Reg. No. M.1550.
If not delivered please return to "KODAGU" OFFICE. MERCARA.

ಕೊಡಗು.

[illegible]

ವಾರ್ಷಿಕ ಚಂದಾ ರೂ. ೩-೮-೦. | ಸಂಪಾದಕ—ಐಂದ್ಯಂಡ ಬಿ. ಕಟ್ಟಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಮಡಿಕೇರಿ, ಸನ್ ೧೯೩೫ನೇ ಇಸವಿ ಜೂನ್ ತಾರೀಖು ೭ನೇ ಶುಕ್ರವಾರ [ಸಂಚಿಕೆ ೧

Post Box 423,
TRIPLICANE, MADRAS.

Catalogue Free
to Bona fide Enquirers

MANUFACTURES AND DEALS IN ALL:—

(1) Gemset Jewels, gold and silver articles of all patterns.
(2) Race Cups. Caskets, Medals, etc., for presentation purposes
(3) Trovels, Keys, Locks, etc., for ceremonial purposes.

JEWELLER
BY
APPOINTMENT
TO
His Excellency
THE GOVERNOR
OF MADRAS.

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro plating, gilding and nickel-ling
(3) Buying old jewellery, or undertaking to effect sale.

V. SUBRAMANIA IYER
JEWELLER

Telephone:—
3145

Telegrams:—
"PRECIOUS"

Gold-smith, Silver smith, & Dealer in all Gemset Jewels.

52—38

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ
ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ
ರತನ್ ಮಿಶ್ರಿ ಹಲ್ವಾ
ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು ನೀರಾಗಿರುವಿಕೆ ಆಗಾಗ್ಗೆ ಸ್ವಪ್ನದಲ್ಲಿ ಸ್ಖಲನೆಯಾಗುವಿಕೆ, ಅತಿ ಸ್ವೇಚ್ಛಾಪ್ರವರ್ತನೆಯಿಂದಲೂ, ಬಾಲ್ಯದ ದುರಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ಶೀಘ್ರ ಸ್ಖಲನೆಯಾಗುವಿಕೆ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಯುವಿಕೆ, ಬಹುಕಾಲದ ಮೇಹ ವ್ಯಾಧಿಯಿಂದ ಶರೀರವು ಸಣಕಲು ಹೋಗುವಿಕೆ, ನೇತ್ರರೋಗ, ಚರ್ಮವ್ಯಾಧಿ, ಉಷ್ಣವಾಯು ಸಂಬಂಧರೋಗ, ಎದೆ ಶೂಲೆ, ಮೇಹವಿಕೆ ಆರ್ಬುದ, ಕೆಮ್ಮು ಈ ವಿಧವಾದ ನಾನಾ ರೋಗಗಳನ್ನು ಗುಣಪಡಿಸಿ ಧಾತುಪುಷ್ಟಿ, ಶರೀರ ಪುಷ್ಟಿಯನ್ನುಂಟುಮಾಡುವುದು. ಹೆಂಗಸರು ಸೇವಿಸಿದಲ್ಲಿ ಉಷ್ಣಗರ್ಭಕಾರಕ ವ್ಯಾಧಿಗಳೆಲ್ಲಾ ನೀಗುವವು. ಸಂಪೂರ್ಣ ಗುಣ ಉಂಟಾಗಲು ೩–೪ ಡಬ್ಬಿಗಳನ್ನು ಉಪಯೋಗಿಸಬೇಕು.

ಕ್ರಯ.—೧ ಪೌಂಡು ಟಿನ್ ೧ಕ್ಕೆ ರೂ. ೫—೦—೦. ಅರ್ಧ ಪೌಂಡು ಟಿನ್ ೧ಕ್ಕೆ ರೂ. ೨—೮—೦.
ಚಿಕ್ಕಪೇಟೆ, ವಿದ್ಯಾವಿಲಾಸ ಬುಕ್ಕು ಡಿಪೋವಿನಲ್ಲೂ ದೊರೆಯುತ್ತೆ.

52—24. ವ್ಯವಸ್ಥಾಪಕರು—ರತನ್ ಮಿಶ್ರಿ ಡಿಪೊ. (ಆಂಜನೇಯ ಜ್ಯೋತಿಷಾಲಯ,)
ಚಾಮುಂಡೇಶ್ವರಿಗುಡಿ ಬೀದಿ, ಬೆಂಗಳೂರು ಸಿಟಿ.

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

ಅಪೂರ್ವ ಸಂದರ್ಭ.
ಹಾಳಾದ ದೇಹಸಾಮರ್ಥ್ಯವನ್ನು ಪುನಃ ಸಂಪಾದಿಸ ಬೇಕಾದರೆ ಇದೀಗ ಅಪೂರ್ವ ಸಂದರ್ಭ.

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಬಳಲಿಕೆ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ.!

ಧರ್ಮಾರ್ಥ! ಧರ್ಮಾರ್ಥ!!

ಕಾಮ ಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.—

ಆತಂಕನಿಗ್ರಹ ಔಷಧಾಲಯ,
52—14 ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೇಷ್ಠವಾದ 5 ಕುಟುಂಬ ಔಷಧಗಳು.
ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದವು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ. 40.	ಅಸಲಾ ಗೋರೋಚನ ತೊಲ 1ಕ್ಕೆ ರೂ. 12.
ಕೇಸರಿ ಅಥವಾ ಕುಂಕುಮಪುಷ್ಪ ತೊಲ 1ಕ್ಕೆ ರೂ. 3½	ಪಚ್ಚ ಕರ್ಪೂರ ತೊಲ 1ಕ್ಕೆ ರೂ. 2½.

ಕಾಬೂಲ ಇಂಗು ತೊಲ 10 ಕ್ಕೆ ರೂ. 1.

ಶ್ರೇಷ್ಠವಾದ 108 ಮಣಿವುಳ್ಳ ರುದ್ರಾಕ್ಷಿ ಜಪ ಮಾಲೆ 1ಕ್ಕೆ ಆಣೆ 6, 8, 12, ರೂ 1, 2, 5, 10 ರ ವರೆಗೆ.
32 ಮಣಿವುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ. 1, 2, 3, 4, 5, 8, 10 ರ ವರೆಗೆ.
ಮತ್ತು ಎಲ್ಲಾ ವಿಧವಾದ ರೇಶ್ಮೆ ಜರಿ ಸೀರೆಗಳು, ಕಣಗಳು, ಮುಗುಟ ವಗೈರಾ ಎಲ್ಲಾ ಸರಕುಗಳು ದೊರೆಯುತ್ತೆ. ಸಾವಕಾಶ ಮಾಡದೆ ಈ ಕೆಳಗಿನ ಅಡ್ರೆಸ್ಸಿಗೆ ಆರ್ಡರು ಕೊಡಿರಿ. ಸಾಮಾನುಗಳು ಸುಲಭ ಕ್ರಯಕ್ಕೆ ದೊರೆಯುತ್ತೆ. ಅಡ್ರೆಸ್—

ಭಾರಧ್ವಾಜ ಕಂಪೆನಿ, "ಸಿಲ್ಕ್ ಹೋಮ್," ಶ್ರೀಕಾಶಿ.

BHARADWAJ & CO.,
"SILK HOME,"
52—41 Benares City.

ಏಕೆ ನರಳುತ್ತೀರಿ?
ಕ್ರಯವು ಅಂಚೆಹಾಸಲು.
ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—42 ಮದನಮಂಜರಿ ಫಾರ್ಮಸಿ,
1/94 ನ್ಯೂ ಬಜಾರು ರೋಡು, ಮದ್ರಾಸು.

ಕೊಡಗು.

ಸಂ ೧೯೨೯ನೇ ಇಸವಿ

ಜೂನ್ ತಾ. ೬ ನೇ ಶುಕ್ರವಾರ.

ಹೊಸ ಬ್ರಿಟಿಷ್ ಪಾರ್ಲಿಮೆಂಟ್.

ಬ್ರಿಟಿಷ್ ಪಾರ್ಲಿಮೆಂಟಾದ 'ಹೌಸ್ ಆಫ್ ಕಾಮನ್ಸ್' ನ ಹೊಸ ಚುನಾವಣೆಯು ಈಗ ತಾನೇ ಮುಗಿದಿದೆ. ಲೇಬರ್ ಪಕ್ಷದವರಿಗೆ ದೊಡ್ಡ ಜಯವಾಗಿದೆ. ಲೇಬರ್ ಪಕ್ಷದ 288 ಮೆಂಬರುಗಳೂ, ಕನ್‌ಸರ್ವೇಟಿವ್ ಪಕ್ಷದ 255 ಮೆಂಬರುಗಳೂ, ಲಿಬರಲ್ ಪಕ್ಷದ 58 ಮೆಂಬರುಗಳೂ, ಇತರರು 8 ಮೆಂಬರುಗಳೂ ಜಯಶೀಲರಾಗಿರುವರು. ಕಳೆದ ಪಾರ್ಲಿಮೆಂಟಿನಲ್ಲಿ ಕನ್‌ಸರ್ವೇಟಿವ್‌ಗಳು 398, ಲೇಬರ್ ಪಕ್ಷದವರು 163, ಲಿಬರಲ್ ಪಂಗಡದವರು 41, ಇತರರು 9 ಮೆಂಬರುಗಳಿದ್ದರು. ಇದರಿಂದ ಕನ್‌ಸರ್ವೇಟಿವ್ ಪಕ್ಷದವರಿಗೆ ದೊಡ್ಡ ಅಪಜಯವೂ, ಲೇಬರ್ ಪಕ್ಷದವರಿಗೆ ವಿಶೇಷ ಜಯವೂ ಆಗಿದೆಯೆಂದು ವಿಶದವಾಗುತ್ತದೆ. ಪಾರ್ಲಿಮೆಂಟಿನಲ್ಲಿ ಬಹುಮತ ಮೆಂಬರುಗಳಿರುವ ಪಾರ್ಟಿಯವರೇ ಮಂತ್ರಿ ಮಂಡಳಿಯನ್ನು ಏರ್ಪಡಿಸಿ ಸರ್ಕಾರವನ್ನು ನಡಿಸುವ ಪದ್ಧತಿಯಂತೆ ಈ ವರೆಗೆ ಕನ್‌ಸರ್ವೇಟಿವ್ ಪಕ್ಷದವರು ಬ್ರಿಟನ್ನಿನ ಸರ್ಕಾರವನ್ನು ನಡಿಸುತ್ತಿದ್ದರು. ಆದರೆ ಆ ಪಕ್ಷದವರಿಗೆ ಈ ಸಾರಿಯ ಚುನಾವಣೆಯಲ್ಲಿ ಬಹುಮತ ದೊರೆಯದ್ದರಿಂದ ಅವರ ಪ್ರಧಾನ ಮಂತ್ರಿಯವರಾದ ಮಿ. ಬಾಲ್ಡ್‌ವಿನ್‌ರವರು ತಮ್ಮ ಮಂತ್ರಿಮಂಡಳಿಯೊಡನೆ ರಾಜಿನಾಮೆ ಕೊಡಲಿಕ್ಕಿರುವರು. ಇವರು ರಾಜಿನಾಮೆ ಕೊಟ್ಟ ಕೂಡಲೆ ಅರಸರ ಕೋರಿಕೆ ಮೇರೆ ಈಗ ಬಹುಮತ ದೊರೆತಿರುವ ಲೇಬರ್ ಪಕ್ಷದ ಮುಂದಾಳಾದ ಮಿ. ರಾಮ್ಸೆ ಮೆಕ್ಡೊನಾಲ್ಡ್‌ರವರು ಮುಖ್ಯ ಮಂತ್ರಿಯಾಗಿ ತಮ್ಮ ಮಂತ್ರಿಮಂಡಳಿಯನ್ನು ನೇಮಿಸಬೇಕಾದು. ಆದರೆ ಈ ಪಕ್ಷದವರಿಗೆ ಈಗಿನ ಪಾರ್ಲಿಮೆಂಟಿನ ಅವಧಿಯು ತೀರುವವರೆಗೂ ಬೇರೆ ಪಾರ್ಟಿಗಳ ಸಹಾಯವಿಲ್ಲದೆ ಸರ್ಕಾರ ನಡಿಸಲು ಸಾಧ್ಯವಾಗುವದು ಸ್ವಲ್ಪ ಕಷ್ಟವೆಂದೇ ತೋರುತ್ತದೆ. ಯಾಕೆಂದರೆ ಕನ್‌ಸರ್ವೇಟಿವ್ ಮತ್ತು ಲಿಬರಲ್ ಪಕ್ಷದವರು ಜೊತೆ ಸೇರಿ ಬಹುಮತದಿಂದ ಲೇಬರ್ ಪಕ್ಷದವರ ಸರ್ಕಾರವನ್ನು ವಿರೋಧಿಸಿದರೆ ಲೇಬರ್ ಪಕ್ಷದವರು ಅಧಿಕಾರವನ್ನು ಬಿಡಬೇಕಾಗುವದು. ಆದರೆ ಲಿಬರಲ್ ಪಕ್ಷದವರು ಕನ್‌ಸರ್ವೇಟಿವ್ ಪಕ್ಷದವರೊಂದಿಗೆ ಸೇರುವ ಸಂಭವವು ಬಹಳ ಕಡಿಮೆಯೆಂತ ತೋರುತ್ತದೆ. ಬದಲು ಲಿಬರಲ್ ಪಾರ್ಟಿಯವರು ಲೇಬರ್ ಪಕ್ಷದವರೊಂದಿಗೆ ಸೇರುವ ಸಂಭವವು ಹೆಚ್ಚೆಂದು ಕಂಡು ಬರುತ್ತದೆ. ಅಲ್ಲದೆ ಲೇಬರ್ ಪಾರ್ಟಿಯವರು ತಮ್ಮ ತತ್ವಗಳನ್ನು ಬಿಟ್ಟುಕೊಡದೆ ನ್ಯಾಯವಾದ ರೀತಿಯಲ್ಲಿ ಸರ್ಕಾರವನ್ನು ನಡಿಸುತ್ತಾ ಒಂದರೆ ಅವರ ಬಲವು ಹೆಚ್ಚಲೂ ಬಹುದು ಆದಕಾರಣ ಲೇಬರ್ ಸರ್ಕಾರವು ಕೆಲವು ಕಾಲದವರೆಗೆ ನಡೆಯಲು ಯಾವ ಅಡಚಣೆಯೂ ಕಾಣುವುದಿಲ್ಲ.

ಲೇಬರ್ ಪಕ್ಷದವರ ಜಯದಿಂದ ಇಂಡಿಯಾ ದೇಶಕ್ಕೆ ಏನಾದರೂ ಪ್ರಯೋಜನವಾಗುವದೋ ಎಂಬ ಪ್ರಶ್ನೆಯು ಎಲ್ಲಾ ಹಿಂದೀಯರ ಮನಸ್ಸಿನಲ್ಲಿಯೂ ಹುಟ್ಟುತ್ತದೆ. ಬ್ರಿಟಿಷ್ ಸರ್ಕಾರವು ಕನ್‌ಸರ್ವೇಟಿವ್‌ಗಳದೇ ಆಗಲೀ, ಲೇಬರ್ ಪಕ್ಷದವರದೇ ಆಗಲೀ, ಲಿಬರಲ್ ಪಕ್ಷದವರದೇ ಆಗಲೀ ಅದರಿಂದ ಹಿಂದೂಸ್ಥಾನಕ್ಕೆ ಹೆಚ್ಚು ಪ್ರಯೋಜನವಾಗಲಿಕ್ಕಿಲ್ಲವೆಂದೂ, ಬ್ರಿಟಿಷರ ಯಾವ ಪಕ್ಷದವರೇ ಆಗಲಿ ಹಿಂದೂದೇಶವನ್ನು ತಮ್ಮ ಅಧೀನದಿಂದ ತಪ್ಪಿಸಿ ಅದಕ್ಕೆ ಸ್ವಾತಂತ್ರ್ಯ ಕೊಡಲು ಒಪ್ಪಲಿಕ್ಕಿಲ್ಲವೆಂದೂ ಕಾಂಗ್ರೆಸ್ ಮುಂದಾಳುಗಳ ಅಭಿಪ್ರಾಯವಾಗಿದೆ. 1924ನೇ ಇಸವಿಯಲ್ಲಿ ಲೇಬರ್ ಪಾರ್ಟಿಯವರ 9 ತಿಂಗಳ ಸರ್ಕಾರದ ವರ್ತನೆಯೂ, ಲೇಬರ್ ಪಕ್ಷದವರು ಸೈಮನ್ ಕಮಿಷನಿನ ನೇಮಕಕ್ಕೆ ಒತ್ತಾಸೆ ಕೊಟ್ಟದ್ದೂ, ಕಳೆದ ಚುನಾವಣೆಯಲ್ಲಿ ಅವರು ಇಂಡಿಯಾದ ಸುಧಾರಣೆಯ ವಿಷಯ ಏನೊಂದೂ ಮಾತೆತ್ತದೆ ಹೋದದ್ದೂ ಕಾಂಗ್ರೆಸ್ ಮುಖಂಡರ ಮೇಲಿನ ಅಭಿಪ್ರಾಯವು ಸರಿಯಾದ್ದೆಂದು ವಿಶದಪಡಿಸುತ್ತದೆ.

ಸೈಮನ್ ಕಮಿಶನಿನ ಅಧ್ಯಕ್ಷರಾದ ಸರ್ ಜಾನ್ ಸೈಮನರು ಲಿಬರಲ್ ಪಕ್ಷಕ್ಕೆ ಸೇರಿದವರು. ಸದರಿ ಕಮಿಷನನ್ನು ಕನ್‌ಸರ್ವೇಟಿವ್ ಸರ್ಕಾರದವರು ನೇಮಿಸಿದ್ದಾದರೂ ಲೇಬರ್ ಮತ್ತು ಲಿಬರಲ್ ಪಕ್ಷದವರು ಅದಕ್ಕೆ ಒತ್ತಾಸೆ ಕೊಟ್ಟಿರುವರು. ಆದುದರಿಂದ ಲೇಬರ್ ಸರ್ಕಾರವೂ ಕೂಡ ಸೈಮನ್ ಕಮಿಶನಿನ ಸಿಫಾರಸ್ಸುಗಳಿಗೆ ಬೆಲೆ ಕೊಟ್ಟೇ ಕೊಡುವರು. ಒಂದು ವೇಳೆ ಈ ಕಮಿಶನಿನ ಸಿಫಾರಸ್ಸುಗಳಿಗಿಂತ ಹೆಚ್ಚಾದ ಸುಧಾರಣೆಗಳನ್ನು ಇಂಡಿಯಾಕ್ಕೆ ಕೊಡಬೇಕೆಂದು ಲೇಬರ್ ಪಕ್ಷದವರು ಇಚ್ಛಿಸಿದರೂ, ಲಿಬರಲ್ ಪಕ್ಷದವರು ತಮ್ಮವರೊಬ್ಬರಾದ ಸೈಮನರ ಸಿಫಾರಸ್ಸುಗಳನ್ನು ಮೀರಲು ಎಂದಿಗೂ ಒಪ್ಪಲಾರರು. ಆಗ ಕನ್‌ಸರ್ವೇಟಿವ್ ಮತ್ತು ಲಿಬರಲ್ ಪಕ್ಷದವರು ಇಂಡಿಯಾದ ಹೆಚ್ಚಿನ ಮಾರ್ಪಾಡುಗಳಿಗೆ ವಿರೋಧ ಬಂದೇ ಬರುವ ಕಾರಣ ಹಿಂದೂದೇಶಕ್ಕೆ ಲೇಬರ್ ಪಕ್ಷದವರಿಂದ ಹೆಚ್ಚಿನ ಸಹಾಯವೇನೂ ಆಗುವಂತೆ ಕಾಣುವದಿಲ್ಲವೆಂಬುದರಲ್ಲಿ ನಿಜವಿದೆ.

ಆದರೆ ಹಿಂದೂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಸಹಾನುಭೂತಿ ಇರುವ ಬ್ರಿಟಿಷರು ಯಾರಾದರೂ ಇದ್ದರೆ ಅವರು ಲೇಬರ್ ಪಕ್ಷದವರೆಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪಕ್ಷದ ಇಂಡಿಪೆಂಡೆಂಟ್ ಭಾಗದವರು ಹಿಂದೂಸ್ಥಾನದ ಅಭಿವೃದ್ಧಿಯ ಸ್ನೇಹಿತರೆಂದು ಅಂದುಕೊಳ್ಳುತ್ತಿರುವರು. ಇವರಲ್ಲಿ ಕೆಲವರು ನೆಹರು ವರದಿಗೆ ಒಪ್ಪಿಗೆಯನ್ನು ಸೂಚಿಸಿರುವರು, ಇಂಡಿಯಾಕ್ಕೆ ಆಗುವಷ್ಟು ಬೇಗನೆ ವಸಾಹತು ಸ್ವರಾಜ್ಯ ಕೊಡಬೇಕೆಂದು ಅನ್ನುತ್ತಿರುವರು. ಆದುದರಿಂದ ಆ ಪಾರ್ಟಿಯವರೇ ಅಧಿಕಾರಕ್ಕೆ ಬರುವಾಗ್ಯೆ ತಮ್ಮ ಸಹಾನುಭೂತಿಯ ತತ್ವವನ್ನು ಜಾರಿಗೆ ತರಲು ಸ್ವಲ್ಪವಾದರೂ ಪ್ರಯತ್ನಿಸದೆ ಇರಲಿಕ್ಕಿಲ್ಲವೆಂದು ಹಿಂದೂ ದೇಶದ ಶಾಂತ ಪಕ್ಷದ ಕೆಲವು ಮುಂದಾಳುಗಳ ನಂಬಿಕೆಯಾಗಿದೆ. ಮುಖ್ಯವಾಗಿ ಲೇಬರ್ ಪಾರ್ಟಿಯಲ್ಲಿ ಹಲವು ಸ್ನೇಹಿತರಿರುವ ಡಾಕ್ಟರ್ ಬೆಸೆಂಟರವರು ಮತ್ತು ಅವರ ಹಿಂಬಾಲಕರಿಗೆ ಲೇಬರ್ ಸರ್ಕಾರದಲ್ಲಿ ಈ ವಿಶ್ವಾಸವಿರುವಂತೆ ಕಾಣುತ್ತದೆ.

ಹೇಗೂ ಹಿಂದೂಸ್ಥಾನದ ಸ್ವಾತಂತ್ರ್ಯ ಸಂಪಾದನೆಯು ಹಿಂದೀಯರ ಕೈಯ್ಯಲ್ಲಿದೆಯೇ ಹೊರತು ಬೇರೆಯವರಿಂದ ಎಂದಿಗೂ ಸಿಗಲಾರದು. ತಮ್ಮ ಜೀವನಕ್ಕೆ ಮುಖ್ಯ ಆಧಾರವಾಗಿರುವ ಭಾರತ ಭೂಮಿಯನ್ನು ಕಳಕೊಳ್ಳಲು ಬ್ರಿಟಿಷರ ಯಾವ ಪಾರ್ಟಿಯವರೂ ಒಪ್ಪಲಿಕ್ಕಿಲ್ಲವೆಂದು ಹೇಳಬೇಕೇ! ಆದರೂ ಇಂಡಿಯಾಕ್ಕೆ ಬ್ರಿಟಿಷರಿಂದ ಏನಾದರೂ ಅಲ್ಪಸ್ವಲ್ಪ ಸಹಾಯ ದೊರೆಯುವದಿದ್ದರೆ ಅದು ಲೇಬರ್ ಪಾರ್ಟಿಯವರಿಂದಾದುದರಿಂದ ಲೇಬರ್ ಸರ್ಕಾರದಿಂದ ಭಾರತ ಭೂಮಿಯ ಸ್ವರಾಜ್ಯ ಹೋರಾಟಕ್ಕೆ ದೊಡ್ಡ ಸಹಾಯ ದೊರೆಯದೆ ಹೋದರೂ ಈಗಕ್ಕಿಂತ ಹೆಚ್ಚಿನ ಕೆಡಕು ಆಗಲಿಕ್ಕಿಲ್ಲವೆಂದು ನಂಬುವ.

ಓರಿಯಂಟಲ್ ಜೀವವಿಮೆ ಕಂಪೆನಿ.

ಓರಿಯಂಟಲ್ ಜೀವವಿಮೆ ಕಂಪೆನಿಯ ೧೯೨೮ನೇ ವರ್ಷದ ಡೈರೆಕ್ಟರ ರಿಪೋರ್ಟು ನಮಗೆ ಕಳುಹಿಸಲ್ಪಟ್ಟಿರುತ್ತದೆ. ಅದರಿಂದ ಈ ಸುಪ್ರಸಿದ್ಧ ಜೀವವಿಮೆ ಕಂಪೆನಿಯ ಬೇರೆ ಬೇರೆ ವಿಭಾಗಗಳು ಎಷ್ಟೊಂದು ಅಭಿವೃದ್ಧಿ ಸ್ಥಿತಿಗೆ ಬಂದಿರುವುದೆಂಬುದು ವ್ಯಕ್ತವಾಗುವುದು. ಕಳೆದ ವರ್ಷ ಕಂಪೆನಿಗೆ ಹೊಸದಾಗಿ ಬಂದ ವಿಮೆಗಳ ಮೊತ್ತವು ೫೮೦೯ ಲಕ್ಷ ರೂಪಾಯಿಗಳು ಬಾಳುವ ೨೭೨೫೪ ಪಾಲಿಸಿಗಳಾಗಿರುತ್ತವೆ. ಅದರ ಹಿಂದಿನ ವರ್ಷದಲ್ಲಿ ೨೧೪೧೮ ಪಾಲಿಸಿಗಳೂ, ೪೬೭ ಲಕ್ಷ ರೂ ಮೊತ್ತವೂ ಆಗಿದ್ದಿತು ಅಂದ ಮೇಲೆ ೧೭ ಲಕ್ಷ ರೂ. ಬಾಳುವ ೫೮೪೦ ವಿಮೆಗಳು ಅಥವಾ ಒಟ್ಟಿನಲ್ಲಿ ಶೇಕಡ ೨೫ರಷ್ಟು ಹೆಚ್ಚಾಗಿ ಪ್ರಸಕ್ತ ವರ್ಷದಲ್ಲಿ ಬಂದಿರುತ್ತದೆ. ಈ ಲೆಕ್ಕಾಚಾರಗಳಿಂದ ಓರಿಯಂಟಲ್ ಕಂಪೆನಿಯು ಅಭಿವೃದ್ಧಿ ವಿಚಾರದಲ್ಲಿ ಹಿಂದೂಸ್ಥಾನದ ಮೊದಲನೆ ಕಂಪೆನಿಯಾಗಿಯೂ ಹೊಸ ಜೀವವಿಮೆಯ ಮೊತ್ತದಿಂದ ಬ್ರಿಟಿಷ್ ಚಕ್ರಾಧಿಪತ್ಯದ ಮುಖ್ಯ ೧೨ ಕಂಪೆನಿಗಳಲ್ಲೊಂದಾಗಿಯೂ ಇರುತ್ತದೆಂಬುದು ವ್ಯಕ್ತವಾಗುವುದು. ಈ ವಿಚಾರವು ನಮ್ಮ ವಾಚಕರಿಗೆ ಚೆನ್ನಾಗಿ ತಿಳಿಯಬೇಕೆಂಬ ಉದ್ದೇಶದಿಂದ ಮೊನ್ನೆ ಬೊಂಬಾಯಿಯಲ್ಲಿ ನಡೆದ ಡೈರೆಕ್ಟರುಗಳ ಸಭೆಯಲ್ಲಿ ಅಧ್ಯಕ್ಷರಾದ ಮಿ ವಾರ್ಡನ್‌ಯವರು ಮಾಡಿದ ಭಾಷಣದ ಕೆಲವು ಮುಖ್ಯಾಂಶಗಳನ್ನು ಮುಂದೆ ಉಲ್ಲೇಖಿಸಿರುವೆವು. ಅವರು ಹೇಳಿದ್ದೇನೆಂದರೆ —

ಆದಾಯದ ಲೆಕ್ಕವನ್ನು ನೋಡುವುದರಿಂದ ಈ ವರ್ಷದಲ್ಲಿ ಕಳೆದ ಸಾಲಿಗಿಂತ ೧೭ ಲಕ್ಷ ರೂ. ಹೆಚ್ಚಾಗಿ ಅಂದರೆ ೧೩೯ ಲಕ್ಷ ರೂಪಾಯಿಗಳ ಪ್ರಿಮಿಯಂ ಆದಾಯವು ಬಂದಿರುತ್ತದೆ. ವರ್ಷಾಂತ್ಯದಲ್ಲಿ ಅನೇಕ ಹೊಸ ವಿಮೆ ಅರ್ಜಿಗಳು ಬಂದದರಿಂದ ಅವುಗಳ ಪ್ರಿಮಿಯಂ ಮೊಬಲಗು ಮುಂದಿನ ವರ್ಷಕ್ಕೆ ಸೇರಿಸಲ್ಪಡಬೇಕಾಗುವುದು. ಅದೂ ಸೇರಿದ್ದ ಪಕ್ಷದಲ್ಲಿ ಈ ಆದಾಯವು ದ್ವಿಗುಣವಾಗುತ್ತಿದ್ದುದರಲ್ಲಿ ಸಂಶಯವಿಲ್ಲ. ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಪ್ರಕಟಿಸಲ್ಪಟ್ಟ ಕಂಪೆನಿಯ ವೇಲ್ಯುಯೇಷನ್ ಲೆಕ್ಕಗಳಿಂದ ಜನರಲ್ಲಿ ವಿಶ್ವಾಸವು ಹೆಚ್ಚಿ ಆಷ್ಟೊಂದು ಹೆಚ್ಚು ವಿಮೆ ಅರ್ಜಿಗಳು ಬಂದವೆಂದು ನಾನು ನಂಬಿರುವೆನು. ಎಲ್ಲಾ ಬಾಬುಗಳಿಂದ ಒಟ್ಟು ಆದಾಯವು ೪೩॥ ಲಕ್ಷ ರೂ. ಅಥವಾ ಕಳೆದ ಸಾಲಿಗಿಂತ ೩ ಲಕ್ಷ ರೂ. ಜಾಸ್ತಿಯಾಗಿ ಬಂದಿರುವುದು.

ಇನ್ನು ಖರ್ಚುಬಾಬನ್ನು ಪರಿಶೀಲಿಸಿದರೆ, ಮೃತಿಹೊಂದಿದ್ದರಿಂದ ಕೊಡಬೇಕಾದ ವಿಮೆ ಮೊಬಲಗು ಈ ಸಾಲಿನಲ್ಲಿ ೨೯॥ ಲಕ್ಷದಿಂದ ೩೪ ಲಕ್ಷಕ್ಕೆ ಹೆಚ್ಚಿರುವುದು. ವಿಮೇ ಅರ್ಜಿಗಳು ಹೆಚ್ಚಿದಂತೆಲ್ಲಾ ನಾವು ಕೊಡಬೇಕಾದ ಹಣವು ಹೆಚ್ಚುವುದೂ ಸಹಜವಾಗಿಯೇ ಇದೆ. ಚಾಲ್ತಿ ವಿಮೆ ಹಣವು ಕಳೆದ ಮೂರು ವರ್ಷಗಳಿಂದ ೧೦ ಕೋಟಿ ರೂಪಾಯಿಗಳು ಅಥವಾ ಶೇಕಡ ೫೦ರಷ್ಟು ಜಾಸ್ತಿಯಾಗಿರುವುದು. ಪ್ರಸ್ತುತ ಸಾಲಿನ ಆದಾಯದಿಂದ ನಮ್ಮ ಕಂಪೆನಿಯ ರಿಸರ್ವ್ ನಿಧಿಯು ಸುಮಾರು ೭೨ ಲಕ್ಷ ರೂ. ಗಳು ಹೆಚ್ಚಿರುವುದು. ಹಿಂದಿನ ಸಾಲಿನಲ್ಲಿ ಆ ರೀತಿ ಹೆಚ್ಚಾದ ಮೊಬಲಗು ೫೨॥ ಲಕ್ಷ ಮಾತ್ರ. ಓರಿಯಂಟಲ್ ಕಂಪೆನಿಗೆ ಈಗ ೩೦ ಬ್ರ್ಯಾಂಚ್ ಆಫೀಸುಗಳೂ, ೫ ಚೀಫ್ ಏಜನ್ಸಿಗಳೂ, ೬೫೦೦ ಜನಪ್ರತಿನಿಧಿಗಳೂ ಇರುತ್ತಾರೆ. ೧೯೨೮ ವರ್ಷದಲ್ಲಿ ಶೇರುದಾರರಿಗೆ ಶೇರು ೧ಕ್ಕೆ ೫೦ ರೂ. ಲಾಭವು ಕೊಡಲ್ಪಟ್ಟಿದೆ. ಇದರ ಲೆಖ್ಖಗಳಿಂದ ಈ ಕಂಪೆನಿಯು ಜನರ ನಂಬಿಕೆಯನ್ನು ಪಡೆದಿದೆಯೆಂತ ಸ್ಪಷ್ಟವಾಗುತ್ತದೆ.

ಶ್ರೀ. ಬಳ್ಳಾರಿ ರಾಘವಾಚಾರ್ಯರ ಭಾಷಣ.

ನಾಟಕ ಶಿರೋಮಣಿಗಳಾದ ಬಳ್ಳಾರಿ ರಾಘವಾಚಾರ್ಯರು ತಾ 30—5—29ರಲ್ಲಿ ಸೀತಾಮನೋಹರ ನಾಟಕ ಮಂಡಲಿಯ ರಂಗಭೂಮಿಯಲ್ಲಿ ನಾಟ್ಯಕಲೆಯನ್ನು ಕುರಿತು ಮತ್ತೊಂದು ಭಾಷಣವನ್ನಿತ್ತರು. ಆ ದಿನದ ಪ್ರೇಕ್ಷಕರ ಸಮೂಹವು ಬಲು ದೊಡ್ಡದಿತ್ತು. ಹೈಸ್ಕೂಲಿನ ಇಬ್ಬರು ಹುಡುಗರೂ, ಮಿ. ಯು. ಯಂ. ಕೃಷ್ಣರಾಯರೂ, ಮಿ. ಬಿ ಎಸ್. ಕುಶಾಲಪ್ಪನವರೂ ಇಂಗ್ಲಿಷ್ ನಾಟಕಗಳ ಕೆಲವು ಭಾಗಗಳನ್ನು ನಟನೆಗಳೊಂದಿಗೆ ಆಡಿ ತೋರಿಸಿದರು. ಅಂತ್ಯದಲ್ಲಿ ರಾಘವಾಚಾರ್ಯರು ಅಂದದ್ದೇನಂದರೆ —

ನಾಟಕ ಕಲೆಯು ಆತ್ಮೋದ್ಧಾರಕರವಾದುದೆಂದೂ, ಪ್ರಕೃತಿಯು ಪರ ಅಪರ ಮಾರ್ಗಗಳಲ್ಲಿ ಪ್ರಗತಿಗೆ ಸಹಾಯಕವಾಗಿರುತ್ತದೆಂದೂ, ನಾಟಕಗಳು ಶಾಶ್ವತವಾದ ತತ್ವಗಳನ್ನು ಅಂದರೆ ಸತ್ಯ, ಧರ್ಮ, ಅಹಿಂಸೆ ಇತ್ಯಾದಿಗಳನ್ನು ಬೋಧಿಸುತ್ತವಾದರೂ ಸಾವಿತ್ರಿ, ಶಕುಂತಲಾ, ಹರಿಶ್ಚಂದ್ರ ಮೊದಲಾದ ನಾಟಕಗಳು ಈಗಿನ ಕಾಲಕ್ಕೆ ಯೋಗ್ಯವಾದವುಗಳಲ್ಲವೆಂದೂ, ಅವುಗಳನ್ನು ಈಗಿನ ಕಾಲಕ್ಕೆ ಸರಿಯಾಗಿ ಬದಲಾಯಿಸಿಕೊಳ್ಳಬೇಕೆಂದೂ ಹೇಳಿದರು ವೇದೋಪನಿಷತ್ತು ಮತ್ತು ಪುರಾಣಗಳನಂತರ ನಾಟ್ಯಕಲೆಯು ಬಂದಿತೆಂದೂ, ನಮ್ಮ ನಾಟಕಗಳಲ್ಲಿ ಸ್ತ್ರೀವ್ಯಾಮೋಹ ಸಂಬಂಧವೇ ಹೆಚ್ಚಿರುತ್ತದೆಂದೂ, ಅವುಗಳು ಯಾವ ವಿಧದಲ್ಲಿಯೂ ಮುಂದರಿದಿಲ್ಲವೆಂದೂ, ನಟನೆ ಎಂದರೆ ಧ್ವನಿಯ ಏರಿಳಿತಗಳಾಗಲಿ, ಮುಖವಿನ್ಯಾಸವಾಗಲಿ ಅಲ್ಲವೆಂದೂ, ಅದು ಭಾವೋತ್ಪನ್ನ ಮಾಡುವ ಜೀವನದ ರಹಸ್ಯವನ್ನು ತಿಳಿಸುವ ಕಾರ್ಯವೆಂದೂ, ಪ್ರಜ್ಞಾರಹಿತನಾಗಿ ತಾನು ಮಾಡುವ ಪಾತ್ರದಲ್ಲಿ ಮೂರ್ತಿಮಂತನಾಗಿ ನಟನು ಅಭಿನಯಿಸಬೇಕೆಂದೂ, ನಾಟಕ ಕಲೆಯು ವಿದ್ಯಾರ್ಥಿಗಳಿಗೆ ಆಟಗಳಂತೆ ಬಹು ಅವಶ್ಯವೆಂದೂ, ಮಾನವನ ಜೀವಿತವು ಹಲವು ಕಂಟಕಗಳಿಂದ ಕೂಡಿರುವುದರಿಂದ ಅಂತ ಜೀವನ ಸಂಗ್ರಾಮದಲ್ಲಿ ಬಾಲಕರು ಭಾಗ ತೆಗೆದುಕೊಂಡು ತಮ್ಮ ಸಂಸ್ಕೃತಿಯನ್ನು ಬೆಳೆಯಿಸಬಹುದೆಂದೂ, ಹೀಗೆ ಸಂಸಾರ ಯುದ್ಧದಲ್ಲಿರುವಾಗ ಜನರು ನಿರಾಶಾವಾದಿಗಳಾಗಿ "ಸಂಸಾರಸಾಗರೋದುಃಖಂ" ಎಂಬ ಮಂತ್ರವನ್ನು ಜಪಿಸುತ್ತಾ ಕೂಡಬಾರದೆಂದೂ, "ಭವತಿ ಭಿಕ್ಷಾಂ ದೇಹಿ" ಎಂತ ಹೇಳಿಕೊಂಡು ಮೂರು ಮನೆ ಭಿಕ್ಷೆ ಬೇಡುತ್ತೇನೆ ಎಂಬ ಭಾವನೆಯು ಅವರ ಮನದಲ್ಲಿ ಯಾವಾಗಲೂ ಇರಬಾರದೆಂದೂ, ಎಷ್ಟೇ ಕಷ್ಟಬಂದರೂ ಅದನ್ನು ಪರಿವೆ ಮಾಡಬಾರದೆಂದೂ, ಐರೋಪ್ಯರಂತೆ ಭಾರಿ ಕಷ್ಟಗಳಿಗೂ ಎದೆಗುಂದದೆ ತಮ್ಮ ಮನುಷ್ಯತ್ವವನ್ನು ಕಾಪಾಡಿಕೊಂಡು ಇತರ ಜನಾಂಗಗಳಲ್ಲಿ ನಾವೂ ಒಬ್ಬರು ಎಂತ ಮೆರೆಯಬೇಕೆಂದೂ ಉದ್ಘೋಷಿಸಿದರು.

ನಾಟಕದಿಂದ ಹುಡುಗರಿಗಿರುವ ಪ್ರಯೋಜನಗಳನ್ನು ವಿವರಿಸಿದನಂತರ 'ಇಂಗ್ಲೆಂಡಿನ ರಾಯಲ್ ಅಕೆಡೆಮಿ ಆಫ್ ಆರ್ಟ್ಸ್' ಎಂಬಲ್ಲಿ ಐದು ತರಗತಿಗಳಿವೆಯೆಂದೂ, ಅಲ್ಲಿ ಧ್ವನಿಶಾಸ್ತ್ರ, ನಟನೆ, ಅಭಿನಯ, ನಡಿಗೆ, ಕುದುರೆ ಸವಾರಿ, ಪತಾವರಸೆ, ಕಾವ್ಯ, ಈಜು ಇವುಗಳಲ್ಲಿ ವಿದ್ಯಾರ್ಥಿಯು ವ್ಯಾಸಂಗ ಮಾಡಬೇಕೆಂದೂ, ಅನಂತರ ಇವನಿಗೆ ಒಂದು ಡಿಪ್ಲೊಮಾ ಸಿಗುತ್ತದೆಂದೂ, ನಮ್ಮಲ್ಲಾದರೆ, ನಾಲ್ಕು ಪದ ಹೇಳುವವನಾದರೆ ಸಾಕು, ನೀನು ಏನು ಪಾಸಾಗಿದ್ದೀಯೆ ಎಂತ ಸಹ ಕೇಳುವುದಿಲ್ಲವೆಂದೂ, ನಮ್ಮ ನಟರು ರಂಗಭೂಮಿಯಲ್ಲಿ ಜೋಂಕುಪಂಕವಾಗಿ ನಡೆಯುತ್ತಾರೆಂದೂ, ಆಯಾ ಪಾತ್ರಗಳಿಗೆ ಯೋಗ್ಯವಾದ ಶರೀರವಿರಬೇಕೆಂದೂ, ಶ್ರೀಯುತ ಕೈಲಾಸಂ ಇವರು ವಿಕಲವ್ಯನ ಪಾತ್ರವನ್ನು ವಹಿಸಿದಾಗ ವಿಕಲವ್ಯನಂತೆ ಮಾಂಸಖಂಡಗಳನ್ನು ಬೆಳೆಯಿಸುವ ನಿಮಿತ್ತ ಆರು ತಿಂಗಳ ತನಕ ಕಸರತ್ತು ಮಾಡಿದರೆಂದೂ, ಹಾಗೆಯೇ ಸತತ ಪ್ರಯತ್ನದಿಂದ ಯಾವನೊಬ್ಬ ನಟನು ಶ್ರೇಷ್ಠನಾಗುತ್ತಾನೆಂದು ಹೇಳುತ್ತಾ, ಯಾರೂ ಅತೃಪ್ತಿಕರವಾಗಿ ನಟಿಸುತ್ತಾರೋ ಅಂಥಾವರನ್ನು ಕೂಡಲೆ ರಂಗಭೂಮಿಯಿಂದ ಹೊರತಳ್ಳಬೇಕೆಂದೂ ಅಂದರು. ಅನಂತರ ಇಂಗ್ಲಾಂಡಿನಲ್ಲಿ ಆಡಿದ "ಟ್ರಯಲ್ ಆಫ್ ಮೇರಿಡೇಲ್" ಎಂಬ ನಾಟಕವನ್ನು ವಿವರಿಸಿ "ಒತೆಲೋ" ಎಂಬ ಷೇಕ್ಸ್‌ಪಿಯರನ ನಾಟಕದಿಂದ ಒಂದು ಭಾಗವನ್ನು ಪ್ರದರ್ಶಿಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ.

ಅಭಿವೃದ್ಧಿ.

ಹೊಸ ವಿಮೆಗಳು.		ಪ್ರೀಮಿಯಂ ಆದಾಯ.	
೧೯೨೫	೨೯೬ ಲಕ್ಷ ರೂಪಾಯಿ.	೧೯೨೫	೯೪ ಲಕ್ಷ ರೂಪಾಯಿ.
೧೯೨೬	೩೯೧ ,, ,,	೧೯೨೬	೧೦೨ ,, ,,
೧೯೨೭	೪೬೮ ,, ,,	೧೯೨೭	೧೨೬ ,, ,,
೧೯೨೮	೫೮೫ ,, ,,	೧೯೨೮	೧೪೦ ,, ,,

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1,000 ರೂಪಾಯಿಗಳಿಗೆ ವರ್ಷಕ್ಕೆ 10 ರೂ.	1924ರಲ್ಲಿ 1,000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ.
1921ರಲ್ಲಿ ,, ,, ,, 15 ,,	1927ರಲ್ಲಿ ,, ,, ,, 25 ,,

ಆದಕಾರಣದಿಂದ

ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ ಅಥವಾ ಹೆಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಈ ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿಹೊಂದುತ್ತಿರುವ ಕಂಪೆನಿಗೆ ಬಂದರೆ ನಿಮಗೆ ಅದರಿಂದ ಲಾಭವುಂಟಾಗುವದು.

ಎಲ್ಲಾ ಕಡೆಗಳಲ್ಲೂ ಪ್ರತಿನಿಧಿಗಳಿರುತ್ತಾರೆ.

ಈ ಕೆಳಗಿನ ಸ್ಥಳಗಳಲ್ಲಿ ಆಫೀಸುಗಳಿರುತ್ತವೆ.

ಹೆಡ್ಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಬ್ರಾಂಚ್ ಆಫೀಸುಗಳು.—

ಆಗ್ರ.	ಕಲ್ಕತ್ತ.	ಕರಾಚಿ.	ಮಂಡಲೆ.	ಪೂನಾ.	ಸಿಂಗಾಪೂರ.
ಅಜಮೀರ್.	ಕೊಲೊಂಬೊ.	ಕುವಲಲಂಪುರ.	ಮಂಗಳೂರು	ಕ್ವೆಟ್ಟ	ಸುಕ್ಕೂರ್.
ಅಹಮದಬಾದ	ಢಕ್ಕ.	ಲಾಹೋರ್.	ಮೊಂಬಾಸ.	ರಂಗೂನು.	ತ್ರಿವೆಂದ್ರಂ.
ಅಲ್ಲಹಬಾದು.	ಡಿಲ್ಲಿ.	ಲಕ್ನೊ.	ನಾಗಪುರ.	ರಾಂಚಿ.	ತಿರುಚಿನಾಪಲ್ಲಿ.
ಬೆಂಗಳೂರು.	ಕ್ಯಾಂಡಿ.	ಮದರಾಸು.	ಪಾಟ್ನ.	ರಾವಲ್ಪಿಂಡಿ.	ವಿಶಾಕಪಟ್ನ.

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮ್ಯಯರ್,
ಬ್ರಾಂಚ್ ಸೆಕ್ರೆಟರಿ,

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೩೪ನೇ ಪ್ರಕರಣ.

'ನವಜೀವನ ಮತ್ತು 'ಯಂಗ್ ಇಂಡಿಯಾ'

ಹೀಗೆ ಅಹಿಂಸಾ ರಕ್ಷಕವಾದ ಚಳವಳಿಯು ಅತಿ ನಿಧಾನವಾದರೂ ಹೆಜ್ಜೆ ತಪ್ಪದೆ ಒಂದು ಕಡೆ ಹರಡುತ್ತಿರಲು ಮತ್ತೊಂದೆಡೆ ಸರಕಾರದ ಅರಾಜಕ ದಂಡನೀತಿಯು ಅತಿ ರಭಸದಿಂದ ಪ್ರವಹಿಸುತ್ತ ಪಂಜಾಬಿನಲ್ಲಿ ಮುಚ್ಚು ಮರೆ ಇಲ್ಲದೆ ತನ್ನ ನಿಜಸ್ವರೂಪವನ್ನು ತೋರಿಸಿಕೊಳ್ಳುತ್ತಿದ್ದಿತು. ನಾಯಕರನ್ನು ದಸ್ತಗಿರಿ ಮಾಡಿದರು. ಯುದ್ಧಕಾಲದ ಕಾನೂನು ಎಂದರೆ ಕಾನೂನಿನ ನಾಸ್ತಿತ್ವವು ಪ್ರಚಾರಕ್ಕೆ ಬಂದಿತು. ಪ್ರತ್ಯೇಕ ನ್ಯಾಯಸ್ಥಾನಗಳು ಏರ್ಪಟ್ಟವು. ಇವೇನೋ ಧರ್ಮಾಧರ್ಮವನ್ನು ನಿರ್ಣಯಿಸತಕ್ಕ ಸಂಸ್ಥೆಗಳಾಗಿರದೆ ನಿರಂಕುಶನೊಬ್ಬನ ಸ್ವತಂತ್ರ ಮನೋ ನಿಶ್ಚಯವನ್ನು ನಡಿಸುವ ಆಯುಧಗಳಾಗಿದ್ದುವು. ಸಾಕ್ಷ್ಯದ ಬೆಂಬಲವಿಲ್ಲದೆ ಧರ್ಮಕ್ಕೆ ತಿಲಾಂಜಲಿಯನ್ನು ಕೊಟ್ಟು ದಂಡನೆಯನ್ನು ವಿಧಿಸುತ್ತಿದ್ದರು. ಅಮೃತಸರದಲ್ಲಿ ನಿರ್ದೋಷಿಗಳಾದ ಗಂಡಸರನ್ನೂ ಹೆಂಗಸರನ್ನೂ ಹುಳುಗಳ ಹಾಗೆ ಹೊಟ್ಟೆಯ ಮೇಲೆ ತೆವಳುವಂತೆ ಮಾಡಿದರು. ಜಾಲಿಯನ್ ವಾಲಾಬಾಗಿನ ಹತ್ಯಾಕಾಂಡವೇ ಮುಖ್ಯವಾಗಿ ಭರತಖಂಡದ ಮತ್ತು ಇಡೀ ಪ್ರಪಂಚದ ದೃಷ್ಟಿಯನ್ನು ಆಕರ್ಷಿಸಿದಾದರೂ ಅದು ಈ ಕಾರ್ಯಕ್ರಮದ ಮುಂದೆ ನನಗೆ ಅತಿ ಸಾಮಾನ್ಯವಾಗಿ ಕಂಡಿತು.

ನಾನು ಒಡನೆಯೇ ಪಂಜಾಬಿಗೆ ಹೊರಡಬೇಕೆಂದೂ ಅದರ ಪರಿಣಾಮವನ್ನು ಲೆಕ್ಕಿಸಕೂಡದೆಂದೂ ನನ್ನನ್ನು ಒತ್ತಾಯಪಡಿಸಿದರು. ಅಲ್ಲಿಗೆ ಹೋಗಲು ನನಗೆ ಅಪ್ಪಣೆ ಕೊಡಬೇಕೆಂದು ವೈಸ್‌ರಾಯರಿಗೆ ಪತ್ರ ಬರೆದುದಲ್ಲದೆ ತಂತಿಯನ್ನೂ ಕಳುಹಿಸಿದೆನು. ಆದರೆ ಅದು ನಿಷ್ಫಲವಾಯಿತು. ಹೀಗೆ ಅಪ್ಪಣೆಯಿಲ್ಲದೆ ಹೊರಟರೆ ಪಂಜಾಬಿನ ಎಲ್ಲೆಯನ್ನು ದಾಟಲು ನನ್ನನ್ನು ಬಿಡುತ್ತಿರಲಿಲ್ಲ. ಸವಿನಯಭಂಗದಿಂದ ಏನು ತೃಪ್ತಿಯುಂಟಾಗುವದೋ ಅಷ್ಟರಿಂದಲೇ ನಾನು ಸಂತೋಷಪಟ್ಟುಕೊಳ್ಳಬೇಕಾಗಿದ್ದಿತು. ಆದುದರಿಂದ ಮುಂದೇನು ಮಾಡಬೇಕೆಂಬ ಪ್ರಶ್ನೆಯು ನನ್ನನ್ನು ಕಠಿಣವಾದ ಉಭಯ ಸಂಕಟಕ್ಕೀಡು ಮಾಡಿತು. ಅಂದಿನ ಪರಿಸ್ಥಿತಿಯಲ್ಲಿ ಪಂಜಾಬಿನೊಳಗೆ ಕಾಲಿಡಕೂಡದೆಂಬ ಆಜ್ಞೆಯ ಉಲ್ಲಂಘನವು ನನ್ನ ದೃಷ್ಟಿಯಲ್ಲಿ ಸವಿನಯ ಭಂಗವೆನಿಸಿಕೊಳ್ಳುತ್ತಿರಲಿಲ್ಲ. ಏಕೆಂದರೆ ನನ್ನ ಸುತ್ತಮುತ್ತಲೂ ನನಗೆ ಬೇಕಾದಂತಹ ಶಾಂತಿಯ ವಾತಾವರಣವಿರಲಿಲ್ಲ. ಪಂಜಾಬಿನಲ್ಲಿ ಮಿತಿಯಿಲ್ಲದೆ ಪ್ರಯೋಗಿಸುತ್ತಿದ್ದ ದಂಡನೀತಿಯಿಂದ ಜನರ ಕೋಪವು ಇನ್ನೂ ಹೆಚ್ಚಿದ್ದಿತು. ಆದುದರಿಂದ ಅಂತಹ ಕಾಲದಲ್ಲಿ ನಾನು ಸವಿನಯೋಲ್ಲಂಘನವೆಸಗುವುದೆಂದರೆ ಉರಿಯುವ ಬೆಂಕಿಗೆ ತುಪ್ಪ ಹೊಯ್ದಂತಾಗುತ್ತಿದ್ದಿತು. ಇದರಿಂದ ನಾನು ಪಂಜಾಬಿಗೆ ಹೋಗುವುದಿಲ್ಲವೆಂದು ಮಿತ್ರರ ಸಲಹೆಗೆ ವಿರೋಧವಾಗಿ ನಿರ್ಧರಿಸಿದೆನು. ಈ ನಿರ್ಣಯವನ್ನು ನುಂಗುವದು ನನಗೇನೂ ರುಚಿಕರವಾಗಿರಲಿಲ್ಲ. ದಿನವೂ ಕ್ರೂರ ಅನ್ಯಾಯದ, ಪ್ರಜಾ ಹಿಂಸೆಯ ಸುದ್ದಿಯು ಪಂಜಾಬಿನಿಂದ ಬರುತ್ತಲೇ ಇದ್ದಿತು. ಆದರೆ ಹಲ್ಲು ಕಡಿಯುತ್ತಾ ಕೈ ಕಟ್ಟಿಕೊಂಡು ಕುಳಿತಿರುವುದಲ್ಲದೆ ಬೇರೆ ಏನನ್ನೂ ನಾನು ಮಾಡುವಂತಿರಲಿಲ್ಲ.

ಅದೇ ಸಮಯದಲ್ಲಿ ಮಿ ಹಾರ್ನಿಮನರನ್ನು ಸರಕಾರದವರು ಇದ್ದಕ್ಕಿದ್ದ ಹಾಗೆಯೇ ನಾಗಿಸಿಬಿಟ್ಟರು. 'ಬಾಂಬೇ ಕ್ರಾನಿಕಲ್' ಪತ್ರಿಕೆಯು ಇವರ ಕೈಯ್ಯಲ್ಲೊಂದು ಅಗಾಧ ಶಕ್ತಿಯಾಗಿ ಪರಿಣಮಿಸಿದ್ದಿತು. ಸರಕಾರದ ಈ ಕಾರ್ಯವು ಅತ್ಯಂತ ದುರ್ನೀತಿಯದೆಂದು ನನಗೆ ತೋರಿತು. ಅದರ ಹೇಯ ಸ್ವರೂಪವನ್ನು ನೆನಸಿಕೊಂಡರೆ ಇಂದೂ ನನ್ನ ಮೈ ಜುಮ್ಮೆನ್ನುತ್ತದೆ. ಹಾರ್ನಿಮನರಿಗೆ ಅರಾಜಕತ್ವವು ಎಂದೂ ಬೇಕಾಗಿರಲಿಲ್ಲವೆಂದು ನನಗೆ ಗೊತ್ತು. ಸತ್ಯಾಗ್ರಹ ಸಮಿತಿಯ ಅನುಜ್ಞೆಯಿಲ್ಲದೆ ನಾನು ಪಂಜಾಬ್ ಸರಕಾರದ ನಿರೋಧ ನಿರೂಪವನ್ನುಲ್ಲಂಘಿಸಿದುದು ಅವರ ಇಷ್ಟಕ್ಕೆ ಬಂದಿರಲಿಲ್ಲ. ಕಾನೂನಿನ ಸವಿನಯಭಂಗವನ್ನು ಸದ್ಯಕ್ಕೆ ನಿಲ್ಲಿಸಬೇಕೆಂಬ ನಿರ್ಧಾರವನ್ನು ಅವರು ಸಂಪೂರ್ಣವಾಗಿ ಅನುಮೋದಿಸಿದರು. ಈ ನಿರ್ಧಾರವನ್ನು ನಾನು ಪ್ರಕಟಿಸುವುದಕ್ಕಿಂತ ಮುಂಚೆಯೇ ಅವರಿಂದ ಅದೇ ತಾತ್ಪರ್ಯವುಳ್ಳ ಪತ್ರವು ಕೂಡ ಬಂದಿದ್ದಿತು. ಮುಂಬಯಿಗೂ ಅಹಮದಾಬಾದಿಗೂ ಮಧ್ಯೆ ದೂರವಿರುವುದರಿಂದ ಅವರ ಪತ್ರವು ನಾನು ನನ್ನ ನಿರ್ಧಾರವನ್ನು ತಿಳಿಸಿದ ಮೇಲೆ ಬಂದಿತು. ಆದುದರಿಂದ ಅವರನ್ನು ಒಮ್ಮೆಯೇ ಗಡಿಪಾರು ಮಾಡಿದುದರಿಂದ ನನಗೆ ದುಃಖವೂ ಆಶ್ಚರ್ಯವೂ ಉಂಟಾಯಿತು.

ಈ ಸಂಘಟನೆಗಳ ಫಲವಾಗಿ 'ಬಾಂಬೇ ಕ್ರಾನಿಕಲ್' ಪತ್ರಿಕೆಯ ಮಾಲಿಕರುಗಳು ನಾನು ಆ ಪತ್ರಿಕೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕೆಂದು ನನ್ನನ್ನು ಕೇಳಿದರು. ಮಿ. ಬೆರಿಯವರು ಆಗಲೇ ಅದರ ಕಛೇರಿಯಲ್ಲಿದ್ದುದರಿಂದ ನಾನು ಮಾಡಬೇಕಾದುದು ಹೆಚ್ಚಾಗಿ ಏನೂ ಉಳಿದಿರಲಿಲ್ಲ. ಆದರೂ ನನ್ನ ಸ್ವಭಾವಕ್ಕನುಸಾರವಾಗಿ ಈ ಜವಾಬ್ದಾರಿಯು ನನ್ನ ಮೇಲೆ ಇನ್ನೊಂದು ಹೊರೆಯಾಗಿ ಪರಿಣಮಿಸಿತು.

ಆದರೆ ನಾನು ಈ ಭಾರವನ್ನು ಬಹು ದಿನ ಹೊರಬೇಕಾಗಲಿಲ್ಲ. ಸರಕಾರವು ನನ್ನ ಸಹಾಯಕ್ಕೆ ಬಂದಿತೋ ಎಂಬಂತೆ 'ಕ್ರಾನಿಕಲ್' ಪತ್ರಿಕೆಯ ಪ್ರಕಟನೆಯನ್ನು ನಿಲ್ಲಿಸಿತು.

'ಕ್ರಾನಿಕಲ್' ಪತ್ರಿಕೆಯ ಚಲನೆಯನ್ನು ನಿರ್ವಹಿಸುತ್ತಿದ್ದ ಉಮರ್ ಸುಬಾನೀ ಮತ್ತು ಶಂಕರಲಾಲ ಬ್ಯಾಂಕರರ ಕೈಯಲ್ಲಿಯೇ 'ಯಂಗ್ ಇಂಡಿಯಾ' ಪತ್ರಿಕೆಯೂ ಇದ್ದಿತು. 'ಕ್ರಾನಿಕಲ್' ಪತ್ರಿಕೆಯನ್ನು ನಿಲ್ಲಿಸಿದ್ದುದರಿಂದ ನಾನು 'ಯಂಗ್ ಇಂಡಿಯಾ'ದ ಸಂಪಾದಕತ್ವವನ್ನು ವಹಿಸಬೇಕೆಂದೂ, ನಿಂತು ಹೋದ ಪತ್ರಿಕೆಯ ಸ್ಥಾನವನ್ನು ತುಂಬಲಿಕ್ಕೆ ಪರಿಪೂರ್ಣ ಮಾಡಲು ಈ ಪತ್ರಿಕೆಯು ವಾರಕ್ಕೊಂದು ಬಾರಿ ಹೊರಡುವುದರ ಬದಲು ಎರಡು ಬಾರಿ ಹೊರಡಬೇಕೆಂದೂ ಆ ಮಿತ್ರರು ಸೂಚಿಸಿದರು. ನನಗೆ ತೋರಿದುದೂ ಹಾಗೆಯೇ. ಸತ್ಯಾಗ್ರಹದೊಳಗಡಗಿರುವ ಅರ್ಥವನ್ನು ಜನರಿಗೆ ವಿಶದಪಡಿಸಲು ನಾನು ಆತುರನಾಗಿದ್ದೆನಲ್ಲದೆ ಈ ಪ್ರಯತ್ನದ ಮೂಲಕ ಪಂಜಾಬಿನ ಪರಿಸ್ಥಿತಿಯನ್ನು ಉತ್ತಮಗೊಳಿಸಲಾದರೂ ಆಗುವುದೆಂಬ ಆಸೆಯನ್ನು [illegible] ಇಟ್ಟುಕೊಂಡಿದ್ದೆನು. ಏಕೆಂದರೆ ನಾನು ಬರೆದುದರಲ್ಲೆಲ್ಲಾ ಸತ್ಯಾಗ್ರಹವು ಗರ್ಭಿತವಾಗಿದ್ದಿತು. ಸರಕಾರವೂ ಇದನ್ನರಿತಿದ್ದಿತು. ಆದುದರಿಂದ ನಾನು ಈ ಮಿತ್ರರ ಸೂಚನೆಗೆ ಸಿದ್ಧವಾಗಿ ಸಮ್ಮತಿಸಿದೆನು.

ಆದರೆ ಇಂಗ್ಲಿಷ್ ಭಾಷೆಯ ಮೂಲಕ ಜನ ಸಾಮಾನ್ಯವನ್ನೆಲ್ಲಾ ಸತ್ಯಾಗ್ರಹಕ್ಕಾಗಿ ಸಿದ್ಧಗೊಳಿಸುವುದೆಂತು? ನನ್ನ ಮುಖ್ಯ ಕರ್ಮಕ್ಷೇತ್ರವು ಗುಜರಾತಿನಲ್ಲಿದ್ದಿತು. ಆ ಸಮಯದಲ್ಲಿ ಶ್ರೀ. ಇಂದು ಲಾಲ ಯಾಜ್ಞಿಕರು ಸುಬಾನೀ-ಬ್ಯಾಂ

ಕರರ ಗುಂಪಿನಲ್ಲಿಯೇ ಇದ್ದರು. ಅವರು ಗುಜರಾತೀ 'ನವಜೀವನ' ಮಾಸ ಪತ್ರಿಕೆಯನ್ನು ನಡೆಸುತ್ತಿದ್ದರು. ಈ ಪತ್ರಿಕೆಗೆ ಈ ಮಿತ್ರರ ಧನ ಸಹಾಯವಿದ್ದಿತು. ಈ ಮಾಸ ಪತ್ರಿಕೆಯನ್ನೂ ನನ್ನ ವಶಕ್ಕೆ ಕೊಟ್ಟರು. ಇದಲ್ಲದೆ ಶ್ರೀ. ಯಾಜ್ಞಿಕರು ಈ ಪತ್ರಿಕೆಗಾಗಿ ಕೆಲಸ ಮಾಡುವೆವೆಂದು ಹೇಳಿದರು. ಇದನ್ನು ವಾರ ಪತ್ರಿಕೆಯಾಗಿ ಮಾಡಿದೆವು.

ಈ ಮಧ್ಯೆ 'ಕ್ರಾನಿಕಲ್'ಗೆ ಪುನರ್ಜೀವನ ಬಂದಿತು. ಆದುದರಿಂದ 'ಯಂಗ್ ಇಂಡಿಯಾ' ಪತ್ರಿಕೆಯು ಹಿಂದಿನಂತೆ ವಾರ ಪತ್ರಿಕೆಯಾಯಿತು. ಎರಡು ವಾರ ಪತ್ರಿಕೆಗಳನ್ನು ಬೇರೆ ಬೇರೆ ಸ್ಥಳಗಳಿಂದ ಪ್ರಕಟಿಸುವುದೆಂದರೆ ನನಗೆ ಬಹು ಅನಾನುಕೂಲವಾಗುತ್ತಿದ್ದಿತಲ್ಲದೆ ಅದರಿಂದ ಹೆಚ್ಚು ವೆಚ್ಚವೂ ಆಗುತ್ತಿದ್ದಿತು. 'ನವಜೀವನ'ವನ್ನು ಆಗಲೇ ಅಹಮ್ಮದಾಬಾದಿನಿಂದ ಪ್ರಕಟಿಸುತ್ತಿದ್ದುದರಿಂದ ನನ್ನ ಸಲಹೆಯ ಪ್ರಕಾರ 'ಯಂಗ್ ಇಂಡಿಯಾ' ಪತ್ರಿಕೆಯೂ ಅಲ್ಲಿಗೇ ಕೊಂಡೊಯ್ಯಲ್ಪಟ್ಟಿತು.

ಈ ಬದಲಾವಣೆಗೆ ಬೇರೆ ಕಾರಣಗಳೂ ಇದ್ದುವು. 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಸಂಬಂಧವಾಗಿ ನಾನು ಗಳಿಸಿದ್ದ ಅನುಭವದಿಂದ ಇಂತಹ ಪತ್ರಿಕೆಗಳಿಗೆ ಸ್ವತಂತ್ರ ಮುದ್ರಣಾಲಯವಿರುವುದು ಅಗತ್ಯವೆಂಬುದು ನನಗೆ ಚೆನ್ನಾಗಿ ಗೊತ್ತಾಗಿದ್ದಿತು. ಮತ್ತು ಅಂದಿನ ಕಾಲದಲ್ಲಿ ವೃತ್ತಪತ್ರಿಕೆಗಳಿಗೆ ಸಂಬಂಧ ಪಟ್ಟ ಕಾಯಿದೆಗಳು ಕ್ರೂರವಾಗಿದ್ದುದರಿಂದ ನಾನು ನನ್ನ ಅಭಿಮತವನ್ನು ನಿರಾತಂಕವಾಗಿ ವ್ಯಕ್ತಪಡಿಸಬೇಕೆಂದರೆ ಅದನ್ನು ಆಗಿದ್ದ ಮುದ್ರಣಾಲಯಗಳು ಪ್ರಕಟಿಸಲು ಹಿಂತೆಗೆಯುತ್ತಿದ್ದುವು. ಏಕೆಂದರೆ ಅವುಗಳನ್ನು ನಡೆಸುತ್ತಿದ್ದುದು ಆರ್ಥಿಕ ದೃಷ್ಟಿಯಿಂದ. ಆದುದರಿಂದ ನಮ್ಮದೇ ಒಂದು ಛಾಪಖಾನೆಯನ್ನು ಹೂಡುವುದು ಅತ್ಯಗತ್ಯವಾಯಿತು. ಹೀಗೆ ಮಾಡಲು ಅಹಮದಾಬಾದಿನಲ್ಲಿ ಮಾತ್ರ ಅನುಕೂಲವಿದ್ದುದರಿಂದ 'ಯಂಗ್ ಇಂಡಿಯಾ'ವನ್ನೂ ಅಲ್ಲಿಗೇ ಸಾಗಿಸಬೇಕಾಯಿತು.

ಈಗ ನಾನು ಈ ಪತ್ರಿಕೆಗಳ ಮೂಲಕ ಅಕ್ಷರಸ್ಥರಾದ ಜನರಿಗೆ ಸತ್ಯಾಗ್ರಹದ ವಿಷಯವಾಗಿ ಶಿಕ್ಷಣ ಕೊಡುವ ಕೆಲಸವನ್ನು ನನ್ನ ಶಕ್ತಿಯಾದ ಮಟ್ಟಿಗೂ ನಡೆಸತೊಡಗಿದೆನು. ಇವೆರಡೂ ಒಂದು ಕಾಲದಲ್ಲಿ ಅತಿ ವಿಶಾಲವಾದ ವಾಚಕ ವರ್ಗವನ್ನು ಸಂಪಾದಿಸಿದ್ದುವು. ಒಂದೊಂದಕ್ಕೂ ಸುಮಾರು ನಲವತ್ತು ಸಹಸ್ರ ಗ್ರಾಹಕರಿದ್ದರು. 'ನವಜೀವನ'ದ ಗ್ರಾಹಕರ ಸಂಖ್ಯೆಯು ಒಮ್ಮೆಯೇ ಏರಿತು. ಆದರೆ 'ಯಾಂಗ್ ಇಂಡಿಯಾ'ದ ವರ್ಗಣೆದಾರರ ಸಂಖ್ಯೆಯು ನಿಧಾನವಾಗಿ ಹೆಚ್ಚಿತು. ನನಗೆ ಕಾರಾಗೃಹವಾಸವಾದ ಮೇಲೆ ಇವೆರಡು ಸಂಖ್ಯೆಗಳೂ ಬಹು ಕಡಮೆಯಾದುವು. ಇಂದು ಇವು ಎಂಟು ಸಾವಿರದೊಳಗಿವೆ.

ಈ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಪ್ರಕಟಿಸಕೂಡದೆಂದು ನಾನು ಮೊಟ್ಟಮೊದಲಿನಿಂದ ನಿರ್ಧಾರ ಮಾಡಿಕೊಂಡೆನು. ಇದರಿಂದ ಅವುಗಳಿಗೆ ಯಾವ ನಷ್ಟವೂ ಆಗಿಲ್ಲವೆಂದು ನಾನು ಎಣಿಸುತ್ತೇನೆ. ಅಷ್ಟೇ ಅಲ್ಲ, ಇದರಿಂದ ಅವು ತಮ್ಮ ಸ್ವತಂತ್ರ ವ್ಯಕ್ತಿಯನ್ನು ಕಾಯ್ದುಕೊಳ್ಳಲು ಬಹು ಸಹಾಯವಾಗಿದೆಯೆಂದೇ ನನ್ನ ಅಭಿಪ್ರಾಯ.

ಮತ್ತು ಈ ಪತ್ರಿಕೆಗಳು ನನ್ನ ಮನಶ್ಶಾಂತಿ ಸ್ಥಾಪನೆಗೆ ಸಹಾಯಕವಾದುವು. ಏಕೆಂದರೆ ಒಡನೆಯೇ ಕಾನೂನಿನ ಸವಿನಯ ಭಂಗವನ್ನು ಮಾಡುವ ಯೋಚನೆಗೇ ಅವಕಾಶವಿಲ್ಲದಿದ್ದರೂ ಇವುಗಳ ಮೂಲಕ ನನ್ನ ಅಭಿಮತವನ್ನು ನಿರಾತಂಕವಾಗಿ ವ್ಯಕ್ತಪಡಿಸಿ ಜನರಿಗೆ ಧೈರ್ಯಗೊಡಲು ನನಗೆ ಸಾಧ್ಯವಾಯಿತು. ಹೀಗೆ ಇವೆರಡು ಪತ್ರಿಕೆಗಳೂ ಜನರಿಗೆ ಈ ಸಂಕಟ ಕಾಲದಲ್ಲಿ ಹೆಚ್ಚು ಸಹಾಯವನ್ನು ಮಾಡಿ ಯುದ್ಧದ ಕಾನೂನಿನ ಅತ್ಯಾಚಾರವನ್ನು ತಗ್ಗಿಸುವ ವಿಷಯದಲ್ಲಿ ಅಳಿಲ ಸೇವೆಯನ್ನು ಮಾಡಿದುವೆಂದು ನಾನು ಎಣಿಸುತ್ತೇನೆ.

ವಿಮರ್ಶೆ.

ಭಾರತ ಧರ್ಮ.

ಲೇಖಕರು:—ಶ್ರೀ. ಕೇಶವಾದ್ರಿಶರ್ಮಾ, ಚಂದ್ರ ವಿಲಾಸ್, ವಿಶ್ವೇಶ್ವರಪುರ, ಬೆಂಗಳೂರು ಸಿಟಿ, ಬೆಲೆ ೩—೦—೦.

ಇದು ಎರಡು ಭಾಗಗಳಿಂದ ಕೂಡಿದ ತಾತ್ವಿಕ ಗ್ರಂಥ. ಮೊದಲನೇ ಭಾಗದಲ್ಲಿ ಜ್ಞಾನಾನಂದರ ಉಪದೇಶ ಸದ್ವೃತ್ತಿ ಮತ್ತು ಮುಂದಿನ ಮಾರ್ಗ, ರಾಧಾಕೃಷ್ಣರ ಚರಿತ್ರೆ, ಹೊಸ ಹಳವಿ ಬಂದಿವೆ. ಎರಡನೇ ಭಾಗದಲ್ಲಿ ರಾಧಾಕೃಷ್ಣನ್ ಇವರ ಇಂಗ್ಲಿಷ್ ಭಾಷಣಗಳ ಕನ್ನಡಾನುವಾದ ಅನುವಾದವು ಸೊಗಸಾಗಿದೆ. ಶರ್ಮರು ಒಳ್ಳೆ ಚಿಕಿತ್ಸಾ ಬುದ್ಧಿಯುಳ್ಳವರೆಂಬುದು ಅವರ ಬರವಣಿಗೆಯಿಂದಲೇ ತಿಳಿದುಬರುತ್ತದೆ. ರಾಧಾಕೃಷ್ಣರು ಶರ್ಮರಿಗೆ ಗುರುಗಳಾಗಿದ್ದು ಶರ್ಮರು ಗುರುಗಳ ಇಂಗ್ಲಿಷ್ ವ್ಯಾಖ್ಯಾನಗಳನ್ನು ಕನ್ನಡಿಸಿರುವುದರಿಂದ ಗುರುಗಳ ಭಾವನೆಗಳು ಇವರ ಗ್ರಂಥಗಳಲ್ಲಿ ಚೆನ್ನಾಗಿ ಚಿತ್ರಿತವಾಗಿರತಕ್ಕವೆಂದು ನಮ್ಮ ನಂಬಿಕೆ. ಈ ನಷ್ಟಪಟ್ಟದ ಪಕ್ಕದ ಒಂದು ಆಶ್ರಮವನ್ನು ಕಟ್ಟಿಸಿ ಲೋಕಸೇವೆಯನ್ನು ಮಾಡಬೇಕೆಂಬ ಆಸೆಯು ಗ್ರಂಥಕರ್ತರಿಗೆ ಇರೋಣದರಿಂದ ಸುಲಭ ಬೆಲೆಗೆ ಸಿಗತಕ್ಕ "ಭಾರತ ಧರ್ಮ" ಎಂಬ ಗ್ರಂಥವನ್ನು ಕನ್ನಡ ಭಾಷಾಭಿಮಾನಿಗಳು ಕೊಂಡುಕೊಂಡು ಶರ್ಮರ ಆಕಾಂಕ್ಷೆಯು ಈಡೇರುವಂತೆ ಮಾಡಬೇಕೆಂದು ನಮ್ಮ ಕೋರಿಕೆ.

"ಚೀಫ್ ಫಾರೆಸ್ಟ್ ಆಫೀಸು,"
ಮಡಿಕೇರಿ,
ತಾ 26—5—29

ನೋಟೀಸು.

ಕೊಡಗಿನ ರಿಸರ್ವ್ ಫಾರೆಸ್ಟುಗಳಲ್ಲೂ, ಸರಕಾರಿ ಪೈಸಾರಿಗಳಲ್ಲೂ, ದೇವರ ಕಾಡುಗಳಲ್ಲೂ, ಮತ್ತು ಊರುಡ್ವೆಗಳಲ್ಲೂ 1929ನೇ ಇಸವಿ ಜುಲೈ 1 ರಿಂದ 1930ನೇ ಇಸವಿ ಜೂನ್ 30ನೇ ತಾರೀಕಿನ ವರೆಗೆ ಮೈನರ್ ಫಾರೆಸ್ಟ್ ಉತ್ಪತ್ತಿಯನ್ನು ಜಮಾಯಿಸುವ ಹಕ್ಕನ್ನು ಸೋಮವಾರಪೇಟೆಯಲ್ಲಿ 10—6—29ರಲ್ಲೂ, ಫ್ರೇಜರ್‌ಪೇಟೆಯಲ್ಲಿ 11—6—29ರಲ್ಲೂ, ಮಡಿಕೇರಿಯಲ್ಲಿ 14—6—29ರಲ್ಲೂ, ವೀರರಾಜೇಂದ್ರಪೇಟೆಯಲ್ಲಿ 12—6—29ರಲ್ಲೂ, ಪೊನ್ನಂಪೇಟೆಯಲ್ಲಿ 13—6—29ರಲ್ಲೂ ಹರಾಜು ಮಾಡಲಾಗುವುದು.

ಹಾರಂಗಿ ನದಿಯ ದಕ್ಷಿಣಕ್ಕೂ, ಹಾರಂಗಿಯಿಂದ ಆನೆಚೌಕೂರು ವರೆಗಿನ ಕೊಡಗಿನ ಪೂರ್ವ ಸರಹದ್ದಿನ ಪಶ್ಚಿಮಕ್ಕೂ ಮತ್ತು ಅಲ್ಲಿಂದ ಗೋಣಿಕೊಪ್ಪಲು, ಪೊನ್ನಂಪೇಟೆ, ಹುದಿಕೇರಿ ಮತ್ತು ಶ್ರೀಮಂಗಲಕ್ಕಾಗಿ ಕುಟ್ಟಕ್ಕೆ ಹೋಗುವ ಮಾರ್ಗದ ಮಧ್ಯೆ ಇರುವ ಕೊಡಗಿನ ಭಾಗದಲ್ಲಿ ಕಕ್ಕೆ ಚಕ್ಕೆಯನ್ನು 1—7—29 ರಿಂದ 30—6—30 ರ ವರೆಗೆ ತೆಗೆಯುವ ಹಕ್ಕನ್ನು ಸಹ ಮಡಿಕೇರಿಯಲ್ಲಿ ತಾ. 14—6—29ರಲ್ಲಿ ಹರಾಜು ಮಾಡಲಾಗುವುದು.

ಹೆಚ್ಚಿನ ಸಂಗತಿಗೆ ಇವರಿಗೆ ಬರೆಕೊಳ್ಳುವುದು:

"ಚೀಫ್ ಫಾರೆಸ್ಟ್ ಆಫೀಸರ್"
2—2 ಮಡಿಕೇರಿ.

---

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉಷ್ಣವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು. —ಕ್ರಯ ಡಬ್ಬಿ 1 ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ 7—0—0

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೩. ಮಲೇರಿಯಾ ನಿವಾರಣಿ.

ದಿನ ಬಿಟ್ಟು ಬರುವಜ್ವರ, ಮಲೆ ಜ್ವರ, 2 ಅಥವಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುರಿ, ತಲೆ ಉರಿ, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1—4—0. 3 ಕ್ಕೆ 3—8—0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0—8—0, 3ಕ್ಕೆ 1 6-0.

೬. ಕಸ್ತೂರಿ ಮಿಶ್ರಣ.

ದಶ ಮೂಲಾರಿಷ್ಟ ಬಾಣಂತಿಯರಿಗೆ ಬಾಟ್ಲಿ 1 ಕ್ಕೆ 1-8-0, 3 ಬಾಟ್ಲಿಗೆ 4—4—0.

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ. ಬಾಟ್ಲಿ 1 ಕ್ಕೆ 1 4-0, 3 ಬಾಟ್ಲಿಗೆ 3-8-0

೮. ಚವನ ಪ್ರಾಸ ಡಬ್ಬಿ 1 ಕ್ಕೆ 2—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸ ಬಹುದು ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದೀಕ್ ಫಿಜಿಸಿಯನ್ಸ್,
52—31 ರಥಬೀದಿ, ಮಂಗಳೂರು, ದ. ಕನ್ನಡ.

ಒಂದೇ ಬ್ಲಾಕಿನಲ್ಲಿರುವ ಒಳ್ಳೆ ಸೊತ್ತುಗಳು

ಮಾರಾಟಕ್ಕಿವೆ.

ಕೊಡಗು ಅಮ್ಮತ್ತಿ—ಸಿದ್ದಾಪುರನಾಡು ಮಾಲ್ದಾರೆ ಗ್ರಾಮದಲ್ಲಿ ಸರ್ಕಾರಿ ರಸ್ತೆಗೆ ಮುಟ್ಟಿರುತ್ತೆ. ಸಿದ್ದಾಪುರದಿಂದ ಐದು ಮೈಲು ದೂರದಲ್ಲಿ ಮೈಸೂರಿಗೆ ಹೋಗುವ ರಸ್ತೆಯಲ್ಲಿದೆ. ಹೋಗಿಬರಲು ಬಸ್ಸುಗಳ ಅನುಕೂಲಗಳಿವೆ.

ಸೊತ್ತುಗಳ ವಿವರ—

17 ಎಕ್ರೆ ಕಿತ್ತಳೆತೋಟ ಬಹು ಒಳ್ಳೆ ಸ್ಥಿತಿಯಲ್ಲಿದೆ
30 ಎಕ್ರೆ ನೀರಾವರಿ ಗದ್ದೆ.
13 ಎಕ್ರೆ ಹೊಲ (ರಾಗಿ ಬೆಳೆಯುವಂಥಾದ್ದು)
3 ಎಕ್ರೆ ಕಾಫಿತೋಟ ಬಹು ಒಳ್ಳೆ ಸ್ಥಿತಿಯಲ್ಲಿದೆ
60 ಎಕ್ರೆ ಜಾತಿಮರಗಳಿರುವ ಹೊಸ ಕಾಡು (ಕಾಫಿ ಮತ್ತು ಕಿತ್ತಳೆ ಸಾಗುವಳಿಗೆ ಯೋಗ್ಯವಾದದ್ದು)

ಇದರ ಕ್ರಯದ ವಿಷಯ ಕೆಳಗೆ ಕಂಡ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು

ಟಿ. ಎ. ಕುಪ್ಪುಸ್ವಾಮಿ ಪಿಳ್ಳೆ,
4—3 ಸಿದ್ದಾಪುರ. (ಕೊಡಗು.)

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್, ಈಡಿಗ ಯಕ್ಸ್‌ಪೆಲ್ಲರ್ಸ್, ಮೈಸೂರು.

ನಮ್ಮಲ್ಲಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಫಿಲ್ಟರುಗಳಿಂದ ಶೋಧಿಸಲ್ಪಟ್ಟ ಅಪ್ಪಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸಹಾ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯಲಪೇಕ್ಷೆಯುಳ್ಳವರು ಸಂತೆಪೇಟೆಯಲ್ಲಿ ಇರುವ ನನ್ನ ಅಂಗಡಿಯಲ್ಲಾಗಲಿ ಅಗ್ರಹಾರ ಮಿಲ್ ಬಳಿಯಲ್ಲಾಗಲಿ ಯಾ ಪತ್ರ ದ್ವಾರ ತಿಳಿಯಬಹುದು.
26—3

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ರವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ೧ಕ್ಕೆ 0—14—0. ಟಿ. ಪಿ. 0—9—0.

ಕೆ. ಟಿ. ಡೋಂಗರೆ ಕಂಪೆನಿ,
52—38 ಗಿರಗಾಂವ, ಮುಂಬಯಿ.

ವರ್ತಮಾನ ಸಂಗ್ರಹ.

ಒ ಳ ದೇ ಶ .

ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಈ ದಿನ ಮಧ್ಯಾಹ್ನ 2 ಗಂಟೆಗೆ ಕೌನ್ಸಿಲ್ ಹಾಲ್‌ನಲ್ಲಿ ನಡೆಯುವದು.

ರಾವ್ ಸಾಹೇಬ್ ಕೋಡಿಮಣಿಯಂಡ ಸುಬ್ಬೈಯ್ಯನವರಿಗೆ ರಾವ್ ಬಹದ್ದೂರ್ ಬಿರುದು ಕೊಡಲಾಗಿದೆ.

ಸುಂಟಿಕೊಪ್ಪದ ಮೆ. ಬಿ. ಟಿ. ಗೋವಿಂದೈಯ್ಯನವರು ಮೈಸೂರು ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಕಮಿಷನರಾದ ಮೆ. ಜಿ. ಡಬ್ಲ್ಯು ಪ್ರಿಸ್ಟ್ಲಿಯವರು ಅನಾರೋಗ್ಯದ ದೆಸೆಯಿಂದ ಈ ತಾ. 17 ರಿಂದ ಒಂದು ತಿಂಗಳು ರಜೆಯಲ್ಲಿ ಹೋಗುವರು.

ಮಡಿಕೇರಿ ಭಾಗಮಂಡ್ಲ ರಸ್ತೆಯ ಅಪ್ಪಂಗಳ ಸೇತುವೆಯು ಈ ತಾ 6ರಲ್ಲಿ ನೀರಿನ ಪ್ರವಾಹದಿಂದ ಮುರಿದು ಹೋಗಿ ಜನರಿಗೆ ಅತ್ತಿತ್ತ ದಾಟಲು ಬಹಳ ತೊಂದರೆಯಾಗಿದೆ

ಕಳೆದ ಏಪ್ರಿಲ್ ತಿಂಗಳಲ್ಲಿ ಕೊಡಗಿನಲ್ಲಿ 314 ಜನನಗಳೂ, 350 ಮರಣಗಳೂ ಆದುವೆಂದೂ, ಈ ಪೈಕಿ 222 ಮರಣಗಳು ಮಲೇರಿಯ ಜ್ವರದಿಂದ ಮಾತ್ರ ಸಂಭವಿಸಿದವೆಂದೂ ಪ್ರಕಟವಾಗಿದೆ.

ಯೂರೋಪಿಯನ್ ಪ್ಲಾಂಟರುಗಳ ಪರವಾಗಿ ಮೆ. ಪಿ ಜಿ. ಟಿಪ್ಪಿಂಗ್‌ರವರ ಬದಲಾಗಿ ಲೆಫ್ಟಿನೆಂಟ್ ಕರ್ನಲ್ ಹವರ್ಡ್ ಫರ್ಗುಸನ್ ಮೂರ್ಲೆಂಡ್‌ರವರು ಕೊಡಗು ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರಾಗಿ ಚುನಾಯಿಸಲ್ಪಟ್ಟಿರುವರು.

ಮಳೆಗಾಲ ಪ್ರಾರಂಭಿಸುವ ಕಾರಣ ಜಂಬೂರು ಸುಂಟಿಕೊಪ್ಪ ರಸ್ತೆಯ ಹರದೂರು ಹಂಗಾಮಿ ಸೇತುವೆಯನ್ನು ಕಳೆದ ತಾ. 30 ರಿಂದ ವೈವಾಟಗಳಿಗೆ ಮುಚ್ಚಲ್ಪಟ್ಟಿದೆಯೆಂದು ಎಗ್ಸಿಕ್ಯೂಟಿವ್ ಇಂಜಿನಿಯರರವರು ತಿಳಿಸಿರುತ್ತಾರೆ.

ಯೂರೋಪಿಯನ್ ಪ್ಲಾಂಟರುಗಳ ಪರವಾಗಿ ಮೆ ಪಿ. ಜಿ. ಟಿಪ್ಪಿಂಗ್‌ರವರ ಮತ್ತು ಮೆ. ಯಸ್. ಸಿ. ರೇಮಂಡ್‌ರವರ ಬದಲು ಮೆ ಜಿ. ಯಸ್. ಮೋರ್ಗನ್ ಮತ್ತು ಜೆ ಹೆಚ್. ಜೆಫ್ರಿಯವರು ಡಿಸ್ಟ್ರಿಕ್ಟ್‌ಬೋರ್ಡುಮೆಂಬರುಗಳಾಗಿ ಆರಿಸಲ್ಪಟ್ಟಿರುವರು

ಈ ತಾರೀಖು 1 ರಿಂದ ದೇಶದಲ್ಲಿ ಮಳೆಗಾಲವು ಸರಿಯಾಗಿ ಪ್ರಾರಂಭಿಸಿದಂತೆ ಕಾಣುತ್ತದೆ. ಈಗ ಮಡಿಕೇರಿಯಲ್ಲಿ ಮಳೆಯು ಜೋರಾಗಿ ಬೀಳುತ್ತಿದೆ. ತಾ 1ರಿಂದ 7ರ ವರೆಗೆ ಮಡಿಕೇರಿಯಲ್ಲಿ 16.03 ಇಂಚು ಮಳೆಯಾಗಿದೆ. ತಾ. 5ರಲ್ಲಿ 4.56 ಇಂಚು ಮಳೆ ಬಿತ್ತು.

ಕೊಡಗು ರೆಜಿಸ್ಟ್ರೇಶನ್ ಟೆಸ್ಟ್ ಪರೀಕ್ಷೆಯು ಬರುವ ಆಗೋಸ್ತು ತಾ. 26ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದೂ ಸದರಿ ಪರೀಕ್ಷೆಗೆ ಕೂರಲು ಇಚ್ಛಿಸುವವರು ಜುಲೈ 31ರೊಳಗೆ ತಲಪುವಂತೆ ರೆಜಿಸ್ಟ್ರೇಶನಿನ ಇನ್‌ಸ್ಪೆಕ್ಟರ್ ಜನರಲಿಗೆ ಅಪ್ಲಿಕೇಶನ್ ಕಳುಹಿಸಬೇಕೆಂತಲೂ ಪ್ರಕಟವಾಗಿದೆ.

ಕಳೆದ ಜನವರಿ 1ರಲ್ಲಿ ಹಾಕತ್ತೂರಿನಲ್ಲಿ ನಡೆದ ಖೂನಿ ಕೇಸಿನಲ್ಲಿ ಅಕ್ಕಾರಿ ಉತ್ತೈಯ್ಯ, ಪುಟ್ಟೈಯ್ಯ ಮತ್ತು ಕಟ್ರತನ ತಿಮ್ಮೈಯ್ಯ ಎಂಬವರಿಗೆ ಸೆಷನ್ಸ್ ಜಡ್ಜರಿಂದ ಫಾಸಿ ಶಿಕ್ಷೆಯು ವಿಧಿಸಲ್ಪಟ್ಟದ್ದರ ಮೇಲೆ ಜ್ಯುಡಿಷ್ಯಲ್ ಕಮಿಷನರಿಗೆ ಅಪ್ಪೀಲು ಮಾಡಿದಲ್ಲೂ ಫಾಸಿ ಶಿಕ್ಷೆಯೇ ಖಾಯಂ ಮಾಡಲ್ಪಟ್ಟಿದೆ.

ಶನಿವಾರಸಂತೆಯ 'ಕೊಡಗು ವೀರಶೈವ ವಿದ್ಯಾನಿಧಿ'ಯಿಂದ ವೇತನ ಹೊಂದಿ ವಿದ್ಯಾಭ್ಯಾಸ ಮಾಡುವಂಥ ವಿದ್ಯಾರ್ಥಿಗಳು ಇದ್ದರೆ ಈ ತಾ. 20 ರೊಳಗೆ ಅಪ್ಲಿಕೇಶನು ಕಳುಹಿಸಬೇಕೆಂದೂ ಇಲ್ಲವೆ ನಿಧಿಯ ಅಧ್ಯಕ್ಷರನ್ನು ಖುದ್ದು ಕಾಣಬೇಕೆಂದೂ ನಂತರ ಬರುವ ಅಪ್ಲಿಕೇಶನುಗಳಿಗೆ ಗಮನ ಕೊಡಲಾಗುವದಿಲ್ಲವೆಂತಲೂ ಅದರ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಸಬ್‌ಜಡ್ಜಿಯರಾದ ಮೆ. ಅಪ್ಪಾರಂಡ ಕಾರ್ಯಪ್ಪನವರು ರಿಟಯರ್ ಆಗಲು 6 ತಿಂಗಳು ರಜೆಯಲ್ಲಿ ಹೋಗುವ ಸಂದರ್ಭ ಅವರ ಕೋರ್ಟಿನ ಸಿಬ್ಬಂದಿಯವರು ತಾ. 4ರಲ್ಲಿ ಅವರನ್ನು ಪುಷ್ಪ ಫಲಾಹಾರಾದಿಗಳಿಂದ ಸತ್ಕರಿಸಿದರು. ಇವರಿಗೆ ಈ ತಾ. 3 ರಿಂದಲೇ ರಜೆ ಮಂಜೂರಾಗಿರುವದಾದರೂ ಈ ಉದ್ಯೋಗಕ್ಕೆ ಇನ್ನೂ ಬೇರೆ ಯಾರನ್ನೂ ನೇಮಿಸದೆ ಇರುವದರಿಂದ ಇವರೇ ಕೆಲಸ ನಡಿಸುತ್ತಿರುವರು.

ಮದ್ರಾಸು ಪ್ರಾಂತ್ಯದ ಇಂಡಿಯನ್ ಪೋಲೀಸು ಸರ್ವಿಸಿಗೆ ಒಬ್ಬ ಮಹಮ್ಮದೀಯನನ್ನು ಮತ್ತು ಒಬ್ಬ ಬ್ರಾಹ್ಮಣೇತರ ಹಿಂದು ಯಾ ಆಂಗ್ಲೋ ಇಂಡಿಯನನ್ನು ಆರಿಸಲ್ಪಡುವದೆಂದೂ, ಕೊಡಗಿನಲ್ಲಿ ಅದಕ್ಕೆ ಬೇಕಾದ ಯೋಗ್ಯತೆಗಳಿರುವವರು (ಫೋರ್ಟ್ ಸೆಯಿಂಟ್ ಜಾರ್ಜ್ ಗಜೆಟ್‌ನಲ್ಲಿ ಪ್ರಕಟವಾದ ಮೇರೆ) ತಮ್ಮ ಅರ್ಜಿಗಳನ್ನು ಈ ತಿಂಗಳು 18ರೊಳಗೆ ಕಮಿಷನರ ಆಫೀಸಿಗೆ ಕಳುಹಿಸತಕ್ಕದೆಂದೂ ಪ್ರಕಟವಾಗಿದೆ.

ಈ ತಾ. 4ರಲ್ಲಿ ಮೆ. ಮುಕ್ಕಾಟಿರ ಕಾರ್ಯಪ್ಪನವರು, ತಮ್ಮ ಪತ್ನಿ ಮತ್ತು ತೊಟ್ಟಿಲು ಮಗುವಿನ ಸಮೇತ, ಬೇರೆ ಕೆಲವರು ಸೇರಿ 7 ಜನರು ಬೆಳ್ಳುಮಾಡಿನಲ್ಲಿ ದೋಣಿಯಲ್ಲಿ ಹೊಳೆದಾಟುತ್ತಿದ್ದಾಗ ಇನ್ನೊಂದು ದಡಕ್ಕೆ ಬಂದು ತಲಪುವಷ್ಟರಲ್ಲಿ ದೋಣಿಯು ಮಗುಚಿಹೋಗಿ ಎಲ್ಲರೂ ಹೊಳೆಗೆ ಬಿದ್ದರೂ ಬೇಟೆಯವರ ಸಹಾಯದಿಂದ ದಡ ಸೇರಿದರೆಂದೂ, ದೋಣಿ ನಡಿಸುವ ಮಾಪಿಳ್ಳೆಯ ಚಾತುರ್ಯದಿಂದ ತೊಟ್ಟಿಲು ಮಗುವು ಕಾಪಾಡಲ್ಪಟ್ಟಿತ್ತೆಂದೂ, ಸದರಿ ದೋಣಿಯು ಆಗಾಗ್ಯೆ ಮಗುಚುವಂಥಾದ್ದಾದುದರಿಂದ ಅದನ್ನು ಬದಲಾಯಿಸುವದು ಉತ್ತಮವೆಂದೂ ಒಂದು ಬಾತ್ಮಿ.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಮಡಿಕೇರಿ ಹೈಸ್ಕೂಲಿನಿಂದ ಪರೀಕ್ಷೆಗೆ ಹೋದ 35 ಹುಡುಗರಲ್ಲಿ ಈ ಕೆಳಗಿನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು: ಮೆ. ಗಳಾದ 1 ಪಟ್ಟಮಾಡ ಪಿ. ಕರುಂಬೈಯ್ಯ, 2. ಹುಣಸೂರು ವಿ ರಾಮಕೃಷ್ಣ, 3. ಕುಕ್ಕೆಮನೆ ಯಸ್. ರಾಮಚಂದ್ರರಾವ್, 4. ದೇಶಕೋಡಿ ರಾಘವೇಂದ್ರರಾವ್, 5 ಚಾರ್ಮಂಗಡ ಮಾದಪ್ಪ, 6 ಕೊಂಗಂಡ ಎ ಅಪ್ಪಚ್ಚು, 7. ಪಾಲೇಕಂಡ ಯಂ. ದೇವೈಯ್ಯ, 8. ಪೆಮ್ಮಂಡ ಯಸ್ ಮಾಚೈಯ್ಯ, 9. ಪೆಮ್ಮಣಮಾಡ ಯಸ್. ಚಂಗಪ್ಪ, 10 ಕೂತಂಡ ಯಂ. ಚಂಗಪ್ಪ, 11. ಕೀತಿಯಂಡ ಸಿ. ಗಣಪತಿ, 12 ಕಾಡುಮಂಡ ಯಂ. ಐಯ್ಯಪ್ಪ, 13. ಮಚ್ಚಿರ ಬಿ. ಮುಂದಣ್ಣ, 14. ಅಡೆಮನೆ ಪಿ. ವೆಂಕಟಸುಬ್ಬೈಯ್ಯ ಮತ್ತು 15 ಮೊರಾಜೆ ಆರ್. ಶ್ರೀಧರರವರು. ಮಡಿಕೇರಿ ಕಾನ್ವೆಂಟ್ ಹೈಸ್ಕೂಲಿನಿಂದ ಹೋದ 5ರಲ್ಲಿ 3 ಹುಡುಗಿಯರೂ, ವೀರರಾಜೇಂದ್ರಪೇಟೆ ಹೈಸ್ಕೂಲಿನಿಂದ 18ರ ಪೈಕಿ 10 ವಿದ್ಯಾರ್ಥಿಗಳೂ ಪಾಸಾಗಿರುವರೆಂದು ವರ್ತಮಾನ. ಇವರ ಹೆಸರುಗಳನ್ನು ಬರುವವಾರ ಪ್ರಕಟಿಸುವೆವು.

ಬರುವ ಕೌನ್ಸಿಲು ಚುನಾವಣೆ ಸುಲುವಾಗಿ ಮೊದಲಿನಂತೆ ಯೂರೋಪಿಯನರಿಗೆ ಅವರ ಸಂಘದ ಸೆಕ್ರೆಟರಿಯವರೂ, ಆಯಾ ತಾಲೋಕಿನ ಸುಭೇದಾರರುಗಳೂ ರಿಟರ್ನಿಂಗ್ ಆಫೀಸರುಗಳಾಗಿಯೂ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ರಿವೈಜಿಂಗ್ ಆಫೀಸರಾಗಿಯೂ ನೇಮಿಸಲ್ಪಟ್ಟಿರುವರು. ಅಲ್ಲದೆ ಮೊದಲಿನಂತೆಯೇ ಆಯಾಯ ಕಾನ್‌ಸ್ಟಿಟ್ಯುವೆನ್ಸಿಗಳ ಮುಖ್ಯ ಪಟ್ಟಣಗಳನ್ನು ಹೆಡ್ ಕ್ವಾರ್ಟರ್ಸ್‌ಗಳಾಗಿಯೂ ಚೀಫ್ ಕಮಿಶನರು ನೇಮಿಸಿರುವರು. ಬರುವ ಆಗೋಸ್ತು ತಿಂಗಳಲ್ಲಿ ರಿಟರ್ನಿಂಗ್ ಆಫೀಸರುಗಳು ವೋಟರುಗಳ ಕರಡು ಪಟ್ಟಿಯನ್ನು ತಯಾರಿಸಿ ಪ್ರಕಟಿಸಬೇಕೆಂದೂ, ಆ ಪಟ್ಟಿಯಲ್ಲಿ ತಪ್ಪು ಹೆಸರುಗಳಿದ್ದೋ, ಹೆಸರುಗಳು ಬಿಟ್ಟು ಹೋಗಿಯೋ ನ್ಯೂನತೆಗಳಿದ್ದರೆ ಅವುಗಳನ್ನು ಸರಿಪಡಿಸಲು ಸೆಪ್ಟೆಂಬರ್ 30ರೊಳಗೆ ರಿವೈಜಿಂಗ್ ಆಫೀಸರಿಗೆ ಬರೆದುಕೊಳ್ಳಬೇಕೆಂದೂ ಅಂಥಾ ಫಿರ್ಯಾದುಗಳನ್ನು ವಿಚಾರಿಸಲು ರಿವೈಜಿಂಗ್ ಆಫೀಸರು ಅಕ್ಟೋಬರು 10ರ ಒಳಗೆ ಒಂದು ದಿನವನ್ನು ನಿಶ್ಚೈಸಬೇಕೆಂದೂ, ಅಕ್ಟೋಬರ್ 25ರಲ್ಲಿ ರಿವೈಜಿಂಗ್ ಆಫೀಸರು ತಿದ್ದುಪಡಿ ಮಾಡಿ ಸಂಪಾದಿಸಿದ ವೋಟರುಗಳ ಪಟ್ಟಿಯ ನಕಲನ್ನು ಸಂಬಂಧಪಟ್ಟ ರಿಟರ್ನಿಂಗ್ ಆಫೀಸರುಗಳಿಗೆ ಕಳುಹಿಸಬೇಕೆಂದೂ ಅಂಥಾ ಪಟ್ಟಿಯನ್ನು ರಿಟರ್ನಿಂಗ್ ಆಫೀಸರುಗಳು ನವಂಬರು 25ರಲ್ಲಿಯೂ ಅದರೊಳಗೆ ಪುನಹ ಪ್ರಕಟಿಸತಕ್ಕದ್ದು ಎಂದೂ ಚೀಫ್ ಕಮಿಶನರು ಗಜೆಟಿನಲ್ಲಿ ಪ್ರಕಟಿಸಿರುವರು.

ಹಿಂದೂದೇಶ.

ರಂಗೂನಿನ ಮೊಲ್ಮಾಗನ್ ಎಂಬಲ್ಲಿ ಒಂದು ಬೆಂಕಿ ಕಡ್ಡಿ ಕಾರ್ಖಾನೆಗೆ ಬೆಂಕಿ ಬಿದ್ದು ಸುಮಾರು 12 ಲಕ್ಷ ರೂಪಾಯಿ ನಷ್ಟ ಉಂಟಾಗಿದೆ.

ಮದ್ರಾಸು ಪ್ರಾಂತ್ಯದಲ್ಲಿ ಸಬ್‌ಜಡ್ಜರ ಉದ್ಯೋಗಗಳಿಗೆ ಲಾಯರುಗಳನ್ನು ನೇರಾ ನೇಮಿಸಲಾಗುವದೆಂಬ ವರ್ತಮಾನವು ಸುಳ್ಳೆಂದು ತಿಳಿಯಬರುತ್ತದೆ

ತಾ 4ರಲ್ಲಿ ಪೋಲೀಸಿನವರು ಕಲ್ಕತ್ತಾದಲ್ಲಿ 'ಸಾಧಿಂತ ಮೆಂಟ' ಬಂಗಾಳಿ ಪತ್ರಿಕೆಯ ಆಫೀಸನ್ನು ಶೋಧಿಸಿ ಅದರ ಸಂಪಾದಕರಾದ ಮೆ. ಫಣಿ ಭೂಷಣ ದಾಸಗುಪ್ತರನ್ನು ರಾಜದ್ರೋಹದ ಲೇಖನಗಳನ್ನು ಪ್ರಕಟಿಸಿದರೆಂಬ ತಕ್ರಾರಿನ ಮೇಲೆ ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಟ್ಟಿರುವರು

ಮದ್ರಾಸು ಸೈಮನ್ ಕಮಿಟಿಯವರು, ಮದ್ರಾಸು ಪ್ರಾಂತ್ಯದಲ್ಲಿ ಎಲ್ಲಾ ಇಲಾಖೆಗಳನ್ನು ಜನರ ಪ್ರತಿನಿಧಿಗಳ ಅಧಿಕಾರಕ್ಕೆ ಬಿಟ್ಟುಕೊಡಬೇಕೆಂದೂ, ಸಂಪೂರ್ಣ ಪ್ರಾಂತೀಕ ಜವಾಬ್ದಾರಿ ಸರ್ಕಾರ (ಪ್ರೊವಿನ್ಸ್ಯಲ್ ಆಟಾನಮಿ) ನಡೆಸಬೇಕೆಂದೂ ಒಮ್ಮತದಿಂದ ಶಿಫಾರಸ್ಸು ಮಾಡಿರುವರು

ತಾ. 4 ರಲ್ಲಿ ನಡೆದ ಮದ್ರಾಸು ಮುನ್ಸಿಪಲ್ ಕಾರ್ಪೊರೇಶನ್ ಮೀಟಿಂಗಿನಲ್ಲಿ ಅಧ್ಯಕ್ಷರು ಹಾಜರಿಲ್ಲದ್ದರಿಂದ ಮಿಸೆಸ್ ಹಾನೆನ್ ಅಂಜೆಲೋರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು ಕಲ್ಲಿದ್ದಲು ಕಂಟ್ರಾಕ್ಟಿನ ವಿಷಯ ಠರಾವು ಚರ್ಚೆಗೆ ಬಂದಾಗ ಜಸ್ಟಿಸ್ ಪಾರ್ಟಿಯವರಿಗೂ, ಸ್ವರಾಜ್ಯ ಪಾರ್ಟಿಯವರಿಗೂ ವಿವಾದಗಳುಂಟಾಗಿ ಗಲಿಬಿಲಿ ಎದ್ದು ಜಸ್ಟಿಸ್ ಪಾರ್ಟಿಯವರು ಮೀಟಿಂಗನ್ನು ಬಿಟ್ಟು ಎದ್ದು ಹೋದರು. ನಂತರ ಮೀಟಿಂಗು ಸಾಂಗವಾಗಿ ನಡೆಯಿತು.

ಮಹಾರಾಷ್ಟ್ರ ಪ್ರಾಂತ್ಯದಲ್ಲಿ ಇತ್ತೀಚೆಗೆ ಹೆಚ್ಚಿಸಿರುವ ಕಂದಾಯವನ್ನು ಕೊಡದೆ ಬಾರ್ಡೋಲಿಯಲ್ಲಿ ನಡಿಸಿದಂತೆ ಸತ್ಯಾಗ್ರಹವನ್ನು ನಡಿಸಲು ಅಲ್ಲಿಯ ಕೆಲವು ಮುಂದಾಳುಗಳು ತಯಾರು ಮಾಡುತ್ತಿರುವರಂತೆ ಮೆ ಯನ್.ಸಿ ಕೇಳ್ಕರ್, ಮೆ. ಬೋಪಾಟ್ಕರ್ ಮತ್ತು ಕೆಲವು ಕೌನ್ಸಿಲ್ ಮೆಂಬರುಗಳು ಈ ವಿಷಯವಾಗಿ ಬಾರ್ಡೋಲಿ ಹೆಸರುವಾಸಿಯ ಸರ್ದಾರ್ ವಲ್ಲಭಾಯಿ ಪಟೇಲರ ಬುದ್ಧಿವಾದವನ್ನು ಕೇಳಿರುವರು. ಇವರು ಬೊಂಬಾಯಿಯಲ್ಲಿ ಸೇರಿ ಈ ಸಂಗತಿಯನ್ನು ಕುರಿತು ಚರ್ಚಿಸಲಿರುವರು

ಊಟಕಮಂಡಿನಲ್ಲಿ ತಾ. 22ರಲ್ಲಿ ನಡೆದ ಬೈಬಲ್ ಸೊಸೈಟಿ ಮೀಟಿಂಗಿನಲ್ಲಿ ಏಸುಕ್ರಿಸ್ತನ ಜೀವನದ ಚರಿತ್ರೆಯನ್ನೂ ಬೋಧನೆಯನ್ನೂ ಜನರಿಗೆ ತಿಳಿಸಲು ಶ್ರೀಯುತ ಗಾಂಧಿಯವರು ತುಂಬಾ ಸಹಾಯಮಾಡಿದ್ದಾರೆಂತಲೂ ಅವರಿಗೆ ವಂದಿಸಬೇಕೆಂತಲೂ ಲಾರ್ಡ್ ಬಿಶಪ್‌ರವರು ಹೇಳಿದರು.

ನಗರ ಕೀರ್ತನೆಗಳನ್ನು ಮಾಡಲು ಸರ್ಕಾರದವರು ಅಡ್ಡಿ ಮಾಡಿರುವ ಕಾರಣ ಯುನೈಟೆಡ್ ಪ್ರಾಂತ್ಯದ ಆರ್ಯ ಲೀಗಿನವರು ಮೊರಾದಾಬಾದಿನಲ್ಲಿ ಸತ್ಯಾಗ್ರಹವನ್ನು ನಡಿಸಲು ನಿಶ್ಚೈಸಿ, ಆಲ್ ಇಂಡಿಯಾ ಆರ್ಯ ಲೀಗಿನ ವರ್ಕಿಂಗ್ ಕಮಿಟಿಯ ಒಪ್ಪಿಗೆಗೆ ಬರೆದಿರುವರು. ಈ ಮಧ್ಯೆ ಅಲ್ಲಿಯ ಗವರ್ನರನ್ನು ಭೇಟಿ ಮಾಡಿ ರಾಜಿಯಿಂದ ತೀರ್ಮಾನಿಸಲು ಯತ್ನಿಸುವರು. ಇದು ಸಾಧ್ಯವಾಗದೆ ಹೋದರೆ ಸತ್ಯಾಗ್ರಹವನ್ನು ಹೂಡುವರು. ಇದಕ್ಕಾಗಿ 50,000 ರೂಪಾಯಿಗಳನ್ನು ಜಮಾಯಿಸಿರುವರು. 10000 ಸ್ವಯಂ ಸೇವಕರನ್ನು ಸೇರಿಸಲಿರುವರಂತೆ.

ವಿದೇಶ.

ಅಮನುಲ್ಲಾರವರು ಅಫ್ಘಾನಿಸ್ಥಾನವನ್ನು ಬಿಟ್ಟು ಯೂರೋಪಿಗೆ ಹೊರಟು ಹೋದನಂತರ ಕಂದಹಾರಿನಲ್ಲಿ ಅರಸನೆಂದು ಪ್ರಕಟಿಸಿದ ಸರ್ದಾರ್ ಅಲಿ ಅಹೆದ್‌ಜಾನ್‌ರವರು ಸೈನ್ಯವನ್ನು ಬಚಾಯಿಸಕೋರವರ ಸೈನ್ಯವು ಸೋಲಿಸಿ, ಜಾನ್‌ರವರನ್ನು ಸೆರೆಹಿಡಿದು ಕಾಬೂಲಿಗೆ ತೆಗೆದುಕೊಂಡು ಹೋಗಿರುವರೆಂದು ವರ್ತಮಾನ.

ಏಳುನೂರ. (ಹೆಚ್ಚಾಗಿ ರಷ್ಯನರು) ಪ್ರಯಾಣಿಕರನ್ನು ಒಯ್ಯುತ್ತಿದ್ದ "ಯುಗಮಾರೊ" ಎಂಬ ಹೊಗೆ ಹಡಗು ಬೆಂಕಿಯಿಂದ ನಾಶಮಾಡಲ್ಪಟ್ಟಿದೆಯಂತೆ. ಅದರಲ್ಲಿ ಪ್ರಯಾಣಿಕರ ಗತಿ ಏನಾಗಿದೆಯೆಂದು ಇನ್ನು ಗೊತ್ತಾಗಿರುವದಿಲ್ಲವಂತೆ

ಕಳೆದ ವಾರದಲ್ಲಿ ಮುಗಿದ ಬ್ರಿಟಿಷ್ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಕನ್‌ಸರ್ವೇಟಿವ್ ಪಾರ್ಟಿಗೆ ತುಂಬಾ ನಷ್ಟವಾಗಿ, ಲೇಬರ್ ಪಾರ್ಟಿಯವರಿಗೆ ಬಹುಮತ ದೊರೆತಿದೆ ಆದಕಾರಣ ಇಷ್ಟರವರೆಗೆ ಅಧಿಕಾರದಲ್ಲಿದ್ದ ಕನ್‌ಸರ್ವೇಟಿವ್ ಸರ್ಕಾರದವರು ರಾಜಿನಾಮೆ ಕೊಟ್ಟಿರುವರು. ಲೇಬರ್ ಪಕ್ಷದ ಮುಂದಾಳಾದ ಮೆ. ರಾಮ್ಸೆ ಮೆಕ್ಡನಾಲ್ಡ್‌ರವರನ್ನು ಮಂತ್ರಿಮಂಡಳಿಯನ್ನು ಏರ್ಪಡಿಸುವಂತೆ ಅರಸರು ಕೇಳಿಕೊಂಡಿರುವರು. ಲೇಬರ್ ಸರ್ಕಾರದಲ್ಲಿ ಲಾರ್ಡ್ ಒಲಿವಿಯರನ್ನು ಇಂಡಿಯಾದ ಸ್ಟೇಟ್ ಸೆಕ್ರೆಟರಿಯಾಗಿ ನೇಮಿಸುವರೆಂದು ವರ್ತಮಾನ.

ಪ್ರ ಕ ಟ ಣೆ .

ನನ್ನ ಬಾಬ್ತು ಎರಡು ವರ್ಷದ ಹೋರಿಗರು ಮೇಕೇರಿ ಗ್ರಾಮದಲ್ಲಿರುವ ನನ್ನ ಹೊಸ ವಾರಗಾರ ಮು. ಚಂಗಪ್ಪನಲ್ಲಿ ಬಿಟ್ಟಿದ್ದೆನು. ಈಗ್ಯೆ ಮೂರುವಾರದಿಂದ ಕಾಣದಾಗಿದೆ. ಇದರ ಚಹರೆ—ಸುಮಾರು 3½ ಅಡಿ ಎತ್ತರ, ಕಪ್ಪು ಬಣ್ಣ, ಕುತ್ತಿಗೆ ಮತ್ತು ಕೆಳಹೊಟ್ಟೆಯಲ್ಲಿ ಬಿಳುಪಾಗಿದೆ. ಕೊಂಬುಗಳು ಈಗ ಬರುವಂತಿವೆ. ಈ ಕರುವನ್ನು ವಶ ಮಾಡಿದವರಿಗೆ ಅಥವಾ ಇರುವ ಸ್ಥಳವನ್ನು ನನಗೆ ತಿಳಿಸಿದವರಿಗೆ ಎರಡು ರೂಪಾಯಿ ಬಹುಮಾನ ಕೊಡುತ್ತೇನೆ.

ಸಿ. ಅಚ್ಚುತರಾವ್,
ಸ್ಕೂಲ್ ಆಫೀಸು,
2—1 ಮಡಿಕೇರಿ.

ಮಾರಾಟಕ್ಕಿದೆ.

ಕಾಫಿ ತೋಟವು ಮಾರಾಟಕ್ಕಿದೆ. ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ವಿಳಾಸ—"ಯಂ,"
C/o. ಎಡಿಟರ್,
"ಕೊಡಗು,"
2—1 ಮಡಿಕೇರಿ.

ನೋ ಟೀ ಸು .

ಕಳೆದ ಏಪ್ರಿಲ್ ತಿಂಗಳಲ್ಲಿ ಪೊನ್ನಂಪೇಟೆಯಲ್ಲಿ ನಡೆದ ಜಮೀನ್ದಾರರ ಸಂಘದ ವಾರ್ಷಿಕ ಜನರಲ್ ಮೀಟಿಂಗಿನ ಸ್ವಾಗತ ಖರ್ಚಿಗೆ ಜಮೆಯಾದ ಹಣ ಸಾಲದ್ದರಿಂದ, 1920ರಲ್ಲಿ ಪೊನ್ನಂಪೇಟೆಯಲ್ಲಿಯೂ, 1924ರಲ್ಲಿ ಮಡಿಕೇರಿಯಲ್ಲಿಯೂ ನಡೆದ ಸಂಘದ ವಾರ್ಷಿಕ ಜನರಲ್ ಮೀಟಿಂಗುಗಳ ಸ್ವಾಗತ ಏರ್ಪಾಡಿನ ಉಳಿಕೆ ಹಣವನ್ನು ಉಪಯೋಗಿಸಲು ತೀರ್ಮಾನಿಸುವದಕ್ಕಾಗಿ. ಈ ತಾ. 17ನೇ ಸೋಮವಾರ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯಲ್ಲಿ ಕಿಗ್ಗಟ್ಟುನಾಡಿನವರ ಒಂದು ಸಭೆ ಮೀಟಿಂಗು ನಡೆಯುತ್ತದೆ. ಸರ್ವರೂ ದಯಮಾಡಿಸಬೇಕಾಗಿ ಕೋರುತ್ತೇನೆ.

ಜಮೀನ್ದಾರರ ಸಂಘದ 17ನೇ ವಾರ್ಷಿಕ ಮಹಾಸಭೆ. ಪೊನ್ನಂಪೇಟೆ.	ಅಮ್ಮಾಡ ಮಾದಪ್ಪ, ಸ್ವಾಗತ ಅಧ್ಯಕ್ಷ. ತಾ. 6—6—29.

Wanted.

Candidates for Wireless Telegraph and Station Master's Courses. Railway Fare PAID. Boarding arrangements.

Prospectus on two anna stamps—

Royal Wireless & Telegraph College,

'2—6 DELHI.

ಕೊಡಗಿನ ಮುಸಲ್ಮಾನರ ಪ್ರಥಮ ಮಹಾಸಭೆ.

ಕೊಡಗಿನ ಮುಸಲ್ಮಾನರ ಪ್ರಥಮ ಮಹಾಸಭೆಯು ತಾ. 30—4—'29ರಲ್ಲಿ ವೀರರಾಜಪೇಟೆಯಲ್ಲಿ ನಡೆಯಿತು. ಮದ್ರಾಸಿನ ಕ್ರೆಸೆಂಟ್ ಸೊಸೈಟಿಯ ಜನರಲ್ ಸೆಕ್ರೆಟರಿಯಾದ ಮಿ. ಯಸ್. ಯಂ. ಫಾಸ್ಸಿಲ್‌ರವರು ಅಧ್ಯಕ್ಷರಾಗಿದ್ದರು. ಈ ಸಭೆಯಲ್ಲಿ ಪಾಸಾದ ಠರಾವುಗಳನ್ನು ಅದರ ಸೆಕ್ರೆಟರಿಯವರು ಕಳುಹಿಸಿಕೊಟ್ಟ ಮೇರೆ ಈ ಕೆಳಗೆ ಪ್ರಕಟಿಸಲಾಗಿದೆ.

1. 5ನೇ ಜಾರ್ಜ್ ಪ್ರಭುಗಳವರ ಕಾಯಿಲೆಯು ಸಂಪೂರ್ಣ ವಾಸಿಯಾದದ್ದಕ್ಕೆ ಈ ಸಭೆಯು ಸಂತೋಷಪಡುವದಲ್ಲದೆ, ಅವರಿಗೆ ದೀರ್ಘಾಯುಸ್ಸನ್ನು ಕೊಡಲೆಂದು ಭಗವಂತನನ್ನು ಪ್ರಾರ್ಥಿಸುತ್ತದೆ. ಅಧ್ಯಕ್ಷರಿಂದ ಸೂಚಿಸಲ್ಪಟ್ಟದ್ದು

2. ಕೊಡಗಿನಲ್ಲಿರುವ ಮುಸಲ್ಮಾನರು ವಿದ್ಯಾಭ್ಯಾಸದಲ್ಲಿ ಬಹಳ ಹಿಂದು ಬಿದ್ದಿರುವದರಿಂದ ಮುಸಲ್ಮಾನರು ಇರುವ ಕಡೆಗಳಲ್ಲಿ ಆಗುವಷ್ಟು ಶಾಲೆಗಳನ್ನು ತೆರೆಯುವಂತೆ ಸರ್ಕಾರವನ್ನು ಈ ಸಭೆಯು ಕೇಳಿಕೊಳ್ಳುತ್ತದೆ.

ಮಿ. ಕೆ. ಯಂ. ಸೂಫಿಯವರಿಂದ ಸೂಚಿಸಲ್ಪಟ್ಟು ಮಿ. ಯಂ. ಎ. ಮಜೀದ್‌ರವರಿಂದ ಅನುಮೋದಿಸಲ್ಪಟ್ಟಿತು.

3. ಮುಸ್ಲಿಮ್ ಬಾಲಕ ಬಾಲಕಿಯರು ಓದುವ ಶಾಲೆಗಳಲ್ಲೆಲ್ಲಾ ಉರ್ದು ಭಾಷೆಯನ್ನು ಕಲಿಸತಕ್ಕದ್ದು.

ಮಿ. ಯಂ. ರಹಮನ್‌ರವರು ಸೂಚಿಸಿದ್ದನ್ನು ಮಿ. ಗಫೂರ್ ಖಾನ್‌ರವರು ಅನುಮೋದಿಸಿದರು.

4. 'ಎಲ್ಲಾ ಹೈಸ್ಕೂಲುಗಳಲ್ಲಿ ಬಡ ಮುಸ್ಲಿಮ್ ವಿದ್ಯಾರ್ಥಿಗಳಿಗಾಗಿ ಸಾಕಷ್ಟು ಸ್ಕಾಲರ್‌ಶಿಪ್‌ಗಳನ್ನು ಪ್ರತ್ಯೇಕಿಸಿ ಇಡಬೇಕು.'

ಮಿ. ಯಂ ರಹಮನ್ ಖಾನ್‌ರವರಿಂದ ಸೂಚಿಸಲ್ಪಟ್ಟ ಈ ಠರಾವು ಮಿ ಮೊಣ್ ಹುಸೈನ್‌ರವರಿಂದ ಅನುಮೋದಿಸಲ್ಪಟ್ಟಿತು.

5. ಮುಸಲ್ಮಾನರಲ್ಲಿ ವಿದ್ಯಾ ಪ್ರಚಾರವನ್ನು ಶೀಘ್ರವಾಗಿ ಹೆಚ್ಚಿಸಲು ಖಾಸಗಿ ಮುಸಲ್ಮಾನ್ ಶಾಲೆಗಳಿಗೆಲ್ಲಾ ಸ್ಪೆಶ್ಯಲ್ ಗ್ರ್ಯಾಂಟ್ ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತದೆ.

ಮಿ. ಯಂ ಎ. ಮಜೀದ್‌ಖಾನ್‌ರವರಿಂದ ತರಲ್ಪಟ್ಟ ಈ ಠರಾವು ಮಿ. ಎ. ಖಾದರ್‌ಸಾಬಿಯವರಿಂದ ಅನುಮೋದಿಸಲ್ಪಟ್ಟಿತು.

6. ಕೊಡಗಿನಲ್ಲಿ ಮುಸಲ್ಮಾನರ ವಿದ್ಯಾಭ್ಯಾಸದ ಉಸ್ತುವಾರಿ ನೋಡಿಕೊಳ್ಳಲು ಒಬ್ಬ ಮಹಮ್ಮದೀಯ ಸುಪರ್‌ವೈಜರನ್ನು ನೇಮಿಸತಕ್ಕದ್ದು.

ಮಿ. ಯಂ. ಯಂ. ಸಿದ್ದೀಕ್‌ರವರು ಸೂಚಿಸಿದರು. ಮಿ. ಗಫೂರ್‌ಖಾನ್‌ರವರು ಅನುಮೋದಿಸಿದರು.

7. ಅಂಜುಮನ್ ಕಟ್ಟಡದ ಮಹಡಿಯನ್ನು ಅಂಜುಮನ್ ಇತ್ತೆಹಾದ್ ಇಸ್ಲಾಮಿನ ಕೆಲಸಗಳಿಗೆ ಬಿಟ್ಟು ಕೊಡುವಂತೆ ಬಂಗಾಳೀ ಮೊಹಲ್ಲಾ ಜಮಾತ್‌ರವರನ್ನು ಕೇಳಿಕೊಳ್ಳುತ್ತದೆ.

ಮಿ. ಮೊಣ್ ಹುಸ್ಸೇನ್‌ರವರು ಸೂಚಿಸಿದ್ದನ್ನು ಮಿ. ಮಜೀದ್ ಖಾನ್‌ರವರು ಅನುಮೋದಿಸಿದರು.

8 'ಮುಸ್ಲಿಮ್ ವಿದ್ಯಾ ಫಂಡ'ನ್ನು ಸ್ಥಾಪಿಸಲು ಈ ಸಭೆಯು ನಿಶ್ಚಯಿಸಿ ಇದಕ್ಕೆ ಕೊಡಗಿನ ಮಹಮ್ಮದೀಯರೆಲ್ಲರೂ ಉದಾರಭಾವದಿಂದ ಚಂದಾ ಕೊಡಬೇಕೆಂದು ಕೇಳಿಕೊಳ್ಳುತ್ತದೆ.

ಮಿ. ಅಬ್ದುಲ್ ರಜಾಕ್‌ರವರು ಸೂಚಿಸಿದರು. ಮಿ. ಗಫೂರ್‌ಖಾನ್‌ರವರು ಅನುಮೋದಿಸಿದರು.

9. ಕೊಡಗಿನ ಮಹಮ್ಮದೀಯರೆಲ್ಲರೂ ಸಹಕಾರಿ ಸಂಘಗಳಿಗೆ ಸೇರಬೇಕೆಂದು ಕೇಳಿಕೊಳ್ಳುವದಲ್ಲದೆ, ಅದರಲ್ಲಿ ದೊರೆಯುವ ಲಾಭವನ್ನು ಮುಸಲ್ಮಾನರ ವಿದ್ಯಾಭ್ಯಾಸ ಅಭಿವೃದ್ಧಿಗೆ ಉಪಯೋಗಿಸಲು ಅಂಜುಮನ್ ಇತ್ತೆಹಾದ್ ಇಸ್ಲಾಮಿಗೆ ಕೊಡುವಂತೆ ಕೋರುತ್ತದೆ.

ಮಿ. ಗಫೂರ್ ಖಾನ್‌ರವರ ಈ ಸೂಚನೆಯನ್ನು ಮಿ. ಅಬ್ದುಲ್ ಖರೀಮ್‌ರವರು ಅನುಮೋದಿಸಿದರು.

10. ತಾನು ಮದ್ರಾಸಿನಲ್ಲಿ ವಾಸವಿರುವ ಕಾರಣ ತನಗೆ ಜೇಥ್ ಕಮಿಟಿಯರೊಂದಿಗೆ ಪತ್ರವ್ಯವಹಾರ ನಡಿಸಲು ಅನಾನುಕೂಲವೆಂದು ಅಧ್ಯಕ್ಷರು ತಿಳಿಸಿದ್ದರಿಂದ ಈ ಕೆಳಗಿನ ಠರಾವು ಪಾಸುಮಾಡಲಾಯಿತು.

ಈ ಮಹಾ ಸಭೆಯಲ್ಲಿ ಮಂಜೂರಾದ ಠರಾವುಗಳನ್ನು ಜೇಥ್ ಕಮಿಟಿಗೆ ಕಳುಹಿಸುವಂತೆ ಸ್ವಾಗತ ಅಧ್ಯಕ್ಷರಾದ ಮಿ. ಸೆಯ್ಯದ್ ಅಹ್ಮದ್ ಯಂ. ಯಲ್ ಸಿ. ಯವರಿಗೆ ಈ ಸಭೆ [illegible]

ಈ ಮಹಾ ಸಭೆಯನ್ನು ನಡಿಸಿದ ಅಂಜುಮನ್ ಇತ್ತೆಹಾದ್ ಇಸ್ಲಾಮಿನ ಕಾರ್ಯಗಳನ್ನು ನಡಿಸಲು ಈ ಕೆಳಗಿನ ಉದ್ಯೋಗಸ್ಥರು ಮತ್ತು ಕಾರ್ಯಕಾರಿ ಮಂಡಳಿಯವರು ಆರಿಸಲ್ಪಟ್ಟರು.

ಅಧ್ಯಕ್ಷರು—ಮಿ ಯಂ ಯಂ. ಸಿದ್ದೀಕ್‌ರವರು. ಉಪಾಧ್ಯಕ್ಷರುಗಳು—ಮಿ. ಯಸ್. ಅಬ್ದುಲ್ ರಜಾಕ್‌ರವರು ಮತ್ತು ಮಿ. ಕೆ. ಹಬಿಬುಲ್ಲಾರವರು. ಗೌರವ ಖಜಾಂಜಿಯವರು—ಮಿ. ಮೊಣ್ ಹುಸ್ಸೇನ್‌ರವರು. ಜನರಲ್ ಸೆಕ್ರೆಟರಿಯವರು—ಮಿ. ಯಂ. ಎ. ಮಜೀದ್‌ಖಾನ್‌ರವರು. ಅಸಿಸ್ಟೆಂಟ್ ಸೆಕ್ರೆಟರಿಗಳು—ಮಿ. ಕೆ. ಯಂ. ಸೂಫಿಯವರು ಮತ್ತು ಮಿ ಅಬ್ದುರ್ ರಹಮಾನ್‌ರವರು ಇವರಲ್ಲದೆ 31 ಜನರು ಕಾರ್ಯಕಾರಿ ಮಂಡಳಿ ಮೆಂಬರುಗಳಾಗಿ ಆರಿಸಲ್ಪಟ್ಟರು

ಪತ್ರವ್ಯವಹಾರ

ಟಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡವ ಸಭೆಯ ಮೀಟಿಂಗೂ, ಜಮೀನ್‌ದಾರರ ಸಂಘವೂ

ಅಯ್ಯಾ ಸಂಪಾದಕರೇ,

ನಿಮ್ಮ ಪತ್ರಿಕೆಯಲ್ಲಿ ಮೇ ತಿಂಗಳು ೩ಗನೇ ತಾರೀಕಿನ ಸಂಚಿಕೆಯ ಪತ್ರವ್ಯವಹಾರದಲ್ಲಿ ಮೇಲ್ಕಂಡ ವಿಷಯದಲ್ಲಿ ಪ್ರಕಟವಾದ ಪತ್ರವನ್ನು ಓದಿನೋಡಿ ಜಮೀನ್‌ದಾರರ ಸಂಘದ ತೀರ್ಮಾನದಲ್ಲಿ ನ್ಯಾಯವಿದೆಯೋ ಎಂತ ಯೋಚಿಸಿ ನೋಡಿದೆನು. ಮಹಾತ್ಮ ಗಾಂಧಿಯವರ ತತ್ವವನ್ನೇ ಹೋಲಿಸಿ ನೋಡಿದರೂ ನ್ಯಾಯವಂತರಿಗೆ ಜಮೀನ್‌ದಾರರ ಸಂಘದ ತೀರ್ಮಾನವು ಸಕಾರಣವಾಗಿ ತೋರದಿರಲಾರದು. ಜಮೀನ್‌ದಾರರ ಸಂಘವು ತನ್ನ ಕಟ್ಟಡವನ್ನು ಯಾರಿಗೆ ಕೊಡಲಿಲ್ಲ? ರಾಜಕೀಯ ವಿಚಾರದಲ್ಲಿ ಸಂಘದ ತತ್ವಕ್ಕೆ ಸಂಪೂರ್ಣ ವಿರೋಧವಾಗಿ ನಡೆಯುವ ಸಂಸ್ಥೆಗೆ. ಇದೇ ಕೊಡವ ಸಭೆಯ ಮೆಂಬರುಗಳು ಇರುವ ಮಡಿಕೇರಿ ಕೊಡವ ಸಮಾಜದವರ ಉಪಯೋಗಕ್ಕೆ ಸಂಘದ ಕಟ್ಟಡವನ್ನು ಕೊಡಲಾಗಿತ್ತು. ಆದರೆ ಸಂಘವು ಸಾರ್ವಜನಿಕ ಕಾರ್ಯಗಳಲ್ಲಿ ಕೋಮುವಾರು ವ್ಯತ್ಯಾಸವಿಡಬಾರದೆಂಬ ದೊಡ್ಡ ತತ್ವವನ್ನು ಅನುಸರಿಸಿರುವ ಸಂಸ್ಥೆಯಾಗಿದೆ. 'ಕೊಡವ' ಸಭೆಯೆಂಬುದು ಹೆಸರಿನಿಂದಲೇ ಒಂದೇ ಕೋಮಿನ ಹಿತವನ್ನು ಬಯಸುವ ಸಂಘವೆಂಬುದು ಗೊತ್ತಾಗುತ್ತದೆ. ಈ ಒಂದು ಮೂಲ ತತ್ವದ ವ್ಯತ್ಯಾಸದಿಂದಲೇ ಸಂಘದ ತೀರ್ಮಾನವನ್ನು ನ್ಯಾಯವೆಂತ ಒಪ್ಪಬಹುದು

ಸಂಘವು ಸೈಮನ್ ಕಮಿಶನಿನೊಂದಿಗೆ ಬಹಿಷ್ಕರಿಸಲು ತೀರ್ಮಾನಿಸಿ ಅದರಂತೆಯೇ ವರ್ತಿಸಿತು. ಕೊಡವ ಸಭೆಯವರು ಈ ತತ್ವಕ್ಕೆ ವಿರೋಧವಾಗಿ ಸೈಮನ್ ಕಮಿಶನಿನೊಂದಿಗೆ ಸಹಕರಿಸಿದರು. ಇದರಿಂದ ಎರಡು ಸಂಸ್ಥೆಗಳ ಅಭಿಪ್ರಾಯಗಳು ಒಂದಕ್ಕೊಂದು ವಿರೋಧವಾಗಿದೆಯೆಂತ ಸ್ಪಷ್ಟವಾಯಿತು. ಸೈಮನ್ ಕಮಿಶನಿನ ಮುಂದೆ ಕೊಟ್ಟ ಅಭಿಪ್ರಾಯಗಳು ಕೊಡವ ಸಭೆಗೆ ಒಪ್ಪಿಗೆಯೆಂತ ಕೊಡವ ಸಭೆಯ ಜನರಲ್ ಮೀಟಿಂಗಿನಲ್ಲಿ ತೀರ್ಮಾನವಾಯಿತು. ಸೈಮನ್ ಕಮಿಶನನ್ನು ಬಹಿಷ್ಕರಿಸುವ ವಿಷಯ ಅಲ್ಪವಾದದ್ದಲ್ಲ. ಅಂಥಾ ವಿಷಯದಲ್ಲಿ ಸಂಪೂರ್ಣ ವಿರೋಧ ಮತಕ್ಕೆ ಒಪ್ಪಿಗೆ ಕೊಡುವ ಸಂಸ್ಥೆಯ ಮೀಟಿಂಗಿಗೆ ಸಂಘದ ಕಟ್ಟಡದ ಉಪಯೋಗ ಕೊಟ್ಟಿದ್ದರೆ ಸಂಘವು ಟೀಕಾಕಾರರಿಗೆ ಗುರಿಯಾಗುತ್ತಿತ್ತು.

ಕೊಡವ ಸಭೆಯ ಚಾಲಕರು ತಮ್ಮ ಸಭೆಯ ಮುಖ್ಯ ಉದ್ದೇಶವೇ ಜಮೀನ್ದಾರರ ಸಂಘವನ್ನು ಮುರಿಯುವದೆಂತ ಆಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಸಂಘವನ್ನು ಮುರಿಯುವ ಕೆಲಸದಲ್ಲಿ ಸಂಘವು ಸಹಕರಿಸುವುದು ಸಾಧ್ಯವೇ? ಸಂಘದ ಹಾಲಿನಲ್ಲೇ ಸಂಘವನ್ನು ಮುರಿಯುವ ವಿಚಾರಗಳ ಆಲೋಚನೆಗೆ ಎಡೆ ಕೊಡಬೇಕಿತ್ತೇ? ಇದೆಂಥ ನ್ಯಾಯ! ಅಹಿಂಸಾವಾದಿಗಳಾದ ಮಹಾತ್ಮ ಗಾಂಧಿಯವರು ಸಹ ಆತ್ಮರಕ್ಷಣೆಗಾಗಿ ಹಿಂಸೆಯನ್ನು ಕೈಕೊಳ್ಳಬಹುದೆಂತ ಒಪ್ಪುತ್ತಾರೆ. ದೇಶಕ್ಕೆ ಹಾನಿಯನ್ನು ಮಾಡುತ್ತಿರುವ ಸರ್ಕಾರದೊಂದಿಗೆ ಸಹಕರಿಸಬಾರದೆನ್ನುತ್ತಾರೆ. ಇದರಿಂದಲೇ ಗಾಂಧಿಯವರ ಅಭಿಪ್ರಾಯಗಳ ಬೆಂಬಲವು "ಕೆ. ಯಂ. ಪಿ" ಯವರಿಗೆ ದೊರೆಯಲಾರದೆಂಬುದು ಸ್ಪಷ್ಟವಾಗುತ್ತದೆ. ದೇಶೋದ್ಧಾರಕ್ಕೆ ಸಹಾಯವಾಗುವ ಕಾಂಗ್ರೆಸಿನವರು ನಡಿಸುವ ಪ್ರದರ್ಶನಗಳಲ್ಲಿ ಸರಕಾರವು ಭಾಗಿಯಾಗಬಾರದೆಂತ ಸರ್ಕಾರವು ತೀರ್ಮಾನಿಸುವದು ಯಾತಕ್ಕೆ? ಅಂಥಾ ಪ್ರದರ್ಶನಗಳಿಂದ ದೇಶಕ್ಕೆ ಸಹಾಯವಾಗಬಹುದಾದರೂ ಈಗಿನ ಸರ್ಕಾರದ ಇರುವಿಕೆಗೆ ಕೇಡಾಗಬಹುದೆಂತಲ್ಲವೇ?

'ಕೆ. ಯಂ. ಪಿ.'ಯವರ ಪತ್ರದ ಪ್ರಾರಂಭದಲ್ಲಿ ಕೊಟ್ಟಿರುವ ಇಂಗ್ಲಿಷ್ ಪದ್ಯದಲ್ಲಿರುವ ತತ್ವಕ್ಕೆ ಕೊಡವ ಸಭೆ ವಿರೋಧವೇ ಹೊರತು ಜಮೀನ್ದಾರರ ಸಂಘವಲ್ಲ. "ಸರ್ವರ ಹಿತವೇ ಪ್ರತಿಯೊಬ್ಬನ ನಿಯಮವೆಂದಾದೀತು, ಪ್ರಪಂಚದಲ್ಲಿ ಸರ್ವ ಶಾಂತಿ ಎಂದು ಸ್ಥಾಪಿತವಾದೀತು.", ಎಂತ ಪದ್ಯದ ಅಭಿಪ್ರಾಯವಾಗಿದೆ. ಕೊಡಗೇ ನಿವಾಸ ಸ್ಥಾನವಾಗಿರುವ ಸರ್ವ ಜನರ ಹಿತವನ್ನೇ ಸಾಧಿಸಲು ಪ್ರಯತ್ನಿಸುವ ಸಂಘವು ಖಂಡಿತ ಈ ಪದ್ಯದ ತತ್ವಕ್ಕೆ ವಿರೋಧವಾಗಿ ನಡಿಯುತ್ತಿರುವುದಿಲ್ಲ. ಒಂದೇ ಕೋಮಿನ ಮೇಲ್ಮೆಗಾಗಿ ಪ್ರಯತ್ನಿಸುವದರಲ್ಲಿ ಆ ಕೋಮಿನ ಹೊರಗಿರುವ ಸರ್ವ ಜನರ ಹಾನಿಯೂ ದೀತೋ ಎಂತ ಯೋಚಿಸಲು ಎಡೆಯೇ ಇಲ್ಲ. ಯಾವ ಕೋಮಿನ ಹೆಸರಿನಲ್ಲಿ ಕೊಡವ ಸಭೆಯು ಪ್ರಯತ್ನಿಸುತ್ತಿದೆಯೋ, ಆ ಕೋಮಿನ ಬಹು ಜನರೇ ಆ ಸಭೆಯಿಂದ ಕೆಡುಕಿದೆಯೆಂತ ತಿಳಿದು ದೂರ ನಿಂತಿರುವದು ಕೆ. ಯಂ. ಪಿ. ಯವರಿಗೆ ತಿಳಿಯದ್ದಲ್ಲ. ಹೀಗಿರುವಾಗ 'ಬಹು ಜನರ ಬಹು ಸುಖ'ವು ಕೊಡವ ಸಭೆಯ ಉದ್ದೇಶವು ಎಂದಿಗೂ ಆಗಲು ಸಾಧ್ಯವಿಲ್ಲ. ಹೆಚ್ಚೇಕೆ, ಕೊಡವ ಸಭೆಯಿಂದ ದೇಶಕ್ಕೂ, ಕೊಡವ ಸಮಾಜಕ್ಕೂ ಸಹ ಕೆಡಕಿದೆಯೆಂತ ಜಮೀನ್ದಾರರ ಸಂಘವು ನಂಬಿರುವಾಗ ಅಂಥಾ ಕೆಡಕಿನ ಸಂಸ್ಥೆಯೊಂದಿಗೆ ಸಂಘವು ಸಹಕರಿಸದೆ, ಸಂಘದ ಗೌರವವನ್ನು ಉಳಿಸಿಕೊಂಡಿದೆ.

"ನಿಷ್ಪಕ್ಷಪಾತಿ."

ಜನರ ಪ್ರತಿನಿಧಿಗಳು.

ಅಯ್ಯಾ,

ಈಗ ಕೆಲವು ವಾರಗಳ ಹಿಂದೆ 'ಗ್ರಾಮಸ್ಥ' ಎಂಬ ಹೆಸರಿನಿಂದ ಸೋಮವಾರಪೇಟೆನಾಡು ಕುಂದಳ್ಳಿ ಗ್ರಾಮದ ಸರಹದ್ದಿನಿಂದ ಮೈಸೂರು ಸರಹದ್ದಿನ ವರೆಗೆ ಗಾಡಿ ರಸ್ತೆ ಮಾಡಿಸಿಕೊಡಬೇಕಾಗಿ ಸರ್ಕಾರಕ್ಕೆ ಅರ್ಜಿ ಬರಕೊಂಡದ್ದಾಗಿಯೂ, ಕೌನ್ಸಿಲ್ ಮತ್ತು ಡಿ ಬೋರ್ಡು ಮೆಂಬರರನ್ನು ಕೇಳಿಕೊಂಡದ್ದಾಗಿಯೂ, ಸದರಿ ಮೆಂಬರರು ಮಾಡಿಸಿ ಕೊಡುವುದಾಗಿ ವಾಗ್ದಾನವಿತ್ತಿದ್ದರಾಗಿಯೂ, ಆದರೆ ಮೀಟಿಂಗಿನಲ್ಲಿ ಬಾಯಿ ಬಿಟ್ಟಿಲ್ಲವಾಗಿಯೂ, ಜಮೀನ್ದಾರರ ಸಂಘದ ಮೀಟಿಂಗಿನಲ್ಲಿ ಸದರಿ ಠರಾವು ಪಾಸಾಗಿದ್ದರೂ ಸರ್ಕಾರದವರು ಮಾಡಿಸಿ ಕೊಟ್ಟಿಲ್ಲ ವಗೈರೆಯಾಗಿ ಬರೆದ ಬಾತ್ಮಿಯನ್ನು ನೋಡಿ ವ್ಯಸನವಾಯಿತು. ನಮ್ಮ ಮೆಂಬರು ನಾಡಿಗೆ ಮಾಡಿರುವ ಕೆಲಸವು ಸಕಲರಿಗೂ ಗೊತ್ತೇ ಇದೆ. ಇದುವರೆಗೆ ಠರಾವುಗಳನ್ನು ಈ ನಾಡಿನ ಪರವಾಗಿ ಚರ್ಚೆಗೆ ತಂದು ಪಾಸು ಮಾಡಿಸಿದ್ದರೆ ನಿಮ್ಮ ಗ್ರಾಮದ ರಸ್ತೆಯ ಸಂಗತಿ ಠರಾವು ತರುತ್ತಿದ್ದರು. ಓಟಿನ ಬೆಲೆಯನ್ನು ತಿಳಿಯದೆ ಆಡಂಭರದ ಮಾತಿಗೆ ಮರುಳಾಗಿ ಓಟನ್ನು ಕೊಟ್ಟದರ ಪ್ರತಿ ಫಲವೇ ಇದು. ನ್ಯಾಯವಾದ ಪ್ರತಿನಿಧಿಗಳನ್ನು ಆರಿಸಿಕೊಳ್ಳದ್ದು ಯಾರ ತಪ್ಪು? ನಮ್ಮ ನಾಡಿನವರು ಹಿಂದುಳಿದವರೆಂದು ಹೇಳಿಕೊಳ್ಳಲಿಕ್ಕೆ ಬೇರೆ ಆಧಾರ ಬೇಕೇ? ಸರ್ಕಾರದವರಿಗೆ ದಯೆ ಬಂದು ಏನಾದರೂ ಕಿಂಚಿತ ಕೆಲಸ ಮಾಡಿಸಿ ಕೊಟ್ಟರೆ ಅದು ತನ್ನಿಂದಾಯಿತೆಂದು ಹೇಳಿಕೊಂಡರೆ ಸಾಕೇ? ಇದು ವರೆಗೆ ನಮ್ಮ ಮೆಂಬರು ಮಾಡಿದ ಯಾವ ಕೆಲಸವು ಪತ್ರಿಕೆಯಲ್ಲಿ ಪ್ರಕಟವಾದದ್ದು ಕಂಡುಬಂದಿರುವುದಿಲ್ಲ. ತಾನು ಮಾಡಿರುವ ಒಂದೆರಡು ಕೆಲಸಗಳನ್ನು ಪತ್ರಿಕೆಯ ಮೂಲಕ ಓಟರುಗಳಿಗೆ ತಿಳಿಸಿದ್ದರೆ ಧನ್ಯನಾಗುತ್ತಿದ್ದೆನು. ಸೋಮವಾರಪೇಟೆಗೆ ಒಂದು ಲೋವರ್ ಸೆಕೆಂಡರಿ ಸ್ಕೂಲ್ ಬೇಕೆಂದು ಜನರು ಹಂಬಲಿಸುತ್ತಿರುವಾಗ ಇದರ ಸುದ್ದಿಯೇನಾದರೂ ಎತ್ತಬಾರದಿತ್ತೇ? ಇನ್ನು ಮುಂದಕ್ಕಾದರೂ ನ್ಯಾಯವಾದ ಪ್ರತಿನಿಧಿಯನ್ನು ಆರಿಸಿಕೊಳ್ಳಲಿಕ್ಕೆ ಪ್ರಯತ್ನಿಸುವ. ಜಾತಿಭೇದ ವಗೈರೆಯನ್ನು ಬದಿಗಿರಿಸಿ ದೇಶಸೇವೆ ಮಾಡುವವರನ್ನೇ ಆರಿಸುವ. ದೇಶದ ಹಿತವನ್ನು ಬಯಸುವ ಮತ್ತು ಗರೀಬರ ಕಷ್ಟ ನಿವಾರಣೆ ಮಾಡುವವರೇ ಜನರ ನಿಜವಾದ ಪ್ರತಿನಿಧಿಗಳು. ಜನರ ಪರವಾಗಿ ಹೋರಾಡಲು ಶಕ್ತಿ ಇಲ್ಲದ ಯಾ ಮನಸ್ಸಿಲ್ಲದ ಮಹನೀಯರು ಇನ್ನು ಮುಂದಕ್ಕೆ ಜನರ ಪ್ರತಿನಿಧಿತ್ವವನ್ನು ವಹಿಸಿಕೊಳ್ಳಬಾರದಾಗಿ ಅವರಲ್ಲಿ ನನ್ನ ಕೋರಿಕೆ.

'ಓಟರು.'

ಪೊನ್ನಂಪೇಟೆ ಮೋಡಲ್ ಸ್ಕೂಲು.

ಅಯ್ಯಾ,

ಪೊನ್ನಂಪೇಟೆ ಮೋಡಲ್ ಸ್ಕೂಲಿನಲ್ಲಿ ಮೊದಲು ಹೆಡ್ಡ್ ಮಾಸ್ಟರಾಗಿದ್ದು ಅನಂತರ ತಾಲೂಕು ಸುಪರ್‌ವೈಜರಾಗಿ ಈಗ ರಿಟಯರ್ ಆಗಿರುವ ಮಿ. ಎ ಕಾಳಪ್ಪನವರ ಜ್ಞಾಪಕಾರ್ಥವಾಗಿ ಪೊನ್ನಂಪೇಟೆ ಮೋಡಲ್ ಸ್ಕೂಲಿನಲ್ಲಿ ಅವರ ಭಾವಚಿತ್ರ ಒಂದನ್ನು ಇಟ್ಟಿರುವುದು ಸಂತೋಷಕರವೇ ಸರಿ. ಆದರೆ ಈ ವಿಷಯದಲ್ಲಿ ನನಗೆ ಕಂಡು ಬರುವ ನ್ಯೂನತೆಯನ್ನು ವಾಚಕರ ಮುಂದಿಡಲು ಇಚ್ಛಿಸುತ್ತೇನೆ. ಸರ್ಕಾರದಿಂದ ವೇತನ ಪಡೆದು ಅದಕ್ಕೆ ತಕ್ಕ ಕೆಲಸಮಾಡಿದ ಮಹನೀಯರ ಜ್ಞಾಪಕವನ್ನು ಸದರಿ ಸ್ಕೂಲ್‌ನಲ್ಲಿ ನೆಲೆಗೊಳಿಸುವಾಗ್ಯೆ ಆ ಸ್ಕೂಲನ್ನು ಸ್ಥಾಪನೆಮಾಡಿ ಉತ್ಕರ್ಷಕ್ಕರ ವಿದ್ಯಾವ್ಯಾಸಂಗಕ್ಕೆ ಎಡೆಗೊಡಿಸಿದ ಸ್ವರ್ಗವಾಸಿ ರಾಯಬಹದ್ದೂರು ಬೆಪ್ಪುಡಿರ ತಿಮ್ಮಯ್ಯನವರನ್ನು ಮರೆತದ್ದು ತುಂಬಾ ಶೋಚನೀಯ. ಈ ವಿಷಯ ಆಲೋಚಿಸಿದರೆ ಎತ್ತಿನ ಮುಂದೆ ಗಾಡಿಯೆಂಬ ಹೇಳಿಕೆಗೆ ಸರಿಬೀಳುವಂತಿದೆ. ಈ ವಾಗ ಜ್ಞಾಪಕಾರ್ಥವಾಗಿ ಇಟ್ಟಿರುವ ಭಾವಚಿತ್ರಕ್ಕೆ ಪ್ರೋತ್ಸಾಹಿಸಿದ ಮಹನೀಯರೇ ಕಣ್ಣು ತೆರದು ಸ್ವರ್ಗವಾಸಿ ಸಿ. ತಿಮ್ಮಯ್ಯ ಆರ್. ಬಿ ಯವರ ಭಾವಚಿತ್ರವನ್ನು ಮುಂದೆ ಇಡಲು ಪ್ರಯತ್ನಿಸುವರೇ? ಅವರ ಭಾವಚಿತ್ರ ಇಡಲು ನಿಮಗೆ ತೃಪ್ತಿ ಇಲ್ಲದ ಪಕ್ಷ ಈಗ ಇಟ್ಟಿರುವ ಮಹನೀಯರ ಭಾವಚಿತ್ರವನ್ನು ಹೊರಗೆ ಇಟ್ಟರೆ ತಪ್ಪಾದೀತೆ ಎಂಬದನ್ನು ದಯವಿಟ್ಟು ತಿಳಿಸಿ.

"ನೋಡಿದವ"

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲ ಬಾಧಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ
ಮಾತ್ರೆಗಳು.

ಧಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನರಹಿತವಾದುದು. ಒಂದು ಡಬ್ಬಿಯ ಕ್ರಯ ೧-೦-೦

52–42 ಮದನಮಂಜರಿ ಫಾರ್ಮಸಿ,
1/94 ಜೀನಾ ಬಜಾರ್, ಮದ್ರಾಸ್.

ಹೊಸ ಪುಸ್ತಕ ಕ್ರಯ ೧-೦-೦

ಮೊದಲನೆಯ ಮುದ್ರಣ

ಸ್ತ್ರೀಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ತಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಆದೇಶ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ನೂತನ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೂಡಿದೆ. ಕ್ರಯ ಪುಸ್ತಕ ೧ಕ್ಕೆ ರೂ. ೧-೦-೦.

ಎಸ್. ವಿ. ಗೋಪಾಲ್ ಬುಕ್ ಡಿಪೋ,
52–24 37. ತಿರುಪಳ್ಳಿಬೀದಿ, ಮದರಾಸ್.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಎಂಬುದೇ

ಎಲ್ಲಾ ಬೆಳೆಗಳಿಗೂ ಯೋಗ್ಯವಾದ ಸಾರಜನಕ ಗೊಬ್ಬರವು, ಪ್ರಪಂಚದಲ್ಲೆಲ್ಲಾ ಇದೇ ಸಸ್ಯಾದಿಗಳನ್ನು ಒಳ್ಳೇಯದಾಗಿ ಬೆಳೆಸುವ ಮತ್ತು ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಫಸಲನ್ನು ಕೊಡುವ ಸಾಧನವೆಂದು ಖ್ಯಾತಿಯನ್ನು ಪಡೆದಿರುತ್ತದೆ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಗಿಡಗಳ ಬೇರುಗಳನ್ನು ಹೆಚ್ಚು ಆಳದ ವರೆಗೂ ಪಸರಿಸುವಂತೆ ಮಾಡುವದರಿಂದ ಮಳೆ ಕಡಿಮೆಯಾದಾಗ್ಯೂ ಗಿಡಗಳಿಗೆ ಹೆಚ್ಚಿನ ತೊಂದರೆಯಾಗಲಾರದು.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗಗಳಿಗೆ ಥಕ್ಕನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಆಫ್ ಸೋಡಾದಲ್ಲಿ ಬೆಳೆಗಳನ್ನೂ ಮಣ್ಣನ್ನೂ ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಏಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪ್ಯಾರಿ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಲಿನ ಚೀಲ 1ರ ರೂಪಾಯಿ 6–8–0ರಂತೆ ಒದಗಿಸಿ ಕೊಡುವದಲ್ಲದೆ, ಮಡಿಕೇರಿ, ವೀರಾಜಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 7–8–0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದರ್ಮಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
24–3 ಪೋ. ಬಾ. ನಂ. 469, ಕಲ್ಕತ್ತಾ.

(2) ಮಿಸ್ಟರ್ ಯಂ. ಯು. ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

Arms, Ammunition and Shooting Requisites !!!



Current Illustrated Catalogue Free on Application !

D· B· B L· Rifles	Rs·	120	to Rs·	2750·
S B. B L·	,,	35	to ,,	950.
D· B· B· L· Guns	,,	50	to ,,	1350·
S· B· B· L· ,,	,,	35	to ,,	275·
D· B M· L· ,,	,,	45	to ,,	135·
S B· M· L· ,,	,,	30	to ,,	80·
B. L· Revolvers	,,	35	to ,,	350·
Antomatic Pistols	,,	30	to ,,	150·

Brilliant Search Light Lamp For Shooting· Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24–13 **210 Abdul Rehman Street, BOMBAY.**

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

1. 'ದಿಲ್ ಬಹರ್ ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ 1ಕ್ಕೆ				50	8	0
2. "ಸಿದ್ಧಪ್ಪಾಸ್ ಫ್ಲ್ಯೂಟ್"	,,		,,	42	8	0
3. ಶಕುಂತಲಾ	,,	,,	,,	40	0	0
4. ಮೋಹನ್	,,	,,	,,	37	8	0
5. ಮೋಸ್ಟೇರಿ	,,	,,	,,	35	0	0
6. ಮಹಾರಾಜಾ	,,	,,	,,	32	8	0
7. ಕೋಹಿನೂರು	,,	,,	,,	29	8	0
8. ಡೈಮಂಡ್	,,	,,	,,	27	8	0
9. ಬೇಬೀ	,,	,,	,,	25	0	0
10. "ದಿಲ್‌ಬಹರ್ ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1ಕ್ಕೆ				65	0	0
11. ಸ್ಪೆಶಲ್		,,	,,	56	0	0
12. ಮೋಹನ್	,,	,,	,,	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟೆನ್ ಪೆನ್‌ಗಳು.

ವರ್‌ಲ್ಡ್ ವಂಡರ್ ಫೌಂಟನ್ ಪೆನ್	1ಕ್ಕೆ		3	0	0
,, ಬಿಗ್‌ಬ್ಯಾರಲ್	,,	,,	3	2	0
,, ಸ್ಕ್ರೂಕ್ಯಾಪ್	,,	,,	3	8	0
,, ಮಾರ್ಬಲ್ ಕಲರ್	,,	,,	3	14	0
,, ಮಾರ್ಬಲ್ ಸ್ಕ್ರೂಕ್ಯಾಪ್	,,	,,	4	4	0
,, ಬ್ರೌನ್‌ಕಲರ್ ಸೆಲ್ಫ್‌ಫಿಲಿಂಗ್ ಪೆನ್		,,	5	8	0
,, ಸೇಫ್ಟಿ ಪೆನ್	,,	,,	6	8	0
,, ಲೇಡೀಸ್ ಸೈಜಿನ ಮಾರ್ಬಲ್ ಕಲರ್ ಪೆನ್		,,	4	8	0
ಬ್ಲ್ಯಾಕ್‌ಬರ್ಡ್ ಪೆನ್ 1ಕ್ಕೆ 3 8 0 ಮತ್ತು			3	12	0
ಸ್ವಾನ್ ಪೆನ್ ,, 6 8 0		,,	7	0	0
ವಾಟರ್‌ಮೆನ್ ಐಡಿಯಲ್ 1ಕ್ಕೆ 8 0 0		,,	8	8	0
,, ಸೆಲ್ಫ್ ಫಿಲ್ಲಿಂಗ್ ಯಾ ಸೇಫ್ಟಿ ಪೆನ್ 1ಕ್ಕೆ			12	0	0
ಬಿಗ್‌ಬ್ಯಾರಲ್ ಹಾರ್ಡ್ ವೇರ್	,,	,,	8	0	0
,, ನೆವ್ಯೂಯನ್ ಪೆನ್ 1ಕ್ಕೆ			17	0	0

ಖಾತ್ರಿಯೂ ಬಂದೋಬಸ್ತೂ ಆದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು	1ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಅಲಾರಂ ಟೈಂಪೀಸು	,,	3	12	0
ಅನ್‌ಸೋನಿಯಾ 'ಬಿ' ಟೈಂಪೀಸು	,,	5	13	0
,, ಅಲಾರಂ ,,	,,	5	6	0
ಬಿಗ್‌ಬೆನ್ ,,	,,	9	6	0
,, ಡಿಲಕ್ಸ್ ಸ್ಟ್ಯಾಂಡಿರುವ ಅಲಾರಂ ಟೈಂಪೀಸು	,,	13	5	0
ಘಂಟೆ ತೋರಿಸಿ ಅಲಾರಂ ಭಾರಿಸುವ ಕ್ಯಾರೇಜ್ ಕ್ಲಾಕ್	,,	7	2	0
,, ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1ಕ್ಕೆ		8	10	[illegible]
,, ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಭಾರಿಸುವ ಕ್ಯಾರೇಜ್ ಕ್ಲಾಕ್ 1ಕ್ಕೆ		9	12	0
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಕರ್ಣಾನಂದ ವಾಗುವಂತೆ ಗಾನಮಾಡುವ ಕ್ಯಾರೇಜು ಕ್ಲಾಕ್ 1ಕ್ಕೆ		12	0	0

ಸೂಚೀಪತ್ರಕ್ಕಾಗಿ ಕಾಗದ ಬರೆಯುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52–4

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊ ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	19,240
ಜಮೂಬಂದ ಠೇವಣಾತಿ —	1,83,670

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1–5–1929.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು ಮತ್ತು—ಮೆ. ಪೇರಿಯಂಡ ಪೂವಯ್ಯನವರು.

ಮರೆನಾಡು—ಮೆ. ಕೇಕಡ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಣತೀರ ನಂಜಪ್ಪನವರು, ಮತ್ತು ಮೆ. ಕುಂಡೀರಂಡ ಸೋಮಯ್ಯನವರು, (ಖಾದಿಭಂಡಾರ.)

ಮೂನಾಡು—ಮಡೆಯಂಡ ದೇವಯ್ಯನವರು,

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.

ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,

ಗೋಣಿಕೊಪ್ಪಲು—ಮೆ. ಚಮ್ಮಟ ಮಾದಪ್ಪನವರು,

ಅಮ್ಮತ್ತಿ–ಸಿದ್ಧಾಪುರ—ಮೆ ಬಿಸಂಡ ಪೂದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಯ್ಯನವರು,

ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್, "ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇಲ್ಲದೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್, "ಕೊಡಗು" ಮಡಿಕೇರಿ.



12 bore Victor Cartridges Rs. 10/- Per 100

Mahomedally-Noorbhoy.

ARMS & AMMUNITION MART.

321 Abdul Rehman Street.

52-38 **BOMBAY, 3.**

ಕಟುಕಷಾಯ ಮಲೇರಿಯ ರಕ್ಷೆ:—ಇದು ಆಜ್ಞೆನ್ ಮತ್ತು ಕ್ವಿನೀನು ಸೇರಿಸಿದರೂ ಗುಣವಾಗದಿರುವ ಮಲೇರಿಯ ಜ್ವರ, ದಿನಬಿಟ್ಟು ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0, 3ಕ್ಕೆ ರೂ. 4–0–0, 6ಕ್ಕೆ ರೂ 7–8–0, 12ಕ್ಕೆ ರೂ 14.

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಪಡಿಕಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಸುಣ್ಣ ಹೋಗುವುದು, ಅಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲು 1, 3, 6ಕ್ಕೆ ರೂ. 1–1–0 3–8–0, 6–12–0.

ರೋಮನಾಶಿನಿ:— ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಉದುರುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3–8–0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ಖಿನ್ನ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2–10–0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5–8–0.

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.

52–34 ೯. ಮಂಗಳೂರು.

ಸ್ಥಾಪನೆ–1874. ಹೆಡ್ ಆಫೀಸು–ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವ್ಯವಾಟದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು	1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25.
	1000 ,, ಎಂಡೋಮೆಂಟ್ ,, ,, —ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.

ಪುನಹ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು

ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಓರಿಯಂಟಲ್ ಬಿಲ್ಡಿಂಗ್ಸ್, ನಂ. 1. ಸೌತ್ ಪರೇಡ್, ಬೆಂಗಳೂರು. 52–23 **ಯಲ್. ಆರ್. ಕೃಷ್ಣಸಾಮಯ್ಯರ್.** ಬ್ರಾಂಚ್ ಸೆಕ್ರೆಟರಿ.

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.





ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮೊಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.

24–3

ಎಂಪಯರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿಸಲ್ಪಟ್ಟದ್ದು (1897ರಲ್ಲಿ)

1929ನೆಯ ಫೆಬ್ರುವರಿ 28ರ ವರೆಗಿನ ಆದಾಯ

ಹೊಸ ವಿಮೆಗಳು	1,27,00,000	ರೂ.	ಗಿಂತ	ಹೆಚ್ಚಿದೆ.
ಆದಾಯವು	50,00,000	,,	,,	,,
ಒಟ್ಟು ಭಂಡವಾಳ	3,34,00,000	,,	,,	,,

ಮಡಿಕೇರಿ, ಸೋಮವಾರಪೇಟೆ ಮತ್ತು ಸಿದ್ಧಾಪುರ ಮೊದಲಾದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಹೆಡ್ ಆಫೀಸು. ಎಂಪಯರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

24–1

ಬ್ರಾಂಚ್ ಆಫೀಸು 152 ಕಮರ್ಷಿಯಲ್ ಬೀದಿ ಬೆಂಗಳೂರು.

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 1550.

If not delivered please return to

"KODAGU" OFFICE. MERCARA.

ಕೊಡಗು.

[illegible] || [illegible]

ವಾರ್ಷಿಕ ಚಂದಾ ರೂ. ೩-೮-೦. ಸಂಪಾದಕ—[illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಮಡಿಕೇರಿ, [illegible] ಶುಕ್ರವಾರ [ಸಂಚಿಕೆ [illegible]

Post Box 423,
TRIPLICANE, MADRAS.

MANUFACTURES AND DEALS IN ALL:—

(1) Gemset Jewels, gold and silver articles of all patterns.
(2) Race Cups, Caskets, Medals, etc., for presentation purposes.
(3) Trovels, Keys, Locks, etc., for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

Catalogue Free to Bona fide Enquirers

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro plating, gilding and nickelling.
(3) Binguy old jewellery, or undertaking to effect sale.

V. SUBRAMANIA IYER

Telephone:— 3145

JEWELLER

Telegrams:— "PRECIOUS."

Gold-smith, Silver-smith, & Dealer in all Gemset Jewels.

52—39

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ
ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ

ರತನ್ ಮಿಶ್ರಿ ಹಲ್ವಾ

ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು ನೀರಾಗಿರುವಿಕೆ ಆಗಾಗ್ಯೆ ಸ್ವಪ್ನದಲ್ಲಿ ಸ್ಖಲನೆಯಾಗುವಿಕೆ, ಅತಿ ಸ್ತ್ರೀಚಾಪ್ರವರ್ತನೆಯಿಂದಲೂ, ಬಾಲ್ಯದ ದುರಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ಶೀಘ್ರ ಸ್ಖಲನೆಯಾಗುವಿಕೆ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಯುವಿಕೆ, ಚಿರಕಾಲದ ಮೇಹ ವ್ಯಾಧಿಯಿಂದ ಶರೀರವು ನಶಿಸಿ ಹೋಗುವಿಕೆ, ನೇತ್ರರೋಗ, ಚರ್ಮವ್ಯಾಧಿ, ಉಷ್ಣವಾಯು ಸಂಬಂಧರೋಗ, ಎದೆ ಶೂಲೆ, ಮೇಹಪಡೆ, ಅಜೀರ್ಣ, ಕೆಮ್ಮು ಈ ವಿಧವಾದ ನಾನಾ ರೋಗಗಳನ್ನು ಗುಣಪಡಿಸಿ ಧಾತುಪುಷ್ಟಿ, ಶರೀರ ಪುಷ್ಟಿಯನ್ನುಂಟುಮಾಡುವುದು ಹೊಗಸರು ಸೇವಿಸಿದಲ್ಲಿ ಉಷ್ಣಗರ್ಭಕಾರಕ ವ್ಯಾಧಿಗಳೆಲ್ಲಾ ನೀಗುವವು. **ಸಂಪೂರ್ಣ ಗುಣ ಉಂಟಾಗಲು ೩-೪ ಡಬ್ಬಿಗಳನ್ನು ಪಯೋಗಿಸಬೇಕು.**

ಕ್ರಯ—೧ ಪೌಂಡು ಟಿನ್ ೧ಕ್ಕೆ ರೂ. ೫—೦—೦; ಅರ್ಧ ಪೌಂಡು ಟಿನ್ ೧ಕ್ಕೆ ರೂ. ೨—೮—೦.

ಚಿಕ್ಕಪೇಟೆ, ವಿದ್ಯಾವಿಲಾಸ ಬುಕ್ಕು ಡಿಪೋವಿನಲ್ಲೂ ದೊರಲ್ಪಡುತ್ತೆ.

52—25. ವ್ಯವಸ್ಥಾಪಕರು—ರತನ್ ಮಿಶ್ರಿ ಡಿಪೋ. (ಆಂಜನೇಯ ಜ್ಯೋತಿಷಾಲಯ,) ಕಾಶೀಶ್ವರಿಗುಡಿ ಬೀದಿ, ಬೆಂಗಳೂರು ಸಿಟಿ.

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

ಅಪೂರ್ವ ಸಂದರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ.

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

ಕಾಮ ಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

ಆತಂಕನಿಗ್ರಹ ಔಷಧಾಲಯ,
52—45 ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೇಷ್ಠವಾದ 5 ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ. 40. ಅಸಲ್ ಗೋರೋಜನ ತೊಲ 1ಕ್ಕೆ ರೂ. 12.
ಕೇಸರಿ ಅಥವಾ ಕುಂಕುಮ್ಮಪುವ್ವ ತೊಲ 1ಕ್ಕೆ ರೂ. 3½. ಪಚ್ಚ ಕರ್ಪೂರ ತೊಲ 1ಕ್ಕೆ ರೂ. 2½.
ಕಾಬೂಲ ಇಂಗು ತೊಲ 10 ಕ್ಕೆ ರೂ. 1.

ಶ್ರೇಷ್ಠವಾದ 108 ಮಣಿವುಳ್ಳ ರುದ್ರಾಕ್ಷಿ ಜಪ ಮಾಲೆ 1ಕ್ಕೆ ಆಣೆ 6, 8, 12, ರೂ. 1, 2, 5, 10 ರ ವರೆಗೆ.
32 ಮಣಿವುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ. 1, 2, 3, 4, 5, 8, 10 ರ ವರೆಗೆ.
ಮತ್ತು ಎಲ್ಲಾ ವಿಧವಾದ ರೇಷ್ಮೆ ಜರಿ ಸೀರೆಗಳು, ಕಣಗಳು, ಮುಗುಟ ವಸ್ತ್ರರಾದಿ ಎಲ್ಲಾ ಸರಕುಗಳು ದೊರೆಯುತ್ತೆ. ಸಾವಕಾಶ ಮಾಡದೆ ಈ ಕೆಳಗಿನ ಅಡ್ರೆಸ್ಸಿಗೆ ಆರ್ಡರು ಕೊಡಿರಿ. ಸರಕುಗಳು ಸುಲಭ ಕ್ರಯಕ್ಕೆ ದೊರೆಯುತ್ತೆ.

ಅಡ್ರೆಸ್—
ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್," ಶ್ರೀಕಾಶಿ.

BHARADWAJ & CO.,
"SILK HOME,"
52—42 **Benares City.**

ಏಕೆ ನರಳುತ್ತೀರಿ?

ಕ್ರಯವು ಅಂಚೆಹಾಸಲು.
ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—43 ಮದನಮಂಜರಿ ಫಾರ್ಮಸಿ,
1/94 ಬ್ರಾಡ್ವೆ ಬಜಾರು ರೋಡು. ಮದ್ರಾಸು.

ಕೊಡಗು.

ಸನ್ ೧೯೨೯ನೇ ಇಸವಿ

ಜೂನ್ ತಾ. ೧೪ ನೇ ಶುಕ್ರವಾರ.

ಸಬ್ ಜಡ್ಜರ ನೇಮಕ.

ಹದಿಮೂರು ವರ್ಷ ಕೆಲಸ ಮಾಡಿದ ಮೆ. ಎ. ಬಿ. ಕಾರ್ಯಪ್ಪ ಯಂ. ಎ ಬಾರ್‌ಎಟ್ ಲಾರವರು ಸಬ್‌ಜಡ್ಜಿ ಕೆಲಸದಿಂದ ರಿಟಯರ್ ಆದರು. ವೀರರಾಜಪೇಟೆಯಲ್ಲಿ ಸುಮಾರು 20 ವರ್ಷ ಮುನಸೀಫ್ ಕೆಲಸ ಮಾಡಿದ ಮೆ. ಸಿ ಯನ್. ಮುತ್ತಣ್ಣ ಬಾರ್ ಎಟ್ ಲಾ ರವರಿಗೆ ಪ್ರಮೋಶನ್ ಸಿಕ್ಕಲಿಲ್ಲ. ಕೊಡವ ಸಭೆಯ ಚಾಲಕರಾಗಿದ್ದು, ಕೌನ್ಸಿಲಿನಲ್ಲಿ ಸಾಧಾರಣವಾಗಿ ಸರ್ಕಾರದ ಪರ ಅಭಿಪ್ರಾಯ ಕೊಡುತ್ತಿದ್ದ ಮೆ. ಪಿ ಬಿ. ಮೇದಪ್ಪ ಬಿ. ಎ., ಬಿ. ಎಲ್., ಹೈಕೋರ್ಟ್ ವಕೀಲರಿಗೆ ಸಬ್ ಜಡ್ಜಿಯರ ಕೆಲಸವಾಯಿತು. ಈ ನೇಮಕ ಸಹ ಮೆ ಕಾರ್ಯಪ್ಪನವರು ಕೆಲಸದಿಂದ ನಿವೃತ್ತರಾಗಬೇಕಾಗಿದ್ದ ಒಂದು ವಾರದನಂತರವಾಯಿತು. ಸರ್ಕಾರದ ಮೇಲಧಿಕಾರಿಯ ಈ ವರ್ತನೆಯು ವಿಚಾರರ್ಹವಾಗಿದೆ.

ಪ್ರೋವಿನ್ಶಿಯಲ್ ಗಜೆಟೆಡ್ ಉದ್ಯೋಗಸ್ಥರನ್ನು ಐದು ವರ್ಷಕ್ಕೊಂದಾವರ್ತಿಯಾದರೂ ವರ್ಗಾವರ್ಗಿ ಮಾಡಲು ಅನುಕೂಲವಾಗುವ ಏರ್ಪಾಡನ್ನು ಮಾಡಬೇಕೆಂತ ದೇಶದವರು ಜಮೀನ್ದಾರರ ಸಂಘದ ಮೂಲಕವೂ, ಬೇರೆ ಸಾರ್ವಜನಿಕ ಮೀಟಿಂಗುಗಳ ಮೂಲಕವೂ ಕೇಳಿಕೊಂಡರು ಕೌನ್ಸಿಲಿನಲ್ಲಿ ಇದೇ ವಿಷಯದ ಠರಾವು ಚರ್ಚೆಯಾಯಿತು. ಆಗ ವರ್ಗಾವರ್ಗಿಯ ತತ್ವವನ್ನು, ಮುಖ್ಯವಾಗಿ ನ್ಯಾಯತೀರ್ಪಿನ ಅಧಿಕಾರಿಗಳ ಸಂಬಂಧವಾಗಿ, ಚರ್ಚೆಯಲ್ಲು ಭಾಗಿಗಳಾದವರೆಲ್ಲರೂ ಒಪ್ಪಿದರೂ ಸಹ ಹಾಗೆ ವರ್ಗ ಮಾಡಲು ಅನುಕೂಲವಿಲ್ಲವೆಂತ ಅಭಿಪ್ರಾಯ ಕೊಟ್ಟರು. ಸರ್ಕಾರದ ಪರವಾಗಿ ಆಗ ಕಮಿಶನರಾಗಿದ್ದ ಮೆ ಟಾಸ್ಕರವರು ನ್ಯಾಯತೀರ್ಪಿನ ಅಧಿಕಾರಿಗಳನ್ನು ಮದ್ರಾಸಿನಲ್ಲಿ ಸಾಧಾರಣವಾಗಿ ಮೂರು ವರ್ಷಕ್ಕೊಂದಾವರ್ತಿ ವರ್ಗಾಯಿಸುತ್ತಿದ್ದಾರೆ, ಇದು ನ್ಯಾಯವಾದ ಪದ್ಧತಿಯೆಂತ ಒಪ್ಪಿದರೂ ಇಲ್ಲಿನ ಅಧಿಕಾರಿಗಳನ್ನು ಮದ್ರಾಸಿನೊಂದಿಗೆ ಅದಲು ಬದಲು ಮಾಡಲು ಸಾಧ್ಯವಿಲ್ಲವೆಂತ ವಗೈರೆ ಕಾರಣ ಕೊಟ್ಟು ಠರಾವನ್ನು ವಿರೋಧಿಸಿದರು. ಕೊಡಗಿನಲ್ಲಿರುವ ಗಜೆಟೆಡ್ ಉದ್ಯೋಗಸ್ಥರನ್ನು ಕೊಡಗಿನಲ್ಲೇ ವರ್ಗಾಯಿಸುವ ಅನುಕೂಲವು ಬೇರೆ ಎಲ್ಲಾ ಉದ್ಯೋಗಗಳ ಸಂಬಂಧವಾಗಿ ಇಲ್ಲವಾದರೂ, ನ್ಯಾಯತೀರ್ಪಿನ ಅಧಿಕಾರಗಳು ಎರಡು ಇರುವುದರಿಂದ ಈ ಇಲಾಖೆಯಲ್ಲಿ ಅಪರೂಪವಾಗಿಯಾದರೂ ಅನುಕೂಲವಿದೆ. ಸಬ್‌ಜಡ್ಜರ ಕೆಲಸವು ಖಾಲಿ ಬಿದ್ದಾಗ ಈ ಅನುಕೂಲವು ದೊರೆತಿತ್ತು. ಬಹು ಕಾಲ ವೀರರಾಜಪೇಟೆಯಲ್ಲಿ ಮುನಸೀಫ್ ಕೆಲಸವನ್ನು ಮಾಡಿದ ಮೆ ಸಿ. ಯನ್ ಮುತ್ತಣ್ಣನವರನ್ನು ಮಡಿಕೇರಿಗೆ ಸಬ್‌ಜಡ್ಜರಾಗಿ ವರ್ಗಾಯಿಸಬೇಕಿತ್ತು. 20 ವರ್ಷಗಳ ವರೆಗೆ ಸಿವಿಲ್ ಜಡ್ಜರೂ ಮತ್ತು ಕ್ರಿಮಿನಲ್ ಮೇಜಿಸ್ಟ್ರೇಟರೂ ಆಗಿದ್ದ ಇವರಿಗೆ ಸಬ್‌ಜಡ್ಜ್ ಆಗುವ ಅನುಭವವೂ, ಅರ್ಹತೆಯೂ ಇದೆ ತನ್ನ ಜೀವಮಾನದ ದೊಡ್ಡ ಭಾಗವನ್ನು ಸರ್ಕಾರದ ಸೇವೆಯಲ್ಲೇ ಎಡೆ ಬಿಡದೆ ಕಳೆದವರಿಗೆ ಹಕ್ಕಿನ ಮೇರೆ ಸಬ್‌ಜಡ್ಜಿ ಪದವಿಯು ಸಿಕ್ಕಲೇ ಬೇಕಿತ್ತು. ಒಬ್ಬರು ಒಂದೇ ಸ್ಥಳದಲ್ಲಿ ಒಂದೇ ಪದವಿಯಲ್ಲಿ ಪ್ರಾರಂಭದಿಂದ ರಿಟಯರ್ ಆಗುವ ವರೆಗೂ ಇರುವುದರಿಂದ ಅವರಿಗೆ ಎಷ್ಟರ ಮಟ್ಟಿಗೆ ಬೇಸರವಾದೀತೆಂಬದನ್ನು ಊಹಿಸಿಕೊಳ್ಳಬಹುದು. ಪ್ರಮಾಣಿಕತೆಯಿಂದ ಸರ್ಕಾರಿ ಕೆಲಸ ಮಾಡಿದವರಿಗೆ ಹೆಚ್ಚಿನ ಪದವಿಗೆ ಪ್ರಮೋಶನ್ ಕೊಡುವ ಎಡೆ ಇರುವಾಗಲೂ ಕೊಡದಾಗೆ ದೂಡಿದೆ ಇರುವುದರಿಂದ ಅವರು ತಮ್ಮ ಕೆಲಸದಲ್ಲಿ ನಿರುತ್ಸಾಹಿಗಳಾಗುವುದರಲ್ಲಿ ಸಂಶಯವಿಲ್ಲ.

ಮೆ. ಸಿ. ಯನ್. ಮುತ್ತಣ್ಣನವರಿಗೆ ಖಾಲಿಬಿದ್ದ ಅಧಿಕಾರವನ್ನು ಕೊಟ್ಟಿದ್ದರೆ ವೀರರಾಜಪೇಟೆಯ ನ್ಯಾಯತೀರ್ಪಿನ ಅಧಿಕಾರಿಗೆ ಅವಶ್ಯವಿರುವ ವರ್ಗ ಕೊಟ್ಟಂತಾಗುತ್ತಿದ್ದದ್ದೂ ಅಲ್ಲದೆ, ಇವರು ಬೇಗನೆ ರಿಟಯರಾಗುವವರಾದುದರಿಂದ ಸಬ್‌ಜಡ್ಜಿಯ ಉದ್ಯೋಗವಲ್ಲು ಬದಲಾವಣೆಗೆ ಬೇಗನೆ ಅವಕಾಶ ದೊರೆಯುತ್ತಿತ್ತು. ದೇಶದವರು ನಿರೀಕ್ಷಿಸದ ಈ ಹೊಸ ನೇಮಕದಿಂದ ಈ ಮುಖ್ಯ ನ್ಯಾಯತೀರ್ಪಿನ ಅಧಿಕಾರದಲ್ಲಿ ಇನ್ನು ಕಾಲು ಶತಮಾನದ ವರೆಗಾದರೂ ಬದಲಾವಣೆಯಾಗುವ ಸಂಭವವಿಲ್ಲ. ಇಂಥಾ ಅನಾನುಕೂಲದ ಮತ್ತು ವ್ಯಾಜ್ಯಗಾರರಿಗೆ ಕಷ್ಟಕರವಾದ ಸ್ಥಿತಿಯನ್ನು ಸರ್ಕಾರದವರು ಉಂಟುಮಾಡಿದನ್ನು ಎಷ್ಟು ಖಡಿಣವಾಗಿ ಖಂಡಿಸಿದರೂ ಸಾಲದು.

ರಾಜಕೀಯ ಕಾರ್ಯಗಳಲ್ಲಿ ಕೋಮುವಾರು ವ್ಯತ್ಯಾಸವನ್ನೇ ಬಲಪಡಿಸುವವರಲ್ಲಿ ಸಂಜಕ ಇರುವ ಒಂದು ಕೂಟದ ಮುಖಂಡರನ್ನು ಆರಿಸಿದ್ದು ಇನ್ನೊಂದು ಆಕ್ಷೇಪಣೆಯಾಗಿದೆ. ಇವರು ರಾಜಕೀಯ ಚಳವಳದಲ್ಲಿ ಒಂದು ಪಕ್ಷದ ಮುಂದಾಳಾಗಿ ಇದ್ದಾಗ ಇವರಿಗೆ ಸಹಾಯಕರಾದವರೂ, ಎದುರು ನಿಂತವರೂ ಇದ್ದಾರೆ ಇಂಥವರನ್ನೆಲ್ಲಾ ಈಗ ಸಮ ದೃಷ್ಟಿಯಿಂದ ನೋಡುವದು ಕಷ್ಟವಾಗುತ್ತದೆ ಸಾಧಾರಣ ಸ್ವಭಾವವನ್ನು ಮೀರಿ ನಿಷ್ಪಕ್ಷನ್ಯಾಯವನ್ನು ಇವರು ಕೊಡುತ್ತಾರೆಂತಲೇ ನಂಬೋಣ ಆದರೆ ಇವರಿಗಿದ್ದ ಜಾತಿ ಪ್ರೇಮ, ಸಂಗಡ ಪ್ರೇಮ ಮುಂತಾದ ಮನೋಭಾವಗಳನ್ನು ಮೀರಿ ಇವರು ತಮಗೆ ನ್ಯಾಯ ಕೊಟ್ಟಾರೋ ಎಂಬ ಸಂಶಯಗಳು ಇವರ ಮುಂದೆ ಬರುವ ಕಕ್ಷಿಗಾರರಿಗೆ ಇದ್ದೇ ಇರುತ್ತದೆ ಆದರೆ ಸರ್ಕಾರದವರು ದೇಶದಲ್ಲಿ ಒಬ್ಬನಿಗಾದರೂ ಒಂದು ನಿಮಿಷವಾದರೂ ಮೇಲೆ ವಿವರಿಸಿದ ತರದ ಸಂಶಯಗಳು ಹುಟ್ಟಲು ಅವಕಾಶವಿಲ್ಲದಂತೆ ಈ ಉದ್ಯೋಗಕ್ಕೆ ಸರಿಯಾದವರನ್ನು ನೇಮಿಸಲು ಎಡೆ ಇದ್ದರೂ ಈ ರೀತಿಮಾಡಿದ್ದರಿಂದ ಇಷ್ಟು ಟೀಕೆಗೆ ಕಾರಣವಾಯಿತು

ಜನರ ಪ್ರೀತಿಗೆ ಪಾತ್ರರಾದ ಕಾರಣದಿಂದಲಾದರೂ ಈ ಹೊಸ ನೇಮಕವನ್ನು ಮಾಡಿದರೋ ಎಂದು ನೋಡಿದರೆ ಇದರಲ್ಲೂ ಸರ್ಕಾರದವರು ನ್ಯಾಯವಾಗಿ ವರ್ತಿಸಿದಂತೆ ಕಾಣುವದಿಲ್ಲ. ಮೆ. ಮೇದಪ್ಪನವರು ಬರೇ ಕೊಡವ ಸಭೆಯವರ ಪ್ರೀತಿಗೆ ಮಾತ್ರ ಪಾತ್ರರಾಗಿದ್ದರು ಕೊಡವ ಸಭೆಯು ಒಂದು ಕೋಮಿನವರ ಸಭೆಯಾಗಿದೆ ಆದರಲ್ಲೂ ಈ ಕೋಮಿನ ದೊಡ್ಡ ಬಹುಮತದವರು ಈ ಸಭೆಗೆ ವಿರೋಧವಾಗಿರುವರು. ಹೀಗಿರುವಲ್ಲು ಇವರು ಎಷ್ಟೊಂದು ಕಮ್ಮಿ ಜನ ಸಂಖ್ಯೆಯಿಂದ ಪ್ರೀತಿಸಲ್ಪಡುತ್ತಿದ್ದರೆಂಬುದು ಗೊತ್ತಾಗುವದು ಮೆ. ಮುತ್ತಣ್ಣನವರಾದರೋ ಯಾವ ಸಂಗಡ, ಜಾತಿ ಯಾ ಕೋಮಿಗೂ ಅಸೂಯೆಯಾಗಲೀ, ದ್ವೇಷವಾಗಲೀ ತೋರಿಸದೆ ನ್ಯಾಯವಾದ ರೀತಿಯಲ್ಲಿ ತಮ್ಮ ಕೆಲಸವನ್ನು ನಡಿಸುತ್ತಾ ಬಂದದರಿಂದ ಅವರ ಉದ್ಯೋಗದ ಆವರಣದೊಳಗಿರುವ ದಕ್ಷಿಣ ಕೊಡಗಿನ ಎಲ್ಲಾ ಜನರ ಪ್ರೀತಿಗೆ ಒಳಗಾಗಿರುವರು. ಅರ್ಹತೆಯನ್ನು ವಿಚಾರಿಸಿದರೂ ಮೆ. ಮುತ್ತಣ್ಣನವರು ಹೆಚ್ಚಿನ ಅರ್ಹತೆಯುಳ್ಳವರಾಗಿದ್ದಾರೆ. ಮೆ. ಮುತ್ತಣ್ಣನವರು ಬಾರ್ ಎಟ್ ಲಾ ರಾಗಿರುವರು, ಮತ್ತು 20 ವರ್ಷ ಸಿವಿಲ್ ಜಡ್ಜಿ ಕೆಲಸದ ಅನುಭವವಿರುವವರು. ಮೆ. ಮೇದಪ್ಪನವರಿಗಾದರೋ ಲಾಯರು ಕೆಲಸದ ಅನುಭವವು ಬಹಳ ವರ್ಷದ್ದಿಲ್ಲ. ಅದರಲ್ಲೂ ಇವರಿಗೆ ಕ್ರಿಮಿನಲ್ ಭಾಗದಲ್ಲಿ ಹೆಚ್ಚು ಕೆಲಸವಿತ್ತೇ ಹೊರತು ಸಿವಿಲ್ ತರಫಿನ ಕೆಲಸ ಹೆಚ್ಚಿರಲಿಲ್ಲವೆಂದು ತಿಳಿಯುತ್ತೇವೆ ದೇಶದ ಮುಖ್ಯವಾದ ಈ ಸಿವಿಲ್ ಜಡ್ಜಿ ಪದವಿಗೆ ಹಲವು ವರ್ಷಗಳಿಂದ ಸಿವಿಲ್ ಕಾನೂನಿನ ಅನುಭವಸ್ಥರು ದೊರೆತಿರುವವಿಲ್ಲವೆಂಬುದು ಸರ್ಕಾರದ ಮೇಲಧಿಕಾರಿಗಳಿಗೂ ಗೊತ್ತಿರಬಹುದು. ಈ ದೃಷ್ಟಿಯಿಂದಲೂ ಈಗಿನ ನೇಮಕವು ಸಮರ್ಪಕವಾದುದಲ್ಲ

ಹೊಸ ಸಬ್‌ಜಡ್ಜಿಯರು ಪಾರ್ಟಿ ಮುಖಂಡರಾಗಿ ಇದ್ದಿದ್ದಲ್ಲದೆ ಎರಡು ಮೂರು ತರದ ಬೇರೆ ಕೆಲಸಗಳನ್ನು ನಡಿಸುತ್ತಿದ್ದರು. ಇದನ್ನು ಎಣಿಸಿದರೂ ಇವರ ಆರಿಸುವಿಕೆಯು ಸರಿಯಾದದ್ದಾಗಲಿಲ್ಲ. 'ಕಾವೇರಿ ಮೋಟಾರು ಸರ್ವಿಸು' ಮತ್ತು 'ಕಾವೇರಿ ಪ್ರಿಂಟಿಂಗ್ ವರ್ಕ್ಸ್' ಎಂಬ ಎರಡು ಖಾಸಗಿ ಕಂಪೆನಿಗಳ ಪಾಲುದಾರರಾಗಿಯೂ ಇದ್ದಾರೆ. ಈ ಎರಡು ಸಂಸ್ಥೆಗಳಲ್ಲೂ ಬೇರೆ ಅನೇಕ ಪಾಲುದಾರರಿದ್ದಾರೆ ಇಂಥವರ ಮತ್ತು ಇವರ ವ್ಯಾಪಾರಕ್ಕೆ ಸಂಬಂಧವಿರುವವರ ದಾಕ್ಷಿಣ್ಯ ಮೀರಿ ನ್ಯಾಯ ತೀರ್ಮಾನ ಕೊಡುವದೂ ಕಷ್ಟವಾಗುತ್ತದೆ ಈ ಸಂಸ್ಥೆಗಳ ಪ್ರತಿಸ್ಪರ್ಧಿಗಳನ್ನು ಆಕ್ಷೇಪಿಸಿದವರೂ, ಇನ್ನು ಮುಂದೆ ಆಕ್ಷೇಪಿಸುವವರೂ ಇರಬಹುದು. ಇಂಥವರು ಇವರ ಮುಂದೆ ನ್ಯಾಯತೀರ್ಪಿಗೆ ಬರಬೇಡವೇ ? ಈ ಕಷ್ಟಗಳನೆಲ್ಲಾ ಮೇಲಧಿಕಾರಿಗಳು ಯಾಕೆ ಯೋಚಿಸಲಿಲ್ಲವೋ ನಮಗೆ ತಿಳಿಯದು.

ಈ ನೇಮಕವನ್ನು ಮಾಡಲಿಕ್ಕೆ ಅನಾವಶ್ಯವಾದ ತಡವೂ ಮಾಡಿದರು. ಹಳೇ ಜಡ್ಜಿಯರು ಇದೇ ತಿಂಗಳು 3 ರಲ್ಲೇ ಕೆಲಸದಿಂದ ಬಿಡುಗಡೆಯಾಗಬೇಕಾಗಿದ್ದರೂ ಹತ್ತನೇ ತಾರೀಕಿನವರೆಗೆ ನಿವೃತ್ತರಾಗಲು ಸಾಧ್ಯವಾಗಲಿಲ್ಲ. 8 ನೇ ತಾರೀಕಿನವರೆಗೆ ಹೊಸ ಜಡ್ಜಿಯರು ನೇಮಕವಾಗಲೇ ಇಲ್ಲ. ಈ ತಡವಾದ ಕಾಲದಲ್ಲಿ ಕೆಲಸದಿಂದ ನಿವೃತ್ತರಾಗಿದ್ದ ಅಧಿಕಾರಿಯು ಮಾಡಿದ ಕೆಲಸಗಳು ಕಾನೂನು ಬದ್ಧವಾಗಿವೆಯೋ ಎಂಬ ಸಂಶಯವಿದೆ. ಇಂಥಾ ಅನಾನುಕೂಲತೆಗಳಿಗೆ ಯಾಕೆ ಎಡೆಕೊಡಬೇಕಿತ್ತು ? ಈ ಅಧಿಕಾರಕ್ಕೆ 3 ನೇ ತಾರೀಕಿನಲ್ಲೇ ಯಾರನ್ನಾದರೂ ನೇಮಿಸಬೇಕಿತ್ತು, ಎಂಬದು ಮರತೇ ಹೋಗಿತ್ತೋ, ಅಥವಾ ಸಮಯವೇ ದೊರಕಲಿಲ್ಲವೋ ? ಯಾವ ಕಾರಣದಿಂದಲೇ ಆದರೂ ಸರ್ಕಾರದ ಮೇಲಧಿಕಾರಿಗಳು ತಮ್ಮ ಕರ್ತವ್ಯವನ್ನು ಕಾಲಕ್ಕೆ ಸರಿಯಾಗಿ ಮಾಡದ ತಪ್ಪಿಗೂ ಗುರಿಯಾಗಿದ್ದಾರೆ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

(ಬರೆದು ಬಂದದ್ದು.)

ತಾರೀಖು 7—6—1929 ರಲ್ಲಿ ಕೊಡಗು ಕೌನ್ಸಿಲು ಹಾಲಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು ನಡೆಯಿತು. ಪ್ರೆಸಿಡೆಂಟರು ಗೈರುಹಾಜರಾದುದರಿಂದ ವೈಸ್ ಪ್ರೆಸಿಡೆಂಟಾದ ಮೆ. ಪಾಂಡಂಡ ಚಂಗಪ್ಪನವರು ಮೀಟಿಂಗಿನ ಅಧ್ಯಕ್ಷರಾಗಿದ್ದರು

ಬೇರೆ ಮೀಟಿಂಗುಗಳಿಗಿಂತ ಈ ಮೀಟಿಂಗಿನಲ್ಲಿ ಕೆಲವು ವಿಶೇಷ ಸಂಗತಿಗಳು ನಡೆದವು. ಎಲ್ಲಾ ಠರಾವುಗಳಿಗಿಂತಲೂ ಮೊದಲಿದ್ದ ವಿದ್ಯಾಕಮಿಟಿಯ ರಿಪೋರ್ಟಿನ ವಿಷಯ ಚರ್ಚೆಯನ್ನು ಮೊದಲು ತೆಗೆದುಕೊಳ್ಳದೆ, ಅದರ ವಿಷಯ ವ್ಯತ್ಯಾಸದ ವಾಸನೆಯು ಮೊದಲೇ ಹೊರಟಿದ್ದುದರಿಂದ ಅದನ್ನು ಕಡೆಗೆ ಚರ್ಚಿಸಬೇಕೆಂದು ತೀರ್ಮಾನವಾಯಿತು.

ಚರ್ಚಾಸ್ಪದವಲ್ಲದ ಮತ್ತು ಬರೇ ಮಂಜೂರಾತಿಗಾಗಿ ಇಟ್ಟಿದ್ದ ಕೆಲವು ಠರಾವುಗಳನ್ನು ಮೊದಲು ತೀರ್ಮಾನಿಸಿ, ಕಾರ್ಯಕ್ರಮ ಪಟ್ಟಿಯಲ್ಲಿದ್ದ ೫ರನೇ ಠರಾವನ್ನು ಚರ್ಚೆಗೆ ಮುಂದಿಟ್ಟರು. ಅದರಲ್ಲಿ ಮೆ ಕೊಡಂದೆರ ದೇವೈಯ್ಯನವರು ಡಿ ಬೋರ್ಡಿನ ಮೇಲೆ ಮಾಡಿದ್ದ ದಾವದ ಖರ್ಚು ಮಂಜೂರು ಮಾಡಬೇಕೆಂದಿತ್ತು. ಇದರ ವಿಷಯ ಮೆ. ಯನ್ ಮುದ್ದಪ್ಪನವರು—ಸದರಿ ಖರ್ಚನ್ನು ಯಾಕೆ ಡಿ. ಬೋರ್ಡು ಹೊಂದಿಕೊಂಡೂ ಮತ್ತು ಸದರಿ ದಾವದಲ್ಲು ಸಾಕ್ಷಿಯಾಗಿ ಬಂದ ಡಿ. ಬೋರ್ಡು ವೈಸ್‌ಪ್ರೆಸಿಡೆಂಟರು ಮೊದಲು ಸುಭೇದಾರರ ಮುಂದೆ ಕೊಡಂದೆರ ದೇವೈಯ್ಯನವರ ಜಾಗಕ್ಕೆ 150 ರೂ. ಕ್ರಯವೆಂದೂ, ನಂತರ ಕೋರ್ಟಿನಲ್ಲಿ ದೇವೈಯ್ಯನವರ ಜಾಗಕ್ಕೆ 450 ರೂ. ಗಿಂತ ಹೆಚ್ಚು ಬೆಲೆಯೆಂದೂ ಹೇಳಿ ಡಿ. ಬೋರ್ಡಿಗೆ ನಷ್ಟಪಡಿಸಲು ಕಾರಣವೇನೆಂತಲೂ ಮತ್ತು ಈ ದಾವದಲ್ಲಿ ಯಾಕೆ ಅಪ್ಪೀಲು ಮಾಡಲಿಲ್ಲವೆಂದೂ, ಈ ರೀತಿ ವೈಸ್‌ಪ್ರೆಸಿಡೆಂಟರೇ ಬೋರ್ಡಿಗೆ ವಿರೋಧ ಮಾಡಿದ್ದು ವ್ಯಸನಕರವೆಂದೂ ಸೂಚಿಸಿದರು ಈ ಪ್ರಶ್ನೆಗಳಿಗೆ ಮೆ. ಚಂಗಪ್ಪನವರ ಉತ್ತರವಿಲ್ಲ. ಡಿ. ಮೆ. ಸಾಹೇಬರು—ಈಗ ಆ ವಿಷಯ ಮಾತಾಡಿ ಪ್ರಯೋಜನವಿಲ್ಲವೆಂದೂ, ಕೋರ್ಟು ಡಿಕ್ರಿ ಹೇಗೂ ಕೊಡಬೇಕೆಂದೂ ಹೇಳಿದರು. ಅದರಂತೆಯೇ ಸಮಯ ಹೋದದ್ದರಿಂದ ಈ ವಿಷಯ ಚರ್ಚಿಸಿ ಪ್ರಯೋಜನವಿಲ್ಲವೆಂದು ಠರಾವನ್ನು ಮಂಜೂರು ಮಾಡಿದರು

ನಂತರ ಬೋರ್ಡಿನಲ್ಲಿದ್ದ ಹಣದ ಪೈಕಿ ರೂ. 40,000 ವನ್ನು ಸರ್ಕಾರದಲ್ಲಿ ಬಡ್ಡಿಗೆ ಇಡಬೇಕೆಂಬ ಠರಾವಿಗೆ ಅನೇಕರು ವಿರೋಧಿಸಿದರು ರೈತರು ನಾನಾ ಬಾಬಿಗೆ ಬೋರ್ಡಿನಿಂದ ಸಹಾಯ ಬೇಕೆಂದು ಕೂಗುತ್ತಿರುವಾಗ ಬೋರ್ಡಿನವರು ಚುನಾಯಿತ ಮೆಂಬರುಗಳು ತರುವ ಠರಾವುಗಳನ್ನು ಚರ್ಚೆಗೆ ಇಡದೆಯೂ, ಜನರ ಇಷ್ಟಗಳನ್ನು ನೆರವೇರಿಸದೆಯೂ ಇರುವದರಿಂದ ಈ ಠರಾವನ್ನು ಒಪ್ಪಲಾಗುವುದಿಲ್ಲವೆಂದರು. ಆದರೆ ಓಟಿಗೆ ಬಿಡುವಾಗ ಮೆ. ಗಳಿಯದ ಮುದ್ದಯ್ಯನವರು, ಅಜ್ಜಮಾಡ ಮಾದಪ್ಪನವರು, ಐನಂಡ ಮಾದಪ್ಪನವರು, ನಿಡ್ಯಮಲೆ ಮುದ್ದಪ್ಪನವರು, ಅರೆಯಡ ಸುಬ್ಬಯ್ಯನವರು ಮತ್ತು ರಾಮಶೆಟ್ಟಿಯವರು ಮಾತ್ರ ಠರಾವನ್ನು ವಿರೋಧಿಸಿ ಬಾಕಿ ಚುನಾಯಿತ ಮೆಂಬರುಗಳು ಸರ್ಕಾರಿ ಕಡೆ ನಿಂತದ್ದರಿಂದ ಸರ್ಕಾರಕ್ಕೆ ಬಡ್ಡಿಗೆ ಹಣ ಕೊಡಬಹುದೆಂಬ ಠರಾವು ಪಾಸಾಯಿತು.

ಆ ಮೇಲೆ ಗೋಣಿಕೊಪ್ಪಲು ಆಸ್ಪತ್ರೆಯಲ್ಲಿ ರೋಗಿಗಳಿಗೆ ಉಳಕೊಳ್ಳಲು ಜಾಗಕೊಡುವುದನ್ನು ನಿಲ್ಲಿಸಬೇಕೆಂಬ ಠರಾವು ಚರ್ಚೆಗೆ ಬಂತು ಇದಕ್ಕೆ ಮುದ್ದಯ್ಯನವರು ತುಂಬಾ ವಿರೋಧಿಸಿದರು ಅವರಿಗೆ ಬಹಳ ಸಯಾಗಿ ಅಜ್ಜಮಾಡ ಮಾದಪ್ಪನವರು ಮಾತಾಡಿದರು. ಸಿವಿಲ್ ಸರ್ಜನರು, ಆ ಆಸ್ಪತ್ರೆಗೆ ರೋಗಿಗಳು ಬರುವುದಿಲ್ಲವೆಂದರು. ರೋಗಿಗಳು ಬಾರದೆ ಇರುವುದಕ್ಕೆ ಅಲ್ಲಿಯ ಡಾಕ್ಟರೇ ಕಾರಣವೆಂದು ಕೆಲವರು ಹೇಳಿದರು ಸರ್ಜನರ ಮಾತಿನಂತೆ ನಡೆಯಬೇಕೆಂದು ಮೆ ಕೊಂಗೆಟ್ಟಿರ ಅಪ್ಪಯ್ಯನವರು ಅಂದರು. ಅವರ ಅಧಿಕಾರಕ್ಕೆ ತಾವು ಒಳಪಟ್ಟಿಲ್ಲವೆಂದು ಮೆ ಅಜ್ಜಮಾಡ ಮಾದಪ್ಪನವರು ಹೇಳಿದರು ಹೀಗೆ ದೀರ್ಘ ಚರ್ಚೆ ನಡೆದು ಓಟಿಗೆ ಹಾಕುವಾಗ ಸರಕಾರಿ ಮೆಂಬರುಗಳಲ್ಲದೆ ಚುನಾಯಿತ ಮೆಂಬರುಗಳ ಪೈಕಿ ಮೆ. ಗಳಿಯದ ಕೇತಿಯಂಡ ಕುಶಾಲಪ್ಪನವರೂ, ಕೊಂಗೆಟ್ಟಿರ ಅಪ್ಪಯ್ಯನವರೂ ಮತ್ತು ನೇಮಿತ ಮೆಂಬರು ಮೆ ರಸೂಲ್ ಖಾನ್ ಸಾಹೇಬರೂ ಸರಕಾರಿ ಕಡೆ ಸೇರಿ, ಆ ಆಸ್ಪತ್ರೆಯಲ್ಲಿ ಕಾಯಿಲಸ್ಥರು ಇರಕೂಡದೆಂದು ಅಭಿಪ್ರಾಯಪಟ್ಟರು. ಆದರೂ ಬಾಕಿ 8 ಜನ ಚುನಾಯಿತ ಮೆಂಬರುಗಳು ವಿರೋಧಿಸಿದ್ದರಿಂದ ಕಾಯಿಲಸ್ಥರು ಉಳಕೊಳ್ಳಲು ಇರುವ ಆಸ್ಪತ್ರೆ ಕಟ್ಟಡವನ್ನು ಮುಚ್ಚಬಾರದೆಂದು ತೀರ್ಮಾನವಾಯಿತು

ಇದೆಲ್ಲಾ ಆದನಂತರ ವಿದ್ಯಾಕಮಿಟಿಯ ರಿಪೋರ್ಟು ಚರ್ಚೆಗೆ ಬಂತು. ಆಗ್ಯ ರಾಮಶೆಟ್ಟಿಯವರು—ಈ ರಿಪೋರ್ಟು ಸರಿಯಲ್ಲವೆಂತಲೂ ಮತ್ತು ಇದಕ್ಕೆ ನೇಮಿತರಾಗಿದ್ದ 4 ಜನರ ಪೈಕಿ ಚುನಾಯಿತ ಮೆಂಬರಿಬ್ಬರ ಸೈನು ಇದರಲ್ಲಿ ಇಲ್ಲವೆಂದೂ, ಚುನಾಯಿತ ಮೆಂಬರುಗಳು ನೇಮಿತ ಮೆಂಬರುಗಳೊಡನೆ ದೇಶದಲ್ಲೆಲ್ಲಾ ತಿರುಗಾಡದೆ ಹೋದರೂ ಅವರಿಬ್ಬರು ಈ ದೇಶದವರೇ ಆದುದರಿಂದ ಅವರಿಗೆ ದೇಶದ ಸ್ಥಿತಿಯು ಗೊತ್ತಿರುವ ಕಾರಣ ರಿಪೋರ್ಟನ್ನು ಬರೆಯುವಾಗ ಅವರನ್ನು ಸೇರಿಸಿಕೊಳ್ಳಬೇಕಾಗಿತ್ತೆಂದೂ, ಹೀಗೆ ಮರೆಯಿಯ ಕಮಿಟಿಯವರು ಮಾಡಿದ್ದರೆಂದೂ, ಮತ್ತು ರಿಪೋರ್ಟಿನಲ್ಲಿ ಮೆಂಬರರನ್ನು ಹೀಯಾಳಿಸಿದ್ದು ತಪ್ಪೆಂದೂ, ಆದ್ದರಿಂದ ಇದನ್ನು ಬೋರ್ಡಿನ ಮುಂದಿಡುವುದು ಸರಿಯಲ್ಲವೆಂದೂ ಹೇಳಿದರು. ಅದಕ್ಕೆ ಸ್ಕೂಲ್ ಸ ಇ. ಇನ್ಸ್ಪೆಕ್ಟರು ಇಬ್ಬರು ಮೆಂಬರುಗಳು ಮಾತ್ರ ಯಾಕೆ ರಿಪೋರ್ಟು ಬರೆದರೆಂಬುದನ್ನು ಪುನಃ ನಿಮಗೆ ಬೇಕಾದರೆ ಹೇಳಬಹುದಾಗಿಲ್ಲ. ನೀವು ರಿಪೋರ್ಟು ಪಾಸು ಮಾಡಿ, ಮಾಡದೆ ಇರಿ, ನಮ್ಮ ಕೆಲಸ ನಡೆದೇ ಹೋಗಿದೆ.

(4ನೇ ಪುಟದಲ್ಲಿ ಮುಂದುವರಿದಿದೆ)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೩೫ನೇ ಪ್ರಕರಣ.

ಪಂಜಾಬಿನಲ್ಲಿ.

ಅಂತು ಸರ್ ಮೈಕೇಲ್ ಓಡ್ವೈಯರವರು ಪಂಜಾಬಿನಲ್ಲಿ ನಡೆದುದಕ್ಕೆಲ್ಲಾ ನಾನೇ ಜವಾಬ್ದಾರನೆಂದೂ, ಕೆಲವರು ಕೋಪೋದ್ರೇಕಿತರಾದ ಪಂಜಾಬೀ ಯುವಕರು ಅಲ್ಲಿ ಯುದ್ಧದ ಕಾನೂನಿನ ಪ್ರಚಾರಕ್ಕೆ ನಾನೇ ಕಾರಣನೆಂದೂ ಅಭಿಪ್ರಾಯಪಟ್ಟರು. ನಾನು ಸವಿನಯ ಕಾನೂನು ಭಂಗವನ್ನು ಮಾತ್ರ ನಿಲ್ಲಿಸದಿದ್ದರೆ ಜಲಿಯನ್‌ವಾಲಾಬಾಗಿನ ಹತ್ಯಾಕಾಂಡವೇ ನಡೆಯುತ್ತಿರಲಿಲ್ಲವೆಂದು ಅವರು ಪ್ರತಿವಾದಿಸಿದರು. ಅವರಲ್ಲಿ ಕೆಲವರು ನಾನು ಪಂಜಾಬಿನೊಳಗೆ ಕಾಲಿಟ್ಟರೆ ನನ್ನನ್ನು ಕೊಂದುಬಿಡುವುದಾಗಿ ಕೂಡ ಹೆದರಿಸಿದರು.

ಆದರೆ ನನ್ನ ಎಣಿಕೆಯಲ್ಲಿ ನನ್ನ ಕಾರ್ಯಕ್ರಮವು ಎಷ್ಟು ಸರಿಯಾಗಿದ್ದಿತೆಂದರೆ ಯಾವ ವಿವೇಕಸ್ಥನೂ ಅದನ್ನು ತಪ್ಪುತಿಳಿದುಕೊಳ್ಳುವಂತಿರಲಿಲ್ಲ.

ಪಂಜಾಬಿಗೆ ಹೋಗಲು ನಾನು ಅಲ್ಲಿಗೆ ಎಂದೂ ಹೋಗಿಲ್ಲದಿದ್ದುದರಿಂದ ಅಲ್ಲಿನ ಪರಿಸ್ಥಿತಿಯನ್ನು ಸಾಕ್ಷಾತ್ತಾಗಿ ಅರಿತುಕೊಳ್ಳಲು ನನ್ನ ಔತ್ಸುಕ್ಯವು ದ್ವಿಗುಣವಾಗಿದ್ದಿತು. ನಾನು ಪಂಜಾಬಿಗೆ ಬರಬೇಕೆಂದು ಆಹ್ವಾನವಿತ್ತ ಡಾ. ಸತ್ಯಪಾಲ್ ಡಾ. ಕಿಚಲೂ ಮತ್ತು ಶ್ರೀ. ರಾಮಭಜದತ್ತ ಚೌಧರಿ, ಇವರು ಆಗ ಬಂದೀಖಾನೆಯಲ್ಲಿದ್ದರು. ಆದರೆ ಸರಕಾರದವರಿಗೆ ಇವರನ್ನೂ ಇತರ ಕೈದಿಗಳನ್ನೂ ಬಹು ಕಾಲ ನಿರ್ಬಂಧದಲ್ಲಿಡುವ ಧೈರ್ಯವಿಲ್ಲವೆಂದು ನನ್ನ ಮನಸ್ಸಿಗೆ ಸ್ಪಷ್ಟವಾಗಿದ್ದಿತು. ನಾನು ಮುಂಬಯಿಯಲ್ಲಿದ್ದಾಗಲೆಲ್ಲಾ ಅನೇಕ ಮಂದಿ ಪಂಜಾಬಿಗಳು ಬಂದು ನನ್ನನ್ನು ಕಾಣುತ್ತಿದ್ದರು ಈ ಸಂದರ್ಭಗಳಲ್ಲಿ ನಾನು ಅವರಿಗೆ ಪ್ರೋತ್ಸಾಹಕವಾಗಿ ಒಂದೆರಡು ಮಾತನ್ನು ಹೇಳುತ್ತಿದ್ದೆನು ಅದರಿಂದ ಅವರೂ ಎದೆಗೊಳ್ಳುತ್ತಿದ್ದರು ಆಗ ನನಗಿದ್ದ ಆತ್ಮ ವಿಶ್ವಾಸವು ಇತರರಲ್ಲಿಯೂ ಧೈರ್ಯವನ್ನು ಹುಟ್ಟಿಸುತ್ತಿದ್ದಿತು.

ಆದರೆ ನಾನು ಪಂಜಾಬಿಗೆ ಹೋಗುವುದನ್ನು ಅನೇಕ ಬಾರಿ ಮುಂದಕ್ಕೆ ಹಾಕಬೇಕಾಯಿತು ನಾನು ಕೇಳಿದಾಗಲೆಲ್ಲಾ ವೈಸ್‌ರಾಯರು 'ಇನ್ನು ಬೇಡ' ವೆಂದು ಹೇಳಿಬಿಡುತ್ತಿದ್ದರು. ಹೀಗೆಯೇ ಪ್ರಯಾಣವು ನಿಂತುಹೋಗುತ್ತಿದ್ದಿತು.

ಈ ಮಧ್ಯೆ ಯುದ್ಧದ ಕಾನೂನಿನ ಸಂಬಂಧವಾಗಿ ಪಂಜಾಬ್ ಸರ್ಕಾರದ ಕಾರ್ಯಕಾರಿಗಳನ್ನು ವಿಮರ್ಶಿಸಲು ಹಂಟರ್ ಸಮಿತಿಯು ಏರ್ಪಟ್ಟಿರುವುದು ಪ್ರಕಟವಾಯಿತು. ಮಿ. ಸಿ. ಎಫ್. ಆಂಡ್ರೂಸರೂ ಅಲ್ಲಿಗೆ (ಪಂಜಾಬಿಗೆ) ಹೋಗಿ ಕಲಪಿದರು ಅವರ ಪತ್ರಗಳಲ್ಲಿ ಪಂಜಾಬಿನ ಪರಿಸ್ಥಿತಿಯ ಹೃದಯ ವಿದ್ರಾವಕ ವರ್ಣನೆಗಳಿರುತ್ತಿದ್ದುವು ಅವುಗಳನ್ನು ಓದಿದಾಗ ಯುದ್ಧದ ಕಾನೂನಿನ ಅತ್ಯಾಚಾರಗಳು ವೃತ್ತಪತ್ರಿಕೆಗಳಲ್ಲಿ ಬರುತ್ತಿದ್ದ ವಿವರಗಳಿಗಿಂತ ವಾಸ್ತವಿಕವಾಗಿ ಇನ್ನೂ ಕೇಡಾಗಿದ್ದುವೆಂದು ನನಗೆ ತೋರುತ್ತಿದ್ದಿತು. ನಾನು ತಕ್ಷಣವೇ ಹೋಗಿ ತಮ್ಮನ್ನು ಸೇರಬೇಕೆಂದು ಅವರು ಆಗ್ರಹಪೂರ್ವಕವಾಗಿ ಪತ್ರ ಬರೆದರು. ಅದೇ ಸಮಯದಲ್ಲಿ ಪಂ. ಮಾಲವೀಯರವರು ಕೂಡ ನಾನು ಪಂಜಾಬಿಗೆ ಒಡನೆಯೇ ತೆರಳಬೇಕೆಂದು ತಾರುಗಳನ್ನು ಕಳುಹಿಸಿದರು ನಾನು ಈಗ ಪಂಜಾಬಿಗೆ ಹೋಗಬಹುದೋ ಎಂದು ವೈಸ್‌ರಾಯರಿಗೆ ಪುನಃ ತಂತಿಕೊಟ್ಟೆನು ಒಂದು ಕ್ಲುಪ್ತವಾದ ತಾರೀಕಾದ ಮೇಲೆ ನಾನು ಅಲ್ಲಿಗೆ ಹೋಗಬಹುದೆಂದು ಅವರು ಉತ್ತರವಿತ್ತರು. ಅದು ಯಾವತಾರೀಕೆಂದು ನನಗೆ ಸರಿಯಾಗಿ ನೆನಪಿಲ್ಲ. ಆದರೆ ಅಕ್ಟೋಬರ್ ಹದಿನೇಳು ಎಂದು ತೋರುತ್ತದೆ

ನಾನು ಲಾಹೋರನ್ನು ತಲಪಿದಾಗ ಅಲ್ಲಿ ನನ್ನ ಕಣ್ಣಿಗೆ ಬಿದ್ದ ದೃಶ್ಯವನ್ನು ನಾನೆಂದಿಗೂ ಮರೆಯಲಾರೆನು ರೈಲ್ವೇ ನಿಲ್ದಾಣವೆಲ್ಲಾ ಮೊದಲಿಂದ ಕೊನೆಯವರೆಗೆ ಜನಸಂದಣಿಯಿಂದ ಕಿಕ್ಕಿರಿದಿದ್ದಿತು. ಊರಿನ ಜನರೆಲ್ಲಾ ಬಹು ಕಾಲ ಅಗಲಿದ ಆಪ್ತಬಂಧುವನ್ನು ಇದಿರುಗೊಳ್ಳಲೋ ಎಂಬಂತೆ ಅಲ್ಲಿಗೆ ಬಂದು ಆತ್ಯಾತುರದಿಂದ ಇದಿರುನೋಡುತ್ತಾ ಆನಂದದಲ್ಲಿ ಮೈಮರೆತಿದ್ದರು. ನಾನು ಪಂಡಿತ ರಾಮಭಜದತ್ತ ಚೌಧರಿಯವರ ಬಂಗಲೆಯಲ್ಲಿ ಇಳಿದೆನು ನನ್ನನ್ನು ಉಪಚರಿಸುವ ಭಾರವು ಶ್ರೀಮತೀ ಸರಳಾದೇವೀ ಚೌಧರಾನಿಯವರ ಮೇಲೆ ಬಿದ್ದಿತು. ಅದು ನಿಜವಾಗಿಯೂ ಭಾರವೆಂದೇ ಹೇಳಬೇಕು. ಏಕೆಂದರೆ ಇಂದಿನಂತೆ ಅಂದು ಕೂಡ ನಾನಿಳಿಯುತ್ತಿದ್ದ ಸ್ಥಳವು ಅನ್ನಸತ್ರವಾಗಿ ಪರಿಣಮಿಸುತ್ತಿದ್ದಿತು.

ಪಂಜಾಬಿನ ಮುಖ್ಯ ನಾಯಕರೆಲ್ಲಾ ಕಾರಾಗೃಹದಲ್ಲಿದ್ದುದರಿಂದ ಅವರ ಸ್ಥಾನದಲ್ಲಿ, ಯುಕ್ತವಾಗಿಯೇ, ಪಂಡಿತ ಮಾಲವೀಯರೂ, ಪಂಡಿತ ಮೋತೀಲಾಲರೂ, ದಿವಂ. ಸ್ವಾಮಿ ಶ್ರದ್ಧಾನಂದರೂ ಇರುವುದನ್ನು ನಾನು ಕಂಡೆನು. ನನಗೆ ಇದಕ್ಕೆ ಮುಂಚೆಯೇ ಮಾಲವೀಯರ ಹಾಗೂ ಶ್ರದ್ಧಾನಂದರ ಗಾಢ ಪರಿಚಯವಿದ್ದಿತು. ಆದರೆ ಮೋತೀಲಾಲರೊಡನೆ ನಿಕಟ ಸಂಪರ್ಕವುಂಟಾದುದು ಇದೇ ಮೊದಲು. ಈ ನಾಯಕರೂ ಮತ್ತು ಸೆರೆಮನೆಗೆ ಹೋಗುವ ಸನ್ಮಾನಕ್ಕೆ ಇನ್ನೂ ಪಾತ್ರರಾಗಿಲ್ಲದಿದ್ದ ಸ್ಥಳೀಯ ಮುಂದಾಳುಗಳೂ ನನ್ನನ್ನು ತಮ್ಮವನಾತಿ ಕಂಡರು. ನನಗೆ ಒಂದು ಕ್ಷಣವೂ ವಿದೇಶದಲ್ಲಿದ್ದಂತೆ ತೋರಲಿಲ್ಲ.

ಹಂಟರ್ ಸಮಿತಿಯ ಮುಂದೆ ಸಾಕ್ಷ್ಯವನ್ನು ಕೊಡಬಾರದೆಂದು ನಾವೆಲ್ಲರೂ ಏಕಮತದಿಂದ ನಿರ್ಧರಿಸಿದುದೆಂತೆಂಬುದು ಈಗ ಐತಿಹಾಸಿಕ ವಿಷಯವಾಗಿದೆ. ಅದರ ಕಾರಣಗಳು ಆಗಲೇ ಪ್ರಕಟಿಸಲ್ಪಟ್ಟುವು. ಅವುಗಳನ್ನು ಪುನಃ ತಿಳಿಸದೇ ಕಾದುದಿಲ್ಲ. ಇಷ್ಟು ಹೇಳಿದರೆ ಸಾಕು. ಇಷ್ಟು ಕಾಲವಾದ ಮೇಲೆ ಆ ಸಂಗತಿಯನ್ನು ಪರಿಶೀಲಿಸಿದರೆ ಸಮಿತಿಗೆ ಬಹಿಷ್ಕಾರ ಹಾಕಬೇಕೆಂದು ನಾವು ಮಾಡಿದ ನಿರ್ಣಯವೂ ಅದರ ಕಾರಣಗಳೂ ಕೇವಲ ಯುಕ್ತವಾದುವೆಂದು ನನಗೆ ಈಗಲೂ ತೋರುತ್ತದೆ.

ಹಂಟರ್ ಸಮಿತಿಯ ಬಹಿಷ್ಕಾರದ ಅಗತ್ಯ ಫಲವಾಗಿ ರಾಷ್ಟ್ರಮಹಾ ಸಭೆಯ ಪರವಾಗಿ ಅದೇ ವಿಷಯದಲ್ಲಿ ವಿಚಾರಣೆಯನ್ನು ನಡೆಸಲು ಖಾಸಗೀ ಒಂದು ಸಮಿತಿಯೊಂದನ್ನು ಏರ್ಪಡಿಸಬೇಕೆಂದು ನಿರ್ಧಾರವಾಯಿತು ಪಂಡಿತ ಮೋತಿಲಾಲ ನೆಹರೂ, ದಿವಂ. ದೇಶಬಂಧು ಚಿತ್ತರಂಜನದಾಸ್, ಶ್ರೀ. ಎಂ. ಆರ್. ಜಯಕರ್ ಮತ್ತು ನಾನು, ಇಷ್ಟು ಜನರು ಈ ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟೆವು ಪಂಡಿತ ಮಾಲವೀಯರೇ ನೇಮಿಸಿದರೆಂದು ಹೇಳಬೇಕು. ವಿಮರ್ಶೆಗಾಗಿ ನಾವು ಒಬ್ಬೊಬ್ಬರು ಬೇರೆ ಬೇರೆ ಕಡೆಗೆ ಹೋದೆವು. ಸಮಿತಿಯ ಕಾರ್ಯಕ್ರಮವನ್ನು ಗೊತ್ತು ಮಾಡುವ ಜವಾಬ್ದಾರಿಯು ನನ್ನ ಪಾಲಿಗೆ ಬಿದ್ದಿತು ಮತ್ತು ಇವರಿಗಿಂತ ಹೆಚ್ಚು ಸ್ಥಳಗಳಲ್ಲಿ ವಿಮರ್ಶೆ ನಡೆಸುವ ಭಾಗ್ಯವು ನನಗೆ ಒದಗಿದುದರಿಂದ ಪಂಜಾಬಿನ ಜನರನ್ನೂ ಹಳ್ಳಿಗಳನ್ನೂ ಸೂಕ್ಷ್ಮವಾಗಿ ಪರಿಚಯಮಾಡಿಕೊಳ್ಳಲು ನನಗೆ ಅಪೂರ್ವ ಅವಕಾಶವು ದೊರಕಿತು.

ವಿಮರ್ಶೆ ಮಾಡುವಾಗ ನಾನು ಪಂಜಾಬಿನ ಮಹಿಳೆಯರ ಪರಿಚಯವನ್ನೂ ಹೊಂದಿದೆನು. ನಾವು ಒಬ್ಬರನ್ನೊಬ್ಬರು ಯುಗಾಂತರದಿಂದ ಬಲ್ಲೆವೋ ಎಂಬಂತೆ ತೋರುತ್ತಿದ್ದಿತು. ನಾನು ಹೋದೆಡೆಯಲ್ಲೆಲ್ಲಾ ಅವರು ಗುಂಪುಗಟ್ಟಿಕೊಂಡು ಬಂದು ತಾವು ತಂದಿದ್ದ ನೂಲಿನ ಕಟ್ಟುಗಳನ್ನು ನನ್ನ ಮುಂದಿಡುತ್ತಿದ್ದರು ಹೀಗೆ ವಿಮರ್ಶೆಗೆ ಸಂಬಂಧಪಟ್ಟ ನನ್ನ ಕಾರ್ಯವು ಪಂಜಾಬ್ ಪ್ರಾಂತವು ದೊಡ್ಡ ಖಾದೀ ಕ್ಷೇತ್ರವಾಗಬಹುದೆಂಬುದನ್ನು ನನಗೆ ಮನವರಿಕೆಮಾಡಿ ಕೊಟ್ಟಿತು

ಜನರ ಮೇಲೆ ನಡೆದ ಅತ್ಯಾಚಾರದ ವಿಷಯವಾಗಿ ನನ್ನ ವಿಮರ್ಶೆಯಲ್ಲಿ ನಾನು ಮುಂದುವರಿದಂತೆಲ್ಲಾ ಸರ್ಕಾರದ ನಿರಂಕುಶತೆಯ ಮತ್ತು ಅಧಿಕಾರಿಗಳ ಸ್ವೇಚ್ಛಾ ಪ್ರವರ್ತನೆಯ ಕತೆಗಳು ಕಿವಿಗೆ ಬಿದ್ದುವು. ಅವು ಎಷ್ಟು ಹೇಯವಾಗಿದ್ದುವೆಂದರೆ ನಾನು ಇಂತಹ ಕೃತ್ಯಗಳು ನಡೆದಿವೆಯೆಂದು ನಿರೀಕ್ಷಿಸಿಯೇ ಇರಲಿಲ್ಲ. ಇದನ್ನೆಲ್ಲಾ ಕೇಳಿ ನನಗೆ ಬಹು ಮನೋವ್ಯಥೆಯುಂಟಾಯಿತು. ಆಗ ನನಗೆ ಆಶ್ಚರ್ಯವನ್ನುಂಟುಮಾಡಿದುದೇನೆಂದರೆ, ಯುದ್ಧ ಕಾಲದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಮಿಕ್ಕ ಪ್ರಾಂತ್ಯಗಳಿಗಿಂತ ಹೆಚ್ಚಾಗಿ ಯೋಧರನ್ನು ಒದಗಿಸಿ ಕೊಟ್ಟ ಈ ಪ್ರಾಂತ್ಯವು ಇಂತಹ ಪಾಶವಿಕ ಅತ್ಯಾಚಾರಗಳನ್ನು ಹೇಗೆ ಕೈಕಟ್ಟಿಕೊಂಡು ಸಹಿಸಿದುದು; ಈ ವಿಷಯವು ಈಗಲೂ ನನಗೆ ವಿಸ್ಮಯವನ್ನುಂಟುಮಾಡುತ್ತದೆ

ಈ ಸಮಿತಿಯ ವರದಿಯನ್ನು ಬರೆಯುವ ಕೆಲಸವು ಕೂಡ ನನ್ನ ಪಾಲಿಗೆ ಬಿದ್ದಿತು ಪಂಜಾಬಿನ ಜನರ ಮೇಲೆ ನಡೆಸಿದ ಅತ್ಯಾಚಾರಗಳೆಂತಹವೆಂಬುದನ್ನು ಅರಿಯಲಿಚ್ಛಿಸುವವರು ಈ ವರದಿಯನ್ನೋದಬೇಕೆಂದು ನನ್ನ ಸೂಚನೆ ನಾನು ಇಲ್ಲಿ ಹೇಳಲೆಳಸುವುದಿಷ್ಟೆ. ಆದರಲ್ಲಿ ಎಲ್ಲಿಯೂ ಬೇಕಾದರೂ ತಿಳಿದು ಬರೆದ ಅತಿಶಯೋಕ್ತಿಯಿಲ್ಲ ಅದರಲ್ಲಿರುವ ಪ್ರತಿಯೊಂದು ವಿಷಯವೂ ಸಾಕ್ಷ್ಯದ ಆಧಾರವನ್ನು ಪಡೆದಿದೆ. ಮತ್ತು ಪ್ರಕಟವಾದ ಸಾಕ್ಷ್ಯವು ಸಮಿತಿಯ ವಶದಲ್ಲಿದ್ದ ಸಾಕ್ಷ್ಯದ ಅತ್ಯಲ್ಪಭಾಗ ಲೇಶ ಮಾತ್ರ ಸಂಶಯಕ್ಕೆಡೆಗೊಟ್ಟ ವಿಷಯವೊಂದಕ್ಕೂ ವರದಿಯೊಳಗೆ ಸ್ಥಳಕೊಡಲಿಲ್ಲ. ಸತ್ಯಾಂಶವನ್ನು ಮಾತ್ರ ಹೊರಗೆಡಹಬೇಕೆಂಬ ಒಂದೇ ಒಂದು ಉದ್ದೇಶದಿಂದ ಸಿದ್ಧಪಡಿಸಲ್ಪಟ್ಟ ಈ ವರದಿಯನ್ನು ಓದಿದರೆ ಬ್ರಿಟಿಷ್ ಸರ್ಕಾರವು ತನ್ನ ಪ್ರಾಬಲ್ಯವನ್ನುಳಿಸಲೋಸುಗ ಎಷ್ಟುದೂರ ಹೋಗಬಲ್ಲದು, ಎಂತೆಂತಹ ಅತ್ಯಾಚಾರಗಳನ್ನೂ ಅಮಾನುಷಿಕ ಕೃತ್ಯಗಳನ್ನೂ ಎಸಗಬಲ್ಲದು ಎಂಬುದು ಸ್ಪಷ್ಟವಾಗುತ್ತದೆ. ನನಗೆ ಗೊತ್ತಿರುವ ಮಟ್ಟಿಗೆ ಈ ವರದಿಯಲ್ಲಿರುವ ಒಂದು ವಾಕ್ಯ ಕೂಡ ಇದುವರೆಗ ಅಸತ್ಯವೆಂದು ಕಂಡುಬಂದಿಲ್ಲ.

ಕರ್ನಾಟಕ ಏಕೀಕರಣ

೧೯೨೮–೨೯ರಲ್ಲಿ ನಡೆದ ಕಾರ್ಯ.

ಕರ್ನಾಟಕದಲ್ಲಿ ಏಕೀಕರಣದ ಕಾರ್ಯವನ್ನು ಈಗ ಪ್ರಧಾನತಃ ಮಾಡುವ ಸಂಸ್ಥೆಗಳು ಎರಡು ೧೯೨೪ರಲ್ಲಿ ಬೆಳಗಾವಿಯಲ್ಲಿ ಸ್ಥಾಪಿತವಾದ ಕರ್ನಾಟಕ ಏಕೀಕರಣ ಸಭೆ, ಮತ್ತು ೧೯೨೫ರಲ್ಲಿ ಸ್ಥಾಪಿತವಾದ ಕ. ಪ್ರಾಂ ಕಾಂಗ್ರೆಸ್ ಕಮಿಟಿಯ ಏಕೀಕರಣ ಉಪಮಂಡಲ. ಇವೆರಡೂ ಸಂಪೂರ್ಣ ಐಕಮತ್ಯದಿಂದ ಕಾರ್ಯ ಮಾಡುತ್ತಿರುವವು.

೨೪ನೇ ೧೯೨೮ನೇ ದಿನ ಧಾರವಾಡದಲ್ಲಿ ರಾ. ಸಾ. ಹಳಕಟ್ಟೀಯವರ ಅಧ್ಯಕ್ಷತೆಯಲ್ಲಿ ಕ. ಏ. ಪರಿಷತ್ತಿನ ೩ನೇ ಅಧಿವೇಶನವು ಆಯಿತು. ಅಂದಿನಿಂದ ಆ ಪರಿಷತ್ತಿನ ೪ನೇ ಅಧಿವೇಶನದ ಕಾಲದ ವರೆಗೆ (೧೧—೫—೨೯) ಏಕೀಕರಣಕ್ಕೆ ಅನುಕೂಲ ಪ್ರತಿಕೂಲವಾದ ಸಂಗತಿಗಳ ಸಂಕ್ಷಿಪ್ತ ಚಿತ್ರವು ಈ ಸಮಯದಲ್ಲಿ ಎಲ್ಲರೆದುರಿಗೆ ಇಡಬೇಕೆಂದು ಈ ಕೆಳಗಿನ ಮಾತುಗಳು ಅಚ್ಚು ಹಾಕಲ್ಪಟ್ಟವೆ. ಅವುಗಳನ್ನು ಚೆನ್ನಾಗಿ ತಿಳಿದುಕೊಂಡು ಕರ್ನಾಟಕಸ್ಥರು ಈ ಏಕೀಕರಣ ಪ್ರಶ್ನೆಯನ್ನು ಬಿಡಿಸಲಿಕ್ಕೆ ಯತ್ನಿಸಬೇಕೆಂದು ನಮ್ಮ ನಮ್ರವಾದ ಬಿನ್ನಹ.

(೧) ೧೯೨೮ ಜೂನ್ ೨೬ನೇ ತಾರೀಕಿಗೆ ಕ. ಏ. ಸಭೆಯ ಮತ್ತು ಪ್ರಾಂ. ಕಾ. ಕ. ಪ್ರತಿನಿಧಿಗಳು ಹಿಂದುಸ್ಥಾನದ ಭಾವೀ ರಾಜಕೀಯ ಸಂಘಟನವನ್ನು ಕುರಿತು ವಿಚಾರಿಸುವದಕ್ಕಾಗಿ ಸರ್ವಪಕ್ಷೀಯ ಪರಿಷತ್ತಿನವರು ನೇಮಿಸಿದ ನೆಹರೂ ಕಮಿಟಿಯ ಮುಂದೆ ಹೋಗಿ ಕ. ಏ. ದ ಶಕ್ಯತೆ ಅವಶ್ಯಕತೆಗಳನ್ನು ಸಪ್ರಮಾಣವಾಗಿ ಸಿದ್ಧಪಡಿಸಿದರು.

(೨) ಆಗಸ್ಟ್ ೧೫ಕ್ಕೆ ನೆಹರೂ ಕಮಿಟಿಯವರು ಹೊರಡಿಸಿದ ತಮ್ಮ ವರದಿಯಲ್ಲಿ 'ಕ. ಏ. ವು ಅವಶ್ಯವು, ಬ್ರಿಟಿಷ್ ಕರ್ನಾಟಕವು ಏಕೀಕೃತವಾಗಲಿಕ್ಕೆ ಯೋಗ್ಯವಾಗಿದೆ, ಅದಕ್ಕೆ ಅಖಿಲ ಕರ್ನಾಟಕದ ಬೆಂಬಲವಿದೆ. ಆರ್ಥಿಕ ದೃಷ್ಟಿಯಿಂದ ಕೂಡ ಕರ್ನಾಟಕವು ತನ್ನ ಸಂಸಾರವನ್ನು ತಾನು ಸಾಗಿಸಬಲ್ಲದು ಎಂದು ಬರೆದರು.

(೩) ಆಗಸ್ಟ್ ೨೫ಕ್ಕೆ A Case for Karnataka Unification ಎಂಬ ಚಿಕ್ಕ ಪುಸ್ತಕವು ಕ. ಏ. ಸಭೆ ಮತ್ತು ಕ. ಪ್ರಾಂ. ಕಾ. ಕ. ಇವುಗಳ ಪರವಾಗಿ ಪ್ರಕಟಿಸಲಾಯಿತು.

(೪) ಆಗಸ್ಟ್ ೩೧ಕ್ಕೆ ಲಖನೌದಲ್ಲಿ ಕೂಡಿದ ಸರ್ವಪಕ್ಷೀಯ ಪರಿಷತ್ತಿನವರು ನೆಹರೂ ಕಮಿಟಿಯ ವರದಿಯ ವಿಚಾರ ಮಾಡುವ ಸಂದರ್ಭದಲ್ಲಿ ಈ ನೆಹರೂ ರಾಜ್ಯಘಟನೆಯು ಅಮಲಿನಲ್ಲಿ ಬಂದೊಡನೆಯೇ ಕರ್ನಾಟಕ ಮತ್ತು ಆಂಧ್ರ ಇವುಗಳಿಗೆ ಪ್ರತ್ಯೇಕ ಪ್ರಾಂತಗಳನ್ನು ಕೊಟ್ಟು ತೀರಬೇಕೆಂದು ತೀರ್ಮಾನವನ್ನು ಮಾಡಿದರು.

(ಸೆಪ್ಟಂಬರ್ ೨೦ಕ್ಕೆ ಕರ್ನಾಟಕದ ಭೂಗೋಲ, ಇತಿಹಾಸ, ಸಂಸ್ಕೃತಿ ಮುಂತಾದವುಗಳನ್ನೊಳಗೊಂಡ ಕರ್ನಾಟವು ಛಿನ್ನವಿಛಿನ್ನವಿರುವುದರಿಂದ ಅದಕ್ಕುಂಟಾದ ತೊಂದರೆಗಳನ್ನು ತೋರ್ಪಡಿಸುವ ಅನೇಕ ಚಿತ್ರ ಮತ್ತು ನಕಾಶೆಗಳಿಂದ ಬೋಧಕರವೂ ಮನೋರಂಜಕವೂ ಆದ 'United Karnataka' ಎಂಬ ಪುಸ್ತಕವು ಮೇಲ್ಕಾಣಿಸಿದ ಎರಡು ಸಂಸ್ಥೆಗಳ ಪರವಾಗಿ ಪ್ರಸಿದ್ಧಪಟ್ಟಿತು.

(೬) ಇದೇ ತಿಂಗಳಲ್ಲಿ ಕರ್ನಾಟಕದಲ್ಲಿದ್ದರೂ ಸ್ವಲ್ಪ ಬೇರೆಯಾದ ತುಳು ಭಾಷೆಯನ್ನಾಡುವ ದಕ್ಷಿಣ ಕನ್ನಡದ ಕೆಲ ಬಾಂಧವರು ತುಳು ಮಹಾಸಭೆ ಎಂಬುದನ್ನೇರ್ಪಡಿಸಿ ತುಳುವರ ಪ್ರತ್ಯೇಕ ಭಾಷೆ ಸಂಸ್ಕೃತಿಗಳನ್ನು ಕಾಯ್ದುಕೊಳ್ಳುವ ಯತ್ನವನ್ನು ಪ್ರಾರಂಭಿಸಿದರು. ಮಂಗಳೂರಿಗೆ ತುಳುನಾಡು ಎಂದು ಅನ್ನಬೇಕು. ಕರ್ನಾಟಕದ ಜಿಲ್ಲೆಯಾದರೂ ಅಲ್ಲಿ ತುಳು ಭಾಷೆ ಸಂಸ್ಕೃತಿಗಳನ್ನು ರಕ್ಷಿಸುವಂತೆ ಏರ್ಪಾಡಾಗಬೇಕು, ಇದೇ ಅವರ ಉದ್ದೇಶ. (ಇಲ್ಲವೆ ತುಳುನಾಡಿನದೊಂದು ಪ್ರತ್ಯೇಕ ಪ್ರಾಂತವಾಗಬೇಕು. ಇಲ್ಲವೆ ಪಶ್ಚಿಮ ಕರಾವಳಿನೊಂದು ಪ್ರಾಂತ ಮಾಡಿ ಅದರಲ್ಲಿ ತುಳುನಾಡನ್ನು ಸೇರಿಸಬೇಕು ಎಂದು ಅವರಲ್ಲಿ ಕೆಲವರ ಅಭಿಪ್ರಾಯ).

(೭) ಇತ್ತ ಹಿಂದೂಸ್ಥಾನದವರು ಬಹಿಷ್ಕರಿಸಿದ್ದರೂ ಸೈಮನ್ ಕಮಿಶನ್ನಿಗೆ ಕ. ಏ. ವಿಷಯವನ್ನು ಅರಿಕೆಮಾಡಿಕೊಳ್ಳಲಿಕ್ಕೆಂದು ಬ್ರಿಟಿಷ್ ಕರ್ನಾಟಕ ಅಸೋಸಿಯೇಶನ್ ಎಂಬ ಸಂಘವು ನಿರ್ಮಾಣವಾಗಿ ಅದರ ಪರವಾಗಿ ರಾ. ಬಾ. ಬಿ. ಯಲ್. ಪಾಟೀಲ ಎಸ್. ಟಿ ಪಾಟೀಲರು ನವಂಬರ ೨೮ ಸುಮಾರಕ್ಕೆ ಮುಂಬಯಿಗೆ ಹೋಗಿ ತಾವು ತಯಾರಿಸಿದ ಮತ್ತು ಏ ಸಭೆಯವರೂ ಕ. ಪ್ರಾಂ. ಕಾ. ಕ. ಯವರೂ ತಯಾರಿಸಿದ ಕ ಏ ಪುಸ್ತಕಗಳನ್ನು ಕಮಿಶನ್ನಿಗೆ ಕೊಟ್ಟರು. ಅವರಿಗೆ ದೊರೆತ ಉತ್ತರವನ್ನು ಅವರು ಎಲ್ಲಿಯೂ ಪ್ರಕಟಿಸಿದಂತೆ ಕಂಡು ಬರುವದಿಲ್ಲ.

(೮) ಡಿಸೆಂಬರು ೨೨—೨೮ರ ವರೆಗೆ ಕಲ್ಕತ್ತೆಯಲ್ಲಿ ಸರ್ವ ಪಕ್ಷೀಯ ಮಹಾಸಭೆ (All Parties Convention) ಕೂಡಿದಾಗ ಅದಕ್ಕೆ ಮತ್ತೆ ಹೋಗಿ ಕ. ಏ ಸಭೆಯ ಮತ್ತು ಪ್ರಾಂ. ಕಾ. ಕಮಿಟಿಯ ಪ್ರತಿನಿಧಿಗಳು ಒಂದು ಬಿನ್ನಹ ಪತ್ರಿಕೆಯನ್ನು ಹಂಚಿ ಕ. ಏ ವಿಷಯವನ್ನು ಮುಂದಿಟ್ಟರು.

(೯) ಅದೇ ಮಹಾಸಭೆಗೆ ತುಳು ಮಹಾಸಭೆಯ ಇಬ್ಬರು ಪ್ರತಿನಿಧಿಗಳು ಹೋಗಿ ಏಕೀಕೃತ ಕರ್ನಾಟಕದಲ್ಲಿ ತಾವು ಸೇರಿದರೂ ತಮ್ಮ ಭಾಷೆ ಸಂಸ್ಕೃತಿಗಳು ಕಾಯಲ್ಪಡಬೇಕು ಎಂಬ ಬಿನ್ನಹವನ್ನು ಮಾಡಿಕೊಂಡರು. ಈ ವಿಷಯವನ್ನು ಕುರಿತು ಅಲ್ಲಿ ಯಾವ ಚರ್ಚೆಯೂ ನಡೆಯಲಿಲ್ಲ.

(೧೦) ದಿವಂಗತ ಕಡವಾ ರಾಘವೇಂದ್ರರಾಯರ ೨ನೇ ಪುಣ್ಯತಿಥಿಯಾದ ೧೯೨೯ ನೇ ಪೆಬ್ರುವರಿ ೨೨ ನೇ ದಿನ ಅಖಿಲ ಕರ್ನಾಟಕದಲ್ಲಿ ಕ ಏಕೀಕರಣ ದಿನವೆಂದು ಆಚರಿಸಲ್ಪಡಬೇಕಾಗಿ ಮಾಡಿದ ಯತ್ನವು ಯಶಸ್ವಿಯಾಯಿತು. ಕರ್ನಾಟಕದ ೪೦ ಊರುಗಳಲ್ಲಿ ಉತ್ಸಾಹದಿಂದ ಈ ದಿನವು ಆಚರಿಸಲ್ಪಟ್ಟಿತು. ಏಕೀಕರಣದ ತೀರ್ಮಾನಗಳಾಗಿ ಅವು ಸರ್ಕಾರಕ್ಕೆ ಕಳುಹಿಸಲ್ಪಟ್ಟವು. ಈ ಏಕೀಕರಣದ ಇತಿಹಾಸ, ಅದರ ಮಹಾತ್ಮ ಇವುಗಳನ್ನೊಳಕೊಂಡ ಒಂದು ಚಿಕ್ಕ ಪತ್ರಿಕೆಯ ೧೦ ಸಾವಿರ ಪ್ರತಿಗಳು ಅಚ್ಚುಹಾಕಿಸಲ್ಪಟ್ಟು ಆ ದಿನ ಪುಕ್ಕಟೆ ಹಂಚಲ್ಪಟ್ಟವು.

(೧೧) ತಾ ೨೪—೨—೨೯ ನೇ ದಿನ ಏಕೀಕರಣದ ವಿಚಾರಮಾಡುವದನ್ನು ಕುರಿತು ಒಂದು ಮಂಡಲವು ನೇಮಿಸಲ್ಪಡಬೇಕು ಎಂಬ ಒಕ್ಕೆ ಡಾ. ಉಡುಪಿ ಕಾಮರಾಯರು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ತಂದ ತೀರ್ಮಾನವು ಸರಕಾರದ ವಿರೋಧದ ಮೂಲಕ ಬಿದ್ದುಹೋಯಿತು.

(೧೨) ಆಂಧ್ರ, ಕರ್ನಾಟಕ ಮುಂತಾದ ಪ್ರಾಂತ್ಯಗಳ ಪ್ರತ್ಯೇಕೀಕರಣವನ್ನು ಕುರಿತು ಹಿಂದುಸ್ಥಾನ ಸರ್ಕಾರದವರು ಸ್ವತಂತ್ರ ಓಲೆಗಳನ್ನು ಬರೆದು ಸೈಮನ್ ಕಮಿಷನ್ನಿಗೆ ಒಪ್ಪಿಸಿದ್ದಾರೆ. ಅವು ಕರ್ನಾಟಕ ಏಕೀಕರಣಕ್ಕೆ ವಿರೋಧಿಯಾಗಿರಲಿಕ್ಕೆ ಸಾಕು, ಎಂದು ಊಹೆ.

(೧೩) ೧೯೨೮ನೇ ಇಸವಿಯ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಕೊನೆಯ ಅಧಿವೇಶನದಲ್ಲಿ ಏಕೀಕೃತ ಕರ್ನಾಟಕದಲ್ಲಿ ಕೊಡಗನ್ನು ಸೇರಿಸಬೇಕು, ಎಂಬ ತೀರ್ಮಾನವು ಬಹುಮತದಿಂದ ಸ್ವೀಕರಿಸಲ್ಪಟ್ಟಿತು. ಆದರೆ ಅದನ್ನು ಅಲ್ಲಿಯ ಕಮಿಶನರು ಈ ವರ್ಷ ಫೆಬ್ರವರಿ ಅಧಿವೇಶನದಲ್ಲಿ ನಿರಾಕರಿಸಿದರು.

(೧೪) ಇತ್ತ ಬ್ರಿ. ಕ. ಅಸೋಸಿಯೇಶನ್‌ನವರು ಸೈಮನ್ ಕಮಿಶನ್ನಿನ ಕಡೆಗೆ ಕ. ಏ. ಕ್ಕಾಗಿ ಹೋದಂತೆ ತಮಗೆ ವಿಭಕ್ತೀಕರಣವು ಬೇಡವೆಂದೂ ಬೇರೆ ಕೆಲವು ಅಧಿಕಾರಗಳು ಬೇಕೆಂದೂ ಹೇಳಲಿಕ್ಕೆ ಕೊಡಗಿನಲ್ಲಿ ಒಂದು ಹೊಸ ಸಭೆ ಏರ್ಪಟ್ಟು ಅದು ಫೆಬ್ರವರಿಯಲ್ಲಿ (೧೯೨೯) ಸೈಮನ್ ಕಮಿಶನ್ನಿನ ಕಡೆಗೆ ಹೋಯಿತು.

(೧೫) ೨೦-೪-೨೯ ನೇ ದಿನ ಪೊನ್ನಂಪೇಟೆಯಲ್ಲಿ ಕೂಡಿದ ಕೊಡಗು ಜಮೀನ್ದಾರರ ಸಂಘದವರು ೪ ನೇ ಸಾರಿ ಕ. ಏಕೀಕರಣದ ತೀರ್ಮಾನವನ್ನು ಸ್ವೀಕರಿಸಿದರು.

(೧೬) ಬೆಂಗಳೂರು ದೊಂಬಿಗಳ ವಿಷಯದಲ್ಲಿ ಈ ಎರಡೂ ಸಂಸ್ಥೆಗಳವರು ಕೂಡಿ, ಮೈಸೂರು ಶ್ರೀಮನ್ಮಹಾರಾಜರವರು ಚೆನ್ನಾಗಿ ವಿಮರ್ಶೆಮಾಡಿ, ಇದಕ್ಕೆ ಕಾರಣವಾದ ಜಾತಿ ವೈಮನಸ್ಯವನ್ನು ಹುಟ್ಟಿಸಿದವರನ್ನು ದಂಡಿಸಬೇಕೆಂದು ಹೋದ ಸೆಪ್ಟಂಬರಿನಲ್ಲಿ ಅರಿಕೆ ಮಾಡಿಕೊಂಡರು. ಆ ಅರಿಕೆಯು ಬ್ರಿಟಿಷ್ ಕರ್ನಾಟಕದ ೩೦ ಊರುಗಳಿಂದ ಕಳುಹಿಸಲ್ಪಟ್ಟಿತು.

(೧೭) ಹಲದಿಂದ ಆಂಧ್ರ ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರದಲ್ಲಿ ಸೇರಿಸಲ್ಪಟ್ಟ ಬಳ್ಳಾರಿ ಜಿಲ್ಲೆಯು ಡಾ. ನಾಗನಗೌಡಾ ಮುಂತಾದವರ ಪ್ರಯತ್ನದ ಮೂಲಕ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ತೀರ್ಮಾನವಾಗಿ ಹೊರಪಡಿಸಲ್ಪಟ್ಟಿತು.

(೧೮) ಕ. ಏ. ಸಭೆಯ ಪ್ರತಿನಿಧಿಗಳು ಲಖನೌಕ್ಕೆ ಹೋದಾಗ-ಸೂಚಿಸಿದಂತೆ ಉತ್ಕಲ, ಆಂಧ್ರ, ಕರ್ನಾಟಕ, ಅಸಾಮು ಮತ್ತು ಸಿಂಧು ಈ ಪ್ರಾಂತ್ಯದ ಪ್ರತಿನಿಧಿಗನ್ನೊಳಗೊಂಡ ಭಾಷಾವಾರ ಪ್ರಾಂತರಚನಾ ಸಂಘ ಎಂಬ ಸಂಸ್ಥೆಯು ಡಿಸೆಂಬರಿನ ೧೯೨೮ ರಲ್ಲಿ ಕಲ್ಕತ್ತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಅಧ್ಯಕ್ಷರು ಪಟ್ಟಾಭಿ ಸೀತಾರಾಮಯ್ಯನವರು. ಕಾರ್ಯದರ್ಶಿಗಳು ಬಿ. ವಿಶ್ವನಾಥದಾಸರು.

ಇದಲ್ಲದೆ ಹಿಂದೂ, ಸ್ವರಾಜ್ಯ, ಬಾಂಬೇ ಕ್ರಾನಿಕಲ್ ಇಂಡಿಯನ್ ಡೇಲೀ ಮೇಲ, ನ್ಯಾಶನಲ್ ಹೇರಲ್ಡ, ಫಾರವರ್ಡ, ಅಮೃತಬಝಾರ, ಲೀಡರ ಮುಂತಾದ ಇಂಗ್ಲಿಷ್ ಪತ್ರಿಕೆಗಳಲ್ಲಿಯೂ ಕರ್ನಾಟಕದ ಎಲ್ಲ ಕನ್ನಡ ಪತ್ರಿಕೆಗಳಲ್ಲಿಯೂ ಸಕಾಲದಲ್ಲಿ ಅನುಕೂಲ ಲೇಖಗಳು ಬಂದವು.

ಈ ರೀತಿ ಈ ವರ್ಷದಲ್ಲಿ ಕರ್ನಾಟಕ ಏಕೀಕರಣಕ್ಕೆ ಅನುಕೂಲ ಕಾರ್ಯಗಳು ನಡೆದವು.

ದಿವಾಕರ ರಂಗನಾಥರಾಯರು,
ಕಾರ್ಯದರ್ಶಿ,
ಕ. ಏ. ಉಪ ಮಂಡಲ.
ಕಮಲಾಪೂರ ಶಾಂತರಾಯರು.
ವಿ. ವಿ. ಪಾಟೀಲ.
ಕಾರ್ಯದರ್ಶಿಗಳು ಕ. ಏ. ಸಭೆ

ಕೊಡಗು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

(೭ನೇ ಪುಟದಿಂದ ಮುಂದುವರಿದದ್ದು.)

ಈ ರಿಪೋರ್ಟಿನಿಂದ ಏನಾಗಬೇಕು? ಇಬ್ಬರು ಮೆಂಬರುಗಳು ನಮ್ಮೊಡನೆ ಬರಲೇ ಇಲ್ಲ ಎಂದರು. ಅದಕ್ಕೆ ಮೆ ಮುದ್ದವೈಯ್ಯನವರು ಹೇಳಿದ್ದೇನೆಂದರೆ—ನಾನು ದಕ್ಷಿಣ ಕೊಡಗಿನಲ್ಲೆಲ್ಲಾ ಸುತ್ತಿಯೂ ಕೂಡ ಈಗ ನಾನು ಬರಲಿಲ್ಲವೆಂದು ಹೇಳುವ ಮಾತು ಸುಳ್ಳು. ಒಬ್ಬ ಮೆಂಬರು ಎಲ್ಲಾ ಜಾಗ ಸುತ್ತಿದ್ದರೂ ರಿಪೋರ್ಟು ಬರೆಯುವಾಗ ಎಲ್ಲರ ಅಭಿಪ್ರಾಯ ಕೇಳಲೇ ಬೇಕಿತ್ತು. ಅನೇಕ ಕಮಿಟಿಗಳಲ್ಲಿ ಸಂಚಾರಕ್ಕೆ ಕೆಲವರು ಮಾತ್ರ ಹೋದರೂ ನ್ಯಾಯವಾದ ಆಲೋಚನೆಯನ್ನು ಉಪಯೋಗಿಸಿ ರಿಪೋರ್ಟನ್ನು ಬರೆಯಲು ಎಲ್ಲರೂ ಸೇರುವ ನಿಯಮವಿದೆ ಎಂದರು.

ಮೆ. ಮುದ್ದಪ್ಪನವರು ಹೇಳಿದ್ದೇನೆಂದರೆ.—ತಾವೆಲ್ಲರೇ ಕೆಲಸ ಮಾಡಿದ್ದೇವೆಂದು ಹೇಳುವ ಇಬ್ಬರು ಸರ್ಕಾರಿ ಮೆಂಬರುಗಳ ಪರಾಕ್ರಮವನ್ನು ಕೇಳಿದ್ದಾಯಿತು. ಎರಡು ಮೆಂಬರುಗಳು ತಮ್ಮ ಸ್ವೇಚ್ಛೆಯಿಂದ ತಮ್ಮ ಇಷ್ಟದಂತೆ ಮಾಡಿರುವ ಈ ಕಾರ್ಯಕ್ರಮ ಪಟ್ಟಿಯನ್ನು ಬದಲಾಯಿಸಿ ತಾವು ಗುಟ್ಟಿನಿಂದಲೂ, ಪೇಟೆಯವರನ್ನು ದೂಷಿಸುವ ಆಲೋಚನೆಯಿಂದಲೂ ರಿಪೋರ್ಟು ಮಾಡಿರಬಹುದು. ಆದರೆ ನಾನೂ ಸಹ ಪ್ರತ್ಯೇಕವಾಗಿ ಕೆಲವು ಶಾಲೆಗಳನ್ನು ನೋಡಿದ್ದೇನೆ. ಸರ್ಕಾರಿ ಮೆಂಬರುಗಳ ಜೊತೆಯಲ್ಲಿಯೇ ಹೋಗಬೇಕೆಂದು ಕಟ್ಟಳೆ ಇಲ್ಲ. ಅವರ ಕಾರಿನ ಹಿಂದೆ ನಾವು ಹೋಗಲಿಲ್ಲವೆಂಬ ಅಹಂಕಾರದಿಂದ ಉದ್ಯೋಗಸ್ಥ ಮೆಂಬರುಗಳಿಬ್ಬರೂ ವರ್ತಿಸಿದ್ದಾಗಿದೆ. ಅಲ್ಲದೆ ರಿಪೋರ್ಟಿನ ಕಡೇ ಭಾಗದಲ್ಲಿ ಅಲ್ಪ ತರದ ಮಾತುಗಳಿಂದ ಮೆಂಬರುಗಳನ್ನು ದೂಷಣೆ ಮಾಡಿದ್ದು ರಿಪೋರ್ಟು ಬರೆದ [illegible] ರಿಪೋರ್ಟು ವಿದ್ಯಾ ರಿಪೋರ್ಟು ಎಂದು ಕರೆಯಲ್ಪಟ್ಟರೂ ಅದರಲ್ಲಿ ವಿದ್ಯೆಯ ವಾಸನೆಯೇ ಇಲ್ಲ. ಉದ್ಯೋಗಸ್ಥ ಮೆಂಬರುಗಳ ಬೆನ್ನು ಹಿಂದೆ ಬಾಕಿ ಮೆಂಬರುಗಳು ಬರಬೇಕೆಂಬ ಅವರ ಪ್ರಯತ್ನ ನೆರವೇರದಿದ್ದರೂ, ಸಂಬಂಧವಿಲ್ಲದ ರಿಫಾರ್ಮ್ಸ್ ಆಕ್ಟು ಮತ್ತು ರಾಜಕೀಯ ಚಳವಳದ ವಿಷಯ 'ವಿದ್ಯಾ' ಕಮಿಟಿಯ ರಿಪೋರ್ಟಿನಲ್ಲಿ ಬರೆದು ದೇಶದಲ್ಲಿ ಗಲಾಟೆ ತರಲಿಕ್ಕೂ, ಮರೆನಾಡಿನ ರೈತರನ್ನು ಮರ್ಯಾದೆ ಹೀನರೆಂದು ಬೈದು ರಿಪೋರ್ಟು ಬರೆಯಲಿಕ್ಕೂ ಈ ಎರಡು ಮೆಂಬರುಗಳು ದೇಶ ಸಂಚಾರ ಮಾಡಬೇಕಾಗಿತ್ತೇ? ಇಂಥಾ ಹೊಲಸು ಹರಟೆಗಳನ್ನು ಸ್ವೇಚ್ಛೆಯಿಂದ ಬರೆಯಲಿಕ್ಕೆ ತಮಗೆ ಅನುಕೂಲ ಸಿಗಬೇಕೆಂಬ ಇರಾದೆಯಿಂದಲ್ಲವೇ ಚುನಾಯಿತ ಮೆಂಬರುಗಳನ್ನು ಬಿಟ್ಟದ್ದು? ಆದರೂ ಚಿಂತೆಯಿಲ್ಲ. ಬಡ ಉಪಾಧ್ಯಾಯರುಗಳ ಸಂಬಳ ಹೆಚ್ಚಿಸಲಿಕ್ಕೂ, ಸ್ಕೂಲುಗಳನ್ನು ಹೆಚ್ಚಿಸಲಿಕ್ಕೂ, ಮತ್ತು ವಿದ್ಯಾಭ್ಯಾಸದ ಅಭಿವೃದ್ಧಿಗೂ ನಾನು ವಿರೋಧಿಸುವುದಿಲ್ಲ. ಆದರೆ ಸಾಕಷ್ಟು ಒಳ್ಳೆಯದು ಮಾಡುವುದಕ್ಕೂ, ಅದಷ್ಟು ಶಾಲೆಗಳನ್ನೂ ಉಪಾಧ್ಯಾಯರುಗಳನ್ನೂ ಹೆಚ್ಚಿಸಿ ದೇಶ ಸೇವೆ ಮಾಡಲಿಕ್ಕೂ ಅನುಕೂಲ ಕೊಡದೆ ತಮ್ಮ ಅಹಂಕಾರದಿಂದ ಎರಡು ಮೆಂಬರುಗಳನ್ನು ತ್ಯಜಿಸಿ ತಮ್ಮ ಮನ ಬಂದಂತೆ ತಾವು ಬರೆದ ಕಾಗದದಷ್ಟು ಬೆಲೆಯಿಲ್ಲದ ರಿಪೋರ್ಟು ತಯಾರಿಸಿದ ಎರಡು ಮೆಂಬರುಗಳಿಗೆ ನಮಸ್ಕಾರ. ಈ ರಿಪೋರ್ಟನ್ನು ಚರ್ಚಿಸಲು ನಾವು ಎಂದಿಗೂ ಅವಕಾಶ ಕೊಡಬಾರದು'

ಠರಾವನ್ನು ಓಟಿಗೆ ಹಾಕಲು ವಿರೋಧಪಕ್ಷದವರಿಗೆ ಬಹುಮತ ಸಿಕ್ಕಲಿಲ್ಲ. ಆದ್ದರಿಂದ ಮೆ. ಗಳಾದ ರಾಮಸೆಟ್ಟಿಯವರು, ಮುದ್ದವೈಯ್ಯನವರು, ಅಜ್ಜಮಾಡ ಮಾದಪ್ಪನವರು, ಐನಂಡ ಮಾದಪ್ಪನವರು, ಮತ್ತು ಮುದ್ದಪ್ಪನವರು ಮೀಟಿಂಗನ್ನು ಬಿಟ್ಟು ಹೊರಗೆ ಹೋದರು (Walked out). ಬಾಕಿಯವರಲ್ಲಿ ತಕರಾರುಗಳು ಇಲ್ಲದ್ದರಿಂದ ಮುಂದಿನ ಠರಾವುಗಳು ಅಕ್ಷರಶಃ ಪಾಸಾದವು.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗು ಈ ತಾ. 8ರಲ್ಲಿ ವೀರರಾಜಪೇಟೆ ಕಾಫಿ ಭಂಡಾರದ ಮಹಡಿಯಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಮೆ. ಸಿ. ಯಸ್. ವೆಂಕಪ್ಪೈಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈ ಕೆಳಗಿನ ಮೆಂಬರುಗಳು ಹಾಜರಿದ್ದರು. ಮೆ. ಗಳಾದ 2. ಮನೆಯಪಂಡ ಯಂ. ಚಿಣ್ಣಪ್ಪನವರು, 3 ಐನಂಡ ಮಾದಪ್ಪನವರು, 4. ಚೆಂಗಂಡ ಕುಟ್ಟಪ್ಪನವರು, 5. ಪುಲಿಕೊಂಡ ಗಣಪತಿಯವರು, 6. ಕೃತ್ತಮನೆ ಮುದ್ದವೈಯ್ಯನವರು, 7 ಅಜ್ಜಮಾಡ ಮಾದಪ್ಪನವರು, 8. ಗುಡ್ಡಂಡ ಭೀಮಯ್ಯನವರು, 9 ಕೋಡಿರ ತಮ್ಮಯ್ಯನವರು, 10. ಮಂಡೇಪಂಡ ಸೋಮಯ್ಯನವರು, 11. ಕೋಟೆರ ಚಿಣ್ಣಪ್ಪನವರು, 12. ಅಬ್ದುಲ್ ಗಫೂರ್‌ಖಾನ್ ಬೈಕ್ಸಿಯವರು, 13. ಕೆ. ಯಂ. ಸೂಫಿಯವರು, 14. ಸಿ ಯಸ್. ಉತ್ತೈಯ್ಯನವರು, 15. ಚೇಮಿರ ಕುಟ್ಟಪ್ಪನವರು, 16. ಕಾಳೇಂಗಡ ಚಿಣ್ಣಪ್ಪನವರು ಮತ್ತು 17. ಪಂದ್ಯಂಡ ಬೆಳ್ಯಪ್ಪನವರು.

1. ಕಳೆದ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2 ಏಪ್ರಿಲ್ ಮತ್ತು ಮೇ. ತಿಂಗಳುಗಳ ಜಮಾ ಖರ್ಚಿನ ಲೆಖ್ಖ ಓದಿ ಒಪ್ಪಲಾಯಿತು.

3. ಕಳೆದ ವಾರ್ಷಿಕ ಜನರಲ್ ಮೀಟಿಂಗಿನ ಅಧ್ಯಕ್ಷರ ಪ್ರಯಾಣದ ಖರ್ಚು 111-4-0 ಮಂಜೂರು ಮಾಡಲಾಯಿತು

ಕಳೆದ ಜನರಲ್ ಮೀಟಿಂಗಿನಲ್ಲಿ ಮಂಜೂರಾದ ಈ ಕೆಳಗಿನ ಠರಾವುಗಳು ಆಲೋಚಿಸಲ್ಪಟ್ಟವು

4. ಸಂಘದ ಪ್ರಚಾರ ಕೆಲಸವನ್ನು ನಡಿಸಲು ಆರ್ಗನೈಜರುಗಳನ್ನ ನೇಮಿಸುವ ವಿಷಯ ಚರ್ಚಿಸಲಾಯಿತು.

ಆರ್ಗನೈಜರುಗಳು ಪ್ರಚಾರ ಕೆಲಸವನ್ನು ಯಾವ ರೀತಿ ನಡಿಸಬೇಕೆಂಬದನ್ನು ಚೆನ್ನಾಗಿ ಪರ್ಯಾಲೋಚಿಸಿ ಬರುವ ಕಮಿಟಿ ಮೀಟಿಂಗಿನ ಮುಂದಿಡಲು ಮೆ. ಗಳಾದ ಅಬ್ದುಲ್ ಗಫೂರ್‌ಖಾನ್‌ರವರು, ಕೊಳ್ಳಿಮಾಡ ಕರುಂಬೈಯ್ಯನವರು ಮತ್ತು ಕೋಟೆರ ಚಿಣ್ಣಪ್ಪನವರು—ಇವರ ಒಂದು ಉಪಕಮಿಟಿಯು ನೇಮಿಸಲಾಯಿತು. ಇವರು ಬರುವ ಜುಲೈ ತಿಂಗಳ ಅಖೈರೊಳಗೆ ತಮ್ಮ ಸಲಹೆಗಳನ್ನು ಜನರಲ್ ಸೆಕ್ರೆಟರಿಯವರಿಗೆ ಕಳುಹಿಸತಕ್ಕದ್ದು ಎಂದು ತೀರ್ಮಾನಿಸಲಾಯಿತು.

5. ದೇಶದಲ್ಲಿ ನಿಶಾನಿಷೇಧ ಚಳವಳನ್ನು ನಡಿಸುವ ವಿಷಯ ಚರ್ಚಿಸಲಾಯಿತು.

ಈ ಕೆಲಸವನ್ನು ನಡಿಸಲು ಈ ಕೆಳಗಿನ ಮಹನೀಯರುಗಳ ಒಂದು ಸೆಂಟ್ರಲ್ ಕಮಿಟಿಯು ನೇಮಿಸಲಾಯಿತು. ಮೆ. ಗಳಾದ 1. ಬಿದ್ದಂಡ ಪಿ. ಐಯ್ಯಪ್ಪನವರು, 2. ಕೃತ್ತಮನೆ ಮುದ್ದವೈಯ್ಯನವರು, 3. ಅಬ್ದುಲ್ ಗಫೂರ್‌ಖಾನ್‌ರವರು ಮತ್ತು 4. ಐನಂಡ ಮಾದಪ್ಪನವರು. ಈ ಕಮಿಟಿಯವರು ನಿಶಾ ನಿಷೇಧ ಚಳವಳದ ಪ್ರಚಾರ ಕೆಲಸವನ್ನು ಹೇಗೆ ನಡಿಸಬೇಕೆಂಬದನ್ನು ಆಲೋಚಿಸಿ ತಮ್ಮ ಕಾರ್ಯಕ್ರಮವನ್ನು ಈ ಕಾರ್ಯಕಾರಿ ಮಂಡಳಿಯ ಮುಂದಿಡುವಂತೆ ತೀರ್ಮಾನಿಸಲಾಯಿತು.

6. ಕೊಡಗಿನಲ್ಲಿ ಸೇವಾದಳವನ್ನು ಇಡುವದರ ವಿಷಯ ಚರ್ಚೆಯನ್ನು ಇನ್ನೊಂದು ಮೀಟಿಂಗಿಗೆ ಮುಂದಿಡಲಾಯಿತು.

ಕಳೆದ ವಾರ್ಷಿಕ ಜನರಲ್ ಮೀಟಿಂಗಿನ ವಿಷಯ ನಿಯಾಮಕ ಸಮಿತಿಯವರು ಕಾರ್ಯಕಾರೀ ಮಂಡಳಿಯ ತೀರ್ಮಾನಕ್ಕೆ ಬಿಟ್ಟ ಈ ಕೆಳಗಿನ ವಿಷಯಗಳು ಚರ್ಚಿಸಲ್ಪಟ್ಟವು.

7. ಮೈತಾಡಿ ಗ್ರಾಮವನ್ನು ಮೂರ್ನಾಡು ಪೋಸ್ಟಾಫೀಸಿನಿಂದ ಬಿಡಿಸಿ ವೀರರಾಜಪೇಟೆ ಪೋಸ್ಟಾಫೀಸಿಗೆ ಸೇರಿಸಬೇಕೆಂಬ ಮೆ. ಕೆ. ಯಂ. ಸೂಫಿಯವರ ಠರಾವು ಚರ್ಚಿಸಲ್ಪಟ್ಟಿತು.

ಈ ವಿಷಯ ಪೋಸ್ಟ್ ಮಾಸ್ಟರ್ ಜನರಲರವರಿಗೆ ಸಂಘದ ಹೆಸರಿನಲ್ಲಿ ಸೆಕ್ರೆಟರಿಯವರು ಪತ್ರ ಬರೆಯಬೇಕೆಂದು ತೀರ್ಮಾನಿಸಲಾಯಿತು.

8. ಸ್ವಂತ ಜಮೀನಿನ ಮಧ್ಯಕ್ಕಾಗಿ ಹರಿಯುವ ಸಣ್ಣ ತೋಡುಗಳ ಕರೆಯಲ್ಲಿ ಇರುವ ಮರ ವಗೈರೆಗಳು ರೈತರ ಹಕ್ಕಾಗಿರಬೇಕೆಂಬ ಠರಾವನ್ನು ಚರ್ಚೆಯಾದ ಮೇಲೆ ಸೂಚಕರಾದ ಮೆ. ಕೆ. ಯಂ. ಸೂಫಿಯವರು ವಾಪಸು ತೆಗೆದುಕೊಂಡರು.

9. ಜಮೀನ್ದಾರರ ಸಂಘಕ್ಕೆ ಪ್ರತ್ಯೇಕ ಗುಮಾಸ್ತರು ಮತ್ತು ಜವಾನನು ಆಗಬೇಕೆಂಬ ಠರಾವನ್ನು ಸೂಚಕರಾದ ಮೆ. ಕೋಟೆರ ಚಿಣ್ಣಪ್ಪನವರು ವಾಪಸು ತೆಗೆದುಕೊಂಡರು.

10. ಪರದೇಶಕ್ಕೆ ಮರ ಮಾರಾಟ ಮಾಡುವಾಗ ಲೈಸೆನ್ಸ್ ಕೊಡುವ ಹಕ್ಕನ್ನು ಪಾರುಪತ್ಯಗಾರರಿಗೆ ಕೊಡಬೇಕು ಎಂಬ ಮೆ. ಚೇಂದಿರ ತಿಮ್ಮಯ್ಯನವರ ಠರಾವಿನಂತೆ ಈಗ ಜಾರಿಯಲ್ಲಿರುವುದರಿಂದ ಇದು ಚರ್ಚಿಸಲ್ಪಡಲಿಲ್ಲ.

11. ಮೆ. ಎ. ಬಿ. ಕಾರ್ಯಪ್ಪನವರು ಸಬ್‌ಜಡ್ಜಿ ಕೆಲಸದಿಂದ ನಿವೃತ್ತರಾದಾಗ, ಗಜೆಟೆಡ್ ಉದ್ಯೋಗಸ್ಥರನ್ನು ವರ್ಗಾಯಿಸಬೇಕೆಂಬ ತತ್ವವನ್ನು ವೀರಾಜಪೇಟೆ ಮುನಸೀಫರ ಸಂಬಂಧವಾಗಿ ಉಪಯೋಗಿಸಲು ದೊರೆತ ಅವಕಾಶವನ್ನು ಸರಕಾರವು ಉಪಯೋಗಿಸಿಕೊಳ್ಳದಿದ್ದದ್ದನ್ನೂ, ಕೋಮುವಾರು ತತ್ವವನ್ನವಲಂಬಿಸಿ ರಾಜಕೀಯ ಚಳವಳವನ್ನು ನಡಿಸುತ್ತಿದ್ದ ಪಾರ್ಟಿಯ ಮುಖಂಡರನ್ನು ನ್ಯಾಯ ತೀರ್ಪಿನ ಅಧಿಕಾರಕ್ಕೆ ನೇಮಿಸಿದ್ದನ್ನೂ ಜಮೀನ್ದಾರರ ಸಂಘದ ಕಮಿಟಿಯು ನಿಷೇಧಿಸುತ್ತದೆ.

ಪಿ. ಐ ಬೆಳ್ಯಪ್ಪ,
(ಜನರಲ್ ಸೆಕ್ರೆಟರಿ.)

Notice.

Students who have received Scholarships and loans in the year 1928—1929 are requested to send in their applications with their progress reports signed by the Principals of their respective colleges so as to reach the undersigned by the 25th June 1929, the latest, so that, renewal of the scholarships and loans may be considered at the next meeting of the members of the committee which will take place about the 1st July 1929.

B. I. Kuttappa,
Hon. Secretary.

ಕೊಡಗು ವಿದ್ಯಾಭಿವೃದ್ಧಿ ಸಂಘ,
ಮಡಿಕೇರಿ, ತಾ. 5—6—'29.

ನೋಟೀಸು.

ಈ ಸಂಘದ ವಾರ್ಷಿಕ ಜನರಲ್ ಮೀಟಿಂಗ್ 1929ನೇ ಇಸವಿ ಜುಲೈ ತಾರೀಖು 1ರಲ್ಲು ಸಾಯಂಕಾಲ 5 ಗಂಟೆಗೆ ಓಂಕಾರೇಶ್ವರ ದೇವಸ್ಥಾನದ ಪಾಕ್‌ಕಮಾನ್ ಮಹಡಿಯಲ್ಲಿ ನಡೆಯುತ್ತಾದ್ದರಿಂದ ಸದ್ರಿ ಸಂಘದ ಮೆಂಬರುಗಳು ಮತ್ತು ಮೆಂಬರಾಗಲಿಕ್ಕೆ ಇಚ್ಛೈಸುವವರು ಸಹ ಸದರಿ ಮೀಟಿಂಗಿಗೆ ಹಾಜರಾಗಬೇಕಾಗಿ ಕೇಳಿಕೊಳ್ಳೋಣಾಗಿರುತ್ತೆ.

ಈ ಸಂಘದ ರಶೀತಿ ಪುಸ್ತಕಗಳನ್ನು ಹೊಂದಿಕೊಂಡ ತಕ್ಕ ಮಹನೀಯರುಗಳು ತಾವು ವಸೂಲ್ ಮಾಡಿರತಕ್ಕ ಹಣವನ್ನು ಚಂದಾದಾರರ ಪಟ್ಟಿ ಸಮೇತ ಈ ತಾರೀಖು 20 ಒಳಗೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳೋಣಾಗಿರುತ್ತೆ.

ಬಿ. ಐ. ಕುಟ್ಟಪ್ಪ,
ಗೌರವ ಕಾರ್ಯದರ್ಶಿ.

ವಿಮರ್ಶೆ.

"ಕಾವೇರಿ ಮಹಾತ್ಮೆ"

ಕೊಡಗಿನ ಪ್ರಾಮುಖ್ಯ ದೇವತೆಯಾಗಿದ್ದು ಇಲ್ಲಿಯ ಎಲ್ಲಾ ಹಿಂದೂಗಳಿಂದಲೂ ಪೂಜಿಸಲ್ಪಡುವ ಲೋಕಮಾತೆ ಕಾವೇರಮ್ಮನವರ ಆದ್ಯಂತ ಚರಿತ್ರೆಯನ್ನು ಅನೇಕ ಕಥಾಕಂದೊಡಗೂಡಿ ಕೊಡವ ಭಾಷೆ ತಿಳಿದವರೆಲ್ಲರಿಗೂ ಸುಲಭದಲ್ಲಿ ತಿಳಿಯುವಂತೆಯೂ, ಆಕರ್ಷಕಪೂರಿತವಾಗಿಯೂ ಕೊಡವ ಭಾಷೆಯ ನಾಟಕ ರೂಪದಲ್ಲಿ ಶ್ರೀ: ಅಪ್ಪನೆರವಂಡ ಅಪ್ಪಚ್ಚನವರು ಬರೆದಿರುವ ಈ ಪುಸ್ತಕವು ಪ್ರತಿಯೊಂದು ಕೊಡವರ ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಇದರಲ್ಲಿರುವ ಹಾಡುಗಳು ಬಹು ಮನೋರಂಜಕವಾಗಿ ಕೊಡಗಿನ ಈಗಿನ ಒಬ್ಬರೇ ಕವಿಯಾದ ಹರದಾಸ ಅಪ್ಪ[illegible]ವಿಯವರಿಂದ ಕೊಡವ ಭಾಷೆಗೆ ಎಷ್ಟರ ಮಟ್ಟಿಗೆ ಸಾಹಿತ್ಯ ಬಂದಿದೆಯೆಂದು ಹೇಳಬೇಕಾಗಿಲ್ಲ. ಇವರಿಗೆ ಉತ್ತೇಜನ ಕೊಡಬೇಕಾದದ್ದು ಪ್ರತಿಯೊಬ್ಬ ದೇಶೀಯನ ಕರ್ತವ್ಯವಾಗಿದೆ. ಪುಸ್ತಕವು ಸುಲಭ ಕ್ರಯದಲ್ಲಿ ಅಂದರೆ ಬೆಲೆ 8 । ಮೆ. ಡಿ. ಯಸ್. ಪಂಚ್ಯಾಕ್ಷರಪ್ಪನವರು, ಬುಕ್‌ಸೆಲ್ಲರ್ ಮಡಿಕೇರಿ, ಇವರಲ್ಲಿ ದೊರೆಯುವದು.

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ. 23ರಲ್ಲಿ ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗ್ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುವದು.

ಕಳೆದ ಶನಿವಾರದಿಂದ ಮಡಿಕೇರಿಯಲ್ಲಿ ಮಳೆಯು ಬಹಳ ಕಡಿಮೆಯಾಗಿದೆ. ಹಾಗೆಯೇ ದೇಶದ ಎಲ್ಲಾ ಕಡೆಗಳಲ್ಲೂ ಕಡಿಮೆಯೆಂದು ವರ್ತಮಾನ.

ಮಡಿಕೇರಿ ಮಹದೇವಪೇಟೆಯಲ್ಲಿ ಸಿಡುಬು ರೋಗವು ಇನ್ನೂ ಇದೆ. ಮೂರು ಜನರಿಗೆ ಆಗಿ ವಾಸಿಯಾಗಿದೆಯೆಂದೂ, ಈಗ ಪುನಹ ಮೂವರಿಗೆ ಅಂಟಿದೆಯೆಂದೂ ಸುದ್ದಿ.

ಸುಂಟಿಕೊಪ್ಪ ಬಲ್ಯಾಟ್ರಿ ತೋಟದಲ್ಲಿರುವ ಮೆ. ಮುಕ್ಕಾಟಿರ ಅಪ್ಪಣ್ಣನವರಿಗೆ 'ಡರ್ಬಿ ಸ್ವೀಪ್' ಎಂಬ ಕುದುರೆ ಜೂಜಿನ ಲಾಟರಿಯಲ್ಲಿ ಹತ್ತು ಸಾವಿರ ರೂಪಾಯಿ ಸಿಕ್ಕಿದೆಯೆಂದು ವರ್ತಮಾನ.

ವಿಕ್ಟೋರಿಯ ಮೋಟಾರು ಸರ್ವಿಸಿನ ಮಡಿಕೇರಿ—ಕೊಡ್ಲಿಪೇಟೆ ಲೈನಿನ ಬಸ್ಸುಗಳನ್ನು ಲೈಸೆನ್ಸ್ ಸಮೇತ 'ಕಾವೇರಿ ಮೋಟಾರ್ ಸರ್ವಿಸ್'ನವರು ಕ್ರಯಕ್ಕೆ ತೆಗೆದುಕೊಂಡಿರುವರೆಂದು ತಿಳಿಯ ಬರುತ್ತದೆ.

ಕಮಿಷನರಾದ ಮೆ. ಪ್ರೀಸ್ಟ್ಲಿಯವರು ಈ ತಾ. 17ರಿಂದ ಒಂದು ತಿಂಗಳು ರಜೆಯಲ್ಲಿ ಹೋಗುವಾಗ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಮೆ. ಕೇಟೋಳಿರ ಚಂಗಪ್ಪನವರು ತಮ್ಮ ಕೆಲಸದೊಂದಿಗೆ ಕಮಿಷನರ ಕೆಲಸವನ್ನೂ ನೋಡುವರು.

ಮೆ. ನಡಿಕೇರಿಯಂಡ ಚಿಣ್ಣಪ್ಪನವರು ಭಗವದ್ಗೀತೆಯನ್ನು ಕೊಡವ ಭಾಷೆಯ ಪದದ ರೂಪದಲ್ಲಿ ಬರೆದಿರುವ "ಭಗವಂತಂಡ ಪಾಟ್" ಎಂಬ ಪುಸ್ತಕವನ್ನು ಆದರದಿಂದ ಸ್ವೀಕರಿಸುತ್ತೇವೆ. ಇದರ ವಿಮರ್ಶೆಯನ್ನು ಬರುವವಾರ ಪ್ರಕಟಿಸುವೆವು.

ಮೆ. ಚೆಪ್ಪುಡಿರ ಸಿ. ಬೋಪಯ್ಯನವರು ಕಳೆದ ಏಪ್ರಿಲ್ ತಿಂಗಳಿಂದ ಇಡೀ ನೀಲಗಿರಿಗೆ ಯುನಿವರ್ಸಲ್ ಮ್ಯಾಚುವಲ್ ಏಯಿಡ್ ಅಂಡ್ ಪೂವರ್ ಹೌಸೆಸ್ ಎಸೋಸಿಯೇಶನಿನ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಇಲ್ಲಿಯ ಸರ್ಕಾರದವರು ಮದ್ರಾಸು ವೆಟರಿನರಿ ಕಾಲೇಜಿನಲ್ಲಿ ತರಬೇತಿಗೆ ಕಳುಹಿಸಲು ಮೆ. ಕೇಚಮಾಡ ಬೆಳ್ಯಪ್ಪನವರನ್ನು ಮತ್ತು ಮೆ. ಕುಞ್ಞೀರ ಮುತ್ತಣ್ಣನವರನ್ನು ಆರಿಸಿದ್ದರಲ್ಲಿ ಮುತ್ತಣ್ಣನವರು ಮೆಡಿಕಲ್ ಪರೀಕ್ಷೆಯಲ್ಲಿ ಫಿಟ್ ಆಗಲಿಲ್ಲವೆಂದೂ, ಇನ್ನೊಬ್ಬರನ್ನು ನಾಳೆ ಆರಿಸುವರೆಂದೂ ತಿಳಿಯಬರುತ್ತದೆ.

ಮೇ ತಾ. 31ರಲ್ಲು ಪ್ರಕಟಿಸಿದ ಬೆಂಗಳೂರಿನಲ್ಲಿ ಆದ ಉಪಾಧ್ಯಾಯರ ಪರೀಕ್ಷೆಯಲ್ಲಿ ಕೊಡಗಿನಿಂದ ಪಾಸಾದವರ ಹೆಸರುಗಳಲ್ಲಿ ಮೆ. ಬಿದ್ದಾಟಂಡ ಅಪ್ಪಣ್ಣನವರ ಹೆಸರು ಬಿಟ್ಟು ಹೋಗಿತ್ತು, ಮತ್ತು ಲೋವರ್ ಸೆಕೆಂಡರಿ ಗ್ರೇಡಿನಲ್ಲಿ ಪಾಸಾದ ಕೆ. ಪಿ. ಮುತ್ತಣ್ಣ ಎಂಬ ಹೆಸರು ತಪ್ಪಾಗಿರುತ್ತದೆ. ಅದು ಕೆ. ಪಿ. ಮುತ್ತರಾಯ ಎಂದಾಗಬೇಕು.

ಸಬ್ ಜಡ್ಜರಾಗಿದ್ದ ಮೆ. ಅಪ್ಪಾರಂಡ ಕಾರ್ಯಪ್ಪ ಯಂ. ಎ. ಬಾರ್ ಎಟ್ ಲಾರವರು ಈ ತಾ 10 ರಲ್ಲಿ ರಿಟಯರ್ ಆಗುವ ಮುಂಚೆ 6 ತಿಂಗಳು ರಜೆಯಲ್ಲಿ ಹೋದರು. ಈ ಉದ್ಯೋಗಕ್ಕೆ ನೇಮಿಸಲ್ಪಟ್ಟ ಮೆ. ಪಾಲೇಕಂಡ ಮೇದಪ್ಪ ಬಿ. ಎ., ಬಿ ಎಲ್., ಹೈಕೋರ್ಟ್ ವಕೀಲರು ತಾ. 10 ರಲ್ಲಿ ಮೆ. ಕಾರ್ಯಪ್ಪನವರಿಂದ ಚಾರ್ಜ್ ತೆಗೆದುಕೊಂಡರು.

ಮಡಿಕೇರಿನಾಡು ಹಮ್ಮಿಯಾಲ ಗ್ರಾಮದ ಪಳಿಯಂಡ ಕಾಳೈಯ್ಯನವರ 16 ವರ್ಷ ಪ್ರಾಯವಾಗದ ಮಗಳನ್ನು ಅವರಲ್ಲಿ ಕೆಲಸ ಮಾಡುತ್ತಿದ್ದ ಪಾಲೆ ಸೋಮನೆಂಬವನು ಅಕ್ರಮ ಸಂಭೋಗ ಮಾಡುವ ಉದ್ದಿಶ್ಯ ಅವರ ಮನೆಯಿಂದ ಓಡಿಸಿಕೊಂಡು ಹೋದನೆಂಬ ಮೊಕದ್ದಮ್ಮೆಯು ಸೆಷನ್ಸ್ ಕೋರ್ಟಿನಲ್ಲಿ ವಿಚಾರಿಸಲ್ಪಟ್ಟು ಸೋಮನಿಗೆ ಒಂದು ವರ್ಷ ಕಠಿಣ ಸಜೆ ವಿಧಿಸಲಾಗಿದೆ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಮಡಿಕೇರಿ ಕಾನ್ವೆಂಟ್ ಹೈಸ್ಕೂಲಿನಿಂದ ಪರೀಕ್ಷೆಗೆ ಹೋದ 5 ಹುಡುಗಿಯರ ಪೈಕಿ ಶ್ರೀಮತಿಗಳಾದ ನೆರವಂಡ ಪಾರ್ವತಿಯವರು, ಕೋಡಿಮಣಿಯಂಡ ಗೌರಮ್ಮನವರು ಮತ್ತು ಕೂತಂಡ ಬೋಳ್ಯಮ್ಮನವರೂ, ವೀರರಾಜಪೇಟೆ ಹೈಸ್ಕೂಲಿನಿಂದ 18ರ ಪೈಕಿ ಮೆ. ಗಳಾದ 1. ಮುದ್ದಿರ ಚಂಗಪ್ಪ, 2. ಹೊಸೂರು ಕೆ. ಥೀಮರಾವ್ 3. ಕುಞ್ಞೀರ ಮುತ್ತಣ್ಣ, 4. ಚೆಮ್ಮಂಡ ಬಿ. ಪುಟ್ಟಣ್ಣ, 5 ಸಿ. ಶ್ರೀಕಂಠಯ್ಯ, 6. ಪಿ. ಆರ್. ಗಣಪ್ಪಯ್ಯ, 7. ಯಂ. ಜಿ. ಕಾಳಪ್ಪ, 8. ಬೆಳ್ಳತಂಡ ಯಂ. ಪೂವಯ್ಯ, 9. ಪುಟ್ಟಿಚಂಡ ಬಿ. ಕುಶಾಲಪ್ಪ ಮತ್ತು ತೋರೆರ ಯಂ. ಕುಶಾಲಪ್ಪನವರು ತೇರ್ಗಡೆಯಾಗಿರುವರು.

ಬಲಮುರಿ ಗ್ರಾಮದ ಕಟ್ರತಂಡ ಕುಶಾಲಪ್ಪನವರ ಮನೆಗೆ ನೆಂಟನಾಗಿ ಹೋದ ದೇವಜನ ತಿಮ್ಮಯ್ಯನೆಂಬವನು ಕುಶಾಲಪ್ಪನವರ ಒಂದು ಚಿನ್ನದ ಸರಪಣಿಯನ್ನು ಕಳವು ಮಾಡಿದನೆಂದು ಪೋಲೀಸಿಗೆ ಪುಕಾರ ಹೇಳಲು, ಪೋಲೀಸಿನವರು ತಾ. 8ರಲ್ಲಿ ಗುಮಾನಿಯಿಂದ ತಿಮ್ಮಯ್ಯನನ್ನು ಅವನ ಮನೆಯಿಂದ ನಾಪೋಕ್ಲು ಪೋಲೀಸು ಸ್ಟೇಶನಿಗೆ ಕರೆದುಕೊಂಡು ಹೋಗುತ್ತಿರುವಾಗ ಕೊಟ್ಟಮುಡಿ ಹೊಳೆದಾಟುವ ಸಮಯದಲ್ಲಿ ತಿಮ್ಮಯ್ಯನು ಹೊಳೆಯ ಮಧ್ಯಕ್ಕೆ ತಲಪಿದಾಗ ಫಕ್ಕನೆ ದೋಣಿಯಿಂದ ಹೊಳೆಗೆ ಹಾರಿ ಬಿದ್ದು ಪ್ರಾಣಹತ್ಯ ಮಾಡಿಕೊಂಡನೆಂದೂ, ಐದಾರು ದಿವಸಗಳ ಮೇಲೆ ಅವನು ಹಾರಿದಲ್ಲಿಂದ ಸುಮಾರು 2 ಮೈಲು ದೂರದಲ್ಲಿ ಅವನ ಶವವು ಕಾಣಲಿಕ್ಕೆ ಸಿಕ್ಕಿತೆಂದೂ ತಿಳಿಯಬರುತ್ತದೆ.

ಕಳೆದವಾರ ಹೊಡೆದ ಮಳೆಯ ದೆಸೆಯಿಂದ ಮಡಿಕೇರಿ-ಭಾಗಮಂಡ್ಲ ರಸ್ತೆಯ ಅಪ್ಪಂಗಳ ಸೇತುವೆಯು ತೇಲಾಡುತ್ತಾ ಬಂದ ಒಂದು ಮರ ತುಂಡಿನಿಂದ ಮುರಿದು ಬಿದ್ದು ಹೋಗಿದೆ, ಈಗ ಅದನ್ನು ದುರಸ್ತು ಮಾಡಲು ಸಾಧ್ಯವಲ್ಲದ್ದರಿಂದ ತತ್ಕಾಲ ಒಂದು ಕಾಲು ದಾರಿಯು ಮಾತ್ರ ಮಾಡಲಾಗುವದು, ಗಾಡಿ ವಗೈರೆ ವ್ಯವಹಾರಗಳಿಗೆ ನಾಲ್ಕೈದು ತಿಂಗಳು ಸಾಧ್ಯವಿಲ್ಲ. ಭಾಗಮಂಡ್ಲಕ್ಕೆ ಹೋಗುವ ಗಾಡಿ, ಮೋಟಾರು ವಗೈರೆಗಳು ಮೂರ್ನಾಡು, ಚೆಟ್ಟಳ್ಳಿಗಾಗಿ ಹೋಗಬೇಕು. ಬರುವ ಕಾವೇರಿ ಜಾತ್ರೆಯ ಸಮಯಕ್ಕೆ ಈ ಸೇತುವೆಯು ರಿಪೇರಿ ಮಾಡಲ್ಪಡುವದು, ಇದಾಗದಿದ್ದರೆ ತತ್ಕಾಲಿಕ ಸೇತುವೆಯಾದರೂ ಕಟ್ಟಲ್ಪಡುವದೆಂದು ಎಗ್ಸಿಕ್ಯುಟಿವ್ ಇಂಜಿನಿಯರವರು ತಿಳಿಸಿರುತ್ತಾರೆ.

ಹಿಂದೂದೇಶ.

ಬರುವ ಲಾಹೋರ್ ಕಾಂಗ್ರೆಸ್ಸಿನ ಅಧ್ಯಕ್ಷಪದವಿಗೆ ಬೊಂಬಾಯಿ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಮಹಾತ್ಮಗಾಂಧಿ, ಶ್ರೀ. ವಲ್ಲಭಭಾಯಿ ಪಟೇಲ್ ಮತ್ತು ಪಂಡಿತ ಜವಾಹಿರ್‌ಲಾಲ್‌ರವರ ಹೆಸರುಗಳನ್ನು ಸೂಚಿಸಿರುವರು.

ಎಸೆಂಬ್ಲಿಯಲ್ಲಿ ಬಾಂಬುಗಳನ್ನು ಎಸದ ಭಾಗತ್ ಸಿಂಗ್ ಮತ್ತು ದತ್ತ್‌ರವರಿಗೆ ಜೀವಪರ್ಯಂತರ ನೀರಿನ ಮೇಲೆ ಕಳುಹಿಸಲ್ಪಡುವ ಶಿಕ್ಷೆಯು ವಿಧಿಸಲಾಗಿದೆ. ಇವರಿಬ್ಬರು ಜಡ್ಜ್‌ಮೆಂಟನ್ನು ಕೇಳಿದಾಗ 'ದಂಗೆಯು ಬಹು ಕಾಲ ಬಾಳಲಿ' ಎಂದು ಕೂಗಿದರಂತೆ!

ಅಸ್ಸಾಮು ಕೌನ್ಸಿಲಿನ ಹೊಸ ಚುನಾವಣೆಯು ಮುಗಿದಿದೆ ಅಲ್ಲಿಯ ಪಾರ್ಟಿಗಳ ಬಲವು ಮೊದಲಿನಂತೆಯೇ ಇದೆ. ಸ್ವರಾಜ್ಯ ಪಾರ್ಟಿಯವರ ಬಲವು ಕಡಿಮೆಯಾದೀತೆಂಬ ಸರ್ಕಾರದ ಅಭಿಲಾಷೆಯು ಕೈಗೂಡಲಿಲ್ಲ. ರೆವೆರೆಂಡ್ ಜೆ. ನಿಕಲ್ಸ್ ರಾಯಿರವರು ಮಂತ್ರಿಪದವಿಗೆ ರಾಜಿನಾಮೆಕೊಟ್ಟಿರುವರು

ಬಂಗಾಳದಲ್ಲಿ ಸ್ವರಾಜ್ಯ ಪಾರ್ಟಿಗೆ ವಿರೋಧವಾಗಿ "ಪ್ರೋಗ್ರೆಸ್ಸಿವ್" ಪಾರ್ಟಿಯನ್ನು ಹೊರಡಿಸಿದ ಮೆ. ಜೆ. ಯನ್. ಗುಪ್ತರವರು ಕೌನ್ಸಿಲು ಚುನಾವಣೆಯಲ್ಲಿ ಸೋಲಿಸಲ್ಪಟ್ಟಿರುವರು. ಇವರಿಗೆ ವಿರೋಧವಾಗಿ ನಿಂತಿದ್ದ ಸ್ವರಾಜ್ಯ ಪಾರ್ಟಿ ಮೆಂಬರರು ಜಯಶೀಲರಾದರು. ಮಾತ್ರವಲ್ಲ ಮೆ. ಗುಪ್ತರವರು ತಮ್ಮ ಠೇವಣಾತಿ ಹಣವನ್ನೂ ಕೂಡ ಕಳಕೊಳ್ಳಬೇಕಾಯಿತು.

ಸಿಲೋನಿನ ಎಪಿಸ್ಸೆಮೊ ಎಂಬ ಗ್ರಾಮದಲ್ಲಿ ನಾಲ್ಕು ಜನರು ಜೂಜಾಡುತ್ತಿದ್ದಾಗ ಜಗಳವಾಗಿ ಒಬ್ಬನು ಇನ್ನೊಬ್ಬ ಯುವಕನ ಕಾಲಿಗೆ ಚೂರಿಯಿಂದ ತಿವಿದನು. ಆ ಯುವಕನು ಬೇರೆ ಇಬ್ಬರ ಸಹಾಯದಿಂದ ಅವನಿಗೆ ಹಿಂತಿರುಗಿ ತಿವಿದು ಅವನನ್ನು ಕೊಂದನು. ತಿವಿದ ಕೂಡಲೇ ಅವರು ಮೂವರು ಬಿದ್ದವನ ರಕ್ತವನ್ನು ಕುಡಿದರಂತೆ! ಕೋರ್ಟಿನಲ್ಲಿ ವಿಚಾರ ಮಾಡುವಾಗ್ಗೆ ತಾನು ಕಳಕೊಂಡ ರಕ್ತವನ್ನು ಭರ್ತಿಮಾಡಲಿಕ್ಕಾಗಿ ತಾನು ತನ್ನ ವಿರೋಧಿಯ ಸುಮಾರು ಎರಡು ಕುಪ್ಪಿ ರಕ್ತವನ್ನು ಕುಡಿದೆನೆಂದು ಯುವಕನು ಹೇಳಿದನಂತೆ!!

ಸರ್ಕಾರದವರು ಎಸೆಂಬ್ಲಿಯ ಮತ್ತು ಬೇರೆ ಕೆಲವು ಪ್ರಾಂತೀಕ ಕೌನ್ಸಿಲುಗಳ ಚುನಾವಣೆಯನ್ನು ಈ ವರ್ಷ ನಡಿಸದೆ, ಒಂದು ವರ್ಷ ಮುಂದರಿಸಿದ್ದರಿಂದ ಸ್ವರಾಜ್ಯಪಕ್ಷ ಮೆಂಬರುಗಳು ಎಸೆಂಬ್ಲಿಗಾಗಲೀ, ಪ್ರಾಂತೀಕ ಕೌನ್ಸಿಲುಗಳಿಗಾಗಲೀ ಹೋಗಕೂಡದೆಂದು ಅಖಿಲಭಾರತ ಕಾಂಗ್ರೆಸ್ ಕಮಿಟಿಯವರು ತೀರ್ಮಾನಿಸಿರುವರಾದರೂ, ಸಂಯುಕ್ತ ಪ್ರಾಂತ್ಯದ ಸ್ವರಾಜ್ಯಪಕ್ಷದ ಮೆಂಬರುಗಳು ಅಲ್ಲಿಯ ಕೌನ್ಸಿಲಿನ ಬರುವ ಮೀಟಿಂಗಿಗೆ ಹೋಗುವಂತೆ ಕಾಣುತ್ತದೆ. ಹಾಗೆ ತಮ್ಮನ್ನು ಕೌನ್ಸಿಲಿಗೆ ಹೋಗಲು ಬಿಡಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಬರೆದಿರುವರು. ಕೌನ್ಸಿಲುಗಳಿಗೆ ಹೋಗುವದಾದರೆ ಯಾವಾಗಲೂ ಹೋಗಬೇಕೆಂತಲೂ, ಇಲ್ಲವಾದರೆ ಸಂಪೂರ್ಣ ಬಹಿಷ್ಕಾರ ಬೇಕೆಂತಲೂ, ಹೋಗುವಂತೆ ನಿಶ್ಚೈಸಿ ಕೆಲವು ಸಮಯ ಮಾತ್ರ ಹೋಗದಿದ್ದರೆ ಓಟರುಗಳಿಗೆ ನ್ಯಾಯಮಾಡಿದಂತೆ ಆಗುವದಿಲ್ಲವೆಂದೂ ಅಲ್ಲಿಯವರ ಅಭಿಪ್ರಾಯವಂತೆ.

ವಿದೇಶ.

ಲೇಬರ್ ಸರ್ಕಾರದವರು ಡಾಕ್ಟರ್ ಡ್ರಮಂಡ್ ಶೀಲ್ಸ್‌ರವರನ್ನು ಇಂಡಿಯಾದ ಅಂಡರ್ ಸೆಕ್ರೆಟರಿಯಾಗಿ ನೇಮಿಸಿರುವರು.

ಗ್ರೇಟ್ ಬ್ರಿಟನ್ ಮತ್ತು ಐರ್ಲೇಂಡಿನ ಈಗಿನ ಓಟರುಗಳ ಪಟ್ಟಿಯಲ್ಲಿ ಒಟ್ಟು 28,720,570 ಹೆಸರುಗಳಿರುವವು. ಇದರಲ್ಲಿ ಗಂಡಸರಿಗಿಂತಲೂ 1,528,388 ಸ್ತ್ರೀಯರುಗಳ ಹೆಸರು ಹೆಚ್ಚಾಗಿವೆ

"ದೇವರು ಇಲ್ಲ" ವೆಂಬವರ ಸಭೆಯೊಂದು ತಾ. 12 ರಲ್ಲಿ ಮಾಸ್ಕೊದಲ್ಲಿ ನಡೆಯಿತು. 800 ಪ್ರತಿನಿಧಿಗಳು ನೆರೆದಿದ್ದರು ದೇವರಿಲ್ಲನೆಂಬುವವರು ಈಗ ಬಹಳ ಕಡಿಮೆಯಾದರೂ ಬೇಗನೆ ದೇವರ ಮೇಲೆ ವಿಶ್ವಾಸವಿರುವವರ ಸಂಖ್ಯೆಯನ್ನು ಕಡಿಮೆಮಾಡುವೆವೆಂದು ಅವರು ಧೈರ್ಯದಿಂದ ನಿರ್ಧರಿಸಿರುವರಂತೆ!

ಲೇಬರ್ ಪಾರ್ಟಿಯವರು ಬ್ರಿಟನ್ನಿನ ಸರ್ಕಾರದ ಅಧಿಕಾರವನ್ನು ವಹಿಸಿಕೊಂಡಿರುವರು. ಮೆ. ರಾಮ್ಸೆ ಮೆಕ್ಡನಾಲ್ಡ್‌ರವರು ಪ್ರಧಾನ ಮಂತ್ರಿಯಾಗಿ ಮಂತ್ರಿ ಮಂಡಳಿಯನ್ನು ಏರ್ಪಡಿಸಿರುವರು. ಕ್ಯಾಪ್ಟನ್ ವೆಡ್ಜ್‌ವುಡ್ ಬೆನ್‌ರವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿರುವರು. ಇವರಿಗೆ ಇಂಡಿಯಾದ ವಿಷಯ ಹೆಚ್ಚಿನ ಮಾಹಿತಿ ಇಲ್ಲವೆಂದು ಸುದ್ದಿ. ಮಿಸ್ ಮಾರ್ಗರೆಟ್ ಬಾಂಡ್‌ಫೀಲ್ಡ್‌ರವರು ಲೇಬರ್ ಮಂತ್ರಿಯಾಗಿರುವರು. ಮಂತ್ರಿ ಪದವಿಗೆ ಸ್ತ್ರೀಯರನ್ನು ನೇಮಿಸಿದ್ದು ಇದೇ ಪ್ರಥಮ.

ಚೈನಾದ ರಾಷ್ಟ್ರೀಯ ಸರ್ಕಾರದ ಅಧ್ಯಕ್ಷರಾಗಿದ್ದ ಡಾಕ್ಟರ್ ಸನ್ ಯಾಟ್ ಸೆನ್‌ರವರು ಸ್ವರ್ಗಸ್ಥರಾದರು. ಇವರ ದಫನ ಮೆರವಣಿಗೆಯಲ್ಲಿ ಇಂಡಿಯಾದ ಪ್ರತಿನಿದಿಯಾಗಿ ಬರ್ಮಾದ ರೆವೆರೆಂಡ್ ಒಟ್ಟಾಮರವರು ಹೋಗಿರುವರು. ಅಲ್ಲದೆ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಪ್ರೆಸಿಡೆಂಟರು ಹಿಂದೂದೇಶದ ಪರವಾಗಿ ತಮ್ಮ ವ್ಯಸನವನ್ನು ತಂತೀ ಮೂಲಕ ಸೂಚಿಸಿದರು. ಇಂಡಿಯಾದ ಪರವಾಗಿ ರೆ. ಒಟ್ಟಾಮರವರನ್ನು ಕಳುಹಿಸಿದಕ್ಕೆ ದಫನಕಮಿಟಿಯವರು ನಾಂಕಿಂಗಿನಿಂದ ಕಾಂಗ್ರೆಸ್ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿರುವರು.

ಅಫ್ಘಾನಿಸ್ಥಾನದಲ್ಲಿ ಜನರಲ್ ನಾದಿ ಖಾನ್‌ರವರು ಬಕಾಯಿ ಸಾಕೋರವರ ಪರವಿರುವ ಪಂಗಡಗಳ ಮೇಲೆ ಯುದ್ಧಮಾಡುತ್ತಿರುವರು. ಕಾಬೂಲಿನಲ್ಲಿ 'ಜೇರ್ಗ' ಎಂಬ ಸಭೆ ನಡಿಸಿ ಅದರ ತೀರ್ಮಾನದಂತೆ ಅಫ್ಘಾನಿಸ್ಥಾನದ ಅರಸರನ್ನು ಆರಿಸುವ ಎಂದು ಬಕಾಯಿ ಸಾಕೋರವರು ಜನರಲ್ ನಾದಿರ್ ಖಾನ್‌ರವರಿಗೆ 2 ನೇ ಸಾರಿ ಹೇಳಿ ಕಳುಹಿಸಿದರಂತೆ. ಬಕಾರವರು ಸಿಂಹಾಸನವನ್ನು ಬಿಟ್ಟು ನಂತರ ಇಂಥಾ ಸಭೆಯನ್ನು ಕರೆಸಿ ತೀರ್ಮಾನಿಸಲು ತಾನು ಒಪ್ಪುವೆನೆಂದು ನಾದಿರ್‌ಖಾನರು ಉತ್ತರವನ್ನಿತ್ತಿರುವರೆಂದು ವರ್ತಮಾನ. ನಾದಿರ್‌ಖಾನರೂ, ಬಕಾಯಿಸಾಕೋರವರೂ ಏನೋ ಒಂದು ಒಪ್ಪಂದಕ್ಕೆ ಬಂದಿರುವರೆಂದು ಇತ್ತಳಾಗಿ ಸುದ್ದಿ.

Wanted.

Candidates for Wireless Telegraph and Station Master's Courses. Railway Fare PAID. Boarding arrangements. Prospectus on two anna stamps—

Royal Wireless & Telegraph College,

12—7 DELHI.

Wanted.

Branch Secretaries at Siddapur and Somvarpet on Rs. 50—5—75 plus consolidated (Office) allowance of Rs. 40/- per mensem. Selected candidates have to deposit Rs. 235/-. Very decent prospects for honest and influential gentlemen. Particulars on application.

Apply to.—

THE DIVISIONAL SECRETARY,
N. L. S. R. Bank Ltd.,
(Madras)
4—1 Puttur, South Kanara.

ಮಾರಾಟಕ್ಕಿದೆ.

ಕಾಫಿ ತೋಟವು ಮಾರಾಟಕ್ಕಿದೆ. ಕೊಂಡುಕೊಳ್ಳಬಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ವಿಳಾಸ—"ಯಂ.,"
C/o. ಎಡಿಟರ್,
"ಕೊಡಗು,"
2—2 ಮಡಿಕೇರಿ.

ಇನಾಮು!

1928 ನೇ ಇಸವಿ ಏಪ್ರಿಲ್ 20 ನೇ ತಾರೀಖಿನ (7 ನೇ ಸಂಪುಟದ 45 ನೇ ಸಂಚಿಕೆಯ) 'ಕೊಡಗು' ಪತ್ರಿಕೆಯ ಒಂದು ಪ್ರತಿಯು ಬೇಕಾಗಿದೆ. ಇದನ್ನು ನಮಗೆ ಮೊದಲು ಕಳುಹಿಸಿದವರಿಗೆ ಅರ್ಧ ವರ್ಷದ ಚಂದವೂ, 2 ನೇಯದಾಗಿ ಕಳುಹಿಸಿದವರಿಗೆ 3 ತಿಂಗಳ ಚಂದವೂ ಮಾಫಿಮಾಡಲ್ಪಡುವದು.

"ಎ"
C/o. ಮೇನೇಜರ್,
"ಕೊಡಗು" ಮಡಿಕೇರಿ.

ಪ್ರಕಟಣೆ.

ನನ್ನ ಬಾಬ್ತು ಎರಡು ವರ್ಷದ ಹೋರಿಗರು ಮೇಕೇರಿ ಗ್ರಾಮದಲ್ಲಿರುವ ನನ್ನ ಹೊಸ ವಾರಗಾರ ಮು ಚಂಗಪ್ಪನಲ್ಲಿ ಬಿಟ್ಟಿದ್ದೆನು ಈಗ್ಯೆ ಮೂರುವಾರದಿಂದ ಕಾಣದಾಗಿದೆ. ಇದರ ಚಹರೆ—ಸುಮಾರು 3½ ಅಡಿ ಎತ್ತರ, ಕಪ್ಪು ಬಣ್ಣ, ಕುತ್ತಿಗೆ ಮತ್ತು ಕೆಳಹೊಟ್ಟೆಯಲ್ಲಿ ಬಿಳುಪಾಗಿದೆ. ಕೊಂಬುಗಳು ಈಗ ಬರುವಂತಿವೆ. ಈ ಕರುವನ್ನು ಪತ್ತೆ ಮಾಡಿದವರಿಗೆ ಅಥವಾ ಇರುವ ಸ್ಥಳವನ್ನು ನನಗೆ ತಿಳಿಸಿದವರಿಗೆ ಎರಡು ರೂಪಾಯಿ ಬಹುಮಾನ ಕೊಡುತ್ತೇನೆ.

ಸಿ. ಅಚ್ಚುತರಾವ್,
ಸ್ಕೂಲ್ ಆಫೀಸು,
2—2 ಮಡಿಕೇರಿ.

ಸಬ್‌ಜಡ್ಜರೂ, ಲಾಯರುಗಳೂ.

(ಒಬ್ಬ ಬಾತ್ಮಿದಾರರಿಂದ)

ತಾ 10—6—29 ರಲ್ಲಿ ಸಬ್‌ಜಡ್ಜರಾಗಿದ್ದ ಮೆ. ಎ. ಬಿ ಕಾರ್ಯಪ್ಪ ಯಂ ಎ ಬಾರ್‌ಎಟ್‌ಲಾದವರು ಕೆಲಸದಿಂದ ನಿವೃತ್ತರಾಗಿ, ಹೊಸದಾಗಿ ನೇಮಕವಾದ ಮೆ. ಕೆ. ಬಿ ಪೋದಪ್ಪ ಬಿ. ಎ. ಬಿ ಎಲ್ ಹೈಕೋರ್ಟು ವಕೀಲರು ಕೆಲಸದ ಚಾರ್ಜು ತೆಗೆದುಕೊಂಡರು. ಇವರಿಬ್ಬರೂ ಕೋರ್ಟು ಕೊಠಡಿಯ ಪೀಠದಲ್ಲಿ ಕೂತಾಗ ಈ ಕೆಳಗಿನ ಭಾಷಣಗಳಾದವು.

ಲಾಯರುಗಳ ಪರವಾಗಿ ಮೆ. ಯಂ ಭುಜಂಗರಾಯರು ಹೇಳಿದ್ದೇನೆಂದರೆ—

ಮೆ ಕಾರ್ಯಪ್ಪನವರೇ, ತಮ್ಮನ್ನು ಅಗಲಲಿಕ್ಕೆ ಲಾಯರುಗಳಾದ ನಮಗೆ ವ್ಯಸನವಿದೆ. ತಾವು 1916 ರಲ್ಲೇ ಜಡ್ಜಿಯರಾಗಿ 13 ವರ್ಷಗಳ ವರೆಗೆ ನಮ್ಮ ಒಡನಾಡಿದಿರಿ. ಲಾಯರುಗಳೊಂದಿಗೆ ತಾವು ಗೌರವ ಭಾವದಿಂದಲೇ ವರ್ತಿಸಿದಿರಿ ತಮ್ಮೊಂದಿಗೆ ಲಾಯರುಗಳು ಒಬಟಾಗಿ ವರ್ತಿಸಿದ್ದು ಇಂಬಹುದು. ಅಂಥಾ ವರ್ತನೆಗಳನ್ನು ತಾವು ಸುಹೃದಯದಿಂದ ನೋಡುತ್ತಿದ್ದಿರಿ ಲಾಯರುಗಳು ತಮ್ಮೊಳಗೆ ಸಿಟ್ಟಿಗೆದ್ದಾಗ ತಾವು ಸುಲಭದಲ್ಲಿ ಸಮಾಧಾನಪಡಿಸುತ್ತಿದ್ದಿರಿ. ತಾವು ಲಾಯರುಗಳಾಗಿದ್ದುದ್ದರಿಂದ ಲಾಯರುಗಳಿಂದ ದೊರಕುವ ಸಹಾಯದ ಬೆಲೆ ತಮಗೆ ಗೊತ್ತಿದೆ ಫೈಸಲ್‌ಗಳನ್ನು ಕೊಡುವಾಗ ಎಲ್ಲರನ್ನೂ ತೃಪ್ತಿಗೊಳಿಸಲು ಸಾಧ್ಯವಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ತಮಗೆ ಯುಕ್ತಕಂಡಂತೆ ತಾವು ಫೈಸಲ್‌ಗಳನ್ನು ಕೊಡುತ್ತಿದ್ದಿರಿ. ನ್ಯಾಯದಂತೆಯೂ ಧರ್ಮದಂತೆಯೂ ತೀರ್ಮಾನಿಸಲು ತಾವು ಪ್ರಯತ್ನಿಸುತ್ತಿದ್ದಿರಿ. ಜನರ ಕಡೆಗೆ ತಾವು ಸಹಾನುಭೂತಿಯುಳ್ಳವರಾಗಿದ್ದಿರಿ. ಕೊಡಗಿನ ಒಂದು ಪ್ರಮುಖ ಕುಟುಂಬಕ್ಕೆ ಸೇರಿದವರಾಗಿದ್ದೀರಿ ತಮಗೆ ಸ್ವದೇಶ ಪ್ರೀತಿ ತುಂಬಾ ಇದೆ ಇನ್ನೂ ಪ್ರಾಯ ಹೆಚ್ಚಾಗಿಲ್ಲ ದೇಶಸೇವೆಮಾಡಲು ತಮಗೆ ದೀರ್ಘಾಯುವಿರಲಿ ಎಂತ ಹಾರೈಸುತ್ತೇವೆ ತಾವು ಇನ್ನು ಮೇಲೆ ಲಾಯರುಗಳಾಗಿ ಲಾಯರುಗಳ ಕೂಟವನ್ನು ಬಲಪಡಿಸಿದರೆ ಆಗಬಹುದೆಂತ ನನ್ನ ಸ್ವಂತ ಅಭಿಪ್ರಾಯವಾಗಿದೆ. ಮಧುರೆಯಲ್ಲಿ ಲಾಯರುಗಳಾಗಿದ್ದಾಗ ಅಲ್ಲಿನ ಸಮಾಜದಲ್ಲಿ ಪ್ರಮುಖರಾಗಿದ್ದಿರಿ. ಅದರಂತೆಯೇ ಇನ್ನು ಮೇಲೆ ಕೊಡಗಿನಲ್ಲಿಯೂ ಅದೇ ರೀತಿ ಸಮಾಜಕ್ಕೆ ಪ್ರಯೋಜನವಾಗುವ ಕೆಲಸಮಾಡುತ್ತಿರುವಿರಿ ಎಂತ ನಂಬುತ್ತೇವೆ ತಮಗೆ ದೀರ್ಘಾಯುಷ್ಯವಿರಲಿ ಎಂತ ಪ್ರಾರ್ಥಿಸುತ್ತೇವೆ.

ಮೆ ಪೋದಪ್ಪನವರೇ, ನಮ್ಮಲ್ಲೊಬ್ಬರಾಗಿದ್ದ ತಮ್ಮನ್ನು ಈ ಪದವಿಗೆ ಆರಿಸಿದ್ದಕ್ಕೆ ಸಂತೋಷಪಡುತ್ತೇವೆ ತಾವು ಈ ಪಾರ್ಟಿ ಅಥವಾ ಆ ಪಾರ್ಟಿಯ ಮುಖಂಡರಾಗಿದ್ದಿರಿ ಎಂತ ಪರೋಕ್ಷದಿಂದ (hearsay) ತಿಳಿದಿದ್ದೇನೆ. ಈಗ ಹೇಗೂ ತಾವು ರಾಜಕೀಯ ಚಳವಳವನ್ನು ಬಿಟ್ಟಿರುತ್ತೀರಿ. ಚಕ್ರವರ್ತಿಯವರ ನ್ಯಾಯತೀರ್ಪಿನ ಈ ಸ್ಥಾನದಲ್ಲಿ ಪಕ್ಷಪಾತವಿಲ್ಲದೆ, ಪಾರ್ಟಿ, ಜಾತಿ, ವ್ಯಕ್ತಿ ವ್ಯತ್ಯಾಸವಿಲ್ಲದೆ ನ್ಯಾಯತೀರ್ಪನ್ನು ಕೊಟ್ಟೀರಿ ಎಂಬುದರಲ್ಲಿ ನನಗೇನೂ ಸಂಶಯವಿಲ್ಲ ಮನುಷ್ಯನಿಗೆ ಹೆದರದೆ ದೇವರಿಗೆ ಮಾತ್ರ ಹೆದರಿ ವರ್ತಿಸುವಿರಿ ಎಂತ ನಂಬುತ್ತೇವೆ. ತಮ್ಮ ಮುಂದೆ ಒಂದ ಸಾಕ್ಷಿ ರುಜುವಾತಿನಂತೆಯೇ ಹೊರತು ಕೋರ್ಟು ಹೊರಗಾಗಲೀ ಒಳಗಾಗಲೀ ಕೇಳಬಹುದಾದ ಹೇಳಿಕೆ ಮಾತಿನಂತೆ ಫೈಸಲ್ ಮಾಡಲಾರಿರಿ ಎಂತ ಆಶಿಸುತ್ತೇವೆ. ತಮ್ಮ ಸ್ಥಾನದ ಕೆಲಸಗಳು ಜಯಪ್ರದವಾಗಲಿ ಎಂತ ಹಾರೈಸುತ್ತೇವೆ.

ಮೆ. ಎ ಬಿ. ಕಾರ್ಯಪ್ಪನವರ ಭಾಷಣ.

ಲಾಯರುಗಳಾದ ಮಹಾಶಯರೇ, ತಮ್ಮ ಟೀಕೆಗಳನ್ನು ನಾನು ಅಂಗೀಕರಿಸುತ್ತೇನೆ. ಸರಿಯಾದ ತೀರ್ಮಾನವನ್ನು ಕೊಡುವದು ಕಷ್ಟ. ನಾವು ಜಡ್ಜಿಗಳು ಪಾರ್ಟಿವ್ಯಕ್ತಿಗಳಾಗಬಾರದು. ಅವರವರ ಅಭಿಪ್ರಾಯಕ್ಕೆ ಒಳಗಾಗಬಾರದು ಮೆ. ಭುಜಂಗರಾಯರು ಹೇಳಿದಂತೆ ಮನಸ್ಸಾಕ್ಷಿಗೆ ಸರಿಯಾಗಿ ಕೆಲಸಮಾಡಬೇಕು. ಯುವಕ ಲಾಯರುಗಳು ಹದಮೀರುವದುಂಟು, ಜಡ್ಜಿಗಳು ಸಮಾಧಾನದಿಂದಿರಬೇಕು. ಲಾಯರುಗಳೆಲ್ಲರೂ ನನಗೆ ಸಹಾಯಕರಾಗಿದ್ದಿರಿ. ನನ್ನ ಕೆಲಸ ನಡಿಸುವದರಲ್ಲಿ ನನ್ನ ಮನಸ್ಸಾಕ್ಷಿಯನ್ನು ಮೆಚ್ಚಿಸಲು ಪ್ರಯತ್ನಿಸುತ್ತಿದ್ದೆ. ಕೊಡಗು ಲಾದ ಕೇಸುಗಳನ್ನು ತೀರ್ಮಾನ ಮಾಡುವ ಅವಕಾಶವಿತ್ತು. ಧರ್ಮದಂತೆ ವರ್ತಿಸಿರುತ್ತೇನೆ ನಿಮ್ಮ ವರ್ತನೆಗಳಲ್ಲಿ ಪ್ರಾಮಾಣಿಕರಾಗಿರಿ. ಹಣ ತಾನೇ ಬರುತ್ತದೆ. ಬೇರೆ ಪ್ರಾಂತ್ಯಗಳಲ್ಲಿ ಲಾಯರುಗಳ ಮೇಲೆ ತುಂಬಾ ಆಕ್ಷೇಪಣೆಗಳಿವೆ ನಮ್ಮ ದೇಶದಲ್ಲಿ ಅಂಥಾದ್ದಕ್ಕೆ ಅವಕಾಶವಿಲ್ಲ. ಯುವಕ ಲಾಯರುಗಳು ನ್ಯಾಯವಾದ ಅಭಿಪ್ರಾಯಗಳನ್ನು ಕೊಡುವರಾಗಿ ನಂಬುತ್ತೇನೆ ನೀವ್ ಹಿಡಿಯುವ ಕೇಸ್‌ಗಳನ್ನು ಆರಿಸುವದರಲ್ಲಿ ಜಾಗರೂಕರಾಗಿರಬೇಕು. ಹಳಬ ಲಾಯರುಗಳಿಂದ ಯುವಕ ಲಾಯರುಗಳು ಬುದ್ಧಿವಾದ ಕೇಳಬೇಕು ನನಗೆ ಕೋಪ ಬರುತ್ತಿರಲಿಲ್ಲ ನಿಮ್ಮೊಳಗೆ ಬಂದೊದಗುವ ಹೋರಾಟದಲ್ಲಿ ನಾನು ಹೇಗೆ ವರ್ತಿಸಬೇಕೆಂತ ನನಗೆ ಗೊತ್ತಿತ್ತು ನನ್ನ ಆರೋಗ್ಯ ಉತ್ತಮವಾದರೆ ಲಾಯರಾಗಬೇಕೆಂತ ಯೋಚನೆ ಇದೆ. ಇದರ ತತ್ಕಾಲ ಸಿಕಂದರಾಬಾದಿಗೆ ಹೋಗಬೇಕೆಂತ ಇದ್ದೇನೆ ಲಾಯರುಗಳಲ್ಲೊಬ್ಬರು ಆರಿಸಲ್ಪಟ್ಟದ್ದಕ್ಕೆ ಸಂತೋಷಪಡುತ್ತೇನೆ. ಈ ಹಕ್ಕನ್ನು ಕಳಕೊಳ್ಳಬೇಡಿ ನನ್ನ ಮೇಲೆ ಮಾಡಿದ ಉಪಚಾರದ ಭಾಷಣಕ್ಕೆ ವಂದಿಸುತ್ತೇನೆ

ಮೆ. ಪಿ. ಬಿ ಪೋದಪ್ಪನವರಂದದ್ದೇನೆಂದರೆ—ನಾನು ಇನ್ನೂ ಚಾರ್ಜು ತೆಗೆದುಕೊಂಡಿರುವದಿಲ್ಲವಾದ್ದರಿಂದ ಮೆ. ಕಾರ್ಯಪ್ಪನವರ ವಿಷಯದಲ್ಲಿ ಮೆ ಭುಜಂಗರಾಯರು ಹೇಳಿದ್ದನ್ನೆಲ್ಲಾ ಲಾಯರಾಗಿ ನಾನು ಮನಃಪೂರ್ತಿಯಾಗಿ ಒಪ್ಪುತ್ತೇನೆ ಅವರ ಸುಸ್ವಭಾವ ಮತ್ತು ಸ್ವದೇಶಪ್ರೀತಿಯು ಯಾವಾಗಲೂ ತೋರಿಬರುತ್ತಿತ್ತು ಅವರ ಮೇಲ್ಪಂಕ್ತಿಯನ್ನು ಅನುಸರಿಸಲು ಪ್ರಯತ್ನಿಸುತ್ತೇನೆ ಲಾಯರುಗಳ ಕೂಟದಿಂದ ಒಬ್ಬನನ್ನು ಈ ಕೇಸಕ್ಕೆ ಆರಿಸಿದ ವಿಷಯಕ್ಕೆ ಸೂಚಿಸಿದ ತೃಪ್ತಿಯಲ್ಲಿ ನಾನೂ ಭಾಗಿಯಾಗಿದ್ದೇನೆ ನನ್ನನ್ನಾರಿಸಿದರೆಂಬ ಕಾರಣದಿಂದ ಹೇಳುವದಲ್ಲ ಇದರಲ್ಲಿ ಇರುವ ತತ್ವವನ್ನು ಒಪ್ಪಬೇಕಾದದ್ದಾಗಿದೆ ಈ ತತ್ವವನ್ನನುಸರಿಸಿಯೇ ನನ್ನನ್ನು ಆರಿಸಿದ್ದೆಂತ ನಂಬುತ್ತೇನೆ ಬೇರೆಯವರ ಹೇಳಿಕೆ ಮೇರೆ ನಾನು ಪಾರ್ಟಿಮನುಷ್ಯನೆಂತ ಮೆ ಭುಜಂಗರಾಯರು ಹೇಳಿದರು. ಆಗಿರಬಹುದು. ಆದರೆ ನ್ಯಾಯತೀರ್ಪಿನ ಈ ಸ್ಥಾನದಲ್ಲಿ ಪಾರ್ಟಿ ಇಲ್ಲ ನ್ಯಾಯತೀರ್ಪಿನ ಅಧಿಕಾರಿಗಳು ಪಾರ್ಟಿ ವಹಿಸಬಾರದೆಂಬುದು ಎಲ್ಲರಿಗೂ ತಿಳಿದ ತತ್ವವಾಗಿದೆ. ಜಡ್ಜಿ ಮತ್ತು ಲಾಯರುಗಳೊಳಗೆ ಅನ್ಯೋನ್ಯತೆ ಇರಬೇಕು. ನನ್ನ ಕೆಲಸಗಳು ತೃಪ್ತಿಯಾಗಿ ನಡಿಯಲು ಸಾಧ್ಯವಾಗುವಂತೆ ಲಾಯರುಗಳಿಂದ ಸಂಪೂರ್ಣ ಸಹಕಾರವನ್ನು ನಿರೀಕ್ಷಿಸುತ್ತೇನೆ ನನಗೆ ಶುಭವನ್ನು ಬಯಸಿದ್ದಕ್ಕೆ ವಂದಿಸುತ್ತೇನೆ.

ರಾಷ್ಟ್ರೀಯಧ್ವಜದ ಅಪಮಾನವು.

ಹಿಂದೀಯರು ಯೋಗ್ಯ ಉತ್ತರವನ್ನು ಕೊಡುವರೋ?

(ಶ್ರೀ ಡಾ ನಾ ಸು ಹರ್ಡೀಕರ, ಕಾರ್ಯದರ್ಶಿ ಸೇವಾದಲ)

ತಾ ೨೬—೪—೨೯ನೆಯ ದಿವಸ ಸೈಮನ್ ಕೂಟದವರು ಲಂಡನಿಗೆ ತಿರುಗಿ ಹೋದಾಗ ಆ ಶಹರದಲ್ಲಿಯ ಪೋಲೀಸರು ಹಿಂದೀ ರಾಷ್ಟ್ರೀಯಧ್ವಜಕ್ಕೆ ಭಯಂಕರ ಅಪಮಾನವನ್ನು ಮಾಡಿದರು.

ಈ ತರಹದ ಅಪಮಾನವು ಅಮೇರಿಕೆಯ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್, ಫ್ರಾನ್ಸ್, ಇಟಲಿ ಅಥವಾ ಜಪಾನ್ ಮೊದಲಾದ ಸ್ವತಂತ್ರ ರಾಷ್ಟ್ರಗಳ ಧ್ವಜಕ್ಕೆ ಆಗಿದ್ದರೆ, ಕೂಡಲೇ ಆ [illegible] ಉತ್ತರವನ್ನು ಕೇಳುತ್ತಿದ್ದರು ಮತ್ತು ಉತ್ತರ [illegible] ಅಪಮಾನ ಮಾಡಿದ ರಾಷ್ಟ್ರದ ಕಡೆಯಿಂದ [illegible] ಅಪಮಾನವನ್ನು ಯೋಗ್ಯರೀತಿಯಿಂದ [illegible]ತ್ತಿದ್ದರು

ಈಗ ಹಿಂದೀ ರಾಷ್ಟ್ರಧ್ವಜಕ್ಕೆ ಅಪಮಾನವಾಗಿರುತ್ತದೆ

ಪರಾವಲಂಬಿಗಳೂ ಸಹಾಯವಿಹೀನರೂ ಆದ ಹಿಂದೀಯರು ಲಂಡನ್ ಪೋಲೀಸರ ಈ ದುಷ್ಕೃತ್ಯಕ್ಕೆ ಯಾವ ಯೋಗ್ಯ ಮತ್ತು ಪರಿಣಾಮಕಾರಕ ಉತ್ತರವನ್ನು ಕೊಡತಕ್ಕದ್ದು?

ಈ ವಿಷಯವಾಗಿ ಮೇ ತಿಂಗಳ 13ನೆಯ ತಾರೀಖಿಗೆ ಮುಂಬಯಿಯಲ್ಲಿ ಕೂಡಿದ ಅಖಿಲಭಾರತ ಸ್ವಯಂಸೇವಕ ಸಮಿತಿಯವರು ಈ ಕೆಳಗಿನ ಠರಾವುಗಳನ್ನು ಪಾಸು ಮಾಡಿರುತ್ತಾರೆ. "ತಮ್ಮ ರಾಷ್ಟ್ರೀಯ ಅಭಿಮಾನದ ದ್ಯೋತಕವಾದ" ಧ್ವಜಕ್ಕೆ ಯಾವದೇ ವ್ಯಕ್ತಿಯಿಂದಾಗಲೀ ಇಲ್ಲವೆ ದೇಶದಿಂದಾಗಲೀ ಅಪಮಾನವಾಗಬಾರದೆಂದು ಪ್ರತಿಯೊಬ್ಬ ಹಿಂದೀಯನು ಪೂರ್ಣ ಸ್ವಾತಂತ್ರ್ಯಕ್ಕಾಗಿ ತನ್ನಿಂದಾದಷ್ಟು ಪ್ರಯತ್ನ ಮಾಡತಕ್ಕದ್ದು.

"ಪ್ರತಿ ತಿಂಗಳಲ್ಲಿ ಧ್ವಜಾರೋಹಣವನ್ನು ಮಾಡಬೇಕೆಂಬ ದಲದ ಕಲ್ಕತ್ತಾ ಠರಾವನ್ನು ಪುನಃ ಸೂಚಿಸುವದಲ್ಲದೆ ಯಾವತ್ತೂ ಜನರು ಧ್ವಜವಂದನೆಯ ಸಮಾರಂಭವನ್ನು ಪ್ರತಿ ತಿಂಗಳ ಕೊನೆಯ ರವಿವಾರ ಮುಂಜಾನೆ ೮ ಗಂಟೆಗೆ ಸರಿಯಾಗಿ ತಪ್ಪದೆ ಜರುಗಿಸಬೇಕೆಂದು ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ.'

ನಾವೆಲ್ಲರೂ ಈ ಮೇಲಿನ ಠರಾವಿನಲ್ಲಿ ಸೂಚಿಸಿದಂತೆ ವರ್ತಿಸೋಣ

ಈ ಸಮಾರಂಭಗಳಾಗುವ ಸ್ಥಳಗಳ ಸಂಖ್ಯೆಯನ್ನು ಹೆಚ್ಚಿಸಿ ಹಿಂದೀಯರಿಗೆ ತಮ್ಮ ಧ್ವಜದ ಬಗ್ಗೆ ಇದ್ದ ಪೂಜ್ಯಭಾವನೆಯನ್ನೂ ಪ್ರೀತಿಯನ್ನೂ ಜಗತ್ತಿಗೆ ವ್ಯಕ್ತಮಾಡಿ ತೋರಿಸೋಣ

ದೇಶದ ಸಂದಿಗೊಂದಿಗಳಲ್ಲಿಯೂ ಕೂಡ ರಾಟಿಯಿಂದೊಡಗೂಡಿದ ಮೂರು ಬಣ್ಣದ ಈ ಧ್ವಜವು ಏರಿಸಲ್ಪಟ್ಟು ವಂದಿಸಲ್ಪಡಬೇಕು ಮತ್ತು ಪೂಜಿಸಲ್ಪಡಬೇಕು. ಪ್ರತಿಯೊಬ್ಬನು ತನ್ನ ಸರ್ವಸ್ವಕ್ಕಿಂತ ರಾಷ್ಟ್ರೀಯ ಧ್ವಜವು ಹೆಚ್ಚಿನದೆಂದು ತಿಳಿದು ಅದನ್ನು ಬೇಕಾದಂಥ ಕಠಿಣ ಪ್ರಸಂಗಗಳಲ್ಲಿ ಸಂರಕ್ಷಿಸಲು ಸಿದ್ಧನಿರಬೇಕು.

ಆ ಮೇಲೆ ಹಿಂದೀ ರಾಷ್ಟ್ರೀಯಧ್ವಜಕ್ಕೆ ಯಾರು ಅಪಮಾನಗೊಳಿಸುವ ಧೈರ್ಯ ಮಾಡುವರೋ ನೋಡೋಣ.

ಹುಬ್ಬಳ್ಳಿ,
ತಾ ೨೫—೫—೨೯

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ.]

ಕೊಡಗು ದೇಶದ ಹೀನಸ್ಥಿತಿಗೆ ಕಾರಣಗಳು.

ನಮ್ಮ ದೇಶದ ಆಧಿವಾರಾಯದಂತಿರುವ ವ್ಯವಸಾಯವು ಕಮ್ಮಿಯಾದುದರಿಂದ ನಾವು ಕ್ರಮಕ್ರಮವಾಗಿ ಹೀನಸ್ಥಿತಿಗೆ ಬರುತ್ತಿರುವೆವು. ಕೊಡಗಿನ ವ್ಯವಸಾಯಕ್ಕೆ ಮುಖ್ಯ ಅಡಚಣೆಯಾಗಿರುವುದು ಲಂತಾನವು. ಇದು ದೇಶದ ಫಲವತ್ತಾದ ಜಮೀನು ಅಥವ ಬಂಜರು ಜಮೀನು ಎಂಬ ಭೇದವಿಲ್ಲದೆ ಪ್ರತಿ ಸ್ಥಳವನ್ನು ಆಕ್ರಮಿಸಿಕೊಂಡು ಬಂದಿರುವದು ದೇಶದ ಮುಕ್ಕಾಲುಪಾಲು ಸ್ಥಳವನ್ನು ಇದು ಈಗಾಗಲೇ ಆಕ್ರಮಿಸಿಕೊಂಡಿರುವದೆಂದು ನಾವು ಭಯವಿಲ್ಲದೆ ಹೇಳಬಹುದು. ಬಾಕಿ ಉಳಿದ ಕಾಲುಪಾಲು ಸ್ಥಳದಲ್ಲಿ ಬೆಳೆಸಿದ ಬೆಳೆಯಲ್ಲಿ ನಮ್ಮ ಜೀವನ ಮತ್ತು ಕಂದಾಯ ಕಾಣಿಕೆ ಮೊದಲಾದ ತೆರಿಗಗಳನ್ನು ಕೊಡುವದಕ್ಕೆ ಸಾಕಾಗುವದಿಲ್ಲ ಈ ಕಾರಣದಿಂದ ಐಶ್ವರ್ಯವಂತರಿಂದ ಹೆಚ್ಚಿನ ಬಡ್ಡಿ ತೆರಬೇಕಾದ ಸಾಲವನ್ನು ಹೊಂದಬೇಕಾಗುವದು. ಹೀಗೆ ಸಾಲ ಹೊಂದುತ್ತಾ ಬರುವುದರಿಂದ ಅನೇಕರು ಒಂದು ಸಮಯದಲ್ಲಿ ಜಮಾಲೀಕರೆನ್ನಿಸಿಕೊಂಡಿದ್ದವರು ಈಗಲೀಗ ಐಶ್ವರ್ಯವಂತರಗ ಲಾಮರಾಗಿ ಹೋಗಿರುತ್ತಾರೆ ಈ ಲಂತಾನದ ದೆಸೆಯಿಂದ ದನಕರುಗಳಿಗೆ ನ್ಯಾಯವಾದ ಮೇವು ಸಿಕ್ಕದೆ ಅನೇಕ ತರದ ಕಾಯಿಲೆಕಸಲಗಳು ತುಂಬಿಕೊಂಡು ಪ್ರತಿವರ್ಷವು ಎಷ್ಟೋ ನಡೆ ದನಗಳು ಸಾಯುತ್ತಿರುವವು. ಹೀಗಾಗಿ ಈ ಮೇಲೆ ಹೇಳಿದ ಕಾಲುಪಾಲು ಭಾಗದಲ್ಲಿ ನ್ಯಾಯವಾದ ಬೆಳೆಯನ್ನು ಹೊಂದುವದು ಬಹಳ ಕಷ್ಟವಾಗಿರುವದು ಲಂತಾ ತುಂಬಿಕೊಂಡದ್ದರಿಂದ ದೇಶದಲ್ಲಿ ಮಲೇರಿಯವು ಬಹಳ ಹೆಚ್ಚಾಗಿ ಹೋಗಿ ಜನಗಳ ಆರೋಗ್ಯವೇ ಅಲ್ಲದೆ ಜನಸಂಖ್ಯೆ ಸಹ ಕಡಿಮೆಯಾಗುತ್ತಾ ಬರುತ್ತಿರುವುದು ಭೂಮಿಯ ಪಾರ್ಶ್ವಗಳಲ್ಲಿ ಲಂತಾನ ತುಂಬಿಕೊಂಡದರಿಂದ ಬೆಳೆಗಳನ್ನು ನಾಶಮಾಡುವ ಕಾಡು ಮೃಗಗಳಿಗೆ ಅಡಗಿಕೊಳ್ಳಲಿಕ್ಕೆ ಬಹಳ ಅನುಕೂಲವಾಗಿರುವದು ಹೀಗೆ ಲಂತಾನ ತುಂಬಿಕೊಂಡಿರುವ ಸ್ಥಳಗಳ ಅಜುಬಾಜುಗಳಲ್ಲಿರುವ ಎಷ್ಟೋ ಹೊಲಗದ್ದೆಗಳು ಜನರಿಗೆ ವಾಸಕ್ಕೆ ಯೋಗ್ಯವಲ್ಲದೆಯೂ ಮತ್ತು ಈ ಕಾಡುಮೃಗಗಳ ಕಾಟದಿಂದಲೂ ಪಾಳು ಬಿದ್ದುಹೋಗಿರುವದು ಲಂತಾನ ಬೆಳೆದ ಪ್ರದೇಶಗಳಲ್ಲಿ ಒಳ್ಳೆ ಜಾತಿ ಮರಗಳು ಸಹ ಬೆಳೆಯುವದಿಲ್ಲ. ಇದರ ದೆಸೆಯಿಂದ ಕೊಡಗಿನ ಎಷ್ಟೋ ಸ್ಥಳಗಳಲ್ಲಿ ಜನರು ತಮ್ಮ ಸ್ವಂತ ಮನೆಮಾರುಗಳನ್ನು ಕಟ್ಟುತ್ತ ಮರಮಟ್ಟುಗಳನ್ನು ಕ್ರಯಕ್ಕೆ ಕೊಂಡುಕೊಳ್ಳುತ್ತಿರುತ್ತಾರೆ. ಇಷ್ಟೇ ಅಲ್ಲದೆ, ಸೌದೆಗೆ ಮರಗಳಿಲ್ಲದೆ ಇದನ್ನು ಸಹ ಕ್ರಯಕ್ಕೆ ತೆಗೆದುಕೊಳ್ಳುವವರು ಎಷ್ಟೋ ಜನರಿರುತ್ತಾರೆ. ಇಷ್ಟೆಲ್ಲಾ ನಾಶವು ಈ ಲಂತಾನದ ದೆಸೆಯಿಂದಲೇ ಆಗಿರುವದೆಂದು ಎಲ್ಲರಿಗೂ ತಿಳಿಯಬಹುದಾದ ಸಂಗತಿಯಾಗಿರುವದು ಸರಕಾರದ ಮುಖ್ಯ ಉತ್ಪತ್ತಿಗಳಲ್ಲಿ ಒಂದಾದ ಪಾರೆಷ್ಟು ಉತ್ಪತ್ತಿಯು ಸಹ ಕ್ರಮೇಣ ಬಹಳ ಕಮ್ಮಿಯಾಗುವದೆಂಬುವದನ್ನು ನಾವು ಮರೆಯಬಾರದು

ನಮ್ಮ ಸರಕಾರದವರು ಪ್ರಜೆಗಳ ಕ್ಷೇಮಕ್ಕಾಗಿ ಎಷ್ಟೋ ಕೆಲಸಗಳನ್ನು ಆಗಿಂದಾಗ್ಗೆ ನಡಿಸುತ್ತಾ ಬರುತ್ತಿರುವರು. ಅದೇ ರೀತಿಯಲ್ಲಿ ಈ ನಮ್ಮ ಚಿಕ್ಕ ದೇಶವಾದ ಕೊಡಗು ದೇಶದ ಪ್ರಜೆಗಳ ಆರೋಗ್ಯವನ್ನು ಮತ್ತು ಐಶ್ವರ್ಯವನ್ನು ತಡೆಮಾಡುತ್ತಿರುವ ಈ ಲಂತಾನವನ್ನು ಪೂರ್ತಿಯಾಗಿ ನಾಶಮಾಡುವ ಕೆಲಸವನ್ನು ಕೈಕೊಂಡರೆ ನಾವು ನಮ್ಮ ಸರಕಾರವನ್ನು ಯಾವಾಗಲೂ ವಂದಿಸದೆ ಇರಲಾರೆವು.

ಕಲವು ವರ್ಷಗಳ ಹಿಂದೆ ಈ ಲಂತಾನದ ಕಾಟವನ್ನು ತಡೆಯಲಾರದೆ ಇದನ್ನು ರೈತರಿಂದ ತೆಗೆಸಬೇಕೆಂದು ಎಷ್ಟೋ ತರದ ಪ್ರಯತ್ನಗಳನ್ನು ಮಾಡಿದರು. ಆದರೆ ಅಂಥಾ ಪ್ರಯತ್ನಗಳು ಕೊನೆಗಂಡ ಬಂದಿರುವದಿಲ್ಲ ಬಡ ರೈತರ ಆರೋಗ್ಯವೂ ಐಶ್ವರ್ಯವೂ ಸರಕಾರದ ಉನ್ನತ ಸ್ಥಿತಿಗೆ ಮುಖ್ಯ ಕಾರಣವೆಂಬುದನ್ನು ವ್ಯಕ್ತಗೊಳಿಸಬೇಕಾದು ಸರಕಾರದ ಉತ್ಪತ್ತಿಯ ಕಲವು ಭಾಗವನ್ನು ಈ ಹಾಳು ಲಂತಾನವನ್ನು ನಾಶಮಾಡುವ ಕೆಲಸಕ್ಕೆ ಉಪಯೋಗಿಸಬೇಕಾಗುವದು ಹೀಗೆ ಮಾಡಿದರೆ ಎಂಟು ವರ್ಷಗಳಲ್ಲಿ ಈ ಲಂತಾನವನ್ನು ಪೂರ್ತಿಯಾಗಿ ನಾಶಪಡಿಸಬಹುದು. ಇದಕ್ಕೆ ವೆಚ್ಚಮಾಡಿದ ಹಣವು ಸರಕಾರಕ್ಕೆ ಪ್ರತಿಯಾಗಿ ಬರಲಿಕ್ಕೆ ಲಂತಾನ ತೆಗೆದ ಸ್ಥಳಗಳಲ್ಲಿ ಹೊಸ ಬೆಳೆಗಳನ್ನು ನವೀನ ತರದ ವ್ಯವಸಾಯ ಕ್ರಮದಲ್ಲಿ ಬೆಳೆಸುವಂತೆ ರೈತರಿಗೆ ಸಹಾಯಮಾಡಬೇಕು. ಇಲ್ಲವೆ ಬೇರೆ ಯಾವುದಾದರು ರೀತಿಯಲ್ಲಿ ದ್ರವ್ಯ ಒದಗಿಸಿಕೊಂಡು ಇದನ್ನು ಸರಕಾರದವರೇ ನಾಶಮಾಡಬೇಕಲ್ಲದೆ ರೈತರಿಂದ ನಾಶಪಡಿಸುವದು ಬಹಳ ಕಷ್ಟವಾಗಿರುವದು.

"ಈಸ್ಟ್ ಆಫ್ರಿಕದಲ್ಲಿರುವ ಕೊಡಗ."

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ

ಮಾತ್ರೆಗಳು.

ಧಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನರಹಿತವಾದುದು. ಒಂದು ಡಬ್ಬಿಯ ಕ್ರಯ ೧-೦-೦

52—43 **ಮದನಮಂಜರಿ ಫಾರ್ಮಸಿ,**
1/94 **ಚೀನಾ ಬಜಾರ್, ಮದ್ರಾಸ್.**

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಎಂಬುದೇ

ಎಲ್ಲಾ ಬೆಳೆಗಳಿಗೂ ಯೋಗ್ಯವಾದ ಸಾರಜನಕ ಗೊಬ್ಬರವು, ಪ್ರಪಂಚದಲ್ಲೆಲ್ಲಾ ಇದೇ ಸಸ್ಯಾದಿಗಳನ್ನು ಒಳ್ಳೇಯದಾಗಿ ಬೆಳೆಸುವ ಮತ್ತು ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಫಸಲನ್ನು ಕೊಡುವ ಸಾಧನವೆಂದು ಖ್ಯಾತಿಯನ್ನು ಪಡೆದಿರುತ್ತದೆ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಗಿಡಗಳ ಬೇರುಗಳನ್ನು ಹೆಚ್ಚು ಆಳದ ವರೆಗೂ ಪಸರಿಸುವಂತೆ ಮಾಡುವದರಿಂದ ಮಳೆ ಕಡಿಮೆಯಾದಾಗ್ಯೂ ಗಿಡಗಳಿಗೆ ಹೆಚ್ಚಿನ ತೊಂದರೆಯಾಗಲಾರದು.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗಗಳಿಗೆ ಥಕ್ಕನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಆಫ್ ಸೋಡಾದಲ್ಲಿ ಬೆಳೆಗಳನ್ನೂ ಮಣ್ಣನ್ನೂ ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಎಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪ್ಯಾರಿ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಿನ ಚೀಲ 1ರ ರೂಪಾಯಿ 6—8—0ರಂತೆ ಮನಗಿಸಿ ಕೊಡುವದಲ್ಲದೆ, ಮಡಿಕೇರಿ, ವೀರರಾಜಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 7—8—0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದರ್ಮಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ. 469, ಕಲ್ಕತ್ತಾ.

(2) ಮಿಸ್ಟರ್ ಯಂ. ಯಂ. ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24—4

ಹೊಸ ಪುಸ್ತಕ ಕ್ರಯ ೧-೦-೦

ಮೊದಲನೆಯ ಮುದ್ರಣ ;

ಸ್ತ್ರೀಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲೀಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ಮಾನವ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಇದೆ. ಕ್ರಯ ಪುಸ್ತಕ ೧ಕ್ಕೆ ರೂ. ೧-೦-೦.

ಎಸ್. ವಿ. ಗೋಪಾಲ್ ಬುಕ್ ಡಿಪೋ,
52—25 **37. ತಿರುಪಳ್ಳಿಬೀದಿ, ಮದರಾಸ್.**

Arms, Ammunition and Shooting Requisites !!!



Current Illustrated Catalogue Free on Application !

D. B. B. L. Rifles	Rs.	120	to Rs	2750.
S. B. B. L.	"	35	to "	950.
D. B. B. L. Guns	"	50	to "	1350.
S. B. B. L.	"	35	to "	275.
D. B. M. L.	"	45	to "	135.
S. B. M. L.	"	30	to "	80.
B. L. Revolvers	"	35	to "	350.
Automatic Pistols	"	30	to "	150.

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—14 **210 Abdul Rehman Street, BOMBAY.**

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

1. 'ದಿಲ್ ಬಹರ್ ಪ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ 1ಕ್ಕೆ	50	8	0
2. "ಸಿದ್ದಪ್ಪಾಸ್ ಪ್ಲ್ಯೂಟ್" " "	42	8	0
3. ಶಕುಂತಲಾ " " "	40	0	0
4. ಮೋಹನ್ " " "	37	8	0
5. ಮೋಸ್ಲೇಂ " " "	35	0	0
6. ಮಹಾರಾಜಾ " " "	32	8	0
7. ಕೊಹಿನೂರು " " "	29	8	0
8. ಬ್ಯೂಟಿಫುಲ್ " " "	27	8	0
9. ಬಿಜಲೀ " " "	25	0	0
10. "ದಿಲ್‌ಬಹರ್ ಪ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1ಕ್ಕೆ	85	0	0
11. ಸ್ಪೆಷಲ್ " " "	56	0	0
12. ಮೋಹನ್ " " "	50	8	0

14 ಕ್ಯಾರೆಟ್ ಬಂಗಾರದ ನಿಬ್ಬುಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟನ್ ಪೆನ್‌ಗಳು.

ವರ್ಲ್ಡ್ ವಂಡರ್ ಫೌಂಟನ್ ಪೆನ್ 1ಕ್ಕೆ	3	0	0
" ಬಿಗ್‌ಬ್ಯಾರಲ್ " "	3	2	0
" ಸ್ಕ್ರೂಕ್ಯಾಪ್ " "	3	8	0
" ಮೊಟಲ್ ಕಲರ್ " "	3	14	0
" ಮೊಟಲ್ ಸ್ಕ್ರೂಕ್ಯಾಪ್ " "	4	4	0
" ಬ್ಲ್ಯಾಕ್‌ಕಲರ್ ಸೆಲ್ಫ್‌ಫಿಲಿಂಗ್ ಪೆನ್ "	5	8	0
" ಸೇಫ್ಟಿ ಪೆನ್ " "	6	8	0
" ಲೇಡೀಸ್ ಸೈಜಿನ ಮೊಟಲ್ ಕಲರ್ ಪೆನ್ "	4	8	0
ಬ್ಲ್ಯಾಕ್‌ಬರ್ಡ್ ಪೆನ್ 1ಕ್ಕೆ 3 8 0 ಮತ್ತು	3	12	0
ಸ್ವಾನ್ ಪೆನ್ " 6 8 0 "	7	0	0
ವಾಟರ್‌ಮೆನ್ ಐಡಿಯಲ್ 1ಕ್ಕೆ 8 0 0 "	8	8	0
" ಸೆಲ್ಫ್ ಫಿಲ್ಲಿಂಗ್ ಯಾ ಸೇಫ್ಟಿ ಪೆನ್ 1ಕ್ಕೆ	12	0	0
ಬಿಗ್‌ಬ್ಯಾರಲ್ ಹಾರ್ಡ್ ವೇರ್ " "	8	0	0
" ನೆವ್ಹ್ಯಾನ್ಸ್ ಪೆನ್ 1ಕ್ಕೆ	17	0	0

ಖಾತ್ರಿಯೂ ಬಂದೋಬಸ್ತೂ ಆದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು 1ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಅಲಾರಂ ಟೈಂಪೀಸು "	3	12	0
ಅನ್‌ಸೋನಿಯಾ 'ದಿ' ಟೈಂಪೀಸು "	5	13	0
" ಅಲಾರಂ " "	5	6	0
ಬಿಗ್‌ಬೆನ್ " " "	9	6	0
" ಡಿಲ್ಯುಕ್ಸ್ ಸ್ಟಾಂಡಿರುವ ಅಲಾರಂ ಟೈಂಪೀಸು "	13	5	0
ಘಂಟೆ ತೋರಿಸಿ ಅಲಾರಂ ಭಾರಿಸುವ ಕ್ಯಾರೇಜ್ ಕ್ಲಾಕ್ "	7	2	0
" ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1ಕ್ಕೆ	8	10	0
" ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಭಾರಿಸುವ ಕ್ಯಾರೇಜ್ ಕ್ಲಾಕ್ 1ಕ್ಕೆ	9	12	0
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಕರ್ಣಾನಂದವಾಗುವಂತೆ ಗಾನವಾಡುವ ಕ್ಯಾರೇಜು ಕ್ಲಾಕ್ 1ಕ್ಕೆ	12	0	0

ಅಪೇಕ್ಷಿಸುವವರಿಗೆ ಪತ್ರಿಕೆ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—5

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಷೇರ್ ಬಂಡವಾಳ	—	50,000
ವಸೂಲಾದ ಷೇರ್ ಮೊಬಲಗು	—	19,240
ಜನರಿಂದ ಠೇವಣಾತಿ	—	1,93,670

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ದರ್ಖಾಸ್ತಿನಂದಾವರ್ಗ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧಿಸುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೋಣಂಡ ಅಪ್ಪಯ್ಯನವರು, ಕೊಂಗಂಡ [illegible] ಅಪ್ಪಯ್ಯ
ರಾವ್ ಬಹದ್ದೂರ್. ನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—5—1929.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು, ಮತ್ತು—ಮೆ. ಪೇರಿಯಂಡ ಪೂವಯ್ಯನವರು.
ಸುರ್ಲಬ್ಬಿನಾಡು—ಮೆ. ಶೀತಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಸಪೇರಿರ ಸಂಜಪ್ಪನವರು, ಮತ್ತು ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಮೂರ್ನಾಡು—ಮಡಿಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಶಾಂತಳ್ಳಿ—ಮೆ. ಟಿ. ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ. ಐಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ಕುದಿಕೇರಿ & ತಿತಿಮತಿ—ಮೆ. ಜಿ. ಮಾದಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವೀರಾಜಪೇಟೆ ಬಜಾರ್ ಸ್ಟೋರಿನಲ್ಲಿಯೂ ದೊರಕುತ್ತವೆ. ಮೇನೇಜರ್,
"ಕೊಡಗು" ಮಡಿಕೇರಿ.



12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART.
321 Abdul Rehman Street.
39-39 BOMBAY. 3

ಕಟ್ಟೋಕಷಾಯ ಮಲೇರಿಯ:—ಇದು ಇಂಗ್ಲೀಷ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗೆಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14.

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಸುಣ್ಣ ಹೋಗುವುದು, ಆಗಾಗ್ಯೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲು 1, 3, 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ:— ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹೊಟ್ಟು, ಕಣ್ಣಿನಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ಜಡ್ಡು ಬಾಧಿಸುವುದು, ತಲೆ ಶಕ್ತಿ ಕುಂದಿಹೋಗುವುದು. ಇವುಗಳಿಗೆಲ್ಲಾ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ನರೆ[illegible] ಕೂದಲನ್ನು ಕಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0.
ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ:—ಮನೋಲ್ಲಾಸಿನಿ ಕಂಪೆನಿ.
52—35 9. ಮಂಗಳೂರು.

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವೈನಾಟದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ	1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ	—ರೂ. 25.
ಹೆಚ್ಚಾಗಿ ಸಿಕ್ಕಿರುವ ಬೋನಸು	1000 ,, ಎಂಡೋಮೆಂಟ್ ,, ,,	—ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.
ಪುನಃ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು
ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಓರಿಯಂಟಲ್ ಬಿಲ್ಡಿಂಗ್ಸ್, ನಂ. 1. ಸೌತ್ ಪರೇಡ್, ಬೆಂಗಳೂರು. { 52—24 ಯಲ್. ಆರ್. ಕೃಷ್ಣಸಾಮ್ಯಯ್ಯರ್. ಬ್ರಾಂಚ್ ಸೆಕ್ರೆಟರಿ.

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.





ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮೊಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ 8 ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರಮುಖೇನ ಬರೆದು ಈಗಲೇ ತಿಳಿಯಬಹುದು

24—4

EMPIRE OF INDIA
LIFE ASSURANCE COMPANY, LIMITED.

(Established 1897.)

(For the year ending 28th February 1929).

New business exceeds	..	Rs.	1,27,00,000
Income exceeds	....	Rs.	58,00,000
Assets exceeds	....	Rs	3,34,00,000

Wanted:—Agents at Mercara, Somwarpet and Siddapur.

HEAD OFFICE. BRANCH OFFICE.
Empire of India Life Building, 152, Commercial Street,
BOMBAY. 24—2 BANGALORE.

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩–೮–೦.

ಸಂಪಾದಕ–ಹೊಸ್ಕೆರೆ ...

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಮಡಿಕೇರಿ, ಸಾ ೧೯೨೯ನೇ ಇಸವಿ ಜೂನ್ ತಾರೀಖು ೨೧ನೇ ಶುಕ್ರವಾರ [ಸಂಚಿಕೆ ೩

Post Box 423,
TRIPLICANE, MADRAS.

MANUFACTURES AND DEALS IN ALL:—

(1) Gemset Jewels, gold and silver articles of all patterns
(2) Race Cups, Caskets, Medals, etc, for presentation purposes
(3) Trovels, Keys, Locks etc., for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

Catalogue Free to Bona fide Enquirers

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro plating, gilding and nickel-ling
(3) Binguy old jewellery, or under taking to effect sale

V. SUBRAMANIA IYER
JEWELLER

Telephone — 3145

Telegrams — "PRECIOUS"

Gold-smith, Silver smith, & Dealer in all Gemset Jewels.

52–40

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ
ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ
ರತನ್ ಮಿಶ್ರಿ ಹಲ್ವಾ
ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು ನೀರಾಗಿರುವಿಕೆ ಆಗಾಗ್ಗೆ ಸ್ವಪ್ನದಲ್ಲಿ ಸ್ಖಲನೆಯಾಗುವಿಕೆ, ಅತಿ ಸ್ವೇಚ್ಛಾ ಪ್ರವರ್ತನೆಯಿಂದಲೂ, ಬಾಲ್ಯದ ದುರಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ಶೀಘ್ರ ಸ್ಖಲನೆಯಾಗುವಿಕೆ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಯುವಿಕೆ, ಚಿರಕಾಲದ ಮೇಹ ವ್ಯಾಧಿಯಿಂದ ಶರೀರವು ಸೊರಗಿ ಹೋಗುವಿಕೆ, ನೇತ್ರರೋಗ, ಚರ್ಮವ್ಯಾಧಿ, ಉಷ್ಣವಾಯು ಸಂಬಂಧರೋಗ, ಎದೆ ಕಳೆ ಮೋಹಪಸಿ, ಅಜೀರ್ಣ, ಕೆಮ್ಮು ಈ ವಿಧವಾದ ನಾನಾ ರೋಗಗಳನ್ನು ಗುಣಪಡಿಸಿ ಧಾತುಪುಷ್ಟಿ, ಶರೀರ ಪುಷ್ಟಿಯನ್ನುಂಟುಮಾಡುವುದು ಹೆಂಗಸರು ಸೇವಿಸಿದಲ್ಲಿ ಉಷ್ಣಗರ್ಭಕಾರಕ ವ್ಯಾಧಿಗಳೆಲ್ಲಾ ನೀಗುವವು ಸಂಪೂರ್ಣ ಗುಣ ಉಂಟಾಗಲು ೨–೩ ಡಬ್ಬಿಗಳನ್ನು ಉಪಯೋಗಿಸಬೇಕು.

ಕ್ರಯ —೧ ಪೌಂಡು ಟಿನ್ ೧ಕ್ಕೆ ರೂ ೫—೦—೦, ಅರ್ಧ ಪೌಂಡು ಟಿನ್ ೧ಕ್ಕೆ ರೂ. ೩—೮—೦.
ಚಿಕ್ಕಪೇಟೆ, ವಿದ್ಯಾವಿಲಾಸ ಬುಕ್ಕು ಡಿಪೋವಿನಲ್ಲೂ ಮಾರಲ್ಪಡುತ್ತೆ.

52—26. ವ್ಯವಸ್ಥಾಪಕರು— ರತನ್ ಮಿಶ್ರಿ ಡಿಪೊ. (ಆಂಜನೇಯ ಜ್ಯೋತಿಷಾಲಯ,)
ಚಾಮುಂಡೇಶ್ವರಿಗುಡಿ ಬೀದಿ, ಬೆಂಗಳೂರು ಸಿಟಿ.

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

ಅಪೂರ್ವ ಸಂದರ್ಭ.
ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ.

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

ಕಾಮ ಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ —

ಆತಂಕನಿಗ್ರಹ ಔಷಧಾಲಯ,
52—46 ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೇಷ್ಠವಾದ 5 ಕುಟುಂಬ ಔಷಧಗಳು.
ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ. 10 — ಅಸಲ್ ಗೋರೋಜನ ತೊಲ 1ಕ್ಕೆ ರೂ 12.
ಕೇಸರಿ ಅಥವಾ ಕುಂಕುಮಪುಷ್ಪ ತೊಲ 1ಕ್ಕೆ ರೂ 3½ — ಪಚ್ಚ ಕರ್ಪೂರ ತೊಲ 1ಕ್ಕೆ ರೂ 2¼.
ಕಾಬೂಲ ಇಂಗು ತೊಲ 10 ಕ್ಕೆ ರೂ. 1.

ಶ್ರೇಷ್ಠವಾದ 108 ಮಣಿವುಳ್ಳ ರುದ್ರಾಕ್ಷಿ ಜಪ ಮಾಲೆ 1ಕ್ಕೆ ಆಣೆ 6 8 12, ರೂ 1, 2, 5, 10 ರ ವರೆಗೆ
32 ಮಣಿವುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ. 1, 2, 3, 4, 5, 8, 10 ರ ವರೆಗೆ.
ಮತ್ತು ಎಲ್ಲಾ ವಿಧವಾದ ರೇಶ್ಮೆ ಜರಿ ಸೀರೆಗಳು, ಕಣಗಳು, ಮುಗುಟ ವಗೈರಾದಿ ಎಲ್ಲಾ ಸರಕುಗಳು ದೊರೆಯುತ್ತೆ. ಸಾವಕಾಶ ಮಾಡದೆ ಈ ಕೆಳಗಿನ ಅಡ್ರಸ್ಸಿಗೆ ಆರ್ಡರು ಕೊಡಿರಿ ಸರಕುಗಳು ಸುಲಭ ಕ್ರಯಕ್ಕೆ ದೊರೆಯುತ್ತೆ.

ಅಡ್ರಸ್—
ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್," ಶ್ರೀಕಾಶಿ.

BHARADWAJ & CO.,
"SILK HOME,"
Benares City.

52—43

ಏಕೆ ನರಳುತ್ತೀರಿ?
ಕ್ರಯವು ಅಂಚೆಹಾಸಲು.
ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—44 ಮದನಮಂಜರಿ ಫಾರ್ಮಸಿ,
1/94 ಬ್ರಿನ ಬಜಾರು ರೋಡು ಮದ್ರಾಸು

ಕೊಡಗು.

ಸನ್ ೧೯೨೯ನೇ ಇಸವಿ

ಜೂನ್ ತಾ ೨೧ ನೇ ಶುಕ್ರವಾರ.

ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು.

ಈ ತಾ. 7ರಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಸ್ವಲ್ಪ ವಿಶೇಷವಾದದ್ದೆಂದೇ ಹೇಳಬೇಕು. ಇದರಲ್ಲಿ ನಡೆದ ಚರ್ಚೆಗಳನ್ನು ಮತ್ತು ತೀರ್ಮಾನಗಳನ್ನು ಕುರಿತು ದೇಶದವರು ಸ್ವಲ್ಪ ಯೋಚಿಸುವುದು ಅವಶ್ಯವಿದೆ.

ಬೋರ್ಡಿನ ವಿದ್ಯಾ ಕಮಿಟಿಯ ವರದಿಯು ಚರ್ಚೆಗೆ ಬಂದ ಮುಖ್ಯ ವಿಷಯವಾಗಿದೆ. ಗ್ರಾಮಾಂತರಗಳಲ್ಲಿ ಪ್ರಾಥಮಿಕ ವಿದ್ಯಾಭಿವೃದ್ಧಿಯನ್ನು ಕುರಿತು ವಿಚಾರಿಸಿ ಸಲಹೆಗಳನ್ನು ಕೊಡಲು ಬೋರ್ಡಿನವರು ಕಳೆದ ವರ್ಷ ಒಂದು ಕಮಿಟಿಯನ್ನು ನೇಮಿಸಿದ್ದರೆಂದು ತಿಳಿಯುತ್ತೇವೆ. ಈ ಕಮಿಟಿಯ ಮೆಂಬರುಗಳಾಗಿ ಬೋರ್ಡಿನ ವೈಸ್‌ಪ್ರೆಸಿಡೆಂಟರೂ, ಶಾಲಾ ಡೆಪ್ಯುಟಿ ಅಸಿಸ್ಟೆಂಟ್ ಇನ್‌ಸ್ಪೆಕ್ಟರವರೂ ನೇಮಿಸಲ್ಪಟ್ಟರು. ಮತ್ತು ಮೆ. ನಿಡ್ಯಮಲೆ ಮುದ್ದಪ್ಪನವರೂ, ಮೆ. ಪುತ್ತಮನೆ ಮ. ಡ್ಡಿ ಪೈಯ್ಯನವರೂ ಪ್ರತಿನಿಧಿ ಮೆಂಬರುಗಳಾಗಿ ಚುನಾಯಿಸಲ್ಪಟ್ಟರು. ಈ ಕಮಿಟಿಯ ಹೆಸರಿನಲ್ಲಿ ಇಬ್ಬರು ನೇಮಿತ ಮೆಂಬರುಗಳು ಮಾತ್ರ ಒಂದು ವರದಿಯನ್ನು ಬೋರ್ಡಿಗೆ ಒಪ್ಪಿಸಿದರು. ಚುನಾಯಿತ ಮೆಂಬರುಗಳಿಬ್ಬರು ನೇಮಿತ ಮೆಂಬರುಗಳ ಸಂಗಡ ಗ್ರಾಮಾಂತರಗಳನ್ನು ಸಂದರ್ಶಿಸಲು ಹೋಗಲಿಲ್ಲವೆಂಬ ಕಾರಣದಿಂದ ನೇಮಿತ ಮೆಂಬರುಗಳಿಬ್ಬರೇ ವರದಿಯನ್ನು ಬರೆದಿರುವರೆಂದು ತಿಳಿಯಬರುತ್ತದೆ. ಕಮಿಟಿಯನ್ನು ನೇಮಿಸುವಾಗ ಎಲ್ಲಾ ಗ್ರಾಮಶಾಲೆಗಳನ್ನು ನೋಡಬೇಕೆಂಬ ಶರತ್ತು ಇತ್ತೋ ಏನೋ ತಿಳಿಯದು. ಈ ವರದಿಯಲ್ಲಿ ಈ ಕಮಿಟಿಯನ್ನು ಯಾವಾಗ ನೇಮಿಸಿದ್ದು ಮತ್ತು ಯಾತಕ್ಕಾಗಿ ನೇಮಿಸಿದ್ದು ಎಂಬುದು ವಿವರವಾಗಿ ಬರೆದಿರುವುದಿಲ್ಲ. ಚುನಾಯಿತ ಮೆಂಬರುಗಳು ಕೆಲವು ಕಡೆಗಳಿಗೆ ಹೋಗಿರುತ್ತೇವೆಂದೂ ಹೇಳುತ್ತಾರೆ. ಈ ವಾದವು ಹ್ಯಾಗೂ ಇರಲಿ. ಚುನಾಯಿತ ಮೆಂಬರುಗಳು ಕಮಿಟಿ ನೇಮಕವಾಗುವಾಗ ಇದ್ದ ಶರತ್ತುಗಳ ಮೇರೆ ತಮಗೆ ನಿಶ್ಚಯಿಸಲ್ಪಟ್ಟಿದ್ದ ಕೆಲಸಗಳನ್ನು ಪೂರ್ತಿಯಾಗಿ ಮಾಡದ್ದು ಸರಿಯಲ್ಲವೆಂದು ಎಲ್ಲರಿಗೂ ಗೊತ್ತಾಗುವದು.

ಆದರೆ ಚುನಾಯಿತ ಇಬ್ಬರು ಮೆಂಬರುಗಳು ಎಲ್ಲಾ ಕಡೆ ಸುತ್ತಲಿಲ್ಲವೆಂಬ ಕಾರಣದಿಂದ ನೇಮಿತ ಮೆಂಬರುಗಳಿಬ್ಬರೇ ವರದಿಯನ್ನು ಬರೆದು ಬೋರ್ಡಿಗೆ ಒಪ್ಪಿಸುವುದು ಸರಿಯೋ ಎಂದು ನೋಡಬೇಕಾಗಿದೆ. ವಾಡಿಕೆಯಾಗಿ ಇಂಥಾ ಕಮಿಟಿ ಮೆಂಬರುಗಳು ಅವಶ್ಯವಿದ್ದರೆ ದೇಶದ ಎಲ್ಲಾ ಭಾಗಗಳನ್ನು ಸುತ್ತಿ ಜನರ ಆವಶ್ಯಕತೆಗಳನ್ನೂ, ಅಭಿಪ್ರಾಯಗಳನ್ನೂ ತೆಗೆದುಕೊಂಡು ನಂತರ ತಮ್ಮ ಮೀಟಿಂಗು ಮಾಡಿ ಎಲ್ಲರೂ ಚರ್ಚಿಸಿ ವರದಿಯನ್ನು ಬರೆಯುವದಾಗಿದೆ. ಹೀಗೆ ವರದಿಯನ್ನು ಬರೆಯುವಾಗ ಭಿನ್ನಾಭಿಪ್ರಾಯಗಳು ಹುಟ್ಟಿದರೆ ಮುಖ್ಯ ಭಾಗದ ವರದಿಗೆ ಒಪ್ಪದವರು ತಮ್ಮದೊಂದು ಪ್ರತ್ಯೇಕ ವರದಿ ಬರೆಯುವುದುಂಟು. ಜನರ ಅಭಿಪ್ರಾಯ ತೆಗೆದುಕೊಳ್ಳಲು ಯಾ ಸ್ಥಳಗಳನ್ನು ಸಂದರ್ಶಿಸಲು ಎಲ್ಲಾ ಮೆಂಬರುಗಳು ಬರಲಿಲ್ಲವೆಂಬ ಕಾರಣದಿಂದ ಹಾಗೆ ಬಾರದ ಮೆಂಬರುಗಳನ್ನು ವಿನಾಯಿಸಿ ಬಾಕಿಯವರು ಮಾತ್ರ ವರದಿಯನ್ನು ಬರೆಯುವುದು ಎಲ್ಲಿಯೂ ಇಲ್ಲ, ಮತ್ತು ನ್ಯಾಯವೂ ಅಲ್ಲ. ಹಾಗೆ ಬಂದ ರಿಪೋರ್ಟು ಕಮಿಟಿಯ ರಿಪೋರ್ಟೆಂದು ಕರೆಯಲ್ಪಡತಕ್ಕದ್ದೂ ಅಲ್ಲ. ವಿನಾಯಿಸಲ್ಪಟ್ಟ ಮೆಂಬರುಗಳು ಪ್ರತ್ಯೇಕ ರಿಪೋರ್ಟು ಬರೆಯಬಹುದಿತ್ತು ಎಂದು ಹೇಳುವುದರಲ್ಲಿ ಅರ್ಥವೂ ಇಲ್ಲ. ಬೋರ್ಡಿನ ಮುಂದಿಟ್ಟ ರಿಪೋರ್ಟು ವಿಮತದವರ ವರದಿಯೂ ಕೂಡ ಅಲ್ಲ. ಬೋರ್ಡಿನವರು ನಾಲ್ಕು ಜನಗಳ ಕಮಿಟಿಯನ್ನು ನೇಮಿಸಿ ಇಬ್ಬರು ಮಾತ್ರ ಸಹಿ ಮಾಡಿ ಬರೆದ ವರದಿಯನ್ನು ಬೋರ್ಡಿನ ಚರ್ಚೆಗೆ ಅಧ್ಯಕ್ಷರು (ಕಮಿಶನರು) ಹೇಗೆ ಇಟ್ಟರೋ ಎಂಬುದು ... ಚರ್ಚಿಸಬಹುದಾದ ವಿಷಯವು. ಎಂದು ಮೀಟಿಂಗಿನ ತೀರ್ಮಾನಕ್ಕೆ ಬಿಡತಕ್ಕಂಥಾದ್ದೂ ಅಲ್ಲ. ಅರ್ಧ ಕಮಿಟಿಯ ವರದಿಯನ್ನು ಕಮಿಟಿಯ ನ್ಯಾಯವಾದ ವರದಿಯೆಂದೆಣಿಸಿ ಬೋರ್ಡಿನವರು ಚರ್ಚೆಗೆ ಒಪ್ಪಿಕೊಂಡದ್ದು ಸರಿಯಲ್ಲವೆಂದೇ ನಮ್ಮ ಅಭಿಪ್ರಾಯ. ಚುನಾಯಿತ ಮೆಂಬರುಗಳೆಂದು ಆರಿಸಲ್ಪಟ್ಟ ಇಬ್ಬರು ಮೆಂಬರುಗಳನ್ನು ವಿನಾಯಿಸಿದ ವರದಿಯನ್ನು ಒಪ್ಪಿಕೊಂಡದ್ದು ಪ್ರತಿನಿಧಿ ಮೆಂಬರುಗಳಿಗೆ ಭೂಷಣವಲ್ಲ. ಹೀಗೆ ಬೋರ್ಡಿನ ಬಹುಮತದವರ ಮತ್ತು ಅಧ್ಯಕ್ಷರ ನ್ಯಾಯವಲ್ಲದ ವರ್ತನೆಯಲ್ಲಿ ಅತೃಪ್ತಿಯನ್ನು ಸೂಚಿಸಲು ಐದು ಚುನಾಯಿತ ಮೆಂಬರುಗಳು ಮೀಟಿಂಗಿನಿಂದ ಎದ್ದು ಹೋದದ್ದು ಜನರ ಪ್ರತಿನಿಧಿಗಳಿಗೆ ಯೋಗ್ಯವಾದದ್ದಾಗಿದೆ.

ಬೋರ್ಡಿನ ಉಳಿವರಿ ಹಣ 40,000 ರೂ ಗಳನ್ನು ಸರ್ಕಾರಕ್ಕೆ ಸಾಲಕೊಡಬೇಕೆಂದು ಮಾಡಿದ ತೀರ್ಮಾನವು ಇನ್ನೊಂದು ಮುಖ್ಯ ವಿಷಯವಾಗಿದೆ. ದೇಶದಲ್ಲಿ ಪ್ರೈಮರಿ ವಿದ್ಯಾ ಪ್ರಚಾರವೂ, ಆಸ್ಪತ್ರೆಯ ಅನುಕೂಲಗಳೂ, ಗ್ರಾಮಾಂತರ ರಸ್ತೆಗಳೂ ಸಾಕಷ್ಟು ಆಗದೆ ಇರುವಾಗ ಬೋರ್ಡಿನಲ್ಲಿ ಇಷ್ಟು ದೊಡ್ಡ ಉಳಿವರಿ ಮಾಡಿದ್ದೇ ಸರಿಯಲ್ಲ. ಚುನಾಯಿತ ಬಹುಮತವಿಲ್ಲದೆ ಇರುವಾಗ ಇಂಥಾ ಉಳಿವರಿ ಹೊಂದಿರುವದಾಗಿದೆ. ಇದನ್ನು ಜನರ ಪ್ರತಿನಿಧಿಗಳ ಬಹುಮತ ದೊರೆತಾಗಲಾದರೂ ಅತ್ಯವಶ್ಯವಿರುವ ಖರ್ಚುಗಳಿಗೆ ಉಪಯೋಗಿಸಿಯಾರೆಂದು ಜನರು ನಂಬಿದ್ದರು. ಆದರೆ ಬೋರ್ಡಿನ ಈ ತೀರ್ಮಾನವು ತುಂಬಾ ನಿರಾಶೆಯನ್ನುಂಟು ಮಾಡಿದೆ. ಈ ಹಣವನ್ನು ಉಪಯೋಗಿಸುವಂಥ ಕೆಲಸಗಳು ಇಲ್ಲದೆ ಹೋದರೆ ಜನರ ಕೋರಿಗೆ ವಿರೋಧವಾಗಿ ಅವರು ಕೊಡಲಾರದಷ್ಟು ಹಾಕಿರುವ ತೆರಿಗೆಗಳನ್ನಾದರೂ ಕಡಿಮೆ ಮಾಡಬಹುದಾಗಿತ್ತಲ್ಲವೇ? ವಿದ್ಯಾ ಕಮಿಟಿಯ ವರದಿಯನ್ನು ಅನುಸರಿಸಿ ಶಾಲೆಯ ಹೊಸ ಕಟ್ಟಡಗಳಿಗೆ ಊರವರು ಅರ್ಧ ಹಣ ಕೊಟ್ಟರೆ ಬೋರ್ಡಿನವರು ಅರ್ಧ ಹಣ ಕೊಡುವರಂತೆ. ಈ ಗ್ರಾಮಸ್ಥರು ತಮ್ಮ ಸ್ವಂತ ಖರ್ಚಿನಿಂದ ಕಟ್ಟಡಗಳನ್ನು ... ಆವಶ್ಯಕವಿರುವಷ್ಟು ವಿಸ್ತಾರಗೊಳಿಸಿದರೆ ಹೆಚ್ಚಿನ ಉಪಾಧ್ಯಾಯರನ್ನು ಕೊಡಲಾಗುವುದು ಯಾ ಹೆಚ್ಚಿನ ತರಗತಿ ತೆರೆಯಲಾಗುವದೆಂತಲೂ ಮಾಡಿರುವ ತೀರ್ಮಾನಗಳನ್ನು ನೋಡಿದರೆ ಬೋರ್ಡಿನಲ್ಲಿ ಸಾಕಷ್ಟು ಹಣವಿಲ್ಲವೆಂದು ತೋರುತ್ತದಲ್ಲವೇ? ಬೋರ್ಡಿನಲ್ಲಿರುವ ದೊಡ್ಡ ಉಳಿವರಿಯನ್ನು ಇಂಥಾ ಕಟ್ಟಡದ ಕೆಲಸಗಳಿಗೆ ಉಪಯೋಗಿಸದೆ ಅದನ್ನು ಸರ್ಕಾರಕ್ಕೆ ಸಾಲಕೊಡಲು ಮಾಡಿದ ತೀರ್ಮಾನವು ಎಂದೂ ತೃಪ್ತಿಕರವಲ್ಲ. ಗ್ರಾಮಸ್ಥರು ಭೂಕಂದಾಯ, ಡಿ. ಬೋರ್ಡು ಸೆಸ್ಸ್ ಮುಂತಾದ ರೂಪಗಳಲ್ಲಿ ತೆರಿಗೆ ಕೊಡುತ್ತಿದ್ದರೂ ಕೂಡ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಕಟ್ಟಡ ಕಟ್ಟಿಸಲು ಪುನಹ ಚಂದಾ ಕೊಡಬೇಕೆಂದು ಕೇಳುವುದು ದೊಡ್ಡ ಅನ್ಯಾಯವಾಗಿದೆ. ಪ್ರಜೆಗಳಿಗೆ ಪ್ರೈಮರಿ ವಿದ್ಯಾಭ್ಯಾಸವನ್ನಾದರೂ ಕೊಡುವದು ಸ್ಥಳೀಯ ಸರ್ಕಾರ ಸಂಸ್ಥೆಯ ಪ್ರಥಮ ಕರ್ತವ್ಯವಾಗಿದೆ. ಇದಕ್ಕೆ ಎಲ್ಲಾ ಅನುಕೂಲಗಳನ್ನು ಕಲ್ಪಿಸಿ ಕೊಟ್ಟು ಬಿಡಾಯವಾಗಿ ಪ್ರೈಮರಿ ವಿದ್ಯಾಭ್ಯಾಸ ಕೊಡುವ ಪ್ರಯತ್ನಗಳನ್ನು ಎಲ್ಲೆಲ್ಲೂ ನಡೆಸುತ್ತಿರುವ ಸಮಯದಲ್ಲಿ ನಮ್ಮ ಡಿ. ಬೋರ್ಡಿನವರು ತಮ್ಮ ಮಕ್ಕಳಿಗೆ ಶಾಲೆಗಳನ್ನು ಕಟ್ಟಿಸಿಕೊಳ್ಳಿ ಎಂದು ಗ್ರಾಮಸ್ಥರೇ ಮುಂದೆ ಒಂದು ಕೇಳುವಾಗ್ಯ ಕಟ್ಟಡವನ್ನು ನಿಮ್ಮ ಖರ್ಚಿನಿಂದಲೇ ಕಟ್ಟಿಸಬೇಕೆಂದು ಅನ್ನುವದು ನಾಚಿಕೆಯವಲ್ಲವೇ? ಹೀಗಾದರೆ ಬೋರ್ಡು ಮಾಡುವ ಕೆಲಸವೇನು? ರೈತರು ಬೋರ್ಡಿಗೆ ಸೆಸ್ಸ್ ಯಾಕೆ ಕೊಡಬೇಕು? ಕಟ್ಟಡದ ಖರ್ಚು ಪ್ರತಿವರ್ಷವೂ ಆಗುವಂತಾದ್ದಲ್ಲ. ಆದಕಾರಣ ಈಗಿರುವ ಉಳಿವರಿಯಿಂದ ಗ್ರಾಮಸ್ಥರು ಕೇಳುವಲ್ಲೆಲ್ಲಾ ಯಾಕೆ ಶಾಲೆಗಳನ್ನು ಕಟ್ಟಿಸಬಾರದು? ವಿದ್ಯಾ ಕಮಿಟಿಯ ಇಬ್ಬರು ಮೆಂಬರುಗಳು ಇಂಥಾ ಶಿಫಾರಸ್ಸನ್ನು ಮಾಡಲು ದೇಶದಲ್ಲೆಲ್ಲಾ ಸುತ್ತಬೇಕಾಗಿತ್ತೇ! ಈ ಮುಖ್ಯ ವಿಷಯವನ್ನು ಬೋರ್ಡಿನವರು ಪುನರಾಲೋಚನೆ ಮಾಡುವರೋ? ಮೇಲಧಿಕಾರಿಗಳಾದರೂ ಈ ಸಂಗತಿಗೆ ತಕ್ಕ ನಿಗ ಕೊಡುವರಾಗಿ ನಂಬುತ್ತೇವೆ.

ಒಂದು ಮಾಳದ ಕೇಸಿನ ವಿಷಯ ಮೆ. ಕೊಡಂದೇರ ದೇವಯ್ಯನವರು ಕೋರ್ಟು ಖರ್ಚು ಕೇಳಿದ ಅರ್ಜಿಯ ಚರ್ಚೆಯಾದಾಗ್ಯೆ ಒಬ್ಬ ಮೆಂಬರರು ಈ ಕೇಸಿನ ಸಂಬಂಧ ವೈಸ್ ಪ್ರೆಸಿಡೆಂಟರ ವರ್ತನೆಯನ್ನು ಕುರಿತು ಕೇಳಿದ ಪ್ರಶ್ನೆಗಳಿಗೆ ವೈಸ್ ಪ್ರೆಸಿಡೆಂಟರು ನ್ಯಾಯವಾದ ಜವಾಬು ಕೊಡದ್ದು ನೋಡಿದರೆ ಅವರು ಬೋರ್ಡಿನ ಹಿತ ವಹಿಸಿ ವರ್ತಿಸಲಿಲ್ಲವೆಂದೇ ತೋರುತ್ತದೆ. ಇಂಥಾ ವರ್ತನೆಯು ಸರಿಯಾದದ್ದಲ್ಲ. ಮತ್ತು ಇನ್ನು ಮುಂದೆ ಇಂಥಾ ಆಕ್ಷೇಪಣೆಗೆ ಅವಕಾಶ ಕೊಡಲಾರರೆಂತ ನಂಬುತ್ತೇವೆ.

ಕಿಗ್ಗಟ್ಟುನಾಡಿನವರ ಮೀಟಿಂಗು

'ಕೊಡಗು' ಪತ್ರಿಕೆಯಲ್ಲಿ ಮತ್ತು ಪಕ್ಕ ಪತ್ರಿಕೆಗಳಲ್ಲಿ ಪ್ರಕಟಿಸಿದಂತೆ ತಾರೀಖು 17—6—29 ರಲ್ಲಿ ಕಿಗ್ಗಟ್ಟುನಾಡಿನವರ ಒಂದು ಪಬ್ಲಿಕ್ ಮೀಟಿಂಗು ಹುದಿಕೇರಿಯಲ್ಲಿ ನಡೆಯಿತು. ಈ ದಿವಸದ ಮೀಟಿಂಗಿಗೆ ಮೆ. ಇಟ್ಟಿರ ಪೊನ್ನಪ್ಪನವರನ್ನು ಅಧ್ಯಕ್ಷರಾಗಿ ಆರಿಸಬೇಕೆಂದು ಮೆ. ಕೊಳ್ಳಿಮಾಡ ಕರುಂಬೈಯ್ಯನವರು ಸೂಚಿಸಿದರು. ಮೆ. ಕಾಳ್ಯಮಾಡ ಐಯ್ಯಮ್ಮನವರು ಅನುಮೋದಿಸಿದರು. ಅಧ್ಯಕ್ಷರು ಸ್ಥಾನವನ್ನು ಅಲಂಕರಿಸಿದನಂತರ ಮೆ. ಕೆ. ಸಿ. ಕರುಂಬೈಯ್ಯನವರು ಈ ದಿವಸ ಸಭೆ ಸೇರಿದ ಉದ್ದೇಶ್ಯವನ್ನು ಸಾಂಗೋಪಾಂಗವಾಗಿ ವಿವರಿಸಿದರು. ಅಧ್ಯಕ್ಷರು ಅವರ ಮಾತನ್ನು ಪುಷ್ಟೀಕರಿಸಿ ಮಾತಾಡಿದರು.

ಕಳೆದ ಏಪ್ರಿಲ್ ಮಾಹೆಯಲ್ಲಿ ಪೊನ್ನಂಪೇಟೆಯಲ್ಲಿ ನಡೆದ ಮಹಾ ಸಭೆಯ ಸ್ವಾಗತ ಮಂಡಳಿಯ ಖರ್ಚಿಗೆ ಸಾಲದ ಹಣಕ್ಕೆ, ಇದಕ್ಕೆ ಮೊದಲು ಪೊನ್ನಂಪೇಟೆಯಲ್ಲಿ ಮತ್ತು ಹುದಿಕೇರಿಯಲ್ಲಿ ನಡೆದ ಮಹಾ ಸಭೆಯ ಸ್ವಾಗತ ಮಂಡಳಿಯ ಉಳಿವರಿಯ ಹಣವನ್ನು ಈ ಸಾಲದೆ ಇರುವ ಹಣಕ್ಕೆ ಉಪಯೋಗಿಸಬಹುದೆಂಬದಾಗಿ ಮೆ. ಕಾಕಮಾಡ ಗಣಪತಿಯವರು ಮಾತಾಡಿದರು. ಹೀಗೆ ಮಾಡಲು ಯಾರ ಅಭ್ಯಂತರವಿಲ್ಲವೆಂದೂ ಹಲವರು ಹೇಳಿದರು. ಇದಕ್ಕೆ ತಾನು ಒಪ್ಪುವದಿಲ್ಲವೆಂದು ಮೆ. ಸಿ. ಎ. ಪೊನ್ನಪ್ಪನವರು ವಿರೋಧಿಸಿದರು.

ಕಡೆಗೆ ಹುದಿಕೇರಿ ಮಹಾ ಸಭೆಯ ಸ್ವಾಗತ ಮಂಡಳಿಯ ಉಳಿವರಿಯನ್ನು ಸಂಟ್ರಲ್ ಬ್ಯಾಂಕಿನಿಂದ ತರಿಸಿ ಈ ವರ್ಷದ ಬಾಕಿ ಹಣಕ್ಕೆ ಭರ್ತಿ ಮಾಡಬಹುದೆಂಬ ಮತ್ತು ಪೊನ್ನಂಪೇಟೆಯ ಉಳಿವರಿಯಾಗಿ ಮೆ. ಮನೆಯಪಂಡ ನಾಣಪ್ಪನವರಲ್ಲಿರತಕ್ಕ ಹಣವನ್ನು ವಸೂಲು ಮಾಡಲು ಮೆ. ಇಟ್ಟಿರ ಪೊನ್ನಪ್ಪನವರಿಗೆ, ಮೆ. ಜಮ್ಮಡ ಮಾದಪ್ಪನವರಿಗೂ ಸಭೆಯು ಅಧಿಕಾರ ಕೊಡಬಹುದೆಂಬ ಠರಾವನ್ನು ಸಭೆಯು ಮುಂದಿಡಲು, ಬಹುಮತದಿಂದ ಮಂಜೂರು ಮಾಡಲ್ಪಟ್ಟಿತು. ಅಧ್ಯಕ್ಷರಿಗೆ ವಂದನೆಗಳಾದ ನಂತರ ಸಭೆಯು ವಿಸರ್ಜನೆಯಾಯಿತು.

ಹುದಿಕೇರಿ — ಇಟ್ಟಿರ ಪೊನ್ನಪ್ಪ.
17—6—29

ವಿಮರ್ಶೆ.

ಭಗವಂತಂಡ ಪಾಟ್.

(ಭಗವದ್ಗೀತೆ)

ಭಗವದ್ಗೀತೆಯನ್ನು ಕೊಡಗು ಭಾಷೆಯಲ್ಲಿ ಮೆ. ನಡಿಕೇರಿಯಂಡ ಚಿಣ್ಣಪ್ಪನವರು ರಚಿಸಿದ್ದು ಬಹಳ ಸ್ತೋತ್ರಾರ್ಹವಾಗಿದೆ. ಕೊಡಗು ಭಾಷೆ ಮಾತ್ರ ಆಡುವ ಜನರಿಗೆ ಸಾಧಾರಣವಾಗಿ ಕನ್ನಡ ತಿಳಿಯದೇ ಇದ್ದರೂ ತಮ್ಮ ತಾಯ್ನುಡಿಯಲ್ಲೇ ದೊರೆತ ವಿಷಯವನ್ನು ಓದಲಿಕ್ಕೆ ಕುತೂಹಲವು ಹೆಂಗಸರು ಮಕ್ಕಳು ಮೊದಲಾಗಿ ಎಲ್ಲರಿಗೂ ಹುಟ್ಟುವದರಲ್ಲಿ ಸಂಶಯವಿಲ್ಲ. ಕೊಡಗು ಭಾಷೆಯಲ್ಲಿ ಗದ್ಯರೂಪದಲ್ಲೇ ಬರೆದಿದ್ದರೂ ಸಹ ಗೀತೆಯನ್ನು ಓದಲಿಕ್ಕೆ ಕೊಡವ ಮಾತಿನವರಿಗೆ ಎಷ್ಟೋ ಉತ್ತೇಜನ ಸಿಕ್ಕಿದಂತಾಗುತಿತ್ತು. ಅದರಲ್ಲೂ ಕೊಡವ ಜನರಿಗೆ ತುಂಬಾ ಪ್ರಿಯವಾದ ತಮ್ಮಲ್ಲಿ ರೂಢಿಯಲ್ಲಿರುವ ಪದಗಳ ವಾಟಿಯಲ್ಲಿ ಕವನ ಮಾಡಿರುವದರಿಂದ ಗೀತೆಯ ಹೆಚ್ಚಿನ ಪ್ರಚಾರವಾಗುವದರಲ್ಲಿ ಸಂಶಯವಿಲ್ಲ. ವಿರಾಮ ಕಾಲದಲ್ಲಿ ಏನೇನೋ ಹಾಡುವದಕ್ಕಿಂತ ಪ್ರಪಂಚದಲ್ಲಿ ಪ್ರಖ್ಯಾತಿಯನ್ನು ಪಡೆದ ವೇದಾಂತ ಸಾರವನ್ನೊಳಕೊಂಡಿರುವ ಗೀತೆಯ ಪದಗಳನ್ನು ಹಾಡುತ್ತಿದ್ದರೆ ಹಾಡುವವರಿಗೆ ಮಾತ್ರವಲ್ಲದೆ ಮನೆಯವರಿಗೆಲ್ಲಾ ಗೀತೆಯ ಬೋಧನೆಗಳು ಕಿವಿಗೆ ಬೀಳುತ್ತವೆ. ಸಂಸ್ಕೃತದಲ್ಲಿರುವ ಮೂಲ ಗೀತೆಯನ್ನು ಅರ್ಥ ತಿಳಿಯದೆ ಬರೇ ಪಾರಾಯಣ ಮಾಡಿದರೇನೇ ಪ್ರಯೋಜನವಿದೆಯೆಂತ ಶಾಸ್ತ್ರವಿದ್ದರೂ, ಗೀತೆಯ ಅರ್ಥ ತಿಳಿದರೇನೇ ಹೆಚ್ಚಿನ ಪ್ರಯೋಜನವೆಂಬುದು ಹೇಳಬೇಕಾದ್ದಿಲ್ಲವಷ್ಟೆ. ಇದು ಕೊಡವ ಭಾಷೆಯಲ್ಲಿ ಪದ್ಯರೂಪದಲ್ಲಿದ್ದರೂ ಭಾಷೆಯು ಬಹಳ ಸುಲಭವಾಗಿ ಎಲ್ಲರಿಗೂ ತಿಳಿಯುವಂತಿದೆ. ಮೂಲ ಗೀತೆಯು ವೇದಾಂತ ವಿಷಯದ ಶಬ್ದಗಳನ್ನೇ ಅನೇಕ ಕಡೆಗಳಲ್ಲಿ ಉಪಯೋಗಿಸಿದ್ದಾರೆ. ವೇದಾಂತ ಶಾಸ್ತ್ರದ ಪಾರಿಭಾಷಿಕ ಶಬ್ದಗಳಿಗೆ ದೇಶೀಯ ಭಾಷೆಗಳಲ್ಲಿ ತಕ್ಕದಾದ ಶಬ್ದಗಳು ದೊರೆಯುವುದು ಕಷ್ಟವಾದ್ದರಿಂದ ಮೂಲ ಶಬ್ದಗಳನ್ನು ಉಪಯೋಗಿಸಿದ್ದು ಯುಕ್ತವಾಗಿಯೇ ಇದೆ. ಅಂಥಾ ಕಷ್ಟ ಶಬ್ದಗಳಿಲ್ಲದ ಭಾಗಗಳನ್ನು ಓದುಗರು ಗೀತೆಯಲ್ಲಿ ಸವಿ ಹಟ್ಟಿದರೆ ಮೂಲ ಕಠಿಣ ಶಬ್ದಗಳ ಅರ್ಥವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ.

ಶ್ರೀಕೃಷ್ಣನ ಹೆಸರನ್ನು 'ಕುಟ್ಟಪ್ಪ' 'ಕುಟ್ಟಯ್ಯ' ಎಂಬೂ 'ಅಚ್ಯುತ' ಎಂಬ ಶಬ್ದಕ್ಕೆ 'ಅಚ್ಚಯ್ಯ' 'ಅಚ್ಚಪ್ಪ' ಎಂತಲೂ ಉಪಯೋಗಿಸಿದ್ದಾರೆ. ಇದನ್ನು ಎಲ್ಲರೂ ಒಪ್ಪಲಾರರು. ಕೊಡವರಲ್ಲಿ ರೂಢಿಯಲ್ಲಿರುವ ಮೇಲಿನ ಹೆಸರುಗಳು ಕೃಷ್ಣ ಅಚ್ಯುತ ಎಂಬವುಗಳಿಂದಲೇ ಹುಟ್ಟಿದ್ದೆಂಬದಕ್ಕೆ ಆಧಾರವೇನಿಯೋ ನಮಗೆ ತಿಳಿಯದು. ಕವಿಗಳಿಗೆ ಇರುವ ಸ್ವಾತಂತ್ರ್ಯದಿಂದ ಹೀಗೆ ಮಾಡಬಹುದೆಂತ ಊಹಿಸಬೇಕಾಗಿದೆ. ಕೃಷ್ಣ ಅಚ್ಯುತ ಎಂಬ ಶಬ್ದಗಳನ್ನೇ ಉಪಯೋಗಿಸಿದ್ದರೆ ಜನರಿಗೆ ಭಕ್ತಿಬರಲು ಹೆಚ್ಚಿನ ಅವಕಾಶವಿರುತ್ತಿತ್ತೆಂತ ಹೇಳಬೇಕಾಗಿದೆ.

ಗೀತಾಧರ್ಮ ಪ್ರಚಾರಕ್ಕೆ ಮೆ. ಚಿಣ್ಣಪ್ಪನವರ ಗ್ರಂಥ ತುಂಬಾ ಪ್ರೋತ್ಸಾಹ ಕೊಡುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಕೊಡವ ಭಾಷೆಯನ್ನಾಡುವವರೆಲ್ಲರೂ ಮನೆಗೊಂದು ಪುಸ್ತಕವನ್ನಾದರೂ ಕೊಳ್ಳತಕ್ಕದ್ದಾಗಿದೆ. ಗ್ರಂಥಕರ್ತರ ಈ ಒಳ್ಳೇ ಕಾರ್ಯಕ್ಕೆ ಪ್ರೋತ್ಸಾಹ ದೊರಕಲಿ ಎಂತ ಹಾರೈಸುತ್ತೇವೆ.

ಈ ಪುಸ್ತಕವು 1—0—0 ಕ್ರಯಕ್ಕೆ ಮಡಿಕೇರಿ, ವಿರಾಜಪೇಟೆ, ವೀರರಾಜೇಂದ್ರಪೇಟೆ ಗೋಣಿಕೊಪ್ಪಲು ಮತ್ತು ಹುದಿಕೇರಿಯಲ್ಲಿ ದೊರೆಯುತ್ತವೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೩೭ನೇ ಪ್ರಕರಣ

ಖಿಲಾಫತ್ತಿಗೆ ಪ್ರತಿಯಾಗಿ ಗೋರಕ್ಷಣೆಯೋ?

ಸದ್ಯಕ್ಕೆ ನಾವು ಪಂಜಾಬಿನ ಈ ದುರ್ಘಟನೆಗಳ ವಿಷಯವನ್ನು ನಿಲ್ಲಿಸಬೇಕು.

ಪಂಜಾಬಿನಲ್ಲಿ ನಡೆದ 'ಡೈಯರ್-ಗಿರಿ'ಯ ವಿಷಯವಾಗಿ ಮಹಾಸಭೆಯ ಸಮಿತಿಯ ವಿಚಾರಣೆಯು ಪ್ರಾರಂಭವಾಯಿತು. ಅಷ್ಟರಲ್ಲಿಯೇ ಖಿಲಾಫತ್ ಪ್ರಶ್ನೆಯನ್ನು ಕುರಿತು ಆಲೋಚಿಸಲೋಸುಗ ದಿಲ್ಲಿಯಲ್ಲಿ ನೆರೆಯಲಿದ್ದ ಹಿಂದೂ ಮುಸಲ್ಮಾನರ ಉಭಯ ಸಮ್ಮೇಳನಕ್ಕೆ ಬರಬೇಕೆಂದು ಅನೇಕರಿಗೆ ಕಳುಹಿಸಿದ್ದ ಆಹ್ವಾನ ಪತ್ರವು ನನಗೂ ಬಂದಿತು. ಅದಕ್ಕೆ ರುಜು ಮಾಡಿದವರಲ್ಲಿ ದಿವಂ. ಹಕೀಂ ಅಜಮಲ್‌ಖಾನ್ ಸಾಹೇಬರೂ, ಮಿ. ಆಸಫ್ ಆಲಿಯವರೂ ಇದ್ದರು. ದಿವಂ. ಸ್ವಾಮಿ ಶ್ರದ್ಧಾನಂದರು ಸಮ್ಮೇಳನಕ್ಕೆ ಬರುವರೆಂದು ಆ ಪತ್ರದಲ್ಲಿದ್ದಿತು. ನನಗೆ ನೆನಪಿರುವ ಮಟ್ಟಿಗೆ ಸಮ್ಮೇಳನವು ಆ ವರ್ಷದ ನವಂಬರ್ ತಿಂಗಳಲ್ಲಿ ಕೂಡುವುದಿದ್ದಿತು. ಸ್ವಾಮಿ ಶ್ರದ್ಧಾನಂದರು ಅದರ ಉಪಾಧ್ಯಕ್ಷರಾಗಿರಬೇಕೆಂಬ ಯೋಚನೆಯಿದ್ದಿತೆಂದು ನನಗೆ ಜ್ಞಾಪಕವಿದೆ. ಆ ಪತ್ರದಲ್ಲಿ ಪ್ರಸ್ತಾಪಿತವಾದ ಅನೇಕ ಸಂಗತಿಗಳಲ್ಲಿ ಆ ಸಮ್ಮೇಳನವು ಖಿಲಾಫತ್ ಪ್ರಶ್ನೆಯೊಂದನ್ನೇ ಅಲ್ಲದೆ ಗೋಸಂರಕ್ಷಣದ ಪ್ರಶ್ನೆಯನ್ನು ಚರ್ಚಿಸುವುದೆಂಬುದೂ, ಆದುದರಿಂದ ಆ ಸಮಸ್ಯೆಯನ್ನು ಪೂರ್ಣಮಾಡಲು ಅಗ ಅಪೂರ್ವ ಸನ್ನಿವೇಶವು ದೊರೆಯುವುದೆಂಬುದೂ ಇದ್ದಿತು. ಈ ರೀತಿಯಾಗಿ ಗೋರಕ್ಷಣೆಯ ಪ್ರಶ್ನೆಯನ್ನು ಪ್ರಸ್ತಾಪಿಸುವುದು ನನ್ನ ಒಪ್ಪಿಗೆಗೆ ಬರಲಿಲ್ಲ. ಆದುದರಿಂದ ಆಹ್ವಾನ ಪತ್ರಕ್ಕೆ ಉತ್ತರವಾಗಿ ಬರೆದ ಕಾಗದದಲ್ಲಿ ನಾನು ಸಮ್ಮೇಳನಕ್ಕೆ ಬರಲು ಸರ್ವ ಪ್ರಯತ್ನ ಮಾಡುವೆನೆಂದೂ ಆವೆರಡು ಪ್ರಶ್ನೆಗಳನ್ನೂ ಒಟ್ಟುಗೂಡಿಸಿ ಅವುಗಳನ್ನು ಉಪಕಾರ, ಪ್ರತ್ಯುಪಕಾರಗಳೆಂಬ ದೃಷ್ಟಿಯಿಂದ ನೋಡಕೂಡದೆಂದೂ ಅವುಗಳನ್ನು ಪ್ರತ್ಯೇಕವಾಗಿ ಗಮನಿಸಿ ಪ್ರತಿಯೊಂದನ್ನೂ ಅದರ ಗುಣದೋಷಗಳಿಗನುಸಾರ ನಿರ್ಧರಿಸಬೇಕೆಂದೂ ಸೂಚಿಸಿ ಬರೆದೆನು.

ಹೀಗೆ ಆಲೋಚಿಸುತ್ತಾ ನಾನು ಸಮ್ಮೇಳನಕ್ಕೆ ಹೋದೆನು. ಅದಾದ ಮೇಲೆ ನಡೆದ ಕೂಟಗಳಂತೆ ಇದರಲ್ಲಿ ಹತ್ತು ಸಾವಿರ ಜನರು ನೆರೆದಿರಲಿಲ್ಲವಾದರೂ ಇದರ ಜನಸಂಖ್ಯೆಯು ಹೆಚ್ಚಾಗಿದ್ದಿತೆಂದೇ ಹೇಳಬೇಕು. ಮೇಲೆ ಹೇಳಿದ ಪ್ರಶ್ನೆಯನ್ನು ನಾನು ಅಲ್ಲಿಗೆ ಬಂದಿದ್ದ ಸ್ವಾಮಿ ಶ್ರದ್ಧಾನಂದರೊಡನೆ ಚರ್ಚಿಸಿದೆನು. ನಾನು ವಾದಿಸಿದುದು ಅವರ ಒಪ್ಪಿಗೆಗೆ ಬಂದಿತು. ಅದನ್ನು ಸಮ್ಮೇಳನದ ಗಮನಕ್ಕೆ ತರುವ ಭಾರವನ್ನು ಅವರು ನನಗೇ ಬಿಟ್ಟರು. ಹಾಗೆಯೇ ನಾನು ಈ ಪ್ರಶ್ನೆಗಳನ್ನು ಹಕೀಂ ಸಾಹೇಬರೊಡನೆಯೂ ಪ್ರಸ್ತಾಪಿಸಿದೆನು. "ಖಿಲಾಫತ್ ಚಳವಳಿಗೆ ನ್ಯಾಯದ ಮತ್ತು ಧರ್ಮದ ಆಧಾರವಿದ್ದರೆ (ಅಂತಹ ಆಧಾರವಿದ್ದಿತೆಂದೇ ನನ್ನ ನಂಬಿಕೆ.) ಸರಕಾರವು ಕೇವಲ ಅನ್ಯಾಯವನ್ನು ಆಚರಿಸಿದ್ದರೆ ಮುಸಲ್ಮಾನರು ಖಿಲಾಫತ್ ಸಂಬಂಧವಾಗಿ ಹೋರಾಡುವುದರಲ್ಲಿ ಹಿಂದುಗಳು ಅವರಿಗೆ ನೆರವೀಯಬೇಕು. ಈ ವಿಷಯದಲ್ಲಿ ಹಿಂದುಗಳು ಗೋಸಂರಕ್ಷಣೆಯ ಪ್ರಶ್ನೆಯನ್ನೆತ್ತುವುದಾಗಲಿ ಅಥವಾ ಈ ಸಂದರ್ಭವನ್ನು ಮುಸಲ್ಮಾನರೊಡನೆ ಕರಾರು ಮಾಡಿಕೊಳ್ಳಲು ಉಪಯೋಗಿಸುವುದಾಗಲಿ ಉಚಿತವಲ್ಲ. ಹಾಗೆಯೇ ಮುಸಲ್ಮಾನರು ಕೂಡ ಖಿಲಾಫತ್ ಸಂಬಂಧವಾಗಿ ಹಿಂದುಗಳ ಬೆಂಬಲವನ್ನು ಪಡೆಯುವುದಕ್ಕೋಸ್ಕರ ಗೋಹತ್ಯವನ್ನು ನಿಲ್ಲಿಸುವುದಕ್ಕೆ ಒಪ್ಪುವುದೂ ಯೋಗ್ಯವಲ್ಲ. ಆದರೆ ಮುಸಲ್ಮಾನರು ತಮ್ಮ ಸ್ವಂತ ಇಚ್ಛೆಯಿಂದ ಹಿಂದುಗಳ ಧಾರ್ಮಿಕ ಮನೋಭಾವವನ್ನು ಆದರಿಸಿ ಅವರು ತಮ್ಮ ನೆರೆಹೊರೆಯವರೆಂದೂ ಒಂದೇ ತಾಯಿನಾಡಿನ ಮಕ್ಕಳೆಂದೂ ಎಣಿಸಿ ಕರ್ತವ್ಯದ ದೃಷ್ಟಿಯಿಂದ ಮುಸಲ್ಮಾನರು ಗೋವಧೆಯನ್ನು ನಿಲ್ಲಿಸಿದರೆ ಅದು ಅತ್ಯಂತ ಯೋಗ್ಯವಾಗಿದ್ದು ಅವರಿಗೆ ಘನತೆಯನ್ನುಂಟುಮಾಡುವುದು. ಅದೇ ಬೇರೆ ವಿಚಾರವಾಗುವುದು. ಹಾಗೆ ಸ್ವತಂತ್ರ ದೃಷ್ಟಿಯಿಂದ ನೋಡುವುದೇ ಅವರ ಕರ್ತವ್ಯ. ಅದರಿಂದ ಅವರ ನಡತೆಯ ಗಾಂಭೀರ್ಯವು ಇಮ್ಮಡಿಯಾಗುವುದು. ಆದರೆ ಮುಸಲ್ಮಾನರು ನೆರೆಹೊರೆಯವರನ್ನು ಕುರಿತು ತಮ್ಮ ಕರ್ತವ್ಯವೇನೆಂಬ ದೃಷ್ಟಿಯಿಂದ ಗೋವಧೆಯನ್ನು ನಿಲ್ಲಿಸಬೇಕೆಂದೇ ಹೊರತು ಹಿಂದುಗಳು ಖಿಲಾಫತ್ ವಿಷಯದಲ್ಲಿ ತಮಗೆ ಸಹಾಯ ಮಾಡಲಿ, ಮಾಡದಿರಲಿ ತಾವು ಗೋವಧೆಯನ್ನು ನಿಲ್ಲಿಸಬೇಕು. ಆದುದರಿಂದ ಇವೆರಡು ವಿಷಯಗಳನ್ನು ಪ್ರತ್ಯೇಕವಾಗಿ ಚರ್ಚಿಸಬೇಕು. ಈ ಸಮ್ಮೇಳನದ ಕಾರ್ಯಕಲಾಪಗಳು ಖಿಲಾಫತ್ ಪ್ರಶ್ನೆಗೆ ಮಾತ್ರ ಸಂಬಂಧಪಟ್ಟಿರಬೇಕು" ಎಂದು ನಾನು ಸಮ್ಮೇಳನದಲ್ಲಿ ವಾದಿಸಿದೆನು. ಈ ವಾದವು ಅಲ್ಲಿದ್ದವರ ಮನಸ್ಸನ್ನು ಹಿಡಿಯಿತು. ಇದರ ಫಲವಾಗಿ ಗೋಸಂರಕ್ಷಣೆಯ ವಿಷಯದಲ್ಲಿ ಆಗ ಚರ್ಚೆಯಾಗಲಿಲ್ಲ. ಆದರೆ ನಾನು ಹೀಗೆ ಎಚ್ಚರಿಕೆ ಕೊಟ್ಟರೂ ಕೂಡ ಮುಂದಿನ ಕೂಟಗಳಲ್ಲಿ ಮುಸಲ್ಮಾನರು ಖಿಲಾಫತ್ ಸಂಬಂಧವಾಗಿ ಹಿಂದುಗಳ ಬೆಂಬಲದ ಕೃತಜ್ಞತೆಗಾಗಿ ಗೋವಧೆಯನ್ನು ನಿಲ್ಲಿಸುವ ಕರ್ತವ್ಯವನ್ನು ಕುರಿತು ಹೇಳುತ್ತಲೇ ಇದ್ದರು. ಮತ್ತು ಒಂದು ಕಾಲದಲ್ಲಿ ಅವರು ಅದನ್ನು ನಿಲ್ಲಿಸಿಯೇ ಬಿಡುವರೆನ್ನುವ ಮಟ್ಟಿಗೆ ತೋರುತ್ತಿದ್ದಿತು.

ಮೌಲಾನಾ ಹಜರತ್ ಮೋಹನಿಯವರು ಈ ಸಭೆಗೆ ಬಂದಿದ್ದರು. ಇದಕ್ಕಿಂತ ಮುಂಚೆಯೇ ನನಗೆ ಅವರ ಪರಿಚಯವಿದ್ದಿತು. ಆದರೆ ಅವರು ಎಂತಹ ಯೋಧರೆಂಬುದು ನನಗೆ ಈಗಲೇ ಗೊತ್ತಾದುದು. ಮೊಟ್ಟ ಮೊದಲಿನಿಂದಲೇ ನಾವು ಅನೇಕ ವಿಷಯಗಳಲ್ಲಿ ಭಿನ್ನ ಮತವುಳ್ಳವರಾಗಿದ್ದೇವೆ. ಕೆಲವು ವಿಷಯಗಳಲ್ಲಿ ಈ ಭಿನ್ನಾಭಿಪ್ರಾಯವು ಇನ್ನೂ ನಿಂತಿದೆ.

ಈ ಸಮ್ಮೇಳನವು ಅನುಮೋದಿಸಿದ ಅನೇಕ ಗೊತ್ತುವಳಿಗಳಲ್ಲಿ ಹಿಂದೂಗಳೂ, ಮುಸಲ್ಮಾನರೂ ಸ್ವದೇಶೀ ವ್ರತವನ್ನು ಕೈಗೊಳ್ಳಬೇಕೆಂಬುದು ಒಂದು. ಇದರ ಸಹಜಾನುವರ್ತಿಯಾಗಿ ವಿದೇಶೀ ವಸ್ತುಗಳನ್ನು ಬಹಿಷ್ಕರಿಸಬೇಕೆಂಬ ಪ್ರಸ್ತಾಪವೂ ಸ್ವೀಕೃತವಾಯಿತು. ಖಾದಿಗೆ ಇನ್ನೂ ತನ್ನ ಸ್ಥಾನವು ದೊರಕಿರಲಿಲ್ಲ. ಹಜರತ್ ಸಾಹೇಬರು ಈ ಗೊತ್ತುವಳಿಯನ್ನು ಒಪ್ಪಲಿಲ್ಲ. ಖಿಲಾಫತ್ ವಿಷಯದಲ್ಲಿ ನ್ಯಾಯವಾದ ತೀರ್ಮಾನವಾಗದಿದ್ದರೆ ಬ್ರಿಟಿಷ್ ಚಕ್ರಾಧಿಪತ್ಯದ ಮೇಲೆ ಮುಯ್ಯಿ ತೀರಿಸಿಕೊಳ್ಳುವುದೇ ಅವರ ಉದ್ದೇಶವಾಗಿದ್ದಿತು. ಆದುದರಿಂದ ಅವರು ಇದಕ್ಕೆ ಪ್ರತಿಯಾಗಿ 'ಸಾಧ್ಯವಾದ ಮಟ್ಟಿಗೆ ಬ್ರಿಟಿಷ್ ಪದಾರ್ಥಗಳನ್ನು ಬಹಿಷ್ಕರಿಸಬೇಕು' ಎಂಬ ಗೊತ್ತುವಳಿಯನ್ನು ಸಭೆಯ ಮುಂದಿಟ್ಟರು. ನಾನು ಇದನ್ನು ತಾತ್ವಿಕ ದೃಷ್ಟಿಯಿಂದಲೂ, ಕಾರ್ಯದ ದೃಷ್ಟಿಯಿಂದಲೂ ವಿರೋಧಿಸಿದೆನು. ಈ ಸಂಬಂಧವಾಗಿ ನಾನು ವಾದಿಸಿದ ಅಂಶಗಳು ಈಗ ಬಹುಮಟ್ಟಿಗೆ ಜನರ ಅವಗಾಹನೆಗೆ ಬಂದಿವೆ. ಇದಲ್ಲದೆ ನಾನು ಅಹಿಂಸೆಯ ವಿಷಯದಲ್ಲಿ ನನ್ನ ಅಭಿಮತವನ್ನು ಸಭೆಯ ಗಮನಕ್ಕೆ ತಂದೆನು. ನಾನು ಹೇಳಿದುದು ಅಲ್ಲಿದ್ದವರ ಮನಸ್ಸಿನ ಮೇಲೆ ಗಂಭೀರ ಪರಿಣಾಮವನ್ನುಂಟುಮಾಡಿತೆಂಬುದು ನನಗೆ ಗೋಚರವಾಯಿತು. ನನಗೆ ಮುಂಚೆ ಹಜರತ್ ಮೋಹಾನಿಯವರ ಭಾಷಣವನ್ನು ಸಭೆಯು ಅತ್ಯಂತ ಉತ್ಸಾಹದಿಂದ ಕೇಳಿದ್ದುದರಿಂದ ನನ್ನ ಮಾತು ಅರಣ್ಯರೋದನವಾದೀತೆಂದು ನಾನು ಭಯಗೊಂಡಿದ್ದೆನು. ಸಮ್ಮೇಳನದ ಮುಂದೆ ನನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸದಿರುವುದು ಕರ್ತವ್ಯಲೋಪವಾಗುವುದೆಂದು ದೃಢವಾಗಿ, ಮಾತ್ರ ನಾನು ಮಾತನಾಡಲು ಪ್ರಯತ್ನಗೊಂಡಿದ್ದೆನು. ಆದರೆ ನನ್ನ ಆಶ್ಚರ್ಯಕ್ಕೆ ಸರಿಯಾಗಿ ಅಲ್ಲಿದ್ದವರು ನನ್ನ ಭಾಷಣವನ್ನು ಸಂಪೂರ್ಣ ಗಮನವಿಟ್ಟು ಕೇಳಿದರಲ್ಲದೆ ನನ್ನ ಅಭಿಪ್ರಾಯಕ್ಕೆ ವೇದಿಕೆಯ ಮೇಲಿದ್ದವರ ಪೂರ್ಣ ಬೆಂಬಲವೂ ದೊರಕಿತು. ಒಬ್ಬರಾದ ಮೇಲೊಬ್ಬರು ನನ್ನ ಅಭಿಮತವನ್ನು ಪುಷ್ಟೀಕರಿಸಿ ಮಾತನಾಡಿದರು. ಬ್ರಿಟಿಷ್ ಸಾಮಾನುಗಳ ಬಹಿಷ್ಕಾರವು ಉದ್ದೇಶವನ್ನು ಸಾರ್ಥಕಗೊಳಿಸದಿರುವುದಲ್ಲದೆ ಅದನ್ನನುಸರಿಸಿದರೆ ತಾವು ನಗೆಗೀಡಾಗುವೆವೆಂದು ಮುಖಂಡರಿಗೆ ವ್ಯಕ್ತವಾಯಿತು. ಅಲ್ಲಿ ನೆರೆದಿದ್ದ ಪ್ರತಿಯೊಬ್ಬರ ಮೈಮೇಲೂ ಯಾವುದಾದರೊಂದು ಬ್ರಿಟಿಷ್ ಪದಾರ್ಥವಿದ್ದೇ ಇದ್ದಿತು. ಆದುದರಿಂದ ಈ ಗೊತ್ತುವಳಿಗೆ ಒಪ್ಪಿಗೆ ಕೊಟ್ಟವರೇ ಅದನ್ನು ನಡೆಸುವುದಕ್ಕಾಗದಿರುವಾಗ ಅದಕ್ಕೆ ಸಮ್ಮತಿ ಕೊಟ್ಟರೆ ಅನರ್ಥವೇ ಹೊರತು ಬೇರೆಯೇನೂ ಇಲ್ಲವೆಂದು ಅಲ್ಲಿದ್ದ ಅನೇಕರಿಗೆ ಮನದಟ್ಟಾಯಿತು.

'ಕೇವಲ ವಿದೇಶೀ ವಸ್ತ್ರದ ಬಹಿಷ್ಕಾರದಿಂದ ನಮಗೆ ತೃಪ್ತಿಯಾಗುವುದಿಲ್ಲ. ನಮ್ಮ ಅವಶ್ಯಕತೆಗೆ ಬೇಕಾದಷ್ಟು ಸ್ವದೇಶೀ ಬಟ್ಟೆಯನ್ನು ತಯಾರು ಮಾಡಲು ಮತ್ತು ವಿದೇಶೀ ವಸ್ತ್ರವನ್ನು ಪೂರ್ತಿಯಾಗಿ ತೊಲಗಿಸಲು ಎಷ್ಟು ಕಾಲ ಹಿಡಿಯುವುದೋ ಯಾರಿಗೆ ಗೊತ್ತು? ಬ್ರಿಟಿಷರ ಮೇಲೆ ಒಡನೆಯೇ ಪರಿಣಾಮವೆಸಗುವಂತಹ ಸಾಧನವು ನಮಗೆ ಬೇಕು. ವಿದೇಶೀ ವಸ್ತ್ರ ಬಹಿಷ್ಕಾರವಿರಲಿ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಅದರ ಜೊತೆಗೆ ಇನ್ನೂ ಶೀಘ್ರವಾದ ತ್ವರಿತವಾದ ಸಾಧನವನ್ನು ನಮಗೆ ತೋರಿಸಿ' ಎಂಬುದೇ ಒಟ್ಟಿನಲ್ಲಿ ಮೌಲಾನಾ ಹಜರತ್ ಮೋಹಾನಿಯವರ ಮಾತಾಗಿದ್ದಿತು. ಅವರ ಭಾಷಣವನ್ನು ನಾನು ಕೇಳುತ್ತಿದ್ದ ಹಾಗೆಯೇ ವಿದೇಶೀ ವಸ್ತ್ರ ಬಹಿಷ್ಕಾರದ ಜೊತೆಗೆ ಇನ್ನಾವುದಾದರೂ ಹೊಸದೊಂದು ಅಗತ್ಯವೆಂದು ನನಗೆ ತೋರುತ್ತಿತ್ತು. ಈ ಬಹಿಷ್ಕಾರವನ್ನು ಕೂಡಲೇ ಒಡನೆಯೇ ನಡೆಸುವುದು ಅಸಾಧ್ಯವಾಗಿ ಅನಿಶ್ಚಯವೆಂದು ನನಗೆ ಆಗ ತೋರಿತು. ಇಷ್ಟು ಬೇಗನೆ ನಾವು ನಮಗೆ ಬೇಕಾದಷ್ಟು ಖಾದಿಯನ್ನು ಉಂಟುಮಾಡಿಕೊಳ್ಳಬಲ್ಲೆವೆಂದು ಆ ಕಾಲದಲ್ಲಿ ನನಗೆ ಗೊತ್ತಿರಲಿಲ್ಲ. ಇದನ್ನು ಕಂಡುಹಿಡಿದುದು ಆ ಮೇಲೆ. ಆದರೆ ಈ ಬಹಿಷ್ಕಾರವನ್ನು ಸಾಧಿಸುವುದಕ್ಕಾಗಿ ನಾವು ಗಿರಣಿಗಳನ್ನು ನಂಬಿದರೆ ನಮಗೆ ಮೋಸವಾಗುವುದೆಂದು ಆಗ ಕೂಡ ನನಗೆ ಗೊತ್ತಿದ್ದಿತು. ನಾನು ಇನ್ನೂ ಈ ಉಭಯ ಸಂಕಟದಲ್ಲಿರುವಾಗಲೇ ಮೌಲಾನಾರು ತಮ್ಮ ಭಾಷಣವನ್ನು ಮುಗಿಸಿದರು.

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ವಿವರ.

ಈ ತಾ. 7ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ವಿವರ.—

ಕಮಿಶನರು ಮತ್ತು ಬೋರ್ಡಿನ ಅಧ್ಯಕ್ಷರು ಆದ ಮಿ. ಪ್ರೀಸ್ಟ್ಲಿಯವರು, ಎಗ್ಸಿಕ್ಯೂಟಿವ್ ಇಂಜಿನಿಯರ್ ಆದ ಮಿ. ಬ್ರಾಂಡ್‌ಟನವರು ಮತ್ತು ಮಿ. ಶ್ರೀಪತಿರಾಯರು, ಇವರಲ್ಲದೆ ಬಾಕಿ ಮೆಂಬರುಗಳೆಲ್ಲರೂ ಹಾಜರಿದ್ದರು.

ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಮೀಟಿಂಗಿನ ಮುಂದಿಡಲಾಯಿತು.

I. ವಿದ್ಯಾ ಕಮಿಟಿಯ ವರದಿಯು ಓದಲಾಯಿತು. ಈ ವರದಿಯನ್ನು ಚರ್ಚಿಸಬೇಕೆಂದು ಶಾಲಾ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರು ಸೂಚಿಸಿದರು. ಮಿ. ಯಸ್. ಯನ್. ರಾಮಶೆಟ್ಟಿಯವರೂ ಮತ್ತು ಯಸ್. ಮುದ್ದಪ್ಪನವರು ಮೇಲಿನ ಸೂಚನೆಯನ್ನು ವಿರೋಧಿಸಿ, ಸದರಿ ವರದಿಯನ್ನು ತಿರಸ್ಕರಿಸಬೇಕೆಂದರು. ಸೂಚನೆಯನ್ನು ಓಟಿಗೆ ಹಾಕಿದಲ್ಲಿ ವರದಿಯನ್ನು ಚರ್ಚಿಸಬೇಕೆಂದು ಬಹುಮತದಿಂದ ತೀರ್ಮಾನಿಸಲ್ಪಟ್ಟಿತು. ಕೂಡಲೆ ಮೆಂಬರುಗಳಾದ ಯನ್. ಮುದ್ದಪ್ಪನವರು, ಯಸ್. ಯನ್. ರಾಮಶೆಟ್ಟಿಯವರು, ಅಜ್ಜಮಾಡ ಮಾದಪ್ಪನವರು, ಪುತ್ತರಿರ ಮುದ್ದಯ್ಯನವರು ಮತ್ತು ಐನಂಡ ಮಾದಪ್ಪನವರು ತಮ್ಮ ಆಕ್ಷೇಪಣೆಯನ್ನು ಸೂಚಿಸಲು ಮೀಟಿಂಗಿನಿಂದ ಎದ್ದು ಹೋದರು. ನಂತರ ರಿಪೋರ್ಟು ಚರ್ಚಿಸಲ್ಪಟ್ಟು ಈ ಕೆಳಗಿನ ಠರಾವುಗಳು ಪಾಸು ಮಾಡಲಾದವು.

1. ಪೊಳ್ಳಿಬೆಟ್ಟ ಶಾಲೆ—ಈ ಸ್ಕೂಲನ್ನು ಇಡಲು ಇಂಡಿಯನ್ ಆಫೀಸರುಗಳ ಕ್ವಾರ್ಟರ್ಸನ್ನಾಗಲೀ, ಪಿ. ಡಬ್ಲ್ಯು. ಡಿ. ಸೆಕ್ಷನ್ ಆಫೀಸರ ಕ್ವಾರ್ಟರ್ಸನ್ನಾಗಲೀ ಕೇಳಬೇಕು, ಮತ್ತು ಇದರ ರಿಪೇರಿ ಖರ್ಚು ಮತ್ತು ಫರ್ನೀಚರುಗಳ ಕ್ರಯವನ್ನು ಅಲ್ಲಿಯ ಜನರು ಕೊಡತಕ್ಕದ್ದು. ನಂತರ ಬೋರ್ಡಿನವರು ಒಬ್ಬ ಉಪಾಧ್ಯಾಯರನ್ನೂ, ಸಾದಿಲ್ವಾರು ಖರ್ಚಿಗೆ 30 ರೂ. ನ್ನೂ ಮಂಜೂರು ಮಾಡುವರು.

2. ಚೆಂಬುಶಾಲೆ—ಜನರು ತಮ್ಮ ಸ್ವಂತ ಖರ್ಚಿನಿಂದ ತಕ್ಕದಾದ ಒಂದು ಕಟ್ಟಡವನ್ನು ಕಟ್ಟಿಸಿದರೆ ಬೋರ್ಡಿನವರು ಫರ್ನಿಚರು ಮತ್ತು ಸಾದಿಲ್ವಾರು ಖರ್ಚಿಗೆ 230 ರೂ. ಕೊಡುವರು.

3 ಕೊಂಬುಕೊಲ್ಲಿ ಶಾಲೆ—ಜನರು ತಮ್ಮ ಸ್ವಂತ ಖರ್ಚಿನಿಂದ ತಕ್ಕದಾದ ಒಂದು ಕಟ್ಟಡವನ್ನು ಕಟ್ಟಿಸಿದರೆ ಬೋರ್ಡಿನವರು ಫರ್ನಿಚರು ಮತ್ತು ಸಾದಿಲ್ವಾರು ಖರ್ಚಿಗೆ 230 ರೂ. ಕೊಡುವರು.

4. ಬೇಲೂರು, ಐಗೂರು, ಬೀರುಗ, ನಾಲ್ಕೇರಿ ಮತ್ತು ಬಿಳುಗುಂದ ಮುಸ್ತಫೀದರ ಖಾಸಗಿ ಶಾಲೆಗಳಿಗೆ ತಿಂಗಳೊಂದರ 10 ರೂ. ಯಂತೆ ಗ್ರ್ಯಾಂಟ್ ಕೊಡುವಂತೆ ಸಿಫಾರಸು ಮಾಡುತ್ತ ಇದಕ್ಕಿರುವ ಹಣವನ್ನು ಮಂಜೂರು ಮಾಡುವುದನ್ನು ಬರುವ ಬಡ್ಜೆಟ್ ಮೀಟಿಂಗಿನಲ್ಲಿ ಚರ್ಚಿಸಲ್ಪಡುವದು.

5. ಶ್ರೀಮಂಗಲ ಪೇಟೆ ಶಾಲೆ—ಜನರು ತಮ್ಮೊಳಗೆ ಕಟ್ಟಡಕ್ಕೆ ಬೇಕಾಗುವ ಬಾಕಿ ಹಣವನ್ನು ಜಮಾಯಿಸುವ ಶರತ್ತಿನ ಮೇರೆ 1000 ರೂ. ಮಂಜೂರು ಮಾಡಲಾಯಿತು.

6. ಹೆಬ್ಬಾಲೆ ಶಾಲೆ—ಕಟ್ಟಡಕ್ಕೆ 600 ರೂ. ಕೊಡಲಾಯಿತು. ಬಾಕಿ ಹಣವನ್ನು ಜನರು ಕೇಳಬಹುದು ಇಲ್ಲವೆ ವ್ಯವಹಾರ ಬೇಕು.

7. ತಿರುಂಗಾಲ ಶಾಲೆ—ಗ್ರಾಮಸ್ಥರು ಕಟ್ಟಡವನ್ನು ಸಾಕಷ್ಟು ವಿಸ್ತರಿಸುವವರೆಗೆ ಹೆಚ್ಚಿನ ಒಬ್ಬ ಉಪಾಧ್ಯಾಯರ ನೇಮಕವನ್ನು ಆಲೋಚಿಸಲಾಗುವದಿಲ್ಲ.

8. ಇಂಕನಹಳ್ಳಿ ಶಾಲೆ—ಕಟ್ಟಡಕ್ಕೆ 450 ರೂ. ಮಂಜೂರಾಯಿತು. ಗ್ರಾಮಸ್ಥರು ಹಣ ಕೊಡಬೇಕಾದುದಿಲ್ಲ.

9. ಪೆರಾಜೆ ಶಾಲೆ—ಜನರು ಚಂದಾವೇನೂ ಕೂಡಲು ತಯಾರಾಗದ್ದರಿಂದ ಕಟ್ಟಡಕ್ಕೆ ಹಣ ಕೊಡಲಾಗುವದಿಲ್ಲ.

10. ಕೊಟ್ಟೂರು ಶಾಲೆ—ಕಟ್ಟಡವನ್ನು ವಿಸ್ತರಿಸಲು ಬೇಕಾಗುವ 1000 ರೂಪಾಯಿಯಲ್ಲಿ ಜನರು 500 ರೂ. ಜಮಾಯಿಸುವದಾದರೆ ಬೋರ್ಡಿನಿಂದ 500 ರೂ. ಕೊಡಲಾಗುವುದು.

11. ಕುಂಬಳದಾಳು ಶಾಲೆ—ಕಟ್ಟಡವನ್ನು ಗ್ರಾಮಸ್ಥರು ವಿಸ್ತರಿಸಿದರೆ ಅಲ್ಲಿ ಇಂಗ್ಲೀಷು ಕಲಿಸಲು ಹೆಚ್ಚಿನ ಒಬ್ಬ ಉಪಾಧ್ಯಾಯರನ್ನು ಪರೀಕ್ಷಾರ್ಥವಾಗಿ ಇಡಲ್ಪಡುವದು.

12. ಐವತೊಕ್ಲು ಶಾಲೆ—ಬೇರೆ ಶಾಲೆಗಳಿಂದ ತೆಗೆದು ಹೆಚ್ಚಿನ ಒಬ್ಬ ಉಪಾಧ್ಯಾಯರನ್ನು ಕೊಡಲಾಗುವುದು.

13. ಪಾರಾಣೆ ಶಾಲೆ—ಕಟ್ಟಡವನ್ನು ವಿಸ್ತರಿಸಲು 500 ರೂ. ಮಂಜೂರಾಯಿತು. ಬಾವಲಿ ಶಾಲೆಯಲ್ಲಿರುವ (ಕಟ್ಟಿಸಿದವರ) ಹೆಸರಿನ ಹಲಿಗೆಯನ್ನು ಈಗ ವಿಸ್ತರಿಸುವ ಕಟ್ಟಡದಲ್ಲಿ ಇಡುವದಾದರೆ, ಬಾವಲಿ ಶಾಲೆಯನ್ನು ಮುಚ್ಚಿ, ಆ ಕಟ್ಟಡದ ಸಾಮಾನುಗಳನ್ನು ಪಾರಾಣೆ ಕಟ್ಟಡದ ವಿಸ್ತರಿಸುವಿಕೆಗೆ ಉಪಯೋಗಿಸಬಹುದೆಂದು ತೀರ್ಮಾನವಾಯಿತು.

14. ಮಾದಾಪುರ ಶಾಲೆ—ಜನರು ಅವಶ್ಯವಿರುವಷ್ಟು ಕಟ್ಟಡವನ್ನು ತಮ್ಮ ಸ್ವಂತ ಖರ್ಚಿನಿಂದ ವಿಸ್ತರಿಸಿದರೆ ಹೆಚ್ಚಿಗೆ ಒಬ್ಬ ಉಪಾಧ್ಯಾಯರನ್ನು ಕೊಡಬಹುದು.

15. ನಾಕೋಟೆ ಪರಂಬು ಶಾಲೆ—ಹೆಚ್ಚಿನ ಒಬ್ಬ ಉಪಾಧ್ಯಾಯರಿಗೆ ಈಗಿನ ಬಡ್ಜೆಟ್ಟಿನಿಂದ ಶಾಲಾ ಸಬ್ ಅ. ಇನ್ಸ್‌ಪೆಕ್ಟರು ಹಣ ಒದಗಿಸಿಕೊಡುವದಾದರೆ VII ಸ್ಟೇಂಡಾರ್ಡನ್ನು ತೆರೆಯುವುದು; ಮತ್ತು ಹಾಳಾಗಿರುವ ಈಗಿನ ಶಾಲಾ ಕಟ್ಟಡವನ್ನು ಪುನಹ ಕಟ್ಟಿಸುವ ಅರ್ಧ ಖರ್ಚನ್ನು ಜನರು ಸಂಗ್ರಹಿಸತಕ್ಕದ್ದು.

16. ಹೊದ್ದೂರು ಶಾಲೆ—ಕಟ್ಟಡದ ರಿಪೇರಿಗೂ, ಒಂದು ಬಾವಿಗೂ 250 ರೂ. ಮಂಜೂರಾಯಿತು.

17. ಮದುಗೋಡು ಶಾಲೆ—ಶಾಲೆ ಇರುವ ಜಾಗದ ಮಾಲೀಕರು (ಜಾಗವು ಶಾಲೆಕಟ್ಟಿಸಿದವರದಲ್ಲವಾದುದರಿಂದ) ಸದರಿ ಜಾಗವನ್ನು ಬೋರ್ಡಿಗೆ ವಹಿಸಿ ಕೊಟ್ಟ ಮೇಲೆ ಸಸ್ಥಳದಲ್ಲಿ ಹೆಸರಿನ ಹಲಿಗೆ ಇಡುವ ವಿಷಯ ಯೋಚಿಸಲ್ಪಡುವದು.

18. ಮೈತಾಡಿ ಶಾಲೆ—ಕಟ್ಟಡಕ್ಕೆ ಹೆಂಚು ಹಾಕಲು 300 ರೂ. ಮಂಜೂರಾಯಿತು.

19 ಬೆಳ್ಳುಮಾಡು ಶಾಲೆ—ಮಾಡಿಗೆ ಪೂರ್ತಿ ಹೆಂಚು ಹಾಕಲಿಕ್ಕೆ ಮತ್ತು ಬಾವಿ ರಿಪೇರಿಗೆ 100 ರೂ. ಕೊಡಲಾಯಿತು.

20 ಚೈಯ್ಯಂಡಾಣೆ ಶಾಲೆ—ಬಾವಿ ರಿಪೇರಿಗೆ 50 ರೂ ಮಂಜೂರಾಯಿತು.

21. ಗೋಣಿಕೊಪ್ಪಲು ಬಾಸೆಲ್ ಮಿಶನ್ ಶಾಲೆ—ಇತ್ತೀಚೆಗೆ ಸ್ಕೂಲು ಫೀಸು ಮಾಫಿ ಮಾಡುವದಕ್ಕೂ, ಮತ ಬೋಧನೆಯನ್ನು ಬಲಾತ್ಕಾರವಾಗಿ ಕೊಡುವದನ್ನು ನಿಲ್ಲಿಸುವ ದಕ್ಕೂ ಇದರ ಅಧಿಕಾರಿಗಳು ಒಪ್ಪಿರುವದರಿಂದ ಇದರ ವಿಷಯ ಆಲೋಚಿಸತಕ್ಕದ್ದಿಲ್ಲ.

22 ಶ್ರೀಮಂಗಲ ಶಾಲೆ—ಹೆಚ್ಚಿನ ಉಪಾಧ್ಯಾಯರು ಅವಶ್ಯವಿಲ್ಲ.

23 ಬಿರುನಾಣಿ ಶಾಲೆ—(ಮರೆನಾಡು) ಗ್ರಾಮಸ್ಥರು 700 ರೂ. ಶೇಖರಿಸಿದರೆ ಬೋರ್ಡಿನಿಂದ 700 ರೂ ಕೊಡಲಾಗುವದು

24. ಹುದಿಕೇರಿ ಶಾಲೆ—ಬೋರ್ಡಿಂಗಿಗೆ ತಿಂಗಳಿಗೆ 13 ರೂ. ಯಂತೆ ಗ್ರಾಂಟು ಕೊಡಲಾಗುವದು ಇದಕ್ಕಿರುವ ಹಣ ಬರುವ ಬಜೆಟ್ಟಿನಲ್ಲಿ ಇಡಲಾಗುವದು

25 ಮಾಯಮುಡಿ ಶಾಲೆ—ಕಟ್ಟಡವನ್ನು ವಿಸ್ತರಿಸಲು ಜನರು ಅಷ್ಟೇ ಹಣ ಜಮಾಯಿಸಿದರೆ ಬೋರ್ಡಿನವರು 500 ರೂ. ಕೊಡುವರು.

26. ಚೇರಳ ಶ್ರೀಮಂಗಲ ಶಾಲೆ—ಒಬ್ಬ ಹೆಚ್ಚಿನ ಉಪಾಧ್ಯಾಯರನ್ನು ಮಂಜೂರು ಮಾಡಲಾಯಿತು. ಇದಕ್ಕೆ 240 ರೂ. ಬರುವ ಬಜೆಟ್ಟಿನಲ್ಲಿ ಇಡಲಾಗುವುದು

27. ಕಾಟಕೇರಿ ಶಾಲೆ—ಕಟ್ಟಡದ ಅಭಿವೃದ್ಧಿಗೆ 60 ರೂ ಮಂಜೂರಾಯಿತು.

28. ನೆಲಜಿ ಶಾಲೆ—ಒಡಗಿ ಕೆಲಸದ ತರಬೇತನ್ನು ನಿಲ್ಲಿಸುವಂತೆಯೂ, ಒಂದು ಬಾವಿಗೂ ಮತ್ತು ಕಿಟಿಕಿಗಳ ರಿಪೇರಿಗೂ 160ರೂ. ಕೊಡುವಂತೆಯೂ ತೀರ್ಮಾನವಾಯಿತು

29 ಕಕ್ಕಬೆ ಶಾಲೆ—ಗ್ರಾಮಸ್ಥರು ಕಟ್ಟಡವನ್ನು ವಿಸ್ತರಿಸಿದರೆ, ಒಬ್ಬ ಸ್ಕೂಲ್ ಫೈನಲ್, ತರಬೇತಾದ ಉಪಾಧ್ಯಾಯರ ಸಮೇತ VI ಸ್ಟೇಂಡಾರ್ಡನ್ನು ತೆರೆಯುವಂತೆ ಮಂಜೂರಾಯಿತು ವೆರಾಂಡಕ್ಕೆ 200 ರೂ ಮತ್ತು ನೆಲವನ್ನು ಮಟ್ಟ ಮಾಡಲಿಕ್ಕೆ 20 ರೂ. ಕೊಡುವಂತೆ ನಿಶ್ಚಯವಾಯಿತು. ಉಪಾಧ್ಯಾಯರು 1930—31ರಲ್ಲಿ ಮಾತ್ರ ಇಡಲಾಗುವುದು

30. ತಿಂಗಳಿಗೆ 10ಕ್ಕಿಂತ ಕಮ್ಮಿ ವಿದ್ಯಾರ್ಥಿಗಳು ಬರುವ ಪಂಚಮ ಶಾಲೆಗಳನ್ನೆಲ್ಲಾ ಮುಚ್ಚುವಂತೆ ತೀರ್ಮಾನವಾಯಿತು.

31 ಮೇಲೆ ಸೂಚಿಸಿದ ಶಾಲೆಗಳ ಪೈಕಿ ಹೊಸ ಕಟ್ಟಡಗಳಾಗಬೇಕಾದದಕ್ಕೆ ಪೈಸಾರಿಯಿಂದ ಮರಗಳನ್ನು ಚಾರ್ಜಿಲ್ಲದೆ ಕೊಡುವಂತೆ ಸರ್ಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

32 ವಿದ್ಯಾ ಕಮಿಟಿಯ ಪಠವಿಯಲ್ಲಿ ಸೂಚಿಸಿದಂತೆ ಹೊಸ ಕಟ್ಟಡಗಳ ಖರ್ಚನ್ನು ಅಂದಾಜು ಮಾಡಿ, ಅವುಗಳ ಕೆಲಸದ ಉಸ್ತುವಾರಿ ನೋಡಲು ರೆವಿನ್ಯೂ ಆಫೀಸರುಗಳಿಗೆ ಸಾಧ್ಯವಿಲ್ಲವೆಂದು ತೀರ್ಮಾನವಾಯಿತು

33 20ಕ್ಕಿಂತ ಕಮ್ಮಿ ಮಹಮ್ಮದೀಯ ವಿದ್ಯಾರ್ಥಿಗಳು ಓದುತ್ತಿರುವ ಶಾಲೆಗಳಿಗೆ ಉರ್ದು ಉಪಾಧ್ಯಾಯರುಗಳನ್ನು ನೇಮಿಸಲು ಸರ್ಕಾರ ಪ್ರಯತ್ನ ಮಾಡಬೇಕೆಂದು ನಿಶ್ಚಯವಾಯಿತು.

34 ಕಟ್ಟಡಗಳಿಗೆ ಹಣ ಮಂಜೂರು ಮಾಡಿರುವ ಸಂದರ್ಭಗಳಲ್ಲಿ ಹಣ ಖರ್ಚು ಮಾಡುವ ಮೊದಲು ನ್ಯಾಯವಾದ ಅಂದಾಜು ಪಟ್ಟಿಯನ್ನು ತಯಾರಿಸಿ ಮಂಜೂರಾತಿ ಪಡೆಯಬೇಕು ಮತ್ತು ಗ್ರಾಮಸ್ಥರು ಜಮಾಯಿಸುವ ಹಣವೆಲ್ಲಾ ಆ ಗತ್ಯವಿರುವ ಕಟ್ಟಡ ಕೆಲಸದಲ್ಲಿ ಖರ್ಚಾದ ಮೇಲೆ ಬೋರ್ಡಿನಿಂದ ಹಣ ತೆಗೆದುಕೊಳ್ಳಬೇಕು

II. ಕಾಕೋಟುಪರಂಬು ಶಾಲೆಯಲ್ಲಿ VII ಸ್ಟೇಂಡಾರ್ಡ ತೆರೆಯುವ ಮತ್ತು ಒಬ್ಬ ಹೆಚ್ಚಿಗೆ ಉಪಾಧ್ಯಾಯರನ್ನು ನೇಮಿಸುವ ವಿಷಯ ಶಾಲಾ ಇನ್‌ಸ್ಪೆಕ್ಟರ ಪತ್ರ ಓದಲಾಯಿತು

ಈ ವರ್ಷದ ಬಜೆಟಿನಿಂದ ಸಬ್ ಅ. ಇನ್‌ಸ್ಪೆಕ್ಟರು ಹಣ ಒದಗಿಸಬಹುದಾದರು ಈ ವಿಷಯವನ್ನು ಜಾರಿಮಾಡುವದು

III ಗ್ರಾಮಸ್ಥರು ತಮ್ಮ ಸ್ವಂತ ಖರ್ಚಿನಿಂದ ಕಟ್ಟಡವನ್ನು ಸಾಕಷ್ಟು ವಿಸ್ತರಿಸಿದರೆ ಕಕ್ಕಬೆ ಶಾಲೆಯಲ್ಲಿ VI ಸ್ಟೇಂಡಾರ್ಡನ್ನು ತೆರೆಯುವ ವಿಷಯ ಶಾಲಾ ಇನ್‌ಸ್ಪೆಕ್ಟರವರ ಪತ್ರವು ಓದಲಾಯಿತು.

ಇದು ಮಂಜೂರಾಯಿತು. ಇದಕ್ಕೆ ಬೇಕಾದ ಹಣವು ಬರುವ ಬಜೆಟಿನಲ್ಲಿ ಇಡಲಾಗುವದು ಈ ಮಧ್ಯೆ, ಪೊನ್ನಂಪೇಟೆ ಸರಕಾರಿ ಶಾಲೆಯಲ್ಲಿ ಕೆಲಸಮಾಡುತ್ತಿರುವೆಂದು ಹೇಳುವ ಬೋರ್ಡಿನ ಉಪಾಧ್ಯಾಯರನ್ನು ವಾಪಸ ಕಳುಹಿಸುವಂತೆ ಶಾಲಾ ಸಬ್ ಅ ಇನ್‌ಸ್ಪೆಕ್ಟರು ಸರ್ಕಾರಕ್ಕೆ ಬರೆಯುವಂತೆ ತೀರ್ಮಾನವಾಯಿತು.

4. ಕುತ್ತೂರಿನಲ್ಲಿರುವ ಶಾಲೆ ಓದಲಿಕ್ಕೆ ಬೋರ್ಡಿಗೆ ಅವಶ್ಯವಿಲ್ಲವೆಂದು ಬರೆದ ಕಮಿಷನರ ಪತ್ರ ಓದಲಾಯಿತು

ಈ ಕಟ್ಟಡವು ಶಾಲೆ ಇಡಲು ಯೋಗ್ಯವಾದದ್ದೋ ಎಂಬದು ಶಾಲಾ ಸಬ್ ಅ. ಇನ್‌ಸ್ಪೆಕ್ಟರು ನೋಡುವಂತೆ ತೀರ್ಮಾನವಾಯಿತು.

5. ಸೋಮವಾರಪೇಟೆ ಆಸ್ಪತ್ರೆಗೆ ಫರ್ನಿಚರಿಗಾಗಿ ಖರ್ಚು ಮಾಡಿ

6. ಬೋರ್ಡು ಸದಸ್ಯರಾದ ಇತ್ತೀಚಿನ ಸುಂಟಿಕೊಪ್ಪದಲ್ಲಿರುವ ಮಿ. ಕೊಡಂದೆರ ದೇವಯ್ಯನವರ ಗಾಡಿಯೋಳವ ವಿಷಯ ಅವರು ನಡಿಸಿದ ಕೇಸಿನ ಕೋರ್ಟು ಖರ್ಚನ್ನು ಬೋರ್ಡು ಕೊಡಬೇಕೆಂದು ದೇವಯ್ಯನವರು ಬರೆದ ಪತ್ರ ಓದಲಾಯಿತು 74—1—0 ಕೊಡಲು ಮಂಜೂರಾಯಿತು

7 ಹರಿಹರ ಶಾಲೆಯಲ್ಲಿ 10 ರೂ. ಗೆ ಮಾರದ ಜಾಗೆ ನಿಂದ ಮಿ. ಎಂ ಸುಬ್ಬಯ್ಯನವರ ನೆಡಿಸ ಹಲಿಗೆಯನ್ನು ಇಡಬೇಕೆಂದು ಶಾಲಾ ಸಬ್ ಅ ಇನ್‌ಸ್ಪೆಕ್ಟರು ಬರೆದ ಪತ್ರ ಓದಲಾಗಿ ಮಂಜೂರು ಮಾಡಲಾಯಿತು

8 0—8—0 ಕ್ರಯದ 'ಕಾವೇರಿ ಮಹಾತ್ಮೆ' ಪುಸ್ತಕದ 80 ಪ್ರತಿಗಳನ್ನು ತೆಗೆದುಕೊಳ್ಳಲು ಮಂಜೂರಾತಿ ಬೇಕೆಂದು ಸ ಅ ಇನ್‌ಸ್ಪೆಕ್ಟರು ಬರೆದ ಕಾಗದ ಓದಲಾಗಿ ಮಂಜೂರು ಮಾಡಲಾಯಿತು

9 ಬೋರ್ಡಿನ ಉಳಿತಾಯವಾದ 40 000 ರೂಪಾಯನ್ನು ಶೇಕಡ ಸುಮಾರು 5 ರ ಬಡ್ಡಿಯಲ್ಲಿ ಸರ್ಕಾರಕ್ಕೆ ಸ್ವಲ್ಪ ಕಾಲದ ವರೆಗೆ ಸಾಲಕೊಡುವಂತೆಯೂ, ಜಿಲೆ ಕಮ್ಮಿಯಾಗಿ ನಷ್ಟವುಂಟಾಗದಂತೆ ಅದನ್ನು ಬೇಗನೆ ವಾಪಸು ಹೊಂದಿಕೊಳ್ಳುವಂತೆಯೂ ತೀರ್ಮಾನಿಸಲಾಯಿತು.

10. ವೀರಾಜಪೇಟೆಯ ಬಳಿ ಸೋರ್ಲಬಿ ರಸ್ತೆಯಲ್ಲಿ ಒಂದು ಸೇತುವೆಯನ್ನು ಹೊಸತ ಕಟ್ಟಲಿಕ್ಕೆ 1600 ರೂ ಮಂಜೂರಾಗಬೇಕೆಂದು ಎಗ್ಸಿಕ್ಯುಟಿವ್ ಇಂಜನಿಯರು ಬರೆದ ಕಾಗದ ಓದಲಾಗಿ ಮಂಜೂರು ಮಾಡಲಾಯಿತು

11 ಎಕೌಂಟೆಂಟ್ ಜನರಲರು ಕೇಳಿದ ಮೇರೆ 1928 29 ರಲ್ಲಿ ಕೊಂಡುಕೊಂಡ ದೋಣಿಗಳ ಕ್ರಯ 450 ರೂ ಮಂಜೂರು ಮಾಡಲಾಯಿತು

12 ಕಾಕೋಟು ಪರಂಬು ಶಾಲೆಯ ಹಿಂದುಗಡೆ ಕೋಣೆಯನ್ನು ಗೋಡೆ ತೆಗೆದು ವೆರಾಂಡ ಮಾಡಲಿಕ್ಕೆ 50 ರೂ ಮಂಜೂರಾಗಬೇಕೆಂಬ ಎಗ್ಸಿಕ್ಯುಟಿವ್ ಇಂಜನಿಯರ ಪತ್ರ ಓದಲಾಯಿತು ಇದು ಮಂಜೂರಾಯಿತು ಆದರೆ ಆ ಗೋಡೆಯ ತೆಗೆಯುವಿಕೆಯಿಂದ ಕಟ್ಟಡದ ಮುಖ್ಯ ಭಾಗಕ್ಕೆ ದೋಷವಿಲ್ಲವೆಂತಾದರೆ ಈ ಕೆಲಸವನ್ನು ಕೈಕೊಳ್ಳುವ ಅವಶ್ಯವಿಲ್ಲ

13 1924 ರಿಂದ ಗೋಣಿಕೊಪ್ಪಲು ಆಸ್ಪತ್ರೆಗೆ ಒಳಕೊಳ್ಳುವ ರೋಗಿಗಳು ಯಾರೂ ಬಾರದೆ ಇರುವದರಿಂದ ಆ ವಾರ್ಡನ್ನು ಮುಚ್ಚಬೇಕೆಂದೂ, ಹಾಗೆ ಮುಚ್ಚಿದರೆ ಅಲ್ಲಿರುವ ಇಬ್ಬರು ಆಳುಗಳನ್ನು ಕೆಲಸದಿಂದ ಬಿಡಬೇಕೆಂದೂ ಬರೆದ ಸಿವಿಲ್ ಸರ್ಜನರ ಕಾಗದ ಓದಲಾಯಿತು

ಸದರಿ ವಾರ್ಡನ್ನು ಮುಚ್ಚಕೂಡದೆಂದು ತೀರ್ಮಾನಿಸಲಾಯಿತು

14 ಶನಿವಾರಸಂತೆ ಶಾಲೆಯಲ್ಲಿ ಮಹಮ್ಮದೀಯ ಹುಡುಗರಿಗೆ ಉರ್ದು ಕಲಿಸುವ ಏರ್ಪಾಡು ಮಾಡಬೇಕೆಂಬ ಅರ್ಜಿ ಓದಲಾಯಿತು

20 ವಿದ್ಯಾರ್ಥಿಗಳು ಸಿಕ್ಕಿದಲ್ಲಿ ಈ ಏರ್ಪಾಡು ಮಾಡಬಹುದೆಂದು ತೀರ್ಮಾನವಾಯಿತು

15 ಟೋಲ್‌ಗೇಟ್, ಮಾರ್ಕೆಟ್ ಮುಂತಾದ ಕಂಟ್ರಾಕ್ಟದಾರರು ತಮ್ಮ ಕಂತುಗಳನ್ನು ಕೊಡದೆ ತಪ್ಪಿದರೆ ಶಿಕ್ಷಿಸುವ ಕರಾರನ್ನು ಎಗ್ರಿಮೆಂಟಿನಲ್ಲಿ ಸೇರಿಸಬಹುದೆಂಬ ಮದ್ರಾಸು ಎಕೌಂಟೆಂಟ್ ಜನರಲರವರ ಸಿಬ್ಬಂದಿಯವರ ಇನ್‌ಸ್ಪೆಕ್ಷನ್ ಸೂಚನೆಯು ಓದಲಾಯಿತು.

ಈ ಸೂಚನೆಯು ಮಂಜೂರಾಗಲಿಲ್ಲ

16 ಸೋಮವಾರಪೇಟೆ ಆಸ್ಪತ್ರೆಯ ಎಬ್‌ಸ್ಟ್ರಾಕ್ಟ್ ಕೊಡುವ 390 ರೂಯನ್ನು ಎಕೌಂಟೆಂಟ್ ಜನರಲರವರು ಕೇಳಿದ ಮೇರೆ ಮಂಜೂರು ಮಾಡಲಾಯಿತು.

ಪಿ ಎ ಚಂಗಪ್ಪ
(ಪ್ರೆಸಿಡೆಂಟ್)

ಶ್ರೀ ಶ್ರೀಕಂಠೇಶ್ವರ
ಚಿಕ್ಕವೀರಣ್ಣ ಆಯಿಲ್ ಮಿಲ್ಸ್
ಈಡಿಗ ಯಕ್ಸ್‌ಟೆನ್ಷನ್,
ಮೈಸೂರು.

ನಮ್ಮಲ್ಲಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಫಿಲ್ಟರುಗಳಿಂದ ಶೋಧಿಸಲ್ಪಟ್ಟ ಅಸ್ಪಷ್ಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸಹ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯಲಪೇಕ್ಷೆಯುಳ್ಳವರು ಸಂತೆಪೇಟೆಯಲ್ಲಿ ಇರುವ ನನ್ನ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರ ದ್ವಾರ ತಿಳಿಯಬಹುದು.

26—4

ಒಂದೇ ಬ್ಲಾಕಿನಲ್ಲಿರುವ ಒಳ್ಳೆ ಸೊತ್ತುಗಳು ಮಾರಾಟಕ್ಕಿವೆ.

ಕೊಡಗು ಅಮ್ಮತ್ತಿ—ಸಿದ್ದಾಪುರನಾಡು ಮಾಲ್ದಾರೆ ಗ್ರಾಮದಲ್ಲಿ ಸರ್ಕಾರಿ ರಸ್ತೆ ಮುಟ್ಟಿರುತ್ತೆ ಸಿದ್ದಾಪುರದಿಂದ ಆರು ಮೈಲು ದೂರದಲ್ಲಿ ಮೈಸೂರಿಗೆ ಹೋಗುವ ರಸ್ತೆಯಲ್ಲಿದೆ ಮೋಟಾರು ಬಸ್ಸುಗಳ ಅನುಕೂಲಗಳಿವೆ

ಸೊತ್ತುಗಳ ವಿವರ—

17 ಎಕ್ರೆ ಕಿತ್ತಳೆತೋಟ ಬಹು ಒಳ್ಳೆ ಸ್ಥಿತಿಯಲ್ಲಿದೆ.
30 ಎಕ್ರೆ ನೀರಾವರಿ ಗದ್ದೆ
13 ಎಕ್ರೆ ಹೊಲ (ರಾಗಿ ಬೆಳೆಯುವಂಥಾದ್ದು)
3 ಎಕ್ರೆ ಕಾಫಿತೋಟ ಬಹು ಒಳ್ಳೆ ಸ್ಥಿತಿಯಲ್ಲಿದೆ
50 ಎಕ್ರೆ ಜಾತಿಮರಗಳಿರುವ ಹೊಸ ಕಾಡು (ಕಾಫಿ ಮತ್ತು ಕಿತ್ತಳೆ ಸಾಗುವಳಿಗೆ ಯೋಗ್ಯವಾದದ್ದು)

ಇದರ ಕ್ರಯದ ವಿಷಯ ಕೆಳಗೆ ಕಂಡ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಟಿ. ಎ. ಕುಪ್ಪುಸಾಮಿ ಪಿಳ್ಳೆ,
4—4 ಸಿದ್ದಾಪುರ (ಕೊಡಗು)

Wanted.

Candidates for Wireless Telegraph and Station Master's Courses Railway Fare PAID Boarding arrangements. Prospectus on two anna stamps—
Royal Wireless & Telegraph College,
12—8 DELHI.

Wanted.

Branch Secretaries at Siddapur and Somvarpet on Rs 50—5—75 plus consolidated (Office) allowance of Rs 40/ per mensem. Selected candidates have to deposit Rs 235/ Very decent prospects for honest and influential gentlemen Particulars on application

Apply to —
The Divisional Secretary,
N L S R Bank Ltd.,
4—2 (Madras)
Puttur, South Kanara.

ಸಣ್ಣ ಹುಡುಗರ ಸಲುವಾಗಿ

ದೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿಗೆ 0—14—2 ಟಿ. ಖ. 0—9—0

ಕೆ. ಟಿ. ದೋಂಗರೆ ಕಂಪೆನಿ,
52 20 ಗಿರಗಾಂವ, ಮುಂಬಯಿ.

ವರ್ತಮಾನ ಸಂಗ್ರಹ.

ಒಳದೇಶ.

ಕೌನ್ಸಿಲು ಠರಾವಿನ ಮೇರೆ ಹೆಚ್ಚಿಗೆ ಮೂರು ಸಹಕಾರಿ ಇನ್ಸ್‌ಪೆಕ್ಟರುಗಳನ್ನು ನೇಮಿಸಲು ಮಂಜೂರಾಗಿದೆ.

ಮಡಿಕೇರಿ ಪಾರುಪತ್ಯಗಾರರಿಗೆ 3ನೇ ಕ್ಲಾಸ್ ಮೇಜಿಸ್ಟ್ರೇಟ್ ಅಧಿಕಾರ ಕೊಡುವಂತೆ ನಿಶ್ಚಯಿಸಿದ್ದಾರೆ.

ವೆಟರಿನರಿ ಅಸಿಸ್ಟೆಂಟ್ ಸರ್ಜನರ ತರಬೇತಿಗೆ ಮೆ. ಅಪ್ಪಾರಂಡ ಪಿ. ಐಯ್ಯಪ್ಪನವರೂ ಆರಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ತಾ 7 ರಿಂದ 21ರ ವರೆಗೆ ಮಡಿಕೇರಿಯಲ್ಲಿ 7. 14 ಇಂಚು ಮಳೆಯಾಗಿದೆ. ಜೋರಾಗಿ ಮಳೆ ಹೊಡೆದ ತಾ. 8ರಲ್ಲಿ 1. '16 ಇಂಚು ಬಿತ್ತು.

ಮೆ. ತಿಗ್ಗಾಲು ಶಂಕರನಾರಾಯಣ ಬಿ ಎ ಯವರು ಎಲ್ ಎಲ್ ಬಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯಲು ಸಂತೋಷಪಡುತ್ತೇವೆ.

ಮೆ. ಮಾಳೇಟಿರ ಡಬ್ಲ್ಯು. ಸುಬ್ರಹ್ಮಣ್ಯನವರು ಜುಲೈ ತಾ. 1 ರಿಂದ ಮಡಿಕೇರಿ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಲ್ಪಟ್ಟಿರುವರು.

ಈ ಮೊದಲು ಸ್ಪೆನ್ಸರ್ ಕಂಪೆನಿಯ ಮೇನೇಜರಾಗಿದ್ದ ಮೆ. ಪಟ್ಟಮಾಡ ಚಿಣ್ಣಪ್ಪನವರು ಈಗ ಮಡಿಕೇರಿಯಲ್ಲಿ 'ಕುರ್ಗ್ ಎಂಪೋರಿಯಮ್' ಎಂಬ ಹೊಸ ಅಂಗಡಿಯನ್ನು ತೆರೆದಿರುವರು.

ಕಳೆದ ವಾರ ಪ್ರಕಟಿಸಿದ ಹೆಸರುಗಳಲ್ಲದೆ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಕಾನ್ವೆಂಟ್ ಹೈಸ್ಕೂಲಿನಿಂದ ಶ್ರೀಮತಿ ಕೋದಂಡ ಪಿ. ಕುಂಞಮ್ಮನವರೂ, ಸೆಂಟ್ರಲ್ ಹೈಸ್ಕೂಲಿನಿಂದ ಮೆ. ಮೂಡೆರ ಟಿ ಐಯ್ಯಪ್ಪನವರೂ ತೇರ್ಗಡೆಯಾಗಿರುವರು.

ಮಡಿಕೇರಿಯಲ್ಲಿರುವ ಸಬ್ ಮೇಜಿಸ್ಟ್ರೇಟರು ವಾರಕ್ಕೆ ಮೂರು ದಿವಸ ಮಡಿಕೇರಿಯಲ್ಲಿಯೂ, ಮೂರು ದಿವಸ ವೀರಾಜಪೇಟೆಯಲ್ಲಿಯೂ ಕೋರ್ಟು ಮಾಡುವಂತೆ ಸ್ಥಳೀಯ ಸರ್ಕಾರದವರು ತೀರ್ಮಾನಿಸಿರುವರು.

ಕಳೆದ ತಿಂಗಳ 26 ರಲ್ಲಿ ನಡೆದಂತೆ ಈ ತಾರೀಕು 30ನೇ ಆದಿತ್ಯವಾರ ಬೆಳಗ್ಗೆ 8 ಗಂಟೆಗೆ ಪೊನ್ನಂಪೇಟೆ ಕುಶಾಲಪುರದಲ್ಲಿ ರಾಷ್ಟ್ರೀಯ ಧ್ವಜಾಭಿವಂದನೆಯು ನಡೆಯುವದೆಂದೂ, ಕೊಡಗಿನಲ್ಲಿರುವ ಸ್ವಯಂಸೇವಕರೆಲ್ಲರೂ ಅಲ್ಲಿಗೆ ಸೇರುವರೆಂದೂ ತಿಳಿಯುತ್ತೇವೆ

ಗೋಣಿಕೊಪ್ಪಲಲ್ಲಿ ದನಗಳ ಪ್ರದರ್ಶನವನ್ನು ನಡಿಸುವದರ ವಿಷಯ ಚರ್ಚಿಸಿ, ಕಕ್ಷ ನಿರ್ಧಾರ ಮಾಡಲು ಮೆ. ಕೋದಂಡ ಸೋಮಣ್ಣನವರ ಅಧ್ಯಕ್ಷತೆಯಲ್ಲಿ ತಾ. 9-6-29 ರಲ್ಲಿ ಗೋಣಿಕೊಪ್ಪಲಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಇದರ ವಿವರವನ್ನು ಈ ವಾರ ಸ್ಥಳ ಸಂಕೋಚವಾದುದರಿಂದ ಬರುವ ವಾರ ಪ್ರಕಟಿಸುವೆವು.

ಹಾಕತ್ತೂರು ಗ್ರಾಮದ ಅಕ್ಕಾರಿ ಖೂನಿಕೇಸಿನಲ್ಲಿ ಮರಣ ಶಿಕ್ಷೆಗೆ ಗುರಿಯಾದವರು ಸ್ಥಳೀಯ ಸರ್ಕಾರಕ್ಕೂ, ವೈಸರಾಯರಿಗೂ ದಯೆ ತೋರಿಸಿ ಜೀವ ಉಳಿಸಬೇಕೆಂದು ಅರ್ಜಿ ಬರಕೊಂಡಿದ್ದಾರೆಂತಲೂ, ಆ ಅರ್ಜಿ ನಾಮಂಜೂರಾಗಿದ್ದರೆ ಜುಲೈ ತಾ 8ರಲ್ಲಿ ಬೆಳಿಗ್ಗೆ 6 ಗಂಟೆಗೆ ಇವರು ಮೂವರೂ ಮಡಿಕೇರಿ ಸಬ್ ಜೈಲಿನಲ್ಲಿ ಗಲ್ಲಿಗೆ ಏರಿಸಲ್ಪಡುವರೆಂತಲೂ ತಿಳಿಯುತ್ತೇವೆ.

ಕಳೆದ ಮಂಗಳವಾರ ಓಂಕಾರೇಶ್ವರ ದೇವಸ್ಥಾನದ ಹಾಲ್‌ನಲ್ಲಿ ರಾ. ಬಾ. ಕೋದಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಮಡಿಕೇರಿ ಕೊಡವರ ಮೀಟಿಂಗು ನಡೆದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ರಾ ಬಾ. ಕೇಟೋಳಿರ ಚಂಗಪ್ಪನವರಿಗೆ ಒಂದು ತಿಂಗಳ ಮಟ್ಟಿಗೆ ಕಮಿಷನರ ಹುದ್ದೆ ದೊರೆತದಕ್ಕೂ, ಮೆ. ಪಾಲೇಕಂಡ ಮೇದಪ್ಪನವರಿಗೆ ಸಬ್ ಜಡ್ಜರ ಹುದ್ದೆ ದೊರೆತದಕ್ಕೂ ಅವರಿಬ್ಬರನ್ನು ಅಭಿನಂದಿಸಿಯೂ, ಚೀಫ್ ಕಮಿಷನರನ್ನು ವಂದಿಸಿಯೂ ಠರಾವುಗಳು ಪ್ಯಾಸ್ಸಾದವೆಂದು ತಿಳಿಯುತ್ತೇವೆ.

ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ. ಕೋದಂಡ ಕಾರ್ಯಪ್ಪನವರು ಕಲ್ಕತ್ತಾದಲ್ಲಿ 'ಟ್ರಾಪಿಕಲ್' ರೋಗಗಳ ಚಿಕಿತ್ಸಾ ತರಬೇತಿಗೆ ಹೋಗುವದರಿಂದ ಜುಲೈ 1ರಿಂದ ಮೆ. ಪುದಿಯತ್ತಿರ ಗಣಪತಿಯವರು ವೀರಾಜಪೇಟೆಯಿಂದ ಫ್ರೇಜರಪೇಟೆಗೆ ವರ್ಗಾಯಿಸಲ್ಪಟ್ಟಿರುವರು. ಮೆ. ಅಜ್ಜಮಾಡ ನಾಚ್ಚಿಯ್ಯನವರು ಮಲೇರಿಯ ಚಿಕಿತ್ಸಾ ತರಬೇತಿಗಾಗಿ ಜುಲೈ 1 ರಲ್ಲಿ ಕಸೌಲಿ ಎಂಬಲ್ಲಿಗೆ ಕಳುಹಿಸಲ್ಪಡುವರು.

ಸುಮಾರು 4 ಅಡಿ ಎತ್ತರದ 1½ ಅಡಿ ಉದ್ದದ ಮುಂಡಕ್ಕೆ ಬಾಗಿರುವ, ಸುಮಾರು ಬಿಳೀ ವರ್ಣದ ದೊಡ್ಡ ಕೋಣ ಒಂದೂ, ಇದೇ ಜಹರಿಯ ಕರೀವರ್ಣದ ಇನ್ನೊಂದು ದೊಡ್ಡ ಕೋಣವೂ ಪಶಾರಿ ಬಂದ. ಈ ತಾ. 17ರಿಂದ ತನ್ನ ಕೋಣಗಳ ಜೊತೆಯಲ್ಲಿ ಸೇರಿಕೊಂಡಿವೆಯೆಂದೂ, ಇವುಗಳ ಮಾಲೀಕರು 20 ದಿವಸಗಳೊಳಗೆ ಬಂದು ಹಿಡಕೊಂಡು ಹೋಗದಿದ್ದರೆ ವೀರಾಜಪೇಟೆ ದೊಡ್ಡಿಗೆ ಕಳುಹಿಸಲಾಗುವದೆಂದೂ ಬಿಳ್ಳೂನಾಡು ಕೆದಮುಳ್ಳೂರು ಗ್ರಾಮದ ಮೆ. ಮಾಳೇಟಿರ ಪಿ. ಮಾಚ್ಚಯ್ಯನವರು ತಿಳಿಸಿರುತ್ತಾರೆ.

ಹಿಂದೂದೇಶ.

ಬೊಂಬಾಯಿ ಗಿರಣಿ ಮಾಲೀಕರಿಗೂ, ಕೆಲಸಗಾರರಿಗೂ ಇರುವ ವಿವಾದವು ಇನ್ನೂ ತೀರ್ಮಾನಿಸಲ್ಪಟ್ಟಿರುವದಿಲ್ಲ. ಕೆಲಸಗಾರರ ಮುಷ್ಕರವು ಅಂತ್ಯಗೊಂಡಿರುವದಿಲ್ಲ. ಹಲವು ಪ್ರಯತ್ನಗಳು ನಿಷ್ಫಲವಾದವು. ಈಗ ಗವರ್ನರು ಎಲ್ಲಾ ಪಾರ್ಟಿಗಳ ಮುಖಂಡರನ್ನು ಕಂಡು ರಾಜಿಗೆ ಪ್ರಯತ್ನಿಸುತ್ತಿರುವರು. ಕಾರ್ಪೊರೇಶನ್‌ನವರೂ ಒಂದು ಕಡೆ ಪ್ರಯತ್ನಿಸುತ್ತಿರುವರು.

ಈ ತಾ. 16ರಲ್ಲಿ ದೇಶಬಂಧು ದಾಸ್‌ರವರ ಮರಣದ 4ನೇ ವರ್ಷಂತಿಯನ್ನು ಕಲ್ಕತ್ತಾದಲ್ಲಿಯೂ ಹಿಂದೂ ದೇಶದ ಹಲವು ಮುಖ್ಯ ಪಟ್ಟಣಗಳಲ್ಲಿಯೂ ಆಚರಿಸಿದರು. ಈ ದಿನ ನಡಿಸಿದ ಸಾರ್ವಜನಿಕ ಸಭೆಗಳಲ್ಲಿ ಗತಿಸಿದ ಸುಪ್ರಸಿದ್ಧ ಮುಂದಾಳಿನ ಜೀವ ಕಥನ ಮಾಡುವರಲ್ಲದೆ ಅವರ ಸ್ವಾರ್ಥತ್ಯಾಗವನ್ನು ಹೊಗಳಿ, ಅವರ ಉದಾಹರಣೆಯು ಎಲ್ಲರಿಂದ ಹಿಂಬಾಲಿಸತಕ್ಕದೆಂದು ಮುಖಂಡರು ಜನರಲ್ಲಿ ಅಪ್ಪೀಲು ಮಾಡಿದರು.

ಪಂಜಾಬು ಸೈಮನ್ ಕಮಿಟಿಯವರು ಒಳೆದ ವರದಿಯಲ್ಲಿ ಧನ್ನಾಭಿಪ್ರಾಯದ ಮೂರು ರಿಪೋರ್ಟುಗಳಿವೆ. ಸಾಲ್ಯ ಜನರು ಬರೆದ ವರದಿಯಲ್ಲಿ ಹಿಂದೂಗಳಿಗೂ, ಮುಸಲ್ಮಾನರಿಗೂ ಪ್ರತ್ಯೇಕ ಚುನಾವಣೆಯಾಗಬೇಕೆಂದು ಬರೆಯಲ್ಪಟ್ಟಿದೆ. ಆದರೆ ಅದನ್ನು ವಿರೋಧಿಸಿ ಇಬ್ಬರು ಹಿಂದು ಮೆಂಬರುಗಳು ಮುಸಲ್ಮಾನರಿಗೆ ಸ್ಥಳಗಳನ್ನು ಕಾಯ್ದಿಡುವದಾದರೂ ಮಿಶ್ರ ಓಟರುಗಳ ಕಟ್ಟಿನಿಂದಾಗಬೇಕೆಂತಲೂ, ಕೇವಲ ಯೋಗ್ಯತೆಯನ್ನು ಚುನಾವಣೆಯಲ್ಲಾಗಲೀ, ಉದ್ಯೋಗಗಳಲ್ಲಾಗಲೀ ಇಲ್ಲದಂತೆ ಮಾಡಬೇಕೆಂತಲೂ ಶಿಫಾರಸ್ಸು ಮಾಡಿರುವರು. [illegible] ಮೆಂಬರುಗಳ ಅಭಿಪ್ರಾಯ ಇನ್ನೂ ಪ್ರಕಟವಾಗಿರುವದಿಲ್ಲ.

ಅಫ್ಘಾನಿಸ್ಥಾನದ ಅರಸರನ್ನು ಅರಸು ನಾದಿರ್ ಖಾನ್‌ರವರು ಒಂದು ಮಹಾ ಸಭೆಯನ್ನು ಸೇರಿಸಿದ್ದರು. ಅದಕ್ಕೆ ಬಚಾಯಿ ಸಾಕೋರವರ ಪ್ರತಿನಿಧಿಗಳೂ ಹೋಗಿದ್ದರು. ಈ ಪ್ರತಿನಿಧಿಗಳ ಮುಖಾಂತರ ನಾದಿರ್ ಖಾನನು ಯುದ್ಧವನ್ನು ನಿಲ್ಲಿಸಿದರೆ ತನ್ನ ಮಂತ್ರಿಯಾಗಿ ಮಾಡಿಕೊಳ್ಳುವೆನೆಂದು ಬಚಾಯಿ ಸಾಕೋರವರು ಹೇಳಿ ಕಳುಹಿಸಿದನು, ನಾದಿರ್ ಖಾನನು ತಿರಸ್ಕರಿಸಿದನು. ಈ ಸಭೆಯವರು ಬಚಾಯಿ ಸಾಕೋರವರನ್ನು ಅರಸರಾಗಿ ಒಪ್ಪಿಕೊಳ್ಳಲಾಗುವದಿಲ್ಲವೆಂದು ತೀರ್ಮಾನಿಸಿದರು. ಸಾಕೋರವರ ಸಿಂಹಾಸನವನ್ನು ಒಟ್ಟಿನಲ್ಲಿ ಕಾಬೂಲಿನಲ್ಲಿ ಅರಸನ ಆರಿಸುವಿಕೆಗೆ ಒಂದು ಮಹಾ ಸಭೆ ನಡಿಸಲು ನಾದಿರ್ ಖಾನರು ಒಪ್ಪಿರುವರು.

ವಿದೇಶ.

ತಾ. 17ರಲ್ಲಿ ಜಪಾನಿನಲ್ಲಿ ಕೋಮಗಾಟಕ ಸೆಂಬ ಜ್ವಾಲಾಮುಖಿಯಿಂದ ಎರಡು ಮೈಲು ಎತ್ತರ ಬೆಂಕಿಯೂ, ಹೊಗೆಯು ಹಾರಿ ಸಮೀಪದ ಎರಡು ಗ್ರಾಮಗಳನ್ನು ಪೂರ್ತಿಯಾಗಿಯೂ, ಇನ್ನೊಂದು ಗ್ರಾಮದ ಅರ್ಧವನ್ನು ನಾಶಪಡಿಸಿದೆ.

ಇಂಡಿಯಾ ಲೀಗು ಸೆಕ್ರೆಟರಿಯವರಾದ ಮೆ. ವೆಡ್ಜ್‌ವುಡ್ ಬೆನ್‌ರವರಿಗೆ ತನ್ನ ದೊಡ್ಡ ಜವಾಬ್ದಾರಿಯ ಕೆಲಸವನ್ನು ನಡಿಸಲು, ಸಹಾಯ ಮಾಡಲಿಕ್ಕಾಗಿ ಸೆಕ್ರೆಟರಿಯವರು ಒಂದು ಕಮಿಟಿಯನ್ನು ನೇಮಿಸಿರುವರು. ಹೊಸ ಪಾರ್ಲಿಮೆಂಟನ್ನು ತೆರೆಯುವಾಗ ಅರಸರು ತಮ್ಮ ಭಾಷಣದಲ್ಲಿ ಹಿಂದೂ ದೇಶಕ್ಕೆ ವಸಾಹತು ಸ್ವರಾಜ್ಯ (ಡೊಮಿನಿಯನ್ ಸ್ಟೇಟಸ್) ಕೊಡುವವರ ವಿಷಯ ಈ ಸರಕಾರದ ತತ್ವವನ್ನು ಒಡಂಬಡಿಸುವರೆಂದು ಎದುರು ನೋಡುವೆ.

ದಕ್ಷಿಣ ಆಫ್ರಿಕದ ಡರ್ಬನ್ ಪಟ್ಟಣದಲ್ಲಿ ನಿವಾಸಿಗಳಿಗೂ ಕೊಡುವ ಬೀಯರ್ ಮುತ್ತು ಬಾರಿನವರನ್ನು ಯುರೋಪಿಯನರು ಕಮ್ಮಿದರೆ ತಿರುಗಿಬಿದ್ದ ಪುಟ್ಟಿ ನಿವಾಸಿಗಳು ಆಕ್ಷೇಪಿಸಿದರು. ಇದು ಯುರೋಪಿಯನರನ್ನು ಸಿಟ್ಟಿಗೆಬ್ಬಿಸಿತು. ಯುರೋಪಿಯನರು ಕಪ್ಪು ನಿವಾಸಿಗಳ ಮೇಲೆ ಬಿಗಿದು ಹೋದರು. ಎರಡು ಕಡೆಯವರೂ ಕಲ್ಲು, ದೊಣ್ಣೆಗಳನ್ನು ಉಪಯೋಗಿಸಿದಲ್ಲದೆ ಗುಂಡುಗಳನ್ನೂ ಹಾರಿಸಿದರು. ಇಬ್ಬರು ಯುರೋಪಿಯನರೂ, 6 ಕಪ್ಪು ಜನರೂ ಮೃತರಾದರು, 10 ಯುರೋಪಿಯನರಿಗೂ 41 ಕಪ್ಪು ಜನರಿಗೂ ಗಾಯಗಳುಂಟಾದವು. ಗಲಭೆಯು ಇನ್ನೂ ಪೂರ್ತಿ ಶಮನವಾಗಿರುವದಿಲ್ಲವಂತೆ.

ಈ ವಾರ ಐರ್ಲೆಂಡಿನ ಮುಖ್ಯ ಪಟ್ಟಣವಾದ ಡಬ್ಲಿನ್ ಪಟ್ಟಣದಲ್ಲಿ ಕಥೋಲಿಕರ ಒಂದು ದೊಡ್ಡ ಹಬ್ಬವು ಆಚರಿಸಲ್ಪಡುತ್ತಿದೆ. ಅಗ್ಗಿ ದಿಬ್ಬಗಳನ್ನು, ಪಬ್ಲಿಕ್ ಕಟ್ಟಡಗಳನ್ನು ಎಲ್ಲಾ ರಾಷ್ಟ್ರೀಯ ಬಾವುಟಗಳಿಂದ ಶೃಂಗರಿಸಿರುವರು. ಐರ್ಲೆಂಡ್ ಫ್ರೀ ಸ್ಟೇಟಿನ ಮೂರು ಬಣ್ಣದ ಧ್ವಜವೂ, ಪೋಪ್‌ರವರ ಬಾವುಟವೂ ಹಾರಾಡುತ್ತಿರುವವು. ಆದರೆ ಬ್ರಿಟನ್ನಿನ 'ಯೂನಿಯನ್ ಜಾಕ್' ಬಾವುಟವು ಇಲ್ಲವೇ ಇಲ್ಲವಂತೆ. ಇದರಿಂದ ಐರ್ಲೆಂಡಿನವರಿಗೆ ಬ್ರಿಟಿಷರ ಸಂಬಂಧದ ಮೇಲಿರುವ ದ್ವೇಷವು ಸೂಚಿಸಲಾಗಿರುವದೆಂದು, ಇದನ್ನು ಪ್ರಬಲರಾಗಲು ಬಿಡುವದು ಉಚಿತವಲ್ಲವೆಂತಲೂ ಅಲ್ಲಿಯ ಒಂದು ಪತ್ರಿಕೆಯು ಬರೆದಿದೆ.

ತಿದ್ದುಪಡಿ.

ಇದೇ ಜೂನ್ ತಾ. 7ರ "ಕೊಡಗು" ಪತ್ರಿಕೆಯ 2ನೇ ಪುಟದಲ್ಲಿ ಪ್ರಕಟವಾದ 'ಓರಿಯಂಟಲ್ ಜೀವವಿಮೆ ಕಂಪೆನಿ' ಎಂಬ ಲೇಖನದಲ್ಲಿ ಕೆಲವು ತಪ್ಪುಗಳುಂಟಾಗಿವೆ. ಅವುಗಳನ್ನು ಈ ಕೆಳಗಿನಂತೆ ತಿದ್ದಿಕೊಳ್ಳುವದು.

ಒಂದನೇ ಪ್ಯಾರದ 9ನೇ ಪಂಕ್ತಿಯಲ್ಲಿ 'ಅಂದ ಮೇಲೆ ೧೭ ಲಕ್ಷ ರೂ' ಎಂಬುದರ ಬದಲು 'ಅಂದ ಮೇಲೆ ೧೧೦ ಲಕ್ಷ ರೂ.' ಎಂದೂ, ಮೂರನೇ ಪ್ಯಾರದ 10ನೇ ಪಂಕ್ತಿಯಲ್ಲಿ 'ಮೊಬಲಗು ೫೨½ ಲಕ್ಷ' ಎಂಬದರ ಬದಲು 'ಮೊಬಲಗು ೬೨½ ಲಕ್ಷ' ಎಂದೂ, 11ನೇ ಪಂಕ್ತಿಯಲ್ಲಿ '೩೦ ಬ್ರಾಂಚ್ ಆಫೀಸುಗಳು' ಎಂಬದರ ಬದಲು '೨೦ ಬ್ರಾಂಚ್ ಆಫೀಸರುಗಳು' ಎಂದೂ, 12ನೇ ಪಂಕ್ತಿಯಲ್ಲಿ '೬೫೦೦ ಜನ ಪ್ರತಿನಿಧಿಗಳೂ' ಎಂಬದರ ಬದಲು '೩೫೦೦ ಪ್ರತಿನಿಧಿಗಳೂ' ಎಂದು ಆಗಬೇಕು.

ನೋಟೀಸು.

ಭಾಗಮಂಡಲನಾಡು ಕುಂದಚೇರಿ ಗ್ರಾಮದ ಕೆದಂಬಾಡಿ ಚೆಟ್ಟಿಯಪ್ಪ ಮತ್ತು ಇವರ ಮಕ್ಕಳು ರಾಮಪ್ಪ ವಗೈರೆಯು ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಕೊಡಗು ಸಬಾರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ ನನ್ನ ದೊಡ್ಡ ತಂದೆ ಲೇಟ್ ಕೆದಂಬಾಡಿ ಸೋಮಯ್ಯನವರ ಮೊಮ್ಮಗ ಗಣಪತಿ ಇತನ ಗಾರ್ಡಿಯನ್ ತಾಯಿ ಅಮ್ಮಕ್ಕನ ಮೇಲೆ ನಮ್ಮ ಪಿತ್ರಾರ್ಜಿತದ ಸ್ಥಿರ ಮತ್ತು ಚರ ಆಸ್ತಿಗಳ ಜಂಟಿ ಸ್ವಾಧೀನಕ್ಕೆ ವಗೈರೆ ಪರಿಹಾರಗಳಿಗಾಗಿ ನಾವುಗಳು ವ್ಯವಹರಣೆ ನಡಿಸುತ್ತಾ ಇದ್ದೇವೆ. ಸದರಿ ಆಸ್ತಿಗಳನ್ನು ಈ ಬಗ್ಗೆ ಪರಭಾರೆ ಮಾಡಿಸುವದರಲ್ಲಿ ಕೆಲವರು ಉದ್ಯುಕ್ತರಾಗುವ ವರಾಗಿ ವರ್ತಮಾನವಿದೆ. ಹಾಗೆ ಯಾರಾದರು ಸದರಿ ಸೊತ್ತುಗಳನ್ನು ಗಿರ್ವಿ, ಭೋಗ್ಯ ವಗೈರೆ ಪರಾಧೀನ ಹೊಂದಿದ್ದರೂ ಅದಾಗಲಿ ವ್ಯಾಜ್ಯದಲ್ಲಿರುವ ಆಸ್ತಿಗಳಾಗಲೀ ಯಾವ ಭಾಗದಲ್ಲು ಸಹ ಈಡಾಗಲಿಕ್ಕಿಲ್ಲವೆಂಬದನ್ನೂ, ನಾವು ಅಂಥಾ ಪರಭಾರೆಗಳಿಗೆ ಒಳಪಡುವದಿಲ್ಲವೆಂಬ ಸಂಗತಿಯನ್ನೂ ಸಹ ಈ ಮೂಲಕ ತಿಳಿಸುತ್ತೇವೆ.

ಕುಂದಚೇರಿ ಗ್ರಾಮ, ಕೆದಂಬಾಡಿ ರಾಮಪ್ಪ.

ತಾ 17—6—26. 2—1

GENTLEMEN,

I have great pleasure in informing you that I have opened two shops under the name "THE COORG EMPORIUM" at Mercara and Sidapur and shall have the pleasure of serving you with satisfaction in the following departments.

Wines, Bakery, Aerated water at Sidapur. Oilman Stores, Smoking requisites, Perfumery and patent medicines, Hardware, Crokery, Glass-ware, Lampware, Cutlery, Stationary, Haberdashery, etc., etc.

Mofussil orders will be booked at either of the stations and promptly executed. Goods are priced at lowest rates in consistence with the quality.

A trial order will convince you.

Assuring you of my best services at all times,

Yours faithfully,
P. M. CHINNAPPA,
Late of Messrs. Spencer & Co., Ltd.

ಪತ್ರವ್ಯವಹಾರ

ಬರೆಯುವವರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಓಟರಿಗೆ ಜವಾಬು.

ಅಯ್ಯ,

ತಾರೀಕು 7—6—29ರಲ್ಲಿ 'ಕೊಡಗು' ಪತ್ರಿಕೆಯಲ್ಲಿ 'ಜನರ ಪ್ರತಿನಿಧಿಗಳು' ಎಂಬದಾಗಿ ಓರ್ವ ಓಟರು ಪ್ರಕಟಿಸಿದ ಬಾತ್ಮಿಯನ್ನು ನೋಡಿ ಸಂತೋಷವಾಯಿತು. ಸೋಮವಾರಪೇಟೆನಾಡು ಕುಂದಳ್ಳಿ ಗ್ರಾಮದಿಂದ ಬಿಸ್ಲೆಘಾಟಿಗೆ ಹೋಗಿ ಬರಲು ಒಂದು ಗಾಡಿ ರಸ್ತೆಯನ್ನು ಮಾಡಿಸಿಕೊಡಬೇಕಾಗಿ ಕುಂದಳ್ಳಿ, ಸಗರಳ್ಳಿ, ಬಾಚಳ್ಳಿ, ಕುಮ್ಮಳ್ಳಿ ವಗೈರೆ ಗ್ರಾಮಸ್ಥರು ಈಗ ಹಿಂದೆ ನಾಲ್ಕು ವರ್ಷದಿಂದ ಪ್ರಸ್ತಾಪಿಸುತ್ತಿದ್ದಾರೆ. ಆ ಗ್ರಾಮಗಳ ಮಧ್ಯಕ್ಕಾಗಿ ಸುಬ್ರಹ್ಮಣ್ಯಕ್ಕೆ ಸಂಚಾರ ಮಾಡಲು ಒಂದು ರೋಡು ಬೇಕಾಗಿ ಹುಜರ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಲ್ಲು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ವೈಸ್ ಪ್ರೆಸಿಡೆಂಟರವರಲ್ಲು ಸಹ ಮಹಜರು ಮಾಡಿಸುವ ಮಧ್ಯೆ ತೋಳೂರು, ತೋಳೂರು ಶೆಟ್ಟಿಳ್ಳಿ, ಕೂತಿ ಗ್ರಾಮಸ್ಥರು ತಮ್ಮ ಗ್ರಾಮಗಳ ಮೇಲೆ ಒಂದು ರೋಡು ಸುಬ್ರಹ್ಮಣ್ಯಕ್ಕೆ ಹೋಗಲು ಬೇಕಾಗಿ ಅರ್ಜಿ ಬರೆದು

ಕೊಂಡದಕ್ಕೆ ಇಲಾಖೆದಾರರು ಆಗುವುದಿಲ್ಲವಾಗಿ ಹುಕುಂ ಕೊಟ್ಟಿರುವದಾಗಿ ತಿಳಿಯುತ್ತೇನೆ. ಆದರೆ ಎರಡು ಕಡೆಯವರು ತಮತಮಗೆ ಬೇಕಾಗಿ ಹೋರಾಟ ಮಾಡಿದ್ದರಿಂದ ಇದು ರಸ್ತೆ ಸರಿಯಾದ್ದೆಂಬ ಸಂಗತಿ ಶುದ್ಧ ಸೋಜಿಗವೇ ಆಯಿತು. ಈಗ ಮಳೆ ಸುರು ಆದ್ದರಿಂದ ನೋಡಲು ಅನಾನುಕೂಲವಾದ ದೆಸೆಯಿಂದ ಬರುವ ಸಪ್ಟೆಂಬರು, ಅಕ್ಟೋಬರು ತಿಂಗಳಿಗೆ ಇದ ಲ್ಪಟ್ಟಿದೆ. ರೋಡನ್ನು ಮಾಡಿಸಲು ಶಿಫಾರಸ್ಸು ಮಾಡುವದಾಗಿ ಹೇಳಬಹುದು, ಶಿವಾಯಿ ಮಾಡಿಸಿಕೊಡುತ್ತೇನೆಂದು ವಾಗ್ದಾನ ಕೊಟ್ಟಿರುವದಿಲ್ಲ. ನನ್ನ ನಾಡಿನ ಎಲ್ಲಾ ಓಟರುಗಳು ನನಗೆ ನ್ಯಾಯವಾಗಿಯೂ ಮೆಂಬರುತನಕ್ಕೆ ಲಾಯಕ್ಕಾದವನೆಂದು ಓಟು ಕೊಟ್ಟಿದ್ದಾರೆ. ಕೆಲಸ ಮಾಡಿದ್ದನ್ನು ತಿಳಿಯಬೇಕಾದಲ್ಲಿ ರಿಕಾರ್ಡು ಬೇಕಾಗಿ ಕೇಳಿದಲ್ಲಿ ಅಂಥಾವರಿಗೆ ಕಳುಹಿಸಿ ಕೊಡಬಹುದು ಯಾ ತೋರಿಸಿ ಕೊಡಬಹುದು. ಪತ್ರಿಕೆಯಲ್ಲಿ ತಾನು ಇಂಥಿಂಥ ಕೆಲಸ ಮಾಡಿದ್ದೇನೆಂದು ಪ್ರಕಟಿಸುವದು ನೋವಾಂರಿಯಾಗಿ ಕೂಕುಕೊಂಡು ಮಾಡಲು ಯಾ ನೋಡಲು ಅಸ್ತಿ ಇಲ್ಲದ ಪುರುಷನಿಗೆ ಅಲಂಕಾರವಾಗಿದೆ.

ಸೋಮವಾರಪೇಟೆಗೆ ಒಂದು ಲೋವರ್ ಸೆಕೆಂಡರಿ ಸ್ಕೂಲು ಆಗಬೇಕಾಗಿ ಬಹಳ ದಿನಗಳಿಂದ ಹೋರಾಡುತ್ತ ಠರಾವು ತಂದಿರುತ್ತೆ. ವಿದ್ಯಾರ್ಥಿಗಳಿಲ್ಲವಾಗಿ ಸರ್ಕಾರದವರ ಜವಾಬಾಗಿದೆ. ಸ್ಕೂಲಿಗೆ ಮಕ್ಕಳನ್ನು ಕಳುಹಿಸಬದ್ದರೆ, VII VIII ನೇ ಸ್ಟೇಂಡರ್ಡ್‌ಗಳಿಗೆ ವಿದ್ಯಾಭ್ಯಾಸ ಮಾಡಲು ವಿದ್ಯಾರ್ಥಿಗಳಿಲ್ಲದಿದ್ದರೆ ಹೇಗ ತಾನೇ ಲೋವರ್ ಸೆಕೆಂಡರಿ ಸ್ಕೂಲು ತೆರೆಯಲು ಸರ್ಕಾರದವರು ಹಣ ಖರ್ಚು ಮಾಡ್ಯಾರು? ನಾಡಿನ ಹುಡುಗರನ್ನು ಸೇರಿಸುವ ಎಂದರೆ, ನಾಡಿನವರು ಹಿಂದೆ ಒಂದು ಬೋರ್ಡಿಂಗ್ ತೆರೆದು ಕೆಲವು ವಿದ್ಯಾರ್ಥಿಗಳು ಸೇರಿದ್ದರು. ಅದನ್ನು ಸಹ ಒಬ್ಬ ಮಹನೀಯರು ಹಾಳು ಮಾಡಿ ದುರುಪಯೋಗ ಪಡಿಸಿಕೊಂಡರು. ಈಗಲೂ ಸಹ ವಿದ್ಯಾರ್ಥಿಗಳು ಸಿಕ್ಕಿದರೆ ಸ್ಕೂಲು ತೆರೆಯುವಲ್ಲಿ ಸರ್ಕಾರದವರ ಆಕ್ಷೇಪಣೆ ಇರುವುದಿಲ್ಲ. ಇದು ಎಂದೂ ಮೆಂಬರರ ತಪ್ಪಲ್ಲ.

ಜಾತಿಭೇದವಿಲ್ಲದ ಯಾರೂ ಇರಲಾರರು. ಎಲ್ಲರಿಗೂ ತಮ್ಮ ತಮ್ಮ ಜಾತಿ ಮೇಲೆ ಪ್ರೀತಿ ಇದ್ದೇ ಇರುತ್ತೆ. ತಾವು ಹೆಸರು ಬರೆಯದೆ ಓಟರೆಂದು ಬರೆದದ್ದು ಬಹಳ ನಾಚಿಕೆಕರವಾದ ಸಂಗತಿ ಆಗಿದೆ. ಈಗಲಾದರೂ ತಾವು ತಮ್ಮ ಜಾತಿ ಮತ್ತು ನಾವಾಂಕಿತವನ್ನು ತಿಳಿಸಿದರೆ ಅದಕ್ಕೆ ಸರಿಯಾದ ಜವಾಬು ಕೊಡಲು ಸಿದ್ಧನಾಗಿದ್ದೇನೆ.

ಸಿ ಹೆಚ್ ರಾಳಪ್ಪ
ಯಂ ಯಲ್ ಸಿ
ಮತ್ತು ಡಿ ಬೋ ಮೆಂಬರು

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಿಂದ ಪಲಾಯನ.

ಕೊಡಗು ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಡಿ ಬೋ ಮೀಟಿಂಗಿನ ವರ್ತಮಾನವು ನೋಡಲಾಯಿತು. ಅವರನ್ನು ಖಂಡಿಸಿ ನಿಜ ಸ್ಥಿತಿಯನ್ನು ಹೊರಪಡಿಸಲು ಇದು ಬರೆದುದಾಯಿತು. ಕಳೆದ ವರ್ಷ ಒಂದು ವಿದ್ಯಾವಿಚಾರ ಕಮಿಟಿಯನ್ನು ಏರ್ಪಡಿಸಬೇಕೆಂದು ತೀರ್ಮಾನವಾಯಿತು. ಮೆಂಬರುಗಳಿಗೆ ಪ್ರಯಾಣದ ವೆಚ್ಚ ಕೊಡಲಾಗುವುದಿಲ್ಲವಾಗುವದರಿಂದ ಸ್ವಾರ್ಥತ್ಯಾಗಿಗಳಾದ ಮೆಂಬರುಗಳನ್ನು ಆರಿಸಬೇಕೆಂದು ಹೇಳಿದ್ದಕ್ಕೆ ಸರ್ಕಾರಿ ಉದ್ಯೋಗಸ್ಥರು ಬೇಡ, ನಾವು ಭತ್ಯವಿಲ್ಲದೆ ಕೆಲಸ ಮಾಡುತ್ತೇವೆಂದು ಒಪ್ಪಿಕೊಂಡು ಮುದ್ದಮ್ಮಯ್ಯನವರೂ, ಮುದ್ದಪ್ಪನವರೂ ಮೆಂಬರುತನಕ್ಕೆ ಸಮ್ಮತಿಸಿದರು.

ದೇಶ ಸಂಚಾರ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಲು ಒಂದು ಮೀಟಿಂಗು ಮಾಡಲಾಯಿತು. ಮುದ್ದಪ್ಪನವರು ಆಗ ಮೀಟಿಂಗಿಗೆ ಒಂದು ತಾಸು ಈಗ ಬಂದು ಕೇಸಿದೆ, ಪಟ್ಟಿಯನ್ನು ತಯಾರಿಸಿ, ತಮಗೆ ಸಮ್ಮತ ಸೋಮವಾರಪೇಟೆಗೆ ಇಂಥಾ ದಿನವೆಂದು ನಿಶ್ಚಯಿಸಿ ಆ ದಿನ ತನಗೆ ಅಲ್ಲಿ ಒಂದು ಕೇಸಿದೆ. ಕೇಸಿಗೂ ಈ ಕೆಲಸಕ್ಕೂ ಅನುಕೂಲವಾಗುತ್ತದೆ ಎಂದು ಹೇಳಿ ಹೊರಟು ಹೋದರು. ಸಂಚಾರ ಕಾರ್ಯಕ್ರಮ ಪಟ್ಟಿಯು ತಯಾರಾಯಿತು. ಮುದ್ದಪ್ಪನವರ ಅನುಕೂಲಕ್ಕೆ ತಕ್ಕಂತೆ ಸೋಮವಾರಪೇಟೆ ಸಂಚಾರವು ಇಡಲಾಯಿತು. ದೇಶಾಭಿಮಾನಿಗಳಾದ ಮುದ್ದಪ್ಪನವರು ಅಲ್ಲಿಗೆ ಬಂದೇ ಬಂದರು. ಯಾತಕೋಸ್ಕರ? ವ್ಯಾಜ್ಯದ ಸಂಬಂಧ ಮತ್ತು ಜಮೀನ್ದಾರರ ಸಂಘದ ಮೀಟಿಂಗಿಗೆ ಬಂದವರು ಕಮಿಟಿಯವರ ಸಂಗಡ ಕಮಿಟಿಯ ಕೆಲಸಕ್ಕೆ ಸೇರಲಿಲ್ಲ. ಆದರೆ ಸೋಮವಾರಪೇಟೆಗೆ ಬಂದ ಗುರ್ತಿಗೆ ಒಂದು ಶಾಲೆಯನ್ನು ಸಹ ನೋಡಿದರು. ಅದೇ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧವಿಲ್ಲದ ಸರ್ಕಾರಿ ಶಾಲೆ. ಇವ್ಯಾಗೂ ಉತ್ತರ ಕೊಡಗಿನಲ್ಲಿ ನೋಡಬೇಕಾಗಿದ್ದ ಶಾಲೆಗಳನ್ನು ಒಬ್ಬರು ಮಾತ್ರ ತಿರುಗಿ ಸಂದರ್ಶಿಸಿದರು.

ಈ ವರ್ಷ ಡಿ. ಬೋ ಸಾಹೇಬರವರ ಅನುಮೋದನೆಯು ಕಾರ್ಯಕ್ರಮ ಪಟ್ಟಿಯ ಮತ್ತು ಕಮಿಟಿಯವರ ಪಟ್ಟಿಯು ಒಂದೇ ಆಗಿ ಬದಲಾವಣೆಯಾಯಿತು. ಈ ಎರಡು ವಿಷಯಗಳನ್ನು ಪತ್ರಿಕೆಗಳಲ್ಲಿಯೂ ಪ್ರಕಟಿಸಿತ್ತು, ಮತ್ತು ಶಾಲೆಗಳಿಗೂ, ಊರವರಿಗೂ ಸಹ ತಿಳಿಸಲ್ಪಟ್ಟಿತ್ತು, ಮತ್ತು ನಾಲ್ಕು ಕಮಿಟಿ ಮೆಂಬರುಗಳಿಗೂ ಒಂದೊಂದು ಪಟ್ಟಿಯನ್ನು ಕಳುಹಿಸಲ್ಪಟ್ಟಿದೆ. ದೇಶ ಸಂಚಾರವಾದನಂತರ ಒಂದು ...ನಲ್ಲಿ ಮಾಸ್ತರುಗಳ ಹೊಂದ ವಿಷಯ ಮತ್ತು ಕಟ್ಟಡಗಳಿಗೆ ಬೇಕಾದ ಹಣದ ವಿಷಯ ಠರಾವನ್ನು ಚರ್ಚಿಸುವಾಗ್ಯೆ ರಿಪೋರ್ಟು ಇಬ್ಬರೇ ಕಮಿಟಿ ಮೆಂಬರುಗಳು ಬರೆದದ್ದಾಗಿದೆ. ಬಾಕಿ ಇಬ್ಬರು ಸೈನ್ ಮಾಡಿರುವದಿಲ್ಲವಾದುದರಿಂದ ಮಂಜೂರು ಮಾಡಲು ಒಪ್ಪುವದಿಲ್ಲವೆಂದು ರಾಮುಶೆಟ್ಟಿ ಮತ್ತು ಮುದ್ದಪ್ಪನವರು ವಿರೋಧಿಸಿದರು. ಆಗ ಶಾಲಾ ಇನ್ಸ್‌ಪೆಕ್ಟರವರು ಕಮಿಟಿಯ ವರದಿಯನ್ನು ಮೀಟಿಂಗಿನಲ್ಲಿ ಚರ್ಚಿಸೋಣ. ಈಗ ಮಾಸ್ತರುಗಳ ಸಂಬಳದ ಏರಿಕೆಗೂ ಕಟ್ಟಡಕ್ಕೂ ಇರುವ ಹಣವನ್ನು ಬಡ್ಜೆಟ್ಟಿನಲ್ಲಿ ಪ್ರತ್ಯೇಕವಾಗಿ ವಿನಿಯೋಗಿಸೋಣವೆಂದು ಹೇಳುವಾಗ್ಯೆ ಇವರಿಗೆ ಯಾವ ದಾರಿಯೂ ಇಲ್ಲದೆ ಸುಮ್ಮಗಾದರು. ಸಂಬಳ ಬಡ್ತಿಗಾಗಿ ೨೦೦೦ ರೂ ಮತ್ತು ಕಟ್ಟಡಕ್ಕೆಂದು ೩೦೦೦ ರೂ ಮಂಜೂರಾಯಿತು. ಬಾಕಿ ಇರುವ ಶಿಫಾರಸ್ಸುಗಳನ್ನು ಇನ್ನೊಂದು ಮೀಟಿಂಗಿನಲ್ಲಿ ಚರ್ಚಿಸುವದಾಗಿ ತೀರ್ಮಾನವಾಯಿತು.

ಕಳೆದ ಮೀಟಿಂಗಿನಲ್ಲಿ ನಡೆದ ವಿವರ ಬರೆದು ಬಂದ ಪತ್ರಿಕೆಯಲ್ಲಿ ಒಂದು ವಿಧವಾಗಿ ಪ್ರಕಟಿಸಿದೆ. ಅದಕ್ಕೀಗ ಈ ಉತ್ತರಗಳು.

ಶೆಟ್ಟಿಗಳು ಹೇಳುತ್ತಾರೆ—ಇನ್ನಿಬ್ಬರು ನೇಮಿತ ಮೆಂಬರುಗಳು ತಿರುಗಾಡಿದರೆ ಹೋದವರೂ ಅವರನ್ನು ಋಜುವಿಗೆ ಸೇರಿಸಿಕೊಳ್ಳಬೇಕೆಂದು ಇದು ಯಾವ ನ್ಯಾಯವೋ? ಊರೂರ ಅತಿ ಶ್ರಮಪಟ್ಟು ತಿರುಗಾಡಿ ಸರಿಯಾಗಿ ಅನ್ನ ನೀರಿಲ್ಲದೆ ಕೆಲಸಮಾಡಿ ರಿಪೋರ್ಟು ತಯಾರಿಸುವಾಗ ಈ ನೇಮಿತರಾದವರು ಮನೆಯಲ್ಲಿ ಸುಖವಾಗಿ ಕಾಲು ನೀಡಿಕೊಂಡು ಕುಳಿತವರಿಗೆ ಕಾಲು ಬುಡಕ್ಕೆ ಬಂದು ಮಹಾಸ್ವಾಮಿಗಳೇ! ನಾವು ಈ ರೀತಿಯಾಗಿ ವರದಿ ಬರೆಯಲಿಕ್ಕಿದ್ದೇವೆ. ತಾವು ಸೈನು ಮಾಡಬೇಕು' ಎಂದು ನಮಸ್ಕಾರ ಮಾಡಬೇಕಿತ್ತೋ? ಮತ್ತು ಹೇಳಿದ್ದಾರೆ ಶೆಟ್ಟಿ ಮೆಂಬರುಗಳನ್ನು ಹಿಯಾಳಿಸಿದರು, ಎಂದು ಹಾಗಿದ್ದರೆ ಸುಮ್ಮನೆ ಸಿಕ್ಕಿದ ಮಾನನಷ್ಟಕ್ಕೆ ಕೆಟ್ಟು ಕೋರ್ಟಿಗೆ ಹೋಗದಿರುತ್ತಿದ್ದಪ್ಪ. ಅದರಲ್ಲಿ ಯಾವ ವಾಕ್ಯವು ಮೆಂಬರುಗಳನ್ನು ಹೀಯಾಳಿಸಿದರೆಂದು ತೋರಿಸುತ್ತಿದೆಯೋ? ಹೇಳಿದ್ದಾರೆ ಮುದ್ದಮ್ಮಯ್ಯನವರು ನಾನು ದಕ್ಷಿಣ ಕೊಡಗಿನಲ್ಲೆಲ್ಲಾ ಸುತ್ತಿಯೂ ನಾನು ಒದಲಿಲ್ಲವೆಂದು ಹೇಳಿದ್ದು ಸುಳ್ಳು ಎಂದು ಅವರು ಹೇಳಿದ್ದೇ ಸುಳ್ಳು. ಅವರ ನಾಡಿನಲ್ಲಿ ಮೋಟಾರು ಹೋಗುವ ಎರಡು ಮೂರು ಶಾಲೆಗಳಿಗೆ ಮಾತ್ರ ಹೋಗಿರುತ್ತಾರೆ. ಮರೆನಾಡಿನಲ್ಲಿ ಹದಿನೆಂಟು ಮೈಲು ಒಂದು ದಿನದಲ್ಲಿ ನಡೆದು ಹೋಗುವಾಗ ಇವರು ಕಮಿಟಿಯವರ ಜೊತೆಯಲ್ಲಿದ್ದರೇ? ಇವರ ಭೂಗೋಳಶಾಸ್ತ್ರದಲ್ಲಿ ಮರೆನಾಡು ದಕ್ಷಿಣ ಕೊಡಗಿಗೆ ಸೇರಲಿಲ್ಲವೆಂದು ತೋರುತ್ತದೆ. ಅಂತೂ ಒದಲಿಲ್ಲ.

ಈಗ ನಮ್ಮ ಲಾಯರುಗಳ ಗರ್ಜನೆ ಕಾರ್ಯಕ್ರಮ ಪಟ್ಟಿ ಗುಲ್ಲಾಗಿ ಬದಲಾವಣೆಯಂತೆ. ದೇಶದವರಿಗೆಲ್ಲಾ ಗೊತ್ತಾಗಿದ್ದರೂ ಇವರ ಬಾಲ ಹಿಡಿದು ಮೀಟಿಂಗಿನಿಂದ ಓಡಿ ಹೋದ ಸ್ನೇಹಿತರಿಗೂ ಗೊತ್ತಾಗಿದ್ದರೂ ಇವರಿಗೆ ಮಾತ್ರ ಗುಟ್ಟು ಗೊತ್ತಿದ್ದರೆ ತಮ್ಮ ಕೋರ್ಟು ಬಿಟ್ಟು ಬರುವವರು ಇವರೇ? ತಾವು ಸಹ ಪ್ರತ್ಯೇಕವಾಗಿ ಶಾಲೆಗಳನ್ನು ಸಂದರ್ಶಿಸಿದ್ದರಂತೆ ಪ್ರತ್ಯೇಕವಾಗಿ ಎಷ್ಟೋ ಸಾರಿ ಹೋಗಿರ ಬಹುದು. ಅದು ಈ ಟೈಮು ಉಪಯೋಗವಾಯಿತೋ? ಹಾಗೂ ಪ್ರತ್ಯೇಕವಾಗಿ ... ಯೇ ಸೋಮವಾರಪೇಟೆ ಸರ್ಕಾರಿ ಶಾಲೆ ... ಶಾಲೆಯಲ್ಲವೆಂದು ಇವರಿಗೆ ಗೊತ್ತಾ... ಎಂಥಾ ಮೋಸ!!! ಪ್ರಾರ್ಥ ಹೇಳಿದ್ದಾರೆ ಲಾಯರುಗಳು—ಅಲ್ಪಸರದ ಮಾತುಗಳಿಂದ ಮೆಂಬರಗಳನ್ನು ದೂಷಣೆ ಮಾಡಿದ್ದೇವೆಂದು. ದೂಷಣೆ ಮಾಡಿದ್ದು ಇಷ್ಟೇ ಇದ್ದುದ್ದು ಹೇಳಿದ್ದು. ಇದು ಇವರ ಮತಕ್ಕೆ ವಿರೋಧವೆಂದು ತಿಳಿಯಬೇಕಾಗಿತ್ತು. ಇದ್ದದ್ದನ್ನು ಬಿಟ್ಟು ಚರ್ಚಿಸುವಾಗ ಬೇರೆ ವಿಧವಾಗಿ ನ್ಯಾಯಕ್ಕೆ ಹೊರಡಲಿಕ್ಕಿಲ್ಲವೆಂದು. ನನ್ನ ಭಾವನೆ ವಿಶೇಷವಾಗಿ ಕೆಲಸ ಮಾಡಿದ ಡಿ. ಬೋ ಮೆಂಬರುಗಳನ್ನು ಹಾಗೆ ಯಾವ ಕೆಲಸವನ್ನೂ ಮಾಡದಕ್ಕೆ ... prime Indifference ಎಂದು ಬರೆದ್ದೇ ಮುದ್ದಪ್ಪನವರನ್ನು ತೀಕ್ಷ್ಣವಾಗಿ ಚುಚ್ಚಿದ್ದು ಇನ್ನು ಲಾಯರುಗಳು ಕೆರಳುತ್ತಾರೆ. ಸಂಬಂಧವಿಲ್ಲದ ರಾಜಕೀಯ ಚಳವಳಿ ಎಬ್ಬಿಸಿ ಗಲಾಟೆ ತರವೆಂದು ರಿಪೋರ್ಟಿನಲ್ಲಿರುವ ಭಾಗವೇ ತಿಳಿಯದು. ಪ್ರಜಾಪ್ರತಿನಿಧಿ ಸರಕಾರವು ನಡೆಯಬೇಕಾದರೆ ಓಟರುಗಳೆಲ್ಲಾ ವಿದ್ಯಾವಂತರಾಗಿರಬೇಕೆಂದು ಅನುದರಿಂದ ಆದಷ್ಟು ಶಾಲೆಗಳನ್ನು ಹೆಚ್ಚಿಸಬೇಕೆಂದು ಬರೆದದ್ದೋ? ಓಹೋ! ಗೊತ್ತಾಯಿತು. ಓಟರುಗಳೆಲ್ಲಾ ವಿದ್ಯಾವಂತರಲ್ಲದಿದ್ದರೆ ಅವರನ್ನು ಮರುಳು ಮಾಡಿ ಓಟು ಕಸಕೊಳ್ಳುವುದು ಸುಲಭ. ಇದು ಇವರ ತತ್ವಕ್ಕೆ ವಿರೋಧವಾಯಿತೇ? ತಪ್ಪಾಯಿತು. ಇನ್ನು ಅರಚುತ್ತಾರೆ ಮರೆನಾಡಿನ ರೈತರನ್ನು ಮರ್ಯಾದೆ ಹೀನರೆಂದು. ಬೈದುದೆಂಗೂ—ರಿಪೋರ್ಟಿನಲ್ಲಿ ಬರೆದದ್ದು Inglorious Educational Philosophers ಎಂದು. ಇದರ ಅರ್ಥವೇನು? ವಿದ್ಯಾವಂತರಾದ ಲಾಯರುಗಳು ಕೊಟ್ಟ ಅರ್ಥವೇನು? ಗ್ರೇ ಎಂಬ ಕವಿಯು "Elegy written in a country churchyard" ಎಂಬ ಪದ್ಯದಲ್ಲಿ Inglorious Miltons here may rest ಎಂದು ಬರೆದಿದ್ದಾರೆ. ಇದರ ಅರ್ಥ ಮರ್ಯಾದೆ ಹೀನರೆಂಬಲೋ? ಮೂಲೆಯಲ್ಲಿರುವ ಮರೆನಾಡಿನ ಆಂದರೆ ಯಾವ ಅವಕಾಶವೂ ಇಲ್ಲದೆ 'ಪ್ರಖ್ಯಾತಿಗೆ ಬಾರದ ಎಂಬರ್ಥದಲ್ಲೇ ಬರೆ... ... ಆಗಿ ಗಳನು ಪಡೆದು ಇವ...

ತಿಳಿಯದವರಾದರೆ ಎಂತಹ ನಾಚಿಕೆ ಹಾಗೇನು ಅಲ್ಲ, ಅವರ ಉದ್ದೇಶವೇ ಬೇರೆ.

ಲಾಯರು ಹೇಳುತ್ತಾರೆ—ವಿದ್ಯಾ ರಿಪೋರ್ಟಿನಲ್ಲಿ ವಿದ್ಯದ ವಾಸನೆ ಇಲ್ಲ. ವಿದ್ಯದ ವಾಸನೆ ಹೇಗೆ? ಅಫೀಮಿನ ಹಾಗೋ? ಈ ವಾಸನೆ ಇಲ್ಲದೆಯೋ ಮೆಂಬರುಗಳಲ್ಲಿ ಹಲವರು ಅದು ತಮಗೆ ಬೇಡವೆಂದು ಮುದ್ದಪ್ಪನವರ ಬಾಲ ಹಿಡಿದು ಓಡಿ ಹೋದದ್ದು? ಕಡೆಗೆ ತೋರಿಸುತ್ತಾರೆ ನಮ್ಮ ಲಾಯರು ಅಪಾರವಾದ ದೇಶಾಭಿಮಾನ. ಉಪಾಧ್ಯಾಯರ ಸಂಬಳ ವಿದ್ಯಾಭಿವೃದ್ಧಿಗೆ ತಾನು ಎಂದೂ ವಿರೋಧಿಸುವದಿಲ್ಲವೆಂದು ಯಾರಾದರೂ ದೇಶಾಭಿಮಾನವನ್ನು ಕೃತ್ಯಗಳಿಂದಲ್ಲದೆ ಭಾಷಾಂಗಳಿಂದಲ್ಲ ತಿಳಿಯುವುದು. ಇಷ್ಟು ಮಮತೆಯುಳ್ಳವರು ಕಮಿಟಿಯ ಪರವಾಗಿ ಯಾವದೊಂದೂ ಕೆಲಸವನ್ನೇಕೆ ಮಾಡಲಿಲ್ಲ! ಪ್ರಥಮದಲ್ಲಿ ಉಪಾಧ್ಯಾಯರ ಸಂಬಳ ಹೆಚ್ಚಿಸುವದಕ್ಕೂ ಸಹ ಯಾಕೆ ವಿರೋಧಿಸಿದರು! ಒಂದುವೇಳೆ ಮೆಂಬರುಗಳಲ್ಲಿ ಅನೇಕರು ಇದನ್ನು ಹಿಂಬಾಲಿಸಿ ಮೀಟಿಂಗು ಬಿಟ್ಟು ಓಡಿಹೋಗಿದ್ದರೆ ಈ ವರ್ಷದ ವಿದ್ಯಾಭಿವೃದ್ಧಿಯ ಫಲವೇ ಬಾಕಿಯಾಗುತ್ತಿರಲಿಲ್ಲವೇ? ಇದು ಯಾಕೆ ಗ್ರಹಿಸಲಿಲ್ಲ. ಅಥವಾ ಶೆಟ್ಟಿಗಳು ವರ್ಣಿಸಿದ ಹಾಗೆ ಇವರು ದೇಶೀಯರಾಗಿ ಎಲ್ಲಾ ವಿಚಾರವು ಗೊತ್ತಿದ್ದರಿಂದ ಇವರೇ ಬೇರೊಂದು ವರದಿಯನ್ನು ತಯಾರಿಸಬಹುದಾಗಿತ್ತಲ್ಲವೇ? ಅಥವಾ ಮೊನ್ನೆ ಮೀಟಿಂಗಿನಲ್ಲಿ ಹೇಳಿದ ಹಾಗೆ ಬೇಕಾದಷ್ಟು ಅಲ್ಲದ ಸಲ್ಲದ ಮಾತುಗಳನ್ನು ಬಾಯಿ ತುಂಬಾ ಹೇಳಿಬಿಟ್ಟು ವರದಿಯನ್ನು ಚರ್ಚಿಸಲಿಲ್ಲ. ತಮ್ಮ ಎಲ್ಲಾ ಶಾಲೆಗಳ ಅನುಭವವನ್ನು ತೋರಿ ದೇಶದ ಕಾರ್ಯವನ್ನು ಮುಂದರಿಸಲು ಹಾಗೆ ದಾರಿಯಿಲ್ಲವೇ? ಯಾವಾಗ ತಮ್ಮ ಠರಾವು ಪಾಸಾಗಲಿಲ್ಲವೋ ಆಗ ಮೀಟಿಂಗ್ ಬಿಟ್ಟು ಎರಬರನೆ ಪಲಾಯನ.

ಇವರು ಪಲಾಯನ ಮಾಡಿದುದೇಕೆ? ಇದು ಸಹ ಆಗಬಹುದು. ದೇಶವನ್ನು ಸಂಚರಿಸದೆಯೇ ಇಂಥಾ ರಿಪೋರ್ಟನ್ನು ಬರಯಬಹುದೆಂದು ಹೇಳಿಯಾಯಿತು. ಚರ್ಚೆಗೆ ಸುರುವಾಗುವಾಗ ತಮ್ಮ ಅಮೂಲ್ಯವಾದ ಜ್ಞಾನವನ್ನು ಬಹಿರಂಗಪಡಿಸಲು ಕಾರಣವಾಗುತ್ತದೆ. ಇದು ಯಾಕೆ? 'ಇಂದು ಓಡಿದ ಮಗುವು ನಾಳೆ ಕಾಣಬಹುದು' ಎಂಬಂತೆ ಒಂದೇ ಪಲಾಯನ. ಇವರು ಹೀಗೆ ಪಲಾಯನ ಮಾಡುವಾಗ ಕೆಡಿಡೆಯನ್ನೋ ಕಾಲುಗಳನ್ನೋ ಬಿಟ್ಟು ಓಡಿಹೋದರೋ ಎಂದು ಗೊತ್ತಿಲ್ಲ.

ಇನ್ನೊಂದು ಮಾತು— ಮುದ್ದಪ್ಪನವರಿಗೇನೋ ಪುತ್ತೂರು ಮೊದಲಾದ ಸ್ಥಳಗಳನ್ನು ಕೊಡಗು ವಿದ್ಯಾಭಿವೃದ್ಧಿಯು ಮೂಲೆಗೊತ್ತಿದರೂ ಇವರಿಗೆ ಅಲ್ಪವೇ. ಆದರೆ ಇವರನ್ನು ಹಿಂಬಾಲಿಸಿ ಓಡಿದಂಥಾ ಐನಂಡ ಪೂದಪ್ಪನವರು ಮತ್ತು ಅಜ್ಜಮಾಡ ಮಾದಪ್ಪನವರ ಸ್ಥಿತಿಗತಿ ಏನು? ಇವರಿಬ್ಬರೂ ಸಹ ಇನ್ನಿಬ್ಬರು ಮೆಂಬರುಗಳು ಕಮಿಟಿಯ ಸಂಚಾರಕ್ಕೆ ಸೇರಲಿಲ್ಲವೆಂದು ಗೊಣಗುಟ್ಟಿದವರು. ಆತರನ್ನು ಹಿಂಬಾಲಿಸಿ ಓಡಿದುದೇಕೆ? ಪಾರ್ಟಿ ತತ್ವವೋ! ದೇಶದವರೇ ಇಂಥಾ ಪಾರ್ಟಿತತ್ವದಲ್ಲಿ ಕೆಲಸ ಮಾಡುತ್ತಿದ್ದರೆ, ದೇಶಸೇವೆ ಏನಾಗುತ್ತದೆಂದು ಗ್ರಹಿಸಿ. ವಿದ್ಯಾ ಕಮಿಟಿ ಮರೆನಾಡಿಗೆ ಹೋದಾಗ ಅಲ್ಲಿಯ ನಾಲ್ಕು ಗ್ರಾಮಸ್ಥರು ಶಾಲೆಗಳ ಅಭಿವೃದ್ಧಿಯ ಮತ್ತು ಮರೆನಾಡಿಗೆ ಗಾಡಿರಸ್ತೆಗೆದುಕೊಂಡು ಹೋಗುವ ಹಾಗೆ ರಸ್ತೆಗ ಏನು ಏರ್ಪಾಡೆಂದು ಎಲ್ಲರೂ ಚರ್ಚಿಸುತ್ತಾ ಇದ್ದುದಾಯಿತು. ಎಲ್ಲರೂ ಸೇರಿ ವಿರಾಜನಾಯ ಮಧ್ಯದಲ್ಲಿ ಒಂದ ಒಳ್ಳೆಯ ಹೊಸದಾದ ಶಾಲೆಯನ್ನು ಕಟ್ಟಿಸಿ, ಅದನ್ನು ಹಯ್ಯರ್ ಎಲಿಮೆಂಟರಿ ಶಾಲೆಗೆ ಏರಿಸುವ ಪ್ರಯತ್ನ ಪಡಬೇಕೆಂದೂ ಮತ್ತು ಈ ನಾಡಿಗೆ ಗಾಡಿ ರಸ್ತೆಕ್ಕೆ ಬೇಗನೆ ಯಲ್ಲಾದರೂ ಬರುವ ಹಾಗೆ ಒಳ್ಳೆಯ ಹಂಗಾಮಿ ಸೇತುವೆ ಮಾಡಲಿಕ್ಕೂ, ಮಳಗಾಲದಲ್ಲಿ ಹೊಳೆ ದಾಟಲು ಬದ್ಧವಾದ ಸಸ್‌ಪೆನ್ಸ ಶುನ್ ಆದರೂ ಮಾಡುವ ಪ್ರಯತ್ನ ಪಡಬೇಕೆಂದು ಚರ್ಚಿಸಲಾಯಿತು. ಶಾಲೆ ಕಟ್ಟಡಕ್ಕೆ ಅರ್ಧ ಹಣ ಊರವರು ಹಾಕುವ ಹಾಗೂ ಅರ್ಧ ಬೋರ್ಡಿನಿಂದ ಕೊಡಿಸಿ ಕೊಡಬೇಕಾಗಿಯೂ ಕೇಳಲಾಯಿತು. ಮರೆನಾಡಿನವರು ತುಂಬಾ ಮರ್ಯಾದಸ್ಥರಾಗಿಯೂ ಯೋಗ್ಯರಾಗಿಯೂ ಇರುತ್ತಾರೆ. ಅವರು ಹೊಳೆದಾಟುವ ಕಷ್ಟವನ್ನು ನೋಡಿ ಅವರ ಧಾನ್ಯ ದವಸಕ್ಕೆ ಒಳ್ಳೆಯ ಕ್ರಯವಿಲ್ಲವೆಂದೂ ಅವರ ಮೊರೆಯನ್ನು ಕೇಳಿ ಅವರ ಮೇಲೆ ತುಂಬಾ ಕನಿಕರಪಟ್ಟು ಕಮಿಟಿ ರಿಪೋರ್ಟಿನಲ್ಲಿ ತೋರಿಸಿದಾಗಿದೆ. ಇದು ತಪ್ಪು. ಹೀಗೆ ಹೇಳಬಾರದಿತ್ತು, ಎಂದು ಇವರ ಪರವಾಗಿ ಚುನಾಯಿಸಿದ ಡಿ. ಬೋ ಮೆಂಬರ್ ಮರೆನಾಡಿನವರನ್ನು ಹೀಯಾಳಿಸಿದರಿ ಎಂದು ಕಮಿಟಿಯವರ ಸಂಗಡ ವಾದ—ಇವರೇ ಮೊದಲು ಹೀಗೆ ಹೇಳಿ ಬರೆದದ್ದು ಒಳ್ಳೇದೆಂದು ಒಪ್ಪಿ ಕಳೆದ ಮೀಟಿಂಗಿನ ದಿನ ಹೀಗೆ ಬರಯಬಹುದೋ ಎಂದು ವಾದ, ಮತ್ತು ಪತ್ರಿಕೆಯಲ್ಲಿ ಬಾಸ್ಕೆ ಮತ್ತು ಪುಕಾರು. ಕಂಡದ್ದನ್ನು ಕಂಡಂತೆ ದೇಶದ ಹಿತಕ್ಕಾಗಿ ಬರೆದದ್ದು ತಪ್ಪೆಂದು ದೇಶದಲ್ಲಿ ಕೆಲಸಮಾಡುತ್ತೇವೆಂದು ಒಪ್ಪಿಕೆ ಇಂದು ಮಹಿಮಾರಾಂಡ ಕೆಲಸವನ್ನು ಮಾಡದವರು ಕೆಲಸವನ್ನು ಮಾಡಿದವರ ಮೇಲೆ ಪುಕಾರು ಮತ್ತು ಮೀಟಿಂಗಿನಲ್ಲಿ ಸಿಪಾವಾಗಿ ನಡೆದ ಸಂಗತಿಯನ್ನು ಬರೆಯದೆ ಕೆಲವು ನಡೆಯದ ಸುಳ್ಳು ವರ್ತಮಾನವನ್ನು ಪತ್ರಿಕೆಗೆ ಕೊಡುವದು ವಿಷಾದಕರ. ಇನ್ನಾದರೂ ದೇಶದ ಮೇಲೆ ಪ್ರೀತಿಯನ್ನಿಟ್ಟು ಒಗ್ಗಟ್ಟನ್ನು ಅತೀ ಪಾರ್ಟಿತತ್ವವನ್ನು ಬಯಸದಿರಲಿ.

ಒಬ್ಬ ಮೆಂಬರು

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲಾ ಬಾಧಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ

ಮಾತ್ರೆಗಳು.

ದಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನ ರಹಿತವಾದುದು. ಒಂದು ಡಬ್ಬಿಯ ಕ್ರಯ ೧ ೦ ೦

52—44 ಮದನಮಂಜರಿ ಫಾರ್ಮಸಿ,
1/94 ಚೀನಾ ಬಜಾರ್, ಮದ್ರಾಸ್.

ಹೊಸ ಪುಸ್ತಕ ಕ್ರಯ ೧—೦—೦

ಮೊದಲನೆಯ ಮುದ್ರಣ

ಸ್ತ್ರೀಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ದಾಂಪತ್ಯ ರಹಸ್ಯ.

ಸುಮಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ತಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀ ಸುರತ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧಾರಣೆ, ಸಂಭೋಗದಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ ಹೊಸವ ಮಾರ್ಗಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೊಡಿದೆ. ಕ್ರಯ ಪುಸ್ತಕ ೧ಕ್ಕೆ ರೂ. ೧—೦—೦.

ಎಸ್. ವಿ. ಗೋಪಾಲ್ ಬುಕ್ ಡಿಪೋ,
52—26 37. ತಿರುಪಳ್ಳಿಬೀದಿ, ಮದರಾಸ್.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಎಂಬುದೇ

ಎಲ್ಲಾ ಬೆಳೆಗಳಿಗೂ ಯೋಗ್ಯವಾದ ಸಾರಜನಕ ಗೊಬ್ಬರವು, ಪ್ರಪಂಚದಲ್ಲೆಲ್ಲಾ ಇದೇ ಸಸ್ಯಾದಿಗಳನ್ನು ಒಳ್ಳೇಯದಾಗಿ ಬೆಳೆಸುವ ಮತ್ತು ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಫಸಲನ್ನು ಕೊಡುವ ಸಾಧನವೆಂದು ಖ್ಯಾತಿಯನ್ನು ಪಡೆದಿರುತ್ತದೆ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಗಿಡಗಳ ಬೇರುಗಳನ್ನು ಹೆಚ್ಚು ಆಳದ ವರೆಗೂ ಪಸರಿಸುವಂತೆ ಮಾಡುವದರಿಂದ ಮಳೆ ಕಡಿಮೆಯಾದಾಗ್ಯೂ ಗಿಡಗಳಿಗೆ ಹೆಚ್ಚಿನ ತೊಂದರೆಯಾಗಲಾರದು.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗಗಳಿಗೆ ಥಕ್ಕನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಆಫ್ ಸೋಡಾದಲ್ಲಿ ಬೆಳೆಗಳನ್ನೂ ಮಣ್ಣನ್ನೂ ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಹುಳಿ (ಆಸಿಡ್) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪ್ಯಾರಿ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಷನಿಗಾದರೂ 8½ ಹಂಡ್ರೆಡ್‌ವೇಟಿನ ಚೀಲ 1ರ ಕ್ರಯವಾಯಿ 6—8—0ರಂತೆ ಒದಗಿಸಿ ಕೊಡುವರಲ್ಲದೆ, ಮಡಿಕೇರಿ, ವೀರಾಜಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 7—8—0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ ವಿವಿದ ಬೆಳೆಗಳ ವಿಷಯ ದರ್ಮಾರ್ದವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ 469, ಕಲ್ಕತ್ತಾ.

(2) ಮಿಸ್ಟರ್ ಯಂ ಯಂ ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24—5

Arms, Ammunition and Shooting Requisites!!!



Current Illustrated Catalogue Free on Application!

D. B. B. L. Rifles	Rs	120	to	Rs	2750
S. B. B. L.	"	35	to	"	950.
D. B. B. L. Guns	"	50	to	"	1350.
S. B. B. L.	"	35	to	"	275
D. B. M. L.	"	45	to		135
S. B. M. L.	"	30	to	"	80.
B. L. Revolvers	"	35	to	"	350
Automatic Pistols	"	30	to	"	150

Brilliant Search Light Lamp For Shooting Camping, Fishing and All such other Night Sports and work Rs 30 Free Delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—15 210 Abdul Rehman Street, BOMBAY.

ಎಂ. ಎಸ್. ಶಿವಪ್ಪ ಬ್ರದರ್ಸ್
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

1. 'ದಿಲ್ ಬಹರ್ ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ 1ಕ್ಕೆ	50	8	0
2. "ಸಿದ್ಧವಸ್ತು ಫ್ಲ್ಯೂಟ್" " "	42	8	0
3. ಶಕುಂತಲಾ " " "	40	0	0
4. ಮೋಹನ್ " " "	37	8	0
5. ಮೋಸ್ಲೇಂ " " "	35	0	0
6. ಮಹಾರಾಜಾ " " "	32	8	0
7. ಕೊಹಿನೂರು " " "	29	8	0
8. ಡೈಮಂಡ್ " " "	27	8	0
9. ಬಿಜಲೀ " " "	25	0	0
10. "ದಿಲ್‌ಬಹರ್ ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1ಕ್ಕೆ	85	0	0
11 ಸ್ಪೆಷಲ್ " "	55	0	0
12. ಮೋಹನ್ " " "	50	8	0

14 ಕ್ಯಾರೆಟ್ ಬಂಗಾರದ ನಿಬ್ಬುಗಳುಳ್ಳ ಖಾತ್ರಿಯೂ ಬಂದೋಬಸ್ತೂ ಆದ ಫೌಂಟೆನ್ ಪೆನ್ನುಗಳು.

ವರ್ಲ್ಡ್ ವಂಡರ್ ಪೌಂಟನ್ ಪೆನ್ 1ಕ್ಕೆ	3	0	0
" ಬಿಗ್‌ಬ್ಯಾರಲ್ " "	3	2	0
" ಸ್ಕ್ರೂಕ್ಯಾಪ್ " "	3	8	0
" ಮಾಟಲ್ ಕವರ್ " "	3	14	0
" ಮಾಟಲ್ ಸ್ಕ್ರೂಕ್ಯಾಪ್ "	4	4	0
" ಬ್ರೌನ್‌ಕಲರ್ ಸೆಲ್ಫ್‌ಫಿಂಗ್ ಪೆನ್ "	5	8	0
" ಸೇಫ್ಟಿ ಪೆನ್ " "	6	8	0
" ಲೇಡೀಸ್ ಸ್ಪೆಷಲ್ ಮಾಟಲ್ ಕಲರ್ ಪೆನ್ "	4	8	0
ಬ್ಲಾಕ್‌ಬರ್ಡ್ ಪೆನ್ 1ಕ್ಕೆ 3 8 0 ಮತ್ತು	3	12	0
ಸ್ವಾನ್ ಪೆನ್ " 6 8 0 "	7	0	0
ವಾಟರ್‌ಮೆನ್ ಐಡಿಯಲ್ 1ಕ್ಕೆ 8 0 0 "	8	8	0
" ಸೆಲ್ಫ್ ಫಿಲ್ಲಿಂಗ್ ಸೇಫ್ಟಿ ಪೆನ್ 1ಕ್ಕೆ	12	0	0
ಬಿಗ್‌ಬ್ಯಾರಲ್ ಪಾರ್ಕರ್ ಪೆನ್ " "	8	0	0
" ಸಪ್ಲ್ಯೂಸ್ ಪೆನ್ 1ಕ್ಕೆ	17	0	0

ಖಾತ್ರಿಯೂ ಬಂದೋಬಸ್ತೂ ಆದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು 1ಕ್ಕೆ	2	2	0
ಜರ್ಮನ್ ಗುಂಡಾಗ ಕೃತಿಯ ಅಲಾರಂ ಟೈಂಪೀಸು "	3	12	0
ಅನ್‌ಸೋನಿಯಾ 'ಬಿ' ಟೈಂಪೀಸು "	5	13	0
" ಅಲಾರಂ " "	5	6	0
ಎಗ್‌ಬೆಲ್ " " "	5	6	0
" ಡಿಲ್ಯೂಕ್ಸ್ ಸ್ಟ್ಯಾಂಡಿರುವ ಅಲಾರಂ ಟೈಂಪೀಸು "	13	5	0
ಗಂಟೆ ತೋರಿಸಿ ಅಲಾರಂ ಬಾರಿಸುವ ಕ್ಯಾರೇಜ್ ಕ್ಲಾಕ್ "	7	2	0
" ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1ಕ್ಕೆ	8	10	0
" ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಬಾರಿಸುವ ಕ್ಯಾರೇಜ್ ಕ್ಲಾಕ್ 1ಕ್ಕೆ	9	12	0
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಕರ್ಕಶವಾದ ಶಬ್ದವನ್ನುಂಟುಮಾಡುವ ಕ್ಯಾರೇಜು ಕ್ಲಾಕ್ 1ಕ್ಕೆ	12	0	0

ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	19,240
ಜಮಾಬಂದ ಠೇವಣಾತಿ	—	1,83,670

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಕೋಳೆಯಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1–5–1929.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ. ಕೀಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಸಚೇರಿರ ನಂಜಪ್ಪನವರು, ಮತ್ತು, ಮೆ. ಮುಂಡೇಪಂಡ ಸೋಮೈಯ್ಯನವರು, (ಖಾದಿಭಂಡಾರ.)
ಮೂರ್ನಾಡು—ಮಡೆಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ. ಟಿ. ಅರ್. ರಾಮೈಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬುಕ್ಕ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.



12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART.
321 Abdul Rehman Street.
55-10 BOMBAY. 2.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3–4 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗೆಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0, 3ಕ್ಕೆ ರೂ 4–0–0, 6ಕ್ಕೆ ರೂ 7–8–0, 12ಕ್ಕೆ ರೂ 14.

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ 1–4–0 3–8–0 6–12–0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3–8–0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ಇದ್ದ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2–10–0 ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5–8–0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ.—ಮನೋಲ್ಲಾಸಿನಿ ಕಂಪೆನಿ.

52–36 ೯. ಮಂಗಳೂರು.

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವೈವಾಟದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು { 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25.
1000 ,, ಎಂಡೌಮೆಂಟ್ ,, ,, —ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.
ಪುನಹ ಒಂದು ಹೊಸ ಪಾಲಿಸಿಯನ್ನು 'ಓರಿಯಂಟಲ್' ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು
ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1. ಸೌತ್ ಪೆರೇಡ್, ಬೆಂಗಳೂರು.
52–25

ಯಲ್. ಆರ್. ಕೃಷ್ಣಸ್ವಾಮಯ್ಯರ್.
ಬ್ರಾಂಚ್ ಸೆಕ್ರೆಟರಿ.

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಾಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು [illegible]ಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.

24–5

೫೦ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದಬಾಧೆ, ರಕ್ತಪಿತ್ತ, ಒಳಜ್ವರ ಮಲಬದ್ಧತೆ, ಕೈಕಾಲು ಬಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.—ಕ್ರಯ ಡಬ್ಬಿ 1 ಕ್ಕೆ 2–8–0, ಮೂರು ಡಬ್ಬಿಗಳಿಗೆ ರೂ. 7–0–0.

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1 ಕ್ಕೆ 0–10–0 3 ಕ್ಕೆ 1–12–0.

೩. ಮಲೇರಿಯಾ ನಿವಾರಣಿ.

ದಿನ ಬಿಟ್ಟು ಬರುವಜ್ವರ, ಮಲೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–2–0.

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆ ಉರಿ ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1–4–0. 3 ಕ್ಕೆ 3–8–0.

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0–8–0, 3ಕ್ಕೆ 1–6–0.

೬. ಕಸ್ತೂರಿ ಮಿಶ್ರಣ.

ದಶ ಮೂಲಾರಿಷ್ಟ ಬಾಣಂತಿಯರಿಗೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗೆ 4–4–0

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ. ಬಾಟ್ಲಿ 1 ಕ್ಕೆ 1–4–0, 3 ಬಾಟ್ಲಿಗೆ 3–8–0

೮. ಚವನ ಪ್ರಾಶ ಡಬ್ಬಿ 1 ಕ್ಕೆ 2–0–0.

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ. ಖಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷದಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದೀಯ ಫಿಸಿಸಿಯನ್ಸ್,
52–32 ರಥಬೀದಿ, ಮಂಗಳೂರು, ದ. ಕನ್ನಡ.

Printed & published by P. J. Belliappa, at "Kodagu" Press, Mercara for "Kodagu" Ltd.

Reg. No. M. 1550.
If not delivered please return to "KODAGU" OFFICE MERCARA.

ಕೊಡಗು.

ಸತ್ಯೇನ ಧರ್ಮದಯುಕ್ತ ... [illegible]

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಶೇಷ್ಯಂಗ ... [illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಮಡಿಕೇರಿ, ಸ್ನ ೧೯೨೯ನೇ ಇಸವಿ ಜೂನ್ ತಾರೀಖು ೨೮ನೇ ಶುಕ್ರವಾರ [ಸಂಚಿಕೆ ೪

Post Box 423,
TRIPLICANE, MADRAS.

MANUFACTURES AND DEALS IN ALL.—

(1) Gemset Jewels, gold and silver articles of all patterns
(2) Race Cups Caskets, Medals, etc., for presentation purposes
(3) Trovels, Keys, Locks etc., for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

Catalogue Free to Bona fide Enquirers

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro plating, gilding and nickelling
(3) Binguy old jewellery, or undertaking to effect sale

V. SUBRAMANIA IYER

Telephone — 3145

JEWELLER

Telegrams.— "PRECIOUS"

Gold-smith, Silver smith, & Dealer in all Gemset Jewels.

52—41

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ
ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ

ರತನ್ ಮಿಶ್ರಿ ಹಲ್ವಾ

ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು, ನೀರಾಗಿರುವಿಕೆ ಆಗಾಗ್ಗೆ ಸ್ವಪ್ನದಲ್ಲಿ ಸ್ಖಲನೆಯಾಗುವಿಕೆ, ಅತಿ ಸ್ತ್ರೀಸ್ವಾಪ್ರವರ್ತನೆಯಿಂದಲೂ, ಬಾಲ್ಯದ ದುರಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ಶೀಘ್ರ ಸ್ಖಲನೆಯೂ ಗುಪಿರ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಯುವಿಕೆ, ಚಿರಕಾಲದ ಮೇಹ ವ್ಯಾಧಿಯಿಂದ ಶರೀರವು ಸೊರಗಿ ಹೋಗುವಿಕೆ, ನೇತ್ರರೋಗ, ಚರ್ಮವ್ಯಾಧಿ ಉಷ್ಣವಾಯು ... [illegible] ... ನಾನಾ ರೋಗಗಳನ್ನು ಗುಣಪಡಿಸಿ ಧಾತುಪುಷ್ಟಿ ಶರೀರ ಪುಷ್ಟಿಯನ್ನು ... [illegible] ... ಗಳೆಲ್ಲಾ ನೀಗುವವು ಸಂಪೂರ್ಣ ಗುಣ ಉಂಟಾಗಲು ... ಡಬ್ಬಿಗಳನ್ನು ಉಪಯೋಗಿಸಬೇಕು.

ಕ್ರಯ —೧ ಪೌಂಡು ಟಿನ್ ೧ಕ್ಕೆ ರೂ ೫—೦—೦, ಅರ್ಧ ಪೌಂಡು ಟಿನ್ ೧ಕ್ಕೆ ರೂ ೩—೮—೦
ಚಿಕ್ಕಪೇಟೆ, ವಿದ್ಯಾವಿಲಾಸ ಬುಕ್ಕು ಡಿಪೋದಲ್ಲೂ ದೊರಕುತ್ತೆ

52—27. ವ್ಯವಸ್ಥಾಪಕರು— ರತನ್ ಮಿಶ್ರಿ ಡಿಪೋ. (... [illegible])
... [illegible] ಬೀದಿ, ಬೆಂಗಳೂರು ಸಿಟಿ.

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

ಅಪೂರ್ವ ಸಂದರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!!

ಧರ್ಮಾರ್ಥ! ಧರ್ಮಾರ್ಥ!!

ಕಾಮ ಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ —

ಆತಂಕನಿಗ್ರಹ ಔಷಧಾಲಯ,
52—47 ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೇಷ್ಠವಾದ 5 ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ 40 — ಅಸಲ್ ಗೋರೋಚನ ತೊಲ 1ಕ್ಕೆ ರೂ. 12
ಕೇಸರಿ ಅಥವಾ ಕುಂಕುಮಪುಷ್ಪ ತೊಲ 1ಕ್ಕೆ ರೂ 3½ — ಪಚ್ಚ ಕರ್ಪೂರ ತೊಲ 1ಕ್ಕೆ ರೂ 2½
ತಾಂಬೂಲ ಇಂಗು ತೊಲ 10 ಕ್ಕೆ ರೂ 1

ಶ್ರೇಷ್ಠವಾದ 108 ಮಣಿವುಳ್ಳ ರುದ್ರಾಕ್ಷಿ ಜಪ ಮಾಲೆ 1ಕ್ಕೆ ಆರ್ಕೆ 6 8, 12, ರೂ 1, 2, 5, 10 ರ ವರೆಗೆ
32 ಮಣಿವುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ. 1, 2, 3, 4, 5, 8, 10 ರ ವರೆಗೆ
ಮತ್ತು ಎಲ್ಲಾ ವಿಧವಾದ ರೇಷ್ಮೆ ಜರಿ ಸೀರೆಗಳು, ಕಣಗಳು, ಮುಕುಟ ಪಟ್ಟೆ ... [illegible] ಸರಕುಗಳು ದೊರೆಯುತ್ತೆ. ಸಾವಕಾಶ ನೋಡಿ ... [illegible] ಆರ್ಡರು ಕೊಡಿರಿ ಸರಕುಗಳು ಸುಲಭ ಕ್ರಯಕ್ಕೆ ದೊರೆಯುತ್ತೆ.

ಅಡ್ರಸ್—

ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್," ಶ್ರೀಕಾಶಿ.

BHARADWAJ & CO.,

"SILK HOME,"
Benares City.

52—44

ಏಕೆ ನರಳುತ್ತೀರಿ?

ಕ್ರಯವು ಅಂಚೆಹಾಸಲು.
ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—45 ಮದನಮಂಜರಿ ಫಾರ್ಮಸಿ,
1/94 ಜೈನ ಬಜಾರು ರೋಡು, ಮದ್ರಾಸು

ಕೊಡಗು.

ಸನ್ ೧೯೨೯ನೇ ಇಸವಿ

ಜೂನ್ ತಾ. ೨೮ ನೇ ಶುಕ್ರವಾರ.

೧೯೨೯—೩೦ನೇ ವರ್ಷದ ಕೊಡಗು ಸರ್ಕಾರದ ಬಡ್ಜೆಟ್.

1929—30ನೇ ವರ್ಷದ ಅಂದರೆ 1929ನೇ ಇಸವಿ ಏಪ್ರಿಲ್ 1 ರಿಂದ 1930ನೇ ಇಸವಿ ಮಾರ್ಚಿ ಆಖೈರ್ ವರೆಗಿನ ಒಂದು ವರ್ಷದ ಬಡ್ಜೆಟ್ ಕಳೆದ ತಿಂಗಳಲ್ಲಿ ಚೀಫ್ ಕಮಿಶನರಿಂದ ಮಂಜೂರು ಮಾಡಲ್ಪಟ್ಟಿದೆ. ಕೌನ್ಸಿಲ್ ಮುಂದೆ ಕಳೆದ ಮಾರ್ಚಿ ತಿಂಗಳಲ್ಲಿ ಈ ಬಡ್ಜೆಟನ್ನು ಚರ್ಚೆಗೆ ಇಟ್ಟಾಗ ಆದಾಯ ರೂ 14,11,000 ವೆಂತ ತೋರಿಸಿದ್ದು ಈಗ ರೂ 14,47,000 ಎಂತ ಬದಲಾಗಿದೆ. ಖರ್ಚು ರೂ. 14,78 000 ಎಂತ ಇದ್ದದ್ದು ರೂ 15,33,000 ಕ್ಕೆ ಏರಿದೆ. ಈ ವ್ಯತ್ಯಾಸಗಳಲ್ಲಿ ಕೌನ್ಸಿಲ್ ಅಭಿಪ್ರಾಯಕ್ಕನುಗುಣವಾಗಿ ಆದದ್ದು ಎಷ್ಟು, ಕೌನ್ಸಿಲನ್ನು ಗಣನೆಗೆ ತೆಗೆದುಕೊಳ್ಳದೆ ಆದದ್ದು ಎಷ್ಟು ಎಂಬದನ್ನು ನೋಡಬೇಕಾಗಿದೆ. ಇದನ್ನು ನೋಡುವ ಮುಂಚೆ ಹಿಂದಿನ ವರ್ಷದ ಬಡ್ಜೆಟನ್ನು ತಯಾರಿಸುವದರಲ್ಲಿ ಆಗಿರುವ ಅಜಾಗರೂಕತೆಯನ್ನು ತೋರಿಸಬೇಕಾಗಿದೆ. ಆ ವರ್ಷದಲ್ಲಿ ಉತ್ಪತ್ತಿಯ ಅಂದಾಜು ರೂ 13,46,000 ಮಾಡಿದ್ದದ್ದು ರೂ 14 41 000 ಉತ್ಪತ್ತಿಯಾಗಬಹುದೆಂತ ತಿದ್ದಲ್ಪಟ್ಟಿದೆ. ಇದರಲ್ಲಿ ಕೆಲವು ಬಾಬುಗಳು ಬಡ್ಜೆಟನ್ನು ತಯಾರಿಸುವಾಗ ಖಂಡಿತ ಹೇಳಲು ಸಾಧ್ಯವಿಲ್ಲದವು ಇದ್ದರೂ, ಫಾರೆಸ್ಟ್, ಎಕ್ಸೈಸ್ ಮುಂತಾದ ಕೆಲವು ಇಲಾಖೆಗಳಲ್ಲಿ ಬರಬಹುದಾದ ಉತ್ಪತ್ತಿಯನ್ನು ಸರಿಯಾಗಿ ತೋರಿಸದ್ದರಿಂದ ಈ ರೀತಿ ವ್ಯತ್ಯಾಸಗಳು ಬರಲು ಕಾರಣವಾಗಿದೆ. ಖರ್ಚಿನ ಬಾಬಿನಲ್ಲಿ 14,19 000 ಅಂದಾಜು ಮಾಡಿದ್ದದ್ದು ರೂ 13,42,000 ಮಾತ್ರ ಆಗಬಹುದೆಂತ ತಿದ್ದಲ್ಪಟ್ಟಿದೆ. ಒಟ್ಟಿನ ಮೇಲೆ 1928—29ನೇ ವರ್ಷದ ಬಡ್ಜೆಟ್ಟಿನಲ್ಲಿ ರೂ 73,000 ನಷ್ಟವಾಗಬಹುದೆಂತ ಅಂದಾಜು ಮಾಡಿದ್ದದ್ದು 99,000 ರೂ ಉಳಿತಾಯವಾಗುವದೆಂತ ತಿದ್ದಲ್ಪಟ್ಟಿದೆ. ಈ ತರದ ಅಜಾಗರೂಕತೆಯ ಬಡ್ಜೆಟ್ಟಿನಿಂದ ಆಗುವ ತೊಂದರೆಯನ್ನು ಕಳೆದ ಬಡ್ಜೆಟ್ ಮೀಟಿಂಗಿನ ಚರ್ಚೆಯಲ್ಲೇ ಹೇಳಲ್ಪಟ್ಟ ವೇರೆ ವಿವರಿಸಲಾಗಿದೆ. ಇದರಿಂದ ದೇಶಕ್ಕೆ ಪ್ರಯೋಜನವಾಗುವ ಕೆಲಸಗಳಿಗೆ ಹಣವಿಲ್ಲವೆಂತ ಸರಕಾರದ ಮೆಂಬರು ಹೇಳಲು ಅನುಕೂಲ ಮಾಡಿಕೊಂಡಂತಾಗುತ್ತದೆ. ಕಳೆದ ವರ್ಷದ ಬಡ್ಜೆಟ್ಟಿಗೂ, ಈಗ ತಿದ್ದುಪಡಿ ಆದ ಸಂಖ್ಯೆಗೂ ರೂ. 1,72,000 ವ್ಯತ್ಯಾಸವಾಯಿತು. ಇನ್ನು ಮೇಲಾದರೂ ಹೀಗಾಗಲು ಬಿಡಲಾರರೆಂತ ಆಶಿಸುತ್ತೇವೆ.

ಕಳೆದ ವರ್ಷದ ಬಡ್ಜೆಟ್ಟಿನ ಇನ್ನೊಂದು ವಿಷಯವನ್ನಾದರೂ ನಾವು ಪ್ರತ್ಯೇಕ ಹೇಳಬೇಕಾಗಿದೆ. ಔಷಧಿ ಮತ್ತು ಆರೋಗ್ಯ ಇಲಾಖೆಗಳಿಗಾಗಿ ರೂ. 1,15,700 ಇಟ್ಟಿದ್ದದ್ದರಲ್ಲಿ ರೂ 95,000 ಮಾತ್ರ ಖರ್ಚು ಮಾಡಿದ್ದಾರೆ. ದೇಶದಲ್ಲಿ ಜನನ ಸಂಖ್ಯೆಗಿಂತ ಮರಣ ಸಂಖ್ಯೆಯೇ ಹೆಚ್ಚಾಗುತ್ತಿರುವಾಗ ಔಷಧಿ ಮತ್ತು ಆರೋಗ್ಯ ಇಲಾಖೆಗಳ ಖರ್ಚಿಗೆ ಇಟ್ಟಿದ್ದ ಹಣವನ್ನು ಖರ್ಚು ಮಾಡದೆ ಇದ್ದದ್ದಕ್ಕೆ ಎಷ್ಟು ವಿಷಾದಿಸಿದರೂ ಸಾಲದು.

ಹೊಸ ಬಡ್ಜೆಟ್ಟಿನಲ್ಲಿ ಸರಕಾರಿ ಇನ್ಸ್‌ಪೆಕ್ಟರುಗಳನ್ನು ಹೆಚ್ಚಾಗಿ ನೇಮಿಸಿಕೊಳ್ಳಲಿಕ್ಕೂ, ವೀರರಾಜಪೇಟೆ ಹೈಸ್ಕೂಲಿನ ಬೋರ್ಡಿಂಗನ್ನು ವಿಸ್ತರಿಸಲಿಕ್ಕೂ, ಪ್ರೈಮರಿ ವಿದ್ಯೆಗೆ ಕೊಡುವ ಗ್ರ್ಯಾಂಟನ್ನು 2500 ರೂ. ಯಷ್ಟು ಹೆಚ್ಚಿಸಿದ್ದಕ್ಕೂ ಸರಕಾರವನ್ನು ನಾವು ಅಭಿನಂದಿಸುತ್ತೇವೆ. ವೀರರಾಜಪೇಟೆ ಹೈಸ್ಕೂಲಿನಲ್ಲಿ ಗಣಿತ ಶಾಸ್ತ್ರವನ್ನು ಕಲಿಸುವ ತತ್ವವನ್ನು ಒಪ್ಪಿದ್ದರೂ ಅದಕ್ಕೆ ಹಣವಿಡಲಿಲ್ಲ. ಈ ಏರ್ಪಾಡು ಮಾಡಲು ಸಾಧ್ಯವಾದರೆ ಹಣ ದೊರಕಬಹುದೆಂತ ಬರೆದಿದೆ. ಬಡ್ಜೆಟ್ಟಿನಲ್ಲಿ ತಿಳಿಸಿದ್ದ ಹಣ ದೊರಕಿಸಬಹುದಾದರೆ ಬಡ್ಜೆಟ್ಟಿನ ಸಂಖ್ಯೆಗಳು ಜಾಗರೂಕತೆಯಿಂದ ತಯಾರಿಸಲ್ಪಟ್ಟಿಲ್ಲವೆಂಬದಕ್ಕೆ ಒಂದು ಆಧಾರ ದೊರೆತಂತಾಯಿತು. ಹಣ ದೊರಕುತ್ತದಾದರೆ ಇದನ್ನು ಏರ್ಪಡಿಸಲು ತಡವಾಗಬಾರದೆಂಬದನ್ನು ಆ ಇಲಾಖೆಯವರಿಗೆ ತೋರಿಸಲಿಕ್ಕಾಗಿ ಬಡ್ಜೆಟ್ಟಿನಲ್ಲಿ ಈ ಬಾಬಿನ ಖರ್ಚಿಗೆ ಹಣ ಇಡಲೇಬೇಕಿತ್ತು. ಖರ್ಚಿಗೆ ಸ್ಥಳೀಯ ಸರಕಾರದ ಭರವಸೆ ಇರುವದರಿಂದ ವಿದ್ಯಾ ಇಲಾಖೆಯವರು ಈ ಏರ್ಪಾಡನ್ನು ಮಾಡಲು ತಡಮಾಡಲಾರರೆಂತ ನಂಬುತ್ತೇವೆ.

ಸಾಪೋರ್ಟ್ಸ್ ಬೋರ್ಡಿಂಗನ್ನು ಬದಲಾಯಿಸಲು ಸರ್ಕಾರವು ಒಪ್ಪಿದರೂ ಇಂಜನೀಯರಿಂಗ್ ಇಲಾಖೆಯವರಿಗೆ ಈ ಕೆಲಸವನ್ನು ಜಾರಿ ಮಾಡಲು ಅನುಕೂಲವಾಗಬಾರದೆಂತ ಬಡ್ಜೆಟ್ಟಿನ ಮೇಲೆ ಟಿಪ್ಪಣಿ ಇದೆ. ದೊಡ್ಡ ಸಂಬಳ ಪಡೆಯುವ ಅಧಿಕಾರಿಗಳು ಹೆಚ್ಚಾಗಿರುವ ಈ ಇಲಾಖೆಯ ಅಶಕ್ತತೆಯನ್ನು ನೋಡಿ ವಿಷಾದ ಪಡಬೇಕಾಗಿದೆ.

ಇಂಜನೀಯರಿಂಗ್ ಇಲಾಖೆಯ ಖರ್ಚನ್ನು ಸ್ಥಳೀಯ [illegible] ರೂ 3 62 600 ರಿಂದ ರೂ 3,44,400ಕ್ಕೆ ಏರಿಸಿದ್ದಾರೆ. ಇದರಲ್ಲಿ ವಿರಾಜಪೇಟೆ ಬೋರ್ಡಿಂಗಿನ ಕಟ್ಟಡಕ್ಕಾಗಿ ರೂ. 8000 ಸೇರಿಸಿದೆ. ಹೊಸ ಯಂತ್ರಗಳನ್ನು ಕೊಳ್ಳಲಿಕ್ಕಾಗಿಯೇ 16000 ರೂ ಹೆಚ್ಚಿಸಿದ್ದಾರೆ. "ಸ್ಕೇರಿ ಫೈಯರ್" ಎಂಬ ಹೊಸ ಯಂತ್ರವೊಂದನ್ನು ಕೊಂಡುಕೊಂಡು ಅನುಭವವಾದ ಮೇಲೆ ಮುಂದಿನ ವರ್ಷ ಹೆಚ್ಚಿಗೆ ಕೊಳ್ಳಬಹುದೆಂತ ಯೋಚಿಸಲ್ಪಟ್ಟಿದ್ದರೂ ಈಗಾಗಲೇ ಇನ್ನೂ ಎರಡು ಕೊಳ್ಳಲು ಮಂಜೂರ್ ಮಾಡಿದ್ದಾರೆ. ಇವು ಫಾರೆಸ್ಟ್ ಇಲಾಖೆಯ ಯಂತ್ರಗಳಂತೆ ಆಗಲಾರವೆಂತ ಆಶಿಸುತ್ತೇವೆ. ಒಂದು ಹೊಸ ಸ್ಟೀಮ್ ರೋಲರನ್ನು ತರಿಸಲು ಹಣವಿಡಲಾಗಿದೆ. ಇದು ಬೇಕೆಂತ ಕೌನ್ಸಿಲ್ ಮೀಟಿಂಗಿಗೆ ಮುಂಚೆಯೇ ಇಲಾಖೆಯವರಿಗೆ ಗೊತ್ತಿರದೆ ಇರಲು ಕಾರಣವಿಲ್ಲ. ಆವಶ್ಯವಿದ್ದರೆ ಕೊಂಡುಕೊಳ್ಳಲಿ. ಆದರೆ ಹೊಸ ಯಂತ್ರಗಳ ಸದುಪಯೋಗವಾಗಿ ಹಾಳಾದ ರಸ್ತೆಗಳು ದುರಸ್ತಾದಾವೆಂತ ದೇಶವು ನಿರೀಕ್ಷಿಸುತ್ತಲಿದೆ.

ಇದೇ ಇಲಾಖೆಗಾಗಿ ಚೀಫ್ ಕಮಿಶನರಲ್ಲಿ ಅನಾಮತ್ತಾಗಿ ಇಡುತ್ತಿದ್ದ ರೂ. 5000 ವನ್ನು ರೂ 15,000 ಕ್ಕೆ ಹೆಚ್ಚಿಸಿಕೊಂಡಿದ್ದಾರೆ. ಇದು ಸಹ ಕೌನ್ಸಿಲನ್ನು ಸರಕಾರವು ತಿರಸ್ಕರಿಸುತ್ತದೆ ಎಂಬದಕ್ಕೆ ಒಂದು ಉದಾಹರಣೆಯಾಗಿದೆ. ಕೌನ್ಸಿಲ್ ಮುಂದೆ ಬಂದ ಬಡ್ಜೆಟ್ಟಿನಲ್ಲೇ ಈ ಹೆಚ್ಚಿನ ಸಂಖ್ಯೆಯನ್ನು ಯಾಕೆ ಹಾಕಬಾರದಿತ್ತು?

ವೀರರಾಜಪೇಟೆಯಲ್ಲಿ ಸಬ್ ಮೇಜಿಸ್ಟ್ರೇಟರನ್ನು ನೇಮಿಸಿ ದಕ್ಷಿಣ ಕೊಡಗಿನ ಸಿವಿಲ್, ಕ್ರಿಮಿನಲ್ ವ್ಯಾಜ್ಯಗಾರರ ಕಷ್ಟ ನಿವಾರಣೆ ಮಾಡಿಕೊಡಬೇಕೆಂತ ಕೇಳಿದ್ದಕ್ಕೆ ಮಡಿಕೇರಿ ಸಬ್ ಮೇಜಿಸ್ಟ್ರೇಟರು ವಿರಾಜಪೇಟೆಯಲ್ಲಿ ವಾರಕ್ಕೆ ಮೂರು ದಿನ ಕೋರ್ಟು ಮಾಡಬೇಕೆಂತ ತೀರ್ಮಾನಿಸಿ, ಇದಕ್ಕೆ ಬಡ್ಜೆಟ್ಟಿನಲ್ಲಿ ಹಣ ಇಟ್ಟಿರುತ್ತಾರೆ. ಈ ಏರ್ಪಾಡಿಗಾಗಿ ಮಡಿಕೇರಿ ನಾಡು ನಾರುಪತ್ತೆಗಾರರಿಗೆ ಮೇಜಿಸ್ಟ್ರೇಟ್ ಅಧಿಕಾರ ಕೊಡಬೇಕಾಗುವಂತ ರೆವಿನ್ಯು ಅಧಿಕಾರಿಗಳಿಗೆ ಕ್ರಿಮಿನಲ್ ಅಧಿಕಾರ ಕೊಡಬಾರದೆಂಬ ತತ್ವವನ್ನು ಎಲ್ಲರೂ ಒಪ್ಪುತ್ತಿರುವಾಗ ಹೊಸದಾಗಿ ಒಬ್ಬರಿಗೆ ಅಧಿಕಾರ ಕೊಟ್ಟರ [illegible] ವಾರಕ್ಕೆ ಮೂರು ದಿನ ಮಾತ್ರ ವೀರರಾಜಪೇಟೆಯಲ್ಲಿ ಸಬ್ ಮೇಜಿಸ್ಟ್ರೇಟರು ಇರುವದಾದ್ದರಿಂದ ಅಲ್ಲಿ ಪಾರುಪತ್ಯಗಾರರಿಗೂ ಮೇಜಿಸ್ಟ್ರೇಟ್ ಅಧಿಕಾರ ಉಳಿಯಲೇ ಬೇಕಾಗುತ್ತದೆ. ಮುನ್‌ಶೀಫರು ಕ್ರಿಮಿನಲ್ ಕೆಲಸದಿಂದ ಪೂರ್ತಿಯಾಗಿ ಬಿಡುಗಡೆಯಾಗಲು ಸಾಧ್ಯವಾಗುತ್ತದೋ ನೋಡಬೇಕಷ್ಟೆ. ಪ್ರತ್ಯೇಕ ಮೇಜಿಸ್ಟ್ರೇಟರನ್ನು ನೇಮಿಸಿದ್ದದ್ದರೆ ಸುಮಾರು 2000 ರೂ ಬೇಕಾಗುತ್ತಿತ್ತು. ಆವಶ್ಯವಿರುವ ಈ ನೇಮಕವನ್ನು ಮಾಡದೆ ಹೋದರೂ ಮಡಿಕೇರಿ ಸಬ್ ಮೇಜಿಸ್ಟ್ರೇಟರು ವೀರರಾಜಪೇಟೆಗೆ ಹೋಗುವ ಏರ್ಪಾಡಿಗೆ ಎಲ್ಲಾ ಬಾಬಿಗಾಗಿಯೂ ರೂ. 1420 ಹೆಚ್ಚಿಗೆ ಹಣ ಬಡ್ಜೆಟ್ಟಿನಲ್ಲಿ ಇಟ್ಟಿರುತ್ತಾರೆ. ಈ ಸ್ವಲ್ಪ ಹಣ ಉಳಿಸಲಿಕ್ಕಾಗಿ ಆವಶ್ಯವಿರುವ ಉದ್ಯೋಗವನ್ನು ಏರ್ಪಡಿಸದೆ ಇದ್ದದ್ದು ಬುದ್ಧಿವಂತಿಕೆಯಾಗಲಿಲ್ಲ.

ಫಾರೆಸ್ಟ್ ಇಲಾಖೆಯ ಆದಾಯ ವೆಚ್ಚವು ನಿಯಮದ ಪ್ರಕಾರವಾಗಿಲ್ಲವೆಂಬದಕ್ಕೆ ಬಡ್ಜೆಟ್ಟಿನ ಟಿಪ್ಪಣಿಯಲ್ಲಿ ಉದಾಹರಣೆಗಳಿವೆ. ಚಾಮರಾಜನಗರದ ಖರ್ಚಿನಿಂದ 4000 ರೂ ಕೌನ್ಸಿಲ್ ಮುಂದೆ ಇಟ್ಟಿದ್ದ ಬಡ್ಜೆಟ್ಟಿನಿಂದ ಈಗ ಕಡಿಮೆ ಮಾಡಿದ್ದಾರೆ. ಈ ಇಲಾಖೆಯಲ್ಲಿ ಆವಶ್ಯವಿಲ್ಲದ ಖರ್ಚುಗಳಿಗೆ ಬಡ್ಜೆಟ್ ಮಾಡಿಕೊಳ್ಳುವದರಿಂದ ಅನಾವಶ್ಯದ ಖರ್ಚುಗಳಿಗೆ ಅನುಕೂಲವಾದೀತೋ ಎಂಬುವೇ ನಮ್ಮ ಭೀತಿಯಾಗಿದೆ. ಫಾರೆಸ್ಟ್ ಇಲಾಖೆಗೆ ಭಂಡವಾಳದ ಖರ್ಚಿಗೆ ರೂ 40,500 ಇದ್ದದನ್ನು ರೂ. 56,200 ಕ್ಕೆ ಏರಿಸಿದ್ದಾರೆ. ಫಾರೆಸ್ಟ್ ಮೆಂಬರು ಈ ಬಾಬಿನ ಖರ್ಚನ್ನು ಕೌನ್ಸಿಲಿನಲ್ಲಿ ತಪ್ಪಾಗಿ ವಿವರಿಸಿದ್ದರು. ಅಷ್ಟು ಮುಂದಾಲೋಚನೆಯಿಂದ ಕೇಳಿದ ಹಣಕ್ಕಿಂತ ಈಗ ಸುಮಾರು 16,000 ರೂ. ಹೆಚ್ಚಿಗೆ ಕೊಡಲು ಕಾರಣವೇನೋ ಗೊತ್ತಾಗುವದಿಲ್ಲ. ಕೌನ್ಸಿಲ್ ಚರ್ಚೆಯಾದನಂತರ ಈ ರೀತಿ ಸಂಖ್ಯೆಗಳನ್ನು ಸ್ಥಳೀಯ ಸರ್ಕಾರಕ್ಕೆ ಮನಸ್ಸು ಬಂದಂತೆ ಬದಲಾಯಿಸಿಕೊಳ್ಳುವ ದಾದರೆ ಫೈನಾನ್ಸ್ ಕಮಿಟಿ, ಕೌನ್ಸಿಲ್ ಚರ್ಚೆ ಎಂಬ ತಮಾಷೆಗಳು ಯಾತಕ್ಕೆ?

ದೇಶಕ್ಕೆ ಆವಶ್ಯವಿರುವ ಇಲಾಖೆಗಳಿಗೆ ಖರ್ಚು ಮಾಡದೆ ಉಳಿದ ಅಥವಾ ಸರ್ಕಾರಕ್ಕೆ ಆವಶ್ಯವಿದ್ದವಕ್ಕಿಂತ ಹೆಚ್ಚಾಗಿ ದೇಶದವರಿಂದ ಎತ್ತಿದ ಹಣವನ್ನು ಸ್ಥಳೀಯ ಸರ್ಕಾರವು ಜನರ ಪ್ರತಿನಿಧಿಗಳ ಅನುಮತಿ ಇಲ್ಲದೆ ಖರ್ಚು ಮಾಡುವ ಪದ್ಧತಿಯು ಕೌನ್ಸಿಲ್ ಬರುವ ಮುಂಚೆ ನಡೆಯುತ್ತಿದ್ದಂತೆಯೇ ಈಗಲೂ ನಡೆಯುತ್ತಲಿದೆ. ಈ ತರದ ವರ್ತನೆಯು ಇನ್ನು ಮುಂದೆ ನಡೆಯಬಾರದೆಂಬದಕ್ಕಾಗಿಯೇ ಪ್ರಜಾಜವಾಬ್ದಾರಿ ಸರಕಾರವನ್ನು ಪಡೆಯಲು ದೇಶೀಯರು ಹೋರಾಡುತ್ತಿರುವದಾಗಿದೆ.

ದೇಶಸೇವೆ ಮಾಡುವ ದಾರಿ.

(ಮಹಾತ್ಮಗಾಂಧಿಯವರಿಂದ)

ನನಗೆ ಆಂಧ್ರ ದೇಶದಲ್ಲಿ ಒಪ್ಪಿಸಲ್ಪಟ್ಟ ಒಂದು ಬಿನ್ನವತ್ತಳೆಯಲ್ಲಿ ಹೀಗೆಂತ ಇದೆ —

"ಅಸ್ಪೃಶ್ಯತಾ ನಿವಾರಣೆ, ಮದ್ಯಪಾನನಿಷೇಧ ಮತ್ತು ಹಿಂದೀ ಪ್ರಚಾರದ ಕಾರ್ಯಗಳಲ್ಲಿ ನಾವೇನೂ ಕೆಲಸ ಮಾಡಿಲ್ಲವೆಂತ ಒಪ್ಪಿಕೊಳ್ಳಲು ವ್ಯಸನಪಡುತ್ತೇವೆ. ಈ ಉದ್ದೇಶಗಳನ್ನು ಸಾಧಿಸಲು ಬೇಕಾದ ಭಂಡವಾಳ ಮತ್ತು ನಿಸ್ವಾರ್ಥ ಕೆಲಸಗಾರರನ್ನು ಒದಗಿಸಲು ನಿಮ್ಮ ಸಹಾಯವನ್ನೂ, ಸಲಹೆಗಳನ್ನೂ ಕೋರುತ್ತೇವೆ."

ಪ್ರಪಂಚದ ಬೇರೆ ಯಾವ ಭಾಗದಲ್ಲಾದರೂ ಈ ತರದ ಅಸಹಾಯಕತೆಯನ್ನು ಹೇಳಿಕೊಂಡರೆ ಬಹುಶಃ ಅರ್ಥವಾಗಲಾರದು. ಯಾಕೆಂದರೆ—ಆವಶ್ಯವಿರುವ ಭಂಡವಾಳವನ್ನು ಮಾತ್ರವಲ್ಲ, ಸ್ವಾರ್ಥತೆಯಿಲ್ಲದ ಕೆಲಸಗಾರರನ್ನು ಸಹ ಒದಗಿಸಬೇಕೆಂತ ನನ್ನನ್ನು ಕೇಳಿಕೊಂಡಿದ್ದಾರೆ. ಇದು ತಮ್ಮ ಸಂಪೂರ್ಣ ನಂಬಿಕೆಗೆ ಅರ್ಹರಾದ, ವಿನಯದ ಹಿಂಬಾಲಕರಾದ ಪಟ್ಟದ ಕಾಂಗ್ರೆಸ್ ಕಮಿಟಿ ಮೆಂಬರರೆಂತ ಹೇಳಿಕೊಳ್ಳುವವರಿಂದ ಒಂದ ಬಿನ್ನವತ್ತಳೆಯಾಗಿದೆ. ನನ್ನ 'ನಂಬಿಕೆಗೆ ಪಾತ್ರರಾದ' 'ವಿನಯ' ಹಿಂಬಾಲಕರು ಯಾರಾದರೂ ಇದ್ದರೆ ಅವರು ಸ್ವಾರ್ಥತೆ ಇಲ್ಲದವರಾಗಿರಬೇಕೆಂತ ನಿರೀಕ್ಷಿಸುತ್ತೇನೆ. ಈಚೆಗೆ ಕಾಂಗ್ರೆಸ್ ಕಮಿಟಿಗಳಲ್ಲಿ ಪದವಿಗಳಿಗೆ ಅಸಹ್ಯವಾದ ಹೋರಾಟಗಳಿವೆಯೆಂತ ನನಗೆ ಗೊತ್ತಿದೆ. ಆದರೂ ಕಾಂಗ್ರೆಸ್ ಪ್ರತಿನಿಧಿಯು ಸ್ವಾರ್ಥತೆ ಇಲ್ಲದವನಲ್ಲವಾದರೆ ಅವನು ಅಂಥಾ ಪ್ರತಿನಿಧಿಯಾಗಲೇ ಕೂಡದೆಂತ ಕಾಂಗ್ರೆಸ್ ಸದಸ್ಯರೆಲ್ಲರಿಗೂ ತಿಳಿದಿದೆ. 'ಉಪ್ಪೇ ಉಪ್ಪಿನ ರುಚಿಯನ್ನು ಕಳಕೊಂಡರೆ ಅದಕ್ಕೆ ಎಲ್ಲಿಂದ ಉಪ್ಪು ಹಾಕುವದು?' ನನ್ನ ಹಿಂಬಾಲಕರೂ, ಈ ಕಾಂಗ್ರೆಸ್ ಸದಸ್ಯರೂ ಸ್ವಾರ್ಥತೆ ಇಲ್ಲದವರಲ್ಲವಾದರೆ ಅಂಥವರಿಗೆ ಸ್ವಾರ್ಥ ಪರರಲ್ಲದ ಕೆಲಸಗಾರರನ್ನು ಎಲ್ಲಿಂದ ಒದಗಿಸಲಿ? ನಿಸ್ವಾರ್ಥ ಕೆಲಸಗಾರರನ್ನು ಕೊಡಬೇಕೆಂತ ಕೇಳುವವರಿಗೆ ನೀವೇ ಅಂಥಾ ಕೆಲಸಗಾರರಾಗಿರಿ, ನಿಮಗೆ ಬೇಕಾದ ಧನ ತಾನಾಗಿಯೇ ಬರುತ್ತದೆಯೆಂತ ಭರವಸೆಯಿಂದ ಹೇಳುತ್ತೇನೆ. ಸೂರ್ಯನೊಂದಿಗೆ ಸಾಧಾರಣವಾಗಿ ನೆರಳು ಇದ್ದೇ ಇರುತ್ತದೆ. ಮನುಷ್ಯರೇ ಹಣವನ್ನು ಒದಗಿಸಿಕೊಳ್ಳುವದಾಗಿದೆ. ಹಣವೆಂದೂ ಮನುಷ್ಯರನ್ನು ಮಾಡುತ್ತದೆಯೆಂತ ಕೇಳಲಿಲ್ಲ. ಹಣವು ವೇತನಗಾರರನ್ನು ಕೊಡಬಹುದು. ಆದರೆ ವೇತನಗಾರರು ಅಸ್ಪೃಶ್ಯತಾ ನಿವಾರಣೆ ಕೆಲಸವನ್ನಾಗಲೀ, ಮದ್ಯಪಾನನಿಷೇಧದ ಬೋಧನೆಯನ್ನಾಗಲೀ, ನಿಜವಾದ ಹಿಂದೀ ಪ್ರಚಾರ ಕಾರ್ಯವನ್ನಾಗಲೀ ಮಾಡಲು ಎಂದೂ ಸಾಧ್ಯವಿಲ್ಲ. ಪ್ರಪಂಚದ ಕಾರ್ಯಗಳು ಜರಗಲು ವೇತನಗಾರರು ಬೇಕೆಂಬದರಲ್ಲಿ ಸಂಶಯವಿಲ್ಲ. ಆದರೆ ಅವರ ಆವಶ್ಯಕತೆಯು ಸುಧಾರಣೆಯಾದ ನಂತರವೇ ಹೊರತು, ಸುಧಾರಣೆಯನ್ನು ಪ್ರಾರಂಭಿಸಲು ಅವರಿಂದ ಸಾಧ್ಯವಿಲ್ಲ. ಆದ್ದರಿಂದ ಕಾಂಗ್ರೆಸ್ ಸದಸ್ಯರೇ ಈ ಮೂರು ಸುಧಾರಣೆಯ ಕಾರ್ಯಗಳನ್ನು ನಡಿಸಬೇಕು. ಅಸ್ಪೃಶ್ಯತೆಯು ಸಂಪೂರ್ಣವಾಗಿ ಹೋದ ಮೇಲೆ, ಮದ್ಯಪಾನನಿಷೇಧವು ಜನಪ್ರಿಯವಾದಾಗ, ಪ್ರತಿಯೊಬ್ಬನಿಗೂ ಹಿಂದೀ ಭಾಷೆಯನ್ನು ಕಲಿಯುವ ಕುತೂಹಲ ಹುಟ್ಟಿದಾಗ ದ್ರವ್ಯಕ್ಕಾಗಿ ಕೆಲಸ ಮಾಡಲಿಕ್ಕೆ ಬರುವ, ಆಪಾಯವಿಲ್ಲದ ಕೆಲಸವನ್ನು ನಡಿಸಲು ತಯಾರಿರುವ ಜನರು ದೊರಕುವದು ಕಷ್ಟವೇ ಇಲ್ಲ.

ನನ್ನ ಪ್ರವಾಸದಲ್ಲೆಲ್ಲಾ ನನ್ನ ಗೋಚರಕ್ಕೆ ಬಂದ ದುರಾದೃಷ್ಟದ ವಿಷಯವೇನೆಂದರೆ—ಕಾಂಗ್ರೆಸ್ ಸದಸ್ಯರು ರಚನಾತ್ಮಕ ಕಾರ್ಯಕ್ಕೆ ಅಷ್ಟೊಂದು ಗಮನ ಕೊಡುವದಿಲ್ಲ. ಬರೀ ಗುಲ್ಲಿಗೂ, ವಿಶೇಷ ಅಥವಾ ಏನೂ ಕೆಲಸವಿಲ್ಲದೆ ತಮಗೆ ಪ್ರಾಮುಖ್ಯತೆ ದೊರಕಬೇಕೆಂತ ಪ್ರಯತ್ನಿಸುವದೇ ಕಾಣುತ್ತದೆ. ನಮಗೆ ಧಾರಾಳ ಕೆಲಸಗಾರರು ಸಿಗಬೇಕಾದರೆ ಈ ಮನೋಭಾವವು ಹೋಗಬೇಕು. ಎಲ್ಲೆಲ್ಲಿಯೂ ಆರೋಗ್ಯವಾಗಿರುವ ಬುದ್ಧಿ ಚುರುಕಿರುವ, ನನಗೆ ಅನುಕೂಲಪಡಿಸಲು ತುಂಬಾ ಶ್ರಮತೆಗೆದುಕೊಂಡು ಸೇವೆಮಾಡುವ, ಕುತೂಹಲದಲ್ಲಿ ರಾತ್ರಿ ಹಗಲು ಕೆಲಸಮಾಡುತ್ತಿರುವ ಸ್ವಯಂಸೇವಕರು ನನ್ನ ಸುತ್ತಮುತ್ತಲಿರುತ್ತಿದ್ದರು. ಇಷ್ಟೆಲ್ಲಾ ಸಹಾಯವೇಕಿಲ್ಲದ, ಇಂಥಾ ಗವನದಿಂದ ನನಗೆ ತೊಂದರೆಯಾಗುತ್ತದೆಯೆಂತ ಭಾವಿಸುವ ಮನುಷ್ಯನಿಗಾಗಿ ತೋರಿಸುವ ಈ ಸೇವೆಯ ಉತ್ಸಾಹವನ್ನು ಆ ಮನುಷ್ಯನ ಜೀವನದ ಉದ್ದೇಶಗಳಿಗೆ ತೋರಿಸಿದರೆ ಆ ಕಷ್ಟನಿವಾರಣೆಯಾದಂತೆಯೇ ಆಯಿತು. ಎಲ್ಲೆಲ್ಲಿಯೂ ನಾನು ಕೆಲಸಗಾರರ ಮೀಟಿಂಗುಗಳನ್ನು ಮಾಡಿದ್ದೇನೆ. ಅವರು ಮನಸ್ಸುಮಾಡಿ ಕೆಲಸಮಾಡದೆ ಮಾಡಲಿಕ್ಕಿರುವ ಕೆಲಸಕ್ಕೆ ಬೇಕಾದಷ್ಟು ಜನರು ಇದ್ದಾರೆ. ಆದರೆ ನಾನು ಮೇಲೆ ಬರೆದಂಥಾ ವಿಜ್ಞಾಪನಾಪತ್ರಿಕೆಗಳನ್ನು ತಯಾರಿಸುವವರೂ ಇವರೇ. ವರ್ತಮಾನ ಇಂಥಾ ಗದ್ದಲವಿಲ್ಲದ ಮೀಟಿಂಗುಗಳಲ್ಲಿ ಸಹ ಜನ, ಹಣ ಸಹಾಯವನ್ನು ಕೇಳುವವರೂ ಇವರೇ. ಆದ್ದರಿಂದ ಎಲ್ಲಾ ಕಾಂಗ್ರೆಸ್ ಕಮಿಟಿಗಳೂ ಕಾರ್ಯದಕ್ಷತೆಯನ್ನು ತೋರಿಸಿ ಜವಾಬ್ದಾರಿ ಕೆಲಸಗಾರರನ್ನು ಕಂಡುಹಿಡಿದು ಅವರ ವೇತನವನ್ನು ನಿಷ್ಕರ್ಷಿಸಿ, ರಚನಾತ್ಮಕ ಕಾರ್ಯಕ್ರಮವನ್ನು ಮುಂದೆ ಸಾಗಿಸಬೇಕು. ಇದಕ್ಕಾಗಿ ಕಾಂಗ್ರೆಸ್ ಕಮಿಟಿಗಳು ಪ್ರಾಂತೀಯ ಕಮಿಟಿಯು ಅಥವಾ ಮಧ್ಯವರ್ತಿ ಸಂಸ್ಥೆಯ ಕಡೆ ನೋಡಿಕೊಂಡಿರುವದು ಬೇಡ. ಪ್ರಾಂತಿಕ ಕಮಿಟಿಗಳಿಗೆ ಪ್ರಾಂತಿಕ ಕಾರ್ಯಗಳು ಇರಲೂ ಬಹುದು, ಇಲ್ಲದಿರಲೂ ಬಹುದು. ಅವುಗಳಿಗೆ ಇಂಥಾ ಕೆಲಸಮಾಡಲು ಧನದ ಅಭಾವವಿರಬಹುದು. ತಾಲೂಕು ಮತ್ತು ಗ್ರಾಮ ಕಮಿಟಿಗಳಿಗೆ ಹಾಗಾಗಲು ಕಾರಣವಿಲ್ಲ. ಅವುಗಳು ಪೂರ್ಣ ಸ್ವತಂತ್ರವಿರುವವು. ನ [illegible] ನಡೆಸಲಿಕ್ಕೂ, ಯಾವ ಸುಧಾರಣೆಗಳನ್ನು ಜಾರಿಗೆ ತರಲು ಅವುಗಳನ್ನು ತಡೆಯುವವರು ಯಾರೂ ಇಲ್ಲ. ಅಂಥ ಮನೋರಂಜಕವಾದ ನನ್ನ ಪ್ರವಾಸದಲ್ಲಿ ಇಂಥಾ ಕೆಲಸ ಮಾಡುವ ಎಷ್ಟೋ ಕಮಿಟಿಗಳನ್ನು ನಾನು ನೋಡಿದ್ದೇನೆ. ಆ ಕಮಿಟಿಗಳು ತಮ್ಮ ಕೆಲಸವನ್ನು ಆಸಕ್ತಿಯಿಂದ ಮಾಡಲಿ

(5ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಐನೇ ಭಾಗದಲ್ಲಿ ೩೭ನೇ ಪ್ರಕರಣ

ಅಮೃತಸರದ ಮಹಾಸಭೆ.

ಯುದ್ಧದ ಕಾನೂನಿನ ಆಡಳಿತದಲ್ಲಿ ನೂರಾರು ಮಂದಿ ಪಂಜಾಬಿಗಳನ್ನು ಬಂಧಿಸಿದ್ದರು. ಇವರುಗಳ ವಿಚಾರಣೆ ಮಾಡಿದ ನ್ಯಾಯಸ್ಥಾನಗಳು ಹೆಸರಿಗೆ ಮಾತ್ರ ನ್ಯಾಯಸ್ಥಾನಗಳಾಗಿದ್ದುವು. ಅವು ಅತ್ಯಲ್ಪ ಸಾಕ್ಷ್ಯದ ಮೇಲೆ ಅವರೆಲ್ಲರಿಗೂ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿದ್ದುವು. ಇಂತ ನೂರಾರು ಜನರನ್ನು ಪಂಜಾಬ್ ಸರ್ಕಾರದವ್ರು ಒಹು ಕಾಲ ಸೆರೆಯಲ್ಲಿಟ್ಟಿರುವಂತಿರಲಿಲ್ಲ. ಎಲ್ಲ ಕಡೆಯಿಂದಲೂ ಈ ಪರಮ ಅನ್ಯಾಯದ ವಿಷಯವಾಗಿ ಜನರು ಬೊಬ್ಬೆ ಇಟ್ಟುದರಿಂದ ಈ ಜನರನ್ನು ಇನ್ನೂ ಬಂಧಿಸಿರುವುದು ಅಸಾಧ್ಯವಾಯಿತು. ಮಹಾಸಭೆಯು ಆರಂಭವಾಗುವುದಕ್ಕೆ ಮುಂಚೆ ಮುಕ್ಕಾಲು ಪಾಲು ಬಂಧಿಗಳಿಗೆ ಬಿಡುಗಡೆಯಾಯಿತು. ಮಹಾಸಭೆಯು ನಡೆಯುತ್ತಿರುವಾಗಲೇ ಲಾಲಾ ಹರಕಿಶನ್ ಲಾಲ್ ಮುಂತಾದ ನಾಯಕರನ್ನು ಬಿಟ್ಟರು. 'ಅಲೀ ಸಹೋದರರು' ನೇರವಾಗಿ ಕಾರಾಗೃಹದಿಂದ ಅಲ್ಲಿಗೆ ಬಂದಳಿದರು. ಜನ ಸಂತೋಷಕ್ಕೆ ಪಾರವೇ ಇರಲಿಲ್ಲ. ಮೋತಿಲಾಲ್ ನೆಹರೂರವರು ಮಹಾಸಭೆಯ ಅಧ್ಯಕ್ಷರಾಗಿದ್ದರು. ಇವರು ಸ್ವಾರ್ಥತ್ಯಾಗವಾಗಿ ನಡೆಯುತ್ತಿದ್ದ ವಕೀಲ ವೃತ್ತಿಯನ್ನು ಬಿಟ್ಟು ತಮಗುಂಟಾದ ನಷ್ಟವನ್ನು ಲೆಕ್ಕಿಸದೆ ಪಂಜಾಬಿಗೆ ಬಂದು ನಿಂತು ದೇಶ ಸೇವೆ ಮಾಡಿದ್ದರು. ಸ್ವಾಮಿ ಶ್ರದ್ಧಾನಂದರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು.

ಇದು ವರೆಗೆ ಮಹಾ ಸಭೆಯ ವಾರ್ಷಿಕ ಸಮ್ಮೇಳನಗಳಲ್ಲಿ ನನ್ನ ಭಾಗವು ಇಷ್ಟೇ ಆಗಿರುತ್ತಿತ್ತು: ರಾಷ್ಟ್ರಭಾಷೆಯಲ್ಲಿ ಭಾಷಣಮಾಡುವುದರ ಮೂಲಕ ಹಿಂದೀ ಪ್ರಚಾರಮಾಡುವುದು ಮತ್ತು ಆ ಭಾಷಣದಲ್ಲಿ ವಿದೇಶದಲ್ಲಿದ್ದ ಭಾರತೀಯರ ವಿಷಯವನ್ನು ಸಭೆಯ ಮುಂದಿಡುವುದು. ಈ ವರ್ಷ ಇದಕ್ಕಿಂತ ಹೆಚ್ಚಾಗಿ ಆಗಬೇಕಾದುದೇನಾದರೂ ಇದ್ದೀತೆಂದು ನಾನು ಎಣಿಸಿರಲಿಲ್ಲ. ಆದರೆ ಹಿಂದೆ ಎಷ್ಟೋ ಬಾರಿ ಆಗಿದಂತೆ ಈಗಲೂ ಜವಾಬ್ದಾರಿಯ ಕೆಲಸವು ಇದ್ದಕ್ಕಿದ್ದ ಹಾಗೆಯೇ ನನ್ನ ತಲೆಯ ಮೇಲೆ ಬಿದ್ದಿತು.

ಹೊಸ ಸುಧಾರಣೆಗಳ ವಿಷಯವಾಗಿ ಚಕ್ರವರ್ತಿಗಳ ಪ್ರಕಟಣೆಯು ಆಗ ತಾನೆ ಪ್ರಕಟವಾಗಿದ್ದಿತು. ನನಗೆ ಕೂಡ ಸಂಪೂರ್ಣವಾಗಿ ಸಮರ್ಪಕವಾಗಿರಲಿಲ್ಲ. ಇತರರಿಗೂ ಅದು ಅಸಮರ್ಪಕವಾಗಿದ್ದಿತು. ಸುಧಾರಣೆಗಳಲ್ಲಿ ದೋಷವಿದ್ದರೂ ಅವು ಸ್ವೀಕಾರಯೋಗ್ಯವಾಗಿದ್ದುವೆಂದು ನನಗೆ ತೋರಿತು. ಆ ಪ್ರಸಿದ್ಧ ಪತ್ರಿಕೆಯಲ್ಲಿ ನನಗೆ ಸಿಂಹರ ಕೈವಾಡವಿದೆಯೆಂದು ಕಂಡಿತು. ಆದರೆ ಭಾಷೆ ನನಗೆ ಆಶಾಜನಕವಾಗಿ ತೋರಿಯಿತು. ಆದರೆ ಲೋಕಮಾನ್ಯ ತಿಲಕರು, ದೇಶಬಂಧು ಚಿತ್ತರಂಜನ ದಾಸರು ಮುಂತಾದ ಅನುಭವಿಗಳಾದ ನಾಯಕರು ತಲೆಯಲ್ಲಾಡಿಸಿದರು. ಪಂಡಿತ ಮಾಲವೀಯರು ತಟಸ್ಥರಾಗಿದ್ದರು.

ಪಂಡಿತ ಮಾಲವೀಯರು ನನಗೆ ತಮ್ಮ ಕೋಣೆಯಲ್ಲಿ ಇಟ್ಟಿದ್ದರು. ಹಿಂದೂ ವಿಶ್ವವಿದ್ಯಾಲಯದ ಸ್ಥಾಪನಾ ಕಾಲದಲ್ಲಿ ಅವರ ಜೀವವೆಷ್ಟು ಸರಳವೆಂದು ನನಗೆ ಗೊತ್ತಿತ್ತು. ಆದರೆ ಈ ಸಂದರ್ಭದಲ್ಲಿ ನಾನು ಅವರ ಕೋಣೆಯಲ್ಲೇ ಇದ್ದುದರಿಂದ ಅವರ ದಿನಚರಿಯನ್ನು ಅತ್ಯಂತ ಸಮೀಪವಾಗಿ ದಿಟ್ಟಿಸಲು ನನಗೆ ಅವಕಾಶ ದೊರೆಕಿತು. ನನ್ನ ಕಣ್ಣಿಗೆ ಬಿದ್ದುದು ನನ್ನನ್ನು ಆಶ್ಚರ್ಯದಿಂದಲೂ ಸಂತೋಷದಿಂದಲೂ ತುಂಬಿತು. ಅವರ ಕೋಣೆಯು ಎಲ್ಲರಿಗೂ ಧರ್ಮಶಾಲೆಯಂತೆ ಕಾಣುತ್ತಿದ್ದಿತು. ಒಂದು ಕಡೆಯಿಂದ ಇನ್ನೊಂದು ಕಡೆಗೆ ದಾಟುವುದೇ ಕಷ್ಟವಾಗಿದ್ದಿತು. ಅಲ್ಲಿ ಅಷ್ಟು ಜನರಿರುತ್ತಿದ್ದರು. ಯಾರೇ ಆಗಲಿ ಎಂದೇ ಆಗಲಿ ಅಲ್ಲಿಗೆ ಬರಬಹುದಾಗಿದ್ದಿತು. ಯಾರು ಅವರೊಡನೆ ಎಷ್ಟು ಹೊತ್ತು ಇದ್ದರೂ ಅಡಚಣೆಯಿಲ್ಲ. ಈ ಕೊಟ್ಟಿಗೆಯ ಒಂದು ಮೂಲೆಯಲ್ಲಿ ನನ್ನ ... ಗಾಂಭೀರ್ಯದಿಂದ ಕಂಗೊಳಿಸುತ್ತಿದ್ದಿತು.

ನಾನು ಈ ಅಧ್ಯಾಯವನ್ನೆಲ್ಲಾ ಮಾಲವೀಯರ ... ಸಂಪ್ರದಾಯದ ವರ್ಣನೆಯಿಂದ ತುಂಬಿಸಲಾಗ... ಪ್ರಕೃತ ವಿಷಯಕ್ಕೆ ತೆರಳೋಣ.

ನಾನು ಪ್ರತಿ ದಿನವೂ ಮಾಲವೀಯರೊಡನೆ ... ಸಾಧ್ಯವಾಯಿತು. ಅವರು ಅಣ್ಣನು ತಮ್ಮನಿಗೆ ... ವಿವಿಧ ಪಕ್ಷಗಳ ಅಭಿಪ್ರಾಯವನ್ನು ವಿವರಿಸು... ಸುಧಾರಣೆಗಳಿಗೆ ಸಂಬಂಧಪಟ್ಟ ಗೊತ್ತುವಳಿಯಲ್ಲಿ ನಾನು ಭಾಗಿಯಾಗದಿರುವುದು ಅಸಾಧ್ಯವೆಂದು ಕಂಡಿತು. ಪಂಜಾಬಿನ ಅತ್ಯಾಚಾರಗಳನ್ನು ... ಸಭೆಯ ವರದಿಯನ್ನು ಬರೆಯುವುದರಲ್ಲಿ ನನ್ನ ... ಯೂ ಇದ್ದಿತು. ಇದುದರಿಂದ ಅದರ ಸುತ್ತಲೂ ಇದ್ದ ಅನೇಕ ವಿಷಯಗಳಿಗ ನನ್ನ ಲಕ್ಷ್ಯ ಕೊಡಬೇಕೆಂದು ನನಗೆ ತೋರಿತು. ಈ ವಿಚಾರದೊಡನೆ ವ್ಯವಹಾರ ನಡೆಸಬೇಕಾಗಿಯೂ ಇ... ಹೇಗೆಯೋ ವಿಶಾಖತಾ ಪ್ರಶ್ನೆಯೂ ಇದ್ದಿತು. ಆಗ ನನಗೆ ಮ. ಮಾಂಟೆಗ್ಯೂರವರು ಭಾರತವನ್ನು ... ಬಗೆಯುವುದೂ ಇಲ್ಲ; ಇತರರು ಹಾಗೆ ಮಾಡುವುದೂ ಇಲ್ಲ ಎಂಬ ನಂಬಿಕೆಯಿದ್ದಿತು. ಆ... ಮುಂತಾದ ಕೈದಿಗಳ ಬಂಧವಿಮೋಚನೆಯೂ ನನಗೆ ಶುಭಸೂಚನೆಯೆಂದು ತೋರಿತು. ಹೀಗಿರುವಲ್ಲಿ ಸಂದರ್ಭಗಳನ್ನು ತ್ಯಜಿಸದೆ ಸ್ವೀಕರಿಸುವ ಗೊತ್ತುವಳಿಯೇ ಉಚಿತವಾದುದೆಂದು ನನಗೆ ತೋರಿತು. ದೇಶಬಂಧು ಚಿತ್ತರಂಜನ ದಾಸರಾದರೋ ಸುಧಾರಣೆಗಳು ಕೇವಲ ಅಲ್ಪವಾಗಿಯೂ, ಅಸಮರ್ಪಕವಾಗಿಯೂ ಇದ್ದುದರಿಂದ ಅವುಗಳನ್ನು ನಿರಾಕರಿಸಬೇಕೆಂಬ ಸ್ಪಷ್ಟಾಭಿಪ್ರಾಯ ವ್ಯಕ್ತಪಡಿಸಿದ್ದರು. ದಿವಂಗತ ಲೋಕಮಾನ್ಯರು ತಟಸ್ಥರಾಗಿದ್ದರು. ಆದರೆ ಅವರು ತಮ್ಮ ಬೆಂಬಲವನ್ನು ದೇಶಬಂಧುಗಳು ಒಪ್ಪಿದ ಗೊತ್ತುವಳಿಗೆ ಕೊಡಲು ನಿಶ್ಚಯಿಸಿದ್ದರು.

ಇಂತಹ ಪಕ್ವಾನುಭವಿಗಳಾದ ಸಹಕೃ ಸಮರ್ಥರಲ್ಲಿ ಸುರತ ಸರ್ವಮಾನ್ಯರಾದ ನಾಯಕರೊಡನೆ ಮತಭೇದದಿಂದಿರುವುದು ನನಗೆ ಸಹಿಸಲಾರದಾಗಿದ್ದಿತು. ಆದರೆ ಇನ್ನೊಂದು ಕಡೆ ಅಂತಸ್ಸಾಕ್ಷಿಯ ಆಜ್ಞೆಯು ಸ್ಪಷ್ಟವಾಗಿದ್ದಿತು. ನಾನು ಮಹಾ ಸಭೆಯನ್ನು ಬಿಟ್ಟು ಓಡಿಹೋಗಲು ಯತ್ನಿಸಿದೆನು. ಮಹಾ ಸಭೆಯ ಅಧಿವೇಶನದ ಉಳಿದ ಭಾಗದಲ್ಲಿ ನಾನು ಇಲ್ಲದಿರುವುದೇ ಎಲ್ಲರಿಗೂ ಕ್ಷೇಮಕರವೆಂದು ... ಹಾಗೆ ಮಾಡಿದರೆ ನಾನು ಅಂತಹ ಮಾನ್ಯ ಮುಖಂಡರೊಡನೆ ಭಿನ್ನಾಭಿಪ್ರಾಯವೃಕ್ತಪಡಿಸಬೇಕಾದುದನ್ನು ನಾನು ಹೇಳುವ ಅಗತ್ಯವು ತಪ್ಪುವುದೆಂದೂ ನಾನು ಪಂಡಿತ ಮಾಲವೀಯರಿಗೂ ಮೋತಿಲಾಲರಿಗೂ ಸೂಚಿಸಿದೆನು.

ಆದರೆ ಈ ಹಿರಿಯರಿಬ್ಬರೂ ಇದಕ್ಕೆ ಒಪ್ಪಲಿಲ್ಲ. ಇವರ ಸಲಹೆಯು ಲಾಲಾ ಹರಿಕಿಸನ್ ಲಾಲರಿಗೆ ಹೇಗೋ ತಿಳಿಯಿತು. "ಅದೆಲ್ಲಾ ಆಗುವುದಿಲ್ಲ. ಅದರಿಂದ ಪಂಜಾಬಿಗಳಿಗೆ ಮನಸ್ಸಿಗೆ ಖೇದವುಂಟಾಗುತ್ತದೆ" ಎಂದವರು. ನಾನು ಈ ವಿಷಯವನ್ನು ಲೋಕಮಾನ್ಯರೊಡನೆಯೂ, ದೇಶಬಂಧುಗಳೊಡನೆಯೂ, ಮಿ. ಜಿನ್ನಾ ರೊಡನೆಯೂ ಚರ್ಚಿಸಿದೆನು. ಸಂಕಟದಿಂದ ತಪ್ಪಿಸಿಕೊಳ್ಳುವ ದಾರಿಯೇನೂ ಕಾಣಲಿಲ್ಲ. ಕಡೆಗೆ ನಾನು ನನ್ನ ದುಃಖವನ್ನು ಮಾಲವೀಯರಿಗೆ ಅರಿಕೆ ಮಾಡಿಕೊಂಡೆನು "ಎರಡು ಪಕ್ಷಗಳಿಗೂ ರಾಜಿಯಾಗುವ ಹಾಗೇ ನನಗೆ ಕಾಣುವುದಿಲ್ಲ. ನನ್ನ ಗೊತ್ತುವಳಿಯನ್ನು ನಾನು ಪ್ರಸ್ತಾಪಿಸುವುದೇ ಆದರೆ ಅದನ್ನು ಕುರಿತು ಸಭೆಯ ಮತವನ್ನು ನಿರ್ಧರಿಸಲು 'ಓಟ್' (ಮತಸೂಚಿ) ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಇಲ್ಲಿ ಯಾವ ಏರ್ಪಾಟೂ ಕಾಣಬರುವುದಿಲ್ಲ. ಮಹಾ ಸಭೆಯ ಅಧಿವೇಶನದಲ್ಲಿ 'ಕೈ ಎತ್ತುವುದರಿಂದಲೇ 'ಓಟು' ತೆಗೆದುಕೊಳ್ಳುವರು. ಇದು ವರೆಗಿನ ಅಭ್ಯಾಸ. ಇದರ ಫಲವೇನೆಂದರೆ, ಇದರಲ್ಲಿ ಸದಸ್ಯರಿಗೂ ಪ್ರೇಕ್ಷಕರಿಗೂ ವ್ಯತ್ಯಾಸ ಮಾಡಲಾಗುವುದೇ ಇಲ್ಲ. ಇಂತಹ ದೊಡ್ಡ ಸಮೂಹಗಳಲ್ಲಿ 'ಓಟ್' ಎಣಿಸುವುದಕ್ಕೆ ನಮಗೆ ಸಾಧನವೇ ಇಲ್ಲ. ಆದುದರಿಂದ ಇದೆಲ್ಲದರ ತಾತ್ಪರ್ಯವೇನೆಂದರೆ, ನಾನು 'ಓಟ್' ಎಣಿಸಬೇಕೆಂದಿದ್ದರೂ ಅದಕ್ಕೆ ಅನುಕೂಲವೂ ಇಲ್ಲ, ಅರ್ಥವೂ ಇಲ್ಲ." ಆದರೆ ಲಾಲಾ ಹರಕಿಸನ್ ಲಾಲರು ಸಹಾಯಕ್ಕೆ ಬಂದು ಇದಕ್ಕೆ ಬೇಕಾದ ಏರ್ಪಾಡು ಮಾಡುವ ಭಾರವನ್ನು ಹೊತ್ತುಕೊಂಡರು. 'ಓಟ್' ತೆಗೆದುಕೊಳ್ಳುವ ದಿನ ನಾವು ಪ್ರೇಕ್ಷಕರನ್ನು ಮಹಾಸಭೆಯ ಚಪ್ಪರದೊಳಕ್ಕೆ ಬಿಡುದಿಲ್ಲ. ಲೆಕ್ಕ ಮಾಡುವ ವಿಚಾರ ನನಗೆ ಬಿಡಿ. ನೀವಂತೂ ಮಹಾಸಭೆಯನ್ನು ಬಿಟ್ಟು ಹೋಗಬಾರದು.' ಎಂದವರು.

ಕಡೆಗೆ ನಾನು ಸೋತೆನು. ನನ್ನ ಗೊತ್ತುವಳಿಯನ್ನು ಸಿದ್ಧಪಡಿಸಿ ಅದನ್ನು ಸಭೆಯ ಮುಂದಿಡಲು ಒಪ್ಪಿಕೊಂಡೆನು. ಹೀಗೆ ಮಾಡುವಾಗ ನನ್ನ ಹೃದಯವು ಆಶ್ಚರ್ಯದಿಂದ ಕಂಪಿಸುತ್ತಿದ್ದಿತು. ಪಂಡಿತ ಮಾಲವೀಯರೂ, ಮಿ. ಜಿನ್ನಾರೂ ಈ ಗೊತ್ತುವಳಿಯನ್ನು ಸಭೆಯಲ್ಲಿ ಸ್ವೀಕರಿಸಬೇಕೆಂದು ನಿರ್ಧರಿಸಲಾಯಿತು. ನಮ್ಮ ಮತ ಭೇದದಲ್ಲಿ ಎಳ್ಳಷ್ಟೂ ಹೊಟ್ಟೆಯುರಿ ಇಲ್ಲದಿದ್ದರೂ ನಮ್ಮ ಭಾಷಣಗಳಲ್ಲಿ ತರ್ಕವನ್ನಲ್ಲದೆ ಇನ್ನೇನೂ ಇರಲಿಲ್ಲವಾದರೂ ಹೀಗೆ ನಮ್ಮಲ್ಲಿ ಭೇದವಿರುವುದೇ ಜನರಿಗೆ ಸಹಿಸಲಿಲ್ಲವೆಂಬುದು ನನ್ನ ಗಮನಕ್ಕೆ ಬಂದಿತು. ಇದು ಅವರ ಮನಸ್ಸನ್ನು ನೋಯಿಸಿತು. ಅವರಿಗೆ ಏಕಮತ್ಯವು ಬೇಕಾಗಿದ್ದಿತು.

ಭಾಷಣಗಳಾಗುತ್ತಿದ್ದಂತೆಯೇ ನಡೆದ್ದಕ್ಕಿನ ಅಂತರವನ್ನು ತೊಲಗಿಸಲು ವೇದಿಕೆಯ ಮೇಲೆ ಪ್ರಯತ್ನವು ನಡೆಯುತ್ತಿದ್ದಿತು. ಈ ಉದ್ದೇಶಕ್ಕಾಗಿ ನಾಯಕರಲ್ಲಿ ಒಬ್ಬರಿಂದೊಬ್ಬರಿಗೆ ಚೀಟಿಗಳು ಓಡಾಡುತ್ತಿದ್ದುವು. ಮಾಲವೀಯರು ರಾಜಿಯನ್ನು ಮಾಡಿಸಲು ಎಲ್ಲಾ ಸಾಹಸವನ್ನೂ ಮಾಡಿದರು. ಆಗತಾನೆ ಜಯರಾಮದಾಸರು ಗೊತ್ತುವಳಿಯ ತಿದ್ದುಪಡಿಯೊಂದನ್ನು ನನ್ನ ಕೈಗೆ ಕೊಟ್ಟು ತಮಗೆ ಸಹಜವಾದ ಮಧುರ ಶಬ್ದಗಳಿಂದ ಪ್ರತಿನಿಧಿಗಳನ್ನು ಈ ಸಂದರ್ಭದಲ್ಲಿ 'ಓಟ್' ಕೊಡುವ ಸಂಕಟದಿಂದ ತಪ್ಪಿಸಬೇಕೆಂದು ಕೇಳಿಕೊಂಡರು. ಅವರ ತಿದ್ದುಪಡಿಯು ನನಗೆ ಉಚಿತವಾಗಿ ಕಂಡಿತು. ಮಾಲವೀಯರ ದೃಷ್ಟಿಯಂತೂ ಆಗಲೇ ಆಶಾಕಿರಣಗಳನ್ನರಸುತ್ತಾ ನಾಲ್ಕು ಕಡೆ ಬೀಳುತ್ತಿದ್ದಿತು. ಜಯರಾಮದಾಸರ ತಿದ್ದುಪಡಿಯು ಎರಡು ಕಡೆಯವರ ಒಪ್ಪಿಗೆಗೂ ಬರುವ ಹಾಗಿದೆಯೆಂದು ನನಗೆ ಕಾಣುವುದೆಂದು ನಾನು ಮಾಲವೀಯರಿಗೆ ಹೇಳಿದೆನು. ಇದಾದ ಮೇಲೆ ಲೋಕಮಾನ್ಯರಿಗೆ ತೋರಿಸಿದೆವು. ಅವರು "ಸಿ. ಆರ್. ದಾಸರು ಒಪ್ಪಿದರೆ ನನಗೂ ಆಗಬಹುದು" ಎಂದರು. ದೇಶಬಂಧುಗಳು ಕಡೆಗೆ ಮನಕರಗಿ ಒಪ್ಪಿಗೆಗಾಗಿ ಶ್ರೀ. ವಿಪಿನಚಂದ್ರಪಾಲರ ಕಡೆಗೆ ನೋಡಿದರು. ಮಾಲವೀಯರು ಆಶೆಯಿಂದ ತುಂಬಿದರು. ತಿದ್ದುಪಡಿಯಿದ್ದ ಚೀಟಿಯನ್ನು ಕಿತ್ತುಕೊಂಡು ದೇಶಬಂಧುಗಳು ಜೆ ಹ ವಾಗಿ 'ಆಗಲಿ' ಎನ್ನುವುದಕ್ಕೆ ಮುಂಚೆಯೇ "ಪ್ರತಿನಿಧಿ ಸಹೋದರರೇ ರಾಜಿಯಾಗಿದೆಯೆಂಬ ಸಂತೋಷದ ಸುದ್ದಿಯನ್ನು ನಿಮಗೆ ತಿಳಿಸುತ್ತೇನೆ" ಎಂದು ಕೂಗಿದರು. ಮುಂದೆ ನಡೆದುದನ್ನು ವರ್ಣಿಸಲು ಶಕ್ಯವಲ್ಲ. ಚಪ್ಪಾಳೆಯ ಸದ್ದಿನಿಂದ ಚಪ್ಪರವು ನಡುಗಿತು. ಅಲ್ಲಿಯ ವರೆಗೆ ನಿರಾಸೆಯಿಂದ ಕಂಗೆಟ್ಟಿದ್ದ ಸಭಿಕರ ಮುಖಗಳು ಆನಂದದಿಂದ ಕಳೆಗೊಂಡುವು.

ತಿದ್ದುಪಡಿಯ ವಿಷಯವನ್ನು ವಿಷದವಾಗಿ ಹೇಳಲು ಆವಶ್ಯಕತೆಯಿಲ್ಲ. ಈ ಪ್ರಕರಣಗಳ ವಿಷಯವಾದ ನನ್ನ ಪ್ರಯೋಗಗಳಲ್ಲಿ ಒಂದಾಗಿ ಈ ಗೊತ್ತುವಳಿಯ ಭಾರವನ್ನು ನಾನು ಹೊತ್ತುಕೊಂಡದ್ದು ಹೇಗೆಂಬುದನ್ನು ತಿಳಿಸುವುದೇ ಇಲ್ಲಿ ನನ್ನ ಉದ್ದೇಶ.

ಗೋಣಿಕೊಪ್ಪಲಿನ ದನಗಳ ಪ್ರದರ್ಶನ.

ಸನ್ 1929ನೇ ಇಸವಿ ಮೇ ತಾರೀಕು 19ರಲ್ಲು ಗೋಣಿಕೊಪ್ಪಲಿನಲ್ಲಿ ಮ॥ ಕೊಡಂದೇರ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ಪ್ರತಿ ವರ್ಷವೂ ನವಂಬರ್ ಯಾ ಡಿಸೆಂಬರ್ ತಿಂಗಳಲ್ಲಿ ಗೋಣಿಕೊಪ್ಪಲು ಕಚೇರಿ ಬಳಿ ದಕ್ಷಿಣ ಕೊಡಗಿಗಾಗಿ ಒಂದು ದನಗಳ ಪ್ರದರ್ಶನವನ್ನು "Cattle show" ನಡಿಸುವಂತೆ ಏರ್ಪಾಡಾಯಿತು. ಅದರ ಹೆಚ್ಚಿನ ವಿಷಯಗಳನ್ನು ತೀರ್ಮಾನಿಸುವುದಕ್ಕೆ 9—6—29 ರಲ್ಲಿ ಗೋಣಿಕೊಪ್ಪಲಿನಲ್ಲಿ ವೆಟರಿನರಿ ಅ. ಸರ್ಜನ್ ಮೆ. ಕೋದಂಡ ಸೋಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನ ಪ್ರೊಸೀಡಿಂಗ್ಸ್.—

ಆಕಾಲದಲ್ಲಿ ಸುರುವಾದ ಮಳೆಯ ದೆಸೆಯಿಂದ ಅನೇಕರಿಗೆ ಬರಲಿಕ್ಕೆ ಅನಾನುಕೂಲವಾದರೂ ಸುಮಾರು 80 ಜನ ಹಾಜರಿದ್ದರು. ಅಧ್ಯಕ್ಷರು ಆ ದಿನದ ಮೀಟಿಂಗಿನ ಉದ್ದೇಶ್ಯವನ್ನು ಕುರಿತು ಭಾಷಣ ಮಾಡಿದನಂತರ ಮ. ... ಯ್ಯನವರ ಭಾಷಣವಾಯಿತು.

ಮ॥ ಕಾಕಮೈಯ್ಯನವರು ಕೊಡಗಿನ ದನಗಳನ್ನು ಪ್ರದರ್ಶನಕ್ಕೆ ಕಳುಹಿಸುವದು ಅವಶ್ಯವಾದದೆಂದೂ, ಅದಕ್ಕೆ ನವಂಬರ್ ಯಾ ಡಿಸೆಂಬರ್ ತಿಂಗಳು ತಕ್ಕದಲ್ಲವೆಂದೂ ಹೇಳಿದರು. ಏಪ್ರಿಲ್ ತಿಂಗಳಲ್ಲಿ ಜನರಲ್ಲಿ ಹಣವಿರುತ್ತದೆ, ಆಗ ದನಗಳನ್ನು ಕೊಂಡುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದರು.

ಅದಕ್ಕೆ ಮ. ಸಿ. ಕೆ ಶ್ರೀನಿವಾಸಚಾರ್ಯರು ಹೇಳಿದ್ದೇನಂದರೆ—ಕೊಂಡುಕೊಳ್ಳಬೇಕಾದರೂ ದನಗಳು ಬೇರೆ ಕಡೆಗಳಿಂದಲೇ ಬರಬೇಕು. ಆದರೆ ಜನವರಿ 15ರ ಮೇಲೆ ಅನೇಕ ಕಡೆಗಳಲ್ಲಿ ದನಗಳ ಪ್ರದರ್ಶನಗಳು ಸುರುವಾಗುವುದರಿಂದ ಜನವರಿ ಆದ ಮೇಲೆ ಕೊಡಗಿನ ಪ್ರದರ್ಶನಕ್ಕೆ ದನಗಳು ಬರುವುದು ಕೊಂಚ ಅನುಮಾನವೇ. ಆದುದರಿಂದ ನಮಗಳಿಗೆ ಬೇರೆ ಕಡೆಗಳಿಂದ ದನಗಳು ಬರಬೇಕು, ಕೊಂಡುಕೊಳ್ಳಬೇಕು ಎಂಬದಾಗಿ ಕುತೂಹಲವಿದ್ದ ಪಕ್ಷಕ್ಕೆ ನವಂಬರ್ ಯಾ ಡಿಸೆಂಬರ್ ತಿಂಗಳೇ ಉಚಿತವಾದದೆಂದೂ, ಕೊಂಡುಕೊಳ್ಳಲಿಕ್ಕೆ ಮನಸ್ಸಿದ್ದರೆ ಹ್ಯಾಗಾದರೂ ಕೊಂಡುಕೊಳ್ಳುವರೆಂದೂ ಹೇಳಿದರು.

ಮ॥ ಪುಟ್ಟಮಾಡ ಮಾದೈಯ್ಯನವರು, 19—5—29ರ ಮೀಟಿಂಗಿನಲ್ಲೇ ಸ್ಥಳ ಮತ್ತು ನವಂಬರ್ ಯಾ ಡಿಸೆಂಬರ್ ತಿಂಗಳೆಂಬದು ತೀರ್ಮಾನವಾಗಿದೆ, ಈಗ ಬೇಕಾದುದು ಮುಂದಿನ ಕೆಲಸವನ್ನು ಮುತುವರ್ಜಿ ಇಟ್ಟು ಜರಗಿಸಲಿಕ್ಕಿರುವ ಒಂದು ಕಮಿಟಿಯ ಚುನಾವಣೆ ಎಂಬದಾಗಿ ಹೇಳಿ, ನವಂಬರ್ ಯಾ ಡಿಸೆಂಬರ್ ತಿಂಗಳಲ್ಲಿ ನಡಿಸುವುದು ಯಾತಕ್ಕೋಸ್ಕರ ಅವಶ್ಯವಾದುದೆಂಬದನ್ನು ಸಾಂಗವಾಗಿ ವಿವರಿಸಿದರು. ಕಾಕಮೈಯ್ಯನವರು ಹೇಳಿದ ಮೇರೆ ಕೊಡಗಿನ ದನಗಳನ್ನೇ ಪೋಪ್ರದರ್ಶನಕ್ಕೆ ಕಳುಹಿಸಬೇಕು. ಯಾರಿಗಾದರೂ ಪ್ರದರ್ಶನಕ್ಕೆ ಒಂದು ಎತ್ತನ್ನಾಗಲಿ, ಹಸುವನ್ನಾಗಲಿ ಇಲ್ಲವೇ ಒಂದು ಕರುವನ್ನಾಗಲಿ ಕಳುಹಿಸಬೇಕೆಂದು ಕುತೂಹಲವುಟ್ಟರೆ ನವಂಬರ್ ತಿಂಗಳಲ್ಲಾದರೆ ಗದ್ದೆಯ ತೆವರಿಯ ಮೇಲೆ ಮೇಯಿಸಿಯಾಗಲಿ, ಇಲ್ಲವೆ ಹಸಿ ಹುಲ್ಲನ್ನು ಕುಯ್ದು ಹಾಕಿಯಾಗಲಿ ಪುಷ್ಟಿಗೆ ತರಬಹುದು. ಆದಕಾರಣಗಿಯೂ "ದೀಪಾವಳಿಯಲ್ಲಿ ದನಗಳನ್ನು ಮಾತಾಡಿಸಬೇಡ, ಸುಗ್ಗಿಯಲ್ಲಿ ಹೊಲೆಯರನ್ನು ಮಾತಾಡಿಸಬೇಡ" ಎಂಬ ಗಾದೆ ಹುಟ್ಟಿದೆ. ಅದು ಬಿಟ್ಟು ಏಪ್ರಲ್ ತಿಂಗಳಾದರೆ ಒಕ್ಕಲು ಕೆಲಸ ತೀರಿ ಒಣಗಿ ಹೋದ ಗದ್ದೆ ತೆವರಿಯನ್ನು ಕೆರೆಯುತ್ತಿರುವ ದನಕರುಗಳು ಪ್ರದರ್ಶನಕ್ಕೆ ಎಷ್ಟು ತಕ್ಕವಾಗಿರುವವು ಎಂದು ಎಲ್ಲರೂ ಯೋಚಿಸಬೇಕಾದ ಸಂಗತಿಯಾಗಿದೆ. ಅದಲ್ಲದೆ ನವಂಬರ್ ಮತ್ತು ಡಿಸೆಂಬರ್ ತಿಂಗಳು ಬೇರೆ ಕಡೆಗಳಲ್ಲಿ ಕಂದಾಯದ ಸಮಯವಾದುದರಿಂದ ದನಗಳನ್ನು ತಂದು ಅಗ್ಗವಾಗಿ ಮಾರುತ್ತಾರೆ. ಯುಗಾದಿ ಕಳೆದ ಮೇಲೆ ಹೊಲಗಳನ್ನು ಉಳಲಿಕ್ಕೆ ಸುರುಮಾಡುವುದರಿಂದ ಏಪ್ರಿಲ್ ತಿಂಗಳಲ್ಲಿ ಅಗ್ಗವಾಗಿ ದೊರೆಯುವುದಿಲ್ಲ. ಹೀಗೆ ನೋಡಿದರೆ ಅವರು ಹೇಳಿದ ಹಾಗೆ ಕಾವಾಡ್ಯರು ಮತ್ತು ಇದ್ರೆ ತಿಂಗಳುಗಳಲ್ಲಿ ಹ್ಯಾಗಾದರೂ ಕೊಂಡುಕೊಳ್ಳಲೇ ಬೇಕಾದುದರಿಂದ, ಆ ತಿಂಗಳುಗಳು ತಕ್ಕವುದಿಲ್ಲವೇ? ಅದು ಕಾರಣ ಕೊಂಡುಕೊಳ್ಳುವವರು ಹ್ಯಾಗಾದರೂ ಕೊಂಡುಕೊಳ್ಳುವರು. ನವಂಬರ್ ಯಾ ಡಿಸೆಂಬರ್ ತಿಂಗಳಲ್ಲಾದರೆ, ದನಗಳೂ ಕೊಡಗಿನ ಹವಕ್ಕೆ ಒಗ್ಗಿ, ಆಸ್ತಿ, ಕಕ್ಕಡ ತಿಂಗಳುಗಳಲ್ಲಿ ಕೊಂಡುಕೊಳ್ಳುವ ನಡೆ ಗುತ್ತಿರು... ನಗಳಿಗಿಂತಲೂ ಕೊಂಚ ಕಾಲ ಚೆನ್ನಾಗಿ ಕೆಲಸಮಾಡುವುವು. ಅಲ್ಲಗೆ ತೆಂತ ...

ಇಟಲಿ ದೇಶದ ನವೀನ ಪರಿಶೋಧನೆಗಳು.

ಮಲೇರಿಯಾ ಜ್ವರವನ್ನು ತಪ್ಪದೆ ಗುಣಪಡಿಸುವ ಔಷಧಿ.

ಮಲೇರಿಯಾ ಗುಣಕಾರಿಯಾದ ಗುಳಿಗೆಗಳು ಐ. ಅಂ'. ಟಿ. ಎ.; ಮೆಟಲಿಸ್ ಚಿನಿನ ಬ್ಲೂ ಐ ಆರ್. ಟಿ. ಎ. (ಇಂಜೆಕ್ಷನುಗಳು.)

ಮೇಲಿನ ಔಷಧಿಗಳು ಎಲ್ಲಾ ತರದ ಮಲೇರಿಯ ಜ್ವರವನ್ನು ಸಂಪೂರ್ಣವಾಗಿ ಗುಣ ಮಾಡುತ್ತವೆ. ಇವುಗಳು ಇಟಲಿಯ ಪ್ರಸಿದ್ಧ ಬ್ಯಾಕ್ಟೀರಿಯಾಲೊಜಿ ಪ್ರೊಫೆಸರುಗಳಿಂದ ರೋಮಿನಲ್ಲಿ ಈಗ ತಾನೇ ಕಂಡುಹಿಡಿಯಲ್ಪಟ್ಟಿವೆ. ಇವು ಬಹು ಜ್ಞಾನಶಕ್ತಿಯಿಂದ ಕಂಡು ಹಿಡಿಯಲ್ಪಟ್ಟವೂ, ಹಾನಿರಹಿತವಾದವೂ ಮತ್ತು ಈಗಿನ ಕಾಲದ ವಿದ್ಯಾಶಾಸ್ತ್ರಕ್ಕೆ ಅನುಸಾರವಾದವೂ ಆಗಿವೆ.

ಚೈತನ್ಯ ಹೀನತೆಗೆ

ಯಾವಾಗಲೂ ಪ್ರೊಫೆಸರ್ ಗ್ಯಾರಿನೋರವರ "ಕಿಂಗ್ಸ್ ಗ್ಲೋಬ್ಯೂಲ್ಸ್" ಎಂಬ ಮಾತ್ರೆಗಳನ್ನು ಉಪಯೋಗಿಸಿರಿ.

ಇದು ಜನನೇಂದ್ರಿಯಗಳ ಕೆಲಸಗಳಿಗೆ ಉತ್ತೇಜನಕೊಡುವಂಥ ಉತ್ತಮ ಔಷಧಿ. ಈ ಗುಳಿಗೆಗಳು ಇಂದ್ರಿಯ ಸ್ಖಲನ, ಜ್ಞಾಪಕಶಕ್ತಿ ಕುಂದುವಿಕೆ, ಚೈತನ್ಯ ಕುಂದುವಿಕೆ, ದೃಷ್ಟಿ ಕಡಿಮೆಯಾಗುವಿಕೆ, ಕಿವಿ ಕೇಳದಿರುವಿಕೆ, ಮುಂತಾದವುಗಳಿಗೆ ಉತ್ತಮವಾದವು. ಸರ್ವಸಂದರ್ಭಗಳಲ್ಲಿಯೂ ಇದು ಅದ್ವಿತೀಯ ಶಕ್ತಿವರ್ಧಕ ಔಷಧಿಯಾಗಿದೆ.

ಸೇವನೆಗೆ ಇರುವ ನಮ್ಮ ಬೇರೆ ಔಷಧಿಗಳು.

(ಅಸ್ತಮ) ನೇವಸ, (ಕ್ರಾನಿಕ್ ಬ್ರಾಂಕೈಟಿಸ್) ಹಳೇ ಶ್ವಾಸನಾಳದ ಕಾಯಿಲೆಗಳು ಮುಂತಾದವಕ್ಕೆ— "ಲಿಕ್ಕರ್ ಆಪಿ."
(ಹಿಸ್ಟರಿಯ) ಸೂತಿಕಾವಾಯು ಮತ್ತು (ಅಪಿಲೆಪ್ಸಿ) ಅಪಸ್ಮಾರವನ್ನು ಒಳಕೊಂಡ ಎಲ್ಲಾ ನಾಡಿರೋಗಗಳಿಗೆ— "ಎವಾಲ್."
(ಸಿಫಿಲಿಸ್) ಮೇಹ ರೋಗಕ್ಕೆ ಅಬಸ್ಮವಾಗಿದ್ದರೂ ಕೂಡ— "ಸಾಲಿಡ್ಯೆನ್ ಪಿಲ್ಸ್."
(ಡಯಬಿಟಿಸ್) ಮಧುಮೂತ್ರದ ಕಾಯಿಲೆಗೆ— "ಎಂಟಿ ಡಯಬಿಟಿಕ್ ಟ್ಯಾಬ್ಲೆಟ್ಸ್."

ಕ್ಷಯ ರೋಗ ನಿವಾರಣೆಗೆ

- ಪ್ರೊಫೆಸರ್ ಎ. ಬ್ರುಸ್ಕೆಟಿನಿಯವರ 'ಸೀರ' ಮತ್ತು ಗುಣಕಾರಿಯಾದ 'ವೇಕ್ಸಿನ್'ಗಳು.

ಈ ರೋಗದ ಹಲವು ರೂಪಾಂತರಗಳಲ್ಲಿ ಅಂದರೆ ಶ್ವಾಸಕೋಶ ಸಂಬಂಧ (1ನೇ, 2ನೇ ಮತ್ತು 3ನೇ ಪ್ರಗತಿಯ) ಕಾಯಿಲೆಗೂ, ಗಂಡಮಾಲೆಗೂ, ಅಸ್ಥಿಕೋಶದ ಮತ್ತು ಅಸ್ಥಿಗೆ ಸಂಬಂಧಪಟ್ಟ ಕಾಯಿಲೆಗಳಿಗೂ ಒಳ್ಳೆ ಔಷಧಿ. ಬೇರೆ ತರಹದ ಚಿಕಿತ್ಸೆಗಳಿಗಿಂತ ಇದು ಉತ್ತಮವಾದದ್ದೆಂದು ಇಷ್ಟರ ವರೆಗೆ ಕಂಡು ಬಂದಿದೆ. ಇವುಗಳ ರೋಗ ನಿವಾರಣ ಶಕ್ತಿಯೂ, ಕೇಡು ಇಲ್ಲದಿರುವಿಕೆಯೂ ಖಾತ್ರಿಯಾದವು.

ಬ್ರುಸ್ಕೆಟಿನಿಯವರ ಬೇರೆ ಔಷಧಿಗಳು.

ಕೀವುಗಳಿಂದ ಅಂಟುವ ರೋಗಗಳಿಗೆ.	ಮಧುಮೂತ್ರ, ಹುಣ್ಣು, ಎಲ್ಲಾ ತರದ ಇನ್‌ಫ್ಲುವೆನ್ಜ ಜ್ವರ, ಕಠಿಣ ವಾತರೋಗಗಳು (ರ್‍ಯುಮೆಟಿಸ್ಮ್, ಮತ್ತು ಆರ್ಥ್ರೈಟಿಸ್) ಬಾಣಂತಿ ಸನ್ನಿ, ಸ್ಕಾರ್ಲೆಟ್ ಜ್ವರ, 'ಎರಿಸಿಪೆಲಾಸ್', ಸಂಜು, ಡಬ್ಬಲ್ ನಿಮೋನಿಯ, ಹಲ್ಲಿನಿಂದ ರಕ್ತ ಹೋಗು (ಪಯೋರಿಯ), 'ಕ್ರಾನಿಕ್ ಒಟೋರಿಯ' ಮುಂತಾದ ಕಾಯಿಲೆಗಳಿಗೆ 'ಏಂಟಿ ಪಯಜನಿಕ್ ಪೊಲಿವಲೆಂಟ್ ವ್ಯಾಕ್ಸಿನ್' ಬಹು ಉತ್ತಮವಾದದ್ದು.
ಉರಿಮೂತ್ರ (ಗೊನೋರಿಯ) ರೋಗಕ್ಕೆ.	ಗುಣಕಾರಿಯಾದ 'ಏಂಟಿ ಗೊನೊಕೊಕಿಯೊ ವ್ಯಾಕ್ಸಿನ್.'
'ಟೈಫಾಯಿಡ್' ಜ್ವರಕ್ಕೆ	ಗುಣಕಾರಿಯಾದ 'ಏಂಟಿ ಟೈಫಾಯಿಡ್ ಪಾರಟೈಫಾಯಿಡ್.'
'ಕೋಲಿ'ಗೆ	ಗುಣಕಾರಿಯಾದ 'ಏಂಟಿ ಕೋಲಿ ವ್ಯಾಕ್ಸಿನ್' (ಕರುಳುಗಳ ಕಾಯಿಲೆಗೆ)
ಕುಷ್ಠ ರೋಗಕ್ಕೆ	ಗುಣಕಾರಿಯಾದ 'ಏಂಟಿ ಲೆಪ್ರೋಸಿಯ ವ್ಯಾಕ್ಸಿನ್.'
ವಾಂತಿಭೇದಿಗೆ	ಗುಣಕಾರಿಯಾದ 'ಏಂಟಿ ಕೊಲೆರಿಕ್ ವ್ಯಾಕ್ಸಿನ್'

ಮೇಲಿನ "ಸೀರ ಮತ್ತು ಕ್ಯುರೇಟಿವ್ ವ್ಯಾಕ್ಸಿನ್" ಗಳು, ಕುಷ್ಠರೋಗ ಮತ್ತು ಏಡಿ ಹುಣ್ಣು (ಕ್ಯಾನ್ಸರ್) ಗಳಿಗೆ ವಿರೋಧ ನಡೆಸುತ್ತಿರುವ ಇಂಟರ್ ನೇಶನಲ್ ರೀಸರ್ಚ್‌ಗಳ ಪ್ರೆಸಿಡೆಂಟರಾಗಿ ಹೊಸತು ಈಗ ತಾನೇ ಪ್ಯಾರಿಸ್ ಪಟ್ಟಣದ 'ಇಂಟರ್ ನೇಶನಲ್ ಲೀಪರ್ಸ್ ಸೊಸೈಟಿಯ ಜನರಲ್ ಎಸೆಂಬ್ಲಿ' ಯವರಿಂದ ಆರಿಸಲ್ಪಟ್ಟಿರುವ ಬ್ಯಾಕ್ಟೀರಿಯೋಲಜಿಯ ಪ್ರಸಿದ್ಧ ಇಟಾಲಿಯನ್ ಪ್ರೊಫೆಸರಾದ ಎ. ಬ್ರುಸ್ಕೆಟಿನಿಯವರಿಂದ ತಯಾರಿಸಲ್ಪಟ್ಟವಾಗಿವೆ.

Agents wanted in Coorg.

ಮೇಲಿನ ಔಷಧಿಗಳು ಬರುವ ಜುಲೈ ತಾ 3ನೇ ಬುಧವಾರದ ವರೆಗೆ ಮಡಿಕೇರಿಯಲ್ಲಿರುವ ಇಟಾಲಿಯನ್ ಏಜೆಂಟರಿಂದ ದೊರೆಯುವವು. ಅವರನ್ನು ಬೆಳಿಗ್ಗೆ 9ರಿಂದ 12 ಗಂಟೆಯ ವರೆಗೂ, ಮಧ್ಯಾಹ್ನದ ಮೇಲೆ 1ರಿಂದ 6 ಗಂಟೆಯ ವರೆಗೂ ಮುಸಾಫರಿ ಬಂಗ್ಲೆಯಲ್ಲಿ ಕಾಣಬಹುದು.

ಕೊಡಗಿನಲ್ಲಿ ಏಜೆಂಟರು ಬೇಕು

ಕೊಂಡುಕೊಳ್ಳದೆ ಕೂಡದು. ಹೀಗೆ ಅನೇಕ ವಿಧಗಳಲ್ಲಿ ಉಪಯೋಗವಾಗುವುದರಿಂದ ನವಂಬರ್ ಯಾ ಡಿಸೆಂಬರ್ ತಿಂಗಳೇ ಪ್ರದರ್ಶನಕ್ಕೆ ಉತ್ತಮವಾದುದು.

ಕಡೆಗೆ ಮೆ. ಕಾಳಮ್ಮಯ್ಯನವರು ಮೆ. ಪುಚ್ಚಿಮಾಡ ಮುದ್ದಯ್ಯನವರು ಪ್ರೆಸಿಡೆಂಟರಾಗಿರಬೇಕೆಂದು ಸೂಚಿಸಿದಕ್ಕೆ ಸರ್ವರೂ ಸಮ್ಮತಿಸಿದರು.

ಮೆ. ಪುಚ್ಚಿಮಾಡ ಮುದ್ದಯ್ಯನವರು ಮೆ. ಮಾಚಿಮಾಡ ಮಂದಣ್ಣನವರು ಸೆಕ್ರೆಟರಿಯಾಗಿರಬೇಕೆದು ಸೂಚಿಸಿದಕ್ಕೆ ಎಲ್ಲರೂ ಒಪ್ಪಿದರು.

ಮೆ. ಕಾಳಮ್ಮಯ್ಯನವರು ಸೂಚಿಸಿದ ಮೇರೆ ಸರ್ವಸಮ್ಮತದಿಂದ ಮೆ. ಮುಕ್ಕಾಟಿರ ಪೂಣಚ್ಚನವರು ಟ್ರೆಜರರ್ ಆಗಿ ಚುನಾಯಿಸಲ್ಪಟ್ಟರು.

ಅದಾದ ಮೇಲೆ ಕೆಳಗಿನ ಕಮಿಟಿ ಮೆಂಬರುಗಳು ಚುನಾಯಿಸಲ್ಪಟ್ಟರು.

1. ಮೊಗಳಾಡ ಎ. ಕಾಳಮ್ಮಯ್ಯನವರು, 2. ಕೊಡಂದೇರ ಚಂಗಪ್ಪನವರು, 3 ಚಮ್ಮಾಡ ಮಾದಪ್ಪನವರು, 4 ಚೆಪ್ಪುಡಿರ ಪೂವಯ್ಯನವರು, 5. ಸಿ. ಕೆ ಶ್ರೀನಿವಾಸಚಾರ್‍ಯರು, 6. ಕರೀಮ್ ಸಾಹೇಬರು, 7. ಜಿ. ವಿ. ತಿಮ್ಮಯ್ಯನವರು.

ಅಧ್ಯಕ್ಷರು, ಅವರನ್ನು ಆ ದಿನದ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲಿಕ್ಕೆ ಕೇಳಿಕೊಂಡದರಿಂದ ಎಲ್ಲರನ್ನೂ ಬಹಳವಾಗಿ ವಂದಿಸಿದರು.

ಮೆ. ಪುಚ್ಚಿಮಾಡ ಮುದ್ದಯ್ಯನವರು ಮೆ. ಕೋದಂಡ ಸೋಮಯ್ಯನವರು ಮಡಿಕೇರಿಯಿಂದ ಬಂದು ಆ ದಿನದ ಮೀಟಿಂಗನ್ನು ಅಷ್ಟು ಮುತುವರ್ಜಿಯಿಂದ ನಡಿಸಿಕೊಟ್ಟದಕ್ಕೂ, ಆ ದಿನ ಎಲ್ಲರ ಉಪಯೋಗಕ್ಕಾಗಿ ಸ್ಕೂಲು ರೂಮನ್ನು ಬಿಟ್ಟುಕೊಟ್ಟದ್ದ ಮಿಷನ್ ಸ್ಕೂಲು ಹೆಡ್ಮಾಸ್ಟರ್‌ರವರಿಗೂ ಅಲ್ಲಿ ನೆರೆದಿದ್ದ ಜನರ ಪರವಾಗಿ ವಂದನೆಗಳನ್ನು ಅರ್ಪಿಸಿದರು.

ಕಡೆಗೆ ಆ ದಿನ ನಡೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಕೊಡಗಿನ ಎರಡು ಪತ್ರಿಕೆಗಳಿಗೂ ಕಳುಹಿಸಬೇಕೆಂಬದು ಪಾಸಾದ ಮೇಲೆ ಮೀಟಿಂಗು ಬರಕಾಸ್ತ್ಯಾಯಿತು.

ಕೋದಂಡ ಸೋಮಣ್ಣ,
(ಅಧ್ಯಕ್ಷರು)

[illegible] ಬ್ಯಾಂಕು ಮೀಟಿಂಗು.

ಯಿತು. ಹಾಜರಿದ್ದ ಮೆಂಬರುಗಳು—1. ರಾವ್ ಬಹದ್ದೂರ್ ಕೆ. ಅಪ್ಪಯ್ಯನವರು (ಪ್ರೆಸಿಡೆಂಟರು), 2 ರಾವ್ ಸಾಹೇಬ್ ಪಿ ದೇವಯ್ಯನವರು, 3. ಮೆ. ಗಳಾದ ಸಿ. ಎನ್. ವೆಂಕಪ್ಪಯ್ಯನವರು (ಗೌರವ ಸೆಕ್ರೆಟರಿ) 4 ಅಪ್ಪಾರಂಡ ಚಂಗಪ್ಪನವರು, 5. ಯನ್ ಮುದ್ದಪ್ಪನವರು, 6. ಕೊಂಗೆಟ್ಟಿರ ಅಪ್ಪಯ್ಯನವರು (ಟ್ರೆಜರರ್.) 7. ಪಾಂಡಂಡ ಚಂಗಪ್ಪನವರು 8. ಯನ್. ಬಿ ಸಗೋಮ್ಮಯ್ಯನವರು, 9. ಯಂ. ಯಂ. ಕೃಷ್ಣಪ್ಪನವರು, 10. ಪಿ ಪಿ. ಬೆಳ್ಳಪ್ಪನವರು ಮತ್ತು 11 ಕೆ. ಪಿ ಚಂಗಪ್ಪನವರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ ಓದಿ ಒಪ್ಪಲಾಯಿತು

2. ಮೇ ತಿಂಗಳ ಜಮ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

3 ಅರ್ವತೊಕ್ಕಲು ಸೊಸೈಟಿಗೆ ರೂ. 350 ಮತ್ತು ಗೌಡಳ್ಳಿ ಸೊಸೈಟಿಗೆ ರೂ. 800 ಸಾಲ ಮಂಜೂರ್ಮಾಡಲಾಯಿತು

4. 1. ಹೆರವನಾಡು ಸೊಸೈಟಿ, 2 ಕೆದಮುಳ್ಳೂರು ಸೊಸೈಟಿ 3. ಬೇಗೂರು ಸೊಸೈಟಿ 4 ಕೋಕೇರಿ ಸೊಸೈಟಿ 5. ಬೆಟ್ಟಗೇರಿ ಸೊಸೈಟಿ. 6. ಅರೆಯೂರು ಸೊಸೈಟಿ, 7 ವಿದ್ಯಾಇಲಾಖೆ ಉದ್ಯೋಗಸ್ಥರ ಸೊಸೈಟಿ, 8. ಪುಳ್ಳೂರು ಸೊಸೈಟಿ, 9. ಕಿರುಗೂರು ಸೊಸೈಟಿ, 10. ಈಚೂರು ಮಯ್ಯಸ್ಸ ಸೊಸೈಟಿ, 11. ಕಣಗಾಲು ಸೊಸೈಟಿ, 12. ಕೋಟೂರು ಸೊಸೈಟಿ, 13 ಕೋತೂರು ಸೊಸೈಟಿ, 14. ಬೆಕ್ಕೆಸೊಡ್ಲೂರು ಸೊಸೈಟಿ. 15. ಕಂಗಳತ್ನಾಡು ಸೊಸೈಟಿ 16 ಶಿಗ್ಗಾಲು—ಐಕೊಳ ಸೊಸೈಟಿ ಮತ್ತು 17. ಕಾಂಡನಕೊಲ್ಲಿ ಸೊಸೈಟಿಗಳ ಸಾಲದ ಅರ್ಜಿಗಳನ್ನು ಬ್ಯಾಂಕಿನಲ್ಲಿ ಈಗ ಹಣವಿಲ್ಲದ್ದರಿಂದ ಹಣ ಸಿಕ್ಕುವವರೆಗೆ ಹಾಗೆಯೇ ಇಡಬೇಕೆಂತ ತೀರ್ಮಾನವಾಯಿತು.

5. ಬ್ಯಾಂಕಿಗೆ ರೂ. 20,000 ವರೆಗೆ ನಿರಖು ಠೇವಣಿಯನ್ನು (ಫಿಕ್ಸೆಡ್ ಡಿಪಾಜಿಟ್ಟನ್ನು) ಹೊಂದಿಕೊಳ್ಳಲು ಬ್ಯಾಂಕಿನ ಗೌರವ ಸೆಕ್ರೆಟರಿಯವರಿಗೆ ಅಧಿಕಾರ ಕೊಡಲಾಯಿತು.

6 ಗಡಿನಾಡು ಬಿಳಿಗೇರಿ ದವಸ ಭಂಡಾರದವರು ತಮ್ಮ ಬಾಕಿ, ಬ್ಯಾಂಕಿಗೆ ಈ ವರ್ಷ ಪಾವತಿ ಮಾಡಲಿಕ್ಕಿರುವ ಕಂತಿನ ಹಣಕ್ಕೆ ನವಂಬರ್ ತಿಂಗಳ ಆಖೈರುವರೆಗೆ ವಾಯಿದೆ ಕೊಡಬೇಕಾಗಿ ಬರಕೊಂಡ ಅರ್ಜಿಗೆ, ವಾಯಿದೆಕೊಡಲು ಆಗುವುದಿಲ್ಲವೆಂದು ತೀರ್ಮಾನವಾಯಿತು.

ರದ ಕ್ರಿಯಕ್ಕೆ ಒಂದು ಕೊಡೆಯನ್ನು ತೆಗೆಯಕೊಡಬೇಕೆಂದು ತೀರ್ಮಾನವಾಯಿತು ಕೆ ಅಪ್ಪಯ್ಯ (ಅಧ್ಯಕ್ಷ)

ದೇವಾಂಗದವರ ಮೀಟಿಂಗು.

ಮಡಿಕೇರಿಯಲ್ಲಿ ದೇವಾಂಗ ಮುಕಸ್ಥರು ಅನೇಕ [illegible]ಗಳಿಂದ ಪಂಗಡಗಳಾಗಿ ಜಾತಿಯಲ್ಲಿ ಅನೇಕ ವ್ಯಾಜ್ಯ ಉಂಟುಮಾಡಿಕೊಂಡು ಮತ್ತು ಸಾವಿರಾರು ರೂಪಾಯಿಗಳನ್ನು ವ್ಯಯಮಾಡಿಕೊಂಡು, ನೆಂಟಸ್ತರಲ್ಲಿ ದ್ವೇಷ [illegible]ಟ್ಟಿಕೊಂಡಿದ್ದರು. ಈಗ ಅವರೆಲ್ಲರೂ ತಮ್ಮ [illegible]ಗಾಗಿ ಒಂದುಗೂಡಿಕೊಂಡರು ಮತ್ತು ಅನ್ಯ[illegible]ವಾದ ಶ್ರೀಮದ್ ರಾಮಚಂದ್ರ, ಪುರ ಮಠದ [illegible] ಹುಕುಮುಗಳನ್ನು ಮತ್ತು ಮಠದವರ ಹುಕುಮುಗ[illegible] ವಾಂಗದವರು ನುಸ್ಸಿಸುತ್ತಿದ್ದರು. ದೇವಾಂಗ [illegible] ರೂ ಐಕ್ಯಮತ್ಯದಿಂದ ಶ್ರೀ. ಚಾಮುಂಡೇಶ್ವರಿ ಅಮ್ಮನ [illegible]ಸ್ಥಾನದಲ್ಲಿ ತಾ. 18—5—29 ರಲ್ಲು ಮತ್ತು 19 [illegible]ಲ್ಲು ಸಹ ಮಹಾಸಭೆ ಸೇರಿ ಪೊಲ್ಯಂಡ ಮಠದ [illegible] ಕೆಲಸಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ, ಇನ್ನು [illegible] ಅಧೀನಕ್ಕೊಳಪಡುವುದಿಲ್ಲವೆಂತಲೂ, ಅವರ [illegible] ದೇವಾಂಗದವರಿಗೆ ಅನ್ವಯಿಸುವದಿಲ್ಲವೆಂತಲೂ [illegible]ಗಿ ಹೊಸ ಪ್ರೆಸಿಡೆಂಟ್ ಮತ್ತು ಕಮಿಟಿ ಮೆಂಬರುಗಳನ್ನು [illegible]ಮತದಿಂದ ಚುನಾಯಿಸಲ್ಪಟ್ಟರು. ಮತ್ತು ಸ್ವಜಾ[illegible]ತ ಶ್ರೀ ಹಂಪೆ ಮಠದ ಶ್ರೀ. ಜಗದ್ದೇವಾಂಗ[illegible] ಹುಕುಮುಗಳಿಗನುಸಾರವಾಗಿ ಇಲ್ಲಿಯ ದೇವಾಂ[illegible] ನಡೆಯತಕ್ಕದೆಂದು ಸಹ ಠರಾವು ಪಾಸಾಯಿತು.

ನೇ. [illegible]

Wanted.

Candidates for Wireless and Station Master's Courses. Fare PAID. Boarding arr[illegible]

Prospectus on two anna st[illegible]

Royal Wireless & Telegraph [illegible]

12—8

ವರ್ತಮಾನ ಸಂಗ್ರಹ.

ಒಳದೇಶ.

ಕೆಲವು ವರ್ಷಗಳ ಹಿಂದೆ ಕೊಡಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿದ್ದ ಮೆ. ಎ. ಜಿ. ಕರ್ಗನ್‌ವೆನ್ ಐ. ಸಿ. ಯಸ್‌ರವರು ಮದ್ರಾಸು ಹೈಕೋರ್ಟಿನ ಪ್ಯೂನಿ ಜಡ್ಜರಾಗಿ ನೇಮಿಸಲ್ಪಟ್ಟಿರುವರು.

ಮೆ. ಕೋದಂಡ ಕಾಳಪ್ಪನವರ ಪತ್ನಿ ಪೊನ್ನವ್ವನವರು ಈ ತಾರೀಖು 26ರಲ್ಲಿ ಮಡಿಕೇರಿಯಲ್ಲಿ ಶಿವಾಧೀನರಾದರು. ಇವರ ಶವವನ್ನು ಕೊಟ್ಟೋಳಿ ಗ್ರಾಮದ ಅವರ ಮನೆಗೆ ಸಾಗಿಸಿ ಅಲ್ಲಿ ದಹನ ಮಾಡಲಾಯಿತು.

ಸೋಮವಾರಪೇಟೆ ಪ್ಲಾಂಟರ್ ಲೇಟ್ ಮೆ. ಡಿ. ವೆಂಕಟರಮಣ ಶೆಟ್ಟಿಯವರ ಪತ್ನಿ ಶ್ರೀಮತಿ ನಂಜಮ್ಮನವರು ಬೊಂಬಾಯಿ ಯುನಿವರ್ಸಿಟಿಯ ಎಲ್. ಸಿ. ಪಿ. ಯಸ್. ಎಂಬ ಮೆಡಿಕಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ಕೇಳಿ ಸಂತೋಷಪಡುತ್ತೇವೆ.

ಮಡಿಕೇರಿಯಲ್ಲಿರುವ ಸಬ್ ಮೇಜಿಸ್ಟ್ರೇಟರು ಜುಲೈ ತಾ. 1 ರಿಂದ ಪ್ರತಿ ಸೋಮವಾರ, ಮಂಗಳವಾರ ಮತ್ತು ಬುಧವಾರ ವೀರರಾಜಪೇಟೆಯಲ್ಲಿಯೂ, ಗುರುವಾರ, ಶುಕ್ರವಾರ ಮತ್ತು ಶನಿವಾರ ಮಡಿಕೇರಿಯಲ್ಲಿಯೂ ಕೋರ್ಟು ಮಾಡುವಂತೆ ಹುಕುಂ ಆಗಿದೆ.

ಬಾಳಲೆ ಗ್ರಾಮದ ಮಡಿಕೆಪೀಡಿನಲ್ಲಿ ಕುಂಬಾರ ದೇವ ಶೆಟ್ಟಿಯವರ ಹೆಂಡತಿ ದೇವಮ್ಮನವರು ಕೆಲವು ದಿವಸಗಳ ಹಿಂದೆ 2 ಹೆಣ್ಣು ಮತ್ತು 1 ಗಂಡು ಅಂತು ಮೂರು ಮಕ್ಕಳನ್ನು ಹೆತ್ತು, ಮಕ್ಕಳು ಅದೇ ದಿನವೂ, ತಾಯಿಯು ಮೂರು ದಿವಸಗಳನಂತರವೂ ಮೃತರಾದರೆಂದು ವರ್ತಮಾನ.

ಮಡಿಕೇರಿ—ವೀರರಾಜಪೇಟೆ ರಸ್ತೆಯ 19/2 ಮೈಲು ಬಳಿ ಇರುವ ಮೋರಿಯು ಅಭದ್ರವಾಗಿರುವ ಕಾರಣ 19/2 ರಿಂದ 19/4 ನೇ ಮೈಲಿನ ವರೆಗೆ ಸದರಿ ರಸ್ತೆಯು ಮೈವಾಟಗಳಿಗೆ ಮುಚ್ಚಲ್ಪಟ್ಟಿದೆಯೆಂದೂ, ಆದರೆ ಚರ್ಚ್ ರೋಡಿಗಾಗಿ ವೀರರಾಜಪೇಟೆಗೆ ಮೈವಾಟಗಳು ನಡೆಸಲ್ಪಡುತ್ತಿವೆಯೆಂದೂ ಎಗ್ಸಿಕ್ಯೂಟಿವ್ ಇಂಜಿನಿಯರರವರು ತಿಳಿಸಿರುತ್ತಾರೆ.

ಕೆಲವು ದಿವಸಗಳ ಹಿಂದೆ ತನ್ನ ಹೆಂಡತಿಯನ್ನು ಕೆರೆಯಿಂದ ನೀರು ತರುತ್ತಿದ್ದಾಗ ದಾರಿಯಲ್ಲಿ ಕಾರಣಾಂತರಗಳಿಂದ ಕಡಿದು ಕೊಂದು ಪರಾರಿಯಾದನೆಂದು ಸುದ್ದಿಯಾದ ಬಾಳಲೆ ಗ್ರಾಮದ ಹಜಾಮರ ದೇವನೆಂಬವನನ್ನು ಪೊಲೀಸಿನವರು ವಯನಾಡಿನಲ್ಲಿ ದಸ್ತಗಿರಿ ಮಾಡಿ ತಂದು, ಈಗ ವೀರರಾಜಪೇಟೆ ಮುನ್ಸೀಫ್ ಕೋರ್ಟಿನಲ್ಲಿ ಕೇಸು ನಡೆಸುತ್ತಿರುವದಾಗಿ ತಿಳಿಯಬರುತ್ತದೆ.

ಸಬ್ ಅಸಿಸ್ಟೆಂಟ್ ಸರ್ಜನ್ ಮೆ. ಮಾಳೇಟಿರ ತಮ್ಮಯ್ಯ ಮುತ್ತಣ್ಣನವರು ಜುಲೈ 1 ರಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿ ಛಾರ್ಜು ತೆಗೆದುಕೊಳ್ಳುವರೆಂದು ಮಾಡಿದ್ದ ಹುಕುಮನ್ನು ಬದಲಾಯಿಸಿ, ಅವರು ಜುಲೈ 5ರಲ್ಲಿ ವೀರರಾಜಪೇಟೆ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರುವರೆಂದು ಹುಕುಂ ಆಗಿದೆ. ಈಗ ಪೊಳ್ಳಿಬೆಟ್ಟ ಎಸ್ಟೇಟ್ ಡಿಸ್ಪೆನ್ಸರಿಯಲ್ಲಿರುವ ಮೆ. ನಾರಾಯಣನಾಯರ್‌ರವರು ಮಡಿಕೇರಿ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಲ್ಪಟ್ಟಿರುವರು.

ಹಿಂದೂದೇಶ.

ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ಬರುವ ಲಾಹೋರ್ ಕಾಂಗ್ರೆಸ್ಸಿನ ಅಧ್ಯಕ್ಷಪದವಿಗೆ ಪಂಡಿತ ಜವಾಹಿರ್‌ಲಾಲ್ ನೆಹರೂರವರ ಹೆಸರನ್ನು ಶಿಫಾರಸ್ಸು ಮಾಡಿರುವರು.

ತಾ 24ರಲ್ಲಿ ಸ್ಟೆನಿಟಾಲಿನಲ್ಲಿ ನಡೆದ ಯುನೈಟೆಡ್ ಪ್ರಾಂತ್ಯದ ಲೆಜಿಸ್ಲೇಟಿವ್ ಕೌನ್ಸಿಲು ಮೀಟಿಂಗಿಗೆ ಸ್ವರಾಜ್ಯ ಪಾರ್ಟಿಯ ಮೆಂಬರುಗಳು ಯಾರೂ ಹೋಗಲಿಲ್ಲ.

ಕಲ್ಕತ್ತಾದ ಒಬ್ಬ ಬ್ಯಾರಿಸ್ಟರಾದ ಮೆ. ಪಿ. ಚೌದರಿಯವರು ಸುಮಾರು 20,000 ರೂ. ಬೆಲೆಬಾಳುವ ಫ್ರೆಂಚ್ ಪುಸ್ತಕಗಳ ಭಂಡಾರವನ್ನು ಹಿಂದೂ ವಿಶ್ವವಿದ್ಯಾಲಯಕ್ಕೆ ಉಚಿತವಾಗಿ ಕೊಟ್ಟಿರುವರು.

ಹಿಂದೂಸ್ಥಾನದ ಆಶ್ರಿತ ಸಂಸ್ಥಾನಗಳ ರಾಜರುಗಳ ಮತ್ತು ಅವರ ಮಂತ್ರಿಗಳ ಸಭೆಯೊಂದು ತಾ. 25 ರಲ್ಲಿ ಬೊಂಬಾಯಿಯಲ್ಲಿ ನಡೆಯಿತು. ಬಿಕಾನೀರ್ ಮಹಾರಾಜರು ಅಧ್ಯಕ್ಷರಾಗಿದ್ದರು. ಸಬ್ ಕಮಿಟಿಯವರು ತಯಾರಿಸಿದ ಯೋಜನೆಗಳನ್ನು ಅಂಗೀಕರಿಸಿರುವರು. ಇದರ ಪ್ರಕಾರ ಪ್ರಜೆಗಳಿಗೂ, ರಾಜರುಗಳಿಗೂ ಒಪ್ಪುವಂಥ ಬಟ್ಲರ್ ಕಮಿಟಿಯ ಕೆಲವು ಸೂಚನೆಗಳನ್ನು ಅಂಗೀಕರಿಸಿರುವರೆಂದೂ, ಬಾಕಿಯವನ್ನು ತಿರೋಧಿಸಿರುವರೆಂದೂ ವರ್ತಮಾನ.

ಮೆಂಡಲೆಯ ಮೇಜಿಸ್ಟ್ರೇಟರೊಬ್ಬರು ಅಲ್ಲಿಯ ಸಬ್ ಇನ್‌ಸ್ಪೆಕ್ಟರ್ ಖಾದಿನ್‌ರವರು ಬೇರೆ ಇಬ್ಬರ ಸಮೇತ ಸುಮಾರು 5 ಸಾವಿರ ರೂಪಾಯಿಯನ್ನು ದುರುಪಯೋಗಪಡಿಸಿದ ಒಂದು ಕೇಸನ್ನು ವಿಚಾರಿಸಿ, ಬೇರಿಬ್ಬರನ್ನು ಬಿಟ್ಟು, ಖಾದಿನ್ನರಿಗೆ ಮಾತ್ರ ಒಂದು ವರ್ಷ ಕಠಿಣ ಸಜೆ ವಿಧಿಸಿದರು. ಜಡ್ಜ್‌ಮೆಂಟು ಕೊಟ್ಟ ಕೂಡಲೆ ಖಾದಿನರು ಮೇಜಿಸ್ಟ್ರೇಟರ ಹಿಂದೆ ನಿಂತು ಅವರಿಗೆ ಮೂರುಸಾರಿ ತನ್ನಲ್ಲಿ ಅಡಗಿಸಿಟ್ಟುಕೊಂಡಿದ್ದ ಪಿಸ್ತೋಲಿನಿಂದ ಗುಂಡು ಹೊಡೆದ. ಅವರನ್ನು ಕೊಂದನು ಮತ್ತು ತನಗೂ ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡನು.

ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬೊಂಬಾಯಿ ಮೀಟಿಂಗಿನಲ್ಲಿ ಕಾಂಗ್ರೆಸ್ ಮೆಂಬರುಗಳು ಎಸೆಂಬ್ಲಿ ಮತ್ತು ಕೌನ್ಸಿಲು ಮೀಟಿಂಗುಗಳಿಗೆ ಹೋಗಕೂಡದೆಂದು ಮಾಡಿದ ಠರಾವಿನ ಮೇಲೆ ಹಲವು ಕಾಂಗ್ರೆಸ್ ಕೌನ್ಸಿಲು ಪಾರ್ಟಿಗಳಿಗೆ ಅಸಮಾಧಾನವುಂಟಾಗಿ, ತಮ್ಮನ್ನು ವಿಶೇಷ ಸಂದರ್ಭಗಳಲ್ಲಿ ಕೌನ್ಸಿಲು ಮೀಟಿಂಗುಗಳಿಗೆ ಹೋಗಲು ಬಿಡಬೇಕೆಂದು ಕಾಂಗ್ರೆಸ್ ಕಮಿಟಿಯನ್ನು ಪ್ರಾರ್ಥಿಸಿ ಕೇಳಿರುವರು. ಇವುಗಳನ್ನು ಚರ್ಚಿಸಲು ವರ್ಕಿಂಗ್ ಕಮಿಟಿಯ ಮೀಟಿಂಗು ಜುಲೈ ತಾ. 5ರಲ್ಲಿ ಡೆಲ್ಲಿಯಲ್ಲಿ ನಡೆಯುವದು.

ಈ ತಾ 9ರಿಂದ 22ರ ವರೆಗೆ ಅಸ್ಸಾಮಿನ ಸುರ್ಮಾ ನದಿಗಳಲ್ಲಿ ದೊಡ್ಡ ಪ್ರವಾಹವುಂಟಾಗಿ ಹಲವು ಗ್ರಾಮಗಳು ನೀರಿನಿಂದ ಮುಚ್ಚಲ್ಪಟ್ಟವು. ಇದಕ್ಕೆ ಅಲ್ಲಿಯ ಬೆಟ್ಟಗಳಲ್ಲಿ ವಾಡಿಕೆಯಾಗಿ ಬೀಳುವದಕ್ಕಿಂತ 40 ಇಂಚು ಹೆಚ್ಚು ಮಳೆಯಾದದ್ದೇ ಕಾರಣ. ನೆರೆಯ ಸಮಯದಲ್ಲಿ ಸುಮಾರು 50,000 ಜನರು ತಮ್ಮ ಮನೆಮಾರುಗಳನ್ನು ಬಿಟ್ಟು ಎತ್ತರವಾದ ಸ್ಥಳಗಳಲ್ಲೂ, ಅಟ್ಟಣಿಗಳ ಮೇಲೂ ವಾಸಿಸಬೇಕಾಯಿತು. ಈ ಪ್ರವಾಹದಿಂದ ತುಂಬಾ ನಷ್ಟವುಂಟಾಗಿದೆ. ಹಲವು ದನಕರಗಳು ನೀರಿನಲ್ಲಿ ಕೊಚ್ಚಲ್ಪಟ್ಟವು. ಆದ್ರೆ ಮನುಷ್ಯರ ಪ್ರಾಣನಷ್ಟವಾಗಿರುವುದಿಲ್ಲ. ಟೀ ತೋಟಗಳಿಗೂ ಬಹಳ ನಷ್ಟವಾಗಿದೆಯಂತೆ. ತೊಂದರೆಗೊಳಪಟ್ಟ ಜನರ ಸಹಾಯಾರ್ಥವಾಗಿ ಚಂದಾ ಎತ್ತಿ ಆಹಾರ ಪದಾರ್ಥಗಳನ್ನು ಅವರಿಗೆ ಕೊಡುತ್ತಿರುವರು. ತ್ರಿಪುರದ ಮಹಾರಾಜರು ಇದಕ್ಕೆ 1 ಲಕ್ಷ ರೂ. ಕೊಟ್ಟಿರುವರು.

ಬಲೂಚಿಸ್ಥಾನದ ಖೋಸ್ತ್ ಎಂಬಲ್ಲಿ ಕಿಮಾತ್ ಎಂಬ ಮುಸಲ್ಮಾನ್ ಹುಡುಗಿಯೊಬ್ಬಳನ್ನು ಅವಳ ತಂದೆತಾಯಿಗಳು ಅವಳ 11ನೇ ವಯಸ್ಸಿನಲ್ಲಿ ಗಫೂರ್ ಎಂಬವನಿಗೆ ಮದುವೆ ಮಾಡಿ ಕೊಟ್ಟರು. ಅವಳು ಮದುವೆಯಾಗಿ 6 ದಿವಸಗಳನಂತರ ಅಲ್ಲಿಂದ ತಪ್ಪಿಸಿಕೊಂಡು, ಹುಡುಗನ ಉಡುಪನ್ನು ಧರಿಸಿಕೊಂಡು ಬೆಲೋಸ್ಟನ್ ಎಂಬಲ್ಲಿಗೆ ಹೋಗಿ 'ಕಮಾಲ್' ಎಂಬ ಹೆಸರಿನಿಂದ ಕುರಿ ಕಾಯುವ ಕೆಲಸ ಮಾಡುತ್ತಿದ್ದಳು. ನಾಲ್ಕೈದು ತಿಂಗಳನಂತರ ಮುಲ್ತಾನಿಗೆ ಹೋಗಿ ಅಲ್ಲಿ ಒಬ್ಬನ ಹತ್ತಿರ ಮೂರು ವರ್ಷಗಳ ವರೆಗೆ ಗವಿ ಕೆಲಸ ಮಾಡಿದಳು. ಇವಳು ಒಂದು ದಿನ ಟ್ರೈನಿನಲ್ಲಿ ಹೋಗುತ್ತಿದ್ದಾಗ, ತನ್ನ ಗಂಡನಿಂದ ತ್ಯಜಿಸಲ್ಪಟ್ಟವಳಾದ ಇವಳ ಬೆಲೋಸ್ಟನಿನ ಯಜಮಾನನ ಹೆಂಡತಿಯು ಇವಳನ್ನು ಕಂಡು ಮೋಹಿಸಿ ತನ್ನನ್ನು ಮದುವೆಯಾಗಬೇಕೆಂದು ಇವಳನ್ನು (ಕಮಾಲ್') ಕೇಳಿಕೊಂಡಳು. ಇದಕ್ಕೆ ಕಿಮಾತ್'ನು ಒಪ್ಪಿ ಮದುವೆಯಾದನು. ಹೀಗಿರುವಾಗ್ಗೆ 'ಕಮಾಲ'ನಿಗೆ ಸರಹದ್ದಿನಲ್ಲಿ ಸಿಪಾಯಿ ಕೆಲಸ ದೊರೆಯಿತು. ಆದುದರಿಂದ ಹೆಂಡತಿಯನ್ನು ಅಗಲಿರುವ ಕಾಲವು ಹೆಚ್ಚಾಯಿತು. 1919ರಲ್ಲಿ ನಡೆದ ವಜಿರಿ ದಂಗೆಯಲ್ಲಿ ಕಮಾಲನು ಭಾಗಿಯಾದನು. ಅವನಿಗೆ ತುಂಬಾ ಗಾಯ ಆಯಿತು. ಮಿಲಿಟರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಚಿಕಿತ್ಸೆ ಮಾಡುವಾಗ್ಗೆ ಕಮಾಲನು ಗಂಡಸಲ್ಲ, ಹೆಂಗಸೆಂದು ಗೊತ್ತಾಯಿತು. ಅವಳಿಗೆ ಈಗ ಇಂಡಿಯಾ ಸರಕಾರದಿಂದ 'ಯುದ್ಧದ' ಪಿಂಚಿನು ತಿಂಗಳಿಗೆ 11 ರೂ. ಸಿಕ್ಕುತ್ತದೆ. ಅವಳು ಈಗ ಹಾರ್ನಾಯಿ ಎಂಬಲ್ಲಿ ಕೆಸರುವಾಸಿಯಾದವಳಾಗಿರುವಳು!

ವಿದೇಶ.

ಬ್ರಿಟಿಷ್ ಲೇಬರ್ ಸರಕಾರವು ರಷ್ಯಾದ ಸೋವಿಯೆಟ್ ಸರಕಾರದೊಂದಿಗೆ ರಾಯಭಾರ ಸಂಬಂಧ ಬೆಳೆಸಲು ಮನಸ್ಸು ಮಾಡಿದೆ ಎಂದು ಬ್ರಿಟಿಷ್ ವರ್ತಮಾನ ಪತ್ರಿಕೆಗಳು ತಿಳಿಸಿದವು.

ರಾಜಂತೆ ಕೌನ್ಸಿಲಿಗೆ ಮುಂಚೆ ವರ್ಸೇಲ್ಸ್ ಒಪ್ಪಂದದ 10 ನೇ ವರ್ಷಾಂತವನ್ನು ಆಚರಿಸುವ ಜೂನ್ 28 ನೇ ದಿನವನ್ನು ಜರ್ಮನಿ ದೇಶದವರು 'ರಾಷ್ಟ್ರೀಯ ಶೋಕ' ದಿನವಾಗಿ ಆಚರಿಸಲು ನಿಶ್ಚಯಿಸಿರುವರು. ಇದಕ್ಕೆ ಅಲ್ಲಿಯ ಸರಕಾರದವರ ಪ್ರೋತ್ಸಾಹವೂ ಇದೆ.

ಗ್ರೇಟ್ ಬ್ರಿಟನ್ನಿನ ಹೊಸ ಪಾರ್ಲಿಮೆಂಟು ಈ ತಾ. 25ರಲ್ಲಿ ಸೇರಿತು. ಮೊದಲಿನ ಪಾರ್ಲಿಮೆಂಟಿನ "ಸ್ಪೀಕರ್" (ಅಧ್ಯಕ್ಷ) ರಾಗಿದ್ದ ಕ್ಯಾಪ್ಟನ್ ಫಿಟ್ಸ್‌ರಾಯಿಯವರೇ ಸರ್ವಸಮ್ಮತದಿಂದ ಈಗಲೂ "ಸ್ಪೀಕರ" ರಾಗಿ ಆರಿಸಲ್ಪಟ್ಟರು. ನಿಜವಾದ ಕೆಲಸ ಪ್ರಾರಂಭಿಸಲು ಪಾರ್ಲಿಮೆಂಟು ಜುಲೈ ತಾ. 2 ರಲ್ಲಿ ಪುನಃ ಸೇರುವದು.

ದೇಶ ಸೇವೆ ಮಾಡುವ ದಾರಿ.

(2ನೇ ಪುಟದಿಂದ ಮುಂದುವರಿದದ್ದು)

ಕಾಂಗ್ರೆಸ್ ಸದಸ್ಯರು 1930ನೇ ಇಸ್ವಿಯನ್ನು ಎದುರು ನೋಡದಿರಲಿ. 1930ನೇ ಇಸ್ವಿ ಜನವರಿ 1ರಲ್ಲಿ ಅಕಸ್ಮಾತ್ತಾಗಿ ಸ್ವರಾಜ್ಯ ಸ್ಥಾಪನೆಯಾಗುವದಿಲ್ಲ. ಜರುಗುತ್ತಿರುವ ಈ ವರ್ಷದ ಕೆಲಸದ ಫಲಿತಾಂಶವೇ ಜನವರಿ 1ರಲ್ಲಿ ನಮಗೆ ದೊರಕುವದು. 1930ನೇ ಇಸ್ವಿ ಜನವರಿ 1ರಲ್ಲಿ ಅಕಸ್ಮಾತ್ ಬದಲಾವಣೆಯೇನೂ ಆಗುವದಿಲ್ಲ. ಆದ್ದರಿಂದ ಕಾಂಗ್ರೆಸ್ ಸದಸ್ಯನಾದ ಪ್ರತಿಯೊಬ್ಬನೂ ತನ್ನ ಕೈಯಿಂದಾಗುವಷ್ಟು ಕೆಲಸಮಾಡಬೇಕು. ಆಗ ಅವರಿಗೆ ಜನಾಂಗವನ್ನು ಎಚ್ಚರಗೊಳಿಸಲು ಸಾಧ್ಯವಾಗುತ್ತದೆ. ಜನಾಂಗದ ಮೇಲಾಗಲೀ, ಒಂದು ಉದ್ದೇಶದ ಮೇಲಾಗಲೀ ಒಬ್ಬ ವ್ಯಕ್ತಿಯಿಂದ ಯಾವ ಪರಿವರ್ತನೆಯನ್ನೂ ಮಾಡಲು ಸಾಧ್ಯವಿಲ್ಲವೆಂತ ಎಣಿಸದಿರಲಿ. ಹೇಗೂ ಉದ್ದೇಶಗಳನ್ನು ಸಾಧಿಸುವದು ವ್ಯಕ್ತಿಗಳ ಗುಂಪೇ. ಯಾವನಾದರೊಬ್ಬನು ಪ್ರಾರಂಭಮಾಡಬೇಕು. ಯಾವ ಕೆಲಸದಲ್ಲಾದರೂ ಜಯವಾಗುವದು ಹೇಗೆ ಎಂಬ ಗುಟ್ಟನ್ನು ತಿಳಿದ ಪ್ರತಿಯೊಬ್ಬನೂ ಬೇರೆಯವರು ಏನು ಮಾಡುತ್ತಾರೆ, ಯಾರು ಮಾಡುವದಿಲ್ಲವೆಂಬದನ್ನು ಎಣಿಸದೆ ತನ್ನ ಕರ್ತವ್ಯವನ್ನು ತಾನು ಮಾಡಲಿ.

ವೇತನವನ್ನು ಹೊಂದಿಕೊಳ್ಳುವದರಲ್ಲಿ ನಾಚಿಕೆಯೇನೂ ಇಲ್ಲದಿರಲಿ. ಕೆಲಸಗಾರನಿಗೆ ಮಜೂರಿ ಸಿಕ್ಕಲೇಬೇಕು. ಸಂಬಳ ಹೊಂದಿಕೊಂಡ ಮಾತ್ರಕ್ಕೆ ಸ್ವಾರ್ಥಪರನಾಗುವದಿಲ್ಲ. ನಿಜವಾಗಿಯೂ ಸಂಪೂರ್ಣ ಸ್ವಾರ್ಥತೆಯನ್ನು ಬಿಟ್ಟವನು ತನ್ನ ಸರ್ವಸ್ವವನ್ನೂ—ದೇಹ, ಮನಸು ಮತ್ತು ಆತ್ಮವನ್ನೂ ರಾಷ್ಟ್ರಕ್ಕಾಗಿ ಕೊಡಬೇಕು. ಆದರೂ ಅವನ ಜೀವನ ನಡೆಸಬೇಕಷ್ಟೆ. ರಾಷ್ಟ್ರವು ಸಂತೋಷದಿಂದ ಅಂಥವರ ಜೀವನವನ್ನು ನಡೆಸಿದರೂ ಅವರನ್ನು ಸ್ವಾರ್ಥತ್ಯಾಗಿಗಳೆಂತಲೇ ಕರೆಯುತ್ತಾರೆ. ಸ್ವಯಂಸೇವಕನಿಗೂ, ಜೀತಗಾರನಿಗೂ ಇರುವ ವ್ಯತ್ಯಾಸವೇನೆಂದರೆ—ಜೀತಗಾರನಾದರೆ ತನ್ನ ಕೆಲಸಕ್ಕೆ ಮಜೂರಿ ಕೊಟ್ಟರೆ ಯಾರ ಕೆಲಸವನ್ನಾದರೂ ಮಾಡುತ್ತಾನೆ. ರಾಷ್ಟ್ರೀಯ ಸ್ವಯಂಸೇವಕನಾದರೆ ತಾನು ನಂಬಿರುವ ಉದ್ದೇಶಗಳಿಗಾಗಿ ತಾನು ಉಪವಾಸದಿಂದ ಸಾಯಬೇಕಾದರೂ ರಾಷ್ಟ್ರದ ಸೇವೆಯನ್ನೇ ಮಾಡುತ್ತಾನೆ.

ಬೇಕಾಗಿದೆ.

ಸೆಂಟ್ರಲ್ ಸಹಕಾರಿ ಬ್ಯಾಂಕಿಗೆ 20,000 ರೂಪಾಯಿ ಸ್ಥಿರಮು ಠೇವಣಾತಿ (ಫಿಕ್ಸೆಡ್ ಡಿಪಾಜಿಟ್ಟು) ಹಣ ಬೇಕಾಗಿದೆ. ಹೀಗೆ ಇಡಲು ಇಚ್ಛಿಸುವವರು ಕೂಡಲೇ ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರುತ್ತೇನೆ.

ಮಡಿಕೇರಿ, **ಸಿ. ಯಸ್. ವೆಂಕಟಯ್ಯ.**
ತಾ. 25—5—29. 2. 1 ಗೌರವ ಸೆಕ್ರೆಟರಿ.

OFFICE OF THE COMMISSIONER OF COORG,
MERCARA, THE 24TH JUNE 1929.

NOTICE.

Applications are invited for the post of a probationary clerk in the Commissioner's Office on a salary of Rs. 50/—per mensem. Applications should reach the Commissioner by the 25th July 1929.

2. Applications from graduates of recognised universities only will be considered.

3. Any representation from third parties on behalf of candidates will be treated as a disqualification.

4. Further particulars, if desired, can be had from the Commissioner's Office.

K. M. CHENGAPPA,
OFFG. COMMISSIONER.

Tenders for the collection of Veltha Payani fruits.

Tenders are invited for the collection of the Veltha Payani fruits from the forests (Kertie, Matre, Sollikolli etc) of Kutumpole (Makut) Range and delivery of the broken kernels of the fruits at our factory at Kunnoth. Tenders should quote rate per ton of 16 bags of 140 lbs. each. Payments strictly cash on delivery of goods at Kunnoth. Persons whose tenders are accepted will have to give security against default. Last day for the submission of tenders will be 30-6-29 (5 P. M.). Terms of agreement can be had from our office in Tellicherry.

F. X. MIRANDA,
Manager,
Messers Malabar Estates Ltd.,
Tellicherry.

COORG DISTRICT MAGISTRATE'S OFFICE,
MERCARA, DATED THE 21st JUNE 1929.

NOTICE.

It is here-by notified for general information that the Sub Magistrate, Mercara, will hold his court three days in the week, i. e, Monday, Tuesday and Wednesday at Virajpet from the 1st day of July 1929 and will entertain and dispose of all second class criminal cases arising within the South Coorg Taluk.

K. M. CHENGAPPA.
DISTRICT MAGISTRATE.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಉದ್ಯೋಗಸ್ಥರಿಗೆ ಟೀ ಪಾರ್ಟಿ.

ಅಯ್ಯಾ,

ನಮ್ಮ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಮಿ. ಕೆ. ಚಂಗಪ್ಪನವರು ಕಮಿಶನರ್ ಕೆಲಸಕ್ಕೆ ಹಂಗಾಮಿಯಾಗಿ ಒಂದು ತಿಂಗಳ ವರೆಗೆ ನೇಮಕವಾದದ್ದು ಸರಿಯಷ್ಟೆ ಮಡಿಕೇರಿಯಲ್ಲಿ ಅವರ ಹಿತಚಿಂತಕರು ಸೇರಿ ಈ ತಾ 18 ರಲ್ಲಿ ಒಂದು ಮೀಟಿಂಗು ಮಾಡಿ ಒಂದು ಟೀ ಪಾರ್ಟಿ ಕೊಡಲು ತೀರ್ಮಾನಿಸಿರುವರಾಗಿ ತಿಳಿಯುತ್ತೇನೆ ಇದೇ ಸಮಯದಲ್ಲಿ, ಮಿ. ಪಿ. ಬಿ ಮೇದಪ್ಪನವರಿಗೆ ಸಬ್‌ಜಡ್ಜಿ ಪದವಿ ದೊರೆತ ಸಂತೋಷಕ್ಕಾಗಿ ಸಹ ಅವರನ್ನು ಕೂಡಿಸಿಕೊಂಡು ಟೀ ಪಾರ್ಟಿ ಕೊಡಲು ಏರ್ಪಾಡು ಮಾಡಿರುವರಂತೆ

ಮಿ. ಚಂಗಪ್ಪನವರು ಕೊಡಗಿನಲ್ಲಿ ಪ್ರಥಮವಾಗಿ ಈ ಜೋಡಿ ಹುದ್ದೆಯನ್ನು ನೋಡುವುದರಿಂದ ಅವರಿಗೇನೋ ಕೊಡತಕ್ಕದು ಇದರ ಮೊದಲು ಮಿ. ಎ. ಬಿ. ತಿಮ್ಮಯ್ಯನವರು ಸಬ್‌ಜಡ್ಜಿಯಾಗಿ ನೇಮಿಸಲ್ಪಟ್ಟಾಗ ಇ ಥಂದ್ದೇನೂ ಅವರಿಗೆ ನಡೆಯಲಿಲ್ಲ ಮಿ. ಪಿ. ಬಿ ಮೇದಪ್ಪನವರಿಗೂ ಕೊಡುವುದು ನ್ಯಾಯವೆಂದು ನಂಬೋಣ. ಆದರೆ ಈಗ ತಾನೆ ಹೊಸ ರಾವ್‌ಬಹದೂರ್ ಪದವಿ ದೊರೆತ ಮಿ. ಕೋಡಿಮಣಿಯಂಡ ಸುಬ್ಬಯ್ಯನವರಿಗೆ ಇಂಥಾ ಸಂಭ್ರಮವನ್ನೇಕೆ ಮಾಡುವುದಿಲ್ಲ. ಅವರು ಇಂಥಾದ್ದಕ್ಕೆ ಅರ್ಹರಲ್ಲವೇ ? ಈ ಎರಡು ಜನರಿಗೆ ಕೊಡುವಾಗ ಅವರನ್ನು ಜೊತೆಗೆ ಏತಕ್ಕಾಗಿ ಸೇರಿಸಲಿಲ್ಲ ಮಡಿಕೇರಿ ಕೊಡವರಲ್ಲಿ ಈ ರೀತಿ ಪಕ್ಷಪಾತ ನಡೆಯಲಿಕ್ಕಿಲ್ಲವಾಗಿ ಭಾವಿಸುತ್ತೇನೆ ಇನ್ನಾದರೂ ತಡವೆಂದೆಣಿಸದೆ ಅವರನ್ನೂ ಸಹ ಸೇರಿಸಿ, ಟೀ ಪಾರ್ಟಿ ಕೊಡಬೇಕೆಂದು ಕೋರುತ್ತೇನೆ.

ಕೊಡಗು.

ಗ್ರಾಮ ಪಂಚಾಯಿತಿ ಮತ್ತು ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟುಗಳು

ಅಯ್ಯಾ,

ನಮ್ಮ ಕೊಡಗು ದೇಶಕ್ಕೆ ಕೌನ್ಸಿಲು ಬಂದ ಪ್ರಥಮ ಮೂರು ವರ್ಷದೊಳಗೆ ಕೌನ್ಸಿಲಿನಲ್ಲಿ ಎರಡು ಆಕ್ಟುಗಳು ಮಂಜೂರಾದವು (1) ಗ್ರಾಮ ಪಂಚಾಯಿತಿ ಆಕ್ಟು (2) ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟು. ಗ್ರಾಮ ಪಂಚಾಯಿತಿ ವಿಷಯದಲ್ಲಿ ಇದುವರೆಗೆ ಸರಕಾರದವರು ಆಕ್ಟನ್ನು ರಿಕಾರ್ಡು ಕೋಣೆಯಲ್ಲಿರಿಸಿ ಸುಮ್ಮನೆ ಕುಳಿತಿರಲು ಕಾರಣವೇನೆಂಬುದು ತಿಳಿಯುವುದಿಲ್ಲ ಕೊಡಗು ದೇಶದ ಅನೇಕ ಗ್ರಾಮಗಳು ಇದನ್ನು ನಡೆಸಲಿಕ್ಕೆ ತಯಾರಾಗಿವೆಯೆಂಬುದನ್ನು ತಿಳಿಯಲಿಲ್ಲವೇ? ಸರಕಾರಕ್ಕೆ ಇದನ್ನು ಜಾರಿಗೆ ತರಲು ಇಷ್ಟವಿಲ್ಲದ ಮೇಲೆ ಇಂಥಾದ್ದನ್ನು ಕೌನ್ಸಿಲಿಗೆ ಮಸೂದೆ ರೂಪದಲ್ಲಿ ಏತಕ್ಕಾಗಿ ತಂದರೆಂಬುದಕ್ಕೆ ಜವಾಬು ಕೊಡಬೇಕಾಗಿದೆ ಈಗಾಗಲೇ ಮದ್ರಾಸು, ಮೈಸೂರು ಪ್ರಾಂತ್ಯಗಳಲ್ಲಿ ಗ್ರಾಮ ಪಂಚಾಯಿತಿಯು ಜಾರಿಗೆ ಬಂದು ಕೆಲಸ ಮಾಡುತ್ತಿದೆ ನಮ್ಮ ಸರಕಾರಕ್ಕೆ ಇದು ತಿಳಿಯಲಿಲ್ಲವೋ? ಹಾಗಿದ್ದರೆ ಅವರ ಗೋಚರಕ್ಕೆ ಈ ಆಕ್ಟು ಸ್ವಪ್ನದಲ್ಲಿಯೂ ಬಾರದ್ದಕ್ಕೆ ವಿಷಾದಿಸಬೇಕಾಗಿದೆ.

ಪಂಚಾಯಿತಿ ಆಕ್ಟು ಅನಂತರ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟು ಜಾರಿಗೆ ಬಂತು. ಈ ವಿಷಯದಲ್ಲಿ ಸರಕಾರದವರು ಎಷ್ಟು ಆತುರರಾಗಿದ್ದರೆಂದು ವಾಚಕರು ಸ್ವಲ್ಪ ಮಟ್ಟಿಗೆ ತಿಳಿಯಬೇಕಾಗಿದೆ. ಸರಕಾರದವರು ಮೂರು ತಿಂಗಳೊಳಗೆ ಎರಡು ಕೌನ್ಸಿಲು ಮೀಟಿಂಗುಗಳನ್ನು ಮಾಡಿ ಈ ಆಕ್ಟನ್ನು ಜಾರಿಗೆ ತಂದೇ ಬಿಟ್ಟರು. ಇಷ್ಟು ಆತುರ ಏತಕ್ಕಾಗಿ ಮಾಡಿದರೆಂಬುದನ್ನು ಯೋಚಿಸುವ ನಮ್ಮ ಸರಕಾರದ ನೀತಿಯು ಸುಬ್ಬಾಗಿ ಐಶ್ವರ್ಯವಂತರನ್ನು ಪೋಷಿಸುವದಾಗಿದೆ ಈ ಕಾರಣದಿಂದ ಪ್ಲಾಂಟರುಗಳಿಗೆ ಮತ್ತು ಇತರ ಐಶ್ವರ್ಯವಂತರಿಗೆ ತೊಂದರೆಯಾಗುತ್ತದೆಯೆಂಬ ಭಾವನೆಯಿಂದ ಬಹಳ ತುರಿತದಲ್ಲಿ ಕೂಲೀಕಾರರ ಕ್ಷೇಮವನ್ನು ಯೋಚಿಸದೆ ಮಾಡಿಯೇ ಬಿಟ್ಟರು ಗ್ರಾಮ ಪಂಚಾಯಿತಿಯಿಂದ ರೈತರಿಗೆ ಸ್ಥಳೀಯ ಸ್ವರಾಜ್ಯದ ತತ್ವವನ್ನು ಕಲಿಯಲು, ಸ್ವಾಭಿಮಾನವನ್ನು ಹೆಚ್ಚಿಸಿ ಅಭಿವೃದ್ಧಿಗೆ ಬರಲು ಬಹಳ ಅನುಕೂಲಗಳಿವೆ ಇಂಥಾದ್ದು ನಮ್ಮ ಸರಕಾರಕ್ಕೆ ಬೇಡವಾಯಿತು. ನಮ್ಮ ಸರಕಾರದ ನೀತಿಯು ಜನರ ಹಿತವನ್ನು ಬಯಸುವದಾಗಿದ್ದರೆ ಈ ಪಂಚಾಯಿತಿ ಪದ್ಧತಿಯನ್ನು ಜಾರಿಗೆ ತಂದು ರೈತರಿಗೆ ಬಹಳ ಅನುಕೂಲಗಳನ್ನು ಕಲ್ಪಿಸುತ್ತಿದ್ದರು ಇನ್ನಾದರೂ ತಡವೆಂದೆಣಿಸದೆ ಪಂಚಾಯಿತಿ ಆಕ್ಟನ್ನು ಜಾರಿಗೆ ತರಲಿಕ್ಕೆ ಸರಕಾರದವರು ಮುಂದೆ ಬರಬೇಕೆಂದೂ, ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟು ಜಾರಿಗೆ ತರಲಿಕ್ಕೆ ಇದ್ದ ಆತುರವನ್ನೇ ಈಗಲೂ ತೋರಿಸಬೇಕೆಂದೂ ಕೇಳುವ

ಓರ್ವ

ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್

ಅಯ್ಯಾ,

'ಕೊಡಗು' ಪತ್ರಿಕೆಯ ತಾರೀಖು 21—6—24 ರ ಸಂಚಿಕೆಯಲ್ಲಿ "ಒಬ್ಬ ಮೆಂಬರು ಪ್ರಕಟಿಸಿದ ಬಾತ್ಮಿಯನ್ನು ನೋಡಿದೆನು. ಇವರು ಬಾತ್ಮಿಯ ಒಂದು ಕಡೆಯಲ್ಲಿ "ವಿದ್ಯೆಯ ವಾಸನೆ ಹೇಗೆ, ಅಫೀಮಿನ ಹಾಗೋ?" ಎಂದು ಪ್ರಶ್ನೆ ಕೇಳಿರುವರು ಇವರ ಬಾತ್ಮಿಯು ಸಹ ಅಫೀಮಿನ ಮತ್ತಿನಿಂದ ಬರೆದ ಬಾತ್ಮಿಯೆಂದೇ ತೋರುತ್ತದೆ ಇದು ಹೇಗೆಂದು ಈ ಕೆಳಗೆ ವಿವರಿಸುವೆನು

ಇವರು ವಿದ್ಯಾ ಕಮಿಟಿಯ ಪರವಾಗಿ ನಾನು ಮತ್ತು ಮುದ್ದಯ್ಯನವರು ಸಹ ವೈಸ್ ಪ್ರೆಸಿಡೆಂಟು ಮತ್ತು ಶಾಲಾ ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರ ಸಂಗಡ "ಸಂಚಾರ' ಮಾಡಿಲ್ಲವೆಂದೂ ಆದ್ದರಿಂದ ನಾವಿಬ್ಬರು ಸದರಿ ಕಮಿಟಿಯ ರಿಪೋರ್ಟು ಬರೆಯಲು ಭಾಗಿಗಳಾಗಕೂಡದೆಂದೂ ಬರೆದಿರುವರು ಆ ವಿಷಯದಲ್ಲಿ ತಾರೀಕು 21—6—24ರಲ್ಲಿ 'ಕೊಡಗು ಪತ್ರಿಕೆಯ ಸಂಪಾದಕರು ಬರೆದು ವಿಶದಪಡಿಸಿರುತ್ತಾರೆ ಅದರ ವಿಷಯ ಇನ್ನು ಹೆಚ್ಚು ಬರೆಯುವ ಪ್ರಯೋಜನವಿಲ್ಲ ಅದೂ ಅಲ್ಲದೆ ವೈಸ್ ಪ್ರೆಸಿಡೆಂಟರು ಮತ್ತು ಇನ್‌ಸ್ಪೆಕ್ಟರು ಸಹ ಕಾರ್ಯಕ್ರಮಪಟ್ಟಿಯನ್ನು ಬದಲಾಯಿಸಿದರೆಂದು ಅವರೇ ಒಪ್ಪಿಕೊಳ್ಳುತ್ತಾರೆ ಆದ್ದರಿಂದ ನಮ್ಮನ್ನು ಕೇಳದೆ ಬದಲಾಯಿಸಿದ ಕಾರ್ಯಕ್ರಮ ಪಟ್ಟಿಯನ್ನು ಬದಲಾಯಿಸಿದನಂತರ ನಮಗೆ ತಿಳಿಸಿದರ ಪ್ರಯೋಜನವೇನು? ನಾಲ್ಕು ಜನರು ಕಲಸಭೆ ಮಾಡಿ ಕಮಿಟಿಯ ಕಾರ್ಯಕ್ರಮ ಪಟ್ಟಿಯನ್ನು ಇಬ್ಬರು ಮಾತ್ರ ತಮ್ಮ ಇಚ್ಛೆಯಂತೆ ಬದಲಾಯಿಸಲು ಅವರಿಗೆ ಹಕ್ಕಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಆದ್ದರಿಂದ ನಮಗಿಬ್ಬರಿಗೂ ಉಳಿದ ಇಬ್ಬರ ಸಂಗಡ ಶಾಲೆ ನೋಡಲು ಎಡೆ ಕೊಡಬಾರದೆಂಬುದಾಗ ಮಾಡಲೆ ಇವರ ಮನಸ್ಸಿನಲ್ಲಿದ್ದಂತೆ ಕಾಣುತ್ತದೆ ನನ್ನನ್ನು ಪುತ್ತೂರಿಗೆ ಕಳುಹಿಸುವ ಆಲೋಚನೆಯಲ್ಲಿ ಕೆಲವು ಮೆಂಬರುಗಳು ಇರುವಾಗ ನನ್ನೊಡನೆ ಕಲಸ ಮಾಡುವದು ನಾಚಿಕೆಯಲ್ಲವೇ ?

ನಾನು ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟ ಸೋಮವಾರಪೇಟೆಯ ಶಾಲೆಯನ್ನು ನೋಡಿದ್ದು ರಿಪೋರ್ಟು ಬರೆದ ಮೆಂಬರುಗಳಿಗೆ ಆಶ್ಚರ್ಯ. ಆದರೆ ಅವರೂ ಸಹ ಅದೇ ದಿನ ಆ ಶಾಲೆಯನ್ನು ನೋಡಿರುತ್ತಾರೆ. ಅದು ಯಾಕೋ ತಿಳಿಯದು. ಏಕೆಂದರೆ, ವಿದ್ಯಾ ಕಮಿಟಿಯು ಹಳೆಯ ಕಟ್ಟಡಗನ್ನು ಮುರಿದು ಹೊಸ ಕಟ್ಟಡಗಳನ್ನು ಕಟ್ಟಿಸಲಿಕ್ಕೆ ಮಾತ್ರ ಏರ್ಪಾಡು ಮಾಡಲ್ಪಟ್ಟದ್ದಲ್ಲ. ಅಥವಾ ಶಾಲೆಗಳಿಗೆ ಚಂದಾ ಎತ್ತುವುದಕ್ಕೂ ಅಲ್ಲ. ಈಗಿನ ವಿದ್ಯಾಭ್ಯಾಸದ ಕುಂದು ಕೊರತೆಗಳನ್ನು ಕಂಡು ಹಿಡಿದು ಹೊಸ ಕ್ರಮಗಳನ್ನು ಏರ್ಪಡಿಸಲಿಕ್ಕೂ, ಬೋರ್ಡಿಗೆ ಸೇರದ ಶಾಲೆಗಳಿಗೂ, ಬೋರ್ಡಿನ ಶಾಲೆಗಳಿಗೂ ಇರುವ ತಾರತಮ್ಯಗಳನ್ನು ಕಂಡು ಹಿಡಿಯಲಿಕ್ಕೂ, ಮಕ್ಕಳಿಗೆ ಯಾವ ತರಗತಿಯಲ್ಲಿ ಇಂಗ್ಲಿಷು ವಿದ್ಯಾಭ್ಯಾಸವನ್ನು ಪ್ರಾರಂಭ ಮಾಡಬಹುದೆಂದೂ, ಮತ್ತು ಗ್ರಾಮ ಪಂಚಾಯತಿಗೆ ಎಷ್ಟು ಜವಾಬ್ದಾರಿಕ ಕೊಡಬಹುದೆಂದೂ ಇನ್ನೂ ಅನೇಕ ವಿಷಯಗಳನ್ನು ಆಲೋಚಿಸಲಿಕ್ಕೂ ಸಹ ನಿಯಮಿತವಾದದ್ದು ಬರೀ ಶಾಲೆಗಳು ಎಲ್ಲೆಲ್ಲಿ ಇರಬೇಕೆಂಬ ವಿಷಯವನ್ನು ಆಲೋಚಿಸುವದಾದರೆ, ಈಗಿನ ಇನ್‌ಸ್ಪೆಕ್ಟರುಗಳಿಗಿಂತ ಹೆಚ್ಚು ಇದ್ದ ಸಬ್ ಇನ್‌ಸ್ಪೆಕ್ಟರು ಮತ್ತು ಪಟ್ಟೆದಾರಿಗಳವರು ಸಹ ತಯಾರಿಸಿದ ಪಟ್ಟಿಯನ್ನು ಅನುಸರಿಸಿ ರಿಪೋರ್ಟು ಬರೆಯ ಬಹುದಿತ್ತಲ್ಲವೇ? ಗ್ರಾಮ ಪಂಚಾಯತರು ಶಾಲೆಗಳ ಆಡಳಿತದಲ್ಲಿ ಎಷ್ಟರ ಮಟ್ಟಿಗೆ ಭಾಗಿಗಳಾಗಬೇಕೆಂದ ಪದೇ ಪದೇ ಪ್ರಶ್ನೆ ಕೇಳುತ್ತಿದ್ದ ಪ್ರತಿನಿಧಿಗಳಿಗೆ ಈ 'ಕಮಿಟಿ' ರಿಪೋರ್ಟು ಯಾವ ಜವಾಬು ಕೊಟ್ಟಿದೆಯೆಂದು ದೇಶದವರು ಪರೀಕ್ಷಿಸಲಿ. ಇದೆಲ್ಲವನ್ನು ಮನಸ್ಸಿಗೆ ತೆಗೆದುಕೊಂಡು ನಾನು ಮಾತಾಡಿದ್ದಕ್ಕೆ 'ಒಬ್ಬ ಮೆಂಬರ"ಗೆ ವ್ಯಸನವಾಗಿದೆ.

ನಾವು ಐದು ಜನರು ಮೀಟಿಂಗು ಬಿಟ್ಟು ಹೋದುದರಿಂದ ನಾವು ತಿಳಿದ ಮಟ್ಟಿಗೆ ದೇಶಸೇವೆ ಮಾಡಿರುತ್ತೇವೆಂದು ನಾಚಿದ್ದೇವೆ ಬೋರ್ಡಿನ ಹಣವನ್ನು ವೆಚ್ಚಮಾಡಲು ದಾರಿ ಇಲ್ಲದೆ ಈಗ ಸೆಂಟ್ರಲ್ ಬ್ಯಾಂಕಿನಲ್ಲಾದರೂ ಡಿಪಾಜಿಟ್ಟು ಇಡಬೇಕೆಂದು ವೈಸ್ ಪ್ರೆಸಿಡೆಂಟರು ಪ್ರಯತ್ನ ಮಾಡುತ್ತಿರುವಾಗ 'We made the village Hampdens who bearded us understand that the District Board was as bare as mother Hubbard's cup board" (ನಮ್ಮನ್ನು ಮುತ್ತಿಗೆ ಹಾಕಿದ ಗ್ರಾಮಸ್ಥರಿಗೆ ಡಿಸ್ಟ್ರಿಕ್ಟ್ ಬೋರ್ಡು ತಾಯಿ ಹಬ್ಬಾರ್ಡಳ ಕಪಾಟಿನ ಹಾಗೆ ಬರಿದಾಗಿದೆಯೆಂದು ಸ್ಪಷ್ಟ ಪಡಿಸಿದೆವು,) ಅಂದರೆ ಬೋರ್ಡಿನಲ್ಲಿ ಹಣವಿಲ್ಲವೆಂದು ಬರೆದ ವಿದ್ಯಾ ಕಮಿಟಿಯ ರಿಪೋರ್ಟು ಸುಳ್ಳಲ್ಲವೇ ? ಈ ರಿಪೋರ್ಟನ್ನು ಬರೆದ ಬಳಿಕ ದೈವದಿಂದ ಇನ್ನೂ ಚಂದಾ ಎತ್ತಲು ಆಸ್ಪದ ಕೊಡಬೇಕಿತ್ತೇ ?

ಓಟರುಗಳು ವಿದ್ಯಾಹೀನರಾಗಿದ್ದರೆ ಓಟು ಕಸಕೊಳ್ಳುವದು ಸುಲಭವೆಂದು ಬರೆದಿರುವರು. ಇದೇನೋ ನಿಜವಿರುವುದು ಜನರು ವಿದ್ಯಾಹೀನರಾಗಿದ್ದರೆ ಕುರುಡು ವಿದ್ಯಾವಂತರಿಗೆ ಓಟು ಕಸಕೊಳ್ಳಲು ಸುಲಭ. ವಿದ್ಯಾಹೀನರೊಡನೆ ವರ್ತಿಸುವುದು ವಿದ್ಯಾವಂತರಿಗೆ ಎಷ್ಟು ಅಪಾಯಕರವೆಂದು 'ಒಬ್ಬ ಮೆಂಬರು' ಬರೆದ ಬಾತ್ಮಿಯಿಂದಲೇ ತಿಳಿಯುವುದಿಲ್ಲವೇ !

'Inglorious educational Philosophers' ಎಂಬ ಸ್ಪಷ್ಟವಾದ ಗದ್ಯದ ಅರ್ಥಕ್ಕೆ ಬೇರೆ ಅರ್ಥವನ್ನು ಕೊಡಲು 'ಗ್ರೇ' ಕವಿಯನ್ನು ಎಳೆಯಬೇಕಾಯಿತಲ್ಲವೇ ? ಇದೀಗ (Devil quoting scriptures) ಭೂತವು ಶಾಸ್ತ್ರವನ್ನು ಉಚ್ಚರಿಸುವುದೆಂಬುದಕ್ಕೆ ದೃಷ್ಟಾಂತರ ಈ ಮೆಂಬರು ವಿದ್ವಾಂಸರೇ ಸರಿ. ಗದ್ಯರೂಪವಾಗಿ 'Inglorious' ಎಂಬ ಶಬ್ದವನ್ನು ಉಪಯೋಗಿಸುವಾಗ ಅದಕ್ಕೆ ಶಾಲಾ ನಿಘಂಟಿನಲ್ಲಿರುವ ಅರ್ಥವಲ್ಲದೆ 'ಗ್ರೇ' ಕವಿಯ ಅರ್ಥವು ಎಲ್ಲಿಂದ ಬಂದೀತು ? ಒಂದು ವೇಳೆ ಅದು 'ಗ್ರೇ' ಕವಿಯು ಬರೆದದ್ದೆಂದು ತೋರಿಸಲಿಕ್ಕೆ ಅದನ್ನು ಪ್ರತ್ಯೇಕ ಈ " " ಗುರುತಿನಿಂದಾದರೂ ಬರೆಯಬೇಡವೇ ? ಇಲ್ಲದಿದ್ದರೆ ಅದನ್ನು ಕಳವು (Plagiarism) ಮಾಡಿದಂತಾಗುವದಿಲ್ಲವೇ ? ವಿದ್ಯಾ ಇಲಾಖೆಯವರೇ ಹೀಗೆ ಹೇಳಿದರೆ ಇನ್ನೇನು ಉಳಿಯಿತು ! ಈ ಕುಂದುಕವನ್ನು ನಾನು ತೋರಿಸಿದಕ್ಕೆ ನಾನು ಪಡೆದ ಡಿಗ್ರಿಗಳ ಮೇಲೆ ಇವರಿಗೆ ಕಣ್ಣು. ಈ ಮೆಂಬರು ಡಿಗ್ರಿ ಕೊಡುವವರಾಗಿದ್ದರೆ ನನಗೆ ಡಿಗ್ರಿ ದೊರೆಯುತ್ತಿದ್ದಿಲ್ಲ ಬಹುಶ ನಾನು ಎಲ್ಲಾ ಪರೀಕ್ಷೆಗಳಲ್ಲಿ ಮೊದಲನೇ ಸಾರಿಯೇ ತೇರ್ಗಡೆ ಹೊಂದಿದ್ದರಿಂದ ಒಂದೊಂದು ಪರೀಕ್ಷೆಗೆ ನಾಲ್ಕೈದು ಸಾರಿ ಕುಳಿತವರಷ್ಟು ನನಗೆ ಅನುಭವ ಸಾಲದೆ ಇರಲಿಕ್ಕೂ ಸಾಕು

ಈ ರಿಪೋರ್ಟಿಗೆ ವಿದ್ಯಾವಾಸನೆ ಇಲ್ಲವೆಂದು ನಾನು ಹೇಳಿದ್ದು ಇವರಿಗೆ ಬಹಳ ಅಸಮಾಧಾನ ಉಂಟಾಗಿದೆ ಆದ್ದರಿಂದ 'ವಿದ್ಯಾವಾಸನೆಯು ಹೇಗೆ, ಅಫೀಮಿನ ಹಾಗೋ'? ಎಂದು ಕೇಳಿರುವರು ಇವರ ತಿಳುವಳಿಕೆಗೆ ವಿದ್ಯಾವಾಸನೆ ಹೇಗೆಂಬುದನ್ನು ಸ್ವಲ್ಪ ಮಟ್ಟಿಗೆ ವಿವರಿಸುವೆನು. ಅದು ಹೇಗೆಂದರೆ— ಯಾವ ಗಂಧವು ಮನುಷ್ಯನ ಮದ, ಮಾತ್ಸರ್ಯ, ಅಸೂಯೆ, ಪಂಗಡ ಮತ್ತು ಜಾತಿಭೇದ ಇವುಗಳನ್ನೆಲ್ಲಾ ಶರೀರದಿಂದ ಅಟ್ಟಿ, ಶರೀರವನ್ನು ಶುದ್ಧಿಮಾಡಿ ಎಲ್ಲಾ ಜನರ ಮೇಲೂ ಪ್ರೀತಿಯನ್ನು ಹುಟ್ಟಿಸಿ ಸಹೋದರ ಸಹೋದರಿಯರೆಂದು ತಿಳಕೊಳ್ಳುವ ಮನಸ್ಸನ್ನು ಹುಟ್ಟಿಸುವುದೋ ಅದಕ್ಕೆ ವಿದ್ಯಾವಾಸನೆಯೆನ್ನಬಹುದು ವಿದ್ಯಾವಾಸನೆ ಇಲ್ಲದಿದ್ದರೆ ಮನುಷ್ಯನು ಮದ, ಮಾತ್ಸರ್ಯಗಳಿಂದಲೂ ಪಂಗಡ ಮತ್ತು ಜಾತಿ ಭೇದಗಳಿಂದಲೂ ಪೀಡಿತನಾಗುವದಲ್ಲದೆ ಅವನಿಗೆ ಭೂಮಿಯೆಲ್ಲಾ ಅಫೀಮಿನ ವಾಸನೆಯಿಂದಲೂ, ಸಾರಾಯಿಯ ವಾಸನೆಯಿಂದಲೂ ತುಂಬಿಕೊಂಡಂತೆ ತೋರುವದು.

ಈ 'ಒಬ್ಬ ಮೆಂಬರು' ನಾನು ಈ ದೇಶದಿಂದ ಪುತ್ತೂರಿಗೆ ಹೋಗಬಹುದೆಂದು ಸೂಚಿಸುತ್ತಾರೆ ಒಬ್ಬನಿಗೆ ತಾನು ಹುಟ್ಟಿ ಬೆಳೆದ ದೇಶವು ಎಷ್ಟರ ಮಟ್ಟಿಗೆ ಪ್ರೀತಿಗೆ ಪಾತ್ರವಾದದ್ದು ಎಂದು ಇವರಿಗೆ ತಿಳಿಯದೆ ಇವರು ಹೀಗೆ ಬರೆದದ್ದಲ್ಲ. ನಾನು ಒಬ್ಬ ಗೌಡನಾಗಿ ಲಾಯರು ಕೆಲಸಕ್ಕೆ ಬಂದದ್ದು ಇವರಿಗೆ ವ್ಯಸನಕರ ಆದ್ದರಿಂದ ನನ್ನನ್ನು ಇಲ್ಲಿ ಹುಟ್ಟಲೇ ಇಲ್ಲವೆಂದಾದರೂ ಗ್ರಹಿಸಿ ಸ್ವಲ್ಪ ಸಂತೋಷಪಟ್ಟುಕೊಳ್ಳುವ ಎಂಬ ಇರಾದೆಯಿಂದ ಈ ರೀತಿ ಬರೆಯುತ್ತಿರುವರು ನನ್ನನ್ನು ನನ್ನ ಹುಟ್ಟು ದೇಶವಾದ ಕೊಡಗನ್ನು ಬಿಟ್ಟು ಪುತ್ತೂರಿಗೆ ಕಳುಹಿಸುವುದು ಇವರಿಗೆ ಸಾಧ್ಯವಿಲ್ಲ ಆದರೆ ಪುತ್ತೂರಿನವರಾಗಲೀ, ಹಿಂದೂದೇಶದ ಬೇರೆ ಯಾವ ಕಡೆಯವರಾಗಲೀ ನಾನು ಲಾಯರಾಗಿಯೇ ಜೀವಿಸಬಹುದರಲ್ಲಿ ಸಂಶಯವಿಲ್ಲ ಕಾಫಿತೋಟದಲ್ಲಿ ರೈಟರು ಕೆಲಸಕ್ಕೇನಾದರೂ ನಾನು ಹೋಗುವೆನೋ, ಎಂದಿಗೂ ಇಲ್ಲವಲ್ಲ

ಅನೇಕ ಕಡೆಗಳಲ್ಲಿ ಇವರು ನನ್ನನ್ನು ಕುರಿತು 'ಲಾಯರುಗಳ ಪಕಾಲತ್ತು, ಲಾಯರುಗಳ ಗರ್ಜನೆ, ಲಾಯರು ಹೇಳುವರು' ಎಂದು ಬರೆದಿರುತ್ತಾರೆ. ಇವರು ನನ್ನ ಲಾಯರುತನಕ್ಕೆ ಇಷ್ಟು ಮರ್ಯಾದೆ ಕೊಟ್ಟದ್ದಕ್ಕೆ ಇವರಿಗೆ ನನ್ನ ವಂದನೆ ಆದರೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ನಾನು ಒರ್ವ ಮೆಂಬರಲ್ಲದೆ ಲಾಯರಾಗಿ ಕುಳಿತುಕೊಳ್ಳುವದಿಲ್ಲವೆಂಬದು ಇವರಿಗೆ ತಿಳಿಯದು ಬಹುಶ ಯಾವದೋ ಕೇಸುಗಳಲ್ಲಿ ಇವರಿಗೆ ಲಾಯರುಗಳ ಕಾಟ ಬಹಳ ಜೋರಾದ್ದರಿಂದ ಇವರು ಹೀಗೆ ಬರೆದಿರಬಹುದು.

ಇವೆಲ್ಲಕ್ಕಿಂತಲೂ ಪಂಗಡ ಭೇದಗಳನ್ನು ಹುಟ್ಟಿಸುವ ಇವರ ಸೂಚನೆಗಳಿಗೆ ಎಲ್ಲರೂ ವ್ಯಸನಪಡತಕ್ಕದ್ದು. ಇವರಿಗೆ ನಾನು ಮೀಟಿಂಗಿನಿಂದ ಹೊರಗೆ ನಡೆದದ್ದು ಆಶ್ಚರ್ಯವಲ್ಲ ಯಾಕೆಂದರೆ ನಾನು ಪುತ್ತೂರಿಗೆ ಹೋಗುವವನಾತ ಆದರೆ ರಾಮಶೆಟ್ಟಿಯವರು ಮತ್ತು ಮುದ್ದಮ್ಮಯ್ಯನವರು ಸಹ ದೇಶ ಬಿಟ್ಟು ಹೋಗುವವರೇ ? ಅವರು ಮೀಟಿಂಗು ಬಿಟ್ಟು ಹೋದದ್ದು ಇವರಿಗೆ ಆಶ್ಚರ್ಯವಿಲ್ಲ ಇವರಿಗೆ ಐನಂಡ ಮಾದಪ್ಪನವರು ಮತ್ತು ಅಜ್ಜಮಾಡ ಮಾದಪ್ಪನವರು ಹೋದದ್ದು ಮಾತ್ರ ಆಶ್ಚರ್ಯ. ಇದು ಕೇವಲ ಜಾತಿವಾದ ಮಾತಾದ ವದಲ್ಲವೇ ? ಇವರಿಗೆ ಕೊಡಗೇತರರನ್ನು ಕಂಡರೆ ಅಷ್ಟು ಪ್ರೀತಿ ! ಆದರಿಂದಲೇ ಅವರನ್ನು ಬಿಟ್ಟುಬಿಟ್ಟಿರುತ್ತಾರೆ. ಆದರೆ ಇವರು ಗೋಳಾಡಿದಂತೆ ಐನಂಡ ಮಾದಪ್ಪನವರೂ, ಅಜ್ಜಮಾಡ ಮಾದಪ್ಪನವರೂ ಗೋಳಾಡುವದಿಲ್ಲ ಅವರು ತಾವು ಮಾಡಿದ ಕೆಲಸದಲ್ಲಿ ಪೂರ್ಣ ತೃಪ್ತರಾಗಿರುತ್ತಾರೆ. ಅವರಿಗೆ ಜಾತಿ ಭೇದವಿಲ್ಲ ತಮಗೆ ಸರಿಕಾಣದ್ದರಲ್ಲಿ ತಾವು ಹೇಗೆ ನಡೆಸಬೇಕೋ ಹಾಗೆ ಮಾಡುತ್ತಾರೆ ಅವರು 'ಒಬ್ಬ ಮೆಂಬರನ' ಕುಹಕಯುಕ್ತಿಯಲ್ಲಿ ಪಾಲು ತೆಗೆದುಕೊಂಡಿಲ್ಲ. ಪಾರ್ಟಿ ತತ್ವವು ಇವರಿಗೆ ತಿಳಿಯದು. ಪಾರ್ಟಿ ತತ್ವದಲ್ಲಿ ದೋಷವಿಲ್ಲ. ಆದರೆ ಇವರು ಹಿಂಬಾಲಿಸುವ ಪಂಗಡ ತತ್ವವನ್ನು ಬಿಡದಿದ್ದರೆ ದೇಶದಲ್ಲಿ ಸುಖವಿಲ್ಲ ಇವರು ಸತ್ಯ ಹೇಳುವದನ್ನು ಪರರಿಗೆ ಬೋಧಿಸುವ ಮೊದಲು ತಾವೇ ಕಲಿತುಕೊಂಡು ಪಂಗಡ ಭೇದವನ್ನು ಬಿಡುವದು ಉತ್ತಮವಲ್ಲವೇ ?

ಯಸ್ ಮಂದಪ್ಪ.

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ

ಮಾತ್ರೆಗಳು.

ಧಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನರಹಿತವಾದುದು. ಒಂದು ಡಬ್ಬಿಯ ಕ್ರಯ ೧-೦-೦

52-45 ಮದನಮಂಜರಿ ಫಾರ್ಮಸಿ,

1/94 ಚೀನಾ ಬಜಾರ್, ಮದ್ರಾಸ್.

ಹೊಸ ಪುಸ್ತಕ ಕ್ರಯ ೧-೦-೦

ಮೊದಲನೆಯ ಮುದ್ರಣ

ಸ್ತ್ರೀಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಋತುದೋಷ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ನೂತನ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೂಡಿ. ಕ್ರಯ ಪುಸ್ತಕ ೧ಕ್ಕೆ ರೂ. ೧-೦-೦.

ಎಸ್. ವಿ. ಗೋಪಾಲ್ ಬುಕ್ ಡಿಪೋ,

53-37 37. ತಿರುಪಳ್ಳಿಬೀದಿ, ಮದರಾಸ್.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಎಂಬುದೇ

ಎಲ್ಲಾ ಬೆಳೆಗಳಿಗೂ ಯೋಗ್ಯವಾದ ಸಾರಜನಕ ಗೊಬ್ಬರವು, ಪ್ರಪಂಚದಲ್ಲೆಲ್ಲಾ ಇದೇ ಸಸ್ಯಾದಿಗಳನ್ನು ಒಳ್ಳೇಯದಾಗಿ ಬೆಳೆಸುವ ಮತ್ತು ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಫಸಲನ್ನು ಕೊಡುವ ಸಾಧನವೆಂದು ಖ್ಯಾತಿಯನ್ನು ಪಡೆದಿರುತ್ತದೆ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಗಿಡಗಳ ಬೇರುಗಳನ್ನು ಹೆಚ್ಚು ಆಳದ ವರೆಗೂ ಪಸರಿಸುವಂತೆ ಮಾಡುವದರಿಂದ ಮಳೆ ಕಡಿಮೆಯಾದಾಗ್ಯೂ ಗಿಡಗಳಿಗೆ ಹೆಚ್ಚಿನ ತೊಂದರೆಯಾಗಲಾರದು.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗಗಳಿಗೆ ಥಟ್ಟನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಆಫ್ ಸೋಡಾದಲ್ಲಿ ಬೆಳೆಗಳನ್ನೂ ಮಣ್ಣನ್ನೂ ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಏಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪ್ಯಾರಿ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಲಿನ ಚೀಲ 1ಕ್ಕೆ ರೂಪಾಯಿ 6-8-0ರಂತೆ ಸರಬರಾಜು ಮಾಡುವವರಲ್ಲದೆ, ಮಡಿಕೇರಿ, ವೀರಾಜಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 7-8-0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ಧರ್ಮಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ 469, ಕಲ್ಕತ್ತಾ.

(2) ಮಿಸ್ಟರ್ ಎಂ. ಎಂ. ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24-6

Arms, Ammunition and Shooting Requisites!!!



Current Illustrated Catalogue Free on Application!

D. B. B. L. Rifles	Rs.	120	to	Rs.	2750
S. B. B. L.	„	35	to	„	950.
D. B. B. L. Guns	„	50	to	„	1350
S. B. B. L.	„	35	to	„	275.
D. B. M. L.	„	45	to	„	135
S. B. M. L.	„	30	to	„	80
B. L. Revolvers	„	35	to	„	350
Automatic Pistols	„	30	to	„	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisite® at the most competitive rates.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24-16 210 Abdul Rehman Street, BOMBAY.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

'ದಿಲ್ ಬಹರ್ ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ 1ಕ್ಕೆ			50	8	0
"ಸಿದ್ಧಪ್ಪಾಸ್ ಫ್ಲ್ಯೂಟ್"	„	„	42	8	0
ಶಕುಂತಲಾ	„	„	40	0	0
ಮೋಹನ್	„	„	37	8	0
ಮೋಸ್ಟೀಂ	„	„	35	0	0
ಮಹಾರಾಜಾ	„	„	32	8	0
ಕೊಹಿನೂರು	„	„	29	8	0
ಡೈಮಂಡ್	„	„	27	8	0
ದಿಲ್ ಖುಷ್	„	„	25	0	0
"ದಿಲ್‌ಬಹರ್ ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1ಕ್ಕೆ			85	0	0
ಸ್ಪೆಷಲ್	„	„	56	0	0
ಮೋಹನ್	„	„	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಳ್ಳ ಖಾತ್ರಿಯೂ ಬಂದೋಬಸ್ತೂ ಆದ ಫೌಂಟನ್ ಪೆನ್‌ಗಳು.

ವರ್ಲ್ಡ್ ವಂಡರ್ ಫೌಂಟನ್ ಪೆನ್	1ಕ್ಕೆ	3	0	0
„ ಬಿಗ್‌ಬ್ಯಾರಲ್ „	„	3	2	0
„ ಸ್ಕ್ರೂಕ್ಯಾಪ್ „	„	3	8	0
„ ಮೋಟಲ್ ಕಲರ್ „	„	3	14	0
„ ಮೋಟಲ್ ಸ್ಕ್ರೂಕ್ಯಾಪ್ „	„	4	4	0
„ ಬ್ರೌನ್‌ಕಲರ್ ಸೆಲ್ಫ್‌ಫಿಲಿಂಗ್ ಪೆ „	„	5	8	0
„ ಸೇಫ್ಟಿ ಪೆನ್ „	„	6	8	0
„ ಲೇಡೀಸ್ ಸೈಜಿನ ಮೋಟಲ್ ಕಲರ್ ಪೆನ್	„	4	8	0
ಬ್ಲಾಕ್‌ಬರ್ಡ್ ಪೆ 1ಕ್ಕೆ 3 8 0 ಮತ್ತು		3	12	0
ಸ್ವಾನ್ ಪೆನ್ „ 6 8 0 „		7	0	0
ವಾಟರ್‌ಮೆ ಐಡಿಯಲ್ 1ಕ್ಕೆ 8 0 0 „		8	8	0
„ ಸೆಲ್ಫ್ ಫಿಲ್ಲಿಂಗ್ ಯಾ ಸೇಫ್ಟಿ ಪೆ	1ಕ್ಕೆ	12	0	0
ಬಿಗ್‌ಬ್ಯಾರಲ್ ಹಾರ್ಡ್ ವೇರ್ „	„	8	0	0
„ ನೆವ್ಸ್ಟೈಲ್ ಪೆನ್	1ಕ್ಕೆ	17	0	0

ಖಾತ್ರಿಯೂ ಬಂದೋಬಸ್ತೂ ಆದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು	1ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಅಲಾರಂ ಟೈಂಪೀಸು	„	3	12	0
ಅನ್‌ಸೋನಿಯಾ 'ಬಿ' ಟೈಂಪೀಸು	„	5	13	0
„ ಅಲಾರಂ „	„	5	6	0
ಬಿಗ್‌ಬೆನ್ „ „	„	9	6	0
„ ತಿಲ್ಯುಕ್ಸ್ ಸ್ಟ್ರೈಕಿಸುವ ಅಲಾರಂ ಟೈಂಪೀಸು	„	13	5	0
ಘಂಟೆ ತೋರಿಸಿ ಅಲಾರಂ ಭಾರಿಸುವ ಕ್ಯಾರೇಜ್ ಕ್ಲಾಕ್	„	7	2	0
„ ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್	1ಕ್ಕೆ	8	10	0
„ ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಭಾರಿಸುವ ಕ್ಯಾರೇಜ್ ಕ್ಲಾಕ್	1ಕ್ಕೆ	9	12	0
ಘಂಟೆ ತೋರಿಸಿ ಇಪ್ಪತ್ತು ನಿಮಿಷಗಳ ಕಾಲ ಸಂಗೀತ ವಾಗುವಂತೆಗಾನವಾಡುವ ಕ್ಯಾರೇಜ್ ಕ್ಲಾಕ್	1ಕ್ಕೆ	12	0	0

ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿದ್ದಪ್ಪ, ಅಂಡ್ ಬ್ರದರ್ಸ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

		ರೂ
ಸೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	19 240
ಒಟ್ಟು ಒಂದು ಠೇವಣಾತಿ	—	1,83,070

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕರ್‍ಗೊಂಡಾವರ್ತಿ ಕೊಳ ಸರ್ಟಿಫಿ ಬಿಸಿಸ್ತಾರವರು ಲೆಕ್ಕ ಆಡಿ ಮೂಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಕೋದಂಡ ಅಪ್ಪಯ್ಯನವರು,
ರಾವ್ ಬಹದ್ದೂರ್

ಟ್ರೆಜರರ್,
ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯಸ್. ವೆಂಕಟಸ್ವಯ್ಯನವರು, ಬಿ.ಎ, ಬಿ.ಎಲ್.

ತಾರೀಖು 1–5–1929

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜಂಟರುಗಳಿಗೆ ಏಜಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ವಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮ. ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮ ಕೀಕಿರ ಅಣ್ಣಯ್ಯನವರು.

ಸಬ್ ಏಜಂಟರುಗಳು.

ವೀರರಾಜಪೇಟೆ—ಮ. ಕಾನಡೀರಿರ ಸಂಜಪ್ಪನವರು, ಮತ್ತು ಮ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ)
ಮೂರ್ನಾಡು—ಮಡಯಂಡ ದೇವಯ್ಯನವರು,
ಶ್ರೀಮಂಗಲನಾಡ—ಮ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮ. ಟಿ. ಆರ್ ರಾಮಯ್ಯನವರು,
ಪೊನ್ನಂಪೇಟೆ—ಮ. ಒಮ್ಮಡ ಮಾದಪ್ಪನವರು,
ಅಮ್ಮತ್ತಿ–ಸಿದ್ದಾಪುರ—ಮ. ಬಸಂಡ ಮಾದಪ್ಪನವರು,
ಕನ್ನಂಪೇಟೆನಾಡ—ಸಿ. ಪಿ. ಜಿ ಮುದ್ದವ್ವಯ್ಯನವರು,
ಬಿದಿಕೇರಿ & ತಿತಿಮತ್ತಿ—ಮ ಜಿ ಮಾಚಯ್ಯನವರು,

ಸೂಚನೆ —ಪ್ರಿಂಟ್ ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ನಾನಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ



12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART.
321 Abdul Rehman Street.

ಕಟುಕಕ್ಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಚಳಿ ಜ್ವರ ದಿನಾ ಬರುವ ಜ್ವರ 3–4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ... ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0 3ಕ್ಕೆ ರೂ 4–0–0 6ಕ್ಕೆ ರೂ 7–8–0 12ಕ್ಕೆ ರೂ 11

ಚಂದನಾಸವ—ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ತಡೆಯಾಗುವುದು, ಮೂತ್ರಕೋಶದ ಉರಿ, ... ಮೂತ್ರನಾಳದ ... ನೋಯುವಾಗ ಉರಿಯುವುದು. ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕಾಗದೆ ... ದೇಹದಲ್ಲಿ ... ಮೂತ್ರನಾಳದಲ್ಲಿ ... ಪರಮ ಔಷಧಿ ಬೆಲೆ ಬಾಟ್ಲಿ 1 3 6ಕ್ಕೆ ರೂ 1– –0, 3–8–0 6–12–0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 1 ಡಜನಿಗೆ 3–8–0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಶಿರಿಯಿಂದ ಕೀವು ಸೋರುವುದು ಶಿವುಡುತನ ಕಣ್ಣು ನೋವು ಅಪಸ್ಮಾರ ನಿದ್ರೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2–10–0. ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5–8–0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ.

52–37

9. ಮಂಗಳೂರು.

ಸ್ಥಾಪನೆ–1871.

ಹೆಡ್ ಆಫೀಸು–ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವ್ಯಾಪಾರದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು { 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ–ರೂ. 25.
1000 „ ಎಂಡೌಮೆಂಟ್ „ „ –ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.
ಪುನಹ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು
ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1. ಸೌತ್ ಪರೇಡ್, ಬೆಂಗಳೂರು.

52–26

ಯಲ್. ಆರ್. ಕೃಷ್ಣಸಾಮಯ್ಯರ್.
ಬ್ರಾಂಚ್ ಸೆಕ್ರೆಟರಿ.

ದಯವಿಟ್ಟು ಗಮನಿಸಿರಿ!

ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಗಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ ನಮ್ಮಲ್ಲಿ 8 ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.



24–6

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಎಲ್ಲಾ ಪಚನಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು —ಕ್ರಯ ಡಬ್ಬಿ 1ಕ್ಕೆ 2–8–0, ಮೂರು ಡಬ್ಬಿಗಳಿಗೆ ರೂ 7–0–0.

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.
ಬಾಟ್ಲಿ 1 ಕ್ಕೆ 0–10–0 3 ಕ್ಕೆ 1–12–0.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ, ಚಳಿ ಜ್ವರ, 2 ಯಾ 3 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–2–0

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆ ಉರಿ, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1–4–0 3 ಕ್ಕೆ 3–8–0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0–8–0 3ಕ್ಕೆ 1 6 0.

೬. ಕಸ್ತೂರಿ ಮಿಶ್ರಣ.

ದಶ ಮುಖಾರಿಷ್ಟ ಬಾಲಾಂತಿಯರಿಗೆ ಬಾಟ್ಲಿ 1 ಕ್ಕೆ 1 8 0, 3 ಬಾಟ್ಲಿಗೆ 4–4–0

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1ಕ್ಕೆ 1 4 0, 3 ಬಾಟ್ಲಿಗೆ 3 8 0

೮. ಚವನ ಪ್ರಾಶ ಡಬ್ಬಿ 1 ಕ್ಕೆ 2–0–0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷದಿ ರವಾನಿಸಬಹುದು ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
52–33 ರಥಬೀದಿ, ಮಂಗಳೂರು, ದ. ಕನ್ನಡ.

Printed & published by P. I. Belliappa, at "Kodagu" Press. Mercara for "Kodagu" Ltd.

Reg. No. M. 1580.
If not delivered please return to "KODAGU" OFFICE MERCARA.

ಕೊಡಗು.

[illegible]

ವಾರ್ಷಿಕ ಚಂದಾ ರೂ. ೩—೮—೦ | ಪ್ರತಿ ಶುಕ್ರವಾರ [illegible] ಪ್ರಕಟಿಸಲ್ಪಡುವದು. | ಸಂಪಾದಕ—ಸಂಧ್ಯಂಡ [illegible]

ಸಂಪುಟ ೯] ಮಡಿಕೇರಿ, [illegible] ತಾರೀಖು [illegible] ಶುಕ್ರವಾರ [ಸಂಚಿಕೆ ೫

Post Box 423,
TRIPLICANE, MADRAS

JEWELLER BY APPOINTMENT TO [illegible] THE GOVERNOR OF MADRAS

Catalogue Free to Bona fide Enquirers

MANUFACTURES AND DEALS IN ALL —

(1) Gemset Jewels, gold and silver articles of all patterns
(2) Race Cups Caskets, Medals etc, for presentation purposes
(3) Trovels Keys, Locks etc for ceremonial purposes.

UNDERTAKES —

(1) Remaking or Remodelling of all sorts of old gemset jewels to latest patterns.
(2) Electro plating gilding and nickelling
(3) Buying old jewellery, or undertaking to effect sale

V. SUBRAMANIA IYER

Telephone — 3145

JEWELEER

Telegrams — 'PRECIOUS'

Gold smith, Silver smith, & Dealer in all Gemset Jewels.

52—42

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ
ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ

ರತನ್ ಮಿಶ್ರಿ ಹಲ್ವಾ

ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ [illegible] ಸ್ವಪ್ನದಲ್ಲಿ ಸ್ಖಲನೆಯಾಗುವಿಕೆ, ಅತಿ ಸ್ವೇಚ್ಛಾಪ್ರವರ್ತನೆಯಿಂದ [illegible] ದುರಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ ಶೀಘ್ರ ಸ್ಖಲನೆಯಾಗುವಿಕೆ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ [illegible] ನೇತ್ರರೋಗ ಚರ್ಮವ್ಯಾಧಿ, ಉಷ್ಣವಾಯು ಸಂಬಂಧರೋಗ [illegible] ಗಳನ್ನು ಗುಣಪಡಿಸಿ ಧಾತುಪುಷ್ಟಿ ಶರೀರ ಪುಷ್ಟಿಯನ್ನುಂಟುಮಾಡುವುದು [illegible] ಧಿಗಳಿಲ್ಲ ನೀಗುವವು. ಸಂಪೂರ್ಣ [illegible] ಡಬ್ಬಿಗಳನ್ನು ಸೇವಿಸಬೇಕು.

ಕ್ರಯ — [illegible]

ಚಿಕ್ಕಪೇಟೆ [illegible]

52—28 ವ್ಯವಸ್ಥಾಪಕರು— ರತನ ಮಿಶ್ರಿ ಡಿಪೋ [illegible] ಸಿಟಿ

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

ಅಪೂರ್ವ ಸಂದರ್ಭ.

[illegible] ಪುನಃ ಸಂಪಾದಿಕ [illegible] ಸಂದರ್ಭ

ಆತಂಕನಿಗ್ರಹ ಮಾತ್ರೆಗಳು

[illegible] ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಪಡಿಸುವವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

ಕಾಮ ಶಾಸ್ತ್ರ

[illegible] ದಾಂಪತ್ಯಕ್ಕೆ [illegible] ಶೀಘ್ರವಾಗಿ ಬರೆದು [illegible]

12—43 ಆತಂಕನಿಗ್ರಹ ಔಷಧಾಲಯ, ಚಿಕ್ಕಪೇಟೆ ಬೆಂಗಳೂರು ಸಿಟಿ.

ಶ್ರೇಷ್ಠವಾದ 5 ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದವು

ಶ್ರೇಷ್ಠವಾದ ಸೇವಾಳದ ಕಸ್ತೂರಿ ತೊಲ 1 ಕ್ಕೆ ರೂ 40 [illegible] 1 ಕ್ಕೆ ರೂ 1
ಕೇಸರಿ ಅಥವಾ ಕುಂಕುಮ [illegible] ತೊಲ 1 ಕ್ಕೆ ರೂ 3½ [illegible] 1 ಕ್ಕೆ ರೂ 2½
ಶಿಲಾಜಿತ್ [illegible] ತೊಲ 10 ಕ್ಕೆ ರೂ 1

ಶ್ರೇಷ್ಠವಾದ 108 ಮಣಿ [illegible] ರುದ್ರಾಕ್ಷಿ [illegible]
[illegible] ರುದ್ರಾಕ್ಷಿ [illegible]
ಮತ್ತು ಎಲ್ಲಾ ವಿಧವಾದ ರೇಷ್ಮೆ [illegible] ಯುಕ್ತ [illegible] ಈ ಕೆಳಗಿನ ವಿಳಾಸಕ್ಕೆ ಆರ್ಡರ [illegible] ಯುಕ್ತ

ಅಡ್ರೆಸ್—

ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್," ಶ್ರೀಕಾಶಿ.

BHARADWAJ & CO.,
"SILK HOME,"
Benares City.

52—45

ಏಕೆ ನರಳುತ್ತೀರಿ?

ಕ್ರಯವು [illegible] ಅಂಚೆಹಾಸಲು.

ಇಲ್ಲಿಗೆ ಉಚಿತವಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

[illegible] 46 ಮದನಮಂಜರಿ ಫಾರ್ಮಸಿ, [illegible] ಬಜಾರು ರೋಡು, ಮದ್ರಾಸು

ಕೊಡಗು.

ಸನ್ ೧೯೨೯ನೇ ಇಸವಿ

ಜುಲೈ ತಾ. ೫ನೇ ಶುಕ್ರವಾರ.

ನಿಷಾ ನಿಷೇಧ.

ಕಳೆದ ವಾರ ನಾವು ಬಜೆಟ್ಟಿನ ಮೇಲೆ ಟೀಕಿಸುವಾಗ ಅಬಕಾರಿ ನಿಷಾಸೇವನೆಯಿಂದ ಸರಕಾರಕ್ಕೆ ಆಗುವ ಉತ್ಪತ್ತಿಯು ಹೆಚ್ಚುತ್ತಿರುವ ದುಃಖಕರವಾದ ಸಂಗತಿಯನ್ನು ಬರೆಯಲು ಬಾಕಿ ಮಾಡಿದ್ದೆವು. ಬಜೆಟ್ಟನ್ನು ಕೌನ್ಸಿಲಿನ ಮುಂದೆ ಇಟ್ಟಾಗ ಅಂದಾಜು ಮಾಡಲ್ಪಟ್ಟಿದ್ದ ರೂ 3,60,000ನ್ನು ಅಂಗಡಿ ಹರಾಜಿನ ಉತ್ಪತ್ತಿಯನ್ನು ನೋಡಿ ರೂ. 3,78,000ಕ್ಕೆ ಏರಿಸಿದ್ದಾರೆ. ಈ ಬಾಬಿನ ಉತ್ಪತ್ತಿಯು 1922—23ರಲ್ಲಿ ರೂ 3,28,419 ಮಾತ್ರ ಇದ್ದದ್ದು ಈಗ ರೂ 3,78,000 ಏರಿ ಒಟ್ಟು ಆರು ವರ್ಷದಲ್ಲಿ 50,000 ಹೆಚ್ಚಾಗಿದೆ. ಈ ಹೆಚ್ಚಿನ ಉತ್ಪತ್ತಿಗೆ ಕ್ರಯವನ್ನು ಏರಿಸಿದ್ದು ಒಂದು ಕಾರಣವೆಂಬುದು ನಮಗೆ ಗೊತ್ತಿದೆ. ಆದರೆ ಕ್ರಯವೇರಿಸಿದ್ದರಿಂದ ಕುಡುಕತನ ಕಡಿಮೆಯಾಗಲಿಲ್ಲವೆಂಬುದೇನೋ ಇದರಿಂದ ಸ್ಪಷ್ಟವಾಗುತ್ತದೆ. ದೇಶೀಯ ನಿಷಾಪದಾರ್ಥಗಳಿಂದ ಸರಕಾರದ ಉತ್ಪತ್ತಿಯು ಏರುತ್ತಿರುವದರಿಂದ ದೇಶದ ಜನರಿಗೆ ಆಗುತ್ತಿರುವ ಹಾನಿಯೂ ಹೆಚ್ಚುತ್ತಲಿದೆಯೆಂಬುದನ್ನು ದೇಶೀಯರು ತಿಳಿದುಕೊಳ್ಳಬೇಕು.

ಇದೂ ಅಲ್ಲದೆ ಪರದೇಶೀ ಮಾದಕ ಪದಾರ್ಥಗಳ ಸೇವನೆಯು ಯಾವ ರೀತಿಯಲ್ಲಿ ಮುಂದುವರಿಯುತ್ತಿದೆಯೆಂಬುದು ನಮ್ಮ ಸರಕಾರದ ಉತ್ಪತ್ತಿಯ ಪಟ್ಟಿಯಿಂದ ತಿಳಿಯುವದಿಲ್ಲ. ಪರದೇಶೀ ಮಾದಕ ಪದಾರ್ಥಗಳ ಅಂಗಡಿಗಳು ಒಂದೊಂದಾಗಿ ಹೆಚ್ಚುತ್ತಿವೆ. ಪರದೇಶೀ ನಿಷಾವಸ್ತುಗಳ ಮೇಲೆ ತೆರಿಗೆ ಹಾಕುವ ಹಕ್ಕು ನಮ್ಮ ಸರಕಾರಕ್ಕೆ ಇಲ್ಲ. ಆದರೆ ಒಟ್ಟು ಹಿಂದೂಸ್ಥಾನದಲ್ಲಿ ಪರದೇಶೀ ನಿಷಾವಸ್ತುಗಳ ಆಮದು ಬಹಳವಾಗಿ ಹೆಚ್ಚಿದೆ ಎಂತ ಒಟ್ಟು ಹಿಂದುಸ್ಥಾನದ ಸರಕಾರದ ರಿಕಾರ್ಡುಗಳಿಂದ ಗೊತ್ತಾಗುತ್ತದೆ. 1904—5ರಲ್ಲಿ 7,01,177 ಗ್ಯಾಲನ್ ಪರದೇಶೀ ಮಾದಕ ಪದಾರ್ಥಗಳು ಬರುತ್ತಿದ್ದದ್ದು 1927—28ರಲ್ಲಿ 62,07,343 ಗ್ಯಾಲನಿಗೆ ಏರಿದೆಯಂತೆ! ಇಷ್ಟರಮಟ್ಟಿಗೆ ಹೆಚ್ಚಾಗಿರುವ ಆಮದಿನ ದಾಮಾಶಾಯಿಗಿಂತ ಹೆಚ್ಚಾಗಿಯೇ ನಮ್ಮ ದೇಶದಲ್ಲಿ ಪರದೇಶೀ ನಿಷಾಸೇವನೆಯು ಹೆಚ್ಚುತ್ತಲಿದೆಯೆಂಬುದರಲ್ಲಿ ಸಂಶಯವಿಲ್ಲ. 1905ರಲ್ಲಿ ಇಂಡಿಯಾ ಸರಕಾರದ ತತ್ವವು ಪರದೇಶೀ ಮಾದಕ ಪದಾರ್ಥಗಳನ್ನು ದೇಶೀಯರಲ್ಲಿ ಸಾಧಾರಣವಾಗಿ ಉಪಯೋಗಿಸಲ್ಪಡುವ ಪದಾರ್ಥವಾಗಿ ಮಾಡುವದಿಲ್ಲವೆಂತಲೂ, ಯುರೋಪಿಯನ್, ಯುರೇಶಿಯನ್, ಪಾರ್ಶಿ ಜನರು ಮುಂತಾದ ಪರದೇಶೀ ನಿಷಾವಸ್ತುವೇ ಉಪಯೋಗಿಸುವ ಅಭ್ಯಾಸವಿರುವವರಿಗೆ ಮಾತ್ರ ಒದಗಿಸಿಕೊಡುವದಾಗಿದೆಯೆಂತಲೂ ಇತ್ತು. ಈ ನಿಷಾಸೇವನೆಯ ಅಭ್ಯಾಸವಿರುವಂಥ ಯುರೋಪಿಯನ್ ಮುಂತಾದವರಿಗೆ ಒದಗಿಸಿಕೊಡಲು ಬೇಕಷ್ಟು ಅಂಗಡಿಗಳು ಕೊಡಗಿನಲ್ಲಿ ಮೊದಲೇ **ಇರುತ್ತಾ ಅಂಗಡಿಗಳನ್ನು ಇತ್ತೀಚೆಗೆ ಯಾಕೆ ಹೆಚ್ಚಿಸಿದರು? ಅಭ್ಯಾಸವಿಲ್ಲದ ದೇಶೀಯರಿಗೂ ಕೂಡ ಹೊಸ ಅಂಗಡಿಗಳು ಕುಡಿಯುವ ಆಶೆ ಹುಟ್ಟಿಸುತ್ತವೆ.**

ಈ ರೀತಿ ನಿಷಾಸೇವನೆಯು ಘೋರವಾಗಿ ಹೆಚ್ಚುತ್ತಿರುವಾಗ ಇದನ್ನು ನಿಲ್ಲಿಸಲು ನಮ್ಮ ಸರಕಾರವು ಏನೇನೂ ಪ್ರಯತ್ನ ಮಾಡುವುದಿಲ್ಲವೆಂಬುದು ಶೋಚನೀಯವಾಗಿದೆ. ಮದ್ರಾಸ್ ಸರ್ಕಾರವಾದರೆ ಈಗ ತಾನೇ ನಿಷಾನಿಷೇಧ ಚಳವಳದ ಒಂದು ಏರ್ಪಾಡು ಮಾಡಿರುವುದು ತೃಪ್ತಿಕರವಾದ ಸಂಗತಿಯಾಗಿದೆ. 1929ನೇ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಮದ್ರಾಸ್ ಕೌನ್ಸಿಲಿನಲ್ಲಿ "ಇನ್ನು 20 ವರ್ಷಗಳಲ್ಲಿ ಮದ್ರಾಸ್ ಆಧಿಪತ್ಯದಲ್ಲಿ ನಿಷಾ ಸೇವನೆಯೇ ಇಲ್ಲದಂತೆ ಸರಕಾರವು ಮಾಡಬೇಕು" ಎಂಬ ಠರಾವು ಮಂಜೂರಾಯಿತು. ನಿಷಾ ಸೇವನೆಯನ್ನು ಸಂಪೂರ್ಣವಾಗಿ ನಿರ್ಬಂಧಿಸುವ ಶಾಸನ ಮಾಡಿದರೂ ಜನರಲ್ಲಿ ನಿಷಾ ಸೇವನೆಯನ್ನು ಬಿಡಬೇಕೆಂಬ ಭಾವನೆ ಹುಟ್ಟದಿದ್ದರೆ ಸಫಲವಾಗಲಾರದೆಂತ ಯೋಚಿಸಿ, ಜನರಲ್ಲಿ ನಿಷಾಸೇವನೆಯನ್ನು ಬಿಡುವ ಬುದ್ಧಿ ಹುಟ್ಟಲಿಕ್ಕೆ ಚಳವಳ ನಡಿಸಲು 4 ಲಕ್ಷ ರೂಪಾಯಿ ಖರ್ಚು ಮಾಡುವಂತೆ ಹಾಲಿ ವರ್ಷದ ಬಜೆಟ್ಟಿನಲ್ಲಿ ಹೂಡಲಾಗಿದೆ. ಈ ಹಣವನ್ನು ಯಾವ ರೀತಿಯಲ್ಲಿ ವಿನಿಯೋಗಿಸಬೇಕೆಂಬುದನ್ನು ಕಳೆದ ವಾರ ಮದ್ರಾಸ್ ಸರಕಾರವು ತೀರ್ಮಾನಿಸಿರುತ್ತದೆ.

ಮದ್ರಾಸ್ ಸರ್ಕಾರದ ನಿಷಾನಿಷೇಧ ಚಳವಳದ ಏರ್ಪಾಡಿನ ಮುಖ್ಯ ಅಂಶಗಳು ಯಾವವೆಂದರೆ—ನಿಷಾನಿಷೇಧ ಚಳವಳದ ಒಗ್ಗೆ ಮಧ್ಯವರ್ತಿ ಸಂಸ್ಥೆಯೊಂದು ಇರಬೇಕು. ಈ ಸಂಸ್ಥೆಯು ನಿಷಾನಿಷೇಧ ಚಳವಳದ ಬಗ್ಗೆ ಜಿಲ್ಲಾ ಸಂಸ್ಥೆಗಳಿಗೂ, ಆಮ್ಯತಮಯ ಸಂಘಗಳಿಗೂ ಹಣ ಕೊಡುತ್ತದೆ. ನಿಷಾಸೇವನೆಯು ಆರ್ಥಿಕ, ನೈತಿಕ, ಧಾರ್ಮಿಕ ದೃಷ್ಟಿಯಿಂದಲೂ ಹಾನಿಕರವೆಂಬುದನ್ನು, ಕರಪತ್ರಿಕೆಗಳನ್ನು ಮುದ್ರಿಸಿ ಹಂಚುವದರಿಂದಲೂ, ನಿಷಾ ಕೆಡುಕುಗಳನ್ನು ದೊಡ್ಡ ಅಕ್ಷರದಲ್ಲಿ ಪಬ್ಲಿಕ್ ಸ್ಥಳಗಳಲ್ಲಿ ಬರೆದಿಡುವದರಿಂದಲೂ, ವ್ಯಾಖ್ಯಾನ[illegible] ಗಳನ್ನು ಕೊಡಿಸುವದರಿಂದ **ಈ ಸಂಬಂಧದ ಪುಸ್ತಕಗಳನ್ನೂ, ಪತ್ರಿಕೆಗಳನ್ನೂ ಶಾಲೆಗಳಿಗೆ ಒದಗಿಸಿ ಕೊಡುವದರಿಂದಲೂ, ಶಾಲೆಗಳಲ್ಲಿ ನಿಷಾನಿಷೇಧದ ಉಪನ್ಯಾಸಗಳನ್ನು ಬರೆದವರಿಗೆ ಇನಾಮು ಹಂಚುವದರಿಂದಲೂ, ಮಾಜಿಕ ಪ್ರದರ್ಶನಗಳಿಂದಲೂ ಬೋಧಿಸಬೇಕೆಂತ ತೀರ್ಮಾನಿಸಿರುತ್ತಾರೆ.**

ಜಿಲ್ಲಾ ಸಮಿತಿಗಳಲ್ಲಿ 7 ರಿಂದ 9ರ ವರೆಗೆ ಸದಸ್ಯರಿರಬೇಕು. ಇದರಲ್ಲಿ ಸ್ಥಳೀಯ ಸ್ವರಾಜ್ಯ ಸಂಸ್ಥೆಯ ಪ್ರತಿನಿಧಿಯೂ, ಸಹಕಾರಿ ಸಂಘದ ಪ್ರತಿನಿಧಿಯೂ, ಆಮ್ಯತಮಯ ಕೆಲಸದ ಪ್ರತಿನಿಧಿಯೂ, ಈ ಕೆಲಸದಲ್ಲಿ ಅಭಿರುಚಿ ಇರುವ ಇತರರೂ ಇರಬಹುದು. ಈ ಸಮಿತಿಯು ಒಬ್ಬ ಸೆಕ್ರಟರಿಯನ್ನೂ ಒಬ್ಬ ಗುಮಾಸ್ತನನ್ನೂ, ಒಬ್ಬ ಜವಾನನನ್ನೂ ನೇಮಿಸಿಕೊಳ್ಳಬಹುದು. ಇದೂ ಅಲ್ಲದೆ ಅವಶ್ಯವಿರುವಷ್ಟು ಪ್ರಚಾರಕರನ್ನೂ ಸಂಬಳ ಕೊಟ್ಟು ನೇಮಿಸಿಕೊಳ್ಳಬಹುದು. ಈ ಮೇಲ್ಕಂಡ ಏರ್ಪಾಡುಗಳ ಮೂಲಕ ಸರಕಾರದಿಂದ ಒಂದು ವರ್ಷಕ್ಕೆ ಮಂಜೂರಾದ 4 ಲಕ್ಷ ರೂಪಾಯಿಗಳನ್ನು ಉಪಯೋಗಿಸಿಕೊಂಡು ನಿಷಾನಿಷೇಧದ ಪ್ರಚಾರ ಕಾರ್ಯವನ್ನು ಮಾಡುತ್ತಾರೆ. ಈ ಏರ್ಪಾಡು ಚೆನ್ನಾಗಿದೆ. ಸರಕಾರ ಅಧಿಕಾರಿಗಳೂ ಈ ಕೆಲಸದಲ್ಲಿ ಭಾಗಿಗಳಾಗುವಾಗ ದೇಶೀಯರೂ ಮನಃಪೂರ್ವಕವಾಗಿ ಕೆಲಸ ಮಾಡಿದರೆ ತುಂಬಾ ಪ್ರಯೋಜನವಾದೀತೆಂಬುದರಲ್ಲಿ ಸಂದೇಹವಿಲ್ಲ.

ನಮ್ಮ ದೇಶದ ಸರಕಾರವು ಮದ್ರಾಸನ್ನು ಒಂದು ನಿಮಿಷವೂ ತಡೆಯದೆ ಹಿಂಬಾಲಿಸಬೇಕೆಂತ ನಮ್ಮ ಅಭಿಪ್ರಾಯವಾಗಿದೆ. ಸರಕಾರದ ಅಧಿಕಾರಿಗಳೇ ನಿಷಾಸೇವನೆಯನ್ನು ನಿಲ್ಲಿಸಬೇಕೆಂತ ಬೋಧಿಸಲು ಪ್ರಾರಂಭಿಸಿದರೆ ತುಂಬಾ ಫಲದಾಯಕವಾದೀತೆಂತ ನಮಗೆ ಆಶೆ ಇದೆ. ಈ ವರೆಗಿನ ಸರಕಾರ ವರ್ತನೆಯಿಂದ ಅಂದರೆ ಎಲ್ಲೆಲ್ಲಿಯೂ ಅಂಗಡಿಗಳನ್ನು ತೆರೆಯುವದರಿಂದಲೂ, ಕುಡಿಯಲು ಅಪೇಕ್ಷೆ ಇರುವವರಿಗೆ ನಿಷಾಪದಾರ್ಥವನ್ನು ಒದಗಿಸಿ ಕೊಡುವುದು ಸರಕಾರದ ತತ್ವವೆಂತ ಸರ್ಕಾರದ ಮುಖ್ಯ ಅಧಿಕಾರಿಗಳು ಭಾಷಣ ಮಾಡುವುದರಿಂದಲೂ ನಿಷಾಸೇವನೆಗೆ ಸರಕಾರದ ಪ್ರೋತ್ಸಾಹ ಇದೆಯೆಂತ ತೋರುತ್ತಿತ್ತು. ಈ ಅಭಿಪ್ರಾಯವು ನಿಷಾಸೇವನೆಗೆ ತುಂಬಾ ಉತ್ತೇಜನ ಕೊಡುತ್ತಿತ್ತು. ಸರ್ಕಾರದ ಅಧಿಕಾರಿಗಳೂ ಮತ್ತು ಸರ್ಕಾರದ ಆಧೀನದ ಸಂಸ್ಥೆಗಳೂ ನಿಷಾಸೇವನೆಯನ್ನು ನಿಲ್ಲಿಸಲಿಕ್ಕೆ ಬೋಧಿಸಲು ಪ್ರಾರಂಭಿಸಿದರೆ ಜನರ ಮನೋಭಾವವು ಬದಲಾಗುತ್ತದೆ. ಈ ತರದ ಕೆಲಸ ಮಾಡುವ ಅಧಿಕಾರಿಗಳು ಸಹ ನಿಷಾಸೇವನೆಯನ್ನು ಬಿಡಬೇಕಾಗುತ್ತದೆ. ಅಧಿಕಾರಿಗಳು ಪಬ್ಲಿಕ್ಕಾಗಿ ನಿಷಾಸೇವನೆ ಮಾಡುವದರಿಂದ ನಿಷಾಸೇವನೆಗೆ ಅತ್ಯಂತ ಪ್ರೋತ್ಸಾಹ ದೊರಕಿಹೋಗಿದೆ. ಆದ್ದರಿಂದ ಸರ್ಕಾರಿ ಅಧಿಕಾರಿಗಳೇ ತಮ್ಮ ಮಾದರಿಯಿಂದಲೂ, ಬೋಧನೆಯಿಂದಲೂ ಜನರನ್ನು ಸದ್ವೃತ್ತಿಗೆ ತಿರುಗಿಸಲು ಅವಕಾಶ ದೊರಕುತ್ತದೆ.

ಅಮೇರಿಕದ ಸಂಯುಕ್ತ ಪ್ರಾಂತ್ಯದವರು ನಿಷಾ ಸೇವನೆಯನ್ನು ಸಂಪೂರ್ಣವಾಗಿ ನಿಲ್ಲಿಸಿರುವದಲ್ಲದೆ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಕೆನಡಾ ಪ್ರಾಂತ್ಯದಿಂದ ಕಳ್ಳತನದಿಂದ ಸಂಯುಕ್ತ ಪ್ರಾಂತ್ಯಕ್ಕೆ ನಿಷಾ ಪದಾರ್ಥಗಳು ಬರುವದನ್ನು ನಿಲ್ಲಿಸಲಿಕ್ಕಾಗಿ 3000 ಮೈಲು ಉದ್ದಕ್ಕೂ ಮುಳ್ಳು ತಂತಿಬೇಲಿ ಹಾಕುತ್ತಾರಂತೆ! ನಮ್ಮ ದೇಶದಲ್ಲಿ ನಿಷಾ ಸೇವನೆಯು ಸಂಪೂರ್ಣ ನಿಲ್ಲುವ ಕಾಲ ಎಂದು ಬರುವದೋ ತಿಳಿಯದು. ತತ್ಕಾಲ ನಿಷಾ ಸೇವನೆಯ ಕೆಡಕುಗಳನ್ನು ಬೋಧಿಸಲು ತಕ್ಕ ಏರ್ಪಾಡಾದರೂ ಕೂಡಲೇ ಮಾಡಿದರೆ ಎಷ್ಟೋ ಪ್ರಯೋಜನವಾದೀತು.

ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು.

ಈ ವಿಷಯವನ್ನು ಕುರಿತು ಡಿಸ್ಟ್ರಿಕ್ಟ್ ಬೋರ್ಡಿನ ವೈಸ್ ಪ್ರೆಸಿಡೆಂಟರಾದ ಮೆ. ಪಾಂಡಂಡ ಚಂಗಪ್ಪನವರು ಬರೆದ ಬಾತ್ಮಿಯನ್ನು ಇನ್ನೊಂದು ಕಡೆ ಪ್ರಕಟಿಸುತ್ತೇವೆ. ಆ ಬಾತ್ಮಿಯಲ್ಲಿ, ನಾವು ಎರಡು ವಾರಗಳ ಹಿಂದೆ ಕಳೆದ ಡಿ. ಬೋರ್ಡು ಮೀಟಿಂಗನ್ನು ಕುರಿತು ಬರೆದಿದ್ದ ಅಗ್ರಲೇಖನದ ಅಭಿಪ್ರಾಯಗಳು ಕೆಲವು ಖಂಡಿಸಲ್ಪಟ್ಟಿವೆ. ಆದುದರಿಂದ ಆ ಖಂಡನೆಗಳಿಗೆ ಜವಾಬಾಗಿ ಒಂದೆರಡು ಮಾತುಗಳನ್ನು ಬರೆಯಬೇಕಾಗಿದೆ.

ಮೆ. ಪಿ. ಎ. ಚಂಗಪ್ಪನವರು ಚುನಾಯಿತ ಮೆಂಬರೆಂದೂ, ಬೋರ್ಡಿನಿಂದ ಆರಿಸಲ್ಪಟ್ಟ ವೈಸ್ ಪ್ರೆಸಿಡೆಂಟರೆಂದೂ ನಮಗೆ ಗೊತ್ತಿದೆ. ಆದರೆ ಬೋರ್ಡಿನ ವಿದ್ಯಾ ಕಮಿಟಿಗೆ ಅವರು ನೇಮಿಸಲ್ಪಟ್ಟ ಮೆಂಬರೆಂದು ನಾವು ಬರೆದಿರುವದಾಗಿದೆ. ಅದು ನಿಜವೆಂದು ಈಗಲೂ ಹೇಳುತ್ತೇವೆ. ವಿದ್ಯಾ ಕಮಿಟಿಯನ್ನು ನೇಮಿಸಿದ ಮೀಟಿಂಗಿನಲ್ಲಿ ವೈಸ್ ಪ್ರೆಸಿಡೆಂಟರು, ಶಾಲಾ ಸಬ್ ಅ ಇನ್‌ಸ್ಪೆಕ್ಟರು ಮತ್ತು ಇಬ್ಬರು ಸುಬೇದಾರರುಗಳುಳ್ಳ ಕಮಿಟಿಯನ್ನು ನೇಮಿಸುವಂತೆ ಬೋರ್ಡಿನ ಅಧ್ಯಕ್ಷರು, ರಾವ್ ಸಾಹೇಬ್ ಮೆ. ರಾಮಶೆಟ್ಟಿಯವರು ಅದನ್ನು ವಿರೋಧಿಸಿ, ಸುಬೇದಾರರುಗಳ ಬದಲು ಇಬ್ಬರು ಚುನಾಯಿತ ಮೆಂಬರುಗಳನ್ನು ಕಮಿಟಿಗೆ ಆರಿಸಬೇಕೆಂದು ಸೂಚಿಸಿದ ಮೇರೆ ಬೋರ್ಡು ಒಪ್ಪಿ, ಮೆ. ಯಸ್. ಮುದ್ದಪ್ಪನವರನ್ನು ಮತ್ತು ಮೆ. ಮುದ್ದಯ್ಯನವರನ್ನು ಬೋರ್ಡಿನವರು ಸದರಿ ಕಮಿಟಿಗೆ ಆರಿಸಿರುವದಾಗಿದೆ. ಇದರಿಂದ ವೈಸ್ ಪ್ರೆಸಿಡೆಂಟರು ಮತ್ತು ಶಾಲಾ ಸಬ್ ಅ ಇನ್‌ಸ್ಪೆಕ್ಟರು ವಿದ್ಯಾ ಕಮಿಟಿಗೆ ನೇಮಿಸಲ್ಪಟ್ಟ ಮೆಂಬರುಗಳೆಂಬುದು ವಿಶದವಾಗುತ್ತದೆ. ವೈಸ್ ಪ್ರೆಸಿಡೆಂಟರು ಸದರಿ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿನೋಡಿದ್ದರೆ ಅವರು ಕಮಿಟಿಗೆ ಚುನಾಯಿಸಲ್ಪಟ್ಟ ಮೆಂಬರೆಂದು ವಾದಿಸುತ್ತಿರಲಿಲ್ಲವಾಗಿ ನಂಬುತ್ತೇವೆ.

ಈ ಮೊದಲೇ ನಾವು ಬರೆದಿದ್ದಂತೆ ಇಂಥಾ ಕಮಿಟಿಯ **ಕೃತಕತೆಗಳನ್ನೂ, ಅಭಿಪ್ರಾಯಗಳನ್ನೂ ತಿಳಿದುಕೊಳ್ಳಲಿಕ್ಕಾಗಿಯಾಗಿದೆ. ಇಂಥಾ ವಿಷಯಗಳನ್ನೆಲ್ಲಾ ಸಂಗ್ರಹಿಸಿದನಂತರ, ಕಮಿಟಿಯವರು ಪುನಹ ಸೇರಿ ಅವುಗಳನ್ನೆಲ್ಲಾ ಚರ್ಚಿಸಿ ರಿಪೋರ್ಟು ಬರೆಯುವದಾಗಿದೆ. ಕಮಿಟಿಯಲ್ಲಿ ಕೆಲವು ಮೆಂ**ಬರುಗಳು ದೇಶವನ್ನು ಸುತ್ತದೆ ಇದ್ದರೂ ಕೂಡ ಬೇರೆ ಮೆಂಬರುಗಳು ಸಂಗ್ರಹಿಸಿದ ವಿಷಯಗಳನ್ನು ಚರ್ಚಿಸಿ ನ್ಯಾಯವಾದ ಸಿಫಾರಸ್ಸುಗಳನ್ನು ಬರೆಯುವುದರಲ್ಲಿ ಅಡಚಣೆ ಏನೂ ಕಾಣುವುದಿಲ್ಲ. ಇದರಲ್ಲಿ ಮನಸ್ಸಾಕ್ಷಿಗೆ ವಿರೋಧ ಬರುವಂಥಾದ್ದೇನೂ ಇಲ್ಲ. ಅದರಲ್ಲೂ ಈ ಕಮಿಟಿಯ ವರದಿಯಲ್ಲಿ ಮುಖ್ಯವಾಗಿ ಬರೆದಿರುವದು ಶಾಲಾ ಕಟ್ಟಡಗಳ ವಿಷಯವಾಗಿದೆ. ಚುನಾಯಿತ ಮೆಂಬರುಗಳು ಚರ್ಚೆಗೆ ಸೇರಿ ವರದಿ ಬರೆಯುವುದರಲ್ಲಿ ಭಾಗಿಗಳಾಗಿದ್ದರೆ, ಕಟ್ಟಡಗಳಿಗೆ ಗ್ರಾಮಸ್ಥರು, ಅವರ ಬಡತನವನ್ನು ಸ್ವಲ್ಪವೂ ಗಣನೆಗೆ ತೆಗೆದುಕೊಳ್ಳದೆ, ಅರ್ಧ ಹಣ ಜಮಾಯಿಸಿದರೆ ಬಾಕಿ ಹಣವು ಬೋರ್ಡಿನಿಂದ ಕೊಡಲಾಗುವುದು ಎಂದು ಬರೆಯುವದರ ಬದಲು ಬೋರ್ಡಿನಲ್ಲಿರುವ ದೊಡ್ಡ ಉಳಿವರಿಯನ್ನು ಗ್ರಾಮಸ್ಥರಿಗೆ ಬೇಕಾಗಿರುವ ಕಡೆಗಳಲ್ಲೆಲ್ಲಾ ಶಾಲೆಗಳನ್ನು ಕಟ್ಟಿಸಲು ಉಪಯೋಗಿಸಬಹುದು ಎಂದು ಬರೆಯಬಹುದಿತ್ತಲ್ಲವೇ?

ಡಿ. ಬೋರ್ಡಿನ ನಲವತ್ತು ಸಾವಿರ ರೂಪಾಯಿ ಉಳಿವರಿಯನ್ನು ಯಾವಾಗಲೂ ರಿಸರ್ವ್ ಆಗಿ ಖಜಾನೆಯಲ್ಲಿಡುವುದು' ಎಂಬುದು ಸರಿಯಲ್ಲ. ಬೋರ್ಡಿನ 24ನೇ ನಿಬಂಧನೆ ಮೇರೆ ಬರೇ ಹತ್ತು ಸಾವಿರ ರೂ ಮಾತ್ರ ಖಾಯಂ ಉಳಿವರಿ ಇಟ್ಟರೆ ಸಾಕಾಗಿದೆ. ಬೋರ್ಡಿನಲ್ಲಿ ಆಕಸ್ಮಿಕವಾಗಿ ಸಂಭವಿಸಬಹುದಾದ ಖರ್ಚುಗಾಗಲೀ, ಯಾವಾಗಲಾದರೂ ಉತ್ಪತ್ತಿಯು ಅಂದಾಜು ಮಾಡಿದಕ್ಕಿಂತ ಸ್ವಲ್ಪ ಕಡಿಮೆಯಾಗಿ ನಷ್ಟ ಸಂಭವಿಸುವಾಗಾಗಲಿ ಉಪಯೋಗಿಸಲು ಸಾಕಾಗಬಹುದೆಂದೇ 10 ಸಾವಿರ ರೂ. ಖಾಯಮಾಗಿ ಉಳಿವರಿ ಇಡಬೇಕೆಂದು ಬೋರ್ಡಿನ ನಿಬಂಧನೆಯಲ್ಲಿ ನಮೂದಿಸಿರುವದಾಗಿರಬೇಕು. ಹೀಗಿರುವಲ್ಲಿ 40 ಸಾವಿರ ರೂ. ರಿಸರ್ವ್ ಆಗಿ ಇಟ್ಟುಕೊಳ್ಳುವುದರ ಅರ್ಥವೇನು? ಸುಮಾರು 1½ ಲಕ್ಷ ರೂ. ಉತ್ಪತ್ತಿ ಇರುವ ಬೋರ್ಡಿನಲ್ಲಿ 40 ಸಾವಿರ ರೂ ಉಳಿವರಿಯಾಗಿ ಇಡಬೇಕೆಂಬುದು ಎಷ್ಟರ ಮಟ್ಟಿನ ಬುದ್ಧಿವಂತಿಗೆಯೆಂದು ವಾಚಕರೇ ಊಹಿಸಿಕೊಳ್ಳಬಹುದು. ಉತ್ಪತ್ತಿಯಲ್ಲಿ ಇಷ್ಟು ದೊಡ್ಡ ಮೊಬಲಗು ಕಡಿಮೆಯಾದದ್ದು ಬೋರ್ಡು ಸ್ಥಾಪಿತವಾದಂದಿನಿಂದ ಎಂದಿಗೂ ಇಲ್ಲ, ಇನ್ನು ಮುಂದೆ ಆಗುವದೆಂದು ಯೋಚಿಸಲು ಕಾರಣವೂ ಇಲ್ಲ. ಇಂಥಾ ಭಯವು ಬೋರ್ಡಿನ ವೈಸ್‌ಪ್ರೆಸಿಡೆಂಟರಿಗೆ ಇರುವದಾದರೆ ಉತ್ಪತ್ತಿಯ ಅಂದಾಜು ಪಟ್ಟಿ ಮಾಡುವದರ ಬದಲು ಒಂದು ವರ್ಷದ ಉತ್ಪತ್ತಿಯನ್ನು ಆ ವರ್ಷ ಖರ್ಚುಮಾಡದೆ ಹಾಗೆಯೇ ಇಟ್ಟು, ಅದನ್ನು ನಂತರದ ವರ್ಷದಲ್ಲಿ ಖರ್ಚುಮಾಡುವ ನವೀನ ಪದ್ಧತಿಯನ್ನು ಅನುಸರಿಸಬಹುದಲ್ಲವೇ! ಹೀಗೆಂದ ಮೇಲೆ ಭೂಲೋಕದ ಎಲ್ಲಾ ಸರ್ಕಾರಗಳ ಅಂದಾಜು ಪಟ್ಟಿ ಮಾಡುವ ಈಗಿನ ಪದ್ಧತಿಯೇ ಪ್ರಯೋಜನವಿಲ್ಲದ್ದಾಯಿತಲ್ಲವೇ? ಬೋರ್ಡಿನ ಉದ್ದೇಶ್ಯವು ಜನರಿಗೆ ಅವಶ್ಯವಿರುವ ಕೆಲಸಗಳಿಗೆ ಹಣ ಖರ್ಚು ಮಾಡದೆ, ಬರೇ ಬಡ್ಡಿ ಸಂಪಾದಿಸುವದಾದರೆ ಒಟ್ಟು ಉತ್ಪತ್ತಿಯನ್ನು ಬಡ್ಡಿಗೆ ಹಾಕುತ್ತಾ ಜನರಿಗೆ ಶಾಲೆ, ಆಸ್ಪತ್ರೆ, ರಸ್ತೆ ಮೊದಲಾದುವು ಬೇಕಾದರೆ ಅವರೇ ಚಂದಾ ಎತ್ತಿ ಮಾಡಿಕೊಳ್ಳುವಂತೆ ಮಾಡಬಹುದಲ್ಲವೇ? ರೈತರು ಕಷ್ಟಪಟ್ಟು ದುಡಿದು ಕೊಡುವ ತೆರಿಗೆಗಳು ಸರ್ಕಾರಕ್ಕೆ ಅಲ್ಪ ಬಡ್ಡಿಯಲ್ಲಿ ಸಾಲಕೊಟ್ಟು ಯಾ ಬ್ಯಾಂಕುಗಳಲ್ಲಿ ಠೇವಣಿಯಿಟ್ಟು **ಇಟ್ಟು ಬಡ್ಡಿ ಸಂಪಾದಿಸಲಿಕ್ಕಲ್ಲವೆಂದೂ, ಅವರಿಗೆ ಅಗತ್ಯವಿರುವ ಕೆಲಸಗಳಿಗೆ ಉಪಯೋಗಿಸಲಿಕ್ಕೆಂದೂ ಬೋರ್ಡಿನ ಮೆಂಬರುಗಳು ತಿಳಿದುಕೊಳ್ಳದೆ ಇರುವುದು ವಿಷಾದಕರ.**

ಬೋರ್ಡಿನ ಕಳೆದ ಮೀಟಿಂಗಿನ ತೀರ್ಮಾನದ ಮೇರೆ 20 ಸಾವಿರ ರೂಪಾಯಿಗಳನ್ನು ಶೇಕಡ 5ರ ಬಡ್ಡಿಯಲ್ಲಿ ಇಂಡಿಯಾ ಗವರ್ನ್‌ಮೆಂಟಿಗೆ ಸಾಲಕೊಟ್ಟಿರುವರೆಂದೂ ಈ ಸಾಲವು 1935ರಲ್ಲಿ ವಾಪಸು ದೊರೆಯುವದೆಂದೂ ತಿಳಿಯುತ್ತೇವೆ. ಹಾಗಾದರೆ ಈ ಹಣವು ಬೋರ್ಡಿಗೆ ಬೇಕಾದಾಗ ತುರ್ತು ಕೆಲಸಗಳಿಗೆ ಸಿಕ್ಕುವದು ಹೇಗೆ? ಹಾಗೆ ಬೇಕಾದರೆ ಈ ಸಾಲದ ಬಾಂಡುಗಳನ್ನು ಬೇರೆಯವರಿಗೆ ಕಡಿಮೆ ಬೆಲೆಗೆ ಮಾರಬೇಕಾಗುವುದು. ಇದರಿಂದ ಬೋರ್ಡಿಗೆ ನಷ್ಟವಲ್ಲದೆ ಲಾಭವೇನೂ ಕಾಣುವುದಿಲ್ಲ. ಇಂಥಾ ಲಾಭ ನಷ್ಟದ ವ್ಯಾಪಾರಕ್ಕಾಗಿರುವದು ಡಿ. ಬೋರ್ಡಲ್ಲವೆಂಬವನ್ನು ಅದರ ಮೆಂಬರುಗಳು ಇನ್ನಾದರೂ ತಿಳಿದುಕೊಳ್ಳುವರೇ?

ಬಂಡಿ ಮೊಕದ್ದಮೆ ಕೇಸಿನ ವಿಷಯ ನಾವು ಸರಿಯಾಗಿ ತಿಳಿಕೊಳ್ಳದೆ, ಒಬ್ಬ ಮೆಂಬರರ ಹೇಳಿಕೆ ಮಾತಿನ ಮೇರೆ ಬರೆದದ್ದೆಂದು ಆಕ್ಷೇಪಿಸಿರುವರು. ನಮಗೆ ತಿಳಿದ ವಿಷಯಗಳ ಮಟ್ಟಿಗೆ ನಾವು ಟೀಕಿಸಿದ್ದೆವು. ಮೀಟಿಂಗಿನಲ್ಲಿ ನಡೆಯುವ ಚರ್ಚೆಗಳನ್ನೇನೂ ಪ್ರಕಟಿಸದ ಬೋರ್ಡಿನ ಪ್ರೊಸೀಡಿಂಗ್ಸಿನ ತಪಸೀಲನ್ನು ಅದರ ಮೆಂಬರುಗಳಿಂದ ತಿಳಕೊಳ್ಳುವದು ತಪ್ಪಾಯಿತೇ? ವೈಸ್ ಪ್ರೆಸಿಡೆಂಟರು ತನ್ನ ವರ್ತನೆಗೆ ಕಾರಣಗಳನ್ನು ತಮ್ಮ ಬಾತ್ಮಿಯಲ್ಲಿ ಬಹಿರಂಗಪಡಿಸದ್ದರಿಂದ ನಮಗೆ ತಿಳಿದ ಸಂಗತಿಗಳೇ ನಿಜವೆಂದು ನಂಬಬೇಕಾಗಿದೆ.

ಬೋರ್ಡಿನ ವೈಸ್ ಪ್ರೆಸಿಡೆಂಟರೇ ಬೋರ್ಡಿಗೆ ಸಂಬಂಧಪಟ್ಟ ಸಂಗತಿಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. **ಪತ್ರಿಕೆಯಲ್ಲಿ ತೋರುವ ನ್ಯಾಯವಾದ ಟೀಕೆಗಳನ್ನು ಅರ್ಥಮಾಡಿಕೊಳ್ಳದೆಯೂ ಅಂಥ ಟೀಕೆಗಳಿಂದ ತಮ್ಮ ವರ್ತನೆಯನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸದೆ ಟೀಕಕರನ್ನು ನಿಕ್ಕಾಬಿಟ್ಟಿ ಬೈದು, ಅವರಿಗೆ ಯೋಗ್ಯವಲ್ಲದ ಉದ್ದೇಶಗಳನ್ನು ಆರೋಪಿಸುವುದರಿಂದ ಏನೊಂದೂ ಸಾರ್ಥಕವಿಲ್ಲ.**

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೩೦ನೇ ಪ್ರಕರಣ.

ಮಹಾ ಸಭಾ ಪ್ರವೇಶ

ಅಮೃತಸರದಲ್ಲಿ ನಡೆದ ಮಹಾಸಭೆಯಲ್ಲಿ ನಾನು ಭಾಗವಹಿಸಿದಾಗಲೇ ನಾನು ಮಹಾಸಭೆಯ ಕಾರ್ಯಭಾರದಲ್ಲಿ ಪ್ರವೇಶಿಸಿದನೆಂದು ಎಣಿಸುವುದಿಲ್ಲ. ಹಿಂದಿನ ಅಧಿವೇಶನಗಳಿಗೆ ನಾನು ಹೋಗಿದ್ದುದು ಮಹಾಸಭೆಗೆ ವಾರ್ಷಿಕ ಕಾಣಿಕೆಯನ್ನೊಪ್ಪಿಸುವುದಕ್ಕೇ ಹೊರತು. ಇನ್ನೇನು ಹೆಚ್ಚಲ್ಲವೆಂದು ಹೇಳಬಹುದು. ಕೇವಲ ಸಾಮಾನ್ಯ ಯೋಧನ ಕೆಲಸವಲ್ಲದೆ ಮತ್ತೇನೂ ವಿಶೇಷವಾದ ಕಾರ್ಯವು ನನ್ನ ಪಾಲಿಗೆ ಬಿದ್ದಿತೆಂದು ನನಗೆ ಈ ಸಂದರ್ಭಗಳಲ್ಲಿ ತೋರಲೂ ಇಲ್ಲ, ನಾನು ಹೆಚ್ಚನ್ನು ಬಯಸಲೂ ಇಲ್ಲ.

ಪ್ರಾಯಶಃ ಒಂದೆರಡು ವಿಷಯಗಳಲ್ಲಿ ನನಗೆ ವಿಶೇಷ ಕೌಶಲ ಉಂಟು. ಆದರಿಂದ ಮಹಾಸಭೆಗೆ ಸಹಾಯವಾಗಬಹುದು—ಎಂದು ನನಗೆ ಅಮೃತಸರದಲ್ಲಿ ಅನುಭವಕ್ಕೆ ಬಂದಿದ್ದಿತು. ಪಂಜಾಬಿನ ಅತ್ಯಾಚಾರ ಕಾಂಡದ ವಿಮರ್ಶೆಗಾಗಿ ನಾನು ಮಾಡಿದ ಕೆಲಸದಿಂದ ದಿವಂ ಲೋಕಮಾನ್ಯರೂ, ದೇಶಬಂಧುಗಳೂ, ಪಂಡಿತ ಮೋತಿಲಾಲರೂ, ಇತರ ನಾಯಕರೂ ಸಂತುಷ್ಟರಾಗಿದ್ದರೆಂಬುದು ಆಗಲೇ ನನ್ನ ಗೋಚರಕ್ಕೆ ಬಂದಿದ್ದಿತು. ಅವರು ನನ್ನನ್ನು ತಮ್ಮ ತಮ್ಮ ಕೂಟಗಳಿಗೆ ಕರೆಯುತ್ತಿದ್ದರು. ಇಲ್ಲಿ ಒಬ್ಬರಿಗೊಬ್ಬರು ಮನ ಬಿಚ್ಚಿ ಮಾತನಾಡುತ್ತಿದ್ದರು ವಿಷಯ ನಿರ್ಧಾರ ಸಮಿತಿಯ ಮುಂದಿಡಲಿಕ್ಕೆ ಗೊತ್ತುವಳಿಗಳು ರೂಪಗೊಳ್ಳುತಿದ್ದುದೂ ಇಲ್ಲಿಯೇ. ಈ ಕೂಟಗಳಿಗೆ ನಾಯಕರಿಗೆ ವಿಶೇಷ ಭರವಸೆಯುಳ್ಳ ಮತ್ತು ಆವರಿಗೆ ಸಹಾಯ ಮಾಡುವಂತಿದ್ದ ಜನರನ್ನು ಮಾತ್ರ ಕರೆಯುತ್ತಿದ್ದರು. ಇತರರೂ ಆಗಾಗ ಹೇಗೆಯೋ ಬಂದು ಸೇರುತ್ತಿದ್ದರು.

ಮುಂದಿನ ವರ್ಷಕ್ಕೆ ಸಂಬಂಧಪಟ್ಟ ಎರಡು ವಿಷಯಗಳು ನನ್ನ ಮನಸ್ಸನ್ನಾಕರ್ಷಿಸಿದುವು. ಏಕೆಂದರೆ ಅವುಗಳಲ್ಲಿ ನನಗೆ ಅಭಿರುಚಿಯಿದ್ದಿತು. ಇವುಗಳಲ್ಲಿ ಜಲಿಯನ್ ವಾಲ್‌ಬಾಗ್ ಕೊಲೆಯ ಸ್ಮಾರಕವು ಒಂದಾಗಿದ್ದಿತು. ಇದನ್ನು ರಚಿಸಬೇಕೆಂಬ ಠರಾವು ಮಹಾಸಭೆಯಲ್ಲಿ ಅತ್ಯುತ್ಸಾಹದಿಂದ ಅಂಗೀಕೃತವಾಗಿದ್ದಿತು. ಇದಕ್ಕಾಗಿ ಸುಮಾರು ಐದು ಲಕ್ಷ ರೂಪಾಯಿಯ ನಿಧಿಯನ್ನು ಕೂಡಿಸಬೇಕಾಗಿದ್ದಿತು. ನನ್ನನ್ನು ಒಬ್ಬ ಧರ್ಮದರ್ಶಿಯಾಗಿ ನೇಮಿಸಿದರು. ಸಾರ್ವಜನಿಕ ಸೇವೆಗಾಗಿ ಹಣ ಬೇಡುವವರಲ್ಲಿ ಪಂಡಿತ ಮಾಲವೀಯರಿಗೆ ರಾಜ್ಯಭಿಕ್ಷುಕರೆಂಬ ಹೆಸರಿದ್ದಿತು. ಆದರೆ ಈ ವಿಷಯದಲ್ಲಿ ನಾನು ಅವರಿಗಿಂತ ಬಹು ಹಿಂದಿಲ್ಲವೆಂದು ನನಗೆ ಗೊತ್ತಿದ್ದಿತು. ಈ ಕಾರ್ಯದಲ್ಲಿ ನನಗಿದ್ದ ದಕ್ಷತೆಯು ನನಗೆ ಗೊತ್ತಾದುದು ನಾನು ದಕ್ಷಿಣ ಆಫ್ರಿಕದಲ್ಲಿದ್ದಾಗ. ಭರತ ಖಂಡದ ರಾಜರು ಮಹಾ ರಾಜರುಗಳಿಂದ ಲಕ್ಷಾಂತರ ರೂಪಾಯಿಗಳನ್ನು ಸೆಳೆಯುವ ಮಾಲವೀಯರ ಅದ್ವಿತೀಯ ಇಂದ್ರಜಾಲವು ನನ್ನಲ್ಲಿರಲಿಲ್ಲ. ಆದರೆ ಜಲಿಯನ್ ವಾಲಾ ಸ್ಮಾರಕಕ್ಕಾಗಿ ರಾಜರು ಮಹಾರಾಜರುಗಳನ್ನು ಬೇಡುವ ಪ್ರಸ್ತಾಪವೇ ಒದಗುವುದಿಲ್ಲವೆಂದು ನಾನು ಅರಿತಿದ್ದೆನು. ಇದಕ್ಕಾಗಿ ಹಣ ಕೂಡಿಸುವ ಜವಾಬ್ದಾರಿಯು ನಾನು ನಿರೀಕ್ಷಿಸಿದ್ದಂತೆ ಮುಖ್ಯವಾಗಿ ನನ್ನ ತಲೆಯ ಮೇಲೆ ಬಿದ್ದಿತು. ಮುಂಬಯಿಯ ಉದಾರ ಪುರಜನರು ಕೈತುಂಬ ಹಣವನ್ನು ಕೊಟ್ಟರು. ಈಗ ಈ ನಿಧಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಬೇಕಾದಷ್ಟು ಹಣವಿದೆ. ಆದರೆ ಇಂದು ಈ ದೇಶವು ನಿರ್ಧರಿಸಬೇಕಾದ ಪ್ರಶ್ನೆ ಏನೆಂದರೆ, ಹಿಂದುಗಳೂ ಮುಸಲ್ಮಾನರೂ ಸಿಕ್ಖರೂ ತಮ್ಮ ನೆತ್ತರನ್ನು ಒಂದುಗೂಡಿಸಿ ಬಿಡವಿದ ಮಾಡಿರುವ ಆ ಭೂಮಿಯ ಮೇಲೆ ಎಂತಹ ಸ್ಮಾರಕವನ್ನು ಕಟ್ಟಬೇಕು. ಪ್ರೇಮ ಮೈತ್ರಿಗಳಿಂದ ಒಂದುಗೂಡಿರಬೇಕಾದ ಈ ಮೂರು ಪಂಗಡಗಳು ಇಂದು ಕಾಣಬರುವ ಮಟ್ಟಿಗೂ ಒಂದರ ಮೇಲೊಂದು ಯುದ್ಧಮಾಡುತ್ತಿವೆ. ಆದುದರಿಂದ ಜನಾಂಗವು ಈ ಸ್ಮಾರಕ ನಿಧಿಯನ್ನು ಹೇಗೆ ಉಪಯೋಗಿಸಬೇಕೋ ತಿಳಿಯದೆ ಕುಳಿತಿದೆ.

ಮಹಾಸಭೆಗೆ ಉಪಯೋಗವಾಗುತ್ತಿದ್ದ ನನ್ನ ಮತ್ತೊಂದು ನೈಪುಣ್ಯವೇನೆಂದರೆ—ವಾಕ್ಯರಚನಾ ಕೌಶಲ. ಯಾವ ವಿಷಯವನ್ನಾಗಲಿ ಸಂಕ್ಷೇಪವಾಗಿ ವ್ಯಕ್ತಪಡಿಸುವ ಯೋಗ್ಯತೆಯು ನನಗಿರುವುದನ್ನು ಮಹಾಸಭೆಯ ಮುಂದಾಳುಗಳು ಕಂಡುಹಿಡಿದಿದ್ದರು. ಈ ಯೋಗ್ಯತೆಯನ್ನು ನಾನು ಚಿರಾಭ್ಯಾಸದಿಂದ ಸಂಪಾದಿಸಿದ್ದೆನು. ಅಂದಿನ ಮಹಾಸಭೆಯ ರಚನಾಕ್ರಮವು ದಿವಂ. ಗೋಖಲೆಯವರು ನಿರ್ಮಿಸಿದುದಾಗಿದ್ದಿತು. ಅವರು ಸೃಜಿಸಿದ ನಾಲ್ಕಾರು ನಿಯಮಗಳ ಮೇಲೆಯೇ ಮಹಾಸಭೆಯ ಯಂತ್ರವೆಲ್ಲ ನಡೆಯುತ್ತಿದ್ದಿತು. ಈ ನಿಯಮಗಳು ಹುಟ್ಟಿದುದೆಂತೆಂಬ ಕುತೂಹಲದ ಕಥೆಯನ್ನು ನಾನು ಗೋಖಲೆಯವರ ಬಾಯಿಂದಲೇ ಕೇಳಿದ್ದೆನು. ಆದರೆ ನಿತ್ಯವೂ ಹೆಚ್ಚುತ್ತಿದ್ದ ಮಹಾಸಭೆಯ ಕಾರ್ಯಕಲಾಪಕ್ಕೆ ಈ ನಿಯಮಗಳು ಸಾಲವೆಂದೂ ಈಗ ಎಲ್ಲರಿಗೂ ತೋರಹತ್ತಿದ್ದಿತು. ಈ ಪ್ರಶ್ನೆಯು ವರ್ಷಂಪ್ರತಿ ಮಹಾಸಭೆಯ ಮುಂದೆ ಬರುತ್ತಿದ್ದಿತು. ಎರಡು ಅಧಿವೇಶನಗಳ ಮಧ್ಯದ ಕಾಲದಲ್ಲಾಗಲಿ, ಅನಿರೀಕ್ಷಿತ ಸಂದರ್ಭವೊದಗಿದಾಗಲಾಗಲಿ ಕಾರ್ಯವನ್ನು ನಿರ್ವಹಿಸಲು ಆಗ ಮಹಾಸಭೆಗೆ ಯಾವ ಸಾಧನವೂ ಇರಲಿಲ್ಲ. ಆಗಿನ ನಿಯಮಗಳ ಪ್ರಕಾರ ಮೂರು ಮಂದಿ ಕಾರ್ಯದರ್ಶಿಗಳಿದ್ದರೂ ವಸ್ತುತಃ ಅವರಲ್ಲಿ ಒಬ್ಬರೇ ಕೆಲಸ ನಡೆಸುತ್ತಿದ್ದುದು; ಅವರು ಕೂಡ ಪೂರ್ಣವೇಳೆಯ ಕೆಲಸ ಮಾಡುವವರಾಗಿರಲಿಲ್ಲ. ಅವರೊಬ್ಬರೇ ಮಹಾಸಭೆಯ ಕಚೇರಿಯನ್ನು ನಡೆಸುವುದು ಹೇಗೆ? ಅಥವಾ ಮುಂದಿನ ಆಲೋಚನೆಯನ್ನು ಮಾಡುವುದೆಂತು? ಮತ್ತು ಹಿಂದೆ ಮಹಾಸಭೆಯು ನಿರ್ಧರಿಸಿದ ಕಾರ್ಯಕ್ರಮವು ಇಂದಿನ ವರ್ಷ ನಡೆಯುವ ದಾರಿಯೇನು? ಆದುದರಿಂದ ಈ ಪ್ರಶ್ನೆಯು ಈ ವರ್ಷ ಎಂದಿಗಿಂತ ಮುಖ್ಯವಾದುದಾಗಿ ಪರಿಣಮಿಸುವುದೆಂದು ಎಲ್ಲರೂ ನಿರೀಕ್ಷಿಸಿದ್ದರು. ಸಾರ್ವಜನಿಕ ವಿಷಯಗಳ ಚರ್ಚೆಗೆ ಮಹಾಸಭೆಯು ಅತ್ಯಗಾಧವಾದ ಸಂಸ್ಥೆಯಾಗಿದ್ದಿತು. ಮಹಾಸಭೆಯ ಪ್ರತಿನಿಧಿಗಳ ಒಟ್ಟು ಸಂಖ್ಯೆಗಾಗಲಿ ಪ್ರತಿ ಪ್ರಾಂತವು ಕಳುಹಿಸಬಹುದಾದ ಪ್ರತಿನಿಧಿಗಳ ಸಂಖ್ಯೆಗಾಗಲಿ ಮಿತಿಯೇ ಇರಲಿಲ್ಲ. ಹೀಗೆ ಆಗಿದ್ದ ಅನಾಯಕ ಪರಿಸ್ಥಿತಿಯನ್ನು ಮಾರ್ಪಡಿಸುವುದು ಅತ್ಯಗತ್ಯವೆಂದು ಎಲ್ಲರಿಗೂ ತೋರುತ್ತಿದ್ದಿತು. ನಾನು ಮಹಾಸಭೆಯ ರಚನಾವಿಧಾನವನ್ನು ಬರೆಯುವ ಕಾರ್ಯವನ್ನು ಕೈಗೊಂಡೆನು. ಆದರೆ ಒಂದು ಕರಾರಿನ ಮೇಲೆ. ಅದೇನೆಂದರೆ—ಜನರ ಮೇಲೆ ಲೋಕಮಾನ್ಯರು ಮತ್ತು ದೇಶ ಬಂಧುಗಳು ಈ ಇಬ್ಬರು ನಾಯಕರ ಪ್ರಭಾವವು ಅತ್ಯಂತ ಅಧಿಕವಾಗಿದ್ದಿತು. ಪ್ರಜೆಗಳ ಪ್ರತಿನಿಧಿಗಳಾಗಿ ಇವರಿಬ್ಬರು ನನ್ನೊಡನೆ ರಚನಾವಿಧಾನ ಸಮಿತಿಯ ಸದಸ್ಯರಾಗಿರಬೇಕೆಂದು ನಾನು ಕೇಳಿದೆನು. ಆದರೆ ಅವರಿಬ್ಬರಿಗೂ ಸ್ವಂತವಾಗಿ ಬಂದು ಈ ಕೆಲಸವನ್ನು ಮಾಡುವಷ್ಟು ವಿರಾಮವು ಇಲ್ಲದಿದ್ದುದು ಸ್ಪಷ್ಟವಾಗಿದ್ದುದರಿಂದ ಅವರ ಭರವಸೆಯನ್ನು ಸಂಪಾದಿಸಿದ ಯಾರಾದರೂ ಇಬ್ಬರು ನನ್ನೊಡನೆ ಸಮಿತಿಯಲ್ಲಿರಬೇಕೆಂದೂ ಸದಸ್ಯರ ಸಂಖ್ಯೆಯು ಮೂರನ್ನು ಮೀರಕೂಡದೆಂದೂ ನಾನು ಸೂಚಿಸಿದೆನು. ಈ ಸಲಹೆಯನ್ನು ದಿವಂಗತ ಲೋಕಮಾನ್ಯರೂ, ದಿವಂಗತ ದೇಶಬಂಧುಗಳೂ ಒಪ್ಪಿ ತಮ್ಮ ಪ್ರತಿನಿಧಿಗಳಾಗಿ ಶ್ರೀ. ಎನ್. ಸಿ. ಕೇಳ್ಕರರನ್ನೂ, ಶ್ರೀ. ಐ. ಬಿ. ಸೇನರನ್ನೂ ಗೊತ್ತುಮಾಡಿದರು. ಈ ಸಮಿತಿಯು ಒಂದು ಸಲ ಕೂಡ ಒಟ್ಟುಗೂಡಲಾಗಲಿಲ್ಲ. ಆದರೆ ಪತ್ರವ್ಯವಹಾರದ ಮೂಲಕ ನಾವು ಒಬ್ಬರ ಸಲಹೆಯನ್ನೊಬ್ಬರು ತೆಗೆದುಕೊಂಡು, ಕಡೆಗೆ ಏಕಾಭಿಪ್ರಾಯವುಳ್ಳ ವರದಿಯನ್ನು ಒಪ್ಪಿಸಿದೆವು. ಈ ವರದಿಯ ವಿಷಯದಲ್ಲಿ ನನಗೆ ಸ್ವಲ್ಪ ಅಭಿಮಾನವುಂಟು. ನಾವು ಇದರಲ್ಲಿನ ರಚನಾವ್ಯವಸ್ಥೆಯನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದರೆ ಹಾಗೆ ಮಾಡುವುದೇ ನಮಗೆ ಸ್ವರಾಜ್ಯವನ್ನು ಸಾಧಿಸಿ ಕೊಡುವುದೆಂದು ನನ್ನ ಅಭಿಪ್ರಾಯ. ಈ ಜವಾಬ್ದಾರಿಯನ್ನು ಹೆಗಲ ಮೇಲೆ ಹೊತ್ತಂದಿನಿಂದ ನಾನು ಮಹಾಸಭೆಯ ಕಾರ್ಯಕಲಾಪದಲ್ಲಿ ಪ್ರವೇಶಿಸಿದೆನೆಂದು ಹೇಳಬಹುದು.

ಮಾಂಸಾಹಾರವನ್ನು ವರ್ಜಿಸಬೇಕೆಂಬುವೇಕೆ?

ಸ್ವಭಾವಸಿದ್ಧವಾಗಿಯೇ ಮನುಷ್ಯರು ಮಾಂಸಾಹಾರಿಗಳಲ್ಲವೆಂಬುದಕ್ಕೆ ಅನೇಕ ನಿದರ್ಶನಗಳುಂಟು. ಈ ಮಾಂಸಾಭಕ್ಷಣದಲ್ಲಿರುವ ಗುಣಾಗುಣ ವಿಚಾರಗಳು ಕೇವಲ ವಿದ್ಯಾವಂತರಿಗೂ ಮತ್ತು ಅದರ ಸೂಕ್ಷ್ಮ ಪರಿಶೋಧನೆಯಲ್ಲಿ ಅಕ್ಕರೆಯುಳ್ಳವರಿಗೂ ಮಾತ್ರವಲ್ಲದೆ, ಸಾಧಾರಣವಾಗಿ ಜನಸಾಮಾನ್ಯಕ್ಕೆಲ್ಲ ಕುತೂಹಲವನ್ನುಂಟುಮಾಡತಕ್ಕವುಗಳಾಗಿವೆ. ಸಾಮಾನ್ಯ ಜನರ ನಡವಳಿಕೆಯಿಂದ, ಮೇಲೆ ಕಂಡ ವಿಚಾರವನ್ನು ಕುರಿತು ಅವರು ಕೇವಲ ಅಲಕ್ಷ್ಯ ಬಾವವಿಂದಿರುವಂತಿದ್ದರೂ, ಅವರಿಗೂ ಇದರ ವಿಚಾರದಲ್ಲಿ ಸಂಪೂರ್ಣವಾದ ಅನುಭವವಿಲ್ಲದೆ ಇಲ್ಲ. ಸಂಗ್ರಹವಾಗಿ ಹೇಳುವದಾದರೆ ಮಾಂಸ ವರ್ಜಿತವಾದ ಆಹಾರವೇ ಮನುಷ್ಯ ವರ್ಗಕ್ಕೆ ಎಲ್ಲಾ ಭಾಗದಲ್ಲಿಯೂ ಒಳ್ಳೆಯದೆಂದು ಏರ್ಪಡುವುದು. ಹೀಗಿರುವಾಗಲೂ ಇನ್ನೂ ಅಲ್ಲಲ್ಲಿ ಕೆಲವು ಪಾಶ್ಚಾತ್ಯರೂ, ನೋಧಾವಿಗಳೂ ಮನುಷ್ಯನ ಆರೋಗ್ಯ ದೇಹವಕ್ಕೆ ಮಾಂಸಾಹಾರವು ಅತ್ಯವಶ್ಯವಾಗಿ ಇದ್ದೇ ತೀರಬೇಕೆಂದೂ, ಮಾಂಸವನ್ನು ತಕ್ಕಮಟ್ಟಿಗಾದರೂ ಆಹಾರದಲ್ಲಿ ಸೇರಿಸಿಕೊಳ್ಳದಿರುವ ಮನುಷ್ಯನ ಬದುಕು ಎಂದಿದ್ದರೂ ಸುಖಕರವಲ್ಲವೆಂದೂ ವಾದಿಸುವರುಂಟು. ಇದನ್ನು ನೋಡಿದರೆ ಆಶ್ಚರ್ಯವಾಗಿದೆ. ಮನುಷ್ಯನಿಗೆ ಮಾಂಸಾಹಾರ, ಶಾಕಾಹಾರಗಳೆರಡೂ ಮಿಶ್ರಿತವಾಗಿರಬೇಕೆಂಬುದು ಇತರ ಅಭಿಪ್ರಾಯವು. ಆದರೆ, ಮಾಂಸಭೋಜನವನ್ನೇ ಮುಖ್ಯವೆಂದು ಕೆಲವರೂ, ಶಾಕಭೋಜನವೇ ಉತ್ತಮವೆಂದು ಕೆಲವರೂ ವಾದಿಸುತ್ತಿರುವಾಗ, ಆ ಉಭಯ ಪಕ್ಷದವರ ಮನಸ್ಸಮಾಧಾನಕ್ಕಾಗಿ ಮೇಲೆ ಹೇಳಿದ ಮಧ್ಯಸ್ಥವಾಗಿರುವ ಮತ್ತು ಒಂದು ವಿಚಾರವನ್ನು ಕುರಿತು ವಾದಪ್ರತಿವಾದಗಳು ಹುಟ್ಟಿದ ಸಮಯದಲ್ಲಿ ಇವರಡಕ್ಕೂ ಮಧ್ಯಸ್ಥವಾದ ಸಮಾಧಾನವು ಬೇಕೇ ಬೇಕು. ಇದಲ್ಲದೆ, ಮನುಷ್ಯ ಜೀವನವನ್ನೇ ವಿಷಯೀಕರಿಸುವ ಇಂತಹ ವಿಷಯಗಳಲ್ಲಿ ವಾದ ಪ್ರತಿವಾದಿಗಳ ಮನಸ್ಸಮಾಧಾನವನ್ನು ನಿರ್ಣಯಿಸಿ ತೀರ್ಮಾನವನ್ನು ಹೊಂದುವುದು ನ್ಯಾಯವಲ್ಲ. ಇಂಡಿಯಾ ದೇಶದಲ್ಲಿ ಅನ್ಯದೇಶಗಳಂತಲ್ಲದೆ, ಬಹು ಪುರಾತನಕಾಲದಿಂದ ಶಾಕಾಹಾರವೇ ಮುಖ್ಯವಾಗಿರುವುದೇಕೆಂದು ನಾವು ಯೋಚಿಸಬೇಕು. ಬಹು ದೀರ್ಘಕಾಲದ ಯೋಚನೆಯಿಂದಲೇ ನಮ್ಮ ಪುರಾತನಾರ್ಯರು ಈ ದೇಶಕ್ಕೆ ಮಾಂಸಾಹಾರವನ್ನು ಅನಾವಶ್ಯಕವಾಗಿ ವಿಧಿಸಲಿಲ್ಲವೆಂಬುದೂ ತಿಳಿಯಬೇಕು. ಈ ಸಂಗತಿ ಹಾಗಿರಲಿ! ಇನ್ನು ಬೇರೆ ಎಷ್ಟೋ ನಿರೂಪಣೆಗಳಿಂದ, ಮಾಂಸಾಹಾರವು ಭಾರತೀಯರಾದ ನಮಗೆ ಎಂದಿಗೂ ಹಿತವಲ್ಲವೆಂದು ಸ್ಪಷ್ಟವಾಗಿ ನಿರೂಪಿಸಬಹುದು. ಪಾಶ್ಚಾತ್ಯ ದೇಶದಲ್ಲಿರುವ ಅನೇಕ ವಿದ್ವಾಂಸರೂ ಶಾಸ್ತ್ರಜ್ಞರೂ, ಸಮಾಜಸುಧಾರಕರೂ, ತತ್ವಪರಿಶೋಧಕರೂ ಮಾಂಸಾಹಾರವು ಮನುಷ್ಯನಿಗೆ ಯೋಗ್ಯವಲ್ಲವೆಂಬುದಕ್ಕೆ ಎಷ್ಟೋ ನಿದರ್ಶನಗಳನ್ನು ಕೊಟ್ಟಿರುವರು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕಾಣಿಸುವೆವು. ಮಾಂಸಾಹಾರವನ್ನು ಸಂಪೂರ್ಣವಾಗಿ ಬಿಡಬೇಕೆಂದೇ ಅವು ಸ್ಪಷ್ಟವಾಗಿ ತೋರಿಸುವವು. ನಮ್ಮ ಆಹಾರದಲ್ಲಿ ಶಾಸ್ತ್ರೀಯವಾದ ಪೂರ್ಣಪದ್ಧತಿಯನ್ನು ಬಿಡುವುದಕ್ಕಾಗಲೀ ಬದಲಾಯಿಸುವುದಕ್ಕಾಗಲಿ ನಾವು ಪ್ರಯತ್ನಿಸುವುದು ಬಹಳ ಕೆಡುಕೆಂಬುದನ್ನು ಅವು ಆಗ್ಯನೆಲ್ಲಿಯಂತೆ ಸ್ಪಷ್ಟವಾಗಿ ಕಾಣಿಸುತ್ತಿರುವುವು.

ಮನುಷ್ಯನು ಮಾಂಸಾಹಾರಿ ಪ್ರಾಣಿವರ್ಗದಲ್ಲಿ ಸೇರಿಲ್ಲವೆಂಬುದು ಶಾರೀರ ಶಾಸ್ತ್ರದಿಂದಲೇ ಚೆನ್ನಾಗಿ ಸ್ಪಷ್ಟವಾಗುವುದು. ಮನುಷ್ಯನ ಕರುಳುಗಳು, ನಾಯಿ, ಹುಲಿ, ಮುಂತಾದ ಮಾಂಸಾಹಾರಿ ಪ್ರಾಣಿಗಳ ಕರುಳುಗಳಂತೆ ಹ್ರಸ್ವವಾಗಿಲ್ಲದೆ ಅವುಗಳಿಗಿಂತ ದೊಡ್ಡದಾಗಿರುವುವು. ಅಲ್ಲದೆ ಇವನ ಹಲ್ಲುಗಳ ರಚನೆಯೂ ಆ ಮೃಗಗಳ ಹಲ್ಲುಗಳಷ್ಟು ಹರಿತವಾಗಿಯೂ, ಮೊನೆಯಾಗಿಯೂ ಇರುವುದಿಲ್ಲ. ಜೀವಸಹಿತವಾಗಿರುವ ಆಹಾರ ಯೋಗ್ಯವಾದ ಪ್ರಾಣಿಗಳ ಮೇಲೆ ಬಿದ್ದು ಹಿಡಿಯುವುದಕ್ಕಾಗಲಿ, ಆ ಪ್ರಾಣಿಗಳ ಶರೀರವನ್ನು ಸುಲಿಯುವುದಕ್ಕಾಗಲಿ, ಅವುಗಳನ್ನು ಎತ್ತಿಕೊಂಡು ಓಡಿಹೋಗುವುದಕ್ಕಾಗಲೀ ತಕ್ಕಷ್ಟು ಶಕ್ತಿಯೂ, ಸೌಕರ್ಯವೂ ಮನುಷ್ಯನಿಗಿರುವುದಿಲ್ಲ. ಆದರೆ ಕೆಲವರು, ಮನುಷ್ಯ ಶರೀರ ರಚನೆಯು ಮಾಂಸಾಹಾರಶಾಕಾಹಾರಗಳೆರಡಕ್ಕೂ ಅನುಕೂಲಿಸುವಂತೆ ನಡುತರವಾದ ಸ್ಥಿತಿಯಲ್ಲಿರುವುದೆಂದು ಹೇಳಬಹುದು. ಇದೇನೋ ವಾಸ್ತವವೇ! ಆದರೆ ಆ ಮಧ್ಯಸ್ಥತೆಯು ಶಾಕಭಕ್ಷಣಕ್ಕೂ, ಫಲಭಕ್ಷಣಕ್ಕೂ ಅನುಕೂಲವಾದ ಸ್ಥಿತಿಯೇ ಹೊರತು, ಮಾಂಸಭಕ್ಷಣದ ಸೌಕರ್ಯಕ್ಕಾಗಿ ಏರ್ಪಟ್ಟದಲ್ಲ. ಆದುದರಿಂದ ಮನುಷ್ಯವರ್ಗಕ್ಕೆ ಏರ್ಪಟ್ಟ ಆಹಾರವಿಶ್ರಣಗಳಲ್ಲಿ ಕಾಯಿಪಲ್ಯಗಳು, ಗೆಡ್ಡೆಗೆಣಸುಗಳು, ಕೀರೆಯಜಾತಿಗಳು, ಫಲಜಾತಿಗಳು ಇವು ಮಾತ್ರವೇ ಹೊರತು, ಮಾಂಸವು ಅದರಲ್ಲಿ ಸೇರುವುದಿಲ್ಲ. ಮನುಷ್ಯರ ಹಲ್ಲುಗಳ ರಚನೆಯೂ ಅದೇ ಅಂಶವನ್ನು ನಿರೂಪಿಸುವುವು.

ಇದೇ ಸಿದ್ಧಾಂತಕ್ಕೆ ಬೇರೊಂದು ಮುಖ್ಯವಾದ ಆಧಾರವುಂಟು. ನಮ್ಮ ಶರೀರರಚನೆಯು ಹೇಗೋ ಹಾಗೆ, ಇಂದ್ರಿಯಗಳ ವ್ಯಾಪಾರವೂ ಮನುಷ್ಯನು ಮಾಂಸಾಹಾರಿಯಲ್ಲವೆಂಬುದನ್ನೆ ತೋರಿಸುವುದು. ಮನುಷ್ಯನಿಗೆ ರುಚಿಯನ್ನು ನೋಡುವ ಮತ್ತು ವಾಸನೆಯನ್ನು ಕಂಡುಹಿಡಿಯುವ ಶಕ್ತಿಯೂ, ಅತ್ತ ಹೋಗುವ ಮಾರ್ಗವೂ ಮಾಂಸಭಕ್ಷಕ ಮೃಗಗಳಿಗಿಂತ ಬೇರೆ ವಿಧವಾದುದು. ಮನುಷ್ಯನಿಗೆ ಮಾಂಸಾಹಾರವು ಬಹಳ ಮುಖ್ಯವೆಂದು ವಾದಿಸುವವರಾದರೂ ಕೂಡ, ಮಾಂಸವನ್ನು ತಕ್ಕರೀತಿಯಲ್ಲಿ ಪಕ್ವಮಾಡಿ, ಬಾಯಿಗೆ ರುಚಿಯಾಗುವಂತೆ ಪರಿಕರಗಳನ್ನು ಸೇರಿಸಿದ ಹೊರತು, ಬರೀ ಮಾಂಸವನ್ನು ತಿನ್ನುವುದಕ್ಕೆ ಸಮ್ಮತಿಸುವಹಾಗಿಲ್ಲ. ಇದೇ ವಿಚಾರವಾಗಿ ಷೆಲ್ಲಿ ಎಂಬ ಪಾಶ್ಚಾತ್ಯ ಕವಿಯೊಬ್ಬನು ಹೀಗೆಂದು ಬರೆದಿರುವನು.

"ಸತ್ತ ಪ್ರಾಣಿಯ ದೇಹಮಾಂಸವನ್ನು ಕುಯ್ದು, ಬೇಯಿಸಿ, ಮೃದುವಾಗಿ ಮಾಡಿ, ಪರಿಕರಗಳನ್ನು ಸೇರಿಸಿ, ಅದಕ್ಕೆ ಮೊದಲಿದ್ದ ಆಕೃತಿಯೇ ತಿಳಿಯದಂತೆ ಮಾಡಿಟ್ಟರೆ ಮಾತ್ರ ಮನುಷ್ಯನು ಅದನ್ನು ಅಗಿದು ತಿಂದು ಜೀರ್ಣಿಸಿಕೊಳ್ಳಬಲ್ಲನೇ ಹೊರತು, ಹಸಿ ಮಾಂಸದಿಂದ ಸೋರುತ್ತಿರುವ ರಕ್ತವನ್ನು, ಅದರ ಘೋರವಾದ ಸ್ಥಿತಿಯನ್ನೂ ಕಣ್ಣಾರೆ ನೋಡುತ್ತಿರುವವರೆಗೆ ಅದರ ಮೇಲೆ ಅನಾದರವೂ, ಅಸಹ್ಯವೂ ಹುಟ್ಟದಿರಲಾರದು. ಇದು ನಿಜವೇ ಅಲ್ಲವೇ, ಎಂದು ಸಂದೇಹ ಪಡುವವರು ನಿಜಸ್ಥಿತಿಯನ್ನು ಕಂಡುಕೊಳ್ಳಬೇಕೆಂದಿದ್ದರೆ, ಒಂದು ಪರೀಕ್ಷೆಯನ್ನು ಮಾಡಿನೋಡಲಿ!" ಎಂದು ಹೇಳಿರುವನು. ಪ್ಲುಟಾರ್ಕ್ ಎಂಬ ವಿದ್ವಾಂಸನು ಹೇಳುವುದೇನೆಂದರೆ—'ಜೀವಸಹಿತವಾದ ಒಂದು ಸಣ್ಣ ಆಡುಮರಿಯನ್ನು ತಂದು ಒಬ್ಬ ಮಾಂಸಾಹಾರಿಯ ಮುಂದಿಟ್ಟು, ಬಾಯಿಂದಲೇ ಅದನ್ನು ಇತರ ಮಾಂಸಾಹಾರಿ ಮೃಗಗಳಂತೆ ಅದನ್ನು ಕಡಿದು, ಅದರ ರಕ್ತವನ್ನು ಹೀರಿ ಮಾಂಸವನ್ನು ತಿಂದು, ತನ್ನ ಹಸಿವು ಬಾಯಿಕೆಯನ್ನು ಹಿಂಗಿಸಿಕೊಳ್ಳುವಂತೆ ಹೇಳಿದರೆ, ಅದನು ಆ ಕಾರ್ಯಕ್ಕೆ ಯತ್ನಿಸುವಾಗ, 'ದೈವವು ಈ ಕಾರ್ಯಕ್ಕಾಗಿ ನನ್ನನ್ನು ಸೃಷ್ಟಿಸಿದ ಹಾಗಿಲ್ಲ' ವೆಂದು ಅವನ ಮನಸ್ಸಿಗೆ ತಾನಾಗಿಯೇ ತೋರುವುದು. ಹಾಗೆ ಅವನಿಗೆ ತೋರದಿದ್ದರೆ ಮಾತ್ರ ಆತನು ಮನುಷ್ಯನನ್ನು ಮಾಂಸಭಕ್ಷಕನನ್ನಾಗಿಯೇ ದೇವರು ಸೃಷ್ಟಿಸಿರಬೇಕೆಂದು ಹೇಳುವುದು ಉಚಿತವು."

ಈ ಯುಕ್ತಿವಾದಗಳೆಲ್ಲ ಹಾಗಿರಲಿ! ಮನುಷ್ಯರು ಬಹು ಪುರಾತನಕಾಲದಿಂದಲೇ ಮಾಂಸಭಕ್ಷಕರಾಗಿರುವರು. ಆದರಿಂದ ಅವರ ಮೈಗಾಗಲೀ, ಬುದ್ಧಿಗಾಗಲೀ ಯಾವತರದ ಹಾನಿಯೂ ಕಂಡುಬಂದಿಲ್ಲ. ಇದರಿಂದ ಅವರು ಪ್ರಾಣಿವರ್ಗದಲ್ಲಿ ಸೇರಿರುವ ಮನುಷ್ಯಜಾತಿ ಸಂಬಂಧವಾದ ಮೇಲ್ಮೆಯನ್ನು ಯಾವ ವಿಧದಲ್ಲಿಯೂ ಕಳೆದುಕೊಂಡಿಲ್ಲ" ಎಂದು ಕೆಲವರು ಗುಣಸುಟ್ಟಬಹುದು. ಅದೂ ವಾಸ್ತವವೇ! ಅದರಲ್ಲಿ ಸಂದೇಹವಿಲ್ಲ. ಆದರೆ, ಪ್ರಕೃತಿಯು ಯಾವ ಜನರ ಆಕೃತಿಯ ಪ್ರವೇಶಕ್ಕೆ ತಕ್ಕ ಪ್ರವೃತ್ತಿಗಳನ್ನು ಕಲ್ಪಿಸದೆ ಬಿಟ್ಟಿಲ್ಲ. ಈ ವಿಚಾರದಲ್ಲಿ ದೈವಶಕ್ತಿಯು ಅತ್ಯಾಶ್ಚರ್ಯಕರವಾದುದು. ನಾವು ನಮಗೆ ಸ್ವಭಾವಸಿದ್ಧವಲ್ಲದ ಕಾರ್ಯಕ್ಕೆ ಪ್ರಯತ್ನಿಸಿದಾಗ ನಮ್ಮಿಂದ ಅದಕ್ಕೆ ತಕ್ಕ ದಂಡವನ್ನು ದೇವರು ತೆಗೆದುಕೊಳ್ಳದೆ ಬಿಡುವುದಿಲ್ಲ? ಆ ದಂಡ ಯಾವುದು? ನಮ್ಮ ದೇಶದ ಜನರಿಗೆ ಪೂರ್ವಕಾಲದಿಂದಲೂ ಅನುಭವಕ್ಕೆ ಬಾರದ ತಿಳಿಯದ ರೋಗಗಳಲ್ಲದೆ, ನಮಗೂ ತಿಳಿಯದ ಹೊಸ ಹೊಸ

ೀಗಗಳು, ವರ್ಷವರ್ಷಕ್ಕೂ ಹೆಚ್ಚಿ ಬಂದು ನಮ್ಮನ್ನು ಪೀಡಿಸುತ್ತಿರುವುದಲ್ಲವೇ ? ಇದಕ್ಕೆ ಕಾರಣವೇನು ? ನಮ್ಮ ಶರೀರದ ಪೋಷಣೆಗೆ ಇತರ ಮೂಲಗಳ ಸಂಬಂಧನೇ ಹೆಚ್ಚಿರಲಿಲ್ಲ

ಆರೋಗ್ಯ ಮಿತ್ರ

ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಒಳ್ಳೆ ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ ಸರಿಯಾಗಿ ಗಂಟೆಯನ್ನು ತೋರಿಸುವವು ಇದರ ಕೇಸು ಭಂಗಾರಕ್ಕೆ ಸರಿಸಮಾನವಾಗಿರುವದು ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ

ವಹಿತ್ರ ಒಂದು ಅಲಾರಂ ಟೈಂಪೀಸ್ ಇನಾಮಾಗಿ ಕೊಡುವೆವು. ಕ್ರಯ 7- 0—0,

ವಿಳಾಸ —ಲಿಬರ್ಟಿ ವಾಚ್ ಕಂಪೆನಿ,

52—1 ಪೋ ಬಾ ೫೪೩ ಮದರಾಸು

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಸುಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ಗಳ್ಗೆ 0-14-0 ಟ ಖ 0-9-0

ಕೆ. ಟಿ. ಡೋಂಗರೆ ಕಂಪೆನಿ.

52—40 ಗಿರಗಾಂವ, ಮುಂಬಯಿ.

Wanted.

Branch Secretaries at Siddapur and Somvarpet on Rs 50—5—75 plus consolidated (Office) allowance of Rs 40/ per mensem Selected candidates have to deposit Rs 25/ Very decent prospects for honest and influential gentlemen Particulars on application

Apply to —

THE DIVISIONAL SECRETARY

N. I. S. R. Bank Ltd.,

(Madras)

4—3 Puttur South Kanara



FOR SEASON, 1929 30,

CURRENT CATALOGUE ON APPLICATION

ANNOUNCES GREAT REDUCTION IN PRICES OF

Guns, Rifles, Revolvers, Pistols, Cartridges & Hunting Requisites

THE BOMBAY ARMOURY,

331 ABDULREHMAN STREET

BOMBAY No. 3

24—1

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ ಪಿತ್ತದಬಾಧೆ ರಕ್ತಪಿತ್ತ ... ಮಲಬದ್ಧತೆ, ಕೈಕಾಲು ... ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು —ಕ್ರಯ ಡಬ್ಬಿ 1 ಕ್ಕೆ 2—8—0 ... ಡಬ್ಬಿಗಳಿಗೆ ರೂ 7—0—0

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ ... 3 ದಿವಸಕ್ಕೊಂದು ಸಾರಿ ಬರುವ ... ರ ಗೆಡ್ಡೆಯಿಂದ ಬರುವ ... ಕರಗಿ ಶಕ್ತಿಯನ್ನು ... 1 ಕ್ಕೆ 1—8—0 3 ಬಾಟ್ಲಿಗಳಿಗೆ 4—4—0

೪. ಭೃಂಗಾಮಲಕ ತೈಲ.

ಅಷ್ಟಂಗಕ್ಕೆ ಅಮೋಘವಾದದ್ದು ... ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ ... ದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗುವಿಕೆಗೆ ... ಬಾಟ್ಲಿ 1 ಕ್ಕೆ 1—4—0 3 ಕ್ಕೆ 3—8—0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ ಬಾಟ್ಲಿ 1 ಕ್ಕೆ 0—8—0, 3 ಕ್ಕೆ 1 6 0

೬. ಕಸ್ತೂರಿ ಮಿಶ್ರಣ.

ಒಳ ಮುಲಾರಿಷ್ಟ ಬಾಣಂತಿಯರಿಗೆ. ಬಾಟ್ಲಿ 1 ಕ್ಕೆ 1 8 0 3 ಬಾಟ್ಲಿಗೆ 4—4—0

೭. ರಕ್ತಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1-4-0, 3 ಬಾಟ್ಲಿಗೆ 3 6 0

೮. ಚವನ ಪ್ರಾಶ ಡಬ್ಬಿ 1 ಕ್ಕೆ 2—0—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ... ಮಾಲಿ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸ ಲಾಗುವದು ಕಟಲಾಗು ತರಿಸಿ ನೋಡಿರಿ

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದೀಯ ಫಿಜಿಷಿಯನ್ಸ್,

52—34 ರಥಬೀದಿ ಮಂಗಳೂರು, ದ. ಕನ್ನಡ.

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್ ಈದಿಗ ಯಕ್ಸ್‌ಪೋರ್ಟರ್ಸ್, ಮೈಸೂರು.

ನಮ್ಮಲ್ಲಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಫಿಲ್ಟರುಗಳಿಂದ ಶೋಧಿಸಲ್ಪಟ್ಟ ಅಪ್ಪಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸಹ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯಬೇಕೆಂಬುವವರು ಕೃಷ್ಣರಾಜ ಸರ್ಕಲ್ ಬಳಿಯಲ್ಲಿ ಇರುವ ನನ್ನ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರ ದ್ವಾರ ತಿಳಿಯಬಹುದು

26—5

Ready ! Sales & Service !!

The most competitive CAR in the most competitive YEAR

THE NEW MODEL A *Ford!*

with three speed selective sliding gear Transmission

The most economical car in the market

For Demonstration & further particulars

Please apply to —

S. Sunder Rau,

Ford Dealer for Coorg,

24—1 **MERCARA**

Wanted.

Candidates for Wireless Telegraph and Station Master's Courses Railway Fare PAID Boarding arrangement

Prospectus on two anna stamps— Royal Wireless & Telegraph College

12—9 **DELHI**

ವರ್ತಮಾನ ಸಂಗ್ರಹ.

ಒಳ ದೇಶ.

ಮಡಿಕೇರಿ ಕಾನ್ವೆಂಟ್ ಸ್ಕೂಲಿಗೆ ಜುಲೈ ಒಂದು ತಿಂಗಳು ಮಳೆಗಾಲದ ರಜೆ ಬಿಡಲಾಗಿದೆ

ಫ್ರೇಜರ್‌ಪೇಟೆಯಲ್ಲಿ ಸರ್ವೆ ಸ್ಕೂಲು ಈ ತಿಂಗಳು 15 ರಲ್ಲಿ ಪ್ರಾರಂಭವಾಗುವದೆಂದು ಕೇಳುತ್ತೇವೆ

ಉತ್ತರ ಕೊಡಗಿನ ಸಬ್‌ಡಿವಿಜನ ಮೆ ಮಂಡೇಪಂಡ ಮಂದಣ್ಣನವರಿಗೆ ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟ್ ಅಧಿಕಾರ ಕೊಡಲಾಗಿದೆ

ಹೆರವನಾಡು, ಭಾಗಮಂಡ್ಲ ಮತ್ತು ಗೋಣಿಕೊಪ್ಪಲು ಪ್ರದೇಶಗಳಲ್ಲಿ ದನಗಳಿಗೆ ಗಂಟ್ಲುಕಟ್ಟು ಮತ್ತು ದೊಡ್ಡ ರೋಗಗಳು ಇವೆಯೆಂದು ತಿಳಿಯಬರುತ್ತದೆ

ಮೆ. ಕೊಂಗಂಡ ಅಚ್ಚಯ್ಯನವರ ಪತ್ನಿ ಶ್ರೀಮತಿ ಚೋಂದವ್ವನವರು ಮದ್ರಾಸಿನಲ್ಲಿ ಗೌರವ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರೆಂದು ಕೇಳಿ ಸಂತೋಷಪಡುತ್ತೇವೆ. ಕೊಡಗು ಮಹಿಳೆಯರಿಗೆ ಈ ಪದವಿ ದೊರೆತದ್ದು ಇದೇ ಮೊದಲು

ಕಳೆದ ತಿಂಗಳು 23ನೇ ಆದಿತ್ಯವಾರ ಬೆಳಿಗ್ಗೆ ಹಿಂದಿನ ದೇಶದ ಬೇರೆ ಹಲವು ಕಡೆಗಳಲ್ಲಾದಂತೆ ಪೊನ್ನಂಪೇಟೆಯ ಕುಶಾಲಪುರದಲ್ಲಿಯೂ ರಾಷ್ಟ್ರೀಯ ಧ್ವಜಾಭಿವಂದನೆಯೂ ನಡೆಯಿತು. ಜೋರಾದ ಮಳೆಯ ದೆಸೆಯಿಂದ ಹೆಚ್ಚು ಸ್ವಯಂಸೇವಕರು ಸೇರಿರಲಿಲ್ಲವಂತೆ

ಕೊಡವ ವಿದ್ಯಾಭಿವೃದ್ಧಿ ಫಂಡಿನ ಜನರಲ್ ಮೀಟಿಂಗು ಆದರ ಪ್ರಮುಖ ಅಧಿಕಾರಿ ರಾ ಬಾ ಕೇಟೋಳಿರ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ತಾ 1ರಲ್ಲಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲ್‌ನಲ್ಲಿ ನಡೆಯಿತು ಇದರ ವಿವರವು ಬರುವ ವಾರ ಪ್ರಕಟಿಸಲಾಗುವುದು

ಮಡಿಕೇರಿಯಲ್ಲಿ ಕಳೆದ ಜೂನ್ ತಾರೀಕು 21ರಿಂದ 28 ರ ವರೆಗೆ 7.63 ಇಂಚೂ, ತಾ 28ರಿಂದ ಜುಲೈ ತಾರೀಕು 5 ರ ವರೆಗೆ 11.52 ಇಂಚೂ ಮಳೆಯಾಗಿದೆ. ಜೋರಾಗಿ ಹೊಡೆದ ತಾ 4ರಲ್ಲಿ 4.59 ಇಂಚು ಮಳೆ ಬಿತ್ತು ಜೂನ್ 1ರಿಂದ 30 ರ ವರೆಗೆ ಒಟ್ಟು 42.32 ಇಂಚು ಮಳೆಯಾಗಿದ

ಹಂಗಾಮಿ ಕಮಿಶನರಾದ ಶ್ರೀ ಬ್ರಾ. ಕೇಟೋಳಿರ ಚಂಗಪ್ಪನವರ, ರಿಟಯರ್ಡ್ ಸಬ್ ಜಡ್ಜ್ ಮೆ ಅಪ್ಪಾರಂಡ ಕಾರ್ಯಪ್ಪನವರು ಮತ್ತು ಹೊಸ ಸಬ್ ಜಡ್ಜ್ ಮೆ ಪಾಲೇಕಂಡ ಮೇದಪ್ಪನವರಿಗೆ ಕಳೆದ ತಾ 30ರಲ್ಲಿ ವೀರಾಜಪೇಟೆಯಲ್ಲಿ ಒಂದು ಟೀ ಪಾರ್ಟಿಯು ಕೊಡಲಾಯಿತೆಂದು ತಿಳಿಯುತ್ತೇವೆ

ಮಿಸಸ್ ಕೊಡಂದೇರ ಸಿ. ತಿಮ್ಮಯ್ಯನವರು, ಮೆ ಮನೆಯಪಂಡ ಬಿ ಚಿಣ್ಣಪ್ಪನವರು ಮತ್ತು ಮೆ. ರಸೂಲ್‌ಖಾನ್ ಸಾಹೇಬ್‌ರವರು 1929ನೇ ಜೂನ್ 1 ರಿಂದ ಎರಡು ವರ್ಷಗಳ ವರೆಗೆ ಮಡಿಕೇರಿ ಜೈಲಿನ ಬೇಟಿಯ ಉದ್ಯೋಗಸ್ಥ ಪ್ರೇಕ್ಷಕರ (ನಾನ್ ಆಫೀಷ್ಯಲ್ ವಿಸಿಟರ್ಸ್) ರಾಗಿ ನೇಮಿಸಲ್ಪಟ್ಟಿರುವರು

ಹೂ ಬಾಣದ, ಒಂದು ಮೊಳಕ್ಕಿಂತ ಉದ್ದದ ಹಿಂಗೋಡಿನ ಒಂದು ಎಮ್ಮೆಯೂ, ಆದರ ಎರಡು ಹೆಣ್ಣು ಕರುಗಳೂ ಸುಮಾರು 3-4 ತಿಂಗಳುಗಳಿಂದ ಕುಂಜಿಲ ಮತ್ತು ನಾಪೋಕ್ಲು ಗ್ರಾಮಗಳಲ್ಲಿ ಪರಾರಿಯಾಗಿ ಎಲ್ಲಿಯಾದರೂ ಇದ್ದರೆ ಮಾಲೀಕರು ಬಂದು ಹಿಡಿದುಕೊಂಡು ಹೋಗಬಹುದೆಂದು ಮೆ. ಮೂದಂಡ ಮಂದಣ್ಣನವರು ತಿಳಿಸುತ್ತಾರೆ

ತಾ 1ರಲ್ಲಿ ಮಡಿಕೇರಿಯಲ್ಲಿ ನಡೆದ ಕೊಡವ ವಿದ್ಯಾಭಿವೃದ್ಧಿ ಫಂಡಿನ ಸೆಂಟ್ರಲ್ ಕಮಿಟಿ ಮೀಟಿಂಗಿನಲ್ಲಿ ಈ ಕೆಳಗಿನ ಮೇರೆ ಸ್ಕಾಲರ್‌ಶಿಪ್‌ಗಳು ಮಂಜೂರಾಗಲ್ಪಟ್ಟವು ಮೆ ಗಳಾದ ನೆಲ್ಲಮಕ್ಕಡ ದೇವಯ್ಯ ಬೊಳಕಾರಂಡ ಕಾರ್ಯಪ್ಪ ಮನೆಯಪಂಡ ಬೆಳ್ಯಪ್ಪ ಮಂಡೇಪಂಡ ಐಯ್ಯಪ್ಪ ಮತ್ತು ಕಾಳಪ್ಪನವರಿಗೆ ತಿಂಗಳಿಗೆ 10 ರೂ ರಂತೆ 10 ತಿಂಗಳ ವರೆಗೆ ವೇತನವು ಮುಂದರಿಸಲ್ಪಟ್ಟಿತು ಈ ಕೆಳಗಿನವರಲ್ಲಿ ಇಂಪೀರಿಯಲ್ ಅಥವಾ ಪ್ಲಾಂಟೇಶನ್ ಫಂಡ್ ಸ್ಕಾಲರ್‌ಶಿಪ್ ದೊರೆಯದವರಿಗೂ, ನಂಬರು 1ರಿಂದ 3ರ ವರೆಗಿನವರು ಅವರ ನಡತೆ ಮತ್ತು ವಿದ್ಯಾಭಿವೃದ್ಧಿಯ ವಿಷಯ ಅವರವರ ಕಾಲೇಜುಗಳ ಪ್ರಿನ್ಸಿಪಾಲರುಗಳಿಂದ ತೃಪ್ತಿಕರವಾದ ರಿಪೋರ್ಟು ಕಳುಹಿಸಿದರೆ ಅವರಿಗೂ ತಿಂಗಳಿಗೆ 10 ರೂಪಾಯಿಯಂತೆ 10 ತಿಂಗಳ ವರೆಗೆ ವೇತನಗಳು ಕೊಡಲ್ಪಡುವವು ಮೆ ಗಳಾದ 1. ಮುಕ್ಕಾಟಿರ ಮುದ್ದಪ್ಪ, 2 ಚೊಟ್ಟೆಯಂಗಳ ಅಪ್ಪಣ್ಣ, 3. ಮನೆಯಪಂಡ ಪೊನ್ನಪ್ಪ, 4 ಪಟ್ಟಮಾಡ ಕಾರ್ಯಪ್ಪ, 5 ಕೇಳಿಯಂಡ ಗಣಪತಿ, 6 ಮೊಣ್ಣಂಡ ಕಾರ್ಯಪ್ಪ, 7. ಪಾಲೇಕಂಡ ದೇವಯ್ಯ, 8 ಕುಪ್ಪಂಡ ಚಂಗಪ್ಪ, 9 ಮಾಚಿಮಾಡ ಐಯ್ಯಪ್ಪನವರು. ಸಾಲದ ಅರ್ಜಿಗಳು ಬರುವ ಕಮಿಟಿ ಮೀಟಿಂಗಿನಲ್ಲಿ ಆಲೋಚಿಸಲ್ಪಡುವವು.

ಹಿಂದೂದೇಶ.

ಬಿಹಾರ್ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯವರು ಬರುವ ಲಾಹೋರ್ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಮಹಾತ್ಮ ಗಾಂಧಿಯವರ ಹೆಸರನ್ನು ಶಿಫಾರಸ್ಸು ಮಾಡಿರುವರು

ಜೆ. ಯನ್. ಸಿ. ಕೆಲ್ಕಾರವರು ಕಳೆದ ತಾ 28ರಲ್ಲಿ ಪೂನಾದ ಮುನ್ಸಿಪಲ್ ಆಫೀಸಿನ ಮೇಲ್ಗಡೆ ರಾಷ್ಟ್ರೀಯ ಧ್ವಜವನ್ನು ಏರಿಸಿದರು

ಸರ್ ಅತುಲ ಚಟರ್ಜಿಯವರು ತಮ್ಮ ಕೆಲಸದಿಂದ ನಿವೃತ್ತಿ ಹೊಂದಿದ ಕೂಡಲೇ ಸರ್ ಮಹಮ್ಮದ್ ಹಬಿಬುಲ್ಲರವರು ಇಂಡಿಯಾದ ಹೈ ಕಮಿಷನರಾಗಿ ನೇಮಿಸಲ್ಪಡುವರೆಂದು ವದಂತಿ

ಇಂಡಿಯಾದ ಲೇಬರ್ ಮುಂದಾಳುಗಳ ಮೇಲೆ ನಡೆಸುತ್ತಿರುವ ಮೊಕದ್ದಮೆಯನ್ನು ಮೀರಟ್ಟಿನಿಂದ ಕಲ್ಕತ್ತಾ ಯಾ ಬೊಂಬಾಯಿಗೆ ವರ್ಗಾಯಿಸಬೇಕೆಂದು ಅಲಹಾಬಾದಿನ ಹೈಕೋರ್ಟಿಗೆ ಅರ್ಜಿ ಬರೆಯಲಾಗಿದೆ

ಅಮಾನುಲ್ಲರು ಇಟಲಿಗೆ ತೆರಳುವಾಗ ತಮ್ಮ ಆಭರಣಗಳನ್ನೆಲ್ಲ ೧೧,೦೦೦ ಪವನುಗಳಿಗೆ ಇನ್ಸೂರ್ ಮಾಡಿಸಿರುವರು. ತಮ್ಮ ಕೆಲವು ಅನುಯಾಯಿಗಳನ್ನು ಸ್ಟೀಮರಿನಲ್ಲಿ ನಿಂತು ಬೀಳ್ಕೊಡುವಾಗ ಆ ಪ್ರಸಿದ್ಧ ಅಮೀರರು ಕಣ್ಣೀರು ಸುರಿಸಿದರು

ಮಂತ್ರಿಮಂಡಳಿಯನ್ನು ಏರ್ಪಡಿಸಬೇಕೆಂದು ಬಂಗಾಳದ ಗವರ್ನರವರು ಅಲ್ಲಿಯ ಸ್ವರಾಜ್ಯ ಪಕ್ಷದ ಮುಂದಾಳಾದ ಜೆ ಯನ್ ಸೆನ್ ಗುಪ್ತರವರನ್ನು ಕೇಳಿದರು ಅದಕ್ಕೆ ಗುಪ್ತರವರು ಕಾಂಗ್ರೆಸ್ ಧ್ಯೇಯದ ಮೇರೆಗೆ ತಾನು ಮಂತ್ರಿಪದವಿಯನ್ನು ವಹಿಸಿಕೊಳ್ಳುವದಿಲ್ಲವೆಂದು ಉತ್ತರವನ್ನಿತ್ತರು

ಲಾರ್ಡ್ ಗೋಶೆನ್‌ರವರು ಕಳೆದ ತಾ 30ರಲ್ಲಿ ಬೊಂಬಾಯಿಯಲ್ಲಿ ಲಾರ್ಡ್ ಅರ್ವಿನ್‌ರವರಿಂದ ವೈಸರಾಯಿ ಮತ್ತು ಗವರ್ನರ್ ಜನರಲರ ಪದವಿಯ ಚಾರ್ಜನ್ನು ವಹಿಸಿಕೊಂಡರು ಲಾರ್ಡ್ ಅರ್ವಿನ್‌ರವರು ನಾಲ್ಕು ತಿಂಗಳು ರಜೆಯಲ್ಲಿ ಇಂಗ್ಲೆಂಡಿಗೆ ಹೋದರು, ಲಾರ್ಡ್ ಗೋಶೆನ್‌ರವರು ಅದೇ ದಿನ ಡೆಲ್ಲಿಗೆ ಹೊರಟರು.

ಕೆಲವು ಮುಸಲ್ಮಾನ ಸ್ತ್ರೀಯರೂ ಸೇರಿ ಮತ್ತು ಕಾಂಗ್ರೆಸ್ ಪಕ್ಷದಿಂದ ಜೊತೆಯಾಗಿಯೂ ಹಿಂದೂ ಮುಸಲ್ಮಾನರ ಒಂದು ಸಭೆ ಸೇರಿ ಹಿಂದೂ ಸ್ತ್ರೀಯರ ಹಕ್ಕು ಬಾಧ್ಯತೆಗಳನ್ನು ಬ್ರಿಟಿಷರ ಮುಂದಿರಿಸಲು ಇಂಗ್ಲೆಂಡಿಗೆ ಆಗಾಖಾನರ ಮುಂದಾಳುತನದಲ್ಲಿ ಒಂದು ಡೆಪ್ಯುಟೇಶನ್ ಕಳುಹಿಸಲು ತೀರ್ಮಾನಿಸಿರುವರು ಈ ವರ್ತನೆಯನ್ನು ಮೆ. ಜಿನ್ನಾರವರು ವಿರೋಧಿಸಿರುವರು

ಸೆಂಟ್ರಲ್ ಪ್ರಾಂತ್ಯದ ಲಿಬರಲ್ ಪಾರ್ಟಿಯ ಒಬ್ಬ ಪ್ರಮುಖ ಮುಂದಾಳಾಗಿದ್ದ ಸರ್ ಜಿ ಯಂ ಚಿಟ್ನಾವಿಸ್‌ರವರು ಕಳೆದ ತಾ 27ರಲ್ಲಿ ಶಿವಾಧೀನರಾದರು ಇವರು ಅಲ್ಲಿಯ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿಯೂ, ನಂತರ ಎಸೆಂಬ್ಲಿಯಲ್ಲಿಯೂ ಮೆಂಬರಾಗಿದ್ದು 1921 ರಿಂದ 1925ರ ವರೆಗೆ ಅಲ್ಲಿಯ ಕೌನ್ಸಿಲಿನ ಅಧ್ಯಕ್ಷರಾಗಿಯೂ ಇದ್ದರು.

ಬರುವ ಲಾಹೋರು ಕಾಂಗ್ರೆಸ್ಸಿಗೆ ಸಿಂಧ ಪ್ರಾಂತೀಕ ಕಾಂಗ್ರೆಸ್ ಕಮಿಟಿಯು ಈ ಕೆಳಗೆ ಸೂಚಿಸಿದವರಲ್ಲೊಬ್ಬರನ್ನು ಅಧ್ಯಕ್ಷರನ್ನಾಗಿ ಚುನಾಯಿಸಬಹುದೆಂದು ಶಿಫಾರಸು ಮಾಡುತ್ತದೆ —1. ಮಹಾತ್ಮ ಗಾಂಧಿಯವರು, 2 ಪ್ರಧಾನ ಸಚಿವರಾದ ಮೋತಿಲಾಲರು 3 ಶ್ರೀ ವಲ್ಲಭಾಯಿ ಪಟೇಲರು, 4. ಡಾ ಮೂಂಜೆ, 5 ಮೌಲಾನ ಎಮ್ ಎಸ್ ಸಿ ಗಳಾದ ಶ್ರೀ ಜೈರಾಮದಾಸ್ ದೌಲತ್‌ರಾಮ್, 6. ಮೌಲಾನ ಅಬುಲ್ ಕಲಾಮ್ ಆಜಾದ್, 7. ಶ್ರೀ ಸೇನಗುಪ್ತಾ

ವಿದೇಶ.

ಚಾರ್ಲ್ಸ್ ಚಕ್ರವರ್ತಿಗಳು ಕಾಯಿಲೆಯಿಂದ ಪೂರ್ತಿ ಗುಣಹೊಂದಿ ಜುಲೈ 1ರಲ್ಲಿ ಲಂಡನ ಪ್ಯಾಲೇಸ್ಸು ಹಿಂದಿರುಗಿ ಬಂದರು

ಕೆಲ್ಲಾಗ್ ಕರಾರಿಗೆ ಸೈನ್ ಮಾಡಿದ್ದರ ದೆಸೆಯಿಂದ ಪ್ರಿವಿ ಕೌನ್ಸಿಲಿನಲ್ಲಿ ಭಿನ್ನಾಭಿಪ್ರಾಯ ಹುಟ್ಟಿದ ಕಾರಣ ಜಪಾನಿನ ಮಂತ್ರಿ ಮಂಡಳಿಯು ರಾಜೀನಾಮೆ ಕೊಟ್ಟಿದೆ

೨೦ ವರುಷ ಸೆಂಟ್ರಲ್ ಪಾರ್ಟಿಗೆ ಸ್ಟ್ರೆಸ್‌ಮನ್ ರವರ ನಾಯಕತ್ವದಲ್ಲಿ ಬಹುಕಾಲದ ಅನುಭವವುಳ್ಳವರೆಂತಲೂ, ಸ್ಟ್ರೆಸ್‌ಮನ್‌ರವರು ಈ ಕಮಿಟಿ ಮಿನಿಸ್ಟರಿಗೆ ಸರಿಸಮಾನ ಹಕ್ಕು ಕೊಟ್ಟಿರುವದಿಲ್ಲವೆಂತಲೂ ಆ ಸೆ. ಕಮಿಟಿಯ ಅಧ್ಯಕ್ಷರಾದ ಸರ್ ಎಂಕರ್ ನಾಮರವರು ಅಭಿಪ್ರಾಯಪಡುವರು

ಆಫ್ಘಾನಿಸ್ಥಾನದಲ್ಲಿ ನಾದಿರ್‌ಖಾನರವರ ಹೆಡ್ ಕ್ವಾರ್ಟರ್ ಆಗಿದ್ದ ಗಾರ್ಡೆಜನ್ನು ಬಚಾಯಿಸಾಕೋರವರ ಸೈನ್ಯದವರು ಕೈವಶ ಮಾಡಿಕೊಂಡಿರುವರೆಂದೂ, ಇದರ ಲೋಘರ್ ಪ್ರಾಂತ್ಯದಲ್ಲಿ ನಾದಿರ್‌ಖಾನರ ಕಡೆಯವರು ಸಾಕೋರವರ ಸೈನ್ಯದವರನ್ನು ಸೋಲಿಸಿ ಅವರಿಗೆ ತುಂಬಾ ನಷ್ಟವನ್ನುಂಟುಮಾಡಿರುವರೆಂದೂ ವರ್ತಮಾನ

ಕಾಮನ್‌ವೆಲ್ತ್ ಲೀಗ್ ಕಾನ್‌ಫರೆನ್ಸು ಡಾಕ್ಟರ್ ಆನಿಬೆಸೆಂಟರವರ ಅಧ್ಯಕ್ಷತೆಯಲ್ಲಿ ಕಳೆದ ತಾ 28 ಮತ್ತು 29ರಲ್ಲಿ ಲಂಡನಿನಲ್ಲಿ ನಡೆಯಿತು. ಇಂಡಿಯಕ್ಕೆ ನೆಹರು ವರದಿಯ ಪ್ರಕಾರ ವಸಾಹತು ಸ್ವರಾಜ್ಯ ಕೊಡಬೇಕೆಂಬ ಠರಾವನ್ನು ಪಾಸುಮಾಡಿದರು ಅಧ್ಯಕ್ಷರು ಇಂಡಿಯಾದ ಸ್ಥಿತಿಗತಿಯನ್ನೂ, ಅವರ ಪ್ರಾತಿಕೂಲ್ಯದ ಹೋರಾಟವನ್ನೂ ಕುರಿತು ಬ್ರಿಟಿಷರ ಮನಸ್ಸುನಾಟುವಂತೆ ಭಾಷಣಮಾಡಿದರು

ತಮ್ಮದು ಒಂದು ಕಷ್ಟದ ಕೆಲಸವೆಂದೂ ಇಂಡಿಯಾದ ಸಮಸ್ಯೆಯನ್ನು ಸಾಧಿಸಲು ಹಿಂದೀಯರು ತಮಗೆ ಸಹಾಯಕರಾಗಬೇಕೆಂದೂ ತಮ್ಮೊಂದಿಗೆ ಹಿಂದೀಯರು ಒಪ್ಪದೆ ಹೋದರೂ ಲೇಬರ್ ಸರ್ಕಾರದ ಪ್ರಯತ್ನಗಳನ್ನು ತಿಳಿದುಕೊಂಡು ಅವುಗಳಿಗೆ ಸಹಾನುಭೂತಿಯನ್ನು ತೋರಿಸಿ ಯೆಂದೂ ಇಂಡಿಯಾದ ಅಂಡರ್ ಸೆಕ್ರೆಟರಿಯಾದ ಡಾಕ್ಟರ್ ಡ್ರಮ್ಮಂಡ್ ಶೀಲ್ಸ್‌ರವರು ಹಿಂದೂ ದೇಶಕ್ಕೆ ಸಂದೇಶವನ್ನು ಪ್ರಕಟಿಸಿರುವರು

ವಿನಂತಿ.

ನನಗೂ ನನ್ನ ಸಂಸಾರಕ್ಕೂ ಒದಗಿದ ದುಃಖವನ್ನು ಸಮಾಧಾನಗೊಳಿಸುವದಕ್ಕೋಸ್ಕರವಾಗಿ ನನ್ನ ನೆಂಟರೂ, ಸ್ನೇಹಿತರುಗಳೂ ಅನೇಕ ತೊಂದರೆಗಳನ್ನು ತಕ್ಕೊಂಡು ನನ್ನಲ್ಲಿಗೆ ಬಂದೂ ಕಾಗದಗಳ ಮುಖಾಂತರಗಳಿಂದಲೂ ನಮಗಳನ್ನು ಸಮಾಧಾನಮಾಡಿದಕ್ಕಾಗಿ ನಾವು ಇಬ್ಬರೂ ಅತ್ಯಂತ ಕೃತಜ್ಞರಾಗಿ ಇರುತ್ತೇವೆ ಆದರೆ ಬಂದಂಥಾ ವ ಹಸೀಯರುಗಳಿಗೂ ಮಹಾ ಪುಣ್ಯಶೀಲೆಯರುಗಳಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಬರದು ಮನವರಿಕೆ ಮಾಡುವದಕ್ಕೆ ಮನಸ್ಸು ವಿರಾಮವಿಲ್ಲದರಿಂದ ಈ ಸಂಗತಿಗಳನ್ನು ವರ್ತಮಾನ ಪತ್ರಿಕೆಗಳಿಗೆ ಕಳುಹಿಸಿದಾಗಿದೆ ಎಲ್ಲರೂ ಕ್ಷಮಿಸಬೇಕಾಗಿ ನಮಗಳ ವಂದನೆಗಳು

ವಿಧೇಯ,

ತಾ 1—7—29 ಕೆ. ಮಂದಣ್ಣ,

ಪ್ರಕಟಣೆ.

ಪೊನ್ನಂಪೇಟೆನಾಡು ಮತ್ತೂರು ಗ್ರಾಮದ ಸ್ಥಾನಿಕ ರಾಮಚಂದ್ರಯ್ಯನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ—

ನನ್ನ ತಂದೆ ಸ್ಥಾ. ಕೃಷ್ಣಯ್ಯನೆಂಬವರು ನನ್ನಲ್ಲಿ ಕಲಹ ಮಾಡಿಕೊಂಡು ಮತ್ತೂರಿನ ವಾಸದ ಮನೆ ಬಿಟ್ಟುಬಿಟ್ಟು ಪೊನ್ನಂಪೇಟೆಯಲ್ಲಿ ವಾಸವಿರುತ್ತಾರೆ ಇವರು ಸದರಿ ಗ್ರಾಮದಲ್ಲಿ ಸದರಿ ಕೃಷ್ಣಯ್ಯನವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಸಾಗಿನ ಭೂಮಿಯ ಪೈ. ನಂಬರು $\frac{31}{3}$ ರ ಸಂ 9ನೇ ಆ. ಡ ವರ್ಗಿಗದ್ದೆ ವರ್ಗದ ಪೈಕಿ 3.58 ಎಕ್ರೆದ 7—12—0 ಕಂದಾಯದ ಮತ್ತು $\frac{31}{1}$ ರ ಸಂ 8ನೇ ಪೊನ್ನತೀರ ಕೈಮಡಿಕೆ ವರ್ಗದಿಂದರ 8.07 ಎಕ್ರೆದ 15—4—0 ಕಂದಾಯದ ಭೂಮಿ ಮತ್ತು ಸದರಿ ಗ್ರಾಮದಲ್ಲಿ ಅಯ್ಯಪ್ಪದೇವರ ಜಹಗೀರ್ $\frac{163}{1}$ ರ 4.60 ಎಕ್ರೆದ 2—5—0 ಕಂದಾಯದ ಭೂಮಿ ಪೈಕಿ 1 ಎಕರೆಯು, ಈ ಎರಡು ಸೊತ್ತುಗಳನ್ನು ಮಾರಾಟ ಮಾಡಲು ಹೊರಟಿರುತ್ತಾರೆ.

ಈ ಎರಡು ಸೊತ್ತುಗಳನ್ನು ಕೃಷ್ಣಯ್ಯನ ಮಕ್ಕಳಾಗಿರುವ ನಾನು ಮತ್ತು ನನ್ನ ತಮ್ಮ ಸುಬ್ರಾಯ ಎಂಬವರನ್ನು ನೋಡಿಕೊಳ್ಳಲಿಕ್ಕೆ ಯಾ ಭೋಗ್ಯ ಯಾ ಪರಾಧೀನಪಡಿಸಲು ಅವರೊಬ್ಬರಿಗೆ ಸ್ವತಂತ್ರವಿಲ್ಲವೆಂದೂ, ಹಾಗೆ ಪರಾಧೀನ ಮಾಡಿದ ಕಾಲದಲ್ಲಿ ಅದು ಅವರಿಗೆ ಸಿಂಧು ಆಗಲಾರದೆಂದೂ ಮತ್ತು ಹೀಗೆ ಮಾಡುವದರಿಂದ ಉಂಟಾಗತಕ್ಕ ಸರ್ವನಷ್ಟ ಕಷ್ಟಕ್ಕೂ ಸೊತ್ತು ಕೊಂಡುಕೊಂಡವರೇ ಜವಾಬ್ದಾರರಾಗಬೇಕೆಂದೂ ಈ ಮೂಲಕ ತಿಳಿಸಿರುತ್ತೇನೆ

ಮತ್ತೂರು,

3—7—29 ಸ್ಥಾ. ರಾಮಚಂದ್ರಯ್ಯ.

2—1

ಬೇಕಾಗಿದೆ.

ಸಂಟ್ರಲ್ ಸಹಕಾರ ಬ್ಯಾಂಕಿಗೆ 20,000 ರೂಪಾಯಿ ಮಿತಿಗೆ ಬಡ್ಡಿ ಕೇವಣಾತಿ (ಫಿಕ್ಸ್‌ಡ್ ಡಿಪಾಜಿಟ್ಟು) ಹಣ ಬೇಕಾಗಿದೆ ಹೀಗೆ ಇಡಲು ಇಚ್ಛಿಸುವವರು ಅವರಲ್ಲಿ ಬಡ್ಡಿ ಪ್ರಮಾಣವನ್ನು ಈ ಕೆಳಗಿನ ವಿಳಾಸಕ್ಕೆ ಕೂಡಲೇ ಕಳುಹಿಸಬೇಕಾಗಿ ಕೋರುತ್ತೇನೆ

ಮಡಿಕೇರಿ ಸಿ. ಯನ್. ವೆಂಕಪ್ಪಯ್ಯ.

ತಾ 25—6—29 2 2 ಗೌರವ ಸೆಕ್ರೆಟರಿ

Important Notice.

With reference to our recent advertisements regarding our various Italian Sera Vaccines and other medicines for internal use, the public is hereby informed that we have appointed as our Agent for Coorg Messrs. The Coorg Emporium to whom they should apply for their further requirements.

The Italian Chemico-therapeutic Agency.
General Agents.

ಪತ್ರವ್ಯವಹಾರ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ.]

ಕೊಡಗು - ಜಮೀನ್ದಾರರ ಸಂಘ.

ಮಹಾಶಯರೇ,

"ಕೊಡಗು" ಮತ್ತು "ಲೋಕಪಾವನ" ಪತ್ರಿಕೆಗಳಲ್ಲು ದೇಶದ ಈಗಿನ ಪರಿಸ್ಥಿತಿಯ ವಿವರವನ್ನು ನೋಡಲಾಯಿತು

ಕಾವೇರಿನದಿಯು (ಈ ದೇಶವು) ಸಮುದ್ರದ ಕಡೆ ಹರಿದು ಹೋಗುವದರಿಂದ, ಸಮುದ್ರಕ್ಕೆ ಹರಿದರೆ ಮೋಕ್ಷವೆಂದು ಕೆಲವರೂ, ಸಮುದ್ರಕ್ಕೆ ಸೇರಿದರೆ ಕಾವೇರಿಯೆಂಬ ನಾಮವೇ ಇಲ್ಲದಂತಾಗುವದರಿಂದ ಅಲ್ಲಲ್ಲಿ ಅಣೆಕಟ್ಟುಗಳಿಂದ ಅನೇಕ ಪ್ರಯೋಜನ ಹೊಂದುವ ಸಂಭವವಿರುವದರಿಂದ ಪ್ರತ್ಯೇಕವಿರುವದೇ ಒಳ್ಳೆಯದೆಂದೂ, ಸೇರಿಹೋದನಂತರ ಅಡಚಣೆಗಳೂ, ಕಷ್ಟಗಳೂ ತೋರುವಾಗ್ಯೆ ಹಿಂದಕ್ಕೆ ಬರುವ ಸಂಭವವಿರಲಾರದ್ದರಿಂದ ಈಗಲೆ ಪರೀಕ್ಷಿಸಿನೋಡುವದು ಉತ್ತಮ ಮತ್ತು ಪ್ರತ್ಯೇಕವಿರುವದರಿಂದ ಒಳ್ಳೆಯದೆಂದು ನಂಬುವ ಕೆಲವರ ವಾದಗಳಿಂದ ಜಮೀನುದಾರರ ಸಂಘದಲ್ಲೇ ಎರಡು ಸಂಗಡಗಳಾಗಿರುವಂತೆ ಪತ್ರಿಕೆಗಳು ಹೊರಪಡಿಸುತ್ತವೆ. ಸಂಘದ ಒಡಕು ದೇಶದ ಅಭಿವೃದ್ಧಿಗಾದರೂ, ಸ್ವಾರ್ಥಪರರು ತಮ್ಮ ತಮ್ಮ ಸ್ವಾರ್ಥತೆಗಾಗಿ ದೇಶದ ಹಳ್ಳಿಗರ ಮನಸಿಗೆ ವಿಷವನ್ನಿಕ್ಕಿ ಕೌನ್ಸಿಲ್ ಸುರುವಾದ ಬಾಗಾಯಿತಿನಿಂದ ಒಡಕುಗಳನ್ನು ಒಟ್ಟು ಒಂದು ಪಂಗಡವು ಕೌನ್ಸಿಲನ್ನು ಆವರಿಸಿಕೊಂಡಿದೆ ಇನ್ನೊಂದು ಕಡೆಯವರು ಇಂಥ ಅಕೃತ್ಯಗಳನ್ನು ವಿರೋಧಿಸದೆ ಸುಮ್ಮನೆ ಕೂತು ಜಮೀನುದಾರರ ಸಂಘದ ಜನರಲ್ ಮೀಟಿಂಗಿಗೂ ಸಹ ಹೋಗದ್ದರಿಂದ ಇವರ ಮನಸಿಗೆ ವಿರೋಧವಿರುವಂಥ ಠರಾವುಗಳನ್ನು ಜಾರಿಗೆತಂದದರ ದೆಸೆಯಿಂದ ಮತ್ತಷ್ಟು ಎಣ್ಣೆಗೆ ಬೆಂಕಿ ಬಿದ್ದಂತಾಗಿ ಭಯಂಕರವಾಗಿ ಹತ್ತಲು ಸುರುವಾಗಿದೆ. ಇದನ್ನು ಯಾರು ಶಮನಮಾಡಬೇಕೆಂಬದು (ಅಂದರೆ ಎಣ್ಣೆಯೋ, ಯಾ ಬೆಂಕಿಯೋ) ಪ್ರಶ್ನೆಯಾಗಿದೆ. ಹತ್ತಿದಷ್ಟು ಬೆಂಕಿಯಿಂದ ನಾಶವಾದ ಎಣ್ಣೆಯು ಹೋಗಲಿ ಬಾಕಿ ಎಣ್ಣೆಯನ್ನು ಜಪ್ತ್ ಮಾಡಿದರಲ್ಲವೇ ಬೆಂಕಿಯು ಹಾವಳಿಯು ಕಮ್ಮಿಯಾಗುವದು. ಇಲ್ಲವಾದರೆ ಫಲಿತಾಂಶವೇನೆಂಬದು ಎಣ್ಣೆಯ ನಾಶದಿಂದ ತಿಳಿಯುವದರಿಂದ ವಿವರಿಸಬೇಕಿಲ್ಲ.

ಗತಿಸಿದ ಕುಶಾಲಪ್ಪನವರ ಬದಲಿಗೆ ಪ್ರೆಸಿಡೆಂಟರನ್ನು ನೇಮಿಸದಲ್ಲೇ ದೇಶಕ್ಕೆ ಸ್ವಾಪ್ಯವಾಗುವಂಥ ದುಸ್ಥಿತಿಯನ್ನು ವಿವರಿಸಿದರೂ ಕೂಡ ನಿದ್ರೆಯಿಂದ ಮಲಗಿರುವ ಹಾವನ್ನು ತುಳಿದೆಬ್ಬಿಸಿದಂತಿತ್ತಾರೆ. ಈಗ ಎರಡು ಕಡೆಯವರೂ ಒಬ್ಬ ಮನುಷ್ಯನನ್ನು ಕಮಿಟಿಗೆ ಹಾಕಿರುತ್ತಾರಾಗಿ ತಿಳಿಯುತ್ತೇನೆ. ತುಳಿದವರು ನಿದ್ರೆಯಿಂದ ಎದ್ದ ಹಾವಿಗೆ ಶಾಂತಿಕೊಡುವದು ಅವರದಾಗಿದೆ. ದೇಶವನ್ನು ದೇವರಂತೆ ನಂಬಿ ದೇಶದ ಏಳಿಗೆಯನ್ನು ಚಿಂತಿಸುವವರಾದರೆ ಉಳಿದವರು ವಿವೇಕವನ್ನು ತಾಳಬೇಕಾದದ್ದು ಅವರ ಮುಖ್ಯ ಕರ್ತವ್ಯವಾಗಿರುತ್ತೆ. ಏನು ಕಷ್ಟ ಮತ್ತು ಭಂಗವಾದರೂ ದೇಶಕಲ್ಲದೆ ವ್ಯಕ್ತಿತ್ವಕ್ಕಲ್ಲ. ದೇಶಸೇವೆಯೇ ಈಶಸೇವೆಯೆಂದು ನಂಬಿರುವವರಾದರೆ ಇವರು ಯಾವ ತರದ ಮಧ್ಯಸ್ಥಿಗೆಗಾದರೂ ಇವರು ಒಪ್ಪಲೇಬೇಕಾದ ಇವರ ಕೆಲಸವಾಗಿದೆ. ಈತರಾದ ದೇಶದವರಿಗೆ ಅವಶ್ಯವಿಲ್ಲದಕ್ಕೆ ಒಗ್ಗಟ್ಟನ್ನು ಒಡೆದು ಭಿನ್ನಾಭಿಪ್ರಾಯವುಂಟುಮಾಡಿದಲ್ಲಿ ನಮ್ಮ ಮುಖ್ಯವಾದ ದೇಶದ ಕಾರ್ಯವು ನಡೆದೀತೇ? ತಂದೆ ಕಟ್ಟಿದ ಮನೆಯನ್ನು ಒಂದು ನಿಮಿಷದಲ್ಲಿ ಹಾಳುಮಾಡಬಹುದಾದರೂ ಕಟ್ಟಲಿಕ್ಕೆ ಯಾರಿಂದಲೂ ಆದೇ ಸಮಯದಲ್ಲಿ ಸಾಧ್ಯವಿಲ್ಲವೆಂಬದು ಬರೆಯಬೇಕಿಲ್ಲ. ಮಹಶಯರೇ, ಪಶುವು ಅನ್ನದಾತರೂ, ಅನ್ನದಾತರೂ ಯಾ ಗಂಜಿಯಾದರೂ ಇಚ್ಛೆಯಿಂದ ಕುಡಿಯಬೇಕಲ್ಲದೆ ಇಲ್ಲವಾದರೆ ರೋಗಿಯು ಉಪ್ಪಲಾರನೆಂಬಂತೆ ಯಾವ ಮಾರ್ಗದುಗಳಿಗೆ ವಿಘ್ನಬಂದಲ್ಲಿ ಒಗ್ಗಟ್ಟೇ ಮುಖ್ಯಸಾಧನವೆಂಬದನ್ನು ಬರೆಯಬೇಕಿಲ್ಲ. ಸಮಾಧಾನಕ್ಕೆ ಇವರು ಬಾರದಿದ್ದರೆ ವಿಪರೀತಕ್ಕೆ ಹೋದಲ್ಲಿ ಹೊತ್ತುದಾರನ ತುಪ್ಪಕ್ಕೇನೇ ರೊಟ್ಟಿಬಿದ್ದಂತಾಗಿ ಕಡೆಗೆ ವ್ಯಸನಪಡಬೇಕಾಗುವದು.

ಬಿದ್ದಂಡ ಸುಬ್ಬಯ್ಯ.

ಡಿಸ್ಟ್ರಿಕ್ಟ್ ಬೋರ್ಡು.

ಕಳೆದ ಜೂನ್ ತಾರೀಕು 21ರ 'ಕೊಡಗು' ಪತ್ರಿಕೆಯಲ್ಲಿ ಕಳೆದ ಡಿ. ಬೋರ್ಡು ಮೀಟಿಂಗಿನ ಮೇಲೆ ಲೀಡರೇಟ್ ಬರೆದ ಲೇಖಕರ ಟೀಕೆ ಇತ್ತು. ಇದಕ್ಕೆ ಕಾರಣವೇನಂದರೆ—ಡಿ. ಬಿ ವಿದ್ಯಾಕಮಿಟಿಯಲ್ಲಿ ನಾಲ್ಕು ಜನರು ಚುನಾಯಿತ ಮೆಂಬರ ಗಳಿದ್ದರು. ಇವರಲ್ಲಿ ಒಬ್ಬ ಪ ಆ ಇನ್ಸ್ಪೆಕ್ಟರವರು ಗವರ್ನಮೆಂಟ್ ಆಫೀಸರಾದರೂ ಇವರಿಗೆ ತನ್ನ ಡಿಪಾರ್ಟ್‌ಮೆಂಟ್ ಕೆಲಸ ತುಂಬಾ ಇದೆ, ಆದ್ದರಿಂದ ಕಮಿಟಿಯಲ್ಲಿರಲು ಸಾಧ್ಯವಾಗಲಿಕ್ಕಿಲ್ಲವೆಂದರೂ ಬೋರ್ಡಿನವರೇ ಪ. ಆ. ಇನ್ಸ್ಪೆಕ್ಟರವರು ಇರಬೇಕೆಂದು ಕೇಳಿಕೊಂಡದ್ದರಿಂದ ಇವರು ಕಮಿಟಿಯಲ್ಲಿರಲು ಒಪ್ಪಿಕೊಂಡರು. ಇದರಂತೆ ಮೊದಲಿನ ಮೆ. ಉತ್ತಪ್ಪನವರೂ, ಮೆ ಬಿ ಕುಶಾಲಪ್ಪನವರೂ ಈ ಕಮಿಟಿಯ ಕೆಲಸದಲ್ಲಿ ತುಂಬಾ ಶ್ರಮ ತೆಗೆದುಕೊಂಡು ಕೆಲಸ ಮಾಡಿದ್ದಾರೆ. ಮತ್ತು ಡಿ. ಬಿ. ವೈಸ್‌ಪ್ರೆಸಿಡೆಂಟರು ಬಹುಮತದಿಂದ ಬೋರ್ಡಿನಲ್ಲಿಯೂ ಅವರ ಕಾನ್‌ಸ್ಟಿಟ್ಯುಯೆನ್ಸಿನಿಂದ ಚುನಾಯಿತರಾದ ಮೆಂಬರು. ಡಿ. ಬೊ. ವೈಸ್‌ಪ್ರೆಸಿಡೆಂಟರುತನಕ್ಕೆ ಮೆ. ಪಾಂಡಂಡ ಚಂಗಪ್ಪನವರೂ, ಮೆ. ನಿಡ್ಯಮಲೆ ಮುದ್ದಪ್ಪನವರೂ ಉಮೇದವಾರರಾಗಿ ನಿಂತಲ್ಲಿ ದೇಶದ ಚುನಾಯಿತ ಡಿ. ಬೊ ಮೆಂಬರುಗಳೂ, ಆಫೀಸರುಗಳೂ ಸೇರಿ ಮೆ. ಚಂಗಪ್ಪನವರನ್ನು ಬಹುಮತದಿಂದ ವೈಸ್‌ಪ್ರೆಸಿಡೆಂಟರುತನಕ್ಕೆ ಚುನಾಯಿಸಿದರೆಂಬದು ಕೊಡಗು ಲೀಡರೇಟ್ ಲೇಖಕರಿಗೆ ತಿಳಿಯದೆ ಹೋಯಿತೇ? ಅವರು ಯಾವ ಆಧಾರದ ಮೇಲೆ ವೈಸ್‌ಪ್ರೆಸಿಡೆಂಟರು ನೇಮಿತ ಮೆಂಬರೆಂದು ಪತ್ರಿಕೆಯಲ್ಲಿ ಹೇಳುತ್ತಾರೆಂದು ತಿಳಿಯದು.

ವಿದ್ಯಾಕಮಿಟಿಯು ರಿಪೋರ್ಟಿಗೆ ದೇಶವೆಲ್ಲಾ ಸಂಚರಿಸಿ ಖುದ್ದಾಗಿ ಹೋಗಿ ಕಣ್ಣಾರೆ ನೋಡಿದ ಸಂಗತಿಗಳನ್ನು ರಿಪೋರ್ಟಿನಲ್ಲಿ ಬರೆಯಬೇಕೆಂದೇ ಕಮಿಟಿ ಊಟುಮಾಡಿದ್ದು. ಈ ಕಮಿಟಿ ಒಂದೊಂದು ಕಡೆ ಖುದ್ದಾಗಿ ಬರಲಿಲ್ಲ, ಇವರು ಹೊಳೆ, ಗುಡ್ಡ, ಬೆಟ್ಟವಿದೆ. ಆದ್ದರಿಂದ ನಮ್ಮ ಗ್ರಾಮಕ್ಕೆ ಬರಲಿಲ್ಲವೋ ಎಂದು ಪುಕಾರು ಪತ್ರಿಕೆಯಲ್ಲಿ ಕಂಡದ್ದರಿಂದ ಕಮಿಟಿ ಅಲ್ಲಿಗೆ ಹೋಗಿ ಅಲ್ಲಿಯ ಸಂಗತಿಗಳನ್ನು ನೋಡಿಬಂದದ್ದೂ ಮತ್ತು ಕಮಿಟಿಯು ಉದ್ದಿಷ್ಟ ಯಾವ ಯಾವ ಅವಶ್ಯವಿರುವ ಸ್ಥಳಕ್ಕೆ ಹೋಗಿ ಆ ಗ್ರಾಮಸ್ಥರನ್ನೂ, ಪಂಚಾಯಿತದಾರರನ್ನೂ ಕಂಡು ಅವರ ಕಷ್ಟ ಸುಖಗಳನ್ನು ಕೇಳಿಯೂ, ಚರ್ಚಿಸಿಯೂ ಅವಶ್ಯಕಂಡ ಸಂಗತಿಗಳನ್ನು ರಿಪೋರ್ಟಿಗೆ ತೆಗೆದುಕೊಳ್ಳಬೇಕಾದದ್ದಾಗಿದೆಯೆಂದೂ, ಕಣ್ಣಾರೆ ನೋಡದೆ ಬರೆದ ರಿಪೋರ್ಟಿಗೆ ತಾನು ಸೈನು ಹಾಕಿದರೆ ತನ್ನ ಮನಸಾಕ್ಷಿಗೆ ವಿರೋಧವೆಂದೂ, ಬೇರೆ ಕಮಿಟಿ ಮೆಂಬರುಗಳಿಗೂ ಲೀಡರೇಟ್ ಲೇಖಕರಿಗೂ ತಿಳಿಯದೆ ಇರುವದು ಆಶ್ಚರ್ಯ. ಒಂದು ವೇಳೆ ತನ್ನ ಅಭಿಪ್ರಾಯ ಕೊಡುತ್ತೇನೆ, ತಾನು ಬರಲಿಕ್ಕೆ ಅನಾನುಕೂಲವಾಯಿತೆಂದೂ, ಆದ್ದರಿಂದ ಕಮಿಟಿ ರಿಪೋರ್ಟು ಬರೆಯುವಾಗ್ಯೆ ತಾನೂ ಬರುತ್ತೇನೆಂದು ಬೇರೆ ಕಮಿಟಿಯವರು ಹೇಳಬಹುದಿತ್ತು. ಕಮಿಟಿಯ ವರದಿಯನ್ನು ಬೋರ್ಡು ಮೀಟಿಂಗಿನಲ್ಲಿ ಇಡುತ್ತಾರೆಂದು ಮೀಟಿಂಗಿಗೆ ಮುಂಚಿತವಾಗಿ ಬಹಳ ದಿನಗಳ ಮುಂದೆ ತಿಳಿದಿತ್ತು. ನಾವು ರಿಪೋರ್ಟು ಬರೆಯಲಿಕ್ಕೆ ಸೇರಲಿಲ್ಲ, ನಾವೂ ಸೇರುತ್ತೇವೆ, ನಮ್ಮ ರುಜು ತೆಗೆದುಕೊಳ್ಳಿ, ನಾವು ಇಂಥಾ ಅನಾನುಕೂಲತೆಯಿಂದ ಬರಲು ಸಾಧ್ಯವಾಗಲಿಲ್ಲವೆಂದು ಇವರು, ಇವರನ್ನು ಮೀಟಿಂಗಿಗೆ ಬರಲು ಬರೆದ ಮತ್ತು ಕಮಿಟಿ ಕಾರ್ಯಕ್ರಮ ಪಟ್ಟಿ ಇವರಿಗೆ ಕಳುಹಿಸಿದ ವೈಸ್‌ಪ್ರೆಸಿಡೆಂಟರಿಗೆ ಎಷ್ಟೋ ಸಾರಿ ಕಂಡಾಗಲೂ ಕಾಗದವಾದರೂ ಬರೆಯಬಹುದಿತ್ತು. ಕಾರ್ಯಕ್ರಮ ಪಟ್ಟಿ 'ಕೊಡಗು,' 'ಲೋಕಸಾಧನ' ಪತ್ರಿಕೆಗಳಲ್ಲಿ 2—3 ಸಾರಿ ಪ್ರಕಟಿಸಲ್ಪಟ್ಟಿತ್ತು. ಇಷ್ಟಾಗಿಯಾದರೂ ಆಗಿನ ಡಿ. ಬೊ. ಬಜೆಟ್ ಮೀಟಿಂಗು ಇಂಥಾ ದಿನ ನಡೆಯುತ್ತೆ, ಆದ್ದರಿಂದ ಎಲ್ಲಾ ಚುನಾಯಿತ ಮೆಂಬರುಗಳು ಕೆಲವು ದಿನಗಳ ಮುಂಚಿತವಾಗಿ ಬರಕೂಡದೆ ಹೋದರೂ ಒಂದು ದಿನಕ್ಕೆ ಮುಂಚಿತವಾಗಿಯಾದರೂ ಬಂದು ವಿವಾದರೂ ಅವಶ್ಯವಿರುವ ಸಂಗತಿಗಳನ್ನು ಡಿ. ಬೊ. ಮೀಟಿಂಗಿನ ಮುಂಚೆ ಇಡಲು ನಮ್ಮ ಜಮೀನ್‌ದಾರರ ಸಂಘದ ಹಾಲಿನಲ್ಲಿ ಎಲ್ಲಾ ಚುನಾಯಿತ ಮೆಂಬರುಗಳು ಸೇರಬೇಕೆಂದು ಪ್ರತಿ ಒಬ್ಬ ಚುನಾಯಿತ ಮೆಂಬರುಗಳಿಗೂ ವೈಸ್‌ಪ್ರೆಸಿಡೆಂಟರು ಕಾಗದ ಬರೆದಿರುತ್ತಾರೆ. ಇದರಂತೆ ಎಲ್ಲಾ ಚುನಾಯಿತ ಮೆಂಬರುಗಳು ಒಂದು ದಿನಕ್ಕೆ ಮುಂಚಿತವಾಗಿ ಬಂದು ಜಮೀನ್‌ದಾರರ ಸಂಘದ ಹಾಲಿನಲ್ಲಿ ಸೇರಿ ಚರ್ಚಿಸಿದರೂ ಮಡಿಕೇರಿಯಲ್ಲಿಯೇ ಇದ್ದುಕೊಂಡು ಮೆ. ಎನ್. ಮುದ್ದಪ್ಪನವರು ಬರಲೂ ಇಲ್ಲ. ಅವರಿಗೆ ಬರೆದ ಕಾಗದಕ್ಕೆ ಜವಾಬು ಕೊಡಲೂ ಇಲ್ಲ. ಮೆ. ಮುದ್ದಮ್ಮಯ್ಯನವರು ಡಿ. ಬೊ. ಮೀಟಿಂಗಿಗೆ ಹೋಗಲಿಕ್ಕೆ 1 ಗಂಟೆಗೆ ಮುಂಚಿತವಾಗಿ ಜಮೀನ್‌ದಾರರ ಸಂಘದ ಹಾಲಿಗೆ ಬಂದರೂ ವಿದ್ಯಾಕಮಿಟಿಯ ರಿಪೋರ್ಟು ವಿಷಯ ಏನೂ ಕೇಳಲಿಲ್ಲ. ಇವರಿಗೆ ಇಷ್ಟು ಇಂಡಿಫರೆಂಟಿತನ ತೋರಿಸಿದಕ್ಕೆ ಯಾರು ಜವಾಬುದಾರರು? ಇದು ಲೀಡರೇಟ್ ಲೇಖಕರೂ ನೇರವಾಗಿ ಚೆನ್ನಾಗಿ ಆಲೋಚಿಸುವದಾಗಿದೆ.

ಈ ಕಮಿಟಿಯವರು ಇವರಿಗೆ ನೇಮಿಸಿದ ಸ್ಥಳಕ್ಕೆ ದೇಶದ ಒಂದು ಕಡೆಗಾದರೂ ಬೇರೆ ಕಮಿಟಿಯ ಸಂಗಡ ಬಾರದೆಯೂ, ಒಂದು ಶಾಲೆಯನ್ನಾದರೂ ನೋಡದೆಯೂ ಇದ್ದ ಸಂಗತಿಗೆ ಮೆ. ಪನಂಡ ಮೊದಪ್ಪನವರೂ, ಮೆ. ಅಜ್ಜಮಾಡ ಮೊದಪ್ಪನವರೂ, ಮೆ ರಾಮಶೆಟ್ಟಿ, ಮೆ. ಮುದ್ದಪ್ಪನವರ ಮತ್ತು ಮೆ. ಮುದ್ದಮ್ಮಯ್ಯನವರ ಮೇಲೆ ಕೆಲಸಮಾಡುತಿದ್ದ ಕಮಿಟಿಯ ಮತ್ತು ಬೇರೆ ಜನಗಳ ಮುಂದೆ ಎಷ್ಟು ಗೂಣಗುಟ್ಟಿದ್ದರೆಂದೂ ಅವರ ಮನಸಾಕ್ಷಿಯೇ ಹೇಳಬೇಕು. ಹೀಗೆ ಮಾಡದ ಇವರಿಬ್ಬರೂ ಡಿ. ಬೊ. ಮೀಟಿಂಗ್ ಬಿಟ್ಟು ಅದೂ ವಿದ್ಯಾ ರಿಪೋರ್ಟಿಗಾಗಿ ವಿರೋಧಿಸಿದ ಸಂಗತಿ ಈ ಮೋಲ್ಯಂಡ ಮಾಮವರು ಅವರ ಸಂಗಡ ವಾಕ್‌ಅವುಟ್ (Walked out) ಮಾಡಿದ್ದು ಆಶ್ಚರ್ಯ.

ನಲುವತ್ತು ಸಾವಿರ ರೂಪಾಯಿಗಳು (ರೂ. 40,000/) ಡಿ. ಬೊ ಉಳಿದವು. ಈ ಹಣ ಯಾವಾಗಲೂ ರಿಸರ್ವವಾಗಿ ಖಜಾನೆಯಲ್ಲಿರುವದು. ಇದು ಯಾವದಕ್ಕೆಂದರೆ—ಡಿ. ಬೋರ್ಡು ಕೆಲಸ ನಡೆಯುವದು ಟೋಲ್‌ಗೇಟು, ದೋಣಿಗಳು, ಸೆಸ್ ಮತ್ತು ಬೇರೆ ಕೆಲವು ಸಣ್ಣ ಉತ್ಪತ್ತಿ ಹಣದ ಮೇಲೆ ಇದರಲ್ಲಿ ಯಾವದಾದರೊಂದು 12 ತಿಂಗಳ ಅಖೈರದಲ್ಲಿ ಬೋರ್ಡಿಗೆ ಸಿಕ್ಕದೆ ಹೋದರೆ ಆಸ್ಪತ್ರೆಗಳ ಮತ್ತು ಡಿ. ಬಿ ಶಾಲೆಗಳ ಕೆಲಸ ನಿಲ್ಲಿಸಬೇಕಾಗುತಿತ್ತು. ಅಂಥಾ, ಕಕ್ಕಣ ಅವಶ್ಯಬಿದ್ದ ಕೆಲಸಕ್ಕೆಂದು ಯಾವಾಗಲು ರಿಸರ್ವವಾಗಿರಲೇಬೇಕು. ಇದರಿಂದ ಈ ಹಣ ಖಜಾನೆಯಲ್ಲಿ ಸಮ್ಮನೆ ಇಟ್ಟಿರುವದು. ಆಗೀಗ ರಸ್ತೆಗಳೂ, ಶಾಲೆಗಳೂ, ಆಸ್ಪತ್ರೆಗಳ ರೈತರ ಕ್ಷೇಮಕ್ಕಾಗಿ ಜಾಸ್ತಿ ಕೆಲಸ ಬೋರ್ಡಿನ ಇರಾದೆಯಂತೆ ಮಾಡುವದರಿಂದ ಹೆಚ್ಚು ಹಣ ಬೇಕಾಗಿ ಕಂಡದ್ದರಿಂದಲೂ, ಖಜಾನೆಯಲ್ಲಿ ರಿಸರ್ವವಾಗಿ ಇಟ್ಟಿರುವ ಈ ಹಣವನ್ನು ಯಾವದಾದರೂ ಭದ್ರವಾದ ಬ್ಯಾಂಕಿನಲ್ಲಿ ಶೇಕಡ 5ರೂ. ಯಾ ಹೆಚ್ಚಿಗೆ ಬಡ್ಡಿ ಸಿಕ್ಕುವ ಹಾಗೂ ಮತ್ತು ಈ ಹಣವೂ ಅವಶ್ಯಬೀಳುವಾಗ ಕೇಳಿದಾಗ ಸಿಕ್ಕುವ ಹಾಗೆ ಇರುವ ಬ್ಯಾಂಕಿನಲ್ಲಿ ಕೆಲವು ಕಾಲದ ಅವಧಿಟ್ಟು ಡಿಪಾಜಿಟ್ಟು ಮಾಡಿದರೆ ಇದರಲ್ಲಿ ಬರುವ ಬಡ್ಡಿ ಹಣವನ್ನು ಈ ಮೋಲ್ಯಂಡ ಅವಶ್ಯ ಇರುವ ಕೆಲಸಗಳಿಗೆ ಉಪಯೋಗಿಸಬಹುದೆಂದು ಕಮಿಶನರ್ ಸಾಹೇಬರವರಿಂದ ಬೋರ್ಡಿನ ಮುಂದೆ ಇಡಲ್ಪಟ್ಟು, ಅದನ್ನು ಬೋರ್ಡಿನವರು ಚನ್ನಾಗಿ ಚರ್ಚಿಸಿ ಬಹುಮತದಿಂದ ಪಾಸುಮಾಡಿದರು. ಆಂದರೆ 40 ಸಾವಿರ ರೂ. ಬಡ್ಡಿ ಸೇರಿ 42 ಸಾವಿರ ಒಂದು ವರ್ಷದ ಒಳಗೆ ಆದರೆ ಬೋರ್ಡಿನ ರೈತರಿಗೂ ಕ್ಷೇಮವಾಗಲಿಲ್ಲವೇ? ಈ ಹಣವನ್ನು ಖರ್ಚುಮಾಡಿ ಬಿಟ್ಟರೆ ಒಂದು ವೇಳೆ ಮೋಲ್ಯಂಡ ಯಾವದಾದರೊಂದು ಉತ್ಪತ್ತಿಯಲ್ಲಿ ಯಾವದಾದರೂ ಹಣ ವಸೂಲಾಗದೆ ಹೋದರೆ ಬೋರ್ಡಿನಲ್ಲಿ ಹಣವಿಲ್ಲ, ಮಾಷ್ಟರುಗಳ ಸಂಬಳ ಕೊಡಲು ಇನ್ನೊಂದು ವರ್ಷದಲ್ಲಿ ಹಣ ಬರುವ ವರೆಗೂ ಶಾಲೆಗಳನ್ನು ಮುಚ್ಚಬೇಕೆಂದು ಹೇಳಿದರೆ ರೈತರ ಮಕ್ಕಳ ಮತ್ತು ಆಸ್ಪತ್ರೆಗಳ ಗತಿಯೇನಾದೀತೆಂದು ತಿಳುಕೊಳ್ಳಿ. ಈ ಹಣ ಯಾವದು, ಯಾವ ಸಂದರ್ಭ ಡಿಪಾಜಿಟ್ಟು ಮಾಡುಗುವದು ಎಂದು ತಿಳುಕೊಳ್ಳದೆ ಲೀಡರೇಟ್ ಲೇಖಕರು ಕೊಡಗು ದೇಶದಿನಲ್ಲಿ ಈ ಉಳಿವರಿಗೆ ಗವರ್ನಮೆಂಟಿಗೆ ಸಾಲಕೊಡುವದೆಂತಲೂ, ರೈತರಿಗೆ ಕಟ್ಟಡ ಕಟ್ಟಿಸಲಿಕ್ಕೆ ಕೊಡಬೇಕೆಂದೂ ಅಥವ ಸೆಸ್ ಕಮ್ಮಿ ಮಾಡಬೇಕೆಂದೂ ಈ ಲೀಡರೇಟ್ ಲೇಖಕರಿಗೂ ಮೀಟಿಂಗು ಬಿಟ್ಟುಹೋದ 5 ಮೆಂಬರುಗಳಿಗೆ ಮಾತ್ರ ರೈತರ ಮೇಲೆ ದಯ, ಬೇರೆ ಚುನಾಯಿತ ಬಹುಮತ ಮೆಂಬರುಗಳಿಗೆ ಅಂಥಾ ದಯವಿಲ್ಲ ಮತ್ತು ಅವರೂ ರೈತರಲ್ಲವೆಂದು ಇವರು ತಿಳುಕೊಂಡರೋ ಏನೋ? ಹೀಗೆ ತಿಳಿಯದೆ ಮುಂದಾಲೋಚನೆ ರೈತರ ಮನಸನ್ನು ಕಳವಳ ಮಾಡಿ ಬಹುಮತ ಚುನಾಯಿತ ಮೆಂಬರುಗಳ ಮೇಲೆಯೂ, ಕಮಿಶನರ್‌ರವರ ಮೇಲೆಯೂ ದೂಷಿಸಿದ್ದು ವಿಷಾದಕರವೇ.

ಬಿಡಮಾಳದ ಕೇಸಿನ ವಿಷಯ ನಿಜವಾಗಿ ನಡೆದ ಸಂಗತಿ ತಿಳುಕೊಳ್ಳದೆಯೂ ಮತ್ತು ಕಳೆದ ಮೀಟಿಂಗ್‌ನಲ್ಲಿ ಈ ವಿಷಯ ಚರ್ಚಿಸುವ ಅವಶ್ಯವಿಲ್ಲದೆ ಹೋದರೂ ಬೇಕೆಂದು ಕೆಣಕಿ ತನ್ನ ಸಿಟ್ಟನ್ನು ತೋರಿಸಲಿಕ್ಕೆ ಒಬ್ಬ ಮೆಂಬರು ಪ್ರಯತ್ನಿಸಿದ್ದರಿಂದ ವೈಸ್‌ಪ್ರೆಸಿಡೆಂಟರು ಒಂದೆರಡು ಜವಾಬು ಕೊಟ್ಟರೂ ಮೆಂಬರರ ಸಂಗಡ ದೊಡ್ಡ ಚರ್ಚೆಗೆ ಅವಶ್ಯವಿಲ್ಲವೆಂದು ಸುಮ್ಮಗಾದರು. ಈ ವಿಷಯ ಪತ್ರಿಕೆಯಲ್ಲಿ ಒಬ್ಬ ಮೆಂಬರರ ಹೇಳಿಕೆ (here say) ಮಾತಿನ ಮೇರೆ ಬರೆದದ್ದು ವ್ಯಸನಕರ. ಈ ಉತ್ತರಗಳು ಲೀಡರೇಟ್ ಲೇಖಕರು ತಿಳಿಯದೆ ಸಂಗತಿಗಳನ್ನು ಬರೆದದಕ್ಕಾಗಿದೆ. ಆದರೂ ಲೇಖಕರು ಮೆ. ಮುದ್ದಮ್ಮಯ್ಯನವರೂ, ಮೆ. ಎನ್. ಮುದ್ದಪ್ಪನವರೂ ತಾವು ವಹಿಸಿಕೊಂಡ ವಿದ್ಯಾಕಮಿಟಿಯ ಕೆಲಸವನ್ನು ಮಾಡದಷ್ಟು ತಪ್ಪೆಂದು ಒಪ್ಪಿಕೊಂಡದನ್ನು ಇವರು ನ್ಯಾಯಕ್ಕೆ ಒಪ್ಪಿದರೆಂದು ಹೇಳಲು ಸಂತೋಷವಿದೆ.

ಯಾವದೇ ನ್ಯಾಯಕೂಟ ಇರಲಿ ಡಿ. ಬೊ. ವೈಸ್‌ಪ್ರೆಸಿಡೆಂಟರು ಯಾ ಡಿ. ಬೊ. ಚುನಾಯಿತ ಬೇರೆ ಮೆಂಬರುಗಳು ತಮ್ಮ ತಮ್ಮ ಸ್ವಾರ್ಥತೆಗೋಸ್ಕರ ಮಾಡಲಿಲ್ಲ. ರೈತರ ಹಿತಕ್ಕಾಗಿಯೇ ಮಾಡಿದರು. ಒಂದು ವೇಳೆಯೇನಾದರೂ ತಿದ್ದಬೇಕಾಗಿದ್ದರೆ ಪ್ರತಿ ಒಂದು ಡಿ. ಬೊ. ಮೀಟಿಂಗಿಗೆ ಮುಂಚಿತವಾಗಿ ಎಲ್ಲಾ ಚುನಾಯಿತ ಮೆಂಬರುಗಳು ಜಮೀನ್‌ದಾರರ ಸಂಘದ ಯಾ ಕೌನ್ಸಿಲ್ ಹಾಲ್‌ನಲ್ಲಿ ಸೇರಬೇಕೆಂದೂ, ಇಲ್ಲಿ ಬೇಕಾದ ಸಂಗತಿಗಳನ್ನು ಚರ್ಚಿಸಿ ಮರುದಿನ ಡಿ. ಬೊ. ಮೀಟಿಂಗ್‌ನಲ್ಲಿಡಬಹುದೆಂದು ಡಿ. ಬೊ. ವೈಸ್‌ಪ್ರೆಸಿಡೆಂಟರು ಎಲ್ಲಾ ಚುನಾಯಿತ ಮೆಂಬರುಗಳಿಗೆ ಯಾವ ಪಕ್ಷಪಾತವಿಲ್ಲದೆಯೂ, ಪಾರ್ಟಿತನವಿಲ್ಲದೆಯೂ ಕಾಗದ ಬರೆದು ಕೇಳಿಕೊಂಡದ್ದು ಚುನಾಯಿತ ಮೆಂಬರುಗಳು ಇದನ್ನು ಸಮ್ಮತಿಸಿಯಾರೆಂದು ನೆನಸಬೇಕಾಗಿದೆ. ಎಲ್ಲರೂ ದೇಶದ ಹಿತಕ್ಕಾಗಿ ಮಾಡಬೇಕಾದದ್ದು ಅವರವರ ಕರ್ತವ್ಯ.

ಇಂಥಾ ಸಂಗತಿಯಲ್ಲಿ ವಿದ್ಯಾವಂತರಾದ ಮೆ. ಮುದ್ದಪ್ಪನವರು ಮುಂದಾಳಾಗಬೇಕೆಂದು ಪ್ರಯತ್ನಿಸುವವರು, ಮತ್ತು ಸ್ವರಾಜ್ಯ ಸಿಕ್ಕಬೇಕು. ಸ್ಥಳೀಕ ಸರಕಾರದ ನಾನ್ ಅಫೀಶಿಯಲ್‌ರಿಗೆ ಸಿಕ್ಕಬೇಕೆಂದು ಹೇಳುವವರು ಕಳೆದ ಡಿ. ಬೊ. ಮೀಟಿಂಗಿನಲ್ಲಿ ನಾನ್‌ಅಫೀಶಿಯಲ್ ಮೆಂಬರು ಡಿ. ಬೊ ಮೀಟಿಂಗಿನ ಅಧ್ಯಕ್ಷಸ್ಥಾನವನ್ನು ವಹಿಸಿದಾಗ ಇವರು ಕೆಲ್ಸ ಮೋಲ್ಯಂಗ್ಕ ಹಾಕಿ ಮುಂದೆ ಮೀಟಿಂಗು ಹಾಲ್ ಬಿಟ್ಟು ಹೊರಟು ಹೋದದ್ದೂ, ಮತ್ತು ನಾನ್‌ಅಫೀಶಿಯಲ್ ಮೆಂಬರು ಡಿ. ಬೊ. ಪ್ರೆಸಿಡೆಂಟರಾಗಬೇಕೆಂದು ಕೇಳಬೇಕೆಂದು ಠರಾವು ತರಬೇಕೆಂದು ಹೇಳಿ ಠರಾವು ಬಂದಾಗ ಅನುಮೋದಿಸುತ್ತೇನೆಂದು ಹೇಳಿ, ಠರಾವು ತಂದ ಮೆಂಬರರಿಗೆ ಒತ್ತಾಸೆ ಕೊಡದೆಯೂ ಅನುಮೋದಿಸದೆಯೂ ಇದ್ದದ್ದು ವಿಷಾದಕರ. ಒಂದು ವೇಳೆ ಏನೋ ತಪ್ಪಿದಿಂದ ವಿರೋಧವಿದ್ದರೂ ವಿದ್ಯಾವಂತರಾದ ಈ ಮುದ್ದಪ್ಪನವರು ಇದನ್ನು ಚರ್ಚಿಸಿ ಸರಿಮಾಡಬಹುದು. ಹೀಗೆ ಇಷ್ಟರ ವರೆಗೆ ಹುಡುಗಾಟಿಕೆಯಿಂದ ನಡೆದ ಹೋದರೂ ಇನ್ನು ಮುಂದಕ್ಕಾದರೂ ತಾಳ್ಮೆ ಇಟ್ಟುಕೊಂಡು ಪರಿಶೀಲನೆ ಇವರು ಬಾಯಿಯಲ್ಲಿ ಹೇಳುವ ಸ್ವರಾಜ್ಯದ ಮೆಟ್ಟಿಲಿನ ಅಭಿಪ್ರಾಯದ ದಾರಿಯನ್ನು ತೋರಿಸಿಯಾರೆಂದೂ, ಇದಕ್ಕೆ "ಕೊಡಗು," "ಲೋಕಪಾವನ" ಪತ್ರಿಕೆಗಳೂ ಪಾರ್ಟಿತನವನ್ನು ಅನುಸರಿಸದೆ ಒಗ್ಗಟ್ಟಿಗೆ ಒತ್ತಾಸೆಕೊಡಬೇಕೆಂದೂ ಕೋರುತ್ತೇನೆ. ದೇಶೀಯರಿಗೆ ಈ ಕಳೆದ ಮೀಟಿಂಗಿನ ನಿಜಸ್ಥಿತಿಯನ್ನು ತಿಳಿಸಬೇಕಾದ್ದರಿಂದ ಈ ಬಾತ್ಮಿಯನ್ನು ಬರೆಯಬೇಕಾಯಿತು.

ಪಿ. ಎ. ಚಂಗಪ್ಪ.

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲಾ ಬಾಧಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ
ಮಾತ್ರೆಗಳು.

ವಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನರಹಿತವಾದುದು. ಒಂದು ಡಬ್ಬಿಯ ಕ್ರಯ ೧ ೦ ೦

52—46 ಮದನಮಂಜರಿ ಫಾರ್ಮಸಿ,
1/94 ಚೀನಾ ಬಜಾರ್, ಮದ್ರಾಸ್.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಬೋರಂ ಹುಳದ ದೆಸೆಯಿಂದ ಕೆಟ್ಟು ಹೋಗಿದ್ದ ಕಾಫಿಗಿಡಗಳ ಸಂಖ್ಯೆಯು ಧಾತು ಗುಣದ (Mineral) ಗೊಬ್ಬರ ಹಾಕಿದ ಸ್ಥಳಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ದಾಪುರ ಪರೀಕ್ಷಾ ಕ್ಷೇತ್ರ (Experiment station) ದಲ್ಲಿ ಕಂಡುಬಂದಿದೆ. ಆದುದರಿಂದ ಬೊಂಬಾಯಿ ಹುಳದ ಬೋರರಿಗೆ ಸಾರಜನಕ ಗೊಬ್ಬರವು ಪ್ರಯೋಜನಕರವಾಗಿ ತೋರುತ್ತದೆ" (ಡಬ್ಲ್ಯು. ಚ. ಮೆನೆಸ್ತ್ರೀಜನರಲ್ ಸಯಂಟಿಫಿಕ್ ಆಫೀಸರ್, ಯುನೈಟೆಡ್ ಸಯಂಟಿಫಿಕ್ ಡಿಪಾರ್ಟ್‌ಮೆಂಟ್)

ಚಿಲಿಯನ್ ನೈಟ್ರೇಟ್ ಒಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗಗಳಿಗೆ ಥಕ್ಕನೆ ಎಡೆಕೊಡುವದಿಲ್ಲ. ಇದು ಹೊರತು ಚಿಲಿಯನ್ ನೈಟ್ರೇಟ್ ಒಫ್ ಸೋಡಾದಲ್ಲಿ ಬೆಳೆಗಳನ್ನೂ ಮಣ್ಣನ್ನೂ ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಒಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಎಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಒಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪ್ಯಾರಿ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಶನುಗಳಿಗೂ ಟನ್ನಿನ ಚೀಲ 1ರ ರೂಪಾಯಿ 6—8—0ರಂತೆ ಒದಗಿಸಿ ಕೊಡುವದಲ್ಲದೆ, ಮಡಿಕೇರಿ, ವೀರಾಜಪೇಟೆ ಮತ್ತು ಗೋಣಿಕೊಪ್ಪಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ 7—8—0ರಂತೆ ದೊರೆಯುತ್ತದೆ.

ಹೆಚ್ಚಿನ ಸೂಚಿತ, ವಿವಿಧ ಬೆಳೆಗಳ ವಿಷಯ ದರ್ಪಣರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
ಪೋ. ಬಾ ನಂ 469, ಕಲ್ಕತ್ತಾ.

(2) ಮಿಸ್ಟರ್ ಎಂ. ಎಂ. ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24—7

ಹೊಸ ಪುಸ್ತಕ ಕ್ರಯ ೧—೦—೦

ಮೊದಲನೆಯ ಮುದ್ರಣ

ಸ್ತ್ರೀಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಪುರುಷರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧಾರಣೆ, ಸಂಭೋಗದಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ಹೊಸವ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೂಡಿದೆ. ಕ್ರಯ ಪುಸ್ತಕ ೧ಕ್ಕೆ ರೂ ೧—೦—೦.

ಎನ್. ವಿ. ಗೋಪಾಲ್ ಬುಕ್ ಡಿಪೋ,
52—28 37. ತಿರುಪಳ್ಳಿಬೀದಿ, ಮದರಾಸ್.

Arms, Ammunition and Shooting Requisites!!!



Current Illustrated Catalogue Free on Application!

D. B. B. L. Rifles	Rs	120	to Rs.	2750
S. B. B. L.	„	35	to	950.
D. B. B. L. Guns	„	50	to	1350
S. B. B. L.	„	35	to	275
D. B. M. L.	„	45	to	135
S. B. M. L.	„	30	to „	60
B. L. Revolvers	„	35	to „	350
Automatic Pistols	„	30	to „	150

Brilliant Search Light Lamp For Shooting, Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—17 210, Abdul Rehman Street, BOMBAY.

ಎಂ. ಎಸ್. ಶಿವಪ್ಪ & ಬ್ರದರ್ಸ್.
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

1. 'ದಿಲ್ ಒಹರ್ ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ	1ಕ್ಕೆ	50	8	0
2 "ಸಿದ್ಧವಿಜ್ಞಾನ್ ಫ್ಲ್ಯೂಟ್"	„ „	42	8	0
3. ಶಕುಂತಲಾ	„ „ „	40	0	0
4 ಮೋಹನ್	„ „ „	37	8	0
5. ಮೋಸ್ಸೇಂ	„ „ „	35	0	0
6. ಮಹಾರಾಜಾ	„ „ „	32	8	0
7. ಕೊಹಿನೂರು	„ „ „	29	8	0
8. ಡೈಮಂಡ್	„ „ „	27	8	0
9. ಬಿಜಲೀ	„ „ „	25	0	0
10. "ದಿಲ್‌ಬಹರ್ ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ	1ಕ್ಕೆ	85	0	0
11. ಸ್ಪೆಷಲ್	„ „	56	0	0
12. ಮೋಹನ್	„ „ „	50	8	0

14 ಕ್ಯಾರೆಟ್ ಬಂಗಾರದ ನಿಬ್ಬುಳ್ಳ ಖಾತ್ರಿಯಾದ ಬಂದೋಬಸ್ತು ಆದ ಫೌಂಟೆನ್ ಪೆನ್ನುಗಳು.

ವರ್ಲ್ಡ್ ವಂಡರ್ ಫೌಂಟನ್ ಪೆನ್	1ಕ್ಕೆ	3	0	0
„ ಬಿಗ್‌ಬ್ಯಾರಲ್	„	3	2	0
„ ಸ್ಕ್ರೂಕ್ಯಾಪ್	„ „	3	8	0
„ ಮೋಟಲ್ ಕಲರ್	„ „	3	14	0
„ ಮೋಟಲ್ ಸ್ಕ್ರೂಕ್ಯಾಪ್	„ „	4	4	0
„ ಬ್ರೌನ್‌ಕಲರ್ ಸೆಲ್ಫ್‌ಫಿಲಿಂಗ್ ಪೆನ್	„	5	8	0
„ ಸೇಫ್ಟಿ ಪೆನ್	„ „	6	8	0
„ ಲೇಡೀಸ್ ಸೈಜಿನ ಮೋಟಲ್ ಕಲರ್ ಪೆನ್	„	4	2	0
ಬ್ಲ್ಯಾಕ್‌ಬರ್ಡ್ ಪೆನ್ 1ಕ್ಕೆ 3 6 0 ಮತ್ತು		3	12	0
ಸ್ವಾನ್ ಪೆನ್ „ 6 8 0	„	7	0	0
ವಾಟರ್‌ಮೆನ್ ಐಡಿಯಲ್ 1ಕ್ಕೆ 8 0 0	„	8	8	0
„ ಸೆಲ್ಫ್ ಫಿಲ್ಲಿಂಗ್ ಯೂ ಸೇಫ್ಟಿ ಪೆನ್	1ಕ್ಕೆ	12	0	0
ಬಿಗ್‌ಬ್ಯಾರಲ್ ಹಾರ್ಡ್ ವೇರ್	„ „	8	0	0
„ ಸೆವೆನ್ಟ್ಯನ್ ಪೆನ್	1ಕ್ಕೆ	17	0	0

ಖಾತ್ರಿಯಾದ ಬಂದೋಬಸ್ತು ಆದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು	1ಕ್ಕೆ	2	2	0
ಜರ್ಮನ್ ಗುಂಡಾದ ಕೈತಿಯ ಆಕಾರದ ಟೈಂಪೀಸು	„	3	12	0
ಅಮೇರಿಕಾದ 'ಬಿ' ಟೈಂಪೀಸು	„	5	13	0
„ ಅಕಾರದ	„	5	6	0
ಬಿಗ್‌ಬೆನ್ „ „	„	9	6	0
„ ಡಿಲ್ಯಾಕ್ಸ್ ಸ್ಟ್ಯಾಂಡಿರುವ ಆಕಾರದ ಟೈಂಪೀಸು	„	13	5	0
ಘಂಟೆ ತೋರಿಸಿ ಅಲಾರಂ ಬಾರಿಸುವ ಕ್ಯಾರೇಜ್ ಕ್ಲಾಕ್	„	7	2	0
„ ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್	1ಕ್ಕೆ	8	10	
„ ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಬಾರಿಸುವ ಕ್ಯಾರೇಜ್ ಕ್ಲಾಕ್	1ಕ್ಕೆ	9	12	0
ಘಂಟೆ ತೋರಿಸಿ ಇಪ್ಪತ್ತು ದಿವಸಗಳಿಗೆ ಕರ್ಣಾರ್ನಾವಾದಾಗುವಂತೆ ಗಾನವಾಡುವ ಕ್ಯಾರೇಜ್ ಕ್ಲಾಕ್	1ಕ್ಕೆ	12	0	0

ಬೇಕಾದವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್,

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	19,240
ಜಮಾಬಂದ ಠೇವಣಾತಿ	—	1,33,670

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ ; ಬಿ.ಎಲ್.

ತಾರೀಕು 1—5—1929.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಿಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ. ಕೀಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾನಚೇರಿರ ಸಂಬಪ್ಪನವರು, ಮತ್ತು ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಮೂರ್ನಾಡು—ಮಡೆಯಂಡ ದೇವಯ್ಯನವರು,
ಶ್ರೀಮಂಗಲನಾಡ —ಮೆ. ಅಜ್ಜಿಕುಟ್ಟಿರ ಮಾದಪ್ಪನವರು.
ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

12 bore Victor Cartridges Rs 10/- Per 100

Mahomedally-Noorbhoy.

ARMS & AMMUNITION MART.

321 Abdul Rehman Street.

BOMBAY. 2.

ಘಟಾಂಶಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವೀನೈನು ಸೇವಿಸಿದಾಗ್ಯೂ ಗುಣವಾಗದಿರುವ ಮಲೇರಿಯ ಜ್ವರ, ದಿನಾ ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರದಿಂದ ದೋಷದಿಂದ ಬರುವ ಜ್ವರಗಳಿಗೆ ಗುಣಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ 4—0—0 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹಳದಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದ ಮೂತ್ರ ಹೊಯ್ಯುವಾಗ ಉರಿಯುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಕಡೆಯಲ್ಲಿ ಧಾತು ಹೋಗುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಸಾಮರ್ಥ್ಯವಿಲ್ಲದಿರುವುದು, ಮುಂತಾದ ರೋಗಗಳು. ಇವುಗಳಿಗೆ ಪರಮ ಔಷಧಿ. ಚಿಕ್ಕ ಬಾಟ್ಲು 1, 3 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುವು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವು ಎಲ್ಲವನ್ನೂ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನು ಹೊಳಪನ್ನು ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ.
೪. ಮಂಗಳೂರು.

52–38

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.

ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮೋಫೋನುಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ದೊರೆಯುವವು. ಸಗಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುವವು.

ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು

21—/

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ

ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು

1925	[illegible]	ಲಕ್ಷ ರೂಪಾಯಿ.	
1926	331	„	„
1927	418	„	„
1928	585	„	„

ಪ್ರೀಮಿಯಂ ಆದಾಯ.

1925.	930	ಲಕ್ಷ ರೂಪಾಯಿ	
1926.	106	„	„
1927.	122	„	„
1928.	140	„	„

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ
1921ರಲ್ಲಿ „ „ „ „ „
1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ.
1927ರಲ್ಲಿ „ „ „ 25 „

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಬಂದರೆ ನಿಮಗೆ ಅದರಿಂದ ಲಾಭ ಉಂಟಾಗುವುದು

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು

ಎಲ್. ಆರ್. ಕೃಷ್ಣಸಾಮ್ಯಯ್ಯರ್,
ಬ್ರಾಂಚ್ ಸೆಕ್ರೆಟರಿ.

52–27

ಸೊಲಾರ್ ಫೌನ್‌ಟೆನ್ ಪೆನ್.



ಈ ಪೇನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರಟ್ಟಿನ ಸಾಚಾ ಭಂಗಾರದಂಥ ನಿಬ್ಬು ಹಾಕಿದೆ. ಈ ಪೇನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 3—8—0.

ವಿಳಾಸ —ಕೆ. ನಾಥಮುನಿ ಅಂಡ್ ಸನ್ಸ್,
168 ಬೈನಾ ಬಜಾರ್,
ಮದರಾಸು.

52—1

ಭಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಒಳ್ಳಾವು ಕಡನಂತೆ ಎಲೆಕ್ಟ್ರಿಕ್ ಪವರಿನಿಂದ ಸವರನ್ ಭಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸಮಸಮಾನವಾಗಿವೆ. ೧ಕ್ಕೆ ೦-೧೨-೦ ೩ ಉಂಗುರಗಳಿಗೆ ಒಂದು ಟೇಬಲ್ ಟೈಂಪೀಸನ್ನೂ, ೬ ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, ೧೧ ಉಂಗುರಗಳಿಗೆ ಒಂದು ಭಂಗಾರದ ಕೈಯ್ಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ.

ವಿಳಾಸ.—ಈಗಲ್ ವಾಚ್ ಕಂಪನಿ,
ಪೊ. ಬಾ. 243. ಮದರಾಸು.

52—1

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೮—೦ | ಸಂಪಾದಕ—ಹೆಂಡ್ಸಂ [illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಮಡಿಕೇರಿ, [illegible] ಶುಕ್ರವಾರ [ಸಂಚಿಕೆ [illegible]

Post Box 423,
TRIPLICANE, MADRAS.

MANUFACTURES AND DEALS IN ALL —

(1) Gemset Jewels, gold and silver articles of all patterns
(2) Race Cups Caskets, Medals, etc., for presentation purposes
(3) Trovels, Keys, Locks etc for ceremonial purposes.

JEWELLER BY APPOINTMENT TO His Excellency THE GOVERNOR OF MADRAS

Catalogue Free to Bona fide Enquirers

UNDERTAKES—

(1) Remaking or Remodelling of all sorts of old gemset jewels to latest patterns.
(2) Electro plating gilding and nickelling
(3) Binguy old jewellery, or undertaking to effect sale

V. SUBRAMANIA IYER

Telephone — 3145

JEWELEER

Telegrams — 'PRECIOUS'

Gold smith, Silver smith, & Dealer in all Gemset Jewels.

52—43

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ
ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ

ರತನ್ ಮಿಶ್ರಿ ಹಲ್ವಾ

ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು [illegible]

ಕ್ರಯ —[illegible]

52—29

[illegible]

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

ಅಪೂರ್ವ ಸಂದರ್ಭ.
ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸ ಬೇಕಾದರೆ ಇದೀಗ ಅಪೂರ್ವ ಸಂದರ್ಭ.

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ ಮೊದಲಾದ [illegible] ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!! ಧರ್ಮಾರ್ಥ!!

[illegible] ಶಾಸ್ತ್ರಿ

[illegible]

52—4 [illegible]

ಶ್ರೇಷ್ಠವಾದ 5 ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದವು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ 40 [illegible] ತೊಲ 1ಕ್ಕೆ ರೂ 1?
ಕೇಸರಿ ಅಥವಾ ಕುಂಕುಮಪುಷ್ಪ ತೊಲ 1ಕ್ಕೆ ರೂ 3½ [illegible] ತೊಲ 1ಕ್ಕೆ ರೂ [illegible]
[illegible] ತೊಲ 10 ಕ್ಕೆ ರೂ 1

ಶ್ರೇಷ್ಠವಾದ 108 ಮಣಿವುಳ್ಳ ರುದ್ರಾಕ್ಷಿ [illegible] 10 ರ ವರೆಗೆ
32 ಮಣಿ ವುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ 1 2 3 4 5 8, 10 ರ ವರೆಗೆ
ಮತ್ತು ಎಲ್ಲಾ ವಿಧವಾದ ರೇಷ್ಮೆ [illegible]
ಯುಕ್ತ [illegible]
ಯುಕ್ತ ಅಡ್ರಸ್—

ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್," ಕಾಶಿ.

BHARADWAJ & CO.,
"SILK HOME,"
Benares City.

52—46

ಏಕೆ ನರಳುತ್ತೀರಿ?
ಕ್ರಯವು [illegible] ಅಂಚೆಹಾಸಲ
ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—47 ಮದನಮಂಜರಿ ಫಾರ್ಮಸಿ,
1/84 [illegible]

ಕೊಡಗು.

ಸಂ ೧೯೨೯ನೇ ಇಸವಿ

ಜುಲೈ ತಾ. ೧೨ನೇ ಶುಕ್ರವಾರ.

ಬ್ಯಾಂಕ್‍ಗಳ ಅನುಕೂಲತೆ ಸಂಬಂಧದ ತನಿಖೆ.

ಹಿಂದೂಸ್ಥಾನದ ಸರ್ಕಾರವು ಪ್ರಾಂತೀಯ ಸ... ಗ ಳೂ ದೇಶದ ಬ್ಯಾಂಕಿನ ಅನುಕೂಲತೆಗಳ ಪಾಲಿಸ ... ಅಬಹುದು' ಕೃಷಿ, ವ್ಯಾಪಾರ ಕೈಗಾರಿಕ ಅಭಿವೃದ್ಧಿಗೆ ಸಹಾಯವಾಗುವಂತೆ ದೇಶೀಯ ಮತ್ತು ಬಲಿಷ್ಠರಾದ ಬ್ಯಾಂಕುಗಳ ಬೆಳವಣಿಗೆಗೆ ಸಲಹೆಗಳನ್ನು ಕೊಡಲು ಕಮಿಟಿಗಳನ್ನು ನೇಮಿಸುತ್ತಲಿವೆ ಈ ತನಿಖೆಯು ನಮ್ಮ ದೇಶದಲ್ಲೂ ಆಗ ತಕ್ಕದ್ದು ಅವಶ್ಯವಾಗಿ ಇಂಡಿಯಾ ಸರ್ಕಾರದವರು ಸೃಷ್ಟಿಸಿ, ಮದ್ರಾಸ್ ಕಮಿಟಿಯು ಒಂದು ಉಪಕಮಿಟಿಯು ನಮ್ಮ ದೇಶಕ್ಕಾಗಿ ಈ ದೇಶದಿಂದಲೇ ಆರಿಸಲ್ಪಡುವ ಇಬ್ಬರು ಮೆಂಬರುಗಳೊಡನೆ ಸೇರಿ ಈ ದೇಶಕ್ಕೆ ಸಂಬಧಪಡುವ ಶಿಫಾರಸ್ಸುಗಳನ್ನು ಮಾಡಿದರೆ ತಗಬಹುದೆಂತ ಮಧ್ಯವರ್ತಿ ಸರ್ಕಾರವು ಅಭಿಪ್ರಾಯ ಪಟ್ಟು, ಈ ವಿಷಯದಲ್ಲಿ ಸ್ಥಳೀಯ ಸರ್ಕಾರದ ಅಭಿಪ್ರಾಯ ಕೇಳಿದ್ದರಿಂದ ತಿಳಿಯಬರುವ ... ಸ್ಥಳೀಯ ಸರ್ಕಾರವು ಇದಕ್ಕೆ ಏನು ಅಭಿಪ್ರಾಯ ಕೊಟ್ಟಿವೆಯೋ ತಿಳಿಯದು

ನಮ್ಮ ದೇಶದಲ್ಲಿ ಬೇರೆ ಕೈಗಾರಿಕೆ ವರ್ತ ವ್ಯಾಪಾರಕ್ಕೆ ಸಹಾಯ ಕೊಡುವ ಬ್ಯಾಂಕ್‍ಗಳು ಇಲ್ಲವ ಇಲ್ಲ ದೇಶೀಯ ಬ್ಯಾಂಕ್‍ಗಳು ಅಂದರೆ ಹಣ ಕೊಡುವವರ ಕಸುಬಾಗಿರುವ ವ್ಯಾಪಾರಿಗಳು ಸಹ ಇಲ್ಲ ಕೃಷಿ ಸಹಾಯಕ್ಕೆ ಸಹಕಾರಿ ಸಂಘಗಳೂ, ಸೆಂಟ್ರಲ್ ಬ್ಯಾಂಕೂ ಈಗ ಕೆಲವು ವರ್ಷಗಳಿಂದ ಸ್ವಲ್ಪ ಮಟ್ಟಿಗೆ ಸಹಾಯ ಕೊಡುತ್ತಲಿವೆ ಆದರೆ ಕೃಷಿಕರಿಗೆ ಬೇಕಾದಷ್ಟು ಅನುಕೂಲತೆಗಳನ್ನು ಈಗ ಇರುವ ಸಹಕಾರಿ ಸಂಸ್ಥೆಗಳು ಕೊಡುತ್ತಿಲ್ಲವೆಂತಲೂ, ಭೂಗಿರವಿ ಬ್ಯಾಂಕ್‍ಗಳನ್ನು ಸ್ಥಾಪಿಸುವದು ಅವಶ್ಯವೆಂತಲೂ, ಆ ಬಗ್ಗೆ ಒಂದು ಕಮಿಟಿಯಾಗಬೇಕೆಂತಲೂ ಕಳೆದ ಸಹಕಾರಿ ಪರಿಷತ್ತಿನಲ್ಲಿ ಠರಾವು ಮಂಜೂರಾಗಿದೆ ಈಗ ಬೇರೆ ಪ್ರಾಂತ್ಯಗಳಲ್ಲಿ ನಡೆಯುತ್ತಿರುವ ತನಿಖೆಯಲ್ಲಿ ಭೂಗಿರವಿ ಬ್ಯಾಂಕುಗಳ ವಿಚಾರವೂ ಸೇರಿದೆ ಇಂಡಿಯಾ ಸರ್ಕಾರದ ಅಭಿಪ್ರಾಯವು ಈ ದೇಶದ ಜನರ ಗೋಚರಕ್ಕೆ ಬರುವ ಮುಂಚೆಯೇ ಬ್ಯಾಂಕ್ ಸಂಬಂಧದ ತನಿಖೆಯಾಗಬೇಕೆಂತ ಕೊಡಗಿನ ಸಹಕಾರಿಗಳು ಕೇಳಿಕೊಂಡಿರುತ್ತಾರೆ ಆದ್ದರಿಂದ ದೇಶೀಯ ಸರ್ಕಾರವು ನಮ್ಮ ದೇಶದ ಬ್ಯಾಂಕಿನ ಅನುಕೂಲಗಳ ಸಂಬಂಧವಾಗಿ ಸಂಪೂರ್ಣ ತನಿಖೆ ನಡೆಸಲು ಸಾಧ್ಯವಾಗುವಂತೆ ಒಂದು ದೊಡ್ಡ ಕಮಿಟಿಯನ್ನೇ ನೇಮಿಸಬೇಕಾದ ಆವಶ್ಯವು ತೋರಿಬಂದಿದೆ

ಇಂಡಿಯಾ ಸರ್ಕಾರದವರು ಸೂಚಿಸಿದ ಮೇರೆ ಒಬ್ಬರೇ ಇರುವ ಕಮಿಟಿಯು ಕೊಡಗಿಗೆ ಸಾಲದು ಸಹಕಾರಿ ಪರಿಷತ್ತಿನಲ್ಲಿ 7 ಜನ ಉದ್ಯೋಗಸ್ಥರಿಲ್ಲದ ... ಇಬ್ಬರು ಉದ್ಯೋಗಸ್ಥರು ಇರುವ ಕಮಿಟಿಯಾಗಬೇಕೆಂತ ಕೇಳಿದ್ದರು ಈ ಸಂಖ್ಯೆಯು ಹೆಚ್ಚಾಗುವದಿಲ್ಲ ಕಡಿಮೆ ಪಕ್ಷ ಈ ಕೆಳಗಿನಷ್ಟು ಪ್ರತಿನಿಧಿಗಳಾದರೂ ಇರಬೇಕು ಕೊಡಗಿನ ವ್ಯಾಪಾರಿಗಳ ಪ್ರತಿನಿಧಿಯೊಬ್ಬನಾದರೂ ಇರಬೇಕು ಕೃಷಿ ಕಸುಬಿನ ಪ್ರತಿನಿಧಿಗಳು ಮೂವರಾದರೂ ಬೇಕು ಕೈಗಾರಿಕೆಯ ವಿಷಯ ಆಲೋಚಿಸಲು ಒಬ್ಬನಾದರೂ ಬೇಕು. ಇನ್ನು ಸರ್ಕಾರಿ ಅಧಿಕಾರಿಯೊಬ್ಬರು ಇರಬೇಕಾಗಬಹುದು.

ನಮ್ಮ ದೇಶದ ಸ್ಥಿತಿಯನ್ನು ಮದ್ರಾಸ್ ಕಮಿಟಿಯು ಅಜಮಾಯಿಸಿದರೆ ತೃಪ್ತಿಕರವಾಗಲಾರದು. ಅವರಿಗೆ ಅವರ ಪ್ರಾಂತ್ಯದ ವಿಷಯಗಳೇ ಬೇಕಷ್ಟು ಇರುವವು ನಮ್ಮ ದೇಶದಲ್ಲಿ ಕೆಲವು ವಿಶೇಷ ವಿಷಯಗಳಿವೆ ಕೆಲವು ಭೂಮಿಯು ಸರ್ಕಾರಾಧೀನವಾಗ ಕೂಡದು ಯಾವ ಜಮೀನಿಯೂ ಮೈಸೂರಿನ ದಿಕ್ಕಿಗೆ ... ಈಗ ಇರುವ ಸಹಕಾರಿ ಸಂಘಗಳೇ ಭೂಗಿರವಿಯ ಮೇಲೆ ಸಾಲಕೊಡುತ್ತಿರುವದಾಗಿದೆ ಸಹಕಾರಿ ಬ್ಯಾಂಕು ವಿನಹ ಬೇರೆ ಬ್ಯಾಂಕುಗಳ ಅನುಕೂಲತೆಯೇ ಇಲ್ಲ ಪೂರ್ವದಲ್ಲಿ ಮದ್ರಾಸ್ ಬ್ಯಾಂಕಿನ ಶಾಖೆಯಿದ್ದದ್ದನ್ನು ತೆಗೆದುಬಿಟ್ಟರಂತೆ ಮೈಸೂರು ಬ್ಯಾಂಕಿನ ಶಾಖೆ ಇಡಲು ಯೋಚಿಸಿ, ಬಿಟ್ಟು ಬಿಟ್ಟರಂತೆ. ಈ ವಿಷಯಗಳನೆಲ್ಲಾ ಗಮನಕ್ಕೆ ತೆಗೆದುಕೊಂಡು ಮುಂದಿನ ಬೆಳವಣಿಗೆಗೆ ಸಲಹೆಕೊಡಬೇಕು ಈ ವಿಷಯ ಸರ್ವರಿಗೂ ತೃಪ್ತಿಯಾಗುವಂತೆ ಸಲಹೆಕೊಡಲು ಒಬ್ಬಿಬ್ಬರಿಂದ ಆಗಲೀ, ಮದ್ರಾಸ್ ಕಮಿಟಿಯಿಂದ ಮಾತ್ರವೇ ಆಗಲೀ ಸಾಧ್ಯವಾಗಲಾರದು. ಅನುಭವಸ್ಥರಿಂದ ಕೂಡಿದ ಮದ್ರಾಸ್ ಕಮಿಟಿಯು ನಮ್ಮ ದೇಶದ ಕಮಿಟಿಗೆ ಸಲಹೆಕೊಡಲು ಅಡ್ಡಿ ಇಲ್ಲ. ಆದರೆ ಈ ದೇಶದ ಪ್ರತಿನಿಧಿಗಳು ಹೆಚ್ಚಿರುವ ಕಮಿಟಿಯೊಂದು ಆಗಬೇಕೆಂತ ನಮ್ಮ ಅಭಿಪ್ರಾಯವಾಗಿದೆ.

ಪ್ರಾಂತೀಕ ಕಮಿಟಿಗಳು ಯಾವ ಯಾವ ವಿಷಯಗಳನ್ನು ತನಿಖೆಮಾಡಬೇಕೆಂತ ಇಂಡಿಯಾ ಸರಕಾರದ ಅಭಿಪ್ರಾಯವಿದೆ ಯೆಂಬದನ್ನು ನೋಡಿದರೂ ಈ ದೇಶದ ತನಿಖೆಗೆ ಹೆಚ್ಚು ಜನರು ಬೇಕೆಂಬದು ಸ್ಪಷ್ಟವಾಗದೆ ಇರದು ಭೂಮಿ ರೂಪಿತಕ್ಕೆ ಸಾಲ ದೊರಕುವ ಅನುಕೂಲಗಳು, ಸಾಲಗಳ ಮೇಲೆ ತೆಗೆಯುತ್ತಿರುವ ಬಡ್ಡಿ ದರ, ಟಕಾವಿ ಸಾಲಗಳ ಹಂಚುವಿಕೆಯಲ್ಲಿರುವ ಲೋಪಗಳು, ವ್ಯವಸಾಯದ ಮುಟ್ಟು, ಬೀಜ ಮುಂತಾದ್ದನ್ನು ಕೊಳ್ಳಲು ಬೇಕಾದ ಪತ್ತಿನ ಅನುಕೂಲಗಳು, ಸಾಲ ಪಡೆಯುವದರಿಂದ ಉತ್ಪತ್ತಿಯ ಮಾರಾಟಕ್ಕೆ ಇರುವ ಕಷ್ಟಗಳು, ವಿಧ ವಿಧದ ಸಾಲ ಕೊಡುವವರ ರೀತಿಗಳು, ಉತ್ಪತ್ತಿಗಳನ್ನು ಮಾರಾಟ ಮಾಡಲು ಬ್ಯಾಂಕಿನ ಸಹಾಯ, ವ್ಯವಸಾಯಗಾರರು ಎಷ್ಟರ ಮಟ್ಟಿಗೆ ಸಾಲದಲ್ಲಿ ಮುಳುಗಿರುವುದು, ಇದಕ್ಕೆ ಕಾರಣ, ಕೃಷಿ ಸಂಬಂಧವಾದ ಕೈಗಾರಿಕೆಗಳನ್ನು ಅಂದರೆ ಕರಪತ್ತಿ, ಬೆಲ್ಲ ಯಾ ಸಕ್ಕರೆ ಕಾರ್ಖಾನೆ ಮುಂತಾದವುಗಳನ್ನು ಸ್ಥಾಪಿಸಲು ಬೇಕಾದ ಪತ್ತಿನ ಸಹಾಯ, ಜಿಲ್ಲಾವಾರು ಬ್ಯಾಂಕುಗಳು ಒಟ್ಟಾಗಿ ಪ್ರಾಂತೀಕ ಗುಂಪುಗಳಲ್ಲಿ ಕೆಲಸಮಾಡಲು ಅನುಕೂಲತೆ, ಬ್ಯಾಂಕ್‍ಗಳಲ್ಲಿ ಹಣವಿಡುವ ಪದ್ಧತಿಯನ್ನು ಜನರಲ್ಲಿ ಹೆಚ್ಚಿಸುವಿಕೆ ಮುಂತಾದ ಅನೇಕ ಪ್ರಾಮುಖ್ಯ ವಿಷಯಗಳ ತನಿಖೆಯಾಗಬೇಕಾಗಿದೆ ದೊಡ್ಡ ಪ್ರಾಂತ್ಯಗಳಲ್ಲಿ ಈ ಕಮಿಟಿಗಳಲ್ಲಿ ಹೆಚ್ಚು ಮೆಂಬರುಗಳಿರುತ್ತಾರೆ ಈ ದೇಶವು ಪ್ರತ್ಯೇಕ ಪ್ರಾಂತ್ಯವಾಗಿರುವದರಿಂದಲೂ ಇಲ್ಲಿನ ಪರಿಸ್ಥಿತಿಯು ಬೇರೆ ದೇಶಗಳಿಗಿಂತ ಕೆಲವು ಮಟ್ಟಿಗಾದರೂ ವಿಶೇಷವಾಗಿರುವದರಿಂದಲೂ ಇಲ್ಲಿಗೆ ದೊಡ್ಡ ಕಮಿಟಿಯೇ ಆಗಬೇಕು

ಸ್ಥಳೀಯ ಸರಕಾರದವರು ಈ ವಿಷಯದಲ್ಲಿ ಇಬ್ಬರೇ ಸಾಕೆಂತ ಅಭಿಪ್ರಾಯ ಕೊಟ್ಟಿದ್ದರೂ ಸಹ ಇದನ್ನು ಪುನರಾಲೋಚಿಸಬೇಕೆಂದು ... ಪಡುತ್ತೇವೆ ಇಂದಾ ಪ್ರಾಮುಖ್ಯ ವಿಷಯದ ... ಸಾರ್ವಜನಿಕ ಸಂಸ್ಥೆಗಳನ್ನು ಕೇಳಿ ಪ್ರತಿನಿಧಿಗಳನ್ನು ... ಬೇಕಾದದ್ದು ಅವಶ್ಯವಾಗಿದೆ

ಲೇಬರ್ ಸರ್ಕಾರವೂ, ಹಿಂದೂ ದೇಶವೂ.

ಗ್ರೇಟ್ ಬ್ರಿಟನ್ನಿನಲ್ಲಿ ಲೇಬರ್ ಪಾರ್ಟಿಯವರು ಅಧಿಕಾರಕ್ಕೆ ಬಂದದ್ದರಿಂದ ಹಿಂದೂದೇಶದ ರಾಜಕೀಯ ಅಭಿವೃದ್ಧಿಗೆ ಸಹಾಯವಾಗಬಹುದೆಂದು ನಂಬಿದ್ದವರು ಹೊಸ ಪಾರ್ಲಿಮೆಂಟನ್ನು ತೆರೆಯುವಾಗ ಅರಸರು ಮಾಡುವ ಭಾಷಣವನ್ನು ಕುತೂಹಲದಿಂದ ಎದುರು ನೋಡುತ್ತಿದ್ದರು ಆದರೆ ತಾ 2ರಲ್ಲಿ ಮಾಡಿದ ಭಾಷಣದಲ್ಲಿ ಹಿಂದೂದೇಶದ ವಿಷಯ ಒಂದು ಮಾತನ್ನಾದರೂ ಹೇಳದ್ದರಿಂದ ಅವರಿಗೆ ತುಂಬಾ ನಿರಾಶೆಯುಂಟಾಗಿದೆ ಆ ಭಾಷಣವಾದ ಕೂಡಲೇ ಪ್ರಧಾನ ಮಂತ್ರಿಯಾದ ಮಿ. ರಾಮ್ಸೆ ಮೆಕ್ಡನಾಲ್ಡರವರು, ಇಂಡಿಯಾದ ಸುಧಾರಣೆ ವಿಷಯ ವಿಚಾರವು ನಡೆಯುತ್ತಿರುವ ಕಾರಣ ಈ ಸಂಗತಿಯನ್ನು ಕುರಿತ ಅರಸರ ಭಾಷಣದಲ್ಲಿ ಏನೊಂದೂ ಸೂಚಿಸಲಿಲ್ಲವೆಂದು ವಿವರಿಸಿದರು ಬ್ರಿಟಿಷ್ ಲೇಬರ್ ಸರ್ಕಾರದ ಒರುವ ಎರಡು ವರ್ಷಗಳ ಧ್ಯೇಯವನ್ನೂ, ಕಾರ್ಯಕ್ರಮವನ್ನೂ ವಿವರಿಸಿದ ಭಾಷಣದಲ್ಲಿ ಹಿಂದೂಸ್ಥಾನದ ವಿಷಯ ಏನೊಂದೂ ಹೇಳದ್ದು ಸರಿಯಲ್ಲವೆಂದು ಎಲ್ಲರಿಗೂ ತಿಳಿಯುವುದು

ಆದರೆ ಮಂತ್ರಿವರ್ಯರು ತಮ್ಮ ಭಾಷಣದಲ್ಲಿ ಹಿಂದೂಸ್ಥಾನದ ಪರಿಸ್ಥಿತಿಯನ್ನು ಕುರಿತು ಸೂಕ್ಷ್ಮವಾಗಿ ಹೇಳಿರುವ ರೀ... ಸೈಮನ್ ಕಮಿಷನಿನ ನೇಮಕವು ಬ್ರಿಟನಿನಲ್ಲಿ ಸರ್ವಸಮ್ಮತವಾದ್ದಾದರೂ ಇಂಡಿಯಾದಲ್ಲಿ ಬಲವಾದ ಪಂಗಡದವರು ಅದಕ್ಕೆ ಪರವಾಗಿಲ್ಲದ್ದು ವ್ಯಸನಕರವೆಂದೂ, ಇನ್ನಾದರೂ ಈ ಕಷ್ಟಕರದ ಸಮಸ್ಯೆಯನ್ನು ಪ್ರಯೋಜನಕರವಾದ ವಿಧಾನದಲ್ಲಿ ಸಾಧಿಸಲು ಇಂಡಿಯಾದ ಪ್ರತಿನಿಧಿಗಳು ತಮಗೆ ಸಹಾಯ ಮಾಡಬೇಕೆಂದು ಪುನಹ ಕೇಳಿಕೊಳ್ಳುತ್ತೇನೆಂದೂ ಅಂದಿರುವರು. ಹಿಂದೂದೇಶದ ಸರ್ಕಾರದವರು ಸೈಮನ್ ಕಮಿಶನಿನ ವಿಚಾರವು ಬಹು ಜಯಪ್ರದವಾಯಿತೆಂದೂ, ತುಂಬಾ ಜನರು ಅದರೊಂದಿಗೆ ಸಹಕರಿಸಿದರೆಂದೂ ನಟಿಸಿದರೂ ಪ್ರಧಾನ ಮಂತ್ರಿಯವರು ಈ ಗಾಳಿಗೆಯನ್ನು ಕಣ್ಣು ಮುಚ್ಚಿಕೊಂಡು ನುಂಗದೆ, 'ಹಿಂದೂದೇಶದಲ್ಲಿ ಬಲವಾದ ಪಂಗಡದವರು ಕಮಿಶನಿಗೆ ಪರವಾಗಿರಲಿಲ್ಲ'ವೆಂದು ಒಪ್ಪಿಕೊಂಡದ್ದು ಸಂತೋಷಕರವಾಗಿದೆ ಇದನ್ನು ಒಪ್ಪಿಕೊಂಡದ್ದರಿಂದ ಸೈಮನ್ ಕಮಿಶನಿನ ಉಪಾಯವು ಜಯವಾಗಲಿಲ್ಲವೆಂದು ತೋರಿಸಿದರೂ ಈ ದಾರಿಯನ್ನು ಬಿಟ್ಟು ಈ ಕಷ್ಟ ತರದ ಸಮಸ್ಯೆಯನ್ನು 'ಸಾಧಿಸಲು ಬೇರೆ ವಿಧಾನವನ್ನು ಸೂಚಿಸದೆ, ಹಿಂದೀಯ ಪ್ರಮುಖರು ಸಹಾಯ ಮಾಡಬೇಕೆಂದು ಕೇಳುವದರಲ್ಲಿ ಪ್ರಯೋಜನವೇನೂ ಕಂಡುಬರುವದಿಲ್ಲ. ಜಂಟಿಸಮಾನತ್ವದಲ್ಲಿ ಸಹಕರಿಸಲು ಹಿಂದೀಯರು ಯಾವಾಗಲೂ ತಯಾರಾಗಿಯೇ ಇರುವರು ಇಡೀ ಭಾರತವರ್ಷದಲ್ಲಿ ನಡೆಯುತ್ತಿರುವ ಪ್ರಚಂಡ ರಾಜಕೀಯ ಚಳವಳವೂ ಅದಕ್ಕಾಗಿಯೇ ಆಗಿದೆ ಹಿಂದೀಯ ಜನರಿಗೆ ಕೂಡಲೇ ಬೇಕಾಗಿರುವ ಆಡಳಿತ ರಚನೆಯು ಹಿಂದೀಯ ಧುರೀಣರಿಂದ ತಯಾರು ಮಾಡಲ್ಪಟ್ಟಿದೆ. ನೆಹರು ಕಮಿಟಿಯವರು ತಯಾರಿಸಿದ ರಚನೆಯಾಗಿದೆ. ಇದನ್ನು ಸಂಪೂರ್ಣವಾಗಿ ಕೊಡುವುದು ಬ್ರಿಟಿಷ್ ಸರ್ಕಾರದ ಪಾಲಿಗೆ ತಕ್ಕ ಕಡಿಮೆಯೆಂದಾದರೆ ಇದನ್ನು ಅಸ್ತಿಭಾರವನ್ನಾಗಿಟ್ಟುಕೊಂಡು ಭಾರತ ಪ್ರಮುಖರೂ, ಬ್ರಿಟಿಷ್ ಪಾರ್ಲಿಮೆಂಟಿನ ಪ್ರತಿನಿಧಿಗಳೂ ಒಂದಾಗಿ ಸೇರಿ ಎರಡು ಕಡೆಯವರ ಹಕ್ಕು ಬಾಧ್ಯತೆಗಳಿಗೂ ಕುಂದಕ ಬಾರದ ರೀತಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬರಬಹುದು ಇದರಿಂದ ಹಿಂದೀಯರನ್ನು ಅವರ ಭೂಮಿಯಲ್ಲಿ ಸಮಸಮಾನತ್ವದಿಂದ ಕಂಡಂತಾಗುವುದು ಮತ್ತು ಭಾರತೀಯರು ಬ್ರಿಟಿಷ್ ಸರ್ಕಾರದಲ್ಲಿ ಕಳಕೊಂಡಿರುವ ವಿಶ್ವಾಸವನ್ನು ಮರಳಿ ಪಡೆಯಲು ಅನುಕೂಲಿಸಿ ಕೊಟ್ಟಂತಾಗುವುದು. ಹೀಗೆ ಅನ್ಯೋನ್ಯ ಭಾವದಿಂದ ವರ್ತಿಸಿದರೆ ಇವೆರಡು ದೊಡ್ಡ ಜನಾಂಗಗಳ ಅಭಿವೃದ್ಧಿಯೂ, ಶ್ರೇಯಸ್ಸೂ ಹೆಚ್ಚುವದೆಂಬದರಲ್ಲಿ ಸಂಶಯವಿಲ್ಲ ಹೀಗೆ ಮಾಡಲು ದೊರೆತಿರುವ ಈ ಸುಸಂದರ್ಭವನ್ನು ಲೇಬರ್ ಸರ್ಕಾರದವರು ಇನ್ನಾದರೂ ಉಪಯೋಗಿಸಿಕೊಳ್ಳುವರೋ ಎಂಬುದು ಪ್ರಪಂಚವೇ ಎದುರು ನೋಡುತ್ತಿದೆ.

ಈ ಮಧ್ಯೆ ಸೈಮನ್ ಕಮಿಷನಿನೊಂದಿಗೆ ಸಹಕರಿಸಲು ಇಂಗ್ಲೆಂಡಿಗೆ ಹೋಗಿರುವ ಇಂಡಿಯಾದ ಸೆಂಟ್ರಲ್ (ನಾಯರ್) ಕಮಿಟಿಯವರಲ್ಲಿ ಅತೃಪ್ತಿ ಹುಟ್ಟಿರುವಂತೆ ಕಾಣುತ್ತದೆ ಇಂಡಿಯಾದಲ್ಲಿ ಸೈಮನರು ಉದ್ಘೋಷಿಸಿದಂತೆ ಸೈಮನ್ ಕಮಿಷನಿನೊಂದಿಗೆ ತಮಗೆ ಸರಿಸಮಾನದ ಹಕ್ಕು ಕೊಟ್ಟಿರುವದಿಲ್ಲವೆಂದೂ, ಅದರ ಮೆಂಬರುಗಳೊಂದಿಗೆ ಪೂರ್ತಿ ಚರ್ಚೆಯಲ್ಲಿ ಭಾಗಿಗಳಾಗಲು ತಮ್ಮನ್ನು ಬಿಡುವದಿಲ್ಲವೆಂದೂ ಸೆಂಟ್ರಲ್ ಕಮಿಟಿಯ ಅಧ್ಯಕ್ಷರಾದ ಸರ್ ಶಂಕರನಾಯರವರ ಫಿರ್ಯಾದು ಆಗಿದೆ ಈ ಫಿರ್ಯಾದಿಗೆ ಸೈಮನರು ಏನೊಂದೂ ಉತ್ತರವನ್ನೀಯದೆ ಮೌನವಾಗಿರುವರು. ಅಲ್ಲದೆ ಈ ಕಮಿಟಿಯ ಮೆಂಬರುಗಳಲ್ಲಿಯೇ ಭಿನ್ನಾಭಿಪ್ರಾಯಗಳು ಹುಟ್ಟಿ ಅತೃಪ್ತಿಯುಂಟಾಗಿದೆಯೆಂದೂ ವರ್ತಮಾನವಿದೆ ಇದೆಲ್ಲದಕ್ಕಿಂತಲೂ ಹೆಚ್ಚಾಗಿ, ಪ್ರಧಾನ ಮಂತ್ರಿಯವರು ತಮ್ಮ ಭಾಷಣದಲ್ಲಿ ಸೈಮನ್ ಕಮಿಷನನ್ನು ಬಹಿಷ್ಕರಿಸಿದವರನ್ನು 'ಬಲವಾದ ಪಂಗಡ'ವೆಂದು ಹೇಳಿದರೇ ಹೊರತು ಸಂಪೂರ್ಣ ಸಹಕರಿಸಿದ ತಮ್ಮ ಸಹಾಯವನ್ನು ಮೆಚ್ಚಲಿಲ್ಲವೆಂದು ಅವಮಾನಗೊಂಡಿರುವಂತೆ ಹಿಂದೂಸ್ಥಾನದ ದೊಡ್ಡ ಬಹುಮತದವರು ಎಷ್ಟು ವಿರೋಧಿಸಿದರೂ ಕೂಡ ತಾವುಗಳು ಸೈಮನ್ ಕಮಿಶನಿನೊಂದಿಗೆ ಸಹಕರಿಸುವ ಪ್ರಾಶಸ್ತ್ಯ ದೊರೆಯುತ್ತದೆಂದು ನಂಬಿ ಸಹಕರಿಸಿದ ಸೆಂಟ್ರಲ್ ಕಮಿಟಿಯವರು ತಮ್ಮ ತಪ್ಪನ್ನು ಇನ್ನಾದರೂ ಒಪ್ಪಿಕೊಳ್ಳುವರೋ ಎಂಬದು ಸಂಶಯಕರವಾಗಿದೆ

"ಕೊಡಗು" ಕಂಪನಿಯ ಡೈರೆಕ್ಟರುಗಳ ಮೀಟಿಂಗು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ತಾ ೨—7—'29ರಲ್ಲಿ ಜಮೀನ್ದಾರರ ಸಂಘದ ಹಾಲ್‍ನಲ್ಲಿ ನಡೆಯಿತು ಡೈರೆಕ್ಟರುಗಳಾದ 1 ಮೆ. ಸಿ ಯನ್, ವೆಂಕಪ್ಪಯ್ಯನವರು (ಕಾರ್ಯಾಧ್ಯಕ್ಷರು) 2 ಮೆ ಮನೆಯಪಂಡ ಚಿಣ್ಣಪ್ಪನವರು 3. ಮೆ ಯಂ. ಯಂ ಸಿದ್ದೇಶ್ವರವರು, 4 ಮೆ. ಕೋಟೆರ ಚಿಣ್ಣಪ್ಪನವರ, 5 ಮೆ. ಯನ್ ಮಾದಪ್ಪನವರು, ಮತ್ತು 6 ಮೆ ಐಚೆಟ್ಟಿರ ಸಿ ಸುಬ್ಬಯ್ಯನವರು ಹಾಜರಿದ್ದರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು

2 ಏಪ್ರಿಲ್ ಮತ್ತು ಮೇ ತಿಂಗಳುಗಳ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3 ಡೈರೆಕ್ಟರ್ ಮೆ ಕುದಿಯರಂಡ ಮಾಚಯ್ಯನವರ ಪತ್ರ ಓದಲಾಯಿತು ಈ ಡೈರೆಕ್ಟರು ಮೀಟಿಂಗಿನಲ್ಲಿ ಹಾಜರಿಲ್ಲದ್ದರಿಂದ ಈ ಕಾಗದದಲ್ಲಿ ಸೂಚಿಸಿರ ವಿಚಾರವನ್ನು ಚರ್ಚಿಸಲಾಗುವುದಿಲ್ಲವೆಂತಲೂ ಅದರ ಕಾಗದದ ಅಸಭ್ಯ ಭಾಷೆಗೆ ಡೈರೆಕ್ಟರುಗಳು ಆಕ್ಷೇಪಿಸುತ್ತಾರೆಂತಲೂ ತೀರ್ಮಾನಿಸಲಾಯಿತು

4 ಕಳೆದ ವರ್ಷ ನಿಶ್ಚೈಸಿದ ದರದ ಮೇರೆ ಪ್ರೆಸ್ಸಿನ ಸಿಬ್ಬಂದಿಯವರಿಗೆ ತಾ. 1—7—'29ರಿಂದ 31—5—30ರ ವರೆಗೆ ಸಂಬಳ ಬಡ್ತಿ ಕೊಡುವುದೆಂತಲೂ ಕಂಪೋಜಿಟರ್ ಯಂ ಬಿದ್ದಪ್ಪನ ಸಂಬಳದ ದರವನ್ನು 16—2—24—1—30 ಎಂದು ನಿರಮ್ಮ ಮಾಡಿ, ತಾ. 1—7—'29ರಿಂದ 2ರೂ. ಬಡ್ತಿ ಕೊಡಬಹುದೆಂತಲೂ ಮುಂದಿನ ಬಡ್ತಿಯು ಪ್ರತಿ ವರ್ಷ ಡೈರೆಕ್ಟರುಗಳ ಮಂಜೂರಾತಿಗೆ ಒಳಪಟ್ಟಿರಬೇಕೆಂತಲೂ ತೀರ್ಮಾನವಾಯಿತು.

ಕಳೆದ ವರ್ಷ ನಿಶ್ಚೈಸಿದ ದರದ ಮೇರೆ ಸಂಪಾದಕ ಮೆ ಪಿ. ಐ ಬೆಳ್ಯಪ್ಪನವರಿಗೆ ಕೊಡಬೇಕಾದ ಬಡ್ತಿಯನ್ನು ಆರು ತಿಂಗಳ ವರೆಗೆ ಬಾಕಿ ಮಾಡಿ, ನಂತರ ಆಲೋಚಿಸಬಹುದೆಂತ ತೀರ್ಮಾನಿಸಲಾಯಿತು.

5. ಕಂಪೆನಿಗಾಗಿ ವಸೂಲ್ಮಾಡಿದ ಹಣವನ್ನು ದುರುಪಯೋಗಪಡಿಸಿದಕ್ಕಾಗಿ ಕಂಪೆನಿಯ ಏಜೆಂಟರಾಗಿದ್ದ ಪೇರಿಯಂಡ ಪೂವಯ್ಯನವರ ಮೇಲೆ ಪೊಲೀಸಿಗೆ ಕೇಸು ಕೊಡಬಹುದೆಂದು ನಿಶ್ಚೈಸಲಾಯಿತು.

6 ಮೆ ಪಿ ಟಿ ಅಚ್ಚಯ್ಯನವರ ಮತ್ತು ಅವರ ಹತ್ತಿರ ಸಂಬಂಧಿಕರ ಅರ್ಜಿ ಮೇರೆ ಅವರ ಸಹೋದರ ದಿವಂಗತ ಮೆ. ಪಿ ಟಿ. ಕುಶಾಲಪ್ಪನವರ 20 ಶೇರುಗಳನ್ನು ಮೆ. ಅಚ್ಚಯ್ಯನವರ ಹೆಸರಿಗೆ ವರ್ಗಾಯಿಸಲಾಯಿತು.

ಸಿ. ಯನ್. ವೆಂಕಪ್ಪಯ್ಯ.
(ಕಾರ್ಯಾಧ್ಯಕ್ಷರು)

ಕೊಡಗು ಜಮೀನ್ದಾರರ ಸಂಘದ ಮೆಂಬರುಗಳಲ್ಲಿ ವಿನಂತಿ

ಬಹು ಕಾಲದಿಂದ ದೇಶದ ಏಳಿಗೆಗೆ ಕೆಲಸ ಮಾಡುತ್ತಿರುವ ಜಮೀನುದಾರರ ಸಂಘದ ಹೆಸರನ್ನು ಕೆಲವರು ದುರುಪಯೋಗಪಡಿಸಲು ಪ್ರಯತ್ನಿಸಿರುತ್ತಾರೆ. ಕೊಡಗು ಜಮೀನ್ದಾರರ ಸಂಘದ ಮೆಂಬರುಗಳಲ್ಲದವರೂ ಕೂಡಿ ಇರುವ ಈ ಕೆಲವರು ಒಂದು ಕಮಿಟಿಯನ್ನು ಮಾಡಿಕೊಂಡು ಜಮೀನ್ದಾರರ ಸಂಘಕ್ಕೆ ಕೊಡಬೇಕಾಗಿರುವ ಚಂದಾ ಮೊಬಲಗನ್ನು ತಮಗೆ ಕೊಡಬೇಕೆಂತ ಕೇಳುತ್ತಿದ್ದಾರೆಂದು ತಿಳಿಯಬರುತ್ತದೆ. ಈ ಕೆಲವರೇ ಕೊಡವ ಸಭೆಯ ಚಾಲಕರಾಗಿರುತ್ತಾರೆ. ಸಂಘದ ಕಳೆದ ಮಹಾ ಸಭೆಯಲ್ಲಿ ಮಂಜೂರು ಮಾಡಿದ ಕೆಲವು ಠರಾವುಗಳು ಇವರಿಗೆ ಒಪ್ಪದ್ದರಿಂದಲೇ ಹೀಗೆ ಮಾಡಲು ಕಾರಣವೆಂದು ಸೂಚಿಸಿರುವರು. ಸಂಘದ ಮಹಾ ಸಭೆಯಲ್ಲಿ ಬಹುಮತದಿಂದ ಮಾಡಿದ ತೀರ್ಮಾನಗಳನ್ನು ಪಜ ಮಾಡಲು ಸಂಘದ ಮೆಂಬರುಗಳಲ್ಲದವರಿಗೆ ಒಂದಿಷ್ಟೂ ಹಕ್ಕಿರುವುದಿಲ್ಲ; ಮಾತ್ರವಲ್ಲ, ಸಂಘದ ನಿಬಂಧನೆಗಳನ್ನನುಸರಿಸದೆ ನಡಿಸಿದ ಮೀಟಿಂಗಿನಲ್ಲಿ ಸಂಘದ ಮಹಾ ಸಭೆಯವರು ಚುನಾಯಿಸಿದ ಕಾರ್ಯಕಾರಿ ಮಂಡಳಿಯ ಮೇಲೆ ವಿಶ್ವಾಸವಿಲ್ಲವೆಂದು ಠರಾವು ಮಾಡುವ ಅಧಿಕಾರವು ಸಂಘದ ಕೆಲವು ಮೆಂಬರುಗಳಿಗೂ ಇಲ್ಲ. ಹೊಸ ಕಾರ್ಯಕಾರಿ ಮಂಡಳಿಯವರು ಸಂಘದ ಮಹಾ ಸಭೆಯ ತೀರ್ಮಾನಗಳಿಗೆ ವಿರೋಧವಾದ ಕೆಲಸವೇನೂ ಮಾಡದೆ ಇರುವದರಿಂದ ಅವಿಶ್ವಾಸದ ಠರಾವು ಮಾಡಲು ಕಾರಣವೂ ಇಲ್ಲ. ಪ್ರಪಂಚದಲ್ಲಿ ಸಾಧಾರಣವಾಗಿ ನಡೆಯುವ ಕ್ರಮವನ್ನು ಅನುಸರಿಸದ ಈ ವರ್ತನೆಯು ಯಾರೂ ಒಪ್ಪತಕ್ಕಂಥಾದ್ದಲ್ಲ.

2. ಈ ಕೆಲವರು ಜಮೀನ್ದಾರರ ಸಂಘದ ಮೇಲೆ ಹೇಳುವ ಆಕ್ಷೇಪಣೆಗಳಲ್ಲಿ ಒಂದು, ಕರ್ನಾಟಕ ಏಕೀಕರಣಕ್ಕೆ ಒಪ್ಪಿರುವದಾಗಿದೆ. ಕೊಡಗು ದೇಶವು ಕರ್ನಾಟಕ ಪ್ರಾಂತ್ಯದೊಳಗೆ ಸೇರಿಕೊಳ್ಳುವದು ಮಾತ್ರವೇ ಕೊಡಗಿನ ಮುಂದಿನ ರಾಜಕೀಯ ರಚನೆಯೆಂತ ತೀರ್ಮಾನಿಸುವುದಿಲ್ಲ. ಸ್ವತಂತ್ರ ಕರ್ನಾಟಕ ಪ್ರಾಂತ್ಯವು ಸ್ಥಾಪಿತವಾಗುವ ವರೆಗೆ ಕೊಡಗು ದೇಶದ ಆಡಳಿತವು ಪ್ರಜಾಜನರ ಅಧೀನದಲ್ಲಿ ಪ್ರತ್ಯೇಕವಾಗಿ ನಡಿಸಲ್ಪಡಬೇಕೆಂತಲೂ ಸಂಘದ ತೀರ್ಮಾನವು ಇದೆ. ಈ ದೇಶವನ್ನು ಪ್ರತ್ಯೇಕವಾಗಿಯೇ ಇಡಬೇಕೆಂದು ಹೇಳುವವರಂತೆಯೇ, ಹೀಗೆ ಪ್ರತ್ಯೇಕ ಆಳಲು ಸಾಧ್ಯವಿಲ್ಲದ್ದರಿಂದ ಒಡನೆ ಈ ಪ್ರಾಂತ್ಯವನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸಬೇಕೆನ್ನುವವರ ಸಂಗಡ ಒಂದು ದೇಶದಲ್ಲಿ ಇವೆಯೆಂಬುದನ್ನು ಮರೆಯಬಾರದು. ಇವೆರಡು ತರದ ಅಭಿಪ್ರಾಯಗಳನ್ನು ಸಮಾಧಾನಗೊಳಿಸಲಿಕ್ಕಾಗಿಯೇ ಸಂಘವು ಮಧ್ಯತರದ ತೀರ್ಮಾನವನ್ನು ಮಾಡಿರುವುದಾಗಿದೆ. ಕರ್ನಾಟಕ ಏಕೀಕರಣವು ಫಕ್ಕನೆ ಒಂದೆರಡು ವರ್ಷಗಳಲ್ಲಿ ನಡೆಯುವಂಥಾದ್ದಲ್ಲ. ಅದಕ್ಕೆ ಕೆಲವು ವರ್ಷಗಳು ಬೇಕಾಗುವವು. ಅಷ್ಟರ ವರೆಗೆ ಸಂಘವು ಮಾಡುವ ಏರ್ಪಾಟಿನ ರಚನೆಯನ್ನು ಜಾರಿಗೆ ತಂದು ಕೊಡಗನ್ನು ಪ್ರತ್ಯೇಕವಾಗಿ ಆಳುವುದರಿಂದ ಇಲ್ಲಿಯ ನಿವಾಸಿಗಳಿಗೆ ಪ್ರಯೋಜನಕರವಾಗುವುದೋ ಎಂದು ನೋಡಬಹುದು. ಇದರಿಂದ ಕೊಡಗನ್ನು ಎಂದೆಂದಿಗೂ ಪ್ರತ್ಯೇಕವಾಗಿಯೇ ಇಡಬೇಕೆಂಬವರ ಇಚ್ಛೆಯನ್ನು ಜಾರಿಗೆ ತರಲು ಸಾಧ್ಯವೋ ಎಂತ ಅಜಮಾಯಿಸಲು ಅನುಕೂಲ ಕೊಡಲಾಗಿದೆ. ಇದು ಪ್ರಯೋಜನಕರವೆಂದು ಕಂಡುಬಂದರೆ ದೇಶವನ್ನು ಪ್ರತ್ಯೇಕವಾಗಿಯೇ ಆಳುವಂತೆಯೂ, ಪ್ರಯೋಜನಕರವೂ, ಸಾಧ್ಯವೂ ಅಲ್ಲವೆಂದು ಕಂಡರೆ ದೊಡ್ಡ ಪ್ರಾಂತ್ಯದೊಂದಿಗೆ ಕೊಡಗನ್ನು ಸೇರಿಸುವಂತೆಯೂ ದೇಶದವರೇ ಬಹುಮತದಲ್ಲಿ ನಿಶ್ಚಯಿಸುವರೆಂಬುದಕ್ಕೆ ಸಂಶಯವೇನೂ ಇಲ್ಲ. ಆದುದರಿಂದ ಸಂಘವು ತಯಾರಿಸಿರುವ ರಚನೆಯು ಮಧ್ಯಸ್ಥವಾದ್ದಾಗಿದೆ. ಇದರಿಂದ ಯಾವ ಪಂಗಡದವರ ಅಭಿಪ್ರಾಯಕ್ಕೂ ವಿರೋಧವಿಲ್ಲ.

4. ದೊಡ್ಡ ಪ್ರಾಂತ್ಯಗಳಿಗೆ ಕೊಟ್ಟ ರಾಜಕೀಯ ಸುಧಾರಣೆಗಳನ್ನು ಕೊಡಗಿಗೂ ಕೊಡದಿದ್ದರೆ ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂತ 1918 ರಿಂದ 1923ರ ವರೆಗೂ ಸಂಘವು ತೀರ್ಮಾನಿಸುತ್ತಾ ಬಂತು. ಲೆಜಿಸ್ಲೇಟಿವ್ ಕೌನ್ಸಿಲು ಮಂಜೂರಾದಾಗ ಮದ್ರಾಸಿಗೆ ಸೇರುವಿಕೆಯನ್ನು ಕತ್ತಾಲಕ್ಕೆ ಬಿಟ್ಟಿತು. ಹಾಗೆ ಕಾಲಕ್ಕನುಚಿತವಾಗಿ ದೇಶದ ಹಿತವನ್ನು ಬಯಸಿ ಬಹುಮತದ ಇರಾದೆಯಂತೆ ರಾಜಕೀಯ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುವದಕ್ಕೆ ಅಡ್ಡಿ ಏನೂ ಇಲ್ಲ. ಸಂಘದ ಕಾರ್ಯಗಳು ಸದಸ್ಯರ ಬಹುಮತ ತೀರ್ಮಾನದಂತೆ ಹಿಂದೆಯೂ ನಡೆಯುತ್ತಿತ್ತು, ಇನ್ನು ಮುಂದಕ್ಕೂ ನಡೆಯುವದು ಎಂಬುದರಲ್ಲಿ ಸಂಶಯವಿಲ್ಲ. ಸ್ವತಂತ್ರ ಕರ್ನಾಟಕ ಪ್ರಾಂತ್ಯ ರಚನೆಯಾಗುವ ವರೆಗೂ ಸಹ ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿರಬಾರದು, ಕೂಡಲೆ ಮದ್ರಾಸಿಗೆ ಸೇರಿಸಲ್ಪಡಬೇಕು ಎಂಬ ಠರಾವಿನ ಮೇಲೆ ಸಂಘದ ಕಳೆದ ಮಹಾಸಭೆಯಲ್ಲಿ ಬಹಳ ದೀರ್ಘ ಚರ್ಚೆ ನಡೆಯಿತು. ಈ ಅಭಿಪ್ರಾಯಕ್ಕೆ ಬಹುಮತವು ಒಪ್ಪಲಿಲ್ಲ. ಒಬ್ಬರಿಬ್ಬರ ಅಭಿಪ್ರಾಯದಂತೆ ಸಂಘವು ನಡಿಸಲ್ಪಡುತ್ತಿರುವದಿಲ್ಲವೆಂಬದಕ್ಕೆ ಇದೇ ಒಂದು ಸಾಕ್ಷಿಯಾಗಿದೆ. ಪ್ರಜಾಪ್ರಭುತ್ವ ಸರಕಾರವು (ಡೆಮೋಕ್ರೆಸಿ) ಬಹುಮತದ ಅಭಿಪ್ರಾಯದ ಮೇಲೆಯೇ ನಡೆಯುವಂಥಾದ್ದು. ಈ ತತ್ವದ ಮೇಲೆಯೇ ಸಂಘದ ಕಾರ್ಯಕಲಾಪಗಳು ನಡೆಯುತ್ತಿರುವದಾಗಿದೆ.

5. ಈ ಸಂಘದಲ್ಲಿರುವ ಕೊಡವ ಸಭೆಯ ಮೆಂಬರುಗಳು ಒಂದು ವರ್ಷದೊಳಗೆ ಆ ಸಭೆಯನ್ನು ಬಿಡಬೇಕು ಎಂತ ಮಾಡಿದ ತೀರ್ಮಾನವು ಇವರ ಆಕ್ಷೇಪಕ್ಕೆ ಕಾರಣವಾಗಿದೆ. ಕೊಡವ ಸಭೆಯು ರಾಜಕೀಯ ವಿಚಾರದಲ್ಲಿ ಜಮೀನ್ದಾರರ ಸಂಘದ ಅಭಿಪ್ರಾಯಕ್ಕೆ ವಿರೋಧವಾಗಿ ಪ್ರಸಿದ್ಧರಿಂದಲೇ ಈ ತೀರ್ಮಾನಕ್ಕೆ ಕಾರಣ. ಹಿಂದಿನ ದೇಶದ ಬಹುಮತದವರು ಮಾಡಿಸಿದಂತೆಯೇ ಜಮೀನ್ದಾರರ ಸಂಘವು ಸೈಮನ್ ಕಮಿಷನನ್ನು ಬಹಿಷ್ಕರಿಸಲು ತೀರ್ಮಾನಿಸಿತು. ಕೊಡವ ಸಭೆಯವರು ಸದರಿ ಕಮಿಷನಿನೊಂದಿಗೆ ಸಹಕರಿಸಿದರು; ಅದಕ್ಕೆ ಡೆಪ್ಯುಟೇಶನನ್ನೂ ಕಳುಹಿಸಿದರು. ರಾಜಕೀಯ ಚಳವಳಿಯಲ್ಲಿ ಈ ರೀತಿ ಒಂದಕ್ಕೊಂದು ವಿರೋಧವಾದ ತೀರ್ಮಾನಗಳನ್ನು ಮಾಡಿದ ಎರಡು ಸಭೆಗಳಲ್ಲಿ ಸದಸ್ಯರಾಗಿರುವವರು ಎರಡು ಸಭೆಗಳಿಗೂ ಗೌರವ ತರುವದಿಲ್ಲ. ಮೆಂಬರುಗಳು ಜಮೀನ್ದಾರರ ಸಂಘದ ಹೆಸರಿನಲ್ಲಿ ಸಹಕರಿಸುವುದಿಲ್ಲವೆಂತ ಹೇಳಿ, ಕೊಡವ ಸಭೆಯ ಹೆಸರಿನಲ್ಲಿ ಸಹಕರಿಸಿದರೆ ಎರಡು ಸಂಸ್ಥೆಗಳ ಮಾತಿಗೂ ಬೆಲೆ ಇಲ್ಲ. ಆದುದರಿಂದಲೇ ಈ ಮುಖ್ಯ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವವರು ಬೇರೆ ಬೇರೆ ಸಂಸ್ಥೆಗಳಲ್ಲೇ ಸದಸ್ಯರಾಗಿರತಕ್ಕದ್ದು ಯುಕ್ತವೆಂತ ಸಂಘವು ತೀರ್ಮಾನಿಸಿದ್ದಾಗಿದೆ.

10. ಅಸ್ಪೃಶ್ಯರನ್ನು ಬ್ರಾಹ್ಮಣೇತರರು ಹೋಗುವ ಮಟ್ಟಿಗೆ ದೇವಸ್ಥಾನಗಳಿಗೆ ಬಿಡಬೇಕೆಂಬ ಠರಾವನ್ನು ಪಾಸು ಮಾಡಿಕೊಂಡು ಬ್ರಾಹ್ಮಣೇತರ ಹಿಂದೂಗಳನ್ನು ಪಂಚಮರ ಜೊತೆಗೆ ಸೇರಿಸಲು ಸಂಘವು ಯತ್ನಿಸುತ್ತಿದೆಯೆಂದೂ ಆಕ್ಷೇಪಿಸಲಾಗಿದೆ. ಈ ಠರಾವು ಚರ್ಚೆಯಾಗಿ ಬಹುಮತದಿಂದ ತಿರಸ್ಕರಿಸಲ್ಪಟ್ಟಿತು. ಈ ಠರಾವಿಗೆ ಒಪ್ಪುವ ಸಂಘದ ಮೆಂಬರುಗಳು ತಮ್ಮ ಅಭಿಪ್ರಾಯವನ್ನು ದೇಶದಲ್ಲಿ ಸಂಘದ ಹೆಸರಿನಲ್ಲಿ ಜಾರಿಮಾಡಲು ಪ್ರಾರಂಭಿಸಿರುವುದಿಲ್ಲ.

ಬಾರ್ದೋಲಿ ಸತ್ಯಾಗ್ರಹದ ಹೆಸರನ್ನು ಎತ್ತಿ, ಅದರಂತೆ ಇಲ್ಲಿಯೂ ರೈತರು ಕಂದಾಯ ಕೊಡದಂತೆ ಮಾಡಿ, ತಮ್ಮ ಭೂಮಿ ಕಾಣೆಗಳನ್ನು ಕಳಕೊಳ್ಳುವಂತೆ ಸಂಘವು ಮಾಡುವದು ಎಂದು ಜನರಲ್ಲಿ ಭೀತಿಯನ್ನು ಹುಟ್ಟಿಸಲು ಯತ್ನಿಸುತ್ತಿದ್ದಾರೆ. ಸಂಘದ ವಿಷಯನಿಯಾಮಕ ಸಮಿತಿಯಲ್ಲಾಗಲೀ, ಮಹಾಸಭೆಯಲ್ಲಾಗಲೀ ಕಂದಾಯ ಕೊಡದೆ ಸತ್ಯಾಗ್ರಹ ನಡಿಸಬೇಕೆಂಬ ಠರಾವು ಬಂದಿರಲಿಲ್ಲ. ಇಂಥಾ ಮಹತ್ತದ ಠರಾವಿನ ಜವಾಬ್ದಾರಿಯನ್ನು ತಿಳಿಯಕೊಳ್ಳದೆ ಸಂಘವು ಎಂದೂ ಅದನ್ನು ಕೈಕೊಳ್ಳಲಿಕ್ಕಿಲ್ಲ.

7. ಈ ಸಂಘದಲ್ಲಿ ಸುಮಾರು 70% ರಷ್ಟು ಮೆಂಬರುಗಳು ಕೊಡವರೇ ಆಗಿರುವರು. ಇದರ ಯಾವ ಕಮಿಟಿಯಲ್ಲಾಗಲೀ, ಮಹಾಸಭೆಯಲ್ಲಾಗಲೀ ಕೊಡವರೇ ಬಹುಮತದಲ್ಲಿರುವದಲ್ಲದೆ ಕೊಡಗೇತರರಲ್ಲ. ಯಾವ ಕಾರಣ ಈ ಸಂಘದ ಕಾರ್ಯಗಳಿಂದ ಕೊಡವರ ಹಿತಕ್ಕೆ ದ್ರೋಹವಾಗಲು ಎಂದಿಗೂ ಎಡೆಇಲ್ಲ. ಕೊಡವರ ಯಾವ ಹಕ್ಕು ಬಾಧ್ಯತೆಗಳನ್ನಾದರೂ ಈ ಸಂಘದ ಮೂಲಕ ಧೃಢಪಡಿಸಿಕೊಳ್ಳಲು ತುಂಬಾ ಅನುಕೂಲವಿದೆ ಎಂಬುದನ್ನು ಕೊಡವ ಮಹನೀಯರು ಮರೆಯಬಾರದು.

ಜನರು ತಾವಾಗಿಯೇ ಕಳಕೊಂಡಿರುವ ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಸ್ವಾರ್ಥತ್ಯಾಗ ಬಿಟ್ಟು ಹೋರಾಡಲು ಸಿದ್ಧರಾಗಬೇಕು. ಸರಕಾರಿ ಉದ್ಯೋಗಗಳ ಮೇಲಾಗಲೀ, ಟೈಟಲುಗಳ ಮೇಲಾಗಲೀ, ಸರಕಾರಿ ಹುಮ್ಮಕ್ಕಿನ ಮೇಲಾಗಲೀ ದೃಷ್ಟಿ ಇಟ್ಟರೆ ದೇಶದ ಬಹು ಜನರ ಕ್ಷೇಮಕ್ಕಾಗಿ ನಿರ್ಭೀತಿಯಿಂದ ಕೆಲಸ ಮಾಡಲು ಸಾಧ್ಯವಿಲ್ಲ. ಸಂಘದ ಈಗಿನ ಮುಖಂಡರು ಸ್ವಾರ್ಥತ್ಯಾಗದಿಂದ ಕೆಲಸ ಮಾಡುತ್ತಿದ್ದಾರೋ, ಯಾ ದೇಶದ ಹಿತಕ್ಕಾಗಿ ಹೋರಾಡುತ್ತಿದ್ದಾರೋ ಎಂಬುದನ್ನು ತಿಳಕೊಳ್ಳಲು ದೇಶದವರು ಸಮರ್ಥರಾಗಿದ್ದಾರೆ.

ದೇಶದಲ್ಲಿ ಜಾತಿ ಮತ ಭೇದವಿಲ್ಲದೆ ಕೆಲಸ ಮಾಡಿದರೇನೇ ದೇಶದ ಪ್ರತಿಯೊಂದು ಕೋಮಿನವರ ಕ್ಷೇಮವೂ ಸಾಧಿಸಲ್ಪಡುತ್ತದೆ ಎಂತ ಸಂಘವು ನಂಬಿರುತ್ತದೆ. ಒಂದು ಕೋಮಿನ ಹಿತರಕ್ಷಣೆಗೆ ಕೆಲಸ ಮಾಡಿದರೆ ಆ ಕೋಮಿಗೂ ಕೇಡೇ, ದೇಶಕ್ಕೂ ಹಾನಿಯೇ ಎಂಬುದನ್ನು ಸಂಘವು ತಿಳಿದುಕೊಂಡಿದೆ. ಈ ರೀತಿ ಸರ್ವಜನರ ಹಿತಕ್ಕಾಗಿ ಕೆಲಸ ಮಾಡುವ ಸಂಘವನ್ನು ಸರ್ವರೂ ಪ್ರೋತ್ಸಾಹಿಸಬೇಕೇ ಹೊರತು, ಸಂಘದ ಹೆಸರಿನಲ್ಲಿ ಸ್ವಾರ್ಥತೆಯನ್ನು ಸಾಧಿಸುವವರ ಮಾತಿಗೆ ದೇಶದವರು ಒಳಗಾಗಬಾರದೆಂತ ಕೇಳಿಕೊಳ್ಳುತ್ತೇನೆ.

ಕೊಡಗು ಜಮೀನ್ದಾರರ ಸಂಘ, ಪಂದ್ಯಂಡ ಬೆಳ್ಯಪ್ಪ.
ಮಡಿಕೇರಿ, ತಾ. 9—7—'29. (ಜನರಲ್ ಸೆಕ್ರೆಟರಿ)

Wanted.

Branch Secretaries at Siddapur and Somvarpet on Rs 50—5—75 plus consolidated (Conce) allowance of Rs. 40 - per mensem. Selected candidates have to deposit Rs. 255/-. Very decent prospects for honest and influential gentlemen. Particulars on application.

Apply to :—

THE DIVISIONAL SECRETARY,
N. L. S. R. Bank Ltd.,
(Madras)
4—4 Puttur, South Kanara.

Of International Repute Prof.
BRUSCHETTINIS Vaccines for:—

Tuberculosis, Leprosy, Typhoid, Cholera, Venereal diseases, Diabetic carbuncle, Acute Rheumatism, Croupous Pneumonia, Pyorroea, Wounds and Sores, Abscesses of skin & in the internal organs and also for Malaria

Bevil, for all Nervous system.

King's Globules, for loss of memory, tired nerves, weakness of the hearing, sight weakness etc.

Pallidine, for Chronic Rheumatism, Paralysis, Eczema etc.

Dr. Morettis tablets, for Diabetes

Liquor Ave, for Asthama, Chronic Bronchitis etc.

Eubienal tablets for venereal diseases

Anti-malaria Curative Pills, for malarial fever.

For Further Particulars —
Apply to the sole Agents for Coorg.

THE COORG EMPORIUM
48—7 MERCARA

Ready !
Sales & Service !!
The most competitive.
CAR
in the most competitive
YEAR

THE NEW MODEL *A Ford !!!*
with three Speed selective sliding gear Transmission.
The most economical car in the market
For Demonstration & further particulars
Please apply to.—

S. Sunder Rau,
Ford Dealer for Coorg.
24—2 MERCARA

Wanted.

Candidates for Wireless Telegraph and Station Master's Courses. Railway Fare PAID. Boarding arrangements
Prospectus on two anna stamps—
Royal Wireless & Telegraph College,
12—10 DELHI.

ಪ್ರಕಟಣೆ.

ಪೊನ್ನಂಪೇಟೆನಾಡು ಮುಕ್ಕೋಡ್ಲು ಗ್ರಾಮದ ಸ್ವಾಮಿ ರಾಮಚಂದ್ರಯ್ಯನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನೆಂದರೆ—

ನನ್ನ ತಂದೆ ಸ್ವಾ. ಕೃಷ್ಣಯ್ಯನೆಂಬವರು ನನ್ನಲ್ಲಿ ಕಲಹ ಮಾಡಿಕೊಂಡು ಮುಕ್ಕೋಡ್ಲಿನ ವಾಸದ ಮನೆ ಬಿಟ್ಟುಬಿಟ್ಟು ಪೊನ್ನಂಪೇಟೆಯಲ್ಲಿ ವಾಸವಿರುತ್ತಾರೆ. ಇವರು ಸದರಿ ಗ್ರಾಮದಲ್ಲಿ ಸದರಿ ಕೃಷ್ಣಯ್ಯನವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಸಾಗಿನ ಭೂಮಿನ ಸ. ನಂಬರು $\frac{81}{1}$ರ ನಂ 9ನೇ ಆಡ. ಮುಕ್ಕಿಗದ್ದೆ ವರ್ಗದ ಪೈಕಿ 3.58 ಎಕ್ರೆದ 7—12—0 ಕಂದಾಯದ ಮತ್ತು $\frac{81}{1}$ ರ ನಂ 8ನೇ ಪೊನ್ನಡೀರ ಕೈಮುಡಪ ವರ್ಗವಂದರ 8.07 ಎಕ್ರೆದ 15—4—0 ಕಂದಾಯದ ಭೂಮಿ ಮತ್ತು ಸದರಿ ಗ್ರಾಮದಲ್ಲಿ ಅಯ್ಯಪ್ಪದೇವರ ಜಹಗೀರ್ $\frac{18}{1}$ರ 4.60 ಎಕ್ರೆದ 2—5—0 ಕಂದಾಯದ ಪಾಮಿ ಪೈಕಿ 1 ಎಕರೆಯು, ಈ ಎರಡು ಸೊತ್ತುಗಳನ್ನು ಮಾರಾಟ ಮಾಡಲು ಹೊರಟಿರುತ್ತಾರೆ.

ಈ ಎರಡು ಸೊತ್ತುಗಳನ್ನು ಕೃಷ್ಣಯ್ಯನ ಮಕ್ಕಳಾಗಿರುವ ನಾನು ಮತ್ತು ನನ್ನ ತಮ್ಮ ಸುಬ್ರಾಯ ಎಂಬವರನ್ನು ಮೋಸಗೊಳಿಸಿ ಗಿರ್ವೆ ಯಾ ಭೋಗ್ಯ ಯಾ ಪರಭಾರೆ ಮಾಡಲು ಅವರೊಬ್ಬರಿಗೆ ಸ್ವತಂತ್ರವಿಲ್ಲವೆಂದೂ, ಹಾಗೆ ಪರಭಾರೆ ಮಾಡಿದ ಕಾಲದಲ್ಲಿ ಅದು ಅವರಿಗೆ ಸಿಂಧು ಆಗಲಾರದೆಂದೂ ಮತ್ತು ಹೀಗೆ ಮಾಡುವದರಿಂದ ಉಂಟಾಗತಕ್ಕ ನಷ್ಟ ಕಷ್ಟಕ್ಕೂ ಸೊತ್ತು ಕೊಂಡುಕೊಂಡವರೇ ಜವಾಬ್ದಾರರಾಗಬೇಕೆಂದೂ ಈ ಮೂಲಕ ತಿಳಿಸುತ್ತೇನೆ.

ಮುಕ್ಕೋಡ್ಲು, ಸ್ವಾ. ರಾಮಚಂದ್ರಯ್ಯ.
2—7—29. 7—2

ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.



ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ವೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ ಸರಿಯಾದ ಗಂಟೆಯನ್ನು ತೋರಿಸುವವು ಇದರ ಕೇಸು ಬಂಗಾರಕ್ಕೆ ಸರಿಸಮನಾಗಿರುವದು ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವರಿಗೆ ಮಾತ್ರ ಒಂದು ಅಲಾರಂ ಟೈಂಪೀಸ್ ಇನಾಮಾಗಿ ಕೊಡುವೆವು

ಕ್ರಯ 7 0—0.

ವಿಳಾಸ —ಲೀಗಲ್ ವಾಚ್ ಕಂ.

52—2 ಪೋ ಬಾ 243 ಮದ್ರಾಸ

ANNOUNCES GREAT REDUCTION IN PRICES

OF

Guns, Rifles, Revolvers, Pistols, Cartridges & Hunting Requisites

FOR SEASON, 1929-30,

CURRENT CATALOGUE ON APPLICATION



THE BOMBAY ARMOURY,

38 ABDULREHMAN STREET,

BOMBAY No 3

23—2

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಅವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ೧ಕ್ಕೆ 0—1, ... 0 9—0

ಕೆ. ಟಿ. ಡೋಂಗರೆ ಕಂಪೆನಿ,

52—41 ಗಿರಿಗಾಂವ, ಮುಂಬಯಿ.

---

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಒಪ್ಪದಲಾದ ಕಳಕೊಳ್ಳಬೇಡಿ | ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಒಕ್ಕಣೆ ಸು ಪಡಕೆಗಳನ್ನು ದೊರಕಿಸಿ ಸುಪ್ರಸಿದ್ಧವಾದ | ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ

ಬಾಲಗ್ರಹ ದೋಷನಿವಾರಣವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ತೆಗೆಯುವಿಕೆ ಹೊಟ್ಟೆ ಕಟಿ ಮುಸ್ತಪ್ಪ ಬೀಳುವಿಕೆ ವ್ಯತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ ವಾಂತಿ, ಸರ್ಪ ಕಾಟ ಪಿಶಾಚಬಾಧೆಯಿಂದ ನರಳುವಿಕೆ ಬಿಳಪು ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ನಾಶಕ್ಕೆ ಕಾರಣಗಳು ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಆಕಸ್ಮಾತ್ ಸಂಧುರೋಗ ಮುಟ್ಟುದೋಷ ಇಸಿವಿಣ, ಗೃಹಪೀಡೆ ದೃಷ್ಟಿದೋಷ ಭಯದಿಂದ ಜ್ವರಪೀಡೆ, ಕ್ಷೀಣ ಹೊಂದುವಿಕೆ ಜಪ್ಪು ಇರುವಿಕೆ ಮುಟಗಿಬೇನೆ ಹೊಟ್ಟೆಯೊಳಗಿಂದ ಎಳೆದೂ ಮೊದಲಾದವುಗಳಿಂದ ಕಾಡುತ್ತಿರುವದು ಗರ್ಭರಕ್ಷಾಕರ ಭಯದಿಂದ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹ ... ನ ದುಃಸ್ವಪ್ನ ರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ... ಧರಿಸಿದರೆ ಹಡೆಯ್ಯೂ ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಗುಣವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲೆಂದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ಪಡೆಯಿರಿ ಹಡೆಯ್ಯು ಮಕ್ಕಳಿಗೆ ಸಂತಾನ ದಕೆಯಿಂದ ೧ಕ್ಕೆ ೪ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨—೮—೦ ಪೋಸ್ಟ್ ಖರ್ಚು ಬೇರೆ ಆಗತಕ್ಕ ವಿಚಾರಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ

ತಾಯಿತ ಸಿಗುವ ವಿಳಾಸ—ಸಿದ್ಧಾಂತಿ ಬಿ. ಸಿ, ಪಂಚಗಟ್ಟಿ,

ಮು. ಪೋ. ಅಥಣಿ, ಜಿ. ಬೆಳಗಾಂವ.

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್ ಈದಿಗ ಯಕ್ಸ್‌ಟೆನ್ಶನ್, ಮೈಸೂರು.

ನೂತನವಾಗಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಫಿಲ್ಟರುಗಳಿಂದ ಶೋಧಿಸಲ್ಪಟ್ಟ ಅಪ್ಪಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸಹ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯಬೇಕೆನ್ನುವವರು "ಸಂತೆಪೇಟೆ"ಯಲ್ಲಿ ಇರುವ ನನ್ನ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರದ್ವಾರ ತಿಳಿಯಬಹುದು.

26—6

---

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ ಜ್ಞಾಪಕಶಕ್ತಿಯು ದಿನೇ ದಿನೇ ಕ್ಷೀಣಿಸುವಿಕೆ, ಮೇಹ, ಪಿತ್ತದಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು —ಕ್ರಯ ಡಬ್ಬಿ 1 ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ 7—0—0.

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಕೆಮ್ಮಿಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೩. ಮಲೇರಿಯಾ ನಿವಾರಣಿ.

ದಿನ ಬಿಟ್ಟು ಬರುವಜ್ವರ, ಮಳೆ ಜ್ವರ, ೩ ದಿನ ೪ ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುರಿ, ತಲೆ ಉರಿ, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1—4—0 3 ಕ್ಕೆ 3—8—0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0—8—0, 3ಕ್ಕೆ 1 6 0

೬. ಕಸ್ತೂರಿ ಮಿಶ್ರಣ.

ದಿಶ ಮಲಾರಿಷ್ಟ ಬಾಣಂತಿಯರಿಗೆ. ಬಾಟ್ಲಿ 1 ಕ್ಕೆ 1.8.0, 3 ಬಾಟ್ಲಿಗೆ 4—4—0.

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1-4-0, 3 ಬಾಟ್ಲಿಗೆ 3-8-0

೮. ದಶನ ಪ್ರಾಶ ಡಬ್ಬಿ 1 ಕ್ಕೆ 2—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಿ ಕೊಡುವದು ಕೆಟಲಾಗು ತರಿಸಿ ನೋಡಿರಿ.

ಯಂ. ಗೋಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

52—35 ರಥಬೀದಿ, ಮಂಗಳೂರು, ದ. ಕನ್ನಡ.

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ಮೇ ತಿಂಗಳಲ್ಲಿ ಕೊಡಗಿನಲ್ಲಿ 302 ಮರಣಗಳೂ, 269 ಜನನಗಳೂ ಆಗಿವೆ. ಇದರಲ್ಲಿ 173 ಮರಣಗಳು ಮಲೇರಿಯಾ ಜ್ವರದಿಂದ ಮೂತ್ರವಾಗಿವೆ

ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಮತ್ತು ಮೋಡೆಲ್ ಸ್ಕೂಲುಗಳಿಗೆ ಈ ತಾ. 19ರಿಂದ ಎರಡು ವಾರ ಮಳೆಗಾಲದ ರಜೆ ಕೊಡಲಾಗುವದೆಂದು ತಿಳಿಯುತ್ತೇವೆ.

ಎಕ್ಸ್ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆ. ಚೆನ್ನಿರ ಕುಶಾಲಪ್ಪನವರು ಅನಾರೋಗ್ಯದ ರಜೆಯಿಂದ 5 ವಾರದ ರಜೆಯಲ್ಲಿ ಈ ತಾ. 6ರಲ್ಲಿ ಬೆಂಗಳೂರಿಗೆ ಹೋಗಿರುವರು.

ಸೆಂಟ್ರಲ್ ಸಹಕಾರ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಖು 21ನೇ ಆದಿತ್ಯವಾರ ಬೆಳಗ್ಗೆ 11 ಗಂಟೆಗೆ ಮಡಿಕೇರಿಯಲ್ಲಿ ಕೊಡಗು ಜಮೀನ್ದಾರರ ಸಂಘದ ಹಾಲಿನಲ್ಲಿ ನಡೆಯಲಿಕ್ಕಿದೆ.

ಈ ತಾ. 5ರಿಂದ 12ರ ವರೆಗೆ ಮಡಿಕೇರಿಯಲ್ಲಿ 16.97 ಇಂಚು ಮಳೆಯಾಯಿತು. ಮಳೆ ಜೋರಾಗಿದ್ದ ತಾ. 6ರಲ್ಲಿ 5.70 ಇಂಚು ಮಳೆ ಬಿತ್ತು. ದೇಶದ ಎಲ್ಲಾ ಕಡೆಗಳಿಗೂ ಮಳೆ ಚೆನ್ನಾಗಿದೆಯೆಂದು ತಿಳಿಯಬರುತ್ತದೆ.

ಕಮೀಷನರವರ ಆಫೀಸು ಮೇನೇಜರಾದ ರಾ|| ಸಾ|| ಹೆಚ್. ಯಂ. ಕಾಮತ್‌ರವರು ಈ ತಾ. 8ರಿಂದ ಮೂರು ತಿಂಗಳು ರಜೆಯಲ್ಲಿರುವರು. ಅವರ ಬದಲು ಕೆಲಸ ನೋಡಲು ಹೆಡ್ ಎಕೌಂಟೆಂಟರಾದ ಮೆ. ಕೆ. ನಾರಾಯಣರಾಯರೂ, ಹೆಡ್ ಎಕೌಂಟೆಂಟ್ ಕೆಲಸ ಮಾಡಲು ಮೆ. ಮೇರಿಯಂಡ ಭೀಮಯ್ಯನವರೂ ನೇಮಿಸಲ್ಪಟ್ಟಿರುವರು.

ಹಂಗಾಮಿ ಕಮಿಷನರಾದ ರಾ. ಬಾ. ಕೇಟೋಳಿರ ಚಂಗಪ್ಪನವರಿಗೂ, ಸಬ್‌ಜಡ್ಜರ ಕೆಲಸದಿಂದ ನಿವೃತ್ತರಾದ ಪಿ. ಅಪ್ಪಾರಂಡ ಕಾರ್ಯಪ್ಪನವರಿಗೂ ಮತ್ತು ಹೊಸ ಸಬ್‌ಜಡ್ಜ್ ಮೆ. ಪಾಲೇಕಂಡ ಮೇದಪ್ಪನವರಿಗೂ ಅವರ ಮಡಿಕೇರಿ ಕೊಡವ ಸ್ನೇಹಿತರು ಮತ್ತು ಹಿತಚಿಂತಕರು ಸೇರಿ ಕಳೆದ ಆದಿತ್ಯವಾರ ರಾತ್ರಿ ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ಒಂದು ಊಟವನ್ನು ಕೊಟ್ಟರು.

ಹಿಂದೂದೇಶ.

ಕಳೆದ ಸಾರಿ ಬಂಗಾಳ ಕೌನ್ಸಿಲಿನ ಅಧ್ಯಕ್ಷರಾಗಿದ್ದ ನಾಜಿಮುದ್ದೀನ್ ರಾಜರು ಪುನಹ ಅದರ ಅಧ್ಯಕ್ಷರಾಗಿ ಸರ್ವಸಮ್ಮತದಿಂದ ಆರಿಸಲ್ಪಟ್ಟಿರುವರು.

ಬೊಂಬಾಯಿಯ ಮುನ್ಸಿಪಲ್ ಓಟರುಗಳ ಕಂದಾಯ ಅರ್ಹತೆಯನ್ನು 10 ರೂಪಾಯಿಯಿಂದ 5 ರೂಪಾಯಿಗೆ ಇಳಿಸಬೇಕೆಂಬ ಠರಾವು ಅಲ್ಲಿಯ ಮುನ್ಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ಪಾಸಾಗಲಿಲ್ಲ.

ಬಂಗಾಳ ಕೌನ್ಸಿಲಿನಲ್ಲಿ ಬಲವಾದ ಪಂಗಡವಾದ ಸ್ವರಾಜ್ಯ ಪಾರ್ಟಿಯವರು ಮಂತ್ರಿತ್ವವನ್ನು ವಹಿಸಿಕೊಳ್ಳಲು ತಿರಸ್ಕರಿಸಿರುವುದರಿಂದ ತಕ್ಷಾಲ ಮಂತ್ರಿಯವರನ್ನು ನೇಮಿಸುವ ಆಲೋಚನೆಯು ಬಿಡಲಾಗಿದೆ.

ಬೆಂಗಳೂರಿನ ಲೇಬರ್ ಮುಂದಾಳುಗಳಾದ ಮೆ. ಭಾಷ್ಯಮ್ ಮತ್ತು ಮೆ. ಶರ್ಮಾರವರು ಇ. ಪಿ. ಕೋಡ 107ನೇ ಸೆಕ್ಷನ್ ಮೇರೆ ದಸ್ತಗಿರಿ ಮಾಡಲ್ಪಟ್ಟು ಜಾಮೀನು ಮೇಲೆ ಬಿಡಲ್ಪಟ್ಟಿರುವರು. ವಿಚಾರವು ಮುಂದಕ್ಕೆ ಹಾಕಲಾಗಿದೆ

ಬ್ರಿಟಿಷ್ ಪ್ರಧಾನ ಮಂತ್ರಿಯವರ ಪಾರ್ಲಿಮೆಂಟ್ ಭಾಷಣವು, ಸೋಮನಿಂದ ನರಳುತ್ತಿರುವ ಹಿಂದೂದೇಶಕ್ಕೆ ಅಪೇಕ್ಷಣೆಯನ್ನು ಮಾಡದಾತಾಗಿದೆಯೆಂದು ಪಂಡಿತ ಮೋತಿಲಾಲ್ ನೆಹರುರವರು ಅಭಿಪ್ರಾಯ ಕೊಟ್ಟಿರುವರು.

ಓದ್ ಚೀಫ್ ಕೋರ್ಟಿನ ಮೆ. ಜಸ್ಟಿಸ್ ಗೋಕರ್ನಾಥ್ ಮಿಶ್ರರವರು ಈ ತಾ. 5ರಲ್ಲಿ ಶಿವಾಧೀನರಾದರು. ಇವರು ಜಡ್ಜರಾಗುವ ಮುಂಚೆ ನೇಶನಲ್ ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿ ಕೆಲಸವನ್ನು ನೋಡಿದ್ದರು.

ಬೊಂಬಾಯಿಯ ಮುಸಲ್ಮಾನರು ನೇಶನಲಿಸ್ಟ್ ಪಾರ್ಟಿಯೊಂದನ್ನು ಏರ್ಪಡಿಸಿಕೊಂಡು, ತಮ್ಮ ಕೆಲವು ಸಹೋದರರು ಮಾಡುತ್ತಿರುವ ಕೋಮುವಾರು ತಕ್ಕದ ಚಳವಳವನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಒತ್ತಾಸೆಯಾಗಿ ಕೆಲಸಮಾಡಲು ಪ್ರಾರಂಭಿಸಿರುವರು.

ಬಂಗಾಳದ ಜಮೀನುದಾರರ ಸಂಘದ, ಜೀವ ಸಾಯುವ ವರೆಗೂ ಅಧ್ಯಕ್ಷರೂ ಪ್ರಮುಖ್ಯ ಮುಂದಾಳೂ ಒಬ್ಬರಾಗಿದ್ದ ಮತ್ತು ಬಿಹಾರ ಮತ್ತು ಒರಿಸ್ಸಾ ಸರಕಾರದ ಎಗ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರರಾಗಿದ್ದ, ದರ್ಭಾಂಗದ ಮಹಾರಾಜರು ಈ ತಾ. 4ರಲ್ಲಿ ಸ್ವರ್ಗಸ್ಥರಾದರು.

ಮಹಾತ್ಮ ಗಾಂಧಿಯವರ ಕುಮೋನ್ ಪ್ರವಾಸವು ಜಯಪ್ರದವಾಗಿ ನಡೆಯಿತು. ಮೂರು ವಾರಗಳ ಈ ಪ್ರವಾಸದಲ್ಲಿ 22,500 ರೂಪಾಯಿಗಳು ಜಮೆಯಾದವು. ಆದರೆ ಮಹಾತ್ಮರು ಹೋದ ಕಡೆಗಳಲ್ಲೆಲ್ಲಾ ಸರಕಾರದ ಗುಪ್ತಚಾರರು ಅವರನ್ನು ಹಿಂಬಾಲಿಸುತ್ತಿದ್ದರಂತೆ!

ಬೊಂಬಾಯಿ ಮತ್ತು ಮದ್ರಾಸು ಪ್ರಾಂತ್ಯಗಳಲ್ಲಿರುವ ಎಲ್ಲಾ ಕನ್ನಡ ಪ್ರದೇಶಗಳನ್ನು, ಕೊಡಗನ್ನು ಸೇರಿಸಿ ಒಂದು ಹೊಸ ಕರ್ನಾಟಕ ಪ್ರಾಂತ್ಯವನ್ನು ಏರ್ಪಡಿಸುವಂತೆ ಗವರ್ನರ್ ಜನರಲರನ್ನು ಕೇಳಿಕೊಳ್ಳಬೇಕೆಂದು, ಪಿ. ಆರ್. ನಾಗಪ್ಪಗೌಡರು ಮದ್ರಾಸು ಕೌನ್ಸಿಲಿನ ಬರುವ ಮೀಟಿಂಗಿಗೆ ಠರಾವು ಕಳುಹಿಸಿರುವರು.

ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿ ಭೂಕಂದಾಯದ ದರವು ಹೆಚ್ಚಿಸಲ್ಪಟ್ಟಿರುವ ಕಾರಣ, ಇದನ್ನು ಚೆನ್ನಾಗಿ ವಿಚಾರಿಸಿ ಅನ್ಯಾಯವೆಂದು ಕಂಡು ಬಂದರೆ ಆ ಅನ್ಯಾಯವನ್ನು ವಿರೋಧಿಸಲಿಕ್ಕಾಗಿ ಅಂದರೆ ಹೆಚ್ಚಿನ ಕಂದಾಯವನ್ನು ಕೊಡದೆ ತಿರಸ್ಕರಿಸಲಿಕ್ಕಾಗಿ ಅಲ್ಲಿಯ ಜನರನ್ನು ತಯಾರು ಮಾಡಲು ಒಂದು ಕಮಿಟಿಯು ನೇಮಕಮಾಡಲ್ಪಟ್ಟಿದೆ.

ಈ ತಾ. 5ರಲ್ಲಿ ಡೆಲ್ಲಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗಿನಲ್ಲಿ, ಕಾಂಗ್ರೆಸ್ ಪಕ್ಷದವರು ಲೆಜಿಸ್ಲೇಟಿವ್ ಎಸಂಬ್ಲಿ ಮತ್ತು ಕೌನ್ಸಿಲುಗಳ ಮೆಂಬರುತನಕ್ಕೆ ರಾಜಿನಾಮೆ ಕೊಡಬೇಕೆಂದು ತೀರ್ಮಾನಿಸಿರುವರು ಮತ್ತು ಈ ಪ್ರಾಮುಖ್ಯ ವಿಷಯವನ್ನು ತೀರ್ಮಾನಿಸಲು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗೊಂದನ್ನು ಈ ತಾ. 26ರಲ್ಲಿ ಅಲ್ಲಹಾಬಾದಿನಲ್ಲಿ ನಡಿಸುವರು

ಪಂಜಾಬಿನ ಒಬ್ಬ ಪ್ರಾಮುಖ್ಯ ಮುಂದಾಳಾದ ಡಾಕ್ಟರ್ ಸತ್ಯಪಾಲ್ ಎಂಬವರು ಕೆಲವು ಸಮಯದ ಹಿಂದೆ ಡೆಲ್ಲಿಯಲ್ಲಿ ಮಾಡಿದ ಒಂದು ಭಾಷಣದಲ್ಲಿ ರಾಜದ್ರೋಹದ ಮಾತುಗಳಿರುವವೆಂದು ಅವರನ್ನು ಈ ಮೊದಲೇ ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಟ್ಟಿದ್ದರು. ಈ ತಾ. 10ರಲ್ಲಿ ವಿಚಾರ ನಡೆದು, ಅವರು ಇ. ಪಿ. ಕೋಡಿನ 124ಎ ಸೆಕ್ಷನಿನ ಮೇರೆ ತಪ್ಪಿತಸ್ಥರೆಂದು ತೀರ್ಮಾನಿಸಿ ಅವರನ್ನು ಜೈಲಿಗೆ ಕಳುಹಿಸಿರುವರು

ಸಿಲೋನಿನಲ್ಲಿ ಅನುದಾನದ ಕಾನೂನುಗಳ ಮೇಲೆ ಸುಂಕವನ್ನು ಸ್ವಲ್ಪ ಹೆಚ್ಚಿಸಬೇಕೆಂಬ ಠರಾವು ಅಲ್ಲಿಯ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಚರ್ಚಿಸಲ್ಪಟ್ಟಾಗ ಉದ್ಯೋಗಸ್ಥರಲ್ಲದ ಮೆಂಬರುಗಳೆಲ್ಲರೂ ವಿರೋಧಿಸಿದರಿಂದ ಅದು ಪಾಸಾಗಲಿಲ್ಲ. ಆದರೆ ಅಲ್ಲಿಯ ಗವರ್ನರು ತನಗಿರುವ ಅಧಿಕಾರದ ಮೇಲೆ ಅದನ್ನು ಮಂಜೂರು ಮಾಡಿದರು. ಇದನ್ನು ಸಹಿಸಲಾರದೆ ಉದ್ಯೋಗಸ್ಥರಲ್ಲದ ಮೆಂಬರುಗಳ ಬಹುಮತವು ಕೌನ್ಸಿಲಿನಿಂದ ಹೊರಟುಹೋಗಿ ಬಿಟ್ಟಿತು. ನಂತರ ಇವರು ಗವರ್ನರವರ ವರ್ತನೆಯನ್ನು ಖಂಡಿಸಿ ಸ್ಟೇಟ್ ಸೆಕ್ರೆಟರಿಯವರಿಗೆ ತಂತೀ ವರ್ತಮಾನ ಕಳುಹಿಸಿದರು.

ವಿದೇಶ.

ಮಂತ್ರಿಗಳೊಳಗೆ ಭಿನ್ನಾಭಿಪ್ರಾಯಗಳು ಹುಟ್ಟಿದ್ದರಿಂದ ಪೋರ್ಚುಗಲ್ ಮಂತ್ರಿ ಮಂಡಳಿಯು ರಾಜಿನಾಮೆ ಕೊಟ್ಟಿದೆ.

ಗ್ರೇಟ್‌ಬ್ರಿಟನ್ನಿನ ಪಾರ್ಲಿಮೆಂಟಿನ ಮೆಂಬರುಗಳಿಗೆ ಈಗ ಕೊಡುವ ವರ್ಷಕ್ಕೆ 400 ಪೌನುಗಳ ಸಂಬಳವು ಸಾಲದ್ದೆಂದೂ, ಅದನ್ನು ಹೆಚ್ಚಿಸಬೇಕೆಂದೂ ಚಳವಳಿ ನಡೆಯುತ್ತಿದೆ.

ನಾವು ಕಳೆದ ವಾರದ ಅಗ್ರಲೇಖನದಲ್ಲಿ ಸೂಚಿಸಿದಂತೆ ಅಮೇರಿಕದ ಸಂಯುಕ್ತ ಸಂಸ್ಥಾನಕ್ಕೂ, ಕೆನಡಾಕ್ಕೂ ಮಧ್ಯೆ ನಿಷಾ ಪದಾರ್ಥಗಳನ್ನು ತಡೆಯಲು ಮುಳ್ಳು ತಂತಿ ಬೇಲಿ ಹಾಕುತ್ತಾರೆಂಬ ವರ್ತಮಾನವು ನಿಜವಲ್ಲವೆಂದು ಇತ್ತಲಾಗಿ ಪ್ರಕಟವಾಗಿದೆ

ಸೈಮನ್ ಕಮಿಷನಿನ ವರದಿಯು ಈ ವರ್ಷದ ಅಂತ್ಯಕ್ಕಿಂತ ಮೊದಲು ತಯಾರಾಗಲಿಕ್ಕಿಲ್ಲವೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸೂಚಿಸಿರುವರು ಇಂಡಿಯಾ ಸೆಂಟ್ರಲ್ ಕಮಿಟಿಯವರು ಮದ್ರಾಸ ಕಮಿಟಿಯ ವರದಿಯ ಸಿಫಾರಸ್ಸುಗಳನ್ನೇ ಹೆಚ್ಚಾಗಿ ಅನುಸರಿಸಿ ರಿಪೋರ್ಟ್ ಬರೆಯುವರೆಂದು ಸುದ್ದಿ

ವಿಲಾಯತ್ ಕೇಸಿನ 32 ಲೇಬರ್ ಮುಂದಾಳು ಕೈದಿಗಳ ಬಿಡುಗಡೆಗಾಗಿ ಇಂಗ್ಲೆಂಡಿನಲ್ಲಿ ಒಂದು ಡೆಫೆನ್ಸ್ ಕಮಿಟಿಯು ನೇಮಕವಾಗಿ ಪ್ರಯತ್ನಗಳು ನಡೆಯುತ್ತಿವೆ ಈ ಕಮಿಟಿಯವರ ಒಂದು ಡೆಪ್ಯುಟೇಶನಿಗೆ ಭೇಟಿ ಕೊಡಲಿಕ್ಕೆ ಆಗುವುದಿಲ್ಲವೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಮೆ. ಬೆನ್‌ರವರು ಹೇಳಿದರಂತೆ

ಚಕ್ರವರ್ತಿ ಜಾರ್ಜ್ ಪ್ರಭುಗಳ ಕಾಯಿಲೆಯು ಗುಣವಾದದಕ್ಕೆ ಈ ತಾ. 7ರಲ್ಲಿ ಗ್ರೇಟ್ ಬ್ರಿಟನ್ನಿನ ಹಲವು ಚರ್ಚುಗಳಲ್ಲಿಯೂ, ಬ್ರಿಟಿಷ್ ಚಕ್ರಾಧಿಪತ್ಯದ ಹಲವು ಕಡೆಗಳಲ್ಲಿಯೂ ದೇವರಿಗೆ ವಂದನೆಯ ಪ್ರಾರ್ಥನೆಗಳು ನಡಿಸಲ್ಪಟ್ಟವು. ವೆಸ್ಟ್‌ಮಿನಿಸ್ಟರ್ ಚರ್ಚಿನಲ್ಲಿ ನಡೆದ ಪ್ರಾರ್ಥನೆಯಲ್ಲಿ ಚಕ್ರವರ್ತಿಯವರು ಮತ್ತು ಚಕ್ರವರ್ತಿನಿಯವರು ಹಾಜರಿದ್ದರು.

ಈ ಮೊದಲು ಇಂಡಿಯಾ ಸ್ಟೇಟ್ ಸೆಕ್ರೆಟರಿಯಾಗಿದ್ದ ಲಾರ್ಡ್ ಪೀಲ್‌ರವರು ಕೆಲವು ತಿಂಗಳುಗಳಲ್ಲಿಯೇ ಹಿಂದೂದೇಶದಲ್ಲಿ ಪ್ರವಾಸಮಾಡುವರಂತೆ. ಹಿಂದೂ ದೇಶವನ್ನು ಬ್ರಿಟಿಷರ ವ್ಯಾಪಾರಕ್ಕಾಗಿ ಇಟ್ಟುಕೊಳ್ಳಬೇಕೆಂದು ಅಭಿಪ್ರಾಯವಿರುವ ಇವರು ಸೈಮನ್ ಕಮಿಷನಿನ ಸಿಫಾರಸ್ಸುಗಳು ಈ ಅಭಿಪ್ರಾಯಕ್ಕೆ ವಿರೋಧವಾದರೆ ಅವುಗಳನ್ನು ಖಂಡಿಸಲು ಸ್ವತಃ ಇಂಡಿಯಾದ ವಿಷಯಗಳನ್ನು ತಿಳಕೊಳ್ಳುವುದೇ ಈ ಪ್ರವಾಸದ ಉದ್ದೇಶವೆಂದೂ ಸುದ್ದಿ.

ಕೊಡಗು ವಿದ್ಯಾಭಿವೃದ್ಧಿ ಸಂಘ.

ಕೊಡಗು ವಿದ್ಯಾಭಿವೃದ್ಧಿ ಸಂಘದ ವಾರ್ಷಿಕ ಜನರಲ್ ಮೀಟಿಂಗು ಜುಲೈ ತಾ. 10ರಲ್ಲಿ ರಾ. ಬಾ. ಕೇಟೋಳಿರ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲ್‌ನಲ್ಲಿ ನಡೆಯಿತು. ಸುಮಾರು 50 ಜನ ಮೆಂಬರುಗಳು ಹಾಜರಿದ್ದರು.

1. ಸೆಕ್ರೆಟರಿಯವರ ವರದಿಯು, 1926—27 ಮತ್ತು 1927—28 ನೇ ವರ್ಷಗಳ ಆಡಿಟ್ ರಿಪೋರ್ಟ್ ಓದಲಾಯಿತು.

ಇನ್ನು ಮುಂದೆ ವ್ಯಾಪಾರ ಮತ್ತು ಕೈಗಾರಿಕೆ ವಿದ್ಯಾಭ್ಯಾಸವನ್ನು ಮುಂದುವರಿಸುವ ವಿದ್ಯಾರ್ಥಿಗಳು ಸ್ಕಾಲರ್‌ಶಿಪಿಗೆ ಅರ್ಜಿ ಕಳುಹಿಸಬಹುದೆಂದು ಪ್ರಕಟಿಸಬೇಕೆಂದೂ, ಇಂಥಾ ವಿದ್ಯಾರ್ಥಿಗಳ ಅರ್ಜಿಗಳು ಮೊದಲು ಆಲೋಚಿಸಲ್ಪಡತಕ್ಕದೆಂದೂ ತೀರ್ಮಾನಿಸಲಾಯಿತು.

ನಂತರ ಸೆಕ್ರೆಟರಿ ಮತ್ತು ಆಡಿಟರುಗಳ ವರದಿಗಳು ಮಂಜೂರುಮಾಡಲಾದವು.

2. ಸಂಘದಿಂದ ಸ್ಕಾಲರ್‌ಶಿಪ್ ಮತ್ತು ಸಾಲ ಹೊಂದಿಕೊಂಡಿರುವರು ಅವರ ಉತ್ಪತ್ತಿಯ ಶೇಕಡ 5ರಷ್ಟು ಸಂಘಕ್ಕೆ ಪಾವತಿ ಮಾಡದೆ ಹೋದರೆ ಅವರ ಮೇಲೆ ಕಮಿಟಿಯವರು ತಕ್ಕ ಕ್ರಮ ಜರುಗಿಸಬೇಕೆಂದು ರಾ. ಬಾ. ಕೋದಂಡ ಅಪ್ಪಯ್ಯನವರು ಸೂಚಿಸಿದನ್ನು ರಾ. ಸಾ. ಪಟ್ಟಮಾಡ ದೇವಯ್ಯನವರು ಅನುಮೋದಿಸಿದರು ಈ ವಿಷಯದಲ್ಲಿ ಕಮಿಟಿಯವರು ತಮ್ಮ ವಿವೇಚನೆಯನ್ನು ಉಪಯೋಗಿಸಬಹುದೆಂದು ತೀರ್ಮಾನವಾಯಿತು.

3. 1928—1929ನೇ ವರ್ಷದ ಲೆಖ್ಖವನ್ನು ಆಡಿಟ್ ಮಾಡಲು ಮೆ. ಚೇಂದ್ರಿಮಾಡ ಪಿ. ಗಣಪತಿಯವರು ಮತ್ತು ಮೆ. ಗುಡ್ಡಂಡ ಸುಬ್ಬಯ್ಯನವರು ಆರಿಸಲ್ಪಟ್ಟರು.

ಅಧ್ಯಕ್ಷರಿಗೆ ವಂದನೆಗಳಿತ್ತ ಮೀಟಿಂಗು ಬರಕಾಸ್ತು ಮಾಡಲಾಯಿತು

ಕೆ. ಚಂಗಪ್ಪ
(ಅಧ್ಯಕ್ಷರು)

NOTICE.

The public are hereby informed that Mr B. Bettiah of Mysore ceased to be our Distributor at Mysore as from the 17th June 1929 and that Messrs. Ismail Brothers, Bangalore Nilgiri Road, Mysore, have been appointed our Distributors for Mysore District and Coorg. Enquiries or orders for our Chemicals and Fertilisers should be addressed to them or to us at Madras.

IMPERIAL CHEMICAL INDUSTRIES,
(INDIA) LTD.

2—1 P. O Box No 130. Madras.

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ.]

ಸಿದ್ದಾಪುರ ಬಾವಿ ಕುಸಿದುದೇಕೆ?

ನಾನು ಮೊನ್ನೆ ಸಿದ್ದಾಪುರಕ್ಕಾಗಿ ದಾಟಿದೆನು. ಜನರೆಲ್ಲರೂ ಕಳೆದವಾರ ಹೊಡೆದ ಮಳೆಯಲ್ಲಿ ಅಲ್ಲಿಯ ಬಾವಿ ಪೂರ ಕುಸಿದು ಬಿತ್ತೆಂದು ಹೇಳುತ್ತಿದ್ದರು. ಕಾರಣವನ್ನು ವಿಚಾರಿಸುವಾಗ ಮಳೆ ಹೆಚ್ಚಾಗಿ ಹೊಡೆದುದರಿಂದಲ್ಲವೆಂದು ತಿಳಿಯಿತು. ಕಳೆದ ಬೇಸಿಗೆಯಲ್ಲಿ ಈ ಬಾವಿಯನ್ನು ರಿಪೇರಿ ಅಧಿಕಾರಿಗಳು ರಿಪೇರಿ ಮಾಡಿದರಂತೆ. ರಿಪೇರಿ ಮಾಡುವಾಗ ಅಸ್ತಿಭಾರಕ್ಕಿಂತ ಎರಡು ಸೀರಿಲ್ಲವೆಂಬ ನೆಪದಿಂದ ಅಗೆಯಿಸಿದರಂತೆ. ಎರಡು ಮೂರು ಗಾಡಿ ಮಣ್ಣು ಬಾವಿಯಿಂದ ತೆಗೆದರಂತೆ. ಫಲಿತಾಂಶವೇನು? ಬಾವಿಯು ಕುಸಿದು ಬಿದ್ದೇ ಬಿತ್ತು. ಡಿ. ಪಿ. ಡಬ್ಲ್ಯು ಇಲಾಖೆಯವರಿಂದ ಈ ವಿಷಯ ಯಾವ ಆಲೋಚನೆಯು ತೆಗೆದುಕೊಳ್ಳದೆ ಅಜಾಗ್ರತೆಯಿಂದ ಈಗ ಆದ ನಷ್ಟಕ್ಕೆ ಜವಾಬ್ದಾರರು ಯಾರು? ಕೆಲಸಮಾಡಿಸಲಿಕ್ಕೆ ಹುಕುಂ ಕೊಟ್ಟ ಉದ್ಯೋಗಸ್ಥರೋ? ಯಾ ಡಿಸ್ಟ್ರಿಕ್ಟ್ ಬೋರ್ಡೋ?

"ಪಟ್ಟಣಿಗ"

ವೀರರಾಜಪೇಟೆ ಹೈಸ್ಕೂಲು.

ಸದರಿ ಹೈಸ್ಕೂಲನ್ನು ಕುರಿತು 'ಮನನೊಂದ ಮಕ್ಕಳ ತಂದೆ'ಯ ಹೇಳಿಕೆಯನ್ನು 'ಲೋಕಪಾವನ'ದಲ್ಲಿ ಓದಲಾಯಿತು. ಅವರ ಮನಶ್ಶಾಂತಿಗಾಗಿ ಒಂದೆರಡು ಮಾತು ಹೇಳದಿರಲಾಗದು.

ಶಿರಂಗಾಲಯಲ್ಲಿ ಬಹು ದಕ್ಷರಾಗಿಯೂ, ಕಡೇ ಸ್ಥಳಗಳನ್ನು ಅಲಂಕರಿಸುವವರಾಗಿಯೂ, ಭಾಷಾಭೂಷಣಕ್ಕೆ ಕೊರತೆ ಇದ್ದರೂ ನೇಪಾಳ್ಯಭಾಷಣ ಪ್ರವೀಣರಾಗಿಯೂ, ಶಾಲೆಯ ಮಕ್ಕಳೆಂಬುದಕ್ಕಿಂತಲೂ ಬೀದಿಯ ಹುಡುಗರನ್ನಲಿಕ್ಕೆ ತಕ್ಕದಾಗಿಯೂ, ಎರಡು ಮೂರು ವರ್ಷ ಪರೀಕ್ಷೆಗೆ ಕುಳಿತುಕೊಂಡ

ರೂ ಪುಜಾ ಶಾಲೆಯ ದಪೆಯ ಅಭಾವದಿಂದ ತೇಗ್ಗಿಡೆ ಹೊಂದದೆಯೂ ಇದ್ದ ಕೆಲವು ಹುಡುಗರನ್ನು ಕೆಳ ತರಗತಿಯ ಕಿರಿಯವರು ಮೇಲ್ಪ್ಪದಗತಿಗೆ ಬಂದಲ್ಲ ಅಲ್ಲೇ ಉಳಿದ ಟಿಂ ಗಾಸದಾಬ ಹಿರಿಯರನ್ನು ನೋಡಿ ನಾಚಿಕೊಂಡಾರೆಂದು ಹಾ ಜರು ಪಟ್ಟಿಯಿಂದ ಹೆಸರನ್ನು ಪಟಪಸಿದರೆಂದು ನಾನೂ ಕೇಳಿದೆ. ಆದರೆ ವಿಷಯವನ್ನು ಕುರಿತು ಯೋಚಿಸಲು ಈಗ 'ಮನಸೊಂದ ತಂದೆ'ಯು ಇದಕ್ಕೆ ಮೊದಲೇ ತನ್ನ ಮಗನ ಕಡೆ ಸಿಗ ಇಡಬೇಕಿತ್ತೆಂದು ತೋರುತ್ತೆ. ಕೆಲವು ತಂದೆಗಳು ಮ ಕ್ಕಳನ್ನು ಹುಟ್ಟಿಸಿ ಶಾಲೆಗೆ ಕಳುಹಿಸಿದರೆ ಆಯಿತು ಎಲ್ಲವೂ [illegible]ಗಾಗುತ್ತೆಂದು ನಂಬಿ ಮೌನವಾಗಿರುತ್ತಾರೆ. ಮಧ್ಯ ಮಕ್ಕಳು ಶಾಲೆಗೆ ಗೈರ್ಹಾಜರಾಗಿ ಬೀದಿ ಬೀದಿಗಳಲ್ಲಿ ಅಲೆದಾ ಡಿ ಅಲ್ಲದ ಸಲ್ಲದ ದುರ್ನಡತೆಗಳನ್ನು ಅಭ್ಯಾಸಿಸಿ ಹಾಗೂ ಹೀಗೂ ಶಾಲಾ ಪರೀಕ್ಷೆ ಮಾಡುತ್ತಾ ವಿದ್ಯಾರ್ಥಿ ಎಂಬ ಹೆಸ ಟ್ಟರೂ ಎನ್ನಿಗೆ ಬೆಸ್ಸ ಹಾಕಿ ಇರುತ್ತಾರೆ. ಇಂಥಾ ವಿಷ ಯಗಳು ನಿಮ್ಮಂಥ ತಂದೆಗಳ ತಿಳುವಳಿಕೆಗೆ ಬಾರದೂ ಇರುವದಿ ಲ , ಆದಕ್ಕಾಗಿ ನಿಮ್ಮ ಮನಸೊಂದೂ ಇರುವ [illegible] ಪರಸ್ಸ ಪತ್ತೆ ಮಾಡಲಿಕ್ಕೆ ಶಾಲೆಗೆ ಸಂಬಂಧ [illegible] ಒಲ್ಲಂದಿರಿಸಿ ರಿಯುವದಿಲ್ಲ. ಅಂಥವರ [illegible] [illegible] ಮೇಲೆ ಎಪಿ ಸ್ಪೀತಿಗೂ ಅವರಿಗೆ [illegible] [illegible] ಸ್ಥಳವಿಲ್ಲ [illegible] ಕೊಡಗಿನ ಸದ ಗುಕ್ಕೆ [illegible] ಎಷ್ಟೇ ?

[illegible] ಶಾಲೆಯಲ್ಲಿ ಸೇರಿಸಿ [illegible] ವರ್ಷಗಳಲ್ಲಿ ಹೆಡ್ಮಾ ಸ್ಟರು [illegible] ದಯಪಾಲಿಸ[illegible]ಗಳಿಲ್ಲ. [illegible] ದಿಯ , ಇಲ್ಲದ ನೇಳಯಲ್ಲಿ [illegible] [illegible] ಹೆಡ್ಮಾಸ್ಟರು ಅಂಥವರ ಲೀವಿಂಗ್ ಸರ್ಟಿಫಿಕೇಟು ಮೇಲ [illegible] ಕಾರಣಗಳಿಂದ ಹೊರಪಡಿಸಲ್ಪಟ್ಟವರೆಂದು ಬರೆ ಯದೆ ಹೋದದ್ದು ನಿರ್ದಯವೇ ? ದಯವೋ, ನಿರ್ದಯವೋ ಊಹಿಸಿರಿ. ಬರೆದಿದ್ದರೆ ಮುಂದೆ [illegible] ಹೆ ಡ್ಮಾಸ್ಟರು ನಿರ್ದಯರೇ ಆಗುತ್ತಿದ್ದರು. [illegible]ಷಯಗಳನ್ನು ನಾವಧಾನದಿಂದ ಗ್ರಹಿಸಿರಿ.

ಇದರಿಂದ ಮುಂದಾದರೂ ಅಂಥಾ ನಿಮ್ಮ ಮಕ್ಕಳು ದಿ ನ ಚರ್ಯದಲ್ಲಿ ನೆಮ್ಮದಿಯಿಂದ ಅಭ್ಯಾಸ ಮಾಡುತ್ತಿದ್ದಾರೊ ? ವಿದ್ಯಾಬುದ್ಧಿಗಳಲ್ಲಿ ನ್ಯಾಯವಾಗಿ ಮುಂದುವರಿಯುತ್ತಿದ್ದಾ ರೋ ಎಂಬ ಮೇಲ್ವಿಚಾರಗಳನ್ನು ಮನೆಯಲ್ಲಿಯೂ ತೆಗೆದು ಕೊಳ್ಳುವದಲ್ಲದೆ ಶಾಲೆಯ ಉಪಾಧ್ಯಾಯರಿಂದಲೂ ಆಗಿಂ ದಾಗ್ಯೆ ತಿಳಿದು ಶ್ರೇಯಸ್ಸನ್ನು ಹೊಂದಿ . . . [illegible] ನಿಮ್ಮ ಮಕ್ಕಳನ್ನು ತಿಪ್ಪೆಯ ಕುಪ್ಪೆಯಂತೆ ಮಾಡ ದೆ ಜಾಲರವರ್ಷಕ್ಕೆ ಕೀರ್ತಿ ಪಾಲಸಕಕ್ಕ ವೀರಮಣಿಗಳನ್ನಾ ಗಿ ಮಾಡಿ.

ಮಕ್ಕಳ ಹಿತವಾದಿ

ಕೊಡಗ ಕೊಡಗೇತರರ ತಾರತಮ್ಯ.

ವಾಚಕರೇ,

ಕಳೆದ ತಾರೀಕು ೨೫—೬—1929ರ 'ಲೋಕಮಾನ್ಯ'ದ ಸಂಚಿಕೆಯಲ್ಲಿ "ಸರ್ವ ಹಿತೈಷಿ" ಎಂಬವರಿಂದ ಪ್ರಕಟವಾದ ವಾರ್ತೆಯನ್ನು ತಾವು ನೋಡಿರಬಹುದು. ಈ ವಾರ್ತೆಯ [illegible] ಹೀಗೆಂದು ಬರೆದಿರುವರು "ಈಗ ಕೆಲ ವರು ಕೊಡಗೇತರರು ಕೊಡಗರಲ್ಲಿ ಪರಸ್ಪರ ವೈಮನಸ್ಯವನ್ನು ಹುಟ್ಟಿಸಿ ದೇಶದ ಮುಖ್ಯವಾದ ದೊಡ್ಡ ಪದವಿಗಳೆಲ್ಲಾ ತಮ ಗೆ ಸಿಕ್ಕಬೇಕೆಂಬ ದುರಾಶೆಪಡುತ್ತಿದ್ದಾರೆ. ಆದರೆ ಶ್ರೀ ಕಾ ವೇರಮ್ಮನವರ ದಯದಿಂದ ಅವಳ ಸ್ಥಾನದಲ್ಲಿ ಹುಟ್ಟಿದ ಕೊ ಡಗರಿಗೆ ಏಳಿಗೆಯಾಗಬೇಕೇ ವಿನಹ ಹೊಟ್ಟೆಪಾಡಿಗೆ ಬಂದ ಇ ತರರಿಗೆ ಎಂದೂ ವೃದ್ಧಿಯಾಗಲಿಕಿಲ್ಲವೆಂದೇ ನನ್ನ ಭಾವನೆ; ಹೀಗೆ ಮಾಡಲು ಎಷ್ಟೋ ಜನರು ಆಡಿ ಹೆಸರಿಲ್ಲವಾಗಿವೆ." ಈ ಮೇಲ್ಕಂಡ ವಾಕ್ಯಗಳನ್ನು ಓದಿದ ಕೊಡಗೇತರರಿಗೂ, ಕೇವಲ ಮತಭ್ರಾಂತಿಯಿಲ್ಲದ ಕೊಡಗ ಮಹನೀಯರಿಗೂ ವ್ಯಸನವಾಗದೆ ಇರದು. ಇದರಿಂದ ಕೇವಲ ಸಾಧುಗಳಾಗಿ ಎಲ್ಲವನ್ನೂ ತಾಳ್ಮೆಯಿಂದ ನುಂಗುತ್ತಿದ್ದ ಕೊಡಗೇತರರನ್ನು ಕೆಣಕಿ ಎಬ್ಬಿಸಿ ಅವರ ಸ್ಥಿತಿಯನ್ನು ಅವರಿಗೆ ತಿಳಿಸಿದಂತಾಯಿ ತು. ಕೊಡಗು ದೇಶದಲ್ಲಿ ಅನೇಕ ಕೋಮಿನವರು ಕೊಡ ಗರಂತೆಯೇ ಸ್ಥಿರನಿವಾಸಿಗಳಾಗಿರುತ್ತಾರೆ. ಕೊಡಗು ದೇಶ ದ ಜನಸಂಖ್ಯೆ 165,000ರ ಪೈಕಿ ಹುಗಾಮಿಯಾಗಿ ಕೂಲಿ ಕೆ ಲಸಕ್ಕೆ ಬರುತ್ತಿದ್ದ ಕೂಲಿಕಾರರ [illegible] ಸುಮಾರು 30 ಸಾ ವಿರ ಜನ ಬಿಟ್ಟು, ಕೊಡಗಿನಲ್ಲಿಯೇ ಸ್ಥಿರ ಚರ ಸೊತ್ತುಗಳ ನ್ನು ಮನ ಸುಂಗನನ್ನು ಮಾಡಿಕೊಂಡು ಅನೇಕ ಶತಮಾನ ಗಳಿಂದ ವಾಸಿಸುವ [illegible] ನಿವಾಸಿಗಳ ಸಂಖ್ಯೆ ಸುಮಾ ರು 137,000 ಅವರ ಪೈಕಿ [illegible] ನವರಾದ ಕೊಡ ಗರ ಜನಸಂಖ್ಯೆ ಸುಮಾರು 31,000 ಹಾಗಾದರೆ ಕೊಡಗಿನ [illegible] ನಿವಾಸಿಗಳಾದ ಕೊಡಗು [illegible] ಜನಸಂಖ್ಯೆ ಸುಮಾ ರು ಒಂದು ಲಕ್ಷ. [illegible] ಲಕ್ಷ ಜನರ ಪೈಕಿ ಕೊಡ ಗು [illegible] ಮತ್ತು [illegible] ಲಿಂಗಾಯತರಿರುವರು. [illegible] [illegible] ಕಾಲದಿಂದಲೇ [illegible] ಕೊಡಗರಂತೆಯೇ ಹಕ್ಕು ಬಾಧ್ಯತೆಗಳನ್ನು ಪಡೆದು ಸ್ವಸ್ಥಕ್ಕೆ ಅರ್ಹರಾದ ಗೌಡಜನಾಂ ಗದವರಿರುವರು. ಇದೇ ರೀತಿಯಲ್ಲಿ ಹಕ್ಕು ಬಾಧ್ಯತೆಗಳ ನ್ನು ಪಡೆದ ಮುಸಲ್ಮಾನರನೇಕರಿರುವರು. ಇವಲ್ಲದೆ ಇ ವರಂತೆಯೇ ಖಾಯಂ ನಿವಾಸಿಗಳಾದ ಇನ್ನೂ ಅನೇಕ ನು ರಸ್ತರಿರುವರು. ಇವರೆಲ್ಲರೂ ಬರೇ ಹೊಟ್ಟೆಪಾಡಿಗೆ ಬಂದ ವರೆಂದೂ, ಇವರನ್ನು ಕಾವೇರಮ್ಮನವರು ವೃದ್ಧಿಗೊಳಿಸಬಾ ರದೆಂದೂ ವೃತ್ತಾಂತ ಪತ್ರಿಕೆಗಳಲ್ಲಿ ಬರೆಯುವವರು ಈ 20 ನೇ ಶತಮಾನದಲ್ಲಿ ಸಹ ಇರುವರಲ್ಲಾ ಎಂದು ನಾವು ಆಶ್ಚ ರ್ಯಪಡಬೇಕಾಗಿದೆ. ಈ "ಸರ್ವ ಹಿತೈಷಿ"ಯ ಇಷ್ಟೆಯನ್ನು ಕಾವೇರಮ್ಮನವರು ನೆರವೇರಿಸುತ್ತಿದ್ದರೆ, ಕಾವೇರಮ್ಮನವರ ದೇವಾಲಯದ ಸುತ್ತ ಮುತ್ತಲಿರುವ ಗೌಡ ಜನಾಂಗದವರೇ ಪ್ರವರ್ಧಮಾನವಾಗಿ ಇರುತ್ತಿದ್ದರೇ ? ಹಿಂದೂ ದೇಶದ ಈಗಿ ನ ಚಳವಳದಲ್ಲಿ ಎಲ್ಲಾ ಕೋಮಿನವರೂ ತಾವು ಮುಂದುವ ರಿದು ದೇಶದ ಆಡಳಿತದಲ್ಲಿ ಭಾಗಿಗಳಾಗಬೇಕೆಂದು ಪ್ರಯತ್ನ ಪಡುವದನ್ನು ನಾವೆಲ್ಲರೂ ನೋಡಬಹುದು. ಆದರೆ ಬೇ ರೆ ಕೋಮಿನವರು ವೃದ್ಧಿಯಾಗಬಾರದೆಂದು ಶಾಪವಿಡುವವರ ನ್ನು ನಾವೆಂದೂ ನೋಡಿರಲಾರೆವು ಮತ್ತು ಬೇರೆ ಕೋ ಮಿನವರನ್ನು ಹೀಯಾಳಿಸುವದು ಕ್ರಿಮಿನಲ್ ಶಾಸ್ತ್ರದಂತೆ ಸ ಹ ತಿಳಿದು ಹೀಗೆ ಪರರನ್ನು ಹೀಯಾಳಿಸುವದನ್ನು ನೋಡಿದ ರೆ, ಕೊಡಗೇತರರ ಸಾಧುತನವನ್ನು ನೋಡಿ 'ಹಿತೈಷಿ'ಗಳು ತ ಮ್ಮ ಅಧಿಕಾರವನ್ನು ಅವರ ಮೇಲೆ ಎಸೆದಂತೆ ಕಾಣುತ್ತದೆ. ಈ ತರದ ಕೋಮು ಮಾಲ್ಯ ದ್ವೇಷಹುಟ್ಟಿಸುವ ವಾರ್ತೆಗಳನ್ನು [illegible] ಬರೆದ ಸರಕಾರದವರು ಎಚ್ಚರ ತೆಗೆದು ಕೊಳ್ಳುವರೆಂದೇ ನನ್ನ ಭಾವನೆ.

ಕೊಡಗೇತರರು ನೌಕರಿ ಪದವಿಗಳನ್ನು ಕಿತ್ತುಕೊಳ್ಳುವ ಇರಾದೆಯಿಂದ ಕೊಡಗರಲ್ಲಿ ಒಡಕು ತರುತ್ತಾರೆಂದು ಸಹ ಬರೆದಿರುವರು. ಕೊಡಗು ದೇಶದ ದೊಡ್ಡ ದೊಡ್ಡ ಪದವಿಗ ಳು ಕೊಡಗೇತರರಲ್ಲಿ ಎಷ್ಟಿವೆ ? ಇನ್ನು ಕೆಲವು ಕಾಲದಲ್ಲ ವೇ ಕೆಲಸದಿಂದ ನಿವೃತ್ತರಾಗಲಿಕ್ಕಿರುವ ಡಿಪ್ಯುಟಿ ಡೈರೆಕ್ಟರ ಪದವಿಗೆ ಈಗ ಎರಡು ದೊಡ್ಡ ಪದವಿಗಳಲ್ಲಿರುವ ಯಾವನಾದ ರೊಬ್ಬ ಕೊಡಗ ಉದ್ಯೋಗಸ್ಥನ ಸಂಬಂಧಿಕನನ್ನು [illegible] ಬಿಟ್ಟು ಈಗ ಕೊಡಗೇತರರಿಗೆ ಎಷ್ಟು ದೊಡ್ಡ ಪದವಿಗಳು ಉ ಳಿದುವೆಂಬುದನ್ನು ವಾಚಕರು ತಿಳುಕೊಳ್ಳಬಹುದು. ಈ ಮೊದಲು [illegible]ಗಾಗಲೂ ಇಲ್ಲದಷ್ಟು ದೊಡ್ಡ ಪದವಿಗಳು ಈ ಗ ಕೊಡಗರ [illegible]ಲ್ಲಿ ಇರುತ್ತವೆ. ಈ ಸಮಯದಲ್ಲಿ ಕೊ ಡಗ ಮಹನೀಯರು, ತಮ್ಮ ಸಹೋದರರಾದ ಕೊಡಗೇತರರ ನ್ನು ಮುಂದಕ್ಕೆ ತರುವ ಆಲೋಚನೆಯನ್ನು ಪ್ರಚುರಪಡಿಸಬೇ ಕಿತ್ತು. ಹಾಗೆ ಮಾಡುತ್ತಿದ್ದರೆ ಇನ್ನು ಮುಂದೆ ಕೊಡಗು ದೇಶಕ್ಕೆ ಹೆಚ್ಚಿನ ಪರಿವರ್ತನೆ ದೊರೆತಾಗ ಕೊಡಗರು, ಕೊಡ ಗೇತರರೆಂಬ ಭೇದವಿಲ್ಲದೆ ದೇಶದ ಆಡಳಿತದಲ್ಲಿ ಎಲ್ಲರೂ ಭಾ ಗಿಗಳಾಗಬಹುದೆಂಬ ಅಭಿಪ್ರಾಯವು ಕೊಡಗೇತರರಲ್ಲಿ ಹು ಟ್ಟುತ್ತಿತ್ತು. ಅದಕ್ಕೆ ಬದಲಾಗಿ ಕೊಡಗರಿಗೆ ಹೆಚ್ಚಿನ ಪದವಿಗ ಳು ದೊರೆವಾಗ ಕೊಡಗೇತರರಿಗೆ ಕಾವೇರಮ್ಮನವರ ಶಾಪ ಬಿ ತ್ತಲಿಲ್ಲ ಎಂದು ಯೋಚಿಸಲು ಯಾರಿಗೆ ತಾನೇ ಶೋಚನೀಯ ವಾಗದೆ ಇದ್ದೀತು. ಆರು ಸಾವಿರ ಮೈಲಿಗಳ ದೂರದಿಂದ ಬಂದು ಇಲ್ಲಿ ಆಳುತ್ತಿರುವ ಬ್ರಿಟಿಷರು ಸಹ ಭಾರತೀಯರು ಉದ್ಧಾರವಾಗಬಾರದೆಂದು ಹೇಳಿಲ್ಲ. ಬ್ರಿಟಿಷ್ ಅಧಿಪತ್ಯದ ಲ್ಲಿ ಹಿಂದೀಯರು ಸಹ ಬ್ರಿಟಿಷರಂತೆ ರಾಜ್ಯಭಾರ ಕ್ರಮದಲ್ಲಿ ಸಮ ಭಾಗಿಗಳಾಗಬೇಕೆಂದು ಹೇಳುತ್ತಿರುವರು. ಹೀಗಿರು ವಾಗ ಬ್ರಿಟಿಷರ ಆಳಿಕೆಗೆ ಒಳಪಟ್ಟ ಸಂಸ್ಥಾನವಾಗಿರುವ ನ ಮ್ಮೊಳಗ ಈ ಶಾಪಗಳು ಕೇಳುವದಕ್ಕಾಯಿತಲ್ಲವೇ ? "ಹಿ ತೈಷಿ ಗಳ ಅಭಿಪ್ರಾಯವನ್ನು ಕೇಳಿ ಬ್ರಿಟಿಷ್ ಸರಕಾರವು ಸುಮ್ಮನಿದ್ದು ಕೊಡಗೇತರರಿಗೆ ಸರಕಾರದಲ್ಲಿರುವ ಭರವಸೆ ಯು ಕಡಿಮೆಯಾಗುವದರಲ್ಲಿ ಸಂದೇಹವಿಲ್ಲ. ಕೊಡಗೇತ ರರ ಮೇಲೆ ಬ್ರಿಟಿಷ್ ಸರಕಾರವು ಇನ್ನಾದರೂ ಕಣ್ತೆರೆದೀ ತೆಂದೇ ನನ್ನ ಪ್ರಾರ್ಥನೆ.

ಸಾಲದುದಕ್ಕೆ 'ಕೊಡಗು' ಸಂಪಾದಕರ ಮೇಲೆ ಅಸ ವಾದವನ್ನು ಹೊರಿಸಿರುವರು. "ಇದೇ ಕೆಲಸವನ್ನು ನಿತ್ಯ ಪೊ ನ್ನೆ ಪಾಶವಾಗಿ ಬಂದಂತಹ ಬ್ರಾಹ್ಮಣರು, ಗೌಡರುಗಳು, ಮುಸ ಲ್ಮಾನರು, ಕಡೆಗೆ ಪಂಚಮರ ಒಬ್ಬ ಅಳಿಯರಿಗೆ ಅಥವಾ ಬಾ ರ್ ಅಟ್ ಲಾಗೆ ಕೊಟ್ಟಿದ್ದರೆ ಇಷ್ಟು ಅವಮಾನಕರ ಈ 'ಕೊಡ ಗು' ಲೇಖಕರಿಗೆ ಇರುತ್ತಿರಲಿಲ್ಲ.... .. ..ಏ ನೋ ಒಬ್ಬೊಬ್ಬರು ಕೊಡಗೇತರರು ಸೇರಿಕೊಂಡು ಇವರಿಗೆ ಅಲ್ಲಿ ವೈಶಮ್ಯ ತರಬೇಕೆಂದು ಬೋಧಿಸುವದನ್ನು ಕೇಳಿಕೊಂ ಡು ಕುಣಿಯಲು ಇವರೇನು ಕೊಡಗೇತರರ ಕೈಯಲ್ಲಿ ಸಿಕ್ಕಿದ ಮಂಗಗಳೋ" ಎಂದು 'ಹಿತೈಷಿ'ಗಳು ಬರೆದಿರುವರು. ನಾವು ನೋಡಿದ ಮಟ್ಟಿಗೆ 'ಕೊಡಗು' ಸಂಪಾದಕರು ಇದು ವರೆಗೆ ಕೊಡಗೇತರರಿಗೆ ಮಾತ್ರ ಒಳ್ಳೇದಾಗುವಂಥ ಅಭಿಪ್ರಾಯವ ನ್ನು ಎಲ್ಲಿಯೂ ಸೂಚಿಸಲಿಲ್ಲ. 'ಹಿತೈಷಿ'ಗಳು ಇನ್ನು ಮುಂ ದೆ ಕೊಡಗೇತರರಿಗೆ ಯಾವ ಪದವಿಗಳೂ ಹೋಗಬಾರದೆಂಬ ಅ ವರ ಸೂಚನೆಯನ್ನು ಕೊಟ್ಟದ್ದೇವಿನಹ, 'ಕೊಡಗು' ಲೇಖಕರ ಅಭಿಪ್ರಾಯವನ್ನು ಖಂಡಿಸಿದ್ದಲ್ಲ. ಒಂದು ವೇಳೆ ಕೊಡಗೇ ತರರಿಗೆ ನೌಕರಿ ಪದವಿಗಳನ್ನು ಕೊಡಬೇಕೆಂದು ಬರೆದಿದ್ದರೂ ಅದರಲ್ಲಿ ತಪ್ಪೇನು ನ್ಯಾಯವಿತ್ತು. ಮೇಲೆ ಕಾಣಿಸಿದ ಒಂ ದು ಲಕ್ಷ ಕೊಡಗೇತರರಿಗೆ ದೇಶದ ಆಡಳಿತದಲ್ಲಿ ಕೇವಲ ಸ್ವ ಲ್ಪ ಭಾಗ ಮಾತ್ರ ಸೇರಿರುವದರಿಂದ, ಅವರನ್ನು ಮುಂದಕ್ಕೆ ತರಲು ಕೊಡಗರ ಸಹಕಾರವಾಗಬೇಕೆಂತ ಮಾಡುವದು 'ಕೊಡ ಗು' ಸಂಪಾದಕರ ಕರ್ತವ್ಯವಾಗಿತ್ತು. ಆ ಕೆಲಸವನ್ನು ಅವರು ಇದು ವರೆಗೂ ಮಾಡದ್ದರಿಂದ ಕೊಡಗೇತರರು ಎಷ್ಟು ವಿಷಾ ದಿಸಿದರೂ ಸಾಲದು. 'ಕೊಡಗು' ಸಂಪಾದಕರು ಮತ್ತು ಈಗ ನಾನಾ ರೀತಿಯಲ್ಲಿ ಬೈಸಿಕೊಳ್ಳುತ್ತಿರುವ ಜವಾಬ್ದಾ ರರ ಸಂಘವೂ ಇದು ವರೆಗೆ ಕೊಡಗೇತರರಿಗಾಗಿಯೇ ಯಾವ ಕೆಲಸವನ್ನು ಮಾಡಿಲ್ಲ. ಕೆಲವು ತಿಂಗಳ ಹಿಂದೆ ತಾನೇ ಸ್ವರ್ಗಸ್ಥ ರಾದ ಮಿ. ಪಾಡುವಂಗಳ ಕುಶಾಲಪ್ಪನವರು, 'ಕೊಡಗು' ಸಂ ಪಾದಕರು, ಮಿ. ಕೋಟೆರ ಚಿಣ್ಣಪ್ಪನವರು, ಮತ್ತು ಅವರೊ ಡನೆ ದುರಾಶೆಯಿಲ್ಲದೆ ದೇಶದ ಸೇವೆ ಮಾಡಿದ ಮತ್ತು ಮಾಡು ತ್ತಿರುವವರು, ದೇಶದಲ್ಲಿ ಒಗ್ಗಟ್ಟು ಬೆಳೆಸಬೇಕೆಂಬ ಕುತೂಹ ಲದಿಂದ, ತಾವೇ ಪ್ರತ್ಯೇಕವಾಗಿ ಕೆಲಸ ಮಾಡಬಹುದಾಗಿದ್ದ ಕೊಡಗೇತರರನ್ನು ತಡೆದು ಹಾಕಿ ತಮ್ಮೊಡನೆ ಕೆಲಸಮಾಡಲು ಸೇರಿಸಿಕೊಂಡರು. ಅದರಿಂದ ಕೊಡಗೇತರರು ತಮ್ಮ ಕೆಲಸವ ನ್ನು ಮಾಡದೆ ಕುಳಿತುಕೊಳ್ಳಲು ಕಾರಣವಾಯಿತು. ಹೀಗೆ ಅವರು ತಮ್ಮ ಸ್ವಂತ ಕೆಲಸವನ್ನು ಮರೆತದ್ದಕ್ಕಾಗಿಯೇ ಅತ ರ ಸ್ವಾಧೀನ ಈ ಮೊದಲಿದ್ದ ಅನೇಕ ದೊಡ್ಡ ಪದವಿಗಳನ್ನು ಅವರು ಕಳೆದುಕೊಂಡು ಅವರಿಗೆ ಈಗ ಕಾವೇರಮ್ಮನವರಿಂ ದ ಶಾಪ ಒದಗಲು ಕಾರಣವಾಯಿತು.

ಆದರೂ ಸಹ ಕೆಲವು ಕೊಡಗೇತರರು ಮೇಲೆ ಹೇಳಿದ ಕೆಲವು ಕೊಡಗರ ದೇಶಾಭಿಮಾನಕ್ಕೆ ಮೆಚ್ಚಿ ದೇಶದ ಆಡಳಿತ ವು ದೇಶೀಯರ ಕೈಗೆ ಸಿಕ್ಕಿದಾಗಲಾದರೂ ತಮ್ಮ ಸದ್ಯದ ಕಷ್ಟಗಳು ಪರಿಹಾರವಾಗಬಹುದೆಂದೂ, ಮತ್ತು ನಮ್ಮ ಈಗಿ ನ ಅಲ್ಪ ಕಾಲದ ಸುಖಕ್ಕಾಗಿ ದೇಶದಲ್ಲಿ ಒಡಕು ಹುಟ್ಟಿಸಿ ದೇಶದ ಮುಂದಿನ ಏಳಿಗೆಯನ್ನು ನಾಶಪಡಿಸಬಾರದೆಂದೂ, ಒ ಗ್ಗಟ್ಟಿನಲ್ಲಿಯೇ ಕೆಲಸ ಮಾಡುವದನ್ನು ಮುಂದುವರಿಸಿದರಷ್ಟೆ ಆದರೆ ಈಗ ದಿನೇ ದಿನೇ ಒಂದು ಕೋಮಿನವರಿಗೆ ಹೆಚ್ಚಿನ ಅ ಧಿಕಾರ ದೊರೆತಾಗಲೆಲ್ಲ ಕೊಡಗೇತರರ ಮೇಲೆ ದುಮುಕುವ ದು ಹೆಚ್ಚಾದಂತೆ ಕಾಣುತ್ತದೆ. 'ಹಿತೈಷಿ'ಗಳು ಬರೆದಂತೆ ರೀತಿ ಕೊಡಗ ಮಹನೀಯರಲ್ಲಿ ಹೆಚ್ಚು ಭಾಗದವರು ವರ್ತಿಸಿದರೆ ಕೊಡಗೇತರರೂ ಪ್ರತ್ಯೇಕ ನಿಂತು ಕೆಲಸ ಮಾಡಲು ಬಲಾ ತ್ಕರಿಸಿದಂತೆ ಆಗುವದು.

ಒಂದು ವೇಳೆ ದೇಶದ ದುರ್ದೆಶೆಯಿಂದ ಕೊಡಗೇತರ ರು ಪ್ರತ್ಯೇಕವಾದರೆ ಅದರಿಂದ ಕೊಡಗಿಗೆ ಹೆಚ್ಚು ಕೆಡ ಕಾಗುವದೇ ಹೊರತು ಕೊಡಗೇತರರಿಗೆ ಅಲ್ಲ. ಈಗ ಒ ಗ್ಗಟ್ಟಿನ ಹೆಸರಿನಿಂದ ಕೊಡಗರು ಅನುಭವಿಸುವ ಹೆಚ್ಚು ಪ ದವಿಗಳ ಪೈಕಿ ಕೆಲವಾದರೂ ಪಾಲುದಾರಿಕೆಯ ಹಕ್ಕಿನ ಮೇ ಲೆ ಕೊಡಗೇತರರ ಕೈ ಸೇರಲೇ ಬೇಕಾಗುವದು. ಆ ಕಾಲ ದಲ್ಲಿ 'ಕೊಡಗು' ಸಂಪಾದಕರು ಮತ್ತು ಅವರ ಅಭಿಪ್ರಾಯ ವುಳ್ಳ ಬೇರೆ ಕೊಡಗರೂ, ಕೊಡಗೇತರರನ್ನು ತಮ್ಮಂತೆ ಇ ಟ್ಟುಕೊಂಡದ್ದರಿಂದ ಕೊಡಗರಿಗೆ ಉಂಟಾದ ಪ್ರಯೋಜನ ನ್ನು ಅರಿತು ಅವರನ್ನು ಕೊಡಗರು ಪೂಜಿಸಬಹುದು. 'ಕೊ ಡಗು' ಸಂಪಾದಕರು ಮಾಡುವಂಥ ಹೋರಾಟಗಳು ನ್ಯಾಯ ವಾದ್ದೆಂದು ತಿಳಿದು ಗುಟ್ಟಾಗಿ ಅಂತಹ ವರ್ತನೆಗಳನ್ನು ಮೆಚ್ಚಿ ದರೂ ಸಹ ತಮ್ಮ ಸ್ವಾರ್ಥಕ್ಕಾಗಿ ಸರಕಾರದವರ ಮುಂ ಅವುಗಳನ್ನು ಖಂಡಿಸಿ ತಮ್ಮ ಆಶೆಗಳನ್ನು ನೆರವೇರಿಸಲು ಪ್ರ ಕೊಡುತ್ತಿರುವ 'ಕೊಡಗು' ಸಂಪಾದಕರ ಮತ್ತು ಅವ ಸಂಗಡಿಗರೂ ಯಾರ ಪ್ರಯೋಜನಕ್ಕೆ ಬಂದರೆಂದು ದೇಶ ವರೇ ತಿಳಿದುಕೊಂಡರೆ ಸಾಕಾಗಿದೆ.

ಕೊಡಗ ಮಹನೀಯರಲ್ಲಿ ನನ್ನದೊಂದು ವಿನಂತಿ. 'ಸರ್ವ ಹಿತೈಷಿ'ಗಳಂತ ಬೇರೆ ಸಂಗಡದವರನ್ನು ದ್ವೇಷಿಸು ಕೊಡಗರು ಬಹು ಸ್ವಲ್ಪ ಮಂದಿ ಇರಬಹುದೆಂದು ನನ್ನ ಭಾ ನೆ. "ಹಿತೈಷಿ"ಗಳಂತವರು ತಮ್ಮ ಸ್ವಕಾರ್ಯಕ್ಕಾಗಿ ಕೊ ಡಗ ಕೊಡಗೇತರರಲ್ಲಿ ಒಡಕು ತಂದು ದೇಶದಲ್ಲಿ ಕಾಕ ಸಂಗಡಿಗರ ಬೀಜವನ್ನು ಬಿತ್ತುವದನ್ನು ನಿಲ್ಲಿಸುವುದು ಪ ಯೊಬ್ಬ ದೇಶೀಯನ ಕರ್ತವ್ಯವಾಗಿದೆ. ಅದಕ್ಕೆ ಬದಲು ಈಗ ಕೊಡಗರಿಗೇನೇ ಹೆಚ್ಚು ಪ್ರಯೋಜನಕಾರಿಯಾಗಿರ ಜವಾಬ್ದಾರರ ಸಂಘದಲ್ಲಿಯೂ ಕೈಸ್ಪ ಪಡದೆ ಆ ಸಂಘ ಕೆಲವು ಕೊಡಗೇತರರ ಮಾತಿನಿಂದ ನಡೆಯುತ್ತದೆಂದು ತ ಅಭಿಪ್ರಾಯ ಹುಟ್ಟಿಸಿ, ದೇಶದ ಎಲ್ಲಾ ಅಧಿಕಾರಗಳು ತ ಒಂದು ಕೋಮಿನ ಅವರಲ್ಲಿಯೂ ಕೇವಲ ಸಂಬಂಧಿಕರ ಯ್ಯಲ್ಲಿರಬೇಕೆಂಬ ದುರಾಶೆಯಿಂದ ಬೇರೆ ಕೋಮಿನವರ ಮೆ ಯುದ್ಧ ಹೂಡಿದ್ದಾರೆ. ಇದು ವರೆಗೆ ದೇಶದ ಒಗ್ಗಟ್ಟು ಬೆ ದು ಹೋರಾಡುತ್ತಿದ್ದ ಕೊಡಗೇತರರು ತಮ್ಮ ವರ್ತನೆಯ ಬದಲಾಯಿಸಬೇಕಾಗುವದು. ಪ್ರತಿ ಜನಾಂಗವೂ, ದಾಗ ವರೂ, ಕೋಮಿನವರೂ ಸಹ ಸಮಾನತೆಗಾಗಿ ಹೋರಾ ದು ಸಹಜವಾಗಿದೆ. ಏಕೆಂದರೆ ಸಮಾನತ್ವದಿಂದ ಬದು ದು ಪ್ರತಿಯೊಬ್ಬನ ಹಕ್ಕಾಗಿದೆ. ಸಮಾನತೆಯಿಲ್ಲದೆ ಕೀಳಾ ದಕ್ಕಿಂತ ಸಾವೇ ಲೇಸು (Equality is the ri and inferiority is the death of every Nation) ಗೇತರರು ತಮ್ಮ ದೇಶದಲ್ಲಿಯೇ ಸಮಾನತ್ವಕ್ಕೆ ಯೋ ರಲ್ಲವೆಂಬ ಭಾವನೆಯನ್ನು ಅವರಲ್ಲಿ ಹುಟ್ಟಿಸಿದರೆ ಅ ಯೋಗ್ಯತೆಯನ್ನು ರುಜುಪಡಿಸುವದು ಅವರ ಕರ್ತವ್ಯ ಬಹುದು. ಭಾರತೀಯರು ಬ್ರಿಟಿಷರವರಂತೆಯೇ ಗೂ ಸ ಹಕ್ಕು ಬಾಧ್ಯತೆಗಳು ಬೇಕೆಂದು ಹೋರಾಡು ಅಂತಹ ಹಕ್ಕು ಬಾಧ್ಯತೆಗಳು ದೊರೆತಾಗ ಅವುಗಳನ್ನು ನೊಂದು ಕೋಮಿನಲ್ಲಿ ಕೂಡುವದಕ್ಕಲ್ಲ. ಭಾರತೀ ರೂ ಸಮಭಾಗಿಗಳಾಗಿ ಅನುಭವಿಸಬೇಕೆಂಬ ಭಾವನೆಯಿ ಗಿದೆ. ಇಷ್ಟರಿಂದ ಕೊಡಗು ದೇಶದಲ್ಲಿ ಹೆಚ್ಚು ಮುಂ ದ ಕೊಡಗರು ಈ ವಿಷಯಗಳನ್ನು ಆಲೋಚಿಸಿ "ಸರ್ವ ಹಿ"ಗಳಂತಹ ಮತ ಭ್ರಾಂತರಿಗೆ ಎಡೆ ಕೊಡದೆ ಕಸವಿ ಕ್ಕೆ ಮೋಕ್ಷಂತಿಯನ್ನು ಹಾಕುವದು ಅವಶ್ಯವಾಗಿದೆ.

ಎಸ್. ಮುದ್ದ

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದವರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯನ ಎಲ್ಲಾ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ

ಮಾತ್ರೆಗಳು.

ಧಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನ ರಹಿತವಾದುದು. ಒಂದು ಡಬ್ಬಿಯ ಕ್ರಯ ೧-೦-೦

52—47 ಮದನಮಂಜರಿ ಫಾರ್ಮಸಿ,

1/94 ಚೀನಾ ಬಜಾರ್, ಮದ್ರಾಸ್.

ಹೊಸ ಪುಸ್ತಕ ಕ್ರಯ ೧-೦-೦

ಮೊದಲನೆಯ ಮುದ್ರಣ

ಸ್ತ್ರೀಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರ ಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ.

ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧಾರಣೆ, ಸಂಭೋಗದ ಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ನಾನಾ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕಂಡಿದೆ. ಕ್ರಯ ಪುಸ್ತಕ ೧ಕ್ಕೆ ರೂ ೧-೦-೦

ಎಸ್. ವಿ. ಗೋಪಾಲ್ ಬುಕ್ ಡಿಪೋ,

52—19 37. ತಿರುಪಳ್ಳಿಬೀದಿ, ಮದರಾಸ್.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ,

"ಬೋರ್ಡ್ ಹುಲ್ಲು ಬೆಳೆಯಿಂದ ಕಿತ್ತುಕೊಂಡ ಕಾಫಿಗಿಡಗಳ ಸಂಖ್ಯೆಯು ಧಾತು ಗುಣದ (Mineral) ಗೊಬ್ಬರ ಹಾಕಿದ ಸ್ಥಳಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಬಾಳೆಹೊನ್ನೂರ ಪರೀಕ್ಷಾ ಕ್ಷೇತ್ರ (Experiment station) ದಲ್ಲಿ ಕಂಡುಬಂದಿದೆ. ಆದುದರಿಂದ ರೋಬಸ್ಟ ಪಾಟ್-ಹೋಲ್ ಬೋರರಿಗೆ ಸಾರಜನಕ ಗೊಬ್ಬರವು ಪ್ರಯೋಜನಕಾರಿಯಾಗುವದೆಂದು ತೋರುತ್ತದೆ" (ಮೈಸೂರು ಗವರ್ನಮೆಂಟ್ ಎಂಟಮಾಲಜಿಸ್ಟ್ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್)

ಚಿಲಿಯನ್ ನೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗಗಳಿಗೆ ಥಕ್ಕನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಆಫ್ ಸೋಡಾದಲ್ಲಿ ಬೆಳೆಯನ್ನೂ ಮಣ್ಣನ್ನೂ ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಎಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವನ್ನು ಬಾಣಾವರದಲ್ಲಿರುವ ಮೆಸರ್ಸ್ 'ವ್ಯಾಲಿ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಷನಿಗಾದರೂ 80 ರಾತ್ತಲಿನ ಚೀಲ 1ರ ದರವಾಯ 6—8—0ರಂತೆ ಸಪ್ಲೈ ಮಾಡುತ್ತಾರೆ. ಮಡಿಕೇರಿ, ವೀರಾಜಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 7—8—0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದವರ್ಥಗಳಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ, ಇಂಡಿಯನ್ ಡೆಲಿಗೇಶನ್, ಪೋ. ಬಾ ನಂ. 469, ಕಲ್ಕತ್ತಾ.

(2) ಮಿಸ್ಟರ್ ಎ.ಎಂ. ಯಾ ಬೆಳ್ಯಪ್ಪ, ಚಿಲಿಯನ್ ನೈಟ್ರೇಟ್ ಕಮಿಟಿ, ಮಡಿಕೇರಿ.

24—8

Arms, Ammunition and Shooting Requisites!!!



Current Illustrated Catalogue Free on Application!

D. B. B. L. Rifles	Rs	120	to Rs.	2750
S. B. B. L.	„	35	to „	950
D. B. B. L. Guns	„	50	to „	1350
S. B. B. L.	„	35	to „	275
D. B. M. L.	„	45	to	135
S. B. M. L.	„	30	to „	80
B. L. Revolvers	„	35	to „	350
Automatic Pistols	„	30	to „	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS.

Largest Importers of Firearms and Ammunition

Cheapest priced firm in India,

24—18 210 Abdul Rehman Street, BOMBAY.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

1. 'ಡಿಪ್ ಬಹರ್ ಫ್ಲೋಟ್' ಸಿಂಗಲ್ ರೀಡ್ ಹಾರ್ಮೋನಿಯಂ 1ಕ್ಕೆ	50	8	0
2. "ಸಿದ್ಧಪ್ಪಾಸ್ ಫ್ಲೋಟ್" „ „	42	8	0
3. ಶಕುಂತಲಾ „ „ „	40	0	0
4. ಮೋಹನ್ „ „ „	37	8	0
5. ಮೋಸ್ಟೀರಿ „ „ „	35	0	0
6. ಮಹಾರಾಜಾ „ „ „	32	8	0
7. ಕೊಹಿನೂರು „ „ „	29	8	0
8. ಡೈಮಂಡ್ „ „ „	27	8	0
9. ಬಿಜಲೀ „ „ „	25	0	0
10. "ದಿಲ್‌ಬಹರ್ ಫ್ಲೋಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1ಕ್ಕೆ	85	0	0
11. ಸ್ಪೆಷಲ್ „ „	56	0	0
12. ಮೋಹನ್ „ „ „	50	8	0

14 ಕ್ಯಾರೆಟ್ ಬಂಗಾರದ ನಿಬ್ಬುಳ್ಳ ಖಾತ್ರಿಯಾದ ಬಂದೋಬಸ್ತು ಆದ ಫೌಂಟೆನ್ ಪೆನ್‌ಗಳು.

ವರ್ಲ್ಡ್ ವಂಡರ್ ಫೌಂಟನ್ ಪೆನ್ 1ಕ್ಕೆ	3	0	0
„ ಬಿಗ್‌ಬ್ಯಾರಲ್ „ „	3	2	0
„ ಸ್ಕ್ರೂಕ್ಯಾಪ್ „ „	3	8	0
„ ಗೋಲ್ಡ್ ಕಲರ್ „ „	3	14	0
„ ಗೋಲ್ಡ್ ಸ್ಕ್ರೂಕ್ಯಾಪ್ „ „	4	4	0
„ ಬ್ರೌನ್‌ಕಲರ್ ಸೆಲ್ಫ್‌ಫಿಲಿಂಗ್ ಪೆನ್ „	5	8	0
„ ಸೇಫ್ಟಿ ಪೆನ್ „ „	6	8	0
„ ಲೇಡೀಸ್ ಸೈಜಿನ ಗೋಲ್ಡ್ ಕಲರ್ ಪೆನ್ „	4	8	0
ಬ್ಲಾಕ್‌ಬರ್ಡ್ ಪೆನ್ 1ಕ್ಕೆ 3 8 0 ಮತ್ತು	3	12	0
ಸ್ವಾನ್ ಪೆನ್ „ 6 8 0 „	7	0	0
ವಾಟರ್‌ಮೆನ್ ಐಡಿಯಲ್ 1ಕ್ಕೆ 8 0 0 „	8	8	0
„ ಸೆಲ್ಫ್ ಫಿಲ್ಲಿಂಗ್ ಯಾ ಸೇಫ್ಟಿ ಪೆನ್ 1ಕ್ಕೆ	12	0	0
ಬಿಗ್‌ಬ್ಯಾರಲ್ ಹಾರ್ಡ್ ವೇರ್ „ „	8	0	0
„ ನೆಪ್ಚ್ಯೂನ್ ಪೆನ್ 1ಕ್ಕೆ	17	0	0

ಖಾತ್ರಿಯೂ ಬಂದೋಬಸ್ತು ಆದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು 1ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಅಲಾರಂ ಟೈಂಪೀಸು „	3	12	0
ಅನ್‌ಸೋನಿಯಾ 'ಬಿ' ಟೈಂಪೀಸು „	5	13	0
„ ಅಲಾರಂ „ „	5	6	0
ಬಿಗ್‌ಬೆನ್ „ „ „	9	6	0
„ ಡಿಲ್ಯುಕ್ಸ್ ಸ್ಟ್ಯಾಂಡಿರುವ ಅಲಾರಂ ಟೈಂಪೀಸು „	13	5	0
ಘಂಟೆ ತೋರಿಸಿ ಅಲಾರಂ ಬಾರಿಸುವ ಕ್ಯಾರೇಜ್ ಕ್ಲಾಕ್ „	7	2	0
„ ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1ಕ್ಕೆ	8	10	0
„ ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಬಾರಿಸುವ ಕ್ಯಾರೇಜ್ ಕ್ಲಾಕ್ 1ಕ್ಕೆ	9	12	0
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಗ್ರಾಮೋಫೋನಿನಂತೆ ವಾದ್ಯವಾಗುವಂತೆ ಗಾನಮಾಡುವ ಕ್ಯಾರೇಜು ಕ್ಲಾಕ್ 1ಕ್ಕೆ	12	0	0

(ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—9

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೊ ಆಪರೇಟಿವ್ ಸೊಸೈಟಿ ಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಬಂಡವಾಳ	—	20,000
ಜನಗಳಿಂದ ಠೇವಣಾತಿ	—	1,88,273

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ಮೇರೆಗೆ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಿಗಳಿಗೆ ಶೇಕಡ ಸಾಲಿಯಾನ ೪ರ ಬಡ್ಡಿ ದೊರೆಯುತ್ತೆ.

ಪಬ್ಲಿಕ್ ಪ್ರಾಸಿಕ್ಯೂಟರ್ ಕೊಂಬ ಪರೇಟಿವ್ ರಿಜಿಸ್ಟ್ರಾರವರು ಶೇರ್ ಅರ್ಜಿಯನ್ನು ತೆಗೆದುಕೊಳ್ಳುತ್ತಾರೆ.

ಪ್ರೆಸಿಡೆಂಟರು	ವೈಸ್ ಪ್ರೆಸಿಡೆಂಟರು
ಕಾಳೇಂಗಡ ಅಪ್ಪಯ್ಯನವರು	ಕೊಂಗೆಟ್ಟೀರ ... ಯ್ಯ
ರಾವ್ ಬಹದ್ದೂರ್	ನವರು.

ಸೆಕ್ರೆಟರಿ
... ಯನ್ ವೆಂಕಪ್ಪಯ್ಯನವರು, ಬಿ. ಎ., ಎಲ್. ಎಲ್.
ತಾರೀಖು 1-7-1929

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ... ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಒಪ್ಪಿಗೆ ರುಜು ಮೇಲೆ ರಶೀತಿ ಪುಸ್ತಕಗಳ ಕೊಡಲಾಗಿವೆ. ದಯವಿಟ್ಟು ಚಂದಾದಾರರ್ಸ್ಯೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮಿ ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮಿ ಕೇಕಿರ ಅಯ್ಯಪ್ಪನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮಿ ಕಾಸಬೀರ ನಂಜಪ್ಪನವರು, ಮತ್ತು ಮಿ ಮಂಡೇಪಂಡ ಸೋಮಯ್ಯನವರು (ಮಾನಿಭಂಡಾರ)
ಮಡಿಕೇರಿ—ಗಡಿಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮಿ ಅಜ್ಜಮಾಡ ಮಾದಪ್ಪನವರು
ನಾಪೋಕ್ಲು—ಮಿ. ಟಿ ಆರ್ ರಾಮಯ್ಯನವರು,
ಗೋಣಿಕೊಪ್ಪಲು—ಮಿ ಐಮ್ಮಂಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮಿ ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮಿ ಪಿ. ಜಿ ಮುದ್ದಪ್ಪಯ್ಯನವರು,
ಸುಂಟಿಕೊಪ್ಪ ೩ ತಿತಿಮತ್ತಿ—ಮಿ ಜಿ. ಮಾದಪ್ಪಯ್ಯನವರು,

ಮೇಲ್ಕಂಡ ಏಜೆಂಟರು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
ಕೊಡಗು ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರಿ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮೂಲ್ಯ ಅಬ್ಬಾರಿ ಪುಸ್ತಕ ಸಹಾಯಕ ಸಂಘದ ಉಪನಿಬಂಧನೆಗಳೂ ದಾವ ಬರೆಯ ರಿಜಿಸ್ಟ್ರಾರವರ ಆಫೀಸಿನ ಅಳತೆ ಆದ. ಸರಿಯಾಗಿ ಬರೆಯಲ್ಪಡದಲ್ಲಿ ನೆಂದು ವಾಸವು ಇರುವ ಅದನ್ನು ಕನ್ನಡ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರ ... ಫಾರಮ್‌ಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ಗಿಡಾಜನೇಟಿ ಬಿಲ್ಡರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್, 'ಕೊಡಗು' ಮಡಿಕೇರಿ



12 bore Victor Cartridges Rs 10/- Per 100

Mahomedally-Noorbhoy.
ARMS & AMMUNITION MART,
72 Abdul Rehman Street
BOMBAY, 3.

ಕೇಶವರ್ಧಕ ತೈಲ ಮತ್ತು ಕೇಶರಕ್ಷಕ:—ಇದು ... ಮತ್ತು ... ಗುಣವಾಗತಕ್ಕ ಮಲೇರಿಯ ಜ್ವರ ದಿನ ... ಬರುವ ಜ್ವರ 3-4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ... ದೇಹದೊಳಗಿನ ... ಕೊಡುತ್ತದೆ ಸೀಸೆ ಒಂದಕ್ಕೆ ರೂ 1-8-0 3ಕ್ಕೆ ರೂ 4-0-0 6ಕ್ಕೆ ರೂ 7-8-0 12ಕ್ಕೆ ರೂ 14

ಚಂದನಾಸವ—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ... ಮೂತ್ರಕೋಶದ ಉರಿ, ಮೂತ್ರ ಹಿಂದೆಗೆ ... ಮೂತ್ರ ... ಸೋರಿ ಹೋಗ ಉರಿಯುವುದು ಮೂತ್ರನಾಳದೊಳಗೆ ... ಧಾತು ಸುರಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆದ ... ದೇಹದಲ್ಲಿ ಉರಿ ... ಮುಂತಾದ ... ಬೆಲೆ ಬಾಟ್ಲ 1 3 6ಕ್ಕೆ ರೂ 1-4-0 3-4-0 6-12-0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಅ 1 3 ಡಬ್ಬಿಗಳಿಗೆ ರೂ 1 1 ಡಜನಿಗೆ 3-8-0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ ... ಯಿಂದ ಕೀವು ಸೋರುವುದು ... ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವಿಕೆ, ಮನೋಶಕ್ತಿ ಕುಂದಿಹೋಗುವುದು ಇವು ಎಲ್ಲವನ್ನೂ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2-10-0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5-8-0

ನಮ್ಮ ಕೆಟಲಾಗನ್ನು ತರಿಸಿ ನೋಡಿರಿ — ವಿಳಾಸ—ಮನೋಲ್ಲಾಸಿನಿ ಕಂಪೆನಿ.
52-39 — ೨, ಮಂಗಳೂರು.

ದಯವಿಟ್ಟು ಗಮನಿಸಿರಿ! — ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಪಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಾಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಚೈನ್ಯೂ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಚಿಲ್ಲರೆಯಾಗಿಯೂ ಸಗಟಾಗಿಯೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.

24-8

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ

ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು			ಪ್ರೀಮಿಯಂ ಆದಾಯ.		
1925	296	ಲಕ್ಷ ರೂಪಾಯಿ	1925	930	ಲಕ್ಷ ರೂಪಾಯಿ
1926	391	" "	1926	106	" "
1927	408	"	1927	122	" "
1928	585	" "	1928	140	" "

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ
1921ರಲ್ಲಿ " " " " "	1927ರಲ್ಲಿ " " " 2? "

ಆದಕಾರಣದಿಂದ ನೀವು ಬೇರೆ ಯಾವುದೇ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಬಂದರೆ ನಿಮಗೆ ಅದರಿಂದ ಲಾಭ ಉಂಟಾಗುವುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಓರಿಯಂಟಲ್ ಬಿಲ್ಡಿಂಗ್ಸ್, — **ಎಲ್. ಆರ್. ಕೃಷ್ಣಸ್ವಾಮಯ್ಯರ್**
ಪೌತ್ ಪೆರೇಡ್, ಬೆಂಗಳೂರು — 52-28 — **ಬ್ರಾಂಚ್ ಸೆಕ್ರೆಟರಿ.**

ಸೋಲಾರ್ ಫೌಂಟೆನ್ ಪೆನ್.



ಈ ಪೆನ್ನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು ಇದಕ್ಕೆ 14 ಕ್ಯಾರೆಟ್ಟಿನ ಸಾಚಾ ಬಂಗಾರದ ನಿಬ್ಬು ಹಾಕಿದೆ. ಈ ಪೆನ್ನನ್ನು ಕೊಂಡವರಿಗೆ ... ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಮು ಆಗಿ ಕೊಡುವೆವು

ಇನಾಮು ಟೇಬಲ್ ಟೈಂಪೀಸ್ ಸಹಿತ ಪೆನ್ನಾ 1ಕ್ಕೆ 3-8-0.

ವಿಳಾಸ — ಕೆ. ನಾಥಮುನಿ ಅಂಡ್ ಸನ್ಸ್,
168 ಸ್ಟೀನ ಬಜಾರು,
52-2 — ಮದರಾಸು.

ಬಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಿದ ಕಟ್ಟಿದೆ. ಇದು ಒಳ್ಳೆಯ ಕೆಲಸದ ಎಲೆಕ್ಟ್ರೋ ಪ್ಲೇಟ್ ಸಿಂದ ಸವರನ್ ಬಂಗಾರದ ಒಪ್ಪ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸಮಸಮಾನವಾಗಿವೆ. ಒಂದಕ್ಕೆ ೦-೧೨ ... ಉಂಗುರಗಳಿಗೆ ಒಂದು ಟೇಬಲ್ ಟೈಂಪೀಸ್ ... ಉಂಗುರಗಳಿಗೆ ಒಂದು ಬಂಗಾರದ ಪಾಕೆಟ್ ವಾಚನ್ನೂ ... ಉಂಗುರಗಳಿಗೆ ಒಂದು ಬಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನು ಇನಾಮಾಗಿ ಕೊಡುತ್ತೇವೆ.

ವಿಳಾಸ —ರೀಗಲ್ ವಾಚ್ ಕಂಪೆನಿ,
52-2 — ಪೋ. ಬಾ. 243, ಮದರಾಸು.

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಕೃತ್ಯದ ಫಲವದಯುವ ಜನ್ಯ, ಶ್ರೀ ಕೃಷ್ಣ || ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಮಡಿಕೇರಿ, ೧೯೨೯ನೇ ಇಸವಿ ಜುಲೈ ತಾರೀಕು ೧೯ನೇ ಶುಕ್ರವಾರ [ಸಂಚಿಕೆ ೭

Post Box 4234
TRIPLICANE, MADRAS.

MANUFACTURES AND DEALS IN ALL—

(1) Gemset Jewels, gold and silver articles of all patterns
(2) Race Cups Caskets, Medals, etc, for presentation purposes
(3) Trovels, Keys, Locks etc for ceremonial purposes.

JEWELLER
BY
APPOINTMENT
TO
His Excellency
THE GOVERNOR
OF MADRAS.

Catalogue Free
to Bona fide Enquirers

UNDERTAKES—

(1) Remaking or Remodelling of all sorts of old gemset jewels to latest patterns.
(2) Electro plating, gilding and nickelling
(3) Binguy old jewellery, or under taking to effect sale

V. SUBRAMANIA IYER

Telephone — 3145

JEWELEER

Telegrams — "PRECIOUS"

Gold-smith, Silver smith, & Dealer in all Gemset Jewels.

52—44

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ
ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ

ರತನ್ ಮಿಶ್ರಿ ಹಲ್ವಾ

ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು ನೀರಾಗಿರುವಿಕೆ ಆಗಾಗ್ಗೆ ಸ್ವಪ್ನದಲ್ಲಿ ಸ್ಖಲನೆಯಾಗುವಿಕೆ, ಅತಿ ಸ್ತ್ರೀಚಾಪ್ರವರ್ತನೆಯಿಂದಲೂ, ಬಾಲ್ಯದ ದುರಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ಶೀಘ್ರ ಸ್ಖಲನೆಯಾಗುವಿಕೆ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಯುವಿಕೆ, ಚಿರಕಾಲದ ಮೇಹ ವ್ಯಾಧಿಯಿಂದ ಶರೀರವು ನಶಿಸಿ ಹೋಗುವಿಕೆ, ನೇತ್ರರೋಗ ಚರ್ಮವ್ಯಾಧಿ, ಉಷ್ಣವಾಯು ಸಂಬಂಧರೋಗ ಎದೆ ಶೂಲೆ, ಮೇಹಪಡೆ, ಅಜೀರ್ಣ, ಕೆಮ್ಮು ಈ ವಿಧವಾದ ನಾನಾ ರೋಗಗಳನ್ನು ಗುಣಪಡಿಸಿ ಧಾತುಪುಷ್ಟಿ, ಶರೀರ ಪುಷ್ಟಿಯನ್ನುಂಟುಮಾಡುವುದು ಹೆಂಗಸರು ಸೇವಿಸುವಲ್ಲಿ ಉಷ್ಣಗರ್ಭಕಾರಕ ವ್ಯಾಧಿಗಳೆಲ್ಲಾ ನೀಗುವವು. ಸಂಪೂರ್ಣ ಗುಣ ಉಂಟಾಗಲು ೩—೪ ಡಬ್ಬಿಗಳನ್ನು ಉಪಯೋಗಿಸಬೇಕು.

ಕ್ರಯ—೧ ಪೌಂಡು ಟಿನ್ನಿಗೆ ರೂ ೫—೦—೦. ಅರ್ಧ ಪೌಂಡು ಟಿನ್ನಿಗೆ ರೂ. ೨—೮—೦
ಚಿಕ್ಕಪೇಟೆ, ವಿದ್ಯಾವಿಲಾಸ ಬುಕ್ಕು ಡಿಪೋವಿನಲ್ಲೂ ದೊರಕುತ್ತೆ.

52—30. ವ್ಯವಸ್ಥಾಪಕರು—ರತನ್ ಮಿಶ್ರಿ ಡಿಪೋ (ಅಂಚೆ ಜೆ. ವಿ. ಲಿಮಿಟೆಡ್)
ಚಾಮರಾಜೇಂದ್ರಪೇಟೆ, ಬೆಂಗಳೂರು ಸಿಟಿ.

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

ಅಪೂರ್ವ ಸಂದರ್ಭ.
ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಲಿಕ್ಕಾದರೆ ಇದೀಗ ಅಪೂರ್ವ ಸಂದರ್ಭ.

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ದುರ್ಬಲ್ಯತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

ಕಾಮ ಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ಆತಂಕನಿಗ್ರಹ ಔಷಧಾಲಯ,
52—51 ಚಿಕ್ಕಪೇಟೆ ಬೆಂಗಳೂರು ಸಿಟಿ.

ಶ್ರೇಷ್ಠವಾದ 5 ಕುಟುಂಬ ಔಷಧಗಳು.
ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ 40 ಅಸಲ್ ಗೋರೋಚನ ತೊಲ 1ಕ್ಕೆ ರೂ 12.
ಕೇಸರಿ ಅಥವಾ ಕುಂಕುಮಪುಷ್ಪ ತೊಲ 1ಕ್ಕೆ ರೂ. 3½ ಪಚ್ಚ ಕರ್ಪೂರ ತೊಲ 1ಕ್ಕೆ ರೂ 2½
ಶಿಲಾಜಿತು ತೊಲ 10 ಕ್ಕೆ ರೂ 1

ಶ್ರೇಷ್ಠವಾದ 108 ಮಣಿಗಳುಳ್ಳ ರುದ್ರಾಕ್ಷಿ ಜಪಮಾಲೆ 1ಕ್ಕೆ ಆಣೆ 6 8, 12, 2, 3 10 ರ ವರೆಗೆ
32 ಮಣಿಗಳುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ. 1, 2, 3, 4, 5 8 10 ರ ವರೆಗೆ
ಮತ್ತು ಎಲ್ಲಾ ವಿಧವಾದ ರೇಷ್ಮೆ ಜರಿ ಸೀರೆಗಳು, ಕಣಗಳು, ಮುಗುಟ ವಸ್ತ್ರಾದಿ ಎಲ್ಲಾ ಸರಕುಗಳು ದೊರೆಯುತ್ತೆ. ಸಾವಕಾಶ ಮಾಡದೆ ಈ ಕೆಳಗಿನ ಅಡ್ರೆಸ್ಸಿಗೆ ಆರ್ಡರು ಕೊಡಿರಿ ನಮ್ಮಗಳು ಸ ಉಚಿತ ಕ್ರಯಕ್ಕೆ ದೊರೆಯುತ್ತೆ.

ಅಡ್ರೆಸ್—
ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್," ಶ್ರೀಕಾಶಿ.

BHARADWAJ & CO.,
"SILK HOME,"
52—47 Benares City.

ಏಕೆ ನರಳುತ್ತೀರಿ?
ಕ್ರಯವು ಅಂಚೆಹಾಸಲು.
ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

1/—48 ಮದನಮಂಜರಿ ಫಾರ್ಮಸಿ,
1/94 ಕೃಷ್ಣ ಬಜಾರು ರೋಡು ಮದ್ರಾಸು

ಕೊಡಗು.

ಸನ್ ೧೯೨೯ನೇ ಇಸವಿ

ಜುಲೈ ತಾ. ೧೯ನೇ ಶುಕ್ರವಾರ.

ಭೂ ಕಂದಾಯ ವಿಧಿಸುವ ಪ್ರಶ್ನೆ.

ಬೊಂಬಾಯಿ ಅಧಿಪತ್ಯದ ಮಹಾರಾಷ್ಟ್ರದ ನಾಲ್ಕು ತಾಲೂಕುಗಳ ಕೃಷಿಕರು ಇದೇ ತಿಂಗಳ 7ನೇ ತಾರೀಖಿನಲ್ಲಿ ಭೂ ಕಂದಾಯವನ್ನು ಹೆಚ್ಚಿಸುತ್ತಿರುವ ಪದ್ಧತಿಯನ್ನು ವಿರೋಧಿಸಲಿಕ್ಕಾಗಿ ಬೊಂಬಾಯಿಯಲ್ಲಿ ಒಂದು ಸಭೆ ಸೇರಿದ್ದರು. ಈ ನಾಲ್ಕು ತಾಲೂಕುಗಳ ಪೈಕಿ ಎರಡರಲ್ಲಿ ಈ ಮೊದಲೇ ಸೆಟ್ಲ್‌ಮೆಂಟ್ ಆಗಿ ಹೆಚ್ಚಿನ ದರದ ಕಂದಾಯ ವಸೂಲಿ ಆಗಿ ಹೋಗಿದೆ. ಇನ್ನೆರಡು ತಾಲೂಕುಗಳಲ್ಲಿ ಹೆಚ್ಚಿಸುವ ವಿಚಾರದಲ್ಲಿರುತ್ತದೆ. ಬೊಂಬಾಯಿ ಅಧಿಪತ್ಯದ ಗುಜರಾತ್ ಪ್ರಾಂತ್ಯದ ಬಾರ್ಡೋಲಿ ತಾಲೂಕಿನಲ್ಲಿ ಕಂದಾಯ ಹೆಚ್ಚಿಸಿದ್ದಕ್ಕೆ ಆ ತಾಲೂಕಿನ ರೈತರು ವಿರೋಧಿಸಿ ಹೆಚ್ಚಿನ ನಿಗದಿಯಾದ ಕಂದಾಯ ಕೊಡದೆ ಇರಲು ಕಾರಣಗಳು ಸರಿಯೋ ಎಂದು ವಿಚಾರಿಸಲು ರೈತರ ಅಪೇಕ್ಷೆ ಮೇರೆ ಬೇರೆ ಒಂದು ಕಮಿಟಿಯು ಸರಕಾರದಿಂದ ನೇಮಕವಾಗಿ ಆ ಕಮಿಟಿಯು ರೈತರ ಆಕ್ಷೇಪವು ನ್ಯಾಯವಾದ್ದೆಂತ ಒಪ್ಪಿಕೊಂಡಿತು. ಅದರಿಂದ ಬಾರ್ಡೋಲಿಯಲ್ಲಿ ಹೆಚ್ಚಿಸಿದ್ದ ಕಂದಾಯವನ್ನು ಇಳಿಸಿದರು. ಈ ವಿಷಯ ವಾಚಕರಿಗೆ ಮೊದಲೇ ತಿಳಿದಿದೆ.

1921ನೇ ಇಸವಿಯಲ್ಲಿ ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಭೂ ಕಂದಾಯವನ್ನು ವಿಧಿಸುವ ಕ್ರಮವು ಕೌನ್ಸಿಲಿನಿಂದ ಮಂಜೂರಾಗುವ ಶಾಸನಕ್ಕೆ ಒಳಪಟ್ಟಿರಬೇಕೆಂದು ಒಂದು ಠರಾವು ಪಾಸಾಯಿತು. ಇಂಥಾ ಶಾಸನವಾದರೆ ಅದರಲ್ಲಿ, ಭೂ ಕಂದಾಯವನ್ನು ಹೆಚ್ಚಿಸಲು ಶಿಫಾರಸು ಮಾಡಬೇಕಾದರೆ ಭೂ ಮಾಲೀಕರ ಸ್ಥಿತಿಗತಿಯನ್ನು ವಿಚಾರಿಸುವಾಗ ಕೃಷಿಕರ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕೆಂತ ಇರುವದು ನಿಜವಷ್ಟೆ. ಆದರೆ 1924ರ ನಂತರ ಬೊಂಬಾಯಿ ಅಧಿಪತ್ಯದಲ್ಲಿ ಆಗಿಹೋದ ಸೆಟ್ಲ್‌ಮೆಂಟುಗಳಿಗೆ ರೈತರ ಪ್ರತಿನಿಧಿಗಳ ಅಭಿಪ್ರಾಯವನ್ನು ಕೇಳಲೇ ಇಲ್ಲ. ಬಾರ್ಡೋಲಿಯ ತನಿಖೆಯಿಂದ ಸರಕಾರ ಅಧಿಕಾರಿಗಳು ಮಾಡಿದ ವಿಚಾರವು ಸರಿಯಾದದ್ದಲ್ಲವೆಂದು ಸಿದ್ಧವಾಯಿತು. ಆದ್ದರಿಂದಲೇ ಮೇಲೆ ನಮೂದಿಸಿದ ನಾಲ್ಕು ತಾಲೂಕಿನವರು ಈ ಮೊದಲು ಆಗಿಹೋದ ಮತ್ತು ಈಗ ಆಗಲಿಕ್ಕಿರುವ ಸೆಟ್ಲ್‌ಮೆಂಟುಗಳನ್ನು ಬದಿಯಲ್ಲಿ ಇಡಬೇಕೆಂತ ಬೊಂಬಾಯಿ ಮೀಟಿಂಗಿನಲ್ಲಿ ಕೇಳಿಕೊಂಡರು.

ಈ ನಾಲ್ಕು ತಾಲೂಕುಗಳಲ್ಲಿ ಕಂದಾಯವನ್ನು ಹೆಚ್ಚಿಸಲು ಉಂಟಾದ ಕಾರಣಗಳು ಸರಿಯೋ ಎಂಬದನ್ನು ವಿಚಾರಿಸಲಿಕ್ಕೂ, ಒಂದನ್ನು ಬಾರ್ಡೋಲಿಯಂತೆ ಸತ್ಯಾಗ್ರಹ ನಡೆಸಲಿಕ್ಕೆ ತಯಾರು ಮಾಡಲಿಕ್ಕೂ ನಾಲ್ಕು ತಾಲೂಕುಗಳಿಗೆ ಪ್ರತ್ಯೇಕ ಪ್ರತ್ಯೇಕ ಕಮಿಟಿಗಳನ್ನು ನೇಮಿಸಿದರು; ಮತ್ತು ಜಾರಿಯಲ್ಲಿರುವ ಸೆಟ್ಲ್‌ಮೆಂಟ್ ಕ್ರಮವನ್ನು ಬದಲಾಯಿಸಬೇಕು, ಇಲ್ಲವಾದರೆ ಸತ್ಯಾಗ್ರಹ ಕೈಕೊಳ್ಳಬೇಕಾಗುತ್ತದೆಯೆಂತ ಗವರ್ನರಿಗೆ ರೈತರು ಒಂದು ಅರ್ಜಿ ಬರೆಕೊಳ್ಳಬೇಕೆಂದು ತೀರ್ಮಾನಿಸಿಲ್ಲದೆ ರೈತರ ಈ ತರದ ಇನ್ನೂ ಇತರ ಕಷ್ಟಗಳನ್ನು ಪರಿಹರಿಸಿಕೊಳ್ಳಲಿಕ್ಕೂ ಒಟ್ಟು ಬೊಂಬಾಯಿ ಅಧಿಪತ್ಯದ ಭೂ ಹಿಡುವಳಿದಾರರ ಒಂದು ಸಭೆಯನ್ನು ಮಾಡಲು ಯೋಚನೆ ಸಹ ಮಾಡಿದರು. ಸರಕಾರಕ್ಕೆ ಹೆಚ್ಚಾಗಿ ಒತ್ತಾಸೆಯಾಗಿರುವ "ಟೈಮ್ಸ್ ಆಫ್ ಇಂಡಿಯಾ" ಎಂಬ ಬೊಂಬಾಯಿ ಪತ್ರಿಕೆಯು ಸಹ ರೈತರ ಕೋರಿಕೆಯಲ್ಲಿ ನ್ಯಾಯವಿದೆಯೆಂತಲೂ, ಸರಕಾರದವರು ತಮ್ಮ ತೀರ್ಮಾನವನ್ನು ಬೇಗನೆ ಪ್ರಕಟಿಸಬೇಕೆಂತಲೂ ಕೇಳಿಕೊಂಡಿತು. ಈಗಾಗಲೇ ಆಗಿಹೋದ ಸೆಟ್ಲ್‌ಮೆಂಟನ್ನು ಸಹ ಬಾಕಿ ಮಾಡಲು ಬೊಂಬಾಯಿ ಸರಕಾರವು ಒಪ್ಪಿದೆಯೆಂತ ತಾರೀಕು 16—7—29ರ 'ಹಿಂದೂ' ಪತ್ರಿಕೆಯಿಂದ ತಿಳಿಯ ಬರುತ್ತದೆ. ಹಾಗಾದರೆ ಈ ತಾಲೂಕುಗಳ ರೈತರಿಗೆ ಜಯವಾಯಿತು.

ಭೂಮಿ ಹಿಡುವಳಿದಾರರ ಕಷ್ಟಗಳನ್ನು ಪರಿಹರಿಸಿಕೊಳ್ಳಲಿಕ್ಕೆ ಭೂಮಾಲಿಕರ ಸಭೆಯನ್ನು ಬೊಂಬಾಯಿ ಅಧಿಪತ್ಯಕ್ಕೆ ಮಾತ್ರ ಅಲ್ಲ, ರೈತವಾರಿ ಹಿಡುವಳಿ ಜಮೀನುಗಳಿರುವ ಎಲ್ಲಾ ಭಾಗಗಳಿಗೂ ವ್ಯಾಪಕವಾಗುವಂತೆ ಮಾಡಬೇಕೆಂತ "ಹಿಂದೂ" ಪತ್ರಿಕೆಯು ಅಭಿಪ್ರಾಯ ಕೊಟ್ಟಿದೆ. ಹೀಗೆ ಮಾಡುವದು ಅವಶ್ಯವಾಗಿದೆ. ರೈತವಾರಿ ಜಮೀನು ಇರುವ ಎಲ್ಲಾ ಕಡೆಯೂ ಸೆಟ್ಲ್‌ಮೆಂಟಿನ ಬಾಧೆ ಇದ್ದೇ ಇದೆ. ಭೂ ಕಂದಾಯವನ್ನು ವಿಧಿಸುವ ತತ್ವವು ಒಟ್ಟು ಹಿಂದೂಸ್ಥಾನಕ್ಕೆ ಒಂದೇ ಆಗಿದೆ. ಈ ತತ್ವವನ್ನು ಸುಧಾರಿಸಲು ಯೋಚಿಸಲಿಕ್ಕಾಗಿ ಎಲ್ಲಾ ದೊಡ್ಡ ಪ್ರಾಂತ್ಯಗಳ ರೆವಿನ್ಯೂ ಮಂತ್ರಿಗಳು ಸಿಮ್ಲಾದಲ್ಲಿ ಕೆಲವು ದಿನಗಳ ಹಿಂದೆ ಸೇರಿ ಯೋಚಿಸಿದರು. ಈ ಯೋಚನೆಯ ಫಲಿತಾಂಶವೇನೆಂತ ಇನ್ನೂ ಪ್ರಕಟವಾಗಿರುವದಿಲ್ಲ. ಅದರಿಂದ ಹೆಚ್ಚು ಪ್ರಯೋಜನವಾಗಲಾರದೆಂತ ಸರಕಾರದ ರೀತಿಯನ್ನು ತಿಳಿದವರು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಭೂಕಂದಾಯವನ್ನು ನಿರ್ಣಯಿಸುವ ರೀತಿಯನ್ನು ಸುಧಾರಿಸಲು ಒಟ್ಟು ಹಿಂದೂಸ್ಥಾನವು ಒಗ್ಗಟ್ಟಾಗತಕ್ಕದ್ದು ಅವಶ್ಯವಾಗಿದೆ.

ಅಖಿಲಭಾರತ ಕಾಂಗ್ರೆಸ್ ಕಮಿಟಿ.

ಹಿಂದುಸ್ಥಾನದ ಲೆಜಿಸ್ಲೇಟಿವ್ ಕೌನ್ಸಿಲುಗಳ ಚುನಾವಣೆಯನ್ನು ಮುಂದರಿಸಿದ್ದಕ್ಕಾಗಿ ದೇಶದ ಅತೃಪ್ತಿಯನ್ನು ತೋರಿಸಲು ಕೌನ್ಸಿಲುಗಳ ಕಾಂಗ್ರೆಸ್ ಮೆಂಬರುಗಳು ಕೌನ್ಸಿಲುಗಳಿಗೆ ಹೋಗಲೇ ಬಾರದೆಂತ ಕಾಂಗ್ರೆಸಿನ ಕಾರ್ಯಕಾರೀ ಮಂಡಲಿಯು ಕಳೆದ ಮೇ ತಿಂಗಳ ಆಖೈರಿನಲ್ಲಿ ತೀರ್ಮಾನಿಸಿತು. ಈ ತೀರ್ಮಾನದಿಂದ ತಮ್ಮ ತಮ್ಮ ಪ್ರಾಂತ್ಯಗಳನ್ನು ವಿನಾಯಿಸಿಕೊಡಬೇಕೆಂತ ಅನೇಕ ಪ್ರಾಂತ್ಯಗಳಿಂದ ಕಾರ್ಯಕಾರೀ ಮಂಡಲಿಗೆ ಅರ್ಜಿಗಳು ಬಂದವು. ಈ ತಿಂಗಳ ಪ್ರಾರಂಭದಲ್ಲಿ ಕಾರ್ಯಕಾರೀ ಮಂಡಲಿಯು ಡಿಲ್ಲಿಯಲ್ಲಿ ಸೇರಿ ಕೌನ್ಸಿಲುಗಳಲ್ಲಿ ಇರುವ ಕಾಂಗ್ರೆಸ್ ಪಕ್ಷದವರು ಕೌನ್ಸಿಲು ಮೆಂಬರುತನಗಳಿಗೆ ರಾಜಿನಾಮೆ ಕೊಡತಕ್ಕದ್ದು ಅವಶ್ಯವೆಂತ ಸೂಚಿಸಿ ಈ ವಿಷಯದ ಆಖೈರ್ ತೀರ್ಮಾನವನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಬಿಟ್ಟಿತು. ಇದೇ ತಿಂಗಳು 26ನೇ ತಾರೀಕಿಗೆ ಈ ಕಮಿಟಿಯು ಅಲಹಾಬಾದಿನಲ್ಲಿ ಸೇರುತ್ತದೆ.

ದೇಶದ ರಾಜಕೀಯ ವಾತಾವರಣವು ಗಲಿಬಿಲಿಯಲ್ಲಿರುವಾಗ ಕಾಂಗ್ರೆಸ್ಸಿನಲ್ಲಿ ಒಂದಾದ ಮತಭೇದ ಬರುವದು ವಿಷಾದಕರ. ಕಾಂಗ್ರೆಸಿನ ಬೆಂಬಲದಿಂದ ಕೌನ್ಸಿಲುಗಳಿಗೆ ಹೋದ ಹೆಚ್ಚಿನ ಸದಸ್ಯರಿಗೆ ಈಗ ಕಷ್ಟವಾಗಿದೆ. ಸದಸ್ಯರು ಕೌನ್ಸಿಲಿಗೆ ಹೋಗುವಾಗ ವೋಟರುಗಳಿಗೆ ತಾವು ಕೌನ್ಸಿಲಿನಲ್ಲಿ ಮಾಡುವ ಕೆಲಸವನ್ನು ವಿವರಿಸಿರುತ್ತಾರೆ. ಇಂಥಾ ವಿಷಯಗಳಲ್ಲಿ ಪ್ರಜಾಜನರಿಗೆ ಬಹಳ ಅವಶ್ಯವಾದವೂ ಇರುತ್ತವೆ. ಅಂಥ ಅವಶ್ಯವಾದ ಕೆಲಸಗಳನ್ನು ಮಾಡುವ ಅವಕಾಶವನ್ನು ಬಿಟ್ಟು, ಕೌನ್ಸಿಲಿಗೆ ರಾಜಿನಾಮೆ ಕೊಟ್ಟರೆ ಮೆಂಬರುಗಳು ವೋಟರುಗಳಿಗೆ ಕೊಟ್ಟ ಮಾತಿಗೆ ತಪ್ಪಿದಂತಾಗುತ್ತದೆ. ಅಲ್ಲದೆ ಕಾಂಗ್ರೆಸ್ ಮೆಂಬರುಗಳೆಲ್ಲಾ ರಾಜಿನಾಮೆ ಕೊಟ್ಟರೆ ಪುನಃ ಅವರು ಚುನಾವಣೆಗೆ ನಿಲ್ಲ ಕೂಡದು, ಆಗ ಹೊಸದಾಗಿ ಚುನಾವಣೆಯಾಗುವವರು ಸರಕಾರದೊಂದಿಗೆ ಪ್ರಜೆಗಳ ಕ್ಷೇಮಕ್ಕಾಗಿ ಹೋರಾಡುವಂಥವರೇ ಆಗಿರುತ್ತಾರೆಂಬ ಭರವಸೆ ಇಲ್ಲ.

ಪ್ರಜೆಗಳ ಪಕ್ಷವಾಗಿ ಬಲವಾಗಿ ಹೋರಾಡುವಂಥವರು ಕೌನ್ಸಿಲಿನಲ್ಲಿ ಇಲ್ಲದಿದ್ದರೆ ಪ್ರಜೆಗಳಿಗೆ ಹಾನಿಯಾಗುವ ತೀರ್ಮಾನಗಳು ಕೌನ್ಸಿಲುಗಳಲ್ಲಿ ಆಗುತ್ತವೆ ಎಂಬದರಲ್ಲಿ ಸಂಶಯವಿಲ್ಲ. ದೇಶದವರು ಕೌನ್ಸಿಲ್ ಚುನಾವಣೆಗೆ ನಿಲ್ಲಲೇ ಬಾರದೆಂತ ಕಾಂಗ್ರೆಸಿನ ತೀರ್ಮಾನವಿತ್ತು, ಅದಕ್ಕೆ ವಿರೋಧಿಸಿ ಶ್ರೀ. ದಾಸರು ಮತ್ತು ಶ್ರೀ. ಮೋತಿಲಾಲ್ ನೆಹರೂರವರೇ ಮುಂದಾಳುಗಳಾಗಿ ಕಾಂಗ್ರೆಸ್ಸಿನೊಳಗೇ ಸ್ವರಾಜ್ಯಪಾರ್ಟಿಯೊಂದನ್ನು ಮಾಡಿ, ಕಾಂಗ್ರೆಸ್ಸಿನವರು ಕೌನ್ಸಿಲುಗಳ ಒಳಗೂ ಹೋಗಿ ಸರಕಾರದೊಂದಿಗೆ ಹೋರಾಡಬೇಕೆಂತ ತೀರ್ಮಾನಿಸಿದರು. ಈ ತೀರ್ಮಾನದಿಂದ ದೇಶಕ್ಕೆ ತುಂಬಾ ಪ್ರಯೋಜನವಾಗಿದೆ. ಪ್ರಜಾಜನರ ಅಭಿಪ್ರಾಯಗಳನ್ನು ಕೌನ್ಸಿಲುಗಳಲ್ಲಿ ಬಹಳ ಸ್ಪಷ್ಟ ರೂಪದಿಂದ ತಿಳಿಸಲು ಅವಕಾಶವಿತ್ತು. ಇವರ ಅಭಿಪ್ರಾಯಗಳನ್ನೂ, ತೀರ್ಮಾನಗಳನ್ನೂ ಸರಕಾರವು ಅಂಗೀಕರಿಸಿಕೊಳ್ಳದಿದ್ದರೂ ಅನೇಕ ವೇಳೆ ಇವರ ಅಭಿಪ್ರಾಯವನ್ನು ವೈಸ್‌ರಾಯರೂ, ಗವರ್ನರುಗಳೂ ತಮ್ಮ ನಿರಂಕುಶ ಅಧಿಕಾರವನ್ನು ಚಲಾಯಿಸಬೇಕಾಗಿ ಬರುತ್ತಿತ್ತು. ಇದರಿಂದ ಸರಕಾರದ ನೈತಿಕ ಬಲವು ಕಡಿಮೆಯಾಗುತ್ತಿತ್ತು. ಪ್ರಜಾಪ್ರತಿನಿಧಿಗಳ ಬೆಂಬಲದಿಂದ ಸರಕಾರವು ನಡೆಯುವುದಲ್ಲವೆಂಬದು ಸ್ಪಷ್ಟವಾಗುತ್ತಿತ್ತು.

ಅಲ್ಲದೆ ಸೈಮನ್ ಕಮಿಶನಿನ ವರದಿ ಸಹ ಹೊಸ ಚುನಾವಣೆಯಾಗುವ ಮುಂಚೆ ಪ್ರಕಟವಾಗುತ್ತದೆ. ಆ ವರದಿಯಲ್ಲಿ ಕಾಂಗ್ರೆಸ್ಸಿನವರು ಕೇಳಿಕೊಂಡಂಥಾ ಸ್ವರಾಜ್ಯವನ್ನು ಕೊಡಲು ಶಿಫಾರಸು ಮಾಡದಿದ್ದರೆ ಕೌನ್ಸಿಲುಗಳ ಒಳಗೂ ವರದಿಯನ್ನು ಖಂಡಿಸಲು ಅವಕಾಶವಿರುತ್ತದೆ. ಈ ಎಲ್ಲಾ ಕಾರಣಗಳಿಂದ ಕಾಂಗ್ರೆಸ್ ತತ್ವವನ್ನನುಸರಿಸಿ ಕೌನ್ಸಿಲಿಗೆ ಚುನಾಯಿತರಾಗಿರುವ ಮೆಂಬರುಗಳು ಕೌನ್ಸಿಲು ಮೆಂಬರುತನಕ್ಕೆ ರಾಜಿನಾಮೆ ಕೊಡುವದು ಯುಕ್ತವಲ್ಲ. ಅನೇಕ ಪ್ರಾಂತೀಕ ಮುಖಂಡರ ಅಭಿಪ್ರಾಯಗಳನ್ನು ಪತ್ರಿಕೆಗಳಲ್ಲಿ ನೋಡಿದಲ್ಲಿ ಸದರಿ ಕಾರ್ಯಕಾರೀ ಮಂಡಲಿಯ ತೀರ್ಮಾನಕ್ಕೆ ಒಪ್ಪುವಂತೆ ಕಾಣುವದಿಲ್ಲ. 'ಕೌನ್ಸಿಲುಗಳಲ್ಲಿ ಇರುವ ಕಾಂಗ್ರೆಸ್ ಮೆಂಬರುಗಳ ಅಭಿಪ್ರಾಯಕ್ಕೆ ವಿರೋಧವಾಗಿ ಕಾಂಗ್ರೆಸ್ ಕಮಿಟಿಯು ತೀರ್ಮಾನಿಸಿದರೆ ಕಾಂಗ್ರೆಸಿನೊಳಗಿನ ಒಗ್ಗಟ್ಟಿಗೆ ಭಂಗಬರುವುದೆಂಬ ಭೀತಿ ಇದೆ. ಡಿಲ್ಲಿಯಲ್ಲಿ ಸೇರಲಿಕ್ಕಿರುವ ಒಟ್ಟು ಹಿಂದೂಸ್ಥಾನದ ಪ್ರತಿನಿಧಿಗಳು ದೇಶಕ್ಕೆ ಕಲ್ಯಾಣವಾಗುವ ತೀರ್ಮಾನಕ್ಕೆ ಬರಲಿ ಎಂತ ಹಾರೈಸುತ್ತೇವೆ.

ಸಿಮ್ಲಾದ ಒಂದು ಚಿತ್ರ.

(ಯಂಗ್ ಇಂಡಿಯಾದಿಂದ)

ಎರಡು ಸಿಮ್ಲಾಗಳು ಇವೆ. ಮೇಲಿನ ಸಿಮ್ಲಾ ಮತ್ತು ಕೆಳಗಿನ ಸಿಮ್ಲಾ; ಮೇಲಿನ ಸಿಮ್ಲಾದಲ್ಲಿ ಬಿಳೀ ಜನರು ಮತ್ತು ಬಿಳೀ ಜನರ ತರಗತಿಯಲ್ಲಿ ಸೇರಿಸಲ್ಪಡಲು ಇಚ್ಛೈಸುವ ಕಪ್ಪು ಜನರ ಪೈಕಿ ಮೇಲಿನ ಹಕ್ಕು ಜನರೂ, ಕೆಳಗಿನ ಸಿಮ್ಲಾದಲ್ಲಿ ಸಾಧಾರಣವಾಗಿ ಕಪ್ಪು ಜನರೂ ವಾಸಿಸುವರು. ಮೇಲಿನ ಪಟ್ಟದ ಜೀವನಕ್ಕೂ ಕೆಳಗಿನ ಪಟ್ಟದ ಜೀವನಕ್ಕೂ ದೇವತೆಗಳ ಮತ್ತು ಈ ಭೂಲೋಕದ ಜನರ ಜೀವನಗಳಿಗೆ ಇರುವಷ್ಟು ವ್ಯತ್ಯಾಸವಿದೆ. ಮೇಲೆ ಅಂತಸ್ತಿನ ಮುದ್ರೆಯವರ ಕೆಲವರಿಗೆ ಆಗಾಗ್ಗೆ ನಡೆಯುವ ಔತಣ ಮತ್ತು ಕುಣಿತಗಳಿಂದ ಕೂಡಿದ ಹರುಷವಾದ ತಮ್ಮ ಪ್ರತ್ಯೇಕ ಪ್ರಪಂಚ ಒಂದಿದೆ. ಕೆಳಗಿನ ಭಾಗದ ಬಡ ಜನರಿಗೆ ಇಂಥಾ ತಮಾಷೆಗಳಲ್ಲಿ ಭಾಗಿಗಳಾಗಲು ಅನುಕೂಲಗಳೇ ಇಲ್ಲ. ಮೊನ್ನೆ ದಿನ ಚೆಲ್ಮ್ಸ್‌ಫರ್ಡ್ ಕ್ಲಬ್ಬಿನವರ ಆಶ್ರಯದಲ್ಲಿ ಕೊಟ್ಟಂಥ ಆಡಂಬರದ ವೈಸರಾಯರ ಔತಣಕ್ಕೆ ಬಡವನೊಬ್ಬನ ಜೀವಿತ ಕಾಲದ ಸಂಪಾದನೆಯಷ್ಟು ಖರ್ಚಾಗುತ್ತದೆ ಮತ್ತು ಹಲವು ಸಾರಿ ಅಂಥಾ ಔತಣಗಳಿಗೆ ಯೋಗ್ಯವಾದ ಒಂದು ಜೊತೆ ಬಟ್ಟೆ (ಸೂಟ್) ಮಾಡಲು ತಕ್ಕ ಮಟ್ಟಿಗೆ ವಿದ್ಯಾವಂತನಾದ ಆಫೀಸು ಕಾರಕೂನನ ಒಂದು ವರ್ಷದ ಉತ್ಪತ್ತಿಯಷ್ಟು ಬೇಕಾಗುತ್ತದೆ. ಅದು, ಇಂಡಿಯಾ ಸರಕಾರದ (ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲಿನ) ಒಬ್ಬ ಇಂಡಿಯನ್ ಮೆಂಬರು ಅಧ್ಯಕ್ಷರಾಗಿರುವ ಚೆಲ್ಮ್ಸ್‌ಫರ್ಡ್ ಕ್ಲಬ್ಬಿನವರು ವೈಸರಾಯರಿಗೆ ಕೊಟ್ಟ 140 ಜನರ ಊಟವಾಗಿದೆ. 'ನಮ್ಮಲ್ಲಿ 10 ಯಾ 15 ಜನರಲ್ಲದೆ ಬಾಕಿ ಪ್ರತಿಯೊಬ್ಬನೂ ಸಾಕಷ್ಟು 'ಶೇಂಪೈನ್' ಕುಡಿದವು ಮತ್ತು ಸುಮಾರು 1500 ರೂ. ಕ್ರಯದಷ್ಟು ಆ ಉಪಹಾರವನ್ನು ಆ ರಾತ್ರಿ ನಾವು ಖರ್ಚು ಮಾಡಿರಬೇಕು' ಎಂದು ಆ ಊಟದಲ್ಲಿ ಭಾಗಿಯಾಗಿದ್ದ ಒಬ್ಬ ಸ್ನೇಹಿತರು ನನಗೆ ಹೇಳಿದರು. ಅದರೂ ಕೂಡ ನಿಸ್ಸಂಶಯವಾದ ಸರಕಾರದ ಕಪ್ಪ ಯಾ ಉದ್ದೇಶವೆಂದು ನಾವು ಹೇಳುತ್ತೇವೆ! ಆದರೆ ಅದು ಹಾಗಿರಲಿ.

ಕೆಳಗಿನ ಭಾಗದಲ್ಲಿ ವಾಸಿಸುವ ಬಡ ಜನರಿಗೆ ಅಂಥಾ ಸಂದರ್ಭಗಳೇನೂ ಇಲ್ಲ ಮತ್ತು ಅವರ ಚಟುವಟಿಕೆಗಳು ಅವರ ಸಾದಾ ಜೀವನದ ಮತ್ತು ವಾತಾವರಣದ ಭಾಗವಾಗಿವೆ. ತಿಂಗಳಿಗೆ 4500 ರೂ. ಸಂಬಳದ ಒಬ್ಬ ವೈಸ್ ಚೇರ್‌ಮ್ಯಾನರಿಂದ ಕೂಡಿದ ಹೊಸದಾಗಿ ನೇಮಿಸಲ್ಪಟ್ಟ 'ಎಗ್ರಿಕಲ್ಚರ್ ರೀಸರ್ಚ್ ಕೌನ್ಸಿಲ್'ನ ಕೆಲಸ ಪ್ರಾರಂಭದ ಸಮಾರಂಭವನ್ನು ಮೊನ್ನೆ ದಿನ ವೈಸರಾಯರು ನಡಿಸಿದರು. ಇದಕ್ಕೆ ಮುಂಚೆ ವೈಸರಾಯರ ಬಂಗ್ಲೆಯಲ್ಲಿ ಒಂದು ಟೀ ಪಾರ್ಟಿಯು ಆಯಿತು. ಇದಕ್ಕೆ ದೂರದಿಂದಲೂ, ಹತ್ತಿರದಿಂದಲೂ ಸುಮಾರು 30 ಪ್ರಾಮುಖ್ಯ ಜನರು ಕರೆಸಲ್ಪಟ್ಟಿದ್ದರು. ವೈಸ್ ಚೇರ್‌ಮ್ಯಾನರಿಗೆ ಅವರ ದೊಡ್ಡ ಸಂಬಳವನ್ನೂ, ಬೇರೆ ಸ್ನೇಹಿತರಿಗೆ ಟೀ ಪಾರ್ಟಿಯನ್ನೂ ಕೊಡಬಾರದೆಂದು ಯಾರೂ ಹೇಳುವದಿಲ್ಲ. ಎಗ್ರಿಕಲ್ಚರ್ ರೀಸರ್ಚ್ ಕೌನ್ಸಿಲು ಅವಶ್ಯವೆಂದು ಒಪ್ಪಿದ ಮೇಲೆ ಇದಕ್ಕಿಂತ ಉತ್ತಮವಾದ ಆರಂಭವಿಕೆ ಮಾಡಬಹುದಾಗುತ್ತಿರಲಿಲ್ಲ. ಆದರೆ ಈ ಮಿಸ್ಟರ್ ವೈಸ್ ಚೇರ್‌ಮ್ಯಾನರು ಮತ್ತು ಅವರ ಕೌನ್ಸಿಲು ಒಂದು ಕಾಳು ಬೆಳೆದಲ್ಲಿ ಎರಡು ಕಾಳು ಬೆಳೆಯುವಂತೆ ಮಾಡಿ ತಾವು ತಿಂಗಳುವಾರು ಪಡೆಯುವ ಸಾವಿರಗಟ್ಲೆ ರೂಪಾಯಿಗಳ ಖರ್ಚು ನ್ಯಾಯವಾದದ್ದೆಂದು ತೋರಿಸಬೇಕಾಗಿದೆ. ಈ ದೊಡ್ಡ ಕಾರ್ಯಕ್ಕೆ ಹೋಲಿಸಿದಾಗ ಇನ್ನೊಂದು ಕೆಲಸವು, ಸಿಮ್ಲಾದ 'ಕೆಳಗಿನ ಬಜಾರಿ'ನಲ್ಲಿ ಒಂದು ಖಾದಿ ಭಂಡಾರವನ್ನು ತೆರೆದದ್ದಾಗಿದೆ. ಈ ಭಂಡಾರವನ್ನು ತೆರೆಯಲು ಡಾಕ್ಟರ್ ಗೋಪಿಚಂದ ಭಾರ್ಗವರವರು ಲಾಹೋರಿನಿಂದ ಬಂದರು. (ಅವರ ಸ್ವಂತ ಖರ್ಚಿನಿಂದ ಬಂದರೆಂದು ಹೇಳಬಲ್ಲೆನು.) ಈ ಭಂಡಾರವು ಒಂದು ಸಾಧಾರಣದ ಕಟ್ಟಡದಲ್ಲಿದೆ ಮತ್ತು ಇದರ ಮಾಲೀಕರು ಇದಕ್ಕೆ ಬಾಡಿಗೆ ತೆಗೆದುಕೊಳ್ಳುವದಿಲ್ಲ. 'ಮೇಲಿನ ಸಿಮ್ಲಾದವರು ಯಾರೂ ಭಾಗವಹಿಸಿಲ್ಲದ ಈ ಕಾರ್ಯದಲ್ಲಿ ಅಧ್ಯಕ್ಷನಾಗಿರುವ ಗೌರವವು ನನಗೆ ಲಭಿಸಿತು. ಡಾಕ್ಟರ್ ಗೋಪಿಚಂದರವರು ನಿಜ ಸಂಗತಿಗಳಿಂದ ತುಂಬಿದ್ದ ತನ್ನ ಭಾಷಣದಲ್ಲಿ ಖಾದಿಯ ಆರ್ಥಿಕ ಲಾಭವನ್ನು ವಿವರಿಸಿದರಲ್ಲದೆ, ಪಂಜಾಬ ಸರಕಾರದವರು ಅಲ್ಲಿಯ ಗ್ರಾಮಗಳಲ್ಲಿ ಕೈಮಗ್ಗಗಳನ್ನು ಬಡಿಸುವ ವಿಚಾರದಿಂದ ತೋರಿಸುತ್ತಿರುವ ಸಹಾನುಭೂತಿಯುಳ್ಳ ಸ್ವಭಾವವನ್ನು ತೋರಗೊಡಿಸಿದರು. ಸರಕಾರದ ವ್ಯಕ್ತಿಗೆ ಒಳಗಾದ ಕೆಲವರ ಅಭಿಪ್ರಾಯ ಹೇಗಿದ್ದರೂ, ವಸ್ತ್ರದ ಖಾದಿ ಧರಿಸುವ ಅನೇಕ ಜನರ ಅಭಿಲಾಷೆಯು ಮಾತ್ರ ಈ ಭಂಡಾರವನ್ನು ತೆರೆಯುವದಾಗಿದೆಯೆಂದು ಡಾಕ್ಟರರು ಹೇಳಿದರು. ಅಸಹಕಾರದ ಏಳಿಗೆಯ ಸಮಯದಲ್ಲಿ ಕೂಡ ಇಲ್ಲಿ ಖಾದಿ ಭಂಡಾರವು ಇರಲಿಲ್ಲ. ಈ ಭಂಡಾರದ ತೆರೆಯುವಿಕೆಯು ಜನರಿಗೆ ಖಾದಿಯ ಮೇಲೆ ಹೆಚ್ಚುತ್ತಿರುವ ಪ್ರೀತಿಯನ್ನು ಸೂಚಿಸುತ್ತದೆ. ಅಖಿಲಭಾರತ ನೂಲುವವರ ಸಂಘದ ಪಂಜಾಬು ಶಾಖೆಯು ಕಳೆದ ವರ್ಷ 82 ಗ್ರಾಮಗಳಲ್ಲಿ ನೂಲುವವರಿಗೆ, ನೇಯುವವರಿಗೆ, ಅಗಸರಿಗೆ ಮತ್ತು ಬಣ್ಣ ಹಾಕುವವರಿಗೆ ರೂ. 71,050—5—6 ಹಂಚಿದ್ದು 48,733—4—3 ನೂಲುವವರಿಗೆ ಹೋಯಿತು. 'ನಮಗೆ ಕಾಪಡಕ್ಕಿಂತ ಖಾದಿ ಹೆಚ್ಚಾಗಿರುವದರಿಂದ ನಾವು ಭಂಡಾರ ತೆರೆಯುವದಲ್ಲ, ಸಮಯೋಚಿತ ನಾಲಿನಕ್ಕಾಗಿದೆ;

ಖಾದಿ ಪ್ರೀತಿಸುವವರ ಇಚ್ಛೆಯನ್ನು ಎಲ್ಲಾ ಕಡೆಗಳಲ್ಲೂ ನೆರವೇರಿಸಲಿಕ್ಕೆ ಹೀಗೆ ಮಾಡಿದ್ದಾಗಿದೆ ಮತ್ತು ಯಾವನೂ ತನ ಅವಶ್ಯವಿರುವದಕ್ಕಿಂತ ಹೆಚ್ಚು ಖಾದಿಯನ್ನು ಧರಿಸುವದಾಗಲೀ, ಕೊಂಡುಕೊಳ್ಳುವದಾಗಲೀ ಮಾಡಲಿಕ್ಕಿಲ್ಲವೆಂದು ಭಾವಿಸುತ್ತೇನೆಂದು' ಗೋಪಿಚಂದರವರು ಹೇಳಿದರು. ಸದಾ ಖಾದಿ ಧರಿಸುವವರಲ್ಲಿ ಕೆಲವರು ಸರ್ಕಾರಿ ನೌಕರರಾದರೂ ಕೂಡ ಅವರಿಗೆ ಖಾದಿಯ ಮೇಲಿರುವ ವಿಶ್ವಾಸವು ಹೆಚ್ಚು ಇರುವಂಥವರಲ್ಲಿ ಕೆಲವರ ಪರಿಚಯವು ನನಗೆ ಈ ಸಂದರ್ಭ ಉಂಟಾಯಿತು.

ಕಳಗಿನ ಸಿಮ್ಲಾದಲ್ಲಿ ನಡೆದ ಇನ್ನೊಂದು ಕಾರ್ಯವು— ಕಾಂಗ್ರೆಸ್ಸಿಗೆ ಹಣ ಜಮೆಯಿಸಲು ಮತ್ತು ಒಂದು ಕಾಂಗ್ರೆಸ್ ಕಮಿಟಿಯನ್ನು ಏರ್ಪಡಿಸಲು ಬಂದಿದ್ದ ಮೌಲಾನ ಅಬ್ದುಲ್ ಕಾದರ್, ಡಾಕ್ಟರ್ ಸತ್ಯಪಾಲ್ ಮತ್ತು ಲಾಲಾ ದುನಿಚಂದರವರು ಭಾಷಣ ಮಾಡಿದ ಮೀಟಿಂಗು ಆಗಿದೆ. ಡಾಕ್ಟರ್ ಸತ್ಯಪಾಲರ ಗುರಿಯು ಆರಸರ ಒಂದು ಪೈಲಾಗಿದೆಯೆಂದು ಗೊತ್ತಿರುವವರಿಗೆ ಒಬ್ಬ ಶಾಂತವೆಂದು ತೋರಿದ ಒಂದು ಭಾಷಣವನ್ನು ಮಾಡಿದರೂ ಸತ್ಯಪಾಲರು ತಾವು ಬೇಗನೆ ಕೈದು ಮಾಡಲ್ಪಡುವದನ್ನು ಎದುರು ನೋಡುತ್ತಿದ್ದಂತೆ ಕಂಡಿತು. ಅವರು ಹೀಗೆಂದು ಹೇಳಿದರು—"ನಾವು ಲಾಲಾ ಲಜಪತರಾಯರ ಮರಣಕಾಲದ ಮಾತುಗಳನ್ನು ಜ್ಞಾಪಿಸಿಕೊಳ್ಳುವರಾಗಿ ಬಿಡುತ್ತೇನೆ. ಲಾಠಿಯ ಪೆಟ್ಟುಗಳನ್ನು ಮುಯ್ಯಿ ತೀರಿಸಲು ದೇಶಕ್ಕೆ ಶಕ್ತಿ ಇರುವುದೆಂದು ಲಾಲಾಜಿಯವರ ಸಂಸ್ಕೃತ ಶರೀರವು ನಿರೀಕ್ಷಿಸುತ್ತದೆ. ಆದರೆ ನೀವು ಹೇಗೆ ಮುಯ್ಯಿ ತೀರಿಸುತ್ತೀರಿ? ಒಂದಕ್ಕೆ ಎರಡು ಹಿಂತಿರುಗಿ ಕೊಡುವುದರಿಂದಲ್ಲ. ಆದರೆ ಇನ್ನು ಮುಂದೆ ಹಾಗೆ ವರ್ತಿಸಲು ಪೋಲೀಸರಿಗೆ ಅಸಾಧ್ಯವಾಗುವಂತೆ ಮಾಡುವುದರಿಂದಾಗಿದೆ." ಈ ಕೋರಿಕೆಯನ್ನು ಜನರು ಮನಪೂರ್ವಕ ಪುರಸ್ಕರಿಸಿದರು ಮತ್ತು ಅನೇಕರು ಕಾಂಗ್ರೆಸ್ ಮೆಂಬರುಗಳಾಗಿ ಸೇರಿದರು.

ಬೇರೆಯವಷ್ಟು ಸಮ್ಮತಿಯ ಮೂರನೇ ಕಾರ್ಯವು— ಹಿಂದಿ ಪ್ರಚಾರಿಣಿ ಸಭೆಯ ಆಶ್ರಯದಲ್ಲಿ ನಡಿಸಿದ 'ಕಬೀರ' ಜಯಂತಿ'ಯಾಗಿದೆ. 14ನೇ ಶತಮಾನದ ಆ ಪ್ರಸಿದ್ಧ ನೇಯ್ಗೆಯೋಗಿಗೆ ಹಲವು ಹೊಗಳಿಕೆಗಳಿದ್ದವು, ಆದರೆ ಕಬೀರನು ಹಿಂದು ಮುಸಲ್ಮಾನರ ನಿಜವಾದ ಒಗ್ಗಟ್ಟಿಗೆ ಕೆಲಸಮಾಡಿದನು, ಮತ್ತು ಹಿಂದೂ ಮತದಲ್ಲಿರುವ ಮೂಢಭಕ್ತಿಯನ್ನು ಹೋಗಲಾಡಿಸಿ ಮಾತ್ರವಲ್ಲ, ಹಿಂದೂ ಮುಸಲ್ಮಾನ ಭಕ್ತಿಗಳನ್ನು ಒಟ್ಟುಗೂಡಿಸಿ ಹಿಂದೂ ಮತದ ಸೇವೆಮಾಡಿದನು, ಮತ್ತು ಅವನ ಬೋಧನೆಯ ರೀತಿ ನಾವು ಈಗ ಜೀವಿಸಿದರೆ ಅವನನ್ನು ಚೆನ್ನಾಗಿ ಜ್ಞಾಪಿಸಿಕೊಂಡಂತಾಗುವದೆಂಬದರಲ್ಲಿ ಎಲ್ಲರೂ ಸೇರಿದರು. ಯು. ಬಿ.

ಪಾರ್ಟಿ ಮುಖಂಡರು ಜಡ್ಜಿಗಳಾಗುವಿಕೆ.

(ಬರೆದು ಬಂದದ್ದು)

"ಕೊಡಗು" ಪತ್ರಿಕೆಯ ತಾ. 14—6—29ರ ಸಂಚಿಕೆಯಲ್ಲಿ ಪಾರ್ಟಿ ಮುಖಂಡರನ್ನು ಜಡ್ಜರಾಗಿ ನೇಮಿಸಿದ್ದನ್ನು ಖಂಡಿಸಿ ಬರೆದ ಒಂದು ವಾರದೊಳಗೆ ಮದ್ರಾಸ್ ಪತ್ರಿಕೆಯೊಂದರಲ್ಲಿ ಅಲ್ಲಾಹಾಬಾದ್ ಹೈಕೋರ್ಟಿನ ಚೀಫ್ ಜಡ್ಜಿಯರ ಒಂದು ಜಡ್ಜ್‌ಮೆಂಟಿನ ಒಂದು ಭಾಗವನ್ನು ಎತ್ತಿ ಬರೆದು ಟೀಕಿಸಿತ್ತು. ಜಡ್ಜಿಯರ ಈ ವಾಕ್ಯಗಳು "ಕೊಡಗು" ಪತ್ರಿಕೆಯ ಲೇಖನದ ವಿಷಯಕ್ಕೆ ಸಂಬಂಧಿಸುವದರಿಂದ ಅದನ್ನು ಪ್ರಕಟಿಸಿ, ವಿಮರ್ಶಿಸುವದು ಉಚಿತವಾಗಿದೆ.

ಶೇಕ್ ಜಾಹಿದ್ ಹುಸೇನ್ ಎಂಬವನು ಜಾಕಿರ್ ಹುಸೇನ್ ವಗೈರೆರ ಮೇಲೆ ಹೂಡಿದ ಒಂದು ಮೊಕದ್ದಮೆಯು ಮಿ. ರಹಮತ್ ಖಾನ್ ಮತ್ತು ಸೇಟ್ ಪ್ರೇಮನಾಥ್ ಎಂಬ ಇಬ್ಬರು ಮೇಜಿಸ್ಟ್ರೇಟರಾಗಿದ್ದ ಬೆಂಚ್‌ಕೋರ್ಟಿಗೆ ವರ್ಗಾಯಿಸಲ್ಪಟ್ಟಿತು. ಮೇಜಿಸ್ಟ್ರೇಟ್ ರಹಮತ್‌ಖಾನರು ರಾಜಕೀಯ ಚಳವಳದಲ್ಲಿ ತನಗೆ ವಿರೋಧವಾಗಿದ್ದದ್ದರಿಂದ ತನ್ನ ಕೇಸನ್ನು ಸದರಿ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆ ಮಾಡದಂತೆ ಫಿರ್ಯಾದಿಯು ಹೈಕೋರ್ಟಿಗೆ ಅರ್ಜಿ ಬರಕೊಂಡನು. ಆ ಅರ್ಜಿ ಮೇಲೆ ಮಾಡಿದ ಆರ್ಡರಿನಲ್ಲಿ ಚೀಫ್ ಜಡ್ಜಿಯರು ಬರೆದಿರುವದೇನೆಂದರೆ—"ಈ ದೇಶದಲ್ಲಿ ರಾಜಕೀಯ ಚಳವಳದ ವಿರೋಧವು ವ್ಯಕ್ತಿತ್ವವಾಗಿರುತ್ತೆಂತಲೂ, ಅತಿ ಕಠಿಣ ತರವಾಗಿರುತ್ತೆಂತಲೂ, ಆದ್ದರಿಂದ ರಾಜಕೀಯ ಚಳವಳದಲ್ಲಿ ಎದುರಾಗಿದ್ದ ಮೇಜಿಸ್ಟ್ರೇಟನು ಅಪ್ರಮಾಣಿಕನಾಗಿ ತನ್ನ ಜಡ್ಜಿಪದವಿಯನ್ನು ದುರುಪಯೋಗಪಡಿಸಿಯಾನೆಂಬ ಭೀತಿಯು ಪ್ರತಿಯೊಬ್ಬನಲ್ಲಿಯೂ ಇರುವದು ಸ್ವಾಭಾವಿಕವಾಗಿದೆಯೆಂತಲೂ ಬಲವಾಗಿ ವಾದಿಸಲಾಗಿದೆ. ಇದು ಹೌದಾಗಿದ್ದರೆ ತುಂಬಾ ವಿಷಾದಕರವಾದ ವಿಷಯವಾಗಿದೆ. ಆದರೆ ಇದಕ್ಕೆ ನಿವಾರಣೆಯು ಕೇಸುಗಳನ್ನು ವರ್ಗಾಯಿಸುವದಲ್ಲ. ತನ್ನ ಪದವಿಯನ್ನು ಈ ರೀತಿ ದುರುಪಯೋಗಪಡಿಸುವ ಮೇಜಿಸ್ಟ್ರೇಟರನ್ನು ಕೆಲಸದಿಂದ ನಿವೃತ್ತಿಮಾಡುವದೇ ಆಗಿದೆ."

ರಾಜಕೀಯ ಚಳವಳದಲ್ಲಿ ಎದುರಾಗಿದ್ದವರು ತಮ್ಮ ಪದವಿಯನ್ನು ದುರುಪಯೋಗಪಡಿಸಿಯಾರೆಂಬ ಭೀತಿಯು ಸರ್ವರಲ್ಲಿ ಇರುತ್ತದೆಯೆಂತ "ಕೊಡಗು" ಪತ್ರಿಕೆಯಲ್ಲಿ ಒಂದು ವಂತಿಯೇ ಉತ್ತರ ಹಿಂದೂಸ್ಥಾನದ ಒಂದು ಹೈಕೋರ್ಟು ಮುಂದೆ ಮಾಡಿದ ವಾದದಲ್ಲೂ ಹೇಳಿರುವದರಿಂದ ಈ ಭೀತಿ ಇರುವದು ಸ್ವಾಭಾವಿಕವಾಗಿದೆಯೆಂತ ಧೈರ್ಯವಾಗಿ ಹೇಳಬಹುದು. ಅಂಥ ಪಕ್ಷ ವಹಿಸಿದ್ದರೆ ಬರು ದೋಷವಿದ್ದಾದರೆ ಜಡ್ಜಿಯರನ್ನು ಡಿಸ್‌ಮಿಸ್ ಮಾಡಬೇಕೆಂತ ಹೈಕೋರ್ಟಿನ ಚೀಫ್ ಜಡ್ಜಿಯರು ಹೇಳಿದರೂ ಜಡ್ಜಿಯರ ಪದವಿಯನ್ನು ದುರುಪಯೋಗಪಡಿಸುವದನ್ನು ರುಜುವಾತುಮಾಡುವದು ಕಷ್ಟವಾಗುತ್ತದೆ. ಜಡ್ಜಿಯು ಪಕ್ಷಪಾತದ ತೀರ್ಪಿಗೆ ಗುರಿಯಾದ ಕಕ್ಷಿಗಾರನು ಸರಕಾರದ ಮುಂದೆ ಜಡ್ಜಿಯರನ್ನು ಡಿಸ್‌ಮಿಸ್ ಮಾಡಿಸಲು ವಾದಿಸುತ್ತಾನೋ? ಈ ಕೇಸಂತೂ ಹಾಳಾಯಿತು, ಇನ್ನೊಂದರಲ್ಲಾದರೂ ಜಡ್ಜಿಯರು ತನಗೆ ಗುಣ ಮಾಡಲಿ ಎಂತ ಜಡ್ಜಿಯರ ಪಕ್ಷಕ್ಕೆ ಸೇರಿಯ ಮಾಡಲು ಹೊರಡುತ್ತಾನೆ. ಆದ್ದರಿಂದ ಪಾರ್ಟಿ ಮನುಷ್ಯನನ್ನು ಜಡ್ಜಿಯಾಗಿ ನೇಮಿಸಿದ್ದರಿಂದ ಜನರಿಗೆ ಕಡಕಾಗುತ್ತಲೇ ಇರಬಹುದು. ಆದರೆ ಜಡ್ಜಿಗೆ ಡಿಸ್‌ಮಿಸ್ ಆಗುವ ಸಂಭವವಂತೂ ಇಲ್ಲ. ಆದ್ದರಿಂದ ಪಾರ್ಟಿ ಮನುಷ್ಯರನ್ನು ಜಡ್ಜಿಯರಾಗಿ ನೇಮಿಸುವದು ಹಿತವಲ್ಲ.

ಪಾರ್ಟಿ ಮುಖಂಡರನ್ನು ನೇಮಿಸಿದ್ದನ್ನು ಸಮರ್ಥಿಸುವಾಗ ಕೆಲವರು ಕೊಟ್ಟ ಇತರ ಕಾರಣಗಳನ್ನು ಆಜಮಾಯಿಸುವ. ಗಜೆಟೆಡ್ ಉದ್ಯೋಗಸ್ಥರನ್ನು ವರ್ಗಾಯಿಸುವ ತತ್ವವನ್ನು ಕೌನ್ಸಿಲಿನಲ್ಲಿ ಮಾತಾಡಿದವರೆಲ್ಲರೂ ಒಪ್ಪಿದರು. ಕೌನ್ಸಿಲಿನ ಮುಂದೆ ಇದ್ದ ಠರಾವು ಇಲ್ಲಿನ ಗಜೆಟೆಡ್ ಉದ್ಯೋಗಗಳನ್ನು ಮದ್ರಾಸ್ ಅಧಿಕಾರಗಳ ಪಟ್ಟಿಗೆ ಸೇರಿಸಬೇಕೆಂದು. ಈ ಠರಾವು ಬಹುಮತದಿಂದ ಸೋತುಹೋಗಿದೆ. ಈ ವಿಷಯದಲ್ಲಿ ಕಷ್ಟಕರವೆಂತ ಸರಕಾರದ ಮೆಂಬರು ಹೇಳಿದ್ದು ಇದರ ಸೋಲುವಿಕೆಗೆ ಕಾರಣವಾಗಿದೆ. ಆದ್ದರಿಂದ ದೇಶದೊಳಗೇನೇ ವರ್ಗಾವರ್ಗಿಗೆ ಅವಕಾಶವಿದ್ದಾಗ ವರ್ಗಮಾಡಬಾರದು ಎಂತ ಕೌನ್ಸಿಲಿನ ತೀರ್ಮಾನವಾಗಲಿಲ್ಲ.

ಗಜೆಟೆಡ್ ಉದ್ಯೋಗಸ್ಥರನ್ನು ವರ್ಗಮಾಡಬೇಕೆಂತ ವಾದಿಸಿದ್ದರಿಂದಲೇ ಮಿ. ಕೆ. ಪಿ. ಚೆನ್ನಪ್ಪನವರು ಸೋತದ್ದೆಂತ ಕೆಲವರು ವಾದಿಸುತ್ತಾರೆ. ಗಜೆಟೆಡ್ ಉದ್ಯೋಗಸ್ಥರನ್ನು ವರ್ಗಾಯಿಸಬೇಕೆಂತ ವಾದಿಸಿದ ಮತ್ತು ಓಟು ಕೊಟ್ಟ ಇತರ ಎಲ್ಲರೂ ಚುನಾಯಿತರಾಗಲಿಲ್ಲವೇ? ಜನ ಪ್ರಿಯತೆಯನ್ನು ತೋರಿಸಲು ಮಡಿಕೇರಿ ತಾಲೋಕಿನಲ್ಲಿ ಚುನಾವಣೆಯಾದದ್ದನ್ನು ಸೂಚಿಸುತ್ತಾರೆ. ಮಿ. ಪಾಲೇಕಂಡ ಮೇದಪ್ಪನವರನ್ನು ಚುನಾಯಿಸಿದವರು ಮಿ. ಕೆಂಬಡತಂಡ ಮಂದಣ್ಣನವರನ್ನೂ ಚುನಾಯಿಸಿದ್ದರು. ಇಬ್ಬರು ಕೊಡವ ಉಮೇದ್ವಾರರಿಗೆ ಎದುರಾಗಿ ನಿಂತಿದ್ದದ್ದು ಇಬ್ಬರು ಗೌಡರು. ಮಡಿಕೇರಿ ತಾಲೋಕಿನ ಕಳೆದ ಚುನಾವಣೆಯು ಜಾತಿ ಭೇದದ ಮೇಲೆಯೇ ನಡೆಯಿತು. ಆದ್ದರಿಂದ ಜನಪ್ರೀತಿಯನ್ನು ಆ ಚುನಾವಣೆಯಿಂದ ತೋರಿಸಲು ಸಾಧ್ಯವಿಲ್ಲ. 'ಕೊಡಗು' ಪತ್ರಿಕೆಯು ಮಿ. ಸಿ. ಯನ್. ಮುತ್ತಣ್ಣನವರ ಅರ್ಹತೆಯನ್ನು ವಿಶದವಾಗಿ ವಿವರಿಸಿದ್ದಕ್ಕೆ ಏನೇನೋ ಅಲ್ಪ ಉದ್ದೇಶಗಳನ್ನು ಆರೋಪಿಸಿದರೇ ಹೊರತು, ಅವರ ಪಕ್ಷವನ್ನು ತಿರಸ್ಕರಿಸಲು ತಕ್ಕ ಕಾರಣ ಕೊಡಲಿಲ್ಲ. ಆದುದರಿಂದ "ಕೊಡಗು" ಪತ್ರಿಕೆಯ ಲೇಖನವು ಸಕಾರಣವಾದದ್ದೆಂತ ಸ್ಪಷ್ಟವಾಯಿತು. ಮಿ. ಮುತ್ತಣ್ಣನವರು ಸಬ್‌ಜಡ್ಜಿಯರು ಮಾಡಬೇಕಾಗಬಹುದಾದ 1 ನೇ ಕ್ಲಾಸ್ ಮೇಜಿಸ್ಟ್ರೇಟರ ಕೆಲಸವನ್ನು ಅನೇಕ ವರ್ಷಗಳಿಂದ ಮಾಡಿದ್ದಾರೆ, ಅವರು ಸಿವಿಲ್ ಭಾಗದಲ್ಲಿ ಮಾಡುವ ಕೆಲಸವು ಸಬ್‌ಜಡ್ಜರಿಗಿಂತ ತುಂಬಾ ಹೆಚ್ಚಾಗಿದೆ, ಎಂಬ ಈ ಕಾರಣಗಳನ್ನು 'ಕೊಡಗು' ನಮೂದಿಸಿ ಬಿಟ್ಟಿತ್ತು.

'ಖ'

ರಾಸ ಕ್ರೀಡೆಯ ರಹಸ್ಯ.

ಶ್ರೀ ಕೃಷ್ಣನು ಚಿನ್ನಾಭರಣಗಳನ್ನಾಗಲೀ, ವಸ್ತ್ರಾಲಂಕಾರಗಳನ್ನಾಗಲೀ ಯಾವುದೊಂದು ಪದಾರ್ಥವನ್ನು ಕದಿಯುವವನಾಗಿರಲಿಲ್ಲ. ಗೋರಸವನ್ನು ಮಾತ್ರ ಕದಿಯುತ್ತಿದ್ದನೆಂದು ಪ್ರಸಿದ್ಧಿ. ಇದು ಸಹ ೬—೭ ವರ್ಷ ಪ್ರಾಯದೊಳಗೆ. ಗೋವರ್ಧನೋದ್ಧಾರಣವು ೭ನೇ ವರ್ಷದಲ್ಲಿ. ಅನಂತರ ಚೌರ್ಯಕೃತ್ಯದ ಸುದ್ದಿ ಪುರಾಣದಲ್ಲಿ ಇಲ್ಲ. ಕೃಷ್ಣನ ಮೇಲಣ ವ್ಯಭಿಚಾರದ ಅಪವಾದವು ಕೂಡ ಆತನು ಗೋಕುಲದಲ್ಲಿದ್ದಾಗ ಮಾತ್ರ. ವಿವಾಹವಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿದನಂತರ ಕೃಷ್ಣನು ಉತ್ತಮವಾದ ಗೃಹಸ್ಥ ಧರ್ಮವನ್ನು ಆಚರಿಸುತ್ತಿದ್ದನೆಂದು ಪುರಾಣಗಳು ಸ್ಪಷ್ಟವಾಗಿ ಹೇಳುತ್ತವೆ. ಕೃಷ್ಣನಿಗೆ ಹನ್ನೊಂದು ವರ್ಷಗಳಾಗುತ್ತಲೇ ಆತನು ಮಥುರೆಗೆ ಬಂದನು. ಪಾಪಿರೂಪವಾದ ಈಗಿನ ಕಲಿಯುಗದಲ್ಲಿ ಕೂಡ ಹನ್ನೊಂದು ವರ್ಷದ ಹುಡುಗರ ವಿಷಯದಲ್ಲಿ ಕಾಮವಿಕಾರಗಳು ಉತ್ಪನ್ನವಾಗುವುದಿಲ್ಲ. ಹಾಗಾದರೆ ಕೃಷ್ಣನು ಗೋಪ ಸ್ತ್ರೀಯರೊಂದಿಗೆ ರಾಸಕ್ರೀಡೆಯಾಡಿದನೆಂದರೇನು? ಗೋಕುಲದ ಗೋಪಿಯರು ಶ್ರೀ ಕೃಷ್ಣನಲ್ಲಿ ಪ್ರೀತಿಯುಳ್ಳವರಾಗಿ ಆತನು ಪತಿಯಾಗಬೇಕೆಂಬ ಇಚ್ಛೆಯಿಂದ ಕಾತ್ಯಾಯಿನೀ ವ್ರತವೆಂಬ ದುರ್ಗಾರಾಧನೆಯನ್ನು ಮಾಡಿದರು. ಗೋಪಿಯರು ಧರ್ಮವಿರುದ್ಧವಾದ ಕಾಮನೆ ಮಾಡಿದರೂ ಧರ್ಮಸಂಸ್ಥಾಪನೆಗಾಗಿ ಅವತರಿಸಿ ಬಂದವನು ಅವರನ್ನು ಧರ್ಮಪಥಕ್ಕೆ ಹತ್ತಿಸಿ, ಏಕಕಾಲದಲ್ಲಿ ಅವರ ಇಷ್ಟಾರ್ಥವೂ ಪೂರ್ಣವಾಗಬೇಕೆಂದು ಬಗೆದು ಉಪಾಯದಿಂದ "ರಾಸಕ್ರೀಡ" ವೆಂಬ ಆಟವನ್ನು ಹೂಡಿದನು. ಶ್ರೀ ಕೃಷ್ಣನು ಶುದ್ಧ ಸಚ್ಚಿದಾನಂದ ಸ್ವರೂಪನಾದುದರಿಂದ ಆತನ ಶರೀರದಲ್ಲಿ ಕಾಮ ಕ್ರೋಧಾದಿಗಳು ಎಳ್ಳಿನಷ್ಟೂ ಇರಬಾರದು. ಆದುದರಿಂದ ಆತನು ಗೋಪಿಯರಿಗೆ ರತಿಸುಖದ ಬದಲಾಗಿ ಉಪರತಿ ಸುಖವನ್ನು ಕೊಡಲುದ್ಯುಕ್ತನಾದನು. ರಾಸಕ್ರೀಡೆಯನ್ನು ರಚಿಸುವುದರ ಮೂಲಕ ಅವರ ಹೃದಯದಲ್ಲಿನ ಕಾಮವನ್ನು ಹೀರಿಕೊಂಡು ಅವರಿಗೆ ಆತ್ಮ ಸುಖವನ್ನು ಕೊಟ್ಟನು. ಗೋಪಿಯರು ಶುದ್ಧ ಹೃದಯರಾಗಿದ್ದರು. ಗೋಪಿಯರಿಗೆ ಕೃಷ್ಣದರ್ಶನ ಮಾತ್ರದಿಂದಲೇ ಆನಂದವು ಪ್ರಾಪ್ತವಾಗುತ್ತಿತ್ತು. ತುರೀಯ, ಉನ್ಮನೀ ಎಂಬ ಸಮಾಧ್ಯವಸ್ಥೆಗಳಲ್ಲಿ ಅನುಭವಕ್ಕೆ ಬರುವ ಸುಖವು ಶ್ರೀ ಕೃಷ್ಣನ ದರ್ಶನವಾದರೆ ಮೂಢ ಪಶುಗಳಿಗೆ ಸಹ ಅನುಭವಿಸಲಿಕ್ಕೆ ಸಿಕ್ಕುವುದು. ಜ. ಕ.

Of International Repute Prof.
BRUSCHETTINIS Vaccines for:—

Tuberculosis, Leprosy, Typhoid, Cholera, Venereal diseases, Diabetic carbuncle, Acute Rheumatism, Croupous Pnuemonia, Pyorroea, Wounds and Sores, Abscesses even in the internal organs and also for Malaria.

Erval, for all Nervous system.

King's Globules, *for loss of memory*, tired nerves, weakness of the hearing, sight weakness etc.

Pallidine, for Chronic Rheumatism, Paralysis, Eczema etc.

Dr. Morettis tablets, for Diabetes.

Liquor Ave, for Asthama, chronic Bronchitis etc.

Sublenil tablets for venereal diseases.

Anti malaria Curative Pills, for malarial fever.

For Further Particulars:—

Apply to the sole Agents for Coorg.

THE COORG EMPORIUM.

48—3 MERCARA

Ready !
Sales & Service !!
The most competitive.
CAR
in the most competitive
YEAR
The new model A Ford!!!

with three Speed selective sliding gear Transmission.

The most economical car in the market.

For Demonstrattion & further particulars

Please apply to:—

S. Sunder Rau,

Ford Dealer for Coorg.

24—3 **MERCARA.**

Wanted.

Candidates for Wireless Telegraph and Station Master's Courses. Railway Fare PAID. Boarding arrangements. Prospectus on two anna stamps—

Royal Wireless & Telegraph College,

12—11 DELHI.

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ದಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇವಕ್ಕಿಲ್ಲ. ಮನುಷ್ಯರ ಎಲ್ಲ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ

ಮಾತ್ರೆಗಳು.

ಧಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನರಹಿತವಾದುದು. ಒಂದು ಡಬ್ಬಿಯ ಕ್ರಯ ೧—೦—೦

52—48 ಮದನಮಂಜರಿ ಫಾರ್ಮಸಿ,

1/94 ಚೀನಾ ಬಜಾರ್, ಮದ್ರಾಸ್.

ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ವೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಖರಾರು ಗಂಟೆಯನ್ನು ತೋರಿಸುವವು ಇದರ ಕೇಸು ಬಂಗಾರಕ್ಕೆ ಸರಿಸಮಾನವಾಗಿರುವದು ಇದಕ್ಕೆ ಖಾತ್ರಿಯಾದ ೫ ವರ್ಷ ಗ್ಯಾರಂಟಿ ಕೊಡುತ್ತೇವೆ ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಮಾತ್ರ ಒಂದು ಅಲಾರಂ ಟೈಂಪೀಸ್ ಇನಾಮಾಗಿ ಕೊಡುವೆವು ಕ್ರಯ 7–0–0.

ವಿಳಾಸ —ಲೀಗಲ್ ವಾಚ್ ಕಂಪನಿ,

52–3 ಪೋ ಬಾ 243 ಮದರಾಸು.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges & Hunting Requisites

for

SEASON

1929–30.



CURRENT CATALOGUE ON APPLICATION

THE BOMBAY ARMOURY,

Specialists in Arms & Ammunition

331, ABDULREHMAN STREET,

BOMBAY No. 3

24–3

ಚಿಕ್ಕ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವದು ಮತ್ತು ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ೧ಕ್ಕೆ 0–14–0 ಟ ಖ 0–3–0.

ಕೆ. ಟಿ. ಡೋಂಗರೆ ಕಂಪೆನಿ,

52–17 ಗಿರ್ಗಾಂವ, ಮುಂಬಯಿ.

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ	ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟ, ಒಕ್ಕೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ	ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ.

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ ಹೊಟ್ಟೆ ಶೂಲೆ ಮುಟ್ಟಿನ ಬೀಳುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ ನಾಂತಿ ಸರ್ಪಜಾತ ಪಿಶಾಚಬಾಧೆಯಿಂದ ನರಳುವಿಕೆ ಬಿಳುಪು ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಇದಲ್ಲದೆ ಚಿಕ್ಕ ಮಕ್ಕಳಿಗೆ ೧೬ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ ಮುಟ್ಟುದೋಷ ಕಾಮಿಣಿ ಗ್ರಹಪೀಡೆ ದೃಷ್ಟಿದೋಷ ಭಯದಿಂದ ಬೆದರಿಕೆ, ಕ್ಷೀಣ ಹೊಂದುವಿಕೆ ಒಪ್ಪೊ ಇರುವಿಕೆ. ಮುಟಗಿಬಸಿ ಹೊಟ್ಟೆಯೊಳಗಿಂದ ಏಳೋದ ಮೊದಲಾದವುಗಳಿಂದ ಕಾಡುತ್ತಿರುವವು ಗರ್ಭರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಜನ್ಮ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕ ಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ತಿಳಿಯಿರಿ ಹೆಣ್ಣು ಮಕ್ಕಳಿಗೆ ಸಂತಾನ ಪಡೆಯುವ ೧ಕ್ಕೆ ೪ ರೂಪಾಯಿ ಚಿಕ್ಕ ಮಕ್ಕಳಿಗೆ ೧ಕ್ಕೆ ೨–೮–೦ ಪೋಸ್ಟು ಖರ್ಚು ಬೇರೆ ಅಗಲಕ್ಕೆ ವಿಚಾರಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ

ತಾಯಿತ ಸಿಗುವ ವಿಳಾಸ—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52–2 ಮು. ಪೋ. ಅಥಣಿ, ಜಿ. ಬೆಳಗಾಂವ.

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್ ಈಡಿಗ ಯಕ್ಸ್‌ಪೆಲ್ಲರ್ಸ್, ಮೈಸೂರು.

ನಮ್ಮಲ್ಲಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಫಿಲ್ಟರುಗಳಿಂದ ಶೋಧಿಸಲ್ಪಟ್ಟ ಅಚ್ಚುಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸಹ ದೊರೆಯುವುವು.

ಇವುಗಳ ವಿವರಗಳನ್ನು ತಿಳಿಯಬೇಕಾದವರು ಕೃಷ್ಣರಾಜ ಸಂತೆಪೇಟೆಯಲ್ಲಿರುವ ನಮ್ಮ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರ ದ್ವಾರ ತಿಳಿಯಬಹುದು.

26–7

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿ ಕುಂದಿರುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ವಾತ ಪಿತ್ತ ಮುಂತಾದ ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರಿ ಮೊದಲಾದವುಗಳು. ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.—ಕ್ರಯ ಡಬ್ಬಿ 1 ಕ್ಕೆ 2–8–0, ಮೂರು ಡಬ್ಬಿಗಳಿಗೆ ರೂ 7–0–0

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0–10–0 3 ಕ್ಕೆ 1–12–0.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ, ಮಲೆ ಜ್ವರ, ೭ ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–2–0.

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆನೋವು, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1–4–0 3 ಕ್ಕೆ 3–8–0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ ಬಾಟ್ಲಿ 1 ಕ್ಕೆ 0–8–0, 3ಕ್ಕೆ 1

೬. ಕಸ್ತೂರಿ ಮಿಶ್ರಣ.

ಪಡಸ ಎಲಾಬಿಷ್ಟ ಬಾಣಂತಿಯರಿಗೆ. ಬಾಟ್ಲಿ 1 ಕ್ಕೆ 1 3 ಬಾಟ್ಲಿಗೆ 4–4–0

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1 4–0, 3 ಬಾಟ್ಲಿಗೆ

೮. ಜೀವನ ಪುಷ್ಪ ಡಬ್ಬಿ 1 ಕ್ಕೆ 2–0–

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ರೋಗದ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸ ಬಹುದು. ಕೆಳಗಿನಂತೆ ತರಿಸಿ ನೋಡಿ

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್

52–36 ಪಟಾಳ ಮಂಗಳೂರು, ದ. ಕನ್ನ

ವರ್ತಮಾನ ಸಂಗ್ರಹ.

ಒಳ ದೇಶ.

ಮಡಿಕೇರಿನಾಡು ಪಾರುಪತ್ಯಗಾರರಿಗೆ 3 ನೇ ಕ್ಲಾಸ್ ಮೇಜಿಸ್ಟ್ರೇಟರ ಅಧಿಕಾರವು ಕೊಡಲಾಗಿದೆ.

ಈ ತಾ 27ನೇ ಶನಿವಾರ ಬೆಳಿಗ್ಯೆ 11½ ಗಂಟೆಗೆ ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರೀ ಮಂಡಳಿಯ ಮೀಟಿಂಗು ವೀರಾಜಪೇಟೆ ಖಾದಿ ಭಂಡಾರ ಹಾಲ್‌ನಲ್ಲಿ ನಡೆಯಲಿಕ್ಕಿದೆ.

ಈ ವಾರ ದೇಶದ ಎಲ್ಲಾ ಕಡೆಗಳಂತೆಯೇ ಮಡಿಕೇರಿಯಲ್ಲಿಯೂ ಮಳೆ ಕಡಿಮೆ. ಕೆಲವು ಸಾರಿ ಬಿಸಿಲೂ ಕಾಣುತ್ತಿತ್ತು. ಇಲ್ಲಿ ತಾ 12 ರಿಂದ 19ರ ವರೆಗೆ 8.27 ಇಂಚು ಮಳೆಯಾಯಿತು.

ಒಂದು ತಿಂಗಳು ರಜೆಯಲ್ಲಿ ಹೋಗಿದ್ದ ಮೆ. ಪ್ರೀಸ್ಟ್ಲಿಯವರು ರಜೆ ತೀರಿಸಿಕೊಂಡು ಬಂದು ಈ ತಾ. 18ರಲ್ಲಿ ರಾ. ಬಾ. ಕೇಟೋಳಿರ ಚಂಗಪ್ಪನವರಿಂದ ಕಮಿಷನರ್ ಹುದ್ದೆಯ ಚಾರ್ಜು ತೆಗೆದುಕೊಂಡರು.

ಪೊನ್ನಂಪೇಟೆಸಾಡಿನ ಕೆಲವರು ಹಂಗಾಮಿ ಕಮಿಷನರಾಗಿದ್ದ ರಾ ಬಾ. ಕೇಟೋಳಿರ ಚಂಗಪ್ಪನವರಿಗೆ ಈ ತಾ 11ರಲ್ಲಿ ಪೊನ್ನಂಪೇಟೆ ಶಾಲೆಯಲ್ಲಿ ಒಂದು ಟೀ ಪಾರ್ಟಿಯನ್ನು ಕೊಟ್ಟರೆಂದು ತಿಳಿಯಬರುತ್ತದೆ.

ಪಾಲಕ್ಕಾಡು ಆಸ್ಪತ್ರೆಯಲ್ಲಿ ಸರ್ಜನರಾಗಿರುವ ಡಾಕ್ಟರ್ ನಡಿಕೇರಿಯಂಡ ಅಪ್ಪಯ್ಯನವರ ಪತ್ನಿ ಶ್ರೀಮತಿ ಸೀತಮ್ಮನವರು ಮದ್ರಾಸು ಗೌರವ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯಲು ಸಂತೋಷಪಡುತ್ತೇವೆ.

ಪೋಲೀಸು ಸಬ್‌ಇನ್‌ಸ್ಪೆಕ್ಟರ್ ತರಬೇತಿಗೆ 1929ನೇ ಅಕ್ಟೋಬರಿನಲ್ಲಿ ಒಬ್ಬರನ್ನೂ, 1930ನೇ ಅಕ್ಟೋಬರಿನಲ್ಲಿ ಇನ್ನೊಬ್ಬರನ್ನೂ, ಬರುವ ಅಕ್ಟೋಬರಿನಲ್ಲಿ ಕನ್ನಡ ಶಾರ್ಟ್‌ಹ್ಯಾಂಡ್ ತರಬೇತಿಗೆ ಒಬ್ಬರನ್ನೂ ಆರಿಸಿ ಕಳುಹಿಸುವಂತೆ ಮಂಜೂರಾಗಿದೆಯೆಂದು ತಿಳಿಯಬರುತ್ತದೆ.

ಹಾಕತ್ತೂರು ಅಬ್ಕಾರಿ ಖಟ್ಲೆಯ ಮೂವರು ಅಪರಾಧಿಗಳು ಇಂಡಿಯಾದ ಗವರ್ನರ್ ಜನರಲರವರಿಗೆ ಕರುಣೆ ಕೋರಬೇಕೆಂದು ಬರಕೊಂಡ ಅರ್ಜಿಯು ಫಲದಾಯಕವಾಗದ್ದರಿಂದ ಇವರು ಮೂವರು ಈ ತಾ. 11 ರ ಬೆಳಿಗ್ಯೆ 6 ಗಂಟೆಗೆ ಮಡಿಕೇರಿ ಜೈಲಿನಲ್ಲಿ ಗಲ್ಲಿಗೆ ಏರಿಸಲ್ಪಟ್ಟರು.

ಸೋಮವಾರಪೇಟೆಯಲ್ಲಿ ಪಿ. ಡಬ್ಲ್ಯು. ಇಲಾಖೆಯ ಸಕ್ಷನ್ ಆಫೀಸರಾಗಿರುವ ಮೆ. ಉಳುವಾರನ ಚಂಗಪ್ಪನವರು ನಾಲ್ಕು ತಿಂಗಳು ರಜೆಯಲ್ಲಿ ಹೋಗುವುದರಿಂದ ಮಡಿಕೇರಿ ಸೆಕ್ಷನ್ ಆಫೀಸರಾದ ಮೆ. ಚೆಪ್ಪುಡಿರ ಪೊನ್ನಪ್ಪನವರು ಸೋಮವಾರಪೇಟೆಗೆ ವರ್ಗಾಯಿಸಲ್ಪಟ್ಟಿರುವರೆಂದೂ, ಮಡಿಕೇರಿ ಸೆಕ್ಷನ್ ಆಫೀಸರಾಗಿ ಮೆ. ಸುಬ್ರಮಣ್ಯಂ ಅಯ್ಯರವರನ್ನು ನೇಮಿಸಿರುವರೆಂದೂ ತಿಳಿಯುತ್ತೇವೆ.

ಫೆಡರೇಟೆಡ್ ಮಲೆಯ ಸ್ಟೇಟ್ಸನಲ್ಲಿ ರಿಟಯರ್ಡ್ ಅಸಿಸ್ಟೆಂಟ್ ಇಂಜನಿಯರಾಗಿರುವ ಮೆ ಕೊರವಂಡ ಯಂ ಕಾಳಪ್ಪನವರು ಕೊಡಗಿನಲ್ಲಿ 'ಫುಟ್‌ಬಾಲ್' ಟೂರ್ನಮೆಂಟಿಗಾಗಿ ಕೊಡಗು ಎತ್ಲೆಟಿಕ್ ಎಸೋಸಿಯೇಶನಿಗೆ ಒಂದು ಬೆಳ್ಳಿಯ 'ಶೀಲ್ಡ್'ನ್ನು ಇನಾಮಾಗಿ ಕೊಟ್ಟಿರುವರೆಂದೂ, ಹೀಗೆ ಇವರು ಉದಾರತ್ವವನ್ನು ತೋರಿಸಿದ್ದು ಇದು ಎರಡನೇ ಸಾರಿಯೆಂದೂ, ಇದನ್ನು ಕೊಡಗಿನ ಜನರು ಮೆಚ್ಚದೆ ಇರಲಾರರೆಂದೂ ಎತ್ಲೆಟಿಕ್ ಎಸೋಸಿಯೇಶನಿನ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಹಿಂದೂದೇಶ.

ಗ್ರೇಟ್ ಬ್ರಿಟನ್ನಿನಲ್ಲಿ ಶಿಶುಮರಣವು ನೂರಕ್ಕೆ 7 ಕ್ಕೆ ಇಳಿದಿದೆ. ಆದರೆ ಇಂಡಿಯಾದಲ್ಲಿ ನೂರಕ್ಕೆ 65 ರಲ್ಲಿಯೇ ಇದೆ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಆಫೀಸನ್ನು ಈ ತಾ. 10 ರಲ್ಲಿ ಗದಗಿನಿಂದ ಧಾರವಾಡಕ್ಕೆ ವರ್ಗಾಯಿಸಿರುವರು.

ಮೆ. ಆರ್. ಯಂ. ದೇಶಮುಖ್‌ರವರು ಮತ್ತು ಮೆ. ಪಿ. ಸಿ. ಬೋಸ್‌ರವರು ಸೆಂಟ್ರಲ್ ಪ್ರಾವಿನ್ಸ್ ಸರಕಾರದಲ್ಲಿ ಮಂತ್ರಿ ಪದವಿಗಳನ್ನು ವಹಿಸಿಕೊಂಡಿರುವರು.

ಮದ್ರಾಸಿನ ಮೆ. ಯಸ್. ಸತ್ಯಮೂರ್ತಿಯವರು ಪುಣೆ ಕೋಟೆ ಸಂಸ್ಥಾನಕ್ಕೆ ಹೋಗಕೂಡದೆಂದು ಮಾಡಿದ್ದ ಹುಕುಮನ್ನು ಅಲ್ಲಿಯ ದರ್ಬಾರು ಈಗ ವಜಮಾಡಿದೆ.

ವಾಯುವ್ಯ ಸರಹದ್ದು ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯು ಲಾಹೋರ್ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಮಹಾತ್ಮ ಗಾಂಧಿಯವರ ಹೆಸರನ್ನು ಶಿಫಾರಸ್ಸು ಮಾಡಿರುವರು.

ಸಿಬ್ಬಂದಿಗಳ ಯೂನಿಫಾರ್ಮಿಗೂ, ಬೇರೆ ಕೆಲಸಗಳಿಗೂ ಆ ಮುನ್ಸಿಪಾಲಿಟಿಯವರು ಇನ್ನು ಮುಂದೆ ಸ್ವದೇಶೀ ಬಟ್ಟೆಯನ್ನೇ ಕೊಂಡುಕೊಳ್ಳಬೇಕೆಂದು ಬೊಂಬಾಯಿಯ ಕಾರ್ಪೊರೇಶನವರು ತೀರ್ಮಾನಿಸಿರುವರು.

ಮೀರತ್ ಕೇಸಿನ 32 ಅಪರಾಧಿಗಳ ವಿಚಾರವನ್ನು ಅಲ್ಲಾಹಾಬಾದಿಗೆ ವರ್ಗಾಯಿಸಬೇಕೆಂದು ಅಪರಾಧಿಗಳು ಬರಕೊಂಡಿದ್ದ ಅರ್ಜಿಗೆ ಹಾಗೆ ವರ್ಗಾಯಿಸಲಾಗುವುದಿಲ್ಲವೆಂದು ಅಲ್ಲಾಹಾಬಾದಿನ ಹೈಕೋರ್ಟಿನ ಚೀಫ್ ಜಡ್ಜರು ತೀರ್ಮಾನ ಕೊಟ್ಟಿರು.

ಈ ಡಿಸೆಂಬರು 31ರ ನಂತರ ಕಾಂಗ್ರೆಸ್ಸಿನವರು ಶಾಂತತಾ ಕಾಯಿದೆ ಭಂಗವನ್ನು, ಕಂದಾಯ ಕೊಡದೆ ಸತ್ಯಾಗ್ರಹವನ್ನು ನಡಿಸಬೇಕಾಗುವದೆಂದೂ, ಅದಕ್ಕಾಗಿ ಕಾಂಗ್ರೆಸ್ ಸಂಸ್ಥೆಗಳನ್ನು ಬಲಪಡಿಸಬೇಕೆಂದೂ ಬಂಗಾಳದ ಪ್ರಮುಖರಾದ ಸುಭಾಷ್ ಚಂದ್ರಬೋಸ್‌ರವರು ಹೇಳಿರುವರು.

'ರಂಗೀಲಾ ರಸೂಲ್' ಪುಸ್ತಕವನ್ನು ಬರೆದ ರಾಜಪಾಲರನ್ನು ಕೊಲೆ ಮಾಡಿದ ಹಾಮ್ ದಿನ್ ಎಂಬ ಮಹಮ್ಮದೀಯ ಯುವಕನಿಗೆ ಸೆಶ್ಶನ್ಸ್ ಜಡ್ಜರು ಫಾಶಿ ಶಿಕ್ಷೆ ವಿಧಿಸಿದ್ದರ ಮೇಲೆ ಹೈಕೋರ್ಟಿಗೆ ಅಪ್ಪೀಲು ಮಾಡಲ್ಪಟ್ಟಿಲ್ಲ. ಕೆಳಗಿನ ಕೋರ್ಟಿನ ತೀರ್ಮಾನವೇ ಖಾಯಂ ಮಾಡಲ್ಪಟ್ಟಿತು.

ಮಹಾರಾಷ್ಟ್ರ ಕಾಂಗ್ರೆಸ್ ಕಮಿಟಿಯವರು ಬರುವ ಲಾಹೋರ್ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಮಹಾತ್ಮ ಗಾಂಧಿ, ಯನ್. ಸಿ. ಕೇಳ್ಕಾರ್, ಸರ್ದಾರ ವಲ್ಲಭಭಾಯಿ ಪಟೇಲ್, ಸುಭಾಷ್ ಚಂದ್ರಬೋಸ್, ಜವಾಹಿರ್‌ಲಾಲ್ ನೆಹರು, ಡಾಕ್ಟರ್ ಮೂಂಜೆ ಮತ್ತು ಯಂ. ಯಸ್. ಅಣೆಯವರ ಹೆಸರುಗಳನ್ನು ಸೂಚಿಸಿರುವರು.

ಕ್ರಿ. ಪ್ರೊ. ಕೋಡ್ 110ನೇ ಸೆಕ್ಷನಿನ ಶಿಕ್ಷೆಯ ಮೇರೆ ಜೈಲಿಗೆ ಕಳುಹಿಸಲ್ಪಟ್ಟಿದ್ದ ಬಂಗಾಳದ ಒಬ್ಬ ಮುಖಂಡರಾದ ಮೆ. ಸತೀಂದ್ರ ಸೆನ್‌ರವರು ಜೈಲಿನ ಏರ್ಪಾಡುಗಳು ತೃಪ್ತಿಕರವಲ್ಲವೆಂದು ಉಪವಾಸ ವ್ರತವನ್ನು ಕೈಕೊಂಡು 54 ದಿವಸಗಳಾಗಿದ್ದುವು. ಅವರ ಪ್ರಾಣಕ್ಕೆ ಅಪಾಯ ಬರಬಹುದೆಂಬ ಭಯದಿಂದ ಮೆ. ಸುಭಾಷ್ ಚಂದ್ರಬೋಸ್ ಮೊದಲಾದವರು ಒತ್ತಾಯಪಡಿಸಿದ ಕಾರಣ ಅವರು ಉಪವಾಸವನ್ನು ಈಗ ಬಿಟ್ಟುಬಿಟ್ಟಿರುವರು.

ಸರ್ ಶಂಕರನಾಯರು ತಮ್ಮ ಮಗನಿಗೆ ದೊಡ್ಡ ಸರಕಾರಿ ಹುದ್ದೆ ಪಡೆಯಲು ಯತ್ನಿಸಿದರು. ಈಗ ಅವರ ಅಳಿಯನಾದ ಮೆನನ್ ಎಂಬವರು ಸಿಲೋನಿನಲ್ಲಿ ಇಂಡಿಯಾ ಸರಕಾರದ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿರುವರು. ಅಂತೂ ಸೈಮನ್ ಸಾಹೇಬರ ಸಂಗಡ ಶಂಕರನಾಯರರು ಸಹಕರಿಸಿದ್ದು ಸಫಲವಾಯಿತೆನ್ನಬೇಕಲ್ಲವೇ? ರಾಷ್ಟ್ರಕ್ಕೆ ಲಾಭವಲ್ಲದಿದ್ದರೂ ಸ್ವಂತಕ್ಕೆ ಲಾಭವಿತ್ತು!

ರೈತರಿಗೆ ಬಾವಿ ತೋಡಲಿಕ್ಕೂ, ದನಗಳನ್ನು ಕೊಂಡುಕೊಳ್ಳಲಿಕ್ಕೂ ಮತ್ತು ವ್ಯವಸಾಯದ ಸಾಮಾನುಗಳನ್ನು ಕೊಂಡುಕೊಳ್ಳಲಿಕ್ಕೂ 3 ರಿಂದ 12 ವರ್ಷಗಳ ಪಾಯಿದೆಯಲ್ಲಿ ಶೇಕಡ 10 ಬಡ್ಡಿಯಲ್ಲಿ ಸಾಲ ಕೊಡಲು, ಬರೋಡಾ ಸಂಸ್ಥಾನದ ಸರಕಾರದವರು ವರ್ಷಕ್ಕೆ 5 ಲಕ್ಷದಂತೆ 5 ವರ್ಷಗಳ ವರೆಗೆ ಬಜೆಟಿನಲ್ಲಿ ಮೀಸಲಿಡುವಂತೆ ತೀರ್ಮಾನಿಸಿರುವರು. ಈಗಾಗಲೇ ಒಂದು ಲಕ್ಷ ರೂಪಾಯಿಯು ಬಟವಾಡೆಯಾಗಲಿಕ್ಕಿದೆ. ಇದೀಗ ಬಡ ವ್ಯವಸಾಯಗಾರರಿಗೆ ಬೇಕಾದ ಸಹಾಯ.

ನೆಹರು ವರದಿ ಹೊರತ ಬಿದ್ದಂದಿನಿಂದೀಚೆಗೆ ಕೆಲವು ಮುಸಲ್ಮಾನರು ಮುಖ್ಯವಾಗಿ ಅಲಿ ಸಹೋದರರು ಮತ್ತು ಜಿನ್ನಾ ಮುಂತಾದವರು ರಾಷ್ಟ್ರೀಯತ್ವಕ್ಕೆ ಅಡ್ಡ ಬರುವ ಕೋಮುವಾರು ಹಕ್ಕನ್ನು ಬಲಪಡಿಸಲು ಕೆಲಸ ಮಾಡುತ್ತಿದ್ದಾರೆ. ಇದರಿಂದ ಹಿಂದೂಸ್ಥಾನದ ಸ್ವಾತಂತ್ರ್ಯದ ಹೋರಾಟಕ್ಕೆ ತುಂಬಾ ತಡೆಗಳುಂಟಾಗುತ್ತದೆಂದು ತಿಳಿದಿರುವ ಮುಸಲ್ಮಾನ ಮುಖಂಡರು ಇದನ್ನು ವಿರೋಧಿಸಿ ರಾಷ್ಟ್ರೀಯತ್ವಕ್ಕೆ ಒಗ್ಗಟ್ಟಿನಲ್ಲಿ ಕೆಲಸ ಮಾಡಲು 'ಮುಸ್ಲಿಮ್ ನೇಶನಲ್ ಪಾರ್ಟಿ'ಯೊಂದನ್ನು ಸ್ಥಾಪಿಸಲು ಈ ತಾ. 27ರಲ್ಲಿ ಅಲ್ಲಾಹಾಬಾದಿನಲ್ಲಿ ಸಭೆ ಸೇರಲಿಕ್ಕಿರುವರು.

ವಿದೇಶ.

ಮೈಸೂರಿನವರಾದ ಅರ್ಲ್ ಇರ್ವಿನ್‌ರವರು ಪತ್ನಿ ಸಮೇತ ಈ ತಾ. 13ರಲ್ಲಿ ಲಂಡನಿಗೆ ತಲುಪಿದರು. ಇಂಡಿಯಾದ ಸ್ಟೇಟ್ ಸೆಕ್ರೆಟರಿ ಮೊದಲಾದವರು ಅವರಿಗೆ ಸ್ವಾಗತವನ್ನೀಡಿದರು.

ಜಾರ್ಜ್ ಚಕ್ರವರ್ತಿಯವರ ಆರೋಗ್ಯವು ಚೆನ್ನಾಗಿದ್ದರೂ ಕೂಡ ಅವರಿಗೆ ಒಂದು ಚಿಕ್ಕ ಶಸ್ತ್ರಕ್ರಿಯೆ ಮಾಡಬೇಕಾಯಿತು. ಇದು ಮಾಡಿದ ಮೇಲೆ ಆರೋಗ್ಯವು ಉತ್ತಮವಾಗುತ್ತಿದೆಯಂತೆ.

ಪರ್ಷಿಯಾ ದೇಶದ 10½ ಮಿಲ್ಲಿಯ ಜನಸಂಖ್ಯೆಯಲ್ಲಿ 1 ಮಿಲ್ಲಿಯ ಜನರು ಕಣ್ಣುನೋವಿನಿಂದ ಪೀಡಿತರಾಗಿರುವರೆಂದೂ, ಇವರಲ್ಲಿ ಶೇಕಡ 24ರಷ್ಟು ಕುರುಡರಾಗಿರುವರೆಂದೂ ತಿಳಿಯಬರುತ್ತದೆ.

ಪರ್ಷಿಯಾದ ಖಾಫ್ರಾನ್ ಎಂಬ ಪ್ರದೇಶದಲ್ಲಿ ಬಲವಾದ ಮಳೆ ಮತ್ತು ಬಿರುಗಾಳಿಯಿಂದ ದೊಡ್ಡ ಅನಾಹುತ ಸಂಭವಿಸಿದೆ. ಸಾವಿರಾರು ಮನೆಗಳು ಬಿದ್ದಿರುವುದಲ್ಲದೆ ಇಷ್ಟರ ವರೆಗೆ 375 ಹೆಣಗಳು ಕಂಡು ಬಂದಿವೆಯಂತೆ.

ಅಫ್ಘಾನಿಸ್ಥಾನದ ಜಲಲಾಬಾದಿನ ಸರ್ದಾರರಾದ ಅಲಿ ಅಹ್ಮದ್ ಜಾನ್‌ರವರು ಹಬೀಬುಲ್ಲಾರವರಿಗೆ (ಬಚಾಯಿ ಸಾಕೋರವರಿಗೆ) ರಾಜಭಕ್ತಿಯ ಪ್ರತಿಜ್ಞೆ ಮಾಡದ್ದರಿಂದ ಅವರನ್ನು ಹಬೀಬುಲ್ಲಾರವರು ಕೊಲ್ಲಿಸಿದರೆಂದು ತಿಳಿಯಬರುತ್ತದೆ.

ತುರ್ಕಿಸ್ಥಾನದ ಟ್ರೆಬಿಜಾಂಡ್ ಡಿಸ್ಟ್ರಿಕ್ಟಿನಲ್ಲಿ ಬಹಳ ಜೋರಾದ ಮಳೆ ಬಿದ್ದು 30 ಗ್ರಾಮಗಳು ನೀರಿನ ಅಡಿಯಲ್ಲಿ ಆಗಿರುವವು. ಅನೇಕ ಮಸೀದಿಗಳು, ಶಾಲೆಗಳು ಮತ್ತು ಮನೆಗಳು ನೆಲಸಮವಾದವು. 500 ಜನರ ಪ್ರಾಣ ನಷ್ಟವುಂಟಾಗಿದೆಯೆಂದು ಅಂದಾಜು.

ಟೆಗುಸಿಗಲ್ಪಾ ಎಂಬಲ್ಲಿ ಒಂದು ಲಾರಿ ತುಂಬ ಮೈ ನೆನ್ನೆಲು ಹುಡುಗಿಯರು ಪಿಕ್‌ನಿಕ್ ತೀರಿಸಿಕೊಂಡು ವಾಪಸು ಬರುತ್ತಿದ್ದಾಗ್ಯೆ ಲಾರಿಯು 100 ಅಡಿ ಆಳದ ಹಳ್ಳಕ್ಕೆ ಬಿದ್ದು 11 ಜನರು ಮೃತರಾದರು, 27 ಜನರಿಗೆ ಜಖಂ ಆಯಿತು. ಹುಡುಗಿಯರು ಪ್ರಸಿದ್ಧ ಕುಟುಂಬಕ್ಕೆ ಸೇರಿದವರಂತೆ.

ಜೈನಾದ ಯುನ್ನಾನ್ಫು ಎಂಬ ಪಟ್ಟಣದಲ್ಲಿ ಮ್ಯುಲ್ಲ್ಯುಯು ಎಂಬ ಸೇನಾಧಿಪತಿಯು ಮರಳಿ ಬರುವನೆಂಬ ಭಯದಿಂದ ಅಲ್ಲಿಯ ನಿವಾಸಿಗಳು ಕೂಡಿ ಹಾಕಿದ್ದ ಗುಂಡು ಮದ್ದಿನ ಭಂಡಾರಕ್ಕೆ ಆಕಸ್ಮಿಕ ಬೆಂಕಿ ಬಿದ್ದು ಹಾರಿ, ಒಂದು ಸಾವಿರದಷ್ಟು ಜನರು ಮೃತರಾಗಿರುವರೆಂದೂ ಸಾವಿರಾರು ಜನರು ಆಸ್ಪತ್ರೆಗೆ ಒಯ್ಯಲ್ಪಟ್ಟಿರುವರೆಂದೂ ವರ್ತಮಾನ.

ಇಂಡಿಯಾದಲ್ಲಿ ನಡೆಯುತ್ತಿರುವ ಸ್ವದೇಶೀ ಬಟ್ಟೆಗಳ ಫಲಿತಾಂಶವಾಗಿ ಬ್ರಿಟನ್ನಿನಲ್ಲಿ ನೇಯುವವರ ಸಂಬಳವನ್ನು ಶೇಕಡ 12½ಯನ್ನು ಕಡಿಮೆ ಮಾಡಲು ನಿಶ್ಚಯಿಸಿರುವರು. ಇದನ್ನು ವಿರೋಧಿಸಲು ಕೆಲಸಗಾರರು ತೀರ್ಮಾನಿಸುವಂತೆ ಕಾಣುತ್ತಿದೆ. ಇದರ ದೆಸೆಯಿಂದ ಸುಮಾರು ಅರ್ಧ ಮಿಲಿಯ ಕೆಲಸಗಾರರು ಈ ತಿಂಗಳ ಅಂತ್ಯದಲ್ಲಿ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿಯುವರೆಂದು ವರ್ತಮಾನ.

NOTICE.

The public are hereby informed that Mr B Bettiah of Mysore ceased to be our Distributor at Mysore as from the 17th June 1929 and that Messrs. Ismail Brothers, Bangalore Nilgiri Road, Mysore, have been appointed our Distributors for Mysore District and Coorg. Enquiries or orders for our Chemicals and Fertilisers should be addressed to them or to us at Madras.

IMPERIAL CHEMICAL INDUSTRIES, (INDIA) LTD

2—2 P. O. Box No 130 Madras.

ಪತ್ರವ್ಯವಹಾರ

[ಅಭಿಪ್ರಾಯಗಳಿಗೆ ಪತ್ರ ಲೇಖಕರು ಜವಾಬ್ದಾರರು ಸಂ.]

ಜುನಾಪಣೆಯ ಉಪಾಯ

ಅಯ್ಯ,

'ಲೋಕಮಾನ್ಯದ' ತಾ 25—6—29 ಸಂಚಿಕೆಯಲ್ಲಿ ಪಿ. ಬೋರ್ಡಿನ ಎಲೆಕ್ಶನಿನ ವಿಷಯವಾಗಿ ಅಗ್ರಲೇಖನವನ್ನು ನೋಡಿದರೆ ಬರುವ ಚುನಾವಣೆಗೆ ನಿಲ್ಲುವವರಿಗೆ ಮುಂಚೆ ಬುದ್ಧಿ ಹಾಕಲು ಈಗಲೇ ಸಂಪಾದಕರ ಕಾರ್ಯ. ಈ ಗ್ರಹದಿಂದ ಪ್ರೇಮರೆಸು ಸಂಪಾದಕರು ಬರೆದ ಅಗ್ರಲೇಖನದಲ್ಲಿ ಎಂಥಾ ತಿಳಿಗೇಡಿಗಳಿಗಾದರೂ ಲೋಕದ ಅನುಭವ ತಿಳಿಯುವಂತೆ ಬರೆದಿದೆ. "ದೇಶಭಕ್ತರ ಬೇತನವನ್ನು ಜನಗಳು ಈವಾಗಲೂ ಚೆನ್ನಾಗಿ ತಿಳಿದಿದೆ. ಅನೇಕ ಲೋಕಮಾನ್ಯ 'ಬೇಕಾಗಿಲ್ಲ'. ಹೊಟ್ಟೆ ಪಾಡಿಗಾಗಿ ದೇಶವನ್ನು ಬಲಿಕೊಡುವವರನ್ನೂ ಅವರ ಹಿಂಬಾಲಕರನ್ನೂ ದೇಶೀಯರು ಗುರ್ತಿಸಿ ಇಟ್ಟಿರುತ್ತಾರೆ. ಬೋರ್ಡಿನ ಹಣದಿಂದ ಪ್ರತಿಗೆ ಪ್ರಯೋಜನಾರ್ಥವಾಗಿ ಮಾಸಿಕವಾಗಿ ಆಡಿಕೊಳ್ಳೋ ಕಂಯಗಳಿವೆ. ಹಾಗೆ ಮಾಡದೆ ಕಾಲದಿಂದ 40 ಸಾವಿರ ರೂಪಾಯಿಗಳನ್ನು ಸರಕಾರದ ಬ್ಯಾಂಕಿನಲ್ಲಿ ಬಡ್ಡಿಗಿಟ್ಟು ಹಣ ಸಂಪಾದಿಸುವ ದಾರಿಯೇ ಉತ್ತಮವೆಂದು ಬರೆದಿದೆ. ಹಣ ಸಂಪಾದನೆ ಮಾಡಿ ಹೀಗೆ ಕೆಲಸದ ಶಕ್ತಿ ತೋರಿಸಲು 'ಸಮಿತಿ—ವೀರಾಜಪೇಟೆ ಒಕ್ಕಲು ಸಂಘ' ಡಿಸ್ಟ್ರಿಕ್ಟ್ ಬೋರ್ಡ್ ಅಲ್ಲವೆಂದು 'ಲೋಕಮಾನ್ಯ' ಮತ್ತು ಆ ಕೆಲಸವು ಅವರು ತಿಳಿಯಲಿ. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಒಳಹೊಕ್ಕು ಹಣವು ಹೊಟ್ಟೆಗಿಲ್ಲದ ಬಡ ರೈತರು ಕೇವಲ ಸಂಪಾದನೆ ಬಿಟ್ಟು ಶಕ್ತ್ಯನುಸಾರ ಕಷ್ಟದ ಹಣ ಉಪಯೋಗಿಸಿದೆಂದು ತಿಳಿಯಲಿ.

ಅವೆಲ್ಲೋ ಪಾಂಚಾಲ ದೇಶದ ಜನರು ಬೇನಡಿದವರೂ, ಅಲ್ಲಿ ನ್ಯಾಯ ಜೇಷ್ಠವೆಂದರೂ, ಏಬಿನಾ ದಾರದ ಸಂಘವು ಜೇಡ ಹೆಂಡತಿ ಸೈಮನ್ ಕಮಿಷನಿಗೆ ನಮಸ್ಕರಿಸಲು ಮದ್ರಾಸಿಗೆ ಹೋಗಿ ಬರಲಿಕ್ಕೆ ರೈತರ ಹಣವನ್ನು ಖರ್ಚುಮಾಡಿದ್ದು ಯಾವ ಸ್ವಾರ್ಥದಿಂದಲೋ ಏನೋ; ಉಪಯೋಗವಿಲ್ಲದ್ದು ನಿಜವಾಗಿ ಡಿಸ್ಟ್ರಿಕ್ಟ್ ಬೋರ್ಡ್ ಹಣ ಬಡ್ಡಿಯಲ್ಲಿ ಇಡುವದೇ ಮೇಲೆಂದು ಅನ್ನುವ ಪತ್ರಿಕೆಯೊಂದು ಇರುವದು ವಿಶೇಷವೇನು?

ಬಡ ರೈತರು ಏನಾದರೇನು? ತಮ್ಮ ಸ್ವಾರ್ಥಕ್ಕೆ ಕೈಗೂಡಿದರೆ ಆಯಿತು. ಸರಕಾರಿ ನೌಕರರ ಮನಸ್ಸೇ ಇತ್ತೆ

ವರ್ತನೆಯನ್ನು ಖಂಡಿಸಿ ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗನ್ನು ಬಿಟ್ಟು ಹೋದ ಮಹನೀಯರ ವರ್ತನೆಯನ್ನು ದೇಶೀಯರು ಸರಿ ಅನ್ನುತ್ತಿರುವಾಗ್ಯೆ 'ಲೋಕಪಾವನ'ಕ್ಕೆ ಅಗದೆ ಹೋದದ್ದು ಆಶ್ಚರ್ಯವೇನೂ ಅಲ್ಲ. ಪ್ರಜಾ ಮುಖಂಡರು ಈ ಕೊಡಗಿನಲ್ಲಿ ನಡಿಸಿದ ಅದೆಷ್ಟೋ ಕಾರ್ಯಗಳಿಗೆ ಈ 'ಲೋಕಪಾವನ'ವು ಅಡ್ಡ ನಿಂತು ದೂಷಿಸುತ್ತಿರುವಾಗ್ಯೆ ಇದನ್ನು ದೂಷಿಸುವದು ಆಶ್ಚರ್ಯವೇನು? ಕೌನ್ಸಿಲ್‌ಗಳಲ್ಲಿ, ಎಸೆಂಬ್ಲಿಗಳಲ್ಲೂ ಸರಕಾರಿ ಪರ ಮೆಂಬರುಗಳನ್ನು ಖಂಡಿಸಿ ಪ್ರಜಾಪಕ್ಷ ಮಹನೀಯರು ಮೀಟಿಂಗನ್ನು ಬಿಟ್ಟು ಬಂದದ್ದು ಈ 'ಲೋಕಪಾವನಕ್ಕೆ' ಗೊತ್ತಿಲ್ಲದಿದ್ದರೂ ಕೊಡಗಿನ ರೈತರಿಗೆ ಗೊತ್ತಿದೆ. ಈ ರೀತಿ ಆಚರಣೆಗಳು ಎಷ್ಟರ ಮಟ್ಟಿಗೆ ಇಂಡಿಯಾದ ಗೌರವವನ್ನು ಉಳಿಸಿದೆಂಬದೂ ಗೊತ್ತಿದೆ. ಆದ್ದರಿಂದ, 'ಕೊಡಗು ಪತ್ರಿಕೆ ಮತ್ತು ಇವರ ಸಮೂಹಕ್ಕೆ ಬೇಕಾದದ್ದು ಏನೆಂಬದೆನಲ್ಲಾ 'ಲೋಕಪಾವನ'ವು ಅಗಾಗ್ಯೆ ಪ್ರಕಟಿಸುತ್ತಿದೆ. ಆದರೆ 'ಲೋಕಪಾವನ' ಮತ್ತು ಅದರ ಗುಂಪಿಗೆ ಬೇಕಾದ ಸಂಗತಿಗಳನ್ನು ಸಂಕ್ಷೇಪದಲ್ಲಿ ಹೇಳುವದಾದರೆ ಇಷ್ಟೇ.

(1) ಕೌನ್ಸಿಲ್ ಮೆಂಬರುಗಳಿಗೆ ಪ್ರಜಾಪಕ್ಷದವರು ನಿಲ್ಲಬಾರದು.

(2) ಕೊಡವ ಸಭೆಯ ಮುಖಂಡರನ್ನೇ ದೇಶದ ಮುಖಂಡರೆಂದು ಭಾವಿಸಿಕೊಳ್ಳಬೇಕು.

(3) ಸರಕಾರದ ಸರಭರಾಜ್‌ಗಳಿಗೆ, ಹೊಟ್ಟೆಕಿಗಳಿಗೆ ಅವರನ್ನೇ ಮುಂದಕ್ಕೆ ಇಟ್ಟುಕೊಡಬೇಕು.

(4) ಸ್ವಂತ ಸಾಹಾಯ ಎಂದಿನಂತೆ ನಾಡವರು ಕುಡಿದು ಆಲಸ್ಯದಲ್ಲಿ ಪಡಬೇಕು.

(5) ಖಾದಿ ಉಪಯೋಗದ, ಸನ್ಯಾಸಿಗಳನ್ನೂ, ದೇವಸ್ಥಾನಗಳನ್ನೂ ತುಚ್ಛಾಕಾರದಲ್ಲಿ ಕಾಣಬೇಕು.

(6) ಸಹಕಾರ ಸಂಘಗಳು ಬೆಟ್ಟನಾಡಿನ ಸಂಘದಂತೆ ನಾಡಿಗೊಂದು ಆಗಬೇಕು; ಸದ್ಯ ದೇಶಕ್ಕೊಂದು ಆಗಿ ಅದರ ಹೆಡ್ ಆಫೀಸನ್ನು ಮಡಿಕೇರಿಯಲ್ಲಿ ಇಟ್ಟುಕೊಟ್ಟರೆ ಉತ್ತಮ.

ಹೀಗಿದ್ದು ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಟ್ಟುಕೊಂಡು ಆಳುತ್ತಿರಬೇಕು. ಇಂಥಾವುಗಳಿಗೆ ಎಡೆ ಕೊಡದೆ ಇರುವದೇ ನಾಡವರ ಮತ್ತು ನಾಡವರ ಪರ ಹೋರಾಡುವ ಮೆಂಬರುಗಳ ತಪ್ಪು. ಇಂಥಾವುಗಳಿಗೆ ಎಡೆ ಕೊಡದೆ ಇರುವದೇ ಬಮಿಾನ್‌ದಾರರ ಸಂಘದ ಪಾರ್ಟಿಯವರ ತಪ್ಪಲ್ಲದೆ ಬೇರೆ ಅಲ್ಲವೆಂಬುದು ದೇಶದ ರೈತರಿಗೆ ಗೊತ್ತಿದೆ.

ಮಹನೀಯರೇ, 'ಲೋಕಪಾವನ'ದ ಸ್ವರಾಜ್ಯ ತತ್ವವನ್ನು ಕೇಳಿದಿರಾ. 1ನೇದು ಒಪ್ಪಲಿ, ಒಪ್ಪದಿರಲಿ ಮೀಟಿಂಗಿನ ಅಂತ್ಯದ ವರೆಗೆ ಇರುವದು. 2ನೇದು ಅಧ್ಯಕ್ಷರಿಗೆ ಮತ್ಯಾದೆ ಕೊಡುವದು. ಇದಿಷ್ಟು ಮಾಡಿದರೆ ಸರಕಾರವು ಏನೂ ಅನ್ನಲಿಕ್ಕಿಲ್ಲವಂತೆ! ಇದೇ ಸ್ವರಾಜ್ಯ ಸಂಪಾದನೆಯ ದಾರಿಯಂತೆ ಅಹಾ! ಈ ತತ್ವದ ಸ್ವರಾಜ್ಯ ಸಂಪಾದನೆಯನ್ನು ಬಿಟ್ಟು ಮಹಾತ್ಮ ಗಾಂಧಿಯವರು ಹೋರಾಡುತ್ತಿರುವರಲ್ಲ! 'ಲೋಕಪಾವನ'ವಾದರೋ ಈ ಸಂಗತಿಯನ್ನು ಮಹಾತ್ಮರಿಗೆ ತಿಳಿಸಿ ಅವರ ದಾರಿ ತಪ್ಪಿಸಿದ್ದು ಬಾರದೇ? ಅಯ್ಯೊ, ತಿಳಿಗೇಡಿತನದ ವಾದಕ್ಕೆ ಅಂತ್ಯವೆ ಇಲ್ಲವೇ? ಈ ತತ್ವವನ್ನು ವಾಚಕರೇ ನೋಡಿ. ಮೀಟಿಂಗ್ ಬಿಟ್ಟು ಹೋದದಕ್ಕೆ 'ಸರಕಾರವು ಏನು ಹೇಳಿಯೂರು?' 'ಸರಕಾರವು ನೋಡುವದಿಲ್ಲವೇ?' ಎಂದು ಅಸ್ಪಷ್ಟ ಮನೋಬಲದಲ್ಲಿ ಇರುವ ಮಹಾನುಭಾವರಿಂದ ದೇಶಸೇವೆ, ಸ್ವರಾಜ್ಯಸ್ಥಾಪನೆಗೆ ಎಷ್ಟರ ಮಟ್ಟಿಗೆ ಸಹಾಯವಾದೀತೆಂದು ತಾವೇ ತಿಳಿಯಿರಿ.

ಪ್ರಜಾಹಿತವನ್ನು ಬಯಸುವ 'ಕೊಡಗು' ಪತ್ರಿಕೆ ಪಾರ್ಟಿಗೆ ಗಾಬರಿಯಾಗುವ ಪ್ರಶ್ನೆ ಏನೂ ಇಲ್ಲದೆ, ಅಬ್ಕಾರಿಯ ಸಹಾಯ ಪಡೆದು ಗೆಲ್ಲುತ್ತಿರುವವರಿಗೆ ಇವರು ಸಹಾಯ ಮಾಡಬೇಕೇನು? ಅವರು ಅಬ್ಕಾರಿಯ ಸಹಾಯ ಕೇಳಲಿ! ಈ ರೀತಿಯ ಮಂಕು ಬೂದಿಯನ್ನು ಮರುಳರಿಗೂ, ಮಂಕರಿಗೂ, ಕುರುಡರಿಗೂ ಹಾಕಲಿ.

ಒಟ್ಟಾರೆ ಹೇಳುವದಾದರೆ, ಕೌನ್ಸಿಲ್ ಚುನಾವಣೆಯ ಮಂಕು ಬೂದಿಯನ್ನು ಈಗಲೇ ಹರಡಲು ಮಾಡುವದಕ್ಕೆ ಉಪಕ್ರಮಿಸಿದಂತೆ ಕಾಣುತ್ತೆ. ಕೌನ್ಸಿಲ್ ಒಳಗೂ ಹೊರಗೂ, ಕಳೆದ ಡಿ. ಬೋರ್ಡಿನಲ್ಲೂ ಕಳೆದ 6—7 ವರ್ಷಗಳಿಂದ ನಡೆಯಿಸಿದ ಕಮಂಗಳ ಆಚರಣೆಗಳು ಇನ್ನೂ ಬಡ ರೈತರು ಮರೆತಿಲ್ಲ. ಮಂಕು ಬೂದಿಯ ದಿನವು ಕಳೆದಿದೆ. ದೇಶೀಯರು ಎಚ್ಚರಗೊಂಡಿರುವರು. ಇದಕ್ಕಾಗಿ 'ಲೋಕಪಾವನ'ವು ಮರುಗಬೇಕಿಲ್ಲ.

'ತಮ್ಮಯ.'

ಕೊಡಗು ಮಹಾಜನರಲ್ಲಿ ವಿನಂತಿ.

ಈಗಾಗಲೇ ದೇಶದಲ್ಲಿ ಜಾತಿ ಮಾತ್ಸರ್ಯವು ಹೆಚ್ಚುವಂಥ ಲೇಖನಗಳು 'ಲೋಕಪಾವನ'ದಲ್ಲಿ ಪ್ರಕಟವಾದದ್ದು ಮತ್ತು, ಅದರಿಂದ ಎಷ್ಟರ ಮಟ್ಟಿಗೆ ಕೆಡಕಿದೆ ಎಂಬುದು ಮೆ|| ಯನ್ ಮುದ್ದಪ್ಪ ಬಿ. ಎ. ಬಿ. ಯಲ್ ಇವರು "ಕೊಡಗು" ಪತ್ರಿಕೆಯಲ್ಲಿ ಬರೆದ ಉತ್ತರದಿಂದ ವಾಚಕ ಮಹನೀಯರು ತಿಳಿದಿರಬಹುದು.

ಕೊಡಗ, ಕೊಡಗೇತರ, ಗೌಡ, ಬ್ರಾಹ್ಮಣ ಮೊದಲಾಗಿ ಹೇಳಲ್ಪಡುವ ಪಂಗಡಗಳು ಸ್ವಭಾವಿಕವಾಗಿ ಸರಕಾರಿ ನೌಕರಿಗಾಗಿಯೂ ಮತ್ತು ಸರಕಾರದಿಂದ ಅನೇಕ ಕುಮ್ಮಕ್ಕಿನ ನಿರೀಕ್ಷಣೆಯಲ್ಲಿರುವ ಕೆಲವು ಜನರಲ್ಲಿಯೂ ಅಂದರೆ, ಕೋಮುವಾರು ಸಭೆಯ ಚಾಲಕರಲ್ಲಿ ಇದೆಯೇ ಹೊರತು ದೇಶದಲ್ಲಿ ಬಾಧಿತವಾಗಿಲ್ಲ. ಮುಖ್ಯವಾಗಿ ಸರಕಾರಿ ನೌಕರಿಗಳನ್ನು ಪಡೆಯುವದು, ದೇಶಕ್ಕೆ ಎಷ್ಟು ಕೆಡಕಾದರೂ ತಮ್ಮ ಅಕ್ಕನನ್ನು ಮಾರಿ ಮಕ್ಕಳು ಮುಂಗೆಯೂ ಸಂಬಂಧಿಕರಿಗೆ ಸರಕಾರಿ ನೌಕರಿಗಳನ್ನು ಒದಗಿಸಿಕೊಳ್ಳಲು ಬ್ರಾಹ್ಮಣ, ಬ್ರಾಹ್ಮಣೇತರ ಮೊದಲಾದ ಪಂಗಡಗಳು ಹೊಸ ಆಗಿ ಎಷ್ಟೋ ಕೆಡಕಾಗಿದೆಯೆಂಬುದನ್ನು ನಾವು ಮರೆಯಬಾರದು. ಇಂಥಾ ಪಂಗಡಭೇದವನ್ನು ಕವುವ ವಿಷವು ಪಟ್ಟಣಗಳಲ್ಲಿಯ ಕೆಲವು ಮಹನೀಯರಲ್ಲಿ ತಮ್ಮ ಸ್ವಾರ್ಥತೆಯನ್ನು ಸಾಧಿಸಲು ಇದೆಯೇ ಹೊರತು, ಕೊಡಗಿನ ಗ್ರಾಮಗಳ ಮಹನೀಯರಲ್ಲಿಲ್ಲ. ನಮ್ಮ ಪೂರ್ವಿಕರ ಮೇಲ್ಪಂಕ್ತಿಯಂತೆ, ಎಲ್ಲಾ ಗ್ರಾಮಗಳಲ್ಲಿಯೂ, ಕೊಡಗ, ಗೌಡ, ಬ್ರಾಹ್ಮಣ, ಮುಸಲ್ಮಾನ, ಹೆಗ್ಗಡೆ, ಐರಿ, ಗೊಲ್ಲ ಮುಂತಾದ ಪಂಗಡಗಳು ಶುಭಶೋಭಾನಕ್ಕೂ, ಹಬ್ಬ ವಗೈರೆ ಎಲ್ಲಾ ಕಾರ್ಯಗಳಿಗೂ ಜೊತೆಯಲ್ಲಿ ಸೇರಿಕೊಂಡು ತಮ್ಮ ಸಹೋದರ ಭಾವವನ್ನು ಹೆಚ್ಚಿಸುತ್ತಾ ಬರುತ್ತಿರುವುದು ದೇಶದ ಮಹನೀಯರಿಗೆ ವೇದ್ಯವಿದೆ. ಇಂಥಾ ಸಹೋದರ ವಾತ್ಸಲ್ಯವನ್ನು ಹಾಳುಮಾಡಲು ಕೆಲವರು ಈಗ ತಾನೇ ಇನ್ನೊಂದು ಪಂಗಡವನ್ನು ದೂಷಿಸಿ, ತಮ್ಮ ಸ್ವಾರ್ಥತೆಯನ್ನು ಈ ಮೂಲಕ ಸಾಧಿಸಲು, ಜಾತಿ ಮಾತ್ಸರ್ಯವೆಂಬ ಕಾಲಕೂಟ ವಿಷವನ್ನು ಹರಡಲಿಕ್ಕೆ ಪ್ರಯತ್ನಿಸಿರುವರು. ಅಲ್ಲದೆ ಅದನ್ನು ಗ್ರಾಮಗಳಲ್ಲಿಯೂ ಸಹ ಹರಡಲಿಕ್ಕೆ ಪ್ರಾರಂಭಿಸುತ್ತಿರುವರು. ಆದರೆ ಗ್ರಾಮಗಳಲ್ಲಿ ಹೆಚ್ಚಾಗಿ, ಪ್ರತಿ ಒಂದು ಗ್ರಾಮಕ್ಕೂ ಎಲ್ಲಾ ಕೋಮಿನವರಿಂದ ಕೂಡಿದ ಒಂದೊಂದು ಸಹಕಾರ ಸಂಘವಿರುವುದರಿಂದಲೂ, ಪತ್ರಿಕೆಯಲ್ಲಿ ಯಾವದು ನ್ಯಾಯ, ಯಾವದು ಅನ್ಯಾಯವೆಂಬುದನ್ನು ತಿಳಿದು ನೋಡಲು ಯೋಗ್ಯರಾದ ಅನೇಕ ಮಹನೀಯರುಗಳು ಇರುವುದರಿಂದಲೂ ಜಾತಿ ಮಾತ್ಸರ್ಯವೆಂಬ ಕಾಲಕೂಟ ವಿಷವನ್ನು ಹರಡಲು ಎಂದೂ ಸಾಧ್ಯವಿಲ್ಲವೆಂಬುದನ್ನು ಅರಿತಿರಲಿ. ಅಲ್ಲದೆ ಆ ವೀರರಾದ ನಮ್ಮ ತಾತಂದಿರ ನಿಜವಾದ ಪುತ್ರರು ನಾವಾದರೆ, ನಾವು ಸಹ ಅವರು ಮಾಡಿ ತೋರಿಸಿದಂತೆ, ನಮ್ಮ ಜೊತೆಯಲ್ಲೇ ಇರುವ, ಗೌಡುಗಳು, ಹೆಗ್ಗಡೆ, ಗೊಲ್ಲ ಮೊದಲಾದ ಇತರ ಎಲ್ಲಾ ಜಾತಿಗಳನ್ನು ಸಹೋದರ ವಾತ್ಸಲ್ಯದಿಂದ ಕಂಡು, ನಮ್ಮಂತೆಯೇ ಅವರು ವಿದ್ಯಾಬುದ್ಧಿಯಲ್ಲಿ ಮುಂದಕ್ಕೆ ಬಂದು, ದೇಶದ ಮತ್ತು ಅವರವರ ಜಾತಿಯ ಕಲ್ಯಾಣಕ್ಕಾಗಿ ಕೆಲಸ ಮಾಡಲಿ ಎಂಬುದನ್ನು ಮರೆಯಬಾರದು. ನಮ್ಮ ಶರೀರದ ಅಂಗಗಳಲ್ಲಿ ಯಾವುದಾದರೊಂದು ಭಾಗಕ್ಕೆ ನೋವು ಉಂಟಾದರೆ ಶರೀರಕ್ಕೆ ಎಷ್ಟು ಸಂಕಟವಿದೆಯೋ ಹಾಗೆ ದೇಶದ ಯಾವುದಾದರೊಂದು ಕೋಮಿನ ಜನರಿಗೆ ಕಷ್ಟಗಳು ಯಾ ಸಂಕಟ, ಅನ್ಯಾಯಗಳುಂಟಾದರೆ, ದೇಶಕ್ಕೇನೇ ನೋವುಂಟಾಗದಿರದು. ನಮಗೆ ಸ್ವರಾಜ್ಯ ಸಿಕ್ಕಬೇಕೆಂದು ನಾವು ಹೋರಾಡುವ ಸಂದರ್ಭದಲ್ಲಿ ಕೊಡಗಿನ ಎಲ್ಲಾ ಜಾತಿಯವರೂ ಸಹೋದರ ವಾತ್ಸಲ್ಯದಿಂದ ಕೈ ಕೈ ಹಿಡಿದುಕೊಂಡು ಹೋಗಬೇಕೇ ಹೊರತು ಒಬ್ಬನನ್ನು ಹಿಂದಕ್ಕೆ ತಳ್ಳಿ ಹೋಗುವುದಲ್ಲ. ಒಂದು ವೇಳೆ ಒಂದು ಕೋಮಿನವರ ಪ್ರಾಬಲ್ಯದಿಂದ ಸಿಕ್ಕಿದ ಸ್ವರಾಜ್ಯವು ಎಷ್ಟೇ ಒಳ್ಳೆಯದಾಗಿರಲಿ ಅದು ಚಿರಕಾಲ ನಿಲ್ಲಲಾರದು. ಸಾಲದ್ದಕ್ಕೆ, ಅಲ್ಲಿ ಕೋಮಿನ ಪ್ರಯೋಜನ ಮಾತ್ರ ಉಳಿಯುವದಲ್ಲದೆ ದೇಶದ ಎಲ್ಲಾ ಜನರ ಹಕ್ಕಿನ ಭದ್ರತೆಯು ಸುರಕ್ಷಿತವಾಗಿರುವುದು ಕಷ್ಟ.

ದೇಶದ ಕಲ್ಯಾಣವನ್ನು ಬಯಸುವ ಪ್ರತಿ ಒಬ್ಬ ಮಹನೀಯರೂ ಇಂಥಾ ಜಾತಿ ಮಾತ್ಸರ್ಯವನ್ನು ಹರಡಲಿಕ್ಕೆ ಎಡೆ ಕೊಡಬಾರದೆಂದು ಬೇಡುವ.

ಕೆ. ಪಿ. ಚಿಣ್ಣಪ್ಪ.

ಹೊಸ ಜಮೀನ್ದಾರರ ಸಂಘವೋ?

ಅಯ್ಯಾ,

ತಾ 11—6—29ರ 'ಲೋಕಪಾವನ' ಪತ್ರಿಕೆಯಲ್ಲು ಈಗ ತಾನೇ ಹೊಸದಾಗಿ ಏರ್ಪಡಿಸಿರುವದಾಗಿ ತಿಳಿಯುವ ಜಮೀನ್ದಾರರ ಸಂಘವೆಂಬ ಹೊಸ ಸಂಘಕ್ಕೆ ನನ್ನನ್ನು ಆಡಳಿತ ಮಂಡಲಿಯ ಒಬ್ಬ ಮೆಂಬರನಾಗಿ ನೇಮಿಸಿರುವದಾಗಿ ಪ್ರಕಟವಾಗಿದೆ. ಬಹಳ ವರ್ಷಗಳಿಂದ ನಡೆದು ಬರುತ್ತಾ ರೈತರ ಹಿತಚಿಂತನೆಯಲ್ಲಿ ಕೆಲಸಮಾಡುತ್ತಾ ಇರುವ ಜಮೀನ್ದಾರರ ಸಂಘದಲ್ಲು ನಾನು ಒಬ್ಬ ಮೆಂಬರನಾಗಿ ಇರುತ್ತೇನೆ. ಆ ಸಂಘದಲ್ಲು ನನಗೆ ಪೂರ್ಣ ವಿಶ್ವಾಸವಿದೆ. ಈಗಿನ ಹೊಸ ಸಂಘದಲ್ಲು ಕಮಿಟಿ ಮೆಂಬರನ್ನಾಗಿ ಮಾಡಿಕೊಂಡು ಇರುವದು ನನ್ನ ತಿಳುವಳಿಕೆ ಮತ್ತು ಒಪ್ಪಿಗೆ ಇಲ್ಲದೆ ಮಾಡಿಕೊಂಡದ್ದಾಗಿದೆ. ಇದಕ್ಕೆ ನಾನು ಪ್ರತಿಭಟಿಸುತ್ತೇನೆ.

ಪೊನ್ನಂಪೇಟೆ, ಬಿ. ಮೈಲಾರಸೆಟ್ಟಿ.

ಕೊಡಗ ಕೊಡಗೇತರರು.

ವಾಚಕರೇ,

'ಕೊಡಗು' ಪತ್ರಿಕೆಯ ಈ ತಾ. 12 ನೇಯ ಸಂಚಿಕೆಯಲ್ಲಿ ಮೆ. ಎನ್. ಮುದ್ದಪ್ಪನವರು ಒಂದು ಬಾತ್ಮಿ 'ಕೊಡಗ ಕೊಡಗೇತರ ತಾರತಮ್ಯ'ವೆಂದು ಬರೆದದನ್ನು ಓದಿ ನೋಡಿದೆನು. ಕೂಡಲೆ ಮೆ|| ಮುದ್ದಪ್ಪನವರು ಹೇಳಿದಂತೆ 'ಲೋಕಪಾವನದ' 25—5—29ರ 'ಸರ್ವ ಹಿತೈಷಿ'ಯವರ ಬಾತ್ಮಿಯನ್ನು ನೋಡಿದೆನು. 'ಸರ್ವ ಹಿತೈಷಿ'ಯವರ ಬಾತ್ಮಿಯ ಅಭಿಪ್ರಾಯವನ್ನು ಬದಲಾಯಿಸಿ 'ಸರ್ವ ಹಿತೈಷಿ'ಯವರು ಕೊಡಗೇತರರಲ್ಲಿ ಒಬ್ಬೊಬ್ಬರು ಒಡಕು ತರುತ್ತಾರೆಂದು ಬರೆದ ಬಾತ್ಮಿಯನ್ನು ಇಡೀ ಕೊಡಗೇತರರನ್ನು ದೂಷಿಸಿದರೆಂದೂ, ಕೊಡಗೇತರರಿಗೆ ಕೊಡಗರ ಮೇಲೆ ದ್ವೇಷಹುಟ್ಟುವಂತೆ ಮೆ|| ಮುದ್ದಪ್ಪನವರು ಬರೆದ ಹಾಗೆ ಕಾಣುತ್ತದೆ. ಆದ್ದರಿಂದ ದೇಶದ ಸರ್ವ ಕೊಡಗ ಕೊಡಗೇತರರು ಇಂಥಾ ಬಾತ್ಮಿಗಳಿಗೆ ಗಮನಕೊಡದೆ ಮೊದಲು 'ಸರ್ವ ಹಿತೈಷಿ'ಯವರ ಬಾತ್ಮಿಯನ್ನೂ, ಮೆ|| ಮುದ್ದಪ್ಪನವರ ಬಾತ್ಮಿಯನ್ನೂ ಓದಿ ನೋಡಿ ತಮ್ಮ ತಮ್ಮ ಇರಾದೆಗಳನ್ನು ಗಟ್ಟಿಪಡಿಸುವರಾಗಿ ನಂಬುತ್ತೇನೆ. 'ಸರ್ವಹಿತೈಷಿ' ಹೇಳಿದ್ದೆನಂದರೆ—ಕೊಡಗೇತರರಲ್ಲಿ ಒಬ್ಬೊಬ್ಬರು ಕೊಡಗರಿಗೂ ಕೊಡಗೇತರರಿಗೂ ಇಲ್ಲದ ಮಾತುಗಳನ್ನು ಹುಟ್ಟಿಸಿ ಒಡಕು ತರುವ ಹಾಗೆ ಮಾಡುತ್ತಾರೆಂತಲೂ, ಇದೇ ರೀತಿ ಕೊಡಗರಲ್ಲಿಯೂ ಕೆಲವರು ಒಬ್ಬರೊಬ್ಬರು ಬೇರೆಯವರ ಕುಯುಕ್ತಿಗಳನ್ನು ತಿಳುಕೊಳ್ಳದೆ ಮನಸ್ತಾಪ ಬೆಳಸಿ ಕೆಡುತ್ತಾರೆಂತಲೂ, ಹೀಗೆ ಒಡಕು ತಂದು ದೇಶದವರನ್ನು ಕೆಡಿಸಲು ಯತ್ನಿಸುವವರು ಈ ಕಾವೇರಮ್ಮನ ಪುಣ್ಯಕ್ಷೇತ್ರದಲ್ಲಿ ಒಂದು ಕಾಲಕಸ್ಕೂ ವೃದ್ಧಿಯಾಗಲಾರರೆಂದೂ ಬರೆದಿರುತ್ತಾರೆ. ಕೊಡಗೇತರರು ಹೊಟ್ಟೆಪಾಡಿಗೆ ಬಂದವರೆಂದು ಎಂದಿಗೂ ಹೇಳಲಾರರು. ಕೊಡಗು ದೇಶದಲ್ಲಿ ಲಿಂಗಾಯಿತರವರೂ, ಗೌಡು ಒಕ್ಕಲಿಗದವರೂ, ಮುಸಲ್ಮಾನರನೇಕರೂ, ಇನ್ನೂ ಅನೇಕ ಪಂಗಡದ ನಿವಾಸಿಗಳು ಮತಸ್ಥರೂ ಕೊಡಗರಂತೆಯೇ ಹಕ್ಕು ಬಾಧ್ಯತೆಗಳು ಪಡೆದು ಇದ್ದಾರೆಂದು ಸರ್ವಹಿತೈಷಿಗಳಿಗೆ ತಿಳಿಯದೇ? ಕೊಡಗೇತರ ವಿಷಯ ಮೆ|| ಮುದ್ದಪ್ಪನವರಿಗೆ ಮಾತ್ರ ತಿಳಿಯುವದೇ? ಕೊಡಗರು ಕೊಡಗೇತರರ ಮೇಲೆ ಶಾಪ ಹಾಕಿದಂತೆ ಇವರೇನು ಕೊಡಗರು ದೇವರೇ, ಮುನಿಯೋ ಶಾಪಕೊಡಲಿಕ್ಕೆ! "ಕೊಡಗೇತರರಲ್ಲಿ ದೊಡ್ಡ ದೊಡ್ಡ ಪದವಿಗಳು ಎಷ್ಟಿವೆ ಮತ್ತು ಕೆಲವು ಕಾಲದಲ್ಲಿ ನಿವೃತ್ತರಾಗುವ ಡಿಪ್ಯುಟಿ ಕಮಿಶ್ನರವರ ಪದವಿ ಈಗ ತಾನೇ ದೊಡ್ಡ ಪದವಿಯಲ್ಲಿರುವ ಕೊಡಗು ಉದ್ಯೋಗಸ್ಥನ ಸಂಬಂಧಿಕನಿಗೆ ಅಂಟಿಸಿಬಿಟ್ಟರೆ, ಆಗ ಕೊಡಗೇತರರಿಗೆ ಎಷ್ಟು ದೊಡ್ಡ ಪದವಿಗಳು ಉಳಿದಂತಾಗುವದೆಂದು" ಮೆ. ಮುದ್ದಪ್ಪನವರು ಬರೆದಿರುತ್ತಾರೆ. ಇದೇನು ಮೆ|| ಮುದ್ದಪ್ಪನವರು ಹೇಳಿದಂತೆ ಬ್ರಿಟಿಷ್ ಸರಕಾರವು ಕೊಡಗರ ಜೇಬಿನಲ್ಲಿದೆಯೋ? ಕೊಡಗರ ದೊಡ್ಡ ಉದ್ಯೋಗಸ್ಥನು ಹೇಳಿದಂತೆ ಬ್ರಿಟಿಷ್ ಸರಕಾರದ ದೊಡ್ಡ ಮೇಲಧಿಕಾರಿಗಳು ಇವರ ಕೈಯ್ಯಲ್ಲಿದ್ದಾರೊ? ಈ ದೊಡ್ಡ ಅಧಿಕಾರಿಗಳು 6—7 ಸಾವಿರ ಮೈಲಿ ದೂರದಿಂದ ಬಂದು ರಾಜ್ಯದ ಆಡಳಿತೆಯಲ್ಲಿ ತುಂಬಾ ಅನುಭವಶಾಲಿಗಳಾಗಿಯೂ, ಇಂಡಿಯನ್ ಸಿವಿಲ್‌ಸರ್ವಿಸ್ ಪರೀಕ್ಷೆ ಪಾಸಾದವರಾಗಿಯೂ ಇಲ್ಲವೇ? ಇವರೇನು ಯಾರು ಯೋಗ್ಯರು, ದೊಡ್ಡ ಪದವಿಗೆ ಅರ್ಹರೆಂದು ರೆಕಾರ್ಡ್ಸ್ ಮೊದಲಾದವನ್ನು ನೋಡುವದಿಲ್ಲವೇ? ಇವರೇನು ಹೆಡ್ಡರೇ? ಮೆ|| ಮುದ್ದಪ್ಪನವರು 'ಹಿತೈಷಿ'ಯವರನ್ನೂ, ಕೊಡಗರನ್ನೂ ದೂಷಿಸಿದ ಹಾಗೆ ಬ್ರಿಟಿಷ್ ಸರಕಾರವನ್ನೂ ಪಕ್ಷಪಾತಿಗಳೆಂದು ದೂಷಿಸಿದ ಹಾಗೆ ಕಾಣುತ್ತೆ.

ಈ ಬ್ರಿಟಿಷ್ ಸರಕಾರವು ಈಗ ಡಿ ಪಿ ಡಬ್ಲ್ಯು ಮತ್ತು ಇಂಗ್ಲಿಷ್ ಆಫೀಸು, ಫಾರೆಸ್ಟ್ ಮೇನೇಜರ ದೊಡ್ಡ ಜವಾಬುದಾರಿಕೆ ಪದವಿಗಳನ್ನೂ, ಉತ್ತರ, ದಕ್ಷಿಣ ಕೊಡಗು ಎರಡು ಸಬ್ ಡಿವಿಜನ್ ಆಫೀಸರ ದೊಡ್ಡ ಪದವಿಗಳನ್ನೂ, ಪಾರುಪತ್ಯಗಾರ ಮೊದಲಾದ ಜವಾಬುದಾರಿಕೆ ಪದವಿಗಳನ್ನೂ ಈಗ ಕೊಡಗೇತರರಿಗೆ ಕೊಟ್ಟಿಲ್ಲವೋ? ಮತ್ತು ಈ ಮೊದಲು ಸಬ್‌ಜಡ್ಜ್ ಪದವಿ ಮೆ|| ಗಣಾದ ರಾಮಯ್ಯ ಪೂಜಾರವರಿಗೂ, ಚನ್ನಯ್ಯನವರಿಗೂ, ಮತ್ತು ಮೆ|| ಗೋಪಾಲ್‌ರಾಯರಿಗೆ ವಿರಾಜಪೇಟೆ ಮುನ್ಸೀಫರ ಪದವಿ, ಡಿಪ್ಯುಟಿಕಮಿಶ್ನರ ದೊಡ್ಡ ಪದವಿ, ಸುಬೇದಾರರ ಪದವಿ ಬ್ರಾಹ್ಮಣ ಮುಸಲ್ಮಾನರಿಗೆ ಕೊಡಲಿಲ್ಲವೋ? ಇದಕ್ಕೆ ಯಾರಾದರೂ ವಿರೋಧಿಸಿದ್ದರೇ? ಕೊಡಗ ಕೊಡಗೇತರರು ಎಷ್ಟು ಅನ್ಯೋನ್ಯ ಪ್ರೀತಿ ಸ್ನೇಹ ಭಾವದಿಂದ ಕೆಲಸ ನಡಿಸಿಕೊಂಡು ಬರಲಿಲ್ಲವೇ? ಈಗ ಜನಗಳಿಗೆ ಮತಭೇದಗಳಿಲ್ಲದೆಯೂ ಪಕ್ಷಪಾತಗಳಿಲ್ಲದೆಯೂ ಸರಕಾರದ ಉದ್ಯೋಗಗಳೂ ಕೊಡಗ ಕೊಡಗೇತರರಲ್ಲಿ ನಡೆಯುವದಿಲ್ಲವೇ?

ಕೌನ್ಸಿಲ್, ಡಿ. ಬೋರ್ಡಿಗೆ ಮತಭೇದಗಳು ಇಲ್ಲವೆ ಕೊಡಗ ಕೊಡಗೇತರ ಬಹುಮತದಿಂದ ಚುನಾವಣೆ ಮೆಂಬರುಗಳು ಆಗುತ್ತಾ ಇಲ್ಲವೇ? ಸ್ವರಾಜ್ಯ ಮೊದಲು ಸಿಕ್ಕಬೇಕಾದರೆ ಈ ಕೊಡಗಿನಲ್ಲಿಯೇ ಮೊದಲು ಸಿಕ್ಕಲಿಕ್ಕೆ ಅರ್ಹರಾಗಿದ್ದಾರೆಂದು ತಿಳಿದಂಥವರು ಹೇಳಿದ್ದು ಕೇಳಲಿಲ್ಲವೇ? ಕೊಡಗರು ಕೌನ್ಸಿಲ್ ಮತ್ತು ಡಿ. ಬೋರ್ಡಿಗೆ ಓಟುಕೊಟ್ಟು ಕೊಡಗೇತರರನ್ನು ಆ ನಾಯಕರಲ್ಲವೇ? ಕೊಡಗೇತರರು ಕೊಡಗರಿಗೂ ಓಟುಕೊಟ್ಟು ಕೌನ್ಸಿಲ್ ಮತ್ತು ಡಿ. ಬೋರ್ಡಿಗೆ ಬಹುಮತದಿಂದ ಆರಿಸಿಲ್ಲವೇ? ಇದೇ ಕಾನ್ಸ್‌ಸ್ಟಿಟ್ಯುವೆನ್ಸಿಯಲ್ಲಿ ನಮ್ಮವರಲ್ಲಿ ತಾನೊಬ್ಬನೇ ವಿದ್ಯಾವಂತನೆಂದೂ ಬುದ್ಧಿವಂತನೆಂದೂ ನಟಿಸಿ ನಮ್ಮವರಲ್ಲಿ ಎಲ್ಲರೂ ತಾಂಥಾವರಿಗೇನೆ ಓಟುಕೊಡಬೇಕೆಂದೂ ಬೋಧಿಸಿದರೂ ಇವರ ಮಾತು ಕೇಳ ತಮ್ಮ ಮನಸ್ಸಿಗೆ ಯೋಗ್ಯರೆಂದು ಕಂಡವರಿಗೆ ತಮ್ಮ ಓಟನ್ನು ಕೊಡಗ ಕೊಡಗೇತರರೆಂದು ಭಿನ್ನಭೇದವನ್ನು ಇಡದೆ ಕೆಲಸ ಮಾಡಿಲ್ಲವೇ? ಆದ್ದರಿಂದ ಒಂದು ಕಾಲಕಸ್ಕೂ ಕೊಡಗರು ಕೊ

ಗೌಡರನ್ನು ದೂಷಿಸಿ ಭಿನ್ನಭೇದಗಳನ್ನು ಹೋಗಿಸಲಿಕ್ಕಿಲ್ಲವೆಂದು ಎಲ್ಲಾ ಕೊಡಗೌಡರು ನಂಬಬೇಕಾಗಿದೆ. ಈಗ ಒಬ್ಬೊಬ್ಬರು ತಾನೊಬ್ಬನೆ ತನ್ನ ಮತದವರಲ್ಲಿ ವಿದ್ಯಾವಂತನೆಂದೂ ಅಹಂಕಾರದಿಂದ ಎಲ್ಲರೂ ತಾನು ಹೇಳಿದ ಹಾಗೆ ಕೇಳಬೇಕು, ತನ್ನ ಮನಸಿನಲ್ಲಿ ತಾನೊಬ್ಬನೇ ಇವರಲ್ಲಿ ಲೀಡರೆಂದು ನೆನಸಿ ನೀವು ಕೌನ್ಸಿಲ್ ಮತ್ತು ಡಿ. ಬೋರ್ಡಿಗೆ ನಿಲ್ಲಬೇಕು, ನಾನು ನಮ್ಮವರಿಗೆಲ್ಲಾ ಹೇಳಿ ನಮ್ಮವರ ಓಟನ್ನೆಲ್ಲಾ ನಿಮಗೆ ಕೊಡಿಸುತ್ತೇನೆಂದೂ, ನಮ್ಮವರು ಒಂದು ಸರ್ತಿ ನಾನು ಹೇಳಿದರೆ ಕುರಿಗಳ ಹಾಗೆ ಎಲ್ಲರೂ ಓಟುಕೊಡಲಿಕ್ಕೆ ಬರುತ್ತಾರೆ ಎಂದೂ ಅಹಂಕಾರದ ಭರವಸೆ ಕೊಡ ತ್ತಾ ಇದ್ದಾರಂತೆ. ಇದನ್ನು ಓಟರುಗಳು ಚನ್ನಾಗಿ ಆಲೋಚಿಸಿ ವಿದ್ಯಾವಂತರಾದರೂ ಚಿಕ್ಕ ಪ್ರಾಯದವರಾಗಿ ಯಾವ ಅನುಭೋಗವಿಲ್ಲದವರು ಕುಣಿದಾಡುವ ಹಾಗೆ ನಾವು ಕುಣಿದಾಡಬಾರದೆಂದು ದೇಶದವರಲ್ಲಿ ನಮ್ಮ ವಿನಂತಿ. ಮುಸಲ್ಮಾನರೂ, ಲಿಂಗಾಯಿತರೂ, ಗೌಡ ಜನಾಂಗದವರೂ ಇನ್ನೂ ಅನೇಕ ನಿವಾಸಿಗಳೂ ಕೆಲವು ಜನಗಳ ದುಬೋಧನೆಗೆ ಮರಳಾಗಲಿಕ್ಕಿಲ್ಲವೆಂದೂ, ದೇಶದವರು ತಮ್ಮ ತಮ್ಮವರಲ್ಲಿ ದುರ್ಬೋಧನೆ ಕೇಳಿ ಹೊಡೆದಾಡಕ್ಕಿಲ್ಲವೆಂದೂ ನಂಬುತ್ತೇನೆ. ಎಲ್ಲರೂ ಒಂದೇ ತಾಯಿ ಮಕ್ಕಳೋಪಾದಿಯಲ್ಲಿ ಕೊಡಗ ಕೊಡಗೌಡರಾಗಿ ಭಿನ್ನಭೇದ ತೋರಿಸಬಾರದೆಂದು ಪ್ರಾರ್ಥನೆ

ಪಿ. ಎ. ಬೆಂಗಪ್ಪ.

ಹೊಸ ಪುಸ್ತಕ ಕ್ರಯ ೧—೦—೦

ಮೊದಲನೆಯ ಮುದ್ರಣ

ಸ್ತ್ರೀಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ತಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ಹೊಸವ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳನ್ನೂ ಚಿತ್ರಪಟಗಳಸಹಿತ ಕೂಡಿದೆ. ಕ್ರಯ ಪುಸ್ತಕ ೧ಕ್ಕೆ ರೂ. ೧—೦—೦

ಎಸ್. ವಿ. ಗೋಪಾಲ್ ಬುಕ್ ಡಿಪೋ,
52—37 37. ತಿರುಪಳ್ಳಿಬೀದಿ, ಮದರಾಸ್.

ಚಿಲಿಯನ್ ಸ್ಪೈಟ್ರೇಟ್ ಆಫ್ ಸೋಡಾ

"ಪೋರ್ಟ್ ಹುಳಗ ದೆಸೆಯಿಂದ ಕೆಟ್ಟುಹೋಗಿದ ತೋಟಗಿಡಗಳ ಸಂಖ್ಯೆಯು ಧಾತು ಗುಣದ (Mineral) ಗೊಬ್ಬರ ಹಾಕಿದ ಸ್ಥಳಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ದಾಪುರ ಪರೀಕ್ಷಾ ಕ್ಷೇತ್ರ (Experiment station) ದಲ್ಲಿ ಕಂಡ ಬಂದಿದೆ. ಆದುದರಿಂದ ರೋಬಸ್ಟ ಕಾಫಿ—ಹೋಲ್ ಬೋರರಿಗೆ ಸಾರಜನಕ ಗೊಬ್ಬರವು ಪ್ರತಿಬಂಧಕವಾಗುವದೆಂದು ತೋರುತ್ತದೆ" (ಪಿ. ಜಿ. ಮನ್ನ್ಯ್‌ವಾರ್ ಅಸಿಸ್ಟೆಂಟ್ ಎಂಟಮಾಲಜಿಸ್ಟ್, ಮೈಸೂರು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್)

ಚಿಲಿಯನ್ ಸ್ಪೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬೆಳೆದು ... ನಪ್ಪರೆ ರೋಗಗಳಿಗೆ ಪಕ್ಕಾಗ ಎಡೆಕೊಡದಂತಿರುವು. ಇದು ಹೊರತು ಚಿಲಿಯನ್ ಸ್ಪೈಟ್ರೇಟ್ ಆಫ್ ಸೋಡಾವನ್ನು ಬೆಳೆಗಳನ್ನು ಮುಖ್ಯವನ್ನು ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ಸ್ಪೈಟ್ರೇಟ್ ಆಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಎಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ಸ್ಪೈಟ್ರೇಟ್ ಆಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ ಪ್ಯಾರಿ ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಷನುಗಳಿಗಾದರೂ 8 ಹಂಡ್ರೆಡ್‌ವೇಟಿಗೆ 1ರ ದರದಂತೆ ೦—8—೦ರಂತೆ ಪಡೆಯಿಸಿ ಕೊಡುವರಲ್ಲದೆ, ಮಡಿಕೇರಿ, ವೀರರಾಜಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. ...—8—...ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದರ್ಶಿಪತ್ರಗಳು ಮುಂತಾದ ಪತ್ರಿಕೆಗಳು ವ್ಯಕ್ತಿಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು

(1) ಚಿಲಿಯನ್ ಸ್ಪೈಟ್ರೇಟ್ ಕಮಿಟಿ
ಇಂಡಿಯನ್ ಡಿಗೆಂಜನ್,
24—9 ಪೋ ಬಾ ನಂ 461 ಕಲ್ಕತ್ತಾ.

(2) ಮಿಸ್ಟರ್ ಯಂ. ಯು. ದೇವಪ್ಪ,
ಚಿಲಿಯನ್ ಸ್ಪೈಟ್ರೇಟ್ ಕಮಿಟಿ,
ಮಡಿಕೇರಿ.

Arms, Ammunition and Shooting Requisites !!!



Current Illustrated Catalogue Free on Application !

D B B L Rifles	Rs	120	to	Rs	2750
S B. B L	,	35	to	,	950
D B B L Guns	,	50	to	,	1350
S B B L.	„	35	to	,	275
D B M L	„	45	to	,	135
S B M L	„	30	to	„	80
B L Revolvers	,	35	to	„	350
Automatic Pistols	„	30	to	„	150

Brilliant Search Light Lamp For Shooting Camping ... and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS

Largest Importers of Firearms and Ammunition

Cheapest priced firm in India,

24—10 210 Abdul Rehman Street, BOMBAY

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್, ಹ್ಯಾಂಡ್ ಹಾರ್ಮೋನಿಯಂಗಳು.

1. 'ದಿಲ್ ಬಹರ್ ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ 1 ಕ್ಕೆ			40	8	0
2. "ಸಿದ್ದಪ್ಪಾಸ್ ಫ್ಲ್ಯೂಟ್"	,	„	42	8	0
3. ಶಕುಂತಲಾ	„	„	40	0	0
4. ಮೋಹನ್	„	„	37	8	0
5. ಮೋಸ್ಟೇಂ	„	„	35	0	0
6. ಮಹಾರಾಜಾ	„	„	32	8	0
7. ಕೋಹಿನೂರು	„	„	29	8	0
8. ಡೈಮಂಡ್	„	„	27	8	0
9. ಬಿಜಲೀ	„	„	25	0	0
10. "ದಿಲ್‌ಬಹರ್ ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1 ಕ್ಕೆ			85	0	0
11 ಕ್ರಿಷಲ್	„	„	56	0	0
12. ಮೋಹನ್	„	„	50	8	0

14 ಕ್ಯಾರೆಟ್ ಬಂಗಾರದ ನಿಬ್ಬುಳ್ಳ ಉತ್ತಮ ಬಂದೋಬಸ್ತಾದ ಫೌಂಟೆನ್ ಪೆನ್ನುಗಳು.

ವರ್ಲ್ಡ್ ವಂಡರ್ ಫೌಂಟನ್ ಪೆನ್ 1ಕ್ಕೆ	3	0	0
„ ಬಿಗ್‌ಬ್ಯಾರಲ್ „ „	3	2	0
„ ಸೆಕ್ರೆಟರಿ „ „	3	8	0
„ ಮೋಟಲ್ ಕಲರ್ „ „	3	14	0
„ ಮಿಸ್ಟ್ ಸೆಕ್ರೆಟರಿ „ „	4	4	0
„ ಜಾಯಿಂಟಲೆಸ್ ಸೆಲ್ಫ್‌ಫಿಲ್ಲಿಂಗ್ ಪೆನ್ ,	5	8	0
„ ಸ್ಪೆಷಲ್ ಪೆನ್ „ „	6	8	0
„ ಲೇಡೀಸ್ ಸ್ಪೆಷಲ್ ಮೋಟಲ್ ಕಲರ್ ಪೆನ್ „	4	8	0
ಬ್ಲಾಕ್‌ಬರ್ಡ್ ಪೆನ್ 1ಕ್ಕೆ 3 8 0 ಮತ್ತು	3	12	0
ಸ್ವಾನ್ ಪೆನ್ „ 6 8 0 ,	7	0	0
ವಾಟರ್‌ಮನ್ಸ್ ಐಡಿಯಲ್ 1 ಕ್ಕೆ 8 0 0 „	8	8	0
„ ಸೆಲ್ಫ್ ಫಿಲ್ಲಿಂಗ್ ಮತ್ತು ಸೇಫ್ಟಿ ಪೆನ್ 1ಕ್ಕೆ	12	0	0
ಬಿಗ್‌ಬ್ಯಾರಲ್ ಮಾಸ್ಟರ್ ಪೆನ್ „ „	8	0	0
„ ಸ್ವಾನ್ ಪೆನ್ 1ಕ್ಕೆ	17	0	0

ಜರ್ಮನಿಯ ಬಂದೋಬಸ್ತಾದ ಟೈಂಪೀಸುಗಳು.

ಸಣ್ಣ ಸ್ಪೆಷಲ್ ಜರ್ಮನ್ ಟೈಂಪೀಸು 1ಕ್ಕೆ	2	2	0
ಜರ್ಮನ್ ಸುಂದರ ಕೃತಿಯ ಅಲಾರಂ ಟೈಂಪೀಸು ,	3	12	0
ಜಪಾನೀಸ್ ಸಿಯಾ 'ಬಿ' ಟೈಂಪೀಸು „	5	13	0
„ ಅಲಾರಂ „ „	5	6	0
ಬಿಗ್‌ಬೆನ್ „ „ „	9	6	0
„ ಡಿಲಕ್ಸ್ ಸಣ್ಣದಿರುವ ಅಲಾರಂ ಟೈಂಪೀಸು „	13	5	0
ಘಂಟೆ ತೋರಿಸಿ ಅಲಾರಂ ಬಾರಿಸುವ ಟ್ರಾವೆಲ್ಲಿಂಗ್ ಕ್ಲಾಕ್ .	7	2	0
„ ರೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾಲೆಂಡರ್ ಕ್ಲಾಕ್ 1ಕ್ಕೆ	8	10	0
„ ಘಂಟೆ ಅರ್ಧ ಘಂಟೆ ಹೊಡೆಯುವ ಅಲಾರಂ ಸಹ ಬಾರಿಸುವ ಕ್ಯಾಲೆಂಡರ್ ಕ್ಲಾಕ್ 1ಕ್ಕೆ	9	12	0
ಘಂಟೆ ತೋರಿಸಿ ಅಷ್ಟಪಟ್ಟಿ ಕ್ರಿಮಿಗೆ ಅತ್ಯಾನಂದ ವಾಗುವಂತೆಗಳುಳ್ಳ ವಿಕ್ಟೋರಿಯಾ ಕ್ಲಾಕ್ 1ಕ್ಕೆ	1.	6	0

ಬೇರೆ ಕ್ರಿಸ್ತುವಾರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯಿರಿ: ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	30,000
ವಸೂಲಾದ ಶೇರ್ ಮೂಬಲಗು	—	20 600
ಒಪ್ಪಂದದ ಠೇವಣಾತಿ	—	1 88,[illegible]

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೆ ಹೆಚ್ಚಾಗಿ ಸಾಲಕೊಡಲ್ಪಡುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು ರಾವ್ ಬಹದ್ದೂರ್

ವೈಸ್ ಪ್ರೆಸಿಡೆಂಟ್, ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರಿಟರಿ

[illegible] ಯನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್.

ಮಡಿಕೇರಿ 1—7—1929

[illegible] ಸೂಚನೆ.

[illegible] ಕೆಳಗಿನ ವಾಚಕರೂ "ಕೊಡಗು" ಪತ್ರಿಕೆಯ [illegible] ಒಪ್ಪಿಕೊಂಡದ್ದರಿಂದ, [illegible] ನಮ್ಮ ರಶೀತಿ ಪುಸ್ತಕಗಳು [illegible] ಸಬ್ ಏಜೆಂಟರುಗಳಿಗೆ [illegible] ಚಂಗಂಡ [illegible] ಜವಾಬ್ದಾರಿಕೆ ಮೇಲೆ [illegible] ದಯವಿಟ್ಟು ಚಂದಾ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮ ಚಂಗಂಡ ಕುಟ್ಟಪ್ಪನವರು.

ಮರೆನಾಡು—ಮ ಕೇಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮ ಕಾಳಚೇರಿರ ನಂಜಪ್ಪನವರು, ಮತ್ತು ಮ ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ಮೂರ್ನಾಡು—ನಡಿಯಂಡ ದೇವಯ್ಯನವರು,

ಶ್ರೀಮಂಗಲನಾಡು—ಮ ಅಜ್ಜಮಾಡ ಮಾದಪ್ಪನವರು

ನಾಪೋಕ್ಲು—ಮ ಟಿ ಆರ್ ರಾಮಯ್ಯನವರು,

ಗೋಣಿಕೊಪ್ಪಲು—ಮ ಒಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮ ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮ [illegible] ಮುದ್ದಪ್ಪಯ್ಯನವರು,

ಮಡಿಕೇರಿ & ತಿತಿಮತ್ತಿ—ಮ ಬಿ ಮಾದಪ್ಪಯ್ಯನವರು,

ಸೂಚನೆ —[illegible] ಆದ ರಶೀತಿ ಹೊಂದಿರ ಇಲ್ಲದೆ ಯಾ ರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಿಗೂ ಇರಬೇಕಾದ ಅಮೂಲ್ಯ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲ ವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿನನುಸಾರವಾಗಿ ತಯಾರಿಸಲ್ಪಟ್ಟಿರುವ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವೀರರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮ್ಯಾನೇಜರ್, "ಕೊಡಗು" ಮಡಿಕೇರಿ



12 bore Victor Cartridges Rs 10/- Per 100

Mahomedally-Noorbhoy.

ARMS & AMMUNITION MART.

ಕಟುಕಷಾಯ ಮುಳಿಜ ರಕೆ—ಇದು ಇಂಜಕ್ಷನ್ ಮತ್ತು ಕ್ವಿನೈನು ಮೊದಲಾದವು ಗುಣವಾಗದಿರುವ ಮಲೆ ಜ್ವರ ದಿನಕ್ಕೆ ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ಸದಾ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಚಿತ ಗುಣ ಕೊಡುತ್ತದೆ. [illegible] ರೂ 1—4—0, 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ—ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ [illegible] ಮೂತ್ರಕೋಶದ ಉರಿ, ಮೂತ್ರ ಹಿಂಡಿಗಳ ಉರಿ ಮೂತ್ರನಾಳದಲ್ಲಿ ಹುಣ್ಣು, [illegible] ಕೀವು ಬರುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದ [illegible] ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಹಿಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ [illegible] ಔಷಧ ಚಿಕ್ಕ ಬಾಟ್ಲಿ 1 3 6ಕ್ಕೆ ರೂ 1—[illegible]—0 [illegible]—0 6—12—0

ರೋಮನಾಶಿನಿ:—ಈ ತುಡಿಯನ್ನು [illegible] ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—9—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, [illegible] ಶಿರಸ್ಸಿನಿಂದ ಕೀವು ಸೋರುವುದು ಶಿವುಡುತನ ಕಣ್ಣು ನೋವು ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವು ಕಣ್ಣಿಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ [illegible]—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ.

52—40 9- ಮಂಗಳೂರು.

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ ಗ್ರಾಮಾಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್ ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಬಿಡಿ ಬಿಡಿಯಾಗಿಯೂ ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ 8 ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಇನ್ನು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.

24—9

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ

ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.		
1925	296	ಲಕ್ಷ ರೂಪಾಯಿ
1926	391	„ „
1927	408	„ „
1928	585	„ „

ಪ್ರೀಮಿಯಂ ಆದಾಯ.		
1925	93	ಲಕ್ಷ ರೂಪಾಯಿ
1926	106	„ „
1927	122	„ „
1928	140	„ „

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ | 1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ

1921ರಲ್ಲಿ „ „ „ „ „ | 1927ರಲ್ಲಿ „ „ „ 25 „

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಒಂದರೆ ನಿಮಗೆ ಅದರಿಂದ ಲಾಭ ಉಂಟಾಗುವುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ.

52—29

ಸೋಲಾರ್ ಫೌಂಟನ್ ಪೆನ್.





ಈ ಪೇನಾವು ಇಂಗ್ಲೆಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಸಾಚಾ ಭಂಗಾರದಂಥ ನಿಬ್ಬು ಹಾಕಿದೆ. ಈ ಪೇನಾವನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣುವ ಟೇಬಲ್ ಟೈಂಪೀಸ್ ಇನಾಮು ಆಗಿ ಕೊಡುವೆವು.

ಇನಾಮು ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 3—8—0.

ವಿಳಾಸ —ಕೆ. ನಾಥಮುನಿ ಅಂಡ್ ಸನ್ಸ್, 168 ಜೈನಾ ಬಜಾರ್, ಮದರಾಸು.

52—7

ಭಂಗಾರದ ಉಂಗುರಗಳು ೦-೧೨-೦ ಆಣೆ





ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಒಂಗಾರದಿಂದ ತಟ್ಟಿದ ಕಟ್ಟಿದೆ. ಇದರ [illegible] ಎಲೆಕ್ಟ್ರೋ ಪದರಿನಿಂದ ಸವರನ್ ಭಂಗಾರದ ಬಣ್ಣ ಕೊಟ್ಟಿದೆ ಇವು ಸಾಚಾ ವಜ್ರದ ಉಂಗುರಗಳಿಗೆ ಸಮಾನವಾಗಿವೆ [illegible] ಉಂಗುರಗಳಿಗೆ ಒಂದು ಟೇಬಲ್ ಟೈಂಪೀ ಸನ್ನೂ, [illegible] ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, [illegible] ಉಂಗುರಗಳಿಗೆ ಒಂದು ಭಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ.

ವಿಳಾಸ —ಲೀಗಲ್ ವಾಚ್ ಕಂಪೆನಿ, ಪೋ ಬಾ. 243, ಮದರಾಸು.

52—3

Printed & published by P. I. Belliappa, at "Kodagu Press, Mercara

Reg. No. M. 1580.
If not delivered please return to
"KODAGU" OFFICE, MERCARA

ಕೊಡಗು

[illegible]

ವಾರ್ಷಿಕ ಚಂದಾ ರೂ. ೩-೮-೦, [illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಮಡಿಕೇರಿ, [illegible] ಶುಕ್ರವಾರ [illegible]

Post Box 423,
TRIPLICANE, MADRAS.

MANUFACTURES AND DEALS IN ALL:-

(1) Gemset Jewels, gold and silver articles of all patterns
(2) Race Cups, Caskets, Medals, etc., for presentation purposes
(3) Trovels, Keys, Locks, etc., for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

[illegible]
to [illegible]

UNDERTAKES

(1) Remaking or [illegible] sorts of old [illegible] latest pattern[illegible]
(2) Electro plating, g[illegible] ling
(3) Buying old [illegible] taking in [illegible]

V. SUBRAMANIA IYER
JEWELEER

Telephone:-
3145.

Telegrams:-
PRECIO[illegible]

Gold-smith, Silver-smith, & Dealer in all Gemset Jewels.

52-45

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ
ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ

ರತನ್ ಮಿಶ್ರಿ ಹಲ್ವಾ

ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು ನೀರಾಗಿರುವಿಕೆ ರಾತ್ರಿ ಸ್ವಪ್ನದಲ್ಲಿ ಸ್ಖಲನೆಯಾಗುವಿಕೆ, ಅತಿ ಸ್ವೇಚ್ಛಾಪ್ರವರ್ತನೆಯಿಂದಲೂ, ಬಾಲ್ಯದ ದುರಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ಶೀಘ್ರ ಸ್ಖಲನೆಯಾಗುವಿಕೆ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಯುವಿಕೆ, ಚಿರಕಾಲದ ಮೇಹ ವ್ಯಾಧಿಯಿಂದ ಶರೀರವು ನಶಿಸಿ ಹೋಗುವಿಕೆ, ನೇತ್ರರೋಗ, ಚರ್ಮವ್ಯಾಧಿ, ಉಷ್ಣವಾಯು ಸಂಬಂಧರೋಗ, ಎದೆ ಕಟ್ಟಲೆ, ಮೇಹಪಡೆ, ಅಜೀರ್ಣ, ಕೆಮ್ಮು ಈ ವಿಧವಾದ ನಾನಾ ರೋಗಗಳನ್ನು ಗುಣಪಡಿಸಿ ಧಾತುಪುಷ್ಟಿ, ಶರೀರ ಪುಷ್ಟಿಯನ್ನುಂಟುಮಾಡುವುದು ಹೆಂಗಸರು ಸೇವಿಸಿದಲ್ಲಿ [illegible] ಗಳೆಲ್ಲಾ ನೀಗುವವು. **ಸಂಪೂರ್ಣ ಗುಣ ಉಂಟಾಗಲು ೩-೪ ಡಬ್ಬಿಗಳನ್ನು ಉಪಯೋಗಿಸಬೇಕು.**

ಕ್ರಯ:—೧ ಪೌಂಡು ಟಿನ್ ೧ಕ್ಕೆ ರೂ. ೫—೦—೦, ಅರ್ಧ ಪೌಂಡು ಟಿನ್ ೧ಕ್ಕೆ ರೂ. ೨—೮—೦
ಚಿಕ್ಕಪೇಟೆ, ವಿದ್ಯಾವಿಲಾಸ ಬುಕ್ಕು ಡಿಪೋವಿನಲ್ಲೂ ದೊರಲ್ಪಡುತ್ತೆ.

52-31. ವ್ಯವಸ್ಥಾಪಕರು—ರತನ್ ಮಿಶ್ರಿ ಡಿಪೊ. (ಆಂಜನೇಯ ಜ್ಯೋತಿಷಾಲಯ,)
ಚೌಡೇಶ್ವರಿಗುಡಿ ಬೀದಿ, ಬೆಂಗಳೂರು ಸಿಟಿ.

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

ಈ ಮಾತ್ರೆಗಳನ್ನು ಶುದ್ಧವಾದ [illegible]
ದ ತಯಾರಿಸಿದ್ದೇ[illegible]
ವು ಸ್ವಲ್ಪವಾದರೂ ಇದಕ್ಕೆ [illegible]
ಬಾಧಗಳನ್ನು ಶೀಘ್ರ [illegible]
ಈ ಮಾತ್ರೆಗಳಿಗೆ ಬೇ[illegible]
ಗಳು ಪತ್ರ ಸಾಕ್ಷಿ[illegible]

ಮದನ [illegible]
ಮಾತ್ರೆಗಳು.

ಧಾತು ಪುಷ್ಟಿಯನ್ನು ಕೊಡುವದರಲ್ಲಿ [illegible] ರಹಿತವಾದುದು. ಒಂದು ಡಬ್ಬಿಯ ಕ್ರಯ ೧-೦-೦

52-49 ಮದನಮಂಜರಿ ಫಾರ್ಮಸಿ,
1/94 ಚೀನಾ ಬಜಾರ್, ಮದ್ರಾಸ್.

ಶ್ರೇಷ್ಠವಾದ 5 ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ. 40. ಅಸಲ್ ಗೋರೋಚನ ತೊಲ 1ಕ್ಕೆ ರೂ. 12.
ಕೇಸರಿ ಅಥವಾ ಕುಂಕುಮ್ಮಪುವ್ವ ತೊಲ 1ಕ್ಕೆ ರೂ. 3½ ಪಚ್ಚ ಕರ್ಪೂರ ತೊಲ 1ಕ್ಕೆ ರೂ. 2¼.
ಕಾಬೂಲ ಇಂಗು ತೊಲ 10 ಕ್ಕೆ ರೂ. 1.

ಶ್ರೇಷ್ಠವಾದ 108 ಮಣಿವುಳ್ಳ ರುದ್ರಾಕ್ಷಿ ಜಪ ಮಾಲೆ 1ಕ್ಕೆ ಆಣೆ 6, 8, 12. ರೂ. 1, 2, 5, 10 ರ ವರೆಗೆ
32 ಮಣಿವುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ. 1, 2, 3, 4, 5 8, 10 ರ ವರೆಗೆ.
ಮತ್ತು ಎಲ್ಲಾ ವಿಧವಾದ ರೇಷ್ಮೆ ಜರಿ ಶೀರೆಗಳು, ಕಣಗಳು, ಮುಗುಟ ಪಗ್ಗಿಡಾದಿ ಎಲ್ಲಾ ಸರಕುಗಳು ದೊರೆಯುತ್ತೆ. ಸಾವಕಾಶ ಮಾಡದೆ ಈ ಕೆಳಗಿನ ಅಡ್ರಸ್ಸಿಗೆ ಆರ್ಡರು ಕೊಡಿರಿ. ಸರಕುಗಳು ಸುಲಭ ಕ್ರಯಕ್ಕೆ ದೊರೆಯುತ್ತೆ.

ಅಡ್ರಸ್—

ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್," ಶ್ರೀಕಾಶಿ.

BHARADWAJ & CO.,
"SILK HOME,"
Benares City.

52-48

ಏಕೆ ನರಳುತ್ತೀರಿ?

ಕ್ರಯವು [illegible]
ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯೆ

ಎಂಬ ಪುಸ್ತಕವನ್ನು ಓದಿ. ಬಂದ ರೋಗ[illegible]
[illegible] ವಿಧಾನದಿಂದು [illegible]
[illegible]

52-49 ಮದನಮಂಜರಿ ಫಾರ್ಮಸಿ,
[illegible]

ಕೊಡಗು.

ಸನ್ ೧೯೨೯ನೇ ಇಸವಿ

ಜುಲೈ ತಾ. ೨೬ ನೇ ಶುಕ್ರವಾರ.

ಕಾಂಗ್ರೆಸ್ ಮುಸ್ಲಿಮ್ ಪಾರ್ಟಿ.

ಹಿಂದೂದೇಶದ ಒಗ್ಗಟ್ಟಿಗೆ ಹಿಂದೂ—ಮುಸಲ್ಮಾನರ ಐಕ್ಯತೆಯ ಸಮಸ್ಯೆಯೇ ಪ್ರಾಮುಖ್ಯವಾದದ್ದೆಂಬುದು ಎಲ್ಲರಿಗೂ ತಿಳಿದದ್ದಾಗಿದೆ. ಇದನ್ನು ಸಾಧಿಸಲು ಹಲವು ಮುಂದಾಳುಗಳು ಪ್ರಯತ್ನಿಸುತ್ತಿರುವದಾದರೂ, ಅದು ಸಾಕಷ್ಟು ಫಲದಾಯಕವಾಗಿದೆಯೆಂದು ಹೇಳಲಾಗುವದಿಲ್ಲ. ರಾಜಕೀಯ ವಿಚಾರದಲ್ಲಿ ಎಂದು ರಾಷ್ಟ್ರೀಯತ್ವವು ತಮ್ಮ ಸ್ವಧರ್ಮಗಳಿಗಿಂತ ಪ್ರಾಮುಖ್ಯತೆಯನ್ನು ಪಡೆಯುತ್ತದೋ ಅಂದು ಒಗ್ಗಟ್ಟಿನ ಒಗಟೆಯು ಬಿಡಿಸಲ್ಪಡುವುದು. ಅದಿಸವರೆಗೆ ಜಾತಿವಾರು ಯಾ ಮತವಾರು ಎಷ್ಟು ರಿಯಾಯಿತಿಗಳನ್ನು ಪ್ರತ್ಯೇಕಿಸಿ ಇಟ್ಟು ಐಕ್ಯತೆಯನ್ನು ಸಾಧಿಸಿದರೂ ಅದು ಚಿರಕಾಲವಿರಲಾರದು. ಅದು ಹೆಸರು ಮಾತ್ರದ ಒಗ್ಗಟ್ಟಾಗಿ ಪರಿಣಮಿಸುವುದು. ಈ ತತ್ವವನ್ನನುಸರಿಸಿಯೇ ಈಗ ಕೆಲವು ಮಹಮ್ಮದೀಯ ಮುಖಂಡರು 'ಕಾಂಗ್ರೆಸ್ ಮುಸ್ಲಿಮ್ ಪಾರ್ಟಿ'ಯನ್ನು ಏರ್ಪಡಿಸಿರುವುದು ದೇಶದ ಏಳಿಗೆಗೆ ಶುಭ ಚಿನ್ಹೆಯಾಗಿದೆ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಪ್ರಾರಂಭದ ವರ್ಷಗಳಲ್ಲಿ, ಅದು ಒರೇ ಹಿಂದುಗಳ ಸಂಸ್ಥೆಯೆಂದೂ, ಅದರಿಂದ ಮುಸಲ್ಮಾನರ ಹಕ್ಕು ಬಾಧ್ಯತೆಗಳಿಗೆ ಕೆಡಕಾಗುವುದೆಂದೂ ಊಹಿಸಿ ಮುಸಲ್ಮಾನರು ಅದಕ್ಕೆ ಸೇರದೆ ದೂರ ನಿಂತರು. ಆದರೆ ವರ್ಷಗಳು ಕಳೆಯುತ್ತಾ ಬಂದ ಹಾಗೆ ಕಾಂಗ್ರೆಸ್ ಸಂಸ್ಥೆಯ ಜಾತಿ ಮತ ಭೇದವಿಲ್ಲದ ರಾಷ್ಟ್ರೀಯತ್ವದ ಕೆಲಸ ಕಾರ್ಯಗಳನ್ನು ನೋಡಿ ಮುಸಲ್ಮಾನ ಸಹೋದರರು ತಮ್ಮ ಕೋಮುವಾರು ತತ್ವವನ್ನು ಬಿಟ್ಟು ಈ ರಾಷ್ಟ್ರೀಯ ಸಭೆಗೆ ಹೆಚ್ಚಾಗಿ ಸೇರಲಾರಂಭಿಸಿದರು. ನಂತರ ಕಾಂಗ್ರೆಸ್ಸಿಗೆ ಹಿಂದೂದೇಶದಲ್ಲಿಯೂ, ಹೊರಗೂ ಪ್ರಾಶಸ್ತ್ಯವನ್ನು ಸಂಪಾದಿಸಲು ಹಿಂದೂ ಮುಖಂಡರಂತೆಯೇ ಮುಸಲ್ಮಾನ ಮುಂದಾಳುಗಳೂ ಸರ್ವ ಪ್ರಯತ್ನಗಳನ್ನು ನಡಿಸುತ್ತಾ ಬಂದರು. ಆದರೆ ಇತ್ತೀಚೆಗೆ ಕಾಂಗ್ರೆಸ್ಸಿನೊಳಗಿದ್ದ ಮಹಮ್ಮದೀಯರಲ್ಲಿ ಕೆಲವರು ಆ ಸಂಸ್ಥೆಯನ್ನು ಬಿಟ್ಟು ಅದರ ಶತ್ರುಗಳೊಂದಿಗೆ ಸೇರಿಕೊಂಡು, ಅದರ ಉದ್ದೇಶಗಳಿಗೆ ವಿರೋಧವಾಗಿ ಕೆಲಸಮಾಡುತ್ತಿರುವದು ಹಿಂದೂದೇಶದ ದುರ್ದೆಶೆಯಾಗಿದೆ.

ವಾಡಿಕೆಯಾಗಿ ಮಹಮ್ಮದೀಯ ಮತಸ್ಥರು ಕಡುತರದ ಮತ ಪ್ರೇಮಿಗಳೆಂದು ಕೆಲವು ವರ್ಷಗಳ ಹಿಂದೆ ಎಣಿಸಲ್ಪಡುತ್ತಿದ್ದರು. ಆದರೆ ಪರದೇಶಗಳಲ್ಲಿರುವ ಮುಸಲ್ಮಾನರ ವರ್ತನೆಯು ಈಗ ಬಹಳ ಬದಲಾವಣೆಯನ್ನು ಹೊಂದಿದೆ. ತುರ್ಕಿಸ್ಥಾನದಲ್ಲಿ ರಾಜ್ಯಾಡಳಿತದಲ್ಲಿ ಮತದ ಗುರುಗಳಿಗೆ ಇದ್ದ ಪ್ರಾಮುಖ್ಯತೆಯು ಹೋಗಿ, ಈಗ ರಾಷ್ಟ್ರೀಯತ್ವಕ್ಕೆ ಪ್ರಾಶಸ್ತ್ಯ ಬಂದಿದೆ. ಮತದ ಏಳಿಗೆಗಿಂತ ರಾಷ್ಟ್ರದ ಏಳಿಗೆಯನ್ನೇ ಬಯಸಿ ಕಾರ್ಯಭಾರಗಳು ನಡಿಸಲ್ಪಡುತ್ತಿರುವವು. ಪರ್ಷಿಯಾದಲ್ಲಿ ಕೆಲವು ಕಾಲದ ಮುಂಚೆ ಅರಬೀ ಭಾಷೆಗೇನೇ ಪ್ರಾಮುಖ್ಯತೆ ಇತ್ತು. ಈಗ ಅಲ್ಲಿಯ ಶಾಲೆಗಳಲ್ಲೂ, ಕೋರ್ಟು ಕಚೇರಿಗಳಲ್ಲೂ ಅರಬೀ ಭಾಷೆಯ ಬದಲು ಅಲ್ಲಿಯ ರಾಷ್ಟ್ರೀಯ ಭಾಷೆಯಾದ ಪರ್ಷಿಯ ಭಾಷೆಯು ಉಪಯೋಗಿಸಲ್ಪಡುತ್ತಿದೆಯಂತೆ. ರಾಷ್ಟ್ರೀಯ ಭಾವನೆಯೇ ಎಲ್ಲದಕ್ಕಿಂತಲೂ ಮುಂದಿರಿಸಲ್ಪಟ್ಟಿದೆ. ಅಲ್ಲದೆ ಆ ದೇಶದಲ್ಲಿ ಮುಸಲ್ಮಾನರಿಗೆ ಇರುವ ಸ್ವಾತಂತ್ರ್ಯಗಳೇ ಪರಧರ್ಮಿಯರಾದ ಹಿಂದು, ಸಿಖ್ಖ ಮುಂತಾದವರಿಗೆ ಸಹ ಕೊಡಲ್ಪಟ್ಟಿವೆ. ರಷ್ಯಾ ದೇಶದೊಳಗಿರುವ ಮುಸಲ್ಮಾನರು ಪ್ರತ್ಯೇಕವಾಗಿ ನಿಲ್ಲದೆ ರಾಜ್ಯಾಡಳಿತದಲ್ಲಿ ಬೇರೆಯವರೊಂದಿಗೆ ಬೆರೆತು ಕೆಲಸ ಮಾಡುತ್ತಿರುವರು. ನಮ್ಮ ನೆರೆರಾಜ್ಯವಾದ ಅಫ್ಘಾನಿಸ್ಥಾನದ ಪರಿಸ್ಥಿತಿಯು ಎಲ್ಲರಿಗೂ ಬೇಸರಿಕೆಯನ್ನುಂಟುಮಾಡುವಂಥಾದ್ದಾಗಿದೆ. ರಾಜ ಅಮಾನುಲ್ಲಾರವರು ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರವಾಸ ಮಾಡಿ ಆಡಳಿತದಲ್ಲೂ, ಸಮಾಜದಲ್ಲೂ ಕಾಲಕ್ಕೆ ತಕ್ಕಂಥ ಸುಧಾರಣೆಗಳನ್ನು ಜಾರಿಗೆ ತಂದು, ಏಷ್ಯಾ ಖಂಡದಲ್ಲಿ ಇನ್ನೊಂದು 'ಜಪಾನ'ನ್ನು ಸ್ಥಾಪಿಸಲು ಮಾಡಿದ ಉತ್ತಮ ಪ್ರಯತ್ನಗಳ ಪ್ರಯೋಜನವನ್ನು ಅರಿತುಕೊಳ್ಳದೆ ಮತಭ್ರಾಂತರಾದ ಅಲ್ಲಿಯ ಮುಲ್ಲಾರವರು ಅವರನ್ನು ವಿರೋಧಿಸಿ ಯುದ್ಧಕ್ಕೆ ಎಡೆಕೊಟ್ಟರು. ಇನ್ನೂ ಅಂತ್ಯವಾಗದೆ ಇರುವ ಈ ಯುದ್ಧದಿಂದ ಅಮಾನುಲ್ಲಾರವರು ದೇಶ ಬಿಟ್ಟು ಹೋದದಲ್ಲದೆ, ಆ ದೇಶಕ್ಕೆ ಎಷ್ಟರ ಮಟ್ಟಿಗೆ ಕೆಡುಕು ಉಂಟಾಗಿದೆಯೆಂದು ವಿವರಿಸಲು ಸಾಧ್ಯವಿಲ್ಲ. ಈ ಉದಾಹರಣೆಗಳನ್ನೆಲ್ಲಾ ಹಿಂದೂದೇಶದ ಮುಸಲ್ಮಾನರು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಒಂದಕ್ಕಿಂತ ಹೆಚ್ಚು ಮತಗಳ ಜನರು ಇರುವ ದೇಶಗಳಲ್ಲಿ ರಾಜ್ಯಭಾರಕ್ರಮದಲ್ಲಿ ಮತಕ್ಕೇನೇ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟರೆ ಎಲ್ಲಾ ವಿಷಯಗಳಲ್ಲೂ ಎಳೆದಾಟವು ಉಂಟಾಗುವುದಲ್ಲದೆ ಐಕ್ಯತೆಗೆ ಎಡೆ ಇಲ್ಲದಾಗುವದರಲ್ಲಿ ಸಂದೇಹವಿಲ್ಲ. ಮತದ ಪ್ರಾಮುಖ್ಯತೆಯ ಕಾಲವು ಕಳೆದು ಹೋಯಿತು. ಈಗ ರಾಷ್ಟ್ರೀಯತ್ವದ ತೆರೆಯು ಪ್ರಪಂಚದ ಮೇಲೆ ಹರಡುತ್ತಿದೆ. ಇದನ್ನು ಅನುಸರಿಸಿ ನಡೆಯುವವರು ಅಭಿವೃದ್ಧಿಗೊಳ್ಳುವರು. ಇದನ್ನು ವಿರೋಧಿಸಿ ಯಾ ಅಲ್ಲಗಳೆದು ವರ್ತಿಸುವವರು ನಾಶವಾಗುವರು ಇಲ್ಲವೇ ಮೂಲೆಗೆ ಒತ್ತಲ್ಪಡುವರು. ಹೊರ ಪ್ರದೇಶಗಳ ಮುಸಲ್ಮಾನರ ಸುಧಾರಿಸಿದ ವರ್ತನೆಗಳನ್ನು ಹಿಂಬಾಲಿಸಲು ಹಿಂದೂದೇಶದ ಮುಸಲ್ಮಾನರ ಕೆಲವು ಮುಖಂಡರು ಪ್ರಾರಂಭಿಸಿರುವುದು ಆ ಮತದವರ ಏಳಿಗೆಗೂ, ಭಾರತ ಭೂಮಿಯ ಅಭಿವೃದ್ಧಿಗೂ ಉತ್ತೇಜನ ಕೊಡದೆ ಇರದು.

ಹಿಂದೂದೇಶದ ಎಲ್ಲಾ ಪಾರ್ಟಿಗಳ ಪ್ರತಿನಿಧಿಗಳು ಸೇರಿ ನೇಮಿಸಿದ ನೆಹರು ಕಮಿಟಿಯವರು ತಯಾರಿಸಿರುವ ರಾಜಕೀಯ ರಚನೆಯು ಮುಸಲ್ಮಾನರಲ್ಲಿ ಕೆಲವು ಧುರೀಣರಿಗೆ ಒಪ್ಪದ್ದರಿಂದ ಅಂಥವರು ಕೋಮುವಾರು ತತ್ವಕ್ಕೆ ವಿಶೇಷ ಪ್ರಾಮುಖ್ಯತೆ ಕೊಟ್ಟು ರಾಷ್ಟ್ರೀಯತ್ವಕ್ಕೆ ಅಡ್ಡಬರುತ್ತಿರುವದಾಗಿದೆ. ಆದರೆ ಆ ಕಮಿಟಿಯ ಅಧ್ಯಕ್ಷರೂ, ಕಾಂಗ್ರೆಸ್ ಸಭೆಯ ಅಧ್ಯಕ್ಷರೂ ಆಗಿರು ಶ್ರೀಯುತ ಪಂಡಿತ ಮೋತಿಲಾಲ್ ನೆಹರುರವರು ಆ ವರದಿಯಲ್ಲಿ ಮಹಮ್ಮದೀಯ ಮುಂದಾಳುಗಳಿಗೆ ಒಪ್ಪದಿರುವ ಅಂಶಗಳು ಒಂದೋ ಎರಡೋ ಇವೆಯೆಂದೂ, ಇನ್ನಾದರೂ ಅವುಗಳನ್ನು ಚರ್ಚಿಸಿ ತೀರ್ಮಾನಿಸಿಕೊಳ್ಳಬಹುದೆಂದೂ, ಸದರಿ ರಿಪೋರ್ಟಿನಲ್ಲಿ ಕೇಳುವಂಥ ವಸಾಹತು ಸಾಮ್ರಾಜ್ಯವು ದೊರೆತಾಗ ಇವುಗಳು ಮಾತ್ರವಲ್ಲ, ಬೇರೆ ಯಾವ ವ್ಯತ್ಯಾಸಗಳನ್ನಾದರೂ ಒಡನೆ ಸರಿಪಡಿಸಿಕೊಳ್ಳಬಹುದೆಂತಲೂ ಹೇಳಿರುವರು. ಬೊಂಬಾಯಿಯ ಒಬ್ಬ ಮುಸಲ್ಮಾನ ಪ್ರಮುಖರಾದ ಮಿ. ಛಗ್ಲಾರವರು ನೆಹರುರವರ ಈ ಹೇಳಿಕೆಯನ್ನು ಹೊಗಳಿ, ನೆಹರುರವರು ಒಡನೆ ಮುಸಲ್ಮಾನರ ಮುಂದಾಳಾದ ಮಿ. ಜಿನ್ನಾರವರೊಂದಿಗೆ ಸದರಿ ವರದಿಯಲ್ಲಿ ಇವರ ಮತಸ್ಥರಿಗೆ ಇರುವ ವ್ಯತ್ಯಾಸಗಳನ್ನು ಕುರಿತು ಚರ್ಚಿಸಿ ಸರಿಪಡಿಸಿಕೊಳ್ಳುವದು ಉತ್ತಮವೆಂತಲೂ, ಹೀಗೆ ಮಾಡಿದರೆ ಮುಸಲ್ಮಾನ ಜಮಾತಿನವರು ನೆಹರು ವರದಿಗೆ ಒತ್ತಾಸೆಕೊಡುವುದರಲ್ಲಿ ಸಂದೇಹವಿಲ್ಲವೆಂತಲೂ ಸೂಚಿಸಿರುವರು. ಈ ಸೂಚನೆಗೆ ತಕ್ಕಷ್ಟು ಗಮನಕೊಡಲಾದೀತೆಂದು ನಂಬುತ್ತೇವೆ.

ಈ ಮಧ್ಯೆ ಕೋಮುವಾರು ತತ್ವಾವಲಂಬಿಗಳಾದ ಕೆಲವು ಮುಸಲ್ಮಾನರು ಸೈಮನ್ ಕಮಿಷನಿನೊಂದಿಗೆ ಸಹಕರಿಸಿ ಅವರ ಮುಂದೆ ತಮ್ಮ ಅಭಿಪ್ರಾಯಗಳನ್ನು ಇಟ್ಟದ್ದು ಸಾಲದೆಂದು ಇಂಗ್ಲೇಂಡಿಗೆ ಒಂದು ಮುಸಲ್ಮಾನ ಡೆಪ್ಯುಟೇಶನನ್ನು ಕಳುಹಿಸಬೇಕೆಂದು ನಿಶ್ಚಯಿಸಿರುವರು. ಇದರಿಂದ ರಾಷ್ಟ್ರೀಯತ್ವಕ್ಕೆ ತುಂಬಾ ಹಾನಿಯಾಗುವದೆಂದೇ ಮಿ. ಜಿನ್ನಾರವರಂಥವರು ಇದಕ್ಕೆ ವಿರೋಧಿಸಿರುವದಾಗಿದೆ. ನೆಹರು ವರದಿಗೂ, ನೇಶನಲ್ ಕಾಂಗ್ರೆಸ್ಸಿಗೂ ವಿರೋಧವಾಗಿ ಕೆಲಸ ಮಾಡುವವರ ಚಳವಳಿವು ಪ್ರಬಲವಾಗುತ್ತಿರುವುದನ್ನು ರಾಷ್ಟ್ರೀಯ ಭಾವನೆ ತುಂಬಿ ತುಳುಕುತ್ತಿರುವ ಮಹಮ್ಮದೀಯ ಧುರೀಣರು ಸಹಿಸಲಾರದೆ, ತಾವು ಕಾಂಗ್ರೆಸ್ಸಿನೊಳಗೆ ಮಾತ್ರ ಕೆಲಸ ಮಾಡಿದರೆ ಸಾಲದೆಂದು, ತಮ್ಮದೊಂದು ಪ್ರತ್ಯೇಕ ಸಂಘವನ್ನು ಮಾಡಿಕೊಂಡು ಕೋಮುವಾರು ತತ್ವದ ಚಳವಳಿಯನ್ನು ಎದುರಿಸಲು ಮುಂದೆ ಬಂದಿರುವರು. ಬೊಂಬಾಯಿಯ ಮಿ. ಬ್ರೆಲ್ವಿಯವರು, ಡೆಲ್ಲಿಯ ಡಾಕ್ಟರ್ ಅನ್ಸಾರಿಯವರ, ಮಿ. ಕಿಡ್ವಾಯಿಯವರು, ಮೌ. ಶಿವಾನಿಯವರೇ ಮುಂತಾದ ಮುಂದಾಳುಗಳು ಕೈಗೊಂಡಿರುವ 'ಕಾಂಗ್ರೆಸ್ ಮುಸ್ಲಿಮ್ ಪಾರ್ಟಿ'ಯ ಕೆಲಸವು ಜಯಪ್ರದವಾಗುವದೆಂಬುದರಲ್ಲಿ ಸಂಶಯವಿಲ್ಲ. ಆದರೆ ಇವರ ಉದ್ದೇಶವು ಕೈಗೂಡಬೇಕಾದರೆ ಇವರು ಬಹು ಶ್ರಮಪಟ್ಟು ಕೆಲಸ ಮಾಡಬೇಕಾಗಿದೆ. ಇವರ ದಾರಿಯಲ್ಲಿ ತುಂಬಾ ಅಡಚಣೆಗಳು ಇವೆ. ಯಾಕೆಂದರೆ, ಸ್ವಾತಂತ್ರ್ಯದ ಹೋರಾಟಕ್ಕೆ ಪ್ರತಿ ಫಲವಾಗಿ ಕೊಡುವ ಎಲ್ಲಾ ತರಹದ ಕಷ್ಟ ಮತ್ತು ನಿಸ್ವಾರ್ಥತೆಯ ಸೇವೆಯು ರಾಷ್ಟ್ರೀಯತ್ವಕ್ಕಿಂತ ಸರಕಾರಿ ಉದ್ಯೋಗಗಳ ರೂಪದಲ್ಲಿ ಬರೆಯಾಡುವ ಕೋಮುವಾರು ತತ್ವದ ಮತ್ತು ಸ್ವಾರ್ಥತೆಯ ಹೋರಾಟವು ಜನರನ್ನು ಹೆಚ್ಚಾಗಿ ಎಳೆಯುತ್ತದೆ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಧ್ಯೇಯಕ್ಕಾಗಿಯೇ ಕೆಲಸ ಮಾಡಲು ಹೊರಡಿಸಿರುವ ಕಾಂಗ್ರೆಸ್ ಮುಸ್ಲಿಮ್ ಪಾರ್ಟಿಯ ಅಪ್ಪೀಲು ನಮ್ಮ ಕೈ ಸೇರಿದೆ. ಪ್ರತಿ ಕೋಮಿನ ಉದ್ಧಾರವು ಇಡೀ ರಾಷ್ಟ್ರದ ಉದ್ಧಾರದೊಳಗೆ ಅಡಗಿದೆ ಎಂದು ನಂಬುವ ನಾವು ಇಡೀ ಭರತ ಖಂಡದ ಸ್ವಾತಂತ್ರ್ಯದ ಹೋರಾಟಕ್ಕೆ ಹಿಂದೂ ಮುಸಲ್ಮಾನರನ್ನು ಒಟ್ಟುಗೂಡಿಸಲು ಸೊಂಟಕಟ್ಟಿರುವ ಈ ಸಂಸ್ಥೆಗೆ ನಮ್ಮ ದೇಶದ ಮುಸಲ್ಮಾನ ಸಹೋದರರೂ ಒತ್ತಾಸೆ ಕೊಡಬೇಕಾಗಿ ಕೇಳಿಕೊಳ್ಳದೆ ಇರಲಾರೆವು.

ಸಹಕಾರಿ ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 21ರಲ್ಲು ನಡೆಯಿತು. ಹಾಜರಿದ್ದ ಮೆಂಬರುಗಳು—1. ರಾ. ಬಾ. ಕೋದಂಡ ಅಪ್ಪಯ್ಯನವರು (ಪ್ರೆಸಿಡೆಂಟರು), 2. ರಾ. ಸಾ. ಪಟ್ಟಮಾಡ ದೇವಯ್ಯನವರು, 3. ಮಿ ಗಳಾದ ಸಿ ಯನ್. ವೆಂಕಪ್ಪಯ್ಯನವರು (ಗೌರವ ಸೆಕ್ರೆಟರಿ), 4 ಯನ್. ಮುದ್ದಪ್ಪನವರು, 5 ಕೊಂಗಟ್ಟಿರ ಅಪ್ಪಯ್ಯನವರು (ಟ್ರೆಜರರ್), 6. ಕೋಟೆರ ಚಿಣ್ಣಪ್ಪನವರು, 7. ಪಂದ್ಯಂಡ ಬೆಳ್ಯಪ್ಪನವರು, 8 ಎ ಕೆ. ಕೃಷ್ಣಯ್ಯನವರು, 9. ಪಾಂಡಂಡ ಎ. ಚಂಗಪ್ಪನವರು, 10. ಮನೆಯಪಂಡ ಯಂ ಬೆಳ್ಯಪ್ಪನವರು ಮತ್ತು 11. ಚಮ್ಮರ ಮಾದಪ್ಪನವರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು

2. ಜೂನ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರು ಮಾಡಲ್ಪಟ್ಟವು. (1) ಹೆಂಮನಾಡು ಸೊಸೈಟಿಗೆ ರೂ. 500 (2) ಕದಮುಳ್ಳನಾಡು ಸೊಸೈಟಿಗೆ ರೂ. 500, (3) ಬೇಗೂರು ಸೊಸೈಟಿಗೆ ರೂ. 1000, 4 ಬೆಟ್ಟಕೇರಿ ಸೊಸೈಟಿಗೆ ರೂ 600, (5) ಅರೆಯೂರು ಸೊಸೈಟಿಗೆ ರೂ. 600, (6) ಮುಳ್ಳೂರು ಸೊಸೈಟಿಗೆ ರೂ. 400 (7) ಕಿರುಗೂರು ಸೊಸೈಟಿಗೆ ರೂ. 1000, (8) ಈಚೂರು ಐಮ್ಯಪ್ಪ ಸೊಸೈಟಿಗೆ ರೂ. 750, (9) ಕಣಗಾಲು ಸೊಸೈಟಿಗೆ ರೂ. 700, (10) ಕೋಟೂರು ಸೊಸೈಟಿಗೆ ರೂ. 2000, (11) ಕಾಂಡನಕೊಲ್ಲಿ ಸೊಸೈಟಿಗೆ ರೂ 200, (12) ತಿಗ್ಗಳು ಮಕ್ಕೊಳ ಸೊಸೈಟಿಗೆ ರೂ. 2000, (13) ಬೆಕ್ಕೆಸೊಡ್ಲೂರು ಸೊಸೈಟಿಗೆ ರೂ. 1000, (14) ಗೆಜ್ಜೆಹಣಕೋಡು ಸೊಸೈಟಿಗೆ ರೂ. 450. (15) ಗೋಣಿಕೊಪ್ಪಲು ಟವುನ್ ಸೊಸೈಟಿಗೆ ರೂ. 750, (16) ಅತ್ತೂರುಕೊಲ್ಲಿ ಸೊಸೈಟಿಗೆ ರೂ. 500, (17) ಶನಿವಾರಸಂತೆ ಸ್ಟೋರಿಗೆ ರೂ 1000, (18) ಕಂಗಾಟ್ನಾಡು ಸೊಸೈಟಿಗೆ ರೂ. 2000 ಮತ್ತು (19) ಬಿಟ್ಟಂಗಾಲ ಸೊಸೈಟಿಗೆ ರೂ 600.

4. ಕೋಕೇರಿ ಸೊಸೈಟಿಯು ತೃಪ್ತಿಕರವಾಗಿ ಕೆಲಸ ಮಾಡುವುದಿಲ್ಲವೆಂತಲೂ, ಮೆಂಬರುಗಳಿಂದ ಸೊಸೈಟಿಗೆ ವಾಯಿದೆ ಮೀರಿದ ಸಾಲ ಹೆಚ್ಚಾಗಿದೆಯೆಂತಲೂ, ಇನ್ಸ್‌ಪೆಕ್ಟರವರು ಬರೆದ ಪತ್ರದ ಮೇರೆ ಆ ಸಂಘಕ್ಕೆ ಸಾಲ ಮಂಜೂರು ಮಾಡಲಿಲ್ಲ.

5. ಕೋತೂರು ಸೊಸೈಟಿ ಮೆಂಬರುಗಳಿಂದ ವಾಯಿದೆ ಮೀರಿದ ಸಾಲವು ಹೆಚ್ಚಾಗಿರುವುದರಿಂದಲೂ, ಸಾಲದ ಅರ್ಜಿಯಲ್ಲು ಬಾಕಿದಾರರ ತಪಶೀಲ್ ಪಟ್ಟಿ ಕೊಡದ್ದರಿಂದಲೂ ಅದಕ್ಕೆ ಸಾಲ ಮಂಜೂರು ಮಾಡಲಿಲ್ಲ.

6. ಈಗ ಹಣವಿಲ್ಲದ್ದರಿಂದ ಅರ್ವತ್ತೊಕ್ಲು, ಪೊನ್ನಂಪೇಟೆ ಟವುನ್, ಕುಂದ, ಪೊದವಾಡ ಮತ್ತು ಕೈಕೇರಿ ಸೊಸೈಟಿಗಳ ಎರಡನೇ ಸಾಲದ ಅರ್ಜಿಗಳನ್ನು ಮುಂದಕ್ಕೆ ಇಡಲಾಗಿದೆ.

7. ಗೌರವ ಸೆಕ್ರೆಟರಿಯವರು ಪ್ರೆಸಿಡೆಂಟರ ಒಪ್ಪಿಗೆಯಿಂದ ಹತ್ತು ರೂಪಾಯಿಗೆ ಮೀರದ ಸಾದಿಲ್ವಾರು ಖರ್ಚು ಮಾಡಬಹುದೆಂತ ತೀರ್ಮಾನವಾಯಿತು.

8 ಮಿ ಅಪ್ಪಾರಂಡ ಚಂಗಪ್ಪ ಯಂ ಯಲ್. ಸಿ ಯವರ (ಅವರ ಗೈರ್ ಹಾಜರಾತಿಯಲ್ಲಿ ಮಿ. ಕೊಂಗಟ್ಟಿರ ಅಪ್ಪಯ್ಯನವರು ಸೂಚಿಸಿದ) ಈ ಕೆಳಗಿನ ಠರಾವುಗಳನ್ನು ಬರುವ ಡಿಸೆಂಬರ್ ಅಂತ್ಯದ ವರೆಗೆ ಮುಂದರಿಸಿಡುವಂತೆ ತೀರ್ಮಾನವಾಯಿತು

(1) ಬ್ಯಾಂಕಿಗೆ ಪ್ರತ್ಯೇಕ ಒಬ್ಬ ಗುಮಾಸ್ತನನ್ನು ನೇಮಿಸುವದು (2) ಬ್ಯಾಂಕಿನ ಆಫೀಸನ್ನು ಪ್ರತ್ಯೇಕವಾಗಿಡುವದು. (3) ಬ್ಯಾಂಕಿಗೆ ಬೇಕಾದ ಸಾಮಾನುಗಳನ್ನು ತೆಗೆಯುವದು.

ಇಂಡಿಯಾ ಸರಕಾರದವರ ಏರ್ಪಾಡಿನಂತೆ ನಮ್ಮ ಪ್ರಾಂತ್ಯದಲ್ಲಿ ಬ್ಯಾಂಕುಗಳ ಅನುಕೂಲತೆಯ ವಿಷಯ ವಿಚಾರಿಸಿ ಅಭಿಪ್ರಾಯ ಕೊಡಲು ಏಳು ಮೆಂಬರುಗಳುಳ್ಳ ಒಂದು ಕಮಿಟಿಯನ್ನು ನೇಮಿಸುವಂತೆ ಸ್ಥಳೀಯ ಸರಕಾರವನ್ನು ಕೇಳಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಸೆಕ್ರೆಟರಿಯವರು ಈ ಠರಾವನ್ನು ಸರಕಾರಕ್ಕೆ ಕಳುಹಿಸುವಾಗ ಇಂಥಾ ಕಮಿಟಿಯ ಅವಶ್ಯಕತೆಗೆ ಇರುವ ಕಾರಣಗಳನ್ನು ಬರೆಯತಕ್ಕದ್ದು.

6. ವಿಮಂಗಲ ಮತ್ತು ಚೇಲೂರು ಸಂಘಗಳಿಂದ ಬ್ಯಾಂಕಿಗೆ ಸಲ್ಲತಕ್ಕ ಸಾಲದ ಕಂತುಗಳಿಗೆ ವಾಯಿದೆ ಕೊಡಬೇಕೆಂದು ಬರೆದ ಅರ್ಜಿಗಳು ಓದಲಾಗಿ ವಾಯಿದೆ ಕೊಡಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಲಾಯಿತು.

7. ಬಿಳಿಗೇರಿ ದವಸದ ಭಂಡಾರವು ತನ್ನ ಸಾಲದ ಕಂತಿಗೆ ವಾಯಿದೆ ಕೊಡುವ ವಿಷಯ ಪುನರಾಲೋಚಿಸಬೇಕೆಂದು ಬರೆದ ಅರ್ಜಿಯು ಓದಲಾಗಿ ತಿರಸ್ಕರಿಸಲ್ಪಟ್ಟಿತು.

ಕೆ. ಅಪ್ಪಯ್ಯ,

(ಅಧ್ಯಕ್ಷರು)

ಕೊಡಗು ವಿದ್ಯಾಭಿವೃದ್ಧಿ ಫಂಡು.

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಕಳೆದ ಜನರಲ್ ಮೀಟಿಂಗಿನಲ್ಲಿ ಗೌರವ ಸೆಕ್ರೆಟರಿಯವರು ಓದಿದ 1928—29 ರ ಅಂದರೆ 1928 ನೇ ಜುಲೈ 1 ರಿಂದ 1929 ನೇ ಜೂನ್ 30 ರ ವರೆಗಿನ ವರದಿ.

ಸದಸ್ಯರು—ಫಂಡಿನ ರಿಜಿಸ್ಟರಿನಲ್ಲಿರುವ ಮೆಂಬರುಗಳ ಸಂಖ್ಯೆ 281. ಅದರಲ್ಲಿ 68 ಪೋಲೀಸು ಕಾನ್‌ಸ್ಟೇಬಲರುಗಳು ಮತ್ತು ಚೌಕಿದಾರರು ಸೇರಿ 209 ಉದ್ಯೋಗಸ್ಥರಾಗಿರುವರು.

ಮೀಟಿಂಗುಗಳು—ತಾ. 15—4—'28 ರಲ್ಲಿ ನಡೆದ ಜನರಲ್ ಮೀಟಿಂಗಿನ ಸಂತರ ನಿಬಂಧನೆಗಳನ್ನು ತಿದ್ದುಪಡಿ ಮಾಡಲು ತಾ. 1—7—'28 ರಲ್ಲಿ ಒಂದು ವಿಶೇಷ ಜನರಲ್ ಮೀಟಿಂಗು ನಡಿಸಲಾಯಿತು. ಸೆಂಟ್ರಲ್ ಕಮಿಟಿಯ 11 ಮೀಟಿಂಗುಗಳು ನಡೆದವು.

ಆರ್ಥಿಕ ಸ್ಥಿತಿ—ಫಂಡಿನ ಆರ್ಥಿಕ ಸ್ಥಿತಿಯನ್ನು ಅರಿತುಕೊಳ್ಳುವ ಬಗ್ಗೆ ಕಳೆದ 2 ವರ್ಷಗಳ ಅಂದರೆ 1926—27 ಮತ್ತು 1927—28ರ ಲೆಕ್ಕಗಳನ್ನು ಆಡಿಟ್ ಮಾಡಿಸಿದ ಆಡಿಟರುಗಳ ವರದಿಯನ್ನು ಇಲ್ಲಿ ಕೊಡುತ್ತೇನೆ. ಅವರ ರಿಪೋರ್ಟಿನ ಮೇರೆ 1928ನೇ ಜುಲೈ 1ರಲ್ಲಿ ಫಂಡಿನ ಮೂಲವು ಹೀಗಿತ್ತು—

ಫಂಡಿನಿಂದ ಪ್ರಯೋಜನ ಹೊಂದಿದವರಿಂದ

ಜನರಿಂದ ಬರಬೇಕಾದ ಮೊಬಲಗು	11,661— 0— 0
ಸರಕಾರಿ ಪ್ರೋನೋಟಿನಲ್ಲಿರುವ ಹಣ	5,300— 0— 0
ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ರುವದು	1,238—12—11
ಜುಮ್ಲ	18 202—12—11

1928—29 ರ ಪ್ರಾರಂಭದಲ್ಲಿ ಹಿಂದಿನ ವರ್ಷದ ಸಿಲ್ಕು ರೂ 1,238—12—11 ಇತ್ತು. ಇದರಿಂದ ಮೆ. ಗಳಾದ ನೆಲ್ಲಮಕ್ಕಳ ದೇವಯ್ಯ ಮತ್ತು ಬೆಳೆಯರಂಡ ಕಾರ್ಯಪ್ಪನವರಿಗೆ ಕೊಡುತ್ತಿದ್ದ 10 ರೂಪಾಯಿಗಳ ವೇತನಗಳು ಮುಂದರಿಸಲ್ಪಟ್ಟವು. 1928 ರಲ್ಲಿ ಸ್ಕೂಲ್ ಫೈನಲ್ ಪರೀಕ್ಷೆ ಪಾಸಾದ ಈ ಕೆಳಗಿನ ವಿದ್ಯಾರ್ಥಿಗಳಿಗೆ ನಾಲ್ಕು ಹೊಸ ವೇತನಗಳು ಕೊಡಲ್ಪಟ್ಟವು.—ಮಂಡೇಪಂಡ ಐಯ್ಯಪ್ಪನವರು, ಬಿಟ್ಟಿಯಂಡ ಸುಬ್ಬಯ್ಯನವರು, ಮನೆಯಪಂಡ ಬೆಳ್ಯಪ್ಪನವರು ಮತ್ತು ಮಂಡೇಪಂಡ ಕಾಳಪ್ಪನವರು. ಇವರ ಪೈಕಿ ಬಿಟ್ಟಿಯಂಡ ಸುಬ್ಬಯ್ಯನವರು ಎರಡು ತಿಂಗಳು ವೇತನ ಹೊಂದಿಕೊಂಡು ನಂತರ ವಿದ್ಯಾಭ್ಯಾಸವನ್ನು ಮುಂದರಿಸಲಿಲ್ಲ.

ಮೆ. ಗಳಾದ ತೀತಿರ ಮೇದಪ್ಪನವರು, ಚೀಯಕಪೂವಂಡ ಪೂವಯ್ಯನವರು, ಮಂಡೇಪಂಡ ಬೋಪಯ್ಯನವರು ಮತ್ತು ಶ್ರೀಮತಿಗಳಾದ ಕರ್ತಮಾಡ ಗಂಗಮ್ಮನವರು, ಕುಲ್ಲಚಂಡ ಅಕ್ಕಮ್ಮನವರು—ಇವರುಗಳಿಗೆ ರೂ. 500 ಸಾಲವಾಗಿ ಕೊಡಲ್ಪಟ್ಟಿತು.

ವರದಿಯ ವರ್ಷದಲ್ಲಿ ವಸೂಲಾದ ಮೊಬಲಗು.

ವೇತನಗಳು ಮತ್ತು ಸಾಲಗಳು

ವಾಪಸು ಬಂದದ್ದು.	533— 8— 0
ಸರಕಾರಿ ಪ್ರೋನೋಟುಗಳ ಮೇಲೆ ಬಡ್ಡಿ.	168— 4— C
ಚಂದಾ ಮತ್ತು ಉಚಿತಾರ್ಥ ದೊರೆತ ಹಣ.	798— 9— 0
ಜುಮ್ಲ.	1500— 5— 0
ಹಿಂದಿನ ವರ್ಷದ ಸಿಲ್ಕು.	1238—12—11
ಒಟ್ಟು ಜುಮ್ಲ.	2739— 1—11

ಉದ್ಯೋಗಸ್ಥರಲ್ಲದವರಿಂದ ವಸೂಲಾದ ಒಟ್ಟು ಮೊಬಲಗು ರೂ. 274—3—0 ಮಾತ್ರವಾಗಿದೆ.

ಪ್ರಯೋಜನ ಹೊಂದಿಕೊಂಡವರಲ್ಲಿ ಕೆಲವರಲ್ಲದೆ ಬಾಕಿಯವರಿಂದ ವಾಪಸು ಸಲ್ಲಿಯು ಹಿಂದಲಿಗಿಂತ ತೃಪ್ತಿಕರವಾಗಿದೆಯೆಂದು ಹೇಳಲು ಸಂತೋಷಪಡುತ್ತೇನೆ.

ವರದಿಯ ವರ್ಷದ ಖರ್ಚು—

ವೇತನ ಮತ್ತು ಸಾಲಗಳು	1020— 0— 0
ಸ್ಟೇಷನರಿ, ಪ್ರಿಂಟಿಂಗ್ ಚಾರ್ಜು & ಪೋಸ್ಟೇಜು	67— 0— 0
ಜುಮ್ಲ	1087— 0— 0
1—7—'29ರಲ್ಲಿದ್ದ ಸಿಲ್ಕು	1652—1 —11
ಜುಮ್ಲ	2739—1—11

ವಸೂಲಾತಿಯನ್ನು ನೋಡಿದರೆ ಉದ್ಯೋಗಸ್ಥರಲ್ಲದವರಿಂದ ಫಂಡಿಗೆ ಹೆಚ್ಚಿನ ಉತ್ತೇಜನ ಸಿಕ್ಕುತ್ತಿಲ್ಲವೆಂದು ಕಂಡುಬರುತ್ತದೆ. ಫಂಡಿನಲ್ಲಿ ತುಂಬಾ ಹಣವಿದೆ, ಆದರೆ ಸ್ಕಾಲರ್‌ಶಿಪ್‌ಗಳನ್ನು, ಸಾಲಗಳನ್ನೂ ಸರಾಗವಾಗಿ ಕೊಡಲು ಕಮಿಟಿಯವರಿಗೆ ಮನಸ್ಸಿಲ್ಲವೆಂಬ ಅಭಿಪ್ರಾಯವು ಜನರಿಗೆ ಇರುವಂತೆ ತೋರುತ್ತದೆ. ಮೇಲೆ ತೋರಿಸಿದಂತೆ ವರ್ಷದ ಸಿಲ್ಕು ಬರೀ 1652—1—11 ಮಾತ್ರ ಇದೆಯೆಂಬುವದರಿಂದ ಈ ಅಭಿಪ್ರಾಯವು ಸರಿಯಾದದ್ದಲ್ಲವೆಂದು ವಿಷದವಾಗುತ್ತದೆ. ಪಬ್ಲಿಕಿನವರು ಉದಾರತ್ವದಿಂದ ಚಂದಾ ಕೊಡದೆ ಹೋದರೆ ಮುಂದಿನ ವರ್ಷಗಳಲ್ಲಿ ಹೊಸ ವೇತನಗಳನ್ನು ಕೊಡಲು ಸಾಧ್ಯವಾಗಲಿಕ್ಕಿಲ್ಲವೆಂಬ ಭಯವಿದೆ. ಇದನ್ನು ಜ್ಞಾಪಕದಲ್ಲಿಟ್ಟುಕೊಂಡು, ಕೊಡವರಲ್ಲಿ ಪ್ರತಿಯೊಬ್ಬ ಗಂಡಸೂ, ಹೆಂಗಸೂ ತಮ್ಮ ಶಕ್ತ್ಯಾನುಸಾರ ವಂತಿಗೆ ಕೊಟ್ಟು ಕೊಡಗು ಮಕ್ಕಳ ಪ್ರೌಢ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡಬೇಕಾಗಿ ಕೋರುತ್ತೇನೆ.

ತಮ್ಮ ಮಕ್ಕಳು ಸ್ಕೂಲ್‌ಫೈನಲ್ ಪರೀಕ್ಷೆ ಪಾಸಾಗುವ ಸಮಯಬಂದಾಗ ಮಾತ್ರ ತಂದೆ ತಾಯಿಗಳು ಒಂದೆರಡು ರೂಪಾಯಿ ಕೊಟ್ಟು ಫಂಡಿನ ಮೆಂಬರಾಗಲು ಕುತೂಹಲ ತೋರಿಸುವ ಸಂದರ್ಭಗಳೂ ಇವೆ. ಹೀಗೆ ಮಾಡುವುದು ಸ್ಕಾಲರ್‌ಶಿಪ್ ಹೊಂದಲು ಹಕ್ಕು ಪಡೆಯಲಿಕ್ಕೆಂಬುದರಲ್ಲಿ ಸಂಶಯವಿಲ್ಲ.

ಫಂಡಿನಿಂದ ಪ್ರಯೋಜನ ಹೊಂದಿದವರಲ್ಲಿ ಹೆಚ್ಚಿನವರು ತಮ್ಮ ವಾರ್ಷಿಕ ಚಂದಾವನ್ನು ಕೊಟ್ಟು ಮೆಂಬರಾಗದೆ ಇರುವದು ವ್ಯಸನಕರ. ಪ್ರಯೋಜನ ಹೊಂದಿದವರಲ್ಲಿ ಒಬ್ಬರಾದರೂ ಒಂದು ಕಾಸನ್ನಾದರೂ ವಸೂಲಿ ಮಾಡಲು ಪ್ರಯತ್ನಿಸದೆ ಇರುವದು ಮತ್ತಷ್ಟು ವ್ಯಸನಕರವಾಗಿದೆ.

ಕೊಡಗಿನ ಹೊರಗೆ ವಾಸಿಸುವ ಮಹನೀಯರಿಗೆ ಅಪ್ಪೀಲುಗಳನ್ನು ಕಳುಹಿಸಲು ಸ್ಟಾಂಪಿಗಾಗಿ 4—5—0 ಖರ್ಚು ಮಾಡಲಾಯಿತು. ಹುಣಸೂರಿನಲ್ಲಿ ಹೆಡ್ಮಾಸ್ಟರಾಗಿರುವ ಮೆ. ಯಂ. ಪಿ. ಕುಟ್ಟಪ್ಪನವರು ಮತ್ತು ಬೆಂಗಳೂರಿನಲ್ಲಿ ಸರ್ವೆ ಅಸಿಸ್ಟೆಂಟ್ ಸುಪರಿಂಟೆಂಡೆಂಟರಾಗಿರುವ ಮೆ. ಕೇಳಪಂಡ ಮುತ್ತಣ್ಣನವರು ವಿನಹ ಬಾಕಿ ಯಾರೂ ಜವಾಬು ಕೊಡಲಿಲ್ಲ. ಇವರಿಬ್ಬರು ಕಳುಹಿಸಿದ ಮೊಬಲಗು ವಂದನಾಪೂರ್ವಕ ಸ್ವೀಕರಿಸಲಾಗಿದೆ.

ಕೊಡವರು ವ್ಯವಸಾಯ ಮತ್ತು ವ್ಯಾಪಾರದಲ್ಲಿ ಬಹಳ ಹಿಂದುಳಿದವರಾಗಿರುವದರಿಂದಲೂ ಮತ್ತು ವಿದ್ಯಾರ್ಥಿಗಳೆಲ್ಲರೂ ಸ್ಕೂಲ್ ಫೈನಲ್ ಪರೀಕ್ಷೆ ಪಾಸಾದ ಮೇಲೆ ಪ್ರೌಢ ವಿದ್ಯಾಭ್ಯಾಸಕ್ಕೇ ಹೋಗುವದರಿಂದಲೂ ಸ್ಕೂಲ್ ಫೈನಲ್ ಪಾಸಾದ ಒಬ್ಬನಿಗೆ ವ್ಯವಸಾಯ ಮತ್ತು ವ್ಯಾಪಾರದ ತರಬೇತಿಗಾಗಿ ಒಂದು ವೇತನ ಇಡಬೇಕೆಂದು ಸೂಚಿಸುತ್ತೇನೆ. ಲೇಟ್ ಮೆ. ಕಾಡುಬನವಯ್ಯನ ಶಿವ ರುದ್ರಯ್ಯನವರು ಉಚಿತವಾಗಿ ಕೊಟ್ಟಿರುವ ಮೊಬಲಗಿನ ಮೇಲೆ ದೊರೆಯುವ ಬಡ್ಡಿಯನ್ನು ಇದಕ್ಕಾಗಿ ಪ್ರತ್ಯೇಕಿಸಿ ಇಡಬಹುದೆಂದೂ ಸೂಚಿಸುತ್ತೇನೆ.

ಕಮಿಟಿಯವರು ಈ ಕೆಳಗಿನ ಮಹನೀಯರಿಗೆ ವಂದನೆಗಳನ್ನು ಅರ್ಪಿಸುತ್ತಾರೆ

(1) ತನ್ನ ಮಗನ ಮದುವೆ ಸಂಬಂಧ 10. ರೂ. ಕೊಟ್ಟದ್ದಕ್ಕೆ ರಾ ಬಾ ಕೋದಂಡ ಅಪ್ಪಯ್ಯನವರಿಗೆ (2) ತನ್ನ ಮಗಳ ಮದುವೆ ಸಂಬಂಧ 10 ರೂ ಕೊಟ್ಟದಕ್ಕೆ ಮ ಕೊಂಗಂಡ ಅಪ್ಪಯ್ಯನವರಿಗೆ. (3) 15 ರೂ. ಕೊಟ್ಟದಕ್ಕಾಗಿ ಶ್ರೀ ಕಾವೇರಿ ವಿಲಾಸ ನಾಟಕ ಸಭಾದ ಸೆಕ್ರೆಟರಿಯವರಿಗೆ. (4) ಸೀತಮನೋಹರ ನಾಟಕ ಸಭೆಯವರು ಫಂಡಿಗಾಗಿ ಆಡಿದ ನಾಟಕದಲ್ಲಿ 34—10—0ನ್ನು ಜಮಾಯಿಸಲು ತೊಂದರೆ ತೆಗೆದುಕೊಂಡ ಮಹನೀಯರಿಗೆ, (5) ಕಳೆದ ಕಾವೇರಿ ಜಾತ್ರೆಯಲ್ಲಿ ರೂ. 19-14 6 ವಸೂಲಿ ಮಾಡಿದ ವಿದ್ಯಾರ್ಥಿಗಳಾದ ಕೆ. ಅಪ್ಪಚ್ಚ ಮತ್ತು ಪಿ. ಕೆ. ದೇವಯ್ಯನವರಿಗೆ, (6) 10 ರೂ. ಕೊಟ್ಟದಕ್ಕೆ ಕೊಂಗೆಟ್ಟಿರ ಯುವಕರ ಸಂಘದ ಅಧ್ಯಕ್ಷರಿಗೆ (7) ತಮ್ಮ ಊರೊರ್ಪು ಫಂಡಿನಿಂದ 1 ರೂ. ಕೊಟ್ಟದಕ್ಕೆ ಟಿಂಗವರಿ ಗ್ರಾಮಸ್ಥರಿಗೆ, (8) ತನ್ನ ಲೇಟ್ ಸಹೋದರ ಕುಟ್ಟಪ್ಪನವರ ಜ್ಞಾಪಕಾರ್ಥವಾಗಿ 5 ರೂ. ಕೊಟ್ಟದಕ್ಕೆ ಕೂತಂಡ ಐಯ್ಯಪ್ಪನವರಿಗೆ. (9) 5 ರೂ. ಕೊಟ್ಟದಕ್ಕೆ ಕುಂಬಳದಾಳು ನೆರವಂಡ ಕುಟುಂಬಸ್ಥರಿಗೆ ಮತ್ತು (10) ಜನರಿಂದ ಚಂದಾ ವಸೂಲಿ ಮಾಡಲು ತೊಂದರೆ ತೆಗೆದುಕೊಂಡದಕ್ಕೆ ಮೆ. ಗಳಾದ ಕೋಡಿರ ಉತ್ತಪ್ಪ, ಕಾಯಪಂಡ ದೇವಯ್ಯ ಮತ್ತು ಬೆಳೆಯರಂಡ ಕಾರ್ಯಪ್ಪನವರಿಗೆ.

ಕಮಿಟಿ ಮೆಂಬರುಗಳ ಪೈಕಿ ಮೆ. ಗಳಾದ ಎನ್. ಐ. ಕಾಳಪ್ಪ, ರಾ ಸಾ. ಪಿ ದೇವಯ್ಯ, ಪಿ ಎ ನಂಜಪ್ಪ, ಸಿ. ಎಂ ಕುಶಾಲಪ್ಪ, ಕೆ. ಸಿ. ದೇವಯ್ಯ, ಕೆ. ಯಂ. ಬೆಳ್ಯಪ್ಪ, ಮತ್ತು ಪಿ. ಕೆ ಮುತ್ತಣ್ಣನವರು ಜನರಿಂದ ಚಂದಾ ಜಮಾಯಿಸಲು ತುಂಬಾ ತೊಂದರೆ ತೆಗೆದುಕೊಂಡರು.

ಈ ಫಂಡಿನ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಕೊಡವ ಜನಾಂಗದವರು ಹೊಣೆಗೆಯುವರೆಂಬ ಆಶೆಯಿಂದ ಈ ವರದಿಯನ್ನು ಮುಗಿಸುತ್ತೇನೆ

ಬಿ. ಐ. ಕುಟ್ಟಪ್ಪ.
(ಗೌರವ ಕಾರ್ಯದರ್ಶಿ.)

Ford SALES AND SERVICE

The most competitive
CAR
in the most competitive
YEAR
The new model A Ford!!!
with three Speed selective sliding gear Transmission.
The most economical car in the market.
For Demonstration & further particulars
Please apply to:—
S. Sunder Rau,
Ford Dealer for Coorg,
24—4 MERCARA.

OFFICE OF THE DY. SUPT. OF POLICE, COORG
MERCARA, DATED THE 19TH JULY 1929.

NOTICE.

Applications are invited from candidates to be deputed for training in the Provincial Police Training School, Vellore, in October 1929 with a view to his appointment, if he proves suitable, as Probationary Sub-Inspector on a salary of Rs. 65—3—110—5—125 plus a conveyance allowance of Rs. 25/— p. m.

2. Only completed Secondary School Leaving Certificate holders and others possessing higher educational qualifications need apply.

3. Applications should reach the Deputy Superintendent of Police, Coorg, by the 15th August 1929.

4. The applicants should be 21 and not above 25 years of age, should be 5'—5" in height and with a chest measurement of at least 32 inches.

5. Representations from third parties on behalf of candidates will be treated as a disqualification.

6. The successful candidate will receive a stipend of Rs. 35/—p. m. during his course of training.

7. Further particulars, if desired, can be had from the Deputy Superintendent's office.

(Sd) N. I. KALAPPA,
DY. SUPT. OF POLICE.

Wanted.

Candidates for Wireless Telegraph and Station Master's Courses. Railway Fare PAID. Boarding arrangements.

Prorpectus on two anna stamps—

Royal Wireless & Telegraph College,
12—12 DELHI.

ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.—

ಈ ಕೆಳಗೆ ರುಜು ಮಾಡಿರುವ ನಾನು ಮದ್ರಾಸಿನಲ್ಲಿರುವ ಮೆಸರ್ಸ್ 'ಇಂಡೊ ಅಗ್ರಿ ಲಿಮಿಟೆಡ್' (Indo Agri Limited) ರವರ ಏಜೆನ್ಸಿಯನ್ನು ಮೈಸೂರು ಮತ್ತು ಕೊಡಗಿಗೆ ತೆಗೆದುಕೊಂಡಿರುತ್ತೇನೆ. ಕೀಮ ಗೊಬ್ಬರಗಳ ವಿಷಯವಾಗಿ ನನಗಾಗಲಿ ಅಥವ ನಮ್ಮ ಮದ್ರಾಸು ಆಫೀಸಿಗಾಗಲಿ ದಯವಿಟ್ಟು ಬರೆದು ವಿಚಾರಿಸಿಕೊಳ್ಳಬೇಕಾಗಿ ಕೋರುತ್ತೇನೆ. Imperial Chemical Industrials Limited, Madras. ಈ ಕಂಪೆನಿಯ ಏಜೆನ್ಸಿಯನ್ನು ನಾನು ಬಿಟ್ಟುಬಿಟ್ಟಿರುವ ಕಾರಣ ಈ ಕಂಪೆನಿಯವರಾಗಲೀ, ಅಥವ ಅವರ ಕಡೆ ಪ್ರತಿನಿಧಿಗಳಾಗಲಿ ನನ್ನ ಹೆಸರಿನ ಮೇಲೆ ನಡಿಸುವ ಯಾವ ವ್ಯವಹಾರಗಳಿಗೂ ನಾನು ಜವಾಬ್ದಾರನಾಗುವದಿಲ್ಲವೆಂದು ಈ ಮೂಲಕ ತಿಳಿಯಪಡಿಸಿರುತ್ತೇನೆ.

Head Office address:—

Indo Agri Limited, Agents Messers, Shaw Wallace & Company, Post Box No. 14, Madras.	**B. Bettiah.** Sub Agent, Santhepett, Mysore. 4—1.

WANTED.

Candidates for Telegraph and Station Master's Classes. Full particulars and Railway Fare Certificate on 2 annas stamp. Apply to —

IMPERIAL TELEGRAPH COLLEGE,
NAI SARAK,
2—1 DELHI.

ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ ಸರಿಯಾದ ಗಂಟೆಯನ್ನು ತೋರಿಸುವವು ಇದರ ಕೇಸು ಬಂಗಾರಕ್ಕೆ ಸರಿಸಮನಾಗಿರುವದು ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಮಾತ್ರ ಒಂದು ಅಲಾರಂ ಟೈಂಪೀಸ್ ಇನಾಮಾಗಿ ಕೊಡುವೆವು.

ಕ್ರಯ 7 0—0

ವಿಳಾಸ —ಲೀಗಲ್ ವಾಚ್ ಕಂಪೆನಿ,
52—4 ಪೋ ಬಾ 243 ಮದರಾಸು.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges & Hunting Requisites

for SEASON 1929-30



CURRENT CATALOGUE ON APPLICATION

THE BOMBAY ARMOURY.

Specialist in Arms & Ammunition

331, ABDULREHMAN STREET

BOMBAY No 3

24—4

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಜ್ವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ಸೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ೧ಕ್ಕೆ 0—14—0 ಚಿಕ್ಕ 0—9—0

ಕೆ. ಟಿ. ಡೋಂಗರೆ ಕಂಪನಿ,
52—3 ಗಿರಿಗಾಂವ, ಮುಂಬಯಿ

---

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ } ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು ಇನ್ನೂ ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ { ದೀರ್ಘಕಾಲದ ದುಃಖಗಳಿಗಾಗಿ ಪಶ್ಚಾತ್ತಾಪ ಪಡಬೇಡಿ

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ ಹೊಟ್ಟೆ ಶೂಲೆ ಮುಸ್ತಕ ಬೀಳುವಿಕೆ ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ ವಾಂತಿ ಸರ್ಪಕಾಟ ಪಿಶಾಚಬಾಧೆಯಿಂದ ನರಳುವಿಕೆ ಬಿಳುಪು ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಅದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ ಮುಟ್ಟುದೋಷ ಕಾಮಿಣಿ ಗೃಹಪೀಡೆ ದೃಷ್ಟಿದೋಷ ಭಯದಿಂದ ಜ್ವರಪೀಡೆ ಕ್ಷೀಣ ಹೊಂದುವಿಕೆ ಜಪ್ಪು ಇಡುವಿಕೆ ಮುಟಗಿಬೇನೆ ಹೊಟ್ಟೆಯೊಳಗಿಂದ ಎಳೋಣ ಮೊದಲಾದವುಗಳಿಂದ ಕಾಡುತ್ತಿರುವದು ಗರ್ಭ ರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಸಂಶೋಧನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ. ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ತಕ್ಕೊಳ್ಳಿರಿ ಹೆಣ್ಣು ಮಕ್ಕಳಿಗೆ ಸಂತಾನ ಪಡೆಯಂದ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨—೮—೦ ಪೋಸ್ಟು ಖರ್ಚು ಬೇರೆ. ಅಗತ್ಯ ವಿಚಾರಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ

ತಾಯಿತ ಸಿಗುವ ವಿಳಾಸ —ಸಿದ್ಧಾಂತಿ ಬಿ ಸಿ, ಪಂಚಗಟ್ಟಿ,
52—3 ಮು ಪೋ. ಅಥಣಿ, ಜಿ ಬೆಳಗಾಂವ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು. 52-31

ಎಲ್. ಆರ್. ಕೃಷ್ಣಸಾಮಯ್ಯರ್
ಬ್ರಾಂಚ್ ಸೆಕ್ರೆಟರಿ.

ರಬ್ಬರ್ ಆಫ್ ಟ್ರೌಜರ್ಸ್.



ನಮ್ಮಲ್ಲಿ ಚಡ್ಡಿ, ಪೀತಾಂಬರ, ನಡುಕಟ್ಟು ಮುಂತಾದವುಗಳನ್ನು ಉಪಯೋಗಿಸುವದು ವಾಡಿಕೆಯಲ್ಲಿದೆ. ಇದರಿಂದ ತೂರಿ, ಹೇನ, ಕೆಟ್ಟ ವಾಸನೆ ಮುಂತಾದವುಗಳು ಸೇರುವದು ಮತ್ತು ಬಹು ಬೇಗನೆ ಹರಿದು ಹೋಗುವವು. ಈ ರಬ್ಬರ್ ಆಫ್ ಟ್ರೌಜರ್‌ಗಳು ವಿಲಾಯತಿಯಲ್ಲಿ ತಯಾರಾದವು. ಸಾಟಿನ ರೇಷ್ಮೆ ಬಟ್ಟೆಯಂತೆ ಇರುವವು. ಕಸರತ್, ಕುಸ್ತಿ, ಮಾಡುವವರೂ, ಸ್ಕೂಲ್ ಹುಡುಗರೂ, ಬೈಸಿಕಲ್ ಮತ್ತು ಕುದುರೆ ಸವಾರಿ ಮಾಡುವವರೂ, ದೊಡ್ಡ ಶ್ರೀಮಂತರೂ, ಗರೀಬರೂ ಸಹ ಹಾಕಿಕೊಳ್ಳಬಹುದು. 16 ವರ್ಷದವರಿಗೆ ಆಗುವವು. 1ಕ್ಕೆ 1-6-0

ದೊಡ್ಡ ಸೈಜಿನದು— 1ಕ್ಕೆ 1-10-0

ವಿಳಾಸ—ಕೆ. ಎಸ್. ಬೆನ್‌ಸನ್ ಅಂಡ್ ಕೊ.,
52-5 163 ಜೈನಾ ಬಜಾರ್, ಮದರಾಸು.

ಭಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಒಳ್ಳೆಯದು ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಸವರನ್ ಭಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ. ಒಕ್ಕ ೧೨ ಆ. ೩ ಉಂಗುರಗಳಿಗೆ ಒಂದು ಟೇಬಲ್ ಟೈಂಪೀಸನ್ನೂ, ೬ ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ.



ವಿಳಾಸ:—ಲೀಗಲ್ ವಾಚ್ ಕಂಪೆನಿ,
52-5 ಪೋ. ಬಾ. 243. ಮದರಾಸು.

Printed & published by P. I. Bellliappa, at "Kodagu" Press, Mercara for "Kodagu" Ltd.

Reg. No. M. 1350.

It not a liued place (?) 2

"KODAGU" OFFICE, MERCARA.

ಕೊಡಗು.

ಸತ್ಯೇನ ಧರ್ಮ ... ॥ ... ॥

ವಾರ್ಷಿಕ ಚಂದಾ ರೂ. ೩—೮—೦, ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಮಡಿಕೇರಿ, ೧೯೨೯ನೇ ಇಸವಿ ಆಗೊಸ್ಟು ತಾರೀಖು ೯ ನೇ ಶುಕ್ರವಾರ [ಸಂಚಿಕೆ ೧೦

Post Box 42,
TRIPLICANE, MADRAS.

JEWELLER
BY
APPOINTMENT
TO
His Excellency
THE GOVERNOR
OF MADRAS.

Catalogue Free
to Bona fide Enquirers

MANUFACTURES AND DEALS IN ALL.—

(1) Gemset Jewels, gold and silver articles of all patterns
(2) Race Cups, Caskets, Medals, etc., for presentation purposes
(3) Trovels, Keys, Locks, etc., for ceremonial purposes.

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro plating, gilding and nickelling
(3) Binguy old jewellery, or undertaking to effect sale.

V. SUBRAMANIA IYER
JEWELEER

Telephone:— 3145

Telegrams:— "PRECIOUS"

Gold-smith, Silver-smith, & Dealer in all Gemset Jewels.

52—47

ಶ್ರೇಷ್ಠವಾದ 5 ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ. 40 — ಅಸಲ್ ಗೋರೋಚನ ತೊಲ 1ಕ್ಕೆ ರೂ. 12.
ಕೇಸರಿ ಅಥವಾ ಕುಂಕುಮಪುಷ್ಪ ತೊಲ 1ಕ್ಕೆ ರೂ. 3½ — ಪಚ್ಚ ಕರ್ಪೂರ ತೊಲ 1ಕ್ಕೆ ರೂ. 2½.
ಕಾಬೂಲ ಇಂಗು ತೊಲ 10 ಕ್ಕೆ ರೂ. 1.

ಶ್ರೇಷ್ಠವಾದ 108 ಮಣಿವುಳ್ಳ ರುದ್ರಾಕ್ಷಿ ಜಪ ಮಾಲೆ 1ಕ್ಕೆ ಆಣೆ 6, 8, 12, ರೂ. 1, 2, 5, 10 ರ ವರೆಗೆ.
32 ಮಣಿವುಳ್ಳ ರುದ್ರಾಕ್ಷಿ ಕೊಂ 1ಕ್ಕೆ ರೂ 1, 2, 3, 4, 5, 8, 10 ರ ವರೆಗೆ.
ಮತ್ತು ಎಲ್ಲಾ ವಿಧವಾದ ರೇಶ್ಮೆ ... ಗಳು, ಮುಗುಟ ವಸ್ತ್ರಾದಿ ಎಲ್ಲಾ ಸರಕುಗಳು ದೊರೆಯುತ್ತೆ. ಸಾವಕಾಶ ಪೋಷರ ... ಕ್ಕಿಗೆ ಆರ್ಡರು ಕೊಡಿರಿ ಸರಿಗ... ಸುಲಭ ಕ್ರಯಕ್ಕೆ ದೊರೆಯುತ್ತೆ.

ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್." ಕಾಶೀ.

BHARADWAJ & CO.,
SILK
Benares City.

52—50

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ
ಮಾತ್ರೆಗಳು.

ದ ... ಯನ್ನು ... ಡುವದರಲ್ಲಿ ಸಮಾನ ರಹಿತ ... ಒಂದು ... ಕ್ರಯ ೧—೦—೦

52—51 ... ಜರಿ ಫಾರ್ಮಸಿ,
1/೪೧ ... ಬಜಾರ್, ಮದ್ರಾಸ್.

ಫೋಟೋ ಕ್ಯಾಮರಾ.

ಫೋಟೋ ಕ್ಯಾಮರಗಳು ವಿಲಾಯತಿಯಲ್ಲಿ ತಯಾರಾದವು ಈ ಕ್ಯಾಮರಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯಬಹುದು ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು ಫೋ... ಸ್ಟ ತಾರ್ಮಿನ ... ಫೋಟೋಗಳನ್ನು ಎಷ್ಟು ಮಂದಿಗಳಿಗಾದರೂ ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿಯಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು. ಈ ಕ್ಯಾಮರಾವನ್ನು ತರಿಸಿಕೊಳ್ಳುವವರಿಗೆ 3 ವರುಷಕ್ಕೆ ಗ್ಯಾರಂಟಿ ಇರುವ ಟೈಂಪೀಸ್ ಒಂದನ್ನು ಇನಾಮಾಗಿ ಕೊಡುವೆವು. ಕ್ಯಾಮರಾ 1 ಕ್ಕೆ ರೂ. 4—8—0



ಕಾಗದ—ಕೆ ಎಸ್ ಜಿಸ್‌ಸನ್ ಅಂಡ್ ಕೊ,
...—6 158, ಚೈನಾ ಬಜಾರ್, ಮದರಾಸು

ಶ್ರೀ ಶ್ರೀಕಂಠೇಶ್ವರ
ಚಿಕ್ಕವೀರಣ್ಣ ಆಯಿಲ್ ಮಿಲ್ಸ್
ಈಡಿಗ ಎಕ್ಸ್‌ಪೆಲ್ಲರ್ಸ್,
ಮೈಸೂರು.

ನಮ್ಮಲ್ಲಿ ಎಕ್ಸ್‌ಪೆಲ್ಲರುಗಳಿಂದ ಹೊಸದಾಗಿ ಸಿಲ್ಪದಂಗಳಿಂದ ಶೋಧಿಸಲ್ಪಟ್ಟ ಅಚ್ಚ ಬಿಳಿ ದ ... ಕೊಬ್ಬರಿ ಎಣ್ಣೆಯು ಶುದ್ಧವಾದ ಕೊಬ್ಬರಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸಹ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯಬೇಕೆನ್ನುವವರು ಸಂತೆಪೇಟೆಯಲ್ಲಿ ಇರುವ ನಮ್ಮ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರ ದ್ವಾರ ತಿಳಿಯಬಹುದು. 26—10

ಏಕೆ ನರಳುತ್ತೀರಿ?

ಕ್ರಯವು ... ಅಂಚೆಹಾಸಲು.

ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—51 ಮದನಮಂಜರಿ ಫಾರ್ಮಸಿ,
1/೪೧ ಬ್ರಾಡ್ವೆ ಬಜಾರು ರೋಡು, ಮದ್ರಾಸು

ಕೊಡಗು.

ಸಂ ೧೯೨೯ನೇ ಇಸವಿ

ಆಗೊಸ್ಟು ತಾ. ೯ ನೇ ಶುಕ್ರವಾರ.

ಸೈಮನ್ ಸೆಂಟ್ರಲ್ ಕಮಿಟಿ.

ಹಿಂದೂ ದೇಶವು ಹೆಚ್ಚಿನ ರಾಜಕೀಯ ಸುಧಾರಣೆಗೆ ಅರ್ಹವಾಗಿದೆಯೋ ಎಂಬದನ್ನು ವಿಚಾರಿಸುವ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟಿನವರು ಏಳು ಬಿಳೀ ಜನರ ಸೈಮನ್ ಕಮಿಷನನ್ನು ನೇಮಿಸಿದಾಗ, ಅದನ್ನು ಬಹಿಷ್ಕರಿಸಬೇಕೆಂಬ ಚಳವಳಿಯು ಇಂಡಿಯಾ ದೇಶದ ಉದ್ದಗಲಕ್ಕೂ ಹರಡಿದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹಿಂದೂ ದೇಶದ ಮಧ್ಯವರ್ತಿ ನ್ಯಾಯವಿಧಾಯಕ ಸಭೆಯೂ ಅಸೆಂಬ್ಲಿಯವರೂ ಈ ಕಮಿಷನಿನೊಂದಿಗೆ ಸಹಕರಿಸುವುದು ಯೋಗ್ಯವಲ್ಲವೆಂದು ಬಹುಮತದಿಂದ ತೀರ್ಮಾನಿಸಿದರು. ಆದರೂ ಈ ಕಮಿಷನಿನೊಂದಿಗೆ ಸಹಕರಿಸಲು ಇಂಡಿಯಾ ಸರ್ಕಾರದವರು ಏಳು ಮೆಂಬರುಗಳುಳ್ಳ ಒಂದು ಸೆಂಟ್ರಲ್ ಕಮಿಟಿಯನ್ನೂ, ಅದರಂತೆಯೇ ಪ್ರಾಂತೀಯ ಸರ್ಕಾರಗಳು ಪ್ರಾಂತೀಯ ಕಮಿಟಿಗಳನ್ನೂ ನೇಮಿಸಿದರು. ಸೆಂಟ್ರಲ್ ಕಮಿಟಿಯ ಮೆಂಬರುಗಳಿಗೆ ಸೈಮನ್ ಕಮಿಷನಿನ ಮೆಂಬರುಗಳೊಂದಿಗೆ ಸರಿಸಮಾನತ್ವವು ದೊರೆಯಬೇಕೆಂಬ ವಾದವು ದೇಶದಲ್ಲಿ ಬಲವಾಗಿ ನಡೆಯಿತು. ಹೀಗೆ ಸರಿಸಮಾನತ್ವವು ದೊರೆಯದೆ ಹೋದರೆ ಸೆಂಟ್ರಲ್ ಕಮಿಟಿಯ ಮೆಂಬರುಗಳಾಗಲು ಜವಾಬ್ದಾರಿಯ ಮುಂದಾಳುಗಳ್ಯಾರೂ ಒಪ್ಪುವದಿಲ್ಲವೆಂದು ತೋರಿಬಂದಾಗ ಸರ್ ಜಾನ್ ಸೈಮನ್‍ರವರು ಅಂಥ ಸರಿಸಮಾನತ್ವವು ಪೂರ್ತಿ ಇಲ್ಲದಿದ್ದರೂ ತಕ್ಕಮಟ್ಟಿಗಾದರೂ ಕೊಡಲಾಗುವುದೆಂದು ಸೂಚಿಸುವ ಪತ್ರ ಒಂದನ್ನು ಪ್ರಕಟಿಸಿದರು. ಈ ಸೆಂಟ್ರಲ್ ಕಮಿಟಿಗೆ ಕಮಿಷನಿನೊಂದಿಗೆ ಸರಿಸಮಾನತ್ವ ಕೊಡುವ ಹಕ್ಕು ಪಾರ್ಲಿಮೆಂಟಿಗೆ ಇದೆಯೇ ಹೊರತು ಸರ್ ಸೈಮನರಿಗೆ ಇಲ್ಲ ಮತ್ತು ಈ ಪತ್ರದ ಮೇರೆ ಸರಿಸಮಾನತ್ವ ದೊರೆಯುವುದೂ ಇಲ್ಲವಾದುದರಿಂದ ಆ ಕಮಿಟಿಯಲ್ಲಿ ಕೆಲಸ ಮಾಡುವುದಕ್ಕೆ ಯಾರೂ ಒಪ್ಪಬಾರದೆಂದು ಕಾಂಗ್ರೆಸ್ ಮುಂದಾಳುಗಳೂ ಲಿಬರಲ್ ಪಕ್ಷದ ಪ್ರಾಮುಖ್ಯ ಮುಖಂಡರೂ ಎಷ್ಟು ಕೇಳಿಕೊಂಡರೂ ಕೂಡ ಕೆಲವು ಸಹಕಾರಿಗಳು ಸೈಮನರ ಈ ಪತ್ರಕ್ಕೆ ಮರುಳಾಗಿಯೋ ಏನೋ ಸೆಂಟ್ರಲ್ ಕಮಿಟಿಯಲ್ಲಿರಲು ಒಪ್ಪಿದರು. ಹಾಗೆ ಒಪ್ಪಿದವರಲ್ಲಿ ಪ್ರಮುಖರಾದ ಸರ್ ಶಂಕರ ನಾಯರರನ್ನು ಆ ಕಮಿಟಿಯ ಅಧ್ಯಕ್ಷರಾಗಿ ನೇಮಿಸಿದರು.

ಈ ಕಮಿಟಿಯವರು ಸೈಮನ್ ಕಮಿಷನಿನೊಂದಿಗೆ ಹಿಂದೂ ದೇಶದಲ್ಲೆಲ್ಲಾ ಸುತ್ತಿದರು. ಹಿಂದೂ ದೇಶದಲ್ಲಿರುವ ವರೆಗೆ ಆ ಕಮಿಟಿಯವರ ಫಿರ್ಯಾದು ಏನೂ ಇರಲಿಲ್ಲ. ಅವರು ಇಂಗ್ಲೆಂಡಿಗೂ ಹೋಗಿ ಇಂಡಿಯಾಕ್ಕೆ ಸಂಬಂಧಪಟ್ಟ ಕೆಲವು ಉದ್ಯೋಗಸ್ಥರ ಅಭಿಪ್ರಾಯ ತೆಗೆದುಕೊಳ್ಳುವ ಕಮಿಷನಿನ ಕೆಲಸದಲ್ಲಿ ಭಾಗಿಗಳಾದರು. ಆದರೆ ಯಾರ್‍ಯಾರ ಅಭಿಪ್ರಾಯ ತೆಗೆದುಕೊಳ್ಳಬೇಕೆಂಬ ವಿಷಯ ನಿರ್ಣಯದಲ್ಲಿ ಸೆಂಟ್ರಲ್ ಕಮಿಟಿಯ ಆಲೋಚನೆ ತೆಗೆದುಕೊಳ್ಳಲಿಲ್ಲವೆಂತಲೂ, ಕಮಿಷನಿನ ಮುಂದೆ ಬಂದಿರುವ ಅಭಿಪ್ರಾಯಗಳನ್ನು, ವರದಿ ಬರೆಯುವ ಮುಂಚೆ ಕಮಿಷನಿನ ಮೆಂಬರುಗಳೊಡನೆ ಚರ್ಚಿಸುವ ಅನುಕೂಲ ಕಮಿಟಿ ಮೆಂಬರುಗಳಿಗೆ ಇಲ್ಲದೆ ಮಾಡಿರುವರೆಂತಲೂ, ಇದರಿಂದ ಇವೆರಡು ಸಂಸ್ಥೆಗಳ ಮೆಂಬರುಗಳಿಗೆ ಸಮಾನತ್ವ ಇಲ್ಲವೆಂತಾಯಿತೆಂತಲೂ ಸೆಂಟ್ರಲ್ ಕಮಿಟಿಯ ಅಧ್ಯಕ್ಷರಾದ ಸರ್ ಶಂಕರ ನಾಯರರವರು ತಮ್ಮ ಅತೃಪ್ತಿಯನ್ನು ಬಹಿರಂಗ ಪಡಿಸಿದರು. ಈ ಫಿರ್ಯಾದುಗಳ ಮೇಲೆ ಇಂಡಿಯಾದ ರಾಷ್ಟ್ರೀಯ ಪತ್ರಿಕೆಗಳು ಕಠಿಣವಾಗಿ ಟೀಕಿಸಿದವು. ಅದು ಸೈಮನರ ಮನಸ್ಸನ್ನು ಚುಚ್ಚಿತು. ಈ ಫಿರ್ಯಾದುಗಳು ನಿಜವಲ್ಲವೆಂದು ಸೆಂಟ್ರಲ್ ಕಮಿಟಿಯ ಮೆಂಬರುಗಳಿಂದಲೇ ಪ್ರಕಟಿಸುವ ಪ್ರಯತ್ನವನ್ನು ಸೈಮನರು ಮಾಡಿದರು. ಆದರೆ ನಾಯರರವರು ತಾನು ಪ್ರಕಟಿಸಿದ ಅಭಿಪ್ರಾಯವನ್ನು ವಿರೋಧಿಸಲು ಒಪ್ಪಲಿಲ್ಲ. ಕಮಿಟಿಯ ಇನ್ನು ಕೆಲವು ಮೆಂಬರುಗಳು ನಾಯರರವರ ವರ್ತನೆಗೆ ಬೆಂಬಲ ಕೊಡುತ್ತಿದ್ದರು. ಆದಕಾರಣ ಕಮಿಟಿ ಮೆಂಬರುಗಳಲ್ಲಿ ಈ ಅತೃಪ್ತಿಗೆ ಕಾರಣವಿಲ್ಲವೆಂಬ ಘಟನೆಯನ್ನು ಸಾಧಿಸಲು ಆಗಲಿಲ್ಲ.

ಈ ಪ್ರಯತ್ನದ ಮಧ್ಯೆ, ಸೆಂಟ್ರಲ್ ಕಮಿಟಿಯೂ, ಕಮಿಷನೂ ಜೊತೆ ಸೇರಿ ಅಭಿಪ್ರಾಯ ತೆಗೆದುಕೊಳ್ಳುವದು ತೀರಿದ ದಿನ ಸೆಂಟ್ರಲ್ ಕಮಿಟಿಯವರು ತಮ್ಮ ವರದಿಯನ್ನು ಬರೆದು ಕಮಿಷನಿನ ಮುಂದಿಡಬೇಕೆಂದು ಸೈಮನರು ಸೂಚಿಸಿದರು. ಇದು ಸೆಂಟ್ರಲ್ ಕಮಿಟಿಯನ್ನು ಮತ್ತಷ್ಟು ಕೆಳಕ್ಕೆ ದೂಡಿದಂತಾಯಿತು. ಇದರಿಂದ ಈ ಕಮಿಟಿಯನ್ನು ಬರೇ ಒಂದು ಸಾಕ್ಷಿಯ ತರಗತಿಗೆ ಇಳಿಸಿದಂತಾಯಿತು. ಇದು ಸರಿಯಲ್ಲ. ಕಮಿಶನಿನವರು ವರದಿ ಬರೆಯುವ ಮುಂಚೆ ಸೆಂಟ್ರಲ್ ಕಮಿಟಿಯವರೊಂದಿಗೆ ಸಮಾನತ್ವದಿಂದ ಚರ್ಚಿಸಬೇಕು ಎಂದು ಸದರಿ ಕಮಿಟಿಯವರೊಬ್ಬರು ಸೂಚಿಸಿದಕ್ಕೆ ತಾವು ತಮ್ಮನ್ನು ನೇಮಿಸಿದ ಪಾರ್ಲಿಮೆಂಟಿಗೆ ಮಾತ್ರ ತಮ್ಮ ವರದಿಯನ್ನು ಕಳುಹಿಸುವುದಲ್ಲದೆ ಸೆಂಟ್ರಲ್ ಕಮಿಟಿಯ ಮುಂದೆ ತಮ್ಮ ಅಭಿಪ್ರಾಯವನ್ನು ಇಡುವುದಿಲ್ಲವೆಂದು ಸೈಮನರು ಉತ್ತರವನ್ನಿತ್ತರು. ಇದು ಸೆಂಟ್ರಲ್ ಕಮಿಟಿಯವರಿಗೆ ತಮ್ಮ ನಿಜವಾದ ಸ್ಥಿತಿಯನ್ನು ತೋರಿಸಿತು. ಈ ತುಚ್ಛೀಕಾರವನ್ನು ಸಹಿಸುವುದಕ್ಕಿಂತ ಕಮಿಟಿ ಮೆಂಬರುತನಕ್ಕೆ ರಾಜಿನಾಮೆ ಕೊಡುವುದೇ ಉತ್ತಮವೆಂದು ಕಮಿಟಿಯ ಕೆಲವು ಮೆಂಬರುಗಳಿಗೆ ತೋರಿದ್ದು ಸಹಜವೇ. ಆದರೆ ಕಮಿಷನಿನೊಂದಿಗೆ ಸಹಕರಿಸಿ ಇಷ್ಟೆಲ್ಲಾ ಕೆಲಸ ಮಾಡಿ, ಅಖೈರಿನಲ್ಲಿ ರಾಜಿನಾಮೆ ಕೊಟ್ಟರೆ ಬಹಿಷ್ಕಾರವಾದಿಗಳ ನಗೆಗೇಡಿಗೆ ಈಡಾದೇವೆಂಬ ಭೀತಿಯಿಂದಲೂ, ಕಮಿಟಿಯವರಲ್ಲಿ ಒಗ್ಗಟ್ಟು ಇಲ್ಲದ್ದರಿಂದಲೂ ರಾಜಿನಾಮೆ ಕೊಡುವ ಆತ್ಮಗೌರವದ ವರ್ತನೆಯನ್ನು ಕೈಕೊಳ್ಳಲಾಗಲಿಲ್ಲವೆಂದು ವರ್ತಮಾನವಿದೆ.

ಇದು ಮಾತ್ರವಲ್ಲ. ಕೋಮುವಾರು ಪ್ರತಿನಿಧಿತ್ವದ ವಿಷಯ ಕಮಿಟಿ ಮೆಂಬರುಗಳಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿವೆ. ಕಮ್ಮಿ ಜನಸಂಖ್ಯೆಯ ಕೋಮಿನವರಿಗೆ ಮೆಂಬರುತನಗಳನ್ನು ಕಾಯ್ದಿಟ್ಟು ಸಮ್ಮಿಶ್ರಿತ ಚುನಾವಣೆಯಾಗಬೇಕೆಂಬದಕ್ಕೆ ಕಮಿಟಿಯ ಬಹುಮತದವರು ಒಪ್ಪುತ್ತಾರಂತೆ. ಆದರೆ ಮೂರು ಮಹಮ್ಮದೀಯ ಮೆಂಬರುಗಳ ಪೈಕಿ ಇಬ್ಬರು ಇದಕ್ಕೆ ಒಪ್ಪುವದಿಲ್ಲವೆಂತಲೂ, ಚುನಾವಣೆಯೂ ಕೂಡ ಪ್ರತ್ಯೇಕ ಆಗಬೇಕೆಂತಲೂ, ಈ ವಿಷಯದಲ್ಲಿ ಎಲ್ಲರಿಗೂ ಒಪ್ಪುವಂಥ ತೀರ್ಮಾನಕ್ಕೆ ಬಂದಿದ್ದರೆ ಅವರಿಬ್ಬರು ರಾಜಿನಾಮೆ ಕೊಡುವರೆಂದು ಸುದ್ದಿಯಾಗಿದೆ. ಇದೂ ಅಲ್ಲದೆ ಈ ಕಮಿಟಿಯ ಮೆಂಬರುಗಳಲ್ಲಿ ಇನ್ನು ಕೆಲವು ಭಿನ್ನಾಭಿಪ್ರಾಯಗಳು ಇವೆಯಂತೆ. ಆದುದರಿಂದ ಇದರ ವರದಿಯು ಒಗ್ಗಟ್ಟಿನಿಂದ ಬರೆಯಲ್ಪಡುವದಿಲ್ಲವೆಂದು ಕಂಡು ಬರುತ್ತದೆ. ಒಗ್ಗಟ್ಟಿಲ್ಲದೆ ಬರೆಯಲ್ಪಡುವ ವರದಿಯನ್ನು ಸೈಮನ್ ಕಮಿಷನಿನವರು ತಮಗೆ ಇಷ್ಟ ಬಂದಂತೆ ಉಪಯೋಗಿಸಿಕೊಳ್ಳುವರೆಂಬದರಲ್ಲಿ ಸಂಶಯವಿಲ್ಲ. ಆದುದರಿಂದ ಈ ಸೆಂಟ್ರಲ್ ಕಮಿಟಿಯ ಕೆಲಸದಿಂದ ಹಿಂದೂ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗಬೇಕೆಂದು ಹೇಳಲು ಸಾಧ್ಯವಿಲ್ಲ. ಕಮಿಷನನ್ನು ಬಹಿಷ್ಕರಿಸಿದವರ ವಾದವು ನ್ಯಾಯವಾದುದೆಂದೂ, ಎಲ್ಲರೂ ಒಗ್ಗಟ್ಟಾಗಿ ಬಹಿಷ್ಕರಿಸಿದ್ದರೆ ಹಿಂದೂ ದೇಶೀಯರಿಗೆ ಬೇಕಾದ ಸುಧಾರಣೆಗಳೆಲ್ಲವೂ ತಡವಿಲ್ಲದೆ ದೊರಕುತ್ತಿತ್ತೆಂದೂ ಈಗಲಾದರೂ ಸಹಕಾರಿಗಳಿಗೆ ತೋರದೆ ಇರುವುದೇ?

ಲೋಕಮಾನ್ಯ ತಿಲಕರು.

ಆಗಸ್ಟ್ ತಿಂಗಳ 1ನೇ ತಾರೀಕಿನಲ್ಲಿ ಲೋಕಮಾನ್ಯ ತಿಲಕರು ಶಿವಾಧೀನರಾದದ್ದು. ಈ ತಿಂಗಳಿಗೆ ಇವರು ಮೃತರಾಗಿ ಒಂಭತ್ತು ವರ್ಷಗಳಾದವು. ಇವರ ಮರಣದ ದಿನವನ್ನು ಹಿಂದುಸ್ಥಾನದಲ್ಲೆಲ್ಲಾ ಪುಣ್ಯ ದಿನವಾಗಿ ಆಚರಿಸಿದರು. ಹಿಂದುಸ್ಥಾನದ ಸ್ವಾತಂತ್ರ್ಯದ ಹೋರಾಟದ ಮುಖಂಡರೇ ಲೋಕಮಾನ್ಯ ತಿಲಕರು. 'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು; ಅದನ್ನು ನಾನು ಪಡದೇ ಪಡೆಯುತ್ತೇನೆ.' ಎಂಬ ಮೂಲ ಮಂತ್ರವನ್ನು ಬೋಧಿಸಿದವರೇ ಇವರು. ಹಿಂದುಸ್ಥಾನದ ಸ್ವರಾಜ್ಯ ಸಂಗ್ರಾಮದ ಬಿಕ್ಕಟ್ಟಿನ ಸಮಯವಾದ ಈ ಸಂಧಿಯಲ್ಲಿ ತಿಲಕರಂಥವರ ನಾಮಸ್ಮರಣೆಯನ್ನಾದರೂ ಮಾಡುವದು ಹಿಂದೀಯರ ಕರ್ತವ್ಯವಾಗಿದೆ. ಹಿಂದುಸ್ಥಾನದಲ್ಲಿ ಆಖೈರಿನಲ್ಲಿ ಸ್ವತಂತ್ರವನ್ನು ಕಳಕೊಂಡ ಮಹಾರಾಷ್ಟ್ರಕ್ಕೆ ಸೇರಿದವರಾದ ಇವರು ಹಿಂದುಸ್ಥಾನದ ಅಧೀನದ ದುಸ್ಥಿತಿಯನ್ನು ಮನಸ್ಸಿಗೆ ತೆಗೆದುಕೊಂಡು ಪತ್ರಿಕೆಗಳ ಮೂಲಕವೂ, ಉಪನ್ಯಾಸಗಳ ಮೂಲಕವೂ ಜನರನ್ನು ಎಚ್ಚರಿಸಿದರು. ಇವರು ಸಾಮಾನ್ಯ ಜನರಿಗಾಗಿ ಕೆಲಸ ಮಾಡಿದ್ದರಿಂದ ಮಹಾರಾಷ್ಟ್ರದ ಸಾಮಾನ್ಯ ಜನರು ಇವರನ್ನು ಪೂಜಿಸುತ್ತಿದ್ದರು. ಇವರು ತಮ್ಮ ದೇಶಭಕ್ತಿಗಾಗಿ ದೀರ್ಘಕಾಲ ಕಾರಾಗೃಹ ವಾಸವನ್ನು ಅನುಭವಿಸಿದರು. ಇವರು ಬರೆದ ಪುಸ್ತಕಗಳಿಂದ ಇವರ ಪ್ರಖ್ಯಾತಿಯು ಪ್ರಪಂಚವನ್ನೆಲ್ಲಾ ವ್ಯಾಪಿಸಿದೆ. ಇವರು ಬರೆದ ಗೀತಾರಹಸ್ಯದಲ್ಲಿ ಕರ್ಮಯೋಗಕ್ಕೇ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಇವರು ಗೀತಾರಹಸ್ಯದಲ್ಲಿ ವಿವರಿಸಿದ ಕರ್ಮಯೋಗವನ್ನು ಇವರ ಜೀವನದಲ್ಲಿ ಆಚರಿಸಿ ತೋರಿಸಿರುವರು. ಇವರ ಧೈರ್ಯವು ಅಸಾಧಾರಣವಾದದ್ದು. ಇಂಥವರ ಜೀವನವನ್ನು ದೇಶವು ತಮ್ಮ ಮುಂದೆ ಇಟ್ಟುಕೊಂಡು ಕೆಲಸಮಾಡಿ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕು.

ಕರ್ನಾಟಕಸ್ಥರಲ್ಲಿ ಬಿನ್ನಹ.

ನನ್ನ ಪ್ರಿಯ ಬಂಧು ಭಗಿನಿಯರೇ,

ಅಖಿಲ ಭಾರತ ರಾಷ್ಟ್ರೀಯ ಸಭೆಯವರೂ, ಮೊನ್ನೆ ಮುಂಬೈಯಿಯಲ್ಲಿ ಕೂಡಿದ ಅ. ಭಾ. ಕಾಂ. ಕಮಿಟಿಯವರೂ ಕಾಂಗ್ರೆಸ್ ಸಂಸ್ಥೆಗಳ ಪುನರ್ಘಟನೆ, ಖಾದಿಯ ಮುಖಾಂತರ ಪರದೇಶಿ ಬಟ್ಟೆಗಳಿಗೆ ಬಹಿಷ್ಕಾರ, ಮದ್ಯಪಾನ ಮತ್ತು ಅಮಲು ಪದಾರ್ಥ ದ್ರವ್ಯಗಳ ಸಂಪೂರ್ಣ ನಿಷೇಧ, ಈ ಮೂರು ವಿಷಯಗಳನ್ನೊಳಗೊಂಡ ವಿಧಾಯಕ ಕಾರ್ಯಕ್ರಮವೊಂದನ್ನು ಹಾಕಿ ಕೊಟ್ಟಿರುವರು ಇಷ್ಟೇ ಅಲ್ಲದೆ ಈ ಮೇಲಿನ ಕಾರ್ಯಗಳನ್ನು ಯಥಾಕ್ರಮವಾಗಿ ಸಾಗಿಸಲು ಮೂರು ಉಪ ಮಂಡಲಗಳನ್ನು ನೇಮಿಸಿರುವರು. ಆದರೆ ಮಹಾ ಸಭೆಯ ಅಧಿವೇಶನವು ಮುಗಿದು ೭ ತಿಂಗಳುಗಳು ಗತಿಸಿ ಹೋದವು. ಆ ಉಪ ಮಂಡಲಗಳಾದರೂ ತಮ್ಮ ತಮ್ಮ ಕಾರ್ಯಗಳನ್ನು ಸಮಾಧಾನಕಾರಕವಾಗಿ ಸಾಗಿಸಿರುವವು. ಆದರೂ ಆಗತಕ್ಕಷ್ಟು ಕೆಲಸವು ಆಗಿರುವುದಿಲ್ಲವೆಂದೇ ಅನ್ನಬೇಕಾಗುತ್ತದೆ. ನಮ್ಮಲ್ಲಿಯ ಉದಾಸೀನತೆಯು ಇನ್ನೂ ನಮ್ಮನ್ನು ಬಿಡಲೊಲ್ಲದು, ನಾವು ಇನ್ನೂ ಕಣ್ಣು ತೆರೆಯಲೊಲ್ಲೆವು.

ಇತ್ತ ನಮ್ಮನ್ನಾಳುವ ಸರ್ಕಾರವು ಎಷ್ಟು ಜಾಗರೂಕವಾಗಿರುವದೆಂಬದನ್ನು ನೋಡಿರಿ. ಎಸೆಂಬ್ಲಿಯ ಮತವನ್ನು ನಿರಾಕರಿಸಿ ಆ ಸಭೆಯ ಲೋಕನಿಯುಕ್ತ ಅಧ್ಯಕ್ಷರ ಅಪ್ಪಣೆಯನ್ನು ಧಿಕ್ಕರಿಸಿ, ಪಬ್ಲಿಕ್ ಸೇಫ್ಟಿ ಬಿಲ್ಲಿನ ಕಾರ್ಯವು ಸಾಗುವಂತೆ ವೈಸರಾಯ ಸಾಹೇಬರು ತಮ್ಮ ಪ್ರಕಟನೆಯನ್ನು ಹೊರಡಿಸಿದರು. ಏನೋ ಬಾದರಾಯಣ ಸಂಬಂಧವನ್ನು ಹಚ್ಚಿ ಕೂಲಿಕಾರರ ಸಂಘಗಳ ಮುಖಂಡರನ್ನೂ, ಅ. ಭಾ. ರಾ. ಮಂಡಲದ ಹಲವು ಸದಸ್ಯರನ್ನೂ, ಇನ್ನುಳಿದ ಅನೇಕ ಕಾರ್ಯಕರ್ತರನ್ನೂ ಸೆರೆ ಹಿಡಿದರು. ವರ್ತಮಾನ ಪತ್ರಗಳ ಮೇಲಿನ ದಾಳಿಯು ಹೆಚ್ಚು ತ್ತಿದೆ. ಸಂಶಯದಿಂದ ಬೇಕಾದವರನ್ನು ಹಿಡಿಯುವದು ಮನೆಗಳನ್ನು ಝಡತಿ ಮಾಡುವದು, ಇತ್ಯಾದಿ ಪ್ರತಿನಿತ್ಯ ನಡೆಯುತ್ತಿವೆ. ಇವೆಲ್ಲ ಸರ್ಕಾರದವರು ನಮ್ಮ ರಾಷ್ಟ್ರೀಯ ಮಹಾ ಸಭೆಯ ನಿರ್ಣಯಗಳಿಗೆ ಕೊಟ್ಟ ಪ್ರತ್ಯುತ್ತರಗಳೆಂದೇ ತಿಳಿಯಬೇಕಲ್ಲವೇ?

ಬ್ರಿಟಿಷ್ ಪಾರ್ಲಿಮೆಂಟಿನ ಚುನಾವಣೆಯು ಮೊನ್ನೆ ಆಗಿರುತ್ತದೆ. ಕೂಲಿಕಾರರ ಪಕ್ಷದವರು ಅಧಿಕಾರದಲ್ಲಿದ್ದಾರೆ. ಬದಲಾವಣೆಯು ಕಿಂಚಿತ ಆಶಾಜನಕವೆಂದು ತೋರುವದು. ಆದರೆ ನಾವು ಮಾತ್ರ ಸುಸಂಘಟಿತರಾಗಲಿಕ್ಕೆ ಬೇಕು.

ಈ ಎಲ್ಲ ಪರಿಸ್ಥಿತಿಯನ್ನಾಲೋಚಿಸಿ ಅಖಿಲ ಭಾರತ ರಾಷ್ಟ್ರ ಮಂಡಲದವರು ತಾರೀಕು ೨೪—೫—೨೯ನೇ ದಿನ ಮುಂಬಯಿಯಲ್ಲಿ ಸೇರಿದರು. ಆ ಕಾಲದಲ್ಲಿ ಸದ್ಯದ ಪರಿಸ್ಥಿತಿಯನ್ನು ಚೆನ್ನಾಗಿ ನಿರೀಕ್ಷಿಸಿ, ಕಾಂಗ್ರೆಸ್ ಸಂಸ್ಥೆಗಳ ಪುನರ್ಘಟನೆಯಾಗದ ಯಾವ ಕಾರ್ಯಕ್ರಮವೂ ನೆರವೇರದೆಂದು ಬಗೆದು ಮಹಾತ್ಮಾ ಗಾಂಧಿಯವರು ತಂದ ಠರಾವು ಸರ್ವಾನುಮತದಿಂದ ಒಪ್ಪಲ್ಪಟ್ಟಿತು. ಆ ಠರಾವನ್ನು ತಾವು ಈ ಮೊದಲೇ ಅರಿತಿರಲಿಕ್ಕೆ ಸಾಕು. ಕಾರ್ಯಕ್ರಮವೇನೂ ಅಷ್ಟೊಂದು ಕಠಿಣವಾದದ್ದಿರುವದಿಲ್ಲ. ಆದರೆ ನಾವೆಲ್ಲರೂ ನಮ್ಮ ನಮ್ಮ ಜವಾಬ್ದಾರಿಯನ್ನರಿತು ಕೆಲಸವನ್ನು ಮಾತ್ರ ಮಾಡಬೇಕಾಗಿದೆ. ಈಗಿನ ಕಾರ್ಯಕ್ರಮದ ಮೇರೆಗೆ ನಾವು ಮಾಡಬೇಕಾದ ಕಾರ್ಯವೇನೆಂದರೆ —

೧. ನಮ್ಮ ಇಡೀ ಪ್ರಾಂತ್ಯದಲ್ಲಿ ಕನಿಷ್ಠ ೧೫,೦೦೦ ಜನರು ಕಾಂಗ್ರೆಸ್ ಸಭಾಸದರನ್ನು ಮಾಡಬೇಕು. ೨. ಪ್ರತಿಯೊಂದು ಜಿಲ್ಲೆಯವರು ತಮ್ಮಲ್ಲಿಯ ಜನಸಂಖ್ಯೆಯಲ್ಲಿ ೪೦೦ಕ್ಕೆ ೧ ರಂತೆ ಕಾಂಗ್ರೆಸ್ ಸಭಾಸದರನ್ನು ಮಾಡಬೇಕು. ೩. ತಾಲೋಕಿನಲ್ಲಿಯೂ ಮೇಲಿನ ಪ್ರಮಾಣದಂತೆಯೇ ಸಭಾಸದರನ್ನು ಸೇರಿಸಬೇಕು. ೪. ಹಳ್ಳಿಯಲ್ಲಿಯ ಕಾಂಗ್ರೆಸ್ ಸಂಸ್ಥೆಯಲ್ಲಿ ಜನಸಂಖ್ಯೆಯಲ್ಲಿ ೧೦೦ಕ್ಕೆ ೧ ರಂತೆ ಸಭಾಸದರಿರತಕ್ಕದ್ದು.

ಕಮಿಟಿಗಳು —೧. ಪ್ರಾಂತೀಕ ಕಮಿಟಿಯಲ್ಲಿ ಕನಿಷ್ಠ ಅರ್ಧ ಜಿಲ್ಲೆಗಳ ಪ್ರತಿನಿಧಿಗಳಾದರೂ ಇರಬೇಕು. ೨ ಜಿಲ್ಲಾ ಕಮಿಟಿಯಲ್ಲಿ ಕನಿಷ್ಠ ಅರ್ಧ ತಾಲೂಕುಗಳ ಪ್ರತಿನಿಧಿಗಳಿರತಕ್ಕದ್ದು. ೩ ತಾಲೋಕ ಕಮಿಟಿಯಲ್ಲಿ ಕನಿಷ್ಠ ೧೦೦ ಕ್ಕೆ ೧೦ ರಷ್ಟು ಹಳ್ಳಿಗಳ ಪ್ರತಿನಿಧಿಗಳಾದರೂ ಇರಬೇಕು.

ಇಷ್ಟು ಕಾರ್ಯಕ್ರಮವನ್ನು ಆಗೊಸ್ಟು ತಾ ೩೧ ರೊಳಗಾಗಿ ಮುಗಿಸಲೇ ಬೇಕು. ಇಲ್ಲದಿದ್ದರೆ ನಮ್ಮ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಸ್ತಿತ್ವಕ್ಕೆ ಗಡಿ ಬರುವದು. ಮೇಲಿನ ಕಾರ್ಯಕ್ರಮವನ್ನು ಪೂರೈಸದಿದ್ದರೆ ಪ್ರಾಂತೀಕ ಮಂಡಲಗಳನ್ನು ರಾಷ್ಟ್ರೀಯ ಮಹಾ ಸಭೆಯ ಕಾರ್ಯಕ್ಷೇತ್ರದಿಂದ ತೆಗೆದು ಹಾಕುವ ಅಧಿಕಾರವನ್ನು ಕಾರ್ಯಕಾರೀ ಮಂಡಲಕ್ಕೆ ಕೊಟ್ಟಿರುವರು.

ಬಂಧು ಭಗಿನಿಯರೇ, ಈ ಕಾರ್ಯವು ಒಬ್ಬಿಬ್ಬ ವ್ಯಕ್ತಿಗಳಿಂದಲೇ ಆಗುವದೆಂದು ತಿಳಿಯಕೂಡದು. ತಾವೆಲ್ಲರೂ ಸಹಾಯ ಮಾಡಿದರೆ ಈ ಕಾರ್ಯಕ್ರಮವನ್ನು ನಾವು ಪೂರೈಸಬಹುದು. ಆದ್ದರಿಂದ ತಾವು ತಮ್ಮ ಜೊತೆ ಮನಸ್ಸರಿತು ಇಷ್ಟರೊಳಗೆ ತಾವು ಕಾಂಗ್ರೆಸ್ ಸಭಾಸದರಾಗದಿದ್ದರೆ ಕೂಡಲೇ ನಾಲ್ಕಾಣೆಗಳನ್ನು ಕೊಟ್ಟು ಸದಸ್ಯರಾಗಿ, ಮುಂದೆ ಎಲ್ಲ ಕಡೆಯಲ್ಲಿಯೂ ಕಮಿಟಿಗಳನ್ನು ಏರ್ಪಡಿಸುವ ಕಾರ್ಯದಲ್ಲಿ ನಮಗೆ ನೆರವಾಗಬೇಕೆಂದು ಬೇಡಿಕೊಳ್ಳುವೆನು. ಕರ್ನಾಟಕವು ಇದುವರೆಗೆ ಯಾವ ಕಾರ್ಯದಲ್ಲಿಯೂ ಹಿಂದೆ ಬಿದ್ದಿರುವದಿಲ್ಲ. ಈ ಸಾರೆಯಾದರೂ ತಾವೆಲ್ಲರೂ ಒಟ್ಟಿಗೆ ಸೇರಿ ಕರ್ನಾಟಕ ಮಾತೆಯ ಮಾನವನ್ನು ರಕ್ಷಿಸುವಿರೆಂದು ನಂಬಿರುವ,

ತಮ್ಮ ಸೇವಕ,
ಶ್ರೀನಿವಾಸರಾವ್ ಕೌಜಲಗಿ,
ಅಧ್ಯಕ್ಷ, ಕ. ಪ್ರಾ. ಕಾಂ. ಕಮಿಟಿ.

ಕೊಡಗು ವಿದ್ಯಾಭಿವೃದ್ಧಿ ಫಂಡು.

ತಾ 1—8—29ರಲ್ಲಿ ನಡೆದ ಕೊಡಗು ವಿದ್ಯಾಭಿವೃದ್ಧಿ ಫಂಡಿನ ಸೆಂಟ್ರಲ್ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್.

(1) ತಾ. 1—7—29ರಲ್ಲಿ ನಡೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

(2) ಈ ಕೆಳಗೆ ಕಂಡ ವಿದ್ಯಾರ್ಥಿಗಳಿಗೆ ತಲಾ 100/ ರೂಪಾಯಿ ಸಾಲ ಕೊಡಬಹುದೆಂದು ತೀರ್ಮಾನವಾಯಿತು

1. ಕೋಟೆರ ನಂಜುಂಡನವರಿಗೆ
2. ಮಂಡೇಪಂಡ ಬೋಪಯ್ಯನವರಿಗೆ.
3. ಒಲ್ಲಿರಂಡ ಪೊನ್ನಪ್ಪನವರಿಗೆ.

ಚೊಟ್ಟೆಂಗಳ ಅಪ್ಪಣ್ಣನವರಿಗೆ ಪ್ರೊವಿನ್ಶ್ಯಯಲ್ ಫಂಡಿನಿಂದ ಸ್ಕಾಲರ್‌ಶಿಪ್ ಕೊಟ್ಟ ಪಕ್ಷದಲ್ಲಿ ಈ ಫಂಡಿನಿಂದ ಕೋಡಿರ ಮುದ್ದಪ್ಪನವರಿಗೆ 100/ ರೂಪಾಯಿ ಸಾಲ ಕೊಡಬಹುದೆಂತ ತೀರ್ಮಾನವಾಯಿತು.

(3) ಫಂಡಿನ ಚಿನ್ತೆ ಕೆಲಸ ಮಾಡುವದಕ್ಕೆ ಬಗ್ಯೆ ತಿಂಗಳೊಂದರ 2/ ರೂಪಾಯಿ ಮಾಡಂತೆ ಸೆಕ್ರೆಟರಿಯವರು ಖರ್ಚು ಮಾಡಬಹುದೆಂತ ತೀರ್ಮಾನವಾಯಿತು.

ಟಿಪ್ಪಣಿ

ಈ ಫಂಡಿನಿಂದ ಹಾಲಿ ವರ್ಷ ಸ್ಕಾಲರ್ ಶಿಪ್ ಮತ್ತು ಸಾಲ [illegible] 12 [illegible] [illegible]

[illegible]

(ಚಿತ್ರ [illegible])

1 [illegible] ಅನಾರೋಗ್ಯವನ್ನು [illegible] ಐಶ್ವರ್ಯವಾಗಿಯೂ ಮಾಡುವದಾಗಿದೆ

2. ಕಲಿಯಲು ಕ್ಷಾಮದ ಕಾಲದಲ್ಲಿ ಇದನ್ನು [illegible] ದ ಇಡೀ ಸಮಯದ ಕೆಲಸವಾಗಿ ಮಾಡಿಕೊಳ್ಳಬಹುದು.

3 ಇದು ಪರದೇಶಗಳಿಗೆ ಹರಿದು ಹೋಗುವ ಧನವನ್ನು ತಡೆಯಲು ಸಹಾಯ ಮಾಡುತ್ತದೆ.

4 ಇದರ ಉತ್ಪತ್ತಿಯು [illegible] ಸ್ವಾತಂತ್ರ್ಯವನ್ನು ಕೊಡುವುದರಿಂದ ಇದಕ್ಕೆ ಹಿಸು ದೇಶದ್ದ ಮಾರ್ಕೆಟು ಇದೆ.

5. ಇದನ್ನು ಬಹು ಸುಲಭದಲ್ಲಿ ಕಲಿಯಲೂ, ಅಭ್ಯಾಸಿಸಲೂ ಬಹುದು ಮತ್ತು ಇದನ್ನು ಎಲ್ಲಾ ಗಂಡಸರು, ಹೆಂಗಸರು, ಮಕ್ಕಳು, ಹಳಬರು ಮತ್ತು ಅಶಕ್ತರೂ ಮಾಡಬಹುದು.

6. ಇದು ನ್ಯಾಯವಾದ ಮತ್ತು ಬೇರೆ ಹೆಚ್ಚಿನ ಲಾಭದಾಯಕವಾದ ಕಸಬಿನ ಬದಲಿಗೆ ಕೈಕೊಳ್ಳಬೇಕಾದುದಲ್ಲ. ಆದರೆ ಕೆಲಸವಿಲ್ಲದಿರುವಾಗಲೂ, ಸೋಮಾರಿತನವನ್ನು ಕಳೆಯಲೂ ಕೈಕೊಳ್ಳಬೇಕಾದದ್ದು.

7 ಇದು ಇಂಡಿಯಾದ ಗ್ರಾಮಾಂತರಗಳಲ್ಲಿ ಅಸಹಾಯಕತನವನ್ನೂ, ಸೋಮಾರಿತನವನ್ನೂ ಹೋಗಲಾಡಿಸಿ ಕಾರ್ಯಶಕ್ತಿಯನ್ನು ಉಂಟುಮಾಡುವುದು.

ವಿಷ ಸರ್ಪಗಳ ಕಡಿತ.

ನಮ್ಮ ದೇಶದಲ್ಲಿ ವಿಷವುಳ್ಳ ಹಾವುಗಳು ವಿಶೇಷವಾಗಿವೆ. ಅವುಗಳಲ್ಲಿ ನಾಗರಹಾವು, ಚೇರ ಅಥವಾ ಚಂದ್ರಬೋರ, ಗೋಧಿನಾಗರ ಎಂಬಿವು ಅತಿ ವಿಷವುಳ್ಳವು ಇಂಡಿಯಾ ದೇಶದಲ್ಲಿ ಪ್ರತಿ ವರ್ಷವೂ ಆಗುತ್ತಿರುವ ಸುಮಾರು 20,000 ಮರಣಗಳಿಗೆ ಈ ಹಾವುಗಳ ಕಡಿತವೇ ಕಾರಣವಾಗಿದೆ.

ಹಾವುಗಳು ಸಹಜವಾಗಿ ಹೊರಗೆ ಬರುವುದಕ್ಕೆ ಭಯಪಡುತ್ತವೆ. ಸಾಧಾರಣವಾಗಿ ಅವು ಕಣ್ಣಿಗೆ ಗೋಚರವಾಗುವ ಹಾಗೆ ಸಂಚರಿಸುವುದಿಲ್ಲ. ಮತ್ತು ಅವು ಸ್ವಲ್ಪವೂ ಸದ್ದಿಲ್ಲದೆ ಸಂಚರಿಸುವವು ಬೆಳಕಿನಲ್ಲಿ ಹೊರಗೆ ಬರುವುದೂ ಇಲ್ಲ. ಮನುಷ್ಯರೂ, ಪ್ರಾಣಿಗಳೂ ಆಗಿಂದಾಗ ಸಂಚರಿಸುತ್ತಿರುವ ಪ್ರದೇಶಗಳಲ್ಲಿ ತಲೆಯಿಕ್ಕುವುದಿಲ್ಲ. ಅವು ಸಾಮಾನ್ಯವಾಗಿ ಸೂರ್ಯಾಸ್ತಮಾನಕ್ಕೆ ಮುಂಚೆ ಹೊರಗೆ ಬಾರದೆ, ಕತ್ತಲೆ ಹೊತ್ತಿನಲ್ಲಿ ಹೊರಗೆ ಬಂದು ತಮ್ಮ ಆಹಾರಗಳನ್ನು ಸಂಪಾದಿಸಿಕೊಳ್ಳುವವು. ಹಾವಿನ ಮೈ ಮೇಲಿರುವ ಗುರುತುಗಳನ್ನೂ, ಅದರ ಮೊಟಕಾದ ಮತ್ತು ಸಣ್ಣದ ಬಾಲವನ್ನೂ ನೋಡಿ ಅದು ವಿಷ ಜಾತಿಯದೇ ಅಲ್ಲವೇ ಎಂಬುದನ್ನು ತಿಳಿಯಬಹುದು. ಆದರೆ ಹಾವು ಇಂತಹ ಜಾತಿಗೇ ಸೇರಿದುದೆಂದು ಗೊತ್ತು ಮಾಡಲು ಸ್ವಲ್ಪ ಅನುಭವವು ಬೇಕು ಹಾವುಗಳಿಂದ ಕಡಿಸಿಕೊಂಡವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರುವಾಗ ತಮ್ಮನ್ನು ಕಡಿದ ಹಾವುಗಳನ್ನು [illegible] ಜೊತೆ [illegible] [illegible] ಹಾವುಗಳೂ ದೊರೆಯುವುದುಂಟು ಆ ಹಾವುಗಳ [illegible] [illegible] ದು ತೀರ್ಮಾನಿಸಬಹುದಾದ [illegible] ತಿರದ ಕಾರಣ ಮನುಷ್ಯರಿಗೆ [illegible] [illegible] [illegible] ರಿಂದ ಹೊರಬರಲು ಆಗದ ಶಕ್ತಿಯಿಲ್ಲದ [illegible] ಹೋಗ ವ

ದು ಆದರೂ ಅದಕ್ಕೆ ಇನ್ನೂ ಕಚ್ಚುವ ಶಕ್ತಿಯುಂಟು. ಹಾವಿನ ತಲೆಯ ಮೇಲೆ ಹೊಡೆದ ಹೊರತು ಅದು ಸಾಯುವುದಿಲ್ಲ. ತಲೆಯ ಮೇಲೆ ಹೊಡೆದು ಕೊಂದರೆ ಅದರ ಜಾತಿಯು ಚೆನ್ನಾಗಿ ತಿಳಿಯುವುದಿಲ್ಲವಾದುದರಿಂದ ಸಾಧ್ಯವಾದಾಗ ಹಾವುಗಳ ಬೆನ್ನ ಮೇಲೆಯೇ ಪೆಟ್ಟು ಕೊಟ್ಟು ಅವುಗಳ ತಲೆಯ ಪೂರ್ಣಾಕೃತಿಯನ್ನು ಕೆಡಿಸದೆ ಅದಕ್ಕೆ [illegible] ಎಳ್ಳಿನಷ್ಟೂ ಪೆಟ್ಟು ಕೊಲ್ಲುವುದೊಳ್ಳೆಯದು

ನಾಗರ ಹಾವು ಮುಂತಾದ ಕೆಲವು ಜಾತಿಯ ಹಾವುಗಳು ಕಡಿದರೆ, ಆ ವಿಷವು ನರಗಳ ಕೇಂದ್ರಸ್ಥಾನವನ್ನು ಮುಟ್ಟಿ, ಆ ಮೂಲಕ ಬೆನ್ನಹುರಿಗೂ, ಮಿದುಳಿಗೂ ವ್ಯಾಪಿಸಿ, ಎದುಳಿನಲ್ಲಿರುವ ಶ್ವಾಸನಾಳಗಳ ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಿ, ಮರಣಕ್ಕೆ ಕಾರಣವಾಗುವುದು. ಬೇರೆ ಕೆಲವು ಜಾತಿಯ ಹಾವುಗಳು ಕಡಿದರೆ (ರಸಲ್ ವೈಪರ್ ಮುಂತಾದುವು) ಅವು ರಕ್ತವನ್ನು ಕೆಡಿಸಿ, ಹೃದಯ ಚಲನಕ್ಕೆ ಅಡ್ಡಿ ಮಾಡಿ, ಶರೀರದ ಕೆಲಸಗಳೆಲ್ಲವನ್ನೂ ನಿಲ್ಲಿಸುವುವು. ಅಲ್ಲದೆ ಅಧಿಕವಾದ ರಕ್ತಸ್ರಾವದಿಂದ ದೇಹದ ಶಕ್ತಿಯೆಲ್ಲವೂ ಹೋಗಿ ಮರಣಕಾರಿಯಾಗುವುದು.

ಸಾಮಾನ್ಯವಾಗಿ ಹಾವುಗಳಿಗೆ ಭೀತಿಯು ಹೆಚ್ಚು. ಅವುಗಳನ್ನು ಕೆಣಕದ ಹೊರತು ಅವು ಕಚ್ಚುವುದಿಲ್ಲ. ಆದರೆ, ನಾಗರಹಾವು, ಕೇರೆಹಾವು ಮತ್ತು ಗೋಧಿನಾಗರಹಾವುಗಳು ಮಾತ್ರ ಮೇಲೆ ಬಿದ್ದು ಬರುತ್ತವೆ ಕೆಣಕಿದವರನ್ನು ಅಟ್ಟಿ [illegible] ತಮ್ಮ ಸರಳನ್ನೇ [illegible] [illegible] ಗಳಲ್ಲಿ [illegible] [illegible]

[illegible] ಕಚ್ಚು [illegible] [illegible] ಅಥವಾ [illegible] [illegible] ದ [illegible] ಯಾವುದಾದರೂ ವ್ಯಸನವಿದ್ದು, ಆ ವಿಷವು ಚೆನ್ನಾಗಿ ಏರುವುದಕ್ಕೆ ಅವಕಾಶವು ಕಡಿಮೆಯಾಗಿರಬಹುದು. ಅನೇಕ ಸಂದರ್ಭಗಳಲ್ಲಿ ವಿಷವಿಲ್ಲದ ಹಾವುಗಳು ಕಡಿದಿದ್ದರೂ, ಭೀತಿಯಿಂದಲೇ ಹೆಚ್ಚು ಮಂದಿ ಸತ್ತಿರುವರು. ನಮ್ಮ [illegible] ಹಾವಾಡಿಗರನೇಕರು ಬಹಳ ದಿವಸಗಳ ಕಾಲ ತಮ್ಮ ದೇಹಕ್ಕೆ ಸ್ವಲ್ಪ ಸ್ವಲ್ಪವಾಗಿ ವಿಷವನ್ನು ಏರಿಸಿಕೊಳ್ಳುತ್ತ ಬಂದು, ಕ್ರಮೇಣ ಆ ವಿಷದ ಬಾಧೆಯು ದೇಹಕ್ಕೆ ತಟ್ಟದಂತೆ ಮಾಡಿಕೊಳ್ಳುವರು. ಮುಂಗುಸಿಗೆ ಹಾವು ಕಚ್ಚಿದರೂ ವಿಷವೇರುವುದಿಲ್ಲವೆಂಬುದು ಸುಳ್ಳು. ವಿಷದ ಜಾತಿಯ ಹಾವು ಕೋಪದಿಂದ ಕಡಿದರೆ, ಮುಂಗುಸಿಯಾದರೂ ಸಾಯುವುದು ನಿಶ್ಚಯವು

ಹಾವಿನ ವಿಷವು ಸರಿಯಾದ ಪ್ರಮಾಣಕ್ಕೆ ದೇಹಕ್ಕೆ ಸೇರಿದ್ದರೆ ಕಡಿಸಿಕೊಂಡವರು ಒಂದು ಗಂಟೆಯ ಕಾಲದಿಂದ ಹಿಡಿದು ಆರು ಗಂಟೆಯ ಕಾಲದೊಳಗಾಗಿ ಸಾಯುವರು. ಕೆಲವು ಸಮಯಗಳಲ್ಲಿ 12 ಅಥವಾ 24 ಗಂಟೆಗಳ ಕಾಲದ ವರೆಗೂ ಬದುಕಿರುವುದುಂಟು ನಾಗರಹಾವು ಕಡಿದರೆ ಬಹು ಶೀಘ್ರವಾಗಿ ಪ್ರಾಣವು ಹೋಗುವುದು. ರಸಲ್ ವೈಪರ್ ಜಾತಿಯ ಹಾವು ಕಡಿದರೆ ಕಚ್ಚಿಸಿಕೊಂಡವರು ಸಾಯಲು 24 ಗಂಟೆಗಳಿಂದ 27 ಗಂಟೆಗಳ ಕಾಲದ ವರೆಗೂ ಹಿಡಿಯುವುದು.

ಸಾಮಾನ್ಯವಾಗಿ ಹಾವುಗಳ ವಿಷವ ವೇದನೆ, ಉರಿಯನ್ನುಂಟುಮಾಡುವವು. ಶರೀರದೊಳಕ್ಕೆ ವಿಷವು ಪ್ರವೇಶಿಸಿದೊಡನೆ ಅದು ಆ ಸ್ಥಳದಲ್ಲಿ ವಿಶೇಷವಾಗಿ ಉರಿ ಹುಟ್ಟಿಸುವುದು ಹಾವು ಕಚ್ಚಿದ ಕೆಲವು ನಿಮಿಷಗಳೊಳಗಾಗಿ ಆ ಸ್ಥಳವು ಊದಿಕೊಳ್ಳುವುದಕ್ಕೆ ಪ್ರಾರಂಭಿಸಿ ಕೆಲವು ಗಂಟೆಗಳ ಕಾಲದೊಳಗಾಗಿಯೇ ಬಹಳ ದೊಡ್ಡದಾಗುವುದು. ಕಚ್ಚಿದ ಗಾಯದ ರಂಧ್ರದಿಂದ ಧಾರಾಳವಾಗಿ ರಕ್ತಸ್ರಾವವಾಗುವದಕ್ಕೆ ಪ್ರಾರಂಭಿಸುವುದು ಈ ಸೂಚನೆಗಳಲ್ಲಿ ಯಾವುದಾದರೂ ಕಾಣಿಸಿಕೊಂಡೊಡನೆ ಹಾವಿನ ವಿಷವು ಏರುವದೆಂದು ತಿಳಿಯಬಹುದು. ಹಾವು ಕಚ್ಚಿದ ಸ್ಥಳದಲ್ಲಿ ಗಾಯವು ದೊಡ್ಡದಾಗದೆ ಆ ಸ್ಥಳವು ಊದಿಕೊಳ್ಳದೆ ಇದ್ದು ಕಚ್ಚಿದುದರಿಂದುಂಟಾದ ಸಣ್ಣ ಗಾಯದ ರಂಧ್ರವು ಮುಚ್ಚಿಕೊಳ್ಳುತ್ತಾ ಬಂದರೆ ವಿಷದ ಹಾವು ಕಡಿದಿಲ್ಲವೆಂದಾಗಲೀ ಹಾವಿನ ವಿಷವು ದೇಹದೊಳಕ್ಕೆ ಪ್ರವೇಶಿಸಿಲ್ಲವೆಂದಾಗಲೀ ತಿಳಿಯಬಹುದು ಆದುದರಿಂದ ಹಾವು ವಿಷ ಜಾತಿಯದೇ ಅಲ್ಲವೇ ಎಂಬುದನ್ನು ತಿಳಿಯುವುದಕ್ಕೆ ಕಚ್ಚಿದ ಸ್ಥಳದಲ್ಲಿರುವ ಹಲ್ಲುಗಳ ಗುರುತುಗಳನ್ನು ನೋಡಿದ ಮಾತ್ರಕ್ಕೆ ಸಾಲದು. ಹಾವಿನ ವಿಷಕ್ಕೆ ಆಂಟಿವಿನೀನ್ ಎಂಬುದೊಂದು [illegible] ಔಷಧಿ ಮೊದಲನೆಯ ಸಲಕ್ಕೆ 100 ಕ್ಯೂಬಿಕ್ ಸೆಂಟಿಮೀಟರಿನ ಪ್ರಮಾಣವನ್ನು ದೇಹದೊಳಕ್ಕೆ ಚುಚ್ಚಬೇಕು. ಅದರಿಂದ ಮೇಲೆ ಹೇ[illegible] ಬಂದು ಇದ್ದರೆ ಇನ್ನೂ [illegible] ಪ್ರಮಾಣದಲ್ಲಿ [illegible] ದೇಹ[illegible] ಈ ಔಷಧಿಯನ್ನು ಕಸೌಲಿ [illegible] ಸಕಾಲದಲ್ಲಿ ಉಪಯೋಗಿಸ[illegible] ವಿಷಗಳನ್ನು ಸಹ[illegible] [illegible] ವ್ಯಾಪಿಸಿ ಕೆಲಸ[illegible] ವ್ಯಾಪಿಸಿ [illegible] ಶಕ್ತಿಯನ್ನು [illegible] ಮೇಲೆ ಹೇಳಿದ "ಆಂಟಿವಿನೀನ್" ಎಂಬುದು

ಹೊಸದಾಗಿದ್ದಷ್ಟೂ ಒಳ್ಳೆಯದು. ಆದರೆ ಕಸೌಲಿಯಲ್ಲಿ ತಯಾರಾಗುತ್ತಿರುವ ಆಂಟಿವಿನೀನ್ ಎಂಬುದು 1 ವರ್ಷ ಕಾಲಕ್ಕೆ ತನ್ನ ಶಕ್ತಿಯನ್ನು ಉಳಿಸಿಕೊಂಡಿರುವುದು. ಆ ಪರ್ಯಾಯದೊಳಗಾಗಿ ಶೇಕಡ 5 ಅಥವಾ 10 ಭಾಗದಷ್ಟು ಕಡಿಮೆಯಾಗಬಹುದು. ಆ ಔಷಧಿಯ ಶಕ್ತಿಯು 1 ವರ್ಷ ಕಳೆದ ಮೇಲೆಯೂ ಬಹಳ ಮಟ್ಟಿಗೆ ಹಾಗೆಯೇ ಇರುವುದೂ ಉಂಟು. ಚಿಕ್ಕ ಮಕ್ಕಳಿಗೂ ಆಕಾರದಲ್ಲಿ ಚಿಕ್ಕವರಾಗಿರುವವರಿಗೂ, ಯುವಕರಿಗೆ ಬೇಕಾದುದಕ್ಕಿಂತ ಹೆಚ್ಚು ಪ್ರಮಾಣದ ಔಷಧಿಯು ಬೇಕೆಂದು ಅನುಭವದಿಂದ ತಿಳಿದಿದೆ.

ಹಾವುಗಳ ವಿಷವನ್ನು ಪರಿಹರಿಸುವುದಕ್ಕೆ ಈಗ ಸಾಮಾನ್ಯವಾಗಿ ಉಪಯೋಗಿಸುವ ಔಷಧಿಗಳಲ್ಲಿ, ಪೊಟಾಸಿಯಮ್ ಪರ್‌ಮಾಂಗನೇಟ್ (Permanganate of Potassium) ಎಂಬುದು ಮತ್ತೊಂದು. ಆದರೆ ವಿಷವು ರಕ್ತದೊಳಕ್ಕೆ ಪ್ರವೇಶಿಸಿದ ಮೇಲೆ ಈ ಔಷಧಿಯನ್ನು ಉಪಯೋಗಿಸುವುದರಿಂದ ಯಾವ ಗುಣವೂ ಇಲ್ಲ. ರಕ್ತದ ಮೂಲಕ ವಿಷವು ದೇಹದ ಒಳಭಾಗಕ್ಕೆಲ್ಲಾ ವ್ಯಾಪಿಸದಂತಿರಲು, ಹಾವು ಕಚ್ಚಿದ ಸ್ಥಳಕ್ಕೆ ಸ್ವಲ್ಪ ಮೇಲು ಭಾಗದಲ್ಲಿ ಕಟ್ಟು ಕಟ್ಟಬೇಕು. ಹಾವು ಕಚ್ಚಿದ ಸ್ಥಳದಲ್ಲಿರುವ ಗಾಯವನ್ನು ಚಾಕುವಿನಿಂದ ಕೀರಿ ದೊಡ್ಡದು ಮಾಡಿ, ರಕ್ತವನ್ನು ಧಾರಾಳವಾಗಿ ಸುರಿಸಿ, ವಿಷಪರಿಹಾರಕ್ಕಾಗಿ ಆ ಗಾಯಕ್ಕೆ ಪೊಟಾಸಿಯಮ್ ಪರ್‌ಮಾಂಗನೇಟ್ ಪುಡಿಯನ್ನು ಹಾಕಿ ಒತ್ತಬೇಕು. ಆಗ ಮಾತ್ರ ಆ ಚಿಕಿತ್ಸೆಯು ಗುಣದಾಯಕ [illegible] ಕಟ್ಟು ಅರ್ಧ ಗಂಟೆಗಳ ಕಾಲಕ್ಕಿಂತ ಹೆಚ್ಚು ಕಾಲ ಇರಬಾರದು. ಇಲ್ಲದಿದ್ದರೆ ಆ ಸ್ಥಳಗಳಲೆಲ್ಲಾ ರಕ್ತ ಸಂಚಾರವು ಧಾರಾಳವಾಗಿ ನಡೆಯದೆ ಬಹಳ ಕಷ್ಟವಾಗಬಹುದು. ರಕ್ತ ಸಂಚಾರವು ಧಾರಾಳವಾಗಿ ನಡೆಯುತ್ತಿರುವ ರಕ್ತನಾಳಗಳಲ್ಲಿ ವಿಷವು ಸೇರಿಕೊಂಡ ಮೇಲೆ, ಪೊಟಾಸಿಯಮ್ ಪರ್‌ಮಾಂಗನೇಟನ್ನು ಉಪಯೋಗಿಸುವುದರಿಂದ ಏನೂ ಪ್ರಯೋಜನವಿಲ್ಲ.

ಹಾವಿನ ಕಡಿತಕ್ಕೆ ಯಂತ್ರಗಳೂ, ಔಷಧಿಗಳೂ ಅನೇಕ [illegible] ವಿಕ್ರಯಿಸಲ್ಪಡುತ್ತಿವೆ ಆದರೆ, ಅವೊಂದೂ ಗುಣದಾಯಕಗಳಲ್ಲ. ಜನರು ಅಜ್ಞಾನದ ದೋಷದಿಂದ ಕಂಡ ಕಂಡ ಔಷಧಿಗಳನ್ನೆಲ್ಲಾ ಉಪಯೋಗಿಸುತ್ತಿರುವರು. ಮತ್ತು ಹಳ್ಳಿಗಳಲ್ಲಿ ಮಂತ್ರವಾದಿಗಳಿಗೆ ಹಾವಿನ ವಿಷವನ್ನು ಹೋಗಲಾಡಿಸುವ ಶಕ್ತಿ ಇರುವುದೆಂಬ ಮೂಢ ಭಕ್ತಿಯಿಂದ, ಅವರಲ್ಲಿಗೆ ಹೋಗಿ ವ್ಯಥಾ ಕಾಲವನ್ನು ಕಳೆಯುತ್ತಿರುವರು. ಅನೇಕ ಸಂದರ್ಭಗಳಲ್ಲಿ ಅವರ ಮಂತ್ರದಿಂದ ಗುಣವಾಗಿರಬಹುದು. ಆದರೆ, ಅದಕ್ಕೆ ಹಾವುಗಳ ವಿಷವು ದೇಹದೊಳಕ್ಕೆ ತಕ್ಕ ಪ್ರಮಾಣದಲ್ಲಿ ಪ್ರವೇಶಿಸದೆ ಇರಬಹುದು. ವಿಷವಿಲ್ಲದ ಹಾವು ಕಡಿದಿರಬಹುದು. ವಿಷವನ್ನು ದೇಹದೊಳಕ್ಕೆ ಬಿಡದೆ ಸುಮ್ಮನೆ ಹಾವು ಕಚ್ಚಿರಬಹುದು. ತನ್ನ ವಿಷವೆಲ್ಲವನ್ನೂ ಉಪಯೋಗಿಸಿದ ಒಡನೆಯೇ ಆ ಹಾವು ಮನುಷ್ಯನನ್ನು ಕಚ್ಚಿರಬಹುದು ಇವೇ ಮುಂತಾದ ಕಾರಣಗಳಿಂದೇ ಕು ಹಾವು ಕಚ್ಚಿದ್ದಾಗ, ಪ್ರತಿ ನಿಮಿಷವೂ ಬಹಳ ಅಮೂಲ್ಯವಾದ ಕಾಲವೆಂದು ಭಾವಿಸಿ ಚಿಕಿತ್ಸೆಮಾಡಬೇಕು. ಹಾವು ಕಚ್ಚಿದೊಡನೆ ಮೇಲೆ ಕಟ್ಟು ಕಟ್ಟಿ, ವೈದ್ಯರನ್ನು ಕರೆಸಬೇಕು. ಇಲ್ಲದಿದ್ದರೆ ರೋಗಿಯನ್ನು ಸಮೀಪದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು.

'ಆರೋಗ್ಯ ಚಂದ್ರಿಕೆ.'

ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.—

ಈ ಕೆಳಗೆ ರುಜು ಮಾಡಿರುವ ನಾನು ಮದ್ರಾಸಿನಲ್ಲಿರುವ ಮೆ.ಜರ್ಸ್ 'ಇಂಡೊ ಅಗ್ರಿ ಲಿಮಿಟೆಡ್" (Indo-Agri Limited) ರವರ ಏಜನ್ಸಿಯನ್ನು ಮೈಸೂರು ಸಂಸ್ಥಾನಕ್ಕೆ ಕೊಡಗಿಗೆ ನಡೆಸುತ್ತಿದ್ದೇನೆ. ಕ್ರಿಮಿ ಗೊಬ್ಬರಗಳ ವಿಷಯವಾಗಿ ನನಗಾಗಲಿ ಅಥವ ನಮ್ಮ ಮದ್ರಾಸು ಕಂಪೆನಿಗಾಗಲಿ ಬರುವಷ್ಟು ಏನು [illegible] ಬೇಕಾಗಿ [illegible]. Imperial Chemical Industries Limitted, Madras. ಈ ಕಂಪೆನಿಯ ಏಜನ್ಸಿಯನ್ನು ನಾನು ಬಿಟ್ಟುಬಿಟ್ಟಿರುವ ಕಾರಣ ಈ ಕಂಪೆನಿಯವರಾಗಲೀ, ಅಥವ ಅವರ ಕಡೆ ಪ್ರತಿನಿಧಿಗಳಾಗಲಿ ನನ್ನ ಹೆಸರಿನ ಮೇಲೆ ನಡಿಸುವ ಯಾವ ವ್ಯವಹಾರಕ್ಕೆಗೂ ನಾನು ಜವಾಬ್ದಾರನಾಗುವದಿಲ್ಲವೆಂದು ಈ ಮೂಲಕ ತಿಳಿಯಪಡಿಸಿರುತ್ತೇನೆ.

Head Office address —

Indo-Agri Limitted,
Agents, Messrs.
Sassv Wallace & Company,
Post Box No. 14, Madras.

B. Bettiah.
Sub Agent,
[illegible]nnapett, Mysore.

4—3.

WANTED ON HIGH PAY.

Vacancies everywhere. Apply for a copy of "Guide To Chances" enclosing 2 anna stamps

ROYAL ELECTRICAL COLLEGE.
Naichebandan.
DELHI.

6—2

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿಗೆ 0—14—0. ಟ. ಖ. 0—9—0.

ಕೆ. ಟಿ. ಡೋಂಗರೆ ಕಂಪೆನಿ,

52—45 ಗಿರಿಗಾಂವ, ಮುಂಬಯಿ.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges & Hunting Requisites

for

SEASON

1929-30.



CURRENT CATALOGUE ON APPLICATION

THE BOMBAY ARMOURY,

Specialist in Arms & Ammunition.

331, ABDULREHMAN STREET,

BOMBAY No. 4.

24—6

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಅಸ್ಮದ ಲಾಭ ಕಳಕೊಳ್ಳಬೇಡಿ } ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ { ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ.

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ ಹೊಟ್ಟೆ ಶೂಲೆ, ದುಸ್ವಪ್ನ ಬೀಳುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ, ವಾಂತಿ, ಸರ್ಪಕಾಟ ಪಿಶಾಚಬಾಧೆಯಿಂದ ನರಳುವಿಕೆ, ಬರಡು, ಕಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು. ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಳಕ್ಕಾಕ್ ಸಂದುರೋಗ, ಮುಟ್ಟುದೋಷ, ಕಾಮಿಣಿ, ಗ್ರಹಪೀಡೆ, ದೃಷ್ಟಿದೋಷ ಭಯದಿಂದ ಜ್ವರಪೀಡೆ, ಕ್ಷೀಣ ಹೊಂದುವಿಕೆ, ಬಹು ಅಳುವಿಕೆ, ಮುಂಗಟೇನೆ ಹೊಟ್ಟೆಯೊಳಗಿಂದ ಎಳೆಯುವ ಮೊದಲಾದವುಗಳಿಂದ ಕಾಡುತ್ತಿರುವದು ಗರ್ಭ ರಕ್ಷಾಕರ ವಿಧಿಯಲ್ಲಿ, ಕುಮಾರ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಸಂಶೋಧಿಸಿ ಗ್ರಹಣ ಕಾಲದಲ್ಲಿ ಸಾಧುಜನರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸುತ್ತವೆ. ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ತಿಳಕೊಳ್ಳಿರಿ ಹೆಣ್ಣು ಮಕ್ಕಳಿಗೆ ಸಂತಾನ ದಶೆಯಿಂದ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ [illegible] ಪೋಸ್ಟು ಖರ್ಚು ಬೇರೆ ಆಗಿಶಕ್ಕೆ ವಿಚಾರಗಳನ್ನು ಸ್ಪಷ್ಟ ಬರೆಯಿರಿ.

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ, ಪಂಚಗಟ್ಟಿ,

52—5 **ಮು. ಪೋ. ಅಥಣಿ, ಜಿ. ಬೆಳಗಾಂವ.**

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಒಟ್ಟೆಯ ರಂಗಿಗೂ, ಬಟ್ಟೆಯ ನಮೂನೆಗೂ ಮರುಳಾಗಿ ಪರದೇಶಿ ಬಟ್ಟೆಯನ್ನು ಕೊಂಡುಕೊಂಡು ಅನ್ನವಿಲ್ಲದೆ ನರಳುತ್ತಿರುವ ಲಕ್ಷ್ಯಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡುತ್ತಿರುವಿರಾ? ಇಲ್ಲವೇ, ದಿನಕ್ಕೊಮ್ಮೆ ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ನರಳುತ್ತಿರುವ ಲಕ್ಷ್ಯಾನುಲಕ್ಷ ಬಡವಾಯಿ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಒಟ್ಟೆಯನ್ನು [illegible] ಖರ್ಚು ಮಾಡಿದ ಪ್ರತಿ ಒಂದು ರೂಪಾಯಿ [illegible] ರೀತಿಯಾಗಿ ನಮ್ಮ [illegible] ಯರ ಜೀವನಕ್ಕೆ ದಾರಿಯಾಗುತ್ತೆ.

	ರು.	ಆ	ಪೈ.
ಹತ್ತಿ ಬೆಳೆಸುವನಿಗೆ	0	3	0
ಹತ್ತಿ [illegible]ವನಿಗೆ	0	0	6
ಹತ್ತಿ ಸುತ್ತುವವನಿಗೆ	0	1	9
ನೂಲು ಮಾಡುವವನಿಗೆ	0	4	9
ಬಟ್ಟೆ ನೆಯ್ಯುವವನಿಗೆ	0	4	9
[illegible]	0	0	6
ಬಟ್ಟೆ [illegible]	0	0	9
[illegible]	0	1	0
	1	0	0

ಖಾದಿಯ [illegible] ಪರದೇಶದ ಪರ್ವಕ್ಕೆ 60 [illegible] ಗುವದನ್ನು ನಿಲ್ಲಿಸಿ. [illegible] ಖಾದಿ ಕೈಸಿಪಲು [illegible] ನಿಮ್ಮ [illegible] ನೆಯ ಬಳಿಗೆ [illegible]

ಮೋನೇಜರು,

24—2. [illegible]

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾ[illegible] ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್[illegible] ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವ[illegible] ಸಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, [illegible] ಘ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲ[illegible] ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹ[illegible] ಕ್ತಿಯು ಪುನಃ ತುಂಬಿಕೊಳ್ಳುವದು.—ಕ್ರಯ ಡಬ್ಬಿ 1 [illegible] 2—8—0, ಮೂರು ಡಬ್ಬಿಗಳಿಗೆ ರೂ. 7—0—0.

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೩. ಮಲೇರಿಯಾ ನಿವಾರಣಿ.

[illegible] ದಿನ ಬಿಟ್ಟು ಬರುವಜ್ವರ, ಮಲೆ ಜ್ವರ, ? ಯಾ 3 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತವೆ. ಬಾಟ್ಲಿ 1 ಕ್ಕೆ [illegible]

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆ[illegible], ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ. [illegible] 1 ಕ್ಕೆ 1—4—0. 3 ಕ್ಕೆ 3—8—0.

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0—8—0, 3ಕ್ಕೆ 1

೬. ಕಸ್ತೂರಿ ಮಿಶ್ರಣ.

[illegible] ಬಾಣಂತಿಯರಿಗೆ. ಬಾಟ್ಲಿ 1 ಕ್ಕೆ 1 [illegible] —4—0

೭. ರಕ್ತ ಶುದ್ಧಿ ದ್ರಾವಕ.

[illegible] ಬಾಟ್ಲಿ 1 ಕ್ಕೆ 1—4—0, 3 ಬಾಟ್ಲಿಗೆ 3 [illegible] ದ್ರಾವಕ ಡಬ್ಬಿ 1 ಕ್ಕೆ 2—0—0

[illegible] ಔಷಧಿಗಳು ದೊರೆಯುತ್ತವೆ [illegible] ಸಂಗತಿ [illegible] ರೋಗಕ್ಕೆ ತಕ್ಕ ಔಷಧ ರವಾನಿಸ [illegible] ತರಿಸಿ ನೋಡಿರಿ.

ಯಂ. ಗಣಪ[illegible] ಅಂಡ್ ಸನ್ಸ್,

ಆಯುರ್ವೇದೀಯ ಫಿಜಿಸಿಯನ್ಸ್,

52—39 [illegible]

ವರ್ತಮಾನ ಸಂಗ್ರಹ.

ಒಳದೇಶ.

ಸಬ್‌ಜಡ್ಜರಾದ ಮೆ. ಪಾಲೇಕಂಡ ಮೇದಪ್ಪನವರಿಗೆ ಸೆಕೆಂಡ್ ಕ್ಲಾಸ್ ಮೇಜಿಸ್ಟ್ರೇಟರ ಅಧಿಕಾರ ಕೊಡಲಾಗಿದೆ.

ಈ ವಾರದಲ್ಲೂ ಮಳೆ ಕಡಿಮೆ. ಆದರೆ ದೇಶದಲ್ಲಿ ನಾಟಿಯ ವ್ಯವಸಾಯದ ಕೆಲಸವು ಚೆನ್ನಾಗಿ ನಡೆಯುತ್ತದೆ.

ಜೂನ್ ತಿಂಗಳಲ್ಲಿ ಕೊಡಗಿನಲ್ಲಿ 324 ಜನನಗಳೂ, 283 ಮರಣಗಳೂ ಸಂಭವಿಸಿದವೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಮೆ. ಪುಲಿಯಂಡ ಜಿ. ಐಯ್ಯಪ್ಪ, ಬಿ. ಎ. ಯವರು ಕಮಿಷನರ ಆಫೀಸಿನಲ್ಲಿ ಪ್ರೊಬೇಶನರಿ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

ಇಂಡಿಯಾದ ವೈಸರಾಯರಾದ ಲಾರ್ಡ್ ಐರ್ವಿನ್‌ರವರು ಬರುವ ನವಂಬರು ತಾ. 28ರಲ್ಲಿ ಕೊಡಗಿಗೆ ಬರುವರು. ಮರುದಿನ ಮಡಿಕೇರಿಯಲ್ಲಿ ಕೆಲವು ಬಿನ್ನಹ ಪತ್ರಗಳನ್ನು ಅಂಗೀಕರಿಸುವರೆಂದೂ ತಿಳಿಯುತ್ತೇವೆ.

ರೆವಿನ್ಯು ಆಫೀಸಿನ ಹೆಡ್ ಕ್ಲಾರ್ಕರಾದ ಮೆ. ಕೆ. ವೆಂಕಟಾದ್ರಿಯವರು ಎರಡು ತಿಂಗಳು ರಜೆ ತೆಗೆದುಕೊಂಡದ್ದರಿಂದ ಅದೇ ಆಫೀಸಿನ ಮೆ. ಯಂ. ಶ್ರೀನಿವಾಸರಾಯರು ಹೆಡ್ ಕ್ಲಾರ್ಕರ ಉದ್ಯೋಗವನ್ನು ನೋಡಲು ನೇಮಿಸಲ್ಪಟ್ಟಿರುವರು.

1930ನೇ ಜನವರಿ 2ರಲ್ಲಿ ಡಿಲ್ಲಿ ಮತ್ತು ರಂಗೂನಿನಲ್ಲಿ ಪ್ರಾರಂಭವಾಗುವ ಇಂಡಿಯನ್ ಸಿವಿಲ್ ಸರ್ವಿಸ್ ಸ್ಪರ್ಧೆಯ ಪರೀಕ್ಷೆಯ ರೂಲ್ಸ್ ಮತ್ತು ಇತರ ಪುಸ್ತಕಗಳ ನಕಲೊಂದು ನಮಗೆ ಕಳುಹಿಸಲ್ಪಟ್ಟಿದೆ. ನೋಡಲಿಚ್ಛಿಸುವವರಿಗೆ ಅದು ನಮ್ಮ ಆಫೀಸಿನಲ್ಲಿ ದೊರೆಯುವುದು.

ಬರುವ ನವಂಬರು ತಿಂಗಳಲ್ಲಿ ವೈಸರಾಯರಿಗೆ ಒಪ್ಪಿಸಲಿಕ್ಕಿರುವ ಸಂಘದ ಬಿನ್ನಹ ಪತ್ರದ ಮಸೂದೆಯನ್ನು ತಯಾರಿಸುವ ಬಗ್ಗೆ ಕೊಡಗು ಜಮೀನ್ದಾರರ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗು ಈ ತಾ. 15ರಲ್ಲಿ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯಲ್ಲಿ ಸಂಘದ ಹಾಲ್‌ನಲ್ಲಿ ನಡೆಯುವುದು.

ವೀರರಾಜಪೇಟೆ ಮುನಸೀಫ್ ಕೋರ್ಟಿನಲ್ಲಿ ಸಿವಿಲ್ ಕೇಸುಗಳಲ್ಲಿ ಸಾಕ್ಷಿಯರ ಸ್ಟೇಟ್‌ಮೆಂಟುಗಳನ್ನು ಮುನಸೀಫರೇ ಇಂಗ್ಲಿಷಿನಲ್ಲಿ ಬರೆದುಕೊಳ್ಳಬೇಕೆಂತ ಚೀಫ್ ಕಮಿಷನರ ಹುಕುಂ ಆಗಿದೆ. ಆದುದರಿಂದ ಇನ್ನು ಮೇಲೆ ಇಷ್ಟರ ವರೆಗೆ ಇದ್ದಂತೆ ಗುಮಾಸ್ತರು ಸ್ಟೇಟ್‌ಮೆಂಟನ್ನು ಕನ್ನಡದಲ್ಲಿ ಬರಕೊಳ್ಳುವದನ್ನು ನಿಲ್ಲಿಸಿದಂತಾಯಿತು.

ಥರ್ಡ್ ಕ್ಲಾಸ್ ಮೇಜಿಸ್ಟ್ರೇಟರಾದ ಮಡಿಕೇರಿ ಪಾರುಪತ್ಯಗಾರರು ಬ್ರೀಚ್ ಆಫ್ ಕಂಟ್ರಾಕ್ಟು ಕೇಸುಗಳನ್ನೂ, ವರ್ಗಾಯಿಸಿದ ಥರ್ಡ್ ಕ್ಲಾಸ್ ಕೇಸುಗಳನ್ನೂ, ಮಡಿಕೇರಿ, ಸುಂಟಿಕೊಪ್ಪ ಮತ್ತು ಭಾಗಮಂಡ್ಲನಾಡುಗಳ ಅಬ್ಕಾರಿ ಕೇಸುಗಳನ್ನೂ ಮಾತ್ರ ವಿಚಾರಿಸುವರು. ಬಾಕಿ ಕೇಸುಗಳನ್ನು ಸಬ್ ಜಡ್ಜರು ಮತ್ತು ಸಬ್ ಮೇಜಿಸ್ಟ್ರೇಟರು ವಿಚಾರಿಸುವರು.

ಇಷ್ಟರ ವರೆಗೆ ಉತ್ತರ ಕೊಡಗಿನ ಸೆಕೆಂಡ್ ಕ್ಲಾಸ್ ಕ್ರಿಮಿನಲ್ ಕೇಸುಗಳನ್ನೆಲ್ಲಾ ಮಡಿಕೇರಿಯ ಸಬ್ ಮೇಜಿಸ್ಟ್ರೇಟರು ವಿಚಾರಿಸುತ್ತಿದ್ದರು. ಇನ್ನು ಮುಂದೆ ಶನಿವಾರಸಂತೆ, ಸೋಮವಾರಪೇಟೆ, ಫ್ರೇಜರ್‌ಪೇಟೆ ಮತ್ತು ಸುಂಟಿಕೊಪ್ಪ ನಾಡುಗಳ ಕೇಸುಗಳನ್ನು ಸೆಕೆಂಡ್ ಕ್ಲಾಸ್ ಮೇಜಿಸ್ಟ್ರೇಟರಾದ ಸಬ್ ಜಡ್ಜರೂ, ಮಡಿಕೇರಿ ಮತ್ತು ಭಾಗಮಂಡ್ಲನಾಡುಗಳ ಕೇಸುಗಳನ್ನು ಸಬ್ ಮೇಜಿಸ್ಟ್ರೇಟರೂ ವಿಚಾರಿಸುವರು.

ಬರುವ ಅಕ್ಟೋಬರು 1ರಿಂದ ಸುಂಟಿಕೊಪ್ಪ, ಸಿದ್ದಾಪುರ, ಅಮ್ಮತ್ತಿ, ಗೋಣಿಕೊಪ್ಪಲು, ನಾಪೋಕ್ಲು ಮತ್ತು ಪೊನ್ನಂಪೇಟೆಯಲ್ಲಿ ಕಟುಗರು ಮಾರಾಟಕ್ಕಾಗಿ ಕೊಯ್ಯುವ ಕುರಿ, ಆಡುಗಳನ್ನು ಸಬ್ ಅಸಿಸ್ಟೆಂಟ್ ಸರ್ಜನರು ಅಥವಾ ವೆಟರಿನರಿ ಅಸಿಸ್ಟೆಂಟರು ಬೆಳಿಗ್ಗೆ 7ರಿಂದ 8 ಗಂಟೆಯೊಳಗೆ ಪರೀಕ್ಷಿಸಿ, ರೋಗವುಳ್ಳವುಗಳ ಮಾಂಸವನ್ನು ಮಾರಾಟಕ್ಕೆ ಕೊಡದೆ ತಡೆಯಬೇಕೆಂದು ಚೀಫ್ ಕಮಿಷನರು ಹುಕುಂ ಮಾಡಿರುವರು.

ಮೆ. ಪಾಲೇಕಂಡ ಮೇದಪ್ಪನವರು ಕೌನ್ಸಿಲು ಮೆಂಬರತನಕ್ಕೆ ಕೊಟ್ಟ ರಾಜೀನಾಮೆಯು ಚೀಫ್ ಕಮಿಷನರಿಂದ ಅಂಗೀಕರಿಸಲ್ಪಟ್ಟಿದೆ. ಈ ರಾಜೀನಾಮೆಯಿಂದ ಖಾಲಿಯಾಗಿರುವ ಸ್ಥಳಕ್ಕೆ ಮಡಿಕೇರಿ—ಭಾಗಮಂಡ್ಲ—ಸುಂಟಿಕೊಪ್ಪ ಜಮ್ಮಾ ಓಟರುಗಳು ಒಬ್ಬ ಮೆಂಬರನ್ನು ಚುನಾಯಿಸುವ ಬಗ್ಗೆ ಈ ತಾ. 13 ರೊಳಗೆ ಉಮೇದುವಾರರ ನೇಮಕ ಅರ್ಜಿಯು ಕಳುಹಿಸಲ್ಪಡಬೇಕೆಂದೂ, ತಾ. 14ರಲ್ಲಿ ಆ ಅರ್ಜಿಗಳು ಪರಿಶೀಲಿಸಲ್ಪಡತಕ್ಕದ್ದೆಂದೂ, ತಾ. 16ರಲ್ಲಿ ಉಮೇದುವಾರರುಗಳ ಅಂತಿಮ ಪಟ್ಟಿಯು ಪ್ರಕಟಿಸಲ್ಪಡತಕ್ಕದ್ದೆಂದೂ, ಒಬ್ಬನಿಗಿಂತ ಹೆಚ್ಚು ಉಮೇದುವಾರರಿದ್ದರೆ ಸೆಪ್ಟಂಬರು ತಾ. 27ರಲ್ಲಿ ಓಟ್ ತೆಗೆದುಕೊಳ್ಳಲ್ಪಡತಕ್ಕದ್ದೆಂದೂ ಚೀಫ್ ಕಮಿಷನರು ಪ್ರಕಟಿಸಿರುವರು.

ಬರುವ ಸಪ್ಟೆಂಬರು ತಿಂಗಳು 27ರಲ್ಲಿ ನಡೆಯುವ ಮಡಿಕೇರಿ—ಭಾಗಮಂಡ್ಲ—ಸುಂಟಿಕೊಪ್ಪ ಜಮ್ಮಾ ಓಟರುಗಳ ಕೌನ್ಸಿಲಿಗೆ ಒಬ್ಬ ಪ್ರತಿನಿಧಿಯ ಚುನಾವಣೆಯಲ್ಲಿ ಈ ಕೆಳಗಿನ ಮೇರೆ ಪ್ರಿಸೈಡಿಂಗ್ ಆಫೀಸರುಗಳು ನೇಮಿಸಲ್ಪಟ್ಟಿರುವರು. ಮಡಿಕೇರಿ ನಾಡು ಆಫೀಸು — ಮೆ. ಕೋದಂಡ ಯಂ. ಸುಬ್ಬಯ್ಯ, ಸಬ್ ಇನ್‌ಸ್ಪೆಕ್ಟರು, ಮಡಿಕೇರಿ. ಮೂರ್ನಾಡು ಇನ್‌ಸ್ಪೆಕ್ಷನ್ ಬಂಗ್ಲೆ — ಮೆ. ಐಚೆಟ್ಟಿರ ಯಂ. ಅಪ್ಪಚ್ಚು, ಪಾರುಪತ್ಯಗಾರರು, ಮಡಿಕೇರಿ. ಮಾದಾಪುರ ಇಂಡಿಯನ್ ರಿಫ್ರೆಶ್‌ಮೆಂಟ್ ಕ್ವಾರ್ಟರ್ಸ್ — ಮೆ. ಚೆಂಬಾರಂಡ ಕಾರ್ಯಪ್ಪ, ಸಬ್ ಇನ್‌ಸ್ಪೆಕ್ಟರು, ಸುಂಟಿಕೊಪ್ಪ. ಸುಂಟಿಕೊಪ್ಪಲುನಾಡು ಆಫೀಸು — ಮೆ. ಮನೆಯಪಂಡ ತಿಮ್ಮಯ್ಯ, ಪಾರುಪತ್ಯಗಾರರು, ಸುಂಟಿಕೊಪ್ಪ. ಭಾಗಮಂಡಲನಾಡು ಆಫೀಸು — ಮೆ. ಮಂಡೇಪಂಡ ಅಪ್ಪಚ್ಚು, ಪಾರುಪತ್ಯಗಾರರು, ಭಾಗಮಂಡಲ. ಕಾರುಗುಂದ ಇನ್‌ಸ್ಪೆಕ್ಷನ್ ಬಂಗ್ಲೆ — ಮೆ. ಪಟ್ಟಮಾಡ ಮಾದಪ್ಪ, ಅಬ್ಕಾರಿ ಸಬ್ ಇನ್‌ಸ್ಪೆಕ್ಟರು, ನಾಪೋಕ್ಲು. ಸಂಪಾಜೆ ಇನ್‌ಸ್ಪೆಕ್ಷನ್ ಬಂಗ್ಲೆ — ಮೆ. ಮಂಡೇಪಂಡ ಗಣಪತಿ, ಸಬ್ ಇನ್‌ಸ್ಪೆಕ್ಟರು, ಮಡಿಕೇರಿ.

ಹಿಂದೂದೇಶ.

ಕಲ್ಕತ್ತಾ ಜ್ಯೂಟ್ ಗಿರಣಿಗಳಲ್ಲಿ ಮುಷ್ಕರ ಹಿಡಿದ ಕೆಲಸಗಾರರ ಸಂಖ್ಯೆಯು 1,20,000 ಕ್ಕೆ ಏರಿದೆ. ರಾಜಿಯ ಪ್ರಯತ್ನಗಳು ಇನ್ನೂ ಫಲದಾಯಕವಾಗಿಲ್ಲ.

ಪಂಜಾಬಿನ ಪೋಸ್ಟಲ್ ಉದ್ಯೋಗಸ್ಥರು ಕಾಂಗ್ರೆಸ್ ಮೀಟಿಂಗಿನಲ್ಲಾಗಲೀ ಮೆರವಣಿಗೆಯಲ್ಲಾಗಲೀ ಭಾಗಿಗಳಾಗಕೂಡದೆಂದೂ, ಕಾಂಗ್ರೆಸ್ ಫಂಡಿಗೆ ಚಂದಾ ಕೊಡಕೂಡದೆಂದೂ ಅಲ್ಲಿಯ ಪೋಸ್ಟ್ ಮಾಸ್ಟರ್ ಜನರಲ್‌ರವರು ಸರ್ಕ್ಯುಲರ್ ಕಳುಹಿಸಿರುವರಂತೆ!

ಮೈಸೂರು ಸರ್ಕಾರದವರು ಲಂಡನ್ನಿನಲ್ಲಿ ತಮ್ಮ ಸಾಮಾನುಗಳ ವ್ಯಾಪಾರದ ಅಭಿವೃದ್ಧಿ ಬಗ್ಗೆ ಟ್ರೇಡ್ ಕಮಿಷನರೊಬ್ಬರನ್ನು ನೇಮಿಸಲು ನಿಶ್ಚೈಸಿರುವರು. ಹಿಂದೂ ದೇಶದ ಸಂಸ್ಥಾನ ಸರ್ಕಾರವು ಪರದೇಶದಲ್ಲಿ ಟ್ರೇಡ್ ಕಮಿಷನರನ್ನು ನೇಮಿಸುವುದು ಇದೇ ಪ್ರಥಮ.

ಹಿಂದೂದೇಶದ ಸ್ಥಿತಿಗತಿಗಳ ವಿಷಯ ವಿಚಾರಿಸಲು ನೇಮಿಸಲ್ಪಟ್ಟಿರುವ ಸೈಮನ್ ಕಮಿಷನಿನಿಂದಾಗಲೀ, ಬೇರೆ ಯಾವ ಕಮಿಷನಿನಿಂದಾಗಲಿ ಪ್ರಯೋಜನವಾಗುವುದಿಲ್ಲವಾದುದರಿಂದ ಅದನ್ನು ಬಹಿಷ್ಕರಿಸುವುದೇ ಉತ್ತಮವೆಂದು ಪಂಡಿತ ಜವಾಹರ್ ಲಾಲ್ ನೆಹರುರವರು ಸೂಚಿಸಿರುವರು.

ಬರುವ ಲಾಹೋರ್ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ, ಈ ವರೆಗೆ ಸ್ವಾಗತ ಮಂಡಳಿಗೆ ತಲಪಿರುವ 13 ಪ್ರಾಂತೀಕ ಕಮಿಟಿಗಳ ಸಿಫಾರಸ್ಸುಗಳಲ್ಲಿ, 6 ಪ್ರಾಂತ್ಯಗಳು ಮಹಾತ್ಮಾ ಗಾಂಧಿಯವರ ಹೆಸರನ್ನೂ, 3 ಪ್ರಾಂತ್ಯಗಳು ಸರ್ದಾರ್ ವಲ್ಲಭಾಯಿ ಪಟೇಲರ ಹೆಸರನ್ನೂ, 3 ಪ್ರಾಂತ್ಯಗಳು ಪಂಡಿತ ಜವಾಹರ್‌ಲಾಲ್ ನೆಹರುರವರ ಹೆಸರನ್ನೂ, ಒಂದು ಪ್ರಾಂತ್ಯವು ಯನ್. ಸಿ. ಕೇಳ್ಕಾರರವರ ಹೆಸರನ್ನೂ ಸೂಚಿಸಿರುವವು. ಆಖೈರು ಚುನಾವಣೆಯು ಈ ತಾ. 11 ರಲ್ಲಿ ನಡೆಯುವುದು.

ಲಾಹೋರ್ 'ಕಾನ್ಸ್‌ಪಿರೆಸಿ' ಕೇಸಿನ ಕೈದಿಗಳಿಗೆ ಜೈಲಿನಲ್ಲಿ ನ್ಯಾಯವಾದ ಊಟ ಉಪಚಾರಗಳನ್ನು ಕೊಡುವುದಿಲ್ಲವೆಂದು ಭಗತ್‌ಸಿಂಗ್ ಮತ್ತು ದತ್ತರವರು ಉಪವಾಸ ವ್ರತವನ್ನು ಕೈಕೊಂಡು 55 ದಿವಸಗಳೂ, ಬೇರೆಯವರು ಕೈಕೊಂಡು 25 ದಿನಸಗಳೂ ಆದುವು. ಅವರಲ್ಲಿ ಕೆಲವರು ಬಹು ಬಲಹೀನರಾಗಿ ಪ್ರಾಣಕ್ಕೆ ಅಪಾಯ ಬರುವ ಭಯವಿದೆ. ಪಂಜಾಬದ ಗವರ್ನರು ಸಿಮ್ಲಾದಿಂದ ಈಗ ಲಾಹೋರಿಗೆ ಹೋಗಿರುವರು. ಇವರು ಸದರಿ ಕೈದಿಗಳ ಸ್ಥಿತಿಯನ್ನು ಉತ್ತಮಗೊಳಿಸುವಂತೆ ಮಾಡಿ ಉಪವಾಸ ಮುಷ್ಕರವನ್ನು ಅಂತ್ಯಗೊಳಿಸುವರಾಗಿ ವರ್ತಮಾನವಿದೆ.

ವಿದೇಶ.

ಬ್ರಿಟನ್ನಿನಲ್ಲಿ ಸ್ಕಾಟು ಹುಡುಗರಿಗಿಂತ 1,00,000 ಸ್ಕಾಟು ಹುಡುಗಿಯರು ಹೆಚ್ಚಿರುವರಂತೆ!

40 ಪೌಂಡುಗಳಿಗೆ ಮಾರಬಹುದಾದ ಎರಡು ಸೀಟಿನ ಮೋಟಾರು ಕಾರನ್ನು ಅಮೇರಿಕದವನೊಬ್ಬನು ಕಂಡುಹಿಡಿದಿರುವನು.

ರಾಜೀನಾಮೆ ಕೊಟ್ಟ ಲಾರ್ಡ್ ಲಾಯಿಡ್‌ರವರ ಬದಲು ಸರ್ ಪರ್ಸಿ ಲಾರೆನ್‌ರವರು ಈಜಿಪ್ಟಿನ ಹೈ ಕಮಿಷನರಾಗಿ ನೇಮಿಸಲ್ಪಟ್ಟಿರುವರೆಂದು ವರ್ತಮಾನ.

ಮ್ಯಾಂಚೆಸ್ಟರಿನಲ್ಲಿ ಗಿರಣಿಗಳ ಕೆಲಸಗಾರರ ಮುಷ್ಕರದಿಂದ ಗಿರಣಿಗಳಲ್ಲಿ ಕೆಲಸ ನಡೆಯದೆ ಕಷ್ಟದ ಪರಿಸ್ಥಿತಿಯು ಉಂಟಾಗಿದೆ. ಈ ಸಂಬಂಧ ಕೆಲಸಗಾರರಿಗೂ, ಗಿರಣಿ ಮಾಲೀಕರಿಗೂ ಇರುವ ವ್ಯತ್ಯಾಸಗಳನ್ನು ಕುರಿತು ತನಗೆ ರಿಪೋರ್ಟ್ ಕಳುಹಿಸಬೇಕೆಂದು ಪ್ರಧಾನ ಮಂತ್ರಿಯವರು ಮಕಾಂ ಮಾಡಿರುವರು.

ಈಜಿಪ್ಟಿಗೂ, ಬ್ರಿಟನ್ನಿಗೂ ಒಂದು ಹೊಸ ಒಪ್ಪಂದದ ಮಸೂದೆಯು ಪ್ರಕಟವಾಗಿದೆ. ಇದರ ಪ್ರಕಾರ ಬ್ರಿಟಿಷ್ ಸೈನ್ಯವು ಈಜಿಪ್ಟಿನಲ್ಲಿರಬಹುದು. ಆದರೆ ಈಜಿಪ್ಟಿನ ಸೈನ್ಯವನ್ನು ಬ್ರಿಟಿಷ್ ಆಫೀಸರುಗಳು ತರಬೇತು ಮಾಡುವರು. ಈಜಿಪ್ಟಿನ ಜನಾಂಗಗಳ ಪರವಾಗಿ ಮೊಬಲಗು ದೊರಕಲು ಪ್ರಯತ್ನ ಮಾಡಲಾಗುವುದು. ಎರಡು ಸರಕಾರಗಳೂ ತಮ್ಮ ರಾಯಭಾರಿಗಳನ್ನು ಅನ್ಯೋನ್ಯ ನೇಮಿಸತಕ್ಕದ್ದು, ಎಂಬ ಮುಂತಾದ ಕರಾರುಗಳಿರುವ ಈ ಒಪ್ಪಂದವು 25 ವರ್ಷಗಳ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಮಸೂದೆಯು ಬ್ರಿಟನ್ನಿನ ಮತ್ತು ಈಜಿಪ್ಟಿನ ಪಾರ್ಲಿಮೆಂಟುಗಳ ಮುಂದೆ ಇಡಲ್ಪಡುವದು.

ಬೇಕಾಗಿದೆ.

ಬರುವ ಸೆಪ್ಟೆಂಬರಿನಿಂದ ಮುಂದೆ ಜನವರಿ ತಿಂಗಳೊಂದನ್ನು ಬಿಟ್ಟು, ಸಂಘದ ಬರುವ ಜನರಲ್ ಮೀಟಿಂಗಿನ ವರೆಗೆ ಗ್ರಾಮಗಳಲ್ಲಿ ಜಮೀನ್ದಾರರ ಸಂಘದ ಸಂಘಟನೆ ಕಾರ್ಯವನ್ನು ನಡಿಸಲು ಇಬ್ಬರು ಆರ್ಗನೈಜರುಗಳು ಬೇಕಾಗಿದ್ದಾರೆ. ಈ ಕೆಲಸವನ್ನು ಕೈಕೊಳ್ಳಲು ಅಪೇಕ್ಷಿಸುವವರು ತಮಗೆ ಬೇಕಾದ ಕಮಿಷನು ಅಥವಾ ಸಂಬಳವನ್ನು ಸೂಚಿಸಿ ಈ ತಾರೀಕು 20 ರೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಬರಕೊಳ್ಳತಕ್ಕದ್ದು.

ಕೊಡಗು ಜಮೀನ್ದಾರರ ಸಂಘ, ಮಡಿಕೇರಿ, ತಾ. 1—8—'29   ಪಿ. ಐ. ಬೆಳ್ಯಪ್ಪ, ಜನರಲ್ ಸೆಕ್ರೆಟರಿ.

3—2

COORG FOREST DEPARTMENT, SOUTH DIVISION.

NOTICE.

Mercara, the 26th July 1929.

Tenders are invited for the transport of about 40,000 c. ft. of timber from Tittimatti, Kalhalli and Nagerhole in the South Coorg Eastern Forests to Hunsur during the season 15th September 1929 to 28th February 1930. Tenders will be received up to midday on 20-8-29.

For further particulars apply to the:—

DIVISIONAL FOREST OFFICER,
SOUTH COORG,
MERCARA.

1—1

TUTORIAL NIGHT SCHOOL.

Wanted candidates to train themselves up for S. S. L. C examination. Tution free. Place to be fixed later on.

Instructions will be given in (1) English (2) Mathematics, (3) Physics, (4) Botany, (5) Physiology, (6) Chemistry.

Applications to be forwarded to

A. P. Sreenivasa Rao, B. A.,
B. Valley,
Mercara.

ಪತ್ರವ್ಯವಹಾರ

[ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಸರಕಾರದ ತಿಳುವಳಿಕೆಗೆ.

ಸಿದ್ದಾಪುರ ಆಸ್ಪತ್ರೆಗೆ ಹೋಗುವ ರೋಡಿನ ಒಳಭಾಗದಲ್ಲಿ ಒಂದು ಮನೆಯ ಮಾರಾಟಕ್ಕೆ ಇದೆ ಎಂಬದಾಗಿ ನಾನು ತಿಳಿದೆನು. ಇದಕ್ಕೆ ಕೆಲವರು ದರಖಾಸ್ತು ಮಾಡಿರುವದಾಗಿ ತಿಳಿಯುತ್ತೇನೆ. ಸದರಿ ಜಾಗವನ್ನು ಪಬ್ಲಿಕ್ ಹರಾಜಿಗೆ ಬಿಟ್ಟರೆ, ಅನೇಕರು ಹೆಚ್ಚಿನ ಮೊಬಲಗಿಗೆ ತೆಗೆದುಕೊಳ್ಳುತ್ತಾರೆ. ಮತ್ತು ನಾನು ಸಹ ಇದನ್ನು ಹೆಚ್ಚು ಕ್ರಯಕ್ಕೆ ತೆಗೆದುಕೊಳ್ಳುವ ಅಪೇಕ್ಷೆಯಲ್ಲಿದ್ದೇನೆ.

ಮಂಡೇಪಂಡ ಬಿದ್ದಯ್ಯ.

ಮಡಿಕೇರಿ—ಮೈಸೂರು ಮೆಯಿಲ್ ಸರ್ವಿಸ್.

ಅಯ್ಯಾ,

ಈಗ ಮಡಿಕೇರಿಯಿಂದ ಮೈಸೂರಿಗೆ ಮೆಯಿಲ್ ಸಾಗಿಸುತ್ತಿರುವ ಪಾಲಂಜಿ ಬಸ್ಸ್ ಸರ್ವಿಸಿನ ಹೀನಸ್ಥಿತಿಯನ್ನು ಏನೆಂದು ಹೇಳಲಿ. ಬಸ್ಸಿನ ಮಾಡೆಲ್ಲಾ ಸೋರುತ್ತಾ, ಪಕ್ಕಗಳ ಸ್ಕ್ರೀನುಗಳೆಲ್ಲಾ ಹರಕಲಾಗಿರುತ್ತಾ, ಮಳೆಯಲ್ಲಿ ಪ್ರಯಾಣಿಕರು ಒಟ್ಟೆಯಾಗದೆ ಇರುವದು ಹೇಗೆ? ಬಸ್ಸಿನ ಮೇಲೆ ಹಾಕುವ ಸಾಮಾನುಗಳ ಮೇಲೆ ಸರಿಯಾದ ಮೇಣದ ಬಟ್ಟೆ ಹಾಕದೆ ಸಾಮಾನುಗಳೆಲ್ಲಾ ಹಾಳಾಗುವದೇ ಹೆಚ್ಚು. ಇಷ್ಟಲ್ಲದೆ ಈ ಸರ್ವಿಸಿನ ಬಸ್ಸುಗಳು ಅನೇಕ ವೇಳೆ ಸಮಯ ತಪ್ಪಿ ಬರುತ್ತವೆ. ಈಗ ತರಿಸಿರುವ ಒಂದು ಹೊಸ ಬಸ್ಸಲ್ಲದೆ ಬಾಕಿಯವೆಲ್ಲವುಗಳ ಸ್ಥಿತಿ ಇದೇ. ಈ ಮೊದಲು ಇದ್ದ ಟಿ. ಯಸ್. ಮೆಯಿಲ್ ಬಸ್ಸ್ ಸರ್ವಿಸು ಬಹು ಕ್ರಮದಲ್ಲಿ ನಡಿಸಲ್ಪಡುತ್ತಿತ್ತು. ಆಗ್ಯೆ ಮಡಿಕೇರಿಯಿಂದ ಬೆಳಿಗ್ಯೆ ಹೊರಟ ಬಸ್ಸು ಮೈಸೂರಿಗೆ ಮಧ್ಯಾಹ್ನ 1 ಗಂಟೆಗೆ ತಲಪುತ್ತಿತ್ತು. ಈಗಲಾದರೋ ಕೆಲವು ಸಾರಿ ಮಧ್ಯಾಹ್ನ 2½ ಗಂಟೆ ಆಗುವುದೂ ಉಂಟು. ಟ್ರೈನ್ ಹತ್ತುವ ಪ್ರಯಾಣಿಕರಿಗೆ ಊಟಕ್ಕೂ ಸಮಯ ಸಿಕ್ಕುವದಿಲ್ಲ. ಅಲ್ಲದೆ ಟಿ. ಯಸ್. ಸರ್ವಿಸ್ ಇದ್ದಾಗ್ಯೆ ಸದರಿ ಸರ್ವಿಸಿನಲ್ಲಿ ಮಾತ್ರವಲ್ಲ, ಪಾಲಂಜಿ ಸರ್ವಿಸಿನಲ್ಲೂ ಲಗ್ಗೇಜಿಗೆ ಹೆಚ್ಚಿನ ಚಾರ್ಜು ಮಾಡುತ್ತಿರಲಿಲ್ಲ. ಈಗಲಾದರೋ ಚಾರ್ಜು ಬಿಡುವಂತಿಲ್ಲ. ಇದೆಲ್ಲಾ ಈ

ಗ ಸದರಿ ಲೈನಿನಲ್ಲಿ ಪ್ರೈವೇಟಿಗೆ ಎಡೆ ಇಲ್ಲದೆ ಇರುವದರಿಂದಾಗಿದೆ.

ಮಡಿಕೇರಿಯಿಂದ ಮಂಗಳೂರಿಗೆ ಮೆಯಿಲ್ ಸಾಗಿಸುವ ಕಂಕರ್‌ವಿಟಲ್ ಬಸ್ ಸರ್ವಿಸು ಇದಕ್ಕಿಂತ ಹೀನಸ್ಥಿತಿಯ ರಸ್ತೆಯಲ್ಲಿ ಹೋಗುವದಾದರೂ ಯಾವದೊಂದು ಥಕಾರಿಗೆ ಎಡೆ ಇಲ್ಲದೆ ನಡಿಸುತ್ತಿರುವರು. ಇನ್ನಾದರೂ ಆ ಸರ್ವಿಸಿನ ಪ್ರೊಪ್ರೈಟರು ಬಸ್ಸುಗಳ ಒಳ್ಳೇ ಸ್ಥಿತಿಗೂ, ಅಧಿಕಾರಿಗಳು ಮೆಯಿಲು ಗಂಟಿಗೆ ಸರಿಯಾಗಿ ಬರುವಂತೆಯೂ ತಕ್ಕ ಗಮನ ಕೊಡುವರಾಗಿ ನಂಬುತ್ತೇನೆ.

'ಪ್ರಯಾಣಿಕ'

ಅಬ್ಕಾರಿ ಇಲಾಖೆಯ ಹಿತ ಚಿಂತನೆ

ಅಯ್ಯ,

ಈ ದೇಶದಲ್ಲಿ [ಸೇಂದಿ ಸಾರಾಯದ ಮೂಲಕ ಬರ]ಯಾಗುವ ಸರ್ಕಾರಿ ಉತ್ಪತ್ತಿಯು ವರ್ಷ [illegible] ರುವ ಹಾಗೆ ರೈತರ ಬಡತನವೂ, ಮರ[illegible] ಗುತ್ತಾ ಜನ ಸಂಖ್ಯೆಯು ಕಮ್ಮಿಯಾಗುತ್ತಿರುವದು ಸರ್ಕಾರದ ಮತ್ತು ದೇಶ [illegible]ಗಳ ಗಮನಕ್ಕೆ ಇನ್ನೂ ಬಾರದಿರುವದು ಶೋಚನೀಯವೇ ಸರಿ

ದೇಶ [illegible] ಕೊಡವ ಜನಾಂಗವು ಕ್ರಮೇಣ [illegible] ಅಸ್ತಿಕೋಶ[illegible] ಕೊಡವ ಸಭೆಯವರಾಗಲಿ, ಸ್ವಾಮಿನ್ ಪತ್ರಕಾರರಾಗಲೀ ಈ ವಿಷಯ ಗಮನಕ್ಕೆ ತೆಗೆ[illegible] [illegible] ಸೇಂದಿ ಸಾರಾಯಿ [illegible] ಕಮ್ಮಿ ಮಾಡಿಸ[illegible] ಲವು ಮಹನೀಯರು ಕಾನ್ಫರೆನ್ಸ್, ಕೌನ್ಸಿಲಿನ ಮೀಟಿಂಗು ಮೊದಲಾದದರಲ್ಲಿ ಅದಕ್ಕಾಗಿ [illegible] ಕೊಡವ [illegible] ಕ್ರೈಸ್ತ ಮತ ದೇಶ! ಮುಂತಾದ ಧರ್ಮವಿರುದ್ಧವಾದ ಮತ್ತು ಸಗೆಗೇಡಿತನದ ವಾದಗಳಿಂದ ಪರಿಶೋಧಿಸಿದ್ದು ಯಾವ ಕೊಡವನಿಗೂ ಗೊತ್ತಿಲ್ಲದ್ದಲ್ಲ. ಅದರಲ್ಲೂ ಒಬ್ಬೊಬ್ಬ ಮಹನೀಯರು ನಾಟಕ ಸೀನ್‌ನಲ್ಲಿ ಹಾಸ್ಯಗಾರನು ಹಾಡುವ ಗೀತವನ್ನು ಮನದಣಿಯುವಂತೆ ಹಾಡಿ ಸಾರಾಯಿ ಬೇಕು, ಫಸ್ಟ್ ಸಾರಾಯಿಯೇ ಇರಲೆಂದು ಪ್ರೋತ್ಸಾಹಿಸಿ ಸರ್ಕಾರಿ ಮೆಂಬರುಗಳ ಹಾಸ್ಯಕ್ಕೂ, ಸಂತೋಷಕ್ಕೂ ಪಾತ್ರರಾದರು. ಸ್ವಾರ್ಥಿತೆಯ ಸಾಧನೆಗೆ ಇದಕ್ಕಿಂತಲೂ ಹೇಯವಾದ ವಾದಗಳು ಇನ್ನು ಬೇಕೇ? ನೆರೆ ಸೀಮೆಯಾದ ಮೈಸೂರು ದೇಶದಲ್ಲಿ ಅಬ್ಕಾರಿ ಇಲಾಖೆಯು ಉತ್ಪತ್ತಿಯು ಕಳೆದ 2 ವರ್ಷಗಳಿಂದ 4 ಲಕ್ಷ ರೂ. ಕಮ್ಮಿ ಮಾಡಿರುತ್ತಾರೆ. ಮದ್ರಾಸು ಸಂಸ್ಥಾನದಲ್ಲಿ ಸೇಂದಿ ಸಾರಾಯವನ್ನು ಜನರು ಕುಡಿಯದಂತೆ ಮಾಡಲು ಮತ್ತು ಸಾರಾಯಿ ಸೇಂದಿಗಳಿಂದ ಆಗುವ ಕೇಡನ್ನು ಗ್ರಾಮಾಂತರದಲ್ಲಿ ತಿಳಿಸಿ ಬೋಧಿಸಲು ಪ್ರತ್ಯೇಕ ಇಲಾಖೆಗೆ 4 ಲಕ್ಷ ರೂಪಾಯಿ ಸರ್ಕಾರಿ ಖಜಾನೆಯಿಂದ ಕೊಟ್ಟು ರೈತರಿಗೆ ನಿಶಾನಿಷೇಧವನ್ನು ಬೋಧಿಸುತ್ತಾರೆ. ಅಲ್ಲದೆ 20 ವರ್ಷಗಳ ಒಳಗೆ ಇಡೀ ಸಂಸ್ಥಾನದಲ್ಲಿ ಸೇಂದಿ ಸಾರಾಯವನ್ನು ಪೂರಾ ನಿಲ್ಲಿಸುವದೇ ತಮ್ಮ ಧ್ಯೇಯವೆಂದು ನಿಶ್ಚೈಸಿ ಆ ಬಗ್ಗೆ ಪ್ರತಿ ವರ್ಷವೂ ಅಂಗಡಿಗಳನ್ನು ಕಮ್ಮಿ ಮಾಡುತ್ತಾ ಬರುತ್ತಿದ್ದಾರೆ. ಇದನ್ನು ನಮ್ಮ ಹೊಸ ಸಭೆಯವರೂ, ಸ್ವಾಮಿನ್ ಪ್ರೇಕ್ಷಕರೂ ಗಮನಿಸುವರೇ? ಹಾಗೆ ಮಾಡಿದರೆ ಅವರ ಧ್ಯೇಯಕ್ಕೆ ಭಂಗವಾಗಲಿಕ್ಕಿಲ್ಲವೇ?

ಕಳೆದ 2 ವರ್ಷಗಳಿಂದ ಜಮೀನ್ದಾರರ ಸಂಘವು ಸೇಂದಿ ಸಾರಾಯದ ಕೇಡನ್ನು ರೈತರಲ್ಲಿ ಪ್ರಚುರ ಪಡಿಸಲು ಪ್ರಯತ್ನಿಸುವದು ಸಂತೋಷಕರವಾಗಿದೆ. ಇದಕ್ಕೆ ತಕ್ಕ ಪ್ರೋತ್ಸಾಹವನ್ನು ರೈತರೂ, ಸರ್ಕಾರದವರೂ ಕೊಟ್ಟಲ್ಲಿ ಈ ಜಾಬಿನಲ್ಲಿ ಮಹತ್ತಾದ ಕಾರ್ಯವನ್ನು ಮಾಡಿದಂತೆ ಆಗುತ್ತೆ. ಇದಕ್ಕೆ ತಕ್ಕ ನಿಗೆ ಇಡಬೇಕಾಗಿ ಪ್ರಾರ್ಥನೆ.

'ದೇಶ ನಿವಾಸಿ'

ಉದ್ಯೋಗಸ್ಥರಿಗೆ ಟೀ ಪಾರ್ಟಿ.

ಅಯ್ಯ,

ತಾರೀಕು 16—7—29ರ 'ಲೋಕಪಾವನ'ದ ಸಂಚಿಕೆಯಲ್ಲಿ ಹಂಗಾಮಿ ಕಮಿಷನರಾಗಿದ್ದ ರಾ. ಬಾ. ಕೆ. ಚಂಗಪ್ಪನವರನ್ನು ಕಿಗ್ಗಟ್ಟುನಾಡು ತಾಲೋಕಿನವರು ಪೊನ್ನಂಪೇಟೆಯಲ್ಲಿ ಟೀ ಪಾರ್ಟಿಯಿಂದ ಸನ್ಮಾನಿಸಿದ ವಿಷಯ ಬರೆದ ಒಂದು ಬಾತ್ಮಿಯನ್ನು ನೋಡಿದೆನು. ಕಿಗ್ಗಟ್ಟುನಾಡು ತಾಲೋಕಿನವರ ಹೆಸರಿನಲ್ಲಿ ಟೀ ಪಾರ್ಟಿ [illegible] ದರೆಂದು ಹೇಳಿದರೂ [illegible] ಉದ್ಯೋಗಸ್ಥರ [illegible] ಉದ್ಯೋಗಸ್ಥರ [illegible] ಪಾತ್ರರಾದ [illegible] ವರ್ಣಿಸಿದ್ದೆಂದು ತಿಳಿ[illegible] ಉದ್ಯೋಗಸ್ಥರ [illegible] ಪ್ರಕಟಿಸಿದ್ದರಿಂದ [illegible] ಚಿತವಾಗಿ ತೋರದಿದ್ದರೂ [illegible] [illegible] ವಿರೋಧವಿಲ್ಲ. ನ್ಯಾಯಶಾಲೆಗಳ ತತ್ವವು ಹಾಗೆಯೇ ಇರತಕ್ಕದ್ದು. [illegible] ಅಲ್ಲ. ಹಿಂದುಸ್ಥಾನದ ಕಾಂಗ್ರೆಸ್ಸಿನ ತತ್ವದ [illegible] ದೇಶೀಯರಿಗೆ ದೊಡ್ಡ ಉದ್ಯೋಗ ಸಿಕ್ಕುತ್ತಿರುವದೆಂಬುದನ್ನು ಬಾತ್ಮಿದಾರರು [illegible] ತಿಳಿಯಲಿ. ದೇಶದಲ್ಲಿ ದೊಡ್ಡ ಉದ್ಯೋಗವು ದೇಶೀಯರಿಗೆ ಸಿಕ್ಕಿದ್ದರಿಂದ ಸ್ವರಾಜ್ಯ ಸಿಕ್ಕಿತೆಂದು ಹೇಳುವ ಬಾತ್ಮಿದಾರರಿಗೆ ಸ್ವರಾಜ್ಯದ ಅರ್ಥವೇ ತಿಳಿಯಲಿಲ್ಲವೆಂದು ಸ್ಪಷ್ಟವಾಗುತ್ತ ದೇಶದ ಜನರ ಅಧೀನದಲ್ಲಿ ಸರ್ಕಾರದ ಆಡಳಿತವು ನಡೆಯತಕ್ಕದ್ದು. ಹಾಗೂ ಅಧಿಕಾರಿಗಳು ಜನರ ಅಧೀನವಾಗಿರುವದು (ಡೆಮೋಕ್ರೆಟಿಕ್ ಗವರ್ನಮೆಂಟ್) ಪ್ರಜಾ ಜವಾಬ್ದಾರಿಕೆಯ ಸರ್ಕಾರ. ಆಗ್ಯೆ ಸ್ವರಾಜ್ಯ ಸಿಕ್ಕಿತೆನ್ನಬಹುದು. ಅದು ಈಗಿಲ್ಲ. ಬಿಹಾರ್ ಪ್ರಾಂತ್ಯದಲ್ಲಿ ಗವರ್ನರ್ ಪದವಿಯನ್ನು ಲಾರ್ಡ್ ಸಿನ್ಹರವರಿಗೆ ಕೊಟ್ಟಾಗ್ಯೆ ಆ ಪ್ರಾಂತ್ಯದವರು ತಮಗೆ ಸ್ವರಾಜ್ಯ ಸಿಕ್ಕಿತೆಂದು ಬೊಬ್ಬೆ ಹೊಡೆಯಲಿಲ್ಲ.

ನ್ಯಾಯವಾದ ಕಾಂಗ್ರೆಸ್ಸಿನ ಪಂಗಡದವರಿಗೆ ದೊಡ್ಡ ಪದವಿಯನ್ನು ಕೊಟ್ಟರೂ ಅಂಗೀಕರಿಸಲಿಕ್ಕಿಲ್ಲ. ಅಂಗೀಕರಿಸಿದರೂ ನಿರಂಕುಶ ಆಡಳಿತ ನಡೆಯಲಿಕ್ಕಿಲ್ಲವೆಂದು ತಿಳಿಯಲಿ. ನಿರಂಕುಶ ಆಡಳಿತವನ್ನು ಮುರಿಸಿಕೊಳ್ಳುವದೇ ಕಾಂಗ್ರೆಸ್ಸಿನವರ ಧ್ಯೇಯವಾಗಿದೆ

ಪದವಿಗೆ ಆಶೆ ಇಟ್ಟುಕೊಂಡು ದೇಶಸೇವೆ ಮಾಡುವವರಂತೆ ನಟಿಸಿ ದೇಶದಲ್ಲಿ ಪಂಗಡಗಳನ್ನು ಬೆಳೆಸಿ, ಕೋಮುವಾರು ತತ್ವವೇ ಶ್ರೇಯಸ್ಕರವೆಂದು ನಂಬಿ ನವರು. ಒದಗಿದ [illegible] ಆ ಪಂಗಡ, ಈ ಪಂಗಡವೆಂದು ಬಾರುವವರಲ್ಲಿ ಒಬ್ಬರಿಗೆ ಪದವಿ ಸಿಕ್ಕಿದರೆ ನಿರಂಕುಶ ಪ್ರವರ್ತನೆಯು ನಡೆಯಬಹುದೋ ಏನೋ? ಕಾಂಗ್ರೆಸ್ಸಿನವರು ಆ ಪಂಗಡ, ಈ ಪಂಗಡವೆಂದು ದೇಶದವರ [illegible]

[illegible] ಪದವೀಧರರಾಗುವ ದೆಂದೂ ಅವರ ಮತ. [illegible] ವರು ಉದ್ಯೋಗಸ್ಥರನ್ನು [illegible]

[illegible]

[illegible] ಸರ್ಕಾರ [illegible]ದಲ್ಲಿ [illegible] ಬಹುದೆಂದು ಆಗಾಗ ಚೆನ್ನಾಗಿ ಗೊತ್ತಿದೆ [illegible] ಗಳೆಲ್ಲಾ [illegible] ತಿಳಿದಿದೆ. ಪಂಗಡದ ಹಿತವಾದಿಗಳು ಈ ತರಹದ ಬಾತ್ಮಿಯ ಮೂಲಕ ಅಲ್ಲಲ್ಲಿ ದ್ವೇಷಾಸೂಯೆಯನ್ನು ಹುಟ್ಟಿಸಿದರೂ ಬೆದರುವಂಥ ಪುಕ್ಕಲರು ಈ ತಾಲೋಕಿನಲ್ಲಿಲ್ಲವೆಂದು ತಿಳಿಯಲಿ. ಕೆಲಸಗಾರರ ಪಂಗಡವು ಬ್ರಿಟಿಷ್ ಸಾಮ್ರಾಜ್ಯವನ್ನು ಆಳುವ ಈ ಕಾಲದಲ್ಲು ಪ್ರಜೆಗಳಿಗೂ ಆಲೋಚನೆ ಹುಟ್ಟಿದೆ ಅಧಿಕಾರಿಗಳಿಗೂ ಜ್ಞಾನ ಬಂದಿದೆ ಎಂದು ಸದರಿ ಬಾತ್ಮಿದಾರರು ತಿಳಿಯಲಿ.

'ಕಿಗ್ಗಟ್ಟುನಾಡು ತಾಲೋಕಿನವ'

ಕೊಡವ ಮಹಾ ಜನರಲ್ಲಿ ವಿನಂತಿ.

ಮಹನೀಯರೇ,

ಕೊಡಗು ದೇಶದಲ್ಲಿ ಬ್ರಿಟಿಷ್ ಆಡಳಿತದಿಂದೀಚೆಗೆ ಅಂದರೆ ಜಮೀನ್ದಾರರ ಸಂಘವು ಆಗುವ ಮೊದಲು, ರಾಜಕೀಯ ಚಳವಳವು ಹೆಚ್ಚೇನೂ ಇರಲಿಲ್ಲ. ಸರಕಾರಿ ಉದ್ಯೋಗಸ್ಥರೂ, ಅದರಲ್ಲಿ ಮುಖ್ಯವಾಗಿ ಅಸಿಸ್ಟೆಂಟ್ ಕಮಿಶನರೂ ಮತ್ತು ರಿಟಯರ್ ಆದ ಕೆಲವು ಉದ್ಯೋಗಸ್ಥರೂ ಮಡಿಕೇರಿಯಲ್ಲಿದ್ದು ಪ್ರತಿ ವರ್ಷವೂ ಚೀಫ್ ಕಮಿಶನರು ಬರುವಾಗ್ಯೆ ತಮ್ಮ ಅಭಿಪ್ರಾಯವನ್ನು ಕೊಡುತ್ತಾ ಅದು ದೇಶದ ಅಭಿಪ್ರಾಯವೆಂದು ಹೇಳುತ್ತಿದ್ದರು. ಇಂಥಾ ಅಭಿಪ್ರಾಯವು ಸರಿಯಲ್ಲವೆಂದು ಕೆಲವು ಮುಂದಾಳುಗಳು ಸೇರಿ, ಕೊಡಗು ಜಮೀನ್ದಾರರ ಸಂಘವೊಂದನ್ನು ಸ್ಥಾಪಿಸಿ ಕಳೆದ 17 ವರ್ಷಗಳಿಂದ ದೇಶದ ಪ್ರತಿ ತಾಲೋಕಿನಲ್ಲಿಯೂ ಮೀಟಿಂಗ್ ಮಾಡುತ್ತಾ ಜನರಿಗೆ ತಮ್ಮ ರಾಜಕೀಯ ಹಕ್ಕು ಬಾಧ್ಯತೆಗಳನ್ನು ಸಾಧ್ಯವಾದ ಮಟ್ಟಿಗೆ ತಿಳಿಸುತ್ತಾ ಬರುತ್ತಿದ್ದರು. ಹೀಗೆಯೇ 1923 ರ ವರೆಗೆ ಈ ಸಂಘದ ಕಾರ್ಯಕ್ರಮಗಳು ಹೆಚ್ಚಾಗಿ ಟೈಟಲ್‌ದಾರರಿಂದಲೂ, ಪೆನ್ಶನ್ ಹೊಂದಿದ ಸರಕಾರ ನೌಕರರಿಂದಲೂ ನಡೆಸುತ್ತಾ ಬರಲ್ಪಟ್ಟಿತು. ಈ ಮಧ್ಯೆ 1922 ರಲ್ಲಿ "ಕೊಡಗು" ಪತ್ರಿಕೆಯು ಹೊರಟು, ಜನರಲ್ಲಿ ಒಂದೇ ಒಂದು ವರ್ಷದಲ್ಲಿ ಐವತ್ತು ವರ್ಷದಲ್ಲಿ ಆಗದಷ್ಟು ತಿಳುವಳಿಕೆಯನ್ನೂ, ಹುರುಪನ್ನೂ ಉಂಟುಮಾಡಿತು. ಫಲಿತಾಂಶವೇನು? ಗ್ರಾಮನಿವಾಸಿಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ಚೆನ್ನಾಗಿ ತಿಳಿದು ಡಿಸ್ಟ್ರಿಕ್ಟ್ ಬೋರ್ಡಿಗೂ, ಕೌನ್ಸಿಲಿಗೂ ತಮ್ಮ ದರ್ಜೆಯ ಹಿತೈಷಿಗಳಾದ ಸಹೋದರರನ್ನು ಚುನಾವಣೆ ಮಾಡಿಯೇ ಬಿಟ್ಟರು. ರಿಟಯರ್ಡ್ ಉದ್ಯೋಗಸ್ಥರಿಂದಲೂ, ಟೈಟಲ್‌ದಾರರಿಂದಲೂ ಕೂಡಿ ನಡೆಸಲ್ಪಡುತ್ತಿದ್ದ ಜಮೀನ್ದಾರರ ಸಂಘದ ಕಮಿಟಿಯಲ್ಲಿ ಗ್ರಾಮನಿವಾಸಿಗಳ ಬಹುಮತದವರೇ ಮೆಂಬರುಗಳಾಗಿ ಚುನಾಯಿಸಲ್ಪಟ್ಟರು.

ಗ್ರಾಮನಿವಾಸಿಗಳ ಪ್ರತಿನಿಧಿಗಳು ಹೀಗೆ ಮುಂದುವರಿದ್ದು [illegible] ದನ್ನು ಕಂಡು ಕೆಲವು ಕೊಡವ ಕುಲಗಳಿಗೂ, ಟೈಟಲ್‌ದಾರರಿಗೂ, ರಿಟಯರ್ ನೌಕರರಿಗೂ, ಸರಕಾರದ ಕೆಲವು ಅಧಿಕಾರಿಗಳಿಗೂ ಸಹ ಸಹಿಸಲಾರದಷ್ಟು ತಲೆನೋವು ಉಂಟಾಯಿತು. [illegible] ಹೊಸ [illegible] ಕೊಡವ ಸಭೆ [illegible] [illegible] ಸಭೆಯು ಕಮಿಶನರವರಿಂದ [illegible] ಟ್ ಕಮಿಶನರ ಸಹಾಯದಿಂದ [illegible] ಈ ನವೀನ ಕೊಡವ ಸಭೆಯ ಉದ್ದೇಶ [illegible]

1. ಕೊಡಗು ಜಮೀನ್ದಾರರ ಸಂಘದ [illegible] ವಿರೋಧಿಸುವುದು.

2. ಕೌನ್ಸಿಲು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆ ಬಂದ ಸಮಯದಲ್ಲಿ ಮಾತ್ರ [illegible] ಸಭೆ. ಸಭೆ [illegible] ಬಿರುಕು ಹುಟ್ಟಿಸುವುದು.

3. ದೇಶದಲ್ಲಿ ತಮಗೆ ಸ್ಥಳವಿಲ್ಲ, ಸ್ಥಳವಿಲ್ಲ ಎಂಬುದಾಗಿ ಕೂಗಿಕೊಂಡು, ಇನ್ನೊಂದು ಜಮೀನ್ದಾರರ ಸಂಘವೆಂಬುದಾಗಿ ಹೊರಡಿಸುವುದು.

4. ಕೊಡವರನ್ನು ಉದ್ಧಾರ ಮಾಡುತ್ತೇವೆಂಬುದಾಗಿ ಹೇಳುತ್ತಾ, ಆರೇಳು ವರ್ಷಗಳಿಂದ ಈ ಸಭೆಯಲ್ಲಿ ಯಾವ ಕೆಲಸವನ್ನೂ ಮಾಡದೆ, ಸರಿಯಾದ ಮತ್ತು ನಿಜವಾದ ರೂಲ್ಸನ್ನೂ ಸಹ ಮಾಡದೆ, ದೇಶದಲ್ಲಿ ಹೆಚ್ಚಾಗಿ ಪಂಗಡ ಭೇದವನ್ನು ಹೆಚ್ಚಿಸುವುದು.

5 'ರಾಜಕೀಯವು' ಕೊಡವ ಸಭೆಯಲ್ಲಿ ಇಲ್ಲವೆಂದು ಹೇಳಿ ಇಡೀ ಹಿಂದೂದೇಶವೆಲ್ಲಾ ಬಹಿಷ್ಕರಿಸಿದ ಸೈಮನ್ ಕಮಿಶನಿಗೆ, ದೊಡ್ಡ ಭಕ್ಷ್ಯವನ್ನು ಸರಕಾರದಿಂದ ಹೊಂದಿ ಸಾಕ್ಷಿ ಕೊಡುವುದು. ಹಿಂದೂಸ್ಥಾನದಲ್ಲಿ ಪ್ರತಿ ಒಂದು ಪ್ರಾಂತ್ಯವೂ, ಪ್ರಾಂತೀಕ ಸ್ವರಾಜ್ಯದ ಪೂರ್ತಿ ಹಕ್ಕನ್ನು ಕೇಳಿದಾಗ ಈ ಕೊಡವ ಸಭೆಯ ಡೆಪ್ಯುಟೇಶನ್, ತಮ್ಮ ಮೆಮೊರಾಂಡಮಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಬೇಡ, ಕೌನ್ಸಿಲು ಪ್ರೆಸಿಡೆಂಟರು ಚೀಫ್ ಕಮಿಶನರೇ ಆಗಬೇಕು, ಮಂತ್ರಿಗಳು ಬೇಡ ಎಂದು ಮೊದಲಾಗಿ [illegible] ಅಪಮಾನ ತಂದದ್ದು.

[illegible]

ಕೊಡವ ಜನಾಂಗವು [illegible] ರು, ಗ್ರಾಮವಾಸಿಗಳ ಅಭಿವೃದ್ಧಿಗೆ ಯಾವದೊಂದೂ ಕೆಲಸವನ್ನು ಕೈಕೊಳ್ಳದವರು, ಕೊಡವರಿಗೆ ಏನು ತಾನೇ ಮಾಡ್ಯಾರು?

ದೇಶೀಯ ಮಹಾಸಭಾವನೇ, ಕೊಡವ ಭಾಲಿಸಿ.

ದೇಶದ ಸಾಮ್ರಾಜ್ಯ ಪರವಾದ ನಮಗೆ ದೇವರು ಬುದ್ಧಿಶಕ್ತಿಯನ್ನೂ, ಮಾನ ಮರ್ಯಾದೆಯನ್ನೂ ಕೊಟ್ಟಿರುವಾಗಲೂ ಈ ಇಪ್ಪತ್ತನೆಯ ಶತಮಾನದಲ್ಲಿ ಕೇವಲ ಕೂಲೀಕಾರರ (ಲೇಬರ್) ಪಂಗಡದವರ ಸರ್ಕಾರವು ಬ್ರಿಟಿಷ್ ಚಕ್ರಾಧಿಪತ್ಯವನ್ನು ಆಳುವ ಸಮಯದಲ್ಲಿ, [illegible] ಕುಲದ ಪಟ್ಟಿಗೆ ಸೇರಿದವ, ತನ್ನ ತಂದೆ ರಿಟಯರ್ಡ್ ನೌಕರ, ಟೈಟಲ್‌ದಾರ, ನಾವು ಮುಂದೆ, ನೀವು ಹಿಂದೆ ಎಂದು ಹೇಳುವ ಕಾಲವು ಕಳೆದು ಹೋಗಿದೆ. ಈ ಸಮಯದಲ್ಲಿ 'ಬಡವ ಮಡಗಿದಲ್ಲಿರು' ಎಂಬ ತತ್ವದಲ್ಲಿರುವ ನಮ್ಮ ಅನುಭವಕ್ಕೆ ಬಂದಿರುವ ಈ ನವೀನ ಕೊಡವ ಸಭೆಯ ಅಭಿಪ್ರಾಯಕ್ಕೆ ಎಡೆಯುಂಟೇ? ಇಂಥಾದ್ದನ್ನು ನೆಹ ಮಾನಾಕ ಮಾಡಲು ನಾವೆಲ್ಲರೂ ಟೊಂಕ ಕಟ್ಟಿದ ಪಕ್ಷ ನಮ್ಮ ದುಃಖ ನಾಮಸ್ಲದೆ ಬಾಳಲ್ಲವೆಂಬುದನ್ನು ಖಂಡಿತವಾಗಿ ತಿಳಿಯಿ ತಡಮಾಡದೆ ತಾವೆಲ್ಲರೂ ಎದ್ದೇಳಿ, ದೇಶಕ್ಕೆ ತಾವು ಮಾಡಬೇಕಾದ ಕರ್ತವ್ಯವನ್ನು ತಡವಿಲ್ಲದೆ ಮಾಡಿ.

"ಕೊಡವ"

OFFICE OF THE DY. SUPT. OF POLICE, COO[RG]
MERCARA, DATED THE 19TH JULY 1929.

NOTICE.

Applications are invited from candidates [to] be deputed for training in the Provincial P[olice] Training School Vellore, in October 1929 wi[th a] view to his appointment, if he proves suita[ble] as Probationary Sub-Inspector on a salary [of] Rs 65—3—110—5—125 plus a conveyance al[low]ance of Rs. 25/— p. m.

2. Only com[ple]ted Secondary School Lea[ving] Certificate holders and others possessing hi[gher] educational qualifications need apply.

3. Applications should reach the De[puty] Superintendent of Police, Coorg, by the [illegible] August 1929.

4. The applicants should be 21 and [not] above 25 years of age, should be 5'—5" [illegible] and with a chest measurement of at lea[st] [illegible] inches.

5. [illegible]

[illegible] qualification.

6. The successful candidate will rece[ive a] stipend of Rs. 35 - p. m. during his cou[rse of] training.

7. Further particulars, if desired, can [be had] from the Deputy Superintendent's office.

(Sd.) [illegible]
3—3 Dy. Supt. of Pol[ice]

FORD SALES AND SERVICE

The most competitive.

CAR

in the most competitive

YEAR

The new model A Ford!!!

with three Speed selective sliding gear Transmission.

The most economical car in the market For Demonstration & further particulars

Please apply to:—

S. Sunder Rau,

Ford Dealer for Coorg,

24—6 MERCARA

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

“ಜಿಪೋರಂ ಹುಳದ ಪಿಸಿಯಿಂದ ಕೆತ್ತುತಗೆದ ಕಾಫಿಗಿಡಗಳ ಸಂಖ್ಯೆಯು ಧಾತು ಗುಣದ (Mineral) ಗೊಬ್ಬರ ಹಾಕಿದ ಸ್ಥಳಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ದಾಪುರ ಪರೀಕ್ಷಾ ಕ್ಷೇತ್ರ (Experiment station) ದಲ್ಲಿ ಕಂಡುಬಂದಿದೆ. ಆದುದರಿಂದ ಬೊರರ್—ಹೋಲ್ ಬೋರರಿಗೆ ಸಾರಜನಕ ಗೊಬ್ಬರವು ಪ್ರಯೋಜನಕರವಾಗುವದೆಂದು ತೋರುತ್ತದೆ” (ಡಿ. ಜಿ. ಮಸ್ಸ್ರೀಜರ್, ಸಯಂಟಿಫಿಕ್ ಆಫೀಸರ್, ಮೈಸೂರು ಸಯಂಟಿಫಿಕ್ ಡಿಪಾರ್ಟ್‌ಮೆಂಟ್)

ಚಿಲಿಯನ್ ನೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗಗಳಿಗೆ ತಕ್ಕನೆ ಒಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಆಫ್ ಸೋಡಾದಲ್ಲಿ ಬೆಳೆಗಳನ್ನೂ ಮಣ್ಣನ್ನೂ ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಏಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪ್ಯಾರಿ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಿನ ಚೀಲ 1ರ ರೂಪಾಯಿ 6—8—0ರಂತೆ ಒದಗಿಸಿ ಕೊಡುವದಲ್ಲದೆ, ಮಡಿಕೇರಿ, ವೀರರಾಜಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 7—8—0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ಧರ್ಮಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ. 469, ಕಲ್ಕತ್ತಾ.

(2) ಮಿಸ್ಟರ್ ಯ.ಂ. ಯು. ಬೆಳ್ಳಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24—12

Of International Repute Prof.
BRUSCHETTINIS Vaccines for :—

Tuberculosis, Leprosy, Typhoid, Cholera, Venereal diseases, Diabetic carbuncle, Acute Rheumatism, Croupous Pneumonia, Pyorrhoea, Wounds and Sores, Abscesses even in the internal organs and also for Malaria.

Erval, for all Nervous system.

King's Globules, for loss of memory, tired nerves, weakness of the hearing, sight weakness etc.

Pallidine, for Chronic Rheumatism, Paralysis, Eczema etc.

Dr. Morettis tablets, for Diabetes

Liquor Ave, for Asthama, chronic Bronchitis etc.

Eublenal tablets for venereal diseases.

Anti malaria Curative Pills, for malarial fever.

For Further Particulars :—

Apply to the sole Agents for Coorg.

THE COORG EMPORIUM

48—6 MERCARA

Arms, Ammunition and Shooting Requisites !!!



Current Illustrated Catalogue Free on Application !

D· B· B L· Rifles	Rs.	120	to	Rs·	2750
S B. B L·	„	35	to	·	950.
D· B· B· L Guns	„	50	to	·	1350
S· B· B L.	„	35	to	·	275·
D· B M· L·	„	15	to	·	135·
S B· M· L	„	30	to	„	80
B. L Revolvers	„	35	to	„	350·
Automatic Pistols	„	30	to	„	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—22 **210 Abdul Rehman Street, BOMBAY.**

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರದ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

'ದಿಲ್ ಬಹರ್ ಫ್ಲ್ಯೂಟ್'' ಸಿಂಗಲ್ ರೀಡ್ ಹಾರ್ಮೋನಿಯಂ			1ಕ್ಕೆ	50	8	0
"ಸಿದ್ದಪ್ಪಾಸ್ ಫ್ಲ್ಯೂಟ್''	,,	,,	,,	12	8	0
ಶಕುಂತಲಾ	,,	,,	,,	40	0	0
ಮೋಹನ್	,,	,,	,,	37	8	0
ಮೋಸ್ಲೇಂ	,,	,,	,,	35	0	0
ಮಹರಾಜಾ	,,	,,	,,	32	8	0
ಕೊಹಿನೂರು	,,	,,	,,	29	8	0
ಡೈಮಂಡ್	,,	,,	,,	27	8	9
ನಿಜಲೀ	,,	,,	,,	25	0	0
"ದಿಲ್‌ಬಹರ್ ಫ್ಲ್ಯೂಟ್'' ಡಬ್ಬಲ್ ರೀಡ್ ಹಾರ್ಮೋನಿಯಂ			1ಕ್ಕೆ	85	0	0
ಸ್ಪೆಷಲ್		,,	,,	56	0	0
ಮೋಹನ್	,,	,,	,,	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಹಾಕಿದ ಖಾತ್ರಿಯೂ ಬಂದೊಬಸ್ತೂ ಆದ ಫೌಂಟನ್ ಪೆನ್ನುಗಳು.

ವರ್ಲ್ಡ್ ವಂಡರ್ ಫೌಂಟನ್ ಪೆನ್	1ಕ್ಕೆ			3	0	0
,, ಬಿಗ್ ಬ್ಯಾರಲ್	,,		,,	3	2	0
,, ಸ್ಕ್ರೂ ಕ್ಯಾಪ್	,,		,,	3	8	0
,, ಮೋಟಲ್ ಕಲರ್	,,		,,	3	14	0
,, ಮೋಟಲ್ ಸ್ಕ್ರೂ ಕ್ಯಾಪ್	,,		,,	4	4	0
,, ಬ್ರಾನ್ ಕಲರ್ ಸೆಲ್ಫ್ ಫಿಲಿಂಗ್ ಪೆನ್	,,			5	8	0
,, ಸೇಫ್ಟಿ ಪೆನ್	,,		,,	6	8	0
,, ಲೇಡೀಸ್ ಸೈಜಿನ ಮೋಟಲ್ ಕಲರ್ ಪೆನ್	,,			1	0	0
ಬ್ಲ್ಯಾಕ್‌ಬರ್ಡ್ ಪೆನ್	1ಕ್ಕೆ	3 8 0	ಮತ್ತು	3	12	0
ಸ್ವಾನ್ ಪೆನ್		6 [illegible] 0	,,	7	0	0
ವಾಟರ್‌ಮೆನ್ ಐಡಿಯಲ್	1ಕ್ಕೆ	8 0 0	,,	8	8	0
,, ಸೆಲ್ಫ್ ಫಿಲ್ಲಿಂಗ್ ... ಸೇಫ್ಟಿ ಪೆನ್	1ಕ್ಕೆ			12	0	0
ಬಿಗ್‌ಬ್ಯಾರಲ್ ... ಪೆನ್	,,			[illegible]	0	0
,, ... ಪೆನ್	1ಕ್ಕೆ			17	0	0

ಖಾತ್ರಿಯೂ ಬಂದೊಬಸ್ತೂ ಆದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು	1ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಆಲಾರಂ ಟೈಂಪೀಸು	,,	3	12	0
ಅನ್‌ಸೋನಿಯಾ 'ಬಿ' ಟೈಂಪೀಸು	,,	5	13	0
,, ಆಲಾರಂ ,,	,,	5	6	0
ಬಿಗ್‌ಬೆನ್ ,, ,,	,,	9	6	0
,, ಡಿಲಕ್ಸ್ ಸ್ಟ್ಯಾಂಡಿರುವ ಆಲಾರಂ ಟೈಂಪೀಸು	,,	13	5	0
ಘಂಟೆ ತೋರಿಸಿ ಆಲಾರಂ ಭಾರಿಸುವ ಕ್ಯಾರೇಜ್ ಕ್ಲಾಕ್	,,	7	2	0
,, ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್	1ಕ್ಕೆ	8	10	0
,, ಘಂಟೆ ಅರ್ಧ ಘಂಟೆ ಹೊಡೆದು ಆಲಾರಂ ಸಹ ಭಾರಿಸುವ ಕ್ಯಾರೇಜ್ ಕ್ಲಾಕ್	1ಕ್ಕೆ	9	12	0
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಕರ್ಣಾನಂದವಾಗುವಂತೆ ಗಾನವಾಡುವ ಕ್ಯಾರೇಜು ಕ್ಲಾಕ್	1ಕ್ಕೆ	12	0	0

ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಕಳುಹಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

52—13

ಗ ಸದಂ ಲೈನಿನಲ್ಲಿ ಪ್ಲಾಟ್‌ಫೋರ್ಮಿಗೆ ಎಡೆ ಇಲ್ಲದೆ ಇರುವದರಿಂದಾಗಿದೆ

ಮಡಿಕೇರಿಯಿಂದ ಮಂಗಳೂರಿಗೆ ಮೆಯಿಲ್ ಸಾಗಿಸುವ ಕಂಟ್ರಾಕ್ಟ್ ಬಸ್ ಸರ್ವಿಸು ಇದಕ್ಕಿಂತ ಹೀನಸ್ಥಿತಿಯ ರಸ್ತೆಯಲ್ಲಿ ಹೋಗುವದಾದರೂ ಯಾವದೊಂದು ತೊಡಕಿಗೆ ಎಡೆ ಇಲ್ಲದೆ ನಡಿಸುತ್ತಿರುವರು. ಇನ್ನಾದರೂ ಈ ಸರ್ವಿಸಿನ ಪ್ರೊಪ್ರೈಟರು ಬಸ್ಸುಗಳ ಒಳ್ಳೇ ಸ್ಥಿತಿಗೂ, ಅಧಿಕಾರಿಗಳು ಮೆಯಿಲು ಗಂಟೆಗೆ ಸರಿಯಾಗಿ ಬರುವಂತೆಯೂ ತಕ್ಕ ಗಮನ ಕೊಡುವರೆಂದಾಗಿ ನಂಬುತ್ತೇನೆ

ಪ್ರಯಾಣಿಕ

ಅಬ್ಕಾರಿ ಇಲಾಖೆಯ ಹಿತ ಚಿಂತನೆ

ಅಯ್ಯಾ,

ಈ ದೇಶದಲ್ಲಿ ಸೇಂದಿ ಸಾರಾಯದ ಮೂಲಕ ಬರುವ ಸರ್ಕಾರಿ ಉತ್ಪತ್ತಿಯು ದಿನೇ ದಿನೇ ಹೆಚ್ಚಾಗುತ್ತಿರುವ ಹಾಗೆ ರೈತರ ಬಡತನವೂ, ಮರಣ ಸಂಖ್ಯೆಯೂ ಹೆಚ್ಚಾಗುತ್ತಾ ಜನ ಸಂಖ್ಯೆಯು ಕಮ್ಮಿಯಾಗುತ್ತಿರುವದು ಸರ್ಕಾರದ ಮತ್ತು ದೇಶ ಮುಖಂಡರುಗಳ ಗಮನಕ್ಕೆ ಇನ್ನೂ ಬಾರದಿರುವದು ಶೋಚನೀಯವೇ ಸರಿ

ದೇಶ [illegible] ಕೊಡವ ಜನಾಂಗದ [illegible] ಅನ್ನಿಸಿಕೊಂಡು ಮೆರೆಯುತ್ತಿರುವ ಕೊಡವ ಸಭೆಯವರಾಗಲಿ, ಸ್ಯೆಮನ್ ಸಮಿತಿಯವರುಗಳಾಗಲೀ ಈ ವಿಷಯ ಗಮನಕ್ಕೆ ತೆಗೆಯಲಿಲ್ಲ [illegible] ಪ್ರಾಂತ್ಯದ ಉದ್ಧಾರಕ್ಕೆ [illegible] ಸ್ವಾರ್ಥಕ [illegible] ಸೇಂದಿ ಸಾರಾಯಿ ಅಂಗಡಿಗಳ [illegible] ಕಮ್ಮಿ ಮಾಡಬೇಕೆಂದು ಕೆಲವು ಮಹನೀಯರು ಕೌನ್ಸಿಲಿನಲ್ಲಿ, ಕೌನ್ಸಿಲಿನ ಹೊರಗೂ ಹೋರಾಡಿದರೂ ಅದಕ್ಕಾಗಿ ಬಂದ [illegible] ಕೊಡವ ಸಮಾಜದ [illegible] ಯಾವ ದೇಶದ ಮುಂದಾಳು ಧರ್ಮವಿರುದ್ಧವಾದ ಮತ್ತು ನಗೆಗೇಡಿತನದ ವಾದಗಳಿಂದ ವಿರೋಧಿಸಿದ್ದು ಯಾವ ಕೊಡವನಿಗೂ ಗೊತ್ತಿಲ್ಲದ್ದಲ್ಲ ಅದರಲ್ಲೂ ಒಬ್ಬೊಬ್ಬ ಮಹನೀಯರು ನಾಟಕ ಸೀನಿನಲ್ಲಿ ಹಾಸ್ಯಗಾರನು ಹಾಡುವ ಗೀತವನ್ನು ಮನದಣಿಯುವಂತೆ ಹಾಡಿ ಸಾರಾಯಿ ಬೇಕು, ಭತ್ತದ ಸಾರಾಯವೇ ಇರಲೆಂದು ಪ್ರೋತ್ಸಾಹಿಸಿ ಸರ್ಕಾರ ಮೇಲ್ಪಂಕ್ತಿಗಳ ಹಾಸ್ಯಕ್ಕೂ, ಸಂತೋಷಕ್ಕೂ ಪಾತ್ರರಾದರು ಸ್ವಾರ್ಥತೆಯ ಸಾಧನೆಗೆ ಇದಕ್ಕಿಂತಲೂ ಹೇಯವಾದ ವಾದಗಳು ಇನ್ನು ಬೇಕೇ? ನೆರೆ ಸೀಮೆಯಾದ ಮೈಸೂರು ದೇಶದಲ್ಲಿ ಅಬ್ಕಾರಿ ಇಲಾಖೆಯ ಉತ್ಪತ್ತಿಯು ಕಳೆದ 2 ವರ್ಷಗಳಿಂದ 4 ಲಕ್ಷ ರೂ. ಕಮ್ಮಿ ಮಾಡಿರುತ್ತಾರೆ ಮದ್ರಾಸು ಸಂಸ್ಥಾನದಲ್ಲಿ ಸೇಂದಿ ಸಾರಾಯವನ್ನು ಜನರು ಕುಡಿಯದಂತೆ ಮಾಡಲು ಮತ್ತು ಸಾರಾಯಿ ಸೇಂದಿಗಳಿಂದ ಆಗುವ ಕೇಡನ್ನು ಗ್ರಾಮಾಂತರದಲ್ಲಿ ತಿಳಿಸಿ ಬೋಧಿಸಲು ಪ್ರತ್ಯೇಕ ಇಲಾಖೆಗೆ 4 ಲಕ್ಷ ರೂಪಾಯಿ ಸರ್ಕಾರಿ ಖಜಾನೆಯಿಂದ ಕೊಟ್ಟು ರೈತರಿಗೆ ನಿಶಾನಿಷೇಧವನ್ನು ಬೋಧಿಸುತ್ತಾರೆ. ಅಲ್ಲದೆ 20 ವರ್ಷಗಳ ಒಳಗೆ ಇಡೀ ಸಂಸ್ಥಾನದಲ್ಲಿ ಸೇಂದಿ ಸಾರಾಯವನ್ನು ಪೂರಾ ನಿಲ್ಲಿಸುವದೇ ತಮ್ಮ ಧ್ಯೇಯವೆಂದು ನಿಶ್ಚೈಸಿ ಆ ಬಗ್ಗೆ ಪ್ರತಿ ವರ್ಷವೂ ಅಂಗಡಿಗಳನ್ನು ಕಮ್ಮಿ ಮಾಡುತ್ತಾ ಬರುತ್ತಿದ್ದಾರೆ. ಇದನ್ನು ನಮ್ಮ ಹೊಸ ಸಭೆಯವರೂ, ಸ್ಯೆಮನ್ ಪ್ರೇಕ್ಷಕರೂ ಗಮನಿಸುವರೇ? ಹಾಗೆ ಮಾಡಿದರೆ ಅವರ ಧ್ಯೇಯಕ್ಕೆ ಭಂಗವಾಗಲಿಕ್ಕಿಲ್ಲವೇ?

ಕಳೆದ 2 ವರ್ಷಗಳಿಂದ ಜಮಾನ್ದಾರರ ಸಂಘವು ಸೇಂದಿ ಸಾರಾಯದ ಕೇಡನ್ನು ರೈತರಲ್ಲಿ ಪ್ರಚುರ ಪಡಿಸಲು ಪ್ರಯತ್ನಿಸುವದು ಸಂತೋಷಕರವಾಗಿದೆ. ಇದಕ್ಕೆ ತಕ್ಕ ಪ್ರೋತ್ಸಾಹವನ್ನು ರೈತರೂ, ಸರ್ಕಾರದವರೂ ಕೊಟ್ಟಲ್ಲಿ ಈ ಆಬಿನಲ್ಲಿ ಮಹತ್ವಾದ ಕಾರ್ಯವನ್ನು ಮಾಡಿದಂತೆ ಆಗುತ್ತೆ ಇದಕ್ಕೆ ತಕ್ಕ ನಿಗ ಇಡಬೇಕಾಗಿ ಪ್ರಾರ್ಥನೆ.

'ದೇಶ ನಿವಾಸಿ'

ಉದ್ಯೋಗಸ್ಥರಿಗೆ ಟೀ ಪಾರ್ಟಿ

ಅಯ್ಯಾ,

ತಾರೀಕು 16—7—29ರ 'ಲೋಕಮಾನ್ಯ'ದ ಸಂಚಿಕೆಯಲ್ಲಿ ಹಂಗಾಮಿ ಕಮಿಷನರಾಗಿದ್ದ ರಾ. ಬ. ಕೆ. ಚಂಗಪ್ಪನವರನ್ನು ತಿಗ್ಗಟ್ಟುನಾಡು ತಾಲೋಕಿನವರು ಪೊನ್ನಂಪೇಟೆಯಲ್ಲಿ ಟೀ ಪಾರ್ಟಿಯಿಂದ ಸನ್ಮಾನಿಸಿದ ವಿಷಯ ಬರೆದ ಒಂದು ಬಾತ್ಮಿಯನ್ನು ನೋಡಿದೆನು ತಿಗ್ಗಟ್ಟುನಾಡು ತಾಲೋಕಿನವರ ಹೆಸರಿನಲ್ಲಿ ಟೀ ಪಾರ್ಟಿ [illegible] ಹೆಚ್ಚಾಗಿ ಉದ್ಯೋಗಸ್ಥರ [illegible] ಪಾತ್ರರಾಗ [illegible] ವಿರ್ಪಡಿಸಿದ್ದೆಂದು ತಿಳಿ ಉದ್ಯೋಗ [illegible] ಪಬ್ಲಿಕಿನಿಂದ [illegible] ಹೊಂದಬಾರದೆಂದು [illegible] ಹದು. ಆ ನೂತ್ನಕ್ಕೆ ಕಮಿಶನರ [illegible] ಪದವಿ ಸಿಕ್ಕಿದ್ದಕ್ಕೆ ವಿರೋಧವೆಂತಲ್ಲ ನ್ಯಾಯವಾಗಲಿ ತತ್ವವು ಹಾಗೆಯೇ ಇರತಕ್ಕದ್ದು [illegible] ಬೇರೆ ಕೋರಿಕೆಗ ಅಲ್ಲ ಒಂದು ಸ್ವಾತಂತ್ರ್ಯ ಕಾಂಗ್ರೆಸ್ಸಿನ ತತ್ವದ [illegible] ದೇಶೀಯರಿಗೆ ದೊಡ್ಡ ಉದ್ಯೋಗ ಸಿಕ್ಕುತ್ತಿರುವದೆಂಬುದನ್ನ ಬಾತ್ಮಿದಾರರು [illegible] ತಿಳಿಯಲಿ. ದೇಶದಲ್ಲಿ ದೊಡ್ಡ ಉದ್ಯೋಗವು ದೇಶೀಯರಿಗೆ ಸಿಕ್ಕಿದ್ದರಿಂದ ಸ್ವರಾಜ್ಯ ಸಿಕ್ಕಿತೆಂದು ಹೇಳುವ ಬಾತ್ಮಿದಾರನಿಗೆ ಸ್ವರಾಜ್ಯದ ಅರ್ಥವೇ ತಿಳಿಯಲಿಲ್ಲವೆಂದು ಸ್ಪಷ್ಟವಾಗುತ್ತ ದೇಶದ ಜನರ ಅಧೀನದಲ್ಲಿ ಸರ್ಕಾರದ ಆಡಳಿತವು ನಡೆಯತಕ್ಕದ್ದು ಹಾಗೂ ಅಧಿಕಾರಿಗಳು ಜನರ ಅಧೀನವಾಗಿರುವದು (ಡೆಮೋಕ್ರೆಟಿಕ್ ಗವರ್ನಮೆಂಟ್) ಪ್ರಜಾ ಜವಾಬ್ದಾರಿಯ ಸರ್ಕಾರ. ಆಗ್ಯೆ ಸ್ವರಾಜ್ಯ ಸಿಕ್ಕಿತೆನ್ನಬಹುದು. ಅದು ಈಗಿಲ್ಲ ಬಿಹಾರ್ ಪ್ರಾಂತ್ಯದಲ್ಲಿ ಗವರ್ನರ್ ಪದವಿಯನ್ನು ಲಾರ್ಡ್ ಸಿನ್ಹರವರಿಗೆ ಕೊಟ್ಟಾಗ್ಯೆ ಆ ಪ್ರಾಂತ್ಯದವರು ತಮಗೆ ಸ್ವರಾಜ್ಯ ಸಿಕ್ಕಿತೆಂದು ಬೊಬ್ಬೆ ಹೊಡೆಯಲಿಲ್ಲ

ನ್ಯಾಯವಾದ ಕಾಂಗ್ರೆಸ್ಸಿನ ಪಂಗಡದವರಿಗೆ ದೊಡ್ಡ ಪದವಿಯನ್ನು ಕೊಟ್ಟರೂ ಅಂಗೀಕರಿಸಲಿಕ್ಕಿಲ್ಲ ಅಂಗೀಕರಿಸಿದರೂ ನಿರಂಕುಶ ಆಡಳಿತ ನಡೆಯಲಿಕ್ಕಿಲ್ಲವೆಂದು ತಿಳಿಯಲಿ. ನಿರಂಕುಶ ಆಡಳಿತವನ್ನು ಮೂಲಗೊತ್ತುವದೇ ಕಾಂಗ್ರೆಸ್ಸಿನವರ ಧ್ಯೇಯವಾಗಿದೆ

ಪದವಿಗೆ ಆಶೆ ಇಟ್ಟುಕೊಂಡು ದೇಶಸೇವೆ ಮಾಡುವವರಂತೆ ನಟಿಸಿ ದೇಶದಲ್ಲಿ ಪಂಗಡಗಳನ್ನು ಬೆಳೆಸಿ, ಕೋಮುವಾರು ತತ್ವವೇ ಶ್ರೇಯಸ್ಕರವೆಂದು ಸಂದಿ ಸಮಯ ಒದಗಿದ [illegible] ಆ ಸಂಗಡ, ಈ ಪಂಗಡವೆಂದು ಜಾರುವವರಲ್ಲಿ ಒಬ್ಬರಿಗೆ ಪದವಿ ಸಿಕ್ಕಿದರೆ ನಿರಂಕುಶ ಪ್ರವರ್ತನೆಯು ನಡೆಯಬಹುದೋ ಏನೋ? ಕಾಂಗ್ರೆಸ್ಸಿನವರು ಆ ಪಂಗಡ ಈ ಪಂಗಡವೆಂದು ದೇಶದವರಲ್ಲಿ [illegible] ದೇಶದ [illegible] ಸ್ವರೆಲ್ಲರೂ ದೇಶೀಯರು [illegible] ಪದವೀಧರರಾಗಬಹುದೆಂದೂ [illegible] ದೇಶದ [illegible] ನರು ಉದ್ಯೋಗಸ್ಥರನ್ನು [illegible] ವರ [illegible] ಆದರ ಉದ್ಯೋಗಸ್ಥ ಪ್ರಜೆಗಳ ಅಭಿವೃದ್ಧಿಗೆ [illegible] ಆಡಳಿತದಲ್ಲಿ ಸ್ವರ ಮಟ್ಟಿಗೆ ಕಲಸ ಮಾಡಬಹುದೆಂದು ಅವರಿಗೆ ಚೆನ್ನಾಗಿ ಗೊತ್ತಿದೆ ಹೀಗೆ [illegible] ಜೆಗಳೆಲ್ಲಾ [illegible] ತಮ್ಮ ಹಿತಕ್ಕಾಗಿ ಕೆಲಸ [illegible] ತಿಳಿದಿದೆ. ಪಂಗಡದ ಹಿತವಾದಿಗಳು ಈ ತರಹದ ಬಾತ್ಮಿಯ ಮೂಲಕ ಅಲ್ಲಲ್ಲಿ ದ್ವೇಷಾಸೂಯೆಯನ್ನು ಹುಟ್ಟಿಸಿದರೂ ಬಿಡರುವಂಥ ಪುಕ್ಕಲರು ಈ ತಾಲೋಕಿನಲ್ಲಿಲ್ಲವೆಂದು ತಿಳಿಯಲಿ ಕೆಲಸಗಾರರ ಪಂಗಡವು ಬ್ರಿಟಿಷ್ ಸಾಮ್ರಾಜ್ಯವನ್ನು ಆಳುವ ಈ ಕಾಲದಲ್ಲಿ ಪ್ರಜೆಗಳಿಗೂ ಆಲೋಚನೆ ಹುಟ್ಟಿದೆ ಅಧಿಕಾರಿಗಳಿಗೂ ಜ್ಞಾನ ಬಂದಿದೆ ಎಂದು ಸದರಿ ಬಾತ್ಮಿದಾರರು ತಿಳಿಯಲಿ.

'ತಿಗ್ಗಟ್ಟುನಾಡು ತಾಲೋಕಿನವ'

ಕೊಡವ ಮಹಾ ಜನರಲ್ಲಿ ವಿನಂತಿ

ಮಹನೀಯರೇ,

ಕೊಡಗು ದೇಶದಲ್ಲಿ ಬ್ರಿಟಿಷ್ ಆಡಳಿತದಿಂದೀಚೆಗೆ ಅಂದರೆ ಜಮಾನ್ದಾರರ ಸಂಘವು ಆಗುವ ಮೊದಲು, ರಾಜಕೀಯ ಚಳವಳವು ಹೆಚ್ಚೇನೂ ಇರಲಿಲ್ಲ ಸರಕಾರಿ ಉದ್ಯೋಗಸ್ಥರೂ, ಅದರಲ್ಲಿ ಮುಖ್ಯವಾಗಿ ಅಸಿಸ್ಟೆಂಟ್ ಕಮಿಶನರೂ ಮತ್ತು ರಿಟಯರ್ ಆದ ಕೆಲವು ಉದ್ಯೋಗಸ್ಥರೂ ಮಡಿಕೇರಿಯಲ್ಲಿದ್ದು ಪ್ರತಿ ವರ್ಷವೂ ಚೀಫ್ ಕಮಿಶನರು ಬರುವಾಗ್ಯೆ ತಮ್ಮ ಅಭಿಪ್ರಾಯವನ್ನು ಕೊಡುತ್ತಾ ಅದು ದೇಶದ ಅಭಿಪ್ರಾಯವೆಂದು ಹೇಳುತ್ತಿದ್ದರು ಇಂಥಾ ಅಭಿಪ್ರಾಯವು ಸರಿಯಲ್ಲವೆಂದು ಕೆಲವು ಮುಂದಾಳುಗಳು ಸೇರಿ, ಕೊಡಗು ಜಮಾನ್ದಾರರ ಸಂಘವೊಂದನ್ನು ಸ್ಥಾಪಿಸಿ ಕಳೆದ 17 ವರ್ಷಗಳಿಂದ ದೇಶದ ಪ್ರತಿ ತಾಲೋಕಿನಲ್ಲಿಯೂ ಮೀಟಿಂಗ್ ಮಾಡುತ್ತಾ ಜನರಿಗೆ ತಮ್ಮ ರಾಜಕೀಯ ಹಕ್ಕು ಬಾಧ್ಯತೆಗಳನ್ನು ಸಾಧ್ಯವಾದ ಮಟ್ಟಿಗೆ ತಿಳಿಸುತ್ತಾ ಬರುತ್ತಿದ್ದರು ಹೀಗೆಯೇ 1923 ರ ವರೆಗೆ ಈ ಸಂಘದ ಕಾರ್ಯಕ್ರಮಗಳು ಹೆಚ್ಚಾಗಿ, ಟೈಟಲ್‌ದಾರರಿಂದಲೂ ಪೆನ್ಶನ್ ಹೊಂದಿದ ಸರ್ಕಾರ ನೌಕರರಿಂದಲೂ ನಡಿಸುತ್ತಾ ಬರಲ್ಪಟ್ಟಿತು ಈ ಮಧ್ಯೆ 1922 ರಲ್ಲಿ "ಕೊಡಗು ಪತ್ರಿಕೆಯು ಹೊರಟು, ಜನರಲ್ಲಿ ಒಂದೇ ಒಂದು ವರ್ಷದಲ್ಲಿ ಐವತ್ತು ವರ್ಷದಲ್ಲಿ ಆಗದಷ್ಟು ತಿಳುವಳಿಕೆಯನ್ನೂ, ಹುರುಪನ್ನೂ ಉಂಟುಮಾಡಿತು ಫಲಿತಾಂಶವೇನು? ಗ್ರಾಮನಿವಾಸಿಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ಚೆನ್ನಾಗಿ ತಿಳಿದು ಡಿಸ್ಟ್ರಿಕ್ಟ್ ಬೋರ್ಡಿಗೂ ಕೌನ್ಸಿಲಿಗೂ ತಮ್ಮ ದರ್ಜೆಯ ಹಿತೈಷಿಗಳಾದ ಸಹೋದರರನ್ನು ಚುನಾವಣೆ ಮಾಡಿಯೇ ಬಿಡಿದರು ರಿಟಯರ್ಡ್ ಉದ್ಯೋಗಸ್ಥರಿಂದಲೂ, ಟೈಟಲ್‌ದಾರರಿಂದಲೂ ಕೂಡಿ ನಡೆಸಲ್ಪಡುತ್ತಿದ್ದ ಜಮಾನ್ದಾರರ ಸಂಘದ ಕಮಿಟಿಯಲ್ಲಿ ಗ್ರಾಮನಿವಾಸಿಗಳ ಹಿತವಂತರಾದವರೇ ಮುಂದಾಳುಗಳಾಗಿ ಚುನಾಯಿಸಲ್ಪಟ್ಟರು

ಗ್ರಾಮನಿವಾಸಿಗಳ [illegible] ಮುಂದುವರಿದುದನ್ನು ಕಂಡು ಕೆಲವು ಕೊಡವ ಕುಳಗಳಿಗೂ, ಟೈಟಲ್‌ದಾರರಿಗೂ, ರಿಟಯರ್ಡ್ ನೌಕರರಿಗೂ, ಸರಕಾರದ ಕೆಲವು ಅಧಿಕಾರಿಗಳಿಗೂ ಸಹ ಸಹಿಸಲಾರದಷ್ಟು ತಲೆನೋವು ಉಂಟಾಯಿತು [illegible] ಕೊಡವ [illegible] ವಿರಾಜಪೇಟೆಯಲ್ಲಿ [illegible] ಒಂದು ಪಟ್ಟಿಯು ಕಮಿಶನರವರಿಂದ [illegible] ಟ್ ಕಮಿಶನರ [illegible] ಕೊಡವ [illegible]

1 ಕೊಡಗು [illegible] ಸಂಘದ [illegible]

2 ಕೌನ್ಸಿಲು ಮತ್ತು ಡಿಸ್ಟ್ರಿಕ್ಟ್ ಬೋರ್ಡು [illegible] ಒಂದ ಸಮಯದಲ್ಲಿ ಮಾತ್ರ ಕೂಡುವ ಪಕ್ಷ ಸಭೆ [illegible] ಬಲಿ ಹುಟ್ಟಿಸುವುದು.

3. ದೇಶದಲ್ಲಿ ತಮಗೆ ಸ್ಥಳವಿಲ್ಲ, ಸ್ಥಳವಿಲ್ಲ ಎಂಬುದಾಗಿ ಕೂಗಿಕೊಂಡು, ಇನ್ನೊಂದು ಜಮಾನ್ದಾರರ ಸಂಘವೆಂಬದಾಗಿ ಹೊರಡಿಸುವುದು.

4 ಕೊಡವರನ್ನು ಉದ್ಧಾರ ಮಾಡುತ್ತೇವೆಂಬುದಾಗಿ ಹೇಳುತ್ತಾ, ಆರೇಳು ವರ್ಷಗಳಿಂದ ಈ ಸಭೆಯಲ್ಲಿ ಯಾವ ಕೆಲಸವನ್ನೂ ಮಾಡದೆ, ಸರಿಯಾದ ಮತ್ತು ನಿಜವಾದ ರೂಲ್ಸನ್ನೂ ಸಹ ಮಾಡದೆ, ದೇಶದಲ್ಲಿ ಹೆಚ್ಚಾಗಿ ಪಂಗಡ ಭೇದವನ್ನು ಹೆಚ್ಚಿಸುವುದು.

5 'ರಾಜಕೀಯವು ಕೊಡವ ಸಭೆಯಲ್ಲಿ ಇಲ್ಲವೆಂದು ಹೇಳಿ ಇಡೀ ಹಿಂದೂದೇಶವೆಲ್ಲಾ ಬಹಿಷ್ಕರಿಸಿದ ಸ್ಯೆಮನ್ ಕಮಿಶನಿಗೆ, ದೊಡ್ಡ ಭತ್ಯವನ್ನು ಸರಕಾರದಿಂದ ಹೊಂದಿ ಸಾಕ್ಷಿ ಕೊಡುವುದು ಹಿಂದೂಸ್ಥಾನದಲ್ಲಿ ಪ್ರತಿ ಒಂದು ಪ್ರಾಂತ್ಯವೂ, ಪ್ರಾಂತೀಕ ಸ್ವರಾಜ್ಯದ ಪೂರ್ತಿ ಹಕ್ಕನ್ನು ಕೇಳಿದಾಗ ಈ ಕೊಡವ ಸಭೆಯ ಡೆಪ್ಯುಟೇಶನ್, ತಮ್ಮ ಮೆಮೊರಾಂಡಮಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಬೇಡ ಕೌನ್ಸಿಲು ಪ್ರೆಸಿಡೆಂಟರು ಚೀಫ್ ಕಮಿಶನರೇ ಆಗಬೇಕು, ಮಂತ್ರಿಗಳು ಬೇಡವೆಂದು ಮೊದಲಾಗಿ ಹೇಳಿ [illegible] ತಂದದ್ದು

ಒಬ್ಬರೇ [illegible] ತೋಳಬೇಕಾದರೆ ಪೂರ್ವದ [illegible] ಅವರ ಕೇವಲ ಸಂಬಂಧಿಕರು ತಾವೇ ದೇಶದ ಮುಂದಾಳುಗಳೆಂದಾಗಿ [illegible] ಸರ್ಕಾರದ ಕಮ್ಮಿಷನ ಎದುರಿನಲ್ಲಿದ್ದು [illegible] ಮೆಚ್ಚಿಕೆಗಾಗಿ [illegible] ಹೇಗೆ ವರ್ತಿಸಿದರೋ ಅದೇ ರೀತಿ ಈಗ ತಮ್ಮ [illegible] ಅಂದರೆ, ಬಂದ [illegible] ತರಗದಲ್ಲಿರು [illegible] ಇವರ ತರ

6 [illegible] ಕೊಡವ ಜನರಿಗೂ [illegible] ರೂಲ್ಸನ್ನು [illegible] ರು, ಗ್ರಾಮವಾಸಿಗಳ ಅಭಿವೃದ್ಧಿಗೆ ಯಾವದೊಂದೂ ಕೆಲಸವನ್ನು ಕೈಕೊಳ್ಳದವರು, ಕೊಡವರಿಗೆ ಏನು ತಾನೇ ಮಾಡ್ಯಾರು?

ದೇಶೀಯ ಮಹಾನುಭಾವರೇ, ಕೊಂಚ ಆಲಿಸಿ

ದೇಶದ ಸಾಮಾನ್ಯ ಜನರಾದ ನಮಗೆ ದೇವರು ಬುದ್ಧಿಶಕ್ತಿಯನ್ನೂ ಮಾನ ಮರ್ಯಾದೆಯನ್ನೂ ಕೊಟ್ಟಿರುವಾಗಲೂ, ಈ ಇಪ್ಪತ್ತನೆಯ ಶತಮಾನದಲ್ಲಿ ಕೇವಲ ಕೂಲೀಕಾರರ (ಲೇಬರ್) ಪಂಗಡದವರ ಸರ್ಕಾರವು ಬ್ರಿಟಿಷ್ ಚಕ್ರಾಧಿಪತ್ಯವನ್ನು ಆಳುವ ಸಮಯದಲ್ಲಿ, ತಾನು ಕುಳದ ಪಟ್ಟಿಗೆ ಸೇರಿದವ, ತನ್ನ ತಂದೆ ರಿಟಯರ್ಡ್ ನೌಕರ ಟೈಟಲ್‌ದಾರ, ನಾವು ಮುಂದೆ, ನೀವೆಲ್ಲರೂ ಹಿಂದೆ ಎಂದು ಹೇಳುವ ಕಾಲವು ಕಳೆದು ಹೋಗಿದೆ. ಈ ಸಮಯದಲ್ಲಿ ಬಡವ ಮಡುಗಿದಲ್ಲಿರು ಎಂಬ ತತ್ವದಲ್ಲಿರುವಂತೆ ನಮ್ಮ ಅನುಭವಕ್ಕೆ ಬಂದಿರುವ ಈ ನವೀನ ಕೊಡವ ಸಭೆಯ ಅಭಿಪ್ರಾಯಕ್ಕೆ ಎಡೆಯುಂಟೇ? ಇಂಥಾದ್ದನ್ನು ಸಹ ಮೂಲ ನಾಶ ಮಾಡಲು ನಾವೆಲ್ಲರೂ ಟೊಂಕ ಕಟ್ಟದ ಪಕ್ಷ ನಮ್ಮ ಬದುಕು ನಾವಲ್ಲದೆ ಬಾಳಲ್ಲವೆಂಬದನ್ನು ಖಂಡಿತವಾಗಿ ತಿಳಿಯಿರಿ ತಡಮಾಡದೆ ತಾವೆಲ್ಲರೂ ಎದ್ದೇಳಿ, ದೇಶಕ್ಕೆ ತಾವು ಮಾಡಬೇಕಾದ ಕರ್ತವ್ಯವನ್ನು ತಡವಿಲ್ಲದೆ ಮಾಡಿ

'ಕೊಡವ

OFFICE OF THE DY. SUPT. OF POLICE, COORG
MERCARA, DATED THE 19TH JULY 1929

NOTICE.

Applications are invited from candidates to be deputed for training in the Provincial Police Training School Vellore, in October 1929 with a view to his appointment, if he proves suitable as Probationary Sub-Inspector on a salary of Rs 65—3—110—5—125 plus a conveyance allowance of Rs 25/— p m

2 Only com[illegible]eted Secondary School Leaving Certific[illegible]te holders and others possessing higher educational qualit[illegible]ations need apply

3 Applicatio[illegible]s should reach the Deputy Superintendent of Police, Coorg by the 15th August 1929

4 The appli[illegible]nts should be 21 and not above 25 years of age should be 5'—5" in height and with a chest [illegible]easurement of at least 3[illegible] inches

5 Repres[illegible]tations [illegible] parties [illegible] beh[illegible] [illegible] will be treated as [illegible] d[illegible]alification

6 The successful candidate will receive a stipend of Rs 35/— p m during h[illegible]s course [illegible] training

7. Further p[illegible]ticulars if desired, can be [illegible] from the Deputy Superintendent [illegible]

2 — (d) [illegible]
3—3 — Dy Supt of Police

The most competitive.

CAR

in the most competitive

YEAR

The new model A Ford!!!

with three Speed selective sliding gear Transmission

The most economical car in the market For Demonstration & further particulars

Please apply to —

S. Sunder Rau,

Ford Dealer for Coorg

24—6 MERCARA

Of International Repute Prof BRUSCHETTINIS Vaccines for —

Tuberculosis, Leprosy Typhoid Cholera Venereal diseases Diabetic carbuncle, Acute Rheumatism, Croupous Pneumonia, Pyorroea, Wounds and Sores, Abscesses even in the internal organs and also for Malaria

Erval, for all Nervous system

King's Globules, for loss of memory, tired nerves weakness of the hearing sight weakness etc

Pallidine, for Chronic Rheumatism Paralysis, Eczema etc

Dr Morettis tablets, for Diabetes

Liquor Ave for Asthama chronic Bronchitis etc

Bublenal tablets for venereal diseases

Anti malaria Curative Pills, for malarial fever

For Further Particulars —

Apply to the sole Agents for Coorg

THE COORG EMPORIUM

48—6 MERCARA

ಚಿಲಿಯನ್ ಸ್ಟ್ರೀಟ್ ಆಫ್ ಸೋಡಾ

'ಬೋರಿಂ' ತುಳದ ದೆಸೆಯಿಂದ ಶಿಕ್ಕೆಗಿದ ಕಾಫಿಗಿಡಗಳ ಸಂಖ್ಯೆಯು ಧಾತು ಗುಣದ (Mineral) ಗೊಬ್ಬರ ಹಾಕಿದ ಸ್ಥಳಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ದಾಪುರ ಪರೀಕ್ಷಾ ಕ್ಷೇತ್ರ (Experiment station) ದಲ್ಲಿ ಕಂಡುಬಂದಿದೆ. ಆದುದರಿಂದ ದೊಡ್ಡ ಗಾಳಿ—ಮಳೆ ಬೋರರಿಗೆ ಸಾರಜನಕ ಗೊಬ್ಬರವು ಪ್ರಯೋಜನಕರವಾಗುವದೆಂದು ತೋರುತ್ತದೆ (ಮೈಸೂರು ಸರಕಾರದ [illegible] [illegible])

ಚಿಲಿಯನ್ ಸ್ಟ್ರೀಟ್ ಒಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬೆಳೆದು ಹುಳ ವಗೈರೆ ರೋಗಗಳಿಗೆ ಥಕ್ಕನೆ ಎಡೆಕೊಡಲಾರವು ಇದು ಹೊರತು ಚಿಲಿಯನ್ ಸ್ಟ್ರೀಟ್ ಒಫ್ ಸೋಡಾದಲ್ಲಿ ಬೆಳೆಗಳನ್ನೂ ಮಣ್ಣನ್ನೂ ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ ಚಿಲಿಯನ್ ಸ್ಟ್ರೀಟ್ ಒಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಏಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ

ಚಿಲಿಯನ್ ಸ್ಟ್ರೀಟ್ ಒಫ್ ಸೋಡಾವನ್ನು ರಾಜಪೇಟೆಯಲ್ಲಿರುವ ಮೆಸರ್ಸ್ 'ಶ್ಯಾಂ ಕಂಪೆನಿಯವರು ಸಂಗ್ರಹಿಸಿರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಲ ಚೀಲ 1ರ ರೂಪಾಯಿ 6—8—0ರಂತೆ ವರಗಿಸಿ ಕೊಡುವರಲ್ಲದೆ, ಮಡಿಕೇರಿ, ವೀರಾಜಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ 7—8—0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ ವಿವಿಧ ಬೆಳೆಗಳ ವಿಷಯ ದರ್ಮಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು

(1) ಚಿಲಿಯನ್ ಸ್ಟ್ರೀಟ್ ಕಮಿಟಿ ಇಂಡಿಯನ್ ಡೆಲಿಗೇಶನ್, ಪೋ ಬಾ ನಂ 469 ಕಲ್ಕತ್ತಾ.

(2) ಮಿಸ್ಟರ್ ಎಂ ಯು ಬೆಳ್ಯಪ್ಪ, ಚಿಲಿಯನ್ ಸ್ಟ್ರೀಟ್ ಕಮಿಟಿ, ಮಡಿಕೇರಿ.

24—12

Arms, Ammunition and Shooting Requisites!!!



Current Illustrated Catalogue Free on Application!

D B B L Rifles	Rs.	120	to	Rs	2750
S B. B L		35	to		950.
D B B L Guns		50	to		1350
S B B L ,,		35	to		275
D B M L ,,		45	to		135
S B M L ,,	,,	30	to	,,	80
B L Revolvers	,,	35	to	,,	350
Automatic Pistols	,,	30	to	,,	150

Brilliant Search Light Lamp For Shooting Camping, Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—22 **210 Abdul Rehman Street, BOMBAY.**

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

'ದಿಲ್ ಒಹರ್ ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ 1 ಕ್ಕೆ	50	8	0
"ಶಿದ್ದಪ್ಪಾಸ್ ಫ್ಲ್ಯೂಟ್"	42	8	0
ಕಳಂತರಾ ,,	40	0	0
ಮೋಹನ್ ,, ,,	7	8	0
ಮೋಸ್ಟ್ರೀಂ ,, ,,	55	0	0
ಮಹಾರಾಜಾ ,, ,, ,,	32	8	0
ಕೋಹಿನೂರು ,, ,, ,,	29	8	0
ಡೈಮಂಡ್ ,, ,, ,,	27	8	0
ದಿಬಾರೀ ,, ,,	25	0	0
"ದಿಲ್‌ಬಹಾರ್ ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1 ಕ್ಕೆ	85	0	0
ಸ್ಪೆಷಲ್ ,, ,,	56	0	0
ಮೋಹರ್ ,, ,, ,,	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಳ್ಳ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟನ್ ಪೆನ್ನುಗಳು

ವರ್ಲ್ಡ್ ವಂಡರ್ ಫೌಂಟನ್ ಪೆನ್ 1ಕ್ಕೆ	3	0	0
,, ಎಗ್‌ವ್ಯಾರರ್	3	2	0
,, ಸ್ಕ್ರೂಕ್ಯಾಪ್	3	8	0
ಮೆಟಲ್ ಕಲರ್	3	14	0
ಮೆಟಲ್ ಸ್ಕ್ರೂಕ್ಯಾಪ್	4	4	0
ಬ್ರ್ಯಾನ್‌ಕಲರ್ ಸೆಲ್ಫ್‌ಫಿಲಿಂಗ್ ಪೆನ್	5	8	0
,, ಸೇಫ್ಟಿ ಪೆನ್	6	8	0
,, [illegible] ಮೆಟಲ್ ಕಲರ್ ಪೆನ್	5	6	0
ಬ್ಲ್ಯಾಕ್‌ಬರ್ಡ್ ಪೆನ್ 1ಕ್ಕೆ 3 8 0 ಮತ್ತು	3	12	0
ಸ್ವಾನ್ ಪೆನ್ ,, 6 [illegible] 0	7	0	0
ವಾಟರ್‌ಮೆನ್ ಐಡಿಯಲ್ 1 ಕ್ಕೆ 8 0 0	8	8	0
ಸೆಲ್ಫ್ ಫಿಲ್ಲಿಂಗ್ [illegible] ಸೇಫ್ಟಿ ಪೆನ್ 1ಕ್ಕೆ	10	0	0
ಬಿಗ್‌ಬ್ಯಾರಲ್ [illegible] ,,	15	0	0
,, [illegible] 1ಕ್ಕೆ	17	0	0

ಖಾತ್ರಿಯುಳ್ಳ ಬಂದೋಬಸ್ತಾದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು 1ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಆಕಾರದ ಟೈಂಪೀಸು ,,	3	12	0
ಅನ್‌ಸೋನಿಯಾ ಬಿ ಟೈಂಪೀಸು ,,	5	13	0
ಆಕಾರದ ,, ,,	5	6	0
ಬಿಗ್‌ಬೆನ್ ,, ,, ,,	9	6	0
,, ತಿಲ್ಸ್ಯಾಕ್ಸ್ ಸ್ಟ್ಯಾಂಡಿರುವ ಆಕಾರದ ಟೈಂಪೀಸು ,,	13	5	0
ಪಂಟೆ ತೋರಿಸಿ ಆಕಾರದ ಫಳಿಸುವ ಕ್ಯಾರೇಜ್ ಕ್ಲಾಕ್	7	2	0
ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1ಕ್ಕೆ	8	10	0
,, ಘಂಟೆ ಅರ್ಧ ಘಂಟೆ ಹೊಡೆಯುವ ಆಕಾರದ ಕರು ಭಾರಿಸುವ ಕ್ಯಾರೇಜ್ ಕ್ಲಾಕ್ 1ಕ್ಕೆ	9	12	0
ಘಂಟೆ ತೋರಿಸಿ ತಪ್ಪಿದ್ದ ಟೈಮಿಗೆ ಎಚ್ಚರಿಸುವ ವಾಗುವಂತೆಗಾಣುವ ಕ್ಯಾರೇಜ್ ಕ್ಲಾಕ್ 1ಕ್ಕೆ	12	0	0

ಅಪೇಕ್ಷಿಸುವವರಿಗೆ ಪತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—13

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	20 660
ಜಮೆಯಾದ ಠೇವಣಾತಿ	—	1 87,7

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಕಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0 0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಗಾವ್ಯವಹಾರ ... ಆಪರೇಟಿವ್ ರಿಜಿಸ್ಟ್ರಾರವರು ...

... ಕೋಟೆಬಂಡ ... ... ಬೆಳ್ಳಿಯಪ್ಪ ...

... ಬಾಬುದ್ವಾರ ... ನವರು.

... ಯನ್ ವೆಂಕ ... ಬಿ ಎ ಬಿ ಎಲ್.

ಮಡಿಕೇರಿ. ... 19

... ಸೂಚನೆ.

... ಕೆಳಗಿನ ... ಕೊಡಗು ಪತ್ರಿಕೆಯ ... ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡಯಬೇಕಾಗಿ ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾನಜೀರಿರ ಸಂಜಪ್ಪನವರು, ಮತ್ತು ಮೆ. ಮಂಡೇಪಂಡ ಸೋಮಯ್ಯನವರು, (ಪಾದಿಭಂಡಾರ.)
ಮೂರ್ನಾಡು—ಮಡೆಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ. ಟಿ. ಆರ್ ರಾಮಯ್ಯನವರು,
ಗೋಣಿಕೊಪ್ಪಲು—ಮೆ. ಬಿಪ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ ಬಿ ಮುದ್ದಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜನಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸುವಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ಪೂಲ್ಲಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳು ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಸ್ತರ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮೇನೇಜರ್,
"ಕೊಡಗು" ಮಡಿಕೇರಿ



12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART
331 Abdul Rehman Street.
52 47 BOMBAY. 3.

ಕಟುಕಷಾಯ ಮಾಲೆಜ ರಕ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದಾಗ ಗುಣವಾಗದಿರುವ ಚಳಿ ಜ್ವರ ದಿನಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಮತ್ತು ಪ್ಲೀಹದೋಷದಿಂದ ಬರುವ ಜ್ವರಗಳಿಗೆ ಖಾತ್ರಿಯಾಗಿ ಗುಣಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ, ಹಿಂದಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧ ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—1—0 3—8—0, 6—12—0

ರೋಮನಾಶಿನಿ:— ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಯಲ್ಲಿ ಕಣ್ಣು ಕಿವಿಯಿಂದ ಕೀವು ಸೋರುವುದು ಶಿವುಡುತನ ಕಣ್ಣು ನೋವು ಅವಸ್ಥೆ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವು ಕನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ಕಡೆವು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ ... —ಮನೋಲ್ಲಾಸಿನಿ ಕಂಪೆನಿ,
52—4 ೧. ಬೆಂಗಳೂರು.

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ ಗ್ರಾಮೊಫೋನುಗಳೂ ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ... ಕೈಗಡಿಯಾರಗಳ ರೋಲ್ಡ್ ಗೋಲ್ಡಿನ ಚೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ 8 ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರ



ವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಪಡೆಯ ಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ
24—12 ಮುಖೇನ ಬರೆದು ಈಗಲೇ ತಿಳಿಯಬಹುದು.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	286	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ.
1926.	391	" "	1926.	106	" "
1927	468	" "	1927.	122	"
1928	585	" "	1928.	140	"

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ.	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ
1921ರಲ್ಲಿ " " " " "	1927ರಲ್ಲಿ " " " 25 "

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಬಂದರೆ ನಿಮಗೆ ಅಧಿಕ ಲಾಭ ಉಂಟಾಗುವುದು

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

... ಯಂಟಲ್ ಬಿ..., ಎಲ್. ಆರ್. ಕೃಷ್ಣಸ್ವಾಮಯ್ಯರ್
... 52—32 ಬ್ರಾಂಚ್ ಸೆಕ್ರೆಟರಿ.

... ಜರ್ಸ್.



ನಮ್ಮಲ್ಲಿ ಬಟ್ಟೆ, ಬಾಚಣಿಗೆ, ಸಹು ಕಟ್ಟು ಮುಂತಾದವುಗಳನ್ನು ಉಪಯೋಗಿಸುವದು ವಾಡಿಕೆಯಲ್ಲದೆ, ಇದರಿಂದ ಕೂರೆ, ಹೇನ, ಕೆಟ್ಟ ವಾಸನೆ ಮುಂತಾದವುಗಳ ಸೇರುವದು ಮತ್ತು ಬಹು ಬೇಗನೆ ಹಿಂದು ಹೋಗುವವು. ಈ ಕಟ್ಟರ್ ಆಫ್ ... ಇರುವವು ಗಸರತ್, ಕುಸ್ತಿ, ಮಾಡುವವರೂ ಸ್ಕೂಲ್ ಹುಡುಗರೂ ಬೈಸಿಕಲ್ ಮತ್ತು ಕುದುರೆ ಸವಾರಿ ಮಾಡುವವರೂ, ದೊಡ್ಡ ಶ್ರೀಮಂತರೂ, ಗಂಟಬರೂ ಉಪಯೋಗಿಸಬಹುದು. 10 ವರ್ಷದವರಿಗೆ ಆಗುವವು 1ಕ್ಕೆ 1—6—0 ದೊಡ್ಡ ಸೈಜಿನದು— 1ಕ್ಕೆ 1—10—0

ವಿಳಾಸ—... ಬೆನಾಸನ್ ಅಂಡ್ ಕೋ,
52—6 168 ಜ್ಯೂನಾ ಬಜಾರ್, ಮದರಾಸ್.

ಭಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಡ ತಟ್ಟಿದೆ. ಇದರ ... ಎಲೆಕ್ಟ್ರಿಕ್ ... ಬಂಗಾರದ ... ವಜ್ರದ ...

... ಒಂದು ಭಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನು ಇನಾಮಾಗಿ ಕೊಡುತ್ತೇವೆ

ವಿಳಾಸ—ಲೀಗಲ್ ವಾಚ್ ...
52—6 ಪೋ. ಬಾ 243. ...

Printed & published by P. I. Bellippa, at "Kodagu" Press, Mercara for "Kodagu" Ltd.

Reg. No. M. 155.
If not delivered please return to
"KODAGU" OFFICE MERCARA.

ಕೊಡಗು.

ಕನ್ನಡ ಭಾಷೆಯ ... || ... ||

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಮಡಿಕೇರಿ, ಸನ್ ೧೯೨೯ನೇ ಇಸವಿ ಆಗೊಸ್ಟು ತಾರೀಖು ೧೬ ನೇ ಶುಕ್ರವಾರ [ಸಂಚಿಕೆ ೧೦

Post Box 423,
TRIPLICANE, MADRAS.

Catalogue Free
to Bona fide Enquirers

MANUFACTURES AND DEALS IN ALL.—

(1) Gemset jewels, gold and silver articles of all patterns.
(2) Race Cups, Caskets, Medals, etc. for presentation purposes.
(3) Trowels, Keys, Locks, etc., for ceremonial purposes.

JEWELLER
BY
APPOINTMENT
TO
His Excel...
THE GOVERNOR
OF MADRAS

UNDERTAKES:—

(1) Remaking or ... all sorts of old gemset jewels to latest patterns.
(2) Electro plating, gilding and nickel-...
(3) Buying old jewellery, or undertaking to effect sale

V. SUBRAMANIA IYER
JEWELLER

Telephone :—
3145

Telegrams :—
"PRECIOUS"

Gold-smith, Silver smith, & Dealer in all Gemset Jewels.

52—48

ಶ್ರೇಷ್ಠವಾದ 5 ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ. 40 — ಅಸಲ್ ಗೋರೋಜನ ತೊಲ 1ಕ್ಕೆ ರೂ. 12.
ಕೇಸರಿ ಅಥವಾ ಕುಂಕುಮಪುಷ್ಪ ತೊಲ 1ಕ್ಕೆ ರೂ. 3½ — ಪಚ್ಚ ಕರ್ಪೂರ ತೊಲ 1ಕ್ಕೆ ರೂ. 2½.
ಕಾಬೂಲ ಇಂಗು ತೊಲ 10 ಕ್ಕೆ ರೂ. 1.

ಶ್ರೇಷ್ಠವಾದ 108 ಮಣಿಯುಳ್ಳ ರುದ್ರಾಕ್ಷಿ ಜಪ ಮಾಲೆ 1ಕ್ಕೆ ಆಣೆ 6, 8, 12, ರೂ. 1, 2, 5, 10 ರ ವರೆಗೆ.
32 ಮಣಿಯುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ. 1, 2, 3, 4, 5, 8, 10 ರ ವರೆಗೆ

ಮತ್ತು ಎಲ್ಲಾ ವಿಧವಾದ ರೇಶ್ಮೆ ... ಕಣಗಳು, ಮುಗುಟ ವಸ್ತ್ರವೇ ಎಲ್ಲಾ ಸರಕುಗಳು ದೊರೆಯುತ್ತೆ. ... ಸಾವಕಾಶ ಮಾಡದೆ ಈ ... ಗೆ ಆರ್ಡರು ಕೊಡಿರಿ. ... ದೊರೆಯುತ್ತೆ.

ಭಾರತ ಧ್ವಾ... ... ಸೋಪ್ ... ಶ್ರೀ ...

... A ... AL ... & CO.,

SILK ...

52—51

... City.

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಗಳು ವಿಲಾಯತಿಯಲ್ಲಿ ತಯಾರಾದವು. ಈ ಕ್ಯಾಮರಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಂಗಾದರೂ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು.

ಫೋಟೋ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ಎಷ್ಟು ಹೊಂದಿಗೆಗಾದರೂ ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿಕೆ ಕೃಷ್ಟ ಇಲ್ಲ, ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು. ಈ ಕ್ಯಾಮರಾವನ್ನು ತರಿಸಿಕೊಳ್ಳುವವರಿಗೆ 3 ವರುಷದ ಗ್ಯಾರಂಟಿ ಇದ್ದ ಟೈಂಪೀಸು ಒಂದನ್ನು ಇನಾಮಾಗಿ ಕೊಡುವೆವು. ಕ್ಯಾಮರಾ 1 ಕ್ಕೆ ರೂ. 1—8—0.

ವಿಳಾಸ—ಕೆ. ಎನ್. ಬೆನ್‌ಸನ್ ಅಂಡ್ ಕೊ.,
168, ಜೈನಾ ಬಜಾರ್, ಮದರಾಸ್.

2—7

ಶ್ರೀ ಶ್ರೀಕಂಠೇಶ್ವರ
ಚಿಕ್ಕವೀರಣ್ಣ ಆಯಿಲ್ ಮಿಲ್ಸ್
ಈಡಿಗ ಯುಕ್ಸೆಟರ್ಷ,
ಮೈಸೂರು.

ನಮ್ಮಲ್ಲಿ ಯಂತ್ರಸಲಕರಣೆಗಳಿಂದ ತಯಾರಾಗಿ ಶಿಲ್ಪಿಗಳಿಂದ ಶೋಧಿಸಲ್ಪಟ್ಟ ಅಪ್ಪಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸದಾ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯಲಪೇಕ್ಷೆಯುಳ್ಳವರು ... ಇರುವ ನಮ್ಮ ಅಂಗಡಿಯ ... ಆಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರ ದ್ವಾರ ತಿಳಿಯಬಹುದು.

36—11

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧ ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ
ಮಾತ್ರೆಗಳು.

... ಯನ್ನು ... ವದರಲ್ಲಿ ಸಮಾನ ... ಕ್ರಯ ೧—೦—೦

52—52

ಮದನಮಂಜರಿ ಫಾರ್ಮಸಿ,
1/94 ಚೈನಾ ಬಜಾರ್, ಮದ್ರಾಸ್.

ಏಕೆ ನರಳುತ್ತೀರಿ?

ಶ್ರಯಪು ... ಅಂಚೆಖಾನೆಲು.

ಇಲ್ಲವೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯೆ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಸ್ವಾಸ್ಥ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—52

ಮದನಮಂಜರಿ ಫಾರ್ಮಸಿ,
1/94 ಚೈನಾ ಬಜಾರು ರೋಡು, ಮದ್ರಾಸು

ಕೊಡಗು.

ಸನ್ ೧೯೨೯ನೇ ಇಸವಿ

ಆಗೊಸ್ತು ತಾ. ೧೬ ನೇ ಶುಕ್ರವಾರ.

ಈಜಿಪ್ಟಿನ ಸ್ವಾತಂತ್ರ್ಯ.

ಬ್ರಿಟಿಷ್ ಸಾಮ್ರಾಜ್ಯದೊಳಗೆ ಇರುವ ಮೂರು ಖಂಡಗಳಲ್ಲಿ ಮೂರು ದೇಶಗಳು ಪರದಾಸ್ಯಕ್ಕೆ ಗುರಿಯಾಗಿ ನರಳುತ್ತಿದ್ದವು. ಯುರೋಪಿನಲ್ಲಿ ಐರ್‌ಲ್ಯಾಂಡ್ ಬ್ರಿಟಿಷ್ ಸಾಮ್ರಾಜ್ಯ ವಾದಿಗಳ ಬಲೆಯಿಂದ ತಪ್ಪಿಸಿಕೊಳ್ಳಬೇಕಾದರೆ ಬಹು ಕಾಲ ಕಠಿಣ ಯುದ್ಧಮಾಡಬೇಕಾಗಿ ಬಂತು. ಅಂತು ಹೇಗಾದರೂ ಬಿಡುಗಡೆ ಹೊಂದಿತು. ಆಫ್ರಿಕಾ ಖಂಡದ ಈಜಿಪ್ಟ್ ದೇಶವು ಬ್ರಿಟಿಷ್ ಸಾಮ್ರಾಜ್ಯದೊಳಗಿನ ಗುಲಾಮಗಿರಿಗೆ ಸಿಕ್ಕಿ ನರಳುತ್ತಿತ್ತು. ಕಳೆದ ಘೋರ ಯುದ್ಧದಲ್ಲಿ ಈಜಿಪ್ಟ್ ಇಂಗ್ಲೆಂಡಿನ ಜೊತೆ ಸೇರಿ ಇಸ್ಲಾಂ. ಇಸ್ಲಾಮ್ ಮತದ ಟರ್ಕಿರಾಜ್ಯದೊಡನೆ ಯುದ್ಧಮಾಡಿತು. ಇದರ ಪ್ರತಿಫಲವಾಗಿ ಇಂಗ್ಲೆಂಡಿನವರು ಈಜಿಪ್ಟ್ ದೇಶಕ್ಕೆ ಹೆಸರಿಗಾದರೂ ಸ್ವಾತಂತ್ರ್ಯ ಕೊಡಬೇಕಾಗಿ ಬಂತು. ಆದರೆ ಬ್ರಿಟಿಷ್ ಸಾಮ್ರಾಜ್ಯದ ಸಾಮ್ರಾಜ್ಯ ವಾದಿಗಳು ನಿಜವಾದ ಸ್ವಾತಂತ್ರ್ಯವು ಜಾರಿಗೆ ಬರಲು ಬಿಡಲಿಲ್ಲ. ಬ್ರಿಟಿಷ್ ಸರಕಾರದ ಪರವಾಗಿ ಆ ರಾಜ್ಯದಲ್ಲಿ ಇರುವ ಹೈಕಮಿಶನರೆಂಬ ಅಧಿಕಾರಿಯು ದೇಶದೊಳಗೆ ಜಗಳಗಳನ್ನು ತಂದೊಡ್ಡಿ ಸ್ವತಂತ್ರ ಸರಕಾರವು ನಡೆಯುವದು ಸಾಧ್ಯವಿಲ್ಲದಂತೆ ಮಾಡಿದರು.

ಈಜಿಪ್ಟಿನ ಸ್ಥಳವು ಬ್ರಿಟಿಷ್ ಸಾಮ್ರಾಜ್ಯಕ್ಕೆ ಬಹಳ ಪ್ರಾಮುಖ್ಯವಾದದ್ದಾಗಿದೆ. ಈಜಿಪ್ಟಿಗೆ ಸೇರಿದ ಸೊಡಾನ್ ಪ್ರದೇಶದಲ್ಲಿ ಹತ್ತಿಯು ತುಂಬಾ ಬೆಳೆಯುತ್ತದೆ. ಆ ಪ್ರದೇಶವನ್ನು ಬ್ರಿಟಿಷರು ಕೈವಶಮಾಡಿಕೊಂಡು ಹತ್ತಿ ಬೆಳೆಸಿ ಬ್ರಿಟಿಷ್ ಹತ್ತಿ ಕಾರ್ಖಾನೆಗಳಲ್ಲಿ ಬಟ್ಟೆ ಮಾಡಿ ಪ್ರಯೋಜನ ಹೊಂದುತ್ತಾರೆ. ಇಂಡಿಯಾದೇಶಕ್ಕೂ ಮತ್ತು ಇತರ ಪೂರ್ವ ಪ್ರಾಂತ್ಯಗಳಿಗೂ ಬರಲಿಕ್ಕೆ ಇರುವ ಸಮುದ್ರ ಮಾರ್ಗವಾದ ಸುಯೆಜ್ ಕೆನಾಲ್‌ನ ಎರಡು ಬದಿಯ ಪ್ರಾಂತ್ಯವೂ ಈಜಿಪ್ಟಿಗೆ ಸೇರಿದ್ದು. ಆ ಭೂಮಧ್ಯದ ಹಡಗುಗಳ ದಾರಿಯು ಬ್ರಿಟಿಷರ ಆಧೀನದಲ್ಲಿರತಕ್ಕದ್ದು ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಗೆ ಬಹಳ ಅವಶ್ಯವಾಗಿದೆ. ಈ ಕಾರಣದಿಂದ ಈಜಿಪ್ಟನ್ನು ತಮ್ಮ ಕೈವಶಮಾಡಿಕೊಂಡು ಅಲ್ಲಿ ಬ್ರಿಟಿಷ್ ಸೈನ್ಯಗಳನ್ನು ಇಟ್ಟಿದ್ದದ್ದಲ್ಲದೆ, ಅಲ್ಲಿ ವಾಸಮಾಡುವ ಬ್ರಿಟಿಷ್ ಜನರು ಆ ದೇಶದ ಖಾನೂನಿಗೂ, ಕೋರ್ಟುಗಳಿಗೂ ಒಳಪಟ್ಟವರಾಗಿರಲಿಲ್ಲ. ಅಲ್ಲಿ ಬ್ರಿಟಿಷ್ ಜನರು ಖಾನೂನಿಗೆ ವಿರೋಧವಾಗಿ ನಡಕೊಂಡರೂ ಸಹ ಈಜಿಪ್ಟ್ ಕೋರ್ಟುಗಳಲ್ಲಿ ವಿಚಾರಕ್ಕೆ ಗುರಿಯಾಗುತ್ತಿರಲಿಲ್ಲ. ಇವರನ್ನು ವಿಚಾರ ಮಾಡಲು ತಮ್ಮ ಜಾತಿಯ ಜನರೇ ಜಡ್ಜಿಗಳಾಗಬೇಕಿತ್ತು. ಈ ಎಲ್ಲಾ ವಿಷಯಗಳಿಂದ ಈಜಿಪ್ಟಿನ ದುರ್ದೆಶೆಯು ಎಷ್ಟರ ಮಟ್ಟಿಗೆ ಶೋಚನೀಯವಾಗಿತ್ತೆಂಬುದು ಗೊತ್ತಾಗುತ್ತದೆ.

ಈ ಹೀನ ದೆಸೆಯಿಂದ ತಪ್ಪಿಸಿಕೊಳ್ಳಲು ಈಜಿಪ್ಟ್ ದೇಶದವರು 1905ರಲ್ಲೇ ಜಾಗ್ರತರಾದರು. ಅದೇ ಸಮಯದಲ್ಲಿಯೇ ಹಿಂದುಸ್ಥಾನದವರಿಗೂ ಪಾರತಂತ್ರ್ಯದ ಬೇಡಿಗಳನ್ನು ತಪ್ಪಿಸಿಕೊಳ್ಳಬೇಕೆಂಬ ಭಾವನೆಯು ಹುಟ್ಟಿದ್ದಾಗಿದೆ. ಕ್ರಮೇಣ ಸರಕಾರಿ ಉದ್ಯೋಗಸ್ಥರಲ್ಲಿಯೂ, ವಿದ್ಯಾರ್ಥಿಗಳಲ್ಲಿಯೂ, ವಕೀಲರಲ್ಲಿಯೂ, ಸಾಧಾರಣ ಜನರಲ್ಲಿಯೂ ಸ್ವಾತಂತ್ರ್ಯದ ಅಭಿಲಾಷೆಯು ಹೆಚ್ಚುತ್ತಾ ಬಂತು. 1912ರಲ್ಲಿ ಜಗ್ಲೂಲ್ ಪಾಷಾರವರ ಮುಂದಾಳುತನದಲ್ಲಿ ಸ್ವಾತಂತ್ರ್ಯ ಸಂಘವು ಏರ್ಪಟ್ಟಿತು. ಮಹಾ ಯುದ್ಧದ ಸಮಯದಲ್ಲಿ ಸ್ವತಂತ್ರ ಪ್ರೇಮಿಯಾದ ಈ ಜಗ್ಲೂಲ್ ಪಾಷಾರವರನ್ನು ಬ್ರಿಟಿಷ್ ಸರಕಾರವು ಗಡೀಪಾರು ಮಾಡಿದರು. ಆದರೆ ಈಜಿಪ್ಟಿನ ಅಶಾಂತಿಯು ಇನ್ನೂ ಹೆಚ್ಚಿತು. ಇವರನ್ನು ಬಿಡುಗಡೆ ಮಾಡಬೇಕಾಗಿ ಬಂತು. ಅನಂತರ ಈಜಿಪ್ಟಿಗೆ ಯಾವ ತರದ ಸರಕಾರ ಬೇಕೆಂಬುದರ ಬಗ್ಗೆ ಈ ದೇಶಕ್ಕೆ ಈಚೆಗೆ ಬಂದ ಸೈಮನ್ ಕಮಿಶನಿನಂತೆಯೇ ಮಿಲ್ನರ್ ಕಮಿಶನ್ ಎಂಬುದೊಂದು ಕಮಿಶನು ಈಜಿಪ್ಟಿನ ರಾಜ್ಯಾಡಳಿತದ ವಿಷಯ ತನಿಖೆ ಮಾಡಲು ಬಂತು. ಇದಕ್ಕೆ ಈಜಿಪ್ಟಿನವರು ಸಂಪೂರ್ಣ ಬಹಿಷ್ಕಾರ ಹಾಕಿದ್ದರಿಂದ ಸ್ವತಂತ್ರವಾದಿಯಾದ ಜಗ್ಲೂಲ್ ಪಾಷಾರವರ ಅಭಿಪ್ರಾಯಕ್ಕೆ ಅನುಗುಣವಾಗಿ ಮಿಲ್ನರ್ ಕಮಿಶನಿನವರು ರಿಪೋರ್ಟು ಮಾಡಬೇಕಾಗಿ ಬಂತು. ಹೇಗೂ 1924ನೇ ಇಸವಿಯಲ್ಲಿ ಈಜಿಪ್ಟಿಗೆ ಸ್ವಾತಂತ್ರ್ಯವು ಕೊಡಲ್ಪಟ್ಟಿತು. ಹೊಸ ಪಾರ್ಲಿಮೆಂಟೂ ಏರ್ಪಾಡಾಯಿತು. ಆಗ ಬ್ರಿಟನ್ನಿನಲ್ಲಿ ಕೂಲಿಕಾರರ ಪಕ್ಷದವರೇ ಮಂತ್ರಿಪದವಿಯಲ್ಲಿದ್ದರು.

ಅನಂತರ ಪುನಃ ಕನ್ಸರ್‌ವೇಟಿವ್ ಪಕ್ಷದವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಾಬಲ್ಯಕ್ಕೆ ಬಂದಾಗ ಈಜಿಪ್ಟಿನ ಸ್ವಾತಂತ್ರ್ಯವು ಹೆಸರಿನಲ್ಲಿ ಮಾತ್ರ ಉಳಿಯುವಂತಾಯಿತು. ಈಜಿಪ್ಟಿನಲ್ಲಿ ಹೈ ಕಮಿಶನರಾಗಿದ್ದ ಲಾರ್ಡ್ ಲಾಯಿಡರವರ ಒಳಸಂಚುಗಳಿಂದ ನಿರಂಕುಶ ವರ್ತನೆಯು ಹೆಚ್ಚಿ ಈಜಿಪ್ಟಿನಲ್ಲಿ ಪಾರ್ಲಿಮೆಂಟ್ ಸರಕಾರವೇ ಇಲ್ಲವಾಯಿತು. ಈ ವರ್ಷ ಪುನಃ ಕೂಲಿಕಾರರ ಪಂಗಡವು ಮಂತ್ರಿತ್ವಕ್ಕೆ ಬಂದಾಗ ಈ ಹೈ ಕಮಿಶನರ ಅಕೃತ್ಯಗಳನ್ನು ಸಹಿಸಲಾರದೆ ಅವರನ್ನು ಕೆಲಸದಿಂದ ವಜಮಾಡಿದರು. ಇವರು ಕನ್ಸರ್‌ವೇಟಿವ್ ಸರಕಾರದ ಪರ ರಾಷ್ಟ್ರ ಮಂತ್ರಿಯ ಹುಕುಮುಗಳನ್ನು ಉಲ್ಲಂಘಿಸಿ ನಡೆಯುತ್ತಿದ್ದದ್ದನ್ನು ಹೊರಗೆಡಹಿದರು. ಕೂಲಿಕಾರರ ಪಂಗಡದವರ ಈ ಧೈರ್ಯವಾದ ಕೆಲಸದಿಂದಲೇ ಈಜಿಪ್ಟಿಗೆ ಏನಾದರೂ ಗುಣವಾಗಬಹುದೆಂತ ಆಶೆ ಹುಟ್ಟಿತು.

ಈ ಆಶೆಗನುಗುಣವಾಗಿಯೇ ಬ್ರಿಟಿಷ್ ಮಂತ್ರಿಮಂಡಲಿಯು ಈಜಿಪ್ಟಿನೊಡನೇ ಒಂದು ಹೊಸ ಕವಲು ಮಾಡಲು ಏರ್ಪಾಡುಮಾಡಿ ಕವಲಿನ ಕರಾರುಗಳ ಮಸೂದೆಯನ್ನು ಇದೇ ತಿಂಗಳ 6ನೇ ತಾರೀಕಿನಲ್ಲಿ ಪ್ರಕಟಿಸಿದ್ದಾರೆ. ಈ ಕರಾರುಗಳನ್ನು ಈಜಿಪ್ಟ್ ದೇಶದವರೂ ಬ್ರಿಟಿಷ್ ಪಾರ್ಲಿಮೆಂಟಿನವರೂ ಒಪ್ಪಿಕೊಳ್ಳುತ್ತಾರೋ ಎಂಬುದು ಇನ್ನು ಮೇಲೆ ತಿಳಿಯಬೇಕಷ್ಟೆ. ಆದರೆ ಬ್ರಿಟಿಷ್ ಪಾರ್ಲಿಮೆಂಟಿನ ಲಿಬರಲ್ ಪಾರ್ಟಿಯವರು ಈ ಕವಲಿನ ಕರಾರುಗಳಿಗೆ ಒಪ್ಪುತ್ತಾರಾಗಿ ತಿಳಿದು ಬಂದಿರುವದರಿಂದ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಂಜೂರಾಗುವ ಸಂಭವವಿದೆ. ಕವಲಿನಲ್ಲಿ ಅನೇಕ ಮುಖ್ಯ ಬಾಬುಗಳಲ್ಲಿ ಈಜಿಪ್ಟಿನ ಸ್ವಾತಂತ್ರ್ಯವನ್ನು ಒಪ್ಪಿಕೊಂಡಿದ್ದರೂ ಈಜಿಪ್ಟಿನವರಿಗೆ ಒಪ್ಪಿಗೆಯಾಗದ ಇರಬಹುದಾದ ಕೆಲವು ಕರಾರುಗಳಿವೆ.

ಇನ್ನು ಮೇಲೆ ಈಜಿಪ್ಟಿನಲ್ಲಿ ಬ್ರಿಟಿಷ್ ಸೈನ್ಯವು ಇರಕೂಡದು. ಲೀಗ್ ಆಫ್ ನೇಶನ್ಸ್ ಎಂಬ ಜನಾಂಗಗಳ ಕೂಟಕ್ಕೆ ಈಜಿಪ್ಟ್ ಸ್ವಂತ ಹಕ್ಕಿನ ಮೇಲೆ ಸೇರಿಕೊಳ್ಳಬಹುದು. ಈಜಿಪ್ಟಿನಲ್ಲಿ ಕೆಡುಕುಮಾಡುತ್ತಿದ್ದ ಹೈ ಕಮಿಶನರ್ ಎಂಬ ಬ್ರಿಟಿಷ್ ಅಧಿಕಾರಿಯು ಈಜಿಪ್ಟಿನಲ್ಲಿ ಇರಕೂಡದು. ಈಜಿಪ್ಟಿನಲ್ಲಿರುವ ಪರದೇಶೀಯರ ಜೀವಕ್ಕೂ ಆಸ್ತಿಗೂ ಈಜಿಪ್ಟ್ ರಾಜ್ಯವೇ ಜವಾಬ್ದಾರಿಯಾಗಿರತಕ್ಕದ್ದು. ಇಂಗ್ಲೆಂಡಿನಲ್ಲಿ ಈಜಿಪ್ಟಿನ ರಾಯಭಾರಿಯೂ ಈಜಿಪ್ಟಿನಲ್ಲಿ ಇಂಗ್ಲೆಂಡಿನ ರಾಯಭಾರಿಯೂ ಇರತಕ್ಕದ್ದು. ಈ ತಂತ್ರಗಳಿಂದ ಈಜಿಪ್ಟಿನ ಸ್ವಾತಂತ್ರ್ಯವನ್ನು ಒಪ್ಪಿಕೊಂಡಂತಾಯಿತು. ಇಂಗ್ಲೆಂಡಿಗೂ, ಬೇರೆ ರಾಜ್ಯಗಳಿಗೂ ಯುದ್ಧ ಪ್ರಾರಂಭವಾದರೆ ಈಜಿಪ್ಟಿನ ಬಂದರುಗಳನ್ನೂ, ರಸ್ತೆಗಳನ್ನೂ ಬಿಟ್ಟುಕೊಟ್ಟು ಇತರ ವಿಧದಿಂದಲೂ ಸಹಾಯ ಮಾಡಬೇಕು. ಈಜಿಪ್ಟಿನ ಸೈನ್ಯ ತರಬೇತು ಮಾಡಲು ಪರದೇಶದ ಜನರನ್ನು ಕರೆಸಿಕೊಳ್ಳುವದಾದರೆ ಬ್ರಿಟಿಷರನ್ನೇ ಕರೆಸಿಕೊಳ್ಳಬೇಕು. ಸೂಯೆಜ್ ಕೆನಾಲನ್ನು ಕಾಪಾಡಲು ಬೇಕಾದ ಸೈನ್ಯಗಳನ್ನು ಕ್ಲುಪ್ತ ಮಾಡಲ್ಪಟ್ಟ ಸ್ಥಳಗಳಲ್ಲಿ ಇಟ್ಟುಕೊಳ್ಳಬಹುದು. ಈಜಿಪ್ಟಿನಲ್ಲಿ ಇಟ್ಟುಕೊಳ್ಳುವ ಪರದೇಶೀಯ ಅಧಿಕಾರಿಗಳು ಬ್ರಿಟಿಷರೇ ಆಗಿರಬೇಕು. ಸೊಡಾನ್ ಪ್ರಾಂತ್ಯವು 1899ನೇ ಇಸವಿಯ ಒಪ್ಪಂದದಂತೆಯೇ ಈಜಿಪ್ಟ್ ಮತ್ತು ಇಂಗ್ಲೆಂಡಿನ ಅಧಿಕಾರಕ್ಕೆ ಒಳಪಟ್ಟಿರಬೇಕು. ಪಟ್ಟಣದ ಪೊಲೀಸು ಇಂಗ್ಲೆಂಡಿನ ಅಧೀನದಲ್ಲಿ ಐದು ವರ್ಷಗಳ ವರೆಗೆ ಇರಬೇಕು ಎಂಬ ಇತ್ಯಾದಿ ಕರಾರುಗಳು ಈಜಿಪ್ಟಿನ ಗೌರವಕ್ಕೆ ಕುಂದು ತರುವಂಥವಾಗಿವೆ. ಆದರೆ ಈ ಕರಾರುಗಳು ಇದ್ದರೂ ಈಜಿಪ್ಟಿನ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳುವ ಕರಾರುಗಳು ಬಹಳ ಮಹತ್ವದ್ದುವೆ. ಈಜಿಪ್ಟಿಗೆ ಕುಂದು ತರುವ ಕರಾರುಗಳನ್ನು ಇಲ್ಲದಂತೆ ಮಾಡುವದು ಮಂತ್ರಿಮಂಡಲಿಗೆ ಸಾಧ್ಯವಾಗಲಾರದು. ಯಾಕೆಂದರೆ—ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಸಾಮ್ರಾಜ್ಯವಾದಿಗಳು ಅಂದರೆ ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಯನ್ನು ಕಡಿಮೆಮಾಡಬಾರದೆಂಬವರು ತುಂಬಾ ಇದ್ದಾರೆ. ಅವರ ಒಪ್ಪಿಗೆ ಸಹ ಸಿಕ್ಕಬೇಕಾದರೆ ಇಂಥಾ ಕರಾರುಗಳು ಇಲ್ಲದೆ ಸಾಧ್ಯವಿಲ್ಲ. ಆದ್ದರಿಂದ ಕೂಲಿಕಾರರ ಪಕ್ಷದ ಮಂತ್ರಿ ಮಂಡಲಿಯ ಉದಾರ ಸ್ವಭಾವವು ಅಂದರೆ ಸಾಮ್ರಾಜ್ಯದೊಳಗಿರುವ ಅಧೀನ ರಾಜ್ಯಗಳಿಗೆ ಸಾಧ್ಯವಿರುವಷ್ಟು ಮಟ್ಟಿಗೆ ಸ್ವಾತಂತ್ರ್ಯ ಕೊಡಬೇಕೆಂಬ ಭಾವವು ಈಜಿಪ್ಟ್ ಕವಲಿನ ಕರಾರುಗಳಿಂದ ತಿಳಿಯಬರುತ್ತದೆ.

ಬ್ರಿಟಿಷ್ ಮಂತ್ರಿಮಂಡಲಿಯ ಈ ಕಾರ್ಯದಿಂದ ಹಿಂದುಸ್ಥಾನದ ಸ್ವಾತಂತ್ರ್ಯಕ್ಕೆ ಸಹಾಯ ಸಿಕ್ಕುವ ಸಂಭವವಿದೆಯೆಂತ ಹೇಳಕೂಡದು. ಯಾಕೆಂದರೆ, ಹಿಂದುಸ್ಥಾನದ ವಿಷಯದಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಎಲ್ಲಾ ಪಂಗಡದವರೂ ಒಗ್ಗಟ್ಟಿನಿಂದ ಸೈಮನ್ ಕಮಿಶನನ್ನು ನೇಮಿಸಿದ್ದಾರೆ. ಸೈಮನ್ ಕಮಿಶನಿನ ಶಿಫಾರಸ್ಸು ಹಿಂದುಸ್ಥಾನಕ್ಕೆ ಗುಣವಾಗಿರುವ ಸಂಭವ ಬಹಳ ಕಡಿಮೆ. ಸೈಮನ್ ಕಮಿಶನಿನ ಸಿಫಾರಸನ್ನು ಅಲ್ಲಗಳೆಯಲು ಕೂಲಿಕಾರರ ಪಕ್ಷದವರಿಗೆ ಸಾಧ್ಯವಾಗಲಾರದು. ಆದರೂ ಕೂಲಿಕಾರರ ಪಕ್ಷದ ಮಂತ್ರಿ ಮಂಡಲಿಯವರೊಂದಿಗೆ ಸಂಭಾಷಣೆ ಮಾಡಿ ಬಂದ ಹಿಂದೀಯ ಮುಖಂಡರು ಮಂತ್ರಿ ಮಂಡಲಿಯು ಹಿಂದುಸ್ಥಾನದ ಕಡೆಗೆ ಸಹಾನುಭೂತಿಯುಳ್ಳದ್ದಾಗಿದೆಯೆಂತಲೂ ಹಿಂದುಸ್ಥಾನಕ್ಕೆ ಸಹಾಯ ಮಾಡಬೇಕೆಂಬ ಅವರ ಇರಾದೆಯು ಎಷ್ಟರ ಮಟ್ಟಿಗೆ ಫಲಕಾರಿಯಾಗುವದೆಂಬುದನ್ನು ನೋಡಿ ಅನಂತರ ಈ ಮಂತ್ರಿ ಮಂಡಲಿಯ ಮೇಲೆ ಹಿಂದುಸ್ಥಾನದ ಅಭಿಪ್ರಾಯ ಕೊಡಬೇಕೆಂತಲೂ ಹೇಳುತ್ತಾರೆ. ಆದರೆ ಹಿಂದುಸ್ಥಾನದ ಸ್ವಾತಂತ್ರ್ಯವು ಹಿಂದುಸ್ಥಾನದ ಜನರ ಪ್ರಯತ್ನದ ಮೇಲೆಯೇ ಹೊಂದಿದೆ ಎಂಬ ಅಭಿಪ್ರಾಯವೇ ಹಿಂದೂಸ್ಥಾನದಲ್ಲಿ ಹೆಚ್ಚಾಗಿದೆ.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು ಈ ತಾ. 15ರಲ್ಲಿ ಸಂಘದ ಹಾಲ್‌ನಲ್ಲಿ ನಡೆಯಿತು. ಈ ಕೆಳಗಿನ ಮೆಂಬರುಗಳು ಹಾಜರಿದ್ದರು. ಮೆಂಬರುಗಳಾದ 1. ಸಿ. ಯನ್ ವೆಂಕಪ್ಪಯ್ಯನವರು (ಅಧ್ಯಕ್ಷರು) 2. ಚಂಗಂಡ ಕುಟ್ಟಪ್ಪನವರು, 3. ಮನೆಯಪಂಡ ಚಿಣ್ಣಪ್ಪನವರು, 4. ನಿಡ್ಯಮಲೆ ಮುದ್ದಪ್ಪನವರು, 5. ಯಂ. ಯಂ. ಸಿದ್ದೇಶ್ವರನವರು, 6. ಅಂಜಪರವಂಡ ತಿಮ್ಮಯ್ಯನವರು, 7. ಚೆರಿಯ ಅಪ್ಪಯ್ಯನವರು., 8 ಅಜ್ಜಿಕುಟ್ಟಿರ ಪೊನ್ನಪ್ಪನವರು, 9 ಯಸ್ ಯನ್. ರಾಮಶೆಟ್ಟಿಯವರು, 10 ಕೋಟೆರ ಚಿಣ್ಣಪ್ಪನವರು, 11. ಕೊಳ್ಳಿಮಾಡ ಕರುಂಬಯ್ಯನವರು, 12 ಮನೆಪಂಡ ಬೆಳ್ಯಪ್ಪನವರು, 13 ಐಚೆಟ್ಟಿರ ಸಿ. ಸುಬ್ಬಯ್ಯನವರು, 14. ಕೋರನ ದೇವಯ್ಯನವರು ಮತ್ತು 15. ಪಂದ್ಯಂಡ ಬೆಳ್ಯಪ್ಪನವರು, ಸಂಘದ ಮೆಂಬರರಾದ ಮ. ಕೊರವಂಡ ಪೊನ್ನಪ್ಪನವರೂ ಹಾಜರಿದ್ದರು.

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2 ಜುಲೈ ತಿಂಗಳ ಲೆಕ್ಕ ಓದಿ ಒಪ್ಪಲಾಯಿತು.

3 ಬರುವ ನವೆಂಬರ ತಿಂಗಳಲ್ಲಿ ವೈಸರಾಯ್‌ರು ಕೊಡಗಿಗೆ ಬರುವಾಗ್ಯೆ ಅವರಿಗೆ ಕೊಡಬೇಕಾದ ಅಭಿನಂದನಾ ಪತ್ರದ ಮಸೂದೆಯನ್ನು ಓದಲಾಯಿತು. ಚರ್ಚಿಸಿ ಕೆಲವು ಬದಲಾವಣೆಗಳಿಂದ ಅದು ಮಂಜೂರು ಮಾಡಲಾಯಿತು.

4 ಸಂಘದ ಪರವಾಗಿ ಏಳು ಜನ ಪ್ರತಿನಿಧಿಗಳು ವೈಸರಾಯರಿಗೆ ಅಭಿನಂದನಾ ಪತ್ರ ಕೊಡಲು ಹೋಗ ಬೇಕೆಂದು ಕಮಿಷನರಿಗೆ ತಿಳಿಸಬೇಕಾಗಿ ತೀರ್ಮಾನಿಸಲಾಯಿತು.

ತಾ 15—8—29   ಪಿ. ಐ. ಬೆಳ್ಯಪ್ಪ,

ಜನರಲ್ ಸೆಕ್ರೆಟರಿ.

ನಮ್ಮಲ್ಲಿ ಸ್ವಾವಲಂಬನೆಯು ಬೇಕು.

(ಪರದೇಶೀ ಬಟ್ಟೆ ಬಹಿಷ್ಕಾರ ಕಮಿಟಿಯಿಂದ)

ಸನ್ ೧೮೦೦ ವರೆಗೆ ಹಿಂದುಸ್ಥಾನದಲ್ಲಿ ರಾಟೆಯು ಮೇಲೆ ನಡೆಯುತ್ತಿದ್ದರು. ಅಂದಿನ ವರೆಗೆ ಭಾರತೀಯರು ತಮ್ಮ ಬಟ್ಟೆಗಳನ್ನು ತಾವು ಪೂರೈಸಿಕೊಳ್ಳುತ್ತಿದ್ದದಲ್ಲದೆ ಇಂಗ್ಲೆಂಡ್, ಯುರೋಪಗಳಿಗೆ ಕೋಟಿಗಟ್ಟಲೆ ರೂಪಾಯಿ ಬೆಲೆ ಬಾಳುವ ಅರವೆಯನ್ನು ಕಳಿಸಿಕೊಡುತ್ತಿದ್ದರು.

೧೮೪೦ರಲ್ಲಿ ೫ ಕೋಟಿ ಹಾಗೂ ೧೮೭೭ರಲ್ಲಿ ಸಹ ೭ ಕೋಟಿ ರೂಪಾಯಿಗಳ ಬಟ್ಟೆಯು ಮಾತ್ರ ಈ ದೇಶಕ್ಕೆ ಬಂದಿತು. ಆ ಕಾಲಕ್ಕೆ ಆಂಗ್ಲೇಯರ ಗಿರಣಿಯ ಬಟ್ಟೆಯು ಭಾರತೀಯರ ಕೈನೂಲಿನ ಬಟ್ಟೆಯನ್ನು ಸರಿಗಟ್ಟಲಾರದಾಗಿತ್ತು. ೧೮೭೦ನೇ ಇಸ್ವಿಯಲ್ಲಿ ಮಧ್ಯ ಪ್ರಾಂತದ ಸಂಬಂಧವಾಗಿ ರಿಪೋರ್ಟ ಕಾರ್ನರರು ಬರೆದದೇನೆಂದರೆ:—

" ಅಗಸನ ಹೊಡತಕ್ಕೆ ಹರಿಯದೆ ಚಳಿ ಮಳೆ ಬಿಸಿಲುಗಳಿಂದ ಸಂರಕ್ಷಿಸುವ ಗಟ್ಟಿಮುಟ್ಟಾದ ದೇಶೀ ಅರವೆಯ ಮುಂದೆ ಯಂತ್ರದಿಂದ ಸಿದ್ಧವಾದ ಬಟ್ಟೆಗಳು ಕಾಲೂರಿ ನಿಲ್ಲಲು ಸಮರ್ಥವಾಗಲಿಲ್ಲ."

ಆಂಗ್ಲ ಸರಕಾರವು ಇಂಗ್ಲೆಂಡಿನಲ್ಲಿ ಹಿಂದುಸ್ಥಾನದ ಮಾಲು ಕರಿಸುವವರನ್ನು ಶಿಕ್ಷೆಗೆ ಗುರಿಮಾಡಿತು. ಮತ್ತು ಹಿಂದುಸ್ಥಾನದ ಒಳದೇಶದ ವ್ಯಾಪಾರದ ಮೇಲೆ ಭಾರವಾದ ಸುಂಕವನ್ನು ಹೇರಿ ಆಂಗ್ಲ ಬಟ್ಟೆಯನ್ನು ' ವ್ಯಾಪಾರ ಸ್ವಾತಂತ್ರ್ಯ " ವನ್ನೂ ಭಾರತೀಯದಲ್ಲಿ ಪ್ರತಿಷ್ಠಾಪಿಸಿತು.

ಸದ್ಯಕ್ಕೆ ವರ್ಷ ವರ್ಷಕ್ಕೆ ೬೬ ಕೋಟಿ ರೂಪಾಯಿ ಬೆಲೆ ಬಾಳುವ ಬಟ್ಟೆಯನ್ನು ನಾವು ಪರದೇಶದಿಂದ ತರಿಸುತ್ತೇವೆ. ಹಿಂದುಸ್ಥಾನದ ಅಲ್ಪ ಗಳಿಕೆಯಿಂದ ಇಷ್ಟು ಅಪರಿಮಿತವಾದ ಹಣವು ನಮ್ಮ ಕೈಬಿಟ್ಟು ಹೋಗುತ್ತದೆ. ಈ ಅನ್ಯಾಯಕ್ಕೆ ಉಪಾಯವೇನಾದರೂ ಉಂಟೋ? ಹೌದು, ನಮ್ಮಲ್ಲಿ ಸ್ವಾವಲಂಬನೆಯು ಮಾತ್ರ ಬೇಕು.

ಬೇಕಾಗಿದೆ.

ಬರುವ ಸೆಪ್ಟೆಂಬರಿನಿಂದ, ಮುಕ್ಕ ಜನವರಿ ತಿಂಗಳವರೆಗೆ ನ್ನು ಬಿಟ್ಟು, ಸಂಘದ ಬರುವ ಜನರಲ್ ಮೀಟಿಂಗಿನ ವರ್ತಮಾನಗಳಲ್ಲಿ ಜಮೀನ್ದಾರರ ಸಂಘದ ಸಂಘಟನೆ ಕಾರ್ಯವನ್ನು ನಡಿಸಲು ಇಬ್ಬರು ಆರ್ಗನೈಜರುಗಳು ಬೇಕಾಗಿದ್ದಾರೆ. ಸಂಬಳವು ಯೋಗ್ಯತಾನುಸಾರ ಮಾಹೆಯಾನ ರೂ. 50ರಿಂದ 75ರ ವರೆಗೆ ಕೊಡಲಾಗುವುದು. ಈ ಕೆಲಸವನ್ನು ಕೈಕೊಳ್ಳಲು ಅಪೇಕ್ಷಿಸುವವರು ಈ ತಾರೀಕು 25 ರೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಬರಕೊಳ್ಳತಕ್ಕದ್ದು.

ಕೊಡಗು ಜಮೀನ್ದಾರರ ಸಂಘ,   ಪಿ. ಐ. ಬೆಳ್ಯಪ್ಪ

ಮಡಿಕೇರಿ, ತಾ. 15–8—'29.   ಜನರಲ್ ಸೆಕ್ರೆಟರಿ.

3—3

ಮಹಾತ್ಮಗಾಂಧಿ ಯವರ ಶ್ಲಾಘನೆ.

ಅಮೇರಿಕಾದ ಮಿ. ಜಾನ್ ಹೆಯಿನ್ಸ್ ಹೋಮ್ಸ್ ಬವರು ಗಾಂಧಿಯವರನ್ನು ಶ್ಲಾಘಿಸಿ ಬರೆದಿರುವದೇನೆಂದ—

ಗಾಂಧಿಯವರು ಹಿಂದುಸ್ಥಾನದ ಸಾರ್ವಜನಿಕ ಕಾರ್ಯಗಳಲ್ಲಿ ಪುನಃ ಕೈಹಾಕಿದ್ದು ಪರದೇಶೀ ಬಟ್ಟೆಯ ಸುಡು ಯನ್ನು ಪುನಃ ಪ್ರಾರಂಭಿಸಿದ್ದು, ಗಾಂಧಿಯವರ ದಸ್ತಗಿರಿ ಅವರಿಗೆ ಆದ ಶಿಕ್ಷೆ, ಕಳೆದ ಡಿಸೆಂಬರಿನಲ್ಲಿ ಕಲ್ಕತ್ತಾ ಕಾಂಗ್ರೆಸಿನಲ್ಲಿ ಈ ವರ್ಷ ಡಿಸೆಂಬರ್ ಅಖೈರಿನೊಳಗಾಗಿ ರಾಷ್ಟ್ರದ ಸ್ವರಾಜ್ಯ ಕೋರಿಕೆಯನ್ನು ಮಂಜೂರ್ ಮಾಡದಿದ್ದರೆ ಹೊಸ ಅಹಿಂಸಾತ್ಮಕ ಚಳವಳದಲ್ಲಿ ತನ್ನ ಜನಾಂಗದ ಮುಂದಾಳಾಗುತ್ತೇನೆಂತ ಅವರು ಕೊಟ್ಟ ಘೋಷಣೆಯು ಇವೆಲ್ಲಾ ಹಿಂದುಸ್ಥಾನದ ಪರಿಸ್ಥಿತಿಯಲ್ಲಿ ಬಹು ಮುಖ್ಯವಾದ ವಿಷಯಗಳಾಗಿವೆ. ಹೊಸ ಬಿಕ್ಕಟ್ಟು ಬಂದೊದಗುವದರಲ್ಲಿ ದೆ— ಪ್ರಪಂಚದಲ್ಲೆಲ್ಲಾ ಅತ್ಯಂತ ಬಲಶಾಲಿಯಾದ ಮನುಷ್ಯನ ಪ್ರಾಬಲ್ಯವೇ ಹೆಚ್ಚಾಗಿರುತ್ತದೆ. ಯಾಕೆಂದರೆ ಮಹಾತ್ಮ ಗಾಂಧಿಯವರಿಗೆ 1919ರಿಂದ—1922ರ ವರೆಗೆ ಇದ್ದದಕ್ಕಿಂತ ಈಗ ಶಕ್ತಿ ಹೆಚ್ಚಾಗಿದೆ. ಅವರ ಶಕ್ತಿಯ ಹೊಸ ಪರಿಣಾಮವು ಈಗಿನ ಕಾಲದಲ್ಲಿ ಅಸಮಾನವಾದದ್ದು —ಐದು ವರ್ಷಗಳಿಂದೀಗೆ ಗಾಂಧಿಯವರು ಸಾರ್ವಜನಿಕ ಕೆಲಸದಿಂದ ಕೆಲವು ಕಾಲಗಳಿಗೆ ಬೇರೆಯಾದಂದಿನಿಂದ ಒದಗಿದ ಸಂಗತಿಗಳಿಂದಲೂ ಈಗ ಹಿಂದೂಸ್ಥಾನದಲ್ಲಿ ಈಗ ಆಗುತ್ತಿರುವ ಚಳವಳದಿಂದಲೂ ಈ ಅದ್ಭುತ ಮನುಷ್ಯನ ವಿಷಯಗಳನ್ನು ಪ್ರಪಂಚವು ವಿಷದವಾಗಿ ತಿಳಿದು ಕೊಳ್ಳುವದು ಅವಶ್ಯವಾಗಿದೆ.

ಎದುರಾಗದಿರುವ [illegible] ಗಳ, ಸರಿಯಾದ [illegible] ಕೊಡುವದಿಲ್ಲ [illegible] ಕೇಡಿಗೆ [illegible] ಇದಿರುವದು [illegible] ಹೊಸವೊಡವಿರ [illegible] ಸಾಧಾರಣ ಮನು[illegible] [illegible] ಗಾಂಧಿಯವರು [illegible] 'ಆತ್ಮಶಕ್ತಿ' ಎಂಬ [illegible] ಸ್ವಭಾವದ [illegible] ಶಕ್ತಿಯಿಂದ [illegible] ಸ್ವಾರ್ಥತ್ಯಾಗದ [illegible] ಗಾಂಧಿಯವರು [illegible] ಮನುಷ್ಯನ [illegible] ಜೀವನದಿಂದ [illegible] ಯುಗದಲ್ಲೂ ಮನ[illegible] ಮನುಷ್ಯನನ್ನು [illegible]

'ಎದುರಾಗದಿರುವ' [illegible] ಈ ವರೆಗೆ ಎಂದೂ [illegible] ಇಷ್ಟು [illegible] ಶಕ್ತಿಯನ್ನು [illegible] ಪ್ರಯತ್ನಿಸಿಯೂ [illegible] ರಾಜಕೀಯ [illegible] ಈ ತತ್ವವನ್ನು [illegible] ಉಪಯೋಗಿಸಿರಲಿಲ್ಲ.

1921—22ರಲ್ಲಿ [illegible] ಜನಾಂಗವು [illegible] ಜಾತಿಯ [illegible] ಶಕ್ತಿಯನ್ನೆಲ್ಲಾ [illegible] ಜನಾಂಗದಲ್ಲೆಲ್ಲಾ [illegible] ಈ ಪ್ರಯತ್ನದಲ್ಲಿ [illegible] ಅಸಹಕಾರದ ಕಾರ್ಯಕ್ರಮದಲ್ಲಿ [illegible] ತಮ್ಮ ಅತಿ ಮಹತ್ವದ ಬುದ್ಧಿಶಕ್ತಿಯನ್ನು [illegible] ಪ್ರದರ್ಶಿಸಿದರು.

ರಾಜಕೀಯ ಚಳವಳದ ಮುಂದಾಳು [illegible] ಪ್ರಪಂಚದ ಪರಿಸ್ಥಿತಿಯನ್ನೆಲ್ಲಾ [illegible] ಕೋಟಿಗಟ್ಟಲೆ ಜನರ ಮೇಲೆ [illegible] ಧರ್ಮೋಪದೇಶಕನಾಗಲೀ, ಯುದ್ಧವಿಶಾರದನಾಗಲೀ [illegible] ಇವರಿಗೆ ಇದ್ದಷ್ಟು ಶಕ್ತಿ [illegible] ಹಿಂದೂಸ್ಥಾನದಲ್ಲೆಲ್ಲಾ ಗಾಂಧಿಯವರು [illegible] ಜಾತಿಯವರು [illegible] ಅವರ [illegible] ದಯೆಯನ್ನು [illegible]

ಕೊಂಡಿರುವ ವಿಧ[illegible]ದ ಭಾಷೆಯನ್ನಾಡುವ, ತರತರದ ಪೂರ್ವಾಚಾರವಿರುವ, ಬೇರೆ ಬೇರೆ ದೇವತೆಗಳನ್ನು ಪೂಜಿಸುವ, ಹೆಚ್ಚಿನವರು ಅಕ್ಷರಸ್ಥರಿಲ್ಲದ ಜನಾಂಗದಲ್ಲಿ ಗಾಂಧಿಯ ಹೆಸರು ತಿಳಿಯದವರಿರಲಿಲ್ಲ ಅವರ ಮಾತನ್ನು ಶಿರಸಾವಹಿಸದವರಿರಲಿಲ್ಲ ಮೂವತ್ತು ಕೋಟಿ ಜನಾಂಗದಲ್ಲಿ ಒಬ್ಬನಿಗೆ ಇಷ್ಟು ಪ್ರಾಬಲ್ಯ ಬಂದದ್ದು ಯಾವ ಜನಾಂಗದಲ್ಲೂ ಎಂದೂ ಇರಲಿಲ್ಲ. ಈಗಲೂ ಗಾಂಧಿಯವರು ಇಷ್ಟೇ ಶಕ್ತಿಯುಳ್ಳವರಾಗಿದ್ದಾರೆ. ಆದರೆ ಈ ಶಕ್ತಿಯ ಸ್ವರೂಪವು ಬದಲಾಗಿದೆ. ಅಷ್ಟು ಘರ್ಷಣೆ ಮನಸ್ಸಿಗೆ ಮುಟ್ಟುವದಿಲ್ಲ. ಅಷ್ಟು ಅದ್ಭುತ ನೋಟವಾಗಿರಲಾರದು. ಅಷ್ಟೊಂದು ತತ್ಕಾಲ ಫಲದಾಯಿಯಾಗಿರಲಾರದು. ಆದರೆ ಆ ಶಕ್ತಿಯು ಇನ್ನೂ ಬಲವಾದದ್ದಾಗಿಯೂ ಸ್ಥಿರವಾದದ್ದಾಗಿಯೂ ಇದೆ ಮೊದಲಿನಷ್ಟೇ ವ್ಯಾಪಕವಾದದ್ದಾಗಿ ಇರುವದು ಅಲ್ಲದೆ ಆಲೋಚನೆಯ ಮತ್ತು ಜೀವನದ ಮೂಲಗಳನ್ನೇ ಆವರಿಸಿಕೊಂಡಿದೆ. ಎಲ್ಲವನ್ನೂ ಕೊಚ್ಚಿಕೊಂಡು ಹೋಗುವ ಪ್ರವಾಹದಂತಿರದೆ ಸಸ್ಯಾದಿಗಳಿಗೆ ಜೀವನವನ್ನು ಕೊಟ್ಟು ನೋಟವನ್ನು ಸೌಂದರ್ಯಗೊಳಿಸುವ ನದಿಯಂತಿದೆ. ರಾಜಕೀಯ ಮುಂದಾಳುತನದಲ್ಲಿ ಜನರು ಅಷ್ಟೊಂದು ಹಿಂಬಾಲಿಸದಿದ್ದರೂ ಧಾರ್ಮಿಕ ದೃಷ್ಟಿಯಿಂದ ಜನರು ಇವರನ್ನು ಗಾಂಭೀರ್ಯತೆಯಿಂದ ಪೂಜಿಸುತ್ತಾರೆ.

ಈ ಕಾರಣದಿಂದಲೇ ಗಾಂಧಿಯವರು ರಾಜಕೀಯ ಮುಂದಾಳುತನ [illegible] ಕೈಕೊಳ್ಳುವದರಲ್ಲಿ ಅಗಾಧವಾದ ವಿಷಯವಿರುವಂಥಾದ್ದು ಇವರ ಈ ಆತ್ಮಶಕ್ತಿಯೂ ಇವರಿಗೆ ಜನರ ಮೇಲಿ[illegible] ಹಿಂದೂಸ್ಥಾನದ ಜೀವನದಲ್ಲಿ ಇವರಿಗೆ ಪ್ರಾ[illegible] ಕೊಡುವದಾಗಿದೆ. ಇಂಗ್ಲಿಷ್ ಅಧಿಕಾ[illegible] ಮಹಾತ್ಮರ [illegible] ಗಾಂಧಿಗೆ [illegible] ಶಕ್ತಿ ಇದೆ [illegible] ಮಹಾತ್ಮರ [illegible] ಇದನ್ನು ತಿಳಿದುಕೊಳ್ಳುತ್ತಾರೋ?

ಜೊಹನ್ [illegible]

ವಿವಾಹ ಹಾಗೂ ಸಮ್ಮತಿ ವಯಸ್ಸು.

ಹೆಣ್ಣು ಮಕ್ಕ[ಳ] ವಿವಾಹ ಹಾಗೂ ಸಂಭೋಗ ಸಮ್ಮತಿಯ ವಯೋಮಯ[ರ್ಯಾ]ದೆಯನ್ನು ಕುರಿತು ವಿಚಾರ ಮಾಡುವದಕ್ಕಾಗಿ ನೇಮಿಸ[ಲ್ಪಟ್ಟ] ಸಂಘವು [illegible] ನೇ ದಿನ ಒಂದು ಮಂಡ[ನೆ]ಯನ್ನು ಸಾದರಪಡಿಸಿದ್ದರು. ಆದರ ಸಭಾಸದರು —ಸರ್ ಮೋರೋಪಂತ ಜೋಶಿ (ಅಧ್ಯಕ್ಷರು) ರಾವ್ ಬಹಾದ್ದೂರು ತನ್ನ[illegible], ಪಿ. ರಾಮಸ್ವಾಮಿ ಮೊದಲಿಯಾರ್, ಖಾನ್ ಬಹದ್ದೂರ್ ಕಾದ್ರಿ, ಶ್ರೀಮತಿ ಓಬ್ರಾಯನ್ ಬಿಡನ್, ಯಂ[illegible], ಶ್ರೀಮತಿ ಬ್ರಿಜಲಾಲ ನೇಹರು, ಸತ್ಯೇಂದ್ರಚಂದ್ರ [illegible], ಪಂಡಿತ ಠಾಕುರದಾಸ್ ಭಾರ್ಗವ, ಮೌಲವಿ ಮಹಮದ ಯಾಕುಬ, ಮಿಯಾನ್ ಮಹಮುದ್ ಕಪ[illegible] ನವಾಬ ಯ.೦. ಬ[illegible]ಗಣ (ಕಾರ್ಯದರ್ಶಿ). ಮಂಡಲದವರು ಒಟ್ಟು ಸುಮಾರು [illegible]೦ ಜನರ ಸಾಕ್ಷಿಗಳನ್ನು ತೆಗೆದುಕೊಂಡ[ರು]. ಅವರು ಮಾಡಿದ ಶಿಫಾರಸುಗಳೇನಂದರೆ—

ಶಿಫಾರಸುಗಳು

೧. ಮದುವೆ [ಯಾ]ದ ಹೆಣ್ಣು ಮಕ್ಕಳ ಸಮ್ಮತಿಯ ವಯಸ್ಸು [illegible] ಆಗಬೇಕು. [illegible] ವರ್ಷದೊಳಗಿನ ಹೆಂಡತಿಯ ಕೂಡ ಗಂಡನು ಸಂಭೋಗ ಮಾಡಿದರೆ ಅದು ಅಪರಾಧವಾಗಬೇಕು. [illegible] ಗಂಡನಲ್ಲದವನು ೧[illegible] ವರ್ಷದೊಳಗಿನ ಸ್ತ್ರೀಯರ ಕೂಡ ಸಂಭೋಗ ಮಾಡಿದರೆ ಅದು ಅಪರಾಧವಾಗಬೇಕು. ೪ ೧೪ ವರ್ಷದೊಳಗಿನ ಹೆಣ್ಣು ಮಕ್ಕಳ ಮದುವೆಯಾಗಕೂಡದು. ೫. ಈ ಕಾಯದೆಗಳ ಜ್ಞಾನವನ್ನು ಇದರ [illegible] ತಿಳುವಳಿಕೆಯನ್ನೂ ಜನರಲ್ಲಿ ಪ್ರಸಾರಗೊಳಿಸಬೇಕು. ಮದುವೆಯಾದವರ ವಯಸ್ಸು ಮುಂತಾದವುಗಳನ್ನೊಳಗೊಂಡ ಒಂದು ರಜಿಸ್ಟರನ್ನು ಸರಕಾರವು ಇಡಿಸಬೇಕು. ೭ ಮದುವೆಯ ಸರ್ಟಿಫಿಕೇಟುಗಳನ್ನು ಉಚಿತವಾಗಿ ಕೊಡಬೇಕು. ೮ ಈ ಕಾಯಿದೆ ಮುರಿದ ಅಥವಾ ಸುಳ್ಳು ವರ್ತಿಕೊಟ್ಟದ್ದನ್ನು ಈ ರಜಿಸ್ಟರ್ ಇಡುವವರು ಸಮೀಪದ ಮೇಜಿಸ್ಟ್ರೇಟರಿಗೆ [ತಿಳಿ]ಸಬೇಕು. ೯. ಇದರಂತೆ ಜನನ ರಜಿಸ್ಟರನ್ನೂ ಇಡಬೇಕು ೧೦. ಮದುವೆಯ ಹಾಗೂ ಜನನ ರಜಿಸ್ಟರುಗಳನ್ನು ಕಾಯಂ ಇಡಬೇಕು. ೧೧. ೧೨ ವರ್ಷದೊಳಗಿನ ಹೆಂಡತಿಯ ಕೂಡ ಗಂಡನು ಸಂಭೋಗ ಮಾಡಿದರೆ [illegible] ಕೇಸಿನಲ್ಲಿ [illegible]ಗೆ ಅಪರಾಧವಿಲ್ಲ. ೧೨ [illegible] ೧೫ ವರ್ಷದೊಳಗಿನ ಹೆಂಡತಿಯು [illegible] ಜಾಮೀನು [illegible] ೧೨ ವರ್ಷದೊಳಗಿನ ಹೆಂಡತಿಯ ಕೂಡ [illegible] ೧೦ ವರ್ಷದ ಶಿಕ್ಷೆಯನ್ನು, ೧೨ ರಿಂದ [illegible] ಸಂಬಂಧದಲ್ಲಿ [illegible] ವರ್ಷದವರೆಗೆ [illegible] ವಿಧಿಸಬಹುದು [illegible] ಸಂಭೋಗ [illegible] ಆಗದಂತೆ

ಕೋರ್ಟಿನವರು ಬೇಕಾದ ವ್ಯವಸ್ಥೆಯನ್ನು ಮಾಡಬಹುದು. ೧೪. ಈ ಅಪರಾಧಗಳಿಗೆ ಬರೇ ದಂಡದ ಶಿಕ್ಷೆಯಾಗದೆ ಕಾರಾಗೃಹವಾಸದ ಶಿಕ್ಷೆಯೇ ಆಗಬೇಕು. ೧೫. ಕೋರ್ಟಿನ ಸಂರಕ್ಷಣೆಗೆ ಒಳಪಟ್ಟ ಹೆಣ್ಣುಮಕ್ಕಳ ಆರೋಗ್ಯ, ಸಂಗೋಪನೆ, ವರ್ತನೆ ಮುಂತಾದವುಗಳ ಬಗ್ಗೆ ಕೋರ್ಟಿನವರು ಆಗಾಗ್ಯೆ ತಿಳಿದುಕೊಳ್ಳತಕ್ಕದ್ದು. ೧೬. ಈ ಅಪರಾಧಗಳ ವಿಚಾರಣೆಯನ್ನು ನಡೆಸಲು, ಹೆಣ್ಣುಮಕ್ಕಳ ಹೇಳಿಕೆ, ಸಾಕ್ಷಿ ಮುಂತಾದವುಗಳನ್ನು ತೆಗೆದುಕೊಳ್ಳಲು ವೈದ್ಯಪರೀಕ್ಷೆ, ಹೆಣ್ಣುಮಕ್ಕಳನ್ನು ಕೋರ್ಟಿಗೆ ಕರೆದುಕೊಂಡು ಬರುವದು ಹಾಗೂ ತಿರುಗಿ ಮನೆಗೆ ಮುಟ್ಟಿಸುವದು ಮುಂತಾದವುಗಳ ಸಲುವಾಗಿ ಸ್ತ್ರೀ ಪೋಲೀಸರನ್ನು ನೇಮಿಸಬೇಕು ೧೭. ಈ ಅಪರಾಧಗಳ ಕೋರ್ಟು ವಿಚಾರಣೆಯಲ್ಲಿ ಸ್ತ್ರೀಯರನ್ನೇ ಎಸೇಸರ್ ಅಥವಾ ಜೂರರರನ್ನಾಗಿ ನೇಮಿಸಬೇಕು. ೧೮. ಹೆಣ್ಣುಮಕ್ಕಳ ವೈದ್ಯಪರೀಕ್ಷೆಯು ಸ್ತ್ರೀ ಡಾಕ್ಟರಿಂದಲೇ ನಡೆಯತಕ್ಕದ್ದು ೧೯. ಕೋರ್ಟಿನಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕ ಸ್ಥಳವಿರಬೇಕು. ೨೦. ಈ ಕಾಯಿದೆಯು ಅಮಲಿನಲ್ಲಿ ಬರುವಾಗ ೧೪ ವರ್ಷ ತುಂಬಿದ ಮದುವೆಯಾದ ಹೆಣ್ಣುಮಕ್ಕಳಿಗೆ ಅದು ಲಗಾವು ಇಲ್ಲ. ೨೧. ವಿವಾಹಿತ ಹೆಂಡತಿಯ ಕೂಡ ಆದ ಇಂಥಾ ಅಪರಾಧವನ್ನು ಅಪರಾಧವಾಗಿ ಒಂದು ವರ್ಷವಾದ ಮೇಲೆ ಕೋರ್ಟಿನವರು ಲಕ್ಷಿಸಬಾರದು. ೨೨ ೧೫ ವರ್ಷದೊಳಗಿನ ಹೆಂಡತಿಯನ್ನು ತನಗೆ ಕೊಡಬೇಕೆಂದು ಕೇಳಲು ಗಂಡನಿಗೆ ಅಧಿಕಾರ ಇರತಕ್ಕದ್ದು.

Ford SALES AND SERVICE

The most competitive.

CAR

in the most competitive

YEAR

The new model A Ford!!!

with three Speed selective sliding gear Transmission.

The most economical car in the market For Demonstration & further particulars

Please apply to:—

S. Sunder Rau,

Ford Dealer for Coorg.

24—7 MERCARA

ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ —

ಈ ಕೆಳಗೆ ರುಜು ಮಾಡಿರುವ ನಾನು ಮದ್ರಾಸಿನಲ್ಲಿರುವ ಮೆ॥ ಇಂಡೋ ಅಗ್ರಿ ಲಿಮಿಟೆಡ್' (Indo-Agri Limited) ರವರ ಏಜೆನ್ಸಿಯನ್ನು ನನ್ನ ಹೆಸರು ಮತ್ತು ಕೊಡಗಿಗೆ ತೆಗೆದುಕೊಂಡಿರುತ್ತೇನೆ ತೀವು ಗೊಬ್ಬರಗಳ ವಿಷಯವಾಗಿ ನನಗಾಗಲಿ ಅಥವ ನಮ್ಮ ಮದ್ರಾಸು ಕಂಪೆನಿಗಾಗಲಿ ದಯವಿಟ್ಟು ಬರೆದು ವಿಚಾರಿಸಿಕೊಳ್ಳಬೇಕಾಗಿ ಕೋರುತ್ತೇನೆ. Imperial Chemical Industrials Limitted, Madras. ಈ ಕಂಪೆನಿಯ ಏಜೆನ್ಸಿಯನ್ನು ನಾನು ಬಿಟ್ಟುಬಿಟ್ಟಿರುವ ಕಾರಣ ಈ ಕಂಪೆನಿಯವರಾಗಲೀ, ಅಥವ ಅವರ ಕಡೆ ಪ್ರತಿನಿಧಿಗಳಾಗಲಿ ನನ್ನ ಹೆಸರಿನ ಮೇಲೆ ನಡಿಸುವ ಯಾವ ವ್ಯವಹಾರಗಳಿಗೂ ನಾನು ಜವಾಬ್ದಾರನಾಗುವದಿಲ್ಲವೆಂದು ಈ ಮೂಲಕ ತಿಳಿಯಪಡಿಸಿರುತ್ತೇನೆ

Head Office address —

Indo-Agri Limitted,
Agents, Messers.
Shaw Wallace & Company,
Post Box No. 14, Madras.

B. Bettiah.
Sub Agent,
Santhepett, Mysore.

1—4.

WANTED ON HIGH PAY.

Vacancies everywhere Apply for a copy of "Guide To Chances" enclosing 2 anna stamps.

ROYAL ELECTRICAL COLLEGE.

Naichebandan.

6—3 DELHI

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ೧ಕ್ಕೆ 0–14–0 ಟ ಪ 0–9–0

ಕೆ. ಟಿ. ಡೋಂಗರೆ ಕಂಪನಿ,

52–46 ಗಿರಿಗಾಂವ, ಮುಂಬಯಿ.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges &

Hunting Requisites

for

SEASON

1929–30.

CURRENT CATALOGUE ON APPLICATION

THE BOMBAY ARMOURY,

Specialist in Arms & Ammunition

31 ABDULREHMAN STREET,

BOMBAY No 4

24–7

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಒಟ್ಟಿಯ ರಂಗಿಗೂ, ಒಟ್ಟೆಯ ನಮೂನೆಗೂ ಮರುಳಾಗಿ ಪರದೇಶಿ ಒಟ್ಟೆಯನ್ನು ಕೊಂಡುಕೊಂಡು ಅನ್ನವಿಲ್ಲದೆ ನರಳುತ್ತಿರುವ ಲಕ್ಷಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡುತ್ತಿರುವಿರಾ? ಇಲ್ಲವೇ, ದಿನಕ್ಕೊಮ್ಮೆ ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ನರಳುತ್ತಿರುವ ಲಕ್ಷಾನುಲಕ್ಷ ಬಡವರ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಒಟ್ಟೆಯನ್ನು ಕೊಂಡುಕೊಳ್ಳಲು ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಯೂ ಈ ರೀತಿಯಾಗಿ ನಮ್ಮ ಬಡ ದೇಶೀಯರ ಜೀವನಕ್ಕೆ ದಾರಿಯಾಗುತ್ತೆ.

	ರು.	ಆ	ಪೈ
ಹತ್ತಿ ಬೆಳೆದವನಿಗೆ	0	3	0
ಹತ್ತಿ ಬಿಡಿಸಿದವನಿಗೆ	0	0	6
ಹತ್ತಿ ಸುತ್ತುವವನಿಗೆ	0	1	9
ನೂಲು ನೂಲುವವನಿಗೆ	0	3	9
ಒಟ್ಟೆ ನೇಯ್ಗೆಯವನಿಗೆ	0	4	9
ಅಗಸನಿಗೆ	0	0	6
ಒಟ್ಟೆ ಅಚ್ಚು ಹಾಕುವವನಿಗೆ	0	0	9
ಖಾದಿ ಅಂಗಡಿಯವನಿಗೆ	0	1	0
	1	0	0

ಖಾದಿಯನ್ನು ಹಾಕುವದರಿಂದ ವರ್ಷಕ್ಕೆ 60 ಕೋಟಿ ರೂಪಾಯಿ ಹೋಗುವದನ್ನು ನಿಲ್ಲಿಸಿ. ಆರ್ಡರ್ ಕಳಿಸಿದರೆ ಒಟ್ಟೆಯನ್ನು ನಿಮ್ಮ ಮನೆಯ ಬಾಗಲಿಗೆ ಖುದ್ದಾಗಿ ತಂದು ಕೊಡುವೆವು.

ಮ್ಯಾನೇಜರು,

24–3 ಖಾದಿ ಭಂಡಾರ,

ಪಿ. ರಾಜಪೇಟೆ.

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ

ಅದಕ್ಕೆ ವಚ್ಚಕ್ಕಾಗಿ ಬಸ್ಸದ ಅಂಬ ಕಳಕೊಳ್ಳಬೇಡಿ | ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು ಪಡೆದ ಸುಪರಿಣಾಮವನ್ನು ತೋರಿಸಿದ ಸ್ವಾನುಭವದ | ಮಕ್ಕಳಾದವರೆ ದಂಪತಿಗಳಾಗಿ ಶಾಸ್ತ್ರೋಕ್ತ ಪಡೆಯಿರಿ

ಬಾಲಗ್ರಹ ದೋಷನಿವಾರಣವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಹೂರ್ತವ ಸಮಯದೊಳು ಕೈಕಾಲು ಹರಿಯುವಿಕೆ ಹೊಟ್ಟೆ ಶೂಲೆ ದುಸ್ವಪ್ನ ಬೀಳುವಿಕೆ ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ ಶಾಂತ ಸರ್ಪದಾಪ ಪಿಶಾಚಬಾಧೆಯಿಂದ ನರಳುವಿಕೆ ಬೇರೆ ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು. ಇವಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಗ್ರಹ ದೋಷದಿಂದ ಅಕಸ್ಮಾತ್ ಸಂಭವಿಸುವ ಮುಟ್ಟುದೋಷ ಶಾಕಿಣಿ ಗ್ರಹಪೀಡೆ ದೃಷ್ಟಿದೋಷ ಭಯದಿಂದ ಜ್ವರಪೀಡಿತರಾಗುವಿಕೆ ಹಾಲು ಕುಡಿಯದಿರುವಿಕೆ ಮುಟಿಗೆ ಹೊಟ್ಟೆಯೊಳಗಿನ ವಿಕಾರ ಮೊದಲಾದವುಗಳಿಂದ ಕಾಡುತ್ತಿರುವದು ಗುರುಶಾಸ್ತ್ರ ವಿಧಿಯಲ್ಲಿ ಸೂರ್ಯ ರಹಸ್ಯ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಶುಭ ಕಾಲದಲ್ಲಿ ಸಾಧುಗಳ ಮುಖದ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ವಶಪಡಿಸಿರುವೆ. ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ. ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ. ಬಹುಮಾನ ಕೊಡುತ್ತೇವೆ. ಒಂದುಸಲ ತರಿಸಿ ಅನುಭವ ಪಡೆಯಿರಿ. ಹೆಣ್ಣು ಮಕ್ಕಳಿಗೆ ಸಂತಾನ ಪಡೆಯುವದಕ್ಕೆ ೩ ರೂಪಾಯಿ. ಚಿಕ್ಕಮಕ್ಕಳಿಗೆ ೧ಕ್ಕೆ ೨–೮–೦ ಪೋಸ್ಟ ಖರ್ಚು ಬೇರೆ. ಆಗತಕ್ಕ ವಿಕಾರಗಳನ್ನು ಸ್ಪಷ್ಟ ಬರೆಯಿರಿ.

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ.

ತಾಯಿತ ಸಿಗುವ ವಿಳಾಸ.—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52–6 ಮು. ಪೋ. ಅಥಣಿ, ಜಿ. ಬೆಳಗಾಂವ.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುವೃಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿ ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಪಚನಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ ಮೊದಲಾದ ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರಿ ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.—ಕ್ರಯ ಡಬ್ಬಿ 1 ಕ್ಕೆ 2–8–0, ಮೂರು ಡಬ್ಬಿಗಳಿಗೆ ರೂ 7–0–0

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ

ಬಾಟ್ಲಿ 1 ಕ್ಕೆ 0–10–0 3 ಕ್ಕೆ 1–12–0

೩. ಮಲೇರಿಯಾ ನಿವಾರಣ.

ದಿನ ಬಿಟ್ಟು ಬರುವಜ್ವರ, ಚಳಿ ಜ್ವರ, 2 ಯಾ 3 ದಿವಸಕ್ಕೊಂದು ಸಲ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–0–0

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆತಿರುಗುವದು ನಿದ್ರೆಯಿಲ್ಲದೆ ಇರುವಿಕೆ, ಕೂದಲುದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ಬಾಟ್ಲಿ 1 ಕ್ಕೆ 1–4–0 3 ಕ್ಕೆ 3–8–0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ ಬಾಟ್ಲಿ 1 ಕ್ಕೆ 0–8–0, 3 ಕ್ಕೆ

೬. ಕಸ್ತೂರಿ ಮಿಶ್ರಣ.

ದಿನ ಮಕ್ಕಳ ಬಾಣಂತಿಯರಿಗೆ ಬಾಟ್ಲಿ 1 ಕ್ಕೆ 1 ಬಾಟ್ಲಿಗೆ 4–4–0

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1–4–0, 3 ಬಾಟ್ಲಿ

೮. ಶ್ವಾಸ ಕಾಸ ಡಬ್ಬಿ 1 ಕ್ಕೆ 2–

ಎಲ್ಲಾ ತರದ ಔಷಧಿಗಳು ದೊರೆಯುತ್ತವೆ. ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ಔಷಧಿ ರವಾನಿಸಲಾಗುವುದು. ಪಟ್ಟಿಗಾಗಿ ಬರೆಯಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಏಜನ್ಸಿಯ

52–40 ರಥಬೀದಿ ಮಂಗಳೂರು, ದ.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ ದೇಚೂರಿನಲ್ಲಿ ಸಿಡುಬಿನಿಂದ ಒಬ್ಬ ಹೆಂಗಸು ಮೃತಳಾದಳೆಂದೂ, ಈಗ ಇನ್ನೊಬ್ಬನಿಗೆ ಅಂಟಿದೆಯೆಂದೂ ತಿಳಿಯುತ್ತೇವೆ.

ಕೊಡಗು ಜಮೀನ್ದಾರರ ಸಂಘದ ಎಕ್ಸಿಕ್ಯುಟಿವ್ ಕಮಿಟಿ ಮೀಟಿಂಗು ಈ ತಾ. 15ರಲ್ಲಿ ಸಂಘದ ಹಾಲ್‌ನಲ್ಲಿ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಈ ವಾರ ಮಡಿಕೇರಿಯಲ್ಲಿಯೂ, ಹಾಗೆಯೇ ದೇಶದಲ್ಲಿಯೂ ಮಳೆಯು ಬಹಳ ಕಡಿಮೆಯಾಗಿದೆ. ಇದೇ ರೀತಿ ಮುಂದುವರಿದರೆ ಭತ್ತದ ಬೆಳೆಗೆ ದೋಷಬರುವದೆಂಬ ಭಯವು ಜನರಿಗೆ ಹುಟ್ಟಿದೆ.

ಕೊಡಗು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 25—8—29 ನೇ ಆದಿತ್ಯವಾರ ದಿನ ಬೆಳಗ್ಗೆ 11 ಗಂಟೆಗೆ ಮಡಿಕೇರಿಯಲ್ಲಿರುವ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುತ್ತೆ.

ಮ. ಪಾಲೆಕಂಡ ಮೊಣ್ಣಪ್ಪನವರ ರಾಜಿನಾಮೆಯಿಂದ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಖಾಲಿಯಾಗಿರುವ ಸ್ಥಳಕ್ಕೆ ಬರುವ ಸೆಪ್ಟೆಂಬರು 27ರಲ್ಲಿ ನಡೆಯುವ ಚುನಾವಣೆಗೆ ರಾ. ಬ. ಕಾಳಿಮಾಡ ಮುತ್ತಣ್ಣನವರ ಮತ್ತು ಮ. ಕೋಟೆರ ಚಿಣ್ಣಪ್ಪನವರು ಉಮೇದುವಾರರಾಗಿ ನಿಂತಿರುವರು.

ಸಿದ್ದಾಪುರದ ಬಳಿ ನೆಲ್ಲಿಹುದಿಕೇರಿ ಗ್ರಾಮದ ... ಯನ್ ಕೋಮನ್ ಎಂಬವನ ... ಗಾಡಿಗಳ ... ಕೆಳದ ... ಸೇರಿ ತೋಮನನನ್ನು ಕಡಿದು, ಕೊಂದು, ... ಅಲ್ಲಿ ಹಾಕಿ ಅವನ ಮನೆಯ ಒಂದು ... ದಿವಸದಲ್ಲಿ ... ರಿಂದಲೂ, 8 ದಿವಸಗಳ ನಂತರ ... ಪೋಲೀಸರು ... ಹುಡುಕಿದಾಗ ... ದೇಹವು ... ಪೋಲೀಸಿನವರು ... ಹುಡುಕುತ್ತಿರುವದಾಗಿ ತಿಳಿಯುತ್ತದೆ.

ಹೊರದೇಶ.

ಸ್ತ್ರೀಯರಿಗೂ ಓಟಿನ ಹಕ್ಕು ಕೊಡಬೇಕೆಂಬ ಠರಾವು ಬರ್ಮಾ ಕೌನ್ಸಿಲಿನಲ್ಲಿ ಮಂಜೂರಾಯಿತು.

ಸೈಮನ್ ಕಮಿಶನ್ನಿನ ಪ್ರವಾಸಕ್ಕಾಗಿ ಬಂಗಾಳ ಸರಕಾರದಿಂದ ರೂ. 1,19,000 ಖರ್ಚು ಮಾಡಿರುವರಂತೆ!

ಲಾಹೋರ್ 'ಕಾನ್ಸ್‌ಪಿರೇಸಿ' ಕೇಸಿನ ಕೈದಿಗಳ ಉಪವಾಸ ವ್ರತದ ವಿಷಯ ಏನು ಮಾಡಬೇಕೆಂದು ಪಂಜಾಬು ಸರ್ಕಾರದವರು ಇಂಡಿಯಾ ಸರ್ಕಾರದವರೊಡನೆ ವ್ಯವಹಾರ ನಡೆಸುತ್ತಿರುವರಂತೆ.

ಅಫ್ಘಾನಿಸ್ತಾನದಲ್ಲಿ ನಾದಿರ್ ಖಾನ್‌ರವರು, ಜಾಜಿಸ್ ಮತ್ತು ಮೊಂಗೆಲ್ಸ್ ಪಂಗಡಗಳು ಸಹಕರಿಸುವಂತೆ ಮಾಡಿ, ಗಾರ್ಡೆಜ್ ಪಟ್ಟಣವನ್ನು ಪುನಹ ಕೈವಶಮಾಡಿಕೊಳ್ಳಲು ಪ್ರಯತ್ನಿಸುತ್ತಿರುವರು.

... 1,87,175 ... 1,35,000 ... 'ಸೆರ್ವೆಂಟ್ಸ್ ಆಫ್ ಪೀಪಲ್ ಸೊಸೈಟಿ'ಗೆ ... ಧರ್ಮ ... ರುವರು.

ಡಾಕ್ಟರ್ ಕರ್ಜಿ ಎಂಬ ಇಂಗ್ಲಿಷರೊಬ್ಬರು ಬೌದ್ಧಮತವನ್ನವಲಂಬಿಸಿ, ಸದರಿ ಮತದ ಪ್ರಚಾರೋದ್ದೇಶದಿಂದ ಸಿಲೋನಿಗೆ ಬಂದಿರುವರು. ಇವರು ಕೆಲವು ವರ್ಷ ಸಿಲೋನಿನಲ್ಲಿದ್ದು ಜಪಾನಿನಲ್ಲಿದ್ದು ಬೌದ್ಧ ಮತದ ವಿಷಯ ಬಹಳ ಪುಸ್ತಕಗಳನ್ನು ಬರೆದಿರುವರು.

ಒರುವ ಲಾಹೋರ್ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ಸರ್ದಾರ್ ವಲ್ಲಭಭಾಯಿ ಪಟೇಲರವರನ್ನೂ, ಸೌತ್ ಇಂಡಿಯನ್ನಿನ ಮರಾಟಿ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ಮಹಾತ್ಮ ಗಾಂಧಿಯವರನ್ನೂ ಸೂಚಿಸಿರುವರು.

ಬೆಂಬಾಯಿ, ಮದ್ರಾಸು ಮತ್ತು ಕೊಡಗು ಪ್ರಾಂತ್ಯಗಳಲ್ಲಿರುವ ಕನ್ನಡ ಭಾಷೆಯನ್ನಾಡುವ ಪ್ರದೇಶಗಳನ್ನೆಲ್ಲಾ ಸೇರಿಸಿ ಒಂದು ಕರ್ನಾಟಕ ಪ್ರಾಂತ್ಯವನ್ನು ನಿರ್ಮಿಸಬೇಕೆಂಬ ಠರಾವು ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಮಂಜೂರಾಗಿದೆ. ಅದರ ಅದೇ ಠರಾವು ಬೊಂಬಾಯಿ ಕೌನ್ಸಿಲಿನಲ್ಲಿ ಪಾಸಾಗಲಿಲ್ಲ.

ನೆಹರು ಕಮಿಟಿಯ ವರದಿಯ ... ಮುನಸ್ಥಾನ ... ಒಪ್ಪನೆಂತೆ ಮಾಡಲು ಅದರಲ್ಲಿ ... ವಿಷಯಗಳನ್ನು ಕುರಿತು ಮಹಾತ್ಮ ಗಾಂಧಿಯವರು ಈ ತಾ. 11 ರಲ್ಲಿ ಬೊಂಬಾಯಿಯಲ್ಲಿ ... ನಂತರ ... ಸಭೆಯ ... ಯನ್ನು ಮಾಡಿದರು.

ಸ್ವಾಗತ ಮಂಡಳಿಯವರು ತನ್ನನ್ನು ಲಾಹೋರ್ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಬಹುಮತದಿಂದ ಆರಿಸಿದರೂ ಕಡ ... ಆ ಬಹುಮಾನವನ್ನು ಒಪ್ಪಿಕೊಳ್ಳುವದಿಲ್ಲವೆಂತಲೂ, ನಂತರ ಆ ವಿಷಯವು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ತೀರ್ಮಾನಕ್ಕೆ ಬಿಡಲ್ಪಡುವುದೆಂತಲೂ ಮಹಾತ್ಮ ಗಾಂಧಿಯವರು ಸೂಚಿಸಿರುವರು.

'ಕಾಂಗ್ರೆಸ್' ಎಂಬ ಪತ್ರಿಕೆಯ ಸಂಪಾದಕರೂ, ಆಂಧ್ರ ದೇಶದ ಒಬ್ಬ ಪ್ರಮುಖರೂ, ಉಜ್ವಲ ದೇಶಭಕ್ತರೂ ಆದ ಶ್ರೀಮಂತ ಆನ್ನಪೂರ್ಣಯ್ಯನವರ ಮೇಲೆ ರಾಜದ್ರೋಹಕ್ಕಾಗಿ ಕೇಸು ನಡೆಸಿ ರಾಜಮಹೇಂದ್ರಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಅವರಿಗೆ ಎರಡು ವರ್ಷ ಕಠಿಣ ಸಜೆಯನ್ನೂ, 500 ರೂ. ಜುಲ್ಮಾನೆಯನ್ನೂ ವಿಧಿಸಿರುವರು.

ಹಿಂದೂದೇಶಕ್ಕೆ ಡೊಮಿನಿಯನ್ ಸ್ಟೇಟಸ್ ಸಿಕ್ಕುವ ವರೆಗೆ ಪ್ರಾಂತೀಯ ಕೌನ್ಸಿಲುಗಳಿಂದ ಪ್ರತಿನಿಧಿಗಳನ್ನು ಆರಿಸಿ ಬ್ರಿಟಿಷ್ ... ಕಳುಹಿಸುವ ಹಕ್ಕು ಇರಬೇಕೆಂದು ಇಂಡಿಯನ್ ಸೆಂಟ್ರಲ್ ಕಮಿಟಿಯವರು ಠರಾವು ಪಾಸುಮಾಡಿದರು. ... ಪ್ರತ್ಯೇಕ ... ಪ್ರಾಂತ್ಯವನ್ನು ಬೊಂಬಾಯಿಯಿಂದ ಪ್ರತ್ಯೇಕಿಸಬೇಕೆಂದು ... ಸಿರುವರಂತೆ.

ಅಮೇರಿಕದ ಡಾಕ್ಟರ್ ಸಂಡರ್‌ಲ್ಯಾಂಡ್‌ರವರು ಬರೆದಿರುವ ... ಇನ್ ಬಾಂಡೇಜ್ (ಇಂಡಿಯಾದ ಗುಲಾಮಗಿರಿ) ಎಂಬ ಪುಸ್ತಕವನ್ನು ಪ್ರಕಟಿಸಿ ರಾಜದ್ರೋಹದ ತಪ್ಪಿಗೆ ಗುರಿಯಾಗಿರುವರೆಂದು 'ಮೋಡರ್ನ್ ರಿವ್ಯೂ' ಮಾಸಪತ್ರಿಕೆಯ ಸಂಪಾದಕರಾದ ಮ. ರಮಾನಂದ ಚಟರ್ಜಿಯವರಿಗೂ, ಅದರ ಪ್ರಕಾಶಕರಾದ ಮ. ಮನ್ ... ದಾಸ್‌ರವರಿಗೂ ... ಶಿಕ್ಷೆ ... ತಪ್ಪಿದರೆ ... ಹಾಕಲಾಗಿದೆ.

ವರ್ಣ ಪಂಗಡಗಳ ಪಾಪಕ್ಕಾಗಿ ... ಮೇಲೆ, ಹಿಂದೂ ... ಮುಂದಿನ ... ಕ್ರಮದಲ್ಲಿ ಸಂಸ್ಥಾನಗಳ ಸಂಬಂಧವು ಹೇಗಿರಬೇಕೆಂಬುದನ್ನು ಚರ್ಚಿಸಲು ಕರೆದ ಪರಿಷತ್ತಿನ ಕಮಿಟಿಗೆ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಬೇರು ... ನ್ಸನ್ನ ... ಹೇಳಿದಲ್ಲಿ ... ಮುಂತಾದವರು ... ಮಹಾರಾಜರು ... ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನೆಹರುರವರು ಪತ್ರಗಳನ್ನು ಬರೆದಿರುವರು.

ಪಾಶ್ಚಿಮಾತ್ಯ ದೇಶಗಳನ್ನು ಸುತ್ತಿಕೊಂಡು ಬಂದ ಶ್ರೀ ... ದೇವಿಯವರಿಗೆ ಬೊಂಬಾಯಿಯ ಸ್ತ್ರೀಯರು ... ರಲ್ಲಿ ಒಂದು ಸಭೆ ಸೇರಿ ಸ್ವಾಗತಕೊಟ್ಟರು. ... ಅಧ್ಯಕ್ಷರಾಗಿದ್ದರು. ... ಮುಂತಾದ ... ಮತ್ತು 'ಇಂಗ್ಲಿಷ್' ಮಹಿಳೆಯರೂ ಹಾಜರಿದ್ದರು. ... ತಮ್ಮ ಭಾಷಣದಲ್ಲಿ ... ಸ್ತ್ರೀಯರು ... ಸ್ವದೇಶೀ ... ಗಳನ್ನೆಂದೂ, ... ನಮ್ಮ ದೇಶದ ಮಹಿಳೆಯರೂ ಸ್ವದೇಶೀ ವಸ್ತುಗಳನ್ನೇ ಉಪಯೋಗಿಸಬೇಕೆಂದೂ ಮುಂತಾಗಿ ಹೇಳಿದರು.

ಮಡಿಕೇರಿ-ಭಾಗಮಂಡ್ಲ-ಸುಂಟಿಕೊಪ್ಪ ಜಮ್ಮ ಓಟರುಗಳಲ್ಲಿ ವಿನಂತಿ.

ಬರುವ ಸೆಪ್ಟಂಬರು ತಾ. 27ರಲ್ಲಿ ನಡೆಯಲಿಕ್ಕಿರುವ ಕೌನ್ಸಿಲು ಚುನಾವಣೆಗೆ ಮಡಿಕೇರಿ—ಭಾಗಮಂಡಲ—ಸುಂಟಿಕೊಪ್ಪ ಜಮ್ಮ ಓಟರುಗಳ ಪರವಾಗಿ ನಾನೊಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ತಾವೆಲ್ಲರೂ ತಮ್ಮ ಓಟನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಬೇಕೆಂದು ವಿನಯದಿಂದ ಕೇಳುತ್ತೇನೆ.

ತಮ್ಮ ವಿಧೇಯ,

ಮಡಿಕೇರಿ, ಕೋಟೆರ ಪಿ. ಚಿಣ್ಣಪ್ಪ.
ತಾ. 16—8—'29. 2—1

ಬೇಕಾಗಿದೆ.

ಶ್ರೀಮತಿ ಡಿ. ನಾಕಮ್ಮನವರ (1) ಕುಸುಬೂರು, (2) ಮಾದಾಪುರ, (3) ... ಕಾಫಿ ತೋಟಗಳಿಗೆ ಸೂಪರಿಂಟೆಂಡೆಂಟ್ ... ಒಬ್ಬರು ... ಕ್ಲಾರ್ಕ್‌ ... ಕಾರ್ಯದಲ್ಲಿ ... ವುಳ್ಳವರು ... ತಮ್ಮ ಯೋಗ್ಯತಾ ... ಸಂಬಳ ... ಪತ್ರಗಳೊಡನೆ ... ಕೆಳಗಿನ ವಿಳಾಸಕ್ಕೆ ಬರೆಯಬೇಕು.—

ಜನರಲ್ ಮೇನೇಜರು,
ಕುಸುಬೂರು ತೋಟ,
ಸೋಮವಾರಪೇಟೆ,
(ಉ. ಕೊಡಗು)

ನೋಟೀಸು.

ಹಾಸನದ ಡಿಸ್ಟ್ರಿಕ್ಟು ಅರಕಲಗೂಡು ತಾಲೋಕು, ರಾಮನಾಥಪುರದಲ್ಲಿ ನಡೆಯುವ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ರಥೋತ್ಸವದ ಕಾಲದಲ್ಲಿ 1929ನೇ ಡಿಸೆಂಬರು ತಾರೀಕು 6ರ ಆರಂಭಿಸಿ 8ರ ವರೆಗೆ ದನಗಳ ಪ್ರದರ್ಶನ ನಡೆಸಲ್ಪಡುತ್ತೆ. ಹೆಚ್ಚಿಗೆ ವಿಷಯ ತಿಳಿಯಲಪೇಕ್ಷೆಯುಳ್ಳವರು ಹಾಸನದ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರಿಗೆ ಬರೆದುಕೊಳ್ಳಬಹುದು.

ಹಾಸನ. ಎಸ್. ಎಸ್. ಸಂಜುಂಡೈಯ್ಯ,
12—8—1929. ಪ್ರೆಸಿಡೆಂಟ್, ಡಿಸ್ಟ್ರಿಕ್ಟು ಬೋರ್ಡು.
3—1.

ನೋಟೀಸು.

ಹಾಸನದ ಡಿಸ್ಟ್ರಿಕ್ಟು ಮಂಜರಾಬಾದ್ ತಾಲೋಕಿನಲ್ಲಿ ಸುಬ್ರಹ್ಮಣ್ಯದಿಂದ 24 ಮೈಲಿ ದೂರದಲ್ಲಿರುವ ಶುಕ್ರವಾರ ಸಂತೆ ಸುಬ್ರಹ್ಮಣ್ಯ ಮತ್ತು ವಣಗೂರು ಮಲ್ಲಿಪಟ್ಟಣ ರಸ್ತೆಗಳ ಜಂಕ್ಷನ್ ಆಂದರೆ ಮಳ್ಳಂಗಿ ಕೂಡುರಸ್ತೆ ಬಳಿ ಸುಬ್ರಹ್ಮಣ್ಯದ ಜಾತ್ರೆಗೆ ಮುಂಚಿತವಾಗಿ 1929ನೇ ಡಿಸೆಂಬರು 13ನೇ ತಾರೀಖು ಬುಧವಾರದ ಆರಂಭವಾಯಿತು ನವಂಬರು 16ನೇ ತಾರೀಕು ಶನಿವಾರದ ವರೆಗೆ ದನಗಳ ಪ್ರದರ್ಶನವನ್ನು ನಡೆಸುತ್ತಾರಾಗಿ, ಈ ಕಾಲದಲ್ಲಿ ಸೇರುವ ದನಗಳ ಮೇಲೆ ಫೀ ವಸೂಲ್ಮಾಡುವದಿಲ್ಲವಾಗಿಯೂ, ಈ ಸ್ಥಳದಲ್ಲಿ ಮೇವಿನ ಸರಬರಾಯಿ ಮತ್ತು ನೀರಿನ ವಸತಿ ಚೆನ್ನಾಗಿರುತ್ತಾಗಿಯೂ, ಜನ ಮತ್ತು ಜಾನುವಾರುಗಳಿಗೆ ವೈದ್ಯ ಸಹಾಯವನ್ನು ಏರ್ಪಡಿಸುತ್ತಿಯಾಗಿ ಜನಗಳಿಗೆ ಈ ಮೂಲಕ ತಿಳುವಳಿಕೆ ಕೊಟ್ಟಿದೆ. ಆಯಕಾರರಾದ ರಾಸುಗಳಿಗೆ ಬಹುಮಾನವೂ ಕೊಡಲ್ಪಡುತ್ತೆ. ಹೆಚ್ಚಿಗೆ ವಿಚಾರ ತಿಳಿಯಬೇಕಾದಲ್ಲಿ ಹಾಸನದ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರಿಗೆ ಬರೆದು ತಿಳಿದುಕೊಳ್ಳಬಹುದು.

ಹಾಸನ ಎಸ್. ಎಸ್. ಸಂಜುಂಡೈಯ್ಯ,
6—8—29 ಪ್ರೆಸಿಡೆಂಟ್, ಡಿಸ್ಟ್ರಿಕ್ಟು ಬೋರ್ಡು.
3—1

FOR SALE.

One Solo Triumph 4 94 H. P Motor Cycle in perfect running order with original tyres very sparingly used is for sale

Please apply to—

M.
C/o Manager,
'Kodagu'
3-1 Mercara.

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಮ. ಪಾಂಡಂಡ ಚಂಗಪ್ಪನವರು ಏನು ಹೇಳುತ್ತಾರೆ?

ಇವರು ಹೇಳುವುದು ಯೂ ಬರೆಯುವುದೆಲ್ಲಾ ನಿಜವೋ ಎಂಬ ದರಲ್ಲಿ ಮಡಿಕೇರಿ ನಾಡವನಾದ ನನಗೆ ಬಹಳ ಸಂಶಯ ಹುಟ್ಟಿದೆ. ಅದ್ದರಿಂದ ನನ್ನ ಸಂಶಯವನ್ನು ದಯವಿಟ್ಟು ಅವರು ಪರಿಹರಿಸಬೇಕಾಗಿ ಕೋರುತ್ತೇನೆ.

ಅಯ್ಯ ಚಂಗಪ್ಪನವರೇ,

ನೀವು ಕಳೆದ ಮಾರ್ಚಿ ತಾರೀಕು 22ರ 'ಕೊಡಗು' ಪತ್ರಿಕೆಯಲ್ಲಿ ಸೈಮನ್ ಕಮಿಶನ್ನಿಗೆ ಕೊಡವಸಭೆ ಪರವಾಗಿ ಸಾಕ್ಷಿ ನುಡಿಯಲು ಹೋದ ಸಂದರ್ಭದಲ್ಲಿ ಈ ರೀತಿ ಬರೆದಿರುತ್ತೀರಿ.

"ಕೊಡಗು ದೇಶಕ್ಕೆ ಹೆಚ್ಚಿನ ರಿಫಾರ್ಮ್ಸ್ ಬೇಡವೆಂದು ಕೇಳುವ ಪಕ್ಷದಲ್ಲಿ ಸೈಮನ್ನರವರ ಮುಂದೆ ಹಳೆ ಇಷ್ಟು ದೂರದಿಂದ ಕೈಯಿಂದ ಸ್ವಂತ ಹಣ ಖರ್ಚುಮಾಡಿಕೊಂಡು ಹೋಗಬೇಕೇನು? ಇದರಿಂದ ಡೆಪ್ಯುಟೇಶನ್ ಹೋದ ಮೆಂಬರುಗಳಿಗೆ ಲಾಭವೇನು? ... ... ವಗೈರೆಯಾಗಿ. ಈ ಸಂದರ್ಭ ದಯವಿಟ್ಟು ಈ ಪ್ರಶ್ನೆಗಳಿಗೆ ಜವಾಬುಕೊಡಿ.

1 ನೀವು ಏತಕ್ಕಾಗಿ ಸೈಮನ್ ಮುಂದೆ ಸಾಕ್ಷಿ ಹೇಳಬು ಹೋಗಿ 207—1—0 ಭತ್ಯ ಹೊಂದಿಕೊಂಡಿರಿ?

2 ಭತ್ಯವನ್ನು ತಿರಸ್ಕರಿಸಿದಿರೋ?

3. ಡಿಸ್ಟ್ರಿಕ್ಟು ಬೋರ್ಡಿನ ವಿದ್ಯಾ ಕಮಿಟಿಯಲ್ಲಿ ಮ. ಮುದ್ದಪ್ಪನವರು ಭತ್ಯೆ ಸಿಕ್ಕದ್ದರಿಂದ ಪ್ರಯಾಣ ಮಾಡಲಿಲ್ಲ

ವೆಂದು ಸೂಚಿಸಿದಿರಲ್ಲವೇ. ಈ ಸಂದರ್ಭ ವಿದ್ಯಾ ಇಲಾಖೆಯ ಕಮಿಟಿ ಪ್ರಯಾಣದಲ್ಲಿ ಚುನಾಯಿತ ಮೆಂಬರೆಂದುಕೊಳ್ಳುವ ನೀವು 500/ರೂ. ಗಿಂತ ಹೆಚ್ಚಾಗಿ ಭತ್ಯೆ ತೆಗೆದುಕೊಂಡದ್ದು ಏಕೆ?

4. ನಿಮ್ಮ ವೈಸ್ ಪ್ರೆಸಿಡೆಂಟ್ ತನದಲ್ಲಿ ಒಟ್ಟು ಎಷ್ಟು ಸಾವಿರ ರೂಪಾಯಿ ಈ ವರೆಗೆ ಭತ್ಯೆ ಆಗಿದೆ?

5. ನೀವು ದೇಶದ ಮೇಲೆ ಪ್ರೀತಿಯುಳ್ಳವರಾಗಿದ್ದರೆ, ನಿಮ್ಮ ಭತ್ಯವನ್ನು ಏತಕ್ಕಾಗಿ ಬಡ ಉಪಾಧ್ಯಾಯರ ಸಂಬಳಕ್ಕಾಗಲೀ, ಯಾ ಶಾಲಾ ಕಟ್ಟಡಕ್ಕಾಗಲೀ, ಯಾ ಹಳ್ಳಿಗಳ ರಸ್ತೆಗಾಗಲೀ, ಕೊಡಲಿಲ್ಲ?

6. ಸೈಮನ್ ಕಮಿಶನ್ ಮುಂದೆ ಹಾಗೆ ಹೇಳಿದ್ದೇನೆ, ಹೀಗೆ ಹೇಳಿದ್ದೇವೆಯೆಂದು ಹೇಳುತ್ತೀರಿ. ನೀವು ಕೊಡವ ಸಭೆಯ ಮೆಂಬರಾಗಿದ್ದು ಬರೆದುಕೊಟ್ಟ ಮೆಮೋರಾಂಡವನ್ನು ಈ ವರೆಗೆ ಪತ್ರಿಕೆಯಲ್ಲಿ ಯಾಕೆ ಪ್ರಕಟಿಸಲಿಲ್ಲ?

7. ಇದನ್ನು ಪ್ರಕಟಿಸಿದರೆ ನಿಮ್ಮ ಗುಟ್ಟು ರಟ್ಟಾಗುವುದಿಲ್ಲವೇ?

ಪುನಃ ಹೇಳುತ್ತೀರಿ, ಈ ಪರವಾಗಿ ಸಾಕ್ಷ್ಯನುಡಿಯಲು ಹೋದ ಮೆಂಬರುಗಳಿಗೆ ಲಾಭವೇನು? ಕಣ್ಣಾರೆ ಕಾಣುವ ರೀತಿ ಭತ್ಯ, ಇನ್ನು ಏನಾದರೂ ಕುಮ್ಮಕ್ಕು ಈ ಹೊತ್ತಲ್ಲದಿದ್ದರೆ ನಾಳೆಯಾದರೂ ಸಿಕ್ಕಿಯೇ ಸಿಕ್ಕುತ್ತೆ.

ಅಯ್ಯೋ, ಚಂಗಪ್ಪನವರೇ, ನಿಮ್ಮನ್ನು ಈ ಮೂಲಕ ಚೆನ್ನಾಗಿ ತಿಳಿದಿದ್ದೇವೆ. ನಿಮ್ಮ ಈ ಯುಕ್ತಿಯು ನಮ್ಮ ನಾಡವರಲ್ಲಿ ಪ್ರವರ್ತಿಸ್ಸಿ ಗ [illegible] ಗಳಲ್ಲಿ ಕಲಹ ತರುವ ಚಾಣಾಕ್ಷ್ಯ ತಂತ್ರವನ್ನೊಡ್ಡಿದ್ದಿರಿ. ಅದರಿಂದೇನೂ ಆಗದು.

ಆದದ್ದು ಆಗಿಹೋಯಿತು. ಇನ್ನು ಮುಂದೆ ಚುನಾವಣಾ ಬಂದೇ ಬರುವುದು. ಆಗ ನಿಮ್ಮನ್ನು ಸರಿಯಾಗಿ ನೋಡಿಕೊಳ್ಳುವೆವು. ತಮ್ಮ ಉತ್ತರ ಸಿಕ್ಕಿದನಂತರ ಅನುಕೂಲವಾದರೆ ನಿಮ್ಮನ್ನು ಪುನಃ ಎಚ್ಚರಿಸುವೆನು.

"ಪ [illegible] ನಾಡವ

ಕೊಡಗಿನ ಪಿ. ಡಬ್ಲ್ಯು. ಇಲಾಖೆ.

ದಿನೇ ದಿನೇ, ಎಲ್ಲರೂ ಕಾಣುವ ರೀತಿ, ಈ ಇಲಾಖೆಯ ಕೆಲಸವು ಯಾವ ಮಟ್ಟಿಗೂ ತೃಪ್ತಿಕರವಾಗಿ ನಡೆಯುವುದಿಲ್ಲ. ನಮ್ಮ ನೆರೆ ರಾಜ್ಯದ, ಅಂದರೆ ಮೈಸೂರು, ಮಲೆಯಾಳ, ದಕ್ಷಿಣ ಕನ್ನಡಜಿಲ್ಲೆಯ ರಸ್ತೆಗಳು ನಮ್ಮ ರಸ್ತೆಗಿಂತ ಎಷ್ಟೋ ಚೆನ್ನಾಗಿವೆ. ನಮ್ಮ ರಸ್ತೆಗಳ ಬದಿಯಲ್ಲಿ ಕೆಲಸಮಾಡುತ್ತಿರುವ ಕೂಲಿಕಾರರನ್ನು ಈ ಸಮಯದಲ್ಲಿ ಕಾಣುವುದು ಕಡಿಮೆಯಾಗಿದೆ. ಆದರೂ ಇಂಜಿನಿಯರಿಂಗ್ ಸಬ್ ಡಿವಿಜನಲ್ ಆಫೀಸರುಗಳಿಗೆ ಕೆಲಸ ಆಗಲಿ, ಆಗದೆ ಹೋಗಲಿ ಸಂಬಳ ಮತ್ತು ಭತ್ಯ ನಡದೇ ನಡೆಯುತ್ತದೆ.

ಈ ಸರಕಾರವು ಬೇಕಾದಷ್ಟು ಹಣ ಮಂಜೂರು ಮಾಡಿದರೂ ಕೆಲಸಗಳು ನಿಲ್ಲುವುದಿಲ್ಲವಂತೆ. ಈ ಕುರಿತು ಡಿಪಿನ್ಯು [illegible] ಮಾಡಬೇಕಂತೆ. ಹಾಗಾದರೆ [illegible] ದೊಡ್ಡ ಸಂಬಳದ ಮತ್ತು ಭತ್ಯದ ಆಫೀಸರುಗಳು (ಕೆಲಸವೇನೂ ತೃಪ್ತಿಕರವಾಗಿ ನಡೆಯದ ವೇಳೆಯಲ್ಲಿ) ಕೊಡಗಿಗೇತಕ್ಕೆ? ಬರೀ ಸಂಬಳ ಮತ್ತು ಭತ್ಯಕ್ಕೆಂದೇ ಹೇಳಬೇಕಾಗಿದೆ. ಕೊಡಗು ಕಮಿಶನರವರು ಈ ವಿಷಯ ನಿಗದಲ್ಲಿರುವುದನ್ನು ತಿಳಿದಿರುತ್ತೇನೆ. ಆದರೆ ಇವರು ಮಾಡುವುದೇನು? ಮದ್ರಾಸಿನಿಂದ ಬಂದ ಎಗ್ಸಿಕ್ಯೂಟಿವ್ ಇಂಜಿನಿಯರ್, ಇಬ್ಬರು ಸಬ್ ಡಿವಿಜನಲ್ ಆಫೀಸರುಗಳ ಮೇಲೆ ಇವರ ಅಧಿಕಾರವು ನಡೆಯುವದು ಕೊಂಚ ಕಡಿಮೆಯೆಂದೇ ಭಾವಿಸಬೇಕಾಗಿದೆ. ಕಮಿಶನರವರು ಬಹಳ ಕೊಂದರೆ ಕೊಟ್ಟರೆ ಇವರು ಮದ್ರಾಸಿಗೆ ಪುನಃ ರಿಪೋರ್ಟ್ ಮಾಡಿಸಿಕೊಳ್ಳಲಿಕ್ಕೂ ಸಾಕು.

ಕಮಿಶನರವರು ಕೂಡಲೇ ಚೀಫ್ ಕಮಿಶನರವರಿಗೆ ಬರೆದು ಈ ಇಲಾಖೆಯ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಮದ್ರಾಸಿಗೂ, ಇದಕ್ಕೂ ಯಾವ ಸಂಬಂಧವೂ ಇರಕೂಡದು. ಹಾಗೂ ರಾಜಪ್ರತಿನಿಧಿಗಳಲ್ಲಿ ಇಬ್ಬರು ಯಜಮಾನರು ನಮಗೆ ಬೇಕಿಲ್ಲ. ಕೌನ್ಸಿಲು ಮೆಂಬರುಗಳು ಸಹ ಈ ವಿಷಯ ಕೊಂಚ ಮಟ್ಟಿಗೆ ಗಮನಕ್ಕೆ ತರಬೇಕಾಗಿದೆ.

ರಸ್ತೆ ಬಾಜುಗಳ ಕಾಡು ಕಡಿಯಲಿಕ್ಕೆ ರೆವಿನ್ಯು ಅಧಿಕಾರಿಗಳಿಗೆ ಕೊಟ್ಟಿರುವುದಾಗಿ ತಿಳಿಯುತ್ತೇನೆ. ಹಾಗಾದರೆ ಪಿ. ಡಬ್ಲ್ಯು. ನವರು ಮಾಡುವುದೇನು? ಸೇತುವೆಗಳೆಷ್ಟೋ ಕಟ್ಟಲಿಕ್ಕಿವೆ. ಇವುಗಳು ಕೆಲಸಗಳು ಯಾವಾಗ ಪೂರೈಸಲ್ಪಡುತ್ತವೆಯೋ ತಿಳಿಯುವುದಿಲ್ಲ.

ಈಗಿನ ಕಮಿಶನರ್ ಮಿ. ಪ್ರಿಚ್ಚರ್ಡಿಯವರು ದಯಮಾಡಿ ಈ ವಿಷಯ ಪರ್ಯಾಲೋಚಿಸಿ, ಈ ಇಲಾಖೆಯ ಕೆಲಸವು ಸರಿಯಾಗಿ ನಡೆಯುವಂತೆ ಏರ್ಪಾಡು ಮಾಡಬೇಕಾಗಿ ಕೋರುವ.

'ದೇಶಸೇವಕ'

ಜಮೀನ್ದಾರರ ಸಂಘದ ಅಧ್ಯಕ್ಷ ಪದವಿ.

ಸಂಪಾದಕರೇ,

ಆದುದರಿಂದ ನಮ್ಮನ್ನಾಳುವ ಕೊಡಗು ಕಮಿಶನರ್ ಸಾಹೇಬರವರೂ, ಚೀಫ್ ಫಾರೆಸ್ಟು ಆಫೀಸರನವರೂ, ರೈತರ ಪರವಾಗಿ ಹೋಗಿರುವ ಕೌನ್ಸಿಲ್ ಮೆಂಬರುಗಳೂ, ಕಂದಾಯ ವಸೂಲ್ ಮಾಡುವ ರೆವಿನ್ಯೂ ಇಲಾಖೆಯವರೂ ಸಹ ಸೇರಿ ಈ ಇಲಿ ಬಾಲದ ಫಾರೆಸ್ಟನ್ನು ಕತ್ತರಿಸಿ ವಜಮಾಡಿ ರೈತರ ದನಕರುಗಳು ಮೇಯಲು ಬಿಟ್ಟುಕೊಡುವಂತೆ ಮಾಡಿಕೊಡದಿದ್ದರೆ ಈ ಫಾರೆಸ್ಟು ಗಾರ್ಡುಗಳ ಉಪದ್ರದಿಂದ ಬೆನ್ನಳ್ಳಿ, ಹೊರವಳೆ, ಐಗೂರು ರೈತರು ನಾಲೆ ಕೆಳಗಿನ ಭೂಮಿಯನ್ನು ಬಿಟ್ಟು ಬೇರೆ ಕಡೆ ಹೋಗಬೇಕಾಗುತ್ತೆ. ಆಗ್ಯೆ ಸರಕಾರಿ ಕಂದಾಯ ಕಮ್ಮಿಯಾಗುವದರಿಂದ ಒಡನೆ ಈ ಬಾಬಿನಲ್ಲಿ ತನಿಕೆಯಿಂದ ವಿಲೆವಾರಿ ಕೊಡಬೇಕಾಗಿ ಕೋರುವ,

'ದೇಶಹಿತೈಷಿ'

ಒಂದು ಸಂಘದಲ್ಲಿ ಎರಡು ವಿರೋಧ ಕಮಿಟಿಗಳೋ!

ಮಹನೀಯರೇ,

'ಜಮೀನ್ದಾರರ ಸಂಘದ ಹೆಸರಿನ ದುರುಪಯೋಗ' ಎಂಬ ಜಮೀನ್ದಾರರ ಸಂಘದ ಜನರಲ್ ಸೆಕ್ರೆಟರಿಯವರ ಲೇಖನದ ಮೇಲೆ ಕೆಲವರು ಟೀಕಿಸುವದನ್ನು ನಾನು ಕೇಳುತ್ತೇನೆ. ಅಂಥಾ ಟೀಕೆಗಳಲ್ಲಿ ನ್ಯಾಯವಿದೆಯೋ ಎಂದು ಸ್ವಲ್ಪ ವಿಚಾರಿಸುವ.

ಈಗ ಒಂದೆರಡು ತಿಂಗಳುಗಳ ಹಿಂದೆ ಹೊರಡಿಸಲ್ಪಟ್ಟಿರುವ ಜಮೀನ್ದಾರರದೆನ್ನುವ ಕಮಿಟಿ ಯಾ ಸಂಘವು ಹೊಸದಲ್ಲವೆಂತಲೂ, ಅದು ಹಳೇ ಜಮೀನ್ದಾರರ ಸಂಘದ ಒಂದು ಭಾಗವೆಂತಲೂ ಕೆಲವರು ಹೇಳುತ್ತಾರೆ. ಒಂದೇ ಸಂಘದಲ್ಲಿ ರೂಲ್ಸಿಗೆ ಅನುಸಾರವಾಗಿ ಎರಡು ವಿರೋಧ ಕಮಿಟಿಗಳು ಇರುವದು ಅಸಾಧ್ಯವೆಂಬದು ಯಾರಿಗೆ ತಾನೇ ಗೊತ್ತಾಗದೆ ಇರುವದು? ಸಂಘದ ನಿಂಬದನೆ ಮೇರೆ ಪೊನ್ನಂಪೇಟೆಯಲ್ಲಿ ನಡೆದ ಸಂಘದ ಕಳೆದ ಜನರಲ್ ಮೀಟಿಂಗಿನಲ್ಲಿ ಬರುವ ಎರಡು ವರ್ಷಗಳ ವರೆಗೆ ಇರುವ ಒಂದು ಎಕ್ಸಿಕ್ಯುಟಿವ್ ಕಮಿಟಿಯು ಆರಿಸಲ್ಪಟ್ಟಿದೆ. ಈ ಕಮಿಟಿಯು ಸಂಘದ ಮಹಾಸಭೆಯಲ್ಲಿ ತೀರ್ಮಾನವಾದ ವಿಷಯಗಳಿಗನುಸಾರವಾಗಿ ಕಾರ್ಯಗಳನ್ನು ನಡಿಸಬೇಕೇ ಹೊರತು, ಅವುಗಳಿಗೆ ವಿರೋಧ ವರ್ತಿಸಕೂಡದು. ಹಾಗೆ ವಿರೋಧ ವರ್ತಿಸಿದರೆ ಮಾತ್ರ ಸದರಿ ಕಮಿಟಿಯಲ್ಲಿ ವಿಶ್ವಾಸವಿಲ್ಲವೆಂದು ಸಂಘದವರು ವಾರ್ಷಿಕ ಅಥವಾ ವಿಶೇಷ ಜನರಲ್ ಮೀಟಿಂಗಿನಲ್ಲಿ ಠರಾವು ಮಂಜೂರು ಮಾಡಬಹುದು. ಹಾಗೆ ಮಂಜೂರು ಮಾಡಿದಾಗ್ಯೆ ಸದರಿ ಕಮಿಟಿಯವರು ತಮ್ಮ ಮೆಂಬರುತನಕ್ಕೆ ರಾಜಿನಾಮೆ ಕೊಡಬೇಕು. ನಂತರ ಮಹಾಸಭೆಯು ಇನ್ನೊಂದು ಕಮಿಟಿಯನ್ನು ಆರಿಸಬಹುದು. ಈಗಿನ ಸ್ಥಿತಿಯಲ್ಲಿ ಈ ನ್ಯಾಯವಾದ ರೀತಿ ಯಾವದೂ ನಡೆದಿರುವದಿಲ್ಲ.

ಹಾಲಿ ಇರುವ ಕಮಿಟಿಯು ಸಂಘದ ಮಹಾಸಭೆಯ ಯಾವದೊಂದು ತೀರ್ಮಾನಕ್ಕೂ ವಿರೋಧ ವರ್ತಿಸಿರುವದಿಲ್ಲ. ಮಹಾಸಭೆಯ ತೀರ್ಮಾನಗಳನ್ನೇ ಜಾರಿಗೆ ತರಲು ಪ್ರಯತ್ನಿಸುತ್ತಿದೆ. ಹೀಗಿರುವಲ್ಲಿ ಸದರಿ ಕಮಿಟಿಯ ಮೇಲೆ ವಿಶ್ವಾಸವಿಲ್ಲವೆಂಬ ಮಾತಿಗೆ ಎಡೆಯೇ ಇಲ್ಲ.

ಒಂದು ವೇಳೆ ಕಮಿಟಿಯ ವರ್ತನೆಯು ಸರಿಯಲ್ಲವೆಂದು ಕೆಲವರಿಗೆ ತೋರಿದ್ದರೆ ಅಂಥಾ ವರ್ತನೆಯನ್ನು ಖಂಡಿಸಲು ಸಂಘದ ನಿಬಂಧನೆಯನ್ನನುಸರಿಸಿ ವಿಶೇಷ ಜನರಲ್ ಮೀಟಿಂಗು ಮಾಡಬಹುದಾಗಿತ್ತು. ಇದನ್ನು ಬಿಟ್ಟು, ಸಂಘದ ಮೆಂಬರುಗಳಲ್ಲದ ಹಲವರು ಸಂಘದ ಕೆಲವು ಮೆಂಬರುಗಳನ್ನು ಸೇರಿಸಿಕೊಂಡು, ಸಂಘದ ಎಲ್ಲಾ ಮೆಂಬರುಗಳಿಗೆ ರೂಲ್ಸಿನ ಮೇರೆ ಜನರಲ್ ಸೆಕ್ರೆಟರಿಯ ಮೂಲಕ ನೋಟೀಸು ಕೊಡದೆ, ಒಂದು ಮೀಟಿಂಗು ಮಾಡಿ, ಕೆಲವರಿಗೆ ಹಂಚಿದ ನೋಟೀಸಿನಲ್ಲಿ ಸೂಚಿಸದ ಹೊಸ ವಿಷಯವನ್ನೆತ್ತಿ ಒಂದು ಹೊಸ ಕಮಿಟಿಯನ್ನು ನೇಮಿಸಿದರೆ ಸದರಿ ಕಮಿಟಿಯು ಸಂಘದ ಕಮಿಟಿಯಾಗುವದು ಹೇಗೆ? ಅಷ್ಟು ಮಾತ್ರವಲ್ಲ, ಈ ಹೊಸ ಕಮಿಟಿಯಲ್ಲಿ ಸಂಘದ ಮೆಂಬರುಗಳಲ್ಲದವರೂ ಹಲವರು ಇರುವರೆಂದು ತಿಳಿಯುತ್ತೇನೆ. ಹಾಗಾದರೆ ಸಂಘದ ಮೆಂಬರುಗಳಲ್ಲದವರಿಂದ ಆರಿಸಲ್ಪಟ್ಟ ಮತ್ತು ಸಂಘದ ಮೆಂಬರುಗಳಲ್ಲದವರಿಂದ ಕೂಡಿದ ಕಮಿಟಿಯು ಸಂಘದ ಕಮಿಟಿಯಾಗಲಾರದೆಂದು ಎಂಥಾ ಸಾಮಾನ್ಯ ಮನುಷ್ಯನಿಗೂ ತಿಳಿಯದೆ ಇರದು.

ಸಂಘದ ಪೊನ್ನಂಪೇಟೆ ಮಹಾಸಭೆಯು ಆರಿಸಿದ ಕಮಿಟಿಯ ಪ್ರಥಮ ಮೀಟಿಂಗು ಜೂನ್ ತಾ. 8 ರಲ್ಲಿ ನಡೆದದ್ದಾಗಿದೆ. ಅದೇ ದಿನ ಕೆಲವರು ಸೇರಿ ಹೊಸ ಕಮಿಟಿಯನ್ನು ಆರಿಸಿರುವದಾಗಿದೆ. ಹಾಗಾದರೆ ಹಳೇ ಕಮಿಟಿಯ ಮೇಲೆ ವಿಶ್ವಾಸವಿಲ್ಲವೆನಲು ಕಾರಣ ಏನಿದೆ? ಇದಕ್ಕಿಂತ ಪೊನ್ನಂಪೇಟೆಯಲ್ಲಿ ನಡೆದ ಮಹಾಸಭೆಯ ಮೇಲೆಯೇ ವಿಶ್ವಾಸವಿಲ್ಲವೆಂದು ಹೇಳಿದರೆ ಕಾರಣ ಯುಕ್ತವಾಗಬಹುದು. ಆದರೆ ಸಂಘದ ಮಹಾಸಭೆಯ ಮೇಲೆ ವಿಶ್ವಾಸವಿಲ್ಲವೆಂದು ಹೇಳುವ ಹಕ್ಕು ಸಂಘದ ಅಲ್ಪ ಸ್ವಲ್ಪ ಮೆಂಬರುಗಳೂ, ಮೆಂಬರುಗಳಲ್ಲದ ಹೆಚ್ಚಿನವರೂ ಕೂಡಿದ ಮೀಟಿಂಗಿಗೆ ಇಲ್ಲವೆಂದು ಹೇಳಬೇಕಾಗಿಲ್ಲ. ಕೆಲವರು ಸಂಘದ ಮಹಾಸಭೆಗೆ ಹೋಗದೆ ಮನೆಯಲ್ಲಿ ಕೂತುಕೊಂಡಿದ್ದು ನಂತರ ಮಹಾಸಭೆಯಲ್ಲಿ ತಮಗೆ ಒಪ್ಪುವಂಥ ತೀರ್ಮಾನಗಳು ಆಗಲಿಲ್ಲ, ತಮ್ಮನ್ನು ಸಂಘದ ಕಮಿಟಿಗೆ ಯಾ ಬೇರೆ ಉದ್ಯೋಗಗಳಿಗೆ ಆರಿಸಲಿಲ್ಲವೆಂದು ಹೇಳುವದು ನಾಚಿಕೆಕರವಲ್ಲವೇ? ಇನ್ನು ಕೆಲವರು ಮಹಾಸಭೆಯಲ್ಲಿ ಹಾಜರಿದ್ದು ತಮ್ಮ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟು ಬಲವಾಗಿ ವಾದಿಸಿದರೂ ಕೂಡ ಅದಕ್ಕೆ ಬಹುಮತದವರು ಒಪ್ಪಲಿಲ್ಲವಾದಕಾರಣ, ನಂತರ ಸಂಘವು ದಾರಿತಪ್ಪಿ ಹೋಗುತ್ತಿದೆ, ಅದನ್ನು ಸರಿಪಡಿಸಲು ಹೊಸ ಕಮಿಟಿಯನ್ನು ಮಾಡಬೇಕಾಗಿ ಬಂತು ಎಂದು ಸಾರುತ್ತಿರುವದು ಹಾಸ್ಯಾಸ್ಪದವಲ್ಲವೇ? ಆದುದರಿಂದ, ಹೊಸ ಕಮಿಟಿಯು ಹಳೇ ಜಮೀನ್ದಾರರ ಸಂಘದ ಒಂದು ಭಾಗವೆಂದು ಹೇಳುವ ಕೆಲವರ ವಾದವು ಎಷ್ಟು ಟೊಳ್ಳು ಸ್ವಭಾವದ್ದೆಂದು ದೇಶದವರು ತಿಳಿದುಕೊಳ್ಳದೆ ಇರಲಾರರು.

'ಸಂಘದ ಕಮಿಟಿ ಮೆಂಬರು'

ಕೊಡಗಿನ ರಾಜಕೀಯ ಚಳವಳಿ.

ಮಹನೀಯರೇ,

ನಮ್ಮ ಜಮೀನ್ದಾರರ ಸಂಘವು ಕಳೆದ 17 ವರ್ಷಗಳಿಂದ ನಾನಾ ವಿಧಗಳಲ್ಲಿ ದೇಶಸೇವೆ ಮಾಡುತ್ತಿರುವದೂ, ಈ ಕೆಲಸದ ಫಲದಿಂದ ನಿದ್ದೆಯಲ್ಲಿದ್ದ ದೇಶೀಯರು ಎಚ್ಚರವಾಗಿ ಹೆಚ್ಚುಹೆಚ್ಚಾಗಿ ದೇಶಸೇವೆಯನ್ನು ಮಾಡಲು ಅನುಕೂಲವಾಗುವಂತೆ 'ಕೊಡಗು' ಪತ್ರಿಕೆಯೊಂದು ದೀವಿಗೆಯಿಂದಲೇ ಹೊರಡಿಸಲ್ಪಟ್ಟದ್ದೂ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಜಮೀನ್ದಾರರ ಸಂಘವನ್ನು ಸ್ಥಾಪಿಸಿ, ಸ್ಥಿರಗೊಳ್ಳುವಂತೆ ಮಾಡಲು ಮನೆಯಪಂಡ ಮುತ್ತಣ್ಣನವರೂ, ಕೋದಂಡ ಮಾದಯ್ಯನವರೂ, ಬಿದ್ದಂಡ ಗಣಪತಿಯವರೂ, ಅಪ್ಪಾರಂಡ ಚಂಗಪ್ಪನವರೂ, ಕೊಳುವಂಡ ಅಪ್ಪಣ್ಣನವರೂ, ಸಿ. ಯನ್. ವೆಂಕಟಯ್ಯನವರೂ ಇನ್ನೂ ಅನೇಕ ಮಹನೀಯರೂ ಎಷ್ಟೊಂದು ಕೆಲಸಮಾಡಿದರೆಂಬದು ಸರ್ವರೂ ತಿಳಿದ ವಿಷಯವಾಗಿದೆ. ದೀರ್ಘದರ್ಶಿಗಳಾದ ಆ ಮಹನೀಯರೊಂದಿಗೆ ಅನೇಕ ಸ್ವಾರ್ಥಿಗಳೂ ಹೊರಟರು. ಸ್ವಾರ್ಥಿಗಳ ಕಾರ್ಯಕ್ರಮವೇನು? ಎಲ್ಲಿ ವರೆಗೆ ತಮ್ಮ ಮಾತು ನಡೆಯುವದೋ, ಎಲ್ಲಿ ವರೆಗೆ ಸರಕಾರದ ಮೆಚ್ಚಿಕೆ ದೊರೆಯುವದೋ, ಎಲ್ಲ ವರಗೆ ಕೆಲಸವೇನೂ ಮಾಡದೆ ಕೀರ್ತಿ ಮಾತ್ರ ದೊರೆಯುವದೋ, ಅಲ್ಲಿ ವರೆಗೆ ಮಾತ್ರ ಸಹಕರಿಸುವದು. ಯುದ್ಧದ ಸಮಯದಲ್ಲಿ ಕೊಡಗು ದಂಡಿಗೆ ಬಲತ್ಕಾರಪಡಿಸಿ ಕೊಡವರನ್ನು ಸೇರಿಸುವ ವಿಷಯ ಮ. ಮನೆಯಪಂಡ ಮುತ್ತಣ್ಣನವರು ಸರಕಾರದ ಮೇಲೆ ತಿರುಗಿ ಬಿದ್ದಾಗ, ಅವರ ಬೆಂಬಲಕ್ಕೆ ಒಬ್ಬಿಬ್ಬ ಕೊಡಗಿನ ನಿಜವಾದ ದೇಶಬಂಧುಗಳು ಬಂದರಲ್ಲದೆ ಉಳಿದ ಪೊಳ್ಳು ಸ್ವಾರ್ಥಿಗಳು ಅವರನ್ನು ಬಿಟ್ಟರು. ಅದರಂತೆಯೇ ಮುಂದು ಮುಂದಕ್ಕೆ ಬಂದ ಹಾಗೆ ಜಮೀನ್ದಾರರ ಸಂಘವು ಸರಕಾರವನ್ನು ಅದು ಕೊಡಿ, ಇದು ಕೊಡಿ ಎಂದು ಬೇಡುವದನ್ನು ಬಿಟ್ಟು ಕೊಡಗು ಜನಾಂಗಕ್ಕೆ ಬೇಕಾದ ಅದೆಷ್ಟೋ ಕೆಲಸಗಳನ್ನು ಮಾಡಲು ಉಪಕ್ರಮಿಸಿತು. ಸೇಂದಿ ಸಾರಾಯಿ ಕುಡಿಯುವದನ್ನು ನಿಲ್ಲಿಸುವದು, ಖಾದಿ ಉಡುವದು, ಜನಬಗ್ಗರಿಗೆ ರಾಜಕೀಯ ಜ್ಞಾನವನ್ನು ಕಲಿಸುವದು, ಪ್ರಜೆಗಳ ಏಳಿಗೆಗೆ ವಿರೋಧವಾದ ಕೆಲಸಗಳನ್ನು ಮಾಡುವ ಸರಕಾರದ ವರ್ತನೆಯನ್ನು ಕೌನ್ಸಿಲಿನಲ್ಲೂ, ಕೌನ್ಸಿಲಿನ ಹೊರಗೂ ಖಂಡಿಸುವದು ಇದರ ಪ್ರತಿಫಲವೇನು? ಗ್ರಾಮಾಂತರದಲ್ಲಿರುವ ರೈತರಿಗೆ ಟೈಟಲ್‌ಗಳಿಗೂ, ಬರೀ ಹೆಸರಿಗೂ, ಸ್ಥಳಕ್ಕೂ, ಬಿರುದುಗಳಿಗೂ ಕೆಲಸಮಾಡುವವರು ಯಾರ, ನಿಜವಾಗಿ ದೇಶಸೇವೆಮಾಡುವವರು ಯಾರು ಎಂಬದು ಗೊತ್ತಾಯಿತು. ಆ ಪೊಳ್ಳು ನಾಯಕಧಾರಿಗಳು ಒಬ್ಬೊಬ್ಬರಾಗಿ ಜಮೀನ್ದಾರರ ಸಂಘದಿಂದ ಪಲಾಯನಮಾಡತೊಡಗಿದರು. ನಾಳದಕ್ಕೆ ಸಂಘದ ಕೆಲಸವನ್ನು ಅಪಹಾಸ್ಯಮಾಡತೊಡಗಿದರು. ಆದರೂ ಸಂಘವು ಮುಂದುವರಿಯುತ್ತಲೇ ಬಂತು. ಗ್ರಾಮವಾಸಿಗಳು ಸಂಘದಲ್ಲಿ, ದೇಶದ ಚಳವಳದಲ್ಲಿ ಹೆಚ್ಚುಹೆಚ್ಚಾಗಿ ಭಾಗತೆಗೆದುಕೊಳ್ಳುವದನ್ನು ನೋಡಿದರು. ಈ ರೀತಿ ಮುಂದುವರಿದರೆ, ತಮಗೆ ಸ್ಥಳವೆಲ್ಲಿ, ಚೀಫ್ ಕಮಿಶನರು, ಮೈಸೂರಾಯರು, ಮಹಾರಾಜರು ಬಂದರೆ ಅವರಿಗೆ ಭೇಟಿಕೊಡುವದು ಸಂಘದ ಪರವಾಗಿ ಗ್ರಾಮವಾಸಿಗಳು, ಇದೊಂದು ಮಾತ್ರ ಸಹಿಸಲಾರದ್ದು! ಕುಲಪಾವನರೆ ಬಹುಮಾನಕಾಯುವ ಕುಲಮಿತ್ರರು ದೀರ್ಘ ಆಲೋಚನೆಗೆ ಒದಗಿದರು. ಅದರಲ್ಲಿ ಕೆಲವರ ಕೊಡವ ಸಭೆ ಹೊರಡಿಸಿದರು.

ಈ ಜಮಾನತನ ಪಟ್ಟಿ, ಕೊಡವ ಸಭೆ, ಜಮೀನ್ದಾರರ ಸಂಘವೆಂದೇ ಹೆಸರಿಕ್ಕಿದ ಇನ್ನೊಂದು ಸಭೆ ಮಾಡಿಕೊಂಡು ಕಳವರ ಸಗ್ಗಿ ಕಣಾತ ಕುಣಿಯುತ್ತಿದ್ದರೂ, ನಿಜವಾದ ದೇಶಪ್ರೇಮಿಗಳಾದ ಆ ಮನೆಯಪಂಡ ಮುತ್ತಣ್ಣನವರ, ಆ ಬಿದ್ದಂಡ ಗಣಪತಿಯವರ ಹಿಂಬಾಲಕರೂ, ಅವರ ಸಹೋದರರೂ ಇನ್ನೂ ದೇಶಸೇವೆಯೇ ಮೇಲೆಂದು ಜಮೀನ್ದಾರರ ಸಂಘದ ಹಾಗೂ ದೇಶದ ಸೇವೆಯಲ್ಲಿಯೇ ನಿರತರಾಗಿದ್ದದ್ದು ದೇಶೀಯರಿಗೆ ಗೊತ್ತಿಲ್ಲದೆ ಇಲ್ಲ.

ಬೇರೆ ಯಾವ ರೂಪದಿಂದಲೂ ಸಾಗದು, ಜಮೀನ್ದಾರರ ಸಂಘವೆಂದೇ ಹೆಸರನ್ನು ಸಹ ಹಾಕಿಕೊಂಡ. ಒಂದು ಹೊಸ ಸಂಸ್ಥೆಯಲ್ಲಿ ನಲಿಯುತ್ತಿರುವರು. ಇನ್ನೂ ಒಂದು ಮಾತ್ರ ಉಳಿದಿದೆ. ಅವರಲ್ಲಿ ವೆಂಕಪ್ಪಯ್ಯ, ನಾನು ಎಂದು ಒಬ್ಬರು ಹೊರಡಲಿ. ಅವರಲ್ಲಿ ಚೆಣ್ಣಪ್ಪ, ನಾನು ಎಂದು ಇನ್ನೊಬ್ಬರು ಹೊರಡಲಿ. ಹಾಗೆ ಸಂಘದ ಮೆಂಬರುಗಳ ಹೆಸರನ್ನೆಲ್ಲಾ ತಮ್ಮದರಲ್ಲಿ ಒಬ್ಬೊಬ್ಬರಿಗೆ ಹಾಕಿಕೊಳ್ಳಲಿ. ಅದಲ್ಲವೇ ಚಂದ! 'ಇದೆಷ್ಟು ದಿನವೋ, ನೋಡಬೇಕು.

ಗ್ರಾಮ ಮಹಾಜನಗಳೇ, ಸ್ವಾರ್ಥ ಕಲೆಯ ತಂತ್ರವು ನಮ್ಮ ದೇಶದಲ್ಲಿ ತಲೆ ಎತ್ತದಂತೆ ನೋಡಿಕೊಳ್ಳುವದು ತಮ್ಮಲ್ಲಿದೆ. ಜಮೀನ್ದಾರರ ಸಂಘದ ಕಾರ್ಯವನ್ನು ಯಾರೇ ಮಾಡುತ್ತಾರೆ, ಅವರು ಮಾಡಲಿ ಎಂದು ತೃಪ್ತರಾಗುವದು ತಪ್ಪು. ಇನ್ನೂ ಕೆಲವರು ಏನಾದರೂ ಆಗಲಿ, ನಾವು ಸುಮ್ಮನಿರೋಣವೆಂದು ಇರುವರು. ಸುಮ್ಮನಿರುವದು ಈ ಕಾಲವಲ್ಲ. ರಾಜಮನೆತನಕ್ಕೂ, ಕೊಡವ ಸಭೆಗೂ ಯಾವ ರೀತಿಯಿಂದ ಚಳವಳವನ್ನು ಎಬ್ಬಿಸಿ ಅದನ್ನು ಮೂಲೆಗೆ ಒತ್ತಿ, ಕೊಡಗು ದೇಶದಲ್ಲಿ ರಾಜಕೀಯದಲ್ಲಿ ಸಂಗಡಭೇದವಿಲ್ಲ, ರಾಜಕೀಯಕ್ಕೆ ನಮ್ಮ ಜಮೀನ್ದಾರರ ಸಂಘ ಒಂದೇ ಸಂಸ್ಥೆ ಎಂಬದನ್ನು ದೃಢಪಡಿಸಿ ಇಂಡ್ಯಾದ ಮುಖಂಡರಾದ ಶ್ರೀನಿವಾಸ ಅಯ್ಯಂಗಾರ್ ಮೊದಲಾದವರ ಮೆಚ್ಚಿಕೆಯನ್ನು ಪಡೆದು ಇರುವಿರೋ, ಅದರಂತೆಯೇ ಸಂಘಕ್ಕೆ ಬೇಕಾದ ಸಹಾಯ ಪ್ರೋತ್ಸಾಹ ಕೊಟ್ಟು, ದೇಶದಲ್ಲಿ 18 ವರ್ಷ ಪ್ರಾಯದ ಪ್ರತಿಯೊಬ್ಬ ಮೆಂಬರನೂ ಜಮೀನ್ದಾರರ ಸಂಘಕ್ಕೆ ಮೆಂಬರಾಗಿ ದೇಶದ ಗ್ರಾಮವಾಸಿಗಳ ಮನೋಗತವನ್ನು ತಿಳಿಸುವ ಸಮಯವು ಇದಾಗಿದೆ. ದೇಶದ ಕಾರ್ಯದಲ್ಲಿ ತಮ್ಮ ಶಕ್ತಿ ಸಾಮರ್ಥ್ಯವನ್ನು ಒಪ್ಪಿಸಿಕೊಟ್ಟವರು ಮೇಲಾಗಿ ಕೆಲಸಮಾಡಿ ರಾಜಕೀಯದಲ್ಲಿ ಹಚ್ಚಿನ ಅಧಿಕಾರವನ್ನು ಪಡೆಯಲು ನೋಡಿಕೊಳ್ಳುವ ಸಮಯ ಇದಾಗಿದೆ.

'ದೇಶನಿವಾಸಿ

ಭಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳಿಗೆ ವಜ್ರದ ಕಲ್ಲುಗಳು ... ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಡ ಕಟ್ಟಿದ ... ರ ಬಣ್ಣವು ಕಡದುವ ಎಲೆಕ್ಟ್ರಿಕ್ ಸವರಿಸಿದ ಸೆವಂಟ್ ಬಂಗಾರದ ಬಣ್ಣ ಕೊಟ್ಟ ದ ಇವು ಬಹಳ ವಜ್ರದ ಉಂಗುರಗಳಿಗೆ ಸರಿಸಮಾನ ಆಗಿವೆ. ೧ಕ್ಕೆ ೧೨ ಆ. ೩ ಉಂಗುರಗಳಿಗೆ ಒಂದು ಟೈಂಪೀಸ್ ವ್ಯಂಪೀಸನ್ನು, ... ಒಂದು ಬಂಗಾರದ ಪಾಕೆಟ್ ವಾಚನ್ನು, ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನು ಇನಾಮಾಗಿ ಕಳುಹುತ್ತೇವೆ. ವಿಳಾಸ—ಈಗಲ್ ವಾಚ್ ಕಂಪೆನಿ,

52—9 ಪೋ ಬಾ. 243 ಮದರಾಸು.

The most competitive

CAR

In the most competitive

YEAR

The new model A Ford!!!

with three Speed selective sliding gear Transmission

The most economical car in the market

For Demonstration & further particulars

Please apply to —

S. Sunder Rau,

Ford Dealer for Coorg.

24—8 MERCARA

ರಬ್ಬರ್ ಆಫ್ ಟ್ರೈಬರ್ಸ್.

ನಮ್ಮಲ್ಲಿ ಚಿಕ್ಕ ಮಕ್ಕಳ ಸಹ ಕಲ್ಪ ಮುಂತಾದವುಗಳನ್ನು ಉಪಯೋಗಿಸುವದು ವಾಡಿಕೆಯಲ್ಲಿದೆ, ಇದರಿಂದ ಕೂತೆ, ಹೇನು, ಕೆಟ್ಟ ವಾಸನೆ ಮುಂತಾದವುಗಳು ಸೇರುವದು ಮತ್ತು ಬಹು ಬೇಗನೆ ಹರಿದು ಹೋಗುವವು ಈ ರಬ್ಬರ್ ಆಫ್ ಟ್ರೈಬರ್‌ಗಳು ವಿಲಾಯಿತಿಯಲ್ಲಿ ತಯಾರಾದವು ಸಾಬಾ ರೇಷ್ಮೆ ಬಟ್ಟೆಯಂತೆ ಇರುವವು ಕಸರತ್, ಕುಸ್ತಿ, ಮಾಡುವವರೂ, ಸ್ಕೂಲ್ ಹುಡುಗರೂ, ಬೈಸಿಕಲ್ ಮತ್ತು ಕುದುರೆ ಸವಾರಿ ಮಾಡುವವರೂ, ದೊಡ್ಡ ಶ್ರೀಮಂತರೂ ಗರೀಬರೂ ಸಹ ಹಾಕಿಕೊಳ್ಳಬಹುದು 16 ವರ್ಷದವರಿಗೆ ಆಗುವುದು. 1ಕ್ಕೆ 1— 6—0

ದೊಡ್ಡ ಸೈಜಿನದು— 1ಕ್ಕೆ 1—10—0

ವಿಳಾಸ.—ಕೆ. ಎಸ್. ಬೆನ್‌ಸನ್ ಅಂಡ್ ಕೊ.,

52—9 158 ಚೈನಾ ಬಜಾರ್, ಮದರಾಸು.

Lamps

(of Basel Mission fame)

Just arrived! Shop Early!!

Table Lamps—glass container with brass fittings & Shade @ Rs. 7 8 6 1-6/8 & 5/- Each

Wall Lamps—glass container with brass fittings & mirror @ Rs 3/12 3/-1/8 & 1/2 Each

Hanging Lamp brass container @ Rs 3/12

Hanging Lamp glass container @ Rs 2/12.

Lanterns thoroughly reliable @ Rs 3/4 3/2 & 3/ Each

Spare Chimneys Stocked

The Coorg Emporium

Mercara Sidapur.

46—6

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ತಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು,

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭದರಿಸುವಿಕೆ, ಸಂಭೋಗದಕಾಲ, ತಪ್ಪುಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ನೂತನ ಮರ್ಮಗಳ ವಿವರವೇ ಮುಂತಾದ ಸುಖಿರೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೂ... ಕ್ರಯ ಪುಸ್ತಕ ೧ಕ್ಕೆ ರೂ. ೧—೨—೦.

ಎಸ. ವಿ. ಗೋಪಾಲ್ ಬುಕ್ ಡಿಪ್ಪೋ,

52—32 37. ತಿರುಪಳ್ಳಿಬೀದಿ, ಮದರಾಸ್.

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕಾರ್ಡು ಬರೆದರೆ ಇಗಿನ ಕ್ಯಾಟಲಾಗು ಮಾಫಿಯಾಗಿ ಕಳುಹಿಸಲ್ಪಡುವುದು.

ಜೋಡು	ಹೊಳವಿನ	ತೋಟದ	ರೈಫಲುಗಳು	ರೂ	120	ರಿಂದ	ರೂ	2730	ರ	ವರೆಗೆ.
ಒಂಟಿ	"	"	"	"	35	"	"	950		"
ಜೋಡು	"	"	ಕೋವಿಗಳು	"	50	"	,	1350		"
ಒಂಟಿ	"	"	"	"	35	"	"	275		"
ಜೋಡು	ಹೊಳವಿನ	ಕೇವು	"	"	45	"	,	135		,
ಒಂಟಿ	"	"	"	"	30	"	"	80		"
ಬ್ರೇಕ್	ಲೋಡಿಂಗ್	ರಿವಾಲ್ವರುಗಳು		"	35	"	"	350		"
ಪಿಸ್ತೋಲುಗಳು				"	30	"	"	150		"

ಕಾಡು ಮೃಗಗಳ ಬೇಟೆ ಮೀನು ಬೇಟೆ ಮುಂತಾದ ಎಲ್ಲಾ ತರಹದ ರಾತ್ರಿಯ ವಿನೋದ ವ ತ್ತು ಕೆಲಸಗಳಿಗೆ ಬಹು ಉಪಯೋಗಕರವಾದ ಉತ್ತಮ 'ಸರ್ಚ್ ಲೈಟ್' ಎಂಬ ದೀಪಕ್ಕೆ ಬರೇ ರೂ. 30. ರವಾನೆಯ ಚಾರ್ಜಿಲ್ಲ.

ಕತ್ತಿಗಳು, ಬರ್ಚಿಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—24 **210 Abdul Rehman Street, BOMBAY.**

ಎಂ. ಎಸ್. ಶಿವಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

1. 'ಧಿಲ್ ಒವರ್ ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ 1ಕ್ಕೆ	[illegible]	8	0
2. "ಸಿದ್ಧಪ್ಪನ" ಫ್ಲ್ಯೂಟ್	12	8	0
3 ಶಕುಂತಲಾ	10	0	0
4. ಮೋಹನ್	37	8	0
5. ಮೋಸ್ಲೇಂ	35	0	0
6 ಮಹಾರಾಜಾ	32	8	0
7. ಕೊಹಿನೂರು	29	8	0
8 ಡೈಮಂಡ್	27	8	0
9 ವಿಜಯ	25	0	0
10. "ದಿಲ್‌ಬಹರ್' ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1ಕ್ಕೆ	85	0	0
11 ಸ್ವರಾಜ್	56	0	0
12. ಮೋಹನ್	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟನ್ ಪೆನ್ನುಗಳು.

ವರ್ಲ್ಡ್ ವಂಡರ್ ಫೌಂಟನ್ ಪೆನ್ 1ಕ್ಕೆ	3	0	0
" ಬಿಗ್‌ಬ್ಯಾರಲ್ " "	3	2	0
" ಸ್ಕ್ರೂ ಕ್ಯಾಪ್ ,	[illegible]	8	0
... ಕಲರ್	3	14	0
ಮಾಟಿತ ಸ್ಕ್ರೂ ಕ್ಯಾಪ್ ,	1	4	0
... ಕಲರ್ ... ಸೆ— "	[illegible]	8	0
" ಸೇಫ್ಟಿ ಪೆನ್ " "	6	8	0
" ಲೇಡೀಸ್ ಸೈಜಿನ ಮಾರ್ಬಲ್ ಕಲರ್ ಪೆನ್ "	4	3	0
... 1ಕ್ಕೆ 3 8 0 ಮತ್ತು	3	12	0
ಸ್ವಾನ್ ಪೆನ್ [illegible] 8 0 "	[illegible]	0	0
ವಾಟರ್‌ಮೆನ್ ... 6 0 0 "	8	8	0
" ... 1ಕ್ಕೆ	1[illegible]	[illegible]	0
...	[illegible]	[illegible]	0
... ಸೆಟ್ 1ಕ್ಕೆ	17	0	0

... ಬಂದೋಬಸ್ತೂ ಆದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು 1ಕ್ಕೆ	2	2	0
ಜರ್ಮನ್ ಗುಂಡಾ ಕೈತಿಯ ... ಟೈಂಪೀಸು "	3	12	0
... ಸೋನಿವಸ ವಿ ಟೈಂಪೀಸು "	5	13	0
, ... " "	5	6	0
... " " "	9	6	0
, ಡಿಲ್ಯೂಕ್ಸ್ ... ಟೈಂಪೀಸು "	13	5	0
ಘಂಟೆ ತೋರಿಸಿ ... ಕ್ಯಾಲೆಂಡರ್ ... "	7	2	0
" ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾಲೆಂಡರ್ ಕ್ಲಾಕ್ 1ಕ್ಕೆ	8	10	0
" ಘಂಟೆ ಅರ್ಧ ಘಂಟೆ ಹೊಡೆಯುವ ... ಕ್ಯಾಲೆಂಡರ್ ಕ್ಲಾಕ್ 1ಕ್ಕೆ	9	12	0
... ತೋರಿಸಿ ... ಕ್ಯಾಲೆಂಡರ್ ಕ್ಲಾಕ್ 1ಕ್ಕೆ	12	0	0

"ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—15

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	20,660
ಜಮೊಬಂದ್ರ ಠೇವಣಾತಿ —	1,87,796

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್:

ತಾರೀಖು 1-7-1929.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ದಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ. ಕೀಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾನಡೀರಿರ ಸಂಜಪ್ಪನವರು, ಮತ್ತು ಮೆ. ಮಂಡೇಪಂಡ ಸೋಮೈಯ್ಯನವರು, (ಖಾದಿಭಂಡಾರ.)
ಮೂರ್ನಾಡು—ಮಡೆಯಂಡ ದೇವೈಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಪಾಪೋಕ್ಲು—ಮೆ. ಟಿ. ಆರ್. ರಾಮೈಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಕುದಿಕೇರಿ & ತಿತಿಮತ್ತಿ—ಮೆ. ಜೆ. ಮಾದಪ್ಪಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರ್ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮ್ಯಾನೇಜರ್,

"ಕೊಡಗು" ಮಡಿಕೇರಿ.



12 bore Victor Cartridges Rs. 10/- Per 100

Mahomedally-Noorbhoy.

ARMS & AMMUNITION MART

321 Abdul Rehman Street.

53-49 BOMBAY. 3.

ಕಟುಕಷಾಯ ಮಲೇರಿಯ ರಸ:—ಇದು ಇಂಜೆಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಚಳಿ ಜ್ವರ, ದಿನಬಿಟ್ಟು ಬರುವ ಜ್ವರ 3-4 ದಿವಸಕ್ಕೊಂದು ಸಾರಿ ಬರುವ ಜ್ವರ, ನಿತ್ಯ ಬರುವ ಜ್ವರ, ಮತ್ತು ಜ್ವರಗಳ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1-8-0, 3ಕ್ಕೆ ರೂ. 4-0-0, 6ಕ್ಕೆ ರೂ 7-8-0, 12ಕ್ಕೆ ರೂ 14.

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳಗಳಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1-4-0 3-8-0, 6-12-0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3-8-0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2-10-0 ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5-8-0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ.
೯. ಮಂಗಳೂರು.

52-45

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 223, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಾಫೋನುಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಥಾವಾಗಲೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.



24-14

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ

ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ.
1926.	391	" "	1926.	106	" "
1927	468	" "	1927.	122	"
1928	585	" "	1928.	140	"

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ.	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ
1921ರಲ್ಲಿ " " " " "	1927ರಲ್ಲಿ " " " 25 "

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಬಂದರೆ ನಿಮಗೆ ಅದರಿಂದ ಲಾಭ ಉಂಟಾಗುವುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮ್ಯಯ್ಯರ್
ಬ್ರಾಂಚ್ ಸೆಕ್ರೆಟರಿ.

52-34

ಶ್ರೇಷ್ಠವಾದ 5 ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸರ್ವದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ. 40.
ಆಸಲ್ ಗೋರೋಜನ ತೊಲ 1ಕ್ಕೆ ರೂ. 12
ಕೇಸರಿ ಅಥವಾ ಮುಂಮುಮ್ಯಹುವ್ವ ತೊಲ 1ಕ್ಕೆ ರೂ. 3½
ಪಚ್ಚ ಕರ್ಪೂರ ತೊಲ 1ಕ್ಕೆ ರೂ. 2½.
ಕಾಬೂಲ ಇಂಗು ತೊಲ 10 ಕ್ಕೆ ರೂ. 1.

ಶ್ರೇಷ್ಠವಾದ 108 ಮಣಿವುಳ್ಳ ರುದ್ರಾಕ್ಷಿ ಜಪ ಮಾಲೆ 1ಕ್ಕೆ ಆಣೆ 6, 8, 12, ರೂ. 1, 2, 5, 10 ರ ವರೆಗೆ

32 ಮಣಿವುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ. 1, 2, 3, 4, 5, 8, 10 ರ ವರೆಗೆ.

ಮತ್ತು ಎಲ್ಲಾ ವಿಧವಾದ ರೇಷ್ಮೆ ಜರಿ ಶೀರೆಗಳು, ಕಣಗಳು, ಮುಗುಟ ವಗೈರಾದಿ ಎಲ್ಲಾ ಸರಕುಗಳು ದೊರೆಯುತ್ತೆ. ಸಾವಕಾಶ ಮಾಡದೆ ಈ ಕೆಳಗಿನ ಅಡ್ರಸ್ಸಿಗೆ ಆರ್ಡರು ಕೊಡಿರಿ. ಸರಕುಗಳು ಸುಲಭ ಕ್ರಯಕ್ಕೆ ದೊರೆಯುತ್ತೆ.

ಅಡ್ರಸ್—

ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್," ಶ್ರೀಕಾಶಿ.

BHARADWAJ & CO.,

"SILK HOME,"

Benares City.

52-52

Printed & published by P. I. Belliappa, at "Kodagu" Press, Mercara for "Kodagu" Ltd.

"KODAGU" OFFICE, MERCARA.
If not delivered please return to

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯತ್ನತಃ ॥ ಐಕ್ಯಸತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯ | ಮಡಿಕೇರಿ, ಸನ್ ೧೯೨೭ನೇ ಇಸವಿ ಅಗೊಸ್ಟು ತಾರೀಕು ೫ನೇ ಶುಕ್ರವಾರ. | ಸಂಚಿಕೆ ೧೪

Telephone :— 3145

By Appointment to
H E The Governor of Madras.

Telegrams :— "PRECIOUS"

Guarantee of Satisfaction throughout in every order large or small.

Brooch.

Excellent Quality Chaste Designs Moderate Prices.

Ice Tumbler.

"Green Hills"
VIRARAJENDRAPET
7th Decr., 26
Sir,
........I am glad to note that the Jewels have a good finish .
(Sd.) Mrs A B. CHENGAPPA

SLATICOPPS,
Nedote Estate.
Dear Sir, 7th April, 28
I received the parcel and I am very glad to see the workmanship I must say it is excellent. I appreciate your workmanship and skilful handling They were praised by one and all of my friends
(Sd) Mrs K SUBBIAH

MERCARA,
20th May, 27.
Dear Sir,
,I am quite satisfied with the Jewels you sent on the 16th instant.
(Sd) Mrs. K. S. CARIAPPA

52–50 *Illustrated Catalogue Free on Application.*

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಬೆಳೀರಲ್ ಹುಳದ ದೆಸೆಯಿಂದ ಕೆಟ್ಟುಹೋಗಿದ ಕಾಫಿಗಿಡಗಳ ಸೊಪ್ಪೆಯು ಧಾತುಗುಣದ (Mineral) ಗೊಬ್ಬರ ಹಾಕಿದ ಕೆಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ಧಾಪುರ ಪರೀಕ್ಷಾ ಕ್ಷೇ (Experiment station) ದಲ್ಲಿ ಕಂಡು ... ಆದುದರಿಂದ ರೋಬಸ್ಟ ತೋಟ—ಹೋಲ್ ಬೋರ್ ... ಸಾರಜನಕ ಗೊಬ್ಬರವು ಪ್ರಯೋಜನಕರವಾ... ...ದೆ" (... ಮನೊ...ಜನರಲ್ ... ...ವಾಹ ಸು ... ಡಿಪಾರ್ಟ್‌ಮೆಂಟ್)

ಹೆಚ್ಚಿನ ಮಾಹಿತಿ, ವಿವಿಧ ... ಪ್ರಮಾಣ ... ಪತ್ರಿಕೆಗ ವಗೈರೆಗಳಿಗೆ ಕೆಳಗಿನ ವಿಳಾ ಸದರಿಗೆ ಬರೆಯಬಹುದು.

(1) ಚಿಲಿಯನ್ ನೈ... ಕಮಿ... ... ಮಿಸ್ಟರ್ ...
ಇಂ... ... ...
21—15 ಪೋ ... ಮಡಿಕೇರಿ.

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ... ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲು ಲ್ಲ. ಕೆಲವರಿಗೆ ೩—೪ ತಿಂಗಳ ಕಾಲ ನಿಂತು ಸಂ... ಹೋಗಿ ಬಿಡುವದು. ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವುದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ... ಉಂಟಾಗುವ ಹೊಟ್ಟೆನೋವು ಮುಂತಾದವು ಖಂಡಿತ ಗುಣಪಡಿಸುವದು ಈ ಎಣ್ಣೆಯನ್ನು ... ಮದರಾಸು ಅಧಿಪತ್ಯಗಳಲ್ಲಿ ಮಕ್ಕಳಿಲ್ಲದವರು ಉ... ಪುತ್ರ ಸಂತಾನ ಪಡೆದಿರುವರು. ಒಂದು ಬಾಟ್ಲನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಈ ಜೊತೆಯಲ್ಲಿ ಕಳುಹಿಸುತ್ತೇವೆ.



ಕ್ರಯ ಬಾಟಲ್ 1ಕ್ಕೆ 2—8—0.
...— ಕೆ. ಎಸ್. ರಾಧಾಕೃಷ್ಣ ಬ್ರದರ್ಸ್.
109 ಚೈನಾ ಬಜಾರ್ ರೋಡ್, ಮದರಾಸ

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ ಈದಿಗ ಯಕ್ಸ್‌ಟೆನ್ಷನ್, ಮೈಸೂರು.

ನಮ್ಮಲ್ಲಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಫಿಲ್ಟರುಗಳಿಂದ ಶೋಧಿಸಲ್ಪಟ್ಟ ಅಸ್ಪಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂದಿ ... ಸಹ ದೊರೆಯುತ್ತೆ.

ಹೆಚ್ಚು ... ... 3—...

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯನ ಎಲ್ಲ ಬಾಧಕಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮ... ಸಾಟಿಯಾಗಲಾರವು.

ಮದನ ಮಂಜರಿ ಮಾತ್ರೆಗಳು.

ದಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನ ರಹಿತವಾದುದು. ಒಂದು ಡಬ್ಬಿಯ ಕ್ರಯ ೧—೦—೦
52— 2 ಮದನಮಂಜರಿ ಫಾರ್ಮಸಿ,
1/94 ಚೀನಾ ಬಜಾರ್, ಮದ್ರಾಸ್.

ಏಕೆ ನರಳುತ್ತೀರಿ?

ಪ್ರಿಯವು ... ಅಂಚೆಹಾಸಲು.
ಇಷ್ಟವೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಇಂದ ರೋಗಗಳನ್ನು ... ಮಾಡಿಕೊಂಡು ಭವಿಷ್ಯದಲ್ಲಿ ರೋಗಗ... ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.
...2 ಮದನಮಂಜರಿ ಫಾರ್ಮಸಿ,
1/94 ಚೈನ ಬಜಾರು ರೋಡು ಮದ್ರಾಸು

ಕೊಡಗು.

ಸನ್ ೧೯೨೯ನೇ ಇಸವಿ

ಅಗೋಸ್ತು ತಾ ೩೦ ನೇ ಶುಕ್ರವಾರ.

ಕೊಡಗಿನ ಕೃಷಿ ಇಲಾಖೆ.

ಕೊಡಗಿನ ಸರಕಾರವು ದೇಶದ ಮುಖ್ಯ ಕಸುಬಾದ ಕೃಷಿಗೆ ಏನೇನೂ ಗಮನ ಕೊಡುತ್ತಿರುವದಿಲ್ಲವೆಂತ ಈ ವರೆಗೆ ದೇಶದವರು ಮಾತ್ರ ಹೇಳುತ್ತಿದ್ದರು. ಜನರ ಈ ಆಕ್ಷೇಪಣೆಗೆ ಕೃಷಿ ಕಮಿಶನಿನ ವರದಿಯಿಂದ ತುಂಬಾ ಬಲಬಂದಿದೆ. "ಕೊಡಗು ಮತ್ತು ಇದರಂತೆಯೇ ಪ್ರತ್ಯೇಕ ಆಡಳಿತ ಇರುವ ಚಿಕ್ಕ ಪ್ರಾಂತ್ಯಗಳಿಗೆ ಚಿಕ್ಕವು ಆಗಿರುವ ಕಾರಣದಿಂದಲೇ ಕೃಷಿ ಶಾಸ್ತ್ರದ ಮತ್ತು ಗ್ರಾಮಾಭಿವೃದ್ಧಿಯ ಇತರ ಏರ್ಪಾಡುಗಳ ಪ್ರಯೋಜನವನ್ನು ಹೊಂದಲು ಅನುಕೂಲ ಮಾಡಿಕೊಡುವದಿಲ್ಲವೆಂಬ ಆಕ್ಷೇಪಣೆಯನ್ನು ಇಂಡಿಯಾ ಸರಕಾರವು ಹೋಗಲಾಡಿಸಿಕೊಳ್ಳಬೇಕು" ಎಂತ ವರದಿಯಲ್ಲಿ ಬರೆದಿದೆ. ಕೊಡಗು ವಿನಹಾ ಇತರ ಚಿಕ್ಕ ಪ್ರಾಂತ್ಯಗಳಲ್ಲಿ ತಮ್ಮ ಖರ್ಚಿಗೆ ಬೇಕಾದ ಹಣ ತಮ್ಮಲ್ಲೇ ಉತ್ಪತ್ತಿಯಾಗುವದಿಲ್ಲವೆಂಬುದು ಈ ಚಿಕ್ಕ ಪ್ರಾಂತ್ಯಗಳಿಗೆ ಕೃಷಿ ಕಸುಬಿಗೆ ಸಹಾಯ ಕೊಡದಿರಲು ಸಾಕಷ್ಟು ಕಾರಣವಲ್ಲ. ಕೊಡಗಿನಲ್ಲಿ ಸಹ ಕೃಷಿಕರ ಸಹಾಯಕ್ಕೆ ಆಗಬೇಕಾದಷ್ಟು ಏರ್ಪಾಡು ಮಾಡಲು ಇಂಡಿಯಾ ಸರಕಾರದ ಆರ್ಥಿಕ ಸಹಾಯವಿಲ್ಲದೆ ಕೊಡಗಿನ ಉತ್ಪತ್ತಿಯಿಂದಲೇ ಸಾಧ್ಯವಾಗಲಾರದು ಎಂತಲೂ ವರದಿಯಲ್ಲಿ ಹೇಳಿದೆ. ವರದಿಯಲ್ಲಿ ಸೂಚಿಸಿರುವ ಮೇರೆ ಕೊಡಗಿನ ಸರಕಾರದ ಖರ್ಚಿಗೆ ಕೊಡಗಿನ ಉತ್ಪತ್ತಿಯು ಸಾಕಾಗಿರುವದು ಮಾತ್ರವಲ್ಲದೆ ಉಳಿವರಿ ಸಹ ಆಗಿದ್ದರೂ ಕೂಡ ಕೃಷಿ ಶಾಸ್ತ್ರದ ಸಹಾಯವನ್ನು ಕೃಷಿಕರಿಗೆ ಕೊಡದಿರುವದು ತುಂಬಾ ಶೋಚನೀಯವಾದ ಸಂಗತಿಯಾಗಿದೆ.

ಕೃಷಿ ಕಮಿಶನಿನ ವರದಿಯಲ್ಲಿ ಕೊಡಗು ಮತ್ತು ಇದರಂತೆಯೇ ಇರುವ ಚಿಕ್ಕ ಪ್ರಾಂತ್ಯಗಳಿಗೆ ಮಾಡಬಹುದಾದ ಏರ್ಪಾಡಿನ ವಿಷಯ ಇರುವ ಅಭಿಪ್ರಾಯವೇನಂದರೆ—ಕೃಷಿ ವಿಷಯದ ಪರೀಕ್ಷಾ ಕ್ಷೇತ್ರವನ್ನು ಇಂಥಾ ಚಿಕ್ಕ ಪ್ರಾಂತ್ಯಗಳಲ್ಲಿ ಮಾಡಲು ಸಾಧ್ಯವಿಲ್ಲ. ಪರೀಕ್ಷಾ ಕ್ಷೇತ್ರವೆಂದರೆ ಮಣ್ಣಿನ ಆಜಮಾಯಿಸಿಕೆ ಮುಂತಾದ ವಿಜ್ಞಾನ ಶಾಸ್ತ್ರದ ಪರೀಕ್ಷೆಗೆ ಬೇಕಾದ ಏರ್ಪಾಡು. ಚಿಕ್ಕ ಪ್ರಾಂತ್ಯಗಳಿಗೆ ವೈಜ್ಞಾನಿಕ ಪರೀಕ್ಷಾ ಕೆಲಸಗಳನ್ನು ಪೂಸಾ ಪರೀಕ್ಷಾಕ್ಷೇತ್ರವೇ ಮಾಡಬೇಕು ಮಾತ್ರವಲ್ಲ, ಚಿಕ್ಕ ಪ್ರಾಂತ್ಯಗಳ ವಿಷಯದಲ್ಲಿ ಹೆಚ್ಚು ಸಿಗಾ ತೆಗೆದುಕೊಳ್ಳಬೇಕು. ಅಲ್ಲದೆ ಸಮೀಪದ ದೊಡ್ಡ ಪ್ರಾಂತ್ಯದ ಪರೀಕ್ಷಾಕ್ಷೇತ್ರದ ಏರ್ಪಾಡಿನಿಂದಲೂ ಸಹಾಯ ದೊರಕಬೇಕೆಂತಲೂ, ಅಂಥಾ ಸಹಾಯ ಕೊಡಲ್ಪಡಲೇ ಬೇಕೆಂತಲೂ ವರದಿಯಲ್ಲಿ ಸೂಚನೆ ಇದೆ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವು ಬೇರೆಯಾಗಿಲ್ಲ. ಈ ಮಣ್ಣಿನ ಪರೀಕ್ಷೆ, ಗೊಬ್ಬರಗಳಿಂದ ಬೇರೆ ಬೇರೆ ಪಸಲುಗಳಿಗೆ ಆಗುವ ಸಹಾಯ ಅಥವ ಕಡಕು ಇತ್ಯಾದಿ ವಿಷಯಗಳನ್ನು ಕಂಡು ಹಿಡಿಯಲಿಕ್ಕಾಗಿ ಕೊಡಗಿಗೆ ಪ್ರತ್ಯೇಕ ಸಂಸ್ಥೆಯು ಅವಶ್ಯವಿದೆಯೆಂತ ನಮಗೆ ತೋರುವದಿಲ್ಲ. ಪೂಸಾದ ಸಂಸ್ಥೆಯೂ, ನೆರೆಪ್ರಾಂತ್ಯವಾದ ಮದ್ರಾಸಿನ ಸಂಸ್ಥೆಯೂ ಈ ವಿಷಯದಲ್ಲಿ ಸಹಾಯ ಕೊಟ್ಟರೆ ಸಾಕಾಗಿದೆ.

ಆದರೆ ಕೃಷಿ ಶಾಸ್ತ್ರದ ಉಪಯೋಗವನ್ನು ಕಾರ್ಯತಃ ಕೃಷಿಕರಿಗೆ ಮಾಡಿ ತೋರಿಸಲು ಬೇಕಾದ ಏರ್ಪಾಡಿನ ವಿಷಯ ವರದಿಯು ಕೊಟ್ಟಿರುವ ಶಿಫಾರಸ್ಸನ್ನು ವಿಮರ್ಶಿಸಬೇಕಾಗಿದೆ. ವರದಿಯಲ್ಲಿ ಹೇಳಿರುವಂತೆ ಕೊಡಗಿಗೂ ಪ್ರತ್ಯೇಕ ಕೃಷಿ ಇಲಾಖೆ ಇರಲೇ ಬೇಕು. 'ಕೊಡಗಿನ ಇಲಾಖೆಯು ಒಬ್ಬ ಡಿಪ್ಯುಟಿ ಡೈರೆಕ್ಟರ ಅಧೀನದಲ್ಲಿರತಕ್ಕದ್ದು. ಇವರನ್ನು ನೆರೆಯಲ್ಲಿರುವ ದೊಡ್ಡ ಪ್ರಾಂತ್ಯ ಅಂದರೆ ಮದ್ರಾಸಿನಿಂದ ಎರವಾಗಿ ತೆಗೆದುಕೊಳ್ಳಬೇಕು ಮತ್ತು ಇವರ ಶಿಫಾರಸ್ಸಿನ ಮೇರೆ ಇವರ ಅಧೀನದಲ್ಲಿರುವ ಉದ್ಯೋಗಸ್ಥರಲ್ಲಿರನ್ನು ಅಥವಾ ಕೆಲವರನ್ನಾದರೂ ಹಾಗೆಯೇ ಎರವಾಗಿ ತೆಗೆದುಕೊಳ್ಳಬೇಕು. ಕೊಡಗು ಮತ್ತು ಇದರಂತೆಯೇ ಇತರ ಚಿಕ್ಕ ಪ್ರಾಂತ್ಯಗಳಿಗೂ ಡಿಪ್ಯುಟಿ ಡೈರೆಕ್ಟರು ಕೇವಲದಲ್ಲಿ ತುಂಬಾ ಸರ್ವೀಸಾದವರ ಸಂಬಳವನ್ನು ವಹಿಸಿಕೊಳ್ಳಲು ಸಾಧ್ಯವಾಗಲಾರದು. ಆದ್ದರಿಂದ ಈ ಆಫೀಸರುಗಳು ದೊಡ್ಡ ಪ್ರಾಂತ್ಯದ ಉದ್ಯೋಗದ ಪಟ್ಟಿಗೇ ಸೇರಿರಬೇಕು. ಅವರ ಸಂಬಳವು ಹೆಚ್ಚಾದಂತೆ ನೆರೆ ಪ್ರಾಂತ್ಯಕ್ಕೆ ಕಳುಹಿಸುವ ಅನುಕೂಲವಿರಬೇಕು.' ಎರವಾಗಿ ತೆಗೆದುಕೊಳ್ಳುವದು ಅವಶ್ಯವಿದ್ದಾಗ ನಡೆಯಬಹುದಾದರೂ ಕೊಡಗಿನವರೇ ಕೃಷಿ ವಿದ್ಯೆ ಕಲಿತು ಈ ಕೆಲಸಕ್ಕೆ ಅರ್ಹರಾದವರಿದ್ದರೆ ಅಂಥವರನ್ನು ನೇಮಿಸಿಕೊಳ್ಳುವದು ಆವಶ್ಯಕ. ಇಂಥವರು ಕೆಲವು ಕಾಲ ಈ ದೇಶದಲ್ಲಿ ಕೆಲಸ ಮಾಡಿದನಂತರ ಎಲ್ಲಾ ಗಜೆಟೆಡ್ ಉದ್ಯೋಗಸ್ಥರ ವಿಷಯದಲ್ಲೂ ನಾವು ಹೇಳುವ ಮೇರೆ ಇವರನ್ನು ಮದ್ರಾಸ್ ಪಟ್ಟಿಗೆ ಸೇರಿಸಬಹುದು. ಈಗ ತಾನೇ ಹೊಸದಾಗಿ ಏರ್ಪಡಿಸಬೇಕಾದ ಕೃಷಿ ಇಲಾಖೆಗೆ ದೇಶೀಯರನ್ನೇ ನೇಮಿಸದಿದ್ದರೆ ಜನರಿಗೆ ಈ ಇಲಾಖೆಯಲ್ಲಿ ಅಭಿರುಚಿ ಹುಟ್ಟಲಾರದು. ಕಮಿಶನಿನ ಶಿಫಾರಸ್ಸು ಮೇರೆ ಇಲ್ಲಿನ ಡಿಪ್ಯುಟಿ ಡೈರೆಕ್ಟರು ಮದ್ರಾಸು ಪಟ್ಟಿಗೆ ಸೇರಿದವರಾಗಿರಬೇಕೆಂತ ನಮ್ಮ ಸರ್ಕಾರವು ತೀರ್ಮಾನಿಸುವುದಾದರೂ, ದೇಶದಲ್ಲಿ ಕೃಷಿವಿದ್ಯೆ ತಿಳಿದವರನ್ನು ಮದ್ರಾಸು ಪಟ್ಟಿಗೆ ಸೇರಿಸಿಕೊಳ್ಳುವಂತೆ ಸ್ಥಳೀಯ ಸರ್ಕಾರವು ಏರ್ಪಾಡು ಮಾಡಿ ಅಂಥವರನ್ನೇ ಕೊಡಗಿನಲ್ಲಿ ಕೃಷಿ ಇಲಾಖೆಯನ್ನು ಏರ್ಪಡಿಸಲು ಆರಿಸಿ ಕೊಳ್ಳಬೇಕು. ದೇಶದವರಲ್ಲಿ ಕೃಷಿವಿದ್ಯೆ ಕಲಿತವರು ಸಿಕ್ಕದಿದ್ದರೆ ಈ ವಿದ್ಯೆಯಲ್ಲಿ ಬೇಗನೆ ತರಬೇತು ಹೊಂದಬಹುದಾದಂಥ ಗಟ್ಟಿಗರಾದ ವಿದ್ಯಾವಂತರನ್ನು ಆರಿಸಿ, ತರಬೇತಿಗೆ ಕಳುಹಿಸುವುದು ಉತ್ತಮ.

ಡಿಪ್ಯುಟಿ ಡೈರೆಕ್ಟರ ತಾಬೆದಾರರನ್ನು ಅಥವಾ ಕೆಲವರನ್ನಾದರೂ ನೆರೆಪ್ರಾಂತ್ಯದಿಂದ ಎರವಾಗಿ ತೆಗೆದುಕೊಳ್ಳಬೇಕೆನ್ನುವದಕ್ಕೂ ನಾವು ಒಪ್ಪುವದಿಲ್ಲ. ಕೃಷಿವಿದ್ಯೆ ಕಲಿತ ದೇಶೀಯರೇ ಅರ್ಹರಾದವರಿದ್ದರೆ ಅಂಥವರನ್ನೇ ನೇಮಿಸಿಕೊಳ್ಳಬೇಕಾದದ್ದು ಅವಶ್ಯವಾಗಿದೆ.

ಸ್ಥಳೀಯ ಸರ್ಕಾರಕ್ಕೆ ನೆರೆ ಪ್ರಾಂತ್ಯದ ಕೃಷಿ ಇಲಾಖೆಯ ಡೈರೆಕ್ಟರೂ ಪಶುವೈದ್ಯ ಇಲಾಖೆಯ ಡೈರೆಕ್ಟರೂ ಆಲೋಚನೆ ಕೊಡುವಂತೆಯೂ, ಒಂದು ಯಾ ಎರಡು ವರ್ಷಕ್ಕೊಂದಾವರ್ತಿ ದೇಶವನ್ನು ಸಂದರ್ಶಿಸುವಂತೆಯೂ ಮಾಡಬೇಕೆಂತ ವರದಿಯಲ್ಲಿದೆ. ಈ ಅಭಿಪ್ರಾಯಕ್ಕೆ ನಮ್ಮ ಆಕ್ಷೇಪಣೆಯೇನೂ ಇಲ್ಲ.

ಕೃಷಿ ಆಜಮಾಯಿಸಿಕೆಯ ಕೌನ್ಸಿಲು ಚಿಕ್ಕ ಪ್ರಾಂತ್ಯಗಳ ಕೃಷಿ ಬೆಳವಣಿಗೆಗೆ ವಿಶೇಷ ಸಿಗ ಕೊಡಬೇಕು ಎಂತಲೂ, ಚಿಕ್ಕ ಪ್ರಾಂತ್ಯಗಳಿದ್ದರಿಂದ ಕೃಷಿ ಆಜಮಾಯಿಸಿಕೆಗೆ ಈ ಪ್ರಾಂತ್ಯಗಳು ತುಂಬಾ ಅನುಕೂಲವಾಗಿವೆಯೆಂತಲೂ, ಇವುಗಳನ್ನು ದೊಡ್ಡ ಪ್ರಾಂತ್ಯಗಳು ಹಿಂಬಾಲಿಸುವಂತೆ ಮಾದರಿ ಪ್ರದೇಶಗಳಾಗಿ ಮಾಡಿಕೊಳ್ಳಬಹುದೆಂತಲೂ ವರದಿಯ ಶಿಫಾರಸ್ಸುಗಳಿವೆ. ಕೃಷಿ ಆಜಮಾಯಿಸಿಕೆಯ ಕೌನ್ಸಿಲು ಈಗಾಗಲೇ ಏರ್ಪಡಾಗಿ ಇದರ ಮೆಂಬರುಗಳ ನೇಮಕ ಸಹ ಆಗಿದೆ. ವರದಿಯ ಶಿಫಾರಸ್ಸನ್ನು ಈ ಕೌನ್ಸಿಲು ಮನಸ್ಸಿಗೆ ತೆಗೆದುಕೊಂಡು ಕೊಡಗಿನ ಕೃಷಿ ಬೆಳವಣಿಗೆಗೆ ತಡಮಾಡದೆ ಸಹಾಯ ಮಾಡಬೇಕೆಂತ ಸೂಚಿಸುತ್ತೇವೆ.

ಚಿಕ್ಕ ಪ್ರಾಂತ್ಯಗಳ ಕೃಷಿ ಕಸುಬಿನ ಬೆಳವಣಿಗೆಯು ತೃಪ್ತಿಕರವಾಗಿ ಮುಂದರಿಯಬೇಕಾದರೆ ವಿದ್ಯೆ ಮತ್ತು ಸಹಕಾರ ಇವುಗಳ ಬೆಳವಣಿಗೆಗೆ ಹೆಚ್ಚಿಗೆ ಸಿಗ ಕೊಡಬೇಕೆಂತ ಕೃಷಿ ಕಮಿಶನಿನ ಸೂಚನೆಯಾಗಿದೆ. ನಮ್ಮ ದೇಶದಲ್ಲಿ ಈ ವರೆಗೆ ಕೃಷಿ ಇಲಾಖೆಯ ಡಿಪ್ಯುಟಿ ಡೈರೆಕ್ಟರೆನ್ನಿಸಿಕೊಳ್ಳುವವರೇ ಸಹಕಾರಿ ಇಲಾಖೆಯ ರಿಜಿಸ್ಟ್ರಾರಾಗಿದ್ದಾರೆ. ಇನ್ನು ಮುಂದೆ ಯಾವ ಏರ್ಪಾಡಾಗುತ್ತದೋ ತಿಳಿಯದು. ಒಬ್ಬನೇ ಆಫೀಸರು ಈ ಎರಡು ಇಲಾಖೆಗಳ ಆಡಳಿತದಲ್ಲಿ ಇರುವದಾದರೂ ಬೇರೆ ರಿಜಿಸ್ಟ್ರಾರವರನ್ನು ನೇಮಿಸುವದಾದರೂ ಎಂಥವರು ರಿಜಿಸ್ಟ್ರಾರ್ ಆಗಿರಬೇಕೆಂಬ ವಿಷಯದಲ್ಲಿ ಕಮಿಷನಿನ ರಿಪೋರ್ಟಿನಲ್ಲಿರುವ ಶಿಫಾರಸ್ಸನ್ನು ಪರ್ಯಾಲೋಚಿಸಬೇಕಾಗಿದೆ. ಸಹಕಾರಿ ವಿದ್ಯಾಪ್ರಸಾರ, ಸಹಕಾರದ ಮೇಲ್ವಿಚಾರ ಸಹ ನಡೆಸಲು ಒಳ್ಳೇ ಇಲಾಖೆ ಇರಬೇಕು. ಇದು ಸಾಧ್ಯವಾಗಬೇಕಾದರೆ ರಿಜಿಸ್ಟ್ರಾರವರ ಅಧಿಕಾರಕ್ಕೆ ನೇಮಿಸಲ್ಪಡುವ ಉದ್ಯೋಗಸ್ಥರ ಯೋಗ್ಯತೆಯು ಬಹಳ ಪ್ರಾಮುಖ್ಯವಾಗಿದೆ. ಸಹಕಾರಿ ಚಳವಳದ ನಾಯಕರೇ ರಿಜಿಸ್ಟ್ರಾರವರು. ಸಹಕಾರಿ ಕಮಿಶನ್ ವರದಿಯ ಶಿಫಾರಸ್ಸಿನಲ್ಲಿ ಹೇಳಿರುವಂತೆ ಅವನು ಬಿಡದೆ ಸಹಕಾರಿ ಗ್ರಂಥಗಳನ್ನು ಓದುತ್ತಿರುವವನಾಗಿರಬೇಕು, ತನ್ನ ದೇಶದ ಮತ್ತು ಒಟ್ಟು ಹಿಂದುಸ್ಥಾನದ ಜನರ ಆರ್ಥಿಕ ಸ್ಥಿತಿಯನ್ನು ತಿಳಿದವನಾಗಿರಬೇಕು, ಬ್ಯಾಂಕುಗಳನ್ನು ನಡಿಸುವ ಕ್ರಮವನ್ನೂ, ತತ್ವಗಳನ್ನೂ ತಿಳಿದವನಾಗಿರಬೇಕು. ಬೇರೆ ದೇಶಗಳಲ್ಲಿ ಅನುಭವಕ್ಕೆ ಬಂದ ನೂತನ ರೀತಿಗಳನ್ನು ಆಜಮಾಯಿಸುತ್ತಿರಬೇಕು. ಜನರಿಗೆ ಸಹಕಾರವನ್ನು ಬೋಧಿಸಲು ತಕ್ಕ ಇರುವವನಾಗಿರಬೇಕು. ಆದ್ದರಿಂದ ಈ ಉದ್ಯೋಗಕ್ಕೆ ಅತ್ಯುತ್ತಮ ಮನುಷ್ಯನನ್ನು ಆರಿಸಬೇಕು. ಇದು ಕಲೆಕ್ಟರ ದರ್ಜೆಗೆ ಪ್ರಮೋಶನ್ ಆಗುವ ಒಬ್ಬ ಆಫೀಸರಿಗೆ ಅನುಕೂಲವಾದ ಸ್ಥಳವೆಂತ ಎಂದೂ ಭಾವಿಸಲ್ಪಡಬಾರದು. ಆಡಳಿತದ ಅನುಭವ, ಜನರನ್ನೂ ಅವರ ಆರ್ಥಿಕ ಸ್ಥಿತಿಯನ್ನೂ ತಿಳಿದವನಾಗಿರಬೇಕು. ಉದ್ಯೋಗಸ್ಥರಲ್ಲದ ಸಹಕಾರಿಗಳ ಸಹಾಯವನ್ನು ಪಡೆಕೊಳ್ಳಲು ಶಕ್ತನಾಗಿರಬೇಕು. ಈ ಅಧಿಕಾರಕ್ಕೆ ನೇಮಕವಾದವರನ್ನು 5 ವರ್ಷಕ್ಕಿಂತ ಕಡಿಮೆ ಇಲ್ಲದೆ 10 ವರ್ಷಕ್ಕೆ ಮೀರದೆ ಆ ಕೆಲಸದಲ್ಲಿಡಬೇಕು.' ಅನುಕೂಲವಿದ್ದಾಗ ಇವನನ್ನು ಯೂರೋಪ್ ಮುಂತಾದ ದೇಶಗಳಿಗೆ ಅನುಭವ ಪಡೆಯಲು ಕಳುಹಿಸಬೇಕೆಂತಲೂ ಇದೆ.

ಶಿಫಾರಸ್ಸು ಈ ರೀತಿ ಇರುವದರಿಂದ ಈ ಉದ್ಯೋಗಕ್ಕೆ ನೇಮಿಸುವವರನ್ನು ಪ್ರಮೋಶನ್ ಹಕ್ಕಿನ ಮೇಲೆ ಆರಿಸಬಾರದೆಂಬುದೂ, ಎಂದು ಪೆನ್ಶನ್ ಪಡೆವೇನೆಂತ ನಿರೀಕ್ಷಿಸುತ್ತಿರುವವರನ್ನು ಆರಿಸಬಾರದೆಂಬುದೂ ಸ್ಪಷ್ಟವಾಯಿತು. ಜನರ ಪ್ರೀತಿಯನ್ನು ಸಂಪಾದಿಸಲು ಮತ್ತು ವಿಷಯವನ್ನು ಕಲಿತುಕೊಳ್ಳಲು ಕುತೂಹಲ ಮತ್ತು ಶಕ್ತಿ ಇರುವವರಾಗಿರಬೇಕು. ಕೃಷಿ ಇಲಾಖೆಯ ಡೈರೆಕ್ಟರರಾಗಲು ಅರ್ಹತೆ ಇರುವವರಿಗೇ ಈ ಗುಣಗಳೆಲ್ಲಾ ಅಥವಾ ಅವುಗಳಲ್ಲಿ ಹೆಚ್ಚಿನವಾದರೂ ಇದ್ದರೆ ಅಂಥವರೇ ರಿಜಿಸ್ಟ್ರಾರಾಗಲು ಆಕ್ಷೇಪಣೆ ಇಲ್ಲ. ಕೃಷಿ ಇಲಾಖೆಯ ಉದ್ಯೋಗಕ್ಕೆ ಪ್ರತ್ಯೇಕ ಉದ್ಯೋಗಸ್ಥರನ್ನು ನೇಮಿಸುವದಾದರೆ ರಿಜಿಸ್ಟ್ರಾರ್ ಕೆಲಸಕ್ಕೆ ಮೇಲಿನ ಶಿಫಾರಸ್ಸಿನಲ್ಲಿ ಹೇಳಿರುವ ಗುಣಗಳೂ, ಶಕ್ತಿಗಳೂ ಇರುವವರನ್ನೇ ನೇಮಿಸಲು ನಮ್ಮ ಸರಕಾರವು ಮರೆಯಲಿಕ್ಕಿಲ್ಲವಾಗಿ ನಂಬುತ್ತೇವೆ.

ಸರಾಯಿಯನ್ನು ಸವಿಯದವರ ಜೀವನದ ಸವಿ.

ಬ್ರಿಟಿಷ್ ಆಡಳಿತದಿಂದಾದ ಅನೇಕ "ಸುಧಾರಣೆ"ಗಳಲ್ಲಿ ಜನರಲ್ಲಿ ಸರಾಯಿಯ ವ್ಯಸನವನ್ನು ಕಡಿಮೆ ಮಾಡುವುದಕ್ಕೆಂದು ಸರಾಯಿಯ ಮೇಲೆ ಕರ, ಸುಂಕ, ಮುಂತಾದ್ದನ್ನು ಹೇರಿ ಅದರಿಂದ ಸರಕಾರದವರು ತಮ್ಮ ಬೊಕ್ಕಸವನ್ನು ತುಂಬಿಕೊಳ್ಳುವ ಉದ್ಯೋಗವು ಒಂದಾಗಿದೆ. ಈ ಲೇಖನದಲ್ಲಿ, ಬಹಳ ವರ್ಷಗಳಿಂದ ಸರಾಯಿಯ ಸವಿಯನ್ನು ಕಂಡ ಅಮೇರಿಕಾ ದೇಶವು ಆ ವ್ಯಸನದಿಂದ ಹೇಗೆ ಪಾರಾಯಿತೆಂಬುದನ್ನು, ಹೀಗೆ ಮದ್ಯದಿಂದ ಮುಕ್ತರಾದ ಅಮೇರಿಕನರು ಈಗ ಹೇಗೆ ಸುಖಿಗಳಾಗಿಯೂ ಸಧನರಾಗಿಯೂ ಇದ್ದಾರೆಂಬುದನ್ನು ಹೇಳುವೆವು. ಅದರಿಂದ ನಮ್ಮ ಆಳರಸರು ಮದ್ಯದ ಕಾರಖಾನೆಗಳನ್ನು ನಿಲ್ಲಿಸಿಬಿಡುವುದೂ, ಮದ್ಯ ಮಾರುವ ಅಂಗಡಿಗಳನ್ನು ಮುಚ್ಚಿ ಬಿಡುವುದೂ ಸಾಧ್ಯವಿಲ್ಲವೆಂಬುದಕ್ಕೆ ಕೊಡುವ ಕಾರಣಗಳು ಎಷ್ಟು ಟೊಳ್ಳಾಗಿರುವವೆಂಬುದು ಕೂಡ ಗೊತ್ತಾಗುವುದು. ಈ ವಿಷಯದಲ್ಲಿ ಅಮೇರಿಕೆಯು ಎಲ್ಲಾ ಜನಾಂಗಗಳಿಗೂ ಆದರ್ಶಭೂತವಾಗಿದೆ.

ಅಮೇರಿಕದಲ್ಲಿಯ ಯುನೈಟೆಡ್ ಸ್ಟೇಟ್ಸಿನಲ್ಲಿ ಸರಾಯಿಯ ವ್ಯಸನವನ್ನು ಬೇರು ಸಹಿತವಾಗಿ ಕಿತ್ತು ಹಾಕಿದ ಯಶಸ್ಸು ಮಿ॥ ಪುಸ್ಸಿಫೂಟ್ ಜಾನ್‌ಸನ್‌ರಂಥ ಮುಂದಾಳುಗಳಿಗೆ ಸಲ್ಲತಕ್ಕದ್ದಿರುತ್ತದೆ. ಅವರ ಇತಿಹಾಸವನ್ನು ಶ್ರೀಯುತ ... ಸಿಹಲಸಿಂಗರು ಒಳ್ಳೇ ಚಿತ್ತಾಕರ್ಷಕವಾಗಿ ಸುರಾಭಿಲಾಷಿಗಳಿಗೆ ಸಹ ಸುಸಂಗತ ಸವಿಯಾಗುವಂತೆ ... ಭವಾದ ಮತ್ತು ಸುಂದರವಾದ ಭಾಷೆಯಲ್ಲಿ ಬರೆದಿರುವರು. ಈ ವಿಷಯದ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳಬಿಚ್ಛಿಸುವವರು "Dry America" ಎಂಬ ಪುಸ್ತಕವನ್ನು ಓದಬಹುದು.

ಅಮೇರಿಕದ ಮೂಲ ನಿವಾಸಿಗಳು ಕೆಂಪು ಬಣ್ಣದವರು. ಅವರಿಗೆ Red Indians ಎಂದು ಹೆಸರು. ಅವರಲ್ಲಿ ಸರಾಯಿಯ ವ್ಯಸನ ಬಹಳ ಕಡಿಮೆ. ಯುರೋಪಿಂದ—ಮುಖ್ಯವಾಗಿ ಇಂಗ್ಲೆಂಡಿನಿಂದ ಹೋದ ಕ್ರೈಸ್ತ ಜನರು ಈ ವ್ಯಸನದ ಬೀಜವನ್ನು ಆ ಮೂಲ ನಿವಾಸಿಗಳಲ್ಲಿ ಮೊದಲು ಬಿತ್ತಿದರು. ಯುರೋಪಿನ ಜನರಲ್ಲಿ ಈ ವ್ಯಸನವು ಬಹಳ ಪುರಾತನ ಕಾಲದಿಂದ ಬಂದದ್ದು ಆಗಿರುತ್ತದೆ. ಈ ವ್ಯಸನದಿಂದ ಸರಕಾರಗಳಿಗೆ ಉತ್ಪತ್ತಿಯು ಬರುತ್ತಿದ್ದುದರಿಂದ ಅವರು ಅದನ್ನು ನಿಲ್ಲಿಸಿಬಿಡುವುದಕ್ಕೆ ಯಾವಾಗಲೂ ಹಿಂಜರಿಯುತ್ತಾರೆ. ೧೯೧೮—೧೯ನೆಯ ಇಸವಿಯಲ್ಲಿ ಅಮೇರಿಕದಲ್ಲಿ ಸರಾಯಿಯ ಉತ್ಪನ್ನವು ೪೮,೨೫೬,೮೨೯ ಡಾಲರ ಇತ್ತು. ಇದು ಸರಾಸರಿಯಿಂದ ಪ್ರತಿಯೊಬ್ಬನಿಗೆ ೫ ಡಾಲರ ತಲೆ ಬೀಳುತಿತ್ತು. (ಒಂದು ಡಾಲರ ಅಂದರೆ ಸುಮಾರು ೩ ರೂಪಾಯಿ)

೧೮೫೧ ರಿಂದ ೧೯೦೫ನೆಯ ಇಸವಿಯ ವರೆಗೆ ಅಮೇರಿಕದಲ್ಲಿಯ ಸಣ್ಣ ಸಂಸ್ಥಾನಗಳು ಸರಾಯಿಯ ಗಡಂಗನ್ನು ನಿಲ್ಲಿಸಿಬಿಡುವ ಕುರಿತು ಅನೇಕ ಉಪಾಯಗಳನ್ನು ಕೊಂಡವು. ಅದಲ್ಲದೆ ಬೇರೆ ಅನೇಕ ಸಂಸ್ಥೆಗಳು ಮದ್ಯಪಾನ ನಿಷೇಧದ ಆಂದೋಲನಗಳನ್ನು ಮಾಡಿದವು. ಆದರೆ ೧೮೬೫ರಲ್ಲಿ ದಕ್ಷಿಣ ಮತ್ತು ಉತ್ತರ ಅಮೇರಿಕೆಗಳಲ್ಲಿ ಆದ ಯುದ್ಧದ ಸಮಾಪ್ತಿಯ ನಂತರ ಮದ್ಯದ ವ್ಯಾಸಂಗವು ಹೆಚ್ಚು ಬೆಳೆಯಿತು. ಅದಕ್ಕಿಂತ ಮುಂಚೆ ಮದ್ಯವನ್ನು ಬಹಿಷ್ಕರಿಸುವ ಅನೇಕ ಕಾಯಿದೆಗಳು ಮಾಡಲ್ಪಟ್ಟಿದ್ದವು. ಅವೆಲ್ಲ ಈ ಯುದ್ಧದ ಅನಂತರ ರದ್ದು ಮಾಡಲ್ಪಟ್ಟವು. ಅದರಿಂದ ೧೮೬೫ರಿಂದ ಮುಂದೆ ೧೯೧೦ರ ವರೆಗೆ ಅಮೇರಿಕದ ಮದ್ಯಪಾನವು ಅತಿಶಯವಾಗಿ ಬೆಳೆಯಿತು. ನಡುನಡುವೆ ಮದ್ಯಪಾನದವರಿಗೆ ಸ್ವಲ್ಪ ಇಳಿಕೆಯ ಕಾಲವು ಬರುತಿತ್ತು. ಆದರೆ ಒಟ್ಟಿನ ಮೇಲಿಂದ ನೋಡಲು ಈ ಕಾಲದಲ್ಲಿ ಮದ್ಯಪಾನವು ಬೆಳೆಯುತ್ತಲೇ ಇತ್ತು. ಅಮೇರಿಕದಲ್ಲಿದ್ದ ಬೇರೆಬೇರೆ ಸಂಸ್ಥಾನಗಳಿಗೆ ಮದ್ಯಪಾನವನ್ನು ನಿಲ್ಲಿಸುವ ಅಧಿಕಾರವಿದೆಯೆಂಬ ಚರ್ಚೆಯು ಆಯಿತು. ಪಂಡಿತರಲ್ಲಿ ಈ ಕಾಲದ ... ವೃತ್ತಪತ್ರಗಳಲ್ಲಿ ದೊಡ್ಡ ವಾದವು ನಡೆಯಿತು. ಸರಾಯಿಯನ್ನು ಮಾಡುವ ಉದ್ಯೋಗದಲ್ಲಿ ತೊಡಗಿದ ಹಣಗಾರರು ಮತ್ತು ಸರಾಯಿಯನ್ನು ಮಾರುವದರಲ್ಲಿ ಉದ್ಯುಕ್ತರಾದ ವರ್ತಕರು ಸ್ವಹಿತಪರಾಯಣರಾಗಿ ... ಕಸುಬಿನಿಂದ ಮದ್ಯಪಾನ ನಿಷೇಧದ ಚಳವಳಿಯನ್ನು ಸೋಲಿಸಲಿಕ್ಕೆ ವಿಶ್ವಪ್ರಯತ್ನ ಮಾಡಿದರು. ೧೯೧೭ನೆಯ ಇಸವಿಯ ಜನವರಿ ತಿಂಗಳಲ್ಲಿ ಅಮೇರಿಕದ ಸುಪ್ರೀಮ್ ಕೋರ್ಟಿನವರು ನಿರ್ಣಯ ಕೊಟ್ಟದ್ದೇನೆಂದರೆ—'ಯಾವುದೊಂದು ಸಂಸ್ಥಾನಕ್ಕೆ ಮದ್ಯದ ಆಮದು (Import) ನಿಲ್ಲಿಸಿಬಿಡುವ ಹಕ್ಕು ಇಲ್ಲವೆಂದು ಹೇಳುವದಕ್ಕೆ ಆಗುವದಿಲ್ಲ.' ಈ ನಿರ್ಣಯದ ಮೂಲಕ ದಕ್ಷಿಣ ಸಂಸ್ಥಾನಗಳಲ್ಲಿ ಮದ್ಯಪಾನ ನಿಷೇಧದ ಚಳವಳವು ಹೆಚ್ಚು ಭರದಿಂದ ನಡೆಯಿತು. ದಕ್ಷಿಣ ಸಂಸ್ಥಾನಗಳ ಪ್ರಜೆಗಳಲ್ಲಿ ನೀಗ್ರೋ ಜನರು ಹೆಚ್ಚು. ಅವರು ಸರಾಯಿಯನ್ನು ಕುಡಿಯುವವರಾಗಿ ... ಆ ಕಾರಣ ಮದ್ಯಪಾನವನ್ನು ನಿಲ್ಲಿಸುವ ವಿಷಯದಲ್ಲಿ ... ರಿಂದ ಹೆಚ್ಚಿಗೆ ಕೆಲಸ ಮಾಡಿದವರು ಮುಂದಾಳುಗಳು ... ದ್ದರು. ಆದುದರಿಂದ ಈ ವ್ಯಸನವು ಆ ನೀಗ್ರೋ ಜನರಲ್ಲಿ ಹಬ್ಬಬಾರದೆಂದು ಅವರು ಪ್ರಯತ್ನ ಮಾಡುತ್ತಿದ್ದರು.

೧೯೧೮ನೆಯ ಇಸವಿಯಲ್ಲಿ ಮಹಾಯುದ್ಧದ ... ಗಿ ಮದ್ಯಪಾನ ಪ್ರತಿಬಂಧದ ಕಟ್ಟಳೆಯಾಯಿತು. ... ಮೇ ಯುದ್ಧವು ಮುಗಿದ ಬಳಿಕ ಕೂಡ ಉಳಿಯಿ...

ಈ ತರದ ಕಟ್ಟಳೆಯನ್ನು ಮಾಡುವುದಕ್ಕೆ ಸರಕಾರಕ್ಕೆ ಅಧಿಕಾರವೇ ಇಲ್ಲವೆಂದು ನಿರ್ಣಯಿಸುವ ಬಗ್ಗೆ ಸುಪ್ರೀಮ್ ಕೋರ್ಟಿನಲ್ಲಿ ದಾವೆ ಆಯಿತು. ೧೯೨೧ನೆಯ ಇಸವಿಯಲ್ಲಿ ಈ ತರದ ಕಟ್ಟಳೆಯು Unconstitutional ಅಂದರೆ ಕಟ್ಟಳೆಗೆ ಸೇರಿದ್ದು ಅಲ್ಲವೆಂದು ನಿರ್ಣಯವಾಯಿತು.

ಸರಾಯಿಯ ಸವಿಯನ್ನು ಜನರಲ್ಲಿ ಹುಟ್ಟಿಸುವುದರಿಂದ ಜನರ ಮೇಲೆ ಆಗುವ ದುಷ್ಪರಿಣಾಮಗಳನ್ನು ವರ್ಣಿಸುವುದಕ್ಕಿಂತ ಸರಾಯಿಯ ವ್ಯಸನವನ್ನು ಬೇರುಸಹಿತ ಕಿತ್ತುಹಾಕುವುದರಿಂದ ಜನತೆಯಲ್ಲಿ ನೆಲೆಗೊಳ್ಳುವ ಸುಖಸಾಧನಗಳ ಭೋಗಗಳನ್ನು ಹೇಳುವುದು ಹೆಚ್ಚು ಹಿತವಾದುದು.

ಸರಾಯಿಯು [illegible] ದೊಡ್ಡ ದೊಡ್ಡ ಕಾರಖಾನೆಗಳಲ್ಲಿಯು ಕೂಲಿಕಾರರಿಂದ ಆಗುವ ಕೆಲಸವು ಹೆಚ್ಚುತ್ತ ಬಂದಿತು. ಕೂಲಿಕಾರರು ಕಾಲಕ್ಕೆ ಸರಿಯಾಗಿ ಕೆಲಸಕ್ಕೆ ಉದ್ಯೋಗಕ್ಕೆ ಬರಹತ್ತಿದರು. ರವಿವಾರ ದಿವಸ ಯಥೇಷ್ಟವಾಗಿ ಸರಿ ಕುಡಿದು ಸೋಮವಾರ ದಿವಸ ಕೆಲಸವನ್ನು ತಪ್ಪಿಸಿಬಿಡುವುದು ಅವರಿಗೆ ಮುಂಚೆ ವಾಡಿಕೆಯಾಗಿತ್ತು. ಆ ವೇಳೆಗೆ ಸಂಬಳವು ಕೈಯಲ್ಲಿ ಬಿದ್ದಿತೆಂದರೆ ತೀರಿತು, ಮುಂದೆ ಒಂದೆರಡು ದಿನ ಕೆಲಸವನ್ನು ತಪ್ಪಿಸಿಯೇ ಬಿಡುತ್ತಿದ್ದರು. ಸರಾಯಿಯನ್ನು ನಿಲ್ಲಿಸಿದ ಬಳಿಕ ಇದೆಲ್ಲವೂ ಕಡಿಮೆಯಾಯಿತು. ಹಾಗೆಯೇ ಕಾರಖಾನೆಗಳಲ್ಲಿ ಸರಾಯಿಯನ್ನು ಕುಡಿಯುವುದರಿಂದ ಹೆಚ್ಚಿಗೆ ಅಪಘಾತಗಳಾಗುತ್ತಿದ್ದುವು. ಅವು ಮುಂದೆ ಕಡಿಮೆಯಾದವು. ಅವರಲ್ಲಿಯ ಜಗಳಗಳೂ, ಹೊಡೆದಾಟ ಬಡಿದಾಟಗಳೂ ಕಡಿಮೆಯಾದುವು.

ಸರಾಯಿಯ ಕಾರಖಾನೆಗಳಿಗೆ ಬೀಗ ಹಾಕುವುದರಿಂದ ಮಿಕ್ಕ ಕಾರಖಾನೆಗಳೂ ಬಿಡತಕ್ಕ ಹೋಗುವವೆಂದು ಸರಾಯಿಯ ಉದ್ಯೋಗಸ್ಥರು ಮುಂಚೆ ಹೆದರಿದ್ದರು. ಸರಾಯಿಯು ಸಿದ್ಧತೆಗಾಗಿ ಲಕ್ಷಾಂತರ ಡಾಲರು ಕ್ರಯದ ಹತ್ತು ಕೋಟ್ಯವಧಿ ರೂಪಾಯಿಗಳ ಧಾನ್ಯ, ದ್ರಾಕ್ಷೆಯ ರಸ ಮುಂತಾದವುಗಳು ಬೇಕಾಗುತ್ತವೆ. ಸರಾಯಿಗೆ ಗಿರಾಕಿಗಳು ದೊರೆಯದಿದ್ದರೆ ಇವುಗಳ ವ್ಯಾಪಾರವು ನಿಂತು ಒಕ್ಕಲಿಗರಿಗೆ ಬಹಳ ಹಾನಿಯಾಗುವುದೆಂದು ಅವರು ಒಕ್ಕಲಿಗರ ಮನಸ್ಸಿನಲ್ಲಿ ಅಂಜಿಕೆಯನ್ನು ಹುಟ್ಟಿಸಿದರು. ತಿಳಿಗೇಡಿಗಳಾದ ಒಕ್ಕಲಿಗರು ಅದೆಲ್ಲವೂ ನಿಜವೆಂದು ನಂಬಿ ಮದ್ಯಪಾನ ನಿಷೇಧವನ್ನು ವಿರೋಧಿಸ ತೊಡಗಿದರು. ಆದರೆ ಈ ಮಿಥ್ಯಾವಾದದ ಹುಸ್ತಕೆಯು ತೋರಬೀಳಲಿಕ್ಕೆ ಬಹಳ ಕಾಲ ಬೇಕಾಗಲಿಲ್ಲ. ಮದ್ಯಪಾನದ ಯುಗದಲ್ಲಿ ಕೂಲಿಕಾರರ ಸಂಬಳದ ದೊಡ್ಡ ಭಾಗವು ಗಡಂಗದ ಹಾದಿಯನ್ನು ಹಿಡಿಯುತ್ತಿತ್ತು. ಗಡಂಗಗಳು ಬಂದಾದ ಅನಂತರ ಕೂಲಿಕಾರರು ಆ ಹಣವನ್ನು ಕಾಳುಕಡ್ಡಿ, ಹಣ್ಣುಹಂಪಲ ಮೊದಲಾದವುಗಳನ್ನು ಕೊಳ್ಳುವುದರಲ್ಲಿ ಉಪಯೋಗಿಸ ತೊಡಗಿದರು. ಅದರಿಂದ ಒಕ್ಕಲಿಗರು ಮೊದಲಿಗೆ ಅಂಜಿದಂತೆ, ಗಿರಾಕಿಗಳು ಕಡಿಮೆಯಾಗದೆ ಬದಲು ಅದರ ಸಂಖ್ಯೆ ಹಿರಿತು. ಕೂಲಿಕಾರನಿಗೆ [illegible] ಸೆಂಟಿನ ಬಡ ಆಹಾರದ ಮೇಲೆ ಜೀವಿಸಬೇಕಾಗುತ್ತಿತ್ತು. ಮುಂದೆ ಆತನು ೫೦–೬೦ ಸೆಂಟುಗಳ ಮೃಷ್ಟಾನ್ನವನ್ನು ಉಣ್ಣಲುಪಕ್ರಮಿಸಿದನು.

ಡೈರೀ ಸೊಸೈಟಿಗಳು — ಅಂದರೆ ಶುದ್ಧ ಹಾಲು ಮಾರುವ ಸಂಸ್ಥೆಗಳು ಈಗ ಹೆಚ್ಚು ಹಾಲನ್ನು ಮಾರುತ್ತಿರುವವು. ಐಸ್‌ಕ್ರೀಮಿನ ವ್ಯಾಪಾರವು ಇಮ್ಮಡಿ ಬೆಳೆದಿದೆ. ಬೆಣ್ಣೆಯು ಇಮ್ಮಡಿ ಖರ್ಚಾಗುತ್ತದೆ. ಹಾಲಿನ ಮಾರಾಟವು ೧೦೦ಕ್ಕೆ ೪೨ರಂತೆಯೂ, ಕಾಫಿಯ ಮಾರಾಟವು ೧೦೦ಕ್ಕೆ ೨೫ರಂತೆಯೂ, ಮಿಠಾಯಿಗಳ ಮಾರಾಟವು ೧೦೦ಕ್ಕೆ ೫೦ರಂತೆಯೂ ಏರಿವೆ.

(ಮುಂದುವರಿಯುವುದು)

ಮಡಿಕೇರಿ ಹುಡುಗಿಯರ ಹೈಸ್ಕೂಲ್ ಹಾಲ್.

ಮಡಿಕೇರಿ ಹುಡುಗಿಯರ ಹೈಸ್ಕೂಲಿಗೆ ಒಂದು ಹಾಲ್ ನ್ನು ಕಟ್ಟಿಸುವ [illegible] ದಯವಿಟ್ಟು ದ್ರವ್ಯ ಸಹಾಯ ಕೊಟ್ಟಿರುವರೆಂದು ತಿಳಿಸಲು ಮಿಸಸ್ [illegible] ಮತ್ತು ಮಿಸಸ್ [illegible]. ಹಾಲ್‌ನ ಅಸ್ತಿಭಾರವನ್ನು ಮೈಸೂರಿನ [illegible] ನೆರವೇರಿಸಲಾಗಿದೆ.

ನಾಮಧಾರಿ ಮಿಸ್ಟರ್ & ಮಿಸಸ್ ಸ್ಟ್ಯೂವರ್ಟ್ ಹೀಯು ರೂ. ಸ್ಟರವರು,	500
ಮಿಸೆಸ್ ಕೊಡಂದೆರ ಕುಟ್ಟಯ್ಯನವರು,	1000
ಮಿಸ್ಟರ್ & ಮಿಸಸ್ ಕೋದಂಡ ಅಪ್ಪಯ್ಯನವರು,	500
ಮಿಸ್ಟರ್ & ಮಿಸಸ್ ಕೊರವಂಡ ಮುತ್ತಣ್ಣನವರು,	1000
ಮಿ. ಅಪ್ಪಾರಂಡ ಕಾರ್ಯಪ್ಪ ಬಾಚ್ ಎಟ್ ಲಾ ರವರು	1000
ಮಿಸ್ಟರ್ & ಮಿಸಸ್ [illegible] ಚಂಗಪ್ಪನವರು,	500
” ” ಕೋದಂಡ [illegible]ಪ್ಪನವರ,	500
” ” ” ದೇವಯ್ಯನವರು,	1000
” ” ಅಪ್ಪಾರಂಡ ಪೂವಪ್ಪನವರು,	500
” ” ಕುಟ್ಟೀಟಿರ ಸುಬ್ಬಯ್ಯನವರು,	500
” ” [illegible]ದಂದೆರ ತಿಮ್ಮಯ್ಯನವರು	1000

ಸೆಂಟ್ರಲ್ ಬ್ಯಾಂಕು ಮೀಟಿಂಗು

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಖು 25 ರಲ್ಲಿ ನಡೆಯಿತು. ಹಾಜರಿದ್ದ ಮೆಂಬರುಗಳು:—ರಾ. ಬಾ. ಕೋದಂಡ ಅಪ್ಪಯ್ಯನವರು (ಪ್ರೆಸಿಡೆಂಟರು), 2. ರಾವ್‌ಸಾಹೇಬ್ ಪಟ್ಟಮಾಡ ದೇವಯ್ಯನವರು, ಮೆಂಬರಾದ 3. ಯಮ್. ಮುದ್ದಪ್ಪನವರು, 4. ಮನೆಯಪಂಡ ಚಿಣ್ಣಪ್ಪನವರು, 5. ಕೊಂಗಟ್ಟಿರ ಅಪ್ಪಯ್ಯನವರು (ಟ್ರೆಜರರ್), 6 ಪಾಡ್ಯಂಡ ಬೆಳ್ಯಪ್ಪನವರು, 7. ನಾಪನೆರವಂಡ ಪೊಣ್ಣಪ್ಪನವರು, 8 ಸಿ. ಯಮ್ ವೆಂಕಟ್ಟಯ್ಯನವರು (ಗೌರವ ಕಾರ್ಯದರ್ಶಿ.)

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಜುಲೈ ತಿಂಗಳ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. 1. ಅರ್ವತ್ತೊಕ್ಲು ಸೊಸೈಟಿಗೆ ರೂ 500, 2. ಕುಂದ ಸೊಸೈಟಿಗೆ ರೂ. 700, 3. ಹೊದವಾಡ ಸೊಸೈಟಿಗೆ ರೂ. 1000, ಮತ್ತು 4. ಬೆಂಗಳೂರು ಸೊಸೈಟಿಗೆ ರೂ. 500.

4. ಪೊನ್ನಂಪೇಟೆ ಟೌನ್, ಕೈಕೇರಿ, ಶನಿವಾರಸಂತೆ ಟೌನ್ ಮತ್ತು ಬಿದರೂರು ಸೊಸೈಟಿಗಳಿಗೆ ಕಾರಣಾಂತರಗಳಿಂದ ಸಾಲ ಮಂಜೂರಾಗಲಿಲ್ಲ.

5 ಇನ್ನು 10,000 ರೂ. ಡಿಪಾಜಿಟ್ಟು ತೆಗೆದುಕೊಳ್ಳಬಹುದೆಂತಲೂ, ಹಾಗೆ ಡಿಪಾಜಿಟ್ಟು ಸಿಕ್ಕಿದ ಪಕ್ಷ ರೂ. 5,000 ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿಯೂ, ರೂ 5,000 ಮೈಸೂರು ಬ್ಯಾಂಕಿನಲ್ಲಿಯೂ ಡಿಪಾಜಿಟ್ಟು ಇಡಬೇಕೆಂತಲೂ ತೀರ್ಮಾನವಾಯಿತು.

ಕೆ ಅಪ್ಪಯ್ಯ,
(ಅಧ್ಯಕ್ಷರು)

ಮಾರಾಟಕ್ಕಿದೆ.

ನನ್ನ ಬಾಬ್ತು ಶನಿವಾರಸಂತೆ ಹೋಬಳಿ ಹುಲುಸೆ ಗ್ರಾಮದಲ್ಲಿರುವ [illegible] ಎಕರೆ ಕಾಫಿ ತೋಟದ [illegible] 3 ಎಕರೆ [illegible] ಮತ್ತು 5 [illegible] 10 ಎಕರೆ ಕುಶ್ಕಿ ಜಮೀನು, ಇದಲ್ಲದೆ 9 ಎಕರೆ ಕಾಫಿ [illegible] ಜಾಗ ಸಹ ಮಾರಾಟಕ್ಕಿದೆ. ಈ ತೋಟಕ್ಕೆ [illegible] ಮೈಲು ದೂರದಲ್ಲಿ [illegible] ಹೋಗುವ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಯು [illegible] ಮಂಗಳೂರು [illegible] [illegible] ತಿಳಿಯಬೇಕಾಗುವುದು.

ಶನಿವಾರಸಂತೆ,   ಜೆ. ಪಿ. ಬಸವಣ್ಣಯ್ಯ,
ತಾ. 23—8—29.   ಪ್ಲಾಂಟರು,
4—1   ದೇವರಳ್ಳಿ ಎಸ್ಟೇಟ್.

ಬೇಕಾಗಿದೆ.

ಶ್ರೀಮತಿ ಡಿ. ನಾಗಮ್ಮನವರ (1) ಕುಸುಬೂರು, (2) ಮೂದರಪ್ಪರ (3) ಚನ್ನ ಕಾಫಿ ತೋಟಗಳಿಗೆ ಸೂಲಗಿತಿಯ ಕೆಲಸದಲ್ಲಿ ಮತ್ತು [illegible] ಉಪಚಾರದಲ್ಲಿ ತರಬೇತು ಹೊಂದಿರುವ ಮೂವರು [illegible] ಬೇಕಾಗಿದ್ದಾರೆ. ಸಂಬಳ ವಗೈರೆಗಳಿಗೆ [illegible] ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಜನರಲ್ ಮೇನೇಜರು,
ಕುಸುಬೂರು ತೋಟ,
ಸೋಮವಾರಪೇಟೆ,
(ಉ. ಕೊಡಗು)

ಮಡಿಕೇರಿ-ಭಾಗಮಂಡಲ-ಸುಂಟಿಕೊಪ್ಪ ಬಸ್ಸು ಓಟರುಗಳಲ್ಲಿ ರಾವು ಬಹದೂರ್ ಚೋಡಿಮಣಿಯಂಡ ಸುಬ್ಬಯ್ಯನ

ವಿಜ್ಞಾಪನೆ.

[illegible] ಬರುವ ಸಪ್ಟಂಬರ್ ತಿಂಗಳ 27ನೇ ಶುಕ್ರವಾರ ದಿನ [illegible] ಯುವ ಸ್ಟೇಶನುಗಳಿಗೆ [illegible] ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.   ಇಂತಿ ತಮ್ಮ ಸೇವಕ,
ಚೋಡಿಮಣಿಯಂಡ ಸುಬ್ಬಯ್ಯ.
ಮಡಿಕೇರಿ 2[illegible]—8—29   4—1

ನೋಟೀಸು.

ಹಾಸನದ ಡಿಸ್ಟ್ರಿಕ್ಟ್ ಅರಕಲಗೂಡು ತಾಲೋಕು, ರಾಮನಾಥಪುರದಲ್ಲಿ ನಡೆಯುವ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ರಥೋತ್ಸವದ ಕಾಲದಲ್ಲಿ 1929ನೇ ಡಿಸೆಂಬರು ತಾರೀಖು ೬ರ ಆರಭ್ಯ ೮ರ ವರೆಗೆ ದನಗಳ ಪ್ರದರ್ಶನ ನಡೆಸಲ್ಪಡುವುದು. ಹೆಚ್ಚಿಗೆ ವಿಷಯ ತಿಳಿಯ ಬಯಸುವವರು ಹಾಸನದ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಿಗೆ ಬರೆದುಕೊಳ್ಳಬಹುದು.

ಹಾಸನ   ಎನ್. ಎಸ್. ನಂಜುಂಡಯ್ಯ,
17—8—1929   ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡು
3—1.

ನೋಟೀಸು.

ಮಡಿಕೇರಿ ಮುನ್ಸಿಪಾಲಿಟಿ ಆಫೀಸಿನಿಂದ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಮಡಿಕೇರಿ ಮುನ್ಸಿಪಾಲಿಟಿ ದಾಸವಾಳ ಕೆರೆ ಬಳಿಯಿರುವ ಹಳೇ ಮುನ್ಸಿಪಲ್ ಕಟ್ಟಡವನ್ನು ಅಂದರೆ ಗೋಡೆಯ ಇಟ್ಟಿಗೆ, ಮರದ ಸಾಮಾನುಗಳು ಮತ್ತು ಹಂಚು ಸಹ 1929 ನೇ ಸೆಪ್ಟಂಬರ್ ತಿಂಗಳು 7 ನೇ ಶನಿವಾರ ದಿನ ಬೆಳಿಗ್ಗೆ 10½ ಘಂಟೆ ಸಮಯಕ್ಕೆ ಸ್ಥಳದಲ್ಲಿ ಪ್ರೆಸಿಡೆಂಟರವರ ರೂಬರೂ ಹರಾಜು ಮಾಡಲ್ಪಡುತ್ತೆ.

ಕಾಯಿಲ್‌ವಾರರು ಸದ್ರಿ ದಿನ ಸಮಯಕ್ಕೆ ಸರಿಯಾಗಿ ಹಾಜರಾಗಿ ಹರಾಜು ಮೂಲಕ ಪಡಕೊಳ್ಳಬಹುದಾಗಿ ಈ ಮೂಲಕ ತಿಳಿಯಪಡಿಸಿದೆ

ಪಿ. ದೇವಯ್ಯ,
ತಾ 22—8—1929.   1—1   ಪ್ರೆಸಿಡೆಂಟ್.

FOR SALE.

One solo Triumph 4 94 H P Motor Cycle in perfect running order with original tyres very sparingly used, is for sale

Please apply to—

M.
C/o Manager
Kodagu

ನೋಟೀಸು.

[illegible] ಡಿಸ್ಟ್ರಿಕ್ಟ್ ಮಂಜರಾಬಾದ್ ತಾಲೋಕಿನಲ್ಲಿ [illegible] 1 ಮೈಲಿ ದೂರದಲ್ಲಿರುವ ಹುತ್ತವಾಹಕ ಸುಬ್ರಹ್ಮಣ್ಯ ಮತ್ತು ವಣಗೂರು ಮಲ್ಲಿಕಾರ್ಜುನ [illegible] ಜಂಕ್ಷನ್ ಅಂದರೆ ಹ[illegible] ಕೂಡುಗೆ ಬಳಿ ಸುಬ್ರಹ್ಮಣ್ಯದ ಜಾತ್ರೆಗೆ ಮುಂಚಿತವಾಗಿ 1929ನೇ ಇಸವಿ ನವಂಬರು 13ನೇ ತಾರೀಖು ಬುಧವಾರದ ಆರಭ್ಯಯಿಸಿ ನವಂಬರು 16ನೇ ತಾರೀಖು ಶನಿವಾರದ ವರೆಗೆ ದನಗಳ ಪ್ರದರ್ಶನವನ್ನು ನಡೆಸುತ್ತಾರಾಗಿ, ಆ ಕಾಲದಲ್ಲಿ ಸೇರುವ ದನಗಳ ಮೇಲೆ ಫೀ ವಸೂಲ್ಮಾಡುವುದಿಲ್ಲವಾಗಿಯೂ, ಆ ಸ್ಥಳದಲ್ಲಿ ಮೇವಿನ ಸೌಕರ್ಯ ಮತ್ತು ನೀರಿನ ವಸತಿ ಚೆನ್ನಾಗಿರುತ್ತಾಗಿಯೂ, ಜನ ಮತ್ತು ಜಾನುವಾರುಗಳಿಗೆ ವೈದ್ಯ ಸಹಾಯವನ್ನು ಏರ್ಪಡಿಸುತ್ತೆಯಾಗಿ ಜನಗಳಿಗೆ ಈ ಮೂಲಕ ತಿಳುವಳಿಕೆ ಕೊಟ್ಟಿದೆ. ಉಂಬಳಿಕ್ಕಾದ ರಾಸುಗಳಿಗೆ ಬಹುಮಾನವು ಕೊಡಲ್ಪಡುತ್ತೆ. ಹೆಚ್ಚಿಗೆ ವಿವರ ತಿಳಿಯಬೇಕಾದಲ್ಲಿ ಹಾಸನದ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೆ ಬರೆದು ತಿಳಿದುಕೊಳ್ಳಬಹುದು.

ಹಾಸನ   ಎನ್. ಎಸ್. ನಂಜುಂಡಯ್ಯ,
6—8—29   ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡು.
1—1

Goldsmiths' Rolling Mills,
ಪಟ್ಟಿ ಮೆಷಿನುಗಳು.



ನಗ ಮಾಡುವವರು ಮತ್ತು ಅಕ್ಕಸಾಲೆಯವರು ಉಪಯೋಗಿಸುವ ಚಿನ್ನ ಮತ್ತು ಬೆಳ್ಳಿಯ ತಗಡುಗಳನ್ನು ಮಾಡುವ ಈ ಮಿಷ್ಣುಗಳಿಗೆ ನಾವು ಏಜಂಟರಾಗಿರುತ್ತೇವೆ. ಕ್ರಯ [illegible] ಮುಖ್ಯ ಪಟ್ಟಣಗಳಲ್ಲಿ ಸಬ್ ಏಜಂಟರುಗಳು ಬೇಕಾಗಿದ್ದಾರೆ. ಹೆಚ್ಚಿನ ಸಂಗತಿ ಮತ್ತು ಕೆಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳುವುದು.

Ch. Sobhanachalam & Sons.
Chilakalapudi P. O.
12—2   Masulipatam

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ

ಈ ಬಾಲಾಮೃತವನ್ನು ಕೂಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ೧ಕ್ಕೆ 0—14—0 ಟ ಖ 0—1—0.

ಕೆ. ಟಿ. ಡೋಂಗರೆ ಕಂಪೆನಿ,

52—48 ಗಿರಿಗಾಂವ, ಮುಂಬಯಿ.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges &

Hunting Requisites

for

SEASON

1929-30



CURRENT
CATALOGUE
ON APPLICATION

THE BOMBAY ARMOURY,

Specialist in Arms & Ammunition

30, ABDULREHMAN STREET

BOMBAY No 4

24—9

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಒಟ್ಟಿಗೆ ರಂಗಿಗೂ ಒಟ್ಟೆಯ ಸಮೂಹಗೂ ಮರುಳಾಗಿ ಪರದೇಶಿ ಒಟ್ಟೆಯನ್ನು ಕೊಂಡುಕೊಂಡು ಅನ್ನವಿಲ್ಲದೆ ಸಾಯುತ್ತಿರುವ ಲಕ್ಷಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡುತ್ತಿರುವಿರಲ್ಲ ಇಲ್ಲವೇ, ದಿನಕ್ಕೊಮ್ಮೆ ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ಸಾಯುತ್ತಿರುವ ಲಕ್ಷಾನುಲಕ್ಷ ಬಡವಾಯಿ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಒಟ್ಟೆಯನ್ನು ಕೊಂಡುಕೊಳ್ಳಲು ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಯೂ ಈ ರೀತಿಯಾಗಿ ನಮ್ಮ ಬಡ ದೇಶೀಯರ ಜೀವನಕ್ಕೆ ದಾರಿಯಾಗುತ್ತೆ.

	ರು	ಆ	ಪೈ
ಹತ್ತಿ ಬೆಳೆಯುವವನಿಗೆ	0	3	0
ಹತ್ತಿ ಬಿಡಿಸುವವನಿಗೆ	0	0	6
ಹತ್ತಿ ಹಿಂಜುವವನಿಗೆ	0	1	9
ನೂಲು ನೂಲುವವನಿಗೆ	0	3	9
ಒಟ್ಟೆ ನೇಯುವವನಿಗೆ	0	4	9
ಅಗಸನಿಗೆ	0	0	6
ಒಟ್ಟೆ ಅಂಗಡಿಗೆ ಸಾಗಿಸುವದಕ್ಕೆ	0	0	9
ಅಂಗಡಿಯವನಿಗೆ	0	1	0
	1	0	0

ಖಾದಿಯಿಂದ ಉಳಿದ್ದು ಪರದೇಶಕ್ಕೆ ಹೋಗುವ 60 ಕೋಟಿ ರೂಪಾಯಿ ಹೋಗುವದನ್ನು ನಿಲ್ಲಿಸಿ ಅಪೇಕ್ಷಿಸಿದಲ್ಲಿ ಬೇಕಾದ ಒಟ್ಟೆಯನ್ನು ನಿಮ್ಮ ಮನೆಯ ಬಾಗಿಲಿಗೆ ಒಪ್ಪಿಸಿ ತಂದು ಕೊಡುವೆವು.

ವ್ಯವಸ್ಥಾಪಕರು,
ಖಾದಿಭಂಡಾರ,

24—5 ವೀರರಾಜಪೇಟೆ

೧೦೦ ರೂಪಾಯಿ ಬಹುಮಾನ

☞ ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ } ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ { ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡುವಿರಿ

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ ಹೊಟ್ಟೆ ರೊಳೆ ಮಸ್ತಕ ಶೂಲೆ ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ ಮಂತ್ರಿ ಸರ್ಪಶಾಪ ಪಿಶಾಚಬಾಧೆಯಿಂದ ನರಳುವಿಕೆ ಬಿಳುಪು ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಇದಲ್ಲದೆ ಚಿಕ್ಕ ಮಕ್ಕಳಿಗೆ ೧೬ ವರುಷದ ವರೆಗೆ ಬಾಲಗ್ರಹ ದೋಷದಿಂದ ಅಕಸ್ಮಾತ್ ಸಂದುರೋಗ ಮುಟ್ಟುದೋಷ ಕಾಮಿಣಿ ಗ್ರಹಪೀಡೆ ದೃಷ್ಟಿದೋಷ ಭಯದಿಂದ ಜ್ವರ ಕ್ಷೀಣ ಹೊಂದುವಿಕೆ ಜಪ್ಪಿ ಇಡುವಿಕೆ ಮುಲಗಬೇನೆ ಹೊಟ್ಟೆಯೊಳಗಿಂದ ಎಳೋಣ ಮೊದಲಾದವುಗಳಿಂದ ಕಾಡುತ್ತಿರುವದು ಗರ್ಭ ರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಮಹಾ ಕಾಲದಲ್ಲಿ ಸಾಧುಸನ್ಯಾಸಿ ರುಷಿಗಳ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಚ್ಚು ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ದೂರವಾಗುವದು ಹೀಗಾಗದ ಸುಯಿತಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡಲ್ಪಡುವದು ಒಂದುಸಲ ತರಿಸಿ ಅನುಭವ ಕಳ್ಕೊಳ್ಳಿರಿ ಹೆಚ್ಚು ಮಕ್ಕಳಿಗೆ ಸಂತಾನ ದಿಂದ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨-೮-೦ ಪೋಸ್ಟ್ ಖರ್ಚು ಬೇರೆ ಆಗತಕ್ಕ ವಿಚಾರಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ ☞

ತಾಯಿತ ಸಿಗುವ ವಿಳಾಸ.—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52—8 **ಮು. ಪೋ. ಆಡಣಿ, ಜಿ. ಬೆಳಗಾಂವ.**

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಮೈ ಊದಿಕೆ, ಬಿಳುಪು ರಕ್ತಹೋಗುವಿಕೆ, ನರಗಳ ದುರ್ಬಲವಾಗಿ ಸಂಭೋಗ ಶಕ್ತಿ ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ ಜೀರ್ಣಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೂಲ, ಪಿತ್ತದ ವೃದ್ಧಿ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಒಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು —ಕ್ರಯ ಡಬ್ಬಿ 1 ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ 7—0—0

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0

೩. ಮಲೇರಿಯಾ ನಿವಾರಣಿ.

ದಿನ ಬಿಟ್ಟು ಬರುವ ಜ್ವರ, ಮಲೆ ಜ್ವರ, 2 ಯಾ 3 ದಿನ ಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಪ್ಲೀಹ ರಗೆಡ್ಡೆ ಇಂದ ಬರುವ ಜ್ವರವನ್ನು ನಿಲ್ಲಿಸಿ ಪ್ಲೀಹಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದುದು ಕಣ್ಣು ಉರಿ, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲುದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ ಬಾಟ್ಲಿ 1 ಕ್ಕೆ 1—1—0 3 ಕ್ಕೆ 3—8—0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0—8—0, 3ಕ್ಕೆ

೬. ಕಸ್ತೂರಿ ಮಿಶ್ರಣ.

ದಡ ಮುಲಾದಿಷ್ಟ ಬಾಣಂತಿಯರಿಗೆ ಬಾಟ್ಲಿ 1 ಕ್ಕೆ 3 ಬಾಟ್ಲಿಗೆ 4—4—0

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1 4 0, 3 ಬಾಟ್ಲಿಗೆ

೮. ಜೀವನ ಪ್ರಾಶ ಡಬ್ಬಿ 1 ಕ್ಕೆ 2—0—

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ. ಖುಲೆ ಸಂಗತಿ ವಿವರವಾಗಿ ಒರೆದಲ್ಲಿ ರೋಗಕ್ಕೆ ತಕ್ಕ ಔಷದಿ ರವಾನಿಸ ಲಾಗುವದು ಕೆಟಲಾಗು ತರಿಸಿ ನೋಡಿ

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್

52—42 ರಥಬೀದಿ ಮಂಗಳೂರು, ದ. ಕನ್ನ

ವರ್ತಮಾನ ಸಂಗ್ರಹ.

ಒಳದೇಶ.

ಈ ವಾರ ದೇಶದಲ್ಲಿ ಮಳೆ ಬಹಳ ಕಡಿಮೆಯಾಗಿ ಬಿಸಿಲು ಕಾಯುತ್ತಿದೆ.

ಈ ತಾ. 25ರಲ್ಲಿ ಬೆಳಿಗ್ಯೆ 8 ಗಂಟೆಗೆ ಪೊನ್ನಂಪೇಟೆ ಕುಶಾಲಪುರದಲ್ಲಿ ರಾಷ್ಟ್ರೀಯ ಧ್ವಜಾಭಿವಂದನೆಯು ನಡೆಯಿತು.

ಕೈಲ್‌ಮುಹೂರ್ತ ಹಬ್ಬವು ತಾಲ್ಲೂಕುನಾಡಿನಲ್ಲಿ ಈ ತಾ. 28 ರಲ್ಲೂ, ಕಡಿಯತ್ತುನಾಡಿನಲ್ಲಿ ತಾ. 29 ರಲ್ಲಿಯೂ ಆಚರಿಸಲ್ಪಟ್ಟಿತು. ಬಾಕಿ ಕಡೆಗಳಲ್ಲಿ ಸೆಪ್ಟಂಬರು ತಾ. 2 ಮತ್ತು 3 ರಲ್ಲಿ ಆಚರಿಸಲ್ಪಡುವುದು.

ಕೈಲ್‌ಪೋಳುದು ಹಬ್ಬದ ದಿನವಾದ ಸೆಪ್ಟೆಂಬರು ತಾ. 3ನೇ ಮಂಗಳವಾರ ಮೂನಾಡಿನವರು ಕಳೆದ ವರ್ಷದಂತೆ ಪಾಲಿಬೆಟ್ಟದಲ್ಲಿ ಮಧ್ಯಾಹ್ನದ ಮೇಲೆ ಗುರಿಗೆ ಗುಂಡು ಹೊಡೆಯುವುದು, ಓಡುವದು, ಹಾರುವದು ಮುಂತಾದ ವಿನೋದಗಳನ್ನು ನಡಿಸುವರೆಂದೂ, ಅಲ್ಲಿಗೆ ಎಲ್ಲರೂ ಹೋಗಬಹುದೆಂದೂ ತಿಳಿಯಬರುತ್ತದೆ.

ಇನ್ನು ಮುಂದೆ ವೀರಾಜಪೇಟೆ ಮುನ್ಸಿಪಲ್ ಕಮಿಟಿಗೆ ಯೂರೋಪಿಯನ್, ಆಂಗ್ಲೋ ಇಂಡಿಯನ್ ಮತ್ತು ಇಂಡಿಯನ್ ಕ್ರೈಸ್ತರ ಪರವಾಗಿ 2 ಪ್ರತಿನಿಧಿಗಳೂ, ಕೊಡಗರಲ್ಲದ ಹಿಂದುಗಳ ಪರ 4 ಪ್ರತಿನಿಧಿಗಳೂ, ಕೊಡಗರ(ಅಮ್ಮ ಕೊಡವರು ಮತ್ತು ಗೌಡುಗಳು ಸೇರಿ) ಪರ 2 ಪ್ರತಿನಿಧಿಗಳೂ, ಮುಸಲ್ಮಾನರ ಪರ 3 ಪ್ರತಿನಿಧಿಗಳೂ, ಒಟ್ಟು 11 ಪ್ರತಿನಿಧಿಗಳು ಚುನಾಯಿಸಲ್ಪಡತಕ್ಕದೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಈ ತಾ. 22 ರಲ್ಲಿ ನಡೆದ ಮಡಿಕೇರಿ ಕೊಡವ ಮೀಟಿಂಗಿನಲ್ಲಿ ತೀರ್ಮಾನಿಸಿದಂತೆ ಕೈಲ್‌ಪೋಳುದು ಹಬ್ಬದ ದಿನ (ತಾ. 3—9—29) ಕ್ರಿಕೆಟ್ ಮೈದಾನದಲ್ಲಿ ತೆಂಗಿನಕಾಯಿಗೆ ಗುರಿ ಹೊಡೆಯುವುದು ಮುಂತಾದ ಆಟೋಟಗಳನ್ನು ನಡಿಸುವುದಲ್ಲದೆ, ಆ ರಾತ್ರಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ಔತಣವನ್ನೂ ಏರ್ಪಡಿಸುವರೆಂದು ತಿಳಿಯಬರುತ್ತದೆ.

ಪೋಲೀಸು ಸಬ್ ಇನ್‌ಸ್ಪೆಕ್ಟರು ಉದ್ಯೋಗದ ಚುನಾವಣೆ ಬಗ್ಯೆ ಅರ್ಜಿದಾರರು ಸೆಪ್ಟೆಂಬರು ತಾ 9 ರಲ್ಲಿ ಬೆಳಿಗ್ಯೆ 10 ಗಂಟೆಗೆ ಮಡಿಕೇರಿಯಲ್ಲಿ ಕಮಿಟಿಯ ಮುಂದೆ ಹಾಜರಾಗಬೇಕೆಂತಲೂ, ಆಗ್ಯೆ ಅವರು ತಮ್ಮ ನಡತೆ ನೀತಿಯ ಸಿಫಾರಸ್ಸು ಪತ್ರಗಳನ್ನೂ, ವಿದ್ಯಾಭ್ಯಾಸದ ಸರ್ಟಿಫಿಕೇಟುಗಳನ್ನೂ, ಸ್ಕೂಲ್ ಫೈನಲ್ ಪರೀಕ್ಷೆ ಸರ್ಟಿಫಿಕೇಟುದಾರರು ತಾವು ಯುನಿವರ್ಸಿಟಿ ಕ್ಲಾಸಿಗೆ ಸೇರಲು ಅರ್ಹರೋ ಎಂದು ತಮ್ಮ ಸ್ಕೂಲಿನ ಹೆಡ್ ಮಾಸ್ಟರ ಪತ್ರವನ್ನೂ ತರಬೇಕೆಂತಲೂ ಪೋಲೀಸು ಡಿಪ್ಯುಟಿ ಸುಪರಿಂಟೆಂಡೆಂಟರು ತಿಳಿಸಿರುತ್ತಾರೆ.

ಹಿಂದೂದೇಶ.

ಸರ್ ಪಿ. ಸಿ. ರೇಯವರು ಕಲ್ಕತ್ತಾ ಯುನಿವರ್ಸಿಟಿಗೆ 90,000 ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು.

ಕರಾಚಿ ಬಂದರದಲ್ಲಿ 25 ಅಡಿ ಉದ್ದವಾದ ಒಂದು ಮೃತವಾದ ಮೀನು ದಡಕ್ಕೆ ಬಂದು ಬಿದ್ದಿರುತ್ತದೆ. ಅದರ ಕಣ್ಣು ಐದು ಅಡಿ ಉದ್ದ ಇರುತ್ತದೆ.

ತಿರುವಾಂಕೂರು ಸಂಸ್ಥಾನದಲ್ಲಿ ೧,೦೦೦ ಕ್ಕೆ ಮೇಲ್ಪಟ್ಟು ನ್ಯಾಷನಲ್ ದಳವಿದೆ. ೨೦೦ ಮಂದಿ ಬಾಲಕಿಯರೇ ಸೇರಿರುವರು. ಸರಕಾರವು ೫,೦೦೦ ರೂ ಸಹಾಯಧನವನ್ನು ಕೊಟ್ಟಿದೆ.

ಗತಿಸಿದ ಪನಗಲ್ ರಾಜರವರ ಬದಲು ಮದ್ರಾಸಿನ ಬ್ರಾಹ್ಮಣೇತರರ ಪಾರ್ಟಿಗೆ ಒಬ್ಬ ಮುಂದಾಳನ್ನು ಆರಿಸುವ ಬಗ್ಯೆ ಸದರಿ ಪಾರ್ಟಿಯ ಮಹಾಸಭೆಯೊಂದು ಆಕ್ಟೋಬರು 5 ರಲ್ಲಿ ನೆಲ್ಲೂರಿನಲ್ಲಿ ನಡಿಸಲ್ಪಡುವುದು.

ತಮಿಳುನಾಡಿನ 33 ನೇ ಕಾನ್‌ಫರೆನ್ಸು ಸರ್ದಾರ್ ವಲ್ಲಭಭಾಯಿ ಪಟೇಲರವರ ಅಧ್ಯಕ್ಷತೆಯಲ್ಲಿ ಈ ತಾ. 31 ರಲ್ಲೂ ಮತ್ತು ಸಪ್ಟೆಂಬರು 1 ರಲ್ಲೂ ನಡೆಯುವದು. ಈ ಸಭೆಯನ್ನು ಶ್ರೀಯುತ ಯಸ್. ಶ್ರೀನಿವಾಸ ಅಯ್ಯಂಗಾರ್‌ರವರು ತೆರೆಯುವರು.

ಮೀರತ್ತಿನ 'ಕಮ್ಯುನಿಸ್ಟ್ ಕಾನ್ಸ್‌ಪಿರೆಸಿ' ಕೇಸು ನಡೆಯುತ್ತಿರುವಾಗಲೇ ಅದರ ಸಂಬಂಧ ಲೇಖನ ಬರೆದುದು ಕೋರ್ಟನ್ನು ತಿರಸ್ಕರಿಸಿದಂತಾಗಿದೆಯೆಂದು ಅಲಹಾಬಾದಿನ 'ಯುನಿಯನ್' ಪತ್ರಿಕೆಯ ಸಂಪಾದಕರ ಮೇಲೆ ಮೊಕದ್ದಮ್ಮೆ ನಡಿಸುತ್ತಿರುವರು.

ಪಾಶ್ಚಿಮಾತ್ಯರ ರಂಗಭೂಮಿಯ ಕುರಿತು ಅನುಭವ ಪಡೆಯಲು ಶ್ರೀ. ಹರೀಂದ್ರನಾಥ ಚಟ್ಟೋಪಾಧ್ಯಾಯರು ಅಮೇರಿಕಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿಂದ ಇಂಗ್ಲೆಂಡಿಗೂ ತೆರಳಲಿದ್ದು, ಒಂದು ವರ್ಷದ ಮೇಲೆ ಸ್ವದೇಶಕ್ಕೆ ಮರಳುವರೆಂದು ತಿಳಿದುಬರುತ್ತದೆ.

ಮದ್ರಾಸಿನ ಮುಂದಾಳಾದ ಶ್ರೀಯುತ ಯಸ್. ಶ್ರೀನಿವಾಸ ಅಯ್ಯಂಗಾರ್‌ರವರ ಸ್ವಾಸ್ಥ್ಯವು ಸ್ವಲ್ಪ ಕೆಡುತ್ತಿರುವದರಿಂದ ಡಾಕ್ಟರವರ ಹೇಳಿಕೆ ಮೇರೆ ಒಂದು ತಿಂಗಳು ವಿಶ್ರಾಂತಿ ಹೊಂದಿಕೊಳ್ಳಲು ಅವರು ಬೇಗನೆ ಬೆಂಗಳೂರಿಗೆ ಬರಲಿಕ್ಕಿರುವರು.

ಬರುವ ಆಕ್ಟೋಬರು ತಾ. 10ರಲ್ಲಿ ಜಿನೇವಾದಲ್ಲಿ ಪ್ರಾರಂಭಿಸುವ ಜನಾಂಗಗಳ ಲೇಬರ್ ಕಾನ್‌ಫರೆನ್ಸಿಗೆ ಮೆ. ಮದನಾಥ್ ರಾಯಿಯವರು ಹಿಂದೂ ದೇಶದಲ್ಲಿ ಕೆಲಸಗಾರರನ್ನಿಟ್ಟು ಕೆಲಸ ಮಾಡಿಸುವ ಯಜಮಾನರ ಪರ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿರುವರು.

ಪಟಿಯಾಲದ ಮಹಾರಾಜರವರಿಗೆ ಸಿಖ್ ಜನರ ಒಂದು ಡೆಪ್ಯುಟೇಶನ್ ಹೋದುದರ ಫಲಿತಾಂಶವಾಗಿ ಮಹಾರಾಜರವರು ಆ ಸಂಸ್ಥಾನದಲ್ಲಿದ್ದ 46 ಅಕಾಲಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದಲ್ಲದೆ ಸರ್ಕಾರದವರು ತೆಗೆದುಕೊಂಡಿದ್ದ ಅವರ ಆಸ್ತಿಗಳನ್ನು ಅವರಿಗೆ ವಾಪಸು ಕೊಟ್ಟು ಜನರ ಪ್ರೀತಿಯನ್ನು ಸಂಪಾದಿಸಿರುವರು.

ಕನ್ನಡನಾಡು, ಕನ್ನಡ ನುಡಿ, ಕನ್ನಡ ರಂಗಭೂಮಿ, ಕರ್ನಾಟಕ ಏಕೀಕರಣ, ಕನ್ನಡ ನಾಡಿನ ತರುಣರಲ್ಲಿ ಜಾಗೃತಿ, ಭರತ ಖಂಡದ ಸ್ವಾತಂತ್ರ್ಯ, ರಾಜ್ಯಕ್ರಾಂತಿಕಾರರ ಆಂದೋಲನದ ಪರಿಚಯ ಇವೇ ಮೊದಲಾದ ವಿಷಯಗಳಲ್ಲಿ ಒಳ್ಳೇ ಕಳವಳದಿಂದ ಕಾರ್ಯಮಾಡುತ್ತಿರುವ 'ಕನ್ನಡಿಗ' ಪತ್ರಿಕೆಯು ಇದೇ ಆಗೋಸ್ತಿನಿಂದ ವಾರದಲ್ಲಿ ಎರಡು ಸಲ ಹೊರಡುತ್ತಿರುವದು.

ಲಾಹೋರಿನ ಕಾಂಗ್ರೆಸ್ಸಿಗೆ ಮಹಾತ್ಮರೇ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವದಾದರೂ, ಅವರು ಒಪ್ಪಿಕೊಳ್ಳಲಾರರಾದ್ದರಿಂದ ಪ್ರಾಯಶಃ ಒಬ್ಬ ಅಧ್ಯಕ್ಷನನ್ನಾರಿಸಬೇಕಾಗಿದೆ. ಆಲ್ ಇಂಡಿಯ ಕಾಂಗ್ರೆಸ್ ಕಮಿಟಿಯೇ ಇನ್ನು ಆ ಚುನಾವಣೆ ಮಾಡಬೇಕಾಗಿರುವದು. ಅದರ ಕಾರ್ಯಕಾರೀ ಮಂಡಳದ ಅಧ್ಯಕ್ಷರಾದ ಶ್ರೀ ಮೋತಿಲಾಲರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಬೇಕೆಂದು ಬಹ್ವಾಯುಷದಿಂದ ಮಹಾತ್ಮರಿಗೆ ತಂತಿ ಕಳುಹಿಸಿರುವರು.

ಬೊಂಬಾಯಿ ಮುನ್ಸಿಪಾಲಿಟಿಯಲ್ಲಿ 14 ವರ್ಷ ಪ್ರಾಯದೊಳಗಿನ ಮಕ್ಕಳಿಗೆ ಬೀಡಿ, ಸಿಗರೇಟ್ ಮುಂತಾದ ಧೂಮಪಾನದ ಸಾಮಾನುಗಳನ್ನು ಮಾರುವದು ಅಪಾಯಕರವೂ, ಹಾನಿಕರವೂ ಆದುದರಿಂದ ಹಾಗೆ ಮಾರುವುದು ತಪ್ಪೆಂದೂ, ಈ ತಪ್ಪಿಗೆ 50 ರೂ. ಜುಲ್ಮಾನೆ ವಿಧಿಸುವಂತೆಯೂ ಶಾಸನ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುವಂತೆ ಅಲ್ಲಿಯ ಮುನ್ಸಿಪಾಲಿಟಿಯವರು ತೀರ್ಮಾನಿಸಿದರು. ಇದಲ್ಲದೆ ಮಕ್ಕಳು ಬಹಿರಂಗ ಸ್ಥಳಗಳಲ್ಲಿ ಧೂಮಪಾನ ಮಾಡದಂತೆ ತಡೆಯಲು ತಕ್ಕ ಏರ್ಪಾಡು ಮಾಡುವಂತೆ ಪೋಲೀಸ್ ಇಲಾಖೆಯವರನ್ನು ಕೇಳುವಂತೆಯೂ ನಿಶ್ಚೈಸಿರುವರು.

ವಿದೇಶ.

ಬಚ್ಚಾ-ಇ-ಸಾಕನು ತನಗೆ ವಿರೋಧಿಗಳಾದ 300 ಜನ ಪಠಾಣರ ಮೂಗು ಕೊಯಿಸಿದನಂತೆ!

ಈಗಿಗಳಲೇ ಇಟಲಿಯಲ್ಲಿ ಬ್ರಿಟಿಷ್ ಆಡಳಿತದ ನೊಗಕ್ಕೆ ತಲೆಬಗ್ಗಿದ ಸೈಪ್ರಸ್ ಎಂಬ ದ್ವೀಪವು, ಅಲ್ಲಿಯ ಒಬ್ಬ ಬಿಷಪರ ಮುಂದಾಳುತನದಲ್ಲಿ ಪೂರ್ಣ ಸ್ವಾತಂತ್ರ್ಯಕ್ಕಾಗಿ ಚಳವಳವೆಬ್ಬಿಸಿದೆ.

ಇಟೇಲಿಯಲ್ಲಿ ಮುಸೋಲಿನಿಯವರ ಕೊಲೆಗೆ ಯತ್ನಿಸಿದರೆಂಬ ಅಪವಾದನೆಯ ಮೇಲೆ ವೆನಿಸ್ ನಗರದಲ್ಲಿ ಇಬ್ಬರು ಇಂಡಿಯಾನರನ್ನು ಇಟೇಲಿಯ ಪೋಲೀಸರು ಸೆರೆಹಿಡಿದರೆಂದು ವಾರ್ತೆ ಬಂದಿದೆ.

ಇರಾಕಿನಲ್ಲಿ ಅರಸರಿಗೂ, ಪ್ರಧಾನ ಮಂತ್ರಿಯವರಿಗೂ ಭಿನ್ನಾಭಿಪ್ರಾಯವುಂಟಾದುದರಿಂದ ಮಂತ್ರಿ ಮಂಡಳಿಯು ರಾಜಿನಾಮೆ ಕೊಟ್ಟಿದೆ. ಮಾಜಿ ಮಂತ್ರಿಯವರು ಹೊಸ ಮಂತ್ರಿ ಮಂಡಳಿಯನ್ನು ನೇಮಿಸಲಿರುವರಂತೆ.

ಬ್ರಿಟನ್ನಿನ ಹಲ್ ಎಂಬ ಬಂದರದಲ್ಲಿ ಮೀನು ಮಾರ್ಕೆಟ್ಟಿಗೆ ಆಕಸ್ಮಿತ ಬೆಂಕಿಬಿದ್ದು 100,000 ಪೌಂಡು ಖರ್ಚು ಮಾಡಿ ಕಟ್ಟಿದ ಹೊಸ ಮಾರ್ಕೆಟ್ಟು ಪೂರ್ತಿ ಬೆಂದುಹೋಯಿತು. ಒಟ್ಟಾರೆ ಲಕ್ಷ ಮಿಲಿಯ ಪೌಂಡುಗಳಷ್ಟು ನಷ್ಟವಾಗಿದೆ.

ಗ್ರೇಫ್ ಜೆಪೆಲಿನ್ ಎಂಬ ಜರ್ಮನಿಯ ಪ್ರಚಂಡ ವಾಯುಯಾನವೊಂದು ಭೂಪ್ರದಕ್ಷಿಣೆಗೆ ಹೊರಟಿರುವುದು. ಅದರಲ್ಲಿ ೨೦ ಪ್ರಯಾಣಿಕರೂ, ೨,೫೦೦ ಗೆಲನು ಪೆಟ್ರೋಲೂ, ೬೦೦ ಗೆಲನು ಎಣ್ಣೆಯೂ ೫೦,೦೦೦ ಕಾಗದಪತ್ರಗಳೂ ಇರುತ್ತವೆ.

ಅಮೇರಿಕದಲ್ಲಿ ಟಪ್ಪಾಲು ಚೀಟಿಯನ್ನು ಹಚ್ಚುವ ಒಂದು ಹೊಸ ಯಂತ್ರವು ತಯಾರಿಸಲ್ಪಟ್ಟಿದೆ. ಕಾಗದವನ್ನೂ ದುಡ್ಡನ್ನೂ ಟಪ್ಪಾಲು ಪೆಟ್ಟಿಗೆಗೆ ಹಾಕಿದರೆ ದುಡ್ಡು ಖಜಾನೆಗೆ ಬಿದ್ದು ಕಾಗದದ ಮೇಲೆ ದುಡ್ಡಿಗೆ ತಕ್ಕಂತೆ ಮುದ್ರೆಯು ಒತ್ತಲ್ಪಡುವುದಂತೆ! ದುಡ್ಡನ್ನು ಹಾಕದಿದ್ದರೆ ಮುದ್ರೆಯೂ ಇಲ್ಲ.

ಇಂಗ್ಲಂಡಿನ ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯ 'ನ್ಯೂ ಲೀಡರ್' ಎಂಬ ಪತ್ರಿಕೆಯು ಭೂಲೋಕದಲ್ಲಿ ಮಹಾಪುರುಷರನ್ನು ಕಂಡು ಹಿಡಿಯುವ ಬಗ್ಗೆ ಒಂದು ಸ್ಪರ್ಧೆಯನ್ನು ನಡಿಸಿದದಲ್ಲಿ ಬರ್ನಾರ್ಡ್ ಷಾ, ಗಾಂಧಿ, ಐನ್‌ಸ್ಟೀನ್, ಫೋರ್ಡ್ ಮತ್ತು ಚಾರ್ಲಿ ಚಾಪ್ಲಿನ್ ಎಂಬವರ ಹೆಸರುಗಳು ಆರಿಸಲ್ಪಟ್ಟವಂತೆ.

ಅಮೇರಿಕದ ಯುನೈಟೆಡ್ ಸ್ಟೇಟ್ಸಿನಲ್ಲಿ ಒಂದು ವೇಳೆ ನಿಷೇಧದ ಶಾಸನವು ರದ್ದಾಗಿ ಜನರನ್ನು ಹಿತಾ ಕುಡಿಯಲು ಬಿಟ್ಟರೆ ತಾನು ತನ್ನ ಕಂಪೆನಿಯ ಕೆಲಸವನ್ನು ನಿಲ್ಲಿಸಿಬಿಡುತ್ತೇನೆಂದು ಭೂಲೋಕದಲ್ಲಿ ಅತಿದೊಡ್ಡದಾದ ಫೋರ್ಡ್ ಮೋಟಾರ್ ಕಂಪೆನಿಯ ಯಜಮಾನರಾದ ಮೆ. ಫೋರ್ಡರವರು ಸೂಚಿಸಿರುವರು.

WANTED CANDIDATES.

Service Guaranteed. Session Commencing. London Diplomas Fare free. Apply for "Guide To Chances" enclosing 2 anna stamps

ROYAL ELECTRICAL COLLEGE.
6—4 Naichebandan.
DELHI.

ಮಡಿಕೇರಿ—ಭಾಗಮಂಡ್ಲ—ಸುಂಟಿಕೊಪ್ಪ ಜಮ್ಮಾ ಓಟರುಗಳಲ್ಲಿ

ವಿನಂತಿ.

ಬರುವ ಸೆಪ್ಟೆಂಬರು ತಾ. 27ರಲ್ಲಿ ನಡೆಯಲಿಕ್ಕಿರುವ ಕೌನ್ಸಿಲು ಉಪ ಚುನಾವಣೆಗೆ ಮಡಿಕೇರಿ—ಭಾಗಮಂಡಲ—ಸುಂಟಿಕೊಪ್ಪ ಜಮ್ಮಾ ಓಟರುಗಳ ಪರವಾಗಿ ನಾನೊಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ತಾವೆಲ್ಲರೂ ತಮ್ಮ ಓಟನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಬೇಕಾಗಿ ಅತಿ ವಿನಯದಿಂದ ಕೋರುತ್ತೇನೆ,

ತಮ್ಮ ವಿಧೇಯ,

ಮಡಿಕೇರಿ. ಕೋಟೆರ ಪಿ. ಚಿಣ್ಣಪ್ಪ.

ತಾ. 16—8—'29. 6—2

WANTED.

A trained Compounder for permanent appointment in the Coorg Medical Department on pay Rs 30—½—35—5/5—40. Apply at once to the Civil Surgeon, Coorg, with copies of testimonials stating age and previous experience.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಜಮೀನ್ದಾರರ ಸಂಘ.

ಜಮೀನ್ದಾರರ ಸಂಘದ ಜನರಲ್ ಸೆಕ್ರೆಟರಿ ಮೆ. ಪಿ. ಐ. ಬೆಳ್ಯಪ್ಪನವರ ಒಂದು ಕಾರ್ಡು ನನಗೆ ತಾ. 15—8—29ರಲ್ಲಿ ತಲುಪಿತು. ಅದರಲ್ಲಿ—"ಜಮೀನ್ದಾರರ ಸಂಘದ ಹೆಸರನ್ನು ಉಪಯೋಗಿಸುತ್ತಿರುವ ಇನ್ನೊಂದು ಹೊಸ ಕಮಿಟಿಯಲ್ಲಿ ನೀವು ಒಬ್ಬ ಮೆಂಬರಾಗಿ ಆರಿಸಲ್ಪಟ್ಟಿರುತ್ತೀರಾಗಿ ತಿಳಿಯಬರುತ್ತೆ. ಹೀಗೆ ಸದರಿ ಹೊಸ ಕಮಿಟಿಗೆ ನಿಮ್ಮನ್ನು ಆರಿಸಲು ನಿಮ್ಮ ಅನುಮತಿ ಇದೆಯೋ? ಇದ್ದರೆ ನೀವು ಸಂಘದಲ್ಲಿ ಕೆಲಸ ಮಾಡುತ್ತೀರೋ? ಅಥವಾ ಹೊಸ ಕಮಿಟಿಯಲ್ಲಿ ಕೆಲಸ ಮಾಡುತ್ತೀರೋ? ಎಂಬದನ್ನು ದಯವಿಟ್ಟು ತಿಳಿಸಬೇಕಾಗಿ ಕೋರುತ್ತೇನೆ" ಎಂದು ಒಂದು ಕಾರ್ಡು ಕಳುಹಿಸಿದರಿಂದ ಇದರ ವಿಷಯ ಕೆಲವು ಸಂಗತಿ ವಿವರಿಸಿ ನನ್ನ ಅಭಿಪ್ರಾಯವನ್ನು ಬಹಿರಂಗ ಮಾಡಲು ಇಚ್ಛೈಸುತ್ತೇನೆ.

ದೇಶದ ನಿಜವಾದ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸುವ ಮೂಲಕದಿಂದ ನಾವು ಕಳೆದುಕೊಂಡಿರುವಂಥ ನಮ್ಮ ಹಕ್ಕು ಬಾಧ್ಯತೆಗಳಿಂದ ನಾವು ನಮ್ಮ ಪೂರ್ಣ ಸ್ವಾತಂತ್ರ್ಯವನ್ನು ಹೊಂದುವುದೇ ಈ ಸಂಘದ ಮುಖ್ಯ ಉದ್ದಿಶ್ಯವಾಗಿರುತ್ತೆಂಬದು ನಾನು ಬರೆಯಬೇಕಿಲ್ಲ.

1. ನಮ್ಮ ದೇಶದ ಜಮ್ಮದ ಪ್ರಶ್ನೆಯನ್ನು ಪರ್ಷಂಪ್ರತಿ ಅಧ್ಯಕ್ಷರಿಂದ ತಾನು ಮಾಡಿದಂತೆ ಮಾಡಿಕೊಂಡು ಮೂಲೆಗೊತ್ತಿ ಜಮ್ಮದ ಹಿಡುವಳಿದಾರರನ್ನು ಸಂಘದಲ್ಲಿ ಮೆಂಬರರನ್ನಾಗಿ ಮಾಡಿಕೊಂಡು ಅವರಿಗೆ ತಿಳಿಯದಂತೆ ನಿಮ್ಮ ಸಂಗಡದ ಧ್ಯೇಯವನ್ನು ಸಾಗಿಸಿಕೊಂಡು ಹೋಗುವದು ಹುಳ್ಳಗರಾದ ಜಮೀನ್ದಾರನೇಕರು ತಿಳಿಯದ ಸಂಗತಿ ಎಂದರೆ ಅತಿಶಯೋಕ್ತಿಯಾಗಲಾರದು. ಈ ಜಮ್ಮದ ಪ್ರಶ್ನೆಯನ್ನು ದೇಶದ ಮುಖ್ಯವಾದ ಸಂಗತಿಯೆಂದು ತಂದರೂ, ಸಂಘವು ಈ ವರೆಗೆ ಜಮ್ಮದ ಹಕ್ಕನ್ನು ಒಂದು ವ್ಯವಸ್ಥೆಗೆ ತಾರದಿರುವದು ದೇಶದ ಭಾಗಕ್ಕೆ ಒಂದು ದೊಡ್ಡ ವ್ಯಸನ ಮತ್ತು ಅನ್ಯಾಯವಾಗಿದೆ. ಇದೂ ದೇಶೀಯರ ಭಾಗಕ್ಕೆ ಸಂಘವು ಅದರ ಕೆಲಸವನ್ನು ಮರೆತಂತಾಗಿದೆ. ಇದು ನನ್ನ ಮನಸ್ಸನ್ನು ನಿತ್ಯವೂ ಬಾಧಿಸುತ್ತಿತ್ತು. ಅಲ್ಲದೆ ಈ ಸಂಬಂಧ ಸಂಘಕ್ಕೆ ಹಾಜರು ಪಡಿಸಿದ ಎಲ್ಲಾ ದಾಖ್ಲೆಗಳು ಗೈರ್ಹಾಜರಿ ಮಾಡಿಟ್ಟು ಪುನಃ ಸದರಿ ಜಮ್ಮದ ಸಂಗತಿಯಾಗಿ ದಾಖ್ಲೆಗಳನ್ನು ಕೇಳುವಾಗ್ಯೆ ಈ ವರೆಗೆ ಯಾರಿಗೂ ಗೊತ್ತಿಲ್ಲವೆಂಬ ಒಂದು ಉತ್ತರವಲ್ಲದೆ ಬೇರೆ ಉತ್ತರ ಸಿಕ್ಕಲಿಲ್ಲ. ಮಹಶಯರೇ, ಇವಕ್ಕೆ ಕಾರಣವೇನು? ಉದ್ದಿಶ್ಯವೇನು? ಇಂಥಾ ದಾಖ್ಲೆಗಳು ಕಾಣದಕ್ಕೆ ಯಾರು ಜವಾಬ್ದಾರಿಗಳು ಎಂಬ ಪ್ರಶ್ನೆಯು ಏಳಲೇಬೇಕಾಗಿದೆ.

ಜಮ್ಮದ ಸನ್ನದಿಗೆ ವಿರೋಧವಾಗಿ ಹೆಚ್ಚಿಗೆ ಕಂದಾಯವನ್ನು ವಸೂಲು ಮಾಡುವ ಹಕ್ಕನ್ನು ಸರ್ಕಾರದವರು ಕಳಕೊಂಡಿರುತ್ತಾರೆಂದು ಮೆ. ಆರ್. ಸಿ. ದತ್ತರವರ ರೆವಿನ್ಯೂ ಮೇನ್ಯುವೆಲ್ಲಿನಲ್ಲಿ ವಿಶದಪಡಿಸಿದರೂ ಕೂಡ ಜಮೀನು ಸಂಘವು

ಈ ವರೆಗೆ ನಮ್ಮ ಪಕ್ಷನ್ನು ಕಾಪಾಡದಿರುವದೇ ಜಮ್ಮ ಹಿಡುವಳಿದಾರರಿಗೆ ದೊಡ್ಡ ಅನ್ಯಾಯ ಮತ್ತು ಅನಿಶಾಯಕರವಾಗಿದೆ ಈ ಸಂಗತಿ ನಿತ್ಯವೂ ನನ್ನ ಮನಸ್ಸನ್ನು ಕಾಡುತ್ತಿರುವದು

ನೇದು ಕರ್ನಾಟಕ ಏಕೀಕರಣದ ಪ್ರಶ್ನೆ —(ಈ ವ್ಯಾಕಾರದಲ್ಲಿ, ಕರ್ನಾಟಕ ಏಕೀಕರಣಕ್ಕೆ ತಾನು ವಿರೋಧವಿದ್ದೇನೆಂತಲೂ ಈ ವಿಷಯದ ಠರಾವು ದೇಶದ ಹಿಡುವಳಿದಾರರಿಗೆ ಬಹಳ ಅಪಾಯಕರವೆಂತಲೂ ವಿವರಿಸಲ್ಪಟ್ಟಿದೆ.)

೩ ಜಮೀನುದಾರರ ಸಂಘದಲ್ಲಿರುವವರು ಕೊಡವ ಸಭೆಯಲ್ಲಿರುವ ಮೆಂಬರುತನಕ್ಕೆ ಕೂಡ್ಲೆ ರಾಜಿನಾಮೆ ಕೊಡಬೇಕು ಇದಕ್ಕೆ ಒಂದು ವರ್ಷ ಅವಧಿ ಇಟ್ಟಿದೆ. ಇದು ಕೊಡವ ಅಂದರೆ ಜಮ್ಮ ಗಾರರಾದ ಕೊಡವ, ಅಮ್ಮ ಕೊಡವ, ಐರಿ, ಹೆಗ್ಗಡೆ, ಗೌಡ ವಗೈರೆರಾದ ದೇಶನಿವಾಸಿಗಳಿಗೆ ನಮ್ಮ ಪಕ್ಷ ಬಾಧ್ಯತೆ ಮತ್ತು ಸಾಂಪತ್ತಿಕ, ನೈತಿಕ, ಮಾನಸಿಕ, ವಗೈರೆ ಗ್ರಾಮದ ಒಗ್ಗಟ್ಟಿನ ಕೆಲಸಗಳಿಗೆ ಅತ್ಯಾವಶ್ಯಕವಾಗಿದೆ. ಇದು ಮೇಲ್ಕಂಡ ಠರಾವಿಗೆ [illegible] ಕೆಲವು ತಪ್ಪಿದವರ ಹಿಂಬಾಲಕರೇನೂ ಒಪ್ಪಬಹುದು. ಆದರೆ ಅಹಿತನೆಂದು [illegible] ಹೇಳುವ್ಯೇನೆ ಅಲ್ಲದೆ ಇದು ಈ [illegible] ಬಾಧ್ಯಕರವಾಗಿದೆ. [illegible] ಸಂಘವು ಈ [illegible] ದಿಂದ ದೇಶದ [illegible] ಅಭಿಪ್ರಾಯವನ್ನು [illegible] ನಮ್ಮ ಪಕ್ಷ [illegible] ತಮ್ಮ ಇರಾದೆಗಳನ್ನು ನೆರವೇರಿಸುವುದಕ್ಕಾಗಿ. ಸಂಘದ ಕೆಲವು ಸ್ವಾರ್ಥಪರರು ಜಮೀನ್ದಾರ [illegible] ಸಂಘ, ಸೆಂಟ್ರಲ್ ಬ್ಯಾಂಕ್ ಮತ್ತು [illegible] ಕಮಿಟಿಮೆಂಬರುಗಳಾಗುವದಕ್ಕೆ [illegible] ಸಂಗಡದವರ [illegible] ವಣೆಯಲ್ಲಿ, ಅವರವರೇ [illegible] ಮತ್ತು [illegible] ಗಳನ್ನು ಕಂಡು ಕಂಡು [illegible] ಯಂಥ [illegible] ಕಳೆದ ಜಮೀನ್ದಾರ ಸಂಘದ ವಾರ್ಷಿಕ ಮೀಟಿಂಗಿನಲ್ಲಿ [illegible] ಸ್ಥಳ ಬಿಟ್ಟೆನು 'ಪಳ್ಳಿ [illegible]' (ಒಟ್ಟೆಮೂರಿಕೊಂಡು ಒಂದವಗೆ) ಒಂದವಂಗ್ ಅ ಚಲ ಪಳ್ಳಿ' ಹುಟ್ಟಿಸಿದ ತಂದೆಯನ್ನು [illegible] ತಾಯಿಯನ್ನು ಮನೆ ಬಿಟ್ಟು ಹೋಗಬೇಕೆಂದು ಶಪತ್ತು ಇಟ್ಟ ಮೇಲೆ ತಂದೆ ತಾಯಿಗಳ [illegible] ಒಂದು ಜೋಪಡಿ ಹಾಕಿಕೊಂಡು ತಮ್ಮ ಕೆಲಸವನ್ನು ಮಾಡಬೇಕಾದ್ದು ಅವಶ್ಯವಲ್ಲವೇ? ಇಂಥಾ ಸಕತ್ತು ನಿರ್ಣಯಗಳು ಜಮೀನುದಾರರ ಸಂಘದ ಸ್ಥಾಪಕರ ಮನೋವಾಕ್ಕಾಯ ಕರ್ಮಗಳಲ್ಲಿತ್ತೋ? ಇದ್ದಿದ್ದರೆ ಸಂಘವು ಈ ವರೆಗೆ ನಿಲ್ಲುತ್ತಿತ್ತೇ? ಹಿಂದಿ ಕಾಂಗ್ರೆಸು ಸಂಘದಲ್ಲಿ ಯಾವ ಯಾವ ತತ್ವದ ಸಂಗಡದವರು ಇರುತ್ತಾರೆಂಬದು ನಿಮಗೆ ತಿಳಿಯದೆ? ಅವರೇನು ಅವಧಿ ಕಾಣಿಸಿ ನಿಮ್ಮಂಥ ದಬ್ಬಾಳಿಕೆಯ ಠರಾವು ಪಾಸುಮಾಡಿರುವರೇ? ಅವರು ಸಾವಿರಾರು? ಎಲ್ಲ ವರ್ಣದವರಿಂದ ಗ್ರಾಮದ ಒಗ್ಗಟ್ಟಿಗೆ ಸ್ಥಾಪಿಸಿದ 'ಕೊಡವ ಸಭೆಯನ್ನು ಕೊಡಗನು ಮಾತ್ರ [illegible] ಜಾತಿ ಗೌಡ, ವಹಮ್ಮಿ, ವಗೈರೆ ಸಂಗಡಗಳು ಅವರ ಸಭೆಯ [illegible] ಯ ಕೇಳಿದಕ್ಕೆ ಕೂಡಪರಾಗಲೀ, ಜಮೀನ್ದಾರರ ಸಂಘದವರಾಗಲೀ ಈ ವರೆಗೆ ಏನು ವಿಘ್ನ ತಂದಿರುತ್ತಾರೆ? ಬಾಯಿಗೆ **ಉಪ್ಪು ಹಾಕಿ ಸಪ್ಪೆ ಎಂದ ಹಾಗಾಗಿದೆ! ಮಾದಪ್ಪನವರು, "ಅಧ್ಯಕ್ಷರ ಭಾಷಣವು ತೀರಿದ ನಂತರ ಎಲ್ಲರೂ ಪಲಾಯನಮಾಡುವದು ಮಾತ್ರವಲ್ಲ, ಇಂಥವರನ್ನು ಕಮಿಟಿಗೆ ಅವರ ಅನುಮತಿ ವಿನಹ ಹಾಕಿದರೂ ಕೂಡ 6—7 ವರ್ಷಗಳಿಂದ ಮೀಟಿಂ**ಗಿಗೆ ಬರುವದಿಲ್ಲ' ವೆಂದು ಸೂಚಿಸಿದ್ದು ನ್ಯಾಯವಾದದ್ದೇ ಸರಿ. ಯಾಕಂದರೆ, ನಿಮ್ಮ ಕರುಣಾದ ಯಾವ ಠರಾವಿಗೂ ನಿಮ್ಮ ಬಹುಮತವಿದ್ದೇ ಇರುತ್ತೆ. ಅಂಥವರು ಬಂದು ಕಲೆಯುವದರಿಂದ ಅವರ ಸಮಯವನ್ನು ಕಳಕೊಳ್ಳುವದಷ್ಟೆ. ಇದೇ 6-7 ವರ್ಷಗಳಿಂದ ನಾನು ಅನುಭವಿಸಿದ ನನ್ನ ಅನುಭವವಾಗಿದೆ. ಈಗ ಹೇಳುವ ಮಾದಪ್ಪನವರು, ಅವರ ಸಂಗಡದವರು ಸೂಚಿಸುವಂತೆ 'ನಿಜವಾಗಿ ಮೇಲುಗಾರಿಕೆಗಾಗಿಯೂ, ಹೆಸರಿಗಾಗಿಯೂ, ಪದವಿಗಾಗಿಯೂ, ಕಷ್ಟಕ್ಕಾಗಿಯೂ ಹೊರಟವರಲ್ಲವೆಂದರೆ ದೇಶದ ಮೇಲಣ ಪ್ರೇಮಕ್ಕಾಗಿಯೂ ದೇಶದ ಉನ್ನತಿಗಾಗಿಯೂ, ಸ್ಥಳ, ಪದವಿ, ಹೆಸರುಗಳ ಮೇಲೆ ಆಸೆಯಿಲ್ಲದೆ, ಒಗ್ಗಟ್ಟನ್ನು ಬಯಸುವವರಾದರೆ, ನೀವು ನಿಮ್ಮ ಸಂಗಡದವರು, ನಿಮ್ಮ ಕಾರ್ಯಕಾರಿ ಮಂಡಳಿಯವರು ರಾಜಿನಾಮೆಯನ್ನು ಕೊಟ್ಟು [illegible] ಯಾಕೆ [illegible] ಮಾಡಬಾರದು? ಈ ಸರಿಗ [illegible] ನೀವುಗಳು ಒಗ್ಗಟ್ಟಿಗಾಗಿ, [illegible] ಮಾಡಬಾರದು? ಈ [illegible] ನಿಮ್ಮ ಸಂಗಡದವರಾಗಲೀ, [illegible] ಯಾವ ವಿಧ ಒಗ್ಗಟ್ಟು [illegible] [illegible] ಉತ್ತರವನ್ನು [illegible]

[illegible]

ಮ. ಐದ್ದಂಡ ಸುಬ್ಬಯ್ಯನವರಿಗೆ ಉತ್ತರ.

ಅಯ್ಯಾ ಸುಬ್ಬಯ್ಯನವರೇ,

ನಿಮ್ಮ ಬಾತ್ಮಿಯಲ್ಲಿ ಹೇಳುವ ಅರ್ಜಿಯನ್ನು [illegible] 27—7—'29ರ ಸಂಘದ ಕಮಿಟಿ ಮೀಟಿಂಗಿನ ತೀರ್ಮಾನದ ಮೇರೆ ಕಳುಹಿಸಿರುವುದಾಗಿದೆ. **ಸಂಘದ ರೂಲ್ಸಿಗನುಸಾರ**ವಾಗಿ ಸಂಘದ ಮಹಾಸಭೆಯಲ್ಲಿ ಆರಿಸಲ್ಪಟ್ಟ ನ್ಯಾಯವಾದ ಕಮಿಟಿಯಲ್ಲಿಯೂ, ಸಂಘದ ರೂಲ್ಸನ್ನು ಉಲ್ಲಂಘಿಸಿ ಸಂಘದ ಮೆಂಬರುಗಳಲ್ಲದವರೂ ಸೇರಿದ ಮೀಟಿಂಗಿನಲ್ಲಿ ನೇಮಿಸಲ್ಪಟ್ಟ ಹೊಸ ಕಮಿಟಿಯಲ್ಲಿಯೂ ಇರುವಂಥ ನಿಮ್ಮಂಥವರ ಸ್ಥಿತಿಯನ್ನು ವಿಶದ ಪಡಿಸುವುದಕ್ಕಾಗಿಯೇ ಸದರಿ ಕಾರ್ಡು ಬರೆದದ್ದಾಗಿದೆ.

ಜಮ್ಮ ಹಿಡುವಳಿಯ ನಿರಖು ಕಂದಾಯದ ಬದಲಾವಣೆಯ ವಿಷಯ ಸಂಘವು ಪ್ರಾರಂಭದಿಂದಲೇ ಚಳವಳ ನಡಿಸುತ್ತಾ ಬಂದಿದೆ. ಸಂಘವು ಕೆಲವು ವರ್ಷಗಳ ಹಿಂದೆ ನಮ್ಮ ಹಿರಿಯರಿಂದ ನಡಿಸಲ್ಪಡುತ್ತಿದ್ದಾಗ್ಯೂ ಈ ವಿಷಯ ಅತ್ಯಪ್ರಿಯ ಠರಾವುಗಳನ್ನು ಪಾಸುಮಾಡುತ್ತಾ, ವೈಸರಾಯರುಗಳಿಗೆ ಡೆಪ್ಯುಟೇಶನ್ ಹೋದಾಗ್ಯೂ ಈ ಕಂದಾಯ ಬದಲಾವಣೆಯನ್ನು ರದ್ದುಪಡಿಸಬೇಕೆಂದು ಕೇಳುತ್ತಿದ್ದರೇ ಹೊರತು ಪ್ರಯತ್ನವನ್ನೂ ಮಾಡಿರಲಿಲ್ಲ. ಈಗಲೂ ಹಾಗೆಯೇ ಮಾಡುತ್ತಿರುವುದಲ್ಲದೆ, ಕೌನ್ಸಿಲಿನಲ್ಲೂ ಸಂಘದ ಪರ ಮೆಂಬರುಗಳು ಈ ವಿಷಯ ಎರಡು ಸಾರಿ ಚರ್ಚಿಸಿ ಸರ್ಕಾರದವರು ಮಾಡಿರುವ [illegible] ತೋರಿಸಿರುವರು. ಆದರೂ ಸರ್ಕಾರದವರು [illegible] ಈ ವಿಷಯ ಸಿವಿಲ್ ಕೋರ್ಟಿಗೆ [illegible] ಬೇಕೆಂದು ಜಮ್ಮ ಹಿಡುವಳಿದಾರರಿಗೆ ಅಭಿಪ್ರಾಯ [illegible] ಇಂಥಾ ಅನ್ಯಾಯ [illegible] ಹೋಗಲಾಡಿಸುವುದಕ್ಕಾಗಿಯೇ ಜನರ ಪ್ರತಿನಿಧಿಗಳಿಗೆ [illegible] ಪಡೆಯಬೇಕೆಂದು ಸಂಘವು [illegible] ಇಂದಿನ ಸ್ವರಾಜ್ಯ ಸ್ಥಾಪನೆಯ [illegible] ಯೊಂದಿಗೆ ಪಕ್ಷಗೌರವ [illegible] ನನ್ನು [illegible] ಸಂಘವು [illegible] ಕೊಡವ ಸಭೆಯವರು ಸದರಿ ಕ[illegible] ಕೇಳಿದ್ದೇನು? ಜನರಿಗೆ [illegible] ಕೌನ್ಸಿಲಿಗೆ ಚುನಾಯಿತ ಅಧ್ಯಕ್ಷರ [illegible] ಇಂಡಿಯಾ ಸರ್ಕಾರದಿಂದ ಉಳುವರಿ ಕೊಟ್ಟ ನಂತರ ಬಿಟ್ಟ ಸುಧಾರಣೆ ಕೊಡಬೇಕು. ಈ ಹಣವಿಲ್ಲದಿದ್ದರೆ ಸ್ಥಾಪಿಸಿದ ಪ್ರತ್ಯೇಕ ಪ್ರಾಂತೀಕ ಸರ್ಕಾರ ನಡಿಸಲು ಸಾಧ್ಯವಿಲ್ಲವೆಂದಲ್ಲವೇ? ನಿಮ್ಮ ಸಂಗಡದವರ ಈ ತರದ ನಡತೆಯಿಂದ ನಮ್ಮವರು ಕಳಕೊಂಡಿರುವ ಹಕ್ಕು ಬಾಧ್ಯತೆಗಳನ್ನು ಮರಳಿ ಪಡೆಯುವುದು ತಾನೇ ಹೇಗೆ?

ಜಮ್ಮದ ವಿಷಯ ದಾಖಲೆಗಳನ್ನು ನೀವು ಯಾವಾಗ ಯಾರಿಗೆ ಕೊಟ್ಟದ್ದು ಎಂಬದನ್ನು ಹೇಳದೆ ಸಂಘದ ಈಗಿನ ಕಮಿಟಿಯನ್ನು ದೂರುವದು ಯೋಗ್ಯವಲ್ಲ.

2ನೇ ವಿಷಯವಾದ, ಕರ್ನಾಟಕ ಏಕೀಕರಣವನ್ನು ಕುರಿತು ಸಂಘವು ಮಾಡಿರುವ ಠರಾವನ್ನೂ, ಅದಕ್ಕೂ ಸಂಘವು ತಯಾರಿಸಿರುವ ಆಕ್ಷೇಪ ರಚನೆಗೂ ಇರುವ ಸಂಬಂಧವನ್ನೂ ಕಳೆದ ಜುಲೈ ತಾ 12ರ 'ಕೊಡಗು' ಪತ್ರಿಕೆಯ 3ನೇ ಪುಟದಲ್ಲಿ ಪ್ರಕಟಿಸಿದ 'ಕೊಡಗು ಜಮೀನ್ದಾರರ ಸಂಘದ [illegible]ಲ್ಲಿ ವಸಂತಿ' ಎಂಬ ಲೇಖನದಲ್ಲಿ (ಅದನ್ನು ತಪಸೀಲಾಗಿ) ವಿವರಿಸಿರುತ್ತೇನೆ 3ನೇ ವಿಷಯವಾದ, ಸಂಘದಲ್ಲಿರುವ ಕೊಡವ ಸಭೆಯ ಮೆಂಬರುಗಳನ್ನು ಕುರಿತು ಸಂಘವು ಪಾಸುಮಾಡಿ**ರುವ ಠರಾವನ್ನೂ ಮೇಲೆ ಸೂಚಿಸಿದ ಲೇಖನದಲ್ಲಿಯೇ ವಿವರಿಸಿರುತ್ತೇನೆ. ಆದುದರಿಂದ ಇವುಗಳ ವಿಷಯ ಪುನಹ ಇಲ್ಲಿ ಬರೆದು ಪತ್ರಿಕೆಯ ಸ್ಥಳವನ್ನು ವೃಥಾ ಕಳೆಯುವುದು ಸರಿಯಲ್ಲ.**

ನೀವು, ಜಮೀನುದಾರರ ಸಂಘದ ಮಹಾಸಭೆಯಲ್ಲಿ ನಡೆದ ಕೆಲಸಗಳನ್ನು 'ದರೋಡೆ', 'ಮೋಸಕೃತ್ಯ' ಎಂಬ ಶಬ್ದಗಳಿಂದ ವಿವರಿಸಿರುವ ನಿಮ್ಮ ಆಕ್ಷೇಪಕರವಾದ ಆರೋಪಗಳಿಗೆ ನಾನು ಪ್ರತ್ಯೇಕ ಜವಾಬು ಕೊಡಬೇಕಾಗಿಲ್ಲ. ಆ ಮಹಾಸಭೆಯ ಮೆಂಬರುಗಳಿಗೆಲ್ಲಾ ಅಲ್ಲಿ ನಡೆದದ್ದು ಚೆನ್ನಾಗಿ ಗೊತ್ತಿದೆ ಮಹಾ ಸಭೆಯಲ್ಲಿ ಬಹುಮತದ ಅಭಿಪ್ರಾಯದಂತೆ ಎಲ್ಲಾ ವಿಷಯಗಳನ್ನು ತೀರ್ಮಾನಿಸಿದ್ದು ನೀವು ಸರಿಯಲ್ಲವೆಂದು ಹೇಳುವದಾದರೆ ಇನ್ನು ಮುಂದೆ ಬಹುಮತದ ಅಭಿಪ್ರಾಯದಂತೆ ತೀರ್ಮಾನಿಸದೆ ನಿಮ್ಮಂಥ ಕೆಲವರ ಸೂಚನೆಯಂತೆಯೇ ನಡೆಯಬೇಕೆಂದು ಹೇಳುವಿರೋ? ಹಾಗಾದರೆ ಮೀಟಿಂಗಿನಲ್ಲಿ ಚರ್ಚಿಸಿದ ಎಲ್ಲಾ ಸಂಗತಿಗಳು ಹಾಜರಿದ್ದ ಮೆಂಬರುಗಳ ಒಟ್ಟು ಸಂಖ್ಯೆಗೆ ಅನುಸಾರವಾಗಿ ವಿಲೆ ಆಗತಕ್ಕದ್ದು ಎಂಬ ಸಂಘದ ನಿಬಂಧನೆಯನ್ನು '...ಒಟ್ಟಿನ ಹೆಚ್ಚು ಸಂಖ್ಯೆಗೆ ವಿರೋಧವಾಗಿ ವಿಲೆ ಆಗತಕ್ಕದ್ದು' ಎಂದು ಬದಲಾಯಿಸಬೇಕಲ್ಲವೇ? ಯಾವ ಸಭೆಯಲ್ಲೇ ಆಗಲೀ ಬಹುಮತದವರ ತೀರ್ಮಾನಕ್ಕೆ ಕಮ್ಮಿ ಸಂಖ್ಯೆಯವರು ಒಪ್ಪಬೇಕೆಂಬ ಸಾಮಾನ್ಯ ತತ್ವವನ್ನು ನೀವು ಇನ್ನೂ ಅರಿತುಕೊಂಡಂತೆ ಕಾಣುವುದಿಲ್ಲ.

ಸಂಘವನ್ನು ಸ್ಥಾಪಿಸಿದ ಮಹಾನುಭಾವರು, ಅದನ್ನು [illegible] ಆದರೆ ತಮ್ಮ ಮರಣ ಪರ್ಯಂತರ [illegible] ಬಹುಮತದ ಅಭಿಪ್ರಾಯವನ್ನು [illegible] ತಮ್ಮ [illegible] ನಡಸಬೇಕೆಂಬ ಇರಾದೆಯಿಂದ [illegible] ದೇಶದ [illegible] ನಡಿಸಲ್ಪಟ್ಟ ಸಂಘವು [illegible] ಬಹುಮತದ [illegible] ಕಮಿಟಿಯವರು [illegible] (ನ್ಯಾಯವಾದ್ದೇ [illegible]) [illegible] ಈ ದೇಶಸ್ಥರ ಮತ್ತು ಆ ದೇಶದಲ್ಲಿ ಪಕ್ಷಬಾಧ್ಯತೆಗಳ [illegible] ಅವರೇ ಅವರು, ಸಂಘವನ್ನು ಹೊರಡಿಸುವಾಗಲೇ **ಕಾವು ಮೆಂಬರುಗಳಾದುದರಿಂದ ಸಂಘವು ತಮ್ಮ ಇರಾದೆ**ಯಂತೆಯೇ ನಡೆಯಬೇಕೆನ್ನುವವರಲ್ಲ. ಅವರು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿರುವವರು, ಬಹುಮತದ ಅಭಿಪ್ರಾಯದಂತೆ ನಡೆಯಲು ತಯಾರಾಗಿರುವವರು.

ನಿಮ್ಮ ಆಚ್ಯೆರು ಪ್ರಶ್ನೆ—ಸಂಘದ ರೂಲ್ಸಿಗನುಸಾರವಾಗಿ ನಡಿಸಲ್ಪಟ್ಟ ಸಂಘದ ಕಳೆದ ಮಹಾಸಭೆಯಲ್ಲಿ ಬಹುಮತದಿಂದ ಆರಿಸಲ್ಪಟ್ಟ ಕಮಿಟಿಯವರು ರಾಜಿನಾಮೆ ಕೊಟ್ಟು ಬಾಕಿಯವರಿಗೆ (ಅಂದರೆ ಸಂಘದ ರೂಲ್ಸನ್ನು ಉಲ್ಲಂಘಿಸಿ ಕಮಿಟಿ ಮೆಂಬರುಗಳೆಂದುಕೊಳ್ಳುವವರಿಗೆ) ಎಡೆ ಕೊಡಬೇಕೆಂತ! ಇದು ದೇಶದ ಒಗ್ಗಟ್ಟಿಗಂತೆ ದೇಶದ ಮೇಲ್ಮೆಗಾಗಿ ದೇಶದ ಬಹುಮತದವರು ಹೇಳಿದ ಹಾಗೆ ನಡೆಯಬೇಕೋ, ಯಾ ಬಹುಮತವನ್ನು ತುಚ್ಛೀಕರಿಸುವ ಕೆಲವರ ಮಾತಿನಂತೆ ನಡೆಯಬೇಕೋ? ಎಲ್ಲವೂ ತಮ್ಮ ಪಕ್ಕದೆಂದು ಹೇಳಿಕೊಳ್ಳುವ ಕೆಲವರ ಇಚ್ಛೆಯಂತೆ ವರ್ತಿಸಲು ಬಿಡುವದು ದೇಶದ ಒಗ್ಗಟ್ಟಿಗಾದರೆ ಅಂಥಾ ಟೊಳ್ಳು ಒಗ್ಗಟ್ಟಿನಿಂದ ದೇಶವು ಎಂದೂ ಮುಂದುವರಿಯಲಾರದೆಂದು ನಾನು ಹೇಳಬೇಕಾಗಿಲ್ಲ. ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧವಾಗಿಯೂ, ಯಾವದೇ ಸಂಘದ ಯಾ ಸಂಸ್ಥೆಯ ಸಾಮಾನ್ಯ ನಿಬಂಧನೆಗಳನ್ನು ಉಲ್ಲಂಘಿಸಿಯೂ ವರ್ತಿಸುವುದರಿಂದ ಒಗ್ಗಟ್ಟನ್ನು ಎಂದಿಗೂ ಸಾಧಿಸಲಾಗುವುದಿಲ್ಲ. ಈ ಸಂಘದ ಕಳೆದ ಮಹಾ ಸಭೆಯ [illegible] ಗಳಿಗೆ ಪ್ರದಾನರು ಸಂಘದ ಮೆಂಬರುಗಳಿಗೆ ಅತೃಪ್ತಿಕರ [illegible] ಸಂಘದ ನಿಬಂಧನೆಗನುಸಾರವಾಗಿ [illegible] ವಿಶೇಷ [illegible] ಮೀಟಿಂಗನ್ನು ಸೇರಿಸಿ ಅವುಗಳನ್ನು [illegible] ಪಡಿಸಿಕೊಳ್ಳಬೇಕಲ್ಲದೆ ಮಹಾ ಸಭೆಯಲ್ಲಿ ಚುನಾಯಿಸಲ್ಪಟ್ಟ ಕಮಿಟಿಯವರು ತಮ್ಮ ಜವಾಬ್ದಾರಿಯನ್ನು ಮರೆತು ರಾಜಿನಾಮೆ ಕೊಡಬೇಕೆಂದು ನೀವು ಹೇಳುವುದರಲ್ಲಿ ಅರ್ಥವಿಲ್ಲ.

ಜಮೀನ್ದಾರರ ಸಂಘ, ಪಿ. ಎ. ಚೆಟ್ಟಪ್ಪ,
ಮಡಿಕೇರಿ. (ಜನರಲ್ ಸೆಕ್ರೆಟರಿ)

"ಮಡಿಕೇರಿ ನಾಡವನೆಂದು ಬರೆದ ಲೇಖಕರಿಗೆ ಪಿ. ಎ. ಚಂಗಪ್ಪನವರು ಹೇಳುವ ಉತ್ತರ"

"ಕೊಡಗು" ಪತ್ರಿಕೆಯ ತಾ. 16—8—29ರ ಸಂಚಿಕೆಯಲ್ಲಿ ಮಡಿಕೇರಿ ನಾಡವನೆಂಬ ದಸ್ಕತ್ತಿನಿಂದ ಕೂಡಿದ ಬಾತ್ಮಿಯನ್ನು ಚೆನ್ನಾಗಿ ಓದಿದೆನು. ಅಂಥಾ ಹೀನ ತರದ ಬಾತ್ಮಿಗೆ ನನ್ನ ನಿಗ ಅವಶ್ಯವಿಲ್ಲ. ತನ್ನ ತಂದೆತಾಯಿಗಳು ಕೊಟ್ಟಂಥಾ ಘನತೆಯ ನಾಮವನ್ನು ಬಹಿರಂಗ ಪಡಿಸಲು ಎದೆಗುಂದಿ ಮಡಿಕೇರಿ ನಾಡವರ ಮುಖಂಡನೆನಿಸಿಕೊಳ್ಳತಕ್ಕ ರಕ್ಕ ನಾಮದಿಂದೊಡಗೂಡಿದ ಬಾತ್ಮಿಗೆ ಯಾರು ತಾನೆ ನಿಗವಿಡುವರು? ಅಂಥಾ ಟೊಳ್ಳು ಗೌರವವನ್ನು ಪಾಲಿಸತಕ್ಕ ಅವಶ್ಯವೂ ಇರುವುದಿಲ್ಲ. ಆದರೂ ಆಕಾಶದಲ್ಲಿ ಗಂಭೀರದಿಂದ ಹಾರುತ್ತಿರುವ ರಣ ಹದ್ದು ಕೆಳಗೆ ಯಾವ ದೃಷ್ಟಿಯಿಂದಿರುವದೋ ಅದೇ ರೀತಿಯಲ್ಲಿರತಕ್ಕ ಈ ನಾಡಿನವನೆಂಬ ಸುಳ್ಳು ನಾಮದಿಂದ ಬರೆದ ಲೇಖಕರಿಗೆ ನನ್ನ ಛತ್ರದ ಚೀಲ ಬಿದ್ದ ಸ್ಥಳವನ್ನು ಸ್ವಲ್ಪ ತೋರಿಸಿಕೊಡಬೇಕಾಗಿರುತ್ತೆ.

ಅಯ್ಯಾ, ಮಡಿಕೇರಿ ನಾಡವನೇ —ನನ್ನ ರೂಬು ರೂಬು ಬಂದು ಈ ವಿಷಯ ಕೇಳಿದ್ದೇಯಾದರೆ ಹೃದಯಾನಂದಕರವಾದ ಪಾನದಿಂದ ನಿಮ್ಮ ದಾಹವನ್ನು ಅಡಗಿಸಿ ಆನಂದಗೊಳಿಸುತ್ತಿದ್ದೆನು. ಆದರೆ ಪರದೆಯ ಹಿಂದೆ ನಿಮ್ಮ ಮುಖವು ಕಾಣದು. ಆದರೂ ಪರ್ವ ಇಲ್ಲ. ದಯಮಾಡಿ ಕೊಡಗಿನ ಕೈಪಿಡಿಯನ್ನು ಸ್ವಲ್ಪ ತೆಗೆದು ನೋಡಿದರೆ ನನ್ನದು ಮಾತ್ರವಲ್ಲ ಇತರರ ಚೀಲಗಳು ಬಿದ್ದ ಸ್ಥಳ ಸಹ ನಿಮಗೆ ಸಿಕ್ಕುವದು ಅಷ್ಟೇ ಅಲ್ಲ, 1923ನೇ ವರ್ಷದ ಜಮೀನ್ದಾರರ ಸಂಘದ [illegible] ಸ್ವಾಗತ ಮಂಡಳಿಯಲ್ಲಿ ಮಡಿಕೇರಿ ನಾಡವನು [illegible] ರಾದರೆ ಸ್ವಾಗತ ಮಂಡಳಿಯವರಷ್ಟೇ? ಸ್ವಾಗತವು ಯಾವ [illegible] ತಿಳಿಯದೇ? "He that never thinks can never be wise" ಉಂಡಮನೆಗೆರಡನ್ನು ಬಗೆಯುವವರಿದ್ದಾರೆಂಬುವದು ನಾನು ಅರಿತಿರಲಿಲ್ಲ. ಮಡಿಕೇರಿ ನಾಡಿನವನು [illegible] ರಾಗಿದ್ದರೆ ನಿಜವಾಗಿಯೂ ಮುನಿಸಿಪಾಲಿಟಿ, ಆಸ್ಪತ್ರೆ ತೆರೆದು ಪಾಮರ ಜನರ ಸೌಕರ್ಯವ [illegible] ಪಡಿಕೇರಿ ನಾಡಿನವನ ಚೀಲವೋ ನನ್ನ ಚೀಲವೋ [illegible] ಚೆನ್ನಾಗಿ ಪರ್ಯಾಲೋಚಿಸಿನೋಡುತ್ತಿ [illegible] ಚುನಾವಣೆ ಮಾಡಲು ಇದು ನಿರಂಕುಶ ದೇಶವಲ್ಲ ನಿಮ್ಮ ನಿರಂಕುಶ ಯೋಚನೆಯನ್ನು ಮೂಲೆಗೊತ್ತರಿಸಿ ನನ್ನ ಜನೂ ಖರ್ಚು ಕೇಳತಕ್ಕ ನಾಡವನು ಸದ್ಯಕ್ಕೆ ಹುಟ್ಟಿರುವದಿಲ್ಲ. ನನ್ನ ಒಡೆಯನಾದ ಆ ಪರಮಾತ್ಮನಿಗೆ ಮಾತ್ರ ನನ್ನ ಲೆಕ್ಕ ಒಪ್ಪಿಸುವೆನು.

ಪಾಮರ ಜನರಲ್ಲಿ ಎರಡು ಕಡೆ ಜಗಳ ಹುಟ್ಟಿಸಿ ಮನಶ್ಶಾಂತಿಗೆ ವಿರೋಧವಾದ ಕೆಲಸ ಮಾಡಿ, ವಂಚಿಸಿ, ಸುಲಿದು, [illegible] ಜೊಹರ ಮಕ್ಕಳನ್ನು ಸಾಕತಕ್ಕ ಧ್ಯೇಯವು ನನ್ನದಲ್ಲ. "God's mill grinds slow, but sure" ಆದ್ದರಿಂದ [illegible] ನ್ನ [illegible] ಜನರಿಗೆ ತಿಳಿಯುವದು. ಅಲ್ಲದೆ "Tell me your friend, I will tell you who you are" ನಿಮ್ಮ ಧ್ಯೇಯದ ಬಾತ್ಮಿಯಿಂದ [illegible] ಯಾರೆಂಬುವದು ನನಗೆ ತಿಳಿಯಿತು. ನಿಸ್ವಾರ್ಥನು ನಾನಲ್ಲ. ನಿಮ್ಮ ಸಂಗಡಿಗರೊಂದಿಗೆ ನಿಮ್ಮ ಧ್ಯೇಯವನ್ನು ಪಾಲಿಸಿಕೊಳ್ಳಿ. ಇಲ್ಲಿಗೇ ಸಾಕು.

ಪಿ. ಎ. ಚಂಗಪ್ಪ.

ಭಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಿಡ ಕಟ್ಟಿದೆ. ಇದರ ಬಣ್ಣವು ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಸವರನ್ ಭಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ. ೧ಕ್ಕೆ ೧೨ ಆ. ೩ ಉಂಗುರಗಳಿಗೆ ಒಂದು ಟೇಬಲ್ ಟೈಂಪೀಸನ್ನೂ, ೬ ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯ್ಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ.

ವಿಳಾಸ:—ಲೀಗಲ್ ವಾಚ್ ಕಂಪೆನಿ,

52—10 ಪೋ. ಬಾ. 243. ಮದರಾಸು.

Ford SALES AND SERVICE

The most competitive.

CAR

in the most competitive

YEAR

The new model A Ford!!!

with three Speed selective sliding gear Transmission.

The most economical car in the market

For Demonstration & further particulars

Please apply to.--

S. Sunder Rau,

Ford Dealer for Coorg,

24—9 MERCARA.

ಟೇಬಲ್ ಟೈಂಪೀಸು ಇನಾಂ.



ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ನೋಲಾದ ಗಟ್ಟಿ ಸಾಮಾನಗಳಿಂದ (ಸ್ಕ್ರೀನ್ ನೋಡಿ) ತಯಾರಿಸಿವೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸರಿಸಮಾನವಾಗಿರುವುದು. ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಒಂದನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1 ಕ್ಕೆ 7—0—0.

ವಿಳಾಸ.—ಕೆ. ಎನ್. ಜೆನ್‌ಸೆನ್ ಅಂಡ್ ಕೊ,

52—10 168. ಛೈನಾ ಬಜಾರ್, ಮದರಾಸು.

Lamps

(of Basel Mission fame)

Just arrived! Shop Early!!

Table Lamps—glass container with brass fittings & Shade @ Rs 7 8, 6/12, 6/8 & 5/– Each.

Wall Lamps—glass container with brass fittings & mirror @ Rs 3/12, –, – 1/8 & 1/2 Each

Hanging Lamp brass container @ Rs 3, 12.

Hanging Lamp glass container @ Rs 2/12.

Lanterns thoroughly reliable @ Rs 3/4 3, 2 & 3/ Each

Spare Chimneys Stocked.

The Coorg Emporium,

Mercara. Sidapur.

48—9

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ತಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದಕಾಲ, ದುಷ್ಟಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ಹೊಸವ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೂಡಿದೆ. ಕ್ರಯ ಪುಸ್ತಕ ೧ಕ್ಕೆ ರೂ. ೧—೦—೦.

ಎಸ್. ವಿ. ಗೋಪಾಲ್ ಬುಕ್ ಡಿಪ್ಪೋ,

52—33 37. ತಿರುಪಳ್ಳಿಬೀದಿ, ಮದರಾಸ್.

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕಾರ್ಡು ಬರೆದರೆ ಉಗಿನ ಕ್ಯಾಟಲಾಗು ಮಫತ್ತಾಗಿ ಕಳುಹಿಸಲ್ಪಡುವದು.

ಜೋಡು ನಳಿಗೆಯ ಶಾಟ ಬನ್ದೂಕುಗಳು	ರೂ.	120 ರಿಂದ	ರೂ.	2750	ರ ವರೆಗೆ.
ಒಂಟಿ ,, ,, ,,	,,	35 ,,	,,	950	,,
ಜೋಡು ,, ,, ಕೋವಿಗಳು	,,	50 ,,	,	1350	,,
ಒಂಟಿ ,, ,, ,,	,,	35 ,,	,,	275	,,
ಜೋಡು ನಳಿಗೆಯ ಕೇಪು ,,	,,	45 ,,	,,	135	,
ಒಂಟಿ ,, ,, ,,	,,	30 ,,	,,	80	,,
ಬ್ರೀಚ್ ಲೋಡಿಂಗ್ ರಿವಾಲ್ವರುಗಳು	,,	35 ,,	,,	350	,,
ಪಿಸ್ತೋಲುಗಳು	,,	30 ,,	,,	150	,,

ಕಾಡು ಮೃಗಗಳ ಬೇಟೆ, ಮೀನು ಬೇಟೆ ಮುಂತಾದ ಎಲ್ಲಾ ತರಹದ ರಾತ್ರಿಯ ವಿನೋದ ಮತ್ತು ಕೆಲಸಗಳಿಗೆ ಬಹು ಉಪಯೋಗಕರವಾದ ಉತ್ತಮ 'ಸರ್ಚ್ ಲೈಟ್' ಎಂಬ ದೀಪಕ್ಕೆ ಬೆಲೆ ರೂ. 30. ರವಾನೆಯ ಚಾರ್ಜ್ಯು.

ಕತ್ತಿಗಳು, ಬಚಿಗಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—1 **210 Abdul Rehman Street, BOMBAY.**

ಎಂ. ಎಸ್. ಶಿವಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

1. 'ಡಿಲ್ ಒವರ್ ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ 1 ಕ್ಕೆ 50 8 0
2. "ಸಿದ್ಧಪ್ಪಾಸ್ ಫ್ಲ್ಯೂಟ್" ,, ,, 42 8 0
3. ಶಕುಂತಲಾ ,, ,, ,, 40 0 0
4. ಮೋಹನ್ ,, ,, ,, 37 8 0
5. ಮೋಸ್ಲೇಂ ,, ,, ,, 35 0 0
6. ಮಹಾರಾಜಾ ,, ,, ,, 32 8 0
7. ಕೊಹಿನೂರು ,, ,, ,, 29 8 0
8. ಡೈಮಂಡ್ ,, ,, ,, 27 8 0
9. ಬಿಜಲೀ ,, ,, ,, 25 0 0
10. "ದಿಲ್‌ಬಹಾರ್ ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1 ಕ್ಕೆ 55 0 0
11. ಸ್ಪೆಷಲ್ ,, ,, ,, 56 0 0
12. ಮೋಹನ್ ,, ,, ,, 50 8 0

14 ಕ್ಯಾರೆಟ್ ಭಂಗಾರದ ನಿಬ್ಬುಹಾಕಿದ ಖಾತ್ರಿಯಾದ ಬಂದೋಬಸ್ತು ಆದ ಫೌಂಟೆನ್ ಪೆನ್‌ಗಳು.

'ವರ್ಲ್ಡ್ ವಂಡರ್' ಫೌಂಟೆನ್ ಪೆನ್ 1 ಕ್ಕೆ 3 0 0
,, ಬಿಗ್‌ಬ್ಯಾರಲ್ ,, ,, 3 2 0
,, ಸ್ಕ್ರೂಕ್ಯಾಪ್ ,, , 3 8 0
,, ಮಾಟಲ್ ಕಲರ್ ,, ,, 3 14 0
,, ಮಾಟಲ್ ಸ್ಕ್ರೂಕ್ಯಾಪ್ ,, ,, 4 4 0
,, ಬ್ಲಾಕ್ ನ್ ಕಲರ್ ಸೆಲ್ಫ್‌ಫಿಲಿಂಗ್ ಪೆನ್ ,, 5 8 0
,, ಸ್ಪೆಷಲ್ ಪೆನ್ , ,, 6 8 0
,, ಲೇಡೀಸ್ ಸೈಜಿನ ಮಾಟಲ್ ಕಲರ್ ಪೆನ್ ,, 4 8 0
ಬ್ಲಾಕ್‌ಬರ್ಡ್ ಪೆನ್ 1 ಕ್ಕೆ 3 0 0 ಮತ್ತು 3 12 0
ಸ್ವಾನ್ ಪೆನ್ ,, 6 8 0 , [illegible] 0 0
ವಾಟರ್‌ಮೆನ್ ಐಡಿಯಲ್ [illegible]
,, [illegible]
ಬಿಗ್ ಬ್ಯಾರಲ್ [illegible]
,, [illegible]

ಖಾತ್ರಿಯಾದ ಬಂದೋಬಸ್ತು ಆದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು 1 ಕ್ಕೆ 2 2 0
ಜರ್ಮನ್ ಗುಂಡಾ ಕೃತಿಯ ದೊಡ್ಡ ಟೈಂಪೀಸು ,, 3 12 0
ಅನ್‌ಸೋನಿಯಾ 'ಬಿ' ಟೈಂಪೀಸು ,, 5 13 0
, ಅಕಾರದ ,, ,, 5 6 0
ಬಿಗ್‌ಬೆನ್ ,, ,, ,, 9 6 0
,, ಶಿಲ್ಲಿಂಗ್ಸ್ ಸ್ಟ್ಯಾಂಡಿರುವ ಅಕಾರದ ಟೈಂಪೀಸು ,, 13 5 0
ಘಂಟೆ ಹೊಡಿಸಿ ಅರಾಂ ಬಾರಿಸುವ ಕ್ಯಾಲೆಂಡರ್ ಕ್ಲಾಕ್ ,, 7 2 0
,, ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾಲೆಂಡರ್ ಕ್ಲಾಕ್ 1 ಕ್ಕೆ 9 10 0
, ಘಂಟೆ ಅರ್ಧ ಘಂಟೆ ಹೊಡೆಯುವ ಅಕಾರದ ಹೊಸ ಘಂಟೆಯ ಕ್ಯಾಲೆಂಡರ್ ಕ್ಲಾಕ್ 1 ಕ್ಕೆ 9 12 0
[illegible] ಕ್ಯಾಲೆಂಡರ್ ಕ್ಲಾಕ್ 1 ಕ್ಕೆ 12 0 0

'ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿವಪ್ಪ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—16

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	20,000
... ಠೇವಣಾತಿ —	1,87,795

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟು, ಟ್ರೆಜರರ್.
ಕೋಡಂಡ ಅಪ್ಪಯ್ಯನವರು, ಕೊಂಗೆಟ್ಟಿರ ಅಪ್ಪಯ್ಯ
ರಾವ್ ಬಹದ್ದೂರ್ ನವರು.

ಸೆಕ್ರೆಟರಿ
... ವೆಂಕಟ್ಟ ... ಬಿ. ಎ., ಬಿ. ಎಲ್.,
... – 1929

ನೋಟೀಸು.

... ಪ್ರತಿಯ ... ಕೊಂಡಪ್ಪನಿಂದ, ಆ ದಸ್ತು ವಿಲೇವಾರಿಗಾಗಿ ... ನಮ್ಮ ರಶೀತಿ ... ಕೊಡಲಾಗಿದೆ ... ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ... ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ...

ಏಜಂಟರುಗಳು.

... ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
... —ಮೆ. ಕೀಕಿರ ಅಗ್ಗಯ್ಯನವರು.

ಸಬ್ ಏಜಂಟರುಗಳು.

ವೀರರಾಜಪೇಟೆ—ಮೆ. ಕಾಸಿಚೇರಿರ ಸಂಜಪ್ಪನವರು, ಮತ್ತು ಮೆ. ಮಂಡೇಪಂಡ ಸೋಮಯ್ಯನವರು, (ಬಾಡಿಭಂಡಾರ.)
ಮೂರ್ನಾಡು—ಮಡಿಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ ... ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಯ್ಯನವರು,
ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ಪಾವ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿನನುಸಾರವಾಗಿ ತಯಾರಿಸಲ್ಪಟ್ಟಿರುವಾ ಫಾರಂಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವೀರಾಜಪೇಟೆ ಒಡ್ಡರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮೇನೇಜರ್,
"ಕೊಡಗು" ಮಡಿಕೇರಿ.



... Victor Cartridges Rs. 10/- Per 100
Mahomedally-Noorbhoy.
ARMS & AMMUNITION MART.
33, Abdul Rehman Street
52-50 BOMBAY. 3.

ಕಟುಕಷಾಯ ಮಾತ್ರೆ ದಳ:— ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಚಳಿ ಜ್ವರ, ದಿನವೂ ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗತ್ತ ದೋಷದಿಂದ ಬರುವ ಜ್ವರಗಳಿಗೆ ... ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0, 3ಕ್ಕೆ ರೂ. 4–0–0, 6ಕ್ಕೆ ರೂ 7–8–0, 12ಕ್ಕೆ ರೂ. 14.

ಚಂದನಾಸವ:— ಇದು ಪ್ರಮೇಹ ಮೂತ್ರ ಕೃಚ್ಛ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಮೊಸರಿನಂತೆ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಯೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳಕ್ಕೆ ಬರುವ ರೋಗ ಇವುಗಳಿಗೆ ಪರಮ ಔಷಧ. ಬೆಲೆ ಬಾಟ್ಲು 1, 3, 6ಕ್ಕೆ ರೂ. 1–4–0, 3–8–0, 6–12–0.

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವುಳ್ಳ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ ... 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3–9–0

ಮನೋಲ್ಲಾಸಿನಿ ತೈಲ:— ತಲೆನೋವು, ತಲೆತಿರುಗುವುದು, ತಲೆವುರಿ, ಕಣ್ಣು ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು, ಅಪಸ್ಮಾರ ಪಿತ್ಥ ಬಾಧೆಯು ದು ನಿಶ್ಚಯ ... ಗುಣವಾಗುತ್ತದೆ. ಉದುರುವ ಕೂದಲನ್ನು ... ಕೂದಲನ್ನು ... ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2–10–0. ಒಂದು ಡಜನ್ ಸೀಸೆಗೆ ರೂ. 2, 3 ಸೀಸೆಗಳಿಗೆ 5–8–0.

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.
52–46 ೯. ಮಂಗಳೂರು.

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಫೋನುಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಚೈನ್ಗಳೂ, ಬೆಳ್ಳಿಯ ಮತ್ತು ಚರ್ಮದ ಪಟ್ಟಿಗಳೂ ... ಚಿಲ್ಲರೆಯಾಗಿಯೂ ದೊರೆಯುವವು ... ನಮ್ಮಲ್ಲಿ ... ವರ್ಷಗಳ ಗ್ಯಾರಂಟಿ ... ಸುಂದರವಾಗಿಯೂ, ದಸ್ತುವಾಗಿಯೂ ಇರುವ ... "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರ



ವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯ ಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ
24–15 ಮುಖೇನ ಬರೆದು ಈಗಲೇ ತಿಳಿಯಬಹುದು

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ
ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತವೆ
ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ.
1926	391	" "	1926.	106	" "
1927	468	" "	1927.	122	"
1928	585	" "	1928.	140	"

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ. | 1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ
1921ರಲ್ಲಿ " " " | 1927ರಲ್ಲಿ " " 25 "

... ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ಪಾಲಿಸಿಗಳ ... ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ... ಆಗುವುದು.

... ಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರುದುಕೊಳ್ಳುವುದು —

... ಎಲ್. ಆರ್. ಕೃಷ್ಣಸ್ವಾಮಯ್ಯರ್
ಸೌತ್ ... ಬೆಂಗಳೂರು 52–35 ಬ್ರಾಂಚ್ ಸೆಕ್ರೆಟರಿ.

ಶ್ರೇಷ್ಠವಾದ 5 ಕುಟುಂಬ ಔಷಧಗಳು.

ಪ್ರತಿ ಕುಟುಂಬದಲ್ಲಿಯೂ ಸದಾ ಇರಬೇಕಾದದ್ದು.

ಶ್ರೇಷ್ಠವಾದ ನೇಪಾಳದ ಕಸ್ತೂರಿ ತೊಲ 1ಕ್ಕೆ ರೂ. 40. ಅಸಲ್ ಗೋರೋಜನ ತೊಲ 1ಕ್ಕೆ ರೂ. 12.
ಕೇಸರಿ ಅಥವಾ ಕುಂಕುಮಪ್ಪುಪ್ಪ ತೊಲ 1ಕ್ಕೆ ರೂ. 3½ ಪಚ್ಚ ಕರ್ಪೂರ ತೊಲ 1ಕ್ಕೆ ರೂ. 2½.
ಅಪ್ಘಾನ ಇಂಗು ತೊಲ 10 ಕ್ಕೆ ರೂ. 1.

ಶ್ರೇಷ್ಠವಾದ 108 ಮಣಿಗಳುಳ್ಳ ರುದ್ರಾಕ್ಷಿ ಜಪ ಮಾಲೆ 1ಕ್ಕೆ ಆಣೆ 6, 8, 12, ರೂ 1, 2, 5, 10 ರ ವರೆಗೆ.
... ಮಣಿಗಳ್ಳುಳ್ಳ ರುದ್ರಾಕ್ಷಿ ತೊಲ 1ಕ್ಕೆ ರೂ. 1, 2, 3, 4, 5, 8, 10 ರ ವರೆಗೆ.
ಮತ್ತು ಎಲ್ಲಾ ವಿಧವಾದ ರೇಷ್ಮೆ ಜರಿ ಸೀರೆಗಳು, ಕಣಗಳು, ಮುಗುಟ ವಗೈರಾದಿ ಎಲ್ಲಾ ಸರಕುಗಳು ದೊರೆಯುತ್ತೆ. ಸಾವಕಾಶ ಮಾಡದೆ ಈ ಕೆಳಗಿನ ಅಡ್ರಸ್ಸಿಗೆ ಆರ್ಡರು ಕೊಡಿರಿ. ಸರಕುಗಳು ಸುಲಭ ಕ್ರಯಕ್ಕೆ ದೊರೆಯುತ್ತೆ.

ಅಡ್ರೆಸ್—

ಭಾರದ್ವಾಜ ಕಂಪೆನಿ, "ಸಿಲ್ಕ್ ಹೋಮ್," ಶ್ರೀಕಾಶಿ.

BHARADWAJ & CO.,
"SILK HOME,"
52–1 Benares City.

Printed & published by P. I. Belliappa, at "Kodagu" Press, Mercara for "Kodagu" Ltd.

"KODAGU" OFFICE, MERCARA.
If not delivered please return to
ರಿಜಿ. No. M. 1350.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯತ್ನತಃ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯ | ಮಡಿಕೇರಿ, ಸನ್ ೧೯೨೯ನೇ ಇಸವಿ ಸೆಪ್ಟಂಬರ್ ತಾರೀಕು ೬ನೇ ಶುಕ್ರವಾರ. | ಸಂಚಿಕೆ ೧೪

Telephone :— 3145

By Appointment to H. E. The Governor of Madras.

Telegrams :— "PRECIOUS"

Guarantee of Satisfaction throughout in every order large or small.

Brooch.

PROMPTEST EXECUTION — CATALOGUE ON APPLICATION — HIGH-CLASS WORKMANSHIP

GOLDSMITH — SILVERSMITH

V. Subramania Iyer

GEM SET JEWELLER

POST BOX—423 TRIPLICANE MADRAS.

Excellent Quality Chaste Designs Moderate Prices

Ice Tumbler.

"Green Hills"
VIRARAJENDRAPET.
7th Decr., 26.

Sir,

........I am glad to note that the Jewels have a good finish . .

(Sd.) Mrs. A. B. CHENGAPPA.

SUNTICOPPA,
Nellore Estate.

Dear Sir, 7th April, 28

I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends.

(Sd.) Miss K. S[...]

MERCARA,
20th May, 27.

Dear Sir,

I am quite satisfied with the Jewels you sent on the 16th instant.

(Sd.) Mrs. K. S. CARIAPPA.

52—51

Illustrated Catalogue Free on Application.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಚೋರರ್' ಹುಳದ ದೆಸೆಯಿಂದ ಕಿತ್ತು ತೆಗೆದ ಕಾಫಿಗಿಡಗಳ ಸಂಖ್ಯೆಯು ಧಾತುಗುಣದ (Mineral) ಗೊಬ್ಬರಹಾಕಿದ ಸ್ಥಳಗಳಿಗಿಂತಲೂ ಸಾರಜನಕ (Nitrogen ...) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ದಾಪುರ ಪರೀಕ್ಷಾ ಕ್ಷೇತ್ರ (Experiment station) ದಲ್ಲಿ ಕಂಡ ... ಆದುದರಿಂದ ಕೊಟಸ್ಪ್ ಪಾಟ್ ... ಸಾರಜನಕ ಗೊಬ್ಬರವು ಪ್ರಯೋಜನಕರವಾಗುವದೆಂದು ತೋರುತ್ತದೆ (... ಮನಸ್ಸೋರ್ ... ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್)

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ... ಪತ್ರಿಕೆ ... ಗಳಿಗೆ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ
ಇಂಡಿಯನ್ ಡೆಲಿಗೇಶನ್
ಪೋ. ಬಾ. ... ೧೦೯, ಕಲ್ಕತ್ತಾ

(2) ಮಿಸ್ಟರ್ ... ಚಿಲಿಯನ್ ... ಕಮಿಟಿ,
ಮಡಿಕೇರಿ.

24—16

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವುದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿ ಬಿಡುವದು. ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವುದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ಮುಟ್ಟಾದ ನಂತರವೂ, ಉಂಟಾಗುವ ಹೊಟ್ಟೆನೋವು ಮುಂತಾದವುಗಳನ್ನು ಖಂಡಿತ ಗುಣಪಡಿಸುವದು. ಈ ಎಣ್ಣೆಯನ್ನು ಬೊಂಬಾಯಿ, ಮದರಾಸು ಆಧಿಪತ್ಯಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನ ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟಲ್ 1ಕ್ಕೆ 2—8—0.

ವಿಳಾಸ:— ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,
109 ಛೈನಾ ಬಜಾರ್ ರೋಡ್, ಮದರಾಸು.

32—10

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್ ಈದಿಗ ಯಕ್ಸ್‌ಪೆಲ್ಲರ್ಸ್, ಮೈಸೂರು.

ನಮ್ಮಲ್ಲಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಸಿಲ್ಟರುಗಳಿಂದ ಶೋಧಿಸಲ್ಪಟ್ಟ ಅಪ್ಪಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸಹ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯ ಅಪೇಕ್ಷೆಯುಳ್ಳವರು ಸಂತೆಪೇಟೆಯಲ್ಲಿ ಇರುವ ನಮ್ಮ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರದ್ವಾರ ತಿಳಿಯಬಹುದು.

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲಾ ಬಾಧೆಗಳನ್ನು ತೀರಿಸಿ ಸಮಯಾವಸ್ಥೆಯನ್ನು ಕೊಡುವ ಈ ಜಾತಿ ... ಚಳಿ, ಬಂಗಾರ ಮುಂತಾದ ಭಸ್ಮ ... ಕಾಟಿಯಾಗಲಾರವು

ಮದನ ಮಂಜರಿ ಮಾತ್ರೆಗಳು.

ಧಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನರಹಿತವಾದುದು. ಒಂದು ಡಬ್ಬಿಯ ಕ್ರಯ ೧—೦—೦

52—3 ಮದನಮಂಜರಿ ಫಾರ್ಮಸಿ,
1/94 ಚೈನಾ ಬಜಾರ್, ಮದ್ರಾಸ್.

ಏಕೆ ನರಳುತ್ತೀರಿ?

ಕ್ರಯವು ಅಂಚೆಹಾಸಲು.

ಇಲ್ಲವೆ ಉಚಿತವಾಗಿ ಕಳಿಸಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಾಧ ರೋಗಗಳನ್ನು ಪರಿಹಾರ ಮಾಡಿಕೊಂಡು, ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—3 ಮದನಮಂಜರಿ ಫಾರ್ಮಸಿ,
1/94 ಛೈನಾ ಬಜಾರು ರೋಡು, ಮದ್ರಾಸು

ಕೊಡಗು.

ಸ ೧೯೨೯ನೇ ಇಸವಿ

ಸೆಪ್ಟಂಬರ್ ತಾ. ೬ ನೇ ಶುಕ್ರವಾರ.

ಉಪವಾಸ ವ್ರತದ ಅಂತ್ಯ.

ಕೆಲವು ತಿಂಗಳುಗಳ ಹಿಂದೆ ಮಧ್ಯವರ್ತಿ ನ್ಯಾಯವಿಧಾಯಕ ಸಭೆಯಾದ ಎಸೆಂಬ್ಲಿಯಲ್ಲಿ ಬಾಂಬು ಎಸೆದರೆಂಬ ಕೇಸಿನಲ್ಲಿ ಸಜೆ ವಿಧಿಸಲ್ಪಟ್ಟ ಭಾಗತ್‌ಸಿಂಗ್ ಮತ್ತು ದತ್‌ರವರು ಜೈಲಿನಲ್ಲಿ ರಾಜಕೀಯ ಕೈದಿಗಳಿಗೆ ನ್ಯಾಯವಾದ ಉಪಚಾರಗಳನ್ನು ಕೊಡುವುದಿಲ್ಲವೆಂದು ಅಧಿಕಾರಿಗಳಿಗೆ ಫಿರ್ಯಾದು ಹೇಳಿದರೂ ಪ್ರಯೋಜನವಾಗದ್ದರಿಂದ ಉಪವಾಸ ವ್ರತವನ್ನು ಕೈಕೊಂಡು ಮನುಷ್ಯರು ಸೇವಿಸಲು ಯೋಗ್ಯವಾದ ಆಹಾರವನ್ನೂ, ಓದಲಿಕ್ಕೆ ಪುಸ್ತಕಗಳು ಮತ್ತು (ತಟಸ್ಥಪಕ್ಷ ಸರ್ಕಾರದ ಪರವಾದ) ವರ್ತಮಾನ ಪತ್ರಿಕೆಗಳನ್ನೂ ಕೊಡುವ, ಅವರಿಗೆ ಅಭ್ಯಾಸವಿರುವ ಕೆಲಸವನ್ನು ಮಾತ್ರ ಮಾಡಿಸುವ ಮತ್ತು ಅವರನ್ನು ಒಬ್ಬರಿಂದ ಒಬ್ಬರನ್ನು ಪ್ರತ್ಯೇಕಿಸದೆ ಒಟ್ಟಿಗೆ ಇಡುವವರೆಗೆ ತಾವು ಆಹಾರವನ್ನು ತೆಗೆದುಕೊಳ್ಳುವದಿಲ್ಲವೆಂದು ನಿಶ್ಚಯಿಸಿದರು. ಪ್ರಾರಂಭದಲ್ಲಿ ಅಧಿಕಾರಿಗಳು ಇದಕ್ಕೆ ಗಮನವೇ ಕೊಡಲಿಲ್ಲ. ಒಂದು ತಿಂಗಳಲ್ಲಿ ಲಾಹೋರ್ 'ಕಾನ್‌ಸ್ಪಿರಸಿ' ಕೇಸಿನ ಕೈದಿಗಳು ಸಿಂಗ್ ಮತ್ತು ದತ್‌ರವರ ವರ್ತನೆಯಲ್ಲಿ ಸಹಾನುಭೂತಿ ತೋರಿಸಲಿಕ್ಕಾಗಿಯೂ, ಅವರಿಗೂ ಸರಿಯಾದ ಉಪಚಾರಗಳು ದೊರೆಯದ್ದರಿಂದಲೂ ಅವರೂ ಉಪವಾಸವಿರಲು ಪ್ರತಿಜ್ಞೆ ಮಾಡಿಕೊಂಡರು. ಅವರು ಆಹಾರ ತೆಗೆದುಕೊಳ್ಳಲು ತಿರಸ್ಕರಿಸುತ್ತಾ ಬಂದದ್ದರಿಂದ ಬಹಳ ನಿಶಕ್ತರಾಗ ತೊಡಗಿದರು. ಪಂಜಾಬು ಸರ್ಕಾರದವರು ಕೈದಿಗಳ ನ್ಯಾಯವಾದ ಫಿರ್ಯಾದುಗಳನ್ನು ಕೂಡಲೆ ವಿಚಾರಿಸಿ ಸರಿಪಡಿಸುವುದರ ಬದಲು ಮೌನ ತಾಳುತ್ತಾ ಬಂದರು. ಕೈದಿಗಳ ಕಷ್ಟದ ಅವಸ್ಥೆಯೂ, ಅಧಿಕಾರಿಗಳ ಉದಾಸೀನತೆಯೂ ಹೆಚ್ಚು ಏರುವಂತಾದಾದುದರಿಂದ ಈ ವಿಷಯವು ದೇಶದ ಜನರ ಗಣನೆಗೆ ಬಂದು ಪ್ರಾಮುಖ್ಯತೆಯನ್ನು ಪಡೆಯಿತು. ಇಡೀ ಹಿಂದುಸ್ಥಾನದಲ್ಲಿ ಇದನ್ನು ಕುರಿತು ಚಳವಳವು ಎದ್ದಿತು. ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನೆಹರುರವರೇ ಸರ್ಕಾರದ ಉದಾಸೀನತೆಯನ್ನು ಖಂಡಿಸಿ, ಮುಷ್ಕರದಾರರ ಕಷ್ಟಗಳನ್ನು ಪರಿಹರಿಸದೆ ಅವರ ಉಪವಾಸವನ್ನು ಮುಂದರಿಸಲು ಬಿಟ್ಟರೆ, ಸರ್ಕಾರದವರು ಪ್ರಜೆಗಳ ಜೀವವನ್ನು ಕಾಪಾಡುವ ತಮ್ಮ ಪ್ರಾಥಮಿಕ ಕರ್ತವ್ಯವನ್ನು ಮಾಡದಂತಾಗುವದಲ್ಲದೆ ಜನಸಮುದಾಯದ ದ್ವೇಷಕ್ಕೂ ಗುರಿಯಾಗುವರೆಂದು ಸೂಚಿಸಿದರು.

ನಂತರ ಪಂಜಾಬು ಸರ್ಕಾರದವರು ಜೈಲಿನಲ್ಲಿ ರಾಜಕೀಯ ಕೈದಿಗಳನ್ನು ನಡಿಸುವ ನಿಬಂಧನೆಗಳನ್ನು ವಿವರಿಸಿ, ಅದರ ಮೇರೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಕೆಲವು ರಿಯಾಯಿತಿ ತೋರಿಸಬಹುದಲ್ಲದೆ, ಎಲ್ಲಾ ಸಂದರ್ಭಗಳಲ್ಲಿ ಹಾಗೆ ಮಾಡಲಿಕ್ಕಾಗುವುದಿಲ್ಲವೆಂದು ಪ್ರಕಟಿಸಿದರು. ಆದರೆ ಮುಷ್ಕರಗಾರರ ವಿಷಯದಲ್ಲಿ ಯಾಕೆ ಆ ರಿಯಾಯಿತಿಗಳನ್ನು ತೋರಿಸಬಾರದೆಂಬುದನ್ನು ಚೆನ್ನಾಗಿ ವಿವರಿಸಲಿಲ್ಲ. ಮಾತ್ರವಲ್ಲ, ಎಲ್ಲಾ ರಾಜಕೀಯ ಕೈದಿಗಳಿಗೆ ಕೊಡುವ ಉಪಚಾರಗಳು ಅಸಹನೀಯವಾದವೆಂಬ ಜನರ ಆಕ್ಷೇಪಣೆಗೆ ಒಂದಿಷ್ಟೂ ಗಮನ ಕೊಡಲಿಲ್ಲ. ಆದುದರಿಂದ ಮುಷ್ಕರವು ನಿಲ್ಲುವುದರ ಬದಲು ಜನರ ಚಳವಳವು ಪ್ರಬಲವಾಗುತ್ತಾ ಬಂತು. ಕಡೆಗೆ ಇಂಡಿಯಾ ಸರ್ಕಾರದವರು ಕಣ್ಣು ತೆರೆಯಬೇಕಾಗಿ ಬಂತು. ಅವರು ಬಹಿರಂಗಪಡಿಸಿದ ಒಂದು ಪ್ರಕಟಣೆಯಲ್ಲಿ ಪಂಜಾಬು ಸರ್ಕಾರದವರ ಸೂಚನೆಗಳಿಗೇನೇ ಬೆಂಬಲಕೊಟ್ಟರೂ, ವಿಚಾರದಲ್ಲಿರುವ ಕೈದಿಗಳಿಗೆ ಸಂಬಂಧಿಸುವ ನಿಬಂಧನೆಗಳು ಜನ ಸಮುದಾಯಕ್ಕೆ ಅತೃಪ್ತಿಕರವಾಗಿದೆಯೆಂಬದನ್ನು ಒಪ್ಪಿಕೊಂಡು, ಪಬ್ಲಿಕ್ ಮುಂದಾಳುಗಳ ಆಲೋಚನೆ ತೆಗೆದುಕೊಂಡು ಅವುಗಳನ್ನು ಬೇಗನೆ ತಿದ್ದುಪಡಿ ಮಾಡಬೇಕೆಂದು ಪ್ರಾಂತೀಕ ಸರ್ಕಾರಗಳನ್ನು ಕೇಳಿಕೊಳ್ಳಲಾಗಿತ್ತು. ಇದರ ಮೇರೆ ಪಂಜಾಬು ಸರ್ಕಾರದವರು ಅಲ್ಲಿಯ ಜೈಲ್ ಕಮಿಟಿಯವರೊಡನೆ ಆಲೋಚಿಸಿ, ಮುಷ್ಕರಗಾರರು ಕೇಳುವ ರಿಯಾಯಿತಿಗಳನ್ನು ಕೊಡಬಹುದೆಂದು ತೀರ್ಮಾನಿಸಿದಂತೆ ತಿಳಿದು ಬರುತ್ತದೆ.

ಮುಷ್ಕರ ಹಿಡಿದ ಕೈದಿಗಳಲ್ಲಿ ಹೆಚ್ಚಿನವರು ಇನ್ನೂ ವಿಚಾರದಲ್ಲಿರುವ ರಾಜಕೀಯ ಕೈದಿಗಳಾಗಿರುವರು. ಅವರು ತಪ್ಪಿತಸ್ಥರೆಂದು ಇನ್ನೂ ತೀರ್ಮಾನಿಸಲ್ಪಟ್ಟಿರುವದಿಲ್ಲ. ಆದುದರಿಂದ ಅವರು ತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳಬೇಕಲ್ಲದೆ ಅವರನ್ನು ಶಿಕ್ಷಿಸಲ್ಪಟ್ಟ ಕೈದಿಗಳಂತೆ ಕಾಣುವದು ಎಂದೂ ಸರಿಯಲ್ಲವೆಂಬುದು ಯಾರಿಗೆ ತಾನೇ ತೋಚದೆ ಇರದು. ಸಿಂಗ್ ಮತ್ತು ದತ್‌ರವರು ಮುಷ್ಕರ ಹಿಡಿದು 80 ದಿವಸಗಳು ಆಗುವ ವರೆಗೂ ಸರ್ಕಾರದವರು ಈ ವಿಷಯಕ್ಕೆ ನಿಗ ಕೊಡದೆ ಇದ್ದದ್ದು ಶೋಚನೀಯವೇ ಸರಿ. ಅಲ್ಲದೆ ರಾಜಕೀಯ ಕೈದಿಗಳನ್ನು ಅಂದರೆ ತಮ್ಮ ದೇಶದ ಸ್ವಾತಂತ್ರ್ಯದ ಸಲುವಾಗಿ ಹೋರಾಡುವವರನ್ನು ಸಾಮಾನ್ಯ ಮಹಾಪಾತಕಿ ಯಾ ಕಡುಗಳ್ಳರಂತೆ ಕಾಣುವುದು ನ್ಯಾಯವಲ್ಲವೆಂದೂ, ಅವರನ್ನು ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟವರಂತೆ ನೋಡುವುದು ಯೋಗ್ಯವೆಂದಲೂ ಪ್ರಾಜ್ಞರ ಅಭಿಪ್ರಾಯವಾಗಿದೆ. ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟವರನ್ನು ಯಾವ ನಾಗರೀಕ ಜನಾಂಗವೂ ಯೋಗ್ಯವಾದ ಆಹಾರ ಕೊಡದೆ ನಿರ್ಬಂಧದಲ್ಲಿಡುವುದಿಲ್ಲವಷ್ಟೆ. ಹಾಗೆಯೇ ರಾಜಕೀಯ ಕೈದಿಗಳನ್ನು ಉಪಚರಿಸಬೇಕೆಂಬುದೇ ಮುಷ್ಕರಗಾರರ ವಾದವಾಗಿತ್ತು. ತಡವಾದರೂ ಸರ್ಕಾರದವರು ಮುಷ್ಕರಗಾರರ ವಾದದ ನ್ಯಾಯವನ್ನು ಅರಿತು ಅವರ ಕಷ್ಟಗಳನ್ನು ಪರಿಹರಿಸಲು ನಿಶ್ಚೈಸಿದ್ದು ತೃಪ್ತಿಕರವೆ. ಎಷ್ಟು ಶಕ್ತಿ ಕುಂದಿದರೂ, ಯಮನ ಪಾಶಕ್ಕೆ ಒಳಗಾಗುವಂತಿದ್ದರೂ ಕೂಡ ಉಪವಾಸವ್ರತದ ತಮ್ಮ ದೃಢ ನಿಶ್ಚಯವನ್ನು ಕಡೆಯ ವರೆಗೂ ಪಾಲಿಸಿ ಜಯ ಹೊಂದಿದರ ಶ್ರೇಯಸ್ಸು ಮುಷ್ಕರಗಾರರಿಗೆ ಸೇರಿದೆ.

ಎಸೆಂಬ್ಲಿಯ ಅಧ್ಯಕ್ಷರೂ, ವೈಸರಾಯರೂ.

ಕಳೆದ ಎಪ್ರಿಲ್ ತಿಂಗಳಲ್ಲಿ ನಡೆದ ಎಸೆಂಬ್ಲಿ ಮೀಟಿಂಗಿನಲ್ಲಿ ಸರ್ಕಾರಿ ಮೆಂಬರರು ಪಬ್ಲಿಕ್ ಸೇಫ್ಟಿ ಬಿಲ್'ನ್ನು ಚರ್ಚೆಗೆ ಇಟ್ಟಾಗ, ಈ ಬಿಲ್ಲಿಗೆ ಸಂಬಂಧಪಡುವಂಥ ಕೇಸೊಂದು ಮೀರಟ್ಟಿನಲ್ಲಿ ನಡೆಯುವುದರಿಂದ, ಈ ಬಿಲ್‌ನ್ನು ಚರ್ಚಿಸದೆ ಆ ಕೇಸನ್ನು ನಡಸಬೇಕು, ಇಲ್ಲವೇ ಕೇಸನ್ನು ನಡಿಸದೆ ಬಿಲ್‌ನ್ನು ಚರ್ಚಿಸಬೇಕಲ್ಲದೆ ಎರಡನ್ನೂ ಒಂದೇ ಸಮಯದಲ್ಲಿ ನಡಿಸಕೂಡದೆಂದು ಎಸೆಂಬ್ಲಿಯ ಚುನಾಯಿತ ಅಧ್ಯಕ್ಷರಾದ ಶ್ರೀಯುತ ವಿಠ್ಠಲಭಾಯಿ ಪಟೇಲರವರು ತೀರ್ಮಾನ ಕೊಟ್ಟರು. ಸರ್ಕಾರದವರು ಮೀರತ್ ಕೇಸನ್ನು ನಿಲ್ಲಿಸಲು ಒಪ್ಪದ್ದರಿಂದ ಸದರಿ ಬಿಲ್‌ನ್ನು ಚರ್ಚಿಸಲು ಎಸೆಂಬ್ಲಿಯ ಅಧ್ಯಕ್ಷರು ಬಿಡಲಿಲ್ಲ. ಅಧ್ಯಕ್ಷರ ಧೈರ್ಯದ ಈ ವರ್ತನೆಯು ಸರ್ಕಾರದವರ ಅಧಿಕಾರಕ್ಕೆ ಅಡ್ಡ ಬಂದದ್ದರಿಂದ, ವೈಸರಾಯರಿಗೆ ಬೇರೆ ದಾರಿಯೇನೂ ತೋಚದೆ, ತನಗಿರುವ ವಿಶೇಷ ಅಧಿಕಾರವನ್ನು ಉಪಯೋಗಿಸಿ ಸದರಿ ಬಿಲ್‌ನ್ನು 'ಆರ್ಡಿನೇನ್ಸ್' ಆಗಿ ಪ್ರಕಟಿಸಿ ತತ್ಕಾಲ ಜಾರಿಗೆ ತಂದರು. ಇದು ದೇಶೀಯರಲ್ಲಿ ಬಹಳ ಅತೃಪ್ತಿಯನ್ನುಂಟು ಮಾಡಿತು.

ನಂತರ ವೈಸರಾಯರು ಎಸೆಂಬ್ಲಿಯ ಮತ್ತು ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರುಗಳನ್ನು ಸೇರಿಸಿ ಒಂದು ಭಾಷಣವನ್ನು ಮಾಡಿದಾಗ್ಗೆ ಅಧ್ಯಕ್ಷರ ಸದರಿ ತೀರ್ಮಾನವನ್ನು ಖಂಡಿಸಿ ಮಾತಾಡಿದರು. ಮಾತ್ರವಲ್ಲ, ಇಂಥಾ ಸಂದರ್ಭಗಳಲ್ಲಿ ಅಧ್ಯಕ್ಷರಿಗೆ ಇದ್ದ ಆವರು ತೀರ್ಮಾನದ ಅಧಿಕಾರವನ್ನು ಕಡಿಮೆ ಮಾಡುವಂತೆ ಎಸೆಂಬ್ಲಿಯ ನಿಬಂಧನೆಗಳಲ್ಲಿ ಒದಲಾವಣೆಯನ್ನು ಸ್ಟೇಟ್ ಸೆಕ್ರೆಟರಿಯವರಿದ ಮಂಜೂರು ಮಾಡಿಸಿದರು. ಇದು ಎಸೆಂಬ್ಲಿಯ ಅಧ್ಯಕ್ಷರ ಹಾಗೂ ಎಸೆಂಬ್ಲಿಯ ಗೌರವಕ್ಕೆ ಕುಂದಕವೆಂದು ಅರಿತ ಪಟೇಲರವರು ವೈಸರಾಯರಿಗೆ ಒಂದು ಪತ್ರವನ್ನು ಬರೆದರು. ಅದರಲ್ಲಿ ಯಾವ ನ್ಯಾಯವಿಧಾಯಕ ಸಭೆ ಯಾ ಪಾರ್ಲಿಮೆಂಟಿನ ನಿಬಂಧನೆಗಳ ಪ್ರಕಾರ ಅದರಲ್ಲಿ ನಡೆಯುವ ಕೆಲಸಗಳ ತೀರ್ಮಾನದ ಸಂಪೂರ್ಣ ಅಧಿಕಾರವು ಅಧ್ಯಕ್ಷರಿಗೇ ಇರುವುದೆಂದೂ, ಅಂಥಾದರಲ್ಲಿ ವೈಸರಾಯರು ಎಸೆಂಬ್ಲಿಯ ಅಧ್ಯಕ್ಷರ ತೀರ್ಮಾನವನ್ನು ಖಂಡಿಸಿದ್ದು ಸರಿಯಲ್ಲವೆಂದೂ, ಇದರಿಂದ ಎಸೆಂಬ್ಲಿಯ ಗೌರವವನ್ನು ಕಡಿಮೆ ಮಾಡಿದಂತಾಯಿತೆಂದೂ ಮುಂತಾಗಿ ಬರೆದಿದ್ದರು. ಅಧ್ಯಕ್ಷರ ತೀರ್ಮಾನವನ್ನು ತಾನು ಖಂಡಿಸಲಿಲ್ಲವೆಂದೂ, ತನ್ನ ಮಾತನ್ನು ಹಾಗೆ ಅರ್ಥಮಾಡಿಕೊಂಡದಕ್ಕೆ ತಾನು ವ್ಯಸನಪಡುತ್ತೇನೆಂತಲೂ, ಅಧ್ಯಕ್ಷರ ತೀರ್ಮಾನವನ್ನು ಪ್ರಶ್ನಿಸುವ ಹಕ್ಕು ಬೇರೆ ಯಾರಿಗೂ ಇಲ್ಲವೆಂತಲೂ ವೈಸರಾಯರು ಅದಕ್ಕೆ ಜವಾಬು ಕೊಟ್ಟರು. ಈ ಪತ್ರಗಳನ್ನು ಪಟೇಲರವರು ಈ ಸಾರಿಯ ಎಸೆಂಬ್ಲಿ ಮೀಟಿಂಗಿನ ಮುಂದಿಟ್ಟು ಅಧ್ಯಕ್ಷ ಪದವಿಗೆ ಇರುವ ಅಧಿಕಾರವನ್ನು ವೈಸರಾಯರು ಒಪ್ಪಿಕೊಂಡದ್ದರಿಂದ ಅವರ ಜವಾಬು ಎಲ್ಲರಿಗೂ ತೃಪ್ತಿಯನ್ನುಂಟುಮಾಡದೆ ಇರಲಾರದೆಂದು ಹೇಳಿದರು.

ಮಿ ಪಟೇಲರವರು ಎಸೆಂಬ್ಲಿಯ ಚುನಾಯಿತ ಅಧ್ಯಕ್ಷರಾಗಿರುವವರಿಂದ ಸ್ವಲ್ಪವೂ ಹೆದರದೆ ಇಂಡಿಯಾ ಸರ್ಕಾರದ ಮುಖ್ಯಾಧಿಕಾರಿಗೆ ಸ್ವಾಭಿಮಾನದ ಪತ್ರ ಬರೆದು ಎಸೆಂಬ್ಲಿಯ ಹಾಗು ತಮ್ಮ ಪದವಿಯ ಅಧಿಕಾರವನ್ನೂ, ಗೌರವವನ್ನೂ ಕಾಪಾಡಿದ್ದು ಹಿಂದೀಯರಿಗೆ ಹೆಮ್ಮೆಯನ್ನುಂಟುಮಾಡುವಂಥ ಸಂಗತಿಯಾಗಿದೆ.

ಸರ್ದಾರ್ ವಲ್ಲಭಭಾಯಿ ಪಟೇಲ್.

ಶ್ರೀ ವಲ್ಲಭಭಾಯಿ ಪಟೇಲರು ಕಳೆದ ವಾರ ತಮಿಳುನಾಡಿನ ಪ್ರಾಂತೀಕ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಇವರು ಹಿಂಸಾತ್ಮಕವಾದ ಯುದ್ಧದಲ್ಲಿ ಹೋರಾಡಿ ಇವರಿಗೆ ಸರದಾರ್ ಎಂಬ ಬಿರುದು ಬಂದದ್ದಲ್ಲ. ಬೊಂಬಾಯಿ ಅಧಿಪತ್ಯದ ಬಾರ್ಡೋಲಿ ತಾಲೋಕಿನ ರೈತರ ಪರವಾಗಿ ಅವರ ಮುಂದಾಳಾಗಿ ನಿಂತು ರೈತರ ಕಂದಾಯ ಹೆಚ್ಚಿಸಿದ್ದಕ್ಕೆ ಆಕ್ಷೇಪಿಸುವ ಹೋರಾಟ ನಡಿಸಿ ಬಿರುದು ಪಡೆದವರಾಗಿದ್ದಾರೆ. ಇವರು ಮಹಾತ್ಮ ಗಾಂಧಿಯವರ ಹಿಂಬಾಲಕರಲ್ಲಿ ಬಹಳ ಪ್ರಮುಖರಾಗಿದ್ದಾರೆ. ಇವರು ಉಪನ್ಯಾಸಕ್ಕಿಂತ ಕಾರ್ಯಮಾಡುವದರಲ್ಲೇ ಹೆಚ್ಚು ನಂಬಿ ಆ ನಂಬಿಕೆಯನ್ನು ನಡಿಸುವವರಾಗಿದ್ದಾರೆ. ಇವರು ಅಹಮದಾಬಾದ್ ಮುನಿಸಿಪಾಲಿಟಿಯ ಅಧ್ಯಕ್ಷರಾಗಿ ಬಹಳ ಗೌರವಿಸಲ್ಪಟ್ಟವರಾಗಿದ್ದಾರೆ ಎಸೆಂಬ್ಲಿ ಅಧ್ಯಕ್ಷರಾದ ವಿಠ್ಠಲಭಾಯಿ ಪಟೇಲರ ತಮ್ಮನಾಗಿರುತ್ತಾರೆ. ಈಗಿನ ಹಿಂದುಸ್ಥಾನದ ಜನರ ಗೌರವವನ್ನು ಸಂಪೂರ್ಣವಾಗಿ ಬಹುಮತದಿಂದ ಸಂಪಾದಿಸಿದವರಾಗಿದ್ದಾರೆ. ಇವರಿಗೆ ತಮಿಳುನಾಡಿನಲ್ಲೆಲ್ಲಾ ತುಂಬಾ ಮರ್ಯಾದೆ ದೊರೆತದ್ದು ಮಾತ್ರವಲ್ಲದೆ ಮದ್ರಾಸ್ ಮುನ್ಸಿಪಲ್ ಕಾರ್ಪೋರೇಶನವರು ಬಹುಮಾನ ಪತ್ರವನ್ನು ಸಹ ಒಪ್ಪಿಸಿದರು. ಅದೇ ಸಮಯದಲ್ಲಿ ಮದ್ರಾಸ್ ಮುನ್ಸಿಪಲ್ ಹಾಲ್‌ನಲ್ಲಿ ಮಹಾತ್ಮ ಗಾಂಧಿಯವರ ಭಾವ ಚಿತ್ರವನ್ನು ತೆರೆದರು. ಕರ್ಮಯೋಗವನ್ನು ಸಾಧಿಸುವ ಇಂಥಾ ವೀರಪುರುಷರು ಹುಟ್ಟಿದ ದೇಶವು ಬಹುಕಾಲ ಪರಾಧೀನತೆಯಲ್ಲಿ ಇರಲಾರದು.

ಇವರು ಮದ್ರಾಸ್ ಪ್ರಾಂತ್ಯದಲ್ಲಿ ಮಾಡಿದ ಬೋಧನೆಯು ಕಾಂಗ್ರೆಸ್ಸಿನ ರಚನಾತ್ಮಕಕಾರ್ಯಕ್ರಮವಾದ ಖದ್ದರ್ ಪ್ರಚಾರ, ಅಸ್ಪೃಶ್ಯತಾನಿವಾರಣೆ, ಮದ್ಯನಿಷೇಧ ಇವುಗಳ ಮೇಲೆಯೂ ಮತ್ತು ಕೋಮುವಾರು ದ್ವೇಷದ ನಿವಾರಣೆಯ ಆವಶ್ಯಕತೆಯ ಮೇಲೂ, ಭೂಮಾಲೀಕರ ಕಂದಾಯದ ಹೊರೆಯನ್ನು ಕಡಿಮೆಮಾಡಿಕೊಳ್ಳುವ ಹೋರಾಟದ ವಿಷಯದಲ್ಲೂ ಆಗಿದೆ. ತಾನು ಬ್ರಾಹ್ಮಣೇತರನಾಗಿಯೇ, ಬ್ರಾಹ್ಮಣೇತರರು ಒರೇ ಸರಕಾರಿ ಉದ್ಯೋಗಕ್ಕಾಗಿ ಅಲ್ಪ ಸಂಖ್ಯಾಕರಾದ ಬ್ರಾಹ್ಮಣರನ್ನು ದ್ವೇಷಿಸಬಾರದೆಂತ ಬ್ರಾಹ್ಮಣೇತರರಿಗೆ ಬೋಧಿಸಿದ್ದಲ್ಲದೆ, ಬ್ರಾಹ್ಮಣರು ತಮ್ಮ ಕುಲಕಸಬಾದ ವಿದ್ಯಾಪ್ರಚಾರದ ಕಸಬನ್ನು ಬಿಟ್ಟು ಸರಕಾರಿ ನೌಕರಿ, ಲಾಯರ್ ಕಸಬು ಮುಂತಾದ್ದನ್ನು ಕೈಕೊಂಡು ಸ ಜೀವನವನ್ನು ನಡಿಸುವದೇ ಉದ್ದೇಶವಾಗಿಟ್ಟುಕೊಂಡರೆ ಬ್ರಾಹ್ಮಣರೆನಿಸಿಕೊಳ್ಳಲಾರರೆಂತಲೂ, ಇದರಲ್ಲೇ ನಿರತರಾಗಿದ್ದರೆ ಬ್ರಾಹ್ಮಣರು ತಾವಾಗಿಯೇ ನಶಿಸಿಹೋಗುತ್ತಾರೆಂತಲೂ ಎಚ್ಚರಿಸಿದರು. ಇವರ ಬೋಧನೆಗಳು ಜನರ ಮನಸ್ಸಿಗೆ ನಾಟಿ ಒಳ ಕಲಹಗಳೆಲ್ಲಾ ಹೋಗಿ ಗರೀಬ ಜನರ ಉದ್ಧಾರಕ್ಕಾಗಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸಮಾಡಲು ಪ್ರಾರಂಭಿಸಿದರೆ ಇಂಥಾ ಮಹಾಪುರುಷರ ಜೀವನವು ಸಾರ್ಥಕವಾದೀತು.

ಸಹಕಾರಿ ಯೂನಿಯನ್‌ಗಳ ಫೆಡರೇಶನ್.

ತಾ 7—4—'29 ರಲ್ಲಿ ಮಡಿಕೇರಿಯಲ್ಲಿ ನಡೆದ ಸಹಕಾರಿ ಸಂಘಗಳ ಪ್ರತಿನಿಧಿಗಳ ಸಭೆಯಲ್ಲಿ ಕೊಡಗಿನ ಸಹಕಾರಿ ಯೂನಿಯನ್‌ಗಳ ಫೆಡರೇಶನನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿ, ಅದಕ್ಕೆ ಉಪನಿಬಂಧನೆಗಳನ್ನು ತಯಾರಿಸಲು ಒಂದು ಕಮಿಟಿಯು ನೇಮಿಸಲಾಗಿತ್ತು. ಈ ಕಮಿಟಿಯ ಮೀಟಿಂಗೊಂದು ಈ ತಾ. ೭ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಕೋಆಪರೇಟಿವ್ ಸಂಘಗಳ ರಿಜಿಸ್ಟ್ರಾರಾದ ಮಿ. ಕೆ. ಯನ ಸುಬ್ಬಾಯನವರು (ಅಧ್ಯಕ್ಷರು) ಮಿ ಪಿ ಐ ಬೆಳ್ಯಪ್ಪನವರ ಮಿ ಕೆ. ಪಿ. ಚಿಣ್ಣಪ್ಪನವರು, ಮತ್ತು ಯನ್. ಸಂಜಪ್ಪನವರು ಹಾಜರಿದ್ದರು.

1. ರಿಜಿಸ್ಟ್ರಾರವರು ತಯಾರಿಸಿದ್ದ ಕರಡು ಉಪನಿಬಂಧನೆಗಳು ಚರ್ಚಿಸಲ್ಪಟ್ಟು, ಕೆಲವು ಬದಲಾವಣೆಗಳೊಂದಿಗೆ ಒಪ್ಪಲಾಯಿತು.

2. ಕಮಿಟಿಯವರು ತಯಾರಿಸಿರುವ ಕರಡು ಉಪನಿಬಂಧನೆಗಳನ್ನು ಮಂಜೂರು ಮಾಡುವದಕ್ಕೂ ಮತ್ತು ಫೆಡರೇಶನನ್ನು ರಿಜಿಸ್ಟರ್ ಮಾಡುವ ಬಗ್ಗೆ ರಿಜಿಸ್ಟ್ರಾರವರಿಗೆ ಅಪ್ಲಿಕೇಶನ್ ಕಳುಹಿಸುವುದಕ್ಕೂ ಇನ್ನು ಏರ್ಪಡಿಸಲಿಕ್ಕಿರುವ ಫೆಡರೇಶನಿನ ಜನರಲ್ ಮೀಟಿಂಗೊಂದನ್ನು ತಾ. 5—10—29ರಲ್ಲಿ ಮಡಿಕೇರಿಯಲ್ಲಿರುವ ಜಮೀನ್ದಾರರ ಸಭಾ ಹಾಲ್‌ನಲ್ಲಿ ಮಧ್ಯಾಹ್ನ 1 ಗಂಟೆಗೆ ನಡಿಸುವಂತೆ ತೀರ್ಮಾನಿಸಲಾಯಿತು.

ಸದರಿ ಜನರಲ್ ಮೀಟಿಂಗಿಗೆ ಯೂನಿಯನ್ ಒಂದರ ಇಬ್ಬರು ಪ್ರತಿನಿಧಿಗಳನ್ನೂ, ಸೆಂಟ್ರಲ್ ಬ್ಯಾಂಕಿನಿಂದ ೯ ಪ್ರತಿನಿಧಿಗಳನ್ನೂ ಕಳುಹಿಸುವಂತೆ ಎಲ್ಲಾ ಯೂನಿಯನ್‌ಗಳಿಗೂ, ಸೆಂಟ್ರಲ್‌ಬ್ಯಾಂಕಿಗೂ ನೋಟೀಸು ಕಳುಹಿಸಲು ರಿಜಿಸ್ಟ್ರಾರರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನವಾಯಿತು.

ಕೆ. ಯನ್. ಸುಬ್ಬಾಯ.
(ಅಧ್ಯಕ್ಷರು.)

ಸರಾಯಿಯನ್ನು ಸವಿಯದವರ ಜೀವನದ ಸವಿ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಬೂಟುಗಳನ್ನು ಕೊಳ್ಳುವವರ ಸಂಖ್ಯೆ ಬೆಳೆದಿದೆ. ಸರಾಯಿಯ ವಿರುದ್ಧವಾಗಿ ಕಟ್ಟಳೆಯಾದ ಒಂದು ವಾರದಲ್ಲಿಯೇ ಕೆಲವು ಸಂಸ್ಥಾನಗಳಲ್ಲಿ ಹುಡುಗರ ಬೂಟುಗಳ ವ್ಯಾಪಾರವು ಹೆಚ್ಚಿತು. ಕುಡಿಯುವವರ ಕೈಯಲ್ಲಿ ಹಣ ಉಳಿದುದರಿಂದ ಅವರ ಲಕ್ಷ್ಯವು ಹುಡುಗರ ಕಡೆಗೆ ಹೆಚ್ಚಾಗಿ ಎಳೆಯಿತು. ಮಕ್ಕಳ ಬೇಡಿಕೆಗಳನ್ನು ಒದಗಿಸಿಕೊಡಲು ಗಡಂಗದ ಹಾದಿ ಹಿಡಿಯುವ ಕುಡುಕರಿಗೆ ಎಚ್ಚರ ಹುಟ್ಟಿತು. ವಾಶಿಂಗ್ಟನ್ ಶಹರದಲ್ಲಿ ಕೆಲವು ಸರಾಯಿಯ ಅಂಗಡಿಗಳು ಊಟಿನ ಅಂಗಡಿಗಳಾದವು.

ಇದರಂತೆಯೇ ಅರಿವೆಯ, ಬಟ್ಟೆಗಳ ವ್ಯಾಪಾರವು ಬೆಳೆಯಿತು. ಒಬ್ಬ ದರ್ಜಿಯು ತನ್ನ ಅನುಭವವನ್ನು ಹೀಗೆ ಹೇಳುವನು.—ಏನೆಂದರೆ—ಸರಾಯಿಯ ಸೇವನೆಯಿಂದ ಅನೇಕರಿಗೆ ಬೊಜ್ಜು ಬಂದು ಹೋಗಿತ್ತು. ಸರಾಯಿ ಸೇವಿಸುವ ಗಿರಾಕಿಗಳು ಕೆಲವು ಕಾಲದ ಅನಂತರ ಅವನಲ್ಲಿಗೆ ಬಂದರು. ಆಗ ಅವರ ಹಿಂದಿನ ಅಳತೆಗೂ ಆಗಿನ ಅಳತೆಗೂ ಬಹಳ ಬದಲಾಗಿತ್ತು. ಸರಾಯಿ ಕುಡಿಯುವುದನ್ನು ಬಿಟ್ಟ ಬಳಿಕ ಅವರ ಬೊಜ್ಜು ಕಡಿಮೆಯಾಯಿತು.

ಬೆಳ್ಳಿ, ಬಂಗಾರದ, ಹರಳು ಕಲ್ಲಿನ ಮತ್ತು ಆಭರಣಗಳ ಹೆಸರುಗಳನ್ನು ಕೂಡ ಕೇಳದ ಜನರು ಅವುಗಳನ್ನು ತೆಗೆಯಲು ಪ್ರಾರಂಭಿಸಿದರು.

ಸರಾಯಿಯ ಅಮಲಿನಲ್ಲಿ ಬೀದಿಗಳಲ್ಲಿ ಬಿದ್ದು ಹೊರಳಾಡುವುದನ್ನು ಬಿಟ್ಟು ಜನರು ತಮ್ಮ ಹೆಂಡತಿ ಮಕ್ಕಳೊಡನೆ ಸಿನೆಮಾ, ನಾಟಕ ಮುಂತಾದವುಗಳಿಗೆ ಈಗ ಹೋಗಹತ್ತಿರುವರು. ಆದರಿಂದ ಈ ಸಂಸ್ಥೆಗಳ ಉತ್ಪನ್ನವು ನಾಲ್ಕು ಮಡಿ ಬೆಳೆದಿದೆ. ತಮ್ಮ ವಿಶ್ರಾಂತಿಯ ವೇಳೆಯನ್ನು ಜನರು ತೋಟಗಳನ್ನು ಮಾಡುವುದರಲ್ಲಿ ಕಳೆಯ ಹತ್ತಿರುವುದರಿಂದ ತೋಟದ ಕೆಲಸಕ್ಕೆ ಬೇಕಾಗುವ ಗುದ್ದಲಿ, ಹುಲ್ಲು ಕತ್ತರಿಸುವ ದೊಡ್ಡ ಕತ್ತರಿ ಇವೇ ಮುಂತಾದವುಗಳ ವ್ಯಾಪಾರವೂ, ಬೀಜಗಳ ಮತ್ತು ಸಸಿಗಳ ಮಾರಾಟವೂ ಬೆಳೆದಿದೆ.

ಇನ್ನು, ವೃತ್ತ ಪತ್ರಿಕೆಗಳ ಮತ್ತು ಮಾಸ ಪತ್ರಿಕೆಗಳ ಇತಿಹಾಸವನ್ನು ನೋಡಿರಿ. ಅವುಗಳಿಗೆ ಸರಾಯಿಯ ಪ್ರಕಟನೆಗಳಿಂದ ಮುಂಚೆ ಬಹಳ ದೊಡ್ಡ ಆದಾಯವಾಗುತ್ತಿತ್ತು. ಅದು ಕಡಿಮೆಯಾಯಿತು. ಆದರೆ ಕುಡಿದು ಎಚ್ಚರಿಕೆಯಿಲ್ಲದೆ ಬೀಳುವಾಗ ಜನರು ಪತ್ರಿಕೆಗಳನ್ನು ವಿಶೇಷವಾಗಿ ಓದುತ್ತಿರಲಿಲ್ಲ. ಆದರೆ ಈಗ ಅವರಿಗೆ ಓದಲಿಕ್ಕೆ ಪತ್ರಿಕೆಗಳು ಬೇಕಾಗುತ್ತವೆ. ಆದುದರಿಂದ ಚಂದಾದಾರರ ಸಂಖ್ಯೆ ಬೆಳೆದಿದೆ. ಆದಕಾರಣ, ಮೊದಲಿನ ಮೇಲೆ ಪತ್ರಿಕಾಕರ್ತರಿಗೆ ಲಾಭವೇ ಆಗಿದೆ. ಒಂದೇ ಒಂದು ಉದಾಹರಣೆಯನ್ನು ಇಲ್ಲಿ ಕೊಡುತ್ತೇವೆ. ಕೊಲೋರಾಡೋ ಎಂಬ ಸಂಸ್ಥಾನದಲ್ಲಿಯ ಕೂಲಿಕಾರರ ವತಿಯಿಂದ ಹೊರಡುವ ಪತ್ರಿಕೆಗೆ ಪ್ರತಿ ತಿಂಗಳಿಗೆ ಸರಾಯಿಯ ಪ್ರಕಟಣೆಯಿಂದ ೫೦ ಡಾಲರು ಬರುತ್ತಿತ್ತು. ಅದು ನಿಂತುಹೋಯಿತು. ಮತ್ತೂ ಸರಾಯಿಯ ಉದ್ಯೋಗದಲ್ಲಿ ತೊಡಗಿದ ೩೫೦ ಚಂದಾದಾರರು ಕಡಿಮೆಯಾದರು. ಆದರೆ ಬೇರೆ ವಸ್ತುಗಳ ವ್ಯಾಪಾರವು ಮೇಲೆ ಹೇಳಿದಂತೆ ಬೆಳೆದುದರಿಂದ ಅವುಗಳ ಪ್ರಕಟಣೆಗಳು ಅದಕ್ಕೆ ದೊರೆಯುತ್ತಿದ್ದವು. ಅದರಿಂದ ಅವರ ಪ್ರಕಟಣೆಯ ಉತ್ಪನ್ನವು ನಾಲ್ಕರಷ್ಟು ಬೆಳೆಯಿತು ಮತ್ತು ಚಂದಾದಾರರು ಮೂರರಷ್ಟು ಬೆಳೆದರು. ಇದಲ್ಲದೆ ಚಂದಾಹಣವೂ ಸರಿಯಾಗಿ ವಸೂಲು ಆಗಲು ತೊಡಗಿತು.

ಯುರೋಪಿನಲ್ಲಿ ಊಟವಾದ ಬಳಿಕ ಸರಾಯಿಯನ್ನು ಕುಡಿಯುವ ಪದ್ಧತಿಯುಂಟು. ಖಾನಾವಳಿಗಳಲ್ಲಿ ಸರಾಯಿಯ ಖರ್ಚು ಹೆಚ್ಚು. ಸರಾಯಿಯನ್ನು ನಿಲ್ಲಿಸುವುದರಿಂದ, ಖಾನಾವಳಿಗಳಿಗೆ ಒಡತನ ಬರುತ್ತದೆಂದು ಜನರು ತಿಳಿದಿದ್ದರು. ಆದರೆ ಜನರು ಸರಾಯಿಯ ಹಣವನ್ನೆಲ್ಲ ಚಲೋ ಹಿತಕರವಾದ ತಿನ್ನುವ ಪದಾರ್ಥಗಳನ್ನು ಕೊಳ್ಳುವುದಕ್ಕೋಸ್ಕರ ವೆಚ್ಚ ಮಾಡ ತೊಡಗಿದ್ದರಿಂದ ಖಾನಾವಳಿಗಳ ವ್ಯಾಪಾರಕ್ಕೆ ನಷ್ಟ ಬರಲಿಲ್ಲ.

ಮದ್ಯಪಾನದ ಭಕ್ತರಾದ ಒಡಬಗ್ಗರು ಮಲಗಿಕೊಳ್ಳುವುದಕ್ಕೆ ಹೊಲಸಾದ ಹಾಸಿಗೆಗಳನ್ನು ಉಪಯೋಗಿಸುತ್ತಿದ್ದರು. ಸರಾಯಿಯನ್ನು ಕುಡಿಯುವುದನ್ನು ಬಿಟ್ಟ ಬಳಿಕ ಆ ಜನರು ಚಲೋ ಹಾಸಿಗೆಗಳ ಮೇಲೆ ಮಲಗಿಕೊಳ್ಳಹತ್ತಿದರು. ಮದ್ಯದ ಅವತಾರ ಸಮಾಪ್ತಿಯಾದ ಒಂದು ವರ್ಷದಲ್ಲಿ ಅನೇಕ ಸಂಸ್ಥಾನಗಳಲ್ಲಿ ಮನೆಗಳ ಸಂಖ್ಯೆಯೂ ಹೆಚ್ಚಿತು.

ನಾನಾ ತರದ ಸರಾಯಿಯ ಕಾರಖಾನೆದಾರರಿಗೆ ಮಿತಿಮೀರಿ ಹಾನಿಯಾಗುತ್ತದೆಂಬ ಊಹೆ ಕೂಡ ನಿರಾಧಾರವಾಯಿತು. ಆ ಕಾರಖಾನೆಗಳು ಔಷಧಕ್ಕೆ ಬೇಕಾಗಿರುವ ಮಾದಕ ಪದಾರ್ಥ, ಆಯ್ಸಕ್ರೀಮು, ಅನೇಕ ಬಗೆಯ ಸರಬತ್ತುಗಳು ಇವೇ ಮುಂತಾದವುಗಳನ್ನು ತಯಾರಿಸಹತ್ತಿವೆ. ವಾಶಿಂಗ್ಟನ್ನದ ಒಂದು ಕಾರಖಾನೆಯಲ್ಲಿ ೫೦ ಕೂಲಿಕಾರರು ಕೆಲಸ ಮಾಡುತ್ತಿದ್ದರು. ಅಲ್ಲಿ ಒಂದು ಲಕ್ಷ ಮೂವತ್ತು ಸಾವಿರ ಡಾಲರು ಖರ್ಚಾಗುತ್ತಿತ್ತು. ಮುಂದೆ ಅದೇ ಕಾರಖಾನೆಯಲ್ಲಿ ಆಯ್ಸಕ್ರೀಮು ಮಾಡುವ ಕೆಲಸಕ್ಕಾಗಿ ೧೫೦ ಕೂಲಿಕಾರರನ್ನು ಇಟ್ಟರು. ಮತ್ತು ೪ ಲಕ್ಷ ಡಾಲರದ ವ್ಯಾಪಾರ ಮಾಡಹತ್ತಿದರು. ಮುಂಚೆ ಈ ಕಾರಖಾನೆಯಲ್ಲಿ ೬೫,೦೦೦ ಬ್ಯಾರೆಲ್ ಬೀಯರ್ ತಯಾರಿಸುತ್ತಿದ್ದರು. ಅದರ ಬದಲು ಆ ಕಾರಖಾನೆಯಲ್ಲಿ ಮುಂದೆ ೮ ಲಕ್ಷ ಗ್ಯಾಲನ್ ಆಯ್ಸಕ್ರೀಮ್ ತಯಾರಾಗಹತ್ತಿತು. ವಾಶಿಂಗ್ಟನ್ನದಲ್ಲಿ ಖರ್ಚು ಆಗುವ ೩ ಆಯ್ಸಕ್ರೀಮ್ ಈ ಕಾರಖಾನೆಯಲ್ಲಿ ಹುಟ್ಟುತ್ತದೆ.

ಗಡಂಗಗಳ ಸ್ಥಳಗಳ ಬಾಡಿಗೆ ೨೦,೦೦೦ ಡಾಲರದಿಂದ ೫೦,೦೦೦ ಡಾಲರುಗಳ ವರೆಗೆ ಏರಿದೆ. ಅವುಗಳ ಸ್ಥಳದಲ್ಲಿ ಹುಡುಗರ ಆಟದ ಸಾಮಾನದ ಅಂಗಡಿಗಳು, ಕಿರಾಣಿ ಅಂಗಡಿಗಳು ಆಗಿವೆ. ಗಡಂಗಗಳು ಬಂದಾದುದರಿಂದ ಅವುಗಳ ಹತ್ತಿರದ ಸ್ಥಳಗಳ ಬಾಡಿಗೆಯೂ ಏರಿದೆ. ನ್ಯೂಯಾರ್ಕ ಶಹರದಲ್ಲಿ ಸ್ಥಿರ ಆಸ್ತಿಯ ಬೆಲೆ ೧೦೦ಕ್ಕೆ ೫೦ ರಂತೆ ಏರಿದೆ. ೧೦೦ಕ್ಕೆ ೨೦ ರಂತೆ ಬಾಡಿಗೆ ಬೆಳೆದಿದೆ.

ಇನ್ಶುರೆನ್ಸ್ ಕಂಪನಿಗಳ, ಕುರ್ಚಿ, ಮೇಜು, ಕಪಾಟು ಮುಂತಾದವುಗಳನ್ನು ಮಾಡುವ ಕಂಪನಿಗಳ ಕೆಲಸ ಬೆಳೆದಿದೆ. ಗಿರಾಕಿಗಳಲ್ಲಿ ಹಣವಿದ್ದುದರಿಂದ ಉದ್ರಿಯ ವ್ಯಾಪಾರವು ಕಡಿಮೆಯಾಗಿದೆ. ಸಂಬಳ ಬಂದ ಕೂಡಲೆ ಹಣವು ಬೇಂಕುಗಳಿಗೆ ಬಂದು ಬೀಳುತ್ತದೆ.

ಸರಾಯಿಯ ಕಾರಖಾನೆದಾರರು ತಮ್ಮ ಕಾರಖಾನೆಗಳನ್ನು ಬಂದುಮಾಡುವುದರಿಂದ ಅನೇಕ ಕೂಲಿಕಾರರು ಅನ್ನಗೇಡಿಗಳಾಗುವರೆಂದು ಹೆದರಿಸುತ್ತಿದ್ದರು. ೧೯೧೦ರಲ್ಲಿ ಆದ ಖಾನೇಸುಮಾರಿ (census) ಪ್ರಕಾರ ೬೨,೯೨೦ ಜನರು ಸರಾಯಿಯ ಉದ್ಯೋಗದಲ್ಲಿ ತೊಡಗಿದ್ದರು. ೨೦೦ ಕೋಟಿಯ ಬಂಡವಾಳವು ಆ ದರುದ್ಯೋಗದಲ್ಲಿ ಹಾಕಲ್ಪಟ್ಟಿತ್ತು. ಅಲ್ಲದೆ ೪,೯೩,೬೫೫ ಜನರೂ ೨೦೦ ಕೋಟಿ ಬಂಡವಾಳವೂ ಅದನ್ನು ಮಾರುವ ಮತ್ತು ಅದರ ಭಟ್ಟಿಗಳನ್ನು ತಯಾರಿಸುವುದರಲ್ಲಿ ಹಾಕಲ್ಪಟ್ಟಿತ್ತು. ಹತ್ತು ಲಕ್ಷಕ್ಕೆ ೬೬ರಂತೆ ಕೂಲಿಗಾರರು ಸರಾಯಿಯ ಉದ್ಯೋಗದಲ್ಲಿ, ೨೮೪ ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರದಲ್ಲಿ ೩೬೩ ಕಾಗದ ಮತ್ತು ಅಚ್ಚು ಹಾಕುವುದರಲ್ಲಿ, ೪೬೭ ಕೆಲಗಳಿನ ವ್ಯಾಪಾರದಲ್ಲಿ, ೫೩೮ ಅರಿವೆ ವ್ಯಾಪಾರದಲ್ಲಿ, ೫೬೯ ಕಟ್ಟಿಗೆಯ ವ್ಯಾಪಾರದಲ್ಲಿ ದುಡಿಯುತ್ತಾರೆ. ಸರಾಯಿಯ ಕಾರಖಾನೆಯ ಕೂಲಿಗಾರರಿಗೆ ಅದರಲ್ಲಿ ಹಾಕಿದ ಬಂಡವಾಳದ ಮೇಲೆ ೧೦೦ಕ್ಕೆ ೫೬ ರಂತೆಯೂ, ಕಬ್ಬಿಣದಲ್ಲಿ ಹಾಕಿದ ಬಂಡವಾಳಕ್ಕೆ ೧೭.೬, ಕಾಗದ ಮತ್ತು ಅಚ್ಚುಗಳಲ್ಲಿಯ ಬಂಡವಾಳಕ್ಕೆ ೨೧.೩; ಕೆಲಗಳಿನ ಬಂಡವಾಳಕ್ಕೆ ೨೩.೫, ಟೆಕ್ಸಟಾಯಿಲ್ ಬಂಡವಾಳಕ್ಕೆ ೨೩.೮, ಮತ್ತು ಕಟ್ಟಡಗಳ ಕಟ್ಟಿಗೆಯ ವ್ಯಾಪಾರದಲ್ಲಿ ಹಾಕಿದ್ದಕ್ಕೆ ೨೭.೧ರಂತೆ ಕೂಲಿ ದೊರೆಯುತ್ತದೆ. ಸರಾಯಿಯ ಕಾರಖಾನೆಗಳಲ್ಲಿಯ ಕೂಲಿಕಾರರ ಮರಣದ ಸಂಖ್ಯೆಯು ಅಮೇರಿಕೆಯಲ್ಲಿಯ ಸರ್ವಸಾಧಾರಣ ಮರಣದ ಸಂಖ್ಯೆಗಿಂತ ೧೦೦ಕ್ಕೆ ೫೦ರಷ್ಟು ಹೆಚ್ಚು ಇತ್ತು. ಮತ್ತು ಸರಾಯಿ ಮಾರುವವರ ಅಂಗಡಿಗಳಲ್ಲಿಯ ಕೂಲಿಕಾರರ ಮರಣದ ಸಂಖ್ಯೆಯು ೧೦೦ಕ್ಕೆ ೨೫ರಷ್ಟು ಹೆಚ್ಚು ಇತ್ತು. ಇದರಿಂದ ಸರಾಯಿಯ ದುಷ್ಪರಿಣಾಮದ ಭೀಕರ ಸ್ವರೂಪವು ಗೊತ್ತಾಗುವುದು.

ಸರಾಯಿಯನ್ನು ನಿಲ್ಲಿಸಿದ ಕೂಡಲೆ, ಕೂಡಿಹಾಕುವ ಸಂಘಗಳು ಬೆಳೆದವು. ಅವುಗಳ ಸದಸ್ಯರ ಸಂಖ್ಯೆಯು ಬೆಳೆಯಿತು. ಬೇಂಕುಗಳ ಬಾಕಿಯು ವಸೂಲಾಗಹತ್ತಿತು. ಡಿಪಾಜಿಟ್ಟಿನ ಹಣವು ಏರಹತ್ತಿತು. ವಾಶಿಂಗ್ಟನ್ನದಲ್ಲಿ ಸರಾಯಿಯನ್ನು ನಿಲ್ಲಿಸಿದ ಮೊದಲನೆಯ ವರ್ಷದಲ್ಲಿಯೇ ಡಿಪಾಜಿಟ್ಟಿನ ಹಣವು ೧೦೦ಕ್ಕೆ ೨೧ರಷ್ಟು ಬೆಳೆಯಿತು. ಮತ್ತು ೧೩೦ಕ್ಕೆ ೨೯ರಂತೆ ಬಾಕಿ ವಸೂಲಿಯು ಹೆಚ್ಚಾಯಿತು. ಸಾನ್‌ಫ್ರಾನ್ಸಿಸ್ಕೋ (San Francisco) ಮತ್ತು ಕಾಲಿಫೋರ್ನಿಯಾ (California) ಇವುಗಳಲ್ಲಿಯೂ ಸೇವಿಂಗ್ಸ್ ಬೇಂಕು ಡಿಪಾಜಿಟ್ಟು ೧೯೧೮ರಲ್ಲಿ ೨೮,೩೭,೦೭,೪೬೧ ಇದ್ದದ್ದು ೧೯೧೯ರಲ್ಲಿ ೩೧,೨೫,೩೨,೧೨೯ ಆಯಿತು. ಕೊಲೋರೇಡೋ (Colorado)ದಲ್ಲಿ ೧೧೯೦೦ ಸೇವಿಂಗ್ಸ್ ಬೇಂಕು ಖಾತೆಗಳು ಎರಡು ವರ್ಷಗಳಲ್ಲಿ ಬೆಳೆದವು. ಅಮೇರಿಕೆಯ ಸರಕಾರದ ಬೇಂಕುಗಳಲ್ಲಿ ೩೦ ೧೯೧೯ರಿಂದ ೧೬.೧೧.೧೯೧೯ರ ವರೆಗೆ ೫ ತಿಂಗಳುಗಳಲ್ಲಿ ಸೇವಿಂಗ್ಸ್ ಬೇಂಕು ಡಿಪಾಜಿಟ್ಟುಗಳ ಹಣವು ೧೪,೨೨,೮೫,೩೦೦ ಡಾಲರು ಏರಿತೆಂದು ಕಂಟ್ರೋಲರ ಆಫ್ ಕರೆನ್ಸಿ ಇವರು ಹೇಳುತ್ತಾರೆ.

ಸರಾಯಿಯನ್ನು ಮಾರುವ ಅಂಗಡಿಗಳಲ್ಲಿ ಮುಖ ತೊಳೆದುಕೊಳ್ಳುವ, ಬಾಚಿಕೊಳ್ಳುವ, ಮುಖ ನಿರ್ಮಲ ಮಾಡಿಕೊಳ್ಳುವ ಅನುಕೂಲತೆ ಇರುತ್ತಿತ್ತು. ಅದಕ್ಕೋಸ್ಕರ ಜನರು ಗಡಂಗಗಳಿಗೆ ಹೋಗುತ್ತಿದ್ದರು. ಈ ಸಾಮಾನುಗಳನ್ನು ಪುಕ್ಕಸಾಟೆಯಾಗಿ ಉಪಯೋಗಿಸಬಾರದೆಂಬ ಭಾವನೆಯಿಂದ ಬರುವಾಗ ಸರಾಯಿಯನ್ನು ಕುಡಿದು ಬರುತ್ತಿದ್ದರು. ಈಗ ಈ ಸಾಮಾನುಗಳನ್ನು ಅನ್ಯ ಕಡೆಗಳಲ್ಲಿ ಇರುವ ವ್ಯವಸ್ಥೆಯಾಗಿದೆ. ವಾಶಿಂಗ್ಟನ್ನ ಸಭಾಗೃಹದಲ್ಲಿ ಉಪ್ಪಿನ ಸಂಬಂಧ...ದರಿಂದ ಅಲ್ಲಿ ಕುಡಿಯುವ ನೀರಿಗೆ ಸಹ ದೊಡ್ಡ ಪಟ್ಟಣಗಳಲ್ಲಿ ಕ್ರಯ ಬೀಳುತ್ತದೆ. ನೀರಡಿಕೆಯನ್ನಾರಿಸಿಕೊಳ್ಳಲಿಕ್ಕೆ ಜನರು ಮುಂಚೆ ಗಡಂಗಗಳಿಗೆ ಹೋಗುತ್ತಿದ್ದರು. ಆದರೆ ಈಗ ಕುಡಿಯುವುದಕ್ಕೆ ನೀರು ಕೊಡುವ ಬೇರೆ ವ್ಯವಸ್ಥೆಯಾಗಿದೆ.

ಸರಾಯಿಯ ಕೂಡ ಗಣಿಕೆಯರ ಸಂಖ್ಯೆಯೂ ಕಡಿಮೆಯಾಗಿದೆ. ಜನರು ತಮ್ಮ ಆರಾಮ ವೇಳೆಯನ್ನು ಗೃಹಗಳನ್ನು ಶೃಂಗರಿಸುವುದರಲ್ಲಿಯೂ, ಬಟ್ಟೆಗಳನ್ನು ಹೊಲಿಯುವುದರಲ್ಲಿಯೂ ಮತ್ತು ನೆರೆಹೊರೆಯವರೊಡನೆ ಸುಖದಿಂದ ಮಾತುಕಥೆಗಳನ್ನಾಡುವುದರಲ್ಲಿಯೂ ಕಳೆಯುತ್ತಾರೆ.

ಅಮೇರಿಕೆಯಲ್ಲಿ ಸಂಸಾರದ ದೂರುಗಳನ್ನು ಕೇಳುವ ಕೋರ್ಟು ಒಂದು ಉಂಟು. ಅದರ ಹೆಸರು (The Complaint Department of the Court of Domestic Relations) ಎಂದು. ಇದು ಸರಾಯಿಯನ್ನು ನಿಲ್ಲಿಸಿದ ಕೂಡಲೆ ಈ ಕೋರ್ಟಿನಲ್ಲಿ ೪೦ಕ್ಕಿಂತ ಹೆಚ್ಚು ಫಿರ್ಯಾದಿಗಳು ಕಡಿಮೆಯಾದವು.

ಕ್ಯಾಲಿಫೋರ್ನಿಯಾದ ಸ್ಮಶಾನದ ಒಡೆಯರಿಂದ ತಿಳಿಯುವುದೇನೆಂದರೆ—೧೯೧೯ ಜುಲಾಯಿ ತಿಂಗಳಿನಲ್ಲಿ ದಿನಾಲು ಸರಾಸರಿ ೧೨ ಹೆಣಗಳು ಬರುತ್ತಿದ್ದವು. ಅದಕ್ಕಿಂತ ಮುಂಚೆ ದಿನಾಲು ಸರಾಸರಿ ೩೮ ಹೆಣಗಳು ಬರುತ್ತಿದ್ದವು. ಸರಾಯಿಯನ್ನು ನಿಲ್ಲಿಸಿದ್ದರಿಂದ ಆತ್ಮಹತ್ಯೆಯ ಸಂಖ್ಯೆ ಕಡಿಮೆಯಾಯಿತು. ನ್ಯೂಯಾರ್ಕ ಶಹರದಲ್ಲಿ ೧೯೧೮ರಲ್ಲಿ ಮರಣದ ಸಂಖ್ಯೆ ೭೮೧೧೯ ಇದ್ದದ್ದು ೧೯೧೯ರಲ್ಲಿ ೭೪,೪೪೩ ಆಯಿತು. ಜ್ವರದ ಸಂಖ್ಯೆ ಇಳಿಯಿತು. ಜೊತೆಯಿಂದಾಗುವ ರಹದಾರಿಯ ಮೋಟರಿನ ಮತ್ತು ರೈಲ್ವೆಗಳಲ್ಲಿಯ ಅಪಘಾತಗಳು ಕಡಿಮೆಯಾದವು. ಕುಡುಕರ ಬಿಡಾರಗಳ ಸಂಖ್ಯೆಯು ಕಡಿಮೆಯಾಯಿತು. ೧೯೧೯ನೆಯ ಇಸವಿಯ ನಾತಾಳ ಹಬ್ಬದಲ್ಲಿ ಕೋಲಂಬಸ್ ಓಹಿಯೋ ಸೆರೆಮನೆಯಲ್ಲಿ ೧೭ ಸೆರೆಯಾಳುಗಳಿದ್ದರು. ಆದರೆ ಅದಕ್ಕೆ ಮುಂಚೆ ಅದರಲ್ಲಿ ಸರಾಸರಿ ೧೨೦೦ ಸೆರೆಯಾಳುಗಳಿರುತ್ತಿದ್ದರು.

ಸರಕಾರಕ್ಕೆ ಸರಾಯಿಯಿಂದ ಒಂದು ಡಾಲರು ಪ್ರಾಪ್ತಿಯಾಗಬೇಕಾದರೆ ಜನರು ೨೦ ಡಾಲರ ಸರಾಯಿಯನ್ನು ಕುಡಿಯಬೇಕಾಗುತ್ತದೆ. ಇದು ನೀತಿ ವಿರುದ್ಧವಾದ ಮಾತಷ್ಟೇ ಅಲ್ಲವೇ ಅಲ್ಲ, ವ್ಯವಹಾರಕ್ಕೆ ಸಹ ಸಮ್ಮತವಾದ ಮಾತು ಆಗಲಾರದು. ಈ ಅನುಭವವನ್ನು ಕಂಡುಕೊಂಡು ವರ್ತಿಸಿದ್ದರಿಂದ ಅಮೇರಿಕೆಯಲ್ಲಿ ಈಗ ಕುಡಿತವು ಬಹಳ ಕಡಿಮೆಯಾಗಿದೆ.

"ಜ. ಕರ್ನಾಟಕ."

WANTED CANDIDATES.

Service Guaranteed. Session Commencing London Diplomas Fare free Apply for "Guide To Chances" enclosing 2 anna stamps

ROYAL ELECTRICAL COLLEGE

0—5 Naichebandan.

DELHI

ಮಡಿಕೇರಿ-ಭಾಗಮಂಡಲ-ಸಂಟಿಕೊಪ್ಪ ಚಮ್ಮಾಟಿರುಗಳಲ್ಲಿ ರಾವು ಬಹದೂರ್ ಕೋಡಿಮಣಿಯಂಡ ಸುಬ್ಬಯ್ಯನ

ವಿಜ್ಞಾಪನೆ.

ಈಗ ಕೌನ್ಸಿಲಿನಲ್ಲಿ ಖಾಲಿಬಿದ್ದಿರುವ ಚಮ್ಮಾಗಾರರ ಪದವಿಗೆ ನಾನೊಬ್ಬ ಉಮೇದ್ವಾರನಾಗಿರುವುದರಿಂದ ತಾವುಗಳೆಲ್ಲರೂ ಬರುವ ಸೆಪ್ಟಂಬರ್ ತಿಂಗಳ 27ನೇ ಶುಕ್ರವಾರ ದಿನ ಓಟು ತೆಗೆಯುವ ಸ್ಟೇಶನುಗಳಿಗೆ ಹಾಜರಾಗಿ ದಯವಿಟ್ಟು ತಮ್ಮ ಓಟನ್ನು ನನಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಂತಿ ತಮ್ಮ ವಿನಯದ,

ಕೋಡಿಮಣಿಯಂಡ ಸುಬ್ಬಯ್ಯ.

ಮಡಿಕೇರಿ. 26—8—29 4—2

ಮಾರಾಟಕ್ಕಿದೆ.

ನನ್ನ ಬಾಬ್ತು ಶನಿವಾರಸಂತೆ ಹೋಬಳಿ ಹಂಡ್ಲಿ ಕೋಡ್ಲು ಗ್ರಾಮದಲ್ಲಿರುವ ಮಾಡವಳ್ಳಿ ಎಸ್ಟೇಟ್. ಕಾಫಿ ತೋಟದ ಸ್ಥಳ 23 ಏಕರು ಕಾಫಿ ವ್ಯವಸಾಯದ ಮತ್ತು 3 ಏಕರು ಕಿತ್ತಳೆ ಎಳೆ, ಕಸಿಮಾವು, ತೆಂಗು ವಗೈರೆ ವ್ಯವಸಾಯದ ಜಾಗ ಮತ್ತು 5 ಏಕರು ತರಿಭೂಮಿ, 10 ಏಕರು ಕುಶ್ಕಿ ಜಮೀನು, ಇದಲ್ಲದೆ 9 ಏಕರು ಕಾಫಿ ಸಾಗುವಳಿಗೆ ಲಾಯಕ್ಕಾದ ಕಾಡು ಜಾಗ ಸಹ ಮಾರಾಟಕ್ಕಿದೆ. ಈ ಸೊತ್ತಿಗೆ ಕೊಡ್ಲಿಪೇಟೆ ಪೈರೋಡಿನಿಂದ ಒಂದು ಮೈಲು ದೂರವಿದೆ. ಮಲ್ಲಿಪಟ್ಟಣಕ್ಕೆ ಹೋಗುವ ಡಿಸ್ಟ್ರಿಕ್ಟ್ ಬೋರ್ಡ ರಸ್ತೆಯು ಈ ಜಾಗದ ಹತ್ತಿರದಿಂದಲೇ ಹಾದುಹೋಗುತ್ತದೆ. ಈ ತೋಟದಲ್ಲಿ ಮಂಗಳೂರು ಹಂಚು ಹಾಕಿದ ಒಂದು ಚಿಕ್ಕ ಬಂಗಲೆಯೂ, ಕೂಲಿ ಆಳುಗಳ 2 ಲೈನುಗಳೂ ಸಹ ಇವೆ. ವರ್ಷಕ್ಕೆ 2500 ರೂಪಾಯಿ ವೀಳ್ಯದೆಲೆ ಹುಟ್ಟುವಳಿ ಇದೆ. ಕ್ರಯಕ್ಕೆ ಇರುವವರು ಈ ಸೊತ್ತನ್ನು ನೋಡಿ ಈ ಕೆಳಗಿನ ವಿಳಾಸದವರಿಗೆ ಬರೆದರೆ ಎಲ್ಲಾ ತಪಸೀಲ್ ಕ್ರಯ ವಗೈರೆ ತಿಳಿಸಲಾಗುವುದು.

ಶನಿವಾರಸಂತೆ, ಜೆ. ಪಿ. ಬಸವಣ್ಣಯ್ಯ,

ತಾ. 23—8—29. ಪ್ಲಾಂಟರು,

4—2 ಬೆಳ್ಳಾರಳ್ಳಿ ಎಸ್ಟೇಟ್.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ೧ಕ್ಕೆ 0—14—0. ಟಿ. ಖ 0—9—0

ಕೆ. ಟಿ. ಡೋಂಗರೆ ಕಂಪೆನಿ,

52—49 ಗಿರಿಗಾಂವ, ಮುಂಬಯಿ.

THE BOMBAY ARMOURY

ANNOUNCES GREAT REDUCTIONS IN PRICES OF

Guns, Rifles, Pistols, Cartridges & Hunting Requisites

for

SEASON

1929-30.



CURRENT CATALOGUE ON APPLICATION

THE BOMBAY ARMOURY,

Specialist in Arms & Ammunition.

331, ABDUL REHMAN STREET,

BOMBAY No. 4

24—10

೧೦೦ ರೂಪಾಯಿ ಬಹುಮಾನ

☞ ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ	ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ	ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ.

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ ಹೊಟ್ಟೆ ಶೂಲೆ, ದುಸ್ವಪ್ನ ಬೀಳುವಿಕೆ ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ ಪಾಂಡು ಸರ್ಪಶಾಪ ಪಿಶಾಚಬಾಧೆಯಿಂದ ನರಳುವಿಕೆ ಬಿಳುಪು ಕೆಂಪು ಹೋಗಿ ಗರ್ಭನಾಶನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು. ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ ಮುಟ್ಟುದೋಷ, ಡಾಕಿಣಿ, ಗ್ರಹಪೀಡೆ ದೃಷ್ಟಿದೋಷ, ಭಯದಿಂದ ಜ್ವರಪೀಡೆ ಕ್ಷೀಣ ಹೊಂದುವಿಕೆ ಜಪ್ಪು ಇರುವಿಕೆ ಮುಟಿಗಜೀನೆ ಹೊಟ್ಟೆಯೊಳಗಿಂದ ಏಳೋಣ ಮೊದಲಾದವುಗಳಿಂದ ಕಾಡುತ್ತಿರುವದು ಗರ್ಭರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖಪಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ಪಡೆಯಿರಿ ದೊಡ್ಡ ಮಕ್ಕಳಿಗೆ ಸಂತಾನ ದಶೆಯಿಂದ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨—೮—೦ ಪೋಸ್ಟು ಖರ್ಚು ಬೇರೆ ಆಗತಕ್ಕ ವಿಕಾರಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ ☜

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52—9 ಮು. ಪೋ. ಅಥಣಿ, ಜಿ. ಬೆಳಗಾಂವ.

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಒಟ್ಟೆಯ ರಂಗಿಗೂ, ಒಟ್ಟೆಯ ನಮೂನೆಗೂ ಮರುಳಾಗಿ ಪರದೇಶಿ ಒಟ್ಟೆಯನ್ನು ಕೊಂಡುಕೊಂಡು, ಅನ್ನವಿಲ್ಲದೆ ನರಳುತ್ತಿರುವ ಲಕ್ಷಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡ ತ್ತಿರುವಿರಾ? ಇಲ್ಲವೇ, ದಿನಕೊಮ್ಮೆ ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ನರಳುತ್ತಿರುವ ಲಕ್ಷಾನುಲಕ್ಷ ಒಡಹುಟ್ಟಿಯ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಒಟ್ಟೆಯನ್ನು ಕೊಂಡುಕೊಳ್ಳಲು ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಯೂ ಈ ರೀತಿಯಾಗಿ ನಮ್ಮ ಒಡ ದೇಶೀಯರ ಜೀವನಕ್ಕೆ ದಾರಿಯಾಗುತ್ತೆ.

	ರು	ಆ	ಪೈ.
ಹತ್ತಿ ಬೆಳೆದವನಿಗೆ	0	3	0
ಹತ್ತಿ ಬಿಡಿಸಿದವನಿಗೆ	0	0	6
ಒತ್ತಿ ಸುತ್ತುವವನಿಗೆ	0	1	9
ನೂಲು ನೂಲುವವನಿಗೆ	0	3	9
ಒಟ್ಟೆ ನೆಯ್ಯುವವನಿಗೆ	0	4	9
ಅಗಸನಿಗೆ	0	0	6
ಒಟ್ಟೆ ಅತ್ತಿತ್ತ ಸಾಗಿಸುವದಕ್ಕೆ	0	0	9
ಖಾದಿ ಅಂಗಡಿಯವನಿಗೆ	0	1	0
	1	0	0

ಖಾದಿಯನ್ನು ಉಟ್ಟು, ಪರದೇಶಕ್ಕೆ ವರ್ಷಕ್ಕೆ 60 ಕೋಟಿ ರೂಪಾಯಿ ಹೋಗುವದನ್ನು ನಿಲ್ಲಿಸಿ ಅಪೇಕ್ಷಿಸಿದಲ್ಲಿ ಬೇಕಾದ ಒಟ್ಟೆಯನ್ನು ನಿಮ್ಮ ಮನೆಯ ಬಾಗಿಲಿಗೆ ಖುದ್ದಾಗಿ ತಂದು ಕೊಡುವೆವು.

ಮೇನೇಜರು,

24—6 ಖಾದಿಭಂಡಾರ,

ವೀರಾಜಪೇಟೆ.

೫೪ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ನಿಂಬೇಗ ಶಕ್ತಿ ಕುಂದಿರುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ತ್ಪಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದಾಹ, ರಕ್ತಪಿತ್ತ, ಜಳಜ್ವರ, ಮಲಬದ್ಧತೆ, ಕೈಕಾಲು ಉಜ್ಜುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು —ಕ್ರಯ ಡಬ್ಬಿ 1 ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ 7—0—0.

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೩. ಮಲೇರಿಯಾ ನಿವಾರಿಣಿ.

ದಿನ ಬಿಟ್ಟು ಬರುವಜ್ವರ, ಮಲೆ ಜ್ವರ ೭ ದಿನ 3 ದಿನ ಸಕ್ಕೊಂಡು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆನೋವು, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಡಿಮೆಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1—4—0. 3 ಕ್ಕೆ 3—8—0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0—8—0, 3ಕ್ಕೆ 1—

೬. ಕಸ್ತೂರಿ ಮಿಶ್ರಣ.

ದಕ ಮುಲಾರಿಷ್ಟ ಬಾಣಂತಿಯರಿಗೆ. ಬಾಟ್ಲಿ 1 ಕ್ಕೆ 1—8— 3 ಬಾಟ್ಲಿಗೆ 4—4—0

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1—4 0, 3 ಬಾಟ್ಲಿಗೆ 3

೮. ಜವಸ ಪ್ರಾಸ ಡಬ್ಬಿ 1 ಕ್ಕೆ 2—0—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಮೇಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷಧ ರವಾನಿಸ ಬಹುದು ಕೆಟಲಾಗು ತರಿಸಿ ನೋಡಿರಿ

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದೀಕ್ ಫಿಜಿಸಿಯನ್ಸ್,

52—43 ರಥಬೀದಿ ಮಂಗಳೂರು, ದ. ಕನ್ನಡ.

ವರ್ತಮಾನ ಸಂಗ್ರಹ.

ಒಳದೇಶ.

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗೊಂದು ಈ ತಾ. 15ರಲ್ಲಿ ಮಡಿಕೇರಿಯಲ್ಲಿ ನಡೆಯುವುದು.

ಪೊಳ್ಳಿಬೆಟ್ಟದ ಸಮೀಪ ಇರುವ ಸಾವಿರಬಟ್ಟಿ ದೊಡ್ಡಿಯು ಈ ತಿಂಗಳ ಒಂದರಿಂದ ಮುಚ್ಚಲ್ಪಟ್ಟಿದೆ.

ಕಳೆದ ಜುಲೈ ತಿಂಗಳಲ್ಲಿ ಕೊಡಗಿನಲ್ಲಿ 337 ಜನನಗಳೂ, 370 ಮರಣಗಳೂ ಆದವೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಬೆಂಗಳೂರಿನ ಕೊಡಗು ಸಂಘದವರು ತಮ್ಮ 18ನೇ ವಾರ್ಷಿಕೋತ್ಸವವನ್ನೂ, ಕೈಲ್‌ಪೊಳುದು ಹಬ್ಬವನ್ನೂ ಈ ತಾ 8ರಲ್ಲಿ ಲಾಲ್‌ಬಾಗಿನಲ್ಲಿ ನಡೆಸುವರೆಂದು ತಿಳಿಯಬರುತ್ತದೆ.

ಮೂರು ಕೋಆಪರೇಟಿವ್ ಸುಪರ್‌ವೈಸರುಗಳ ಕೆಲಸವು ಖಾಲಿ ಇದೆಯೆಂದೂ, ಇದಕ್ಕೆ ಸೇರಲು ಇಚ್ಛೈಸುವವರು ರಿಜಿಸ್ಟ್ರಾರವರಿಗೆ ಅಪ್ಲಿಕೇಶನ್ ಕಳುಹಿಸಬಹುದೆಂತಲೂ ತಿಳಿಯುತ್ತೇವೆ.

ಈ ವರ್ಷ ಕೈಲ್ ಮುಹೂರ್ತ ಹಬ್ಬಕ್ಕೆ ಕಿಗ್ಗಟ್ಟುನಾಡಿನ ಗೋಣಿಕೊಪ್ಪಲು ಸರಾಯಿ ಕೋಠಿಯಿಂದ ಸುಮಾರು 500 ಗೆಲನ್ ಸರಾಯಿ ಕೊಡಲು ಪಾಸ್ ಕೊಡಲ್ಪಟ್ಟಿತ್ತೆಂದು ವರ್ತಮಾನ.

ಪೊನ್ನಂಪೇಟೆಯಲ್ಲಿ ಮೆ ಮುದ್ದಮ್ಮಯ್ಯನವರು ತೆರೆದಿರುವ ಖಾದಿ ಅಂಗಡಿಯಲ್ಲಿ ಕಳೆದ ಮಾರ್ಚಿಯಿಂದ ಆಗೋಸ್ಟು ಅಖೈರು ವರೆಗೆ 1500ರೂ ಗಳ ಖಾದಿ ಬಟ್ಟೆ ಖರ್ಚಾಗಿದೆಯೆಂದು ತಿಳಿಯಲು ಸಂತೋಷಪಡುತ್ತೇವೆ

ಹೊಸದಾಗಿ ಮಂಜೂರಾಗಿರುವ ಮೂರು ಕೋಆಪರೇಟಿವ್ ಇನ್‌ಸ್ಪೆಕ್ಟರುಗಳ ಹುದ್ದೆಗೆ ಮೆ ಗೀಕಾದ ಬಿ ಯಮ್ ತಿಮ್ಮಪ್ಪಯ್ಯನವರು, ಬೆಳ್ಳಿಚಿಟ್ಟೀರ ಚಂಗಪ್ಪನವರು ಮತ್ತು ಕೆ. ಪಿ. ಶೇಷಗಿರಿರಾಯರು ಈ ತಾ. 5ರಿಂದ ನೇಮಿಸಲ್ಪಟ್ಟಿರುವರು,

ಟ್ರಿಜರಿ ಆಫೀಸರಾದ ಮೆ. ಕೊಂಗಂಡ ಅಪ್ಪಯ್ಯನವರು ಈ ತಾ. 5ರಿಂದ 20 ದಿವಸ ರಜೆ ತೆಗೆದ ಕೊಂಡಿರುವುದರಿಂದ ಕೌನ್ಸಿಲು ರಿಪೋರ್ಟರಾದ ವಿ. ವೆಂಕಟೇಶ್ವರ ಅಯ್ಯರವರು ಟ್ರಿಜರಿ ಚಾರ್ಜನ್ನೂ, ಜೈಲ್ ಸುಪರಿಂಟೆಂಡೆಂಟರ ಕೆಲಸವನ್ನೂ ನೋಡುವಂತೆ ನೇಮಿಸಲ್ಪಟ್ಟಿರುವರು.

ಕಳೆದ ತಿಂಗಳು 30ರಿಂದ ಮೂರು ದಿವಸಗಳ ವರೆಗೆ ಬೇಂಗುನಾಡು ಚೇರಂಬಾಣೆಯಲ್ಲಿರುವ ಸಿದ್ಧಾಶ್ರಮದಲ್ಲಿ ಸುಮಾರು 500 ಭಕ್ತ ಜನರು ನೆರೆದು ಹಗಲಿರುಳು ಭಜನ ಸಪ್ತಾಹ ಪೂಜೆ ನಡಿಸಿದರೆಂದೂ, ನೆರೆದಿದ್ದವರಿಗೆಲ್ಲ ಅನ್ನ ಸಂತರ್ಪಣೆಯಾಯಿತೆಂದೂ ಒಬ್ಬರು ಬರೆದಿರುತ್ತಾರೆ

ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಕೊಡಗು ಸ್ಪೆಶ್ಯಲ್ ಟೆಸ್ಟ್ ಪರೀಕ್ಷೆಯಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಫೀಸಿನ ಮೆ ಯಂ. ಯಸ್. ಅನಂತ ಪದ್ಮನಾಭರಾವ್‌ರವರೂ, ಕಮಿಷನರ ಇಂಗ್ಲಿಷ್ ಆಫೀಸಿನ ಮೆ. ಸಿ ಕೆ. ತಿಮ್ಮಯ್ಯನವರೂ ಎಲ್ಲಾ ವಿಷಯಗಳಲ್ಲೂ ತೇರ್ಗಡೆ ಹೊಂದಿರುವರು.

'ಲೋಕಪಾವನ' ಪತ್ರಿಕೆಯು ತಾ. 27—8—'29ರ ಸಂಚಿಕೆಯಲ್ಲಿ 'ಒಬ್ಬ ಜಮ್ಮ ಗೌಡ ಓಟರು' ಎಂಬ ರುಜುವಿನಿಂದ ಪ್ರಕಟವಾದ 'ಏನು ದೇಶಸೇವೆಯೋ!' ಎಂಬ ತಲೆಬರಹದ ಬಾತ್ಮಿಯಲ್ಲಿಯೂ, ಅದನ್ನೇ ವಸ್ತುಪತ್ರಿಕೆಯಾಗಿ ಹಾಕಿದವಲ್ಲಿಯೂ ತನ್ನ ಮೇಲೆ ನಿಜವಲ್ಲದ ಸಂಗತಿಗಳನ್ನು ಆರೋಪಿಸಿ ತನಗೆ ಮಾನಹಾನಿ ಮಾಡಿದರೆಂದು ಮೆ ಕೋಟೆರ ಚಿಣ್ಣಪ್ಪನವರು 'ಲೋಕಪಾವನ'ದ ಸಂಪಾದಕರ ಮೇಲೆ ಕ್ರಿಮಿನಲ್ ಕೇಸು ದಾಕ್ಲೆ ಮಾಡಿರುತ್ತಾರೆ.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕೋರ್ಟಿನ ಶಿರಸ್ತೆದಾರರಾದ ಮೆ ಕೋದಂಡ ಕಾಳಪ್ಪನವರು ಸೋಮವಾರಪೇಟೆ ಪಾರುಪತ್ಯಗಾರರಾಗಿಯೂ, ಸೋಮವಾರಪೇಟೆ ಪಾರುಪತ್ಯಗಾರರಾದ ಮೆ. ಕೋಳೆರ ಕುಟ್ಟಪ್ಪನವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕೋರ್ಟಿನ ಶಿರಸ್ತೆದಾರರಾಗಿಯೂ, ಪಾರುಪತ್ಯಗಾರರಾದ ಮೆ. ಮಂಡೇಪಂಡ ಅಪ್ಪಚ್ಚನವರು ಭಾಗಮಂಡಲದಿಂದ ಫ್ರೇಜರ್‌ಪೇಟೆಗೂ, ಮೆ. ಮುಕ್ಕಾಟಿರ ಮುದ್ದಪ್ಪನವರು ಫ್ರೇಜರ್‌ಪೇಟೆಯಿಂದ ಭಾಗಮಂಡಲಕ್ಕೂ ಈ ತಾ. 15ರಿಂದ ವರ್ಗಾಯಿಸಲ್ಪಟ್ಟಿರುವರಾಗಿ ತಿಳಿಯಬರುತ್ತದೆ

ಕಳೆದ ಮಂಗಳವಾರ ಮಧ್ಯಾಹ್ನದ ಮೇಲೆ ಮಡಿಕೇರಿ ಕ್ರಿಕೆಟ್ ಮೈದಾನದಲ್ಲಿ, ಮೂರ್ನಾಡು ನಾಂಡಿಕ ರಿಂದ ದಿನಲ್ಲಿ ಕೈಲ್ ಮುಹೂರ್ತ ಹಬ್ಬದ ಸಲುವಾಗಿ ಎಂದಿನಂತೆ ತೆಂಗಿನಕಾಯಿಗೆ ಗುಂಡು ಗುರಿ ಹೊಡೆಯುವುದೂ, ಆಟೋಟಗಳೂ ನಡೆದು ಜಯಶೀಲರಾದವರಿಗೆ ಇನಾಮುಗಳು ಹಂಚಲ್ಪಟ್ಟವೆಂದು ತಿಳಿಯುತ್ತೇವೆ ಅದೇ ರಾತ್ರಿ ಮಡಿಕೇರಿ ಕೊಡವರು ಜಮಾನ್ದಾರರ ಸಂಘದ ಹಾಲ್‌ನಲ್ಲಿ ಒಂದು ಔತಣವನ್ನು ಮಾಡಿದರು. ಎರಡು ಕಡೆಗಳಲ್ಲಾ ಕೌನ್ಸಿಲು ಚುನಾವಣೆಗೆ ನಿಂತಿರುವ ಉಮೇದುವಾರರ ಭಾಷಣಗಳಾದುವಂತೆ.

ಮಡಿಕೇರಿ ವೇದಾಂತ ಸಂಘದವರು ಶ್ರೀ ಕೃಷ್ಣಜಯಂತಿಯನ್ನು ಕಳೆದ ತಾ. 30ರಲ್ಲಿ ಜಮಾನ್ದಾರರ ಸಂಘದ ಹಾಲ್‌ನಲ್ಲಿ ಸೆಂಟ್ರಲ್ ಸ್ಕೂಲಿನ ಹೆಡ್ಮಾಸ್ಟರಾದ ಮೆ. ಸಿ. ಯಂ. ರಾಮರಾಯರ ಅಧ್ಯಕ್ಷತೆಯಲ್ಲಿ ನಡಿಸಿದರು. ಭಜನೆಯಾದನಂತರ ಮೆ. ಸಿ. ಡಿ. ಬಿಯ್ಯಪ್ಪನವರು ಶ್ರೀ ಕೃಷ್ಣನ ಜೀವ ಚರಿತ್ರೆಯನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು ಇದೇ ವಿಷಯದ ಮೇಲೆ ಹೈಸ್ಕೂಲಿನ ಸಂಸ್ಕೃತ ಪಂಡಿತರಾದ ಮೆ ಅತ್ರಿ ರಾಮಶಾಸ್ತ್ರಿಯವರೂ ಚಿಕ್ಕ ಮತ್ತು ಅರ್ಥಗರ್ಭಿತವಾದ ಭಾಷಣ ಮಾಡಿದರು ಆ ಮೇಲೆ ಮೆ. ಕೆ. ಸುಬ್ಬಾಯನವರು ಹರಿಕಥೆಯನ್ನು ಮಾಡಿದರು

ಹಿಂದೂದೇಶ.

ಸ್ತ್ರೀಯರಿಗೆ ಓಟಿನ ಹಕ್ಕು ಕೊಡಬೇಕೆಂಬ ಠರಾವು ಬಿಹಾರ್ ಕೌನ್ಸಿಲಿನಲ್ಲಿ ಮಂಜೂರಾಯಿತು.

ಈ ತಾ 29ರಲ್ಲಿ ನಡೆಯಲಿಕ್ಕಿರುವ ಕಾಶೀ ವಿದ್ಯಾಪೀಠದ ಕಾನ್ವೊಕೇಶನಿನ ಭಾಷಣವನ್ನು ಮಹಾತ್ಮಗಾಂಧಿಯವರು ಮಾಡಲಿಕ್ಕಿರುವರು.

ಬಿಹಾರ್ ಸೈಮನ್ ಕಮಿಟಿಯ ಮೆಂಬರುಗಳಲ್ಲಿ ಭಿನ್ನಾಭಿಪ್ರಾಯ ಹುಟ್ಟಿರುವುದರಿಂದ ಎರಡು ರಿಪೋರ್ಟುಗಳು ಬರೆಯಲ್ಪಡುವವೆಂದು ವರ್ತಮಾನ

ಬರುವ ಫೆಬ್ರುವರಿ ತಿಂಗಳಲ್ಲಿ ಮೆ. ಡಬ್ಲ್ಯು. ಪಿ ಬಾರ್ಟನ್‌ರವರ ಬದಲು ಲೆಫ್ಟಿನೆಂಟ್ ಕರ್ನಲ್ ಟಿ ಯಂ ಕೆಯಿಸ್ ಎಂಬವರು ಹೈದರಾಬಾದ ಸಂಸ್ಥಾನದ ರೆಸಿಡೆಂಟರಾಗಿ ನೇಮಿಸಲ್ಪಡುವರೆಂದು ಸುದ್ದಿ ಇದೆ

ಶ್ರೀಯುತ ಎಸ್ ಶ್ರೀನಿವಾಸ ಅಯ್ಯಂಗಾರರವರು ತಮಿಳುನಾಡು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಟ್ಟರು. ಆ ಪದವಿಗೆ ಮೆ ಮುತ್ತುರಂಗ ಮೊದಲಿಯಾರರವರು ಆರಿಸಲ್ಪಟ್ಟಿರುವರು.

ಮಹಾತ್ಮಗಾಂಧಿಯವರ ಆರೋಗ್ಯವು ಇನ್ನೂ ಚೆನ್ನಾಗಿಲ್ಲದಿರುವುದರಿಂದ ಡಾಕ್ಟರವರ ಹೇಳಿಕೆ ಮೇರೆ ಅವರ ಸೆಪ್ಟೆಂಬರು 11ರಿಂದ 20ರ ವರೆಗೆ ಆಗ್ರದಲ್ಲಿ ವಿಶ್ರಾಂತಿ ತೆಗೆದುಕೊಂಡು ನಂತರ ತಮ್ಮ ಪ್ರವಾಸವನ್ನು ಪ್ರಾರಂಭಿಸುವರು

ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನ ಹಿಂದೂ ಹಾಸ್ಟೆಲಿನಿಂದ ಹೊರಗೆ ಹಾಕಲ್ಪಟ್ಟ ಕೆಲವು ಹುಡುಗರೊಂದಿಗೆ ಸಹಾನುಭೂತಿ ತೋರಿಸಲಿಕ್ಕಾಗಿ ಪ್ರೆಸಿಡೆನ್ಸಿ ಕಾಲೇಜಿನ ಸುಮಾರು 500 ವಿದ್ಯಾರ್ಥಿಗಳು ಈ ತಾ. 2ರಲ್ಲಿ ಕಾಲೇಜಿಗೆ ಹೋಗದೆ ಮುಷ್ಕರ ಹಿಡಿದರು.

ತಮಿಳುನಾಡು ಪ್ರಾಂತೀಕ ಕಾನ್‌ಫರೆನ್ಸನ್ನು ಮುಗಿಸಿಕೊಂಡು ವಾಪಸು ಹೋಗುವಾಗ್ಯೆ ಮದ್ರಾಸು ಕಾರ್ಪೊರೇಶನವರು ಸರ್ದಾರ್ ವಲ್ಲಭಭಾಯಿ ಪಟೇಲರವರಿಗೆ ತಾ. 4ರಲ್ಲಿ ಒಂದು ಸ್ವಾಗತ ಪತ್ರವನ್ನು ಒಪ್ಪಿಸಿದರು ಅದೇ ವೇಳೆಯಲ್ಲಿ ಪಟೇಲರವರು ಮುನಿಸಿಪಲ್ ಆಫೀಸಿನಲ್ಲಿ ಮಹಾತ್ಮಗಾಂಧಿಯವರ ಭಾವಚಿತ್ರವನ್ನು ತೆರೆದರು

ಹಿಂದೂದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ಜೈಲಿಗೆ ಕಳುಹಿಸಲ್ಪಟ್ಟವರ ಜ್ಞಾಪಕಾರ್ಥವಾಗಿ ಕಳೆದ ಆಗೋಸ್ಟು ತಾ. 11ನ್ನು 'ಪೊಲಿಟಿಕಲ್ ಸಫರರ್ಸ್' ದಿನವಾಗಿ ಆಚರಿಸಿದಾಗ ಪೋಲೀಸು ಕಮಿಷನರ ಹುಕುಮನ್ನು ಉಲ್ಲಂಘಿಸಿ ಕಲ್ಕತ್ತಾದಲ್ಲಿ ಮೆರವಣಿಗೆಯನ್ನು ಮಾಡಿದರೆಂದು ಬಂಗಾಳ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಸುಭಾಸ್‌ಚಂದ್ರ ಬೋಸ್‌ರವರಿಗೂ ಇನ್ನೂ ಸುಮಾರು 20 ಕಾಂಗ್ರೆಸ್ ಕೆಲಸಗಾರರಿಗೂ ಎಡಿಶನಲ್ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಮುಂದೆ ಈ ತಾ 9 ರಲ್ಲಿ ಹಾಜರಾಗಬೇಕೆಂದು ಸಮನ್ಸ್ ಕಳುಹಿಸಿರುವರು.

ಸಿಂಧು ನದಿಯ ದೊಡ್ಡ ಪ್ರವಾಹದಿಂದ ಪಂಜಾಬು ಮತ್ತು ಸಿಂಧು ಪ್ರಾಂತ್ಯಗಳಲ್ಲಿ ತುಂಬಾ ನಷ್ಟವುಂಟಾಗಿದೆ. ಸಿಂಧು ಪ್ರಾಂತ್ಯದಲ್ಲಿ ಇಷ್ಟರವರೆಗೆ 66 ಲಕ್ಷ ರೂಪಾಯಿ ಬೆಲೆಯ ಬೆಳೆ ಮತ್ತು ಆಸ್ತಿಗಳು ನಷ್ಟವಾಗಿವೆ. 1927ರ ಸಿಂಧು ರಿಲೀಫ್ ಫಂಡಿನ ಉಳಿಕೆ 49,000 ರೂ ಮತ್ತು ಕೌನ್ಸಿಲಿನವರು ಮಂಜೂರು ಮಾಡಿದ 2 ಲಕ್ಷ ರೂ ಹಂಚಲ್ಪಟ್ಟರೂ ಜನರ ಕಷ್ಟನಿವಾರಣೆಯಾಗುವುದಿಲ್ಲ ಪುನಹ ಒಂದು ರಿಲೀಫ್ ಫಂಡು ಪ್ರಾರಂಭಿಸಲ್ಪಟ್ಟಿದೆ. ಅದಕ್ಕೆ ಈಗ 1,17,000 ರೂ. ಜಮೆಯಾಗಿದೆಯಂತೆ. ಉದಾರಭಾವದ ಮಹನೀಯರು ಇಂಥಾ ಕಷ್ಟದ ಸಮಯದಲ್ಲಿ ಸಹಾಯ ಕೊಡಲು ಹಿಂಜರಿಯಲಾರರು

ಲಾಹೋರು 'ಕಾನ್‌ಸ್ಪಿರೆಸಿ ಕೇಸಿ'ನ ಕೈದಿಗಳು ತಮ್ಮ ಉಪವಾಸದ ವಿಷಯ ಕೇಳಿದ ಸಂಗತಿಗಳನ್ನೆಲ್ಲಾ ನಡಿಸಿಕೊಡಲು ಪಂಜಾಬು ಸರ್ಕಾರದವರು ಒಪ್ಪಿರುವುದರಿಂದ ಅವರು ಕೈಕೊಂಡಿದ್ದ ಉಪವಾಸ ವ್ರತವನ್ನು 80 ದಿವಸಗಳ ನಂತರ ಬಿಟ್ಟು ಈಗ ಆಹಾರ ತೆಗೆದುಕೊಳ್ಳುತ್ತಿರುವರು ಅವರ ಅವರಲ್ಲಿ ಒಬ್ಬರಾದ ಮೆ ಜತೀಂದ್ರನಾಥ ದಾಸ್‌ರವರ ಆರೋಗ್ಯವು ಬಹಳ ಕೆಟ್ಟುಹೋಗಿ ಅವರ ಪ್ರಾಣವೇ ಅಪಾಯ ಸ್ಥಿತಿಯಲ್ಲಿರುವುದರಿಂದ ಅವರನ್ನು ಬಿಡುಗಡೆ ಮಾಡುವುದಾದರೂ ಉಪವಾಸ ವ್ರತವನ್ನು ಬಿಡಲು ಒಂದು ಶರತ್ತು ಆಗಿತ್ತು. ಆದರೆ ಅಧಿಕಾರಿಗಳು ಅವರನ್ನು ಇನ್ನೂ ಬಿಡುಗಡೆ ಮಾಡಿರುವದಿಲ್ಲವೆಂದು ವರ್ತಮಾನ.

ವಿದೇಶ.

ಬ್ರಿಟನ್ನಿನ ಪ್ರಧಾನ ಮಂತ್ರಿಯಾದ ಮೆ. ರಾಮ್ಸೆ ಮೆಕ್ಡೊನಾಲ್ಡ್‌ರವರು ಜನಾಂಗಗಳ ಕೂಟದ ಕಾನ್‌ಫರೆನ್ಸಿಗಾಗಿ ತನ್ನ ಮಗಳೊಂದಿಗೆ ಜಿನೇವಾಕ್ಕೆ ಹೋಗಿರುವರು.

ಅಫ್ಘಾನಿಸ್ತಾನದಲ್ಲಿ ಗಾದಿಗೆ ಪಟ್ಟವು ಇನ್ನೂ ಬಚ್ಚಾಯಿ ಸಾಕೋವನ ಸ್ವಾಧೀನದಲ್ಲಿಯೇ ಇದೆಯೆಂತಲೂ, ಅದರ ಸುತ್ತಲೂ ಭಯಂಕರವಾದ ಯುದ್ಧವು ನಡೆಯುತ್ತಿದೆಯೆಂತಲೂ ಸುದ್ದಿ

ಭೂಲೋಕದಲ್ಲಿ ಪಾನನಿಷೇಧವನ್ನು ವಿರೋಧಿಸಿ ಚಳವಳಿ ನಡಿಸಲಿಕ್ಕಾಗಿ ಯೂರೋಪಿನಲ್ಲಿ ಡ್ರಾಕ್ಷೆ (ವೈನ್) ಬೆಳೆಸುವ 13 ರಾಷ್ಟ್ರಗಳು ಸೇರಿ ಒಂದು ಸಂಸ್ಥೆಯನ್ನು ಏರ್ಪಡಿಸಿ, ಪ್ಯಾರಿಸ್ ಪಟ್ಟಣವನ್ನು ಅದರ ಮುಖ್ಯ ಸ್ಥಳವಾಗಿ ನಿಶ್ಚೈಸಿರುವರೆಂದೂ ವರ್ತಮಾನ.

ಪೈನಾಕಿಂಗ್, ರಷ್ಯಾಕ್ಕೂ ಮಧ್ಯೆ ಇರುವ ರೈಲ್ವೆಯ ಸಂಬಂಧ ಇವೆರಡು ರಾಷ್ಟ್ರಗಳಿಗೆ ಇರುವ ತಕರಾರುಗಳನ್ನು ಎರಡು ಕಡೆಯ ಪ್ರತಿನಿಧಿಗಳು ಸಭೆ ಸೇರಿ ತೀರಿಸಿಕೊಳ್ಳುವುದೆ ಎಂದು ಕಡೆಯವರು ಒಪ್ಪಿರುವುದರಿಂದ ಈ ಎರಡು ಜನಾಂಗಗಳಿಗೆ ನಡೆಯುತ್ತಿದ್ದ ಯುದ್ಧ ಮುಕ್ತಾಯಗೊಂಡಿದೆ.

ಮೆ. ರೋಬರ್ಟ್ ವಿಬಟ್ ಎಂಬ ಒಬ್ಬ ಅಮೇರಿಕದ ನೀಗ್ರೊ (ಕಪ್ಪು ವರ್ಣದ) ಲಕ್ಷಾಧಿಪತಿಯು ಯೂರೋಪ್ ಖಂಡದಲ್ಲಿ ಪ್ರವಾಸ ಮಾಡಿದಾಗ್ಯೆ ಲಂಡನ್ ಪಟ್ಟಣದಲ್ಲಿ ಉಳಕೊಳ್ಳಲು 30 ಹೊಟೇಲುಗಳಲ್ಲಿ ಪ್ರಯತ್ನಿಸಿದರೂ ಯಾವ ಹೊಟೇಲಿನವರೂ ಸ್ಥಳಕೊಡದೆ ಕಡೆಗೆ ಒಬ್ಬ ನೀಗ್ರೊವಿನ ಮನೆಯಲ್ಲೇ ಉಳಕೊಳ್ಳಬೇಕಾಯಿತಂತೆ! ಆದರೆ ಫ್ರಾನ್ಸ್, ಬೆಲ್ಜಿಯಂ, ಜರ್ಮನಿ ಮೊದಲಾದ ದೇಶಗಳಲ್ಲಿ ಇಂಥಾ ತೊಂದರೆಗಳ್ಯಾವವೂ ಆಗಲಿಲ್ಲವಂತೆ

ಕನ್ನಡಿಗರಲ್ಲಿ ಬಿನ್ನಹ.

ಶುಕ್ಲ ವರ್ಷದ ಭಾದ್ರಪದ ತಿಂಗಳ ಶುಕ್ಲ ೫ ಕೃಷ್ಣ ೨, ೪, ೬, ೧೨ ತಿಥಿಗಳಲ್ಲಿ (ಕ್ರಮವಾಗಿ ಸೆಪ್ಟಂಬರ್ ೮, ೨೦, ೨೨, ೨೪, ೩೦) ಜನಿಸಿದ ಶಿಶುಗಳ ಪಾಲಕರು ದಯವಿಟ್ಟು ಈ ಸಂಗತಿಯನ್ನು ಸಮಯಾದ ವೇಳೆಯೊಡನೆ ತಿಳಿಸಬೇಕೆಂದು ಬಿನ್ನಹ

ಶ್ರಾ. ಕೃ. ಪ. ಚಾ. ವಿ ಪ. ಅಳಿಲ, ತಮ್ಮ ವಿಧೇಯ,

ಕನ್ನಡಿಗರ ಕೂಟ, ಪುರೋಹಿತ ಶ್ರೀನಿವಾಸಭಟ್ಟ,

ಧಾರವಾಡ ಕಾರ್ಯದರ್ಶಿ ಜ್ಯೋತಿರ್ಮಂಡಲ ಶಾಖೆ

SITUATION WANTED.

By a writer who is able to recruit a labour supplier who has got 100 to 150 coolies (both males & females) in hand, having thorough experience in Estate work. For full particulars Apply to.—

"K"
C/o "Kodagu"
Mercara.

1—1 (N. Coorg.)

ಮಡಿಕೇರಿ—ಭಾಗಮಂಡ್ಲ—ಸುಂಟಿಕೊಪ್ಪ ಜಮ್ಮ ಓಟರುಗಳಲ್ಲಿ ವಿನಂತಿ.

ಬರುವ ಸೆಪ್ಟೆಂಬರು ತಾ. 27ರಲ್ಲಿ ನಡೆಯಲಿಕ್ಕಿರುವ ಕೌನ್ಸಿಲು ಉಪ ಚುನಾವಣೆಗೆ ಮಡಿಕೇರಿ—ಭಾಗಮಂಡಲ—ಸುಂಟಿಕೊಪ್ಪ ಜಮ್ಮ ಓಟರುಗಳ ಪರವಾಗಿ ನಾನೊಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ತಾವೆಲ್ಲರೂ ತಮ್ಮ ಓಟನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಬೇಕಾಗಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ತಮ್ಮ ವಿಧೇಯ,

ಮಡಿಕೇರಿ ಕೋಟೆರ ಸಿ. ಚಿಣ್ಣಪ್ಪ,

ತಾ. 10—8—'29. 6—4

ಕೊಡಗಿನ ಕೈಪಿಡಿ.

ಅಲಹಾಬಾದಿನ "ಹಿಂದುಸ್ಥಾನ ರಿವ್ಯು" ಎಂಬ ಮಾಸಪತ್ರಿಕೆಯು ಮೆ. ಪಿ ಯಂ. ಮುತ್ತಣ್ಣನವರಿಂದ ಬರೆಯಲ್ಪಟ್ಟಿರುವ "ಕೊಡಗಿನ ಕೈಪಿಡಿ" ಎಂಬ ಪುಸ್ತಕವನ್ನು (ಕಳೆದ ತಿಂಗಳ ಸಂಚಿಕೆಯಲ್ಲಿ) ವಿಮರ್ಶಿಸಿ ಬರೆದಿರುವುದೇನೆಂದರೆ—

'ಕೊಡಗಿನ ಕೈಪಿಡಿಯು' ಸಹಜವಾಗಿ ಕನ್ನಡದಲ್ಲಿಯೂ, ಒಂದು ಭಾಗ ಇಂಗ್ಲಿಷಿನಲ್ಲಿಯೂ ಬರೆಯಲ್ಪಟ್ಟಿದೆ. ಅದು ಆ ದೇಶದ, ಅಲ್ಲಿಯ ಜನರ, ಅವರ ಪದ್ಧತಿಗಳ, ನಡತೆಗಳ, ಮುಖ್ಯವಾಗಿ ಗುಡ್ಡ, ನದಿಗಳ ಮತ್ತು ತಿಳಿಯಬೇಕಾದ ಹಲವು ಸ್ಥಳಗಳ ವಿಷಯ ಪ್ರಯೋಜನಕರವಾದ ಮಾಹಿತಿಯನ್ನು ಕೊಡು

ಕೊಡುತ್ತದೆ. ಈ ಪುಸ್ತಕವು ಸ್ಥಳೀಯ ವಾಚಕರಿಗೆ ಹಲವು ಧಾರ್ಮಿಕ ಮತ್ತು ರಾಜಕೀಯ ಚಳವಳಿಗಳ ಮನೋರಂಜಕವಾದ ವಿವರಣೆಯನ್ನು ಕೊಡುತ್ತದೆ. ಕನ್ನಡ ತಿಳಿಯದೆ ಇರುವ ದೊಡ್ಡ ಜನಸಂಖ್ಯೆಯವರ ಪ್ರಯೋಜನಾರ್ಥವಾಗಿ ಪುಸ್ತಕದ ಬರುವ ಸಂಚಿಕೆಯನ್ನು ಪೂರ್ತಿ ಇಂಗ್ಲಿಷಿನಲ್ಲಿ ಪ್ರಕಟಿಸುವುದು ಒಳ್ಳೆಯದೆಂತ ಸೂಚಿಸುತ್ತೇವೆ.'

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಹೊಸ ಜಮೀನ್ದಾರರ ಸಂಘದ ಪ್ರಚಾರವೇ?

ಅಯ್ಯಾ ಸಂಪಾದಕರೇ,

ಕೆಲವು ದಿವಸಗಳ ಹಿಂದೆ ನಾನು ಹುದಿಕೇರಿ ಸಂತೆಗೆ ಒಂದು ಸೋಮವಾರ ಹೋಗಿದ್ದೆನು. ಮ. ರಾ. ಶ್ರೀ. ಚೆಪ್ಪುಡಿರ ಎ. ಪೊನ್ನಪ್ಪನವರು ಒಂದು ಪ್ರಿಂಟು ಫಾರಮಿಗೆ ಸೈನು ಕೊಡಬೇಕೆಂದು ಕೇಳಿದರು. ಅದು ಎಂಥಾ ಫಾರಂ ಎಂದು ಕೇಳಿದಲ್ಲಿ ಅದು ನಾನು ಮೊದಲೇ ಮೆಂಬರಾಗಿರುವ ಹಳೇ ಜಮೀನ್ದಾರರ ಸಂಘದಿಂದ ಬಂದ ಫಾರಮು ಎಂಬದಾಗಿ ತಿಳಿಸಿದರು. ಅವರ ಭರವಸ ಮೇರೆ ನಾನು ಅದಕ್ಕೆ ಸೈನು ಹಾಕಿದೆನು. ಈಗ ತಿಳಿಯುವಾಗ ಅದು ಈಗ ಶಾನೇ ಏರ್ಪಾಡಾದ ಹೊಸ ಜಮೀನ್ದಾರರ ಸಂಘದವರಿಂದ ಬಂದ ಫಾರಮೆಂತ ತಿಳಿದೆನು. ಈ ವಿಷಯವನ್ನು ಸರಿಯಾಗಿ ತಿಳಿಸದೆ ನನ್ನ ಸೈನನ್ನು ಹೊಂದಿಕೊಂಡರೂ ನಾನು ಹೊಸ ಸಂಘದ ಮೆಂಬರಲ್ಲ, ನಾನು ಹಳೇ ಜಮೀನ್ದಾರರ ಸಂಘದ ಮೆಂಬರೆಂದಾಗಿ ಮ. ರಾ. ಶ್ರೀ. ಪೊನ್ನಪ್ಪನವರಿಗೂ, ಬೇರೆ ಎಲ್ಲಾ ಮಹನೀಯರಿಗೂ ಈ ಮೂಲಕ ತಿಳಿಸಿರುತ್ತೇನೆ.

ದಡ್ಡೆರ ಗಣಪತಿ.

ಸಿದ್ದಾಪುರದ ಬಾವಿ

ಅಯ್ಯಾ,

ಸಿದ್ದಾಪುರದ ಬಾವಿಯು ಕುಸಿದು ಬಿದ್ದು ತಿಂಗಳು ಒಂದಕ್ಕಿಂತ ಹೆಚ್ಚಾಯಿತು. ಹಜರತ್ ಕಮಿಶನರ್ ಸಾಹೇಬರು ಖುದ್ದು ದಯಮಾಡಿಸಿ ನೋಡಿದರು. ಅದು ಕುಸಿದು ಬಿದ್ದ ನ್ಯಾಯವಾದ ಕಾರಣವು ತಿಳಿಯಲಾರದೆ ಹೋಯಿತಂತೆ. ಇಂಜಿನಿಯರ್ ಇಲಾಖೆಯವರ ಅಜಾಗ್ರತೆಯಿಂದಲೋ, ರೆವಿನ್ಯೂ ಇಲಾಖೆಯವರ ಅನುಮತಿ ಮೇರೆ ಬಾವಿಯ ಅಡಿ ಭಾಗದಲ್ಲಿ ಆಳ ಕೊರೆದುದರ ಕಾರಣದಿಂದಲೋ ಎಂಬದು ಗೊತ್ತು ಮಾಡಲಾರದೆ ಹೋದರಂತೆ. ಇಂಜಿನಿಯರ್ ಇಲಾಖೆಯವರ ಅಜಾಗ್ರತೆಯಿಂದ ಕಟ್ಟಿಸಿದ ಬಾವಿಯಾದರೆ 1924ನೇ ಇಸವಿಯಲ್ಲಿ ಜೋರು ಮಳೆಯಲ್ಲಿ ಬೀಳಬೇಕಿತ್ತು. ಬಾವಿ ಸುತ್ತ ನೀರು ನಿಂತರೆ ಬಾವಿಯು ಕುಸಿದು ಬೀಳುವದು ಲೋಕದಲ್ಲಿ ಇದೆಯೋ? ಹುದುವು ನೆಲದಲ್ಲಿ ಬೌಗು ನೆಲದಲ್ಲಿ ಕಟ್ಟಿಸಿದ ಎಷ್ಟೋ ಬಾವಿಗಳು ಈ ದೇಶದಲ್ಲಿ ಇಲ್ಲವೇ? ಈ ಕೆಳಗಿನ ಸವಾಲುಗಳನ್ನು ಕಮಿಶನರ್ ಸಾಹೇಬರು ವಿಚಾರಿಸಿದಲ್ಲಿ ನಿಜಸ್ಥಿತಿ ತಿಳಿಯಲಾರದೇ? ಬಾವಿಯ ರಿಪೇರಿಗಾಗಿ ರೆವಿನ್ಯೂ ಅಧಿಕಾರಿಗಳು ಹಣ ಕೊಡಿಸಿದ್ದು ಉಂಟೋ? (2) ಹಣ ಸಾಲದ್ದಕ್ಕೆ ಸಿದ್ದಾಪುರ ಪಟ್ಟಣದವರು ಚಂದಾ ಎತ್ತಿದರೋ? (3) ಬಾವಿಯ ಅಡಿಯಿಂದ ಎಷ್ಟು ಗಾಡಿ ಮಣ್ಣು ತೆಗೆಯಿಸಿದರು? (4) ಬಾವಿಯ ಅಡಿಪಾಯ ತೋರಿದರೆ ಬಾವಿ ನಿಲ್ಲುವದೋ? (5) ಮೇಲೆ ಕಸರು ನಿಂತು ಎಲ್ಲಿಯಾದರೂ ಬಾವಿ ಬಿದ್ದಿದೆಯೋ?

ಈ ನಾಡಿನ ಕೌನ್ಸಿಲ್ ಮೆಂಬರುಗಳು ಕಮಿಶನರ್ ಸಾಹೇಬರಲ್ಲಿ ಈ ಸಂಗತಿ ಅರಿಕೆ ಮಾಡಿ ಕೂಡಲೆ ತಪ್ಪಿತಸ್ಥರನ್ನು ಎಚ್ಚರಿಸಿ, ಹೊಸ ಬಾವಿಯನ್ನು ತೋಡಿಸುವ ಏರ್ಪಾಡು ಮಾಡುವರಾಗಿ ನಂಬುತ್ತೇನೆ. ಸಿದ್ದಾಪುರವು ಮೊದಲೇ ಜ್ವರದ ಊರು ಇದ್ದ ನೀರನ್ನೂ ಕೆಡಿಸಿ ಊರವರು ಕುಡಿಯುವ ನೀರಿಗೆ ಭಂಗವಾಗಿದೆ.

ಪಟ್ಟಣಿಗ.

ದನಗಳ ಕಾಯಿಲೆ.

ಅಯ್ಯಾ,

ಸೋಮವಾರಪೇಟೆನಾಡು ಬೆಳ್ಳದಳ್ಳಿಯಲ್ಲಿ ಈಗ್ಯೆ ಎರಡು ತಿಂಗಳುಗಳಲ್ಲಿ ದನಗಳ ಕಾಯಿಲೆಯು ಪ್ರಾರಂಭವಾಗಿದ್ದಾಗಿದೆ. ಈ ಕಾಯಿಲೆಯು ದಿನೇ ದಿನೇ ಪ್ರಾಬಲ್ಯವಾಗುತ್ತಾ ಅನೇಕ ಒಡ ವೃಷಭ ದನಗಳು ಹೆಮ್ಮಾರಿಯ ಬಾಯಿಗೆ ತುತ್ತಾದವು. ಈ ಗ್ರಾಮಕ್ಕೆ ಸಮೀಪ ಇರುವ ಅಬಂಬಾಡುಗಳಿಗೂ ವ್ಯಾಪಿಸಿ ದಿನ ಒಂದರ 1-2 ದನಗಳು ಮರಣೋದ್ಯಮವಾಗುವದನ್ನು ಕಂಡರೆ ಯಾರಿಗೆ ತಾನೆ ಆಶ್ಚರ್ಯವಿಲ್ಲದೆ ಇರುವದು. ಈ ನಾಡಿಗ ವೆಟರಿನರಿ ಡಾಕ್ಟರನ್ನು ಸರ್ಕಾರದವರು ಪ್ರಜೆಗಳ ಹಿತಕ್ಕೋಸ್ಕರ ನೇಮಿಸಿರುವರು. ಗ್ರಾಮಾಧಿಕಾರಿಗಳು ದನಗಳ ಕಾಯಿಲೆ ಇರುವದಾಗಿ ೭-೮ಸಾರಿ ರಿಪೋರ್ಟು ಮಾಡಿದ್ದಾಗ್ಯೂ ಈ ಇಲಾಖಾದಾರರ ಆವಾಗ ಹಸಬ್ಬೆ ಬಾರದೆ ಇರುವದು ಶೋಚನೀಯವಾಗಿದೆ. ಸರ್ಕಾರಕ್ಕೆ ರೈತರಿಂದ ಸಲ್ಲಬೇಕಾದ ಕಂದಾಯದಲ್ಲಿ ಒಂದು ಕಾಸು ನಿಂತರೂ ಒಡನೆ ನೋಟೀಸು, ವಾರಂಟು ಬಂದು ರೈತರಿಂದ ಒಂದು ಒಂದುವರೆ ರೂಪಾಯಿ ವಸೂಲು ಮಾಡಿಬಿಡುತ್ತಾರೆ. ರೈತರಿಗೆ ಇಂತಹ ರೋಗದಿಂದ 200—300 ರೂಪಾಯಿ ನಷ್ಟವಾದರೆ ನೋಡುವವರು ಯಾರೂ ಇಲ್ಲವಲ್ಲ. ಕಷ್ಟಕಾಲದಲ್ಲಿ ಸಹಾಯ ದೊರೆಯದೆ ಇರುವ ಇಂಥಾ ಇಲಾಖೆ ಇರುವುದಕ್ಕಿಂತ ಮೊದಲಿನ ಹಾಗೆ ಇಲ್ಲದೆ ಇರುವುದು ಉತ್ತಮವಲ್ಲವೇ? ರೈತರಿಗೆ ಎಂತಹ ಕಾಯಿಲೆಯೆಂದು ತಿಳಿಯಲು ಸಾಧ್ಯವಾಗದ್ದರಿಂದ ನಾಡಿನ ಯಾವ ಔಷಧಿಯೂ ನಿಷ್ಪ್ರಯೋಜನವಾಯಿತು. ಈ ನಾಡಿನ ಪ್ರಜೆಗಳು ವಿದ್ಯೆಯಲ್ಲಿ ಹಿಂದುಳಿದು, ತಿಳುವಳಿಕೆ ಕಡಿಮೆಯಾದವರಾದುದರಿಂದ ಯಾವ ವಿಷಯವನ್ನು ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳಲು ಅಂಜುವವರಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯ ಒಡನೆ ಪರ್ಯಾಲೋಚಿಸದಿದ್ದಲ್ಲಿ ಈ ನಾಡಿನ ಜಾನುವಾರುಗಳು ರೋಗವೆಂಬ ಹೆಮ್ಮಾರಿಯ ಬಾಯಿಗೆ ತುತ್ತಾಗಿ ಪ್ರಜೆಗಳು ತುಂಬಾ ದುಃಖಕ್ಕೆ ಪಾತ್ರರಾಗುವರೆಂಬದರಲ್ಲಿ ಸಂಶಯವಿಲ್ಲ.

'ನಷ್ಟ ಪಟ್ಟವ'

ಕೊಡಗಿನ ಒಂದು ಅಕ್ರಮ ಸಾಮಾಜಿಕ ಪದ್ಧತಿ.

ಯಾವದಾದರೊಂದು ಮತದ ಧರ್ಮವನ್ನಾಗಲೀ, ಒಂದು ರಾಜಕೀಯ ಚಳವಳವನ್ನಾಗಲೀ ಅಥವಾ ಸಾಮಾಜಿಕ ಕುಂದುಕೊರತೆಯನ್ನಾಗಲೀ ಖಂಡಿಸಿ ಬರೆದು ಬಂದ ಬಾತ್ಮಿಯು (Article) ಜನರಿಗೆ ರುಚಿಸದು. ಇದು ಸ್ವಾಭಾವಿಕ. ಈ ಸ್ವಾಭಾವಿಕತ್ವವು ಸ್ವಾರ್ಥದೃಷ್ಟಿಯಿಂದಲ್ಲದೆ ಅಲ್ಲ. ಯಾವ ಖಂಡನೆಯನ್ನಾಗಲೀ ವಿಶಾಲ ದೃಷ್ಟಿಯಿಂದ ಪರಿಗಣಿಸಿ ಕುಂದುಕೊರತೆಗಳಿದ್ದರೆ ಮೂಲೋತ್ಪಾಟನೆ ಮಾಡಿ ಉತ್ತಮ ಸ್ಥಿತಿಯನ್ನು ಅನುಸರಿಸುವುದು ಒಳ್ಳೆಯದು. ಈ ಲೇಖನವನ್ನು ಓದತಕ್ಕ ಕೊಡಗರು ಸ್ವಲ್ಪಕಾಲ ಪರ್ಯಾಂಕರ ಕೊಡಗರ ಸ್ಥಾನದಲ್ಲಿಲ್ಲದೆ ಈ ಪ್ರವರ್ತಕನ ಸ್ಥಾನದಲ್ಲಿದ್ದುಕೊಂಡಾಗಲೀ ಅಥವಾ ಪರಜನ ದೃಷ್ಟಿರೀತ್ಯವಾಗಿಯಾಗಲೀ ಆಲೋಚಿಸಬೇಕು.

ನಾನು ಈ ಮೂಲಕ ಅವರ ಸಾಮಾಜಿಕ ಪದ್ಧತಿಯನ್ನಲ್ಲದೆ ಕೊಡಗರನ್ನಾಗಲೀ ಅಥವಾ ಅವರ ಮತಾಚಾರಗಳನ್ನಾಗಲೀ ಖಂಡಿಸಿದೆನೆಂದು ತಿಳಿಯ ಕೂಡದು. ಬಹು ಪುರಾತನವಾದ ಪದ್ಧತಿಯಾದರೂ ಈಗ ಬಹು ಅಸಹ್ಯವಾಗಿ ಕಾಣುವ ಪದ್ಧತಿಯನ್ನು ತಿದ್ದುಪಾಟು ಮಾಡಿಕೊಳ್ಳಬೇಕೆಂಬುದೇ ಈ ಲೇಖನದ ಉದ್ದೇಶ.

ಬಹು ಪುರಾತನ ಕಾಲದಲ್ಲಿ ಅಂದರೆ ಜ್ಞಾಪಕಕ್ಕೆ ನಿಲುಕದಷ್ಟು ಪೂರ್ವ ಕಾಲದಲ್ಲಿ ಯಾವಾಗ ಇನ್ನೂ ಪ್ರಪಂಚವು ನಾಗರಿಕತೆಯಿಂದಲೂ (Civilisation) ಮತ್ತು ಸಂಸ್ಕೃತಿಯಿಂದಲೂ (Culture) ಬೆಳಗುತ್ತಿರಲಿಲ್ಲವೋ ಆಂದು ಅಲ್ಪ ಕಾರ್ಯಗಳನ್ನೇ ಅಧಿಕ ಕಾರ್ಯಗಳನ್ನಾಗಿ ಮಾಡಿಕೊಂಡು ಜ್ಯೇಷ್ಠ ಸಹೋದರನ ಪತ್ನಿಯನ್ನು ಸಹೋದರನ ಅವಸಾನ ಕಾಲನಂತರ ವಿಧವಾ ವಿವಾಹರೀತ್ಯವಾಗಿ ಸೇರುವ ಪದ್ಧತಿ ಇತ್ತು. ಆದರೆ ಜನರಲ್ಲಿ ಯೋಚನಾಪರತೆಯು ಕಾಲಕ್ರಮೇಣ ಹೆಚ್ಚು ಹೆಚ್ಚುತ್ತಾ ಆ ಪದ್ಧತಿಯು ಕೆಲವಾರು ದಿವಸಗಳಲ್ಲಿ ಅಳಿಸಿ ಹೋಯಿತು. ಜನರಿಗೆ ತಮ್ಮ ಅನುಭವವೇ (Experience) ತಮಗೆ ಪಾಠವನ್ನು ಕಲಿಸಿ ಸಂಸಾರದ ಒಂದು ಕುಂದನ್ನು ಹೋಗಲಾಡಿಸಿತೆಂದು ಧಾರಾಳವಾಗಿ ಹೇಳಬಹುದು. ನಮ್ಮ ಹಿಂದು ಜನಾಂಗದಲ್ಲಿ ಪುರಾತನ ಪದ್ಧತಿಗಳು ಅಳಿಸಿ ಹೋಗುವುದು ಬಹು ಕಷ್ಟ. ಬಾಲ್ಯ ವಿವಾಹವನ್ನಾಗಲಿ, ವಿಧವಾ ವಿವಾಹ ಖಂಡನ ಅನುಪಯೋಗವಾದ ಜಾತಿ ಪದ್ಧತಿಗಳು ಇನ್ನೂ ಉಳಿದಿವೆ. ಅಂದ ಮೇಲೆ ಅಷ್ಟು ಬೇಗ ಅಗೋಚರವಾದ ಈಗಿನ ಕೊಡಗರ ಅಕ್ರಮ ಪದ್ಧತಿಯು ಎಲ್ಲಾ ನ್ಯೂನತೆಗಳಿಗಿಂತಲೂ ಅಧಿಕವಾಗಿದ್ದಿರಬೇಕು. ಇದು ಯಾರೋ ಮುಖಂಡರಿಂದ ಬಹಿಷ್ಕೃತವಾದುದಲ್ಲ. ("Experience is the best teacher") "ತಲೆ ತಗಲಿದ ಮೇಲೆ ಬುದ್ಧಿ ಬಂತು" ಎನ್ನುವಂತೆ ಜನ ಸಾಮಾನ್ಯದ ಅನುಭವವೇ ವಿಷಮ ಪಾಠವನ್ನು ಕಲಿಸಿರಬಹುದು. ಹೇಗೆಂದರೆ—ಒಂದು ಮನೆಯಲ್ಲಿರುವವರು ತಾಯಿ-ತಂದೆ, ಅಣ್ಣ-ತಮ್ಮ ಅಕ್ಕ-ತಂಗಿ, ಅತ್ತಿಗೆ-ನಾದಿನಿಯರು. ಇವರೆಲ್ಲರೂ ಸೇರಿದರೆ ಒಂದು ಸಂಸಾರ ಕುಟುಂಬವಾಗುವುದು. ಇವರು ಸಂಬಂಧದಲ್ಲಿ ಒಬ್ಬರಿಗಿಂತಲೂ ಒಬ್ಬರು ಹೆಚ್ಚು. ಇವರಲ್ಲಿ ನೆಲೆಸಿರುವ ಪ್ರೀತಿಯು ಸಾಮಾನ್ಯವಾಗಿ ಒಂದೇ ಗುಣವನ್ನು ತೋರುವುದು. ನಾವು ನಿಷ್ಕಲ್ಮಷವಾದ ಪ್ರೀತಿಗೆ ಉದಾಹರಣೆಯಾಗಿ ತಂದೆಯನ್ನೂ, ಸಹೋದರನನ್ನೂ ತೆಗೆದುಕೊಳ್ಳುತ್ತೇವೆ. "ತಂದೆಯಂತೆ ಕಾಣು, ಸೋದರಭಾವವಿರಲಿ" ಎಂದು ಹೇಳುವ ವಾಡಿಕೆಯು ಇಡೀ ಪ್ರಪಂಚವನ್ನೇ ಆವರಿಸಿದೆ. ತಂದೆಯನ್ನು ಸೇರಿದ ತಾಯಿಯು ತಂದೆಗಿಂತಲೂ ಅಧಿಕಳು ಎಂದ ಮೇಲೆ ಸಹೋದರರನ್ನು ಸೇರಿದ ಅತ್ತಿಗೆ ನಾದಿನಿಯರು ಸಹೋದರರಿಗಿಂತಲೂ ಹೆಚ್ಚು ಎಂದೇ ಭಾವಿಸಬೇಕು. ಹಾಗೆ ಭಾವಿಸದೆ ಹೋದರೆ ಒಂದು ಕುಟುಂಬದಲ್ಲಿ ಏಕರೀತ್ಯವಾದ ಪ್ರೀತಿಗೆ ಭಂಗ ಬರುತ್ತದೆ. ನಿಷ್ಕಳಂಕವಾದ ಪ್ರೀತಿಯೂ, ಬೀಭತ್ಸವಾದ ಅತ್ಯಾಚಾರವೂ ಒಂದುಗೂಡಿದಂತಾಗುತ್ತದೆ. ಇದರ ಫಲಿತಾಂಶವಾಗಿ ಕುಟುಂಬವು ದುಸ್ಥಿತಿಯಲ್ಲಿ ತೊಳಲುವುದರಲ್ಲಿ ಸಂದೇಹವಿಲ್ಲ. ಹೇಗೆಂದರೆ- ("Charity begins at home") ದಾನದೃಷ್ಟಿಯು ಮನೆಯಲ್ಲಿಯೇ ಜನಿತವಾಗಬೇಕು ಎಂಬುದಕ್ಕೆ ಬದಲು ಕೊನೆಗಾಣಬೇಕು ಎಂಬಂತಾಗುತ್ತದೆ. ಸಹೋದರರಲ್ಲಿ ಸ್ವಾಭಾವಿಕವಾಗಿ ಪರಸ್ಪರ ಪ್ರೀತಿಯು ಅಂಕುರಿಸುವುದಕ್ಕೆ ಬದಲು ಪರಕೀಯತೆಯು ಬಾಲ್ಯದಿಂದಲೇ ಹುಟ್ಟುತ್ತದೆ. ಈಗಿನ ಮಕ್ಕಳಾದರೋ ಬಹು ಚತುರರು, ದೂರಾಲೋಚನೆಯುಳ್ಳವರು. ಒಬ್ಬನ ಪತ್ನಿಗೆ ಮತ್ತೊಬ್ಬನಿಗೆ ಹಕ್ಕು ಎಂದ ಮೇಲೆ ಕನಿಷ್ಠ ಸಹೋದರನಿಗೂ, ಜ್ಯೇಷ್ಠ ಸಹೋದರನಿಗೂ ಇರುವ ಬಂಧನವು ಅಷ್ಟು ಬಲವಿಲ್ಲದೆ ಸಡಿಲವಾಗಿರುವ ಕಾರಣ ಸಂಪೂರ್ಣವಾಗಿ ಕಿತ್ತು ಹೋಗುವ ಭಯವು ಇಲ್ಲದೇ ಇಲ್ಲ. ಹೇಗೆಂದರೆ—ಒಂದು ಮಗುವಿನ ಮುಂದೆ ಒಂದು ಕಿತ್ತಳೆಯ ಹಣ್ಣನ್ನು ಇಟ್ಟು ಈಗ ಮುಟ್ಟಬೇಡ ಸ್ವಲ್ಪ ಹೊತ್ತಿನನಂತರ ಮುಟ್ಟು ಎಂದಾಗ, ಮಗುವು ಅನಂತರ ತಿನ್ನುವುದನ್ನೇ ಈಗ ಏಕೆ ತಿನ್ನಬಾರದು ಎಂದು ಯೋಚಿಸುವುದರಿಂದ ಆಶೆಯು ಬಲವಾಗುತ್ತಾ ಇರಲು ಅಪ್ಪಣೆಯನ್ನು ನಿರಾಕರಿಸಿ ತಿಂದೇ ಬಿಡುವುದು. ಒಂದು ಮನೆಯಲ್ಲಿರುವ ಅತ್ತಿಗೆ ನಾದಿನಿಯರು ಈ ಹಣ್ಣಿನ ಸ್ಥಾನದಲ್ಲಿರುವವರು. ಒಂದು ವೇಳೆ ಹಣ್ಣನ್ನೇ ಮುಟ್ಟಕೂಡದು. ಅದರ ಸ್ಪರ್ಶವೇ ವಿಷ, ತಿಂದರೆ ಸಾವು ನಿಶ್ಚಯ ಎಂದು ಮಗುವಿನಲ್ಲಿ ಭಯವನ್ನುಂಟುಮಾಡಿದ್ದರೆ ಮಗುವು ತಿನ್ನುವುದೇ ಇಲ್ಲ. ಅಂದರೆ ಈ ಅಕ್ರಮ ಪದ್ಧತಿಗೆ ತಕ್ಕ ಅಂಕುಶವಿದ್ದರೆ ಇದಕ್ಕೆ ಎಷ್ಟೋ ಮೊದಲೇ ಇದು ಮಾಯವಾಗುತ್ತಿದ್ದಿತು. ಜ್ಯೇಷ್ಠ ಸಹೋದರನು ಬದುಕಿರುವಾಗಲೇ ಕನಿಷ್ಠ ಸಹೋದರನುದ್ಧೃತ ಮನಸ್ಸುಳ್ಳವನಾದರೆ ಅತ್ತಿಗೆಯನ್ನೇ ಆಶಿಸಬಹುದು. ಅಥವಾ ಜ್ಯೇಷ್ಠನಿಗೆ ಕನಿಷ್ಠನ ಪತ್ನಿಯ ಮೇಲೆ ಸ್ವಲ್ಪ ಹೆಚ್ಚು ಅಧಿಕಾರವಿರುವುದರಿಂದ ಅತ್ಯಾಚಾರದಲ್ಲಿ ಸ್ವಲ್ಪವೂ ಮನಸ್ಸಂಕೋಚವಿಲ್ಲದಿರಬಹುದು. ತಮ್ಮನಿಗೆ ಅತ್ತಿಗೆಯು ತಾಯಿಯ ಸಮಾನ, ಅಣ್ಣನಿಗೆ ನಾದಿನಿಯು ಸಹೋದರಿಯ ಸಮಾನವೆಂಬ ಭಾವನೆಗೆ ಆಸ್ಪದವಿಲ್ಲದಿರುವ ಕಾರಣ ಈ ಪದ್ಧತಿಯು ಅತಿ ಸುಲಭವಾದ ಮನೋವಿಕಲ್ಪಕ್ಕೆ ದಾರಿಯಾಗುತ್ತದೆ.

ವಯಸ್ಸಿನಲ್ಲಿ ಅತ್ತಿಗೆಗೂ ಮೈದುನನಿಗೂ ಬಹಳ ವ್ಯತ್ಯಾಸವಿದ್ದರೆ ಮೈದುನನು ಅತ್ತಿಗೆಗೆ ದೀರ್ಘದಂಡ ನಮಸ್ಕಾರ ಮಾಡುವುದುಂಟು. ಇದನ್ನು ನೋಡಿದರೆ ಸ್ವಲ್ಪ ಆಶ್ಚರ್ಯವೂ, ಏಕ ಕಾಲದಲ್ಲಿ ನಗುವೂ ಬರುತ್ತವೆ. ಏಕೆಂದರೆ—ಮೈದುನನು ವಯಸ್ಸಿಗೆ ಪ್ರಾಮುಖ್ಯತೆಯನ್ನು ಕೊಟ್ಟಂತಾಗುತ್ತದೆಯೇ ಹೊರತು ನಿಜವಾದ ವ್ಯಕ್ತಿಗಲ್ಲ. ಚಿಕ್ಕವಳಾದ ಅತ್ತಿಗೆಗೆ ಹಾಗೆ ಮರ್ಯಾದೆ ಮಾಡದೆ ಇರುವ ಮೈದುನನಿಗೆ ಮತ್ಯಾವ ಮುಂದಿನ ಉದ್ದೇಶವಿರಬಹುದೆಂಬದನ್ನು ಮಹಾಶಯರ ಅವಗಾಹನೆಗೆ ಬಿಟ್ಟಿದ್ದೇನೆ. ಚಿಕ್ಕ ವಯಸ್ಸಿನ ಅತ್ತಿಗೆಯನ್ನು ತನಗಿಂತಲೂ ಚಿಕ್ಕವಳಿರಬಹುದಾದ ಮಲ ತಾಯಿಯಂತೆಯೂ, ಸಹೋದರಿಯಂತೆಯೂ ಏಕೆ ಭಾವಿಸಬಾರದು? ಜ್ಯೇಷ್ಠನು ತನ್ನ ನಾದಿನಿಯನ್ನು ಒಡಹುಟ್ಟಿದ ಸಹೋದರಿಯಂತೆ ಭಾವಿಸುವುದರಿಂದ ನಿಷ್ಕಲ್ಮಷವಾದ ಮತ್ತು ನಿಷ್ಕಪಟವಾದ ಪ್ರೀತಿಯು ಉದ್ಭವಿಸುವುದಲ್ಲದೆ ಕುಟುಂಬದಲ್ಲಿ ಒಂದೇ ಸಮಾನವಾದ ಪರಸ್ಪರ ಸಂಸಾರ ಪ್ರೇಮವು ಅಧಿಕವಾಗುವುದು.

ಅಣ್ಣನು ನಾದಿನಿಯಲ್ಲಿರಬಹುದಾದ ಮತ್ತು ತಮ್ಮನು ಅತ್ತಿಗೆಯಲ್ಲಿರಬಹುದಾದ ಗುಣಗಳನ್ನು ಹೊಗಳುವುದಲ್ಲದೆ, ಎಂದಿಗೂ ಅವಳ ಸೌಂದರ್ಯವನ್ನು ಮೆಚ್ಚುವುದೂ, ಕಾಮದೃಷ್ಟಿಯಿಂದ ನೋಡುವುದೂ ಶಾಸ್ತ್ರವಿರುದ್ಧವೆಂದು ಸಾರಿ ಹೇಳುತ್ತಿರುವ ಕಾಲದಲ್ಲಿ ಸಹೋದರರ ಪತ್ನಿಯರನ್ನು ತಾಳಿ ಕಟ್ಟಿಕೊಳ್ಳುವ ಪದ್ಧತಿಯು ಇನ್ನೂ ಜೀವಂತವಾಗಿರುವದು ಕೊಡಗರ ಸಾಮಾಜಿಕದ ಒಂದು ದುರ್ಘಟವಾದ ನ್ಯೂನತೆ. ಲಕ್ಷ್ಮಣನು ತನ್ನ ಅತ್ತಿಗೆಯನ್ನು ಮಾತೆಯೆಂದು ಭಾವಿಸಿದನೇ ಹೊರತು ಪರಂತು ಅಲ್ಲ. ಹದಿನಾಲ್ಕು ವರ್ಷ ಪರ್ಯಂತರವೂ ತನ್ನ ಅತ್ತಿಗೆಯಾದ ಸೀತಾದೇವಿಯ ಪಾದಗಳನ್ನು ನೋಡುತ್ತಿದ್ದನೇ ಹೊರತು ಅವಳ ಸೌಂದರ್ಯವನ್ನು ದೃಷ್ಟಿಸಿ ಮೆಚ್ಚಲಿಲ್ಲ. ಸೀತಾದೇವಿಯು ತನಗೆ ಪುಣ್ಯರೂಪಿಣಿಯಾದ ಮಾತೆಯಲ್ಲದೆ ಅಚ್ಚುಮೆಚ್ಚಿನ ಪ್ರಿಯೆಯಲ್ಲ. ಹೀಗೆ ಶ್ರೀರಾಮನೂ ತನ್ನ ಸಹೋದರರ ಪತ್ನಿಯರಲ್ಲಿ ಸೋದರಿ ಪ್ರೀತಿಯನ್ನಿಟ್ಟಿದ್ದನು. ಈ ಅಕ್ರಮ ಪದವಿಯನ್ನು ಭಾಗವತದ, ರಾಮಾಯಣದ, ಭಾರತದ ಯಾವ ವೀರನೂ ಯಾವ ವೀರ ನಾರಿಯೂ ಅನುಸರಿಸಿದ್ದಿಲ್ಲ. ನಮ್ಮ ಹಿಂದೂದೇಶದಲ್ಲಿ ಅಂದರೆ ಹಿಮಾಲಯದಿಂದ ಕಾಮರಿನ್ ವರೆಗೆ ಕೊಡಗರಲ್ಲಲ್ಲದೆ ಮತ್ಯಾವ ಜಾತಿಯಲ್ಲಿಯೂ ಅಸಹನೀಯವಾದ ಪದ್ಧತಿಯು ಇಲ್ಲ. ಆದಕಾರಣ ಕೊಡಗ ಮಹಾಶಯರು ಈ ಪದ್ಧತಿಯನ್ನು ವಿರೋಧಿಸಿ ಮುಂದುವರಿಯದಂತೆ ಮಾಡಿದರೆ ನನ್ನ ಲೇಖನವನ್ನು ವಿಶಾಲ ದೃಷ್ಟಿಯಿಂದ ವಿಮರ್ಶಿಸಿ ಯೋಗ್ಯತಾ ಬೆಲೆಯನ್ನು ಕೊಟ್ಟಂತೆ ನಂಬುತ್ತೇನೆ.

ಕೊಡಗ ಜನರಲ್ಲಿ ಪತಿವ್ರತ ಶಿರೋಮಣಿಯರು ಇಲ್ಲವೆಂದು ನಾನು ತಿಳಿದೆನೆಂದು ಊಹಿಸಬಾರದು. ಮಾನವತಿಯರು ಮತ್ತು ಪತಿವ್ರತೆಯರು ಅನೇಕರಿರುವರು. ನಾರಿಮಣಿಯರೇ ಅಲ್ಲದೆ ಸಿಂಹ ವೀರರೂ ಇದ್ದಾರೆಂದು ಭಾವಿಸಿದ್ದೇನೆ. ಈ ಸಾಮಾಜಿಕ ಪದ್ಧತಿಯನ್ನು ಪರ್ಯಾಲೋಚಿಸಿ ಚಿತ್ತ ಚಂಚಲರಿಗೂ ಮತ್ತು ದುಷ್ಟರಿಗೂ ಒಂದು ವಿಧವಾದ ಕಠಿಣ ತರದ ನಿಬಂಧನೆಯು ಇರಬೇಕೆಂತಲೂ, ಸೋದೆಗಲ್ಲಿನೋಪಾದಿಯಲ್ಲಿ ಪರಸ್ಪರ ಆಕರ್ಷಿಸುವ ಪುರುಷನಿಗೂ, ಸ್ತ್ರೀಗೂ ಮಧ್ಯದಲ್ಲಿ ಸುಳಿಗಾಳಿಗೆ ಹಾರಿ ಹೋಗುವ ಪೊರೆಗೆ ಬದಲು ಮದ್ದುಗುಂಡಿಗೂ ಜಗ್ಗದಿರುವ ಕೋಟೆಗೆ ಸಮಾನವಾದ ಕಠಿಣ ತರದ ನಿಬಂಧನೆಗಳ (Moral restrictions) ಇರಬೇಕೆಂಬುದೇ ನನ್ನ ಉದ್ದೇಶ.

ಕೆ. ಟಿ. ಯನ್.

ಬೇಕಾಗಿದೆ.

ಶ್ರೀಮತಿ ಡಿ. ಸಾಕಮ್ಮನವರ (1) ಕುಸುಬೂರು, (2) ಚೂದಾಪುರ, (3) ಪನ್ಯ ಕಾಫಿ ತೋಟಗಳಿಗೆ ಸೂಲಗಿತ್ತಿಯ ಕೆಲಸದಲ್ಲಿ ಮತ್ತು ಕಾಯಿಲಸ್ಥರ ಉಪಚಾರದಲ್ಲಿ ತರಬೇತು ಹೊಂದಿರುವ ಮೂವರು ನರ್ಸುಗಳು ಬೇಕಾಗಿದ್ದಾರೆ. ಸಂಬಳ ವಗೈರೆಗಳಿಗೆ ಸಿಫಾರಸ್ಸು ಪತ್ರಗಳೊಂದಿಗೆ ಈ ಕೆಳಗಿನ ವಿಳಾಸ ಬರೆದುಕೊಳ್ಳುವುದು.—

ಜನರಲ್ ಮೇನೇಜರು,
ಕುಸುಬೂರು ತೋಟ,
ಸೋಮವಾರಪೇಟೆ, (ಉ ಕೊಡಗು)

[illegible]4

FOR SALE.

One Solo Triumph 4 94 H. P Motor Cycle in perfect running order with original tyres, very sparingly used, is for sale.

Please apply to— M.
C/o Manager.
'Kodagu' Mercara

Lamps
(of Basel Mission fame)

Just arrived! Shop Early!!

Table Lamps—glass container with brass fittings & Shade @ Rs 7 8 6/12 6/8 & 5/- Each

Wall Lamps—glass container with brass fittings & mirror @ Rs 3/12, 3/- 1/8, & 1/2 Each

Hanging Lamp, brass container @ Rs 3/12

Hanging Lamp, glass container @ Rs. 2/12.

Lanterns thoroughly reliable @ Rs. 3/4 3/2 & 3/ Each

Spare Chimneys Stocked.

The Coorg Emporium,
Mercara. Sidapur.

48—10

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್ ಇಂಗ್ಲೀಷ್, ಹಿಂದುಸ್ತಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಅನೇಕ ವಿಷಯಗಳೂ ತಿಳಿಯುವ ಲಕ್ಷಣಗಳೂ, ಸ್ತ್ರೀಯರ ಭೋಗದ ಕಾಲ, ಹಸ್ತಪ್ರಯೋಗ, ಗರ್ಭಧರಿಸುವಿಕೆ, ಸಂದರ್ಭ ತಕ್ಕ ಚಿಕಿತ್ಸೆ, ನೂತನ ಉಂಟಾಗುವ ಹಾನಿ, ಇತರ ಸುಖಭೋಗಗಳ ವಿಷಯಗಳೇ ವಿವರವೇ ಮುಂದಿದೆ. ಕ್ರಯ ಪುಸ್ತಕ (ಸರಗಳಸಹಿತ ಕೂ

ಎಸ್. ವಿ. ಗೋಪಾಲ್ ಬುಕ್ ಡಿ. ೧—೦—೦.
52—34 37. ತಿರುಪಳ್ಳಿಬೀದಿ, .

ಬಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಬಣ್ಣವು ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಸವರನ್ ಭಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ. ೧ಕ್ಕೆ ೧೨ ಆ. ೩ ಉಂಗುರಗಳಿಗೆ ಒಂದು ಟೇಬಲ್ ಟ್ರೆಂಪೀಸನ್ನೂ, ೬ ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮು ಕೊಡುತ್ತೇವೆ. ವಿಳಾಸ.—ಲೀಗಲ್ ವಾಚ್ ಕಂಪೆನಿ,
52—11 ಪೊ ಬಾ. 243, ಮದರಾಸು.

ಟೇಬಲ್ ಟ್ರೆಂಫೀಸು ಇನಾಂ.



ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿವೆ. ಬರಾಬರು ಗಂಟೆಯನ್ನು ತೋರಿಸುವು. ಇದರ ಕೇಸು ಭಂಗಾರಕ್ಕೆ ಸರಿಸಮವಾಗಿರುವುದು. ಪ್ರತಿಯೊಂದಕ್ಕೆ ಖಾತ್ರಿಯುಳ್ಳ ೩ ವರ್ಷ ಗ್ಯಾರಂಟಿ ಕೊಡುವೆವು. ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಟೇಬಲ್ ಟ್ರೆಂಫೀಸ್ ಒಂದನ್ನು ಇನಾಮಾಗಿ ಕೊಡುವೆವು. ಇನಾಂ ಟೇಬಲ್ ಟ್ರೆಂಫೀಸ್ ಸಹಿತ ರಿಸ್ಟ್ ವಾಚ್ 1 ಕ್ಕೆ 7—0—0.

ವಿಳಾಸ.—ಕೆ ಎಸ್ ಜೆನ್‌ಸನ್ ಅಂಡ್ ಕೊ,
52—11 168, ಜೈನಾ ಬಜಾರ್, ಮದರಾಸು.

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕಾರ್ಡು ಬರೆದರೆ ಈಗಿನ ಕ್ಯಾಟಲಾಗ, ಮಫತ್ತಾಗಿ ಕಳುಹಿಸಲ್ಪಡುವುದು.

ಜೋಡು ಕೊಳವಿನ ತೋಟದ ರೈಫಲುಗಳು	ರೂ.	12	ರಿಂದ	ರೂ	2750	ರ	ವರೆಗೆ.
ಒಂಟಿ ,, ,, ,,	,,	35	,,	,,	950		,,
ಜೋಡು ,, ,, ಕೋವಿಗಳು	,,	50	,,	,,	1350		,,
ಒಂಟಿ ,, ,, ,,	,,	35	,,	,,	275		,,
ಜೋಡು ಕೊಳವಿನ ಕೇಪು ,,	,,	45	,,	,,	135		
ಒಂಟಿ ,, ,, ,,	,,	30	,,	,,	80		,,
ಬ್ರೀಚ್ ಲೋಡಿಂಗ್ ರಿವಾಲ್ವರುಗಳು	,,	35	,,	,,	350		,,
ಪಿಸ್ತೋಲುಗಳು	,,	30	,,	,,	150		,,

ಕಾಡು ಮೃಗಗಳ ಬೇಟೆ ಎಂಥ ಬೇಟೆ ಮುಂತಾದ ಎಲ್ಲಾ ತರಹದ ರಾತ್ರಿಯ ವಿನೋದ ಮತ್ತು ಕೆಲಸಗಳಿಗೆ ಬಹು ಉಪಯೋಗಕರವಾದ ಉತ್ತಮ 'ಸರ್ಚ್ ಲೈಟ್' ಎಂಬ ದೀಪಕ್ಕೆ ಬರೇ ರೂ. 30. ರವಾನೆಯು ಚಾರ್ಜಿಲ್ಲ.

ಕತ್ತಿಗಳು, ಬರ್ಚಿಗಳು, ತೋಟಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
21—2 210 Abdul Rehman Street, BOMBAY.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

ದಿಲ್ ಬಹರ್ 'ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ	1 ಕ್ಕೆ	50	8	0
'ಸಿದ್ದಪ್ಪಾಸ್ ಫ್ಲ್ಯೂಟ್' ,,	,,	42	8	0
ಕಿಸೆಂತಬಾ ,, ,,	,,	40	0	0
ಮೋಹನ್ ,, ,,	,,	37	8	0
ಮೋಸ್ಟೀಂ ,, ,,	,,	35	0	0
ಮಹಾರಾಜ ,, ,,	,,	32	8	0
ಕೊಹಿನೂರು ,, ,,	,,	29	8	0
ಡೈಮಂಡ್ ,, ,,	,,	27	8	0
ಜುಬಿಲೀ ,, ,,	,,	25	0	0
ದಿಲ್‌ಬಹರ್ 'ಫ್ಲ್ಯೂಟ್' ಡಬ್ಬಲ್ ರೀಡ್ ಹಾರ್ಮೋನಿಯಂ	1 ಕ್ಕೆ	85	0	0
ಕ್ರಿಷರ್ ,,	,,	56	0	0
ಮೋಹನ್ ,, ,,	,,	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಳ್ಳ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟನ್ ಪೆನ್‌ಗಳು.

ವರ್ಲ್ಡ್ ವಂಡರ್ ಫೌಂಟನ್ ಪೆನ್	1 ಕ್ಕೆ	3	0	0
,, ಬಿಗ್‌ಬ್ಯಾರಲ್ ,,	,,	3	2	0
,, ಸ್ಕ್ರೂಕ್ಯಾಪ್ ,,	,,	3	8	0
,, ಮೊಟಲ್ ಕಲರ್ ,,	,,	3	14	0
,, ಮೊಟಲ್ ಸ್ಕ್ರೂಕ್ಯಾಪ್ ,,	,,	4	4	0
,, ಬ್ರೌನ್‌ಕಲರ್ ಸೆಲ್ಫ್‌ಫಿಲಿಂಗ್ ಪೆನ್ ,,	,,	5	8	0
,, ಸೇಫ್ಟಿ ಪೆನ್ ,,	,,	6	8	0
,, ಲೇಡೀಸ್ ಸೈಜಿನ ಮೊಟಲ್ ಕಲರ್ ಪೆನ್	,,	4	8	0
ಬ್ಲ್ಯಾಕ್‌ಬರ್ಡ್ ಪೆನ್ 1 ಕ್ಕೆ 3 8 0 ಮತ್ತು		3	12	0
ಸ್ವಾನ್ ಪೆನ್ ,, 6 8 0 ,,		7	0	0
ವಾಟರ್‌ಮೆನ್ ಐಡಿಯಲ್ 1 ಕ್ಕೆ 8 0 0 ,,		8	8	0
,, ಸೆಲ್ಫ್ ಫಿಲ್ಲಿಂಗ್ ಯೂ ಸೇಫ್ಟಿ ಪೆನ್	1 ಕ್ಕೆ	12	0	0
ಬಿಗ್‌ಬ್ಯಾರಲ್ ಪಾರ್ಕರ್ ಪೆನ್ ,,	,,	8	0	0
,, ನೆಸ್ಟೋನ್ ಪೆನ್	1 ಕ್ಕೆ	17	0	0

ಖಾತ್ರಿಯೂ ಬಂದೋಬಸ್ತೂ ಆದ ಟ್ರೆಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟ್ರೆಂಪೀಸು	1 ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಅಲಾರಂ ಟ್ರೆಂಪೀಸು	,,	3	12	0
ಅಮೆರಿಕನ್ 'ಬಿ' ಟ್ರೆಂಪೀಸು	,,	5	13	0
,, ಅಲಾರಂ ,,	,,	5	6	0
ಬಿಗ್ ಬೆನ್ ,, ,,	,,	9	6	0
,, ಡಿಲಕ್ಸ್ ಸ್ವಾಭಾವಿಕ ಅಲಾರಂ ಟ್ರೆಂಪೀಸು	,,	13	5	0
ಘಂಟೆ ತೋರಿಸಿ ಅರ್ಧ ಘಂಟೆ ಬಾರಿಸುವ ಕ್ಯಾಲೆಂಡರ್ ಕ್ಲಾಕ್	,,	7	2	0
,, ಟ್ರೆಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾಲೆಂಡರ್ ಕ್ಲಾಕ್	1 ಕ್ಕೆ	8	10	?
,, ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಬಾರಿಸುವ ಕ್ಯಾಲೆಂಡರ್ ಕ್ಲಾಕ್	1 ಕ್ಕೆ	9	12	0
ಘಂಟೆ ತೋರಿಸಿ ಇಪ್ಪತ್ತೆಂಟು ದಿವಸ [illegible] ಕ್ಲಾಕ್	1 ಕ್ಕೆ	12	0	0

ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

52—17

ಕೊಡುತ್ತದೆ. ಈ ಪುಸ್ತಕವು ಸ್ಥಳೀಯ ವಾಚಕರಿಗೆ ಹಲವು ಧಾರ್ಮಿಕ ಮತ್ತು ರಾಜಕೀಯ ಚಳವಳಗಳ ಮನೋರಂಜಕವಾದ ವಿವರಣೆಯನ್ನು ಕೊಡುತ್ತದೆ. ಕನ್ನಡ ತಿಳಿಯದೆ ಇರುವ ದೊಡ್ಡ ಜನಸಂಖ್ಯೆಯವರ ಪ್ರಯೋಜನಾರ್ಥವಾಗಿ ಪುಸ್ತಕದ ಬರುವ ಸಂಚಿಕೆಯನ್ನು ಪೂರ್ತಿ ಇಂಗ್ಲಿಷಿನಲ್ಲಿ ಪ್ರಕಟಿಸುವುದು ಒಳ್ಳೆಯದೆಂತ ಸೂಚಿಸುತ್ತೇವೆ.'

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಹೊಸ ಜಮೀನ್ದಾರರ ಸಂಘದ ಪ್ರಚಾರವೇ?

ಅಯ್ಯಾ ಸಂಪಾದಕರೇ,

ಕೆಲವು ದಿವಸಗಳ ಹಿಂದೆ ನಾನು ಪುದಿಕೇರಿ ಸಂತೆಗೆ ಒಂದು ಸೋಮವಾರ ಹೋಗಿದ್ದೆನು. ಮ. ರಾ. ಶ್ರೀ. ಚೆಪ್ಪುಡಿರ ಎ. ಪೊನ್ನಪ್ಪನವರು ಒಂದು ಪ್ರಿಂಟು ಫಾರಮಿಗೆ ಸೈನು ಕೊಡಬೇಕೆಂದು ಕೇಳಿದರು. ಅದು ಎಂಥಾ ಫಾರಂ ಎಂದು ಕೇಳಿದಲ್ಲಿ ಅದು ನಾನು ಮೊದಲೇ ಮೆಂಬರಾಗಿರುವ ಹಳೇ ಜಮೀನ್ದಾರರ ಸಂಘದವರಿಂದ ಬಂದ ಫಾರಮು ಎಂಬದಾಗಿ ತಿಳಿಸಿದರು. ಅವರ ಭರವಸೆ ಮೇರೆ ನಾನು ಅದಕ್ಕೆ ಸೈನು ಹಾಕಿದೆನು. ಈಗ ತಿಳಿಯುವಾಗ ಅದು ಈಗ ತಾನೇ ಏರ್ಪಾಡಾದ ಹೊಸ ಜಮೀನ್ದಾರರ ಸಂಘದವರಿಂದ ಬಂದ ಫಾರಮು ಎಂತ ತಿಳಿದೆನು. ಈ ವಿಷಯವನ್ನು ಸರಿಯಾಗಿ ತಿಳಿಸದೆ ನನ್ನ ಸೈನನ್ನು ಹೊಂದಿಕೊಂಡರೂ ನಾನು ಹೊಸ ಸಂಘದ ಮೆಂಬರನಲ್ಲ, ನಾನು ಹಳೇ ಜಮೀನ್ದಾರರ ಸಂಘದ ಮೆಂಬರೆಂಬದಾಗಿ ಮ. ರಾ. ಶ್ರೀ. ಪೊನ್ನಪ್ಪನವರಿಗೂ, ಬೇರೆ ಎಲ್ಲಾ ಮಹನೀಯರಿಗೂ ಈ ಮೂಲಕ ತಿಳಿಸಿರುತ್ತೇನೆ.

ದಡ್ಡೆರ ಗಣಪತಿ.

ಸಿದ್ದಾಪುರದ ಬಾವಿ

ಅಯ್ಯಾ,

ಸಿದ್ದಾಪುರದ ಬಾವಿಯು ಕುಸಿದು ಬಿದ್ದು ತಿಂಗಳು ಒಂದಕ್ಕಿಂತ ಹೆಚ್ಚಾಯಿತು. ಹುಜರತ್ ಕಮಿಶನರ್ ಸಾಹೇಬರು ಖುದ್ದು ದಯಮಾಡಿಸಿ ನೋಡಿದರು. ಅದು ಕುಸಿದು ಬಿದ್ದ ನ್ಯಾಯವಾದ ಕಾರಣವು ತಿಳಿಯಲಾರದೆ ಹೋಯಿತಂತೆ. ಇಂಜನಿಯರ್ ಇಲಾಖೆಯವರ ಅಜಾಗ್ರತೆಯಿಂದಲೋ, ರೆವಿನ್ಯೂ ಇಲಾಖೆಯವರ ಅನುಮತಿ ಮೇರೆ ಬಾವಿಯ ಅಡಿ ಭಾಗದಲ್ಲಿ ಆಳ ಕೊರೆದುದರ ಕಾರಣದಿಂದಲೋ ಎಂಬದು ಗೊತ್ತು ಮಾಡಲಾರದೆ ಹೋದರಂತೆ. ಇಂಜನಿಯರ್ ಇಲಾಖೆಯವರ ಅಜಾಗ್ರತೆಯಿಂದ ಕಟ್ಟಿಸಿದ ಬಾವಿಯಾದರೆ 1924ನೇ ಇಸವಿಯಲ್ಲಿ ಜೋರು ಮಳೆಯಲ್ಲಿ ಬೀಳಬೇಕಿತ್ತು. ಬಾವಿ ಸುತ್ತ ನೀರು ನಿಂತರೆ ಬಾವಿಯು ಕುಸಿದು ಬೀಳುವದು ಲೋಕದಲ್ಲಿ ಇದೆಯೋ? ಮರಳು ನೆಲದಲ್ಲಿ, ಜೌಗು ನೆಲದಲ್ಲಿ ಕಟ್ಟಿಸಿದ ಎಷ್ಟೋ ಬಾವಿಗಳು ಈ ದೇಶದಲ್ಲಿ ಇಲ್ಲವೇ? ಈ ಕೆಳಗಿನ ಸವಾಲು ಗಳನ್ನು ಕಮಿಶನರ್ ಸಾಹೇಬರು ವಿಚಾರಿಸಿದಲ್ಲಿ ನಿಜಸ್ಥಿತಿ ತಿಳಿಯಲಾರದೇ? ಬಾವಿಯ ರಿಪೇರಿಗಾಗಿ ರೆವಿನ್ಯೂ ಅಧಿಕಾರಿಗಳು ಹಣ ಕೊಡಿಸಿದ್ದು ಉಂಟೋ? (2) ಹಣ ಸಾಲದ್ದಕ್ಕೆ ಸಿದ್ದಾಪುರ ಪಂಚಾಯಿತಿಯವರು ಚಂದಾ ಎತ್ತಿದರೋ? (3) ಬಾವಿಯ ಅಡಿಯಿಂದ ಎಷ್ಟು ಗಾಡಿ ಮಣ್ಣು ತೆಗೆಯಿಸಿದರು? (4) ಬಾವಿಯ ಅಡಿಸ್ಥಳ ಕೊರೆದರೆ ಬಾವಿ ನಿಲ್ಲುವದೋ? (5) ಮೇಲೆ ಕೆಸರು ನಿಂತು ಎಲ್ಲಿಯಾದರೂ ಬಾವಿ ಬಿದ್ದಿದೆಯೋ?

ಈ ನಾಡಿನ ಕೌನ್ಸಿಲ್ ಮೆಂಬರುಗಳು ಕಮಿಶನರ್ ಸಾಹೇಬರಲ್ಲಿ ಈ ಸಂಗತಿ ಅರಿಕೆ ಮಾಡಿ ಕೂಡಲೆ ತಪ್ಪಿತಸ್ಥರನ್ನು ಎಚ್ಚರಿಸಿ, ಹೊಸ ಬಾವಿಯನ್ನು ತೋಡಿಸುವ ಏರ್ಪಾಡು ಮಾಡುವರಾಗಿ ನಂಬುತ್ತೇನೆ. ಸಿದ್ದಾಪುರವು ಮೊದಲೇ ಜ್ವರದ ಊರು. ಇದ್ದ ನೀರನ್ನೂ ಕೆಡಿಸಿ ಊರವರು ಕುಡಿಯುವ ನೀರಿಗೆ ಭಂಗವಾಗಿದೆ.

ಪಟ್ಟಣಿಗ.

ದನಗಳ ಕಾಯಿಲೆ.

ಅಯ್ಯಾ,

ಸೋಮವಾರಪೇಟೆನಾಡು ಬೆಸ್ಸದಳ್ಳಿಯಲ್ಲು ಈಗ್ಯೆ ಎರಡು ತಿಂಗಳುಗಳಲ್ಲಿ ದನಗಳ ಕಾಯಿಲೆಯು ಪ್ರಾರಂಭವಾಗಿದ್ದಾಗಿದೆ. ಈ ಕಾಯಿಲೆಯು ದಿನೇ ದಿನೇ ಪ್ರಾಬಲ್ಯವಾಗುತ್ತಾ ಅನೇಕ ಬಡ ರೈತರ ದನಗಳು ಹೆಮ್ಮಾರಿಯ ಬಾಯಿಗೆ ತುತ್ತಾದವು. ಈ ಗ್ರಾಮಕ್ಕೆ ಸಮೀಪ ಇರುವ ಅಕ್ಕಪಕ್ಕಗಳಿಗೂ ವ್ಯಾಪಿಸಿ ದಿನ ಒಂದರ 1-3 ದನಗಳು ಪರಲೋಕಯಾತ್ರೆ ಮಾಡುವದನ್ನು ಕೇಳಿದರೆ ದಯೆ ಬಾರದೆ ಇರುವದು. ಈ ನಾಡಿಗೆ ವೆಟರಿನರಿ ಸರ್ಜನರನ್ನು ಸರ್ಕಾರದವರು ಪ್ರಜೆಗಳ ಹಿತಕ್ಕೋಸ್ಕರ ನೇಮಿಸಿರುವದು. ಗ್ರಾಮಾಧಿಕಾರಿಗಳು ದನವಿನ ಕಾಯಿಲೆ ಇರುವದಾಗಿ 2—3ಸಾರಿ ರಿಪೋರ್ಟು ಕಳುಹಿದ್ದಾಗ್ಯೂ ಈ ಇಲಾಖೆದಾರರ ಅವಾಗ ಹಸಿಗೆ ಬಾರದೆ ಇರುವದು ಶೋಚನೀಯವಾಗಿದೆ. ಸರ್ಕಾರಕ್ಕೆ ರೈತರಿಂದ ಸಲ್ಲಬೇಕಾದ ಕಂದಾಯದಲ್ಲಿ ಒಂದು ಕಾಸು ನಿಂತರೂ ಒಡನೆ ನೋಟೀಸು, ವಾರಂಟು ಬಂದು ರೈತರಿಂದ ಒಂದು-ಒಂದುವರೆ ರೂಪಾಯಿ ವಸೂಲು ಮಾಡಿಬಿಡುತ್ತಾರೆ. ರೈತರಿಗೆ ಇಂತಹ ರೋಗದಿಂದ 200—300 ರೂಪಾಯಿ ನಷ್ಟವಾದರೆ ನೋಡುವವರು ಯಾರೂ ಇಲ್ಲವಲ್ಲ. ಕಷ್ಟಕಾಲದಲ್ಲಿ ಸಹಾಯ ದೊರೆಯದೆ ಇರುವ ಇಂಥಾ ಇಲಾಖೆ ಇರುವುದಕ್ಕಿಂತ ಮೊದಲಿನ ಹಾಗೆ ಇಲ್ಲದೆ ಇರುವುದು ಉತ್ತಮವಲ್ಲವೇ? ರೈತರಿಗೆ ಎಂತಹ ಕಾಯಿಲೆಯೆಂದು ತಿಳಿಯಲು ಸಾಧ್ಯವಾಗದ್ದರಿಂದ ನಾಡಿನ ಯಾವ ಔಷಧಿಯೂ ನಿಷ್ಪ್ರಯೋಜನವಾಯಿತು. ಈ ನಾಡಿನ ಪ್ರಜೆಗಳು ವಿದ್ಯೆಯಲ್ಲಿ ಹಿಂದುಳಿದು, ತಿಳುವಳಿಕೆ ಕಡಿಮೆಯಾದವರಾದುದರಿಂದ ಯಾವ ವಿಷಯವನ್ನು ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳಲು ಅಂಜುವವರಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯ ಒಡನೆ ಪರ್ಯಾಲೋಚಿಸದಿದ್ದಲ್ಲಿ ಈ ನಾಡಿನ ಜಾನುವಾರುಗಳು ರೋಗವೆಂಬ ಹೆಮ್ಮಾರಿಯ ಬಾಯಿಗೆ ತುತ್ತಾಗಿ ಪ್ರಜೆಗಳು ತುಂಬಾ ದುಃಖಕ್ಕೆ ಪಾತ್ರರಾಗುವರೆಂಬದರಲ್ಲಿ ಸಂಶಯವಿಲ್ಲ.'

'ನಷ್ಟ ಪಟ್ಟವ"

ಕೊಡಗಿನ ಒಂದು ಅಕ್ರಮ ಸಾಮಾಜಿಕ ಪದ್ಧತಿ.

ಯಾವದಾದರೊಂದು ಮತದ ಧರ್ಮವನ್ನಾಗಲೀ, ಒಂದು ರಾಜಕೀಯ ಚಳವಳವನ್ನಾಗಲೀ ಅಥವಾ ಸಾಮಾಜಿಕ ಕುಂದುಕೊರತೆಯನ್ನಾಗಲೀ ಖಂಡಿಸಿ ಬರೆದು ಬಂದ ಬಾತ್ಮಿಯು (Article) ಜನರಿಗೆ ರುಚಿಸದು. ಇದು ಸ್ವಾಭಾವಿಕ. ಈ ಸ್ವಾಭಾವಿಕತ್ವವು ಸ್ವಾರ್ಥದೃಷ್ಟಿಯಿಂದಲ್ಲದೆ ಅಲ್ಲ. ಯಾವ ಖಂಡನೆಯನ್ನಾಗಲೀ ವಿಶಾಲ ದೃಷ್ಟಿಯಿಂದ ಪರಿಗಣಿಸಿ ಕುಂದುಕೊರತೆಗಳಿದ್ದರೆ ಮೂಲೋತ್ಪಾಟನೆ ಮಾಡಿ ಉತ್ತಮ ಸ್ಥಿತಿಯನ್ನು ಅನುಸರಿಸುವುದು ಒಳ್ಳೆಯದು. ಈ ಲೇಖನವನ್ನು ಓದತಕ್ಕ ಕೊಡಗು ಸ್ವಲ್ಪಕಾಲ ಪರ್ಯಂತರ ಕೊಡಗರ ಸ್ಥಾನದಲ್ಲಿಲ್ಲದೆ ಈ ವಿಮರ್ಶಕನ ಸ್ಥಾನದಲ್ಲಿದ್ದುಕೊಂಡಾಗಲೀ ಅಥವಾ ಪರಜನ ದೃಷ್ಟಿರೀತ್ಯವಾಗಿಯಾಗಲೀ ಆಲೋಚಿಸಬೇಕು.

ನಾನು ಈ ಮೂಲಕ ಅವರ ಸಾಮಾಜಿಕ ಪದ್ಧತಿಯನ್ನಲ್ಲದೆ ಕೊಡಗರನ್ನಾಗಲೀ ಅಥವಾ ಅವರ ಮತಾಚಾರಗಳನ್ನಾಗಲೀ ಖಂಡಿಸಿದೆನೆಂದು ತಿಳಿಯ ಕೂಡದು. ಬಹು ಪುರಾತನವಾದ ಪದ್ಧತಿಯಾದರೂ ಈಗ ಬಹು ಅಸಹ್ಯವಾಗಿ ಕಾಣುವ ಪದ್ಧತಿಯನ್ನು ತಿದ್ದುಪಾಡು ಮಾಡಿಕೊಳ್ಳಬೇಕೆಂಬುದೇ ಈ ಲೇಖನದ ಉದ್ದೇಶ.

ಬಹು ಪುರಾತನ ಕಾಲದಲ್ಲಿ ಅಂದರೆ ಜ್ಞಾಪಕಕ್ಕೆ ನಿಲುಕದಷ್ಟು ಪೂರ್ವ ಕಾಲದಲ್ಲಿ ಯಾವಾಗ ಇನ್ನೂ ಪ್ರಪಂಚವು ನಾಗರಿಕತೆಯಿಂದಲೂ (Civilisation) ಮತ್ತು ಸಂಸ್ಕೃತಿಯಿಂದಲೂ (Culture) ಬೆಳಗುತ್ತಿರಲಿಲ್ಲವೋ ಆದು ಅಲ್ಪ ಕಾರ್ಯಗಳನ್ನೇ ಅಧಿಕ ಕಾರ್ಯಗಳನ್ನಾಗಿ ಮಾಡಿಕೊಂಡು ಜ್ಯೇಷ್ಠ ಸಹೋದರನ ಪತ್ನಿಯನ್ನು ಸಹೋದರನ ಅವಸಾನ ಕಾಲನಂತರ ವಿಧವಾ ವಿವಾಹರೀತ್ಯವಾಗಿ ಸೇರುವ ಪದ್ಧತಿ ಇತ್ತು. ಆದರೆ ಜನರಲ್ಲಿ ಯೋಚನಾಪರತೆಯು ಕಾಲಕ್ರಮೇಣ ಹೆಚ್ಚು ಹೆಚ್ಚುತ್ತಾ ಆ ಪದ್ಧತಿಯು ಕೆಲವಾರು ದಿವಸಗಳಲ್ಲಿ ಅಳಿಸಿ ಹೋಯಿತು. ಜನರಿಗೆ ತಮ್ಮ ಅನುಭವವೇ (Experience) ತಮಗೆ ಪಾಠವನ್ನು ಕಲಿಸಿ ಸಂಸಾರದ ಒಂದು ಕುಂದನ್ನು ಹೋಗಲಾಡಿಸಿತೆಂದು ಧಾರಾಳವಾಗಿ ಹೇಳಬಹುದು. ನಮ್ಮ ಹಿಂದು ಜನಾಂಗದಲ್ಲಿ ಪುರಾತನ ಪದ್ಧತಿಗಳು ಅಳಿಸಿ ಹೋಗುವುದು ಬಹು ಕಷ್ಟ. ಬಾಲ್ಯ ವಿವಾಹವನ್ನಲ್ಲದೆ, ವಿಧವಾ ವಿವಾಹ ಖಂಡನೆ ಅನುಪಯೋಗವಾದ ಜಾತಿ ಪದ್ಧತಿಗಳು ಇನ್ನೂ ಉಳಿದಿವೆ. ಅಂದ ಮೇಲೆ ಅಷ್ಟು ಬೇಗ ಅಗೋಚರವಾದ ಈಗಿನ ಕೊಡಗರ ಅಕ್ರಮ ಪದ್ಧತಿಯು ಎಲ್ಲಾ ನ್ಯೂನತೆಗಳಿಗಿಂತಲೂ ಅಧಿಕವಾಗಿದ್ದಿರಬೇಕು. ಇದು ಯಾರೋ ಮುಖಂಡರಿಂದ ಬಹಿಷ್ಕೃತವಾದುದಲ್ಲ. ("Experience is the best teacher") "ತಲೆ ತಗಲಿದ ಮೇಲೆ ಬುದ್ಧಿ ಬಂತು" ಎನ್ನುವಂತೆ ಜನ ಸಾಮಾನ್ಯದ ಅನುಭವವೇ ವಿಷಮ ಪಾಠವನ್ನು ಕಲಿಸಿರಬಹುದು. ಹೇಗೆಂದರೆ—ಒಂದು ಮನೆಯಲ್ಲಿರುವವರು ತಾಯಿ-ತಂದೆ, ಅಣ್ಣ-ತಮ್ಮ ಅಕ್ಕ-ತಂಗಿ, ಅತ್ತಿಗೆ-ನಾದಿನಿಯರು. ಇವರೆಲ್ಲರೂ ಸೇರಿದರೆ ಒಂದು ಸಂಸಾರ ಕುಟುಂಬವಾಗುವುದು. ಇವರು ಸಂಬಂಧದಲ್ಲಿ ಒಬ್ಬರಿಗಿಂತಲೂ ಒಬ್ಬರು ಹೆಚ್ಚು. ಇವರಲ್ಲಿ ನೆಲಸಿರುವ ಪ್ರೀತಿಯು ಸಾಮಾನ್ಯವಾಗಿ ಒಂದೇ ಗುಣವನ್ನು ಹೋಲುವುದು. ನಾವು ನಿಷ್ಕಲ್ಮಷವಾದ ಪ್ರೀತಿಗೆ ಉದಾಹರಣೆಯಾಗಿ ತಂದೆಯನ್ನೂ, ಸಹೋದರನನ್ನೂ ತೆಗೆದುಕೊಳ್ಳುತ್ತೇವೆ. "ತಂದೆಯಂತೆ ರಾಣು, ಸೋದರಭಾವವಿರಲಿ" ಎಂದು ಹೇಳುವ ಪಾಡಿಕೆಯು ಇಡೀ ಪ್ರಪಂಚವನ್ನೇ ಆವರಿಸಿದೆ. ತಂದೆಯನ್ನು ಸೇರಿದ ತಾಯಿಯು ತಂದೆಗಿಂತಲೂ ಅಧಿಕಳು ಎಂದ ಮೇಲೆ ಸಹೋದರರನ್ನು ಸೇರಿದ ಅತ್ತಿಗೆ ನಾದಿನಿಯರು ಸಹೋದರರಿಗಿಂತಲೂ ಹೆಚ್ಚು ಎಂದೇ ಭಾವಿಸಬೇಕು. ಹಾಗೆ ಭಾವಿಸದೆ ಹೋದರೆ ಒಂದು ಕುಟುಂಬದಲ್ಲಿ ಏಕರೀತ್ಯವಾದ ಪ್ರೀತಿಗೆ ಭಂಗ ಬರುತ್ತದೆ. ನಿಷ್ಕಳಂಕವಾದ ಪ್ರೀತಿಯೂ, ಬೀಭತ್ಸವಾದ ಅತ್ಯಾಚಾರವೂ ಒಂದುಗೂಡಿದಂತಾಗುತ್ತದೆ. ಇದರ ಫಲಿತಾಂಶವಾಗಿ ಕುಟುಂಬವು ದುಷ್ಪರಿಣಾಮದಲ್ಲಿ ಕೊನೆಗಾಣುವುದರಲ್ಲಿ ಸಂದೇಹವಿಲ್ಲ. ಹೇಗೆಂದರೆ—("Charity begins at home") ದಾನದೃಷ್ಟಿಯು ಮನೆಯಲ್ಲಿಯೇ ಜನಿತವಾಗಬೇಕು ಎಂಬುದಕ್ಕೆ ಬದಲು ಕೊನೆಗಾಣಬೇಕು ಎಂಬಂತಾಗುತ್ತದೆ. ಸಹೋದರರಲ್ಲಿ ಸ್ವಾಭಾವಿಕವಾಗಿ ಪರಸ್ಪರ ಪ್ರೀತಿಯು ಅಂಕುರಿಸುವುದಕ್ಕೆ ಬದಲು ಪರಕೀಯತೆಯು ಬಾಲ್ಯದಿಂದಲೇ ಹುಟ್ಟುತ್ತದೆ. ಈಗಿನ ಮಕ್ಕಳಾದರೋ ಬಹು ಚತುರರು, ದೂರಾಲೋಚನೆಯುಳ್ಳವರು. ಒಬ್ಬನ ಪತ್ನಿಗೆ ಮತ್ತೊಬ್ಬನಿಗೆ ಹಕ್ಕು ಎಂದ ಮೇಲೆ ಕನಿಷ್ಠ ಸಹೋದರನಿಗೂ, ಜ್ಯೇಷ್ಠ ಸಹೋದರನಿಗೂ ಇರುವ ಬಂಧನವು ಅಷ್ಟು ಬಲವಿಲ್ಲದೆ ಸಡಿಲವಾಗಿರುವ ಕಾರಣ ಸಂಪೂರ್ಣವಾಗಿ ಕಿತ್ತು ಹೋಗುವ ಭಯವು ಇಲ್ಲದೇ ಇಲ್ಲ. ಹೇಗೆಂದರೆ—ಒಂದು ಮಗುವಿನ ಮುಂದೆ ಒಂದು ಕಿತ್ತಳೆಯ ಹಣ್ಣನ್ನು ಇಟ್ಟು ಈಗ ಮುಟ್ಟಬೇಡ ಸ್ವಲ್ಪ ಹೊತ್ತಿನನಂತರ ಮುಟ್ಟು ಎಂದಾಗ, ಮಗುವು ಅನಂತರ ತಿನ್ನುವುದನ್ನೇ ಈಗ ಏಕೆ ತಿನ್ನಬಾರದು ಎಂದು ಯೋಚಿಸುವುದರಿಂದ ಆಶೆಯು ಬಲವಾಗುತ್ತಾ ಇರಲು ಅಪ್ಪಣೆಯನ್ನು ನಿರಾಕರಿಸಿ ತಿಂದೇ ಬಿಡುವುದು. ಒಂದು ಮನೆಯಲ್ಲಿರುವ ಅತ್ತಿಗೆ ನಾದಿನಿಯರು ಈ ಹಣ್ಣಿನ ಸ್ಥಾನದಲ್ಲಿರುವವರು ಒಂದು ವೇಳೆ ಹಣ್ಣನ್ನೇ ಮುಟ್ಟಕೂಡದು. ಅದರ ಸ್ಪರ್ಶವೇ ವಿಷ, ತಿಂದರೆ ಸಾವು ನಿಶ್ಚಯ ಎಂದು ಮಗುವಿನಲ್ಲಿ ಭಯವನ್ನುಂಟುಮಾಡಿದ್ದರೆ ಮಗುವು ತಿನ್ನುವುದೇ ಇಲ್ಲ. ಅಂದರೆ ಈ ಅಕ್ರಮ ಪದ್ಧತಿಗೆ ತಕ್ಕ ಅಂಕುಶವಿದ್ದರೆ ಇದಕ್ಕೆ ಎಷ್ಟೋ ಮೊದಲೇ ಇದು ಮಾಯವಾಗುತ್ತಿದ್ದಿತು. ಜ್ಯೇಷ್ಠ ಸಹೋದರನು ಬದುಕಿರುವಾಗಲೇ ಕನಿಷ್ಠ ಸಹೋದರನು ದೃಢ ಮನಸ್ಸಿಲ್ಲದವನಾದರೆ ಅತ್ತಿಗೆಯನ್ನೇ ಆಶಿಸಬಹುದು. ಅಥವಾ ಜ್ಯೇಷ್ಠನಿಗೆ ಕನಿಷ್ಠನ ಪತ್ನಿಯ ಮೇಲೆ ಸ್ವಲ್ಪ ಹೆಚ್ಚು ಅಧಿಕಾರವಿರುವುದರಿಂದ ಅತ್ಯಾಚಾರದಲ್ಲಿ ಸ್ವಲ್ಪವೂ ಮನಸ್ಸಂಕೋಚವಿಲ್ಲದಿರಬಹುದು. ತಮ್ಮನಿಗೆ ಅತ್ತಿಗೆಯು ತಾಯಿಯ ಸಮಾನ, ಅಣ್ಣನಿಗೆ ನಾದಿನಿಯು ಸಹೋದರಿಯ ಸಮಾನವೆಂಬ ಭಾವನೆಗೆ ಆಸ್ಪದವಿಲ್ಲದಿರುವ ಕಾರಣ ಈ ಪದ್ಧತಿಯು ಅತಿ ಸುಲಭವಾದ ಮನೋವಿಕಲ್ಪಕ್ಕೆ ದಾರಿಯಾಗುತ್ತದೆ.

ವಯಸ್ಸಿನಲ್ಲಿ ಅತ್ತಿಗೆಗೂ ಮೈದುನನಿಗೂ ಬಹಳ ವ್ಯತ್ಯಾಸವಿದ್ದರೆ ಮೈದುನನು ಅತ್ತಿಗೆಗೆ ದೀರ್ಘದಂಡ ನಮಸ್ಕಾರ ಮಾಡುವುದುಂಟು. ಇದನ್ನು ನೋಡಿದರೆ ಸ್ವಲ್ಪ ಆಶ್ಚರ್ಯವೂ, ಏಕ ಕಾಲದಲ್ಲಿ ನಗುವೂ ಬರುತ್ತವೆ. ಏಕೆಂದರೆ—ಮೈದುನನು ವಯಸ್ಸಿಗೆ ಪ್ರಾಮುಖ್ಯತೆಯನ್ನು ಕೊಟ್ಟಂತಾಗುತ್ತದೆಯೇ ಹೊರತು ನಿಜವಾದ ವ್ಯಕ್ತಿಗಲ್ಲ. ಚಿಕ್ಕವಳಾದ ಅತ್ತಿಗೆಗೆ ಹಾಗೆ ಮರ್ಯಾದೆ ಮಾಡದೆ ಇರುವ ಮೈದುನನಿಗೆ ಮತ್ಯಾವ ಮುಂದಿನ ಉದ್ದೇಶವಿರಬಹುದೆಂಬದನ್ನು ಮಹಾಶಯರ ಅವಗಾಹನೆಗೆ ಬಿಟ್ಟಿದ್ದೇನೆ. ಚಿಕ್ಕ ವಯಸ್ಸಿನ ಅತ್ತಿಗೆಯನ್ನು ತನಗಿಂತಲೂ ಚಿಕ್ಕವಳಿರಬಹುದಾದ ಮಲ ತಾಯಿಯಂತೆಯೂ, ಸಹೋದರಿಯಂತೆಯೂ ಏಕೆ ಭಾವಿಸಬಾರದು? ಜ್ಯೇಷ್ಠನು ತನ್ನ ನಾದಿನಿಯನ್ನು ಒಡಹುಟ್ಟಿದ ಸಹೋದರಿಯಂತೆ ಭಾವಿಸುವುದರಿಂದ ನಿಷ್ಕಲ್ಮಷವಾದ ಮತ್ತು ನಿಷ್ಕಪಟವಾದ ಪ್ರೀತಿಯು ಉದ್ಭವಿಸುವುದಲ್ಲದೆ ಕುಟುಂಬದಲ್ಲಿ ಒಂದೇ ಸಮಾನವಾದ ಪರಸ್ಪರ ಸಂಸಾರ ಪ್ರೇಮವು ಅಧಿಕವಾಗುವುದು.

ಅಣ್ಣನು ನಾದಿನಿಯಲ್ಲಿರಬಹುದಾದ ಮತ್ತು ತಮ್ಮನು ಅತ್ತಿಗೆಯಲ್ಲಿರಬಹುದಾದ ಗುಣಗಳನ್ನು ಹೊಗಳುವುದಲ್ಲದೆ, ಎಂದಿಗೂ ಅವಳ ಸೌಂದರ್ಯವನ್ನು ಮೆಚ್ಚುವುದೂ, ಕಾಮದೃಷ್ಟಿಯಿಂದ ನೋಡುವುದೂ ಶಾಸ್ತ್ರವಿರುದ್ಧವೆಂದು ಸಾರಿ ಹೇಳುತ್ತಿರುವ ಕಾಲದಲ್ಲಿ ಸಹೋದರರ ಪತ್ನಿಯರನ್ನು ತಾಳಿ ಕಟ್ಟಿಕೊಳ್ಳುವ ಪದ್ಧತಿಯು ಇನ್ನೂ ಜೀವಂತವಾಗಿರುವದು ಕೊಡಗರ ಸಾಮಾಜಿಕದ ಒಂದು ದುರ್ಘಟವಾದ ನ್ಯೂನತೆ. ಲಕ್ಷ್ಮಣನು ತನ್ನ ಅತ್ತಿಗೆಯನ್ನು ಮಾತೆಯೆಂದು ಭಾವಿಸಿದನೇ ಹೊರತು ಪರಾಂಗನೆ ಅಲ್ಲ. ಹದಿನಾಲ್ಕು ವರ್ಷ ಪರ್ಯಂತರವೂ ತನ್ನತ್ತಿಗೆಯಾದ ಸೀತಾದೇವಿಯ ಪಾದಗಳನ್ನು ನೋಡುತ್ತಿದ್ದನೇ ಹೊರತು ಅವಳ ಸೌಂದರ್ಯವನ್ನು ದೃಷ್ಟಿಸಿ ಮೆಚ್ಚಲಿಲ್ಲ. ಸೀತಾದೇವಿಯು ತನಗೆ ಪೂಜ್ಯರೂಪಿಣಿಯಾದ ಮಾತೆಯಲ್ಲದೆ ಅಚ್ಚುಮೆಚ್ಚಿನ ಪ್ರಿಯೆಯಲ್ಲ. ಹೀಗೆ ಶ್ರೀರಾಮನೂ ತನ್ನ ಸಹೋದರರ ಪತ್ನಿಯರಲ್ಲಿ ಸೋದರಿ ಪ್ರೀತಿಯನ್ನಿಟ್ಟಿದ್ದನು. ಈ ಅಕ್ರಮ ಪದ್ಧತಿಯನ್ನು ಭಾಗವತದ, ರಾಮಾಯಣದ, ಭಾರತದ ಯಾವ ವೀರನೂ ಯಾವ ವೀರ ನಾರಿಯೂ ಅನುಸರಿಸಿದ್ದಿಲ್ಲ. ನಮ್ಮ ಹಿಂದೂದೇಶದಲ್ಲಿ ಆಚೆಗೆ ಹಿಮಾಲಯದಿಂದ ಕಾಮರಿನ್ ವರೆಗೆ ಕೊಡಗರಲ್ಲಿಲ್ಲದೆ ಮತ್ಯಾವ ಜಾತಿಯಲ್ಲಿಯೂ ಅಸಹನೀಯವಾದ ಪದ್ಧತಿಯು ಇಲ್ಲ. ಇದಕಾರಣ ಕೊಡಗ ಮಹಾಶಯರು ಈ ಪದ್ಧತಿಯನ್ನು ವಿರೋಧಿಸಿ ಮುಂದುವರಿಯದಂತೆ ಮಾಡಿದರೆ ನನ್ನ ಲೇಖನವನ್ನು ವಿಶಾಲ ದೃಷ್ಟಿಯಿಂದ ವಿಮರ್ಶಿಸಿ ಯೋಗ್ಯತೆ ಬೆಲೆಯನ್ನು ಕೊಟ್ಟಂತೆ ನಂಬುತ್ತೇನೆ.

ಕೊಡಗ ಜನರಲ್ಲಿ ಪತಿವ್ರತ ಶಿರೋಮಣಿಯರು ಇಲ್ಲವೆಂದು ನಾನು ತಿಳಿದೆನೆಂದು ಊಹಿಸಬಾರದು. ಮಾನವತಿಯರು ಮತ್ತು ಪತಿವ್ರತೆಯರು ಅನೇಕರಿರುವರು. ನಾರಿಮಣಿಯರೇ ಅಲ್ಲದೆ ಸಿಂಹ ವೀರರೂ ಇದ್ದಾರೆಂದು ಭಾವಿಸಿದ್ದೇನೆ. ಈ ಸಾಮಾಜಿಕ ಪದ್ಧತಿಯನ್ನು ಪರ್ಯಾಲೋಚಿಸಿ ಚಿತ್ತ ಚಂಚಲರಿಗೂ ಮತ್ತು ದುಷ್ಟರಿಗೂ ಒಂದು ವಿಧವಾದ ಕಠಿಣ ತರದ ನಿಬಂಧನೆಯು ಇರಬೇಕೆಂತಲೂ, ಕೊಡಗಿನ ಸೋದರಿಯಲ್ಲಿ ಪರಸ್ಪರ ಆಕರ್ಷಿಸುವ ಪುರುಷನಿಗೂ, ಸ್ತ್ರೀಗೂ ಮಧ್ಯದಲ್ಲಿ ಸುಳಿಗಾಳಿಗೆ ಹಾರಿ ಹೋಗುವ ಪೊರೆಗೆ ಬದಲು ಮದ್ದುಗುಂಡಿಗೂ ಜಗ್ಗದಿರುವ ಕೋಟೆಗೆ ಸಮಾನವಾದ ಕಠಿಣ ತರದ ನಿಬಂಧನೆಗಳ (Moral restrictions) ಇರಬೇಕೆಂಬುದೇ ನನ್ನ ಉದ್ದೇಶ.

ಕೆ. ಟಿ. ಯನ್.

ಬೇಕಾಗಿದೆ.

ಶ್ರೀಮತಿ ಡಿ. ಸಾಕಮ್ಮನವರ (1) ಕುಸುಬೂರು, (2) ಕೂಡಾಪುರ, (3) ಪನ್ಯ ಕಾಫಿ ತೋಟಗಳಿಗೆ ಸೊಲಗಿತಿಯ ಕೆಲಸದಲ್ಲಿ ಮತ್ತು ಕಾಯಿಲಸ್ಥರ ಉಪಚಾರದಲ್ಲಿ ತರಬೇತು ಹೊಂದಿರುವ ಮೂವರು ನರ್ಸುಗಳು ಬೇಕಾಗಿದ್ದಾರೆ. ಸಂಬಳ ವಗೈರೆಗಳಿಗೆ ಶಿಫಾರಸ್ಸು ಪತ್ರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಜನರಲ್ ಮೇನೇಜರು,
ಕುಸುಬೂರು ತೋಟ,
4—4 ಸೋಮವಾರಪೇಟೆ, (ಉ ಕೊಡಗು)

FOR SALE.

One Solo Triumph 4 94 H P Motor Cycle in perfect running order with original tyres very sparingly used, is for sale.

Please apply to— M.
C/o Manager,
'Kodagu' Mercara

Lamps

(of Basel Mission fame)

Just arrived! Shop Early!!

Table Lamps—glass container with brass fittings & Shade @ Rs 7 8 6/12 6/8 & 5/- Each

Wall Lamps—glass container with brass fittings & mirror @ Rs 3/12 3/- 1/8 & 1/2 Each

Hanging Lamps brass container @ Rs 3/12

Hanging Lamps glass container @ Rs 2/12.

Lanterns thoroughly reliable @ Rs 3/4 3/2 & 3/ Each.

Spare Chimneys Stocked

The Coorg Emporium,
Mercara. Sidapur.
48—10

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಪ್ರಕಟವಾಯಿತು. ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ, ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಅಚ್ಚುಹಾಕಿ ಪ್ರಕಟಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀ ಪುರುಷರ ಅನೇಕ ವಿಷಯಗಳೂ ಹಿಂದು ಲಕ್ಷಣಗಳೂ, ಸ್ತ್ರೀಯರ ಭೇದಗಳೂ, ಪಕ್ವವೃದ್ಧಿ, ಗರ್ಭಧಾರಣೆ, ಸಂದರ್ಭ ಶಕ್ತಿ ಚಿಕಿತ್ಸೆ, ನಾನಾ ಪ್ರಯೋಗಗಳು ಹಾಗು ಇತರ ಸುಖಭೋಗಗಳ ವಿಷಯಗಳಿಗೆ ವಿವರವೇ ಇದೆ. ಕ್ರಯ ಪುಸ್ತಕ ೧ಕ್ಕೆ ಸಹಿತ ಕೂ.

ಎಸ್. ವಿ. ಗೋಪಾಲ್ ಬುಕ್ ಡಿ. ೧—೨—೦.
52—34 37. ತಿರುಪಳ್ಳಿಬೀದಿ,

ಭಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಬಣ್ಣವು ಕೆಡದಂತೆ ಎಲೆಕ್ಟ್ರಿಕ್ ಸವರಿನಿಂದ ಸವರನ್ ಬಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ. ೧ಕ್ಕೆ ೧೨ ಆ. ೧ ಉಂಗುರಗಳಿಗೆ ಒಂದು ಟೇಬಲ್ ಟೈಂಪೀಸನ್ನೂ, ೬ ಉಂಗುರಗಳಿಗೆ ಒಂದು ಬಂಗಾರದ ಪಾಕೆಟ್ ವಾಚನ್ನೂ, ೧೨ ಉಂಗುರಗಳಿಗೆ ಒಂದು ಬಂಗಾರದ ಕೈಪಟ್ಟಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ. ವಿಳಾಸ—ಶೀಗಲ್ ವಾಚ್ ಕಂಪೆನಿ,

52—11 ಪೋ ಬಾ. 243 ಮದರಾಸು.

ಟೇಬಲ್ ಟೈಂಪೀಸು ಇನಾಂ.



ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿವೆ. ಸರಿಯಾಗಿ ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸರಿಸಮಾನವಾಗಿರುವುದು. ಇದಕ್ಕೆ ಖಾತ್ರಿಯುಳ್ಳ 5 ವರ್ಷ ಗ್ಯಾರಂಟಿ ಕೊಡುವೆವು ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಒಂದನ್ನು ಇನಾಮಾಗಿ ಕೊಡುವೆವು ಇನಾಮ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1 ಕ್ಕೆ 7—0—0.

ವಿಳಾಸ—ಕೆ ಎನ್ ಜೆನ್‌ಸನ್ ಅಂಡ್ ಕೊ,
52—11 168, ಚೈನಾ ಬಜಾರ್, ಮದರಾಸು

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



[illegible]

ಜೋಡು ಹೊಳಲಿನ ಕೋವಿದ ರೈಫಲುಗಳು	ರೂ	15 ರಿಂದ	ರೂ	275 ರ ವರೆಗೆ
ಒಂಟಿ " " "	"	35	"	95
ಜೋಡು " " ಕೋವಿಗಳು	"	50	"	135
ಒಂಟಿ " " "	"	35	"	275
ಜೋಡು ಹೊಳಲಿನ ಕೇಪು "	"	45	"	135
ಒಂಟಿ " " "	"	30	"	80
ಪ್ರೀಚ್ ಲೋಡಿಂಗ್ ರಿವಾಲ್ವರುಗಳು	"	35	"	350
ಪಿಸ್ತೋಲುಗಳು	"	30	"	150

ಕಾಡು ಮೃಗಗಳ ಬೇಟೆ ವಿನಾ ಬೇಟೆ ಮುಂತಾದ ಎಲ್ಲಾ ತರಹದ ರಕ್ಷಣೆ ... ಕೆಲಸಗಳಿಗೆ ಬಹು ಉಪಯೋಗಕರವಾದ ಉತ್ತಮ. ಸ್ಪೋರ್ಟ್ಸ್ ಎಂಬ ದೀಪಕ್ಕೆ ... ಎಲ್ಲಾ ಕತ್ತಿಗಳು, ಬಚೀಗಳು, ತೋಟಗಳು, ಕೇತ್ರಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—2 210 Abdul Rehman Street, BOMBAY.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

"ದಿಲ್ ಬಹರ್ ಫ್ಲ್ಯೂಟ್" ಸಿಂಗಲ್ ರೀಡ್ ಹಾರ್ಮೋನಿಯಂ		1 ಕ್ಕೆ	50	8	0
"ಸಿದ್ದಪ್ಪಾಸ್ ಫ್ಲ್ಯೂಟ್"	"	"	42	8	0
ಕಸ್ತೂರಿ	"	"	40	0	0
ಮೋಹನ್	"	"	37	8	0
ಮೋಸ್ಟೀಂ	"	"	35	0	0
ಮಹಾರಾಜ	"	"	32	8	0
ಕೊಹಿನೂರು	"	"	29	8	0
ಡೈಮಂಡ್	"	"	27	8	0
ಬಿಜಲೀ	"	"	25	0	0
"ದಿಲ್‌ಬಹರ್ ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ		1 ಕ್ಕೆ	85	0	0
ಸ್ಪೆಷಲ್	"	"	56	0	0
ಮೋಹನ್	"	"	50	8	0

14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟೆನ್ ಪೆನ್‌ಗಳು.

ವರ್ಲ್ಡ್ ಮಾಸ್ಟರ್ ಫೌಂಟನ್ ಪೆನ್	1 ಕ್ಕೆ	3	0	0
" ಬಿಗ್‌ಬ್ಯಾರಲ್	"	"	3	2	0
" ಸ್ಟ್ರೈಕ್ಸ್	"	"	3	8	0
" ಮೂಟಲ್ ಕಲರ್	"	"	3	14	0
" ಮೂಟಲ್ ಸ್ಟ್ರೈಕ್ಸ್	"	"	4	4	0
" ಬ್ರೌನ್ ಕಲರ್ ಸೆಲ್ಫ್‌ಫಿಲ್ಲಿಂಗ್ ಪೆ	"	"	5	8	0
" ಸೇಫ್ಟಿ ಪೆನ್	"	"	6	8	0
" ಲೇಡೀಸ್ ಸೈಜ್ ಮೂಟಲ್ ಕಲರ್ ಪೆನ್	"	"	4	8	0
ಬಲ್ಲೆಬಹರ್ ಪೆನ್ 1 ಕ್ಕೆ 1 8 0 ಮತ್ತು			3	12	0
ಸ್ವಾನ್ ಪೆನ್ 6 8 0		"	7	0	0
ವಾಟರ್‌ಮೆನ್ ಪೆನ್ 1 ಕ್ಕೆ 8 0 0		"	8	8	0
" ಸೆಲ್ಫ್ ಫಿಲ್ಲಿಂಗ್ ಯೂ ಸೇಫ್ಟಿ ಪೆನ್	1 ಕ್ಕೆ		12	0	0
ಬಿಗ್‌ಬ್ಯಾರಲ್ ಹಾರ್ಡ ವೇರ್	"	"	8	0	0
" ಸಿಪ್ಲೆಕ್ಸ್ ಪೆನ್	1 ಕ್ಕೆ		17	0	0

ಖಾತ್ರಿಯುಳ್ಳ ಬಂದೋಬಸ್ತಾದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು	1 ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಅಲಾರಂ ಟೈಂಪೀಸು	"	3	12	0
ಅನ್‌ಸೋನಿಯಾ 'ರ' ಟೈಂಪೀಸು	"	5	13	0
" ಅಲಾರಂ "	"	5	6	0
ಬಿಗ್‌ಬೆನ್ "	"	9	6	0
" ಬಿಲ್ಡ್‌ರಿಂಗ್ ರ್ವ್ಯಾಂಡಿಸುವ ಅಲಾರಂ ಟೈಂಪೀಸು	"	11	5	0
ಘಂಟೆ ತೋರಿಸಿ ಅಲಾರು ಬಾರಿಸುವ ಕ್ಯಾಂಡೀಸ್ ಕ್ಲಾಕ್	"	7	2	0
" ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾಂಡೀಸ್ ಕ್ಲಾಕ್ 1 ಕ್ಕೆ		8	10	0
" ಘಂಟೆ ಅರ್ಧ ಘಂಟೆ ಹೊಡೆಯು ಅಲಾರಂ ಸಹ ಬಾರಿಸುವ ಕ್ಯಾಂಡೀಸ್ ಕ್ಲಾಕ್ 1 ಕ್ಕೆ		9	12	0
ಘಂಟೆ ತೋರಿಸಿ ... ಕ್ಯಾಂಡೀಸ್ ... 1 ಕ್ಕೆ		12	0	0

ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
52—17

ಸರ್ಕಾರಿ ಬ್ಯಾಂಕ್,

ರೂ 5-0-0ರ

ರೋಗಾರ್ತಿಗಳಿಗೆ ಕೀಳ್ದ ರಿಡಿಮೆ ವಾಯಿದೆಯ ಠೀವ

ಒಪ್ಪ ದೊರೆಯುತ್ತೆ 4ರ ಬಡ್ಡಿ ದೊರೆಯುತ್ತೆ

ಕೀಳ ಸಾಲೋಚ ಪರೇಟಿವ್ ರಿಜಿಸ್ಟ್ರಾರವರು

ಟ್ರೆಜರರ್

ಕೂಂಗಟ್ಟಿರ ತಮ್ಮಯ್ಯ

ನವರು.

ಬಿ.ಎ. ಬಿ.ಎಲ್.

ಪತ್ರಿಕೆಯ

ಒಪ್ಪಿಕೊಂಡದ್ದರಿಂದ,

ನಮ್ಮ ರಶೀತಿ

ವಾರ್ಷಿಕ ಮೇಲೆ

ಚಂದಾ

ತಮ್ಮ

ಪ್ಪನವರು

ನಂಜಪ್ಪನವರು, ಮತ್ತು

(ಬಾದಿಬಂಡಾರ)

ಯ್ಯನವರು

ಮಾದಪ್ಪನವರು

ಮಾದಪ್ಪನವರು,

ಮಾದಪ್ಪನವರು,

ಮುದ್ದಯ್ಯನವರು,

ಮಾದಯ್ಯನವರು,

ರಶೀತಿ ಹೊಂದಿಕೊಳ್ಳದೆ

ತಿಳಿಸಲಾಗಿದೆ.

ಮಡಿಕೇರಿ,

ಮಂಜರಸ್ಥರಿಯೂ

ಸಹಾಯಕ ಸಂ

ರಿಜಿಸ್ಟ್ರಾರವರ

ಬಯಿಪ್ಪಚಲ್ಲಿ

ಸಹಿಯಾಗಿ ಬರೆ

ರೂಲ್ಸಿಗನುಸಾರ

ಪಾಸ್ ಬುಕ್ಕು

ಬಿಲ್ಡಿಂಗ್ ಸ್ಟೋರಿ

ಮೇನೇಜರ್.

"ಕೊಡಗು" ಮಡಿಕೇರಿ

12 bore Victor Cartridges Rs. 10/- Per 100

Mahomedally-Noorbhoy.

ARMS & AMMUNITION MART

Abdul Rehman Street

BOMBAY. 3.

ಕಷಾಯ ಸಂಜೀವಿ ರಕೆ:—ಇದು ಇಂಜೆಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ ಜ್ವರ ದಿನಬಿಟ್ಟು ಬರುವ ಜ್ವರ 3-4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿಯಾಗಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1-8-0 3ಕ್ಕೆ ರೂ 4-0-0 6ಕ್ಕೆ ರೂ 7-8-0 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಸಿದ್ಧ. ಚಿಕ್ಕ ಬಾಟ್ಲಿ 1, 3 ರಕ್ಕೆ ರೂ 1-4-0 3-5-0 6-12-0

ರೋಮನಾಶಿನಿ:— ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1 1 ಡಜನಿಗೆ 3-5-0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುಂಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2-10-0- ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5-8-0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ.

52-47

9. ಮಂಗಳೂರು.

ದಯವಿಟ್ಟು ಗಮನಿಸಿರಿ!

ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಾಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಚೈನ್ನು, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಚಿಲ್ಲರೆಯಾಗಿಯೂ ಸಗಟಾಗಿಯೂ ದೊರೆಯುವುವು. ನಮ್ಮಲ್ಲಿ 8 ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ ರಮ್ಯವಾಗಿಯೂ ಇರುವ ಹೊಸ ನಮೂನೆ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್ ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯ ಬಹುದು ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.

21-16

ಭರತಖಂಡದ ಜೀವನವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವನವಿಮೆ ಕಂಪೆನಿಯ

ಇಂದಿನ ಸ್ಥಿತಿಯೂ, ಅಭಿವೃದ್ಧಿಯೂ ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925	296	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ.
1926	391	,, ,,	1926	106	,, ,,
1927	468	,, ,,	1927.	122	,,
1928	585	,, ,,	1928.	140	,,

ಜನಪ್ರೀತಿಯೂ ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 100 ರೂಪಾಯಿಗಳಿಗೆ ವರ್ಷಕ್ಕೆ 10 ರೂ	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ
1921ರಲ್ಲಿ ,, ,, ,, ,,	1927ರಲ್ಲಿ ,, ,, ,, 25 ,,

ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ವಿಮೆಗಾಗಿ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಒಂದು ... ಉಂಟಾಗುವುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್,

ಎಲ್. ಆರ್. ಕೃಷ್ಣಸಾಮ್ಯೆಯ್ಯರ್

52-46

ಬ್ರಾಂಚ್ ಸೆಕ್ರೆಟರಿ.

G... Smiths' Rolling Mills.

ಪಟ್ಟಿ ಮೆಶಿನುಗಳು.



ನಗ ಮಾಡುವವರು ಮತ್ತು ಅಕ್ಕಸಾಲೆಯವರು ಉಪಯೋಗಿಸುವ ಚಿನ್ನ ಮತ್ತು ಬೆಳ್ಳಿಯ ತಗಡುಗಳನ್ನು ಮಾಡುವ ಈ ಮಿಲ್ಲುಗಳಿಗೆ ನಾವು ಏಜಂಟರಾಗಿರುತ್ತೇವೆ ಪ್ರತಿ ಬಹು ಮುಖ್ಯ ಪಟ್ಟಣಗಳಲ್ಲಿ ಸಬ್ ಏಜಂಟರುಗಳು ಬೇಕಾಗಿದ್ದಾರೆ ಹೆಚ್ಚಿನ ಸಂಗತಿ ಮತ್ತು ಕೆಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಇಂಗ್ಲೀಷಿನಲ್ಲಿ ಬರೆದುಕೊಳ್ಳುವುದು

Ch Sobhanachalam & Sons

Chilakalapudi P O,

Masulipatam

12-3

Ford SALES AND SERVICE

The most competitive.

CAR

in the most competitive

YEAR

The new model A Ford!!!

with three Speed selective sliding gear Transmission

The most economical car in the market

For Demonstration & further particulars

Please apply to —

S. Sunder Rau,

Ford Dealer for Coorg.

24-10 **MERCARA**

Printed & published by P I Belliappa, at "Kodagu" Press Merc" for "Kodagu" Ltd.

R. No. M. 1559.
"KODAGU" MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತತಾ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯ | ಮಡಿಕೇರಿ, ಸನ್ ೧೯೨೮ನೇ ಇಸವಿ ಸೆಪ್ಟೆಂಬರ್ ತಾರೀಕು ೧೪ನೇ ಶುಕ್ರವಾರ. | ಸಂಚಿಕೆ ೧೫

Telephone.—
3145.

By Appointment to
H. E. the Governor of Madras.

Telegrams:—
"PRECIOUS"

Guarantee of Satisfaction throughout in every order large or small.

Brooch.

PROMPTEST EXECUTION — HIGH CLASS WORKMANSHIP
GOLDSMITH SILVERSMITH
V. Subramania Iyer
GEMSET JEWELLER
POST BOX—423 TRIPLICANE MADRAS.

Excellent Quality Chaste Designs Moderate Prices.

Ice Tumbler.

"Green Hills"
Virarajendrapet.
7th Decr., 26.

Sir,

.......I am glad to note that the Jewels have a good finish.. ..

(Sd.) Mrs. A. B. Chengappa.

Sunticoppa,
Nellore Estate.
7th April, 28

Dear Sir,

I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends.

(Sd.) Miss K. Subbiah

Mercara,
20th May, 27.

Dear Sir,

.. I am quite satisfied with the Jewels you sent on the 16th instant.

(Sd.) Mrs. K. S. Cariappa.

52—52

Illustrated Catalogue Free on Application.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಚೇರರ್ ಹೊಳದ ದೆಸೆಯಿಂದ ಕಿತ್ತಳೆ ಕಾಫಿಗಿಡಗಳ ಸಂಚಿಯ ಧಾತುಗುಣದ (Mineral) ಗೊಬ್ಬರಹಾಕಿದ ಸ್ಥಳಗಳಿಗಿಂತಲೂ ಸಾರಾಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ... (Experiment station) ದಲ್ಲಿ ... ಗೊಬ್ಬರವು ಪ್ರಯೋಜನಕರವಾಗ ... (ಬಿಹಾರ್ ಡಿಪಾರ್ಟ್‌ಮೆಂಟ್)

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ... ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಆಫ್ ಕಮಿಟಿ,
ಇಂಡಿಯನ್ ಡೆಲಿಗೇಶನ್
ಪೋ. ಬಾ. ನಂ. 164, ಕಲ್ಕತ್ತಾ.

(2) ಏಜೆಂಟರ್ ...
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24—17

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದದರ ಸಂಬಂಧವು ಸ್ವಲ್ಪವಾದರೂ ಇರಕ್ಕಿಲ್ಲ. ಮನುಷ್ಯರ ಎಲ್ಲಾ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ... ಬೆಳ್ಳಿ, ಬಂಗಾರ ಮುಂತಾದ ಭಸ್ಮ ... ಉಪಯೋಗಿಸಬಾರದು.

... ಮದನ ಮಂಜರಿ
ಮಾತ್ರೆಗಳು.

ಬಾಹು ಪುಸ್ತಿಯನ್ನು ಕೊಡುವದರಲ್ಲಿ ಸಮಾನ ರಹಿತವಾದವು. ಒಂದು ಡಬ್ಬಿಯ ಕ್ರಯ ೧—೦—೦

52—4 ಮದನಮಂಜರಿ ಫಾರ್ಮಸಿ,
194 ಜೈನಾ ಬಜಾರ್, ಮದ್ರಾಸ್.

ಪುತ್ರ ಸಂತಾನದ ಎಣ್ಣೆ.



ಈ ಎಣ್ಣೆಯು ಬಹಳ ದೊಡ್ಡ ವೈದ್ಯರಿಂದ ತಯಾರಿಸಿ ... ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲ ... ಕೆಲವರಿಗೆ 3—4 ತಿಂಗಳ ಕಾಲ ... ಹೋಗಿ ಬಿಡುವದು. ಇಂಥಾ ಹೆಂಗಸು ... ಈ ಎಣ್ಣೆಯನ್ನು 15 ದಿನಗಳ ... ದಿಂದ ಗರ್ಭವು ನಿಂತು ಪುತ್ರ ... ವು ... ಸುಖಪ್ರಸವ ... ಗುಣವಡಿಸುವದು. ಈ ಎಣ್ಣೆ ... ಮದರಾಸು ಅಧಿಕಾರಿಗಳಲ್ಲಿ ಸಕ್ಸೆಸ್ ... ಗಿನ ಪುತ್ರ ಸಂತಾನ ಪಡೆದಿರುವರು. ... ಪರೀಕ್ಷಿಸಿ ಉಪಯೋಗಿಸ ... ಕೊಳ್ಳುವರಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟಲ್ 1ಕ್ಕೆ ೭—೮—೦

— ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,
109 ಜೈನಾ ಬಜಾರ್ ರೋಡ್, ಮದರಾಸ.

ಶ್ರೀ ಶ್ರೀಕಂಠೇಶ್ವರ
ಚಿಕ್ಕವೀರಣ್ಣ ಆಯಿಲ್ ಮಿಲ್ಸ್
ಈಡಿಗ ಯಕ್ಸ್‌ಪರ್ಟ್ ಕ್ಲಬ್,
ಮೈಸೂರು.

... ಪಚ್ಚ ... ಗಳಿಂದ ...
... ಕಿಲ್ಲ ... ಗಳಿಂದ ... ತೆಲ್ಲ ...
...
... ದೇ ಶಿರಮುತ್ತ.

... ಕನ್ನ ... ಲಿಯ ... ಶಕ್ತಿ ...
... ತಿಳಿಸಿ ... ಬರೆದು ...

ಏಕೆ ನರಳುತ್ತೀರಿ?

... ಅಂಜಬೇಡಿರಿ.

... ಕಾರಣವಾಗಿ ಕೊಡಲ್ಪಡುವ

ವೈದ್ಯ ವಿಧ್ಯ

... ಪುಸ್ತಕವನ್ನು ಓದಿ, ಬಿಡದ ರೋಗಗಳನ್ನು ... ಮಾಡಿಕೊಂಡು, ಇಂಥ ಸ್ಥಿರದಲ್ಲಿ ... ಆಶಾವಾದ ... ಸೂಚಿಸೋ ...

ಮದನಮಂಜರಿ ಫಾರ್ಮಸಿ,
1/81 ಜೈನ ಬಜಾರು ರೋಡು, ಮದ್ರಾಸು

ಕೊಡಗು.

ಸ ೧೯೨೯ನೇ ಇಸವಿ

ಸೆಪ್ಟಂಬರ್ ತಾ ೧೩ ನೇ ಶುಕ್ರವಾರ.

ಅಬ್ಬಿಗಳಿಂದ ವಿದ್ಯುಚ್ಛಕ್ತಿ.

ಮದ್ರಾಸ್ ಆಧಿಪತ್ಯದಲ್ಲಿ ಅಬ್ಬಿಗಳಿಂದ ವಿದ್ಯುಚ್ಛಕ್ತಿಯನ್ನು ಎಲ್ಲೆಲ್ಲಿ ಉಂಟುಮಾಡಿಕೊಳ್ಳಬಹುದು, ಈ ಬಗ್ಗೆ ಎಷ್ಟೆಷ್ಟು ಖರ್ಚಾಗುತ್ತದೆ, ವಿದ್ಯುಚ್ಛಕ್ತಿಯನ್ನು ಹುಟ್ಟಿಸಿದರೆ ಅದನ್ನು ಯಾವ ಯಾವ ಕೆಲಸಗಳಿಗೆ ಉಪಯೋಗಿಸಿಕೊಂಡು ಪ್ರಯೋಜನ ಹೊಂದಬಹುದು ಎಂಬ ಮುಂತಾದ ವಿಷಯಗಳನ್ನು ತನಿಖೆ ಮಾಡಲಿಕ್ಕೂ, ಪ್ರಯೋಜನವಾಗಬಹುದೆಂತ ತೋರುವಲ್ಲಿ ವಿದ್ಯುಚ್ಛಕ್ತಿಯನ್ನು ದೊರಕಿಸಿಕೊಳ್ಳುವ ಕೆಲಸ ನಡಿಸಲಿಕ್ಕೂ 1928—29ನೇ ವರ್ಷದಲ್ಲಿ ಒಂದು ಇಲಾಖೆಯೇ ಕೆಲಸ ಮಾಡಿದೆ. ಈ ಇಲಾಖೆಗೆ ಆ ವರ್ಷ ಸುಮಾರು 2½ ಲಕ್ಷ ರೂಪಾಯಿ ಖರ್ಚಾಗಿದೆ. ಈ ಇಲಾಖೆಯು ನೀಲಗಿರಿಯಲ್ಲಿರುವ ಪೈಕಾರ ಗ್ಲೆನ್‌ಮೋರ್ಗನ್, ಆಂಧ್ರ ದೇಶದಲ್ಲಿರುವ ಅನಂತಗಿರಿ, ಕೊಲಬ ಮತ್ತು ಆಧಿಪತ್ಯದ ಬೇರೆ ಬೇರೆ ಕಡೆಗಳಲ್ಲಿ ಸಾಧ್ಯವಿರುವ ಅನೇಕ ಅಬ್ಬಿಗಳ ವಿಷಯ ಈ ಸಂಬಂಧವಾಗಿ ಅಜಮಾಯಿಸುತ್ತಿದ್ದಾರೆ. ಇಂಥಾ ತನಿಖೆಯಲ್ಲಿ ನೀಲಗಿರಿ ತೋಟಗಾರಿಗಾಗಿ ಮಾಡಿದ ಕಾಲುವೆಗಳಲ್ಲಿ ಇರುವ ಚಿಕ್ಕ ಚಿಕ್ಕ ಅಬ್ಬಿಗಳ ಅಜಮಾಯಿಸಿಕೆಯೂ ಸಹ ಸೇರಿದೆ. ಮದ್ರಾಸಿನ ಈ ಇಲಾಖೆಯ ವರದಿಯು ಕಳೆದ ತಿಂಗಳ ಆಖೈರಿನಲ್ಲಿ ಪ್ರಕಟವಾಗಿದೆ

ಬೆಟ್ಟ ಸೀಮೆಯಾದ ನಮ್ಮ ದೇಶದಲ್ಲಿ ಚಿಕ್ಕ ದೊಡ್ಡ ಅಬ್ಬಿಗಳು ಅನೇಕ ಇವೆ. ಇವುಗಳ ಅಜಮಾಯಿಸಿಕೆಯಾಗಬೇಕೆಂತ ಕೌನ್ಸಿಲಿನಲ್ಲಿ ರಠಾವು ಚರ್ಚೆಯಾದರೂ ನಮ್ಮ ದೇಶದ ಸರಕಾರವು ಈ ವಿಷಯಕ್ಕೆ ಈ ವರೆಗೆ ಗಮನ ಕೊಡದಿರುವದು ವಿಷಾದಕರವಾಗಿದೆ. ನಮ್ಮ ದೇಶದ ಸರಕಾರದ ಮತ್ತು ಜನರ ಆರ್ಥಿಕ ಸ್ಥಿತಿಯು ತೃಪ್ತಿಕರವಾಗಿಲ್ಲವೆಂತ ಎಲ್ಲರೂ ಒಪ್ಪುತ್ತಾರೆ. ಹಾಗಿರುವಾಗ ಸರಕಾರಕ್ಕೂ ದೇಶ ನಿವಾಸಿಗಳಿಗೂ ಪ್ರಯೋಜನವಾಗುವಂಥ ವಿದ್ಯುಚ್ಛಕ್ತಿಯ ಉತ್ಪತ್ತಿಗೆ ಗಮನ ಕೊಡುವದು ಬಹಳ ಅವಶ್ಯವಿದೆ. ವಿದ್ಯುಚ್ಛಕ್ತಿಯನ್ನು ಹುಟ್ಟಿಸುವ ಕಾರ್ಖಾನೆಯಾಗಿ ಶಕ್ತಿ ಹುಟ್ಟಿದರೆ ಸರಕಾರಕ್ಕೆ ಉತ್ಪತ್ತಿ ಇದ್ದೇ ಇದೆ. ಇಂಥಾ ಕಾರ್ಖಾನೆಗಳನ್ನು ಸರಕಾರವೇ ನಡಿಸಿದರೆ ಸರಕಾರಕ್ಕೇ ಲಾಭವೆಲ್ಲಾ ಉಳಿಯುತ್ತದೆ. ಅಥವಾ ಕಂಪೆನಿಗಳ ಮೂಲಕ ಕೆಲಸ ನಡಿಸಿದರೆ ಲಾಭದಲ್ಲಿ ಪಾಲು ಸರಕಾರಕ್ಕೆ ಸಿಕ್ಕಿಯೇ ಸಿಕ್ಕುತ್ತದೆ.

ಸುಲಭ ಬೆಲೆಗೆ ವಿದ್ಯುಚ್ಛಕ್ತಿಯು ದೊರಕಿದರೆ ದೇಶದ ಜನರು ಹೊಸ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಿ ಪ್ರಯೋಜನ ಹೊಂದಬಹುದಲ್ಲದೆ, ಕೃಷಿ ಕಸಬನ್ನು ಸಹ ವಿಶೇಷವಾಗಿ ಸುಧಾರಿಸಿಕೊಂಡು ಜನರ ಆರ್ಥಿಕ ಸ್ಥಿತಿಯನ್ನು ಉನ್ನತಿಗೊಳಿಸಿಕೊಳ್ಳಬಹುದು. ವಿದ್ಯುಚ್ಛಕ್ತಿಯನ್ನು ಉಂಟುಮಾಡಿಕೊಂಡರೆ ದೇಶದೊಳಗೆ ಈ ಶಕ್ತಿಯ ಉಪಯೋಗವಾಗಬಹುದಲ್ಲದೆ ನೆರೆಜಿಲ್ಲೆಗಳಲ್ಲಿ ಇರುವ ಕೈಗಾರಿಕೆಗಳಿಗೂ ರೈಲ್ವೇಗೂ ಸಹ ಉಪಯೋಗವಾಗಬಹುದು. ಮಲಬಾರು ಮತ್ತು ದಕ್ಷಿಣಕನ್ನಡ ಜಿಲ್ಲೆಗಳ ಸಮುದ್ರ ಕರಾವಳಿಯಲ್ಲಿ ಇರುವ ವಿಧ ವಿಧದ ಕಾರ್ಖಾನೆಗಳಿಗೂ, ರೈಲ್ವೇಗೂ ಸಹ ಈ ಶಕ್ತಿಯನ್ನು ತೆಗೆದುಕೊಂಡು ಹೋಗಬಹುದು. ಆ ಜಿಲ್ಲೆಗಳಲ್ಲಿ ಪ್ರಯೋಜನ ಮಾಡಿಕೊಳ್ಳಲಿಕ್ಕಾಗಿಯೇ ಮದ್ರಾಸು ಸರಕಾರವು ದಕ್ಷಿಣಕೊಡಗಿನ ಸಾರತ್ಥ್ಯಬ್ಬಿಯನ್ನು ಅಜಮಾಯಿಸುತ್ತಾರೆಂಬ ವರ್ತಮಾನವು ಕೆಲವು ವರ್ಷಗಳ ಕೆಳಗೆ ಇತ್ತು.

ದೇಶದ ಆರ್ಥಿಕ ಸ್ಥಿತಿಯನ್ನು ಉನ್ನತಿಗೊಳಿಸಲು ಸರಕಾರವು ಮನಸುಮಾಡಿದರೆ ಈಗಲಾದರೂ ಮದ್ರಾಸ್ ಆಧಿಪತ್ಯದಲ್ಲಿ ಈಗ ಸ್ಥಾಪಿತವಾಗಿರುವ ಇಲಾಖೆಯನ್ನು ಕೊಡಗಿನ ಸಹಾಯಕ್ಕೆ ಉಪಯೋಗಿಸಿಕೊಳ್ಳಬಹುದು. ಮದ್ರಾಸ್ ಆಧಿಪತ್ಯದ ಜಿಲ್ಲೆಗಳಿಗೂ ಕೊಡಗಿನ ಶಕ್ತಿಯನ್ನು ಉಪಯೋಗಿಸಲು ಅನುಕೂಲವಿದೆಯೆಂತ ಮದ್ರಾಸ್ ಸರಕಾರಕ್ಕೆ ತಿಳಿಸಿಕೊಟ್ಟರೆ ನಮ್ಮ ಸರಕಾರಕ್ಕೆ ಹೆಚ್ಚು ಖರ್ಚಿಲ್ಲದೆ ಈ ತನಿಖೆಯು ನಡೆಯಬಹುದು.

ನಮ್ಮ ದೇಶದ ಫಾರೆಸ್ಟ್ ಫಾರೆಸ್ಟ್‌ಗಳಿಂದ ಪ್ರಯೋಜನ ಮಾಡಿಕೊಳ್ಳುವ ಕುತೂಹಲದಿಂದಲೇ ಮೊನ್ನೆ ಕೂಟದಲ್ಲಿ ಸುಮಾರು 15ಲಕ್ಷ ರೂಪಾಯಿ ಈ ಬಡ ದೇಶದ ಉತ್ಪತ್ತಿಯಿಂದ ಖರ್ಚಾಯಿತು. ಫಾರೆಸ್ಟಿನ ಮರಗಳಿಂದ ಪ್ರಯೋಜನ ಸಿಕ್ಕಬೇಕಾದರೆ ಸುಲಭ ಖರ್ಚಿನ ಶಕ್ತಿಯು ದೊರಕಬೇಕು. ಮರವನ್ನು ಕೊಯಿದು ಮಾರಲಿಕ್ಕೂ, ಬೊಂಬೆ ತಿದ್ದಿ ಮಾಡಲಿಕ್ಕೂ, ಸಸ್ಯಾದಿಗಳಿಂದ ಕಾಗದಮಾಡಲಿಕ್ಕೂ ವಿದ್ಯುಚ್ಛಕ್ತಿಯನ್ನು ದೊರಕಿಸಿಕೊಂಡರೆ ಸುಲಭ ಸಾಧ್ಯವಿದೆ.

ದೇಶದಲ್ಲಿ ವಿದ್ಯಾವಂತ ಯುವಕರಿಗೆ ಕಸಬಿಲ್ಲದೆ ಕಷ್ಟಪಡುವದನ್ನು ನೋಡಿದರೆ ಹೊಸ ಹೊಸ ಕಸಬುಗಳನ್ನೂ, ಕೈಗಾರಿಕೆಗಳನ್ನೂ ಉಂಟುಮಾಡಿಕೊಡುವದು ಸರಕಾರದ ಕರ್ತವ್ಯವೆಂತ ಸ್ಪಷ್ಟವಾಗುತ್ತದೆ. ಒಂದು ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಕೆಲಸಕ್ಕೆ ಸುಮಾರು 50ಕ್ಕಿಂತ ಹೆಚ್ಚು ಅರ್ಜಿಗಳಿದ್ದವೆಂತಲೂ, ಇದರಂತೆಯೇ ಸರಕಾರದ ಯಾವದೇ ಚಿಕ್ಕ ಉದ್ಯೋಗಕ್ಕಾದರೂ ಅರ್ಜಿಗಳು ಅನೇಕಾನೇಕ ಬರುತ್ತವೆಂತಲೂ ತಿಳಿದರೆ ವಿದ್ಯಾವಂತ ಯುವಕರಿಗೆ ಉತ್ಪತ್ತಿಕೊಡುವ ಕಸಬುಗಳಿಲ್ಲದೆ ಇರುವ ಕಷ್ಟವು ಸಾಧಾರಣವಾದದ್ದಲ್ಲವೆಂಬದು ತಿಳಿಯುತ್ತದೆ ವಿದ್ಯಾವಂತರಿಗೆ ಕಸಬಿಲ್ಲದೆ ಇರುವಿಕೆಯ ಕಾರಣವನ್ನು ಕಂಡುಹಿಡಿದು ಅದನ್ನು ಪರಿಹರಿಸಲು ಸಲಹೆ ಕೊಡುವ ಬಗ್ಗೆ ಹಿಂದುಸ್ಥಾನದ ಒಂದೆರಡು ಪ್ರಾಂತೀಕ ಸರಕಾರಗಳು ತನಿಖೆಮಾಡಿದವು. ಇವರ ಕಾರ್ಯದಿಂದ ಸಫಲವಾದದ್ದೇನೂ ಕಾಣಲಿಲ್ಲ. ನಮ್ಮ ದೇಶದಲ್ಲೂ ಇಂಥಾ ತನಿಖೆಗೆ ಹಣ ವ್ಯಯಮಾಡದೆ ಯುವಕರಿಗೆ ಕಸಬು ದೊರೆಯುವ ಹೊಸ ಕೈಗಾರಿಕೆಗಳನ್ನು ಉಂಟುಮಾಡಿಕೊಡಬೇಕು. ವಿದ್ಯುಚ್ಛಕ್ತಿಯ ಅಜಮಾಯಿಸಿಕೆಯ ಇಲಾಖೆಯೊಂದಾದರೆ ಕೆಲವು ಯುವಕರಿಗಾದರೂ ಕಸಬು ದೊರೆಯುತ್ತದೆ ಅಂಥ ತನಿಖೆಯಿಂದ ಪ್ರಯೋಜನವಾಗಿ ವಿದ್ಯುಚ್ಛಕ್ತಿಯ ಕಾರ್ಖಾನೆಗಳೂ, ಶಕ್ತಿಯನ್ನು ಉಪಯೋಗಿಸುವ ಇತರ ಕೈಗಾರಿಕೆಗಳೂ ಪ್ರಾರಂಭವಾದರೆ ಕಸಬಿಲ್ಲದೆ ಇರುವಿಕೆಯ ಸಮಸ್ಯೆಯು ಬಹಳ ಮಟ್ಟಿಗೆ ಒಡೆಯಲ್ಪಡುತ್ತದೆ.

ಕಡಮಾಡದೆ ನಮ್ಮ ಸರಕಾರವು ಪ್ರತ್ಯೇಕ ಆಫೀಸರುಗಳನ್ನು ನೇಮಿಸಿಕೊಂಡಾಗಲೀ, ಅಥವಾ ಮದ್ರಾಸ್ ಇಲಾಖೆಯನ್ನು ಉಪಯೋಗಿಸಿಕೊಂಡಾಗಲೀ ಈ ದೇಶದ ಭೂಸ್ಥಿತಿಯಿಂದ ದೊರಕಿರುವ ಅನುಕೂಲವನ್ನು ಉಪಯೋಗಿಸುವ ದಾರಿಯನ್ನು ಕಂಡುಹಿಡಿಯಬೇಕಾಗಿದೆ.

ಕಾಂಗ್ರೆಸ್ಸಿನ ಅಧ್ಯಕ್ಷ ಪದವಿ.

ಕಳೆದ ಕಲ್ಕತ್ತಾ ಕಾಂಗ್ರೆಸ್ಸಿನ ತೀರ್ಮಾನದ ಮೇರೆ ಬ್ರಿಟಿಷ್ ಪಾರ್ಲಿಮೆಂಟಿನವರು ನೆಹರು ವರದಿಯಲ್ಲಿ ಸೂಚಿಸಿರುವ ವಸಾಹತುಗಳ ಸ್ವರಾಜ್ಯವನ್ನು ಈ ಡಿಸೆಂಬರು 31ರೊಳಗೆ ಹಿಂದೂದೇಶಕ್ಕೆ ಕೊಡದೆ ಹೋದರೆ, ಕಾಂಗ್ರೆಸ್ ಮಹಾಸಭೆಯು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಅಸಹಕಾರವನ್ನು ಕೈಕೊಳ್ಳುವಂತೆ ಬರುವ ಲಾಹೋರ್ ಕಾಂಗ್ರೆಸ್ಸಿನಲ್ಲಿ ನಿಶ್ಚೈಸಬೇಕಾಗಿದೆಯಷ್ಟೆ. ಹಿಂದೂಸ್ಥಾನದ ಇಂಥಾ ಬಿಕ್ಕಟ್ಟಿನ ರಾಜಕೀಯ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಸಭೆಯ ಮುಂದಾಳುತನವನ್ನು ವಹಿಸುವುದು ಯಾರೆಂಬದು ಬಹು ವಿಶೇಷವಾದ ಸಂಗತಿಯಾಗಿದೆ. ಈ ಮಹಾ ಸಭೆಯ ಅಧ್ಯಕ್ಷಪದವಿಗೆ ಎಂದಿನಂತೆ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳು ತಾವು ಅಧ್ಯಕ್ಷರಾಗಿ ಆರಿಸಲು ಇಚ್ಛೈಸುವ ಮಹನೀಯರುಗಳ ಹೆಸರುಗಳನ್ನು ಸಿಫಾರಸ್ಸು ಮಾಡಿದರು. ವಾಡಿಕೆಯಂತೆ ಕಾಂಗ್ರೆಸ್ ಮಹಾಸಭೆಯ ಸ್ವಾಗತ ಕಮಿಟಿಯವರು ಬಹುಮತ ಕಾಂಗ್ರೆಸ್ ಕಮಿಟಿಗಳು ಸಿಫಾರಸ್ಸು ಮಾಡಿದ ಮಹಾತ್ಮ ಗಾಂಧಿಯವರನ್ನು ಅಧ್ಯಕ್ಷ ಪದವಿಗೆ ಆರಿಸಿದರು.

ಆದರೆ ಮಹಾತ್ಮ ಗಾಂಧಿಯವರು ಈ ಮೊದಲೇ, ತಾನು ಈಗಿನ ಯುವಕ ಉತ್ಸಾಹಿಗಳಲ್ಲಿ ಹಿಂದಿನ ನಂಬಿಕೆಯವನಾಗಿರುವುದರಿಂದಲೂ, ಅಧ್ಯಕ್ಷ ಪದವಿಯ ಆಫೀಸು ಕೆಲಸಗಳನ್ನು ನೋಡಿಕೊಳ್ಳಲು ತನಗೆ ಆಗುವುದಿಲ್ಲವಾದುದರಿಂದಲೂ ಈ 'ಮುಳ್ಳಿನ ಕಿರೀಟ'ವನ್ನು ಧರಿಸಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಳ್ಳಲಾಗುವುದಿಲ್ಲವೆಂತಲೂ, ಈ ಬಹುಮಾನವನ್ನು ಪಂಡಿತ ಜವಾಹಿರ್‌ಲಾಲ್ ನೆಹರುರವರಿಗೆ ಕೊಡಬೇಕೆಂತಲೂ ಸೂಚಿಸಿದ್ದರು. ಆದರೂ ಕೂಡ ಸ್ವಾಗತ ಕಮಿಟಿಯವರು ಮಹಾತ್ಮಾಜೀಯವರನ್ನು ಒಮ್ಮತದಿಂದ ಚುನಾಯಿಸಿದರು. ಈ ಬಹುಮಾನವನ್ನು ಅಂಗೀಕರಿಸಲು ತಾನು ಒಪ್ಪುವುದಿಲ್ಲವೆಂತ ಮಹಾತ್ಮ ಗಾಂಧಿಯವರು ಸ್ವಾಗತ ಕಮಿಟಿಗೆ ತಿಳಿಸಿರುವರು. ಆದುದರಿಂದ ಈ ವಿಷಯ ತೀರ್ಮಾನಮಾಡುವ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಈ ತಾ. ೨೮ರಲ್ಲಿ ಲಕ್ನೋದಲ್ಲಿ ಸೇರುವುದು. ಕಾಂಗ್ರೆಸ್ಸಿನ ಅಧ್ಯಕ್ಷರ ಚುನಾವಣೆಯಲ್ಲಿ ಈ ಪರಿಸ್ಥಿತಿಯು ಉಂಟಾದದ್ದು ಇದೇ ಪ್ರಥಮತವಂತೆ.

ಬ್ರಿಟಿಷ್ ಸರ್ಕಾರದವರು ವಸಾಹತು ಸ್ವರಾಜ್ಯವನ್ನು ಈ ವರ್ಷದ ಅಂತ್ಯದೊಳಗೆ ಕೊಡದೆ ಹೋದಲ್ಲಿ ಕಾಂಗ್ರೆಸು ಅಹಿಂಸಾ ಅಸಹಕಾರವನ್ನು ಯಾವ ರೂಪದಲ್ಲಾದರೂ ಕೈಕೊಳ್ಳದೆ ಹೋದರೆ ಅದು ಅಪಕೀರ್ತಿಯನ್ನು ಸಂಪಾದಿಸಿದಂತಾಗುವುದು. ಹಾಗೆ ಕೈಕೊಳ್ಳುವದಾದರೆ ಈ ಚಳವಳವನ್ನು ನಡಿಸಲು ಮಹಾತ್ಮರಿಗಿಂತ ಉತ್ತಮ ಪುರುಷರು ಬೇರೆ ಯಾರೂ ಇಲ್ಲ. ಮಹಾತ್ಮರು 'ಹಿಂದಿನ ನಂಬಿಕೆ' ಯವರಲ್ಲವೆಂದು ದೇಶವು ಕಾಂಗ್ರೆಸ್ ಕಮಿಟಿಗಳ ಸಿಫಾರಸ್ಸಿನ ಮೂಲಕವೂ, ಸ್ವಾಗತ ಕಮಿಟಿಯ ಒಮ್ಮತದ ಚುನಾವಣೆಯಿಂದಲೂ ವಿಶದ ಪಡಿಸಿದೆ.

ಪಂಡಿತ ಜವಾಹಿರ್ ಲಾಲ್ ನೆಹರುರವರು ದೊಡ್ಡ ಶಕ್ತಿಯುಳ್ಳವರು, ಅದ್ವಿತೀಯ ದೇಶಭಕ್ತರು, ಸ್ವಾತಂತ್ರ್ಯಕ್ಕಾಗಿ ಭಯಭೀತಿಗಳಿಲ್ಲದೆ ಹೋರಾಡುವಂತವರು ಮತ್ತು ಯುವಕರಿಗೆ ಆದರ್ಶ ಪ್ರಾಯವಾದ ಮುಂದಾಳು ಎಂಬುದರಲ್ಲಿ ಸಂಶಯವಿಲ್ಲ. ಅವರು ಹಿಡಿದ ಹಟವನ್ನು ಸಾಧಿಸುವುದರಲ್ಲಿ ಎಂದೂ ಎದೆಗುಂದುವವರಲ್ಲ. ಇಂಥವರು ಕಾಂಗ್ರೆಸ್ಸಿನ ಅಧ್ಯಕ್ಷಪದವಿಗೆ ಯೋಗ್ಯರಲ್ಲವೆಂದು ಯಾರೂ ಹೇಳಲಾರರು. ಆದರೆ ಅಸಹಕಾರ ಚಳವಳವನ್ನು ಪುನಹ ಹೂಡಬೇಕೆಂದಿರುವ ಈ ಬಿಕ್ಕಟ್ಟಿನ ಸಂಧಿಯಲ್ಲಿ ಆ ಅದ್ಭುತ ಚಳವಳದ ಮೂಲಪುರುಷರಾದ, ಇಡೀ ಪ್ರಪಂಚದಲ್ಲೇ ಜೀವಿತ ಮನುಷ್ಯರಲ್ಲಿ ಅತಿ ದೊಡ್ಡವರೆಂತೆನ್ನಿಸಿಕೊಂಡಿರುವ ಮಹಾತ್ಮರೇ ಭಾರತಭೂಮಿಯ ರಾಷ್ಟ್ರೀಯ ಸಭೆಯ ಮುಂದಾಳುತನವನ್ನು ವಹಿಸಲು ಶ್ರೇಷ್ಠರು ಎಂಬದರಲ್ಲಿ ಸಂದೇಹವಿಲ್ಲ. ಆದುದರಿಂದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲೂ ಕೂಡ ಇವರನ್ನೇ ಅಧ್ಯಕ್ಷರಾಗಿ ಆರಿಸಿ ಇವರು ಈ ಕಿರೀಟವನ್ನು ಧರಿಸುವಂತೆ ಮಾಡುವರಾಗಿ ಆಶಿಸುತ್ತೇವೆ.

ಕೋಮುವಾರು ತತ್ವ.

ಒಬ್ಬ ರಾಷ್ಟ್ರೀಯ ಮುಸಲ್ಮಾನ ಮುಖಂಡರಾದ ಲಾಹೋರಿನ ಡಾಕ್ಟರ್ ಶೇಕ್ ಮಹಮ್ಮದ್ ಆಲಂ ಯಂ. ಯಲ್. ಸಿ ಯವರು ಬಂಗಾಲ್ಲಂಡದ ಯುವಕರ ಕಾನ್‌ಫರೆನ್ಸಿನಲ್ಲಿ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ಹೀಗೆಂದು ಹೇಳಿದರು:—

ಕೋಮುವಾರು ತತ್ವವನ್ನು ಹೋಗಲಾಡಿಸಿ. ಆಗ್ಯೆ ರಾಜಕೀಯ ಗುಲಾಮಗಿರಿಯು ಅದರಷ್ಟಕ್ಕೇ ಮಾಯವಾಗುವುದು. ಸ್ವರಾಜ್ಯವನ್ನು ಸ್ಥಾಪಿಸಲು ನಮ್ಮ ಜೀವನದ ಪ್ರತಿಯೊಂದು ಭಾಗದಲ್ಲೂ ಕೋಮುವಾರು ತತ್ವವನ್ನು ಬೇರು ಸಹಿತ ಕಿತ್ತು ಹಾಕುವದಲ್ಲದೆ ಬೇರೆ ಯಾವ ಪ್ರಯತ್ನವೂ ಅವಶ್ಯವಿಲ್ಲವೆಂದು ನನ್ನ ದೃಢ ನಂಬಿಗೆಯಾಗಿದೆ. ಹಿಂದೂದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಯು ಹಿಂದು ಬೀಳಲು ಕೋಮುವಾರು ತತ್ವವೇ ಕಾರಣವೆಂದು ಹೇಳಬಲ್ಲೆನು. ಅದು ನಮ್ಮ ಜನಾಂಗದ ಜೀವವನ್ನೇ ಹೀರಿಬಿಟ್ಟಿದೆ. ಮತ್ತು ಈ ವಿಷವನ್ನು ಸ್ವಲ್ಪ ತೆಗೆದುಕೊಂಡರೆ ಮತ್ತಷ್ಟು ಹೆಚ್ಚಿಗೆ ತೆಗೆದುಕೊಳ್ಳಬೇಕೆನ್ನುವಷ್ಟು ಇದು ಸವಿಯಾಗಿದೆ. ನಮ್ಮಲ್ಲಿ ಪ್ರತಿಯೊಬ್ಬನಲ್ಲಿಯೂ ಇದು ಸ್ವಲ್ಪ ಮಟ್ಟಿಗೆ ಇದ್ದೇ ಇದೆ ಆದರೆ ಅದು ನಮ್ಮಲ್ಲಿ ಇಲ್ಲವೇ ಇಲ್ಲವೆಂದು ಯೋಚಿಸಿಕೊಂಡು ಮೋಸ ಹೋಗುತ್ತೇವೆ. ಈ ರೋಗವು ನಮ್ಮ ಮುಂದಾಳುಗಳ ಗುಂಪಿಗೂ ಸಹ ತಗಲಿದೆ; ಮತ್ತು ಅವರಲ್ಲಿ ಹಲವರು ಅದರ ಹಾನಿಕರವಾದ ಬೀಜವನ್ನು ದೇಶದಲ್ಲಿ ಬಿತ್ತುತ್ತಿರುವರೆಂದು ನಾನು ಧೈರ್ಯವಾಗಿ ಹೇಳಿದರೆ ನನ್ನನ್ನು ಕ್ಷಮಿಸುವಿರಾಗಿ ನಂಬುತ್ತೇನೆ

ನಮ್ಮ ಮುಂದಾಳುಗಳನೇಕರು ಈಗ ಮುಂದಾಳುಗಳಾಗಿರುವದಿಲ್ಲ. ಅವರು ಹೇಡಿಗಳಾಗಿ, ಜನಸಮುದಾಯದ ಅಭಿಪ್ರಾಯವನ್ನು ಎದುರುಗೊಳ್ಳಲಾರದವರಾಗಿರುವರು. ಅವರು ತೆರೆ ಬಂದಂತೆ ವರ್ತಿಸುತ್ತಾರೆ. ಮತ್ತು ಕೆಲವು ಸಾರಿ ರಾಷ್ಟ್ರೀಯ ಕೆಲಸದಲ್ಲಿ ನಿರಾಶಿತರಾಗಿ ಅಸಡ್ಡೆ ಹುಟ್ಟಿದಾಗ ಅವರು ಕೋಮುವಾರು ಭಾವನೆಯನ್ನು ಜನರಲ್ಲಿ ಹುಟ್ಟಿಸಿ ಕೋಮುವಾರು ಜಗಳದಲ್ಲಿ ತಮ್ಮ ಪ್ರಾಮುಖ್ಯತೆಯನ್ನು ಇಟ್ಟುಕೊಳ್ಳಲು ಯತ್ನಿಸುತ್ತಾರೆ. ಇದಕ್ಕೆ ಉದಾಹರಣೆಯಾಗಿ ಈಗಾಗಲೇ ಕೆಲವು ಮುಂದಾಳುಗಳ ವರ್ತನೆಯು ಬಹಿರಂಗಪಡಿಸಲಾಗಿದೆ; ಆದ್ದರಿಂದ ನೀವು ಮೋಸ ಹೋಗಬಾರದು. ತತ್ವವನ್ನು ಪೂಜಿಸಿರಿ. ವ್ಯಕ್ತಿಗಳನ್ನಲ್ಲ. ನೀವು ಒಂದು ಜನಾಂಗವಾಗುವ ಮೊದಲು ದೇಶವು ಕೋಮುವಾರು ಭಾವನೆಯಿಂದ ಸಂಪೂರ್ಣ ಬಿಡುಗಡೆಯಾಗಬೇಕು ಮತ್ತು ನೀವು ಒಗ್ಗಟ್ಟಿನ ಒಂದು ಜನಾಂಗವಾಗದೆ ಹೋದರೆ ಸ್ವರಾಜ್ಯವನ್ನು ಸ್ಥಾಪಿಸಲೂ ಸಾಧ್ಯವಿಲ್ಲ; ಸ್ಥಾಪಿಸಿದ್ದರಿಂದ ನಮಗೆ ಹೆಚ್ಚಿನ ಪ್ರಯೋಜನವೂ ಇಲ್ಲ. ಸ್ವರಾಜ್ಯವನ್ನು ಪಡೆಯಲು ನಿಮಗಿರುವ ಕುತೂಹಲದ ಪರಿಮಾಣವು ನೀವು ಕೋಮುವಾರು ತತ್ವವನ್ನು ತ್ಯಜಿಸುವುದರಲ್ಲಿ ಗೊತ್ತಾಗುವುದು.

ಕೋಮುವಾರು ತತ್ವವು ನಮ್ಮನ್ನು ಸಂಪೂರ್ಣ ನೀತಿಗೇಡಿಗಳಾಗಿ ಮಾಡಿ, ಹೀನಸ್ಥಿತಿಗೆ ಇಳಿಸಿದೆ. ನಮ್ಮ ಅಧೋಗತಿಯನ್ನು ನೀವು ಎಂದಾದರೂ ಯೋಚಿಸಿರುವಿರೋ ? ರೈಲ್ವೆ ಸ್ಟೇಶನುಗಳಲ್ಲಿ 'ಹಿಂದೂ ಪಾನಿ' (ನೀರು) ಮತ್ತು 'ಮುಸಲ್ಮಾನ್ ಪಾನಿ' ಎಂಬ ಕೂಗನ್ನು ಕೇಳುವಾಗ್ಯೆ ನಿಮಗೆ ಎಂಥಾ ಭಾವನೆ ಉಂಟಾಗುತ್ತೆ ಹಿಂದೂ ದೇಶದ ಹೊರಗಿನ ಜನಾಂಗಗಳು ಪ್ರಕೃತಿಯ ಶಕ್ತಿಗಳನ್ನು ಕೈವಶ ಮಾಡಿ ನಮ್ಮ ಪ್ರಯೋಜನಕ್ಕೆ ಉಪಯೋಗಿಸುವದರಲ್ಲಿ ನಿರತರಾಗಿರುವಾಗ್ಯೆ ನೀವು ದೇವರು ಎಲ್ಲರಿಗಾಗಿಯೂ ಕೊಟ್ಟಿರುವ ವಸ್ತುಗಳನ್ನು ಕೋಮುವಾರು ತತ್ವದ ಮೇರೆ ವಿಂಗಡ ಮಾಡುತ್ತಿರುವಿರಿ. ನಿಮ್ಮ ನಂತರದ ಕೆಲಸವು ಗಾಳಿಯನ್ನು 'ಹಿಂದೂ ಹವ' ಮತ್ತು 'ಮುಸಲ್ಮಾನ್ ಹವ' ವೆಂದು ವಿಭಾಗಿಸುವದಾಗಿರಬಹುದು. ನಿಮ್ಮ ಕೋಮುವಾರು ಜಗಳಗಳ ಅಂತ್ಯವೇ ಇಲ್ಲ. ಮತ್ತು ಒಂದು ಅದನ್ನು ಕೊಲ್ಲು... ಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು ಹಲವು ಮನ... ಪ್ರಾಣ ಹಾನಿಯಲ್ಲಿ ಕೊನೆಗಂಡಿವೆ. ಈ ತರಹದ ಪ... ಭಾವನೆಯು ಇರುವ ವರೆಗೂ ಒಂದು ಜನಾಂಗವಾಗಿ ಸ್ವರಾಜ್ಯವನ್ನು ಪಡೆಯಲು ನಿಮಗೆ ಸಾಧ್ಯವಾದೀತೋ ? ... ಒಂದು ದುಷ್ಟ ಚಕ್ರದಲ್ಲಿ ಜೀವಿಸುತ್ತಿದ್ದೇವೆ ಮತ್ತು ನಮ್ಮ ಯುವಮಾನರ ಮಾಯಾ ಬಲೆಗೆ ಬಿದ್ದಿದ್ದೇವೆ. ...ನ್ನು ಮುರಿಯಲು ಹಿಂದೂ ದೇಶವು ಅದರ ಯುವಕರ ...ಪೂರ್ಣ ಭರವಸೆ ಇಟ್ಟಿದೆ. ನೀವು ನಿಮ್ಮ ಕರ್ತವ್ಯ... ಮಾಡುವಿರೋ ?

ಮನಸ್ಸಿನ ಆರೋಗ್ಯಸ್ಥಿತಿ.

ದೇಹವು ಆರೋಗ್ಯಸ್ಥಿತಿಯಲ್ಲಿದ್ದರೆ, ಮನಸ್ಸೂ ಆರೋಗ್ಯಸ್ಥಿತಿಯಲ್ಲಿರುವುದೆಂಬ ಪ್ರಸಿದ್ಧವಾದ ವಾಕ್ಯವು ಸರ್ವಸಾಮಾನ್ಯವಾಗಿ ಎಲ್ಲರಿಗೂ ತಿಳಿದುದೇ! ಇದು ನಿಜವಾದ ಮಾತು. ಆದರೆ ಕೆಲವು ಸಂದರ್ಭಗಳಲ್ಲಿ ಹಲವರಿಗೆ ದೇಹಾರೋಗ್ಯವು ಸಂಪೂರ್ಣವಾಗಿದ್ದರೂ ಈ ಪ್ರಪಂಚದಲ್ಲಿ ಸುಖವಾಗಿ ಜೀವನವನ್ನು ನಡೆಸುವ ಶಕ್ತಿಯೂ, ಪರೋಪಕಾರಿಗಳಾಗುವ ಚೈತನ್ಯವೂ ಇರುವುದಿಲ್ಲ. ಸಾಧಾರಣವಾಗಿ ಅವರು ಹೆಚ್ಚು ಕಾಲ ಬದುಕುವರು. ಅದಕ್ಕೆ ಕಾರಣವೇನು? ಅವರ ಬುದ್ಧಿಯು ಕೆಟ್ಟು ಅದಕ್ಕೆ ದೇಹದ ಮೇಲಿನ ಯೋಚನೆಯು ಕಡಿಮೆಯಾಗುವುದೂ, ಮನಸ್ಸಿನಲ್ಲಿ ಚಿಂತೆ ಮೊದಲಾದುವು ಯಾವುದೂ ಇಲ್ಲದೆ, ಬುದ್ಧಿಯು ಸ್ಥಿಮಿತವಾಗಿ ಅವರ ಶಕ್ತಿಯು ಹೆಚ್ಚುವುದೂ ಕಾರಣವಾಗಿದೆ. ಆದುದರಿಂದ ಬುದ್ಧಿಯು ಕೆಟ್ಟುಹೋಗಿದ್ದರೂ ದೇಹವು ಆರೋಗ್ಯಸ್ಥಿತಿಯಲ್ಲಿರಬಹುದೆಂದು ತಿಳಿಯಬಹುದು.

ಹೀಗಿದ್ದರೆ, ಶರೀರದ ಮತ್ತು ಮನಸ್ಸಿನ ಆರೋಗ್ಯಸ್ಥಿತಿಗಳು ಬಹಳ ಮುಖ್ಯವಾದುವೆಂದೂ ಜಾಗ್ರತೆ ಮನಸ್ಸನ್ನು ಆರೋಗ್ಯಸ್ಥಿತಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಬೇಕು. ಅಂತಹ ಮನಸ್ಸಿನಿಂದ ದೇಹಾರೋಗ್ಯವೂ ಹೆಚ್ಚುವುದು. ಲೋಕದಲ್ಲಿ ಸೇರುವ ಅನೇಕ ವ್ಯಾಧಿಗಳಿಗೆ ಮನಸ್ಸೇ ಕಾರಣವು. ಚಿಂತೆ, ಕಳವಳ, ದುಃಖ ಮೊದಲಾದುವು ಮನಸ್ಸನ್ನು ಕೆಡಿಸಿ, ಅಜೀರ್ಣವ್ಯಾಧಿಗೆ ಕಾರಣವಾಗುವುದು. ಮನಸ್ಸಿನಲ್ಲಿ ಚಿಂತೆಯು ಹೆಚ್ಚಿದರೆ, ಅದು ಬಹುಮೂತ್ರವ್ಯಾಧಿಗೆ ಅವಕಾಶಕೊಡಬಹುದು. ಕೋಪೋದ್ರೇಕವಾಗಿದ್ದಾಗ, ಅನೇಕರು ಹೃದಯಸ್ತಂಭ ಅಥವಾ ಕ್ಷಿಪ್ರಸನ್ನಿ ರೋಗದಿಂದ ಸತ್ತಿರುವರು.

ಇವುಗಳಿಂದ ಮನಸ್ಸಿನ ಆರೋಗ್ಯವನ್ನೂ ದೇಹಾರೋಗ್ಯವನ್ನೂ ಸಮನಾಗಿ ಗಮನಿಸಬೇಕು. ಮನುಷ್ಯನು ತಾನೂ ಸುಖವಾಗಿ ಜೀವಿಸಿ, ಪರೋಪಕಾರಿಯಾಗಿರಲು ಇವೆರಡೂ ಸಂಪೂರ್ಣವಾಗಿರಬೇಕು. ರೋಗ ಬಂದಾಗ ಮಾತ್ರ ದೇಹಾರೋಗ್ಯ ವಿಚಾರವನ್ನು ಕುರಿತು ಆಲೋಚಿಸುವುದು, ರೋಗವೂ, ರೋಗಗಳ ಸೋಂಕೂ ತಗಲದಂತೆ ನಿವಾರಣೋಪಾಯಗಳನ್ನು ಅನುಸರಿಸುವುದು, ನಿತ್ಯಕರ್ಮಗಳನ್ನು ಕ್ರಮಪಡಿಸುವುದು, ವಸನಗಳನ್ನು ಶುಚಿಯಾಗಿಡುವುದು, ಈ ಮುಂತಾದುವು ರೋಗ ಬಂದ ಮೇಲೆ ಗುಣಕ್ಕೆ ಪ್ರಯತ್ನಿಸುವುದಕ್ಕಿಂತ ಮೇಲು. ದೇಹದಂತೆಯೇ ಬುದ್ಧಿಯ ವಿಷಯದಲ್ಲಿಯೂ ಇವುಗಳೆಲ್ಲವೂ ಮುಖ್ಯವಾದುವು. ಒಬ್ಬನಿಗೆ ಹುಚ್ಚು ಹಿಡಿದಾಗ ಮಾತ್ರ ಆತನ ಮನೋಗತಿಗಳನ್ನು ಕುರಿತು ಆಲೋಚಿಸುವುದು ತಪ್ಪು. ಯಾರಿಗೂ ಬುದ್ಧಿಭ್ರಮಣವಾಗದಂತೆ ಮಾಡುವುದೇ ನಮ್ಮ ಪ್ರಯತ್ನವಾಗಿರಬೇಕು.

ದೇಹಕ್ಕೆ ಪ್ರಾಪ್ತವಾಗಬಹುದಾದ ರೋಗಗಳನ್ನು ನಿವಾರಣೆ ಮಾಡುವುದು ಹೇಗೆ ಮುಖ್ಯವೋ ಹಾಗೆಯೇ ಮನಸ್ಸಿಗೆ ಬಾಧೆಗಳಾಗದಂತೆ ಮಾಡುವುದು ಮುಖ್ಯವಾದುದು.

ಒಬ್ಬ ಮನುಷ್ಯನ ಅಥವಾ ಸ್ತ್ರೀಯ ದೇಹವು ಆರೋಗ್ಯಸ್ಥಿತಿಯಲ್ಲಿರಬಹುದು. ಆದರೆ ಬುದ್ಧಿಯು ಕೆಟ್ಟುಹೋಗಿದ್ದರೆ, ಆ ದೇಹದಿಂದಾಗುವ ಪ್ರಯೋಜನವೇನು? ಅದೇ ಮನುಷ್ಯನ ಬುದ್ಧಿ ಬಲವು ಹೆಚ್ಚಾಗಿದ್ದು ರೋಗದಿಂದ ಹಾಸಿಗೆ ಬಿಟ್ಟೇಳಲಾರದೆ ಮಲಗಿದ್ದರೂ ಆತನು ತನ್ನ ಅಭಿಪ್ರಾಯವನ್ನು ಇತರರಿಗೆ ಹೇಳಿ ಬರೆಯಿಸಬಹುದು. ಅಥವಾ ಬಹಳ ಪ್ರಯೋಜನಕಾರಿಗಳಾದ ಆಲೋಚನೆಗಳನ್ನು ಇತರರಿಗೆ ಹೇಳಿ ಅವರಿಂದ ಆ ಕೆಲಸಗಳನ್ನು ಮಾಡಿಸಬಹುದು. ಅದವಾ ತನಗೆ ತಿಳಿದುದನ್ನು ಇತರರಿಗೆ ಹೇಳಿಕೊಡಬಹುದು.

ಮಿದುಳಿನ ರೋಗವು ಹೇಳಿದೊಡನೆಯೇ ಅಸಂಬದ್ಧವಾದ ಉಸುರನ್ನು ಧರಿಸಿ, ಬಾಯಿಗೆ ಬಂದಂತೆ ಹರಟುತ್ತಾ ಹೋಗುವ, ಅಥವಾ ಎದುರು ಸಿಕ್ಕಿದವರನ್ನೆಲ್ಲಾ ತೊಂದರೆಪಡಿಸುವ ಹುಚ್ಚರು ನಮ್ಮ ನೆನಪಿಗೆ ಬರಬಹುದು. ಆದರೆ ಇದು ರೋಗವು ಬಹಳ ಹೆಚ್ಚಿದ ಸ್ಥಿತಿಯನ್ನು ಸೂಚಿಸುವುದು. ಆ ಸ್ಥಿತಿಯಿಂದ ಗುಣ ಹೊಂದುವುದೂ ಬಹಳ ಕಷ್ಟವೇ! ದೇಹಕ್ಕೆ ಬರುವ ಇತರ ವ್ಯಾಧಿಗಳಂತೆ ಮನೋವ್ಯಾಧಿಗಳೂ ಸಾಮಾನ್ಯವಾಗಿ ಅಥವಾ ಸ್ವಲ್ಪವಾಗಿರಬಹುದು. ಇಲ್ಲವೇ ತೀವ್ರವಾಗಬಹುದು. ಅಥವಾ ಹಾಗೆಯೇ ನಿಂತುಹೋಗಬಹುದು. ಗುಣವಾಗುವಂತಿರಬಹುದು ಅಥವಾ ಗುಣವಾಗದೆಯೇ ಇರಬಹುದು. ಅನೇಕ ಮನೋವ್ಯಾಧಿಗಳನ್ನು ಪ್ರಥಮ ಸ್ಥಿತಿಯಲ್ಲಿ ಎಚ್ಚರಿಕೆಯಿಂದ ಚಿಕಿತ್ಸೆ ಮಾಡಿ ಗುಣಪಡಿಸಬಹುದು. ಅದು ಪ್ರಬಲವಾದರೆ ಎಂದಿಗೂ ಗುಣವಾಗದಂತಾಗಬಹುದು.

ಮನಸ್ಸಿನಲ್ಲಿ ವ್ಯಾಧಿಯುಂಟಾಗದಂತೆ ಕಾಪಾಡುವುದು ಈ ಜೀವಮಾನದಲ್ಲಿ ಅತ್ಯಂತ ಅಮೋಘವಾದ ವಿಷಯವು. ಸುಖವನ್ನು ಹೊಂದಲು ಸಾಧ್ಯವಾಗುವ ಸ್ಥಿತಿಯಲ್ಲಿ ಮನಸ್ಸನ್ನು ಇಟ್ಟುಕೊಳ್ಳುವುದೇ ನಮ್ಮ ಉದ್ದೇಶವಾಗಬೇಕು. ಮನಸ್ಸನ್ನು ಶಾಂತವಾದ ಸ್ಥಿತಿಯಲ್ಲಿ ಇಡುವುದೂ ಸರಿಯಾದ ಆಲೋಚನಾ ಪದ್ಧತಿಗಳನ್ನು ರೂಢಿಗೆ ತರುವುದೂ ಮುಖ್ಯವಾದುವು. ವ್ಯಾಯಾಮವು ದೇಹಕ್ಕೆ ಹೇಗೆ ಆವಶ್ಯಕವೋ ಹಾಗೆಯೇ ಮನೋಬಲಕ್ಕೂ ಅದು ಮುಖ್ಯವಾಗಿರಬೇಕು. ದೇಹದಂತೆಯೇ ಮನಸ್ಸಿಗೂ ವಿಶ್ರಾಂತಿಯು ಬೇಕು. ಆಹಾರ ಕ್ರಮ, ಶರೀರ ಸ್ವಚ್ಛತೆ ಇವುಗಳ ವಿಷಯದಲ್ಲಿ ಅಲಕ್ಷ್ಯದಿಂದಿದ್ದರೆ ದೇಹದಲ್ಲಿ ವ್ಯಾಧಿಯು ತಲೆದೋರುವಂತೆಯೇ ಆಲೋಚನೆಗಳು ಕ್ರಮವಾಗಿಲ್ಲದಿದ್ದು, ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳದೆ, ಕೋಪ ತಾಪಗಳು, ಭೀತಿ, ಅಸೂಯೆ ಮುಂತಾದವುಗಳಿಗೆ ಅವಕಾಶಕೊಟ್ಟರೆ, ಮನೋರೋಗಕ್ಕೂ ಮತ್ತು ಮನಸ್ಸಿನ ಬಾಧೆಗಳಿಗೂ ದಾರಿಕೊಟ್ಟಂತಾಗುವುದು.

ಮನೋರೋಗಕ್ಕೆ ಸಾಧಾರಣವಾಗಿ ಚಿಂತೆಯೇ ಮುಖ್ಯ ಕಾರಣವು. ಸಾಮಾನ್ಯವಾಗಿ ಜನರು ಕಾರ್ಯವನ್ನೂ ಚಿಂತೆಯನ್ನೂ ಒಂದಾಗಿರುವಂತೆ ಭಾವಿಸುವರು. ನಿರ್ಮಲವಾದ ಮನಸ್ಸಿನಿಂದಲೂ, ಉತ್ಸಾಹದಿಂದಲೂ ಯಾವ ಕೆಲಸವನ್ನು ಮಾಡಿದರೂ, ಅದುವು ಸಿದ್ಧವು. ಕೆಲಸದೊಡನೆ ಚಿಂತೆಯು ಸೇರಿದರೆ, ಪ್ರಾರಂಭಿಸಿದ ಕೆಲಸವು ನೆರವೇರುವುದಕ್ಕೆ ವಿಘ್ನವಾಗುವುದು. ಚಿಂತೆಗೆ ಅನೇಕ ಕಾರಣಗಳುಂಟು. ಶರೀರದಲ್ಲಿ ಅನಾರೋಗ್ಯವೂ, ಕೆಲಸವನ್ನು ಮಾಡಿ ಮುಗಿಸಲು ಶಕ್ತಿಯಿಲ್ಲದಿರುವುದೂ, ಮುಖ್ಯಕಾರಣಗಳು. ಈ ಸಂದರ್ಭಗಳಲ್ಲಿ ದೇಹಾರೋಗ್ಯವನ್ನು ಸಂಪಾದಿಸಿಕೊಳ್ಳಬೇಕು. ಪ್ರಾರಂಭಿಸಿದ ಕೆಲಸದಲ್ಲಿ ಜಯವಾಗುವುದೋ, ಇಲ್ಲವೋ, ಮಾಡಿದ ಕೆಲಸವನ್ನು ಇತರರು ಸ್ವೀಕರಿಸುವರೋ ಇಲ್ಲವೋ, ತನಗೆ ತಕ್ಕ ಪ್ರಯೋಜನವಾಗುವುದೋ ಇಲ್ಲವೋ, ಎಂಬ ಭೀತಿಗಳೇ ಚಿಂತೆಗೆ ಕಾರಣಗಳು. ಕೆಲಸವನ್ನು ಮಾಡುವುದಾಗಿ ನಿಶ್ಚಯಿಸಿ, ಇತರರ ಆಕ್ಷೇಪಣೆಗಳಿಗೆ ಸ್ವಲ್ಪವೂ ಲಕ್ಷ್ಯಕೊಡದೆ ಸ್ಥಿರಚಿತ್ತದಿಂದ ಜಯ ಫಲವು ಕಂಡೇ ತೀರುವುದೆಂಬ ದೃಢ ಸಂಕಲ್ಪವೊಡನೆ ದೃಢದಿಂದ ಕೆಲಸವೂ ನಡೆಯುವುದು. ಕೆಲಸವನ್ನು ಪ್ರಾರಂಭಿಸುವುದಕ್ಕೆ ಮೊದಲೇ ಅದನ್ನು ನಡೆಸಲು ಶಕ್ತಿ ಇರುವುದೋ ಇಲ್ಲವೋ ಎಂದು ಯೋಚಿಸಿಕೊಳ್ಳಬೇಕು. ಅನೇಕರು ಶಕ್ತಿಗೆ ಸಾಮರ್ಥ್ಯಕ್ಕೂ ಮೀರಿದ ಕೆಲಸವನ್ನು ಪ್ರಾರಂಭಿಸಿ ಅದನ್ನು ನಡೆಸಲಾರದೆ ವೃಥಾ ಚಿಂತಿಸುವರು. ಈ ಸ್ಥಿತಿಯಲ್ಲಿ ಅವರಿಗೆ ಕೆಲಸವು ಶಕ್ತಿಯಿಲ್ಲದಿರುವುದು ಮಾತ್ರವಲ್ಲದೆ, ಚಿಂತೆಗೆ ಗುರಿಯಾಗಿ ತಮ್ಮ ಕೈಲಾಗುವ ಕೆಲಸವನ್ನು ಮಾಡಲು ಅಶಕ್ತರಾಗುವರು.

ಪ್ರಬಲವಾದ ಭೀತಿಯು ಚಿಂತೆಗೆ ಸಹಕಾರಿಯು. ಬಾಲ್ಯದಲ್ಲಿ ಅಪಾಯಕ್ಕೆ ಗುರಿಯಾದಾಗ ತೋರುವ ಭೀತಿಯೇ ಬೇರೆ. ತಕ್ಕ ಕಾರಣಗಳಿಲ್ಲದೆ ಹುಟ್ಟುವ ಭಯವಾದರೋ ಪ್ರಯೋಜನಕಾರಿಯಾದ ಕೆಲಸವನ್ನು ಮಾಡುವ ಶಕ್ತಿಯನ್ನು ಹಾಗಿಸಿ, ಮನುಷ್ಯರನ್ನು ನಿಷ್ಪ್ರಯೋಜಕರನ್ನಾಗಿ ಮಾಡುವುದು.

ನಾವು ಪ್ರತಿದಿನವೂ ಮಾಡುವ ಕೆಲಸಗಳ ಸ್ವಭಾವವು ಎಂಥಾದರೂ ಅವುಗಳನ್ನು ಮಾಡುವಾಗ ಮನಸ್ಸು ನಿರ್ಮಲವಾಗಿಯೂ, ಸಮಾಧಾನ ಸ್ಥಿತಿಯಲ್ಲಿಯೂ ಇರಬೇಕು. ಮತ್ತು ಜಯಿಸುವ ನಂಬಿಕೆಯಿರಬೇಕು.

ಮನುಷ್ಯನ ಮನೋಗುಣವು ವ್ಯತ್ಯಾಸವಾದರೆ, ಅದಕ್ಕೆ ಕಾರ್ಯವು ಹೆಚ್ಚಿರುವುದೇ ಕಾರಣವಾಗಿರಬಹುದೆಂದು ಅನೇಕರು ಹೇಳುವುದುಂಟು. ಇದು ನಿಜವಲ್ಲ. ದೇಹಕ್ಕಾಗಲೀ, ಮನಸ್ಸಿಗಾಗಲೀ ಹೆಚ್ಚು ಕೆಲಸಕೊಡುವುದು ಅನಿವಾರ್ಯವು. ಸ್ವಲ್ಪ ಕಾಲವಾದಮೇಲೆ ಪ್ರಕೃತಿಯು ತಾನಾಗಿ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಮನುಷ್ಯನನ್ನು ಎಚ್ಚರಿಸುವುದು. ಮೇಲೆ ಹೇಳಿರುವ ಅನೇಕ ಕಾರಣಗಳಿಂದ ತೋರುವ ಚಿಂತೆಯೇ ಬುದ್ಧಿಭ್ರಾಂತಿಗೆ ಕಾರಣವೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಿರಿ.

'ಆರೋಗ್ಯ ಚಂದ್ರಿಕೆ'

ನಿರುದ್ಯೋಗ.

ಪಾಶ್ಚಾತ್ಯ ರಾಜ್ಯಗಳಲ್ಲಿ ನಾನಾ ಬಗೆಯಾದ ಕೈಗಾರಿಕೆಗಳು ಅಭಿವೃದ್ಧಿಗೆ ಬಂದು, ಅವುಗಳಲ್ಲೊಂದೊಂದೂ ಜನರ ಜೀವನೋಪಾಯಕ್ಕೆ ಆಧಾರವಾಗಿವೆ. ಆದುದರಿಂದ ಆ ದೇಶಗಳಲ್ಲಿ ಜನರ ವೃತ್ತಿ ಜೀವನೋಪಾಯವು ಸರ್ವಸಾಮಾನ್ಯವಾಗಿ ಒಂದೇ ಎಂದು ಏರ್ಪಡಿಸಲ್ಪಟ್ಟಿರುವುದಿಲ್ಲ. ಜನರ ಮಾನಸಿಕ ಮತ್ತು ದೇಹದ ಸ್ಥಿತಿಗನುಸಾರವಾಗಿ, ಜನರು ತಮಗೆ ಸುಲಭವೆಂದು ತೋರುವ ಯಾವುದಾದರೊಂದು ವೃತ್ತಿಯನ್ನವಲಂಬಿಸಿ ಜೀವನೋಪಾಯವನ್ನು ಕಲ್ಪಿಸಿಕೊಂಡಿರುವರು. ತಂದೆಯು ಅನುಸರಿಸುವ ವೃತ್ತಿಯನ್ನು ಮಕ್ಕಳು ಪರಿಗ್ರಹಿಸಬೇಕೆಂಬ ನಿರ್ಬಂಧವೇನೂ ಇಲ್ಲ. ನಮ್ಮಲ್ಲಾದರೂ ಗುಮಾಸ್ತೆಯ ಒಂದು ಸಂಸಾರದಲ್ಲಿ ಮಕ್ಕಳೆಲ್ಲರೂ ವಿದ್ಯಾಭ್ಯಾಸ ಬಳಿಕ ದೇಶಸೇವೆ, ಸರಕಾರಿ ನೌಕರಿ ಮುಂತಾದ ಕೆಲಸಗಳಲ್ಲಿ ಜೀವನವನ್ನು ಸಂಪಾದಿಸುವರು. ಮಕ್ಕಳು ಚಿಕ್ಕಂದಿನಲ್ಲಿಯೇ ತೋರುವ ಸೂಚನೆಗಳಿಂದ ತಂದೆ ತಾಯಿಗಳು ಅವರ ಯೌವನದ ವೃತ್ತಿಯನ್ನು ನಿರ್ಧರಿಸಿ ಅನುಸಿದಲೂ ಅದಕ್ಕೆ ತಕ್ಕ ಪಾಠ ಶಿಕ್ಷಣ ಕೊಡುವರು. ಈ ರೀತಿಯಾದ ಶಿಕ್ಷಣದಿಂದ ಆ ದೇಶದಲ್ಲಿ ನಿರುದ್ಯೋಗಿಗಳು ಇರುವುದೇ ಇಲ್ಲ. ಸ್ತ್ರೀಯರಿಗೆ ಅವರ ಶಕ್ತಿ ಸಾಮರ್ಥ್ಯಗಳಿಗನುರೂಪವಾದ ಕುಶಲವಿದ್ಯೆ, ಲಲಿತ ಕಲೆಗಳಲ್ಲಿ ಶಿಕ್ಷಣವು ದೊರೆಯುವುದರಿಂದ ದುರ್ದೈವವಶಾತ್ ಅವರಿಗೆ ಪಾಲಕರು ಮೃತಿ ಹೊಂದಿದಾಗಲೂ ಅವರು ನಿರ್ಗತಿಕರಾಗದೆ, ತಮ್ಮ ವಿದ್ಯೆಯಿಂದ ಜೀವನವನ್ನು ಎಂದು ನಮ್ಮ ಶಕ್ತಿಯ ಆತ್ಮಾವಲಂಬಿಗಳೂ ಆಗುವರು.

ಆದರೆ ನಮ್ಮ ದೇಶದಲ್ಲಿ ಭೂವ್ಯವಸಾಯವೊಂದೇ ಜನರಲ್ಲಿ ಬಹು ಜನರ ಮುಖ್ಯ ಜೀವನೋಪಾಯ. ಅದೂ ಜನರ ಅವಿದ್ಯಾವಂತರ ಪಾಲಾಗಿ, ವಿದ್ಯಾವಂತರ ಅನಾದರಣೆಯನ್ನು ಪಡೆದು ಇರುವುದರಿಂದಲೂ, ಅಭಿವೃದ್ಧಿಗೆ ತಕ್ಕ ದ್ರವ್ಯಾನುಕೂಲ ಪ್ರೋತ್ಸಾಹವಿಲ್ಲದಿರುವುದರಿಂದಲೂ, ದಿನ ದಿನಕ್ಕೆ ಹೀನ ದೆಸೆಯನ್ನೈದುತ್ತಿದೆ. ನಮ್ಮ ದೇಶದಲ್ಲಿರುವಂಥ ನಿಕೃಷ್ಟ ಜೀವನೋಪಾಯವು ಬೇರೆ ಇಲ್ಲವೆಂದು ಪರಿಗಣಿಸಲ್ಪಟ್ಟಿದೆ. ಬೇರೆ ವೃತ್ತಿಗಳನ್ನು ಅವಲಂಬಿಸಿರುವವರು ಪ್ರಾಯಶಃ ವಂಶಪಾರಂಪರ್ಯವಾಗಿ ಕುಲ ಕಸುಬೆಂದು ವಾಡಿಕೆಯಲ್ಲಿ ಬಂದಿರುವ ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ. ಈಗಿನ ಕಾಲದ ವಿದ್ಯಾಭ್ಯಾಸ ಕ್ರಮದ ನ್ಯೂನತೆಯಿಂದಲೋ ಅಥವಾ ತಪ್ಪು ತಿಳುವಳಿಕೆಯಿಂದಲೋ ಪ್ರತಿಯೊಬ್ಬರೂ ತಮ್ಮ ಹಿರಿಯರ ಕಸುಬು ನಿಕೃಷ್ಟವಾದುದೆಂದೂ, ಸರಕಾರಿ ಸೇವೆಯೊಂದೇ ವಿದ್ಯಾರ್ಜನೆ ಮಾಡಿದ ದಕ್ಕೆ ನಿದರ್ಶನವೆಂದೂ ಭಾವಿಸಿಕೊಂಡಿರುವರು. ಆದುದರಿಂದ ಅಲ್ಪ ಸ್ವಲ್ಪ ವಿದ್ಯಾಭ್ಯಾಸಗೈದವರು ಸರಕಾರಿ ನೌಕರಿಯನ್ನಾಶಿಸಿ, ಅದರಲ್ಲಿ ದೊರೆಯುವ ಅಲ್ಪ ಸಂಬಳವಾದರೇ ಕೃತಾರ್ಥರಾಗಿ ಕಾಲ ಕಳೆಯುತ್ತಿದ್ದಾರೆ. ಉಳಿದ ಕಸುಬುದಾರರಲ್ಲಿ ವಿದ್ಯಾವಂತರು ಸಿಗುವುದೇ ಅಪರೂಪವಾಗಿದೆ. ಈ ಕಾರಣಗಳಿಂದ ಭೂವ್ಯವಸಾಯವೂ ಇತರ ಕಸುಬುಗಳೂ ನಮ್ಮ ದೇಶೀಯರ ಅನಾದರಣೆಗೆ ಪಾತ್ರವಾಗಿ ಹಿಂದೆ ಬಿದ್ದು ನಿಂತದರಲ್ಲಿ ಅವನ್ನು ಅನುಸರಿಸುವವರಲ್ಲಿ ಕೇವಲ ಅವಶ್ಯಕವಾದ ಆಲಕ್ಷ್ಯವೂ ನಡೆಸುವುದೇ ದುಸ್ತರವಾಗಿದೆ.

ಸರಕಾರಿ ನೌಕರಿಗಳು ಕೇವಲ ಕಡಿಮೆ ಸಂಖ್ಯೆಯುವು ಅವರಲ್ಲಿಯ ಸುಖ ಜೀವನವನ್ನು ಮಾಡಿಸುವ ಸಂಬಳವುಳ್ಳವುಗಳು ಬಹಳ ಕಡಿಮೆ. ವಿದ್ಯಾವಂತರಾದವರು ಸರಕಾರಿ ನೌಕರಿಯನ್ನು ಪಡೆಯುವ ಪ್ರಯತ್ನದಲ್ಲಿರುವುದರಿಂದಲೇ, ಪ್ರತಿ ಒಂದು ಖಾಲಿ ನೌಕರಿಗೆ ಹೆಚ್ಚಿನ ಯೋಗ್ಯತಾ ಪತ್ರಗಳುಳ್ಳ ನೂರಾರು ಜನರು ಅರ್ಜಿಗಳನ್ನು ಹಾಕಿಕೊಳ್ಳುತ್ತಿರುವರು. ಹಿರಿಯರ ಆಸ್ತಿಪಾಸ್ತಿಗಳನ್ನು ವಿಕ್ರಯಿಸಿ ಅವರ ದೇಹದಂಡನೆಯ ಸಂಪಾದನೆಯ ಹಣದಿಂದ ವಿದ್ಯಾರ್ಜನೆ ಮಾಡಿದವರು ಪ್ರಯತ್ನದಲ್ಲಿ ಆ ಹಿರಿಯರ ಆಸ್ತಿಪಾಸ್ತಿಗಳನ್ನು ರಕ್ಷಿಸದೆಯೂ, ಅವರ ಜೀವನೋಪಾಯವನ್ನು ನಡೆಸದೆಯೂ, ಕೇವಲ ತಮ್ಮ ಹೆಂಡತಿ ಮಕ್ಕಳ ಅನ್ನ ಬಟ್ಟೆಗಳಿಗೂ ಸಾಲದ ವೃತ್ತಿಗಳಲ್ಲಿ ತೊಳಲುವುದು ನಿಜವಾಗಿಯೂ ವ್ಯಸನಕರವಾಗಿದೆ.

ಸದ್ಯದಲ್ಲಿ ನಮ್ಮ ದೇಶದಲ್ಲಿ ಶೇಕಡ ೭೦ ಭಾಗ ಜನರು ಭೂವ್ಯವಸಾಯದಿಂದ ಜೀವಿಸತಕ್ಕವರಾಗಿದ್ದಾರೆ. ಈ ವೃತ್ತಿಯನ್ನು ಅವರು ಶಾಸ್ತ್ರೀಯವಾಗಿ ನಡೆಸುವರಾದರೆ ಇಲ್ಲಿನ ರೈತರೂ ಪಾಶ್ಚಾತ್ಯ ರೈತರಂತೆ ಸುಖ ಸಂಪತ್ತುಗಳಿಂದ ಜೀವಿಸಬಹುದು. ಅಲ್ಲದೆ ಇತರ ವೃತ್ತಿಗಳನ್ನು ಅನುಸರಿಸುವವರಿಗೂ ಜೀವನೋಪಾಯವನ್ನು ನಡೆಸಬಹುದಾಗಿದೆ. ಎಲ್ಲಾ ವೃತ್ತಿಗಳಿಗೂ ಭೂವ್ಯವಸಾಯವೇ ಮೂಲಾಧಾರವಾದುದರಿಂದ ಇದು ಅಭಿವೃದ್ಧಿ ಸ್ಥಿತಿಯಲ್ಲಿದ್ದರೆ, ಇತರ ವೃತ್ತಿಗಳು ಮೇಲ್ಮೆಯನ್ನು ಪಡೆಯುವುವು. ಹೀಗೆಂದ ಮೇಲೆ ನಮ್ಮ ದೇಶೀಯರ ಜೀವನ ಸಮಸ್ಯೆಯು ಭೂವ್ಯವಸಾಯಗಾರರ ಸ್ಥಿತಿಗಳಿಂದ ನಿರ್ಧಾರವಾಗಬೇಕಾಗುವುದು.

ಇತರ ವೃತ್ತಿಗಳಲ್ಲಿ ಹೆಚ್ಚು ಜನರು ತೊಡಗಿದರೆ, ಅದರಲ್ಲಿ ಲಾಭ ಕಡಿಮೆ, ಭೂವ್ಯವಸಾಯವು ಹೀಗಲ್ಲ. ಹೆಚ್ಚು ಜನರು ಈ ಕಸುಬಿನಲ್ಲಿ ನಿರತರಾದಷ್ಟೂ ಫಲಜಾಸ್ತಿ, ಭೂಮ್ಯುತ್ಪನ್ನವು ಹೆಚ್ಚಾದಷ್ಟೂ ಕೃಷಿಕನ ಸ್ಥಿತಿಗತಿಗಳು ಮೇಲ್ಪಡುವವು. ಇತರ ವೃತ್ತಿಯವರಿಗೆ ಅಗತ್ಯವಾದ ಕಚ್ಚಾ ಸಾಮಾನುಗಳು ಹೇರಳವಾಗಿ ದೊರೆಯುವವು. ಆದ್ದರಿಂದ ಭೂವ್ಯವಸಾಯವನ್ನು ವಿಸ್ತರಿಸಿ ಅದನ್ನು ಶಾಸ್ತ್ರೀಯವಾಗಿ ನೂತನ ಸಾಧನ, ಗೊಬ್ಬರ, ಉತ್ತಮವಾದ ಬೀಜಗಳಿಂದ ಉತ್ತಮ ಸ್ಥಿತಿಗೆ ತರಲು ವಿದ್ಯಾವಂತರಾದವರು ಈ ಕಸುಬಿನಲ್ಲಿ ಪ್ರವೇಶಿಸಬೇಕಾಗಿದೆ. ಗ್ರಾಮಾಂತರಗಳಿಂದ ವಿದ್ಯಾವಂತರಾಗಿ ಸರಕಾರಿ ನೌಕರಿಯನ್ನು ಹುಡುಕಿಕೊಂಡು ಹೋಗುವವರೂ ಹಿಂತಿರುಗಿ ಗ್ರಾಮಗಳಲ್ಲಿ ನೆಲೆಸಿ ನಿಲ್ಲಬೇಕು. ಇತರ ವೃತ್ತಿಗಳಲ್ಲಿ ಪ್ರಯೋಜನವನ್ನು ಕಾಣದಿರುವ ಪಟ್ಟಣಿಗ ವಿದ್ಯಾವಂತರೂ ಗ್ರಾಮಗಳನ್ನು ಸೇರಬೇಕು. ಇವರೆಲ್ಲರೂ ಭೂವ್ಯವಸಾಯವನ್ನು ಕೈಕೊಂಡರೆ ವಿದ್ಯಾವಂತರೂ ಅವಿದ್ಯಾವಂತರೂ ಅವರ ದೃಷ್ಟಾಂತ ಅನುಸರಿಸುವವರಿಂದ ದೇಶದ ನಿರಾದರಣೆಯಾಗಿ ಕೃಷಿ ಕಸಬು ಉತ್ತಮ ಸ್ಥಿತಿಗೆ ಬರುವುದು. ಭೂವ್ಯವಸಾಯದಿಂದ ಕನಿಷ್ಠಪಕ್ಷ ನಿರಾತಂಕ ಜೀವನ ನಡೆಸುವದಕ್ಕಾದರೂ ಅವಕಾಶವಿದೆ. ಕೃಷಿಯಿಂದ ಮಾಡುವವರಿಗೆ ಸುಖಜೀವನವಾಗುವುದು. ಸ್ವತಂತ್ರವಾಗಿ ಮಾಡುವವರು ತಮ್ಮ ಮತ್ತು ದೇಶದ ಆರ್ಥಿಕ ಸಂಪತ್ತನ್ನೇ ಅಭಿವೃದ್ಧಿಗೊಳಿಸಬಹುದು. ಇದರಿಂದ ವಿದ್ಯಾವಂತರಿಗೆ ಭೂವ್ಯವಸಾಯವು ಇರುವವರೆಗೆ ನಿರುದ್ಯೋಗದ ಚಿಂತೆಯು ಪಟ್ಟಬೇಕಾದುದಿಲ್ಲ. ಇದನ್ನನುಸರಿಸಲು ಪ್ರಾರಂಭದಲ್ಲಿ ಅವರಿಗೆ ಸರಕಾರದ ಸಹಾಯವು ಬೇಕಾಗುವುದು. ಈ ವೃತ್ತಿಯನ್ನು ನಮ್ಮ ವಿದ್ಯಾವಂತರು ಅನುಸರಿಸಲು ಮುಂದೆ ಬರುವ ಕಾಲವು ದೂರವಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಜನ ಪತ್ರಿಕೆ

WANTED CANDIDATES.

Service Guaranteed. Session Commencing. London Diplomas. Fare free. Apply for Guide to Chances enclosing 2 anna stamps

ROYAL ELECTRICAL COLLEGE
Naichabandan
Delhi

0—6

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವ್ರದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವ್ರದು ಮತ್ತು ಇದು ಮಧುರವಾಗಿರುವ್ರದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ೧ಕ್ಕೆ 0–14–0. ಟಿ. ಖ. 0–9–0.

ಕೆ. ಟಿ. ಡೋಂಗರೆ ಕಂಪೆನಿ,

52–50 ಗಿರಿಗಾಂವ, ಮುಂಬಯಿ.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges & Hunting Requisites

for SEASON 1929–30.



CURRENT CATALOGUE ON APPLICATION

THE BOMBAY ARMOURY,

Specialist in Arms & Ammunition

331, ABDULREHMAN STREET,

BOMBAY No 4

24–11

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಅಶೆಯ ಕಳಕೊಳ್ಳಬೇಡಿ | ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ | ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ.

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹಿಡಿಯುವಿಕೆ, ಹೊಟ್ಟೆ ಶೂಲೆ, ದುಸ್ವಪ್ನ ಬೀಳುವಿಕೆ ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ, ವಾಂತಿ ಸರ್ಪಶಾಪ ಪಿಶಾಚಬಾಧೆಯಿಂದ ನರಳುವಿಕೆ, ಬಿಳುಪು, ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಆಕಸ್ಮಾತ್ ಸಂದುರೋಗ ಮುಟ್ಟುದೋಷ ಕಾಮಿನಿ ಗ್ರಹಪೀಡೆ, ದೃಷ್ಟಿದೋಷ ಭಯದಿಂದ ಜ್ವರಬೀಳುವಿಕೆ ಕ್ಷೀಣ ಹೊಂದುವಿಕೆ ಜಪ್ಪು ಇರುವಿಕೆ ಮುಖಗಜ್ಜಿ ಹೊಟ್ಟೆಯೊಳಗಿಂದ ಏಳೋದು ಮೊದಲಾದವುಗಳಿಂದ ಕಾಡುತ್ತಿರುವದು ಗರ್ಭರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇವಲ್ಲ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲೆಂದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ತಿಳಿಕೊಳ್ಳಿರಿ ಹೆಣ್ಣು ಮಕ್ಕಳಿಗೆ ಸಂತಾನ ದಯಿಂದ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨–೮–೦ ಪೋಷ್ಟು ಖರ್ಚು ಬೇರೆ ಆಗತಕ್ಕ ವಿಕಾರಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತ ಬರೆಯಿರಿ

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52–10 ಮು. ಪೋ. ಆಥಣಿ, ಜಿ. ಬೆಳಗಾಂವ.

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಬಟ್ಟೆಯ ರಂಗಿಗೂ, ಬಟ್ಟೆಯ ನಮೂನೆಗೂ ಮರುಳಾಗಿ ಪರದೇಶಿ ಬಟ್ಟೆಯನ್ನು ಕೊಂಡುಕೊಂಡು ಅನ್ನವಿಲ್ಲದೆ ನರಳುತ್ತಿರುವ ಲಕ್ಷಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡುತ್ತಿರುವಿರಾ? ಇಲ್ಲವೇ, ದಿನಕೊಮ್ಮೆ ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ನರಳುತ್ತಿರುವ ಲಕ್ಷಾನುಲಕ್ಷ ಬಡವಾಯಿ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಬಟ್ಟೆಯನ್ನು ಕೊಂಡುಕೊಳ್ಳಲು ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಯೂ ಈ ರೀತಿಯಾಗಿ ನಮ್ಮ ಬಡ ದೇಶೀಯರ ಜೀವನಕ್ಕೆ ದಾರಿಯಾಗುತ್ತೆ.

	ರು	ಆ	ಪೈ.
ಹತ್ತಿ ಬೆಳೆದವನಿಗೆ	0	3	0
ಹತ್ತಿ ಬಿಡಿಸಿದವನಿಗೆ	0	0	6
ಹತ್ತಿ ಹಿಕ್ಕುವವನಿಗೆ	0	1	9
ನೂಲು ಮಾಡುವವನಿಗೆ	0	3	9
ಬಟ್ಟೆ ನೆಯ್ಯುವವನಿಗ	0	4	9
ಅಗಸನಿಗ	0	0	6
ಬಟ್ಟೆ ಅತ್ತಿತ್ತ ಸಾಗಿಸ ವಕ್ಕೆ	0	0	9
ಖಾದಿ ಅಂಗಡಿಯವನಿಗ	0	1	0
	1	0	0

ಖಾದಿಯನ್ನು ಉಟ್ಟು, ಪರದೇಶಕ್ಕೆ ವರ್ಷಕ್ಕೆ 60 ಕೋಟಿ ರೂಪಾಯಿ ಹೋಗುವದನ್ನು ನಿಲ್ಲಿಸಿ. ಆಪೇಕ್ಷಿಸಿದಲ್ಲಿ ಬೇಕಾದ ಬಟ್ಟೆಯನ್ನು ನಿಮ್ಮ ಮನೆಯ ಬಾಗಲಿಗೆ ಖಾದ್ದಾಗಿ ತಂದು ಕೊಡುವೆವು.

ಮೇನೇಜರು,

24–7. ಖಾದಿಭಂಡಾರ,

ವೀರಾಜಪೇಟೆ.

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದವಾದಿ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉಷ್ಣವಸು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು —ಕ್ರಯ ಡಬ್ಬಿ 1 ಕ್ಕೆ 2–8–0, ಮೂರು ಡಬ್ಬಿಗಳಿಗೆ ರೂ. 7–0–0

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1 ಕ್ಕೆ 0–10–0 3 ಕ್ಕೆ 1–12–0.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ, ಮಲೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–2–0.

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆನೋವು, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ, ಕಡಿಮೆಯಾಗಿರುವಿಕೆಗೂ ದಿವ್ಯ ... ಬಾಟ್ಲಿ 1 ಕ್ಕೆ 1–4–0 3 ಕ್ಕೆ 3–8–0.

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0–8–0, 3ಕ್ಕೆ 1...

೬. ಕಸ್ತೂರಿ ಮಿಶ್ರಣ.

ದಂತ ಮುಲಾಂಪ್ಪ ಬಾಣಂತಿಯರಿಗೆ. ಬಾಟ್ಲಿ 1 ಕ್ಕೆ 1... 3 ಬಾಟ್ಲಿಗೆ 4–4–0.

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1–4–0, 3 ಬಾಟ್ಲಿಗೆ 3...

೮. ಚವನ ಪ್ರಾಶ ಡಬ್ಬಿ 1 ಕ್ಕೆ 2–0–0

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ. ಖುಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷದಿ ರವಾನಿಸ ಬಹುದು ಕೆಟಲಾಗು ತರಿಸಿ ನೋಡಿ

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

52–44 ರಥಬೀದಿ, ಮಂಗಳೂರು, ದ. ಕನ್ನಡ.

ಮಾರಾಟಕ್ಕಿದೆ.

ನನ್ನ ಬಾಪ್ತು, ಶನಿವಾರಸಂತೆ ಹೋಬಳಿ ಹುಲುಕೋಡು ಗ್ರಾಮದಲ್ಲಿರುವ ಮೂವತ್ತೈದು ಎಕರು ಕಾಫಿ ತೋಟದ ಪೈಕಿ 23 ಎಕರು ಕಾಫಿ ವ್ಯವಸಾಯದ ಮತ್ತು 3 ಎಕರು ಕಿತ್ತಳೆ, ಬಾಳೆ, ಕಸಿಮಾವು, ತೆಂಗು ವಗ್ಯೆರೆ ವ್ಯವಸಾಯದ ಜಾಗ ಮತ್ತು 5 ಎಕರು ತಂಭೂಮಿ, 10 ಎಕರು ಕುಕ್ಕಿ ಜಮೀನು, ಇದಲ್ಲದೆ 9 ಎಕರು ಕಾಫಿ ಸಾಗುವಳಿಗೆ ಲಾಯಕ್ಕಾದ ಕಾಡು ಜಾಗ ಸಹ ಮಾರಾಟಕ್ಕಿದೆ. ಈ ಸೊತ್ತಿಗೆ ಕೊಡ್ಲಿಪೇಟೆ ಪೈರೋಡಿನಿಂದ ಒಂದು ಮೈಲು ದೂರವಿದೆ ಮಲ್ಲಿಪಟ್ಟಣಕ್ಕೆ ಹೋಗುವ ಡಿಸ್ಟ್ರಿಕ್ಟ್‌ಬೋರ್ಡು ರಸ್ತೆಯು ಈ ಜಾಗದ ಪಕ್ಕದಲ್ಲಿಯೇ ದಾಟುತ್ತದೆ. ಈ ತೋಟದಲ್ಲಿ ಮಂಗಳೂರು ಹಂಚು ಹಾಕಿದ ಒಂದು ಚಿಕ್ಕ ಬಂಗಲೆಯೂ, ಕೂಲಿ ಆಳುಗಳ 2 ಲೈನುಗಳೂ ಸಹ ಇವೆ. ವರ್ಷಕ್ಕೆ 2500 ರೂಪಾಯಿ ವೇಸ್ಟು ಮುಟ್ಟಾವಳಿ ಇದೆ. ಕಾಯಿಷ್ ಇರುವವರು ಈ ಸೊತ್ತನ್ನು ನೋಡಿ ಈ ಕೆಳಗಿನ ವಿಳಾಸದವರಿಗೆ ಬರಕೊಂಡಲ್ಲಿ ತಪಸೀಲ್ ಕ್ರಯ ವಗ್ಯೆರೆ ತಿಳಿಯಬಹುದು

ಶನಿವಾರಸಂತೆ,
ತಾ. 23—8—29.

ಜೆ. ಪಿ. ಬಸವಣ್ಣಯ್ಯ,
ಪ್ಲಾಂಟರು,
ಬೆಳ್ಳಾರಳ್ಳಿ ಎಸ್ಟೇಟ್.

4—3

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ಮೂಸವ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೂಡಿದೆ.

ಕ್ರಯ ಪುಸ್ತಕ ೧ಕ್ಕೆ ರೂ ೧—೨—೦.

ಎನ್. ವಿ. ಗೋಪಾಲ್ ಬುಕ್ ಡಿಪೋ,
37. ತಿರುಪಳ್ಳಿಬೀದಿ, ಮದರಾಸ್.

52—35

Lamps

Just a[illegible] Basel Mission fame)

Table **d!** **Shop Early!!**

brass fittings—glass container with 6/8, & 5/– Shade @ Rs 7/8, 6/12

Wall Lan.

brass fittings & glass container with 1/8, & 1/2 Each @ Rs 3/12, 3/–.

Hanging Lamp

Hanging Lamp. [illegible]ss container @ Rs 3/12.

Lanterns thoroughly. container @ Rs. 2/12.

3/2 & 3/ Each.

Spare Chimneys @ Rs. 3/4

The Coorg Empl.

Mercara. **Sm,**

ur.

48—11

ಟೇಬಲ್ ಟೈಂಪೀಸು ಇನಾ—

ಈ ಕಾಣುವ ಟ್ರೋಲ್ಡ ವಾಚು, ಬಹು ನೇಲಾಟ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿವೆ ಬಿರಾರು ಗಂಟೆಯನ್ನು ತೋರಿಸುವವು. ಇದರ ಕೇಸು ಭಂಗಾರಕ್ಕೆ ಸರಿಸಮಾನವಾಗಿರುವುದು. ಇದಕ್ಕೆ ಖಾತ್ರಿಯಿಂದ ೧ ವರ್ಷ ಗ್ಯಾರಂಟಿ ಕೂಡ ಇದೆ. ಈ ಚಿಕ್ಕ ಕಾಣುವ ರಿಸ್ಟ್ ವಾಚನ್ನು ಈ ವಿಶದಲ್ಲಿ ತರಿಸಿಕೊಳ್ಳುವರಿಗೆ ಟೇಬಲ್ ಟೈಂಪೀಸ್ ಒಂದನ್ನು ಇನಾಮಾಗಿ ಕೊಡುವೆವು ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1 ಕ್ಕೆ 7—0—0

ವಿಳಾಸ—ಕೆ ಎನ್ ಜೆನ್‌ಸನ್ ಅಂಡ್ ಕೊ,
16೪ ಚೈನಾ ಬಜಾರ್, ಮದರಾಸು.

52—11

ಭಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಬಣ್ಣವು ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಸವರನ್ ಭಂಗಾರದ ಬಣ್ಣ ಕೊಟ್ಟಿದೆ ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ. ೧ಕ್ಕೆ ೧೨ ಆ. ೩ ಉಂಗುರಗಳಿಗೆ ಒಂದು ಟೇಬಲ್ ಟೈಂಪೀಸನ್ನೂ, ೬ ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯ್ಯಲ್ಲಿ ಕಟ್ಟುವ ರಿಸ್ಟ್ ವಾಚನ್ನು ಇನಾಮಾಗಿ ಕೊಡುತ್ತೇವೆ.

ವಿಳಾಸ.—ಲೀಗಲ್ ವಾಚ್ ಕಂಪೆನಿ,
ಪೊ. ಬಾ. 243, ಮದರಾಸು

52—11

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕಾರ್ಡು ಬರೆದರೆ ೧ಗಿನ ಕ್ಯಾಟಲಾಗ, ಮಾಫಿಯಾಗಿ ಕಳುಹಿಸಲ್ಪಡುವುದು

ಜೋಡು ಹೊಳವಿನ ತೋಟದ ರೈಫಲುಗಳು	ರೂ.	120	ರಿಂದ	ರೂ	2750	ರ ವರೆಗೆ
ಒಂಟಿ " " "	"	35	"	"	950	"
ಜೋಡು " " ಕೋವಿಗಳು	"	50	"	"	1350	"
ಒಂಟಿ " " "	"	35	"	"	275	"
ಜೋಡು ಹೊಳವಿನ ಕೇಪು "	"	45	"	"	135	"
ಒಂಟಿ " " "	"	30	"	"	80	"
ಬ್ರೀಚ್ ಲೋಡಿಂಗ್ ರಿವಾಲ್ವರುಗಳು	"	35	"	"	350	"
ಪಿಸ್ತೋಲುಗಳು	"	30	"	"	150	"

ಕಾಡು ಮೃಗಗಳ ಬೇಟೆ, ವಿಮಾನ ಬೇಟೆ ಮುಂತಾದ ಎಲ್ಲಾ ತರಹದ ರಾತ್ರಿಯ ವಿನೋದ ಮತ್ತು ಕೆಲಸಗಳಿಗೆ ಬಹು ಉಪಯೋಗಕರವಾದ ಉತ್ತಮ 'ಸರ್ಚ್ ಲೈಟ್' ಎಂಬ ದೀಪಕ್ಕೆ ಬರೇ ರೂ. 30. ರವಾನೆಯ ಚಾರ್ಜಿಲ್ಲ. ಕತ್ತಿಗಳು, ಬರ್ಚಿಗಳು, ತೋಟಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

210 Abdul Rehman Street, BOMBAY.

24—3

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರದ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

ದಿಲ್ ಬಹರ್ ಫ್ಲ್ಯೂಟ್ ಸಿಂಗಲ್ ರೀಡ್ ಹಾರ್ಮೋನಿಯಂ	1 ಕ್ಕೆ	50	8	0
ಸಿದ್ಧಪ್ಪಾಸ್ ಫ್ಲ್ಯೂಟ್	"	"	42	8	0
ಸ್ವಾತಂತ್ರ್ಯ	"	"	40	0	0
ಮೋಹನ್	"	"	37	8	0
ಮೀನ್ಸ್ಟ್ರೇಲ್	"	"	35	0	0
ಮಹರಾಜಾ	"	"	32	8	0
ಕೊಹಿನೂರು	"	"	29	8	0
ಮೊಂಡ್	"	"	27	8	0
[illegible]ರೀ	"	"	25	0	0

[illegible]ಬಹರ್ ಫ್ಲ್ಯೂಟ್ ಡಬ್ಬಲ್ ರೀಡ್ ಹಾರ್ಮೋನಿಯಂ	1 ಕ್ಕೆ	85	0	0
[illegible]ಲ್	"	56	0	0
[illegible]ಪರ್	"	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಗಳುಳ್ಳ ಖಾತ್ರಿಯಾದ ಬಂದೋಬಸ್ತಾದ ಫೌಂಟನ್ ಪೆನ್ನುಗಳು.

ವರ್ಲ್ಡ್ ಮಾಸ್ಟರ್ ಫೌಂಟನ್ ಪೆನ್	1 ಕ್ಕೆ	3	0	0
" ಬಿಗ್‌ಬ್ಯಾರಲ್ "	"	3	2	0
" ಸ್ಕ್ರೂಕ್ಯಾಪ್ "	"	3	8	0
" ಮರ್ಬಲ್ ಕಲರ್ "	"	3	14	0
" ಮಾಟಲ್ ಸ್ಕ್ರೂಕ್ಯಾಪ್ "	"	4	4	0
" ಬ್ರೌನ್‌ಕಲರ್ ಸೆಲ್ಫ್‌ಫಿಲಿಂಗ್ ಪೆನ್ "	"	3	8	0
" ಸೇಫ್ಟಿ ಪೆನ್	"	6	8	0
" ಲೇಡೀಸ್ ಸೈಜಿನ ಮಾರ್ಬಲ್ ಕಲರ್ ಪೆನ್	"	4	8	0
ಬ್ಲಾಕ್‌ಬರ್ಡ್ ಪೆನ್ 1 ಕ್ಕೆ 3 8 0 ಮತ್ತು		3	12	0
ಸ್ವಾನ್ ಪೆನ್ " 6 8 0	"	7	0	0
ವಾಟರ್‌ಮ್ಯಾನ್ ಐಡಿಯಲ್ 1 ಕ್ಕೆ 8 0 0	"	8	8	0
" ಸೆಲ್ಫ್ ಫಿಲ್ಲಿಂಗ್ ಮತ್ತು ಸೇಫ್ಟಿ ಪೆನ್	1 ಕ್ಕೆ	12	0	0
ಬಿಗ್‌ಬ್ಯಾರಲ್ ಹಾರ್ಡ್‌ವೇರ್	"	8	0	0
" ಸಫ್ಲ್ಯೂಯನ್ ಪೆನ್	1 ಕ್ಕೆ	17	0	0

ಖಾತ್ರಿಯಾದ ಬಂದೋಬಸ್ತಾದ ಟೈಂಪೀಸುಗಳು.

ಸಣ್ಣ ಸೈಜಿನ ಜರ್ಮನ್ ಟೈಂಪೀಸು	1 ಕ್ಕೆ	2	2	0
ಜರ್ಮನ್ ಗುಂಡಾಕೃತಿಯ ಅಲಾರಂ ಟೈಂಪೀಸು				
ಅನ್‌ಸೋನಿಯಾ ಟೈಂಪೀಸು	"	3	12	0
" ಅಲಾರಂ	"	5	13	0
ಬಿಗ್‌ಬೆನ್ "	"	5	6	0
" ಅಟೋಮೆಟಿಕ್ ಸೈಲೆಂಟ್ ಅಲಾರಂ ಟೈಂಪೀಸು	"	9	6	0
ಘಂಟೆ ತೋರಿಸಿ ಅಲಾರಂ ಬಾರಿಸುವ ಕ್ಯಾರೇಜ್ ಕ್ಲಾಕ್	"	13	5	0
" ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1 ಕ್ಕೆ	"	7	2	0
" ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಭಾರಿಸುವ ಕ್ಯಾರೇಜ್ ಕ್ಲಾಕ್		8	10	0
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಕೇಳಾರ್ಸಿದ ಹಾಗುವಂತೆಗಾನವಹುದಾದ ಕ್ಯಾರೇಜ್ ಕ್ಲಾಕ್	1 ಕ್ಕೆ	9	12	0
	1 ಕ್ಕೆ	1[illegible]		

ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

52—18

ಪ್ರಕಟಣೆ.

ಕೊಡಗು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಮಡಿಕೇರಿ

ಆಥರೈಸ್ಡ್ ಕ್ಯಾಪಿಟಲ್ 50000

ಷೇರ್ ಬಂಡವಾಳ 20160

ವರ್ಕಿಂಗ್ ಕ್ಯಾಪಿಟಲ್ 1,87,716

ಜನರಿಂದ ಠೇವಣಿ ತೆಗೆದುಕೊಳ್ಳುವ ಸಹಕಾರ ಸಂಘ

ಈ ಬ್ಯಾಂಕಿನಿಂದ ಕೊಡುವ

ಠೇವಣಿಗೆ ಹೆಚ್ಚಾಗಿ ಸಾಲಕೊಡುವ ಹೆಚ್ಚಿನ ವಾಯಿದೆಯ ಒಂದು ವರ್ಷ ವಾಯಿದೆಯಾದ ರೂ. 5-0-0ರ ಠೇವಣಾತಿಗಳಿಗೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ದರದಲ್ಲಿ ಬಡ್ಡಿ ದೊರೆಯಾನ ಶೇ ಬಡ್ಡಿ ದೊರೆಯುತ್ತೆ ಠಾತಿಗಳಿಗೆ ಕೋಆಪರೇಟಿವ್ ರಿಜಿಸ್ಟ್ರಾರವರು ವರ್ಷಕ್ಕೆ ಗೊತ್ತಾಗಿದೆ.

ಶಿಕ್ಷ ಅಜವರು, ಪೈಯ್ಯನವರು, ಕೋದಂಡಪುರ್.	ಡೈರೆಕ್ಟರ್. ಕೊಂಗೆಟ್ಟಿರ ಅಪ್ಪಯ್ಯನವರು.

ಸಕ್ರೆಟರಿ

ಯಸ್ ವೆಂಕಟ್ರಾಮನ್ ಬಿ. ಎ., ಬಿ. ಎಲ್.

ತಾ 1—7—1929

ಸೂಚನೆ.

ಈ ಸಂಸ್ಥೆ ವಾರ್ಷಿಕರು ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಮುಖಾಂತರ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾ ದಾರರೆಲ್ಲರೂ ಅವರಿಗೆ ಅನುಕೂಲವಾದ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಲಾಗಿದೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು.
ಮರನಾಡು—ಮೆ ಶೇಕರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಸಣೀರ ಗಂಡಪ್ಪನವರು, ಮತ್ತು ಮೆ. ಮಂಡೇಪಂಡ ಸೋಮಯ್ಯನವರು, (ಬಾದಿಭಂಡಾರ.)
ಮೂರ್ನಾಡು—ಪಡೆಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಯ್ಯನವರು,
ಕುದಿಕೇರಿ & ತಿತಿಮತಿ—ಮೆ ಜಿ. ಮಾದಯ್ಯನವರು

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಒಪಾಚ್ಛಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ ಪಾಕ್ ಟ್ಯಾಕ್ ಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಜಾರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ ಮೇನೇಜರ್ "ಕೊಡಗು" ಮಡಿಕೇರಿ.



12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART.
321 Abdul Rehman Street

ಕಷಾಯ ಮಲೇರಿಯ ಗುಳಿಗೆ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ ಜ್ವರ ದಿನವೂ ಬರುವ ಜ್ವರ 3-4 ದಿನಗಳಿಗೊಂದು ಸಾರಿ ಬರುವ ಜ್ವರ ಚಳಿಯಿಂದ ಬರುವ ಜ್ವರ, ಮತ್ತು ಪ್ಲೀಹ ದೋಷದಿಂದ ಬರುವ ಜ್ವರಗಳಿಗೆ ಬಾಗ್ಯ ಗುಣ ಕೊಡುತ್ತದೆ. ... 3ಕ್ಕೆ ರೂ 1—0— ... ರೂ 7—8—0, 12ಕ್ಕೆ ರೂ 14

... ರೂ. 1—?—0 ... 12—0

ರೋಮನಾಶಿನಿ.— ಈ ಪುಡಿಯನ್ನು ನೀರಿನಲ್ಲಿ ಕಲಸಿ ಸ್ವಲ್ಪ ಮೈಯಲ್ಲಿ ರೋಮವಿರುವ ಭಾಗಗಳಿಗೆ ಹಚ್ಚಲು ರೋಮವೆಲ್ಲಾ ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 ಡಜನಿಗೆ 3—3—0

ಮನೋಲ್ಲಾಸಿನಿ ತೈಲ—ಕಲಿಸೋಲು, ಕರಿತಿರುಗುವುದು, ತಲೆನೋವು, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಕೆಟ್ಟಗುಣಗಳ ಕಣ್ಣು ನೋವು ಅಸಸ್ಮಾರ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ... ಸೌಂದರ್ಯವನ್ನೂ ... ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ. 1, ... ಸೀಸೆಗೆ 2—10—0 ... 2, 3 ಸೀಸೆಗಳಿಗೆ 5—5—0

... ಕಟವಾಗಿ ಕಳುಹಿಸಿ ನೋಡಿರಿ

ವಿಳಾಸ.—ಮನೋಲ್ಲಾಸಿನಿ ಕಂಪೆನಿ.
೧. ಮಂಗಳೂರು

52—48

ದಯವಿಟ್ಟು ಗಮನಿಸಿರಿ!

ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಪಿ. ರಾಮರಾವ್,

ವಾಚ್ ಇಂಪೋರ್ಟರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗಡಿಯಾರಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಸರಗಳು, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳೂ ರೋಲ್ಡ್ ಗೋಲ್ಡಿನ ಬೆಳ್ಳಿಯ, ಲೋಹದ ಮತ್ತು ಚರ್ಮದ ಪಟ್ಟಿಗಳೂ ... ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುವು ... ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ" ಎಂಬ ಕೈಗೆ ಕಟ್ಟುವ ಗಡಿಯಾರ ... ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ... ಬಹುಮಾನವಾಗಿಯೂ, ಪಡೆಯಬಹುದು. ... ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಕಳುಹಿಸುತ್ತೇವೆ

ನಂಬರ್ ಬರೆದು ಈಗಲೇ ತಿಳಿಯಬಹುದು.



24—17

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯು

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ
ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತವೆ
ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ	1925.	93	ಲಕ್ಷ ರೂಪಾಯಿ.
1926	391	" "	1926	106	" "
1927	468	" "	1927.	122	" "
1928	585	" "	1928.	140	"

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ
1921ರಲ್ಲಿ " " " "	1927ರಲ್ಲಿ " " " 25 "

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಒಂದು ... ಆನಂದ ಲಾಭ ಉಂಟಾಗುವುದು

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮಯ್ಯರ್
ಬ್ರಾಂಚ್ ಸೆಕ್ರಟರಿ.

52—37

Goldsmiths' Rolling Mills.
ಪಟ್ಟೆ ಮಿಷಿನುಗಳು.



ನಗ ಮಾಡುವವರು ಮತ್ತು ಅಕ್ಕಸಾಲೆಯವರು ಉಪಯೋಗಿಸುವ ... ಮತ್ತು ... ತಗಡುಗಳನ್ನು ಮಾಡುವ ಈ ಮಿಲ್ಲುಗಳಿಗೆ ನಾವು ಏಜಂಟರಾಗಿರುತ್ತೇವೆ ಕ್ರಯ ಬಹು ಮಧ್ಯಸ್ಥ ... ಪಟ್ಟಣಗಳಲ್ಲಿ ಸಬ್ ಏಜಂಟರುಗಳು ಬೇಕಾಗಿದ್ದಾರೆ ... ಸಂಗತಿ ನಮ್ಮ ವಿಳಾಸಕ್ಕೆ ... ಕೆಳಗಿನ ವಿಳಾ... ಇಂಗ್ಲೀಷಿನಲ್ಲಿ ಬರೆದುಕೊಳ್ಳುವುದು

Ch. Sobhanachalam & Sons
Chilakalapudi P. O.
Masulipatam

12—1

The most competitive.
CAR
in the most competitive
YEAR
The new Model A Ford!!
with three speed selective sliding gear Transmission
The most economical car in the market
For Demonstration & further particulars
Please apply to:—

S. Sunder Rau,
Ford Dealer for Coorg
MERCARA

24—11

Printed & published by P. I. Bellappa, at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯತ್ನತಾಃ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯ | ಮಡಿಕೇರಿ, ಸನ್ ೧೯೨೯ನೇ ಇಸವಿ ಸೆಪ್ಟಂಬರ್ ತಾರೀಕು ೨೦ನೇ ಶುಕ್ರವಾರ. | ಸಂಚಿಕೆ ೧೭

Telephone :–
3145

By Appointment to
H. E. The Governor of Madras

Telegrams :–
"PRECIOUS"

Guarantee of Satisfaction throughout in every order large or small.


Brooch.

Excellent Quality Chaste Designs Moderate Prices.

Ice Tumbler.

"Green Hills"
VIRARAJENDRAPET.
7th Decr., 26.

Sir,

.......I am glad to note that the Jewels have a good finish .. .

(Sd.) Mrs. A. B. CHENGAPPA.

SUNTICOPPA,
Nellore Estate.
7th April, 28

Dear Sir,

I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends.

(Sd.) MISS K. SUBBIAH

MERCARA,
20th May, 27.

Dear Sir,

... ... I am quite satisfied with the Jewels you sent on the 16th instant.

(Sd.) Mrs. K. S. CARIAPPA.

52–1

Illustrated Catalogue Free on Application.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಬೋರರ್ ಹುಳದ ದೆಸೆಯಿಂದ ಕೆತ್ತಿಕೆಗೆದ ಕಾಫಿಗಿಡಗಳ ಸಂಖ್ಯೆಯು ಧಾತುಗುಣದ (Mineral) ಗೊಬ್ಬರಹಾಕಿದ ಸ್ಥಳಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ದಾಪುರ ಪರೀಕ್ಷಾ ಕ್ಷೇತ್ರ (Experiment station) ದಲ್ಲಿ ಕಂಡು ಬಂದಿದೆ. ಆದುದರಿಂದ ಕೊಬಸ್ಟ ಪಾಟ್_ಮೋಲ್ ಬೋರರಿಗೆ ಸಾರಜನಕ ಗೊಬ್ಬರವು ಪ್ರಯೋಜನಕರವಾಗುವದೆಂದು ತೋರುತ್ತದೆ" (ಬಿ ಜಿ ಮನ್ರೋ ಜನರಲ್ ಸಯಂಟಿಫಿಕ್ ಆಫೀಸರ್ ಮೈಸೂರು ಕಾಫಿ ಡಿಪಾರ್ಟ್‌ಮೆಂಟ್)

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ಧರ್ಮಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ 469, ಕಲ್ಕತ್ತಾ.

(2) ಮಿಸ್ಟರ್ ಎಂ ಎಂ. ಚಿಟ್ಟಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24–18

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವುದಿಲ್ಲ. ಕೆಲವರಿಗೆ 3–4 ತಿಂಗಳ ಕಾಲ ನಿಂತು ನಂತರ ಹೋಗಿ ಬಿಡುವದು. ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವುದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ಮುಟ್ಟಾದ ನಂತರವೂ, ಉಂಟಾಗುವ ಹೊಟ್ಟೆನೋವು ಮುಂತಾದವುಗಳನ್ನು ಖಂಡಿತ ಗುಣಪಡಿಸುವದು ಈ ಎಣ್ಣೆಯನ್ನು ಬೊಂಬಾಯಿ, ಮದರಾಸು ಆಧಿಪತ್ಯಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನ ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.



ಕ್ರಯ ಬಾಟಲ್ 1ಕ್ಕೆ 2–8–0.

ವಿಳಾಸ:— ಕೆ. ಎನ್. ರಾಧಾಕೃಷ್ಣ ಬ್ರದರ್ಸ್,
109 ಜೈನಾ ಬಜಾರ್ ರೋಡ್ ಮದರಾಸು.

52–12

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್ ಈದಿಗ ಯಕ್ಸ್‌ಪೆಲ್ಲರ್ಸ್, ಮೈಸೂರು.

ನಮ್ಮಲ್ಲಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಸಿಲ್ಟರುಗಳಿಂದ ಶೋಧಿಸಲ್ಪಟ್ಟ ಅಸ್ಪುಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸಹ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯ ಬಯಕೆಯುಳ್ಳವರು ಸಂತೆಪೇಟೆಯಲ್ಲಿ ಇರುವ ನಮ್ಮ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯೂ ಪತ್ರ ದ್ವಾರ ತಿಳಿಯಬಹುದು.

26–16

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ ಮನುಷ್ಯನ ಎಲ್ಲಾ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ ಮಾತ್ರೆಗಳು.

ಧಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನರಹಿತವಾದುದು. ಒಂದು ಡಬ್ಬಿಯ ಕ್ರಯ ೧–೧–೦

52–5 ಮದನಮಂಜರಿ ಫಾರ್ಮಸಿ,
1/94 ಚೀನಾ ಬಜಾರ್, ಮದ್ರಾಸ್.

ಏಕೆ ನರಳುತ್ತೀರಿ?

ಕ್ರಯವು ಅಂಚೆಹಾಸಲು.
ಇಲ್ಲವೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯೆ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು, ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52–5 ಮದನಮಂಜರಿ ಫಾರ್ಮಸಿ,
1/94 ಚೈನ ಬಜಾರು ರೋಡು, ಮದ್ರಾಸು

ಕೊಡಗು.

ಸ೯ ೧೯೨೯ನೇ ಇಸವಿ
ಸೆಪ್ಟೆಂಬರ್ ತಾ. ೨೦ ನೇ ಶುಕ್ರವಾರ.

ಮದ್ರಾಸಿನ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳು.

ಮದ್ರಾಸಿನ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳನ್ನು ಅಂದರೆ ಲೋಕಲ್ ಬೋರ್ಡುಗಳನ್ನು ಮತ್ತು ಮುನ್ಸಿಪಾಲಿಟಿಗಳನ್ನು ಸುಧಾರಿಸಲು ಖಾನೂನನ್ನು ತಿದ್ದುಪಡಿಮಾಡುವ ಏರ್ಪಾಡು ಮದ್ರಾಸಿನಲ್ಲಿ ನಡೆಯುತ್ತಿದೆ. ಮದ್ರಾಸ್ ಕೌನ್ಸಿಲಿನ ಇನ್ನೊಂದು ಅಧಿವೇಶನದಲ್ಲಿ ಕೌನ್ಸಿಲ್ ಮುಂದೆ ಇಡಲಿಕ್ಕಿರುವ ಮಸೂದೆ ಖಾನೂನು ಮದ್ರಾಸಿನ ಸರಕಾರಿ ಗಜೆಟ್ಟಿನಲ್ಲಿ ಪ್ರಕಟವಾಗಿದೆ. ಈ ಮೂಲಕ ಮಾಡಲಿಕ್ಕಿರುವ ತಿದ್ದುಪಡಿಯ ಮುಖ್ಯ ಅಂಶಗಳು ಯಾವವೆಂದರೆ—ಗ್ರಾಮಪಂಚಾಯತಿ ಆಕ್ಟನ್ನು ರದ್ದುಪಡಿಸಿ ಗ್ರಾಮಪಂಚಾಯತಿಗಳನ್ನು ಲೋಕಲ್ ಬೋರ್ಡ್ ಆಕ್ಟಿನೊಳಗೆ ಸೇರಿಸಿಕೊಳ್ಳುವದು, ತಾಲೋಕು ಬೋರ್ಡುಗಳನ್ನು ರದ್ದುಪಡಿಸಿ ಸರ್ಕಲ್ ಬೋರ್ಡುಗಳನ್ನು ಮಾಡುವದು, ನಿಯಮಿತ ಮೆಂಬರುಗಳನ್ನು ಇಲ್ಲದೆ ಮಾಡುವದು, ಐದು ವರ್ಷಕ್ಕೊಂದಾವರ್ತಿ ಚುನಾವಣೆ ಮಾಡುವದು, ಅಧ್ಯಕ್ಷರನ್ನು ಚುನಾಯಿಸುವ ಹಕ್ಕು ಕೊಡುವದು, ಅಧ್ಯಕ್ಷರಲ್ಲಿ ನಂಬಿಕೆ ಇಲ್ಲವೆಂಬ ಠರಾವು ಚರ್ಚಿಸಿ ಪಾಸುಮಾಡಲು ಅವಕಾಶ ಕೊಡುವದು ವಗೈರೆ. ನಮ್ಮ ದೇಶಕ್ಕೆ ತತ್ಕಾಲ ಅಭಿರುಚಿ ಇಲ್ಲದಿರುವ ಇನ್ನೂ ಅನೇಕ ಮಾರ್ಪಾಡುಗಳಿವೆ.

ನಮ್ಮ ದೇಶದ ಮುನ್ಸಿಪಲ್ ಮತ್ತು ಲೋಕಲ್ ಫಂಡ್ ರೆಗ್ಯುಲೇಶನ್ ಸಹ ತಿದ್ದುಪಡಿಯಾಗಬೇಕಾದದ್ದು ಅವಶ್ಯವಿದೆ. ಮುನ್ಸಿಪಾಲಿಟಿಯಲ್ಲಿ ಚುನಾಯಿತ ಕಮಿಟಿಯೂ, ಅಧ್ಯಕ್ಷರೂ ಇದ್ದರೂ ಮುನ್ಸಿಪಾಲಿಟಿ ಆಡಳಿತದಲ್ಲಿ ಅದರ ಕಮಿಟಿಗೆ ಹೆಚ್ಚಿನ ಸ್ವತಂತ್ರ ಸಿಕ್ಕುವಂತೆ ಮುನ್ಸಿಪಲ್ ರೆಗ್ಯುಲೇಶನು ತಿದ್ದುಪಡಿಯಾಗಬೇಕಾಗಿದೆ. ಆದರೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಮಾರ್ಪಾಡಿಗೆ ತುಂಬಾ ಅವಕಾಶವಿದೆ. ನಮ್ಮ ಡಿಸ್ಟ್ರಿಕ್ಟ್ ಬೋರ್ಡಿಗೆ ಈ ವರೆಗೆ ನಿಯಮಿತ ಅಧ್ಯಕ್ಷರೂ ಸಹ ಇಲ್ಲ. ಕಮಿಶನರೇ ಅಧ್ಯಕ್ಷರಾಗಿದ್ದಾರೆ. 1920ನೇ ಇಸವಿಯಿಂದ ಮದ್ರಾಸಿನ ಅನೇಕ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಸರಕಾರಿ ಉದ್ಯೋಗಸ್ಥರಲ್ಲದವರನ್ನು ಅಧ್ಯಕ್ಷರನ್ನಾಗಿ ಸರಕಾರವು ನೇಮಿಸುತ್ತಿತ್ತು. ಈಗಿನ ಮಸೂದೆ ಖಾನೂನಿನಿಂದ ಅಧ್ಯಕ್ಷರನ್ನು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳೇ ಚುನಾಯಿಸಿಕೊಳ್ಳುವ ಹಕ್ಕು ಕೊಡುತ್ತಾರೆ. ಸ್ಥಳೀಯ ಸ್ವರಾಜ್ಯ ಸಂಸ್ಥೆಯ ಬೆಳವಣಿಗೆಗೆ ಚುನಾಯಿತ ಅಧ್ಯಕ್ಷರಿರುವದು ಬಹಳ ಅವಶ್ಯವಿದೆ. ಅಧ್ಯಕ್ಷರನ್ನು ಚುನಾಯಿಸುವ ಹಕ್ಕು ಇರುವದು ಮಾತ್ರವಲ್ಲದೆ, ಚುನಾವಣೆಯಾದನಂತರ ಬೋರ್ಡಿನ ಬಹುಮತಕ್ಕೆ ವಿರೋಧವಾಗಿ ಅಧ್ಯಕ್ಷರು ನಡೆದರೆ ಅವರಲ್ಲಿ ನಂಬಿಕೆ ಇಲ್ಲವೆಂತ ಬೋರ್ಡಿನಲ್ಲಿ ಠರಾವು ಪಾಸ್ಮಾಡುವ ಹಕ್ಕೂ, ಹಾಗೆ ಠರಾವ್ ಪಾಸ್ಮಾಡಿದರೆ ಅಂಥಾ ಅಧ್ಯಕ್ಷರನ್ನು ಸರಕಾರವು ತೆಗೆದುಬಿಡಬೇಕೆಂತಲೂ ಈಗಿನ ಬಿಲ್ಲಿನಲ್ಲಿ ಇದೆ. ಮದ್ರಾಸಿನಲ್ಲಿ ಸರಕಾರದಿಂದ ನೇಮಿತರಾದ ಅಧ್ಯಕ್ಷರ ಕಾರ್ಯಗಳು ಬೋರ್ಡಿಗೆ ತೃಪ್ತಿಯಿಲ್ಲದಿದ್ದರೂ ಅವಧಿ ವರೆಗೆ ಅಧ್ಯಕ್ಷರನ್ನು ತೆಗೆಯುವ ಹಕ್ಕು ಬೋರ್ಡಿಗೆ ಇರಲಿಲ್ಲ. ಪ್ರಜಾ ಜವಾಬ್ದಾರಿ ಸರಕಾರಿ ಪದ್ಧತಿಯಲ್ಲಿ ಕೌನ್ಸಿಲಿನ ಬಹುಮತದ ಬೆಂಬಲವಿರುವವರನ್ನು ಮಂತ್ರಿಗಳಾಗಿ ನೇಮಿಸಿಕೊಂಡನಂತರ ಅಂಥ ಮಂತ್ರಿಗಳ ವರ್ತನೆಯು ಕೌನ್ಸಿಲಿಗೆ ಒಪ್ಪಿಗೆ ಇಲ್ಲದಿದ್ದರೆ ಹೇಗೆ ಅವರು ಮಂತ್ರಿತ್ವವನ್ನು ಬಿಟ್ಟು ಹೋಗಬೇಕೋ ಹಾಗೆಯೇ ಲೋಕಲ್ ಬೋರ್ಡುಗಳಲ್ಲೂ ಬೋರ್ಡಿನ ನಂಬಿಕೆಯಿಲ್ಲದ ಪ್ರೆಸಿಡೆಂಟರನ್ನು ಪದವಿಯಿಂದ ತೆಗೆಯುವ ಹಕ್ಕು ಬೋರ್ಡಿಗೆ ಇರುವದು ಅತಿ ಅವಶ್ಯವಾಗಿದೆ.

ಮದ್ರಾಸ್ ಆಧಿಪತ್ಯದಲ್ಲಿ ಈ ವರೆಗೆ ತಾಲೋಕು ಬೋರ್ಡುಗಳು ಎಂಬ ಸಂಸ್ಥೆಗಳು ಇದ್ದವು. ಇವು ತಮ್ಮ ತಮ್ಮ ತಾಲೋಕಿನ ಸರಹದ್ದಿನೊಳಗೆ ಇರುವ ಸ್ಥಳೀಯ ಸ್ವರಾಜ್ಯ ಆಡಳಿತವನ್ನು ನಡಿಸುತ್ತಿದ್ದವು. ಮದ್ರಾಸಿನ ಅನುಭವದಲ್ಲಿ ತಾಲೋಕಿನಷ್ಟು ದೊಡ್ಡ ಸರಹದ್ದಿಗೆ ಒಂದು ಸಂಸ್ಥೆಯಿದ್ದರೆ ಕೆಲಸ ತೃಪ್ತಿಯಾಗಿ ನಡಿಯುವದಿಲ್ಲವೆಂತ ಕಂಡುಬಂದದ್ದರಿಂದ ತಾಲೋಕಿಗಿಂತ ಚಿಕ್ಕ ಭಾಗಗಳಿಗೆ ಸರ್ಕಲ್ ಬೋರ್ಡ್ ಎಂತ ಮಾಡುವ ಯೋಚನೆಯಲ್ಲಿದ್ದಾರೆ. ಗ್ರಾಮಾಂತರಗಳಲ್ಲಿ ವಾಸಿಸುವ ಜನರು ತಮ್ಮ ದೇಶದ ಆಡಳಿತದಲ್ಲಿ ಅಭಿರುಚಿ ತೆಗೆದುಕೊಳ್ಳಲು ಅವಕಾಶ ದೊರಕಲು ಚಿಕ್ಕ ಚಿಕ್ಕ ಸರಹದ್ದುಗಳಲ್ಲಿ ಚುನಾಯಿತ ಸಂಸ್ಥೆಗಳನ್ನು ಏರ್ಪಡಿಸಿ ಆಡಳಿತದ ಜವಾಬ್ದಾರಿಯನ್ನು ಕೊಡಬೇಕಾದದ್ದು ಬಹಳ ಅವಶ್ಯ. ನಮ್ಮ ದೇಶದಲ್ಲಿ ಸರ್ಕಲ್ ಬೋರ್ಡ್ ಎಂಬದರ ಬದಲು ನಾಡು ಬೋರ್ಡು ಎಂತ ಮಾಡಿಕೊಳ್ಳಬಹುದು.

ಇಂಥಾ ಸಂಸ್ಥೆಗಳನ್ನು ಏರ್ಪಡಿಸಿ ಅವುಗಳಿಗಾಗಿ ಚುನಾವಣೆಯ ಹೋರಾಟ ನಡೆಸಿದರೆ ಅನಾವಶ್ಯ ಮನಸ್ತಾಪ ಹೆಚ್ಚುತ್ತದೆ ಎಂತ ಕೆಲವರು ಅಭಿಪ್ರಾಯಪಡಬಹುದು. ಹಿಂದುಸ್ಥಾನವು ಈ ವರೆಗೆ ನಿರಂಕುಶ ಪ್ರಭುತ್ವಕ್ಕೆ ಒಳಗಾಗಿ ಆಡಳಿತದಲ್ಲಿ ಅಭಿಪ್ರಾಯಕೊಡಲು ದೇಶದ ಜನರಿಗೆ ಹಕ್ಕಿದೆಯೆಂತ ಅವರಿಗೆ ಗೊತ್ತೇ ಇಲ್ಲದೆ ಹೋಗಿದೆ. ಜನರನ್ನು ಈ ನಿದ್ರೆಯಿಂದ ಎಚ್ಚರಿಸಬೇಕಾದದ್ದು ಅವಶ್ಯ. ಪ್ರತಿನಿಧಿ ಸಂಸ್ಥೆಗಳಿಗೆ ಚುನಾವಣೆ ನಡಿಸುವ ಸಂದರ್ಭದಲ್ಲಿ ಜನರಿಗೆ ಕಂಟಾ ಜಾಗ್ರತಿಯಾಗುತ್ತದೆ. ಚುನಾವಣೆಯ ಹೋರಾಟವು ತತ್ಕಾಲ ವಿರಸವಾಗಿ ಕಂಡರೂ ಅದು ಖಾಯಂ ಮನಸ್ತಾಪಗಳನ್ನೇನೂ ಉಂಟುಮಾಡುವದಿಲ್ಲ. ಈ ತತ್ವವನ್ನು ಕಲ್ಲು ಉಮೇದ್ವಾರರೂ, ಅವರ ಸ್ನೇಹಿತರೂ ಮರೆಯುತ್ತಾರೆ. ಶೀಘ್ರದಲ್ಲೇ ಚುನಾವಣೆಯಲ್ಲಿರುವ ನಿಜವಾದ ತತ್ವವು ಜನರಿಗೆ ತಿಳಿದು ಚುನಾವಣೆಯ ಬೋಧನೆಗಳಿಂದ ಕಳವಳವಿಲ್ಲದಂತಾದೀತೆಂತ ನಂಬುತ್ತೇವೆ.

ಚುನಾವಣೆಯು ಐದು ವರ್ಷಕ್ಕೆ ಒಂದಾವರ್ತಿಯಾಗುವಂತೆ ಬಿಲ್ಲಿನಲ್ಲಿ ಸಲಹೆ ಇದೆ. ಇದು ನ್ಯಾಯವಾದ ಮಾರ್ಪಾಡು. ಮೂರು ವರ್ಷಕ್ಕೊಂದಾವರ್ತಿ ಚುನಾವಣೆಯ ಗೊಂದಲವೂ, ಅದಕ್ಕಾಗುವ ಖರ್ಚೂ ಅವಶ್ಯವಿಲ್ಲ.

ಕೋಮುವಾರು ಚುನಾವಣೆಯನ್ನು ತೆಗೆದೇ ಬಿಡುವ ಶರತ್ತು ಇದೆ. ನಮ್ಮ ದೇಶದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯಲ್ಲಿ ಕೋಮುವಾರು ಚುನಾವಣೆ ಇಲ್ಲದೆ ಮಾಡಿದ್ದು ಬಹಳ ತೃಪ್ತಿಕರ. ಮದ್ರಾಸಿನಲ್ಲಿ ಈ ವರೆಗೆ ಇದ್ದ ಕೋಮುವಾರು ಚುನಾವಣೆಯನ್ನು ತೆಗೆದುಹಾಕಿ ಮುಸಲ್ಮಾನರಿಗೂ, ಕ್ರಿಶ್ಚಿಯನರಿಗೂ, ಆದಿ ದ್ರಾವಿಡರಿಗೂ ಕ್ಲುಪ್ತ ಸಂಖ್ಯೆ ಮೆಂಬರುತನವನ್ನು ಕಾದಿಡುವ ಏರ್ಪಾಡು ಮಾಡುತ್ತಾರೆ. ಅಂದರೆ ಕೋಮುವಾರು ವ್ಯತ್ಯಾಸವಿಲ್ಲದೆ ಎಲ್ಲಾ ಓಟರುಗಳ ಓಟು ಪಡೆದೇ ಪ್ರತಿಯೊಬ್ಬ ಮೆಂಬರನು ಚುನಾಯಿತನಾಗಬೇಕು. ಆದರೆ ಹಾಗೆ ಚುನಾಯಿತರಾದವರಲ್ಲಿ ಇಂತಿಷ್ಟು ಮುಸಲ್ಮಾನ್, ಕ್ರಿಶ್ಚಿಯನ್ ಮತ್ತು ಆದಿ ದ್ರಾವಿಡರು ಇರಬೇಕೆಂತ ಮಾಡುತ್ತಾರೆ. ಇಂಥಾ ನಿರ್ಬಂಧ ಸಹ ಇಲ್ಲದೆ ಇರುವದೇ ಅತ್ಯುತ್ತಮವಾದ ಚುನಾವಣೆ ಪದ್ಧತಿ. ಆದರೆ ಕೋಮುವಾರು ಪ್ರತಿನಿಧಿಗಳಿಗೆ ಬೇಕಾದರೂ ಅಂಥವರಿಗೆ ಇತರ ಕೋಮಿನ ಓಟು ಪಡೆಯಬೇಕಾದ್ದರಿಂದ ಕೋಮುವಾರು ದ್ವೇಷವಿರುವವರಿಗೆ ಚುನಾವಣೆಯಾಗದೆ, ಅನ್ಯೋನ್ಯತೆಯನ್ನು ಬೆಳಸುವ ಅಭಿಪ್ರಾಯದವರಿಗೆ ಚುನಾವಣೆಯಾಗುತ್ತದೆ.

ಹಿಂದುಳಿದ ವಂಗಡ ಮುಂತಾದ ನೆವದಿಂದ ಮೆಂಬರುಗಳನ್ನು ಸರಕಾರವು ನೇಮಿಸುವ ಪದ್ಧತಿಯನ್ನು ತೆಗೆದುಬಿಡುವ ಏರ್ಪಾಡು ನ್ಯಾಯವಾದದ್ದಾಗಿದೆ. ಯಾವ ಸಂಸ್ಥೆಯಲ್ಲೇ ಆದರೂ ಇಂಥಾ ನಿಯಮಿತ ಮೆಂಬರುಗಳು ಸರ್ಕಾರಿ ಪರವಿರಬೇಕೆಂಬ ಭಾವವು ಸಾಧಾರಣವಾಗಿರುತ್ತದೆ. ಅಂಥವರು ಚುನಾಯಿತ ಸಂಸ್ಥೆಯ ನಿಜವಾದ ಅಭಿಪ್ರಾಯವನ್ನು ತಿಳಿಸಲು ಅಡ್ಡಿಯಾಗುತ್ತಾರೆ. ಆದಿದ್ರಾವಿಡ ಪ್ರತಿನಿಧಿಯು ಸಹ ಸರ್ವ ಜನರಿಂದ ಚುನಾಯಿತನಾಗಬೇಕೆಂತ ಮಾಡುವದು ತೃಪ್ತಿಕರ.

ಗ್ರಾಮ ಪಂಚಾಯಿತಿಗಳನ್ನು ಲೋಕಲ್ ಬೋರ್ಡ್ ಆಕ್ಟಿನ ಒಳಗೆ ತರುವುದು ಉತ್ತಮ. ನಮ್ಮ ದೇಶದಲ್ಲಿ ಗ್ರಾಮ ಪಂಚಾಯತಿ ಆಕ್ಟು ಮಂಜೂರಾಗಿ ಎಷ್ಟೋ ಕಾಲವಾದರೂ ಇನ್ನೂ ಒಂದು ಪಂಚಾಯಿತಿಯನ್ನಾದರೂ ಮಾಡದಿರುವದು ನಾಚಿಕೆಕರ. ಪಂಚಾಯಿತಿಗಳು ಲೋಕಲ್ ಬೋರ್ಡ್ ಆಕ್ಟಿಗೆ ಒಳಪಟ್ಟರೆ ಲೋಕಲ್ ಬೋರ್ಡಿನ ಕೆಲವು ಕೆಲಸವಾದರೂ ಪಂಚಾಯಿತಿಗಳ ಮೂಲಕ ನಡೆಯಬೇಕಾಗಬಹುದಾದ್ದರಿಂದ ಗ್ರಾಮ ಪಂಚಾಯತಿಗಳನ್ನು ಏರ್ಪಡಿಸದೆ ಇರಲು ಸಾಧ್ಯವಾಗಲಾರದು.

ಮದ್ರಾಸಿನ ಕೌನ್ಸಿಲು ಮುಂದೆ ಬರಲಿಕ್ಕಿರುವ ಮಸೂದೆ ಖಾನೂನಿನ ಚರ್ಚೆಯನ್ನು ನಮ್ಮ ದೇಶೀಯರೂ ಕುತೂಹಲದಿಂದ ನೋಡುತ್ತಿದ್ದು ಈ ದೇಶಕ್ಕೆ ಅವಶ್ಯವಿರುವ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳನ್ನು ಏರ್ಪಡಿಸಲು ಪ್ರಯತ್ನಿಸಬೇಕು.

ಹಿಂದೂದೇಶದ ಯುವಕ ವೀರ.

ಈಗ ವಿಚಾರದಲ್ಲಿರುವ ಲಾಹೋರ್ 'ಕಾನ್ಸ್ಪಿರಸಿ' ಕೇಸಿನ ಒಬ್ಬ ಅಪರಾಧಿಯಾದ ಶ್ರೀಯುತ ಯತೀಂದ್ರ ನಾಥ್ ದಾಸ್‌ರವರು 63 ದಿವಸ ಉಪವಾಸ ಮಾಡಿ ಈ ತಾ 13ರಲ್ಲಿ ಶಿವಾಧೀನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಇವರು ವಿದ್ಯಾರ್ಥಿಯಾಗಿದ್ದರೂ ರಾಜಕೀಯದಲ್ಲಿ ತುಂಬಾ ಅಭಿರುಚಿಯುಳ್ಳವರಾಗಿದ್ದರು, ಮತ್ತು ಇವರು ದಕ್ಷಿಣ ಕಲ್ಕತ್ತಾ ಕಾಂಗ್ರೆಸ್ ಕಮಿಟಿಯ ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ ಇದ್ದರು. ಬರೇ 24 ವರ್ಷ ಪ್ರಾಯದ ಈ ಯುವಕರು ಜೈಲಿನಲ್ಲಿ ರಾಜಕೀಯ ಕೈದಿಗಳನ್ನು ನ್ಯಾಯವಾದ ರೀತಿ ನೋಡುವುದಿಲ್ಲವಾದುದರಿಂದ ಹಾಗೆ ಸರಿಯಾಗಿ ನೋಡುವ ವರೆಗೆ ತಾನು ಇನ್ನೂ ಹಲವು ಕೈದಿಗಳೊಂದಿಗೆ ಆಹಾರವನ್ನು ತೆಗೆದುಕೊಳ್ಳುವದಿಲ್ಲವೆಂದು ನಿಶ್ಚೈಸಿದರು. ಹೀಗೆ ಉಪವಾಸ ವ್ರತವನ್ನು ಕೈಕೊಂಡವರ ದೇಹಸ್ಥಿತಿಯು ಕ್ಷೀಣವಾಗುತ್ತಾ ಬಂದರೂ ಸರ್ಕಾರದವರು ಅವರ ಕೋರಿಕೆಗಳಿಗೆ ಗಮನವೇ ಕೊಡಲಿಲ್ಲ. ಈ ಮುಷ್ಕರಗಾರರ ಪರ ಸಾರ್ವಜನಿಕ ಚಳವಳವು ಪ್ರಬಲವಾಗುತ್ತಾ ಬಂದದ್ದರಿಂದ ಇಂಡಿಯಾ ಸರ್ಕಾರದ ಸೂಚನೆ ಮೇರೆ ಪಂಜಾಬು ಸರ್ಕಾರದವರು ಈ ವಿಷಯ ವಿಚಾರಿಸಲು ಒಂದು ಜೈಲ್ ಕಮಿಟಿಯನ್ನು ನೇಮಿಸಿದರು. ಈ ಕಮಿಟಿಯವರು ಮುಷ್ಕರ ಹಿಡಿದ ಕೈದಿಗಳನ್ನು ವಿಚಾರಿಸಿದಲ್ಲಿ ಅವರ ತಕರಾರುಗಳು ನ್ಯಾಯವಾದವೆಂದು ತಿಳಿದು ಅವುಗಳನ್ನು ಪರಿಹರಿಸುವಂತೆ ಸರ್ಕಾರಕ್ಕೆ ಸಿಫಾರಸ್ಸು ಮಾಡಿದರು. ಇದರ ಫಲಿತಾಂಶವಾಗಿ ಮುಷ್ಕರಗಾರರು ತಮ್ಮ ವ್ರತವನ್ನು ಬಿಟ್ಟರು. ಆದರೆ ಶ್ರೀ ಯತೀಂದ್ರ ನಾಥ್ ದಾಸ್‌ರವರ ದೇಹವು ಬಹು ಕ್ಷೀಣವಾಗಿ ಪ್ರಾಣವು ಬಹು ಅಪಾಯಸ್ಥಿತಿಯಲ್ಲಿದ್ದದರಿಂದ ಅವರನ್ನು ಕೂಡಲೆ ಏನೊಂದೂ ಶರತ್ತುಗಳಿಲ್ಲದೆ ಬಿಡುಗಡೆ ಮಾಡಬೇಕೆಂದು ಜೈಲ್ ಕಮಿಟಿ ಮೆಂಬರುಗಳು ಸೂಚಿಸಿದ್ದರು. ಆದರೂ ಸರ್ಕಾರದವರು ಅವರನ್ನು ಜಾಮೀನ ಮೇಲೆ ಮಾತ್ರ ಬಿಡುವೆವೆಂದು ಹೇಳಿದರು. ಅದಕ್ಕೆ ದಾಸ್‌ರವರ ಎಚ್ಚರಿಕೆ ತೆಗೆದುಕೊಳ್ಳುತ್ತಿದ್ದ ಅವರ ತಮ್ಮ ಶ್ರೀ ಕಿರಣ್ ದಾಸ್‌ರವರು ಈ ಶರತ್ತಿಗೆ ಒಪ್ಪಲಿಲ್ಲ. ಯತೀಂದ್ರ ನಾಥ್‌ರವರು ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ಕೂಡ ಬಹು ದೃಢ ನಿಶ್ಚಯ ಉಳ್ಳವರಾದುದರಿಂದ ಕೊನೆಯ ಉಸಿರು ಇರುವ ವರೆಗೂ ತಮ್ಮ ಉಪವಾಸ ವ್ರತವನ್ನು ಪಾಲಿಸಿದರು. ಅವರು ರಾಜಕೀಯ ಕೈದಿಗಳ ಅಮಾನುಷ ಉಪಚಾರವನ್ನು ಉತ್ತಮಗೊಳಿಸುವ ಸದುದ್ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದರು.

ಉಪವಾಸ ವ್ರತವನ್ನು ಕೈಕೊಂಡು ಕೈದಿಗಳು ಕೋರ್ಟಿಗೆ ಹಾಜರಾಗಲಾರದೆ ಕೇಸಿನ ವಿಚಾರಕ್ಕೆ ಅಡ್ಡಿ ಮಾಡುವುದರಿಂದ, ಅಂಥಾ ಸಂದರ್ಭಗಳಲ್ಲಿ ಅಪರಾಧಿಗಳ ಗೈರ್‌ಹಾಜರಿನಲ್ಲಿಯೇ ಕೇಸನ್ನು ವಿಚಾರಿಸಬಹುದೆಂಬ ಬಿಲ್ಲನ್ನು ಈ ಮಧ್ಯೆ ಸರ್ಕಾರದವರು ಎಸೆಂಬ್ಲಿಯಲ್ಲಿ ಚರ್ಚೆಗೆ ತಂದರು. ಇದು ಅನ್ಯಾಯದ ಕಾನೂನು. ಆದುದರಿಂದ ಇದನ್ನು ಜಾರಿಗೆ ತರಬಾರದೆಂದೂ, ಒಂದು ವೇಳೆ ಜಾರಿಗೆ ತರುವದಾದರೂ ಮೊದಲು ಇದನ್ನು ಜನರ ಅಭಿಪ್ರಾಯಕ್ಕಾಗಿ ಪ್ರಕಟಿಸಬೇಕೆಂದೂ ಚುನಾಯಿತ ಮೆಂಬರುಗಳು ವಾದಿಸಿದರು. ಇಷ್ಟರಲ್ಲೇ ಯತೀಂದ್ರ ನಾಥ್‌ರವರು ಸ್ವರ್ಗಸ್ಥರಾದರು. ಈ ಮರಣಕ್ಕೂ ಮತ್ತು ಈ ಕೇಸಿನ ಬಾಕಿ ಕೈದಿಗಳ ಕಷ್ಟಸ್ಥಿತಿಗೂ ಕಾರಣವಾದ ಸರ್ಕಾರದ ತತ್ವವನ್ನು ಖಂಡಿಸಲು ಪಂಡಿತ ಮೋತಿಲಾಲ್ ನೆಹರುರವರು ಎಸೆಂಬ್ಲಿಯಲ್ಲಿ ಒಂದು ಠರಾವನ್ನು ತಂದರು. ಇದು ಚರ್ಚಿಸಲ್ಪಟ್ಟು ಬಹುಮತದಿಂದ ಪಾಸಾಯಿತು. ಇದರ ದೆಸೆಯಿಂದಲೋ, ಯಾ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಸೂಚನೆಯಿಂದಲೋ ಸರ್ಕಾರದವರು ಮೇಲಿನ ಬಿಲ್ಲನ್ನು ಜನರ ಅಭಿಪ್ರಾಯದ ಬಗ್ಗೆ ಪ್ರಕಟಿಸಲು ಒಪ್ಪಿಕೊಂಡರು. ಅಂದರೆ ಸದರಿ ಬಿಲ್ಲು ಬೇಗನೆ ಜಾರಿಗೆ ಬರುವದಿಲ್ಲವೆಂದಾಯಿತಲ್ಲದೆ, ಅದು ಮೂಲೆಗೆ ಬಿತ್ತೆಂದೇ ಹೇಳಬೇಕು. ಇದು ಎಸೆಂಬ್ಲಿಯ ರಾಷ್ಟ್ರೀಯ ಪಕ್ಷದವರಿಗೆ ಜಯವೆಂದೇ ಹೇಳಬಹುದು.

ದಾಸ್‌ರವರ ಮರಣದಿಂದ ಇಡೀ ಹಿಂದೂಸ್ಥಾನದಲ್ಲಿ ನವಜಾಗ್ರತಿಯ ಕುರುಹುಗಳು ಕಾಣಕೊಡಗಿವೆ. ಲಾಹೋರಿನಲ್ಲಿಯೇ ಅವರ ಶವದ ಮೆರವಣಿಗೆಯಲ್ಲಿ ಸಾವಿರಾರು ಜನರು ಸೇರಿದ್ದರು. ಅಲ್ಲಿಂದ ಅವರ ಶವವು ರೈಲಿನಲ್ಲಿ ಅವರ ಜನ್ಮ ಸ್ಥಳವಾದ ಕಲ್ಕತ್ತಾಕ್ಕೆ ಒಯ್ಯಲ್ಪಟ್ಟಿತು. ದಾರಿಯ ಸ್ಟೇಶನುಗಳಲ್ಲಿ ಸಾವಿರ ಗಟ್ಟಲೆ ಜನರು ನೆರೆದು ಅವರ ಶವದ ಮೇಲೆ ಹೂವನ್ನೆರಚಿದರು. ಕಲ್ಕತ್ತಾದಲ್ಲಿ ತಾ. 16 ರಲ್ಲಿ ಟ್ರೈನಿನಿಂದ ಇಳಿದಾಗ ಸೇರಿದ್ದ ಸುಮಾರು 1½ ಲಕ್ಷ ಜನ ಸಮುದಾಯವು ಮೆರವಣಿಗೆಯು ಮುಂದುವರಿಯುತ್ತಾ ಬಂದ ಹಾಗೆ 5 ಲಕ್ಷಕ್ಕೆ ಏರಿತಂತೆ! ದಿವಂಗತ ದೇಶಬಂಧು ದಾಸ್‌ರವರ ಮರಣದಲ್ಲಿ ಮಾತ್ರ ಕಲ್ಕತ್ತಾದಲ್ಲಿ ಇಷ್ಟರ ಮಟ್ಟಿನ ಜನ ಸಂದಣಿಯೂ, ಜನ ಸಮುದಾಯದಲ್ಲಿ ಕುತೂಹಲವೂ ಇತ್ತಲ್ಲದೆ ಬೇರೆ ಯಾವ ಸಂದರ್ಭದಲ್ಲಿಯೂ ಇರಲಿಲ್ಲವಂತೆ. ಹಿಂದೂಸ್ಥಾನದ ಹಲವು ಪಟ್ಟಣಗಳಲ್ಲಿ ಸಂತಾಪ ಮೀಟಿಂಗುಗಳು ನಡಿಸಲ್ಪಟ್ಟವು. ಅನೇಕ ಕಡೆಗಳಲ್ಲಿ ವಿದ್ಯಾರ್ಥಿಗಳು ಆ ದಿನ ಶಾಲೆಗಳಿಗೂ, ಕಾಲೇಜುಗಳಿಗೂ ಹೋಗದೆ ಮೆರವಣಿಗೆಗಳನ್ನು ನಡಿಸಿ ಯತೀಂದ್ರ ನಾಥ್‌ರವರ ಮರಣದಲ್ಲಿ ದುಃಖವನ್ನು ತೋರಿಸಿದರು.

ಯತೀಂದ್ರ ನಾಥ್‌ರವರನ್ನು ಸೆರೆಹಿಡಿದದ್ದು ನ್ಯಾಯವೋ ಅನ್ಯಾಯವೋ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ಆದರೆ ಅವರು ಉಪವಾಸ ವ್ರತವನ್ನು ಕೈಕೊಂಡ ದೇಶಭಕ್ತಿಯ ಉದ್ದೇಶವೂ, ಅದಕ್ಕಾಗಿ ಅವರು ಪ್ರಾಣವನ್ನರ್ಪಿಸಿದುದೂ ಹಿಂದೂದೇಶದ ಯಶಸ್ಸನ್ನು ಹೆಚ್ಚಿಸಿದೆ. ಇಂದು ಇಂಥಾ ವೀರ ಪುತ್ರರಿರುವ ಭಾರತ ಭೂಮಿಯು ಇನ್ನೆಷ್ಟು ಕಾಲ ದಾಸತ್ವದಲ್ಲಿರುವದೋ ಎಂದು ನೋಡಬೇಕಾಗಿದೆ.

ಶ್ರೀ. ಕಾವೇರಿ ತುಲಾಸಂಕ್ರಮಣದ ತೀರ್ಥೋದ್ಭವ ಪುಣ್ಯಕಾಲದ ಮುಹೂರ್ತ ಪಟ್ಟಿ.

1. ಇದೇ ಸನ್ 1929ನೇ ಇಸವಿ ಬರುವ ಅಕ್ಟೋಬರ್ ತಾರೀಖು 14ನೇ ಸೋಮವಾರ 11½ ಘಂಟೆಗೆ ಧನಿಷ್ಠಾ ನಕ್ಷತ್ರ ಧನುರ್ಲಗ್ನ ಶುಕ್ರನ ಕಾಲ ಹೊರೆಯಲ್ಲು ಅಕ್ಷಯ ಪಾತ್ರೆ ಇಡುವ ಶುಭ ಮುಹೂರ್ತ.

2. ಇದೇ ದಿನ ಅಂದರೆ ಸಾಯಂಕಾಲ 4 ಘಂಟೆಗೆ ಶತಭಿಷಾನಕ್ಷತ್ರ ಕುಂಭ ಲಗ್ನ ಗುರು ಕಾಲ ಹೊರೆಯಲ್ಲು ಕಾಣಿಕೆ ಡಬ್ಬಿ ಇಡುವ ಶುಭ ಮುಹೂರ್ತ.

3. ಇದೇ ಅಕ್ಟೋಬರ್ ತಾರೀಖು 16ನೇ ಬುಧವಾರ ದಿನ ರಾತ್ರೆ, 12 ಘಂಟೆ ಮೇಲೆ ಅಂದರೆ ತಾರೀಖು 17ನೇ ಗುರುವಾರ ದಿನ ಬೆಳಿಗ್ಗೆ 4 ಘಂಟೆಗೆ ಸರಿಯಾಗಿ ತುಲಾಕಾವೇರಿ ಸಂಕ್ರಮಣ ತೀರ್ಥೋದ್ಭವ ಪುಣ್ಯಕಾಲದ ಶುಭಮುಹೂರ್ತ.

ಮುಜಾಯಿ ಇಲಾಖೆ. ಕೆ. ಚಂಗಪ್ಪ,
3—1 ಪ್ರೆಸಿಡೆಂಟ್.

ಬೆಂಗಳೂರಿನ ಕೊಡಗು ಸಂಘ.

ಈ ಮೊದಲೇ ನಿಶ್ಚಯಿಸಿದಂತೆ ತಾ. 8ನೇ ಆದಿತ್ಯವಾರ ಬೆಂಗಳೂರಿನ ಕೊಡಗು ಸಂಘದವರು ತಮ್ಮ ೧೦ನೇ ವಾರ್ಷಿಕೋತ್ಸವವನ್ನೂ, ಕೈಲ್‌ಪೊಳ್‌ದು ಹಬ್ಬವನ್ನೂ ಲಾಲ್‌ಬಾಗಿನಲ್ಲಿ ನಡೆಯಿಸಿದರು. ಹೆಚ್ಚು ಕಡಿಮೆ ಬೆಂಗಳೂರಿನಲ್ಲಿರುವ ಕೊಡವರೆಲ್ಲರೂ ಸೇರಿದ್ದರಲ್ಲದೆ, ಹೊರಗಿನಿಂದಲೂ ಕೆಲವು ಮಹನೀಯರು ದಯಮಾಡಿಸಿದ್ದರು. ಎಂದಿನಂತೆಯೇ ಊಟ ಉಪಚಾರಗಳೂ, ಆಟ ವಿನೋದಗಳೂ ನಡೆದ ನಂತರ ಸಾಯಂಕಾಲ ಸಭೆಯ ಪ್ರೆಸಿಡೆಂಟರಾದ ಮ. ರಾ. ಶ್ರೀ ಕೋದಂಡ ಮಾಚಯ್ಯನವರು ಆಟ ಓಟಗಳಲ್ಲಿ ಗೆದ್ದವರಿಗೆ ಇನಾಮುಗಳನ್ನೂ, ಮೆ. ಕೂತಂಡ ಚಂಗಪ್ಪನವರಿಗೆ ಈ ವರ್ಷದ ಚೇಂಪಿಯನ್‌ಶಿಪ್ ಮೆಡಲನ್ನೂ ಹಂಚಿ ಯುಕ್ತಭಾಷಣದೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಐ. ಕೆ. ಪೊನ್ನಪ್ಪ,
ಸೆಕ್ರೆಟರಿ

ಗೋಣಿಕೊಪ್ಪಲು ದನಗಳ ಪ್ರದರ್ಶನ.

ತಾರೀಖು 13—9—1929ರಲ್ಲು ಗೋಣಿಕೊಪ್ಪಲು ಟೌನ್ ಹಾಲ್ ಬಳಿ ನಡೆದ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್:—

ಹಾಜರಿದ್ದ ಮೆಂಬರುಗಳು:— 1. ಸಿ. ಪುಚ್ಚಿಮಾಡ ಮಾದೈಯ್ಯನವರು, (ಅಧ್ಯಕ್ಷರು.) 2. ಮುಕ್ಕಾಟಿರ ಪೂಣಚ್ಚನವರು, 3. ಜಮ್ಮಡ ಮಾದಪ್ಪನವರು, 4. ಕೊಡಂದೇರ ಚಂಗಪ್ಪನವರು, 5 ಕರೀಂ ಸಾಹೇಬರು.

ಗೈರುಹಾಜರಾದ ಮೆಂಬರುಗಳು:— 1. ಮೆ. ಮಾಚಿಮಾಡ ಮಂದಣ್ಣನವರು, 2. ಸಿ. ಎಸ್. ಪೂವೈಯ್ಯನವರು, 3. ಎ. ಕಾಳಮೈಯ್ಯನವರು, 4. ಜಿ. ಎ. ತಿಂಮೈಯ್ಯನವರು, 5. ಸಿ. ಕೆ. ಶ್ರೀನಿವಾಸಾಚಾರ್ಯರು.

ಈಗ ಇರುವ ಕಮಿಟಿ ಮೆಂಬರುಗಳ ಸಂಖ್ಯೆ ಸಾಲದ್ದರಿಂದ ಈ ಕೆಳಗಿನವರು ಕಮಿಟಿಮೆಂಬರುಗಳಾಗಿ ಚುನಾಯಿಸಲ್ಪಟ್ಟಿರುತ್ತಾರೆ.

1. ಮೆ. ಕೊಡಂದೇರ ಮೇದಪ್ಪನವರು, 2. ಕೊಂಗಂಡ ಬಿ. ಗಣಪತಿಯವರು, 3. ಪಡಿಕಲ್ ಪೂವೈಯ್ಯನವರು, 4. ಹೆಚ್. ಡಿ. ಕಾಳಪ್ಪನವರು, 5. ಹೆಚ್. ಬಿ ಅಣ್ಣೈಯ್ಯನವರು.

ಸೆಕ್ರೆಟರಿ ಮೆ. ಮಾಚಿಮಾಡ ಮಂದಣ್ಣನವರು ತಾನು ಸೆಕ್ರೆಟರಿಯಾಗಿರಲು ಆಗುವದಿಲ್ಲ, ತನ್ನ ರಾಜಿನಾಮೆ ಮಂಜೂರು ಮಾಡಬೇಕು ವಗೈರೆಯಾಗಿ ಬರೆದ ಪತ್ರವನ್ನು ಓದಿ ಮಂಜೂರು ಮಾಡಲಾಯಿತು.

ಕಾಲಿಬಿದ್ದ ಸೆಕ್ರೆಟರಿ ಹುದ್ದೆಗೆ ಮೆ. ಕೊಂಗಂಡ ಗಣಪತಿಯವರನ್ನು ಚುನಾಯಿಸಲಾಯಿತು.

ಈ ಪ್ರದರ್ಶನಕ್ಕೆ ಈ ವರೆಗೆ ವಾಗ್ದಾನವಾದ 41/— ರೂಪಾಯಿಗಳ ಪೈಕಿ 15/— ರೂಪಾಯಿಗಳು ವಸೂಲಾಗಿವೆ. ಇದರಲ್ಲು ರೂ. 11—13—6 ಖರ್ಚಾಗಿದೆ. ಉಳಿದ ರೂ. 3-2-6ನ್ನು ಕಂಟಿಂಜೆಂಟ್ ಖರ್ಚಿಗಾಗಿ ಸೆಕ್ರೆಟರಿಯವರ ಸ್ವಾಧೀನ ಇಟ್ಟಿರುತ್ತೆ.

ಬರುವ ಕಮಿಟಿ ಮೀಟಿಂಗನ್ನು ಈ ತಾರೀಖು 22ನೇ ಆದಿತ್ಯವಾರ ದಿನ ಮಧ್ಯಾಹ್ನ 1 ಗಂಟೆಗೆ ಗೋಣಿಕೊಪ್ಪಲಲ್ಲಿ ನಡಿಸುವಂತೆ ತೀರ್ಮಾನವಾಯಿತು.

ಈ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಸ್ಥಳೀಕ ಎರಡು ಪತ್ರಿಕೆಗಳಲ್ಲಿಯೂ ಪ್ರಕಟಿಸಬೇಕೆಂದು ಠರಾವು ಪಾಸಾದ ಮೇಲೆ ಮೀಟಿಂಗು ಬರಖಾಸ್ತಾಯಿತು.

ಪುಚ್ಚಿಮಾಡ ಮಾದೈಯ್ಯ,
(ಅಧ್ಯಕ್ಷರು)

ಕೊಡಗು ಗೌಡ ವಿದ್ಯಾ ಸಂಘ

ಮೇಲ್ಕಂಡ ಸಂಘದ ಕಮಿಟಿ ಮೀಟಿಂಗೊಂದು ತಾರೀಖು 15—9—29ನೇ ಆದಿತ್ಯವಾರ ದಿನ ಹಳೇ ಬೋರ್ಡಿಂಗ್ ಕಟ್ಟಡದಲ್ಲಿ ನಡೆದು ಈ ಕೆಳಗಿನ ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನಿಸಲ್ಪಟ್ಟವು. ಸದ್ರಿ ಮೀಟಿಂಗಿನಲ್ಲಿ 20 ಕಮಿಟಿ ಮೆಂಬರುಗಳ ಪೈಕಿ 5 ಮೆಂಬರರೂ, ಪ್ರೆಸಿಡೆಂಟರೂ, ವೈಸ್‌ಪ್ರೆಸಿಡೆಂಟರೂ, ಟ್ರೆಜರರೂ ಮತ್ತು ಸೆಕ್ರೆಟರಿಯವರೂ ಹಾಜರಿದ್ದರು.

ಕಳೆದ ತಾ. 9—6—'29 ರ ಕಮಿಟಿ ಮೀಟಿಂಗ್ ಲಾಗಾಯತಿನಿಂದ ಮೇಲ್ಕಂಡ ಮೀಟಿಂಗಿನ ವರೆಗೆ ಸಂಘಕ್ಕೆ ಜಮೆಗೆ ಬಂದ ಹಣದ ತಪಸೀಲು.—ಸಾಲ ಮರು ಪಾವತಿ ರೂಪಾಯಿ 46—0—0, ಲಗ್ನದ ಹಣ ರೂ. 54—0—0, ವಾರ್ಷಿಕ ಚಂದಾ ರೂ. 1—0—0 ಮತ್ತು ಮನೆ ಬಾಡಿಗೆ ರೂ 21—0—0, ಜುಮ್ಲ ರೂ. 122—0—0 ಸಂಘಕ್ಕೆ ಬರಬೇಕಾದ ಸಾಲ ವಸೂಲಾತಿ ಒಗ್ಗೆ ಸಾಲಗಾರರಿಗೆ ತಿಳಿಸಿ ಕೂಡಲೇ ವಸೂಲಾತಿಗೆ ಕ್ರಮ ಒದಗಿಸುವುದು. ಸಾಲಗಾರರ ಪೈಕಿ ಒಬ್ಬರಾದ ಮೆ. ಕೋಟಂಬೈಲು ಮುದ್ದಪ್ಪನವರ ಮೇಲೆ ಕೂಡಲೇ ದಾವೆ ಮಾಡತಕ್ಕದ್ದು. ಮೆ. ಚೆರಿಯಮನೆ ಕುಶಾಲಪ್ಪನವರು ಈ ತಿಂಗಳೊಳಗೆ ಅವರಿಂದ ಬರತಕ್ಕ ಪೂರ್ತಿ ಅಸಲು ಮೊಬಲಗನ್ನು ಪಾವತಿ ಮಾಡಿದರೆ ಸದರಿ ಮೊಬಲಗಿಗೆ ಬಡ್ಡಿಯು ಬಿಟ್ಟುಕೊಡಲಾಗುವುದು.

ಸಂಘದಿಂದ ಈ ಕೆಳಗೆ ವಿವರಿಸಲ್ಪಟ್ಟ ಮೇರೆ ಗೌಡ ವಿದ್ಯಾರ್ಥಿಯರಿಗೆ 8 ತಿಂಗಳ ವರೆಗೆ ಸ್ಕಾಲರ್‌ಶಿಪ್‌ಗಳು ಮಂಜೂರುಮಾಡಲ್ಪಟ್ಟವು.

1. ಕೋಟಂಬೈಲು ಬಿದ್ದಪ್ಪ, ಫಾರಂ V ಮಾಹೆಯಾನ 3 ರೂ.
2. ಪೇರಿಯನ ಪೂವೈಯ್ಯ, " " "
3 ಕೆದಂಬಾಡಿ ಮುದ್ದಪ್ಪ " VI. ಮಾಹೆಯಾನ 2 ರೂ.
4. ಕೆದಂಬಾಡಿ ಮುತ್ತಪ್ಪ, " III. "
5 ಪೂಜಾರಿ ರಾಮಪ್ಪ. " III. "

ಸದರಿ ಸ್ಕಾಲರ್‌ಶಿಪ್‌ಗಳು ಮಾಹೆಯಾನ ಸುರು ತಾರೀಖಿನಲ್ಲಿ ಹಂಚಲ್ಪಡುವವು. ವಾರ್ಷಿಕ ಚಂದಾ ವಸೂಲಾತಿ ಬಗ್ಗೆ ಸಂಘದ ಪ್ರೆಸಿಡೆಂಟರು ಆಯಾ ನಾಡಿನ ಕಮಿಟಿ ಮೆಂಬರುಗಳ ಸಹಾಯಪಡೆದುಕೊಂಡು ದೇಶದಲ್ಲೆಲ್ಲಾ ಸಂಚರಿಸಿ ತಿಳುವಳಿಕೆ ಕೊಟ್ಟು ಚಂದಾ ವಸೂಲು ಮಾಡತಕ್ಕದ್ದು.

ಬರುವ ಕಮಿಟಿ ಮೀಟಿಂಗನ್ನು ಮೇಲ್ಕಂಡ ಸ್ಥಳದಲ್ಲಿ ತಾ 6—10—29ನೇ ಆದಿತ್ಯವಾರಕ್ಕೆ ಇಟ್ಟಿದೆ

ಸಿ ಕೆ ಪೊನ್ನಪ್ಪ,
ಕಾರ್ಯದರ್ಶಿ.

ಸಂಗೀತ

(ವಾಸುದೇವರಾವ್)

ಜಗತ್ತಿನ ಸರ್ವ ಕಲೆಯಲ್ಲಿ ಸಂಗೀತ ಕಲೆಯು ಶ್ರೇಷ್ಠತರವಾಗಿಯೂ, ಮಾನವನ ವ್ಯಸನವನ್ನು ಪರಿಹರಿಸಿ ಮನಸ್ಸನ್ನು ನಿರ್ಮಲವಾಗಿರಿಸತಕ್ಕದ್ದಾಗಿಯೂ, ಭಗವಂತನ ನಾಮಸ್ಮರಣಾದಿಗಳಿಗೆ ಪ್ರಥಮ ಸೋಪಾನವಾಗಿಯೂ ಇರುವುದು. ಲಕ್ಷಾಧಿಪತಿಯಿಂದ ಭಿಕ್ಷಾಧಿಪತಿಯ ವರೆಗೆ ಸಂಗೀತಕ್ಕೆ ಮರುಳಾಗದವರೇ ಅತಿ ವಿರಳ. ಸಂಸಾರಾದಿ ತಾಪತ್ರಯಗಳಿಂದ ಚಿಂತೆಗೊಳಪಟ್ಟಾಗ ಕಲುಷಿತವಾದ ಮನಸ್ಸನ್ನು ನಿರ್ಮಲವಾಗಿಯೂ, ಶಾಂತವಾಗಿಯೂ ಇರಿಸಬೇಕಾದರೆ ಆನಂದಕರವಾದ ಸಂಗೀತ ಸಾಧನಕ್ಕಿಂತ ಉತ್ತಮವಾದ ಬೇರೆ ಸಾಧನವಿಲ್ಲವೆಂತು ಹೇಳಬಹುದು. ತಾಂಡವ ಪ್ರಿಯನಾದ ಪರಮೇಶ್ವರನು ಸಹ ಘೃತಪುಷ್ಪಾದಿಗಳಿಗಿಂತ ಗಾನದಲ್ಲಿ ತನಗೆ ಅಧಿಕ ಪ್ರೀತಿಯೆಂದು ಹೇಳಿರುವನು ಅಲ್ಲದೆ ವಿದ್ಯಾಧಿದೇವತೆಯಾದ ಸರಸ್ವತಿಯೇ ವೀಣಾಪಾಣಿಯಾದ್ದರಿಂದ ಸಂಗೀತವು ದೇವಾನುದೇವತೆಗಳಿಂದ ಪೂಜಿಸಲ್ಪಡುತ್ತಿದ್ದಿತೆಂದು ಸಂಪಷ್ಟವಾಗಿದೆ. ಭಗವಂತನಾದ ವಾಸುದೇವನೇ (Flute) ಮುರಳಿಗಾನದಿಂದ ಗೋಪುಗಳ ಮನಸನ್ನು ಸಹ ಆಕರ್ಷಿಸುತ್ತಿದ್ದುದು ಸರ್ವರಿಗೂ ತಿಳಿದ ವಿಷಯವೇ. ಹೀಗೆ ಭಾರತೀಯರಿಗೆ ಅಪೂರ್ವವಾಗಿ ಒಲಿದು ಬಂದ ಸಂಗೀತ ಕಲೆಯನ್ನು ಮತ್ತಷ್ಟು ಪ್ರೋತ್ಸಾಹಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿರುತ್ತದೆ. ಇಂತಹ ಜಗನ್ಮೋಹನವಾದ ನಮ್ಮ ಹಿಂದುಸ್ಥಾನದ ಸಂಗೀತ ವಿಷಯದಲ್ಲಿ ಶಾಸ್ತ್ರಿ ಮಾತ್ಯರಾದ Mr. V. V. Dornakal, Mr. J. W. Farquhar ರವರ ಅಭಿಪ್ರಾಯವನ್ನು ಸ್ವಲ್ಪ ಕೇಳಿ. 'We believe that Indian Music possesses so much value for the life of the people of India that in this great day of national aspiration of progress, it ought to be known and understood by every man and woman who has India's good at heart, so that it may become cultivated in every city and village throughout the land' ಅಂದರೆ—ಭಾರತೀಯರ ಜೀವನಕ್ಕೆ ಬಹು ಬೆಲೆಯನ್ನು ಕೊಡುವ ಹಿಂದುಸ್ಥಾನದ ಸಂಗೀತವು ಈ ರಾಷ್ಟ್ರೀಯತೆಯ ದಿನದಲ್ಲಿ—ದೇಶದುನ್ನತಿಯನ್ನು ಸಾಧಿಸುವ ಪ್ರತಿ ಒಬ್ಬ ಸ್ತ್ರೀಪುರುಷರಿಂದ ಪ್ರತಿ ಹಳ್ಳಿಪಟ್ಟಣಗಳಲ್ಲಿಯೂ ಪ್ರೋತ್ಸಾಹಿಸಲ್ಪಡುವುದೆಂದು ನಾವು ನಂಬಿದ್ದೇವೆ.' ಆದಮೇಲೆ 'ಇಂಗ್ಲಿಷ್' ಭಾಷೆಯನ್ನೇ ನಿತ್ಯ ಜಪ ಮಾಡಿಸುವ ತಂದೆ ತಾಯಿಗಳು ಮಕ್ಕಳಿಗೆ ಸ್ವಲ್ಪಮಟ್ಟಿಗಾದರೂ ಚಿತ್ರ ಕಲೆ, ಸಂಗೀತ ಕಲೆ, ಕೈಗಾರಿಕೆ ಇತ್ಯಾದಿಗಳ ಶಿಕ್ಷಣವನ್ನು ಕೊಡಿಸುವುದು ಉತ್ತಮವೆಂದು ಹೇಳಬೇಕಾಗಿಲ್ಲ.

ಸೇವಾದಲದ ವ್ಯಾಯಾಮ ವಿದ್ಯಾಪೀಠವು.

ಕರ್ನಾಟಕದ ನಿಧಿಯ ಸಂಘ

೧೯೨೯ನೇ ಇಸವಿಯ ಆಗಸ್ಟ ೧ನೆಯ ತಾರೀಖಿನ ದಿವಸ ಬಾಗಲಕೋಟೆಯಲ್ಲಿ ನಡೆಸಲ್ಪಟ್ಟ ನಾಲ್ಕನೆಯ ಕರ್ನಾಟಕ ಪ್ರಾಂತೀಯ ಸ್ವಯಂಸೇವಕ ಸಮ್ಮೇಳನದಲ್ಲಿ ಬಾಗಲಕೋಟೆಯ ಕರ್ನಾಟಕ ವಿದ್ಯಾಪೀಠದ ವ್ಯವಸ್ಥೆಯ ಸಲುವಾಗಿ ಕಾರ್ಯತತ್ಪರರಾದ ಸದಸ್ಯರಿಂದ ಕೂಡಿದ ಒಂದು ಆರ್ಥಿಕ ಸಂಘವು ನಿಯಮಿಸಲ್ಪಟ್ಟಿರುವದು. ಬೇಲೂರಿನ ಶ್ರೀ ಕೇಶವದಾಸರು ಅಧ್ಯಕ್ಷರಾಗಿಯೂ, ಕರ್ನಾಟಕ ದಲದ ಪ್ರಾಂತೀಕ ಸಂಘಟಕರಾದ ಶ್ರೀ ಬಿಂದಾಚಾರ್ಯ ಬುರ್ಲಿಯವರು ಕಾರ್ಯದರ್ಶಿಗಳಾಗಿಯೂ ನಿಯಮಿಸಲ್ಪಟ್ಟರು.

ಶ್ರೀಯುತರುಗಳಾದ (೧) ದಾಮೂ ಅಂಣಾ ಲೇಂಗಡೆ, ಕಪಾಪೂರ್ ಬೆಳಗಾವ. (೨) ಬೆಳಗಾವ ಜಿಲ್ಲೆಯ ಅಥಣೀಯ ಗುರುನಾಥ ಗೋಪಾಳಜೋಶಿ, (೩) ಬಾಗಲಕೋಟೆಯ ಶ್ರೀನಿವಾಸರಾವ ಕುಲಕರ್ಣಿಯವರು, (೪) ಸದ್ಯಕ್ಕೆ ಸಿವಮೊಗ್ಗೆಯಲ್ಲಿ ಇರುವ ಎಮ್. ಸಿ. ಮೊರ್ಧಂಡರು (೫) ತುಮಕೂರಿನ ಅಡ್ವೋಕೇಟರಾದ ಡಿ. ರಾಮರಾಯರು, (೬) ಡಿ. ಸುಬ್ರಮ್ಹಣ್ಯನ್, ವಕೀಲ, ತುಮಕೂರು, (೭) ಧಾರವಾಡ ಜಿಲ್ಲೆಯ ಹಾನಗಲ್ಲಿನ ಅನಂತಭಟ್ಟ ಕುಂದಾಪೂರರು ಮತ್ತು (೮) ಜವಳೀ ರಘುಪತರಾವ, ತೀರ್ಥಹಳ್ಳಿ, ಡಿಸ್ಟ್ರಿಕ್ಟ ಸಿವಮೊಗ್ಗಾ, ಮೇಲ್ಕಂಡ ನಿಧಿಯ ಸಂಘದ ಇತರ ಸದಸ್ಯರುಗಳಾಗಿದ್ದಾರೆ

ಸಂಘಕ್ಕೆ ಯಾವದಾದರೂ ನಿವಾರ್ಯವಿಲ್ಲದ ಸಂದರ್ಭಗಳಲ್ಲಿ ಹೊಸ ಸದಸ್ಯರುಗಳನ್ನು ಕೂಡಿಸಿಕೊಳ್ಳಲು ಅಧಿಕಾರವಿರುತ್ತದೆ

ಪ್ರದೇಶಗಳಲ್ಲಿಯೂ, ಕೀರ್ತನೆಗಳ ಮೂಲಕವೂ ಮತ್ತು ಇತರ ವಿಧಾನಗಳಿಂದಲೂ ಹಣವನ್ನು ಎತ್ತುತ್ತಿದ್ದಾರೆ.

ಅನೇಕ ಕನ್ನಡ ನಾಟಕ ಮಂಡಳಿಗಳು, ಕೆಲವು ನಾಟಕಗಳನ್ನು ನಮಗಾಗಿ ಆಡಿ ಅದರಿಂದ ಆಗುವ ಉತ್ಪನ್ನವನ್ನು ನೀಡುವೆವೆಂತ್ತ ಕೊಡಲು ಒಪ್ಪಿದ್ದಾರೆ. ಈ ನಾಟಕ ಕಂಪನಿಗಳು ಎಲ್ಲಿ ಮತ್ತು ಯಾವಾಗ ನಾಟಕಗಳನ್ನಾಡಬೇಕು ಇವೆ ಮೊದಲಾದ ವಿಷಯಗಳನ್ನು ನಿಶ್ಚಯಿಸಲಿಕ್ಕೆ ಶ್ರೀ ಬುರ್ಲಿಯವರಿಗೆ ಸಂಪೂರ್ಣ ಅಧಿಕಾರವನ್ನು ಕೊಡಲ್ಪಟ್ಟಿದೆ.

೧೯೩೦ನೇಯ ಜನವರಿ ೧ನೇ ತಾರೀಖಿನ ವರೆಗೂ ಶ್ರೀ ಬುರ್ಲಿಯವರು ಚಂದಾಹಣವನ್ನೆತ್ತುವ ಕೆಲಸವನ್ನೇ ಮಾಡುವದೆಂದು ಗೊತ್ತಾಗಿದೆ.

ನಾನು ಕರ್ನಾಟಕದಲ್ಲಿರುವ ನನ್ನ ಸ್ನೇಹಿತರುಗಳಿಗೂ ಮತ್ತು ಸಂಘದ ಕಾರ್ಯನಿರ್ವಾಹಕರಿಗೂ ನನ್ನೊಡನೆ ಸಹಕರಿಸಿ ಅವರೆಲ್ಲರ ಆರ್ಥಿಕ ಸಹಾಯದಿಂದ ಬಾಗಲಕೋಟೆಯ ವಿದ್ಯಾಪೀಠವನ್ನು ಕರ್ನಾಟಕದಲ್ಲಿ ಅಷ್ಟು ಅಲ್ಲ, ಇಡಿ ಹಿಂದುಸ್ಥಾನದಲ್ಲೆಲ್ಲಾ ಮೊದಲಿಯ ವಿದ್ಯಾಪೀಠವನ್ನಾಗಿ ಮಾಡಲು ಸಹಾಯ ಮಾಡಲು ವಿಜ್ಞಾಪಿಸಿಕೊಂಡಿದ್ದೇನೆ. ನನ್ನ ವಿನಂತಿಯು ವ್ಯರ್ಥವಾಗಲಾರದೆಂದು ನಂಬಿದ್ದೇನೆ.

ಮೇಲ್ಕಂಡ ಸಂಘದ ಸದಸ್ಯರೆಲ್ಲರು ನನ್ನ ಸಹಾಯಿಂದ ಕೂಡಿದಂಥ ರಶೀದಿ ಪುಸ್ತಕಗಳನ್ನು ಹೊಂದಿದ್ದರೆ ಸರ್ವರೂ ಈ ಪತ್ರಕಾರ್ಯದಲ್ಲಿ ಸ್ವತಃ ಪರಹಸ್ತದಿಂದ ಸಹಾಯ ಮಾಡಬೇಕೆಂದು ಬೇಡುತ್ತೇನೆ.

ನಾ. ಸು. ಹರ್ಡೀಕರ
ಹುಬ್ಬಳ್ಳಿ, ಕಾರ್ಯದರ್ಶಿ,
೧೪—೯—೨೯. ಕ ಪ್ರಾ. ಸ್ವ. ಮಂಡಳ

ಮಡಿಕೇರಿ-ಭಾಗಮಂಡಲ-ನುಂಟಿಕೊಪ್ಪ ಜಮ್ಮ ಓಟರುಗಳಲ್ಲಿ ರಾವು ಬಹದೂರ್ ಕೋಡಿಮಣಿಯಂಡ ಸುಬ್ಬೈಯ್ಯನ ವಿಜ್ಞಾಪನೆ.

ಈಗ ಕೌನ್ಸಿಲಿನಲ್ಲಿ ಖಾಲಿಬಿದ್ದಿರುವ ಜಮ್ಮಗಾರರ ಪರ ಮೆಂಬರುತನಕ್ಕೆ ನಾನೊಬ್ಬ ಉಮೇದ್ವಾರನಾಗಿರುವುದರಿಂದ ತಾವುಗಳೆಲ್ಲರೂ ಬರುವ ಸೆಪ್ಟಂಬರ್ ತಿಂಗಳ 27ನೇ ಶುಕ್ರವಾರ ದಿನ ಓಟು ಹಾಕುವ ಸ್ಟೇಶನುಗಳಿಗೆ ಹಾಜರಾಗಿ ದಯವಿಟ್ಟು ತಮ್ಮಗಳ ಓಟನ್ನು ನನಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಂತಿ ತಮ್ಮವನಾದ,

ಕೋಡಿಮಣಿಯಂಡ ಸುಬ್ಬೈಯ್ಯ.

ಮಡಿಕೇರಿ, 26—8—29 4—4

COORG FOREST DEPARTMENT, SOUTH DIVISION.

Timber Sale Notice.

Mercara, the 6th September 1929.

It is hereby notified that about 239 c. ft. of Teak, 25 c. ft. of Biti 644 c. ft. of Honne, 219 c. ft. of Nandi, 232 c. ft. of Matti and 195 c. ft. of Junglewood of 3rd class timbers lying in the Tittimatti Range will be sold by public auction at Tittimatti on the 4th October 1929 at 12 noon.

All the timber is open to inspection. For further particulars apply to DIVISIONAL FOREST OFFICER, SOUTH COORG, MERCARA.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ೧ಕ್ಕೆ 0–14–0 ಟಿ ಮ. 0–9–0.

ಕೆ. ಟಿ. ಡೋಂಗರೆ ಕಂಪೆನಿ,

52–51 ಗಿರಿಗಾಂವ, ಮುಂಬಯಿ.

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಒಟ್ಟೆಯ ರಂಗಿಗೂ, ಒಟ್ಟೆಯ ನಮೂನೆಗೂ ಮರುಳಾಗಿ ಪರದೇಶಿ ಒಟ್ಟೆಯನ್ನು ಕೊಂಡುಕೊಂಡು, ಅನ್ನವಿಲ್ಲದೆ ನವಳುತ್ತಿರುವ ಲಕ್ಷಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡುತ್ತಿರುವಿರಾ? ಇಲ್ಲವೇ, ದಿನಕೊಮ್ಮೆ ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ನರಳುತ್ತಿರುವ ಲಕ್ಷಾನುಲಕ್ಷ ಬಡವಾಯಿ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಒಟ್ಟೆಯನ್ನು ಕೊಂಡುಕೊಳ್ಳಲು ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಯೂ ಈ ರೀತಿಯಾಗಿ ನಮ್ಮ ಬಡ ದೇಶೀಯರ ಜೀವನಕ್ಕೆ ದಾರಿಯಾಗುತ್ತೆ.

	ರು	ಆ	ಪೈ
ಹತ್ತಿ ಬೆಳೆದವನಿಗೆ	0	3	0
ಹತ್ತಿ ಬಿಡಿಸಿದವನಿಗೆ	0	0	6
ಹತ್ತಿ ಸುಕ್ಕುವವನಿಗೆ	0	1	9
ನೂಲು ಮಾಡುವವನಿಗೆ	0	3	9
ಒಟ್ಟೆ ನೆಯ್ಯುವವನಿಗೆ	0	4	9
ಅಗಸನಿಗೆ	0	0	6
ಒಟ್ಟೆ ಅತ್ತಿತ್ತ ಸಾಗಿಸುವದಕ್ಕೆ	0	0	9
ಖಾದಿ ಅಂಗಡಿಯವನಿಗೆ	0	1	0
	1	0	0

ಖಾದಿಯ ಒಟ್ಟು, ಪರದೇಶಕ್ಕೆ ವರ್ಷಕ್ಕೆ 60 ಕೋಟಿ ರೂಪಾಯಿ ಹೋಗುವದನ್ನು ನಿಲ್ಲಿಸಿ ಅಪೇಕ್ಷಿಸಿದಷ್ಟು ಬೇಕಾದ ಒಟ್ಟೆಯನ್ನು ನಿಮ್ಮ ಮನೆಯ ಬಾಗಿಲಿಗೆ ಖುದ್ದಾಗಿ ತಂದು ಕೊಡುವೆವು.

ಮೇನೇಜರು,

24–8 ಖಾದಿಭಂಡಾರ,

ವೀರಾಜಪೇಟೆ.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges & Hunting Requisites

for

SEASON

1929-30.



CURRENT CATALOGUE ON APPLICATION

THE BOMBAY ARMOURY,

Specialist in Arms & Ammunition.

331, ABDULREHMAN STREET,

BOMBAY No 4

24–12

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳೆಕೊಳ್ಳಬೇಡಿ. | ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ | ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ.

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ, ಹೊಟ್ಟೆ ತಲೆ ದುಸ್ವಪ್ನ ಬೀಳುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ ವಾಂತಿ ಸರ್ವಕಾಲ ಪಿಶಾಚಬಾಧೆಯಿಂದ ನರಳುವಿಕೆ, ಬಿಳುಪು, ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಅಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ ಮುಟ್ಟುದೋಷ ಕಾಮಿನಿ ಗ್ರಹಪೀಡೆ, ದೃಷ್ಟಿದೋಷ, ಭಯದಿಂದ ಜ್ವರಪೀಡೆ, ಕ್ಷೀಣ ಹೊಂದುವಿಕೆ, ಜಪ್ಪು ಇಡುವಿಕೆ, ಮುಟಗಿದನೆ ಹೊಟ್ಟೆಯೊಳಗಿಂದ ವಿಶೋಧ ಮೊದಲಾದವುಗಳಿಂದ ಕಾಡುತ್ತಿರುವದು ಗರ್ಭ ರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ, ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ತಕ್ಕೊಳ್ಳಿರಿ ಹೆಣ್ಣು ಮಕ್ಕಳಿಗೆ ಸಂತಾನ ದೊರೆಯಿವ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨–೮–೦ ಪೋಷ್ಟು ಖರ್ಚು ಬೇರೆ ಆಗತಕ್ಕ ವಿಕಾರಂಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52–11 **ಮು. ಪೋ. ಅಥಣಿ, ಜಿ. ಬೆಳಗಾಂವ.**

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ಥದುವಾಧಿ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಿಡ್ಡವದು ಮೊದಲಾದವುಗಳು ಪೂರ್ಣ ಗುಣವಾಗಿ ಕುಂದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು —ಕ್ರಯ ಡಬ್ಬಿ 1 ಕ್ಕೆ 2–8–0, ಮೂರು ಡಬ್ಬಿಗಳಿಗೆ ರೂ. 7–0–0

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ ಕಫಕ್ಕೆ, ಜ್ವರಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0–10–0 3 ಕ್ಕೆ 1–12–0

೩. ಮಲೇರಿಯಾ ನಿವಾರಣಿ.

ದಿನ ಬಿಟ್ಟು ಬರುವಜ್ವರ, ಮಲೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಹಸಿವನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆಉರಿ, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ, ಬಾಟ್ಲಿ 1 ಕ್ಕೆ 1–4–0 3 ಕ್ಕೆ 3–8–0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ ಬಾಟ್ಲಿ 1 ಕ್ಕೆ 0–6–0, 3ಕ್ಕೆ 1–0

೬. ಕಸ್ತೂರಿ ಮಿಶ್ರಣ.

ಚಿಕ ಮಕ್ಕಳಿಗೆ ಬಾಲಂತಿಯರಿಗೆ ಬಾಟ್ಲಿ 1 ಕ್ಕೆ 1–8–0 3 ಬಾಟ್ಲಿಗೆ 1—4—0

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ. ಬಾಟ್ಲಿ 1 ಕ್ಕೆ 1–4–0, 3 ಬಾಟ್ಲಿಗೆ 3–

೮. ಚವನ ಪ್ರಾಶ ಡಬ್ಬಿ 1 ಕ್ಕೆ 2–0–0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷಧ ರವಾನಿಸಲ್ಪಡುವದು ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದೀಕ ಫಿಜಿಸಿಯನ್ಸ್,

52–45 ರಥಬೀದಿ ಮಂಗಳೂರು, ದ. ಕನ್ನಡ

ವರ್ತಮಾನ ಸಂಗ್ರಹ.

ಒ ಳ ದೇ ಶ.

ಜಮೀನ್ದಾರರ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗು ಈ ತಾ. 28ರಲ್ಲಿ ಮಡಿಕೇರಿಯಲ್ಲಿ ಸಂಘದ ಹಾಲ್‍ನಲ್ಲಿ ನಡೆಯಲಿಕ್ಕಿದೆ.

ಶ್ರೀ ಕಾವೇರಿ ತುಲಾ ಸಂಕ್ರಮಣದ ತೀರ್ಥೋದ್ಭವವು ಬರುವ ಅಕ್ಟೋಬರ್ ತಾ. 17 ನೇ ಗುರುವಾರ ಪ್ರಾತಃಕಾಲ 4 ಗಂಟೆಗೆ ಆಗುವುದು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗೊಂದು ಈ ತಾ 28ನೇ ಶನಿವಾರ ಬೆಳಿಗ್ಯೆ 11 ಗಂಟೆಗೆ ಕಂಪೆನಿಯ ಆಫೀಸಿನಲ್ಲಿ ನಡೆಯುವುದು.

ಸಂಪಾಜೆ ಕಡಮಕಲ್ಲು ಪ್ರಾಂತ್ಯದಲ್ಲಿ ಇದ್ದ ಒಂಟಿಗ ಆನೆಯನ್ನು ಬೇಡ್ಲದ ಮೆ. ಅಂಗ್ರಿ ನರಸಿಂಹ ಭಟ್ಟರು ಕಳೆದ ವಾರ ಗುಂಡು ಹೊಡೆದು ಕೊಂದಿರುವರು.

ಈ ತಾ. 15ರಲ್ಲಿ ನಡೆಯಬೇಕಾಗಿದ್ದ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ ಕೋರಂ ಇಲ್ಲದ್ದರಿಂದ ಸದರಿ ಮೀಟಿಂಗು ಈ ತಾ. 29ಕ್ಕೆ ಮುಂದರಿಸಲಾಗಿದೆ.

ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಿಂದ ಸಿಲೋನಿಗೆ ಈ ವಾರ ಹೋದ ಕ್ರಿಕೆಟ್ ಮತ್ತು ಹಾಕಿ ಆಟಗಾರರ ಟೀಮಿನಲ್ಲಿ ಮೆ. ನಡಿಕೇರಿಯಂಡ ಬಿದ್ದಪ್ಪನವರು ಒಬ್ಬರಾಗಿರುವರೆಂದು ತಿಳಿದು ಸಂತೋಷ ಪಡುತ್ತೇವೆ.

ತಾ. 17ನೇ ರಾತ್ರಿ ಬೆಟ್ಟತ್ನಾಡು ನಲ್ಲಿಗೋಟೆ ಗ್ರಾಮದಲ್ಲಿರುವ ಕುಪ್ಪಂಡ ತಿಮ್ಮಯ್ಯ (ಪಟೇಲರು) ನವರನ್ನು ಅವರ ಮನೆಯಲ್ಲಿ ಅಡಿಗೆ ಮಾಡಿಕೊಂಡಿದ್ದ ಮಲಯಾಳಿಯೊಬ್ಬನು ಕಾರಣಾಂತರಗಳಿಂದ ದೊಣ್ಣೆಯಿಂದ ಹೊಟ್ಟೆಗೆ ತಿವಿದು ಕೊಂದನೆಂದೂ, ಮರುದಿನ ಬೆಳಿಗ್ಯೆ ಸದರಿ ಮಲಯಾಳಿಯು ಅಮ್ಮತ್ತಿ ಸಿದ್ದಾಪುರ ರಸ್ತೆಯಲ್ಲಿ ಕೈದು ಮಾಡಲ್ಪಟ್ಟು ಪೋಲೀಸು ತನಿಖೆ ನಡೆಯುತ್ತಿದೆಯೆಂದೂ ತಿಳಿದು ಬರುತ್ತದೆ.

ಈ ತಾ. 12 ರಲ್ಲಿ ಮಡಿಕೇರಿ—ಸಿದ್ದಾಪುರ ರಸ್ತೆ 10 ನೇ ಮೈಲು ಬಳಿ ಕೆಲವು ಗ್ರಾಮಸ್ಥರು ಸೇರಿ ಹುತ್ರಿ ಹಬ್ಬದ ವಿಷಯ ಮೀಟಿಂಗು ಮಾಡಿದ್ದಾಗ್ಯೆ ಕೊಡವ ಸಭೆಯು ಪ್ರಚಾರಕರ ಮೂಲಕ ಮೇರೆ ಕೊಡವ ಸಭೆ ಬೇಕೆಂದು ಒಪ್ಪಿ ಕಮಿಟಿ ನೇಮಿಸಲಾಯಿತೆಂದೂ, ತಾ. 15 ರಲ್ಲಿ ಹೆರವನಾಡು ಅಂಬಲದಲ್ಲಿ ನಡಿಸಿದ ಮೀಟಿಂಗಿನಲ್ಲಿ, ದೇಶೀಯರಲ್ಲಿ ಒಡಕನ್ನು ಹುಟ್ಟಿಸುವ ಕೊಡವ ಸಭೆಗೆ ಅಲ್ಲಿಯವರು ಒಪ್ಪುದಿಲ್ಲವಾಗಿ ತೀರ್ಮಾನಿಸಿದರೆಂದೂ ವರ್ತಮಾನ.

ಕೆಲವು ವರ್ಷಗಳ ಹಿಂದೆ ಮೆ. ಇ. ಎ. ಫೆನೆಲ್‍ರವರ ಉಲುಗುಲಿ ತೋಟದ ಮೇನೇಜರಾಗಿದ್ದಾಗ ಮೆ. ಡಿ. ಯಫ್. ಸ್ಟೀಫನೇಜ್‍ರವರು ಸುಮಾರು 1,700 ರೂಪಾಯಿಗಳನ್ನು ದುರುಪಯೋಗಪಡಿಸಿದರೆಂದು ಅವರ ಮೇಲೆ ಕ್ರಿಮಿನಲ್ ಕೇಸು ಸುಮಾರು 2 ವರ್ಷಗಳಿಂದ ನಡೆಯುತ್ತಿದ್ದು ಈ ತಾ. 13ರಲ್ಲಿ ಪಸ್ಟ್‍ಕ್ಲಾಸ್ ಮೇಜಿಸ್ಟ್ರೇಟರಾದ ಉತ್ತರ ಕೊಡಗು ಸುಬೇದಾರರ ಕೋರ್ಟಿನಲ್ಲಿ ಅವರಿಗೆ 300 ರೂ. ಜುಲುಮಾನೆಯೂ, ಕೋರ್ಟು ಏಳುವವರೆಗೆ ಸಜೆಯೂ ವಿಧಿಸಲಾಯಿತು.

ಸಿದ್ದಾಪುರದ ಬಳಿ ನೆಲ್ಯ ಹುದಿಕೇರಿ ಗ್ರಾಮದಲ್ಲಿ ಗೌಡಗಳ ಪೋಕ್ರು ಮತ್ತು ಕ್ರಿಶ್ಚಿಯನ್ ಮುಗ್ಗ ಎಂಬವರು ನೇ ಮುಗ್ಗನ ಗಂಡ ತೋಮಸ್ ಎಂಬವನನ್ನು ಜುಲೈ ತಿಂಗಳಂತ್ಯದಲ್ಲಿ ಖೂನಿ ಮಾಡಿದರೆಂಬ ಖೂನಿ ಕೇಸ್ ಸೆಶನ್ ಕೋರ್ಟಿನಲ್ಲಿ ಈ ತಾ. 16, 17ರಲ್ಲಿ ವಿಚಾರ ನಡೆದು. ಪೋಕ್ರು ಖೂನಿ ಮಾಡಿದ್ದು ರುಜುವಾಯಿತೆಂಬುದರಿಂದ ಅವನಿಗೆ ಫಾಶಿಯೂ, ಖೂನಿ ಮಾಡಿದ್ದ ರುಜುವಾತುಗಳನ್ನು ಮರೆಮಾಡಿತೆಂಬ ತಕ್ಸೀರಿಗಾಗಿ ಮುಗ್ಗನಿಗೆ 5 ವರ್ಷ ಸಜಾವೂ ವಿಧಿಸಲಾಗಿದೆ.

ಕೊಡಗು ಕೌನ್ಸಿಲಿನಲ್ಲಿ ಖಾಲಿ ಬಿದ್ದಿರುವ ಮೆಂಬರು ಸ್ಥಾನದ ಉಪಚುನಾವಣೆ ಬಗ್ಗೆ ಮಡಿಕೇರಿ—ಭಾಗಮಂಡ್ಲ—ಸುಂಟಿಕೊಪ್ಪ ಜಮ್ಮ ಓಟರುಗಳ ಓಟುಗಳು ಈ ತಾ. 27 ನೇ ಶುಕ್ರವಾರ ದಿನ ಮಡಿಕೇರಿ ನಾಡು ಆಫೀಸು, ಮೂರ್ನಾಡು 'ಸ್ಪೆಕ್ಷನ್ ಬಂಗ್ಲೆ, ಮಹಾಪುರ ಇಂಡಿಯನ್ ಆಫೀಸ ಕ್ವಾರ್ಟರ್ಸ್, ಸುಂಟಿಕೊಪ್ಪ ನಾಡು ಆಫೀಸು, ಭಾಗಮಂಡ್ಲ ನಾಡು ಆಫೀಸು, ಕಾರುಗುಂದ ಇನ್‍ಸ್ಪೆಕ್ಷನ್ ಬಂಗ್ಲೆ ಮತ್ತು ಸಂಪಾಜೆ ಇನ್‍ಸ್ಪೆಕ್ಷನ್ ಬಂಗ್ಲೆ, ಈ ಸ್ಥಳಗಳಲ್ಲಿ ಎಕೊಳ್ಳಲಾಗುವುವು.

ಪೊನ್ನಂಪೇಟೆ ಕೊಡಗರೆಲ್ಲರೂ ಸೇರಿ ಎಂದಿನಂತೆ ಕೈಲ್ಪೊಳ್ದ್ ಉತ್ಸವವನ್ನು ತಾ. 18—9—29ರಲ್ಲು ಆಚರಿಸಿದರು. ಮಕ್ಕಳಿಗೂ ಪೊನ್ನಂಪೇಟೆ ಮಹಾ ಜನಗಳಿಗೂ ಆಟ ಪಂದ್ಯಗಳು ಇದ್ದವು. ಯಾವ ಮತ ಭೇದ ಭಾವಗಳಿಲ್ಲದೆ ಎಲ್ಲವರೆಲ್ಲರೂ ಈ ಉತ್ಸವದಲ್ಲಿ ಭಾಗಿಗಳಾಗಿದ್ದರು. ಸ್ಪರ್ಧೆಯಲ್ಲಿ ಗೆದ್ದವರಿಗೆ ಮ. ರಾ. ಶ್ರಿ. ಎ. ಕಾಳಮ್ಮಯ್ಯನವರ ಕೈಯಲ್ಲಿ ಇನಾಮುಗಳು ಹಂಚಲ್ಪಟ್ಟವು. ಎಲ್ಲರೂ ಇನಾಮುಗಳನ್ನು ತೆಗೆದುಕೊಂಡನಂತರ ಕೂಟವು ಮುಗಿದು ರಾತ್ರಿ ಗೃಹಸ್ಥರೆಲ್ಲರೂ ಸೇರಿ ಒಂದು ಊಟವನ್ನು ನಡೆಸಿದರು.

ಕೊಡಗಿನ ಬರುವ ಜನರಲ್ ಚುನಾವಣೆಯು ಸಲುವಾಗಿ ಈ ವರೆಗೆ ಪ್ರಕಟಿಸಿದ್ದ ನೋಟೀಸನ್ನು ರದ್ದುಮಾಡಿ, ರಿಟರ್ನಿಂಗ್ ಆಫೀಸರುಗಳು ಈ ಸೆಪ್ಟಂಬರು ತಿಂಗಳಲ್ಲಿ ಓಟರರ ಪಟ್ಟಿಗಳನ್ನು ತಯಾರಿಸಿ ಪ್ರಕಟಿಸಬೇಕೆಂತಲೂ, ಸದರಿ ಪಟ್ಟಿಗಳಲ್ಲಿ ಸೇರಿಸಿರುವ ಹೆಸರುಗಳ ವಿಷಯವಾಗಲೀ, ಬಿಟ್ಟು ಹೋಗಿರುವ ಹೆಸರುಗಳ ವಿಷಯವಾಗಲೀ ಫಿರ್ಯಾದುಗಳಿದ್ದರೆ ಓಟರುಗಳು ಅವುಗಳನ್ನು ಅಕ್ಟೋಬರು 25 ರೊಳಗೆ ರಿವೈಸಿಂಗ್ ಆಫೀಸರಿಗೆ (ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ) ತಿಳಿಸತಕ್ಕದೆಂತಲೂ, ಇಂಥಾ ಫಿರ್ಯಾದುಗಳನ್ನು ವಿಚಾರಿಸಲು ನವಂಬರು 5 ರೊಳಗೆ ಒಂದು ದಿನವನ್ನು ರಿವೈಸಿಂಗ್ ಆಫೀಸರು ನಿಶ್ಚೈಸತಕ್ಕದ್ದೆಂತಲೂ ಈ ತಾರೀಖು ಮತ್ತು ಸ್ಥಳವನ್ನು ಕುರಿತ ನೋಟೀಸನ್ನು ರಿವೈಸಿಂಗ್ ಆಫೀಸರು ತಮ್ಮ ಆಫೀಸಿನಲ್ಲಿಯೂ, ಸುಬೇದಾರರು ಮತ್ತು ಪಾರುಪತ್ಯಗಾರರುಗಳ ಆಫೀಸುಗಳಲ್ಲಿಯೂ ಪ್ರಕಟಿಸುವುದಲ್ಲದೆ, ಫಿರ್ಯಾದು ಸಂಬಂಧಿಸುವ ಪ್ರತಿಯೊಬ್ಬ ಓಟರಿಗೂ ಕಳುಹಿಸಬೇಕೆಂತಲೂ, ರಿವೈಸಿಂಗ್ ಆಫೀಸರು ಓಟರರ ಪಟ್ಟಿಯಲ್ಲಿ ತಾನಾಗಿಯೇ ಮಾಡಿದ ಬದಲಾವಣೆಯನ್ನು ನವಂಬರು 1 ರೊಳಗೆ ಪ್ರಕಟಿಸಬೇಕೆಂತಲೂ, ರಿವೈಸಿಂಗ್ ಆಫೀಸರು ತಿದ್ದುಪಡಿ ಮಾಡಿದ ಪಟ್ಟಿಯ ನಕಲನ್ನು ನವಂಬರು 11ರಲ್ಲಿ ಸಂಬಂಧಪಟ್ಟ ರಿಟರ್ನಿಂಗ್ ಆಫೀಸರುಗಳಿಗೆ ಕಳುಹಿಸತಕ್ಕದ್ದೆಂತಲೂ, ರಿಟರ್ನಿಂಗ್ ಆಫೀಸರುಗಳು ಹಾಗೆ ತಿದ್ದುಪಡಿ ಮಾಡಿದ ಪಟ್ಟಿಗಳನ್ನು ನವಂಬರು 25 ರೊಳಗೆ ಪ್ರಕಟಿಸಬೇಕೆಂತಲೂ ಚೀಫ್ ಕಮಿಷನರು ನೋಟೀಸನ್ನು ಪೂನ ಗಜೆಟಿನಲ್ಲಿ ಪ್ರಕಟಿಸಿರುವರು.

ಹಿಂದೂದೇಶ.

ಸಕಲ ಖರ್ಚುಗಳನ್ನು ಕಳೆದು, ಬೊಂಬಾಯಿಯ ತಾತಾರವರ ಕಬ್ಬಿಣದ ಕಂಪೆನಿಯು ಕಳೆದ ವರ್ಷದ ನಿವ್ವಳ ಆದಾಯವು 58 ಲಕ್ಷ ರೂಪಾಯಿಯೆಂದು ತಿಳಿಸುಬರುತ್ತದೆ.

ಹಿಂದುಸ್ಥಾನ ಸೇವಾದಳದವರಿಗೆ ಮಿಲಿಟರಿ ತರಹದ ಯೂನಿಫಾರಂ ಮಾಡಿಸಬೇಕೆಂಬ ವಿಷಯ ನಿಶ್ಚೈಸಲು ಅಖಿಲ ಭಾರತ ವಾಲಂಟಿಯರ್ ಬೋರ್ಡಿನ ಮೀಟಿಂಗೊಂದು ಈ ತಾ 28ರಲ್ಲಿ ಲಕ್ನೋದಲ್ಲಿ ನಡೆಯುವುದು.

ಪಂಜಾಬು ಸರ್ಕಾರದ ಮತ್ತು ಅಲ್ಲಿಯ ಪ್ರಾಂತೀಕ ಸೈಮನ್ ಕಮಿಟಿಯ ವರದಿಗಳ ಮೇಲೆ ಈಗ ಅಲ್ಲಿಯ ಕೌನ್ಸಿಲಿನಲ್ಲಿ ಚರ್ಚೆಯು ನಡೆಯುತ್ತಿದೆ. ಸ್ವರಾಜ್ಯ ಪಾರ್ಟಿಯ ಮೆಂಬರುಗಳು ಈ ಚರ್ಚೆಯಲ್ಲಿ ಭಾಗಿಗಳಾಗಿರುವುದಿಲ್ಲ.

ಅನಾಥರಾದ ವಿಧವೆಯರಿಗೆ ವಿದ್ಯೆಯನ್ನು ಕಲಿಸಲಿಕ್ಕೂ, ಅವರಿಗೆ ಆಶ್ರಯವನ್ನು ಕೊಟ್ಟು ಉದ್ಯೋಗವನ್ನು ಕಲಿಸಲಿಕ್ಕೂ ವಿನಿಯೋಗಿಸುವಂತೆ ಪಶ್ಚಾದ ಪ್ರಸಿದ್ಧ ಸಾಹುಕಾರ ಮಿ. ಜೆ. ಗೋರ ಎಂಬವರು ಹಿಂದೂ ಮಹಾಸಭೆಗೆ 15 ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

ಹಿಂದೀ ಸರ್ಕಾರದವರು, 6 ಚಕ್ರಗಳುಳ್ಳ 3 ಟನ್ನು ಭಾರವನ್ನು ಹೊರಬಲ್ಲ, 9೦೦ ಮೋಟಾರು ಗಾಡಿಗಳನ್ನು ತಯಾರಿಸುವುದಕ್ಕೆ ಇಂಗ್ಲೆಂಡಿನ ಆಲ್ಬಿಯನ್ ಕಂಪೆನಿಗೆ ಆಜ್ಞೆ ಕೊಟ್ಟಿರುವರು. ಮೋಟಾರು ಕಂಪೆನಿಗೆ ಇಷ್ಟು ದೊಡ್ಡ ಆರ್ಡರು ದೊರೆತದ್ದು ಇದೇ ಮೊದಲಂತೆ!

ಲಾಹೋರ್ ಕಾಂಗ್ರೆಸ್ಸಿಗಾಗಿ ಪಂಜಾಬು ಸರ್ಕಾರವು ಡೇನ್ ಪಾರ್ಕನ್ನು ದಯಪಾಲಿಸಿದುದನ್ನು ಕಾಂಗ್ರೆಸ್ ಅಧಿಕಾರಿಗಳು ಸ್ವೀಕರಿಸಿರುವರು. ದಿ ಲಾಲಾ ಲಜಪತರಾಯರ ಶವ ಸಂಸ್ಕಾರವು ಅಲ್ಲಿ ನಡಿಯಿತಾದ್ದರಿಂದ ಅದನ್ನು 'ಲಜಪತರಾಯ ನಗರ'ವೆಂದು ನಾಮಕರಣ ಮಾಡಿದರು.

ಹಿಂದೂ ದೇಶದ ಪ್ರಾಂತೀಕ ಸರ್ಕಾರಗಳು ಗ್ರಾಮಾಂತರಗಳಲ್ಲಿ ಪಂಚಾಯಿತಿಗಳನ್ನು ನೇಮಿಸದರ ವಿಷಯ ಇಂಡಿಯಾ ಸರ್ಕಾರದವರು ವಿಶೇಷವಾಗಿ ಗಮನ ಕೊಡದ ಕಾರಣ ಗ್ರಾಮಾಂತರಗಳ ಸ್ಥಿತಿಯನ್ನು ಅಜಮಾಯಿಸಬೇಕೆಂಬ ಜನರ ಪ್ರತಿನಿಧಿಗಳ ಠರಾವು ಎಸೆಂಬ್ಲಿಯಲ್ಲಿ ಬಹುಮತದಿಂದ ಮಂಜೂರಾಯಿತು.

ತಾ. 16 ರಲ್ಲಿ ಲಕ್ನೋದಲ್ಲಿ ಪಂಡಿತ ಜವಾಹಿರ್‌ಲಾಲರವರ ಅಧ್ಯಕ್ಷತೆಯಲ್ಲಿ ನಡೆದ ಸಂಯುಕ್ತ ಪ್ರಾಂತ್ಯದ ಯುವಕರ ಮಹಾಸಭೆಯಲ್ಲಿ, ರಾಜಕೀಯ ವಿಷಯವಲ್ಲಾಗಲೀ ಆರ್ಥಿಕ ವಿಷಯವಲ್ಲಾಗಲೀ ಕೋಮುವಾರು ತತ್ವಕ್ಕೆ ಸ್ವಲ್ಪವೂ ಎಡೆಕೊಡಕೂಡದೆಂದೂ, ಹಾಗೆ ಎಡೆ ಕೊಟ್ಟರೆ ದೇಶಕ್ಕೆ ತುಂಬಾ ಕೆಡುಕಾಗುವದೆಂದೂ ಠರಾವು ಪಾಸಾಯಿತು.

ಲಾಹೋರ್ 'ಕಾನ್‌ಸ್ಪಿರೆಸಿ' ಕೇಸಿನ ಬಗ್ಗೆ ಕೈದಿಯಾದ ಮೆ ಯತೀಂದ್ರನಾಥ್ ದಾಸ್‌ರವರು ಕೈದಿಗಳ ಉಪಚಾರವನ್ನು ಉತ್ತಮಗೊಳಿಸುವ ಉದ್ದೇಶ್ಯ 63 ದಿವಸಗಳ ವರೆಗೆ ಉಪವಾಸ ಮಾಡಿ ಈ ತಾ. 13ರಲ್ಲಿ ಸ್ವರ್ಗಸ್ಥರಾದರು. ಈ ಸಂಬಂಧ ಸರ್ಕಾರದ ವರ್ತನೆಯನ್ನು ಖಂಡಿಸಿ ಎಸೆಂಬ್ಲಿಯಲ್ಲಿ ಒಂದು ಠರಾವು ಪಾಸಾಯಿತು. ಈಗ ಎಸೆಂಬ್ಲಿಯ ಸರ್ಕಾರಿ ಮೆಂಬರರು ಉಪವಾಸ ವ್ರತವನ್ನು ಕೈಕೊಂಡಿರುವ ಬಾಕಿಯವರ ಸ್ಥಿತಿಯನ್ನು ಕುರಿತು ಚರ್ಚಿಸಲು ಪಾರ್ಟಿ ಮುಂದಾಳುಗಳೊಂದಿಗೆ ಮೀಟಿಂಗು ಮಾಡಲು ಏರ್ಪಾಡು ಮಾಡುತ್ತಿದ್ದಾರೆ.

ಬಂಗಾಳದ ಪಟುವಾಖಾಲಿ ಸತ್ಯಾಗ್ರಹದ ಸಂಬಂಧ ಸೆರೆ ಹಿಡಿಯಲ್ಪಟ್ಟು ಬಾರಿಸಾಲ್ ಜೈಲಿನಲ್ಲಿರುವ ಮೆ. ಸತೀಂದ್ರನಾಥ್ ಸೆನ್‌ರವರು, ಸತ್ಯಾಗ್ರಹವನ್ನು ಕುರಿತು ಅಧಿಕಾರಿಗಳು ಮಾಡಿದ ಒಪ್ಪಂದ ಪ್ರಕಾರ ಅವರು ನಡೆಯದ್ದರಿಂದ, ಕಳೆದ ಮೇ 24ರಲ್ಲಿ ಉಪವಾಸವ್ರತವನ್ನು ಕೈಕೊಂಡರು. ಅವರು ಈ ವ್ರತವನ್ನು ಪ್ರಾರಂಭಿಸಿ ಸುಮಾರು 115 ದಿವಸಗಳಾದುದರಿಂದ ಅವರ ಪ್ರಾಣವು ಬಹು ಅಪಾಯ ಸ್ಥಿತಿಯಲ್ಲಿದೆ. ಈ ತಾ. 18ರಲ್ಲಿ ಅವರನ್ನೂ, ಅವರ ಸಂಗಾತಿಗಳಾದ ಬೇರೆ 13 ಕೈದಿಗಳನ್ನೂ ಬಿಡುಗಡೆ ಮಾಡಿ ಬಿಟ್ಟಿರುವರೆಂದು ವರ್ತಮಾನವಿದೆ.

ಸೈಮನ್ ಕಮಿಷನಿನವರು, ಹಿಂದೂದೇಶದಲ್ಲಿ ಈಗ ವಸಾಹತು ಸ್ವರಾಜ್ಯ ಕೈಕೊಳ್ಳಲು ಸಾಧ್ಯವಾಗಲಿಕ್ಕಿಲ್ಲವೆಂತಲೂ, ಸ್ವರಾಜ್ಯ ಆಡಳಿತ ಪದ್ಧತಿಯು ಪ್ರಾಂತ್ಯಗಳ ಸ್ಥಿತಿಗನುಸಾರವಾಗಿ ಮೆಲ್ಲ ಮೆಲ್ಲನೆ ಕೊಡಲ್ಪಡಬೇಕೆಂತಲೂ, ದೇಶದ ರಕ್ಷಣೆ, ಪರರಾಷ್ಟ್ರಗಳ ಸಂಬಂಧಗಳು ಇಂಪೀರಿಯಲ್ ಸರಕಾರದ ಜವಾಬ್ದಾರಿಯಲ್ಲಿರಬೇಕೆಂದೂ, 'ಲಾ ಮತ್ತು ಆರ್ಡರ್'ನ್ನು ಕುರಿತು ಸೆಂಟ್ರಲ್ ಸರಕಾರದ ಅಧಿಕಾರವನ್ನು ಕಡಿಮೆ ಮಾಡಕೂಡದೆಂದೂ ಕೋಮು ವಾರು ಪ್ರತಿನಿಧಿತ್ವವು ಸ್ವಲ್ಪ ಇಡಲ್ಪಡುವದೆಂದೂ. ಓಟಿನ ಅರ್ಹತೆಯನ್ನು ಕಡಿಮೆ ಮಾಡಲಾಗುವದಿಲ್ಲವೆಂದೂ ಅಭಿಪ್ರಾಯಕ್ಕೆ ಬಂದಿರುವರೆಂದು ಸುದ್ದಿ ಹೊರಟಿದೆ.

ವಿದೇಶ.

ಡೊರಾನಿ ಲಷ್ಕರರು ಕಾಬಹಾರನ್ನು ಯುದ್ಧವಿಲ್ಲದೆ ಕೈವಶ ಮಾಡಿಕೊಂಡಿರುವರೆಂದೂ, ಇವರು ನಾದಿರ್ ಖಾನಂಗೆ ಬತ್ತಾಸೆಯಾಗಿ ಕೆಲಸ ಮಾಡುತ್ತಿರುವರೆಂದೂ ವರ್ತಮಾನ.

ಈಗ ಇಟಲಿಯಲ್ಲಿರುವ ಅಫ್ಘಾನಿಸ್ಥಾನದ ಮಾಜಿ ಅರಸ ರಾದ ಅಮಾನುಲ್ಲಾರವರನ್ನು ಕೊಲೆ ಮಾಡಲು ಇಲ್ಲಿ ಇಬ್ಬರು ಇಂಡಿಯನರು ಪ್ರಯತ್ನಿಸಿದರೆಂಬ ಸಂಶಯದಿಂದ ಅವರಿಬ್ಬರನ್ನು ಸೆರೆಹಿಡಿದು ಇಂಡಿಯಾಕ್ಕೆ ವಾಪಸು ಕಳುಹಿಸಿರುವರಂತೆ.

ಬೇ ಕಾ ಗಿ ದೆ.

"ಕೊಡಗು" ಪತ್ರಿಕೆಯ ಸಬ್ ಎಡಿಟರ್ ಮತ್ತು ಎಕೌಂಟೆಂಟ್ ಕೆಲಸಕ್ಕೆ ಮಾಹೆಯಾನ 30 ರೂ. ಸಂಬಳದಲ್ಲಿ ಉಮೇದುವಾರರು ಬೇಕಾಗಿದ್ದಾರೆ. ಇದಕ್ಕೆ ಅರ್ಜಿಗಳು ಈ ತಾ. 27 ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು.

"ಕೊಡಗು" ಕಂಪೆನಿ ಲಿಮಿಟೆಡ್, ಮಡಿಕೇರಿ — ಸಿ. ಯೆನ್. ವೆಂಕಪ್ಪಯ್ಯ, (ಕಾರ್ಯದರ್ಶಿರು) 2—2

ಮಡಿಕೇರಿ—ಭಾಗಮಂಡ್ಲ—ಸುಂಟಿಕೊಪ್ಪ ಜಮ್ಮ ಓಟರುಗಳಲ್ಲಿ ವಿ ನಂ ತಿ.

ಬರುವ ಸೆಪ್ಟಂಬರು ತಾ. 27ರಲ್ಲಿ ನಡೆಯಲಿಕ್ಕಿರುವ ಕೌನ್ಸಿಲು ಉಪ ಚುನಾವಣೆಗೆ ಮಡಿಕೇರಿ—ಭಾಗಮಂಡಲ—ಸುಂಟಿಕೊಪ್ಪ ಜಮ್ಮ ಓಟರುಗಳ ಪರವಾಗಿ ನಾನೊಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ತಾವೆಲ್ಲರೂ ತಮ್ಮ ಓಟನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಬೇಕಾಗಿ ಅತಿ ವಿನಯದಿಂದ ಕೇಳುತ್ತೇನೆ.

ತಮ್ಮ ವಿಧೇಯ,

ಮಡಿಕೇರಿ, ಕೋಟೆರ ಪಿ. ಚಿಣ್ಣಪ್ಪ,

ತಾ. 16—8—'29. 6—6

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗಿನಲ್ಲಿ ರಾಷ್ಟ್ರ ಧ್ವಜಾಭಿವಂದನೆ

ಹಿಂದೂಸ್ಥಾನೀ ಸೇವಾದಳದ ಕಾರ್ಯಕ್ರಮದಂತೆ ಭಾರತ ಖಂಡದ ಅನೇಕ ಕಡೆಗಳಲ್ಲಿ ಇದು ವರೆಗೆ ಎಂಟು ಧ್ವಜಾಭಿವಂದನೆಗಳು ಕಳೆದು ಹೋದವು. ಆದರೆ ಕೊಡಗಿನ ಒಂದು ಕಡೆಯಲ್ಲು (ಪೊನ್ನಂಪೇಟೆ ಕುಶಾಲಪುರದಲ್ಲು) ನಾಲ್ಕು ಧ್ವಜಾಭಿವಂದನೆಗಳು ಆದದ್ದಲ್ಲದೆ, ಬೇರೆ ಯಾವ ಕಡೆಯಲ್ಲೂ ಆಗಲಿಲ್ಲವೆಂಬುದು ವ್ಯಸನದ ಸಂಗತಿ. ಇದರಿಂದ ಕೊಡಗಿನಲ್ಲಿಯ ತರುಣರ ರಾಷ್ಟ್ರಾಭಿಮಾನವು ಎಷ್ಟರ ಮಟ್ಟಿಗೆಂಬುದು ತಿಳಿದು ವ್ಯಸನವಾಗುತ್ತದೆ. ಇಲ್ಲಿ ತಕ್ಕಷ್ಟು ತರುಣರಿದ್ದರೂ ಈ ವಿಷಯದಲ್ಲಿ ಮುಂದುವರಿಯದ್ದು ತರುಣರಾದ ನಮಗೆ ಅಭಿಮಾನವಲ್ಲ. ಈ ಸಮಯದಲ್ಲು ಭಾರತದ ಎಲ್ಲಾ ಕಡೆಗಳಲ್ಲಿಯೂ ತರುಣರು ಸ್ವತಂತ್ರ ಹೋರಾಟದಲ್ಲಿ ಅಗ್ರಗಣ್ಯರೆಂದೆನ್ನಿಸಿಕೊಳ್ಳುತ್ತಿರುವಲ್ಲಿ ನಾವು ಅವರನ್ನು ಸ್ವಲ್ಪವಾದರೂ ಹಿಂಬಾಲಿಸುತ್ತಿರುವದು ನಮ್ಮನ್ನು ಕಾಯುಕೊಳ್ಳುವ ಶಕ್ತಿಯು ನಮ್ಮಲ್ಲಿಲ್ಲವೆಂದು ತೋರಿಸುತ್ತದೆ. ಆದ್ದರಿಂದ ಪ್ರಿಯ ತರುಣರೇ, ಇನ್ನು ಮುಂದಾದರೂ ಆಗಾಗವಲ್ಲದೆ, ತಿಂಗಳಿಗೆ ಒಂದು ದಿವಸ ಸಮಯವನ್ನು ತೆಗೆದುಕೊಂಡು ರಾಷ್ಟ್ರೀಯ ಧ್ವಜಾಭಿವಂದನೆಯನ್ನು ಮಾಡಿ ಭಾರತ ಮಾತೆಯ ಸೇವೆಯನ್ನು ಮಾಡುವ.

ಇಷ್ಟು ದಿವಸವಾದರೂ ಆರಂಭದ ಅತಿಚಾರೆಯಿದ್ದುದರಿಂದ ಪೊನ್ನಂಪೇಟೆ ಕುಶಾಲಪುರದಲ್ಲಿ ...

ಗೆ ಹೆಚ್ಚು ಜನರು ಸೇರಲು ಅನುಕೂಲವಾಗಲಿಲ್ಲ. ಇನ್ನು ಮುಂದಕ್ಕಾದರೂ ದೇಶದ ರಾಷ್ಟ್ರಾಭಿಮಾನಿಗಳೂ, ತರುಣರೂ ತಪ್ಪದೆ ಬಂದು ಕೆಲವರಿಂದ ಮೇಲಕ್ಕೆತ್ತಲ್ಪಟ್ಟ ಧ್ವಜವನ್ನು ಮತ್ತಷ್ಟು ಮೇಲಕ್ಕೆತ್ತಲು ತಾವು ಸಹಾಯಕರಾಗಿರುವಿರೆಂದು ನಂಬಿರುವೆವು.

ಈ ತಿಂಗಳ ಕಡೇ ಆದಿತ್ಯವಾರವಾದ 29ನೇ ತಾರೀಕಿನಲ್ಲು ಪೊನ್ನಂಪೇಟೆ ಕುಶಾಲಪುರದಲ್ಲಿ ಬೆಳಿಗ್ಯೆ 8 ಘಂಟೆಗೆ ಧ್ವಜಾಭಿವಂದನೆಯು ನಡಿಸಲ್ಪಡುವುದು. ಎಲ್ಲರೂ ದಯವಿಟ್ಟು ಅವಶ್ಯ ಬರಬೇಕಾಗಿ ಕೋರುವ,

ಎ. ಎಸ್. ಚಿಣ್ಣಪ್ಪ,
(ಸ್ವಯಂ ಸೇವಕ.)

ಮಾಯಮುಡಿ ಶಾಲೆ.

ಅಯ್ಯಾ,

ಮಾಯಮುಡಿ ಶಾಲೆ ಹೆಡ್ ಮಾಸ್ಟರಾಗಿದ್ದು ಈಗ ಬೆಸಗೂರು ಶಾಲೆಗೆ ವರ್ಗವಾಗಿ ಹೋದ ಮ. ಟಿ ಯಾ ಸೋಮ್ಮಯ್ಯನವರು ಈ ಶಾಲೆಗೆ ಬಂದು ಮೂರು ವರ್ಷಗಳಾದವು. ಇವರು ಈ ಶಾಲೆಗೆ ಬರುವಾಗ ಬರೇ 20—25 ಹುಡುಗರಿಗಿಂತ ಹೆಚ್ಚು ಇರಲಿಲ್ಲ.

ಅಲ್ಲಿಂದೀಚೆಗೆ ಇವರ ಶಾಂತತೆಯನ್ನೂ, ಪ್ರಿಯಭಾವವನ್ನೂ, ಬೋಧನೆಯನ್ನೂ ಕಂಡು ದಿನೇ ದಿನೇ ಹುಡುಗರ ಸಂಖೆಯು ಹೆಚ್ಚಿ, ಶಾಲೆಯಲ್ಲಿ 80—85 ಮಕ್ಕಳ ವರೆಗೆ ಸೇರಿದರು. ಈ ಮಕ್ಕಳನ್ನೆಲ್ಲಾ ಶಾಲೆ ಒಳಗೆ ಕೂಡಿಸಿಕೊಂಡು ಪಾಠಹೇಳಲು ಶಾಲೆಯು ಬಹಳ ಚಿಕ್ಕದಾದ್ದರಿಂದ ಪ್ರತಿ ದಿನ ಶಾಲೆಯನ್ನು ತನ್ನ ಸಹಾಯಕ ಉಪಾಧ್ಯಾಯರಿಗೆ ಬಿಟ್ಟುಕೊಟ್ಟು ತಾನು ತನ್ನ ತರಗತಿಯನ್ನು ಹೊರಗೆ ಕರೆದುಕೊಂಡು ಹೋಗಿ ಮರದಡಿಯಲ್ಲಿ ಕೂರಿಸಿಕೊಂಡು ಪಾಠಹೇಳುತ್ತಾ ಬಿಸಿಲು, ಗಾಳಿ, ಮಳೆಯ ಬಾಧೆಗಳಿಗೆಲ್ಲಾ ಒಳಗಾಗಿಕೊಂಡು ಕಷ್ಟಪಡುತ್ತಾ ಶಾಲೆಯನ್ನು ಅಭಿವೃದ್ಧಿಗೆ ತಂದರು. ಮತ್ತು ಇವರು ಶಾಲಾ ಮಕ್ಕಳನ್ನು ಅವರ ತಂದೆ ತಾಯಿಗಳಿಗಿಂತಲೂ ಹೆಚ್ಚು ಎಚ್ಚರಿಕೆಯಿಂದಲೂ, ಪ್ರೀತಿಯಿಂದಲೂ ನೋಡುತ್ತಿದ್ದದಲ್ಲದೆ ತಾನೇ ಮಕ್ಕಳು, ಮಕ್ಕಳೇ ತಾನು ಎಂಬಂತೆ ಸಣ್ಣ ಮಕ್ಕಳ ಜೊತೆಯಲ್ಲಿ ಒಡನಾಡುತ್ತಿದ್ದರು.

ಈ ಶಾಲೆಯಲ್ಲಿ ಮುತುವರ್ಜಿಯಿಂದ ಕೆಲಸಮಾಡಿ ಶಾಲೆಯನ್ನು ಅಭಿವೃದ್ಧಿಗೆ ತಂದು ಮಕ್ಕಳ ಪ್ರೀತಿಗೂ, ಜನರ ಪ್ರೀತಿಗೂ ಪಾತ್ರರಾಗಿದ್ದ ಚೆ ಮಾ. ಮ. ಸೋಮ್ಮಯ್ಯನವರಿಗೆ ತಾ. 27—8—29ರಲ್ಲಿ ಸ್ಕೂಲ್ ವಿದ್ಯಾರ್ಥಿಯರೂ, ಉಪಾಧ್ಯಾಯರೂ ಸೇರಿ ಒಂದು ಟೀಪಾರ್ಟಿಯನ್ನೂ ಮತ್ತು ಮಾಯಮುಡಿ ಶಾಲೆಯ ಪಂಚಾಯ್ತರೂ, ಗ್ರಾಮಸ್ಥರೂ ಸೇರಿ ತಾ. ೬—9—29ರಲ್ಲಿ ಒಂದು ಟೀಪಾರ್ಟಿಯನ್ನೂ ಕೊಟ್ಟರು. ಮಾಯಮುಡಿ ಶಾಲೆಯಲ್ಲಿ ಈಗಿರುವ ಉಪಾಧ್ಯಾಯರೂ ಸಹ ಮ. ಸೋಮ್ಮಯ್ಯನವರ ಸುಗುಣಗಳನ್ನೇ ಹಿಂಬಾಲಿಸಿ ಶಾಲೆಯ ಅಭಿವೃದ್ಧಿಯನ್ನು ಮುಂದುವರಿಸಲೆಂದು ಗ್ರಾಮಸ್ಥರು ಭಗವಂತನನ್ನು ಪ್ರಾರ್ಥಿಸುತ್ತಾರೆ.

ಹಾಜರಿದ್ದವ.

ಕೊಡಗು ಸರಕಾರದ ಸನ್ನಿಧಾನದಲ್ಲು ಅತ್ಯಂತ ವಿನಯದ ಅರಿಕೆ.

ಮೊನ್ನೆ ತಾ. 9 ರಲ್ಲು ಆದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಚುನಾವಣೆಯಲ್ಲು ಒಬ್ಬ ಮುಸಲ್ಮಾನನನ್ನು ಚುನಾಯಿಸದೆ ಇದ್ದದ್ದು ನಮಗೆ ತುಂಬಾ ವ್ಯಸನಕರವಾದ ವಿಷಯವಾಗಿದೆ. ನಾವು ಸಹ ಸರ್ಕಾರದ ರೈತರೇ ಅಲ್ಲದೆ ಬಹು ಹಿಂದೆ ಬಿದ್ದಿರುವ ಸಂಗತಿ ಸರಕಾರಕ್ಕೆ ಚೆನ್ನಾಗಿ ತಿಳಿದಿದೆ. ಇಂಥಾ ಸಂದರ್ಭಗಳಲ್ಲಿ ಇಂಥಾ ಚಿಕ್ಕ ಕೆಲಸಗಳನ್ನು ಸತ್ತುಕೊಡದೆ ಮುಸಲ್ಮಾನರನ್ನು ತಳ್ಳಿಹಾಕಿ ಬಿಟ್ಟರೆ ನಾವು ಮುಂದಕ್ಕೆ ಬರುವುದು ಹ್ಯಾಗೆ, ಯಾವ ರೀತಿ, ಯಾವ ದಾರಿ ಮತ್ತು ಯಾವ ಸಮಯವೆಂಬುದು ತಿಳಿಯುವದಿಲ್ಲ. ಇದು ನೋಡಿದರೆ ಒಬ್ಬ ಕೊಡಗು ಸಹೋದರರು 'ಲೋಕವಾವನ'ದಲ್ಲಿ "ಕೊಡಗರು ವಿನಹ ಇತರ ಜನಾಂಗದವರಿಗೆ ಕಾವೇರಮ್ಮನ ಸ್ಥಳದಲ್ಲಿ ಅಭಿವೃದ್ಧಿ ಆಗಬಾರದು" ಎಂಬ ಶಾಪ ಹಾಕಿದ್ದು ಸರ್ಕಾರದಲ್ಲು ಮಂಜೂರು ಆಯಿತೆಂದು ತೋರುತ್ತೆ.

ಅಲ್ಲದೆ ಸಿದ್ದಾಪುರದ ಹೆಡ್‌ಕಾನ್ಸ್‌ಟೇಬಲ್ ಮ. ಅಬ್ದುಲ್ ಗಫೂರ್ ಸಾಹೇಬರವರು 1½ ವರ್ಷ ಸಬ್ ಇನ್ಸ್‌ಪೆಕ್ಟರ್ ಡ್ರೆಸ್ ಹಾಕಿಕೊಂಡು ಆಕ್ಟಿಂಗಾ ಕೆಲಸ ನೋಡಿದ್ದಾರೆ. ಆಗ್ಯೆ ಅವರು ಆ ಕೆಲಸಕ್ಕೆ ಲಾಯಕಾಗಿದ್ದು ಯಾವ ಕಾಸೂನು ಮೀರಿ ಈಗ ಇಂಥಾ ನ್ಯಾಯವಾದ ಹಕ್ಕುದಾರನು ಚುನಾವಣೆಯಲ್ಲು ನಾಲಾಯಕಾದದ್ದು ಎಂಬುದು ತಿಳಿಯಲು ನಾವು ಮುಸಲ್ಮಾನರು ಅಶಕ್ಯರಾಗಿರುತ್ತೇವೆ.

ಈ ಸಂಗತಿಗಳೆಲ್ಲಾ ಸರಿಯೆ? ಮಾಡತಕ್ಕದ್ದೇನು! ಈ ಕೊಡಗು ದೇಶದಲ್ಲು ಮುಸಲ್ಮಾನರ ಏಳಿಗೆಯ ವಿಷಯ ಕೇಳುವವರು ಯಾರೂ ದಿಕ್ಕೇ ಇಲ್ಲ. ಮಹಾದೇವರೇ ನಮ್ಮನ್ನು ಕಾಪಾಡಬೇಕೆಂಗಿ ಆತನಲ್ಲಿ ಸಂಪೂರ್ಣ ಭಯ ಭಕ್ತಿಯಿಂದ ಪ್ರಾರ್ಥಿಸುತ್ತೇವೆ.

ಅಬ್ದುಲ್ ಗಫೂರ್‌ಖಾನ್ ಸೈಕ್ಷಿ.

ಹೆರವನಾಡು ಶಾಲೆ.

ಅಯ್ಯಾ,

ಈ ಗ್ರಾಮದ ಮಧ್ಯೆ ಇರುವ ಜೀರ್ಣಬಿದ್ದ ಅಂಬಲವನ್ನು ಹೊಸದಾಗಿ ಕಟ್ಟಿಸುವ ಬಗ್ಯೆ ಮ. ಪಾಲಂದಿರ ಬೋಪ್ಪಯ್ಯನವರು, ಮತ್ತು ಮುಕ್ಕಾಟಿರ ಗಣಪತಿಯವರು ಚಪ್ಪಂಡಿರ ಪಳಂಗಪ್ಪನವರ ಮೇಲ್ಪತ್ತಿನಿಂದ ಹೆರವನಾಡು ಗ್ರಾಮಸ್ಥರನ್ನು ಸೇರಿಸಿ ಚಂದ ಎತ್ತಿ ಸುಮಾರು 300 ರೂಪಾಯಿ ಖರ್ಚಿನಿಂದ ಕಟ್ಟಡವನ್ನು ಕಟ್ಟಿಸಿರುತ್ತಾರೆ. ಸದರಿ ಕಟ್ಟಡಕ್ಕೆ ಮರ ಪೂರ್ತಿ ಉಚಿತವಾಗಿ ಮ. ಪಾಲಂದಿರ ಬೋಪ್ಪಯ್ಯನವರು ಕೊಟ್ಟಿರುತ್ತಾರೆ. ಸದರಿ ಕಟ್ಟಡವನ್ನು ಊರಂಬಲವಾಗಿ ಮಾಡಿದರೂ ಕೂಡ ಸದರಿ ಗ್ರಾಮದಲ್ಲಿ ವಿದ್ಯಾ ಕಲಿಯಲಿಕ್ಕೆ ಸ್ಕೂಲು ಇಲ್ಲದೆ ಸದರಿ ಗ್ರಾಮಸ್ಥರು ವಿದ್ಯಾ ಹೀನರಾಗಿ ತೊಂದರೆ ಪಡುವ ಕಾರಣ ಈಚೆಗೆ ಈ ಕಟ್ಟಡದಲ್ಲಿ ಸ್ವಂತ ಸಂಬಳ ಕೊಟ್ಟು ಉಪಾಧ್ಯಾಯರನ್ನಿಟ್ಟು ಸದರಿ ಶಾಲೆಯನ್ನು ಕಳೆದ ತಾ. 5ರಲ್ಲಿ ತೆರೆಯಲಾಗಿ ಈಗ ಸುಮಾರು 50 ವಿದ್ಯಾರ್ಥಿಯರ ವರೆಗೆ ಶಾಲೆಗೆ ವಿದ್ಯಾ ಕಲಿಯಲಿಕ್ಕೆ ಬರುತ್ತಲಿದ್ದಾರೆ. ಸದರಿ ಶಾಲೆಯನ್ನು ಇನ್ನು ಮುಂದೆ ಸರಕಾರಿ ಶಾಲೆಯಾಗಿ ತಿರ್ಮಾನು ಮಾಡುವಂತೆ ಗ್ರಾಮಸ್ಥರೆಲ್ಲರೂ ಸೇರಿ ಕಮಿಷನರ್ ಸಾಹೇಬರವರಿಗೆ ಅರ್ಜಿ ಬರಕೊಂಡಿರುತ್ತಾರೆ. ಗರೀಬರಾದ, ಈ ಗ್ರಾಮದಲ್ಲಿ ಹಿಂದೆ ಬಿದ್ದಿರುವ ಜನರ ಮಕ್ಕಳಿಗೆ ವಿದ್ಯಾ ಮುಂದರಿಸುವ ಬಗ್ಯೆ ಸರಕಾರದವರು ನಿಗ ಕೊಟ್ಟು ಸದರಿ ಶಾಲೆಯನ್ನು ಸರಕಾರಕ್ಕೆ ವಹಿಸಿ ಮುಂದಿನ ಜವಾಬ್ದಾರಿಕೆ ಎಲ್ಲವನ್ನು ಕೃಪೆಯಾಗಿ ನಡಿಸುವಂತೆ ಮಾಡಬೇಕಾಗಿ ಕೋರುತ್ತೇನೆ.

'ಗ್ರಾಮಸ್ಥ.'

ಕೊಡಗಿನ ವಿದ್ಯಾ ಇಲಾಖೆ.

ಕೊಡಗಿನಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಮಾಡಿದ ಪ್ರಯತ್ನಗಳನ್ನು ನೋಡೋಣ. ನಮ್ಮ ಜನಾಂಗದ ಏಳಿಗೆಗೆ ಮುಖ್ಯ ಕಾರಣವಾದ ಸ್ತ್ರೀ ಶಿಕ್ಷಣದ ವಿಷಯ ಇನ್ನೂ ಪೂರ್ತಿ ಜ್ಞಾನೋದಯವಾಗದ ಜನರು ಈ ಕತಮಾನದಲ್ಲಿ ಅನೇಕರಿರಲಿಕ್ಕಿಲ್ಲವೆಂದು ಭಾವಿಸುತ್ತೇನೆ. ಇದ್ದರೂ, ಅವರು 'ಯಾವಳ ಕೈಯಲ್ಲಿ ತೊಟ್ಟಿಲ ಸೂತ್ರವಿರುವುದೋ ಅವಳ ಕೈಯಲ್ಲಿ ಸೃಷ್ಟಿ ಸೂತ್ರವಿರುವುದು' (The hand that rocks the cradle is the power that rules the world) ಎಂಬ ಆಭಿಯೋಕ್ತಿಯನ್ನು ಸ್ಮರಿಸಿಕೊಂಡರೆ ಪುರುಷರಿಗಿಂತಲೂ ಸ್ತ್ರೀಯರಿಗೆ ಶಿಕ್ಷಣದ ಆವಶ್ಯಕತೆಯು ಹೆಚ್ಚಾಗಿರಬೇಕೆಂದು ತಿಳಿಯದೆ ಇರಲಾರರು.

ಸ್ತ್ರೀಯರು ಪುರುಷರೊಡನೆ ಈ ಜಗತ್ತಿನಲ್ಲಿ ಸುಖ ಸಂತೋಷಗಳಿಂದ ಬಾಳಬೇಕಾದರೆ ಅವರಿಗೆ ವಿದ್ಯೆಯು ಅವಶ್ಯವು. ಈಗಿನ ಸ್ತ್ರೀಯರು ಪೂರ್ವದಿಂದಲೇ ನಡದು ಬಂದಂಥ ಅಜ್ಞಾನದ ಅಡಳಿತವನ್ನು ಬಿಟ್ಟು ಪುರುಷರಂತೆ ತಮ್ಮ ಮಾನಸಿಕ ಶಕ್ತಿಯನ್ನು ವೃದ್ಧಿಗೊಳಿಸಲು ಪ್ರಯತ್ನಿಸುವರು. ಇದರ ಫಲಿತಾಂಶವು ಈಗಾಗಲೇ ಕಂಡು ಬಂದಿರುವದು. ನಾವು ಅವರಿಗೆ ವಿದ್ಯಾಭ್ಯಾಸ ಕೊಟ್ಟರೆ ಮನೆಯಲ್ಲಿ ರಸಭರಿತವಾದ ಪಕ್ವಾನ್ನಗಳನ್ನು ಮಾಡಲು ಜನರಿಲ್ಲದೆ ಹೋಗುವರೆಂಬ ಸ್ವಾರ್ಥಪರತೆಯ ತುಚ್ಛ ಅಭಿಪ್ರಾಯವನ್ನು ತರುವುದು ಯುಕ್ತವಲ್ಲ. ಈಗ ಕೊಡುತ್ತಿರುವ ವಿದ್ಯಾಭ್ಯಾಸವಾದಲ್ಲು ಅವರು ಈ ಕೆಲಸವನ್ನು ಖಂಡಿತವಾಗಿ ಮರೆಯುವರು. ಈ ಕೆಲಸವನ್ನು ಸಹ ಅವರಿಗೆ ಶಾಲೆಯಲ್ಲಿ ಕಲಿಸಬೇಕು.

ಸ್ತ್ರೀ ಶಿಕ್ಷಣವನ್ನು ಕೊಡಲು ನಮ್ಮ ದೇಶದಲ್ಲಿ ಸರಕಾರದವರಾಗಲೀ ಯಾ ದೇಶೀಯರಾಗಲೀ ತಕ್ಕ ಅನುಕೂಲತೆಗಳನ್ನು ಮಾಡಿರುವುದಿಲ್ಲ. ನಮ್ಮ ದೇಶದಲ್ಲಿ ರಾಜ ಸರ್ ಅಣ್ಣಮಲೆಯವರಂಥ ಐಶ್ವರ್ಯವಂತರೂ, ಉದಾರಿಗಳೂ ಇಲ್ಲದಕ್ಕೆ ನಾವು ಮರುಗಬೇಕಾಗಿದೆ. ಪರದೇಶಿಯರು ಬಂದು ಮಡಿಕೇರಿಯಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿರುವರು. ಆದರೆ ಅದರಿಂದ ಕೆಲವರು ಮಾತ್ರ ಪ್ರಯೋಜನವನ್ನು ಪಡೆಯುವರು. ಅದೂ ಅಲ್ಲದೆ ಅಲ್ಲಿ ನಮ್ಮ ದೇಶೀಯ ಸ್ತ್ರೀಯರಿಗೆ ಬೇಕಾದ ಸಂಗತಿಗಳಲ್ಲಿ ಪಾಠ ಹೇಳುವುದಿಲ್ಲವೆಂದೇ ಭಾವಿಸಬೇಕಾಗಿದೆ. ಅನೇಕ ಹುಡುಗಿಯರು ಮಡಿಕೇರಿ ಮತ್ತು ವಿರಾಜಪೇಟೆ ಹೈಸ್ಕೂಲುಗಳಿಗೆ ಸೇರುವರು. ಇದರಿಂದ ಅವರ ಮತ್ತು ನಮ್ಮ ಮುಂದಿನ ಅಭಿವೃದ್ಧಿಗೆ ಏನೊಂದೂ ಪ್ರಯೋಜನವಿಲ್ಲ. ಅನೇಕ ಸಂಗತಿಗಳಲ್ಲಿ ಸ್ತ್ರೀಯರಿಗೆ ಪ್ರತ್ಯೇಕ ಶಿಕ್ಷಣಗಳನ್ನು ಕೊಡಬೇಕಾಗುತ್ತದೆ.

ಸ್ತ್ರೀಯರಿಗೆ ಶಾರೀರಿಕ, ಮಾನಸಿಕ ಶಕ್ತಿಗಳನ್ನು ಪೂರ್ಣ ಮಾಡಲಿಕ್ಕೆ ಸಹಾಯವಾಗುವಂಥ ವಿದ್ಯೆಯನ್ನು ಕೊಡಬೇಕು. ಆ ಶಕ್ತಿಗಳ ಸಹಾಯದಿಂದ ತಮ್ಮ ಮತ್ತು ಸುತ್ತಮುತ್ತಲಿನ ಜನರ ಹಿತವನ್ನು ಸಾಧಿಸಿಕೊಳ್ಳುವುದೇ ಆ ಶಿಕ್ಷಣದ ಉದ್ದೇಶವು. ಈ ವಿಷಯವು ಸ್ತ್ರೀ ಪುರುಷರಿಗೆ ಸಾಮಾನ್ಯವಾಗಿರುವವು. ಇನ್ನು ಬಾಕಿ ಸಂಗತಿಗಳಲ್ಲಿ ಸ್ತ್ರೀಯರಿಗೆ ಪ್ರತ್ಯೇಕ ಶಿಕ್ಷಣವನ್ನು ಕೊಡಬೇಕಾಗುತ್ತದೆ.

ತಾಯಿಯಾದವಳು ತನ್ನ ಮಕ್ಕಳ ರಕ್ಷಣೆ, ಪೋಷಣೆ, ಶಿಕ್ಷಣೆ ಕಾರ್ಯಗಳನ್ನು ವಹಿಸಬೇಕಾಗುತ್ತದೆ. ಇದರಲ್ಲೆಲ್ಲಾ ತಾಯಿ ಮೇಲೆ ಹೆಚ್ಚಿನ ಜವಾಬ್ದಾರಿಯು ಇರುವುದು. ಆದುದರಿಂದ ಇವುಗಳಲ್ಲಿ ಅವರಿಗೆ ಹೆಚ್ಚಿನ ಶಿಕ್ಷಣವನ್ನು ಕೊಡಬೇಕು.

ಗೃಹಿಣಿಯಾದವಳು ತನ್ನ ಮನೆಯಲ್ಲಿ ಎತ್ತ ನೋಡಿದತ್ತ ಸುಖಶಾಂತಿಗಳನ್ನು ನೆಲೆಗೊಳಿಸಲಿಕ್ಕೆ ಸಮರ್ಥಳಾಗತಕ್ಕದ್ದು. ಇದಕ್ಕೆ ಬೇಕಾಗಿ ಸ್ತ್ರೀಯರು ಹಿರಿಯರ ಶುಶ್ರೂಷೆ, ಗೃಹವ್ಯವಸ್ಥೆ, ಆದಾಯವ್ಯಯ, ಗಾಯನ, ನೆಯ್ಗೆ, ಹೊಲಿಯುವುದು ಮೊದಲಾದ ಕರ್ತವ್ಯಗಳನ್ನು ಮಾಡಬೇಕಾಗುವುದು. ಇಂಥ ಕಾರ್ಯದಕ್ಷತೆಯನ್ನು ಪಡೆದ ಸ್ತ್ರೀಯು ಕುಟುಂಬದಲ್ಲಿ ಸುಖಶಾಂತಿ ನೆಲೆಗೊಳಿಸಿ ಕುಟುಂಬದ ಉನ್ನತಿಗೆ ಕಾರಣಳಾಗುವಳು. ಇದಿಲ್ಲದೆ ವಿದ್ಯಾಹೀನರಾದ ಸ್ತ್ರೀಯರು ಮಾತ್ಸರ್ಯದಿಂದ ಜಗಳಕ್ಕೆ ಮೂಲ ಕಾರಣರಾಗುವರು; ಒಂದು ಮನೆಯವರಲ್ಲಿ ಎರಡು ಮನೆಗಳನ್ನು ಮಾಡುವರು, ಹೆಚ್ಚೇಕೆ, ತಂದೆ ಮಕ್ಕಳಿಗೆ ಕಲಹವನ್ನು ತಂದು ಹಾಕುವರು. ಕುಟುಂಬದಲ್ಲಿ ಒಗ್ಗಟ್ಟು ಹುಟ್ಟಿ ಅದರ ಏಳಿಗೆಯು ಸಹಜವಾಗ ಬೇಕಾದರೆ ವಿದ್ಯಾವಂತರಾದ ಸ್ತ್ರೀಯರು ಅವಶ್ಯವು. ಅದರೆ ಈ ಮೇರೆಗೆ ಬೇರೆ ಬೇರೆ ಕರ್ತವ್ಯಗಳನ್ನು ಸರಿಯಾಗಿ ನಡೆಸಬೇಕಾದರೆ ಅವರಿಗೆ ಅದಕ್ಕೆ ತಕ್ಕದಾದ ಶಿಕ್ಷಣವನ್ನು ಕೊಡಬೇಕು.

ಇಷ್ಟೇ ಅಲ್ಲದೆ ಅವರಿಗೆ ಸಾಮಾಜಿಕ, ರಾಜಕೀಯ, ಔದ್ಯೋಗಿಕ ಎಂಬ ನಾಗರೀಕತನದ ಕರ್ತವ್ಯಗಳನ್ನು ಜರಗಿಸಲು ಯೋಗ್ಯವಾದ ಶಿಕ್ಷಣವನ್ನು ಸಹ ಕೊಡಬೇಕು. ಇದರ ಆವಶ್ಯಕತೆ ಈಗ ಹೆಚ್ಚೇನೂ ಇಲ್ಲದಿದ್ದರೂ ಇಂಥ ಕಾರ್ಯಗಳನ್ನು ವಹಿಸಿದ ಪುರುಷರಿಗೆ ಅನುಕೂಲರಾಗಿ ಶ್ರೀಯನ್ನು ತರಬಹುದು. ಇದೂ ಅಲ್ಲದೆ ತಾನೇ ಸ್ವತಃ ಮಾಡತಕ್ಕ ಸಾಮಾಜಿಕ ಕಾರ್ಯಗಳಿರುವುವು. ಅವು ಯಾವುವೆಂದರೆ—ಚಿಕ್ಕ ಮಕ್ಕಳ ಪ್ರಾಥಮಿಕ ಶಿಕ್ಷಣ, ರೋಗ ಚಿಕಿತ್ಸೆ, ಈ ಕರ್ತವ್ಯಗಳನ್ನು ಜರಗಿಸಲು ಅವರಿಗೆ ಯೋಗ್ಯವಾದ ಶಿಕ್ಷಣವನ್ನು ಕೊಡಬೇಕು. ಅಂದರೆ ಅದು ನಿಜವಾದ ಸರ್ವಾಂಗ ಪರಿಪೂರ್ಣವಾದ ಸ್ತ್ರೀ ಶಿಕ್ಷಣವಾಗುವುದು ಇಂಥ ಸ್ತ್ರೀಯನ್ನು ಹೊಂದಿದ ಕುಟುಂಬವು ಸುಖಮಯವನ್ನು ಹೊಂದುವುದಲ್ಲದೆ ಅವರ ನೆರೆಹೊರೆಯವರೂ ಸಹ ಸುಖಶಾಂತಿಮಯರಾಗುವರು.

ಇಂಥ ಕಾರ್ಯಗಳಿಗೆ ನಮ್ಮ ದೇಶದ ಮುಂದಾಳುಗಳು ಸ್ವಲ್ಪ ಶ್ರಮಪಟ್ಟು ಕೆಲಸ ಮಾಡಿ ಮುಖ್ಯ ಮುಖ್ಯ ಸ್ಥಳಗಳಲ್ಲಿ ಸ್ತ್ರೀ ಶಿಕ್ಷಣ ಕಾರ್ಯಾಲಯಗಳನ್ನು ಸ್ಥಾಪಿಸಬೇಕು. ನಮ್ಮ ಜನರು ಜಾತಿಭೇದ, ಮತಭೇದ, ಪಂಗಡಭೇದ ಮುಂತಾದ ಕೆಡಕಿನ ಕಾರ್ಯಗಳಲ್ಲಿ ಮಗ್ನರಾಗಿರುವರೇ ಹೊರತು, ಇಂಥ ಸಾರ್ವಜನಿಕ ಕಾರ್ಯಗಳನ್ನು ಕೈಕೊಳ್ಳಲು ಸಂಪೂರ್ಣ ಮರೆತಿರುವಂತೆ ಕಾಣುತ್ತದೆ. ನಮ್ಮ ಮುಂದಾಳುಗಳು ಸಹ ಇದರ ವಿಷಯದಲ್ಲಿ ಹೆಚ್ಚಿನ ಮುತುವರ್ಜಿಯಿಂದ ಕೆಲಸ ಮಾಡಿದಂತೆ ಕಾಣುವುದಿಲ್ಲ. ಇನ್ನು ಮುಂದಾದರೂ ಈ ವಿಷಯಗಳಲ್ಲಿ ಚಳವಳವೆಬ್ಬಿಸಿ ವಿದ್ಯಾಭ್ಯಾಸದ ಏಳಿಗೆಗೆ ಕಾರಣಭೂತರಾದಲ್ಲು ನಮ್ಮ ಬಾಲಕ ಬಾಲಕಿಯರ ಪ್ರೀತಿಗೆ ಖಂಡಿತವಾಗಿ ಅರ್ಹರಾಗುವಿರಿ. ಇಂಥ ಶಕ್ತಿಯನ್ನೂ, ಸಾಮರ್ಥ್ಯವನ್ನೂ ನಮ್ಮ ಜನರಿಗೆ ದೇವರು ಅನುಗ್ರಹಿಸಲಿ.

ಕೆ. ಮುದ್ದಪ್ಪ.

ಕೊಡಗು ಸಭೆ ಮತ್ತು ಹೊಸ ಜಮೀನ್ದಾರರ ಸಂಘದ ಮಹನೀಯರಲ್ಲಿ ಅರಿಕೆ.

ಈ ಸಭೆಗಳಲ್ಲಿ ಸೇರಿದ ಅನೇಕ ಸಹೋದರರು ಖಾಯಂ ಜಮೀನ್ದಾರರ ಸಂಘದಲ್ಲು ಅನ್ಯಾಯವಿದೆ, ಫೀವೆಲ್ಲಾ ಮ. ಸಿ. ಯನ್. ವೆಂಕಪ್ಪಯ್ಯನವರ ಮಾತಿನ ಮೇರೆ ಇದ್ದೀರಿ ಎಂಬದಾಗಿ ನಮಗೆ ಅಪವಾದ ಹೊರಿಸುತ್ತಾರೆ. ಇದನ್ನು ನಾವು ಮುಸಲ್ಮಾನರು ಎಂದೂ ಒಪ್ಪಿಕೊಳ್ಳುವದಿಲ್ಲ. ನಮ್ಮ ಲಾಭ ನಷ್ಟ ನಮಗೆ ಚೆನ್ನಾಗಿ ತಿಳಿದಿದೆ. ತಾವು ಮಹನೀಯರು 1. ಕೊಡಗಿನಲ್ಲಿ, ಹಿಂದೂದೇಶದ ಬೇರೆ ಕಡೆಯಲ್ಲಿ ಇರುವ ಪದ್ಧತಿಯನ್ನು ಬಿಟ್ಟು, ಧಾರಾಳ ಮತ್ತು ಉದಾರ ಮನಸ್ಸಿನಿಂದ ಜಾತಿಭೇದ ಇಡಕೂಡದೆಂದು ಹೇಗೆ ತೀರ್ಮಾನ ಮಾಡಿದಿರೋ, ಹಾಗೆಯೇ ಜಮ್ಮ ಸಾಗು ಎಂಬ ಬೆಟ್ಟದ ಹಾಗಿರುವ ಭೇದವನ್ನೂ ಸಹ ಇಡಕೂಡದು; 2. ಜಮ್ಮಕ್ಕೆ 5—0—0 ಸಾಗಿಗೆ 10—0—0 ರೂಪಾಯಿ ಎಂಬ ನಿಬಂಧನೆ ಸಹ ಓಟಿಗೆ ಇಡಬಾರದು. ಮೆಂಬಾರ್ಶಿಗೆ ಬಂದ ಎಲ್ಲರೂ ಓಟು ಕೊಡಬಹುದೆಂದು ಒಪ್ಪಿಕೊಳ್ಳಬೇಕು. ಈ ಎರಡು ಶರತ್ತುಗಳಿಗೆ ತಾವು ಮಹನೀಯರು ಒಪ್ಪಿಕೊಂಡರೆ ನಾವು ಮುಸಲ್ಮಾನರು ತಾವು ಹೇಳಿದ ಹಾಗೆ ಕೇಳಲಿಕ್ಕೆ ಸಿದ್ಧವಾಗಿದ್ದೇವೆ. ಕೊಡವ ಸಭೆಗೆ ಸೇರಿದವರು ಜಮೀನ್ದಾರರ ಸಂಘಕ್ಕೆ ಸೇರಬಾರದೆಂಬ ಠರಾವಿಗೆ ನಾವು ಸಹ ವಿರೋಧವಾಗಿದ್ದೇವೆ. ಈ ಠರಾವು - 1923ನೇ ಇಸವಿ ತೀರ್ಮಾನದ ಮೇರೆ ಕೊಡವ ಸಭೆಯು ಮತ ಸಭೆಯಾಗಿರಬೇಕು, ರಾಜಕೀಯ ಸಭೆಯಾಗಿರಬಾರದು ಎಂದು ಆಗಬೇಕಾಗಿತ್ತು. ಹ್ಯಾಗೂ ಇರಲಿ, ಅದಕ್ಕೆ ಒಂದು ವರ್ಷ ಅವಧಿ ಇದೆ ಅದನ್ನು ಮೇಲ್ಕಂಡ ರೀತಿ ಬದಲಾಯಿಸಲು ನಾವು ಪ್ರಯತ್ನಿಸುತ್ತೇವೆ. ಇನ್ನು ಕರ್ನಾಟಕ ಏಕೀಕರಣ. ಇದು ಕನ್ನಡ ಭಾಷೆ ಆಡುವ ಹಿಂದುಗಳಿಗೆ ಲಗಾವೇ ಹೊರತು ನಮಗೆ ಲಗಾವು ಇರುವುದಿಲ್ಲ.

ಆದ್ದರಿಂದ ತಾವು ನಮ್ಮ ಈ ಎರಡು ಶರತ್ತುಗಳು ಪ್ರುವದಾದರೆ ನಾವು ತಮಗಳ ಮಾತು ಕೇಳಲಿಕ್ಕೆ ಸಿದ್ಧವಾಗಿದ್ದೇವೆ. ಇಲ್ಲವಾದರೆ ನಮ್ಮ ಮೇಲೆ ಅಪವಾದ ಹಾಕುವುದು, ನಮ್ಮನ್ನು ದೂರುವದು ನ್ಯಾಯವೋ ಎಂಬದು ತಾವೇ ತೀರ್ಮಾನ ಮಾಡಬೇಕಾಗಿ ಅತ್ಯಂತ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಅಬ್ದುಲ್ ಗಫೂರ್‌ಖಾನ್ ಸೈಕ್ಷಿ.

ಮಾರಾಟಕ್ಕಿದೆ.

ನನ್ನ ಬಾಬ್ತು, ಶನಿವಾರಸಂತೆ ಹೋಬಳಿ ಕುಲುಕೋಡ ಗ್ರಾಮದಲ್ಲಿರುವ ಮೂವತ್ತೈದು ಎಕರ, ಕಾಫಿ ತೋಟದ ಸ್ಥಳ, ಎಕರು ಕಾಫಿ ವ್ಯವಸಾಯದ ಮತ್ತು 3 ಎಕರು ಕಿತ್ತಳೆ, ಕಸಮಾವು, ತೆಂಗು ವಗೈರೆ ವ್ಯವಸಾಯದ ಜಾಗ ಮತ್ತು 5 ಎಕರು ತರಿಭೂಮಿ, 10 ಎಕರು ಕುಶ್ಕಿ ಜಮೀನು, ದ 9 ಎಕರು ಕಾಫಿ ಸಾಗುವಳಿಗೆ ಅನುಯುಕ್ತವಾದ ಕಾಡು ಜಾಗ ಸಹ ಮಾರಾಟಕ್ಕಿದೆ. ಈ ಸೊತ್ತಿಗೆ ಕೊಡ್ಲಿಪೇಟೆ ಪಟ್ಟಣದಿಂದ ಒಂದು ಮೈಲು ದೂರವಿದೆ. ಮುಲ್ಲಿಪಟ್ಟಣಕ್ಕೆ ಹೋಗುವ ಡಿಸ್ಟ್ರಿಕ್ಟ್ ಬೋರ್ಡು ರಸ್ತೆಯು ಈ ಜಾಗದ ಮೂಲಕ ದಾಟುತ್ತದೆ. ಈ ತೋಟದಲ್ಲಿ ಮಂಗಳೂರು ಹಂಚು ಹಾಕಿದ ಒಂದು ಚಿಕ್ಕ ಬಂಗಲೆಯೂ, ಕೂಲಿ ಆಳುಗಳ ಲೈನುಗಳೂ ಸಹ ಇವೆ. ವರ್ಷಕ್ಕೆ 2500ರೂಪಾಯಿ ಮೇಲೆ ಹುಟ್ಟುವಳಿ ಇದೆ. ಕಾಯಿಷ್ ಇರುವವರು ಈ ತೋಟವನ್ನು ನೋಡಿ ಈ ಕೆಳಗಿನ ವಿಳಾಸದವರಿಗೆ ಬರೆಕೊಂಡ ಪಕ್ಷದಲ್ಲಿ ಕ್ರಯ ವಗೈರೆ ತಿಳಿಯಲಾಗುವುದು

ಶನಿವಾರಸಂತೆ, ಜೆ. ಪಿ. ಬಸುವಣ್ಣಯ್ಯ,
ತಾ. 25—8—29. ಪ್ರಾಂಟರು,
4—4 ಬೆಳ್ಳಾರಳ್ಳಿ ಎಸ್ಟೇಟ್.

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ 'ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಠಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ನೂತನ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಠಗಳಸಹಿತ ಕೂಡಿದೆ. ಕ್ರಯ ಪುಸ್ತಕ ೧ಕ್ಕೆ ರೂ ೧—೦—೦

ಎಸ್. ವಿ. ಗೋಪಾಲ್ ಬುಕ್ ಡಿಪ್ಪೋ,
52—36 37. ತಿರುಪಳ್ಳಿಬೀದಿ, ಮದರಾಸ್.

Lamps

(of Basel Mission fame)

Just arrived! Shop Early!!

Table Lamps—glass container with brass fittings & Shade @ Rs 7/8 6/12. 6/8. & 5/— Each

Wall Lamps—glass container with brass fittings & mirror @ Rs 3/12. 3/— 1/8. & 1/2 Each

Hanging Lamps brass container @ Rs 3/12.

Hanging Lamps glass container @ Rs 2/12.

Lanterns thoroughly reliable @ Rs. 3/4 3/2 & 3/ Each

Spare Chimneys Stocked.

The Coorg Emporium,

Mercara. Sidapur.

48—12

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕೇಟಲಾಗ್ ಬರೆದರೆ ಉಚಿತ
ಕ್ಯಾಟಲಾಗು ಮಾಫಿಯಾಗಿ
ಕಳುಹಿಸಲ್ಪಡುವುದು.

ಜೋಡು ಹೊಳವಿನ ತೋಟದ ರೈಫಲುಗಳು	ರೂ 120 ರಿಂದ	ರೂ 2750 ರ	ವರೆಗೆ
ಒಂಟಿ ,, ,, ,,	,, 35 ,,	,, 950	,,
ಜೋಡು ,, ,, ಕೋವಿಗಳು	,, 50 ,,	,, 1350	,,
ಒಂಟಿ ,, ,, ,,	,, 35 ,,	,, 275	,,
ಜೋಡು ಹೊಳವಿನ ಕೇಪು ,,	,, 45 ,,	,, 135	,,
ಒಂಟಿ ,, ,, ,,	,, 30 ,,	,, 80	,,
ಬ್ರೀಚ್ ಲೋಡಿಂಗ್ ರಿವಾಲ್ವರುಗಳು	,, 35 ,,	,, 350	,,
ಪಿಸ್ತೋಲುಗಳು	,, 30 ,,	,, 150	,,

ಕಾಡು ಮೃಗಗಳ ಬೇಟೆ, ಮೀನು ಬೇಟೆ ಮುಂತಾದ ಎಲ್ಲಾ ತರತರ ರಾತ್ರಿಯ ಪಸೋದ ಮತ್ತು ಕಲಸಗಳಿಗೆ ಉಪಯೋಗಕರವಾದ ಉತ್ತಮ 'ಸರ್ಚ್ ಲೈಟ್' ಎಂಬ ದೀಪಕ್ಕೆ ಬೆಲೆ ರೂ. 30. ರವಾನೆಯ ಚಾರ್ಜು ಇಲ್ಲ

ಕತ್ತಿಗಳು, ಬಚೆಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.

Largest Importers of Firearms and Ammunition

Cheapest priced firm in India,

24—4 210 Abdul Rehman Street, BOMBAY.

ಟೇಬಲ್ ಟೈಂಪೀಸು ಇನಾಂ.



ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ನೋಟವಾದ ... ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿವೆ. ಬಿರಾರು ಗಂಟೆಯನ್ನು ತೋರಿಸುವವು. ಇವು ಕೇಸು ಭಂಗಾರಕ್ಕೆ ಸಮಸಮ ನಾಗಿರುವುವು. ಇದಲ್ಲದೆ ... 5 ವರ್ಷ ಗ್ಯಾರಂಟಿ ಕೊಡುವೆವು. ಈ ಚಿತ್ರದಲ್ಲಿ ... ರಿಸ್ಟ್ ವಾಚನ್ನು ಈ ವಾರದಲ್ಲಿ ತರಿಸುವವರಿಗೆ ಟೇಬಲ್ ಟೈಂಪೀಸ್ ಒಂದನ್ನು ಇನಾಮು ಕೊಡುವೆವು. ಇನಾಮು ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1 ಕ್ಕೆ 7—0—0.

ವಿಳಾಸ.—ಕೆ. ಎಸ್ ಬೆನ್‌ಸನ್ ಅಂಡ್ ಕೊ,
52—12 168 ಜೈನಾ ಬಜಾರ್, ಮದರಾಸು.

ಭಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಬಣ್ಣವು ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಸವರನ್ ಬಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ. ೧ಕ್ಕೆ ೧೨ ಆ. ೩ ಉಂಗುರಗಳಿಗೆ ಒಂದು ಟೇಬಲ್ ಟೈಂಪೀಸನ್ನೂ, ೬ ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯ್ಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ.



ವಿಳಾಸ.—ಲೀಗಲ್ ವಾಚ್ ಕಂಪೆನಿ,
52—12 ಪೋ. ಬಾ. 243 ಮದರಾಸು

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

... ಬಹರ್ ಫ್ಲೂಟ್ ಸಿಂಗಲ್ ರೀಡ್ ಹಾರ್ಮೋನಿಯಂ 1 ಕ್ಕೆ		50	8	0
... ಸ್ವಾಸ್ ಫ್ಲೂಟ್	,, ,,	42	8	0
...ಂತರಾ	,, ,, ,,	40	0	0
...ಹನ್	,, ,, ,,	37	8	0
...ಸ್ಟೀಂ	,, ,, ,,	35	0	0
...ರಾಜಾ	,, ,, ,,	32	8	0
...ಹಿನೂರು	,, ,, ,,	29	8	0
...ಮಂಡ್	,, ,, ,,	27	8	0
...ೀ	,, ,, ,,	25	0	0
... ಬಹರ್ ಫ್ಲೂಟ್ ಡಬ್ಬಲ್ ರೀಡ್ ಹಾರ್ಮೋನಿಯಂ 1 ಕ್ಕೆ		85	0	0
...ರ್	,, ,,	56	0	0
...ಹನ್	,, ,, ,,	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಗಳುಳ್ಳ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟೆನ್ ಪೆನ್‌ಗಳು.

ವರ್ಲ್ಡ್ ವಂಡರ್ ಫೌಂಟನ್ ಪೆನ್	1ಕ್ಕೆ	3	0	0	
,, ಬಿಗ್‌ಬ್ಯಾರಲ್	,, ,,	3	2	0	
,, ಸಿಲ್ವರ್ ಕ್ಲಾಪ್	,, ,,	3	8	0	
,, ಮಾರ್ಬಲ್ ಕಲರ್	,, ,,	3	14	0	
,, ಮಾರ್ಬಲ್ ಸಿಲ್ವರ್ ಕ್ಲಾಪ್	,,	4	4	0	
,, ಟ್ರಾನ್ಸ್‌ಪರೆಂಟ್ ಸೆಲ್ಫ್ ಫಿಲ್ಲಿಂಗ್ ಪೆನ್	,,	5	8	0	
,, ಸೇಫ್ಟಿ ಪೆನ್	,, ,,	6	8	0	
,, ಲೇಡೀಸ್ ಸೈಜು ಮಾರ್ಬಲ್ ಕಲರ್ ಪೆನ್	,,	4	8	0	
ಬ್ಲಾಕ್‌ಬರ್ಡ್ ಪೆನ್ 1ಕ್ಕೆ 3 8 0 ಮತ್ತು		3	12	0	
ಸ್ವಾನ್ ಪೆನ್ ,, 6 8 0 ,,		7	0	0	
ವಾಟರ್‌ಮೆನ್ ಐಡಿಯಲ್ 1 ಕ್ಕೆ 8 0 0 ,,		8	8	0	
,, ಸೆಲ್ಫ್ ಫಿಲ್ಲಿಂಗ್ ಯೂ ಸೇಫ್ಟಿ ಪೆನ್	1ಕ್ಕೆ	12	0	0	
ಬಿಗ್‌ಬ್ಯಾರಲ್ ಹಾರ್ಡ್ ವೇರ್	,, ,,	8	0	0	
,, ನೆಪ್ಚ್ಯೂನ್ ಪೆನ್	1ಕೆ	17	0		

ಖಾತ್ರಿಯುಳ್ಳ ಬಂದೋಬಸ್ತಾದ ಟೈಂಪೀಸುಗಳು

ಸಣ್ಣ ಸೈಜಿನ ಜರ್ಮನ್ ಟೈಂಪೀಸು	1ಕ್ಕೆ	2	2	0
ಜರ್ಮನ್ ಗುಂಡಾಕೃತಿಯ ಆಕಾರದ ಟೈಂಪೀಸು	,,	3	12	0
ಅಮೇರಿಕಾದ ... ಟೈಂಪೀಸು	,,	5	13	0
,, ಆಕಾರದ ,,	,,	5	6	0
ಬಿಗ್‌ಬೆನ್ ,, ,,	,,	9	6	0
,, ಡಬ್ಬಲ್ ... ಆಕಾರದ ಟೈಂಪೀಸು	,,	13	0	0
ಘಂಟೆ ತೋರಿಸುವ ... ಕ್ಯಾಲೆಂಡರ್ ಕ್ಲಾಕ್	,,	7	2	0
,, ಟೈಂ ತೋರಿಸುವ ... ಕ್ಯಾಲೆಂಡರ್ ಕ್ಲಾಕ್ 1ಕೆ		8	1	0
,, ಘಂಟೆ ... ಆಕಾರದ ಸಹ ಬಾರಿಸುವ ಕ್ಯಾಲೆಂಡರ್ ಕ್ಲಾಕ್	1ಕ್ಕೆ	9	12	0
ಘಂಟೆ ತೋರಿಸಿ ...				

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

		ರೂ
ಷೇರ್ ಬಂಡವಾಳ	—	50,880
ವಸೂಲಾದ ಷೇರ್ ಮೊಬಲಗು	—	20,660
ಒಟ್ಟು ಠೇವಣಾತಿ	—	1,87,7..

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಕೊಂಗಟ್ಟಿರ ತಿಪ್ಪಯ್ಯನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1929

ನೋಟೀಸು.

ಈ ಕೆಳಗಿನ ಮಹನೀಯರು «ಕೊಡಗು» ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ. ಕೇಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಸಬೇರರ ಸಂಜಪ್ಪನವರು, ಮತ್ತು ಮೆ. ಮುಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಮೂರ್ನಾಡು—ಮಡೆಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ-ಸಿದ್ದಾಪುರ—ಮೆ. ಬನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರು.
ಸುದಿಕೇರಿ & ತಿತಿಮತ್ತಿ—ಮೆ. ಜೆ. ಮಾದಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
«ಕೊಡಗು» ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ



12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART
221 Abdul Rehman Street.

ಕಟುಕಷಾಯ ಮಾತ್ರೆ ಪದಕ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಮತ್ತು ತ್ರಿದೋಷದಿಂದ ಬರುವ ಜ್ವರಗಳಿಗೆ ಖಂಡಿತ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 1—0—0 6ಕ್ಕೆ ರೂ 7—8—0, 12ಕ್ಕೆ ರೂ 14

ಜೀವನ ಸುಧೆ:—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಹನಿ ಹನಿಯಾಗಿ ಬರುವದು, ಮೂತ್ರಕೋಶದ ಉರಿ, ಮೂತ್ರ ಹಿಂದಗಳ ಉರಿ, ಮೂತ್ರನಾಳದ ... ಮೂತ್ರ ಹೋಯ್ಯುವಾಗ ಉರಿಯುವುದು, ಮೂತ್ರ ದ್ವಾರದಿಂದ ಕೀವು ಬರುವುದು, ... ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆ... ಸಾಮರ್ಥ್ಯವಿಲ್ಲದಿರುವದು ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರ... ಬರುವ ಸೋಕು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲು 1, 3, 6ಕ್ಕೆ ರೂ 1—... 3—8—0 6—12—0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗೆ ರೂ 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆವುರಿ, ಕಣ್ಣಿನಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—...

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ:—ಮನೋಲ್ಲಾಸಿನಿ ಕಂಪೆನಿ.
52—49 ೨. ಮಂಗಳೂರ

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮಗಾನ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಾಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು



24—18

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ
ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ
ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.				ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ.		1925.	93	ಲಕ್ಷ ರೂಪಾಯಿ.
1926.	391	,, ,,		1926.	106	,, ,,
1927	468	,, ,,		1927.	122	,,
1928	585	,, ,,		1928.	140	,,

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ. ‖ 1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ
1921ರಲ್ಲಿ ,, ,, ,, ,, ,, ‖ 1927ರಲ್ಲಿ ,, ,, ,,

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಒಂದರೆ ನಿಮಗೆ ಅದರಿಂದ ಲಾಭ ಉಂಟಾಗುವುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು.

ಎಲ್. ಆರ್. ಕೃಷ್ಣಸ್ವಾಮಿ, ಬ್ರಾಂಚ್ ಸೆಕ್ರೆಟರಿ.

52—38

Goldsmiths' Rolling Mills,
ಪಟ್ಟಿ ಮೆಷಿನುಗಳು.



ನಗ ಮಾಡುವವರು ಮತ್ತು ಅಕ್ಕಸಾಲೆಯವರು ಉಪಯೋಗಿಸುವ ಚಿನ್ನ ಮತ್ತು ಬೆಳ್ಳಿಯ ತಗಡುಗಳನ್ನು ಮಾಡುವ ಈ ಮಿಲ್ಲುಗಳಿಗೆ ನಾವು ಏಜಂಟರಾಗಿರುತ್ತೇವೆ ಕ್ರಯ ಬಹು ಮಧ್ಯತರ ಮುಖ್ಯ ಪಟ್ಟಣಗಳಲ್ಲಿ ಸಬ್ ಏಜಂಟರುಗಳು ಬೇಕಾಗಿದ್ದಾರೆ ಹೆಚ್ಚಿನ ಸಂಗತಿ ಮತ್ತು ಕೆಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಇಂಗ್ಲೀಷಿನಲ್ಲಿ ಬರೆದುಕೊಳ್ಳುವುದು.

Ch. Sobhanachalam & Sons
Chilakalapudi P O
Masulipatam

12—5

Ford SALES AND SERVICE

The most competitive
CAR
in the most competitive
YEAR
The new model A Fo...
with three Speed selective slid...
Transmission.
The most economical car in th...
For Demonstration & further P...
Please apply to:—

S. Sunder Ra...
Ford Dealer for
M E R...

24—12

Printed & published by P. I. Bell'iappa, at "Kodagu Press

Regd. No. M. 1550.
Hand at Here ... return to
"KODAGU" OFFICE, MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಸಂತ್ಸತಃ ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯ ‖ ಮಡಿಕೇರಿ, ಸನ್ ೧೯೩೧ನೇ ಇಸವಿ ಸೆಪ್ಟಂಬರ್ ತಾರೀಕು ೨೭ನೇ ಶುಕ್ರವಾರ. ‖ ಸಂಚಿಕೆ ೧೭

Telephone:—
3145

By Appointment to
H. E. The Governor of Madras

Telegram :—
"PRECIOUS"

Guarantee of Satisfaction throughout in every order large or small.

Brooch.

PROMPTEST EXECUTION — HIGH CLASS WORKMANSHIP

GOLDSMITH — SILVERSMITH

V. Subramania Iyer

GEMSET JEWELLER

POST BOX 423 TRIPLICANE MADRAS.

Excellent Quality Chaste Designs Moderate Prices.

Ice Tumbler.

"Green Hills"
VIRARAJENDRAPET.
7th Decr., 26.

Sir,

....I am glad to note that the Jewels have a good finish . . .

(Sd.) Mrs. A. B. CHENGAPPA.

SUNTICOPPA,
Nellore Estate.
7th April, 28

Dear Sir,

I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends.

(Sd.) MISS K. SUBBIAH

MERCARA,
20th May, 27.

Dear Sir,

I am quite satisfied with the Jewels you sent on the 16th instant.

(Sd.) Mrs. K. S. CARIAPPA

52—2

Illustrated Catalogue Free on Application.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಬೆಳೆಗಳ ಹುಳದ ದೆಸೆಯಿಂದ ಕೆಟ್ಟು ಹೋಗಿದ ಕಾಫಿಗಿಡಗಳು ಸಂಖ್ಯೆಯು ಧಾತುಗುಣದ (Mineral) ಗೊಬ್ಬರವಾಕಿದಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ಧಾಪುರ ಪರೀಕ್ಷಾ ಕ್ಷೇ (Experiment station) ದಲ್ಲಿ ... ... ಆದುದರಿಂದ ... ... ಸಾರಜನಕ ಗೊಬ್ಬರವು ಪ್ರಯೋಜನಕರವಾಗುವದೆಂದು ತೋರುತ್ತದೆ" (... ... ... ಡಿಪಾರ್ಟ್‌ಮೆಂಟ್)

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ... ... ಸಂತಾನ ಪತ್ರಿಕೆ ... ... ವಿಳಾಸಗಳಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್
ಪೋ. ಬಾ. ನಂ. ೪೦೯, ಕಲ್ಕತ್ತಾ.

(2) ... ...
... ... ಕಂಪನಿ,
ಮಡಿಕೇರಿ.

4—19

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿ ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿ ಬಿಡುವದು. ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವುದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ಮುಟ್ಟಾದ ನಂತರವೂ, ಉಂಟಾಗುವ ಹೊಟ್ಟೆನೋವು ಮುಂತಾದವು ಖಂಡಿತ ಗುಣಪಡಿಸುವದು. ಈ ಎಣ್ಣೆಯನ್ನು ಬೆಂ... ಮದರಾಸು ಆಧಿಪತ್ಯಗಳಲ್ಲಿ ಮಕ್ಕಳಿಲ್ಲದವರು ... ಪುತ್ರ ಸಂತಾನ ಪಡೆದಿರುವರು. ಒಂದು ಬಾ... ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ... ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟಲ್ 1ಕ್ಕೆ 2—8—0.

ಸಿ:— ಕೆ. ಎನ್. ರಾಧಾಕೃಷ್ಣ ಬ್ರದರ್ಸ್,
109 ಜೈನಾ ಬಜಾರ್ ರೋಡ್, ಮದರಾಸು.

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್ ಈಡಿಗ ಯಕ್ಸ್ಪೆಲ್ಲರ್ಸ್, ಮೈಸೂರು.

ನಮ್ಮಲ್ಲಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಸಿಪ್ಪರುಗಳಿಂದ ಶೋಧಿಸಲ್ಪಟ್ಟ ಅಪ್ಪಟವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯು ಸಹ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯ ಬಯಸುವವರು ಸಂತಪೇಟೆಯಲ್ಲಿ ಇರುವ ನಮ್ಮ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರ ದ್ವಾರ ತಿಳಿಯಬಹುದು.

26—17

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದದರ ಸಂಬಂಧವು ಸ್ವಲ್ಪವಾದರೂ ಇದರಲ್ಲಿಲ್ಲ. ಮನುಷ್ಯರ ಎಲ್ಲ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗೆ ಬೆಳ್ಳಿ, ಬಂಗಾರ ಮುಂತಾದ ಪದಾರ್ಥ... ... ಉಪಯೋಗವಾಗುವದು.

ಮದನ ಮಂಜರಿ ಮಾತ್ರೆಗಳು.

ದಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನ ರಹಿತವಾದುದು. ಒಂದು ಡಬ್ಬಿಯ ಕ್ರಯ ೧—೦—೦

52—6 ಮದನಮಂಜರಿ ಫಾರ್ಮಸಿ,
1/94 ಚೈನಾ ಬಜಾರ್, ಮದ್ರಾಸ್.

ಏಕೆ ನರಳುತ್ತೀರಿ?

ಕ್ರಯವು ... ಅಂಚೆ ಕಾಗದಗಳು.

ಇಲ್ಲಿಗೆ ಉಚಿತವಾಗಿ ಕೊಡಲ್ಪಡುತ್ತ

ವೈದ್ಯ ವಿದ್ಯೆ

... ಪುಸ್ತಕವನ್ನು ಓದಿ ಬಾರ ರೋಗಗಳ ... ... ಮಾಡಿಕೊಳ್ಳುತ್ತ, ... ಬಾಧೆಯಿಂದ ನಿವಾರಣೆ ಮಾಡಿಕೊಳ್ಳಿ

52—6 ಮದನಮಂಜರಿ ಫಾರ್ಮಸಿ,
1/94 ಚೈನಾ ಬಜಾರ್ ರೋಡು, ಮದ್ರಾಸು

ಕೊಡಗು.

ಸ. ೧೯೨೯ನೇ ಇಸವಿ

ಸೆಪ್ಟಂಬರ್ ತಾ. ೨೭ ನೇ ಶುಕ್ರವಾರ.

ಮೈಸೂರಿನ ಆರ್ಥಿಕ ಸಮ್ಮೇಳನ.

ಮೈಸೂರು ಸಂಸ್ಥಾನದ ಪ್ರಜೆಗಳ ಅಭಿವೃದ್ಧಿಯನ್ನು ಬೆಳೆಸುವ ಉದ್ದೇಶ್ಯ ಅಲ್ಲಿಯ ಮಹಾರಾಜರವರ ಸರ್ಕಾರದವರು ಜನರ ಅಭಿಪ್ರಾಯವನ್ನು ತೆಗೆದುಕೊಂಡು ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಅಲ್ಲಿ ಆಗಾಗ್ಯೆ ಬೇರೆ ಬೇರೆ ವಿಷಯಗಳನ್ನು ಕುರಿತು ಪರಿಷತ್ತುಗಳನ್ನು ನಡಿಸುತ್ತಾರೆ. ಆರ್ಥಿಕ ವಿಷಯವನ್ನು ಕುರಿತು ಅಂಥಾದೊಂದು ಕಾನ್‌ಫರೆನ್ಸು ಈ ತಾ 21ರಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಅಲ್ಲಿಯ ದಿವಾನರಾದ ಮಿ. ಅಮೀನ್‌ಉಲ್‌ಮುಲ್ಕ್ ಮಿರ್ಜಾ ಯಂ ಇಸ್ಮೇಲ್‌ರವರು ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದರು. ಮಿ. ಮಿರ್ಜಾರವರು ಸಮಾರಂಭದಲ್ಲಿ ಮಾಡಿದ ಭಾಷಣದಲ್ಲಿ ಆ ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಸರ್ಕಾರದವರು ಕೈಕೊಂಡಿರುವ ಮತ್ತು ಇನ್ನು ಮುಂದಕ್ಕೆ ನಡಿಸಬೇಕೆಂದಿರುವ ಕೆಲವು ಮುಖ್ಯ ಏರ್ಪಾಡುಗಳನ್ನು ವಿವರಿಸಿ ಹೇಳಿದರು. ಅದರಲ್ಲೂ ಅವರು ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸದ ಮತ್ತು ವ್ಯವಸಾಯ ಅಭಿವೃದ್ಧಿಯ ಅವಶ್ಯಕತೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟದ್ದು ನ್ಯಾಯವಾಗಿದೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಕುರಿತು ಅವರು ಹೇಳಿರುವುದೇನೆಂದರೆ—'ಜನರು ಒಮ್ಮತದಿಂದ ಒಪ್ಪುವ ವಿಷಯವೇನಾದರೂ ಇದ್ದರೆ, ಅದು ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಶೀಘ್ರವಾಗಿ ಹರಡುವುದಾಗಿದೆ. 1921ನೇ ಖಾನೇಸುಮಾರಿ ಲೆಖ್ಖದ ಮೇರೆ ಮೈಸೂರಿನಲ್ಲಿ ಓದು ಬರಹ ತಿಳಿದವರ ಸಂಖ್ಯೆಯು ಶೇಕಡ 7.4 ಆಗಿತ್ತು. ಕಳೆದ ಹತ್ತು ವರ್ಷಗಳಲ್ಲಿ ಈ ವಿಷಯದಲ್ಲಿ ಸ್ವಲ್ಪ ಅಭಿವೃದ್ಧಿಯಾಗಿರುವದಾದರೂ, ತಿರುವಾಂಕೂರು, ಕೊಚ್ಚಿ ಮುಂತಾದ ಸಂಸ್ಥಾನಗಳ ಮತ್ತು ಮುಂದುವರಿಯುತ್ತಿರುವ ಪಾಶ್ಚಾತ್ಯ ದೇಶಗಳ ವಿದ್ಯಾಭ್ಯಾಸದ ಸ್ಥಿತಿಯಷ್ಟು ನಮ್ಮ ಸಂಸ್ಥಾನದ ಸ್ಥಿತಿಯು ಒಳ್ಳೇಯದಾಗಿರುವುದಿಲ್ಲ. ಗ್ರಾಮಾಂತರಗಳಲ್ಲಿ ಹೆಚ್ಚಿನ ಪ್ರೈಮರಿ ಶಾಲೆಗಳು ಬೇಕೆಂಬ ಕೂಗೂ, ಹಲವು ಕಡೆಗಳಲ್ಲಿ ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂಬ ಕೋರಿಕೆಯೂ ಬಲವಾಗಿದೆ. ಪ್ರೈಮರಿ ವಿದ್ಯಾಭ್ಯಾಸಕ್ಕೆ ಮಾಡಿರುವ ಅನುಕೂಲತೆಗಳು, ಜನರ ಅಪೇಕ್ಷೆಯಷ್ಟಾಗಿರುವುದಿಲ್ಲ.' ಈ ನಿಜ ಸಂಗತಿಯನ್ನು ದಿವಾನರು ಒಪ್ಪಿಕೊಂಡದ್ದು ಸಂತೋಷಕರವೇ. ಆದರೆ ಅವರೂ ಬ್ರಿಟಿಷ್ ಅಧಿಕಾರಿಗಳಂತೆ ಹಣದ ಅಭಾವದ ಪ್ರಶ್ನೆಯನ್ನು ಮುಂದಕ್ಕೆ ತಂದೊಡ್ಡುತ್ತಾರೆ. ಮೈಸೂರಿನ ಎಲ್ಲಾ ಗ್ರಾಮಗಳಲ್ಲಿಯೂ ಪ್ರೈಮರಿ ಶಾಲೆಗಳನ್ನು ಸ್ಥಾಪಿಸಲು ಈಗ ಮಾಡುವ ಖರ್ಚಿಗಿಂತ 40 ಲಕ್ಷ ರೂಪಾಯಿ ಹೆಚ್ಚು ಬೇಕಾಗುವದೆಂತಲೂ, ಸರ್ಕಾರದ ಈಗಿನ ಆರ್ಥಿಕ ಸ್ಥಿತಿಯಲ್ಲಿ ಇದು ಸಾಧ್ಯವಲ್ಲವೆಂತಲೂ ಹೇಳಿದರು. ಆದರೆ ವಿದ್ಯಾ ಡೈರೆಕ್ಟರವರು, ಐದು ಯಾ ಹತ್ತು ವರ್ಷಗಳಲ್ಲಿ ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ಶಾಲೆಯನ್ನಿಟ್ಟು ಸಾರ್ವತ್ರಿಕ ವಿದ್ಯಾಭ್ಯಾಸವನ್ನು ಮೆಲ್ಲನೆ ಸಾಧಿಸುವ ಏರ್ಪಾಡನ್ನು ಸೂಚಿಸಿ ಇದಕ್ಕೆ 15 ಲಕ್ಷ ರೂಪಾಯಿ ಬೇಕಾಗುವದೆಂತಲೂ, ಇದರಲ್ಲಿ 9 ಲಕ್ಷ ಸರ್ಕಾರದವರು ಕೊಡಬೇಕೆಂತಲೂ, ಬಾಕಿ 6 ಲಕ್ಷ ಸ್ಥಳೀಯ ಸಂಸ್ಥೆಗಳಾದ ಡಿಸ್ಟ್ರಿಕ್ಟ್ ಬೋರ್ಡುಗಳು ಮತ್ತು ಮುನ್ಸಿಪಾಲಿಟಿಗಳು ಕೊಡಬೇಕೆಂತಲೂ ಬರೆದಿರುವರಂತೆ. ಅಲ್ಲಿಯ ಸರ್ಕಾರದ ವಾರ್ಷಿಕ ಉತ್ಪತ್ತಿಯು 5 ರಿಂದ 6 ಲಕ್ಷದ ವರೆಗೆ ಹೆಚ್ಚಾಗುತ್ತಿರುವದರಿಂದ ಬರುವ 10 ವರ್ಷಗಳಲ್ಲಿ ಈ 9 ಲಕ್ಷ ರೂಪಾಯಿಗಳನ್ನು ಒದಗಿಸುವುದು ಕಷ್ಟವಾಗಲಿಕ್ಕಿಲ್ಲವೆಂದು ಮಿ. ಮಿರ್ಜಾರವರು ಸೂಚಿಸಿದರು. ಮಾದರಿ ಸಂಸ್ಥಾನವೆಂದೆನ್ನಿಸಿಕೊಳ್ಳುತ್ತಿದ್ದ ಮೈಸೂರಿನಲ್ಲಿಯೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಜನರು ಆಶಿಸುವಷ್ಟು ಅನುಕೂಲತೆಗಳು ಇಲ್ಲದಿರುವದು ವ್ಯಸನಕರ. ಇನ್ನಾದರೂ ಅವುಗಳನ್ನು ಶೀಘ್ರದಲ್ಲಿಯೇ ಮಾಡಿಕೊಡಲು ಸರ್ಕಾರದವರು ತಯಾರಿಲ್ಲದ್ದು ಮತ್ತಷ್ಟು ವ್ಯಸನಕರ. ಆದರೂ ಇನ್ನು ಹತ್ತು ವರ್ಷಗಳಲ್ಲಾದರೂ ಪ್ರತಿಯೊಂದು ಗ್ರಾಮಕ್ಕೂ ಶಾಲೆ ಇಡುವಂತೆ ಏರ್ಪಾಡು ಮಾಡಿದರೆ ಅಲ್ಲಿಯ ಜನರಲ್ಲಿರುವ ನಿರಕ್ಷರತೆಯನ್ನು ಸಾಧಾರಣ ಮಟ್ಟಿಗಾದರೂ ಹೋಗಲಾಡಿಸಿದಂತಾಗುವುದು.

ಮಹಾರಾಜರವರ ಆಳಿಕೆಯ ರಜತೋತ್ಸವದ ಜ್ಞಾಪಕಾರ್ಥವಾಗಿ ಕೈಗಾರಿಕೆ ಕಲಿಸುವ ಸಂಸ್ಥೆಯೊಂದನ್ನು ಸ್ಥಾಪಿಸಲು ಸರ್ಕಾರದವರು ನಿಶ್ಚೈಸಿರುವರೆಂದೂ, ಇದಕ್ಕೆ ದೊಡ್ಡ ಮೊಬಲಗು ಬೇಕಾಗಿರುವುದರಿಂದ ಇಷ್ಟೇ ಎಂದು ಈಗಲೇ ಹೇಳಲು ಸಾಧ್ಯವಿಲ್ಲವೆಂತಲೂ, ಇದರ ಏರ್ಪಾಡನ್ನು ಮಾಡಲು ಒಂದು ಕಮಿಟಿಯು ನೇಮಿಸಲ್ಪಟ್ಟಿದೆಯೆಂತಲೂ ದಿವಾನರು ಹೇಳಿದರು. ನಿರುದ್ಯೋಗದ ಸಮಸ್ಯೆಯು ಈಗ ಇಡೀ ಪ್ರಪಂಚವನ್ನೇ ಬೆದರಿಸುತ್ತಿದೆ. ಇದನ್ನು ಬಿಡಿಸಲು ಜನರಿಗೆ ತಕ್ಕಂಥ ಹಲವು ವಿಧದ ಕೈಗಾರಿಕೆಯ ವಿದ್ಯೆಗಳಲ್ಲಿ ತರಬೇತು ಕೊಡಲು ಯೋಗ್ಯ ಏರ್ಪಾಡುಗಳನ್ನು ಮಾಡುವುದು ಅಗತ್ಯವಾಗಿದೆ.

ವ್ಯವಸಾಯ ಕ್ರಮದಲ್ಲಿ ತರಬೇತು ಹೊಂದಿದವರು, ಆ ಕ್ರಮವನ್ನು ಕಾರ್ಯತಃ ಆಚರಿಸಿ ರೈತರಿಗೆ ತೋರಿಸುವ ಬಗ್ಗೆ ಮೈಸೂರು ಸರ್ಕಾರದವರು ಭದ್ರ ಕಾಲುವೆಯ ನೀರು ಸಿಕ್ಕುವಲ್ಲಿ, ತಂಡ ತಂಡದವರಿಗೆ ಭೂಮಿ ಕೊಟ್ಟು, ಅವನ್ನು ಸುಧಾರಿಸಿದ ಕ್ರಮದಲ್ಲಿ ವ್ಯವಸಾಯ ಮಾಡಲು ಅವರಿಗೆ ಸಾಕಷ್ಟು ಹಣ ಸಾಲವನ್ನು ಕೊಡುವ ಏರ್ಪಾಡೊಂದನ್ನು ಮಾಡಿರುವರು. ಈ ಏರ್ಪಾಡು ಜಯಶೀಲವಾದರೆ ವಿದ್ಯಾವಂತರಲ್ಲದ ರೈತರು ಸುಧಾರಿಸಿದ ಕೃಷಿ ವಿಧಾನಗಳನ್ನು ಕೈಕೊಳ್ಳಲು ಅನುಕೂಲಪಡಿಸಿಕೊಟ್ಟಂತಾಗುವದಲ್ಲದೆ, ವಿದ್ಯಾವಂತರಾಗಿ ಉದ್ಯೋಗವಿಲ್ಲದೆ ಅಲೆದಾಡುತ್ತಿರುವ ಯುವಕ ಸಮೂಹಕ್ಕೆ ವ್ಯವಸಾಯದಲ್ಲಿ ಅಭಿರುಚಿ ಹುಟ್ಟಿ ಅದರಿಂದ ಪ್ರಯೋಜನ ಪಡೆಸುವಂತೆ ಮಾಡಿದಂತೆಯೂ ಆಗುವುದು.

ವ್ಯವಸಾಯಕ್ಕೆ ಉತ್ತೇಜನ ಕೊಡಲು ಇನ್ನೊಂದು ಏರ್ಪಾಡನ್ನು ಅಲ್ಲಿಯ ಸರ್ಕಾರವು ಕೈಕೊಳ್ಳಲೆತ್ನಿಸುತ್ತಿರುವುದು ಸಂತೋಷಕರವೇ. ಒಳ್ಳೇ ಲಾಭಕರವಾದ ಕಬ್ಬಿನ ವ್ಯವಸಾಯದಲ್ಲಿ ಜನರಿಗೆ ಉತ್ಸಾಹವುಂಟಾಗುವಂತೆ ಮಾಡಲು ಅದನ್ನು ಬೆಳೆಸಲು ಬೇಕಾದ ದ್ರವ್ಯ ಸಹಾಯವನ್ನು ಸರ್ಕಾರದವರು ಕೊಡುವುದಲ್ಲದೆ, ಆ ಬೆಳೆಯನ್ನೆಲ್ಲಾ ಸರ್ಕಾರದವರೇ ಕೊಂಡುಕೊಂಡು, ಅದರ ರಸದಿಂದ ಬೆಲ್ಲವನ್ನು ಮಾಡಿಸುವ ಏರ್ಪಾಡಿನ ಆಲೋಚನೆಯಲ್ಲಿರುವರಂತೆ. ಬಡ ರೈತರ ಉತ್ಪತ್ತಿಯನ್ನು ಹೆಚ್ಚಿಸಲು ಅನುಕೂಲವಾಗುವ ಇಂಥಾ ಏರ್ಪಾಡುಗಳನ್ನು ಸರ್ಕಾರದವರು ಎಷ್ಟು ಬೇಗನೆ ಜಾರಿಗೆ ತರುವರೋ ಅಷ್ಟೇ ಪ್ರಯೋಜನವಾಗುವದೆಂಬುದರಲ್ಲಿ ಸಂಶಯವಿಲ್ಲ.

ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನೀಯುವ ಈಗಿನ ಆವಶ್ಯಕದ ಪ್ರಶ್ನೆಯನ್ನು ಮಹಾರಾಜರವರ ಸರ್ಕಾರದವರು ಮರೆಯದೆ ಇರುವುದು ಪ್ರಜೆಗಳ ಏಳಿಗೆಗೆ ಶುಭ ಸೂಚನೆಯಾಗಿದೆ. ಕಾಫಿ ಬೆಳೆಯು ಕೊಡಗಿನಂತೆಯೇ ಮೈಸೂರಿನಲ್ಲಿಯೂ ಒಂದು ಪ್ರಾಮುಖ್ಯ ಕೈಗಾರಿಕೆಯಾಗಿದೆ. ಯೂರೋಪಿಯನ್ ಕಂಪೆನಿಗಳಿಂದ ನಡಿಸಲ್ಪಡುತ್ತಿರುವ ಕಾಫಿತೋಟಗಳಲ್ಲದೆ ಬಾಕಿಯವುಗಳೆಲ್ಲವೂ ಸಾಧಾರಣವಾಗಿ ಚಿಕ್ಕ ಪ್ಲಾಂಟರುಗಳದಾಗಿವೆ. ವಾಡಿಕೆಯಾಗಿ ಇವರು ಸಾಕಷ್ಟು ಐಶ್ವರ್ಯವಂತರಾಗಿರುವುದಿಲ್ಲ. ಇವರಿಗೆ ಹಣದ ಅಡಚಣೆಯು ಮುಖ್ಯವಾಗಿ ಕಾಫಿಯ ಫಸಲು ಕಡಿಮೆಯಾದ ವರ್ಷಗಳಲ್ಲಿ ತುಂಬಾ ಇರುತ್ತದೆ. ಆದಕಾರಣ ಅವರು ಮುಂಗಡವಾಗಿಯೇ ತಮ್ಮ ಫಸಲನ್ನು ಬಹಳ ಕಮ್ಮಿ ಕ್ರಯಕ್ಕೆ ಮಾರಬೇಕಾಗುವದರಿಂದ ತುಂಬಾ ನಷ್ಟಕ್ಕೆ ಗುರಿಯಾಗುತ್ತಾರೆ. ಇಂಥಾ ವೇಳೆಯಲ್ಲಿ ಅವರಿಗೆ ಕಮ್ಮಿ ಬಡ್ಡಿಯ ಸಾಲವಾಗಿ ಹಣದ ಸಹಾಯ ದೊರೆತರೆ ಅವರ ಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ. ಇದಕ್ಕಾಗಿ ಮಲನಾಡಿನಲ್ಲಿ ಒಂದು ಕಾಫಿ ಬ್ಯಾಂಕನ್ನು ಸ್ಥಾಪಿಸುವ ವಿಷಯ ಸರ್ಕಾರದವರು ಆಲೋಚಿಸಿ, ಮಾಡಿರುವ ತೀರ್ಮಾನವನ್ನು ಈ ಕಾನ್‌ಫರೆನ್ಸಿನ ಮುಂದಿಟ್ಟಿರುವರು. ಸಭೆಯವರು ಅದನ್ನು ಮಂಜೂರು ಮಾಡದೆ ಇರಲಿಕ್ಕಿಲ್ಲವಾಗಿ ನಂಬುತ್ತೇವೆ.

ನಮ್ಮ ನೆರೆ ಪ್ರಾಂತ್ಯವಾದ ಮೈಸೂರು ಸಂಸ್ಥಾನದವರ ಕಷ್ಟ ಸುಖಗಳಿಗೂ ನಮ್ಮ ದೇಶದವರದವುಗಳಿಗೂ ಹೆಚ್ಚಿನ ಭೇದವೇನೂ ಇಲ್ಲ. ಆದರೆ ಮೈಸೂರು ಸರ್ಕಾರದವರು ಅಲ್ಲಿಯ ಪ್ರಜೆಗಳ ಏಳಿಗೆಗಾಗಿ ತಕ್ಕಷ್ಟು ಅನುಕೂಲಗಳನ್ನು ಕಲ್ಪಿಸಲು ಯತ್ನಿಸುತ್ತಿದ್ದಾರೆ. ನಮ್ಮ ಸರ್ಕಾರದವರಾದರೋ ಅಂಥಾ ವಿಷಯಗಳಿಗೇನೂ ಗಮನಕೊಡುವಂತೆ ಕಾಣುವುದಿಲ್ಲ. ಪ್ರಜಾ ಬಾಹ್ಯವಾದ ಸರ್ಕಾರವು, ದೊರೆತ ವಿನಹ ದೇಶಾಭಿವೃದ್ಧಿಯ ಕೆಲಸಗಳಿಗೆ ಸರ್ಕಾರದಿಂದ ದ್ರವ್ಯ ಸಹಾಯವು ದೊರೆಯುವುದೆಂದು ನಿರೀಕ್ಷಿಸುವುದು ವ್ಯರ್ಥವಲ್ಲವೇ?

ನಿಷಾ ನಿಷೇಧ.

'ಹಿಂದುಸ್ಥಾನ್' ರಿವ್ಯೂ ಎಂಬ ಮಾಸಿಕ ಪತ್ರಿಕೆಯಲ್ಲಿ ಮಿ. ಯಸ್ ಜಿ. ವಾರ್ಡೆ ಎಂಬವರು ಬರೆದ ಲೇಖನದ ಅಂಶಗಳು.

ನಿಷಾ ಸೇವನೆಯನ್ನು ಸಂಪೂರ್ಣವಾಗಿ ಮನ್ನೆ ಪಡಿಸಬೇಕೆಂಬ ತತ್ವದಲ್ಲಿ ಮತಭೇದವಿಲ್ಲ. ಹಿಂದೂಸ್ಥಾನದಲ್ಲಿರುವ ಆಂಗ್ಲೋ ಇಂಡಿಯನ್ ಜನರು ವಿನಹ ಇತರ ಎಲ್ಲಾ ಜನರೂ ನಿಷಾ ಸೇವನೆಯನ್ನು ಸಂಪೂರ್ಣವಾಗಿ ಬಿಡಬೇಕೆಂಬ ತತ್ವವನ್ನು ಸಂತೋಷದಿಂದ ಅಂಗೀಕರಿಸಿಕೊಳ್ಳುತ್ತಾರೆ. ಆಂಗ್ಲೋ ಇಂಡಿಯನ್ ಜನರಲ್ಲೂ ಕ್ರಿಶ್ಚಿಯನ್ ಮಿಶನರಿಗಳು ನಮ್ಮ ಸಂಗಡಲೇ ಇದ್ದಾರೆ, ಮಾತ್ರವಲ್ಲ, ನಮಗಾಗಿ ಯಾವ ಪಕ್ಷವನ್ನೂ ವಹಿಸದೆ ಒಲವಾಗಿ ಹೋರಾಡುತ್ತಿದ್ದಾರೆ. ಸರಕಾರವಾದರೋ "ಸಾಧ್ಯವಾದರೆ" ಸಂಪೂರ್ಣ ನಿಷೇಧಕ್ಕೆ ಒಪ್ಪಿಕೆ ಇದೆ. ಸರಕಾರಕ್ಕೂ ಪ್ರಜೆಗಳಿಗೂ ಈ ಬಾಬಿನಲ್ಲಿ ಇರುವ ವ್ಯತ್ಯಾಸವೇನೆಂದರೆ—"ಸಾಧ್ಯವಾದರೆ" ಎಂಬ ಮಾತುಗಳಿಗೆ ಸರಿಯಾದ ಅರ್ಥ ಏನು ಎಂಬದೇ ಆಗಿದೆ.

ಸಂಪೂರ್ಣ ನಿಷೇಧವೇ ಧ್ಯೇಯವಾಗಿ ಒಪ್ಪಿಕೊಳ್ಳುವದಾದರೆ ಒಂದು ಮುಖ್ಯ ವಿಷಯವನ್ನು ಯೋಚಿಸಬೇಕಾಗಿದೆ. ಸಂಪೂರ್ಣ ನಿಷೇಧ ತತ್ವವನ್ನು ಹಿಂದೂಸ್ಥಾನವೆಲ್ಲಾ ಒಟ್ಟಾಗಿ ಒಂದೇ ಸಾರಿ ಅಂಗೀಕರಿಸಬೇಕೋ ಅಥವ ಪ್ರಾಂತ್ಯ ಪ್ರಾಂತ್ಯವಾಗಿ ನಿಧಾನವಾಗಿ ಈ ತತ್ವವನ್ನು ಜಾರಿಗೆ ತರಬೇಕೋ? ಅಂದರೆ ನಿಷಾ ನಿಷೇಧವನ್ನು ಸಾಧಿಸಲು ಪ್ರಾಂತೀಕ ಸರಕಾರಗಳಿಗೆ ಬಿಡಬೇಕೋ ಅಥವಾ ಒಟ್ಟು ಹಿಂದುಸ್ಥಾನದಲ್ಲೆಲ್ಲಾ ಒಂದೇ ತರದ ಸುಧಾರಣೆಯಾಗುವಂತೆ ಅಖಿಲ ಹಿಂದುಸ್ಥಾನದ ಸರಕಾರವೇ ಈ ತತ್ವವನ್ನು ರಾಷ್ಟ್ರೀಯ ಧ್ಯೇಯವಾಗಿಟ್ಟುಕೊಂಡು ಆ ಧ್ಯೇಯವನ್ನು ಸಾಧಿಸಬೇಕೋ ಎಂಬದೇ ಪ್ರಶ್ನೆಯಾಗಿದೆ. ಯಾವ ದಾರಿಯು ಹೆಚ್ಚು ಅನುಕೂಲವಾಗುವಂಥಾದ್ದು, ಪ್ರಯೋಜನವಾಗುವಂಥಾದ್ದು, ಫಲಕಾರಿಯಾಗುವಂಥಾದ್ದು, ಸುಲಭವಾದದ್ದು ಎಂತ ಯೋಚಿಸಬೇಕಾಗಿದೆ. ನಿಷಾ ಸೇವನೆಯು ಸಂಪೂರ್ಣ ಮನ್ನವು ಕ್ರಮಕ್ರಮವಾಗಿ ಮೆಟ್ಟಲು ಮೆಟ್ಟಲಿಂದ ಅಂದರೆ ಮಿತಿಯಿಂದ ಕೊಡುವಿಕೆ, ಸ್ಥಳೀಕ ಸ್ವಾತಂತ್ರ್ಯ ಇತ್ಯಾದಿ ರೀತಿಗಳಿಂದ ಸಾಧಿಸಬೇಕೋ ಅಥವಾ ಒಂದೇ ಸಾರಿ ಕೂಡಲೇ ಈ ತತ್ವವನ್ನು ಜಾರಿಗೆ ತರಬೇಕೋ ಎಂಬ ಸವಾಲುಗಳನ್ನು ಲೇಖನದಲ್ಲಿ ಚರ್ಚಿಸಿ, ಇಂಡಿಯಾ ಸರ್ಕಾರವೇ ಒಟ್ಟು ಹಿಂದುಸ್ಥಾನಕ್ಕೆಲ್ಲಾ ವ್ಯಾಪಕವಾಗುವಂತೆ ಈ ತತ್ವವನ್ನನುಸರಿಸಬೇಕೆಂತ ಅಭಿಪ್ರಾಯ ಕೊಟ್ಟು, ಜಾರಿಗೆ ತರುವ ವಿಧಾನವನ್ನು ಈ ಕೆಳಗಿನಂತೆ ಚರ್ಚಿಸಿದ್ದಾರೆ.

ನಿಷಾ ಪದಾರ್ಥದ ಸಂಪೂರ್ಣ ಮನ್ನದಿಂದ ಪ್ರಾಂತೀಕ ಸರಕಾರಗಳಿಗೆ ಎಕ್ಸೈಸ್ ರೆವಿನ್ಯೂ ಇಲ್ಲವಾಗುತ್ತದೆ. ಇಂಡಿಯಾ ಸರಕಾರಕ್ಕೆ ಪರದೇಶೀ ಮಾದಕ ಪದಾರ್ಥಗಳಿಗೆ ಹಾಕುವ ಕಷ್ಟಮ್ಸ್ ರೆವಿನ್ಯೂ ಇಲ್ಲದಾಗುತ್ತದೆ. ಮತ್ತು ಸಂಪೂರ್ಣ ಮನ್ನದ ಕಾನೂನಿಗೆ ಜನರು ವಿರೋಧವಾಗಿ ನಡಿಯದಂತೆ ನೋಡಿಕೊಳ್ಳಲು ಬೇಕಾದ ಸಿಬ್ಬಂದಿಗೆ ಖರ್ಚು ಹೆಚ್ಚಾಗುತ್ತದೆ. ಎಕ್ಸೈಸ್ ಮತ್ತು ಕಷ್ಟಮ್ಸ್ ಉತ್ಪತ್ತಿಗಳನ್ನು ಹೇಗಾದರೂ ಕಳಕೊಳ್ಳಲೇ ಬೇಕು. ನಿಷಾನಿಷೇಧವನ್ನು ಸಾಧಿಸಲು ಮಾಡಬೇಕಾದ ಹೆಚ್ಚಿನ ಖರ್ಚನ್ನು ವಿಧವಿಧದ ಉಪಾಯದಿಂದ ಸಾಧಿಸಿಕೊಳ್ಳಬಹುದು. ಪ್ರಾಂತೀಕ ಸರಕಾರಗಳು ಬೇರೆ ಬೇರೆಯಾಗಿ ನಿಷಾ ನಿಷೇಧದ ಕಾರ್ಯವನ್ನು ಕೈಕೊಂಡರೆ ಖರ್ಚು ಹೆಚ್ಚಾಗುತ್ತದೆ. ಇಂಡಿಯಾ ಸರಕಾರವೇ ಕೈಕೊಂಡರೆ ಖರ್ಚು ಕಡಿಮೆಯಾಗುತ್ತದೆ. ಇಂಡಿಯಾ ಸರಕಾರವೇ ಸಂಪೂರ್ಣ ನಿಷೇಧ ತತ್ವವನ್ನು ಕೈಕೊಂಡರೆ ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಕಳ್ಳತನದಿಂದ ಸಾಗಿಸುವದನ್ನು ನಿಲ್ಲಿಸಲು ಬೇಕಾದ ಖರ್ಚು ಉಳಿಯುತ್ತದೆ. ಆದ್ದರಿಂದ ಪ್ರಾಂತೀಕ ಸರಕಾರಗಳಿಗೆ ಈ ತತ್ವವನ್ನು ಅಂಗೀಕರಿಸಿಕೊಳ್ಳಲು ಬಿಡದೆ ಇಂಡಿಯಾ ಸರ್ಕಾರವೇ ಒಟ್ಟು ಹಿಂದುಸ್ಥಾನಕ್ಕೆಲ್ಲಾ ವ್ಯಾಪಕವಾಗುವಂತೆ ಒಂದೇ ಸಾರಿ ಈ ತತ್ವವನ್ನು ಜಾರಿಗೆ ತರಬೇಕು.

ಸಂಪೂರ್ಣ ನಿಷೇಧವು ನಿಧಾನವಾಗಿ ಕ್ರಮಕ್ರಮವಾಗಿ ಬರಬೇಕೋ ಅಥವಾ ಕೂಡಲೇ ತಡವಿಲ್ಲದೆ ಬರಬೇಕೋ ಎಂಬದು ಇನ್ನೊಂದು ಮುಖ್ಯ ವಿಷಯವಲ್ಲ. ನೈತಿಕ ದೃಷ್ಟಿಯಿಂದ ನೋಡುವ ಉತ್ಸಾಹಿಗಳು ತಡಮಾಡದೆ ಕೂಡಲೇ ಸಂಪೂರ್ಣವಾಗಿ ನಿಷಾಸೇವನೆಯು ಮನ್ನವಾಗಬೇಕೆನ್ನುತ್ತಾರೆ. ಕಾರ್ಯತಃ ಸಾಧಿಸುವದರಲ್ಲಿ ಇರುವ ಕಷ್ಟವನ್ನರಿತವರು ಕ್ರಮಕ್ರಮವಾಗಿ ನಿಧಾನವಾಗಿ ಬಂದರೆ ಸಾಕೆಂತ ಹೇಳುತ್ತಾರೆ. ಈಗ ಇರುವ ಸರಕಾರದ ಖರ್ಚುಗಳನ್ನು ಸಂಪೂರ್ಣ ನಿಷಾ ನಿಷೇಧದಿಂದ ಆಗುವ ಕಡಿಮೆ ಉತ್ಪತ್ತಿಗೆ ಸರಿಯಾಗಿ ಮಾಡಿಕೊಳ್ಳಲು ಸ್ವಲ್ಪ ಸಮಯ ಬೇಕಾಗುತ್ತದೆ. ಕ್ರಮಕ್ರಮವಾಗಿ ಸಾಧಿಸುವದಾದರೆ ಮಿತಿಯಿಂದ ಮಾರುವುದು, ಸ್ಥಳೀಕ ಸ್ವಾತಂತ್ರ್ಯ ಮುಂತಾದ ಕ್ರಮಗಳನ್ನು ಅನುಸರಿಸಬೇಕು. ಹೇಗೂ 20 ವರ್ಷಗಳೊಳಗೆ ನಿಷಾಸೇವನೆಯು ಮನ್ನವಾಗಬೇಕೆಂಬದರಲ್ಲಿ ಏಕಮತವಿದೆ. ಇಷ್ಟು ಕಾಲದಲ್ಲಿ ಆದಾಯವೆಚ್ಚವನ್ನು ಸರಿಪಡಿಸಿಕೊಳ್ಳಲಿಕ್ಕೂ ಇನ್ನೂ ಇತರ ತೊಂದರೆಗಳಿಂದ ಬಿಡುಗಡೆ ಮಾಡಿಕೊಳ್ಳಲಿಕ್ಕೂ ಬೇಕಾದಷ್ಟು ಸಮಯವಿರುತ್ತದೆ.

"ಮೋಡರ್ನ್ ರಿವ್ಯೂ'

ಏಶಿಯಾ ಖಂಡದ ಭವಿತವ್ಯತೆ.

ಏಶಿಯಾಖಂಡದ ನಕಾಶದ ಕಡೆಗೆ ದೃಷ್ಟಿಯನ್ನು ಹೊರಳಿಸಿದರೆ ನಮಗೆ ಅನೇಕ ರಂಗಬೇರಂಗಗಳು ಕಂಡುಬರುವವು. ಜಪಾನದ ಹೊರತಾಗಿ ಉಳಿದ ಯಾವ ದೇಶಗಳು ಸಂಪೂರ್ಣ ಸ್ವತಂತ್ರವಾಗಿರುವದಿಲ್ಲ. ಅಲ್ಲದೆ ಪಾರತಂತ್ರ್ಯದ ನರಕದಲ್ಲಿ ಕೊಳೆಯುತ್ತ ಬಿದ್ದಿರುವವು. ಚೀನವು ಸ್ವತಂತ್ರವಿದ್ದರೂ ಸಂಪೂರ್ಣ ಸ್ವತಂತ್ರ್ಯವು ಇದಕ್ಕೆ ದೊರೆತಿರುವದಿಲ್ಲ. ಸಯಾಮವೂ ಸ್ವತಂತ್ರವಿದೆ. ಆದರೆ ಹೆಸರಿಗೆ ಮಾತ್ರ. ಒಟ್ಟಿಗೆ ೨–೩ ದೇಶಗಳನ್ನು ಬಿಟ್ಟರೆ ಸ್ವಾತಂತ್ರ್ಯದ ಸುಳಿವು ಏಶಿಯಾಖಂಡದಲ್ಲಿ ಎಲ್ಲೆಲ್ಲಿಯೂ ಕಂಡು ಬರುವದಿಲ್ಲ. ಹಿಂದುಸ್ಥಾನ, ಮಲಾಯಾ, ಸಿಲೋನ, ಬೃಹತ್ತ ದೇಶ ಇಂಡೋಚಾಯನಾ, ಜಾವಾ, ಸುಮಾತ್ರಾ, ಬೋರ್ನಿಯೋ, ಗಿನ್ಯಾ, ಫಿಲಿಪಾಯಿನ್ಸ್, ಕೋರಿಯಾ, ಸೈಬೀರಿಯ ...

ಸ್ವರಾಜ್ಯಕ್ಕೆ ಎರವಾದ ಪೂರ್ವಕಡೆಯ ದೇಶಗಳು. ಇನ್ನು ಪಶ್ಚಿಮ ಕಡೆಯ ದೇಶಗಳೆಂದರೆ ಕೇರೋದಿಂದ ಬಲುಚಿಸ್ಥಾನದ ವರೆಗೆ ಗುಲಾಮಗಿರಿಯಲ್ಲಿ ಕೊಳಲಾಡುತ್ತಿರುವವು. ಈ ಎಲ್ಲ ದೇಶಗಳಿಗೆ ಈಗ ಸ್ವಾತಂತ್ರ್ಯದ ಹಸಿವು ಆಗಿದ್ದು ಇವು ಇದರ ಸಲುವಾಗಿ ಪ್ರಬಲ ಪ್ರಯತ್ನ ನಡಿಸಿರುವವು.

ಪೌರ್ವಾತ್ಯ ರಾಷ್ಟ್ರಗಳಿಗೀಗ ಕೆಂಪು ಜನರ ರಾಜಕಾರಣದ ಬಗ್ಗೆ ಒಕರಿಕೆ ಬಂದಿರುವದು. ಇದೂ ಅಲ್ಲದೆ ಕೆಂಪು ಜನರ ಔದ್ಯೋಗಿಕ ಧಾರ್ಮಿಕ, ಸಾಮಾಜಿಕ ವರ್ಚಸ್ಸವು ಈ ದೇಶಗಳಿಗೆ ಸಹನವಾಗದಾಗಿದೆ. ಮಹಾಯುದ್ಧದ ಸಮಾಪ್ತಿಯಿಂದ ಎಲ್ಲ ದೇಶದ ಕಣ್ಣುಗಳು ತೆರೆಯಲ್ಪಟ್ಟಿದ್ದು ಇವು ಸದ್ಯಃ ಆತ್ಮನಿರೀಕ್ಷಣೆಯನ್ನು ಮಾಡುತ್ತಿರುವವು. ಕೆಂಪು ಜನರ ಜುಲುಮೆಯನ್ನು ನಾವು ಎಲ್ಲಿಯ ವರೆಗೆ ಮತ್ತು ಯಾಕೆ ಸಹನ ಮಾಡಬೇಕೆಂದು ಪ್ರತಿಯೊಂದು ರಾಷ್ಟ್ರವು ಪ್ರಶ್ನೆ ಕೇಳುತ್ತಿರುವದು. ಜಪಾನವು ಸ್ವತಂತ್ರ ರಾಷ್ಟ್ರವೆಂದು ನಾವು ಅನ್ನುತ್ತೇವೆ. ಆದರೆ ಇದಕ್ಕೆ ಈ ಬಗ್ಗೆ ಅನುಮಾನ ಹುಟ್ಟಿರುವದು. ಮಹಾಯುದ್ಧವು ಮುಗಿದಕೂಡಲೆ ಬ್ರಿಟಿಷರು ಆಂಗ್ಲೋ ಜಪಾನಿ ಒಪ್ಪಂದವನ್ನು ರದ್ದುಪಡಿಸಿದಲ್ಲದೆ ಸಿಂಗಾಪುರದಲ್ಲಿ ದೊಡ್ಡ ಸೇನೆಯನ್ನು ಸ್ಥಾಪಿಸಿದರು. ಈ ಸಂಗತಿಯು ಜಪಾನದ ಹೃದಯದಲ್ಲಿ ಕಳವಳವನ್ನುಂಟುಮಾಡಿದೆ. ಎಲ್ಲ ಯುರೋಪಿಯನ್ ರಾಷ್ಟ್ರಗಳು ಸ್ವತಂತ್ರವಿರುವವು. ಆದರೆ ಏಶಿಯಾಖಂಡದ ಸ್ಥಿತಿಯು ಹಾಗಿರುವದಿಲ್ಲ. ಹೀಗಾಗಿ ಒಂದು ರೀತಿಯಿಂದ ಜಪಾನದ ಟೊಂಕು ಮುರಿದಂತಾಗಿರುವದು. ಇದ್ದರಿಂದಲೇ ಅಮೇರಿಕಾ ದೇಶದವರು ಜಪಾನಿ ಜನರನ್ನು ತಮ್ಮ ರಾಜ್ಯದಲ್ಲಿ ಅಸ್ಪೃಶ್ಯರೆಂದು ಭಾವಿಸುತ್ತಾರೆ. ಜಪಾನಿ ಜನರು ಅಮೇರಿಕಾದಲ್ಲಿ ವಾಸ ಮಾಡುವಾಗ ಅಮೇರಿಕೆಯು ಯಾವಾಗಲೂ ಎಚ್ಚರಪಡುತ್ತದೆ. ಎಲ್ಲ ಏಶಿಯಾಖಂಡವು ಸ್ವತಂತ್ರವಿದ್ದರೆ ಜಪಾನದ ಮೇಲೆ ಈ ತರದ ಪ್ರಸಂಗವು ಎಂದಿಗೂ ಬರುತ್ತಿರಲಿಲ್ಲ. ಜಪಾನವು ಈ ವರೆಗೆ ಮೂಕನಾಗಿದ್ದಾದರೂ ಏಶಿಯಾಖಂಡದ ದೇಶಗಳೊಂದಿಗೆ ಇದು ಸ್ನೇಹವನ್ನು ಬೆಳಿಸದಿರುವದು ಅತ್ಯಂತ ವಿಷಾದಕರದ ಸಂಗತಿಯಾಗಿದೆ. ಆದರೆ ಇಂದಿಲ್ಲ ನಾಳೆ ಜಪಾನವು ತನ್ನ ದೃಷ್ಟಿಯನ್ನು ಏಶಿಯಾಖಂಡದ ಕಡೆಗೆ ಹೊರಳಿಸಬೇಕಾಗುವದೆಂಬುದು ನಿರ್ವಿವಾದವು.

ಚೀನವು ಪರಕೀಯರ ದವಡೆಯೊಳಗಿಂದ ಬಿಡುಗಡೆಯಾಗಬೇಕೆಂದು ಪ್ರತಿಜ್ಞೆಯನ್ನು ತೊಟ್ಟಿತ್ತು. ಮತ್ತು ಈ ಪ್ರತಿಜ್ಞೆಯನ್ನು ಇದು ನಿಜವಾಗಿ ನಡಿಸಿರುವದು. ಶಿಕ್ಷಣ, ರಾಜಕಾರಣ, ಧರ್ಮ, ಉದ್ಯೋಗ, ಧಂದೆ ಮುಂತಾದ ವಿಷಯಗಳಲ್ಲಿ ತಾವು ಪಾಶ್ಚಾತ್ಯರಿಗಿಂತ ಹೆಚ್ಚಿನವರಿರುವರೆಂಬ ಭಾವನೆಯು ತರುಣರಲ್ಲಿ ಉಪ್ಪಮೂಡಿ ಇದು ಇವರನ್ನು ಸ್ವರಾಜ್ಯ ಯುದ್ಧಕ್ಕೆ ಮುಂದೆಳೆಯಿತು. ಮತ್ತು ಈ ಸತ್ಕಾರ್ಯದಲ್ಲಿ ಚೀನವು ಮೇಲುಗೈಯನ್ನು ಪಡೆಯಿತು. ಇಷ್ಟಾದರೂ ಚೀನವು ಇನ್ನೂ ಸಂಪೂರ್ಣ ಸ್ವತಂತ್ರವಾಗಿರುವದಿಲ್ಲ. ಇದು ಸಂಪೂರ್ಣ ಸ್ವಾತಂತ್ರ್ಯದ ಸಲುವಾಗಿ ತನ್ನ ಶಕ್ತಿಮೀರಿ ಸಾಹಸಪಡುತ್ತಿರುವದು.

ಫಿಲಿಫಾಯಿನ್ಸನ್ನು ಅಮೇರಿಕೆಯವರು ಅಧರ್ಮದಿಂದ ಗುಲಾಮಗಿರಿಯಲ್ಲಿ ಇಟ್ಟಿರುವರೆಂದು ಸರ್ವಶ್ರುತವಿದೆ. ಈ ದೇಶದ ಜನರು ಅಮೇರಿಕೆಯವರೊಂದಿಗೆ ಬಹಿರಂಗವಾಗಿ ಯುದ್ಧಕ್ಕೆ ನಿಲ್ಲದಿದ್ದರೂ ಯುದ್ಧದ ತಯಾರಿ ನಡಿಸಿರುವರೆಂಬುದು ಅವರ ದಿನ ಮಾತಿನಿಂದ ತಿಳಿಯುತ್ತದೆ. ಸೆನೇಟದ ಅಧ್ಯಕ್ಷರು ಒಂದೆಡೆಯಲ್ಲಿ ಅಂದದ್ದೇನಂದರೆ — We would rather be governed like hell and do it ourselves than like heaven and have it done.

ಇನ್ನು ಇಂಡೋಚಾಯಿನಾದಲ್ಲಿಯೂ ಫ್ರೆಂಚರ ವಿರುದ್ಧ ಸ್ವಾತಂತ್ರ್ಯಗಾಳಿಯು ಬೀಸುತ್ತಿರುವದು.

ಸಯಾಮವೂ ಸ್ವಾವಲಂಬಿ ಯುದ್ಧದಲ್ಲಿ ಸೇರ್ಪಡೆಯಾಗಿರುವದು. ಈ ರಾಜ್ಯದಲ್ಲಿ ಈಗ ಸ್ವಕೀಯ ಜನರೇ ಅಧಿಕಾರಾರೂಢರಾಗಿರುವರು. ಪರಕೀಯ ಜನರಿಗೆ ದೊರೆಯುತ್ತಿದ್ದ ಮಾನವು ಈಗ ದೊರೆಯದಾಗಿರುವದು. ಶಿಕ್ಷಣ ಪದ್ಧತಿ ಶಿಕ್ಷಣವು ಅಸಲಿನಲ್ಲಿ ಬಂದಿರುವದು.

ಪೆನಾಂಗದ ಮಾತೂ ಅಸಂದವನ್ನುಂಟುಮಾಡದೆ ಇರಲಾರದು. ಪರಕೀಯರ ಹಸ್ತದೊಳಗಿನ ರಾಜ್ಯಕಾರಭಾರವು ಈಗ ಕಸಿದುಕೊಳ್ಳಲ್ಪಟ್ಟಿದೆ. ಸಿಂಗಾಪುರವು ಬ್ರಿಟಿಷರ ತಾಣೆಯಾಗಿದ್ದರೂ ಇಲ್ಲಿಯ ಜನರಿಗೆ ಬ್ರಿಟಿಷ ಜನರ ಬಗ್ಗೆ ಆದರ ಹುಟ್ಟುವದಿಲ್ಲ. ಇಲ್ಲಿಯ ಜನರು ತಮ್ಮ ಸ್ವಂತ ಮಾಲುಗಳನ್ನೇ ಹೆಚ್ಚಾಗಿ ಕೊಳ್ಳುವರು.

ಅನಂತರ ನಾವು ಜಾವಾ ಮೊದಲಾದ ಡಚ್ಚ ದೇಶಗಳ ಕಡೆಗೆ ಲಕ್ಷ್ಯಪೂರೈಸಿದರೂ ಇಲ್ಲಿಯೂ ಭಯಂಕರ ಅಸಂತೋಷವು ಪ್ರಸರಿಸಿರುವದಾಗಿ ಕಂಡುಬರುವದು. ಇಲ್ಲಿ ಅಸ್ವಸ್ಥತೆಯು ಬೇಗ ಹತ್ತಿದೆ. ಇದನ್ನು ಹೇಗೆ ನಂದಿಸಬೇಕೆಂಬುದು ಅಧಿಕಾರಿಗಳಿಗೆ ಹೊಳೆಯದಾಗಿದೆ.

ಬ್ರಹ್ಮದೇಶ, ಹಿಂದುಸ್ಥಾನ, ಸಿಲೋನ ಮೊದಲಾದ ದೇಶಗಳಲ್ಲಿ ಯಾವ ಯಾವ ತರದ ಚಳವಳಿಗಳು ನಡೆದಿರುವವೆಂಬುದು ಪ್ರತಿಯೊಬ್ಬರಿಗೆ ಅವಗತವಾದ ವಿಷಯವಾಗಿದೆ. ಇದರಂತೆಯೇ ಈಜಿಪ್ತ, ತುರ್ಕಸ್ಥಾನ, ಅಫಗಾನಿಸ್ಥಾನ ಮೊದಲಾದ ದೇಶಗಳಾದರೂ ನಿಜವಾದ ಸ್ವಾತಂತ್ರ್ಯದ ಸಲುವಾಗಿ ಹೇಗೆ ಹಸಿದುಗೊಂಡಿರುವವೆಂಬುದು ಕಾಣಿಸುತ್ತಿರುವದು. ಏಶಿಯಾಖಂಡದ ಈ ಎಲ್ಲ ಚಳವಳಿಗಳಿಂದ ನಾವು ಭವಿಷತ್ಕಾಲದ ಬಗ್ಗೆ ನಿರಾಶರಾಗುವ ಕಾರಣವಿಲ್ಲ.

ಯಾವ ಕಾಲಕ್ಕೆ ಏಶಿಯಾಖಂಡವು ಗೆಲ್ಲಲ್ಪಟ್ಟಿತೋ ಆಗ ಬ್ರಿಟಿಷರು ಅನೇಕರ ದೃಷ್ಟಿಯಲ್ಲಿ ಅನೇಕ ಬಗೆಯಿಂದ ದೃಷ್ಟರಾದರು. ಕೆಲವರಿಗೆ ಇವರು ದೇವದೂತರೆಂದು ಕಂಡರು, ಕೆಲವರಿಗೆ ಇವರು ಮಹಾನ ಬುದ್ಧಿಶಾಲಿಗಳೆಂದು ತೋರಿದರು. ಕೆಲವರಿಗೆ ಇವರ ಸಮಾಜ ರಚನೆಯು ನಿರ್ದೋಷವೆಂದು ಹೊಳೆಯಿತು. ಕೆಲವರಿಗೆ ಇವರ ನೀತಿ ಮತ್ತವು ಮಿಗಿಲಾದದ್ದೆಂದು ಭಾಸವಾಯಿತು. ಕೆಲವರಿಗೆ ಇವರ ವಿಪ್ಲವ ಮನಸ್ಸಿಗೆ ಬಂದಿತು. ಇನ್ನು ಕೆಲವರಿಗೆ ಇವರ ಶೌರ್ಯ, ಧೈರ್ಯ, ಪರಾಕ್ರಮಗಳು ಮನಸ್ಸಿಗೆ ಬಂದವು. ಈಗ ಇವೇ ಸಂಗತಿಗಳು ಏಶಿಯಾಖಂಡದ ಜನರಿಗೆ ವಿಪರೀತವಾಗಿ ಕಾಣುತ್ತಿರುವವು.

ಪಾಶ್ಚಾತ್ಯರು ಏಶಿಯಾಖಂಡವನ್ನು ಗೆದ್ದುದು ಕೇವಲ ಸ್ವಾರ್ಥದ ಸಲುವಾಗಿ ಎಂದು ಈಗೀಗ ಜನರಿಗೆ ಮನವರಿಕೆಯಾಗುತ್ತಿರುವದು. ನಮ್ಮ ಸಂಗಡ ಅನಿರ್ಬಂಧ ವ್ಯಾಪಾರ ನಡಿಸುವದೇ ಇವರು ರಾಜ್ಯ ಗೆದ್ದುದರ ಮುಖ್ಯ ಕಾರಣವಾಗಿರುವದು. ಮತ್ತು ಈ ತಮ್ಮ ರಾಜ್ಯವನ್ನು ಉಳಿಸಿಕೊಳ್ಳುವದರ ಸಲುವಾಗಿ ಸೇನೆ ಇಡಲ್ಪಟ್ಟಿರುತ್ತದಲ್ಲದೆ ಬೇರೆ ಕಾರಣವಿರಬೇಕಾಗಿಯಲ್ಲ. ಇದೇ ಕಾರಣದ ಸಲುವಾಗಿ ಇಂದು ಏಶಿಯಾಖಂಡದಲ್ಲಿ ಪ್ರತಿಸ್ಪರ್ಧಿಗಳಿಗೆ ಯೋಗ್ಯ ರೀತಿಯಿಂದ ಪ್ರತ್ಯುತ್ತರ ಕೊಡುವ ಪ್ರಯತ್ನವು ಸ್ವದೇಶಿ ಚಳವಳಿಯ ಮೂಲಕ ಉತ್ತಮ ರೀತಿಯಿಂದ ನಡೆದಿರುವದು.

ಪಾಶ್ಚಾತ್ಯರ ಶಸ್ತ್ರಾಸ್ತ್ರಗಳಿಗೆ ಭಯಬೀತರಾಗುವ ದಿವಸಗಳು ಈಗ ಹೊರಟು ಹೋಗಿರುವವು. ಲೋಕಮತವನ್ನು ಧಿಕ್ಕರಿಸಿ ಮನಬಂದಂತೆ ಮುಂದೆ ಸಾಗುವದು ಈಗ ... ಕೊಡದು. ... ನವ ದೇಶ ಹೊಸದಾಗಿ ... ತಮ್ಮ ... ರಾಜ್ಯವಾಳುವಂತಿದ್ದರೇನೇ ಪಾಶ್ಚಾತ್ಯರು ಇನ್ನೂ ಸಾವಿರ ವರ್ಷ ತಮ್ಮ ರಾಜ್ಯಶಕಟವನ್ನು ಮುಂದುವರಿಸುವ ಸಂಭವವಿರುವದು. ಈ ವಿಷಯದಲ್ಲಿ ಚೀನ ದೇಶವು ಕೊಟ್ಟ ಉತ್ತರವು ನೆನಪಿನಲ್ಲಿಡತಕ್ಕಂಥದ್ದಾಗಿದೆ —

'Understand that with the appearance of every foreign gunboat in our Chinese ports, a thousand youths will flock to the banner of the Nationalist armies. Let the whole world realise that the illegal standing of every foreign battalion on our soil will be a challenge to Chinese legions to rise and drive the foreigner into the sea.'

'ನವಜೀವನ'

ವ್ಯಾಧಿಗಳ ಮೇಲೆ ಸಾರಾಯಿಯ ಪರಿಣಾಮಗಳು.

ಸುಮಾರು ಅರ್ಧ ಶತಮಾನಗಳ ಹಿಂದೆ ಮಾದಕ ದ್ರವ್ಯಗಳು ಬಲವರ್ಧಕಗಳೆಂದೂ, ಉತ್ತೇಜಕ ಪದಾರ್ಥಗಳೆಂದೂ ವೈದ್ಯರು ಹೇಳುತ್ತಿದ್ದುದಲ್ಲದೆ, ಅದೇ ರೀತಿಯಾಗಿ ತಮ್ಮ ಪುಸ್ತಕಗಳಲ್ಲಿ ಬರೆಯುತ್ತಿದ್ದರು. ಹಾರ್ಟ್‌ಫರ್ಡ್ ಎಂಬ ಪ್ರದೇಶದಲ್ಲಿರುವ ವಾಲ್‌ನಟ್ ಲಾಡ್ಜ್ ಆಸ್ಪತ್ರೆಯ ಸುಪರಿಂಟೆಂಡೆಂಟರಾದ ಡಾಕ್ಟರ್ ಟಿ. ಡಿ. ಕ್ರೋಧರ್ಸ್ ಎಂಬವರು, ಮಾದಕ ದ್ರವ್ಯಗಳಲ್ಲಿ ಜನಗಳಿಗೆ "ಗುಣ ಭ್ರಾಂತಿ" ಎಂಬ ವಿಷಯದ ಮೇಲೆ ಒಂದು ಲೇಖನವನ್ನು ಬರೆದು ಅದರಲ್ಲಿ ಹೀಗೆ ಹೇಳುವರು. 'ಹಿಂದಿನ ಕಾಲದಲ್ಲಿ ವಿಷಮ ಶೀತಜ್ವರದ ನಿವಾರಣೆಗೆ ಹೃದಯದಲ್ಲಿ ಸಾರಾಯಿಯ ಉದ್ರೇಕವು ಗುಣಕಾರಿಯೆಂಬ ನಂಬಿಕೆಯಿದ್ದಿತು. ಆದರೆ ಇವುಗಳನ್ನು ಉಪಯೋಗಿಸಿದ ಸ್ಥಳಗಳಲ್ಲೆಲ್ಲ ಮರಣ ಸಂಖ್ಯೆಯು ಹೆಚ್ಚಿದಂತೆ ತೋರಿತು. ಪೂರ್ವೋತ್ತರ ವಿಚಾರಗಳನ್ನು ಪರಿಶೀಲಿಸಿ, ಸಾರಾಯಿಯನ್ನು ಉದ್ರೇಕ ಪದಾರ್ಥವಾಗಿಯಾಗಲೀ, ಬಲವರ್ಧಕ ಪದಾರ್ಥವಾಗಿಯಾಗಲೀ ಉಪಯೋಗಿಸಕೂಡದೆಂದು ಈಗಿನ ವೈದ್ಯ ಗ್ರಂಥಗಳು ಹೇಳುತ್ತಿವೆ.

ಡಿಫ್ತೀರಿಯಾ ಎಂಬ ಕಂಠ ರೋಗದಲ್ಲಿ ಕ್ರಿಮಿನಾಶಕ್ಕಾಗಿಯೂ, ಹೃದಯಕ್ಕೆ ಬಲವನ್ನು ಕೊಡುವುದಕ್ಕಾಗಿಯೂ ಸಾರಾಯಿಯನ್ನು ಉಪಯೋಗಿಸುವುದಕ್ಕೆ ಪ್ರಾರಂಭಿಸಿದ ಮೇಲೆ ಅದರಿಂದ ಮರಣ ಸಂಖ್ಯೆಯೂ ಇತರ ರೋಗಗಳೂ ಹುಟ್ಟಿ ವಿಪರೀತ ಅನರ್ಥಗಳಿಗೆ ಕಾರಣವಾಯಿತು. ಕ್ಷಯರೋಗದ ವಿಚಾರದಲ್ಲಿಯೂ ಇದರ ಉಪಯೋಗದಿಂದ ಹೀಗೆಯೇ ಮೊದಲಿನಂತ ಶೀಘ್ರ ಮರಣಕ್ಕೆ ಕಾರಣವಾಯಿತು. ಮತ್ತು ಪ್ರಾರಂಭದಲ್ಲೇ ವ್ಯಾಧಿಯು ಬಲವಾಗಿ ಕಾಣಿಸಿಕೊಳ್ಳುವುದಕ್ಕೆ ಮೊದಲಾಯಿತು. ಕೆಲವು ಕಾಲ ಸ್ವಲ್ಪ ಗುಣವಾದಂತೆ ತೋರಿದರೂ ಅತಿ ಶೀಘ್ರದಲ್ಲಿ ಮನುಷ್ಯನನ್ನು ಕೊಂದಿತು.

೧೯೦೭ನೆಯ ಇಸವಿಯಲ್ಲಿ ಇಂಗ್ಲೆಂಡಿನ ೬೦ ದೊಡ್ಡ ಆಸ್ಪತ್ರೆಗಳು ಸಾರಾಯಿಗಾಗಿ ೧೭,೪೦೦ ರೂಪಾಯಿಗಳನ್ನು ವೆಚ್ಚಮಾಡಿದವು. ೧೯೦೨ನೇ ಇಸವಿಯಲ್ಲಿ ಇದೇ ಆಸ್ಪತ್ರೆಗಳು ೧,೧೧೭೬ ರೂಪಾಯಿಗಳನ್ನು ಸಾರಾಯಿಗಾಗಿಯೂ ೧,೫೧೮ ರೂಪಾಯಿಗಳನ್ನು ಹಾಲಿಗಾಗಿಯೂ ಉಪಯೋಗಿಸಿದುವು. ಚಿಕಿತ್ಸೆಗಾಗಿ ಬಂದವರ ಸಂಖ್ಯೆಯು ಮಾತ್ರ ಎರಡು ಸಂದರ್ಭಗಳಲ್ಲಿಯೂ ಹೆಚ್ಚು ಕಡಿಮೆ ಒಂದೇ.

ಶರೀರಾರೋಗ್ಯವನ್ನೂ, ಶಕ್ತಿಯನ್ನೂ ಕೆಡಿಸುವ ಸ್ವಭಾವವುಳ್ಳ ಇಂತಹ ಪದಾರ್ಥಕ್ಕೆ ರೋಗಿಗಳನ್ನು ಗುಣಪಡಿಸುವ ಶಕ್ತಿಯಾಗಲಿ, ಬಲಹೀನರಿಗೆ ಶಕ್ತಿಯನ್ನು ಕೊಡುವ ಸ್ವಭಾವವಾಗಲಿ ಇಲ್ಲವೆಂಬುದನ್ನು ತಿರುಗಿ ಹೇಳಬೇಕಾಗಿಲ್ಲ.

'ಆರೋಗ್ಯ ಚಂದ್ರಿಕೆ.'

ಕಾಂಗ್ರೆಸು ಸಭಾಸದರನ್ನು ಕೂಡಿಸುವ ಅವಧಿಯು ಬೆಳೆಯಿಸಲ್ಪಟ್ಟಿತು.

ಮುಂಬಯಿಯಲ್ಲಿ ಕೂಡಿದ ಅಖಿಲ ಭಾರತೀಯ ಕಾಂಗ್ರೆಸು ಕಮಿಟಿಯ ಗೊತ್ತುವಳಿಯ ಪ್ರಕಾರ ಹೋದ ತಿಂಗಳ (ಆಗೋಸ್ಟ) ಕೊನೆಯ ಒಳಗಾಗಿಯೇ ಕಾಂಗ್ರೆಸ್ ಸಭಾಸದರನ್ನು ಮಾಡುವ ಕಾರ್ಯವು ಪೂರೈಸಿ ಬಿಡಬೇಕೆಂದು ನಿರ್ಧಾರವಾಗಿತ್ತು. ಆದರೆ ಕರ್ನಾಟಕ ಪ್ರಾಂತ್ಯದಲ್ಲಿ ಈ ಕಾರ್ಯವು ಆ ಅವಧಿಯೊಳಗೆ ಮುಗಿಯುವಂತೆ ತೋರದ್ದರಿಂದ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯಲ್ಲಿ ಅಧ್ಯಕ್ಷರು ಅಖಿಲ ಭಾರತೀಯ ಕಾಂಗ್ರೆಸ್ ಕಮಿಟಿಯಲ್ಲಿ ಕಾರ್ಯದರ್ಶಿಗಳಿಗೆ ಈ ಅವಧಿಯನ್ನು ಅಕ್ಟೋಬರ್ ೧ನೇ ತಾರೀಖಿನ ವರೆಗೆ ಅಂದರೆ ಇನ್ನು ಒಂದು ತಿಂಗಳು ಬೆಳೆಯಿಸಬೇಕೆಂದು ವಿನಂತಿ ಮಾಡಿಕೊಂಡದ್ದನ್ನು ಈ ಮೊದಲು ಪ್ರಸಿದ್ಧ ಪಡಿಸಿರುವೆವು. ಆ ಪ್ರಕಾರ ಅವರಾದರೂ ಒಪ್ಪಿಕೊಂಡು ೧ನೇ ಅಕ್ಟೋಬರಿನ ವರೆಗೆ ಆ ಅವಧಿಯನ್ನು ಬೆಳೆಯಿಸಲು ನಮಗೆ ಅಪ್ಪಣೆಯನ್ನು ಕೊಟ್ಟಿರುತ್ತಾರೆ. ಅದ್ದರಿಂದ ಕಾಂಗ್ರೆಸ್ ಸಭಾಸದರನ್ನು ಕೂಡಿಸುವ ಕಾರ್ಯವನ್ನು ಕೈಕೊಂಡ ಎಲ್ಲ ಕರ್ನಾಟಕಸ್ಥರು ಮತ್ತು ಕಾಂಗ್ರೆಸ್ ಕಮಿಟಿಗಳು ಆದಷ್ಟು ಬೇಗನೆ ತಮ್ಮ ತಮ್ಮ ಭಾಗವು ಮಾಡಬೇಕೆಂದು ಗೊತ್ತಾದ ಕಾರ್ಯವನ್ನು ಮಾಡಿ ಕರ್ನಾಟಕ ಪ್ರಾಂತ್ಯದ ಸಂಖ್ಯೆಯನ್ನು ಪೂರೈಸಬೇಕಾಗಿ ವಿನಂತಿ ಇದೆ. ಮತ್ತು ಅವು ನೆರದಿಯನ್ನು ... ಮಾಡಿದ ಸಾವತಿ ಪುಸ್ತಕಗಳನ್ನು ಸೇವಾದಲದ ಹುಬ್ಬಳ್ಳಿ ಕಚೇರಿಗೆ ೧ನೇ ಅಕ್ಟೋಬರಿಗೆ ಮುಟ್ಟುವಂತೆ ಕಳುಹಿಸಬೇಕು. ಕ. ಪ್ರಾಂತ್ಯವೂ ೧೩,೬೪೪ ಕಾಂಗ್ರೆಸ್ ಸಭಾಸದರನ್ನು ಕೂಡಿಸಬೇಕಾಗಿದೆ. ಇಲ್ಲಿಯ ವರೆಗೆ ಆದ ಕಾರ್ಯವನ್ನು ನೋಡಿದರೆ ಆ ಸಂಖ್ಯೆಗೆ ಇನ್ನು ೩,೦೦೦ ಸಭಾಸದರು ಕಡಿಮೆ ಬಿದ್ದಿದ್ದಾರೆ. ಅದ್ದರಿಂದ ಈ ಸಂಖ್ಯೆಯನ್ನು ಬೇಗನೆ ಪೂರೈಸಿ ಕರ್ನಾಟಕ ಪ್ರಾಂತ್ಯದ ಮಾನವನ್ನು ಕಾಯುವರೆಂದು ಬೇಡುವ,

ಸೇವಾದಲದ ಚೇರಿ ನಾ. ಸು. ಹರ್ಡಿಕರ,
ಹುಬ್ಬಳ್ಳಿ ಸೇವಾದಲದ ಕಾರ್ಯದರ್ಶಿ.

ಜತೀಂದ್ರನ ಮರಣ.

(ಲೇಖಕ ವಾಮನ ಕೆ. ಮುತ್ತಪ್ಪ—ವಿದ್ಯಾರ್ಥಿ)

ಹಾ! ಅಸುವನೀಗಿದೆಯಾ ಪ್ರಿಯ ಕುವರಾ!
ಹಾ! ಅಸ್ತಮಿಸಿದನೋ ಜತೀಂದ್ರ ಕುವರಾ!
ಹಾ! ಅಪ್ಪಿದೆಯಾ ಮೃತ್ಯು ದೇವತೆಯಾ!
ಹಾ! ಅಂಗಹೀನವಾಯಿತೇ ಹಿಂದೂ ಸಮಾಜವು ॥ ೧ ॥

ಎನ್ನ ಸೇವೆಗೋಸುಗ ನೀನು ಧೀರತನದಿ
ತನು ಮನ ಧನ ಕೋಶ ದೇಹಗಳನರ್ಪಿಸಿದೆ!
ಸೂನು! ಮೃತನಾದೆಯಾ ನೀನು! ಯೆನಗೋಸುಗ!
ಮಾನವ ತ್ಯಜಿಸಿ ನೀನು ಸೇವೆಯನ್ನಗೈದೆ ॥ ೨ ॥

ಇನ್ನಿತರ ಕುವರರು ಅವನಿಯಲ್ಲಿರಲು,
ಮನ್ನಿಸದೆ ನೀನು ಆಂಗ್ಲೇಯರ ಮತವನು,
ಮುನ್ನ ಭಾರತದ ಕಾಳಿ ಮುಸ್ಕರವ ಹಿಡಿದು
ಮನ್ನಿಸಲ್ ನಿನ್ನನು ಮರನೀಗಿದೆಯಾ ॥ ೩ ॥

ಹೇಮ ಕಿರೀಟದ ರತ್ನ ಒಂದುದುರಿತು!
ಶ್ರೀಮಂತರಾದೆಲ್ಲ ತರ ಕುವರರ ದುಃಖಾಂಬುಧಿಯೊಳ್
ಮುಳುಗಿಸಿ, ನೀನೊರ್ವನೇ ಮಹಾಮಹಿ
ಮನ ಸಾನಿಧ್ಯವ ಪೊಂದಿದೆಯಾ ॥ ೪ ॥

ಸಾಗಿ ತಾಳಲೀ ಪುತ್ರವಿಯೋಗ ದುಃಖವ!
ಯಾಗವಮಾಡಿದೆ ನೀನು ನಿನ್ನಯ ಶರೀರವ!
ರಾಗದಿ ನಾಡುವೆನು ನಿನ್ನಯ ಕೀರ್ತಿಯ,
ಸಾಗುವೆ ಈ ಪರಿಯಿಂ ದೀ ಮಾಯಾಜಗತನು ॥ ೫ ॥

ಮುಕ್ತಾಯಗೊಳಿಸಿರಲು ನಿನ್ನ ಜಾವಿಹಾನ ಮೇಲೆ,
ಯುಕ್ತವಾದ ಭಾಷಣದಿಂದ ನೀ ತಿರಸ್ಕರಿಸಿ,
ಭಕ್ತರ ಬೇಡಿಕೆಗಳಿಗೆ ಕಿವಿಗೊಡದೆ,
ರಕ್ತವ ಯಜ್ಞಮಾಡಿ ಕೊನೆಗೊಂಡಿದೆ ॥ ೬ ॥

ಬಿಳು ಗಂಟೆಯ ಹೊತ್ತು ನಿನ್ನ
ಗೋಳಾಡ ತಾ ನೋಡಿದವಳಲ್ಲಾ!
ಧೀರ ಭಕ್ತ ಜತೀಂದ್ರ ಕುವರಾ!
ಕಳೇಬರದ ಸಮನಾದೆನು ನಾ ನಿನ್ನಯ ವಿಯೋಗದಿ ॥ ೭ ॥

ಪುತ್ರಾ! ನಿನ್ನ ವಿಯೋಗದ ದುಃಖವು
ಪುತ್ರಾದಿಪರಿಯಿಂದ ಸಹಿಪುದೆನ್ನ!
ಮಾತಾಮಹಾದಾಹ ಶಾಂತರಸ ಮರೆಯಿಕ್ಕಿದೆಯ!
ಸುತಾ! ಯನ್ನ ದುಃಖಾಂಬುಧಿಯಲ್ಲಿಕ್ಕಿದೆಯಾ ॥ ೮ ॥

ಅಶರೀರಯಲಿ ಶಾಂತಿಯು ನಿನ್ನಾತ್ಮಕೆ!!
ದೇವನೀಯೆ ಸುರಧರನ ಆತ್ಮಕೆ ॥

ಓಂ! ಶಾಂತಿಃ

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಯವರ
ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲು ೧ಕ್ಕೆ 0—14—0 ಟ. ಖ 0—9—0

ಕೆ. ಟಿ. ಡೋಂಗರೆ ಕಂಪೆನಿ,

52—48 ಗಿರಿಗಾಂವ, ಮುಂಬಯಿ.

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಒಟ್ಟೆಯ ರಂಗಿಗೂ, ಒಟ್ಟೆಯ ನಮೂನೆಗೂ ಮರುಳಾಗಿ ಪರದೇಶಿ ಒಟ್ಟೆಯನ್ನು ಕೊಂಡುಕೊಂಡು ಅನ್ನವಿಲ್ಲದೆ ನರಳುತ್ತಿರುವ ಲಕ್ಷಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡುತ್ತಿರುವಿರಾ? ಇಲ್ಲವೇ, ದಿನಕೊಮ್ಮೆ ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ನರಳುತ್ತಿರುವ ಲಕ್ಷಾನುಲಕ್ಷ ಬಡಬಾಯಿ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಒಟ್ಟೆಯನ್ನು ಕೊಂಡುಕೊಳ್ಳಲು ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಯೂ ಈ ರೀತಿಯಾಗಿ ನಮ್ಮ ಬಡ ದೇಶೀಯರ ಜೀವನಕ್ಕೆ ದಾರಿಯಾಗುತ್ತೆ.

	ರು	ಆ	ಪೈ.
ಹತ್ತಿ ಬೆಳೆದವನಿಗೆ	0	3	0
ಹತ್ತಿ ಬಿಡಿಸಿದವನಿಗೆ	0	0	6
ಬತ್ತಿ ಸುತ್ತುವವನಿಗೆ	0	1	9
ನೂಲು ಮಾಡುವವನಿಗೆ	0	3	9
ಒಟ್ಟೆ ನೆಯ್ಗೆಯವನಿಗೆ	0	4	9
ಅಗಸನಿಗೆ	0	0	6
ಒಟ್ಟೆ ಅತ್ತಿತ್ತ ಸಾಗಿಸುವದಕ್ಕೆ	0	0	9
ಖಾದಿ ಅಂಗಡಿಯವನಿಗೆ	0	1	0
	1	0	0

ಖಾದಿಯನ್ನು ಉಟ್ಟು, ಪರದೇಶಕ್ಕೆ ವರ್ಷಕ್ಕೆ 60 ಕೋಟಿ ರೂಪಾಯಿ ಹೋಗುವದನ್ನು ನಿಲ್ಲಿಸಿ. ಅಪೇಕ್ಷಿಸಿದಲ್ಲಿ ಬೇಕಾದ ಒಟ್ಟೆಯನ್ನು ನಿಮ್ಮ ಮನೆಯ ಬಾಗಿಲಿಗೆ ಒದಗಿಸಿ ತಂದು ಕೊಡುವೆವು.

ಮೇನೇಜರು,
24—9 ಖಾದಿಭಂಡಾರ,
ಪೀರಾಜಪೇಟೆ.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges & Hunting Requisites

for

SEASON

1929-30.

CURRENT
CATALOUGUE
ON APPLICATION

THE BOMBAY ARMOURY,

Specialist in Arms & Ammunition.

331, ABDULREHMAN STREET,

BOMBAY No. 4

24—13

---

೧೦೦ ರೂಪಾಯಿ ಬಹುಮಾನ

☞ ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ	ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ	ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ.

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹಿಡಿಯುವಿಕೆ ಹೊಟ್ಟೆ ಶೂಲೆ ದುಸ್ವಪ್ನ ಬೀಳುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ ವಾಂತಿ ಸರ್ಪಶಾಪ ಪಿಶಾಚಬಾಧೆಯಿಂದ ನರಳುವಿಕೆ ಬಿಳುಪು, ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾಂಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ ಮುಟ್ಟುದೋಷ ಕಾಮಾಣಿ ಗ್ರಹಪೀಡೆ, ದೃಷ್ಟಿದೋಷ, ಭಯದಿಂದ ಜ್ವರಪೀಡೆ ಕ್ಷೀಣ ಹೊಂದುವಿಕೆ ಚಳಿ ಇಡುವಿಕೆ, ಮುಟಗಿಬೇನೆ ಹೊಟ್ಟೆಯೊಳಗಿಂದ ಎಳೆಯೋಣ ಮೊದಲಾದವುಗಳಿಂದ ಸಾಯುತ್ತಿರುವದು ಗರ್ಭರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನು ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಚ್ಚು ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲಂದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ತಕ್ಕೊಳ್ಳಿರಿ ಹೆಚ್ಚು ಮಕ್ಕಳಿಗೆ ಸಂತಾನ ದರಿಯಿಂದ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨—೮—೦ ಪೋಷ್ಟು ಖರ್ಚು ಬೇರೆ ಆಗಶಕ್ಕ ವಿಚಾರಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ ☜

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52—12 **ಮು. ಪೋ. ಅಥಣಿ, ಜಿ. ಬೆಳಗಾಂವ.**

---

೫೪ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತನಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಒಡ್ಡವದು ಮೊದಲಾದವುಗಳು ಪೂರ್ಣ ಗುಣವಾಗಿ ಕುಂದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು —ಕ್ರಯ ಡಬ್ಬಿ 1 ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ 7—0—0.

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ ಮಲೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲು 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆನೋವು, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1—4—0 3 ಕ್ಕೆ 3—8—0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ ಬಾಟ್ಲಿ 1 ಕ್ಕೆ 0—8—0, 3ಕ್ಕೆ 1—6

೬. ಕಸ್ತೂರಿ ಮಿಶ್ರಣ.

ದಶ ಮೂಲಾರಿಷ್ಟ ಬಾಣಂತಿಯರಿಗೆ. ಬಾಟ್ಲಿ 1 ಕ್ಕೆ 1—8 3 ಬಾಟ್ಲಿಗೆ 4—4—0.

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1-4-0, 3 ಬಾಟ್ಲಿಗೆ 3-4

೮. ಚ್ಯವನ ಪ್ರಾಶ ಡಬ್ಬಿ 1 ಕ್ಕೆ 2—0—0

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ. ಖಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷದಿ ರವಾನಿಸ ಬಹುದು ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,
52—46 ರಥಬೀದಿ, ಮಂಗಳೂರು, ದ. ಕನ್ನಡ

ವರ್ತಮಾನ ಸಂಗ್ರಹ.

ಒಳದೇಶ.

ಕಂಪೌಂಡರು ಮೆ. ಕೊಕ್ಕಲೆರ ಪೊಚ್ಚೈಯ್ಯನವರು ಮಡಿಕೇರಿ ಆಸ್ಪತ್ರೆಯಿಂದ ಸೋಮವಾರಪೇಟೆ ಆಸ್ಪತ್ರೆಗೆ ಬರುವ ತಿಂಗಳು 1ರಿಂದ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ತಿತಿಮತಿಯಲ್ಲಿ ರೇಂಜರಾಗಿದ್ದ ಮೆ. ಬಿದ್ದಂಡ ಚಂಗಪ್ಪನವರು ಅಂದಮಾನ್ ದ್ವೀಪದಲ್ಲಿ ಎಕ್ಸ್ಟ್ರಾ ಅಸಿಸ್ಟೆಂಟ್ ಕನ್‌ಸರ್ವೇಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದು ಸಂತೋಷಪಡುತ್ತೇವೆ.

ಮೆ. ಕೋಟೆರ ಚಿಣ್ಣಪ್ಪನವರು 'ಲೋಕಪಾವನ' ಪತ್ರಿಕೆಯ ಸಂಪಾದಕರು, ಪ್ರಿಂಟರು ಮತ್ತು ಪಬ್ಲಿಷರ ಮೇಲೆ ದಾಖಲು ಮಾಡಿರುವ ಮಾನ ನಷ್ಟದ ಕ್ರಿಮಿನಲ್ ಮೊಕದ್ದಮ್ಮೆಯು ಮಡಿಕೇರಿ ಸುಬೇದಾರರ ಕೋರ್ಟಿನಲ್ಲಿ ಈ ತಾ 23 ರಲ್ಲಿ ಸ್ವಲ್ಪ ವಿಚಾರಿಸಲ್ಪಟ್ಟು ಅಕ್ಟೋಬರು ತಾ 7ನೇ ಸೋಮವಾರಕ್ಕೆ ಮುಂದರಿಸಲಾಗಿದೆ

'ಈ ತಾ. 12ರಲ್ಲಿ ಮಡಿಕೇರಿ—ಸಿದ್ದಾಪುರ ರಸ್ತೆ 10ನೇ ಮೈಲು ಬಳಿ ಕೆಲವು ಗ್ರಾಮಸ್ಥರು ಸೇರಿ ಮಾಡಿದ ಮೀಟಿಂಗಿನಲ್ಲಿ ಕೊಡವ ಸಭೆಗೆ ಒಪ್ಪಿ ಕಮಿಟಿ ನೇಮಿಸಲಾಯಿತೆಂದು' ಒಬ್ಬ ಬಾತ್ಮಿದಾರರು ತಿಳಿಸಿದ ಮೇರೆ ನಾವು ಕಳೆದ ವಾರ ಪ್ರಕಟಿಸಿದ್ದು ನಿಜವಲ್ಲವೆಂದೂ, ಸದರಿ ಕಮಿಟಿಯು ಅಲ್ಲಿ ಹುತ್ರಿ ಹಬ್ಬವನ್ನು ಒಗ್ಗಟ್ಟಾಗಿ ನಡಿಸುವುದಕ್ಕಾಗಿ ಏರ್ಪಡಿಸಿದ್ದೆಂತಲೂ ಇನ್ನೊಂದು ಕಡೆ ಪ್ರಕಟವಾದ ನಾಡ ತಕ್ಕರಾದ ಮೆ. ಮುಳ್ಳಂಡ ಜೋಯಪ್ಪನವರ ಬಾತ್ಮಿಯಿಂದ ತಿಳಿಯುತ್ತದೆ.

ವೀರಾಜಪೇಟೆ ಮುನ್ಸಿಪಲ್ ಕಮಿಟಿಯ ಚುನಾವಣೆಯು ಈ ತಾ. 21ರಲ್ಲಿ ನಡೆಯಿತು. ಕೊಡಗರಲ್ಲದ ಹಿಂದೂಗಳ ಪೈಕಿ ಮೆ. ಆರ್. ಯಸ್. ಸಂಪೇಪರಾಯರು ಮತ್ತು ಮೆ. ಟಿ. ರಾಮಕೃಷ್ಣ ಶೆಟ್ಟಿಯವರೂ, ಕೊಡವರ ಪೈಕಿ ಮೆ. ಗಳಾದ ಬಿಟ್ಟಿಯಂಡ ಉತ್ತೈಯ್ಯನವರು, ಕೋದಂಡ ಕರುಂಬೈಯ್ಯನವರು, ಕಂಡ್ರತಂಡ ಚಿಣ್ಣಪ್ಪನವರು, ಬಾಚೆಟ್ಟಿರ ಕಾರ್ಯಪ್ಪನವರು ಮತ್ತು ಮಾಚಿಮಾಡ ಮುತ್ತಣ್ಣನವರು ತಮ್ಮ ಅಪ್ಲಿಕೇಶನುಗಳನ್ನು ವಾಪಸು ತೆಗೆದುಕೊಂಡದ್ದರಿಂದ ಬಾಕಿಯವರಿಗೆ ಓಟುಗಳು ತೆಗೆಯಲಾದವು. ಕ್ರೈಸ್ತರ ಪರವಾಗಿ 1. ಮೆ. ಅಬೆಲ್ ವಾಸ್‌ರವರು ಮತ್ತು 2. ಮೆ. ಅಂತೋಣಿ ಸಲ್ಡಾನರವರೂ, ಕೊಡಗರಲ್ಲದ ಹಿಂದೂಗಳ ಪರವಾಗಿ ಮೆ. ಗಳಾದ 1. ಪಿ ಕುಂಞ್‌ಕಣ್ಣನ್‌ರವರು, 2 ಎ. ಕೆ. ಕೃಷ್ಣಯ್ಯನವರು, 3. ಎ. ಯಸ್. ರಾಮೈಯ್ಯನವರು, ಮತ್ತು 4. ಟಿ. ಆರ್ ತಿರುವೆಂಗಡ ಪಿಳ್ಳೆಯವರೂ, ಕೊಡವರ (ಅಮ್ಮಕೊಡವರು ಮತ್ತು ಗೌಡುಗಳು ಸಹಿತ) ಪರವಾಗಿ 1. ಮೆ. ಕೋಳೇರಿರ ಸುಬ್ಬೈಯ್ಯನವರು ಮತ್ತು 2. ಮೆ. ಪಳಂಗಂಡ ನಂಜಪ್ಪನವರೂ, ಮುಸಲ್ಮಾನರ ಪರವಾಗಿ ಮೆ. ಗಳಾದ 1. ಖಾಜಿಮಹ್ಮದ್ ಯುಸಫ್‌ರವರು, 2. ಬಿ. ಕೆ. ಹಬಿಬುಲ್ಲಾಖಾನ್ ಬೈಗ್ಸಾಹುಬರು ಮತ್ತು 3. ಕಂಡೋತ್ ಅಮ್ಮುರವರೂ ಚುನಾವಣೆಯಲ್ಲಿ ಜಯಶೀಲರಾಗಿರುವರು.

ಹಿಂದೂದೇಶ.

ಗಾಂಧೀಜಿಯವರ "ಹಿಂದೀ ಸ್ವರಾಜ್ಯ" ವೆಂಬ ಪುಸ್ತಕವನ್ನು ಬಿಕನೀರ್ ಸಂಸ್ಥಾನದೊಳಕ್ಕೆ ತರಕೂಡದೆಂದು ಕಟ್ಟಪ್ಪಣೆಯಾಗಿದೆಯಂತೆ.

ಕರ್ನಾಟಕದಲ್ಲಿ ಆಗಸ್ಟು ತಿಂಗಳಲ್ಲಿ ಒಟ್ಟಿಗೆ ೭೪೭೧ ಖಾದಿಯು ತಯಾರಾಯಿತು. ಮತ್ತು ೨೦,೦೪೪ ರೂಪಾಯಿಗಳ ಖಾದಿಯು ಮಾರಾಟವಾಯಿತು.

ನಾಮಧಾರಿ ವಿ ಯಸ್. ಶ್ರೀನಿವಾಸ ಶಾಸ್ತ್ರಿಯವರ ೬೦ನೇ ಜನ್ಮದಿನವನ್ನು ಪೂನ, ಮದ್ರಾಸು, ಬೆಂಗಳೂರು ಮುಂತಾದ ಪಟ್ಟಣಗಳಲ್ಲಿ ಸಾರ್ವಜನಿಕ ಮೀಟಿಂಗುಗಳನ್ನು ನಡಿಸಿ ಆಚರಿಸಿದರು.

ಬರ್ಡೋಲಿಯಲ್ಲಿ ರೈತರಿಂದ ಸತ್ಯಾಗ್ರಹವನ್ನು ಮಾಡಿ ಜಯಶಾಲಿಗಳಾದ ಶ್ರೀ ವಲ್ಲಭಾಯ್ ಪಟೇಲ್‌ರವರು ಈ ತಿಂಗಳ 12ನೆಯ ತಾರೀಖಿನ ದಿವಸ ಬೆಂಗಳೂರಿಗೆ ದಯಮಾಡಿದ್ದು ಪುರಪ್ರಮುಖರೇ ಮೊದಲಾದವರು ಅವರನ್ನು ವಿಶೇಷವಾಗಿ ಸನ್ಮಾನಿಸಿದರು.

ಬಾರಿ ಸಾಲದ ಜೈಲಿನಲ್ಲಿ ಸುಮಾರು 3½ ತಿಂಗಳಿಂದ ಉಪವಾಸ ವ್ರತವನ್ನು ಕೈಕೊಂಡಿರುವ ಮೆ. ಸತಿನ್ ಸೆನ್‌ರವರ ದೇಹಸ್ಥಿತಿಯು ಅಪಾಯದಲ್ಲಿದೆ. ಅವರನ್ನು ಬಿಡುಗಡೆ ಮಾಡಬೇಕೆಂದು ಬಂಗಾಳದಲ್ಲಿ ಚಳವಳಿಯು ಜೋರಾಗುತ್ತಿದೆ ಈ ತಾ. 22 ರಂದು ಬಂಗಾಳದಲ್ಲೆಲ್ಲಾ 'ಸತಿನ್ ಸೆನ್‌ರ ದಿನವಾಗಿ' ಆಚರಿಸಿದರು.

ದೇಶೀಯ ಸಂಸ್ಥಾನಗಳಿಂದ ಇಂಡಿಯಾ ಸರ್ಕಾರಕ್ಕೆ ಈಗ ಕಂಡಂತೆ ಪ್ರತಿ ವರ್ಷವೂ ಹತ್ತು ಕೋಟಿ ರೂಪಾಯಿಗೂ ಮೇಲೆ ಆದಾಯವು ಬರುತ್ತಿದೆ. ಹಡಗಿನ ವ್ಯಾಪಾರ 706 ಲಕ್ಷ, ಉಪ್ಪು 93 ಲಕ್ಷ, ರೈಲ್ವೆ 120 ಲಕ್ಷ, ಚಲಾವಣೆ, ಟಂಕಶಾಲೆ 86 ಲಕ್ಷ, ಸುಂಕ 39 ಲಕ್ಷ, ಒಟ್ಟು 1,044 ಲಕ್ಷ.

ಸರ್ಕಾರಿ ಉದ್ಯೋಗಸ್ಥರು ರಾಜಕೀಯ ಮೀಟಿಂಗುಗಳಿಗೆ ಹೋಗಕೂಡದೆಂತಲೂ, ಅಂಥಾ ಮೆರವಣಿಗೆ ಮುಂತಾದವುಗಳಲ್ಲಿ ಭಾಗ ತೆಗೆದುಕೊಳ್ಳಬಾರದೆಂತಲೂ, ಪಂಜಾಬು ಸರ್ಕಾರದವರು ಉದ್ಯೋಗಸ್ಥರಿಗೆ ಸರ್ಕ್ಯುಲರು ಕಳುಹಿಸಿರುವರಂತೆ.

ಬ್ರಾಹ್ಮಣೇತರರ ಕಾನ್‌ಫರೆನ್ಸು ಅಕ್ಟೋಬರು ತಾ. 5 ಮತ್ತು 6ರಲ್ಲಿ ನೆಲ್ಲೂರಿನಲ್ಲಿ ಮೆ. ಬಿ. ಮುನಸ್ವಾಮಿನಾಯುಡುರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಸದರಿ ಪಾರ್ಟಿಯ ಮುಂದಾಳನ್ನು ಆರಿಸುವ ಮತ್ತು ಆ ಪಾರ್ಟಿಗೆ ಎಲ್ಲಾ ಜಾತಿಯ ಜನರನ್ನು ಮೆಂಬರುಗಳಾಗಿ ಸೇರಿಸಿಕೊಳ್ಳುವ ವಿಷಯಗಳು ತೀರ್ಮಾನಿಸಲ್ಪಡುವುವು.

ಹಿಂದೂ ದೇಶದಲ್ಲಿ ಹುಡುಗರಿಗೆ 18 ವರ್ಷ ಪ್ರಾಯಕ್ಕಿಂತಲೂ, ಹುಡುಗಿಯರಿಗೆ 14 ವರ್ಷ ಪ್ರಾಯಕ್ಕಿಂತಲೂ ಮುಂಚಿತವಾಗಿ ಮದುವೆ ಮಾಡಕೂಡದೆಂತೂ ಹಾಗೆ ಮದುವೆ ಮಾಡಿದರೆ ಜುಲುಮಾನೆ ಯೂ ಸಹ ಶಿಕ್ಷೆಗೆ ಗುರಿಮಾಡಬಹುದೆಂಬ ಬಿಲ್ಲು ಇಂಡಿಯಾ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ದೊಡ್ಡ ಬಹುಮತದಿಂದ ಮಂಜೂರಾಗಿದೆ.

ರಂಗೂನ್ ಜೈಲಿನಲ್ಲಿ ರಾಜಕೀಯ ಕೈದಿಯಾಗಿದ್ದ ಫೊಂಗಿ ಯು. ವಿಜಯರವರು 157 ದಿವಸ ಉಪವಾಸ ಮಾಡಿ ಮೃತರಾದರು. ಇವರ ಮರಣಕ್ಕೆ ಸಂತಾಪವನ್ನು ಸೂಚಿಸುವ ಮೀಟಿಂಗುಗಳು ಬರ್ಮಾದಲ್ಲಿಯೂ, ಇಂಡಿಯಾದಲ್ಲಿಯೂ ಹಲವು ಕಡೆಗಳಲ್ಲಿ ನಡೆದವು. ಈ ವಿಷಯ ಸರಕಾರದ ವರ್ತನೆಯನ್ನು ಖಂಡಿಸುವ ಠರಾವೊಂದು ಎಸೆಂಬ್ಲಿಯಲ್ಲಿಯೂ ಚರ್ಚಿಸಲ್ಪಡಲಿಕ್ಕಿದೆ.

ಸಿಂಧ್ ಪ್ರದೇಶದಲ್ಲಿ ಅಧಿಕ ನೆರೆಯ ಹಾವಳಿಯಿಂದ ಕಷ್ಟ ಪಡತಕ್ಕ ಜನರ ಸಹಾಯಾರ್ಥವಾಗಿ 5,000 ರೂಪಾಯಿಗಳನ್ನು ಕೊಡುವುದಾಗಿ ಗಾಯಕವಾಡದ ಮಹಾರಾಜರು ಪ್ಯಾರಿಸ್ ಪಟ್ಟದಿಂದ ತಂತಿ ವರ್ತಮಾನ ಕಳುಹಿಸಿರುತ್ತಾರೆ. ಇದೇ ಪ್ರಾಂತ್ಯದ ದಿವಾನ್ ರಿಲೀಫ್ ಫಂಡಿನ ಕಮಿಟಿಯವರು ರಾ. ಬಾ. ವಿ ಟಿ ಕೃಷ್ಣಮಾಚಾರಿಯವರ ಅಧ್ಯಕ್ಷತೆಯಲ್ಲಿ, 1927 ರಲ್ಲಿ ಆದ ಗುಜರಾತ್ ಪ್ರವಾಹದ ಸಮಯದಲ್ಲಿ ಕೂಡಿಸಿದ ಹಣದಲ್ಲಿ ಹೆಚ್ಚುವರಿಯಾದ 5,000 ರೂಪಾಯಿಗಳನ್ನು ಕೊಡುವಂತೆ ತೀರ್ಮಾನಿಸಿರುತ್ತಾರೆ. ಈ ಪ್ರಾಂತ್ಯದಿಂದ ಒಟ್ಟಿಗೆ ಸಹಾಯ ದ್ರವ್ಯವು ರೂ. 10,000 ಆಗುತ್ತದೆ.

20 ವರ್ಷ ಜೈಲಿನಲ್ಲಿದ್ದ ಬಂದಿಯೊಬ್ಬನು ಸಂಪೂರ್ಣವಾಗಿ ಮರದಿಂದಲೇ ವಿಚಿತ್ರ ಗಡಿಯಾರವೊಂದನ್ನು ತಯಾರಿಸಿರುವನು. ಇದು ಒಂದು ಕಪಾಟಿನಲ್ಲಿರಿಸಲ್ಪಟ್ಟು ಲೋಕದ 30 ದೊಡ್ಡ ಪಟ್ಟಣಗಳಲ್ಲಿನ ಬೇರೆ ಬೇರೆ ಕಾಲವನ್ನು ತೋರಿಸುವ 30 ಗಡಿಯಾರಗಳನ್ನೊಳಗೊಂಡಿದೆ ಇದಲ್ಲದೆ ಇನ್ನೊಂದು ಪ್ರತ್ಯೇಕ ಗಡಿಯಾರವು ಸೂರ್ಯ, ಚಂದ್ರ, ನಕ್ಷತ್ರಗಳ ಚಲನೆಯನ್ನು ತೋರಿಸುವುದು. ಉಷ್ಣಮಾಪಕ ಯಂತ್ರವೊಂದು ಹವಾಗುಣವನ್ನು ಸೂಚಿಸುವುದು. ತಾರೀಖು ಪಟ್ಟಿಯೊಂದು ದಿನ, ವಾರ, ತಿಂಗಳುಗಳನ್ನೆಲ್ಲಾ ಅಧಿಕ ವರ್ಷ ಬಂದರೂ ತಪ್ಪಿಲ್ಲದೆ ತೋರಿಸುವುದು. ತೂಕಮಾಡುವ ಯಂತ್ರವೊಂದು ಈ ಗಡಿಯಾರದೊಂದಿಗೆ ಜೋಡಿಸಲ್ಪಟ್ಟಿರುವುದು

ಮಹಾತ್ಮ ಗಾಂಧಿಯವರು ಸಂಯುಕ್ತ ಪ್ರಾಂತ್ಯದಲ್ಲಿ ಪ್ರವಾಸವನ್ನು ಪ್ರಾರಂಭಿಸಿರುವರು. ತಾ 23ರಲ್ಲಿ ಕಾನ್‌ಪುರಕ್ಕೆ ಹೋದಾಗ ಅಲ್ಲಿಯ ಮುನ್ಸಿಪಾಲಿಟಿಯವರೂ, ಡಿಸ್ಟ್ರಿಕ್ಟ್ ಬೋರ್ಡಿನವರೂ ಅವರಿಗೆ ಯೋಗ್ಯರೀತಿಯಲ್ಲಿ ಸ್ವಾಗತವನ್ನೀಡಿದಲ್ಲದೆ ಮಹಿಳೆಯರು ಬೇರೆ ಮೀಟಿಂಗನ್ನು ಅವರಿಗೆ ಬಿನ್ನವತ್ತವನ್ನೂ ಹಣ ಮತ್ತು ಆಭರಣಗಳ ಒಂದು ಬೊಕ್ಕಸವನ್ನೂ ಕೊಟ್ಟರು. ಸಾಯಂಕಾಲ ಸುಮಾರು 35,000 ಜನರು ನೆರೆದಿದ್ದ ಒಂದು ಮಹಾಸಭೆಯಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು, ಪ್ರೆಸ್ಸ್ ಕೆಲಸಗಾರರ ಸಂಘದವರು, ಗಾಂಧಿ ಸೇವಾ ಸಮಿತಿಯವರು, ಕಸಬಿನವರ ಸಂಘದವರು ಮತ್ತು ಅಸ್ಪೃಶ್ಯರು ಪ್ರತ್ಯೇಕ ಪ್ರತ್ಯೇಕ ಬಿನ್ನವತ್ತಗಳನ್ನು ಅರ್ಪಿಸಿದರು ಅಲ್ಲಿ ಅವರಿಗೆ ಸುಮಾರು 8000 ರೂಪಾಯಿ ಕೊಡಲಾಗಿದೆ

ಪ್ಯಾಲಸ್ಟೈನಿನಲ್ಲಿರುವ ಮುಸಲ್ಮಾನರಿಗೆ ಸಹಾಯಕೊಡುವ ಉದ್ದೇಶ್ಯ ಕಲ್ಕತ್ತಾದಲ್ಲಿ ನಡೆದ ಮುಸಲ್ಮಾನರ ಒಂದು ಮೀಟಿಂಗಿನಲ್ಲಿ ಸರ್ ಅಬ್ದುಲ್‌ರಹಿಮ್ ರವರು ಹೇಳಿದ್ದೇನೆಂದರೆ—' ಈ ದೇಶವನ್ನು ಸ್ವಾತಂತ್ರ್ಯ ಜನರ ದೇಶವಾಗಿ ಮಾಡದೆ ಹೋದರೆ ಪ್ರಪಂಚದ ಬೇರೆ ಕಡೆಗಳಲ್ಲಿರುವ ಮುಸಲ್ಮಾನರಿಗೆ ಸಹಾಯ ಮಾಡಲು ನಮಗೆ ಸಾಧ್ಯವಿಲ್ಲ. ನಾವು ಹಿಂದೀಯರು. ಆದರೆ ಮುಸಲ್ಮಾನರು ಮತ್ತು ಹಿಂದುಗಳು ಒಗ್ಗಟ್ಟಾಗಿ ರಾಜಕೀಯ ಸ್ವಾತಂತ್ರ್ಯಕ್ಕೆ ಹೋರಾಡಿದರೆ ಸ್ವಮಂತೆ ಇರುವ ಏಷ್ಯಾ ಖಂಡದ ಬೇರೆ ರಾಷ್ಟ್ರಗಳಿಗೆ ಒಳ್ಳೇ ಉದಾಹರಣೆಯನ್ನು ತೋರಿದಂತಾಗುವುದು. ಹಿಂದೀಯರು ತಮ್ಮ ದೇಶವನ್ನು ಆಳುವ ಜವಾಬ್ದಾರಿ ತೆಗೆದುಕೊಂಡರೆ ಬ್ರಿಟಿಷರಿಗೆ ಸಿಕ್ಕಿದ ದೇಶಗಳಿಗೆಲ್ಲಾ ಆಡಳಿತೆಯ ದೊಡ್ಡ ಜವಾಬ್ದಾರಿಯನ್ನು ಕಡಿಮೆ ಮಾಡಿದಂತಾಗುವುದು!

ವಿದೇಶ.

ಅಮೇರಿಕದ ಡಾ. ಫಿಶ್‌ರವರು ಪುರುಷರು ಮುಖ್ಯಾಗದಂತಹ ಒಂದು ಔಷಧಿಯನ್ನು ಶೋಧಿಸಿದ್ದಾರಂತೆ!

ಇರಾಕ್ ದೇಶವನ್ನು ಯಾವ ಶರತ್ತುಗಳಿಲ್ಲದೆ 1932 ರಲ್ಲಿ ಜನಾಂಗಗಳ ಕೂಟಕ್ಕೆ ಸೇರಿಸಿಕೊಳ್ಳುವಂತೆ ಬ್ರಿಟಿಷ್ ಸರ್ಕಾರದವರು ಒಪ್ಪಂದ ಕೊಟ್ಟಿರುತ್ತಾರೆ.

ಜರ್ಮನಿಯ ರೀಸ್ಟಾಗ್ ಎಂಬ ಪಾರ್ಲಿಮೆಂಟ್ ಸಭೆಗೆ ಯಾರೋ ಬಾಂಬು ಗುಂಡುಗಳನ್ನು ಎಸೆದರು. ಬಾಂಬಿನಲ್ಲಿ "ಜರ್ಮನಿಯೇ! ಎಚ್ಚೆತ್ತು" ಎಂದು ಬರೆದಿದ್ದ ಕಾಗದವಿದ್ದಿತು.

ಅಫಗಾನಿಸ್ಥಾನದ ಹಿಂದರ್‌ಬೆಲ್ ಎಂಬಲ್ಲಿ ಬಾಚಾಯಿ ಸಾಕೋರವರ ಸೈನ್ಯಕ್ಕೆ ಅಪಜಯವಾಗಿದೆ. ಗಾರ್ಡೆಜ್ ಪಟ್ಟಣಕ್ಕೆ 3 ಮೈಲು ದೂರದಲ್ಲಿರುವ ಬಿಲಂಡೆಶ್ ಪಟ್ಟವು ನಾದಿರ್‌ಖಾನ್‌ರವರ ಕೈವಶವಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಈಗ ಎಲ್ಲಾ ಕೆಲಸಕ್ಕೂ ಯಂತ್ರಗಳೇ ಉಪಯೋಗಿಸಲ್ಪಡುವುದು ಜಾಸ್ತಿಯಾಗುತ್ತದೆ ಕೋಳಿಮರಿಗಳ ಗರಿಗಳನ್ನು ಕೆಲವು ಸೆಕೆಂಡುಗಳಲ್ಲಿ ಕಿತ್ತುಹಾಕುವ ಯಂತ್ರವೊಂದು ಈಗ ತಯಾರಾಗಿದೆಯಂತೆ!

ಮದ್ರಾಸಿನ ಸರ್ ಸಿ. ಪಿ ರಾಮಸ್ವಾಮಿ ಅಯ್ಯರವರು ಈಗ ಲಂಡನಿನಲ್ಲಿ ಪಾರ್ಟಿ ಮುಂದಾಳುಗಳನ್ನು ಭೇಟಿ ಮಾಡುತ್ತಿರುವರು. ಬ್ರೈಟನ್‌ನಲ್ಲಿ ನಡೆಯುವ ಲೇಬರ್ ಪಾರ್ಟಿಯ ಕಾನ್‌ಫರೆನ್ಸಿಗೆ ಇವರಿಗೆ ಆಹ್ವಾನವಿದೆಯಂತೆ

ಐರ್ಲೆಂಡಿನ ಸಾಮ್ರಾಜ್ಯ ವಿರೋಧಿಗಳ ಸಂಘದವರು, ರಿಪಬ್ಲಿಕನ್ ಸೈನ್ಯದವರು ಮತ್ತು ಹಾಗೆಯೆ ಸಂಘಗಳ ಡಿಫೆನ್ಸ್ ಲೀಗಿನವರು ಜತೀಂದ್ರನಾಥ್ ದಾಸ್‌ರವರ ಮರಣಕ್ಕೆ ಸಂತಾಪವನ್ನು ಸೂಚಿಸಿಯೂ, ಹಿಂದೀಯರ ಸ್ವರಾಜ್ಯ ಹೋರಾಟಕ್ಕೆ ಸಹಾನುಭೂತಿಯನ್ನು ತೋರಿಸಿಯೂ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರಿಗೆ ತಂತೀ ಕಳುಹಿಸಿರುವರು.

ಜರ್ಮನಿಯ ಕೈಗಾರಿಕೆಯ ಕೆಲಸದವರ ವಾರ್ಷಿಕ ಸಮ್ಮೇಳನದಲ್ಲಿ ಅಧ್ಯಕ್ಷತೆಯನ್ನು ವಹಿಸಿದ ಡಾ. ಡುಯಿಸ್‌ಬರ್ಗ್‌ರವರು ಅಲ್ಲಿಯ ವರ್ತಕರಿಗೆ ಇಂಡಿಯಾದ ವಿಷಯ ತಿಳಿದುಕೊಳ್ಳುವಂತೆಯೂ, ಆ ಮೂಲಕ ಜರ್ಮನಿಯ ಒಳ್ಳೆಯ ಸಾಮಾನುಗಳನ್ನು ಕಮ್ಮಿ ಕ್ರಯಕ್ಕೆ ಮಾರಿ ಇಂಡಿಯಾವನ್ನು ಜರ್ಮನಿಯ ಮಾರ್ಕೆಟ್ಟಾಗಿ ಮಾಡಿಕೊಳ್ಳುವಂತೆಯೂ ಬೋಧಿಸಿದರು

ಶ್ರೀ. ಕಾವೇರಿ ತುಲಾಸಂಕ್ರಮಣದ ತೀರ್ಥೋದ್ಭವ ಪುಣ್ಯಕಾಲದ ಮುಹೂರ್ತ ಪಟ್ಟಿ.

1. ಇದೇ ಸನ್ 1929ನೇ ಇಸವಿ ಬರುವ ಅಕ್ಟೋಬರ್ ತಾರೀಕು 14ನೇ ಸೋಮವಾರ 11½ ಘಂಟೆ (ಧನಿಷ್ಠಾ ನಕ್ಷತ್ರ ಧನುರ್ಲಗ್ನ ಶುಕ್ರನ ಕಾಲ ಮೆರೆಯಲ್ಲು ಅಕ್ಕಿಯ ಪಾತ್ರ ಇಡುವ ಶುಭ ಮುಹೂರ್ತ.

2. ಇದೇ ದಿನ ಅಂದರೆ ಸಾಯಂಕಾಲ 4 ಘಂಟೆಗೆ ಶತಭಿಷಾನಕ್ಷತ್ರ ಕುಂಭ ಲಗ್ನ ಗುರು ಕಾಲ ಮೆರೆಯಲ್ಲು ಕಾಣಿಕೆ ಡಬ್ಬಿ ಇಡುವ ಶುಭ ಮುಹೂರ್ತ.

3. ಇದೇ ಅಕ್ಟೋಬರ್ ತಾರೀಕು 16ನೇ ಬುಧವಾರ ದಿನ ರಾತ್ರೆ, 12 ಘಂಟೆ ಮೇಲೆ ಅಂದರೆ ತಾರೀಕು 17ನೇ ಗುರುವಾರ ದಿನ ಬೆಳಗ್ಗೆ 4 ಘಂಟೆಗೆ ಸರಿಯಾಗಿ ತುಲಾಕಾವೇರಿ ಸಂಕ್ರಮಣ ತೀರ್ಥೋದ್ಭವ ಪುಣ್ಯಕಾಲದ ಶುಭಮುಹೂರ್ತ.

ಮುಜರಾಯಿ ಇಲಾಖೆ — ಕೆ. ಚಂಗಪ್ಪ, ಪ್ರೆಸಿಡೆಂಟ್.

3—2

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಇದದ್ದನ್ನು ಇದ ಹಾಗೆ ಪ್ರಕಟಿಸಬಾರದೇ?

ಈ ತಾರೀಕು 12ರಲ್ಲು ಚೇರಂ—ಬ್ರಾಣಗುಲ ಸ್ಕೂಲಿನಲ್ಲಿ ನಾಲ್ಕು ಗ್ರಾಮಸ್ಥರು ಸೇರಿ ಮಾಡಿದ ಮೀಟಿಂಗಿನಲ್ಲಿ ಕೊಡವ ಸಭೆಗೆ ಒಪ್ಪಿ ಕಮಿಟಿ ಏರ್ಪಡಲಾಗಿದೆ ಎಂದು ಪತ್ರಿಕೆಗಳಲ್ಲಿ ಪ್ರಕಟಿಸಿದನ್ನು ನೋಡಲಾಯಿತು. ಕಮಿಟಿ ಏರ್ಪಡಾದದ್ದು ಕೊಡವ ಸಭೆಗೆ ಅಲ್ಲ. ಈ ಗ್ರಾಮಗಳಲ್ಲಿ ಹುತ್ರಿ ಹಬ್ಬವನ್ನು ಪೂರ್ವ ಪದ್ಧತಿ ರೀತಿ ಕ್ರಮವಾಗಿ ಜರಗಿಸಲು ಏರ್ಪಡಾದದ್ದಾಗಿದೆ ಹುತ್ರಿ ಸಂಬಂಧದ ಏರ್ಪಾಡನ್ನು ಕೊಡವ ಸಭೆಗೆ ಒಪ್ಪಿದ್ದೆಂದು ಪ್ರಕಟಿಸಿದಕ್ಕೆ ವ್ಯಸನಪಡುತ್ತೇನೆ.

ಮುಳ್ಳಂಡ ಜೋಯಪ್ಪ.

ಇದು ನ್ಯಾಯವಾದ ಪ್ರಚಾರ ಕೆಲಸವೇ?

ಅಯ್ಯಾ, ಸಂಪಾದಕರೇ,

ಕೆಲವು ವಾರಗಳ ಹಿಂದೆ ನಾನು ಗೋಣಿಕೊಪ್ಪಲು ಸಂತೆಗೆ ಹೋದ ಅನಿಶ್ಚಯವಾದ ದಿವಸ ಹೋಗಿದ್ದೆನು ಮೆ. ರಾ. ಶ್ರಿ. ಚೆಪ್ಪುಡಿರ ಎ. ಪೊನ್ನಪ್ಪನವರು ಒಂದು ಪ್ರಿಂಟು ಫಾರಂ ಬುಕ್ಕಿಗೆ ಸೈನು ಕೊಡಬೇಕೆಂದು ಕೇಳಿದರು. ಅದು ಎಂಥ ಫಾರಂ ಎಂದು ಕೇಳಿದಲ್ಲಿ ಅದು ನಾನು ಮೆಂಬರನಾಗಿರುವ ಹಳೇ ಜಮಾನ್ದಾರರ ಸಂಘದವರಿಂದ ಬಂದ ಫಾರಂ ಎಂಬದಾಗಿ ತಿಳಿಸಿದರು. ಅವರ ಹಿರಿಯರ ಮೇಲೆ ನಾನು

ಅದಕ್ಕೆ ಸ್ಪೈಸು ಹಾಕಿದೆನು. ಈಗ ತಿಳಿಯುವಾಗ ಅದು ಈಗ ತಾನೆ ಏರ್ಪಾಡಾದ ನವೀನ ಬವಿೂನ್ದಾರರ ಸಂಘದಿಂದ ಬಂದ ಫಾರಂ ಎಂತ ತಿಳಿದೆನು. ವಿಷಯವನ್ನು ಸರಿಯಾಗಿ ತಿಳಿಸದೆ ನನ್ನ ಸೈನನ್ನು ಹೊಂದಿಕೊಂಡರೂ, ನಾನು ಈಗ ಸುಮಾರು 18 ವರ್ಷಗಳಿಂದ ಈ ದೇಶದಲ್ಲಿ ಸರಿಯಾಗಿ ಕೆಲಸ ನಡಿಸುತ್ತಿರುವ ಹಳೇ ಬವಿೂನ್ದಾರರ ಸಂಘದ ಮೆಂಬರೇ ಹೊರತು ಹೊಸ ಬವಿೂನ್ದಾರರ ಸಂಘದ ಮೆಂಬರಲ್ಲವೆಂಬ ಸಂಗತಿ ಮ. ಶ್ರಿ. ಎ. ಪೊನ್ನಪ್ಪನವರಿಗೂ ದೇಶದ ಇತರ ಎಲ್ಲಾ ಮಹನೀಯರಿಗೂ ಈ ಮೂಲಕ ತಿಳಿಸದೆ ಇರಲಾರೆನು

ಚೆಪ್ಪುಡಿರ ಟಿ. ಕಾರ್‍ಯಪ್ಪ

ಈ ವರ್ಷ ಹುತ್ತರಿಹಬ್ಬ ಯಾವಾಗ?

ಪ್ರಿಯ ಆಸ್ತಿಕ ಶಿರೋಮಣಿಗಳೇ,

ಈ ವರ್ಷ ಬರುವ ಹುತ್ತರಿ ಹಬ್ಬವು ನವಂಬರನಲ್ಲಿಯೋ ಅಥವಾ ಡಿಸೆಂಬರನಲ್ಲಿಯೋ ಎಂಬ ಸಂದಿಗ್ಧ ವಿಚಾರವು ಕೊಡಗಿನಲ್ಲಿ ಸ್ವಲ್ಪ ತಲೆದೋರಿದ ಹಾಗೆ ಕಾಣುತ್ತದೆ. ಕೊಡಗಿನ ಈ ಹುತ್ತರಿ ಹಬ್ಬವು ಸಾಮಾನ್ಯ ಯಾವದೊಂದು ಧರ್ಮಶಾಸ್ತ್ರದ ನಿರ್ಣಯಕ್ಕಾಗಲೀ ಅಥವಾ ಒಂದು ನಿಬಂಧನೆಗಾಗಲೀ ಒಳಪಡದೆ ಅದೊಂದು ಅನುಕೂಲ ಸಿಂಧುವಿನ ಪ್ರಕಾರದಲ್ಲಿ ನಡಿದುಕೊಂಡು ಬರುತ್ತದೆ. ಆದರೆ ಈ ಆಚರಣೆಯು ಪದ್ಧತಿಯೆಂಬ ನ್ಯಾಯವನ್ನು ಹೊಂದಿಕೊಂಡಿದೆ. ಇದನ್ನು ಚೆನ್ನಾಗಿ ಪರಿಶೀಲಿಸಿದಲ್ಲಿ ಇದನ್ನು ಒಂದು ಶಾಸ್ತ್ರದ ನಿಬಂಧನೆಗೆ ಒಳಪಡಿಸಬಹುದು. ಆದರೆ ಅದಕ್ಕೆ ಕೊಡಗಿನ ಎಲ್ಲಾ ಜನರ ಅನುಮತಿಯು ಅಗತ್ಯವಾಗಿದೆ. ಈ ವಿಚಾರ ಹೇಗಿದ್ದರೂ ಪ್ರಕೃತ ಪದ್ಧತಿ ಪ್ರಕಾರದ ಆಚರಣೆಯಲ್ಲಿ ಬರುವ ಈ ಹುತ್ತರಿ ಹಬ್ಬವು ನವಂಬರು ತಾರೀಕು 16 ಮತ್ತು 17 ರಲ್ಲಿ ನಡೆಯಬೇಕಾದದ್ದು ಸಕಾರಣವೂ, ಶಾಸ್ತ್ರ ಸಮ್ಮತಿಯೂ ಆಗಿದೆ. ಡಿಸೆಂಬರಿನಲ್ಲಿ ಆದರೆ ಆ ಸಮಯಕ್ಕೆ ಶೂನ್ಯಮಾಸವೆಂದು ಪ್ರಸಿದ್ಧಿಯುಳ್ಳ ಧನುರ್ಮಾಸವು ಸಿಕ್ಕುತ್ತದೆ. ಇದರಲ್ಲಿ ಯಾವ ಕಾರ್ಯವನ್ನೂ ಮಾಡಕೂಡದೆಂಬ ವಿಧಿನಿಷೇಧವು ಸರ್ವರಿಗೂ ವಿದಿತವಾಗಿಯೇ ಇದೆ. ನವಂಬರು ತಾರೀಕು 16, 17ರಲ್ಲಿ ಆಚರಿಸುವದು ಸಕಾರಣ, ಸಶಾಸ್ತ್ರ ಸಮ್ಮತವು ಮತ್ತು ಸಯುಕ್ತಿಯುಕ್ತವೂ ಆಗಿರುವದರಿಂದ ಆ ಸಮಯದ ಹುತ್ತರಿ ಹಬ್ಬದ ಆಚರಣೆಯು ಯೋಗ್ಯವಾಗಿದೆ.

ಬಿ. ಆರ್. ವಿಷ್ಣುಮೂರ್ತಿ (ಜೋಯಿಸ್)

ಚಿಕ್ಕಮಗಳೂರು ಕೊಡಗನಿಗೆ ಜವಾಬು.

ಅಯ್ಯಾ,

ಚಿಕ್ಕಮಗಳೂರಿನಲ್ಲಿ ನಾನೊಬ್ಬನೇ ಸರ್ಕಾರಿ ನೌಕರ. ಚಿಕ್ಕಮಗಳೂರು ಟೌನಿಗೆ ದೂರ ಫಾಸಲೆಯಲ್ಲಿ ಕಾಫಿ ತೋಟಗಳಲ್ಲಿ ನೌಕರಿಮಾಡಿಕೊಂಡು ಇರುವ ಇಬ್ಬರು ಕೊಡಗರನ್ನು ಮಾತ್ರ ನಾನು ಚೆನ್ನಾಗಿ ಬಲ್ಲೆ. ಬೇರೆ ಯಾರನ್ನೂ ನನಗೆ ಅಷ್ಟೇನೂ ಪರಿಚಯವಿಲ್ಲ. ಕೆಲವು ಕೊಡಗು ಯುವಕರನ್ನು ನಾನು ಈ ಟೌನ್‌ನಲ್ಲಿ ಪದೇ ಪದೇ ನೋಡುತ್ತಲಿದ್ದೇನೆ. ಆದರೆ ಅವರು ಯಾರು ಮತ್ತು ಏನು ಕೆಲಸ ಮಾಡುತ್ತಲಿದ್ದಾರೆ ಎಂಬುವದು ನನಗೆ ಗೊತ್ತಿಲ್ಲ. ನನಗೆ ಗೊತ್ತಿರುವವರಾಗಲೀ, ಅಥವಾ ಗೊತ್ತಿಲ್ಲದೆ ಇರುವವರಾಗಲೀ ನನ್ನಲ್ಲಿಗೆ ಬಂದು ನಮ್ಮ ಪದ್ಧತಿ ಮೇರೆ ಒಗ್ಗಟ್ಟಾಗಿ ಸೇರಿಕೊಂಡು ನಮ್ಮ ಕುಲದ ಹಬ್ಬಗಳನ್ನು ಚೆನ್ನಾಗಿ ನಡಿಸಿಕೊಂಡು ಹೋಗುವ ವಿಚಾರದಲ್ಲಿ ಅಭಿಪ್ರಾಯ ಮಾಡಲೆ, ಚಿಕ್ಕಮಗಳೂರಿನಲ್ಲಿರುವ ಸರ್ಕಾರಿ ಉದ್ಯೋಗಸ್ಥರು ಈ ಪ್ರಚಾರ ನಿಗವಿಡದ ಸಂಗತಿ ವ್ಯಸನಕರವಾಗಿದೆ ಎಂದು ವಗ್ಯರೆ ಬರೆಯುವದರಿಂದ ಪ್ರಯೋಜನವಿಲ್ಲ. ಇನ್ನು ಮುಂದಾದರೂ ಈ ವಿಚಾರ ಬರೆದಿರುವ ಚಿಕ್ಕಮಗಳೂರು ಕೊಡಗನು ನಾಮಧೇಯವನ್ನು ಸೂಚಿಸಿ ನನ್ನಲ್ಲಿ ಬಂದು ಮಾತನಾಡಿದರೆ ಮುಂದಿನ ಏರ್ಪಾಡನ್ನು ಮಾಡಲು ನನ್ನ ಅಭ್ಯಂತರವೇನೂ ಇಲ್ಲ. ನಮ್ಮ ದೇಶಬಿಟ್ಟು ಹೊರಗೆ ಬಂದಿರುವವರು ಒಗ್ಗಟ್ಟಾಗಿ ಒಂದೇ ಮನೆತನದವರಂತೆ ನಮ್ಮ ಕುಲಾಚಾರ ಪದ್ಧತಿಗಳನ್ನು ಪೂರ್ವದಂತೆ ನಡಿಸಿಕೊಂಡು ಹೋಗಬೇಕೆಂದು ಮತ್ತು ನಮ್ಮ ನಮ್ಮ ಮರ್ಯಾದೆ ಅಂದರೆ ನಡತೆಗಳನ್ನು ಚೆನ್ನಾಗಿ ಇಟ್ಟುಕೊಂಡು ನಮ್ಮ ದೇಶದ, ಕುಲದವರ ಹೆಸರನ್ನು ಮತ್ತು ಕೀರ್ತಿಯನ್ನು ಕಾಪಾಡಬೇಕೆಂದೇ ನನ್ನ ಅಭಿಲಾಷೆ,

ಯಂ ಯಸ್. ಅಣ್ಣಯ್ಯ.

ಕಕ್ಕಬೆ ಸ್ಕೂಲ್.

ತಾರೀಕು 2-9-29ರಲ್ಲು ಶಾಲಾ ಸುಪರ್‌ವೈಸರ್ ಮ. ಮೂವೇರ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲು ಕಾರೊನೇಶನ್ ಯೂನಿಯನ್ ಎಂಬ ಸಂಘದ ಒಂದು ಜನರಲ್ ಮೀಟಿಂಗ್ ನಡೆಯಿತು.

ಡಿಸ್ಟ್ರಿಕ್ಟು ಬೋರ್ಡು ವಿದ್ಯಾಕಮಿಟಿಯವರು ಈ ಕಕ್ಕಬೆ ಸ್ಕೂಲಿನಲ್ಲು 1930ನೆ ಏಪ್ರೀಲ್‌ನಲ್ಲು 6ನೇ ಸ್ಟೇಂಡರ್ಡ ತೆರೆಯುವಂತೆಯೂ, ಈ ಶಾಲಾಕಟ್ಟಡಕ್ಕೆ ಮೇಲಾಂಡ ಇಲ್ಲದ್ದರಿಂದ ಮೇಲಾಂಡ ಕಟ್ಟಲು 200/ರೂಪಾಯಿಯನ್ನೂ, ಮಕ್ಕಳು ಆಡಲು ಆಟದ ಮೈದಾನ ಇಲ್ಲದ್ದರಿಂದ ನೆಲಸಮ್ಮಮಾಡಲು 20. ರೂಪಾಯಿಯನ್ನೂ ಕೊಡಬೇಕಾಗಿ ಮಾಡಿದ ಸಿಫಾರಸ್ ಮೇರೆ ಬೋರ್ಡು ಮೀಟಿಂಗ್‌ನಲ್ಲು ಮಂಜೂರ್‌ಮಾಡಿದಕ್ಕಾಗಿ ಡಿ. ಬೋರ್ಡಿನವರಿಗೂ, ಶಾಲಾ ಕಮಿಟಿಯವರಿಗೂ ಈ ಸಂಘವು ಮನಃಪೂರ್ವಕವಾದ ವಂದನೆಯನ್ನು ಅರ್ಪಿಸುತ್ತದೆ ಎಂದು ತೀರ್ಮಾನವಾಯಿತು.

ಈ 6ನೇ ಸ್ಟೇಂಡಾರ್ಡು ತೆರೆಯಲು ನಾಡವರು ಕಟ್ಟಡ ಕಟ್ಟಿಸಿ ಕೊಡಬೇಕೆಂದು ಕೊಟ್ಟ ಹುಕುಂ ಮೇರೆ ಈ ದಿನ ಸುಪರ್‌ವೈಸರವರು ಈ ಶಾಲೆಯ ಬಡಾವಣೆಯನ್ನು T. (ಟಿ) ಶೇಪಿನಲ್ಲು ಕಟ್ಟಬೇಕಾಗಿ ಜಾಗ ಮತ್ತು ಕಟ್ಟಡ ವಿಸ್ತಾರವನ್ನು ತೋರಿಸಿ ಕೊಟ್ಟಿದ್ದಾಯಿತು.

ಈ ಕಟ್ಟಡ ಕಟ್ಟಲು ಹಾಲಿ ಶಾಲೆಯಲ್ಲು ಇರುವ ವಿದ್ಯಾರ್ಥಿಗಳ ತಂದೆಯವರು ತಲಾ ಒಂದು ರೂಪಾಯಿ ಕೊಡಬೇಕೆಂತಲೂ, ಈ ಶಾಲೆಗೆ ಸಮಂಧಪಟ್ಟ ಕುಂಜಿಲ, ನಾಲಡಿ, ಯವಕಪಾಡಿ ಗ್ರಾಮದಲ್ಲು 18 ವರ್ಷ ಪ್ರಾಯಕ್ಕೆ ಬಂದ ಪ್ರತಿ ಒಬ್ಬ ಗಂಡಸು ತಲಾ ಒಂದು ರೂಪಾಯಿಗೆ ಕಮ್ಮಿ ಇಲ್ಲದ ಚಂದಾ ಕೊಡಬೇಕಾಗಿಯೂ ತೀರ್ಮಾನವಾಯಿತು.

ಈ ದಿನ ಸೇರಿದ್ದ ಮಹನೀಯರೂ ಮತ್ತು ಈ ಮೊದಲು ಈ ಶಾಲಾಕಟ್ಟಡಕ್ಕಾಗಿ 34 ಮೆಂಬರುಗಳಿಂದ 503 ರೂಪಾಯಿಗಳು ಚಂದಾ ಕೊಡುವದಾಗಿ ಒಪ್ಪಂದ ಮಾಡಿರುತ್ತಾರೆ. ಇವರುಗಳು ಹಣ ಕೊಟ್ಟಂತೆ ಇವರುಗಳ ಹೆಸರುಗಳನ್ನು ಪತ್ರಿಕೆಗಳಲ್ಲು ಪ್ರಕಟಿಸುವಂತೆಯೂ, 100 ರೂಪಾಯಿಗಳಿಗಿಂತ ಹೆಚ್ಚಾಗಿ ಚಂದಾಕೊಟ್ಟವರು ಅವರ ನಿಜರೂಪವನ್ನು ಕೂಟ್ಟಲ್ಲಿ ಪಟ ಇಲ್ಲದಿದ್ದರೆ ಇನಾಮೆಯವರ ಮಂಜೂರಾತಿಯಿಂದ ಸದರಿಯವರ ಛಾಯಾಚಿತ್ರ ಶಾಲೆಯಲ್ಲು ಇಡುವಂತೆ ತೀರ್ಮಾನವಾಯಿತು.

ಈ ಶಾಲಾ ಕಟ್ಟಡಕ್ಕೆ ಎರಡು ಸಾವಿರ ರೂಪಾಯಿಗಳು ಬೇಕಾಗಬಹುದಾಗಿ ಅಂದಾಜು ಮಾಡಲಾಯಿತು. ಹೆಚ್ಚಿನ ಮೊಬಲಗಿಗೆ ಈ ನಾಡು ಬಿಟ್ಟು ಹೊರಗೆ ಹೋಗಿ ಸರ್ಕಾರಿ ಮತ್ತು ಬೇರೆ ಉದ್ಯೋಗಕ್ಕೆ ಸೇರಿರುವವರ ಪಟ್ಟಿ ಒಂದನ್ನು ತಯಾರಿಸಿ ಸದರಿಯವರಿಗೆಲ್ಲಾ ಬರೆಯಬೇಕಾಗಿ ತೀರ್ಮಾನವಾಯಿತು.

ಹೊರಗಿನವರಿಂದ ಚಂದಾ ಎತ್ತಿದವರಿಗೆ ಶೇಕಡ 6 ರೂ ಕಮಿಶನ್ ಕೊಡುವಂತೆ ತೀರ್ಮಾನವಾಯಿತು.

ಚಂದಾ ವಸೂಲಿ ಬಗ್ಗೆ ತ್ರಿಪ್ರತಿ ರಶೀತಿಗಳ 1,500 ರಶೀತಿಗಳನ್ನು ಪ್ರಿಂಟ್ ಮಾಡಿಸದೇಕಾಗಿಯೂ, ಪ್ರತಿ ಚಂದಾ ಕೊಡುವವರು ರಶೀತಿ ವಿನಹ ಚಂದಾ ಕೊಡಬಾರದಾಗಿಯೂ, ಹೊಂದಬಾರದಾಗಿಯೂ ತೀರ್ಮಾನವಾಯಿತು.

ಈ ಸಂಘದ ಹಳೇ ಬಾಕಿದಾರರಿಗೆ ರಿಜಿಸ್ಟರ್ ನೋಟೀಸ್ ಕೊಟ್ಟು ಹಣ ಪಾವತಿ ಮಾಡದಿದ್ದಲ್ಲು ದಾವೆ ದಾಖಲು ಮಾಡಬೇಕಾಗಿ ತೀರ್ಮಾನವಾಯಿತು.

ಈ ಸಂಘಕ್ಕೆ ಮ. ಶ್ರಿ. ಉದಯಂಡ ಮಾಚೈಯ್ಯನವರು ಪ್ರೆಸಿಡೆಂಟರಾಗಿಯೂ, ಮೇರಿಯಂಡ ಗಣಪತಿಯವರು ಸೆಕ್ರೆಟರಿಯವರಾಗಿಯೂ, ಈ ಶಾಲಾ ಹೆಡ್ಮಾಸ್ಟರು ಟ್ರೆಜರರಾಗಿಯೂ, ಮ. ಶ್ರಿ. ಗಳಾದ ಅಂಚಪರವಂಡ ಮಾದಪ್ಪ, ಮಾದಂಡ ಚಂಗಪ್ಪ, ಬಾರಿಕೆ ಕುಂಞಪ್ಪ, ಮುಕ್ಕಾಟಿ ಅಪ್ಪಯ್ಯ, ಕಾಟಿಯಂಡ ಸೋಮಪ್ಪ, ಉದಯಂಡ ಮುತ್ತಪ್ಪ, ಕಲಿಯಂಡ ಕುಶಾಲಪ್ಪ, ಸಂಜುಂಡ, ಮುತ್ತಪ್ಪ, ಕಲ್ಯಾಟಂಡ ಅಪ್ಪಚ್ಚ, ಪರದಂಡ ಗಣಪತಿ, ಕೋಡಿಮಣಿಯಂಡ ಮುತ್ತಪ್ಪ ಮತ್ತು ಮೊಣ್ಣಂಡ ಗಣಪತಿಯವರನ್ನು ಕಮಿಟಿಯವರಾಗಿಯೂ, ಇನ್ನು ಹೆಚ್ಚಿನ ಜನರನ್ನು ಕೂಡಿಸಿಕೊಳ್ಳುವ ಶರತ್ತಿನ ಮೇಲೆ ಮಂಜೂರು ಮಾಡಲಾಯಿತು.

ಅಧ್ಯಕ್ಷರಿಗೆ ವಂದನೆಯಿಂದ ಸಭೆಯು ಮುಕ್ತಾಯವಾಯಿತು.

ಉ. ಮಾಚೈಯ್ಯ,
(ಪ್ರೆಸಿಡೆಂಟ್.)

ಕೊಡಗು ಸರ್ಕಾರದವರಲ್ಲಿ ವಿನಂತಿ

ನಮ್ಮ ಈ ಸಣ್ಣ ದೇಶವು ಬ್ರಿಟಿಷ್ ಸರ್ಕಾರದವರ ಆಳ್ವಿಕೆಗೆ ಒಳಪಟ್ಟು ಒಂದು ಶತಮಾನವಾಗಲಿಕ್ಕೆ ಬಂತು. ಆ ಕಾಲಗಳಾಯಿತು ಚೀಫ್ ಕಮಿಶನರವರ ಅಧೀನದಲ್ಲಿ ಎಲ್ಲಾ ಡಿಪಾರ್ಟ್‌ಮೆಂಟುಗಳ ಮುಖ್ಯ ಅಧಿಕಾರಿಗಳು ಬ್ರಿಟಿಷ್ ಆಫೀಸರುಗಳೇ ಆಗಿದ್ದರು. ಅವರುಗಳು 5 ವರ್ಷಕ್ಕೊಮ್ಮೆ ವರ್ಗಾಯಿಸಲ್ಪಡುತ್ತಿದ್ದರು. ಹೀಗೆ ಬರುತಿದ್ದ ಅಫೀಸರುಗಳಿಂದ ಪ್ರಜೆಗಳಿಗೆ ಏನಾದರೂ ತೊಂದರೆ ಆಗುತ್ತಿದ್ದ ಪಕ್ಷ ಚೀಫ್ ಕಮಿಷನರಿಗೆ ಅಥವ ಪತ್ರಿಕೆಗಳಿಗೆ ಬರೆದು ಪ್ರಕಟ ಪಡಿಸಿದಲ್ಲಿ ಅವರನ್ನು ಕೂಡಲೆ ಬೇರೆ ಕಡೆ ವರ್ಗಾಯಿಸುತ್ತಿದ್ದರೆಂಬದಾಗಿ ಹೇಳುವದನ್ನು ಕೇಳಿದ್ದೇನೆ.

ಈಗಲಾದರೋ? ಇತ್ತೀಚೆಗೆ ದೇಶೀಯರ ಚಳವಳದ ಮೇಲೆ ದೇಶಕ್ಕೆ ಕೌನ್ಸಿಲ್ ಕೊಟ್ಟದ್ದು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ, ಡಿಪ್ಟಿಡೈರೆಕ್ಟರ ಮತ್ತು ಪೋಲೀಸ್ ಸುಪರಿಂಟೆಂಡೆಂಟರ ಉದ್ಯೋಗಗಳು ದೇಶಿಯರಿಗೆ ಕೊಡಲ್ಪಟ್ಟದ್ದು ತುಂಬಾ ಸಂತೋಷಕರವಾದರೂ, ಇದರಲ್ಲಿರುವ ಕುಂದು ಕೊರತೆಗಳನ್ನು ಕುರಿತು ಎಷ್ಟೋ ಸಲ ಕೌನ್ಸಿಲಿನಲ್ಲಿ ಮದ್ರಾಸ್ ಅಧಿಪತ್ಯಕ್ಕೆ ಗಜಿಟೆಡ್ ಉದ್ಯೋಗಸ್ಥರನ್ನು ವರ್ಗಾವರ್ಗಿ ಮಾಡುವಂತೆ ತಕ್ಕ ಏರ್ಪಾಡನ್ನು ಮಾಡಬೇಕಾಗಿ ರಠಾವುಗಳನ್ನು ತಂದರೂ, ಬವಿೂನ್ದಾರರ ಸಂಘವು ಸಹ ಇದಕ್ಕೆ ಒತ್ತಾಸೆ ಕೊಟ್ಟು ಕೇಳಿಕೊಂಡರೂ ಕೂಡ ಕೆಲವರ ಅಭಿಪ್ರಾಯದಿಂದ ಲೋಕಲ್ ಯಾರು ಇವರನ್ನು ವರ್ಗಾಯಿಸುವುದರಿಂದ ಸರ್ಕಾರದವರ ಆಡಳಿತಕ್ಕೆ ಕುಂದಕ ಬಾರದೆಂಬ ಯೋಚನೆಯಿಂದಲೋ ಎಂಬಂತೆ ಈ ವರೆಗೆ ಈ ವಿಷಯಕ್ಕೆ ಗಮನ ಕೊಡದೆ ಇರುವುದರಿಂದ ಮುಂದೆ ಪ್ರಜೆಗಳಿಗೂ, ತಾಬೇದಾರರಿಗೂ ತುಂಬಾ ಅನ್ಯಾಯಗಳು ಆಗುವದರಲ್ಲಿ ಸಂದೇಹ ತೋರುವದಿಲ್ಲ. ಆದಕಾರಣ ದೇಶೀಯರು, ವೈಸರಾಯರವರು ಬರುವ ಕಾಲದಲ್ಲಿ ಕೊಡುವ ಬಿನ್ನಹ ಪತ್ರದಲ್ಲಿ ಮುಖ್ಯವಾದ ಈ ಅಂಶವನ್ನು ಸೇರಿಸಲು ಮರೆಯಬಾರದು. ಅಲ್ಲದೆ ಕಮಿಶನರ್‌ಸಾಹೇಬರವರು ಈ ಕೆಳಗಿನ ನಡತೆಗಳನ್ನು ಚೆನ್ನಾಗಿ ಪರ್ಯಾಲೋಚಿಸಿದರೆ ಇದರಲ್ಲಿನ ಕುಂದು ಕೊರತೆಗಳು ಗೊತ್ತಾಗಬಹುದು.

ಮನುಷ್ಯ ಸ್ವಭಾವವು ಬಹಳ ವ್ಯತ್ಯಾಸವುಳ್ಳದಾಗಿರುತ್ತೆ. ಎಲ್ಲವರೂ ಸತ್ಯವಂತರೂ, ಧರ್ಮಬುದ್ಧಿಯುಳ್ಳವರೂ, ನೀತಿವಂತರೂ ಆಗಿರುವದಿಲ್ಲ. ಇಂಥಾ ಗುಣಗಳಲ್ಲಿ ಉಳ್ಳವರು ಕೇವಲ ವಿರಳರೆಂದರೆ ಅತಿಶಯೋಕ್ತಿಯಾಗಲಾರದು. ಸಾಮಾನ್ಯವಾಗಿ ಎಲ್ಲರಲ್ಲೂ ಒಂದೊಂದು ದುರ್ಗುಣಗಳು ಇದ್ದೇ ಇರುತ್ತವೆ. ಸತ್ಯವಂತರೂ, ಧರ್ಮಬುದ್ಧಿಯುಳ್ಳವರೂ, ನೀತಿವಂತರೂ ಎಷ್ಟೇ ವರ್ಷ ಮೇಲಧಿಕಾರಿಗಳಾಗಿದ್ದರೂ ತಾಬೇದಾರರಿಗಾಗಲೀ ಪ್ರಜೆಗಳಿಗಾಗಲೀ ಏನೊಂದೂ ತೊಂದರೆ ಇರುವದಿಲ್ಲ. ಇಂಥವರ ಆಡಳಿತದಲ್ಲಿ ಹತ್ತು ವರ್ಷ ಸುಬಪಟ್ಟಿದ್ದು, ಒಂದು ದುರ್ಗುಣವುಳ್ಳ ಮೇಲಧಿಕಾರಿಯ ಆಡಳಿತದಲ್ಲಿ ಒಂದು ವರ್ಷ ಕಳೆಯುವುದು ಬಹು ಕಷ್ಟವಾಗಿ ಪರಿಣಮಿಸುತ್ತದೆ. ಅಲ್ಲದೆ ದೇಶಾಚಾರವೂ, ಪದ್ಧತಿಗಳೂ ಕೂಡ ಕಂಡಾಬಟ್ಟೆ ಆಗುವದರಲ್ಲಿ ಸಂದೇಹವಿಲ್ಲ. ಪದ್ಧತಿಗೆ ವಿರೋಧವಾಗಿ ನಡಿಯುವ ವಿಷಯಗಳನ್ನು ಕಂಡೂ ಕೇಳಿಯೂ ದೇಶಿಯರು ಮತ್ತು ಕೊಡವ ಸಭೆಯು ಏನೊಂದೂ ವಿಚಾರಿಸದೆ ಇರಲು ಕಾರಣವೇನು ಎಂಬದನ್ನೂ, ಕೊಡವ ಸಭೆಯ ಮೆಂಬರುಗಳು ಕರ್ನಾಟಕ ಏಕೀಕರಣಕ್ಕೂ, ಪ್ರಜಾ ಜವಾಬ್ದಾರಿ ಆಡಳಿತ ರಚನೆಗೂ ಮತ್ತು ಗಜಿಟೆಡ್ ಉದ್ಯೋಗಸ್ಥರ ವರ್ಗಾವರ್ಗಿಗೂ ಇವುಗಳಲ್ಲಿ ಒಂದಕ್ಕಾದರೂ ಕೂಡ ಒತ್ತಾಸೆ ಕೊಡದೆ ಎಲ್ಲದಕ್ಕೂ ಅಡ್ಡವಾಗುವದರ ಸಂದರ್ಭವನ್ನು ಕಮಿಶನರ್ ಸಾಹೇಬರವರು ಚೆನ್ನಾಗಿ ಪರ್ಯಾಲೋಚಿಸಿದರೆ ತನ್ನಷ್ಟಕ್ಕೆ ತಾನೇ ಅಂತರಂಗದ ಗುಟ್ಟು ತಿಳಿಯಲಾಗುವುದು.

ಮೇಲಧಿಕಾರಿಗಳ ಗುಣ ದೋಷಗಳನ್ನು ಕುರಿತು ಬರೆದುಕೊಳ್ಳುವಷ್ಟು ಸ್ವತಂತ್ರವು ಪ್ರಜೆಗಳಿಗೆ ಕೊಟ್ಟಿರುವುದಿಲ್ಲ. ಸ್ವಲ್ಪ ಮಟ್ಟಿಗೆ ಇದ್ದರೂ ಕೂಡ ದೇಶಿಯ ಅಧಿಕಾರಿಗಳ ಮೇಲೆ ರುಜುವಾತು ಮಾಡುವದು ಕಷ್ಟ. ಅದರಲ್ಲು ಒಂದು ಕಡೆಯಿಂದ ಒಂದು ಕಡೆಗೆ ವರ್ಗಾವರ್ಗಿಗೆ ಆಸ್ಪದವಿಲ್ಲದ ಈ ಸಣ್ಣ ದೇಶದಲ್ಲು 10-20 ವರ್ಷಗಳ ಕಾಲ ಎದ್ದು ಬಿದ್ದು ಈ ಮುಖ್ಯ ಅಧಿಕಾರಿಗಳನ್ನೇ ನೋಡಬೇಕಾಗಿರುವದರಿಂದ ಯಾವನಾದರೂ ಒಬ್ಬನು ಪುಕಾರು ಮಾಡಿದನೆಂದರೆ ಎಲ್ಲಾ ಅಧಿಕಾರಿಗಳು ಅವನನ್ನು ಯಾವ ವಿಧವಲ್ಲಾದರೂ ಶಿಕ್ಷಿಸಬೇಕೆಂಬ ದೃಷ್ಟಿವುಳ್ಳವರಾಗುವರು. ಅದಕ್ಕೋಸ್ಕರ ಯಾರು ಎಷ್ಟೇ ಅನ್ಯಾಯವಾದರೂ ಪುಕಾರು ಮಾಡಲು ಹಿಂಜರಿಯುವರು. ತಾಬೇದಾರಿಗಳ ವರ್ತನೆಯೂ ಮೇಲಧಿಕಾರಿಯ ಭಾವಗಳನ್ನನುಸರಿಸಿಯೇ ಇರಬೇಕಾಗುತ್ತೆ. ಅದಕ್ಕೆ ವಿರುದ್ಧ ಮಾಡಿದರೆ ವಿದ್ಯಾವಂತರೂ, ಸತ್ಯವಂತರೂ ಆದ ತಾಬೇದಾರರೂ ಕೂಡ ಮುಂದರಿಯಲಾರದೆ ಉದ್ಯೋಗವನ್ನು ಬಿಡಬೇಕಾಗುವ ಕಾಲವು ಬಂದೀತು; ಇಲ್ಲವೇ ಸಾಯುವ ಪರಿಯಂತರ ಹೊಟ್ಟೆಪಾಡಿಗಾಗಿ ನರಳುತ್ತಾ ಯಾವ ಸೌಕರ್ಯವೂ ಇಲ್ಲದೆ ತಾಬೇ ಮಾಡುತ್ತಾ ಕಾಲ ಕಳೆಯಬೇಕಾಗುತ್ತೆ. ದೇಶಿಯ ಮೇಲಧಿಕಾರಿಗಳಿಗೆ ಇಷ್ಟಮಿತ್ರರು ಇರುವದರಿಂದ ತಾಬೇದಾರಿಯ ಜಡ್ಜಿಗಳೂ, ಮೇಜಿಸ್ಟ್ರೇಟರುಗಳೂ ಕೂಡ ಮೇಲಧಿಕಾರಿಗಳ ಗುಣಸ್ವಭಾವಗಳಿಗನುಸಾರ ವರ್ತಿಸಿ, ನ್ಯಾಯವಾದ ತೀರ್ಪುಗಳನ್ನು ಮಾಡುವದಕ್ಕೆ ಹಿಂಜರಿಯುವ ಕಾಲವೂ ಕೂಡ ಒಡನೆ ಬಂದೀತು. ಕೆಲವು ಕೇಸುಗಳಲ್ಲಿ ಮೇಲಿನ ಕೋರ್ಟುಗಳಿಗೆ ಅಪೀಲು ಮಾಡಿಕೊಳ್ಳುವ ಅವಕಾಶವೂ ಇಲ್ಲ.

ವಿದ್ಯೆಯೂ, ಬುದ್ಧಿಯೂ, ಚತುರತೆಯೂ ಒಬ್ಬರಲ್ಲಿ ಬಂದೊಂದು ತರವಾಗಿರುವದರಿಂದ ದೊಡ್ಡ ಉದ್ಯೋಗಸ್ಥರನ್ನು ಬಹು ಕಾಲ ಒಂದೇ ಸ್ಥಳದಲ್ಲಿ ಇಡುವುದರಿಂದ ಉತ್ತಮ ಆಡಳಿತಕ್ಕಾಗಲೀ, ಪ್ರಜೆಗಳ ಸೌಕರ್ಯಕ್ಕೂ ಏನೊಂದು ಉತ್ತೇಜನವು ಉಂಟಾಗಲಾರದು. ಇವುಗಳನ್ನೆಲ್ಲಾ ಪರ್ಯಾಲೋಚಿಸಿ ಈಗ ಇರುವ ಐದು ಮುಖ್ಯ ದೇಶೀಯ ಅಧಿಕಾರಿಗಳನ್ನು ವರ್ಗಾಯಿಸುವಂತಾಗಲೀ ಇಲ್ಲವೇ, ಐದು ವರ್ಷದ ನಂತರ 200 ರೂ ಗೆ ಮೇಲ್ಪಡದ ಪೆನ್ಶನ್ ಕೊಟ್ಟು ಕಳುಹಿಸುವಂತಾಗಲೀ ಏರ್ಪಾಡು ಮಾಡದೆ ಹೋದರೆ ಮುಂದೆ ನ್ಯಾಯಕ್ಕೆ ಪ್ರಾಮುಖ್ಯತೆ ಕೊಡುವದರ ಬದಲು ಅನ್ಯಾಯಕ್ಕೆ ಪ್ರಾಮುಖ್ಯತೆ ಕೊಟ್ಟಾಂತಾಗುವುದಲ್ಲವೇ?

ದೇಶಸ್ಥ

ಪೇರೂರು ಗ್ರಾಮಸ್ಥರಿಗೆ ಜವಾಬು.

ಮಹಾಶಯರೇ,

ತಮ್ಮ ತಾ. 26-8-29ರ ಮೀಟಿಂಗ್ ಪ್ರೊಸೀಡಿಂಗ್ಸ್, ತಾ. 13-9-29ರ "ಕೊಡಗು" ಪತ್ರಿಕೆಯಲ್ಲು ನೋಡಿ ಅತಿ ಆಶ್ಚರ್ಯಕ್ಕೆ ಕಾರಣವಾಯಿತು. ಸದರಿ ತೋಲಂಡ ನಾಣಪ್ಪನವರು ಅವರ ಸ್ವಬುದ್ಧಿಯಿಂದ ಈ ಮೀಟಿಂಗ್ ಕೂಡಿಸಿರಲಾರರು. ಯಾಕೆಂದರೆ—ಅವರು ಸ್ವತಃ ಪೆ... ಎಡಕೇರಿ ದೇವಪ್ಪನವರ ಮನೆಗೆ ಬಂದಿದ್ದಾಗ್ಯೂ ಇವರು ಸ್... ನ್ ಮಾಡಬೇಕಾದರೆ ಚೆನ್ನಾಗಿ ಹೆಡ್ಡಿಂಗ್ ಓದಿ ನೋಡಿ ಕೊಡಗು ದೇಶವು ಈಗ ಇರುವಂತೆಯೇ ಇರಬೇಕೆಂದೂ, ಕರ್ನಾಟಕ ಏಕೀಕರಣಕ್ಕೆ ಸೇರಿಸಲು ಪೂರಾ ವಿರೋಧವೆಂದೂ,

ಹೇಳಿರುವರು. T. D. Nanappa ಎಂದು ಅವರ ಸ್ವಹಸ್ತದಿಂದ 2009ನೇ ನಂ ವೆಂಬರಾಗಿ ಸೈನು ಮಾಡುವಾಗ್ಯೆ ಮೆ ಎಡೆಕೇರಿ ದೇವೈಯ್ಯನವರು ಕುದ್ದು ಇದ್ದು ಇವರಿಬ್ಬರು ಸೈನ್ ಮಾಡಿದರ ಮೇಲೆ ದೇವೈಯ್ಯನವರು ಅವರ ಮನೆಮ ಬಿಯ್ಯಣ್ಣನವರನ್ನು ಕರೆದು ಸದರಿ ಬಿಯ್ಯಣ್ಣನವರಿಗೆ ಇವರಿಬ್ಬರು ಬೋಧಿಸಿ ಪುನಹ ಓದಿ ಹೇಳಿ ಸದರಿಯವರೂ ಸಹ ಸೈನ್ ಮಾಡಿದಾಗಿರುತ್ತೆ.

ಹೀಗಿರುವಾಗ ಬೇರೆಯವರ ದುರ್ಬೋಧನೆಯಿಂದ ಪಿಟಿಶನ್ ಮಾಡಿದ್ದೆಂಬ ನೆವದಿಂದ ಆ ಬಾತ್ಮಿ ಬರೆದ ಉ ಕಾರಣ ಎಂಬದಕ್ಕೆ ಯಾವ ಸಂದೇಹವೂ ಇಲ್ಲ

ಕೊಡಗು ಮಹಾಶಯರೇ, ಇನ್ನಾದರೂ ಇಂತಾ ಸುಳ್ಳು ಬಾತ್ಮಿಗಳಿಗೆ ಮರುಳಾಗದೆ ನಮ್ಮ ದೇಶವನ್ನು ನಾವೇ ಈ ವರೆಗೆ ಇದ್ದಂತೆ ಇನ್ನೂ ಇಟ್ಟುಕೊಳ್ಳಬೇಕಂದೂ ಆಗಿಂದಾಗ್ಯೆ ಕ್ಷಾಮ ಉಂಟಾಗುತೆಂಬ ಕರ್ನಾಟಕ ಏಕೀಕರಣಕ್ಕೆ ಈ ನಮ್ಮ ಪವಿತ್ರವಾದ ಕಾವೇರಮ್ಮನ ಕೊಡಗನ್ನು ಸೇರಿಸಲು ಒಪ್ಪದ ಮಹಾಸೀಯರೆಲ್ಲರೂ ಐಕವಾಗಿ ಒಂದು ಹೊಸ ಒಪಿನ್ನಾರದ ಸಂಘಕ್ಕ ಮೆಂಬರರಾಗುವಿರಾಗಿ ಅತಿ ವಿನಯದಿಂದ ದೇಶೀಯರನ್ನು ಬೇಡುವ

ಉದಯೊಂಡ ಮೊಣ್ಣಯ್ಯ

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಪ್ರೆಂಚ್, ಇಂಗ್ಲಿಷ್ ಹಿಂದುಸ್ತಾನಿ ಬಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕ ಬಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದಕಾಲ ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ ನೂತನ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೂಡಿದೆ

ಕ್ರಯ ಪುಸ್ತಕ ೧ಕ್ಕೆ ರೂ ೧—೦—೦

ಎಸ್. ವಿ. ಗೋಪಾಲ್ ಬುಕ್ ಡಿಪ್ಪೋ,

52—37 37. ತಿರುಪಳ್ಳಿಬೀದಿ, ಮದರಾಸ್.

Lamps

(of Basel Mission fame)

Just arrived! Shop Early!!

Table Lamps—glass container with brass fittings & Shade @ Rs 7/8, 6/12, 6/8 & 5/- Each

Wall Lamps—glass container with brass fittings & mirror @ Rs 3/12, 3/- 1/8 & 1/2 Each

Hanging Lamp brass container @ Rs 3/12

Hanging Lamp glass container @ Rs 2/12

Lanterns thoroughly reliable @ Rs 3/4 3/2 & 3/ Each

Spare Chimneys Stocked

The Coorg Emporium,

Mercara **Sidapur.**

48—13

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕಾರ್ಡು ಬರೆದರೆ ಉಗಿನ
ಕ್ಯಾಟಲಾಗು ಪುಕಸಟೆಯಾಗಿ
ಕಳುಹಿಸಲ್ಪಡುವುದು

ಜೋಡು ಹೊಳವಿನ ಕೋಟದ ರೈಫಲುಗಳು	ರೂ	120 ರಿಂದ	ರೂ	2750 ರ	ವರಿಗೆ
ಒಂಟಿ " "	"	35	"	950	,
ಜೋಡು " " ಕೋವಿಗಳು	"	50	" ,	1350	"
ಒಂಟಿ " " "	"	35	" ,	275	,
ಜೋಡು ಹೊಳವಿನ ಕೇಪು "	"	45	" ,	135	
ಒಂಟಿ " , "	"	30	" ,	80	,
ಬ್ರೀಚ್ ಲೋಡಿಂಗ್ ರಿವಾಲ್ವರುಗಳು	"	35	" "	350	"
ಪಿಸ್ತೋಲುಗಳು	,	30	, ,	150	.

ಕಾಡು ಮೃಗಗಳ ಬೇಟೆ, ಮೀನು ಬೇಟೆ ಮುಂತಾದ ಎಲ್ಲಾ ತರಹದ ರಾತ್ರಿಯ ವಿನೋದ ಮತ್ತು ಕೆಲಸಗಳಿಗೆ ಬಹು ಉಪಯೋಗಕರವಾದ ಉತ್ತಮ 'ಸರ್ಚ್ ಲೈಟ್' ಎಂಬ ದೀಪಕ್ಕೆ ಬರೇ ರೂ 30 ರವಾನೆಯ ಚಾರ್ಜೆಲ್ಲ ಕತ್ತಿಗಳು, ಬರ್ಚಿಗಳು, ತೋಟಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—5 210 Abdul Rehman Street, BOMBAY.

ಟೇಬಲ್ ಟೈಂಪೀಸು ಇನಾಂ.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ರಿಸ್ಟ್ ವಾಚುಗಳು ಬಹು ನೋಟವಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು ಇದರ ಕೇಸು ಬಂಗಾರಕ್ಕೆ ಸರಿಸಮನಾಗಿರುವುದು ಇದಕ್ಕೆ ಖಾತ್ರಿಯಾದ ೩ ವರ್ಷ ಗ್ಯಾರಂಟಿ ಕೊಡುವೆವು ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಒಂದನ್ನು ಇನಾಮಾಗಿ ಕೊಡುವೆವು ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1 ಕ್ಕೆ 7—0—0.

ವಿಳಾಸ—ಕೆ ಎಸ್ ಜೆಸ್‌ಸನ್ ಅಂಡ್ ಕೊ

52—13 168 ಚೈನಾ ಬಜಾರ್, ಮದರಾಸು.

ಭಂಗಾರದ ಉಂಗುರಗಳು ೦-೧೨-೦ ಆಣೆ

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಡ ಕಟ್ಟಿದೆ ಇದರ ಬಣ್ಣವು ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಸವರನ್ ಬಂಗಾರದ ಬಣ್ಣ ಕೊಟ್ಟಿದೆ ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ ೧ಕ್ಕೆ ೧೨ ಆ ೩ ಉಂಗುರಗಳಿಗೆ ಒಂದು ಟೇಬಲ್ ಟೈಂಪೀಸನ್ನೂ ೬ ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ.



ವಿಳಾಸ—ರೀಗಲ್ ವಾಚ್ ಕಂಪೆನಿ,

52—13 ಪೊ ಬಾ. 243, ಮದರಾಸು.

ಎಂ. ಎಸ್. ಶಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

'ದಿಲ್ ಬಹರ್ ಫ್ಲ್ಯೂಟ್' ಸಿಂಗಲ್ ರೀಡ್ ಹಾರ್ಮೋನಿಯಂ

		1 ಕ್ಕೆ	50	8	0
'ಸಿದ್ದಪ್ಪಾಸ್ ಫ್ಲ್ಯೂಟ್'	"	"	42	8	0
ಶಕುಂತಲಾ	" "	"	40	0	0
ಮೋಹನ್	" "	"	37	8	0
ಮೋಸ್ಲೇಂ	" "	"	35	0	0
ಮಹಾರಾಜಾ	" "	"	32	8	0
ಕೊಹಿನೂರು	" "	"	29	8	0
ಡೈಮಂಡ್	" "	"	27	8	0
ಬಿಬಿಲೀ	, "	,	25	0	0

"ದಿಲ್‌ಬಹರ್ ಫ್ಲ್ಯೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ

ಸ್ಪೆಷಲ್	1 ಕ್ಕೆ	65	0	0
ಮೋಹನ್	" "	56	0	0
"	, ,	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಹಾಕಿದ ಖಾತ್ರಿಯಾದ ಬಂದೊಬಸ್ತು ಆದ ಫೌಂಟನ್ ಪೆನ್‌ಗಳು

ವರ್ಲ್ಡ್ಸ್ ಪವರ್ ಫೌಂಟನ್ ಪೆನ್ 1 ಕ್ಕೆ	3	0	0
" ಬಿಗ್‌ಬ್ರದರ್ , "	3	2	0
ಸೆಲ್ಫ್ ಫಿಲ್ಲರ್ " "	3	8	0
, ಮಾಟಲ್ ಕವರ್ , "	3	14	0
" ಮೂಟಲ್ ಸೆಲ್ಫ್ ಫಿಲ್ಲರ್ , ,	4	4	0
, ಬ್ರಾಸ್‌ಕವರ್ ಸೆಲ್ಫ್‌ಪಿಂಗ್ ಪೆ— "	5	8	9
, ಸೇಫ್ಟಿ ಪೆನ್ " "	6	8	0
" ಲೇಡೀಸ್ ಸೈಜಿನ ಮಾಟಲ್ ಕವರ್ ಪೆನ್ "	4	8	0
ಬ್ಲಾಕ್‌ಬರ್ಡ್ ಪೆ— 1ಕ್ಕೆ 3 8 0 ಮತ್ತು	3	12	0
ಸ್ವಾನ್ ಪೆನ್ , 6 8 0 "	7	0	0
ವಾಟರ್‌ಮೇನ್ ಐಡಿಯಲ್ 1 ಕ್ಕೆ 8 0 0 "	8	8	0
" ಸೆಲ್ಫ್ ಫಿಲ್ಲಿಂಗ್ ಯೂ ಸೇಫ್ಟಿ ಪೆ— 1ಕ್ಕೆ	12	0	0
ಪಿಗ್‌ಬ್ಯಾರಲ್ ಮಾಡ್ ಪೇರ್ " ,	8	0	0
" ಸಫೈರ್ ಪೆನ್ 1ಕ್ಕೆ	17	0	0

ಖಾತ್ರಿಯಾದ ಬಂದೊಬಸ್ತು ಆದ ಟೈಂಪೀಸುಗಳು

ಸಣ್ಣ ಸೈಜಿನ ಜರ್ಮನ್ ಟೈಂಪೀಸು 1ಕ್ಕೆ	2	2	0
ಜರ್ಮನ್ ಗುಂಡಾ ಕೃತಿಯ ಅಲಾರಂ ಟೈಂಪೀಸು "	5	12	0
ಅನ್‌ಸೋನಿಯಾ ಬಿ ಟೈಂಪೀಸು "	5	15	0
" ಅಲಾರಂ " "	5	6	0
ವಿಗ್‌ಬೆನ್ " , "	9	6	
, ಬಿಬಿಟ್ರೀಕ್ ನಾಲ್ಕಂಡಿರುವ ಅಲಾರಂ ಟೈಂಪೀಸು "	13	5	0
ಘಂಟೆ ತೋರಿಸಿ ಅಲಾರಂ ಬಾರಿಸುವ ಕ್ಯಾರೇಜ್ ಕ್ಲಾಕ್ .	7	2	0
" ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1ಕ್ಕೆ	8	10	0
" ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಬಾರಿಸುವ ಕ್ಯಾರೇಜ್ ಕ್ಲಾಕ್ 1ಕ್ಕೆ	9	12	0

ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಕರೆಯುವಂತ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಷೇರ್ ಬಂಡವಾಳ	50,000
ವಸೂಲಾದ ಷೇರ್ ಮೊಬಲಗು	20 660
ಒಟ್ಟು ಬಂದ ಠೇವಣಾತಿ	1 87,706

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಕೊಂಗೆಟ್ಟಿರ ತಮ್ಮಯ್ಯನವರು.

ಸೆಕ್ರೆಟರಿ
ಸಿ. ಯನ್. ವೆಂಕಟಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1929.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ. ಕೇಕಡ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾನಡೇರಿರ ನಂಜಪ್ಪನವರು, ಮತ್ತು ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ)
ಮೂರ್ನಾಡು—ಮಡೆಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್, "ಕೊಡಗು" ಮಡಿಕೇರಿ

12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART
321 Abdul Rehman Street.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಚಳಿ ಜ್ವರ, ದಿನನಿತ್ಯ ಬರುವ ಜ್ವರ, 3—4 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—?—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0, 12ಕ್ಕೆ ರೂ. 14.

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹಸಿರಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಬಿಳಿ ಹೋಗುವುದು, ಆಗಾಗ್ಯೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಒಣಯೋನಿ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಚಿಕ್ಕ ಬಾಟ್ಲು 1 3, 6ಕ್ಕೆ ರೂ 1—4—0 3—8—0, 6—12—0.

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಅಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವುದು, ತಲೆಭಾರ, ಕಣ್ಣಿಂದ ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.

52—50 9. ಮಂಗಳೂರು.

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಫೋನುಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸದಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇನೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು



24—19

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ

ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ.
1926.	391	" "	1926.	106	" "
1927.	468	" "	1927.	122	" "
1928.	585	" "	1928.	140	"

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ
1921ರಲ್ಲಿ " " " " "	1927ರಲ್ಲಿ " " " 25

ಈ ಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿ ಒಂದರ ನಿಮಗೆ ಅದರಿಂದ ಲಾಭ ಉಂಟಾಗುವುದು

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು. 52—39

ಎಲ್. ಆರ್. ಕೃಷ್ಣಸ್ವಾಮಯ್ಯರ್ ಬ್ರಾಂಚ್ ಸೆಕ್ರೆಟರಿ.

Goldsmiths' Rolling Mills.
ಪಟ್ಟಿ ಮೆಷಿನುಗಳು.



ನಗ ಮಾಡುವವರು ಮತ್ತು ಅಕ್ಕಸಾಲೆಯವರು ಉಪಯೋಗಿಸುವ ಚಿನ್ನ ಮತ್ತು ಬೆಳ್ಳಿಯ ತಗಡುಗಳನ್ನು ಮಾಡುವ ಈ ಮಿಲ್ಲುಗಳಿಗೆ ನಾವು ಏಜೆಂಟರಾಗಿರುತ್ತೇವೆ. ಪ್ರತಿಯ ಬಹು ಮುಖ್ಯತರ ಮುಖ್ಯ ಪಟ್ಟಣಗಳಲ್ಲಿ ಸಬ್ ಏಜೆಂಟರುಗಳು ಬೇಕಾಗಿದ್ದಾರೆ. ಹೆಚ್ಚಿನ ಸಂಗತಿ ತಿಳಿಯಬೇಕಾದಾಗ ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳುವುದು

Ch. Sobhanachalam & Sons
Chilakalapudi P. O.
Masulipatam

12—6

FORD SALES AND SERVICE

The most competitive CAR in the most competitive YEAR

The new model A Ford!!
with three speed selective sliding gear Transmission.
The most economical car in the market
For Demonstration & further particulars
Please apply to:—

S. Sunder Rau,
Ford Dealer for Coorg,
MERCARA.

24—13

Printed & published by P. I. Bellappa, at "Kodagu" Press, Mercara, for "Kodagu" Ltd.

Reg. No. M. 1500.
If not delivered please return to
"KODAGU" OFFICE, MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತಯಾ || ಐಕ್ಯಮತ್ಯೇನ ದೇಶಾನಾ ಸುಸ್ಥಿರಾ ರಾಜ್ಯ ಸಂಪದಾ ||

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯	ಮಡಿಕೇರಿ, ಸನ್ ೧೯೨೯ನೇ ಇಸವಿ ಅಕ್ಟೋಬರ್ ತಾರೀಕು ೪ನೇ ಶುಕ್ರವಾರ.	ಸಂಚಿಕೆ ೧೮

Telephone :—
3145

By Appointment to
H. E. The Governor of Madras.

Telegrams :—
"PRECIOUS"

Brooch.

Guarantee of Satisfaction throughout in every order large or small.



Excellent Quality Chaste Designs Moderate Prices.

Ice Tumbler.

"Green Hills"
VIRARAJENDRAPET.
7th Decr., 26

Sir,

.......I am glad to note that the Jewels have a good finish. .. ...

(Sd.) Mrs. A. B. CHENGAPPA.

SUNTICOPPA,
Nellote Estate.
7th April, 28

Dear Sir,

I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends

(Sd.) MISS K. SUBBIAH

MERCARA,
20th May, 27.

Dear Sir,

.. I am quite satisfied with the Jewels you sent on the 16th instant.

(Sd.) Mrs. K. S. CARIAPPA

52—3

Illustrated Catalogue Free on Application.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಬೇರರ್ ಕುಳದ ದೆಸೆಯಿಂದ ಶಿಕ್ಷಿತಗೆದ ಕಾಫಿಗಿಡಗಳ ಸಂಖ್ಯೆಯು ಧಾತುಗುಣದ (Mineral) ಗೊಬ್ಬರವಾಕಿದ ಗಿಡಗಳಿಂತಲೂ ಸಾರಜನಕ (Nitrogenous ಗೊಬ್ಬರ ಬಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ದಾಪುರ ಪರೀಕ್ಷಾ ಕ್ಷೇ Experiment station) ದಲ್ಲಿ ಕಂಡು ಬಂ ದೆ ಆದುದರಿಂದ ರೋಬಸ್ಟ ಪಾಟ್—ಹೋಲ್ ಬೋರರ್‌ಗೆ ಸಾರಜನಕ ಗೊಬ್ಬರವು ಪ್ರಯೋಜನಕರವಾಗುವದೆಂದು ತೋರ ತ್ತದೆ" (ಮೈ ಜ ಮನ್ಯೂಜನರಲ್ ... ಡಿಪಾರ್ಟ್‌ಮೆಂಟ್.)

ಹೆಚ್ಚಿನ ಮಾಹಿತಿ, ವಿವಿದ ಬೆಳೆಗಳ ವಿಷಯ ವರ್ಣ ನವಾಗಿ ... ಪತ್ರಿಕೆ ... ಕೆಳಗಿನ ... ರರಿಗೆ ಬರೆಯಬಹುದು

(1) ಚಿಲಿಯನ್ ನೈಟ್ರೇಟ್ ಕಮಿಟಿ
'ಇಂಡಿಯನ್ ಡಿಲೀ...
ಪೋ. ಬಾ. ನಂ. ...

2) ಮಿಸ್ಟ ...
... ಕಂಪನಿ,
ಮಡಿಕೇರಿ.

4—20

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿ ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲು ಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿ ಬಿಡುವದು. ಇಂಥಾ ಹೆಂಗಸರು ಈ ಎಣ್ಣೆಯನ್ನು 15 ದಿನಗಳು ಸೇವಿಸುವುದ ರಿಂದ ಗರ್ಭವು ನಿಂತು ಪುತ್ರ ಸಂತಾನವಾಗು ವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ, ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆನೋವು ಮುಂತಾದವು ಖಾತ್ರಿತ ಗುಣಪಡಿಸುವದು. ಈ ಎಣ್ಣೆಯನ್ನ ಬೊಂ ... ಮದರಾಸು ಅಧಿಪತ್ಯಗಳಲ್ಲಿ ಮಕ್ಕಳಿಲ್ಲದವರು ಉ ... ಪುತ್ರ ಸಂತಾನ ಪಡೆದಿರುವರು. ಒಂದು ಬಾ ... ತರಿಸಿ ಪರೀಕ್ಷಿಸಿ. ಉಪಯೋಗಿಸುವ ವಿಧ ... ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟಲ್ 1ಕ್ಕೆ 2—8—0.

ವಿಳಾಸ:— ಕೆ. ಎನ್. ರಾಧಾಕೃಷ್ಣ ಬ್ರದರ್ಸ್,
109 ಚೈನಾ ಬಜಾರ್ ರೋಡ್, ಮದರಾಸು.

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್ ಈದಿಗ ಯಕ್ಸ್‌ಟೆನ್ಷನ್, ಮೈಸೂರು.

ನಮ್ಮಲ್ಲಿ ಮೆಕ್ಸ್‌ಪೆಲ್ಲರುಗಳಿಂದ ತಯಾರಾಗಿ ಫಿಲ್ಟರುಗಳಿಂದ ಶೋಧಿಸಲ್ಪಟ್ಟ ಅಸ್ಪಟಿವಾದ ಕಡಲೆಕಾಯಿ ಎಣ್ಣೆಯು ಶುದ್ಧವಾದ ಕಡಲೆಕಾಯಿ ಹಿಂಡಿ ಮಾತ್ರ ಕಡಲೆಕಾಯಿ ಹಿಂಡಿ ಪುಡಿಯು ಸಹ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯಬೇಕೆಂದವ ... ಕೃವರು ಸಂತೆಪೇಟೆಯಲ್ಲಿ ಇರುವ ನನ್ನ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರ ದ್ವಾರ ತಿಳಿಯಬಹುದು.

26—13

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದರ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲ ಬಾಧೆಗಳನ್ನು ತೀರಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ ಮುಂತಾದ ಭಸ್ಮ ... ಸಾಟಿಯಾಗಲಾರವು

ಮದನ ಮಂಜರಿ ಮಾತ್ರೆಗಳು.

ದಾತು ಪುಷ್ಟಿಯನ್ನು ಕೊಡುವದರಲ್ಲಿ ಸಮಾನ ರಹಿತವಾದ 32. ಮಾತ್ರೆ ಡಬ್ಬಿಯ ಕ್ರಯ ೧—೦—೦

52—7 ಮದನಮಂಜರಿ ಫಾರ್ಮಸಿ,
1/94 ಚೀನಾ ಬಜಾರ್, ಮದ್ರಾಸ್.

ಏಕೆ ನರಳುತ್ತೀರಿ?

ಕೃಯವು ಅಂಚೆಹಾಸಲು.

ಇಲ್ಲಿದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಾದ ರೋಗಗಳನ್ನು ಪರಿಹಾರ ಮಾಡಿಕೊಂಡು, ಮನಸ್ಸಿನಲ್ಲಿ ... ಬಾರದಂತೆ ನಿವಾರಣೆ ಮಾಡಿಕೊಳ್ಳಿ.

32—7 ಮದನಮಂಜರಿ ಫಾರ್ಮಸಿ,
1/94 ಚೈನ ಬಜಾರು ರೋಡು, ಮದ್ರಾಸು

ಕೊಡಗು.

ಸನ್ ೧೯೨೯ನೇ ಇಸವಿ

ಅಕ್ಟೋಬರ್ ತಾ. ೪ ನೇ ಶುಕ್ರವಾರ.

ಮಹಾತ್ಮ ಗಾಂಧಿಯವರ ಜನ್ಮದಿನ.

ಈ ತಾರೀಖು ೨ನೇ ಬುಧವಾರಕ್ಕೆ ಮಹಾತ್ಮ ಗಾಂಧಿಯವರಿಗೆ ೬೦ ವರ್ಷ ಪ್ರಾಯವು ತುಂಬಿ ೬೧ನೇ ವರ್ಷವು ಪ್ರಾರಂಭವಾಯಿತು. ಮಹಾಲಯ ಅಮಾವಾಸ್ಯೆ ಇದ್ದುದರಿಂದ ಈ ದಿನವು ಹಿಂದುಗಳಿಗಂತೂ ಪವಿತ್ರವಾದದ್ದಾಗಿದೆ. ಇಡೀ ಪ್ರಪಂಚದಲ್ಲಿಯೇ ಈಗಿನ ಕಾಲದ ಅತಿ ದೊಡ್ಡ ಮನುಷ್ಯರೆಂದೆನ್ನಿಸಿಕೊಂಡಿರುವ ಮಹಾತ್ಮರು ಜನಿಸಿದ ಈ ದಿನವನ್ನು ಹಿಂದೂಗಳು ಮಾತ್ರವಲ್ಲ, ಹಿಂದೂದೇಶದವರೆಲ್ಲರೂ ಮತ್ತು ಜಗತ್ತಿನ ಪಲವು ಕಡೆಯವರೂ ಹಬ್ಬದ ದಿನವಾಗಿ ಆಚರಿಸಿದರೆಂದರೆ ಅತಿಶಯೋಕ್ತಿಯಾಗಲಾರದು. ಈ ಮಹಾಪುರುಷರ ಹೆಸರು ತಿಳಿಯದ ಹಿಂದೀಯರು ಬಹು ಕಡಿಮೆ. ಇವರಷ್ಟು ಜನಪ್ರಿಯರಾದ ಮುಂದಾಳು ಈಗ ಯಾರೂ ಇಲ್ಲವೆಂಬುದರಲ್ಲಿ ಸಂದೇಹವಿಲ್ಲ.

ಇವರ ಈ ಪ್ರಸಿದ್ಧಿಗೂ, ಜನಪ್ರಿಯತೆಗೂ ಕಾರಣವೇನೆಂದು ಸ್ವಲ್ಪ ವಿಚಾರಿಸಬೇಕಾಗಿದೆ. ಇವರು ಬೇರೆ ಹಲವು ಹಿಂದೀಯರಂತೆ ಪಾಶ್ಚಿಮಾತ್ಯ ವಿದ್ಯಾಪಾರಂಗತರಾದರೂ ಅವರ ನಡೆನುಡಿ, ಆಚಾರ ಪದ್ಧತಿಗಳ ಬಲೆಗೆ ಸಿಕ್ಕಿ ಬೀಳದೆ ತಮ್ಮ ಮಾತೃಭೂಮಿಯ ಪ್ರೇಮದಿಂದ ತುಂಬಿ ತುಳುಕುತ್ತಿರುವರು. ಹೊಟ್ಟೆಗೆ ಒಂದು ಹಿಡಿ ಅನ್ನವೂ, ಮೈಗೆ ಒಂದು ತುಂಡು ಬಟ್ಟೆಯೂ ಕೂಡ ಇಲ್ಲದೆ ಕಷ್ಟಪಡುತ್ತಿರುವ ತಮ್ಮ ಕೋಟಿಗಟ್ಟಲೆ ಹಿಂದೀಯ ಸಹೋದರರ ಉದ್ಧಾರಕ್ಕಾಗಿ ಹೋರಾಡುತ್ತಿರುವವರಲ್ಲಿ ಇವರಿಗೆ ಸರಿಸಮಾನರಿಲ್ಲ. ಸ್ವರಾಜ್ಯವೆಂದರೆ ಬಡವರ ಉದ್ಧಾರವೆಂದು ಇವರು ತಿಳಿದುಕೊಂಡಿರುವರು. ತಾನು ಹೇಳಿದಂತೆ ಆಚರಿಸುವ ಮುಂದಾಳುಗಳ್ಯಾರಾದರೂ ಇದ್ದರೆ ಅದು ಇವರೇ. ಇವರು ಎಲ್ಲರಿಗೂ ಒಂದು ಆದರ್ಶಪ್ರಾಯರಾಗಿ ಜೀವಿಸುತ್ತಿರುವರು. ಈಗಿನ ಬಾಹ್ಯ ಪ್ರಪಂಚದಲ್ಲಿ ನಿತ್ಯವೂ ಸತ್ಯವನ್ನೇ ನುಡಿಯುವುದು ಸಾಧ್ಯವಲ್ಲವೆಂದು ಹೇಳುವವರ ಮಾತನ್ನು ಇವರು ಸುಳ್ಳು ಮಾಡಿರುವರು. ಸತ್ಯವನ್ನು ಪಾಲಿಸಲಿಕ್ಕಾಗಿ ಇವರು ಎಷ್ಟೇ ಕಷ್ಟಕ್ಕೆ ಒಳಗಾಗಿದ್ದರೂ ಧೈರ್ಯಗುಂದದೆ ಸತ್ಯ ಸಂಶೋಧನೆಯನ್ನು ಜಯಪ್ರದವಾಗಿ ನಡಿಸಿರುವರು.

ಇವರು ಈಗಿನ ಕಾಲದ ಕರ್ಮಯೋಗಿಗಳಾಗಿರುವರು. ತಮ್ಮ ನಿತ್ಯ ಕರ್ಮ, ಧರ್ಮಗಳನ್ನು ಏನೊಂದೂ ಲೋಪವಿಲ್ಲದೆ ನಡಿಸುತ್ತಿರುವರು. ಒಳ್ಳೇ ದೇವಭಕ್ತರೂ, ಪರಿಶುದ್ಧ ಆಚರಣೆಯುಳ್ಳವರೂ ಆಗಿರುವರು. ತಮ್ಮ ನಡತೆಯ ಸರಳತೆಯಿಂದಲೂ, ಜೀವನದ ನಿರ್ಮಲತೆಯಿಂದಲೂ, ಅಸಹಾಯಕರ ಕಡೆಗೆ ಇರುವ ಪ್ರೀತಿಯಿಂದಲೂ ಇವರು ಹಿಂದೂ ದೇಶದವರ ಮಾತ್ರವಲ್ಲ, ಜಗತ್ತಿನ ಜನರ ಮನಸ್ಸನ್ನೇ ತಮ್ಮ ಕಡೆಗೆ ಆಕರ್ಷಿಸಿರುವರು. ಇವರು ಅಹಿಂಸಾ ತತ್ವದ ಮೂರ್ತಿ ಸ್ವರೂಪರಾಗಿರುವುದರಿಂದ ಪ್ರಾಣಿವರ್ಗವೂ ಕೂಡ ಇವರ ಪ್ರೇಮದ ದೃಷ್ಟಿಯು ಬೀರಿದೆ. ಶತ್ರುಗಳನ್ನೂ ಕೂಡ ಪ್ರೀತಿಯಿಂದ ಗೆಲ್ಲಬೇಕೆನ್ನುವ ಮಹಾತ್ಮರೇ ಇವರು.

ಇಂಥಾ ಜಗತ್ಪ್ರಖ್ಯಾತರ ೬೧ನೇ ಜನ್ಮ ದಿನವನ್ನು ಸಾವಿರಾರು ಕಡೆಗಳಲ್ಲಿ ಆಚರಿಸಿದಾಗ್ಯೂ ಜನರು ರಾಷ್ಟ್ರೀಯ ಧ್ವಜಾರೋಹಣ ಮಾಡಿ ಇವರ ಭಾವ ಚಿತ್ರದೊಂದಿಗೆ ಮೆರವಣಿಗೆ ಹೋದನಂತರ ಸಾರ್ವಜನಿಕ ಸಭೆಗಳಲ್ಲಿ ಇವರ ಗುಣಕಥನವನ್ನು ಮಾಡಿ, ಇವರಿಗೆ ಆಯುರಾರೋಗ್ಯವನ್ನು ದಯಪಾಲಿಸುವಂತೆ ಭಗವಂತನಿಗೆ ಪ್ರಾರ್ಥಿಸಿದಲ್ಲದೆ, ಇವರಿಗೆ ಬಹು ಪ್ರಿಯವಾದ ಖಾದಿ ಬಟ್ಟೆಯನ್ನು ಮನೆ ಮನೆಗೆ ಹೊತ್ತುಕೊಂಡು ಹೋಗಿ ಮಾರಾಟ ಮಾಡಿದರು. ಇದೇ ರೀತಿಯಾಗಿ ನಮ್ಮ ದೇಶದ ಪೊನ್ನಂಪೇಟೆಯಲ್ಲಿ ಈ ಉತ್ಸವವನ್ನು ಆಚರಿಸಿದರೆಂದು ಕೇಳಲು ಸಂತೋಷಪಡುತ್ತೇವೆ. ಮಹಾತ್ಮರನ್ನು ಸ್ಮರಿಸಿಕೊಳ್ಳಲಿಕ್ಕಾಗಿ ಈ ಕೆಲಸಗಳನ್ನೆಲ್ಲಾ ಮಾಡಬೇಕಾದದ್ದೆ.

ಆದರೆ ಹೀಗೆ ಮಾಡುವುದರ ಉದ್ದೇಶವನ್ನು ಆ ದಿನದ ಮಟ್ಟಿಗೆ ಬಿಟ್ಟು, ಸುಮ್ಮನಾದರೆ ಅವರನ್ನು ಬಹುಮಾನಿಸಿದಂತಾಗುವುದಿಲ್ಲ. ಅವರು ತನ್ನ ಜನ್ಮವನ್ನೇ ಸವೆಯುತ್ತಿರುವ ಕಾರ್ಯವು ಜಯವಾಗುವಂತೆ ಸಹಕರಿಸಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಹಿಂದೂ ದೇಶದಲ್ಲಿರುವ ಮಾನವ ಕೋಟಿಯು ಕಷ್ಟ ಪರಿಹಾರದ ಬಗ್ಗೆ ಅಹಿಂಸಾ ರೀತಿಯಿಂದ ಸ್ವರಾಜ್ಯವನ್ನು ಪಡೆಯುವುದೇ ಇವರು ಹಿಡಿದಿರುವ ಕಾರ್ಯ. ಇದನ್ನು ಸಾಧಿಸಲಿಕ್ಕಾಗಿ ಇವರು ಬೋಧಿಸುತ್ತಿರುವ ಖಾದಿ ಪ್ರಚಾರ, ನಿಶಾ ನಿಷೇಧ, ಅಸ್ಪೃಶ್ಯತಾ ನಿವಾರಣೆ ಮುಂತಾದ ಕೆಲಸಗಳಲ್ಲಿ ಭಾಗಿಗಳಾದರೆ ಮಹಾತ್ಮರನ್ನು ಮರ್ಯಾದಿಸಿದಂತಾಗುದು ಮಾತ್ರವಲ್ಲ, ಹಿಂದೂ ಮಾತೆಯ ಗೌರವವನ್ನು ಕಾಪಾಡಿದಂತೆಯೂ ಆಗುವುದು.

ಕೌನ್ಸಿಲು ಉಪ ಚುನಾವಣೆ.

ನಾಡುಕೇರಿ — ಭಾಗಮಂಡ್ಲ — ಸಂಪಟಿಕೊಪ್ಪ ನಾಡುಗಳ ಜಮ್ಮ ಓಟರುಗಳ ಪರವಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಖಾಲಿಬಿದ್ದಿದ್ದ ಮೆಂಬರುತನದ ಸಲುವಾಗಿ ಕಳೆದ ತಿಂಗಳ 27ರಲ್ಲಿ ಉಪ ಚುನಾವಣೆಯು ನಡೆಯಿತು. ಉಮೇದುವಾರರುಗಳಾಗಿ ನಿಂತಿದ್ದ ರಾ ಬಾ ಕೋಡಿಮಣಿಯಂಡ ಸುಬ್ಬಯ್ಯನವರು ಮತ್ತು ಮೆ. ಚೇರಿಟಿರ ಪಿ. ಚಿಣ್ಣಪ್ಪನವರಲ್ಲಿ ಮೆ. ಚಿಣ್ಣಪ್ಪನವರು ಜಯಶೀಲರಾದರು. ಈ ಉಪ ಚುನಾವಣೆಯ ಫಲಿತಾಂಶವು ಬರೀ ವ್ಯಕ್ತಿ ಗುಣದೋಷಗಳ ಮೇಲೆ ಹೊಂದಿರದೆ ರಾಜಕೀಯ ತತ್ವಗಳನ್ನು ಅನ್ವಯಿಸಿರುವುದರಿಂದ ಇದರ ಪ್ರಾಮುಖ್ಯತೆಯನ್ನು ದೇಶೀಯರೆಲ್ಲರೂ ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ.

ಈ ಚುನಾವಣೆಗೆ ನಿಂತಿದ್ದ ಇಬ್ಬರು ಉಮೇದುವಾರರುಗಳು ಈಗ ದೇಶದಲ್ಲಿರುವ ಎರಡು ಭಿನ್ನಾಭಿಪ್ರಾಯಗಳ ಸಂಸ್ಥೆಗಳಲ್ಲಿ ಪ್ರಾಮುಖ್ಯ ಮೆಂಬರುಗಳಾಗಿರುವರು. ಮೆ. ಕೆ. ಸುಬ್ಬಯ್ಯನವರು ಕೋಮುವಾರು ಸಭೆಯಾದ 'ಕೊಡವ' ಸಭೆಯ ಉಪಾಧ್ಯಕ್ಷರು, ಮೆ. ಕೆ. ಚಿಣ್ಣಪ್ಪನವರು ದೇಶದ ಎಲ್ಲಾ ಜಾತಿ ಮತಸ್ಥರು ಸೇರಿರುವ ಜಮೀನ್ದಾರರ ಸಂಘದ ಉಪಾಧ್ಯಕ್ಷರು. ಚುನಾವಣೆಯ ಕಾಲದಲ್ಲಿ ಓಟರುಗಳು ಇವೆರಡು ಸಂಸ್ಥೆಗಳ ಧ್ಯೇಯಗಳನ್ನು ಸ್ಮರಿಸಿಕೊಂಡೇ ಓಟುಕೊಟ್ಟಿರಬೇಕೆಂಬುದರಲ್ಲಿ ಸಂಶಯವಿಲ್ಲ. ಯಾಕೆಂದರೆ, ಓಟುಕೇಳಲು ಗ್ರಾಮಾಂತರಗಳಲ್ಲಿ ನಡಿಸಿದ ಮೀಟಿಂಗುಗಳಲ್ಲಿ ಇವೆರಡು ಪಾರ್ಟಿಗಳ ಯಾ ಸಂಸ್ಥೆಗಳ ತತ್ವಗಳು ಉಭಯ ಪಕ್ಷದವರಿಂದ ಜನರಿಗೆ ಚೆನ್ನಾಗಿ ವಿವರಿಸಲ್ಪಟ್ಟಿದ್ದವು.

ಜಮೀನ್ದಾರರ ಸಂಘದ ತೀರ್ಮಾನದಂತೆ ಗಜೆಟೆಡ್ ಉದ್ಯೋಗಸ್ಥರನ್ನು ಐದು ವರ್ಷಗಳಿಗೊಮ್ಮೆಯಾದರೂ ವರ್ಗಾಯಿಸಬೇಕೆಂಬ ತತ್ವಕ್ಕಾಗಿ ಮೆ. ಚಿಣ್ಣಪ್ಪನವರು ಈ ಮೊದಲು ಕೌನ್ಸಿಲಿನಲ್ಲಿದ್ದಾಗ ತುಂಬಾ ಹೋರಾಡಿದ್ದರು. ಈ ಕಾರಣದಿಂದಲೇ ಅವರು 1927ರಲ್ಲಿ ನಡೆದ ಚುನಾವಣೆಯಲ್ಲಿ ಆರಿಸಲ್ಪಡಲಿಲ್ಲವೆಂತ ಕೆಲವರು ಅನ್ನುತ್ತಿದ್ದರು. ಆದರೆ ಅವರು ಈ ಚುನಾವಣೆಯಲ್ಲಿಯೂ ದೊಡ್ಡ ಅಧಿಕಾರಿಗಳ ವರ್ಗಾವರ್ಗಿಯ ವಿಷಯವನ್ನು ಓಟರುಗಳಿಗೆ ವಿವರವಾಗಿ ತಿಳಿಸಿಯೇ ಹೆಚ್ಚಿನ ಓಟು ಪಡೆದರು. ಆದುದರಿಂದ ಇಂಥಾ ವರ್ಗಾವರ್ಗಿಗೆ ಈ ತಾಲೂಕಿನ ಬಹುಮತದವರು ಒಪ್ಪಿದರೆಂದಾಯಿತು.

ನಾವು ಕಳಕೊಂಡಿರುವ ಸ್ವಾತಂತ್ರ್ಯವನ್ನು ಮರಳಿ ಪಡೆಯಲಿಕ್ಕಾಗಿಯೂ, ದೇಶದ ಏಳಿಗೆಗಾಗಿಯೂ ದೇಶೀಯರು **ಕೊಡವ - ಕೊಡವೇತರ,** ಬ್ರಾಹ್ಮಣ - ಬ್ರಾಹ್ಮಣೇತರ, ಬಡವ - ದೊಡ್ಡವ ಎಂಬ ಭೇದಭಾವಗಳಿಲ್ಲದೆ ಎಲ್ಲರೂ ಒಗ್ಗಟ್ಟಾಗಿ ವರ್ತಿಸಬೇಕೆಂಬುದೇ ಜಮೀನ್ದಾರರ **ಸಂಘದ ಮುಖ್ಯ ಧ್ಯೇಯವಾಗಿದೆ. ಈ ಧ್ಯೇಯವನ್ನು ಅನುಸರಿಸಿಯೇ ಮೆ. ಚಿಣ್ಣಪ್ಪನವರು ಕೆಲಸಮಾಡುತ್ತಿರುವುದರಿಂದ ಅವರಿಗೆ** ಜಯವಾಯಿತೆಂದೂ, ಒಗ್ಗಟ್ಟಿಗೆ ಅಡ್ಡಿಬರುವ ಕೋಮುವಾರು ಸಭೆಯ ಉಪ ಮುಖಂಡರಾಗಿರುವುದರಿಂದಲೇ ಮೆ ಸುಬ್ಬಯ್ಯನವರಿಗೆ ಅಪಜಯವಾಯಿತೆಂದೂ ಹೇಳಿದರೆ ತಪ್ಪಾಗಲಾರದು. ಗ್ರಾಮವಾಸಿಗಳು ಎಲ್ಲಾ ವಿಷಗಳಲ್ಲೂ, ಅದರಲ್ಲೂ ಮುಖ್ಯವಾಗಿ ರಾಜಕೀಯದಲ್ಲಿ ಅನುಕೂಲ್ಯವಾದ ಒಗ್ಗಟ್ಟಿನ ಬೆಲೆಯನ್ನು ಅರಿತುಕೊಂಡು ಒಗ್ಗಟ್ಟಿಗಾಗಿ ಹೋರಾಡುವವರಿಗೆ ಪ್ರೋತ್ಸಾಹ ಕೊಟ್ಟದ್ದು ದೇಶದಲ್ಲಿ ಜ್ಞಾನೋದಯದ ಚಿಹ್ನೆಯಾಗಿದೆ.

ರಾಜಕೀಯ ಸುಧಾರಣೆಯ ವಿಷಯದಲ್ಲೂ ಕೂಡ ಜಮೀನ್ದಾರರ ಸಂಘವು ತುಂಬಾ ಮುಂದುವರಿದಿದೆ. ಹಿಂದೂ ದೇಶದ ಆತ್ಮಗೌರವಕ್ಕೆ ಕುಂದಕವೆಂದೆಣಿಸಲ್ಪಟ್ಟಿರುವ ಸೈಮನ್ ಕಮಿಷನಿನೊಂದಿಗೆ ಸಹಕರಿಸಿದ ಕೊಡವ ಸಭೆಯು ಇಂಡಿಯಾ ಸರ್ಕಾರದಿಂದ ಉಳುವರಿಕೊಟ್ಟ ನಂತರ ಆದಾಯ ವ್ಯಯಗಳ ಮೇಲೆ ಓಟುಮಾಡುವ ಹಕ್ಕು ಮೊದಲಾದ ಹೆಚ್ಚಿನ ಸುಧಾರಣೆ ಕೊಡಬೇಕೆಂದು ಕೇಳಿದರಲ್ಲದೆ ಮಂತ್ರಿಗಳನ್ನಾಗಲೀ, ಕೌನ್ಸಿಲಿಗೆ ಚುನಾಯಿತ ಅಧ್ಯಕ್ಷರನ್ನಾಗಲೀ ಕೇಳಲಿಲ್ಲ. ಆದರೆ ಜಮೀನ್ದಾರರ ಸಂಘವು ಹಿಂದೂದೇಶದ ಜೊತೆಗೂಡಿ ಸೈಮನ್ ಕಮಿಷನನ್ನು ಬಹಿಷ್ಕರಿಸಿ, ಕೌನ್ಸಿಲಿಗೆ ಚುನಾಯಿತ ಅಧ್ಯಕ್ಷರು, ಜನರ ಪ್ರತಿನಿಧಿಗಳಿಗೆ ಜವಾಬ್ದಾರರಾದ ಮಂತ್ರಿಗಳು, ಆದಾಯ ವೆಚ್ಚದ ಮೇಲೆ ಓಟುಮಾಡುವ ವತ್ತು ಖಾನೂನು ಮಾಡುವ ಪೂರ್ತಿ ಹಕ್ಕು, ಪತ್ರಿಯೊಂದ ದೇಶೀಯರಿಗೆಲ್ಲ ಓಟಿನ ಹಕ್ಕು ಮೊದಲಾದ ಹಕ್ಕುಗಳಿಂದ ಕೂಡಿದ ಸಂಪೂರ್ಣ ಪ್ರಾಂತೀಯ ಸ್ವಾತಂತ್ರ್ಯ ಸರ್ಕಾರ ಬೇಕೆಂದು ಹೋರಾಡುತ್ತಿರುವುದು. ಈ ಸಂಘದ ಉಪಾಧ್ಯಕ್ಷರನ್ನು ಕೌನ್ಸಿಲಿಗೆ ತಮ್ಮ ಪ್ರತಿನಿಧಿಯಾಗಿ ಆರಿಸಿ ಮುಂದುವರಿದ ರಾಷ್ಟ್ರೀಯ ತತ್ವಕ್ಕೆ ಉತ್ತೇಜನ ಕೊಟ್ಟದನ್ನು ನೋಡಿದರೆ ದೇಶದ ಬಹುಮತದವರು ಪ್ರಜಾಜವಾಬ್ದಾರಿ ಸರ್ಕಾರಕ್ಕೆ ಆತುರದಲ್ಲಿದ್ದಾರೆಂದು ಸ್ಪಷ್ಟವಾಗುತ್ತದೆ.

ಈ ಚುನಾವಣೆಯ ಮೆಂಬರುತನದ ಅವಧಿಯು ಬರೇ ಮೂರು ತಿಂಗಳಾದರೂ ಎರಡು ಸಂಸ್ಥೆಗಳ ಯಾ ತತ್ವಗಳ ಪ್ರಾಬಲ್ಯವನ್ನು ಪರೀಕ್ಷಿಸುವ ಬಗ್ಗೆ ಉಭಯ ಪಕ್ಷದವರೂ ತಮ್ಮ ಸಂಪೂರ್ಣ ಶಕ್ತಿಯಿಂದ ಓಟು ಪಡೆಯಲು ಯತ್ನಿಸಿದರು. ಕಡೆಗೆ, ದೇಶದ ಎಲ್ಲಾ ಜನರ ಏಳಿಗೆಗಾಗಿ ಹೋರಾಡುತ್ತಿರುವ ಜಮೀನ್ದಾರರ ಸಂಘದ ತತ್ವಾವಲಂಬಿಗೆ ಜಯವಾದದ್ದು ಒಗ್ಗಟ್ಟಿನಿಂದ ಸ್ವಾತಂತ್ರ್ಯವನ್ನು ಪಡೆಯಲು ಪ್ರಯತ್ನಿಸುವವರಿಗೆಲ್ಲ ಬಹಳ ಸಂತೋಷವನ್ನುಂಟುಮಾಡದೆ ಇರದು.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ಕೊಡಗು ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು ಕಳೆದ ತಾ 28ರಲ್ಲಿ ಸಂಘದ ಹಾಲ್‌ನಲ್ಲಿ ನಡೆಯಿತು. ಈ ಕೆಳಗಿನ ಮಹನೀಯರು ಹಾಜರಿದ್ದರು:— ಮೆ. ಗೌಡ 1. ಸಿ. ಯನ್. ವೆಂಕಪ್ಪಯ್ಯನವರು (ಅಧ್ಯಕ್ಷರು), 2. ನಿಡ್ಯಮಲೆ ಮುದ್ದಪ್ಪನವರು, 3. ಮನೆಯಪಂಡ ಚಿಣ್ಣಪ್ಪನವರು, 4. ಕೋರನ ದೇವಯ್ಯನವರು, 5. ಇ. ಯನ್. ಶಂಕರಯ್ಯನವರು, 6 ಚಂಗಂಡ ಕುಟ್ಟಪ್ಪನವರು, 7. ಹಳಗೋಟೆ ಅಕ್ಕಪ್ಪನವರು, 8. ಮಕ್ಕಿ ವೆಂಕಪ್ಪಯ್ಯನವರು, 9. ಕೋಟೆರ ಚಿಣ್ಣಪ್ಪನವರು, 10. ಕೊಳ್ಳಿಮಾಡ ಕರುಂಬಯ್ಯನವರು, 11. ಯಂ ಯಂ ಸಿದ್ದೀಕ್‌ರವರು, 12. ಅಜ್ಜಮಾಡ ಮಾದಪ್ಪನವರು, 13. ಮುಕ್ಕಾಟಿರ ಕರುಂಬಯ್ಯನವರು, 14. ತೆಕ್ಕಡ ಆನಂದಯ್ಯನವರು, 15. ಪಂದ್ಯಂಡ ಬೆಳ್ಯಪ್ಪನವರು, 16. ಪಾಲೆಯ್ರ ಸಿ. ಸುಬ್ಬಯ್ಯನವರು, 17. ಮನೆಯಪಂಡ ಬೆಳ್ಯಪ್ಪನವರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಆಗೊಸ್ಟು ತಿಂಗಳ ಲೆಕ್ಕ ಓದಿ ಒಪ್ಪಲಾಯಿತು.

3. ಆರ್ಗನೈಜರ ಕೆಲಸಕ್ಕೆ ಬಂದ ಅರ್ಜಿಗಳನ್ನು ಓದಲಾಯಿತು.

ಸಂಘದ ಆರ್ಗನೈಜಿಂಗ್ ಕೆಲಸವನ್ನು ಹೇಗೆ ಮಾಡಬೇಕೆಂದು ದೀರ್ಘ ಚರ್ಚೆಮಾಡಿ ಈ ಕೆಳಗಿನಂತೆ ತೀರ್ಮಾನಿಸಲಾಯಿತು.

ಸಂಘದ ಸಂಘಟನೆಯ ಕೆಲಸಕ್ಕೆ ಈ ಕೆಳಗಿನ ಮಹನೀಯರನ್ನು ಉಪಕಮಿಟಿಯಾಗಿ ನೇಮಿಸಲಾಯಿತು. ಅವರ ಪ್ರಯಾಣದ ಖರ್ಚು, ಪ್ರಿಂಟಿಂಗ್ ಖರ್ಚು ವಗೈರೆಗಾಗಿ 30 ರೂಪಾಯಿಗೆ ಮೀರದೆ ಉಪಯೋಗಿಸಬಹುದು. ಈ ಕಮಿಟಿಯವರು ನಡಿಸುವ ಮೀಟಿಂಗುಗಳ ನಿರ್ವಹಣೆಯ ಬಗ್ಗೆ ಮೆ. ಚಂಗಂಡ ಕುಟ್ಟಪ್ಪನವರನ್ನು ನೇಮಿಸಲಾಯಿತು. ಇವರಿಗೆ ತಿಂಗಳಿಗೆ 15 ರೂ ಎಲೋವೆನ್ಸ್ ಕೊಡಬಹುದು. ಬರುವ ಡಿಸೆಂಬರು ಆಖೈರೊಳಗೆ ಈ ಕೆಲಸವನ್ನು ಪೂರೈಸಬೇಕು. ಈ ಕಮಿಟಿಯವರು ಚಂದಾ ವಸೂಲಿ ಮಾಡಲು ತಕ್ಕವರನ್ನು ನೇಮಿಸಿ, ಅವರಿಂದ ಮೊದಲಿನಂತೆಯೇ ಜಾಮೀನು ಬರಾಬು ತೆಗೆದುಕೊಳ್ಳಬೇಕು ಮತ್ತು ಚಂದಾ ವಸೂಲಿ ಮಾಡುವವರಿಗೆ ಎಂದಿನಂತೆ ಶೇಕಡ 25ರಷ್ಟು ಕಮಿಷನು ಕೊಡಬಹುದು.

ಉಪಕಮಿಟಿಯ ಮೆಂಬರುಗಳು:— ಮೆ. ಗೌಡ 1. ಸಿ. ಯನ್. ವೆಂಕಪ್ಪಯ್ಯನವರು, 2. ಪಿ. ಬಿ. ಬೆಳ್ಯಪ್ಪನವರು, 3. **ಮಾಚಿಮಾಡ ಮುತ್ತಣ್ಣನವರು, 4. ಮನೆಯಪಂಡ** ಬೆಳ್ಯಪ್ಪನವರು, 5. ಕೆ. ಪಿ. ಚಿಣ್ಣಪ್ಪನವರು, 6. **ಕೊಳ್ಳಿಮಾಡ** ಕರುಂಬಯ್ಯನವರು, 7. ಜಮ್ಮಡ ಮಾದಪ್ಪನವರು, 8. ಅಜ್ಜಮಾಡ ಮಾದಪ್ಪನವರು, 9. ತೆಕ್ಕಡ ಆನಂದಯ್ಯನವರು, 10. ಗುನ ಮುದ್ದಪ್ಪನವರು, 11. ಅಬ್ದುಲ್ ಗಫೂರ್‌ಖಾನ್ ಪ್ಯಾರಿಯವರು, 12. ಯಂ. ಯಂ. ಸಿದ್ದೀಕ್‌ರವರು, 13. ಬಿ. ಸಿ. ಸುಬ್ಬಯ್ಯನವರು, 14. ಮುಕ್ಕಾಟಿರ ಕರುಂಬಯ್ಯನವರು, ಮತ್ತು 15. ಸಿಂಗೂರು ಮಾದಪ್ಪನವರು.

4. ಮೈಸೂರಾಯರಿಗೆ ಅಭಿನಂದನಾ ಪತ್ರ ಅರ್ಪಿಸಲು ಕಮಿಟಿಗಾಗಿ 100 ರೂಪಾಯಿಗೆ ಮೀರದೆ ಖರ್ಚು ಮಾಡಬಹುದೆಂದು ತೀರ್ಮಾನವಾಯಿತು.

5. ಜವಾನನಿಗೆ ಒಂದು ರೂಪಾಯಿ ಸಂಬಳ ಏರಿಸಿ ಕೊಡಬಹುದೆಂದು ನಿಶ್ಚೈಸಲಾಯಿತು.

ಸಿ. ಯನ್. ವೆಂಕಪ್ಪಯ್ಯ,
(ಅಧ್ಯಕ್ಷರು)

ಸೆಂಟ್ರಲ್ ಬ್ಯಾಂಕಿನ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 29ನೇ ಆದಿತ್ಯವಾರ ದಿನ ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯಿತು. ಹಾಜರಿದ್ದ ಮೆಂಬರುಗಳು:— 1 ರಾವ್ ಬಹದ್ದೂರ್ ಕೆ. ಅಪ್ಪಯ್ಯನವರು, (ಪ್ರೆಸಿಡೆಂಟರು) 2. ರಾವ್ ಸಾಹೇಬ್ ಪಿ. ದೇವಯ್ಯನವರು, 3. ಮೆ ಗೌಡ ಸಿ. ಎನ್. ವೆಂಕಪ್ಪಯ್ಯನವರು, (ಗೌರವ ಸೆಕ್ರೆಟರಿ) 4. ಎನ್. ಮುದ್ದಪ್ಪನವರು, 5. ಎ. ಬಿ. ತಿಂಗಪ್ಪನವರು, 6. ಕೆ. ಪಿ. ಚಿಣ್ಣಪ್ಪನವರು, 7. ಜಮ್ಮಡ ಮಾದಪ್ಪನವರು, 8. ಎನ್. ಸೋಮಯ್ಯನವರು ಮತ್ತು 9. ಪಿ. ಐ. ಬೆಳ್ಯಪ್ಪನವರು. ಉತ್ತರ ಕೊಡಗು ಕೋಆಪರೇಟಿವ್ ಇನ್ಸ್‌ಪೆಕ್ಟರು ಮೆ. ಪಿ. ಯು. ಪೊನ್ನಪ್ಪನವರೂ ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಆಗೊಸ್ಟು ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು 1. ಬಿದರೂರು ಸೊಸೈಟಿಗೆ ರೂ. 500, 2 ಶನಿವಾರಸಂತೆ ಟವುನ್ ಸೊಸೈಟಿಗೆ ರೂ. 1000, 3 ಪೊನ್ನಂಪೇಟೆ ಟವುನ್ ಸೊಸೈಟಿಗೆ ರೂ. 500, 4 ಕೈಕೇರಿ ಸೊಸೈಟಿಗೆ ರೂ. 500, 5. ಮಗ್ಗುಲ ಸೊಸೈಟಿಗೆ ರೂ. 500, 6 ಹೆರವನಾಡು ಸೊಸೈಟಿಗೆ ರೂ. 500, 7. ಸಿದ್ದ ಸೊಸೈಟಿಗೆ ರೂಪಾಯಿ 700 ಮತ್ತು, 8 ವೀರಾಜಪೇಟೆ ಟವುನ್ ಸೊಸೈಟಿಗೆ ರೂ. 3000.

4 ಬೊದಪಾಡ ಸೊಸೈಟಿಯವರು ತಮಗೆ ಕಳೆದ ತಿಂಗಳಲ್ಲಿ ಮಂಜೂರಾದ 1000 ರೂ ಪೈಕಿ ರೂ 400 ಮಾತ್ರ ಹೊಂದಿಕೊಂಡದ್ದರಿಂದ ಬಾಕಿ ರೂ. 600 ಹೊಂದಿಕೊಳ್ಳಲು ತಿಂಗಳು ವಾಯಿದೆ ಕೊಡಬೇಕಾಗಿ ಅರ್ಜಿ ಬರೆದುಕೊಂಡ ಮೇರೆ ಅಕ್ಟೋಬರು ತಿಂಗಳು ಆಖೈರು ವರೆಗೆ ಹೊಂದಿಕೊಳ್ಳಬಹುದೆಂತ ತೀರ್ಮಾನವಾಯಿತು.

5 ಕುಂದಳ್ಳಿ—ಕುಮ್ಮಳ್ಳಿ ಸೊಸೈಟಿಯವರು ಮತ್ತು ಗೌನಾಡು ಬಳಗೇರಿ ಧವಸ ಭಂಡಾರದವರು ತಮ್ಮ ಬಾಕಿ ಸಾಲಗಳಿಗೆ ಒಂದು ವರ್ಷ ಹೆಚ್ಚಿನ ವಾಯಿದೆ ಕೊಡಬೇಕಾಗಿ ಬರೆಕೊಂಡ ಅರ್ಜಿಗಳನ್ನು ಓದಲಾಯಿತು.

ಆದರೆ ಹಾಗೆ ಹೆಚ್ಚಿನ ವಾಯಿದೆ ಕೊಡಲಾಗುವುದಿಲ್ಲವಾಗಿ ತೀರ್ಮಾನವಾಯಿತು.

6 ರಿಜಿಸ್ಟ್ರಾರರವರು ಬ್ಯಾಂಕಿನ 19-8-1939 ನೇ ಸಂವತ್ಸರದ ಲೆಕ್ಕಗಳನ್ನು ಆಡಿಟ್‌ಮಾಡಿ ಕಳುಹಿಸಿದ ಅವರ ಆಡಿಟ್ ರಿಪೋರ್ಟು ಮತ್ತು ಸ್ಟೇಟ್‌ಮೆಂಟನ್ನು ಮೀಟಿಂಗಿನಲ್ಲಿ ಇಡಲಾಯಿತು.

ಸದರಿ ಆಡಿಟ್ ರಿಪೋರ್ಟಿನ ಮತ್ತು ಸ್ಟೇಟ್‌ಮೆಂಟಿನ ಕನ್ನಡ ತರ್ಜುಮೆಯನ್ನು ಪ್ರಿಂಟು ಮಾಡಿ ಡೈರೆಕ್ಟರುಗಳಿಗೆ ಹಂಚಬೇಕೆಂತ ತೀರ್ಮಾನವಾಯಿತು.

7. ಯೂನಿಯನ್‌ಗಳ ಫೆಡರೇಶನಿನ ವಿಷಯ ರಿಜಿಸ್ಟ್ರಾರವರಿಂದ ಬಂದ ಕಾಗದ ಮತ್ತು ಬೈಲಾ ಸಹ ಮೀಟಿಂಗಿನ ಮುಂದೆ ಇಡಲಾಯಿತು.

ಈ ಅಕ್ಟೋಬರ್ ತಾ. 5 ನೇ ಶನಿವಾರ ದಿನ ಮಧ್ಯಾಹ್ನ 1 ಗಂಟೆಗೆ ಕೊಡಗು-ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡಿಯುವ ಈ ಯೂನಿಯನ್‌ಗಳ ಫೆಡರೇಶನಿನ ಜನರಲ್ ಮೀಟಿಂಗಿಗೆ ಈ ಕೆಳಗಿನ ಡೈರೆಕ್ಟರುಗಳು ಬ್ಯಾಂಕಿನ ಪರ ಡೆಲಿಗೇಟರುಗಳಾಗಿ ಹೋಗಬಹುದೆಂತ ತೀರ್ಮಾನವಾಯಿತು.

1. ರಾ. ಬಾ. ಕೆ ಅಪ್ಪೆಯ್ಯನವರು, 2. ರಾ ಸಾ ಪಿ ಕೆ ವೈಯ್ಯನವರು, 3 ಮೆ. ಸಿ. ಯನ್. ವೆಂಕಪ್ಪಯ್ಯನವರು, 4 ಮೆ. ಕೆ ಪಿ ಚಿಣ್ಣಪ್ಪನವರು, 5. ಮೆ ಪಿ. ಬಿ. ಬೆಳ್ಯಪ್ಪನವರು.

8. ರಿಜಿಸ್ಟ್ರಾರವರಿಂದ ಬಂದ ಕಾಗದ ಮತ್ತು ಬ್ಯಾಂಕಿಂಗ್ ಎನ್‌ಕ್ವಯರಿ ಪ್ರಶ್ನಾವಳಿ (ಕ್ವಶ್ಚನೇರ್) ಮೀಟಿಂಗಿನ ಮುಂದೆ ಇಡಲಾಯಿತು.

ಬ್ಯಾಂಕಿನ ಪ್ರೆಸಿಡೆಂಟರು, ಗೌರವ ಸೆಕ್ರೆಟರಿಯವರು, ಮೆ. ಕೆ. ಪಿ. ಚಿಣ್ಣಪ್ಪನವರು ಮತ್ತು ಮೆ ಯನ್ ಮುದ್ದಪ್ಪನವರು ಕೂಡಿ ಈ ವಿಷಯ ಒಂದು ಡ್ರಾಫ್ಟ್ (ಕರಡು) ಜವಾಬು ತಯಾರಿಸಿ ಇನ್ನೊಂದು ಮೀಟಿಂಗಿನಲ್ಲಿ ಇಡಬೇಕೆಂತ ತೀರ್ಮಾನವಾಯಿತು.

ಕೆ. ಅಪ್ಪೆಯ್ಯ,
(ಅಧ್ಯಕ್ಷರು.)

ಕೊಡಗು ವಿದ್ಯಾ ಇಲಾಖೆ ಉದ್ಯೋಗಸ್ಥರ ಸಹಕಾರಿ ಸಂಘದ ಮಹಾ ಸಭೆ.

ಕೊಡಗು ವಿದ್ಯಾ ಇಲಾಖೆ ಉದ್ಯೋಗಸ್ಥರ ಮಿತಿಯುಳ್ಳ ಸಹಕಾರ ಸಂಘದ ನಾಲ್ಕನೇ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷರಾಗಿದ್ದ ಮೆ. ಎ ಬಿ ಚಂಗಪ್ಪ ಯಂ ಯಲ್ ಸಿ ಯವರ ಭಾಷಣ.

ಸೋದರ ಸಹಕಾರಿಗಳೇ, ಮಹಿಳೆಯರೇ, ಮಹನೀಯರೇ,

ಈ ದಿನ ನಾನು ನಿಮ್ಮೊಡನೆ ಮಿಳಿತವಾಗಿ ನಿಮ್ಮ ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಸಂತೋಷಪಡುತ್ತೇನೆ ನಿಮ್ಮೊಡನೆ ಕಲೆತು ನಿಮ್ಮ ಪರಿಚಯವನ್ನುಂಟುಮಾಡಿಕೊಳ್ಳಲು ನನಗೆ ಅಸ್ಪದ ಕೊಟ್ಟದಕ್ಕೆ ನಿಮ್ಮ ಸಂಘದ ಪ್ರೆಸಿಡೆಂಟರಾದ ಮೆ. ಪಿ ಯಂ ಉತ್ತಪ್ಪನವರಿಗೆ ನಾನು ತುಂಬಾ ವಂದಿಸುತ್ತೇನೆ

ನಾನು ಈಗ ಹೇಳತಕ್ಕ ಕೆಲವು ವಿಷಯಗಳು ನಿಮಗೆ ಜ್ಞಾನಪ್ರದವಾಗದೆ ಇರಬಹುದು. ಆದರೆ ನನ್ನ ಕುಂದು ಕೊರತೆಗಳನ್ನು ನೀವು ಕ್ಷಮಿಸುವಿರೆಂದು ನಾನು ಕೋರುತ್ತೇನೆ.

ಈ ಸಂಘವು ಒರೇ ನಾಲ್ಕು ವರ್ಷದ ಕಾಲದಲ್ಲಿ ತೀವ್ರ ಅಭಿವೃದ್ಧಿಯನ್ನು ಹೊಂದಿರುವುದನ್ನು ನೋಡಿದೆ. ಉಪಾಧ್ಯಾಯರುಗಳು ಅವರ ಅಧ್ಯಕ್ಷರ ಸಮ್ಮುಖದಲ್ಲಿ ತಮ್ಮ ಸ್ವಂತದ ಏಳಿಗೆ ಮತ್ತು ದೇಶದ ಜನಗಳ ಏಳ್ಗೆಗೆ ಸಹಕಾರವನ್ನು ಪ್ರಚಾರಕ್ಕೆ ತರಲು ಬಹು ಮುತುವರ್ಜಿ ಇಟ್ಟಿರುವರೆಂದು ತೋರುತ್ತೆ. ಇಲಾಖೆಯ ಪ್ರತಿ ಉಪಾಧ್ಯಾಯನೂ ಇದರ ಮೆಂಬರನಾಗಿರಬಹುದೆಂದು ನಾನು ಊಹಿಸಿದ್ದೆ. ಆದರೆ 243 ಜನ ಮಾತ್ರ ಮೆಂಬರುಗಳೆಂಬುದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಉಳಿದವರೆಲ್ಲಾ ಒಡನೆ ಮೆಂಬರುಗಳಾಗಿ ಸಹಕಾರ ತತ್ವಗಳನ್ನು ಬೋಧಿಸಿ ದೇಶದ ಹಿತವನ್ನು ಬಯಸಬೇಕು ಇದರಿಂದ ಅವರು ತಮ್ಮ ತಮ್ಮ ಪರಸ್ಪರ ಸಹಾಯವನ್ನೂ ಮಾಡಿಕೊಳ್ಳುವದಲ್ಲದೆ ಮುಂದಿನ ಜನಾಂಗವಾಗತಕ್ಕ ವಿದ್ಯಾರ್ಥಿಗಳಲ್ಲಿ ಸಹಕಾರದ ಉತ್ತಮ ತತ್ವಗಳನ್ನು ಅಳವಡಿಸಬಹುದಾಗಿದೆ. ಕೆಲವರು ಹಲವು ಸಂಘಗಳಲ್ಲಿ ಮೆಂಬರಾಗಿ ಸಹಕಾರ ತತ್ವಕ್ಕೆ ವಿರೋಧವಾಗಿ ಎಲ್ಲಾ ಸಂಘಗಳಿಂದಲೂ ಸಾಲ ಪಡೆಯುತ್ತಾರೆಂಬುದನ್ನು ಕೇಳಿ ವಿಷಾದಿಸುತ್ತೇನೆ. ಕಮಿಟಿಯವರು ಇಂಥವರಿಗೆ ಸಾಲ ಮಂಜೂರ್ಮಾಡುವಾಗ ಹೆಚ್ಚಿನ ಎಚ್ಚರಿಕೆಯನ್ನು ಮಾಡಬೇಕು. ನನ್ನ ಅನುಭವದಲ್ಲಿ ದಯೂ ಪಶ್ಚಾತ್ತಾಪಗಳನ್ನು ತೋರಿದ ಕಡೆ ಅದರ ಬೆಲೆಯು ಮೆಂಬರನಿಗೆ ತಿಳಿಯದೆ ಅದು ಹೆಚ್ಚು ಫಲಿತಾಂಶಕ್ಕೆ ಬರಲಿಲ್ಲವೆಂದೂ, ಕ್ರಮ ಪ್ರಕಾರ ಕಡ್ಡಾಯವಾಗಿ ನಡೆದಲ್ಲಿ ಮೆಂಬರರಿಗೆ ಕಡೆಕಿಗಿಂತ ಹೆಚ್ಚು ಒಳ್ಳೆಯದೇ ಆಗುತ್ತೆಯೆಂದೂ ನನಗೆ ಪರಿಷ್ಕಾರವಾಗಿ ತಿಳಿದುಬಂದಿದೆ. ಕಮಿಟಿಯವರು ಯಾವಾಗಲೂ ಸಂಘದ ಮತ್ತು ತಮ್ಮ ಕೈಯ್ಯಲ್ಲಿದೆಯೆಂದು ನಂಬಿ ಹೆಚ್ಚಾಗಿ ಆಪತ್ತಿನ ನಿವಾರಣೆಗಾಗಿ ಕೆಲಸ ನಡಿಸಬೇಕು.

ಈ ಸಂಘದಲ್ಲಿ ಪ್ರತಿ ಮೆಂಬರಿನ ಮೇಲೆ ಸರಾಸರಿ ರೂ 167 ಸಾಲ ಇದೆ. ಆದರೆ ಇದೀ ಕೊಡಗಿನ ಸಂಘಗಳಲ್ಲಾ ತೆಗೆದುಕೊಂಡರೆ ಪ್ರತಿ ಒಬ್ಬನ ಮೇಲೆ ಸರಾಸರಿ ಸುಮಾರು 50 ಸಾಲವಿದೆ. ಕಮಿಟಿಯವರು ಕಡಿಮೆ ವಾಯಿದೆಯ ಚಿಕ್ಕ ಸಾಲಗಳಿಗೇ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ನಾನು ಹೇಳುತ್ತೇನೆ. ಒಂದು ಸಾಲವು ಮುಗಿದನಂತರ [illegible] ಬೇಕಾದರೆ ಮತ್ತೊಂದು ಸಾಲ ತೆಗೆಯಬಹುದು.

ಸಂಘದ ವಸೂಲಿಯೂ ತೃಪ್ತಿಕರವಾಗಿದೆ. [illegible] ಬಾಕಿದಾರರಾಗಿರಲು ಮೃತ ಪಟ್ಟಿದ್ದರೆ ಮಾಡಿದವರಾಗಿ ಇರುವರು. ಅವರಿಗೆ ಹಿಂದಿನ ಸಾಲವು ತೀರಿ ಕಡಿಮೆ ಎರಡು ವರ್ಷ ಪರಿಯಂತ ಮತ್ತೆ ಸಾಲವನ್ನು ಕೊಡಬಾರದು.

ಸೋಮವಾರ ಸೆಂಟ್ರಲ್ ಸಹಕಾರ ಬ್ಯಾಂಕಿನ ಮೆಂಬರಾಗಿ [illegible] ಸೆಂಟ್ರಲ್ ಬ್ಯಾಂಕಿನಿಂದ ಹಣ ಸಾಲ ತೆಗೆದ ಕೊಳ್ಳಲಿಲ್ಲವೆಂಬುದನ್ನು ತಿಳಿದು ನಾವು ಸಂತೋಷದಿಂದ ಉಬ್ಬಿದವರಾಗಿದೆ. ವ್ಯವಹಾರವು ಉತ್ತಮ ರೀತಿಯಿಂದ ನಡೆವ ಕಾರಣ ಮೆಂಬರುಗಳು ಮತ್ತು ಇತರರು ತಮ್ಮ ಹಣವನ್ನು ಈ ಸಂಘದಲ್ಲಿ ಡಿಪಾಜಿಟ್ಟು ಇಟ್ಟಿರುವರು. ಜನರ ಈ ರೀತಿಯ ನಂಬಿಕೆಯನ್ನು ಸಂಪಾದಿಸಿದ್ದಕ್ಕೆ ಅಧ್ಯಕ್ಷರನ್ನೂ, ಕಮಿಟಿಯವರನ್ನೂ ನಾನು ತುಂಬಾ ಶ್ಲಾಘಿಸುತ್ತೇನೆ.

ಸಹಕಾರವು ಬಹು ಪುರಾತನ ಕಾಲದಿಂದಲೂ ಕೊಡಗಿನಲ್ಲಿ ಪ್ರಚಾರದಲ್ಲಿತ್ತು. ಬಡವನ ಕುಟುಂಬದಲ್ಲಿ ಮದುವೆ, ತಿಥಿ ಹಂಗೆ ಮತ್ತು ಇತರ ಹೆಚ್ಚು ಖರ್ಚು ಆಗತಕ್ಕ ವಿಷಯಗಳಲ್ಲಿ ನೆರೆಹೊರೆಯವರು, ಬಂಧುಗಳು ಸಹಾಯ ಕೊಡುತ್ತಿದ್ದರು. ಪ್ರತಿ ಗ್ರಾಮದ ದೇವಸ್ಥಾನದಲ್ಲೂ ಗಂಡಸರು ಮತ್ತು ಹೆಂಗಸರು ಮದುವೆ ವಗೈರೆಗಳಲ್ಲಿ ಧರಿಸತಕ್ಕ ಆಭರಣಗಳಿದ್ದು ಅವುಗಳನ್ನು ನಾನು ಮೊತ್ತದ ಕೂಡಿಗೆಗೆ ಕೊಡುತ್ತಿದ್ದರು. ಈ ರೀತಿಯ ಪೂರ್ವದ ಸಹಕಾರ ಪದ್ಧತಿಗಳನ್ನು ನಾವು ಬಿಟ್ಟು ಬಿಟ್ಟಿರುತ್ತೇವೆ. ಉಪಾಧ್ಯಾಯರು ಹಳೆ ಹೊಸ ಸಹಕಾರ ಪದ್ಧತಿಗಳನ್ನು ಜನರಿಗೂ, ವಿಧ್ಯಾರ್ಥಿಗಳಿಗೂ ಬೋಧಿಸುವುದು ಅವರ ಕರ್ತವ್ಯವಾಗಿದೆ.

ಕಮಿಟಿಯವರ ವರದಿಯಿಂದ ಅನೇಕ ಮೆಂಬರುಗಳು ಹೆಚ್ಚು ಸಾಲಗಳನ್ನು ಮತ್ತು ದೊಡ್ಡ ಸಾಲಗಳನ್ನು ಹೊಂದಲಪೇಕ್ಷಿಸುತ್ತಾರೆಂದು ತಿಳಿಯುವುದು. ಇದು ಎಲ್ಲಾ ಸಂಘಗಳಿಗೂ ಸಾಮಾನ್ಯವಾಗಿ ಹಿಡಿದಿರುವ ರೋಗವಾಗಿದೆ. ಆದರೆ ಮಿತವ್ಯಯ, ಪರಸ್ಪರ ಸಹಾಯ ಮತ್ತು ನಿಜವಾದ ವ್ಯವಹಾರ ಧರ್ಮ ಇವುಗಳನ್ನು ಅಭಿವೃದ್ಧಿಗೊಳಿಸುವುದೇ ಸಹಕಾರ ಸಂಘಗಳ ಉದ್ದಿಶ್ಯಗಳಾಗಿರಬೇಕು.

ಕೊಡಗಿನ ಸಹಕಾರ ಸಂಘಗಳು ತಮ್ಮ ಮೆಂಬರುಗಳನ್ನು ನಿಯಮಕಟ್ಟಳೆಪಟ್ಟು ವ್ಯವಹಾರ ಕ್ರಮದಲ್ಲಿ ತರಬೇಕು ಮಾಡುವುದೇ ಮುಖ್ಯ ಕರ್ತವ್ಯವಾಗಿರಬೇಕು. ಈ ವಿಷಯಗಳಲ್ಲಿ ಕೊಡಗರು ಇತರರಿಗಿಂತ ಕಡಿಮೆಯಾಗಿರುವರು, ಅವರು ಕೃಷಿ ವೃತ್ತಿಯವರಾಗಿರುವುದೇ ಇದಕ್ಕೆ ಕಾರಣ. ಉಪಾಧ್ಯಾಯರು ತಮ್ಮ ಬಾಲಕರಿಗೆ ನಿಯಮದಿಂದ ವ್ಯವಹಾರ ನಡಿಸುವುದರ ಪ್ರಯೋಜನಗಳನ್ನು ಹೇಳಬೇಕು. ಶಾಲಾ ಡಿಬೇಟಿಂಗ್ ಸಂಘಗಳಲ್ಲಿ ಆ ವಿಷಯ ಪ್ರಬಂಧಗಳನ್ನು ಓದಬೇಕು.

ದೇಶದ ಏಳಿಗೆಗೆ ವಿದ್ಯೆಯೂ, ಸಹಕಾರವೂ ಸಮಾನ ರೀತಿಯಿಂದ ಪ್ರೋತ್ಸಾಹಿಸಲ್ಪಡಬೇಕೆಂದು ಹೇಳುವುದು ಹೊಸ ವಿಷಯವಲ್ಲ. ಆದರೆ ಆ ಕಾರ್ಯವು ಮುಂದಿನ ಜನಾಂಗದ ಬೋಧಕರಾದ ಉಪಾಧ್ಯಾಯರನ್ನು ಅನ್ವಯಿಸಿದೆ. ಪ್ರತಿ ಉಪಾಧ್ಯಾಯನು ಸಹಕಾರದ ತತ್ವಗಳನ್ನು ಬೋಧಿಸುವುದಲ್ಲದೆ ಶಾಲೆಗಳಲ್ಲಿಯೂ ತರಗತಿಗಳಲ್ಲಿಯೂ ಚಿಕ್ಕ ಚಿಕ್ಕ ಸಹಕಾರ ನಿಧಿಗಳನ್ನು ಏರ್ಪಡಿಸಬಹುದು. ಈ ರೀತಿ ಉಪಾಧ್ಯಾಯರು ಬಾಲಕರೂ ಜನಸಾಮಾನ್ಯಕ್ಕೆ ಸಹಕಾರ [illegible] ತಿಳಿವಳಿಕೆಯನ್ನು ಹರಡಬಹುದು.

ಉಪಾಧ್ಯಾಯರು ಈ ಸಂಘದ ಮಂಬರುಗಳಾಗಿರುತ್ತಾರೆ [illegible] ಸಹಕಾರ ತತ್ವಗಳನ್ನು ಹರಡಲು [illegible] ಇದೆ. ವಿದ್ಯಾವಂತ [illegible] ಸಹಕಾರವನ್ನು ಸಾಧ್ಯದಲ್ಲಿರಿಸುತ್ತಾರೆ. ಅವರೇನೋ [illegible] ದ್ಧಾರಕರಾದ ಮತ್ತು [illegible] ಕಾಣಬೇಕು ಮಾಡುವುದು ಸಾಧ್ಯವಾಗುತ್ತದೆ. ಕೊಡಗಿನಲ್ಲಿ ಸ್ತ್ರೀ ವಿದ್ಯಾಭ್ಯಾಸದ [illegible] ದುಮಾಡಿದರೆ [illegible] ತೃಪ್ತಿಯಿಂದ ಸುಮ್ಮನಿರಬಾರದು. ಸ್ತ್ರೀಯರಿಗೆ ಮಿತವ್ಯಯ, ಸ್ವಾವಲಂಬನ ಮತ್ತು ಸಹಕಾರ ಇತ್ಯಾದಿ ತತ್ವಗಳು ಮನದಟ್ಟಾದರೇನೇ ಅವರು ಜನೋದ್ಧಾರದ ಮತ್ತು ದೇಶೋದ್ಧಾರದ ಕಾರ್ಯಗಳಲ್ಲಿ ನಮ್ಮೊಡನೆ ಭಾಗಿಗಳಾಗುವರು.

ಮಹಿಳೆಯರೇ, ಮಹನೀಯರೇ, ಸಹಕಾರವು ದೇಶಕ್ಕೂ ಜನರಿಗೂ ವರಪ್ರಸಾದವು. ಅದು ಜಾತಿ ಮತಾದಿ ಭಿನ್ನಭೇದಗಳು ಎಕ್ಯವಾದ ಒಂದು ಸಂಸ್ಥೆ. ಅದು ಸ್ವಾರ್ಥವನ್ನು ಹಾಳುಮಾಡುತ್ತೆ. ಅದು ದೇಶದ ಮುಂದಿನ ಶಾಂತತೆಯ ಅಸ್ತಿಭಾರವನ್ನು ಹಾಕುತ್ತೆ. ದೇಶದ ಜನರ ಬಡತನವನ್ನು ನೀಗಲು ಹಿಂದುಳಿದ ಪಂಗಡಗಳನ್ನು ಉತ್ತಮ ಸ್ಥಿತಿಗೆ ತರಲು ಹಲವು ದಾರಿಗಳಿವೆ. ಆದರೆ ಸಹಕಾರಕ್ಕೆ ಮಿಗಿಲಾದ ದಾರಿಯು ಯಾವುದೂ ಇಲ್ಲ. ವ್ಯಕ್ತಿಯ ಗುಣವನ್ನು ವೃದ್ಧಿಪಡಿಸುವುದಕ್ಕೆ ಮತ್ತು ಆತನ ಭವಿಷ್ಯತ್ತಿನ ಜೀವನ ಕ್ರಮವನ್ನು ರೂಪುಗೊಳಿಸುವುದಕ್ಕೆ ಸಹಕಾರದಷ್ಟು ಶಕ್ತಿಯುಳ್ಳ ಸಂಸ್ಥೆಯೂ ವರೂ ಬೇರೊಂದಿಲ್ಲ.

ಮಹಿಳೆಯರೇ, ಮಹನೀಯರೇ, ಹಿಂದೂ ದೇಶದ ಇತರ ಭಾಗಗಳಲ್ಲಿರುವಂತೆ ಇಲ್ಲಿಯೂ ವರ್ಣಭೇದವು ಬಲವಾಗಿ ನೆಲೆಗೊಂಡಿದೆ. ಕೊಡಗ—ಕೊಡಗೇತರ, ಬ್ರಾಹ್ಮಣ—ಬ್ರಾಹ್ಮಣೇತರ ಎಂಬ ಭೇದಗಳು ಸ್ವಾರ್ಥಸಾಧಕರಾದ ಜನರಿಂದ ಹರಡಲ್ಪಟ್ಟು ದೇಶವೆಲ್ಲಾ ವಿಷಮಯವಿನಾಶ ಹರಡಿ ಜನರ ಅಭಿವೃದ್ಧಿಯನ್ನು ಹಾಳುಮಾಡಿದೆ. ಎಲ್ಲಿ ನೋಡಿದರಲ್ಲಿ ಮತ್ಸರವು [illegible] ಅದು ನಮ್ಮನ್ನು ನಾಶಪಡಿಸುವುದರಲ್ಲಿ ಸಂಶಯವಿಲ್ಲ. ಜನರನ್ನು ವಿವಾದ್ಯಮಂತರಾಗಿ ಮಾಡಿ ಒಬ್ಬರು ಮತ್ತೊಬ್ಬರ ಅಭಿಪ್ರಾಯಗಳನ್ನೂ, ಕಿರಿಯರು ಹಿರಿಯರನ್ನೂ ವಿದ್ಯಾಬುದ್ಧಿಗಳನ್ನು [illegible] ಉತ್ತಮ ಸ್ಥಿತಿಯಲ್ಲಿರತಕ್ಕವರನ್ನೂ ಪರಸ್ಪರ ಮಹಾರ್ಗದಿಂದ ಕಾಣುವಂತೆ ಮಾಡದಿದ್ದರೆ ದೇಶದಲ್ಲಿ [illegible], ಶಾಂತಿಯೂ ನೆಲೆಗೊಳ್ಳಲಾರದು ಮತ್ತು ನಮ್ಮ ಸರಕಾರವು ನಮಗೆ ಮತದಾನ ಕೊಡಲಾರದು. ಮತ ರನ್ನ ತುಂಬಿರುವಷ್ಟು ದಿನ ಸಹಕಾರವು ಅಭಿವೃದ್ಧಿಯಾಗದೆ ಒಬ್ಬರು ಮತ್ತೊಬ್ಬರ ಕೆಲಸಕ್ಕೆ ಕತ್ತರಿಸಲೆತ್ನಿಸುವರು. ಹಿರಿಯರು ಹುಚ್ಚರೆಂದೂ, ದೇಶದ ಉನ್ನತಿಗೆ ವಿಘ್ನವನ್ನುಂಟುಮಾಡುವವರೆಂದೂ ಹೇಳತಕ್ಕ ಯುವಕರನೇಕರಿರುವರು. ಆದರೆ ನಾನು ಹೇಳುವುದೇನೆಂದರೆ, ನಮ್ಮ ಹಿರಿಯರು ಹಲವು ಒಳ್ಳೆಯ ಸಂಸ್ಥೆಗಳನ್ನು ತೋರಿಸಿರುವರು. ಅವುಗಳನ್ನು ನಾವು ನಮ್ಮ ವಿದ್ಯಾಬಲದಿಂದ ಸರ್ವರಿಗೂ ಪ್ರಯೋಜನಕ್ಕೆ ಬರುವಂತೆ ಊರ್ಜಿತಗೊಳಿಸಬೇಕು. ದೇಶದಲ್ಲಿ ವರ್ಣಭೇದವು ಬಹು ಹಾನಿಕರವಾಗಿದೆ. ಉಪಾಧ್ಯಾಯರಾದ ನೀವು ಇಂಥ ಸಂಘಗಳ ಮುಖಾಂತರ ಹಿತಕರವಾದ ವಾತಾವರಣಗಳನ್ನು ಹೋಗಲಾಡಿಸಿ ನಿಮ್ಮ ಮತ್ತು ದೇಶದ ಮುಂದಿನ ಜನಾಂಗದ ಅಭಿವೃದ್ಧಿಗೆ ಸಹಾಯ ಮಾಡಬಹುದು.

ಸೋದರ ಸಹಕಾರಿಗಳೆ, ವಿಳಂಬವಾದ ಭಾಷಣಗಳಿಂದ ಹೆಚ್ಚಿನ ಪ್ರಯೋಜನವಿಲ್ಲ. ಅದಕ್ಕಿಂತ ನಿಯಮಕಟ್ಟಳೆಪಟ್ಟ ಪ್ರತ್ಯಕ್ಷ ವ್ಯವಹಾರಗಳೇ ಸರ್ವರ ಅಭಿವೃದ್ಧಿಗೆ ಅತಿ ಅವಶ್ಯವಾದುವು. ದೇಶದ ಉತ್ತೇಜನಕ್ಕಾಗಿ ಸೋದರ ಸಹಕಾರಿಗಳು ಸಹಕಾರ ತತ್ವಗಳನ್ನು ಅವರವರೊಳಗೆ ಬೆಳಸುವುದಲ್ಲದೆ ಶಾಲಾ ಬಾಲಕರಲ್ಲಿಯೂ ಬೆಳೆಯಗೊಟ್ಟು ರಾಷ್ಟ್ರಾಭಿವೃದ್ಧಿಯನ್ನು ತರಬೇಕೆಂದು ನಾನು ಕೋರುತ್ತೇನೆ. ದೇಶದ ಭಾವಿ ಸೌಖ್ಯವು ನಿಮ್ಮ ಕೈಯ್ಯಲ್ಲಿದೆ. ಸಹಕಾರಕ್ಕಿಂತ ಮಿಗಿಲಾದ ಸೇವೆಯು ಇನ್ನಿಲ್ಲ. ಸಹಕಾರದ ಮುಖಾಂತರ ನೀವು ಹಿಂದುಳಿದವರನ್ನು ಮುಂದೆ ತರಬಹುದು, ಬಡತನವನ್ನು ತಡೆಯಬಹುದು ವರ್ಣಭೇದವನ್ನು ಜೀರ್ಣ ಮಾಡಬಹುದು, ಜನ ಸಾಮಾನ್ಯಕ್ಕೆ ಜ್ಞಾನವನ್ನು ಹರಡಬಹುದು, ಜನಾಂಗವನ್ನುದ್ಧಾರ ಮಾಡಬಹುದು. ಪರಸ್ಪರ ಸಹಾಯ: ಪರಸ್ಪರ ಜ್ಞಾನ ಪ್ರಸರಣೆ, ಪರಸ್ಪರ ನಂಬಿಕೆ ಇವುಗಳು ಸಹಕಾರದ ಪರಮ ಧ್ಯೇಯಗಳು.

ಬೇಕಾಗಿದ್ದಾರೆ.

		ಕಲಬು.
ತಾಲೋಕು ಡಿಪ್ಯುಟಿ ಸುಪರಿಂಟೆಂಡೆಂಟರು , ಬ್ಯಾಂಕಿಂಗ್ ಏಜೆಂಟರು	}	80-8-160
ಪ್ರತಿ ಗ್ರಾಮಗಳಲ್ಲಿ ಏಜೆಂಟರು		20-2-10

ಡಿಪ್ಯುಟಿ ಸುಪರಿಂಟೆಂಡೆಂಟರು ಮತ್ತು ಬ್ಯಾಂಕಿಂಗ್ ಏಜೆಂಟರು ಅರ್ಜಿ ಮಾಡುವಾಗ್ಗೆ ತಮ್ಮ ವಿದ್ಯಾಭ್ಯಾಸವು ಎಷ್ಟರ ತನಕ ನಡೆದಿರುವುದೆಂಬುದನ್ನೂ, ಲೆಖ್ಖ ಮತ್ತು ಬ್ಯಾಂಕಿಂಗ್ ವಿಷಯ ಪರಿಚಯ ಮಾಡುವುದರಲ್ಲಿ ಎಷ್ಟರ ಮಟ್ಟಿಗೆ ಬಲ್ಲವರೆಂಬುದನ್ನೂ ಸ್ಪಷ್ಟವಾಗಿ ತಿಳಿಸಬೇಕು. ಗ್ರಾಮ ಏಜೆಂಟರುಗಳಿಗೆ [illegible] ಗೊತ್ತಿದ್ದರೆ ಮಾತ್ರ [illegible] ಪತ್ರಿಕೆಗ [illegible] ಸರ್ಟಿಫಿಕೇಟು [illegible] ಅರ್ಜಿಗಳನ್ನು [illegible] ಯಲ್ಲಿ [illegible] ಪತ್ರಗಳು [illegible]

Head Office
Post Box 373
MADRAS

ತಾಲೋಕು ಡಿಪ್ಯುಟಿ ಸುಪರಿಂಟೆಂಡೆಂಟರು,
ಬಿ ಇಂಡಿಯಾ ಕೊಸ್ಮೊ [illegible] ಲ್ಸ್‌ ಬ್ರಾಂಚ್
ಜನರಲ್ ಡೆವೆಲಪ್‌ಮೆಂಟ್ ಲಿಮಿಟೆಡ್,
ಕಂಪನಿ ಕಟ್ಟಡ,
ಮಂಗಳೂರು. (ದ ಕ)

52-1

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ಗಳ್ಗೆ 0—14—0 ಟಿ. ಖ 0—9—0

ಕೆ. ಟಿ. ಡೋಂಗರೆ ಕಂಪೆನಿ,

52—49 ಗಿರಿಗಾಂವ, ಮುಂಬಯಿ.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges & Hunting Requisites

for

SEASON

1929-30.



CURRENT CATALOGUE ON APPLICATION

THE BOMBAY ARMOURY,

Specialist in Arms & Ammunition.

331, ABDULREHMAN STREET,

BOMBAY No. 4

24—14

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ	ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ	ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹಾಯುವಿಕೆ, ಹೊಟ್ಟೆ ಶೂಲೆ ದುಸ್ವಪ್ನ ಬೀಳುವಿಕೆ ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ ವಾಂತಿ ಸರ್ವಶರೀರ ಪಿಶಾಚಬಾಧೆಯಿಂದ ನರಳುವಿಕೆ, ಬಳಿಕ ಶೀಘ್ರ ಹೋಗಿ ಗರ್ಭ ಪತನವಾಗುವಿಕೆ ಇವೇ [illegible] ಸಂತಾನ ಭಂಗಕ್ಕೆ ಕಾರಣಗಳು. ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ [illegible] ಸಂದುರೋಗ, ಮುಟ್ಟುದೋಷ ಕಾಮಿನಿ ಗ್ರಹಪೀಡೆ, ದೃಷ್ಟಿದೋಷ ಭಯಾದಿಂದ ಜ್ವರದಿಂದ ಕ್ಷೀಣ ಹೊಂದುವಿಕೆ, [illegible], ಮುಟಗಿಬೇನೆ ಹೊಟ್ಟೆಯೊಳಗಿಂದ ಏಳೋಣ ಮೊದಲಾದ [illegible] ಬಾಧಿಸುತ್ತಿರುವದು. ಗರ್ಭರಕ್ಷಾಕರ ವಿಧಿಯಲ್ಲಿ 'ಸುಶ್ರುತ' ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ [illegible] ಪ್ರಶಸ್ತ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಚ್ಚು ಮಕ್ಕಳಿಗಾಗುವ ಸಂತಾನಭಂಗವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ. ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ. ಒಂದುಸಲ ತರಿಸಿ ಅನುಭವ ತಕ್ಕೊಳ್ಳಿರಿ. ಹೆಚ್ಚು ಮಕ್ಕಳಿಗೆ ಸಂತಾನ ದೊರೆಯುವ ಗಳ್ಗೆ ೩ ರೂಪಾಯಿ. ಚಿಕ್ಕಮಕ್ಕಳಿಗೆ ಗಳ್ಗೆ ೨—೮—೦ ಪೋಸ್ಟು ಖರ್ಚು ಬೇರೆ. ಆಗತಕ್ಕ ವಿಚಾರಗಳನ್ನು ಸ್ಪಷ್ಟ ಬರೆಯಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ

ತಾಯಿತ ಸಿಗುವ ವಿಳಾಸ—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ.

52—13 ಮು. ಪೋ. ಅಥಣಿ, ಜಿ. ಬೆಳಗಾಂವ.

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಬಟ್ಟೆಯ ರಂಗಿಗೂ, ಬಟ್ಟೆಯ ನಮೂನೆಗೂ ಮರುಳಾಗಿ ಪರದೇಶಿ ಬಟ್ಟೆಯನ್ನು ಕೊಂಡುಕೊಂಡು, ಅನ್ನವಿಲ್ಲದೆ ನರಳುತ್ತಿರುವ ಲಕ್ಷಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡುತ್ತಿರುವಿರಾ? ಇಲ್ಲವೇ ದಿವಸಕ್ಕೊಮ್ಮೆ ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ನರಳುತ್ತಿರುವ ಲಕ್ಷಾನುಲಕ್ಷ ಬಡವರಾಯಿ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಬಟ್ಟೆಯನ್ನು ಕೊಂಡುಕೊಳ್ಳಲು ಕ [illegible] ಒಂದು ರೂಪಾಯಿಯೂ ಈ [illegible] ಶ್ರೀಯರ ಜೀವನಕ್ಕೆ ದಾರಿಯಾಗುತ್ತೆ

	ರು	ಆ	ಪೈ
ಹತ್ತಿ ಬೆಳೆದವರಿಗೆ	0	3	0
ಹತ್ತಿ ಬಿಡಿಸಿದವರಿಗೆ	0	0	6
ಬತ್ತಿ ಸುತ್ತುವವ[illegible]	0	1	9
ನೂಲು ಮಾಡುವವರಿಗೆ	0	3	9
ಬಟ್ಟೆ ನೇಯುವವರಿಗೆ	[illegible]	1	9
ಅಗಸ[illegible]	0	0	6
ಬಟ್ಟೆ [illegible]	0	0	9
[illegible]	0	1	0
	1	0	0

ಖಾದಿ[illegible] ಪರದೇಶಕ್ಕೆ ವರ್ಷಕ್ಕೆ 60 ಕೋಟಿ [illegible] ಹೋಗುವದನ್ನು ನಿಲ್ಲಿಸಿ ಅನೇಕ[illegible] ನಿಮ್ಮ ಮನೆಯ ಬಾಗಲಿಗೆ ಖಾದ್ಯಾಗಿ ಬಂದು ಕಾಡುವವು.

ಮೋಸೇ[illegible],

24—10 [illegible],

[illegible]ಪೇಟೆ.

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. [illegible]ಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, [illegible] ಮೂತ್ರದೊಡನೆ ಹೊರಹೋಗುವಿಕೆ ನರಗಳು ದುರ್ಬಲ[illegible] ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು [illegible] ಪಚನಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ [illegible] ದೃಷ್ಟಿ [illegible], ಮಲಬದ್ಧತೆ ಕೈಕಾಲು [illegible] ಮೊದಲಾದವುಗಳು ಪೂರ್ಣ ಗುಣವಾಗಿ [illegible] ಕ್ತಿಯು ಪುನಃ ಹುಂಡಿ[illegible] ಬಾಟ್ಲಿ 1 ಕ್ಕೆ 2—8—0, ಮೂರು ಬಾಟ್ಲಿಗಳಿಗೆ ರೂ 7—0—0

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ ಮಲೆ ಜ್ವರ, 2 ಯೂ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣು ಉರಿ, ತಲೆ[illegible], ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು [illegible] ದುದುವಿಕೆ ಬಾಲ್ಯಪಕಳಿ, ಕಮ್ಮಿಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1—4—0. 3 ಕ್ಕೆ 3—8—0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ ಬಾಟ್ಲಿ 1 ಕ್ಕೆ 0—8—0, 3ಕ್ಕೆ 1[illegible]

೬. ಕಸ್ತೂರಿ ಮಿಶ್ರಣ.

[illegible] ಬಾಟ್ಲಿ 1 ಕ್ಕೆ 1—8—0 [illegible] 4—4—0.

೭. ರಕ್ತ ಶುದ್ಧಿ ದ್ರಾವಕ.

[illegible] ಬಾಟ್ಲಿ 1 ಕ್ಕೆ 1—1—0 3 ಬಾಟ್ಲಿಗೆ 3 [illegible]

೮. [illegible]ಪ್ರಾಶ ಡಬಿ, 1 ಕ್ಕೆ 2—0—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ [illegible] ಮೇಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ[illegible] ಔಷಧಿ ರವಾನಿಸ ಬಹುದು. ಕೇಳಿದಾಗ ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್

52—47 ರಥಬೀದಿ ಮಂಗಳೂರು, ದ. ಕನ್ನಡ.

ಕೊಡಗು ಕೌನ್ಸಿಲು ಉಪ ಚುನಾವಣೆಯಲ್ಲಿ

ಮೆ. ಕೋಟೆರ ಚಿಣ್ಣಪ್ಪನವರಿಗೆ ಜಯವಾಯಿತು.

ಮಡಿಕೇರಿ—ಭಾಗಮಂಡ್ಲ—ಸುಂಟಿಕೊಪ್ಪ ಜಮ್ಮ ಓಟರುಗಳ ಪರವಾಗಿ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಖಾಲಿ ಬಿದ್ದ ಮೆಂಬರುತನಕ್ಕೆ ಕಳೆದ ತಾ 27ರಲ್ಲಿ ಉಪಚುನಾವಣೆಯು ನಡೆಯಿತು. ಚುನಾವಣೆಗೆ ನಿಂತಿದ್ದ ಇಬ್ಬರು ಉಮೇದುವಾರರುಗಳ ಪೈಕಿ ಮೆ ಕೋಟೆರ ಚಿಣ್ಣಪ್ಪನವರಿಗೆ 731 ಓಟುಗಳೂ ರಾ ಬಾ ಕೋಡಿಮಣಿಯಂಡ ಸುಬ್ಬಯ್ಯನವರಿಗೆ 636 ಓಟುಗಳೂ ದೊರೆತವು 69 ಓಟುಗಳು ಸರಿಯಲ್ಲವಾದುದರಿಂದ ರದ್ದು ಮಾಡಲಾದವು. ಮೆ ಕೋಟೆರ ಚಿಣ್ಣಪ್ಪನವರು 95 ಓಟುಗಳಿಂದ ಜಯಶೀಲರಾದರು. ಜಯಶೀಲರಿಗೆ ನಮ್ಮ ಅಭಿವಂದನೆಗಳಿವೆ

ಒಳದೇಶ.

ಚೀಫ್ ಕಮಿಷನರವರು ಈ ತಾ 2ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬಂದಿರುವರು

ಈ ವಾರ ಮಡಿಕೇರಿಯಲ್ಲಿಯೂ, ದೇಶದ ಕೆಲವು ಭಾಗಗಳಲ್ಲೂ ತಕ್ಕ ಮಟ್ಟಿಗೆ ಮಳೆ ಬಿದ್ದಿದೆ

ಫಾರೆಸ್ಟು ಹೆಡ್ಡಾಫೀಸಿನಲ್ಲಿದ್ದ ರೇಂಜರ್ ಮೆ ಕೋಡಂಡ ಚಂಗಪ್ಪನವರು ತಿತಿಮತಿಗೆ ವರ್ಗಾಯಿಸಲ್ಪಟ್ಟಿರುವರು.

ಸೋಮವಾರಪೇಟೆಯಲ್ಲಿ ಬೆಂಚ್ ಮೇಜಿಸ್ಟ್ರೇಟರಾಗಿದ್ದ ಮೆ. ಕೆಳಮನೆ ತಿಮ್ಮಣ್ಣನವರು ಈ ತಾ 20ರಲ್ಲಿ ಶಿವಾಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ

ಕಳೆದ ಆಗೋಸ್ತು ತಿಂಗಳಲ್ಲಿ ಕೊಡಗು ಪ್ರಾಂತ್ಯದಲ್ಲಿ 344 ಜನನಗಳೂ, 307 ಮರಣಗಳೂ ಆದವು. ಹೀಗೆ ಮರಣಕ್ಕಿಂತ ಜನನ ಹೆಚ್ಚಾಗಿರುವದು ಬಹು ಅಪರೂಪ.

ಹಿಂದೂದೇಶಕ್ಕೆ ಹೆಚ್ಚಿನ ಸುಧಾರಣೆ (ಡೊಮಿನಿಯನ್ ಸ್ಟೇಟಸ್) ಕೊಡುವುದರ ಬಗ್ಗೆ ಬ್ರಿಟಿಷ್ ಮಂತ್ರಿಮಂಡಳಿಯವರು ಬೇಗನೆ ತಮ್ಮ ಸರ್ಕಾರದ ಇರಾದೆಯನ್ನು ಪ್ರಕಟಿಸಲಿಕ್ಕಿರುವರೆಂದೂ, ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳು ಮತ್ತು ಇಂಡಿಯದ ಮುಂದಾಳುಗಳ ಒಂದು ರೌಂಡ್ ಟೇಬಲ್ ಕಾನ್ಫರೆನ್ಸ್ ನಡೆಸಲ್ಪಡುವದೆಂದೂ, ಇದು ಇಲ್ಲವಾದರೆ ವೈಸರಾಯ್ ಲಾರ್ಡ್ ಇರ್ವಿನ್‌ರವರು ಇಂಡಿಯಕ್ಕೆ ಬರುವ ವೇಳೆ ಲೇಬರ್ ಸರ್ಕಾರದ ಇರಾದೆಯನ್ನು ಕಳಿಸು ... ಭಾಷಣ ಮಾಡುವರೆಂದೂ ವಿವಿಧ ವರ್ತಮಾನಗಳು ಇಂಗ್ಲೆಂಡಿನಿಂದ ಇಂಡಿಯಕ್ಕೆ ತಿಳಿಯುತ್ತಿವೆ

ಜರ್ಮನಿಯ ಪರರಾಜ್ಯಗಳ ಇಲಾಖಾ ಮಂತ್ರಿಯವರಾಗಿದ್ದ ಡಾಕ್ಟರ್ ಸ್ಟ್ರೆಸ್ಮಾನರವರು ಕಳೆದ ವಾರ ಕಾಲವಾದ ಸುದ್ದಿಯು ಹರಡಿ ಜನರೆಲ್ಲರಲ್ಲಿ ಯೂರೋಪ್ ಖಂಡದ ಅದ್ಯಂತದಲ್ಲೂ ವಿಶೇಷವಾದ ವ್ಯಸನವನ್ನುಂಟುಮಾಡಿದೆ ಡಾ ಸ್ಟ್ರೆಸ್ಮಾನರವರು 1878ರಲ್ಲಿ ಬರ್ಲಿನ್ ನಗರದಲ್ಲಿ ಜನಿಸಿ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ... 1907ರಲ್ಲಿ ... ಪಾರ್ಲಿಮೆಂಟಿನ ಮೆಂಬರಾಗಿ ಬಂದರು ... ಯುದ್ಧವಾದ ಬಳಿಕ ಅವರು ಜರ್ಮನಿಯ ... ರಾಜಕೀಯತಂತ್ರಜ್ಞರಾಗಿದ್ದರು. ಜರ್ಮನಿಗೂ ಇತರ ರಾಷ್ಟ್ರಗಳಿಗೂ ಪರಸ್ಪರ ಸ್ನೇಹ ಭಾವವನ್ನು ಉಂಟುಮಾಡುವ ವಿಷಯದಲ್ಲಿ ಡಾ ಸ್ಟ್ರೆಸ್ಮಾನರವರಷ್ಟು ವಿಶೇಷವಾಗಿ ಸಹಾಯಪಟ್ಟವರು ಬೇರೆ ಯಾರೂ ಇಲ್ಲ

— — —

"ಕೊಡಗು" ಕಂಪೆನಿಯ ಮೀಟಿಂಗು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ತಾ. 28—9—'29 ರಲ್ಲಿ ಮಡಿಕೇರಿಯಲ್ಲಿರುವ ಕಂಪೆನಿಯ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು ಮೆ ಗಳಾದ 1 ... ಯಸ್ ವೆಂಕಪ್ಪಯ್ಯನವರು, 2 ಐಚೆಟ್ಟಿರ ... ಸುಬ್ಬಯ್ಯನವರು, 3. ಕೋಟೆರ ಚಿಣ್ಣಪ್ಪನವರು, 4. ಕೊಳ್ಳಿಮಾಡ ಕರುಂಬಯ್ಯನವರು, 5 ಪಿಡ್ಡಮಲೆ ಮುದ್ದಪ್ಪನವರು, 6. ಮನೆಯಪಂಡ ಚಿಣ್ಣಪ್ಪನವರು, 7 ಬಲ್ಯಮೀದೇರಿರ ... ಪ್ಪನವರ ಮತ್ತು 8. ಯಂ ಯು. ಸಿದ್ದೀಕ್‌ರವರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2 ... ಕಂಗಳಿಗೆ ಲೆಕ್ಕ ಓದಿ ...

3. ಸಬ್ ಎಡಿಟರ್ ... ಕೌಂಟೆಂಟರಾಗಿದ್ದ ಮೆ. ... ಮೊಡೈಯ್ಯನವರು ತಮ್ಮ ... ಕೊಟ್ಟ ರಾಜಿನಾಮೆಯು ಓದಿ ಒಪ್ಪಲಾಯಿತು

4 ಸಬ್ ಎಡಿಟರ್ ಕೆಲಸಕ್ಕೆ ಬಂದಿದ್ದ 23 ಅರ್ಜಿಗಳು ಓದಲಾದವು ಅರ್ಜಿದಾರರ ಅರ್ಹತೆಗಳ ವಿಷಯ ದೀರ್ಘ ಚರ್ಚೆ ನಡೆದ ನಂತರ ಮೆ ಯು ಪೊನ್ನಪ್ಪನವರನ್ನು ಸಬ್ ಎಡಿಟರ್ ಮತ್ತು ಎಕೌಂಟೆಂಟರಾಗಿ ನೇಮಿಸಲಾಯಿತು.

5. 1928—29 ನೇ ವರ್ಷದ ಲೆಕ್ಕಗಳನ್ನು ಆಡಿಟ್ ಮಾಡಲು ಆಡಿಟರಿಗೆ ಕೊಡತಕ್ಕದೆಂತ ತೀರ್ಮಾನವಾಯಿತು.

6 ಕಳೆದ ಪದ್ಧತಿಯಂತೆ ಕೆಲಸ ಕಡಿಮೆ ಇರುವ ಕಾಲದಲ್ಲಿ ಆಫೀಸನ್ನು ಶನಿವಾರ ಮಧ್ಯಾಹ್ನ 1 ಗಂಟೆಯ ವೇಳೆ ಮುಚ್ಚುವ ಅಧಿಕಾರವು ಕಾರ್ಯಾಧ್ಯಕ್ಷರಿಗೆ ಕೊಡಬಹುದೆಂದು ತೀರ್ಮಾನಿಸಲಾಯಿತು.

7 ಕಂಪನಿಯ ಬರುವ ಜನರಲ್ ಮೀಟಿಂಗಿನ ಮುಂದಿಡಲು ಕಂಪೆನಿಯ ಕಳೆದ ವರ್ಷದ ವರದಿಯನ್ನು ತಯಾರಿಸಲು ಕಾರ್ಯಾಧ್ಯಕ್ಷರಾದ ಮೆ ಸಿ ಯಸ್ ವೆಂಕಪ್ಪಯ್ಯನವರು, ... ಯಂ. ಸಿದ್ದೀಕ್‌ರವರ ಮತ್ತು ಮೆ. ಐ ಸಿ. ... ಪ್ಪಯ್ಯನವರುಗಳ ಒಂದು ಉಪಕಮಿಟಿಯು ನೇಮಿಸಲಾಯಿತು

ಸಿ ಯಸ್. ವೆಂಕಪ್ಪಯ್ಯ,
(ಅಧ್ಯಕ್ಷರು)

ಹೊಸ ಸ್ಟಾಕು! ಬೆಲೆ ಅಗ್ಗ!

ಕೊಡಗು ಉಪಾಧ್ಯಾಯರ ಮಿತಿಯುಳ್ಳ ಸಹಕಾರ ಸ್ಟೋರ್.

ವೀರಾಜಪೇಟೆ.

ಮೇಲಿನ ಸ್ಟೋರಿನಲ್ಲಿ ಎಲ್ಲಾ ಶಾಲಾ ಪಠ್ಯ ಪುಸ್ತಕಗಳು ಕಾಗದ, ಮಸಿ, ಪೆನ್ ಇತ್ಯಾದಿ ಸ್ಟೇಷನರಿ ಸಾಮಾನುಗಳು, ಹಾಕಿ, ಕ್ರಿಕೆಟ್, ಫುಟ್‌ಬಾಲ್ ಮತ್ತು ಟೆನ್ನಿಸ್ ವಗೈರೆ ಆಟದ ಸಾಮಗ್ರಿಗಳು ಮತ್ತು ಜರ್ಮನಿ ಬೀಗಗಳು, ಕೊಡೆಗಳು ಇತ್ಯಾದಿ ಸುಲಭ ಕ್ರಯಕ್ಕೆ ದೊರೆಯುವವು

ಬಂದು ನೋಡಿ! ಕೊಂಡು ಕೊಳ್ಳಿ!!

12—1

COORG FOREST DEPARTMENT
SOUTH DIVISION.

NOTICE.

MERCARA THE 7TH OCTOBER 1929

Tenders are invited for the purchase of Ragi Crop in the kurries of the Titimatti Range. Tend is should reach this office by 20—10—1929.

For further particulars please apply to the DIVISIONAL FOREST OFFICER SOUTH COORG MERCARA

WANTED.

Candidates for Telegraph and Station Masters Classes. Full particulars and Railway Fare Certificate on 2 annas stamp. Apply to—

IMPERIAL TELEGRAPH COLLEGE,
NAI SARAK
DELHI.

2—1

ಪತ್ರವ್ಯವಹಾರ

[ಪತ್ರಿಕೆದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗಿನ ಮುತ್ತು ಹುತ್ತರಿ

ಅಯ್ಯಾ,

ಮುತ್ತು ಹುತ್ತರಿ ಪವಿತ್ರವಾಗುತ್ತಾ ಬರುತ್ತ ... ಮೆ ರಾ ... ಪಿ. ಬಿ ರಾ. ವಿಸ್ಮಯಮೂರ್ತಿ ಜೋಯಿಸರು ಗಂಟೆ ಘಳಿಗೆ ಕುಂಭ ಮುಹೂರ್ತವನ್ನು ತೋರಿಸಿದ ಹಾಗೆ ಕಾಣುತ್ತೆ. ಆಗಲೆ ಈ ಹಬ್ಬದ ಸಂಬಂಧ ನಾಗೆ ಕಂಡುಬರುವ ಕೆಲವು ಕುಂದುಕೊರತೆಗಳನ್ನು ದೇಶದವರ ಮುಂದಿಡ ...

ಸರ್ವ ಜನರೂ ತಿಳ್ದುಪಡಿ ಮಾಡಬೇಕಾಗಿ ಈ ಪತ್ರಿಕೆಯ ಮೂಲಕ ಕೇಳಿಕೊಳ್ಳುತ್ತೇನೆ. ಈ ಹಬ್ಬವನ್ನು ಪೂರ್ವದ ಕೊಡಗಿನ ರಾಜರ ಕಾಲದಲ್ಲಿ ಅವರ ಅನುಕೂಲತೆಗಾಗಿ ಅರಮನೆ ಪೊಳುದೆಂದೂ, ನಾಡು ಪೊಳುದೆಂದೂ, ಈಗ ಹಾಳು ಬಿದ್ದಿರುವ ನಾಲ್ಕುನಾಡು ಅರಮನೆಯನ್ನೂ, ಮಡಿಕೇರಿ ಸರ್ಕಾರಿ ಆಫೀಸುಗಳನ್ನೂ ಆಕ್ರಮಿಸಿಕೊಂಡಿರುವ ಮಡಿಕೇರಿ ಕೋಟೆಯನ್ನೂ ಕಾಯುವ ನಿಮಿತ್ತ ಆಗಿನ ರಾಜರು ತಮ್ಮ ಸೈನ್ಯಗಳಿಗೂ, ಉದ್ಯೋಗಸ್ಥರಿಗೂ ಮೊದಲಿನ ದಿವಸ ತಮ್ಮ ಅರಮನೆಗಳಿಗೆ ಕದಿರು ಕಟ್ಟುವುದು ಮತ್ತು ಪಹರೆ ಇರುವುದು ಎರಡನೇ ದಿವಸ ಅವರಿಗೆ ರಜೆಕೊಟ್ಟು ಅವರ ನಾಡುಗಳಿಗೆ ಕಳುಹಿಸಿ ಆ ದಿನ ಅವರು ನಾಡುಪೊಳುದು ಹಬ್ಬವಾಗಿ ಆಚರಿಸುತ್ತಿದ್ದರು. ಈ ಪದ್ಧತಿಯು ಈಗಲೂ ನಡಿಯುತ್ತಾ ಇದೆ ಇತ್ಯಲಾಗಿ ಈ ಹಬ್ಬವನ್ನು ದೇಶದವರೆಲ್ಲರೂ ಒಂದೇ ದಿವಸ ನಡಿಸಬೇಕೆಂದು ಕಳೆದ ವರ್ಷ ಮ ರಾ ಶ್ರಿ ಗಳಾದ ಕೂರವಂಡ ಪೊನ್ನಪ್ಪನವರು ಮತ್ತು ಐನಂಡ ಮಾದಪ್ಪನವರು ಬರೆದ ಸಂಗತಿಯನ್ನು ನೀವು ಪತ್ರಿಕೆಯಲ್ಲಿ ಓದಿರಬಹುದಾಗಿ ನಂಬುತ್ತೇನೆ ಅದೇ ಸಂಗತಿಯು ಈಗ ನನಗೆ ಜ್ಞಾಪಕಕ್ಕೆ ಬಂದ ಕಾರಣ ಈ ಸಂಗತಿಯನ್ನು ಎತ್ತಿ ಬರಯಲು ಕಾರಣವಾಯಿತು. ಅದಕಾರಣ ಈ ಹಬ್ಬವನ್ನು ಈ ಸಣ್ಣ ದೇಶದವರಾದ ನಾವು ಕಾರಣವಿಲ್ಲದೆ ಎರಡು ಭಾಗವಾಗಿ ಆಚರಿಸಬಾರದಾಗಿಯೂ, ಈ ಸಂಗತಿಯನ್ನು ಒರುವ ಹುತ್ತರಿ ಹಬ್ಬದ ನಂತರ ಸಮಯದಲ್ಲಿ ವಿನೋದಕ್ಕಾಗಿ ಒರುವ ವೇಳೆಯಲ್ಲಿ ಈ ಮೊದಲೇ ಬರೆದ ಮ. ಪೊನ್ನಪ್ಪನವರು, ಮ. ಐನಂಡ ಮಾದಪ್ಪನವರು ಪಬ್ಲಿಕ್ ಮೀಟಿಂಗಿನಲ್ಲಿ ಮಾತಾಡಿ ಜನರ ಅಭಿಪ್ರಾಯವನ್ನು ತೆಗೆದು ಸ್ಥಳೀಕ ಸರ್ಕಾರದವರ ಮುಂದಿಟ್ಟು ಈ ಹಬ್ಬವನ್ನು ಒಂದೇ ದಿವಸ ದೇಶದವರೆಲ್ಲರೂ ಆಚರಿಸುವಂತೆ ಮಾಡಿಸಬೇಕಾಗಿ ಅಪೇಕ್ಷಿಸುತ್ತೇನೆ ಹೀಗೆ ಆಚರಿಸುವುದರಿಂದ ಯಾರೂ ಯಾವದೊಂದೂ ಬಾಬಿನಲ್ಲಿಯೂ ಕಷ್ಟ ನಷ್ಟಗಳಿಗೆ ಒಳಗಾಗಬೇಕಾದ ಅವಶ್ಯವಿರುವುದಿಲ್ಲವಾಗಿ ಭಾವಿಸುತ್ತೇನೆ.

ಎಸ್. ಉತ್ತಯ್ಯ.

ಮೆ. ಅಬ್ದುಲ್ ಗಫೂರ್ ಖಾನ್ ಬೈತ್ಗಿಯವರು 'ಕೊಡಗು' ಮತ್ತು 'ಲೋಕಪಾವನ' ಪತ್ರಿಕೆಗಳಲ್ಲಿ ಕೊಡಗು ಸಭೆ ಮತ್ತು ಹೊಸ ಜಮೀನುದಾರರ ಸಂಘದ ಮಹನೀಯರಲ್ಲಿ ಅರಿಕೆ ಮಾಡಿದ ಒಂದು ವಿನಂತಿಯನ್ನು ನೋಡಿ ಆಶ್ಚರ್ಯವಾಯಿತು.

ಮೆ. ಅಬ್ದುಲ್ ಗಫೂರ್ ಖಾನ್ ಬೈತ್ಗಿಯವರೇ,

ತಾವು, ಹೊಸ ಜ. ಸಂಘದ ಮಹನೀಯರೆಂದು ಬರೆಯುತ್ತೀರಿ ನೀವು ಹೇಳುವಂತೆ ಹೊಸ ಸಂಘವನ್ನು ಸ್ಥಾಪಿತಪಡಿಸಿಲ್ಲ. ಜಮಾಬಂದಿ ಸಂಘವು ಇದಾಗಿದೆ. ತಾವು ಸಮ್ಮತಿಸದ ಏಕೀಕರಣ ಪ್ರಶ್ನೆಗೆ ನಾವು ಸಮ್ಮತಿಸದ್ದರಿಂದಲೂ, ಕೊಡವ ಸಭೆ ಮೆಂಬರು ಜಮೀನುದಾರರ ಸಂಘದಲ್ಲಿರಕೂಡದು, ಜ. ಸಂಘದ ಮೆಂಬರು ಕೊಡವ ಸಭೆಗೆ ಸೇರಕೂಡದೆಂಬ ನಿಬಂಧನೆ ಇತ್ತು, ರಾವು ಅವಧಿಯನ್ನಿಟ್ಟು ಪಾಸು ಮಾಡಿದ್ದರಿಂದಲೂ ಸಂಘವೊಂದಿಗೆ ಬೇರೊಂದು ಪಂಗಡವಾಗಿರುತ್ತೆಂಬುದನ್ನು ಮನವರಿಕೆ ತಂದುಕೊಳ್ಳಬೇಕಾಗಿ ಕೇಳುತ್ತೇನೆ. ತಾವು ಕಾಣಿಸಿದಂತೆ ಏಕೀಕರಣ ಪ್ರಶ್ನೆಗೆ ನಮ್ಮ ಕವಿಲ್ಲದಿದ್ದರೆ ತಾವುಗಳು ನಮ್ಮ ಪಂಗಡದವರೆಂದು ತಿಳುಕೊಂಡು ನಮ್ಮೊಡನೆ ಸೇರುವರಾಗಿ ನಂಬಿದ್ದೇನೆ. ಅಲ್ಲದೆ ತಮ್ಮ 2 ಪ್ರಶ್ನೆಗಳಿಗೆ ಈ ಕೆಳಗಿನ ಉತ್ತರವಾಗಿದೆ.

1. ಜಮ್ಮ, ಸಾಗು, ಎಂಬ ಬೆಟ್ಟದ ತಾಗಿರುವ ಭೇದವನ್ನು ಇಡಕೂಡದು.

2. ಜಮ್ಮಕ್ಕೆ ರೂ. 5—0—0 ಸಾಗಿಗೆ ರೂ. 10—0—0 ಎಂಬ ನಿಬಂಧನೆ ಇರಕೂಡದು.

ಒಂದನೇ ಪ್ರಶ್ನೆಗೆ—ತಾವು ತಮ್ಮ ಮನವರಿಕೆಗೆ ತಂದಿದ್ದಲ್ಲಿ ಈ ಸಂಗತಿ ಎತ್ತುತ್ತಿರಲೇ ಇಲ್ಲ. ಜಮ್ಮದಲ್ಲಿ ತಾನು ಇಲ್ಲೇ ಹುಟ್ಟಿ ಬೆಳೆದು, ಇಲ್ಲೇ ಮಗ್ನನಾಗಿ ಸಂಳುತ್ತಿವುರುವುದು. ಸಾಗು ಎಂದರೆ ತನಗೆ ಶಕ್ತಿ ಇರುವ ವರೆಗೆ ಇದ್ದು, ಕಲ್ಲದಿದ್ದಲ್ಲಿ ಮಾರಿ, ಕೇರಿ, ಎಲ್ಲಿಗಾದರೂ ಹೋಗಬಹುದು. ಜಮ್ಮವು ಹಾಗಲ್ಲವೆಂಬುದೂ ಇದು ಆವನ ಪುತ್ರ ಪೌತ್ರ ಪಾರಂಪರ್ಯದ ವರೆಗೆ ಇಲ್ಲೇ ನರಳಬೇಕಾದದ್ದು. ಒವನ್ನಂತೆ ಇರಬೇಕಾದರೆ ಸಾಗನ್ನು ಮಾರಲು, ಗಿರ್ವಿ ಭೋಗ್ಯ ವಗೈರೆ ಮಾಡ ಕೂಡದಂಥಾ ಅಡಚನೆಗಳ ಕಾನೂನು ತಪ್ಪ ಮಾಡಿಕೊಂಡರೆ ಜಮ್ಮದಂತೆ ಇರಲು ಯ. ನ ಆಟಂಕವು ಇರಬಾರದು. ಇದು ನ [illegible] ಇದಕ್ಕೆ ಇವರದೇ ಆಟಂಕವಿದೆ

ತಮ್ಮ ಎರಡನೇ ಪ್ರಶ್ನೆಗೆ—ಇದು [illegible] ಮೇಲೆ ಅಲ್ಲ. 100 ಒಟ್ಟು [illegible] ಲಕ್ಷದಲ್ಲಿ [illegible] ತಿಳಿಕೊಳ್ಳುವಿರಾಗಿ ನಂಬಿದ್ದೇನೆ [illegible] 1 [illegible] 2 [illegible] 3 [illegible] ಯ ಪರದಂತೆ ಮತ್ತು ಜಮೀನು [illegible] ಇಲ್ಲದಿದ್ದರೂ ನೂರು ಒಟ್ಟಿಯ [illegible] ಗೆ ಬಂದು ಓಟಿನ ನಿಬಂಧನೆಯು ಇರಬೇಕೇ ಹೊರತು ಅನ್ಯಥಾ ಅಲ್ಲವಾಗಿದೆ. ಅದ್ದರಿಂದ ತಮಗಳ ಖಾಸ್ಗಿದೃಷ್ಟಿ ನಡಕೊಳ್ಳುವರಾಗಿ ಕೇಳಿಕೊಳ್ಳುತ್ತೇನೆ.

ಸುಬ್ಬಯ್ಯ ಬಿದ್ದಂಡ.

ಮಹಾತ್ಮರ ಷಷ್ಟಬ್ದಿಯಲ್ಲಿ ರಂಗನ ಪ್ರೀತಿ

ಆ ದಿನ ಎಲ್ಲಿ ನೋಡಿದರೂ ಜಯ ಜಯ ಘೋಷವು ಆಕಾಶದಲ್ಲಿ ಮೊಳಗುತ್ತಿತ್ತು. ಇಡೀ ಭರತ ಖಂಡವೆಲ್ಲವೂ ರಂಗನಿಂದ ಶೃಂಗರಿಸಲ್ಪಟ್ಟಿತ್ತು. ವಿಶ್ವತಿ ರಂಗನು ಆಕಾಶದಲ್ಲಿ ತೇಲಾಡುತ್ತಾ ಸ್ವಯಂಸೇವಕರ ಜಯ ಜಯ ಘೋಷಕ್ಕೆ ಜಯ ಜಯವೆಂದು ಸುತ್ತೆಷ್ಟು ಮೇಲಕ್ಕೆ ಹಾರುತ್ತಿದ್ದನು. ಮಾರುತನ ಸಹಾಯದಿಂದ ರಂಗನು ಮೇಲಮೇಲಕ್ಕೆ ಹಾರುತ್ತಾ ಸ್ವಯಂಸೇವಕರನ್ನೂ, ಜನ ಸಮೂಹವನ್ನೂ ಮತ್ತಷ್ಟು ಆನಂದಗೊಳಿಸುತ್ತಿದ್ದನು. ಇಂದ ರಂಗನೊಮ್ಮೆಯು ಪ್ರಾಸ್ಸದಲ್ಲಿ ಮುಳುಗಿ [illegible] ನನ್ನು ಮನಸ್ಸು ಕೊರಗಿತು ಅಷ್ಟರಲ್ಲಿಯೇ ರಂಗನು ಪರದಾಸ್ಯವು ನಾಶವಾಗುತ್ತಿದೆ, ತರುಣರೇ ಎದ್ದೇಳಿ, ಎಚ್ಚೇಳಿರೆಂದು ಆಕಾಶದಲ್ಲಿ ಮಾರುತನ ಸಹಾಯದಿಂದ ನುಡಿದನು ಆ ದಿನ ಈ ವಿಶ್ವದಲ್ಲಿ ಹುಟ್ಟಿ ಲೋಕ ಪ್ರಖ್ಯಾತಿಯನ್ನು ಹೊಂದಿದ ಏಕೈಕ ಮಹಾಪುರುಷರಾದ ಮಹಾತ್ಮ ಗಾಂಧಿ [illegible] ಜನ್ಮ ದಿನದ ಉತ್ಸವವಾಗಿತ್ತು. [illegible] ರಂಗನನ್ನು ಬಿಟ್ಟು [illegible] ದನು [illegible] ಮಹಾಪುರುಷರ [illegible] ವಿಷೇಶವಾಗ ರಂಗನು ಆಕಾಶದಲ್ಲಿ [illegible] ಜಯ ಜಯ ಘೋಷವನ್ನು [illegible] ರಂಗನ ಸೇವೆಯನ್ನು ಮೆಚ್ಚುವವಲ್ಲದೆ ಬೇರೆ ಯಾರೂ [illegible] ಸಮೂಹವನ್ನು ನೋಡಲು [illegible] ಹಿಂಬಾಲಿಸುತ್ತಿದ್ದರು [illegible] ಕಿರಿಯ [illegible] ಸು ಮೃಚವನ್ನೇರಿ [illegible] ಶ್ರೀಧರರ [illegible] ಯಾಗಿದ್ದರು ಮಹಾತ್ಮರು ರಂಗನನ್ನು [illegible] ಯುತ್ತಿದ್ದದ್ದರಿಂದಲ್ಲವೇ ರಂಗನು ನಮ ಆ ದಿ [illegible] ಅವರ ಜಯ ಜಯ ಘೋಷವನ್ನು ಮಾಡಿದುದು [illegible] ನಾವೆಲ್ಲರು ಮಹಾತ್ಮರಂತೆ ರಂಗನ ಸೇವೆಯನ್ನು [illegible] ನ ಪ್ರೀತಿಗೆ ಪಾತ್ರರಾಗುವ.

ಎ. ಎಸ್. ಸಿ.
(ಸ್ವಯಂಸೇವಕ)

ಮಂಗಳೂರು ಕೊಡಗರ ಕೈಲ್ ಪೊಳುದು.

ಮಂಗಳೂರು ಕೊಡಗರ ಐದನೇ ವಾರ್ಷಿಕ ಕೈಲ್ ಪೊಳುದು ಹಬ್ಬವು ಕಳೆದ ಸಪ್ಟಂಬರ್ ತಾರೀಖು 21ನೇ ರವಿವಾರದ ದಿವಸ ಗವರ್ನ್‌ಮೆಂಟ್ ಕಾಲೇಜು ಹಾಸ್ಟೆಲಿನಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು [illegible] ಮಹನೀಯರು ನೆರೆದಿದ್ದರು [illegible] ವಂಡ ಬೆಳ್ಯಪ್ಪನವರೂ, [illegible] ಆಮಂತ್ರಿತರಾದವರೆಲ್ಲರೂ [illegible] 1 ಗಂಟೆಗೆ ಬಂದನಂತರ [illegible] ಕೆ ಯಸ್ ಪೊನ್ನಪ್ಪನವರು [illegible] ರಾದುದರಿಂದ ಉಪಾಧ್ಯಕ್ಷರಾದ ಮ. ಸಿ. ಬಿ [illegible] ಸವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. [illegible] ಇದಕ್ಕೆ ಮುಂದಾಗಿ ನಡೆದ ಮೀಟಿಂಗುಗಳ [illegible] ನ್ನು ಓದಿದರು. [illegible] ಚಾರಗಳು ಮನತೃಪ್ತಿಯಾಗಿ ನೆರವೇರಿತು [illegible] ಗೆ ಪುನಃ ಕೂಟವು ಸೇರಿ ಕಾರ್ಯದರ್ಶಿಯ [illegible] ನಿಯ ರಿಗೆಲ್ಲರಿಗೂ ವಂದನೆಯನ್ನು [illegible] ಳ ಪರವಾಗಿ ಮೆ ಪಿ ಬೆಳ್ಯಪ್ಪನವರು [illegible] ಣವನ್ನು ಮಾಡಿ ತಮ್ಮ ಆಹ್ಲಾದವನ್ನು ಪ್ರಕಾಶಗೊಳಿಸಿದರು ತದನಂತರ ತಾಂಬೂಲ ಸಂಗೀತ ಗಾಯನಗಳಿಂದ ಒಂದು ಕಾಲವು ಒರಕಾಸ್ತಾಯಿತು

ಪಿ ಯು ದೇವಯ್ಯ
ಸೆಕ್ರಟರಿ

ಪೊನ್ನಂಪೇಟೆ ಶಾಲೆ

ಅಯ್ಯಾ,

ಈ ಶಾಲೆಯಲ್ಲಿ ಈಗ ಎಂಟು ತರಗತಿ [illegible] 120 ಹುಡುಗರಿದ್ದಾರೆಂದು ತಿಳಿದೆನು 8 ತರಗತಿಗೆ ಬರೇ 7 ಉಪಾಧ್ಯಾಯರಿದ್ದಾರೆ ಹಾಗಾದರೆ ಇನ್ನೊಂದು ತರಗತಿ [illegible] ಸೋಡುವರ್‍ಯಾರು? ಉಪಾಧ್ಯಾಯರಿಗೆ ಒಂದು ಘಂಟೆ ಸಹ ವಿರಾಮವಿಲ್ಲ, ಇದರ [illegible] [illegible] ಗಳಿಗೆ ಹಿಂದೆ ನನಗೆ ಹಾರ [illegible] ನನ್ನು [illegible] ಮ. ನಾಚಪ್ಪನವರು [illegible] ಸಂಪಾದಕರಿಗೆ ಬರೆ [illegible] ಕೊಂಡದರ ಮೇಲೆ ಆ ಸಮಯದಲ್ಲಿ ಸ್ಕೂಲ್ ಇನ್ಸ್‌ಪೆಕ್ಟರಾಗಿದ್ದ [illegible] ಸಂತೋಷದಿಂದ ನಿದ [illegible] ಪರಿಸ್ಥಿತಿ ಬಿದ್ದರು. ಆದರ [illegible] ದ ವರೆಗೆ ಯಾವ ಜವಾಬು [illegible] ಸಬೇಕಾಗಿದೆ.

ಉಪಾಧ್ಯಾಯರು ಶಾಲೆಯಲ್ಲಿ ವಿರಾಮವಿಲ್ಲದೆ ಎಳೆ ಮಾಡುವಲ್ಲದೆ ನವರ ಘಾರಂ ಮತ್ತು ಗಸ್ತಿ ಕೆಲಸ ಸಹ [illegible] ಮಾಡುವುದರಿಂದ ಬಹ ರೈತರ ದ ನಮ್ಮ ಮಕ್ಕಳ ವಿದ್ಯಾಭಿವೃದ್ಧಿ ಹೇಗೆ ಮುಂದುವರಿದೀತು? ಇನ್ನಾದರೂ ಸರ್ಕಾರದವರು ಸದರಿ ಶಾಲೆಗೆ ಒಬ್ಬ ಹೆಚ್ಚಿನ ಉಪಾಧ್ಯಾಯನನ್ನು ಪಡಸೆ ಕೊಡುವುದಲ್ಲದೆ ಸದರಿ ಫಾರಮಿನ ಕೆಲಸ ನಡಿಸಲು ಬೇರೆ ತಕ್ಕ ಏಲೆವಾಟಿ ಮಾಡದಿದ್ದರೆ ಒಡ ಕೈತರ ಮಕ್ಕಳು ವಿದ್ಯಾವಂತರೂ ಅಲ್ಲ, ಆರಂಭಸ್ಥರೂ ಸಹ ಆಗದೆ ಎರಡು ದೋಣಿಯಲ್ಲಿ ಕಾಲು ಹಾಕಿದವನ ಗತಿಯಾಗುವುದರಲ್ಲಿ ಸಂಶಯವಿಲ್ಲ. ನಾಡಿನವರೇ, ಇನ್ನಾದರೂ ಎಚ್ಚರಿ [illegible] ನಮ್ಮ [illegible] ಸುಧಾರಣೆ ಮಾಡುವ ಯತ್ನಗೆ ಮಾಡಿರಿ.

ಮಕ್ಕಳ ತಂದೆ.

ವೀರಶೈವ ವಿದ್ಯಾನಿಧಿ ಸಂಘ.

ಕೊಡಗಿನಲ್ಲಿ ನಮ್ಮ ಅಂದರೆ ವೀರಶೈವ ಜನಾಂಗವು [illegible] ವಿದ್ಯೆ ಬಗ್ಗೆ ಬದನ್ನು ನಮ್ಮ ಜಾತಿಯ [illegible] ನಡಿಗೆ ತಿಗುಸುತ್ತಾನು ವಿದ್ಯೆಗೆ ಪ್ರೋತ್ಸಾಹಕೊಡುವುದಕ್ಕಾಗಿ ಒಂದು ವಿದ್ಯಾನಿಧಿ ಸಂಘವನ್ನು ಸ್ಥಾಪಿಸಿ [illegible] ಈ ಸಂಘವು 1921ನೇ ಇಸ್ವಿಯಲ್ಲೇ ಸ್ಥಾಪಿತವಾ [illegible] ಸಂಘವು ರಿಜಿಸ್ಟರಾಯಿತು. [illegible] ಸಂಘವು ರಿಜಿಸ್ಟರ್ ಆಗ [illegible] ಹಣವನ್ನೆಲ್ಲಾ ಆಗಾಗ್ಯು [illegible] ಎಚ್. ಬಿ ಕಾಳೇಗೌಡರನ್ನ [illegible] ರಿಜಿಸ್ಟ್ರರಾದ ನಂತರ ಅದ [illegible] ಸಂಘಕ್ಕೆ ರಿಜಿಸ್ಟರ್ [illegible] 3—7—192? ಕಮಿಟಿ ಮೀಟಿಂಗಿನಲ್ಲಿ [illegible] ಆದರೆ ಈ ಪಂಗಡ ಅಂಥಾ ವಿಚಾರವನ್ನು [illegible] ತಿಳಿಯುತ್ತೇನೆ [illegible] ಕಮಿಟಿಯಲ್ಲಿ ಇವರನ್ನು ಕೇಳಿದ್ದಕ್ಕೆ [illegible] 3—7—8? [illegible] ಅಂಗೀಕರಿಸಲ್ಪಟ್ಟಿರುವಾಗ [illegible] ಮಾಡಿಕೊಳ್ಳಬೇಕಾಗಿದ್ದಕ್ಕೆ ಹೇಗೆ ಸಂಬಂಧವೋ ನನಗೆ ತಿಳಿಯದು.

ತಾ. 5—6—3? ಕಮಿಟಿ ಮೀಟಿಂಗಿನಲ್ಲಿ ಕಮಿಟಿಯ [illegible] ರಿಜಿಸ್ಟರ್ [illegible] ವಿಷಯ ಪುನ ತೆಗೆದು [illegible] 1 [illegible] ರಿಜಿಸ್ಟರ್ [illegible] ಮೀಟಿಂಗಿನಿಂದ [illegible] ತಿಳಿಯುತ್ತೇನೆ. ಸಂಘದ ಅಧ್ಯಕ್ಷ [illegible] ವೀರಶೈವ ಸಮಾಜದ ಪ್ರತಿನಿಧಿ [illegible] ಅಧ್ಯಕ್ಷರಲ್ಲಿ 3577 ರೂಪಾ [illegible] ಇವೆಲ್ಲಾ ಮಾಡದೆ ನ [illegible] ಕಾರಣ [illegible] ತಪ್ಪಿಲ್ಲದ [illegible] ಯಾಕಂದರೆ [illegible] ಭದ್ರವಾದ [illegible] ಸಂಘದ ಸ್ಥಿತಿ [illegible] ಗಿದೆ.

ಪ್ರಾರಂಭದ [illegible] ಹೇಳಿದ [illegible] ಈ ಎಲ್ಲಾ ಕಮಿಟಿ [illegible] ವೀರಶೈವ ಸಮಾಜದವರು ಕೇಳಬೇಕಾಗಿದೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳಿದೆ. ಈ ವರ್ಷ ಜನರಲ್ ಮೀಟಿಂಗ್ ಮಾಡದೆ ಇರಲು ಯಾಕೆ? ಕಮಿಟಿಯವರು [illegible] ಹೆಚ್ಚಿನ ಸಮಯ ಕಳೆದ [illegible] ಕಮಿಟಿ [illegible] ಜನರಲ್ ಮೀಟಿಂಗು [illegible] ಮೆಂಬರುಗಳಲ್ಲಿ ಕೆಲವರು ಸೇರಿ ಜನರಲ್ ಮೀಟಿಂಗು ನಡೆಸಬೇಕು.

ಸಂಘದ ಎಲ್ಲಾ ರೆಕಾರ್ಡುಗಳು ಸೆಕ್ರೆಟರಿ [illegible] ಇರುತ್ತಿದ್ದದ್ದನ್ನು ಈಚೆಗೆ ಪ್ರಸಿಡೆಂಟರೇ ತರಿಸಿಕೊಂಡಿದ್ದಾರೆಂದು ಕೇಳಿದ್ದೇನೆ. ಹೀಗೆ ಆದುದು ಯಾತಕ್ಕಾಗಿಯೋ ತಿಳಿಯಲಿಲ್ಲ. ಕಮಿಟಿಯವರು ಈ ವಿಷಯ ತಿಳಿಸಿಕೊಟ್ಟು ರೆಕಾರ್ಡುಗಳು ಸೆಕ್ರೆಟರಿಯವರಲ್ಲೇ ಇರಬೇಕು.

"ವೀರಶೈವ"

New arrivals of Cigars.

PRICES MODERATE.
Popular lines

Morning whiffs 100 s.	Rs	1- 8-0
Lady love 100 s.	"	2-10-0.
Special Planters 100 s	"	3- 8-0.
Special Planters 50 s.	"	2- 0-0
Catamaran shape 50 s.	"	2-12-0

CROCKERY—

Tea sets for 6 persons in attractive designs @ Rs. 12/8/- & 10/8/- a set
Spare cups & saucers @ Annas 8/- & 10/- pair

The Coorg Emporium,
Mercara. General Merchant. **Sidapur.**
48-15

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಪ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಆದೇಶ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ನೂತನ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೂಡಿದೆ.

ಕ್ರಯ ಪುಸ್ತಕ ೧ಕ್ಕೆ ರೂ. ೧-೦-೦.

ಎಸ್. ವಿ. ಗೋಪಾಲ್ ಬುಕ್ ಡಿಪೋ,
52-39 37. ತಿರುಪಳ್ಳಿಬೀದಿ, ಮದರಾಸ್.

ಬೇಕಾಗಿದ್ದಾರೆ.

ತಾಲೋಕು ಡಿಪ್ಯುಟಿ ಸುಪರಿಂಟೆಂಡೆಂಟರು	}	ಸಂಬಳ, 80-8-160
" ಬ್ಯಾಂಕಿಂಗ್ ಏಜೆಂಟರು		
ಪಕ್ಕ ಗ್ರಾಮಗಳಲ್ಲಿ ಏಜೆಂಟರು		20-2-40

ಡಿಪ್ಯುಟಿ ಸುಪರಿಂಟೆಂಡೆಂಟರು ಮತ್ತು ಬ್ಯಾಂಕಿಂಗ್ ಏಜೆಂಟರು ಅರ್ಜಿ ಮಾಡುವಾಗ್ಗೆ ತಮ್ಮ ವಿದ್ಯಾಭ್ಯಾಸವು ಎಷ್ಟರ ತನಕ ನಡೆದಿರುವುದೆಂಬುದನ್ನು, ಇನ್ಸೂರೆನ್ಸ್ ಮತ್ತು ಬ್ಯಾಂಕಿಂಗ್ ವಿಷಯ ವಹಿವಾಟು ಮಾಡುವುದರಲ್ಲಿ ಎಷ್ಟರ ಮಾಹಿತಿ ಇದೆ ಎಂಬುದನ್ನೂ ಸ್ಪಷ್ಟವಾಗಿ ತಿಳಿಸಬೇಕು. ಗ್ರಾಮ ಏಜೆಂಟರಿಗೆ ಸ್ವಲ್ಪ ಮಟ್ಟಿಗೆ ಇಂಗ್ಲಿಷ್ ಗೊತ್ತಿದ್ದರೆ ಸಾಕು. ಅರ್ಜಿದಾರರು ನಮ್ಮ ಕಂಪೆನಿ ವಿಷಯಿಕ ಪತ್ರಿಕೆಗಳನ್ನು ಓದಿ ಮನಸ್ಸಿಗೆ ಪೂರ್ಣ ಸಮಾಧಾನ ಪಡೆದನಂತರ ಅರ್ಜಿ ಬರೆದುಕೊಳ್ಳತಕ್ಕದ್ದು. ಕಾರಣ ಅರ್ಜಿಗಳನ್ನು ಗಮನಕ್ಕೆ ತರುವ ಮುಂಚೆ ನಮ್ಮ ಕಂಪೆನಿಯ ವಿಷಯ ಒಂದು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಪತ್ರಗಳ ಬಗ್ಗೆ ಈ ಕೆಳಗಿನ ಅಡ್ರೆಸಿಗೆ ಬರೆದುಕೊಳ್ಳಬೇಕು

Head Office.
Post Box 378.
MADRAS

ತಾಲೋಕು ಡಿಪ್ಯುಟಿ ಸುಪರಿಂಟೆಂಡೆಂಟರು,
ಆಲ್ ಇಂಡಿಯಾ ಕೋ-ಆಪರೇಟಿವ್ ಇನ್ಸೂರೆನ್ಸ್ ಎಂಡ್,
ಜನರಲ್ ಡೆವೆಲಪ್‌ಮೆಂಟ್ಸ್ ಲಿಮಿಟೆಡ್,
ಹಂಪನಕಟ್ಟೆ,
ಮಂಗಳೂರು. (ದ. ಕ.)

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕ್ಯಾಟಲಾಗು ಮುಫತಾಗಿ ಕಳುಹಿಸಲಾಗುವುದು.

ಜೋಡು ಹೊಳವಿನ ತೋಟದ ರೈಫಲುಗಳು	ರೂ. 125 ರಿಂದ	ರೂ.	2750 ರ	ವರೆಗೆ
ಒಂಟಿ " "	35 "	"	950	"
ಜೋಡು " " ಕೋವಿಗಳು	5? "	"	1350	"
ಒಂಟಿ " " "	35 "	"	275	"
ಜೋಡು ಹೊಳವಿನ ಕೇಪು	45 "	"	135	"
ಒಂಟಿ " "	3? "	"	80	"
ಬ್ರೀಚ್ ಲೋಡಿಂಗ್ ರಿವಾಲ್ವರುಗಳು	35 "	"	350	"
ಪಿಸ್ತೋಲುಗಳು	30 "	"	150	"

ಕಾಡು ಮೃಗಗಳ ಬೇಟೆ ಏನು ಬೇಟೆ ಮುಂತಾದ ಎಲ್ಲಾ ತರಹದ ರಾತ್ರಿಯ ವಿನೋದ ಮತ್ತು ಕಲಸಗಳಿಗೆ ಬಹು ಉಪಯೋಗಕರವಾದ ಉತ್ತಮ 'ಸರ್ಚ್ ಲೈಟ್' ಎಂಬ ದೀಪಕ್ಕೆ ಒಬ್ಬೇ ರೂ 30 ಪಾವಸಿಯ ಕಾರ್ಜಿಲ್ಲ.
ಕತ್ತಿಗಳು, ಬಚೀಗಳು, ತೋಟಿಗಳು, ಕೇತ್ರಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24-7 210 Abdul Rehman Street, BOMBAY.

ನ್ಯೂಮಾಡಲ್ ವಾಲ್ ಕ್ಲಾಕ್.

(ಗೋಡೆಗೆ ತಗಲಿಸುವ ಗಡಿಯಾರ)

ಈ ಗಡಿಯಾರವು ಈ ಪಕ್ಕದಲ್ಲಿರುವಂತೆಯೇ ಇರುವದು. ಇತರ ಗಡಿಯಾರಗಳಿಗೆ ವಾರಕ್ಕೆ ಒಂದು ಸಲ ಬೀಗ ಕೊಡಬೇಕು, ಮಟ್ಟ ನೋಡಿ ಗೋಡೆಗೆ ತಗಲಿಸಬೇಕು ಹಾಗೆ ಮಾಡದಿದ್ದರೆ ಗಡಿಯಾರವು ನಡೆಯುವದಿಲ್ಲ. ಆದರೆ ಈ ಗಡಿಯಾರವು ಅಂಥವುಗಳಲ್ಲ. ಗುಡಿ, ರೀಡಿಂಗ್ ರೂಂ, ಅಂಗಡಿ, ಸ್ಕೂಲ್, ಮತ್ತು ಪ್ರತಿಯೊಂದು ಮನೆಯಲ್ಲಿಯೂ ಇಡಲು ಬಹು ಲಾಯಖಾದದ್ದು. ಸರಿಯಾದ ಗಂಟೆಯನ್ನು ತೋರಿಸುವದು. ಈ ಗಡಿಯಾರಗಳು ಮೊದಲು ಇಂಗ್ಲೀಷು ವರ್ತಕರಲ್ಲಿ ಮಾತ್ರ ಇರುತ್ತಿದ್ದವು ಬೇರೆಯವರಲ್ಲಿ ಸಿಕ್ಕುತ್ತಿರಲಿಲ್ಲ. ನಮ್ಮಲ್ಲಿ ಬಹು ಜನರು ಕೇಳುತ್ತಿದ್ದದರಿಂದ ಈಗ ತಾನೇ ತರಿಸಿರುವೆವು ಕ್ರಯ 1ಕ್ಕೆ 3-8-0

ಟಿ. ಬಿರ್ಜು ಮಫಿ,
ವಿಳಾಸ— ಸಿಟಿ ಮಾರ್ಟ್,
52-15 168. ಜೈನಾ ಬಜಾರ್, ಮದರಾಸು.

ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

ದಿಲ್ ಬಹಾರ್ ಫ್ಲ್ಯೂಟ್ ಸಿಂಗಲ್ ರೀಡ್ ಹಾರ್ಮೋನಿಯಂ 1ಕ್ಕೆ	50	8	0
'ಸಿದ್ಧಪ್ಪಾಸ್ ಫ್ಲ್ಯೂಟ್' " "	42	8	0
ವಸಂತರಾಜ " " "	40	0	0
ಮೋಹನ್ " " "	37	8	0
ಪೋಸ್ಟೇಂ " " "	35	0	0
ಮಹರಾಜಾ " " "	32	8	0
ಕೊಹಿನೂರು " " "	29	8	0
ಡೈಮಂಡ್ " " "	27	8	0
ಬಿಲ್ಲೀ " " "	25	0	0
'ದಿಲ್‌ಬಹರ್ ಫ್ಲ್ಯೂಟ್' ಡಬ್ಬಲ್ ರೀಡ್ ಹಾರ್ಮೋನಿಯಂ 1ಕ್ಕೆ	85	0	0
ಸ್ಪೆಷಲ್ " "	56	0	0
ಮೋಹನ್ " " "	50	8	0

14 ಕ್ಯಾರೆಟ್ ಭಂಗಾರದ ನಿಬ್ಬುಹಾಕಿದ ಖಾತ್ರಿಯೂ ಬಂದೊಬಸ್ತೂ ಆದ ಫೌಂಟೆನ್ ಪೆನ್‌ಗಳು.

ವರ್‌ಲ್ಡ್ ವಂಡರ್ ಫೌಂಟನ್ ಪೆನ್ 1ಕ್ಕೆ	3	0	0
" ಬಿಗ್‌ಬ್ಯಾರಲ್ " "	3	2	0
" ಸ್ಕ್ರೂಕ್ಯಾಪ್ " "	3	8	0
" ಮಾಟಲ್ ಕಲರ್ " "	3	14	0
" ಮಾಟಲ್ ಸ್ಕ್ರೂಕ್ಯಾಪ್ " "	4	4	0
" ಬ್ರಾನ್‌ಕಲರ್ ಸೆಲ್ಫ್‌ಫಿಲಿಂಗ್ ಪೆನ್ "	5	8	0
" ಸೇಫ್ಟಿ ಪೆನ್ " "	6	8	0
" ಲೇಡೀಸ್ ಸೈಜಿನ ಮಾಟಲ್ ಕಲರ್ ಪೆನ್ "	4	8	0
ಬ್ಲಾಕ್‌ಬರ್ಡ್ ಪೆನ್ 1ಕ್ಕೆ 3 8 0 ಮತ್ತು	3	12	0
ಸ್ವಾನ್ ಪೆನ್ " 6 8 0 "	7	0	0
ವಾಟರ್‌ಮೆನ್ ಐಡಿಯಲ್ 1ಕ್ಕೆ 8 0 0 "	8	8	0
" ಸೆಲ್ಫ್ ಫಿಲ್ಲಿಂಗ್ ಯೂ ಸೇಫ್ಟಿ ಪೆನ್ 1ಕ್ಕೆ	12	0	0
ಬಿಗ್‌ಬ್ಯಾರಲ್ ಹಾರ್ಡ್ ವೇರ್ " "	8	0	0
" ಸೆಪ್ಟ್ಯನ್ ಪೆನ್ 1ಕ್ಕೆ	17	0	0

ಖಾತ್ರಿಯೂ ಬಂದೊಬಸ್ತೂ ಆದ ಟೈಂಪೀಸುಗಳು

ಸಣ್ಣ ಸೈಜಿನ ಜರ್ಮನ್ ಟೈಂಪೀಸು 1ಕ್ಕೆ	2	2	0
ಜರ್ಮನ್ ಗುಂಡಾಕೃತಿಯ ಅಲಾರಂ ಟೈಂಪೀಸು "	3	12	0
ಅನಸೋನಿಯಾ 'ಬಿ' ಟೈಂಪೀಸು "	5	13	0
" ಅಲಾರಂ " "	5	6	0
ಬಿಗ್‌ಬೆನ್ " " "	9	6	
" ಡಿಲ್ಯೂಕ್ಸ್ ಸ್ಟ್ಯಾಂಡಿರುವ ಅಲಾರಂ ಟೈಂಪೀಸು "	13	5	0
ಘಂಟೆ ತೋರಿಸಿ ಅಲಾರಂ ಭಾರಿಸುವ ಕ್ಯಾರೇಜ್ ಕ್ಲಾಕ್ "	7	2	0
" ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1ಕ್ಕೆ	8	10	0
" ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಭಾರಿಸುವ ಕ್ಯಾರೇಜ್ ಕ್ಲಾಕ್ 1ಕ್ಕೆ	9	12	0
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಕರ್ಣಾನಂದವಾಗುವಂತೆ ಗಾನಮಾಡುವ ಕ್ಯಾರೇಜ್ ಕ್ಲಾಕ್ 1ಕ್ಕೆ	12	0	0

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50 000
ವಸೂಲಾದ ಶೇರ್ ಮೊಬಲಗು	—	20 660
ಜಮೊಬಂದ ಠೇವಣಾತಿ	—	1 87 706

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 1ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ... ತನಿಖೆ ಮಾಡುತ್ತಾರೆ

ಪ್ರೆಸಿಡೆಂಟರು — ...ದಂಡ ಅಪ್ಪಯ್ಯನವರು ರಾಯ್ ಬಹದ್ದೂರ್

ಟ್ರೆಜರರ್ — ಕೊಂಗೀರ ತಿಮ್ಮಯ್ಯನವರು

ಸೆಕ್ರೆಟರಿ

ಸಿ ಯನ್ ವೆಂಕಪ್ಪಯ್ಯನವರ ಬಿ.ಎ., ಬಿ.ಎಲ್.

ಮಡಿಕೇರಿ 1—7—1929

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಒವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ ಕೇಕಡ ಅಯ್ಯಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು (ಖಾದಿಭಂಡಾರ)
ಮೂರ್ನಾಡು—ಮಡೆಯಂಡ ದೇವಯ್ಯನವರು
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು
ನಾಪೋಕ್ಲು—ಮೆ ಟಿ ಆರ್ ನಾಣಯ್ಯನವರು
ಸೋಮವಾರಪೇಟೆ—ಮೆ ಜಮ್ಮಡ ಮಾದಪ್ಪನವರ
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು
ಪೊನ್ನಂಪೇಟೆನಾಡು—ಮೆ ಪಿ. ಜೆ ಮುದ್ದಯ್ಯನವರು, ಮತ್ತು ಅದಮಂಗಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಪಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು,

ಸೂಚನೆ—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬವಾಬ್ದಾರಿ ಪಂಸ್ವರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್
'ಕೊಡಗು' ಮಡಿಕೇರಿ

... bore Victo... ...rtridges Rs 10/- Per 100

Mahomedally-Noorbhoy.
ARMS & AMMUNITION MART
... Street

ಕಟಿಂಕಷಾಯ ಮಲೇರಿಯ ರಶೆ:—ಇದು ಕ್ವಾಯಿನ್ ಮತ್ತು ಕ್ವಿನೈನು ಸೇರಿಸಿದ... ಗುಣವಾಗದಿರುವ ಚಳಿ ಜ್ವರ ದಿನಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನೆಗಡಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಅಪ್ರತಿಮವಾಗಿ ಕೆಲಸಮಾಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ.—ಇದು ಪ್ರಮೇಹ ಮೂತ್ರ ಕೃಚ್ಛ ಮೂತ್ರ ಹಳದಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು ಮೂತ್ರ ... ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಕ್ಕೆ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—4—0 3—8—0 6—12—0

ರೋಮನಾಶಿನಿ — ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುತ್ತದೆ. ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ.—ತಲೆನೋವು ತಲೆತಿರುಗುವುದು, ತಲೆಬುರುಡೆ ಕೆಟ್ಟು ಶಿರಿಯಿಂದ ಕೀವು ಸೋರುವುದು ತಿವುಡಾನ ರಡು ನೋವು ಅಪಸ್ಮಾರ ಬದ್ಧ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಹಿಂಡಿಸಿ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ... ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

... ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ.
52—12 ... ಮಂಗಳೂರು.

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಪಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 125, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ತರವಾದ ಗಡಿಯಾರಗಳು ಗ್ರಾಮೊಫೋನ್‌ಗಳೂ ರಿಪೇರಿಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ ಕೈಗೆ ಕಟ್ಟಿಕೊಳ್ಳುವ ಚೇನಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಚಿಲ್ಲರೆಯಾಗಿಯೂ ಸಗಟಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ 5 ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್ ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯ ಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಇತರ ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು



24—20

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ

ಇಂಡಿಯದಲ್ಲಿ ಸ್ಥಾಪಿಸಲ್ಪಟ್ಟದ್ದು 1871ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925	296	ಲಕ್ಷ ರೂಪಾಯಿ	1925	93	ಲಕ್ಷ ರೂಪಾಯಿ
1926	391	"	1926	106	"
1927	468		1927	122	"
1928	585	"	1928	140	"

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ | 192... ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ ... ರೂ
1921ರಲ್ಲಿ " " " | 1927ರಲ್ಲಿ " " " 15

ಈ ಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ ಅಥವಾ ಹೆಚ್ಚಾಗಿ ಪಾಲಿಸಿಗಳನ್ನು ... ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಯಲ್ಲಿ ... ಇನ್ಷೂರು ಆಗುವುದು

ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು—

... ಬ್ರಾಂಚ್ ... 52—41

ಎಲ್. ಆರ್. ಕೃಷ್ಣಸ್ವಾಮ್ಯಯ್ಯರ್
ಬ್ರಾಂಚ್ ಸೆಕ್ರೆಟರಿ.

Goldsmiths' Rolling Mills,
ಅಕ್ಕಸಾಲೆ ಮಿಶನುಗಳು.



ನಗ ಮಾಡುವವರು ಚಿನ್ನ, ಅಕ್ಕಸಾಲೆಯವರು ಉಪಯೋಗಿಸುವ ಚಿನ್ನ ಮತ್ತು ಬೆಳ್ಳಿಯ ತಗಡುಗಳನ್ನು ಮಾಡುವ ... ಮಿಲ್ಲುಗಳಿಗೆ ನಾವು ಏಜಂಟರಾಗಿರುತ್ತೇವೆ ... ಬಹು ಮಧ್ಯಮ ತರ ಮುಖ್ಯ ಪಟ್ಟಣಗಳಲ್ಲಿ ಸಬ್ ಏಜಂಟರುಗಳು ಬೇಕಾಗಿದ್ದಾರೆ ... ಸಂಗತಿ ... ಕೆಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ... ಬರೆಯಬೇಕು.

Ch Subhanachalam & Sons,
Chilakalapudi P O
Masulipatam
1—8

The most competitive CAR in the most competitive YEAR

The new model A Ford

with three Speed selective sliding gear Transmission.

The most economical car in the market. For Demonstration & further particulars Please apply to —

S. Sunder Rau,
Ford Dealer for Coorg
MERCARA

24—16

Printed & published by P I Belliappa, at "Kodagu" Press, M...

Regd. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿಧ್ವಾ[illegible]ನೀತಿ ಪ್ರಯತ್ನತಾ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯	ಮಡಿಕೇರಿ, ಸನ್ ೧೯೨೯ನೇ ಇಸವಿ ಅಕ್ಟೋಬರ್ ತಾರೀಕು ೧೮ನೇ ಶುಕ್ರವಾರ.	ಸಂಚಿಕೆ ೨೦

Telephone— 3145

By Appointment to
H E The Governor of Madras.

Telegram — "PRECIOUS"

Guarantee of Satisfaction throughout in every order large or small

Brooch.

PROMPTEST EXECUTION — HIGH CLASS WORKMANSHIP

GOLDSMITH — SILVERSMITH

V. Subramania Iyer

GEMSET JEWELLER

POST BOX—423 TRIPLICANE MADRAS.

Excellent Quality Chaste Designs Moderate Prices.

Ice Tumbler

"Green Hills"
VIRARAJENDRAPET.
7th Decr., 26.

Sir,
......I am glad to note that the Jewels have a good finish.
(Sd.) Mrs. A. B. CHENGAPPA.

SUNTICOPPA,
Nelloie Estate.
7th April, 28

Dear Sir,
I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends.
(Sd.) MISS K. SUBBIAH

MERCARA,
20th May, 27.

Dear Sir,
I am quite satisfied with the Jewels you sent on the 16th instant.
(Sd.) Mrs. K. S. CARIAPPA

52–5 *Illustrated Catalogue Free on Application.*

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಬೆಳೆಗಳ ಹುಳದ ಮೇಯಿಂದ ಕಿತ್ತ[illegible] ಕಾಫಿಗಿಡಗಳ ಸುಬ್ಬಯು ಧಾತುಗಳಾದ (Mineral) ಗೊಬ್ಬರವಾಕಿದ ಸ್ಥಳಗಳಿಗಿಂತಲೂ ಸಾರಜನಕ (Nitrogen) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ಧಾಪುರ ಪ್ರೋಗ್ರಾಕ್ಷೇತ್ರ (Experiment station) ದಲ್ಲಿ [illegible] ಸಾರಜನಕ ಗೊಬ್ಬರವು ಪ್ರಯೋಜನಕರವಾಗ [illegible] (ಮೈಸೂರು [illegible] ಡಿಪಾರ್ಟಮೆಂಟ್)

ಹೆಚ್ಚಿನ ಮಾಹಿತಿ, ವಿವಿಧ [illegible] ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು

(1) ಚಿಲಿಯನ್ ನೈಟ್ರೇಟ್ ಕಮಿಟಿ
ಇಂಡಿಯನ್ [illegible]
ಪೋ. ಬಾ. ನಂ [illegible], ಕಲ್ಕತ್ತಾ.

(2) ಮಿಸ್ಟರ್ [illegible],
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24—22

ಹೊಲಿಯುವ ಮಿಷೆನ್‌ಗಳು.

ಈ ಮಿಷೆನ್‌ಗಳು ಹೊಸದಾಗಿ ತಯಾರಾದವು. ಇವುಗಳಲ್ಲಿ ಎಲ್ಲಾ ವಿಧವಾದ ಬಟ್ಟೆಗಳನ್ನು ಬಹು ಬೇಗನೆ ಹೊಲಿಯಬಹುದು. ದೊಡ್ಡ ಮಿಷೆನ್‌ಗಳಂತೆಯೇ ಇವು ಬಹು ಬೇಗನೆ ಹೊಲಿಯುವವು. ಈ ಮಿಷೆನ್‌ಗಳಿಗೂ, ದೊಡ್ಡ ಮಿಷೆನ್‌ಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಪ್ರತಿಯೊಬ್ಬರೂ ಕೊಳ್ಳಲು ಅನುಕೂಲವಾಗುವಂತೆ ಕ್ರಯವನ್ನು ಬಹಳ ಕಡಿಮೆ ಮಾಡಿದೆ. ಇದರ ಜೊತೆಯಲ್ಲಿ 'ಒಂದು ಸೂಜಿ, ಒಂದು ರೀಲುದಾರ [illegible] ಕಳುಹಿಸುವೆವು." ಮೊದಲಿಗಾಗಿ ಸ್ವಲ್ಪವನ್ನೇ ತರಿಸಿರುವೆವು. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.



ಕ್ರಯ 1ಕ್ಕೆ 3–8–0

ವಿಳಾಸ— ಸಿಟಿ ಮಾರ್ಟ್,
168, [illegible]ಬಜಾರ್, ಮದರಾಸು
2–16

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್ ಈಡಿಗ ಯಕ್ಸ್‌ಟೆನ್ಷನ್, ಮೈಸೂರು.

ನಮ್ಮಲ್ಲಿ ಯಕ್ಸ್‌ಪೆಲ್ಲರುಗಳಿಂದ ತಯಾರಾಗಿ ಸಿಲ್ಟರುಗಳಿಂದ ಶೋಧಿಸಲ್ಪಟ್ಟ [illegible] ಎಣ್ಣೆಯೂ ಶುದ್ಧವಾದ ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ [illegible] ಸಹ ದೊರೆಯುತ್ತೆ.

ಹೆಚ್ಚು ವಿಷಯಗಳನ್ನು ತಿಳಿಯ ಅಪೇಕ್ಷಿಸುವವರು ಸಂತೆಪೇಟೆಯಲ್ಲಿ ಇರುವ ನಮ್ಮ ಅಂಗಡಿಯಲ್ಲಾಗಲಿ ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರದಾರ ತಿಳಿಯಬಹುದು.

35–31

ಈ ಮಾತ್ರೆಗಳನ್ನು ಶುದ್ಧವಾದ ವನಸ್ಪತಿಗಳಿಂದ ತಯಾರಿಸಿದ್ದೇವೆ. ರಸ ಮುಂತಾದವುಗಳ ಸಂಬಂಧವು ಸ್ವಲ್ಪವಾದರೂ ಇದಕ್ಕಿಲ್ಲ. ಮನುಷ್ಯರ ಎಲ್ಲ ಬಾಧೆಗಳನ್ನು ತೀರಿಸಿ ಸಮಯಾನವನ್ನು ಕೊಡುವ ಈ ಮಾತ್ರೆಗಳಿಗೆ ಚಿಕ್ಕ, ಬಂಗಾರ ಮುಂತಾದ ಭಸ್ಮಗಳು ಸಹ ಸಾಟಿಯಾಗಲಾರವು.

ಮದನ ಮಂಜರಿ ಮಾತ್ರೆಗಳು.

ದಾತು ಪುಷ್ಟಿಯನ್ನು ಕೊಡುವವರಲ್ಲಿ ಸನಾತನ ರಹಿತವಾದುವು. ಬಾಟಲು ಒಂದರ ಕ್ರಯ ೧ ರೂ.

52—9 ಮದನಮಂಜರಿ ಫಾರ್ಮಸಿ,
1/94 ಚೈನಾ ಬಜಾರ್, ಮದ್ರಾಸ್.

ಏಕೆ ನರಳುತ್ತೀರಿ?

ಕ್ರಯವು ಅಂಚೆಯಾಳೆಲ್ಲ. ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಒಂದ ರೋಗ[illegible] ವಾಗಿ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಿಸಿ ಮಾಡಿಕೊಳ್ಳಿರಿ.

52–9 ಮದನಮಂಜರಿ ಫಾರ್ಮಸಿ,
1/94 ಚೈನಾ ಬಜಾರು ರೋಡು ಮದ್ರಾಸು

ಕೊಡಗು.

ಸನ್ ೧೯೨೯ನೇ ಇಸವಿ

ಅಕ್ಟೋಬರ್ ತಾ. ೧೮ನೇ ಶುಕ್ರವಾರ.

ಬಾಲ್ಯ ವಿವಾಹ ನಿಷೇಧದ ಖಾನೂನು.

ಒಟ್ಟು ಹಿಂದುಸ್ಥಾನದ ಪ್ರತಿನಿಧಿಗಳಿಂದ ಕೂಡಿದ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲೂ, ಕೌನ್ಸಿಲ್ ಆಫ್ ಸ್ಟೇಟಿನಲ್ಲೂ ಚರ್ಚೆ ನಡೆದು ವೈಸರಾಯರಿಂದ ಮಂಜೂರಾತಿ ಪಡೆದ ಬಾಲ್ಯ ವಿವಾಹ ನಿಷೇಧದ ಖಾನೂನು ಏನು ಎಂತ ಜನರು ತಿಳಿದ[illegible]ತಕ್ಕದ್ದು ಅತಿ ಅವಶ್ಯವಿದೆ. 18 ವರ್ಷ ಪ್ರಾಯವಾಗದ ಹುಡುಗನೇ ಆಗಲೀ 14 ವರ್ಷ ಪ್ರಾಯವಾಗದ ಹುಡುಗಿಯೇ ಆಗಲೀ ಮದುವೆಯಾಗುವದನ್ನು ನಿಲ್ಲಿಸಬೇಕೆಂಬುದೇ ಈ ಖಾನೂನಿನ ಮುಖ್ಯ ಉದ್ದೇಶವಾಗಿದೆ. 18 ರಿಂದ 21 ವರ್ಷ ವಯಸ್ಸಿನ ಪುರುಷನು 14 ವರ್ಷವಾಗದ ಹುಡುಗಿಯನ್ನು ಮದುವೆಯಾದರೆ ಅಂತವನು 1000 ರೂ. ಜುಲುಮಾನೆ ಕೊಡುವ ಶಿಕ್ಷೆಗೆ ಗುರಿಯಾಗುತ್ತಾನೆ. 21 ವರ್ಷ ಮೀರಿದ ಯೌವನನೇ ಆಗಲೀ ಅಂಥ ಹುಡುಗಿಯನ್ನು ಮದುವೆಯಾದರೆ ಒಂದು ತಿಂಗಳ ಸಾದಾ ಸಜಾಕ್ಕೂ ಅಥವಾ 1000 ರೂ. ಜುಲುಮಾನೆಗಾಗಲೀ ಅಥವಾ ಇವೆರಡೂ ಶಿಕ್ಷೆಗಳಿಗಾಗಲೀ ಗುರಿಯಾಗುತ್ತಾನೆ. ಮೇಲ್ಕಂಡಷ್ಟು ಪ್ರಾಯ ತುಂಬದ ಹುಡುಗನಿಗೇ ಆಗಲೀ, ಹುಡುಗಿಗೇ ಆಗಲೀ ಮದುವೆ ಮಾಡಿಸಿದರೂ, ಅಂಥ ಮದುವೆಯಾಗುವ ಚಿಕ್ಕವಯಸ್ಸಿನ ಬಾಲಕ ಬಾಲಿಕೆಯರ ತಂದೆ ತಾಯಿ ಅಥವಾ ಪೋಷಕರಿಗೂ ಅದೇ ಶಿಕ್ಷೆಯು ವಿಧಿಸಲ್ಪಡುವುದು. ಸ್ತ್ರೀಯರಿಗೆ ಮಾತ್ರ ಸಜಾ ಶಿಕ್ಷೆ ಕೊಡಲಾಗುವದಿಲ್ಲ. ಮದುವೆಯಾದ ಒಂದು ವರ್ಷದೊಳಗೆ ಫಿರ್ಯಾದಿಯಾದರೆ ಮಾತ್ರ ಮೊಕದ್ದಮೆ ಹಿಡಿಯಲಾಗುವದು. ಈ ಖಾನೂನು 1930ನೇ ಇಸವಿ ಏಪ್ರಿಲ್ 1ನೇ ತಾರೀಕಿನಿಂದ ಜಾರಿಗೆ ಬರತಕ್ಕದ್ದು.

ಈ ಖಾನೂನು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಯಲ್ಲಿರುವಾಗಲೂ, ಅನಂತರವೂ ನಮ್ಮ ದೇಶದಲ್ಲೆಲ್ಲಾ ಈ ವಿಷಯವಾಗಿ ಅನೇಕ ಕಡೆಗಳಲ್ಲಿ ಚರ್ಚೆ ನಡೆಯುತ್ತಿತ್ತು. ಹಿಂದುಗಳಲ್ಲೂ, ಮುಸಲ್ಮಾನರಲ್ಲೂ ಪೂರ್ವ ಪದ್ಧತಿಯನ್ನು [illegible] ಈ ಖಾನೂನು ಮಂಜೂರಾಗಲು ಒಡಬಾರದೆಂತ ಬಹಳವಾಗಿ [illegible]. ಖಾನೂನು ಜಾರಿಗೆ ಬಂದರೂ ಅದನ್ನು ಉಲ್ಲಂಘಿಸಿ ಶಿಕ್ಷೆಗೆ ಗುರಿಯಾಗಬೇಕೆನ್ನುವವರೂ ಇದ್ದಾರೆ. ಇನ್ನು ಮುಂದೆ ಏನೇನು ಆಗಲಿಕ್ಕಿದೆಯೆಂಬುದನ್ನು ನೋಡಬೇಕಷ್ಟೆ.

ಪ್ರೌಢ ವಿವಾಹ ನಡಸುವ ಕೊಡವ, ಗೌಡ ಮುಂತಾದ ಸಮಾಜದವರಿಗೆ ಈ ಖಾನೂನಿನ ಮಹತ್ವವು ತಿಳಿಯಲಾರದು. 8 ವರ್ಷದಲ್ಲೇ ಹುಡುಗಿಯರಿಗೆ ಮದುವೆ ಮಾಡಿಸಬೇಕೆನ್ನುವ ಶಾಸ್ತ್ರವನ್ನು, ಪೂರ್ವಾಚಾರವನ್ನೂ ಅನುಸರಿಸುವ ಜನರಿಗೆ ತುಂಬಾ ಬೇಸರವಾಗುವದು ಸ್ವಾಭಾವಿಕವಾಗಿದೆ. 8 ವರ್ಷದಲ್ಲಿ ಮದುವೆಯಾಗಬೇಕೆಂತ ಶಾಸ್ತ್ರದ ಆಧಾರವಿದ್ದರೂ ನಮ್ಮ ದೇಶದಲ್ಲಿ ಆ ಪ್ರಾಯದ ಹುಡುಗಿಯರಿಗೆ ಲಗ್ನ ಮಾಡುವದು ರೂಢಿಯಲ್ಲಿಲ್ಲ. ಋತುಮತಿಯಾಗುವ ಮುಂಚೆ ಲಗ್ನ ಮಾಡಬೇಕೆಂಬ ರೂಢಿ ಇರುವ ಸಮಾಜದವರು ಬಾಲಿಕೆಯರಿಗೆ 13 ವರ್ಷ ತುಂಬುವ ಮುಂಚೆಯೇ ಅವರಿಗೆ ಲಗ್ನ ಮಾಡಿ ಬಿಡುತ್ತಿದ್ದರು. ಈ ಖಾನೂನು ಜಾರಿಗೆ ಬಂದನಂತರ ಇದು ತಪ್ಪಿಗುತ್ತದೆ. ಋತುಮತಿಯರಾಗಲೀ, ಆಗದಿರಲೀ 11 ವರ್ಷ ತುಂಬಿದ ವಿನಹ ವಿವಾಹ ಮಾಡಿದರೆ ಶಿಕ್ಷೆಗೆ ಗುರಿಯಾಗುತ್ತಾರೆ.

ಹಿಂದೂ ಸಮಾಜದಲ್ಲಿ ಬಾಲ್ಯವಿವಾಹ ನಡಸುವ ಜಾತಿಗಳಲ್ಲಿ ಚಿಕ್ಕ ವಯಸ್ಸಿನ ಬಾಲಕಿಯರಿಗೆ ಲಗ್ನ ಮಾಡುವದರಿಂದ 13, 14 ವರ್ಷಗಳೊಳಗೆ ಹುಡುಗಿಯರು ಮಕ್ಕಳನ್ನು ಹಡೆದು ಅಂಥ ತಾಯಂದಿರ ಆರೋಗ್ಯವು ಕೆಡುವುದಲ್ಲದೆ ಹುಟ್ಟುವ ಮಕ್ಕಳು ಬಲಹೀನರಾಗುತ್ತಾ ಒಂದು ಸಮಾಜವೇ ಕ್ಷೀಣವಾಗುತ್ತಲಿದೆ. ಜನಾಂಗವು ಬಲಹೀನವಾಗುತ್ತಿರಲಿಕ್ಕೆ ಬೇರೆ ಕಾರಣಗಳಿದ್ದರೂ ಈ ಬಾಲ್ಯ ವಿವಾಹವು ಒಂದು ಕಾರಣವೆಂಬುದನ್ನು ಒಪ್ಪಲೇ ಬೇಕು. ಈಗ ಸಮಾಜ ಸುಧಾರಣೆಯ ಅವಶ್ಯಕತೆಯು ಜನರಿಗೆ ಹೆಚ್ಚಿಚ್ಚಾಗಿ ತಿಳಿಯುತ್ತಾ ಬಂದರೆ ಈಗಲೂ ರೂಢಿಯಲ್ಲಿರುವ ಪದ್ಧತಿಯನ್ನು ಬಿಡಲು ಸಮಾಜ ಸುಧಾರಣೆಗೆ ತಯಾರಾದವರಿಗೆ ಸಹ ಕಷ್ಟವಾಗುತ್ತೆ. ಇಂಥಾ ಸುಧಾರಣೆಗಳಿಗೆ ಖಾನೂನಿನ ಬೆಂಬಲವಿಲ್ಲದಿದ್ದರೆ ಅವು ಸಮಾಜದಲ್ಲೆಲ್ಲಾ ಹರಡಲು ಅನೇಕ ವರ್ಷಗಳು ಬೇಕಾದೀತು.

ಪರಕೀಯ ಸರಕಾರವು ಸಮಾಜ ಸುಧಾರಣೆಯ ಖಾನೂನಿಗೆ ಬೆಂಬಲ ಕೊಡುವದನ್ನು ಕೆಲವರು ಅತಿ ಕಠಿಣ ಶಬ್ದಗಳಿಂದ ಪ್ರತಿಭಟಿಸುತ್ತಾರೆ. ಆದರೆ ಒಟ್ಟು ಹಿಂದುಸ್ಥಾನದ ಪ್ರತಿನಿಧಿಗಳಲ್ಲಿ ಹೆಚ್ಚಿನ ಸಂಖ್ಯೆಯವರು ಈ ಖಾನೂನಿಗೆ ಒಪ್ಪಿಗೆ ಕೊಟ್ಟಿದ್ದಾರೆ. ಆದ್ದರಿಂದ ಸರಕಾರವನ್ನು ದೂಷಿಸಿ ಪ್ರಯೋಜನವಿಲ್ಲ. ದೇಶದ ಜನರಲ್ಲಿ ಹೆಚ್ಚಿನವರಿಗೆ ಈ ಖಾನೂನು ಬೇಕೆಂಬ ಅಭಿಪ್ರಾಯವಿದೆಯೆಂಬುದಕ್ಕೆ ಎಸೆಂಬ್ಲಿಯಲ್ಲಿ ಚುನಾಯಿತ ಮೆಂಬರುಗಳಲ್ಲಿ ಹೆಚ್ಚಿನವರ ಬೆಂಬಲ ಸಿಕ್ಕಿದ್ದೇ ಸಾಕ್ಷಿ.

ಹಿಂದೂಸಮಾಜದಲ್ಲಿರುವ ನೀತಿಗೆ ವಿರೋಧವಾದ ಪದ್ಧತಿಗಳನ್ನು ಹೋಗಲಾಡಿಸಲು ಸರಕಾರವು ಬೆಂಬಲ ಕೊಡುವ [illegible] ಮುಂದೆ ಮಾಡಿದ ಜನರ ಅಭಿಪ್ರಾಯವಾ[illegible]. ಈ ಖಾನೂನಿಗೆ ಮತ್ತಾಸೆ ಕೊಟ್ಟು ಸರಕಾರವು ತನ್ನ [illegible] ಕರ್ತವ್ಯವನ್ನು ಈ ಬಾಬಿನಲ್ಲಿ ಹೋಗಲಾಡಿಸಿ[illegible].

ಗಂಡನು ಮರಣ ಹೊಂದಿದಾಗ ಅವನ ಸಂಗಡಲೇ ಪತ್ನಿಯು ಸಹಗಮನ ಮಾಡಬೇಕೆಂಬ ಶಾಸ್ತ್ರದ ಆಧಾರವಿದ್ದ ಪದ್ಧತಿಯನ್ನು ಬ್ರಿಟಿಷ ಸರಕಾರವೇ ಖಾನೂನು ಮಾಡಿ ನಿಲ್ಲಿಸಿತು. ಆ ಕಾಲದ ಹಿಂದೂ ಸಮಾಜವು ಅಂಥಾ ಖಾನೂನಿಗೆ ಬಲವಾಗಿ ವಿರೋಧಿಸಿತು. ಆದರೆ ಈಗಿನ ಹಿಂದೂ ಜನಾಂಗವು ಸಹಗಮನದ ಪದ್ಧತಿಯನ್ನು ನಿಲ್ಲಿಸಿದ್ದಕ್ಕಾಗಿ ಸರಕಾರವನ್ನು ದೂಷಿಸುವದಿಲ್ಲ. ಅದರಂತೆಯೇ ವಿಧವಾ ವಿವಾಹವು ಹಿಂದೂ ಸಮಾಜದಲ್ಲಿ ರೂಢಿಯಲ್ಲಿಲ್ಲದಿದ್ದಾಗ ವಿಧವಾ ವಿವಾಹ ಮಾಡಿಕೊಂಡರೆ ಅಂಥಾ ವಿವಾಹವು ಖಾನೂನಿಗೆ ವಿರೋಧವಲ್ಲವೆಂತಲೂ, ಅಂಥ ಮದುವೆ ಮಾಡಿಕೊಂಡವರಿಗೆ ಹುಟ್ಟಿದ ಮಕ್ಕಳಿಗೆ ಖಾನೂನು ಮೇರೆ ಸಿಕ್ಕಬೇಕಾದ ಹಕ್ಕುಗಳೆಲ್ಲಾ ಸಿಕ್ಕತಕ್ಕದೆಯೆಂತಲೂ ಖಾನೂನು ಮಾಡಿದರು. ಈ ಖಾನೂನಿನಿಂದ ಎಷ್ಟೋ ವಿಧವೆಯರು ಎರಡನೇ ವಿವಾಹ ಮಾಡಿಕೊಂಡು ಸಂಸಾರಿಗರಾಗಿ ಚೆನ್ನಾಗಿ ಬಾಳುತ್ತಿದ್ದಾರೆ. ಆದ್ದರಿಂದ ನೀತಿಗೆ ವಿರೋಧವಾದ ಪದ್ಧತಿಗಳನ್ನು ಹೋಗಲಾಡಿಸಲು ಸರಕಾರದ ಸಹಾಯವು ಅವಶ್ಯವಾಗಿ ಬೇಕಾಗುತ್ತದೆ.

ಹಿಂದೂ ಸಮಾಜದಲ್ಲಿ ಚಿಕ್ಕ ಬಾಲಕಿಯರಿಗೆ ಲಗ್ನ ಮಾಡಿ ಬಿಡುವದರಿಂದ ಚಿಕ್ಕ ಪ್ರಾಯದಲ್ಲೇ ಮಕ್ಕಳು ಹಡೆದು ಸಮಾಜದ ಅಭಿವೃದ್ಧಿಗೆ ಕುಂದಕವಾಗುವದೂ ಅಲ್ಲದೆ ಋತುಮತಿಯರಾಗುವ ಮುಂಚೆಯೇ ವಿಧವೆಯರಾಗಿ ಎಂಥಾ ಕಷ್ಟಕ್ಕೆ ಗುರಿಯಾಗುತ್ತಾರೆ! 14 ವರ್ಷ ತುಂಬಿದ ಮೇಲೆ ಲಗ್ನವಾದರೆ ವಿಧವೆಯರಾಗುವ ಮುಂಚೆ ಗಂಡನ ಸಂಗಡ ಪ್ರೀತಿಯಿಂದ ಜೀವಿಸುವ ಕಾಲವು ಸ್ವಲ್ಪವಾದರೂ ದೊರೆಯುತ್ತದೆ. 11 ವರ್ಷಕ್ಕಿಂತ ಮುಂಚೆ ಲಗ್ನವಾದರೆ ಗಂಡನ ಮೇಲೆ ಪ್ರೀತಿ [illegible] ತಿಳಿದಿರುವದಿಲ್ಲ. ಗಂಡನು ಹೆಂಗಸಿನ [illegible] ಸಹ ತಿಳಿಯಲು ಶಕ್ತಿ ಇರುವದಿಲ್ಲ. ಅಂಥ ಸ್ಥಿತಿಯಲ್ಲಿ ವಿಧವೆಯರಾದರೆ ತಮ್ಮ ಜವಾಬ್ದಾರಿಯನ್ನು ತಿಳಿಯದೆ ನಡತೆಯು ಕೆಡುವ ಸಂಭವವು ಹೆಚ್ಚಾಗಿದೆ. [illegible] ಇದ್ದು ಅನಂತರ ದುಃಖಕರವಾದ ವೈಧವ್ಯಕ್ಕೆ ಗುರಿಯಾದರೂ ತಮ್ಮ ನಡತೆಯನ್ನು ಕಾಪಾಡಲು ಶಕ್ತಿ ಬರುತ್ತದೆ. ವಿಧವಾ ವಿವಾಹಕ್ಕೆ ನಾವು ಒತ್ತಾಸೆ ಕೊಡುವದಿಲ್ಲವೆಂತಲ್ಲ. ಆ ಸುಧಾರಣೆಯೂ ಆಗಲೇ ಬೇಕು. ಅಂಥಾ ವಿವಾಹಗಳು ಸಾಧಾರಣವಾಗಿ ರೂಢಿಗೆ ಬರುವ ವರೆಗೆ ಸಮಾಜದಲ್ಲಿ ಇರುವ ಸ್ಥಿತಿಯನ್ನು ನಾವು ವಿವರಿಸಿದ್ದಾಗಿದೆ.

14 ವರ್ಷಕ್ಕಿಂತ ಚಿಕ್ಕ ಪ್ರಾಯದ ಹುಡುಗಿಯರನ್ನು ಲಗ್ನ ಮಾಡಿಕೊಡುತ್ತಿದ್ದರೂ ಹುಡುಗಿಯರು ಋತುಮತಿಯಾಗುವ ಮುಂಚೆ ಗಂಡನ ಸಂಗಡ ವಾಸಕ್ಕೆ ಹೋಗುವದಿಲ್ಲವೆಂತ ಎಲ್ಲರಿಗೂ ಗೊತ್ತಿದೆ. ಆದರೆ ಋತುಮತಿಯಾದ ಒಡನೇ ಪ್ರಾಯವನ್ನು ಎಣಿಸದೆ ಬಾಲಕಿಯರನ್ನು ಗಂಡನ ಸಂಗಡ ಕಳುಹಿಸುವದು ರೂಢಿಯಲ್ಲಿದೆ. 14 ವರ್ಷ ಪ್ರಾಯಕ್ಕಿಂತ ಮುಂಚೆ ಋತುಮತಿಯಾದರೂ ಸಹ ದೇಹದಲ್ಲಿ ಗರ್ಭಧಾರಣೆಗೆ ಬೇಕಾದ ಶಕ್ತಿ ಬಂದಿರುವದಿಲ್ಲ. ಇಂಥ ಹುಡುಗಿಯರು ಪ್ರಾಯ ಬಂದ ಗಂಡಸರ ಜೊತೆಗೆ ಸಿಕ್ಕಿದರೆ ಅವರ ಸ್ಥಿತಿಯು ಶೋಚನೀಯವಲ್ಲವೇ? ಇದೂ ಅಲ್ಲದೆ ಸ್ತ್ರೀಯು [illegible] ವಿಧವೆಯಾದನಂತರ ಲಗ್ನ ಮಾಡಿಕೊಳ್ಳಕೂಡದೆಂತ ಇದ್ದರೂ 40, 50 ವರ್ಷ ಪ್ರಾಯದ ಗಂಡಸರಾದರೆ ಎಷ್ಟು ಲಗ್ನ ಬೇಕಾದರೂ ಮಾಡಿಕೊಳ್ಳಬಹುದೆಂತ ರೂಢಿ ಇರುವದರಿಂದ ಹಾಗೆ ಪ್ರಾಯ ಹೋದ ಗಂಡಸಿಗೆ ಸಿಕ್ಕುವ ಹುಡುಗಿಯು 11 ವರ್ಷ ಪ್ರಾಯವಾದರೂ ತುಂಬಿದವಳಾಗಿರಬೇಕೆಂತ ಮಾಡುವದು ಯುಕ್ತವಲ್ಲವೇ? ಪ್ರಾಯ ಹೋದ ಗಂಡಸರು 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗಿಯರನ್ನು ಲಗ್ನ ಮಾಡಿಕೊಳ್ಳಬಾರದೆಂತ ಖಾನೂನು ಮಾಡಬೇಕಾದದ್ದು ಸಹ ಅವಶ್ಯವಾಗಿದೆ.

ಈ ಖಾನೂನು ಹಿಂದುಗಳಿಗೆ ಮಾತ್ರ ವ್ಯಾಪಕವಲ್ಲ; ಮುಸಲ್ಮಾನರಿಗೆ ಸಹ ವ್ಯಾಪಿಸುತ್ತದೆ. ಎಸೆಂಬ್ಲಿಯಲ್ಲಿ ಅನೇಕ ಮುಸಲ್ಮಾನ ಪ್ರತಿನಿಧಿಗಳ ಬೆಂಬಲ ದೊರೆತರೂ ಇನ್ನು ಕೆಲವು ಮುಸಲ್ಮಾನ್ ಮೆಂಬರುಗಳು ತಮ್ಮ ಅತೃಪ್ತಿಯನ್ನು ತೋರಿಸಲು ಈ ಖಾನೂನಿನ ಮಸೂದೆಯನ್ನು ಓಟಿಗೆ ಹಾಕುವ ಸಮಯದಲ್ಲಿ ಎಸೆಂಬ್ಲಿಯಿಂದ ಹೊರಟು ಹೋದರು. ಇಸ್ಲಾಮ್ ಧರ್ಮ ಗ್ರಂಥದಲ್ಲಿ [illegible] ವಯಸ್ಸಿನ ಬಾಲಕಿಯರ ವಿವಾಹವನ್ನು ನಿಷೇಧಿಸಿಲ್ಲವಾದ್ದರಿಂದ ಮತ ಸಂಬಂಧ ಪದ್ಧತಿಗೆ ಸರಕಾರವು ಕೈ ಹಾಕಿದ್ದಕ್ಕೆ ಮುಸಲ್ಮಾನರು ವಿರೋಧಿಸುವದಾಗಿದೆಯೆಂದು ಎನ್ನುತ್ತಾರೆ. ಇಸ್ಲಾಮ್ ಧರ್ಮ ಗ್ರಂಥಗಳಲ್ಲಿ ಈ ವಿಷಯ ಏನಿದೆ ಎಂತ ನಮಗೆ ತಿಳಿಯದು. ಆದರೂ ಈ ಖಾನೂನಿಗೆ ಒತ್ತಾಸೆ ಕೊಟ್ಟವರು ಇದು ಇಸ್ಲಾಮ್ ಧರ್ಮಕ್ಕೆ ವಿರೋಧವಿಲ್ಲವೆಂತಲೇ ಹೇಳುತ್ತಾರೆ. ಮುಸಲ್ಮಾನ್ ಬಂಧುಗಳೂ ಸಹ ಸಮಾಜದ ಬೆಳವಣಿಗೆಗೆ ಕೊರತೆಯನ್ನುಂಟುಮಾಡುವ ಬಾಲ್ಯ ವಿವಾಹದ ಪದ್ಧತಿಯನ್ನು ಬಿಡುವದು ಅವಶ್ಯವಾಗಿದೆ.

ಲೇಬರ್ ಸರ್ಕಾರವೂ, ಹಿಂದೂದೇಶವೂ.

ಲೇಬರ್ ಸರ್ಕಾರವು ಗ್ರೇಟ್ ಬ್ರಿಟನ್ನಿನಲ್ಲಿ ಅಧಿಕಾರಕ್ಕೆ ಬಂದೊಡನೆ ಹಿಂದೂದೇಶದ ಸ್ವಾತಂತ್ರ್ಯದ ಹೋರಾಟದ ಕಡೆಗೆ ಅದರ ವರ್ತನೆಯು ಹೇಗಾಗುವುದು ಎಂಬುದನ್ನು ಕುರಿತು ಹಲವು ಮತ ಮಾನಗಳೂ, ಅಭಿಪ್ರಾಯಗಳೂ ಹಿಂದೂದೇಶದಲ್ಲಿ ಹುಟ್ಟಿದ್ದವು. ಲೇಬರ್ ಪಾರ್ಟಿಯವರು ಈ ಸಾರಿ ಅಧಿಕಾರಕ್ಕೆ ಬರುವ ಮುಂಚೆ ಅವರ ಮುಖಂಡರು ಹಿಂದೂದೇಶಕ್ಕೆ ಬೇಗನೆ ಅಂದರೆ ಕೆಲವು ವರ್ಷಗಳಲ್ಲಿಯೂ ಕೂಡ ಅಲ್ಲ, ಕೆಲವು ತಿಂಗಳುಗಳಲ್ಲೇ ವಸಾಹತು ಸ್ವರಾಜ್ಯ ದೊರೆಯಬೇಕೆಂದೂ, ಅದಕ್ಕೆ ತಮ್ಮ ಸಹಾನುಭೂತಿಯು ಮತ್ತು ಒತ್ತಾಸೆಯೂ ಇದೆಯೆಂದು ಬಹಿರಂಗ ಪಡಿಸಿದ್ದರು. ಆದುದರಿಂದ ಆ ಪಾರ್ಟಿಯವರೇ ಅಧಿಕಾರಕ್ಕೆ ಬಂದ ಈಗಿನ ಸಮಯದಲ್ಲಿ ತಾವು ಮೊದಲಿನ ಹೇಳಿಕೆಗಳನ್ನು ತಲೆನಾಗಿದರೂ ಜಾರಿಗೆ ತರುವರೆಂದು ಹಲವರು ಭಾವಿಸಿದ್ದು ಸ್ವಾಭಾವಿಕವಾಗಿದೆ. ಆದರೆ ಈ ಪಾರ್ಟಿಯವರು ಸರ್ಕಾರದ ಜವಾಬ್ದಾರಿಯನ್ನು ವಹಿಸಿಕೊಂಡಂದಿನಿಂದ ಅವರು ವಿಶೇಷ ಸಹಾನುಭೂತಿ ಏನೂ ತೋರಿಸದ್ದರಿಂದ ಇಂಡಿಯಾದ ಹೋರಾಟದ ಕಡೆಗೆ ಜನರಿಗೆ ಅವರ ಮೇಲೆ ಇದ್ದ ಭರವಸೆಯು ತಣ್ಣಗಾಗುತ್ತಾ ಬರುತ್ತಿತ್ತು, ಎನ್ನುವಷ್ಟರಲ್ಲಿ ಈಗ ಪುನಹ ಭರವಸೆ ಹೆಚ್ಚಿಸಲೋಸುಗವೋ ಏನೋ ಕೆಲವು ಸಾರಿ ಒಂದಕ್ಕೊಂದು ಸರಿ ಹೊಂದದ ಹಲವು ವರ್ತಮಾನಗಳು ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಬರುತ್ತಿವೆ. ಇವುಗಳಲ್ಲಿ ಯಾವದು ನಿಜವಾದದು, ಯಾವದು ನಿಜವಲ್ಲದ್ದು ಎಂದು ಕಂಡು ಹಿಡಿಯುವದು ಕಷ್ಟವಾಗಿದೆ. ಕಾಲವೇ ಇವುಗಳ ನಿಜತ್ವವನ್ನು ಹೊರಗೆಡಹಬೇಕಾಗಿದೆ.

ವಸಾಹತು ಸ್ವರಾಜ್ಯವನ್ನು ಉದ್ದೇಶವಾಗಿಟ್ಟುಕೊಂಡು ಅದನ್ನು ಸಾಧಿಸಲು ತಕ್ಕಷ್ಟು ಸುಧಾರಣೆಗಳು ಬೇಗನೆ ಕೊಡಲಾಗುವವೆಂದು ಲೇಬರ್ ಪ್ರಧಾನ ಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಪ್ರಸಿದ್ಧಪಡಿಸುವರೆಂದೂ, ಇದಲ್ಲದಿದ್ದರೆ ಮೇಲಿನ ಸಂಗತಿಯನ್ನು ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಇಂಡಿಯಾಕ್ಕೆ ವಾಪಸು ಬಂದೊಡನೆ ಎಸೆಂಬ್ಲಿಯಲ್ಲಿ ಬಹಿರಂಗಪಡಿಸ ಬಹುದೂ ವರ್ತಮಾನ ಹೊರಟಿತು. ಕೂಡಲೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮಿ. ವೆಡ್‌ವುಡ್ ಬೆನ್‌ರವರು ಸ್ವಲ್ಪ ಸಮಯದಲ್ಲಿ ಇಂಡಿಯಾಕ್ಕೆ ಬಂದು, ಇಲ್ಲಿಯ ಎಲ್ಲಾ ಪಾರ್ಟಿಗಳ ಮುಂದಾಳುಗಳನ್ನು ಸೇರಿಸಿ ಒಂದು ರೌಂಡ್ ಟೇಬಲ್ ಕಾನ್‌ಫರೆನ್ಸನ್ನು ನಡಿಸುವರೆಂದು ಇನ್ನೊಂದು ಸುದ್ದಿ ಹರಡಿತು. ಈ ಮತ ಮಾನಗಳು ಜನರಲ್ಲಿ ಹರಡುವಷ್ಟರಲ್ಲಿ, ಇವು ನಿಜವಲ್ಲವೆಂತಲೂ, ಇವು ನಿಜವಾದರೆ ಇಂಗ್ಲೆಂಡಿನ ಎಲ್ಲಾ ಪಾರ್ಟಿಗಳು ಒಪ್ಪಿರುವ ಸೈಮನ್ ಕಮಿಷನಿನ ಶಿಫಾರಸ್ಸುಗಳಿಗೆ ಏನೊಂದೂ ಬೆಲೆ ಇಲ್ಲದಾಗುವದೆಂದೂ ಮುಂತಾಗಿ ಇಂಗ್ಲೆಂಡಿನ ಪತ್ರಿಕೆಗಳು ಬರೆಯ ತೊಡಗಿವೆ. ಆದುದರಿಂದ ಲೇಬರ್ ಮಂತ್ರಿಮಂಡಳಿಯು ಇಂಡಿಯಾದ ವಿಷಯ ಏನು ಆಲೋಚನೆ ಮಾಡಿದೆಯೆಂದು ಇನ್ನೂ ವಿಶದವಾಗಿರುವುದಿಲ್ಲ. ಆದರೆ ಯಾವ ತರಹದ ಸುಧಾರಣೆಗಳನ್ನೇ ಕೊಡಲಿ, ಅದಕ್ಕೆ ಹಿಂದೂದೇಶದ ಜನರ ಒಪ್ಪಿಗೆಯೂ, ಬೆಂಬಲವೂ ದೊರೆಯದೆ ಹೋದರೆ ಅವುಗಳನ್ನು ಜಾರಿಗೆ ತಂದು [illegible] ಸುಪ್ರದವಾಗಿ ನಡಸಲು ಸಾಧ್ಯವಿಲ್ಲವೆಂಬುದನ್ನು ಮಾತ್ರ ಲೇಬರ್ ಮಂತ್ರಿಗಳು ಮರೆಯದಿರಲಿ. ಇದು ಕಳೆದ ಹತ್ತು ವರ್ಷಗಳ ಅನುಭವವಾಗಿದೆ. ವಸಾಹತು ಸ್ವರಾಜ್ಯವೇ (ಡೊಮಿನಿಯನ್ ಸ್ಟೇಟಸ್) ಹಿಂದೂದೇಶದ ಬಹುಮತವನ್ನು ಕೇಳುವಿಕೆಯಾಗಿದೆ. ಇದನ್ನು ಕೊಡದೆ ಹೋದರೆ ಇಂಡಿಯಾದ ಮುಂದಿನ ರಾಜಕೀಯ ಚಳವಳವು ಹೇಗಾಗುವುದೆಂಬುದಕ್ಕೆ ಸಂಪೂರ್ಣ ಸ್ವಾತಂತ್ರ್ಯವಾದಿಗಳಾದ ಪಂಡಿತ ಜವಾಹಿರ್‌ಲಾಲ್ ನೆಹರೂರವರನ್ನು ಕಾಂಗ್ರೆಸ್ಸಿನ ಅಧ್ಯಕ್ಷರನ್ನಾಗಿ ಚುನಾಯಿಸಿರುವುದೇ ಒಂದು ಸೂಚನೆಯಾಗಿದೆ. ಬರುವ ಲಾಹೋರ್ ಕಾಂಗ್ರೆಸ್ಸಿನ ವರೆಗೆ ಬ್ರಿಟಿಷ್ ಸರ್ಕಾರವು ಏನೊಂದೂ ತೀರ್ಮಾನಿಸದೆ ಸುಮ್ಮನಿದ್ದರೆ ಕಾಂಗ್ರೆಸು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಚಳವಳವನ್ನು ಹೂಡುವದು ಖಂಡಿತ. ಇದರಿಂದ ಬ್ರಿಟನ್ನಿಗೂ, ಇಂಡಿಯಾಕ್ಕೂ ಇರುವ ಸಂಬಂಧಕ್ಕೆ ಕುಂದಕವುಂಟಾಗುವದೆಂದು ಹೇಳಿದರೆ ತಪ್ಪಾಗಲಾರದು.

ಕರ್ನಾಟಕ ಏಕೀಕರಣದ ಪ್ರಯೋಜನಗಳು.

(ಶ್ರೀ ಯಂ ಪೊನ್ನಯ್ಯನವರಿಂದ)

ಕೆಲವು ವರ್ಷಗಳಿಂದ ಕೊಡಗು ದೇಶದ ಮುಂದಾಳುಗಳು ಪದೆ ಪದೇ ಹೊಸ ಅಭಿಪ್ರಾಯಗಳನ್ನು ಹೂಡಿ ದೇಶದ ಚಳವಳಿ ನಡಿಸುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಕೆಲವು ಸಮಯಕ್ಕೆ ಹಿಂದೆ ಕೊಡಗು ಮದ್ರಾಸು ಪ್ರಾಂತ್ಯಕ್ಕೆ ಸೇರಬೇಕೆಂಬ ಚಳವಳಿಯು ಬಹು ಕುತೂಹಲದಿಂದ ನಡೆಯಿತು. ಆ ಚಳವಳಿಯು ಮೂಲೆಗೊತ್ತಲ್ಪಟ್ಟ ತರುವಾಯ ಕೊಡಗು ಮೈಸೂರು ಸೀಮೆಯ ಭಾಗವಾಗಬೇಕೆಂಬ ಚಳವಳಿಯು ಕೊಂಚ ಕಾಲದ ವರೆಗೆ ನಡೆದು ಅರ್ಧ ದಾರಿಯಲ್ಲಿಯೇ ಮಾಯವಾಗಿ ಹೋಯಿತು. ತದನಂತರ ಕೊಡಗು ಮಾರ್ಸ್ ಎಂಬ ಗ್ರಹದ (Mars) ಭಾಗವಾಗಬೇಕೆಂಬ ಚಳವಳಿಯು ಮಾತ್ರ ನಡೆಯದೆ ಇದ್ದದ್ದು ಕೇವಲ ಆಶ್ಚರ್ಯಕರವೇ! ಅದಂತಿರಲಿ ಈಗ ಕೊಡಗು ದೇಶವು ಮುಂದೆ ಆಗಲಿಕ್ಕಿರುವ ಕರ್ನಾಟಕ ಪ್ರಾಂತ್ಯದ ಅಂಶವಾಗಿರಬೇಕೆಂಬ ಚಳವಳಿಯು ದಿನೇ ದಿನೇ ಪ್ರಾಮುಖ್ಯತೆಯನ್ನು ಹೊಂದುತ್ತಿದೆ. ಈ ಚಳವಳಿಯು ಪ್ರಾರಂಭವಾದಂದಿನಿಂದ ದೇಶದ ಒಗ್ಗಟ್ಟಿಲ್ಲವೆಂಬುದೂ, ನಮ್ಮ ದೇಶದಲ್ಲಿರುವ ಎರಡು ಪತ್ರಿಕೆಗಳೂ ಕೊಡಗು ದೇಶದ ಜನರಿಗೆ ಇರುವ ಜವಾಬ್ದಾರಿಕೆಯನ್ನೂ, ಅವರವರು ಹೊಂದಿಸುವ ಪತ್ರಿಕಾ ಪ್ರಕಟನೆಯ ತಕ್ಕದ ಘನತೆಯನ್ನೂ ಮರೆತು, ದೇಶದಲ್ಲಿ ಒಗ್ಗಟ್ಟು ತಂದು ತಿಳುವಳಿಕೆ ಇಲ್ಲದ ಜನಗಳಿಗೆ ತಿಳುವಳಿಕೆಯನ್ನು ಕೊಡುವುದರ ಬದಲಾಗಿ, ಪಂಗಡವನ್ನು ವಹಿಸಿ, ಒಂದು ಪಂಗಡದ ಪತ್ರಿಕೆಯು ಇನ್ನೊಂದು ಪಂಗಡದ ಮೇಲಿನ ದೃಶ್ಯವನ್ನೇ ಜನರಿಗೆ ಪ್ರದರ್ಶಿಸುವಂತೆ ಕಾಣುತ್ತದೆ.

ಪ್ರಕೃತದ ಇಂಡಿಯಾ ದೇಶದ ಪ್ರಾಂತೀಕ ವಿಭಾಗಗಳು (Provincial Distribution of India) ಸಮರ್ಪಕವಾಗಿಲ್ಲವೆಂದೂ, ಇಂಡಿಯಾ ದೇಶದ ಹೊಸ ಪ್ರಾಂತೀಕ ವಿಭಾಗಗಳ ಅವಶ್ಯಕವು ಕ್ಷಿಪ್ರದಲ್ಲಿಯೇ ಬರುವುದೆಂದೂ ಎಲ್ಲರೂ ಒಪ್ಪತಕ್ಕದಾಗಿದೆ. ಹಾಗೆ ಹೊಸ ವಿಭಾಗಗಳಾಗುವ ಸಂದರ್ಭದಲ್ಲಿ ನಮ್ಮ ಚಿಕ್ಕ ಕೊಡಗು ದೇಶದ ಸ್ಥಾನವು ಹೇಗೆ ಇರಬೇಕು—ಈಗಿರುವಂತೆ ಪ್ರತ್ಯೇಕವಾಗಿರಬೇಕೋ ಕರ್ನಾಟಕದ ಒಂದು ಭಾಗವಾಗಿರಬೇಕೋ ಎಂಬುದನ್ನು ತಿಳುಕೊಳ್ಳುವುದು ಪ್ರತಿ ಒಬ್ಬ ದೇಶೀಯನ ಕರ್ತವ್ಯವಾಗಿದೆ. ಪ್ರತಿ ಒಂದು ವಿಷಯಕ್ಕೆ ಎರಡು ದೃಶ್ಯಗಳಿವೆ. ಅದರಂತೆಯೇ ನಮ್ಮ ಈ ಏಕೀಕರಣದ ಸಮಸ್ಯೆಗೂ ಸಹ ಎರಡು ದೃಶ್ಯಗಳಿವೆ. ಆದಕಾರಣ ಅಲ್ಪಜ್ಞನಾದ ನನಗೆ ಅರಿತಷ್ಟು ಆ ಎರಡು ದೃಶ್ಯಗಳ ವಿಷಯ ಪ್ರಸ್ತಾಪಿಸುತ್ತೇನೆ. ಸಾರಸತ್ವಗಳನ್ನು ಗ್ರಹಿಸಿ ಸರಿಯಾದ ತೀರ್ಮಾನ ಮಾಡಿಕೊಳ್ಳುವ ವಿಷಯವನ್ನು ವಾಚಕ ಮಹಾಶಯರಿಗೆ ಬಿಡುವೆನು.

ಪ್ರಥಮದಲ್ಲಿ ನಾನು ಕೊಡಗು ದೇಶವು ಕರ್ನಾಟಕ ಏಕೀಕರಣದಲ್ಲಿ ಒಂದು ಭಾಗವಾಗಿರುವುದರಿಂದ ಉಂಟಾಗುವ ಕ್ಷೇಮಗಳನ್ನು ವಿವರಿಸುತ್ತೇನೆ.

ಕೊಡಗು ದೇಶವು ಬೆಟ್ಟ ಗುಡ್ಡೆಗಳಿಂದ ಸುತ್ತಲ್ಪಟ್ಟು ಸುಲಭವಾಗಿಯೂ ಸಂಚಾರವಿಲ್ಲದೆ ಪ್ರತ್ಯೇಕವಾದ ದೇಶವಾದುದರಿಂದ ಪರದೇಶದ ಜನರಿಗೆ ಕೊಡಗಿನ ಸಂಗತಿಗಳು ತಿಳಿದಿರುವುದು ಬಹಳ ಕಡಿಮೆ. ಮತ್ತು ಕೊಡಗಿನವರಿಗೂ ಸಹ ಹೊರಗಿನ ಸೀಮೆಗಳ ವಿಷಯ ತಿಳಿಯುವುದೂ ಕಡಿಮೆ. ಕೊಡಗು ಕರ್ನಾಟಕ ಪ್ರಾಂತ್ಯದ ಭಾಗವಾದಲ್ಲಿ ನಮ್ಮ ಜನರೂ ಪರದೇಶದ ಜನರೂ ಹೆಚ್ಚಾಗಿ ಮಿಳಿತವಾಗಿ ಪರಸ್ಪರ ಸ್ಥಿತಿಗತಿಗಳನ್ನು ತಿಳಿದುಕೊಂಡು (exchange of ideas) ಕೊಂಚ ಹೆಚ್ಚು ತಿಳುವಳಿಕೆಯನ್ನು ಹೊಂದುವರು. ಅತ್ತಿಯ ಹಣ್ಣಿನ ಹುಳಗಳಂತಿರದೆ ಇಂಡಿಯಾದೇಶದ ಅಭಿವೃದ್ಧಿಯ ಚಳವಳಿಯಲ್ಲಿ ನಾವೂ ಭಾಗಿಗಳಾಗಿ ದೇಶದಲ್ಲಿಯ ಹೆಚ್ಚಿನ ಪಕ್ಷಗಳಿಗೆ ನಾವು ಸಹ ಶ್ರದ್ಧೆ ವಹಿಸಿ ಪ್ರಯತ್ನಿಸಲು ತರಬೇತಾಗುವೆವು.

ನಮ್ಮ ದೇಶದಲ್ಲಿಯ ವಿದ್ಯಾವಂತರಿಗೆ ದೊಡ್ಡ ಹುದ್ದೆಗಳಿಗೆ ಹೋಗಲು ಹೆಚ್ಚಿನ ಅವಕಾಶ ಸಿಕ್ಕುವುದು. ನಾಳೆ ದಿವಸವೇ ಕೊಡಗು ಕರ್ನಾಟಕದ ಭಾಗವಾದಲ್ಲಿ ನಮ್ಮ ದೇಶದ ಮಿಸ್ಟರ್ ಸ್ಪೇಪೆಸ್ಪೇಟರು ಸಂದರ್ಭ ಒದಗಿದ ಕೂಡಲೇ ಒಂದು ಜಿಲ್ಲೆಯ ಕಲೆಕ್ಟರಾಗಿ ಹೋಗುವುದರಲ್ಲಿ ಸಂಶಯವೇ ಇಲ್ಲ. ಈಗಲಾದರೋ ಹಾಗೆ ಮೇಲಿನ ಹುದ್ದೆಗಳಿಗೆ ಹೋಗಲು ಅವಕಾಶವೇ ಇಲ್ಲ. ಮುಖ್ಯಾಧಿಕಾರಿಯಾದ ಚೀಫ್ ಕಮಿಷನರಲ್ಲಿರುವ ಎಗ್ಸಿಕ್ಯೂಟಿವ್ ಮತ್ತು ಜ್ಯುಡಿಶಿಯಲ್ ಪಕ್ಷಗಳು ಒಬ್ಬನ ಕೈಯಲ್ಲಿ ಇರುವುದು ನ್ಯಾಯವಲ್ಲವೆಂದು ಹೆಚ್ಚು ಗಲಬೆಯು ಈಗಿಂದಾಗ್ಯೆ ನಡೆಯುತ್ತಿದೆ. ಚೀಫ್ ಕಮಿಷನರಲ್ಲಿರುವ ಜ್ಯುಡಿಶಿಯಲ್ ಪಕ್ಷ ಅವರಿಂದ ತೆಗೆಯಲ್ಪಟ್ಟು ಸ್ಥಾಪಿಸಲ್ಪಡುವ ಒಂದು ಹೈ ಕೋರ್ಟಿಗೆ ವರ್ಗಾಯಿಸಲ್ಪಡುವುದು. ಈ ಚಿಕ್ಕ ದೇಶದಲ್ಲಿರುವ ಭಾರೀ ಸಂಬಳದ ಅನೇಕ ಹುದ್ದೆಗಳು ತೆಗೆಯಲ್ಪಡಬಹುದು. ಈಗಲೂ ಅನಾವಶ್ಯಕವೆಂದು ಹೇಳುವ ಎಗ್ಸಿಕ್ಯೂಟಿವ್ ಇಂಜಿನೀಯರ್ ಮತ್ತು ಸಿವಿಲ್ ಸರ್ಜನ್ ಈ ಎರಡು ಹುದ್ದೆಗಳು ಖಂಡಿತವಾಗಿ ಸ್ವಾನಿಂದಿ ಚೇತ್ಯಿಗೆ ಒಳಗಾಗುವುದು.

ಹೊರ ಪ್ರದೇಶದ ಜನರ ಸಂಪರ್ಕದಿಂದ ವ್ಯಾಪಾರವು ಹೆಚ್ಚಾಗಿ ನಮ್ಮ ಭತ್ತ, ಕಿತ್ತಳೆ ಮೊದಲಾದವುಗಳಿಗೆ ಹೆಚ್ಚಿನ ಬೆಲೆ ಸಿಕ್ಕಬಹುದು. ನಮ್ಮ ಜನರೇ ಹೆಚ್ಚಿನ ವ್ಯಾಪಾರಕ್ಕೆ ಮನ ಕೊಡುವವರಾಗುವರು, ಮತ್ತು ವಿದ್ಯೆಗೂ ಸಹ ಹೆಚ್ಚು ಗಮನ ಕೊಡುವರು. ಕರ್ನಾಟಕ ಪ್ರಾಂತ್ಯವಾದಲ್ಲಿ ಒಂದು ಕರ್ನಾಟಕ ಯುನಿವರ್ಸಿಟಿ (University) ಸ್ಥಾಪಿಸಲ್ಪಡುವ ಸಂದರ್ಭ ಬರುವುದು. ಹಾಗೆ ಸ್ಥಾಪಿಸಲ್ಪಟ್ಟಲ್ಲಿ ಕೊಡಗಿನ ಕೇಂದ್ರಸ್ಥಾನವಾದ ಮಡಿಕೇರಿಯಲ್ಲಿ ಒಂದು ಸೆಕೆಂಡ್ ಗ್ರೇಡ್ ಕಾಲೇಜು (2nd Grade College) ಬೇಗನೇ ಸ್ಥಾಪಿಸಲ್ಪಡಬಹುದು. ಹಾಗೆ ಮಡಿಕೇರಿಯಲ್ಲಿಯೇ ಪ್ರೌಢ ವಿದ್ಯಾಭ್ಯಾಸವು ದೊರಕುವ ಸಂದರ್ಭವು ಬಂದಾಗ ನಮ್ಮ ಯುವಕರು ಹೆಚ್ಚಾಗಿ ಪ್ರೌಢ ವಿದ್ಯಾಭ್ಯಾಸಕ್ಕೆ ಸಿಗಾರ ಕೊಡುವರು. ಹೀಗಾದಲ್ಲಿ ನಮ್ಮ ಯುವಕರ ವಿದ್ಯಾಭ್ಯಾಸಕ್ಕೋಸ್ಕರವಾಗಿ ತಿಂಗಳುಗಟ್ಟಲೆ ಹೊರ ದೇಶಗಳಿಗೆ ಕಳುಹಿಸಲ್ಪಡುವ ಸಾವಿರಾರು ರೂಪಾಯಿಗಳು ನಮ್ಮ ದೇಶದಲ್ಲಿಯೇ ನಿಲ್ಲುವುದು.

ನಮ್ಮ ದೇಶೀಯರು ವಾಡಿಕೆಯಾಗಿ ಸೋಮಾರಿಗಳು. ಪರದೇಶದ ವ್ಯಾಪಾರಿಗಳು ಬರುವ ಕಾರಣ ಜೀವನಕ್ಕೆ ಪೋಟಾಪೋಟಿ ಹೆಚ್ಚುವದು. ಆಗ ನಮ್ಮ ಜನರು ಎಚ್ಚರಗೊಂಡು ಸೋಮಾರಿತನವನ್ನು ತೊರೆಯುವರು. ಕಷ್ಟಗಾರರಿಗೆ ಎಲ್ಲಾ ವಿಧದಲ್ಲಿಯೂ ಲಾಭವೇ ಉಂಟಾಗುವುದು. ಹೊರಗಿನ ಧನಿಕರು ನಮ್ಮ ಚಿಕ್ಕ ಮತ್ತು ಎಟ್ರಕ್ಟಿವ್ (Attractive) ದೇಶಕ್ಕೆ ಬರಬಹುದಾದುದರಿಂದ ದೇಶದಲ್ಲಿ ಹೆಚ್ಚು ಹಣವು ಚಲಾವಣೆಯಲ್ಲಿರುವುದು ಮತ್ತು ಜಾಗದ ಬೆಲೆಯು ಹೆಚ್ಚಾಗುವುದು. ನಮ್ಮ ಲಿಪಿ ಇಲ್ಲದ ಕೊಡಗು ಭಾಷೆಯು ಹೋಗಿ ಕ್ರಮೇಣ ಕನ್ನಡವು ನಮ್ಮ ಮಾತೃಭಾಷೆಯಾಗಬಹುದು. ಹೊರ ದೇಶದವರು ಹೇಗೆ ಬಂದು ಈ ದೇಶದಲ್ಲಿ ಜೀವನೋಪಾಯವನ್ನು ಹುಡುಕಿ ಇಲ್ಲಿಯೇ ನೆಲೆಗೊಳ್ಳುವರೋ ಅದರಂತೆಯೇ ನಮ್ಮ ಜನರೂ ಸಹ ಪರದೇಶಗಳಿಗೆ ಜೀವನೋಪಾಯವನ್ನು ಹುಡುಕಿಕೊಂಡು ಹೋಗಿ ಅಲ್ಲಿ ನೆಲೆಗೊಳ್ಳುವರು. ಹಾಗೆ ನೆಲೆಗೊಂಡಲ್ಲಿ ತಂದೆಯ ಅತ್ಯಲ್ಪಾಂಶದ ಭೂಮಿಗೆ ಅಣ್ಣ ತಮ್ಮಂದಿಯರಲ್ಲಿ ಉಂಟಾಗುವ ಕಲಹಗಳು ಮಾಯವಾಗುವವು. ತಂದೆಯ ಕಿಂಚಿತ ಆಸ್ತಿಗೆ ಮಕ್ಕಳು ಆಶಿಸದೆ ಹೋದಲ್ಲಿ ಇಂಗ್ಲೆಂಡ್ ದೇಶದವರು ಇಡೀ ಭೂಲೋಕವೇ ನಮ್ಮದು ಎಂದು ಯೋಚಿಸುವಂತೆ ನಾವು ನಮ್ಮ ಇಂಡಿಯಾ ದೇಶವಾದರೂ ನಮ್ಮದೇ ಎಂಬದಾಗಿ ಕೊಂಚ ಮಟ್ಟಿಗಾದರೂ ಯೋಚಿಸಿ ರಾಷ್ಟ್ರೀಯ ಜಾಗ್ರತೆಯು ತಲೆದೋರುವುದಲ್ಲದೆ ಇಂಡಿಯಾ ದೇಶದ ಎಲ್ಲಾ ಭಾಗಗಳಿಗೂ ಜೀವನೋಪಾಯವನ್ನು ಹುಡುಕಿಕೊಂಡು ಹೋಗುವರು.

ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ತಕ್ಕಂಥ ಸ್ಥಳಗಳು ಇನ್ನೂ ಬಹಳವಾಗಿ ಹಾಳು ಬಿದ್ದುಕೊಂಡು ಕಾಡು ಪ್ರದೇಶವಾಗಿದೆ. ಪರದೇಶದ ಹಣಗಾರರು ಬಂದು ಈ ಸ್ಥಳಗಳ ಸ್ಥಿತಿಯಾ ರೂಢಿಗೆ ತರಬಹುದು. ಹೀಗಾದಲ್ಲಿ ಸರಕಾರದ ಹುಟ್ಟುವಳಿಯು ಹೆಚ್ಚಾಗುವುದು. ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಗೆ ಸರಿಯ ವ ಚಳವಳಿಯು ಕೂಡಲೇ ಮಾಯವಾಗುವುದು. ಒಹುಶಃ ಮಡಿಕೇರಿಯು ಕರ್ನಾಟಕದ ಬೇಸಗೆಯ ಮುಖ್ಯಪಟ್ಟ (Summer Capital) ಆಗುವಂತಹ ಸಂದರ್ಭ ಬರಬಹುದು.

ಇವೆಲ್ಲಾ ಪ್ರಯೋಜನಗಳು ಲಭಿಸುವುವೆಂದು ಸೂಚಿಸಿ ಬರುವ ವಾರದ ಪತ್ರಿಕೆಯಲ್ಲಿ ಇದರಿಂದಲೇ ಕೊರತೆಗಳೇನಿರಬಹುದೆಂಬ ವಿಷಯಗಳನ್ನು ವಾಚಕರ ಅವಗಾಹನೆಗೆ ತರುವೆನು.

ಸಾಮಾಜಿಕ ಸುಧಾರಣೆ.

(ಒಬ್ಬ ಸಮಾಜ ಸೇವಕರಿಂದ)

1. ಸ್ತ್ರೀ ವಿದ್ಯಾಭ್ಯಾಸ.

ಸಮಾಜದ ಅಭಿವೃದ್ಧಿಗೂ, ಜನಾಂಗದ ಅಭಿವೃದ್ಧಿಗೂ ಅನೇಕ ವಿಧಗಳಲ್ಲಿ ಕುಂದುಕವನ್ನುಂಟುಮಾಡುವ ಕೆಲಕೆಲವು ಪೂರ್ವಾಚಾರಗಳ ವಿಷಯದಲ್ಲಿ ನಾವು ಆಗಾಗಲೇ ಎಷ್ಟೋ ವರ್ಷಗಳ ಹಿಂದೆ ಮಾರ್ಪಾಡು ಮಾಡಬೇಕಾಗಿದ್ದರೂ ಇನ್ನೂ ಅವುಗಳ ಗೊಡವೆಗೆ ಹೋಗದೆ ತಟಸ್ಥರಾಗಿದ್ದೇವೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ದಿನ ದಿನಕ್ಕೂ ಹೊಸ ಹೊಸ ಸಾಮಾಜಿಕ ವ್ಯವಹಾರಿಕ ಸುಧಾರಣೆಗಳು ಆಗುತ್ತಲೇ ಇವೆ. ಅವುಗಳಲ್ಲಿ ಒಳ್ಳೆಯವೂ ಇರಬಹುದು ಕೆಟ್ಟವುಗಳೂ ಇರಬಹುದು. ಅದು ಹಾಗಿರಲಿ ಶತಮಾನಗಳಿಂದ ಜಾರಿಯಲ್ಲಿ ಬಂದಿರುವ ಆಚಾರವಾದರೂ ಪ್ರಕೃತದ ಶ್ರೇಯೋಭಿವೃದ್ಧಿಗೆ ಅಡಚಣೆಯಾಗುವುದಾದರೆ ಅವುಗಳನ್ನು ಖಂಡಿತವಾಗಿ ಬಿಟ್ಟುಬಿಡಬೇಕು. ನಮ್ಮ ಸಮಾಜದಲ್ಲಿ ಅನೇಕ ಚಿಕ್ಕ ಚಿಕ್ಕ ಅಜ್ಞಾನಗಳು ತುಂಬಿ ಹೋಗಿವೆ. ಜನಾಂಗದ ಏಳಿಗೆಗೆ ಅವಶ್ಯಕವಾದ ಅನೇಕ ಸುಧಾರಣೆಗಳು ಹೊಸದಾದ ಮಾತ್ರಕ್ಕೆ ಯಾರೂ ಅದನ್ನು ಎಡೆಪೇಕರಾಗಿಲ್ಲ. ಏಳಿಗೆಗೆ ಕುಂದುಕವನ್ನುಂಟುಮಾಡುವಂಥ ಪೂರ್ವಾಚಾರಗಳನ್ನು ಬಿಟ್ಟು ಬಿಡಲೂ ಹಿಂಜರಿಯಬಾರದು. ಈ ವಿಷಯದಲ್ಲಿ ನನ್ನ ಸ್ವಲ್ಪ ಬರೆಯ ಬಯಸಿದೆ. ಇನ್ನು ಇನ್ನೊಂದು ಲೇಖನಕ್ಕೆ ಬಿಟ್ಟು ಸದ್ಯಕ್ಕೆ ಮುಖ್ಯವಾದ ಮೂರು ವಿಷಯಗಳನ್ನು ಮಾತ್ರ ಮುಂದೆ ತರುತ್ತೇನೆ.

ಈಗ ನಾನು ನಿಮ್ಮ ಮುಂದೆ ಇಡುವ ಲೇಖನದಲ್ಲಿ ಒಂದು ವಾಕ್ಯವಾದರೂ ಹೊಸದಾದದ್ದಲ್ಲ. ಇದು ಹೀಗೆ ಎಷ್ಟೋ ಜನರು ಕಂಠ ಶೋಷಣೆ ಮಾಡಿದ್ದೇ ಆಗಿದೆ. ನಾವಾರಾದರೂ ಮಾತು ಬಾಯಿಂದ ಆಡುವುದನ್ನು ಬಿಟ್ಟು ಒಂದು ಕಲಸವನ್ನಾದರೂ ನಿಜವಾದ ತ್ಯಾಗದಿಂದ ಆಚರಣೆಗೆ ತರುವವರು ಯಾರೂ ಇಲ್ಲ. ಈಗ ನಿನ್ನನ್ನು ಆಚರಣೆಗೆ ತರಬೇಕೆಂಬುದರಾಗಿಯೇ ನಿಮ್ಮ ಗಮನವನ್ನು ಇತ್ತ ಕಡೆ ಕೊಡಿರೆಂದು ಕೇಳುತ್ತೇನೆ. ಸ್ತ್ರೀ ವಿದ್ಯಾಭ್ಯಾಸ ಪ್ರೌಢ ವಿವಾಹ ವಿಧವಾ ವಿವಾಹ ಇವು ಮೂರು ವಿಷಯಗಳನ್ನು ಎಷ್ಟೋ ವರ್ಷಗಳಿಂದ ವಿಚಾರ ಮಾಡುವುದರಲ್ಲಿ ಕೆಲವು ತರುಣರು ಮುದುಕರಾಗಿಯೂ, ಕೆಲವು ಮುದುಕರು ಲೋಕಾಂತರ ಗತಿಯನ್ನು ಹೊಂದಿದವರಾಗಿಯೂ ಇದ್ದಾರೆ. ಸದ್ಯಕ್ಕೆ ಕೊಡಗಿನಲ್ಲಿ ಕೊಡಗು ಜನಾಂಗದವರು ಮೇಲೆ ಹೇಳಿದ ಮೂರು ವಿಷಯಗಳಲ್ಲಿ ಕಡೆಯ ಎರಡರ ಕ್ರೂರ ಹೊಡೆತಕ್ಕೆ ಸಿಕ್ಕಿದವರಾಗಿಲ್ಲ. ಇದಕ್ಕೆ ಇವರಿಗೆ ನನ್ನ ಸಾವಿರ ವಂದನೆಗಳು. ಪ್ರಕೃತಿ ಬ್ರಾಹ್ಮಣರಲ್ಲಿಯೇ ಹೆಚ್ಚಾಗಿರುವ ಈ ಕುಂದು ಕೊರತೆಗಳನ್ನು ಜಾಗ್ರತೆ ಹೋಗಲಾಡಿಸಲು ಬ್ರಾಹ್ಮಣ ತರುಣರೂ ತರುಣಿಯರೂ ಪ್ರಯತ್ನ ತೆಗೆದುಕೊಳ್ಳದೆ ಹೋದರೆ ಸಮಾಜದ ಏಳಿಗೆಗೆ ಅಡ್ಡಿ ಮಾಡಿದಂತಾಗುವುದರಲ್ಲಿ ಸಂದೇಹವಿಲ್ಲ. ಬ್ರಾಹ್ಮಣ ತರುಣ ತರುಣಿಯರು ಈ ದಿವಸದಿಂದಲೇ ಮನೋ ನಿಶ್ಚಯ ಮಾಡಲಿ.

ಸ್ತ್ರೀ ವಿದ್ಯಾಭ್ಯಾಸ ಕೆಟ್ಟದೆಂತ ಹೇಳುವವರ್‍ಯಾರೂ ನಮ್ಮಲ್ಲಿ ಇರಲಾರರೆಂತ ಭಾವಿಸುತ್ತೇನೆ. ಸ್ತ್ರೀಯರ ಮೇಲೆ ತಮ್ಮ ತಮ್ಮ ಸಹ ವ್ಯಕ್ತಿಗೆ ಅಡಚಣೆಯಾಗುತ್ತದೆಂಬ ಅಭಿಪ್ರಾಯದಿಂದ ಕೆಲವರು ಸ್ತ್ರೀ ವಿದ್ಯಾಭ್ಯಾಸವೇ ಒಳ್ಳೆಯದಲ್ಲವೆಂತ ಹೇಳುವವರೂ ಇರಬಹುದು. ಇಂಥವರಿಗೆ ನಮಸ್ಕಾರವಿರಲಿ. ಈ ಮಾತಿನವರನ್ನು ಒತ್ತಟ್ಟಿಗೆ ಬಿಟ್ಟರೂ ಸಹ ನಮ್ಮಲ್ಲಿ ಹೆಣ್ಣು ಮಕ್ಕಳ ವಿದ್ಯೆಗೆ ಗಮನ ಕೊಡುವವರು ತೀರ ಕಡಿಮೆ. ಹುಡುಗರ ವಿದ್ಯೆಗೆ ಲಕ್ಷ್ಯಗೊಡುವಿರುವವರು ಸ್ತ್ರೀಯರ ವಿದ್ಯೆಗೆ ಎಷ್ಟು ಲಕ್ಷ್ಯ ಕೊಟ್ಟಿರು! ಹುಡುಗಿಯರ ವಿದ್ಯಾಶಿಕ್ಷಣದ ವಿಷಯದಲ್ಲಿ ಅತಿ ತುಚ್ಛವಾದ ಉಪೇಕ್ಷೆಯು ನಮ್ಮಲ್ಲಿ ತುಂಬಿ ಹೋಗಿದೆ. ಮಸಿಕೆ ತೊಳೆಯುವ ಹೆಣ್ಣು ಕೂಸಿಗೆ ವಿದ್ಯೆ ಯಾತಕ್ಕೆ? ಎಂತಲೂ 'ವಿದ್ಯೆ ಕಲಿತು ಯಾವ ಸರಕಾರಿ ಚಾಕರ ಹೊಂದಬೇಕು?' ಎಂತಲೂ ಅನೇಕರು ಹೇಳುವುದನ್ನು ಕೇಳಿದ್ದೇನೆ. ಮನೆ ಕೆಲಸಗಳನ್ನು ಮಾಡುವುದಕ್ಕೂ ವಿದ್ಯೆ ಬೇಡವೇ? ಮನೆಯ ಒಳಗೂ, ಹೊರಗೂ ಶುಚಿಯಾಗಿಡುವುದು, ಪಾತ್ರೆ ಪದಾರ್ಥಗಳನ್ನು ಜೋಪಾನವಾಗಿಯೂ ಕ್ರಮದಂತೆಯೂ ಇಡುವುದು, ಸಮಯದ ಬೆಲೆ ಅರಿತು ನೋಡಿ, ಹೊತ್ತಿಗೆ ಸರಿಯಾಗಿ ಮಿತ ವ್ಯಯದಿಂದ ರುಚಿಕರವಾದ ವಸ್ತುಗಳನ್ನು ತಯಾರಿಸಿ ಊಟಕ್ಕೆ ಒದಗಿಸುವುದು, ಆರೋಗ್ಯವಿಧಿಗನುಸಾರವಾಗಿ ಕಾಯಿ ಪಲ್ಯಗಳ ನಾನಾ ವಿಧವಾದ ಪಾಕ ಮಾಡುವುದನ್ನೂ, ಮಾಡಿದ ಅಡಿಗೆಗೆ ಕ್ರಿಮಿ ಕೀಟಗಳ ಸೋಂಕು ತಟ್ಟದಂತೆ ಜಾಗರೂಕವಾಗಿರುವುದನ್ನು ಕಲಿತುಕೊಳ್ಳುವುದಕ್ಕೆ ವಿದ್ಯೆ ಬೇಡವೆ? ಇನ್ನೂ ಅನೇಕ ಕೆಲಸಗಳಿಗೆ ವಿದ್ಯೆ ಬೇಕೇ ಬೇಕು. ಆರೋಗ್ಯಕ್ಕೆ ಬೇಕಾದ ಅನೇಕ ಹೊಸ ವಿಷಯಗಳನ್ನು ಪತ್ರಿಕೆಗಳಿಂದ ಓದಿ ತಿಳಿದುಕೊಳ್ಳಲು ವಿದ್ಯೆ ಇಲ್ಲದಿದ್ದರೆ ಯಾವ ಪ್ರಯೋಜನವೂ ಆಗಲಾರದು. ಅನೇಕ ತರದ ಆಟ ಪಾಠಗಳು ಬಾರದೆ ಇರಲು ಏನು ಮಾಡಬೇಕೆಂತ ಸ್ತ್ರೀಯರು ಅರಿತಿದ್ದರೆ ದೇಶಕ್ಕೆ ಎಷ್ಟೋ ಕ್ಷೇಮವಾಗಿ ದೀತು. ಮನಸ್ಸು ದೇಹ ಒಪ್ಪವಾಗಿ ಶುಚಿಯಾಗಿಟ್ಟುಕೊಂಡು ಸಂತೋಷವಾಗಿ ಮನೆ ಕೆಲಸಗಳನ್ನು ಚೆನ್ನಾಗಿ ನಡಸಿಕೊಂಡು ಬರಬೇಕಾದರೆ ಅದಾ ಹೆಣ್ಣು ಮಕ್ಕಳಿಗೆ ವಿದ್ಯೆಯೂ, ಶಿಕ್ಷಣವೂ ಬೇಕು. ಇದಿಲ್ಲದಿದ್ದರೆ ಸ್ತ್ರೀಯು ಪುರುಷನ ಅರ್ಧಾಂಗಿಯಾಗಲಾರಳು. ದೇಶದ ಅಭಿವೃದ್ಧಿಗೆ ಗಂಡಸರಿಂದ ಆಗಬೇಕಾದ ಕೆಲಸಕ್ಕಿಂತ ಹೆಂಗಸರಿಂದ ಆಗಬೇಕಾದ್ದೇ ಹೆಚ್ಚೆಂಬುದರಲ್ಲಿ ಸಂಶಯವಿಲ್ಲ. ಪತ್ನಿಯು ಪತಿಯ ಪ್ರತಿಯೊಂದು ಕೆಲಸವೂ, ಒಳ್ಳೆಯದೋ ಕೆಟ್ಟದ್ದೋ ಎಂತ ನಿರ್ಧರಿಸಿ ಕೆಟ್ಟದನ್ನು ಮಾಡಲು ಅಡ್ಡಿ ಬರುವಷ್ಟು ವಿದ್ಯೆಯ ಬುದ್ಧಿಯೂ ಪತ್ನಿಯಲ್ಲಿದ್ದರೆ ಸಂಸಾರವು ಕೀರ್ತಿ ಹೊಂದುವದು. ಇದಿಲ್ಲದಿದ್ದರೆ ಸಂಸಾರದಲ್ಲಿ ಯಾವಾಗಲೂ ಅನಿಷ್ಟವಾದ ಜಗಳಗಳು ಹುಟ್ಟಿಕೊಂಡು ಅದೇ ಘೋರ ನರಕವಾಗುತ್ತದೆ.

ಪ್ರತಿಯೊಬ್ಬಳೂ ತನ್ನ ಮಕ್ಕಳನ್ನು ಸಾಕಬೇಕಷ್ಟೆ. ತಾನೇ ವಿದ್ಯೆ ಇಲ್ಲದ ಪಶುವಾದರೆ ತನ್ನ ಮಕ್ಕಳನ್ನು ಎಷ್ಟು ಚೆನ್ನಾಗಿ ಸಾಕಬಹುದು! ಮಕ್ಕಳನ್ನು ಸಾಕುವ ಜವಾಬ್ದಾರಿಯು ತಾಯಿಯವರಿಗೇ ಸೇರಿದೆ. ಇದೇನೂ ಸಾಮಾನ್ಯವಾದ ಕೆಲಸವಲ್ಲ. ಮಕ್ಕಳು ಜೀವಂತರಾಗಿ ಬದುಕಿರಲು ಸಾಕುವುದನ್ನು ಯಾರು ಬೇಕಾದರೂ ಮಾಡಬಹುದು. ಭೂಭಾರದ ಮಕ್ಕಳನ್ನು ಲೋಕ ಕಂಟಕರಾದ ಮಕ್ಕಳನ್ನು ಸಾಕಿದರೆ ಸಾಲದು. ಮಕ್ಕಳನ್ನು ಸಾಕುವ ಕೆಲಸವು ಪ್ರತಿಯೊಂದು ತಾಯಿ ಸರಿಯಾಗಿ ತಿಳಿದಿಲ್ಲ. ಇವರ ಮಕ್ಕಳಲ್ಲಿ ಧೈರ್ಯ, ಶೌರ್ಯ, ಉತ್ಸಾಹ ಹುಟ್ಟಿಸುವಂತೆ ಮಾಡುವ ಶಕ್ತಿ ತಾಯಂದಿರು ಮೃಗಗಳಂತೆಯೋ ಹೊರತು ಬೇರೇನೂ ಇಲ್ಲ. ಕೆಟ್ಟ ಮಾತುಗಳನ್ನೂ, ಸುಳ್ಳು ಹೇಳುವುದನ್ನೂ ಕಲಿಸದಿರುವುದು, ಮೋಸ ಮಾಡಲು ಕಲಿಸದೆ ಇರುವುದು, ಮೈ, ಕೈ, ಬಟ್ಟೆ ಬರೆ ಕೊಳೆ ಮಾಡಲು ಕಲಿಸದೆ ಇರುವುದು ಯಾರ ಕೆಲಸ? ಮೃದು ಸ್ವಭಾವಗಳಿಂದ ಕೂಡಿ ಧೈರ್ಯ, ಶಕ್ತಿ, ಸಾಹಸಗಳಿಂದ ತುಂಬಿ ತುಳುಕುವಂತೆ ಬಾಲಕರನ್ನು ತಯಾರು ಮಾಡುವ ಮಾತೆಯರಿಗೆ ಇವುಗಳಲ್ಲಿ ಮೊದಲನೆಯ ಸ್ಥಾನ ಸಿಕ್ಕತಕ್ಕದೆಂತ ಖಂಡಿತವಾಗಿ ಹೇಳಬಹುದು. ಲೋಕೋಪಕಾರಿಗಳಾಗುವ ಮಕ್ಕಳನ್ನು ತಯಾರು ಮಾಡುವ ತಾಯಿಯರು ತಮ್ಮ ಕರ್ತವ್ಯವನ್ನು ಸಂಪೂರ್ಣ ನೆರವೇರಿಸಿದಂತೆ ಆಗುತ್ತೆ. ಈಗಿನ ಮಕ್ಕಳೇ ಮುಂದಿನ ಜನಾಂಗ. ಇವರನ್ನು ನ್ಯಾಯವಾದ ತರಬೇತಿನಿಂದ ಸಾಕಿದರೆ ಮುಂದಿನ ಜನಾಂಗದ ಅಭಿವೃದ್ಧಿಯ ಉಪಕ್ರಮವಾದ ಕೀರ್ತಿಯು ತಾಯಂದಿರಿಗೆ ಸಲ್ಲಬೇಕಾಗಿದೆ. ಇದಕ್ಕಿಂತ ಪುಣ್ಯ ಕೆಲಸ ಇನ್ನೊಂದಿಲ್ಲ. ಇವಕ್ಕೆಲ್ಲಾ ತಾಯಂದಿರು ವಿದ್ಯಾವತಿಯರಾಗಿರಬೇಕು. ಹೆಣ್ಣು ಮಕ್ಕಳಿಗೆ ವಿದ್ಯೆ ಇಲ್ಲದೆ ಇದ್ದರೆ ಮುಂದಿನ ಜನಾಂಗವು ಈಗಿರುವುದಕ್ಕಿಂತ ದಾಸ್ಯವೃತ್ತಿಯಲ್ಲಿ ಮುಳುಗಿ ಕ್ರಮೇಣ ನಿರ್ನಾಮವಾದೀತೆಂತಲೂ ಹೇಳಬಹುದು. ಆದ್ದರಿಂದ ಹೆಣ್ಣು ಮಕ್ಕಳಿಗೆ ಗಂಡಸರಂತೆಯೇ ವಿದ್ಯಾಭ್ಯಾಸ ಕೊಟ್ಟು ದೇಶದ ಅಭಿವೃದ್ಧಿಗೆ ಪ್ರತಿಯೊಬ್ಬರೂ ಸಹಾಯ ಮಾಡಬೇಕೆಂತ ಕೇಳಿಕೊಳ್ಳುತ್ತೇನೆ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ ೧ಕ್ಕೆ 0—14—0. ಟಿ. ಖ. 0—9—0.

ಕೆ. ಟಿ. ಡೋಂಗರೆ ಕಂಪೆನಿ,

52–51 ಗಿರಿಗಾಂವ, ಮುಂಬಯಿ.

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಒಟ್ಟೆಯ ರಂಗಿಗೂ, ಒಟ್ಟೆಯ ನಮೂನೆಗೂ ಮರುಳಾಗಿ ಪರದೇಶಿ ಒಟ್ಟೆಯನ್ನು ಕೊಂಡುಕೊಂಡು ಅನ್ನವಿಲ್ಲದೆ ನರಳುತ್ತಿರುವ ಲಕ್ಷಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡುತ್ತಿರುವಿರಾ? ಇಲ್ಲವೇ, ದಿನಕ್ಕೊಮ್ಮೆ ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ನರಳುತ್ತಿರುವ ಲಕ್ಷಾನುಲಕ್ಷ ಬಡವಾಯಿ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಒಟ್ಟೆಯನ್ನು ಕೊಂಡುಕೊಳ್ಳಲು ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಯೂ ಈ ರೀತಿಯಾಗಿ ನಮ್ಮ ಬಡ ದೇಶೀಯರ ಜೀವನಕ್ಕೆ ದಾರಿಯಾಗುತ್ತೆ.

	ರು.	ಆ	ಪೈ.
ಹತ್ತಿ ಬೆಳೆದವನಿಗೆ	0	3	0
ಹತ್ತಿ ಬಿಡಿಸಿದವನಿಗೆ	0	0	6
ಹತ್ತಿ ಸುತ್ತುವವನಿಗೆ	0	1	9
ನೂಲು ಮಾಡುವವನಿಗೆ	0	3	9
ಒಟ್ಟೆ ನೆಯ್ಗೆಯವನಿಗ	0	4	9
ಅಗಸನಿಗೆ	0	0	6
ಒಟ್ಟೆ ಅತ್ತಿತ್ತ ಸಾಗಿಸುವದಕ್ಕೆ	0	0	9
ಖಾದಿ ಅಂಗಡಿಯವನಿಗ	0	1	0
	1	0	0

ಖಾದಿಯನ್ನು ಉಟ್ಟು, ಪರದೇಶಕ್ಕೆ ವರ್ಷಕ್ಕೆ 60 ಕೋಟಿ ರೂಪಾಯಿ ಹೋಗುವದನ್ನು ನಿಲ್ಲಿಸಿ. ಅಪೇಕ್ಷಿಸಿದಲ್ಲಿ ಬೇಕಾದ ಒಟ್ಟೆಗಳನ್ನು ನಿಮ್ಮ ಮನೆಯ ಬಾಗಲಿಗೆ ಖುದ್ದಾಗಿ ತಂದು ಕೊಡುವೆವು.

ಮೇನೇಜರು,

24–12 **ಖಾದಿಭಂಡಾರ,**

ವೀರಾಜಪೇಟೆ.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges & Hunting Requisites

for

SEASON

1929-30.



CURRENT CATALOGUE ON APPLICATION

THE BOMBAY ARMOURY,

Specialist in Arms & Ammunition.

31, ABDULREHMAN STREET,

BOMBAY No. 4

24–16

೧೦೦ ರೂಪಾಯಿ ಬಹುಮಾನ

☞ ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಚಿಲ್ಲ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ	ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ	ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ.

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದಲ್ಲಿ ಕೈಕಾಲು ಹಿಡಿಯುವಿಕೆ, ಹೊಟ್ಟೆ ಶೂಲಿ, ದುಸ್ವಪ್ನ ಬೀಳುವಿಕೆ, ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗದಿರುವಿಕೆ, ವಾಂತಿ ಸರ್ವದಾ ಪಿತ್ತಬಾಧೆಯಿಂದ ನರಳುವಿಕೆ ಬಿಳಪು ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು. ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಆಕಸ್ಮಾತ್ ಸಂದುರೋಗ, ಮುಟ್ಟುದೋಷ, ಕಾಮಿಣಿ ಗ್ರಹಪೀಡೆ, ದೃಷ್ಟಿದೋಷ, ಭಯದಿಂದ ಜ್ವರಪೀಡೆ, ಕ್ಷೀಣ ಹೊಂದುವಿಕೆ, ಜಪೊ ಇಡುವಿಕೆ, ಮುಟಗಿಬೇನೆ ಹೊಟ್ಟೆಯೊಳಗಿಂದ ಏಳೋಣ ಮೊದಲಾದವುಗಳಿಂದ ಕಾಡುತ್ತಿರುವದು ಗರ್ಭರಕ್ಷಾಕರ ವಿಧಿಯಲ್ಲಿ, ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ, ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ಪಡೆಯಿರಿ ಹೆಣ್ಣು ಮಕ್ಕಳಿಗೆ ಸಂತಾನ ಪಡೆಯಿಂದ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨–೮–೦ ಪೋಷ್ಟು ಖರ್ಚು ಬೇರೆ ಆಗತಕ್ಕ ವಿಳಾಸಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ ☜

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52–15 **ಮು. ಪೋ. ಅಥಣಿ, ಜಿ. ಬೆಳಗಾಂವ.**

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದುಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.—ಕ್ರಯ ಡಬ್ಬಿ 1 ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ 7—0—0.

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ, ಮಲೆ ಜ್ವರ, 2 ಯಾ 3 ದಿನ ಸಕ್ಕೊಂಡು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುರಿ, ತಲೆಉರಿ, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ ಬಾಟ್ಲಿ 1 ಕ್ಕೆ 1—4—0. 3 ಕ್ಕೆ 3—8—0.

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0—8—0, 3ಕ್ಕೆ 1-6-0

೬. ಕಸ್ತೂರಿ ಮಿಶ್ರಣ.

ದಶ ಮಹಾರಿಷ್ಟ ಜಾಣಾತಿಯರಿಗೆ. ಬಾಟ್ಲಿ 1 ಕ್ಕೆ 1-8-0 3 ಬಾಟ್ಲಿಗೆ 4—4—0

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1-4-0, 3 ಬಾಟ್ಲಿಗೆ 3-8-0

೮. ಚವನ ಪ್ರಾಶ ಡಬ್ಬಿ 1 ಕ್ಕೆ 2—1—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ರೋಗದ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸುವುದು ಕೆಟಲಾಗು ತರಿಸಿ ನೋಡಿರಿ.

ರಾಮ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

52–49 ರಥಬೀದಿ, ಮಂಗಳೂರು, ದ. ಕನ್ನಡ

ವರ್ತಮಾನ ಸಂಗ್ರಹ.

ಒಳದೇಶ.

ತಾ. 9ರಲ್ಲಿ ರಜೆ ತೆಗೆದುಕೊಂಡು ಕೊಡೆಕನಾಲಿಗೆ ಹೋಗಿರುವ ಕಮಿಷನರವರು ನಾಳೆ ದಿನ ಪತ್ನಿ ಸಮೇತ ಮಡಿಕೇರಿಗೆ ವಾಪಸು ಬರುವರೆಂದು ತಿಳಿಯ ಬರುತ್ತದೆ.

ವೀರರಾಜಪೇಟೆ ಮುನ್ಸಿಪಲ್ ಕಮಿಟಿಯವರು ಮೆ. ಟಿ ಆರ್. ಮೂವೆಂಗಡ ಪಿಳ್ಳೆಯವರನ್ನು ಅಧ್ಯಕ್ಷರನ್ನಾಗಿಯೂ, ಮೆ. ಎ. ಕೆ. ಕೃಷ್ಣಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ ಚುನಾಯಿಸಿರುವರೆಂದು ತಿಳಿಯುತ್ತೇವೆ.

ಕೋರ್ಟ್ ಫಾರೆಸ್ಟಿನ ಗಾರ್ಡೊಬ್ಬನು ಈ ತಿಂಗಳ ಪ್ರಾರಂಭದಲ್ಲಿ ಅಲ್ಲಿಯ ಒಂದು ಕೆರೆಯಲ್ಲಿ ನೀರು ಹಕ್ಕಿಗೆ ಗುಂಡು ಹೊಡೆದ. ಅದನ್ನು ತೆಗೆಯಲಿಕ್ಕೆ ಕೆರೆಗೆ ಇಳಿದಲ್ಲಿ ಮುಳುಗಿ ಮೃತನಾದನೆಂದು ತಿಳಿಯ ಬರುತ್ತದೆ.

ಶ್ರೀ ಕಾವೇರಿ ಸಂಕ್ರಮಣ ಜಾತ್ರೆಯು ಈ ತಾ. 17ನೇ ಗುರುವಾರ ನಡೆಯಿತು. ಆ ದಿನ ಬೆಳಿಗ್ಗೆ 4 ಗಂಟೆಗೆ ಸರಿಯಾಗಿ ತೀರ್ಥೋದ್ಭವವಾಯಿತು. ಯಾತ್ರಿಕರು ಎಂದಿನಷ್ಟು ಇದ್ದರೂ ಈ ಸಾರೆ ವಿಶೇಷ ಹೆಚ್ಚಿರಲಿಲ್ಲವೆಂದೂ, ಮಳೆಯು ಗಲಾಟೆ ಇರಲಿಲ್ಲವೆಂದೂ ತಿಳಿಯುತ್ತೇವೆ.

ಬಿಳುಗುಂದ ಗ್ರಾಮದ ಮುಸಲ್ಮಾನರ ಮೆ. ದಾವುದ್ ಹಾಜಿ ಕೃಷ್ಣಿಯವರು ಈ ತಾ. 12ರಲ್ಲಿ ಶಿವಾಧೀನರಾದ ರೆಂದು ತಿಳಿಯಲು ವ್ಯಸನ ಪಡುತ್ತೇವೆ. ಇವರು ಕೆಲವು ವರ್ಷಗಳು ಬಿಮೊನ್ನಾರರ ಸಂಘದ ಕಮಿಟಿ ಮೆಂಬರಾಗಿದ್ದು ಅದಕ್ಕಾಗಿ ಬಹು ಮುತುವರ್ಜಿಯಿಂದ ಕೆಲಸ ಮಾಡಿದವರಾಗಿದ್ದರು.

ಕೆಲವು ದಿವಸಗಳ ಹಿಂದೆ ಮೆ. ಕಡೇಮಾಡ ಲೇಟ್ ತಿಮ್ಮಯ್ಯನವರ ಪುತ್ರ ಮೆ. ನಂಜುಂಡನವರು ಫಾರೆಸ್ಟರ್ ಕೆಲಸಕ್ಕೆ ರಾಜೀನಾಮೆ ಕೊಟ್ಟು, ತನ್ನ ತಾಯಿಯವರು ಕೊಟ್ಟ ಕಾವಿ ಬಟ್ಟೆಯನ್ನು ಧರಿಸಿಕೊಂಡು ಕಲ್ಕತ್ತಾದ ಬಳಿ ಇರುವ ಬೇಲೂರು ರಾಮಕೃಷ್ಣ ಮಠಕ್ಕೆ ಹೋಗಿ ಸೇರಿರುವರೆಂದು ತಿಳಿಯುತ್ತದೆ.

ವೀರರಾಜಪೇಟೆಯ ತೆಲುಗರ ಮನೆಯೊಂದರಲ್ಲಿ ಇದ್ದುಕೊಂಡಿದ್ದ ಹೆಂಡತಿ ಪುಟ್ಟಿಯೆಂಬವಳು ಈ ತಾ 2ರಲ್ಲಿ ಸತ್ತದ್ದನ್ನು ನೋಡುವಾಗ್ಯೆ ಶವವು ಕುತ್ತಿಗೆಗೆ ನೇಣು ಹಾಕಿದಂತೆ ಕಂಡಿತಂತೆ. ಇದು ಆತ್ಮಹತ್ಯೆಯೋ ಯಾ ಬೇರೆ ವಿಧದಿಂದ ಕೊಲ್ಲಲ್ಪಟ್ಟದ್ದೋ ಎಂದು ಪೋಲೀಸಿನವರು ವಿಚಾರಿಸುತ್ತಿರುವರೆಂತಲೂ ತಿಳಿಯುತ್ತೇವೆ.

ದಿವಂಗತ ಶ್ರೀ. ಪಾರ್ವಂಗಡ ಕುಶಾಲಪ್ಪನವರ ಸ್ಮಾರಕ ವಿಷಯ ಆಲೋಚಿಸಲು ಪೊನ್ನಂಪೇಟೆಯಲ್ಲಿ ಈ ತಾ. 18ಕ್ಕೆ ಮೀಟಿಂಗು ನಿಶ್ಚೈಸಲ್ಪಟ್ಟಿದ್ದರೂ, ಕಾವೇರಿ ಜಾತ್ರೆಯ ನಿಮಿತ್ತದಿಂದ ಆ ದಿನ ಮೀಟಿಂಗಿಗೆ ಹಾಜರಾಗಲು ಹಲವರಿಗೆ ಅನಾನುಕೂಲವಾದ ಕಾರಣ ಸದರಿ ಮೀಟಿಂಗನ್ನು ಈ ತಾ. 26ನೇ ಸೋಮವಾರಕ್ಕೆ ಮುಂದರಿಸಿಡಲಾಗಿದೆಯೆಂದು ತಿಳಿಯ ಬರುತ್ತದೆ.

ಮಡಿಕೇರಿಯ ಮೆ. ಉಮ್ಮರ್‌ದಾದಾ ಸೇಟರ ಬಾಡಿಗೆ ಮೋಟಾರು ಕಾರು ಈ ತಾ. 12ರಲ್ಲಿ ಮೆ. ಮುಕ್ಕಾಟಿರ ಅಪ್ಪಯ್ಯನವರು, ಮಡಿಕೇರಿ ಸ್ಪೆನ್ಸರ್ ಮೇನೇಜರು ವಗೈರೆಯವರ ಪ್ರಯಾಣಕ್ಕಾಗಿ ಮೈಸೂರಿಗೆ ತೆಗೆದುಕೊಂಡು ಹೋಗುವಾಗ ಮೈಸೂರಿಂದ 7 ಮೈಲು ಈಚೆಗೆ ಸುಮಾರು 12 ವರ್ಷ ಪ್ರಾಯದ ಒಬ್ಬ ಹುಡುಗಿಯು ಸದರಿ ಕಾರಿಗೆ ಸಿಕ್ಕಿ ಮೃತಳಾದಳೆಂದೂ, ಈ ಸಂಬಂಧ ಕಾರಿನ ಡ್ರೈವರಾದ ಮೆ. ಟಿ. ಶಿವಣ್ಣನವರ ಅಜಾಗರೂಕತೆ ಇದ್ದೀತೋ ಎಂದು ಮೈಸೂರು ಪೋಲೀಸಿನವರು ವಿಚಾರಿಸುತ್ತಿದ್ದಾರೆಂದೂ ತಿಳಿಯ ಬರುತ್ತದೆ.

ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ಕಳೆದವಾರ ಮೈಸೂರಲ್ಲಿ ನಡಿಸಲ್ಪಟ್ಟ ದಸರಾ ಸ್ಪೋರ್ಟ್ಸಿನಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ ಹೋಗಿದ್ದ ಮೂವರು ವಿದ್ಯಾರ್ಥಿಗಳು ಈ ಕೆಳಗಿನ ಬಹುಮಾನಗಳನ್ನು ಪಡೆದರೆಂದು ಕೇಳಲು ಸಂತೋಷ ಪಡುತ್ತೇವೆ. 1. ಮೆ. ಪೋಡಮಾಡ ಮಾದ್ಯೆಯ್ಯನವರು (1) ಅಡಚಣೆ (ಅಬ್‌ಸ್ಟೇಕಲ್) ಓಟದಲ್ಲಿ 1ನೇ ಇನಾಮು, (2) ಮೂರು ಕಾಲಿನ ಓಟದಲ್ಲಿ 1ನೇ ಇನಾಮು, (3) ಮನುಷ್ಯ ಗಾಡಿ (ಹ್ಯೂಮನ್ ವ್ಹೀಲ್) ಓಟದಲ್ಲಿ 2ನೇ ಇನಾಮು. 2. ಮೆ. ಕೆಂಗಟ್ಟೀರ ಅಚ್ಚಪ್ಪನವರಿಗೆ (1) (ಎಲ್ಲರಿಗೂ ಬಿಟ್ಟಿದ್ದ) ಛಾವ ಎಸೆಯುವುದರಲ್ಲಿ 2ನೇ ಇನಾಮು, (2) ಮನುಷ್ಯ ಗಾಡಿ ಓಟದಲ್ಲಿ 2ನೇ ಇನಾಮು. 3 ಮೆ [illegible] ಯಿಂದ ಅಚ್ಚಪ್ಪನವರಿಗೆ ಮೂರು ಕಾಲಿನ ಓಟದಲ್ಲಿ 1ನೇ ಇನಾಮು ದೊರೆತಿರುವುವು. ಮೇಲ್ಕಂಡ ವಿದ್ಯಾರ್ಥಿಗಳ ಜೊತೆಯಲ್ಲಿ ಸ್ಕೂಲಿನ ಮಾಸ್ಟರು ಮೆ. ಮಾಚಿಮಾಡ ಪಂಗಪ್ಪ ಎಲ್. ಟಿ. ಯವರೂ ಸಹ ಹೋಗಿದ್ದರು.

ಹೊದಗಳ್ಳಿ ತೋಟದ ಸುಪರಿಂಟೆಂಡೆಂಟರಾದ ಮೆ. [illegible]ವರು ಕಾಸ್ಲೇಟ್ ಬಸ್ ಸರ್ವೀಸಿನ ಡ್ರೈವರಾದ ಮೆ. [illegible] ಮಂಜಣ್ಣನವರಿಗೆ ಹೊಡೆದರೆಂದು ಸರ್ ಜಿಲ್ಲಾ 2ನೇ ಕ್ಲಾಸ್ ಮೆ. ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಕ್ರಿಮಿನಲ್ ಕೇಸ್ ಕಳೆದ ವಾರ ವಿಚಾರ ನಡೆಯಿತು. ಯೂರೋಪಿಯನ್ ಜನಾಂಗಕ್ಕೆ ಸೇರಿದವರಿಗೆ ಇರುವ ರಿಯಾಯಿತಿ ಪ್ರಕಾರ ಅಪರಾಧಿಯು ಹೈಕೋರ್ಟಿನ ಪ್ರಾರಂಭದಲ್ಲಿ ಜೂರಿ ಅದನಂತರ ಅಂಥಾ ರಿಯಾಯಿತಿ ಬೇಕೆಂತ ಕೇಳಿ ನೋಟೀಸ್ ಇದ್ದರು ರಿಕಾರ್ಡನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್

ಟರಿಗೆ ಕಳುಹಿಸಿರುತ್ತಾರೆ. ತಾ. 7—9—'29ರಲ್ಲಿ ಬಸ್ಸನ್ನು ಫ್ರೇಜರ್‌ಪೇಟೆಯಿಂದ ಸುಂಟಿಕೊಪ್ಪಕ್ಕೆ ನಡಿಸುತ್ತಾ ಬಂದಾಗ ಕೊಡಗರಳ್ಳಿ ತೋಟದ ಬಳಿ ರಸ್ತೆಯಲ್ಲಿ ಬಸ್ಸು ಒಂದು ನಾಯಿಗೆ ತಗಲಿತೆಂತಲೂ, ಡ್ರೈವರು ಬಸ್ಸು ನಿಲ್ಲಿಸಿ ನಾಯಿಯನ್ನು ನೋಡಲಿಕ್ಕೆ ಹೋದಾಗ ಮಿ ಮಾರಿಸ್‌ರವರು ಬೈಯ್ಯುತ್ತಾ ಬಂದು ಡ್ರೈವರಿಗೆ ಹೊಡೆದರೆಂತಲೂ ಪಿರ್ಯಾದಿ.

ಕಾವೇರಿ ಸಂಕ್ರಮಣದ ಜಿಸೆಯಿಂದ ಈ ಸಾರಿಯ ಪತ್ರಿಕೆಯನ್ನು ಒಂದು ದಿನ ತಡವಾಗಿ ಪ್ರಕಟಿಸಿದ್ದಾಗಿದೆ.

ತಿದ್ದುಪಡಿ.—ಕೊಡಗು ಪ್ಲಾಂಟರುಗಳ ಸಹಕಾರಿ ಸಂಘದ ಜನರಲ್ ಮೀಟಿಂಗು ಮೆ. ಕೊಡಂದೆರ ದೇವೈಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಎಂಬದರ ಬದಲು ಮೆ. ಕೋದಂಡ ದೇವೈಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಎಂದು ಕಳೆದ ವಾರ ತಪ್ಪು ಪ್ರಿಂಟಾದದ್ದಕ್ಕೆ ವ್ಯಸನ ಪಡುತ್ತೇವೆ.

ಹಿಂದೂದೇಶ.

11ನೇ ಇಂಡಿಯನ್ ನೇಶನ್ ಸಂಗೀತ ಕಾನ್‌ಫರೆನ್ಸು, ಹಿಂದುಸ್ತಾನ ಸೇವಾದಳದ ಬರುವ ವಾರ್ಷಿಕ ಮಹಾ ಸಭೆಯೂ ಕಾಂಗ್ರೆಸ್ ವಾರದಲ್ಲಿ ಲಾಹೋರಿನಲ್ಲಿ ನಡಿಸಲ್ಪಡುವವು

ವೀರ ಜತೀಂದ್ರದಾಸ್‌ರವರ ಅಂತ್ಯಕಾಲದ ಚಿತ್ರ ಪಟವು ಸಿನೇಮಾಕ್ಕಾಗಿ ತೆಗೆಯಲ್ಪಟ್ಟದ್ದು ಅದನ್ನು ಪ್ರದರ್ಶಿಸಕೂಡದೆಂದು ಕಲಕತ್ತೆಯ ಮತ್ತು ನಿಜಾಮರ ಹೈದರಾಬಾದಿನ ಪೋಲೀಸಿನವರು ಆಜ್ಞೆ ಮಾಡಿರುವರು.

ರಂಗೂನು ಸೆಂಟ್ರಲ್ ಜೈಲಿನಲ್ಲಿ ಕಳೆದ ಜೂನ್ 7ರಿಂದ ಉಪವಾಸ ವ್ರತವನ್ನು ಕೈಕೊಂಡಿದ್ದ ಯು. ವಿಸೇಂಡ ಎಂಬ ಬೌದ್ಧ ಸನ್ಯಾಸಿಯನ್ನು ಅಲ್ಲಿಯ ಸರ್ಕಾರದ ಹುಕುಂ ಮೇರೆ ಈ ತಾ. 9ರಲ್ಲಿ ಬಿಡುಗಡೆ ಮಾಡಿರುವರು

ಪೂನಾ ಮತ್ತು ಮುನ್ಶಿಗಂಜಿನಲ್ಲಿ ದೇವಸ್ಥಾನಗಳ ಒಳಗೆ ಹೋಗುವ ಹಕ್ಕು ಅಸ್ಪೃಶ್ಯರಿಗೂ ಇದೆಯೆಂಬದನ್ನು ಸಿದ್ಧಪಡಿಸಲು ಇವೆರಡು ಕಡೆಗಳಲ್ಲಿಯೂ ಅವರು ಸತ್ಯಾಗ್ರಹವನ್ನು ಪ್ರಾರಂಭಿಸಿರುವರು. ಈಗಾಗಲೇ ಕೆಲವರು ಸರೆ ಹಿಡಿಯಲ್ಪಟ್ಟಿರುವರು.

ಹಿಂದೂದೇಶದ ಕೆಲಸಗಾರರ ಮತ್ತು ವ್ಯಾಪಾರಿಕೆಗಳ ಸ್ಥಿತಿಯನ್ನು ವಿಚಾರಿಸಲು ನೇಮಿಸಲ್ಪಟ್ಟಿರುವ ವ್ಹಿಟ್ಲೆ ಕಮಿಷನಿನ 7 ಮೆಂಬರುಗಳು ಈ ತಾ. 11ರಲ್ಲಿ ಬೊಂಬಾಯಿಗೆ ಬಂದು ತಲಪಿದರು. ಅಲ್ಲಿಂದ ಅವರು ಕರಾಚಿಗೆ ಹೋಗಿ ತಮ್ಮ ಕೆಲಸವನ್ನು ಪ್ರಾರಂಭಿಸಿರುವರು.

ಅಖಿಲ ಭಾರತ ಉಪಾಧ್ಯಾಯರುಗಳ ಸಂಘಗಳ ಫೆಡರೇಶನಿನ 5ನೇ ಸಮ್ಮೇಳನವನ್ನು ಡಿಸೆಂಬರು ತಾ 27—28 ಮತ್ತು 29 ರಲ್ಲಿ ಮದ್ರಾಸಿನಲ್ಲಿ ನಡಿಸುವಂತೆ ತೀರ್ಮಾನಿಸಿರುವರು. ನಾಮಧಾರಿ ವಿ. ಯಸ್. ಶ್ರೀನಿವಾಸ ಶಾಸ್ತ್ರಿಯವರು ಸಮ್ಮೇಳನದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಕೋಲಾರ ಜಿಲ್ಲೆಯ ಗೋಳಿವಲ್ಲಿ ಎಂಬ ಗ್ರಾಮದಲ್ಲಿ ಒಬ್ಬರ ಕುಲದ ಒಬ್ಬ ಹೆಂಗಸು ಎರಡು ತಿಂಗಳ ಹಿಂದೆ ಒಂದು ಹೆಣ್ಣು ಶಿಶುವನ್ನು ಹೆತ್ತಳು. ಹುಟ್ಟಿ ಒಂದು ತಿಂಗಳನಂತರ ಆ ಕೂಸಿಗೆ ಹೆಣ್ಣು ಚಿಹ್ನೆಗಳೆಲ್ಲಾ ಹೋಗಿ ಗಂಡು ಚಿಹ್ನೆಗಳು ಹುಟ್ಟಿವೆಯೆಂದೂ, ಅದನ್ನು ಅಲ್ಲಿಯ ಕೆಲವು ಅಧಿಕಾರಿಗಳೂ, ಹಲವು ಜನರೂ ನೋಡಿರುವರೆಂದೂ ವರ್ತಮಾನ

ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಮತ್ತು ಮದ್ರಾಸಿನ ಹೊಸ ಗವರ್ನರಾದ ಸರ್ ಜಾರ್ಜ್ ಸ್ಟೇನ್ಲಿ ಯವರು ಪತ್ನಿ ಸಮೇತರಾಗಿ ಈ ತಾ 10 ರಲ್ಲಿ ಲಂಡನಿಂದ ಹೊರಟಿರುವರು. ಇವರು ಈ ತಾ 25 ರಲ್ಲಿ ಬೊಂಬಾಯಿಗೆ ತಲಪಲಿಕ್ಕಿರುವರು. ವೈಸರಾಯರು ತಾ. 28 ರಲ್ಲಿ ಡೆಲ್ಲಿಗೆ ತಲಪಿ ತಮ್ಮ ಪದವಿಯ ಚಾರ್ಜನ್ನು ವಹಿಸಿಕೊಳ್ಳುವರು.

ಬಾರಿಸಾಲ್ ಜೈಲಿನಲ್ಲಿರುವ ಮೆ ಸತೀಂದ್ರ ಸೇನ್‌ರವರು ತಮ್ಮ ದೀರ್ಘ ಉಪವಾಸದಿಂದ ರಾಜಕೀಯ ಖೈದಿಗಳಿಗಿರುವ ಕಷ್ಟವನ್ನು ದೇಶದವರಿಗೆ ಸಾಕಷ್ಟು ಮುಂದಿಟ್ಟು ಮಾಡಿರುವ ಕಾರಣ ಅವರು ತನ್ನ ಮರಣವನ್ನು ಅಪೇಕ್ಷಿಸಬಾರದೆಂದು ಸುಭಾಷಚಂದ್ರ ಬೋಸ್‌ರವರು ಅವರನ್ನು ಒಪ್ಪಿಸಿರುವುದರಿಂದ ಅವರು ತಕ್ಷಣ ಉಪವಾಸ ವ್ರತವನ್ನು ಬಿಟ್ಟು ಹಣ್ಣುಗಳ ರಸ ಮತ್ತು ಬೇರೆ ದ್ರಾವಕ ಆಹಾರವನ್ನು ತೆಗೆದುಕೊಳ್ಳುತ್ತಿರುವರು.

ಸೆಂಟ್ರಲ್ ಸಿಖ್ ಲೀಗಿನ 11ನೇ ಸಮ್ಮೇಳನವು ಈ ತಾ 12 ರಲ್ಲಿ ಸರ್ದಾರ್ ಖರಕ್ ಸಿಂಗ ರವರ ಅಧ್ಯಕ್ಷತೆಯಲ್ಲಿ ಲಾಹೋರಿನಲ್ಲಿ ಪ್ರಾರಂಭವಾಯಿತು. ಮರುದಿನ ಬೆಳಿಗ್ಗೆ ವಿಷಯ ನಿಯಾಮಕ ಕಮಿಟಿಯಲ್ಲಿ, ಸಿಖ್ ಜನರು ಬರುವ ಲಾಹೋರ್ ಕಾಂಗ್ರೆಸಿನೊಂದಿಗೆ ಸಹಕರಿಸಬೇಕೆಂಬ ನಿರ್ಣಯವು ಬಹುಮತದಿಂದ ಸ್ವೀಕರಿಸಲಾಯಿತು. ಆದರೆ ಸಿಖ್ ಪಕ್ಷದ ನೇತಾರರು ಈ ನಿರ್ಣಯವನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು ಎಂಬ ನಿರ್ಣಯಕ್ಕೆ ಬಾರದೆ ಮೀಟಿಂಗು ಚದರಿಹೋಯಿತು.

ಇಂಡಿಯಾ ಸ್ಟೇಟು ಸೆಕ್ರಟರಿಯವರು ಬೇಗನೆ ಇಂಡಿಯಕ್ಕೆ ಬರಲಿಕ್ಕಿರುವರೆಂದೂ, ಅವರು ಬಂದಾಗ್ಯೆ ಹಿಂದೂದೇಶದ ಎಲ್ಲಾ ಪಾರ್ಟಿಗಳ ಮುಖಂಡರುಗಳನ್ನು ಸೇರಿಸಿ ಒಂದು ರೌಂಡ್‌ಟೇಬಲ್ ಕಾನ್‌ಫರೆನ್ಸ್ ನಡಿಸಲಿಕ್ಕಿರುವರೆಂದೂ ಸುದ್ದಿ ಇದೆ.

ಮಡಿಕೇರಿ-ಭಾಗಮಂಡ್ಲ-ಸುಂಟಿಕೊಪ್ಪನಾಡುಗಳ ಜನ್ಮ ಓಟರುಗಳಲ್ಲಿ ವಿನಂತಿ.

ಮಹನೀಯರೇ,

ಬರುವ ನವಂಬರು ತಾ. 15ನೇ ಶುಕ್ರವಾರ ನಡೆಯುವ ಕೌನ್ಸಿಲು ಉಪ ಚುನಾವಣೆಗೆ ಮಡಿಕೇರಿ-ಭಾಗಮಂಡ್ಲ-ಸುಂಟಿಕೊಪ್ಪ ನಾಡುಗಳ ಜನ್ಮ ಓಟರುಗಳ ಪರವಾಗಿ ನಾನೊಬ್ಬ ಉಮೇದವಾರನಾಗಲು ನಿಶ್ಚೈಸಿರುತ್ತೇನೆ ತಾವೆಲ್ಲರೂ ತಮ್ಮ ಓಟುಗಳನ್ನು ನನಗೆ ಕೊಟ್ಟು ನನ್ನ ಚುನಾವಣೆಗೆ ಸಹಾಯ ಮಾಡಬೇಕಾಗಿ ಕೋರುತ್ತೇನೆ

ಮಡಿಕೇರಿ, ತಮ್ಮ ವಿಧೇಯ,

17—10—29 ಐಚೆಟ್ಟಿರ ಸಿ. ಸುಬ್ಬಯ್ಯ.

ಮಾರಾಟಕ್ಕಿದೆ.

ಸುಂಟಿಕೊಪ್ಪನಾಡು ಚೇರಳ ಶ್ರೀಮಂಗಲ ಗ್ರಾಮದಲ್ಲಿ ಈ ಕೆಳಗಿನ ಜಸ್ಮಿಯು ಮಾರಾಟಕ್ಕಿದೆ. 10 ಎಕ್ರೆ ಭೂಮಿ: ಇದರಲ್ಲಿ 50 ಬಟ್ಟಿಯಲ್ಲದೆ ಬಾಕಿ ಎಲ್ಲಾ ಸಾಗುಗಿದೆ. 31.20 ಎಕ್ರೆ ಕಾಪಿ: ಇದರಲ್ಲಿ 10 ಎಕ್ರೆ ಚೆನ್ನಾಗಿದೆ. 16.70 ಎಕ್ರೆ ಬಾಣೆ ಮತ್ತು ಕಾಡು; ಇದು ಕಾಫಿ ನಾಗುವಳಿಗೆ ಅನುಕೂಲವಾಗಿದೆ ಅಲ್ಲದೆ ಕೊಯ್ಯಲಿಕ್ಕೆ ಒಳ್ಳೇ ಮರಗಳು ಇವೆ

ಈ ಸ್ಥಳದಲ್ಲಿ ಕಾಪಿ ಮತ್ತು ಭತ್ತದ ಬೆಳೆಯು ಚೆನ್ನಾಗಿ ಆಗುವುದಲ್ಲದೆ, ವಾಸಕ್ಕೂ ಒಳ್ಳೇ ಆರೋಗ್ಯಕರವಾಗಿದೆ.

ಕ್ರಯ ಮತ್ತು ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು. 'S'

C/o. ಮೇನೇಜರು

" ಕೊಡಗು '

4—3. ಮಡಿಕೇರಿ.

WANTED·

Candidates for Telegraph and Station Master's Classes. Full particulars and Railway Fare Certificate on 2 annas stamp. Apply to —

IMPERIAL TELEGRAPH COLLEGE,

NAI SARAK

2—2 DELHI.

ಹೊಸ ಸ್ಟಾಕು! ಬೆಲೆ ಅಗ್ಗ!

ಕೊಡಗು ಉಪಾಧ್ಯಾಯರ ಮಿತಿಯುಳ್ಳ ಸಹಕಾರ ಸ್ಟೋರ್.

ವೀರರಾಜಪೇಟೆ.

ಮೇಲಿನ ಸ್ಟೋರಿನಲ್ಲಿ ಎಲ್ಲಾ ತರಾ ಪಠ್ಯ ಪುಸ್ತಕಗಳು, ಕಾಗದ, ಮಸಿ, ಪೆನ್ ಇತ್ಯಾದಿ ಸ್ಟೇಷನರಿ ಸಾಮಾನುಗಳು, ಹಾಕಿ, ಕ್ರಿಕೆಟ್, ಫುಟ್‌ಬಾಲ್ ಮತ್ತು ಟೆನ್ನಿಸ್ ವಗೈರೆ ಆಟದ ಸಾಹಿತ್ಯಗಳು; ಮತ್ತು ಜರ್ಮನಿ ದೀಪಗಳು, ಕೊಡೆಗಳು ಇತ್ಯಾದಿ ಸುಲಭ ಕ್ರಯಕ್ಕೆ ದೊರೆಯುವುವು.

ಬಂದು ನೋಡಿ! ಕೊಂಡು ಕೊಳ್ಳಿ!!

12-2

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಹಾಲುಗುಂದ ಭಗವತಿ ಕ್ಲಬ್.

ಸೆಪ್ಟಂಬರ್ ತಾ. 1 ರಲ್ಲಿ ಹಾಲುಗುಂದ ಪೇಟೆ ತಿಂಗಳವಾರು ನಡೆಯುವ ಕಮಿಟಿ ಮೀಟಿಂಗು ನಡೆಯಿತು. ಇದರ ಕಳೆದ ಜನರಲ್ ಮೀಟಿಂಗಿನಲ್ಲಿ ಕರಾವು ಪಾಸಾದ ಮೇರೆ ಕ್ಲಬ್ಬನ್ನು ಇಡಲು ಹೆಚ್ಚು ಸಹಾಯ ಮಾಡಿದ ಮೆ. ದೇಶಿರಾಂತ ವೆಂಕಟ್ಯ್ಯನವರ ಮತ್ತು ಮೆ ಚೋದುಮಟ್ಟಿರ ಬಿದ್ದಯ್ಯನವರ ಫೋಟೋಗಳು ಬಂದಿರುವಾಗಿ ಕಳುಹಿಸಿ ಕೊಟ್ಟದ್ದನ್ನು ಸಂಘದವರು ಮೇಲ್ಕಂಡ ತಾರೀಖಿನಲ್ಲಿ ಕ್ಲಬ್ಬಿನಲ್ಲಿ ಇಡಲಾಯಿತು. ಮೇಲ್ಕಂಡವರ ಗುಣ ಕಥನಗಳನ್ನು ಸಂಘದ ಪ್ರೆಸಿಡೆಂಟರಾದ ಮೆ. ಕೇಲಪಂಡ ಕಾವೇರಪ್ಪನವರು ವಿವರಿಸಿದ ನಂತರ ನೆರೆದ ಜನರೆಲ್ಲರೂ ಫೋಟೋವನ್ನು ಕಳುಹಿಸಿ ಕೊಟ್ಟದ್ದಕ್ಕಾಗಿಯೂ ಅದನ್ನು ಸಂಘದಲ್ಲಿ ಇಟ್ಟದ್ದಕ್ಕಾಗಿಯೂ ಸದರಿಯವರ ಸಹಾಯಕ್ಕೆ ನಮ್ಮ ಗ್ರಾಮ ದೇವತೆಯು ಆಯುರಾರೋಗ್ಯ ಸಂಪತ್ತು ಕೊಡಲೆಂದೂ ಮತ್ತು ಇನ್ನು ಮುಂದಕ್ಕೂ ನಮ್ಮ ಸಂಘವನ್ನು ಇನ್ನಷ್ಟು ಉದ್ಧಾರ ಮಾಡುವ ಮನಸ್ಸು ಅವರಿಗೆ ಬರಲೆಂದೂ ಬೇಡಿಕೊಂಡರು.

ದ ಜನರು ದೇವರನ್ನು ಪ್ರಾರ್ಥಿಸಿ, ಸಂಘದ ಖರ್ಚಿನಿಂದ ತಂದ ತೀರ್ಥಗಳನ್ನು ಸೇರಿದ ಜನರು ಆನಂದಗಿಂದ ಸ್ವೀಕರಿಸಿ ಮೀಟಿಂಗನ್ನು ಬರಖಾಸ್ತು ಮಾಡಿ ತೆರಳಿದರು.

ಸಕ್ರೆಟರಿ

ಪೊಳ್ಳಿಬೆಟ್ಟ ಸ್ಕೂಲ್.

ವಾಚಕ ಮಹಾಶಯರೇ,

ಪೊಳ್ಳಿಬೆಟ್ಟದಲ್ಲಿ ಒಂದು ಸರ್ಕಾರಿ ಸ್ಕೂಲ್ ಇಲ್ಲದೆ ಬಹಳ ವರ್ಷಗಳಿಂದ ಇಲ್ಲಿನ ನಿವಾಸಿಗಳೆಲ್ಲರೂ ತಮ್ಮ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನಡಿಸಲು ಬಹಳ ಶ್ರಮವನ್ನು ತೆಗೆದುಕೊಳ್ಳುತ್ತಿದ್ದರು. ಅದರೂ ಸಾಧ್ಯವಾಗದೆ ಈಗ ಸುಮಾರು 7 ವರ್ಷಗಳಿಂದ ಮಹಾನುಭಾವರಾದ ಮ. ರಾ. ಶ್ರೀ. ಬಿದ್ದಂಡ ಐಯ್ಯಪ್ಪನವರು ತಾನೇ ತನ್ನ ಸ್ವಂತ ಖರ್ಚಿನಿಂದ ಸುಮಾರು 5 ವರ್ಷಗಳ ವರೆಗೆ ಇಲ್ಲಿ ಉಪಯೋಗಿಸಲ್ಪಡದೆ ಖಾಲಿ ಬಿದ್ದಿದ್ದಂತ ಸಾರ್ಜಂಟ್ ಕ್ವಾರ್ಟರ್ಸ್ ಒಂದನ್ನು ಬಾಡಿಗೆಗೆ ಹೊಂದಿಕೊಂಡು ಶಾಲೆ ನಡಿಸುತ್ತಾ ಇದ್ದು ಅನಂತರ ಈಗ 2 ವರ್ಷಗಳಿಂದ ಇಲ್ಲಿನ ಮಹಾನುಭಾವರುಗಳೆಲ್ಲರೂ ಇದನ್ನು ಸಾಧ್ಯವಾದ ಮಟ್ಟಿಗೆ ಮುತುವರ್ಜಿಯಿಂದ ನಡಿಸುತ್ತಾ ಮುಂದುವರಿಸಿಕೊಂಡು ಬರುತಿದ್ದಲ್ಲಿ ಈಗ ಅಕಸ್ಮಾತ್ತಾಗಿ ಅಕ್ಟೋಬರ್ 1ರಲ್ಲಿ ಸದರಿ ಕಟ್ಟಡವನ್ನು ಮಿಲಿಟರಿಯವರಿಗೆ ಬಿಟ್ಟುಕೊಡಬೇಕೆಂದು, ಡಿ. ಪಿ. ಡಬ್ಲ್ಯೂ. ಇಲಾಖೆಯವರು [illegible] ನೋಟೀಸ್ ಕೊಡಲು ಇಲ್ಲಿನವರಿಗೆಲ್ಲಾ ಆಶಾಭಂಗವನ್ನುಂಟುಮಾಡಿದಂತೆ [illegible] ಮಾಡಬೇಕೆಂಬ ದಾರಿಯು ಕಾಣದೆ ಪೇಚಾಡುತ್ತಾ ಇರುವಾಗ್ಯೆ ಕಮೀಶನರ್ ಸಾಹೇಬರವರು ಇಂಡಿಯನ್ ಆಫೀಸರ್ಸ್ ಕ್ವಾರ್ಟರ್ಸ್ ಒಂದನ್ನು ಉದಾರತ್ವದಿಂದ ನಮಗೆ ಬಿಟ್ಟುಕೊಟ್ಟದ್ದು ಬಹಳ ಸ್ತೋತ್ರಾರ್ಹವಾಗಿದೆ.

ಗ್ರಾಮಸ್ಥ.

ಚೀಫ್ ಕಮಿಷನರವರಿಗೆ ಒಂದು ಬಹಿರಂಗ ಪತ್ರ.

ಅಯ್ಯಾ,

ನಮ್ಮ ಈ ದೇಶದ ಕಮಿಷನರ್ ಆಗಿದ್ದ ಹ್ಯಾನಿಂಗ್‌ಟನ್ ಸಾಹೇಬರವರ ಕಾಲದ "ಪದೆಪದೆ ಉದ್ಯೋಗಕ್ಕೆ ಬರುವ ಕೆಲವು ಮುಖ್ಯ ಕುಟುಂಬದ ಪಟ್ಟಿ" ಒಂದನ್ನು ರಾವು ಬಹದ್ದೂರ್ ಕೇಟೋಳಿರ ಚಂಗಪ್ಪನವರ ಸಹಾಯದಿಂದ ಸರಕಾರವು ತಯಾರ್‌ಮಾಡಿ ಅವರ ಪ್ರಯೋಜನಕ್ಕಾಗಿ ಇಟ್ಟುಕೊಂಡಿದ್ದದ್ದು ತಮ್ಮ ಪರಾಂಬರಿಕೆಗೆ ಬಂದಿರಬಹುದು. ಈ ಪಟ್ಟಿಯಲ್ಲಿ 21 ಕುಳಿಗಳ ಹೆಸರು ಮಾತ್ರ ಇರುವದೆಂತಲೂ, ಇದು ಸಂಪೂರ್ಣವಲ್ಲವೆಂತಲೂ ನಮೂದಿದೆಯೆಂದು ಕೇಳಿಬಲ್ಲೆನು. ಈ ಪಟ್ಟಿಯು ಪದೇಪದೇ ಉದ್ಯೋಗಕ್ಕೆ ಬರುತ್ತಿರುವ ಕುಟುಂಬಗಳಿಗೆ ಉದ್ಯೋಗವನ್ನು ಕೊಡುವದು ಕಮ್ಮಿ ಮಾಡಬೇಕಾಗಿಯೂ, ಬಾಕಿ ಕುಳಗಳಿಗೆ ಹೆಚ್ಚಿನ ಉದ್ಯೋಗ ಕೊಡಲು ಅವಕಾಶ ಕೊಡಬೇಕೆಂತಲೂ ಸರಕಾರದವರ ಇರಾದೆಯೆಂಬುದಾಗಿ ಬಲ್ಲವರಿಂದ ಇತ್ತೀಚೆಗೆ ಕೇಳಿ ತಿಳಿದೆನು.

ಇದು ಸರಕಾರದವರ ನ್ಯಾಯವಾದ ತೀರ್ಪು ಇರಾದೆಯಾಗಿರಬಹುದು. ಆದರೆ ಬಾಕಿ ಇರುವ ಕುಳಗಳೆಲ್ಲಾ ಇದನ್ನು ತಪ್ಪು ಗ್ರಹಿಕೆಯಿಂದ ಸದರಿ ಕುಳಗಳಿಗೆ ಮಾತ್ರ ಸರಕಾರದವರು ಏನೋ ಬಹುಮಾನ ಕೊಡುವ ಉದ್ದಿಶ್ಯದಿಂದ ಈ ಪಟ್ಟಿಯನ್ನು ತಯಾರಿಸಿರುವದಾಗಿಯೂ, ಸದರಿ ಪಟ್ಟಿಯನ್ನು ಸದರಿ ಕುಳಗಳ ಇರಾದೆ ಮೇರೆ ತಯಾರಿಸಿದೆಂದೂ ಜನರೆಲ್ಲಾ ತಪ್ಪು ಅಭಿಪ್ರಾಯ ತಿಳಿದುಕೊಂಡಿರುತ್ತಾರೆ. ಈ ಪಟ್ಟಿಗೆ ಸೇರಿದ ಕುಳಗಳ ಕೆಲವು ಭಾಗದವರನ್ನು ಮಾತ್ರ ಪಟ್ಟಿಯಲ್ಲಿ ಸೇರಿಸಿ ಬಾಕಿಯವರನ್ನು ಬಿಟ್ಟದರಿಂದ ಸದರಿ ಕುಳಗಳ ಇರಾದೆ ಮೇರೆ ಸದರಿ ಪಟ್ಟಿ ತಯಾರ್ ಮಾಡಲಿಲ್ಲವಾಗಿ ವ್ಯಕ್ತವಿಟ್ಟರೂ ಕೂಡ ಜನರಿಗೆ ಈ ಕುಳಗಳಮೇಲೆ ಹೊಟ್ಟೆಕಿಚ್ಚೂ, ಅಪನಂಬಿಕೆಯೂ ಉಂಟಾಗಿರುವದರಿಂದ ಈ ಕುಳಗಳು ಬಾಕಿ ಅನೇಕ ಕುಳಗಳಿಗೆ ನೆಂಟಪಕ್ಷವಾಗಿರುವದರಿಂದ ಈ ಕೊಡವ ಜನಾಂಗದಲ್ಲಿ ಇಗ್ಗಟ್ಟು ಬಂದು ಪೂರಾ ಅಸಮಾಧಾನಕ್ಕೂ, ಅನಾಹುತಕ್ಕೂ ಮುಖ್ಯ ಕಾರಣವಾಗಿದೆಯಲ್ಲದೆ ಕಾರ್ಯಕಾರರು ತಮ್ಮ ಕಾರ್ಯಕ್ಕೋಸ್ಕರ ಇದನ್ನು ರಾಜ ಮನಸ್ಥಾನವೆಂತಲೂ, ಇನ್ನಷ್ಟು ಜನರನ್ನು ರೇಗಿಸಿ ದೇಶದಲ್ಲಿ ಈ ಜನಾಂಗಕ್ಕೆ ಕೇಡು ಉಂಟಾಗುತ್ತದೆ. ಇದನ್ನು ಅರಿತು ಈ ಕುಟುಂಬದ ಮೆಂಬರುಗಳು ಇತರ ವಿವೇಕಿಗಳು ಜಮೀನ್‌ದಾರರ ಸಂಘದ ಮೂಲಕ ಇದನ್ನು ನಾಶಪಡಿಸಬೇಕಾಗಿ ಕೇಳಿಕೊಂಡದಲ್ಲದೆ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರುಗಳು ಸವಾಲ್ ಮಾಡಿದ್ದಕ್ಕೆ ಇದು ಸರಕಾರದ ಸ್ವಂತ ಉಪಯೋಗಕ್ಕಾಗಿರುವ್ಯದೆಂತಲೂ, ಇದು ಜನಾಂಗಕ್ಕೆ ಲಗಾವಾಗುವದಿಲ್ಲವೆಂತಲೂ ಉತ್ತರ ಕೊಟ್ಟದ್ದು ಗಜೇಟಿನಲ್ಲಿ ಪಬ್ಲಿಸಾದರೂ ಕೂಡ, ನನ್ನ ಜನಾಂಗಕ್ಕೆ ಸಮಾಧಾನವಾಗದ್ದರಿಂದ ಇದನ್ನು ಸುಟ್ಟುಬಿಡಬೇಕೆಂದು ನಮ್ಮ ಹಜರತ್ ಕಮಿಷನರವರಿಗೆ ಒಂದು ಬಹಿರಂಗ ಪತ್ರ ಬರೆದುಲ್ಲದೆ ನಾನು ಕೌನ್ಸಿಲಿಗೆ ಮೆಂಬರಾಗಿ ಚುನಾವಣೆಯಾದ ಕೂಡಲೆ, ಸುರುವಿನ ರಾವು ಈ ಪುಸ್ತಕವನ್ನು ನಾಶಪಡಿಸಬೇಕಾಗಿ ಬರೆದದನ್ನು ಸರಕಾರವು ಒಪ್ಪಿಕೊಳ್ಳದೆ (It is not one of public interest) ಇದು ಎಲ್ಲಾ ಜನಾಂಗಕ್ಕೆ ಲಗಾವಾಗುವದಿಲ್ಲವೆಂಬ ನೆಪದಿಂದ ವಾಪಸು ಮಾಡಿದ್ದು ತಮ್ಮ ಚಿತ್ತಕ್ಕೆ ವೇದ್ಯವಿರಬಹುದು. ಅತ್ಯಂತ ರಾಜ ಭಕ್ತರಾದ ಈ ಜನಾಂಗದಲ್ಲಿ ಈ ಚಿಕ್ಕ ಕಾರಣದಿಂದ ದ್ವೇಷ ಉಂಟಾಗಿ ದಿನೇ ದಿನೇ ಪ್ರಬಲಿಸುತ್ತ ಬರುವದರಿಂದಲೂ, ಕೇವಲ ಸಮ್ಮಂಧಿಕರಾದ ಬಂಧು ಬಳಗಗಳಿಗೆ ಅತ್ಯಂತ ತೊಂದರೆ ಉಂಟಾಗುವದರಿಂದಲೂ ಈ ನಮ್ಮ ತೊಂದರೆಯನ್ನು ಇನ್ನು ಯಾವ ವಿಧದಲ್ಲು ತಮ್ಮ ಚಿತ್ತಕ್ಕೆ ತರಲು ಅವಕಾಶವಿಲ್ಲದ್ದರಿಂದಲೂ, ಈ ಬಿನ್ನಪತ್ರದ ಮೂಲಕ ಸದರಿ ಪಟ್ಟಿಯನ್ನು ನಾಶಪಡಿಸಿ ಆ ಸಂಗತಿಯನ್ನು ಬಹಿರಂಗಪಡಿಸಬೇಕಾಗಿ ಅತಿ ವಿನಯದಿಂದ ಬೇಡಿಕೊಳ್ಳುವ.

ತಮ್ಮ ಅತ್ಯಂತ ವಿಧೇಯ ಸೇವಕ,
ಕೋದಂಡ ಉತ್ತಯ್ಯ,
ಯಂ. ಎಲ್. ಸಿ.

ಕೊಡಗು ಜಮೀನ್ದಾರರ ಸಂಘ.

ಅಯ್ಯಾ,

ಈ ಸಂಘವು ಸ್ಥಾಪನೆಯಾದಲ್ಲಿಂದ ಯಾವ ಒಡಕೂ ಇಲ್ಲದೆ ಇದ್ದು, ಈ ವರ್ಷ ಸದರಿ ಸಂಘದ ಶಾಖೆ ಒಂದು ಹೊರಟಿರುವದು ನೋಡಿದರೆ ಅದ್ಭುತವೇ ಸರಿ. ಒಂದಾವರ್ತಿ ಸ್ಥಾಪನೆಯಾಗಿ ಏಕ ದೃಢದಿಂದ ನಡಿಯುವ ಸಂಘವು ಅತೃಪ್ತಿ ಎಂದು ಕೆಲವರಿಗೆ ತೋರಿದ ಮಾತ್ರಕ್ಕೆ ಬೇರೆಯೊಂದು ಶಾಖೆಯನ್ನು ಹೊರಡಿಸಿ ಅದೇ ಹೆಸರಿನಿಂದ ನಡಿಯುವದು ಎಂದೆಂದಿಗೂ ಜನಸಮುದಾಯಕ್ಕೆ ಆಶ್ಚರ್ಯವನ್ನುಂಟುಮಾಡದೆ ಇರದು. ಸಂಘದ ಕೆಲಸವು ಅತೃಪ್ತಿಯೆಂದು ಕಂಡು ಬಂದರೆ ಬೇರೆ ಶಾಖೆ ಹೊರಡಿಸುವದರ ಬದಲು ಸಂಘದ ರೂಲ್ಸ್ ಅನುಸರಿಸಿ ಒಂದು ವಿಶೇಷ ಜನರಲ್ ಮೀಟಿಂಗ್ ಮಾಡಿ ಇದನ್ನು ಸರಿಪಡಿಸಬಹುದಲ್ಲವೇ? ಮ. ಶ್ರೀ. ಬಿದ್ದಂಡ ಸುಬ್ಬಯ್ಯನವರು 'ಲೋಕವಾವನ' ಪತ್ರಿಕೆಯಲ್ಲಿ (Mass meeting) ಗುಂಪು ಕೂಡಿದ ಮೀಟಿಂಗಿನಲ್ಲಿ ಠರಾವುಗಳನ್ನು ಕೊನೆಗಾಣಿಸಿಕೊಳ್ಳುತ್ತಾರೆ ಎಂದು ವಗ್ಗರೆಯಾಗಿ ವರ್ಣಿಸಿರುವದು ಆಶ್ಚರ್ಯವೇ ಸರಿ. ಹಾಗಾದರೆ ಸಂಘದ ಕೆಲಸ ತೃಪ್ತಿ ಇಲ್ಲವೆಂದು ಈಗ ಹೊಸ ಶಾಖೆ ಹೊರಡಿಸಿಕೊಂಡು "ಜಮೀನ್ದಾರರ ಸಂಘ" ಎಂದು ನಲಿದಾಡುವ ಮಹನೀಯ ಮೆಂಬರುಗಳು ಆಗ ಎಲ್ಲಿದ್ದರು? ಇವರಿಗೆ ಬಹುಮತ ಇಲ್ಲವೆಂದು ನಮ್ಮಗಿದ್ದ ಮೇಲೆ ಇವರು ಹೊಸ ಶಾಖೆ ಹೊರಡಿಸಲು ಬಹುದಲ್ಲವೆಲ್ಲಿ? ಹಾಗೆ ಅಲ್ಲಿ ಇಲ್ಲಿ ಹೆಸರಿಗೆ ಮಾತ್ರ ಸೈನ್ ಹೊಂದಿಕೊಂಡಿರುವ ಮೆಂಬರುಗಳ ಬಹುಮತವಿದ್ದರೆ ಕೂಡಲೆ ವಿಶೇಷ ಜನರಲ್ ಮೀಟಿಂಗ್ ಒಂದು ಕರೆಸಿ ಎಲ್ಲವನ್ನು ಸರಿಪಡಿಸಿಕೊಳ್ಳುವದರ ಬದಲು ಹೊಸ ಶಾಖೆಯೊಂದೇನು ಅವಶ್ಯವಿತ್ತು? ಜನಸಮುದಾಯದ ಬಹುಮತವಿಲ್ಲದರಿಂದಲೇ ನೆಪ ಮಾತ್ರಕ್ಕೆ "ಜಮೀನ್ದಾರರ ಸಂಘ" ಎಂದು ಹೊಸ ಶಾಖೆಯೊಂದನ್ನು ಏರ್ಪಡಿಸಿಕೊಂಡು ನಲಿಯುವಂತೆ ತೋರುತ್ತೆ.

ಇನ್ನಾದರೂ ಸರಿಯೇ, ಸಂಘದ ಕೆಲಸವು ಅತೃಪ್ತಿ ಎಂದು ಹೇಳುವ ಮಹನೀಯರು ಕೂಡಲೆ ಸದರಿ ಸಂಘದ ಕಮಿಟಿಯವರಿಗೆ ಒಂದು ವಿಶೇಷ ಜನರಲ್ ಮೀಟಿಂಗ್ ನಡಿಸುವಂತೆ ಬರಹ ಮೂಲಕ ತಿಳಿಸಿ ಸದರಿ ಮೀಟಿಂಗಿಗೆ ಈ ವರ್ಷ ಚಂದಾ ಕೊಟ್ಟಿರುವ ಮೆಂಬರುಗಳಿಗೆ ಮಾತ್ರ ನೋಟೀಸು ಕೊಟ್ಟು ಟಿಕೇಟು ಮೇರೆ ಸದರಿಯವರನ್ನು ಸಮೂಹಕ್ಕೆ ತೆಗೆದುಕೊಂಡು ಮೀಟಿಂಗ್ ನಡಿಸಿ ನಮ್ಮ ಸಂಘದ ಕರ್ತವ್ಯಗಳನ್ನು ನಡಿಸಬಹುದಲ್ಲವೇ? ಹಾಗಾದರೆ (mass meeting) ಆಗಲಿಕ್ಕಿಲ್ಲವಲ್ಲಾ. ಇಂಥಾ ಒಳ್ಳೆ ದಾರಿ ಬಿಟ್ಟು ದೇಶದಲ್ಲಿ ಈ ರೀತಿ ಒಡಕು ತಂದರೆ ಸಾವಧಾನದಿಂದ ಸುಮ್ಮನಿರುವ ಜಮೀನ್ದಾರರು ಯಾವ ಸಂಘವನ್ನು ಕೈಕೊಳ್ಳುವದು.

ವೈಸರಾಯರವರು ಬರುವದಕ್ಕೆ ಸಮಯ ಹತ್ತಿರವಾಗುತ್ತಿದೆ. ಈ ಮಧ್ಯೆ ಇಂಥಾ ಚಿಕ್ಕ ರಾಜ್ಯದಲ್ಲಿ ಒಂದೇ ಹೆಸರಿನ ಎರಡು ಜಮೀನ್ದಾರರ ಸಂಘದವರ "ಭೇಟಿ" ಎಂದ ಮಾತ್ರಕ್ಕೆ ವೈಸರಾಯಿಯವರಿಗೆ ಹ್ಯಾಗಾದೀತು ಎಂಬದನ್ನು ಮುಂದಾಳುಗಳು ಸ್ವಲ್ಪವೂ ಮನಸ್ಸಿಗೆ ತಾರದೆ ಈ ರೀತಿ ವರ್ತಿಸಿದರೆ ನಮ್ಮ ಕೊಡಗಿನ ಕೀರ್ತಿ ಎಷ್ಟು ಉಳಿದೀತು ಎಂಬದನ್ನು ಸ್ವಲ್ಪ ಆಲೋಚಿಸುವಿರಾ. ಆದ್ದರಿಂದ ಕೂಡಲೇ ಒಂದು ವಿಶೇಷ ಜನರಲ್ ಮೀಟಿಂಗನ್ನು ಈಗಿನ ಕಮಿಟಿಯವರು ಏರ್ಪಡಿಸಿ ಎಲ್ಲಾ ಮೆಂಬರುಗಳು ಒಮ್ಮುಗೂಡಿ ಒಂದೇ ದೃಢ ಮನಸ್ಸಿನಿಂದ ಒಂದೇ ಭೇಟಿ ಕೊಡಲು ತೀರ್ಮಾನಿಸಬೇಕಾಗಿ ಕೋರಿಕೆ. ನೋಟೀಸಿನಲ್ಲಿ ವಿಶೇಷ ಜನರಲ್ ಮೀಟಿಂಗಿಗೆ ಸೇರಿಸುವ ಕಾರಣ "**ಈಗಿರುವ ಜಮೀನ್ದಾರರ ಸಂಘ ಒಂದಲ್ಲದೆ ಹೊಸದಾಗಿ ಹೊರಟಿರುವ ಜಮೀನ್ದಾರರ** ಸಂಘ ಇರುವುದು ನ್ಯಾಯವೋ? ಅದನ್ನು ಸಂಘದ ಜನಸಮುದಾಯದ ಬಹುಮತ ಒಪ್ಪುತ್ತಾರೋ ಎಂಬ ವಿಷಯ ಚರ್ಚಿಸತಕ್ಕದೆಂದು" ನನ್ನ ಕೋರಿಕೆ.

ಈ ಸಮೂಹದ ನನ ಮಾತ್ರದ ಹೊಸ ಜಮೀನ್ದಾರರ ಸಂಘಕ್ಕೆ ಪ್ರೋತ್ಸಾಹಿಸುವ ನಮ್ಮ ಕೊಡಗು ಸರ್ಕಾರದ ಅಭಿಪ್ರಾಯವೇನೆಂಬುದು ಗೊತ್ತಾಗುವದು ಕಷ್ಟವಾಗಿದೆ. ಚೆನ್ನಾಗಿ ಆಲೋಚಿಸಿದರೆ ಯಾವದೊಂದು ಒಡಕು ಇಲ್ಲದ ಈ ದೇಶದಲ್ಲಿ ಒಂದೇ ಆಗಿದ್ದ ರಾಜಕೀಯ ಸಂಘದ ಹೆಸರಿನಲ್ಲಿ ಎರಡು ಬಿನ್ನಹ ಪತ್ರಗಳನ್ನು ವೈಸರಾಯರಿಗೆ ಒಪ್ಪಿಸಲು ಅಂಗೀಕರಿಸಿದರ ಅರ್ಥವು ಗೊತ್ತಾಗುವುದಿಲ್ಲ. ಹಲ ಕೆಲವರಿಂದ ಹೊರಟ ಈ ಸಭೆಗೆ ಪ್ರೋತ್ಸಾಹಿಸುವ ಪಕ್ಷದಲ್ಲಿ ಪ್ರತಿಯೊಂದು ಹಳ್ಳಿ ಹಳ್ಳಿಗಳಲ್ಲೂ ಇಂಥಾ ಹೆಸರಿನ ಸಂಘಗಳನ್ನು ಏರ್ಪಡಿಸಿದಲ್ಲಿ ಸರ್ಕಾರದವರು ಅಂಥಾ ಸಂಘಗಳನ್ನು ಅಂಗೀಕರಿಸುವರೋ ಎಂಬದನ್ನು ತಿಳಿಯಬೇಕಾಗಿದೆ. ಹಾಗಿಲ್ಲದ ಪಕ್ಷ ಸರ್ಕಾರದ ಉದ್ದೇಶವು ಏನೆಂಬುದು ಗ್ರಾಮವಾಸಿಗಳಿಗೆ ದಿನೇ ದಿನೇ ಹೆಚ್ಚಾಗಿ ತಿಳಿಯ ಬರುತ್ತದೆ. ಇನ್ನಾದರೂ ಘನ ಸರ್ಕಾರದವರು ಕೋಮುವಾರು ಪಂಗಡಗಳನ್ನು ಪ್ರೋತ್ಸಾಹಿಸದೆ ಕಳೆದ 18 ವರ್ಷಗಳಿಂದಲೂ ಸರ್ಕಾರಕ್ಕೂ ಮತ್ತು ರೈತರಿಗೂ ಹಿತವನ್ನು ಬಯಸಿ ವರ್ತಿಸುವ ಜಾತಿ ಮತಭೇಧಗಳಿಲ್ಲದ ಜಮೀನ್ದಾರರ ಸಂಘವೊಂದನ್ನೇ ದೇಶದ ಸಂಘವೆಂದು ಭಾವಿಸಿ ಉಳಿದ ಸಂಘಗಳನ್ನು ಕೋಮುವಾರು ಸಂಘಗಳಂತೆ ತೆಗೆದುಕೊಳ್ಳಬೇಕಾಗಿ ಕೋರಿಕೆ.

ಯನ್. ದೇವಯ್ಯ.

ಜಮ್ಮ ಭೂಮಿಯ ಹರಾಜು.

ಅಯ್ಯಾ,

ಕಳೆದ ತಾ. 24ರಲ್ಲಿ ಅಮ್ಮತ್ತಿನಾಡು ದೈರಂಬದ ಸೊಸೈಟಿಯ ಸಂಬಂಧ ಒಂದೆರಡು ಭೂಮಿ ಹರಾಜು ಇದೆ ಎಂಬದಾಗಿ ಸದರಿ ಸೊಸೈಟಿಯ ಕಮಿಟಿ ಮೆಂಬರುಗಳ ಪೈಕಿ ಒಬ್ಬೊಬ್ಬರು ನನ್ನಲ್ಲಿ ಪ್ರಸ್ತಾಪಿಸಿದರು. ದೀರ್ಘವಾಗಿ ಸಂಭಾಷಣೆ ನಡೆದಲ್ಲಿ ಹರಾಜಿನ ಜಮ್ಮದ ಭೂಮಿ ಎಚೆಟ್ಟಿರ ಕುಟುಂಬಕ್ಕೂ, ಒಲ್ಲಚಂಡ ಕುಟುಂಬಕ್ಕೂ ಸೇರಿದಾಗಿ ತಿಳಿಯಬಂತು. ಜಮ್ಮದ ಭೂಮಿಯನ್ನು ಖಾಡಿತ ಕೋಆಪರೇಟಿವ್ ಸಾಲಕ್ಕಾಗಲೀ, ಗವರ್ನ್‌ಮೆಂಟ್ ಲೋನಿಗಾಗಲೀ ಹರಾಜು ಮಾಡಲು ಬಿಡಕೂಡದಾಗಿ ವಾದಿಸಿದೆನು. ನನ್ನ ವಾದವು ಸಫಲಕ್ಕೆ ಬರಲೂ ಕಾರಣವೇ ಇಲ್ಲ. ಯಾಕಂದರೆ—ಮುಖ್ಯವಾಗಿ ನಾನು ಸದರಿ ಸೊಸೈಟಿಯ ಕಮಿಟಿ ಮೆಂಬರನಲ್ಲ. ಆದ್ದರಿಂದ ನನ್ನ ಅಭಿಪ್ರಾಯವನ್ನು ದೇಶದವರ ಮುಂದೆ ಈ ಪತ್ರಿಕೆ ಮೂಲಕ ವಿವರಿಸುತ್ತೇನೆ.

ಜಮ್ಮ ಹಿಡುವಳಿದಾರರಿಗೆ ಮುಖ್ಯವಾಗಿ ಕೊಡಗಿನಲ್ಲಿ ಪಾಲು ಇರುವದಿಲ್ಲ. ಜೀವನಾಂಶಕ್ಕೆ ಮಾತ್ರ ಪಿತ್ರಾರ್ಜಿತ ಸೊತ್ತನ್ನು ವಿಮರ್ಶೆ ಮಾಡಿಕೊಳ್ಳುವದು ಎಲ್ಲರೂ ತಿಳಿದ ಸಂಗತಿಯಾಗಿದೆ. ಅಂಥಾ ಜೀವನಾಂಶದ ಜಮ್ಮದ ಸೊತ್ತನ್ನು ಸೊಸೈಟಿಗಾಗಲೀ, ಸರ್ಕಾರಕ್ಕೆ ಆಗಲೀ ಗಿರ್ವಿ ಕೊಡಬೇಕಾದರೆ ಪಟ್ಟೆದಾರ ಮಾತ್ರವಲ್ಲ, ಇಡೀ ಕುಟುಂಬದವರ ಅನುಮತಿ ಬೇಕಾಗಿದೆ. ಇವರೆಲ್ಲಾ ಕೈಕಡದು ಕೊಟ್ಟನಂತರ ಒಬ್ಬಿಬ್ಬ ಬುದ್ಧಿ ಹೀನರು ತಮ್ಮ ಸೊತ್ತನ್ನು ಹಾಳು ಕೆಡಗಿ ಸೊಸೈಟಿಯ ಅಥವ ಗವರ್ನ್‌ಮೆಂಟಿನ ಹಣ ಕೊಡದೆ ಹರಾಜಿಗೆ ಬಿಡುವದುಂಟು, ಇಲ್ಲವೇ ಮೇಲ್ಕಂಡ ಜಮ್ಮವನ್ನು ಹ್ಯಾಗಾದರೂ ಸಾಗಿಗೆ ತಂದು ತಮ್ಮ ಮುಂದಿನ ವೇಳ್ಯಕ್ಕೆ ಅನುಕೂಲಪಡಿಸಿಕೊಳ್ಳುವದೂ ಉಂಟು. ಇಂಥಾ ಕುಯುಕ್ತಿ ಕೆಲವು ಕುಟುಂಬಗಳಲ್ಲಿ ತುಂಬ ಕುಟುಂಬವೇ ಹಾಳಾಗುವ ಕಾಲ ಕ್ರಮೇಣ ಸಂಭವಿಸುತ್ತೆಯೆಂತ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಜಮ್ಮದ ಭೂಮಿಯು ನಮ್ಮ ಪೂರ್ವಿಕರ ಸ್ವತ್ತಾಗಿರುತ್ತೆ. ಪಟ್ಟೆದಾರನಿಗೆ ಸಹ ಅದನ್ನು ಗಿರ್ವಿ ಕೊಡುವ ಅಧಿಕಾರ ಖಾಡಿತ ಇರುವದಿಲ್ಲ. ಸೊಸೈಟಿಯ ಅಥವ ಗವರ್ನ್‌ಮೆಂಟಿನ ಸಾಲದ ಬಾಕಿಗೋಸ್ಕರ ಜಮ್ಮದ ಸೊತ್ತನ್ನು ಜಾಮೀನಾಗಿ ತೆಗೆದುಕೊಳ್ಳುವದಾಗಿದೆ. ಆ ಸಂದರ್ಭದಲ್ಲಿ ಸದರಿ ಸಾಲವು ಇಡೀ ಕುಟುಂಬಕ್ಕೇನೇ ವ್ಯಾಪಿಸುತ್ತೆ. ಒಂದು ಕುಟುಂಬದಲ್ಲಿ ಅಂಥಾ ಸಾಲವನ್ನು ಒಬ್ಬಿಬ್ಬ ಮೆಂಬರರು ಹೊಂದಿಕೊಂಡು ತಕ್ಕ ಕಾಲದಲ್ಲಿ ವಾಪತಿ ಮಾಡದೆ ತಪ್ಪಿದರೆ ಸದರಿ ಮೆಂಬರು ಹೊಂದಿಕೊಂಡ ಮೊಬಲಗನ್ನು ಇಡೀ ಕುಟುಂಬದವರಿಂದ ವಸೂಲ್ ಮಾಡತಕ್ಕದಾಗಿದೆ. ಹಾಗೆ ಇಡೀ ಕುಟುಂಬದವರ ಚರ ಸೊತ್ತಿನಿಂದಾಗಲೀ ಅಥವ ಅದರಲ್ಲಿ ಅನುಕೂಲವೈನರ, ರ ಸೊತ್ತಿನಿಂದಾಗಲೀ ಸಾಲ ಹೊಂದಿಕೊಂಡ ಮೆಂಬರನ ಸಾಲವನ್ನು ಭರ್ತಿ ಮಾಡಿಕೊಂಡು ಅವನ ಜೀವನಾಂಶದ ಸೊತ್ತನ್ನು ಅಂದರೆ ಗಿರ್ವಿ ಹೊಂದಿಕೊಂಡ ಸೊತ್ತನ್ನು ಕುಟುಂಬಸ್ಥರಿಗೆ ಯಾ ಹಣ ಕಟ್ಟುವ ಆ ಕುಟುಂಬದ ಅನುಕೂಲಸ್ಥರಿಗೆ ವಹಿಸಿ ಕೊಡುವುದಕ್ಕೆ ಯಾವುದೊಂದು ಅಭ್ಯಂತರ ಇರುವುದಿಲ್ಲ. ಕೊಡಗು ಭಾಷೆಯಲ್ಲಿ ಒಂದು ಗಾದೆ ಇದೆ 'ಅಪ್ಪಂಡ ಪಟ್ಟ್ ಬೆರೆ ಇಲ್ಲೆ, ಮೋನಂಡ ಪಟ್ಟ್ ಬೆರೆ' ನಮ್ಮ ದಯಾಳುಗಳಾದ ಕಮಿಶನರ್ ಸಾಹೇಬರವರು ಮತ್ತು ಡಿಸ್ಟ್ರಿಕ್ಟ್‌ಮೆಜಿಸ್ಟ್ರೇಟ್ ಸಾಹೇಬರವರು ಈ ಸಂಗತಿಯನ್ನು ಘನ ಚಿತ್ತಕ್ಕೆ ತೆಗೆದುಕೊಂಡು ನಮಗಳ ಪೂರ್ವಿಕರು ಸಂಪಾದಿಸಿದ ಆಸ್ತಿಯನ್ನು ಉಳಿಸಿಕೊಡಬೇಕಾಗಿ ಬೇಡಿಕೊಳ್ಳುತ್ತೇನೆ. ಅಲ್ಲದೆ ನಮ್ಮ ಕೌನ್ಸಿಲ್ ಮೆಂಬರರು ಸಹ ಇದಕ್ಕೆ ತಕ್ಕ ನಿಗ ಇಟ್ಟು ಕೌನ್ಸಿಲಿನಲ್ಲಿ ಚರ್ಚೆಗೆ ತರಬೇಕಾಗಿ ಕೇಳಿಕೊಳ್ಳುತ್ತೇನೆ. ತನ್ಮಧ್ಯೆ ಆರು ತಿಂಗಳಿಂದ ಈಚೆಗೆ ಹರಾಜಾದ ಜಮ್ಮ ಭೂಮಿಯನ್ನು ಆಯಾಯ ಕುಟುಂಬಸ್ಥರಿಗೇನೇ ವಹಿಸಿ ಕೊಟ್ಟು ಅದರಿಂದ ಸಲ್ಲತಕ್ಕ ಮೊಬಲಗನ್ನು ಆಯಾಯ ಕುಟುಂಬಸ್ಥರಿಂದ ವಸೂಲ್ ಮಾಡಬೇಕಾಗಿ ಘನ ಸರ್ಕಾರವನ್ನು ಈ ಮೂಲಕ ಕೇಳಿಕೊಳ್ಳುತ್ತೇನೆ. ಮೇಲಿನ ಸಂಗತಿಯನ್ನು ಸರ್ಕಾರದವರೂ, ಜಮ್ಮಹಿಡುವಳಿದಾರರೂ ಚಿತ್ತಕ್ಕೆ ತೆಗೆದುಕೊಂಡು ಕೂಡಲೆ ತಕ್ಕ ಏರ್ಪಾಡು ಮಾಡದಿದ್ದರೆ ಕೆಲವು ಕಾಲದಲ್ಲೇ ಜಮ್ಮ ಎಂಬ ನಾಮಕ್ಕೆ ದೊಡ್ಡ ಸೊನ್ನೆ. ಆ ಮೇಲೆ ಕೂಪದಿ ಕಟ್ಟುವದೆ! ದೇಶದ ಮಹನೀಯರೇ ಎಚ್ಚರಿಕೆ.

ಚೇರಿಕ ಕುಶಾಲಪ್ಪ

New arrivals of Cigars.

PRICES MODERATE

Popular lines

Morning whiffs 100 s.	Rs	1- 8-0
Lady love 100 s	,,	2-10-0
Special Planters 100 s	,,	3- 8-0
Special Planters 50 s.	,,	2- 0-0
Catamaran shape 50 s	,,	2-12-0

CROCKERY:—

Tea sets for 6 persons in attractive designs @ Rs 12/8/- & 10/8/- a set

Spare cups & saucers @ Annas 8/- & 10/ pair

The Coorg Emporium,

Mercara. General Merchant **Sidapur.**

48-16

ದಾಂಪತ್ಯರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ತಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ...

... ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ ... ಚಿತ್ರಗಳು ... ಕ್ರಯ ಪುಸ್ತಕ ಒಕ್ಕೆ ರೂ. ೧-೨-೦.

ಎಸ್. ವಿ. ಗೋಪಾಲ್ ಬ್ರದರ್ಸ್ ಡಿಪೋ,

57-40 37. ತಿರುಪಳ್ಳಿಬೀದಿ, ಮದರಾಸ್.

ಬೇಕಾಗಿದ್ದಾರೆ.

ಕಾಲೇಜ್ ಡಿಪ್ಪುಟಿ ಸೂಪರಿಂಟೆಂಡೆಂಟರು ,, ಬ್ಯಾಂಕಿಂಗ್ ವಿಭಾಗ	ಸಂಬಳ 80-8 100
ಪ್ರತಿ ಗ್ರಾಮಗಳಲ್ಲಿ ಏಜೆಂಟರು	20-2-40

ಡಿಪ್ಪುಟಿ ಸೂಪರಿಂಟೆಂಡೆಂಟರು ... ಬ್ಯಾಂಕಿಂಗ್ ... ಗ್ರಾಮ ... ಇಂಗ್ಲಿಷ್ ... ಪತ್ರಿಕೆ ... ಅಪ್ಲಿಕೇಷನ್ ಪಡೆದುಕೊಳ್ಳಬೇಕು.

Head Office
Post Box 378
MADRAS

ಕಾಲೇಜ್ ಡಿಪ್ಪುಟಿ ಸೂಪರಿಂಟೆಂಡೆಂಟರು,
ಆಲ್ ಇಂಡಿಯಾ ಕೊ-ಆಪರೇಟಿವ್ ...
ಜನರಲ್ ಡೆವೆಲಪ್‌ಮೆಂಟ್ಸ್ ಲಿಮಿಟೆಡ್,
ಪೊ. ಪಟ್ಟಿ,
ಮಂಗಳೂರು. (ದ. ಕ.)

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕಾಪಿ ... ಕ್ಯಾಟಲಾಗು ...

ಜೋಡು ಹೋಳಿನ ತೋಟದ ಕೈಬಂದೂಕುಗಳು	ರೂ.	12 ರಿಂದ	ರೂ	2750	ರ ವರೆಗೆ.
ಒಂಟಿ ,, ,, ,,	,,	35	,,	950	,,
ಜೋಡು ,, ,, ಕೋವಿಗಳು	,,	50	,,	1350	,,
ಒಂಟಿ ,, ,, ,,	,,	35	,,	275	,,
ಜೋಡು ಹೋಳಿನ ಶಿಪ್ಪು ,,	,,	45	,,	135	,,
ಒಂಟಿ ,, ,,	,,	30	,,	80	,,
ಫ್ರೀಚ್ ಲೋಡಿಂಗ್ ರಿವಾಲ್ವರುಗಳು	,,	35	,,	350	,,
ಪಿಸ್ತೋಲುಗಳು	,,	30	,,	150	,,

ಕಾಡು ಮೃಗಗಳ ಬೇಟೆ, ವಿನೋದ ಬೇಟೆ ಮುಂತಾದ ಎಲ್ಲಾ ತರಹದ ರಾತ್ರಿಯ ವಿನೋದ ಮತ್ತು ಕೆಲಸಗಳಿಗೆ ಉಪಯೋಗಕರವಾದ ಉತ್ತಮ 'ಸರ್ಚ್ ಲೈಟ್' ಎಂಬ ದೀಪಕ್ಕೆ ಬೆಲೆ ರೂ. 30. ದರಪಟ್ಟಿ ಚಾರ್ಜಿಲ್ಲ.

ಕತ್ತಿಗಳು, ಬಚೀಗಳು, ತೋಟೆಗಳು, ಕೇಪ್ಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN LALLJBHOY & SONS.
Largest Importers of Firearms and Ammunition
Cheapest price in India,
24-8 210 Abdul Rehman St., BOMBAY.

... ಮೊಡೆಲ್ ವಾಲ್ ಕ್ಲಾಕ್.

(ಗಾಡಿಗೆ ... ಗಡಿಯಾರ)

... ಗಡಿಯಾರ ... ಕಾಣಬೇಕು, ಮತ್ತೆ ನೋಡಿ ... ಗಡಿಯಾರವು ... ಈ ಗಡಿಯಾರವು ... ಡಿ, ರೀಡಿಂಗ್ ರೂಂ, ಅಂಗಡಿ, ಸ್ಕೂಲ್, ಮತ್ತು ಪ್ರತಿಯೊಂದು ಮನೆಯಲ್ಲಿಯೂ ಇರಲು ಬಹು ಅನುಕೂಲವಾದದ್ದು. ಸರಿಯಾದ ಗಂಟೆ ... ಈ ಗಡಿಯಾರಗಳು ಬೊಂಬಾಯಿ ಇಂಗ್ಲೀಷು ಪೇಟೆಯಲ್ಲಿ ... ಬೇರೆಯವರಲ್ಲಿ ಸಿಕ್ಕುತ್ತಿರಲಿಲ್ಲ. ನಮ್ಮಲ್ಲಿ ಬಹು ಜನರು ಕೇಳುತ್ತಿದ್ದುದರಿಂದ ಈಗ ತಾನೇ ತಂಸಿರುತ್ತೇವೆ. ಕ್ರಯ 1ಕ್ಕೆ 3-8-0



ಟಿ. ಬಿ. ...

ವಿಳಾಸ— ಸಿಟಿ ವಾಚ್ ...,
52-16 108. ... ಮದರಾಸು.

ಎಂ. ಎಸ್. ... ಬ್ರದರ್ಸ್.
... ವಿಗಳು, ಮೈಸೂರು.

... ಸಿಂಗಲ್ ಮತ್ತು ಡಬ್ಬಲ್ ... ಹಾರ್ಮೋನಿಯಂಗಳು.				
... ಫ್ಲೂಟ್ ಸಿಂಗಲ್ ರೀಡ್ ಹಾರ್ಮೋನಿಯಂ 1ಕ್ಕೆ	51	8	0	
... ಫ್ಲೂಟ್ ,, ,, ,,	47	8	0	
,, ,, ,,	41	0	0	
,, ,, ,,	37	8	0	
,, ,, ,,	35	0	0	
,, ,, ,,	32	8	0	
,, ,, ,,	29	8	0	
,, ,, ,,	27	8	0	
,, ,, ,,	25	0	0	
... ಫ್ಲೂಟ್ ಡಬ್ಬಲ್ ರೀಡ್ ಹಾರ್ಮೋನಿಯಂ 1ಕ್ಕೆ	85	0	0	
,, ,, ,,	56	0	0	
,, ,, ,,	50	8	0	

14 ಕ್ಯಾರೆಟ್ ... ಫೌಂಟೆನ್ ಪೆನ್‌ಗಳು.			
...	3	2	0
...	3	8	0
...	3	14	0
...	4	4	0
... ಪೆನ್	5	8	0
... ಪೆನ್	6	8	0
ಲೇಡೀಸ್ ... ಪೆನ್	4	8	0
... 1ಕ್ಕೆ 3 8 0 ಮತ್ತು	3	12	0
... ಪೆನ್ 6 8 0	7	0	0
... 1ಕ್ಕೆ 8 0 0	8	8	0
,, ಸೆಲ್ಫ್ ಫಿಲ್ಲಿಂಗ್ ... ಪೆನ್ 1ಕ್ಕೆ	12	0	0
... ಪೆನ್	8	0	0
... ಪೆನ್ 1ಕ್ಕೆ	17	0	0

... ಕ್ಲಾಕ್ಸ್ 1ಕ್ಕೆ	2	2	0
ಜರ್ಮನ್ ... ಟೈಂಪೀಸು			
... ಟೈಂಪೀಸು	3	12	0
...	5	13	0
...	5	0	0
...	9	0	
... ಟೈಂಪೀಸು	12	5	0
... ಕ್ಲಾಕ್	7	2	0
... ಕ್ಲಾಕ್ 1ಕ್ಕೆ	8	10	
... ಕ್ಲಾಕ್ 1ಕ್ಕೆ	9	12	0
... ಕ್ಲಾಕ್ 1ಕ್ಕೆ	11	0	0

... ಬೇಕಾಗುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ.—ಎಂ. ಎಸ್. ... ಅಂಡ್ ಬ್ರದರ್ಸ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಕೋ ಆಪರೇಟೀವ್ ಬ್ಯಾಂಕ್,
ಲಿಮಿಟೆಡ್ ಕೇಂದ್ರ ಸಹಕಾರ ಬ್ಯಾಂಕಿನ
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	50 000
ವಸೂಲಾದ ಶೇರ್ ಹಣ	20 660
ಜಮೂಬಂದ ಠೇವಣಾತಿ	187 705

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆಯ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0 0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 1ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಲೋಕಲ್ ಫಂಡ್ ಆಡಿಟರವರು ಲೆಕ್ಕ ಪರಿಶೋಧಿಸಿ ವರದಿಮಾಡುತ್ತಾರೆ.

ಪ್ರೆಸಿಡೆಂಟರು	ಟ್ರೆಜರರ್
ಕೋದಂಡ ಅಪ್ಪಯ್ಯ ಸಾಹೇಬರು	ಕೆಂಗಟೀರ ಅಪ್ಪಯ್ಯ
ರಾವ್ ಬಹದ್ದೂರ್	ನವರು

ಸೆಕ್ರೆಟರಿ
ಸಿ ಯಮ್ ವೆಂಕಟ ... ಬಿ ಎ ... .

ಮಡಿಕೇರಿ 1—7—1929

ಸೂಚನೆ.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಿಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕಳುಹಿಸಿರುವ ... ಏಜೆಂಟ್ ಚಂಗಂಡ ಕುಟ್ಟಪ್ಪನವರ ... ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ ಚಂಗಂಡ ಕುಟ್ಟಪ್ಪನವರು ಮರೆನಾಡು—ಮೆ ಕೇಕಿರ ಅಪ್ಪಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ)
ಮೂನಾಡು—ಮಡೆಯಂಡ ದೇವಯ್ಯನವರು
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು
ನಾಪೋಕ್ಲು—ಮೆ ಟಿ ಆರ್ ರಾಮಯ್ಯನವರು,
ಗೋಣಿಕೊಪ್ಪಲು—ಮೆ ಚಮ್ಮಟ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ ಜೆ ಮಾದಯ್ಯನವರು
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡತಕ್ಕದ್ದಲ್ಲ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್ ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರರಿಗೂ ಇರಬೇಕಾದ ಅಮಿತ ಬಾಧ್ಯತೆಯ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರ ಅಧೀನಕ್ಕೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸುವ ... ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮೇನೇಜರ್,

'ಕೊಡಗು' ಮಡಿಕೇರಿ



12 bore Victor Cartridges Rs 10/- Per 100

Mahomedally-Noorbhoy.
ARMS & AMMUNITION MART
321 Abdul Rehman Street.
BOMBAY. 3.

ಕಟುಕನಾಶಕ ಮಾತ್ರೆ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ... ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಪ್ಲೀಹ ಗಡ್ಡೆ ದೊಡ್ಡದರಿಂದ ಬರುವ ಜ್ವರಗಳಿಗೆ ... ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಶಿಂಗನಾಶಕ:—ಇದು ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ... ಮೂತ್ರದ್ವಾರದಲ್ಲಿ ... ಮೂತ್ರ ತೊಟ್ಟಾಗಿ ಉರಿಯುವುದು ಮೂತ್ರ ... ಕೀವು ಬರುವುದು, ... ಆಗಾಗ್ಗೆ ಮೂತ್ರ ಬರುವುದು ಮೂತ್ರ ತಡೆಯದೆ ... ದೇಹದಲ್ಲಿ ಉರಿ ... ಸ್ವಪ್ನಾವಸ್ಥೆ, ಮೂತ್ರನಾಳ ... ಮುಂತಾದ ರೋಗಗಳಿಗೆ ಪರಮ ದಿವ್ಯ ಚೆಲೆ ಬಾಕ್ಸ್ 1 3 6ಕ್ಕೆ ರೂ 1— 3—8—0 6—12—0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗೆ ರೂ 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ... ಶಿರಸ್ಸಿನಿಂದ ಕೀವು ಸೋರುವುದು ... ಕಣ್ಣು ನೋವು ಅಪಸ್ಮಾರ ... ಬಾರದಿರುವದು ನೆನಪಿನ ಶಕ್ತಿ ಕುಂದಿಹೋಗುವುದು ಇತ್ಯಾದಿಗಳನ್ನೆಲ್ಲ ತುಂಬಿತ ಗುಣಮಾಡುತ್ತದೆ. ಉದುರುವ ಕೂದಲನ್ನು ... ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—...

ನಮ್ಮ ಕೆಟಲಾಗು ತರಿಸಿ ನೋಡಿರಿ — ವಿಳಾಸ—ಮನೋಲ್ಲಾಸಿನಿ ಕಂಪನಿ

52—1 — ೧. ಮಂಗಳೂರು

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ !!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ ಗ್ರಾಮೊಫೋನುಗಳು ... ಇವುಗಳಿಗೆ ಬೇಕಾಗುವ ಸಾಮಾನುಗ್ಳೂ, ಗಡಿಯಾರದ ಗ್ಲಾಸುಗಳೂ ಕೈಗೆ ಕಟ್ಟಿಕೊಳ್ಳುವ ಜೇಬಿನ ಮತ್ತು ಕೈಗಡಿಯಾರಗಳು ರೋಲ್ಡ್ ಗೋಲ್ಡಿನ ಬೆಳ್ಳಿಯ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಬಿಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯುಳ್ಳ ಸ್ಲೆಡಿ ... ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ ರೋಲ್ಡ್ ಗೋಲ್ಡ್ ರಿಸ್ಟ್ ವಾಚ್ ' ಎಂದು ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯ ಬಯಸು ... ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು

21—21

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯು

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ
ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ
ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925	296	ಲಕ್ಷ ರೂಪಾಯಿ	1925	93	ಲಕ್ಷ ರೂಪಾಯಿ
1926	391	,, ,,	1926	106	,, ,,
1927	468	,, ,,	1927	122	,,
1928	585	,, ,,	1928	140	,

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.
ಜಿ ವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ ...
1921ರಲ್ಲಿ ,, ,, ,,	1927ರಲ್ಲಿ ,, ,, ,,

ಅವಕಾಶದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ... ಲಾಭ ಉಂಟಾಗುವುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು—

ಓರಿಯಂಟಲ್ ಬಿಲ್ಡಿಂಗ್ಸ್, — ಎಲ್. ಆರ್. ಕೃಷ್ಣಸ್ವಾಮಯ್ಯ
ಸೌತ್ ಪೆರೇಡ್ ಬೆಂಗಳೂರು — 52—42 — ಬ್ರಾಂಚ್ ಸೆಕ್ರೆಟರಿ.

Goldsmiths' Rolling Mills,
ಪಟ್ಟಿ ಮೆಶಿನುಗಳು.



ನಗ ಮಾಡುವವರು ಮತ್ತು ಅಕ್ಕಸಾಲೆಯವರು ಉಪಯೋಗಿಸುವ ಚಿನ್ನ ಮತ್ತು ಬೆಳ್ಳಿಯ ತಗಡುಗಳನ್ನು ಮಾಡುವ ಈ ಮಿಲ್ಲುಗಳು ... ಮತ್ತು ... ಪಟ್ಟಿಗಳಲ್ಲಿ ... ಬೇಕಾದ್ದು ... ಹೆಚ್ಚಿನ ಸಂಗತಿ ... ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳುವುದು

Ch Sobhanachalam & Sons
Chilakalapudi P O
12—9 Masulipatam

THE NEW CAR
The new model A Ford
The most economical car in the market
Accelerates 5 to 25 M P H in 8½ secs
Petrol consumption 20—30 m. Gallon Performance 5 to 60 miles hour in top 40 M P H in second gear
A Wonderful Hill climber
Easy instalment terms if you prefer
For Demonstration & other particulars
Please apply to —
S. Sunder Rau,
Sole Ford Dealer for Coorg
24—16 MERCARA

Printed & published by P. I. Belliappa, at "Kodagu" Press, Mercara for "Kodagu" Ltd.

MERCARA.

ಕೊಡಗು.

ಸತ್ಯೇನ ಬೋಧದಯಯಾ ವಿದ್ಯಾ ನೀತಿ ಪ್ರಸುತ್ಯತಾ। ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ॥

ವಾರ್ಷಿಕ ಚಂದಾ ರೂ. ೩-೮-೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೮ | ಮಡಿಕೇರಿ, ಸನ್ ೧೯೩೦ನೇ ಇಸವಿ ಅಕ್ಟೋಬರ್ ತಾರೀಕು ೨೪ನೇ ಶುಕ್ರವಾರ. | ಸಂಚಿಕೆ ೨೦

Telephone – 3145

By Appointment to H. E. the Governor of Madras

Guarantee of Satisfaction throughout in every order large or small



Brooch.

Excellent Quality Chaste Designs Moderate Prices

Ice Tumbler.

I am glad to note that the Jewels have a good finish.
(Sd.) Mrs. A. B. ...

Jewels ... excellent ...
(Sd.) Mrs. K. S. ...

52–6

Illustrated Catalogue Free on Application

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಚೀಲಿಯನ್ ..." ... (Experiment station) ...
(1) ಚಿಲಿಯನ್ ನೈ...

24–23

ಹೊಲಿಯುವ ಮಿಷೇನ್‌ಗಳು.



ಈ ಮಿಷೇನ್‌ಗಳು ಹೊಸದಾಗಿ ತಯಾರಾದವು ... ಜೊತೆಯಲ್ಲಿ ಹಿಂದು ಸೂಜಿ ಒಂದು ... ಸ್ವಲ್ಪವಸ್ಟೇ ...
ಕ್ರಯ ರೂ. ...-8-0
ವಿಳಾಸ — ಸಿಟಿ ಮೋಟರ್,
168 ಜೈನ ಬಜಾರ್ ಮದರಾಸ

ಶ್ರೀ ಶ್ರೀಕಂಠೇಶ್ವರ ಚಿಕ್ಕಮಗಳೂರು ಆಯಿಲ್ ಮಿಲ್, ...

... ರೂಪವಾದ ... ಮತ್ತು ... ಸಹ ದೊರೆಯುತ್ತೆ.

ಹೆಚ್ಚಿನ ವಿಷಯ ಗಳನ್ನು ತಿಳಿಯ ಬೇಕಾದ್ದರೆ ... ಪತ್ರದ ಮೂಲಕ ತಿಳಿಯಬಹುದು.

... ಪತ್ರಿಗಳು. ...

ಬೇಕಾಗಿದೆ. ...

ಕೊಡಗು.

ಸಂ ೧೯೨೯ನೇ ಇಸವಿ

ಅಕ್ಟೋಬರ್ ೨೫ನೇ ಶುಕ್ರವಾರ.

ವಿದ್ಯಾಭಿವೃದ್ಧಿಯ ವರದಿ.

ಹಿಂದೂದೇಶದ ರಾಜಕೀಯ ಸುಧಾರಣೆಯ ವಿಷಯ ಅಭಿಪ್ರಾಯ ಕೇಳಲು ನೇಮಿತವಾದ ಸೈಮನ್ ಕಮಿಶನಿನವರು ಹಿಂದೂಸ್ಥಾನದಲ್ಲಿ ವಿದ್ಯಾಭಿವೃದ್ಧಿ ಎಷ್ಟರ ಮಟ್ಟಿಗೆ ಆಗಿದೆಯೆಂಬುದನ್ನು ತನಿಖೆ ಮಾಡಲು ಒಂದು ಉಪ ಕಮಿಟಿಯನ್ನು ನೇಮಿಸಿದರು. ಆ ಕಮಿಟಿಗೆ ಸರ್. ಪಿ. ಜೆ. ಹಾರ್ಟಾಗ್ ಎಂಬವರು ಅಧ್ಯಕ್ಷರಾಗಿದ್ದದ್ದರಿಂದ ಅದಕ್ಕೆ ಹಾರ್ಟಾಗ್ ಕಮಿಟಿಯೆಂಬ ಹೆಸರು ರೂಢಿಯಾಗಿದೆ. ಈ ಹಾರ್ಟಾಗ್ ಕಮಿಟಿಯ ವರದಿಯು ಕಳೆದ ವಾರ ಪ್ರಕಟವಾಗಿದೆ. ವಿದ್ಯಾಭಿವೃದ್ಧಿಯ ಬೆಳವಣಿಗೆಯನ್ನು ನೋಡಿದರೆ ಜನರು ಹೆಚ್ಚಿನ ಸುಧಾರಣೆಗೆ ಅರ್ಹರಾಗಿದ್ದಾರೋ? ಈಗ ದೊರೆಯುವ ವಿದ್ಯೆಯಿಂದ ಒಳ್ಳೇ ಪ್ರಜಾಪ್ರತಿನಿಧಿಗಳೂ, ಒಳ್ಳೇ ಅಧಿಕಾರಿಗಳೂ ತಯಾರಾಗುವರೋ ಎಂಬುದನ್ನು ವಿಚಾರಿಸುವದು ಈ ಕಮಿಟಿಯ ಕರ್ತವ್ಯವಾಗಿತ್ತು. ಈ ಬಾಬುಗಳಲ್ಲಿ ಈ ಕಮಿಟಿಯ ವರದಿಯು ಆಶ್ಚರ್ಯವಾಗುವಂತಿಲ್ಲ. "ಸಾಧಾರಣ ಜನತೆಯಲ್ಲಿ ವಿದ್ಯಾಭ್ಯಾಸಕ್ಕೆ ಇದ್ದ ಅಸಡ್ಡೆಯು ಈಗ ಇಲ್ಲವಾಗಿದೆ. ಹಿಂದೂಸ್ಥಾನದ ಹೆಂಗಸರಿಗೆ ಬಾಲ್ಯದಿಂದಲೇ ವಿದ್ಯಾಭ್ಯಾಸದಲ್ಲಿ, ಸಾಮಾಜಿಕ ಸುಧಾರಣೆಯಲ್ಲಿಯೂ ಅನುಕೂಲತೆಗಳು ದೊರಕಬೇಕೆಂತ ಇವರ ಕೋರಿಕೆಯು ತುಂಬಾ ಬಲವಾಗುತ್ತಲಿದೆ. ವಿದ್ಯಾಭ್ಯಾಸ ಹೊಂದುತ್ತಿರುವ ಮುಸಲ್ಮಾನ್ ಯುವಕರ ಸಂಖ್ಯೆಯು ಹೆಚ್ಚಾಗುತ್ತಲಿದೆ. ಹಿಂದುಳಿದ ಪಂಗಡಗಳಿಗೆ ವಿದ್ಯಾಭ್ಯಾಸದ ಅನುಕೂಲ ಕೊಡಲು ಪ್ರಯತ್ನಗಳು ನಡೆದಿವೆ. ಈ ಪ್ರಯತ್ನದ ಪ್ರಯೋಜನವನ್ನು ಹಿಂದುಳಿದ ಜನರು ಹೊಂದಲು ಮುಂದೆ ಬರುತ್ತಿದ್ದಾರೆ. ಮುಖಂಡರು ವಿದ್ಯಾಭಿವೃದ್ಧಿಯನ್ನು ಹೇಗೆ ಹೆಚ್ಚಿಸಬೇಕೆಂಬುದನ್ನು ಯೋಚಿಸಿ ಸಹಾಯ ಕೊಡುತ್ತಲಿದ್ದಾರೆ. ವಿದ್ಯಾಭ್ಯಾಸಕ್ಕೆ ಹೆಚ್ಚಿಗೆ ಹಣ ಬೇಕೆಂತ ಮಂತ್ರಿಗಳು ಕೇಳುತ್ತಿದ್ದಾರೆ. ಲೆಜಿಸ್ಲೇಟಿವ್ ಕೌನ್ಸಿಲುಗಳು ಅಂಥಾ ಹೆಚ್ಚಿನ ಖರ್ಚನ್ನು ಸಂತೋಷದಿಂದ ಒಂಬಡುವರು ಮಾಡುತ್ತಲಿವೆ" ಎಂತ ವರದಿಯಲ್ಲಿ ಬರೆದಿದೆ. ಆದ್ದರಿಂದ ಈ ವರದಿಯು ದೇಶಕ್ಕೆ ಹೆಚ್ಚಿನ ರಾಜಕೀಯ ಸುಧಾರಣೆಗೆ ಸಹಾಯವೇ ಆಗಿದೆ.

ಈಗ ರೂಢಿಯಲ್ಲಿರುವ ವಿದ್ಯಾ ಪ್ರಚಾರದ ಆಕ್ರಮಗಳನ್ನು ಇರುವ ಕೊರತೆಗಳನ್ನು ತೋರಿಸಿ ಅವುಗಳನ್ನು ನಿವಾರಿಸಲು ಸಲಹೆಗಳನ್ನೂ ಸಹ ಕೊಟ್ಟಿದ್ದಾರೆ. ವಿದ್ಯಾ ಇಲಾಖೆಯಲ್ಲಿ ಆಗುವ ಖರ್ಚು ತುಂಬಾ ಅನಾವಶ್ಯಕ ಅಂದರೆ ಪ್ರಯೋಜನವಿಲ್ಲದೆ ಆಗುತ್ತಲಿದೆಯೆಂತ ಹೇಳಿ ಅದನ್ನು ಹೀಗೆ ವಿವರಿಸಿದ್ದಾರೆ. ಪ್ರೈಮರಿ ಶಾಲೆಗಳಲ್ಲಿ ಓದುವ ಹುಡುಗರು ಪೂರ್ತಿ ಅಕ್ಷರಾಭ್ಯಾಸವಾಗುವ ವರೆಗೆ ನಿಲ್ಲದೆ ಇರುವುದರಿಂದ ಅಂಥಾವರ ವಿದ್ಯಾಭ್ಯಾಸಕ್ಕೆ ಮಾಡುವ ಖರ್ಚು ನಿಷ್ಪ್ರಯೋಜನವೆಂತ ಅಭಿಪ್ರಾಯ ಪಟ್ಟಿದ್ದಾರೆ. ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳಲ್ಲಿ ಕಲಿಸುವ ವಿದ್ಯೆಯು ಜನರಿಗೆ ಪ್ರಯೋಜನಕರವಾಗಿದ್ದರೆ ಅಂಥಾ ವಿದ್ಯೆಯನ್ನು ಪಡೆದವರೆಲ್ಲರೂ ಯುನಿವರ್ಸಿಟಿ ವಿದ್ಯೆ ಕಲಿತು ಡಿಗ್ರಿ ಪರೀಕ್ಷೆಗಳನ್ನು ಪಾಸಾಗುವದೇ ಧ್ಯೇಯವಾಗಿಟ್ಟುಕೊಳ್ಳುವದರಿಂದಲೂ, ಹಾಗೆ ಉಚ್ಚ ವಿದ್ಯೆಕ್ಕೆ ಅಪೇಕ್ಷಿಸುವ ವಿದ್ಯಾರ್ಥಿಗಳು ಅದಕ್ಕೆ ಅರ್ಹರಾಗಿರದೆ ಅವರಿಗೆ ಮಾಡುವ ಖರ್ಚೆಲ್ಲವೂ ಹಾಳಾಗುತ್ತದೆಂತಲೂ, ಯೂನಿವರ್ಸಿಟಿ ವಿದ್ಯೆಯಿಂದ ಧಾರಾಳ ಬುದ್ಧಿಯ ಸಹನೆ ಶಕ್ತಿ ಇರುವ, ಸ್ವಶಕ್ತಿಯಲ್ಲಿ ನಂಬಿಕೆ ಹುಟ್ಟುವ ಜನರನ್ನು ತಯಾರಿಸುವ ಬದಲು ಪರೀಕ್ಷೆ ಪಾಸ್ ಆಗುವದೇ ಮುಖ್ಯ ಧ್ಯೇಯವಾಗಿ ಹೋಗಿದೆ ಎಂತ ಲೋಪಗಳನ್ನು ಸೂಚಿಸಿದ್ದಾರೆ.

ನಮ್ಮ ದೇಶದಲ್ಲಿ ಪ್ರೈಮರಿ ವಿದ್ಯೆಗೆ ಆಗುತ್ತಿರುವ ಖರ್ಚು ಅನಾವಶ್ಯಕವಾಗುತ್ತಿದೆಯೆಂತ ಹೇಳಲಿಕ್ಕಾಗುವದಿಲ್ಲ. ಇಲ್ಲಿ ಪ್ರೈಮರಿ ವಿದ್ಯೆಗೆ ಆಗುತ್ತಿರುವ ಖರ್ಚು ಸಾಲದೆಂತಲೇ ಧಾರಾಳವಾಗಿ ಹೇಳಬಹುದು. ಡಿಸ್ಟ್ರಿಕ್ಟ್ ಬೋರ್ಡಿಗೆ ಹೊಸ ಶಾಲೆಗಳನ್ನು ಮಾಡಿಕೊಡಬೇಕೆಂತ ಬರುವ ತುಂಬಾ ಅರ್ಜಿಗಳಿಂದಲೇ ನಮ್ಮ ದೇಶದ ಹೆಚ್ಚಿನ ಭಾಗದಲ್ಲಿ ಪ್ರೈಮರಿ ವಿದ್ಯೆಗೆ ಜನರು ತುಂಬಾ ಕುತೂಹಲವುಳ್ಳವರಾಗಿದ್ದಾರೆಂತ ಸ್ಪಷ್ಟವಾಗುತ್ತದೆ. ಅಷ್ಟು ಉತ್ಸಾಹ ತೋರಿಸುವ ಜನರು ತಮ್ಮ ಮಕ್ಕಳನ್ನು ಪ್ರೈಮರಿ ವಿದ್ಯೆ ಪೂರ್ತಿಯಾಗದೆ ಶಾಲೆಯಿಂದ ಬಿಡಿಸುವರೆಂತ ಹೇಳಲಿಕ್ಕಾಗುವದಿಲ್ಲ. ಒಂದು ಶಾಲೆಯಲ್ಲಿ ಒಬ್ಬನೇ ಉಪಾಧ್ಯಾಯನಿದ್ದರೆ ಅಂಥಾ ಶಾಲೆಯಿಂದ ಜನರಿಗೆ ತಕ್ಕಷ್ಟು ಪ್ರಯೋಜನವಿಲ್ಲವೆಂತ ಕಮಿಶನಿನ ಅಭಿಪ್ರಾಯದಂತೆಯೇ ಇವರ ಅಭಿಪ್ರಾಯವೂ ಆಗಿದೆ. ಇಂಥಾ ಒಬ್ಬ ಉಪಾಧ್ಯಾಯನ ಶಾಲೆಗಳು ನಮ್ಮ ದೇಶದಲ್ಲಿ ಅನೇಕ ಇವೆ. ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸಲು ವಿದ್ಯಾರ್ಥಿಗಳಿಲ್ಲದೆ ಅಲ್ಲ, ತರಬೇತು ಹೊಂದಿದ ಉಪಾಧ್ಯಾಯರುಗಳು ಇಲ್ಲದಿರುವದೂ, ಹಣ ದೊರಕದೆ ಇರುವದೂ ಕಾರಣವೆಂದು ಹೇಳುತ್ತಾರೆ. ವಿದ್ಯೆಕ್ಕಾಗಿ ಆಗುವ ಖರ್ಚು ಸಂಪೂರ್ಣ ಪ್ರಯೋಜನಕರವಾಗಬೇಕಾದರೆ ಅವಶ್ಯವಿರುವ ಹೆಚ್ಚಿನ ಖರ್ಚನ್ನು ಸರಕಾರವು ಮಾಡಲೇಬೇಕು.

ನಮ್ಮ ದೇಶದಲ್ಲಿ ಹೆಚ್ಚಿನ ಭಾಗದಲ್ಲಿ ಪ್ರೈಮರಿ ವಿದ್ಯೆಗೆ ತುಂಬಾ ಕುತೂಹಲವಿದ್ದರೂ ಸಂಬಂಧಪಟ್ಟ ಶಾಲೋಕಿಗಳಲ್ಲಿ ಇರಬೇಕಾದಷ್ಟು ಉತ್ಸಾಹವು ಕಾಣುವದಿಲ್ಲವೆಂಬುದು ಶೋಚನೀಯವಾಗಿದೆ. ಉತ್ಸಾಹವಿರುವ ಪ್ರಾಂತ್ಯದಲ್ಲೂ ಎಲ್ಲಾ ಮತದವರೂ ಒಂದೇ ತರದ ಉತ್ಸಾಹ ತೋರಿಸುವದಿಲ್ಲ. ಆದ್ದರಿಂದ ಪ್ರತಿಯೊಬ್ಬನೂ ಓದು ಬರಹ ಕಲಿತವನಾಗಲು ಸಾಧ್ಯವಾಗುವಂತೆ ಪ್ರೈಮರಿ ವಿದ್ಯೆಯು ಕಡ್ಡಾಯವಾಗಲೇ ಬೇಕೆಂಬ ವರದಿಯ ಶಿಫಾರಸ್ಸು ನ್ಯಾಯವಾಗಿದೆ.

ವಿದ್ಯಾಭ್ಯಾಸ ಕೊಡುವ ಜವಾಬ್ದಾರಿಯು ಬರೇ ಪ್ರಾಂತೀಕ ಸರಕಾರದ ಮೇಲೆ ಹಾಕಿದ್ದು ಯುಕ್ತವಲ್ಲ. ಇಂಡಿಯಾ ಸರಕಾರವು ಈ ಜವಾಬ್ದಾರಿಯನ್ನು ವಹಿಸಿಕೊಂಡು ಒಂದೇ ತರದ ಅಭಿವೃದ್ಧಿಯು ಎಲ್ಲಾ ಭಾಗಗಳಲ್ಲಿ ಆಗುವ ಹಾಗೆ ಮತ್ತು ವಿದ್ಯಾಭ್ಯಾಸಕ್ಕೆ ಹಣದ ಅನುಕೂಲವಿಲ್ಲದ ಪ್ರಾಂತ್ಯಗಳಿಗೆ ಈ ಸಹಾಯ ಸಹ ಕೊಡಬೇಕೆಂತ ವರದಿಯ ಶಿಫಾರಸ್ಸಾಗಿದೆ. ಒಟ್ಟು ಜನಾಂಗವು ಸಂಪೂರ್ಣವಾಗಿ ಅಕ್ಷರ ತಿಳಿದದ್ದಾಗ ಬೇಕಾದರೆ ಮಧ್ಯವರ್ತಿ ಸರಕಾರದ ಪೂರ್ಣ ಸಹಾಯವೂ ಖಂಡಿತವಾಗಿಯೂ ಬೇಕು.

ಪ್ರೈಮರಿ ಶಾಲೆಗಳಲ್ಲೇ ಹೆಚ್ಚಿನ ದರ್ಜೆಗಳನ್ನು ತೆರೆದು ಗ್ರಾಮವಾಸಿಗಳಿಗೆ ಪ್ರಯೋಜನಕರವಾಗುವ ವಿಷಯಗಳನ್ನು ಕಲಿಸಬೇಕೆಂತಲೂ, ಮಿಡಲ್ ಸ್ಕೂಲುಗಳಲ್ಲಿ ಕೊಡುವ ವಿದ್ಯೆಯು ಅದೇ ತರದ್ದಾಗಿರಬೇಕೆಂತಲೂ ಅಭಿಪ್ರಾಯ ಕೊಟ್ಟಿದ್ದಾರೆ. ಈಗ ಸೆಕೆಂಡರಿ ಶಾಲೆಗಳಲ್ಲಿ ಕೊಡುವ ವಿದ್ಯೆಯು ಯುವಕರನ್ನು ತಮ್ಮ ಗ್ರಾಮದಲ್ಲೇ, ತಮ್ಮ ಮನೆಯಲ್ಲೇ ಪರಕೀಯರನ್ನಾಗಿ ಮಾಡಿ ಬಿಡುತ್ತಿದೆ. ಈ ಲೋಪವನ್ನು ಹೋಗಲಾಡಿಸಲು ವರದಿಯಲ್ಲಿ ಹೇಳಿರುವ ಮೇರೆ ಮಿಡಲ್ ಸ್ಕೂಲ್ ವರೆಗೆ ಕಲಿಸುವ ವಿದ್ಯೆಯು ಯುವಕರನ್ನು ತಮ್ಮ ಗ್ರಾಮದ ಕಡೆಗೂ, ಮನೆ ಕಡೆಗೂ ತಿರುಗಿ ನೋಡುವಂತೆ ಮಾಡಬೇಕಾದದ್ದು ಅವಶ್ಯ.

ಯೂನಿವರ್ಸಿಟಿಗಳು ದೇಶದ ಅಭಿವೃದ್ಧಿಯಲ್ಲಿ ಮುಖ್ಯ ಕೆಲಸ ಮಾಡತಕ್ಕವುಗಳಾಗಿವೆ. ದೇಶದ ಸಾರ್ವಜನಿಕ ಕೆಲಸಗಳಲ್ಲಿ ಮುಖಂಡರನ್ನು ಯೂನಿವರ್ಸಿಟಿಯು ತರಬೇತು ಮಾಡಬೇಕಾದದ್ದಾಗಿದೆ. ಮುಂದಾಳುತನ ಮಾಡುವ ಮತ್ತು ಆಡಳಿತ ನಡಿಸುವ ಶಕ್ತಿಯು ಅನುಭವದಿಂದ ಬರಬೇಕಾದದ್ದಾದರೂ ಇಂಥಾ ಅನುಭವಕ್ಕೆ ಯೂನಿವರ್ಸಿಟಿಯಲ್ಲಿ ಅವಕಾಶ ಬೇಕಾಗಿದೆ. ಬರೇ ಕ್ಲಾಸ್ ರೂಮಿನಲ್ಲಿ ಮಾತ್ರ ಅಭ್ಯಾಸವಾದರೆ ಸಾಲದು, ಒಗ್ಗಟ್ಟಿನಿಂದ ಕೆಲಸ ಮಾಡುವ ಕ್ರಮವೂ ಇತರರ ಅಭಿಪ್ರಾಯವನ್ನು ತಿಳಿದುಕೊಳ್ಳುವ ಶಕ್ತಿಯೂ, ಸಮುದಾಯದ ಪ್ರಯೋಜನಕ್ಕಾಗಿ ಸ್ವಂತ ಅಭಿಪ್ರಾಯಗಳನ್ನು ಬಿಟ್ಟುಕೊಡುವದೂ, ಇತರರನ್ನು ಅಧಿಕಾರ ಬಲದಿಂದ ಒಪ್ಪಿಸಿಕೊಳ್ಳುವ ಬದಲು ತನ್ನ ನಡೆನುಡಿಯಿಂದ ಒಪ್ಪಿಸಿಕೊಳ್ಳುವ ಗುಣವೂ ಸಹ ಕ್ಲಾಸಿನಿಂದ ಹೊರಗೆ ಸೊಸೈಟಿಗಳಲ್ಲಿ, ಕ್ಲಬ್ಬುಗಳಲ್ಲಿ, ಆಟದ ಮೈದಾನದಲ್ಲೂ, ಒಳ್ಳೇ ಉಪಾಧ್ಯಾಯರುಗಳ ಸಹವಾಸದಿಂದಲೂ ಕಲಿಯತಕ್ಕವಾಗಿವೆ ಎಂತ ಮುಂತಾದ ದೇಶ ಹಿತೈಷಿಗಳು ಒಪ್ಪಬೇಕಾದ ಅನೇಕ ಅಭಿಪ್ರಾಯಗಳು ವರದಿಯಲ್ಲಿ ಇವೆ. ಈ ತರದ ಮಾರ್ಪಾಡುಗಳು ವಿದ್ಯಾಭ್ಯಾಸದ ಕ್ರಮದಲ್ಲಿ ಆಗುತ್ತಲಿದೆಯೆಂತಲೂ ವರದಿಯಲ್ಲಿ ಹೇಳಿವೆ. ಯೂನಿವರ್ಸಿಟಿ ವಿದ್ಯೆ ಕೊಡಲು ಸಾರ್ವಜನಿಕ ಹಣವನ್ನು ಖರ್ಚುಮಾಡಿದ್ದಕ್ಕೆ ಇಂಥಾ ವಿದ್ಯೆ ಪಡೆದ ಜನರು ಹೆಚ್ಚುಹೆಚ್ಚಾಗಿ ದೇಶದ ಸಾರ್ವಜನಿಕ ಹಿತದ ಕಡೆಗೆ ದೃಷ್ಟಿ ಇಡಬೇಕಾದದ್ದು ಬಹಳ ಆವಶ್ಯವಾಗಿದೆ. ವರದಿಯಲ್ಲಿ ಹೇಳಿರುವಂತೆ ಯೂನಿವರ್ಸಿಟಿ ಪರೀಕ್ಷೆಯಾಗಿ ಬರುವ ಯುವಕರು ಸಮುದಾಯಕ್ಕೆ ಸಹಾಯ ಮಾಡುವ ಜವಾಬ್ದಾರಿ ತಮ್ಮ ಮೇಲೆ ಇದೆಯೆಂತ ತಿಳಿಯುವದೇ ಅಪರೂಪ. ಉಚ್ಚ ವಿದ್ಯೆ ಪಡೆದವರೆಲ್ಲರೂ ಸರಕಾರಿ ಉದ್ಯೋಗವಾಗಲಿ, ಬೇರೆ ಕಸಬಾಗಲೀ ಕೈಕೊಳ್ಳದೆ ತಮ್ಮ ಸರ್ವಸ್ವವನ್ನೂ ದೇಶಕ್ಕಾಗಿ ಕೊಡಬೇಕೆಂತ ನಾವು ಹೇಳುವದೂ ಇಲ್ಲ, ಹೇಳಿದರೆ ನಡೆಸುವವರೂ ಇಲ್ಲ. ಆದರೆ ತಾವು ಯಾವ ಸಂಪಾದನೆಯ ಕಸಬನ್ನು ಕೈಕೊಂಡರೂ ದೇಶದ ಹಿತಕ್ಕೆ ಮನಸ್ಸುಕೊಟ್ಟು ಕೆಲಸ ಮಾಡಬೇಕೆಂತಲೂ, ತಮ್ಮ ವಿರಾಮ ಕಾಲವನ್ನು ದೇಶಕ್ಕಾಗಿಯೇ ಕೊಡಬೇಕೆಂತಲೂ ಹೇಳುತ್ತೇವೆ.

ಯೂನಿವರ್ಸಿಟಿ ಡಿಗ್ರಿಗಳಿಗೆ ವಿದ್ಯಾರ್ಥಿಗಳು ಹೆಚ್ಚಾಗಿ ಆತುರಪಡುವದು ಸರಕಾರಿ ಉದ್ಯೋಗಕ್ಕಾಗಿಯೇ ಎಂಬುದನ್ನು ವರದಿಯು ಒಪ್ಪಿಕೊಂಡು ಹೇಳುವದೇನೆಂದರೆ—ಸರಕಾರದವರೂ ಮತ್ತು ಕೆಲಸ ಕೊಡುವ ಇತರರೂ ಸಹ ಯೂನಿವರ್ಸಿಟಿ ಡಿಗ್ರಿ ಇದ್ದರೇನೇ ಕೆಲಸ ಕೊಡುವದೆಂತ ಮಾಡಿರುವದೇ ಇದಕ್ಕೆ ಕಾರಣವಾಗಿದೆ. ಅವಶ್ಯವಿಲ್ಲದೆ ಇರುವ ಉದ್ಯೋಗಗಳಿಗೆ ಸಹ ಡಿಗ್ರಿ ಇರಬೇಕೆಂತ ಸರಕಾರವು ಹೇಳುವದು ಯುಕ್ತವಲ್ಲ. ನಮ್ಮ ದೇಶದ ಸರಕಾರವು ಸಹ ಯೂನಿವರ್ಸಿಟಿ ಡಿಗ್ರಿಯು ಅವಶ್ಯವಿಲ್ಲದೆ ಇರುವ ಉದ್ಯೋಗಗಳಿಗೆ ಬೇಕೆಂತ ಕೇಳುವ ಉದಾಹರಣೆಯು ವಾಚಕರಿಗೆ ತಿಳಿದಿದೆ. ವರದಿಯು ಸೂಚಿಸುವದೇನೆಂದರೆ—ಸರಕಾರಿ ಚಿಕ್ಕ ಉದ್ಯೋಗಗಳಿಗೆಲ್ಲಾ ಸರಕಾರವೇ ಬೇರೆ ಪರೀಕ್ಷೆ ನಡಿಸಿ ತೆಗೆದುಕೊಳ್ಳುವ ಪದ್ಧತಿಯನ್ನು ಇಂಗ್ಲೆಂಡಿನಂತೆಯೇ ಇಲ್ಲಿಯೂ ರೂಢಿಗೆ ತಂದರೆ ಯೂನಿವರ್ಸಿಟಿ ಪರೀಕ್ಷೆಗಳಿಗೆ ಯುವಕರು ಮೇಲೆ ಬಿದ್ದು ಹೋಗಲಾರರು. ಯೂನಿವರ್ಸಿಟಿ ವಿದ್ಯೆಗೆ ಹೋಗುವ ನೂರಾರು ಯುವಕರಿಗೆ ಆ ವಿದ್ಯೆಗಾಗಿ ಖರ್ಚುಮಾಡುವ ಹಣವೂ, ಕಾಲವೂ ವ್ಯರ್ಥವಾಗಿ ಪರಿಣಮಿಸುತ್ತದೆ. ಉಚ್ಚ ವಿದ್ಯೆಗಾಗಿ ಖರ್ಚಾಗುವ ಸಾರ್ವಜನಿಕ ಹಣವಲ್ಲದೆ ವಿದ್ಯಾರ್ಥಿಗಳೇ ಖರ್ಚುಮಾಡಬೇಕಾಗಿರುವ ಹಣವು ದಿನೇ ದಿನೇ ಹೆಚ್ಚುತ್ತಲಿದೆ. ಹೀಗೆ ಮಾಡುವ ಖರ್ಚಿನ ಬಡ್ಡಿಯಷ್ಟು ಮೊಬಲಗನ್ನಾದರೂ ಸಂಪಾದನೆ ಮಾಡುವದು ಅನೇಕರಿಗೆ ಕಷ್ಟವಾಗುತ್ತದೆ. ವಿದ್ಯಾವಂತರಾದ ಹಲ ಕೆಲವು ಜನರು ದೊಡ್ಡ ದೊಡ್ಡ ಪದವಿಗಳಿಗೆ ಹೋಗುವದರಿಂದ ಹೆಚ್ಚಿನ ವಿದ್ಯೆ ಸಂಪಾದಿಸಬೇಕೆಂಬ ಆಶೆ ಎಲ್ಲರಿಗೂ ಹುಟ್ಟುವದು ಸ್ವಭಾವಿಕವಾಗಿದೆ.

ಈ ರೀತಿ ಉಚ್ಚ ವಿದ್ಯೆಗೆ ಹೋಗುವ ಹೆಚ್ಚಿನ ಯುವಕರಿಗೆ ಸೆಕೆಂಡರಿ ವಿದ್ಯಾಭ್ಯಾಸವಾದ ನಂತರ ಕಸಬು ವಿದ್ಯೆ ಕಲಿಸಬೇಕೆಂತ ಸೂಚನೆಯಿದೆ. ಕಸಬು ವಿದ್ಯೆ ಕಲಿತವರಿಗೆಲ್ಲಾ ಉದ್ಯೋಗ ದೊರಕುವಷ್ಟು ಕಸಬುಗಳೂ ಇಲ್ಲವೆಂತ ಕಮಿಟಿಯವರು ಒಪ್ಪುತ್ತಾರೆ. ಆದ್ದರಿಂದ ಹೆಚ್ಚಿನ ಜನರಿಗೆ ತಮ್ಮ ಕೃಷಿ ಅಥವ ಇತರ ಕಸಬನ್ನೇ ಉತ್ತಮ ರೀತಿಯಿಂದ ನಡಿಸಲು ಅನುಕೂಲವಾಗುವಂಥ ವಿದ್ಯೆ ಕೊಡಬೇಕೆಂತ ಅಭಿಪ್ರಾಯವಾಗುತ್ತದೆ. ಇದು ಯುಕ್ತವಾದ ಸಲಹೆಯೆಂತ ತೋರುತ್ತದೆ.

ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡಬೇಕೆಂತ ವರದಿಯಲ್ಲಿ ಬರೆದದ್ದು ಮಾತ್ರವಲ್ಲದೆ ಕಮಿಟಿಯ ಮೆಂಬರುಗಳ ಲ್ಲೊಬ್ಬರಾದ ಡಾಕ್ಟರ್ ಮುತ್ತುಲಕ್ಷ್ಮಿ ರೆಡ್ಡಿಯವರು ಪ್ರತ್ಯೇಕವಾಗಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ. ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಬೇಕಾದರೆ ಗ್ರಾಮಾಂತರಗಳಲ್ಲಿ ಉಪಾಧ್ಯಾಯಿನಿಯರಿಗೆ ವಾಸಿಸಲು ಸಾಧ್ಯವಾಗುವಂತೆ ವಾಸದ ಮನೆಗಳನ್ನೂ, ಹೆಚ್ಚಿನ ಸಂಬಳವನ್ನೂ ಕೊಡಬೇಕೆಂತ ಅಭಿಪ್ರಾಯವಿದೆ. ಒಬ್ಬ ಬಾಲಕನಿಗೆ ಕೊಡುವ ವಿದ್ಯೆಗಿಂತ ಒಬ್ಬ ಬಾಲಿಕೆಗೆ ಕೊಡುವ ವಿದ್ಯೆಯು ಹೆಚ್ಚಿನ ಬೆಲೆಯುಳ್ಳದ್ದೆಂತ [illegible] ಮುಂದೆ ತಾಯಂದಿಯರಾಗುವ ಬಾಲಿಕೆಯರು ವಿದ್ಯಾವತಿಯರಾದರೆ ಅವರ ಮಕ್ಕಳಿಗೆ ವಿದ್ಯೆ ಕಲಿಸುವದು ಸುಲಭವಾಗುತ್ತದೆ. ಈಗ ಸ್ತ್ರೀ ವಿದ್ಯಾಭ್ಯಾಸಕ್ಕೆ ಸಹಾಯ ಕೊಡುತ್ತಿರುವದು ಸಾಲದು. ಇದಕ್ಕೆ ಎಷ್ಟು ಖರ್ಚು ಮಾಡಿದರೂ ಸ್ವಲ್ಪವೇ. ಆದರೆ ಹಾಗೆ ಮಾಡುವ ಖರ್ಚಿನಿಂದ ಜನಾಂಗಕ್ಕೆ ಒಳ್ಳೇದಾಗುವಂತೆ ನೋಡಿಕೊಳ್ಳುವದು ದೇಶೀಯರ ಕರ್ತವ್ಯವಾಗಿದೆ.

ನಾದಿರ್ ಖಾನರ ಜಯ.

ಈಗ ಸುಮಾರು [illegible] ತಿಂಗಳ ಗಳಿಂದ ಅಫಘಾನಿಸ್ಥಾನದ ಅಮೀರರೆನ್ನಿಸಿಕೊಂಡಿದ್ದ ಬಚ್ಚಾಯಿ ಸಾಕೋನನ್ನು ಸೋಲಿಸಿ ಜನರಲ್ ನಾದಿರ್ ಖಾನರ ಸಹೋದರ ಷಾ ವಾಲಿ ಖಾನರು ಮುಖ್ಯ ಪಟ್ಟಣವಾದ ಕಾಬೂಲನ್ನು ಕೈವಶ ಮಾಡಿಕೊಂಡಿರುವರು. ಇದೂ ಅಲ್ಲದೆ ಜಲಾಲಾಬಾದು, ಕಂದಹಾರ್, ಘಜ್ನಿ, ದಕ್ಷಿಣ ಮತ್ತು ಪೂರ್ವ ಪ್ರಾಂತ್ಯಗಳೂ ಸಂಪೂರ್ಣ ನಾದಿರ್ ಖಾನರ ಅಧೀನದಲ್ಲಿವೆಯೆಂದೂ ವರ್ತಮಾನವಿದೆ. ನಾದಿರ್ ಖಾನರು ಅಲ್ಲಿಯ ಜನರ ಪ್ರತಿನಿಧಿಗಳ ಮಹಾ ಸಭೆಯವರಿಂದ ಅರಸರಾಗಿ ಆರಿಸಲ್ಪಟ್ಟಿರುವರು. ತನಗೆ ಅರಸನಾಗಲು ಮನಸ್ಸಿಲ್ಲದಿದ್ದರೂ, ಜನರು ಒತ್ತಾಯ ಪಡಿಸಿದ್ದರಿಂದ ದೇಶದ ಹಿತಕ್ಕಾಗಿ ಆ ಪದವಿಯನ್ನು ಒಪ್ಪಿಕೊಂಡಿರುವದಾಗಿದೆಯೆಂದು ನಾದಿರ್ ಖಾನರು ಸೂಚಿಸಿರುವರು. ಇದರಿಂದಲೇ ಅವರು ದೇಶದ ಅಭಿವೃದ್ಧಿಯನ್ನು ಸಾಧಿಸಲು ತುಂಬಾ ಪ್ರಯತ್ನಿಸುವರೆಂದು ತೋರುತ್ತದೆ. ಮಾಜಿ ಅಮೀರರಾದ ಅಮಾನುಲ್ಲರವರು ಅಫಘಾನಿಸ್ಥಾನದ ಸಿಂಹಾಸನವನ್ನು ಬಿಟ್ಟಂದಿನಿಂದ ಶಾಂತಿ ಏನೆಂಬದನ್ನು ಅರಿಯದೆ ತುಂಬಾ ಕಷ್ಟಕ್ಕೊಳಗಾದ ಆ ದೇಶದಲ್ಲಿ ಇನ್ನಾದರೂ ಶಾಂತಿ ಉಂಟಾಗಲೆಂದು ಆಶಿಸುವ. ನಾದಿರ್ ಖಾನರು ತಮ್ಮ ಈ ಮುಪ್ಪಿನ ಕಾಲದಲ್ಲಿ ದೇಶ ಭಕ್ತಿಗಾಗಿ ಸೈನ್ಯದ ಮುಂದಾಳುತನವಹಿಸಿ ಕಾಬೂಲಿನೊಡನೆ ವಾದಿಯಲ್ಲಿ ಅಧಿಕಾರವಿದ್ದ ಸಾಕೋನನ್ನು ಜಯಿಸಿದ್ದು ಸ್ತೋತ್ರಾರ್ಹವಾಗಿದೆ. ಅವರು ಹಿಂದೂ ದೇಶದವರಿಗೆ ಸಂತೋಷವನ್ನುಂಟುಮಾಡಿರುವರು. ಅಫಘಾನಿಸ್ಥಾನದವರು ನಾದಿರ್ ಖಾನರಿಗೆ ಸಂಪೂರ್ಣ ಒತ್ತಾಸೆ ಕೊಡಲಿ! ಇದರಲ್ಲಿಕ್ಕಲ್ಲವಾಗಿ ನಂಬುತ್ತೇವೆ.

ಕಾಬೂಲಿನಲ್ಲಿ ಪರಾಜಿತನಾದ ಬಚ್ಚಾಯಿ ಸಾಕೋನ ಅಕೆಗೆ ರಾಜ್ಯ ಕೋಟೆಯ, ಗೋಡೆಯನ್ನು ಕಾದು ರಾತ್ರಿ ತಪ್ಪಿಸಿಕೊಂಡು ಓಡಿ ಹೋಗಿ ಕೋಹಿಸ್ತಾನದಲ್ಲಿ ತನ್ನ ಹುಟ್ಟು ಊರಿನಲ್ಲಿ ಸೈನ್ಯವನ್ನು ಶೇಖರಿಸುತ್ತಿದ್ದಾನೆಂದು ಸುದ್ದಿ ಇದೆ. ಅವನನ್ನು ಸೋಲಿಸಲು ನಾದಿರ್ ಖಾನರು ಸೈನ್ಯವನ್ನು ಕಳುಹಿಸಿರುವರೆಂದು ವರ್ತಮಾನವಿದೆ. ಹೇಗೂ ದಿನೇ ದಿನೇ ಜನರಿಗೆ ನಾದಿರ್ ಖಾನರಲ್ಲಿ ವಿಶ್ವಾಸವು ಹೆಚ್ಚುತ್ತಿದೆ ಎಂಬುದು ಅಫಘಾನಿಸ್ಥಾನದ ಮುಂದಿನ ಏಳಿಗೆಗೆ ಶುಭ ಸೂಚನೆಯಾಗಿದೆ. ಈಗ [illegible] ಟಲಿಯಲ್ಲಿರುವ ಮಾಜಿ ಅಮೀರ ಅಮಾನುಲ್ಲರವರ ಮುಂದಿನ ರಾಜ್ಯ ಭಾರದಲ್ಲಿ ಸಹಾನುಭೂತಿ ಇದ್ದ ನಾದಿರ್ ಖಾನರವರು ಅವರಂತೆಯೇ ಅಲ್ಲಿಯ ಜನರಿಗೆ ಒಪ್ಪುವಾಥ [illegible] ಅಭಿವೃದ್ಧಿಯನ್ನು ಸಾಧಿಸುವಂಥ ಸರಕಾರವನ್ನು ನಡಿಸಿ ಅಫಘಾನಿಸ್ಥಾನವನ್ನು ಏಷ್ಯಾ ಖಂಡದ ಒಂದು ಪ್ರಮುಖ ಸ್ವಾತಂತ್ರ್ಯ ರಾಜ್ಯವನ್ನಾಗಿ ಮಾಡುವರಾಗಿ ಹಾರೈಸುತ್ತೇವೆ.

ಸಾಮಾಜಿಕ ಸುಧಾರಣೆ.

(ಒಬ್ಬ ಸಮಾಜ ಸೇವಕರಿಂದ)

2. ಪ್ರೌಢ ವಿವಾಹ.

ತಾಯಿಯರ ವಯಸ್ಸನ್ನಾದರೂ ಸ್ವಲ್ಪ ಪರಿಶೀಲಿಸಿದರೆ ಸಾಕು. ಹದಿಮೂರು ವರ್ಷದ ಬಾಲಿಕೆಯರು ಎಷ್ಟು ಮಂದಿ ಮಕ್ಕಳನ್ನು ಪಡೆದಿಲ್ಲ! 14, 15, 16,17ನೇ ವಯಸ್ಸಿಗಂತೂ ಒಂದು ಅಥವಾ ಎರಡು ಮಕ್ಕಳನ್ನು ಪಡೆಯದಿರುವವರೇ ಅಪರೂಪವಾಗಿದೆ. ತಾವೇ ಇನ್ನು ಆಟವಾಡುವ ಮಕ್ಕಳೇ ಆಗಿರುವಾಗ, ಇನ್ನೂ ಬಾಲ್ಯಾವಸ್ಥೆಯ ಕೊನೆಯ ಮೆಟ್ಟಲನ್ನು ದಾಟುವ ಮೊದಲೇ, ಮಕ್ಕಳನ್ನು ಪಡೆಯಲು ಎಷ್ಟು ಶಕ್ತಿಯರಾಗಿರಬಹುದು! ಪಡೆದಿರುವ ಮಕ್ಕಳು ತಾನೇ ಎಷ್ಟು ದೃಢಕಾಯರಾಗಿರಬಹುದು!! ಯಾವ ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳು, ಮಕ್ಕಳನ್ನು ಪಡೆಯಲು ಯೋಗ್ಯರಾಗಿದ್ದಾರೋ ಎಂಬುದನ್ನು ವಿಚಾರಿಸದೆ, ಮಕ್ಕಳನ್ನು ಪಡೆದರೂ ಸಾಕುವ ವಿಧಾನವನ್ನು ತಿಳಿದಿರುವರೋ ಎಂಬುದನ್ನು ಗಮನಿಸದೆ ಬಾಲ್ಯಾವಸ್ಥೆಯಲ್ಲಿಯೇ ಮದುವೆ ಮಾಡಿ ಕೊಟ್ಟು ಬಿಡುತ್ತಾರೋ ಅಂಥವರು ಇಡೀ ಮುಂದಿನ ಜನಾಂಗದ ಅಸಹನೀಯವಾದ ಶಾಪಕ್ಕೆ ಗುರಿಯಾಗದೆ ಇರಲಾರರು. ಇವರಿಗೆ ಆ ಶಾಪ ವಿಮೋಚನೆಯೇ ಇಲ್ಲ. ಜೀವವನ್ನು ಹೊತ್ತಿರುವುದೇ ಕಷ್ಟವಾಗಿ ಸದಾ ಎಲ್ಲಾ ನೃತ್ಯಿಯಲ್ಲೇ ಮುಳುಗಿದ ಮುಂದಿನ ತರುಣ ತರುಣೀಮಣಿ ಪೀಡಿತವಾಗಿಯೂ ಶಪಿಸದೆ ಇರಲಾರರು. ಆದ್ದರಿಂದ ಇದಕ್ಕೆ ಅವಕಾಶಕೊಡದೆ ತಮ್ಮ ಕರ್ತವ್ಯದ ಕಡೆಗೆ ಚೆನ್ನಾಗಿ ದೃಷ್ಟಿ ಇಟ್ಟು, ಪ್ರತಿಯೊಬ್ಬ ತಂದೆ ತಾಯಿಯೂ ತಮ್ಮ ಹೆಣ್ಣು ಮಕ್ಕಳಿಗೆ ಹುಡುಗಾಟಿಕೆಯೇ, ಚೆನ್ನಾಗಿ ವಿದ್ಯಾಭ್ಯಾಸ ಮಾಡಿಸಿ ಒಳ್ಳೇ ರೀತಿಯಲ್ಲಿ ತರಬೇತು ಮಾಡುವುದು ಅವಶ್ಯವಾಗಿದೆ. ಹದಿನೆಂಟು ವರ್ಷವಿನಹ ಮದುವೆ ಪ್ರಸಂಗವನ್ನೇ ಎತ್ತಬಾರದು. ತಮ್ಮ ಹೆಣ್ಣು ಮಕ್ಕಳಿಗೆ ಸರಿಯಾದ ವಿದ್ಯೆ ಕೊಟ್ಟು ಹದಿನೆಂಟು ವರ್ಷಗಳ ವರೆಗೆ ಚೆನ್ನಾಗಿ ಬೆಳಸಿ ಆ ಮೇಲೆ ಮದುವೆ ಮಾಡಕೊಡಬೇಕು. ಹದಿನಾಲ್ಕು ವರ್ಷಗಳ ಒಳಗೆ ಹೆಣ್ಣು ಮಕ್ಕಳ ಮದುವೆ ಮಾಡುವುದರಂತೂ ಇನ್ನು ಮೇಲೆ ನಡೆಯ ಬಾರದು. ಮೊನ್ನೆ ಲೆಜಿಸ್ಲೇಟಿವ್ ಎಸ್ಸೆಂಬ್ಲಿಯಲ್ಲಿ ಪಾಸಾದ ಶಾರದಾ ಬಿಲ್ಲಿನ ಮೇರೆ 14 ವರ್ಷಕ್ಕಿಂತ ಮೊದಲು ವಿವಾಹಮಾಡಿ ಕೊಟ್ಟರೆ ಅಂಥಾ ವಿವಾಹ ರದ್ದಾಗುವುದಲ್ಲದೆ, ವಿವಾಹ ಮಾಡಿಸಿಕೊಟ್ಟವರಿಗೆ ಕಠಿಣ ಶಿಕ್ಷೆಯೂ ಸಹ ಕೊಡುವ ನಿರ್ಣಯವಾಗಿದೆ. ಈ ಕಾಯಿದೆ ಜಾರಿಯಾದ್ದರಿಂದಲೂ ಸಹ ಸಂಪೂರ್ಣ ಪ್ರಯೋಜನವಾಗಲಾರದು. ಬಾಲ್ಯವಿವಾಹ ಬಿಲ್ಲು, ಒಂದು ವಿ, ಹುಡುಗರಿಗೆ 25 ವರ್ಷಕ್ಕೆ ಮೊದಲು, ಹುಡುಗಿಯರಿಗೆ 18 ವರ್ಷಕ್ಕೆ ಮೊದಲು ಮದುವೆ ಮಾಡಿದರೆ ನಿಜವಾದ ಧರ್ಮಕ್ಕೆ ಸಹ ವಿರುದ್ಧವಾಗಬಹುದೆಂದು ಖಂಡಿತವಾಗಿ ಹೇಳುತ್ತೇನೆ. ಪಾರಮಾರ್ಥಿಕ ದೃಷ್ಟಿಯಲ್ಲಿಯೂ, ಆರ್ಥಿಕ ದೃಷ್ಟಿಯಲ್ಲಿಯೂ ಸಮಾಜದ ಏಳಿಗೆಗಾಗಿಯೇ ಶಾಸ್ತ್ರಗಳನ್ನು ಮಾಡಿದ್ದಾರೆ. ದೇಶದ ಅಭಿವೃದ್ಧಿಗೆ ಪ್ರತಿಕೂಲವಾದಂಥ ಶಾಸ್ತ್ರಗಳನ್ನು ಮಾರ್ಪಾಡಿಸಲೇಬೇಕು. ಒಳ್ಳೇ ಪೂರ್ವಾಚಾರವೆಂದನ್ನೇ ಲೆಕ್ಕಿಸಲ್ಲಿಟ್ಟರೆ ಸಾಲದು. ಪ್ರಾಚೀನ ಕಾಲದವ ಇಂದ್ರಿಯನಿಗ್ರಹ, ಸಹನ ಶಕ್ತಿ, ತ್ಯಾಗ, ದೇಹದಾರ್ಢ್ಯ, ಪ್ರಾಣದಯೆ, ಮುಂತಾದ ಸದ್ಗುಣಗಳಿಗೆ ನಾವು ತಿಲಾಂಜಲಿಯನ್ನು ಕೊಟ್ಟು, ತಿರುಳಿಲ್ಲದ, ಕೆಲಸಕ್ಕೆ ಬಾರದ ಪೂರ್ವಾಚಾರಗಳಿಗೆ ಮಾತ್ರ ಬಹಳ ಬೆಲೆಕೊಟ್ಟು ಆಚರಿಸುವುದರಲ್ಲಿ ಏನೂ ಫಲವಿಲ್ಲ. ಮೊದಲಿನವರ ಹಾಗೆ ಬ್ರಹ್ಮಜ್ಞಾನದಲ್ಲಿ ಚೆನ್ನಾದರೂ ಸಂವಾದಿಸಲು ಯಾರಾದರೂ ಪ್ರಯತ್ನ ಪಡುತ್ತಾರೆಯೆ? ಅನೇಕ ವಿಷಯಗಳಲ್ಲಿ ನಾವು ನಾಟಕದ ನಟರಂತೆ ಬರೇ ಆಕ್ಷಿನ ಆಚರಣೆಯನ್ನೇ ಮಾಡುತ್ತಿರುವುದು ಶೋಚನೀಯವಾದದ್ದು. ಇವನ್ನೆಲ್ಲಾ ಪರಿಶೀಲಿಸದೆ, ಹೆಣ್ಣು ಮಕ್ಕಳು ಮದುವೆಯಾಗುವ ಮೊದಲು ದೊಡ್ಡವರಾದರೆ ಮಹಾ ಪಾಪಮಾಡಿದಂತಾಗುತ್ತದೆ ಎಂತ ಅಭಿಪ್ರಾಯಪಡುತ್ತಾರೆ. ಬಾಲ್ಯವಿವಾಹದಿಂದ ಉಂಟಾಗುವ ಅನರ್ಥಗಳನ್ನು ಇಲ್ಲಿ ವಿವರಿಸಲು ಸಾಧ್ಯವಿಲ್ಲ. ಹದಿಮೂರು ಹದಿನಾಲ್ಕು ವಯಸ್ಸಿಗೆ ಮಕ್ಕಳನ್ನು ಹೆತ್ತ ತಾಯಿಯೂ ಮಗು ಬದುಕುವುದೇ ದುರ್ಲಭ. ಈ ರೀತಿ ಹೆಣ್ಣು ಮಕ್ಕಳನ್ನು ಕಳಕೊಂಡ ತಂದೆ ತಾಯಿಗಳಿಗೆ ಇದರ ಅನುಭವವಿದ್ದು ಮನಸ್ಸಿನಲ್ಲಿ ಚಿಂತೆ ಇದ್ದರೂ, "ಏನುಮಾಡುವುದು, ಪೂರ್ವಾಚಾರ, ಬಿಡಲು ಸಾಧ್ಯವಿಲ್ಲ" ಎಂತಲೂ "ಎಲ್ಲವೂ ಅದೃಷ್ಟ" ಎಂತಲೂ ಹೇಳುತ್ತಾರೆಯೇ ಹೊರತು, ಧೈರ್ಯದಿಂದ ಮುಂದೆ ಬಂದು ಪರಿಹಾರೋಪಾಯವನ್ನು ಮಾಡಲು ಹೋಗುವುದಿಲ್ಲ. 30 ವರ್ಷಗಳಾಗುವ ಮೊದಲು ಎಂಟೋ ಹತ್ತೋ ಗರ್ಭಧಾರಣದ ಮಕ್ಕಳನ್ನು ಹೆತ್ತು ನುಣುಕಿಯರಾಗುವರು. ಅದೇ ರೀತಿಯಲ್ಲಿ ತರುಣರ ಅವಸ್ಥೆಯೂ ಸಹ ಶೋಚನೀಯವಾಗಿ, ಕೂಸು ಹುಟ್ಟಿದಾಗಲೇ ಹೆಣ್ಣು ಮಗುವಿನ ತಂದೆ ತಾಯಿಗಳಿಗೆ ಆಗಲೇ ಆಲೋಚನೆ. "ಮದುವೆ ಹೋಗುವ ಹುಡುಗಿಗೆ ವಿದ್ಯೆ ಯಾತಕ್ಕೆ?" ಎಂತ ಎಷ್ಟೋ ಜನರಿಯನ್ನು ನೋಡಿದ್ದೇನೆ. ಹಾಗೇ ಶಾಲೆಗೆ ಕಳುಹಿಸಿದರೂ 12 ವರ್ಷವಾಗುವ ಮೊದಲೇ ಬಿಡಿಸಿ ಮದುವೆ ಮಾಡುವ ಚಿಂತೆ ಬಂದೊದಗುತ್ತದೆ. 18 ವಯಸ್ಸಿನ ವರೆಗಾದರೂ ವಿದ್ಯಾಭ್ಯಾಸಕ್ಕೆ ಆಗಿನ ಕಾಲದಲ್ಲಿ ಅವಕಾಶವೇ ದೊರೆಯುವುದಿಲ್ಲ. ಮದುವೆ ಮಾಡುವುದಂತೂ ಹುಡುಗಿಗೆ ವರನ ವಿಷಯದಲ್ಲಿ ಯಾವ ಅಭಿಪ್ರಾಯವಿದೆ ಎಂಬುದನ್ನೂ, ಮದುವೆಗೆ ಒಪ್ಪಿಗೆ ಇದೆಯೋ ಎಂಬುದನ್ನು ವಿಚಾರಿಸುವವರೇ ಅಪರೂಪ. ಹ್ಯಾಗೂ ಮದುವೆ ಮಾಡಿಕೊಟ್ಟು ತನ್ನ ಭಾರ ತಪ್ಪಿಸಿಕೊಂಡರಾಯಿತು. ಅತ್ತೆಯರಿಗಂತೂ ತಾವು ಸಾಯುವ ಮೊದಲೇ ಮೊಮ್ಮಗಳ ಮದುವೆಯೊಂದು ನೋಡಿ ಸತ್ತರೆ ಸಾಕೆಂತ ಯೋಚನೆ. ಅದೇ ಅತ್ತೆಯರು ಇನ್ನೂ ಒಂದೆರಡು ವರ್ಷ ಬದುಕಿದ್ದರೆ, ಮದುವೆ ಮಾಡಿಕೊಟ್ಟ ಮೊಮ್ಮಗಳು ಹೆತ್ತು ಮರಣ ಹೊಂದುವುದನ್ನು ನೋಡುವುದೂ ಸಹ ಇದೆ. ಇಷ್ಟಲ್ಲದೆ, ಗೊತ್ತಿದ್ದರೂ ಹದಿನೆಂಟು ವರ್ಷಗಳ ತನಕ ತನ್ನ ಹೆಣ್ಣು ಮಕ್ಕಳನ್ನು ಮನೆಯಲ್ಲಿ ಇರಗೊಡಲಾರರು. ಬೇಗನೆ ಮದುವೆ ಮಾಡಿ ತಮ್ಮ ಮಕ್ಕಳಿಗೆ ಕೂಸು ಹುಟ್ಟಿದ್ದು ನೋಡಬೇಕು. ಆದರೆ ನೋಡುವುದೇನು? ಒಂಭತ್ತು ತಿಂಗಳಿಗೆ ಮೊದಲೇ ಗರ್ಭಸ್ರಾವವಾಗುವುದೋ, ಹುಟ್ಟಿದ ಕೂಸು ಸಾಯುವುದೋ, ಅಥವಾ ತಾಯಿಯೇ ಮಡಿಯುವುದೋ, ಇಷ್ಟೇನೆ!

ಇನ್ನು ಮುಂದಾದರೂ ತಾಯಿ ತಂದೆಯರು ಸಂಪೂರ್ಣ ಎಚ್ಚತ್ತು ತಮ್ಮ ಹೆಣ್ಣು ಮಕ್ಕಳಿಗೆ 18 ವರ್ಷಗಳ ವರೆಗೆ ವಿದ್ಯಾಭ್ಯಾಸ ಮಾಡಿಸಿ, ಹುಡುಗಿಯ ಇಚ್ಛೆ ಅರಿತು ಮದುವೆ ಮಾಡಿ ಕೊಡಬೇಕೆಂತ ಪ್ರಾರ್ಥಿಸುತ್ತೇನೆ. ಇದರ ಹೀಗೆ ಮಾಡದೆ ಹೋದರೆ ಬೇಗನೇ ಬ್ರಾಹ್ಮಣ ತರುಣರನ್ನು ಒಬ್ಬೊಬ್ಬರಾಗಿ ಒಂದು ಸಂಘ ಸ್ಥಾಪಿಸಿ, ವಿದ್ಯಾವತಿಯರಾದ, ಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಪರ ಜಾತಿಯವರನ್ನು ಮದುವೆಯಾಗುವುದೇ ಇಲ್ಲವೆಂತ ಶಪಥ ಮಾಡಲೇ ಬೇಕಾಗುತ್ತೆ. ತಮ್ಮ ಮಟ್ಟಿಗೆ ವಿದ್ಯಾವತಿಯರಾದ ತರುಣಿಯರೂ ಸಹ ಸ್ವಾತಂತ್ರ್ಯ ವಹಿಸಿ ತಮ್ಮ ತಂದೆ ತಾಯಿಗಳ ಇಚ್ಛೆಯ ವಿವಾಹಕ್ಕೆ ಒಂದಲಕ್ಕೆ ಅಡ್ಡಮಾಡಿ ನಿಲ್ಲಬೇಕು.

ಹೆಣ್ಣು ಮಕ್ಕಳ ವಿದ್ಯೆಗೆ ಈ ದರಿದ್ರಾವಸ್ಥೆಯಲ್ಲಿ ಹಣವೆಲ್ಲಿಂದ ತರಬೇಕು? ಎಂತ ಕೆಲವರು ಕೇಳಬಹುದು. ಹುಣ್ಣಿಮೆಗಳಿಗೆ, ಒಟ್ಟೆ ಏರಿಗೆ, ಹಣವನ್ನು ಸೂರೆಮಾಡುವುದು ಚಿಕ್ಕ ಚಿಕ್ಕ ವ್ಯತ್ಯಾಸಗಳಿಗೆ ನೆರೆಹೊರೆಯವರ ಮೇಲೆ ವ್ಯಾಜ್ಯಮಾಡಿ ಕೋರ್ಟು ಕಛೇರಿಗೆ ದುಡ್ಡು ಸುರಿಯುವುದು, ಮದುವೆ ಮುಂತಾದವುಗಳಿಗೆ ಅನಾವಶ್ಯಕವಾಗಿ ವಿಪರೀತ ಖರ್ಚು ಮಾಡುವುದು, ಮುಂತಾದವುಗಳನ್ನೆಲ್ಲ ನಿಲ್ಲಿಸಿದರೆ ಹೆಣ್ಣು ಮಕ್ಕಳ ವಿದ್ಯೆಗೆ ಬೇಕಾದ ಖರ್ಚಿಗೆ ತೊಂದರೆಯಾಗಲಾರದು. ನಮ್ಮಲ್ಲಿ ಈಗ ಮದುವೆಗೆ ಅತೀ ಗರೀಬರೂ ಸಹ 250/— ರೂಪಾಯಿಯಾದರೂ ಖರ್ಚುಮಾಡದೆ ಇರುವ ಒಂದು ಉದಾಹರಣೆಯೂ ಇಲ್ಲವೇ ಇಲ್ಲ. ಬ್ರಾಹ್ಮಣರ ವಿಧಿಗನುಸಾರವಾಗಿ ಶಾಸ್ತ್ರೋಕ್ತವಾಗಿ ಜಾತಿಯವರಿಗೆ 50/ ರೂಪಾಯಿಗಳಿಗೆ ಒಳಪಟ್ಟು ಮದುವೆ ಮಾಡಬಹುದು. ಸಮಾಜಕ್ಕೆ ಅಮುಕ್ತವಿಲ್ಲ. ವಿವಾಹವೆಂದರೆ ವಾಸ್ತವಕ್ಕೆ ವಿವಾಹದ ಮುಖ್ಯ ಉದ್ದೇಶವು ಪೂರ್ತಿ ಆದಂತೆ ಆಗಲಾರದು. ಹುಡುಗರಿಗೆ ಸಂತರ್ಪಣೆ ಮಾಡಿದ ನಷ್ಟಕ್ಕೆ ಆ ಪುಣ್ಯವೇನಿಗೂ ಒದಗದು. ಸಂತರ್ಪಣೆ ಮಾಡಿಸಿ ಅಜೀರ್ಣವಾಗುವ ಹಾಗೆ ಮಾಡಿದ ಪಾಪ ಒಂದರೂ ಬರಬಹುದು. ಜನವರು ಶಾಲೆಯಲ್ಲಿ ನಡಸಲೇಬೇಕಾಗುತ್ತದೆ. ಹೊಡತಿಗೆ ವಿದ್ಯೆ ಇಲ್ಲವೆಂತ ಮೂವರ ಮೇಲೆ ಆಳಿಯನ ಶಾಪವೂ ಇರಬಹುದು. ಎಷ್ಟು ಸಂತರ್ಪಣೆ ಮಾಡಿಸಿದರೂ ಅದಿಗೆ ಚೆನ್ನಾಗಿ ಇಲ್ಲವೆಂತಾಗಲಿ, ಉಪಚಾರ ಮಾಡಿದ್ದು ಸರಿಯಾಗಿಲ್ಲವೆಂತಾಗಲಿ, ಒಂದಿಬ್ಬರು ದೂರು ತಪ್ಪುವುದಿಲ್ಲ. ಇಷ್ಟೇ ಅಲ್ಲದೆ ವಿವಾಹಕ್ಕೋಸ್ಕರ ಹೆಚ್ಚಾಗಿ ದುಡ್ಡು ವ್ಯಯಮಾಡಿದ್ದರಿಂದ ಏನೂ ಪ್ರಯೋಜನವಿಲ್ಲ. ಇದೇ ಹಣವನ್ನು ಸ್ತ್ರೀವಿದ್ಯಾಭ್ಯಾಸಕ್ಕೆ ಉಪಯೋಗಿಸಿದರೆ ಲೋಕೋಪಕಾರವಾದ ಒಂದು ಕೆಲಸವಾಗುವುದು. ವಿವಾಹಕ್ಕೋಸ್ಕರ ಎಷ್ಟು ಸಾಲವೂ, ಕ್ರಯವೂ ಸಹ ಆಗುವ ಗತ್ಯವಿಲ್ಲ. ವಿವಾಹದ ಖರ್ಚನ್ನು ಉಳಿಸಿ ಆ ರೂಪಾಯಿಗಳನ್ನು ಸ್ತ್ರೀವಿದ್ಯಾಭ್ಯಾಸದ ಕಡೆಗೆ ಉಪಯೋಗಿಸಬೇಕು. ನಮ್ಮನ್ನು ನಾವೇ ಹೊಗಳಿಕೊಳ್ಳದೆ, ಕೇವಲ ಗರೀಬ ಮಕ್ಕಳ ವಿದ್ಯಾಭ್ಯಾಸಕ್ಕಾಗಲಿ, ವಿವಾಹಕ್ಕಾಗಲಿ ಉಪಯೋಗಿಸಬಹುದು. ವಿದ್ಯಾರ್ಥಿವೇತನ ಮುಂತಾದವರಿಗೆ ದಾನಶೀಲರಿಗೆ ಒಳ್ಳೆಯ ಸಹಾಯವಾಗುವುದು. ತಮ್ಮ ಮನೆಯಲ್ಲಿ ಆಗುವ ವಿವಾಹದ ಖರ್ಚು ಕಡಿಮೆಮಾಡಿ ವ್ಯಯಮಾಡಬೇಕು. ಇದು ಒಬ್ಬ ವ್ಯಕ್ತಿಯಿಂದ ಆಗುವ ಕೆಲಸವಲ್ಲ. ಎಲ್ಲರೂ ಒಟ್ಟುಗೂಡಿ ಸಮಾಜವನ್ನು ಹೊಗಳಬೇಕು. ಪ್ರಯೋಜನವಿಲ್ಲ.

ಸೆಂಟ್ರಲ್ ಬ್ಯಾಂಕು ಮೀಟಿಂಗ್.

[illegible]

1. ಬ್ಯಾಂಕಿನ ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಸೆಪ್ಟೆಂಬರ್ ತಿಂಗಳ ... ತಿರುಗಿ ಲೆಕ್ಕ ... ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು 1. ಬೇಪಗೊಟ್ಟ ಸೊಸೈಟಿಗೆ, ರೂ. 200, 2. ನೀರುಗುಂದ ಸೊಸೈಟಿಗೆ, ರೂ 600, 3. ಕಡಗದಾಳು ಸೊಸೈಟಿಗೆ, ರೂ. 100) ಮತ್ತು ಚೇಲಾವರ ಸೊಸೈಟಿಗೆ, ರೂ. 200

4. ಬ್ಯಾಂಕಿಂಗ್ ಇನ್‌ಕ್ವಯರಿ ಕಮಿಟಿಯು ಪ್ರಶ್ನಾವಳಿಗೆ ತಯಾರಿಸಿದ ಕರಡು ಜವಾಬನ್ನು ಓದಿ ಮಂಜೂರು ಮಾಡಲಾಯಿತು.

5. ರಿಜಿಸ್ಟ್ರಾರವರ, ಆಡಿಟ್ ಮಾಡಿದ ಬ್ಯಾಂಕಿನ 1928-1929 ನೇ ಸಂವತ್ಸರದ ಆಡಿಟ್ ರಿಪೋರ್ಟಿನ ಕನ್ನಡ ತರ್ಜುಮೆಯನ್ನು ಓದಿ ಆಲೋಚಿಸಲಾಯಿತು.

ಗೌರವ ಸೆಕ್ರೆಟರಿಯವರು ಮೇಲ್ಕಂಡ ಸಂವತ್ಸರದ ಡೈರೆಕ್ಟರುಗಳ ಕರಡು ರಿಪೋರ್ಟನ್ನು ತಯಾರಿಸಿ ಇನ್ನೊಂದು ಮೀಟಿಂಗಿನ ಮುಂದಿಡುವಂತೆ ತೀರ್ಮಾನವಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು.)

ಮಡಿಕೇರಿ-ಭಾಗಮಂಡ್ಲ-ಸುಂಟಿಕೊಪ್ಪ ನಾಡುಗಳ ಜನ್ಮ ಓಟರುಗಳಲ್ಲಿ ವಿನಂತಿ.

ಮಹಾಶಯರೇ,

ಬರುವ ನವಂಬರ ತಾ 15ನೇ ಶುಕ್ರವಾರ ನಡೆಯುವ ಕೌನ್ಸಿಲ ಉಪ ಚುನಾವಣೆಗೆ ಮಡಿಕೇರಿ-ಭಾಗಮಂಡ್ಲ-ಸುಂಟಿಕೊಪ್ಪ ನಾಡುಗಳ ಜನ್ಮ ಓಟರುಗಳ ಪರವಾಗಿ ನಾನೊಬ್ಬ ಉಮೇದುವಾರನಾಗಿ ನಿಲ್ಲಲು ನಿಶ್ಚೈಸಿರುತ್ತೇನೆ. ತಾವೆಲ್ಲರೂ ತಮ್ಮ ಓಟುಗಳನ್ನು ನನಗೆ ಕೊಟ್ಟು ನನ್ನ ಚುನಾವಣೆಗೆ ಸಹಾಯ ಮಾಡಬೇಕಾಗಿ ಕೋರುತ್ತೇನೆ.

ಮಡಿಕೇರಿ,
17—10—29.

ತಮ್ಮ ವಿಧೇಯ,
ಐಚೆಟ್ಟಿರ ಸಿ. ಸುಬ್ಬಯ್ಯ.

ಮುಂಚಿನ ಬೆಲೆ ರೂ. 20. ಈಗಿನ ಬೆಲೆ ರೂ. ...

ಈ ಯಂತ್ರ ಸಹಾಯದಿಂದ ದಿನ 1ಕ್ಕೆ ರೂ. 4, 5 ಸುಲಭವಾಗಿ ಸಂಪಾದಿಸಿ ಕೊಳ್ಳಬಹುದು.

ಅಮೆರಿಕನ್ ಬಯೊಸ್ಕೋಪ್ ಮಿಷನ್.

(ನಕ್ಷೆಯಲ್ಲಿ ಕಾಣಿಸಿರುವ ಪ್ರಕಾರವೇ ಇರುವುದು.)



ಮಹನೀಯರೇ! ಈ ಅಮೆರಿಕನ್ ಬಯೊಸ್ಕೋಪ್ ಯಂತ್ರದಲ್ಲಿ ದೊಡ್ಡ ಬಯೊಸ್ಕೋಪುಗಳಿಗೆ ಹಾಕುವ ಫಿಲಿಂಟೀಪುಗಳನ್ನು ಹಾಕಿಕೊಂಡು ನೋಡುತ್ತಾ, ಒಂದರೆ ದೊಡ್ಡ ಬಯೊಸ್ಕೋಪುಗಳಲ್ಲಿ ಕಾಣುವ ನಕ್ಷೆಯ ಹಾಗೆ ಹಲವು ವಿಧವಾದ ನಕ್ಷೆಗಳು, ನಾಟಕಗಳು ... [illegible]

[illegible]

WONDERFUL SEWING MACHINES.

ಅದ್ಭುತವಾದ ಚಿಕ್ಕ ಹೊಲಿಯುವ ಯಂತ್ರ.



ಈ ಚಿಕ್ಕ ಹೊಲಿಯುವ ಯಂತ್ರ ... [illegible]

WARWICK & CO.,
MADRAS

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಸಿಹಿಯಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿಗೆ 0–14–0. ಟ. ಖ 0–9–0

ಕೆ. ಟಿ. ಡೋಂಗರೆ ಕಂಪೆನಿ,

52–52 ಗಿರಿಗಾಂವ, ಮುಂಬಯಿ.

THE BOMBAY ARMOURY

ANNOUNCES GREAT REDUCTION IN PRICES OF

Guns, Rifles, Pistols, Cartridges & Hunting Requisites

for SEASON 1929-30



CURRENT CATALOGUE ON APPLICATION

THE BOMBAY ARMOURY,

Specialist in Arms & Ammunition

38, ABDUL REHMAN STREET,

BOMBAY No 4

24—17

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ } ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಒಕ್ಕೀಸು ಪದರಗಳನ್ನು ಹೊರಕಿಸಿ ಸುಪ್ರಸಿದ್ಧವಾದ { ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ

ಬಾಲಗ್ರಹ ದೋಷನಿವಾರಣೆಯೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವ ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದಲ್ಲಿ ಕೈಕಾಲು ಹರಿಯುವಿಕೆ ಹೊಟ್ಟೆ ಶೂಲೆ, ದುಸ್ವಪ್ನ ಬೀಳುವಿಕೆ ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗದಿರುವಿಕೆ ವಾಂತಿ ಸಪ ಪಾಪ ಪಿಶಾಚಬಾಧೆಯಿಂದ ನರಳುವಿಕೆ, ಬಿಳಿಯ ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ನಿಂಗಕ್ಕೆ ಕಾರಣಗಳು ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಗ್ರಹ ದೋಷದಿಂದ ಅಕಸ್ಮಾತ್ ಸಂದುರೋಗ ಮುಟ್ಟುದೋಷ ಕಾಮಾಲೆ ಗ್ರಹಪೀಡೆ ದೃಷ್ಟಿದೋಷ ಭಯದಿಂದ ಜ್ವರ ಕೆಮ್ಮು ಹೊಂದುವಿಕೆ ಜಪ ಇಡುವಿಕೆ ಮುಟಗಿಟಿ ಹೊಟ್ಟೆಯೊಳಗಿಂದ ನುಲಿತ ಮೊದಲಾದವುಗಳಿಂದ ಕಾಡುತ್ತಿರುವವು ರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ತಕ್ಕ ಕಾಲದಲ್ಲಿ ಸಾಧುಸತ್ತು ರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ಬರೆಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಘಾತವೂ ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರ ಸುಖವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ತಕ್ಕೊಳ್ಳಿರಿ ಹೆಣ್ಣು ಮಕ್ಕಳಿಗೆ ಸಂತಾನ ದಕೆಯುಂಟ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨–೮–೦ ಪೋಸ್ಟ ಖರ್ಚು ಬೇರೆ ಆಗತಕ್ಕ ವಿಷಯಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸಂಯೋಗಿ ಸಂಪೂರ್ಣ ತಿಳಿಯುವ ಹಾಗೆ ಬರೆಯಿರಿ

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ, ಪಂಚಗಟ್ಟಿ,

52–16 ಮು. ಪೋ. ಅಥಣಿ, ಜಿ. ಬೆಳಗಾಂವ.

ಸ್ವದೇಶ ಪ್ರೇಮಿಯ ಕರ್ತವ್ಯ.

ಖಾದಿಯನ್ನು ಏಕೆ ಧರಿಸಬೇಕು?

ಒಟ್ಟೆಯ ರಂಗಿಗೂ, ಒಟ್ಟೆಯ ನಮೂನೆಗೂ ಮರುಳಾಗಿ ಪರದೇಶಿ ಒಟ್ಟೆಯನ್ನು ಕೊಂಡುಕೊಂಡು, ಅನ್ನವಿಲ್ಲದೆ ಸಾಯುತ್ತಿರುವ ಲಕ್ಷಾನುಲಕ್ಷ ನಮ್ಮ ಸಹೋದರ ಸಹೋದರಿಯರನ್ನು ನೋಡುತ್ತಿರುವಿರಾ? ಇಲ್ಲವೇ, ಒಪ್ಪೊತ್ತು ಕೂಡ ಗಂಜಿ ಕುಡಿಯದೆ ಗತಿಹೀನರಾಗಿ ನರಳುತ್ತಿರುವ ಲಕ್ಷಾನುಲಕ್ಷ ಒಡಹುಟ್ಟಿದ ಹಿಂದೀಯರನ್ನು ಕಾಪಾಡಲು ತಮ್ಮಿಂದ ಆಗುವ ಸಹಾಯ ಮಾಡಬೇಕೆಂದು ಇರುವಿರೋ?

ಖಾದಿಯ ಒಟ್ಟೆಯನ್ನು ಕೊಂಡುಕೊಳ್ಳಲು ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಯೂ ಈ ರೀತಿಯಾಗಿ ನಮ್ಮ ಬಡ ದೇಶೀಯರ ಜೀವನಕ್ಕೆ ದಾರಿಯಾಗುತ್ತೆ.

	ರು	ಆ	ಪೈ.
ಹತ್ತಿ ಬಿಡಿಸುವವನಿಗೆ	0	3	0
ಹತ್ತಿ ಒಣಗಿಸುವವನಿಗೆ	0	0	6
ಒಟ್ಟು ನೂಲುವವನಿಗೆ	0	1	9
ನೂಲು ... ನೇಯುವವನಿಗೆ	0	3	9
ಒಟ್ಟೆ ನೆಯ್ಗೆಯವನಿಗೆ	0	1	9
ಅಗಸನಿಗೆ	0	0	6
ಒಟ್ಟೆ ಬಿಕ್ರಿಯ ಸಾಗಾಣಿಕೆಗೆ	0	0	9
[illegible]	0	1	0
	1	0	0

ಖಾದಿಯನ್ನು ಉಟ್ಟು, ಪರದೇಶಕ್ಕೆ ವರ್ಷಕ್ಕೆ 60 ಕೋಟಿ ರೂಪಾಯಿ ಹೋಗುವದನ್ನು ನಿಲ್ಲಿಸಿ. ಅಪೇಕ್ಷಿಸಿದಲ್ಲಿ ಬೇಕಾದ ಒಟ್ಟೆಯನ್ನು ನಿಮ್ಮ ಮನೆಯ ಬಾಗಿಲಿಗೆ ತಂದು ಕೊಡುವೆವು.

ಮೇನೇಜರು,

24–13 ಖಾದಿಭಂಡಾರ,

ವೀರಾಜಪೇಟೆ.

೫೦ ವರ್ಷಗಳ ಅನುಭವಸಿದ್ಧ ನೂತನ ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ... ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗ ... ಪಚನಶಕ್ತಿಯು ದಿನೇ ದಿನೇ ಕ್ಷಯಿಸ ... ಮೇಹ ... ದೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ... ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ... ಶಕ್ತಿಯು ಪುನಃ ತುಂಬಿಕೊಳ್ಳುವದು.—ಕ್ರಯ ಡಬ್ಬಿ 1 ಕ್ಕೆ 2–8–0, ಮೂರು ಡಬ್ಬಿಗಳಿಗೆ ರೂ 7–0–0.

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ ಬಾಟ್ಲಿ 1 ಕ್ಕೆ 0–10–0 3 ಕ್ಕೆ 1–12–0

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ, ಛಳಿ ಜ್ವರ, 2 ಯಾ 3 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರದ ಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–2–0

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣು ಉರಿ, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ... ದುರುವಿಕೆ ಬ್ರಹ್ಮಪಕರಕ್ಕೆ ಉಪಯೋಗಿರುವಿಕೆಗೂ ... ಟಿ 1 ಕ್ಕೆ 1–1–0 3 ಕ್ಕೆ 3–8–0

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ ಬಾಟ್ಲಿ 1 ಕ್ಕೆ 0–8–0

೬. ಕಸ್ತೂರಿ ಮಿಶ್ರಣ.

... ಮುಖಾರಿಷ್ಟ ಬಾಣಂತಿಯರಿಗೆ ಬಾಟ್ಲಿ 1 ... ಬಾಟ್ಲಿಗೆ 1–1–0.

೭. ರಕ್ತ ಶುದ್ಧಿ ದ್ರಾವಕ.

ರಕ್ತ ಶುದ್ಧಿ ಬಾಟ್ಲಿ 1 ಕ್ಕೆ 1–4 0, 3 ಬಾ...

೮. ಜೀವನ ಪ್ರಾಸ ಡಬ್ಬಿ 1 ಕ್ಕೆ ...

ಎಲ್ಲಾ ನಮೂನೆಯ ಔಷಧಿಗಳು ದೊರೆಯುವುವು. ರೋಗದ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ಔಷಧ ರವಾನಿಸ ... ಕೆಟಲಾಗು ...

ಯಂ. ಗಣಪಯ್ಯ ಅಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ

52–50 ಕಥಬೀದಿ, ಮಂಗಳೂರು, ದ

ಚಿಕ್ಕ ಕೋಟೆ ಮಾಡಿ ಅದರಲ್ಲಿಯು ಪ್ರತಿಯೊಂದು ಗಿಡವನ್ನೂ ಚೆನ್ನಾಗಿ ಅದರ ಯಜಮಾನನಿಗೆ ಗೊತ್ತಿರುವಂತೆ, ಸರಕಾರದ ಮುಖ್ಯಾಧಿಕಾರಿಗಳಿಗೂ ಮತ್ತು ದೇಶದ ಮುಖ್ಯಸ್ಥರಿಗೂ, ಜನರ ಪ್ರತಿನಿಧಿಗಳಿಗೂ ದೇಶದಲ್ಲಿಯ ಎಲ್ಲಾ ಸಂಗತಿಗಳನ್ನೂ ಚೆನ್ನಾಗಿ ತಿಳಿದುಕೊಂಡು ಅವಶ್ಯವಿರುವಲ್ಲಿ ಕಂಡು ಕೊರತೆಗಳನ್ನು ಹೋಗಲಾಡಿಸಲು ಈಗಿರುವ ಹೆಚ್ಚಿನ ಅನ್ನದವು ಬಹಳವಾಗಿ ಕಮ್ಮಿಯಾಗುವುದು.

ಇವಿಷ್ಟು ಆದ ಮೇಲೆ ಬರುವ ವಾರದ ಪತ್ರಿಕೆಯಲ್ಲು ನನ್ನ ಸ್ವಂತ ಅಭಿಪ್ರಾಯವು (Individual Opinion) ಹೇಗಿನದೆಂದು ಬರೆಯಲು ಯೋಚಿಸಿರುತ್ತೇನೆ.

ತರುಣರಿಗೆ ಮಹಾತ್ಮರ ಸಂದೇಶ.

ಪಂಡಿತ ಜವಾಹಿರ ಲಾಲರು ಅಧ್ಯಕ್ಷರಾದದ್ದಕ್ಕಾಗಿ ಅವರನ್ನುದ್ದೇಶಿಸಿ ಮಹಾತ್ಮರು ತರುಣರಿಗೆ ಮಾಡಿದ ಉಪದೇಶ.

ಬರಿ ಯುವಕರಿಗೆ ಮಾತ್ರ ಇದು ಪರೀಕ್ಷೆಯ ಕಾಲವು ಯುವಕರ ಜಾಗ್ರತಿಯೇ ಈ ವರ್ಷದ ವೈಶಿಷ್ಟ್ಯವು ಸೈಮನ್ ಸಮಿತಿಯ ಬಹಿಷ್ಕಾರದ ಕಾಲಕ್ಕೆ ಅವರು ಮಾಡಿದ ಕಾರ್ಯವು ಹೊಗಳತಕ್ಕದೆಂಬುದರಲ್ಲಿ ಸಂದೇಹವಿಲ್ಲ ತಮ್ಮ ಕಾರ್ಯಕ್ಕೆ ದೊರೆತ ಗೌರವವೇ ಜವಾಹಿರ ಲಾಲರ ಆಯ್ಕೆಯೆಂದು ಅವರು ತಿಳಿದುಕೊಳ್ಳಲಿ. ಆದರೆ ಯುವಕರು ತಾವು ಮಾಡಿದ ಕಸರತ್ತುಗಳನ್ನೇ ಹೇಳಿಕೊಳ್ಳುತ್ತಾ ಹುಟ್ಟುಗಳನ್ನು ಬಿಟ್ಟುಕೊಂಡು ಕೂಡ್ರುವ ಸಮಯವಿದಲ್ಲ. ರಾಷ್ಟ್ರವು ಆತ್ಮ ಸ್ವರೂಪವನ್ನು ಹೊಂದಬೇಕಾದರೆ ಇನ್ನು ಎಷ್ಟೋ ಹೆಜ್ಜೆಗಳನ್ನು ನಾವು ನಡೆಯಬೇಕು. ಸಣ್ಣ ಪಾತ್ರೆಯಲ್ಲಿ ಬಂದಿಸಲ್ಪಟ್ಟ ಸಣ್ಣ ತೂತಿನಿಂದ ಹೊರಬಿದ್ದ ಉಗಿಯೇ ದೊಡ್ಡ ದೊಡ್ಡ ಭಾರಗಳನ್ನು ಮುಂದೊಯ್ಯಲು ಸಹಾಯಕವಾಗುತ್ತದೆಂಬುದನ್ನು ಮರೆಯಬಾರದು. ಅದರಂತೆಯೇ ದೇಶದ ಯುವಕರು ತಮ್ಮ ಶಕ್ತಿಯನ್ನು ನಿಯಮಿತವಾದ ಅಳತೆಯಿಂದ ಹೊರಗೆಡ ಹಬೇಕು. ರಾಷ್ಟ್ರವು ಯುವಕರಲ್ಲಿಟ್ಟ ನಂಬಿಕೆಯುದ್ಯೋತಕವೇ ಜವಾಹಿರ ಲಾಲರ ಆಯ್ಕೆಯು. ಜವಾಹಿರ ಲಾಲರೊಬ್ಬರಿಂದಲೇ ಎಲ್ಲವೂ ಸಾಧ್ಯವಿಲ್ಲ ದೇಶದ ಯುವಕರೇ ಅವರ ತೋಳ್ಗಳೂ, ಅವರ ಕಣ್ಣುಗಳೂ ಆಗಬೇಕು. ಯುವಕರು ದೇಶದ ನಂಬಿಗೆಗೆ ಅರ್ಹರೆಂಬುದನ್ನು ಸಿದ್ಧಮಾಡಿ ತೋರಿಸಲಿ

ಕೌನ್ಸಿಲು ಪ್ರಶ್ನೆಗಳು.

ಕೌನ್ಸಿಲ್ ಮೆಂಬರಾದ ಮಿ॥ ಕೆ ಪಿ. ಚಿಣ್ಣಪ್ಪನವರು ಸರಕಾರದಿಂದ ಉತ್ತರ ದೊರಕಿಸಲಿಕ್ಕೆ ಕಳುಹಿಸಿದ ಪ್ರಶ್ನೆಗಳು.—

I. (1) ಸೈಮನ್ ಕಮಿಶನಿನವರು ಕೊಡಗ ಸಭೆಯವರನ್ನು ಡೆಪ್ಯುಟೇಶನ್ ಕಳುಹಿಸಲಿಕ್ಕೆ ಕೇಳಿದರೋ ?

(2) ನಮ್ಮ ಸರಕಾರವು ಕೊಡಗ ಸಭೆಯವರನ್ನು ಡೆಪ್ಯುಟೇಶನು ಕಳುಹಿಸಬೇಕೆಂದು ಕೇಳಿದರೋ ?

(3) ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಕೊಡಗ ಸಭೆಯ ಡೆಪ್ಯುಟೇಶನ್ ಹೊರಡಿಸಲಿಕ್ಕೆ ತೊರಿದರೆ ಕೆಗೆದುಕೊಂಡದ್ದುಂಟೇ ನಿಜವೋ ?

(4) ಡೆಪ್ಯುಟೇಶನ್ ಹೋದವರಿಗೆ ಸರಕಾರದಿಂದ ಪತ್ರ ವೆಷ್ಟು ದೊರೆಯಿತು ? ಹಾಗಾದರೆ ಆ ಭಾಗ ವಕ್ಕದ ಹಣವೆಷ್ಟು ? ಹಣ ಯಾವ ಬಾಬಿನಿಂದ ?

(5) ಸರಕಾರದವರು ಕೊಡಗ ಸಭೆಯು ಸೈಮನ್ ಕಮಿಶನಿಗೆ ಕಳುಹಿಸಿದ ಮೆಮೋರಾಂಡಮಿನ ನಕಲೊಂದನ್ನು ಕೌನ್ಸಿಲಿನ ಮೇಜಿನ ಮೇಲೆ ಇಡುವರೋ ?

II (1) ನಮ್ಮ ಸರಕಾರದವರು ಸೈಮನ್ ಕಮಿಶನ್ನಿನಿಗೆ ಕೊಡಗಿಗೆ ಇನ್ನೂ ಸ್ವತಂತ್ರ ರಾಜಕೀಯ ದರ್ಜೆ ನ ಪಿಸ ಸು ಸಿಫಾರಸ್ಸು ಮಾಡಿದ್ದಾರೋ ? ಹಾಗಾದರೆ ಆ ಸಿಫಾರಸ್ಸಿನ ನಕಲೊಂದನ್ನು ಕೌನ್ಸಿಲಿನ ಮುಂದಿಡಬೇಕು ?

(2) ಕೊಡಗು ಜಮೀನ್ದಾರರ ಸಂಘದಲ್ಲಿ ಮತ್ತು ಕೌನ್ಸಿಲಿನಲ್ಲಿ ಮಂಜೂರಾದ ರಾಜಕೀಯ ರಚನಾತ್ಮಕವಾದ ಸಲಹೆಗಳನ್ನು ಈ ಸಂದರ್ಭದಲ್ಲಿ ಗಣನೆಗೆ ತೆಗೆದುಕೊಂಡಿದ್ದಾರೋ ?

III (1) ಬರುವ ಕೌನ್ಸಿಲ್ ಚುನಾವಣೆ (General election) ಘನ್ನ ಸೈಮನ್ ಕಮಿಷನ್ ರಿಪೋರ್ಟು ಆಗುವ ತನಕ ಬಾಕಿ ಇಡಬೇಕೆಂದು ಸರಕಾರದ ಅಭಿಲಾಷೆಯೋ ?

(2) ಈ ಸಂದರ್ಭದಲ್ಲಿ ವೈಸರಾಯರವರಿಂದ ಏನಾದರೂ ಸಲಹೆಯು ಬಂದಿದೆಯೋ ?

IV. (1) ಡಿ. ಪಿ ಡಬ್ಲ್ಯು. ಇಲಾಖೆಯವರ ಈಗಿನ ಕೆಲಸವು ಜನರಿಗೆ ತೃಪ್ತಿಕರವಾಗಿಲ್ಲವೆ ಇದಲು ಕಾರಣವೇನು ?

(2) ಡಿಪಾರ್ಟ್‌ಮೆಂಟಿನ ಅರ್ಧ ಮೇಲ್ವಿಚಾರಣೆಯನ್ನು ಮದ್ರಾಸು ಸರಕಾರದಲ್ಲಿಯೂ, ಅರ್ಧ ಚೀಫ್ ಕಮಿಶನರಲ್ಲಿಯೂ ಇಡಲು ಕಾರಣವೇನು ?

(3) ಇದನ್ನು ಪೂರ್ತಿಯಾಗಿ ಕಮಿಶನರ ಅಡಳಿತಕ್ಕೆ ಬಿಟ್ಟು ಕೊಡಲು ಕಷ್ಟವಿದೆಯೋ ?

(4) ಹಾಗಾದರೆ ಕಷ್ಟವೇನು ?

(5) ಕಷ್ಟವಿಲ್ಲದಿದ್ದರೆ ಕಮಿಶನರ ಆಡಳಿತಕ್ಕೆ ಒಳಪಡುವಂತೆ ಮಾಡುವುದು ಒಳ್ಳೆಯದಲ್ಲವೇ ?

V. ಅಪ್ಪಂಗಳ ಸೇತುವೆಯನ್ನು ರಿಪೇರಿ ಮಾಡಲಿಕ್ಕೆ ಕಳೆದ ವರ್ಷ ಮಂಜೂರಾದ ಹಣವೆಷ್ಟು ?

(2) ರಿಪೇರಿ ಸರಿಯಾಗಿ ಆಗಿತ್ತೋ ?

(3) ಸರಿಯಾಗಿ ಆಗಿದ್ದರೆ ಸೇತುವೆ ಹಾಳಾಗಲು ಕಾರಣವೇನು ?

VI. (1) ಮಡಿಕೇರಿ—ಮೂರ್ನಾಡು ರಸ್ತೆ 6ನೇ ಕಲ್ಲಿನಿಂದ ಹಾಕತ್ತೂರು, ಘಟ್ಟಗೋಡು, ಹೊಸಕೇರಿ ಕಟ್ಟೆಮಾಡಿಗಾಗಿ ಸಿದ್ದಾಪುರ ರಸ್ತೆಗೆ ಹೋಗುವ ಒಳರಸ್ತೆಯನ್ನು 1921—1922ರಲ್ಲಿ ಡಿಸ್ಟ್ರಿಕ್ಟ ಬೋರ್ಡಿನವರು (ನ್ಯಾಯವಾದ ರಸ್ತೆಯಾಗಿ) ಮಾಡಬೇಕೆಂದು ಅಭಿಪ್ರಾಯ ಪಟ್ಟಿದ್ದರೋ ?

(2) ಹಾಗಾದರೆ ಆಗ ಕೆಲಸವನ್ನು ಏಕೆ ಕೈಕೊಳ್ಳಲಿಲ್ಲ?

(3) ಈ ವರ್ಷದಲ್ಲಿ ಡಿಸ್ಟ್ರಿಕ್ಟ ಬೋರ್ಡು ಬಡ್ಜೆಟ್ಟಿನಲ್ಲಿ ಈ ರಸ್ತೆಗೆ ಹಣವೇನಾದರೂ ಮಂಜೂರಾಗಿದೆಯೋ ?

(4) ಹಾಗಾದರೆ ಮಂಜೂರಾದ ಹಣವೆಷ್ಟು ?

(5) ಇಲ್ಲವಾದರೆ ಈ ಗ್ರಾಮಕ್ಕಾಗಿ ಗಾಡಿ ರಸ್ತೆಯನ್ನು ಮಾಡಬೇಕೆಂದು ಡಿಸ್ಟ್ರಿಕ್ಟ ಬೋರ್ಡಿನವರು ಅಭಿಪ್ರಾಯ ಪಟ್ಟಿದ್ದಾರೋ ?

VII. (1) ಡಿಸ್ಟ್ರಿಕ್ಟ ಬೋರ್ಡಿನವರು ಬೆಳ್ಳುಮಾಡು ಸೇತುವೆಯ ಕೆಲಸವನ್ನು ಪೂರೈಸಲು ಹಣ ಮಂಜೂರ್ಮಾಡಿರುತ್ತಾರೋ ?

(2) ಹಾಗಾದರೆ ಮಂಜೂರಾದ ಹಣವೆಷ್ಟು ?

(3) ಮಂಜೂರ್ಮಾಡಿದ್ದರೆ ಈ ಕೆಲಸವನ್ನು ಕೈಕೊಳ್ಳುವುದು ಯಾವಾಗ ?

(4) ಈ ಸೇತುವೆ ಕೆಲಸ ಸುರು ಮಾಡಿದ್ದು ಯಾವಾಗ?

(5) ಈ ವರೆಗೆ ಈ ಕೆಲಸವನ್ನು ಪೂರೈಸದೆ ಇರಲಿಕ್ಕೆ ಕಾರಣಗಳೇನು ?

(6) ಡಿ. ಬಿ ಪ್ರೆಸಿಡೆಂಟರಾಗಲೀ, ವೈಸ್ ಪ್ರೆಸಿಡೆಂಟರಾಗಲೀ ಈ ಸೇತುವೆಯನ್ನು ನೋಡಿದ್ದಾರೋ ?

VIII (1) ಗ್ರಾಮ ಪಂಚಾಯಿತಿ ಆಕ್ಟನ್ನು ಜಾರಿಗೆ ತಾರದಿರಲು ಕಾರಣವೇನು ?

(2) ಸರಕಾರದವರು ಯಾವುದಾದರೂ ಗ್ರಾಮದಲ್ಲಿ ಯಾ ಗ್ರಾಮಗಳ ಕೂಟದಲ್ಲಿ ಈ ಪಂಚಾಯಿತಿಯನ್ನು ಪರೀಕ್ಷೆ ಸುವಂತೆ ತೊಂದರೆ ತೆಗೆದುಕೊಂಡಿರುವರೋ ?

(3) ಸರಕಾರದ ಇಂಥಾ ಅಭಿಪ್ರಾಯವನ್ನು ಜನರ ತಿಳುವಳಿಕೆಗಾಗಿ ಗಜೆಟಿನಲ್ಲಿ ಪ್ರಕಟಿಸಿ ಮಾಡಿರುವರೋ ?

IX (1) ಉತ್ತರ ಕೊಡಗು ತಾಲೋಕಿನ ಮಡಿಕೇರಿ ನಾಡು, ಫ್ರೇಜರ್‌ಪೇಟೆ ಮತ್ತು ಶನಿವಾರಸಂತೆ ಹೋಬಳಿಗಳ ಕೆಲವು ಗ್ರಾಮಗಳು ಬಹಳ ಅಶುಚಿಯಾಗಿರುವುದನ್ನು ಕುರಿತು ರೆವಿನ್ಯೂ ಆಫೀಸರುಗಳಾಗಲೀ ಯಾ ಸ್ಯಾನಿಟರೀ ಇನ್‌ಸ್ಪೆಕ್ಟರಾಗಲೀ ಸರಕಾರಕ್ಕೆ ರಿಪೋರ್ಟು ಮಾಡಿರುತ್ತಾರೋ ?

(2) ಹೀಗೆ ರಿಪೋರ್ಟು ಮಾಡುವುದು ಅವರ ಕೆಲಸಗಳಲ್ಲೊಂದಲ್ಲವೋ ?

(3) ರಿಪೋರ್ಟು ಮಾಡಿದ್ದರೆ ಸರ್ಕಾರವು ಈ ವಿಷಯ ಕೊಂದರೆ ತೆಗೆದುಕೊಂಡಿರುತ್ತಾರೋ ?

(4) ರಿಪೋರ್ಟು ಸಿಕ್ಕದಿದ್ದರೆ ಈ ವಿಷಯ ಅಜಮಾಯಿಸಿ ಮಾಡುತ್ತೀರೋ ?

(5) ಕಮಿಶನರ್ ಯಾ ಅಸಿಸ್ಟೆಂಟ್ ಕಮಿಶನರು ಇಂಥಾ ಅಶುಚಿಯಾಗಿರುವ ಗ್ರಾಮಗಳನ್ನು ಮಳೆಗಾಲದಲ್ಲಿ ಸಂದರ್ಶಿಸಿ ನೋಡಿದ್ದಾರೋ ?

X (1) ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಮತ್ತು ವೀರಾಜಪೇಟೆ ಮುನಸೀಫ್ ಕೋರ್ಟಿನಲ್ಲಿ 1926, 1927, 1928, ರಲ್ಲಿ ದಾಖಲಾಗಿರುವ ಸ್ಮಾಲ್‌ಕಾಸ್ ಮತ್ತು ಒರಿಜಿನಲ್ ಮೊಕದ್ದಮೆಗಳೆಷ್ಟು ? (ಪ್ರತ್ಯೇಕವಾಗಿ)

(2) ಈ ಎರಡು ಕೋರ್ಟುಗಳಲ್ಲಿ ಮೇಲಿನ ವರ್ಷಗಳಲ್ಲಿ ಕ್ರಿಮಿನಲ್ ಕೇಸುಗಳೆಷ್ಟು ? (ಪ್ರತ್ಯೇಕವಾಗಿ)

(3) ಒಟ್ಟು ಸಿಬ್ಬಂದಿ ಚಾರ್ಜು, ಸಂಬಳವೆಲ್ಲಾ ಕೂಡಿ ಪ್ರತ್ಯೇಕವಾಗಿ ಎರಡು ಕೋರ್ಟುಗಳಲ್ಲಿ ಎಷ್ಟು ?

ಮಾರಾಟಕ್ಕಿದೆ.

ಸುಂಟಿಕೊಪ್ಪನಾಡು ಚೇರಳ ಶ್ರೀಮಂಗಲ ಗ್ರಾಮದಲ್ಲಿ ಈ ಕೆಳಗಿನ ತಋಟವು ಮಾರಾಟಕ್ಕಿದೆ. 10 ಎಕ್ರೆ ಭೂಮಿ, ಇದರಲ್ಲಿ 50 ಬಟ್ಟಿಯಲ್ಲದೆ ಬಾಕಿ ಎಲ್ಲಾ ಸಾಗಾಗಿದೆ. 34.20 ಎಕ್ರೆ ಕಾಫಿ, ಇದರಲ್ಲಿ 10 ಎಕ್ರೆ ಚೆನ್ನಾಗಿದೆ. 16.70 ಎಕ್ರೆ ಬಾಣೆ ಮತ್ತು ಕಾಡು; ಇದು ಕಾಫಿ ಸಾಗುವಳಿಗೆ ಅನುಕೂಲವಾಗಿದೆ. ಅಲ್ಲದೆ ಕುಯ್ಯಲಿಕ್ಕೆ ಒಳ್ಳೇ ಮರಗಳೂ ಇವೆ.

ಈ ಸ್ಥಳದಲ್ಲಿ ಕಾಫಿ ಮತ್ತು ಭತ್ತದ ಬೆಳೆಯು ಚೆನ್ನಾಗಿ ಆಗುವುದಲ್ಲದೆ, ವಾಸಕ್ಕೂ ಒಳ್ಳೇ ಆರೋಗ್ಯಕರವಾಗಿದೆ.

ಕ್ರಯ ಮತ್ತು ಬೆಟ್ಟಿನ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

'S'

C/o. ಮೇನೇಜರು

"ಕೊಡಗು"

ಮಡಿಕೇರಿ.

4—4

ಹೊಸ ಸ್ಟಾಕು ! ಬೆಲೆ ಅಗ್ಗ !

ಕೊಡಗು ಉಪಾಧ್ಯಾಯರ ಮಿತಿಯುಳ್ಳ ಸಹಕಾರ ಸ್ಟೋರ್.

ವೀರಾಜಪೇಟೆ.

ಮೇಲಿನ ಸ್ಟೋರಿನಲ್ಲಿ ಎಲ್ಲಾ ಶಾಲಾ ಪುಸ್ತಕಗಳು, ಕಾಗದ, ಮಶಿ, ಪೆನ್ ಇತ್ಯಾದಿ ಸ್ಟೇಷನರಿ ಸಾಮಾನುಗಳು, ಹಾಕಿ, ಕ್ರಿಕೆಟ್, ಫೂಟ್‌ಬಾಲ್ ಮತ್ತು ಟೆನ್ನಿಸ್ ವಗೈರೆ ಆಟದ ಸಾಹಿತ್ಯಗಳು; ಮತ್ತು ಜರ್ಮನಿ ದೀಪಗಳು, ಕೊಡೆಗಳು ಇತ್ಯಾದಿ ಸುಲಭ ಕ್ರಯಕ್ಕೆ ದೊರೆಯುವವು.

ಬಂದು ನೋಡಿ ! ಕೊಂಡು ಕೊಳ್ಳಿ !!

12—3

Wanted.

ALL INDIA CROP INSURANCE & GENERAL DEVELOPMENTS LTD.

Mahabub Mahal Royapettah,

Head Office:— MADRAS.

AUTHORISED CAPITAL—	SIX CRORES.
PAID UP CAPITAL—	54,20,240.
Taluq Banking agents / " Deputy Superintendents	80—8—160
Savings Bank depot clerks	25/—
Village agents	20—2—40.

Applicants should be in a position to subscribe for shares of 500/—200/—150/— of the Company respectively after selection and execute a fidelity bond as per instructions from Head Office. They must clearly state their qualifications. For particulars apply to the Head Office or

THE DEPUTY SUPERINTENDANT,

HAMPANKATTA,

MANGALORE.

52—4

"MAJESTIC VOICE" PORTABLE GRAMAPHONE

ಮೊದಲಿನ ಕ್ರಯ ರೂ. ೩೫-೦-೦. ಈಗಿನ ಕ್ರಯ ರೂ. ೧೨-೦-೦.

"ಮೆಜೆಸ್ಟಿಕ್ ವಾಯ್ಸ್" ಗ್ರಾಮಫೋನ್

(ಎಂಬ ಹಾಡುಗಾರಿಕೆಯ ಯಂತ್ರ)



ಈ ಯಂತ್ರಗಳ ವಿಕ್ರಯದಲ್ಲಿ ತಯಾರಾದವು ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿರುವಂತೆಯೂ ಒಬ್ಬ ... ದ ಈ ಯಂತ್ರವನ್ನು ತಯಾರಿಸಿ. ಇಂಗ್ಲಿಷು, ಕನ್ನಡ ಹಿಂದೂಸ್ಥಾನಿ ಮುಂತಾದ ಬಾಷೆಗಳಲ್ಲಿ (ರಿಕಾರ್ಡು) ಪದಗಳನ್ನು ಕೇಳುವುದು. ಅಲ್ಲದೆ ಮನೆ, ನಾಟಕ ಶಾಲೆ ಮುಂತಾದ ಶುಭ ದಿವಸಗಳಲ್ಲಿ ಉಪಯೋಗಿಸಲು ಬಹು ಚೆನ್ನಾಗಿರುವುದು. ... ಪದ ಹೇಳುವ ಹಾರ್ನ (Horn) ... ಇದೆ. ನಿಧಾನವಾಗಿಯೂ, ಜಾಗ್ರತೆಯಾಗಿಯೂ ಪದ ಕೇಳಿಸಲು (Fast and Slow Regulator) ... ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ... ಪೆಟ್ಟಿಗೆಯಲ್ಲಿಟ್ಟಿದೆ. ಇಂಥ ನಾದವುಳ್ಳ ಗ್ರಾಮೋಫೋನು ... ಸುಲಭ ಕ್ರಯಕ್ಕೆ ಮತ್ತೆಲ್ಲಿಯೂ ದೊರೆಯಲಾರದು. ಎರಡು ಕಡೆಯೂ ಪದವಿರುವ ... ರೆಕಾರ್ಡ, ಸೂಚಿ ಪೆಟ್ಟಿಗೆ ಮತ್ತು ಯಂತ್ರ ಸಹಿತ ಕ್ರಯ ರೂ. ೧೨ ಪ್ರತ್ಯೇಕ ರೆಕಾರ್ಡ ರೂ. ೨—೦—೦.

ಟಪ್ಪಾಲು ಖರ್ಚು ಇಲ್ಲ (Free)

American Gramaphone Co,

Post Box No 538,

Park Town, Madras.

TELLICHERRY TILES COMPANY, LIMITED.

ತಲಚೇರಿ ಹಂಚುಗಳ ಕಂಪೆನಿ ಲಿಮಿಟೆಡ್.

(1913ರ ಇಂಡಿಯನ್ ಕಂಪೆನಿಗಳ VII ಆಕ್ಟಿನ ಮೇರೆ ಸ್ಥಾಪಿತವಾದದ್ದು)

ಭಂಡವಾಳ: (ಎರಡು ಲಕ್ಷ) ರೂ. ೨,೦೦,೦೦೦.

೨೫ ರೂಪಾಯಿಯ ೮೦೦೦ ಸಾಧಾರಣ ಪಾಲುಗಳಾಗಿ ಹಂಚಲ್ಪಟ್ಟಿವೆ.

ಈಗ ಹಂಚುವಂಥಾದ್ದು—೨೫ ರೂಪಾಯಿಯ ೪೦೦೦ ಪಾಲುಗಳು—ಈ ಕೆಳಗಿನ ಮೇರೆ ಸಲ್ಲಿ ಸಮಾಡತಕ್ಕದ್ದು.

ಅಪ್ಲಿಕೇಶನ್ ಕೊಡುವಾಗ ಪಾಲು ಒಂದರ ೧೦ ರೂ.
ಹಂಚಿದಾಗ ,, ೫ ,,

Directors ಡೈರೆಕ್ಟರುಗಳು.

1. ಮಿ. ಕೆ. ಟಿ. ಚಾತುಕುಟ್ಟಿ ನಂಬಿಯಾರ್, ಲ್ಯಾಂಡ್ ಲಾರ್ಡ್, ಕಲಿಯಾಟ್, ಇರಿಕೂರ್ ಪೋಸ್ಟ್, ಉ. ಮಲಬಾರ್.
2. ,, ಎ. ಕೆ. ಕುನ್ಹಿಮಾಯನ್ ಹಾಜಿ, ಮರ್ಚೆಂಟ್ ಮತ್ತು ಲ್ಯಾಂಡ್ ಲಾರ್ಡ್, ವೈಸ್ ಪ್ರೆಸಿಡೆಂಟ್, ಚಿರಕಲ್ ತಾಲೂಕು ಬೋರ್ಡ್; ಡೈರೆಕ್ಟರ್, ದಿ ಕೊಹಿನೂರು ಸಾ ಮಿಲ್ ಕೊ., ಲಿಮಿಟೆಡ್, ಬಲಿಯಾಪಟಮ್ ಪೋಸ್ಟ್.
3. ,, ಸಿ. ಸಾಮುವೇಲ್ ಆರೋನ್, ಪಾರ್ಟ್ನರ್, ಮೆಸರ್ಸ್ ಸಿ. ಆರೋನ್ ಅಂಡ್ ಸನ್ಸ್; ಡೈರೆಕ್ಟರ್, ಮೆಟಲ್ ಇಂಡಸ್ಟ್ರೀಸ್, ಲಿಮಿಟೆಡ್, ಶೊರನೂರು, ಪಾಪ್ಪಿನಿಸರಿ ಪೋಸ್ಟ್, ಉ. ಮಲಬಾರ್.
4. ,, ಕೆ. ಕೆ. ಸುಬ್ಬರಾವ್, ಮರ್ಚಂಟ್, ಚೇರ್ಮನ್, ಮುನ್ಸಿಪಲ್ ಕೌನ್ಸಿಲ್, ಕಣ್ಣಾನೂರು.

Managing Agents ಮೇನೆಜಿಂಗ್ ಏಜೆಂಟರು.

ಮೆಸರ್ಸ್ ಸಿ. ಆರೋನ್ ಅಂಡ್ ಸನ್ಸ್, ಪಾಪ್ಪಿನಿಸರಿ, ಉ. ಮಲಬಾರ್.

Bankers ಬ್ಯಾಂಕುಗಳು.

ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯ, ತಲಚೇರಿ.
ಕಣ್ಣಾನೂರು ಬ್ಯಾಂಕ್, ಲಿಮಿಟೆಡ್, ಕಣ್ಣಾನೂರು.

ಪ್ರಾಸ್ಪೆಕ್ಟಸಿಗೆ ಮೇನೆಜಿಂಗ್ ಏಜೆಂಟರುಗಳಿಗೆ ಬರೆಯಿರಿ.

4—1

ಕರ್ನಾಟಕದ ತರುಣರೇ, ಕರ್ನಾಟಕ ಸೇವಾದಲವನ್ನು ನಿಮ್ಮ ಕೈಯಲ್ಲಿ ತೆಗೆದುಕೊಳ್ಳಿರಿ.

ಕರ್ನಾಟಕ ಸೇವಾದಲವು ಪ್ರಾರಂಭವಾಗಿ ಈವತ್ತಿಗೆ ೭-೮ ವರ್ಷಗಳಾಗಿದ್ದು ಇಲ್ಲಿಯ ವರೆಗೆ ನಾನೇ ಅದರ ಕಾರ್ಯದರ್ಶಿಯಾಗಿ ಕೆಲಸಮಾಡುತ್ತಿದ್ದೇನೆ; ಆದರೆ ಇನ್ನು ಮುಂದೆ ಈ ಕಾರ್ಯವನ್ನು ಮಾಡಲು ಕರ್ನಾಟಕದಲ್ಲಿ ಮತ್ಯಾರಾದರೂ ಹೊಸ ಹುರುಪಿನ ತರುಣರು ಸಿದ್ಧರಾಗಬೇಕೆಂದು ಇಚ್ಛಿಸುತ್ತೇನೆ. ಅದ್ದರಿಂದಲೇ ಸೇವಾದಲದ ಕಾರ್ಯಮಾಡುವ ಆಸ್ಪದವು ದೊರೆತು ತರುಣರು ಕರ್ನಾಟಕ ಸೇವಾದಲದ ಮಂಡಲದಲ್ಲಿ ಸೇರಿ, ದಲದ ಕಾರ್ಯವನ್ನು ಮುಂದುವರಿಸಬೇಕೆಂದು ಒಂದು ಲೇಖನವನ್ನು ನಾನು ಹೋದ ವರ್ಷ ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧ ಮಾಡಿದ್ದೆನು. ಆದರೆ ಅದಕ್ಕೆ ಉತ್ತರವು ಯಾರ ಕಡೆಯಿಂದಲೂ ಬರಲಿಲ್ಲವೆಂದು ಹೇಳಲು ವಿಷಾದವಾಗುತ್ತದೆ.

ಸೇವಾದಲವು ಉಪಯುಕ್ತವಾದ ಕಾರ್ಯವನ್ನು ಮಾಡುತ್ತಿರುವುದೆಂದು ಎಷ್ಟೋ ಜನರು ಅಭಿಪ್ರಾಯಪಡುತ್ತಿರುವರು. ಅದರಂತೆ ಅದರ ಕಾರ್ಯದ ವಿಷಯವಾಗಿ ಆಕ್ಷೇಪಗಳನ್ನು ಎತ್ತುವವರೂ ಕೆಲವರುಂಟು. ಹೀಗೆ ಆಕ್ಷೇಪಗಳನ್ನು ಎತ್ತುವವರು ಕೇವಲ ಹುಳುಕು ತೆಗೆಯುವ ಕೆಲಸಗಳನ್ನಷ್ಟೇ ಮಾಡುತ್ತ ಸೇವಾದಲದಿಂದ ದೂರ ಉಳಿಯದೆ, ಅವರು ಆ ಸಂಸ್ಥೆಯಲ್ಲಿ ಸೇರಿ, ಅದರಲ್ಲಿ ಆಕ್ಷೇಪಾರ್ಹವಾದಂಥದ್ದೇನಾದರೂ ಇದ್ದಲ್ಲಿ ಅದನ್ನು ಸುಧಾರಿಸಿ ಇನ್ನು ಮುಂದೆ ಸೇವಾದಲದ ವಿಷಯವಾಗಿ ಆಕ್ಷೇಪಗಳು ಬರಲು ಆಸ್ಪದ ಉಳಿಯದಂತೆ ಪ್ರಯತ್ನ ಮಾಡಬೇಕಾಗಿ ಪ್ರಾರ್ಥನೆಯಿದೆ.

ಕರ್ನಾಟಕ ಸೇವಾದಲದ ಕಾರ್ಯದ ಭಾರವನ್ನು ಕೇವಲ ಹೊಸ ಹುರುಪಿನ ತರುಣರ ಮೇಲೆ ಹಾಕಬೇಕೆಂದು ನಾನು ಇಚ್ಛಿಸುತ್ತಿದ್ದೇನೆಂದು ಮೇಲೆ ಹೇಳಿದ್ದೇನೆ. ಹೀಗೆಂದ ಮಾತ್ರಕ್ಕೆ ನಾನು ಅದರ ಸಂಬಂಧವನ್ನು ಸಂಪೂರ್ಣವಾಗಿ ಬಿಟ್ಟುಬಿಡುತ್ತೇನೆಂದು ಯಾರೂ ತಿಳಿಯಬಾರದು. ಅದರ ಕಾರ್ಯವಾಹಕರಿಗೆ ನಾನು ಬೇಕಾದ ಸಹಾಯವನ್ನು ಮಾಡುವುದಕ್ಕೆ ಸಿದ್ಧನಿದ್ದೇನೆ. ಅದರ ಕಾರ್ಯದರ್ಶಿತ್ವದ ಕಾರ್ಯಕ್ಕಾದರೂ ನುರಿತವರು ಬೇಕಾಗುತ್ತಾರೆಂಬುದನ್ನು ನಾನು ಬಲ್ಲೆನು. ಸದ್ಯಕ್ಕೆ ಸೇವಾದಲದ ಕಚೇರಿಯಲ್ಲಿ ಎರಡೆರಡು ವರ್ಷ ಕಾರ್ಯಮಾಡಿ ನುರಿತವರಾದ ಶ್ರೀ. ರಾ. ವೆ. ಕರಗುದರಿ ಮತ್ತು ಶ್ರೀ. ನಾ. ಥ. ಮಳಗಿ ಇವರಲ್ಲಿ ಯಾರಾದರೊಬ್ಬರನ್ನು ಕರ್ನಾಟಕ ದಲದ ಕಾರ್ಯದರ್ಶಿಯನ್ನಾಗಿ ಮಾಡಬೇಕೆಂದು ಆಲೋಚಿಸಿದ್ದೇನೆ. ಇದರಂತೆಯೇ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯ ತರುಣರು ಈ ಮಂಡಲದಲ್ಲಿ ಸೇರಿ ಇಂಥ ಸುಸ್ವಭಾವವನ್ನು ನಡೆಯಿಸಲು ಕಲಿತುಕೊಳ್ಳಬೇಕು. ಮತ್ತು ಹೆಚ್ಚಿನ ದೇಶಸೇವೆಯನ್ನು ಮಾಡಲು ಸಿದ್ಧರಾಗಬೇಕೆಂದು ಬಯಸುತ್ತೇನೆ.

ಕರ್ನಾಟಕದಲ್ಲಿಯ ಕಾರ್ಯಕಾರೀ ಮಂಡಲದಲ್ಲಿ ಸೇರಿ ಕಾರ್ಯ ಮಾಡಲಿಚ್ಛಿಸುವವರು ಸೇವಾದಲದ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಂಡು ಅದರ ಕಾರ್ಯವನ್ನು ಸಾಗಿಸುವ ಹೊಣೆಗಾರಿಕೆಯನ್ನು ಹೊರುವ ಸಿದ್ಧತೆಯಿಂದ ತಮ್ಮ ಹೆಸರನ್ನು ನವಂಬರ್ ತಿಂಗಳ ೧೫ನೆಯ ತಾರೀಖಿನೊಳಗಾಗಿ ಹುಬ್ಬಳ್ಳಿಯ ಸೇವಾದಲದ ಕಚೇರಿಗೆ ಬರೆದು ತಿಳಿಸಬೇಕು. ಕರ್ನಾಟಕ ದಲದ ಮಂಡಲ (ಬೋರ್ಡು)ದ ಹೊಸ ಚುನಾವಣೆಯಾಗುವುದರೊಳಗಾಗಿಯೇ ಈ ಹೆಸರುಗಳು ನಮ್ಮ ಕಡೆಗೆ ಬರಬೇಕಾಗುವುದು. ಆದ್ದರಿಂದ ಮೇಲ್ಕಂಡ ಅವಧಿಯಲ್ಲಿಯೇ ತಮ್ಮ ಹೆಸರುಗಳನ್ನು ಕಳುಹಿಸುವ ಕೃಪೆಮಾಡಬೇಕು. ನನ್ನ ವಿನಂತಿಯು ಅಲಕ್ಷಿಸಲ್ಪಡದೆ ಕರ್ನಾಟಕ ಮಾತೆಯ ಸೇವೆಯನ್ನು ಮಾಡಲು ಹೆಚ್ಚು ಜನರು ಮುಂದೆ ಬರುವರೆಂದು ದೃಢವಾಗಿ ನಂಬಿದ್ದೇನೆ.

ಈ ವಿಷಯವನ್ನು ನಾನು ತಮ್ಮೆಲ್ಲರೆದುರಿಗೆ ಈಗ ಎರಡನೆಯ ಸಾರಿ ಇಡುತ್ತಿದ್ದೇನೆ. ಈಗ ಸಹ ಯಾರೂ ಇದರ ಕಡೆಗೆ ಲಕ್ಷ್ಯ ಕೊಡದಿದ್ದರೆ ನನ್ನ ಕಡೆಗೆ ಯಾವ ದೂರೂ ಉಳಿಯುವುದಿಲ್ಲ. ಆ ವೇಳೆ ಯಾವದಾದರೂ ಆಕ್ಷೇಪಗಳು ಈ ಚುನಾವಣೆಯ ಸಂಬಂಧವಾಗಿ ಸೇವಾದಲದ ಮೇಲೆ ಹೊರಿಸಲ್ಪಟ್ಟರೆ ಅದಕ್ಕೆ ನಾನು ಹೊಣೆಗಾರನಾಗಲಾರೆನು.

ಸೇವಾದಲದ ಕಚೇರಿ, ನಾ. ಸು. ಹರ್ಡೀಕರ್,
ಹುಬ್ಬಳ್ಳಿ, ಕಾರ್ಯದರ್ಶಿ,
ತಾ. ೧೯—೧೦—೨೯. ಕರ್ನಾಟಕ ಸೇವಾದಲ.

ಕರ್ನಾಟಕ ಏಕೀಕರಣದ ಕೊರತೆಗಳು.

(ಕೆ. ಮಂ. ಪೂವಯ್ಯನವರಿಂದ)

ಕಳೆದ ವಾರದ ಪತ್ರಿಕೆಯಲ್ಲಿ ಕರ್ನಾಟಕ ಏಕೀಕರಣದಿಂದ ಕೊಡಗಿಗೆ ಲಭಿಸುವ ಪ್ರಯೋಜನಗಳನ್ನು ಸೂಚಿಸಿದ ಮೇಲೆ ಈಗ ಅದರಿಂದಲೇ ಕೊರತೆಗಳೇನಿರಬಹುದೆಂಬ ವಿಷಯವನ್ನು ವಾಚಕರ ಅವಗಾಹನೆಗೆ ತರುವೆನು.

ಕೊಡಗು ದೇಶದ ನಿವಾಸಿಗಳು ಅನೇಕ ನಡತೆ ನೀತಿಗಳಲ್ಲಿ ಇಂಡಿಯಾ ದೇಶದ ಬೇರೆ ಜನರಿಗಿಂತ ಬಹಳವಾಗಿ ಮುಂದಿರುವರು. ಹೀಗಿರುವುದರಿಂದ ನಾವು ಇಂಡಿಯಾ ದೇಶದ ಯಾವ ಭಾಗಕ್ಕೆ ಹೋದರೂ ನಾವು ನಮ್ಮ ವ್ಯಕ್ತಿತ್ವವನ್ನೂ (Individuality) ಈ ವ್ಯಕ್ತಿತ್ವಕ್ಕೆ ಸಹಾಯವಾಗಿರುವ ನಮ್ಮ ಭಾಷೆಯನ್ನೂ ನಾವು ಕರ್ನಾಟಕ ಭಾಗವಾದಲ್ಲಿ ಕಳಕೊಳ್ಳುವೆವು. ಉತ್ತರ ಹಿಂದೂಸ್ಥಾನದಲ್ಲಿ ಅನೇಕ ಹಿಂದೂಗಳು ಮಹಮ್ಮದೀಯರಂತೆಯೇ ಗೋಷಾ ಪದ್ಧತಿಯನ್ನು ಅನುಸರಿಸುವರು. ತಮೋಗುಣದಲ್ಲಿಯೇ ನಮ್ಮ ಜನರೂ ಸಹ ಪರದೇಶದವರ ಕೆಲವು ದುರಾಚಾರಗಳನ್ನು ಅನುಷ್ಠಾನದಲ್ಲಿಟ್ಟುಕೊಳ್ಳುವ ಸಂಭವವಿರುವುದು.

ನಮ್ಮ ದೇಶದ ಹುಟ್ಟುವಳಿಯು ಕಡಿಮೆಯಾಗಿರುವುದರಿಂದ ಕಂದಾಯವು ಒಡನೆ ಹೆಚ್ಚಿಸಲ್ಪಡಬೇಕಾದ ಸಂದರ್ಭ ಬರುವುದು. ಭೂಲೋಕದಲ್ಲಿಯ ಎಲ್ಲಾ ದೇಶಗಳಲ್ಲಿಯೂ ಜನ ಸಾಮಾನ್ಯವು ವಿಸ್ತಾರವಾದ ಪ್ರಕಾರ ಮೂರು ತರಗತಿಗಳಿಗೆ ವಿಂಗಡಿಸಲ್ಪಡುತ್ತದೆ. 1. Upper Class ಮೇಲಿನ ತರಗತಿ, 2. Middle Class, ಮಧ್ಯಮ ತರಗತಿ, 3. Lower Class, ಕೆಳಗಿನ ತರಗತಿ. ಇದರಲ್ಲಿ ಎಲ್ಲಾ ದೇಶಗಳಲ್ಲಿಯೂ ವಾಡಿಕೆಯಾಗಿ ಮೇಲಿನ ತರಗತಿಯ ಧನಿಕರು ಬಹಳ ಕಮ್ಮಿ; ಮಧ್ಯಮ ತರಗತಿಯ ಜನರು ಅವರಿಗಿಂತ ಕೊಂಚ ಹೆಚ್ಚಿರುವರು. ಕೆಳಗಿನ ತರಗತಿಯವರು ವಾಡಿಕೆಯಾಗಿ ಎಲ್ಲಾ ದೇಶಗಳಲ್ಲಿಯೂ ಅಪರಿಮಿತವಾಗಿರುವರು. ಯಾವ ದೇಶದಲ್ಲಿ ಜನರು ಹೆಚ್ಚಾಗಿ ಮಧ್ಯಮ ತರಗತಿಯವರಾಗಿರುವರೋ ಆ ದೇಶವು ಮತ್ತು ಅದರ ಜನರು ಅಭಿವೃದ್ಧಿಸ್ಥಿತಿಯಲ್ಲಿರುವರೆಂದೇ ಅಭಿಪ್ರಾಯ. ಯಾವ ದೇಶದಲ್ಲಿ ಕೊಂಚ ಐಶ್ವರ್ಯವಂತರೂ, ಅಪರಿಮಿತವಾದ ಮೂರನೇ ತರಗತಿಯ ಜನರು ಇರುವರೋ ಆ ದೇಶವು ಹೆಚ್ಚು ಅಭಿವೃದ್ಧಿಯಲ್ಲಿರುವುದು ಕಡಿಮೆ, ಮತ್ತು ಅಲ್ಲಿಯ ಜನರು ಸಹ ಸುಖಿಗಳಾಗಿರುವುದು ಅಸಾಧ್ಯ. ಆ ದೇಶಗಳಲ್ಲಿ ಬಹುಮಂದಿಯು ದುಃಖದಿಂದ ಕೆಲವರು ಸಾಲ ಭಾಧೆಗಳಾಗಿರುವರು.

ಕೊಡಗು ದೇಶದಲ್ಲಿ ಯಾವ ಪುಣ್ಯದಿಂದಲೋ ಇಂಡಿಯಾ ದೇಶದ ಬೇರೆ ಕಡೆಗಳಲ್ಲಿ ನೆಲೆಗೊಂಡಿರುವ ಸ್ಥಿತಿಯು ನೆಲೆಗೊಂಡಿರುವುದಿಲ್ಲ. ಇದಕ್ಕೆ ಕಾರಣವು ನಮ್ಮ ಜಮ್ಮಾ ಹಿಡುವಳಿಯೇ. ನಮ್ಮ ದೇಶದಲ್ಲಿ 1ನೇ ತರಗತಿಯ ಜನರು ಬಹು ಕಮ್ಮಿ ಮತ್ತು ಮೂರನೇ ತರಗತಿಯ ಜನರು ಸಹ ವಿಪರೀತವಾಗಿರುವುದಿಲ್ಲ. ಇರುವುದೇ ಹೆಚ್ಚಾಗಿ ಎರಡನೇ ತರಗತಿ ಜನರು. ಬಹುಶಃ ಆ ಎರಡನೇ ತರಗತಿಯವರನ್ನು ಅವರವರ ನೆಮ್ಮದಿಗನುಸಾರವಾಗಿ ಎರಡು ಪಂಗಡ ಮಾಡಬಹುದು. Upper middle Class ಮತ್ತು Lower middle Class ಹೀಗಾದುದರಿಂದ ಪರಸ್ಪರ ಭಿನ್ನಭೇದ ಮತ್ತು ಅಸಮಾಧಾನವಿಲ್ಲದೆ ಜನರು ತಕ್ಕ ಮಟ್ಟಿಗೆ ಸುಖಿಗಳಾಗಿರುವರು. ಅಲ್ಲದೆ ಸಮಾಜ ಕಟ್ಟು ಕಟ್ಟಳೆಗಳು ಕೇವಲ ಭದ್ರವಾಗಿರುವುದರಿಂದ ಜನರ ಸಾಮಾಜಿಕ ಸುಖವು ಸುಲಭದಲ್ಲಿ ನಾಶವಾಗಲು ಸಾಧ್ಯವಿಲ್ಲ.

ಕೊಡಗು ಕರ್ನಾಟಕ ಭಾಗವಾದಲ್ಲಿ ಜನರ ಹೆಚ್ಚಿನ ಕಂದಾಯ ತೆರಬೇಕಾಗುವುದಲ್ಲದೆ ನಮ್ಮ ಜಮ್ಮಾ ಹಿಡುವಳಿಯ ಹಕ್ಕು ಸಹ ಕ್ರಮೇಣ ಮಾಯವಾಗುವುದು. ಜಮ್ಮಾದ ಹಕ್ಕು ತಪ್ಪಿದಲ್ಲಿ ನಮ್ಮ ಕೊಡಗರ ಕುಟುಂಬ ಜೀವನದ ಕಳವಳಿಯೇ ಮರೆಯಾದಂತಾಗುವುದು. ನಮ್ಮ ಜಮ್ಮಾ ಹಿಡುವಳಿಯೆಲ್ಲವೂ ಪರದೇಶೀ ಐಶ್ವರ್ಯವಂತರ ಕೈಸೇರಿ ಇಂಡಿಯಾ ದೇಶದ ಬೇರೆ ಕಡೆಗಳಲ್ಲಿರುವಂತೆ ಕೊಡಗಿನಲ್ಲಿಯ ಮಧ್ಯಮ ತರಗತಿಯ ಜನರೆಲ್ಲರೂ (Lower class) ಕೆಳಗಿನ ತರಗತಿಗಿಳಿಯುವರು. ಹೀಗಾದಲ್ಲಿ ಈಗಿನ ಜಮ್ಮಾ ಹಿಡುವಳಿದಾರರು ತಮ್ಮ ಕಿಂಚಿತ ಭೂಮಿಯನ್ನು ತಾವೇ ವ್ಯವಸಾಯ ನಡೆಸಿ ಜೀವನ ಮಾಡುವುದು ಹೇಗೆ ... ... ಇದು ವರೆಗೆ ... ... ಕೊಡಗಿನಲ್ಲಿ ವಾಡಿಕೆಯಾಗುವುದು. ... ದೇಶದಲ್ಲಿ ಬಡ್ಡಿಗಳು ಮತ್ತು ವಾರಗಳಾರು ಇರುವುದರಿಂದ ಯಾವ ಯಾವ ಕಷ್ಟಗಳು ಬರುತ್ತಿವೆಯೆಂದು ವಾಚಕ ಮಹಾಶಯರಿಗೆ ತಿಳಿಯದಿರದು. ಜಮೀನೆಲ್ಲವೂ ಧನಿಕರಾದ ಕೆಲವು ಜನರ ಕೈಸೇರಿದ ಮೇಲೆ ಬಡವರಿಗೆ ಯಾವ ತರದ ಕಷ್ಟಗಳು ಬರುವುದೆಂದು ಈಗಲೇ ಪೂರ್ತಿಯಾಗಿ ನಿರೀಕ್ಷಿಸಲು ಸುಲಭ ಸಾಧ್ಯವಲ್ಲ.

ಈಗಿರುವ ಪ್ರತ್ಯೇಕ ಕೌನ್ಸಿಲ್ (Council) ಹೋಗಿ ಕರ್ನಾಟಕದ ಕೌನ್ಸಿಲಿಗೆ (Karnataka Legislative Council) ನಾಲ್ಕೈದು ಪ್ರತಿನಿಧಿಗಳನ್ನು ಕಳುಹಿಸಬಹುದು. ಹೀಗಾದಲ್ಲಿ ಈಗ್ಯೆ ಸಾಧ್ಯವಾಗಿರುವ ಹಾಗೆ ಕೊಡಗಿನಲ್ಲಿಯ ಅನೇಕ ಚಿಲ್ಲರೆ ಸಂಗತಿಗಳ ವಿಷಯ ಕರ್ನಾಟಕ ಕೌನ್ಸಿಲಿನಲ್ಲಿ ಚರ್ಚಿಸಲು ಅಸಾಧ್ಯ. ಈಗಲಾದರೋ, ಒಂದು

ಚಂದಾದಾರರಲ್ಲಿ ವಿನಂತಿ.

ನಮ್ಮ ಪತ್ರಿಕೆಯನ್ನು ತರಿಸುವ ಕೆಲವು ಚಂದಾದಾರರು ಅವಧಿ ತೀರಿದರೂ ಕೂಡ ಚಂದಾ ಹಣ ಪಾವತಿ ಮಾಡದೆ ಇರುವವರಿಗೂ, ಸ್ವಲ್ಪ ಅಡ್ವಾನ್ಸು ಕೊಟ್ಟು ಬಾಕಿ ಮೊಬಲಗನ್ನು ಕಾಲಕ್ಕೆ ಸರಿಯಾಗಿ ಪಾವತಿ ಮಾಡದೆ ಇರುವವರಿಗೂ ಬಾಕಿ ಹಣಕ್ಕೆ ಪತ್ರಿಕೆಯನ್ನು ವಿ ಪಿ ಮಾಡಿ ಕಳುಹಿಸಬೇಕೆಂದು ನಮ್ಮ ಏಜೆಂಟರವರು ಬರೆಯುತ್ತಾರೆ. ಆದರೆ ವಿ. ಪಿ. ಮಾಡಿ ಕಳುಹಿಸಿದರೆ ಚಂದಾದಾರರು 3 ಆಣೆ ವಿ ಪಿ ಚಾರ್ಜನ್ನು ಹೆಚ್ಚಾಗಿ ಕೊಡಬೇಕಾಗುವುದರಿಂದ, ಅಂಥಾ ಚಂದಾದಾರರು ಬಾಕಿಯಾಗಿರುವ ಮೊಬಲಗನ್ನು ನಮ್ಮ ಆಫೀಸಿಗಾಗಲೀ, ಇಲ್ಲವೇ ನಮ್ಮ ಏಜೆಂಟರಿಗಾಗಲೀ ಕೂಡಲೇ ಪಾವತಿ ಮಾಡಿ ರಶೀತಿ ಪಡೆದುಕೊಳ್ಳಬೇಕಾಗಿ ಕೋರುತ್ತೇವೆ.

"ಕೊಡಗು" ಲಿಮಿಟೆಡ್
ಮಡಿಕೇರಿ. ಮೇನೇಜರು,

ವರ್ತಮಾನ ಸಂಗ್ರಹ.

ಒಳದೇಶ.

ಚೀಫ್ ಕಮಿಷನರವರು ಈ ತಾ 29ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬರುವರೆಂದು ವರ್ತಮಾನ

ಈ ತಾ 27ರಲ್ಲಿ ಎಂದಿನಂತೆ ಕುಶಾಲನಗರದಲ್ಲಿ ರಾಷ್ಟ್ರೀಯ ಧ್ವಜಾಭಿವಂದನೆಯು ನಡೆಯುವುದು.

ಕೊಡಗು ಎತ್ಲೆಟಿಕ್ ಎಸೋಸಿಯೇಶನ ಜನರಲ್ ಮೀಟಿಂಗೊಂದು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಈ ತಾ. 26ರಲ್ಲಿ ನಡೆಯುವುದೆಂದು ತಿಳಿಯುತ್ತೇವೆ

ಕೈಕೇರಿ ಗ್ರಾಮದ ಪಟೇಲ ಮ. ಕುಪ್ಪಂಡ ತಿಮ್ಮಯ್ಯನವರನ್ನು ಖೂನಿ ಮಾಡಿದ ಮೊಕದ್ದಮೆಯು ಬರುವ ನವಂಬರು ತಾ. 7ಕ್ಕೆ ಶೆಷನ್ಸ್ ಕೋರ್ಟಿನಲ್ಲಿ ವಿಚಾರಕ್ಕೆ ಇಡಲ್ಪಟ್ಟಿದೆಯೆಂದು ತಿಳಿಯ ಬರುತ್ತದೆ

ಮಡಿಕೇರಿನಾಡು ಕಚೇರಿಯಲ್ಲಿ [illegible] ಕಾಳಂಡ ಕಾಳಪ್ಪನವರು ಕೆಲಸ ಮಾಡಲು ಅಶಕ್ತರೆಂದು ಡಾಕ್ಟರ ಸರ್ಟಿಫಿಕೇಟು ಪಡೆದು ಈ ತಾ 21ರಲ್ಲಿ ಕೆಲಸದಿಂದ ನಿವೃತ್ತರಾದರೆಂದು ತಿಳಿಯುತ್ತೇವೆ.

ಕಮಿಷನರವರ ಇಂಗ್ಲಿಷ್ ಆಫೀಸಿನ ಮೇನೇಜರಾಗಿದ್ದ ರಾ. ಸಾ. ಹೆಚ್. ಯಂ. ಕಾಮತ್‌ರವರು ಈ ತಾ. 21 ರಿಂದ ಎರಡೂವರೆ ತಿಂಗಳು ಕಾಯಿಲೆ ರಜೆಯಲ್ಲಿರುವರೆಂದು ತಿಳಿಯ ಬರುತ್ತದೆ. ಮ. ಕೆ. ನಾರಾಯಣರಾಯರು ಇವರ ಬದಲು ಮೇನೇಜರು ಕೆಲಸವನ್ನು ನೋಡುವರು.

ಕಳೆದ ಕಾವೇರಿ ಸಂಕ್ರಮಣದಲ್ಲಿ ಬೆಟ್ಟತ್ತುನಾಡು ಕುಂದದ ಬೇಟ್ಟು ದೇವಸ್ಥಾನದಲ್ಲಿ ಸವರಿ ನಾಡಿನವರ, ಬೆಳಗ್ಗೆ 9 ಗಂಟೆ ವರೆಗೂ, ನಂತರ ಮುಗುಟಗೇರಿ ಗ್ರಾಮಸ್ಥರು ಮತ್ತು ಮನೆಯಪಂಡ ಮನೆಯವರೂ ಏನೊಂದೂ ಗಲಾಟೆ ಇಲ್ಲದೆ ಹಬ್ಬ ನಡಿಸಿದರೆಂದು ತಿಳಿಯ ಬರುತ್ತದೆ.

ಸಿದ್ಧಾಪುರದ ಬಳಿ ನೆಲ್ಯ ಹುದಿಕೇರಿ ಗ್ರಾಮದ ಕ್ರಿಶ್ಚಿಯನ್ ಪೊಕ್ಕು ಎಂಬವನ ಖೂನಿ ಮೊಕದ್ದಮೆಯಲ್ಲಿ ಶೆಷನ್ಸ್ ಜಡ್ಜರ ತೀರ್ಮಾನದ ಮೇಲೆ ಚೀಫ್ ಕಮಿಷನರಿಗೆ ಅಪ್ಪೀಲು ಮಾಡಲಾಯಿತು. ಈ ವಿಷಯ ವಾದ ಮಾಡಲು ಈ ತಾ. 23ರಲ್ಲಿ ಇಲ್ಲಿಯ ಲಾಯರುಗಳೇ [illegible] ಹುಕುಂ ಮೇರೆ ಬೆಂಗಳೂರಿಗೆ ಹೋಗಿದ [illegible] ತ್ತೇವೆ.

ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ರಾ. [illegible] ಪ್ಪನವರು ಕಳೆದ ರಾತ್ರಿ ಫ್ರೇಜರ್‌ಪೇಟೆಯಿಂದ [illegible] ಮೋಟಾರು ಕಾರಿನಲ್ಲಿ ಬರುತ್ತಿದ್ದಾಗ್ಯೆ [illegible] ದೊಡ್ಡ ಹೆಬ್ಬುಲಿಗೆ ಗುಂಡು ಹೊಡದು ಕೊಂದ[illegible] ರು ಈಗ ತಾನೇ ಕೇಳಿ [illegible] ಇದೇ ಮೊದಲನೇ ಗುಂಡಿಗೆ [illegible] ದ್ದು ಇದೇ ಪ್ರಥಮವೆಂತಲೂ [illegible]

ಕಳೆದ ತಿಂಗಳಲ್ಲಿ ನಡೆದ ಬಿ ಎ ಪರೀಕ್ಷೆಯಲ್ಲಿ ಮ. ಸಿ. ಯಸ್ ನಾರಾಯಣನವರೂ, ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಮ ಮನೆಯಪಂಡ ಯಂ. ಪೊನ್ನಪ್ಪನವರು ಮತ್ತು ಮಿಸ್ [illegible] ಯಂ ಗಂಗವ್ವ [illegible] ರ್ಣರಾಗಿಯೂ, ಮಿಸ್ [illegible] ವ ರಲ್ಲಿ ಎರಡು ಭಾಗಗಳಲ್ಲಿಯ [illegible] ರೆಂದು ತಿಳಿಯುತ್ತೇವೆ [illegible]

ಡಿಸ್ಟ್ರಿಕ್ಟ್ ಬೋರ್ಡು [illegible] ದು ಕೊರತೆಗಳನ್ನು [illegible] ವೈಸಿಂಗ್ ಆಫೀಸರ [illegible] ದು ಪ್ರಕಟಿಸಿರುತ್ತಾರೆ ತಾ. 28—10—[illegible] ಗಂಟೆಗೆ [illegible] 10 ಗಂಟೆಗೆ [illegible] ಮೇಲೆ 2 ಗಂಟೆಗೆ ವೀರರಾಜಪೇಟೆಯಲ್ಲಿ, 1-11—[illegible] ಬೆಳಗ್ಗೆ 11 ಗಂಟೆಗೆ ಸೋಮವಾರಪೇಟೆಯಲ್ಲಿ

ವೀರರಾಜಪೇಟೆಯಲ್ಲಿ ಈ ತಾ 22ರಲ್ಲಿ [illegible] ಗ್ರಾಮದ ಮ. ಮಾಳೇಟ್ಟಿರ ಅಚ್ಚಪ್ಪನವರೂ, [illegible] ಮುಸಲ್ಮಾನರ ಕಲಂದರ್ ಖಾನ್ [illegible]

ಪಂಥದಾಟವು ನಡೆಯುವದರಲ್ಲಿ ಮ. ಅಚ್ಚಪ್ಪನವರು ಜಯಶೀಲರಾದರೆಂದು ತಿಳಿಯಲು ಸಂತೋಷಪಡುತ್ತೇವೆ 500ಕ್ಕಿಂತ ಹೆಚ್ಚಾಗಿ ಅಲ್ಲಿ ನೆರೆದಿದ್ದ ಜನರು ಕುಸ್ತಿಯಾದ ಕೂಡಲೆ ಮ. ಅಚ್ಚಪ್ಪನವರನ್ನು ಪೇಟೆಯ ಮುಖ್ಯ ಬೀದಿಯಲ್ಲಿ ವಾದ್ಯ ಘೋಷಗಳೊಡನೆ ಮೆರವಣಿಗೆ ಕರೆದುಕೊಂಡು ಹೋದರಂತೆ.

ಹಿಂದೂದೇಶ.

ನೆಲ್ಲೂರಿನಲ್ಲಿ ನಡೆದ ಮದ್ರಾಸು ಪ್ರಾಂತ್ಯದ ಬ್ರಾಹ್ಮಣೇತರರ ಮಹಾಸಭೆಯಲ್ಲಿ ಮ. ಬಿ. ಮುನಸ್ವಾಮಿ ನಾಯುಡುರವರು ಸದರಿ ಪಾರ್ಟಿಯ ಮುಂದಾಳಾಗಿ ಆರಿಸಲ್ಪಟ್ಟಿರುವರು.

ಮುಂದಿನ ರಾಜಕೀಯ ಸುಧಾರಣೆಯಲ್ಲಿ ತಮ್ಮ ಹಿತವನ್ನು ಕಾಪಾಡಲಿಕ್ಕಾಗಿ ಜಸ್ಟಿಸ್ ಪಾರ್ಟಿಯ ಬ್ರಾಹ್ಮಣೇತರ ಪಾರ್ಟಿಯವರು ಇಂಗ್ಲೆಂಡಿಗೆ ಒಂದು ಡೆಪ್ಯುಟೇಶನ್ ಕಳುಹಿಸುವರಂತೆ.

ಒರಿಸ್ಸಾ ವಿದ್ಯಾರ್ಥಿಗಳ 14ನೇ ಪ್ರಾಂತೀಯ ಕಾನ್ಫರೆನ್ಸು ಈ ತಾ [illegible]ರಲ್ಲಿ ಬೆರಹಂಪೂರದಲ್ಲಿ ನಡೆಯಿತು. ಆಂಧ್ರ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಾದ ಮ. ಸಿ. ಆರ್ ರೆಡ್ಡಿಯವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು

ಮೈಸೂರು ರಾಜ್ಯದ ಲಾರ್ಡ್ ಇರ್ವಿನ್‌ರವರು ಮತ್ತು ಮದ್ರಾಸಿನ ಹೊಸ ಗವರ್ನರಾದ ಸರ್ ಜಾರ್ಜ್ ಸ್ಟೇನ್ಲಿಯವರು ಪತ್ನಿ ಸಮೇತರಾಗಿ ಈ ತಾ 11ರಲ್ಲಿ ಲಂಡನಿನಿಂದ ಹೊರಟರು. ಇವರು ಈ ತಾ [illegible] ಮುಂಬಯಿಗೆ [illegible] ಲಿಕ್ಕಿರುವರು ಮೈಸೂರಿನಲ್ಲಿ ತಾ. [illegible]ರಲ್ಲಿ [illegible] ತಮ್ಮ ಪದವಿಯ ಚಾರ್ಜನ್ನು ವಹಿಸಿಕೊಳ್ಳುವರು.

ಶಾಲೆಗಳಲ್ಲಿ ಯಾವ ವಿಧದಲ್ಲಿ ಮತ ಸಂಬಂಧ ಭೇದನೆ ಕಾಣದಂತೆ [illegible] ನಿಷೇಧಿಸಲು ಕೊಟ್ಟಿರುವ ವಿದ್ಯಾ ಇಲಾಖೆ [illegible] ಒಂದು ಕಮಿಟಿಯನ್ನು ನೇಮಿಸಿದೆ. [illegible] ಭೇದನಗಳು ವಿರೋಧವಿಲ್ಲದ ದೇವರ ಪ್ರಾರ್ಥನೆ [illegible] ಮಕ್ಕಳಿಗೆ ಕಲಿಸುವುದೇ ಉತ್ತಮವಾದ ದಾರಿ ಎಂದು ಸದರಿ ಕಮಿಟಿಯವರು ಅಭಿಪ್ರಾಯಪಟ್ಟಿರುವರು.

'ಸೇವಾದಳದ ಎಲ್ಲಾ ಶಾಖೆಗಳೂ ಅವರ ಸಭಾಸದರೂ, ಕಾಂಗ್ರೆಸ್ ಸಂಸ್ಥೆಗಳೂ, ಅವರ ಸದಸ್ಯರೂ, ಅಖಿಲ ಭಾರತೀಯ ಚರಖಾ ಸಂಘದವರೂ ಮತ್ತು ಎಲ್ಲಾ ತರದ ಸಂಘದವರೂ ದೇಶದ ಎಲ್ಲಾ ಜನಗಳಲ್ಲಿ [illegible] ಹಿಂದುಸ್ಥಾನದ ರಾಷ್ಟ್ರೀಯ ಧ್ವಜವನ್ನು ಇದೇ ತಿಂಗಳ ಕೊನೆಯ ರವಿವಾರ (27—10—35) ದ ದಿವಸ ಬೆಳಿಗ್ಗೆ 8 ಘಂಟೆಗೆ ಸರಿಯಾಗಿ ನಿಲ್ಲಿಸಿ ಅದಕ್ಕೆ ನಮಸ್ಕರಿಸಬೇಕೆಂದೂ ಮತ್ತು ಈ [illegible] ವರದಿಯನ್ನು ಕೂಡಲೇ ಹುಬ್ಬಳ್ಳಿ ಸೇವಾದಳದ ಕಚೇರಿಗೆ ಕಳುಹಿಸಬೇಕು ' ಎಂದೂ ಹಿಂದುಸ್ಥಾನೀ ಸೇವಾದಳದ ಪ್ರಮುಖ ಕಾರ್ಯದರ್ಶಿಗಳು ವಿನಂತಿ ಮಾಡುತ್ತಾರೆ.

ವಿದೇಶ.

ಫ್ರಾನ್ಸಿನ ಮಾಜಿ ಮಂತ್ರಿಯಾದ ಮ. ಹೈಯೂಂಡಾರವರು. ಇವರ ಮಂತ್ರಿ ಮಂಡಳಿಯವರೂ ರಾಜೀನಾಮೆ ಕೊಟ್ಟಿರುವರು.

ಇಂಗ್ಲೆಂಡಿನ [illegible] ನೆಕ್ಸ್ಟ್ ಇಯರ್ [illegible]

[illegible]

ನಾಗಳನ್ನು ಮುಳುಗಿಸಿ 500 ನಾವಿಕರನ್ನು ನೀರು ಪಾಲು ಮಾಡಿದ ಹಾಗೂ ಸುದ್ದಿ.

ಅಫಘಾನಿಸ್ಥಾನದ ಮಾಜಿ ಪಟ್ಟದರಸರಾದ ಕಾಬೂಲು ನಾದಿರ್ ಖಾನರ ಸಹೋದರನಾದ ಸಾ ಮಹಮ್ಮದರವರ ಕೈವಶವಾದದ್ದು ನಿಜವೆಂದೂ ತಿಳಿದು ಬಂದಿದೆ. [illegible] ಅವರನ್ನು ನೆರೆಹೊರೆಯವರು [illegible] ಕಳುಹಿಸಲ್ಪಟ್ಟಿದೆಯಂತೆ ಜಲಾಲಾಬಾದೂ, ಇನ್ನು ಕೆಲವು [illegible] ನಾದಿರ್‌ಖಾನರ ಕೈವಶವಾಗಿದೆಯಂತೆ. ನಾದಿರ್ ಖಾನರ ಜಯಕ್ಕೆ ಹಲವು ಕಡೆಗಳಲ್ಲಿ ಸಂತೋಷವು ಸೂಚಿಸಲ್ಪಡುತ್ತಿದೆ ನಾದಿರ್ ಖಾನರು ಅಫಘಾನಿಸ್ಥಾನದ ಅರಸರಾಗಿ ಆರಿಸಲ್ಪಟ್ಟಿರುವರು.

ಸಿಲೋನಿನ ರಾಜಕೀಯ ಸುಧಾರಣೆಯ ವಿಷಯ ವಿಚಾರಿಸಲು ನೇಮಿಸಲ್ಪಟ್ಟ ಡನಾಮೋರ್ ಕಮಿಟಿಯ ವರದಿಯ ಹೆಚ್ಚಿನ ಭಾಗವನ್ನು ಬ್ರಿಟಿಷ್ ಸರಕಾರದವರು ಒಪ್ಪಿ, ದೇಶದೊಳಗಿನ ಕಾರುಬಾರುಗಳಲ್ಲಿ ಸಂಪೂರ್ಣ ಹಕ್ಕನ್ನು ಅಲ್ಲಿಯ ಪ್ರತಿನಿಧಿಗಳ ಸಭೆಗೆ ಕೊಡಲೂ, ಕೋಮುವಾರು ಪ್ರತಿನಿಧಿತ್ವವನ್ನು ಹೋಗಲಾಡಿಸುವ ಮತ್ತು ಪ್ರಾಯ ಬಂದವರಿಗೆ ಓಟು ಕೊಡುವ ಹಕ್ಕನ್ನು [illegible] ಆದರೆ ಗವರ್ನರವರ ಅಧಿಕಾರವನ್ನೂ, ಉದ್ಯೋಗಸ್ಥರ ಹಿತವನ್ನೂ ಕಾಪಾಡಲು [illegible] ಮಾಡಿರುವರೆಂದೂ ತಿಳಿಯ ಬರುತ್ತದೆ

ಒಂದಾನೊಂದು [illegible] (ಯೂನಿಯನ್ ಸ್ಟೇಟ್ಸ್) [illegible] ಬ್ರಿಟಿಷ್ [illegible] ಬೇಗನೆ ತಮ್ಮ ಸರಕಾರದ [illegible] ಪ್ರಕಟಿಸಲಿಕ್ಕಿರುವ [illegible] ಸರಕಾರದ ಪ್ರತಿನಿಧಿ ಮತ್ತು ಇಂಗ್ಲೆಂಡಿನ [illegible] ಗಳ ಒಂದು ರೌಂಡ್ ಟೇಬಲ್ ಕಾನ್ಫರೆನ್ಸು [illegible] ಸುವರೆಂದೂ, ಇದು ಅಲ್ಲವಾದರೆ [illegible] ಇಂಡಿಯಕ್ಕೆ ಒಂದು [illegible] ಲೇಬರ್ ಸರಕಾರ ಇರಾದೆಯನ್ನು ಕುರಿತು [illegible] ಭಾಷಣ [illegible] ವಿವಿಧ ವರ್ತಮಾನಗಳು ಇಂಗ್ಲೆಂಡಿನಿಂದ [illegible] ತಲಪುತ್ತಿವೆ.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು

ಈ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗು ತಾ 19ರಲ್ಲಿ ವೀರರಾಜಪೇಟೆಯಲ್ಲಿ ನಡೆಯಿತು. [illegible] ದ್ದ ಮೆಂಬರುಗಳು ಮ. ಗಳಾದ (1) ಸಿ. ಎಸ್. ವೆಂಕಟಪ್ಪಯ್ಯನವರು (ಪ್ರೆಸಿಡೆಂಟರು), (2) ಮುಕ್ಕಾಟಿರ ತಮ್ಮಯ್ಯನವರು, (3) ಕೇಳಪ್ಪನೂಡ [illegible]ಯ್ಯನವರು, (4) ಮನೆಯಪಂಡ ಚಿಣ್ಣಪ್ಪನವರು (ಸೆಕ್ರೆಟರಿ), (5) [illegible] ಅಪ್ಪಯ್ಯನವರು, (6) ಕೋಟೇರ ಚಿಣ್ಣಪ್ಪನವರು, (7) [illegible] ಮಾದಪ್ಪನವರು, (8) ಚೆಪ್ಪುಡಿರ [illegible]ಪ್ಪನವರು, (9) [illegible] ಮಾದಪ್ಪನವರು, (10) [illegible] ಮಾದಯ್ಯನವರು, (11) ಚಂಗಂಡ ಚಿಟ್ಟಿಯಪ್ಪನವರು, (12) ಕಾಳೇಂಗಡ ಚಿಣ್ಣಪ್ಪನವರು, (13) ಮೂಕೊಂಡ ಗಣಪತಿಯವರು, (14) ಪುತ್ತಮನೆ ಮುತ್ತಣ್ಣಯ್ಯನವರು, (15) ಬಿ. ಎಸ್. ಕೃಷ್ಣಪ್ಪನವರು, (16) ಅಜ್ಜಮಾಡ ತಿಮ್ಮಯ್ಯನವರು, ಮತ್ತು (17) ಪಂದ್ಯಂಡ ಬೆಳ್ಯಪ್ಪನವರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಸಪ್ಟಂಬರ್ ತಿಂಗಳ ಲೆಕ್ಕ ಓದಿ [illegible] ಮಾಡಲಾಯಿತು.

3. [illegible]

4. [illegible]

5. [illegible]

ಪ್ರಕರಣ [illegible] ಕೊನೆಗೊಂಡಿತು.

[illegible]
([illegible])

[illegible]

ಳುದು ಸಹ ನಡಿಸಬೇಕಾಗಿ ಪ್ರಕಟವಾದ ಒಂದೆರಡು ಬಾತ್ಮಿಗಳನ್ನು ನೋಡಿದೆನು. ನವಂಬರ್ ತಾ. 16 ನೇ ದಿನ ಭರಣಿ ಕೃತಿಕೆ ನಕ್ಷತ್ರಗಳ ಸಂಯೋಗವಾಗುವುದರಿಂದ ಅದು ಯಾವ ಕಾರ್ಯಕ್ಕೂ ಯೋಗ್ಯವಾದದ್ದಲ್ಲ. ಅದು ಅರಮನೆಯವರಿಗೆ ಮಾತ್ರ ಶ್ರೇಷ್ಠವು, ನಾಡಿನವರಿಗೆ ಅಯೋಗ್ಯವು. ನಾಡಿನವರಿಗೆ 17 ನೇ ದಿನ ಮಾತ್ರ ಯೋಗ್ಯವು. ಅರಮನೆ ಮತ್ತು ನಾಡು ಪೊಳುದನ್ನು ಒಂದೇ ದಿವಸ ಮಾಡಬೇಕೆಂದು ದೇಶೀಯರು ತೀರ್ಮಾನಿಸಿದರೆ, ಡಿಸೆಂಬರ್ ತಾ. 15 ನೇ ದಿನ ವೃಶ್ಚಿಕಮಾಸ 30 ನೇ ರಾತ್ರಿಗೆ ರೋಹಿಣಿ ನಕ್ಷತ್ರ ಇರುವುದರಿಂದ ಆ ದಿವಸ ಅರಮನೆ ಮತ್ತು ನಾಡು ಪೊಳುದು ಮಾಡಲು ಶುಭ ಮುಹೂರ್ತ ಆಗಿದೆ. ಆದರೆ ದೇಶದ ಜನರಿಗೆ ವೃಶ್ಚಿಕಮಾಸದ ಕಡೇ ದಿನವೆಂತ ಮನಸ್ಸಿಗೆ ಅಜ್ಞಾನ ಇರಬಹುದು. ಆ ದಿನವು ವೃಶ್ಚಿಕಮಾಸಕ್ಕೆ ಸೇರಿತೇ ಹೊರತು ಧನು ತಿಂಗಳಿಗೆ ಸೇರುವದಿಲ್ಲ. ಯಾಕೆಂದರೆ ಸಾಂಕ್ರಾಂತಿ ಮುಹೂರ್ತವು ಉದ್ಯಾವರ ಪಂಚಾಂಗ ರೀತಿಯಲ್ಲಿ 19½ ಗಳಿಗೆ ಇರುವುದರಿಂದ ಆ ದಿನವು ಧನು ತಿಂಗಳಿಗೆ ಸೇರುವುದಿಲ್ಲ.

ಹೆರವನಾಡು. ಕೃಷ್ಣಜೋಯಿಸ.

ಹಳ್ಳಿಗಟ್ಟು ಸಹಕಾರಿ ಸಂಘ.

ನಮ್ಮ ಹಳ್ಳಿಗಟ್ಟು ಸಹಕಾರಿ ಸಂಘದಲ್ಲಿ 45 ಶೇರು ಮೆಂಬರರಿರುತ್ತಾರೆ. ಇವರ ಪೈಕಿ 3 ಜನ ಶೇರು ಮೆಂಬರರು ಮಾತ್ರಾಗಿ ಬಾಕಿ 42 ಜನ ಶೇರು ಮೆಂಬರರಿರುತ್ತಾರೆ. ಆದರೆ ಸಂಘದ ಜನರಲ್ ಮೀಟಿಂಗು ತಾ. 5—8—29 ರಲ್ಲಿ ನಡೆಯಿತು. ಸದರಿ ಜನರಲ್ ಮೀಟಿಂಗಿನಲ್ಲಿ ಆದ ಕಾರ್ಯಭಾರ ಕ್ರಮವು ಅತೃಪ್ತಿಕರವಾಗಿ ನಡೆದದ್ದರಿಂದ ಪುನಹ ಒಂದು ವಿಶೇಷ ಜನರಲ್ ಮೀಟಿಂಗು ಜರಗಿಸಿಕೊಡಬೇಕಾಗಿ ಸಂಘದ ಸೆಕ್ರೆಟರಿಯವರಿಗೆ 23 ಜನ ಶೇರು ಮೆಂಬರುಗಳು ಸೇರಿ ಬೈಲಾ ರೂಲ್ ಮೇರೆ ಅರ್ಜಿ ಮಾಡಿದ್ದಲ್ಲದೆ ಸಂಘಗಳ ಇನ್‌ಸ್ಪೆಕ್ಟರವರ ಮೂಲಕ ಸಹ ಸಂಘದ ಸೆಕ್ರೆಟರಿಯವರಿಗೆ ಅರ್ಜಿ ಕಳುಹಿಸಿದರೂ ಕೂಡ ಸೆಕ್ರೆಟರಿಯವರಾಗಲೀ, ಇನ್‌ಸ್ಪೆಕ್ಟರಾಗಲೀ ನಮ್ಮ ಕೋರಿಕೆಗೆ ನಿಗ ಕೊಡದೆಯೂ, ಮೀಟಿಂಗು ಜರುಗಿಸದೆಯೂ ಇರುವುದು ನೋಡಿದರೆ ಸದರಿ ಸೆಕ್ರೆಟರಿಯವರು ಸಂಘದ ಸೆಕ್ರೆಟರಿ ಅಲ್ಲವೆಂದೂ, ಹಾಲಿ ಕಮಿಟಿ ಮತ್ತು ಪ್ರೆಸಿಡೆಂಟರ ಸ್ವಂತ ಸೆಕ್ರೆಟರಿಯೆಂತಲೂ ಭಾವಿಸಬೇಕಾಗಿದೆ. ಅಲ್ಲದೆ ಹಾಲಿ ಕಮಿಟಿ ಪ್ರೆಸಿಡೆಂಟರು ಸಹ ತಮ್ಮ 6 ಜನರ ಸಂಘವೆಂದು ಭಾವಿಸಿರುವಂತೆ ತೋರುತ್ತೆ. ಹೀಗೆ ಸಂಘದ ಕಮಿಟಿ ಪ್ರೆಸಿಡೆಂಟರು, ಸೆಕ್ರೆಟರಿಯವರು ವರ್ತಿಸುತ್ತಿರುವುದು ನೋಡಿದರೆ ಸಂಘದ ಅಭಿವೃದ್ಧಿಯು ಎಷ್ಟರ ಮಟ್ಟಿಗೆ ಆಗಬಹುದೆಂದು ಹೇಳಲಿಕ್ಕಾಗುವುದಿಲ್ಲ. ಆದುದರಿಂದ ಈ ವಿಷಯವನ್ನು ರಿಜಿಸ್ಟ್ರಾರ್ ಸಾಹೇಬರವರಿಗೆ ರಿಪೋರ್ಟು ಮಾಡಿದ್ದೇವೆ. ರಿಜಿಸ್ಟ್ರಾರ್ ಸಾಹೇಬರವರಾದರೂ ಈ ವಿಷಯಕ್ಕೆ ಗಮನ ಕೊಟ್ಟು ನಮ್ಮ ಅರ್ಜಿ ಮೇರೆ ಮೀಟಿಂಗು ಜರಗಿಸಲು ಅವಕಾಶ ಕೊಡಿಸಿಯಾರೆಂದು ಎದುರು ನೋಡುವ.

ಸಂಘದ ಮೆಂಬರು

ಚೇರಂಗ ಶಾಲೆ.

ಅಯ್ಯಾ,

ಇದೇ ತಾ. 13 ನೇ ಆದಿತ್ಯವಾರ ದಿನ ಶಾಲೆಯಲ್ಲಿ ಸರಸ್ವತಿ ಪೂಜೆಯನ್ನು ಬಹು ವಿಜೃಂಭಣೆಯಿಂದ ನಡಿಸಿದರು. ಪೂಜೆಯಾದ ನಂತರ ಶಾಲೆಯ ಬಾಲ ಬಾಲಕಿಯರು ಗಣಪತಿ ಸ್ತೋತ್ರ, ಸರಸ್ವತಿ ಸ್ತೋತ್ರ, ರಾಮ ಭಜನೆ ಇತ್ಯಾದಿ ಹಾಡುಗಳಿಂದ ಗಾನದ ಇಂಪು ಕರ್ಣಾನಂದಗೊಳಿಸಿತು. ತಿಂಡಿ ತೀರ್ಥ, ಫಲಹಾರ, ಪಾಯಸ ಪರಮಾನ್ನಗಳಿಂದ ತೃಪ್ತಿಗೊಳಿಸಿತು. ಆಟ ಓಟದ ವಿನೋದಗಳಿಂದ ನೇತ್ರಾನಂದಗೊಳಿಸಿತು. ಶಾಲೆಯ ವಿದ್ಯಾರ್ಥಿಯರಾದ ಬಾಲ ಬಾಲಕಿಯರು ಸಾಧಾರಣ 80 ರ ವರೆಗೆ ಇದ್ದರು. ಹೊಸದಾಗಿ ಸೇರಲು ಹಿಡಿಸಿದ ಮಕ್ಕಳು 10—12 ಕ್ಕೆ ಕಡಿಮೆ ಇಲ್ಲದೆ ಇದ್ದರು. ಚೇರಂಗ ಕುರ್ಚಿ ಮತ್ತು ನೆಮ್ಮಲೆ ಗ್ರಾಮಗಳ ಮಧ್ಯ ಈ ಶಾಲೆಯು ಬಹು ಅಭಿವೃದ್ಧಿಯಲ್ಲಿ ಇದೆ. ಸ್ಕೂಲು ಕಟ್ಟಡವು ಬಹು ಚೆನ್ನಾಗಿದೆ. 2 ಜನ ಉಪಾಧ್ಯಾಯರು ಇಷ್ಟು ಮಕ್ಕಳಿಗೆ ಬೋಧನೆ ಮಾಡುವುದು ತುಂಬಾ ಕಷ್ಟವೆಂದೇ ನನಗೆ ತೋರಿತು. ಇಂಥಾ ಅಭಿವೃದ್ಧಿಯಲ್ಲಿ ಇರುವ ಶಾಲೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರಾಗಲಿ, ಸ್ಕೂಲ್ ಕಮಿಟಿಯವರಾಗಲೀ, ಶಾಲಾ ಸ. ಆ. ಇನ್‌ಸ್ಪೆಕ್ಟರಾಗಲೀ ಬೋರ್ಡಿಗೆ ತೆಗೆದುಕೊಳ್ಳದಿರುವುದು ವಿಷಾದಕರವೆ. ಇನ್ನಾದರೂ ಒಡನೆ ನಿಗ ತೆಗೆದುಕೊಂಡು ಡಿ. ಬೋರ್ಡಿನಿಂದ ಉಪಾಧ್ಯಾಯರನ್ನು ಕಳುಹಿಸಿ ಬಡ ರೈತರ ಮಕ್ಕಳ ಅಭಿವೃದ್ಧಿಗೆ ಬೋರ್ಡಿಗೆ ತೆಗೆದುಕೊಳ್ಳುವರಾಗಿ ನಂಬುವ.

"ಬಾಲಬಂಧವ"

ಕೊಟ್ಟಗೇರಿ ಗ್ರಾಮದ ಪಾಡು.

ಅಯ್ಯಾ,

ನಮ್ಮ ಗ್ರಾಮದ ಸ್ಥಿತಿಗತಿಯನ್ನು ವಾಚಕ ಮಹಾಶಯರಿಗೆ ತಿಳಿಸಿದರೆ ಯಾರಿಗೆ ತಾನೇ ಆಶ್ಚರ್ಯವಾಗಲಾರದು. ಕಳೆದ ಡಿಸೆಂಬರು ತಾರೀಕು 20ರಲ್ಲಿ ನಾವು ಗ್ರಾಮಸ್ಥರೆಲ್ಲರೂ ಸೇರಿ ನಮ್ಮ ನಾಡಿನ ಜಮಾಬಂದಿಯಾದಾಗ್ಯೆ ಜಮಾಬಂದಿ ಆಫೀಸರವರಿಗೆ ಕಾವೇರೀಡು ಫಾರೆಸ್ಟಿನಿಂದ ನಮ್ಮ ಗ್ರಾಮಕ್ಕಾಗಿ ಬರುವ ಕಾಲು ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ವೈಸಿಕೊಂಡು ಗಾಡಿ ವಗೈರೆ ಹೋಗುವ ಹಾಗೆ ನ್ಯಾಯವಾಗಿ ರಿಪೇರಿ ಮಾಡಿಕೊಡಬೇಕು ವಗೈರೆಯಾಗಿ ಅರ್ಜಿ ಬರೆದು ಕೊಟ್ಟಿದೆವು. ಸದರಿ ಅರ್ಜಿಯು ತನಿಕೆಗೆ ಬಂದು ಗ್ರಾಮಸ್ಥರ ವಾಙ್ಮೂಲ ಸಹ ಇಲಾಖೆದಾರರು ತೆಗೆದು ಸದರಿ ಕಾಲು ರಸ್ತೆಯು ಪ್ಲಾನು ಸಹ ತಯಾರಿಸಿದಾಗ್ಯೂ ಕೂಡ ಈ ತಾಹಲ್ ವರೆಗೆ ಏನೊಂದೂ ಜವಾಬು ಸಿಕ್ಕಿರುವದಿಲ್ಲ. ನಮ್ಮ ಗ್ರಾಮಸ್ಥರು ಡಿಸ್ಟ್ರಿಕ್ಟು ಬೋರ್ಡು ಸೆಸ್ಸು ತುಂಬಾ ತೆರುತ್ತಾ ಬಂದರೂ ಕೂಡ ಈ ವರೆಗೂ ನಿಗವಿಡದ ಬಾಬಿನಲ್ಲಿ ಅತ್ಯಂತ ವ್ಯಸನಪಡುತ್ತೇವೆ. ನಮ್ಮ ನಾಡಿನ ಡಿಸ್ಟ್ರಿಕ್ಟು ಬೋರ್ಡು ಮೆಂಬರು ಸಹ ಈ ರಸ್ತೆ ಬಾಬಿನಲ್ಲಿ ದೃಷ್ಟಿ ಇಡದೆ ಇರುವುದು ನೋಡಿದರೆ ಆಶ್ಚರ್ಯವೇ ಸರಿ. ಕೆಲವು ವರ್ಷಗಳಿಗೆ ಹಿಂದೆ ನಮ್ಮ ಗ್ರಾಮಕ್ಕೆ ನ್ಯಾಯವಾದ ರಸ್ತೆಯಿಲ್ಲದೆ ನಾವು ಎತ್ತುಗಳಿಂದ ಭತ್ತವನ್ನು ಪೊನ್ನಂಪೇಟೆಗೆ ಸಾಗಿಸಿ ಸಾಹುಕಾರರಿಗೆ ವಿಕ್ರಿ ಮಾಡುತ್ತಿದ್ದೆವು. ಈಗಲಾದರೋ, ಗಾಡಿ ವಗೈರೆಗಳಿಂದ ಭತ್ತ ತುಂಬಿ ಗರೀಬ ರೈತರ ಕಷ್ಟವನ್ನು ನಿವಾರಣೆ ಮಾಡಿಕೊಳ್ಳುವೆವೆಂದರೆ ಬೇಸಿಗೆ ಕಾಲವಾದ ಫೆಬ್ರುವರಿ ಮಾರ್ಚಿ ವಗೈರೆ ತಿಂಗಳುಗಳಲ್ಲಿ ಸಹ ಗಾಡಿಯಲ್ಲಿ ಭತ್ತ ತುಂಬುವದು ಕಷ್ಟವಾದದ್ದಲ್ಲದೆ ಮಳೆಗಾಲದ ತಿಂಗಳುಗಳಲ್ಲಿ ಅಂದರೆ ಜುಲೈಯಿಂದ ಡಿಸೆಂಬರು ತಿಂಗಳುಗಳ ವರೆಗೆ ನಮ್ಮ ಗ್ರಾಮಕ್ಕೆ ಗಾಡಿ ಬರಲಿಕ್ಕೆ ಅನುಕೂಲವಿಲ್ಲದೆ ನಮ್ಮ ಭತ್ತವನ್ನು ಕೇಳುವವರೇ ದಿಕ್ಕಿಲ್ಲ.

ಕಳೆದ ನಾಲ್ಕೈದು ವರ್ಷಗಳ ಹಿಂದೆ ನಾವು ಗ್ರಾಮಸ್ಥರೆಲ್ಲರೂ ಚಂದಾ ಹಾಕಿ ಸದರಿ ರಸ್ತೆಯನ್ನು ಗಾಡಿ ಹೋಗುವ ಹಾಗೆ ಅಲ್ಪ ಸ್ವಲ್ಪ ರಿಪೇರಿ ಮಾಡಿಸಿದೆವು. ಈಚೆಗೂ ಹಾಗೆಯೇ ರಿಪೇರಿ ಮಾಡಿಸುವೆವೆಂದರೆ ಕಳೆದ 2-3 ವರ್ಷಗಳಿಂದ ನಮ್ಮ ಗ್ರಾಮಕ್ಕೆ ನ್ಯಾಯವಾದ ಮಳೆ ಇಲ್ಲದೆ ನಮಗೆ ಬೆಳೆ ಸಹ ಚೆನ್ನಾಗಿ ದೊರಕದೆ ಘನ ಸರಕಾರದವರು ನಮ್ಮ ಬಾಬ್ತು ಕಂದಾಯಕ್ಕೆ ಸಹ ಮಾಫಿ ಕೊಟ್ಟಿರುವಾಗ ಗರೀಬ ರೈತರಾದ ನಾವು ಹ್ಯಾಗೆ ತಾನೇ ಚಂದಾ ಹಾಕಿ ಸದರಿ ರಸ್ತೆಯನ್ನು ರಿಪೇರಿ ಮಾಡಿಸಲಿಕ್ಕಾಗುತ್ತೆ. ನಮ್ಮ ಗ್ರಾಮದಲ್ಲಿ ಒಬ್ಬನಿಗೆ ಕಾಯಿಲೆಯಾದರೆ ಅವನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಲು ಅನುಕೂಲವಿಲ್ಲದೆ ಕುರ್ಚಿ ಯಾ ಡೋಲಿ ಕಟ್ಟಿಕೊಂಡು 3—4 ಮೈಲು ವರೆಗೆ ಹೊತ್ತುಕೊಂಡು ಹೋಗಿ ತದನಂತರ ಗಾಡಿಗೆ ಹಾಕಿ ಆಸ್ಪತ್ರೆಗೆ ಸಾಗಿಸಬೇಕಾಗುವುದು.

ಆದ್ದರಿಂದ ಮೇಲ್ಕಂಡ ಎಲ್ಲಾ ತರಹದ ತಾಪತ್ರಿಗಳಿಂದ ನಮ್ಮ ಗ್ರಾಮವು ಈಗಿನ ಸ್ಥಿತಿಗೆ ಬಹಳ ಕಷ್ಟದಲ್ಲಿರುವುದರಿಂದ ಘನ ಸರಕಾರದವರೂ ಮತ್ತು ಡಿಸ್ಟ್ರಿಕ್ಟ್‌ಬೋರ್ಡು ಮೆಂಬರುಗಳೂ ಸಹ ಇನ್ನಾದರೂ ಗಮನಕೊಟ್ಟು ಹಾಳು ಬಿದ್ದಿರುವ ರಸ್ತೆಯನ್ನು ಒಡನೆ ಡಿಸ್ಟ್ರಿಕ್ಟ್ ಫಂಡು ರೋಡಾಗಿ ರಿಪೇರಿ ಮಾಡಿಸಿಕೊಡಬೇಕಾಗಿ ಕೋರುತ್ತೇನೆ.

ಗ್ರಾಮಸ್ಥ.

ಆಸ್ತಿ ವಿಭಾಗದ ಪದ್ಧತಿ.

ಮಹನೀಯರೇ,

ಒಬ್ಬ ತಂದೆಯು ಆಸ್ತಿಯನ್ನು ಅವನ ಮಕ್ಕಳಾದ ಅಣ್ಣ ತಮ್ಮಂದಿಯರು ತಮ್ಮಲ್ಲಿ ಬೇರೆಬೇರೆಯಾಗಿ ಪಂಚಿಕೊಳ್ಳುವುದರ ಪ್ರಯೋಜನಾಪ್ರಯೋಜನಗಳನ್ನು ಈಗಿನ ತರುಣರು ಬಹಳವಾಗಿ ಆಲೋಚಿಸುತ್ತಿರುವರು. ("It is the thinking man that leads the unthinking") ಮುಂದಾಲೋಚನೆ ಇರತಕ್ಕಂತವರೇ ಆಲೋಚನಾಶೂನ್ಯರನ್ನು ತಿದ್ದಬೇಕಾಗಿದೆ. ಆದುದರಿಂದ ಈ ವಿಧದ ಬಾತ್ಮಿಗಳಿಗೆ ಪತ್ರಿಕಾಕರ್ತರು ಎಡೆಕೊಡಬೇಕಾದದ್ದು ಅವಶ್ಯ.

ಆಸ್ತಿಗಳನ್ನು ಪಾಲು ಮಾಡುವ ಪದ್ಧತಿಯು ದೆಸೆಯಿಂದ ಕೆಲವು ಕಡೆಗಳಲ್ಲಿ ಒಬ್ಬೊಬ್ಬನಿಗೆ ಮೂರು (ನೂರಲ್ಲ) ಭಟ್ಟಿ ಭೂಮಿಯಷ್ಟಕ್ಕೆ ಇಳಿದಿದೆ. ಈ ವಿಷಯವು ಸ್ವಲ್ಪ ವಿರಳವಾದರೂ 10—15—20 ಭಟ್ಟಿ ಭೂಮಿಯಷ್ಟೇ ಇರುವವರು ಅನೇಕರಿದ್ದಾರೆ. ಇಷ್ಟೊಂದು ಭೂಮಿಗೆ ಒಂದು ಜೊತೆ ಎತ್ತು, ಒಂದು ನೇಗಿಲು, ಒಂದು ತಾವೆ ಮರ, ಹಗ್ಗಗಳು, ಒಂದು ಕಣ, ಒಬ್ಬ ದನ ಕಾಯುವವನು ಮತ್ತು ಇತರ ಆರಂಭದ ಸಲಕರಣೆಗಳಿಂದ ತುಂಬಾ ನಷ್ಟವಿದೆ. ಭೂಮಿಯು ಯಾವಾಗ ವಿಭಾಗವಾಗಿ ಹೋಗುವುದೋ ಆಗಲೇ ವಾಸ ಇರತಕ್ಕ ಮನೆಯೂ ಪಾಲಾಗುವುದು. ಮೊದಲು ಒಂದು ಮನೆಯಲ್ಲಿ ಒಂದೇ ಅಡಿಗೆಮನೆ ಸಾಕಾಗಿತ್ತು. ಆದರೆ ಈಗ ಅದೇ ಮನೆಯಲ್ಲಿ ನಾಲ್ಕು ಜನ ಅಣ್ಣತಮ್ಮಂದಿಯರಿದ್ದರೆ, ನಾಲ್ಕು ಅಡಿಗೆ ಮನೆಗಳು ಅವಶ್ಯ. ಮನೆಯ ಒಂದೊಂದು ಭಾಗದಲ್ಲಿ ಒಂದೊಂದು ಅಡಿಗೆ ಮನೆ ಮಾಡಿಕೊಂಡು ಮನೆಯನ್ನೂ, ಬಟ್ಟೆ ಬರೆಗಳನ್ನೂ, ಕಾಗದ ಪುಸ್ತಕಗಳನ್ನೂ ಹೊಗೆ ಹಿಡಿಸಿಕೊಂಡಿರುವುದನ್ನು ಎಷ್ಟೋ ಕಡೆಗಳಲ್ಲಿ ನೋಡಬಹುದು. ಒಬ್ಬೊಬ್ಬನಿಗೆ ಒಂದೊಂದು ಅಡಿಗೆ ಮನೆಯು ಯಾವಾಗ ಬೇಕಾಗುವುದೋ ಅಂದೇ ಪ್ರತ್ಯೇಕವಾಗಿ ಒಂದೊಂದು ಬತ್ತದ ಒಂದೊಂದು ನಾಲೆ ಕೊಟ್ಟಿಗೆಯೂ, ಒಂದೊಂದು ದನ ಕೊಟ್ಟಿಗೆಯೂ ಬೇಕಾಗುವುದು. ಈ ರೀತಿಯಲ್ಲಿ ಆಸ್ತಿಗಳನ್ನು ಪಾಲು ಮಾಡುವುದರಿಂದ ಬಡವರು ತೀರಾ ಬಡವರಾಗುವರೇ ವಿನಹ ಅನುಕೂಲ ಸ್ಥಿತಿಗೆ ಬರುವ ಭರವಸೆಯು ಕಡಿಮೆ.

ಆಸ್ತಿ ಪಾಲಾದಲ್ಲಿ ಆಸ್ತಿ ನೆರೆಯವರಾಗಿರುವುದು ಎಂಬ ನಾಣ್ಣುಡಿಯನ್ನು ಹೊಸದಾಗಿ ಕಲ್ಪಿಸಿದರೆ ಸುಳ್ಳಾಗದು. ಮಳೆ ಇಲ್ಲದ ಸಮಯದಲ್ಲಿ ಗದ್ದೆ ನೀರಿಗಾಗಿ ಜಗಳ, ಗದ್ದೆಗೆ ದನಕರುಗಳು ಇಳಿಯುವುದರ ವಿಷಯವಾಗಿ ಜಗಳ, ಗದ್ದೆ ತೆವರು ಕಡಿಯುವುದರ ವಿಷಯವಾಗಿ ಜಗಳ, ಮನೆಯಲ್ಲಿ ಹೆಂಗಸರ ನಿಮಿತ್ತವಾಗಿ ಜಗಳ, ಮಕ್ಕಳು ಹೊಡಕೊಂಡು ಬೀಳುವ ಕಾರಣದಿಂದ ದೊಡ್ಡವರಿಗೆ ಜಗಳ, ಏನಾದರೂ ಕಾಣದೆ ಹೋದ ಪದಾರ್ಥವು ಮತ್ತೊಬ್ಬನು ಕದ್ದನೆಂದು ಜಗಳ. ಹೀಗೆ ಪಾಲಾದ ಮನೆಗಳೆಲ್ಲಾ ಒಂದೊಂದು ಸಣ್ಣ ಕುರುಕ್ಷೇತ್ರಗಳಾಗುವವು.

ಆದರೆ ವಿಸ್ತಾರವಾದ ಆಸ್ತಿ ಇರತಕ್ಕವನು ಆಸ್ತಿಯನ್ನು ಭಾಗ ಮಾಡಿಕೊಂಡು ಒಬ್ಬೊಬ್ಬನು ದೂರದೂರದಲ್ಲಿ ಪ್ರತ್ಯೇಕ ಮನೆ ಕಟ್ಟಿಕೊಳ್ಳುವುದರಿಂದ ಮೇಲಿನ ಅನಾಹುತಗಳ್ಯಾವವೂ ಸಮ್ಮಂಧಿಸುವುದಿಲ್ಲವೆಂದು ಹೇಳಬಹುದು. ಕೊಡಗಿನ ನಾಡಿನಲ್ಲಿ ಇಂಥಾ ಮನೆಗಳು ಎಷ್ಟೋ ಇವೆ. ಇಂಥಾ ಮನೆಗಳಲ್ಲಿ ಗಂಡ ಹೆಂಡತಿಯರೂ, ಒಂದೆರಡು ಸಣ್ಣ ಕೂಸುಗಳೂ ಮಾತ್ರವೇ ಅಲ್ಲದೆ ಇತರ ಯಾರನ್ನೂ ಕಾಣುವುದೇ ಇಲ್ಲ. ಗಂಡನಿಗೆ ತನ್ನ ಪತ್ನಿಯನ್ನು ಕಾದುಕೊಂಡಿರುವುದು ಒಂದು ದೊಡ್ಡ ಕೆಲಸ. ಪತಿಪತ್ನಿಯರಲ್ಲಿ ಯಾರಾದರೂ ಒಬ್ಬರಿಗೆ ಖಾಯಿಲೆಯಾದರೆ ಮತ್ತೊಬ್ಬರ ಮನಸು ತಳಮಳಗೊಳ್ಳುವುದು. ಇಂಥಾ ಹಲವು ಮನೆಗಳಲ್ಲಿ ಒಬ್ಬ ಅಡಿಗೆಯವನ ಅವಶ್ಯಕತೆಯೂ ಬಿದ್ದಿರುತ್ತದೆ. ಈ ಅಡಿಗೆಯವರಲ್ಲಿ ಕೆಲವರು ಯಜಮಾನನ ಪ್ರಾಣ ತಿನ್ನುವವರಾಗಿರುವರು.

ಆಸ್ತಿಯನ್ನು ಪಾಲು ಮಾಡದಿದ್ದರೆ ಅದರ ಹಕ್ಕುದಾರರಾದ ಅಣ್ಣತಮ್ಮಂದಿಯರು ಅದನ್ನು ವಿಸ್ತಾರಗೊಳಿಸುವುದಕ್ಕಾಗಲೀ ಅಥವಾ ವೃದ್ಧಿಗೊಳಿಸುವುದಕ್ಕಾಗಲೀ ಪ್ರೋತ್ಸಾಹ ತೆಗೆದುಕೊಳ್ಳುವುದಿಲ್ಲವೆಂದೂ, ಪ್ರತಿಯೊಬ್ಬನೂ ಇನ್ನೊಬ್ಬನಿಗಿಂತಲೂ ಸೋಮಾರಿಯಾಗಿದ್ದುಕೊಂಡು ಉದರ ಪೋಷಣೆಯನ್ನು ಸಾಗಿಸುವುದಕ್ಕೆ ಮಾತ್ರ ಪ್ರಯತ್ನಿಸುವನೆಂದೂ ಕೆಲವರ ಅಭಿಪ್ರಾಯವಿದೆ. ಈ ವಿಷಯದಲ್ಲಿ ಎಷ್ಟರಮಟ್ಟಿಗೆ ನಿಜವಿದೆಯೆಂಬುದನ್ನು ಗ್ರಹಿಸಲು ವಾಚಕ ಮಹಾಶಯರಿಗೆ ಬಿಟ್ಟಿದೆ. ಇಂಗ್ಲೆಂಡ್ ದೇಶದಲ್ಲಿ Aristocracy (ಎರಿಸ್ಟೋಕ್ರೆಸಿ) ಮತ್ತು Nobles (ನೋಬಲ್ಸ್) ಎಂದು ಕರೆಯಲ್ಪಡುವ ಕುಟುಂಬಗಳಲ್ಲಿ ಒಂದು ವಿಧದ ಪದ್ಧತಿಯು ಅನುಸರಣೆಯಲ್ಲಿದೆ. ಇಲ್ಲಿ ಹಿರಿಯ ಮಗನಿಗೆ ಮಾತ್ರ ಪಿತ್ರಾರ್ಜಿತ ಸೊತ್ತಿನಲ್ಲಿ ಅಧಿಕಾರವಿರುವುದು. ಇತರ ಮಗಂದಿಯರಿಗೆ ತಂದೆಯ ಸ್ವಯಾರ್ಜಿತ ಸೊತ್ತಿನಲ್ಲಿ ಮಾತ್ರ ಅಧಿಕಾರ. ಸ್ವಯಾರ್ಜಿತ ಸ್ಥಿರಸೊತ್ತು ಇಲ್ಲದಿರುವಾಗ ತಂದೆಯು ಕಿರಿ ಮಗಂದಿಯರಿಗೆ ಜೀವನಾಂಶವಾಗಿ ಹಣವನ್ನು ಕೊಡುವರು. ಈ ಜೀವನಾಂಶವು ಸಾಧಾರಣವಾಗಿ ಭಾರಿಯಾಗಿರುವುದು. ಈ ಜೀವನಾಂಶದಿಂದ ಕಿರಿ ಮಗಂದಿಯರು ತಮ್ಮ ಮುಂದಿನ ಅಭಿವೃದ್ಧಿಯನ್ನು ಸಾಗಿಸಿಕೊಳ್ಳಬೇಕು. ಇದೇ ನಿಯಮವು ಸ್ವಲ್ಪ ವ್ಯತ್ಯಾಸದಿಂದೊಡಗೂಡಿ ಮಲಯಾಳ ಸೀಮೆಯಲ್ಲಿ ಕೆಲವು ಕಡೆಗಳಲ್ಲಿ ಅನುಸರಣೆಯಲ್ಲಿದೆ. ಇಲ್ಲಿ ಒಂದು ವಂಶದಲ್ಲಿ ಯಾವನು ಹಿರಿಯವನಾಗಿ ನಿಂತಿರುವನೋ ಅವನೇ "ಕಾರಣವ" ಎಂಬ ಹೆಸರಿನಿಂದ ಪಿತ್ರಾರ್ಜಿತ ಸೊತ್ತಿನ ಮೇಲೆ ಎಲ್ಲಾ ಅಧಿಕಾರವನ್ನು ವಹಿಸುವನು. ಕಿರಿಯವರಿಗೆ ಜೀವನಾಂಶವನ್ನು ಕೊಡುವ ಕೆಲಸವು ಈ 'ಕಾರಣಾ ವರರದಾಗಿರುವುದು.

ಈ ಪದ್ಧತಿಗಳಿರುವಲ್ಲಿ ಸಹೋದರರು ಸೋಮಾರಿಗಳಾಗಿರುವುದಕ್ಕೆ ಎಡೆ ಇಲ್ಲ. ಶ್ರದ್ಧೆಯಿಂದ ಕೆಲಸ ಮಾಡುವ ಸಾಹಸ ಗುಣವು ಹೆಚ್ಚಾಗುತ್ತದೆ. ಮನೆಮಠದ ಚಿಂತೆಯನ್ನು ಬಿಟ್ಟು ಎಲ್ಲಾದರೂ ಹೋಗಿ ದುಡಿಯುವುದಕ್ಕೆ ಅನುಕೂಲವಿದೆ. 10—15—25—50 ಅಥವಾ 100 ಭಟ್ಟಿ ಭೂಮಿಯಂಥಾ ಅಲ್ಪ ಸೊತ್ತನ್ನು ಇಟ್ಟುಕೊಂಡು ಅದನ್ನೇ ಉತ್ತು ನೆಡುವುದರಲ್ಲಿ ತನ್ನ ಇಡೀ ಜೀವಮಾನವನ್ನು ಕಳೆಯುವುದಕ್ಕಿಂತಲೂ ಅದನ್ನು ತನ್ನ ಕುಟುಂಬದ ಹಿರಿಯವನಿಗೆ ವಹಿಸಿ ಜೀವನಾಂಶವನ್ನು ತೆಗೆದುಕೊಂಡು ಇತರ ಕಡೆಯಲ್ಲಿ ಯಾವುದಾದರೂ ಒಂದು ವೃತ್ತಿಯಲ್ಲಿ ಸ್ವತಃ ಸಂಪಾದಿಸುವುದು ಮೇಲು. ಈ ರೀತಿಯಲ್ಲಿ ಈಗಿನ ಅನೇಕ ತರುಣರು ಅಡಿಗೆ, ಪೊಲೀಸ್, ಡ್ರೈವರ್, ಕಂಡಕ್ಟರು ಇತ್ಯಾದಿ ಉದ್ಯೋಗಗಳಲ್ಲಿ ಸೇರಿಕೊಂಡು ಉದರ ಪೋಷಣೆಯನ್ನು ಕಳೆದು ಸಂಪಾದನೆ ಮಾಡುತ್ತಿರುವುದು ಶ್ರೇಯಸ್ಕರವಾಗಿದೆ. ಆದರೆ ಕೆಲವು ತಿರಿಗೇಡಿಗಳು ಇವೆಲ್ಲಾ ಅವಮಾನಕರವಾದ ಕೆಲಸವೆಂದು ಭಾವಿಸಿಕೊಂಡು 20—50 ಭಟ್ಟಿ ಭೂಮಿಯು ಪಿತ್ರಾರ್ಜಿತ ಸೊತ್ತಿದೆ ಎಂಬ ಅಹಂಕಾರದಿಂದ ಮನೆ ಬಿಟ್ಟು ಅಗಲದೆ ಸಾಲಗಾರರಾಗಿ ಸುಳ್ಳು ಹೇಳುತ್ತಲೂ, ಅಣ್ಣಂದಿಯರ ಜೊತೆಯಲ್ಲಿ ಕದನ ಮಾಡುತ್ತಲೂ ಇರುವುದು ಅತ್ಯಂತ ಶೋಚನೀಯಕರವಾದ ಸಂಗತಿ. ಇವರಿಗೆ ಪಿತ್ರಾರ್ಜಿತ ಸೊತ್ತಿನ ಮೇಲೆಯೇ ಕೂತುಕೊಂಡಿರಬೇಕೆಂಬ ಆಶೆ ಇದ್ದರೆ ಮತ್ತು ಇತರ ಸಂಪಾದನೆಗೆ ಯಾವ ದಾರಿಯೂ ತಿಳಿಯದೆ ಹೋದರೆ ಆರಂಭವನ್ನಾದರೂ ಯುಕ್ತಿಯಿಂದ ನಡೆಸಿದರೆ ಪಾಲಾಗಬಾರದೇ.

'ವರ್ಮ.'

New arrivals of Cigars.

PRICES MODERATE.

Popular lines.

Morning whiffs 100 s.	Rs	1– 8 0
Lady love 100 s.	"	2–10–0
Special Planters 100 s	"	3– 8–0
Special Planters 50 s	"	2– 0–0
Catamaran shape 50 s.	"	2–12–0

CROCKERY:—

Tea sets for 6 persons in attractive designs @ Rs. 12/8/- & 10/8/- a set

Spare cups & saucers @ Annas 8/- & 10 – pair

The Coorg Emporium,

Mercara. General Merchant. **Sidapur.**

48–17

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ತಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು.

ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭದಾರಣೆ, ಸಂಭೋಗದಿಂದ ಉಂಟಾಗುವ ಹಾನಿ, ಇ... ಪುಸ್ತಕ ಚಿತ್ರಗಳ ಸಹಿತ ...

ಕ್ರಯ ಪುಸ್ತಕ ೧ಕ್ಕೆ ರೂ. ೧–೦–೦.

ಎಸ್. ವಿ. ಗೋಪಾಲ್ ಬುಕ್ ಡಿಪೋ,

37. ತಿರುಪಳ್ಳಿಬೀದಿ, ಮದರಾಸ್.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಡಾಬುಗಳು.



ಇದು ಬಂಗಾರದ ಗಿಲೀಟಿನಿಂದ ಪ್ರಖ್ಯಾತಿಹೊಂದಿದ ಕುಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ಜೋಡಿಸಿದ್ದು ಚಕ್ಕನೆ ಹಾಕಿಕೊಳ್ಳಬಹುದು. ಚಿನ್ನದಾಬುಗಳಂತೆ ಹಿಂಭಾಗದಲ್ಲಿ ... ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ... ದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಗೆಜ್ಜೆ ಡಾಬು 1ಕ್ಕೆ 3–0–0.

ರೋಲ್ಡ್ ಗೋಲ್ಡ್ ಕೈ ಬಳೆಗಳು.

ಇದು ಶುದ್ಧವಾದ ಅಮೇರಿಕನ್ ರೋಲ್ಡ್ ಗೋಲ್ಡ್ ... ದಿಂದ ಬಹಳ ಸಜೀವವಾಗಿಯೂ, ಹಮುತ್ಕಾರವಾಗಿಯೂ, ... ಇದರ ಪ್ರಕಾಶ ... ಬಹಳ ದಿವಸ ... ಬೇರೆ ...

... ಒಂದು ... ಜೊತೆ 1ಕ್ಕೆ 2.80

ಸ್ವಿಸ್ ಮೊಡಲ್ ವಾಲ್ ಕ್ಲಾಕ್.

(ಗೋಡೆಗೆ ತಗಲಿಸುವ ಗಡಿಯಾರ)

... ಇತರ ಗಡಿಯಾರಗಳಿಗೆ ವಾರಕ್ಕೆ ಒಂದು ಸಲ ಬೀಗ ಕೊಡಬೇಕು, ಮತ್ತು ಸೋಡಿ ಗೋಡೆಗೆ ತಗಲಿಸಬೇಕು. ಹಾಗೆ ಮಾಡದಿದ್ದರೆ ಗಡಿಯಾರವು ನಡೆಯುವದಿಲ್ಲ. ಆದರೆ ಈ ಗಡಿಯಾರವು ಆಫೀಸುಗಳಲ್ಲಿ ಗುಡಿ, ರೀಡಿಂಗ್ ರೂಂ, ಅಂಗಡಿ, ಸ್ಕೂಲ್, ಮತ್ತು ಪ್ರತಿಯೊಂದು ಮನೆಯಲ್ಲಿಯೂ ಇಡಲು ಬಹು ಲಾಯಖಾದದ್ದು. ಸರಿಯಾದ ಗಂಟೆ ಎನ್ನು ತೋರಿಸುವದು. ಈ ಗಡಿಯಾರಗಳು ಮೊದಲು ಇಂಗ್ಲೀಷು ಪರ್ಗಕವನ್ನು ಮಾತ್ರ ... ನಮ್ಮಲ್ಲಿ ಬಹು ಜನರು ಕೇಳಿಕೊಂಡ್ಡದರಿಂದ ... ಕ್ರಯ 1ಕ್ಕೆ 3–8–0

... ವಿಳಾಸ — ಸಿಟಿ ಮೊಟಾರ್,

52–17 158 ಜೈನಾ ಬೀದಿ, ಮದರಾಸು.

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಜೋಡು	ನಳಿಗೆಯ	ತೋಟದ	...	ರೂ.	12	ರಿಂದ	ರೂ. 270	...
ಒಂಟಿ	"	"						
ಜೋಡು	"	"	...		35	"	450	"
ಒಂಟಿ	"	"			50	"	135	"
ಜೋಡು	ನಳಿಗೆಯ	ಕೇಪು			35	"	275	"
ಒಂಟಿ	"				45	"	135	"
ಬ್ರೀಚ್	ಲೋಡಿಂಗ್	ರಿವಾಲ್ವರುಗಳು			30	"	81	"
ಪಿಸ್ತೋಲುಗಳು				"	35	"	350	"
					30	"	15	"

ಕಾಡು ಮೃಗಗಳ ಬೇಟೆ ... ಬಹು ಉಪಯೋಗಕರವಾದ ಉತ್ತಮ ... ಕತ್ತಿಗಳು, ಬಚಿಗಳು, ತೋಟಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.

Largest Importers of Firearms and Ammunition

Cheapest priced firm in India,

24–9 210 Abdul Rehman Street BOMBAY.

ಎಂ. ಎಸ್. ಶಿಪ್ಪಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರದ ಸಿಂಗಲ್ ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂಗಳು.

1 "ದಿಲ್ ಖುಷ್ ಫ್ಲೂಟ್" ಸಿಂಗಲ್ ರೀಡ್ ಹಾರ್ಮೋನಿಯಂ 1ಕ್ಕೆ				5[illegible]	8	0
2 "ಸಿದ್ಧವಸ್ತಾನ್ ಫ್ಲೂಟ್"	"	"	"	42	8	0
3 ...	"	"	"	40	0	0
4 ಮೋಹನ್	"	"	"	37	8	0
5 ಮೋಸ್ಟೀಂ	"	"	"	35	0	0
6 ...	"	"	"	32	8	0
7 ...	"	"	"	29	8	0
8 ...	"	"	"	27	8	0
9 ಬಿಜಲಿ	"	"	"	25	0	0
"ದಿಲ್ ಬಹರ್ ಫ್ಲೂಟ್" ಡಬ್ಬಲ್ ರೀಡ್ ಹಾರ್ಮೋನಿಯಂ 1ಕ್ಕೆ				85	0	0
...	"	"		56	0	0
ಮೋಹನ್	"	"	"	50	8	0

... ಭಂಗಾರದ ... ವಾದ್ಯಗಳು ...

... ಪೆಟ್ 1ಕ್ಕೆ		3	[illegible]	[illegible]
" ...	"	3	2	0
" ...	"	3	8	0
" ...	"	3	14	0
" ...	"	4	4	0
" ...	"	5	8	0
" ...	"	6	8	0
" ... ಪೆಟ್	"	4	8	0
... 1ಕ್ಕೆ 3 8 0 ಮತ್ತು		3	12	0
... ಪೆಟ್ 5 8 0	"	7	0	0
... 1ಕ್ಕೆ 8 0 0	"	8	8	0
" ... 1ಕ್ಕೆ		12	0	0
...	" "	8	0	0
" ... ಪೆಟ್ 1ಕ್ಕೆ		17	0	0

... 1ಕ್ಕೆ		[illegible]	[illegible]	0
...	"	3	1[illegible]	0
" ...	"	5	13	0
...	"	5	0	0
" ...	"	9	0	
...	"	1[illegible]	5	0
...	"	7	2	0
... 1ಕ್ಕೆ		5	10	0
... 1ಕ್ಕೆ		[illegible]	12	0
... 1ಕ್ಕೆ		1[illegible]	[illegible]	0

ಅಪೇಕ್ಷಿಸುವವರಿಗೆ ಸಚಿತ್ರ ಕ್ಯಾಟಲಾಗಿಗೆ ಬರೆಯುವ ವಿಳಾಸ,—ಎಂ. ಎಸ್. ಶಿಪ್ಪಪ್ಪ ಅಂಡ್ ಬ್ರದರ್ಸ್,

[illegible]–24 ಹಾರ್ಮೋನಿಯಂ ವ್ಯಾಪಾರಿಗಳು ...

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್- ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	20,660
ಜಮಾಬಂದ ಠೇವಣಾತಿ —	1,87,795

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಗಾಯಿದೆ ಅಥವ ಹೆಚ್ಚಿನ ಗಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಗಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,
ಕೋದಂಡ ಅಪ್ಪಯ್ಯನವರು,
ರಾವ್ ಬಹದ್ದೂರ್.

ಟ್ರೆಜರರ್.
ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1-7-1929

ನೋಟೀಸು.

ಈ ಕೆಳಗಿನ ಹೆಸರಿನವರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳನ್ನಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಮುಖಾಂತರ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
ಮಡಿಕೇರಿ—ಮೆ. ಕೇಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಜಾನೆಭಂಡಾರ.)
ಮೂರ್ನಾಡು—ಮಡೆಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ. ಚಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಮಡಿಕೇರಿ & ತಿತಿಮತ್ತಿ—ಮೆ. ಬಿ. ಮಾದಪ್ಪಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ವ್ಯವಹಾರ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವೀರರಾಜಪೇಟೆ ಪಿವ್ಹರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

12 bore Victor Cartridges Rs 10/- Per 100

Mahomedally-Noorbhoy.
ARMS & AMMUNITION MART
321 Abdul Rehman Street.
BOMBAY, 3.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ ಜ್ವರ, ದಿನಾ ಬರುವ ಜ್ವರ, ಚಳಿ ಜ್ವರ ಮತ್ತು ಇತರ ದೋಷದಿಂದ ಬರುವ ಜ್ವರಗಳಿಗೆ ಪಟ್ಟು ಬರುವ ಜ್ವರ, 3-4 ದಿವಸಕ್ಕೊಂದು ಸಾರಿ ಬರುವ ಜ್ವರ ... ಶೀಘ್ರ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1-8-0, 3ಕ್ಕೆ ರೂ. 4-0-0, 6ಕ್ಕೆ ರೂ 7-8-0; 12ಕ್ಕೆ ರೂ. 14.

ಚಂದ್ರಪ್ರಭಾ:—ಇದು ಪ್ರಮೇಹ ... ಕೃಚ್ಛ್ರ, ಮೂತ್ರ ಹನಿಹನಿಯಾಗಿ ... ಉರಿ, ಮೂತ್ರನಾಳದಲ್ಲಿ ಹುಣ್ಣು, ... ಮೂತ್ರ ನಾಳದ ಕೀವು ಬರುವುದು, ಮೂತ್ರದ ... ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಕ್ಕೆ ... ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳಗಳಲ್ಲಿ ... ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1-4-0 3-8-0 6-12-0

ರೋಮನಾಶಿನಿ:—ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3-8-0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಪುರಿ, ಕಣ್ಣುರಿ ... ಕಣ್ಣು ನೋವು, ಅಪಸ್ಮಾರ ಇದ್ದ ... ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲು ... ಸಿನಿಮಾ ಶಕ್ತಿ ಕುಂದಿಹೋಗುವುದು. ಇತ್ಯಾದಿಗಳನ್ನೆಲ್ಲ ಹಿಂಡಿಸ ಗುಣಮಾಡುತ್ತದೆ. ... ಕೂದಲನ್ನು ಕರಿದು ಕಪ್ಪಾದ ಸ್ವರವನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ... ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5-8-0 ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2-10-0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ.—ಮನೋಲ್ಲಾಸಿನಿ ಕಂಪೆನಿ.
೧. ಮಂಗಳೂರು.

52-2

ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ದಯವಿಟ್ಟು ಗಮನಿಸಿರಿ!

ಪಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.





ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಾಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ ... ಮತ್ತು ಕೈ ಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ... ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ "ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.

24-22

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ

ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ
1926.	391	" "	1926.	106	" "
1927	468	" "	1927.	122	"
1928.	585	" "	1928.	140	"

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ.
1921ರಲ್ಲಿ " " " "
1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ.
1927ರಲ್ಲಿ " " " 25

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಮತ್ತೆ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಯ ಒಂದರೆ ಸಿ ಸಿಗೆ ಅದರಿಂದ ಲಾಭ ಉಂಟಾಗುವುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಎಲ್. ಆರ್. ಕೃಷ್ಣಸ್ವಾಮಯ್ಯ,
ಬ್ರಾಂಚ್ ಸೆಕ್ರೆಟರಿ.

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು.

52-43

Goldsmiths' Rolling Mills,
ಪಟ್ಟಿ ಮೆಷಿನುಗಳು.



ನಗ ಮಾಡುವವರು ... ಉಪಯೋಗಿಸುವ ... ಚಿನ್ನ ಮತ್ತು ಬೆಳ್ಳಿಯ ತಗಡುಗಳನ್ನು ... ಈ ಮಿಲ್ಲುಗಳಿಗೆ ... ಏಜೆಂಟರುಗಳು ಬೇಕು ... ಪಟ್ಟಣಗಳಲ್ಲಿ ... ಹೆಚ್ಚಿನ ಸಂಗತಿಗಳು ... ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳುವುದು.

Ch. Sobhanachalam & Sons.
Chilakalapudi P. O.
Masulipatam.

12-10

THE NEW CAR!

The new Model A Ford

The most economical car in the market
Accelerates 5 to 25 M. P. H. in 8½ seconds
Petrol consumption 20-30 miles per Gallon Performance 5 to 60 miles per hour in top 40 M. P. H in second gear
A Wonderful Hill climber!!!
Easy instalment terms if you prefer
For Demonstration & other particulars
Please apply to:—

S. Sunder Rau,
Sole Ford Dealer for Coorg
MERCARA.

24-17

Printed & published by P. I. Belliappa, at "Kodagu" Press, Mercara for "Kodagu" Ltd.

ಕೊಡಗು.

ಸತೇನ ಜೂತವಯಂಗಾ ವಿದ್ಯಾ ನೀತಿ ಪ್ರ ಗುಣ್ತ್ಯಾ ಬಕ್ಯ ಶಕ್ತ್ಯೇನ ದೇಶಾಣಾಂ ಸುಸ್ಥಿರಂ ರಾಜ್ಯ ಸಂಪದಾ||

ವಾರ್ಷಿಕ ಚಂದಾ ರೂ. ೩

ಸಂಪಾದಕ—ನಂದ್ಯಂಡ ಎ. ಬೆಳ್ಯಪ್ಪ.

ಪ್ರತಿ ಪ್ರಸಾದ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯ | ಮರ್ಕೇರಿ, ... ಸಪ್ಟಂಬರ್ ತಾರೀಖು ... | ಸಂಖ್ಯೆ ೨೨

Telephone — 3115

By Appointment to H. E. the Governor of Madras

Telegram — PRECIOUS

Gems of Satisfaction throughout in orders large or small.

Brooch

PROMPTEST EXECUTION — HIGH CLASS WORKMANSHIP

GOLDSMITH — SILVERSMITH

Subramania Iyer

GEMSET

JEWELLER.

POST BOX—425 TRIPLICANE MADRAS

Excellent Quality Chaste Designs Moderate Prices



Ice Tumbler

Sir,

I am glad ... have a good finish.

(Sd.) Mrs. ...

(Sd.) Miss K. ...

(Sd.) Mrs. K. S. ...

53—7

Illustrated Catalogue Free on Application.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಚೀರರ್ ಹುಟಿದ ದಿನದಿಂದ ... ಖನಿಜ (Mineral) ... ರೊಳಗೆ ... (Experiment station) ... ಅಂಶಗಳಲ್ಲಿ ...

(1) ಚಿಲಿಯನ್ ನೈಟ್ರೇಟ್ ...

24—24

ಏಕೆ ನರಳುತ್ತೀರಿ?

ಕ್ರಯವು ... ಅಂಚೆಹಾಸಲು ...

ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯೆ

ಎಲ್ಲಾ ... ರೋಗಗಳನ್ನು ... ವೈದ್ಯ ಬೋಗಿಗ ... ಬರೆದರೆ ... ವಿವರಣೆ ...

... ರಂಜನಿ ಫಾರ್ಮಸಿ,

... ಬೈರ ಎಜಾರು ... ಮದ್ರಾಸು.

ಹೊಲಿಯುವ ಮಿಷಿನ್‍ಗಳು.

ಈ ಮಿಷಿನುಗಳು ... ಎಲ್ಲಾ ವಿಧವಾದ ಬಟ್ಟೆಗ ...



... ಒಂದು ಸೂಜಿ, ಒಂದು ... ಮಾಡುವರಿಗಾಗಿ ... ಅದ್ದರಿಂದ ಬೇಗನೆ ... ತರಿಸಿಕೊಳ್ಳುವವರಿಗೆ ...

ಕ್ರಯ ಸಿಕ್ಕ ...

ವಿಳಾಸ — ಸಿಟಿ ಪೊರ್ಟ್,

168, ... ಬಜಾರು, ಮದರಾಸ

ಶ್ರೀ ಶ್ರೀಕಂಠೇಶ್ವರ

... ಆಯಿಲ್ ಮಿಲ್ಸ್

... ಸ್ಟೇಷನ್,

...

ಮೈಸೂರು.

... ಆಸ್ತಿ ... ಮರ್ಕೇರಿ ... ಅಂಗಡಿಯಲ್ಲಿ ... ಮಾರಬಹುದು.

26—92

ಹೊಸ ಸ್ಟಾಕು! ಬೆಲೆ ಅಗ್ಗ!

ಕೊಡಗಿನ ... ಉಪಾಧ್ಯಾಯರ ... ಸಹಕಾರ ಸಂಘ.

ವೀರರಾಜಪೇಟೆ

... ಸ್ಟೇಷನರಿ ... ಪುಸ್ತಕಗಳು ... ಕೈಯಲ್ಲಿ ದೊರೆಯುವವು.

ಒಂದು ನೋಡಿ! ... ಕೊಳ್ಳಿ!

12—4

ಕೊಡಗು.

ಸಂ ೧೯೨೯ನೇ ಇಸವಿ
ನವಂಬರ್ ತಾ ೧ನೇ ಶುಕ್ರವಾರ.

ವೈಸರಾಯರ ಆಗಮನಕ್ಕಾಗಿ ಖರ್ಚು.

ಇಂಡಿಯಾದ ವೈಸರಾಯರು ಇದೇ ನವಂಬರ್ ತಿಂಗಳು 28ನೇ ತಾರೀಕಿನ ಮಧ್ಯಾಹ್ನ ಮಡಿಕೇರಿಗೆ ಬಂದು 29ನೇ ದಿನ ಮಧ್ಯಾಹ್ನ ಮಂಗಳೂರಿಗೆ ಹೊರಟು ಹೋಗುತ್ತಾರೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇವರು ಈ ದೇಶಕ್ಕೆ ಬರುವಾಗ ಈ ದೇಶದ ಸರಕಾರವು ಸ್ವಾಗತವನ್ನೀಯಬೇಕಾದದ್ದು ಯುಕ್ತವಾಗಿದೆ. ದೇಶೀಯರು ಸಹ ಸ್ವಾಗತವನ್ನೀಯುತ್ತಾರೆ. ಆದರೆ ಇವರ ಆಗಮನಕ್ಕಾಗಿ ಹೆಚ್ಚು ಕಡಿಮೆ ಒಂದು ಲಕ್ಷ ರೂಪಾಯಿ ಖರ್ಚಾಗುವುದೆಂತ ಜನರು ಆಡಿಕೊಳ್ಳುತ್ತಿದ್ದಾರೆ. ಹಿಂದುಸ್ಥಾನದ ಬೇರೆ ಪ್ರಾಂತೀಯ ಸರಕಾರಗಳು ಸರಕಾರಿ ಹಣ ಖರ್ಚು ಮಾಡಬೇಕಾದರೆ ಕೌನ್ಸಿಲನ್ನು ಕೇಳಬೇಕು. ಇಲ್ಲಿನ ಸರಕಾರಕ್ಕೆ ಆ ತೊಂದರೆಯೇನೂ ಇಲ್ಲ. ಚೀಫ್ ಕಮಿಶನರು ತನಗೊಬ್ಬರಿಗೆ ಯುಕ್ತತೋರಿದ ರೀತಿ ಖರ್ಚು ಮಾಡಲು ಸ್ವತಂತ್ರ ಉಳ್ಳವರಾಗಿದ್ದಾರೆ. ಬೇರೆ ಪ್ರಾಂತ್ಯಗಳಂತೆ ಇಲ್ಲಿಯೂ ಪ್ರಜಾಪ್ರತಿನಿಧಿಗಳ ಅನುಮತಿಯೊಡನೆ ಖರ್ಚು ಮಾಡಬೇಕಾಗಿದ್ದಿದ್ದರೆ ಖರ್ಚಾಗುವ ಮುಂಚೆ ಎಷ್ಟು ಖರ್ಚಾಗುತ್ತದೆಯೆಂತಲೂ ಯಾವದು ನ್ಯಾಯವಾದ ಖರ್ಚು, ಯಾವದು ಅನಾವಶ್ಯವಾದ ಖರ್ಚು ಎಂಬದು ಜನರಿಗೆ ತಿಳಿಯಬರುತ್ತಿತ್ತು. ಈ ಪ್ರದೇಶದಲ್ಲಾದರೋ ಹಣವೆಲ್ಲಾ ಖರ್ಚಾದ ಮೇಲೆ ಇಂತಿಷ್ಟು ಖರ್ಚಾಯಿತೆಂತ ಕೌನ್ಸಿಲಿಗೆ ತಿಳಿದು ಬರಬಹುದು. ಈ ಸ್ಥಿತಿಯಲ್ಲಿರುವಾಗ ವೈಸರಾಯರ ಬರುವಿಕೆಗಾಗಿ ಆಗುವ ಖರ್ಚನ್ನು ವಿಮರ್ಶಿಸುವದು ಯುಕ್ತವಾಗಿದೆ.

ವೈಸರಾಯರು ದಯಮಾಡಿ ಹೆರಳುವ ರಸ್ತೆ ರಿಪೇರಿಗಾಗಿ ವಿಶೇಷ ಹಣ ಖರ್ಚಾಗುತ್ತದೆ. ಕಳೆದ ಕೌನ್ಸಿಲ್ ಅಧಿವೇಶನದಲ್ಲಿ ಕೌನ್ಸಿಲಿನಲ್ಲಿ ವರ್ಣಿಸಲ್ಪಟ್ಟಂತೆ ಕೊಡಗಿನ ರಸ್ತೆಗಳು ಬಹಳ ಹೀನಸ್ಥಿತಿಯಲ್ಲಿವೆ. ಇವುಗಳಿಗಾಗಿ ಆಗುವ ಖರ್ಚೆಲ್ಲಾ ವೈಸರಾಯರ ಬರುವಿಕೆಗಾಗಿಯೇ ಆಗುತ್ತದೆಯೆಂತ ಹೇಳಲಿಕ್ಕಾಗುವದಿಲ್ಲ. ಆದರೂ ಅವರು ಬಂದು ಹೋಗುವ ರಸ್ತೆಯಲ್ಲಿ ತಿರುವುಗಳಿಗಾಗಿ ಆಗುವ ಖರ್ಚು ಮತ್ತು ಬೇರೆ ರಸ್ತೆಗಳಿಗಿಂತ ಹೆಚ್ಚು ದುರಸ್ತು ಸ್ಥಿತಿಯಲ್ಲಿ ಇಡಲಿಕ್ಕಾಗಿ ಆಗುವ ಖರ್ಚು ಸಹ ವೈಸರಾಯರ ಬರುವಿಕೆಗಾಗಿಯೇ ಆಗುವದೆಂತ ಹೇಳಬಹುದು. ಈ ರಸ್ತೆಗಳೂ ಮತ್ತು ಕೊಡಗಿನ ಬೇರೆ ರಸ್ತೆಗಳೂ ವೈಸರಾಯರು ಬಂದು ಹೋದ ಮೇಲೆ ಹೇಗಿರುತ್ತವೆ ಎಂಬದನ್ನು ಹೋಲಿಸಿ ನೋಡಿದರೆ ಈ ರಸ್ತೆಗಳಿಗಾಗಿ ಆಗುವ ಖರ್ಚು ಅಲ್ಪ ಮೊಬಲಗಾಗಲಾರದೆಂತ ತಿಳಿಯಬಹುದು.

ವೈಸರಾಯರು ಬರುತ್ತಾರಾದ್ದರಿಂದಲೇ ಪಿ. ಡಬ್ಲ್ಯು. ಇಲಾಖೆಯವರು ತುಂಬಾ ಹಣ ಮುಟ್ಟಿಸಿ ಹೆಚ್ಚಿನ ಸ್ಟೀಮ್ ರೋಲರ್‌ಗಳನ್ನೂ, ಸ್ಕೇರಿಫೈಯರ್ ಎಂಬ ರಸ್ತೆಯನ್ನು ಅಗೆಯುವ ಯಂತ್ರಗಳನ್ನೂ ಕೊಂಡುಕೊಂಡರು. ಒಂದೇ ವರ್ಷ ರಸ್ತೆ ಖರ್ಚಿಗಾಗಿ ಮೂಲ ಧನವಾಗಿ ಯಂತ್ರಗಳಿಗೆ ಹೆಚ್ಚು ಹಣ ಖರ್ಚುಮಾಡುವದು ಒಳ್ಳೇ ತತ್ವವಲ್ಲ. ಈ ಹೆಚ್ಚಿನ ಯಂತ್ರಗಳಿಗಾಗಿ ಆದ ಖರ್ಚು ವೈಸರಾಯರ ಆಗಮನಕ್ಕಾಗಿಯೇ ಆದ ಖರ್ಚೆನ್ನಬಹುದು.

ಮಡಿಕೇರಿ ಟೌನಿನಲ್ಲಿ ಬೋಯೆರ್ ಬಂಗ್ಲೆಯಿಂದ ಕೋಟೆ ವರೆಗೆ ಇರುವ ಸುಮಾರು ಮುಕ್ಕಾಲು ಮೈಲು ಫಾಸಲೆ ರಸ್ತೆಗೆ ಸೀಮೆಂಟ್ ಮತ್ತು ತಾರು ಹಾಕಲಿಕ್ಕಾಗಿ ಸಾವಿರಾರು ರೂಪಾಯಿ ಖರ್ಚು ಮಾಡುತ್ತಾರೆಂಬ ಇನ್ನೊಂದು ವರ್ತಮಾನವಿದೆ. ಈ ಖರ್ಚು ಖಂಡಿತವಾಗಿಯೂ ಅನಾವಶ್ಯವಾದ್ದಾಗಿದೆ. ದೇಶದಲ್ಲೆಲ್ಲಾ ಜನರಿಗ ಪ್ರಯೋಜನವಾಗುವ ರಸ್ತೆಗಳು ಬಹಳ ಹೀನ ಸ್ಥಿತಿಯಲ್ಲಿರುವಾಗ ಮಡಿಕೇರಿಯೊಳಗಿನ ಸ್ವಲ್ಪ ದೂರದ ರಸ್ತೆಗೆ ಅತಿಯಾಗಿ ಖರ್ಚು ಮಾಡುವದು ದೇಶದಲ್ಲಿ ಅತೃಪ್ತಿಯಾಗುವುದರಲ್ಲಿ ಸಂದೇಹವಿಲ್ಲ. ಮರೆನಾಡು ಪ್ರಾಂತ್ಯದವರು ಎಷ್ಟೋ ವರ್ಷಗಳಿಂದ ಕೂಗಿ ಕೂಗಿ ಈ ವರ್ಷ ಗಾಡಿ ರಸ್ತೆಯೊಂದನ್ನು ಮಾಡುವ ಏರ್ಪಾಡು ನಡೆಯುತ್ತಿದೆ. ಮಗ್ಗುಲ, ಮಸಕೇರಿ, ಕಟ್ಟೆಮಾಡ, ಪ್ರಾಂತ್ಯದ ಜನರ ಸಹಾಯಕ್ಕೆ ಒಂದು ರಸ್ತೆ ಬೇಕೆಂತ ಎಷ್ಟೋ ವರ್ಷಗಳಿಂದ ಬೇಡುತ್ತಿದ್ದರೂ ಅದಕ್ಕೆ ಹಣ ದೊರೆಯುವುದಿಲ್ಲವೆಂತ ಹೇಳುತ್ತಿದ್ದಾರೆ. ಈ ರೀತಿ ದೇಶಕ್ಕೆ ಅತ್ಯವಶ್ಯವಾಗಿರುವ ರಸ್ತೆಗಳಿಗೂ ಮತ್ತು ಇತರ ಪ್ರಯೋಜನಗಳಿಗೂ ಆಗಬೇಕಾದ ಖರ್ಚನ್ನು ಮಾಡದೆ ಉಳಿಸಿಟ್ಟ ಹಣವನ್ನು ಮಡಿಕೇರಿ ಟೌನಿನೊಳಗಿನ ಒಂದು ಚಿಕ್ಕ ರಸ್ತೆಗೆ ಖರ್ಚು ಮಾಡುವದಕ್ಕೆ ಜನರ ಒಪ್ಪಿಗೆ ಎಂದೂ ಸಿಕ್ಕಲಾರದು. ಈ ರಸ್ತೆಯನ್ನು ಬೇರೆ ರಸ್ತೆಗಳಂತೆ ರಿಪೇರಿ ಮಾತ್ರ ಮಾಡಲು ಯಾರ ಆಕ್ಷೇಪಣೆಯೂ ಇಲ್ಲ. ಆದರೆ ಇದಕ್ಕೆ ಸೀಮೆಂಟ್ ಮತ್ತು ತಾರು ಹಾಕುವುದು ಖಂಡಿತವಾಗಿಯೂ ಅವಶ್ಯವಿಲ್ಲ. ಕೋಟೆಯ ಬಾಗಿಲಲ್ಲಿ ಈ ಮೊದಲೇ ಹಾಕಿರುವುದನ್ನು ನೋಡಿದರೆ ಇಲ್ಲಿನ ಕೆಲಸಗಾರರಿಗೆ ಈ ಕೆಲಸವನ್ನು ಸರಿಯಾಗಿ ಮಾಡಲು ಗೊತ್ತಿರುವಂತೆ ಕಾಣುವುದಿಲ್ಲ. ಮದ್ರಾಸು ಪಟ್ಟಣದಲ್ಲೂ ಮತ್ತು ಇತರ ದೊಡ್ಡ ಪಟ್ಟಣಗಳಲ್ಲೂ ತಾರು ಹಾಕಿರುವ ಕ್ರಮವೇ ಬೇರೆಯಿರಬೇಕೆಂತ ಕಾಣುತ್ತದೆ. ಅಲ್ಲಿ ಈ ಬಾಬಿಗೆ ಇಲ್ಲಿನ ಇಲಾಖೆಯವರು ಮಾಡುವಷ್ಟು ಖರ್ಚು ಮಾಡುತ್ತಿರಲಾರರೆಂತ ನಂಬ ಬೇಕು. ದೇಶದ ಜನರಿಗೆ ವಿದ್ಯೆ, ವೈದ್ಯ ಚಿಕಿತ್ಸೆ, ಪ್ರಯಾಣದ ಅನುಕೂಲತೆಗಳನ್ನು ಆಗಬೇಕಾದಷ್ಟು ಮಾಡಿಕೊಡದೆ ಕೂಡಿಟ್ಟ ಹಣವನ್ನು ದುಂದು ಖರ್ಚುಮಾಡುವುದನ್ನು ಸ್ಪಷ್ಟ ಮಾತುಗಳಿಂದ ಖಂಡಿಸಬೇಕಾಗಿದೆ. ದೇಶದ ಆಯಾಯ ವರ್ಷದ ಖರ್ಚಿಗೆ ಬೇಕಾದದ್ದಕ್ಕಿಂತ ವಿಪರೀತ ಹಣವನ್ನು ದೇಶದಿಂದ ಎತ್ತುವ ಪದ್ಧತಿಯನ್ನು ಶ್ರೀಮಾನ್ ಗೋಖಲೆಯವರಂಥ ಅರ್ಥ ಶಾಸ್ತ್ರದ ಪಟುಗಳು ಖಂಡಿಸಿರುತ್ತಾರೆ. ಹಾಗೆ ಹಣವನ್ನು ಅನಾವಶ್ಯವಾಗಿ ಕೂಡಿಟ್ಟರೆ ದುಂದು ಖರ್ಚು ಮಾಡಲು ಅಧಿಕಾರಿಗಳಿಗೆ ಅವಕಾಶ ದೊರೆಯುತ್ತದೆಯೆಂಬದೇ ಹೀಗೆ ಹಣ ಕೂಡಿಡುವ ಪದ್ಧತಿಗೆ ಆಕ್ಷೇಪವಾಗಿದೆ. ಈ ಆಕ್ಷೇಪವು ಸಕಾರಣವಾದದ್ದೆಂತ ಈ ದೇಶದ ಸರಕಾರದ ಈಗಿನ ವರ್ತನೆಯಿಂದ ನಿದರ್ಶನವಾಯಿತು.

ವೈಸರಾಯರು ಮಡಿಕೇರಿಯಲ್ಲಿ ಇರುವ ಒಂದು ದಿನದ ಉಪಯೋಗಕ್ಕಾಗಿ ಟೆಲಿಫೋನ್ ಹಾಕುತ್ತಾರೆಂತಲೂ, ಈ ಬಗ್ಗೆ 10 ಯಾ 15 ಸಾವಿರ ರೂ. ಖರ್ಚಾಗುತ್ತದೆಯೆಂತಲೂ ವರ್ತಮಾನವಿದೆ. ವೈಸರಾಯರಿಗೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂತ ಒಪ್ಪುತ್ತೇವೆ. ಆದರೆ ಇಂಥಾ ಖರ್ಚುಗಳನ್ನು ನಮ್ಮ ಸರಕಾರವು ವಹಿಸಿಕೊಳ್ಳಬೇಕಾದರೆ ದೇಶಕ್ಕೆ ತುಂಬಾ ನಷ್ಟವಾಗುತ್ತದೆ.

ವೈಸರಾಯರು ಕೊಡಗಿಗೆ ಪ್ರವೇಶಿಸುವಾಗ ಅವರಿಗೆ ಸ್ವಾಗತವನ್ನೀಯಲು ದೇಶದ ಕೆಲವು ಭಾಗಗಳಿಂದ ಜನರನ್ನು ಕರೆಸಿಕೊಳ್ಳಲು ಪ್ರಯಾಣದ ಖರ್ಚು ಮತ್ತು ಇತರ ಊಟದ ಖರ್ಚು ಸಹ ಸರಕಾರವು ವಹಿಸಿಕೊಳ್ಳುತ್ತದೆಯೆಂತಲೂ ತಿಳಿಯುತ್ತೇವೆ. ವೈಸರಾಯರು ಒರುವಾಗ ಸ್ವಾಗತಕೊಡಬಾರದೆಂತ ಅಭಿಪ್ರಾಯವು ಈ ದೇಶದಲ್ಲಿ ಯಾರೂ ಇಲ್ಲದಿರುವಾಗ ಮತ್ತು ದೇಶದ ಸಾರ್ವಜನಿಕ ಸಂಸ್ಥೆಗಳನೇಕ ಅಭಿನಂದನಾ ಪತ್ರಗಳನ್ನು ಕೊಡಲು ಏರ್ಪಾಡು ಮಾಡಿರುವಾಗ ದೇಶದ ಜನರು ಪ್ರತ್ಯೇಕವಾಗಿ ಸ್ವಾಗತಮಾಡುತ್ತಾರೆಂತ ಸರಕಾರವು ತೋರಿಸುವ ಅವಶ್ಯವೇನೂ ಇರಲಿಲ್ಲ. ಜನರು ತಾವಾಗಿಯೇ ಸ್ವಾಗತ ಕೊಟ್ಟರೆ ಯಾರೂ ಆಕ್ಷೇಪಿಸುವದಿಲ್ಲ. ಅದಕ್ಕಾಗಿ ಸರ್ಕಾರವು ಖರ್ಚುಮಾಡಬಾರದೆಂತ ಮಾತ್ರ ಹೇಳುವದಾಗಿದೆ. ಸರ್ಕಾರದವರು ಖರ್ಚುಕೊಟ್ಟು ಕರೆಸಿಕೊಂಡು ಸ್ವಾಗತ ಕೊಡಿಸಿದರೆ ಆ ಸ್ವಾಗತಕ್ಕೆ ಬೆಲೆಯೂ ಇಲ್ಲ. ನಮ್ಮ ದೇಶದ ಬಡ ಸರ್ಕಾರವು ಈ ತರದ ಸ್ವಾಗತಕ್ಕೆ ಖರ್ಚು ಮಾಡಲು ವೈಸರಾಯರು ಸಹ ಒಪ್ಪಲಾರರು.

ವೈಸ್‌ರಾಯರು ಮಡಿಕೇರಿಯಲ್ಲಿರುವ ರಾತ್ರೆ ಮತಾಪುಗಳನ್ನು ಸುಡುವ ಏರ್ಪಾಡು ಇದೆಯೆಂತಲೂ, ಇದಕ್ಕಾಗಿ ಒಂದೆರಡು ಸಾವಿರ ರೂಪಾಯಿ ಖರ್ಚು ಮಾಡುತ್ತಾರೆಂತಲೂ ತಿಳಿಯುತ್ತೇವೆ. ಇದು ಸಹ ಅನಾವಶ್ಯದ ಖರ್ಚೇ ಆಗಿದೆ. ಈ ದೇಶಕ್ಕೆ ಪ್ರಜಾಪ್ರಭುತ್ವ ಅಧಿಕಾರವನ್ನು ಸರಕಾರವು ಕೊಡುತ್ತೇವೆಯೆಂತಾಗಲೀ, ದೇಶದ ಖರ್ಚಿನ ಬಗ್ಗೆ, 1924ನೇ ಇಸ್ವಿಗಿಂತ ಮೊದಲೇ ಈ ದೇಶದ ಉತ್ಪತ್ತಿಯಲ್ಲಿ ಉಳಿದಿರುವ ಸುಮಾರು ಒಂದು ಕೋಟಿ ರೂಪಾಯಿಯನ್ನು ವಾಪಸು ಕೊಡಲ್ಪಡುತ್ತದೆಯೆಂತಾಗಲೀ, ರೈಲ್ವೆ ಹಾಕಿಸಿ ಕೊಡತ್ತೇವೆಂತಾಗಲೀ, ವೈಸರಾಯರು ಈ ದೇಶಕ್ಕೆ ದಯಮಾಡಿಸಿದಾಗ ಹೇಳುವುದಾದರೆ ದೇಶವು ಸಂತೋಷಪಡಲು ಕಾರಣವಿದ್ದೀತು. ಆದರೆ ರಾಜಕೀಯ ಸುಧಾರಣೆಯ ವಿಷಯವಾಗಿ ಈ ದೇಶಕ್ಕೆ ಪ್ರತ್ಯೇಕವಾಗಿ ಈಗಲೇ ಹೇಳಲು ಸಾಧ್ಯವಿದೆಯೋ, ಏನೋ ನಮಗೆ ತಿಳಿಯದು. ಉಳಿತಾಯವನ್ನು ವಾಪಸು ಕೊಡ ಬಹುದು, ರೈಲ್ವೆ ಹಾಕಿಸಲು ಹಣ ಕೊಡುವ ವಾಗ್ದಾನ ಮಾಡುತ್ತಾರೆಂತ ಕೆಲವರ ಆಶೆ ಇದೆ. ಈ ಆಶೆಯು ಕೈಗೂಡುತ್ತದೋ ಎಂತ ನೋಡಬೇಕಷ್ಟೆ.

ವೈಸ್‌ರಾಯರು ಚಕ್ರವರ್ತಿಯವರ ಪ್ರತಿನಿಧಿಯಾದದ್ದರಿಂದಲೂ, ನಮ್ಮ ಈ ಚಿಕ್ಕ ದೇಶವು ಬೇರೆ ಸರಕಾರವಿರುವ ಪ್ರಾಂತ್ಯವಾಗಿರುವದರಿಂದಲೂ, ಈ ವರೆಗೆ ಯಾವ ವೈಸರಾಯರೂ ಇಲ್ಲಿಗೆ ಬಂದಿರಲಿಲ್ಲವಾದ್ದರಿಂದಲೂ ಮತ್ತು ಈ ದೇಶಕ್ಕೆ ಬರುವ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡಲು ತುಂಬಾ ಸಹಾಯಕರಾಗಿದ್ದಾರೆಂತ ಈಗ ತಿಳಿಯ ಬರುತ್ತಿರುವುದರಿಂದಲೂ ಇವರಿಗೆ ಸ್ವಾಗತಕೊಡಬೇಕಾದದ್ದು ಅವಶ್ಯವಾಗಿದೆ. ನಮ್ಮ ದೇಶಕ್ಕೆ ಸಂಪೂರ್ಣ ಪ್ರಾಂತೀಕ ಸ್ವಾತಂತ್ರ್ಯ ಕೊಡಬೇಕೆಂತ ಕೇಳುತ್ತಿರುವ ಈ ಸುಸಂಧಿಯಲ್ಲಿ ವೈಸರಾಯರು ಖುದ್ದಾಗಿ ಈ ದೇಶಕ್ಕೆ ಬಂದು ಈ ದೇಶದ ಜನರ ಅಭಿಲಾಷೆಗಳನ್ನು ತಿಳಿದುಕೊಂಡು ಹೋದರೆ ಈ ದೇಶದ ಸ್ವರಾಜ್ಯ ಸ್ಥಾಪನೆಗೆ ಸಹಾಯವಾದೀತು. ಆದರೆ ಈ ಎಲ್ಲಾ ಕಾರಣದಿಂದ ಸಹ ನಮ್ಮ ದೇಶದ ಸರಕಾರವು ಸ್ವಲ್ಪವಾದರೂ ಅನಾವಶ್ಯ ಖರ್ಚು ಮಾಡಬಾರದೆಂತ ಮಾತ್ರ ವಾದಿಸುವದಾಗಿದೆ.

ಶ್ರೀಯುತ ರಾಜಗೋಪಾಲಾಚಾರ್ಯರ ಭಾಷಣದ ಸಾರಾಂಶ.

ಶ್ರೀವಿಲ್ಲಿಪುತ್ತೂರು ತಾಲೋಕು ಪರಿಷತ್ತಿನಲ್ಲಿ ಶ್ರೀ. ಸಿ ರಾಜಗೋಪಾಲಾಚಾರ್ಯರು ಹೇಳಿರುವದೇನೆಂದರೆ—

ಕೃಷಿ ಇಲಾಖೆಯ ಡೈರೆಕ್ಟರು ಎಷ್ಟೋ ದೊಡ್ಡ ಸಂಬಳ ತೆಗೆದುಕೊಳ್ಳುವವರಾದರೂ ಅವರ ಆಫೀಸಿನಲ್ಲಿ ಒಂದು ಕಾಳು ಧಾನ್ಯವಾದರೂ ತಯಾರಾಗುವದಿಲ್ಲ. ಧಾನ್ಯವನ್ನು ಗ್ರಾಮವಾಸಿಗಳೇ ಬೆಳೆಸಬೇಕು. ಅವರು ಬೆಳೆಸಿದ ಧಾನ್ಯದ ಲೆಖ್ಖವನ್ನು ಡೈರೆಕ್ಟರು ಬರೆದು ಹೆಸರು ಪಡೆಯುತ್ತಾರೆ. ಅದರಂತೆಯೇ ಕಾಂಗ್ರೆಸ್ ಮುಂದಾಳುಗಳು ಎಷ್ಟೇ ದೊಡ್ಡವರಾದರೂ ನಿಜವಾದ ದೇಶದ ಅಭಿವೃದ್ಧಿಯ ಕಾರ್ಯಗಳು ಗ್ರಾಮಾಂತರಗಳಲ್ಲಿ ಇರುವವರಿಂದಲೇ ಆಗಬೇಕು. ಗ್ರಾಮಗಳಲ್ಲಿ ದೇಶೋನ್ನತಿಯ ಕಾರ್ಯವಾಗದಿದ್ದರೆ ಕಾಂಗ್ರೆಸ್ಸಿನಿಂದಲಾಗಲೀ, ಜಿಲ್ಲಾ ಪರಿಷತ್ತಿನಿಂದಲಾಗಲೀ ಏನೂ ಕಾರ್ಯವಾಗಲಿಕ್ಕಿಲ್ಲ.

ಬೇರೆ ತಾಲೋಕಿನಲ್ಲಿ ಕೆಲಸ ಪ್ರಾರಂಭವಾಗಲಿಲ್ಲ, ನಾನು ಯಾಕೆ ಮಾಡಬೇಕೆಂತ ತಡೆದು ಕೂರಬಾರದು. ಜೇಡಿಯವರು ವ್ಯವಸಾಯ ಪ್ರಾರಂಭ ಮಾಡಿದಾಗ ನೀವು ಮಾಡಿದರೆ ನಾಕೆಂತ ನೀವು ಕೂರುವದಿಲ್ಲವಷ್ಟೆ. ಅದರಂತೆಯೇ ಪ್ರತಿಯೊಂದು ತಾಲೋಕು ತನ್ನ ತನ್ನ ಕೆಲಸವನ್ನು ಮಾಡಬೇಕು. ಆಗ ಒಟ್ಟು ದೇಶದ ಕೆಲಸವು ಮುಂದೆ ಸಾಗುತ್ತದೆ. ಒಂದೇ ತಾಲೋಕಿನಿಂದ ಎಷ್ಟೊಂದು ಕೆಲಸವಾಗಬಹುದೆಂಬದನ್ನು ಬಾರ್ಡೋಲಿ ತಾಲೋಕು ತೋರಿಸಿದೆ. ಇದು ಬರೀ 88,000 ಜನ ಸಂಖ್ಯೆ ಇದ್ದ ತಾಲೋಕು. ಅಲ್ಲಿ ಒಳ್ಳೇ ಮುಂದಾಳುಗಳಿದ್ದರೆನ್ನಬಹುದು. ಆದರೆ ಅಲ್ಲಿ ಒಳ್ಳೇ ರೈತರೂ ಇದ್ದರು. ಒಳ್ಳೇ ರೈತರಿಲ್ಲದಿದ್ದರೆ ಮುಂದಾಳುಗಳಿಂದ ಏನೂ ಮಾಡಲು ಸಾಧ್ಯವಿಲ್ಲ. ಅಲ್ಲಿನ ರೈತರು ಹಿಂದುಸ್ಥಾನದ ಬೇರೆ ಯಾವ ಪ್ರಾಂತ್ಯದ ರೈತರಿಗಿಂತಲೂ ಮುಂದರಿದವರಾಗಿರಲಿಲ್ಲ. ಕಂದಾಯದ ಸೆಟ್ಲ್‌ಮೆಂಟಿನ ಮಾರ್ಪಾಡನ್ನು ರದ್ದು ಪಡಿಸಿದ್ದೇ ಮಾತ್ರ ಅವರ ಜಯಪ್ರದವಾದ ಕಾರ್ಯವಲ್ಲ. ಶ್ರಮದ ಕೆಲಸ, ನಿಯಮ, ಏಕತೆ, ಧೈರ್ಯ ಮತ್ತು ದೇಶ ಭಕ್ತಿ ಇವೇ ಅವರ ಜಯಕಾರಣಗಳು. ಈ ಶಕ್ತಿಗಳನ್ನು ಯಾವದಕ್ಕಾದರೂ ಉಪಯೋಗಿಸಿಕೊಳ್ಳಬಹುದು. ಒಂದೇ ಉದ್ದೇಶಕ್ಕಾಗಿ ಕುಚ್ಛ ಸ್ವಾರ್ಥತೆ ಬಿಟ್ಟು ಎಡೆಬಿಡದೆ ಕೆಲಸ ಮಾಡುವ ಮಾರ್ಗವನ್ನು ಮುಂದಿಟ್ಟುಕೊಳ್ಳಬೇಕು. ಈ ಪ್ರಪಂಚವು ದೇವರ ಸೃಷ್ಟಿ. ಸದುದ್ದೇಶದಿಂದ ಸ್ವಾರ್ಥತೆ ಬಿಟ್ಟು ಕೆಲಸ ಮಾಡಿದರೆ ದೇವರು ಸಹಾಯ ಮಾಡದೇ ಇರುತ್ತಾನೆ.

ದೇಶದ ಕೆಲಸವೆಂದರೇನೆಂತ ತಿಳಿದಿರಬೇಕು. ಮೇಲ್ಮೆ ಪಡೆಯುವದಾಗಲೀ, ಬೇರೆಯವರ ಮೇಲ್ಮೆಗೆ ಸಹಾಯಕರಾಗುವದಾಗಲೀ ದೇಶ ಸೇವೆಯಲ್ಲ. ಈ ದೇಶವು ದೇವರ ದೇವಾಲಯವೆಂತ ಎಲ್ಲರೂ ತಿಳಿದಿರಬೇಕು. ಆದ್ದರಿಂದ ಜನರು ಸ್ಪೃಶ್ಯ, ಇನ್ನೊಬ್ಬನು ಅಸ್ಪೃಶ್ಯನಾಗಲು ಸಾಧ್ಯವಿಲ್ಲ. ಈ ಬಾಬಿನಲ್ಲಿ ಇನ್ನೇನು ಮಾಡದಿದ್ದರೂ ಎಲ್ಲಾ ದೇವಸ್ಥಾನಗಳಿಗೂ ಅಸ್ಪೃಶ್ಯರನ್ನು ಬಿಡುವಂತೆ ಮಾಡಬೇಕು. ನಮ್ಮ ದೇಶದ ಹತ್ತಿಯಿಂದ ಬೇಕಾದಷ್ಟು ಕೈನೂಲಿನ ಬಟ್ಟೆ ಮಾಡಿಕೊಳ್ಳಬಹುದಾಗಿರುವಾಗ ಪರದೇಶೀ ಬಟ್ಟೆಯನ್ನು ಯಾರೂ ಕೊಳ್ಳಬಾರದು. ಬಡವರನ್ನು ಕುಡುಕತನದಿಂದ ಬಿಡಿಸಿ. ಗ್ರಾಮಾಂತರಗಳಲ್ಲಿ ಸಂತೋಷವಿದೆಯೇ? ಈ ಹೊತ್ತು ಹೊಟ್ಟೆ ತುಂಬಾ ಊಟ. ನಾಳೆಗೆ ಸಂಕಷ್ಟ ಇದೆ ಎಂಬ ಧೈರ್ಯವಿದೆಯೋ? ಇಲ್ಲವಾದರೆ ಸೇಂದಿ, ಸಾರಾಯಿ ಅಂಗಡಿಗಳು ಇವರಲ್ಲಿರುವ ಹಣ ಕಾಸನ್ನು ಕಸಕೊಳ್ಳಲು ಬಿಡಬಹುದೋ? ಇಂಥಾ ಸ್ಥಿತಿಯಲ್ಲಿರುವ ಜನರ ಮಧ್ಯೆ ಸೇಂದಿ, ಸಾರಾಯಿ ಅಂಗಡಿಗಳನ್ನು ಇಟ್ಟಿರುವದನ್ನು ನೋಡಿದರೆ ಸಿಟ್ಟು ಬರುತ್ತದೆ, ಕಣ್ಣು ನೀರು ಬೀಳುತ್ತದೆ. ಜಾತಿಗಳೊಳಗೆ ಇರುವ ಮತ್ಸರವೆಂಬ ವಿಷವನ್ನು ಹೋಗಲಾಡಿಸಬೇಕು. ನಮ್ಮ ಮುಖಂಡರು ಸಿಟ್ಟಿನಿಂದಲೂ ದ್ವೇಷದಿಂದಲೂ, ದೂಷಣೆಯಿಂದಲೂ ಒಗ್ಗಟ್ಟನ್ನು ಸಾಧಿಸಬಹುದೆಂತ ಯೋಚಿಸಿದ್ದರು! ಒಳ್ಳೇ ಪ್ರಯತ್ನಗಳಿಂದಲ್ಲದೆ ಇದರಿಂದ ಸಾಧ್ಯವಿಲ್ಲ. ಈ ಗುಣಗಳು ಹಿಂಸೆಯ ರೂಪಾಂತರವಾಗಿವೆ. ಶಾಶ್ವತವಾದ ಒಗ್ಗಟ್ಟಾಗ ಬೇಕಾದರೆ ಬೇರೆ ಉಪಾಯಗಳನ್ನು ಕಂಡು ಹಿಡಿಯಬೇಕು. ನಮ್ಮ ದೇಶವನ್ನು ಪ್ರೀತಿಸುವದಾದರೆ ಎಲ್ಲಾ ಜನಗಳೊಂದಿಗೆ ನಾವು ಮುಂದರಿಸಬೇಕು. ದ್ವೇಷವನ್ನು ಬಿಡಬೇಕು. ಬಾಯಿಯಿಂದ ದ್ವೇಷ ಬಿಟ್ಟೆನೆಂತ ಆಡಿದರೆ ಸಾಲದು. ಮನಶ್ಶುಕ್ತಿಯನ್ನು ಅಭ್ಯಾಸಿಸಿ ನೋಡಬೇಕು. ಬೆಳಿಗ್ಗೆ ಎದ್ದು ಪ್ರತಿಯೊಬ್ಬನೂ ದೇವರ ಪ್ರಾರ್ಥನೆ ಮಾಡುವಾಗ ದಕ್ಷಿಣ ಹಿಂದೂಸ್ಥಾನದಲ್ಲಿರುವ ಜಾತಿ ದ್ವೇಷವನ್ನು ಹೋಗಲಾಡಿಸಿ ದೇಶದ ಭಕ್ತಿ ಬೆಳೆಯುವಂತೆ ಮಾಡೆಂತ ದೇವರನ್ನು ಕೇಳಿಕೊಳ್ಳಬೇಕು.

ಅಸಹಕಾರದ ದಿನಗಳಲ್ಲಿದ್ದ ದೇಶಭಕ್ತಿ ಹೋಗಿ ಈಗ ವ್ಯಕ್ತಿ ಮೇಲ್ಮೆಗೆ ಗಮನ ಹೆಚ್ಚಾಗಿದೆ. ತಾಲೋಕುಗಳಲ್ಲಿ ಸಹ ಸ್ಥಳೀಯ ಸಂಸ್ಥೆಗೆ ಅಥವಾ ಅದಕ್ಕೆ ಚುನಾವಣೆಯ ಸ್ಪರ್ಧೆ ಹೆಚ್ಚಾಗಿದೆ. ದೇಶಭಕ್ತಿಯ ಪ್ರವಾಹವು ಎಲ್ಲಾ ಬಗೆ ದುರ್ಗುಣ ಹೆಚ್ಚುತ್ತಲಿದೆ. ಈ ರೀತಿ ಜನರ ನೀತಿಯನ್ನು ಕೆಡಿಸುವುದರಿಂದ ದೇಶಕ್ಕೆ ಆಗುವ ಹಾನಿಯು ಘೋರವಾದದ್ದು. ಗ್ರಾಮಾಂತರಗಳಲ್ಲಿ ಇರುವ ಜನರು ಈ ದುಷ್ಟ ಚಾಳಿಗೆ ಎದುರು ನಿಂತು ಇದನ್ನು ಬೆಳೆಯಲು ಬಿಡಬಾರದು. ಮೇಲ್ಮೆಯನ್ನು ಅಪೇಕ್ಷಿಸುವ ವ್ಯಕ್ತಿಗಳು ಗ್ರಾಮವಾಸಿಗಳನ್ನು ಕೆಡಿಸಲು ಪ್ರಯತ್ನಿಸುತ್ತಾರೆ. ಈ ರೀತಿ ಕೆಡಿಸುವ ಆಶೆಗಳಿಗೆ ಗ್ರಾಮಾಂತರಗಳಲ್ಲಿರುವ ಒಳ್ಳೇ ಜನರು ಅವಕಾಶವನ್ನು ಕೊಡದೆ ದೇವರಿಗೆ ಹೆದರಿ ಈ ಕೆಟ್ಟ ಚಾಳಿಯನ್ನು ನಿಲ್ಲಿಸಬೇಕು.

ವಿದ್ಯಾರ್ಥಿಗಳಿಗೆ ಮಿ. ಮಿರ್ಜಾ‌ರವರ ಭಾಷಣ

ತಾ. ೧೭—೧೦—೨೯ರಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ವಾರ್ಷಿಕೋತ್ಸವವಾಯಿತು. ಈಗ ಮೈಸೂರಿನ ದಿವಾನರಾದ ಮಿ. ಮಿರ್ಜಾ ಮಹಮ್ಮದ್ ಇಸ್ಮಾಯಿಲರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಆ ಸ್ಥಾನದಿಂದ ಮಾಡಿದ ಭಾಷಣದಿಂದ ಈ ವಿಚಾರವನ್ನು ಎತ್ತಿ ಬರೆಯಲಾಗಿದೆ.

ಕಾಲ ಕೆಟ್ಟು ಹೋಯಿತೆಂದರೆ

ಕಾಲ ಕೆಟ್ಟು ಹೋಯಿತೆಂದು ಹಲವರು ಗೊಣಗುತ್ತಾರೆ. ಹಾಗೆ ಹೇಳುವುದು ಶುದ್ಧ ಅನ್ಯಾಯ. ಇದು ಉತ್ತಮ ಕಾಲ. ಅವ್ಯವಸ್ಥೆಯ ಕಾಲವಿದು; ಅಶಾಂತಿಯ ಕಾಲವಿದು, ಆದರೇನು, ಪೂರ್ಣ ಅಶಾ ಜನಕವೂ ಅದ್ಭುತವೂ ಆದ ಕಾಲವಿದು. ಅಭಿನೂತ ಬೋಧೆಗಳಿಂ ತೀಕ್ಷ್ಣವಾಗಿವೆ, ಕಲಹಗಳಾದರೋ ಉಗ್ರವಾಗಿವೆ, ಎಲ್ಲೆಲ್ಲ ನೋಡಿದರೇನು? ರಾಜ್ಯದಲ್ಲಿ ಹೊಸ ಜೀವನವು ತಲೆದೋರಿದೆ. ಈಗ ನಾಡದೋ ಒಂದು ಶಕ್ತಿ ಪ್ರಭಾವದಿಂದ ಶಕ್ತಿ ಪ್ರತಿಶಕ್ತಿಗಳ ಘೋರ ಸಂಗ್ರಾಮಗಳಾಗಿ ಅವಘಡಗಳಾಗಿವೆ. ಅವು ಅದೇ ಶಕ್ತಿಯೇ ಈ ನಾಡಿನಲ್ಲಿ ಐಕ್ಯ ಮನ್ನಂಟುಮಾಡಿ, ಕೀರ್ತಿಯನ್ನು ತರುತ್ತದೆ.

ಇನ್ನು ವಿದ್ಯಾರ್ಥಿಗಳ ಮಾತಾದರೋ, ಎಲ್ಲಿ ನೋಡಿದರಲ್ಲಿ ವಿದ್ಯಾರ್ಥಿಗಳಲ್ಲಿ ಅಶಾಂತಿಯು ಕಾಣಬರುತ್ತಿದೆ. ಕೆಲವು ಕಾಲದ ಹಿಂದೆ 'ಅಯ್ಯೋ! ವಿದ್ಯಾರ್ಥಿಗಳು ಶುದ್ಧ ಸೋಮಾರಿಗಳು' ಎಂಬ ಕೂಗು ಕೇಳಿ ಬರುತ್ತಿತ್ತು. ಈಗಿನವರೋ ಜನರು "ಅಯ್ಯೋ! ಇನ್ನೇನು ಗತಿ? ಭಾರತ ದೇಶದಲ್ಲಿ ವಿದ್ಯಾರ್ಥಿಗಳಿಗೇನು ಬಂತು? ಇವೋ ಗಲ್ಲಾಟೆ; ಹಿರಿಯರೆಂದರೆ ಅವರಿಗೆ ಲಕ್ಷ್ಯವೇ ಇಲ್ಲ, ಗೌರವ ಎಲ್ಲಿಂದ ಬಂತು. ಬಹಳ ಅನ್ಯಾಯ ... ವಿದ್ಯಾರ್ಥಿಗಳು ಶುದ್ಧ ಕಾಡು ಜನರಾಗುತ್ತಿದ್ದಾರೆ" ಎಂದು ಗೋಳಿಡುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಇದೇ ಜನರು ಹೇಳುತ್ತಿದ್ದುದೇನು ಬಲ್ಲಿರಾ? ಕೇಳಿ.—"ನಮ್ಮ ವಿದ್ಯಾರ್ಥಿಗಳ ದೊಡ್ಡ ದುರ್ಗುಣವೆಂದು, ಅವರು ಜಡಭರತರು; ಪಾಶ್ಚಾತ್ಯ ವಿದ್ಯಾರ್ಥಿಗಳಂತೆ ಸಜೀವಿಗಳೂ, ವೀರ್ಯವಂತರೂ ಆಗಿಲ್ಲವೆಂದು."

ಈ ಮಾತು ನಿಜ. ಹಿಂದೆ ವಿದ್ಯಾರ್ಥಿಗಳು ಹಾಗಿದ್ದರು. ಕೊಂಚವೂ ಅವರು ಯೋಚನೆಮಾಡದೇ ಹೇಳಿದ್ದನ್ನೇ ಹೇಳಿದರೂ ಅದು ವೇದವಾಕ್ಯವೆಂದು ಉಪಾಧ್ಯಾಯರ ಮಾತು ಕಿವಿಗೆ ಕೂಡಿತ್ತಿದ್ದರು. ಈಗಲೂ ಅಷ್ಟು ಅನೇಕರು ಏನು ಹೇಳಿದರದಕ್ಕೆ ಬಹು ಬೇಗ ತಲೆದೂಗುತ್ತಾರೆ.

ನಿರಾಶೆಯು ಹೊಡೆಯುವ ಕಾಲ ಹೋಯಿತು.

ಇಲ್ಲಿ ನೆರೆದಿರುವ ವಿದ್ಯಾರ್ಥಿಗಳಿಗೆ ನಾನು ಹೇಳುವುದಿಷ್ಟೇ. "ನಿಮ್ಮ ಉಪಾಧ್ಯಾಯರು ಹೇಳಿದ್ದೆಲ್ಲ ಸರಿ ಅಲ್ಲಾ ಡಿನಬೇಡಿ. ಸ್ಪಷ್ಟವಾಗಿ ಹೇಳಿ. ಅವರು ಹೇಳುವುದೆಲ್ಲಾ ನಿಜವಾಗಿಯೇ ಇರಬಹುದು. ಆದರೂ ನಿಮಗದರ ವಿಷಯ ಸಂಶಯವನ್ನು ಮನಗಾಣಿಸಿ ಹೇಳಿ. ಅವರನ್ನು ಸುಮ್ಮನೆ ಎದುರಿಸಿ; ಆಕ್ಷೇಪಿಸು; ಚರ್ಚಿಸಿರಿ, ಚರ್ಚಿಸಿರಿ ... ಸ್ವತಂತ್ರವಾದದಿಂದ ಕಲಿಸಿದ್ದಾರೆ. ಉಪಾಧ್ಯಾಯರೂ ನಿಮ್ಮ ಸ್ವಾತಂತ್ರ್ಯ ಭಾವದಿಂದ ಸಂತೋಷ ಹೋಗಿದ್ದಾರೆ. ಸ್ವತಂತ್ರವಾದದಲ್ಲಿ ಶಿಷ್ಯನು ಗುರುವನ್ನು ಸಿಕ್ಕಿಸಿಕೊಂಡರೆ ಆ ದಿನ ಎಲ್ಲರಿಗಿಂತ ಅಧಿಕವಾಗಿ ಗುರುವಿಗೆ ಪರಮಾನಂದವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಸಿಕ್ಕಿಸಿಕೊಂಡಾಗ ಎಂಥ ಯುಕ್ತಿಯಿಂದಲೋ ಹೋಗಲು ತಪ್ಪಿಸಿಕೊಳ್ಳಲು ಗುರು ಪ್ರಯತ್ನಿಸಬಹುದು. ನಿಮ್ಮ ಆ ಯುಕ್ತಿವಾದವನ್ನು ಕಲಿಯಿರಿ ... ದನ್ನು ಬಿಡಬೇಡಿ. ಇಡೀ ವಿಧಿಯಿಲ್ಲದೆ ಗುರುವು ಕೈಗಳೆತ್ತಿ 'ಶರಣು' ಅನ್ನಬೇಕಾಗುತ್ತದೆ. ಇದರಿಂದಾಗಿ ಅವರು ... ನಿಮ್ಮನ್ನು ಪ್ರೀತಿಸದೆ ... ನಿಸಗ ... ದವನಲ್ಲ; ನನಗೂ ಬೇಕಾದವನಲ್ಲ, ನಿಮ್ಮಲ್ಲಿರುವ ಗುರುಭಕ್ತಿಗೆ ದೋಷಬರುವದೆಂಬ ಭಯ ... ಗುರುಭಕ್ತಿಯೆಂಬುದು ನಿಮ್ಮಲ್ಲಿ ಬೇರೂರಿ ಹೋಗಿದೆ. ... ದರೆ ಹಿಂದಿನ ಕಾಲದ, ದಾಸ್ಯದಲ್ಲಿ ... ಬೆಳೆಯುವ ಭಕ್ತಿಪ್ರದರ ... ನಿಮ್ಮ ಗುರುಗಳು ನಿಮ್ಮ ... ತಗಲ್ಲವೇ ನೀವು ಸಹಜವಾಗಿ ನಿಮ್ಮ ... ಅಥವಾ ನವೋದದನೋ ... ನಿಮ್ಮ ಮನಸ್ಸಿನ ... ಸ್ಥಿರವಾದುದನ್ನು ... ಹೇಳಲು ಸಾಧ್ಯವಾಗುವುದು."

ವಿಶಾಲವಾದ ವ್ಯಾಪಾರ.

ವಿದ್ಯಾರ್ಥಿಗಳು ಕ್ರೂರ ಕರ್ಮಿಗಳಾಗುತ್ತಿದ್ದಾರೆ, ಅವರಿಗೆ ಬಾಧ್ಯತೆಯೇ ಇಲ್ಲ, ಅತಿಶಯವನ್ನು ಲೋಪಮಾಡುತ್ತಾರೆ, ಮನುಷ್ಯನ ಸ್ಥಿತಿ ಕಠಿಣವಾಗಿದ್ದಾರೆ, ಅವರೇನಿ ತಿಳಿಯದವರಾಗಿದ್ದಾರೆ—ಎಂದಾಗಿ ಇಂದಿನ ವಿದ್ಯಾರ್ಥಿಗಳ ಮೇಲೆ ಅಪವಾದ. ಇದಕ್ಕೆ ಏನು ಹೇಳೋಣ? ವಿದ್ಯಾರ್ಥಿ ಮುಖ್ಯರ ವಿಚಾರ ಇಲ್ಲಿ—ನಾನೀಗಿದ್ದಾಂತಕ್ಕೆ ಬಂದಿರುವೆನೆಂದು ಹೇಳಲು ನಾನು ಹಿಂದೆಗೆಯುವುದಿಲ್ಲ—ಇದು ವಿಶಾಲವಾದ ವ್ಯಾಪಾರ. ಕೈಗಾರಿಕೆಯ ಜೀವನದಲ್ಲಿ ಕಾಣಬರುವ, ಹೃದಯ ಮರ್ಮಸ್ಥಾನವನ್ನು ಭೇದಿಸುವ ಕಷ್ಟಾವಸ್ಥೆಯುಗಳಿಗೆ ಕಾರಣವಾದ, ಕಠೋರ ದುಃಖದ ಮಾರ್ಗಗಳು ನಿಜವೇ? ವಿದ್ಯಾರ್ಥಿಗಳ ಮುಖ್ಯರವೆಂದರೇನರ್ಥ, ವಿಶಾಲ ಹೇಳದ ಕೇಳದ ಅದಾ. ಇವನ್ನು ದುಷ್ಪರಿಣಾಮ ಅಶಕವೋ ವಿದ್ಯಾರ್ಥಿಗಳಿಗನ್ನು ಸುಖವೇ.

ಜಡಭರತನಂತವರು ಈಗ ಬೇಡ.

ಕೊಂಚ ಕಾಲದ ಹಿಂದೆ ಈ ವಿದ್ಯಾರ್ಥಿ ಮುಖ್ಯರಗಳು ತತ್ವವಿಧ ವಿಚಾರಗಳ ವಿಮರ್ಶೆಗಾಗಿಯೇ ಒಂದು ಸಭೆ ಇತ್ತು. ... ನಮತಿಯು, ತನ್ನ ಬುದ್ಧಿ ಕುಶಲತೆಯನ್ನು ಜೆನ್ನಾಗಿ ... ಪ್ರೇರೇಗಿಸಿ, ಮನುಷ್ಯರ ವಿಶಾಲರವನ್ನೇ ಎತ್ತಿದೆ. ಶತ್ರುಬಾಧ ವಿಚಾರವನ್ನು ಕುರಿತು ಚೆನ್ನಾಗಿ ವಿವರಿಸಲಾಗಿ ... "ತತ್ವಂಬಂಧ" ವಿಚಾರಗಳಲ್ಲಿ ಮುಖ್ಯರಾದವರು ... ವಿದ್ಯಾರ್ಥಿಗಳಲ್ಲಿ ಕಾಣುತ್ತಿರುವ ಅಪೂರ್ವ ಜಿ ವಿಶಿಷ್ಟ ಸ್ವಸಾಮರ್ಥ್ಯ ಮತ್ತು ವೈಯುಕ್ತಿಕ ಸ್ವಾತಂತ್ರ್ಯವಿಷ್ಟೇ. ಇದಕ್ಕಿಂತ ಉತ್ತಮವಾದುದು ರಾಜ್ಯದಲ್ಲೇ ... ವಿದ್ಯಾರ್ಥಿಯು ವಿಶ್ವವಿದ್ಯಾಲಯಕ್ಕೇನು ಕೀರ್ತಿ ತಂದಾನು? ವಿದ್ಯಾರ್ಥಿಯು ನಿಜವಾಗಿ ಅಂದೇ ಜನ ಕೃತಶಕ್ತಿಯಾದಂದು ಅವನು ಆ ಸಂಸ್ಥೆಗೆ ಸೇರಿದವನು ... ಒಂದು ಗಣಾಸ್ಪದವಾದ್ದೆ ಅವರಿಗೆ ಆ ... ವಿದ್ಯಾರ್ಥಿಗಳು. ಈಗ ... ಮುಖ್ಯರೂ ಅದೆ ಹಾಗೇ ಆಗಲಿ, ಅವರೆ ವಿದ್ಯಾರ್ಥಿಗಳಿಗೆ ನಾನು ಹೇಳುವುದಿಷ್ಟೇ. ನಾನು ಹೇಳುವುದಕ್ಕಿನ್ನು ಅವಕಾಶ ಕಲ್ಪಿಸಿದಕ್ಕಾಗಿ ವಂದನ ಭಾವಿಸುತ್ತೇನೆ.

ಅನ್ಯಮನಸ್ಕನಲ್ಲಿ ರಾಜಕೀಯ ವಿಚಾರಕ್ಕೆ ಕೈಹಾಕಬೇಡ.

ರಾಜಕೀಯ ವಿಚಾರಗಳ ಪ್ರವೇಶವನ್ನು ಅತಿಕ್ರಮಿಸಬೇಡಿರಿ. ನಾನೇನನ್ನೂ ಹೇಳಬೇಕಾಗಿಲ್ಲ. ನೀವು ವಿದ್ಯಾರ್ಥಿಗಳೇ ಆಗಿರುವಷ್ಟು ಕಾಲ ಆ ಹಕ್ಕಿ ನಿಮಗಿಲ್ಲ. ಅನ್ಯಮನಸ್ಕರಾಗಿರಲಿ. ಕಾಲೇಜು ಗೋಡೆಗಳ ಹೊರಗೆ ಜೀವನ ಸಂಗ್ರಾಮ ಭೂಮಿಯಿದೆ. ನೀವು ಅದಕ್ಕೆ ಯೋಗ್ಯರಾಗಿ ಸಿದ್ಧರಾಗಲಿಕ್ಕಿರುವ ಕಾಲವಿದು. ಆ ಕಾಲವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಿ. ಆ ಜೀವನ ಸಂಗ್ರಾಮಕ್ಕೆ ಬೇಕಾದ ಶಸ್ತ್ರವನ್ನು ಸಂಗ್ರಹಿಸಿರಿ. ... ನೀವು ಯೋಗ್ಯ ಮೂರ್ತಿ ... ವಿಚಾರಗಳಿಗೆ ... ನಿಮ್ಮ ... ನಿಮ್ಮ ವ್ಯಾಸಂಗವು ಕೆಡುವುದು. ಆ ಪರಿಸ್ಥಿತಿಯಲ್ಲಿ ನಿಮ್ಮಂತವರು ಆ ವಿಚಾರಗಳಿಗೆ ತಲೆ ಹಾಕುವುದರಿಂದ ದೇಶಕ್ಕೂ ಕೇಡಾಗುತ್ತವೆ."

"ವಿ. ಕರ್ನಾಟಕ"

ಸಾಮಾಜಿಕ ಸುಧಾರಣೆ.

(ಬಿಟ್ಟ ಸಂಚಿಕೆಯಿಂದ)

3. ವಿಧವಾ ವಿವಾಹ

ಇನ್ನು ನಮ್ಮ ಬಾಲವಿಧವೆಯರ ಗೋಳನ್ನು ಸ್ವಲ್ಪ ವಿಚಾರಿಸೋಣ. ಸಾಮಾನ್ಯವಾಗಿ ನೋಡಲಿಕ್ಕೆ ವಿವಹ ಮನೆಗಳಲ್ಲಿ ಬಿಡದರೂ ಬಾಲ ವಿಧವೆಯರು ಇಲ್ಲದೆ ಇಲ್ಲ. ಇವರು ಕೇವಲ ಬಾಯಿ ಬಾರದ ಪಶುಗಳಂತೆ ಮನೆಗೆಲಸಕ್ಕೇ ಕೂರಗಳಿಸುತ್ತಾರೆ. ಕೆಲವರು ಮನೆ ಕಾರ್ಯಕ್ಕೂ ಸಹ ಸೇರದಗುತ್ತಾರೆ. (ವಾಸ, ಎಷ್ಟಾದರೂ ಅಂಬಷ್ಟರ್ಗಳಿಗೆ ... ಮನುಷ್ಯ ಜನ್ಮ.) ಇವರನ್ನು ವಿಶೇಷವಾಗಿ ನಿಂದಿಸಲು ಸಹಗಿಹಕ್ಕಿಲ್ಲ. ಇವರಿಗೆ ಕೆಟ್ಟ ಪರಿ ... ನಾವೇ ಕೊಡುತ್ತೇ ಕೊಟ್ಟು ... ಸಾಮಾಜಿಕರ್ಯ ಮಾಡುವ ವಿಧವೆಯರನ್ನು ಹಿಂದೆ ಬ ಸಮಗೆ ವಿದ್ಯಾವಿಂದ ಬಂತು ಗಂಡನು ವರ್ತ ... ಬಂದನಂತರ ಇಷ್ಟೆಂದರಿಂದ ಇರಾತ್ರ ವಿಕೆಗೂ ಮದುವೆಗೆ ಬಡವರು ... ವಯಸ್ಸಿನವರು ... ಗಜಾರದ? ... ಗೆ ಎಂಬ ಹೆಣ್ಣಗಳನ್ನು ... ಕಷ್ಟ ನಡೆದ ವಿ ... ಅಂತ ... ಎರಡನೇ ಮುರಣ ... ಗಂಡನವನ್ನ ... ಅಷ್ಟಾಗಿ ... ವಿಧವಾ ವಿವಾಹಕ್ಕೆ ನಮಾಜದ ... ವಿಧವೆಯ ರು ನಾಪ ... ಕ್ಕೆ ಬೇಗಾಗುತ್ತಾರೆ ಮತ್ತು ಗರ್ಭಗಳನ್ನು ... ಸುವ ... ಅಂಥ ಪಾಪ ... ವಿಧವಾ ... ಪುನರ ಬಂಡು ... ವಿವಾಹಕ್ಕೆ ... ಎನ್ನು ... ಮದುವೆ ... ವಿಚ್ಛೇದ ... ಮತ್ತು ... ಪುನರ ... ದ ... ಮದ ವೇಳೆಗೆ ... ತನ್ನ ತಂದೆ ತಾಯಿ ... ನಿಶ್ಚಯಮಾಡಬೇಕು.

ದೇಶದ ಅಭಿವೃದ್ಧಿಯ ಕಡೆಗೆ ಗಮನ ಕೊಟ್ಟು ಎಲ್ಲಾ ಬ್ರಾಹ್ಮಣ ಜನರಲ್ಲಿ ಗಂಡಿ ಮದುವೆ ... ಮಕ್ಕೆ ... ಹುಡುಗಿ ಮದುವೆ ... ಇಲ್ಲದೇ ... ವ ... ಮದುವೆ ... ಮಾಡಿ ... 2 ನೇ, ಎನೇ ಸಾಲ ಮದುವೆಯಾಗುವ ಗಂಡಸು ... ವಿಧವೆ ... ಮದುವೆ ಮಾಡಿಕೊಳ್ಳಲು ಒಪ್ಪದಿದ್ದರೆ ... ನಾಧ್ಯ ... ಉತ್ತಮ ... 20 ವರ್ಷಗಳ ಬಾಲ ವಿಧವೆಯರನ್ನು ಮದುವೆಯಾಗಲು ... ಮುಂಚೆಗೆ 50 ರೂಪಾಯಿಗಿಂತ ಹೆಚ್ಚಿಗೆ ವಿರ್ಷ ಹುದ್ದೆ

ಪ್ರತಿ ಮದುವೆಯಲ್ಲಿ ಹತ್ತು, ಯಾ ಹದಿನೈದು ರೂಪಾಯಿ ಶೇಖರಿಸಿಕೊಂಡು, ಬಡವರ ಮನೆ ಮಕ್ಕಳ ವಿದ್ಯಾಭ್ಯಾಸಕ್ಕೆ, ಮದುವೆ ಖರ್ಚಿಗೂ ಉಪಯೋಗಿಸಬೇಕು. ಪುನರ್ವಿವಾಹವಾಗಲು ಇಷ್ಟ ಪಡುವ ವಿಧವೆಯರಿಗೆ ಉತ್ಸಾಹ ಕೊಡಬೇಕು. ಈ ರೀತಿ ಮಾಡಲು ಮುಂದೆ ಬರುವ ತರುಣ ತರುಣಿಯರಿಗೆ ದೇವರು ಒಳ್ಳೆಯದನ್ನೇ ಮಾಡುತ್ತಾನೆಂಬುದರಲ್ಲಿ ಸಂದೇಹವಿಲ್ಲ. ತಂದೆ ತಾಯಿಗಳು ಎದುರು ಬೀಳುತ್ತಾರೆಂಬ ಅಂಜಿಕೆಯನ್ನು ಬಿಟ್ಟು, ಈಗಾಗಲೇ ಆಗಿ ಹೋಗಿರುವ, ಇನ್ನೂ ಆಗುತ್ತಿರುವ ಪಾಪವು ... ಮನಸ್ಸಿಗೆ ತಂದು ಒಳ್ಳೇ ಕಾರ್ಯಕ್ಕೆ ಅಡ್ಡಿ ಬರುವ ತಂದೆ ತಾಯಿಗಳಿಗೆ ವಿರೋಧವಾಗಿ ವರ್ತಿಸಿದರೆ ಅವರಿಂದ ಪಾಪ ಬರಲಾರದು. ಇಂದೇ ತರುಣ ತರುಣಿಯರು ಮನೋನಿಶ್ಚಯ ಮಾಡಿ ಮುಂದಕ್ಕೆ ಬನ್ನಿ. ನಿಜವಾಗಿಯೂ ಕಾಲವು ನಿಮ್ಮದಾಗುತ್ತಾ ಬಂತು. ನಿಮಗೆ ದೇವರು ಒಳ್ಳೆಯದನ್ನೇ ಮಾಡುತ್ತಾನೆ. ಇನ್ನು ಕೆಲವು ದಿನಗಳಲ್ಲಿ ಈ ಪತ್ರಿಕೆಯಲ್ಲಿ ಕಾಣುವ ವಿಚಾರಕ್ಕೆ ಇನ್ನಷ್ಟು ಬ್ರಾಹ್ಮಣ ತರುಣ ತರುಣಿಯರು ಬರೆದು ತಿಳಿಸಬಹುದು.

ಮಡಿಕೇರಿ ಸಹಕಾರಿ ಸಂಘ.

ಹಿಂದುಸ್ಥಾನದ ವೈಸರಾಯರಾದ, ಶೀಘ್ರದಲ್ಲೇ ಕೊಡಗಿಗೆ ಬರಲಿಕ್ಕಿರುವ ಲಾರ್ಡ್ ಇರ್ವಿನರು ಮೊನ್ನೆ ೩೧ನೇ ತಾರೀಕಿನಲ್ಲಿ ಬ್ರಿಟನಿನ ಅಭಿಪ್ರಾಯದಲ್ಲಿ ಹಿಂದುಸ್ಥಾನದ ರಾಜಕೀಯ ಧ್ಯೇಯವೇನೆಂಬದನ್ನೂ, ತತ್ಕಾಲ ಬರಲಿಕ್ಕಿರುವ ಆಡಳಿತ ಸುಧಾರಣೆಗಳ ರೂಪವನ್ನು ಯಾರು ಯಾರು ಸೇರಿ ನಿರ್ಣಯಿಸಬೇಕೆಂಬದನ್ನೂ ಸೂಚಿಸುವ ಒಂದು ಜಾಹೀರ್‌ನಾಮೆಯನ್ನು ಪ್ರಕಟಿಸಿದ್ದಾರೆ. ಈ ಘೋಷಣೆಯು ಮನಃಪೂರ್ತಿಯಾಗಿ ಮಾಡಲ್ಪಟ್ಟಿದ್ದೆಂತಲೂ, ಹಿಂದುಸ್ಥಾನದವರ ಅಭಿಲಾಷೆಗಳನ್ನು ನೆರವೇರಿಸುವ ಅಭಿಪ್ರಾಯದಿಂದ ಮಾಡಲ್ಪಟ್ಟಿದ್ದೆಂತಲೂ ಮಹಾತ್ಮ ಗಾಂಧಿಯವರು ಪಂಡಿತ ಜವಾಹಿರ್ ಲಾಲ್ ನೆಹರೂರವರೇ ಮುಂತಾದ ಮುಖಂಡರು ಪ್ರಕಟಿಸಿದ ಅಭಿಪ್ರಾಯದಲ್ಲೂ ಸೂಚಿಸಿದ್ದಾರೆ. ಈ ೧೯೨೯ನೇ ಇಸ್ವಿ ಅಖೈರಿಗೆ ಹಿಂದುಸ್ಥಾನಕ್ಕೆ ಡೊಮಿನಿಯನ್ ಸ್ಟೇಟಸ್ ಅಂದರೆ ವಸಾಹತಿ ಸ್ವರಾಜ್ಯ ಕೊಡದಿದ್ದರೆ ೧೯೩೦ನೇ ಇಸ್ವಿ ಜನವರಿ ೧ರಿಂದ ಹಿಂದುಸ್ಥಾನದ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯವೆಂತ ನಿಶ್ಚೈಸಲ್ಪಡಬೇಕಾಗುವದೆಂದೂ, ಈ ಧ್ಯೇಯವನ್ನು ಸಾಧಿಸಲು ಬಾಯಿಲ್ಲದ ಭಂಗವನ್ನು ಅನುಸರಿಸಬೇಕಾಗುವದೆಂದೂ ಒಟ್ಟು ಹಿಂದುಸ್ಥಾನದ ಜನರ ಅಭಿಪ್ರಾಯಗಳನ್ನು ಸೂಚಿಸುವ ಕಾಂಗ್ರೆಸ್ ಸಭೆಯಲ್ಲಿ ಕಳೆದ ಡಿಸೆಂಬರ್ ತಿಂಗಳಲ್ಲಿ ತೀರ್ಮಾನವಾಗಿತ್ತು. ಈ ತೀರ್ಮಾನವು ಒಣ ಬೆದರಿಕೆಯನ್ನುಂಟುಮಾಡಲು ಮಾಡಿದ್ದಲ್ಲವೆಂತಲೂ, ಹಿಂದುಸ್ಥಾನದವರ ಸ್ವರಾಜ್ಯ ಸ್ಥಾಪನೆಯ ನಿರ್ಣಯವು ಮನಃಪೂರ್ತಿಯಾಗಿ ಮಾಡಿದ್ದೆಂತಲೂ ವೈಸರಾಯರು ತಿಳಿದುಕೊಂಡು ಅವರು ಇಂಗ್ಲೆಂಡಿಗೆ ಹೋಗಿ ಅಲ್ಲಿನ ಸರಕಾರದವರಿಗೂ, ಎಲ್ಲಾ ಪಾರ್ಟಿ ಮುಖಂಡರಿಗೂ ಹಿಂದುಸ್ಥಾನದ ಸ್ಥಿತಿಯನ್ನು ವಿವರಿಸಿ, ಅವರ ಅನುಮತಿಯೊಡನೆ ಈ ಘೋಷಣವನ್ನು ಪ್ರಕಟಿಸಿರುವದಾಗಿದೆ. ಲಾರ್ಡ್ ಇರ್ವಿನರು ಹಿಂದುಸ್ಥಾನದವರ ನಿಜವಾದ ಮನಸ್ಸನ್ನು ತಿಳಿದು ಅವರ ಅಭಿಲಾಷೆಗಳಿಗೆ ಸಹಾನುಭೂತಿ ತೋರಿಸಿ ತುಂಬಾ ಮೇಹನತ್ತು ಮಾಡಿರುವದು ಪ್ರತ್ಯಕ್ಷವಾಗಿರುವದರಿಂದ ಇವರು ಹಿಂದುಸ್ಥಾನದವರ ಸಂಪೂರ್ಣ ಕೃತಜ್ಞತೆಯನ್ನು ಸಂಪಾದಿಸಿದ್ದಾರೆ.

ಇವರ ಘೋಷಣದಲ್ಲಿರುವ ಮುಖ್ಯ ಅಂಶಗಳು ಎರಡು. ಒಂದನೇದು, ಹಿಂದುಸ್ಥಾನದ ಸ್ವರಾಜ್ಯ ರಚನೆಯು ಡೊಮಿನಿಯನ್ ಸ್ಟೇಟಸ್ ಅಂದರೆ ಕೆನಾಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮುಂತಾದ ಸಂಪೂರ್ಣ ಸ್ವಾತಂತ್ರ್ಯವಿರುವ ವಸಾಹತುಗಳ ಆಡಳಿತದ ಮಾದರಿಯದು ಎಂತ ಬ್ರಿಟಿಷ್ ಸರಕಾರವು ಖಂಡಿತವಾದ ಅಭಿಪ್ರಾಯಪಟ್ಟಿದೆ. ಕಳೆದ ಘೋರ ಯುದ್ಧ ನಡೆಯುತ್ತಿರುವಾಗಲೇ ಮಿ. ಮಾಂಟೇಗ್ಯೂರವರು ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯವರಾಗಿದ್ದಾಗ ೧೯೧೭ರಲ್ಲಿ ಹಿಂದುಸ್ಥಾನದಲ್ಲಿ ಸ್ವರಾಜ್ಯ ಸಂಸ್ಥೆಗಳನ್ನು ಕ್ರಮೇಣ ಬೆಳೆಸುತ್ತಾ ಒಂದು ಅಖೈರಿನಲ್ಲಿ ಪ್ರಜಾ ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವದೇ ಬ್ರಿಟಿಷರ ಧ್ಯೇಯವಾಗಿದೆಯೆಂತ ಘೋಷಣವೊಂದನ್ನು ಹೊರಡಿಸಿದ್ದರು. ಆ ಘೋಷಣಾನುಸಾರವಾಗಿಯೇ ಒಟ್ಟು ಹಿಂದುಸ್ಥಾನದಲ್ಲಿ ೧೯೧೯ನೇ ಇಸ್ವಿಯ ಸುಧಾರಣೆಗಳು ಮಂಜೂರಾದದ್ದು. ಆದರೆ ಅದರಲ್ಲಿ ಹೇಳಿರುವ ಪ್ರಜಾ ಜವಾಬ್ದಾರಿ ಸರಕಾರವೆಂದರೆ ದೊಡ್ಡ ವಸಾಹತುಗಳಿಗೆ ಇರುವ ಸ್ವಾತಂತ್ರ್ಯ ಸರಕಾರವಲ್ಲವೆಂತ ಬ್ರಿಟಿಷರಲ್ಲಿ ಅನೇಕರು ಹೇಳಿದರು. ನೆಹರೂ ಕಮಿಟಿಯವರು ಈ ಅಭಿಪ್ರಾಯವನ್ನು ಖಂಡಿಸಿ ಡೊಮಿನಿಯನ್ ಸ್ಟೇಟ್ಸ್‌ಗಳಿಗೆ ಇರುವ ಸ್ವಾತಂತ್ರ್ಯವನ್ನು ಹಿಂದೂಸ್ಥಾನಕ್ಕೆ ಕೊಡಲೇ ಬೇಕೆಂತ ಕೇಳಿಕೊಂಡರು. ಡೊಮಿನಿಯನ್ ಸರಕಾರಗಳಿಗೆ ರಾಜ್ಯದ ಒಳಗಿನ ಆಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ. ಅವರ ಸೈನ್ಯಗಳನ್ನು ಸಹ ಬೇರೆ ಇಟ್ಟುಕೊಳ್ಳುವ ಹಕ್ಕು ಅವರಿಗೆ. ಪರರಾಜರೊಂದಿಗೆ ಯುದ್ಧಕ್ಕೆ ಹೋಗುವ ಇತ್ಯಾದಿ ಸಂಬಂಧಗಳಲ್ಲಿ ಮಾತ್ರ ಬ್ರಿಟಿಷ್ ಸರಕಾರದ ಮೂಲಕ ಅಭಿಪ್ರಾಯ ಕೊಡಬೇಕಷ್ಟೆ. ಬ್ರಿಟಿಷ್ ಸರಕಾರವು ಬೇರೆ ರಾಜ್ಯಗಳೊಂದಿಗೆ ಯುದ್ಧಕ್ಕೆ ಹೋಗುವ ಸಂದರ್ಭದಲ್ಲಿ ಸಹ ಈ ದೊಡ್ಡ ವಸಾಹತುಗಳ ಸರಕಾರಗಳ ಅಭಿಪ್ರಾಯ ಪಡೆಯಬೇಕು. ಹಿಂದೂದೇಶಕ್ಕೆ ಇಷ್ಟರ ಮಟ್ಟಿಗೆ ಸ್ವಾತಂತ್ರ್ಯವಿದ್ದರೆ ಸಾಕೆಂತ ನೆಹರೂ ಕಮಿಟಿಯವರು ಅಭಿಪ್ರಾಯಪಟ್ಟದ್ದು, ಅಲ್ಲದೆ ಈ ವರ್ಷದ ಅಖೈರಿನಲ್ಲಿ ಈ ತರದ ಸರಕಾರವನ್ನು ಬ್ರಿಟಿಷ್ ಸರಕಾರವು ಕೊಡಲೇ ಬೇಕೆಂತ ಕಾಂಗ್ರೆಸ್ ತೀರ್ಮಾನಿಸಿತು.

ವೈಸರಾಯರ ಘೋಷಣದಲ್ಲಿ ಡೊಮಿನಿಯನ್ ಸ್ಟೇಟಸ್ ಈಗಲೇ ಕೊಡಲಾಗಿದೆಯೆಂತ ಹೇಳಲ್ಪಡದಿದ್ದರೂ, ಹಿಂದುಸ್ಥಾನದಲ್ಲಿ ಡೊಮಿನಿಯನ್ ಸ್ಟೇಟಸ್ ಸ್ಥಾಪಿಸುವದು ಬ್ರಿಟಿಷ್ ಸರಕಾರದ ಧ್ಯೇಯವಾಗಿದೆಯೆಂತ ಹೇಳಿದ್ದರಿಂದ ಹಿಂದೀಯರಿಗೆ ತೃಪ್ತಿಯಾಗಿದೆ. ಈ ಘೋಷಣದಲ್ಲಿ ವಿವರವಾಗಿ ಹೇಳದಿದ್ದರೂ ಹಿಂದುಸ್ಥಾನದಲ್ಲಿ ಶೀಘ್ರದಲ್ಲೇ ಆಗಲಿಕ್ಕಿರುವ ರಾಜಕೀಯ ಮಾರ್ಪಾಡುಗಳಲ್ಲಿ ಡೊಮಿನಿಯನ್ ಸ್ಟೇಟಸಿನ ಅಡಿಯನ್ನೇ ಸ್ಥಾಪಿಸುವದು ಸರಕಾರದ ಉದ್ದೇಶ ರತ [illegible] ತಿಳಿದುಕೊಂಡಿರುವರು. [illegible] ಈಗಲೇ ಡೊಮಿನಿಯನ್ ಸ್ಟೇಟಸ್ ಸಿಕ್ಕದೆ ಇದ್ದರೂ [illegible] ಇನ್ನು ಹತ್ತಲಿಕ್ಕಿರುವ ಮೆಟ್ಲು ಎಂಬದರಿಂದ ಹಿಂದೀಯರು ತೃಪ್ತರಾಗಬಹುದು.

ಘೋಷಣದಲ್ಲಿರುವ ಇನ್ನೊಂದು ವಿಷಯವೇನೆಂದರೆ— ಹಿಂದುಸ್ಥಾನದ ರಾಜಕೀಯ ಸುಧಾರಣೆಗಳು ಯಾವ ತರದ್ದಿರಬೇಕಂಬದನ್ನು ನಿಶ್ಚೈಸಬೇಕಾದರೆ ಹಿಂದುಸ್ಥಾನದ ಎಲ್ಲಾ ರಾಜಕೀಯ ಪಂಗಡಗಳ [illegible] ಬ್ರಿಟಿಷ್ ಸರಕಾರವು [illegible] ಹಿಂದುಸ್ಥಾನದ ಹೆಚ್ಚಿನ [illegible] ಪಂಗಡಗಳನ್ನು ತೃಪ್ತಿಪಡಿಸಬೇಕೆಂತ ಬ್ರಿಟಿಷ್ ಸರಕಾರವು ತೀರ್ಮಾನಿಸಿರುತ್ತಾರೆಂಬದು. ಈ ತೀರ್ಮಾನಕ್ಕಾಗಿ ಹಿಂದುಸ್ಥಾನವು ಸಂಪೂರ್ಣವಾಗಿ ಗರ್ವಪಡಬಹುದು. ಹಿಂದುಸ್ಥಾನದ ರಾಜಕೀಯ ಸುಧಾರಣೆಗಳನ್ನು ಹಿಂದೀ ಮುಖಂಡರೂ, ಬ್ರಿಟಿಷ್ ಸರಕಾರವೂ ಸೇರಿ ಉರುಟು ಮೇಜಿನ ಸಮ್ಮೇಳನ (ರೌಂಡ್ ಟೇಬಲ್ ಕಾನ್‌ಫರೆನ್ಸ್) ಕೂಡಿ ತೀರ್ಮಾನಿಸಬೇಕೆಂತ ಹಿಂದುಸ್ಥಾನದ ಮುಖಂಡರು ಕೆಲವು ವರ್ಷಗಳಿಂದಲೇ ಹೇಳುತ್ತಿದ್ದಾರೆ. ಈ ಅಭಿಪ್ರಾಯವನ್ನು ತುಚ್ಛೀಕರಿಸಿ ಹಿಂದುಸ್ಥಾನದವರೊಬ್ಬರನ್ನೂ ಸೇರಿಸದೆ ಬರೇ ಏಳು ಬಿಳೀ ಜನರಿಂದ ಕೂಡಿದ ಸೈಮನ್ ಕಮಿಶನನ್ನು ಬ್ರಿಟಿಷ್ ಸರಕಾರವು ನೇಮಿಸಿದ್ದಕ್ಕೆ ಹಿಂದುಸ್ಥಾನದವರು ಆ ಕಮಿಶನನ್ನು ಬಹಿಷ್ಕರಿಸಿದರು. ವೈಸರಾಯರ ಘೋಷಣದಲ್ಲಿ ಹಿಂದೀ ಮುಖಂಡರು ಬ್ರಿಟಿಷ್ ಮಂತ್ರಿಮಂಡಲದೊಡನೆ ಸಮಸಮಾನರಾಗಿ ಕೂತು ಹಿಂದುಸ್ಥಾನದ ಭಾವೀ ರಾಜ್ಯಭಾರ ರಚನೆಯನ್ನು ನಿಶ್ಚೈಸಬೇಕೆಂತ ಇರುವದರಿಂದ ಸೈಮನ್ ಕಮಿಶನಿಗೆ ಬಹಿಷ್ಕಾರ ಹಾಕಿದ್ದಕ್ಕೆ ಸಂಪೂರ್ಣ ಪ್ರಯೋಜನವಾಯಿತೆಂತ ದೃಢವಾಗಿ ಹೇಳಬಹುದು. ಸೈಮನ್ ಸಾಹೇಬರು ಹಿಂದುಸ್ಥಾನದ ಸುಧಾರಣೆಯ ರೂಪವು ತಮ್ಮ ತೀರ್ಮಾನದ ಮೇಲೆಯೇ ಆಗಬೇಕೆಂತ ಅಹಂಭಾವ ಪಡುತ್ತಿದ್ದರು. ಈಗ ಅವರೇ ಹಿಂದೀ ಮುಖಂಡರನ್ನು ಕರೆದುಕೊಳ್ಳಬೇಕೆಂತ ಹೇಳಬೇಕಾಯಿತು. ಹಿಂದುಸ್ಥಾನದ ಎಲ್ಲಾ ಪ್ರಮುಖ ರಾಜಕೀಯ ಸಂಸ್ಥೆಗಳೂ, ವ್ಯಕ್ತಿಗಳೂ ಬಹಿಷ್ಕರಿಸಿದ್ದರಿಂದ ಹಿಂದುಸ್ಥಾನದ ಆತ್ಮಗೌರವವು ಉಳಿದಂತಾಯಿತು.

ಈ ಘೋಷಣದಲ್ಲಿ ಮಹತ್ವದ ರಿಯಾಯಿತಿಗಳಿವೆಯೆಂಬದರಿಂದ ಅಲ್ಪ ಸ್ವಲ್ಪ ಜನರು ವಿನಹ ಹೆಚ್ಚಿನ ಹಿಂದೀ ಮುಖಂಡರೆಲ್ಲರೂ ಈ ಘೋಷಣಕ್ಕಾಗಿ ವೈಸರಾಯರನ್ನು ಅಭಿನಂದಿಸಿರುತ್ತಾರೆ. ಇದರಲ್ಲಿ ಮಹತ್ವದ ವಿಷಯಗಳಿವೆಯೆಂಬ ಕಾರಣ ಇಂಗ್ಲೆಂಡಿನ ಲಿಬರಲ್ ಮತ್ತು ಕನ್ಸರ್ವೇಟಿವ್ ಪಾರ್ಟಿಗಳು ಈಗಿನ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಕೆಲಸಕ್ಕಾಗಿ ತುಂಬಾ ಅತೃಪ್ತಿಯನ್ನು ತೋರಿಸುತ್ತಾರೆ. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇದಕ್ಕಾಗಿ ಈ ವಾರದಲ್ಲಿ ವಾದವಿವಾದಗಳು ನಡೆಯುತ್ತಲಿವೆ. ಆದರೆ ವೈಸರಾಯರು ಕನ್ಸರ್ವೇಟಿವ್ ಪಾರ್ಟಿಗೆ ಸೇರಿದ ರಾಜ್ಯಾಂಗದವರೂ, ಅವರ ವ್ಯಾಸಂಗದಿಂದಲೇ ಈ ಘೋಷಣವನ್ನು ಹೊರಡಿಸಿದ್ದರಿಂದಲೂ ಈ ವಾದದ ಮೇಲೆ ಪಾರ್ಲಿಮೆಂಟಿನಲ್ಲಿ ವೋಟು ತೆಗೆಯುವ ದಿಲ್ಲವಂತೆ. ಸರಕಾರದ ಎದುರು ಪಾರ್ಟಿಗಳು ತೀರ್ಮಾನಿಸಿದ್ದರಂತೆ. ವೋಟ್ ತೆಗೆದು ಆಗ ಮಾಡಿದ ಕೆಲಸಕ್ಕೆ ಪಾರ್ಲಿಮೆಂಟಿನ ಬಹುಮತವು ಇಲ್ಲವೆಂತಾದರೆ ಈಗಿನ ಮಂತ್ರಿ ಮಂಡಲಿಯು ರಾಜೀನಾಮೆ ಕೊಟ್ಟು ಹೊಸ ಚುನಾವಣೆಯಾಗಬೇಕಿತ್ತು. ತತ್ಕಾಲ ಮಂತ್ರಿ ಮಂಡಲಿಯು ರಾಜೀನಾಮೆ ಕೊಡಬೇಕಾದ ಅವಶ್ಯ ಬೀಳದಿದ್ದರೂ ಹಿಂದೂಸ್ಥಾನದ ವೈಸರಾಯರಾಗಿದ್ದ ಲಿಬರಲ್ ಪಾರ್ಟಿಗೆ ಸೇರಿದ ಲಾರ್ಡ್ ರೀಡಿಂಗರವರು ಸಹ ಈಗಿನ ಮಂತ್ರಿ ಮಂಡಲಿಗೆ ವಿರೋಧವಾಗಿರುವದರಿಂದ ಈ ಘೋಷಣದ ಅಭಿಪ್ರಾಯಗಳು ಕಾರ್ಯರೂಪಕ್ಕೆ ಬರುವಾಗ ಹಿಂದೂಸ್ಥಾನಕ್ಕೆ ಹೆಚ್ಚಿನ ಪ್ರಯೋಜನವಾಗದೆ ಹೋಗುವ ಭಯಕ್ಕೆ ಎಡೆ ಇದೆ. ಆದರೆ ಕನ್ಸರ್ವೇಟಿವ ಪಕ್ಷದ ಮಂತ್ರಿ ಮಂಡಲಿಯು ಹಿಂದೂಸ್ಥಾನದ ಕಡೆಗೆ ಸಹಾನುಭೂತಿ ತೋರಿಸಿರುವದರಿಂದ ಅದರೊಂದಿಗೆ ಸಹಕರಿಸಿ ನೋಡಬೇಕಾದದ್ದು ಹಿಂದುಸ್ಥಾನದ ಕರ್ತವ್ಯವಾಗಿದೆ.

ಹಿಂದುಸ್ಥಾನಕ್ಕೆ ಕೊಟ್ಟ ವಾಗ್ದಾನಗಳನ್ನು ಈ ರೀತಿ ವಿವರಿಸಿದ್ದಕ್ಕೆ ಸಹ ಬ್ರಿಟಿಷ್ ಮುಖಂಡರಲ್ಲಿ ಕೆಲವರು ವಿರೋಧಿಸುವಾಗ ಹಿಂದೀ ಮುಖಂಡರು ಕೇಳಿಕೊಂಡಿರುವ ಕೆಲವು ಶರತ್ತುಗಳಿಗೆ ಸರಕಾರದ ಸಮರ್ಪಕ ಉತ್ತರ ತೆಗೆದುಕೊಳ್ಳಬೇಕಾದದ್ದು ಅವಶ್ಯವಾಗಿದೆ. ಹಿಂದುಸ್ಥಾನವನ್ನು ಹಿಂದೀಯರ ಪ್ರಯೋಜನಕ್ಕಾಗಿಯೇ ಆಳುತ್ತಿರುವರೆಂಬದನ್ನು ಕಾರ್ಯರೂಪಕ್ಕೆ ಈಗಿನಿಂದಲೇ ತರಬೇಕೆಂಬದೂ, ರಾಜಕೀಯ ಕೈದಿಗಳನ್ನೂ ಬಿಡುಗಡೆಮಾಡಬೇಕೆಂಬದೂ, ಕಾಂಗ್ರೆಸ್ಸಿಗೆ ಹೆಚ್ಚಿನ ಪ್ರತಿನಿಧಿತ್ವ ಸಿಕ್ಕಬೇಕೆಂಬದೂ ಮುಂದಾಳುಗಳ ಶರತ್ತುಗಳಾಗಿವೆ. ಈ ಅಭಿಪ್ರಾಯಕ್ಕೆ ಹಿಂದುಸ್ಥಾನ ಮುಖಂಡರೆಲ್ಲರೂ ಒಪ್ಪಿಗೆ ಕೊಟ್ಟು ಇಂಥಾ ಮಹತ್ವದ ವಿಷಯದಲ್ಲಿ ಹಿಂದೀಯರು ಒಗ್ಗಟ್ಟಾಗಿದ್ದಾರೆಂಬದನ್ನು ತೋರಿಸುವರಾಗಿ ಆಶಿಸುತ್ತೇವೆ.

ರಾಜಕೀಯ ಸುಧಾರಣೆ ವಿಷಯದಲ್ಲಿ ವೈಸರಾಯರು ಪ್ರಕಟಿಸಿದ ಪತ್ರದ ಮೇಲೆ ಹಿಂದುಸ್ಥಾನದ ಮುಖಂಡರ ಅಭಿಪ್ರಾಯ.

ಸ್ವರಾಜ್ಯದ ಅನಾಂಗಗಳೆಲ್ಲ ಹಿಂದುಸ್ಥಾನದ ಭಾವಿ ಸ್ಥಾನವನ್ನು ಕುರಿತು ಪ್ರಕಟಿಸಿದ ವೈಸರಾಯರ ಹೇಳಿಕೆಯನ್ನು ನಾವು ಚೆನ್ನಾಗಿ ಗಮನಿಸಿ ಓದಿದೆವು. ಈ ಹೇಳಿಕೆಯು ಮನಃಪೂರ್ತಿಯಾಗಿ ಮಾಡಲ್ಪಟ್ಟದ್ದೆಂತಲೂ, ಬ್ರಿಟಿಷ್ ಸರಕಾರಕ್ಕೆ ಹಿಂದುಸ್ಥಾನದವರಿಗೆ ಸಮಾಧಾನಪಡಿಸಬೇಕೆಂಬ ಅಭಿಲಾಷೆ ಇದೆಯೆಂತಲೂ ನಮಗೆ ತೃಪ್ತಿಯಾಗಿದೆ. ಹಿಂದುಸ್ಥಾನಕ್ಕೆ ಒಪ್ಪದಂಥ ವಸಾಹತೀ ಸ್ವರಾಜ್ಯ ಆಡಳಿತ ರಚನೆಯನ್ನು ತಯಾರಿಸಬೇಕು ಬ್ರಿಟಿಷ್ ಸರಕಾರದೊಂದಿಗೆ ನಾವು ಸಹಕರಿಸುವೆವೆಂತ [illegible] ಹಿಂದುಸ್ಥಾನದ [illegible] ರಾಜಕೀಯ ಸಂಸ್ಥೆಗಳ ಸಹಕಾರವು ದೊರಕುವದು [illegible] ಆಗಬೇಕಂತಲೂ [illegible] ವಿಷಯಗಳು [illegible] ನಾವು [illegible] ಪಡುತ್ತೇವೆ

ಸರಕಾರವು ಕೂಡಿಸಬೇಕೆಂದಿರುವ (ರೌಂಡ್ ಟೇಬಲ್ ಕಾನ್‌ಫರೆನ್ಸ್) ಸಭೆಯ ಕಾರ್ಯಗಳು ಜಯಪ್ರದವಾಗಬೇಕಾದರೆ—

(೧) ಶಾಂತತೆಯ ವಾತಾವರಣವಿರಲು ಸಾಧಾರಣವಾಗಿ ರಾಜಿ ವರ್ತನೆಯ ಧೋರಣೆಯೇ ಅನುಸರಿಸಲ್ಪಡಬೇಕಾದದ್ದೂ,

(೨) ರಾಜಕೀಯ ಕೈದಿಗಳೆಲ್ಲರನ್ನೂ ಬಿಡುಗಡೆ ಮಾಡಬೇಕಾದದ್ದೂ,

(೩) ಮುಂದುವರಿದ ಅಭಿಪ್ರಾಯವಿರುವ ರಾಜಕೀಯ ಸಂಸ್ಥೆಗಳ ಪೂರಾ ಗಮನ ಸಿಕ್ಕುವಷ್ಟರ ಮಟ್ಟಿಗೆ ಅಂಥಾ ಸಂಸ್ಥೆಗಳಿಗೆ ಪ್ರತಿನಿಧಿತ್ವ ಸಿಕ್ಕಬೇಕಾದದ್ದೂ, ಅಂಥಾ ಸಂಸ್ಥೆಗಳ ಪೈಕಿ ಹೆಚ್ಚು ದೊಡ್ಡದಾದ ಕಾಂಗ್ರೆಸ್ಸಿನ ಪ್ರತಿನಿಧಿತ್ವವು ಹೆಚ್ಚಾಗಿ ಇರಬೇಕಾದದ್ದೂ ಅತಿ ಅವಶ್ಯವೆಂತ ನಾವು ಅಭಿಪ್ರಾಯಪಡುತ್ತೇವೆ.

ವೈಸರಾಯರ ಹೇಳಿಕೆಯಲ್ಲಿ ವಸಾಹತಿ ಸ್ವರಾಜ್ಯದ ದರ್ಜೆಯ ವಿಷಯ ಬರೆದದ್ದನ್ನು ಅರ್ಥ ಮಾಡುವದರಲ್ಲಿ ಕೆಲವು ಸಂಶಯಗಳು ಹುಟ್ಟಿವೆ. ಆದರೆ ಸಭೆ ಸೇರುವದು ವಸಾಹತು ಸ್ವರಾಜ್ಯವನ್ನು ಎಂದು ಕೊಡುವದೆಂಬದನ್ನು ಚರ್ಚಿಸಲಿಕ್ಕಲ್ಲ, ವಸಾಹತಿ ಸ್ವರಾಜ್ಯ ಆಡಳಿತ ರಚನೆಯನ್ನು ತಯಾರಿಸಲಿಕ್ಕಾಗಿದೆಯೆಂತ ನಮಗೆ ತಿಳಿಯುತ್ತದೆ. ವೈಸರಾಯರ ಪತ್ರವಾದ ಹೇಳಿಕೆಯ ಅಭಿಪ್ರಾಯವನ್ನೂ, ಅದರ ಗೂಢಾರ್ಥವನ್ನೂ ಈ ರೀತಿ ತಿಳಿದುಕೊಂಡದ್ದು ತಪ್ಪಲ್ಲವೆಂತ ನಾವು ನಂಬುತ್ತೇವೆ. ಹೊಸ ಆಡಳಿತ ರಚನೆಯು ಜಾರಿಗೆ ಬರುವವರೆಗೂ ದೇಶದ ಆಡಳಿತದಲ್ಲಿ ಹೆಚ್ಚಿನ ಧಾರಾಳ ಬುದ್ಧಿಯನ್ನು ತೋರಿಸುವದೂ, ಉದ್ದೇಶಿಸಲ್ಪಟ್ಟ ಸಭೆಯ ಧ್ಯೇಯಕ್ಕನುಗುಣವಾಗಿರುವ ತರಹದ ಸಂಬಂಧವು ಶಾಸನ ಮಂಡಲಿಗಳೂ ಆಡಳಿತದ ಅಧಿಕಾರಿಗಳಿಗೂ ಇರುವದೂ, ಸರಕಾರದ ಸರ್ವರಿಗೂ ಈ ಭಾಷೆಯನ್ನನುಸರಿಸುವದೂ ಅವಶ್ಯವೆಂತ ನಾವು ಅಭಿಪ್ರಾಯ ಪಡುತ್ತೇವೆ. ಈಗಿನಿಂದಲೇ ಆಡಳಿತದ [illegible] ಮವು ಬೇರ್ಪಟ್ಟಿದೆಯೆಂತಲೂ, ಆಂಥ ಬೇರ್ಪಟ್ಟ ಕ್ರಮವನ್ನು ಜಾರಿಗೆ ತರುವದೂ ಮಾತ್ರ, ಹೊಸ ರಚನೆಯು ಉದ್ದೇಶವಾಗಿದೆಯೆಂತಲೂ ಜನರ ಅನುಭವಕ್ಕೆ ಈಗಲೇ ಬರಬೇಕೆಂದು ಅತ್ಯವಶ್ಯವಾದ ವಿಷಯವೆಂತ ನಾವು ನಂಬುತ್ತೇವೆ. ಈ ಅಭಿಪ್ರಾಯಕ್ಕೆ ಸೈನ್ ಹಾಕಿದವರು ಯಾರ್ಯಾರೆಂದರೆ—ಶ್ರೀಯುತರುಗಳಾದ ಎಂ. ಕೆ. ಗಾಂಧಿ, ಪಂಡಿತ ಮೋತೀಲಾಲ್ ನೆಹರು, ಪಂಡಿತ ಮದನಮೋಹನ ಮಾಳವೀಯ, ಪಂಡಿತ ಜವಾಹಿರ್ ಲಾಲ್ ನೆಹರು, ಸರ್ ತೇಜ್ ಬಹದೂರ್ ಸಪ್ರೂ, ಡಾಕ್ಟರ್ ಅನ್ನಿ ಬೆಸೆಂಟ, ಡಾಕ್ಟರ್ ಅನ್ಸಾರಿ, ಶ್ರೀಮತಿ ಸರೋಜಿನಿನಾಯಿಡು, ಡಾಕ್ಟರ್ ಮೂಂಜೆ, ಎ. ರಂಗಸ್ವಾಮಿ ಅಯ್ಯಂಗಾರ್, ಜತೀಂದ್ರ ಸೆನ್‌ಗುಪ್ತ, ಅ ಕೆ, ಡಾಕ್ಟರ್ ಬಿ. ಸಿ. ರಾಯ್, ವಲ್ಲಭಭಾಯಿ ಪಟೇಲ್, ಸೈಯ್ಯದ್ ಮಹಮುದ್, ಜಗತ್ ನಾರಾಯಣಲಾಲ್, ಖಾಲೀಕುಲ್ ಜಮಾನ್, ಶಾರ್ದೂಲ ಸಿಂಗ್, ನಾಮದಾರ್ ಶ್ರೀನಿವಾಸಶಾಸ್ತ್ರಿ, ಮೌಲಾನಾ ಮಹಮದ್ ಅಲಿ, ಮಹ್ಮದಾಬಾದಿನ ಮಹಾರಾಜ, ಲಾಲಾ ಹರಕಿಶನ್ ಲಾಲ್, ಬಿರ್ಲಾ, ಪಂಡಿತ ಸಕ್ಸೆ ರಾಮೇಶ್ವರ. ಇನ್ನೂ ಇತರರು ಸೈನ್ ಹಾಕುತ್ತಲಿದ್ದಾರೆ.

ಮೆ. ಪಾರ್ವಂಗಡ ಕುಶಾಲಪ್ಪ ಸ್ಮಾರಕ ಫಂಡು.

ತಾರೀಕು 29—10—29ರಲ್ಲು ಮಡಿಕೇರಿ ಹೈಸ್ಕೂಲ್ ಎಲಿಮೆಂಟರಿ ಶಾಲೆ ಬಳಿ ಇಲ್ಲಿಯ ಬೋರ್ಡಿಂಗ್ ಕಟ್ಟಡದ ವಿಷಯ ಕುರಿತು ಒಂದು ಸಭೆಯು ಕೂಡಲಾಯಿತು. ಅಧ್ಯಕ್ಷಸ್ಥಾನವನ್ನು ಶ್ರೀಮಾನ್ ಎ. ಕಾಳಮ್ಮಯ್ಯನವರು ವಹಿಸಿದ್ದರು. ಅಧ್ಯಕ್ಷರು ಕೇಳಿಕೊಂಡ ಮೇರೆ ಶ್ರೀಯುತ ಕೆ. ಸಿ. ಕರುಂಬೈಯ್ಯ ಯಂ. ಯಲ್. ಸಿ. ಯವರು ಮೀಟಿಂಗಿನ ಉದ್ದೇಶವನ್ನು ಸರಳವಾಗಿ ವಿವರಿಸಿದರು. ದಿವಂಗತ ಮೆ. ಪಾರ್ವಂಗಡ ಕುಶಾಲಪ್ಪ, ಯಂ. ಯಲ್. ಸಿ. ಯವರ ಸ್ಮಾರಕ ನಿಧಿಯನ್ನು ಈ ಕಟ್ಟೋಣದ ಬಗ್ಗೆ ಉಪಯೋಗಿಸಬಹುದೆಂಬ ನಿರ್ಣಯವನ್ನು ಕುರಿತು ಸಭಿಕರಿಗೆ ಮನದಟ್ಟಾಗುವಂತೆ ಮಾತಾಡಿದರು ಮತ್ತು ದಿವಂಗತರ ಸ್ಮಾರಕ ನಿಧಿಯ ವಿಷಯ ಪೊನ್ನಂಪೇಟೆಯಲ್ಲು ನಡೆದ ಕಮಿಟಿ ಮೀಟಿಂಗಿನಲ್ಲಿ ಅಲ್ಲಿಯೇ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದು ತೀರ್ಮಾನಿಸಿದ್ದಾಗಿತ್ತು. ಆದರೆ ಮಡಿಕೇರಿಯಲ್ಲಿ ಒಂದು ಬೋರ್ಡಿಂಗ್ ಮನೆಯು ಅತ್ಯಾವಶ್ಯಕವೆಂದು ಕಂಡುಬಂದ ಮೇರೆ ಸ್ಮಾರಕ ನಿಧಿಯನ್ನು ಅವಶ್ಯ ಇದ್ದ ಸ್ಥಳಕ್ಕೆ ಉಪಯೋಗಿಸಬಹುದೆಂಬ ನಿರ್ಣಯದಂತೆ ಅಂಥಾ ಉಪಯೋಗವು ಇಲ್ಲಿಯೇ ಆವಶ್ಯಕವೆಂದು ಕಾಣ ಬರುವದರಿಂದ ಆ ನಿಧಿಯನ್ನು ಈ ಸ್ಥಳದಲ್ಲಿ ಸದುಪಯೋಗ ಪಡಿಸುವದರಲ್ಲಿ ಯಾರ ಆಕ್ಷೇಪವೂ ಇರಬಾರದೆಂದೂ, ಇದಕ್ಕೆ ಎಲ್ಲರೂ ತಕ್ಕ ಪ್ರೋತ್ಸಾಹ ಕೊಡಲಿಕ್ಕೆ ಹಿಂಜರಿಯಲಿಕ್ಕಿಲ್ಲ [illegible] ವಿವರಿಸಿದರು. ಅಲ್ಲದೆ ದಿವಂಗತರ ಭ್ರಾತೃವರ್ಗದವರು [illegible] ನಿಧಿಯನ್ನು ಕೊಡಲು ಒಪ್ಪಿ ಕಮಿಟಿಯವರಿಗೆ ಬರೆದಿರುವ ಕಾಗದವನ್ನು ಸಭೆಯ ಮುಂದಿಟ್ಟರು.

ಈ ವಿಷಯ ಸಭಿಕರಿಂದ ಅನೇಕ ವಿಧದಲ್ಲಿ ಚರ್ಚಿಸಲ್ಪಟ್ಟ ನಂತರ ಕೆಳಗಿನ ವಿಷಯಗಳು ಏಕಮನಸಿನಿಂದ [illegible]ವು

1. ಸ್ಮಾರಕ ನಿಧಿಯ ಬಗ್ಗೆ [illegible] ಯ್ಯನವರು [illegible] ಯಿತು.

2. ಈ ಕಟ್ಟೋಣಕ್ಕೆ "ದಿವಂಗತ [illegible] ಲಪ್ಪ ಸ್ಮಾರಕ ಕಟ್ಟೋಣ" ಎಂದು [illegible] ಮಾನವಾಯಿತು.

3. ಈ ಕಟ್ಟೋಣಕ್ಕೆ ಒಂದು [illegible] ಹೆಚ್ಚಿಗೆ ದ್ರವ್ಯ ಸಹಾಯ ಮಾಡಿದವರ ಹೆಸರನ್ನು [illegible] ಶಾಸನದಲ್ಲು ಕೆತ್ತಿಸಿಡುವಂತೆಯೂ, [illegible] ನೂರು ರೂಪಾಯಿಯ ಒಳಗೆ ಕೊಡತಕ್ಕವರ ಹೆಸರುಗಳನ್ನು ಅಚ್ಚು ಹಾಕಿಸಿ ಕನ್ನಡಿ ಚೌಕಟ್ಟು ಕಟ್ಟಿಸಿಡುವಂತೆಯೂ ತೀರ್ಮಾನವಾಯಿತು.

4. ಪ್ರೆಸಿಡೆಂಟರವರ ಹೆಸರಿನಿಂದ ಐದು ನೂರು ಅಪೀಲು ಅರ್ಜಿಗಳನ್ನು ಪ್ರಿಂಟು ಮಾಡಿಸಿ ದೇಶದವರಲ್ಲಿ ಹಂಚಬೇಕೆಂದು ನಿಶ್ಚಯಿಸಲಾಯಿತು.

5 ಈ ಮೊದಲು ಪೊನ್ನಂಪೇಟೆಯಲ್ಲಿ ನಡೆದ ಜಮಾನ್ದಾರರ ಸಂಘದ ಸ್ವಾಗತ ಅಧ್ಯಕ್ಷರಾಗಿದ್ದ ಮೆ. ಮನೆಯಪಂಡ ನಾಣೈಯ್ಯನವರಲ್ಲಿರುವ ಉಳುವರಿ ಹಣವನ್ನು ಕಳದ ವರ್ಷ ನಡೆದ ಜಮಾನ್ದಾರರ ಸಂಘದ ಸ್ವಾಗತ ಮಂಡಲಿಯ ಅಧ್ಯಕ್ಷರಾಗಿದ್ದ ಮೆ. ಜಮ್ಮಡ ಮಾದಪ್ಪನವರಲ್ಲಿರುವ ಉಳುವರಿ ಹಣವನ್ನೂ ಕೇಳಿ ಪಡಕೊಳ್ಳುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಟ್ಟಿದೆ.

6 ದಿವಂಗತರ ಸ್ಮಾರಕ ಫಂಡಿಗೆ ಈ ಮೊದಲು [illegible] ಲಾಗಿರತಕ್ಕ ಹಣವನ್ನು ಬೋರ್ಡಿಂಗ್ ಕಮಿಟಿಯ [illegible] ರು ಕೇಳಿ ಪಡಕೊಳ್ಳುವಂತೆ ಅಧಿಕಾರ ಕೊಡಲಾಯಿತು.

7. ಈ ಕಟ್ಟೋಣದ ಚಂದಾ ವಸೂಲಾತಿ [illegible], ಅದರ ಖರ್ಚಿನ ವ್ಯವಸ್ಥೆ ಬಗ್ಗೆಯೂ ಸರ್ವ ಅಧಿಕಾರವನ್ನು ಖಜಾನ್ಜಿಯವರಿಗೆ ಕೊಡಬೇಕೆಂದು ತೀರ್ಮಾನವಾಯಿತು.

8. ಈ ಕಟ್ಟೋಣಕ್ಕೆ ಬೇಕಾಗುವ ಇಲ್ಲು, ಮರ ಮೊದಲಾದವುಗಳನ್ನು ಸರಕಾರದಿಂದ ಪಡಕೊಳ್ಳಲು ಆಡಳಿತ ಮಂಡಲಿಗೆ ಅಧಿಕಾರ ಕೊಟ್ಟಿರುತ್ತೆ.

9. ಇದರ ಕೆಲಸವನ್ನು ಸಾಂಗವಾಗಿ ನಡಿಸಿಕೊಂಡು ಹೋಗುವದಕೆ ಕೆಳಗಿನ ಮಹನೀಯರುಗಳಿಂದೊಡಗೂಡಿದ ಆಡಳಿತ ಮಂಡಲಿಯು ನಿಶ್ಚಯಿಸಲಾಯಿತು.

1. ಮ. ರಾ. ಶ್ರಿ. ಗಳಾದ ಇಟ್ಟಿರ ಪೊನ್ನಪ್ಪನವರು (ಅಧ್ಯಕ್ಷರು,) 2 ಕಾಳ್ಯಮಾಡ ಐಯ್ಯಮ್ಮನವರು (ಉಪಾಧ್ಯಕ್ಷರು) 3. ಎ. ಕಾಳಮ್ಮನವರು (ಖಜಾನ್ಜಿ,) ಕೆ. ಎಸ್. ಗೋವಿಂದೈಯ್ಯನವರು (ಸೆಕ್ರೆಟರಿ.)

ಕಮಿಟಿ ಮೆಂಬರುಗಳು —ಮಾ. ರಾ. ಶ್ರಿ. ಗಳಾದ (1) ಕೆ. ಸಿ ಕರುಂಬೈಯ್ಯನವರು ಯಂ ಯಲ್. ಸಿ. (2) ಪಿ. ಜಿ. ಮಚ್ಚಮೈಯ್ಯನವರು ಬಿ. ಎ ಯಂ. (3) ಅಜ್ಜಮಾಡ ಮಾದಪ್ಪನವರು ಜಿ. ಬಿ. ಯಂ. (4) ಜಮ್ಮಡ ಮಾದಪ್ಪನವರು., (5) ಕೊಕ್ಕಮಾಡ ಗಣಪತ್ಯಯವರು, (6) ಕಿರಿಯಮಾಡ ನಂಜಪ್ಪನವರು, (7) ಕೇಕಡ [illegible] ಯ್ಯನವರು, (8) ಪಳ್ಳೀರ ಬಂಗಪ್ಪನವರು, (9) [illegible] ಕರುಂಬೈಯ್ಯನವರು ಮತ್ತು (10) ಕಳ್ಳಿಚಂಡ ಕರುಂಬೈಯ್ಯನವರು

ಅಧ್ಯಕ್ಷರ ಭಾಷಣ.—ದಿವಂಗತ ಮೆ. ಪಾರ್ವಂಗಡ ಕುಶಾಲಪ್ಪನವರ ಸ್ಮಾರಕವಾಗಿ ಕಟ್ಟುವ ಕಟ್ಟೋಣವನ್ನು ಕುರಿತು ಈ ನಾಡಿನವರಿಗೆ ವಿನಾದರೂ ಸಂಕೋಚ ಇರಬಾರದು ಆದರೆ ದಿವಂಗತರ ಹೆಸರನ್ನು ಚಿರಸ್ಥಾಯಿಯಾಗಿ ಮಾಡುವ ಉದ್ದೇಶ್ಯ ಈ ಕಟ್ಟೋಣಕ್ಕೆ ಅವರ ಹೆಸರನ್ನು ಕೊಡಬೇಕೆಂದೂ, ಕಟ್ಟಡದ ಬಗ್ಗೆ ದ್ರವ್ಯ ಸಹಾಯ ಮಾಡುವ ಮಹನೀಯರ ಹೆಸರುಗಳನ್ನು ಶಿಲಾಲಿಪಿಯಲ್ಲಿ ಬರೆಯಬೇಕೆಂದೂ ಹೇಳಿದರು. ಸಗಮಂಡಲ ಈ ಕಾರ್ಯಕ್ಕೆ ಸಹಾಯ ಕಲಾಗಲೆಂದೂ ಒಂದೆರಡು ತಿಂಗಳುಗಳಲ್ಲೇ ಇದರ ಪೂರ್ಣತೆಯನ್ನು ನೆರವೇರಿಸಬೇಕೆಂದೂ ಇದರ ಬಗ್ಗೆ ಪ್ರತಿಯೊಬ್ಬರೂ ತಮ್ಮ ಕಾಣಿಕೆಗಳನ್ನು ಅರ್ಪಿಸಲು ತಯಾರಿರಬೇಕೆಂದೂ ಹೇಳಿ ತಮ್ಮ ಪುಟ್ಟ ಭಾಷಣವನ್ನು ಪೂರ್ಣಗೊಳಿಸಿದರು.

ನಂತರ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ಸಭೆಯು ಮಂಗಳ ಶ್ರೀಯುತ ಪ್ರಾರ್ಥನಾದಿಗಳಿಂದ ಬರಖಾಸ್ತಾಯಿತು

ಮಡಿಕೇರಿ, ಕೆ. ಎಸ್. ಗೋವಿಂದೈಯ್ಯ,
ತಾ. 1—11—'29. (ಸೆಕ್ರೆಟರಿ.)

ಹಿಂದೂಸ್ಥಾನೀ ಸೇವಾದಳ.

[illegible] ಪ್ರಸಿದ್ಧ ನಾಟಕ ಮಂಡಳಿಯವರ ತರೀಕೆರೆಯಲ್ಲಿ ಸೇವಾದಳದ ಸಹಾಯಾರ್ಥವಾಗಿ ಒಂದು ನಾಟಕವನ್ನಾಡಿ ಉತ್ಪತ್ತಿಯಾದ [illegible] ರೂಪಾಯಿಗಳನ್ನು ಕೊಟ್ಟರು.

ಡಾಕ್ಟರ್ ಹರ್ಡೀಕರರವರು ಮೈಸೂರಿಗೆ ಹೋಗಿದ್ದಾಗ ಅವರಿಗೆ ಅಲ್ಲಿ ಸೇವಾದಳದ ಸಹಾಯಾರ್ಥವಾಗಿ 300 ರೂಪಾಯಿಗಳು ದೊರೆತ್ತಿರುತ್ತವೆ, ಮತ್ತು ಅವರ ಭಾಷಣವು ಆಯಿತು.

೪೩ ರೂಪಾಯಿಗಳು ಶೃಂಗೇರಿ, ಬೀರೂರು, ಹೊಸಕೋಟೆ, ತರೀಕೆರೆ, ಶಿವಮೊಗ್ಗ ಈ ಸ್ಥಳಗಳಲ್ಲಿ ಸೇವಾದಳದ ಸಹಾಯಾರ್ಥವಾಗಿ ಸಿಕ್ಕಿರುತ್ತವೆ. ಬೀರೂರು ಮತ್ತು ತ[illegible]ಕೆರೆ ಸ್ಥಳಗಳಲ್ಲಿ ಸೇವಾದಳದ ಸಂಘಟಕರಲ್ಲೊಬ್ಬರಾದ ಶ್ರೀ [illegible]ಯವರು ಸೇವಾದಳದ ವಿಷಯವಾಗಿ ಭಾಷಣವನ್ನು ಮಾಡಿದರು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕಾರ್ಯ[illegible] 'ಕರ್ಮವೀರ'ದ ಸಂಪಾದಕರೂ ಆದ ಶ್ರೀ. [illegible] ಕೆಲವು ತಿಂಗಳುಗಳಲ್ಲಿ [illegible] ಅ[illegible] ಆಸ್ಪತ್ರೆ [illegible] ಸನ್ನು [illegible] ಸನ್ಮಾನ್ಯರು ಅವರು [illegible].

[illegible] ಜಯಂತಿ ಉತ್ಸವದ ದಿವಸ (ರವಿವಾರ) ಮುಂಜಾನೆ [illegible] ಸಮಯಕ್ಕೆ ಇಲ್ಲಿಯ ಕರ್ನಾಟಕ ಪ್ರೆಸ್ಸಿನಲ್ಲಿ [illegible] ದಳದ ಪಕ್ಷದಿಂದ ರಾಷ್ಟ್ರ ಧ್ವಜವಂದನವು ನೆರವೇರಿಸಲ್ಪಟ್ಟಿತು.

ಹುಬ್ಬಳ್ಳಿ, ರಾ. ವೆ. ಕರಿಗುದರಿ,
೨೩—೧೦—೨೯. ದಳದ ಪ್ರಕಟನಾ ಕಾರ್ಯದರ್ಶಿ.

ಮರಣವನ್ನು ಜಯಿಸುವುದು.

ತಮ್ಮ ಅಸಾಧಾರಣವಾದ ವಿದ್ಯಾಪ್ರೌಢಿಮೆಗೆ ಪಾಶ್ಚಿಮಾತ್ಯರ ಮೆಚ್ಚುಗೆಯನ್ನೂ, ಗೌರವವನ್ನೂ ಪಡೆದಿರುವ ಹಿಂದೂ ದೇಶೀಯರಲ್ಲಿ ಸರ್ ಜಗದೀಶ ಚಂದ್ರಬೋಸರವರೊಬ್ಬರು. ಇವರು ವಿಜ್ಞಾನ ಶಾಸ್ತ್ರದಲ್ಲಿ ಅಸ್ಪತಿಮವಾದ ಪ್ರಸಿದ್ಧಿಯನ್ನು ಸಂಪಾದಿಸಿ, ಅತಿಗಹನವಾದ ಅನೇಕ ಸೂಕ್ಷ್ಮ ವಿಚಾರಗಳನ್ನು ಸ್ವಶಕ್ತಿಯಿಂದ ಕಂಡುಹಿಡಿದು ಪ್ರಪಂಚವನ್ನು ಬೆರಗು ಮಾಡಿರುತ್ತಾರೆ. ಮನುಷ್ಯರು ಮತ್ತು ಮೃಗಗಳಂತೆ ಸಸ್ಯವರ್ಗವೂ ಕಷ್ಟನಷ್ಟಗಳನ್ನು ಸುಖ ಸಂತೋಷ[illegible] [illegible] [illegible] [illegible] ಕಂಡು ಪ್ರದರ್ಶನ ಮಾಡಿಸಿದರು. ಅವರು [illegible] ದಲ್ಲಲ್ಲದೆ ಯೂರೋಪ್, ಅಮೇರಿಕ ಖಂಡಗಳಲ್ಲಿಯೂ ತಮ್ಮ ಯಂತ್ರಗಳ ಮೂಲಕ ಇದನ್ನು ವ್ಯಕ್ತಪಡಿಸಿ ಅಲ್ಲಿನ ಶಾಸ್ತ್ರಜ್ಞರ ಗೌರವವನ್ನು ಸಂಪಾದಿಸಿಕೊಂಡಿರುವರು.

ಇವರು ಹಿಮಾಲಯ ಪರ್ವತ ಪ್ರಾಂತ್ಯದಲ್ಲಿನ ಕೆಲವು ವನಸ್ಪತಿಗಳ ಗುಣ ದೋಷಗಳನ್ನು ವಿಮರ್ಶೆ ಮಾಡುತ್ತಾ ಇರುವಾಗ, ಅವುಗಳಲ್ಲೊಂದು ಕಳೆದು ಹೋದ ಪ್ರಾಣವನ್ನು ಕೂಡ ಪಡೆಯುವಂತೆ ಮಾಡುವುದೆಂದು ಕಂಡು, [illegible] ವ್ಯಕ್ತವಾಗುತ್ತದೆ ಇತರ ಸಸ್ಯಗಳ ಆ ವನಸ್ಪತಿಯ ಉಪಯೋಗದಿಂದ ಪುನಃ [illegible] ಅಲ್ಲಿಂದ ಜೀವ [illegible] [illegible] [illegible] [illegible].

[illegible] ಸರ್ ಜಗದೀಶ ಚಂದ್ರಬೋಸರು [illegible] ಆ ವನಸ್ಪತಿಯ [illegible] ಹಚ್ಚಿನ ಸಂಗತಿಗಳನ್ನು [illegible].

ರಾಜಕೀಯ ಸುಧಾರಣೆ ವಿಷಯವಾಗಿ ವೈಸರಾಯರು ಪ್ರಕಟಿಸಿರುವ ಹೇಳಿಕೆ.

ನಾನು ಈಗ ತಾನೇ ವಿಲಾಯಿತಿಯಿಂದ ವಾಪಸ್ ಬಂದಿದ್ದೇನೆ. ಚಕ್ರವರ್ತಿಯವರ ಸರಕಾರದವರೊಂದಿಗೆ ಧಾರಾಳವಾಗಿ ಮಾತಾಡಲು ಅವಕಾಶ ದೊರಕಿತ್ತು. ವಿಲಾಯಿತಿಗೆ ಹೋಗುವ ಮುಂಚೆ [illegible] ಪ್ರತಿನಿಧಿಯಾದ ನಾನು ಈ ದೇಶೀಯರಿಗೆ ಹಿಂದೂಸ್ಥಾನದ [illegible] ಭಾವಗಳನ್ನು, ಆಶೋತ್ತರಗಳನ್ನೂ, ಅಭಿಲಾಷೆಗಳನ್ನು ತಿಳಿಸುವುದೇ ನನ್ನ ಕರ್ತವ್ಯವಾಗಿದೆ ಎಂತ ನಾನು ಬಹಿರಂಗವಾಗಿ ಹೇಳಿದ್ದೆ. ವಿಲಾಯಿತಿಯಲ್ಲಿ ಸರಕಾರದವರು ವಾಕ್ಯವಲ್ಲದೆ ಎಲ್ಲಾ ಸಂಗಡದವರೂ ನನ್ನ ಹೇಳಿಕೆಯನ್ನು [illegible] ಕುತೂಹಲ ತೋರಿಸಿದ್ದರಿಂದ ನನ್ನ ಕೆಲಸವು ಸುಲಭವಾಯಿತು.

ಜನ ಸಮುದಾಯದ ಸುಸ್ಥಿತಿಗೆ ಸಂಬಂಧಪಟ್ಟ ವಿಷಯಗಳು ಚರ್ಚೆಯಲ್ಲಿರುವ ಈ ಬಿಕ್ಕಟ್ಟಿನ ಸಮಯದಲ್ಲಿ ಮನಸ್ಸು ಉದ್ರೇಕವಾಗಿರುವದೂ, ಜನರ ಕಾರ್ಯಗಳನ್ನು ತಪ್ಪಾಗಿ ತಿಳಿದುಕೊಳ್ಳುವುದೂ ಸ್ವಾಭಾವಿಕವಾಗಿದೆ. ಕಳೆದ [illegible] ತಿಂಗಳುಗಳಲ್ಲಿ ಜಾತಿ, ಮತ [illegible] ಪಕ್ಷಗಳವರಲ್ಲಿ ಹೆಚ್ಚಿನ [illegible] ರಾಜಭಕ್ತಿ [illegible] ತಮ್ಮ ಮನೋಭಾವವನ್ನು ಸರಕಾರ [illegible] ಸರಕಾರದ ಅಭಿಪ್ರಾಯ ತಿಳಿದುಕೊಳ್ಳಲಿಕ್ಕೂ ಕುತೂಹಲವುಳ್ಳವರಾಗಿದ್ದಾರೆಂತಲೂ ನನಗೆ ನಂಬಿಕೆ [illegible]. ಇಂಗ್ಲೆಂಡ ಜನರಲ್ಲಿ, ಹಿಂದುಸ್ಥಾನದಲ್ಲಿನ [illegible] ವಿದ್ಯಮಾನಗಳಿಂದ ಹಿಂದುಸ್ಥಾನದ ಜನರಿಗೆ [illegible] ಸಂಗತಿ ಪೂರ್ತಿಯಾಗಿ, ಸರಿಯಾಗಿ ತಿಳಿಯದಿದ್ದರೂ ಹಿಂದುಸ್ಥಾನಕ್ಕೆ ಕೊಟ್ಟ ವಚನಗಳನ್ನು ನೆರವೇರಿಸಬೇಕೆಂಬ ಅಭಿಪ್ರಾಯವು ಬ್ರಿಟಿಷ್ ಜನತೆಯ ಚಿತ್ತದಲ್ಲಿ ನೆಲೆಗೊಂಡಿದೆ. ಎರಡು ದೇಶಗಳ ಮೇಲೂ ಬಹು ಜವಾಬ್ದಾರಿ ಮತ್ತು ವಿಶೇಷವಾದ [illegible] ಇದೆ. ಯಾಕೆಂದರೆ, ಈ ಎರಡು ರಾಷ್ಟ್ರಗಳಿಗೆ ಅನ್ಯೋನ್ಯತೆಯು ಸಂಪೂರ್ಣವಾದರೆ ಪ್ರಪಂಚದ ಮೇಲೆ [illegible] ಪರಿಣಾಮದ ಬೆಲೆಯನ್ನು ಎಣಿಸಲು ಸಾಧ್ಯವಿಲ್ಲ. [illegible] ಅನ್ಯೋನ್ಯತೆಯನ್ನು ಬೆಳಸಲು ಮಾಡುವ ಪ್ರಯತ್ನವು ನಿಷ್ಫಲವಾದರೆ ಅದರ ಹಾನಿ ಎಷ್ಟೆಂದು ಊಹಿಸಲು ಸಾಧ್ಯವಿಲ್ಲ.

[illegible] ಇಂಡಿಯಾ ಸ್ಟೇಟ್ [illegible] [illegible] ನನ್ನ ಸಂಭಾಷಣೆಯು ಹಿಂದುಸ್ಥಾನದಲ್ಲಿ ನಡೆ[illegible] ವಿದ್ಯಮಾನಗಳ ಮೇಲೆಯೇ [illegible] ಎರಡು ವರ್ಷಗಳ ಅಂಗೆ ನೇಮಕವಾದ [illegible] ಕಮಿಶನಿನಿಂದ [illegible] ದುಸ್ಥಾನದ ಮನೋಭಾವವು [illegible] ಗೆ ಅಥವಾ ಗುರಕ್ಕೆ, ಕೂಡಿಗೋ [illegible] ಎಂತ ಚರ್ಚಿಸಿ ಪ್ರಯೋಜನ[illegible]. [illegible] ರು ಇದ್ದ ವಿದ್ಯಮಾನಗಳ ಮೇಲೆ ಮುಂದಿನ ಕಾರ್ಯಗಳನ್ನು ನಿಶ್ಚಯಿಸಬೇಕೇ ಹೊರತು ವಿದ್ಯಮಾನಗಳು ಬೇರೆಯಾಗಿದ್ದರೆ [illegible] ಮಾಡಬೇಕಿತ್ತು ಎಂಬುದನ್ನು ಯೋಚಿಸುತ್ತಾ ಕಾಲಕಳೆದು ಪ್ರಯೋಜನವಿಲ್ಲ.

ಸೈಮನ್ ಕಮಿಶನ್.

ಸರ್ ಜಾನ್ ಸೈಮನರ ಕಮಿಶನು ಸೆಂಟ್ರಲ್ ಕಮಿಟಿಯ ಸಹಾಯದೊಡನೆ ಅದರ ವರದಿಯನ್ನು ತಯಾರಿಸುತ್ತಲಿದೆ. ಅವರ ವರದಿಯು ಪ್ರಕಟವಾಗುವ ವರೆಗೆ ಮುಂದೆ ಯಾವ ಸುಧಾರಣೆಗಳನ್ನು ಕೊಡಬಹುದೆಂಬವನ್ನು ಸೂಚಿಸುವದು ಅಸಾಧ್ಯವಾಗಿದೆ. ಅಥವ ನಾವು ಯಾವರೂ ಹಾಗೆ ಸೂಚಿಸುವದು [illegible] ಬ್ರಿಟಿಷ್ [illegible] ಅಭಿಪ್ರಾಯವಾಗಿದೆ. ಈ ವಿಷಯದಲ್ಲಿ ಬ್ರಿಟಿಷ [illegible] [illegible] [illegible] [illegible] [illegible] [illegible] [illegible] ಸೈಮನ್ ಕಮಿಶನ ವರದಿ [illegible] [illegible] ಹಿಂದುಸ್ಥಾನದವರಿಗೆ [illegible] ಅಭಿಪ್ರಾಯ ಕೊಡಲು [illegible] ರಾಜಕೀಯ ಸುಧಾರಣೆಯನ್ನು ಮುಂದುವರಿಸಲು ಯಾವ [illegible] ಯನ್ನು ಅನುಸರಿಸಬೇಕೆಂಬುದೇ.

ಎಂಟು ತಿಂಗಳ ಕೆಳಗೆ ಅಸೆಂಬ್ಲಿಯಲ್ಲಿ ನಾನು ಮಾಡಿದ ಭಾಷಣದಲ್ಲಿ ಆಗಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ನಾನು ಹೇಳಿದ್ದೇನೆಂದರೆ— [illegible] ಮಾಂಟೆಗೂ ತೀರ್ಮಾನ [illegible] ಸ್ವತಂತ್ರ [illegible] [illegible] [illegible] [illegible] [illegible] [illegible] [illegible] [illegible] ಪ್ರಯತ್ನ[illegible]"

[illegible] ರಾಜ್ಯಗಳು.

[illegible] [illegible] ಸಂಬಂಧ [illegible] ಅಧ್ಯಕ್ಷ [illegible] [illegible] ಪ್ರಾಂತದ [illegible] ರಾಜ್ಯಗಳ [illegible] ದೇಶೀಯ ರಾಜ್ಯಗಳಿಗೂ, ಬ್ರಿಟಿಷ್ ಹಿಂದುಸ್ಥಾನಕ್ಕೂ ಇರುವ ಸಂಬಂಧವು [illegible] ಬೇಕೆಂಬುದನ್ನು ಯೋಚಿಸಬೇಕೆಂದು ಕಮಿಶನಿಗೆ [illegible] ಇದು ಸಾಧ್ಯವಾಗದ [illegible] ಸರಕಾರವು ಈ ಮೊದಲು [illegible] ಚಿಸಿದ ಕಾರ್ಯಕ್ರಮವನ್ನು ಬದಲಾಯಿಸಬೇಕೆಂತ ಸೈಮನರು [illegible] ಸಿರುತ್ತಾರೆ. [illegible] ಪ್ರಕಟವಾದ [illegible] ಪ್ರೈಮ್ ಮಿನಿಸ್ಟರ್ [illegible] ಸರಕಾರದೊಡನೆ ಬ್ರಿಟಿಷ್ ಹಿಂದುಸ್ಥಾನದ ಮತ್ತು ದೇಶೀಯ [illegible]

ರಾಜ್ಯಗಳ ಪ್ರತಿನಿಧಿಗಳನ್ನು ಸೇರಿಸಿ ಒಂದು ಸಭೆ ಕೂಡಿಸಿ ಎಲ್ಲರಿಗೂ ಒಪ್ಪಿಗೆಯಾಗುವ ಸುಧಾರಣೆಯನ್ನು ಕಂಡುಹಿಡಿದು ಪಾರ್ಲಿಮೆಂಟ್ ಮುಂದೆ ಇಡತಕ್ಕದ್ದು ಯುಕ್ತವಾಗಿದೆಯೆಂತ ಸೈಮನರು ಸೂಚಿಸಿರುತ್ತಾರೆ. ಹಿಂದುಸ್ಥಾನದ ಶಾಸನ ಮಂಡಲಿಗಳ ಪ್ರತಿನಿಧಿಗಳು ಪಾರ್ಲಿಮೆಂಟಿನ ಕಮಿಟಿಯೊಡನೆ ಸೇರಿ ಸುಧಾರಣೆಯ ಶಾಸನದ ಮಸೂದೆಯನ್ನು ವಿಮರ್ಶಿಸುವ ಮುಂಚೆ ಮೇಲ್ಕಂಡ ಸಭೆಯೊಂದು ಸೇರಿ ಚರ್ಚಿಸಬೇಕೆಂಬುದು ಸ್ಪಷ್ಟವಾಯಿತು.

ಈ ಅಭಿಪ್ರಾಯಕ್ಕೆ ಬ್ರಿಟಿಷ್ ಸರಕಾರವು ಸಂಪೂರ್ಣವಾಗಿ ಒಪ್ಪುತ್ತದೆಯೆಂತಲೂ, ತಕ್ಕ ಸಮಯದಲ್ಲಿ ಜಯಪ್ರದವಾಗುವಂಥ ಸುಧಾರಣೆಯನ್ನು ಕಂಡು ಹಿಡಿಯಬೇಕಾದದ್ದು ಅವಶ್ಯವೆಂತ ಮಾತ್ರವಲ್ಲದೆ ದೇಶೀಯ ರಾಜರುಗಳಿಗೂ ಬ್ರಿಟಿಷ್ ಹಿಂದುಸ್ಥಾನಕ್ಕೂ ಇರುವ ಸಂಬಂಧವನ್ನು ಯೋಚಿಸಬೇಕಾದದ್ದು ಯುಕ್ತವಾಗಿದೆ. ಬ್ರಿಟನಿನ ಈ ಕೆಳಗಿನ ಧೋರಣೆಯನ್ನು ಬಿಟ್ಟರೆ ಮೇಲ್ಕಂಡ ವಿಷಯಗಳೆಲ್ಲಾ ತೀರ್ಮಾನವಾಗಬೇಕೆಂತ ಬ್ರಿಟಿಷ್ ಸರ್ಕಾರವು ಒಪ್ಪುತ್ತದೆ

1917ನೇ ಇಸವಿಯ ತೀರ್ಮಾನ

1917ನೇ ಇಸವಿಯ ಜಾಹೀರ್ ಪತ್ರದಲ್ಲಿ ಸ್ವರಾಜ್ಯ ಸಂಸ್ಥೆಗಳನ್ನು ಕ್ರಮೇಣ ಬೆಳೆಸುತ್ತಾ, ಒಂದು ಬ್ರಿಟಿಷ್ ಸಾಮ್ರಾಜ್ಯದೊಳಗೆ ಹಿಂದುಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವದೇ ಹಿಂದುಸ್ಥಾನದಲ್ಲಿನ ಬ್ರಿಟಿಷರ ಧೋರಣೆಯಾಗಿದೆ ನಾನು ಈಚೆಗೆ ತಿಳಿಸಿದಂತೆ ನನಗೆ ಚಕ್ರವರ್ತಿಯವರು ಕೊಟ್ಟ ಸಲಹೆಯಲ್ಲಿ 1919ರಲ್ಲಿ ಏರ್ಪಡಿಸಿದ ರಾಜಕೀಯ ರಚನೆಯ ಮೂಲಕ ಬ್ರಿಟಿಷ್ ಸಾಮ್ರಾಜ್ಯದೊಳಗೆ ಹಿಂದುಸ್ಥಾನಕ್ಕೆ ತಕ್ಕ ಸ್ಥಾನ ಸಿಕ್ಕುವಂತೆ ಮಾಡುವದೇ ಚಕ್ರವರ್ತಿಯವರ ಪ್ರೀತಿಯೆಂತ ಆಜ್ಞಾಪಿಸಿದ್ದಾರೆ. ಹಿಂದುಸ್ಥಾನವು ತಕ್ಕ ಕಾಲದಲ್ಲಿ ಬ್ರಿಟಿಷ್ ರಾಜ್ಯಗಳೊಳಗೆ ಸಮಾನ ಹಕ್ಕುಳ್ಳದ್ದಾಗಬೇಕೆಂತ ಬ್ರಿಟಿಷ್ ಸರ್ಕಾರದ ಇಚ್ಛೆಯಾಗಿದೆಯೆಂತ ಬ್ರಿಟಿಷ್ ಮಂತ್ರಿಗಳು ಈಗಿಂದಾಗ್ಗೆ ತಿಳಿಸಿರುತ್ತಾರೆ. 1919ನೇ ಇಸವಿಯ ರಾಜಕೀಯ ರಚನೆಯನ್ನು ಏರ್ಪಡಿಸುವದರಲ್ಲಿ ಇದ್ದ ಉದ್ದೇಶವೇನೆಂಬ ವಿಷಯದಲ್ಲಿ ಹಿಂದೂಸ್ಥಾನದಲ್ಲಿಯೂ, ಬ್ರಿಟನ್ನಿನಲ್ಲಿಯೂ ಸಂಶಯತೋರಿ ಬಂದದ್ದರಿಂದ 1917ನೇ ಇಸವಿಯ ಜಾಹೀರು ಪತ್ರದಲ್ಲಿಯೇ ಹಿಂದೂಸ್ಥಾನದ ರಾಜಕೀಯ ಬೆಳವಣಿಗೆಯ ಉದ್ದೇಶವೇ ವಸಾಹತು ಸ್ವರಾಜ್ಯವೆಂತ ಬ್ರಿಟಿಷ್ ಸರ್ಕಾರದ ತೀರ್ಮಾನವೆಂತ ಸ್ಪಷ್ಟವಾಗಿ ತಿಳಿಸಲು ಬ್ರಿಟಿಷ್ ಸರ್ಕಾರವು ನನಗೆ ಅಧಿಕಾರ ಕೊಟ್ಟಿದೆ.

ಈ ಧೋರಣೆಯನ್ನು ಸಾಧಿಸಿದಾಗ ದೇಶೀಯ ರಾಜ್ಯಗಳ ಸ್ಥಿತಿ ಯಾವದಿರಬೇಕೆಂಬದು ಅವಶ್ಯವಾಗಿದೆ. ಈ ದೇಶಗಳಿಗೂ, ಹಿಂದುಸ್ಥಾನಕ್ಕೂ ಇರುವ ಸಂಬಂಧವು ಹೇಗಿರಬೇಕೆಂಬುದನ್ನು ಈಗಲೇ ತೀರ್ಮಾನಿಸಲು ಸಾಧ್ಯವಿಲ್ಲದಿದ್ದರೂ ಒಟ್ಟು ಹಿಂದುಸ್ಥಾನವೆಲ್ಲಾ ಒಂದಾಗಬೇಕೆಂತ ಇರುವ ಉದ್ದೇಶಕ್ಕೆ ಕಡಕಾಗದಂತೆ ನೋಡಿಕೊಳ್ಳಲು ಪ್ರಯತ್ನಿಸಬೇಕಾದದ್ದು ಅವಶ್ಯವಾಗಿದೆ ಬ್ರಿಟಿಷ್ ಹಿಂದುಸ್ಥಾನದ ರಾಜಕೀಯ ಸುಧಾರಣೆಯೂ ಸಮಸ್ಯೆಯೂ ಬ್ರಿಟಿಷ್ ಹಿಂದುಸ್ಥಾನಕ್ಕೂ, ದೇಶೀಯ ರಾಜ್ಯಗಳಿಗೂ ಇರಬೇಕಾದ ಸಂಬಂಧದ ಸಮಸ್ಯೆಯೂ ತೀರ್ಮಾನವಾಗಬೇಕಾದರೆ ಕಮಿಶನರವರು ಹೇಳಿದ ಕಾರ್ಯಕ್ರಮವನ್ನು ಅನುಸರಿಸಬೇಕಾದದ್ದು ಅವಶ್ಯವೆಂತ ಬ್ರಿಟಿಷ್ ಸರಕಾರವು ಅಭಿಪ್ರಾಯಪಟ್ಟಿದೆ

ಆದ್ದರಿಂದ ಕಮಿಶನೂ, ಇಂಡಿಯನ್ ಸೆಂಟ್ರಲ್ ಕಮಿಟಿಯೂ ಅವರ ವರದಿಗಳನ್ನು ಒಪ್ಪಿಸಿದ ನಂತರ ಅವುಗಳನ್ನು ಪ್ರಕಟಿಸಿ ಇಂಡಿಯಾ ಸರಕಾರದ ಅಭಿಪ್ರಾಯ ತೆಗೆದುಕೊಂಡು ಯೋಚಿಸಲು ಬ್ರಿಟಿಷ್ ಸರಕಾರಕ್ಕೆ ಅವಕಾಶ ಸಿಕ್ಕಿದ ನಂತರ ಬ್ರಿಟಿಷ್ ಇಂಡಿಯಾದ ಪಾರ್ಟಿಗಳ ಪ್ರತಿನಿಧಿಗಳನ್ನೂ ಮತ್ತು ದೇಶೀಯ ರಾಜ್ಯಗಳ ಪ್ರತಿನಿಧಿಗಳನ್ನೂ ಕರೆಯಿಸಿಕೊಂಡು ಬ್ರಿಟಿಷ್ ಸರಕಾರವು ಬೇರೆ ಬೇರೆಯಾಗಲೀ ಒಟ್ಟಾಗಿಯಾಗಲೀ ಬ್ರಿಟಿಷ್ ಹಿಂದುಸ್ಥಾನದ ಅಥವ ಒಟ್ಟು ಹಿಂದುಸ್ಥಾನದ ವಿಷಯಗಳನ್ನು ಚರ್ಚಿಸಬೇಕೆಂತ ಅಭಿಪ್ರಾಯಪಡುತ್ತಾರೆ ಈ ಕ್ರಮವನ್ನು ಅನುಸರಿಸಿದರೆ ಹೆಚ್ಚಿನ ಭಾಗದ ಒಪ್ಪಿಗೆ ಸಿಕ್ಕುವ ಸುಧಾರಣೆಗಳನ್ನು ಪಾರ್ಲಿಮೆಂಟ್ ಮುಂದೆ ಇಡಲು ಸಾಧ್ಯವಾದೀತೆಂತ ಬ್ರಿಟಿಷ್ ಸರಕಾರವು ಮನಃಪೂರ್ತಿಯಾಗಿ ನಂಬುತ್ತದೆ.

ಚಕ್ರವರ್ತಿಯವರ ಸರಕಾರದ ಈ ಕೆಲಸದಿಂದ ಹಿಂದುಸ್ಥಾನದ ಎಲ್ಲಾ ಪಂಗಡಗಳ ಸಹಕಾರವೂ ದೊರೆತೀತೆಂತ ನಾನು ನಂಬಿದ್ದೇನೆಂತ ಹೇಳಬೇಕಾಗಿಲ್ಲ. ಹಿಂದುಸ್ಥಾನಕ್ಕೆ ಒಳ್ಳೇದಾಗ ಬೇಕೆನ್ನುವವರೆಲ್ಲಾ ಎಲ್ಲೇ ಇದ್ದರೂ ಯಾರೇ ಇದ್ದರೂ ಹಿಂದುಸ್ಥಾನಕ್ಕೂ ಬ್ರಿಟನಿಗೂ ಮಧ್ಯೆ ಬೆಳೆದಿದ್ದ ಅಪನಂಬಿಕೆಯೆಂಬ ಜೇಡರ ಬಲೆಯನ್ನು ತೆಗೆದೊಗೆಯಲು ಸಹಾಯ ಮಾಡುವರೆಂತ ನಂಬುತ್ತೇನೆ ಹಿಂದುಸ್ಥಾನದ ರಾಜಕೀಯ ಜೀವನದಲ್ಲಿ ಆರೋಗ್ಯವನ್ನುಂಟುಮಾಡಲಿಕ್ಕಾಗಿಯೇ ಈ ಮಾರ್ಪಾಡುಗಳನ್ನು ಮಾಡಲಾಗಿದೆಯೆಂತ ನನಗೆ ಭರವಸೆ ಕೊಟ್ಟಿದ್ದಾರೆ. ಈ ತರದಲ್ಲಿ ವರ್ತಿಸಿದರೇನೇ ಈ ದೊಡ್ಡ ಕಾರ್ಯಗಳಲ್ಲಿ ಪ್ರಯೋಜನಕಾರಿಯಾದ ರಾಜನೀತಿಯ ದರ್ಶನವಾಗುವದು.

ನೋಟೀಸು.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೀಟಿಂಗ್ ತಾ. 16—11—29ನೇ ಶನಿವಾರ ದಿನ ಸಾಯಂಕಾಲ ೪ ಘಂಟೆಗೆ ಮಡಿಕೇರಿ ಜನಿವಾರದವರ ಸಂಘದ ಹಾಲ್ ಮೈದಾನದಲ್ಲಿ ನಡೆಯುವದು. ಎಲ್ಲಾ ಕಾಂಗ್ರೆಸ್ ಮೆಂಬರುಗಳೂ ಹಾಜರಾಗಬೇಕಾಗಿ ಕೋರುತ್ತೇನೆ

ಆರ್. ಶ್ರೀನಿವಾಸ ಮೂರ್ತಿ

ಮಡಿಕೇರಿ.

ತಾ. 8—11—24

Free! Free

6 Scent Bottles and 2 Paris Ladies Calenders Free!!

ಬಹುಮಾನ! ಬಹುಮಾನ

6 ಸುಗಂಧ ದ್ರವ್ಯದ ಸೀಸೆಗಳು (ಸೆಂಟ್ ಬಾಟ್ಲಿ)

ಜನವರಿ ಹಬ್ಬಕ್ಕಾಗಿ ಸೀಪೆಯಿಂದ ತರಿಸಿ ಇರುತ್ತೇವೆ ಆರಾಣೆ ಪೋಸ್ಟ ಸ್ಟಾಂಪುಗಳನ್ನು (Postal stamps) ಕಳುಹಿಸುವವರಿಗೆ ಆರು ಸೆಂಟ್‌ಬಾಟ್ಲಿಗಳು ಮತ್ತು 1930 ವರ್ಷದ ಪ್ಯಾರಿಸ್ ಲೇಡಿಸ್ ಕಲರ್ ಕ್ಯಾಲೆಂಡರ್ ಬಹುಮಾನವಾಗಿ ಕಳುಹಿಸುತ್ತೇವೆ.

T. ROYAL & CO
Perfumers
20 Arunachala
Modaly st
Madras. 4—3

ಟಿ. ರಾಯಲ್ ಕಂಪನಿ
20 ಅರುಣಾಚಲ ಮೊದಲಿ
ಬೀದಿ,
ಮದ್ರಾಸು.

೧೦೦ ರೂಪಾಯಿ ಬಹುಮಾನ

☞ ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ. | ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ | ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ, ಹೊಟ್ಟೆ ಶೂಲೆ, ದುಸ್ವಪ್ನ ಬೀಳುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ, ವಾಂತಿ, ಸರ್ಪಶಾಪ ಪಿಶಾಚಬಾಧೆಯಿಂದ ನರಳುವಿಕೆ, ಬಿಳುಪು ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ, ಮುಟ್ಟುದೋಷ, ಕಾಮಿಣಿ ಗ್ರಹಪೀಡೆ ದೃಷ್ಟಿದೋಷ, ಭಯದಿಂದ ಜ್ವರಪೀಡೆ, ಕ್ಷೀಣ ಹೊಂದುವಿಕೆ, ಜಪ್ಪು ಇಡುವಿಕೆ, ಮುಟಗಿಬೇನೆ ಹೊಟ್ಟೆಯೊಳಗಿನ ಪಿಳೋಜ ಮೊದಲಾದವುಗಳಿಂದ ಕಾಡುತ್ತಿರುವವು ಗರ್ಭರಕ್ಷಾಕರ ವಿಧಿಯಲ್ಲಿ, ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹದ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ಶುದ್ಧವಾದ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ, ಚಿಕ್ಕಮಕ್ಕಳಿಗೆ ಬಾಲಗ್ರಹವೂ ಹೊವತ್ತು ಪರಿಹಾರವಾಗಿ ಸುಖವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ತಕ್ಕೊಳ್ಳಿರಿ ಹೆಣ್ಣು ಮಕ್ಕಳಿಗೆ ಸಂತಾನ ಪಡೆಯಿಂದ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨—೮—೦ ಪೋಸ್ಟು ಖರ್ಚು ಬೇರೆ. ಆಗತಕ್ಕ ವಿಕಾರಂಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತ ಬರೆಯಿರಿ ☞

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52—18 ಮು. ಪೋ. ಅಥಣಿ, ಜಿ. ಬೆಳಗಾಂವ.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದಬಾಧೆ, ರಕ್ತಪಿತ್ತ, ಒಳಜ್ವರ, ಮಂದಬುದ್ಧಿ, ಕೈಕಾಲು ಬಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.—ಕ್ರಯ ಡಬ್ಬಿ 1 ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ. 7—0—0

೨. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0—10—0. 3 ಕ್ಕೆ 1—12—0.

೩. ಮಲೇರಿಯಾ ನಿವಾರಣಿ.

ದಿನ ಬಿಟ್ಟು ಬರುವಜ್ವರ, ಮಳೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಭೃಂಗಾಮಲಕ ತೈಲ.

ಅಭ್ಯಂಗಕ್ಕೆ ಅಮೋಘವಾದದ್ದು. ಕಣ್ಣುಉರಿ, ತಲೆ ಉರಿ, ತಲೆತಿರುಗುವದು, ನಿದ್ರೆಯಿಲ್ಲದೆ ಇರುವಿಕೆ, ಕೂದಲು ಉದುರುವಿಕೆ ಜ್ಞಾಪಕಶಕ್ತಿ ಕಮ್ಮಿಯಾಗಿರುವಿಕೆಗೂ ದಿವ್ಯ. ಬಾಟ್ಲಿ 1 ಕ್ಕೆ 1—4—0. 3 ಕ್ಕೆ 3—8—0.

೫. ನೇತ್ರ ಬಿಂದು.

ನೇತ್ರ ರೋಗಗಳಿಗೆ. ಬಾಟ್ಲಿ 1 ಕ್ಕೆ 0—8—0 3ಕ್ಕೆ 1-6-0

೬. ಕಸ್ತೂರಿ ಮಿಶ್ರಣ.

ದಶ ಮೂಲಾರಿಷ್ಟ ಬಾಣಂತಿಯರಿಗೆ. ಬಾಟ್ಲಿಗೆ 1—8—0 3 ಬಾಟ್ಲಿಗೆ 4—4—0.

೭. ರಕ್ತಶುದ್ಧಿ ದ್ರಾವಕ.

ರಕ್ತ ಶುದ್ಧಿ. ಬಾಟ್ಲಿ 1 ಕ್ಕೆ 1-4-0, 3 ಬಾಟ್ಲಿಗೆ 3-8-0.

೮. ಚವನ ಪ್ರಾಶ ಡಬ್ಬಿ 1 ಕ್ಕೆ 2—0—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

52—52 ರಥಬೀದಿ, ಮಂಗಳೂರು, ದ. ಕನ್ನಡ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಅವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ಸೇವಿಸುತ್ತವೆ.

ಕ್ರಯ ಬಾಟ್ಲಿ ೧ಕ್ಕೆ 0—14—0. ಟ. ಖ. 0—9—0

ಕೆ. ಟಿ. ಡೋಂಗರೆ ಕಂಪೆನಿ,

52—2 ಗಿರಿಗಾಂವ, ಮುಂಬಯಿ.

ಇನಾಂ! ಇನಾಂ!

4 ಆಣೆ ಟಪ್ಪಾಲು ಸ್ಟಾಂಪು.
ಕಳುಹಿಸಿದರೆ 372 ಪುಟಗಳುಳ್ಳ ಬಹಳ ಉಪ
ಯೋಗವಾದ ಮತ್ತು ಸುಂದರವಾದ

1930ನೇ ಇಸವಿಯ

ಡಯರಿ

ಮುಫತ್ತಾಗಿ ಕಳುಹಿಸಲ್ಪಡುವುದು. ತ್ವರೆ ಮಾಡಿರಿ

ಮದನ ಮಂಜರಿ ಫಾರ್ಮಸಿ,

1/94 ಚೀನಾ ಬಜಾರ್, ಮದ್ರಾಸ್

52—12

ಬಿಸಗೂರು ಸಹಕಾರಿ ಸಂಘ.

ತಾರೀಖು 2—11—29ರಲ್ಲು ಬಿಸಗೂರು ಸಹಕಾರಿ ಸಂಘದ ಒಂದು ಜನರಲ್ ಮೀಟಿಂಗು ಮೆ ಕೊಳ್ಳೀರ ಕ ಬ್ಬೈಯ್ಯ ಎಂ ಎಲ್ ಸಿ ಯವರ ಅಧ್ಯಕ್ಷತೆಯಲ್ಲಿ ನಡೆದು ಸದರಿ ಸಂಘದ ಟಿಪಿಡಾಡ ಹಣವನ್ನು ಇನ್ನು ಮುಂದೆ ದರಿ ಗ್ರಾಮದ ಒಂದು ಮೀಸಲು ಫಂಡಾಗಿ ಇಡುವ ತೀ ರ್ಮಾನಿಸಿ ಸದರಿ ಫಂಡಿಗೆ ಕಮಿಟಿ ಪ್ರೆಸಿಡೆಂಟರನ್ನು ಮುನಾಯ ಫಂಡನ್ನು ರಿಜಿಸ್ಟ್ರರ್ ಮಾಡುವ ಉದ್ದಿಶ್ಯ ಪತ್ರವ್ಯವಹಾರ ನಡೆಸುವ ಅಧಿಕಾರವನ್ನು ಮೆ ಪಾಲಂಗಡಗಳ ಎನ್ ಸಂಜಪ್ಪ ನವರಿಗೆ ಕೊಡಲಾಯಿತು ಫಲಾಹಾರಾದಿಗಳ ನಂತರ ಸಭೆ ವಿಸರ್ಜಿಸಲ್ಪಟ್ಟಿತು.

ಪೊನ್ನಂಪೇಟೆ ಸ್ಕೂಲ್ ಸಂಘ

ಇದೇ ತಾ 4ರಲ್ಲು ಪೊನ್ನಂಪೇಟೆ ಶಾಲೆಯಲ್ಲಿ ಶಾಲೆಯ ಅಭಿವೃದ್ಧಿಯನ್ನಾಲೋಚಿಸುವುದಕ್ಕಾಗಿ ಒಂದು ಸಾರ್ವಜನಿಕ ಸಭೆಯು ನಡೆಯಿತು ಸುಮಾರು ನೂರು ಜನರು ಹಾಜರಿದ್ದರು. ಮೆ ಯಮ ಚೆಣ್ಣಪ್ಪನವರು ಅಧ್ಯಕ್ಷರಾಗಿದ್ದರು ಶಾಲೆಯ ಪುರೋಭಿವೃದ್ಧಿಗಾಗಿ ಹಳೇವಿದ್ಯಾರ್ಥಿಗಳ ಮತ್ತು ಇತರ ಹಿತಚಿಂತಕರ ಸಂಘ ಒಂದರ ಅವಶ್ಯಕತೆಯನ್ನು ವಿವರಿಸಿ ಮೆ ಯಂ ಬಿ ಪೂವೈಯ್ಯನವರೂ ಮೆ ಕೆ. ಟಿ. ಉತ್ತಪ್ಪನವರೂ ಮಾತನಾಡಿದರು 'ಪೊನ್ನಂಪೇಟೆ ಶಾಲಾ ಸಂಘ'ವೆಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಮೆ ಸಿ. ಯಸ್ ಪೂವೈಯ್ಯನವರು ತಂದ ಠರಾವನ್ನು ಮೆ ಕೆ ಸೋಮಪ್ಪನವರು ಅನುಮೋದಿಸಿದರು ಸರ್ವ ಸಮ್ಮತದಿಂದ ಸಂಘವು ಸ್ಥಾಪಿತವಾಯಿತು. ಸದ್ಯ ಸಂಘದ ಸದಸ್ಯರ ಗಳಿಗೆ ಅನುಕೂಲತೆಗಾಗಿ ಒಂದು ವಾಚನಾಲಯವನ್ನೂ, ಒಂದು ಪುಸ್ತಕ ಭಂಡಾರವನ್ನೂ ಸ್ಥಾಪಿಸುವುದು ಕಾಲಕ್ರಮೇಣ ಶಾಲೆಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುವುದು ಈ ಸಂಘದ ಉದ್ದೇಶವಾಗಿದೆ ಶಾಲೆಯ ಹಳೇ ವಿದ್ಯಾರ್ಥಿಗಳೂ, ಮಕ್ಕಳ ಪೋಷಕರೂ ಮತ್ತು ಹಿತಚಿಂತಕರೂ ಸದಸ್ಯರುಗಳಾಗಬಹುದು. ಮತ್ತು ಮೇಲಿನ ಗುಂಪಿಗೆ ಸೇರಿದ ಪ್ರತಿಯೊಬ್ಬರೂ ಮೆಂಬರಾಗಬೇಕೆಂದು ಕೇಳಿಕೊಳ್ಳಲಾಯಿತು ಮೆ. ಸಿ ಯಸ್. ಪೂವೈಯ್ಯನವರು ಈ ಸಂಘಕ್ಕೆ ಅವರ ಮಾತಾಪಿತೃಗಳ ಜ್ಞಾಪಕಾರ್ಥವಾಗಿ ಒಂದು ಅಲ್ಮೈರವನ್ನೂ, ಅದರಲ್ಲಿ ಕೆಲವು ಪುಸ್ತಕಗಳನ್ನೂ ಕೊಡುವರೆಂದು ವಚನವನ್ನು ಕೊಟ್ಟರು ಅಲ್ಲೇ ಸುಮಾರು 70 ಜನರು ಸದಸ್ಯರುಗಳಾದರು. ಅಡ್ ಹಾಕ್ ಕಮಿಟಿಯ ಚುನಾವಣೆ ಆದನಂತರ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ಸಭೆಯು ವಿಸರ್ಜಿಸಲ್ಪಟ್ಟಿತು. ಹಾಜರಿದ್ದವ

ಕಗ್ಗಟ್ಟುನಾಡಿನವರ ಪುತ್ತರಿ ಹಬ್ಬದ ಮೀಟಿಂಗು

ಅಂಜಿಗೇರಿನಾಡು ತಕ್ಕರು ಕಿಗ್ಗಟ್ಟುನಾಡಿನವರನ್ನು ಸೇರಿಸಿ ಮಡಿಕೇರಿ ಒಳಿ ಕೋಲು ಮಂದಿನಲ್ಲು ತಾರೀಕು 1—11—29ರಲ್ಲು ಒಂದು ಸಭೆ ಸೇರಿ ಪುತ್ತರಿ ಹೋಳದನ್ನು ದೇಶದಲ್ಲಿ ಒಂದೇ ದಿನ ಇನ್ನು ಮುಂದೆ ಪ್ರತಿ ವರ್ಷವೂ ರೋಹಿಣಿ ನಕ್ಷತ್ರದಲ್ಲಿ ಆಚರಿಸಬೇಕೆಂದು ಅಭಿಪ್ರಾಯ ಪಟ್ಟು, ಅದರ ನಿಶ್ಚಯದ ದಿನವೇ ಎಲ್ಲರೂ ಕದರು ತೆಗೆಯಬೇಕೆಂತ ಮಾಡಿದ ನಿರ್ಧಾರವನ್ನು ದೇಶಸ್ಥರಿಗೆಲ್ಲರಿಗೂ ಪತ್ರಿಕೆಯ ಮೂಲಕ ಆಮಂತ್ರಿಸಲು ಹಾಜರಿದ್ದವರೊಬ್ಬರು ಬರೆಯುತ್ತಾರೆ

ಕೊಡವ ಸಭಾ ವಿಜ್ಞಾಪನೆ ಪತ್ರಿಕಾ.

ಕಳೆದ ಅಕ್ಟೋಬರು ತಾರೀಕು 27ರಲ್ಲು ವೀರರಾಜಪೇಟೆಯಲ್ಲಿ ನಡೆದ ಮೀಟಿಂಗಿನಲ್ಲು ಠರಾವು ಪಾಸಾದ ಮೇರೆ, ನಮ್ಮನ್ನು ಆಳುವ ಚಕ್ರವರ್ತಿ ಸಾರ್ವಭೌಮರ ಹಿಂದೂ ದೇಶದ ಪ್ರತಿನಿಧಿ ವೈಸರಾಯ ಮಹಾ ಪ್ರಭುಗಳು ಇದೇ ನವಂಬರು ತಾರೀಕು 28ನೇ ದಿನ ಫ್ರೇಜರ್‌ಪೇಟೆಗಾಗಿ ಮಡಿಕೇರಿಗೆ ದಯಮಾಡಿಸಿ, ಅಲ್ಲಿ 29ನೇ ಬೆಳಗ್ಗೆ ದರಬಾರುಗಳು ನಡೆಸಿ ನಾಲಕ್ಕಾರು ಸಂಘಗಳ ಬಿನ್ನ ಪತ್ರಿಕೆಗಳನ್ನು ಕೈಕೊಂಡು ತಕ್ಕ ಜವಾಬು ಕೊಟ್ಟು ಮಧ್ಯಾಹ್ನ ಮಡಿಕೇರಿ ಬಿಟ್ಟು ಸಿದ್ದಾಪುರ ಅಮ್ಮತ್ತಿ ವೀರರಾಜಪೇಟೆ ಪೆರಂಬಾಡಿಗಾಗಿ ಕಣ್ಣನೂರಿನ ಕಡೆ ದಯಮಾಡಿಸುವರು ನಮ್ಮ ಈ ಚಿಕ್ಕ ದೇಶವು ಬ್ರಿಟಿಷರ ಆಡಳಿತಕ್ಕೆ ಬಿಟ್ಟು ಒಂದು ಶತಮಾನವಾಗುವುದಕ್ಕಾದರೂ ನಮ್ಮ ಚಕ್ರವರ್ತಿ ಸಾರ್ವಭೌಮರ ಪ್ರತಿನಿಧಿಗಳು ನಮ್ಮ ದೇಶಕ್ಕೆ ದಯಮಾಡಿಸಿದ್ದು ಇದೇ ಮೊದಲೆಂದು ಪ್ರತ್ಯೇಕ ಹೇಳಬೇಕಾಗಿಲ್ಲ ಈ ಸಂದರ್ಭದಲ್ಲಿ ಕೇವಲ ರಾಜ ಭಕ್ತರಾದ ನಮ್ಮ ಭಕ್ತಿಯನ್ನು ತೋರಿಸ ಪನು ಅತ್ಯಂತ ಯುಕ್ತವೂ ಮತ್ತು ಪ್ರಯೋಜನಕರವೂ ಆಗಿರುವದರಿಂದ, ಹದಿನೆಂಟು ವರ್ಷಕ್ಕೆ ಮೀರಿದ ಕೊಡವ ಮಹಾ ಜನರೆಲ್ಲಾ ಅವರು ಆ ಪರ್ಯಟನ ಸ್ಥಳಗಳಲ್ಲಿ ತೋರಣ ಕಟ್ಟುವುದಲ್ಲದೆ ನಮ್ಮ ದೇಶದ ಪದ್ಧತಿ ಮೇರೆ ಸವಸ್ತ್ರ ಉಡಿಗೆ ತೊಟ್ಟು ಸರ್ವ ಆಯುಧಗಳನ್ನು ಪೂರ್ತಿ ಧರಿಸಿಕೊಂಡು ಅನುಕೂಲವಾಗುವ ನೋಟ್ಟಂಡ ಸ್ಥಳಗಳಿಗೆ ಹೊತ್ತಿಗೆ ಮುಂಚಿತವಾಗಿ ಬಂದ ವೈಸರಾಯ ಪ್ರಭುಗಳು ದಾಟುವ ಸಮಯಕ್ಕಿಂತ ಮುಂಚಿತವಾಗಿ ದಯಮಾಡಿಸಬೇಕಾಗಿ ಸರ್ವರನ್ನೂ ಅತಿ ವಿನಯದಿಂದ ಪುನಃ ಪೂರ್ವಕವಾಗಿ ಕೋರಿಕೊಳ್ಳುತ್ತೇನೆ

(1) ಉಡುಪು—ಪಾಸಿಮುಂಡೆತುಣಿ (ಸಾಧ್ಯವಾದ ಮಟ್ಟಿಗೆ) (2) ಕುಪ್ಪಸ, ದಟ್ಟಿ (3) ಪೀಚೆಕತ್ತಿ (4) ಒಡಿಕತ್ತಿ (5) ಕೋವಿ

ಕೊಡವ ಸಭಾ ಆಫೀಸು, ಮಡಿಕೇರಿ — ಕೊಂಗೆಟ್ಟಿರ ಅಪ್ಪಯ್ಯ, ಸೆಕ್ರೆಟರಿ

(ಪ್ರಕಟನೆ)

ಕೌನ್ಸಿಲು ಪ್ರಶ್ನೆಗಳು.

XVII (1) ಮಡಿಕೇರಿ ಹುಡುಗಿಯರ ಕಾನ್ವೆಂಟಿನ ಬೋರ್ಡಿಂಗಿನಲ್ಲಿ ಕ್ರೈಸ್ತ ಹುಡುಗಿಯರು ಎಷ್ಟು ಮತ್ತು ಇತರ ಹಿಂದು ಹುಡುಗಿಯರು ಎಷ್ಟು?

(2) ಇದು ಕ್ರಿಶ್ಚಿಯನ್ ಮದರ್ಸ್ ಮತ್ತು ಸಿಸ್ಟರ್ಸ್ ರವರಿಂದ ನಡೆಸಲ್ಪಡುತ್ತಿದೆಯೇ?

(3) ಕೊಡಗರಲ್ಲದ ಇತರ ಹಿಂದೂ ಹುಡುಗಿಯರನ್ನು ಕಾನ್ವೆಂಟ್ ಬೋರ್ಡಿಂಗಿಗೆ ಸೇರಿಸಲು ಆಕ್ಷೇಪಣೆಯಿದೆಯೋ?

(4) ಇದ್ದರೆ ಕಾರಣವೇನು?

(5) ಸರಕಾರದಿಂದ ಈ ಬೋರ್ಡಿಂಗಿಗೂ ಮತ್ತು ಶಾಲೆಗೂ ವರ್ಷಂಪ್ರತಿ ಸಿಕ್ಕುವ ಗ್ರ್ಯಾಂಟ್ ಎಷ್ಟು?

XVIII (1) ಪಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಇಲಾಖೆಯು ಎಲ್ಲಾ ಖರ್ಚಿಗಾಗಿ 1926 – 1927 – 1928ರಲ್ಲಿ ತಯಾರ್ಮಾಡಿದ ಬಜೆಟ್ ಹಣವೆಷ್ಟು?

(2) ಈ ಹಣದಲ್ಲಿ ಖರ್ಚು ಆಗದ ಪ್ರತಿ ವರ್ಷವೂ ಉಳುವುದಾಗುತ್ತಿದ್ದ ಹಣವೆಷ್ಟು?

(3) ಪಾರೆಸ್ಟ್ ಮೆಂಬರು ಪ್ರತಿ ವರ್ಷವೂ, ಆವಶ್ಯವಿರುವ ಹಣಕ್ಕಿಂತ ಹೆಚ್ಚು ಬಜೆಟ್ ಮಾಡುತ್ತಿರುವುದು ನಿಜವೋ?

(4) ಹಾಗಾದರೆ ಅಂಥಾ ಪದ್ಧತಿಯನ್ನು ಸರಕಾರದವರು ದಯಮಾಡಿ ಬಿಟ್ಟು ಬಿಡುವರೋ?

XIX (1) ಮೂವತ್ತೊಕ್ಲು ಟ್ರಾವಲ್ವೇ ಸಾಮಾನುಗಳನ್ನು ಜಮಾಯಿಸಿ ಸ್ಟೋರ್ ಮಾಡಿದ್ದಾರೋ?

(2) ಹಾಗಾದರೆ ಎಲ್ಲಿ ಸ್ಟೋರ್ ಮಾಡಿದ್ದಾರೆ?

(3) ಮಾಡದಿದ್ದರೆ ಕಾರಣವೇನು?

(4) ಸರಕಾರದವರು ಈ ಸಾಮಾನುಗಳನ್ನು ಹರಾಜು ಮಾಡಲು ಏರ್ಪಾಡು ಮಾಡಿದ್ದಾರೋ?

XX (1) ವ್ಯಾರಿ ಕಂಪೆನಿಯವರು ಹುಣುಸೂರು ಡಿಪೋದಿಂದ ತೇಗದ ತೊಲೆಗಳನ್ನು ಕೊಂಡುಕೊಳ್ಳುವ ಕಂಟ್ರ್ಯಾಕ್ಟರುಗಳೋ?

( ) ಹಾಗಾದರೆ ಕಂಟ್ರಾಕ್ಟಿನ ಶರತ್ತೇನು?

(3) ಶರತಿನ ನಕಲೊಂದನ್ನು ದಯಮಾಡಿ ಮೇಜಿನ ಮೇಲೆ ಇಡುವಿರೋ?

(4) ತೊಲೆಗಳನ್ನು ಹರಾಜು ಮಾಡಲಿಕ್ಕೆ ಟೆಂಡರುಗಳನ್ನು ಕಳೆದ ಮೂರು ವರ್ಷಗಳಿಂದ ಕೇಳದಿರೊ?

(5) ಹಾಗಾದರೆ ಟೆಂಡರುಗಳೆಷ್ಟು ಬಂತು?

(6) ಹಾಗೆ ಇಲ್ಲದಿದ್ದರೆ ಟೆಂಡರುಗಳನ್ನು ಬರಮಾಡಿಸದಕ್ಕೆ ಕಾರಣವೇನು?

XXI. (1) ಎರಡು ಎಕ್ಸ್‌ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರುಗಳನ್ನು ಕೊಡಗಿನಲ್ಲೇ ಇಟ್ಟುಕೊಳ್ಳಬೇಕೆಂದು ಸರಕಾರದ ಅಭಿಲಾಷೆಯೋ?

(2) ಸರ್ಕಾರದವರು ಮದ್ರಾಸು ಸರ್ಕಾರಕ್ಕೆ ಬರೆದು ಒಬ್ಬರನ್ನು ಮದ್ರಾಸು ಸರ್ಕಾರಕ್ಕೆ ಕಳುಹಿಸಿ ಈ ಸದವಿಯ ಲೊಂದನ್ನು ... ಮಾಡುವರೋ?

XXII (1) ಸರ್ಕಾರದವರು ಮದ್ಯ ನಿಷೇಧದ ವಿಷಯ ಮದ್ರಾಸು ಸರ್ಕಾರದವರ, ತತ್ಸಂಬಂಧ ಸಿದ್ಧಾಂತದ ನಿಬಂಧನೆಯನ್ನು ನೋಡಿರುವರೋ?

(2) ಹಾಗಾದರೆ ಇಲ್ಲಿಯೂ ಅಂಥಾ ಅಭಿಪ್ರಾಯಗಳನ್ನು, ಮದ್ಯ ನಿಷೇಧಕ್ಕೆ ಉತ್ತೇಜನ ಕೊಡಲಿಕ್ಕಾಗಿ ಮಾಡುವರೋ?

XXIII. (1) ವೈದ್ಯರು ಬೆಂಗಳೂರಿಗೆ ಎಕ್ಸ್‌ರೇ ಮೂಲಕ ಪರೀಕ್ಷೆ ಮಾಡಿಕೊಳ್ಳಲು ಅನೇಕ ರೋಗಿಗಳು ನಮ್ಮ ದೇಶದಿಂದ ಹೋಗುತ್ತಾ ಇರುವುದು ನಮ್ಮ ಸರ್ಕಾರದ ಗೋಚರಕ್ಕೆ ಬಂದಿದೆಯೋ?

(2) ಮಡಿಕೇರಿಯಲ್ಲಿದ್ದ ಎಕ್ಸ್‌ರೇಯನ್ನು ಉಪಯೋಗ ಮಾಡದೆ ಹಾಗಿದ್ದು ನಿಜವೋ?

(3) ಅದನ್ನು ಯಾತಕ್ಕಾಗಿ ಮಾರಿದ್ದು?

(4) ಅದಕ್ಕೆ ಕ್ರಯವೆಷ್ಟು?

(5) ಮಡಿಕೇರಿ ಆಸ್ಪತ್ರೆಯ ಉಪಯೋಗಕ್ಕೆ ಸರ್ಕಾರದವರು ದಯಮಾಡಿ ಒಂದನ್ನು ತರಿಸುವರೋ?

XXIV (1) ಕನಿಪಾರಸಂತೆ ಹೊಳೆಯಲ್ಲಿ ಇರಿಗೇಶನ್ ಏನ್ನದಲ್ಲಿ ಸರ್ಕಾರಕ್ಕೆ ಈ ವರೆಗೆ ಆದ ಖರ್ಚೆಷ್ಟು?

(2) ಒಟ್ಟು ಕೊಟ್ಟ ಟಕಾವಿ ಹಣವೆಷ್ಟು?

(3) ಸಾಗುವಳಿ ಮಾಡಿದ ಜಾಗದಲ್ಲಿ ವರ್ಷಕ್ಕೆ ಸರಾಸರಿ ಕಂದಾಯವೆಷ್ಟು ವಸೂಲಾಗಬಹುದು?

(4) ಈ ಕೆಲಸವು ಲಾಭಪ್ರದವಾಗಿದೆಯೋ?

(5) ಹಾಗಾದರೆ ಪುನಹ ಹೆಚ್ಚಿನ ಜಾಗವನ್ನು ವೃದ್ಧಿಗೆ ತರುವುದು ಸರ್ಕಾರದವರ ಅಭಿಲಾಷೆಯೋ?

(6) ಅಲ್ಲಿಯ ಗೃಹಸ್ಥರಿಗೆ ಕುಡಿಯಲಿಕ್ಕೆ ಒಳ್ಳೆಯ ನೀರು ದೊರಕುತ್ತದೋ?

ನೋಟೀಸು.

ದಕ್ಷಿಣ ಕೊಡಗು ತಾಲೋಕು ಪೊನ್ನಂಪೇಟೆನಾಡು ಕಾನೂರು ಗ್ರಾಮದ ಮಲಚಿರ ಪೌತಿ ಸುಬ್ಬಯ್ಯನವರ ಮಗ ಕಾಳಪ್ಪನು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಗ್ರಾಮದಲ್ಲು ನನ್ನ ತಂದೆ ಪೌತಿ ಸುಬ್ಬಯ್ಯನವರು ಮತ್ತು ಇತರ ಸಹೋದರ ಪೌತಿ ನಾಣೈಯ್ಯನವರು ಜಂಟಿಯಾಗಿ ಸರ್ವೆ ನಂಬರ್ 31ನೇ ಬೆಂಬವಂಡ ಮೊಟ್ಟಗಂಡಿ ಆಕಡೆ ಪಟ್ಟೆವಂಬ 10·9 ಏಕ್ರದ ಸುಮಾರು 39ಂ ಒಟ್ಟು ಭೂಮಿಯನ್ನು ಸ್ವಯಾರ್ಜಿತ ಸಂಪಾದನೆ ಮಾಡಿದ್ದಾಗಿದೆ ಸದರಿ ಭೂಮಿಯ ಜಮಾಬಂದಿ ಈಗ ಪೌತಿ ನಾಣೈಯ್ಯನವರ ಮಗ ಕುಟ್ಟಪ್ಪನ ಪೌತಿ ಆತನ ಹೆಂಡತಿ ಪೂವಮ್ಮನ ಮತ್ತು ಕಾಳಪ್ಪನಾದ ನನ್ನ ಹೆಸರಿನಲ್ಲು ಜಂಟಿಯಾಗಿ ಜಮಾಬಂದಿ ನಡೆದು ಬರುತ್ತಾ ಇದೆ ಈಗ ಸದರಿ ಪೂವಮ್ಮನು ನನಗೆ ದುರ್ಬೋಧನೆ ಕೇಳಿಕೊಂಡು ನನಗೆ ಸ್ವಾರ್ಜಿತ ಸದರಿ ಸೊತ್ತನ್ನು ಪರಭಾರೆ ಮಾಡುವದಾಗಿ ವರ್ತಮಾನ ತಿಳಿದು ಬರುತ್ತೆ. ಆದರೆ ಸದರಿ ಸೊತ್ತನ್ನು ಅಡವು, ಗಿರವಿ, ಭೋಗ್ಯ ಕ್ರಯನಾದೆ ಏನ್ನೆಕೆಯಾಗಿ ಪರಾಧೀನ ಮಾಡುವ ಹಕ್ಕು ಏನ್ನು ಪೂವಮ್ಮನಿಗೆ ಇರುವದಿಲ್ಲ ಇವರ ಮೇಲೆ ಯಾರಾದರೂ ಸದರಿ ಸೊತ್ತನ್ನು ಅವಳಿಂದ ಪಡೆದುಕೊಂಡಲ್ಲಿ ಅದು ಏನೂ ಊರ್ಜಿತವಾಗಲಾರದು ಮತ್ತು ಅದರಿಂದ ನನಗೆ ಉಂಟಾಗತಕ್ಕ ಸರ್ವ ನಷ್ಟಕಷ್ಟಕ್ಕೂ ಅವರೇ ಜವಾಬುದಾರರಾಗತಕ್ಕದೆಂದು ಈ ಮೂಲಕ ಸರ್ವರಿಗೂ ತಿಳಿಸೋಣಾಗಿದೆ.

"MAJESTIC VOICE" PORTABLE GRAMAPHONE

ಮೊದಲಿನ ಕ್ರಯ ರೂ. ೨೫-೦-೦. ಈಗಿನ ಕ್ರಯ ರೂ. ೧೨-೦-೦.

"ಮೆಜಿಸ್ಟಿಕ್ ವಾಯ್ಸ್" ಗ್ರಾಮಫೋನ್

(ಎಂಬ ಹಾಡುಗಾರಿಕೆಯ ಯಂತ್ರ)

ಈ ಯಂತ್ರಗಳು ವಿಲಾಯಿತಿಯಲ್ಲಿ ತಯಾರಾದವು ... ಕ್ರಮದಲ್ಲಿ ಸುಲಭವಾಗಿರುವಂತೆಯೂ ಬಹು ಸಾವಧಾನದಿಂದ ಈ ಯಂತ್ರವನ್ನು ತಯಾರಿಸಿದೆ ಇಂಗ್ಲಿಷ ... ಹಿಂದೂಸ್ಥಾನಿ ಮುಂತಾದ ಭಾಷೆಗಳಲ್ಲಿ (ರಿಕಾರ್ಡು) ಪದಗಳನ್ನು ... ಶಾಲೆ ಮುಂತಾದ ... ದಿವಸಗಳಲ್ಲಿ ಉಪಯೋಗಿಸಲು ಬಹು ... ಹಾರ್ನ (Horn) ಎಂಬ ಕೊಳವೆ ಇದೆ ... (Fast and Slow Regulator) ... ಗ್ರಾಮಫೋನ್ ... ಒಂದು ರಿಕಾರ್ಡ್, ಸೂಜಿ ಪೆಟ್ಟಿಗೆ ಮತ್ತು ಯಂತ್ರ ಸಹಿತ ಕ್ರಯ ರೂ ೧೨ ಪ್ರತ್ಯೇಕ ... ಟಪ್ಪಾಲು ಖರ್ಚು ಇಲ್ಲ (Free)



... ೨-೦-೨.

American Gramaphone Co,
Post Box No 538,
Park Town, Madras

4—3

TELLICHERRY TILES COMPANY, LIMITED.

ತಲಚೇರಿ ಹಂಚುಗಳ ಕಂಪೆನಿ ಲಿಮಿಟೆಡ್.

(1913ರ ಇಂಡಿಯನ್ ಕಂಪೆನಿಗಳ VII ಆಕ್ಟಿನ ಮೇರೆ ಸ್ಥಾಪಿತವಾದದ್ದು)

ಭಂಡವಾಳ: (ಎರಡು ಲಕ್ಷ) ರೂ. ೨,೦೦,೦೦೦.

೨೫ ರೂಪಾಯಿಯ ೮೦೦೦ ಸಾಧಾರಣ ಪಾಲುಗಳಾಗಿ ಹಂಚಲ್ಪಟ್ಟಿವೆ.

ಈಗ ಹಂಚುವಂಥಾದ್ದು—೨೫ ರೂಪಾಯಿಯ ೪೦೦೦ ಪಾಲುಗಳು—ಈ ಕೆಳಗಿನ ಮೇರೆ ಸಲ್ಲಿ ಮಾಡತಕ್ಕದ್ದು.

ಅಪ್ಲಿಕೇಶನ್ ಕೊಡುವಾಗ ಪಾಲು ಒಂದರ ೧೦ ರೂ.

ಹಂಚುವಾಗ ,, ೫ ,,

Dirctors ಡೈರೆಕ್ಟರುಗಳು.

1 ಮಿ ಕೆ ಟಿ ಚಾತುಕುಟ್ಟಿ ನಂಬಿಯಾರ್, ಲ್ಯಾಂಡ್ ಲಾಡ್, ಕಲಿಯಾಟ, ಇರಿಕೂರ ಪೋಸ್ಟ್, ಉ ಮಲಬಾರ್.

2 ,, ಎ ಕೆ ಕುಞ್ಞಿಮಾಯನ್ ಹಾಜಿ, ಮರ್ಚೆಂಟ್ ಮತ್ತು ಲ್ಯಾಂಡ್ ಲಾರ್ಡ್, ವೈಸ್ ಪ್ರೆಸಿಡೆಂಟ್ ಚಿರಕಲ್ ತಾಲೂಕು ಬೋರ್ಡ್ ಡೈರೆಕ್ಟರ್, ದಿ ಕೂಹಿನೂರು ಸಾ ಮಿಲ್ ಕೊ, ಲಿಮಿಟೆಡ್, ಬಲಿಯಾಪಟ್ಟಂ ಪೋಸ್ಟ್.

3 ಸಿ ಸಾಮುವೇಲ್ ಆರೋನ್, ಪಾರ್ಟ್ನರ್, ಮೆಸರ್ಸ್ ಸಿ ಆರೋನ್ ಅಂಡ್ ಸನ್ಸ್, ಡೈರೆಕ್ಟರ್, ಮಲಬಾರ್ ಇಂಡಸ್ಟ್ರೀಸ್ ಲಿಮಿಟೆಡ್, ಕಣ್ಣನೂರು, ಪಾಪ್ಪಿನಿಸರಿ ಪೋಸ್ಟ್, ಉ ಮಲಬಾರ್

4 ,, ಕೆ ಕೆ ಸುಬ್ಬರಾವ್, ಮರ್ಚೆಂಟ್, ಚೇರ್‌ಮ್ಯಾನ್, ಮುನ್ಸಿಪಲ್ ಕೌನ್ಸಿಲ್, ಕಣ್ಣನೂರು

Managing Agents ಮೇನೆಜಿಂಗ್ ಏಜೆಂಟರು.

ಮೆಸರ್ಸ್ ಸಿ ಆರೋನ್ ಅಂಡ್ ಸನ್ಸ್, ಪಾಪ್ಪಿನಿಸರಿ, ಉ ಮಲಬಾರ್

Banerks ಬ್ಯಾಂಕುಗಳು.

ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯ ತಲಚೇರಿ

ಕಣ್ಣನೂರು ಬ್ಯಾಂಕ್, ಲಿಮಿಟೆಡ್, ಕಣ್ಣನೂರು

ಪ್ರಾಸ್‌ಪೆಕ್ಟಸಿಗೆ ಮೇನೆಜಿಂಗ್ ಏಜೆಂಟರುಗಳಿಗೆ ಬರಯಿರಿ.

4—3

ಅಮ್ಮತ್ತಿ ನಾಡಿನವರ ಮೀಟಿಂಗು.

ತಾರೀಕು ೭—11—29ರಲ್ಲು ಅಮ್ಮತ್ತಿನಾಡಿನ ಅಂ. ಗ್ರಾಮಸ್ಥರು ಸ ಮಾರು 100 ಜನರಿಗೆ ಮೇಲ್ಪಟ್ಟು ಅಮ್ಮತ್ತಿ ಮೈದಾನದಲ್ಲು ನಾಡುತಕ್ಕರು ಮೆ. ಕೊಲ್ಲಿರ ಮುತ್ತಣ್ಣನವರ ಅಧ್ಯಕ್ಷತೆಯಲ್ಲು ಸೇರಿ ಮಾಡಿದ ಮೀಟಿಂಗಿನ ಪ್ರೋಸಿಡಿಂಗ್ಸ್

(1) ಈ ದೇಶದಲ್ಲಿ ಹುತ್ತರಿ ಹಬ್ಬವನ್ನು ಅರಮನೆ ಪೊಳುದು ಮತ್ತು ನಾಡುಪೊಳುದು ಎಂದು ಆಚರಿಸುವವರ ಬದಲು ಅರಮನೆ ಪೊಳುದು ದಿವಸವೇ ನಾಡುಪೊಳುದನ್ನೂ ಸಹ ಆಚರಿಸಬೇಕಾಗಿ ಸರ್ವಸಮ್ಮತದಿಂದ ತೀರ್ಮಾನವಾಯಿತು

(2) ಕೊಡಗು ಸಭೆ ಮತ್ತು ನವೀನ ಜಮೀನುದಾರರ ಸಂಘದ ವಿಷಯ ದೀರ್ಘ ಚರ್ಚೆ ನಡೆದು 17 ವರ್ಷಗಳಿಂದ ದೇಶದ ರೈತರ ಅಭಿವೃದ್ಧಿಗಾಗಿ ಹೋರಾಡುತ್ತಿರುವ ಜಮೀನುದಾರರ ಸಂಘ ಒಂದೇ ಸಾಕೆಂಬದಾಗಿಯೂ, ಆ ಜಮೀನ್‌ದಾರರ ಸಂಘದಲ್ಲಿ ನ್ಯೂನತೆ ಇದ್ದ ಪಕ್ಷ ಹೆಚ್ಚು ಜನ ಮೆಂಬರುಗಳು ಸೇರಿ ಅದನ್ನು ಸರಿಪಡಿಸಬಹುದೆಂತಲೂ, ಈ ಕೊಡಗು ಸಭೆಯು ಅವಶ್ಯವಿಲ್ಲವೆಂತಲೂ ಸರ್ವಸಮ್ಮತದಿಂದ ತೀರ್ಮಾನವಾಯಿತು.

(3) ಇಲ್ಲಿ ಸೇರಿದ ಕೆಲವು ಮೆಂಬರುಗಳು ತಮ್ಮನ್ನು ಈ ನಾಡಿನ ಒಬ್ಬಿಬ್ಬರು ಜಮೀನ್‌ದಾರರ ಸಂಘದ ಪರ ಎಂದು ಯಾವದೋ ಒಂದು ಪುಸ್ತಕಕ್ಕೆ ಗುಪ್ತವಾಗಿ ದಸ್ಕತ್ತು ತೆಗೆದುಕೊಂಡರೆಂದು ಪುಕಾರು ಮಾಡಿದಕ್ಕೆ, ಈ ನಾಡಿನವರು ವಿಸ್ಮಯಗೊಂಡು, ಇನ್ನು ಮುಂದೆ ಇಂಥಾದ್ದು ನಡಿಯದಂತೆಯೂ, ಈಗ ತೆಗೆದುಕೊಂಡ ಸೈನು ರದ್ದಾಗಿರಬೇಕೆಂತಲೂ ತೀರ್ಮಾನವಾಯಿತು

(4) ಈ ನಾಡಿಗೆ ಒಂದು ವಿದ್ಯಾಭಿವೃದ್ಧಿ ಫಂಡನ್ನು ಜಾತಿ, ಮತ ಭೇದವಿಲ್ಲದೆ ಸರ್ವ ಕುಲದವರಿಗೆ ಉಪಯೋಗವಾಗುವಂತೆ ಏರ್ಪಡಿಸಬೇಕೆಂಬದಾಗಿ ತೀರ್ಮಾನಿಸಿ ಇದಕ್ಕೆ ಹತ್ತು ಜನ ಮೆಂಬರುಗಳ ಒಂದು ಕಮಿಟಿಯನ್ನು ಏರ್ಪಡಿಸಲಾಯಿತು.

ಕೊಲ್ಲಿರ ಮುತ್ತಣ್ಣ,
(ನಾಡುತಕ್ಕರು)

ಬೀಜದ ಹೋರಿಗಳು.

ನಡಿಕೇರಿ ಮತ್ತು ಅಮ್ಮತ್ತಿ ಚಾಮವಾರುಗಳ ಆಸ್ಪತ್ರೆಗಳಲ್ಲಿ ಸರಕಾರದ ಬೀಜದ ಹೋರಿಗಳನ್ನು ಇಟ್ಟಿರುತ್ತಾರೆ ಈ ಹೋರಿಗಳು ಉತ್ತಮ ತರದ ಸಿಂಧೂ ದೇಶದ ಜಾತಿಯವು ಈ ಹೋರಿಗಳು ಹೆಚ್ಚು ಹಾಲಿನ ಜಾತಿಯವು ಮಾಮೂಲಕ್ಕಾಗಿ, ಸಾಧಾರಣ ಗಾಡಿ ಕೆಲಸಕ್ಕೂ ಸಹ ಆಗುತ್ತವೆ ಈ ದಿವಸ ಇದ್ದ ಜಾತಿಯ ಹೋರಿಗಳಿಂದ ಶಳ ಇಳಿಸಿ ನಮ್ಮ ಹಸುಗಳಲ್ಲಿ ಹಾಲನ್ನು ಹೆಚ್ಚಿಸುವುದೇ ಸರಕಾರದ ಉದ್ದೇಶ್ಯವಾಗಿದೆ ಆಸ್ಪತ್ರೆಯ ಹಾಗು ನ್ಯಾಯವಾದ ಅದ್ರಿಗೆ ಒಂದಾಗ ಈ ಆಸ್ಪತ್ರೆಗೆ ಕಳುಹಿಸಿ ಮೇಲಿನ ಗೂಳಿಗೆ ಕಟ್ಟಿಸಿ ಎಲ್ಲರೂ ಪ್ರಯೋಜನ ಹೊಂದಿಕೊಳ್ಳುವರಾಗಿ ನಿರೀಕ್ಷಿಸಲ್ಪಟ್ಟಿದೆ.

ಕೆ. ಯನ್. ಸುಬ್ಬಯ್ಯ.
(ಡೆಪ್ಟಿ ಡೈರೆಕ್ಟರು.)

ಕುರುಳಿ ಅಂಬಲದಲ್ಲಿ ಹರಿಕಥೆ

ಕುರುಳಿ ಅಂಬಲದ ವಾಚನಾಲಯದ ಪ್ರೋತ್ಸಾಹದಿಂದ ತಾ 4—11—29ರ ಸಾಯಂಕಾಲ ಕುರುಳಿ ಅಂಬಲ ಶಾಲೆಯಲ್ಲಿ ಮ ರಾ ಶ್ರಿ ಎ ಕೆ ಸುಬ್ಬಯ್ಯನವರು ಕಬೀರದಾಸ ಎಂಬ ಹರಿಕಥೆಯನ್ನು ಬಹಳ ಸ್ವಾರಸ್ಯವಾಗಿ ಮಾಡಿ ನೆರೆದ ಸಭೆಯವರಿಗೆ ಕರ್ಣಾನಂದವನ್ನುಂಟು ಮಾಡಿದರು. ನೆರೆ ಗ್ರಾಮದವರೂ, ಗಂಡಸರೂ, ಹೆಂಗಸರೂ, ಮಕ್ಕಳು ಶಾಲಾ ವಿದ್ಯಾರ್ಥಿಗಳೂ ಹಾಜರಿದ್ದು ಆನಂದಗೊಂಡರು. ಹರಿಕಥೆ ಪೂರೈಸಿ ದೇವತಾ ಪ್ರಾರ್ಥನೆಯಾದ ನಂತರ ಪ್ರಸಾದವನ್ನು ಹಂಚಲಾಯಿತು ಮ ರಾ ಶ್ರಿ ಸಿ ಕೆ ಗಣಪತಿ, ಯವರು ಶಿಶು ಪೋಷಣ, ವ್ಯಾಯಾಮ, ಆರೋಗ್ಯ ವಗೈರೆಗಳನ್ನು ಕುರಿತು ಭಾಷಣ ಮಾಡಿದರು. ನಂತರ ಸಭೆಯು ವಿಸರ್ಜನೆಯಾಯಿತು

ಸಕ್ರೆಟರಿ

MUNICIPAL OFFICE
MERCARA, DATED 30TH OCTOBER 1929

TENDER NOTICE.

Tenders are invited for the conveyance of Municipal sweepings and night soil by means of Motor Lorry for a period of one year from 1st April 1930 to 31st March 1931 Intending tenderers are requested to quote the monthly charges required for this work and submit the same by the end of November 1929 in a sealed cover to the President

Sd/—I Deviyya,
PRESIDENT.

1—1

ಮಡಿಕೇರಿ-ಭಾಗಮಂಡ್ಲ-ಸುಂಟಿಕೊಪ್ಪ ನಾಡುಗಳ ಜಮ್ಮ ಹಿಡುವಳಿದಾರರುಗಳಲ್ಲಿ ವಿನಂತಿ.

ಮಹಾಶಯರೇ,

ಬರುವ ನವಂಬರು ತಾ 15ನೇ ಶುಕ್ರವಾರ ನಡೆಯುವ ಕೌನ್ಸಿಲು ಉಪ ಚುನಾವಣೆಗೆ ಮಡಿಕೇರಿ ಭಾಗಮಂಡ್ಲ-ಸುಂಟಿಕೊಪ್ಪ ನಾಡುಗಳ ಜಮ್ಮ ಓಟರುಗಳ ಪರವಾಗಿ ನಾನೊಬ್ಬ ಉಮೇದುವಾರನಾಗಿರು ನಿಶ್ಚೈಸಿರುತ್ತೇನೆ ತಾವೆಲ್ಲರೂ ತಮ್ಮ ಓಟುಗಳನ್ನು ನನಗೆ ಕೊಟ್ಟು ನನ್ನ ಚುನಾವಣೆಗೆ ಸಹಾಯ ಮಾಡಬೇಕಾಗಿ ಕೋರುತ್ತೇನೆ

ಮಡಿಕೇರಿ, ತಮ್ಮ ವಿಧೇಯ,
17—10—29 [4—4] ಐಚೆಟ್ಟಿರ ಸಿ. ಸುಬ್ಬಯ್ಯ.

Wanted.

ALL INDIA CROP INSURANCE & GENERAL DEVELOPMENTS LTD
Mahabub Mahal Royapettah
Head Office — MADRAS

AUTHORISED CAPITAL — SIX CRORES
PAID UP CAPITAL — [illegible]

Taluq Banking agents „ Deputy Superintendents	80—8—10
Savings Bank depot clerks	25/—
Village agents	20—2—4

Applicants should be in a position to subscribe for shares of 500/—200/—150/— of Company respectively after selection and execute a fidelity bond as per instructions from Head Office. They must clearly state their qualifications For particulars apply to the Head Office
THE DEPUTY SUPERINTENDENT,
HAMPANKATTA
52—6 MANGALORE

ಮುಂಚಿನ ಬೆಲೆ ರೂ 20 ಈಗಿನ ಬೆಲೆ ರೂ

ಈ ಯಂತ್ರ ಸಹಾಯದಿಂದ ದಿನ 1ಕ್ಕೆ ರೂ 4, ಸಂಪಾದಿಸಿಕೊಳ್ಳಬಹುದು

ಅಮೆರಿಕನ್ ಬಯೊಸ್ಕೋಪ್ ಮಿಷನ್

(ನಕ್ಷೆಯಲ್ಲಿ ಕಾಣಿಸಿರುವ ಪ್ರಕಾರವೇ ಇರುವುದು



ಮಹಾಶಯರೇ! ಈ ಅಮೆರಿಕನ್ ಬಯೊಸ್ಕೋಪ್ ಯಂತ್ರ ದೊಡ್ಡ ಬಯೊಸ್ಕೋಪುಗಳಿಗೆ ಕುವ ಪಿಂಟೋಗ್ರಾಫನ್ನು ತೆಗೆದುಕೊಂಡು ನೋಡುತ್ತಾ, ಒಂದು ಬಯೊಸ್ಕೋಪುಗಳಲ್ಲಿ ಕಾಣುವ ನಕ್ಷೆಯ ಹಾಗೆ ಹಲವು ವಿಧ ನಕ್ಷೆಗಳು, ನಾಟ್ಯಗಳು ಮೋಟರ್‌ಗಳು, ಬಹು ಹೋಗಿ ಬರುವಗಳು ಹೋಗುವುದು, ಲೇಡಿಗಳು ವಿನೋದವಾಗಿ ಆಡುವುದು ಮುಂತಾದ್ದೆಲ್ಲಾ ದೊಡ್ಡ ಬಯೊಸ್ಕೋಪಿನಲ್ಲಿ ಕಾಣಿಸುವ ಹಾಗೆಯೇ ಈ ಮಿಷನಿನಲ್ಲಿ ನೋಡಬಹುದು ಈ ಮಿಷನಿಗೆ ಒಂದು ಲೆನ್ಸ್, ಉರಿಯುವ ಎಣ್ಣೆ ದೀಪ ಮತ್ತು ಒಂದು ಗಜ ಫಿಲಿಂ ಇನಾಮಾಗಿ ಕೊಡಲ್ಪಡುತ್ತದೆ ಇದರ ಬೆಲೆ ರೂ 3—0—0 ಮಾತ್ರವೇ ಕ್ರೀಕವಾಗಿ ಫಿಲಿಮನ್ನು ಜೇಪು ಬೇಕಾದ್ದು ಗಜ 1ಕ್ಕೆ ರೂ ಪ್ರಕಾರ ಕೊಡಲ್ಪಡುವುದು ಇದರಲ್ಲಿ ಎಲೆಕ್ಟ್ರಿಕ್ ಯಂತ್ರ ಬೆಲೆ ರೂ 5—0—0.

ಮದರಾಸು ಸಪ್ಲೆಯ ಕಂಪೆನಿ,
4—3 ನಂಬ್ರ 10 ಅಮೆರಿಕನ್ ಬೀದಿ, ಮದರಾಸು

ವರ್ತಮಾನ ಸಂಗ್ರಹ.

ಒಳದೇಶ.

ಬಿಳೂರು ಗ್ರಾಮದಲ್ಲಿ ದನಗಳಿಗೆ ದೊಡ್ಡ ರೋಗ ಸಹ ತೋರಿದೆಯೆಂದು ತಿಳಿಯಬರುತ್ತದೆ.

ಈ ತಾ. 4 ರಲ್ಲಿ ಪೊನ್ನಂಪೇಟೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿ 'ಪೊನ್ನಂಪೇಟೆ ಶಾಖಾ ಸಂಘ' ವನ್ನು ಸ್ಥಾಪಿಸಿರುವರು.

ಈಗ ಕೆಲವು ತಿಂಗಳುಗಳಿಂದ ನಡೆದು ಬರುತ್ತಿರುವಂತೆ ಪೊನ್ನಂಪೇಟೆ ಕುಶಾಲಪುರದಲ್ಲಿ ಕಳೆದ ತಿಂಗಳ ಕಡೇ ಆದಿತ್ಯವಾರ ರಾಷ್ಟ್ರೀಯ ಧ್ವಜಾಭಿವಂದನೆಯು ನಡೆಯಿತೆಂದು ತಿಳಿಯುತ್ತೇವೆ.

ಕೊಡಗು ದೇಶದಲ್ಲಿ ಕಳೆದ ಸೆಪ್ಟೆಂಬರು ತಿಂಗಳಲ್ಲಿ 315 ಜನನಗಳೂ, 304 ಮರಣಗಳೂ ಸಂಭವಿಸಿದವೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಈ ತಾ 16ರಲ್ಲಿ ಮಡಿಕೇರಿಯಲ್ಲಿ ಸಂಘದ ಆಫೀಸಿನಲ್ಲಿ ನಡೆಯಲಿಕ್ಕಿದೆ.

ಮೆ. ಬಿಟ್ಟಿಯಂಡ ಕೆ ಬೆಳ್ಳಪ್ಪನವರು ಮೈಸೂರು ಪ್ರಾಂತ್ಯದ ನೆಲಮಂಗಲದಲ್ಲಿ ಕೋಆಪರೇಟಿವ್ ಇನ್ಸ್ಪೆಕ್ಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದು ಸಂತೋಷ ಪಡುತ್ತೇವೆ.

ಕಿಗ್ಗಟ್ಟುನಾಡಿನವರ ಮೀಟಿಂಗು ಪೊನ್ನಂಪೇಟೆಯಲ್ಲಿಯೂ, ಬೆಪ್ಪುನಾಡಿನವರ ಮೀಟಿಂಗು ಅಮ್ಮತ್ತಿಯಲ್ಲಿಯೂ ನಾಡುತಕ್ಕರುಗಳ ಅಧ್ಯಕ್ಷತೆಯಲ್ಲಿ ನಡೆದು ಇನ್ನು ಮುಂದೆ ಆರಮನೆ ಪೊಳುದ ದಿನವಾದ ರೋಹಿಣೀ ನಕ್ಷತ್ರದಲ್ಲಿಯೇ ಹುತ್ತರಿ ಕೋಳುವದನ್ನು ನಡಸಬೇಕೆಂದೂ ತೀರ್ಮಾನಿಸಿರುವರೆಂದು ತಿಳಿಯ ಬರುತ್ತದೆ

ಕೊಡಗು ಕೌನ್ಸಿಲಿನಲ್ಲಿ ಮಡಿಕೇರಿ—ಬಾಗಮಂಡಲ—ಸುಂಟಿಕೊಪ್ಪ ನಾಡುಗಳ ಜನ್ಮ ಓಟರುಗಳ ಸರ್ವ... ಇರುವ ಸ್ಥಳಕ್ಕೆ ಚುನಾವಣೆ ಬಗ್ಗೆ ಈ ತಾ 1... ಬೆಳಿಗ್ಗೆ 7 ಗಂಟೆಯಿಂದ ಸಾಯಂಕಾಲ 6 ಗಂಟೆ ವರೆಗೆ ಮಡಿಕೇರಿ, ಮೂರ್ನಾಡು, ಕಾಲೂಗುಂದ ಬಾಗಮಂಡಲ, ನಾಪೋಕ್ಲು, ಸುಂಟಿಕೊಪ್ಪ ಮತ್ತು ಮಾದಾಪುರದಲ್ಲಿ ಓಟು ತೆಗೆದುಕೊಳ್ಳಲ್ಪಡುವುದು.

ಸುಂಟಿಕೊಪ್ಪ ಕೊಡಗರಹಳ್ಳಿ ಮೆ ಡಾಕ್ಸ್ರವರ ತೋಟದಲ್ಲಿ 28 ವರ್ಷ ಮೇಸ್ತ್ರಿಯಾಗಿದ್ದ ಮೆ. ದೇವಣೀರ ಮುಂದಣ್ಣನವರು ಈ ತಾ. 1ರಲ್ಲಿ ಕೆಲಸದಿಂದ ನಿವೃತ್ತರಾದಾಗ್ಯೂ ಅವರಿಗೆ ಮೆ. ಡಾಕ್ಸ್ರವರು ಮನೆ ಕಟ್ಟಲಿಕ್ಕೆಂದು 1000 ರೂ. ಉಚಿತವಾಗಿ ಕೊಟ್ಟದ್ದಲ್ಲದೆ, ಇವರ ಜೀವನಪರ್ಯಂತರ ತಿಂಗಳಿಗೆ 30ರೂ ಪೆನ್ಶನನ್ನೂ ಕೊಡಲು ಒಪ್ಪಿರುವರೆಂದೂ, ಯೂರೋಪಿಯನ್ ಪ್ಲಾಂಟರುಗಳ ತೋಟದಲ್ಲಿ ಕೆಲಸ ಮಾಡಿದ ಕೊಡಗರಿಗೆ ಪೆನ್ಶನು ಕೊಟ್ಟದ್ದು ಇದೇ ಪ್ರಥಮವೆಂದೂ ವರ್ತಮಾನ.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯ ಸಂಕ್ಷಿಪ್ತ ಪತ್ರಿಕವನ್ನು ಈ ಸಂಚಿಕೆಯೊಂದಿಗೆ ಪುರವಣಿಯಾಗಿ ಕಳುಹಿದ್ದೇವೆ.

— —

ಹಿಂದೂದೇಶ.

ಈ ತಾ. 4ರ ರಾತ್ರಿ ಡೆಲ್ಲಿ ಪಟ್ಣದಲ್ಲಿ ಆಕಸ್ಮಿತ ಬೆಂಕಿಯಿಂದ ಹಲವು ಅಂಗಡಿಗಳು ಸುಟ್ಟು ಹೋಗಿ ಸುಮಾರು ೫ ಲಕ್ಷ ರೂಪಾಯಿ ನಷ್ಟವಾಗಿದೆ.

ಕಲ್ಕತ್ತಾದ ಯೂರೋಪಿಯನ್ ಸಂಘದ ಜನರಲ್ ಕಮಿಟಿಯವರು ವೈಸರಾಯರ ಘೋಷಣಕ್ಕೆ ಒತ್ತಾಸೆಯನ್ನೀಯುವ ನಿರ್ಧಾರವನ್ನು ವಾಪಸು ಮಾಡಿರುವರು

ಬರುವ ಡಿಸೆಂಬರಿನಲ್ಲಿ ನಡೆಯಲಿಕ್ಕಿರುವ ನೇಶನಲ್ ಲಿಬರಲ್ ಫೆಡರೇಶನಿನ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ವಹಿಸಲು ಸರ್ ಫಿರೋಜ್ ಸೇತ್ನಾರವರನ್ನು ಕೇಳಿಕೊಳ್ಳಲಾಗಿದೆ.

ಬರುವ ಡಿಸೆಂಬರಿನಲ್ಲಿ ಮದ್ರಾಸಿನಲ್ಲಿ ನಡೆಯಲಿಕ್ಕಿರುವ ಅಖಿಲಭಾರತ ಉಪಾಧ್ಯಾಯರುಗಳ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಸರ್. ಪಿ ಯಸ್. ಶಿವಸ್ವಾಮಿ ಅಯ್ಯರವರು ಒಪ್ಪಿರುವರು.

ಪಂಜಾಬಿನ ಜೈಲುಗಳ ಸ್ಥಿತಿಯನ್ನು ಕುರಿತು ವಿಚಾರಿಸಲು ನೇಮಿಸಲ್ಪಟ್ಟಿದ್ದ ಕಮಿಟಿಯವರು ಕೈದಿಗಳ ಉಪಚಾರವನ್ನು ಸುಧಾರಿಸಲು ಕೆಲವು ಒಳ್ಳೇ ಸೂಚನೆಗಳನ್ನು ಶಿಫಾರಸ್ಸು ಮಾಡಿರುವರೆಂದು ತಿಳಿದು ಬರುತ್ತದೆ

ಡೆಲ್ಲಿ ಮುನ್ಸಿಪಾಲಿಟಿಯವರು ಈ ತಾ 2ರಲ್ಲಿ ವೈಸರಾಯಿಯವರಿಗೆ ಒಂದು ಬಿನ್ನಹ ಪತ್ರವನ್ನು ಅರ್ಪಿಸಿದರು ಕಾಂಗ್ರೆಸ್ಸಿನವರಲ್ಲದ ನಾಮನಿರ್ದೇಶಿತರಿಗೆ ಈ ಮುನ್ಸಿಪಾಲಿಟಿಯ ಅಭಿವಂದನಾ ಪತ್ರ ಕೊಟ್ಟದ್ದು ಇದೇ ಪ್ರಥಮ.

ವೈಸರಾಯರೊಂದಿಗೆ ಕಳೆದ ತಿಂಗಳಲ್ಲಿ ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಬಂದ ಮದ್ರಾಸಿನ ಹೊಸ ಗವರ್ನರಾದ ಕಾರ್ನ್ ಸ್ಟೇನ್ಲೆಯವರು ತಾತ್ಕಾಲಿಕವಾಗಿ ಬೊಂಬಾಯಿನ ಗವರ್ನರರು ರಜೆಯಲ್ಲಿ ಹೋಗುವುದರಿಂದ ಅವರ ಕಾರ್ಯವನ್ನು ನಡೆಸುವವರಾಗಿ ಕಾಯಿಲೆ ನಾಸಿಯಾಗಿ ಈ ತಾ. 12ರಲ್ಲಿ ಮದ್ರಾಸಿಗೆ ಬರಲಿಕ್ಕಿರುವರು.

ಇಂಡಿಯನ್ ಸೆಂಟ್ರಲ್ ಕಮಿಟಿಯವರು ತಮ್ಮ ವರದಿಯನ್ನು ಪೂರೈಸಿ ವೈಸರಾಯರಿಗೆ ಕಳುಹಿಸಿರುವರು. ಅದನ್ನು ಪ್ರಕಟಿಸುವ ಅಧಿಕಾರವು ವೈಸರಾಯರಿಗೆ ಇದೆ. ಸದರಿ ಕಮಿಟಿಯವರು ಇದರ ನಕಲನ್ನು ಸರ್ ಜಾನ್ ಸೈಮನರವರಿಗೆ ಕಳುಹಿಸುವುದಿಲ್ಲವಂತೆ.

ಸ್ಥಳೀಯ ಕೈಗಾರಿಕೆಗೆ ಉತ್ತೇಜನ ಕೊಡುವುದಕ್ಕಾಗಿ ಹೊರಗಿನ ಬಟ್ಟೆಯ ಮೇಲೆ ಸುಂಕ ಹಾಕದೆ ಬಿಡುವುದಕ್ಕೆ ಸರಕಾರದವರು ವಿರೋಧಿಸುವುದಿಲ್ಲವೆಂದು' ಬೊಂಬಾಯಿಯ ಗವರ್ನರರು ಹುಬ್ಬಳ್ಳಿ ಮುನ್ಸಿಪಾಲಿಟಿಯವರ ಅಭಿವಂದನಾ ಪತ್ರಕ್ಕೆ ಜವಾಬು ಕೊಡುವಾಗ್ಯ ಹೇಳಿದರು.

ವೈಸರಾಯರ ಘೋಷಣದ ಮೇರೆ ರೌಂಡ್ ಟೇಬಲ್ ಕಾನ್‌ಫರೆನ್ಸಿಗೆ ಬಂಗಾಳದ ಸುಭಾಷ್ ಚಂದ್ರ ಬೋಸ್‌ರವರು, ಪಂಜಾಬಿನ ಡಾಕ್ಟರ್ ಕಿಚ್ಲೂರವರು ಮತ್ತು ಮದ್ರಾಸಿನ ಯಸ್ ಶ್ರೀನಿವಾಸ ಅಯ್ಯಂಗಾರರವರು ಒಪ್ಪಿರುವುದಿಲ್ಲ. ಸುಭಾಷ್ ಚಂದ್ರ ಬೋಸ್‌ರವರು ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿ ಮೆಂಬರುತನಕ್ಕೆ ರಾಜೀನಾಮೆ ಕೊಟ್ಟಿರುವರು.

ಕಲ್ಕತ್ತಾದ ಕನೇಂದ್ರನಾಥ್ ಬೋಸ್ ಎಂಬವನು ತನ್ನ ಉದ್ಯೋಗವನ್ನು ಕಳಕೊಂಡು, ಪುನಃ ಉದ್ಯೋಗ ದೊರೆಯದೆ ಕಷ್ಟಪಡುತ್ತಿದ್ದುದರಿಂದ ತಾನೂ, ತನ್ನ ಹೆಂಡತಿಯೂ ಸ್ವೀಕರಿಸಿ ಎರಡನೆ ಸೋಮವಾರ ಒಪ್ಪಿಕೊಂಡು, ಇಬ್ಬರೂ ತಾ. 1ರಲ್ಲಿ ರಾತ್ರಿ ವಿಷ ತೆಗೆದುಕೊಂಡು ಮೃತರಾದರಂತೆ! ನಿರುದ್ಯೋಗದ ಪರಿಣಾಮವು ಎಷ್ಟು ಕಠಿಣ ತರವಾಗಿವೆ!!

ಹಿಂದೂದೇಶಕ್ಕೆ ವಸಾಹತು ಸ್ವರಾಜ್ಯ ಡೊಮಿನಿಯನ್ ಸ್ಟೇಟಸ್ ಕೊಡುವುದೇ ಬ್ರಿಟಿಷ್ ಸರಕಾರದ ಉದ್ದೇಶವೆಂತಲೂ, ಸೈಮನ್ ಕಮಿಷನಿನ ರಿಪೋರ್ಟ್ ತಯಾರಾದ ಮೇಲೆ ಬ್ರಿಟಿಷ್ ಸರಕಾರದ ಪ್ರತಿನಿಧಿಗಳೂ ಇಂಡಿಯಾದ ಮುಖಂಡರೂ ಸಭೆ ಸೇರಿ ಹಿಂದೂದೇಶದ ಮುಂದಿನ ಆಡಳಿತ ರಚನೆ ಹೇಗಿರಬೇಕೆಂಬುದನ್ನು ಚರ್ಚಿಸಲಾಗುವುದೆಂತಲೂ ವೈಸರಾಯರವರು ಇಂಡಿಯಾ ಗಜೆಟಿನಲ್ಲಿ ಪ್ರಸಿದ್ಧಪಡಿಸಿರುವರು.

ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಿ, ಸರಕಾರದವರ ವರ್ತನೆಯೂ ಜನರ ಕಡೆಗೂ, ಕೌನ್ಸಿಲುಗಳ ಕಡೆಗೂ ಸಮಾಧಾನಕರವಾಗಿರುವಂತಾಗಿ, ಬ್ರಿಟಿಷ್ ಸರಕಾರವು ಸೇರಿಸಲಿರುವ ಸಭೆಯಲ್ಲಿ ಮುಂದುವರಿದ ರಾಜಕೀಯ ಸಂಸ್ಥೆಗಳಿಗೂ ಅದರಲ್ಲೂ ಕಾಂಗ್ರೆಸ್ಸಿಗೆ ಹೆಚ್ಚಿನ ಪ್ರತಿನಿಧಿತ್ವವನ್ನು ಕೊಟ್ಟರೆ ವೈಸರಾಯರು ಪ್ರಸಿದ್ಧಪಡಿಸಿರುವಂತೆ ಸರಕಾರದ ಈ ಕೆಲಸದಲ್ಲಿ ಸಹಕರಿಸಲು ಒಪ್ಪುತ್ತೇವೆಂದು ಮಹಾತ್ಮ ಗಾಂಧಿಯವರೇ ಮೊದಲಾದ ಹಲವು ಮುಂದಾಳುಗಳು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವರು.

ಬರ್ಮದ ಗಣಿಗಳಲ್ಲಿ ಇತ್ತಲಾಗಿ ದೊರೆತ ಎರಡು ಅಮೂಲ್ಯ ರತ್ನಗಳಲ್ಲಿ ಪಚ್ಚೆಯೊಂದನ್ನು ಹಿಂದೀ ರತ್ನ ವ್ಯಾಪಾರಿಯೋರ್ವನು ರೂ. ೧ ಲಕ್ಷಕ್ಕೆ ಕೊಂಡುಕೊಂಡಿರುವನು. ಅವನದನ್ನು ತುಂಡು ತುಂಡು ಮಾಡಿ ವಿಕ್ರಯಿಸಲಿರುವನಂತೆ. ಅತ್ಯಮೂಲ್ಯವಾಗಿದ್ದು ಇಷ್ಟರ ವರೆಗೆ ದೊರೆತುದರಲ್ಲಿ ಅತಿ ಸುಂದರವಾಗಿದ್ದ ಅದನ್ನು ಕೊಂಡುಕೊಳ್ಳಲು ಅಮೇರಿಕದಿಂದಲೂ ಗಿರಾಕಿಗಳು ಬಂದಿದ್ದರು. ಕೊನೆಗೆ ಅಮೇರಿಕದ ಆಲ್ಬರ್ಟ್ ರಾಪ್ಸ್ ಎಂಬವನು ಅದನ್ನು ಕೊಂಡುಕೊಂಡಿರುವನು. ಗಿರಾಕಿಗಳು ಇದಕ್ಕೆ ರೂ ೭ ಲಕ್ಷ ಬೆಲೆಯೆಂದು ಹೇಳಿದ್ದರೂ ಕೊನೆಗೆ ಕಡಿಮೆ ಕ್ರಯಕ್ಕೆ ಮಾರಿದರಂತೆ ಈ ಪಚ್ಚೆಯನ್ನು ೬ ತುಂಡು ಮಾಡಲಾಗುವುದಂತೆ.

ವಿದೇಶ.

ಇಂಗ್ಲೆಂಡಿನಲ್ಲಿ ಒಟ್ಟು 19,000 ಬ್ಯಾಂಕುಗಳಿರುವವು. ಅದರಲ್ಲಿ ಲಂಡನ್ ಪಟ್ಟಣವೊಂದರಲ್ಲಿಯೇ 1,700 ಬ್ಯಾಂಕುಗಳಿರುವವಂತೆ!

ಲಂಡನಿನಲ್ಲಿರುವ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಶಾಖೆಯು ಬರುವ ಲಾಹೋರ್ ಕಾಂಗ್ರೆಸ್ಸಿಗೆ ಮೆ ಸಕ್ಲಾತ್ವಾಲರನ್ನು ತಮ್ಮ ಪ್ರತಿನಿಧಿಯಾಗಿ ಕಳುಹಿಸುವರು.

ಫ್ರಾನ್ಸಿನ ಹೊಸ ಮಂತ್ರಿ ಮಂಡಲಿಯಲ್ಲಿ ಮೆ ಟಾರ್ಡ್ಯೂರವರು ಮುಖ್ಯ ಮಂತ್ರಿಯಾಗಿಯೂ, ಮೆ. ಬ್ರಿಯಾಂಡ್‌ರವರು ಪರರಾಷ್ಟ್ರಗಳ ಖಾತೆಯ ಮಂತ್ರಿಯಾಗಿಯೂ ಇರುವರು

ಚಿಲಿ ದೇಶದ ಪ್ರೆಸಿಡೆಂಟರು ಮೋಟಾರಿನಲ್ಲಿ ಹೋಗುವಾಗ ೧೮ ವರ್ಷ ಪ್ರಾಯದ ರಾಜಕಂಟಕ ಯುವಕನೊಬ್ಬನು ಮೂರು ಬಾರಿ ಅವರ ಕಡೆಗೆ ಪಿಸ್ತೂಲು ಹಾರಿಸಿ ಕೃತಕೃತ್ಯನಾಗದೆ ಸೆರೆ ಹಿಡಿಯಲ್ಪಟ್ಟನು.

ಇಂಗ್ಲೆಂಡಿನ ಮುನ್ಸಿಪಾಲಿಟಿಗಳ ಮೂರರಲ್ಲಿ ಒಂದು ಭಾಗದ ಮೆಂಬರುಗಳ ಚುನಾವಣೆಯು ನಡೆಸುವದರಲ್ಲಿ ಲೇಬರ್ ಪಾರ್ಟಿಯವರಿಗೆ 90 ಸ್ಥಳಗಳು ಹೆಚ್ಚಾಗಿ ಸಿಕ್ಕಿವೆ. ಕನ್ಸರ್ವೇಟಿವ್ ಪಾರ್ಟಿಯವರು 15 ಸ್ಥಳಗಳನ್ನೂ, ಇಂಡಿಪೆಂಡೆಂಟ್ ಪಾರ್ಟಿಯವರು 20 ಸ್ಥಳಗಳನ್ನೂ ಕಳಕೊಂಡಿರುವರು.

ಅಫಘಾನಿಸ್ತಾನದಲ್ಲಿ ಸುಮಾರು ಒಂದು ವರ್ಷದ ಮಟ್ಟಿಗೆ ಅಮೀರನೆನಿಸಿಕೊಂಡಿದ್ದ ಬಚಾಯಿಸಾಕೋ ಮತ್ತು ಅವನ ಕಡೆಯ 11 ಜನರು ಈಗ ಅಮೀರರಾಗಿರುವ ನಾದಿರ್ ಖಾನರ ಸೈನಿಕರಿಂದ ಸೆರೆಹಿಡಿಯಲ್ಪಟ್ಟು ಕಾಬೂಲಿನಲ್ಲಿ ಗುಂಡು ಹೊಡೆದು ಕೊಲ್ಲಲ್ಪಟ್ಟಿರುವರು.

ಪರ್ಶಿಯನ್ ಬಲೂಚಿಸ್ತಾನದ ಖಾಶ್ ಎಂಬಲ್ಲಿ ಕಳೆದ ತಿಂಗಳ ತಾ ೨೨ ರಲ್ಲಿ ಆಕಾಶದಲ್ಲಿ ಕಣ್ಣು ಕುಕ್ಕುವ ಜ್ವಾಲೆಯೊಂದು ಒಂದು ಮಿನಿಟಿನ ವರೆಗೆ ಪ್ರಜ್ವಲಿಸಿ ಇಡೀ ಪಟ್ಟಣವನ್ನು ಬೆಳಗಿಸಿ ನಂತರ ಧೂಮಕೇತುವೊಂದು ಗುಡುಗುಡಿಸಿ ಕೆಳಗೆ ಬಿತ್ತೆಂದೂ, ಈ ಸಂದರ್ಭದಲ್ಲಿ ಇಡೀ ಪಟ್ಟಣವೇ ಕಂಪಿಸಿತೆಂದೂ ತಿಳಿದು ಬರುತ್ತದೆ

ಅಮೇರಿಕಾದೇಶದಲ್ಲಿ ಹೊಸ ಮುದ್ರಾ ಯಂತ್ರವು 61 ಪುಟಗಳುಳ್ಳ ಪತ್ರಿಕೆಯ 35,೦೦೦ ಪ್ರತಿಗಳನ್ನು ಒಂದು ಗಂಟೆಯೊಳಗೆ ಮುದ್ರಿಸಿ ಮಡಚಿ ಕೊಡುತ್ತದೆ. ಒಂದೊಂದು ಐದು ಮೈಲು ಉದ್ದವಿರುವ ಎಂಟು ನೂರು ಕಾಗದದ (ರೋಲರ್) ಗಳನ್ನು ಒಂದೇ ಸಲಕ್ಕೆ ಮುದ್ರಿಸುತ್ತದೆ. ಇದಕ್ಕಿಂತ ದೊಡ್ಡ ಮುದ್ರಾ ಯಂತ್ರವು ಪ್ರಪಂಚದಲ್ಲಿಲ್ಲ.

ಇಂಗ್ಲಿಷ್ ಭಾಷೆಯಲ್ಲಿ ಟೈಪನ್ನು, ಹಿಂದಿನಿಂದ ಮುಂದಕ್ಕೂ, ಕೆಳಗಿನಿಂದ ಮೇಲಕ್ಕೂ, ತಿರುಗಿಸುವ ತಿರುಗುವ ಟೈಪುಟ್ ಎಂಬ ವಿಚಿತ್ರ ಯಂತ್ರ ಸಂಯೋಜನೆಯೊಂದನ್ನು ಅಮೇರಿಕದ ಆರ್. ಜೆ ವೆಸ್ಲಿಯೆಂಬವರು ರಚಿಸಿರುವರು ಜಪಾನ ಟೈಪುಗಳಿಂದಲೂ ಅವರು ಈ ಪ್ರದರ್ಶನವನ್ನು ಜಪಾನಿಗೆ ತೋರಿಸಿ ಪ್ರೇಕ್ಷಕರನ್ನು ಬೆರಗುಗೊಳಿಸಿರುವರು.

ಪ್ರಕೃತ ಅತಿ ಹೆಚ್ಚಿನ ಸಂಬಳ ಎಣಿಸುವ ನಟಿ ಎಂದರೆ ಮಿಸ್. ಗಬ್ರಿಯಲ್ ರೋಬಿನ್ ಎಂಬವಳಂತೆ ಇವಳಿಗೆ ನೂತನವಾದ ಚಿತ್ರದಲ್ಲಿ ನಟಿಸುವುದಕ್ಕೆ ವಾರಕ್ಕೆ ೧೦೦೦ ಪವನು ಸಂಬಳವಿದೆ. ಟೆಲಿಫೋನ್ ಮೂಲಕ ಪ್ರಸರಿಸುವುದಕ್ಕಾಗಿ ಹಾಡುವುದಕ್ಕೆ ೧೫ ನಿಮಿಷಕ್ಕೆ ೫೦೦ ಪವನು ದೊರೆಯುವುದು ಇನ್ನು ಗ್ರಾಮಫೋನ್ ರಿಕಾರ್ಡುಗಳ ಹುಟ್ಟುವಳಿಯ ಆದಾಯವು ಪ್ರತ್ಯೇಕವಿದೆಯಂತೆ.

ಪತ್ರವ್ಯವಹಾರ

[ಬಿಸ್ಕ್ರಿದಾರರು ನಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತೃ ಜವಾಬ್ದಾರರಲ್ಲ. ಸಂ.]

ತಿದ್ದುಪಡಿ.

ಈ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ "ಹುತ್ತರಿ ಹಬ್ಬ" ಎಂಬ ಲೇಖನದಲ್ಲಿ "ಡಿಸೆಂಬರಿನಲ್ಲಿ ಮಾಡುವುದಕ್ಕೆ ನವಂಬರಿನಲ್ಲಿ ಮಾಡುವದೂ ಒಂದೇ ವಿಧದ ಫಲವುಳ್ಳದ್ದಾಗಿದೆ" ಎಂಬುದು ತಪ್ಪು ಆಗಿದೆ. ಈ ಅಭಿಪ್ರಾಯವು ಲೇಖನದ ಪೂರ್ವಾಪರಕ್ಕೆ ವಿರೋಧಾರ್ಥವಾಗುವದರಿಂದ "ಈ ವರ್ಷ ನವಂಬರಿನಲ್ಲಿ ಮಾಡುವದೂ, ಹಿಂದೆ ಇತರ ಸಮಯದಲ್ಲಿ ಮಾಡುವದೂ ಒಂದೇ ವಿಧದ ಫಲವುಳ್ಳದ್ದಾಗಿದೆ" ಎಂದು ತಿದ್ದುಪಡಿ ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

ಬಿ. ಆರ್. ವಿಶ್ವಮೂರ್ತಿ.

ಪೊನ್ನಂಪೇಟೆ ಬೋರ್ಡ್ ಶಾಲೆ.

ಮಹಸ್ವಾಮಿಯೇ,

ನಮ್ಮ ಶಾಲೆಯ ಪರೀಕ್ಷೆಯು ಇದೇ ತಿಂಗಳು ೭ಕ್ಕೆ ನಡಿಸಬೇಕೆಂದು ನಿಶ್ಚಯಿಸಿರುವುದರಿಂದ ಶಾಲೆಯ ಹಳೇ ವಿದ್ಯಾರ್ಥಿಗಳು ಶಾಲೆಯ ಮೇಲೆ ಅಭಿಮಾನವಿಟ್ಟು, ತಮ್ಮ ವಿಳಾಸಗಳನ್ನು ಕಳುಹಿಸಿಕೊಡುವದಲ್ಲದೆ, ತಕ್ಕಷ್ಟು ಧನ ಸಹಾಯವನ್ನೂ ಕೂಡ ಒಂದು, ಉತ್ಸವವನ್ನು ನಡಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಹೆಡ್ ಮೇಷ್ಟ್ರ್

— — —

ತರುಣರಿಗೆ ವಿನಂತಿ.

ಕೊಡಗು ಹಾಗು ಕರ್ನಾಟಕ ಸೇವಾದಳದ ಕಾರ್ಯಕಾರಿ ಮಂಡಲಿಯಲ್ಲಿ ಸೇರಿ ಕೆಲಸ ಮಾಡಲಿಚ್ಚಿಸುವವರು, ಸೇವಾದಳದ ವಿಷಯವನ್ನು ಸಂಪೂರ್ಣ ತಿಳಕೊಂಡು ಕೆಲಸವನ್ನು ಸಾಗಿಸುವ ಯೋಗ್ಯತೆಯನ್ನು ಹೊಂದುವ ಸ್ಥಿತಿಯಿಂದ ತಮ್ಮ ಹೆಸರುಗಳನ್ನು ಈ ನವಂಬರು ತಿಂಗಳು 15 ರೊಳಗೆ ಪೊನ್ನಂಪೇಟೆ ಸೇವಾದಳದ ಸಮಿತಿಯವರಿಗೆ ತಿಳಿಸತಕ್ಕದ್ದು, ಅಥವಾ ನವಂಬರು ತಿಂಗಳು 20ರೊಳಗೆ ಹಿಂದೂಸ್ಥಾನಿ ಸೇವಾದಳದ ಕಾರ್ಯದರ್ಶಿ ಡಾ. ಹರ್ಡೀಕರರಿಗೆ ತಿಳಿಸತಕ್ಕದ್ದು.

ಎ ಎಸ್ ಚಿಣ್ಣಪ್ಪ

(ಪೊನ್ನಂಪೇಟೆ ಸೇವಾದಳದ ಸಮಿತಿ)

— ——

ಇಂದ್ರಜಾಲ ಮಹೇಂದ್ರಜಾಲ ವಿದ್ಯೆ.

ಅಯ್ಯಾ,

ಈಗ್ಗೆ ಎರಡು ಮೂರು ವರ್ಷಗಳ ಹಿಂದೆ ನಮ್ಮಲ್ಲಿಗೆ ಬಂದಿದ್ದ ಇಂದ್ರಜಾಲ ಮಹೇಂದ್ರಜಾಲ ವಿದ್ಯಾ ಪ್ರವೀಣರಾದ ಪ್ರೊಫೆಸರ್ ಟಿ. ಯಸ್. ಶ್ರೀನಿವಾಸಾಚಾರ್ಯರ ಶಿಷ್ಯರಾದ ಕೆ. ಯಸ್ ಕೆ ಅಯ್ಯಂಗಾರರವರು ಇಲ್ಲಿನ ಸುಬೇದಾರರಾದಿಯಾಗಿ ಉದ್ಯೋಗಸ್ಥರ ಮತ್ತು ಅನೇಕ ಮಹನೀಯರುಗಳ ಮುಂದೆ ಈ ಊರ ನೇಶನಲ್ ಸ್ಕೂಲಿನಲ್ಲಿ, ಕ್ಲಬ್ಬಿನಲ್ಲಿ 1—11—29ನೇ ಮತ್ತು 2—11—29ನೇ ತಾರೀಕುಗಳಲ್ಲಿ ತಮ್ಮ ವಿದ್ಯೆಯನ್ನು ಅತಿ ಚಮತ್ಕಾರವಾಗಿಯೂ, ಆಶ್ಚರ್ಯಕರವಾಗಿಯೂ ಮತ್ತು ಮನೋರಂಜಕವಾಗಿಯೂ ಪ್ರದರ್ಶ

ಸಿದರು. ಇವರು ನಮ್ಮ ದೇಶೀಯರಾಗಿ ಈ ವಿದ್ಯೆಯ ಅಭ್ಯಾಸದಲ್ಲಿ ಪ್ರವರ್ತಕರಾಗಿರುವುದರಿಂದ ದೇಶಾಭಿಮಾನಿಗಳೆಲ್ಲರೂ ಪ್ರೋತ್ಸಾಹಿಸುವರಾಗಿ ನಂಬುತ್ತೇನೆ.

ಪ್ರೇಕ್ಷಕ.

ಕೊಡಗಿನ ಹುತ್ತರಿ ಹಬ್ಬ.

ಅಯ್ಯಾ,

ಈ ವರ್ಷದ ಕೊಡಗಿನ ಹುತ್ತರಿ ಹಬ್ಬವು ಉದ್ಯಾವರ ಪಂಚಾಂಗದ ಬೆಸೆಯಿಂದ ನವಂಬರನಲ್ಲೋ, ಡಿಸಂಬರನಲ್ಲೋ ಎಂಬ ಸಂಗತಿಯಾಗಿ ಹಲವರು ವಿಚಾರಿಸುತ್ತಲಿರುತ್ತಾರೆ. ಕೆಲವರು ನವಂಬರನಲ್ಲಿ ಆಗಬಹುದೆಂತಲೂ ಪತ್ರಿಕೆಯಲ್ಲಿ ಬರೆದಿರುತ್ತಾರೆ.

ಹ್ಯಾಗೂ ಈ ವರ್ಷದ ಹುತ್ತರಿ ಹಬ್ಬವು ನವಂಬರು ತಿಂಗಳಲ್ಲಿ ನಡೆಯುವದಿಲ್ಲ, ಡಿಸಂಬರು ತಿಂಗಳಲ್ಲಿ ನಡೆಯುವದಾಗಿದೆ. ಡಿಸಂಬರು 1ನೇ ತಾರೀಕಿನಲ್ಲಿ ಆಗುವ ಅಮಾವಾಸ್ಯೆಯಲ್ಲಿ ಇಗ್ಗುತಪ್ಪ ದೇವರ ಕಟ್ಟು ಬೀಳುವದಾಗಿದೆ. ಆ ದಿನ ಕಾಲ, ಗಳಿಗೆ ವಗೈರೆ ಹುತ್ತರಿ ಮುಹೂರ್ತವನ್ನು ಖಂಡಿತ ಮಾಡಿ ಅನಂತರ ಪತ್ರಿಕೆಗಳಲ್ಲಿ ಪ್ರಕಟವಾಗುವ ರೀತಿ ಬೇಶದಲ್ಲಿ ಹುತ್ತರಿ ನಡೆಯುವದಾಗಿದೆ.

ಉ. ಪೂಚ್ಚೆಯ್ಯ.

ಹುದಿಕೇರಿ ಪೇಟೆಯ ಬಾವಿ.

ಅಯ್ಯಾ,

ಹುದಿಕೇರಿ ಟೌನಿನಲ್ಲಿ ಮಾರ್ಕೆಟ್ಟು ಬಳಿ ನೀರಿನ ಅಭಾವದಿಂದ ಸಂತೆಯ ಜನರ ಪ್ರಯೋಜನಕ್ಕೂ, ಮತ್ತು ಗಾಡಿ ಎತ್ತು, ದನ, ಕರುಗಳ ಪ್ರಯೋಜನಕ್ಕಾಗಿಯೂ ಒಂದು ಸೇದುವ ಬಾವಿಯನ್ನು ಸರ್ಕಾರದವರು ತೋಡಿಸಬೇಕಾಗಿ ಮಾರ್ಕೆಟ್ಟು ಜನರು ಕೇಳಿಕೊಂಡದಕ್ಕೆ ಒಂದು ಬಾವಿ ಮಂಜೂರಾಗಿರುವುದಾಗಿ ತಿಳಿಯುತ್ತೇವೆ. ಈ ಬಾವಿಗೆ ತಕ್ಕಂಥ ಜಾಗವನ್ನು ಸರ್ಕಾರದವರು ಆಲೋಚಿಸಿರುತ್ತಾರಾಗಿ ತಿಳಿಯುತ್ತೇವೆ. ಮಾರ್ಕೆಟ್ಟು ಬಳಿ ಗರ್ಲ್ಸ್ ಸ್ಕೂಲಿಗೆ ಸಮೀಪ ನ್ಯಾಯವಾದ ಸ್ಥಳ, ಬಾವಿಗೆ ಅನುಕೂಲವಾಗಿ ರಸ್ತೆಗೆ ಪತ್ರಾಗಿಯೂ ಇರುವ ಸ್ಥಳ ಮುಕ್ಕಾಟಿ ಗೋವಿಂದಯ್ಯನವರ ಜಾಗದ ಸಮೀಪ ಸ್ಕೂಲು ಮೈದಾನ ಜಾಗದಲ್ಲಿ ಲಾಯಕ್ಕಾಗಿ ನೀರು ಬಹು ಸುಲಭವಾಗಿ ದೊರೆಯುವ ಸ್ಥಳವು ಎಲ್ಲಾ ಜನರ ಮತ್ತು ಸ್ಕೂಲು ವಿದ್ಯಾರ್ಥಿಗಳ ಪ್ರಯೋಜನಕ್ಕೂ ಅನುಕೂಲವಿರುವುದರಿಂದ ಸದರಿ ಸ್ಥಳದ ಬಳಿ ಬಾವಿಗೆ ಸ್ಥಳ ಏರ್ಪಡಿಸಿ, ಮಾರ್ಕೆಟ್ಟು ಜನರ ನೀರಿನ ಅಭಾವವನ್ನು ಪರಿಹರಿಸಬೇಕಾಗಿ ಬೇಡುತ್ತೇವೆ. ಸರ್ಕಾರದವರು ಪ್ರಯೋಜನವಾಗುವಂಥ ಜಾಗದಲ್ಲೇ ಬಾವಿ ತೋಡಿಸಬೇಕೆಂದು ಕೇಳಿಕೊಳ್ಳುತ್ತೇವೆ.

'ಟೌನ್ ನಿವಾಸಿ.'

ಮಜರತ್ ಚೀಫ್‌ಕಮಿಶನರ್ ಸಾಹೇಬರವರಿಗೆ ಬರೆದ ಮಾ. ರಾ. ಶ್ರೀ. ಕೋದಂಡ ಉತ್ತಯ್ಯನವರ ಬಹಿರಂಗ ಪತ್ರಕ್ಕೆ ವಕ್ತಾನೆ.

ಕೊಡಗಿನ ರಾಜಮನೆತನವೆಂಬ ಪುಸ್ತಕದ ಸಂಗ್ರಹಿಸಲ್ಲಿ ಸದರಿ ಪುಸ್ತಕ ನ್ಯಾಯವಾದದ್ದಲ್ಲವೆಂದೂ, ಈ ಪುಸ್ತಕ ಪೂರೈಸಿ ಇರುವದಿಲ್ಲವೆಂದೂ ಈ ಕೆಳಗಿನ ಕಾರಣಗಳಿಂದ ನಾನು ಖಂಡನೆಯಾಗಿ ಹೇಳುವೆನು ಹ್ಯಾಗೆಂದರೆ—

ಅಗಿಂದಾಗ್ಯೆ ಸರಕಾರಿ [illegible] ಬಹಳ ಕಾಲದಿಂದ [illegible] ಕೊಡಗಿನಲ್ಲಿಯೆಂದು ಹೇಳುವದಾದರೆ ಪೂರ್ವದಲ್ಲಿ ಅಂದರೆ ಕುಂಪನಿ ಸರಕಾರವು ಕೊಡಗಿಗೆ ಬರುವ ಮೊದಲು ಲಿಂಗರಾಜೇಂದ್ರ ಒಡೆಯರವರ ಕಾಲದಲ್ಲಿ ಉದಿಯಂಡ ಪೊನ್ನಪ್ಪನವರು ಚಾವಡಿ ಬಮೇದಾರರಾಗಿದ್ದರು. ಆ ಕಾಲದಲ್ಲಿ ಲಿಂಗರಾಜರ ಮತ್ತು ಈ ಬಮೇದಾರರ ನಕ್ಷೆಯು ಅವರ ಮಗ ದೇವಯ್ಯನವರು ಕುಂಪನಿ ಸರಕಾರವು ಕೊಡಗಿಗೆ ಬಂದ ಹಾಗೆ ಇವರು ಹೆಡ್ಡ್ ಮುನ್ಶಿಯರಾಗಿ ಆಗಿನ ಸುಪರಿಂಟೆಂಡೆಂಟರಾಗಿದ್ದ ಗಪ್ಪಾರ್ಡ್ ಸಾಹೇಬರವರ ಮತ್ತು ಇವರ ನಕ್ಷೆಯು ನಹ ಈಗಲೂ ನಮ್ಮ ಮನೆ ನೆಲ್ಲಕ್ಕಿ ನಡುಬಾಡೆಯಲ್ಲಿ ಇರುತ್ತೆ. ನಂತರ ಇವರು ಸುಬೇದಾರರಾಗಿದ್ದರು. ಇವರು ಅವರ ಸೊಳ್ಳಿದಲ್ಲಿ ನಡೆದ ದಂಗೆ ದಬಾಯಿಸಲು ಹೋಗಿದ್ದ ಬಗ್ಗೆ 300 ಬಟ್ಟಿ ಜಹಗೀರ್ ಭೂಮಿಯೂ, ಪಿಂಚಿನ್ ಮತ್ತು ಪದಕ (Medal) ನಹ ಪಡೆದದ್ದು ಅವರ ಹಿರೀ ಮಗನ ಮಗ ಸುಬ್ಬಯ್ಯನವರು ಈಗಲೂ ಪಡೆಯುತ್ತಿದ್ದಾರೆ.

ಸದರಿ ದೇವಯ್ಯನವರ ಮಗ ಮುತ್ತಣ್ಣನವರು ಕೊಡಗಿನ ಹೆಡ್ಡ್ ಸರ್ವೆಯರಾಗಿದ್ದು ಪಿಂಚಿನ್‌ದಾರರಾಗಿದ್ದರು. ಇವರ ಮಗನಾದ ಈ ಲೇಖಕನು [illegible]ನಾಗಿದ್ದು ಸಬ್ ರಿಜಿಸ್ಟ್ರಾರಾಗಿ ಪಾಲಿ ಪಿಂಚಿನ್‌ದಾರನಾಗಿರುತ್ತಾನೆ. ಈಗಲೂ ನನ್ನ ಕುಟುಂಬದಲ್ಲಿ ರೆಂಜರಾಗಿಯೂ, ಶ್ಯಾನುಬೋಗರು ವಗೈರಾಗಿ ಸರಕಾರಿ ಉದ್ಯೋಗಗಳಲ್ಲಿ ಇದ್ದಾರೆ.

ಇಂಥ ಲಾಗಾಯಿತಿನಿಂದ ಅತಿ ಉನ್ನತ ಸರಕಾರಿ ಉದ್ಯೋಗದಲ್ಲೇ ಇರುವ ನನ್ನ ಕುಲದ ಹೆಸರು ಯಾಕೆ ಈ ಪುಸ್ತಕದಲ್ಲಿ ಇಲ್ಲ?

ಈ ಮೇಲ್ಕಂಡ ಕಾರಣಗಳಿಂದ ಈ ಪುಸ್ತಕವು ನ್ಯಾಯವಾದದಲ್ಲವಾದದ್ದರಿಂದ ಸರಕಾರದವರು ಖಂಡಿತವಾಗಿ ಈ ಪುಸ್ತಕವನ್ನು ನಾಶಮಾಡಿ ಆ ಸಂಗ್ತಿ ಪತ್ರಿಕೆಗಳಲ್ಲಿ ಪ್ರಕಟಿಸಿದರೆ ಕೊಡಗಿನಲ್ಲಿ ಈ ಪುಸ್ತಕದ ಬಾಬಿನಲ್ಲಿ ದ್ವೈತ [illegible] [illegible]ಗಳು ಉಂಟಾಗಿ ಅನೇಕ ನಷ್ಟ, ಕಷ್ಟಗಳಾಗಿರುವಂದ ದೇಶದ ಒಗ್ಗಟ್ಟಿಗಾಗಿ ಈ ಪುಸ್ತಕವನ್ನು ನಾಶಮಾಡಿಸಿ [illegible] ತೀರಬೇಕಾಗಿ ಕೋರಿಕೆ.

ಉದಿಯಂಡ ಮಾಚಯ್ಯ.

ಕಣಿವೆ ಹೋಬಳಿಯ ಹೀನಸ್ಥಿತಿ.

ಅಯ್ಯಾ,

ಈ ಹೋಬಳಿಯಲ್ಲಿ ಇರುವ ಎರಡು ಮೂರು ಗ್ರಾಮಗಳಲ್ಲಿ ಪ್ಲೇಗು ರೋಗವು ಆಗಾಗ್ಯೆ ಬರುತ್ತಾ ನಾಲ್ಕಾರು ವರ್ಷಗಳಿಂದ ಗ್ರಾಮಗಳು ಬಹಳ ನಷ್ಟಕಷ್ಟಕ್ಕೆ ಒಳಗಾದದ್ದು, ಒಳಗಾಗುತ್ತಾ ಇರುವದು ಸರ್ಕಾರಕ್ಕೇನೋ ಗೊತ್ತಿಲ್ಲದ ಸಂಗತಿಯಲ್ಲ. ಈ ಹೋಬಳಿಯು ವಿದ್ಯೆಯಲ್ಲಿಯೂ, ನಾಗರೀಕತನದಲ್ಲಿಯೂ ಬಹಳ ಹಿಂದೆ ಬಿದ್ದು ಜನರು ಬಹಳ ಅಶುಚಿಯಾಗಿ ಜೀವಿಸುತ್ತಿರುವದು ಯಾರಿಗೆ ತಾನೇ ತಿಳಿಯದ ಸಂಗತಿ. ಇಂಥಾ ಅಶುಚಿಯಾದ ಗ್ರಾಮಗಳಲ್ಲಿ ಈ ವರೆಗೆ ಗ್ರಾಮ ಶುಚಿಯ ವಿಷಯವಾಗಿ ಸರ್ಕಾರಿ ಯಾವ ಉದ್ಯೋಗಸ್ಥರಾಗಲಿ ಗ್ರಾಮಗಳಲ್ಲಿ ತಿರುಗಿ ರೈತರಿಗೆ ಬೋಧನೆ ಕೊಡದೆ ಇರುವದು ವ್ಯಸನಕರ. ಕಣಿವೆ ಹೋಬಳಿಯ ಗ್ರಾಮಗಳಲ್ಲಿ ಇರುವ ರೈತರ ಪಟ್ಟಿ, ಕೊಟ್ಟಿಗೆ, ಒಡ್ಡಲು, ಕಾಲಿ ಜಾಗಗಳ ಗಲೀಜೇ ಪ್ಲೇಗಿಗೆ ತವರುಮನೆಯಲ್ಲವೆ. ಇಲಿ ಆಹೆಯ ನೈವಾಗಟಗಳಿಂದ ಈ ರೋಗವು ಪ್ರಬಲವಾಗುವುದೆಂಬದು ನಿಜವಲ್ಲ. ಗುಣಪಡಿಸುವುದಕ್ಕಿಂತ ನಿವಾರಣೆಯೇ ಉತ್ತಮ ಎಂಬ ನ್ಯಾಯದಿಂದ ಇಲ್ಲಿಯ ಜನರು ಶುಚಿಯಾಗಿ ಜೀವಿಸುವಂತೆ ಮಾಡುವುದು ಅವಶ್ಯವಾಗಿದೆ. ಈ ಹಿಂದೆ ಒಂದು ವರ್ಷದಲ್ಲಿ ಗ್ರಾಮ ಪಂಚಾಯಿತಿ ಕರಡುಗಾರರಿಗೆ ಗ್ರಾಮಗಳಿಗೆ ಬಂದು ಎಲ್ಲಾ ಸಂಗತಿ ವಿಚಾರ ಮಾಡಿಕೊಂಡು ಹೋದವರು ಈ ವರೆಗೆ ಯಾಕೆ ಪಂಚಾಯಿತಿ ಪದ್ಧತಿಯನ್ನು ಜಾರಿಗೆ ತರಲಿಲ್ಲವೆಂದು ಗೊತ್ತಾಗುವುದಿಲ್ಲ. ಪಂಚಾಯಿತಿ ಪದ್ಧತಿ ಜಾರಿಯಲ್ಲಿದ್ದರೆ ಗ್ರಾಮಗಳು ಶುಚಿಯಾಗಿದ್ದು ಈ ಪ್ಲೇಗು ಮಾರಿಗೆ ಇಲ್ಲಿ ಎಡೆ ದೊರೆಯುತ್ತಿರಲಿಲ್ಲ. ಅಧಿಕಾರಿಗಳು ಕೂಡಲೆ ಗ್ರಾಮ ಪಂಚಾಯಿತಿ ಕ್ರಮವನ್ನು ಜಾರಿಗೆ ತಂದು ಗ್ರಾಮ ಶುಚಿಯ ವಿಷಯ ಹೆಚ್ಚಿನ ತರಪೂದು ತೆಗೆದುಕೊಂಡು ಈ ಕಣಿವೆ ಹೋಬಳಿಯ ರೈತರನ್ನು ಈ ಪ್ಲೇಗು ಮಾರಿಯಿಂದ ಪಾರು ಮಾಡುವರಾಗಿ ನಂಬುತ್ತೇನೆ.

"ಗ್ರಾಮಸ್ಥ."

ಮರೆನಾಡು ರಸ್ತೆ.

ಅಯ್ಯಾ,

ಈಗ ನಮ್ಮ ಮರೆನಾಡಿಗೆ ಮಂಜೂರಾಗಿರುವ ರಸ್ತೆಯು ಹುದಿಕೇರಿಯಿಂದ 6 ಮೈಲು ರಸ್ತೆಗಾಗಿ ಶ್ರೀಮಂಗಲಕ್ಕೆ ಹೋಗಿ ಅನಂತರ 11 ಮೈಲು ಮರೆನಾಡಿಗೆ ದೂರವಾಗಿ ಹೋಗಬೇಕಾಗುತ್ತೆ. ಈ ರಸ್ತೆಯಿಂದ ಶ್ರೀಮಂಗಲಕ್ಕೆ ಹೋಗಲು ನಮಗೆ ಪ್ರಯೋಜನವಾಗುವುದಲ್ಲದೆ ಬೇರೆ ಯಾವ ಪ್ರಯೋಜನವೂ ಇರುವುದಿಲ್ಲ. ಜಮೀನ್ದಾರರ ಸಂಘದವರೂ, ಕೌನ್ಸಿಲ್ ಮೆಂಬರುಗಳೂ ಮರೆನಾಡಿಗೆ ರಸ್ತೆ ಬೇಕೆಂದೂ, ಹೊಳೆಗೆ ಸೇತುವೆ ಬೇಕೆಂದೂ ಹೋರಾಡಿದರ ಫಲವಾಗಿ ಈಗ ನಮಗೆ ಮಂಜೂರಾಗಿರುವ ಸ್ಥಳದಿಂದ ರಸ್ತೆಯು ಎಷ್ಟು ಮಾತ್ರವೂ ತೃಪ್ತಿಯಿಲ್ಲ. ಪಟ್ಟಿಗೋಸ್ಕರವಾಗಿ ಇರುವ ರಸ್ತೆಯಿಂದ ನಾವು ಮಳೆಗಾಲದಲ್ಲೂ ನಹ ಪಾಲವಿಲ್ಲದೇನೇ ತಿರುಗಬಹುದು. ಇಂಥಾ ಸ್ಥಳದಲ್ಲಿ ನಮಗೆ ಪಾಲವಿದ್ದು ಪ್ರಯೋಜನವಿಲ್ಲ. ಜಮೀನ್ದಾರರ ಸಂಘದವರೂ, ಕೌನ್ಸಿಲ್ ಮೆಂಬರುಗಳೂ [illegible] ಅಧಿಕಾರಿಗಳು ನಾಡಿನವರ ಅಭಿಪ್ರಾಯ ತೆಗೆಯದೆ ಮನಸ್ಸಿಗೆ ಇಷ್ಟ ಪ್ರವರ್ತಿಸುವಲ್ಲಿ ನಾಡಿನವರಿಗೆ ಪ್ರಯೋಜನವಿಲ್ಲ. ಹುದಿಕೇರಿಗೆ ಟೀ ತೋಟಕ್ಕಾಗಿ ಯೆ ಒಡಗದ ಕೇರಿಗಾಗಿ, ಹೈಸೊಡ್ಲೂರುಗ-ಗಿ ಹಾದು ಬರುವ ರಸ್ತೆಯನ್ನು ಮಂಜೂರಾಗ್ಯಾದಿ ಈಗ ನಮಗೆ ದೊರೆತಿರುವ ಅಲ್ಪ ದ್ರವ್ಯ ಸಹಾಯವನ್ನು ಪ್ರಯೋಜನವಾಗುವ ರೀತಿಯಲ್ಲಿ ಖರ್ಚು ಮಾಡಿಸಲು ನಮ್ಮ ತಾಲೋಕು ಮತ್ತು ಜೇಶೀಯ ಕೌನ್ಸಿಲು ಮೆಂಬರುಗಳು ಸಿಗ ಇಡಬೇಕಾಗಿ ಪ್ರಾರ್ಥಿಸುತ್ತೇನೆ. ಸಂತೆ, ಕೋರ್ಟು, ಸ್ಕೂಲು, ದೇಶ ಸಂಚಾರ, ವ್ಯಾಪಾರಕ್ಕೆ ನಹ ಅನುಕೂಲವಿರುವ ಹುದಿಕೇರಿಗೆ ಬರುವ ರಸ್ತೆಗೆ ಎಲ್ಲರೂ ಏಕೋಭಾವದಿಂದ ಗಮನ ಕೊಡಬೇಕು. ತತ್ಕಾಲ ಹಣ ಸಾಕಷ್ಟು ಇಲ್ಲದಿದ್ದರೆ ಇರುವಷ್ಟು ಹಣಕ್ಕೆ ಈ ವರ್ಷ ಪೂರೈಸಿ ಮುಂದಕ್ಕೆ ಹಣ ಒದಗುವಾಗ ಮಾಡಿಸುವಂತೆ ಇಡಬಹುದು.

"ಮರೆನಾಡಿನವ."

ಹವ್ಯಕ ಬ್ರಾಹ್ಮಣ ಮಹಾಜನಗಳಲ್ಲಿ ವಿಜ್ಞಾಪನೆ

ಮಹಾಶಯರೆ,

ನಮ್ಮ ಹವ್ಯಕ ಬ್ರಾಹ್ಮಣರಲ್ಲಿ ಅನೇಕ ಬಾಲವಿಧವೆಯರು ಇರುವುದು ನರ್ವರೂ ತಿಳಿದ ವಿಷಯವಾಗಿರುತ್ತೆ. ಇವರಲ್ಲಿ ಅನೇಕರು ಜೀವನಕ್ಕೆ ನಹ ದಾರಿಯಿಲ್ಲದೆ ಬಹಳ ಕಷ್ಟ ಪಡುತ್ತಾರೆ. ಪರರ ಮನೆಯಲ್ಲಿ ಕೆಲಸ ಮಾಡಿ ಹೊಟ್ಟೆ ಹೊರೆಯ ಬೇಕಾಗಿರುತ್ತೆ. ಬೇರೆ ಕಡೆಗಳಲ್ಲಿ ಅಂದರೆ ಮೈಸೂರು, ಬೆಂಗಳೂರು, ಮದ್ರಾಸು, ಬೊಂಬಾಯಿ ವಗೈರೆ ಸ್ಥಳಗಳಲ್ಲಿ ನಮ್ಮ ಬ್ರಾಹ್ಮಣ ಹೆಂಗಸರು ವಿಧವೆಯರು ವಿದ್ಯೆ, ಕೈಗಾರಿಕೆ ವಗೈರೆ ಕಲಿತು ತಮ್ಮ ಜೀವನದ ದಾರಿ ಮಾಡಿಕೊಂಡು ಇರುತ್ತಾರೆ. ಇದರಲ್ಲಿ ಅನೇಕರು ಸ್ಕೂಲು ಪ್ರೈಸಲ್, ಬಿ. ಎಲ್. ವಗೈರೆ ಪಾಸುಮಾಡಿ ದೊಡ್ಡ ಉದ್ಯೋಗದಲ್ಲಿ ನಹ ಇರುತ್ತಾರೆ. ಆದ್ದರಿಂದ ನಮ್ಮ ಈ ಕೊಡಗು ದೇಶದಲ್ಲಿ ಹೆಂಗಸರು ವಿದ್ಯೆಯಲ್ಲಿ ಬಹಳ ಹಿಂದೆ ಇರುತ್ತಾರೆ. ಆದ್ದರಿಂದ ನಮ್ಮ ಬಾಲವಿಧವೆಯರ ಗೋಳು ಹೇಳಲೆ ಸಾಧ್ಯವಿಲ್ಲ. ಇವರಿಗೆ ವಿದ್ಯೆ ಇಲ್ಲ, ಸಹಾಯಕರಿಲ್ಲ. ಚಿಕ್ಕ ವಯಸ್ಸು, ಏನು ಮಾಡಿಯಾರು? ಆದ್ದರಿಂದ ಅತಿ ಕಷ್ಟದಲ್ಲಿ ಬಿದ್ದು ಆ ಜನ್ಮ ಯಾವ ಸುಖ ನಹ ಇಲ್ಲದೆ ಇರಬೇಕಾಗುತ್ತೆ. ಅಲ್ಲದೆ ನಗರ, ತೀರ್ಥಹಳ್ಳಿ ವಗೈರೆ ಸ್ಥಳದಿಂದ ನಮ್ಮ ಹವ್ಯಕ ಬ್ರಾಹ್ಮಣ ಬಾಲವಿಧವೆಯರ ಮೈಸೂರು, ಬೆಂಗಳೂರು ವಗೈರೆ ಸ್ಥಳಗಳ ಸ್ಕೂಲುಗಳಿಗೆ ಸೇರಿ ವಿದ್ಯಾಭ್ಯಾಸ ಮಾಡುತ್ತಾರೆ. ಆದ್ದರಿಂದ ನಮ್ಮ ಹವ್ಯಕ ಬ್ರಾಹ್ಮಣರು ಒಂದು ಕಡೆ ಸೇರಿ ಮೀಟಿಂಗು ನಡೆಸಿ ಬಾಲವಿಧವೆಯರಿಗೆ ಅವರವರ ಜೀವನದ ದಾರಿ ಮಾಡಿಕೊಳ್ಳುವಂತೆ ವಿದ್ಯೆ, ಕೈಗಾರಿಕೆ ವಗೈರೆಗೆ ಪ್ರೋತ್ಸಾಹಿಸಿ ಅವರನ್ನು ಇತರ ತೊಂದರೆಯಿಂದ ತಪ್ಪಿಸಬೇಕು. ಆದ್ದರಿಂದ ನಮ್ಮ ಹವ್ಯಕ ಬ್ರಾಹ್ಮಣರು ಎಲ್ಲರೂ ಸೇರಿ ಉದಾರ ಬುದ್ಧಿಯಿಂದ ನಮ್ಮ ಜನಾಂಗದ ಬಾಲವಿಧವೆಯರನ್ನು ಸ್ಕೂಲುಗಳಿಗೆ ಸೇರಿಸಿ ವಿದ್ಯಾಭ್ಯಾಸ ಮಾಡುವಂತೆ ನರ್ವರೂ ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳುತ್ತೇನೆ. ನಮ್ಮ ಜನಾಂಗದಲ್ಲಿ ಈ ತರಹದ ವಿದ್ಯಾಭ್ಯಾಸ ನಡೆದು ಬರಲಿಲ್ಲ ಎಂದು ಹೇಳಬಾರದು. ಅದಕ್ಕೆ ಅನೇಕ ಉದಾಹರಣೆ ಇರುತ್ತೆ. ಅವನ್ನು ಈಗ ಇಲ್ಲಿ ವಿವರಿಸ ಬೇಕಾಗುವುದಿಲ್ಲ. ಆದಕಾರಣ ಇದನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಇತರ ದೇಶಗಳಲ್ಲಿ ನನ್ನ ಸ್ತ್ರೀಯರು ವಿದ್ಯೆಯಲ್ಲಿ ಎಷ್ಟು ಮುಂದೆ ಬಂದಿರುತ್ತಾರೆ ಎಂಬದನ್ನು ನರ್ವರೂ ತಿಳಿದುಕೊಂಡು ನಮ್ಮ ಈ ಚಿಕ್ಕ ದೇಶವನ್ನು ನಹ ವಿದ್ಯೆಗೆ ಪ್ರೋತ್ಸಾಹಿಸಬೇಕಾಗಿ ವಿಜ್ಞಾಪನೆ.

ಹೆಚ್. ಟಿ. ನಾರಣೈಯ್ಯ.

ಹುತ್ತರಿ ಹಬ್ಬ.

ಮಹನೀಯರೇ,

ಈ ವರ್ಷದ ಹುತ್ತರಿ ಹಬ್ಬದ ವಿಷಯವಾಗಿ ಮ. ರಾ. ಕೃಷ್ಣಮೂರ್ತಿಯವರು ಬರೆದ ಲೇಖನದಿಂದ ಹುತ್ತರಿ ಹಬ್ಬ ನವಂಬರ್ ತಿಂಗಳಲ್ಲಿ ಎಂದು ಹಲವರೂ, ಡಿಸಂಬರ್ ತಿಂಗಳಲ್ಲಿ ಎಂದು ಹಲವರೂ ಹೇಳಿಕೊಂಡು ತಮ್ಮಲ್ಲಿ ತಾವೇ [illegible] ಹಚ್ಚಿಕೊಳ್ಳುತ್ತಿರುವುದು ವಿಷಾದಕರ. ಈ ವಿಷಯವಾಗಿ ಯಾರೂ ಯಾವ ತರ್ಕವನ್ನು ಮಾಡಬೇಕಾದ ಅವಶ್ಯವಿಲ್ಲ. ಯಾಕೆಂದರೆ—ಹುತ್ತರಿ ಹಬ್ಬವು ಮಳೆಗಾಲದಲ್ಲಿ ಬಿಣ ಕಳೆದು ಮೂರು ತಿಂಗಳಲ್ಲಿ ಬರುವುದಾಗಿದೆ. ಅಲ್ಲದೆ 3—4 ವಾರಗಳಿಗೆ ಮೊದಲಾಗಿಯೇ ಪಾಡಿ ಇಗ್ಗುತಪ್ಪ ದೇವಸ್ಥಾನದಿಂದ ಮುಹೂರ್ತ ಪಟ್ಟಿ ಬರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ.

ಮಹನೀಯರೇ, ಹುತ್ತರಿ ಹಬ್ಬದ ಕದಿರು ತೆಗೆಯುವ [illegible]ವು ಕಾರಣಾಂತರಗಳಿಂದ ಎರಡು ದಿನಗಳಲ್ಲಿ ಮೂರು ನ[illegible]ಯಗಳಲ್ಲಿ ತೆಗೆಯುವುದು ಎಲ್ಲರಿಗೂ ತಿಳಿದ ಸಂಗತಿ. [illegible]ವ ಕದಿರು, ಯಾ ಅರಮನೆ ಕದಿರು ಬಿಚ್ಚಾರ್ಯರು ತಿಂಗಳು [illegible] ಹುಣ್ಣಿಮೆಗೆ 1 ದಿನ ಮುಂಚಿತವಾಗಿ ಆಗುವ ಕೃತಿಕಾ ನಕ್ಷತ್ರದಲ್ಲಿಯೂ, ನಾಡು ಪೊಳುದು ಅದರ ಮಾರಣೆ ದಿನದ ನಕ್ಷತ್ರವಾದ ರೋಹಿಣೀ ನಕ್ಷತ್ರದಲ್ಲಿಯೂ ನಡೆದು ಬರುತ್ತಲಿದ್ದದ್ದು ತ್ರಿಜೆಗೆ 6—7 ವರ್ಷಗಳಿಂದ ಕ್ರಮವಾಗಿ ರೋಹಿಣೀ [illegible] [illegible] ನಕ್ಷತ್ರದಲ್ಲಿ ತೆಗೆಯುತ್ತಿರುತ್ತಾ ಇದ್ದದರಿಂದ ಬ[illegible] ಅಸಮಾಧಾನಕ್ಕೆ ಎಡೆಯನ್ನುಂಟುಮಾಡಿದೆ.

ಯಾವ ಮತಸ್ಥರ ಯಾವ ಹಬ್ಬವೇ ಆಗಲೀ, [illegible] [illegible] ಯಾವ ಭಾಗದಲ್ಲೇ ಇರಲಿ ಅವರೆಲ್ಲರೂ [illegible]ರವರ ಜಾತಿ ಹಬ್ಬಗಳನ್ನು ಒಂದೇ ದಿನದಲ್ಲಿ [illegible] ನಮ್ಮ ಹಬ್ಬಗಳಿಗೆ ಅಂಥಾ ನಿರ್ಬಂಧಗಳೇ ಇಲ್ಲದೆ ಇರು[illegible] ಬಹಳ ಶೋಚನೀಯವಾಗಿದೆ. ಕೈಲುಮುಹೂರ್ತ [illegible] ಆಯುಧ ಪೂಜೆ ವು ಕ್ಷತ್ರಿಯರಾದ ನಮಗೆ ಬಹ [illegible] ಮತ್ತು ಮುಖ್ಯವಾದ ಹಬ್ಬವಾಗಿದೆ. ಇದನ್ನು ನಹ [illegible]ವೇ ದಿನ ಆಚರಿಸುವುದರ ಬದಲು ಮೂರು ನಾಲ್ಕು ದಿನ[illegible] ಆಚರಿಸುವರು. ಮಾತ್ರವಲ್ಲ, ನಮ್ಮ ವಿದ್ಯೆ ಬುದ್ಧಿ [illegible]ರಾದ ಮತ್ತು ಪರದೇಶದಲ್ಲಿ ವಾಸಮಾಡುತ್ತಿರುವ [illegible]ಯರಂತು 4—5 ವಾರ ಕಳೆದು ನಹ ಕೈಲುಮುಹೂರ್ತ[illegible]ನ್ನು ಆಚರಿಸುತ್ತಿರುವರು. ಕೈಲುಮುಹೂರ್ತ ಹಬ್ಬವು [illegible]ಧ ಪೂಜೆ ಎಂಬದರ ಬದಲು ಬರೀ ಆಟ ಊಟಗಳ [illegible] ಭಾವನೆಯು ಇದಕ್ಕೆ ಕಾರಣವಾಯಿತೋ ಎಂದು [illegible] ಅವಕಾಶವಾಗಿದೆ.

ಶ್ರೀಯುತ ಯನ್. ಉತ್ತಯ್ಯನವರು ಹೇಳುವ[illegible] ಕಡವರೆಲ್ಲರೂ ಒಂದೆಡೆ ಸೇರಿ ಹಬ್ಬವನ್ನು ಒಂದೇ ದಿ[illegible]ಲು ಏರ್ಪಾಡು ಮಾಡಬೇಕಾದ ಅವಶ್ಯವಿಲ್ಲ. ಒಂದೇ ದಿನಲ್ಲಿ ಸೇರಿ ಕೋಲು ಹೊಡೆಯುವ ನಾಡಿನವರ [illegible]ತ್ಯರ್ಥ ಮಾಡಿಕೊಂಡರೆ ಸಾಕಾಗಿದೆ. ಈ ಬಗ್ಗೆ [illegible] ನಾಡಿನವರ ಮೀಟಿಂಗೊಂದು ತಾ. 2-11-29 ರಲ್ಲಿ [illegible]

ಕೊಡಗು ಮಹನೀಯರೇ, ಮುಖ್ಯವಾಗಿ [illegible]ಶದ ಹೆಸರಗಿರುವ ಕೊಡಗು ಮಹನೀಯರುಗಳೇ, [illegible] ಹಬ್ಬದಲ್ಲಿ ಕದಿರು ತೆಗೆಯುವ ದಿನವನ್ನು ಇಗ್ಗುತಪ್ಪ ದೇವಸ್ಥಾನದ ಪಟ್ಟಿಯಲ್ಲಿ ಹೇಳುವ ದೇವ ಕದಿರು [illegible] ಮನೆ ಪೊಳ್ದು ದಿನವೇ ಎಲ್ಲರೂ ಕದಿರು ತೆಗೆಯುವ[illegible] ಕೈಲುಮುಹೂರ್ತ ಹಬ್ಬವನ್ನು ಸರ್ಕಾರಿ ರಜ ದಿನ[illegible] ಸಾಯೂರ್ ತಿಂಗಳು 18 ಕ್ಕೆ (ಸಿಪ್ಟಂಬರ್ 3 ಕ್ಕೆ) ಪಂತೆಯೂ ಏರ್ಪಾಡು ಮಾಡಬೇಕಾಗಿ ತಮಗಳನ್ನು ಲಕ ಕೇಳಿಕೊಳ್ಳುತ್ತೇನೆ.

ಐ. ಪಿ. [illegible]

New arrivals of Cigars.

PRICES MODERATE
Popular lines

Morning whiffs 100 s	Rs	1- 8 0
Lady love 100 s	,,	2-10-0
Special Planters 100 s	,,	3- 8-0
Special Planters 50 s	,,	2- 0-0
Catamaran shape 50 s	,,	2-12-0

CROCKERY —
Tea sets for 6 persons in attractive designs @ Rs 12/8/- & 10/8/- a set
Spare cups & saucers @ Annas 8/- & 10/- pair

The Coorg Emporium,
Mercara. General Merchant Sidapur.
48-19

ದಾಂಪತ್ಯ ರಹಸ್ಯ.

ಸೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿದ್ದು ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡ ಭಾಷಾಂತರಿಸಿ ಚಿತ್ರಗಳ ಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಸಂಗ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧಾರಣೆ, ಸಂಯೋಗದ ಕಾಲ ಹಸ್ತಮೈಥುನದಿಂದುಂಟಾಗುವ ಹಾನಿ ಇದಕ್ಕೆ ತಕ್ಕ ಚಿಕಿತ್ಸೆ [illegible] ವಿವರಗಳು [illegible] ವಿಷಯಗಳು ಚಿತ್ರಪಟಗಳಸಹಿತ [illegible] ಕ್ರಯ ಪುಸ್ತಕ 1ಕ್ಕೆ ರೂ [illegible]

ಎಸ್. ವಿ. ಗೋಪಾಲ್ ಬುಕ್ ಡಿಪ್ಪೋ,
52-3 37. ತಿರುಪಳ್ಳಿಬೀದಿ, ಮದರಾಸ್.

ಸೊಗಸಾದ ಗೆಜ್ಜೆ ಕಟ್ಟಿದ ಬಂಗಾರದ ಬಾಳೆಗಳು.

ಇದು ಬಂಗಾರದ ಗಿಲೀಟಿನಿಂದ ಪ್ರಖ್ಯಾತಿಹೊಂದಿದ [illegible]



[illegible] ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಗಾಪಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಗೆಜ್ಜೆಬಾಳೆ 1ಕ್ಕೆ 3-0-0

ರೋಲ್ಡ್‌ಗೋಲ್ಡ್ ಕೈ ಬಳೆಗಳು.

ಇದು ಶುದ್ಧವಾದ ಅಮೇರಿಕನ್ ರೋಲ್ಡ್‌ಗೋಲ್ಡ್ [illegible]



[illegible] ದಿ. ಟಿ. ವ ದರಾಸು.

ರಬ್ಬರ್ ಸ್ಟ್ಯಾಂಪ್ ಇನಾಂ.
ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಶ್ರೇಷ್ಠವಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್‌ಮೇಡ್) ತಯಾರಾಗಿದೆ. [illegible] ದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾಚದಲ್ಲಿ [illegible] ಕ್ರಯ ಒಂದ್ದು ವಾಚ್ 1ಕ್ಕೆ 0 4-0

ವಿಳಾಸ — ಲೀಗಲ್ ವಾಚ್ ಕಂಪನಿ,
ಮದರಾಸ.
52-19 108 [illegible]

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕ್ಯಾಟಲೋಗ್ ಬರೆದರೆ ಉಚಿತ [illegible]

ಜೋಡು ಹೋಳಿನ ತೋಟದ ರೈಫಲುಗಳು		ರೂ	100 ರಿಂದ	ರೂ	2700 ರ	ವರೆಗೆ
ಒಂಟಿ	,,		35 ,,	,,	950	,,
ಜೋಡು	,,	ಕೋವಿಗಳು	50 ,,	,,	1350	,,
ಒಂಟಿ	,,		35 ,,	,,	275	,,
ಜೋಡು ಹೋಳಿನ ಕೇಪು	,,		45 ,,	,,	135	,,
ಒಂಟಿ	,,		30 ,,	,,	80	,,
ಬ್ರೀಚ್ ಲೋಡಿಂಗ್ ರಿವಾಲ್ವರುಗಳು			35 ,,	,,	350	,,
ಪಿಸ್ತೋಲುಗಳು			30 ,,	,,	150	,,

ಕಾಡು ಮೃಗಗಳ ಬೇಟೆ ಮೊದಲು ಬೇಟೆ ಮುಂತಾದ ಎಲ್ಲಾ ತರಹದ ರಾತ್ರಿಯ ವಿನೋದ ಮತ್ತು ಕೆಲಸಗಳಿಗೆ ಉಪಯೋಗಕರವಾದ ಉತ್ತಮ 'ನೈಟ್ ಲೈಟ್' ಎಂಬ ದೀಪಕ್ಕೆ ಒಂದೇ ರೂ. 30. ರವಾನೆಯ ಚಾರ್ಜಿಲ್ಲ. ಕತ್ತಿಗಳು, ಬಚೀಗಳು, ತೋಟಿಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನು ಬಹು ಕಡಿಮೆ ದರದಲ್ಲಿ ದೊರೆಯುವುವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
21-1 210 Abdul Rehman Street, BOMBAY.

ಎಂ. ಎಸ್. ಶಿದ್ದಪ್ಪ ಬ್ರದರ್ಸ್.
ಪಂಚಾಂಗ ಮತ್ತು ಕ್ಯಾಲೆಂಡರ್ ಪ್ರಕಾಶಕರು, ಮೈಸೂರು.

೧೯೪೦ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಮೈಸೂರು ಕ್ಯಾಲೆಂಡರುಗಳು.

1 ಅನೇಕ ವಿಷಯಗಳನ್ನೊಳಗೊಂಡು ವಾಲೇಶ್ವರ ಮತ್ತು [illegible] ದೇವರ ಚಿತ್ರಗಳು 17" ಇದ್ದು [illegible] ಶೀಟು ಕ್ಯಾಲೆಂಡರು 50ಕ್ಕೆ ರೂ 1 2 0 100ಕ್ಕೆ ರೂ [illegible] 0
2. 8½"×4½" ಸೈಜಿನ ಪಾಕೆಟ್ ಕ್ಯಾಲೆಂಡರು 25ಕ್ಕೆ ರೂ. 1 3 0 100ಕ್ಕೆ ರೂ 4 1 0
3 5½"×3½" ಸೈಜಿನ ಇಂಗ್ಲಿಷ್ ಪಾಕೆಟ್ ಕ್ಯಾಲೆಂಡರು 12ಕ್ಕೆ ರೂ 0 14 0 25ಕ್ಕೆ ರೂ 1 11 0
4. ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ಅಂದವಾಗಿ ಪ್ರಿಂಟಾದ 10"×14" ಸೈಜಿನಲ್ಲಿ ಅಶ್ವತ್ಥ, ಪಾರ್ವತಿ, ಗಣಪತಿ, ನಾದ ಮೊದಲಾದ ಚಿತ್ರದ ಕ್ಯಾಲೆಂಡರು 1ಕ್ಕೆ ರೂ 0 3 0 12ಕ್ಕೆ ರೂ. 1 2 0
5 18"×22" ಸೈಜಿನಲ್ಲಿ ದಪ್ಪ ಅಕ್ಷರದಿಂದ ಪ್ರಿಂಟಾಗಿರುವ ತಿಂಗಳಿಗೆ 1 ಶೀಟಿನಂತೆ ಹರಿದು ಹಾಕುವ ಆಫೀಸ್ ಕ್ಯಾಲೆಂಡರು 1ಕ್ಕೆ ರೂ. 0 4 0 12ಕ್ಕೆ ರೂ 2 1 0

0-8-0 ಆಣೆ ರವಾನಿಸಿದವರಿಗೆ ಮೇಲ್ಕಂಡ 5 ನಮೂನೆ ಕ್ಯಾಲೆಂಡರನ್ನು ಮಾದರಿಗಾಗಿ ಫ್ರೀ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ದರದಂತೆ ಸಿಗುವ ಕ್ಯಾಲೆಂಡರುಗಳಿಗೆ ಆಗುವ ಪೂರ್ತಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ದ್ವಾರ ನಿಮ್ಮ ವಿಳಾಸಕ್ಕೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಕ್ಯಾಲೆಂಡರ್ ರವಾನಿಸುವುದರಿಂದ ಪೋಸ್ಟೇಜು [illegible] ಖರ್ಚು ತಗಲುವುದರಿಂದ ಬರುವುದಕ್ಕೆ ಅಡ್ವಾನ್ಸ್ ಕಳುಹಿಸಬೇಕು ಇನ್ನೇ ಕೊಡುವುದಿಲ್ಲ. ಕ್ಯಾಲೆಂಡರುಗಳು ಸಿಗುವ ನಂತರ ಬರತಕ್ಕ ಮನಿಯಾರ್ಡರುಗಳನ್ನು ಹಿಂದಿರುಗಿಸಲಾಗುತ್ತೆ.

ಮನಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಬ್ರದರ್ಸ್,
52-26 [illegible] ಮೈಸೂರು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	20,660
ಜಮೂಬಂದ ಠೇವಣಾತಿ	1,87,705

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್

ಟ್ರೆಜರರ್. ಕೊಂಗೆಟ್ಟಿರ ಅಪ್ಪಯ್ಯನವರು

ಸೆಕ್ರೆಟರಿ
ಸಿ ಯನ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1929

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜಂಟರುಗಳಿಗೆ ಏಜಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು
ಮರೆನಾಡು—ಮೆ ಕೀಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ)
ಮೂರ್ನಾಡು—ಮಡೆಯಂಡ ದೇವಯ್ಯನವರು,
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ ಟಿ. ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ

12 bore Victor Cartridges Rs 10/- Per 100

Mahomedally-Noorbhoy.
ARMS & AMMUNITION MART
321 Abdul Rehman Street
BOMBAY, 3.
52-8

ಕಟುಕಷಾಯ ಮಲೇರಿಯ ದಳ—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ ಜ್ವರ ಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಪ್ಲೀಹದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ—ಇದು ಪ್ರಮೇಹ ಮತ್ತು ಕೃಚ್ಛ್ರ, ಮೂತ್ರ ಹೋಗುವಾಗ ಉರಿ, ಮೂತ್ರಕೋಶದ ಉರಿ, ... ಉರಿ, ಮೂತ್ರನಾಳದಲ್ಲಿ ... ಮೂತ್ರ ... ಮೂತ್ರ ಬರುವುದು, ... ಮೂತ್ರ ... ದೇಹದಲ್ಲಿ ಉರಿ ... ಪರಮ ದಿವ್ಯ ಔಷಧಿ ಬೆಲೆ ಬಾಟ್ಲು 1 3 6ಕ್ಕೆ ರೂ 1—3—8—0 6—2—0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ಕೂದಲಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿ ರೂ 1 1 ಡಜನಿಗೆ 3—3—0.

ಮನೋಲ್ಲಾಸಿನಿ ತೈಲ.—ತಲೆನೋವು, ತಲೆತಿರುಗುವುದು, ತಲೆಯುಂಟು ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವದನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ
52-4
9. ಮಂಗಳೂರು

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಪಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ ಗ್ರಾಮಾಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಚಿಲ್ಲರೆಯಾಗಿಯೂ ಸಗಟಾಗಿಯೂ ದೊರೆಯುತ್ತವೆ ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ 'ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್' ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.



24—23

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ

ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.				ಪ್ರೀಮಿಯಂ ಆದಾಯ.			
1925	296	ಲಕ್ಷ	ರೂಪಾಯಿ	1925	93	ಲಕ್ಷ	ರೂಪಾಯಿ
1926	391		,,	1926.	106	,,	,,
1927	468	,	,,	1927.	122	,	
1928	585	,,	,,	1928	110	,,	

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ [illegible]
1921ರಲ್ಲಿ ,, ,, ,, ,, ,,	1927ರಲ್ಲಿ ,, ,, ,, [illegible]5

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ... ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂ... ಬಂದರೆ ನಿಮಗೆ ಅದರಿಂದ ಲಾಭ ಉಂಟಾಗುವುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು

52-45

ಎಲ್. ಆರ್. ಕೃಷ್ಣಸ್ವಾಮಯ್ಯ
ಬ್ರಾಂಚ ಸೆಕ್ರೆಟರಿ.

Goldsmiths' Rolling Mills,
ಪಟ್ಟಿ ಮೆಶಿನುಗಳು.



ನಗ ಮಾಡುವವರು ಮತ್ತು ಅಕ್ಕಸಾಲೆಯವರು ಉಪಯೋಗಿಸುವ ಚಿನ್ನ ಮತ್ತು ಬೆಳ್ಳಿಯ ತಗಡುಗಳನ್ನು ಮಾಡುವ ಈ ಮಿಲ್ಲುಗಳಿಗೆ ನಾವು ಏಜಂಟರಾಗಿರುತ್ತೇವೆ ... ಮುಖ್ಯ ಪಟ್ಟಣಗಳಲ್ಲಿ ಸಬ್ ಏಜಂಟರುಗಳು ಬೇಕಾಗಿದ್ದಾರೆ ಹೆಚ್ಚಿನ ಸಂಗತಿ ಮತ್ತು ಕೆಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳುವುದು

Ch Sobhanachalam & Sons
Chilakalapudi P O.
Masulipatam

12—12

FORD SALES AND SERVICE

THE NEW CAR

The new model A For

The most economical car in the mark...
Accelerates 5 to 25 M P H in 8½ sec...
Petrol consumption 20—30 miles...
Gallon Performance 5 to 60 miles...
hour in top 40 M P H in second gear
A Wonderful Hill climber
Easy instalment terms if you pref...
For Demonstration & other particul...

Please apply to —

S. Sunder Rau,
Sole Ford Dealer for Coorg
MERCA...

24—19

Printed & published by P. I. Belliappa, at "Kodagu Press, Me... for "Kodagu" L...

"KODAGU" OFFICE MERCARA.
No. 1550.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತತಾ॥ ಐಕ್ಯಯುಕ್ತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ॥

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು

ಸಂಪುಟ ೯ ‖ ಮಡಿಕೇರಿ, ಸನ್ ೧೯೨೭ನೇ ಇಸವಿ ನವೆಂಬರ್ ತಾರೀಕು ೧೩ ನೇ ಶುಕ್ರವಾರ. ‖ ಸಂಚಿಕೆ ೨೪

Telephone — 3145

By Appointment to H. E. The Governor of Madras

Telegrams — "PRECIOUS"

Guarantee of Satisfaction through every order large or small

Brooch

Excellent Quality Chaste Designs Moderate Prices



Ice Tumbler

"Green Hill"
Virarajendrapet
7th Decr 26

Sir

I am glad to note that the Jewels have a good finish

(Sd.) Mrs. A. B. Chengappa

Suntikoppa
Nellore Estate.
7th April 28

Dear Sir

I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends.

(Sd.) Miss K. Subbiah

Mercara
20th May 27

Dear Sir

I am quite satisfied with the Jewels you sent on the 16th instant.

(Sd.) Mrs. K. S. Cariappa

52—9

Illustrated Catalogue Free on Application,

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ತೆಕ್ಕರ್ ಹುಳದ ದೆಸೆಯಿಂದ ಕೆಟ್ಟು ತೆಗೆದ ಕಾಫಿಗಿಡಗಳ ನೂತನಯು ಖನಿಗಳಾದ (Mineral) ಗೊಬ್ಬರಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ... ಕೆದ ಸ್ಥಳಗಳಲ್ಲಿ ಕಡಿಮೆ ಯಿಂದ ... (Experiment station) ದಲ್ಲಿ ಕಂಡು ಬಂದಿದೆ ... ರವು ಪ್ರಯೋಜನಕರವಾಗುವದೆಂದು ತಿಳಿಯುತ್ತದೆ (... ಮೈಸೂರು ... ಡಿಪಾರ್ಟ್‌ಮೆಂಟ್)

ಹೆಚ್ಚಿನ ಮಾಹಿತಿ ವಿವರ ತಿಳಿಯ ವಿಷಯ ... ಪತ್ರ ... ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ 409 ಕಲ್ಕತ್ತಾ.

(2) ಮಿಸ್ಟರ್ ... ಚಿಲಿಯನ್ ನೈಟ್ರೇಟ್ ಕಮಿಟಿ
ಮಡಿಕೇರಿ

ಏಕೆ ನರಳುತ್ತೀರಿ?

ಕ್ರಯವು ... ಆಂಗ್ಲಭಾಷೆಯಲ್ಲಿ ... ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ... ರೋಗಗಳ ... ಪುಸ್ತಕದಲ್ಲಿ ರೋಗಗಳ ... ನಿವಾರಣೆ ಮಾಡಿಕೊಳ್ಳಿರಿ

... ರಾಜವೈದ್ಯ ... ಫಾರ್ಮಸಿ, ... ಬಜಾರು ... ಮದ್ರಾಸು

... ವಿ ... ಗಳು.

ಮಶೀನ್‌ಗಳು ... ವಿಧವಾದ ಬಟ್ಟೆಗಳನ್ನು ಬಹು ಬೇಗನೆ ಹೊಲಿಯುವದು ... ಮಶೀನ್‌ಗಳಂತೆಯೇ ಇವು ಸಹ ಬೇಗನೆ ಹೊಲಿಯುವವು ... ದೊಡ್ಡ ಮಶೀನ್‌ಗಳಿಗೂ ... ವ್ಯತ್ಯಾಸವೂ ಇಲ್ಲ ... ಅನುಕೂಲವಾಗುವಂತೆ ... ಕ್ರಯವನ್ನು ಬಹು ಕಡಿಮೆ ಮಾಡಿದೆ ... ಒಂದು ಸೂಜಿ ಒಂದು ... ಮೊದಲಿಗಾಗಿ ಸ್ವಲ್ಪವನ್ನೇ ತರಿಸುವ ... ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ...



ಕ್ರಯ ರೂ 3—8—0

ಸಿಟಿ ಸಪ್ಲೈ...,

168. ... ಬಜಾರ್, ಮದರಾಸು.

ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣ ಆಯಿಲ್ ಮಿಲ್ಸ್ ಈದಿಗ ಯಕ್ಸ್‌ಟೆನ್ಷನ್, ಮೈಸೂರು.

ನಮ್ಮಲ್ಲಿ ... ಗಳಿಂದ ... ಶೋಧಿಸಲ್ಪಟ್ಟ ಅಪ್ಪಟವಾದ ಕಡಲೆಕಾಯಿ ಎಣ್ಣೆಯೂ ... ಕಡಲೆಕಾಯಿ ಹಿಂಡಿ ಮತ್ತು ಕಡಲೆಕಾಯಿ ಹಿಂಡಿ ಪುಡಿಯೂ ಸಹ ದೊರೆಯುತ್ತೆ.

ಹೆಚ್ಚು ವಿಷಯ ಗಳನ್ನು ತಿಳಿಯ ಅಪೇಕ್ಷೆಯುಳ್ಳವರು ಸಂತೆಪೇಟೆಯ ಲ್ಲಿ ಇರುವ ನಮ್ಮ ... ಅಥವಾ ಮಿಲ್ ಬಳಿಯಲ್ಲಾಗಲಿ ಯಾ ಪತ್ರ ದ್ವಾರ ತಿಳಿಯಬಹುದು ೫—೨೧

ಹೊಸ ಸ್ಟಾಕು! ಬೆಲೆ ಅಗ್ಗ!

ಕೊಡಗಿ ... ದ ... ಮಿತಿಯುಳ್ಳ ... ಸ್ಟೋರ್.

ಮಡಿಕೇರಿ

... ಸ್ಟೋರ್ ... ಸಾಮಾನು ... ಮಾರಾಟ ... ಗಳು ... ಸರಿಯಾದ ಕ್ರಯಕ್ಕೆ ದೊರೆಯುವವು

ಒಂದು ಸಲ ... ಕೊಂಡು ...

ಕೊಡಗು.

ಸಂ ೧೯೨೯ನೇ ಇಸವಿ

ನವಂಬರ್ ತಾ. ೧೫ನೇ ಶುಕ್ರವಾರ.

ಹಿಂದುಸ್ಥಾನದ ವಿಷಯ ಪಾರ್ಲಿಮೆಂಟಿನಲ್ಲಿ ಚರ್ಚೆ.

ವೈಸ್‌ರಾಯರ ಜಾಹೀರ್‌ನಾಮೆಯ ಕುರಿತು ಇಂಗ್ಲೆಂಡಿನ ಕನ್ಸರ್‌ವೇಟಿವ್ ಪಕ್ಷಕ್ಕಾಗಿ ಲಾರ್ಡ್ ರೀಡಿಂಗ್‌ರೂ ಮತ್ತು ಲಿಬರಲ್ ಪಾರ್ಟಿಗಾಗಿ ಲಾಯಿಡ್ ಜಾರ್ಜರೂ ಆಕ್ಷೇಪಣೆಗಳನ್ನು ಎತ್ತಿದ್ದರಿಂದ ಪಾರ್ಲಿಮೆಂಟಿನ ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್ ಎಂಬ ಎರಡು ಸಭೆಗಳಲ್ಲೂ ಕಳೆದ ವಾರ ಚರ್ಚೆಗಳು ನಡೆದವು. ಹೌಸ್ ಆಫ್ ಲಾರ್ಡ್ಸಿನಲ್ಲಿ ತಾರೀಕು 5ರಲ್ಲಿ ಚರ್ಚೆ ನಡೆಯಿತು. ಆ ಚರ್ಚೆಯಲ್ಲಿ ಇಂಡಿಯಾದ ವೈಸರಾಯರಾಗಿದ್ದ ಲಾರ್ಡ್ ರೀಡಿಂಗರು ಹೇಳಿದ್ದೇನೆಂದರೆ—ಸೈಮನ್ ಕಮಿಶನನ್ನು ಕೇಳದೆ ಸೈಮನ್ ಕಮಿಶನಿನ ರಿಪೋರ್ಟು ಪ್ರಕಟವಾಗುವ ಮುಂಚೆ ವೈಸ್‌ರಾಯರ ಜಾಹೀರ್‌ನಾಮೆಯನ್ನು ಪ್ರಕಟಿಸಲು ಬಲವಾದ ಕಾರಣವೇನಿತ್ತೆಂಬದನ್ನು ವಿವರಿಸಬೇಕೆಂತಲೂ, ವಸಾಹತ ಸ್ವರಾಜ್ಯವನ್ನು ಮುಂಚಿತ ಕೊಡುವದಾದರೂ 1917ನೇ ಇಸ್ವಿಯ ಜಾಹೀರ್‌ನಾಮೆಯ ಶರತ್ತುಗಳು ಜಾರಿಯಲ್ಲಿ ಇರುವುದೋ; ಇಲ್ಲವೋ ಎಂಬದನ್ನು ವಿವರಿಸಬೇಕೆಂತಲೂ ಮತ್ತು ಈ ವರೆಗೆ ಸರಕಾರವು ಕೈಕೊಂಡ ಧೋರಣೆ (ಪಾಲಿಸಿ) ಯಲ್ಲಿ ಮಾರ್ಪಾಡಾಗಿದೆಯೋ ಎಂತ ತಿಳಿಸಬೇಕೆಂತಲೂ ಕೇಳಿಕೊಂಡರು. ಇವರು ವೈಸರಾಯರಾಗಿದ್ದಾಗ ಹಿಂದುಸ್ಥಾನದ ಪ್ರಜಾ ಜವಾಬ್ದಾರಿ ಸರಕಾರವೆಂದರೆ ವಸಾಹತ ಸ್ವರಾಜ್ಯವೆಂತ ತಾನು ಎಂದೂ ಹೇಳಲಿಲ್ಲವೆಂತಲೂ, ಈಗ ಪ್ರಕಟಿಸಿದ ಜಾಹೀರ್‌ನಾಮೆಯಿಂದ ವಸಾಹತ ಸ್ವರಾಜ್ಯ ಕೂಡಲೇ ಸಿಕ್ಕಬಹುದೆಂತ ಹಿಂದುಸ್ಥಾನದಲ್ಲಿ ಆಸೆ ಹುಟ್ಟಬಹುದೆಂತಲೂ ಹೇಳಿದರು. ಇವರ ಭಾಷಣದಿಂದ ಇವರ ಪಾರ್ಟಿಯವರೂ, ಅವರ ಬೆಂಬಲವಾಗಿರುವ ಬ್ರಿಟನಿನ ಜನರೂ ಸಹ ಹಿಂದುಸ್ಥಾನಕ್ಕೆ ಕೊಟ್ಟ ವಾಗ್ದಾನವನ್ನು ನಡಿಸಿಕೊಡಲು ತಯಾರಿಲ್ಲವೆಂಬ ಭಾವನೆಯು ಹಿಂದುಸ್ಥಾನದಲ್ಲಿ ಹುಟ್ಟಿತು.

ಆದರೆ ತಾ. 7ರಲ್ಲಿ ಹೌಸ್ ಆಫ್ ಕಾಮನ್ಸಿನಲ್ಲಿ ಆದ ಚರ್ಚೆಯಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ವೆಡ್ಜ್‌ವುಡ್ ಬೆನ್ನರು ಹಿಂದುಸ್ಥಾನಕ್ಕೆ ಕೆಲವು ಮಟ್ಟಿಗಾದರೂ ಸಮಾಧಾನವಾಗುವಂತಹ ಭಾಷಣ ಮಾಡಿದ್ದಾರೆ.

ಲಿಬರಲ್ ಪಾರ್ಟಿ ಮುಖಂಡರಾದ ಲಾಯಿಡ್ ಜಾರ್ಜರಿಗೂ, ಕನ್ಸರ್ವೇಟಿವ್ ಪಾರ್ಟಿಯ ಲಾರ್ಡ್ ರೀಡಿಂಗರಿಗೆ ಬೆಂಬಲವಾಗಿದ್ದ ಲಾರ್ಡ್ ಬರ್ಕನ್‌ಹೆಡ್ಡರಿಗೂ ಬಲವಾದ ಜವಾಬು ಕೊಟ್ಟು, ವೈಸ್‌ರಾಯರು ಜಾಹೀರ್‌ನಾಮೆಯನ್ನು ಮಾಡಲು ಕಾರಣಗಳನ್ನು ಬಹಳ ವಿಷದವಾಗಿ ವಿವರಿಸಿರುತ್ತಾರೆ. ವೈಸರಾಯರೇ ಈ ಜಾಹೀರ್‌ನಾಮೆಯನ್ನು ಪ್ರಕಟಿಸಬೇಕೆಂತ ಕೇಳಿಕೊಂಡದ್ದರಿಂದ ಪ್ರಕಟಿಸಿದ್ದಾಗಿದೆ. ಮೊಂಟೆಗ್ಯೂರವರು 1917ರಲ್ಲಿ ಕೊಟ್ಟ ವಾಗ್ದಾನವನ್ನು ಬ್ರಿಟಿಷರು ನಡಿಸುವದು ಸಂಶಯಾಸ್ಪದವೆಂತ ಹಿಂದೀಯರಿಗೆ ಸಂದೇಹ ಹುಟ್ಟಿದೆ. ಅದ್ದರಿಂದ ಅದನ್ನು ನಿವಾರಿಸಬೇಕಾಗಿದೆಯೆಂತಲೂ ಮತ್ತು ಸೈಮನ್ ಕಮಿಶನಿನ ವರದಿಯು ಪ್ರಕಟವಾಗುವಾಗ ಹಿಂದುಸ್ಥಾನದಲ್ಲಿ ಒಳ್ಳೇ ಮನೋಭಾವವಿರಬೇಕಾದದ್ದು ಅವಶ್ಯವೆಂತಲೂ ವೈಸರಾಯರು ಕಾರಣ ಕೊಟ್ಟಿದ್ದಾರಂತೆ. ಬ್ರಿಟಿಷರ ವಾಗ್ದಾನಗಳಲ್ಲಿ ಹಿಂದೀಯರಿಗೆ ಭರವಸೆ ಕಡಿಮೆಯಾಗುತ್ತಿದೆಯೆಂಬ ವಿಷಯವನ್ನು ಬ್ರಿಟಿಷ್ ಮಂತ್ರಿ ಮಂಡಲದಲ್ಲೊಬ್ಬರಾದ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಒಪ್ಪಿರುವದು ತುಂಬಾ ತೃಪ್ತಿಕರವಾಗಿದೆ. ಹಿಂದುಸ್ಥಾನದಲ್ಲಿ ಸರ್ಕಾರದ ಮೇಲೆ ತೃಪ್ತರಾಗಿರುವವರೇ ಹೆಚ್ಚು, ಅತೃಪ್ತಿ ಇರುವವರು ಕಡಿಮೆಯೆಂತ ಸರ್ಕಾರದವರು ಸಾಧಾರಣವಾಗಿ ಹೇಳುವದು ರೂಢಿಯಾಗಿದೆ. ಸೈಮನ್ ಕಮಿಶನಿನ ಬಹಿಷ್ಕಾರದಿಂದ ಹಿಂದುಸ್ಥಾನದ ಅತೃಪ್ತಿಯ ಸೂಚನೆಯು ರುಜುವಾತಾದಂತೆ ತೆಗೆದುಕೊಂಡಿದ್ದಾರೆಂತ ಸ್ಪಷ್ಟವಾಯಿತು. ಹಿಂದುಸ್ಥಾನದವರು ಸಂಶಯಪಡಲು ಕಾರಣವಿದೆಯೆಂಬದಕ್ಕೆ ಲಾರ್ಡ್ ರೀಡಿಂಗ್, ಬರ್ಕನ್ ಹೆಡ್ ಮತ್ತು ಲಾಯಿಡ್ ಜಾರ್ಜರು ಕಳೆದ ವಾರ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣಗಳೇ ಸಾಕ್ಷಿಯಾಗಿದೆ.

ವೈಸರಾಯರ ಜಾಹೀರ್‌ನಾಮೆಯನ್ನು ಪ್ರಕಟಿಸಲು ಕನ್ಸರ್‌ವೇಟಿವ್ ಪಾರ್ಟಿಯ ಮುಂದಾಳುಗಳು ಖಾಸ್ಗಿಯಾಗಿ ಒಪ್ಪಿದ್ದೂ ಲಿಬರಲ್ ಪಾರ್ಟಿಯವರೂ, ಸೈಮನ್ ಕಮಿಶನಿನವರೂ, ಕನ್ಸರ್‌ವೇಟಿವ್ ಪಾರ್ಟಿಯವರೂ ಒಪ್ಪದ್ದರಿಂದ ಬ್ರಿಟಿಷ್ ಮಂತ್ರಿಮಂಡಲಕ್ಕೆ ಧರ್ಮ ಸಂಕಟ ಒಂದಿತೆಂತಲೂ, ಆದರೆ ಹಿಂದುಸ್ಥಾನದ ಆಡಳಿತ ನಡಿಸಲು ಈ ಜಾಹೀರ್‌ನಾಮೆಯನ್ನು ಪ್ರಕಟಿಸುವದು ಮಂತ್ರಿಮಂಡಲಕ್ಕೆ ಅವಶ್ಯವಾಗಿ ತೋರಿದ್ದರಿಂದ ಪ್ರಕಟಿಸಿದ್ದಾಗಿದೆಯೆಂತಲೂ ಮಿ. ವೆಡ್ಜ್‌ವುಡ್ ಬೆನ್ನರು ಹೇಳಿದರು. ಕೂಲಿಕಾರರ ಪಕ್ಷದ ಮಂತ್ರಿಮಂಡಲವು ಈ ರೀತಿ ಧೈರ್ಯ ತಾಳಿದ್ದು ಬಹಳ ತೃಪ್ತಿಕರ. ಈ ಪಂಗಡದವರು ಹಿಂದುಸ್ಥಾನದ ಕಡೆಗೆ ಸಹಾನುಭೂತಿಯುಳ್ಳವರಾಗಿದ್ದಾರೆಂಬದಕ್ಕೆ ಇದೊಂದು ದೃಷ್ಟಾಂತರವಾಯಿತು. ಹಿಂದುಸ್ಥಾನದವರಿಗೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸರಿ ಸಮಾನತ್ವವಿದೆಯೆಂಬ ಭರವಸೆಯನ್ನು ಹಿಂದುಸ್ಥಾನದವರಿಗೆ ಹುಟ್ಟಿಸಲು ಪ್ರಯತ್ನಿಸಲಾಗಿದೆಯೆಂತ ಸಹ ಹೇಳಿದರು. ಮಂತ್ರಿಮಂಡಲಿಯು ಹಿಂದೀಯರ ಮೇಲೆ ಇರುವ ನಿಜವಾದ ಸಹಾನುಭೂತಿಯಿಂದಲೇ ಈ ಮಾತುಗಳನ್ನಾಡಿದ್ದಾರೆಂಬದರಲ್ಲಿ ಸಂಶಯವಿಲ್ಲ. ಆದರೆ ಅವರ ಉದ್ದೇಶ ಎಷ್ಟೇ ಒಳ್ಳೇದಾದರೂ ಎಲ್ಲಾ ಪಾರ್ಟಿಗಳಿಂದ ಕೂಡಿದ ಪಾರ್ಲಿಮೆಂಟಿನ ಆಖೈರ್ ತೀರ್ಮಾನವು ಹೇಗೆ ಇದ್ದೀತೆಂತ ಈಗಲೇ ಹೇಳುವದು ಸಾಧ್ಯವಿಲ್ಲ.

ಹಿಂದುಸ್ಥಾನದಲ್ಲಿ ಸ್ವರಾಜ್ಯ ಸ್ಥಾಪನೆಯು ಸಾಧ್ಯವಾಗಬೇಕಾದರೆ ಜಾತಿ, ಮತ, ಪುರಾತನ ಹಕ್ಕುಬಾಧ್ಯತೆಗಳು, ಅನ್ಯೋನ್ಯ ಮತ್ಸರ ಮುಂತಾದ ಅನೇಕ ತರದ ಅಡಚಣೆಗಳನ್ನು ದಾಟಿ ಹೋಗಬೇಕಾಗಿದೆಯೆಂತ ಕನ್ಸರ್‌ವೇಟಿವ್ ಪಾರ್ಟಿ ಮುಖಂಡರಾದ ಮಿ. ಬಾಲ್ಡ್ವಿನರು ಹೇಳಿದರು. ಇದಕ್ಕೆ ವೆಡ್ಜ್‌ವುಡ್ ಬೆನ್ನರು ಹೇಳಿರುವದೇನೆಂದರೆ—"ಅಡಚಣೆಗಳಿವೆಯೆಂಬದನ್ನು ಎಲ್ಲರೂ ಒಪ್ಪಲೇ ಬೇಕು, ಆದರೆ ಇಂಥಾ ಅಡಚಣೆಗಳಿವೆಯೆಂಬ ಕಾರಣದಿಂದ ಮುಂದುವರಿಯದೆ ಕೂಡಲೂ ಬಹುದು, ಅಥವ ಅಡಚಣೆಗಳಿರುವದರಿಂದ ಅವುಗಳನ್ನು ನಿವಾರಿಸಿಕೊಂಡು ಮುಂದುವರಿಯಲು ಹೆಚ್ಚು ಉತ್ಸಾಹ ಹುಟ್ಟಲೂ ಬಹುದು. ಆದರೆ ನನ್ನ ಪಾರ್ಟಿಯವರೂ ಮತ್ತು ಬಹುಶಃ ಎಲ್ಲಾ ಪಾರ್ಟಿಯವರೂ ಸಹ ಮನಃ ಪೂರ್ತಿಯಾಗಿಯೂ, ಸ್ನೇಹಭಾವದಿಂದಲೂ ಕೆಲಸಮಾಡಿದರೆ ಈ ಅಡಚಣೆಗಳನ್ನು ನಿವಾರಿಸಿಕೊಳ್ಳಬಹುದೆಂತ ಭರವಸವಿದೆಯೆಂತ ನಾನು ಹೇಳುತ್ತೇನೆ" ಎಂಬ ಉದಾರ ಮಾತುಗಳನ್ನಾಡಿದ್ದಾರೆ. ಬ್ರಿಟಿಷ್ ಅಧಿಕಾರಿಗಳು ಈ ಅಡಚಣೆಗಳನ್ನು ಎತ್ತಿ ತೋರಿಸಿ ಹಿಂದುಸ್ಥಾನದ ಸ್ವಾತಂತ್ರ್ಯಕ್ಕೆ ಅಡಚಣೆಯನ್ನು ತಂದೊಡ್ಡುತ್ತಲೇ ಇರುವದು ಹಿಂದೀಯರಿಗೆಲ್ಲಾ ತಿಳಿದ ಸಂಗತಿಯಾಗಿದೆ. ಈಗಿನ ಮಂತ್ರಿಮಂಡಲಿಯಾದರೂ ಇಂಥಾ ಅಡಚಣೆಗಳನ್ನು ಹೋಗಲಾಡಿಸಿ ಮುಂದುವರಿಯಲು ನಿಶ್ಚೈಸಿರುವದರಿಂದ ಹಿಂದೀಯರಿಗೆ ಎಷ್ಟೋ ಸಮಾಧಾನವಾಗುತ್ತದೆ. ಬಾಲ್ಡ್ವಿನರು ಹೇಳಿರುವ ಅಡಚಣೆಗಳು ಇವೆಯೆಂತ ಹಿಂದೀಯರಿಗೂ ತಿಳಿದಿದೆ. ಆದರೆ ಪಾರತಂತ್ರ್ಯದಿಂದ ಬಿಡುಗಡೆಯಾಗಿ ಪ್ರಜಾಜನರ ಸ್ವಾಧೀನಕ್ಕೆ ಆಡಳಿತ ಸಿಕ್ಕಿದ ವಿನಹ ಈ ಅಡಚಣೆಗಳ ನಿವಾರಣೆಯಾಗುವದು ಸಾಧ್ಯವಿಲ್ಲವೆಂತ ಹಿಂದೀಯರಲ್ಲಿ ಹೆಚ್ಚು ಜನರು ನಂಬುತ್ತಾರೆ.

ಕನ್‌ಸರ್‌ವೇಟಿವ್ ಮುಖಂಡರಾದ ಮಿ. ಬಾಲ್ಡ್ವಿನರು ಸಹ ಹಿಂದೀಯರ ಮನಸ್ಸಿಗೆ ಶಾಂತಿಯನ್ನುಂಟು ಮಾಡುವ ಭಾಷಣವನ್ನೇ ಮಾಡಿದ್ದಾರೆ. "ಹಿಂದೀಯರೂ ಆರ್ಯರು, ನಾವೂ ಆರ್ಯರ ; ಅವರು ಪೂರ್ವಕ್ಕೆ ಹೋದರು, ನಾವು ಪಶ್ಚಿಮಕ್ಕೆ ಬಂದೆವು. ಅವರನ್ನು ಪ್ರಜಾಜವಾಬ್ದಾರಿ ಸರ್ಕಾರ ಕ್ರಮದಲ್ಲಿ ತಿದ್ದಬೇಕಾದದ್ದು ನಮ್ಮ ಕೆಲಸವಾಗಿದೆ. ಸ್ವರಾಜ್ಯ ಸರಕಾರದ ರೂಪ ಯಾವುದೇ ಆದರೂ, ಅವರೂ ಸಾಮ್ರಾಜ್ಯದ ಬೇರೆ ಭಾಗದವರೂ ಸರಿಸಮಾನರಾಗಿರುವಂತೆ ಮಾಡಬೇಕೆಂಬುವುದರಲ್ಲಿ ಯಾರಿಗೂ ಸಂಶಯವಿಲ್ಲ. ಸಾಮ್ರಾಜ್ಯದ ಬೇರೆ ರಾಜ್ಯಗಳಿಗಿಂತ ಕೀಳು ದರ್ಜೆಯಲ್ಲಿ ಹಿಂದುಸ್ಥಾನವು ಇರಬೇಕಂತಾದರೆ ಹಿಂದೂಸ್ಥಾನದಲ್ಲಿ ನಮ್ಮ ಕರ್ತವ್ಯವನ್ನು ನಾವು ಮಾಡಲಿಲ್ಲವೆಂತಲೇ ಆಯಿತು. ಈಗಿನ ಬಿಕ್ಕಟ್ಟಿನ ಸಮಯದಲ್ಲಿ ಸೈಮನ್ ಕಮಿಶನಿನ ಮತ್ತು ಇಂಡಿಯಾ ಸರ್ಕಾರದ ಗೌರವಕ್ಕೆ ಕೊರತೆ ಬರುವಂತ ಈ ಮಾತುಗಳನ್ನು ಯಾರೂ ಆಡಲಾರರು" ಎಂತ ಹೇಳಿ ವೈಸರಾಯರ ಜಾಹೀರ್‌ನಾಮೆಗೆ ಒತ್ತಾಸೆ ಕೊಟ್ಟರು. ಸೈಮನರು ಸಹ ತಮ್ಮ ಭಾಷಣದಲ್ಲಿ ಜಾಗರೂಕರಾಗಿದ್ದರೂ ಜಾಹೀರ್‌ನಾಮೆಯನ್ನು ಖಂಡಿಸುವ ಮಾತುಗಳನ್ನಾಡಲಿಲ್ಲ.

ಹಿಂದೂಸ್ಥಾನದ ಆಳ್ವಿಕೆಯಲ್ಲಿ ಧೋರಣೆಯು ಮಾರ್ಪಾಡಿದೆಯೋ ಎಂತ ಕೇಳಿದ್ದಕ್ಕೆ "ಆಳ್ವಿಕೆಯ ಮನೋಭಾವದಲ್ಲಿ ಖಂಡಿತವಾಗಿಯೂ ವ್ಯತ್ಯಾಸವಿದೆ; ಬರ್ಕನ್ ಹೆಡ್ಡರ ಮನೋಭಾವ ಹೋಗಿದೆಯೆಂತಲೂ, ಸೈಮನ್ ರಿಪೋರ್ಟು ಕಮಿಶನ್ ಪ್ರಕಟವಾದನಂತರ ಆಗಬೇಕಾದ ಕಾರ್ಯಕ್ರಮದಲ್ಲಿ ವ್ಯತ್ಯಾಸ ಮಾಡಿರುವದರಿಂದ ಧೋರಣೆಯಲ್ಲೂ ವ್ಯತ್ಯಾಸವಿದೆಯೆಂತಲೂ ಹೇಳಿದರು. ಇವರ ಈ ಉತ್ತರಗಳು ಕಾರ್ಯರೂಪದಲ್ಲಿ ಎಷ್ಟರ ಮಟ್ಟಿಗೆ ಫಲಕಾರಿಯಾಗುತ್ತೆಂಬದನ್ನು ನೋಡಬೇಕಷ್ಟೆ. ನಾವು ಕಳೆದ ವಾರ ಪ್ರಕಟಿಸಿದ ಹಿಂದೀ ಮುಖಂಡರ ಅಭಿಪ್ರಾಯಕ್ಕೆ ವೈಸರಾಯರು ಕೊಡುವ ಜವಾಬಿನಿಂದ ಸರಕಾರದ ಮನೋಭಾವವು ವ್ಯತ್ಯಾಸವಾಗಿದೆಯೋ ಎಂತ ಕೆಲವು ಮಟ್ಟಿಗ ತಿಳಿಯ ಬಹುದು.

ಕಾಗುಂಡ ವೋಟಿಂಗು.

(ಹಾಜರಿದ್ದವರಿಂದ)

ಮಡಿಕೇರಿ—ಭಾಗಮಂಡಲ—ಸುಂಟಿಕೊಪ್ಪನಾಡುಗಳ ಜಮ್ಮ ಓಟರುಗಳ ಪರ ಈ ತಾ. 13 ರಲ್ಲಿ ನಡೆಯಲಿಕ್ಕಿರುವ ಕೌನ್ಸಿಲು ಉಪ ಚುನಾವಣೆಗಾಗಿ ಒಬ್ಬ ಉಮೇದುವಾರರಾಗಿರುವ ಮಿ. ಪಚ್ಚೆಟ್ಟಿರ ಸುಬ್ಬಯ್ಯನವರಿಗೆ ಯಾಕೆ ಓಟು ಕೊಡಬೇಕೆಂಬದನ್ನು ವಿವರಿಸಲಿಕ್ಕಾಗಿ ಹಲವು ಗ್ರಾಮಗಳಲ್ಲಿ ಈಗಾಗಲೇ ವೋಟಿಂಗುಗಳು ನಡೆದವು. ಅದರಂತೆಯೇ ಕಳೆದ ತಾ. 10 ರಲ್ಲಿ ಬೆಳಿಗ್ಗೆ ಬೆಟ್ಟಗೇರಿಯಲ್ಲಿಯೂ, ಮಧ್ಯಾಹ್ನದ ಮೇಲೆ ಕಾಗುಂಡದಲ್ಲಿಯೂ ಮಿ. ಗಳಾದ ಕೋಟೆರ ಚಿಣ್ಣಪ್ಪ, ಸಿ. ಯನ್. ವೆಂಕಪ್ಪಯ್ಯ, ಯನ್. ಮುದ್ದಪ್ಪ, ಮತ್ತು ಪಂದ್ಯಂಡ ಬೆಳ್ಯಪ್ಪನವರ ನೋಟೀಸು ಮೇರೆ ವೋಟಿಂಗುಗಳು ಏರ್ಪಡಿಸಲಾಗಿದ್ದವು. ನೋಟೀಸುಗಳು 8 ದಿವಸಕ್ಕೆ ಮುಂಚೆ ಹಂಚಲಾಗಿದ್ದವು. ಮಿ. ಐ. ಸಿ. ಸುಬ್ಬಯ್ಯನವರೂ, ಅವರ ಕಡೆಯವರಾದ ವೋಟಿಂಗು ನೋಟೀಸಿಗೆ ರುಜು ಹಾಕಿದ್ದ ನಾಲ್ವರೂ, ಮಿ. ಕುಟ್ಟೇಟಿರ ಸುಬ್ಬಯ್ಯನವರೂ, ಮಿ. ಪೊಯ್ಯಟ್ಟಿರ ಪೂವಯ್ಯನವರೂ, ಮಿ. ಚಂಗಡ ಕುಟ್ಟಪ್ಪನವರೂ ಮತ್ತು ಮಿ. ಆರ್. ಸಿ. ಕೋದಂಡ ರಾಮಯ್ಯನವರೂ ಬೆಟ್ಟಗೇರಿ ವೋಟಿಂಗು ತೀರಿಸಿಕೊಂಡು ಮಧ್ಯಾಹ್ನ 2½ ಟೆಗೆ ಕಾಗುಂಡಕ್ಕೆ ಬಂದರು. ಆದರೆ ಚುನಾವಣೆಗೆ ನಿಂತಿರುವ ಇನ್ನೊಬ್ಬ ಉಮೇದುವಾರರಾದ ಮಿ. ಪಾಂಡಂಡ ಚಂಗಪ್ಪನವರ ಕಡೆಯವರಾದ ಮಿ. ಗಳಾದ ಪಾಲೇಕಂಡ ಐಯ್ಯಮ್ಮನವರು, ನಡಿಕೇರಿಯಂಡ ಬೆಳ್ಯಪ್ಪನವರು, ಉದಿಯಂಡ ಮಾಚಯ್ಯನವರು, ಬಟ್ಟಿಯಂಡ ಮುತ್ತಣ್ಣನವರು, ಕಲ್ಲುಮಾಡಂಡ ಅಚ್ಚಪ್ಪನವರು, ಚಂಗಂಡ ಕುಂಞಪ್ಪನವರು, ಒಡ್ಡಿರ ಪೂಣಚ್ಚನವರು ಮೊದಲಾದವರು ಬೆಳಿಗ್ಗೆಯೇ ಅಲ್ಲಿಗೆ ಬಂದಿದ್ದರಲ್ಲದೆ, ಮಿ. ಗಳಾದ ಪಾಂಡಂಡ ಮುತ್ತಣ್ಣನವರು, ಕೆಂಬಡತಂಡ ಮೊಣ್ಣಪ್ಪನವರು, ಬಿ. ಯನ್. ಕೃಷ್ಣಮೂರ್ತಿಯವರು ಬೆಟ್ಟಗೇರಿ ವೋಟಿಂಗು ಮುಗಿಸಿಕೊಂಡು ಅಲ್ಲಿಗೆ ಬಂದರು.

ಸುಮಾರು 150 ಜನರು ನೆರೆದಿದ್ದರು. ಕೆಲವರು ನಿಶಾ ಸೇವನೆ ಮಾಡಿದ್ದಂತೆ ಕಂಡು ಬಂತು. ನೋಟೀಸಿನ ಮೇರೆ 2½ ಗಂಟೆಗೆ ಸರಿಯಾಗಿ ವೋಟಿಂಗು ಪ್ರಾರಂಭವಾಯಿತು. ಮಿ. ಪೊಡನೋಲಂಡ ಭೀಮಯ್ಯನವರು ಅಧ್ಯಕ್ಷರಾಗಬೇಕೆಂದು ಮಿ. ಕೇಕಡ ಅಚ್ಚಯ್ಯನವರು ಸೂಚಿಸಿದರು. ಕೂಡಲೆ ಮಿ. ಪಟ್ಟಮಾಡ ಕುಂಞಪ್ಪನವರು ಅಧ್ಯಕ್ಷರಾಗಬೇಕೆಂದು ಮಿ. ಪಟ್ಟಮಾಡ ಪೂವಯ್ಯನವರು ಸೂಚಿಸಿದರು. ಎರಡು ಹೆಸರುಗಳೂ ಅನುಮೋದಿಸಲ್ಪಟ್ಟವು. ಯಾರು ಅಧ್ಯಕ್ಷರಾಗಬೇಕೆಂಬದನ್ನು ತೀರ್ಮಾನಿಸಲು ಓಟಿಗೆ ಹಾಕಬೇಕೆನ್ನುವಷ್ಟರಲ್ಲಿ ಕಲ್ಲುಮಾಡಂಡ ಒಬ್ಬ ಮುದುಕರು ಕುಂಞಪ್ಪನವರೇ ಅಧ್ಯಕ್ಷರಾಗಬೇಕೆಂದು ಹೇಳಿದ ಕೂಡಲೆ ಮಿ. ಕುಂಞಪ್ಪನವರು ಅಧ್ಯಕ್ಷರಾಗಿ ಕೂತುಕೊಂಡರು. ಕೂಡಲೆ ಅಧ್ಯಕ್ಷರು ಮಿ. ಪಾಂಡಂಡ ಚಂಗಪ್ಪನವರ ಪರ ಮಿ. ಕೃಷ್ಣಮೂರ್ತಿಯವರು ಮತ್ತು ಮಿ. ಐ. ಸಿ. ಸುಬ್ಬಯ್ಯನವರಿಗಾಗಿ ಸುಬ್ಬಯ್ಯನವರು ಮಾತ್ರ ಮಾತಾಡ ಬೇಕಲ್ಲದೆ ಬೇರೆ ಯಾರೂ ವೋಟಿಂಗಿನಲ್ಲಿ ಮಾತಾಡಕೂಡದೆಂದು ಹುಕುಂ ಮಾಡಿದರು. ಆದರೂ ತಿರಿಗಿ ಮಿ. ಕೃಷ್ಣಮೂರ್ತಿಯವರ ಭಾಷಣವಾಯಿತು. ನಂತರ ಮಿ. ಐ. ಸಿ. ಸುಬ್ಬಯ್ಯನವರು ಎದ್ದು, ನೋಟೀಸಿಗೆ ರುಜುಹಾಕಿದ 4 ಮಹನೀಯರೇ ಈ ವೋಟಿಂಗಿನಲ್ಲಿ ಮೊದಲು ಮಾತಾಡಬೇಕಾಗಿತ್ತು, ಅವರಿಗೆ ಮಾತಾಡಲು ಅವಕಾಶ ಕೊಟ್ಟನಂತರ ತಾನು ಮಾತಾಡುವೆನೆಂದೂ, ಅವರನ್ನು ಮಾತಾಡಲು ಬಿಡದೆ ಹೋದರೆ ತಾನು ಮಾತಾಡುವದಿಲ್ಲವೆಂದೂ ಹೇಳಿದರು. ಅಧ್ಯಕ್ಷರು ಸುಬ್ಬಯ್ಯನವರಲ್ಲದೆ ಬೇರೆ ಯಾರೂ ಮಾತಾಡಕೂಡದೆಂದು ಹೇಳಿದರು. ಕಾಲು ಗಂಟೆ ವರೆಗೆ ಯಾರೂ ಮಾತಾಡಲಿಲ್ಲ. ಆಗ್ಗೆ ಪಾಲೇಕಂಡ ಐಯ್ಯಮ್ಮನವರು ಅಧ್ಯಕ್ಷರಿಗೆ ಒಂದು ಚೀಟಿ ಬರೆದು ಕಳುಹಿಸಿದ ತರುವಾಯ ಅಧ್ಯಕ್ಷರು ಮಿ. ಪಾಂಡಂಡ ಚಂಗಪ್ಪನವರಿಗೆ ಎಲ್ಲರೂ ಓಟು ಕೊಡಬೇಕಲ್ಲದೆ ಮಿ. ಸುಬ್ಬಯ್ಯನವರಿಗೆ ಯಾರೂ ಒತ್ತಾಸೆ ಕೊಡಕೂಡದೆಂದು ಮುಂತಾಗಿ ಹೇಳಿ ವೋಟಿಂಗನ್ನು ಬರಕಾಸ್ತು ಮಾಡಿದರು.

ಕೂಡಲೆ ಕೆಲವರು ವೋಟಿಂಗಿನಿಂದ ಎದ್ದರು. ಮಿ. ಸುಬ್ಬಯ್ಯನವರ ಕಡೆಯವರು ಕೂತಲ್ಲೇ ಇದ್ದರು. ಪಾಂಡಂಡ ಚಂಗಪ್ಪನವರ ಕಡೆಯವರು ಕೆಲವರು—ಯಾರೂ ಹೋಗಕೂಡದು, ಎಲ್ಲರೂ ಅಲ್ಲಿಯೇ ಇರಬೇಕೆಂದು ಹೇಳಿದರು. ಅಷ್ಟರಲ್ಲಿ ಮಿ. ಪಾಂಡಂಡ ಮುತ್ತಣ್ಣನವರು 'ಇನ್ನು ಗಲಾಟೆಯಾಗುವಂತಿದೆ, ನೀವು ಹೋಗುವುದು ಒಳ್ಳೇಯದು' ಮಿ. ಕೆ ಸಿ ಚಿಣ್ಣಪ್ಪ ಮತ್ತು ಪಿ ಎ ಬೆಳ್ಯಪ್ಪನವರಿಗೆ ಸೂಚನೆ ಕೊಟ್ಟರು. ಮಿ. ಪೊಡನೋಲಂಡ ಭೀಮಯ್ಯನವರನ್ನು ಹೊಡೆಯುವರೆಂಬ ಭೀತಿಯಿಂದ ಅವರನ್ನು ಸುಮಾರು 2 ಮೈಲು ದೂರ ಅವರ ಮನೆಗೆ ಕಾರಿನಲ್ಲಿ ಬಿಟ್ಟು ಬರಲು ಮಿ. ಕುಟ್ಟೇಟಿರ ಸುಬ್ಬಯ್ಯನವರು ಹೋಗಿರುವುದರಿಂದ ಅವರ ವಾಪಸು ಬಂದ ಕೂಡಲೆ ತಾವು ಹೊರಟು ಹೋಗುತ್ತೇವೆಂದು ಅವರು ಅಂದರು. ಸ್ವಲ್ಪ ಹೊತ್ತಿನಲ್ಲೇ ನಿಶಾಸೇವಿಸಿದ್ದ ಒಬ್ಬ ಹೆಗ್ಗಡೆಯು ಕೂತುಕೊಂಡಿದ್ದ ವೆಂಕಪ್ಪಯ್ಯನವರ ಸಮೀಪ ಬಂದು ಬಾಯಿಗೆ ಬಂದ ಹಾಗೆ ಅವರಿಗೆ ಬೈದನು ... ಕುಡಿದಿದ್ದ ಇನ್ನೂ ಒಬ್ಬಿಬ್ಬರು ವೆಂಕಪ್ಪಯ್ಯನವರನ್ನು ... ರು. ವೆಂಕಪ್ಪಯ್ಯನವರಾಗಲೀ ಅವರ ಕಡೆಯವರಾಗಲೀ ಏನೊಂದೂ ಮಾತಾಡದೆ ಎದ್ದು ರಸ್ತೆ ಕಡೆ ಹೋಗುವ ... ಸ್ಸಿಗೆ ಸಮೀಪಿಸುವಷ್ಟರಲ್ಲಿ ಮಿ. ಪಟ್ಟಮಾಡ ಪೂವಯ್ಯನವರು ವೆಂಕಪ್ಪಯ್ಯನವರ ಮುಂದೆ ನಿಂತು ಅವರಿಗೆ ಸಲಾಂ ... ಡಿದರು. ವೆಂಕಪ್ಪಯ್ಯನವರು ನಮಸ್ಕರಿಸುವಷ್ಟರಲ್ಲಿ ... ಗಡೆಯಿಂದ ಅಮಲೇರಿದ್ದ ಒಬ್ಬ ಹೆಗ್ಗಡೆಯು ಅವರ ತಲೆಗೆ ಒಂದು ದೊಣ್ಣೆಯಿಂದ ಹೊಡೆದನು. ಅವರು ತಲೆ ಬಗ್ಗಿಸಿದ್ದರಿಂದ ಪೆಟ್ಟು ಕುತ್ತಿಗೆಗೂ ಬೆನ್ನಿಗೂ ಬಿತ್ತು. ವೆಂಕಪ್ಪಯ್ಯನವರ ಸಂಗಾತಿಗಳು ಅಲ್ಲಿ ಇದ್ದವರನ್ನು ಸಮಾಧಾನ...

(5ನೇ ಪುಟದಲ್ಲಿ ಮುಂದುವರಿದಿದೆ.)

TELLICHERRY TILES COMPANY, LIMITED.
ತಲಚೇರಿ ಹಂಚುಗಳ ಕಂಪೆನಿ ಲಿಮಿಟೆಡ.

(1913ರ ಇಂಡಿಯನ್ ಕಂಪೆನಿಗಳ VII ಆಕ್ಟಿನ ಮೇರೆ ಸ್ಥಾಪಿತವಾದದ್ದು.)

ಭಂಡವಾಳ: (ಎರಡು ಲಕ್ಷ) ರೂ. ೨,೦೦,೦೦೦.

೨೫ ರೂಪಾಯಿಯ ೮೦೦೦ ಸಾಧಾರಣ ಪಾಲುಗಳಾಗಿ ಹಂಚಲ್ಪಟ್ಟಿವೆ.

ಈಗ ಹಂಚುವಂಥಾದ್ದು—೨೫ ರೂಪಾಯಿಯ ೪೦೦೦ ಪಾಲುಗಳು—ಈ ಕೆಳಗಿನ ಮೇರೆ ಸಲ್ಲತಕ್ಕದ್ದು.

ಅಪ್ಲಿಕೇಶನ್ ಕೊಡುವಾಗ ಪಾಲು ಒಂದರ ೧೦ ರೂ.
ಹಂಚಿದಾಗ " ೫ "

Dirctors ಡೈರೆಕ್ಟರುಗಳು.

1. ಮಿ. ಕೆ. ಟಿ. ಚಾತುಕುಟ್ಟಿ ನಂಬಿಯಾರ್, ಜಾಯಿಂಟ್ ಆರ್ಡರ್, ತಲಿಚಾಲ್, ಇರಿಕೂರ ಪೋಸ್ಟ್, ಉ. ಮಲಬಾರ್.
2. ಎ. ಕೆ. ಕುನ್ಹಿಮಾಯಿನ್ ಹಾಜಿ, ಮರ್ಚೆಂಟ್ ಮತ್ತು ಟ್ರ್ಯಾಂಡ್ ಆರ್ಡರ್, ವೈಸ್ ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ತಾಲೂಕು ಬೋರ್ಡ್, ಡೈರೆಕ್ಟರ್, ದಿ ಕೊಡಗು ಸಾ ಮಿಲ್ ಕೊ., ಲಿಮಿಟೆಡ್, ವಲಿಯಪಟ್ಟಣ ಪೋಸ್ಟ್.
3. ಸಿ. ಸಾಮುವೇಲ್ ಆರೋನ್, ಪಾರ್ಟ್ನರ್, ಮೆಸರ್ಸ್. ಸಿ. ಆರೋನ್ ಅಂಡ್ ಸನ್ಸ್, ಡೈರೆಕ್ಟರ್, ಪಿಟರ್ ಇಂಡಸ್ಟ್ರೀಸ್, ಲಿಮಿಟೆಡ್, ಕೊರಂಗಾಡು, ಪಾಪ್ಪಿನಿಸೆರಿ ಪೋಸ್ಟ್, ಉ. ಮಲಬಾರ್.
4. ಕೆ. ಕೆ. ಸುಬ್ಬರಾವ್, ಮರ್ಚೆಂಟ್, ಚೇರ್ಮ್ಯಾನ್, ಮುನ್ಸಿಪಲ್ ಕೌನ್ಸಿಲ್, ಕಣ್ಣಾನೂರು.

Managinq Agents ಮೇನೆಜಿಂಗ್ ಏಜೆಂಟರು.

ಮೆಸರ್ಸ್ ಸಿ. ಆರೋನ್ ಅಂಡ್ ಸನ್ಸ್, ಪಾಪ್ಪಿನಿಸೆರಿ, ಉ. ಮಲಬಾರ್.

Banerks ಬ್ಯಾಂಕುಗಳು.

ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯ, ತಲಚೇರಿ.
ಕಣ್ಣಾನೂರು ಬ್ಯಾಂಕ್, ಲಿಮಿಟೆಡ್, ಕಣ್ಣಾನೂರು.

4—4 ಪ್ರಾಸ್ಪೆಕ್ಟಸಿಗೆ ಮೇನೆಜಿಂಗ್ ಏಜೆಂಟರುಗಳಿಗೆ ಬರೆಯಿರಿ.

ಅಹಿಂಸೆಯೂ ಅಂಜುಬುರುಕತನವೂ.

ಮಹಾತ್ಮಾ ಗಾಂಧಿಯವರು 'ಯಂಗ್ ಇಂಡಿಯಾ'ದ ...ನೇ ಅಕ್ಟೋಬರ್ ೧೯೨೮ನೇ ಸಂಚಿಕೆಯಲ್ಲಿ ಬರೆದುದು.

(ಬಾಗಲಕೋಟೆಯಲ್ಲಾದ ಅತ್ಯಾಚಾರದ ವಿಷಯವಾಗಿ ಡಾ. ಹರ್ಡೀಕರರವರು ಪ್ರಸಿದ್ಧಮಾಡಿದ ಲೇಖನವನ್ನು ಕುರಿತು ಮಹಾತ್ಮ ಗಾಂಧಿಯವರು ಕೆಳಗಿನಂತೆ ಅಭಿಪ್ರಾಯ ಪಟ್ಟಿದ್ದಾರೆ)

ಕಳೆದ 31ನೇ ತಾರೀಕಿನ ದಿವಸ ಬಾಗಲಕೋಟೆಯಲ್ಲಿ ...ದೂಸ್ಥಾನಿ ಸೇವಾದಲದ ಕೆಲವು ಸ್ವಯಂಸೇವಕರ ಮೇಲೆ ...ಅತ್ಯಾಚಾರದ ವಿಷಯವಾಗಿ ಡಾ. ಹರ್ಡೀಕರರು ನನಗೆ ...ದು ತಿಳುಹಿಸಿದ್ದಾರೆ. ಸ್ವಯಂಸೇವಕರು ವಾದ್ಯಗಳೊಡ...ಊರಲ್ಲಿ ಹಸ್ತಪತ್ರಿಕೆಗಳನ್ನು ಹಂಚುತ್ತ ನಡೆದಿದ್ದರು. ...ಗುವಾಗ ಹತ್ತಿರದಲ್ಲಿದ್ದ ಒಂದು ಮಸೀದಿಯು ಅವರಿಗೆ ...ಣಿಸಲಿಲ್ಲ. ಆದ್ದರಿಂದ ಅವರ ಹತ್ತಿರ ಹೋದಾಗ್ಗೆ ಸಹ ...ಸುತ್ತಲೇ ನಡೆದಿದ್ದರು. ಇದನ್ನು ನೋಡಿ ಸಿಟ್ಟಿಗೆದ್ದ ...ರು ಮಸೀದಿಯೊಳಗಿಂದ ಹೊರಗೆ ಬಂದು ಸ್ವಯಂಸೇವಕ...,ಕಲ್ಲು, ಕಟ್ಟಿಗೆ, ಸಲಿಕೆ ಮೊದಲಾದ ಆಯುಧಗಳಿಂದ ...ಹದರೆಂದು ಆಪೋದವಿದೆ. ಸ್ವಯಂಸೇವಕರು ತಾವು ...ಮಿದೇ ಮಾಡಿದ ತಪ್ಪಿಗಾಗಿ ಕ್ಷಮೆ ಬೇಡಿದರೂ ಅವರ ...ಲಿನ ಅತ್ಯಾಚಾರವು ನಿಲ್ಲಿಸಲ್ಪಡಲಿಲ್ಲವೆಂದು ಡಾ. ಹರ್ಡೀ...ರವರ ಲೇಖನ ಮೇಲಿಂದ ತಿಳಿಯ ಬರುತ್ತದೆ. ಆದಾ... ಸ್ವಯಂಸೇವಕರು ಪ್ರತಿಕಾರ ಮಾಡಲೇ ಇಲ್ಲ. ಅದ... ಈ ಸಂಬಂಧದಿಂದ ಪೊಲೀಸರ ಕಡೆ ದೂರು ಹೇಳಕೂಡ... ನಿಶ್ಚಯಿಸಿದ್ದರು.

ಈ ಆತ್ಮಸಂಯಮನವು ಅಹಿಂಸೆಯ ತತ್ವದಿಂದ ಉಂ...ಯ್ತೊ ಅಥವಾ ಅಂಜುಬುರುಕತನದಿಂದ ಉಂಟಾದದ್ದೊ ಪ್ರಶ್ನೆಯು ಉದ್ಭವಿಸುತ್ತದೆ. ನನ್ನ ತಿಳುವಳಿಕೆಯ ಪ್ರ...ಈ ಪ್ರಸಂಗದಲ್ಲಿ ಅಂಜುಬುರುಕತನದ ಪ್ರಶ್ನೆಯೇ ಒಂ... ಸ್ವಯಂಸೇವಕರು ಓಡಿ ಹೋಗಿದ್ದರೆ ಮಾತ್ರ ಅ...ಂಜುಬುರುಕತನದಿಂದ ನಡೆದಂತಾಗುತ್ತಿತ್ತು. ಅವರ ಅತ್ಯಾಚಾರವು ನಿಲ್ಲುವ ವರೆಗೆ ಅಲ್ಲಿಯೇ ಧೈರ್ಯ...ಂತು ಸ್ವಲ್ಪವಾದರೂ ಪ್ರತೀಕಾರ ಮಾಡದೆ ಅತ್ಯಾ...ವ್ರ ಸಹಿಸಿಕೊಂಡರೆಂದು ತಿಳಿಯ ಬರುತ್ತದೆ.

"ಹಿಂಸೆ" ಮತ್ತು "ಅಂಜುಬುರುಕತನ" ಇವೆರಡು ಪ...ರಸ್ಪರ ವಿರೋಧಿಕಶಬ್ದಗಳಾಗಿವೆ. ಅಹಿಂಸೆಯು ಅ...ಶ್ರೇಷ್ಠ ಸದ್ಗುಣವು; ಅಂಜುಬುರುಕತನವು ದುರ್ಗುಣ...ನಿಕೃಷ್ಟವಾದುದು. ಅಹಿಂಸೆಯು ಪ್ರೇಮದಿಂದ ಉ...ಗೆ. ಅಂಜುಬುರುಕತನಕ್ಕೆ ದ್ವೇಷವು ಜನ್ಮಕೊಡು... ಅಹಿಂಸೆಯಲ್ಲಿ ನಿಸ್ಸಂಕೆ ಇರುತ್ತದೆ. ಅಂಜುಬು...ರನ್ನು ಹಿಂಸೆಗೆ ಈಡು ಮಾಡುತ್ತದೆ. ಸಂಪೂ...ರ್ಣ... ಆಗತಕ್ಕ ಕಾರ್ಯವು, ಅಹಿಂಸೆಯಿಂ... ...ಗುವುದಿಲ್ಲ; ಆದರೆ ಅಂಜುಬುರುಕತನದಿಂದ ...ತ್ತದೆ.

ಸ್ವಯಂಸೇವಕರ ವರ್ತನದಲ್ಲಿ ಅಂಜುಬುರುಕತನದ ...ನನಗೆ ಕಂಡು ಬರುವುದಿಲ್ಲ. ಅವರು ಆ ಪ್ರತಿ...ವನ್ನು ತೋರಿಸಿದರೆಂದೂ ಯಾರೂ ಸಾಧಿಸುವು...ಲ್ಲ. ಸ್ವಯಂಸೇವಕರ ತ್ಯಜನ ಪಥಕ್ಕೆ ಬಂದರೂ ಅವರ ವೇಲೆ ನಡೆದ ಕ್ರೂರ ಅತ್ಯಾಚಾರವನ್ನು ಸಹಿಸಿ ಕೆಲವು ಮು ಸಲ್ಮಾನ ಸ್ತ್ರೀಯರು "ಇನ್ನು ಅವರನ್ನು ಹೊಡೆಯಬೇಡಿರಿ" ಎಂದು ಹೇಳಿದರಂತೆ. ನನಗೆ ತಿಳಿದ ಸಂಗತಿಗಳು ನಿಜವಿದ್ದರೆ ಈ ಸ್ವಯಂಸೇವಕರ ವರ್ತನವು ರಾಷ್ಟ್ರೀಯ ಮಹಾಸಭೆಯ ಆಜ್ಞೆ (Creed) ಯ ಮೇರೆಗೆ ಶಸ್ತ್ರರಹಿತ ಮಾಡಿದಂಥದೂ ಮ...ತ್ತು ಎಲ್ಲಷ್ಟು ತಪ್ಪದೆ ಅಹಿಂಸಾತ್ಮಕವೂ ಇತ್ತು. ಈ ವರ್ತನದ ಯೋಗ್ಯಾಯೋಗ್ಯದ ವಿಷಯವಾಗಿ ಭಿನ್ನಾಭಿಪ್ರಾಯಗಳಾಗಬಹುದು. ಆದರೆ ಸ್ವಯಂಸೇವಕರ ಧೈರ್ಯದ ವಿಷಯವಾಗಿ ಮಾತ್ರ ಭಿನ್ನಾಭಿಪ್ರಾಯಗಳಾಗತಕ್ಕವು. ನಿಸ್ಸಂಶಯವಾಗಿಯೂ ಮಹಾಸಭೆಯ ಆಜ್ಞೆ (Creed) ಮೇರೆಗೆ ಅ...ತ್ಯಾಚಾರಕ್ಕೆ ಗುರಿಯಾದ ಜನರು ಪೊಲೀಸರಲ್ಲಿ ದೂರು ಹೇಳದಿರುವುದು ಯೋಗ್ಯವೇ ಸರಿ. ಸ್ವಯಂಸೇವಕರು ಧೈರ್ಯದಿಂದ ಮತ್ತು ಪೂರ್ಣ ತಿಳುವಳಿಕೆಯಿಂದ ಕಷ್ಟ ಸಹಿಸಲು, ಕಲಿಯುತ್ತ ಹೋದಂತೆ ಪ್ರಸಂಗ ಬಂದಾಗ ಅವರ ಕಾರ್ಯಕ್ಷಮತೆಯು ಹೆಚ್ಚು ಪ್ರಮಾಣದಲ್ಲಿ ಕಂಡು ಬರುವದೆಂದು ನನ್ನ ಪೂರ್ಣ ನಂಬಿಕೆಯಿದೆ.

ಕೌನ್ಸಿಲು ಪ್ರಶ್ನೆಗಳು.

(ಕೆ. ಪಿ. ತಿಮ್ಮಯ್ಯನವರು ಕಳುಹಿಸಿದ್ದು)

XXV. (1) ಕೊಡಗಿನಲ್ಲಿ ಒಟ್ಟು ಈ ವರೆಗೆ ಜನರಲ್ಲಿ ನಿಂತಿರುವ ಟಕಾವಿ ಹಣವೆಷ್ಟು?

(2) ವಾಯಿದೆ ಮೀರಿ ವಸೂಲಾತಿಗೆ ಬಾಕಿ ಇರುವ ತ...ಣವೆಷ್ಟು?

1927—28ರಲ್ಲಿ ವಾಯಿದೆ ಕೊಟ್ಟ ಹಣವೆಷ್ಟು?

(3) ಮತ್ತು ಜನರೆಷ್ಟು?

(4) 1927—28ರಲ್ಲಿ ಎಷ್ಟು ಜನರ ಭೂಮಿ ಹರಾಜು ...ಆಯಿತು?

(5) ಈ ಪೈಕಿ ಜಪ್ತು ಭೂಮಿ ವಿಕರಿಯೆಷ್ಟು, ಹಾಗು ಭೂಮಿ ವಿಕರಿ ಎಷ್ಟು?

XXVI. (1) 1925ರಿಂದ 1928ರ ವರೆಗೆ ಸರಕಾರದ ...ಬಿಟ್ಟು ಪಟ್ಟಣಗಳಲ್ಲಿ ಪಿರ್ಕ ಕಳೆದು ಬಾಕಿ ಇರುವ ಹ...ಣವೆಷ್ಟು?

(2) ಆ ಹಣವು ಎಲ್ಲಿ ಇಡಲ್ಪಟ್ಟಿದೆ?

(3) ಅದಕ್ಕೆ ಏನಾದರೂ ಬಡ್ಡಿ ಬರುತ್ತದೆಯೋ?

(4) ಬರುವುದಾದರೆ, ಯಾವ ದರದಲ್ಲಿ?

XXVII. (1) ಬ್ರಿಟಿಷ್ ಕೆಲಸಕ್ಕೆ ಜನರನ್ನು (ಸಿ...ಪ್ಪಾಯಿಗಳನ್ನು) ಸೇರಿಸಿಕೊಳ್ಳುವುದರಲ್ಲಿ ಸರಕಾರಕ್ಕೆ ಏನಾದ...ರೂ ಖಂಡಿತವಾದ ನಿಯಮವಿದೆಯೋ?

(2) ಜಾತಿ, ಮತ, ಪಂಗಡಗಳ ಮೇಲೆ ಅವಲಂಬಿಸಿರುವ ರಾಜಕೀಯ ಪಾರ್ಟಿಯ ಮುಖಂಡರಿಗೆ ಮರ್ಯಾದೆ ಸರಕಾ...ರದಲ್ಲಿ ಜಪ್ತಿ ಪರವಿ ಕೊಟ್ಟಿದ್ದು ಇಲ್ಲಿಯ ಸರಕಾರದ ಗೋ...ಚರಕ್ಕೆ ಬಂದಿದೆಯೋ?

(3) ಮಿ. ಪಿ. ಬಿ. ಮೇದಪ್ಪನವರು ಕೌನ್ಸಿಲು ಮೆಂಬರಾಗಿದ್ದಾಗ, ಅವರ ರಾಜಕೀಯ ಅಭಿಪ್ರಾಯವು ಸರಕಾರಕ್ಕೆ ಗೊತ್ತಿತ್ತೊ?

(4) ಅವರು ಕೊಡಗಿನ ಸಭೆಯ ಒಬ್ಬ ಮುಖಂಡರೆಂದು ಸರಕಾರಕ್ಕೆ ಗೊತ್ತಿದೆಯೇ?

(5) ಅವರು ಈಗಲೂ ಆ ಸಭೆಯ ಮೆಂಬರಾಗಿದ್ದಾರೋ?

(6) ಅವರಿಗೆ ರಾಜಕೀಯದಲ್ಲಿ ಬಹಳ ವಿರೋಧಿಗಳಿದ್ದುದು ಸರಕಾರದ ಗೋಚರಕ್ಕೆ ಬಂದಿದೆಯೋ?

(7) ಅವರು ಸೈಮನ್ ಕಮಿಶನ್ ಮುಂದೆ ಸಾಕ್ಷಿ ಕೊಡಲಿಕ್ಕೆ ಮದ್ರಾಸಿಗೆ ಹೋದದ್ದು ನಿಜವೋ?

(8) ಅವರು 'ಲೋಕಸಾಹಿತ್ಯ' ಪತ್ರಿಕೆಯಲ್ಲಿಯೂ, ಕಾವೇರಿ ಮೋಟಾರ್ ಸರ್ವೀಸಿನಲ್ಲಿಯೂ ಆಯಿಲ್ ಮಿಲ್ಲಿನಲ್ಲಿ ಪಾಲುದಾರರಾಗಿ ಈಗಲೂ ಇದ್ದಾರೋ?

(9) ಅವರು 'ಲೋಕಸಾಹಿತ್ಯದ' ಪಾಲಿಸಿಯನ್ನು ಈಗ ನಡೆಸುತ್ತಾರೋ?

XXVIII. (1) ಮಡಿಕೇರಿ ಮತ್ತು ದನಗಳ ಸಂತೆಯ ಹರಾಜಿನಿಂದ ಬಂದ ಒಟ್ಟು ಹಣವೆಷ್ಟು?

(2) ಮಡಿಕೇರಿ ಕಮಿಟಿ ರಿಪೋರ್ಟಿನ ಮೇಲೆ ಸರಕಾರದವರು ತೆಗೆದುಕೊಂಡ ಕ್ರಮವೇನು?

(3) ದನಗಳ ಕಮಿಟಿ ರಿಪೋರ್ಟು ಪ್ರಕಟವಾಗಿದೆಯೆ? ಆಗಿದ್ದರೆ ಆ ಕಮಿಟಿಯ ರಿಪೋರ್ಟಿನ ಮೇಲೆ ಸರಕಾರದವರು ಏನು ಮಾಡಿದರು?

XXIX. ಕೊಡಗಿನ ಗಜೆಟೆಡ್ ಉದ್ಯೋಗಸ್ಥರಾದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಡೆಪ್ಯುಟಿ ಡೈರೆಕ್ಟರ್, ಪೊಲೀಸ್ ಡೆಪ್ಯುಟಿ ಸುಪರಿಂಟೆಂಡೆಂಟ್ ಮತ್ತು ಮುನ್ಸಿಫ ಇವರನ್ನು ಐದು ವರ್ಷಕ್ಕೊಮ್ಮೆ ವರ್ಗ ಮಾಡತಕ್ಕ ನಿಯಮದಿಂದ ಜನರಿಗೆ ಬರಬಹುದಾದ ಅ...ತೃಪ್ತಿ ಸರಕಾರದ ಗೋಚರಕ್ಕೆ ಬಂದಿದೆಯೋ?

(2) ಸಬ್‌ಜಡ್ಜಿ ಯವರಾಗಿದ್ದ ಮಿ. ಎ. ಪಿ. ಕಾರಿಯಪ್ಪನವರು ರಿಟೈರಾದ ಸಂದರ್ಭದಲ್ಲಿ ಈ ನಿಲವನ್ನು ಜಾರಿಗೆ ತರಲಿಕ್ಕೆ ಸರಕಾರಕ್ಕೆ ಅನುಕೂಲವಿತ್ತೋ?

(3) ವಿರಾಜಪೇಟೆ ಮುನ್ಸಿಫರು ಅದೇ ಸ್ಥಳದಲ್ಲಿ ಎಷ್ಟು ಕಾಲ ಸರ್ವೀಸು ಮಾಡಿರುತ್ತಾರೆ?

(4) ಬ್ರಿಟಿಷ್ ಉದ್ಯೋಗಸ್ಥರನ್ನು ಒಂದೇ ಸ್ಥಳ, ಮತ್ತು ಉದ್ಯೋಗದಲ್ಲಿ ಐದು ವರ್ಷಕ್ಕಿಂತ ಹೆಚ್ಚಾಗಿ ಇಟ್ಟು ಕೊಳ್ಳುವುದು ಸರಕಾರದ ನೀತಿಯೇ?

(5) ಇದು ನ್ಯಾಯದ ತತ್ವಕ್ಕೆ ಮತ್ತು ಒಳ್ಳೆ ರಾಜ್ಯ ಭಾರದ ಏರ್ಪಾಟಿಗೂ ಸಂಬಂಧವೆಂದು ಸರಕಾರದವರು ಭಾವಿಸುವರೋ?

I. (1) ಮೂರನೇ ಬಾರಿ ಬಾಡಗ ಗ್ರಾಮದಿಂದ ಕಳೆದ ...ದು ವರ್ಷಗಳಲ್ಲಿ ಕಿತ್ತ ಗಂಧದ ಕೊರಡುಗಳೆಷ್ಟು ಟನ್?

(2) ಜಮ್ಮಾ, ಸಾಗು, ಮತ್ತು ಪೈಸಾರಿಯಿಂದೆಷ್ಟು? (ಪ್ರತ್ಯೇಕವಾಗಿ)

(3) ಗ್ರಾಮಸ್ಥರಿಗೆ ಈ ಬಾಬಿನಲ್ಲಿ ಏನಾದರೂ ಕ್ರಯ ಕೊಡುವುದಾಗಿ ಇರಾದೆ ಇದೆಯೋ?

(4) ಗಂಧವನ್ನು ತೆಗೆಸುವಾಗ ಜಾಗದ ಮಾಲೀಕರಿಗೆ ನೋಟೀಸ್ ಕೊಟ್ಟಿದ್ದಾರೋ?

(5) ಕೊಡದಿದ್ದರೆ ಕೊಡದಿರಲು ಕಾರಣವೇನು?

ಕಾಂಗ್ರೆಸ್ ಸದಸ್ಯರಾಗಿರಿ

ಮತ್ತು

ಸೇವಾದಳದ ಸಭಾಸದರಾಗಿರಿ.

ಈ ವರ್ಷದ (೧೯೨೯) ಆಗೋಸ್ಟು ೧ ನೇ ತಾರೀಖಿನ ವರೆಗೆ (೨೧೯೧) ಕಾಂಗ್ರೆಸ್ ಸಭಾಸದರೂ (೨೪೮) ಸೇವಾದಲದ ಸಭಾಸದರೂ ಸೇವಾದಲದ ಪಟಿಯಿಂದ ಮಾಡಿಸಲ್ಪಟ್ಟಿದ್ದಾರೆ. ಸಭಾಸದರನ್ನು ಕೂಡಿಸುವ ಗಡಿಯು ಮುಗಿಯುತ್ತಾ ಬಂತು. ಆದ್ದರಿಂದ ಸಭಾಸದರಾಗಬಯಸುವವರು ಮತ್ತು ಸಭಾಸದರನ್ನು ಕೂಡಿಸುವವರು ದಯಮಾಡಿಸಿ ಕೊಡಬೇಕು.

ಹುಬ್ಬಳ್ಳಿ, ತಾ. 4–9–29 — ನಾ. ಸು. ಹರ್ಡಿಕರ, ಸೇವಾದಲದ ಕಾರ್ಯದರ್ಶಿ.

ಇನಾಂ! ಇನಾಂ!

4 ಆಣೆ ಟಪ್ಪಾಲು ಸ್ಟ್ಯಾಂಪು.

ಕಳುಹಿಸಿದರೆ 172 ಪುಟಗಳುಳ್ಳ ಬಹಳ ಉಪಯೋಗವಾದ ಮತ್ತು ಸುಂದರವಾದ

1930 ನೇ ಇಸವಿಯ

ಡಯರಿ

ಮುಫತ್ತಾಗಿ ಕಳುಹಿಸಲ್ಪಡುವದು. ತ್ವರೆ ಮಾಡಿರಿ.

52–13 ಮದನ ಮಂಜರಿ ಫಾರ್ಮಸಿ,

1/94 ಚೀನಾ ಬಜಾರ್, ಮದ್ರಾಸ್.

ಬುಂಬಿನ ಬೆಲೆ ರೂ. 20. ಕುಗಿನ ಬೆಲೆ ರೂ. 3.

ಈ ಯಂತ್ರ ಸಹಾಯದಿಂದ ದಿನ 1 ಕ್ಕೆ ರೂ. 4, 5 ಸುಲಭದಲ್ಲಿ ಸಂಪಾದಿಸಿಕೊಳ್ಳಬಹುದು.

ಅಮೇರಿಕನ್ ಬಯೊಸ್ಕೋಪ್ ಮಿಷನ್.

(ನಕ್ಷೆಯಲ್ಲಿ ಕಾಣಿಸಿರುವ ಪ್ರಕಾರವೇ ಇರುವುದು.)



ಮಹನೀಯರೇ! ಈ ಅಮೇರಿಕನ್ ಬಯೊಸ್ಕೋಪ್ ಯಂತ್ರದಲ್ಲಿ ದೊಡ್ಡ ಬಯೊಸ್ಕೋಪುಗಳಿಗೆ ಹಾಕುವ ಫಿಲಿಂಟುಗಳನ್ನು ಹಾಕಿಕೊಂಡು ನೋಡುತ್ತಾ, ಒಂದರೆ ದೊಡ್ಡ ಬಯೊಸ್ಕೋಪುಗಳಲ್ಲಿ ಕಾಣುವ ನಕ್ಷೆಯ ಹಾಗೆ ಹಲವು ವಿಧವಾದ ನರ್ತನಗಳು, ನಾಟ್ಯಗಳು, ಮೋಟರುಗಳು, ಜಹಜುಗಳು, ಕುದುರೆ ಬಂಡಿಗಳು ಹೋಗುವುದು, ಲೇಡಿಗಳು ವಿನೋದಕರವಾಗಿ ಆಡುವುದು ಮುಂತಾದ್ದೆಲ್ಲಾ ದೊಡ್ಡ ಬಯೊಸ್ಕೋಪಿನಲ್ಲಿ ಕಾಣಿಸುವ ಹಾಗೆಯೇ ಈ ಮಿಷನಿಂದ ನೋಡಬಹುದು. ಈ ಮಿಷನಿಗೆ ಒಂದು ಲೆನ್ಸು, ಉರಿಯುವ ಎಣ್ಣೆ ಬಿಳ್ಳಿ ದೀಪ ಮತ್ತು ಒಂದು ಗಜ ಫಿಲಿಂ ಇನಾಮಾಗಿ ಕಳುಹಿಸಲ್ಪಡುತ್ತದೆ. ಇದರ ಬೆಲೆ ರೂ 3–0–0 ಮಾತ್ರವೇ. ಪ್ರತ್ಯೇಕವಾಗಿ ಫಿಲಿಂಗಳು ಬೇಕಾದರೆ ಗಜ 1 ಕ್ಕೆ ೩ ಆ. ಗೆ ಪ್ರಕಾರ ಕೊಡಲ್ಪಡುವುದು. ಇದರಲ್ಲಿ ಎಲೆಕ್ಟ್ರಿಕ್ ಯಂತ್ರ ಕ್ರಯ ರೂ. 5–0–0. ಮದರಾಸು ಸಿನಿಮಾ ಕಂಪೆನಿ,

1–4 ನಂಬ್ರ 10. ಅರುಣಾಚಲ ಬೀದಿ, ಮದರಾಸು.

ನಂಜಿಸ್ವರಿನ ಪತ್ರಿ ವ್ಯಾಪಾರಿಯರೊಬ್ಬರ ಮಗಳಾದ ಮಿಸ್. ವಾಟ್ಸನ್ ಎಂಬಾಕೆಯು ಹಿಂದೂಮತವನ್ನವಲಂಬಿಸಿ ತನ್ನ ತಂದೆ ತಾಯಿಗಳ ಅನುಮತಿ ಪ್ರಕಾರ ಡಾ. ಮೇಲ್‌ರಾಜ ರಿಂಬವರನ್ನು ವಿವಾಹವಾದಳು.

Wanted.

ALL INDIA CROP INSURANCE & GENERAL DEVELOPMENTS LTD.
Mahabub Mahal Royapettah.

Head Office:–	MADRAS.
AUTHORISED CAPITAL—	SIX CRORES.
PAID UP CAPITAL—	54,29,240.
Taluq Banking agents	80–8–160
" Deputy Superintendents	
Savings Bank depot clerks	25/—
Village agents	20–2–40.

Applicants should be in a position to subscribe for shares of 500/–200/–150/– of the Company respectively after selection and execute a fidelity bond as per instructions from Head Office. They must clearly state their qualifications. For particulars apply to the Head Office or

THE DEPUTY SUPERINTENDANT,
HAMPANKATTA,
52–7 MANGALORE.

Free! Free!!

6 Scent Bottles and 2 Paris Ladies Calenders. Free!!

ಬಹುಮಾನ! ಬಹುಮಾನ!!

6 ಸುಗಂಧ ದ್ರವ್ಯದ ಸೀಸೆಗಳು (ಸೆಂಟ್‌ಬಾಟ್ಲಿ)

ಜನರ ಹಬ್ಬಕ್ಕಾಗಿ ಸೀಮೆಯಿಂದ ತರಿಸಿ ಇರುತ್ತೇವೆ ಆರಾಣೆ ಪೋಸ್ಟ್ ಸ್ಟ್ಯಾಂಪುಗಳನ್ನು (Postal stamps) ಕಳುಹಿಸುವವರಿಗೆ ಆರು ಸೆಂಟ್‌ಬಾಟ್ಲಿಗಳು ಮತ್ತು 1930ನೇ ವರ್ಷದ ಪ್ಯಾರಿಸ್ ಲೇಡಿಸ್ ಕಲರ್ ಕ್ಯಾಲಂಡರು ಬಹುಮಾನವಾಗಿ ಕಳುಹಿಸುತ್ತೇವೆ.

T. ROYAL & CO. Perfumers. 20 Arunachala Modaly st. Madras.
ಟಿ. ರಾಯಲ್ ಕಂಪೆನಿ 20 ಅರುಣಾಚಲ ಮೊದಲಿ ಬೀದಿ, ಜಿಟಿ. ಮದರಾಸು.
4–4

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ. | ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಪಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ | ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ.

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ, ಹೊಟ್ಟೆ ಶೂಲೆ, ದುಸ್ವಪ್ನ ಬೀಳುವಿಕೆ, ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗದಿರುವಿಕೆ, ಪಾಂತಿ, ಸರ್ಪಕಾವ ಪಿಶಾಚಬಾಧೆಯಿಂದ ನರಳುವಿಕೆ, ಬಳಸು, ಕೆಂಪು ಹೋಗಿ ಗರ್ಭ ಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು. ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ, ಮುಟ್ಟಿದೋಷ, ಕಾಮಿನಿ, ಗೃಹಪೀಡೆ, ದೃಷ್ಟಿದೋಷ, ಭಯದಿಂದ ಜ್ವರಬೀಳೆ, ಕ್ಷೀಣ ಹೊಂದುವಿಕೆ, ಜಪ್ಪಿ ಇರುವಿಕೆ, ಮುಸಿಗುವಿಕೆ, ಹೊಟ್ಟೆಯೊಳಗಿಂದ ಪಲೋಪ ಮೊದಲಾದವುಗಳಿಂದ ಸಾಯುತ್ತಿರುವದು. ಗರ್ಭರಕ್ಷಾಕರ ವಿಧಿಯಲ್ಲಿ, ಕುಮಾರ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಮಂತ್ರಶಾಸ್ತ್ರಾನುಸಾರ ಪರಿಶೋಧಿಸಿ ಗ್ರಹದ ಕಾಲದಲ್ಲಿ ಸಾಧುಸತು ರುಷದ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ. ಇದನ್ನು ತರಿಸಿ ಧರಿಸಿದರೆ ಹೆಚ್ಚು ಮಕ್ಕಳಾಗುವ ಸಂತಾನಭಂಗವೂ, ಚಿಕ್ಕಮಕ್ಕಳಿಗೆ ಬಾಲಗ್ರಹವೂ ಹೋದತ್ತು ಪರಿಹಾರವಾಗಿ ಸುಖವಾಗುತ್ತದೆ. ಈ ತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ ೧೦೦ ರೂ ಬಹುಮಾನ ಕೊಡಲಾಗುತ್ತದೆ. ಒಂದುಸಲ ಪರಿಸಿ ಅನುಭವ ಪಡೆಯಿರಿ. ಹೆಣ್ಣು ಮಕ್ಕಳಿಗೆ ಸಂತಾನ ಪಡೆಯಲು ಒಂದಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ಒಂದಕ್ಕೆ ೨–೮–೦ ಪೋಸ್ಟ ಖರ್ಚು ಬೇರೆ. ಆಗದಕ್ಕೆ ವಿಳಾಸಗಳನ್ನು ಸ್ಪಷ್ಟ ಬರೆಯಿರಿ.

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ.

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ.

52–19 ಮು. ಪೋ. ಅಥಣಿ, ಜಿ. ಬೆಳಗಾಂವ.

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದಿಂದ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉಬ್ಬುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು. ಕ್ರಯ ಡಬ್ಬಿ 1 ಕ್ಕೆ 2–8–0, ಮೂರು ಡಬ್ಬಿಗಳಿಗೆ ರೂ. 7–0–0.

ಅಶೋಕಾರಿಷ್ಟ ಮತ್ತು ಮಾತ್ರೆ. ಹೆಂಗಸರ ಮುಟ್ಟು ದೋಷಗಳು, ಮುಟ್ಟುನಿಲ್ಲುವದು ಹೆಚ್ಚು ಕಮ್ಮಿಯಾಗುವುದು, ಮುಟ್ಟಿನ ನೋವು, ಸೊಂಟ ನೋವು, ಸಂತಾನಹೀನತೆ, ವಾಂತಿ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತಃ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರೈಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ 2 ಆ. 4. 3 ಬಾಟ್ಲಿಮತ್ತುಡಬ್ಬಿಗಳಿಗೆ ರೂ. 6 ಆ 4.

೩. ಮಲೇರಿಯಾ ನಿವಾರಿಣಿ.

ದಿನ ಬಿಟ್ಟು ಬರುವಜ್ವರ, ಮಲೆ ಜ್ವರ, 2 ಯಾ 3 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–2–0

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ ರೂ 2–8–0. 3 ಕ್ಕೆ ರೂ 7.

೫. ಇಚ್ಛಾಭೇದಿ ಗುಳಿಕೆ. ಅಜೀರ್ಣವನ್ನು ಉಂಟುಮಾಡದ ಸುಖ ವಿರೇಚಕ ಬಾಟ್ಲಿ 1 ಕ್ಕೆ 0–1!–0 ಆಣೆ 3 ಬಾಟ್ಲಿಗಳಿಗೆ 2–2–0

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

52–52 ರಥಬೀದಿ, ಮಂಗಳೂರು, ದ. ಕನ್ನಡ.

ಸಣ್ಣ ಹುಡುಗರ ಸಲುವಾಗಿ



ಡೋಂಗರೆ ರವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ಸೇವಿಸುವರು.

ಕ್ರಯ ಬಾಟ್ಲಿ ಒಂದಕ್ಕೆ 0–14–0. ಟ. ಖ. 0–9–0

ಕೆ. ಟಿ. ಡೋಂಗರೆ ಕಂಪೆನಿ,

52–3 ಗಿರಿಗಾಂವ, ಮುಂಬಯಿ.

ವರ್ತಮಾನ ಸಂಗ್ರಹ.

ಒಳದೇಶ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗೊಂದು ಈ ತಾ 24ರಲ್ಲಿ ಮಡಿಕೇರಿಯಲ್ಲಿ ನಡೆಯಲಿಕ್ಕಿದೆ

ಮೂರ್ನಾಡು ಶಾಲೆಯ ಪ್ರಥಮ ವಾರ್ಷಿಕೋತ್ಸವವು ಈ ತಾ. 30ರಲ್ಲಿ ಮೆ. ಪಿ. ಎ. ಬಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದೆಂದು ತಿಳಿಯುತ್ತೇವೆ

ರಾಮಸ್ವಾಮಿ ಕಣಿವೆ ಪೋಲೀಸ್ ಹೆಡ್ಡ್ಸಾರ್ ಮೆ. ಸಿ. ರುದ್ರಪ್ಪನವರು ಬಿ ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿದು ಸಂತೋಷ ಪಡುತ್ತೇವೆ.

ಕೌನ್ಸಿಲು ಉಪ ಚುನಾವಣೆಯ ಸಂಬಂಧ ಈ ತಾ. 10ರಲ್ಲಿ ಕಾಗೋಡದಲ್ಲಿ ನಡೆದ ಮೀಟಿಂಗಿನಲ್ಲಿ ತುಂಬಾ ಗಲಾಟೆಯಾಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಈ ತಾ 11ರಲ್ಲಿ ಬೆಳಿಗ್ಗೆ 11 ಗಂಟೆಗೆ ಎಲ್ಲಾ ಕಡೆಗಳಲ್ಲೂ 2 ಮಿನಿಟು ಮೌನವನ್ನು ತಾಳಿ ಆರ್ಮಿಸ್ಟಿಸ್ ದಿನವನ್ನು ಆಚರಿಸಿದರು. ಆ ದಿನ ಮಧ್ಯಾಹ್ನದ ಮೇಲೆ ಮಡಿಕೇರಿ ರಾಜಾಸೀಟಿನ ಒಳಿ ಜಿಮ್ನಾಸ ರೇಸ್ ಮತ್ತು ಸ್ಪೋರ್ಟ್ಸ್‌ಗಳು ನಡೆದವು.

ಮೆ. ಕೋಟೆರ ಚಿಣ್ಣಪ್ಪನವರು 'ಲೋಕಪಾವನ'ದ ಸಂಪಾದಕರು ಮತ್ತು ಪ್ರಿಂಟರ ಮೇಲೆ ಕೊಟ್ಟಿರುವ ಮಾನನಷ್ಟದ ಮೊಕದ್ದಮೆಯು ಈ ತಾ. 11 ಮತ್ತು 12 ರಲ್ಲಿ ವಿಚಾರಿಸಲ್ಪಟ್ಟು, ಆರ್ಗ್ಯುಮೆಂಟಿಗೆ ತಾ. 20 ಕ್ಕೆ ಇಡಲಾಗಿದೆಯೆಂದು ತಿಳಿಯುತ್ತೇವೆ.

ಕೆಲವು ದಿವಸಗಳ ಹಿಂದೆ ನಲ್ಲುಗೋಟೆ ಗ್ರಾಮದ ಮ ...ಪ್ಪಂಡ ತಿಮ್ಮಯ್ಯನವರನ್ನು ಅವರ ಅಡಿಗೆಯ ಮನೆ(?)ದ ಒ... ಮಲೆಯಾಳದವನು ಚೂರಿಯಿಂದ ತಿವಿದು ಕೊಂದನೆಂಬ ...ಮೊಕದ್ದಮೆಯು ಈ ತಾ 7 ಮತ್ತು 8ರಲ್ಲಿ ಸೆಶನ್ಸ್ ಕೋರ್ಟಿನಲ್ಲಿ ವಿಚಾರಿಸಲ್ಪಟ್ಟು ಅಪರಾಧಿಗೆ ಏಳು ವರ್ಷ ಕಠಿನ ...ಜೆಯು ವಿಧಿಸಲಾಗಿದೆ.

ಸಹಕಾರಿ ಸಂಘಗಳ ಎಲ್ಲಾ ಸೆಕ್ರೆಟರಿಗಳಿಗೂ, ಇನ್ಸ್‌ಪೆ...ವ ಪಂಚಾಯಿತಿದಾರರು ಮತ್ತು ಬೇರೆ ಜನರಿಗೂ ಸಹಕಾರಿ ಸಂಘಗಳನ್ನು ನಡಿಸುವುದರ ವಿಷಯ ತರಬೇತು ಕೊಡತಕ್ಕದ್ದಾಗಿ ಈ ತಾ. 14 ರಿಂದ 23ರ ವರೆಗೆ ವೀರರಾಜಪೇಟೆಯಲ್ಲಿಯೂ, ಡಿಸೆಂಬರು 1 ರಿಂದ 10ರ ವರೆಗೆ ಸೋಮವಾರಪೇಟೆಯಲ್ಲಿಯೂ ಕ್ಲಾಸುಗಳು ನಡಿಸಲ್ಪಡುವವೆಂದು ತಿಳಿಯುತ್ತೇವೆ.

ಮಡಿಕೇರಿ—ಭಾಗಮಂಡ್ಲ—ಸುಂಟಿಕೊಪ್ಪ ನಾಡುಗಳಲ್ಲಿ ... ದಿನ ನಡೆಯಲಿಕ್ಕಿರುವ ಕೌನ್ಸಿಲು ಉಪ ಚುನಾವಣೆಯಲ್ಲಿ ಗಲಾಟೆಯಾಗಬಹುದೆಂಬ ಕಾರಣದಿಂದ ಈ ನಾಡುಗಳಲ್ಲಿರುವ ಶೇಂದಿ, ಸಾರಾಯಿ ಅಂಗಡಿಗಳನ್ನೆಲ್ಲಾ ಈ ದಿನ ಮುಚ್ಚುವಂತೆಯೂ, ಪೋಲಿಂಗ್ ಸ್ಟೇಶನುಗಳಲ್ಲೆಲ್ಲಾ ನ್ಯಾಯವಾದ ಪೊಲೀಸ್ ಬಂದೋಬಸ್ತು ಇಡುವಂತೆಯೂ ಅಧಿಕಾರಿಗಳು ಹುಕುಂ ಮಾಡಿರುವರೆಂದು ತಿಳಿಯ ಬರುತ್ತದೆ.

ಕೊಡಗು ಎಥ್ಲೆಟಿಕ್ ಎಸೋಸಿಯೇಶನಿನ ಹಾಕಿ ಟೂರ್ನಮೆಂಟು ಈ ತಾ. 10ರಲ್ಲಿ ಮಡಿಕೇರಿ ಕ್ರಿಕೆಟ್ ಮೈದಾನದಲ್ಲಿ ಪ್ರಾರಂಭವಾಯಿತು. ಮೊದಲನೇ ದಿನದ ಆಟದಲ್ಲಿ ಸುಂಟಿಕೊಪ್ಪ ಯೂನಿಯನ್ ಟೀಮು ಸೆಂಟ್ರಲ್ ಹೈ ಸ್ಕೂಲು ಸಿ ಟೀಮನ್ನೂ, ತಾ. 11ರಲ್ಲಿ ಸೆಂಟ್ರಲ್ ಹೈ ಸ್ಕೂಲು ಎ ಟೀಮು ಮಡಿಕೇರಿ ಕಾಸ್ಮೊಪಾಲಿಟನ್ ಕ್ಲಬ್ಬಿನ ಟೀಮನ್ನೂ, ತಾ 12ರಲ್ಲಿ ಮಡಿಕೇರಿ ವ್ಯಾಲಿ ಟೀಮು ಎಲಿಮೆಂಟರಿ ಶಾಲೆಗಳ ಟೀಮನ್ನೂ, ತಾ. 13ರಲ್ಲಿ ವೀರರಾಜಪೇಟೆ ಹೈ ಸ್ಕೂಲು ಟೀಮು ಸೆಂಟ್ರಲ್ ಹೈ ಸ್ಕೂಲು ಬಿ. ಟೀಮನ್ನೂ, ತಾ. 14ರಲ್ಲಿ ಕಾರಸ್ಕು(?) ಇಲಾಖೆಯ ಟೀಮು ಸೆಂಟ್ರಲ್ ಹೈಸ್ಕೂಲು ಎ ಟೀಮನ್ನೂ ಸೋಲಿಸಿರುವವು. ಆಟವು ಇನ್ನೂ ಮುಂದುವರಿಯುತ್ತಿದೆ.

ಮೈಸೂರಿನ ಎಂ. ಎಸ್ ಶಿವ್ವಪ್ಪ ಅಂಡ್ ಬ್ರದರ್ಸ್‌ರವರ ದೊಡ್ಡ ಸೈಜಿನ ಸಚಿತ್ರ ಶೀಟ್ ಕ್ಯಾಲೆಂಡರು, ಸಣ್ಣ ಸೈಜಿನ ಪಾಕೆಟ್ ಕ್ಯಾಲೆಂಡರು, ಇಂಗ್ಲಿಷ್ ಪಾಕೆಟ್ ಕ್ಯಾಲೆಂಡರು, ಹಲವು ಬಣ್ಣಗಳಿಂದ ಕೂಡಿದ ಪಿಕ್ಚರ್ ಕ್ಯಾಲೆಂಡರು, ಮತ್ತು ದೊಡ್ಡ ಅಕ್ಷರದ ತಿಂಗಳಿಗೆ 1 ಶೀಟಿರುವ ಆಫೀಸು ಕ್ಯಾಲೆಂಡರು ನಮ್ಮ ಕೈಸೇರಿವೆ. ಪೋಸ್ಟೇಜಿಗಾಗಿ 8 ಆಣೆ ಕಳುಹಿಸುವ ನಮ್ಮ ಚಂದಾದಾರರಿಗೆ ಈ 5 ನಮೂನೆಯ ಕ್ಯಾಲೆಂಡರ್ ಗಳು ಫ್ರೀ ಪಾರ್ಸಲಾಗಿ ಕಳುಹಿಸಲ್ಪಡುವವೆಂದು ಅವರು ತಿಳಿಸಿರುತ್ತಾರೆ.

ಹಿಂದೂದೇಶ.

ಮೆ. ಎ. ರಾಮಸ್ವಾಮಿ ಮೊದಲಿಯಾರ್‌ರವರು ಪ್ರಸ್ತುತ ಮದ್ರಾಸು ಕಾರ್ಪೊರೇಶನಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಪೂನಾದ ಪಾರ್ವತಿ ದೇವಸ್ಥಾನದ ಒಳಗೆ ಪ್ರವೇಶಿಸಲು ಬಿಡದ್ದರಿಂದ ಅಲ್ಲಿಯ ಕೆಲವು ಅಸ್ಪೃಶ್ಯರು ಸತ್ಯಾಗ್ರಹವನ್ನು ಆಚರಿಸಲು ಪುನಃ ತೊಡಗಿರುವರು.

ಆಂಧ್ರ ಹಿಂದೂ ಮಹಾಸಭದ ಸಮ್ಮೇಳನವು ಈ ತಾ. ...ರಲ್ಲಿ ಬೆಜವಾಡದಲ್ಲಿ ನಡೆಯಿತು. ಡಾಕ್ಟರ್ ಮೂಂಜೆಯವರು ಅಧ್ಯಕ್ಷರಾಗಿದ್ದರು.

ಇಲೆಜಿಸ್ಲೇಟಿವ್ ಎಸೆಂಬ್ಲಿಯ ಬರುವ ಮೀಟಿಂಗು ಜನವರಿಯಲ್ಲಿಯೂ, ಕೌನ್ಸಿಲ್ ಆಫ್ ಸ್ಟೇಟಿನ ಮೀಟಿಂಗು ಫೆಬ್ರುವರಿಯಲ್ಲಿಯೂ ನಡೆಯುವುದಂತೆ

ಕರ್ನಾಟಕ ಪ್ರಾಂತ್ಯದ ಮಹಿಳೆಯರ 4 ನೇ ಕಾನ್‌ಫರೆನ್ಸು ಈ ತಾ. 9 ರಲ್ಲಿ ಬೆಂಗಳೂರಲ್ಲಿ ನಡೆಯಿತು. ದಿವಾನರ ಪತ್ನಿಯವರು ಸಭೆಯ ಅಧ್ಯಕ್ಷರಾಗಿದ್ದರು.

ಬಂಗಾಳದಲ್ಲಿ ಮಂತ್ರಿ ಮಂಡಳಿಯನ್ನು ಏರ್ಪಡಿಸಲು, ಅಧಿಕಾರಿಗಳು ಪುನಃ ಪ್ರಯತ್ನಿಸುತ್ತಿದ್ದಾರೆ ... ಗವರ್ನರ್‌ರವರು ನವಾಬರನ್ನು ಕರೆಸಿ ಈ ವಿಷಯ ಮಾತಾಡಿ...

ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ಸಿಗೆ ಮೆ. ಗಣೇಶ ಶಂಕರ್ ವಿದ್ಯಾರ್ಥಿಯವರು ಅಧ್ಯಕ್ಷರೂ, ಶ್ರೀ ಪ್ರಕಾಶರವರು ಸಕ್ರೆಟರಿಯಾಗಿಯೂ ಆರಿಸಲ್ಪಟ್ಟಿರುವರು.

ತಾ. 7 ರಂದು ಪಟ್ನದಲ್ಲಿ ಆಕಸ್ಮಿಕ ಬೆಂಕಿ ಬಿದ್ದು 300 ಮನೆಗಳು ಸುಟ್ಟು ಹೋದವು. 500 ಕುಟುಂಬಗಳು ಮನೆಯಿಲ್ಲದಂತೆ ಕೂರಬೇಕಾಯಿತು. ಒಂದು ಲಕ್ಷ ರೂಪಾಯಿಯಷ್ಟು ನಷ್ಟವಾಗಿದೆಯಂತೆ.

ರಾಜಕೀಯವಾಗಿ ಕೆಲಸ ಮಾಡುತ್ತಿರುವವರು ಕಾರಾಗೃಹ ವಾಸ್ತವ್ಯದಲ್ಲಿ ...ಯಲ್ಲಿ ಬಿದ್ದಾಗ ಅವರ ಸಂಸಾರಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕಮಿಟಿಯವರು ಒಂದು ಪ್ರತ್ಯೇಕ ಫಂಡನ್ನು ಏರ್ಪಡಿಸಿರುವರು.

ಇಂಡಿಯಾ ಸರಕಾರದ ನಡಿಸಲ್ಪಡುತ್ತಿರುವ ಡೆಲ್ಲಿ, ಅಜ್ಮೀರ್ ಮತ್ತು ವಾಯುವ್ಯ ಪ್ರಾಂತ್ಯಗಳಲ್ಲಿ ವಿದ್ಯಾಭಿವೃದ್ಧಿಯನ್ನು ಕಂಡುಹಿಡಿಯಲು ನೇಮಿಸಲ್ಪಟ್ಟಿದ್ದ ಕಮಿಟಿಯವರು ಗ್ರಾಮಗಳಲ್ಲಿ ಬಿತ್ತರಿಸುವ ವಿದ್ಯಾಭ್ಯಾಸ ಕೊಡಬೇಕೆಂಬ ಅಭಿಪ್ರಾಯವನ್ನು ಮಾಡಿರುವರಂತೆ.

ಪಂಜಾಬಿನ ಕಾಂಗ್ರೆಸ್ ಮುಖಂಡರಾದ ಡಾಕ್ಟರ್ ಸತ್ಯಪಾಲ್‌ರವರು ರಾಜದ್ರೋಹದ ಭಾಷಣ ಮಾಡಿದರೆಂದು ಅವರಿಗೆ ಡೆಲ್ಲಿ ... ವರ್ಷ ಸಜೆ ವಿಧಿಸಲಾಗಿತ್ತು. ಆ ...ಲು ಮಾಡಿದ ಹೈಕೋರ್ಟಿನವರು ಸತ್ಯಪಾಲರವರು ಇಷ್ಟರ ವರೆಗೆ ಅನುಭವಿಸಿದಷ್ಟು ಅವರ ಶಿಕ್ಷೆಯನ್ನು ಇಳಿಸಿ ಅವರನ್ನು ಬಿಡುಗಡೆ ಮಾಡಿದರು.

ಸರ್ ಜಾರ್ಜ್ ಸ್ಟೇನ್ಲಿಯವರು ಬೊಂಬಾಯಿಯಿಂದ ಈ ತಾ. 12ರಲ್ಲಿ ಹಡಗು ಹತ್ತಿ ... ಮದ್ರಾಸು ಪ್ರಾಂತ್ಯದ ಗವರ್ನರ್ ಪದವಿ ವಹಿಸಿಕೊಂಡರು. ಆದಕಾರಣ ಆಕ್ಟಿಂಗ್ ಗವರ್ನರಾಗಿದ್ದ ನಾರ್ಮನ್ ಮಾರ್ಜೋರಿಬ್ಯಾಂಕ್ಸ್‌ರವರು ತಮ್ಮ ಮೊದಲಿನ ಪದವಿಯಾದ ಎಗ್ಸಿಕ್ಯೂಟಿವ್ ಕೌನ್ಸಿಲು ಮೆಂಬರುತನಕ್ಕೆ ತಿರುಗಿದರು.

ಐದು ಎಕರೆಗಿಂತ್ಕ ಭೂಮಿ ಇರುವವರಿಂದ ಕಂದಾಯ ವಸೂಲಿ ಮಾಡದೆಯೂ, ಭೂಮಾಲೀಕರ ಕಷ್ಟ ಸೂಸಾರ(?) ಕಂದಾಯ ಕಮ್ಮಿ ಮಾಡುವಂತೆಯೂ ಕಾನೂನು ಮಾಡಬೇಕೆಂತ ಒಂದು ಸೂಚನೆಯನ್ನು ಸ್ವರಾಜ್ಯ ಪಾರ್ಟಿ ಮೆಂಬರಾದ ಮೆ. ಎನ್ ಬಿಹಾರ್ ಎಂಬವರು ಬೊಂಬಾಯಿ ಕೌನ್ಸಿಲಿಗೆ ಕಳುಹಿಸಿರುವರು.

ಪರದೇಶ.

ಜಾರ್ಜ್ ಚಕ್ರವರ್ತಿ ಪುತ್ರರಾದ ಡ್ಯೂಕ್ ಆಫ್ ಗ್ಲೌಸ್ಟರ್ ಎಂಬವರು ಹಿಂದಣ ಸಲದಲ್ಲಿ ಒಂದು ಸೇನೆಗ ಸೇರುವರೆಂದು ತಿಳಿದು ಬಂದಿದೆ

ಸಾಂತಮಾರಿಯಾ ಬಳಿ ಜ್ವಾಲಾಮುಖಿಯು ಸ್ಫೋಟವಾಗಿದ್ದು ಸುಮಾರು 300ಜನ ಮೃತರಾಗಿರುವರು ಮತ್ತು 200 ಜನರಿಗೆ ಜಖಂ ಆಗಿದೆಯಂತೆ.

ಅಮೇರಿಕದ ನ್ಯೂಯಾರ್ಕ್ ಪಟ್ಣದಲ್ಲಿ ಒಂದು ಹಿಂದೂ ದೇವಾಲಯವನ್ನು ಕಟ್ಟಿಸ ಒಟ್ಟು ಬೇಕಾಗುವ 22,600 ಡಾಲರುಗಳನ್ನು ಜಮಾಯಿಸಿ ಮೆ. ಹರಿ ಗೋವಿಂದರವರು ಪ್ರಾರಂಭಿಸಿರುವರು.

ಬರುವ ಡಿಸೆಂಬರು ಲ್ಲಿ ನೈರೋಬಿಯಲ್ಲಿ ನಡೆಯಲಿಕ್ಕಿರುವ ಪೂರ್ವ ಆಫ್ರಿಕದ ಇಂಡಿಯನ್ ಕಾಂಗ್ರೆಸ್ಸಿನ ಅಧಿವೇಶನದ ಅಧ್ಯಕ್ಷ ಪದವಿಯನ್ನು ಶ್ರೀಮತಿ ಸರೋಜಿನೀ ದೇವಿಯವರು ವಹಿಸಲು, ಒಪ್ಪಿರುವರು.

ಇಟಲಿಯ ಪ್ರಧಾನಮಂತ್ರಿಯಾದ ಸಿ. ಮುಸೊಲೀನಿಯವರನ್ನು ಕೊಲೆ ಮಾಡು ಮರೆಸೀ ಒಬ್ಬರು ಅವರಿಗೆ ಹಲವು ಗುಂಡುಗಳನ್ನು ಹೊಡದರೆಂತಲೂ ಒಂದು ಸುದ್ದಿ, ಇದು ನಿಜವಲ್ಲವೆಂತಲೂ ಇನ್ನೊಂದು ಸುದ್ದಿ.

ಬಿಕಾನೀರದ ಮಹಾರಾಜರು ಒಂದು ಪ್ರಕಟಣೆಯನ್ನು ಕೊಟ್ಟಿದ್ದಾರೆ ಅದರಲ್ಲಿ ಹಿಂದೂ ದೇಶದ ಸಾಮಂತ ಸ್ವರಾಜ್ಯಕ್ಕೆ ತಾವು ವಿರೋಧಿಗಳಲ್ಲ, ಬ್ರಿಟಿಷ್ ಸಂಬಂಧವನ್ನು ಬಿಡುವುದಕ್ಕೆ ಮಾತ್ರ ತಾವು ವಿರೋಧಿಗಳು ಎಂದು ಹೇಳುತ್ತಾರೆ. ವೈಸರಾಯರ ಪ್ರಕಟಣೆಯು ಯೋಗ್ಯ ಕಾಲದಲ್ಲಿ ಹೊರಟಿತೆಂದು ಅವರ ಅಭಿಪ್ರಾಯ.

— — — —

ಕಾಗೋಡಿನ ಮೀಟಿಂಗು.

(2ನೇ ಪುಟದಿಂದ ಮುಂದರಿದದ್ದು.)

ಳಿಸಿ ಮಡಿಕೇರಿ ಕಡೆ ನಡೆದುಕೊಂಡು ಹೋದರು. 'ಅವರ ಕಾರನ್ನು ತಡೆಯಿರಿ, ಅವರನ್ನು ಹೊಡೆಯಿರಿ' ಎಂಬ ಕೂಗು ಕೇಳಬರುತ್ತಿತ್ತು. ಅವರು ಸುಮಾರು 2 ಫರ್ಲಾಂಗು ಹೋದನಂತರ, 'ಕೆಲವರು ಹಿಂದಳಿಂದ ದೊಣ್ಣೆ ತೆಗೆದುಕೊಂಡು ಹೊಡೆಯಲಿಕ್ಕೆ ಬರುತ್ತಾರೆಂದೂ, ನೀವು ಓಡಿ ಹೋಗಿರಿ ಎಂದೂ' ಬೇರೆ ಹೇಳ ತೊಡಗಿದರು. ಇದರಿಂದ ವೆಂಕಪ್ಪಯ್ಯ ಮೊದಲಾದವರು ಒಡನೆ ಚುರುಕಾಗಿ ನಡೆದರು. ಸುಮಾರು ಅರ್ಧ ಮೈಲು ಹೋದಾಗ್ಯೆ ಕೆಲವರು ದೊಣ್ಣೆ ತೆಗೆದುಕೊಂಡು ಓಡಿ ಬರುವುದು ಕಂಡು ಬಂತು ಮೆ. ...ರ. ಮುದ್ದಪ್ಪನವರನ್ನು ಕೆಲವು ಗೌಡ ಜನರು ತಮ್ಮ ... ಬಂದಾರಿಯಿಂದ ಕರೆದುಕೊಂಡು ಹೋದರು. ಹೊಡೆಯಲಿಕ್ಕೆ ಬರುವವರು ಸಮೀಪಿಸಿದ ಹಾಗೆ ಮೆ. ವೆಂಕಪ್ಪಯ್ಯನವರು ಕೆಲವರೊಂದಿಗೆ ಮುಂದೆ ಹೋಗಿ ಕಾಲು ದಾರಿಗೆ ದಾಟಿದರು. ಕಡೆದು ನುತ್ತರಾಗಿದ್ದ ಮೂವರು ಕೆ. ಚಿಣ್ಣಪ್ಪ, ... ಬೆಳ್ಯಪ್ಪ, ಎ ಸುಬ್ಬಯ್ಯ ಮೊದಲಾದವರ ಮುಂದೆ ಬಂದು ನಿಂತು ಅವರನ್ನು ಹೊಡೆಯಲಿಕ್ಕಿಸಿದರು. ಇವರನ್ನು ಕಡೆದು ಹಿಂತಿರುಗಿ ನೋಡುವಷ್ಟರಲ್ಲಿ ಸುಮಾರು 25 ಜನರ ಗುಂಪು ಓಡಿ ಬರುತ್ತಿತ್ತು. ಈ ಮೂವರು ತಡೆಯಲಿಕ್ಕೆ ಬಂದ ಗೌಡನ ಅಪ್ಪಚ್ಚನವರ ಕಡೆಗೆ ತಿರುಗಿದರು. ಅಷ್ಟರಲ್ಲಿ ಅಲ್ಲಿದ್ದ ಎ ಸುಬ್ಬಯ್ಯ, ಕ. ಚಿಣ್ಣಪ್ಪ, ಸಿ. ಬೆಳ್ಯಪ್ಪ, ಕೋದಂಡ ರಾಮಯ್ಯ ಮೊದಲಾದವರು ಮುಂದೆ ದಾಟಿ ಕಾಲು ದಾರಿಗಾಗಿ ಹೊರಟು ಹೋದರು ಆ ಮೂರು ಕುಡುಕರು ಅಪ್ಪಚ್ಚನವರಿಗೆ ಕೆಲವು ಪೆಟ್ಟುಗಳನ್ನು ಹೊಡೆದ ನಂತರ ಅಪ್ಪಚ್ಚನವರು ತಪ್ಪಿಸಿಕೊಂಡು ಹೋದರು. ಆ ಮೇಲೆ ಆ ಮೂವರು ಹಿಂದಿನಿಂದ ಓಡಿ ಬರುತ್ತಿದ್ದವರ ಜೊತೆಗೆ ಹೋಗಿ ಸೇರಿದರು.

ಆಗ್ಯೆ ಅಲ್ಲಿ (ಕಾಗೋಡದಿಂದ ಸುಮಾರು ಅರ್ಧ ಮೈಲು ದೂರದಲ್ಲಿ) ದಾಟುತ್ತಿದ್ದ ಮು. ಚೋಡನ ಬೆಳ್ಯಪ್ಪನವರ ತಲೆಗೆ, ಬೆನ್ನಿಗೂ ದೊಣ್ಣೆಯಿಂದ ಹೊಡೆದರೆಂದೂ, ಅವರು ಬಿದ್ದು ಹೋದರೆಂದೂ, ಅವರು ಬಿದ್ದು ಹೋದನಂತರ ಅವರ ತಲೆ ... ಕೊಡೆಯನ್ನು ಅವರ ಶರೀರಕ್ಕೆ ಮುಟ್ಟಿಸಿ ... ಬೆಂಕಿಕೊಟ್ಟರೆಂದೂ, ಬೆಳ್ಯಪ್ಪನವರನ್ನು ಹಲವು ... ಹೊಡೆದಾಗ ಅವರು ಚಾಕಿನಿಂದ ... ಕೆಲವರಿಗೆ ತಗಲಿದೆಯೆಂದೂ ಮೆ. ಚೋಡನ ಬೆಳ್ಯಪ್ಪನವರಿಂದ ತಿಳಿಯ ಬಂತು. ಅಷ್ಟರಲ್ಲಿ ಮು. ಪಿ. ಬೀಮಯ್ಯ ... ಬಿಡಲು ಹೋಗಿದ್ದ ಮೆ. ಕುಟ್ಟೇಟಿರ ಸುಬ್ಬಯ್ಯನವರ ಕಾರು ಅಲ್ಲಿಗಾಗಿ ಮಡಿಕೇರಿ ಕಡೆಗೆ ಬಂತೆಂತಲೂ, ಅದನ್ನು ಕೆಲವರು ತಡೆದರೆಂತಲೂ, ಅವರನ್ನು ತಪ್ಪಿಸಿಕೊಂಡು ... ರಾಗ ಬಿದ್ದು ಹೋಗಿದ್ದ ಮೆ. ಚೋಡನ ಬೆಳ್ಯಪ್ಪನವರು ನಾಯಿಕ್ಕೇನಂತ ಕೂಗುತ್ತಾ ಬಿದ್ದದ್ದನ್ನು ಕಂಡರೆಂತಲೂ, ಸಮೀಪದಲ್ಲಿಯೇ ಕಾರನ್ನು ತಡೆದ ಗುಂಪು ಇದ್ದದ್ದರಿಂದ ಕಾರನ್ನು ನಿಲ್ಲಿಸದೆ ಮುಂದಕ್ಕೆ ಬಂದರೆಂತಲೂ, ಈ ಗುಂಪಿನಲ್ಲಿ ಚಂಗಪ್ಪನವರ ಕಡೆಯಿಂದ ಮಡಿಕೇರಿಯಿಂದ ಬಂದಿದ್ದ ಕೆಲವರು ಕಂಡು ಬಂದರೆಂತಲೂ, ಮೆ. ಭೀಮಯ್ಯನವರನ್ನು ಬಿಡಲಿಕ್ಕೆ ಕಾರಿನಲ್ಲಿ ಹೋದಾಗ್ಯೆ ದಾರಿಯಲ್ಲಿ ಸೇಂದಿ ಕುಡಿದಿದ್ದ ಕೆಲವು ಹೊಲೆಯರು ಕೂತಿದ್ದದನ್ನು ಕಂಡರೆಂತಲೂ ಮೆ. ಸುಬ್ಬಯ್ಯನವರಿಂದ ತಿಳಿಯಬಂತು. ರಸ್ತೆ ಬಿಟ್ಟು ಕಾಲುದಾರಿಗಾಗಿ ಹೋದ ಕೆಲವರೂ, ರಸ್ತೆಗಾಗಿ ಬಂದವರೂ ಜೊತೆಗೆ ಸೇರಿ ಬೆಟ್ಟಗೇರಿಗೆ ಸಮೀಪಿಸುವಾಗ್ಯೆ ಹಿಂದಿನಿಂದ ಮೆ. ಸುಬ್ಬಯ್ಯನವರ ಕಾರು ಬಂದು ಅದರಿಂದ ಮೆ. ಚೋಡನ ಬೆಳ್ಯಪ್ಪನವರು ಬಿದ್ದು ಹೋಗಿದ್ದ ವರ್ತಮಾನ ತಿಳಿದು, ಕಾರನ್ನು ಹಿಂದಕ್ಕೆ ಕಳುಹಿಸಿ ಅವರನ್ನು ತಂದದ್ದಾಯಿತು. ಕಾರು ಹಿಂದೆ ಹೋದಾಗ ಪೆಟ್ಟು ಹೊಡೆದ ಸ್ಥಳದಲ್ಲಿ ಜನರು ಇರಲಿಲ್ಲವೆಂತ ಡ್ರೈವರನಿಂದ ತಿಳಿಯಿತು. ಕಾಗೋಡದಿಂದ ಬೆಸ್ಕಟ್ಟು ಹೊರಟವರು ದಾರಿಯಲ್ಲಿ ಕೇಚಪಂಡ ಸೋಮಯ್ಯನವರಿಗೂ, ಮೈಮನ ಮುತ್ತಣ್ಣನವರಿಗೂ ಹೊಡದಿರುವರೆಂತಲೂ ತಿಳಿದು ಬಂದಿದೆ ... ರಿಂದ ಘಾಯಪಟ್ಟ ಒಬ್ಬರಿಬ್ಬರು ಸೋಮವಾರಪೇಟೆ ಪೊಲೀಸಿಗೆ ತಿಳಿಸಿರುವರೆಂತ ವರ್ತಮಾನವಿದೆ. ಈ ಗಲಾಟೆಯ ವಿಷಯದಲ್ಲಿ ಸಂಪೂರ್ಣ ತನಿಖೆ ಮಾಡಬೇಕೆಂತ ಮೆ ಸಿ. ಯಮ್. ವೆಂಕಪ್ಪಯ್ಯನವರು ಕಮಿಶನರವರಿಗೆ ಬರೆದಿರುವರೆಂತಲೂ ತಿಳಿದು ಬಂದಿದೆ.

ನೋಟೀಸು.

1929ನೇ ಇಸವಿ ನವಂಬರು ತಾರೀಕು 30ನೇ ಶನಿವಾರ ದಿನ ಮಧ್ಯಾಹ್ನ 2 ಗಂಟೆಗೆ ವೀರರಾಜಪೇಟೆಯಲ್ಲಿ ತಾಲೂಕು ಕಚೇರಿ ಬಳಿ ಮೈದಾನದಲ್ಲಿ ಶೇರುದಾರರ ಮಹಾ ಸಭೆಯು (ಜನರಲ್ ಮೀಟಿಂಗು) ಸೇರುವುದೆಂದು ಈ ಮೂಲಕ ತಿಳಿಸಲಾಗಿದೆ.

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ.

1. 1928—1929ನೇ ವರ್ಷದ ಆಡಳಿತ ವರದಿಯನ್ನೂ, ಇದೇ ವರ್ಷದ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭ ನಷ್ಟಗಳ ಪಟ್ಟಿಗಳನ್ನೂ ಮತ್ತು ಆಡಿಟರವರ ಸರ್ಟಿಫಿಕೇಟನ್ನೂ ಮಹಾ ಸಭೆಯ ಮುಂದೆ ಇರಿಸುವುದು.

2. ಆಡಿಟರನ್ನು ನೇಮಿಸುವಿಕೆ.

3. 1928—1929ನೇ ವರ್ಷಕ್ಕೆ ಆಡಿಟರವರಿಗೆ ಕೊಡಬೇಕಾದ ಫೀಜು ನಿಷ್ಕರ್ಷೆ ಮಾಡುವಿಕೆ.

4. ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ.

ಕೊಡಗು ' ಲಿಮಿಟೆಡ್, ಪಿ. ಐ. ಬೆಳ್ಯಪ್ಪ,
ಮಡಿಕೇರಿ, 12—11—29. ಮೇನೇಜರ್.

ಪತ್ರವ್ಯವಹಾರ

[ಬರೆಯುವವರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗಿನಲ್ಲಿ ಜನನ ಮರಣಗಳ ದಾಖ್ಲೆ.

ಕಮೀಷನರ್ ಸಾಹೇಬರವರ ಮತ್ತು ಸಿವಿಲ್ ಸರ್ಜನ್ ಸಾಹೇಬರವರ ತಿಳುವಳಿಕೆ ಬಗ್ಗೆ.

ವೀರಾಜಪೇಟೆನಾಡು ಹೆಂಬೆಟ್ಟಿಯೂರು ಗ್ರಾಮದಲ್ಲಿ 1928 ನೇ ಇಸವಿ ಏಪ್ರಿಲ್ ತಾ. 1 ರಿಂದ 1930 ನೇ ಇಸವಿ ಮಾರ್ಚಿ ಆಖೈರು ವರೆಗೆ ಜನನ ಮರಣದ ರಿಜಿಸ್ಟರಿನ ನಕಲು ತೆಗದು ನೋಡ ವಾಗ್ಯೆ 11 ಜನನ ಮರಣಗಳ ದಾಖ್ಲೆ ಇಲ್ಲ. ಅಲ್ಲಿಂದ ಈಚೆಗ ಎರಡು ಮೂರು ಬಿಟ್ಟು ಹೋಗಿವೆ. ಈ ಸಂಗತಿಯನ್ನು ಪುರಾವೆ ಮಾಡಿದಲ್ಲಿ ಪಾರುಪತ್ಯಗಾರರು ಮತ್ತು ಸುಬೇದಾರರು ತನಿಖೆ ಮಾಡಿ ತಕ್ಕ ಬಂದೋಬಸ್ತು ಮಾಡುತ್ತೇವೆಂತಲೂ, ಇವುಗಳನ್ನು ದಾಖಲು ಮಾಡಿಸುತ್ತೇವೆಂದೂ ಹೇಳಿದರು. ಯಾವುದೂ ಆಗಿ ಕಾಣುವುದಿಲ್ಲ. ಹೀಗೆ ಇಂಥಾ ಮುಖ್ಯವಾದ ದಾಖ್ಲೆಗಳನ್ನು ಬಿಟ್ಟರೆ ಅವಶ್ಯವಾದಾಗ ರೈತರಿಗೆ ದಾಖ್ಲೆ ಸರ್ಟಿಫಿಕೇಟು ಪಡೆಯಲು ಅವಕಾಶ ದೊರೆಯುವುದಿಲ್ಲ. ಇದೇ ಗ್ರಾಮದ ಪಟೇಲರು ಪೈಸಾರಿ ಕೆರೆಯಲ್ಲಿ ಮೀನು ಹಿಡಿದರೆಂಬ ಆರೋಪವನ್ನು ಕುರಿತು ಪಾರುಪತ್ಯಗಾರರು ತನಿಖೆ ಮಾಡಿದ ಸಂಗತಿ ಯಾವ ಎಲ್ಲೆಗೆ ಬಂದಿದೆ ಎಂಬುದು ಗೊತ್ತಿಲ್ಲ. ಗ್ರಾಮಸ್ಥರ ತನಿಖೆಯಾಗಿ ಸುಮಾರು ಮೂರು ತಿಂಗಳ ಮೇಲಾಯಿತು. ದಯವಿಟ್ಟು ತನಿಖೆಯಿಂದ ದಾಖ್ಲೆಗಳಿಗೂ, ಫೈಸಲಿಗೂ ಹಾರೈಸುತ್ತೇನೆ.

ಗ್ರಾಮಸ್ಥ.

ಜವಾನರುಗಳ ಕಷ್ಟ ಸ್ಥಿತಿ.

ಅಯ್ಯಾ,

ತಾಲೋಕು ಕಚೇರಿ, ಲೋಕಲ್ ಫಂಡ್ ಆಸ್ಪತ್ರೆ, ಶಾಲೆ, ಇನ್ನು ಬೇರೆ ಹಲವು ತರದ ಆಫೀಸುಗಳಲ್ಲಿಯೂ, ಕೋರ್ಟುಗಳಲ್ಲಿಯೂ ಕೆಲಸಮಾಡುವ ಜವಾನರುಗಳಿಗೆ ಸರಕಾರದಿಂದ ಬರೇ 14—0—0 ರೂಪಾಯಿಯ ಸಂಬಳವನ್ನು ಕೊಡುತ್ತಾ ಬರುವುದೂ ಸುಮಾರು 8—10 ವರ್ಷಗಳಾದರೂ ಕೂಡ ಅವರಿಗೆ ಹೆಚ್ಚಿನ ಸಂಬಳವನ್ನು ಕೊಡದೆ ಇರುವುದೂ ಬಹಳ ವ್ಯಸನಕರದ ಸಂಗ್ತಿಯಾಗಿರುತ್ತದೆ. ಆದರೆ ನಮ್ಮ ದೇಶದ ಕೌನ್ಸಿಲು ಮೆಂಬರರು ಮತ್ತು ಡಿ. ಬಿ. ಮೆಂಬರುಗಳು, ಅನೇಕ ವಿಧದ ಠರಾವುಗಳನ್ನು ಪಾಸುಮಾಡಿದರೂ ಕೂಡ ನಮ್ಮ ಜವಾನರುಗಳ ಮೇಲೆ ಕಣ್ಣೇ ಬೀಳಲಿಲ್ಲ. ಆದರೂ ಅವರಿಗೆ ಸಾಯುವ ತನಕ, ಇಲ್ಲವೇ ಪಿಂಚನಾಗಿ ಹೋಗುವ ವರೆಗೆ ಇದೇ ಸಂಬಳವೆಂದು ತೋರುತ್ತೆ. ಅಯ್ಯೋ ಗರೀಬರು ಇನು ತಾನೇ ಮಾಡಿಯಾರು? ಈಗ ಸಿಕ್ಕುವ 14 ರೂಪಾಯಿಯಿಂದ ಆಸ್ತಿ ಪಾಸ್ತಿಗಳಿಲ್ಲದೆ ಇರುವ ಇವರು ಹೇಗೆ ತಾನೆ ತಮ್ಮ ಸಂಸಾರವನ್ನು ಸಾಗಿಸುವುದು! ಅದರಲ್ಲಿಯೂ, ಕಷ್ಟದ ಆಸ್ತಿ ಪಕ್ಕರೆ ಇರುವ ಜನರು ಈ ಕೆಲಸದಲ್ಲಿ ಇರುವದು ಅಪರೂಪ ಆದ್ದರಿಂದ ಇನ್ನಾದರೂ ಗರೀಬ ಜವಾನರುಗಳ ಮೇಲೆ ಕರುಣೆಯನ್ನು ಇಟ್ಟು ನಮ್ಮ ದೇಶದ ಮುಂದಾಳುತನವನ್ನು ವಹಿಸಿರತಕ್ಕಂಥ ಕೌನ್ಸಿಲು ಮೆಂಬರುಗಳೂ ಮತ್ತು ಡಿ. ಬಿ. ಮೆಂಬರುಗಳೂ ಇದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಸಂಬಳವನ್ನು ಹೆಚ್ಚಿಸುವಂತೆ ಸರಕಾರದವರನ್ನು ಕೇಳುವರೆಂದು ಆಶಿಸುತ್ತೇನೆ.

'ಮನ ನೊಂದವ.'

ಕೊಡಗು ಕೈಪಿಡಿಯ ವಿಚಿತ್ರ.

ತಾ. 5—10—29ರ 'ಕೊಡಗು' ಪತ್ರಿಕೆಯಲ್ಲಿ ಮೆ. ಕೊಂಗಂಡ ಪೋಡಪ್ಪ ಎಂಬವರು ಬಾಡಗ, ಸಬ್ಬಗೇರಿ ಶಾಲೆಗಳ ತಪ್ಪು ವಿಷಯ ಟೀಕಿಸಿದ್ದಕ್ಕೆ ಶ್ರೀ. ಪಿ. ಯಂ ಮುತ್ತಣ್ಣನವರು ತಾರೀಕು 19—10—29ರ ಅಕ್ಟೋಬರ್ ತಿಂಗಳ ಸದರಿ ಪತ್ರಿಕೆಯಲ್ಲಿ, ಹಿಡ್ಡನ ಸಮಜಾಯಿಸಿಕೆ ಮನೋವಿಕಾಸತೆಯ ಜವಾಬ್ ನೋಡಿ ಆಶ್ಚರ್ಯವನ್ನುಂಟುಮಾಡಿದೆ.

ಸಬ್ಬಗೇರಿ ಶಾಲೆ ಯಾರು ಕಟ್ಟಿಸಿದ್ದು, ಬಾಡಗ ಶಾಲೆ ಯಾರು ಕಟ್ಟಿಸಿದರೆಂಬ ಅರಿವು ತಿಳಿಯದಿರೋದ, ಏ ಕೈಪಿಡಿಯೇ, ನಿನ್ನ 97ನೇ ಪೇಜಿನಲ್ಲಿ ಇರುವ ಬಾಡಗ, ಸಬ್ಬಗೇರಿ ಶಾಲೆಗಳ ನಾಮದ ನಿನ್ನ ನಾಲಿಗೆ ಅಡ್ಡಗಟ್ಟಿ ಹಿಡಿಯುವುದಕ್ಕೆ ಈ ಪತ್ರಿಕೆಯಲ್ಲಿ ಕೂಗಿಕೊ. ಇಲ್ಲದಿದ್ದರೆ ನಾನು ಬಿಡೆನಾರೆ.

ಬಾಡಗ ಶಾಲೆ ಗ್ರಾಮಸ್ಥರದಾಗಿರುತ್ತೆ. ಒಬ್ಬರ ಸ್ವಂತವಲ್ಲ. ಸಬ್ಬಗೇರಿ ಶಾಲೆ ಚೆಟ್ಟೀರ ಪೂಣಚ್ಚ ಎಂಬವರದ್ದಾಗಿದೆ.

ಏ ಕೈಪಿಡಿಯೇ, ಮಳೆವಂಡ ಕುಟುಂಬಸ್ಥರು ಯಾವ ಕಾಲದಲ್ಲಿ ಇಲ್ಲಿಯಾದರೂ ಸ್ಕೂಲ್ ಕಟ್ಟಿಸಿದುಂಟೆಂದು ಈ ಪತ್ರಿಕೆಯಲ್ಲಿ ಅರ್ಥಮಾಡಿಸಲು ನಿಂತಿರುವೆಯಾ? ಹಾಗಾದರೆ ನಿನ್ನ ನಾಮವೂ ಸ್ಥಿರವಾದೀತು. ಇಲ್ಲವಾದರೆ ನೀನೇ ತಿಳಿಕೊ.

ಭಾಗಮಂಡ್ಲ, ತಲಕಾವೇರಿ ಯಾರದೀತ? ಹಾಗೆ ನಿನ್ನ ಭಾವನೆಯೋ—ಕೈಪಿಡಿಯೋ ನಿನ್ನ ನೋಟಗೇ. ಒಬ್ಬನ ದಸ್ಕತ್ತನ್ನು ಇನ್ನೊಬ್ಬನು ಹಾಕಿದರೆ ಅದಕ್ಕೆ ಏನೆಂದು ಹೆಸರು, ಹಾಗೆ ನಿನ್ನ ನಾಲ್ಕು. ಇದಕ್ಕೆ ಜವಾಬ್ ಕೊಡುವಿಯೋ? ಬಾಡಗ ಮುಂತಾದ ಊರಿನವರೇ, ಜನ್ಮಚರಿತ್ರೆಯನ್ನು ನೀವಾದರೂ ಹೇಳದೇ? ?

ಕೆ. ಯಸ್. ಪ.

ನಾಪೋಕ್ಲು ಆಸ್ಪತ್ರೆಗೆ ನರಸುಗಳ ಅವಶ್ಯ.

ಅಯ್ಯಾ,

ನಾಪೋಕ್ಲು ಪಟ್ಟಣವಾಸಿಗಳ ಪ್ರಯೋಜನಕ್ಕಾಗಿಯೂ ಮತ್ತು ಅದರ ಸುತ್ತ ಮುತ್ತಲಿನ ಗ್ರಾಮಗಳ ಜನರ ಹಿತಕ್ಕಾಗಿ ಡಿ. ಬಿ. ಕೌನ್ಸಿಲಿನಲ್ಲಿ ನಾಪೋಕ್ಲು ಆಸ್ಪತ್ರೆಯಲ್ಲಿ ನರಸನ್ನು ಇಡಬೇಕೆಂಬುದಾಗಿ ಠರಾವು ಪಾಸು ಮಾಡಿದ್ದು ಸರಿಯಷ್ಟೆ. ಅದೇ ಪ್ರಕಾರವಾಗಿ ರೈತರ ಮೇಲೆ ಪ್ರೀತಿಯುಳ್ಳ ಸರಕಾರದವರು ನರಸನ್ನು ನೇಮಿಸಿದರು. ಇದು ದೊಡ್ಡ ಉಪಕಾರವೆಂದೇ ಹೇಳಬೇಕು. ಆದರೆ ಜೇಕಿನೋದ್ಧಾರಕರಾಗಿಯೂ, ಜನರ ಹಿತಕ್ಕಾಗಿಯೂ, ಹೋರಾಡುತ್ತಿರುವ ಡಿ ಬೋರ್ಡ್ ಮತ್ತು ಕೌನ್ಸಿಲ್ ಮೆಂಬರರುಗಳಿಗೆ ಎಷ್ಟು ವಂದಿಸಿದರೂ ಸ್ವಲ್ಪವೇ ಸರಿ. ಆದರೆ ಇವರು ಇಷ್ಟು ಕಷ್ಟ ಪಟ್ಟರೂ ನಾಪೋಕ್ಲಿಗೆ ನರಸನ್ನು ಇಟ್ಟದ್ದು ಬರೇ ನಾಲ್ಕೈದು ತಿಂಗಳಾಯಿತು. ಸರ್ಕಾರದವರು ಒಬ್ಬ ನಾಲ್ಕೈದು ತಿಂಗಳ ಮುಂಚೆ ಸ್ತ್ರೀಯೂ ನರಸು ವರ್ಗವಾಗಿ ಹೋದರೋ ಎಂಬುದು ನಮಗೆ ಗೊತ್ತಿಲ್ಲ. ನರಸು ಹೋಗಿ ಕೆಲವು ದಿನಗಳಾದರೂ ಆಸ್ಪತ್ರೆಗೆ ನಂತರ ನರಸೇ ಬರಲಿಲ್ಲ. ಸರ್ಕಾರದವರೇ ಇಂಥಾ ಸೌಕರ್ಯಗಳನ್ನು ಇಟ್ಟಿರುವಾಗ ಕೈಗೆ ಬಂದುದು ತುತ್ತು ಬಾಯಿಗೆ ಬಾರದ ಹಾಗೆ ಆಯಿತು ಎಂಬ ಸಾಮ್ಯಕ್ಕೆ ಸರಿಯಾಯಿತಲ್ಲವೇ? ಆದರೆ ಇನ್ನಾದರೂ ಘನ ಸರಕಾರದವರು ಪಟ್ಟಣವಾಸಿಗಳ ಮೇಲೂ ಮತ್ತು ಬಡ ಪ್ರಜೆಗಳ ಮೇಲೂ ಕನಿಕರವನ್ನು ಇಟ್ಟು ಕೂಡಲೇ ನರಸನ್ನು ಇಡುವರಾಗಿ ನಂಬುತ್ತೇನೆ.

"ಪಟ್ಟಣವಾಸಿ"

ಬ್ರಾಹ್ಮಣ ಸಮುದಾಯದಲ್ಲಿ ಒಂದು ವಿನಂತಿ.

ಪ್ರಿಯ ಬಂಧುಗಳೇ,

ಇತ್ತೀಚೆಗೆ ನಮ್ಮ ಸಮಾಜದಲ್ಲಿ ಅನೇಕ ತರುಣರು ಅಕಾಲ ಮರಣಕ್ಕೆ ಗುರಿಯಾಗುತ್ತಿರುವುದು ನಿಮಗೆ ತಿಳಿಯದ ವಿಷಯವಲ್ಲ. ಆದರೆ ಅವರು ಅಕಾಲ ಮರಣಕ್ಕೆ ತುತ್ತಾಗುವುದನ್ನು ನಾವು ತಪ್ಪಿಸಲು ಶಕ್ಯವಿಲ್ಲ. ಅದು ನಮ್ಮ ಕರ್ತವ್ಯವೂ ಅಲ್ಲ. ಈಗ ನಾವು ವಿಚಾರಿಸಬೇಕಾದುದು ಅವರ ಪತ್ನಿಗಳ ಅವಸ್ಥೆಯನ್ನು ಕುರಿತು.

ಬ್ರಾಹ್ಮಣ ಸಮುದಾಯದಲ್ಲಿ ವಿಧವೆಗಳ ಸ್ಥಿತಿಯು ಬಹು ದುಃಖಕರವಾಗಿದೆ. ವಿಧವೆಗೆಂದರೆ ಅಮಂಗಲ ಸ್ತ್ರೀಯರು. ಯಾವ ಶುಭ ಕಾರ್ಯಕ್ಕೂ ಅವರ ಪ್ರವೇಶವಾಗಬಾರದು. ಬೆಳಿಗ್ಗೆ ಎದ್ದರೆ ಅವರ ಮುಖ ನೋಡಬಾರದು. ಒಂದು ಕಾರ್ಯಕ್ಕೆ ಹೊರಡಬೇಕಾದಲ್ಲಿ ವಿಧವೆಗಳು ಎದುರಾಗಿ ಬರಬಾರದು. ವಿಧವೆಗಳು ಒಡವೆ ಹಾಕಬಾರದು; ಒಳ್ಳೆಯ ಸೀರೆ ತೊಡಬಾರದು; ಆಭರಣ ಇಟ್ಟುಕೊಳ್ಳಬಾರದು. ಮೊದಲೇ ಪತಿ ಇಲ್ಲದಿರುವುದು ಅವರಿಗೊಂದು ದುಃಖ. ಇದರ ಜೊತೆಗೆ ಸಮಾಜದ ಧಿಕ್ಕಾರ ಬೇರೊಂದು.

ಮ ಬಿದ್ದಪ್ಪನವರ ತಾ 1 ನೇ 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನವನ್ನು ಓದಿ ನಾನು ಕರ್ನಾಟಕ ಏಕೀಕರಣವಾದ ಬಳಿಕದ ಪ್ರಯೋಜನಗಳನ್ನು ಸೂಚಿಸಿ ಬರೆದ ಲೇಖನಕ್ಕೆ ಅವರ ಒಪ್ಪಿಗೆ ಇದೆ ಎಂದು ನಾನು ಊಹಿಸುತ್ತೇನೆ ಆದರೆ ನಾನು ಸೂಚಿಸಿದ ಕೊರತೆಗಳು ಅವರಿಗೆ ಕೊರತೆಗಳಾಗಿ ಕಂಡು ಬರುವುದಿಲ್ಲವಾಗಿ ಅವರ ಅಭಿಪ್ರಾಯ ಅವರ ಅಭಿಪ್ರಾಯಗಳನ್ನು ವಿರೋಧಿಸುವಷ್ಟು ತಿಳುವಳಿಕೆಯು ನನಗೆ ಇರುವುದಿಲ್ಲವಾಗಿ ನಾನು ಒಪ್ಪುತ್ತೇನೆ ಆದರೂ ಅವರ ಲೇಖನವನ್ನು ಓದಿಯೂ ಕೂಡ ನನ್ನ ಅಭಿಪ್ರಾಯವನ್ನು ಬದಲಾಯಿಸಲು ಯಾತಕ್ಕೋಸ್ಕರ ಸಾಧ್ಯವಿಲ್ಲವೆಂಬುದಾಗಿ ಕೆಳಗೆ ವಿವರಿಸುತ್ತೇನೆ.

ಅವರು ಜೆಂಜಾಯಿ ಪ್ರಾಂತ್ಯದಲ್ಲಿರುವ ಪಾರ್ಶಿಯವರ ಮತ್ತು ಮಲಯಾಳೀಯರ ಉದಾಹರಣೆಗಳನ್ನು ಸೂಚಿಸಿ ಕೊಡಗು ಕರ್ನಾಟಕ ಪ್ರಾಂತ್ಯವಾದರೂ ಕೂಡ ನಾವು ನಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವೆವು ಎಂಬುದಾಗಿ ಬರೆದಿರುತ್ತಾರೆ. ಪಾರ್ಶಿಯವರ ಉದಾಹರಣೆಯನ್ನು ಸೂಚಿಸುವುದರ ಮೊದಲು, ಪಾರ್ಶಿಯವರು ಯಾವ ಮತದವರು ಎಂಬುದಾಗಿ ಕೊಂಚ ಯೋಚಿಸಬೇಕಿತ್ತು. ಹಾಗಾದರೆ ಮಹಮ್ಮದಿಯರ ಮತ್ತು ಕ್ರಿಸ್ತರ ಉದಾಹರಣೆಗಳನ್ನು ಸಹ ಮೆ. ಬಿದ್ದಪ್ಪನವರು ಸೂಚಿಸಬಹುದು ಮಲಯಾಳಿಗಳು ಮದ್ರಾಸಿಗೆ ಸೇರಿದ್ದರೂ ಸಹ ಮಲಯಾಳದವರು ಅವರ ವ್ಯಕ್ತಿತ್ವವನ್ನು ಉಳಿಸಿಕೊಂಡಿರುವುದು ನಿಜವೇ ಆದರೆ ಮದ್ರಾಸು ಪ್ರಾಂತ್ಯದಲ್ಲಿ ಆಂಧ್ರರು, ತಮಿಳರು ಮಲಯಾಳಿಗಳು ಮತ್ತು ಕರ್ನಾಟಕದವರು ಎಂಬ ಹೆಚ್ಚು ಕಡಿಮೆ ಸಮಾನದ ನಾಲ್ಕು ಜನಾಂಗಗಳಿವೆ ಹೀಗಿರುವಲ್ಲಿ ಯಾವುದಾದರೂ ಒಂದು ಜನಾಂಗಕ್ಕೆ ಮತ್ತೊಂದನ್ನು ಆಕರ್ಷಿಸುವಷ್ಟು ಸಾಧ್ಯವಾಗಿರುವುದಿಲ್ಲ ಅಸರ ಒಪಲಾಗಿ ಮದ್ರಾಸು ಪ್ರಾಂತ್ಯದಲ್ಲಿ ಒಂದು ಜನಾಂಗವಾಗಿದ್ದು ಕನ್ನಡ ಅದರ ಮಧ್ಯದಲ್ಲಿ ಮಲೆಯಾಳವು ಒಂದು ಚಿಕ್ಕ ಜನಾಂಗವಾಗಿದ್ದು ಕಾಣುತ್ತಿದ್ದರೆ ಮಲೆಯಾಳೀ ಜೀವನವು ಬರು. ಕಂಡಿತವಾಗಿಯೂ ಅವರ ವ್ಯಕ್ತಿತ್ವವನ್ನು ಕಳಕೊಳ್ಳುತ್ತಿದ್ದರು. ಆಗಲಾದರೂ ಕನ್ನಡ ತಮಿಳು ನಾಡಿಗೆ ಮುಟ್ಟಿಕೊಂಡಿರುವ ತಿರುವಾಂಕೂರಿನ ಅನೇಕ ಜನರು ತಮಿಳು ಭಾಷೆಯನ್ನೂ, ತಮಿಳರ ನಡತೆ ನೀತಿಗಳನ್ನೂ ಸ್ವೀಕರಿಸಿಕೊಂಡಿರುವರು ಅದರಂತೆಯೇ ತುಳುವರು ಸಹ ಮಲೆಯಾಳದವರ ಭಾಷೆ ನಡತೆ ನೀತಿಗಳನ್ನು ಸ್ವೀಕರಿಸಿಕೊಂಡಿರುವರು ಮತ್ತು ಮಲೆಯಾಳ, ತಮಿಳು ಮೊದಲಾದ ಇತರ ಜನಾಂಗಗಳಿಗೆ ಅವರ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳಲು ಬರೆಯಲು ಅಸ್ಪದವಾದ ಅವರ ಭಾಷೆಗಳೂ ಅವರ ಭಾಷೆಗಳಲ್ಲಿ ಬರೆಯಲ್ಪಟ್ಟ ಪುಸ್ತಕಗಳೂ ವಿಶೇಷವಾಗಿ ಸಹಾಯಕವಾಗಿವೆ ಭೂಲೋಕದ ಯಾವ ಭಾಗದಲ್ಲಿಯೇ ಆದರೂ, ಇಂಗ್ಲೀಷರು ವ್ಯಕ್ತಿತ್ವವನ್ನು ಕಾಪಾಡಿಕೊಳ್ಳಲು ಷೇಕ್ಸ್‌ಪಿಯರ್ ಮತ್ತು ಮಿಲ್ಟನ್ (Shakespeare and Milton) ಎಂಬ ಎರಡು ಕವಿಗಳು ಬರೆದ ಪುಸ್ತಕಗಳು ಸಹಾಯಕವಾಗಿರುವಷ್ಟು ಬೇರೆ ಯಾವುದೂ ಸಹಾಯ ಮಾಡುವುದಿಲ್ಲ ಈ ಸಂದರ್ಭದಲ್ಲಿ ಒಂದು ಚಿಕ್ಕ ಉದಾಹರಣೆಯನ್ನು ಸೂಚಿಸುತ್ತೇನೆ ನಮ್ಮಲ್ಲಿಯೂ ಸಹ ಕೊಂಚ ಮಟ್ಟಿಗೆ ಇಂಗ್ಲೀಷು ಕಲಿತವರು ಪಾಡಿಕೆಯಾಗಿ ಇಂಗ್ಲೀಷಿನಲ್ಲಿಯೇ ಕಾಗದ ಪತ್ರಗಳನ್ನು ಬರೆಯುತ್ತಾರೆ ಮತ್ತು ಒಳ್ಳೆಯ ಕನ್ನಡ ಪುಸ್ತಕಗಳು ಇದ್ದರೂ ಸಹ ಹೆಚ್ಚು ಕಮ್ಮಿ ಕನ್ನಡ ಪುಸ್ತಕಗಳನ್ನು ಓದುವುದೇ ಬಿಟ್ಟು ಇಂಗ್ಲೀಷ ಪುಸ್ತಕಗಳನ್ನೇ ಓದುತ್ತಾರೆ ಆದರೆ ಮಲೆಯಾಳಿಗಳು, ಕನ್ನಡಿಗರು, ತಮಿಳರು ಆಂಧ್ರರ, ಬಂಗಾಳಿಗಳು ಮೊದಲಾದ ಜನಾಂಗದವರು ಅವರ ಕಾಗದ ಪತ್ರಗಳನ್ನು ಹೆಚ್ಚಾಗಿ ಅವರ ಸ್ವಂತ ಭಾಷೆಯಲ್ಲಿಯೇ ಬರೆಯುತ್ತಾರೆ, ಮತ್ತು ಅವರ ಸ್ವಂತ ಭಾಷೆಗಳಲ್ಲಿಯೇ ಬರೆದ ಪುಸ್ತಕಗಳನ್ನು ಅವರು ಹೆಚ್ಚಾಗಿ ಓದುತ್ತಾರೆ.

ಜನಾಂಗಗಳು ಒಟ್ಟಾಗಿ ಸೇರಿ, ಒಂದಕ್ಕೊಂದು ಎದರಾಗಿ ಬಂದು, ಅನೇಕ ಜನಾಂಗಗಳು ತಮ್ಮ ವ್ಯಕ್ತಿತ್ವವನ್ನು ಕಳಕೊಂಡ ಉದಾಹರಣೆಗಳು ಭೂಲೋಕದ ಚರಿತ್ರೆಯಲ್ಲಿ ಬಹಳವಾಗಿ ಇವೆ. ದೊಡ್ಡ ಮತ್ತು ಶಕ್ತಿ ಯುಕ್ತವಾಗಿರುವ ಜನಾಂಗಗಳೊಡನೆ ಚಿಕ್ಕ ಜನಾಂಗಗಳು ಸೇರಿ, ಮಿಳಿತವಾಗಿ ತಮ್ಮ ವ್ಯಕ್ತಿತ್ವವನ್ನು ಕಳಕೊಂಡ ಉದಾಹರಣೆಗಳನ್ನು ಕೊಂಚ ಮಟ್ಟಿಗೆ ಸೂಚಿಸುತ್ತೇನೆ ವೇಲ್ಸ್ (Wales) ಇಂಗ್ಲೆಂಡಿನ ಸಂಗಡ ಸೇರಿದ ಮೇಲೆ ತನ್ನ ವ್ಯಕ್ತಿತ್ವವನ್ನು ಕಳಕೊಳ್ಳಲಿಲ್ಲವೇ ? ಸ್ಕಾಟ್‌ಲೇಂಡ್ (Scotland) ಇಂಗ್ಲೆಂಡಿನ ಸಂಗಡ ಸೇರಿದ ಮೇಲೆ ಬಹಳ ಮಟ್ಟಿಗೆ ತನ್ನ ವ್ಯಕ್ತಿತ್ವವನ್ನು ಕಳಕೊಂಡಿರುವುದಿಲ್ಲವೇ ? ರೋಮನರಿಗೆ ಅಧೀನದಲ್ಲಿದ್ದ ಕೆಲವು ವರ್ಷಗಳಲ್ಲಿ ಇಂಗ್ಲೆಂಡಿನವರು ತಮ್ಮ ವ್ಯಕ್ತಿತ್ವವನ್ನು ಕಳಕೊಳ್ಳಲಿಲ್ಲವೇ? ಎತಿನಿಯನ್ಸ್ (Athenians) ಸ್ಪಾರ್ಟನ್ಸ್‌ದವರು (Spartans) ಎಂಬ ಬಹಳ ಹೆಸರುವಾಸಿಯನ್ನು ಹೊಂದಿದ ಜನಾಂಗದವರ ಹೆಸರುಗಳು ಏಕೀ ಕರ್ನಾಟಕದಂತೆ ಏಕೀ ಗ್ರೀಸ್ (United Greece) ಆದ ಮೇಲೆ ಚರಿತ್ರೆಯಿಂದಲೇ ತಿಕ್ಕಿ ಹೋಗಲಿಲ್ಲವೇ ? ಒಂದು ಚಿಕ್ಕ ಜನಾಂಗದವರೂ ತಮ್ಮ ಅನೇಕ ತರದ ಶಕ್ತಿಗಳಿಂದ ದೊಡ್ಡ ಜನಾಂಗಗಳನ್ನು ಗೆಲ್ಲಬಹುದು ಆದರೆ ಆ ಶಕ್ತಿಯು ಕೊಡಗಿಗೆ ಈಗ ಇಲ್ಲ ಆದಕಾರಣ ನಾವು ಕರ್ನಾಟಕದ ಭಾಗವಾದಲ್ಲಿ ಕರ್ನಾಟಕವು ಕೊಡಗನ್ನು ಗೆಲ್ಲುವುದೇ ಹೊರತು, ಕೊಡಗಿಗೆ ಕರ್ನಾಟಕವನ್ನು ಗೆಲ್ಲುವುದು ಖಂಡಿತವಾಗಿಯೂ ಅಸಾಧ್ಯ ಕೆಲವು ತೊಟ್ಟು ಹಾಲನ್ನೇ ಆದರೂ ಒಂದು ತಂಬಿಗೆ ನೀರಿನಲ್ಲಿ ಸೇರಿಸಿದರೆ ಹಾಲು ತನ್ನ ಬಣ್ಣವನ್ನು ಉಳಿಸಿಕೊಳ್ಳುವುದೇ ? ಕಾವೇರಿ ನದಿಯು ಸಮುದ್ರ ಸಂಗಮವಾಗುವ ವರೆಗೆ ನಮಗೆಲ್ಲರಿಗೂ ಬಹಳ ಪವಿತ್ರವಾಗಿದೆ. ಆದರೆ ಅದು ಸಮುದ್ರ ಸಂಗಮವಾದ ಮೇಲೆ ದೇವೇಂದ್ರನ ಆಜ್ಞೆಯಾದರೂ ಕೂಡ ಅದರ ಪವಿತ್ರವನ್ನು ಉಳಿಸಿಕೊಳ್ಳಲು ಅದಕ್ಕೆ ಸಾಧ್ಯವಾದೀತೇ ? ಅಲ್ಲ ಅದರ ನೀರು ಮಾತ್ರ ಸಮುದ್ರದ ನೀರಿನೊಂದಿಗೆ ಬೆರೆಕೆಯಾಗಿ ಅದರ ಪವಿತ್ರವು ಬೇರೆ ಇದ್ದೀತೇ ?

ನಮ್ಮ ಹಿಡುವಳಿಯ ಹಕ್ಕನ್ನು ಕಳಕೊಳ್ಳುವ ಸಂದರ್ಭವು ಬಿದ್ದಪ್ಪನವರು ಸೂಚಿಸುವಂತೆ, ಕರ್ನಾಟಕದ ಕೌನ್ಸಿಲಲ್ಲಿ ನಮ್ಮ ಕೆಲವು ಪ್ರತಿನಿಧಿಗಳು, ಬೇರೆ ಜಿಲ್ಲೆಗಳ ಪ್ರತಿನಿಧಿಗಳ ಸಹಾಯದಿಂದ ನಮಗೆ ಬೇಕಾದ ಕಾನೂನುಗಳನ್ನು ಚರ್ಚಿಸಿ ಮಂಜೂರು ಮಾಡಿಕೊಳ್ಳಬಹುದು ಅದು ನ್ಯಾಯವಾದ ಮತ್ತು ವಾಡಿಕೆಯಾದ ಸಂಗತಿಯಾಗಿದೆ ಆದರೆ ನಮ್ಮ ಸ್ವಂತ ಹಕ್ಕಾಗಿರುವ ಜಮ್ಮ ಹಿಡುವಳಿಯ ಪ್ರಶ್ನೆ [illegible] ಚರ್ಚೆಗೆ ಬಂದಲ್ಲಿ ಬೇರೆ ಜಿಲ್ಲೆಗಳ ಪ್ರತಿನಿಧಿಗಳ ಸಹಾಯ[illegible] ನಮಗೆ ಖಂಡಿತವಾಗಿಯೂ ಸಿಕ್ಕುವುದು ಸಾಧ್ಯವಲ್ಲ ಮ[illegible] ಇನ್ನೂ ಕಾಲಗಳು ಮುಂದರಿದ ಹಾಗೆ ಕೌನ್ಸಿಲುಗಳ ಬ[illegible] ಹೆಚ್ಚಾಗುವುದರಿಂದ, ಕೌನ್ಸಿಲಿನಲ್ಲಿ ಮಂಜೂರು ಮಾ[illegible]ಟ್ಟ ತರಾವುಗಳನ್ನು ಮೆ. ಬಿದ್ದಪ್ಪನವರು ಯೋಚಿಸುವಂ[illegible] ರಾಕರಿಸಲು ಸರಕಾರದವರಿಗೆ ಸುಲಭ ಸಾಧ್ಯವಲ್ಲ [illegible] ಜಮ್ಮ ಹಿಡುವಳಿಯನ್ನು ಕಾಪಾಡಲು ಬ್ರಿಟಿಷರ ಉ[illegible] ದಲ್ಲಿಯೇ ನಾವು ಪೂರ ನಂಬಿರಬೇಕೆಂಬುದಾಗಿ ಮೆ ಬಿದ್ದಪ್ಪನವರು ಹೇಳುತ್ತಾರೆ ಆದರೆ ಆ ಉದಾರತ್ವವನ್ನು [illegible]ಗ ಒಪ್ಪಿನಲ್ಲಿರುವಾಗ ನಮಗೆ ಮಾತ್ರ ತೋರಿಸಿದರೆ [illegible] ಕವಾಗಿ ಕುಂದಕ ಬರಲಿಕ್ಕಿಲ್ಲವೇ? ಇಲ್ಲವೇ [illegible] ಮೇರೆ[illegible]ದ್ದು ಕೊಂಡು ನಮಗೆ ಸಲ್ಲತಕ್ಕದ್ದನ್ನು [illegible] ತ್ತೇವಾ [illegible] ನಾವು ಗುಂಪಿನಲ್ಲಿರುವ [illegible] ಜನಗಳನ್ನು ಯೋಚಿಸಿ ಗುಂಪಿಗೆ ಸೇರುವುದಾದರೆ [illegible] ತ ಸುಖಗಳನ್ನು ಕಳಕೊಳ್ಳಲು ಒಪ್ಪಬೇಕು ಇಲ್ಲವೇ [illegible] ವು ಗುಂಪಿನಿಂದ ದೂರವಾಗಿರುವದು ಮೇಲು. [illegible] ಪಿನಲ್ಲಿರುವ ಪ್ರಯೋಜನಗಳಿಗೆ ಆಶೆಪಟ್ಟು ಗುಂ[illegible] ನಮ್ಮ ಸ್ವಂತ ಸುಖಗಳನ್ನೂ ಅಲ್ಲಿ ಕೇಳಿದರೆ ಅವ[illegible] ವರ ಮರ್ಯಾದೆಗೆ ಕುಂದಕ ಬರುವುದಲ್ಲದೆ [illegible] ಡಲು ಯೋಚಿಸುವವರ ಹೆಸರುವಾಸಿಗೆ ಭಂಗ [illegible] ಈ ಸಂದರ್ಭದಲ್ಲಿ ಅಂಥ ಬಹುಮಾನ ಕೊಟ್ಟವನಿಗೂ ಕೊಂಡವನಿಗೂ ಕೆಡುಕನ್ನು ಉಂಟುಮಾಡುತ್ತ[illegible] him that gives and curseth him that [illegible]

ಜಮ್ಮ ಹಿಡುವಳಿಯ ಹಕ್ಕಿನೊಂದಿಗೆ ಕೊ[illegible] ಹಕ್ಕನ್ನು ನಾವು ಕಳಕೊಳ್ಳುವೆವು ಎಂಬುದಾಗಿ ನಾ[illegible] ವುದಿಲ್ಲ ಇನ್ನು ಬಗನೇ ಇದೀ ಇಂಡಿಯ[illegible] ಕಾಲ ಕತ್ತಿಯ ಹಕ್ಕಿಗೆ ಹೋದಂತುವುದೇ [illegible] ಆ ಮಸ್ಕಗಳು ಇರುವದರಿಂದ ಕತ್ತಿ ಹಾಕಲು [illegible] ಮ್ಮನಿಲಿಕ್ಕಿಲ್ಲ

[illegible] ಕಾಯಿದೆಯ ತತ್ವವು ಇಡೀ ಇಂಡಿ[illegible] ವ್ಯಾಪ್ತವಾಗಿರುವದರಿಂದ ನಮ್ಮ ವಿಷಯಗಳಿಗೆ ಕಾಯಿದೆಯು ಸ್ಪಷ್ಟವಾಗಿದೆ.

ನಾನು ಮೊದಲೇ ಬರೆದಂತೆ ಪ್ರತಿ ಒಂದ[illegible] ಎರಡು ದೃಶ್ಯಗಳಿವೆ ಹಾಗೆ ಎರಡು ದೃಶ್ಯ[illegible] ಗಳು ಇದು ವರೆಗೆ ಜನರ ಚರ್ಚೆಗೆ ಬಂದಿತವಾಗಿ[illegible] ರುವುದಿಲ್ಲ Silence is consent ಎಂಬ [illegible] ರೆ ನಾನು ಪ್ರಯೋಜನದ ದೃಶ್ಯವನ್ನು ವಿವರಿಸಿ[illegible] ಸಕ್ಕೆ ಮೆ. ಬಿದ್ದಪ್ಪನವರ ಒಪ್ಪಿಗೆ ಇದೆ ಎಂ[illegible] ತ್ತೇನೆ ಏಕೀಕರಣದ ಕೊರತೆಗಳನ್ನು ನಾನ[illegible] ಅವರಿಗೆ ಒಪ್ಪಿಗೆ ಇಲ್ಲ ಹಾಗಾದರೆ, ಕೊ[illegible] ಕ್ಕೆ ಸೇರಲು ಸಮ್ಮತಿಸುವದರಿಂದ ಕೊಡ[illegible] ಯೂ ಕೊರತೆ ಇಲ್ಲವೋ? ಇದ್ದರೆ ಅವುಗ[illegible] ಮೆ ಬಿದ್ದಪ್ಪನವರು ಅವರ ಹೆಚ್ಚಿನ ತಿಳುವ[illegible] ದ ಜನರ ಮುಂದಿಟ್ಟದ್ದರೆ ನಾನು ಬಹ[illegible] ದ್ದೆನು.

ಕೆ [illegible]

New arrivals of Cigars.

PRICES MODERATE.

Popular lines

Morning whiffs 100 s.	Rs.	1— 8—0
Lady love 100 s.	"	2—10—0
Special Planters 100 s.	"	3— 8—0
Special Planters 50 s.	"	2— 0—0
Catamaran shape 50 s	"	2—12—0

CROCKERY:—

Tea sets for 6 persons in attractive designs @ Rs 12/8/— & 10/8/— a set

Spare cups & saucers @ Annas 8/— & 10/— pair

The Coorg Emporium,

Mercara. General Merchant. **Sidapur.**

48—21

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ನಾವು ಒಬ್ಬ ಪ್ರಯೋಜನಾರ್ಥವಾಗಿ ಈ ಪುಸ್ತಕವನ್ನು ಸ... ವಾದಿಸಿ ... ಯುವ ಹಾಗ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಸಹಿತ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧಾರಣೆ, ಸಂಭೋಗದಕಾಲ ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ಮೂಸದ ಮರ್ಮಗಳ ವಿವರಣೆ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಿಂದೊಡನೆ ತಿಳಿಸಿದೆ. ಕ್ರಯ ಪುಸ್ತಕ ೧ಕ್ಕೆ ರೂ. ೧—೦—೦.

ಎಸ್. ವಿ. ಗೋಪಾಲ್ ಬುಕ್ ಡಿಪ್ಪೋ,

52—5 37. ತಿರುಪಳ್ಳಿಬೀದಿ, ಮದರಾಸ್.

ಭಂಗಾರದ ಉಂಗುರಗಳು 12 ಆಣೆ.

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟಿಚ ಕಟ್ಟಿದೆ. ಇದರ ಒಟ್ಟವು ಕೆಡದಂತೆ ... ವರುಷದಿಂದ ಸರ್ಟಿಫಿಕೇಟ್ ... ಕೊಟ್ಟಿದೆ. ... ಗಳಿಗೆ ... 12—0. 3 ಉಂಗುರಗಳಿಗೆ ಒಂದು ಜೇಬಿನ ಟೈಂಪೀಸನ್ನೂ, 6 ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ 12 ಉಂಗುರಗಳಿಗೆ ಒಂದು ಭಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ.

ವಿಳಾಸ.—ಲೀಗಲ್ ವಾಚ್ ಕಂಪೆನಿ,

52—21 ಪೋ. ಬಾ. ನಂ. 213, ಮದರಾಸು.

ಇನಾಮ್! ಇನಾಮ್!

4 ಆಣೆ ಟಪ್ಪಾಲು ಸ್ಟ್ಯಾಂಪು.

ಕಳುಹಿದರೆ 372 ಪುಟಗಳ ... ಉಪಯೋಗವಾದ ಮತ್ತು ಸುಂದರವಾದ

1930ನೇ ಇಸವಿಯ

ಡಯರಿ

... ಇನಾಮಾಗಿ ...

14 ಮದನ ಮಂಜರಿ ಫಾರ್ಮಸಿ,

14 ಚೀನಾ ಬಜಾರ್, ಮದ್ರಾಸ.

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಲೈಸೆನ್ಸ್ ಬೇಕಿದ್ದರೆ ... ಕೇಳಿರಿ

ಜೋಡು ಹೋಳಿನ ಕೋವಿ	ರೈಫಲುಗಳು	ರೂ.	12	ರಿಂದ	2750	ರ ವರೆಗೆ
ಒಂಟಿ	"	"				
ಜೋಡು	"	ಕೋವಿಗಳು	"	35	"	950
ಒಂಟಿ	"	"	"	50	"	1350
ಜೋಡು ಹೋಳಿನ	ಕೇಪು	"	"	35	"	275
ಒಂಟಿ	"	"	"	45	"	135
ಬ್ರೀಚ್ ಲೋಡಿಂಗ್	ರಿವಾಲ್ವರುಗಳು		"	30	"	80
ಪಿಸ್ತೋಲುಗಳು			"	35	"	350
ಕಾಡು ಮೃಗಗಳ ಬೇಟೆ, ವಿಮಾನ ಬೇಟೆ ಮುಂತಾದ			"	30	"	150

ಎಲ್ಲಾ ತರಹದ ರಾತ್ರಿಯ ವಿನೋದ ಮತ್ತು ಕೆಲಸಗಳಿಗೆ ಉಪಯೋಗಕರವಾದ ಉತ್ತಮ ಸರ್ಚ್‌ಲೈಟ್ ... ಬೆಲೆ ರೂ. 30 ... ಕತ್ತಿಗಳು, ಬಚಿಗಳು, ತೋಟಿಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.

Biggest Importers of Firearms and Ammunition

Cheapest priced firm in India,

210 Abdul Rehman Street, BOMBAY.

44—13

ಮಾತನಾಡುವ ಪಟಗಳು.



ಈ ಪಟಗಳಲ್ಲಿ ಹುಲಿ, ಆನೆ, ಕರಡಿ, ಕಪಿ, ನಾಯಿ, ನವಿಲು ಮುಂತಾದ ಮೃಗಗಳೂ, ಕೋಳಿ, ಗಿಳಿ, ಕಾಗೆ, ಪಾರಿವಾಳ ಮುಂತಾದ ಪಕ್ಷಿಗಳೂ ... ಇರುವವು. ಇವನ್ನು ಸ್ಪರ್ಶ ಮಾಡಿದರೆ ತನ್ನ ಸ್ವರದಲ್ಲಿ ಮಾತನಾಡುವವು ... ನೋಡಲು ಬಹು ಅಚ್ಚರಿಯಾಗಿರುವವು. ... ಕ್ರಯ 1 ಕ್ಕೆ 0—8—0. 3 ಪಟಗಳಿಗೆ ಒಂದು ಇಂಗ್ಲಿಷ್ ... 12 ಕ್ಕೆ 5 ವರ್ಷ ಗ್ಯಾರಂಟಿ ಇರುವ ಒಂದು ಟೈಂಪೀಸನ್ನು ಇನಾಮಾಗಿ ಕೊಡುವೆವು. 1 ಪಟಕ್ಕೆ 1 ಆಣೆ ಕಳುಹಿಸಲೇಬೇಕು.

ವಿಳಾಸ.— ಸಿಟಿ ಸ್ಟೋರ್,

158 ಕೈವಾರ ಬಜಾರ್,

52—11 ಮದರಾಸು.

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೧೯೩೦ನೇ ಇಸವಿಯ ಶಿದ್ದಪ್ಪಾಸ್ ಮೊಡಲ್ ಮೈಸೂರು ಕ್ಯಾಲೆಂಡರುಗಳು.

1 ಅನೇಕ ವಿಷಯಗಳನ್ನೊಳಗೊಂಡು ಶ್ರೀಕಂಠೇಶ್ವರ ಮತ್ತು ಮಹಾರಾಜರವರ ಲೀಲಾಸಹಿತವಾದ ದೇವರ ಚಿತ್ರಗಳು 17ನ್ನು ಇಟ್ಟು ಅಂದವಾಗಿ ತಯಾರಿಸಿದ ದೊಡ್ಡ ಶೀಟು ಕ್ಯಾಲೆಂಡರು

2. 3½"×4½" ಸೈಜಿನ ಪಾಕೆಟ್ ಕ್ಯಾಲೆಂಡರು	50ಕ್ಕೆ	ರೂ.	1	2	0	100ಕ್ಕೆ	ರೂ.	2	0 0
3. 5½"×3½" ಸೈಜಿನ ಇಂಗ್ಲಿಷ್ ಪಾಕೆಟ್ ಕ್ಯಾಲೆಂಡರು	25ಕ್ಕೆ	ರೂ.	1	3	0	100ಕ್ಕೆ	ರೂ.	4	12 0
4. ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ಅಂದವಾಗಿ ಪ್ರಿಂಟಾದ 10"×14" ಸೈಜಿನಲ್ಲಿ ಈಶ್ವರ, ಪಾರ್ವತಿ, ಗಣಪತಿ, ಸುಬ್ರಮಣ್ಯ ಮೇಲಿರುವ ಚಿತ್ರದ ಕ್ಯಾಲೆಂಡರು	12ಕ್ಕೆ	ರೂ.	0	14	0	25ಕ್ಕೆ	ರೂ.	1	11 0
5. 18"×22" ಸೈಜಿನಲ್ಲಿ ದಪ್ಪ ಅಕ್ಷರದಿಂದ ಪ್ರಿಂಟಾಗಿರುವ ತಿಂಗಳಿಗೆ 1 ಶೀಟಿನಂತೆ ಹರಿಯುವ ಆಫೀಸ್ ಕ್ಯಾಲೆಂಡರು	1ಕ್ಕೆ	ರೂ.	0	3	0	12ಕ್ಕೆ	ರೂ.	1	2 0
	1ಕ್ಕೆ	ರೂ.	0	4	0	12ಕ್ಕೆ	ರೂ.	2	4 0

0—8—0 ಆಣೆ ರವಾನಿಸಿದವರಿಗೆ ಮೇಲ್ಕಂಡ 5 ನಮೂನೆ ಕ್ಯಾಲೆಂಡರನ್ನು ಮಾದರಿಗಾಗಿ ಫ್ರೀ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ದರವಂತೆ ಸಿಗುವ ಕ್ಯಾಲೆಂಡರುಗಳಿಗೆ ಆಗುವ ಪೂರಾ ಖರ್ಚುಗಳು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ದ್ವಾರ ನಿಮ್ಮ ವಿಳಾಸಕ್ಕೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ ಮೂಲಕ ಕ್ಯಾಲೆಂಡರು ರವಾನಿಸುವುದರಿಂದ ಪೋಸ್ಟೇಜು ದುಬಾರಿಯಾಗುತ್ತಿರುವುದರಿಂದ ವಿ. ಪಿ. ಮೂಲಕ ರವಾನಿಸಿಲ್ಲ ಒಂದಕ್ಕೆ ಆರ್ಡರುಗಳಿಗೆ ಕಂಡಿತವಾಗಿಯೂ ನಿಗಾ ಕೊಡುವುದಿಲ್ಲ. ಕ್ಯಾಲೆಂಡರುಗಳು ಮುಗಿದ ನಂತರ ಬರತಕ್ಕ ಮನಿಯಾರ್ಡರುಗಳನ್ನು ಹೋದವರ್ಷದಂತೆ ವಾಪಸ್ ಮಾಡಲಾಗುತ್ತೆ.

ಮನಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ 1 ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	20,000
ಜಮೆಯಾದ ಠೇವಣಾತಿ	1,87,796

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಜಾಸ್ತಿಯಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5 0 0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 1ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧಿಸುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.	ಕೊಂಗೆಟ್ಟಿರ ಅಪ್ಪಯ್ಯನವರು

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1—7—1929.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಹಾಗೆ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ನಾಪೋಕ್ಲು—ಮೆ. ಟಿ ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ. ಚಮ್ಮಟ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಸಂತ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಟಿ. ಮುದ್ದಪ್ಪಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ ಬಿ. ಮಾದಪ್ಪಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿದೆ.

ಮೇನೇಜರ್,
"ಕೊಡಗು" ಮಡಿಕೇರಿ

12 bore Victor Cartridges Rs 10/- Per 100

Mahomedally-Noorbhoy
ARMS & AMMUNITION MART
31 Abdul Rehman Street.
52-10 BOMBAY. 3.

ಕಟುಕಷಾಯ ಮಲೇರಿಯ ರಸ.—ಇದು ಇಂಜೆಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ ಜ್ವರ ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗೆಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14.

ಚಂದನಾಸವ:—ಇದು ಪ್ರಮೇಹ ವಸ್ತ್ರಕೃಚ್ಛ್ರ, ಮೂತ್ರ ಹಳದಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದ ಕೀವು ಬರುವುದು, ಮೂತ್ರದಲ್ಲಿ ಧಾತು, ಮುದಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕಾಗದೇ ಇರುವುದು ದೇಹದಲ್ಲಿ ಉರಿ ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1 3, 6ಕ್ಕೆ ರೂ. 1—4—0 3—8—0 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಹಿಂಡಿ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಕಪ್ಪಾದ ಸ್ವಭಾವದ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.
52—0 9. ಮಂಗಳೂರು.



ಲಕ್ಷಗಟ್ಲೆ ಮಕ್ಕಳ ಪ್ರಾಣವನ್ನು ಕಾಪಾಡಿದ

ವನಸ್ಪತಿಗಳ ಅದ್ಭುತ ಮಹಿಮೆ.

ಬಾಲಾರ್ಕಮಧು.

ಇದನ್ನು ಮಕ್ಕಳು ಆನಂದದಿಂದ ಸೇವಿಸುತ್ತಾರೆ. ಇದು ಮಧುರವಾಗಿದೆ. ಚಿಕ್ಕ ಮಕ್ಕಳಿಗೆ ಇದನ್ನು ಕೊಡ ಮದರಿಂದ ಉಣ್ಣುವ ಹಾಲೂ ಅನ್ನವೂ ಶೀಘ್ರ ಪಚನವಾಗಿ ಶರೀರದಲ್ಲಿ ಸ್ವಾಭಾವಿಕ ರಸಗಳುಂಟಾಗಿ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಮಕ್ಕಳಿಗೆ ಬಹು ಶಕ್ತಿಯೂ ದೇಹಭಾರವೂ ಹೆಚ್ಚುವುದು. ಕೇವಲ ವೈದ್ಯ ಮೂಗಳಿಕೆಯಿಂದು ತಾತ್ಕಾರ ಮಾಡದೆ ಒಂದೇ ಒಂದು ಸೀಸೆ ತರಿಸಿಕೊಂಡಲ್ಲಿ ಇದರ ಅಪಾರ ಗುಣವು ತಾನಾಗಿ ತಿಳಿಯುವದು.

ಬೆಲೆ ಸೀಸೆ ೧ಕ್ಕೆ ೦—೧೨—೦ ಟ ಪ ೦—೯—೦.

M V Prasadika Oushadhalaya.
52—1 SHIMOGA Mysore State

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ
ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ
ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ
ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925	296	ಲಕ್ಷ ರೂಪಾಯಿ.	1925	93	ಲಕ್ಷ ರೂಪಾಯಿ
1926	391	,, ,,	1926	106	,, ,,
1927	468	,, ,,	1927.	122	,,
1928	585	,, ,,	1928.	140	,,

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ
1921ರಲ್ಲಿ ,, ,, ,, ,, ,,	1927ರಲ್ಲಿ ,, ,, ,, 25

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚು ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿ ಒಂದರ ನಿಮಗೆ ಆದರಿಂದ ಲಾಭ ಉಂಟಾಗುವುದು. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಓರಿಯಂಟಲ್ ಬಿಲ್ಡಿಂಗ್ಸ್, ಎಲ್. ಆರ್. ಕೃಷ್ಣಸಾಮಯ್ಯರ್
ಸೌತ್ ಪರೇಡ್, ಬೆಂಗಳೂರು. 52—47 ಬ್ರಾಂಚ್ ಸೆಕ್ರೆಟರಿ.

Goldsmiths' Rolling Mills,
ಪಟ್ಟ ಮೆಷಿನುಗಳು.



ನಗ ಮಾಡುವವರು ಮತ್ತು ಅಕ್ಕಸಾಲೆಯವರು ಉಪಯೋಗಿಸುವ ಚಿನ್ನ ಮತ್ತು ಬೆಳ್ಳಿಯ ತಗಡುಗಳನ್ನು ಮಾಡುವ ಈ ಮಿಲ್ಲುಗಳಿಗೆ ನಾವು ಏಜೆಂಟರಾಗಿರುತ್ತೇವೆ ಕ್ರಯ ಬಹು ಮಧ್ಯತರ ಮುಖ್ಯ ಪಟ್ಟಣಗಳಲ್ಲಿ ಸಬ್ ಏಜಂಟರುಗಳು ಬೇಕಾಗಿದ್ದಾರೆ. ಹೆಚ್ಚಿನ ಸಂಗತಿ ಮತ್ತು ಇಟ್ಟಾಗಿಗೆ ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳುವುದು.

Ch Sobhanachalam & Sons.
Chilakalapudi P O.
12—14 Masulipatam.

THE NEW CAR!!
The new model A Ford
The most economical car in the mark[et]
Accellerates 5 to 25 M P H in 8½ secon[ds]
Petrol consumption 20—30 miles p[er]
Gallon Performance 5 to 60 miles p[er]
hour in top 40 M P H in second ge[ar]
A Wonderful Hill climber!
Easy instalment terms if you prefer
For Demonstration & other particulars
Please apply to:—
S. Sunder Rau,
Solo Ford Dealer for Coorg
24—21 MERCARA

Printed & published by P. I. Belliappa, at "Kodagu" Press, Mercara for "Kodagu" Ltd.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರವೃತ್ತತಃ | ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಃ ||

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು

ಪುಟ ೯ | ಮಡಿಕೇರಿ, ಸನ್ ೧೯೨[illegible]ನೇ ಇಸವಿ ನವಂಬರ್ ತಾರೀಖು ೨[illegible] ನೇ ಶುಕ್ರವಾರ. | ಸಂಚಿಕೆ ೨೩

Telephone — 3145

By Appointment to H. E. The Governor of Madras

Telegrams — P[illegible]CIOUS.

Guarantee of Satisfaction throughout in every order big or small



Brooch

PROMPTEST EXECUTION — CATALOGUE ON APPLICATION — HIGH CLASS WORKMANSHIP

GOLDSMITH SILVERSMITH

V. Subramania Iyer

GEM SET JEWELLER

POST BOX—4[illegible]3 TRIPLICANE MADRAS

Excellent Quality Chaste Designs Moderate Prices



Ice Tumbler

Green Hills, Virarajendrapet, 7th Decr 26

I am glad to note that the Jewels have a good finish.

(Sd.) Mrs. A. B. CHENGAPPA.

Sunticoppa, Nellore Estate, 7th April 28

Dear Sir, I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends.

(Sd.) Mrs. K. S[illegible]

Mercara, 4th May 27

Dear Sir, I am quite satisfied with the jewels you sent on the 16th instant.

(Sd.) Mrs. K. S. CARIAPPA.

52—11

Illustrated Catalogue Free on Application.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಬೋರರ್ ಹುಳದ ದಸಮಿಂದ [illegible] (Miner [illegible]) [illegible] ಗಳಿಗೆ ನೈಟ್ರಜನ್ ಸಾರಾಂಶ (Nitrogen [illegible]) [illegible] (Experiment station) [illegible] ಗೊಬ್ಬರವು ಪ್ರಯೋಜನಕರವಾಗ [illegible]

ಹೆಚ್ಚಿನ ಮಾಹಿತಿ [illegible] ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ, ಇಂಡಿಯನ್ ಸೆಕ್ಷನ್, ಪೋ. ಬಾ. ನಂ. 40[illegible], ಕಲ್ಕತ್ತಾ,

(2) [illegible] ಚಿಲಿಯನ್ ನೈಟ್ರೇಟ್ ಕಮಿಟಿ, [illegible]

24—[illegible]

Wanted

ALL INDIA CROP INSURANCE & GENERAL DEVELOPMENTS LTD.
Mahbub Mahal, Royapettah

Head Office —	MADRAS
AUTHORISED CAPITAL —	SIX CRORES
PAID UP CAPITAL —	54,[illegible]9,240
[illegible] booking agents / Deputy Superintendents	80—8—160
Savings Bank deposit clerks	2[illegible]/—
Village agents	20—2—4[illegible]

Applicants should be in a position to subscribe for shares of [illegible]—200/—150/— or the [illegible] respectively after selection and execute fidelity bond as per instructions from Head Office. They must clearly state their qualifications. For particulars apply to the Head Office or

THE DEPUTY SUPERINTENDENT,
HAMPANKATTA
MANGALORE

52—9

ಶ್ರೀ ಶ್ರೀಕಂಠೇಶ್ವರ
ಚಿಕ್ಕವೀರಣ್ಣ ಆಯಿಲ್ ಮಿಲ್ಸ್
ಈದಿಗ ಯಕ್ಸ್‌ಟೇನ್ಷನ್,
ಮೈಸೂರು.

ನಮ್ಮಲ್ಲಿ ಯಂತ್ರಗಳೆಲ್ಲರುಗಳಿಂದ [illegible] ಸಿಲ್ಲರುಗಳಿಂದ ಶೋಧಿಸಲ್ಪಟ್ಟ [illegible] ಎಣ್ಣೆಯು [illegible] ಕಡಲೆಕಾಯಿ ಹಿಂಡಿ ಪ್ರತಿಯೊಂದೂ [illegible] ದೊರೆಯುತ್ತೆ.

[illegible] ಬರೆದು ತಿಳಿಯಬಹುದು.

[illegible] ನೆರವಾಗುತ್ತೀರಿ?

[illegible] ಸ್ಪೈಸ್ಯ ವಿದ್ಯೆ [illegible]

[illegible]

ಘನ ಪೊಂದಿದ

ಎಡ್ವರ್ಡ್ ಫ್ರೆಡರಿಕ್ ಲಿಂಡ್ಲೆ ಉಡ್, ಬ್ಯಾರನ್ ಇರ್ವಿನ್

ಪಿ. ಸಿ., ಜಿ. ಎಮ್. ಎಸ್. ಐ., ಜಿ. ಎಮ್. ಐ. ಇ.,

ಹಿಂದುಸ್ಥಾನದ ವೈಸರಾಯ್ ಮತ್ತು ಗವರ್ನರ್ ಜನರಲರವರಿಗೆ.

ದಯವಿಟ್ಟು ಲಾಲಿಸಬೇಕು,

ಕೊಡಗು ಜಮೀನ್ದಾರರ ಸಂಘದ ಪ್ರತಿನಿಧಿಗಳಾದ ನಾವು ತಮ್ಮ ಧರ್ಮಪತ್ನಿಯವರಿಗೂ, ತಮಗೂ ಮನಃಪೂರ್ತಿಯಾದ ಸ್ವಾಗತವನ್ನೀಯುತ್ತೇವೆ. ಈ ಪ್ರಾಂತ್ಯಕ್ಕೆ ವೈಸರಾಯರು ದಯಮಾಡಿಸಿದ್ದು ಇದೇ ಮೊದಲು. ತಾವು ನಮ್ಮ ದೇಶದಲ್ಲಿ ಇರುವ ಸ್ವಲ್ಪ ಕಾಲದಲ್ಲಿ ತಮಗೆ ಶುಭವಾಗಲಿ ಮತ್ತು ನಮ್ಮ ದೇಶವನ್ನು ತಾವು ಎಂದೂ ನೆನಪಿನಲ್ಲಿ ಡುವಂತಾಗಲಿ ಎಂತ ಹಾರೈಸುತ್ತೇವೆ. ಈ ಸಂದರ್ಭದಲ್ಲಿ ಹಿಂದುಸ್ಥಾನದ ಚಕ್ರವರ್ತಿಯವರ ಮೇಲೆ ನಮಗೆ ಇರುವ ರಾಜಭಕ್ತಿಯನ್ನು ನಾವು ಸೂಚಿಸುವದಲ್ಲದೆ ನಮ್ಮ ರಾಜಭಕ್ತಿಯ ಜಾಹೀರಾತಿಯನ್ನು ಚಕ್ರವರ್ತಿಯವರಿಗೆ ತಾವು ವಿಜ್ಞಾಪಿಸಬೇಕೆಂತ ಕೇಳಿಕೊಳ್ಳುತ್ತೇವೆ.

ಬ್ರಿಟಿಷ್ ಸಾಮ್ರಾಜ್ಯಗಳೊಳಗೆ ಹಿಂದುಸ್ಥಾನವು ಸ್ವರಾಜ್ಯವಿರುವ ಪ್ರಾಂತ್ಯವಾಗಿ ಇರುವದನ್ನು ನೋಡಬೇಕೆಂಬ ಕುತೂಹಲವು ಹಿಂದುಸ್ಥಾನದ ಬೇರೆ ಪ್ರಾಂತ್ಯಗಳಂತೆಯೇ ನಮಗೂ ಹುಟ್ಟಿ ಹೊಸ ಜೀವನದ ಕಳೆಯು ನಮ್ಮ ಪ್ರಾಂತ್ಯದಲ್ಲೂ ತೋರುತ್ತಿರುವ ಈ ಸುಸಮಯದಲ್ಲಿ ತಮ್ಮ ಭೇಟಿಯು ನಮ್ಮ ದೇಶಕ್ಕೆ ದೊರೆತದ್ದರಿಂದ ನಮ್ಮ ದೇಶಕ್ಕೆ ಅಭ್ಯುದಯವಾಗುತ್ತದೆಯೆಂತ ನಾವು ನಂಬುತ್ತೇವೆ. ಒಟ್ಟು ಹಿಂದುಸ್ಥಾನದ ಮುಂದಿನ ರಾಜಕೀಯ ಪ್ರಗತಿಯಲ್ಲಿ ಸಂಪೂರ್ಣ ಸಹಾನುಭೂತಿಯುಳ್ಳವರಾಗಿಯೂ, ಸ್ವಲ್ಪ ಕಾಲದಲ್ಲಿಯೇ ಹಿಂದೂಸ್ಥಾನಕ್ಕೆ ದೊರಕುವ ಅನುಕೂಲತೆಗಳನ್ನು ನಮ್ಮ ದೇಶವೂ ಸಹ ಪಡೆಯಬೇಕೆಂಬ ಕುತೂಹಲದಿಂದ ಜಾತಿ, ಮತ ಭೇದವಿಲ್ಲದೆ ಈ ದೇಶದ ಎಲ್ಲಾ ಜನರ ಪ್ರತಿನಿಧಿಗಳುಳ್ಳ ಜಮೀನ್ದಾರರ ಸಂಘವು ಪ್ರಾಂತೀಕ ಸ್ವರಾಜ್ಯ ರಚನೆಯೊಂದನ್ನು ತಯಾರಿಸಿದೆ. ಅದಕ್ಕೆ ತಮ್ಮ ಸರ್ಕಾರದ ಸಹಾನುಭೂತಿ ದೊರೆಯಬೇಕೆಂತ ಬಯಸುತ್ತೇವೆ.

ಆಡಳಿತ ವಿಷಯದಲ್ಲಿ ನಮ್ಮ ದೇಶವು ಹಿಂದುಸ್ಥಾನದ ಬೇರೆ ಪ್ರದೇಶಗಳಿಗಿಂತ ಬಹಳ ಹಿಂದೆ ಬಿದ್ದಿದೆ. ಬೇರೆ ಪ್ರಾಂತ್ಯಗಳ ಮಾದರಿಗೆ ಬರಬೇಕಾದರೆ ತುಂಬಾ ಬದಲಾವಣೆಯಾಗಬೇಕು. ಉದಾಹರಣೆಗಾಗಿ ನಮ್ಮ ದೇಶದಲ್ಲಿರುವ ಪ್ರಾಚೀನ ಕಾಲದ ಮಾದರಿಯ ನ್ಯಾಯ ತೀರ್ಪಿನ ವಿಚಾರವನ್ನು ತಮ್ಮ ಚಿತ್ತಕ್ಕೆ ತಂದುಕೊಳ್ಳಬಹುದು. ಒಬ್ಬ ಮನುಷ್ಯನಲ್ಲೇ ನ್ಯಾಯ ತೀರ್ಪಿನ ಅಧಿಕಾರ ಮಾತ್ರವಲ್ಲ, ಆಡಳಿತದ ಅಧಿಕಾರಗಳೂ ಸಹ ಅಡಕವಾಗಿವೆ. ಈ ತರದ ಅಧಿಕಾರಿಗಳ ಬೆಸುಗೆಯು ಪ್ರಾರಂಭದಿಂದ ಇತ್ತಲ ವರೆಗೂ ಇದೆ. ಆಡಳಿತದಲ್ಲಿ ಸಂಪೂರ್ಣ ಅಧಿಕಾರವಿರುವ ಚೀಫ್ ಕಮಿಶನರಲ್ಲೇ ನ್ಯಾಯ ತೀರ್ಪಿನ ಆಖೈರ್ ಅಪ್ಪೀಲ್ ಅಧಿಕಾರವೂ ಕೂಡಿದೆ. ಈ ವಿಷಯದಿಂದ ಆಡಳಿತವೂ ಸರಿಯಾಗಿ ಆಗುವದಿಲ್ಲ ಮಾತ್ರವಲ್ಲ, ಜನರಲ್ಲಿ ಸ್ವಾತಂತ್ರ್ಯದ ಭಾವನೆಯ ಬೆಳವಣಿಗೆಗೆ ಸಹ ಅಡಚಣೆ ಇದೆ. ಆದ್ದರಿಂದ ಆಡಳಿತದ ಅಧಿಕಾರಗಳೂ, ನ್ಯಾಯ ತೀರ್ಪಿನ ಅಧಿಕಾರಗಳೂ ಬೇರ್ಪಡಬೇಕೆಂತಲೂ ಮತ್ತು ಕೊಡಗನ್ನು ಮದ್ರಾಸ್ ಹೈಕೋರ್ಟಿನ ಅಪ್ಪೀಲ್ ಅಧಿಕಾರಕ್ಕೆ ಒಳಪಡಿಸಬೇಕೆಂತಲೂ ಕುತೂಹಲವುಳ್ಳವರಾಗಿದ್ದೇವೆ.

ನಮ್ಮ ದೇಶದ ಪ್ರಾಂತೀಕ ಗಜೆಟೆಡ್ ಅಧಿಕಾರಿಗಳು ರಿಟೈರ್ ಆಗುವವರೆಗೂ ಒಂದೇ ಅಧಿಕಾರದಲ್ಲಿ ಇರಬೇಕಾಗಿದೆ. ಈ ಸ್ಥಿತಿಯನ್ನು ದೇಶವೆಲ್ಲಾ ಬಲವಾಗಿ ಖಂಡಿಸಿದೆ. ಈ ಕ್ರಮದಿಂದ ಆಡಳಿತವು ಸರಿಯಾಗಿ ನಡೆಯಲು ಸಾಧ್ಯವಿಲ್ಲ. ಇಂಥಾ ಅಧಿಕಾರಿಗಳನ್ನು ಐದು ವರ್ಷಕ್ಕೊಂದಾವರ್ತಿ ಬೇರೆ ಪ್ರಾಂತ್ಯಗಳಿಗೆ ವರ್ಗಾಯಿಸುವ ಏರ್ಪಾಡು ಮಾಡಿ ಈ ಕೊರತೆಯನ್ನು ತಮ್ಮ ಸರಕಾರವು ಹೋಗಲಾಡಿಸಬೇಕಾಗಿ ನಮ್ರತೆಯಿಂದ ವಿಜ್ಞಾಪಿಸಿಕೊಳ್ಳುತ್ತೇವೆ.

ಕೊಡಗಿಗೆ ಮಂಜೂರಾದ ರಾಜಕೀಯ ಸುಧಾರಣೆಯನ್ನು ಉಪಯೋಗಿಸುವದರಲ್ಲಿ ನಮ್ಮ ದೇಶದವರು ತುಂಬಾ ನಿಪುಣತೆಯನ್ನು ಓಟ್ ಕೊಡಲು ಬಂದ ದೊಡ್ಡ ದಾಮಾಶಾಯಿಯ ಓಟರುಗಳ ಸಂಖ್ಯೆಯಿಂದಲೂ, ಕೌನ್ಸಿಲಿನ ಒಳಗಿನ ಕೆಲಸದಿಂದಲೂ ನಿದರ್ಶಿಸಿರುತ್ತಾರೆ. ಸಾಧಾರಣವಾಗಿ ಓದು ಬರಹ ತಿಳಿದವರ ಲೆಖ್ಖದಲ್ಲಿಯೂ ಹಿಂದೂಸ್ಥಾನದ ಬೇರೆ ಕೆಲವು ಪ್ರಾಂತ್ಯಗಳಿಗಿಂತ ನಮ್ಮ ದೇಶವು ಮುಂದೆಯೇ ಇದೆ. ಆದ್ದರಿಂದ ನಮ್ಮ ದೇಶಕ್ಕೆ ಪ್ರಾಂತೀಕ ಸ್ವಾತಂತ್ರ್ಯವು ಕೂಡಲೇ ಮಂಜೂರಾದೀತೆಂತ ನಂಬಿದ್ದೇವೆ.

ಚೀಫ್ ಕಮಿಶನರೇ ಅಧ್ಯಕ್ಷರಾಗಿ ಉಳ್ಳ ಕೊಡಗಿನ ಲೆಜಿಸ್ಲೇಟಿವ್ ಕೌನ್ಸಿಲ್ ಬರೇ ಶಿಫಾರಸ್ಸು ಮಾಡುವ ಸಂಸ್ಥೆಯಾಗಿದೆ. ಅದರ ಶಿಫಾರಸ್ಸುಗಳನ್ನು ಸ್ಥಳೀಯ ಸರಕಾರವು ತಿರಸ್ಕರಿಸುವುದೇ ಹೆಚ್ಚಾಗಿದೆ. ಕೌನ್ಸಿಲಿನ ಮೆಂಬರುಗಳಿಂದ ಆಡಳಿತದ ರೀತಿಯನ್ನು ಸ್ವಲ್ಪ ಮಟ್ಟಿಗಾದರೂ ಬದಲಾಯಿಸಲು ಶಕ್ಯವಿಲ್ಲವೆಂಬ ಕಾರಣದಿಂದ ದೇಶದಲ್ಲಿ ತುಂಬಾ ಅತೃಪ್ತಿಯಿದೆ. ಆದ್ದರಿಂದ ನಮ್ಮ ಸಂಘವು ಕಳೆದ ಎರಡು ವಾರ್ಷಿಕ ಸಮ್ಮೇಳನಗಳಲ್ಲಿ ರಾಜಕೀಯ ರಚನೆಯೊಂದನ್ನು ತಯಾರಿಸಿಕೊಂಡಿದೆ. ಈ ರಚನೆಯ ಪ್ರಕಾರ 10 ಮೆಂಬರುಗಳುಳ್ಳ ಲೆಜಿಸ್ಲೇಟಿವ್ ಕೌನ್ಸಿಲಿಗೆ ಜವಾಬ್ದಾರರಾಗಿರುವ ಒಬ್ಬ ಅಥವಾ ಇಬ್ಬರು ಮಂತ್ರಿಗಳ ಕೈಯಲ್ಲಿ ದೇಶದ ಆಡಳಿತವೆಲ್ಲಾ ಇರಬೇಕು, ಕೌನ್ಸಿಲಿಗೆ ಮೆಂಬರುಗಳನ್ನು ಆರಿಸುವ ಹಕ್ಕು ಪ್ರಾಯ ಬಂದವರಿಗೆಲ್ಲಾ ಇರಬೇಕು. ಓಟು ಕೊಡುವದರಲ್ಲಿ ಯಾವ ತರದ ಕೋಮುವಾರು ಏರ್ಪಾಡೂ ಇರಕೂಡದು. ಕೌನ್ಸಿಲಿನ ಅಧ್ಯಕ್ಷರನ್ನು ಕೌನ್ಸಿಲೇ ಆರಿಸಿಕೊಳ್ಳಬೇಕು. ಕೌನ್ಸಿಲಿಗೆ ಆರ್ಥಿಕ ಅಧಿಕಾರ ಮತ್ತು ಖಾನೂನು ಮಾಡುವ ಹಕ್ಕು ಸಂಪೂರ್ಣವಾಗಿ ಇರಬೇಕು. ಚೀಫ್ ಕಮಿಶನರ ಬದಲಿಗೆ ಬ್ರಿಟಿಷ್ ಸಾಮ್ರಾಜ್ಯದ ಪ್ರಾಂತೀಕ ಗವರ್ನರುಗಳ ಹಕ್ಕು ಮಾತ್ರ ಇರುವ ಗವರ್ನರು ಇರಬೇಕು.

ಇಂಡಿಯನ್ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಕೊಡಗಿನವರಿಂದ ಆರಿಸಲ್ಪಡುವ ಇಬ್ಬರು ಮೆಂಬರುಗಳಿರಬೇಕೆಂತ ಕೊಡಗಿನವರಿಗೆ ತುಂಬಾ ಆಶೆ ಇದೆ.

ಭಾಷೆಯನ್ನನುಸರಿಸಿ ಕರ್ನಾಟಕ ಪ್ರಾಂತ್ಯ ಬೇರೆ ಆಗಬೇಕೆಂಬ ತತ್ವವನ್ನು ನಮ್ಮ ಸಂಘವು ಒಪ್ಪುತ್ತದೆ. ಹಾಗೆ ಕರ್ನಾಟಕ ಪ್ರಾಂತ್ಯವಾದಾಗ ನಮ್ಮ ದೇಶವು ಕರ್ನಾಟಕ ಪ್ರಾಂತ್ಯದೊಳಗೆ ಕೊಡಗಿನ ಹಿತಕ್ಕಾಗಿ ಕೊಡಗು ಪ್ರತ್ಯೇಕ ಜಿಲ್ಲೆಯಾಗಿ ಸೇರಿಕೊಳ್ಳತಕ್ಕದ್ದು ಯುಕ್ತವೆಂತ ನಮ್ಮ ಸಂಘವು ನಂಬುತ್ತದೆ.

ಈ ರಾಜಕೀಯ ರಚನೆಯು ನಮ್ಮ ದೇಶದ ಹೆಚ್ಚಿನ ಜನರ ಅಭಿಪ್ರಾಯಕ್ಕನುಗುಣವಾಗಿರುವ ನಮ್ಮ ಸಂಘದಲ್ಲಿ ಮಂಜೂರಾಗಿರುವುದಲ್ಲದೆ ನಮ್ಮ ಲೆಜಿಸ್ಲೇಟಿವ್ ಕೌನ್ಸಿಲಿನ ಕಳೆದ ಅಧಿವೇಶನದಲ್ಲಿ ಸಹ ಮಂಜೂರಾಗಿದೆಯೆಂತ ತಮಗೆ ತಿಳಿಸಲು ಸಂತೋಷಪಡುತ್ತೇವೆ. ಆದ್ದರಿಂದ ನಮ್ಮ ಜವಾಬ್ದಾರಿಯನ್ನು ಸಂಪೂರ್ಣವಾಗಿ ತಿಳಿದುಕೊಂಡೇ ನಮ್ರತೆಯಿಂದ ಈ ರಾಜಕೀಯ ರಚನೆಯನ್ನು ತಮ್ಮ ಸರ್ಕಾರದ ಅವಗಾಹನೆಗೆ ತಂದಿರುವುದಾಗಿದೆ.

ಕೊಡಗಿಗೆ ರೈಲ್ವೆ ಇಲ್ಲದ್ದರಿಂದ ಈ ದೇಶವು ಹಿಂದೂಸ್ಥಾನದ ಬೇರೆ ಪ್ರಾಂತ್ಯಗಳಿಗಿಂತ ಜಾಸ್ತಿ ಆರ್ಥಿಕ ಬೆಳವಣಿಗೆಗೆ ಬೇಕಾದ ಸಹಾಯವಿಲ್ಲದೆ ಹೋಗಿದೆ. ಆದ್ದರಿಂದ ಕೊಡಗಿಗೆ ಇಂಡಿಯಾ ಸರ್ಕಾರದ ಖರ್ಚಿನಿಂದ ರೈಲ್ ಹಾಕಿಸಿ ಕೊಡಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

ನಮ್ಮ ದೇಶದಲ್ಲಿ ಕೃಷಿಯೇ ಪ್ರಧಾನ ಕಸಬಾಗಿದೆಯೆಂತ ತಮಗೆ ತಿಳಿದಿರಬಹುದು. ಆದರೆ ವ್ಯವಸಾಯದಲ್ಲಿ ಸುಧಾರಿಸಿದ ರೀತಿಗಳನ್ನು ಜನರಿಗೆ ತಿಳಿಸಿಕೊಡಲು ಏನೂ ಪ್ರಯತ್ನ ನಡೆದಿಲ್ಲ. ತಾವು ವೈಸರಾಯರಾಗುವ ಮುಂಚೆಯೇ ತಮಗೆ ಕೃಷಿಯಲ್ಲಿ ತುಂಬಾ ಅಭಿರುಚಿ ಇತ್ತೆಂತ ನಮಗೆ ಗೊತ್ತಿದೆ. ತಾವು ಈ ದೊಡ್ಡ ಪದವಿಯನ್ನು ಅಲಂಕರಿಸಿದ ನಂತರ ಹಿಂದೂಸ್ಥಾನದ ಕೃಷಿಯ ಸಂಬಂಧದ ಎಲ್ಲಾ ವಿಷಯಗಳನ್ನು ತಿಳಿದುಕೊಂಡಿದ್ದೀರಿ. ಆದ್ದರಿಂದ ಈ ಪ್ರಾಂತ್ಯದಲ್ಲಿ ಕೃಷಿ ಕಸಬು ಅಭಿವೃದ್ಧಿಯಾಗಲು ಬೇಕಾದ ಸಹಾಯ ಕೊಡುವಿರೆಂತಾಗಿ ನಂಬಿದ್ದೇವೆ. ಇದೇ ಸಂದರ್ಭದಲ್ಲಿ ಈ ದೇಶದಲ್ಲಿ ನೀರಾವರಿ ಕಾಮಗಾರಿ ಏನೂ ನಡೆದಿಲ್ಲವೆಂತ ಸಹ ತಿಳಿಸಬೇಕಾಗಿದೆ. ಚಿಕ್ಕ ಚಿಕ್ಕ ನೀರಾವರಿ ಕಾಮಗಾರಿಗಳನ್ನು ಸಹ ಮಾಡಿಸಲು ನಮಗೆ ಹಣವಿಲ್ಲದಿರುವದರಿಂದ ಹಾರಂಗಿ ನಾಲೆ ಮುಂತಾದ ನೀರಾವರಿ ಕಾಮಗಾರಿಗಳಿಗೆ ಇಂಡಿಯಾ ಸರ್ಕಾರವು ತುಂಬಾ ಸಹಾಯ ಮಾಡಬೇಕೆಂತ ಕೇಳಿಕೊಳ್ಳುತ್ತೇವೆ.

ಬ್ರಿಟಿಷ್ ಸರ್ಕಾರವು ಕೊಟ್ಟ ವಾಗ್ದಾನಕ್ಕೆ ವಿರೋಧವಾಗಿ ನಮ್ಮ ದೇಶದ ಜಮ್ಮ ಹಿಡುವಳಿಗಾರರಿಗೆ ಇದ್ದ ಜಮ್ಮದ ಹಕ್ಕು ಮತ್ತು ಕತ್ತಿ, ಕೋವಿ ಹಿಡಿಯುವ ಹಕ್ಕುಗಳನ್ನು ಕ್ರಮ ಕ್ರಮವಾಗಿ ಕಡಿಮೆ ಮಾಡುತ್ತಾರಾಗಿ ತಮಗೆ ತಿಳಿಸಬೇಕಾಗಿದೆ. ಇದರಿಂದ ಜನಗಳ ಆಶಾಭಂಗವಾಗುತ್ತಲಿದೆ. ಆದ್ದರಿಂದ ತಮ್ಮ ಸರ್ಕಾರದವರು ಜಮ್ಮದ ಕಂದಾಯವನ್ನು ಮೊದಲಿದ್ದಂತೆಯೇ ಖಾಯಂ ಕಂದಾಯವಾಗಿ ಮಾಡಿಕೊಡಬೇಕೆಂತಲೂ, ಆರ್ಮ್ಸ್ ಆಕ್ಟಿನ ವಿನಾಯಿತಿಗೆ ಮಾಡಿರುವ ನಿರ್ಬಂಧಗಳನ್ನು ತೆಗೆದು ಹಾಕಬೇಕೆಂತಲೂ ಕೇಳಿಕೊಳ್ಳುತ್ತೇವೆ.

ನಮ್ಮ ದೇಶದ ಆರ್ಥಿಕ ಸ್ಥಿತಿಯು ತೃಪ್ತಿಕರವಾಗಿಲ್ಲ. 1924ರಲ್ಲಿ ರಾಜಕೀಯ ಸುಧಾರಣೆ ಮಂಜೂರಾಗುವ ವರೆಗೆ ಸುಮಾರು 40 ವರ್ಷಗಳ ಉಳಿತಾಯವನ್ನೆಲ್ಲಾ ಇಂಡಿಯಾ ಸರ್ಕಾರವು ತೆಗೆದುಕೊಂಡು ಹೋಗದೆ ಇದ್ದಿದ್ದರೆ ನಮ್ಮ ಸ್ಥಿತಿಯು ಇಷ್ಟು ಹಾಳಾಗುತ್ತಿರಲಿಲ್ಲ. ಆದರೆ ಕೊಡಗಿನ ಸರ್ಕಾರದ ಖರ್ಚು ಹೆಚ್ಚುತ್ತಲಿವೆ. ಆದ್ದರಿಂದ ಕೊಡಗಿನ ಸರ್ಕಾರದ ಖರ್ಚು ನಡೆಸಿಕೊಂಡು ಹೋಗಲು ತೊಂದರೆ ಇಲ್ಲದಂತೆ ಇಂಡಿಯಾ ಸರ್ಕಾರವು ದೊಡ್ಡ ಮೊಬಲಗನ್ನು ಹಿಂದಿನ ಸಿಲ್ಲಕ್ಕಾಗಿ ಕೊಡಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ಕೋರಿಕೆಗಳನ್ನೆಲ್ಲಾ ತಮ್ಮ ಸರ್ಕಾರವು ದಯಾದೃಷ್ಟಿಯಿಂದ ನೋಡಿ ಜನರಿಗೆ ಸ್ವರಾಜ್ಯಕ್ಕೆ ಇರುವ ಹಕ್ಕುಗಳನ್ನು ಕೈಗೂಡಿಸಿ ಕೊಡಬೇಕೆಂತಲೂ ಹಾಗೆ ಮಾಡಿದ ತಮ್ಮ ಆಳ್ವಿಕೆಯನ್ನು ಕೊಡಗಿನವರು ಎಂದೆಂದೂ ನೆನೆಯುತ್ತಿರುವರೆಂದೂ ತಿಳಿಸುತ್ತೇವೆ. ತಾವು ಈ ದೇಶಕ್ಕೆ ದಯಮಾಡಿಸಿದಕ್ಕೆ ನಮಗೆ ತುಂಬಾ ತೃಪ್ತಿಯಾಗಿದೆಯೆಂತ ತಿಳಿಸಿ ನಮಗೆ ತಮ್ಮ ಭೇಟಿಕೊಟ್ಟದ್ದಕ್ಕೆ ಸಂಘದ ಪರವಾಗಿ ತಮಗೆ ವಂದಿಸುತ್ತೇವೆ.

ತಮ್ಮ ಧರ್ಮ ಪತ್ನಿಯವರಿಗೂ, ತಮಗೂ ದೀರ್ಘಾಯುಸ್ಸನ್ನೂ, ಸುಖ ಸಾಮ್ರಾಜ್ಯವನ್ನೂ ಬಯಸುವದಲ್ಲದೆ [illegible] ಹಿಂದೂಸ್ಥಾನದ ತಮ್ಮ ಪ್ರವಾಸವು ಸಂತೋಷದಾಯಕವಾಗಿರಲಿ ಎಂತ ಹಾರೈಸುತ್ತೇವೆ.

ಮಡಿಕೇರಿ, ತಮ್ಮ ವಿಧೇಯರಾದ,
ತಾ 29—11—29. **ಜಮೀನ್ದಾರರ ಸಂಘದವರು.**

(ಇದು—ಈ ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ದರ್ಬಾರಿನಲ್ಲಿ ಕೊಡಗು ಜಮೀನ್ದಾರರ ಸಂಘದವರ ಪರ ಡೆಪ್ಯುಟೇಶನವರು ವೈಸರಾಯರಿಗೆ ಒಪ್ಪಿಸಿದ ಬಿನ್ನಹ ಪತ್ರದ ತರ್ಜುಮೆಯಾಗಿದೆ.)

ವೀರಾಜಪೇಟೆ ಮೀಟಿಂಗು.

ತಾ 20—11—29ರಲ್ಲು ವೀರಾಜಪೇಟೆಯಲ್ಲು ಕೊಂಗಂಡ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲು ಒಂದು ಸಭೆ ಸೇರಿತು. ಸದರಿ ಮೀಟಿಂಗಿನಲ್ಲು ಈ ಕೆಳಗಿನ ಠರಾವುಗಳು ಪಾಸು ಮಾಡಲಾದವು.

(1) ಇದೇ ತಾ. 10—11—29ರಲ್ಲು ಕಾಂಗ್ರೆಸ್ಸಿನ ಕೌನ್ಸಿಲ್ ಉಪಚುನಾವಣೆಯ ಮೀಟಿಂಗಿನಲ್ಲಿ ವಿ. ಯನ್. ವೆಂಕಪ್ಪಯ್ಯ ಮತ್ತು ಇತರ ಕೆಲವು ಮುಂದಾಳುಗಳ ಮೇಲೆ ಕೆಲವು ಜನರು ನಡಿಸಿದ ಅತ್ಯಾಚಾರವನ್ನು ಈ ಸಭೆಯು ಖಂಡಿಸುತ್ತದೆ.

(2) ಮಿ. ವೆಂಕಪ್ಪಯ್ಯನವರು ಆ ದಿನ ಮಹಾತ್ಮ ಗಾಂಧಿಯವರ ಅಹಿಂಸಾತತ್ವದ ಮೂಲಕ ಹೆಚ್ಚಿನ ಗಲಿಬಿಲಿಗೆ ಅವಕಾಶ ಕೊಡದಂತೆ ಮಾಡಿದ ಅವರ ಸ್ಥೈರ್ಯವನ್ನು ಈ ಸಭೆಯು ಅಭಿನಂದಿಸುತ್ತದೆ.

(3) ವಿ. ಸಿ. ಯನ್, ವೆಂಕಪ್ಪಯ್ಯನವರ ರಾಜಕೀಯ ಶಕ್ತಿಗಳಿಗೂ, ಜಮೀನ್ದಾರರ ಸಂಘದ ಈಗಿನ ಮುಂದಾಳುತನಕ್ಕೂ ಈ ಸಭೆಯು ವಿಶ್ವಾಸವನ್ನು ಸೂಚಿಸುತ್ತದೆ.

(4) ಈ ಪೊಲ್ಲಿಂಗ ಅಕ್ರಮದ ಕಾರಣಗಳನ್ನು ತಿಳಿದು ತಕ್ಕ ಬಂದೋಬಸ್ತಿಗೆ ಸಲಹೆಗಳನ್ನು ಸೂಚಿಸಲು ಕಮಿಟಿಯೊಂದನ್ನು ಕೂಡಲೇ ನೇಮಕ ಮಾಡಬೇಕಾಗಿ ಈ ಸಭೆಯು ಸರ್ಕಾರವನ್ನು ಕೇಳಿಕೊಳ್ಳುತ್ತದೆ.

ಕೆ ಕುಟ್ಟಪ್ಪ
(ಅಧ್ಯಕ್ಷರು)

ಗೀತಾ ಜಯಂತಿ.

ಒಂದು ಪ್ರಾರ್ಥನಾ.

[ಪೂನಾ ನಗರದ ತಿಲಕ್‌ವೀದಿಯಲ್ಲಿರುವ ಗೀತಾ ಧರ್ಮ ಮಂಡಲಿಯ ಕಾರ್ಯದರ್ಶಿಗಳಾದ ಶ್ರೀಯುತ ಜಿ. ವಿ. [illegible] ಕರವರು ಇದೇ ನವಂಬರು ತಿಂಗಳು 21ನೇ ತಾರೀಕಿನ [illegible] ದೂ ' ಪತ್ರಿಕೆಯಲ್ಲಿ ಈ ರೀತಿ ಪ್ರಕಟಿಸಿರುವರು]

ಈ ಗೀತಾಜಯಂತಿ ಅಥವಾ ಗೀತಾವರ್ದಂತಿ [illegible] ವರ್ಷಂಪ್ರತಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿಯೂ [illegible] ಸುವರು. ಹಿಂದೂ ಪಂಚಾಂಗ ರೀತ್ಯಾ ಈ ಸುದಿನವು ಮಾರ್ಗಶೀರ್ಷ ಶುದ್ಧ ಏಕಾದಶಿಯ ದಿನವಾಗುವುದು. ವಿದ್ವಾಂಸರು ಮಹಾಭಾರತ ಗ್ರಂಥವನ್ನು ಅನೇಕಾವರ್ತಿ [illegible] ಪಠಿಸಿ ಈ ಗೀತಾಜಯಂತಿ ದಿನವೇ ಮಹಾ [illegible] ಯುದ್ಧಾರಂಭ ದಿವಸವೆಂದು ಕಂಡು ಹಿಡಿದಿರುವರು. [illegible] ತೀಯವಾದ ಈ ಭಗವದ್ವಾಣಿಯನ್ನು ಪುರಸ್ಕರಿಸಿ ಇತರರಿಗೆ ತಿಳಿಯಪಡಿಸಲು ಈ ದಿವಸವೇ ಯೋಗ್ಯ ಕಾಲವು. ಮಾರ್ಗಶೀರ್ಷ ಶುಕ್ಲ ಏಕಾದಶಿಯು ಇಂಗ್ಲೀಷ್ ಪಂಚಾಂಗದ ಪ್ರಕಾರ 1929ನೇ ಇಸವಿ ಡಿಸೆಂಬರು ತಾರೀಖು 12ನೇ ದಿನಾಂಕ ಆಗುವದು.

ವರ್ಷಕ್ಕೊಂದಾವರ್ತಿ ಹಿಂತಿರುಗಿ ಬರತಕ್ಕ ಈ ಪವಿತ್ರ ದಿವಸದಲ್ಲಿ ಉಪನ್ಯಾಸಗಳು, ಉಪದೇಶಗಳು, ಗೀತಾ ಮೆರವಣಿಗೆಗಳು, ಕೀರ್ತನ ಮತ್ತು ಪಾರಾಯಣಾದಿ ಸತ್ಕಾಲಕ್ಷೇಪಗಳು ಇವನ್ನು ಮಾಡುವುದು ತಕ್ಕದಾಗಿರುವುದು. [illegible] ವರ್ಷಗಳ ಹಿಂದೆ ಈ ಆಚರಣೆಯನ್ನು ಪುಣ್ಯ ನಗರ (ಪೂನಾ) ' ಗೀತಾಧರ್ಮ ಮಂಡಲಿ " ಯವರು ಪ್ರಚಾರಕ್ಕೆ ತಂದರು. ಈಗ ಇದು ಭರತಖಂಡದಲ್ಲಿ ತುಂಬಾ ಪ್ರಚಾರದಲ್ಲಿರುತ್ತದೆ. ಈ ದಿವಸವನ್ನು ಕುರುಕ್ಷೇತ್ರದಲ್ಲಿ (ಪಂಜಾಬಿನ ತಾನೇಶ್ವರದ ಹತ್ತಿರ) " ಕುರುಕ್ಷೇತ್ರದ ಪುನರುಜ್ಜೀವನ ಸಭಾ " (Kurukshetra Restoration Society) ದವರು [illegible] ಆಚರಿಸುವರು. ಲಾಹೋರು, ಕರಾಚಿ, ಅಜಮೀರ್, [illegible] ಅಲಹಾಬಾದು, ಬೆನಾರಿಸ್, ಕಲ್ಕತ್ತಾ, ಇಂದೂರ್, [illegible] ಯಾಟ್, ನಾಗಪುರ, ಗೋರಾಕಪುರ, ಉಜ್ಜಯಿನಿ, [illegible]

ಬಾದು, ಬರೋಡ, ಬೊಂಬಾಯಿ ಪ್ರಾಂತ, ಮದ್ರಾಸು, ಬೆಂಗಳೂರು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಈ ಗೀತಾಜಯಂತಿಯನ್ನು ಆಚರಿಸುವರು.

ಎಲ್ಲಾ ಹಿಂದೂ ಶಾಲೆಗಳಲ್ಲಿ ಗೀತಾಜಯಂತಿಯ ದಿವಸ ಉಪಾಧ್ಯಾಯರುಗಳು ಈ ದಿವಸದ ವಿಶೇಷ ಮಹಿಮೆಯು, ಭಗವದ್ಗೀತೆಯ ಸೂಕ್ತಿಗಳನ್ನೂ ತಮ್ಮ ವಿದ್ಯಾರ್ಥಿಗಳಿಗೆ ವಿಶದವಾಗಿ ವಿವರಿಸುವರು.

ತಮ್ಮ ಸ್ಥಳಗಳಲ್ಲಿ ಗೀತಾಮಹಿಮೆಯುಳ್ಳವರು ಗೀತಾಜಯಂತಿಯನ್ನು ಆಚರಿಸುವವರು ತಾವು ಮತ್ತು [illegible] ಮಂಡಲಿಯವರು ಅನುಸರಿಸುವ ವಿಷಯವನ್ನು ಕುರಿತ [illegible] ವಿಷಯವು ವರ್ಷ ವರ್ಷ ಎಷ್ಟು ಅಭಿವೃದ್ಧಿಯಲ್ಲಿರುವುದು [illegible] ವಿಷಯವನ್ನು ಸಂಗ್ರಹಿಸಿ ಪ್ರಕಟಗೊಳಿಸಲು ಬದ್ಧ [illegible] ರಾಗಿರುವ ಗೀತಾಧರ್ಮ ಮಂಡಲಿಯವರಿಗೆ ಬರೆದು ತಿಳಿಸಬೇಕಾಗಿ ಕೇಳಿಕೊಳ್ಳಲಾಗಿದೆ.

ನಮ್ಮ ಕೊಡಗು ಬಾಂಧವರೂ ಈ ಗೀತಾಜಯಂತಿ ದಿನದಲ್ಲಿ ತಮ್ಮ ಶಕ್ತ್ಯನುಸಾರ ಮಟ್ಟಿಗೂ ಮೇಲೆ ಹೇಳಿದಂತೆ ಯಾವದಾದರೊಂದು ರೀತಿ ಸತ್ಕಾರ್ಯದಲ್ಲಿ ತೊಡಗಿ ಶ್ರೀ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥನೆ ಇದೆ.

ಸಹಕಾರ ಸಂಘಗಳ ಬೆಳವಣಿಗೆ.

(ಮುಂದುವರಿದದ್ದು)

ವಿದ್ಯಾಪ್ರಸಾರಕ ಸಂಘಗಳು

ವಿದ್ಯೆಯೆಂದರೆ ಜ್ಞಾನ. ಮನುಷ್ಯರಲ್ಲಿ ಮನುಷ್ಯತ್ವವನ್ನು ಉಂಟುಮಾಡುವುದು ವಿದ್ಯೆ. ಇದನ್ನು ಅಬಾಲವೃದ್ಧರಲ್ಲಿ ಪ್ರಚಾರಮಾಡುವುದು ಅತಿ ಅವಶ್ಯವೆಂದು ಹೇಳಬೇಕಾಗಿಲ್ಲ. ಇಂಥ ಅನುಕೂಲವಾದ ವಿದ್ಯೆಯನ್ನು ಸಂಘಗಳನ್ನು ಸ್ಥಾಪಿಸಿ ಆ ಮೂಲಕ ಪ್ರಚಾರ ಮಾಡುವುದು [illegible] ದಲ್ಲಿ ಅಗತ್ಯವಾಗಿದೆ. ಈ ಸಂಘಗಳು [illegible] ಮೆಂಬರುಗಳಿಗೆ ಮಾತ್ರವಲ್ಲದೆ ಇತರರಿಗೂ ಸಹ ಸಹಕಾರ [illegible] ಗಳನ್ನು ಬೋಧಿಸುತ್ತವೆ. ಸಹಕಾರ ತತ್ವವನ್ನು [illegible] ದ ಮೆಂಬರುಗಳು ಸಂಘದ ಕಾರ್ಯಕ್ರಮಗಳನ್ನು [illegible] ಗಿ ನಡಿಸುತ್ತಾರೆ. ಇದಕ್ಕೆ ಉದಾಹರಣೆಯಾಗಿ ಈಗ [illegible] ಗಳಲ್ಲಿರುವ ಪ್ರತಿ ಸಂಘಗಳು ಸಹ ಬೇಗನೆ ಉನ್ನತ ಸ್ಥಿತಿಗೆ ಬಾರದಿರುವುದನ್ನೇ ಹೇಳಬಹುದು. ದೇಶದ ಮುಂದಾಳುಗಳು ಮತ್ತು ಉಪಾಧ್ಯಾಯರುಗಳು ರಾತ್ರಿ ಶಾಲೆಗಳನ್ನು [illegible] ಡು ಸಹಕಾರದ ತತ್ವಗಳ ಬೋಧನೆಯಿಂದಲೂ ಅಲ್ಲಲ್ಲಿ ಪುಸ್ತಕ ಭಂಡಾರಗಳನ್ನೂ, ವರ್ತಮಾನ ಪತ್ರಿಕೆಗಳನ್ನೂ ಗ್ರಾಮ ಕ್ಲಬ್ಬುಗಳನ್ನೂ ಸ್ಥಾಪನೆಮಾಡಬೇಕಾಗಿದೆ. ಈ ರೀತಿಯ ಸಂಸ್ಥೆಗಳನ್ನು [illegible] ದಲ್ಲಿ [illegible] ಗ್ರಾಮ [illegible] ಅಭಿವೃದ್ಧಿಗೆ ಕಾರಣವಾಗುವ [illegible] ನ ಮೇಳೆ ರಾಜ್ಯದಾನ ಸಹಕಾರ [illegible] ಸಹಕಾರ [illegible] ಗಳಲ್ಲಿ ಕಾರ್ಯದರ್ಶಿಗಳು ಮತ್ತು ಪಂಚಾಯತರ ತುಂಬಾ [illegible] ಗಳನ್ನೂ, ಕಾನೂನುಗಳನ್ನು [illegible] ದರೆ ಗ್ರಾಮಸ್ಥರು ಖಂಡಿತವಾಗಿ ಅಭಿವೃದ್ಧಿ ಹೊಂದುವದರಲ್ಲಿ ಸಂದೇಹವಿಲ್ಲ.

ಆರೋಗ್ಯ ಸಹಕಾರ ಸಂಘಗಳು.

ಆರೋಗ್ಯಕ್ಕಿಂತ ಭಾಗ್ಯವಿಲ್ಲವೆಂಬುದು [illegible] ಗಿಲ್ಲರಿಗೂ ತಿಳಿದ ವಿಷಯವಾಗಿದೆ. ನಮ್ಮ ದೇಶದವರೆಲ್ಲರು ಮಲೇರಿಯಾ ಜ್ವರದ ಹಾವಳಿಯಿಂದ ಪೀಡಿತರಾಗುವುದನ್ನು ನಾವು ಅನುದಿನವೂ ನೋಡುತ್ತಲಿದ್ದೇವೆ. [illegible] ಮನುಷ್ಯನಿಗೆ ಆರೋಗ್ಯವಿಲ್ಲದಿದ್ದರೆ ಯಾವ ಕೆಲಸವನ್ನು ಮಾಡಲಿಕ್ಕೆ ಆಗುವುದಿಲ್ಲ. ಅಲ್ಲದೆ ಜ್ಞಾನ ಶಕ್ತಿಯು ಕಡಿಮೆಯಾಗುತ್ತದೆ. A sound mind in a sound body ಎಂಬ ಇಂಗ್ಲೀಷ್ ನಾಣ್ಣುಡಿಯು ಹೇಳಿದ ಅಭಿಪ್ರಾಯವನ್ನು ನಾವು [illegible] ರೋಗಗಳುಂಟಾಗುವ [illegible] ಈ ವರೆಗೆ ನಾವು [illegible] ಇರುವುದಿಲ್ಲ. ಸರಕಾರದಿಂದಲೂ [illegible] ಸರಕಾರದ [illegible] ಆಸ್ಪತ್ರೆ [illegible] ಹೆಚ್ಚು [illegible] ಸಹಕಾರ [illegible] ಸಂಘಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸಿ ಆ ರೋಗಗಳನ್ನು ಬಹಳ ಮಟ್ಟಿಗೆ ನಿವಾರಿಸ [illegible] ತ್ತಾರೆ. ಅವರ ಉದಾಹರಣೆಯನ್ನನುಸರಿಸಿ ನಮ್ಮ ದೇಶದಲ್ಲಿ ಆ ರೀತಿಯ ಸಂಘಗಳನ್ನು ಸ್ಥಾಪಿಸಿದರೆ ನಮ್ಮ [illegible] ನಿರ್ಮೂಲಪಡಿಸಬಹುದೆಂಬುದನ್ನು ನಾನು ಹೇಳಬೇಕಾಗಿಲ್ಲ.

ಕೃಷಿ ಸಹಕಾರ ಸಂಘಗಳು

ನಮ್ಮ [illegible] ಸಂಖ್ಯೆಯು ವ್ಯವಸಾಯವನ್ನೇ ಅವಲಂಬಿಸಿ ಜೀವಿಸುವವರಾಗಿದ್ದಾರೆ. ಅನೇಕ ವರ್ಷಗಳಿಂದ [illegible] ನಮ್ಮ ದೇಶದ ವ್ಯವಸಾಯ ಕ್ರಮದಲ್ಲಿ ಯಾವ ತರದ ಹೊಸ ವಿಧಾನವನ್ನು [illegible] ಹೆಚ್ಚಿನ ಆದಾಯವನ್ನು ಪಡೆಯುವುದಕ್ಕೆ [illegible] ದಿನೇ ದಿನೇ ನಮ್ಮ [illegible] ಭೂಮಿಯ ಉತ್ಪತ್ತಿಯು ಕಡಿಮೆಯಾಗುತ್ತಿರುವುದರಿಂದ [illegible] ಇದರ ಕಡೆ ಮೇಲಧಿಕಾರಿಗಳು ಗಮನಿಸಬೇಕಾಗಿದೆ. ಇದನ್ನು ಹೋಗಲಾಡಿಸಲು ಇತರ ದೇಶಗಳವರು ಸಹಕಾರ ಸಂಘಗಳ ಮೂಲಕ ತಮ್ಮ ವ್ಯವಸಾಯದ ಕ್ರಮವನ್ನು [illegible] ಅತಿ ಆಶ್ಚರ್ಯಕರವಾಗಿ ತೋರುತ್ತದೆ. ಇದಕ್ಕೆ [illegible] ವಹಿಸಿದರೆ—ಪಂಜಾಬು ಮತ್ತು ಬೊಂಬಾಯಿ [illegible] ವ್ಯವಸಾಯ (Better farming) ಸಂಘಗಳನ್ನು [illegible] ಸಂಘಗಳೂ, ಹಂಚಿಕೆ [illegible] ಮತ್ತು ಉತ್ತಮ ಬೀಜವನ್ನು ಕೊಡುವ ಸಂಘಗಳನ್ನು ಸ್ಥಾಪಿಸಬೇಕಾಗಿದೆ.

(ಮುಂದುವರಿಯುವುದು)

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ | ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಔಕ್ಷೀಸು ಪದಕಗಳನ್ನು ಹೊಂದಿದ ಪ್ರಸಿದ್ಧವಾದ | ದೀರ್ಘರೋಗದಿಂದ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ತಾಯಿತದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಮುಟ್ಟಾಗುವ ಸಮಯದಲ್ಲಿ ಕ್ಲೇಶ [illegible] ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗದಿರುವಿಕೆ [illegible] ಇದಲ್ಲದೆ [illegible] ಬಾಲಗ್ರಹ ದೋಷದಿಂದ [illegible] ಗರ್ಭ ರಕ್ಷಾಕರ ವಿಧಿಯಲ್ಲಿ [illegible] ಮಂತ್ರದ ಯಂತ್ರವನ್ನು [illegible] ಇದನ್ನು ತರಿಸಿ ಧರಿಸಿದರೆ [illegible] ಮಕ್ಕಳಿಗಾಗುವ [illegible] ಈ ತಾಯಿತ ಧರಿಸಿಕೊಂಡು [illegible] ಬಹುಮಾನ ಕೊಡುತ್ತೇವೆ [illegible] ಹೆಚ್ಚು ಮಕ್ಕಳಿಗೆ ಸಂತಾನ [illegible] ಬೇರೆ ಬೇರೆ ಆಗತಕ್ಕ ವಿಕಾರಗಳನ್ನು ಸ್ಪಷ್ಟ ಬರೆಯಿರಿ

ದಯವಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ.

ತಾಯಿತ ಸಿಗುವ ವಿಳಾಸ —ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,

52—21 ಮು. ಪೋ. ಅಥಣಿ, ಜಿ. ಬೆಳಗಾಂವ.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದುಬ್ಬಾಧೆ, ರಕ್ತಪಿತ್ತ, ಜೀರ್ಣಜ್ವರ, ಮಲಬದ್ಧತೆ, ಕೈಕಾಲು ಉರಿ ಮುಂತಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.—ಕ್ರಯ ಡಬ್ಬಿ 1 ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ 7—0—0

ಅಶೋಕಾರಿಷ್ಟ ಮತ್ತು ಮಾತ್ರೆ. ಹೆಂಗಸರ ಮುಟ್ಟು ದೋಷಗಳು, ಮುಟ್ಟುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಜೀರ್ಣಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ [illegible] ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, [illegible] ರ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರೈಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ 2—0—0 3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ 6—0—0

೩. ಮಲೇರಿಯಾ ನಿವಾರಣಿ.

ದಿನ ಬಿಟ್ಟು ಬರುವಂಥ ಮಲೆ ಜ್ವರ, 2 ಅಥವಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಪ್ಲೀಹ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಟ್ಟ ಮನುಷ್ಯರಿಗೆ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0 3 ಬಾಟ್ಲಿಗಳಿಗೆ 4—2—0

೪. ಮೇಹ ಕುಠಾರ. ಇದು ಮೂತ್ರನಾಳದಿಂದ ಕೆಂಪು ಬಿಳುಪು [illegible] ಹೋಗತಕ್ಕ ಕೀವನ್ನು [illegible] ವನ್ನೂ ಶೀಘ್ರವಾಗಿ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ 7

೫. ಇಚ್ಛಾಭೇದಿ ಗುಟಿಕೆ. ಅಜೀರ್ಣವನ್ನು ಹೋಗಲಾಡಿಸುವ ಸಲುವಾಗಿ [illegible] ಬಾಟ್ಲಿ 1ಕ್ಕೆ 0—12—0 ಆಣೆ 3 ಬಾಟ್ಲಿಗಳಿಗೆ 2—2—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿಸ್ತಾರವಾಗಿ ಬರೆದಲ್ಲಿ ರೋಗಕ್ಕೆ ತಕ್ಕಂಥ ಔಷಧ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

52—2 ರಥಬೀದಿ, ಮಂಗಳೂರು, ದ. ಕನ್ನಡ.

1930 ನೇ ಇಸವಿಯ ಪಾಕೆಟ್ ಡೈರಿ ಇನಾಂ!

[illegible]

ಇಷ್ಟೇ ಗುಣಗಳನ್ನು [illegible] ಡೈರಿ [illegible] ಇನಾಂ [illegible]

ಕ್ರಯ ಡೈರಿ ಸಹಿತ [illegible] 1ಕ್ಕೆ ರೂ 1—12—0

52—2 [illegible]

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ರವರ ಬಾಲಾಮೃತ

ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವದು. ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ಗೆ 0—14—0 ಟ ಖ. 0—9—0.

ಕೆ. ಟಿ. ಡೋಂಗರೆ ಕಂಪೆನಿ,

52—5 ಗಿರಗಾಂವ, ಮುಂಬಯಿ.

ಕೊಡಗು.

ಸಂ ೧೯೨೯ನೇ ಇಸವಿ

ನವೆಂಬರ್ ತಾ. ೨೯ನೇ ಶುಕ್ರವಾರ.

ವೈಸರಾಯರ ಜವಾಬು.

ತಾ. 29ರಲ್ಲಿ ಮಡಿಕೇರಿಯಲ್ಲಿ ನಡೆದ ವೈಸರಾಯರ ದರ್ಬಾರಿನಲ್ಲಿ ಆರು ಅಭಿನಂದನಾ ಪತ್ರಗಳು ವೈಸರಾಯರಿಗೆ ಒಪ್ಪಿಸಲ್ಪಟ್ಟವು. ಇವುಗಳಿಗೆಲ್ಲಾ ಅವರು ಒಂದೇ ಜವಾಬು ಕೊಟ್ಟರು. ಜಮೀನ್ದಾರರ ಸಂಘದ ಬಿನ್ನಹ ಪತ್ರದ ಕನ್ನಡ ನಕಲೊಂದನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ. ಬೇರೆ ಅಭಿನಂದನಾಪತ್ರಗಳ ಪ್ರತಿಗಳು ನಮಗೆ ಇನ್ನೂ ಸಿಕ್ಕಿರುವದಿಲ್ಲ. ಮಡಿಕೇರಿ ಮುನ್ಸಿಪಾಲಿಟಿಯ ಪತ್ರದಲ್ಲಿ ಮಲೇರಿಯವನ್ನು ಹೋಗಲಾಡಿಸಲು ಸಹಾಯ ಕೇಳಿದ್ದಲ್ಲದೆ ನೀರಿನ ಅಬ್ಬಿಯಿಂದ ವಿದ್ಯುಚ್ಛಕ್ತಿ ಹುಟ್ಟಿಸಿ ಮಡಿಕೇರಿಯ ದೀಪಗಳಿಗೆ ಉಪಯೋಗಿಸಲು ಸಹಾಯ ಕೊಡಬೇಕೆಂತಲೂ ಕೇಳಲಾಗಿತ್ತು. ಹೊಸ ಜಮೀನ್ದಾರರ ಸಂಘದ ಪತ್ರದಲ್ಲಿ ಮಲೇರಿಯ ನಿವಾರಣೆ, ಕೃಷಿಗೆ ಸಹಾಯ, ಬ್ಯಾಂಕ್ ಸ್ಥಾಪನೆಗೆ ಧನ ಸಹಾಯ, ರೈಲ್ವೆ, ಜಮ್ಮ ಕಂದಾಯ ಖಾಯಂ ಮಾಡುವಿಕೆ, ದೊಡ್ಡ ಪ್ರಾಂತ್ಯಗಳಿಗೆ ಕೊಡುವ ರಾಜಕೀಯ ಸುಧಾರಣೆ, ನಮ್ಮ ದೇಶದಲ್ಲಿ ಪ್ರತ್ಯೇಕ ಸರಕಾರ ನಡೆಸಲು ಹಣ ಸಾಲದ್ದರಿಂದ ಇಂಡಿಯಾ ಸರ್ಕಾರದಿಂದ ಮೊತ್ತ ಧನ ಸಹಾಯ ಕೊಡಬೇಕೆಂತಲೂ, ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ಇರಬೇಕೇ ಹೊರತು ಕರ್ನಾಟಕದೊಂದಿಗೆ ಸೇರಿಸಬಾರದು ಎಂತಲೂ ಸಹ ಇತ್ತು. ಕೊಡವ ಸಭೆಯ ಪತ್ರದಲ್ಲಿ ಹೊಸ ಜಮೀನ್ದಾರರ ಪತ್ರದಲ್ಲಿದ್ದ ಕೋರಿಕೆಗಳಲ್ಲಿ ರಾಜಕೀಯ ವಿಷಯ ಬಿಟ್ಟು ಇತರ ವಿಷಯಗಳನ್ನು ಸೂಚಿಸಿತ್ತು. ಯೂರೋಪಿಯನ್ ಪ್ಲಾಂಟರುಗಳ ಪತ್ರದಲ್ಲಿ ಕರ್ನಾಟಕ ಪ್ರಾಂತ್ಯದೊಡನೆ ಸೇರಿಸದೆ ಈ ದೇಶವನ್ನು ಪ್ರತ್ಯೇಕ ಇಡಬೇಕೆಂತ ಹೇಳಿ, ಕಾಫಿ ವ್ಯವಸಾಯಕ್ಕೂ, ತೋಟಕ್ಕೂ ಕೆಲವು ಸಹಾಯಗಳನ್ನು ಮಾಡಿಕೊಡಬೇಕೆಂತಲೂ, ರೈಲ್ವೆ ಮಾಡಿಕೊಡಬೇಕೆಂತಲೂ ಕೇಳಿತ್ತು. ಗೌಡರುಗಳ ಪತ್ರದಲ್ಲಿ ಗೌಡ ಜನರ ಪೂರ್ವ ಇತಿಹಾಸವನ್ನು ಸೂಕ್ಷ್ಮವಾಗಿ ಹೇಳಿ, ಮಿಲಿಟರಿಯಲ್ಲೂ ಬೇರೆ ಇಲಾಖೆಗಳಲ್ಲೂ ಉದ್ಯೋಗಗಳ ಅನುಕೂಲತೆ ಮಾಡಿಕೊಡಬೇಕೆಂತ ಕೇಳಲಾಗಿತ್ತು.

ವೈಸರಾಯರ ಜವಾಬಿನ ನಕಲು ಇನ್ನೂ ನಮಗೆ ದೊರೆತಿರುವದಿಲ್ಲ. ಅದರಲ್ಲಿ ಉಪಚಾರದ ಮಾತುಗಳಾದನಂತರ, 'ರಾಜಕೀಯ ಸುಧಾರಣೆಯ ವಿಷಯದಲ್ಲಿ ಬೇರೆ ಪ್ರಾಂತ್ಯದೊಡನೆ ಸೇರಬೇಕೆಂತಲೂ, ಕರ್ನಾಟಕ ಪ್ರಾಂತ್ಯವಾದಾಗ ಅದರೊಳಗೆ ಸೇರಬೇಕೆಂತಲೂ, ಸ್ವತಂತ್ರ ಪ್ರಾಂತ್ಯವಾಗಿಯೇ ಇಡಬೇಕೆಂತಲೂ ವಿಧ ವಿಧದಲ್ಲಿ ಕೇಳಿಕೊಂಡಿದ್ದೀರಿ; ಸೈಮನ್ ಕಮಿಶನಿನವರು ಹಿಂದುಸ್ಥಾನದ ರಾಜಕೀಯ ಸುಧಾರಣೆ ವಿಷಯ ಆಲೋಚನೆ ಮಾಡುತ್ತಿದ್ದಾರೆ. ಅವರ ಜವಾಬು ದೊರಕುವ ಮುಂಚೆ ನಾನು ಏನೂ ಹೇಳಲು ಸಾಧ್ಯವಿಲ್ಲ' ವೆಂತ ವೈಸರಾಯರು ಹೇಳಿದರು. ಬ್ರಿಟಿಷ್ ಪಾರ್ಲಿಮೆಂಟಿನಿಂದ ನೇಮಕವಾದ ಸೈಮನ್ ಕಮಿಶನಿನ ಕೆಲಸ ನಡಿಯುತ್ತಿರುವಾಗ ವೈಸರಾಯರು, ಈ ವಿಷಯ ಏನೂ ಹೇಳಲು ಸಾಧ್ಯವಿಲ್ಲವೆಂದು ನಾವು ಮೊದಲೇ ತಿಳಿಸಿದಾಶೆಯೇ ಆಯಿತು. ವೈಸರಾಯರ ಭಾಷಣದ ಆಖೈರಿನಲ್ಲಿ "ಹಿಂದುಸ್ಥಾನದ ಆಡಳಿತದಲ್ಲಿ ಶೀಘ್ರದಲ್ಲೇ ಮಾರ್ಪಾಡುಗಳಾಗಲಿಕ್ಕಿವೆ, ಆಗ ದೇಶದ ಜನರ ಮೇಲೆ ಬೀಳುವ ಜವಾಬ್ದಾರಿಯನ್ನು ಅವರು ಸರಿಯಾಗಿ ನಿರ್ವಹಿಸ್ಯಾರೆಂತ ಆಶಿಸುತ್ತೇನೆ"ಎಂಬದರಲ್ಲಿ ಮಾತ್ರ ಜನರ ಕುತೂಹಲಕ್ಕೆ ಅಲ್ಪ ಸ್ವಲ್ಪವಾದರೂ ಸಮಾಧಾನ ದೊರಕುವ ಅಭಿಪ್ರಾಯವಿರುವದು. ಕೊಡಗಿನ ಜನರು ತೋರಿಸಿದ ಅಸಾಧಾರಣ ಉತ್ಸಾಹಕ್ಕೆ ವೈಸರಾಯರಂಥ ದೊಡ್ಡ ಅಧಿಕಾರಿಗಳಿಂದ ದೊಡ್ಡ ವಾಗ್ದಾನಗಳು ದೊರೆತಾವೆಂತ ಆಶಿಸಿದವರಿಗೆ ತುಂಬಾ ಆಶಾಭಂಗವಾಗಿದೆ.

ಜಮೀನ್ದಾರರ ಸಂಘದ ಪತ್ರದಲ್ಲಿ ನ್ಯಾಯತೀರ್ಪಿನ ಮತ್ತು ಆಡಳಿತದ ಅಧಿಕಾರಗಳನ್ನು ಬೇರ್ಪಡಿಸಿಕೊಡಬೇಕೆಂತ ಕೇಳಿದ್ದಕ್ಕೆ ವೈಸರಾಯರು ಹೇಳಿದ್ದೇನೆಂದರೆ—ಈ "ಕೋರಿಕೆಯು ನ್ಯಾಯವಾದದ್ದಾಗಿದೆ ಅದರೆ ಅದನ್ನು ನೆರವೇರಿಸಲು ತುಂಬಾ ಹಣ ಬೇಕು. ಮದ್ರಾಸ್ ಹೈಕೋರ್ಟಿಗೆ ಅಪ್ಪೀಲ್ ಅಧಿಕಾರ ಕೊಡಲು ಆ ಕೋರ್ಟು ಬೇರೆ ಪ್ರಾಂತ್ಯದಲ್ಲಿ ಇರುವದರಿಂದಲೂ, ದೂರವಾದ್ದರಿಂದಲೂ ತೊಂದರೆಗಳಿವೆ. ಈ ಪ್ರಾಂತ್ಯದ ಆರ್ಥಿಕ ಶಕ್ತಿಗನುಸರಿಸಿ ಏನಾದರೂ ಒಂದು ಏರ್ಪಾಡು ಮಾಡುವ ಯೋಚನೆಯಿದೆ' ಎಂದರು. ನ್ಯಾಯತೀರ್ಪಿಗೆ ಆಡಳಿತದ ಬೆರಕೆ ಇಲ್ಲದ ನ್ಯಾಯಸ್ಥಾನಗಳಿರಬೇಕೆಂಬ ತತ್ವವನ್ನು ವೈಸರಾಯರು ಒಪ್ಪಿದ ಮೇಲೆ ಮದ್ರಾಸ್ ಹೈಕೋರ್ಟಿನ ಅಧೀನಕ್ಕೆ ಈ ದೇಶದ ಕೋರ್ಟುಗಳನ್ನು ಒಳಪಡಿಸಬೇಕಾದದ್ದು ಬಹಳ ಅವಶ್ಯವಾಗಿದೆ. ಈ ದೇಶದ ಯೂರೋಪಿಯನರಿಗೆ ಈಗಲೂ ಈ ದೇಶದ ಕ್ರಿಮಿನಲ್ ತೀರ್ಪುಗಳ ಮೇಲೆ ಮದ್ರಾಸು ಹೈಕೋರ್ಟಿಗೆ ಅಪ್ಪೀಲ್ ಮಾಡುವ ಹಕ್ಕಿದೆ. ಹೀಗಿರುವಾಗ ಈ ದೇಶದ ಎಲ್ಲಾ ರೈತರಿಗೂ ಹೈಕೋರ್ಟು ತೀರ್ಪಿನ ಅನುಕೂಲತೆ ಮೊದಲೇ ಕೊಡಬೇಕಿತ್ತು. ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಮದ್ರಾಸು ಹೈಕೋರ್ಟು ನಮಗಿಂತಲೂ ದೂರವಾಗಿದೆ. ಅದರೂ ಅವರಿಗೆ ಬೇರೆ ಕೋರ್ಟು ಮಾಡಿ ಕೊಟ್ಟಿರುವದಿಲ್ಲ. ದೂರ ಪ್ರಾಂತ್ಯಕ್ಕೆ ಹೋಗುವದು ಕಷ್ಟ ಎಂತ ವಗೈರೆ ಕೆಲವರು ಹೇಳುತ್ತಾರೆ. ಬೆಂಗಳೂರಿಗೆ ಅಪ್ಪೀಲ್ ಮಾಡುವವರೆಲ್ಲರೂ ಬೆಂಗಳೂರಿಗೆ ಹೋಗುವದಿಲ್ಲ. ಅಲ್ಲದೆ ಬೆಂಗಳೂರಿನಲ್ಲಿ ಕೊಡಗಿನ ಅಪ್ಪೀಲಿಗೆ ಲಾಯರುಗಳು ಸಿಕ್ಕುವದೇ ಕಷ್ಟ. ಮದ್ರಾಸಿನಲ್ಲಾದರೆ ಆ ತೊಂದರೆಗಳಿರುವದಿಲ್ಲ. ಹೇಗಾದರೂ ಎಷ್ಟೇ ಸರಕಾರದ ಖರ್ಚು ಹೆಚ್ಚಾದರೂ ಪಕ್ಷಪಾತವಿಲ್ಲದ ನ್ಯಾಯತೀರ್ಪು ಸಿಕ್ಕಬೇಕಾದದ್ದು ಅವಶ್ಯವಾಗಿದೆ. ಈ ವಿಷಯದಲ್ಲಿ ವೈಸರಾಯರು ಕೊಟ್ಟ ಜವಾಬನ್ನು ಪುನಃ ಯೋಚಿಸಿಯಾರೆಂತ ಅಪೇಕ್ಷಿಸುತ್ತೇವೆ.

ಜಮೀನ್ದಾರರ ಸಂಘದ ಬಿನ್ನಹ ಪತ್ರದಲ್ಲಿದ್ದ ಗಜೆಟೆಡ್ ಉದ್ಯೋಗಸ್ಥರನ್ನು ವರ್ಗ ಮಾಡಿಸಿ ಕೊಡಬೇಕೆಂಬ ಕೋರಿಕೆಗೆ ಚೀಫ್ ಕಮಿಶನರು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಕೊಟ್ಟ ಜವಾಬನ್ನೇ ಕೊಟ್ಟದ್ದು ಬಹಳ ಅತೃಪ್ತಿಕರವಾಗಿದೆ. ಈ ವರ್ಗಾವರ್ಗಿ ಏರ್ಪಾಡನ್ನು ಮಾಡಲು ಚೀಫ್ ಕಮಿಶನರಿಗೆ ಸಾಧ್ಯವಿಲ್ಲ. ಈ ದೇಶವೂ, ಮದ್ರಾಸೂ ಸಹ ವೈಸರಾಯರ ಸರ್ಕಾರಕ್ಕೆ ಅಧೀನವಾಗಿರುವದರಿಂದ ಅವರಲ್ಲಿ ಈ ಕೊರತೆಯನ್ನು ಹೇಳಿಕೊಂಡದಕ್ಕೆ ಚೀಫ್ ಕಮಿಶನರ ಜವಾಬನ್ನೇ ಹೇಳಿದ್ದು ನೋಡಿದರೆ ಈ ದೇಶದ ಜನರ ತೊಂದರೆಗಳನ್ನು ವೈಸರಾಯರು ಮನಸ್ಸಿಗೆ ತೆಗೆದುಕೊಂಡಂತೆ ಕಾಣುವದಿಲ್ಲ. ಈ ವಿಷಯವು ಕೊಡಗು ಕೌನ್ಸಿಲಿನಲ್ಲಿ ಚರ್ಚಿಸಲ್ಪಟ್ಟು ಪಾಸಾಗಲಿಲ್ಲವೆಂತ ವೈಸರಾಯರು ಹೇಳಿದ್ದು ನೋಡಿದರೆ, ರೈತರಿಗೆ ಗುಣಮಾಡಲು ಮನಸ್ಸಿಲ್ಲದಿದ್ದರೆ ಮಾತ್ರ ಕೌನ್ಸಿಲಿನ ಕೆಲಸವನ್ನು ವೈಸರಾಯರು ಸಹ ಉಪಯೋಗಿಸುತ್ತಾರೆಂತ ಕಾಣುತ್ತದೆ. ಕೌನ್ಸಿಲಿನಲ್ಲಿ ಪಾಸಾದ ಠರಾವುಗಳನ್ನೆಲ್ಲಾ ಸರಕಾರವು ಮಂಜೂರುಮಾಡಿ ಕೊಟ್ಟಿದ್ದರೆ ಪಾಸಾಗದೆ ಇರುವ ಠರಾವನ್ನು ತುಚ್ಛೀಕರಿಸಬಹುದಿತ್ತು. ಕೌನ್ಸಿಲ್ ಚರ್ಚೆಯನ್ನು ವೈಸರಾಯರು ಓದಿ ನೋಡಿದ್ದ ಪಕ್ಷ ಆ ಠರಾವಿನ ಮೇಲೆ ಚರ್ಚೆಯಲ್ಲಿ ಭಾಗಿಗಳಾದವರೆಲ್ಲರೂ ವರ್ಗಾವರ್ಗಿಯ ಅವಶ್ಯಕತೆಯನ್ನು ಒಪ್ಪಿಕೊಂಡಿರುತ್ತಾರೆಂದೂ, ಆದರೆ ಹಾಗೆ ವರ್ಗ ಮಾಡಲು ಅನಾನುಕೂಲತೆಗಳಿವೆ ಎಂಬ ಕಾರಣದಿಂದ ಮಾತ್ರ ಕೆಲವರು ವಿರೋಧಿಸಿದರೆಂದೂ ಗೊತ್ತಾಗುತ್ತಿತ್ತು. ವರ್ಗಾವರ್ಗಿಯು ದೇಶದ ಕ್ಷೇಮಕ್ಕೆ ಅವಶ್ಯವೆಂತಾದರೆ ಇಂಡಿಯಾ ಸರ್ಕಾರವು ಈ ವರ್ಗಾವರ್ಗಿಗೆ ಅನುಕೂಲ ಮಾಡಿ ಕೊಡಬೇಕು.

ಜಮ್ಮದ ಭೂಮಿಗಳಿಗೆ ಸನ್ನದಿನ ಕಂದಾಯವನ್ನು ಖಾಯಂ ಮಾಡಿ ಇಡಬೇಕೇ ಹೊರತು ಸೆಟ್ಲ್‌ಮೆಂಟಿಗೆ ಒಳಪಡಿಸಬಾರದೆಂತ ಕೇಳಿದಕ್ಕೆ ಈ ವಿಷಯವನ್ನು ಚೆನ್ನಾಗಿ ಅಜಮಾಯಿಸಿ ಸರ್ಕಾರವು ಮೊದಲೇ ತೀರ್ಮಾನಿಸಿ ಬಿಟ್ಟಿದೆ, ಪುನಃ ಕೈಹಾಕಲು ಆಗುವದಿಲ್ಲವೆಂತ ಹೇಳಿಬಿಟ್ಟರು. ಇಂಥಾ ಜವಾಬು ಹಿಂದೆ ಎಷ್ಟೋ ಸಾರಿ ಸಿಕ್ಕಿದೆ. ಈ ಸಾರಿ ಸರಕಾರಿ ಹುಕುಂ ಮೀರಿ ಜಮ್ಮದ ರೈತರು ಕತ್ತಿ, ಕೋವಿ ಸಮೇತ ದಸ್ತೆ ಉದ್ದಕ್ಕೂ ಕಾದಿದ್ದು ತಮ್ಮ ರಾಜಭಕ್ತಿಯನ್ನು ತೋರಿಸಿದರೂ ಜಮ್ಮದ ರೈತರ ಬಹು ಕಾಲದ ಕೋರಿಕೆಯಾದ ಜಮ್ಮದ ನಿರುಮೆ ಕಂದಾಯದ ಹಕ್ಕನ್ನು ಸಹ ಖುದ್ದಾಗಿ ವೈಸರಾಯರು ಈ ದೇಶಕ್ಕೆ ಬಂದಾಗ ಕೂಡ ಉಳಿಸಿಕೊಡದ್ದಕ್ಕೆ ಜಮ್ಮದ ರೈತರಿಗೆ ತುಂಬಾ ಅತೃಪ್ತಿಯಾಗಿದೆ. ಜಮ್ಮದ ಜಾಗಗಳಲ್ಲಿ ವ್ಯವಸಾಯ ಮಾಡಲು ಇರುವ ನಿರ್ಬಂಧಗಳನ್ನು ತೆಗೆದು ಹಾಕಲು ಸ್ಥಳೀಯ ಸರ್ಕಾರವು ಯೋಚನೆ ಮಾಡುತ್ತದಂತೆ. ಇದರಿಂದ ಏನು ಅನುಕೂಲತೆಗಳು ಸಿಕ್ಕುತ್ತವೆ ಎಂಬವನ್ನು ನೋಡಿ ಹೇಳಬೇಕಷ್ಟೆ. ಜಮ್ಮದ ರೈತರೂ, ಕೊಡವರೂ ಕೊಡಗಿನಿಂದ ಹೊರಗೆ ಹೋಗುವಾಗ ರಿವಾಲ್ವರ್ ತೆಗೆದುಕೊಂಡು ಹೋಗಬೇಕಾದರೆ ಹತ್ತು ರೂ. ಕೊಟ್ಟು ಲೈಸೆನ್ಸು ತೆಗೆದುಕೊಳ್ಳಬೇಕೆಂತ ಮಾಡಿದ ನಿರ್ಬಂಧವನ್ನು ಹೋಗಲಾಡಿಸಲು ಸಹ ವೈಸರಾಯರು ಒಪ್ಪಲಿಲ್ಲ. 'ಕೋವಿ ಹಿಡಿಯುವ ರಿಯಾಯಿತಿ ಕೊಟ್ಟಾಗ ರಿವಾಲ್ವರ್ ಹಿಡಿಯುವ ರಿಯಾಯಿತಿ ಕೊಡಲಾಗುತ್ತೇಂತ ವಾಗ್ದಾನವಿರಲಿಲ್ಲ, 1924 ರಲ್ಲಿ ಕೋವಿ ಹಿಡಿಯುವ ಕಾನೂನನ್ನು ತಿದ್ದುಪಡಿ ಮಾಡಿದಾಗ ಅನೇಕರಿಗೆ ಇದ್ದ ರಿಯಾಯಿತಿಗಳನ್ನು ಕಿತ್ತು ಹಾಕಲಾಗಿದೆ,' ಆದರೂ ನಿಮ್ಮ ರಿಯಾಯಿತಿಯನ್ನು ಉಳಿಸಲಾಗಿದೆ ಎಂತ ಹೇಳಿದರು. ಈ ಜವಾಬಿನಿಂದಲೂ ಜಮ್ಮದ ರೈತರಿಗೆ ಆಶಾಭಂಗವಾಗುವುದರಲ್ಲಿ ಸಂಶಯವಿಲ್ಲ.

ಕೃಷಿ ಇಲಾಖೆಯ ಏರ್ಪಾಡು ಮತ್ತು ಆ ಮೂಲಕ ಕೃಷಿಯಲ್ಲಿ ಸುಧಾರಿಸಿದ ಕ್ರಮಗಳ ಉಪಯೋಗಕ್ಕೆ ಸಹಾಯ ಕೊಡಬೇಕೆಂತ ಕೇಳಿದಕ್ಕೆ "ಕೃಷಿ ಕಮಿಶನಿನ ವರದಿಯಲ್ಲಿ ಯಾವ್ಯಾವದನ್ನು ಈ ದೇಶಕ್ಕೆ ಉಪಯೋಗಿಸ ಬಹುದೆಂಬದನ್ನು ಚೀಫ್ ಕಮಿಶನರು ಯೋಚಿಸುತ್ತಿದ್ದಾರೆ. ಅವರು 'ಇಂಡಿಯಾ ಸರ್ಕಾರದ ಸಹಾಯ ಕೇಳಿದರೆ ಅವರ ಕೋರಿಕೆಗೆ ತಕ್ಕ ಗಮನ ಕೊಡಲಾದೀತು," ಎಂದರು. ಬ್ಯಾಂಕ್ ಸ್ಥಾಪಿಸಲು ಸಹಾಯ ಕೇಳಿದ್ದಕ್ಕೆ ಬ್ಯಾಂಕಿಂಗ್ ಎನ್‌ಕ್ವಯರಿ ಕಮಿಟಿಗಳು ನೇಮಕವಾಗಿವೆ ಅವುಗಳ ಶಿಫಾರಸ್ಸನ್ನು ನೋಡಿ ಯೋಚಿಸಬೇಕಷ್ಟೆ ಅಂದರು.

ರೈಲ್ವೆ ತರುವ ವಿಷಯದಲ್ಲಿ ಈ ವರೆಗೆ ಆದ ಅಜಮಾಯಿಷಿಯನ್ನೆಲ್ಲಾ ಹೇಳಿ, ಖರ್ಚಿಗೆ ತಕ್ಕ ಪ್ರಯೋಜನವಿಲ್ಲವೆಂತ ಕಂಡು ಬಾರದದ್ದರಿಂದ ಬಾಕಿ ಆಗಿದೆ, ತಲಚೇರಿ ಮೈಸೂರು ಲೈನನ್ನು ಚೀಫ್ ಕಮಿಶನರು ಪುನಃ ಅಜಮಾಯಿಸುತ್ತಾರೆಂತ ಹೇಳಿದರು.

ಹಾರಂಗಿ ನಾಲೆಗೆ 12 ಲಕ್ಷ ರೂ. ಖರ್ಚಾಗಬಹುದೆಂತ ಅಂದಾಜು ಮಾಡಿರುವದರಿಂದಲೂ, ಈ ಖರ್ಚಿಗೆ ತಕ್ಕಷ್ಟು ಪ್ರತಿಫಲವಿಲ್ಲವೆಂತ ಕಂಡು ಬಂದದ್ದರಿಂದಲೂ ಇಂಡಿಯಾ ಸರ್ಕಾರವು ಸಹಾಯ ಮಾಡಲಾಗುವದಿಲ್ಲವೆಂತ ಹೇಳಿದರು.

ಹಿಂದಿನ ಉಳುವೆಯನ್ನೆಲ್ಲಾ ಇಂಡಿಯಾ ಸರ್ಕಾರವು ತೆಗೆದುಕೊಂಡು ಹೋದದ್ದರಿಂದ ಹಿಂದಿನ ನಿಲ್ವಾಗಿ ಮೊತ್ತ ಹಣ ಕೊಡಬೇಕೆಂತ ಹೇಳಿದ್ದಕ್ಕೆ ಜವಾಬು ಹೇಳಿದ್ದು ನಮ್ಮ ಗೋಚರಕ್ಕೆ ಬರಲಿಲ್ಲ. ಈ ವಿಷಯದಲ್ಲಿ ಏನೊಂದನ್ನೂ ಹೇಳದೆ ಇದ್ದದ್ದು ತುಂಬಾ ವ್ಯಸನಕರವಾಗಿದೆ.

ಕೊಡವ ಸಭೆಯ ಪತ್ರದಲ್ಲಿ ಕೊಡವ ಯುವಕರಿಗೆ ಮಿಲಿಟರಿಯಲ್ಲಿ ಕೆಲಸ ಕೊಡಬೇಕೆಂತ ಕೇಳಿದ್ದಕ್ಕೆ "ಮಿಲಿಟರಿ ಇಲಾಖೆಯಲ್ಲಿ ಈ ದೇಶದ ಯುವಕರಿಗೆ ಈಗಾಗಲೇ ತುಂಬಾ ಉತ್ತೇಜನ ದೊರೆತಿದೆ, ಮೂವರು ಮಿಲಿಟರಿಯಲ್ಲಿಯೂ, ಇಬ್ಬರು ಪೋಲೀಸಿನಲ್ಲಿಯೂ ಇದ್ದಾರೆ, ಇನ್ನು ಮುಂದೆಯೂ ಅರ್ಹರಾದ ಯುವಕರಿಗೆ ಉತ್ತೇಜನ ದೊರಕಬಹುದು' ಎಂತ ಹೇಳಿದರು.

ಗೌಡ ಯುವಕರು ಮಿಲಿಟರಿಯಲ್ಲಿ ನಿಪುಣತೆ ತೋರಿಸಿದ್ದಕ್ಕೆ ಸಂತೋಷ ಪಟ್ಟು ಅರ್ಹರಾದವರಿಗೆ ಬೇರೆ ಜನರಂತೆಯೇ ಉತ್ತೇಜನಕ್ಕೆ ಅವಕಾಶವಿದೆಯೆಂತ ಹೇಳಿದರು.

ಮಲೇರಿಯಾ ಜ್ವರದ ಹಾವಳಿಯನ್ನು ತಪ್ಪಿಸಲು ಮಲೇರಿಯಾ ಕಮಿಟಿಯವರು ಶಿಫಾರಸ್ಸು ಮಾಡಿರುವದನ್ನು ಸ್ಥಳೀಯ ಸರ್ಕಾರದವರು ಯೋಚಿಸುತ್ತಲಿದ್ದಾರೆ. ಹೊರಗಿನಿಂದ ತಿಳಿದವರನ್ನು ಕರೆಸಿ ಆಲೋಚನೆ ತೆಗೆದುಕೊಳ್ಳಲಾಗಿದೆ. ಜನರೂ ಸಹ ಈ ವಿಷಯದಲ್ಲಿ ಹೆಚ್ಚಿನ ಪ್ರಯತ್ನ ತೆಗೆದುಕೊಂಡು, ತಮ್ಮ ಜೀವನ ಸ್ಥಿತಿಯನ್ನು ಅಭಿವೃದ್ಧಿ ಮಾಡಬೇಕಾಗಿದೆ ಎಂತ ವೈಸರಾಯರು ಹೇಳಿದರು.

'ನೂರು ಒಂದು ಶತಮಾನದ ಕೆಳಗೆ ದೇಶವನ್ನು ಬ್ರಿಟಿಷ್ ಸರ್ಕಾರಕ್ಕೆ ಬಿಟ್ಟಿರಿ ಎಂತ ಹೇಳಿದಿರಿ. ಈ ದಿನ ನೀವು ಆಡಿದ ಮಾತುಗಳಿಂದ ಬ್ರಿಟಿಷ್ ಸರ್ಕಾರಕ್ಕೆ ಬಿಟ್ಟಿದ್ದಕ್ಕೆ ನೀವು ತೃಪ್ತರಾಗಿ ಇದ್ದೀರಿ ಎಂತ ನೋಡಿ ಸಂತೋಷವಾಯಿತು' ಎಂತ ಆಖೈರಿನಲ್ಲಿ ಹೇಳಿದರು. ಜನರ ವಿಶೇಷ ಉತ್ಸಾಹದಿಂದ ವೈಸರಾಯರಿಗೆ ಈ ಅಭಿಪ್ರಾಯ ಹುಟ್ಟಬಹುದು ಎಂತ ನಾವು ಹೋದ ವಾರದ ಲೇಖನದಲ್ಲಿ ಬರೆದಿದ್ದೆವು. ಇದರಿಂದ ದೇಶೀಯರು ವ್ಯಸನಪಡಬೇಕೇ ಹೊರತು ಸಂತೋಷ ಪಡುವಂತಿಲ್ಲ. ದೇಶಕ್ಕೆ ಸ್ವರಾಜ್ಯ ಕೂಡಲೇ ಕೊಡಬೇಕೆಂತ ಜಮೀನ್ದಾರರ ಸಂಘವು ಕೇಳಿತ್ತು. ದೊಡ್ಡ ಪ್ರಾಂತ್ಯಗಳ ಸುಧಾರಣೆಗಳನ್ನು ಈ ದೇಶಕ್ಕೂ ಕೊಡಬೇಕೆಂತ ಹೊಸ ಜಮೀನ್ದಾರರ ಸಂಘವೂ ಕೇಳಿತ್ತು. ಕೊಡವ ಸಭೆ ಮತ್ತು ಗೌಡ ಸಭೆಗಳು ಕೋಮುವಾರು ಸಂಸ್ಥೆಗಳು ಆದ್ದರಿಂದ ಅವುಗಳ ಅಭಿನಂದನಾ ಪತ್ರದಲ್ಲಿ ರಾಜಕೀಯ ಕೋರಿಕೆಗಳು ಇರಲು ಸಾಧ್ಯವಿಲ್ಲ. ಯೂರೋಪಿಯನರಿಗೆ ಈಗ ಇದ್ದಂತೆಯೇ ಇರಬೇಕಾದದ್ದು ಅವರ ಅನುಕೂಲಕ್ಕಾಗಿದೆ. ಆದ್ದರಿಂದ ದೇಶದ ಎಲ್ಲಾ ಜನರ ಪ್ರತಿನಿಧಿಗಳಿರುವ ಜಮೀನ್ದಾರರಸಂಘದ ಕೋರಿಕೆಯಲ್ಲಿ ದೇಶದ ಆಡಳಿತದ ಕುಂದು ಕೊರತೆಗಳನ್ನು ಹೇಳಿ ಕೂಡಲೇ ಸ್ವರಾಜ್ಯ ಕೊಡಬೇಕೆಂತ ಕೇಳಿದಾಗ ಬ್ರಿಟಿಷ್ ಆಡಳಿತದಲ್ಲಿ ಜನರಿಗೆ ತೃಪ್ತಿಯಾಗಲಿಲ್ಲವೆಂತ ವೈಸರಾಯರು ಅರ್ಥ ಮಾಡಬೇಕಿತ್ತು. ಜಮ್ಮದ ರೈತರನ್ನು ಹುಕುಂ ಕೊಟ್ಟು ಕರೆಸಿ ಜನಸಮೂಹವನ್ನು ಕಾಣಿಸಿದ ಅಧಿಕಾರಿಗಳು ದೇಶದ ಅಭ್ಯುದಯಕ್ಕೆ ಸಹಾಯ ಮಾಡಿದಂತಾಗಲಿಲ್ಲ. ಯಾಕೆಂದರೆ—ಇಷ್ಟೆಲ್ಲಾ ಉತ್ಸಾಹ ತೋರಿಸಿದರೂ ಒಟ್ಟು ರೈತರಿಗಾಗಲೀ, ಅಥವಾ ಜಮ್ಮದ ರೈತರಿಗಾಗಲೀ ಏನೊಂದೂ ರಿಯಾಯಿತಿಯನ್ನು ಕೊಡಲು ವೈಸರಾಯರು ವಾಗ್ದಾನ ಮಾಡಲಿಲ್ಲ. ಇದರಿಂದ ಜನರಿಗೆ ಹುಟ್ಟಿರುವ ಅತೃಪ್ತಿಯನ್ನು ದೇಶದ ಸ್ವಾತಂತ್ರ್ಯ ಪಡೆಯಲು ಉಪಯೋಗಿಸಿ ಪ್ರಯೋಜನ ಮಾಡಿಕೊಳ್ಳಬೇಕಾಗಿದೆ.

ವೈಸರಾಯರ ಪ್ರವಾಸ.

ಈ ಮೊದಲು ಪ್ರಕಟವಾಗಿದ್ದ ಕಾರ್ಯಕ್ರಮದ ಮೇರೆ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ತಮ್ಮ ಪತ್ನಿ ಲೇಡಿ ಇರ್ವಿನ್‌ರವರ ಸಮೇತ ಈ ತಾ. 28ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಫ್ರೇಜರ್‌ಪೇಟೆಗೆ ಬಂದರು. ಅಲ್ಲಿ ಸೇತುವೆಯ ಬಳಿ ಹಾಕಿದ್ದ ಸುಂದರವಾದ ಚಪ್ಪರದ ಕೆಳಗೆ ಇಳಿದಲ್ಲಿ ಕೊಡಗಿನ ನಿವಾಸಿಗಳ ಪರವಾಗಿ ರಾ. ಬಾ. ಕೆ. ಚಂಗಪ್ಪನವರು ಸ್ವಾಗತ ಪತ್ರವನ್ನು ಅರ್ಪಿಸಿದರು. ಅಲ್ಲಿ ಸ್ವಾಗತವನ್ನೀಯಲು 3000 ದ ಮೇಲೆಯೇ ಜನರು ನೆರೆದಿದ್ದರು. ಸಂಚರಿಸಲ್ಪಟ್ಟದ ಜಮ್ಮದ ಕೊಡಗರಲ್ಲದೆ ದಕ್ಷಿಣ ಕೊಡಗಿನಿಂದಲೂ ಹಲವು ಕೊಡಗರು ಕುಪ್ಪಸ ದಟ್ಟಿ, ಕತ್ತಿ ಕೋವಿ ಸಮೇತ ಅಲ್ಲಿಗೆ ಬಂದಿದ್ದರು. ಹಲವು ದೊಡ್ಡ ಉದ್ಯೋಗಸ್ಥರೂ, ಮುಖ್ಯಸ್ಥರೂ ನೆರೆದಿದ್ದರು. ಅಲ್ಲಿಂದ ಹೊರಟ ವೈಸರಾಯರು ಸುಂಟಿಕೊಪ್ಪದಲ್ಲಿ ಹಾಕಿದ್ದ ಚಪ್ಪರಕ್ಕಾಗಿಯೂ, ಕೆದಕಲ್ಲಿನಲ್ಲಿ ರಾ. ಬಾ. ಕೋದಂಡ ಅಪ್ಪಯ್ಯನವರು ಹಾಕಿಸಿದ್ದ ಚಪ್ಪರಕ್ಕಾಗಿಯೂ ದಾಟಿ ಮಧ್ಯಾಹ್ನ 12

ಸಮಯಕ್ಕೆ ಮಡಿಕೇರಿ ಬೊವರ್ ಬಂಗ್ಲೆಗೆ ಒಂದು ಹ ... ದರು. ದಾರಿಯಲ್ಲಿ ಅಲ್ಲಲ್ಲಿ ಜನರು ನಿಂತಿದ್ದರಲ್ಲದೆ ಮಡಿ ... ಬೊವರ್ ಬಂಗ್ಲೆಗೆ ಸಮೀಪ ಸುಮಾರು 2000 ಜನರು ... ದ ಉಡುಪಿನಲ್ಲಿ ಕೋವಿ, ಕತ್ತಿ ಸಮೇತ ವಸ್ತ್ರ ಎಂಬು ... ಗಳೆಲ್ಲಾ ನಿಂತಿದ್ದರು.

ಸಾಯಂಕಾಲ 4½ ಗಂಟೆಗೆ ಬೊವರ್ ಬಂಗ್ಲೆಯ ಒಳ ... ಸುಮಾರು 150 ಜನರಿಗೆ ಒಂದು ಗಾರ್ಡನ್ ಪಾರ್ಟಿ ನಡೆ ... ಯಿತು. ವೈಸರಾಯರು ಪತ್ನಿ ಸಮೇತ ಹಾಜರಿದ್ದರು. ೮ ... ಗಂಟೆಗೆ ಕೆಲವರಿಗೆ ಬೊವಲಿನಲ್ಲಿ ಒಂದು ಔತಣವೂ ... ರಾತ್ರಿ ಸುಮಾರು ಹತ್ತು ಗಂಟೆಗೆ ಕೋಟೆಯೊಳಗೆ ... ವ ಕುಣಿತವೂ (ಬಳಕಾಟ) ಅರ್ಧ ಗಂಟೆಯ ನಂತರ ... ವು ಸುಡುವುದೂ ನಡೆಯಿತು. ಇದಕ್ಕೂ ಜನರು ... ನೆರೆದಿದ್ದರು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು, ಪೊ ... ಡೆಪ್ಯುಟಿ ಸುಪರಿಂಟೆಂಡೆಂಟರೇ ಮೊದಲಾದ ದೊಡ್ಡ ... ಯೋಗಸ್ಥರೂ ಕುಣಿತದಲ್ಲಿ ಭಾಗಿಗಳಾಗಿದ್ದರು. ... ಗಾರರಿಗೆ ಲೇಡಿ ಇರ್ವಿನ್‌ರವರು ಬಂದು ಇನಾಮನ್ನು ... ರೆಂದು ತಿಳಿಯಬರುತ್ತದೆ. ಶೀತದ ದೆಸೆಯಿಂದಲೋ ... ಮತಾಪು ಸುಡುವಿಕೆಯು ಅಷ್ಟು ಚೆನ್ನಾಗಿರ ...

ತಾ 29ನೇ ಶುಕ್ರವಾರ ಬೆಳಿಗ್ಗೆ 10½ ಗಂಟೆಯೊಳಗೆ ... ಕೋಟೆಯ ಒಳ ಹಾಕಿದ್ದ ಚಪ್ಪರದೊಳಗೆ ದರ್ಬಾರಿಗೆ ... ಲ್ಪಟ್ಟಿದ್ದ ಸುಮಾರು 400 ಮಹನೀಯರೂ, ಸುಮಾರು ... ಮಹಿಳೆಯರೂ ಒಂದು ಸೇರಿದ್ದರು. 10.55ಕ್ಕೆ ಚೀ ... ಮಿಷನರು ದರ್ಬಾರು ಸ್ಥಳಕ್ಕೆ ಒಂದಾಗ್ಗೆ ಕಮಿಷನರ ... ರಾದ ದೊಡ್ಡ ಉದ್ಯೋಗಸ್ಥರು ಅವರನ್ನು ಎದುರುಗೊಂ ... 11 ಗಂಟೆಗೆ ಸರಿಯಾಗಿ ವೈಸರಾಯರು ಲೇಡಿ ಇರ್ವಿ ... ಸಮೇತ ದರ್ಬಾರು ಸ್ಥಳಕ್ಕೆ ಬಂದರು. ... ಮಿಷನರು ಮೊದಲಾದವರು ಅವರನ್ನು ಎದುರುಗೊಂಡು ... ನಂತರ ವೈಸರಾಯರು ಟೆಂಟಿನ ಬಳಿ ... "ಗಾರ್ಡ್ ಆಫ್ ಆನರ್"ನ್ನು ಪರೀಕ್ಷಿಸಿದರು. ... ವೈಸರಾಯರು ತಮ್ಮ ಪಾರ್ಟಿ ಸಮೇತ ಚಪ್ಪರ ... ಬಂದರು. ಪ್ಲಾಟ್ ಫಾರಮಿನಲ್ಲಿ (ಎರಡು ಪ್ರಾಂತ್ಯ) ... ಯರು, ಲೇಡಿ ಇರ್ವಿನರು, ಚೀಫ್ ಕಮಿಷನರು, ... ಗಳು, ಮಿಲಿಟರಿ ಆಫೀಸರುಗಳು ಸೇರಿ 13 ಜನರು ... ರು. ಮಿಲಿಟರಿ ಆಫೀಸರ ಗೆ ವೈಸ್ ಕ್ಯಾಪ್ಟನ್ ಕೊ ... ಕಾರ್ಯಪ್ಪನವರು ಒಬ್ಬರಾಗಿದ್ದರು. ಚಪ್ಪರದ ... ಟ್ ಫಾರಮಿನ ಬಲಭಾಗದಲ್ಲಿ ಕೆಳಗೆ ಕೊಡಗಿನ ಗ ... ಉದ್ಯೋಗಸ್ಥರೂ, ಎಡಭಾಗದಲ್ಲಿ ಕೌನ್ಸಿಲು ಮೆಂ ... ಗಳೂ ಕೂತಿದ್ದರು. ಚಪ್ಪರದ ಹೊರಗೆ ಪ್ಲಾಟ್ ಫಾರ ... ಎದುರಿನಲ್ಲಿ ಬಲಗಡೆ ಮಡಿಕೇರಿ ಮುನ್ಸಿಪಾಲಿಟಿಯ, ... ಜಮೀನ್ದಾರರು ಸಂಘದ ಮತ್ತು ಯುರೋಪಿಯನ್ ... ಟರುಗಳ ಡೆಪ್ಯುಟೇಶನುಗಳೂ, ಎಡಭಾಗದಲ್ಲಿ ಹಳೇ ... ರರ ಸಂಘದ, ಕೊಡವ ಸಭೆಯ ಮತ್ತು ಗೌಡರುಗಳ ... ದ ಡೆಪ್ಯುಟೇಶನುಗಳೂ ಒಂದರ ಹಿಂದೆ ಒಂದು ಕೂ ... ಅವರ ನಂತರ ಟೈಟಲ್ ದಾರರೂ, ಡಿಸ್ಟ್ರಿಕ್ಟ್ ಬೋ ... ಮೆಂಬರುಗಳೂ, ಅವರ ಹಿಂದೆ ಆಮಂತ್ರಿಸಲ್ಪಟ್ಟಿದ್ದ ಬೇ ... ಮಹನೀಯರೂ ಕೂತಿದ್ದರು. ಚಪ್ಪರದ ಒಳ ಭಾಗದಲ್ಲಿ ... ಲ್ಪಟ್ಟಿದ್ದ ಗ್ಯಾಲರಿಯಲ್ಲಿ ಮಹಿಳೆಯರೂ ... ಕೂತಿದ್ದರು. ಚಪ್ಪರಕ್ಕೆ ಎದುರಾಗಿ ಒಳಭಾಗದಲ್ಲಿ ... ಟ್ಟಿಯಲ್ಲಿ ಸುಮಾರು ಐದು ಸಾವಿರ ಜನರು ನೆರೆದಿದ್ದ ... ದರ್ಬಾರಿಗೆ ಬಂದಿದ್ದ ಕೊಡವರು ಕುಪ್ಪಸ ಚೆಟ್ಟಿ ... ಬೀರೆಯವರ ಕಪ್ಪು ನಿಲುವಂಗಿ ಮತ್ತು ಪೇಟ ... ಧರಿಸಿದ್ದರು. ಪ್ಲಾಟ್ ಫಾರಮಿನ ಮೇಲೆ ಒಂದು ಬೆಳ ... ಚಿನ್ನದ ಜರತಾರಿಯಿಂದ ಮಾಡಿದ ಜಮಖಾನೆಯು ... ಲ್ಪಟ್ಟಿತ್ತು.

11–10ಕ್ಕೆ ವೈಸರಾಯರ ಅಪ್ಪಣೆ ಮೇರೆ ಕಮಿಷನರು ... ಶುರುಮಾಡಿದರು ತಿಳಿಯಿತೆಂದು ಹೇಳಿದರು. ನಂತರ ಕಮಿಷನರು ... ರಂತೆ ಮಡಿಕೇರಿ ಮುನ್ಸಿಪಾಲಿಟಿಯ ಡೆಪ್ಯುಟೇಶನು ... ಂಡರೆ ಮುನ್ಸಿಪಲ್ ಕಮಿಟಿಯ 12 ಜನ ಸಭಾಸದರು ... ವೈಸರಾಯರ ಮುಂದೆ ಕೆಳಗೆ ಒಂದು ನಿಂತು, ಮು ... ಅಧ್ಯಕ್ಷರಾದ ರಾ. ಸಾ. ಪಿ ವೆಂಕಯ್ಯನವರು ಅ ... ಪ ಪತ್ರವನ್ನು ಓದಿ, ಅದನ್ನು ಹಾಕಿದ ಕ್ಯಾಸ್ಕೆಟ್ (ಪೆಟ್ಟಿಗೆಯನ್ನು) ವೈಸರಾಯರಿಗೆ ಒಪ್ಪಿಸಿದರು. ಅದ ... ಹಳೇ ಜಮೀನ್ದಾರರ ಸಂಘದ ಡೆಪ್ಯುಟೇಶನವ ... ಗಳಾದ 1. ಸಿ. ಸುಬ್ಬಾ. ವೆಂಕಟಯ್ಯನವರು, 2. ... ಯ್ಯನವರು, 3. ಬಿದ್ದಂಡ ಪಿ. ಐಯ್ಯಪ್ಪನವರು, ... ಪೂವಯ್ಯನವರು, 5. ಮನೆಯಪಂಡ ಯಂ. ಬೆಳ್ಳಿ ... 6 ಬಮ್ಮಡ ಮೊದಪ್ಪನವರು, ಮತ್ತು 7 ಹುಬ್ಬು ... ಬೆಳ್ಳಿಯಪ್ಪನವರು ಮುಂದೆ ಬಂದ., ಸಂಘದ ಅಧ್ಯ ... ರಾ. ಬೆಳ್ಳಿಯಪ್ಪನವರು ವಿನ್ನಪ ಪತ್ರವನ್ನು ಓದಿ, ... ರಿದ ಕ್ಯಾಸ್ಕೆಟ್ಟನ್ನು ವೈಸರಾಯರಿಗೆ ಸಲ್ಲಿಸಿ ... ದರ ನಂತರ ಹೊಸ ಜಮೀನ್ದಾರರ ಸಂಘದವರೂ, ... ಸಭೆ ನವರೂ, ಯುರೋಪಿಯನ್ ಪ್ಲಾಂಟರುಗಳೂ ... ಡ ಜನಾಂಗದವರೂ ತಮ್ಮ ತಮ್ಮ ವಿನ್ನಪ ಪತ್ರ ... ಒಪ್ಪಿಸಿದರು. ಹೊಸ ಜಮೀನ್ದಾರರ ಸಂಘದವರ ... ನವರು—ಮು. ಗಳಾದ ರಾ. ಬಾ ಕೊಣಿಯಮ ... ಸುಬ್ಬಯ್ಯನವರು, (ಅಧ್ಯಕ್ಷರು) 2. ನಡಿಕೇರಿ ... ಪ್ಪನವರು, 3. ಉದಿಯಂಡ ಬೋಪಯ್ಯನವ

ರು, 4. ಬಲ್ಲಚಂಡ ಬೆಳ್ಯಪ್ಪನವರು, 5. ರಾವ್‌ಬಹದ್ದೂರ್ ಬೈ ... ರಿಯವರು, 6. ಸಿ. ಪಟೇಲ್ ಕಾಳೇಗೌಡರು, ಮತ್ತು 7. ಪ ... ಟಾ. ಚನ್ನಯ್ಯನವರು, ರ ಅಧ್ಯಕ್ಷರನ್ನು ವಿ. ರ ಸುಬ್ಬ ... ಯ್ಯನವರು ಓದಿದರು. ಕೊಡವ ಸಭೆಯ ಡೆಪ್ಯುಟೇಶನಿನವ ... ರು—ಮು. ಗಳಾದ 1. ಬಾ. ಕೊಣಿಯಂಡ ಅಪ್ಪಯ್ಯನವ ... ರು (ಅಧ್ಯಕ್ಷರು) 2. ಕೇಕಡ ಬೆಳ್ಯಪ್ಪನವರು 3. ಕಂ ... ಬಿರಂಡ ಗಣಪತಿಯವರು, 4. ಕೇಟೋಳಿ ರಾಮಪ್ಪನವರು, 5 ... ಕೂಡಂಡ ... ಮಯ್ಯನವರು, 6 ಕಾಡಿಯಂಡ ಬೋಪಣ್ಣನವರು ಮತ್ತು 7. ಕಾಡ ಕಿವ್ವಯ್ಯನವರು—ಇವರ ವಿನ್ನ ... ಪ ಪತ್ರವನ್ನು ಮಿ. ಕೊಣಿಯಂಡ ಅಪ್ಪಯ್ಯನವರು ಓದಿದರು. ಯುರೋಪಿಯನ್ ಪ್ಲಾಂಟರ ಡೆಪ್ಯುಟೇಶನಿನ ... ವರು—ಮೇಜರ್ ... ರವರು, 2. ಲೆ. ಕರ್ನಲ್ ಮಾ ... ರವರು, ಮಿಳಾವ 3 ... ಮತ್ತು 5. ... —ಇವರ ಅಧಿಪತಿಯರಾ ಪತ್ರವನ್ನು ಮೇಜರ್ ... ರವರು ಓದಿದರು. ಗೌಡ ಜನಾಂಗದ ಡೆಪ್ಯುಟೇಶನಿನ ಮು. ಗಳಾದ ಸಿದ್ದ ... ಪ್ಪನವರು, 2. ... ಪ್ಪನವರು, 3. ... ಯ್ಯನವರು, 4. ಕುಗ ... ಯ್ಯನವರು 5. ಕೆದಂ ... ಅಪ್ಪಯ್ಯನವರು 6. ... ಅಪ್ಪಯ್ಯನವರು, ಮತ್ತು 7. ... ಪ್ಪನವರು—ಇವರ ವಿನ್ನಪಪತ್ರವನ್ನು ಮಿ. ... ಪ್ಪನವರು ಓದಿದರು.

ನಂತರ ವಿನ್ನಪ ಪತ್ರಗಳಿಗೆ ಸೇರಿ ಪ್ರಿಂಟಾಗಿದ್ದ ತಮ್ಮ ಜವಾಬನ್ನು ವೈಸರಾಯರು ಓದಿ ಹೇಳಿದರು. ಇದಾದ ಮೇಲೆ ವೈಸರಾಯರು ... ಕೊಡಲ್ಪಟ್ಟ ... ಡ ... ಯ್ಯನವರಿಗೆ ರಾವ್ ಬಹದ್ದೂರ್ ಟೈಟಲಿನ ಸನ್ನದನ್ನು ಕೊಟ್ಟರು. ನಂತರ ದರ್ಬಾರಿಗಳಿಗೆ ಪಾನ ... ಪಡೆದರು. ಅತ್ತರ್ ಪಾ ... ಮುಗಿದ ... ಹಾಕಲಾಯಿತು ... ದ ... ನಂತರ ವೈಸರಾಯರು ಉಲ್ಲಾಸದಿಂದ ... ಟೆಂಟಿಗೆ ಹೋಗಿ ... ರನ್ನು ... ಲೇಡಿ ಇರ್ವಿನ್‌ರವರು ದರ್ಬಾರಿನ ... ಮೈಸೂರಿಗೆ ಹೋಗಿ ... ಹೊಸ ಹಾ ... ಲಿನ ... ಚಿತ್ರಗಳನ್ನು ... ಮೈಸೂರು ... ನಂತರ ಮಡಿಕೇರಿಯಿಂದ ... 2½ ಗಂಟೆಗೆ ಮಡಿಕೇರಿಯ ... ಹೊರಟು, ವಿರಾಜಪೇಟೆ ... ರವರ, ಮೆ ... ಕೊಡಗಿನ ಅ ... ಪ್ಪನವರತ್ತು ಮೆ. ಮನೆಯಪಂಡ ಬೆಳ್ಳಿಯಪ್ಪನವರ ... ಚಪ್ಪರಗಳಿಗೆ ಸಿ, ... ಪುತ್ರನ ಚಪ್ಪರ, ... ಅಪ್ಪಯ್ಯನವರ ಸ್ವಂತ ಚಪ್ಪರ, ಅಮ್ಮತ್ತಿ ಚಪ್ಪರ, ವಿರಾಜಪೇಟೆ ಮುನಿಸಿಪಲ್ ಒಳ (ಚಪ್ಪ) ಕೊಡವರ ಚಪ್ಪರಗಳಿಗೆ ... ರವರ ... ದ ... ಬಳಿ ಹಾಕಿದ ಚಪ್ಪರದಲ್ಲಿ ... ಸ್ವಾಗತ ಪತ್ರವನ್ನು ಸ್ವೀಕರಿಸಿಕೊಂಡು ... ಸಂಜೆ 4½ ಗಂಟೆಗೆ ಕೂಟುಂಬೆ ... ಮುಂದೆ ... ದರು.

ವರ್ತಮಾನ ಸಂಗ್ರಹ.

ಒಳದೇಶ.

ಸಾಬ್ ಪೋಸ್ಟ್ ಮಾಸ್ಟರ್ ಪರೀಕ್ಷೆಯು ಡಿಸೆಂಬರ್ ... ಗೊಂದು ... ಹಿಲ್ಲಿ ... ಆಫೀಸಿನಲ್ಲಿ ನಡೆಯ ... ವದೆಂದು ಕೇಳುತ್ತೇವೆ.

ಮಡಿಕೇರಿ ಮಹಾದೇವಪೇಟೆಯಲ್ಲಿರುವ ಶ್ರೀನಿವಾಸರಾ ... ವರ ಪತ್ನಿಯವರು ಈ ತಾ. 26ರ ರಾತ್ರಿ ಬಾರಿಗೆ ... ದ್ದ ... ವಿಧಿವಶರಾದರೆಂದು ತಿಳಿಯುತ್ತೇವೆ.

... ಕಮಿಟಿ ಮೊದಲಾದುವುಗಳನ್ನು ಆರಿಸ ... ಬೇಕಾದ ... ಕೌನ್ಸಿಲಿನ ಉದ್ಯೋಗಸ್ಥ ... ರಲ್ಲಿ ... ಚುನಾವಣೆ ಡಿಸೆಂಬರು ತಾ. 10ನೇ ... ಮಡಿಕೇರಿಯಲ್ಲಿ ನಡೆಯಲಿಕ್ಕಿದೆ.

ಬಾಲ್ಯವಿವಾಹ ನಿಷೇಧ ಸಂಬಂಧ ಶಾರದಾ ಬಿಲ್ಲನ್ನು ವಿರೋಧಿಸ ... ಸಭೆ ... ಈ ತಾ. ... ಮಹಾದೇವಪೇಟೆಯ ಒಬ್ಬರಲ್ಲಿ ... ನಡೆ ... ಯ

ಸೋಮವಾರಪೇಟೆಯ ಮೆ. ಡಿ. ಗೋವಿಂದಪ್ಪ ... ಎಲ್ ... ಪ್ರಾಂತ್ಯದ ... ದಲ್ಲಿ ... 250 ರೂ. ಸಂಬಳದಲ್ಲಿ ಅಸಿಸ್ಟೆಂಟ್ ... ನೇಮಿಸಲ್ಪಟ್ಟಿರುವರೆಂದು ಕೇಳಿ ಸಂತೋಷ ಪಡುತ್ತೇವೆ.

ಇಂಡಿಯಾದ ವೈಸರಾಯರು ಮತ್ತು ಗವರ್ನರ್ ಜನರ ... ರಾದ ಲಾರ್ಡ್ ಇರ್ವಿನ್‌ರವರು ತಮ್ಮ ಪತ್ನಿ ಸಮೇತ ಈ ತಾ. 28ರಲ್ಲಿ ಸ್ಪೆಷಲ್ ಟ್ರೇನಿನಲ್ಲಿ ಮಡಿಕೇರಿಗೆ ಬಂದರು. ತಾ. 29ರಲ್ಲಿ ದರ್ಬಾರು ... ನಡೆಸಿದರು ... ವಿನ್ನಪ ಪತ್ರಿಕೆಗಳನ್ನು ... ಲೇಡಿ ಇರ್ವಿನ್‌ರವರು ಕಾನ್ವೆಂಟ್ ... ಹಾಲ್‌ನ ... ವರು ಮ ... ಪ್ರವಾಸ ಮೇಲೆ ... ಅಮ್ಮತ್ತಿಗಾಗಿ ವೀರಾಜಪೇಟೆಗೆ ಹೋಗಿ ಅಲ್ಲಿಯ ಮುನ್ಸಿಪಾಲಿಟಿಯವರ ವಿನ್ನಪ ಪತ್ರವನ್ನು ಸ್ವೀಕರಿಸಿ ಮೈಸೂರಿಗೆ ಹೋದರು. ಇದರ ವಿವರ ಇನ್ನೊಂದು ಕಡೆ ಪ್ರಕಟಿಸಲಾಗಿದೆ.

ಹಿಂದೂದೇಶ.

ಹಿಂದೂದೇಶದ ಕೌನ್ಸಿಲುಗಳ ಬರುವ ಜನರಲ್ ಚುನಾವಣೆಯನ್ನು 1931ನೇ ಜನವರಿಯೊಳಗೆ ನಡಿಸುವರೆಂಬ ಸುದ್ದಿ.

ಮೊದಲು ಫ್ರಾನ್ಸಿನ ಪ್ರಧಾನ ಮಂತ್ರಿಯಾಗಿದ್ದ ಯಂ. ಕ್ಲೆಮೆನ್ಸಿಯೋರವರು ಈ ತಾ. 24ರಲ್ಲಿ ಸ್ವರ್ಗಸ್ಥರಾದರು.

ರಷ್ಯ ಮತ್ತು ಚೈನಾದ ಸೈನ್ಯಗಳಿಗೆ ಹಾರ್ಬಿನ್ ಬಳಿ ಯುದ್ಧವು ನಡೆಯುತ್ತಿದೆ. ... ಪರ್ವತಗಳ ಪ ... ಮ ಭಾಗವೆಲ್ಲವೂ ರಷ್ಯದವರ ಕೈವಶವಾಗಿದೆಯೆಂದು ಸುದ್ದಿ.

ಮಹಾತ್ಮ ಗಾಂಧಿಯವರ ಸಂಯುಕ್ತ ಪ್ರಾಂತ್ಯದ ಪ್ರವಾಸದಲ್ಲಿ ಒಟ್ಟಿಗೆ ಮೂರು ಲಕ್ಷ ರೂಪಾಯಿ ಜಮೆಯಾಗಿದೆಯಂತೆ.

ಹೈದರಾಬಾದಿನ ಶ್ರೀಮತಿ ಪಾರ್ವತಿ ನಾಯುಡುರವರು ... ವಿಶ್ವವಿದ್ಯಾಲಯದ ... ಮತ್ತು ... ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು.

ಮೊದಲು ಬಂಗಾಳ ... ಕಾಲೇಜಿನ ಪ್ರೊಫೆಸರಾಗಿದ್ದ ಮಿ. ನೃಪೇಂದ್ರ ಚಂದ್ರ ಬೆನರ್ಜಿಯವರಿಗೆ ರಾಜದ್ರೋಹದ ಭಾಷಣ ಮಾಡಿದುದಕ್ಕಾಗಿ ಒಂದು ವರ್ಷ ಕಠಿಣ ಸಜೆ ವಿಧಿಸಲಾಗಿದೆ.

ಅಖಿಲ ಭಾರತ ಮಹಿಳೆಯರ ಸಮ್ಮೇಳನವು ಡಿಸೆಂಬರು ತಾ. 26, 27 ಮತ್ತು 28ರಲ್ಲಿ ಲಾಹೋರಿನಲ್ಲಿ ನಡೆಯುವುದು. ... ಅಧ್ಯಕ್ಷತೆಯಾಗಿ ಆರಿಸಲ್ಪಟ್ಟಿರುವರು.

... ಹಿಂದೂದೇಶದ ... ಇಂಗ್ಲೆಂಡಿಗೆ ... ಸ್ವತಂತ್ರ ... ಪ್ರಯತ್ನ ... ತಿಳಿದು ಬರುತ್ತದೆ.

... ಮದ್ರಾಸ್ ... ಆಗ್ರಾ ... ಪ್ರಾಂತೀಯ (ಪೋಲೀಸ್) ಸೇವಾ ... ಡಿಸೆಂಬರ 2ನೇ ವಾರದಲ್ಲಿ ... ನಡೆಯುವುದಂತೆ.

ಮಹಾರಾಷ್ಟ್ರ ಕಾಂಗ್ರೆಸ್ ಕಮಿಟಿಯವರು, ವೈಸರಾಯರ ಜಾಹೀರನಾಮೆಯನ್ನು ಕುರಿತು ಮುಖಂಡರುಗಳು ... ಹೊರಡಿಸಿರುವ ತೀರ್ಮಾನಕ್ಕೆ ಒಪ್ಪಿಗೆ ಕೊಟ್ಟಿರುವರು. ಮಿ. ಎನ್. ಸಿ. ಕೇಳಕರ್‌ರವರನ್ನು ಸದ್ರಿ ಕಮಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಡಾಕ್ಟರ್ ಸುಂದರ್‌ಲಾಲ್‌ರವರು ಬರೆದಿರುವ (ಇಂಡಿಯಾ ಇನ್ ಬಾಂಡೇಜ್) 'ಭಾರತದಲ್ಲಿ ... ರಾಜ್ಯ' ವೆಂಬ ಪುಸ್ತಕವನ್ನು ಬಂಗಾಳ ಸರಕಾರದವರು ... ರುವರು ... ಪುಸ್ತಕದ ಪ್ರಕಾಶಕರು ... ಕೊಟ್ಟಿರುತ್ತಾರೆ.

ಕಳೆದ ... ಪ್ರೆಂಚ್ ಇಂಡಿಯಾದ ಗವರ್ನರ್ ... ದರ ... ಹೊರಡಿಸಿದ ... ಅವರ ... ವಿರೋಧವಾಗಿ ... ಮುಂದಾಗಿ ಪ್ರೆಂಚ್ ... ದರಿಂದ ... ಹುಟ್ಟಿದ್ದರಿಂದ ಈ ವಿಷಯ ವಿಚಾರಿಸುವಂತೆ ಫ್ರಾನ್ಸಿನ ಸರಕಾರದವರು ... ಮಾಡಿರುವರು.

ಮಡಿಕೇರಿ-ಭಾಗಮಂಡಲ-ಸುಂಟಿಕೊಪ್ಪ-ಮಾದಾಪುರ-ಮುರ್ನಾಡು-ಸಂಪಾಜೆನಾಡು ಜನಮ್ಮ ಓಟರುಗಳಲ್ಲಿ ವಿನಂತಿ.

ಮಹನೀಯರೇ,

ಈ ತಾ. 19ರಲ್ಲಿ ನಡೆದ ಕೌನ್ಸಿಲು ಚುನಾವಣೆಯಲ್ಲಿ ತಾವು ತಮ್ಮ ಓಟುಗಳನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಿದ್ದಕ್ಕೆ ತಮಗೆಲ್ಲರಿಗೂ ತುಂಬಾ ವಂದಿಸುತ್ತೇನೆ.

ಮಡಿಕೇರಿ, ತಮ್ಮ ವಿಧೇಯ,

ತಾ 26—11—'29. ಪಾಂಡಂಡ ಚಂಗಪ್ಪ.

WANTED.

Applications are invited from Mahammadan candidates who desire to be employed as teachers. A Lower Secondary pass certificate is the minimum qualification required. Apply stating age, qualification and conduct certificates from the Head Masters should be enclosed.

Sd/ B. S. KUSHALAPPA,
SUB-ASSISTANT INSPECTOR OF SCHOOLS,
2—2 Mercara, (Coorg)

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಮಡಿಕೇರಿ ಬಸ್ಸು ಸ್ಟೇಶನ್

ಇಂಡಿಯಾದ ಮುಂದಾಳುಗಳೊಂದಿಗೆ ರೌಂಡ್ ಟೇಬಲ್ ಕಾನ್ಫರೆನ್ಸ್ ನಡೆಸುವ ಮುಂಚೆ ಈ ವಿಷಯ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇನ್ನೊಂದು ಸಾರಿ ಚರ್ಚೆ ನಡೆಸಲ್ಪಡುವದೆಂದು ಸುದ್ದಿ. ವೈಸರಾಯರು ಜಾಹೀರ್ ಮಾಡಿಯ ವಿಷಯ ... ಹೆಚ್ಚಿನ ... ಸ್ಟೇಟ್ ಸೆಕ್ರೆಟರಿಯಾದ ಮಿ. ಬೆನ್ ವಾರ್ಲಿಮೆಂಟಿನಲ್ಲಿ ಹೇಳಿರುವರು.

ಇಂಗ್ಲೆಂಡಿನ ಬಟ್ಟೆಯ ವ್ಯಾಪಾರಸ್ಥಿತಿಯು ತೀರ ವಿಷಮಸ್ಥಿತಿಗೆ ಬಂದಿರುವದು. 1913ರಲ್ಲಿ 707 ಕೋಟಿ ಗಜ ಬಟ್ಟೆಯು ಪರದೇಶಗಳಿಗೆ ರವಾನೆಯಾಗುತ್ತಿತ್ತು. 1926ರಲ್ಲಿ 392 ಕೋಟಿ ಗಜ ಮಾತ್ರ ರವಾನೆಯಾಗಿದೆ. 1927ರಲ್ಲಿ 418 ಕೋಟಿ ಗಜ ಬಟ್ಟೆಯು ರವಾನೆಯಾಗಿ, 1928ರಲ್ಲಿ 316 ಕೋಟಿ ಗಜ ಬಟ್ಟೆಯು ಹೋಗಿದೆ, ಪ್ರಪಂಚದಲ್ಲಿ ಎಲ್ಲರೂ ಚರ್ಕ ... ಹೋಗಿ ... ಉಪಯೋಗಿಸಿದರೆ ಹೇಗೆ? ಎಂದು ಇಂಗ್ಲೆಂಡಿನವರು, ಅಚ್ಚರಿ ಪಡುವರಂತೆ.

ನೋಟೀಸು.

ತಮ್ಮ ಪತ್ರಿಕೆಯ ಸಂಪುಟ 9ರ ಸಂಚಿಕೆ 23, ಪುಟ 6ರಲ್ಲಿ ಮುಲ್ಲೆರ ಕಾಳಪ್ಪನವರು ಪ್ರಕಟಿಸಿರುವ ನೋಟೀಸು ನೋಡಲಾಯಿತು. ಅವರು ನಮೂದಿಸಿರುವ ಸಂಗತಿಗಳು ನ್ಯಾಯವಾದದ್ದಲ್ಲ. ನಾವು ಸಮಾಜದ ನಾಲು ಮತ್ತು ... ದಾರರಾಗಿರುತ್ತೇನೆ. ನಾಪೋಕ್ಲ ... ದಿಂದ ಜ... ದಿಂದ ಕುಟುಂಬದ ಜೊತೆ ಅವನನ್ನು ಬೇರಿಸಿದ್ದು ರದ್ದಾಗಿ ನನ್ನ ಹೆಸರು ... ದಾಖಲಾದದ್ದೇ ನನಗೆ ನಮ್ಮ ... ಕಾಳಪ್ಪನವರು ಈ ವರೆಗೂ ತಿಳಿದಂತೆ ಕಾಣುವುದಿಲ್ಲ. ಸದರಿ ಕಾಳಪ್ಪನವರು ಕೇಳಿದ ಕಮ್ಮಿ ಮೌಲ್ಯಕ್ಕೆ ನಾನು ಒಪ್ಪಿಯನ್ನು ಕೊಡದ್ದರಿಂದ ನನಗೆ ತೊಂದರೆ ಮಾಡಬೇಕೆಂದು ಬರೆದ ಸಂಗತಿಗೆ ನಾನು ಒಪ್ಪುತ್ತಿಲ್ಲ. ಇದನ್ನು ಮೂರಿನ ಸಂಬಂಧಕರು ... ನ್ನ ಇಷ್ಟದಂತೆ ಮಾಡ... ಲು ಅರ್ಹರು, ಯಾವ ಅಭ್ಯಂತರವೂ ಇಲ್ಲ. ... ರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಿಯಲಾಗುತ್ತೆ. ... ದಿಂದ ... ಬಾಧಿಲ್ಲ ... ದು ... ಸದರಿ ಕಾಳಪ್ಪನವರ ನೋಟೀಸು ಈ ಮೂಲಕ ರದ್ದಾಗಿರತಕ್ಕದ್ದು. ಈ ಸಂಗತಿ ಎಲ್ಲರ ಅವಗಾಹನೆ ಬಗ್ಗೆ ತಿಳಿಸಿದ್ದೇನೆ. ... ದಾಖಲೆಗಳು ನನ್ನಲ್ಲಿ ಇರುತ್ತೆ.

ತಾ. 24-11-29,

ಕಾಂತೂರು ಗ್ರಾಮ. ಮುಲ್ಲೆರ ಪೂವಪ್ಪ.

ಪತ್ರವ್ಯವಹಾರ.

(ಪತ್ರದಾರರು ತಮ್ಮ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.)

ಸಂಪಾದಕ.

ನಮ್ಮ ಕಾಡು ಪ್ರಾಂತ್ಯವಾದ ಈ ನಾಡಿನಲ್ಲಿ ... ಅನೇಕ ಹಾವಿನ ... ವರೆ ... ಇದೀಗ ... ಪ್ರಾಂತ್ಯಗಳಲ್ಲಿ ಹಾಲೆ ... ಗುಂಡು ಹೊಡೆಯ ... ತ ... ಉದ್ಧರಣ ... ದೇವರು ... ನರಸಿಂಹ ಘಟ್ಟದಿಗೆ ಸದರಿ ರೋಗ ... ಗುಂಡು ಹೊ...

ವರ್ತಮಾನ ಸಂಗ್ರಹ.

ಒಳದೇಶ.

ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗೊಂದು ಜನವರಿ ತಾ. 13ರಲ್ಲಿ ಮಡಿಕೇರಿಯಲ್ಲಿ ನಡೆಯಲಿಕ್ಕಿದೆ

ಮಡಿಕೇರಿಯಲ್ಲಿದ್ದ ಮಿ. ಕಾಟೋಳಂಡ ಚರಮಣ್ಣನವರು ಈ ತಾ 2ರಲ್ಲಿ ಸ್ವರ್ಗಸ್ಥರಾದದ್ದಕ್ಕೆ ವ್ಯಸನಪಡುತ್ತೇವೆ.

ಕಳೆದ ಅಕ್ಟೋಬರು ತಿಂಗಳಲ್ಲಿ ಕೊಡಗಿನಲ್ಲಿ 276 ಜನನಗಳೂ, 291 ಮರಣಗಳೂ ಸಂಭವಿಸಿದವೆಂದು ತಿಳಿಯಬರುತ್ತದೆ.

ಕೊಡಗು ಎಕ್ಸೈಸ್ ಎಡ್ವಯಿಸರಿ ಕಮಿಟಿಯ ಮೀಟಿಂಗೊಂದು ಈ ತಾ 2ರಲ್ಲಿ ಮಡಿಕೇರಿ ಕೌನ್ಸಿಲು ಹಾಲ್‍ನಲ್ಲಿ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಇನ್ನೊಂದು ಕಡೆ ಪ್ರಕಟವಾಗಿರುವ ಈ ವರ್ಷದ ಹುತ್ತರಿ ಹಬ್ಬದ ಪಟ್ಟಿಯ ಮೇರೆ ಈ ತಾ 15ನೇ ಆದಿತ್ಯವಾರ ಅರಮನೆ ಪೊಳುದೂ, ತಾ. 16ನೇ ಸೋಮವಾರ ನಾಡು ಪೊಳುದೂ ಆಗುವುದು

ಮಡಿಕೇರಿ ವೇದಾಂತ ಸಂಘದವರು ಗೀತಾಜಯಂತಿ ದಿನವನ್ನು ಈ ತಾ 12 ನೇ ಗುರುವಾರ ಸಾಯಂಕಾಲ 6ಗಂಟೆಗೆ ಸೆಂಟ್ರಲ್ ಹೈಸ್ಕೂಲ್ ಹಾಲ್‍ನಲ್ಲಿ ಆಚರಿಸುವರಾಗಿ ತಿಳಿಯುತ್ತೇವೆ.

ಬರುವ ಜನರಲ್ ಚುನಾವಣೆಯ ಬಗ್ಗೆ ಪರಿಷ್ಕರಿಸಿದ ಓಟರುಗಳ ಪಟ್ಟಿಯನ್ನು ರಿವೈಸಿಂಗ್ ಆಫೀಸರು ಈ ತಾ 20 ರೊಳಗೆ ಪ್ರಕಟಿಸಬೇಕೆಂದು ಚೀಫ್ ಕಮಿಷನರು ಹುಕುಂ ಮಾಡಿರುವರು.

ಡಾಕ್ಟರ್ ಕಡೇಮಾಡ ಕರುಂಬಯ್ಯನವರು ಕ್ರೀಡಾಟದ ಬಹುಮಾನಕ್ಕಾಗಿ ಮಡಿಕೇರಿ ಹೈಸ್ಕೂಲಿಗೂ, ಪೊನ್ನಂಪೇಟೆ ಹೈಸ್ಕೂಲಿಗೂ ಎರಡೆರಡು ಬೆಳ್ಳಿಯ ಕಪ್ಪುಗಳನ್ನು ಕೊಟ್ಟಿರುತ್ತಾರಾಗಿ ತಿಳಿಯ ಬರುತ್ತದೆ.

ಕೊಡುನಾಡಿನ ಸಮೀಪ ಸಂಪಾಜೆ ಒಸ್ತಿ ಪಾರೆಸ್ಸಿನಲ್ಲಿಯೂ, ಸಮೀಪದ ಪ್ರೈವೇಟು ಜಾಗೆಯಲ್ಲಿಯೂ ಕಾಣಬರುವ 'ಕೂಬನಾಡು ಕಪ್ಪು 'ನಂಜು ಗಂಡಾನೆ'ಯನ್ನು ಕೊಲ್ಲಲು ಲೈಸೆನ್ಸಿಗೆ ಅರ್ಜಿ ಹಾಕಬಹುದೆಂದು ಕಮಿಷನರು ಗಜೆಟಿನಲ್ಲಿ ಪ್ರಕಟಿಸಿರುವರು.

ಕಳೆದ ನವಂಬರು ತಾ. 30ರಲ್ಲಿ "ಕೊಡಗು" ಕಂಪೆನಿ ಷೇರುದಾರರ ವಾರ್ಷಿಕ ಜನರಲ್ ಮೀಟಿಂಗು ಪ್ರೆಸ್ಸಿನ ಆಫೀಸಿನಲ್ಲಿ ನಡೆಯಿತು. ಸ್ಥಳ ಸಂಕೋಚದಿಂದ ಈ ವಾರ ಪ್ರಕಟಿಸಲಾಗದ್ದರಿಂದ ಸದರಿ ಮೀಟಿಂಗಿನ ವಿವರವು ಬರುವ ವಾರದ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುದು.

ಕೊಡಗಿನ ಸರ್ಕಾರಿ ಇಲಾಖೆಗಳ ಲೆಕ್ಕಗಳನ್ನು ಆಡಿಟ್ ಮಾಡುವ ಬಗ್ಗೆ ಮದ್ರಾಸಿನಿಂದ ಅಸಿಸ್ಟಂಟ್ ಎಕೌಂಟೆಂಟ್ ಜನರಲರಾದ ಮಿ. ವಿ ನಾರಾಯಣನ್‍ರವರು ತಮ್ಮ ಸಿಬ್ಬಂದಿ ಸಮೇತ ಮಡಿಕೇರಿಗೆ ನಿನ್ನೆ ದಿನ ಬಂದಿರುವರು. ಇವರು ತಾ. 20ರ ವರೆಗೆ ಇಲ್ಲಿ ಇರುವರೆಂದು ತಿಳಿಸಿ ಬರುತ್ತದೆ

ಮಡಿಕೇರಿ ಕಾನ್ವೆಂಟ್ ಹೈಸ್ಕೂಲಿನ ಹಾಲ್‍ನ ಕಟ್ಟಡಕ್ಕೆ ಮಿಸ್ಟರ್ ಮತ್ತು ಮಿಸೆಸ್ ಕೋದಂಡ ಅಪ್ಪಚ್ಚನವರು ರೂ. ..., ಮಿಸ್ಟರ್ ಮತ್ತು ಮಿಸೆಸ್ ಕೊಡಂದೆರ ದೇವಯ್ಯನವರು ರೂ. 500, ಮಿಸ್ಟರ್ ಮತ್ತು ಮಿಸೆಸ್ ಪಾಲೇಕಂಡ ಮೇದಪ್ಪನವರು ರೂ. 500 ಮತ್ತು ಮಿ. ಕೋದಂಡ ಪೂವಯ್ಯನವರು ರೂ. 500 ಕೊಟ್ಟಿದ್ದಾರೆಂದು ಮಿಸೆಸ್ ಸ್ಟುವರ್ಟ್ ಪೀಟರ್‍ರವರು ಮತ್ತು ಮಿಸೆಸ್ ಕೊಡಂದೆರ ತಿಮ್ಮಯ್ಯನವರು ತಿಳಿಸುತ್ತಾರೆ.

ಕಸಬು ತೆರಿಗೆ (ಪ್ರೊಫೆಶನ್ ಟ್ಯಾಕ್ಸ್) ದರವನ್ನು ಪರಿಷ್ಕರಿಸಿ ಎಲ್ಲರಿಗೂ ನ್ಯಾಯವಾದ ರೀತಿ ವ್ಯಾಪಿಸುವಂತೆ ಮಾಡಲು ಡಿಸ್ಟ್ರಿಕ್ಟ್ ಬೋರ್ಡಿನವರು ನೇಮಿಸಿದ್ದ ಉಪ ಕಮಿಟಿಯು ಮೀಟಿಂಗು ಈ ತಾ 5ರಲ್ಲಿ ಮಡಿಕೇರಿಯಲ್ಲಿ ನಡೆಯಿತು ಸ್ವಲ್ಪ ಚರ್ಚೆಯಾದನಂತರ ಇಷ್ಟರ ವರೆಗೆ ವಿನಾಯಿಸಲ್ಪಟ್ಟಿದ್ದ ತೋಟಗಳ ಸುಪರಿಂಟೆಂಡೆಂಟರುಗಳಿಗೂ, ಮೇನೇಜರುಗಳಿಗೂ ಈ ತೆರಿಗೆ ಹಾಕಬೇಕೆಂದು ತೀರ್ಮಾನಿಸಿ, ದರಗಳನ್ನು ಗೊತ್ತು ಮಾಡಲು ಈ ವಿಷಯವನ್ನು ಚೆನ್ನಾಗಿ ಆಲೋಚಿಸಿ ಮುಂದಿನ ಮೀಟಿಂಗನ್ನು ಜನವರಿ ...ಕ್ಕೆ ಮುಂದರಿಸಲಾಯಿತೆಂದು ತಿಳಿಯುತ್ತೇವೆ.

ಹಳೇ ಜಮೀನ್ದಾರರ ಸಂಘದ ತತ್ವವನ್ನನುಸರಿಸಿ ನಡೆದ ಈ ಕೆಳಗಿನ ಮಹನೀಯರು ಬರುವ ಕೌನ್ಸಿಲು ಚುನಾವಣೆಗೆ ಉಮೇದುವಾರರಾಗಿ ನಿಲ್ಲಲು ನಿಶ್ಚಯಿಸಿದ ವರ್ತಮಾನವಿದೆ. ಕಿಗ್ಗಟ್ಟುನಾಡು ತಾಲೋಕಿನ ಬಿ ಕ್ಷೇತ್ರ ಪರವಾಗಿ ಮಿ. ಗಳಾಂದ ಕೊಳ್ಳಿಮಾಡ ಕರುಂಬಯ್ಯನವರು, ಮೊಚಿಮಾಡ ಮುತ್ತಣ್ಣನವರು ಮತ್ತು ಮನೆಯ ಚಿಣ್ಣಪ್ಪನವರು. ಪಡಿನಾಲ್ಕುನಾಡು ತಾಲೋಕು ಪರವಾಗಿ ಮಿ. ಗಳಾಂದ ಕೋಟೇರ ಚಿನ್ನಪ್ಪನವರು, ಐಚೆಟ್ಟಿರ ಸಿ. ಸುಬ್ಬಯ್ಯನವರು, ಮತ್ತು ... ಬೆಳ್ಳಿಯಪ್ಪನವರು. ಮಡಿಕೇರಿ ತಾಲೋಕು ಬ್ರ್ಯಾ... ಪರವಾಗಿ ಮಿ. ಮನೆಯಪಂಡ ಯಂ. ಬೆಳ್ಳಿಯಪ್ಪನವರು. ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಶ್ರೀಮಂಗಲ ನಾಡಿಗೆ ಮಿ. ಅಜ್ಜಮಾಡ ಮಾದಪ್ಪನವರೂ, ಪೊನ್ನಂಪೇಟೆಯಲ್ಲಿ ಮಿ. ಚಮ್ಮಟ್ಟಿರ ಮಾದಪ್ಪನವರೂ ಮತ್ತು ನಾಪೋಕ್ಲಿನಲ್ಲಿ ಮಿ. ಬಿದ್ದಾಳೇಂಡ ಪೂಣಚ್ಚಯ್ಯನವರೂ ಉ... ಮೇದುವಾರರಾಗಿ ನಿಲ್ಲುವರೆಂದು ತಿಳಿಯ ಬರುತ್ತದೆ. ಬಾಕಿ ಕಡೆಗಳ ಉಮೇದುವಾರರುಗಳ ಹೆಸರುಗಳು ಇನ್ನೂ ನಮಗೆ ತಿಳಿಯ ಬಂದಿರುವುದಿಲ್ಲ.

ಹಿಂದೂದೇಶ.

ಮಿ. ಯುಸ್. ಬಿ. ತಂಬೆಯವರು ಸೆಂಟ್ರಲ್ ಪ್ರಾಂತ್ಯ ಮತ್ತು ಬಿರಾರಿನ ಹಂಗಾಮಿ ಗವರ್ನರ್ ಪದವಿಯ ಚಾರ್ಜನ್ನು ವಹಿಸಿಕೊಂಡಿರುವರು.

ಬರುವ ಲಾಹೋರ್ ಕಾಂಗ್ರೆಸ್ಸಿನ ಸಮಯದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಗಿರಣಿಯಲ್ಲಿ ಮಾಡಿದ ಬಟ್ಟೆಗಳನ್ನು ಇಡಕೂಡದೆಂದು ತೀರ್ಮಾನಿಸಿರುವರು.

ದಕ್ಷಿಣ ಆಫ್ರಿಕಾದಲ್ಲಿ ಇಂಡಿಯಾದ ಏಜೆಂಟ್ ಜನರಲ್ ರಾಗಿರುವ ಸರ್ ಕೆ. ವಿ. ರೆಡ್ಡಿಯವರು ಕಾಯಿಲೆಯ ನಿಮಿತ್ತದ ರಜೆಯಲ್ಲಿ ಇಂಡಿಯಕ್ಕೆ ವಾಪಸು ಹೊರಟಿರುವರು.

ಆಲ್ ಇಂಡಿಯಾ ಹಿಂದೂ ಮಹಾಸಭೆಯ ಬರುವ ಅಧಿವೇಶನವು ಬಿಹಾರದಲ್ಲಿ ನಡೆಯುವುದು. ಇದರ ಅಧ್ಯಕ್ಷಸ್ಥಾನವನ್ನು ವಹಿಸಲು ಮಿ. ಯಂ ಆರ್. ಜಯಕರವರು ಒಪ್ಪಿರುವರು.

ಪೋಲೆಂಡ್ ದೇಶದ ಮಿಮಿಸ್ಕೀ ಎಂಬ ಜಟ್ಟಿಯನ್ನು ಹಿಂದೀ ಜಟ್ಟಿಯಾದ ಗಾಮನು ಗೆದ್ದು ಜಗಜಟ್ಟಿಯೆನಿಸಿರುವನಷ್ಟೇ! ಆ ಮಿಮಿಸ್ಕೀನು ಪುನಃ ಸಾಧನೆಮಾಡಿ ಗಾಮನನ್ನು ಎರಡನೇ ಸಾರೆ ಕಾಳಗಕ್ಕೆ ಕರೆಯುವನಂತೆ!

ಬೊಂಬಾಯಿಯಲ್ಲಿ ನಡೆಯುತ್ತಿರುವ ಕ್ವಾಡ್ರ್ಯಾಂಗ್ಯುಲರ್ ಕ್ರಿಕೆಟ್ ಟೂರ್ನಮೆಂಟಿನ ಸ್ಪರ್ಧೆಯ ಆಟದಲ್ಲಿ ಹಿಂದೂ ಟೀಮಿನವರು ಮುಸಲ್ಮಾನರ ಟೀಮನ್ನು ಸೋಲಿಸಿದರೆ ... ಗೆ ಯೂರೋಪಿಯನರೂ, ಪಾರ್ಸಿಗಳೂ ಆಡುತ್ತಿರುವರು.

ಬರುವ ಜನವರಿಯಲ್ಲಿ ಡೆಲ್ಲಿಯಲ್ಲಿ ನಡೆಯಲಿಕ್ಕಿರುವ ಐ. ಸಿ. ಯುಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ 7 ಜನ ಹಿಂದೀಯರಿಗೂ, 3 ಜನ ಬರ್ಮಾದವರಿಗೂ ಉದ್ಯೋಗ ಕೊಡಲಾಗುವುದೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಅಖಿಲ ಭಾರತ ಲಾನ್ ಟೆನ್ನಿಸ್ ಸಂಘದವರು ಕಲ್ಕತ್ತಾ, ದಲ್ಲಿ ಏರ್ಪಡಿಸಿದ್ದ ಟೆನ್ನಿಸ್ ಟೂರ್ನಮೆಂಟಿನ ಆಖೈರಿನಲ್ಲಿ ಫ್ರಾನ್ಸಿನ ಆಟಗಾರರು ಇಂಡಿಯಾದವರನ್ನು ಸೋಲಿಸಿದರು. ಇಂಡಿಯಾದ ಆಟಗಾರರಲ್ಲಿ ಮದನಮೋಹನರು ಉತ್ತಮರಾಗಿದ್ದರು

ಸರ್ಗುಜದ ಮಹಾರಾಜರವರು ಹಿಂದೂದೇಶದಲ್ಲಿ ಇಲ್ಲಿಯವರೆಗೆ 600 ಹುಲಿಗಳನ್ನು ಕೊಂದಿರುವರಂತೆ! ಈಗ ಇವರು ಶಿಕಾರಿಗಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿರುವರು ಅಲ್ಲಿ ಸಿಂಹಗಳನ್ನು ಸಜೀವವಾಗಿ ಹಿಡಿಯಬೇಕೆಂಬುದೇ ಇವರ ಅಪೇಕ್ಷೆಯಾಗಿರುವುದಂತೆ.

ಆರು ವಾರಗಳೊಳಗೆ ವಿಮಾನವನ್ನು ಇಂಡಿಯಾದಿಂದ ಇಂಗ್ಲೆಂಡಿಗೆ ನಡಿಸಿಕೊಂಡು ಹೋಗುವ ಮೊದಲನೇ ಹಿಂದೀಯನಿಗೆ 7500 ರೂಪಾಯಿ ಬಹುಮಾನ ಕೊಡುವುದಾಗಿ ಆಗಾಖಾನರು ಪ್ರಕಟಿಸಿರುವರು. ಈ ಸ್ಪರ್ಧೆಗೆ 1930ನೇ ಜನವರಿ ವರೆಗೆ ಅವಕಾಶವಿದೆ.

ಲಾಹೋರ್ ಕಾಂಗ್ರೆಸ್ ಮಹಾಸಭೆಯು ಡಿಸೆಂಬರು ತಾ 29ರಲ್ಲಿ ಪ್ರಾರಂಭವಾಗಿ ಜನವರಿ 1ರಲ್ಲಿ ಮುಗಿಯುವುದು. ವರ್ಕಿಂಗ್ ಕಮಿಟಿಯ ಮೀಟಿಂಗು ಡಿಸೆಂಬರು 26ರಲ್ಲಿಯೂ, ಸಬ್‍ಜೆಕ್ಟ್ ಕಮಿಟಿಯ ಸಭೆಗಳು 27, 28 ಮತ್ತು 30ನೇ ತಾರೀಕುಗಳಲ್ಲಿ ಜರಗುವವು.

ವಿದೇಶ.

ಜೈನಾದ ಈಸ್ಟರ್ನ್ ರೈಲ್ವೆಯ ಆಡಳಿತದ ಸಂಬಂಧ ಚೈನಾದವರಿಗೂ, ರಷ್ಯಾದವರಿಗೂ ಇದ್ದ ವಿವಾದವು ರಾಜಿಯಿಂದ ತೀರ್ಮಾನಿಸಲ್ಪಟ್ಟು ಅವರಿಗಿದ್ದ ಜಗಳವು ಮುಕ್ತಾಯಗೊಂಡಿದೆಯೆಂದು ವರ್ತಮಾನ

ಲಂಡನ್ನಿನ ರಸ್ತೆಯಲ್ಲಿ ಜಮೆಯಾಗುವ ಕೊಳಕು ಪದಾರ್ಥಗಳನ್ನು ಮಾರಿ ಅಲ್ಲಿ ವರ್ಷಕ್ಕೆ ಮಿಲ್ಲಿಯ ಪೌಂಡುಗಳ ಉತ್ಪತ್ತಿಯಾಗುತ್ತದೆಯಂತೆ. ಹಿಂದೂದೇಶದಲ್ಲಿ ಜನರಿಗೆ ಈ ಉಪಾಯವು ತಿಳಿದು ಬಂದಿರುವದಿಲ್ಲವಲ್ಲಾ!

ಅಫಘಾನಿಸ್ಥಾನದ ಹೊಸ ಅಮೀರರಾದ ನಾದಿರ್ ಷಾರವರ ಅಣ್ಣ ಮಹಮ್ಮದರನ್ನು ಇಂಗ್ಲೆಂಡಿನಲ್ಲಿಯೂ, ತಮ್ಮ ಸದಾರ್ ಮಹಮ್ಮದ್ ಅಜೀಜರನ್ನು ರಷ್ಯಾದಲ್ಲಿಯೂ ರಾಯಭಾರಿಗಳಾಗಿ ನೇಮಿಸಿರುವರು.

ಇಂಡಿಯಾದ ಮುಂದಾಳುಗಳೊಂದಿಗೆ ರೌಂಡ್ ಟೇಬಲ್ ಕಾನ್‍ಫರೆನ್ಸ್ ನಡೆಸುವ ಈ ವಿಷಯ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇನ್ನೊಂದು ಸಾರಿ ಚರ್ಚಿಸಲ್ಪಡುವದೆಂದು ಸುದ್ದಿ. ವೈಸರಾಯರ ಡಿಕ್ಲೇರೇಶನಿನ ವಿಷಯ ಈಗ ಚರ್ಚಿಸಲ್ಪಡುವುದಿಲ್ಲವೆಂದು ಸ್ಟೇಟ್ ಸೆಕ್ರೆಟರಿಯಾದ ಮಿ. ಬೆನ್‍ರವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಇಂಗ್ಲೆಂಡಿನ ಬಟ್ಟೆಯ ವ್ಯಾಪಾರಸ್ಥಿತಿಯು ತೀರ ವಿಷಮಸ್ಥಿತಿಗೆ ಬಂದಿರುವದು. 1913ರಲ್ಲಿ 707 ಕೋಟಿ ಗಜ ಬಟ್ಟೆಯು ಪರದೇಶಗಳಿಗೆ ರವಾನೆಯಾಗುತ್ತಿದ್ದು 1926ರಲ್ಲಿ 392 ಕೋಟಿ ಗಜ ಮಾತ್ರ ರವಾನೆಯಾಗಿದೆ. 1927ರಲ್ಲಿ 418 ಕೋಟಿ ಗಜ ಬಟ್ಟೆಯು ರವಾನೆಯಾಗಿ, 1928ರಲ್ಲಿ 316 ಕೋಟಿಗೆ ಇಳಿದು ಹೋಗಿದೆ. ಪ್ರಸಂಗದಲ್ಲಿ ಎಲ್ಲರೂ ಬೆಕ್ಕಿಲೆ ತಿರುಗುತ್ತಿರುವರೋ ಹೇಗೆ? ಎಂದು ಇಂಗ್ಲೆಂಡಿನವರು ಚಿಂತೆಯೂ ಪಡುವರಂತೆ.

ವಿನಂತಿ.

ಕಳೆದ ನವಂಬರು ತಾ. 29ರಲ್ಲಿ ವೈಸರಾಯರ ಆಗಮನಕ್ಕಾಗಿ ವೀರರಾಜಪೇಟೆಗೆ ಬಂದಿದ್ದ ನಾನು ಸಾಯಂಕಾಲ ಬಸ್ಸಿನಲ್ಲಿ ವಾಪಸು ಹೋಗುತ್ತಿದ್ದಾಗ ಬಿಟ್ಟಂಗಾಲದ ಬಳಿ ರಸ್ತೆಯಲ್ಲಿ ಸುಮಾರು 20 ರೂ. ಬೆಲೆಯ ಸಣ್ಣದೊಂದು ಕೆಂಪು ರೇಷ್ಮೆ ದಟ್ಟಿಯು ಬಿದ್ದು ಹೋಯಿತು. ಇದನ್ನು ಪತ್ತೆ ಮಾಡಿ ಕೊಟ್ಟವರಿಗೆ 2 ರೂಪಾಯಿ ಇನಾಮು ಕೊಡಲಾಗುವುದು.

ಬಿಲ್ಲಾಂಡ ಅಪ್ಪಣ್ಣ,

1—12—'29 ಮಾಯಮುಡಿ,

ಗೋಣಿಕೊಪ್ಪಲು.

ಶ್ರೀಮಂಗಲನಾಡು ಓಟರುಗಳಲ್ಲಿ ಅಜ್ಜಮಾಡ ಮಾದಪ್ಪನ ವಿನಂತಿ.

ನಾನು ಕಳೆದ ಮೂರು ವರ್ಷಗಳಿಂದ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಈ ನಾಡಿಗೆ ಮತ್ತು ದೇಶಕ್ಕೆ ಸಂಬಂಧಪಟ್ಟ ಅನೇಕ ಸಂಗತಿಗಳನ್ನು ಜನರಿಗೆ ಪ್ರಯೋಜನವಾಗುವ ರೀತಿ ನನಗೆ ಸಾಧ್ಯವಾದಷ್ಟು ಮಟ್ಟಿಗೆ ಚರ್ಚಿಸಿ ಜಾರಿಗೆ ತರಲು ಪ್ರಯತ್ನಿಸಿದ್ದು ನಿಮಗೆಲ್ಲಾ ತಿಳಿದ ವಿಷಯವಾಗಿದೆ. ಈ ನಾಡಿಗೆ ಅವಶ್ಯವಿರತಕ್ಕ ಇನ್ನು ಹಲವು ವಿಷಯಗಳನ್ನು ಸಾಧಿಸಲಿಕ್ಕೂ, ಇನ್ನು ಮುಂದಕ್ಕೂ ಜನರ ಹಿತಕ್ಕಾಗಿ ಹೋರಾಡಲಿಕ್ಕೂ ಕುತೂಹಲವುಳ್ಳವನಾಗಿರುವುದರಿಂದ ಈಗ ಬೇಗನೆ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಈ ನಾಡಿನ ಪರವಾಗಿ ನಾನೊಬ್ಬ ಉಮೇದುವಾರನಾಗಿ ನಿಲ್ಲಲು ನಿಶ್ಚಯಿಸಿರುತ್ತೇನೆ. ಕಳೆದ ಸಾರಿಯಂತೆಯೇ ಈ ಸಾರಿಯೂ ನೀವೆಲ್ಲರೂ ನನಗೆ ಓಟು ಕೊಟ್ಟು ನನ್ನನ್ನು ಚುನಾಯಿಸಬೇಕಾಗಿ ಪ್ರಾರ್ಥಿಸಬೇಕಾಗಿ ಕೋರುವ,

ತಮ್ಮ ವಿಧೇಯ,

... ಗ್ರಾಮ, ತಾ 5—1—'29 ಅಜ್ಜಮಾಡ ಮಾದಪ್ಪ.

Wanted.

An S. S. L. C Candidate (or who has studied up to that standard) for a branch secretary's post at Virarajendrapet (Pay Rs. 50 + 40 allowance = Rs. 40. Security Rs. 235.)

For further particulars apply to

The Divisional Secretary,

The U. L. S. R. Bank, Ltd.,

Puttur,

C/o Bittumdira Uttayya,

Virarajendrapet,

4—1 South Coorg

ನೋಟೀಸು.

ತಮ್ಮ ಪತ್ರಿಕೆಯ ಸಂಪುಟ 9ರ ಸಂಚಿಕೆ 23, ಪುಟ 6ರಲ್ಲಿ ಮುಲಚೀರ ಕಾಳಪ್ಪನವರು ಪ್ರಕಟಿಸಿರುವ ನೋಟೀಸು ನೋಡಲಾಯಿತು. ಅವರು ನಮೂದಿಸಿರುವ ಸಂಗತಿಗಳು ನ್ಯಾಯವಾದದ್ದಲ್ಲ. ನಾನು ನಮೂದಾ ಭೂಮಿ ವಾಲು ಮತ್ತು ಹಕ್ಕುದಾರಳಾಗಿರುತ್ತೇನೆ. ನಾಯಕ್ಕಾದ ತಕರಾರಿನಿಂದ ಬಹಳ ಕಾಲದಿಂದ ಕುಟುಂಬದ ಬೇರೆ ಜನರನ್ನು ಸೇರಿಸಿದ್ದು ರದ್ದಾಗಿ ನನ್ನ ಹೆಸರು ಬರಬೇಕಾಗಿದೆ. ದಾಖಲಾದದ್ದೇ ನನಗೆ ನಮ್ಮ ಅರ್ಧದ ಹಕ್ಕಿನ ಅಸ್ತಿಯಾಗಿರುತ್ತೆಂಬದು ಸದರಿ ಕಾಳಪ್ಪನವರು ಈ ವರೆಗೂ ತಿಳಿದಂತೆ ಕಾಣುವುದಿಲ್ಲ. ಸದರಿ ಕಾಳಪ್ಪನವರು ಕೇಳಿದ ಕಮ್ಮಿ ಮೌಲ್ಯಕ್ಕೆ ನಾನು ಆಸ್ತಿಯನ್ನು ಕೊಡದ್ದರಿಂದ ನನಗೆ ತೊಂದರೆ ಮಾಡಬೇಕೆಂದು ಬರೆದ ಸಂಗತಿಗೆ ನಾನು ಒಪ್ಪುವುದಿಲ್ಲ. ಇದನ್ನು ಯಾರೂ ನಂಬಕೂಡದು. ನಾನು ಮಾಲೀಕ ಹಕ್ಕುದಾರಳು. ನನ್ನ ಇಷ್ಟದಂತೆ ಮಾಡಲು ಅರ್ಹಳು, ಯಾವ ಅಡ್ಡಿಯೂ ಇಲ್ಲ. ಖರೀದಿದಾರರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಿಯಬಹುದು. ಹಿಂದಣ ಯಾವ ತೊಂದರೆಯೂ ಬರಲಾರದು. ಬಾದಲ್ಲಿ ಅದು ಅಸಿಂಧು ಆಗಬೇಕು. ಅದ್ದರಿಂದ ಸದರಿ ಕಾಳಪ್ಪನವರ ನೋಟೀಸು ಈ ಮೂಲಕ ರದ್ದಾಗತಕ್ಕದ್ದು. ಈ ಸಂಗತಿ ಎಲ್ಲರ ಅವಗಾಹನೆ ಬಗ್ಗೆ ತಿಳಿಸಲ್ಪಟ್ಟಿದೆ. ಈ ಬಗ್ಗೆ ದಾಖಲೆಗಳು ನನ್ನಲ್ಲಿ ಇರುತ್ತೆ.

ತಾ. 24—11—29,

... ಗ್ರಾಮ. ಮುಲಚೀರ ಪೂವಮ್ಮ.

ಪತ್ರವ್ಯವಹಾರ.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಾಕರ್ತರು ಜವಾಬ್ದಾರರಲ್ಲ. ಸಂ.]

ಸಂಪಾಜೆ.

ನಮ್ಮ ಕಾಡು ಪ್ರಾಂತ್ಯವಾದ ಈ ಸಂಪಾಜೆ ಮಲ್ಲಿ ... ಆನೆಗಳ ಹಾವಳಿ ಉಂಟಾಗಿ ಸಕಲರ ತೀರ ನಷ್ಟ ... ವರೆ ಇತ್ತೀಚೆಗೆ ಸಂಪಾಜೆ, ಕಲ್ಲಾಳ, ಕೊಯನಾಡು ಈ ಪ್ರಾಂತ್ಯಗಳಲ್ಲಿ ಹಾವಳಿ ಮಾಡುವ ಒಂಟಿ ಸಲಗು ಆನೆ ಮನ್ನು ಗುಂಡು ಹೊಡೆದು ಕೊಲ್ಲಲು ಮಿ. ರಾ. ತ್ರಿ. ಅಂಗ್ರಿ, ... ರವರು ಲೈಸೆನ್ಸು ಅಪೇಕ್ಷಿಸಿ ಬರೆದಿರುವ ಅರ್ಜಿಗೆ ಸದರಿ ನರಸಿಂಹ ಭಟ್ಟರಿಗೆ ಸದರಿ ರೋಗು ಆನೆಯನ್ನು ಗುಂಡು ಹೊ...

ಡೆಯಲು ಲೈಸನ್ಸು ಕೊಡದಿದ್ದದ್ದು ನಮ್ಮ ಬಡ ರೈತರ ದುರಾದೃಷ್ಟವೇ ಸರಿ. ಇವರಿಗೆ ಲೈಸೆನ್ಸು ಕೊಡದಿರಲು ಕಾರಣ ತಿಳಿಯದು. ಆದರೆ ವರ್ತಮಾನದ ವೇಳೆ ಇವರು ಈ ಮೊದಲು ಒಂದೇ ಗುಂಡಿಗೆ 3 ಕಾಟಿಗಳನ್ನು ಹೊಡೆದರೆಂಬ ವಿಷಯದಲ್ಲಿ ಕಮೀಶನರ್ ಸಾಹೇಬರವರು ಬಹಳ ರೇಗಿದರಾಗಿ ತಿಳಿದು ಬರುತ್ತದೆ. ಪಾಪ ಇವರು, ಆತ್ಮರಕ್ಷಣೆಗಾಗಿ ಹೊಡೆದದ್ದಕ್ಕೂ ತಪ್ಪೆ? . ಆದರೆ ನಮ್ಮ ಜಿಲ್ಲೆಯಲ್ಲಿ ಇಷ್ಟು ಧೈರ್ಯದಿಂದಲೂ, ಸಾಹಸದಿಂದಲೂ ಇಷ್ಟು ಬಲವಾದ ರೈಫಲ್ ಇಟ್ಟುಕೊಂಡರೂ ಇಂತವರಿಗೆ ಲೈಸನ್ಸು ಕೊಟ್ಟು ನಮ್ಮ ಊರು ಬಡ ರೈತರ ಕಷ್ಟ ನಿವಾರಿಸಲು ಘನ ಸರಕಾರಕ್ಕೆ ಮನಸ್ಸು ಬಾರದಿರುವದು ನಮ್ಮ ದುರ್ಭಾಗ್ಯವೆಂದೇ ತಿಳಿಯಬೇಕಾಗಿದೆ ಆದ್ದರಿಂದ ಇನ್ನಾದರೂ ಸದರಿ ಅಂಗ್ರಿ ನರಸಿಂಹಭಟ್ಟರಿಗೆ ಸದರಿ ಸುಪಾರಿ ರೋಗು ಆನೆಯನ್ನು ಗುಂಡು ಹೊಡೆದು ಕೊಲ್ಲಲು ಲೈಸೆನ್ಸು ಕೊಟ್ಟು ಬಡ ರೈತರನ್ನು ಕಾಪಾಡಬೇಕಾಗಿ ಬೇಡಿಕೊಳ್ಳುವ.

"ಬಡ ರೈತ'

ಕಾಕೋಟುಪರಂಬು ಶಾಲೆ.

ಮೂರು ಕಟ್ಟಡಗಳ ಪೈಕಿ ಹಳೇ ಕಟ್ಟಡವು ಪೂರ್ಣ ಶಿಥಿಲವಾದ್ದರಿಂದ ವಿದ್ಯಾ ಇಲಾಖೆ ಕಮಿಟಿಯವರು ಅದನ್ನು ದುರಸ್ತು ಪಡಿಸಬೇಕಾಗಿಯೂ, ಹಾಗೆ ಮಾಡಲು ರೈತರು ಅರ್ಧ ಖರ್ಚು ಕೊಟ್ಟಲ್ಲಿ ಬೋರ್ಡಿನವರು ಅರ್ಧ ಖರ್ಚು ಕೊಡವುದಾಗಿಯೂ ಹುಕುಂ ಮಾಡಿದ್ದರಿಂದ ಗ್ರಾಮಸ್ಥರು ಒಂದು ಕಮಿಟಿಯನ್ನು ಏರ್ಪಡಿಸಿ ತನ್ಮೂಲಕ ಚಂದವನ್ನು ಇಡೀ ದೇಶದ ಮಹನೀಯರಿಂದ ವಸೂಲ್ಮಾಡುವಂತೆ ನಿರ್ಣಯಿಸಿದರು ಇದಕ್ಕಾಗಿ ಮೆ. ಚೇರಿರ ಚಿಣ್ಣಪ್ಪನವರು ಮುಂದೆ ಬಂದು ಕಮಿಟಿಯವರಿಂದ ಸರಿಯಾದ ರಶೀತಿ ಪುಸ್ತಕಗಳನ್ನು ಪಡೆದು ದೇಶದ ಎಲ್ಲಾ ಭಾಗಗಳಲ್ಲಿಯೂ ಸಂಚರಿಸಿ ಕೆಲವು ಮಟ್ಟಿಗೆ ಚಂದಾ ಶೇಖರಿಸಿರುವುದಾಗಿ ತಿಳಿಯುತ್ತೇನೆ ಆದರೆ ಅವರ ಮೂಲಕ ವಸೂಲಾದ ಹಣ ಪೂರ್ತಿ ಕಮಿಟಿಯವರಿಗೆ ತಲಪಲಿಲ್ಲವಾಗಿ ತಿಳಿಯುತ್ತೇನೆ ವಸೂಲಾತಿ ಬಗ್ಗೆ ಕಮಿಟಿಯವರು ಏನು ನಿಗಾ ತೆಗೆದುಕೊಳ್ಳುವರೋ ನೋಡಬೇಕಾಗಿದೆ ಗ್ರಾಮಸ್ಥರಿಗೂ ಮತ್ತು ಸ್ಕೂಲ್ ಕಮಿಟಿಯವರಿಗೂ ಚಂದ ಕೊಟ್ಟ ಮಹನೀಯರ ಹೆಸರು ಗೊತ್ತಿಲ್ಲದ ಕಾರಣ ಚಂದ ಕೊಟ್ಟವರು ದಯವಿಟ್ಟು ಚಂದ ಕೊಟ್ಟ ಮೊಬಲಗನ್ನು ನಮೂದಿಸಿ ಸದರಿ ಗ್ರಾಮ ಕಮಿಟಿಗೆ ಒಂದು ಕಾರ್ಡು ಬರೆದಲ್ಲಿ ಅವರು ಮಾಡಿದ ಕೆಲಸಕ್ಕೆ ಇದೊಂದು ಸಹಾಯವಾಗುತ್ತಿತ್ತು. ಹ್ಯಾಗೂ ಕಮಿಟಿಯವರು ಪ್ರಯತ್ನ ಪೂರ್ವಕ ಸದರಿ ಮೆ ಚಿಣ್ಣಪ್ಪನವರು ವಸೂಲ್ಮಾಡಿಕೊಂಡ ಮೊಬಲಗನ್ನು ಗುರ್ತಿಸಿ ಬಾಬ್ತಿಗೆ ತೆಗೆದುಕೊಂಡು ವಸೂಲ್ಮಾಡಿದ ಉದ್ದೇಶವನ್ನು ನೆರವೇರಿಸಿ ಕೀರ್ತಿಗೆ ಭಾಗಿಗಳಾಗುವರೆಂತ ಹಾರೈಸುತ್ತೇನೆ

ತಾ. 20—11—1929 ನಾಲ್ಕೇರಿ ಗ್ರಾಮವಾಸಿ

ಕೊಡವರ ಕುಣಾತ

ಮಹನೀಯರೇ,

ಈಗಾಗಲೇ ನಮ್ಮ ದೇಶದ ವೈಸರಾಯಿ ಮತ್ತು ಗವರ್ನರ್ ಜನರಲ್‌ರವರು ಕೊಡಗಿಗೆ ದಯಮಾಡಿಸಿದ್ದು ಕೊಡಗಿನ ಜನರಿಗೆಲ್ಲರಿಗೂ ತಿಳಿದವಿಷಯವಾಗಿದೆ ಅವರು ಮಡಿಕೇರಿಯಲ್ಲಿದ್ದಾಗ್ಗೆ ಕಳೆದ ನವಂಬರ್ ತಾ 28ನೇ ರಾತ್ರಿ ಮಡಿಕೇರಿ ಕೋಟೆಯೊಳಗೆ ಕೊಡವರ (ಒಳಕಾಟ) ಎಂಬ ಕುಣಾತವನ್ನು ಏರ್ಪಡಿಸಿದ್ದು ಸಹ ಸರ್ವರಿಗೂ ತಿಳಿದ ಸಂಗತಿಯಾಗಿದೆ ಈ ಕುಣಾತವನ್ನು ನೋಡಲಿಚ್ಛಿಸುವ ಪ್ರೇಕ್ಷಕರೆಲ್ಲರೂ ಸದರಿ ಕುಣಾತದ ಏರ್ಪಾಡಿನ ಕಮಿಟಿಯ ಅಧ್ಯಕ್ಷರಾಗಿದ್ದ ರಾ ಸಾ ಪಟ್ಟಮಾಡ ದೇವಯ್ಯನವರಿಗೆ ಬಂದು ಪ್ರವೇಶದ ಟಿಕೇಟುಗಳನ್ನು ನವಂಬರ್ ತಾ 27ರ ಒಳಗ ಪಡಕೊಳ್ಳಬಹುದೆಂಬದಾಗಿ ಪ್ರಕಟಿಸಿದ್ದು ಎಲ್ಲರ ಅವಗಾಹನೆಗೆ ಬಂದಿತ್ತು. ಆದ್ದರಿಂದ ಅನೇಕರು ರಾ ಸಾ. ದೇವೈಯ್ಯನವರಿಗೆ ಟಿಕೇಟುಗಳಿಗ ಬರಕೊಂಡು ಪಡಕೊಂಡರೆಂತಲೂ ಮತ್ತು ಕೆಲವರು ರಾ. ಸಾ. ದೇವೈಯ್ಯನವರಿಗೆ ಬರಕೊಂಡಲ್ಲಿ ಟಿಕೇಟುಗಳೆಲ್ಲವೂ ಮುಗಿದಿದೆ, ಕೊಡವ ಸಭೆಯ ಮೆಂಬರುಗಳಿಗೆ ಮಾತ್ರ ಕೆಲವು ಟಿಕೇಟುಗಳಿವೆ, ಅವುಗಳನ್ನು ಇತರರಿಗೆ ಕೊಡಲಾಗುವುದಿಲ್ಲವೆಂತ ರಾ ಸಾ. ದೇವೈಯ್ಯನವರು ಉತ್ತರ ಕೊಟ್ಟರೆಂತಲೂ ತಿಳಿದು ಬಂತು ಸದರಿ ಕುಣಾತವನ್ನು ವೀಕ್ಷಿಸುವದಕ್ಕಾಗಿ ಕೊಡಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರೂ, ಪೋಲೀಸ್ ಡೆಪ್ಯುಟಿ ಸುಪರಿಂಟೆಂಡೆಂಟರವರೂ, ಸಿವಿಲ್ ಜಡ್ಜಿಯವರೂ ಮತ್ತು ಇನ್ನು ಕೆಲವು ಉದ್ಯೋಗಸ್ಥರೂ ಸಹ ನಾಪೋಕ್ಲಿಗೆ ಹೋಗಿದ್ದರೆಂತಲೂ ಅಲ್ಲಿಗೆ ಕುಣಾತದವರನ್ನು ಕರೆಯಿಸಿ, ಕುಣಿಸಿ, ಚೆನ್ನಾಗಿ ಕುಣಿಯುವವರನ್ನು ಆರಿಸಿದರೆಂತಲೂ ತಿಳಿದು ಬರುತ್ತದೆ ಹೀಗೆ ಸರಕಾರಿ ಉದ್ಯೋಗಸ್ಥರಿಂದ ಏರ್ಪಡಿಸಲ್ಪಟ್ಟ ಕೊಡವರ ಕುಣಾತವನ್ನು ಕೊಡವ ಸಭೆಯ ಮೆಂಬರುಗಳು ಮಾತ್ರ ನೋಡಬಹುದೆಂತ ತೀರ್ಮಾನಿಸಲು ರಾ. ಸಾ ದೇವೈಯ್ಯನವರಿಗೆ ಯಾವ ಅಧಿಕಾರವೂ ಇರಲಿಲ್ಲ ಅಲ್ಲದೆ 'ಒಳಕಾಟ' ಕುಣಿಯುವಾಗಲೂ ಸಹ ಕೊಡಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರು ಸಾರಿನಲ್ಲಿ ಒಂದನೆಯವರಾಗಿಯೂ, ಪೋಲೀಸ್ ಡೆಪ್ಯುಟಿ ಸುಪರಿಂಟೆಂಡೆಂಟರವರು ಮೂರನೇಯವರಾಗಿಯೂ ಕುಣಿದರೆಂತ ತಿಳಿದು ಬಂತು. ಇದಕ್ಕೆ ಮುಖ್ಯವಾಗಿ ಸರಕಾರಿ ಉದ್ಯೋಗಸ್ಥರು ಭಾಗಿಗಳಾದ ಕುಣಾತವನ್ನು ನೋಡಲು ಏರ್ಪಡಿಸಿದ ಟಿಕೇಟುಗಳ ವಿಷಯದಲ್ಲಿ ನಡೆದ ಪಕ್ಷಪಾತವನ್ನು ನಮ್ಮ ಕೊಡಗಿನ ಕಮೀಷನರ್ ಸಾಹೇಬರವರು ಯಾವ ರೀತಿಯಲ್ಲಿ ವಿಚಾರಿಸುತ್ತಾರೆಂದು ನಾವೆಲ್ಲರೂ ತಿಳಿಯಲು ಕುತೂಹಲದಲ್ಲಿದ್ದೇವೆ. ಇಡೀ ಹಿಂದೂದೇಶದ ವೈಸರಾಯರು ಕೊಡಗಿಗೆ ಒಂದಾಗ್ಗೆ ಅವರ ದರ್ಶನವನ್ನು ಮಾಡಲು ಸರ್ವರ ಹಕ್ಕಾಗಿರುತ್ತದೆ ಇಂಥಾ ಹಕ್ಕನ್ನು ಕೊಡವ ಸಭೆಯ ಮುಖಂಡರು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಲು ಉದ್ಯುಕ್ತ ಮಾಡಿದ್ದು ದೇಶದ ಜನರಿಗ ಅಸಮಾಧಾನ ಉಂಟುಮಾಡಿ ದೇಶದಲ್ಲಿ ಕಲಹವನ್ನೂ, ಪಕ್ಷಪಾತವನ್ನೂ ಹೆಚ್ಚಿಸಲು ಉತ್ತೇಜನ ಕೊಟ್ಟಂತಾಗುವುದೆಂಬುದು ಅತಿಶಯೋಕ್ತಿಯಾಗಲಾರದು. ಈ ರೀತಿಯ ಪಕ್ಷಪಾತದ ವರ್ತನೆಗೆ ಉದ್ಯೋಗಸ್ಥರು ಎಳ್ಳಷ್ಟಾದರೂ ಎಡೆಕೊಟ್ಟಿದ್ದಾರೆಂತ ಜನರು ನಂಬಿದ್ದಾದರೆ ನಮ್ಮ ಸರಕಾರದಲ್ಲಿ ನಂಬಿಕೆಯನ್ನು ಹಾಳು ಮಾಡಿಕೊಂಡಂತಾಗುವುದು. ಅಥವಾ ರಾ ಸಾ ಪಟ್ಟಮಾಡ ದೇವೈಯ್ಯನವರ ಸ್ವಂತ ಬುದ್ಧಿಯಿಂದ ಈ ರೀತಿಯ ಪಕ್ಷಪಾತವನ್ನು ತೋರಿಸಿದ್ದೇ ಆದರೆ ಅವರಿಗೆ ಈ ರೀತಿಯ ನಿರಂಕುಶದ ಅಧಿಕಾರವನ್ನು ಯಾರು ವಹಿಸಿದರೆಂತ ಜನರು ತಿಳಿಯಲು ಅಪೇಕ್ಷಿಸುತ್ತಾರೆ

"ದೇಶಸ್ಥ.'

ಕಾಗ್ಗುಂಡದ ಮೀಟಿಂಗಿನ ಗಲಾಟೆ.

ಅಯ್ಯಾ,

ಕೊಡಗು ಜನರಲ್ಲಿ ಕ್ಷತ್ರಿಯತ್ವವು ಅಳಿಸಿ ಹೋಗಿಲ್ಲವೆಂದು ಮೊನ್ನೆ ನಡೆದ ಕಾಗ್ಗುಂಡದ ಮೀಟಿಂಗಿನಲ್ಲಿ ಸಾಕ್ಷಾತ್ಕಾರವಾಗಿದೆ. ಪೂರ್ವ ಕಾಲದ ಪ್ರತಾಪ, ರಾಣಾ, ಜಯಸಿಂಹ ಮೊದಲಾದ ವೀರಕ್ಷತ್ರಿಯರುಗಳ ರಕ್ತವು ಕೊಡಗು ಜನರ ಮೈಯ್ಯಲ್ಲಿ ಇನ್ನೂ ಸಂಚರಿಸುತ್ತಿರುವುದು ಆದರೆ ಪ್ರತಾಪ ಮೊದಲಾದವರು ತಮ್ಮ ಶಕ್ತಿಯನ್ನು ತಮ್ಮನ್ನು ಹಿಂಸಿಸುತ್ತಿದ್ದ ಮೊಗಲರ ಮೇಲೆ ತೋರಿಸಿದರು ಹಿಂದೂ ಧರ್ಮವನ್ನು ಕಾಪಾಡಲು ಹಿಂದಿಯರ ಅಭಿಮಾನವನ್ನು ಎತ್ತಿ ಹಿಡಿಯಲು ತಮ್ಮ ಜೀವಮಾನವನ್ನು ಅಲಕ್ಷದಿಂದ ಕಳೆದರು. ಈ ಮಹನೀಯರಿಂದ ವೀರತ್ವವನ್ನು ಪಡೆದ ಕೊಡಗು ಜನರು ತಮ್ಮ ಶಕ್ತಿಯನ್ನು ಪರರ ಮೇಲೆ ತೋರಿಸದೆ ತಮ್ಮವರ ಮೇಲೆಯೇ ತೋರಿಸಿದರೆಂದು ಹೇಳಲು ಯಾರಿಗೆ ನಾಚಿಕೆಯಾಗದು! ಅಣ್ಣ ತಮ್ಮಂದಿರು ತಮ್ಮ ತಮ್ಮೊಳಗೆ ಹೊಡೆದಾಡಿಕೊಂಡರು ಇದಕ್ಕೆ ಕಾರಣ ನವನಾಗರೀಕತೆಯೋ, ಅಲ್ಲವೇ ಭ್ರಾತೃತ್ವಮತ್ಸರವೋ ತಿಳಿಯದು

ಕೊಡಗಿಗೆ ಲೆಜಿಸ್ಲೇಟಿವ್ ಕೌನ್ಸಿಲ್ ಸಿಕ್ಕಿ ಈಗ ಕೆಲವು ವರ್ಷಗಳಾದವು ಇದು ಸಿಕ್ಕಲು ಕಲವು ಕಾಲ ಹೆಣಗಾಡಬೇಕಾಯಿತು ಸಿಕ್ಕಿದನಂತರ ಸರಿಯಾಗಿ ಉಪಯೋಗಿಸುವುದು ನಮ್ಮ ಕರ್ತವ್ಯವಾಗಿದೆ ಆ ಕೌನ್ಸಿಲಿಗೆ ಜನರ ಪ್ರತಿನಿಧಿಗಳನ್ನು ಕಳುಹಿಸಿ ಸರಕಾರಕ್ಕೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವುದು ಮುಖ್ಯ ಉದ್ದೇಶವಾಗಿದೆ ಹೀಗಿರುವಲ್ಲಿ ಸ್ನೇಹಭಾವದಿಂದ ಪ್ರತಿನಿಧಿಗಳನ್ನು ಆರಿಸಿ ತಮ್ಮ ಒಗ್ಗಟ್ಟನ್ನು ಸರಕಾರಕ್ಕೆ ತೋರಿಸಿ ಅವರಿಂದ ಹೆಚ್ಚಾದ ಸ್ವಾತಂತ್ರ್ಯವನ್ನು ಹೊಂದುವುದನ್ನು ಬಿಟ್ಟು ತಮ್ಮೊಳಗೆ ಹೊಡೆದಾಡಿಕೊಳ್ಳುವುದು ಯಾವ ನ್ಯಾಯವು? ಪ್ರತಿನಿಧಿಗಳನ್ನು ಆರಿಸಲು ಸೇರಿದ ಸಭೆಯಲ್ಲಿ ಹೊಡೆದಾಟ! "ತರುವೇ ಪಣ್ಣಳ ಮೆಲ್ಲ' ಎಂಬ ಗಾದೆಯು ಮನಸ್ಸಿಗೆ ಹೊಳೆಯುವದಲ್ಲವೇ? ಮುಂಬರುತನಕ್ಕೆ ಅನೇಕರು ಇರಬಹುದು ಆದರೆ ಮತ್ಸರವೇತಕ್ಕೆ? ಇಬ್ಬರ ಜಗಳ ಮೂರನೆಯವನಿಗೆ ಲಾಭವಲ್ಲವೇ? ಮೊನ್ನೆ ನಡೆದ ವಿಷಯವನ್ನು ನೋಡಿ ಸರಕಾರವು ಹಿಗ್ಗಿಹಿಗ್ಗಿ ನಗುತ್ತಿರಬಹುದು ನಮ್ಮ ಭವಿಷ್ಯವನ್ನು ನಾವೇ ಕೆಡಿಸಿಕೊಂಡಂತೆಯಲ್ಲವೇ? ಶ್ರೀಮಾನ್ ಶ್ರೀನಿವಾಸಯ್ಯಂಗಾರರು ಅಮ್ಮತ್ತಿಯಲ್ಲಿ ಹೇಳಿದ ಮಾತುಗಳು ಜ್ಞಾಪಕವಿದೆಯೋ? ಶ್ರೀಮಾನ್ ಸತ್ಯಮೂರ್ತಿಯವರು ಸೋಮವಾರಪೇಟೆಯಲ್ಲಿ ಹೇಳಿದ ಬುದ್ಧಿವಾದಗಳು ಗೆತ್ತಿದೆಯೇ? ಅದನ್ನು ಮನಸ್ಸಿಗೆ ತಂದುಕೊಂಡಿದ್ದರೆ ಮೊನ್ನೆ ನಡೆದ ಗಲಾಟೆ ಯಾವುದೂ ಜಾಡಿತವಾಗಿ ನಡೆಯುತ್ತಿರಲಿಲ್ಲ ಅದಷ್ಟು ಪ್ರಯತ್ನ ಮಾಡಿ ಕೌನ್ಸಿಲ್ ಪ್ರಸಿಡೆಂಟ್ ತನವನ್ನೂ, ಆಡಳಿತದ ಅಧಿಕಾರವನ್ನೂ ದೇಶದ ಪ್ರತಿನಿಧಿಗಳೇ ಹೊಂದಿಕೊಳ್ಳಬೇಕೆಂದೂ, ಇಲ್ಲದಿದ್ದರೆ ದೇಶದ ಮೊರೆಯು "ನೀರಿನ ಮೇಲೆ ಮಾಡಿದ ಹೋಮ" ದ ಹಾಗೆ ಎಂದೂ ಅವರು ಒತ್ತಿ ಒತ್ತಿ ಹೇಳಲಿಲ್ಲವೇ? ಒರೇ ಮೆಂಬರುತನಕ್ಕೆ ಇಷ್ಟು ಹೊಡೆದಾಟವಾದರೆ ಪ್ರೆಸಿಡೆಂಟ್ ತನಕ್ಕೆ ಆಗಬಹುದಾದ ಹೆಚ್ಚಿನ ಮಲ್ಲಯುದ್ಧಗಳನ್ನು ವಿವರಿಸಲು ಯಾರಿಗೆ ತಾನೆ ಸಾಧ್ಯ "ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ" ಎಂಬ ಗಾದೆಯು ಈಗ ಕಾಣುತ್ತಿ ಸ್ಥಿತಿಯು ಹೀಗಾದ ಮೇಲೆ ಮೆಂಬರುತನವು ರಕ್ತ ಪ್ರಾಣಗಳ ಚೆಲ್ಲಾಟದಿಂದ ಆರಿಸುವಂತಾದರೆ ಮುಂದೆ ಗತಿಯೇನು? ಈಗಿರುವ ಕೌನ್ಸಿಲು ಸಹ ನಮ್ಮ ಕೈತಪ್ಪಿ ಹೋಗುವುದಲ್ಲವೇ? ಕೊಡಗಿನಲ್ಲಿ ಪಾರ್ಟಿ ಸಿಸ್ಟಂ (Party System) ದಿನೇ ದಿನೇ ವೃದ್ಧಿಗೊಳ್ಳುತ್ತಿದೆ ನ್ಯಾಯವಾದ (ಅಂದರೆ ದೇಶದ ಉದ್ಧಾರವನ್ನೇ ಮುಖ್ಯವಾಗಿಟ್ಟುಕೊಂಡು ಈ ವಿಷಯವಾಗಿ ಬರುವ ತರಾವುಗಳಿಗೆ ಕೌನ್ಸಿಲಿನಲ್ಲಿ ಒಗ್ಗಟ್ಟಿನಿಂದ ಸಮ್ಮತಿ ಕೊಡುತ್ತಾ ಇರುವುದು) ಪಾರ್ಟಿ ಸಿಸ್ಟಂ ಅವಶ್ಯವಾಗಿ ಇರಬೇಕು ಪ್ರಜೆಗಳ ಸ್ವಾತಂತ್ರ್ಯವನ್ನು ಕಾಪಾಡಲು. ಇದು ಅತಿ ಅವಶ್ಯ ಪಾರ್ಟಿ ಸಿಸ್ಟಂನ್ನಿನ ಮಹತ್ವವನ್ನು ಇಂಗ್ಲಿಷ್ ಜಾತಿಯವರು ಒಪ್ಪಿದವನ್ನು ಚೆನ್ನಾಗಿ ಬಲ್ಲನು. ಆದರೆ ಕೊಡಗಿನ ಪಾರ್ಟಿ ಸಿಸ್ಟಮನ್ನು ನೋಡಿದರೆ ದುಃಖವಾಗುವುದು. ಕೊಡಗಿನ ಪಾರ್ಟಿಗಳಲ್ಲಿ ಮತ್ಸರವೇ ಮುಖ್ಯ ಉದ್ದೇಶವಾಗಿದೆ ಎಂದು ಮೊನ್ನೆ ನಡೆದ ವಿಷಯದಿಂದ ತಿಳಿದು ಬರುವುದು.

ಕೊಡಗು ಉದ್ಧಾರವಾಗಬೇಕಾದರೆ ಬೇರೆ ದೇಶಗಳೊಂದಿಗೆ ತನ್ನನ್ನು ಎತ್ತಿ ಹಿಡಿದುಕೊಳ್ಳಬೇಕೆಂದಿದ್ದರೆ ತಾನು ಸಹ ಹಿಂದೂದೇಶದಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಕದನದಲ್ಲಿ ತನ್ನ ಪ್ರಯತ್ನವನ್ನು ಮಾಡಿ ಸದ್ಯದಲ್ಲೇ ಸಿಕ್ಕಬಹುದಾದ ಸ್ವಾತಂತ್ರ್ಯ ಫಲವನ್ನು ಸೇವಿಸಬೇಕಾದರೆ ಈ ತರಹದ ಹೇಸಿಗೆ ಮಾರ್ಗವನ್ನು ಬಿಟ್ಟು ರಾಜ ಮಾರ್ಗವಾದ ಸ್ನೇಹ, ಒಗ್ಗಟ್ಟು, ವಿಶಾಲ ದೃಷ್ಟಿಯನ್ನು ಹಿಡಿಯಬೇಕು

ಆರ್. ಎನ್. ಎಸ್.

ಸಹಕಾರ ಸಂಘಗಳ ಬೆಳವಣಿಗೆ

(ಮುಂದುವರಿದದ್ದು)

ಪಶುವರ್ಧಕ ಸಂಘ.

ನಮ್ಮ ರೈತಾವಳಿಯ ಆರೋಗ್ಯದ ಹೀನ ಸ್ಥಿತಿಗೆ ದನಕರುಗಳು ಕಡಿಮೆಯಾಗಿರುವುದೇ ಕಾರಣವಾಗಿದೆ ನಮ್ಮ ದೇಶದ ದನಗಳು ಬೇರೆ ದೇಶದ ಕುರಿಗಳನ್ನು ಹೋಲುತ್ತವೆ ದೇಶದಲ್ಲೆಲ್ಲಾ ಹಾಲಿಲ್ಲವೆಂಬ ಕೂಗು ಕೇಳಬರುತ್ತದೆ. ಹಾಲನ್ನು ಕಾಣದ ಸಾವಿರಾರು ಮಕ್ಕಳಿರಬಹುದು ಹಾಲು ಮತ್ತು ಬೆಣ್ಣೆಯನ್ನು ಸರಿಯಾಗಿ ಸೇವಿಸದ್ದರಿಂದ ನಾವೆಲ್ಲರೂ ಹೀಗೆ ಬಲಹೀನರಾಗಿದ್ದೇವೆ ಕುರಿಗಳ ಹಾಗೆ ಇರತಕ್ಕ ಕಂಗಾಲಾದ ಎತ್ತುಗಳಿಂದ ಯಾವ ತರದ ವ್ಯವಸಾಯವಾಗಬಹುದೆಂದು ನೀವೇ ಊಹಿಸಿಕೊಳ್ಳಿ. ಒಳ್ಳೇ ಮೇವನ್ನು ಹಾಕಿ ದೊಡ್ಡ ಜಾತಿಯ ದನಗಳನ್ನು ಸಾಕಿದರೆ ನಮ್ಮ ವ್ಯವಸಾಯಕ್ಕೆ ಮತ್ತು ಹಾಲು ಬೆಣ್ಣೆಗೆ ಯಾವ ತೊಂದರೆಯೂ ಇರಲಾರದು ಅಲ್ಲದೆ ಜನರೆಲ್ಲರೂ ಒಗ್ಗಟ್ಟಾಗಿ ದೊಡ್ಡ ರೋಗದಿಂದ ವರ್ಷಂಪ್ರತಿ ಸಾಯುತ್ತಿರುವ ಸಾವಿರಾರು ದನಗಳನ್ನು ಪಶುವೈದ್ಯ ಚಿಕಿತ್ಸೆಯಿಂದ ಕಡಿಮೆಮಾಡಬಹುದು ನಮ್ಮ ನೆರೆಯಾದ ಮದರಾಸು ಮತ್ತು ಮೈಸೂರಲ್ಲಿರುವ ಪಶುವರ್ಧಕ ಮತ್ತು ಹಾಲಿನ ಸಂಘಗಳನ್ನು ಇಲ್ಲಿಯೂ ಸ್ಥಾಪನೆ ಮಾಡಿದರೆ ಹೆಚ್ಚಿನ ಪ್ರಯೋಜನವಾಗಬಹುದು.

ಲಂತಾನ ನಿರ್ಮೂಲ ಸಂಘಗಳು

ಲಂತಾನದ ಹಾವಳಿಯಿಂದ ಎಷ್ಟು ಕೆಡಕುಂಟಾಗಿದೆ ಮತ್ತು ಈಗಲೂ ಅದರ ದೆಸೆಯಿಂದ ಎಷ್ಟು ಕಷ್ಟಪಡುತ್ತಿದ್ದೇವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಬಾಣೆ ಮತ್ತು ಮನೆಯ ಹಿತ್ತಲುಗಳಲ್ಲಿ ಲಂತಾನವು ತುಂಬಿ ಹೋಗಿ ದನಕರುಗಳಿಗೆ ಮೇವಿಲ್ಲದಂತೆ ಮಾಡಿರುತ್ತೆ. ಅದರ ಮಧ್ಯದಲ್ಲಿ ಒಳ್ಳೆ ಜಾತಿಯ ಮರಗಳೂ ಕೂಡ ಬೆಳೆಯುವದಿಲ್ಲ ಮಣ್ಣಿನ ಸತ್ವವೂ ಸಹ ಕೆಲವು ಮಟ್ಟಿಗೆ ಹಾಳಾಗುತ್ತದೆ. ಮಲೇರಿಯಾ ಕಾಯಿಲೆಗೆ ಇದೂ ಒಂದು ದೊಡ್ಡ ಕಾರಣವೆಂದು ಹೇಳಬಹುದು ಇದನ್ನು ಪೂರ್ತಿ ನಿರ್ಮೂಲ ಮಾಡದ ಹೊರತು ದೇಶಕ್ಕೆ ಒಳ್ಳೆಯದಾಗಲಾರದು ಆದುದರಿಂದ ಇಲ್ಲಿಯೂ ಲಂತಾನ ನಿರ್ಮೂಲ ಸಂಘಗಳನ್ನೇರ್ಪಡಿಸಿ ಒಗ್ಗಟ್ಟಿನಿಂದ ನಿರ್ಮೂಲ ಮಾಡಬೇಕಾಗಿದೆ.

ಒಟ್ಟಾಗಿ ಖರೀದಿಸುವ ಮತ್ತು ಮಾರುವ ಸಂಘಗಳು

ರೈತಾವಳಿಯು ಬತ್ತ ಧಾನ್ಯವನ್ನೂ ಮತ್ತು ಇತರ ಸಾಮಗ್ರಿಗಳನ್ನೂ ಬೆಳೆಸತಕ್ಕವರೂ, ಮಾರುವವರೂ, ಕೊಳ್ಳುವವರೂ ಆಗಿರುತ್ತಾರೆ ಇಂಡಿಯಾದಲ್ಲಿರುವ ಪ್ರತಿಯೊಬ್ಬ ರೈತನೂ ಸಹ ಬರೇ ಬೆಳೆಸುವವನು ಮಾತ್ರವಲ್ಲದೆ ಮಾರುವವನೂ ಮತ್ತು ಕೊಳ್ಳುವವನೂ ಆಗಿರುತ್ತಾನೆ ಆದರೆ ಯಾವನೊಬ್ಬ ರೈತನು ಈ ಕೆಲಸಗಳನ್ನು ಸರಿಯಾಗಿ ಮಾಡದೆ ಇರುವುದೇ ಅವನ ದುರವಸ್ಥೆಗೆ ಎರಡು ಕಾರಣವಾಗಿದೆ ಇಲ್ಲಿನ ರೈತರು ಬೆಳೆದ ಅಲ್ಪ ಸ್ವಲ್ಪ ವಸ್ತುವನ್ನು ಅಲ್ಲಲ್ಲಿ ಸಣ್ಣ ಸಣ್ಣ ಸಾಹುಕಾರರಿಗೆ ಮಾರಿಬಿಡುತ್ತಾರೆ. ಆದುದರಿಂದ ಅವರು ಬೆಳೆದ ಧಾನ್ಯಗಳಿಗೆ ಸರಿಯಾದ ಬೆಲೆ ಸಿಕ್ಕಲಾರದು ಪ್ರತಿಯೊಬ್ಬ ರೈತನೂ ಪ್ರತ್ಯೇಕ ಪ್ರತ್ಯೇಕವಾಗಿರುವವರ ಬದಲು ಕೆಲವು ಒಗ್ಗಟ್ಟಾಗಿ ಬೆಳೆಸಿದ್ದನ್ನು ಹೊರಗಿನ ದೊಡ್ಡ [illegible] ರುಗಳಲ್ಲಿ ಮಾರಿದರೆ ಒಳ್ಳೆಯ ಲಾಭ ಪಡೆಯಬಹುದು [illegible] ವು ಹಿಂದಕ್ಕೆ ಬರುವಾಗ ದೊಡ್ಡ ವರ್ತಕರುಗಳಿಂದ [illegible] ಖರ್ಚಿಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ಸಗಟಾಗಿ [illegible] ಯಕ್ಕೆ ತಂದು ಮೆಂಬರುಗಳಿಗೆ ಹಂಚಬಹುದು ಈ [illegible] ಯ ಸಂಘಗಳನ್ನು ಬೇರೆ ಬೇರೆ ದೇಶಗಳಲ್ಲಿ ಮಾಡಿ ಜನ [illegible] ಗಳ ಅನುಕೂಲಕ್ಕೆ ಬಂದಿರುವರು ನಾವು ಬೆಳೆದ ಸಾಮಾನುಗಳನ್ನು ಒಳ್ಳೆಯ ಕ್ರಯಕ್ಕೆ ಮಾರಬೇಕು ನಮಗೆ [illegible] ಕಾದ ಸಾಮಾನುಗಳನ್ನು ಸುಲಭ ಕ್ರಯಕ್ಕೆ ಕೊಂಡು ತರಬೇಕು ಈ ರೀತಿ ನಡೆಯುವದರಿಂದ ಬಡ ರೈತರಿಗೆ ಹೆಚ್ಚು ಪ್ರಯೋಜನವಾಗಬಹುದು

ಮಿತವ್ಯಯದ ಸಂಘಗಳು.

ಸಹಕಾರದ ಒಂದನೇ ತತ್ವವು "ಮಿತವ್ಯಯ' [illegible] ಈ ವಿಷಯದಲ್ಲಿ ನಮ್ಮ ದೇಶದಲ್ಲಿ ಈ ವರೆಗೆ ಏನೂ [illegible] ಯುವದಿಲ್ಲ. ಅನಾವಶ್ಯಕವಾದ ಖರ್ಚನ್ನು ಕಡಿಮೆ [illegible] ವ ವಿನಃ ಬಡವನೊಬ್ಬ ಮನುಷ್ಯನ ಆರ್ಥಿಕ ಸ್ಥಿತಿ ಸು[illegible] ಧಾರಿಸಲಾರದು ಆದುದರಿಂದ ಸಂಘಗಳಿಗೆ ಮೆಂಬರುಗಳಾ[illegible] ಗಿರುವ ಸಹಾಯವದರಲ್ಲಿ ಅವಶ್ಯರಾಗಿದ್ದಾರೆಯೇ [illegible]

ವ್ಯಯ ಮತ್ತು ಸ್ವಾವಲಂಬನವನ್ನು ಹೆಚ್ಚಾಗಿ ಅಭ್ಯಾಸಿಸುವಂತೆ ತೋರುವದಿಲ್ಲ. ಮಿತವ್ಯಯದ ಹೆಚ್ಚಿನ ಭಾಗದ ಕೆಲಸಗಳ ಮಹಿಳೆಯರು ವಹಿಸಿಕೊಳ್ಳಬೇಕಾಗಿದೆ. ಮನೆಯ ಆಡಳಿತವನ್ನು ವಹಿಸಿರತಕ್ಕ ಗೃಹಿಣಿಯರು ಖರ್ಚಿನ ಕೆಲವು ಭಾಗಗಳನ್ನು ಕಡಿಮೆಮಾಡಿ ಆ ಹಣವನ್ನು ಉಳಿಸಬೇಕು. ಪಂಜಾಬು ಮತ್ತು ಬಂಗಾಳದಲ್ಲಿ 'ಮಿತವ್ಯಯದ ಸಂಘಗಳನ್ನು ಸ್ಥಾಪನೆಮಾಡಿ ತುಂಬಾ ಪ್ರಯೋಜನ ಹೊಂದಿರುತ್ತಾರೆ. ಪ್ರತಿ ಮನೆಯಲ್ಲಿ ಒಂದೊಂದು 'ಅಪತ್' ಧನದ ಪೆಟ್ಟಿಗೆಯನ್ನು ಇಟ್ಟುಕೊಂಡು ಅದರಲ್ಲಿ ತಮ್ಮ ಉಳಿಕೆಯ ಹಣವನ್ನು ಅಲ್ಪಸ್ವಲ್ಪವಾದರೂ ಹಾಕುತ್ತಾ ಬರಬೇಕು. ನಮ್ಮ ದೇಶದ ಕೆಲವು ಭಾಗಗಳಲ್ಲಿ 'ಮಿತವ್ಯಯ'ದ ಸಂಘಗಳನ್ನು ಸ್ಥಾಪಿಸಿ ಮಹಿಳೆಯರು ಹೆಚ್ಚಿನ ತೊಂದರೆಯನ್ನು ತೆಗೆದುಕೊಂಡರೆ ದೇಶಕ್ಕೆ ತುಂಬಾ ಪ್ರಯೋಜನವಾಗುವುದು.

ಭಂಡಾರ ಸಂಘಗಳು.

ನಮ್ಮ ದೇಶದಲ್ಲಿರುವ ಸ್ಟೋರ್ ಸಂಘಗಳ ಮಾದರಿಯ ಇನ್ನೂ ಹೆಚ್ಚಿನ ಸಂಘಗಳನ್ನು ಸ್ಥಾಪಿಸಿದರೆ ತುಂಬಾ ಪ್ರಯೋಜನವಾಗಬಹುದು.

ಮನೆ ಕಟ್ಟಿಸುವ ಸಂಘಗಳು.

ನಮ್ಮ ದೇಶದ ? ಪಟ್ಟಣಗಳಲ್ಲಿ ವಾಸಕ್ಕೆ ಯೋಗ್ಯವಾದ ಮನೆಗಳಿಲ್ಲದೆ ಕಷ್ಟಪಡುತ್ತಿರುವುದು ನಮಗೆಲ್ಲರಿಗೂ ತಿಳಿದ ವಿಷಯವಾಗಿದೆ. ಕೆಲವು ವೇಳೆ ಮನೆಗಳು ದೊರಕುವದು ದುರ್ಲಭವಾಗಿದೆ. ಅದರಲ್ಲಂತೂ ಉದ್ಯೋಗಸ್ಥರ ಗೋಳು ಹೇಳತೀರದು. ಪಟ್ಟಣಗಳಲ್ಲಿ ಅನೇಕ ಸ್ಥಳಗಳಲ್ಲಿ ಖಾಲಿ ಸ್ಥಳಗಳಿರುತ್ತವೆ. ಒಪ್ಪಿದರಲ್ಲೇ ಅನೇಕ ಸ್ಥಳಗಳಲ್ಲಿ ಮನೆ ಕಟ್ಟಿಸಲು ಸಾಧ್ಯವಿಲ್ಲ. [illegible] ರೀತಿಯ ಕೆಲಸಗಳನ್ನು ಮಾಡಬಹುದು. [illegible] ದೊಡ್ಡ ದೊಡ್ಡ ಪಟ್ಟಣಗಳಲ್ಲೆಲ್ಲಾ ಮನೆ ಕಟ್ಟಿಸುವ ಸಂಘಗಳನ್ನು ಪ್ರಾರಂಭಿಸಿ ಒಳ್ಳೆಯ ಮನೆಗಳನ್ನು ಕಟ್ಟಿಸುತ್ತಾರೆ. ಅದೇ ತತ್ವವನ್ನು ಇಲ್ಲಿಯೂ ಅನುಸರಿಸಿ ಸದ್ಯಕ್ಕೆ ಮಡಿಕೇರಿ ಮತ್ತು ವೀರಾಜಪೇಟೆಯಲ್ಲಿ ಅಂಥ ಸಂಘಗಳನ್ನು ಸ್ಥಾಪಿಸುವುದು ಉತ್ತಮವೆಂದು ನನಗೆ ಕಾಣುತ್ತದೆ.

ವಿದ್ಯಾರ್ಥಿಯರ ಸಹಕಾರ ಸಂಘಗಳು.

ದೇಶದ ಮುಂದಿನ ಅಭಿವೃದ್ಧಿಯೆಲ್ಲವೂ ಈಗಿನ ಬಾಲಕರಲ್ಲಿದೆ ಎಂಬುದು ನಮಗೆಲ್ಲರಿಗೂ ತಿಳಿದ ವಿಷಯವಾಗಿದೆ. ಆದುದರಿಂದ ನಾವು ಯಾವ ಮಹತ್ಕಾರ್ಯಗಳನ್ನು ಮಾಡಬೇಕೆಂದು ನಿಶ್ಚಯಿಸಿದರೂ ಅದರ ಬೀಜವನ್ನು ಈಗಿನ ಬಾಲಕರಲ್ಲಿ ಬಿತ್ತಬೇಕಾಗಿದೆ. ಸಹಕಾರವು ನಮ್ಮಲ್ಲಿ ವೃದ್ಧಿಯಾಗಬೇಕಾದರೆ ಅದು ಈಗಿನ ಬಾಲಕರಿಂದಾಗಬೇಕಾಗಿದೆ. ಸಹಕಾರವು ನಮ್ಮ ದೇಶದಲ್ಲಿ ವೃದ್ಧಿಯಾಗಬೇಕಾದರೆ ಈಗಿನ ಎಳೆ ಬಾಲಕರಲ್ಲಿ ಅದರ ಬೀಜವನ್ನು ಬಿತ್ತಬೇಕಾಗಿದೆ. ಆದಕಾರಣ ಸಹಕಾರ ತತ್ವಗಳನ್ನು ಈಗಿನ ಶಾಲೆಗಳಲ್ಲಿ ಇತರ ಪಾಠಗಳಂತೆಯೇ ಕಲಿಸಬೇಕಾಗಿದೆ. ಪಾಠ ಹೇಳಿ ಕಲಿಸುವದಕ್ಕಿಂತಲೂ ದೊಡ್ಡ ಶಾಲೆಗಳಲ್ಲಿ ಮಕ್ಕಳಿಗೆ ಬೇಕಾಗುವ ಸಾಮಾನುಗಳನ್ನು ಒದಗಿಸುವ ಸಂಘಗಳನ್ನು ಮಾಡಿ ಕಾರ್ಯದಿಂದಲೇ ಅವರಿಗೆ ಸಹಕಾರದ ತತ್ವಗಳನ್ನು ಕಲಿಸಬಹುದು. ಈಗ ಸದ್ಯಕ್ಕೆ ವೀರಾಜಪೇಟೆ, ಮಡಿಕೇರಿ ಮತ್ತು ಕೂಡಿಗೆ [illegible] ಹೈಸ್ಕೂಲುಗಳಲ್ಲಿ ಈ ಮಾದರಿಯ ಸಂಘಗಳನ್ನು ಮಾಡಬಹುದು. ಇಂಡಿಯಾ ದೇಶದ ಅನೇಕ ಹೈಸ್ಕೂಲುಗಳಲ್ಲಿಯೂ, ಕಾಲೇಜುಗಳಲ್ಲಿಯೂ ಇಂತಹ ಸಂಘಗಳನ್ನು ಸ್ಥಾಪನೆ ಮಾಡಿರುತ್ತಾರೆ.

ಈ ಮೇಲೆ ಹೇಳಿದ ಹತ್ತು ವಿಷಯಗಳನ್ನು ಸರಿಯಾಗಿ ನಡೆಸಿದರೆ ನಮ್ಮ ದೇಶವು ಸುಭಿಕ್ಷವಾಗುವದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇಷ್ಟು ಮಾತ್ರವಲ್ಲದೆ ಬೇರೆ ಅನೇಕ ಮಾದರಿಯ ಸಂಘಗಳನ್ನು ಮಾಡಲಿಕ್ಕಿದೆ. ಈ ಮೈಕಿ ಮೇಲೆ ಹೇಳಿದ 10 ವಿಷಯಗಳನ್ನಾದರೂ ಸರಿಯಾಗಿ ನಡೆಸಿದರೆ ನಮ್ಮ ದೇಶವು ಬಹಳ ಒಳ್ಳೆಯ ಸ್ಥಿತಿಗೆ ಬರುವದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಮಹನೀಯರೇ, ಜಾತಿ ಮತ, ಪಂಗಡ ಭೇದವನ್ನು ತೊರೆದ ಈ ಪವಿತ್ರವಾದ ಸಹಕಾರವನ್ನು ಎಲ್ಲರೂ ಸ್ಮರಣೆಗೆ ತಂದು ದೇಶದಲ್ಲಿ ಒಗ್ಗಟ್ಟು ಮತ್ತು ಅನ್ಯೋನ್ಯ ಪ್ರೀತಿಯನ್ನು ಬೆಳೆಸಿ ಸಂತೋಷಭರಿತರಾಗಬೇಕಾಗಿ ನಾನು ದೇವರಲ್ಲಿ ಪ್ರಾರ್ಥಿಸುವವನಾಗಿದ್ದೇನೆ.

ಬಂದೂಕುಗಳು.

ಇವು ವಿಲಾಯಿತಿಯಲ್ಲಿ ತಯಾರಾದವು. ಇವುಗಳನ್ನು ಮನೆಯಲ್ಲಿಡಲು ಲೈಸನ್ಸು ಪಡೆಯಬೇಕಾಗಿಲ್ಲ. ಯಾರು ಬೇಕಾದರೂ ಯಾವ ಭಯವೂ ಇಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗಬಹುದು. ಇವುಗಳಲ್ಲಿ ತಪ್ಪುವಿಲ್ಲದೆ ಶಿಕಾರಿ ಮಾಡಬಹುದು. 100 ರವೆಗಳ ಸಹಿತ ಬಂದೂಕು 1ಕ್ಕೆ 5—4—0 ಪೆಟ್ಟಿಗೆ ರವೆ ಬೇಕಾದರೆ 150 ರವೆಗಳಿರುವ ಪಟ್ಟಿ 1ಕ್ಕೆ 1—10—0.

ವಿಳಾಸ —ಕೆ ನಾಥಮುನಿ ಅಂಡ್ ಸನ್ಸ್,

52—23 ಪೋ ನಂ 243 ಮದರಾಸು.

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕ್ಯಾಟಲಾಗ ಒಡನೆ ಈಗಿನ ಕ್ರಯ ಭಾಗದ ಪಟ್ಟಿಯನ್ನು ಕಳುಹಿಸಲಾಗುವುದು.

ಜೋಡು	ನಳಿಗೆಯ	ತೋಟದ	ಬಂದೂಕುಗಳು	ರು.	1?? ರಿಂದ	ರೂ	2750 ರ	ವರೆಗೆ.
ಒಂಟಿ	,,	,,	,,	,,	35	,,	,,	950	,,
ಜೋಡು	,,	,,	ಕೋವಿಗಳು	,	50	,,	,	1350	,,
ಒಂಟಿ	,,	,	,,	,,	35	,,	,,	275	,,
ಜೋಡು	ನಳಿಗೆಯ	ಕೋವಿ	,,	,,	45	,,	,	135	,
ಒಂಟಿ	,,	,	,,	,,	30	,,	,,	80	,,
ಬ್ರೀಚ್	ಲೋಡಿಂಗ್	ರಿವಾಲ್ವರುಗಳು		,,	35	,,	,,	350	,,
ಪಿಸ್ತೂಲುಗಳು				,,	30	,,	,,	150	,,

ಕಾಡು ಮೃಗಗಳ ಬೇಟೆ ಎರಡು ಬೇಕಿ ಸಮಯದ ಎಲ್ಲಾ ತರದ ರಾತ್ರಿ ಬೆಳಕಿನ ಮತ್ತು ಕೆಲಸಗಳಿಗೆ ಬಹು ಉಪಯೋಗವಾದ ಉತ್ತಮ 'ಸರ್ಚ್ ಲೈಟ್' ಒಂದಕ್ಕೆ ಬೆಲೆ ರೂ. 30. ರವಾನೆಯ ಚಾರ್ಜಿಲ್ಲ.

ಕತ್ತಿಗಳು, ಬಟನ್‌ಗಳು, ತಾಟುಗಳು, ಕತ್ರಿಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,

24—15 210 Abdul Rehman Street, BOMBAY.

ಎಂ. ಎಸ್. ಶಿವಪ್ಪ ಬ್ರದರ್ಸ್.

ಹಾರ್ಡ್‌ವೇರ್ ಎಂಡ್ ಜನರಲ್ ಮರ್ಚೆಂಟ್ಸ್, ಮೈಸೂರು.

೧೯೩೯ನೇ ಇಸವಿಯ ಶಿವಪ್ಪಾಸ್ ಮಾಡಲ್ ಮೈಸೂರು ಕ್ಯಾಲೆಂಡರುಗಳು.

1 ಅನೇಕ ವಿಷಯಗಳನ್ನೊಳಗೊಂಡ ಪರಮೇಶ್ವರ ಮತ್ತು ಮಹಾವಿಷ್ಣು ಲೀಲಾವತಾರವಾದ ದೇವರ ಚಿತ್ರಗಳು 17ನ್ನು ಇಟ್ಟು ಅಂದವಾಗಿ ತಯಾರಿಸಿದ ದೊಡ್ಡ ಸಚಿತ್ರ ಶೀಟು ಕ್ಯಾಲೆಂಡರು	50ಕ್ಕೆ	ರೂ	1 2 0		100ಕ್ಕೆ	ರೂ.	2 0 0
2. 3½"×4½" ಸೈಜಿನ ಪಾಕೆಟ್ ಕ್ಯಾಲೆಂಡರು	25ಕ್ಕೆ	ರೂ.	1 3 0		100ಕ್ಕೆ	ರೂ.	4 12 0
3 5½"×3½" ಸೈಜಿನ ಇಂಗ್ಲಿಷ್ ಪಾಕೆಟ್ ಕ್ಯಾಲೆಂಡರು	12ಕ್ಕೆ	ರೂ.	0 14 0		25ಕ್ಕೆ	ರೂ.	1 11 0
4. ಅನೇಕ ಬಣ್ಣಗಳಿಂದ ರವಿವರ್ಮ ಪೆನ್ಸಿಲ್ಲಿನಲ್ಲಿ ಅಂದವಾಗಿ ಪ್ರಿಂಟಾದ 10"×11" ಸೈಜಿನಲ್ಲಿ ಈಶ್ವರ, ಪಾರ್ವತಿ, ಗಣಪತಿ, ನಂದಿ ಮೇಲಿರುವ ಚಿತ್ರದ ಕ್ಯಾಲೆಂಡರು	1ಕ್ಕೆ	ರೂ	0 3 0		12ಕ್ಕೆ	ರೂ.	1 2 0
5 18"×22" ಸೈಜಿನಲ್ಲಿ ದಪ್ಪ ಅಕ್ಷರದಿಂದ ಪ್ರಿಂಟಾಗಿರುವ ತಿಂಗಳಿಗೆ 1 ಶೀಟಿನಂತೆ ಬರುವ ಆಫೀಸ್ ಕ್ಯಾಲೆಂಡರು	1ಕ್ಕೆ	ರೂ.	0 4 0		12ಕ್ಕೆ	ರೂ.	2 4 0

0—8—0 ಆಣೆ ರವಾನಿಸಿದವರಿಗೆ ಮೇಲ್ಕಂಡ 5 ನಮೂನೆ ಕ್ಯಾಲೆಂಡರನ್ನು ಮಾದರಿಗಾಗಿ ಫ್ರೀ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ದರದಂತೆ ಸಿಗುವ ಕ್ಯಾಲೆಂಡರುಗಳಿಗೆ ಆಗುವ ಪೂರ್ತಿ ಹಣವನ್ನು ರವಾನಿಸಿದರೆ, ಫೋಸ್ಟೇಜ್ ವಗೈರೆ ನಮ್ಮ ವಿಳಾಸಕ್ಕೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಕ್ಯಾಲೆಂಡರನ್ನು ರವಾನಿಸುವುದರಿಂದ ಪೋಸ್ಟೇಜು ದುಬಾರಿಯಾಗುತ್ತಿರುವುದರಿಂದ ವಿ ಪಿ ಮೂಲಕ ರವಾನಿಸಿದರು ಬರತಕ್ಕ ಆರ್ಡರುಗಳಿಗೆ ಕಂಸಿಡರೇಷನ್ ಕೊಡುವುದಿಲ್ಲ.

ಕ್ಯಾಲೆಂಡರುಗಳು ಮುಗಿದ ನಂತರ ಬರತಕ್ಕ ಮನಿಯಾರ್ಡರುಗಳನ್ನು ಹೋದ ಟಪಾಲಿನಲ್ಲಿ ವಾಪಸು ಮಾಡಲಾಗುತ್ತೆ.

ಮನಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್,
ಹಾರ್ಡ್‌ವೇರ್ ವ್ಯಾಪಾರಿಗಳು, ಮೈಸೂರು.

32—30

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ 1 ಪ್ರಕಾರ ರಿಜಿಸ್ಟರಾಗಿದೆ.

	ರೂ
ಷೇರ್ ಬಂಡವಾಳ . .	50,000
ಸೇರಿಬಂದ ಷೇರ್ ಬಂಡವಾಳ — —	20,060
ಬಸೂಲಿಬಂದ ಡೇಪಾಜಿತ —	18,79

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಕಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಡೇಪೋಜಿತಗಳಿಗೆ ಶೇಕಡ ಸಾಲಿಯಾನ ರೂ. 5 0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಡೇಪಾಜಿತಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಕೊಂಗಟ್ಟೀರ ತಪ್ಪಯ್ಯನವರು.

ಸೆಕ್ರೆಟರಿ

ಗಿ ಯನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್

ತಾರೀಖು 1—7—1929.

ಸೂಚನೆ.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡಿದ್ದುದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕಳಿಸಲಾಗಿವೆ. ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಒಪಾಬ್ದಾರಿಕ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ನಾವತಿ ಮೊತ್ತ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.
ಮರನಾಡು—ಮೆ ಕೀಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಮುಂಡೇಪಂಡ ಪೂವಯ್ಯನವರು, (ಖಜಾಂಚಿ ಭಂಡಾರ)
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು
ನಾಪೋಕ್ಲು—ಮೆ. ಟಿ ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ ಒಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಯ್ಯನವರು ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ ಜಿ ಮಾದಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇಡಬೇಕಾದ ಅಮಿತ ಒಪಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮೇನೇಜರ್.

"ಕೊಡಗು" ಮಡಿಕೇರಿ



12 bore Victor Cartridges Rs 10/ Per 100

Mahomedally-Noorbhoy.
ARMS & AMMUNITION MART.
Abdul Rahman Street
52-12 BOMBAY

ನೂತನನಾಡುವ ಪಕ್ಷಿಗಳು.

ಈ ಪಕ್ಷಿಗಳಲ್ಲಿ ಹುಲಿ, ಆನೆ, ಕರಡಿ, ಕುದುರೆ ನಾಯಿ, ಸಿಂಹ ಮುಂತಾದ ಮೃಗಗಳೂ, ಕೋಳಿ, ಗಿಳಿ, ಕಾಗೆ, ಪಾರಿವಾಳ ಮುಂತಾದ ಎಲ್ಲಾ ಜಾತಿಯ ಪಕ್ಷಿಗಳೂ ಇರುತ್ತವೆ. ಇವನ್ನು ನೀರಿನಲ್ಲಿ ಬಿಟ್ಟರೆ ತನ್ನಷ್ಟಕ್ಕೆ ತಾನೇ ಓಡುತ್ತವೆ. ... ಯಾರಿಗೆ ಬೇಕಾದರೂ ... ಇವು ಪೋಸ್ಟ್ ಖರ್ಚು ... 3 ಪಕ್ಷಿಗಳಿಗೆ ಒಂದು ಇಂಗ್ಲಿಷ್ ಸಿಟಿ ಬಾಟಲನ್ನೂ, 6ಕ್ಕೆ ಒಂದು ಇಂಗ್ಲಿಷ್ ಮೇಡ್ ಫೌಂಟನ್ ಪೆನ್ನನ್ನೂ, 12ಕ್ಕೆ 5 ವರ್ಷ ಗ್ಯಾರಂಟಿ ಇರುವ ಒಂದು ಟೈಂಪೀಸನ್ನೂ ಇನಾಮು ಕೊಡುವೆವು. 3 ಪಕ್ಷಿಗಳಿಗೆ ಕಡಿಮೆ ಕಳುಹಿಸಲಾರೆವು.

ವಿಳಾಸ—

ಸಿಟಿ ಪೊಟ್ಟರ್,
108 ಜೈನಾ ಬಜಾರ್,
52—23 ಮದರಾಸು.

New arrivals of Cl

PRICES MODERATE

Popular lines

Morning whiffs 100 s	Rs
Lady love 100 s	,,
Special Planters 100 s	,,
Special Planters 50 s	,,
Catmaran shape 50 s	,

CROCKERY —

Tea sets for 6 persons in at designs @ Rs 12/8/– & 10/8/

Spare cups & saucers @ Anna 10

The Coorg Emporiu

Mercara. General Merchant **Sida**

48—23

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದ

ವನಸ್ಪತಿಗಳ ಅದ್ಭುತ ಮಹಿಮೆ.



ಬಾಲಾರ್ಕಮಧು.

ಇದನ್ನು ಮಕ್ಕಳು ಆನಂದದಿಂದ ಸೇವಿಸುತ್ತಾರೆ. ... ಚಿಕ್ಕ ಮಕ್ಕಳಿಗೆ ಇದನ್ನು ಕೊಡ ... ಬರುವ ... ಮಕ್ಕಳಿಗೆ ... ಶಕ್ತಿಯೂ ದೇಹದಾರ್ಢ್ಯವೂ ... ಕೇವಲ ವೈದ್ಯ ... ಮಾಡದೆ ಒಂದೇ ಒಂದು ಸೀಸೆ ತರಿಸಿಕೊಂಡಲ್ಲಿ ಇದರ ಅದ್ಭುತ ಗುಣವು ತಾನಾಗಿ ತಿಳಿಯುವದು.

ಬೆಲೆ ಸೀಸೆ 1ಕ್ಕೆ ೦—೧೨—೦ ಟ ಖ ೦—೯—೦

M V Prasadika Oushadhalaya
52—3 SHIMOGA Mysore State

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯುನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತವೆ

ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925	296	ಲಕ್ಷ ರೂಪಾಯಿ	1925.	93	ಲಕ್ಷ ರೂಪಾಯಿ
1926	391	,, ,,	1926	106	,, ,,
1927	468	, ,,	1927.	122	,
1928	585	,, ,,	1928	140	,,

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½
1921ರಲ್ಲಿ ,, ,, ,, ,, ,,	1927ರಲ್ಲಿ ,, ,, ,, 25

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಯೊಂದರಲ್ಲಿ ವಿಮೆಗೆ ಆದರಿಂದ ಲಾಭ ಉಂಟಾಗುವುದು. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಯಂ. ವಿ. ಪವಿತ್ರಕೃಷ್ಣ ನಾಯುಡು, ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

52—40

ಇನಾಂ! ಇನಾಂ!

4 ಆಣೆ ಟಪ್ಪಾಲು ಸ್ಟಾಂಪು.

ಕಳುಹಿಸಿದರೆ 372 ಪುಟಗಳುಳ್ಳ, ಬಹಳ ಉಪಯೋಗವಾದ ಮತ್ತು ಸುಂದರವಾದ

1930ನೇ ಇಸವಿಯ

ಡಯರಿ

ವಿಚಿತ್ರವಾಗಿ ಕಳುಹಿಸಲ್ಪಡುವದು ತ್ವರೆ ಮಾಡಿರಿ.

52—16 ಮದನ ಮಂಜರಿ ಫಾರ್ಮಸಿ,
1/94 ಚೀನಾ ಬಜಾರ್, ಮದ್ರಾಸ್.



THE NEW CAR!!

The new model A Ford.

The most economical car in the market
Accellerates 5 to 25 M P H in 8½ seconds
Petrol consumption 20—30 miles per Gallon
Performance 5 to 60 miles per hour in top 40 M P H in second gear

A Wonderful Hill climber!!!

Easy instalment terms if you prefer
For Demonstration & other particulars

Please apply to —

S. Sunder Rau,
Sole Ford Dealer for Coorg.
24—23 MERCARA

Printed & published by P. I. Belliappa, at "Kodagu" Press, Mercara for "Kodagu" Ltd.

"KODAGU" OFFICE MERCARA.

ಕೊಡಗು.

ಸತ್ಯೇನ ಧೊತದಯುಯಾ ವಿದ್ಯಾನೀತಿ ಪ್ರಯುತ್ನತಾ || ಐಕ್ಯಗುಣ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು

ಸಂಪುಟ ೯	ಮಡಿಕೇರಿ, ಸನ್ ೧೯೨೯ನೇ ಇಸವಿ ಡಿಸಂಬರ್ ತಾರೀಕು ೧೩ ನೇ ಶುಕ್ರವಾರ.	ಸಂಚಿಕೆ ೨೭

Telephone – 3145

By Appointment to H. E. The Governor of Madras

Telegrams – "PRECIOUS"

Guarantee of Satisfaction throughout in every order large or small

Brooch

Excellent Quality Cost Designs Moderate Prices

Ice Tumbler

Green Hills, VIRARAJENDRAPET, 7th Decr 26

Sir

I am glad to note that the Jewels have a good finish

(Sd.) Mrs A. B. CHENGAPPA

SUNTICOPPA, Nellore Estate, 7th April 28

Dear Sir,

I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends.

(Sd.) Mrs K. SUBBIAH

MERCARA, 20th May 27

Dear Sir

I am quite satisfied with the Jewels you sent on the 16th instant

(Sd.) Mrs. K. S. CARIAPPA

52—13

Illustrated Catalogue Free on Application.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

'ಬೋರ್ಡ್' ಹುಳದ ಬೆಸಯಿರಾದ ಕಿತ್ತುತೆಗೆದ ... (Mineral) ... ಸಾರಜನಕ (Nitrogenous) ... (Experiment station) ದಲ್ಲಿ ... ಸಾರಜನಕ ...)

ಹೆಚ್ಚಿನ ಮಾಹಿತಿ ... ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ
ಇಂಡಿಯನ್ ಡೆಲಿಗೇಶನ್
ಪೋ. ಬಾ. ನಂ. 469, ಕಲ್ಕತ್ತಾ.

(2) ... ಚಿಲಿಯನ್ ನೈಟ್ರೇಟ್ ಕಮಿಟಿ ...

4—6

Wanted

ALL INDIA CROP INSURANCE & GENERAL DEVELOPMENTS LTD.
Mahabub Mahal Royapettah

Head Office —	MADRAS
Registered Capital—	Six Crores
Paid Up Capital—	54,77,240
Banking agents / Deputy Superintendents	80—8—160
Bank depot clerks	25/—
agents	20—2—40

Applicants should be in a position to subscribe shares of 500/-200/—150/— of the respectively after selection and execute bond as per instructions from Head Office must clearly state their qualifications ... apply to the Head Office or

DEPUTY SUPERINTENDANT,
HAMPANKATTA
MANGALORE

1930ನೇ ಇಸವಿಯ ಪಾಕೆಟ್ ಡೈರಿ ಇನಾಂ!

...

... 1—12—0

52—24

ಏಕೆ ನರಳುತ್ತೀರಿ?

ಕ್ರಯವು ... ಅಂಚೆಖಾಸಲು ...

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ ... ರೋಗಗಳನ್ನು ...

52—1,

ಮದನಮಂಜರಿ ಫಾರ್ಮಸಿ,
1/64 ... ಮದ್ರಾಸು

ಹೊಸ ಸ್ಟಾಕು!

ಬೆಲೆ ಅಗ್ಗ!

ಕೊಡಗು ... ಮಿತಿಯಾಂಕ್ಷ ... ಸ್ಟೋರ್.

...

12—10

ಕೊಡಗು.

ಸನ್ ೧೯೨೯ನೇ ಇಸವಿ

ದಿಸೆಂಬರ್ ತಾ. ೧೩ನೇ ಶುಕ್ರವಾರ.

ಅಬ್ಕಾರಿ ಕಮಿಟಿ.

ಇಡೀ ಹಿಂದುಸ್ಥಾನದ ಎಲ್ಲಿಯಾದರೂ ಒಂದು ಕಡೆ ನಿಷಾ ನಿಷೇಧದ ತತ್ವವನ್ನು ಮೊದಲು ಜಾರಿಗೆ ತರುವಂತಿದ್ದರೆ ಅದು ಕೊಡಗಿನಲ್ಲಾಗಬೇಕೆಂದು ಹೇಳಿದರೆ ತಪ್ಪಾಗಲಾರದು. ಯಾಕೆಂದರೆ—ಬರೇ 1 ಲಕ್ಷ 63 ಸಾವಿರ ಜನ ಸಂಖ್ಯೆ ಇರುವ ಈ ಪುಟ್ಟ ದೇಶದಲ್ಲಿ ಅಬ್ಕಾರಿ ಇಲಾಖೆಯಿಂದ ಸರ್ಕಾರಕ್ಕೇನೇ 3½ ಲಕ್ಷ ರೂಪಾಯಿಗಿಂತ ಹೆಚ್ಚು ಉತ್ಪತ್ತಿ ಬರುತ್ತಿರುವಲ್ಲಿ, ಇಲ್ಲಿಯವರು ಅಮಲು ಪದಾರ್ಥಕ್ಕಾಗಿ ವರ್ಷ ಒಂದಕ್ಕೆ ಹತ್ತು ಲಕ್ಷ ರೂ ಗಿಂತ ಹೆಚ್ಚು ಖರ್ಚು ಮಾಡುತ್ತಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಇಲ್ಲಿಯ ಸರ್ಕಾರದ ಎಲ್ಲಾ ಬಾಬಿನ ಒಟ್ಟು ಉತ್ಪತ್ತಿಯು ಬರೇ 14 ಲಕ್ಷ ರೂ. ಆಗಿರುವಾಗ್ಯೆ 10 ಲಕ್ಷ ರೂಪಾಯಿಯಷ್ಟು ಈ ದುರ್ವ್ಯಸನಕ್ಕಾಗಿ ಜನರಿಂದ ವ್ಯಯಮಾಡಲ್ಪಡುತ್ತಿರುವುದು ಯಾರ ಮನಸ್ಸನ್ನಾದರೂ ಕರಗಿಸದೆ ಇರದು. ಈ ಸಂಗತಿಯು ಇಷ್ಟು ದುಸ್ಥಿತಿಯಲ್ಲಿರುವದಾದರೂ ನಮ್ಮ ಸರ್ಕಾರದವರು ಮಾಡುತ್ತಿರುವದೇನೆಂದು ಸ್ವಲ್ಪ ವಿಚಾರಿಸುವ.

ಜನ ಸಮುದಾಯವನ್ನು ದಿನೇ ದಿನೇ ಬಡತನಕ್ಕೆ ಇಳಿಸುತ್ತಿರುವ ನಿಷಾ ಪದಾರ್ಥದ ಸೇವನೆಯನ್ನು ಕಡಿಮೆ ಮಾಡುವ ಉದ್ದಿಶ್ಯ ಸೇಂದಿ, ಸಾರಾಯಿ ಅಂಗಡಿಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತಾ ಬರಬೇಕೆಂದೂ, ಅಮಲು ಪದಾರ್ಥ ಮಾರಾಟದ ಸಮಯವನ್ನು ಕಡಿಮೆ ಮಾಡಬೇಕೆಂದೂ, ಅಂಗಡಿಗಳನ್ನು ಜನಸ್ತೋಮವು ಸೇರುವ ಕಡೆಯಿಂದ ದೂರವಿಡಬೇಕೆಂದೂ ಮುಂತಾಗಿ ದೇಶದವರು ಜಮಾಬಂದಿ ಸಭೆಗಳ ಮೂಲಕವೂ, ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿಯೂ ಹಲವು ವರ್ಷಗಳಿಂದ ಎಡೆಬಿಡದೆ ಹೋರಾಡುತ್ತಿರುವದು ಸರ್ಕಾರಕ್ಕೆ ತಿಳಿಯದ್ದಲ್ಲ. ಹೀಗೆ ಹೋರಾಡುವವರನ್ನು ಸಮಾಧಾನಗೊಳಿಸುವುದಕ್ಕೋ ಏನೋ ಸರ್ಕಾರದವರು ಕಳೆದ ವರ್ಷ ಎಕ್ಸೈಸ್ ಎಡ್ವೈಸರಿ ಕಮಿಟಿಯೊಂದನ್ನು ನೇಮಿಸಿದರು. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಅಧ್ಯಕ್ಷರಾಗಿರುವ ಈ ಕಮಿಟಿಯಲ್ಲಿ ಪೊಲೀಸು ಡೆಪ್ಯುಟಿ ಸುಪರಿಂಟೆಂಡೆಂಟರು, ಇಬ್ಬರು ಸುಬೇದಾರರುಗಳು, ಮಡಿಕೇರಿ ಮತ್ತು ವೀರರಾಜಪೇಟೆ ಮುನ್ಸಿಪಾಲಿಟಿಗಳ ಪ್ರೆಸಿಡೆಂಟರುಗಳು, ಡಿಸ್ಟ್ರಿಕ್ಟ್ ಬೋರ್ಡ್ ವೈಸ್ ಪ್ರಸಿಡೆಂಟರು ಒಬ್ಬ ಯೂರೋಪಿಯನ್ ಪ್ಲಾಂಟರು ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಒಬ್ಬ ಚುನಾಯಿತ ಪ್ರತಿನಿಧಿಯವರು ಮೆಂಬರುಗಳಾಗಿರುವರು. ಇದು ಸರ್ಕಾರಕ್ಕೆ ಬರೇ ಸಿಫಾರಸ್ಸು ಮಾಡುವ ಕಮಿಟಿಯಾಗಿದೆ. ಇಂಥಾ ಕಮಿಟಿಯಿಂದ ಹೆಚ್ಚಿನ ಪ್ರಯೋಜನವಾದೀತೆಂದು ದೇಶದವರು ಆಶಿಸಲು ಎಡೆಯಿಲ್ಲ. ಉದ್ಯೋಗಸ್ಥರಲ್ಲದ, ಸಾಧ್ಯವಾದಷ್ಟು ಚುನಾಯಿತ ಮೆಂಬರುಗಳೇ ಇರಬೇಕಾದ ಈ ಕಮಿಟಿಯಲ್ಲಿ ಹೆಚ್ಚು ಕಡಿಮೆ ಅರ್ಧದಷ್ಟು ಉದ್ಯೋಗಸ್ಥ ಮೆಂಬರುಗಳೂ, ವಾಡಿಕೆಯಾಗಿ ಸರ್ಕಾರಕ್ಕೆ ಒತ್ತಾಸೆಯಾಗಿರುವ ಒಬ್ಬ ಯೂರೋಪಿಯನ್ ಪ್ಲಾಂಟರೂ ಇರುವದು ಎಂದೂ ತೃಪ್ತಿಕರವಲ್ಲ. ಎರಡು ಮುನ್ಸಿಪಾಲಿಟಿಗಳನ್ನು ಬಿಟ್ಟು ಇಡೀ ದೇಶಕ್ಕಾಗಿ ಇಬ್ಬರು ಮೆಂಬರುಗಳು ಮಾತ್ರ ಈ ಕಮಿಟಿಯಲ್ಲಿರುವಾಗ್ಯೆ ಈ ಪ್ರಾಂತ್ಯದಲ್ಲಿ ಬರೇ ನೂರಕ್ಕೆ ಎರಡ ಯೂರೋಪಿಯನ್ ಪ್ಲಾಂಟರುಗಳ ಪ್ರತಿನಿಧಿಯೊಬ್ಬರು ಇರುವದು ಯಾವ ನ್ಯಾಯವೋ ತಿಳಿಯದು. ಇವರು ಸರ್ಕಾರಿ ತತ್ವಕ್ಕನುಗುಣವಾಗಿ ಸರ್ಕಾರದ ಉತ್ಪತ್ತಿಗೆ ಹೆಚ್ಚು ಗಮನ ಕೊಡುವರೇ ಹೊರತು, ಜನರ ಅಭಿವೃದ್ಧಿಯನ್ನು ಸಾಧಿಸಲು ಯತ್ನಿಸಲಾರರು ಎಂದರೆ ತಪ್ಪಾಗಲಾರದು. ಇದಕ್ಕೆ ಉದಾಹರಣೆಯಾಗಿ, 1870 ರಿಂದ 1928ರ ವರೆಗೂ ಸರ್ಕಾರದವರು ಕೊಡಗಿನಲ್ಲಿ ಸಾರಾಯಿ ಅಂಗಡಿಗಳನ್ನು ಕಡಿಮೆ ಮಾಡುತ್ತಾ ಬಂದಿದ್ದರೂ ಕೂಡ ಈ ಕಮಿಟಿಯು ಸ್ಥಾಪಿತವಾದ ಮೇಲೆ ನಾಲ್ಕು ಹೊಸ ಅಂಗಡಿಗಳನ್ನು ತೆರೆಯಬೇಕೆಂದು 1928ನೇ ನವಂಬರ್ನಲ್ಲಿ ಇವರು ಸಿಫಾರಸ್ಸು ಮಾಡಿದರು. ಅದರಂತೆಯೇ, ಸರ್ಕಾರದವರು ಕಳೆದ ಏಪ್ರಿಲಿನಲ್ಲಿ ಹೆಚ್ಚಿಗೆ ನಾಲ್ಕು ಅಂಗಡಿಗಳನ್ನು ತೆರೆದರು.

ಹೀಗೆ ಹೊಸ ಅಂಗಡಿಗಳನ್ನು ತೆರೆಯುವ ಮುಂಚೆ ಕೌನ್ಸಿಲಿನಲ್ಲಿ ಕೆಲವು ಚುನಾಯಿತ ಮೆಂಬರುಗಳು ಸರ್ಕಾರದವರ ಈ ವರ್ತನೆಯನ್ನು ಬಹಳವಾಗಿ ಖಂಡಿಸಿದರು. ಮರೆನಾಡಿನ ಹೊಸ ಅಂಗಡಿಯನ್ನು ಹರಾಜಿನಲ್ಲಿ ಬಹು ಕಡಿಮೆ ಮೊಬಲಗಿಗೆ ಕೂಗಿದ್ದೇ ಆ ಅಂಗಡಿಯ ಅನಾವಶ್ಯಕತೆಯನ್ನು ತೋರಿಸುತ್ತದೆಯೆಂದು ಒಬ್ಬ ಪ್ರತಿನಿಧಿ ಮೆಂಬರು ಹೇಳಿದಾಗ್ಯೆ, ಅದಕ್ಕೆ ತಾನು ಒಪ್ಪುವುದಿಲ್ಲವೆಂತಲೂ, ಅಲ್ಲಿ ಈ ಮೊದಲು ಅಂಗಡಿ ಇಲ್ಲದ್ದರಿಂದ ಅಲ್ಲಿಯ ವ್ಯಾಪಾರವು ಎಷ್ಟಾಗುವದೆಂದು ತಿಳಿಯದ ಕಾರಣ ಸ್ವಲ್ಪ ಹಣಕ್ಕೆ ಕೂಗಿದ್ದಾಗಿರುವದೆಂತಲೂ ಸರ್ಕಾರಿ ಮೆಂಬರು ಜವಾಬಿತ್ತರು. ಈಗ ೮ ತಿಂಗಳುಗಳ ನಂತರ ಮರೆನಾಡು ಅಂಗಡಿಯಲ್ಲಿ 8 ಗೇಲನ್ ಸಾರಾಯಿ ಮಾತ್ರ ಖರ್ಚಾಗಿದೆಯೆಂದು ತಿಳಿಯ ಬರುವುದರಿಂದ ಅನುಭವದಿಂದಲಾದರೂ ಚುನಾಯಿತ ಮೆಂಬರು ಈ ಮೊದಲು ಕೌನ್ಸಿಲಿನಲ್ಲಿ ಹೇಳಿದ್ದು ನಿಜವೆಂದು ಸರ್ಕಾರದವರು ಒಪ್ಪಿಕೊಳ್ಳಬೇಕಾಯಿತಲ್ಲವೇ.

8 ತಿಂಗಳಲ್ಲಿ ಬರೇ 8 ಗೆಲನ್ ಸಾರಾಯಿ ಖರ್ಚು ಮಾಡಿದ ಮರೆನಾಡಿನವರನ್ನು ನಾವು ಅಭಿನಂದಿಸುತ್ತೇವೆ. ಜನರು ಬೇಡವೆಂದರೂ ಕೂಡ ಸರ್ಕಾರದವರು ಒತ್ತಾಯದಿಂದ ಇಟ್ಟ ಅಂಗಡಿಯನ್ನು ಒಂದು ವರ್ಷದಲ್ಲೇ ತೆಗೆಸುವಂತೆ ಮಾಡಿದ ಆ ನಾಡಿನ ಮಹನೀಯರ ಪ್ರಯತ್ನವು ಸ್ತೋತ್ರಾರ್ಹವಾಗಿದೆ. ಇವರ ಉದಾಹರಣೆಯನ್ನು ದೇಶದ ಬೇರೆ ಕಡೆಯವರೂ ಖಂಡಿತ ಹಿಂಬಾಲಿಸಬೇಕಾಗಿದೆ. ಸರ್ಕಾರದವರು ಜನರ ಸಹಾಯಕ್ಕೆ ಬಾರದೆ ಇರುವಾಗ್ಯೆ ಜನರು ತಮಗೆ ತಾವೇ ಸಹಾಯ ಮಾಡಿಕೊಳ್ಳಬೇಕಾದದ್ದು ಅತ್ಯವಶ್ಯ. ಇಲ್ಲವಾದರೆ ಜನರು ನರಳುತ್ತಿರುವ ಕಡು ಬಡತನದಿಂದ ಅವರು ಎಂದೂ ಪಾರಾಗಲಾರರು. ಹೊಸ ಅಂಗಡಿಯನ್ನು ಇಡಕೂಡದೆಂದು ಬಾಳೆಲೆಯ ಸುತ್ತಮುತ್ತಲಿನ ಗ್ರಾಮಸ್ಥರನೇಕರು ಅಧಿಕಾರಿಗಳಿಗೆ ಅರ್ಜಿ ಬರೆಕೊಂಡ ವಿಷಯ ಒಬ್ಬ ಪ್ರತಿನಿಧಿ ಮೆಂಬರು ಕೌನ್ಸಿಲಿನಲ್ಲಿ ಹೇಳಿದಾಗ ಸರ್ಕಾರಿ ಮೆಂಬರು ಬರೇ ಅರ್ಧ ಡಜನು ಜನರು ವಿರೋಧಿಸಿದರೆಂದು ತನಗೆ ತಿಳಿಸಲಾಗಿ'ದೆಂದು ಹೇಳಿದರು. ಹಲವರು ರುಜುಮಾಡಿ ಕಳುಹಿಸಿದ ಅರ್ಜಿಯ ವಿಷಯವೂ ಕೂಡ ಕಮಿಷನರವರ ತಿಳುವಳಿಕೆಗೆ ಬಾರದೆ ಇರಲು ಕಾರಣವೇನೋ ತಿಳಿಯುವದಿಲ್ಲ. ಅದಂತಿರಲಿ ಬಾಳೆಲೆ ಪ್ರಾಂತ್ಯದವರು ತಾವು ಉತ್ಸಾಹದಿಂದ ಪ್ರಾರಂಭಿಸಿದ ಪ್ರಯತ್ನವನ್ನು ಕೊನೆಯವರೆಗೂ ಸಾಧಿಸದೆ ಹೋದದ್ದು ತುಂಬಾ ವ್ಯಸನಕರ. ಆ ಅಂಗಡಿಯಲ್ಲಿ 272 ಗೆಲನ್ ಸಾರಾಯಿ ಖರ್ಚಾಗಿದೆಯಂತೆ! ಇದಕ್ಕೆ ಅವರು ಎಡೆ ಕೊಡಬಾರದಿತ್ತು. ಅಂಗಡಿ ಬೇಡವೆಂದವರೆಲ್ಲರೂ ಎಡೆಬಿಡದೆ ಸಾಧಿಸಿ, ಜನರಿಗೆ ಒಳ್ಳೇ ಬೋಧನೆ ಕೊಟ್ಟು ಯಾರೂ ಅಂಗಡಿಗೆ ಹೋಗದಂತೆ ಮಾಡಬೇಕಿತ್ತು. ಹಾಗೆ ಮಾಡಿದ್ದರೆ ಅವರು ಹಿಡಿದ ಸದುದ್ದೇಶವು ಕೈಗೂಡುತ್ತಿತ್ತು. ಇನ್ನಾದರೂ ತಡವಾಗಿಲ್ಲ. ನಿಷಾ ಸೇವನೆಯಿಂದ ನಮ್ಮ ದೇಶಸ್ಥರು ಕೆಡುತ್ತಿದ್ದಾರೆಂದು ನಂಬುವವರು ಈ ಕೆಲಸಕ್ಕೆ ಸೊಂಟಕಟ್ಟಿ ಇಳಿಯಬೇಕಾಗಿದೆ. ಇವರು ಮರೆನಾಡಿನವರಂತೆ ದೃಢ ಮನಸ್ಸಿನಿಂದ ಸಾರಾಯಿ ಅಂಗಡಿಯನ್ನು ಬಹಿಷ್ಕರಿಸಲು ಮುಂದು ಬರುವರೇ? ಧೈರ್ಯವಂತರೆಂದುಕೊಳ್ಳುವ ಕೊಡಗಿನ ಮಹನೀಯರು ಇಂಥಾ ಜನೋದ್ಧಾರದ ಕಾರ್ಯದಲ್ಲಿ ತಮ್ಮ ಸ್ಥೈರ್ಯವನ್ನೂ ದೃಢ ನಿಶ್ಚಯವನ್ನೂ ತೋರಿಸುವರೇ? ಇನ್ನೆರಡು ಹೊಸ ಅಂಗಡಿಗಳ ಪ್ರಾಂತ್ಯದವರೂ ಮೇಲಿನ ವಿಷಯಗಳಿಗೆ ತಕ್ಕಷ್ಟು ಗಮನ ಕೊಡುವರಾಗಿ ಆಶಿಸುತ್ತೇವೆ. ಕಕ್ಕಬೆ ಅಂಗಡಿಯಲ್ಲಿ 173 ಗೆಲನ್ ಮಾತ್ರ ಖರ್ಚಾಗಿದೆಯಂತೆ. ಅಲ್ಲಿಯವರು ಇನ್ನು ಸ್ವಲ್ಪ ಹೆಚ್ಚು ಉತ್ಸಾಹದಿಂದ ಪ್ರಯತ್ನಿಸಿದರೆ ಆ ಅಂಗಡಿಯನ್ನು ಮುಚ್ಚಿಸಲು ಸಾಧ್ಯವಾಗುವುದು.

ಅಬ್ಕಾರಿ ಕಮಿಟಿಯವರು ಸಿದ್ದಾಪುರದಲ್ಲಿ ಒಂದು ಬೀರ್ ಅಂಗಡಿಯನ್ನು ಬರುವ ಏಪ್ರಿಲಿನಿಂದ ತೆರೆಯಲು ಮಂಜೂರು ಮಾಡಿರುವರು. ನಿಷಾಸೇವನೆಯನ್ನು ಕಡಿಮೆ ಮಾಡುವ ತತ್ವಕ್ಕೆ ಈ ಕಮಿಟಿಯವರು ವಿರೋಧಿಸುತ್ತಿದ್ದಾರೆಂಬದಕ್ಕೆ ಇದು ಇನ್ನೊಂದು ಉದಾಹರಣೆ. ಸಿದ್ದಾಪುರದಂತ ಚಿಕ್ಕಪೇಟೆಯಲ್ಲಿ ಎರಡು ಸಾರಾಯಿ ಅಂಗಡಿಗಳು, ಒಂದು ಸೇಂದಿ ಅಂಗಡಿಯು, ಮತ್ತು ಒಂದು ಬ್ರಾಂದಿ, ವಿಸ್ಕಿ ಅಂಗಡಿಯು ಇರುವುದೇ ಸಾಕಾಗುವದಿಲ್ಲ. ಇನ್ನೊಂದು ಬೀರ್ ಅಂಗಡಿಯನ್ನು ಇಡಲು ತೀರ್ಮಾನಿಸಿದ್ದು ತುಂಬಾ ವ್ಯಸನಕರ. ದೇಶದ ಜನರ ಮಾನಸಿಕ ಆರ್ಥಿಕ ಮತ್ತು ದೇಹ ಸ್ಥಿತಿಯು ಉತ್ತಮಗೊಳ್ಳಬೇಕಾದರೆ ದೇಶದವರೂ, ಸರ್ಕಾರದವರೂ ನಿಷಾ ನಿಷೇಧದ ಚಳವಳವನ್ನು ಸಾಧಿಸಲು ಎಡೆಬಿಡದೆ ಪ್ರಯತ್ನಿಸಬೇಕಾಗಿದೆ.

ಲೇಡಿ ಇರ್ವಿನ್‌ರವರ ಭಾಷಣ.

ಕಾನ್ವೆಂಟ್ ಹೈಸ್ಕೂಲ್ನಲ್ಲಿ ಕಟ್ಟಲು ಏರ್ಪಡಿಸಿರುವ ಒಂದು ಹೊಸ ಹಾಲಿನ ಪಾಯಗಲ್ಲನ್ನು ಇಡುವಾಗ ವೈಸರಾಯರ ಪತ್ನಿ ಲೇಡಿ ಇರ್ವಿನರು ಮಾಡಿದ ಭಾಷಣ—

1871 ನೇ ಇಸವಿಯಷ್ಟು ಪೂರ್ವದಲ್ಲೇ ಪ್ರಾರಂಭವಾದ ಕೊಡಗಿನ ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಮನಃಪೂರ್ತಿಯಾಗಿ ಎಡೆ ಬಿಡದೆ ನಡೆದ ಪ್ರಯತ್ನಗಳ ವಿಷಯವನ್ನು ಕುತೂಹಲದಿಂದ ಕೇಳಿ ತಿಳಿದುಕೊಂಡೆನು. ಈ ಪ್ರಯತ್ನದ ಫಲ ರೂಪವಾಗಿ ಈ ಒಳ್ಳೇ ಹೈಸ್ಕೂಲ್ ಸ್ಥಾಪಿತವಾಗಿದೆ. ಈ ಹೈಸ್ಕೂಲ್ ತೃಪ್ತಿಕರವಾದುದಾಗಿದೆಯೆಂದೂ ದಕ್ಷಿಣ ಹೆಚ್ಚಿನ ಕಟ್ಟಡ ಬೇಕಾಗಿದೆ ಎಂಬದೇ ಸಾಕ್ಷಿಯಾಗಿದೆ.

ದಿನ ಪಾಯ ಹಾಕುವ ಗೌರವ ನನಗೆ ದೊರೆತ ಈ ಸ್ಕೂಲ್ ಹಾಲನ್ನು ಹುಡುಗಿಯರ ವಿದ್ಯಾ ಪ್ರೋತ್ಸಾಹಕ್ಕಾಗಿ ಕಟ್ಟಿಸಲು ಸಾಧ್ಯವಾಗುವಂತೆ ಧನ ಸಹಾಯ ಮಾಡಿದ ಕೊಡಗಿಗೆ ನಾನು ಧನ್ಯವಾದ ಹೇಳುತ್ತೇನೆ. ಬೊಗಳೂರು ಕಂಟೋನ್‌ಮೆಂಟಿನಂತ ಚಿಕ್ಕ ಪ್ರಾಂತ್ಯಗಳನ್ನು ಬಿಟ್ಟರೆ ಸ್ತ್ರೀ ವಿದ್ಯಾಭ್ಯಾಸದಲ್ಲಿ ಕೊಡಗು ಹಿಂದುಸ್ಥಾನದ ಬೇರೆ ಪ್ರಾಂತ್ಯಗಳಿಗಿಂತೆಲ್ಲಾ ಮುಂದೆ ಇದೆಯೆಂತ ಕೇಳಿದ್ದೇನೆ. ಈಗ ಬಾಲಿಕಾ ಪಾಠ ಶಾಲೆಗಳಲ್ಲಿ 800 ಹುಡುಗಿಯರೂ, ಇತರ ಶಾಲೆಗಳಲ್ಲಿ 1800 ಹುಡುಗಿಯರೂ, ಓದುತ್ತಿದ್ದಾರೆಂತ ತಿಳಿಯುತ್ತೇನೆ. ತಮ್ಮ ಹೆಣ್ಣು ಹುಡುಗಿಯರಿಗೆ ದೊರೆಯಬಹುದಾದ ವಿಶೇಷ ವಿದ್ಯೆಯನ್ನು ಕೊಡಿಸಲು ತಂದೆ ತಾಯಿಗಳು ಹಿಂಜರಿಯುವುದಿಲ್ಲವೆಂತ ಈ ಸಂಖ್ಯೆಗಳಿಂದಲೇ ನಮಗೆ ತಿಳಿಯುತ್ತದೆ. ಹಿಂದುಸ್ಥಾನದ ಬೇರೆ ಅನೇಕ ಕಡೆಗಳಲ್ಲಿ ವಿದ್ಯಾಭ್ಯಾಸದ ಮುಖ್ಯ ಕಾಲವನ್ನೆಲ್ಲಾ ವಿದ್ಯಾಭ್ಯಾಸಕ್ಕೆ ಉಪಯೋಗಿಸಲೂ ಸಾಧ್ಯವಿಲ್ಲದಂತೆ ಚಿಕ್ಕ ಪ್ರಾಯದಲ್ಲೇ ಮದುವೆ ಮಾಡುವ ಪದ್ಧತಿಯು ಈ ದೇಶದಲ್ಲಿ ರೂಢಿಯಲ್ಲಿಲ್ಲವೆಂತ ತಿಳಿಯುತ್ತೇನೆ. ಅನೇಕ ಹುಡುಗಿಯರು ಹೈಸ್ಕೂಲ್ ಬಿಟ್ಟನಂತರವೂ ತೃಪ್ತಿಯಾಗದೆ ಬೇರೆ ಪ್ರಾಂತ್ಯಗಳಲ್ಲಿ ಉಚ್ಛ ವಿದ್ಯೆ ಸಂಪಾದಿಸುತ್ತಲಿದ್ದಾರೆಂಬದೂ, ಹತ್ತು ವರ್ಷಗಳಿಗೆ ಮುಂಚೆಯೇ ಕೊಡಗಿನ ಯುವತಿಯೊಬ್ಬಳು ಯೂನಿವರ್ಸಿಟಿ ಡಿಗ್ರಿ ಪಡೆದಳೆಂಬದೂ ತೃಪ್ತಿಕರವಾದ ಸಂಗತಿಗಳಾಗಿವೆ. ಹಿಂದುಸ್ಥಾನದಲ್ಲೆಲ್ಲಿಯೂ ಇರುವಂತೆ ತಮಗೆ ಬೇಕಾದ ಮುಖ್ಯವಾಗಿ ಉಚ್ಛ ವಿದ್ಯೆ ಕೊಡಲು ಅರ್ಹತೆ ಇರುವ ಸ್ತ್ರೀ ಉಪಾಧ್ಯಾಯಿನಿಯರು ಇಲ್ಲದಿರುವ ತೊಂದರೆಯು ಇಲ್ಲಿಯೂ ಇದೆಯೆಂತ ನಂಬುತ್ತೇನೆ. ಆದರೆ ಈ ತೊಂದರೆಯನ್ನು ನಿವಾರಿಸಿಕೊಳ್ಳಲಿಕ್ಕಾಗಿ ಕೆಲವು ಯುವತಿಯರಿಗೆ ಹಣ ಸಹಾಯ ಕೊಟ್ಟು ಉಪಾಧ್ಯಾಯಿನಿಯರಾಗಲು ಅರ್ಹತೆಯನ್ನು ಪಡೆಯುವಂತೆ ಮಾಡುತ್ತಿರುವಿರಾಗಿ ನಂಬುತ್ತೇನೆ. ಮಕ್ಕಳಿಗೆ ತರಬೇತು ಕೊಟ್ಟು ವಿದ್ಯೆ ಕಲಿಸುವ ಹೊಗಸಿನ ಕಸುಬಿಗಿಂತ ಗೌರವವಾದ ಕಸುಬು ಬೇರೆ ಕಂಡು ಹಿಡಿಯುವದು ಕಷ್ಟವಾಗಿದೆ. ಅಂಥಾ ಉಪಾಧ್ಯಾಯಿನಿಯರ ಮತ್ತು ತಂದೆ ತಾಯಿಗಳ ಮೇಲೆ ಮುಂದಿನ ಜನಾಂಗದ ತಾಯಂದಿರ ಮನಸ್ಸನ್ನೂ, ಬುದ್ಧಿಯನ್ನೂ ರೂಪಿತಪಡಿಸುವ ಜವಾಬ್ದಾರಿಯು ಬಿದ್ದಿದೆ. ಉಪಾಧ್ಯಾಯಿನಿ ಕಸುಬಿನ ಪ್ರಾಮುಖ್ಯತೆಯೂ, ಗೌರವವೂ ಈ ದೇಶದಲ್ಲಿ ಹೆಚ್ಚೆಚ್ಚಾಗಿ ತಿಳಿಯುತ್ತಾ ಬಂದಂತ ದೊಡ್ಡ ಮನಸ್ಸಿನ ಯುವತಿಯರು ಆ ಕಸುಬನ್ನು ಕೈ ಕೊಳ್ಳಲು ಅರ್ಹತೆಯನ್ನು ಪಡೆಯಲು ಉದ್ಯುಕ್ತರಾದಾರೆಂತ ನಂಬುತ್ತೇನೆ. ಈ ಕೊಡಗಿನಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡುವವುಗಳಲ್ಲರಗೂ ಮುಖ್ಯವಾಗಿ 20 ವರ್ಷಗಳಿಂದ ರೆವರೆಂಡ್ ಮದರ್ ಮೇರಿ ಹೆನ್ರಿಯಟ್ ಮತ್ತು, ಅವಳ ಸಹೋದ್ಯೋಗಿಗಳ ಅಧೀನದಲ್ಲಿ ಕೆಲಸ ಮಾಡುತ್ತಿರುವ ಈ ಶಾಲೆಗೆ ನನ್ನ ಮನಃಪೂರ್ವ ಪ್ರೋತ್ಸಾಹವನ್ನು ಕೊಡುತ್ತೇನೆ. ಈ ಶಾಲೆಯು ಬಹು ಕಾಲವಿದ್ದು ಬೆಳೆದು ಅದರಲ್ಲಿ ವಿದ್ಯಾ ಸಂಪಾದನೆಗೆ ಬರುವ ಯುವತಿಯರಿಗೆ ಉಚ್ಛ ಧ್ಯೇಯಗಳು ಹುಟ್ಟುವಂತೆ ಮಾಡಲಿ ಎಂತ ಹಾರೈಸುತ್ತೇನೆ.

“ಕೊಡಗು” ಕಂಪೆನಿಯ ಜನರಲ್ ಮೀಟಿಂಗು.

'ಕೊಡಗು' ಲಿಮಿಟೆಡ್ ಕಂಪೆನಿಯ ಶೇರುದಾರರ ವಾರ್ಷಿಕ ಜನರಲ್ ಮೀಟಿಂಗು ತಾ 30—11—29ರಲ್ಲು ವೀರರಾಜಪೇಟೆ ತಾಲೋಕು ಕಚೇರಿ ಬಳಿ ವೈದ್ಯಶಾಲೆಯಲ್ಲಿ ಮಧ್ಯಾಹ್ನ 2 ಗಂಟೆಗೆ ನಡೆಯಿತು. ಕಂಪೆನಿಯ ಕಾರ್ಯದರ್ಶಿಕರಾದ ಮೆ. ಸಿ. ಎಮ್. ಮುತ್ತಯ್ಯನವರು ಅಧ್ಯಕ್ಷರಾಗಿದ್ದರು. ಶೇರು ಮೊಬಲಗನ್ನು ಪೂರ್ತಿ ಸಲ್ಲಿಸಿ ಓಟು ಕೊಡಲು ಅರ್ಹರಾಗಿದ್ದ 59 ಶೇರುದಾರರೂ ಶೇರು ಮೊಬಲಗು ಪೂರ್ತಿ ಸಲ್ಲಿಸದ ಕೆಲವು ಶೇರುದಾರರೂ ಹಾಜರಿದ್ದರು.

1 ನಿಸ್ಸೆ ತಾನೇ ವೈಸರಾಯರು ಬಂದಾಗ್ಯೆ [illegible] ನೋಡುವ ತೊಂದರೆ ಇದ್ದದರಿಂದ ಶೇರುದಾರರಿಗೆ ಈ ದಿನ ಬರಲು ಅನಾನುಕೂಲವಾಗಿರುವ ಕಾರಣ ಈ ಮೀಟಿಂಗನ್ನು (ಅಡ್ಜರ್ನ್) ಮುಂದಕ್ಕೆ ಇಡಬೇಕೆಂದು ಮೆ. [illegible]ಯಂಡ ಮಾಚಯ್ಯನವರು ಸೂಚಿಸಿದನ್ನು ಮೆ. [illegible] ತಮ್ಮಯ್ಯನವರು ಅನುಮೋದಿಸಿದರು.

ಕಂಪೆನಿ ಆಕ್ಟಿನ ನಿಬಂಧನೆ ಮೇರೆ 15 ದಿವಸಗಳಿಗಿಂತ ಮುಂಚೆಯೇ ಮೀಟಿಂಗಿನ ನೋಟೀಸು, ಡೈರೆಕ್ಟರುಗಳ ವರದಿ ಮ[illegible], ಲೆಕ್ಕಗಳ ಪಟ್ಟಿ ಶೇರುದಾರರಿಗೆಲ್ಲಾ ಕಳುಹಿಸಲ್ಪಟ್ಟಿರುವುದರಿಂದಲೂ, ನಿನ್ನೆ ವೈಸರಾಯರ ಸಂದರ್ಶನಕ್ಕಾಗಿ ಇಲ್ಲಿಗೆ ಬಂದ ಹಲವು ಶೇರುದಾರರಿಗೆ ಈ ದಿನ ಮೀಟಿಂಗಿನಲ್ಲಿ ಹಾಜರಿರಲು ಸುಕೂಲವಾಗಿರುವುದರಿಂದಲೂ ಈ ಮೀಟಿಂಗನ್ನು ಅಡ್ಜರ್ನ್ ಮಾಡಕೂಡದೆಂದು ಮೆ. ಪಟ್ಟಿರ ಸುಬ್ಬಯ್ಯನವರು [illegible]ದಿದರು. ಅದನ್ನು ಮೆ. ಚಂಗಂಡ ಕುಟ್ಟಪ್ಪನವರು [illegible]ಮೋದಿಸಿದರು.

ಠರಾವನ್ನು ಓಟಿಗೆ ಹಾಕಲಾಗಿ 20 ಜನರು ಅ[illegible]ನ್ನು ಅಡ್ಜರ್ನ್ ಮಾಡಬೇಕೆಂಬ ಠರಾವಿಗೆ ಪರವಾಗಿ[illegible] 32 ಜನರು ವಿರೋಧವಾಗಿಯೂ ಓಟು ಕೊಟ್ಟದ್ದರಿಂದ ಠ[illegible] ಮಂಜೂರಾಗಲಿಲ್ಲ.

2 ಮೆ. ನೀಲಜಾರವರು ಡೈರೆಕ್ಟರುಗಳ ವರದಿಯನ್ನು [illegible] ಹೇಳಿದರು.

ಮೆ. ಬಿದ್ದಂಡ ಕಾರ್ಯಪ್ಪನವರು, ಸವೆಯುವಿಕೆಯ (ಡಿ[illegible] ಸಿಯೇಶನ್) ಫಂಡನ್ನು ಪ್ರತ್ಯೇಕ ಇಡಬೇಕೆಂತಲೂ 19[illegible] ನೇ ವರ್ಷದಲ್ಲಿ ವಸೂಲಾಗದೆ ಇರುವ ಚಂದಾ ಬಾಕಿ[illegible] ವರದಿಯಲ್ಲಿ ತೋರಿಸಬೇಕಾಗಿತ್ತೆಂತಲೂ ಹೇಳಿದರು.

ಸವೆಯುವಿಕೆಯ ಫಂಡನ್ನು ಲಾಭ ಹಂಚುವಾಗ [illegible] ಪ್ರತ್ಯೇಕ ಇಟ್ಟರೆ ಸಾಕೆಂದು ಆಡಿಟರವರ ಅಭಿಪ್ರಾಯ[illegible] ವಸೂಲಾಗಲಾರದ ಚಂದಾ ಬಾಕಿಯನ್ನು ಮಾತ್ರ ವರ[illegible] ತೋರಿಸುವದಾಗಿದೆ, 1927—28ರ ಚಂದಾ ಬಾಕಿಯ[illegible]ನ್ನೂ ಸ್ವಲ್ಪ ವಸೂಲಾಗಬಹುದಾದ ಕಾರಣ ಅದನ್ನು ವರ[illegible]ಲ್ಲಿ ಕಾಣಿಸಿರುವುದಿಲ್ಲವೆಂದೂ ಅಧ್ಯಕ್ಷರು ಉತ್ತ[illegible]

ನಬ್ಬರ್ ಕೌನ್ಸ್ ಪ್ರೆಸ್ಸಿನ ಕ್ರಯವು 1923—24[illegible] ರ್ಷದ ವರದಿಯಲ್ಲಿ ತೋರಿಸಿರುವ ಕ್ರಯಕ್ಕೆ ಕಾಳೆ[illegible]ಲು ಕಾರಣವೇನೆಂದು ಮೆ. ಬಿದ್ದಂಡ ಸುಬ್ಬಯ್ಯನವರು [illegible]ದರು. ಲೆಖ್ಖಗಳನ್ನು ತಾಳೆ ನೋಡಿ ಸದರಿ ಪ್ರೆಸ್ಸಿನ [illegible]

ಸಿಕ್ಕಿದ ಕೆಲವು ಸಾಧನೆಗಳನ್ನು ವರದಿ ಎಂದ ಉತ್ಕೃಷ್ಟಿಯನ್ನು ವಜಾ ಮಾಡಿದ್ದರಿಂದ 1923—24ರ ಸಂಖ್ಯೆಗಳ ವಿಷಯ ಗಣ ಮುಂದೆ ಇಟ್ಟ ರಿಪೋರ್ಟಿನಲ್ಲಿ ನಮೂದಿಸಿರುವ ಸಂಖ್ಯೆಗಳ ವ್ಯತ್ಯಾಸವಿರಲು ಕಾರಣವೆಂತ ತಿಳಿಸಲಾಯಿತು.

3 'ಈ ಸಭೆಯ ೨ ವರದಿ ವಿತ್ತ ಲೆಖ್ಖಗಳನ್ನು ಮಂಜೂರು ಮಾಡುತ್ತದೆ' ಎಂಬ ಠರಾವನ್ನು ಅಧ್ಯಕ್ಷರು ಸೂಚಿಸಿದರು. ಅದನ್ನು ಮೆ. ಮೂಕೊಂಡ ಗಣಪತಿಯವರು ಅನುಮೋದಿಸಿದರು.

ಮೆ. ಗಳಿಕದ ಪಿದ್ದಂಡ ಅಪ್ಪಯ್ಯನವರ, ಮಿದ್ದಂಡ ಸುಬ್ಬಯ್ಯನವರು, ನಾಂಗಂಡ ಸಂಬಪ್ಪನವರು, ಕುಡಿಯಂಡ ಮಾಚ್ಚಯ್ಯನವರ, ಪುಟ್ಟಮಾಡ ನಾಣಯ್ಯನವರು ಮತ್ತು ನಾಯಂಡ ಬೆಳ್ಯಪ್ಪನವರು ಠರಾವನ್ನು ವಿರೋಧಿಸಿ ಮಾತಾಡಿದರು. ಅನಂತರ ಪಾಸಿಂಗ ಸಾಧಾರಣವೇನೆಂದರೆ—ಆಡಿಟರವರು ಮೀಟಿಂಗಿಗೆ ಬರಬೇಕಾಗಿತ್ತು. ಕಂಪನಿಯ ಅಧಿಕಾರಿಗಳು ಲೆಖ್ಖದ ವಿಷಯ ಕೊಡುವ ವಿವರ ತೃಪ್ತಿಕರವಲ್ಲ. ಕಂಪನಿಯ ಡಿರೆಕ್ಟರು ಮಾಡಿದ ವಸೂಲಾತಿಯ ತಪಶೀಲು ಲೆಖ್ಖ ವಿವರಿಸಬೇಕಾಗಿತ್ತು. ಡೈರೆಕ್ಟರುಗಳ ರಿಪೋರ್ಟನ್ನು ಡೈರೆಕ್ಟರುಗಳ ಮೀಟಿಂಗಿನಲ್ಲಿ ಇಡಲೇ ಇಲ್ಲ. ಲೆಖ್ಖಗಳನ್ನು ಅವಲೋಕಿಸಲು ಸಮಯ ಸಾಕಾಗಲಿಲ್ಲ. ಜನರು ನಗ್ಗರಿ ಪ್ರತ್ಯೇಕವನ್ನು ಲೆಖ್ಖಕ್ಕೆ ತೆಗೆದುಕೊಳ್ಳಬೇಕಿತ್ತು.

ಠರಾವಿನ ಪರವಾಗಿ ಮೆ. ಗಳಿಕದ ಕಾಳೇಟಿರ ಚಿಣ್ಣಪ್ಪನವರು, ಕೂಳ್ಳಿಮಾಡ ಕಾರ್ಯಪ್ಪನವರು ಮತ್ತು ಪಿ. ಸಿ. ಸುಬ್ಬಯ್ಯನವರು ಮಾತಾಡಿದ್ದೇನೆಂದರೆ—ಲೆಖ್ಖಗಳು, ವರದಿಯೂ ಡೈರೆಕ್ಟರುಗಳ ಮೀಟಿಂಗಿನಲ್ಲಿ ಮಂಜೂರಾಗಿದೆ. ಮೀಟಿಂಗಿಗೆ ಬಾರದ ಡೈರೆಕ್ಟರುಗಳಿಗೆ ಅವು ಗೊತ್ತಿಲ್ಲವಷ್ಟೆ. ಚಿಲ್ಲರೆ ಸಂಗತಿಗಳನ್ನು ಮುಖ್ಯ ಸಭೆಯಲ್ಲಿ ಚರ್ಚಿಸುವುದು ಹಿತವಲ್ಲ. ಕೊರಟಾದ ಅವರು ವಿಸ್ತರಿಸಿದ ಡೈರೆಕ್ಟರುಗಳು ಮಾಡಿದ ಲೆಖ್ಖದಲ್ಲಿ ಚಿಕ್ಕ ತಪ್ಪುಗಳನ್ನು ಹೇಳುವ ಅವಶ್ಯವಿಲ್ಲ. ಲೆಖ್ಖದ ವಿಷಯ ಕಂಪನಿಯ ಅಧಿಕಾರಿಗಳು ಕೊಟ್ಟ ಉತ್ತರ ತೃಪ್ತಿಕರವಾಗಿದೆ. ಆದುದರಿಂದ ವರದಿ ಮತ್ತು ಲೆಖ್ಖಗಳನ್ನು ಮಂಜೂರು ಮಾಡಬಹುದು.

ಠರಾವನ್ನು ಓಟಿಗೆ ಹಾಕಿದಾಗ ಯಾವ ವಿರೋಧವೂ ಇಲ್ಲದೆ ಪಾಸಾಯಿತು. (ಇಷ್ಟರಲ್ಲಿ ಠರಾವಿಗೆ ವಿರೋಧವಾಗಿ ಮಾತಾಡಿದ ಕೆಲವರು ತಾವು ಓಟಿಂಗಿನಲ್ಲಿ ಭಾಗಿಗಳಾಗುವುದಿಲ್ಲವೆಂದು ಹೇಳಿದರು.)

4 '1929—30ನೇ ವರ್ಷಕ್ಕೆ ಮೆ. ಪಿ. ಕ್ಯಾಮ್ಬ್ಯೆಲ್ ಅವರನ್ನು ಆಡಿಟರನ್ನಾಗಿ ನೇಮಿಸಬೇಕು" ಎಂಬ ಠರಾವನ್ನು ಮೆ. ಪಿ. ಮಾದಪ್ಪನವರು ಸೂಚಿಸಿದರು. ಮೆ. ಕೆ. ಪಿ. ಚಿಣ್ಣಪ್ಪನವರು ಅನುಮೋದಿಸಿದರು. ಮೆ. ಬಿ. ಮಾಚ್ಚಯ್ಯನವರು ಮತ್ತು ಮೆ. ಪಿ. ಸುಬ್ಬಯ್ಯನವರು ವಿರೋಧಿಸಿದರು. ಓಟಿಗೆ ಹಾಕಲಾಗಿ ಠರಾವು ವಿರೋಧವಿಲ್ಲದೆ ಪಾಸಾಯಿತು.

5. "1928—29ನೇ ವರ್ಷಕ್ಕೆ ಆಡಿಟರವರಿಗೆ 100 ರೂಪಾಯಿ ಕೊಡಬೇಕು" ಎಂದು ಮೆ. ಟಿ. ಯಸ್. ಪೂವಯ್ಯನವರು ಸೂಚಿಸಿದ್ದನ್ನು ಮೆ. ಪಾಲುಪಂಡ ಚಿಣ್ಣಪ್ಪನವರು ಅನುಮೋದಿಸಿದರು. ಆಡಿಟರವರು ಒಂದು ಜನರಲ್ ಮೀಟಿಂಗಿಗೆ ಬರುವಂತೆ ಮಾಡಬೇಕೆಂದು ಮೆ. ಮೂಕೊಂಡ ಗಣಪತಿಯವರು ಹೇಳಿದರು. ಠರಾವು ವಿರೋಧವಿಲ್ಲದೆ ಪಾಸಾಯಿತು.

6 ಡೈರೆಕ್ಟರುಗಳಿಂದ ರಿಟಯರ್ ಆದ ಮೆ. ಗಳಿಕದ ಸಿ. ಯಸ್. ವೆಂಕಪ್ಪಯ್ಯ, 2 ಪುಲಿಯಂಡ ಗಣಪತಿ, 3. ಬಿಪ್ಪುಡ ಮಾದಪ್ಪ, 4. ತೆಕ್ಕಡ ಪೂವಯ್ಯ ಮತ್ತು 5. ಐನಂಡ ಮಾದಪ್ಪನವರ ಬದಲು ೨ ಡೈರೆಕ್ಟರುಗಳ ಚುನಾವಣೆಗೆ ಮೆ. ಗಳಿಕದ 1 ಸಿ. ಯಸ್. ವೆಂಕಪ್ಪಯ್ಯನವರ 2 ಪಿದ್ದಂಡ ಪಿ. ಐಯ್ಯಪ್ಪನವರ 3 ಪುಲಿಯಂಡ ಗಣಪತಿಯವರ, 4 ಚೆಪ್ಪುಡಿರ ಪೂವಯ್ಯನವರ, 5. ಬಿಪ್ಪುಡ ಮಾದಪ್ಪನವರ, 6. ತೆಕ್ಕಡ ಪೂವಯ್ಯನವರ ಹೆಸರುಗಳು ಸೂಚಿಸಲ್ಪಟ್ಟವು. ಓಟು ತೆಗೆಯಲಾಗಿ ಮೆ. ಗಳಿಕದ 1. ಸಿ. ಯಸ್. ವೆಂಕಪ್ಪಯ್ಯ, 2. ಪಿದ್ದಂಡ ಪಿ. ಐಯ್ಯಪ್ಪ, 3 ಬಿಪ್ಪುಡ ಮಾದಪ್ಪ 4 ಪುಲಿಯಂಡ ಗಣಪತಿ ಮತ್ತು 5 ತೆಕ್ಕಡ ಪೂವಯ್ಯ—ಇವರು 5 ಜನರು ಡೈರೆಕ್ಟರ ಗಳಾಗಿ ಆರಿಸಲ್ಪಟ್ಟರು.

7. ತೀನು ಜನರಲ್ ಮೀಟಿಂಗಿಗೆ ಕಳುಹಿಸಿದ್ದ ಠರಾವು ಸರಿಯಾದವೆಂದು ಮೆ. ಬಿ. ಮಾಚ್ಚಯ್ಯನವರು ಅಧ್ಯಕ್ಷರಿಗೆ ಕೇಳಿದರು. ಸದರಿ ಠರಾವುಗಳ ನೋಟೀಸನ್ನು ಕೇಳುವರಿಗೆ ಕೊಡಲು ಕಾಲ ಮೀರಿದ ನಂತರ ಇವರ ಕಾಗದ ದಿಂದ ಅವುಗಳನ್ನು ಈ ಮೀಟಿಂಗಿನಲ್ಲಿ ತೆಗೆದು ಕೊಳ್ಳಗವಿಲ್ಲವೆಂತಲೂ, ಈ ವಿಷಯವನ್ನು ಮೊದಲೇ ಇವರ ಸ್ಪೆಷಲ್ ಅವರ್ಸ್ಸಿಗೆ ಒಂದು ದಿನ ಅಧ್ಯಕ್ಷರು ತಿಳಿಸಿ…

8. ತೃಪ್ತಿಕರವಾಗಿ ಕಂಪನಿಯ ಕೆಲಸವನ್ನು ನಡೆಸಿದ ಡೈರೆಕ್ಟರುಗಳಿಗೂ, ಸಭೆಯ ಅಧ್ಯಕ್ಷರಿಗೂ ವಂದನೆಗಳನ್ನು ಅರ್ಪಿಸಿದ ನಂತರ ಮೀಟಿಂಗು ಬರಖಾಸ್ತಾಯಿತು.

ಸಿ. ಯಸ್. ವೆಂಕಪ್ಪಯ್ಯ,
(ಅಧ್ಯಕ್ಷರು).

ಮಿಂಸಸ್ ಸೀಯರ್ಸ್‌ರವರ ಭಾಷಣ.

ಕಳೆದ ತಿಂಗಳ 29ರಲ್ಲಿ ಮೈಸೂರಿನ ಪ್ರಸಿದ್ಧ ಲೇಡಿ ಡಾಕ್ಟರ್‌ರವರು ಮಡಿಕೇರಿ ಹುಡುಗಿಯರ ಹೈಸ್ಕೂಲಿನ ಅಧ್ಯಕ್ಷತೆಯನ್ನು ವಹಿಸಿದಾಗ ಚೀಫ್ ಕಮಿಷನರವರ ಪತ್ನಿಯವರಾದ ಮಿಸೆಸ್ ಸೀಯರ್ಸ್‌ರವರು ಈ ಕೆಳಗಿನ ಪ್ರಾರಂಭದ ಭಾಷಣವನ್ನು ಮಾಡಿದರು.

ಘನ ಹೊಂದಿದ ಮೇಡಂ ಸಾಹೇಬರವರೆ,

ಈ ದಿನ ಈ ಶಾಲೆಯ ಬಹುಮಾನ ಸಮಾರಂಭವನ್ನು ಹಿಂತಕಲು ನೀವು ಒಪ್ಪಿದಕ್ಕೆ ನಿಮಗೆ ವಂದಿಸುತ್ತೇನೆ ಮತ್ತು ಈ ಕೆಲಸವನ್ನು ಮಾಡಲು ನನ್ನನ್ನು ಕೇಳಿಕೊಂಡದ್ದಕ್ಕಾಗಿ, ರಜೆಯಂದು ಇವರ ಪೆಂಡು ಹೆಸ್ರಿಯನ್ನು ತಿಳಿಸಿ ಅವರಿಗೆ ನನ್ನ ಭಕ್ತಿಯಾದ ನಮಸ್ಕಾರ ಈ ಉತ್ಸವದ ಹೈಸ್ಕೂಲನ್ನು ಈ ಸ್ಥಿತಿಗೆ ತಂದ ಮುಂಚಿನ ಕೊಡಗು ಹುಡುಗಿಯರ ವಿದ್ಯಾಭ್ಯಾಸವು ಹಲವು ತೊಂದರೆಗಳನ್ನು ದಾಟಬೇಕಾಯಿತೆಂದು ನಾನು ಹೇಳಬೇಕಾಗುತ್ತದೆ. 1871ರಲ್ಲಿ ಅಂದಿನ ಉಪಾಧ್ಯಾಯರ ಸ್ತ್ರೀ ವಿದ್ಯಾಭ್ಯಾಸದ ಚಳವಳದ ಪ್ರಾರಂಭದಲ್ಲಿ ಮಿಸೆಸ್ ಕೆ. ಸಿ. ತಿಮ್ಮಯ್ಯನವರ ತಂದೆ ದಿವಾನ ಮೆ. ಕೇಪಮಾಡ ಕಾರ್ಯಪ್ಪನವರೆಂಬ ಒಬ್ಬ ಕೊಡವ ಮಹನೀಯರು ಹುಡುಗಿಯರ ಶಾಲೆಗಾಗಿ ಒಂದು ಕಟ್ಟಡವನ್ನು ಉಚಿತವಾಗಿ ಕೊಟ್ಟರು. ಆ ಶಾಲೆಯು ಸ್ವಲ್ಪ ಕಾಲ ಮಾತ್ರ ನಡೆಯಿತು, ಅದರೆ 1883 ರಿಂದ 1886ರ ವರೆಗೆ ಮಡಿಕೇರಿಯಲ್ಲಿ ಹುಡುಗಿಯರ ಒಂದು ಶಾಲೆಯನ್ನು ಪುನಃ ತೆರೆಯಲು ಮತ್ತು ಅದನ್ನು ಸರ್ಕಾರಿ ಶಾಲೆಯಾಗಿ ಮಾಡಲು ಪ್ರಯತ್ನಗಳು ಮಾಡಲ್ಪಟ್ಟವು. ಕೊಡವ ಪಂಚಾಯಿತಿದಾರರೂ ಇದು ಸಂಪೂರ್ಣ ಅಸಮಂಜಸವಾಯಿತು 1890ರಲ್ಲಿ ಪುನಃ ಕೊಡವ ಹುಡುಗಿಯರ ವಿದ್ಯಾಭ್ಯಾಸದ ವಿಷಯವು ಮುಂದಕ್ಕೆ ತರಲಾಗಿ, ಅರ್ಥ ಸಹಾಯ ದಿಂದ ಮತ್ತು ಅರ್ಥ ಮುನಿಸಿಪಾಲಿಟಿಯಿಂದ ಸಹಾಯ ಪಡೆದ ಶಾಲೆಯೊಂದು ಪ್ರಾರಂಭವಾಯಿತು … ಬದ್ದರಿಂದಲೂ, … ಈ ಉತ್ತಮ ಪ್ರಯತ್ನವು 1897ರ ಅಂತ್ಯದಲ್ಲಿ ನಿಲ್ಲಿಸಲ್ಪಡಬೇಕಾಯಿತು.

20 ವರ್ಷಗಳ ಹಿಂದೆ 1909ರಲ್ಲಿ ಮಡಿಕೇರಿಯ ಮ್ಯುನಿಸಿಪಾಲಿಟಿಯು ಒಂದು ಪಾಠಶಾಲೆಗೆ ಸ್ಥಳೀಯ ಸರ್ಕಾರದ ಅನುಮೋದನೆಗಾಗಿ ತಿಳಿಸಿದರು. ಇದು ಮಾಡಬೇಕಾದರೆ—ಒಂದು ಸ್ಕೂಲನ್ನು ತೆರೆಯಬೇಕು ಅದು ಮೈಸೂರಿನ ಕೆಥೊಲಿಕ್ ಕನ್ನಾಸ್ತ್ರೀಯರ ಸಿಬ್ಬಂದಿಯಿಂದ ನಡೆಸಲ್ಪಡಬೇಕು, ಇಂಗ್ಲಿಷು ಕಲಿಸಲ್ಪಡಬೇಕು, ಒಂದು ಬೋರ್ಡಿಂಗ್ ಮನೆಯೂ ಇರಬೇಕು ಮತ್ತು ಶಾಲೆಯು ಸರ್ಕಾರಿ ಸಂಸ್ಥೆಯಾಗಿರದೆ ಸರ್ಕಾರದ ಸಹಾಯ ಪಡೆಯುವಂಥಾದ್ದಾಗಿರಬೇಕು. ಮೈಸೂರಿನ ವಿಷಯವು ಇಲ್ಲಿಯ ವಿಷಯದ ಕನ್ಯಾಸ್ತ್ರೀಯರನ್ನು ಮಾಸ್ತರುಗಳಾಗಿ ಕಳುಹಿಸಲು ತಯಾರಾಗಿದ್ದರು. ಮತ್ತು ಮಿಸೆಸ್ ತಿಮ್ಮಯ್ಯನವರ ತಂದೆಯವರ 1871ರಲ್ಲಿ ಕೊಟ್ಟಿದ್ದ ಕಟ್ಟಡವು ಸರ್ಕಾರದ ಟ್ರೈನಿಂಗ್ ಶಾಲೆಯಾಗಿ ಉಪಯೋಗಿಸಲ್ಪಡುತ್ತಿದ್ದುದರಿಂದ ಅದಕ್ಕೆ ಇಲ್ಲಿಂದ ಬೇರೆ ಕಟ್ಟಡವನ್ನು ಕೊಡುವಂತೆ ಸ್ಥಳೀಯ ಸರ್ಕಾರವನ್ನು ಕೇಳಿಕೊಳ್ಳಲಾಯಿತು. ಅದರ ನ್ಯಾಯವಾದ ಕಾರಣಕ್ಕೆ ಅವಶ್ಯವಿದ್ದ ಹಣವನ್ನು ಕೊಡಲು ಸಾಧ್ಯವಾಗದೆ ಈ ಸರ್ಕಾರದವರು ಹಳೇ 71ನೇ ಕೊಡಗು ರೈಫಲ್ಸ್‌ಗಳ ಉಪಯೋಗದ ಮನೆಯನ್ನು ಕನ್ಯಾಸ್ತ್ರೀಯರ ಉಪಯೋಗಕ್ಕೆ ಬಿಟ್ಟುಕೊಟ್ಟರು. ನೀವು ನೋಡುವಂಥ ಈ ಕಟ್ಟಡವು ಆ ಹಳೇ ಉಪಯೋಗದ ಮನೆಯಾಗಿದೆ. 1909ರಲ್ಲಿ ಇಂಥ ವಿಷಯದಲ್ಲಿ ಸರ್ಕಾರದವರು ಶಾಲೆಯ ಅರ್ಧ ಖರ್ಚನ್ನು ಕೊಡಲು ಒಪ್ಪಿದರು ಮತ್ತು ಬೋರ್ಡಿಂಗಿನಲ್ಲಿ ಉಳಕೊಳ್ಳುತ್ತಿದ್ದ 12 ಹುಡುಗಿಯರಿಂದ ಶಾಲೆಯು ಪ್ರಾರಂಭವಾಯಿತು. ಕಾಲಕ್ರಮೇಣ ಹಾಗೆ ಕಟ್ಟಡವು ಹೆಚ್ಚಿನ ಅಭಿವೃದ್ಧಿ ಹೊಂದಲ್ಪಟ್ಟಿದೆ ಮತ್ತು 1918ರಲ್ಲಿ ಇಂಥ ಹೊಸ ಸರ್ಕಾರದ ಕಟ್ಟಡ ಕಟ್ಟುವುದಕ್ಕಾಗಿ ರೂ. 8417 ಮಂಜೂರು ಮಾಡಿದರು. ಶಾಲಾ ಕಾರ್ಯಕರ್ತರು ಕಷ್ಟಗಳನ್ನು ಲೆಕ್ಕಿಸದೆ ದುಡಿದುದರಿಂದ ಪ್ರಯತ್ನಿಸಿದರು, ಅದರೆ ಇದು ಸಾಧ್ಯವಾಗಲಿಲ್ಲವೆಂದು. ಇಂತಹದರಿಂದ 1927ರಲ್ಲಿ ಈ ಕಟ್ಟಡದ ಚಾರ್ಜನ್ನು ವಹಿಸಿಕೊಂಡು, ಅದರ ಹಿಂದಿನ ಖರ್ಚು ಕೊಡುವಂತೆ ಸ್ಥಳೀಯ ಸರ್ಕಾರವನ್ನು ಕೇಳಿಕೊಳ್ಳಲಾಯಿತು. ಇದಕ್ಕೆ ಸ್ಥಳೀಯ ಸರ್ಕಾರದವರು ಒಪ್ಪಿದರು.

ಈಗ 243 ಕೊಡಗು ಹುಡುಗಿಯರಿದ್ದಾರೆ, ಅವರಲ್ಲಿ 94 ಬೋರ್ಡರುಗಳಾಗಿರುವರು. ಇಷ್ಟು ಮಕ್ಕಳಿಗೆ ಈಗಿನ ಕಟ್ಟಡವು ಸಾಲದು ಮತ್ತು ಒಂದು ದೊಡ್ಡ ಹಾಲ್ ಇಲ್ಲದ ಇರುವುದು ದೊಡ್ಡ ಅನಾನುಕೂಲವೆಂದು ರಲ್ಲಿರುವವರೆಂದು ಸ್ವಲ್ಪ ಕಾಲದಿಂದಲೇ ಕಂಡು ಬಂದಿದೆ.

ಪ್ರಾರಂಭದಲ್ಲಿ ಈ ದಾರಿಗೆ ರೂ. 7000 ಎಂದಾಜು ಮಾಡಲಾಯಿತು, ಆದರೆ ಇನ್ನೂ ಸಾಕಾಗದೆ ಹೋಯಿತು. ಮಿಸೆಸ್ ತಿಮ್ಮಯ್ಯನವರು ಮತ್ತು ನಾನು ಈ ವಿಷಯ ಹಲವು ಸಾರಿ ಎಲ್ಲಾ ರೀತಿಯಲ್ಲಿಯೂ ಚರ್ಚಿಸಿದೆವು ಮತ್ತು ಸ್ಥಳೀಯ ಸರ್ಕಾರದಲ್ಲಿ ಇದಕ್ಕೆ ಕೊಡಲು ಹಣವಿಲ್ಲವೆಂದು. ಕೊಡಗಿನ ದಾನಿಗಳ ಉದಾರ ಮನಸ್ಸಿನ ಸಹಾಯಗಳನ್ನು ಕೇಳಿದರೆ ಹಣ ದೊರೆಯಬಹುದೆಂದು, ಹಾಗೆ ಕೇಳಲು ತಾವು ಒಪ್ಪಿಕೊಳ್ಳುತ್ತೇನೆಂದು ಮಿಸೆಸ್ ತಿಮ್ಮಯ್ಯನವರು ಹೇಳಿದರು. ಅವರು ಇದನ್ನು ಯಶಸ್ವಿಯಾಗಿ ನಡೆಸಿದರು. ಇದಕ್ಕಾಗಿ ಉದಾರತ್ವದಿಂದ ದ್ರವ್ಯ ಸಹಾಯ ಮಾಡಿ ಈ ದಿನ ಸಮಾರಂಭಕ್ಕೆ ಬರಲು ನನ್ನನ್ನು ಕೇಳಲು ಅನುಕೂಲಿಸಿದ ಮಹಿಳೆಯರ ಮತ್ತು ಮಹನೀಯರ ಹೆಸರುಗಳನ್ನು ನಿಮ್ಮ ಅಪ್ಪಣೆ ಮೇರೆ ಓದುತ್ತೇನೆ (ಈ ಪಟ್ಟಿಯು ಈ ಮೊದಲೇ ಈ ಪತ್ರಿಕೆಯಲ್ಲಿ ಪ್ರಕಟವಾಗಿದೆ.)

ಇದಕ್ಕೆ ಹಣ ಕೊಡುವ ಸಂತೋಷವು ಚೀಫ್ ಕಮಿಷನರಿಗೂ ಮತ್ತು ನನಗೂ ದೊರಕಿತು. 'ತನಗೆ ತಾನೆ ಸಹಾಯ ಮಾಡಿಕೊಳ್ಳುವವರಿಗೆ ದೇವರು ಸಹಾಯ ಮಾಡುತ್ತಾನೆ' ಎಂಬ ಹಳೇ ಗಾದೆಯೊಂದಿದೆ. ಈ ಸಂದರ್ಭದಲ್ಲಿ ಅದು ನಿಜವಾಗಿದೆ. ಯಾಕೆಂದರೆ—ಮಿಸೆಸ್ ತಿಮ್ಮಯ್ಯನವರು ರೂ. 3000 ವಸೂಲು ಮಾಡಿರುವುದರಿಂದ ಇದಕ್ಕೆ ಸಾಕಷ್ಟು ಹಣವು ಸರ್ಕಾರದಲ್ಲಿ ದೊರೆಯಬಹುದೆಂದು ಕಂಡು ಬಂದಿತು ಮತ್ತು ಎಂಜಿನಿಯರ್ ಮಾಡಿದವರು ಅತ್ಯವಶ್ಯವಿರುವ ಹೆಚ್ಚಿನ ಕ್ಲಾಸ್ ರೂಮುಗಳನ್ನು ಕಟ್ಟಿಸಿ ಕೊಡಬೇಕೆಂದು ಕೇಳಿದರು, ಇವು ಬೇಗನೆ ಮಾಡಲ್ಪಡುವವೆಂದು ಆಶಿಸುತ್ತೇನೆ.

ವಿಸ್ತರ ಮಹಾ ಕಾರ್ಯಗಳನ್ನು ಶಿಕ್ಷಕಿಯರು ಅಥವಾ ವಿದ್ಯಾರ್ಥಿನಿಯರು ವಹಿಸಿ ನಡೆಸುವರು. 19ನೇ ಶತಮಾನದ ಅಂತ್ಯದ ವರೆಗೂ ಕೊಡಗಿನಲ್ಲಿ ಸ್ತ್ರೀಯರು ಬರೆಯಲು ಓದಲು ಪುರಾತನ ಪದ್ಧತಿಯಾಗಿದೆ ಮತ್ತು ಇವು ಬಹು ಸುಂದರ ವಸ್ತುಗಳಾಗಿವೆ. ಮುಖ್ಯವಾಗಿ ಸ್ತ್ರೀ ವಿದ್ಯಾಭ್ಯಾಸವು ಹಿಂದುಳಿದಿದ್ದರೂ ಬಹು ಪ್ರಯತ್ನಿಸುತ್ತಿರುವ ಈ ಸಮಯದಲ್ಲಿ ಕೊಡಗಿನ ಹುಡುಗಿಯರ ವಿದ್ಯಾಭ್ಯಾಸದ ಚರಿತ್ರೆಯಲ್ಲಿ ಇದೊಂದು ವಿಶೇಷ ಸುದಿನವೆಂದು ನಾವು ಯೋಚಿಸುವುದರಿಂದ, ಈ ದಿನ ನೀವು ಇದರ ಅಧ್ಯಕ್ಷತೆಯನ್ನು ವಹಿಸಿದ್ದಕ್ಕೆ, ಇದಕ್ಕೆ ಧನ ಸಹಾಯ ಮಾಡಿದವರ ಹೆಸರುಗಳೊಂದಿಗೆ ಹಾಲ್ ಮುಗಿಸೋಣ ಎಂದು ಅದರಲ್ಲಿ ಕೆತ್ತಿಸಲು ನಾವು ಆಶಿಸುತ್ತೇವೆ.

ಕಟ್ಟಡದ ಕಲ್ಲನ್ನು ಹಾಕುವಂತೆ ನಿಮ್ಮನ್ನು ಕೇಳುವ ಮುಂಚೆ ಈ ಸಂಗ್ರಹಕ್ಕೆ ಸಹಾಯ ಮಾಡಿದವರ ಪರವಾಗಿ ನಿಮಗೆ ಮಾಡಿಕೊಡಲು ಮಿಸೆಸ್ ತಿಮ್ಮಯ್ಯನವರ ಅಪ್ಪಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಅಡಿಪಾಯದ ಕಲ್ಲನ್ನು ಹಾಕುವಂತೆ ನಿಮ್ಮನ್ನು ಕೇಳಿಕೊಳ್ಳಲೇ?

ನೋಟೀಸು.

ದಕ್ಷಿಣ ಕೊಡಗು ತಾಲೋಕು ನಾಪೋಕ್ಲು ನಾಡು ನರಿಯಂದಡ ಗ್ರಾಮದ ಮಾಚಿಕೆ ಕುಪ್ಪೋಡನ ಮುತ್ತು, ಅಪ್ಪಡೆ ಕಾವೇರಿ, ಪೈದು, ನಾವು ನಾಲ್ಕು ಜನರು ಈ ಮೂಲಕ ಸರ್ವ ಜನರಿಗೂ ತಿಳಿಸುವದೇನಂದರೆ—

ಇದೇ ಗ್ರಾಮದಲ್ಲಿ ನಮ್ಮ ಕುಪ್ಪೋಡನ ಚಾಮಿಯನ್ನು ಬೆಂಬಲದ ಹೆಸರಿಗೆ ನಮ್ಮ ಕಟುಂಬದ ಪಿತ್ರಾರ್ಜಿತದ ಒಕ್ಕದ ಭೂಮಿಯು ಸೈಕೆ ನಂಬರು ಗಂಟಿನ 7 ಚಿಲ್ಲರೆ ವಿಸ್ತೀರ್ಣ ಭೂಮಿಯು ಬನಬಂದಿಯ ಮೇಲೆ ಸರ್ಕಾರದಿಂದ ದಾಖಲಾಗಿದೆ. ಈ ಭೂಮಿಯ ಹಕ್ಕು ಬಾಧ್ಯತೆಯು ಕುಟುಂಬಸ್ಥರಾದ ನಮಗೆಲ್ಲರಿಗೂ ಹಕ್ಕು ಇರುವದಾಗಿದೆ. ಸದರಿ ಭೂಮಿಯನ್ನು ಸದರಿ ಚಾಮಿಯನ್ನು ಕುಟುಂಬಸ್ಥರಿಗೆ ಮೋಸಪಡಿಸುವ ಇರಾದೆಯಿಂದ ಬೇರೆ ಜನರಿಗೆ ಗಿರವಿ, ಬೋಗ್ಯ, ಸ್ವಾಧೀನ ವಿಕ್ರಯ ಇವುಗಳಿಂದ ಬರೆದುಕೊಡುವಂತೆ ಇದ್ದಂತೆ ದು ಪ್ರಕಾಶನ ಇದೆ. ಹಾಗೆ ಬರೆದುಕೊಡಲು ಯಾವ ಹಕ್ಕು ಇವರಿಗಿರುವುದಿಲ್ಲ. ಹಾಗೆ ಇವರಿಂದ ಆ ಭೂಮಿಯನ್ನು ದಿಗ್ಗಲ್ಲದೆ ಬೇರೆಯವರಿಗೆ ಬರೆಕೊಟ್ಟರೆ ಅದು ಮಂಜೂರಾಗತಕ್ಕದ್ದಲ್ಲ. ಅದೂ ಅಲ್ಲದೆ ಇವರ ಸ್ವಂತ ಭಾಗದಲ್ಲಿ ಇವರ ತಂದೆಯ ಅನುಭವದ ಭೂಮಿಯನ್ನು ಸರ್ಕಾರದವರು ಗೆಜ್ಜೆಯಾಗ ಹಾಕಿ ಇದು ಹೆಸರ ಕಳೆದು ಬೇರೆ ಸಾಹುಕಾರರು ಇದರಿಂದ ಖಾತಾ ಸರ್ಕಾರದಲ್ಲಿದ್ದದ್ದು ಇದು ದೊಡ್ಡವರಿಂದ ಮೇಲೆ ಇವರಿಗೆ ಸಿಕ್ಕಿದೆ. ಹೀಗೆ ಸದರಿ ಚಾಮಿಯನ್ನು ಸಿಗೆ ಹಕ್ಕು ಇದ್ದುದರಿಂದ, ಭೂಮಿ ದಾಖಲಾತಿ ಅದಾಯ ಮತ್ತು ತೀರ್ವೆಯಿಂದ ಹೀಗೆ ಇಲ್ಲದೆ ಕುಟುಂಬಸ್ಥರಾದ ನಮಗೆ ಅನುಭವದ ಭೂಮಿ ಸೈಕೆ 2 ಚಿಲ್ಲರೆ ಎಕರೆ ಭೂಮಿಯನ್ನು ಕಾಫಿತೋಟ ನಾಟಿಬರದರ ಮುಖಾಂತರ ನೇರವೆ ಅರ್ಜಿಯ ಪ್ರಕಾರ ಕೊಟ್ಟು ನಾವಿಲ್ಲದೆ ನಿಪುಣತೆ ಮಾಡಿದ್ದ. ಈಗ ಇರುವ ಅವರ ಅನುಭವದ 7 ಚಿಲ್ಲರೆ ಎಕರೆ ಭೂಮಿಯ ಉತ್ಪತ್ತಿಯೂ ಕೂಡ ಅವರ ಜೀವನಕ್ಕಿಂತ ಹೆಚ್ಚಾಗಿಯೂ ಇವರನ್ನು ಹುಡುಗರ ಗಂಡು ಹಸಿ ಮಲೆಯಾಳದಲ್ಲಿರುವ ತನ್ನ ಸಮ್ಮಂಧಿಕರ ಖರ್ಚಿಗಾಗಿ ಇವರಿಂದ ಸಾಲ ತೆಗೆದು ಆ ಸಾಲಕ್ಕೆ ಬದಲಾಗಿ ದಸ್ತಾವೇಜುಗಳಿಗೆ ಈ ಚಾಮಿಯನ್ನು ನನ್ನ ಗೆಳೆಯನಂತೆ ಸದರಿ ಚಾಮಿಯನ ಭೂಮಿಯ ಪಾಲಿಗೂ ತೊಂದರೆ ಪಡಿಸುವದಲ್ಲದೆ ಕುಟುಂಬಸ್ಥರಾದ ನಮಗೂ ತೊಂದರೆ ಪಡಿಸುವಂತೆ ಕಾಣುತ್ತದೆ. ಅದ್ದರಿಂದ ಸದರಿ ಚಾಮಿಯನ ಸದರಿ ಭೂಮಿ ಮನ್ನಾಗಳಿಗೆ ಅಥವಾ ಸಂಬಂಧಿಕರಾದವರಿಗೆಲ್ಲಾ ಕುಟುಂಬಸ್ಥರಾದ ನಮ್ಮಲ್ಲಿ ಒಪ್ಪಿಗೆ ಇಲ್ಲದೆ ಬರೆಸಿಕೊಳ್ಳತಕ್ಕದ್ದಾಗಿಯೂ, ಹಾಗೆ ಬರೆದರೆ ಅದು ಸಹ ಊರ್ಜಿತವಲ್ಲವಾಗಿಯೂ, ಅಥವಾ ಹಾಗೆ ಬರೆದರೆ ಅದರಿಂದ ನಮಗೆ ಬರುವ ನಷ್ಟಗಳಿಗೆ ಬರೆಸಿಕೊಂಡವರೇ ಜವಾಬುದಾರರಾಗಬೇಕಾಗುವದು ಈ ಮೂಲಕ ಎಲ್ಲರಿಗೂ ತಿಳಿಸಲಾಗಿದೆ. 1—1.

ಕುಪ್ಪೋಡನ ಮುತ್ತು, ಕುಪ್ಪೋಡನ ಕಾವೇರಿ,
ಕುಪ್ಪೋಡನ ಅಪ್ಪುಡೆ, ಕುಪ್ಪೋಡನ ಪೈದು.

ನೋಟೀಸು.

ಮೈಸೂರು ಜಿಲ್ಲಾ ಹುಣಸೂರು ತಾಲೋಕು ಬೆಟ್ಟದ ಪುರದ ಹೋಬಳಿ ಬೆಟ್ಟದ ತುಂಗ ಗ್ರಾಮದ ಶಿವಾಚಾರದ ಸಿದ್ದೈಯ್ಯನವರ ಮಗ ಅಂದಾನೈಯ್ಯನು ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನಂದರೆ—

ಪೊನ್ನಂಪೇಟೆನಾಡು ಧನುಗಾಲ ಗ್ರಾಮದ ಶಿವಾಚಾರದ ಚೆನ್ನ ಬಸುವೈಯ್ಯನವರ ಮಗ ಸಿದ್ದೈಯ್ಯನವರು ತನ್ನ ಬಾಪ್ತು ಸದರಿ ಗ್ರಾಮದಲ್ಲು ಅವರ ಹೆಸರಿನಲ್ಲು ಜಮಾಬಂದಿ ಸ್ವಾಧೀನಾನುಭವದಲ್ಲು ಇರುವ ಸಾಗಿನ ಸ. ನಂ 10/1ರ 4—17 ಏಕ್ರೆಯ ಭೂಮಿ, 3/4ರ 0—95 ಏಕ್ರೆಯ ಭೂಮಿ, 11ರ 0—57 ಏಕ್ರೆಯ ಭೂಮಿ, 12/3ರ 0—50 ಏಕ್ರೆಯ ಭೂಮಿ, 3/7ರ 1—30 ಏಕ್ರೆಯ ಭೂಮಿ, 3/5ರ 0—88 ಏಕ್ರೆಯ ಕಿತ್ತಳೆ ತೋಟ, 12/1ರ 3 25 ಏಕ್ರೆಯ ಹಿತ್ತಲು ಮನೆದಳ, 3/9ರ 1—90 ಏಕ್ರೆಯ ಬಾಣೆ, 3/8ರ 1—00 ಏಕ್ರೆಯ ಬಾಣೆ, 3/10ರ 2—60 ಏಕ್ರೆಯ ಬಾಣೆ, ಅಂತು ಈ ಮೇಲ್ಕಂಡ ಸೊತ್ತುಗಳು, ಅದರಲ್ಲು ಇರುವ ಮನೆ, ಕಣ, ಕೊಟ್ಟಿಗೆ, ಹಿತ್ತಲುಗಳಲ್ಲು ಇರುವ ಸರ್ವ ಫಲ ಪೈರು ವಗೈರೆಯನ್ನು ಸಹ ಸದರಿಯವರು ಮಾಡಿರುವ ಸಾಲ ಗಿರ್ವಿ ವಗೈರೆಯಿಂದ ಸೊತ್ತುಗಳು ಹರಾಜು ಆಗುವ ಸಂಭವ ಕಂಡದ್ದರಿಂದಲೂ, ಈ ಸಿದ್ದೈಯ್ಯನವರು 2ನೇ ದರ್ಜೆ ಹೆಂಡತಿಯನ್ನು ಇಟ್ಟುಕೊಂಡು ಸೊತ್ತು ಹಾಳು ಮಾಡಬಹುದೆಂಬದಕ್ಕಾಗಿಯೂ ಇವರ ಮಕ್ಕಳಾದ, ನನ್ನ ಅಳಿಯಂದಿಯರಾದ 1ನೇ ಚೆನ್ನಬಸುವೈಯ್ಯ, 2ನೇ ಪುಟ್ಟಸ್ವಾಮಿ ಯಾನೆ ರೇವೈಯ್ಯ ಎಂಬ ಈ ಎರಡು ಮೈನರುಗಳಿಗಾಗಿ ನಾನು ಸದರಿಯವರ ಸರ್ವ ಸಾಲಗಳನ್ನು ತೀರ್ಮಾನಮಾಡಿ ಸರ್ವ ಸೊತ್ತುಗಳನ್ನು ಭೋಗ್ಯಕ್ಕೆ ಬರಸಿ ರಿಜಿಸ್ಟರ್ ಮಾಡಿಸಿಕೊಂಡಿದ್ದೇನೆ. ಸಿದ್ದೈಯ್ಯನವರ ಜೀವನಾಂಶ ಸಹ ನಾನೇ ನಡಸುತ್ತೇನೆ ನಾನು ಈ ಕೆಲಸವನ್ನು ಮೇಲ್ಕಂಡ 2 ಮೈನರುಗಳಿಗಾಗಿ ಮಾಡಿದ್ದಾಗಿರುತ್ತೆ. ಈ ಲಾಗಾಯಿತಿನಿಂದ ಈ ಮೇಲಿನ ಸೊತ್ತುಗಳನ್ನಾಗಲೀ, ಅದರ ಯಾವದಾದರೂ ಒಂದು ಭಾಗವನ್ನಾಗಲೀ ಯಾವ ವಿಧದ ಪರಾಧೀನ ಮಾಡುವ ಹಕ್ಕು ಸದರಿ ಸಿದ್ದೈಯ್ಯನವರಿಗೆ ಇರುವದಿಲ್ಲ ಅಂಥಾ ಪರಾಧೀನದ ಕರಾರು ಪತ್ರಗಳು ವಗೈರೆಗಳಾದಲ್ಲು ಅಂಥಾದ್ದು ಅಸಿಂಧು ಆಗಿರಬೇಕಾಗಿ ಈ ಮೂಲಕ ವ್ಯಕ್ತಪಡಿಸಲಾಗಿರುತ್ತೆ.

ತಾ 4—1—'29 ಶಿವಾಚಾರದ ಅಂದಾನೈಯ್ಯ.

2—1

ದಾಂಪತ್ಯ ರಹಸ್ಯ.

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು. ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ ಕನ್ನಡಕ್ಕೆ ಭಾಷಾಂತರಿಸಿ ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ.

ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀ ಪುರುಷರ ಅನೇಕ ವಿಷಯಗಳೂ ಶಿಶು ಉತ್ಪತ್ತಿ, ಗರ್ಭಧರಿಸುವಿಕೆ, ಸಂಭೋಗದ ಕಾಲ, ಹಸ್ತಪ್ರಯೋಗದಿಂದುಂಟಾಗುವ ಹಾನಿ, ಇದಕ್ಕೆ ತಕ್ಕ ಚಿಕಿತ್ಸೆ, ಹೊಸದ ಮರ್ಮಗಳ ವಿವರವೇ ಮುಂತಾದ ಸುಖಭೋಗಗಳ ವಿಷಯಗಳು ಚಿತ್ರಪಟಗಳಸಹಿತ ಕೂಡಿದೆ. ಕ್ರಯ ಪುಸ್ತಕ ೧ಕ್ಕೆ ರೂ. ೧—೦—೦

ಎಸ್. ವಿ ಗೋಪಾಲ್ ಬುಕ್ ಡಿಪ್ರೋ,

52—7 37 ತಿರುಪಳ್ಳಿಬೀದಿ, ಮದರಾಸ್.

೧೦೦ ರೂಪಾಯಿ ಬಹುಮಾನ

ಮಕ್ಕಳನ್ನು ಪಡೆಯಬೇಕು, ಮಕ್ಕಳು ಆರೋಗ್ಯದಿಂದಿರಬೇಕು ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಿರಿ.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿ. | ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು ಪದಕಗಳನ್ನು ದೊರಕಿಸಿ ಸುಪ್ರಸಿದ್ಧವಾದ | ಧಿಕ್ಕರಿಸಿದರೆ ದುಃಖಿಗಳಾಗಿ ಪಶ್ಚಾತ್ತಾಪ ಪಡಬೇಡಿ.

ಬಾಲಗ್ರಹ ದೋಷನಿವಾರಕವೆಂಬ

ಮಂತ್ರ ಯಂತ್ರದ ತಾಯಿತ.

ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ, ಹೊಟ್ಟೆ ಶೂಲೆ, ಮುಸ್ಸಪ್ನ ಬೀಳುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ, ವಾಂತಿ, ಸರ್ಪಬಾಧೆ ಪಿಶಾಚಬಾಧೆಯಿಂದ ನರಳುವಿಕೆ, ಬಿಳಿ ಕೆಂಪು ಹೋಗಿ ಗರ್ಭಪತನವಾಗುವಿಕೆ ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಇದಲ್ಲದೆ ಚಿಕ್ಕ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಆಕಸ್ಮಾತ್ ಸಂದುರೋಗ ಮುಟ್ಟುದೋಷ, ಕಾಮಿಣಿ, ಗೃಹಪೀಡೆ ದೃಷ್ಟಿದೋಷ, ಭಯದಿಂದ ಜ್ವರಪೀಡೆ, ಕ್ಷೀಣ ಬೆಳೆಯುವಿಕೆ, ಬಹೂ ಅಳುವಿಕೆ, ಮುಟಗಿಬೀಸೆ ಹೊಟ್ಟೆಯೊಳಗಿಂದ ಏಳಿಸಿಅ ಮೊದಲಾದವುಗಳಿಂದ ಕಾಡುತ್ತಿರುವದು ಗರ್ಭರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧುಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ವಿಶ್ವಾಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನಭಂಗವೂ, ಚಿಕ್ಕಮಕ್ಕಳಿಗೆ ಬಾಲಗ್ರಹವೂ ಯಾವತ್ತು ಪರಿಹಾರವಾಗಿ ಸುಖವಾಗುತ್ತದೆ ಈ ತಾಯಿತ ಧರಿಸಿಕೊಂಡು ಗುಣವಿಲ್ಲೆಂದವರಿಗೆ ೧೦೦ ರೂ ಬಹುಮಾನ ಕೊಡುತ್ತೇವೆ ಒಂದುಸಲ ತರಿಸಿ ಅನುಭವ ತಕ್ಕೊಳ್ಳಿರಿ ಹೆಣ್ಣು ಮಕ್ಕಳಿಗೆ ಸಂತಾನ ದರೆಯಿಂದ ೧ಕ್ಕೆ ೩ ರೂಪಾಯಿ ಚಿಕ್ಕಮಕ್ಕಳಿಗೆ ೧ಕ್ಕೆ ೨—೮—೦ ಪೋಷ್ಟು ಖರ್ಚು ಬೇರೆ ಆಗತಕ್ಕ ವಿಳಾಸಗಳನ್ನು ಸ್ಪಷ್ಟ ಬರೆಯಿರಿ

ಪಿಯಮಿಟ್ಟು ನಿಮ್ಮ ವಿಳಾಸ ಸರಿಯಾಗಿ ಸಂಪೂರ್ಣ ತಿಳಿಯುವಂತೆ ಬರೆಯಿರಿ

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ, ಪಂಚಗಟ್ಟಿ,

52—22 ಮು. ಪೋ. ಅಥಣಿ, ಜಿ. ಬೆಳಗಾಂವ.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೋಹ, ಪಿತ್ಥದಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು—ಕ್ರಯ ಡಬ್ಬಿ 1ಕ್ಕೆ 2—8—0, ಮೂರು ಡಬ್ಬಿಗಳಿಗೆ ರೂ. 7—0—0.

ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣಪಡಿಸುವುದು ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರೈಸಿರುವವು

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ 2 ಅ 4.
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಅ 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವಜ್ವರ, ಚಳಿ ಜ್ವರ, 2 ಅಥವಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಪ್ಲೀಹ ಗೆಡ್ಡೆಯಿಂದ ಬರುವ ಜ್ವರವನ್ನು ವಿಷಮ ಜ್ವರಗಳನ್ನು ಕಳಿಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0

೪. ಮೇಹ ಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು ಬಿಳಿ, ಹಳದಿಯಂತೆ ಹೋಗತಕ್ಕ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ ಡಬ್ಬಿ 1ಕ್ಕೆ ರೂ 2—8—0. 3ಕ್ಕೆ ರೂ 7.

೫. ಇಛ್ಛಾಭೇದಿ ಗುಟಿಕೆ.

ಆಯಾಸವನ್ನು ಉಂಟುಮಾಡದ ಸುಖ ವಿರೇಚಕ ಬಾಟ್ಲಿ 1ಕ್ಕೆ 0—12—0 ಆಣೆ 3 ಬಾಟ್ಲಿಗಳಿಗೆ 2—2—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಚಿಕಿತ್ಸೆಯ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ

ಯಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

52—3 ರಥಬೀದಿ, ಮಂಗಳೂರು, ದ. ಕನ್ನಡ.

INSURE WITH THE

BOMBAY MUTUAL LIFE ASSURANCE SOCIETY, LTD.

(Established—1871)

THE OLDEST AND THE SAFEST INDIAN LIFE OFFICE.

Read what the Indian Insurance Journal writes in July 1929:—

"The Bombay Mutual Life Assurance Society occupies a unique position in the regard of its policy holders for it is of a very small number that did not experience a setback in its bonuses during the last fifty years This regard will be increased by the new bonus rates and for new comers the offer is particularly attractive Any man who wants absolute security, moderate premiums and splendid bonuses in a life office managed on economical lines cannot do better than enquire from the Bombay Mutual It is indeed a life office of which Indian Insurance has every reason to be proud

For particulars please write to — Messrs. S. A, RAMASWAMI & BROS, CHIEF AGENTS, S A L E M.

Wanted a chief agent for Coorg

ಬೊಂಬಾಯಿ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(1871 ರಲ್ಲಿ ಸ್ಥಾಪಿತವಾದ್ದು)

ಇವರಲ್ಲಿ ವಿಮೆ ಮಾಡಿರಿ.

ಎಲ್ಲಾದಕ್ಕಿಂತ ಹಳೇದಾದ ಮತ್ತು ಭದ್ರವಾದ ಇಂಡಿಯನ್ ಲೈಫ್ ಆಫೀಸು.

ಇಂಡಿಯನ್ ಇನ್ಶ್ಯೂರೆನ್ಸ್ ಪತ್ರಿಕೆಯು 1929 ನೇ ಜುಲೈಯಲ್ಲಿ ಬರೆದಿರುವುದನ್ನು ಓದಿರಿ.

"ಕಳೆದ ೫೦ ವರ್ಷಗಳಲ್ಲಿ ಬೋನಸ್ ಕೊಡುವುದರಲ್ಲಿ ಹಿಂದೆ ಬೀಳದ ಬಹು ಸ್ವಲ್ಪ ಕಂಪೆನಿಗಳಲ್ಲಿ ಇದೊಂದು ಆಗಿರುವುದರಿಂದ ಬೊಂಬಾಯಿ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿಯು ಪಾಲಿಸಿದಾರರ ಭಾವನೆಯಲ್ಲಿ ಅಪೂರ್ವವಾದ ಉತ್ತಮ ಸ್ಥಿತಿಯಲ್ಲಿದೆ. ಈ ಮೆಚ್ಚುಗೆಯು ಹೊಸ ಬೋನಸ್ ದರದಿಂದ ಹೆಚ್ಚಿಸಲ್ಪಡುವುದು ಮತ್ತು ಹೊಸಬರಿಗೆ ಈ ದರವು ಬಹು ಆಕರ್ಷಕವಾದುದು. ಮಿತವ್ಯಯದಿಂದ ನಡೆಸಲ್ಪಡುತ್ತಿರುವ ವಿಮೆ ಕಂಪೆನಿಯಲ್ಲಿ ಸಂಪೂರ್ಣ ಭದ್ರತೆ, ಮಧ್ಯಮ ತರದ ಪ್ರೀಮಿಯಮ್‌ಗಳು ಮತ್ತು ಉತ್ತಮ ಬೋನಸ್‌ಗಳು ಬೇಕಾದರೆ ಬೊಂಬಾಯಿ ಮ್ಯೂಚುವಲ್ ಕಂಪೆನಿಯಲ್ಲಿ ಕೇಳುವುದು ಉತ್ತಮ ಇದು ನಿಜವಾಗಿಯೂ ಇಂಡಿಯನ್ ಇನ್ಶ್ಯೂರೆನ್ಸ್ ಹೆಮ್ಮೆ ಪಡಬೇಕಾದಂಥ ಆಫೀಸಾಗಿದೆ.

ಹೆಚ್ಚಿನ ಸೂಚನೆಗೆ ದಯವಿಟ್ಟು ಈ ಕೆಳಗಿನವರಿಗೆ ಬರೆಯಿರಿ—

ಮೆಸರ್ಸ್ ಯಸ್. ಎ. ರಾಮಸ್ವಾಮಿ & ಬ್ರದರ್ಸ್,
ಚೀಫ್ ಏಜೆಂಟ್ಸ್, ಸೇಲಂ.

ಕೊಡಗಿಗೆ ಒಬ್ಬ ಚೀಫ್ ಏಜೆಂಟು ಬೇಕಾಗಿದ್ದಾರೆ

ಸೂಚನೆ.

ಹುತ್ತರಿ ಹಬ್ಬಕ್ಕಾಗಿ ನಮ್ಮ ಆಫೀಸು ಬರುವ ವಾರ ಮುಚ್ಚಲ್ಪಡುವುದರಿಂದ ಈ ತಾ. 20ರಲ್ಲಿ ನಮ್ಮ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲವೆಂಬದನ್ನು ವಾಚಕಮಹಾಶಯರಿಗೆ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರು.

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ 8ರಲ್ಲಿ ನಡೆಯಬೇಕಾಗಿದ್ದ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕೋರಂ ಇಲ್ಲದೆ ಬಾಕಿಯಾಯಿತು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಹುತ್ತರಿ ಮತ್ತು ಕ್ರಿಸ್ಮಸ್ ಹಬ್ಬಗಳಿಗಾಗಿ ಈ ತಾ 14ರಿಂದ ಜನವರಿ 5ರ ವರೆಗೆ ಮುಚ್ಚಲಾಗಿದೆ.

ಬರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ವಿರಾಜಪೇಟೆ ನಾಡಿನಲ್ಲಿ ಮೆ. ನಾಯಕಂಡ ಬೆಳ್ಯಪ್ಪನವರು ಒಬ್ಬ ಉಮೇದುವಾರರಾಗಿ ನಿಲ್ಲುತ್ತಾರೆಂಬ ವರ್ತಮಾನ.

ಸಿವಿಲ್ ಸರ್ಜನರಾದ ಮೇಜರ್ ತಾಂಪ್ಸನ್ ರವರು ಈ ತಾ 4ರಲ್ಲಿ ಒಂದು ತಿಂಗಳು ರಜೆಯಲ್ಲಿ ಹೋಗಿರುವರು. … ಕಡೇಮಾಡ ಕರುಂಬೈಯ್ಯನವರು ಆ ಕೆಲಸದ ಚಾರ್ಜಿನಲ್ಲಿರುವರು.

ಹುತ್ತರಿ ಹಬ್ಬಕ್ಕಾಗಿ ಕೊಡಗು ಉದ್ಯೋಗಸ್ಥರಿಗೆ ತಾ … ರಿಂದ 21ರ ವರೆಗೂ, ಕ್ರಿಸ್ಮಸ್ ಹಬ್ಬಕ್ಕಾಗಿ ಎಲ್ಲಾ ಉದ್ಯೋಗಸ್ಥರಿಗೂ ಈ ತಾ 24ರಿಂದ ಜನವರಿ 1ರ ವರೆಗೂ ರಜೆ ಇದೆ.

ಕೌನ್ಸಿಲಿನ ಜನರಲ್ ಚುನಾವಣೆಗೆ ಸಂಬಂಧಪಟ್ಟ ನೋಟೀಸುಗಳು ಇನ್ನೂ ಪ್ರಕಟಿಸಲ್ಪಡದೆ ಇರುವುದು, ಬರುವ ಚುನಾವಣೆಯು ಒಂದೆರಡು ತಿಂಗಳು ಮುಂದರಿಸಲ್ಪಡುವ ಎಂಬ ಊಹನೆಗೆ ಕಾರಣವಾಗಿದೆ.

ಈ ವರ್ಷ ಹುತ್ತರಿ ಹಬ್ಬವು ಬಹಳ ತಡವಾಗಿ ಹೋಗುವುದರಿಂದ ದಕ್ಷಿಣ ಕೊಡಗಿನಲ್ಲಿ ಮುಖ್ಯವಾಗಿ ಬಿಟ್ಟಂಗಾಲ ಕಿಗ್ಗಟ್ಟುನಾಡು ತಾಲೋಕು ಕಡೆ ಹಲವರು ಕುಯಿಲಕ್ಕೆ ಪ್ರಾರಂಭಿಸಿರುವರೆಂದು ವರ್ತಮಾನ.

ಜಮೀನ್ದಾರರ ಸಂಘದ ಕಳೆದ ಪೊನ್ನಂಪೇಟೆ ಕಾನ್ಫರೆನ್ಸಿನ ಸ್ವಾಗತ ವಿಚಾರಣೆಯ ಖರ್ಚು ವೆಚ್ಚದ ಲೆಕ್ಕವನ್ನು …ಡುವ ಬಗ್ಗೆ ಸದರಿ ಸ್ವಾಗತ ಕಮಿಟಿಯ ಮೀಟಿಂಗೊಂದು ತಾ. 25ನೇ ಬುಧವಾರ ಪೊನ್ನಂಪೇಟೆಯಲ್ಲಿ ನಡೆಯುವುದೆಂದು ತಿಳಿಯುತ್ತೇವೆ.

ಕೊಡಗಿನ ಹೊಸ ಚೀಫ್ ಫಾರೆಸ್ಟ್ ಆಫೀಸರಾಗ ವ… ಹೆಚ್ ಜಿ ಹಿತ್ಲರವರು ಈ ತಾ. 4ರಿಂದ ಈಗಿನ ಚೀಫ್ ಆಫೀಸರಾದ ಮೆ. ರಾಬಿನ್ಸನ್ ರವರ ಸಂಗಡ ಕೆಲಸ ಕಲಿಯುತ್ತಿರುವರೆಂದೂ, ಬರುವ ತಿಂಗಳು 5ರಲ್ಲಿ ಇವರು ಚಾರ್ಜ್ ವಹಿಸಿಕೊಳ್ಳುವರೆಂದೂ ತಿಳಿದು ಬರುತ್ತದೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳು ಈ ತಾ 10ರಲ್ಲಿ ಕೌನ್ಸಿಲ್ ಹಾಲ್ ನಲ್ಲಿ ಮೆ. ಗಳಾದ ಕೊಕ್ಕಲಮಾಡ ಕರುಂಬೈಯ್ಯನವರನ್ನೂ, …ಮಾಡ ಮುತ್ತಣ್ಣನವರನ್ನೂ ಮತ್ತು ಪಾಂಡ್ಯಂಡ ಬೆಳ್ಯಪ್ಪನವರನ್ನೂ ಫೈನಾನ್ಸ್ ಕಮಿಟಿಯ ಮೆಂಬರುಗಳಾಗಿ ಚುನಾಯಿಸಿದರು.

ಮುಜ್ರಾಯಿ ಇಲಾಖೆಯವರ ಹುತ್ತರಿ ಹಬ್ಬ ಪಟ್ಟಿ ಪ್ರಕಾರ ಈ ವರ್ಷ ನಾಡ ಪೊಲುದು ಈ ತಾ 16ರಲ್ಲಿ ಆದರೂ … 18ರಲ್ಲಿ ಆಗಬೇಕಾಗಿದ್ದರೂ, ಶೂನ್ಯ ಮಾಸವಾದ … ದಲ್ಲಿ ಕದಿರು ತೆಗೆಯುವುದು ಯೋಗ್ಯವಲ್ಲವಾದ್ದರಿಂದ ದೇಶದವರೆಲ್ಲರೂ ಒಂದೇ ದಿನ ಅಂದರೆ ಈ ತಾ 15 … ದಿವ್ಯವಾರ ಕದಿರು ತೆಗೆಯುವ ಅನುಕೂಲವೂ, ಸುದ… ದೊರೆತಿದೆಯೆಂದು ಒಂದು ಬಾತ್ಮಿ.

ಹಿಂದೂದೇಶದ … ಕಡೆಗಳಂತೆಯೇ ಮಡಿಕೇರಿಯಲ್ಲಿ … ಜಯಂತಿ ದಿನವು ಈ ತಾ 12ರ ಸಾಯಂಕಾಲ ವೇ… ಸಂಘದವರ ಆಶ್ರಯದಲ್ಲಿ ಸೆಂಟ್ರಲ್ ಹೈಸ್ಕೂಲು ಹಾ… ಆಚರಿಸಲ್ಪಟ್ಟಿತು. ಹೈಸ್ಕೂಲಿನ ಸಂಸ್ಕೃತ ಪಂಡಿತ ಮೆ. ಅಣ್ಣರಾಮ ಶಾಸ್ತ್ರಿಯವರು ಭಗವದ್ಗೀತೆಯನ್ನು … ಸ್ವಾರಸ್ಯವಾದ ಮತ್ತು ಬೋಧಪ್ರಯುಕ್ತವಾದ ಉಪನ್ಯಾಸವನ್ನು ಮಾಡಿದರು. ರಾ ಬ. ಕೋದಂಡ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು.

ಹಿಂದೂದೇಶ.

ಲಾಹೋರ್ ಕಾಂಗ್ರೆಸ್ಸಿನ ವಸ್ತು ಪ್ರದರ್ಶನವನ್ನು ತಾ … ತೆರೆಯಲು ಸರ್ ಪಿ ಸಿ ರಾಯಿಯವರು ಒಪ್ಪಿರುವರು.

…ರ್ಸ್ಪಿಯ ಒಬ್ಬ ಮುಸಲ್ಮಾನರ ಮನೆಯಲ್ಲಿ ಈ ತಿಂ. ಒಂದು ಮೇಕೆಯು ಮನುಷ್ಯ ರೂಪದ ಮರಿಯನ್ನು …ಯಿತಂತೆ!

ವರ್ಮಾ ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷರನ್ನು … ತೆಗೆಯಬೇಕೆಂದು ಆ ಕೌನ್ಸಿಲಿನಲ್ಲಿ ಚರ್ಚಿಸಲ್ಪ…ವು ಪಾಸಾಗಲಿಲ್ಲ.

ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಬಗ್ಗೆ ಒಂದು ಬಿಲ್ಲನ್ನು ತರುವ ಅಸೆಂಬ್ಲಿಯ ಮೀಟಿಂಗಿನಲ್ಲಿ ಮೆ. ಜಯಕರವರು ಸೂಚಿಸಲಿಕ್ಕಿದ್ದಾರೆ.

ತಾ 8ರಲ್ಲಿ ಅಹ್ಮದಾಬಾದಿನಲ್ಲಿ ನಡೆದ ಗುಜರಾತಿನ ಪ್ರಾಂತೀಯ ಸ್ತ್ರೀಯರ ಕಾನ್ಫರೆನ್ಸಿನಲ್ಲಿ ಬಾಲ್ಯ ವಿವಾಹ ನಿಷೇಧದ ಸಾರ್ದಾ ಬಿಲ್ಲಿಗೆ ಒತ್ತಾಸೆಯಾಗಿ ಠರಾವು ಪಾಸು ಮಾಡಿದರು.

ರೌಂಡ್ ಟೇಬಲ್ ಕಾನ್ಫರೆನ್ಸ ಸಂಬಂಧ ಇಂಡಿಯದ ಮುಂದಾಳುಗಳು ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಬೇಕೆಂದು ಹೇಳಿದ್ದಕ್ಕೆ, ಅವರಲ್ಲಿ ಕೆಲವರನ್ನಾದರೂ ಬಿಡುವ ಆಲೋಚನೆಯನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಮಾಡುತ್ತಿರುವರಂತೆ.

ಕಳೆದ ವಾರ ಬೊಂಬಾಯಿಯಲ್ಲಿ ನಡೆದ ಕ್ವಾಡ್ರಾಂಗ್ಯುಲರ್ ಕ್ರಿಕೆಟ್ ಟೂರ್ನಮೆಂಟಿನ 1ನೇ ಆಟದಲ್ಲಿ ಹಿಂದೂಗಳು ಮುಸಲ್ಮಾನರನ್ನು ಸೋಲಿಸಿದರು; 2ನೇ ಆಟದಲ್ಲಿ ಪಾರ್ಸಿಯರು ಯೂರೋಪಿಯನರನ್ನು ಸೋಲಿಸಿದರು. ಆಖೈರು ಆಟದಲ್ಲಿ ಹಿಂದೂಗಳು ಪಾರ್ಸಿಯರನ್ನು ಸೋಲಿಸಿ ಬಹುಮಾನವನ್ನು ಪಡೆದರು.

ಸಾರದಾ ಮಸೂದೆಯು ಜಾರಿಗೆ ಬರುವ ಮೊದಲು ವಿವಾಹ ಮಾಡಿಬಿಡಬೇಕೆಂದು ಗುಜರಾತಿನಲ್ಲಿ ಎಲ್ಲೆಲ್ಲಿಯೂ ಮದುವೆಯ ಸಂಭ್ರಮವೇ ನಡೆಯುತ್ತಿದೆಯಂತೆ. ಸೂರತ್ ಪಟ್ಟಣ ಒಂದರಲ್ಲಿಯೇ 2,000 ವಿವಾಹಗಳು ನಡೆದಿವೆ. ತೊಟ್ಟಿಲ ಕೂಸುಗಳನ್ನೂ ಮದುವೆ ಮಾಡಲು ತೊಡಗಿರುವರು. ವರದಕ್ಷಿಣೆಯ ದರವಂತೂ ಬಹಳ ಏರಿದೆ.

ಉತ್ತರ ಅರ್ಕಾಟ್ ಡಿಸ್ಟ್ರಿಕ್ಟಿನ … ಎಂಬ ಗ್ರಾಮದಲ್ಲಿ ಬಡಲಿಗಾ… ಎಂಬ ಸುಮಾರು 26 ವರ್ಷ ಪ್ರಾಯದ ಪುರುಷನೊಬ್ಬನು ಈಗ ಸ್ತ್ರೀ ರೂಪಕ್ಕೆ ತಿರುಗುತ್ತಿದ್ದಾನಂತೆ! ಅವನಿಗೆ ಮೊದಲು ಪುರುಷಾವಯವಗಳೆಲ್ಲವೂ ಇದ್ದವು. ಈಗ 3 ವರ್ಷಗಳಿಂದ ಅವೆಲ್ಲವೂ ಮೆಲ್ಲ ಮೆಲ್ಲಗೆ ಮಾಯವಾಗುತ್ತಾ ಸ್ತ್ರೀ ಅವಯವಗಳು ಕಾಣ ಬರುತ್ತಿವೆಯಂತೆ. ಸ್ತನಗಳು ದಪ್ಪವಾಗುತ್ತಾ, ತಿಂಗಳು ಗಟ್ಟಲೆ ಮುಟ್ಟಾಗುತ್ತಾ ಎಂದು ಒಂದು ಸಾರಿ ಗರ್ಭದ ಚಿಹ್ನೆ ತೋರಿ ಸಿಂಕು ಹೋಯಿತಂತೆ. ವಿಷಯ ಇಲ್ಲದ ಇವನ ನಡಿಗೆಯು ಪುರುಷನಂತಿದ್ದರೂ ಇವನಿಗೆ ಪುರುಷರೊಂದಿಗೆ ಮಾತನಾಡಲು ಲಜ್ಜೆ, ಸ್ತ್ರೀಯರೊಂದಿಗೆ ಇರಲು ಇಷ್ಟ - ಇದೆಂಥಾ ವಿಚಿತ್ರ!

ವಿದೇಶ.

ಈ ತಾ 7ರಲ್ಲಿ ಬ್ರಿಟನ್ನಿನ ದಕ್ಷಿಣ ಭಾಗದಲ್ಲಿ ಚಳಿ ಬಿರುಗಾಳಿಯಿಂದ ತುಂಬಾ ನಷ್ಟ ಸಂಭವಿಸಿದೆ.

ರಷ್ಯಾದಲ್ಲಿ ಕ್ರಿಸ್ಮಸ್ ಹಬ್ಬವನ್ನು ಆಚರಿಸಬಾರದೆಂದು ನಾಸ್ತಿಕರು ಚಳವಳ ನಡಿಸುತ್ತಿರುವರಂತೆ!

ಗ್ರೀಸ್ ದೇಶದ ಪ್ರೆಸಿಡೆಂಟರಾದ ಎಡ್ಮಿರಲ್ ಕೊಂಡರಯುಟಿಸ್ ರವರು ತಮ್ಮ ಪದವಿಗೆ ರಾಜಿನಾಮೆ ಕೊಟ್ಟಿರುವರು.

ಮ್ಯಾಂಚೆಸ್ಟರಿನ ಒಬ್ಬ ಶ್ರೀಮಂತನ ಮಗಳಾದ ಮಿಸ್ ಎಡಿತ್ ವಾಟ್ಸನ್ ಎಂಬವಳು ಡೆಲ್ಲಿಯಲ್ಲಿ ಹಿಂದೂ ಧರ್ಮವನ್ನು ಸ್ವೀಕರಿಸಿರುವಳು.

ಚೈನಾದ ನ್ಯಾಂಕಿಂಗ್ ರಾಷ್ಟ್ರೀಯ ಸರ್ಕಾರದ ಪ್ರೆಸಿಡೆಂಟರನ್ನು ಕೆಳಗಿಳಿಸಿ ಕೆಲವು ದೊಡ್ಡ ಸೇನಾಧಿಪತಿಗಳು ಪ್ರಕಟಣೆ ಹೊರಡಿಸಿ, ಪ್ರೆಸಿಡೆಂಟರಿಗೆ ವಿರೋಧ ನಿಂತಿರುವರು. ಇನ್ನು ಮುಂದಕ್ಕೆ ಏನಾಗುತ್ತದೋ ನೋಡಬೇಕಷ್ಟೆ.

… ಇಸ್ಮಾಯಿಲಿ ಕೋಮಿನ ಗುರುಗಳಾದ ಮತ್ತು ಒಬ್ಬ ದೊಡ್ಡ ಐಶ್ವರ್ಯವಂತರಾದ ಆಗಾಖಾನರು, ಪ್ಯಾರಿಸ್ ಕ್ಯಾರನ್ ಎಂಬೊಬ್ಬ ಫ್ರೆಂಚ್ ಸ್ತ್ರೀಯನ್ನು ಈ ತಾ 7ರಲ್ಲಿ ಫ್ರಾನ್ಸಿನ ಎಯಿಕ್ಸ್—ಲೆಸ್—ಬೈನ್ಸ್ ಎಂಬಲ್ಲಿ ಮದುವೆಯಾದರು. ಆಗಾಖಾನರು ವಧುವಿಗೆ 200,000 ಪೌಂಡುಗಳ ಬೆಲೆಯುಳ್ಳ ಸ್ತ್ರೀಧನ ಕೊಟ್ಟಿರುವರಲ್ಲದೆ 64,000 ಪೌಂಡುಗಳಷ್ಟು ಒಡವೆ ವಸ್ತುಗಳನ್ನು ಕೊಟ್ಟಿರುವರಂತೆ. ಸದ್ಯ ಇಷ್ಟು ದೊಡ್ಡ ಸ್ತ್ರೀಧನ ಕೊಟ್ಟಿರುವುದಿಲ್ಲವೆಂದೂ ಒಂದು ವರ್ತಮಾನ.

ಅಫಘಾನಿಸ್ಥಾನದಲ್ಲಿ … ಇಲ್ಲವೆಂತಲೂ, ಬಚ್ಚಾಯಿ ಸಾಕೋನಿಗೆ ಕಡೆ ಪಠಾಣ್ಯರುಗಳ ಸಹಾಯ ದೊರೆಯುತ್ತಿಲ್ಲವೆಂತಲೂ, ಜನರ ಇಂಗಿತವನ್ನರಿತು ನಾದಿರ್ ಖಾನರು ಆರಿಸಲ್ಪಟ್ಟಿರುವರೆಂತಲೂ ನಾಡಿ ಅರಸರಾದ ಅನುಕೂಲತೆಯನ್ನು ಸಾಧಿಸಲು ಬರುತ್ತಿರುವರು. ಜನರ ಶ್ರೇಯಸ್ಸಿಗಾಗಿ ನಾದಿರ್ ಖಾನರು ವಿದ್ಯಾ ಪ್ರಚಾರ ಮತ್ತು ವ್ಯಾಪಾರ ವಿಷಯದಲ್ಲಿ ಈಗಿನ ಕಾಲದ ವ್ಯವಸ್ಥೆಗಳನ್ನು ಮಾಡಲು ಉದ್ಯುಕ್ತರಾಗಿರುವರೆಂದೂ, ಹಿಂದೂ ದೇಶದವರು ಅಫಘಾನಿಸ್ಥಾನದ ಶಾಂತಿಯ ಕಡೆ ತೋರಿಸಿದ ಸಹಾನುಭೂತಿಗೆ ಅವರಿಗೆ ತುಂಬಾ ವಂದನೆಗಳೆಂದೂ ಅಫಘಾನಿಸ್ಥಾನದ ಇಂಗ್ಲೆಂಡ್ ರಾಯಭಾರಿಯಾದ ಸರ್ದಾರ್ ಷಾ ವಾಲಿಖಾನರು ಹೇಳಿರುವರು.

ವಂದನೆಗಳು.

ಕಳೆದ ಸುಮಾರು 7 ವರ್ಷಗಳಿಂದ ನಡೆಯುತ್ತಿದ್ದ ಚೆಪ್ಪುಡೀರ ಕುಟುಂಬದವರು ರಾ. ಬ. ತಿಮ್ಮಯ್ಯ ಸುಬೇದಾರರ ಭಾಗದವರಿಗೂ ಮತ್ತು ಕುಟುಂಬಸ್ಥರಿಗೂ 'ಗುಂಡಾಕಾಡಿನ' ಎಂಬ ಸುಮಾರು 170 ಬಟ್ಟಿ ಭೂಮಿಯ ವ್ಯಾಜ್ಯವು ಕಳೆದ ತಿಂಗಳಲ್ಲಿ ಕೊಡಗು ಕಮಿಷನರ್ ಸಾಹೇಬರವರ ಕೋರ್ಟಿನಲ್ಲಿ ಸದರಿ ತಿಮ್ಮಯ್ಯ ಸುಬೇದಾರರ ಮತ್ತು ಮೇಲ್ಕಂಡವರ ಪರವಾಗಿ ಅವರ ವ್ಯಾಜ್ಯದ ಖರ್ಚು ಸಮೇತ ಡಿಕ್ರಿಯಾಗಿರುವ ಸಂಗತಿ … ಸೂಚಿಸುತ್ತೇನೆ. ಅಲ್ಲದೆ ಈ ವ್ಯಾಜ್ಯದಲ್ಲಿ ನನಗೆ ಸಹಾಯ ಮಾಡಿದಂಥ ಕುಟುಂಬಸ್ಥರಿಗೂ, ಊರಿನವರಿಗೂ ಮತ್ತು ಇತರರಿಗೂ ಈ ಮೂಲಕ ತುಂಬಾ ವಂದನೆಗಳನ್ನು ಅರ್ಪಿಸುತ್ತೇನೆ.

ಚೆಪ್ಪುಡಿರ ಮುದ್ದಣ್ಣ.

ಪೊನ್ನಂಪೇಟೆನಾಡು ಓಟರುಗಳಲ್ಲಿ ವಿನಂತಿ.

ಮಹನೀಯರೇ,

ಬರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಪೊನ್ನಂಪೇಟೆ ನಾಡಿನ ಪರವಾಗಿ ನಾನೊಬ್ಬ ಉಮೇದುವಾರನಾಗಿ ನಿಲ್ಲಲು ನಿಶ್ಚೈಸಿರುತ್ತೇನೆ. ನಮ್ಮ ದೇಶದ ಮತ್ತು ನಾಡಿನ ಏಳಿಗೆಗಾಗಿಯೂ, ರಾಷ್ಟ್ರೀಯ ಮತ್ತಿತರ ಚಳುವಳಿಗಳಿಗಾಗಿ ಈಗ ಕೆಲವು ವರ್ಷಗಳಿಂದ ನಾನು ಮಾಡುತ್ತಿರುವ ಕೆಲಸವು ನಿಮಗೆಲ್ಲರಿಗೂ ತಿಳಿಯದ್ದಲ್ಲ. ಇನ್ನು ಮುಂದಕ್ಕೂ ನಾಡಿನ ಹಾಗು ದೇಶದ ಅಭಿವೃದ್ಧಿಗಾಗಿ ದುಡಿಯ ಬೇಕೆಂಬ … ಕುತೂಹಲವೂ ನನಗಿರುವುದರಿಂದ, ನೀವು ಮತ್ತು ನಿಮ್ಮ ಇಷ್ಟಮಿತ್ರರು ಸಹ ಬರುವ ಚುನಾವಣೆಯಲ್ಲಿ ನನಗೆ ಓಟು ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಬೇಕಾಗಿ ಕೋರುತ್ತೇನೆ.

ತಮ್ಮ ವಿಧೇಯ,

1—1 ಜಮ್ಮಡ ಮಾದಪ್ಪ.

ಪತ್ರವ್ಯವಹಾರ.

[… ದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ … ಜವಾಬ್ದಾರರಲ್ಲ. ಸಂ.]

ಅಪ್ಪಿ ಮಠ.

ಕೊಡಗು ದೇಶದಲ್ಲಿ ಈ ದೇಶಕ್ಕೆ ಸಂಬಂಧಪಟ್ಟ ಈ ದೇಶದ ಪೂರ್ವದ ವೀರಶೈವ ರಾಜರುಗಳಿಂದ ಸ್ಥಾಪಿತವಾದ ಈ ದೇಶೀಯರ ಹಕ್ಕಾದ ವೀರಶೈವ ಮತದವರ ಅನೇಕ ಮಠಗಳಿರುವುದು ಸರಿಯಷ್ಟೆ. ಇವುಗಳಲ್ಲೊಂದಾದ ಅಪ್ಪಿ ಮಠವು ಕೆಲವು ವರ್ಷಗಳ ಹಿಂದೆ ಇದ್ದ ಆಗಿನ ಅಧಿಕಾರಿಗಳು ಶಿವಾಧೀನರಾಗುವಾಗ್ಯೆ ತಮ್ಮ ಅಂತಿಮ ಕಾಲದಲ್ಲಿ ತಮ್ಮ ಅಧಿಕಾರವನ್ನು ಇದೇ ದೇಶೀಯರಾದ ನಾಗಭೂಷಣ ಸ್ವಾಮಿಗಳೆಂಬ ವೈಸರ್ ವಿಲುವಿಗೆ ವಿಲ್ ಮೂಲಕ ವಹಿಸಿದ್ದರು. ಅದರ ಮೇಲೆ ದೇಶೀಯ ಭಕ್ತ ಮಹೇಶ್ವರರೂ, ಮಠಾಧಿಕಾರಿಗಳೂ ದೂಮೂಲಿನಂತೆ ಅದೇ ಪಟ್ಟವನ್ನು ಆ ಮಠಕ್ಕೆ ವಿಧ್ಯುಕ್ತವಾಗಿ ಗುರುಗಳನ್ನಾಗಿ ನೇಮಕ ಮಾಡಿದರು. ಆಗ್ಗೆ ಮೈಸೂರ್ ದೇಶದ ಚಿಕ್ಕದುಗ್ಗದ ವ್ಯಾಧಿಕಾರ್ತರಾದ ಶ್ರೀಮನ್ ಮುರುಘಾರಾಜೇಂದ್ರ ಸ್ವಾಮಿಗಳು ತಮಗೆ ಆಜ್ಞೆ ಇಲ್ಲದೆ ಅಧಿಕಾರ ಮಾಡಕೂಡದೆಂತಲೂ, ವಿರಕ್ತ ಮಠಗಳ ಮೇಲಾಧಿಕಾರಿಗಳು ತಾವೆಂತಲೂ, ಆ ಮಠವು ತಮಗೆ ಸೇರಬೇಕೆಂತಲೂ ಉಭಯ ಕಡೆಯವರ ವ್ಯಾಜ್ಯವು ಕೊಡಗಿನ ಸಬ್ ಜಡ್ಜರವರ ಕೋರ್ಟಿನಲ್ಲಿ ನಡೆದು ದೇಶೀಯ ಪಕ್ಷದವರು … ನಾಗಭೂಷಣ ಸ್ವಾಮಿಯವರಿಗೇನೇ ಗುಣವಾಗಿ ತೀರ್ಮಾನವಾಯಿತೆಂಬ ಸಂಗತಿ ಸರ್ವರಿಗೂ ತಿಳಿದಿದೆ. ಪ್ರತಿವಾದಿಗಳಾದ ಶ್ರೀಮನ್ ಮುರುಘಾರಾಜೇಂದ್ರ ಮಹಾ ಸ್ವಾಮಿಗಳಿಗೆ ಈ ನಾಗಭೂಷಣ ಸ್ವಾಮಿಗಳು ಇವರ … ಮುದ್ದಪ್ಪನೆಂಬವರ ಪ್ರೇರಣೆಯ ಮೇರೆ ಕೆಲವು ಹಣ ತೆಗೆದುಕೊಂಡು ಅಪ್ಪಿ ಮಠವನ್ನು ಅವರಿಗೆ ವಹಿಸಿಕೊಡುವುದಾಗಿ ಪತ್ರ ಬರೆದಿದ್ದಾರೆ. ಇದು ಎಷ್ಟರ ಮಟ್ಟಿಗೆ ನಿಜವೋ ಹೇಳಲು ಸಾಧ್ಯವಿಲ್ಲ. ಇದು ನಿಜವಾಗಿದ್ದ ಪಕ್ಷದಲ್ಲಿ ದೇಶೀಯ ಮಠವನ್ನೂ, ಭಕ್ತರನ್ನೂ ತುಂಬಾ ಅನ್ಯಾಯವಾಗುತ್ತಿಲ್ಲವೋ? ಈ ದೇಶದ ಪೂರ್ವದ ರಾಜರ ಕಾಲದಿಂದ ಈ ಲಿಂಗಾಯಿತರ ಮಠಗಳು ಪರದೇಶದವರ ಮಠಗಳಿಗಧೀನವಾಗಿರದೆ, ನಮ್ಮಲ್ಲಿ ದೇಶೀಯ ಶ್ರೇಯೋಭಿವೃದ್ಧಿಗಾಗಿ ಸ್ಥಾಪಿಸಿದ್ದ ಈ ಮಠವನ್ನು ದೇಶದ ಮಠದವರ ದೇಶೀಯ ಭಕ್ತ ಮಹೇಶ್ವರರ ಅನುಮತಿ ಇಲ್ಲದೆ ಮಠಾಧಿಕಾರವೆಂಬ ದರ್ಪದಿಂದ ನಾಗಭೂಷಣ ಸ್ವಾಮಿಗಳು ಹ್ಯಾಗೆ ತಾನೆ ಬೇರೆಯವರಿಗೆ ವಹಿಸಲು ಸಾಧ್ಯವಾದೀತು? ಹಾಗೆ ಮಾಡಿದಾಗ್ಯೂ ಶ್ರೀಮನ್ ಮುರುಘಾರಾಜೇಂದ್ರ ಸ್ವಾಮಿಗಳಿಗೆ ಹ್ಯಾಗೆ ತಾನೆ ಹಕ್ಕುದೊರೆತು ಎಂದು ತಿಳಿಯುವುದಿಲ್ಲ. ಇದರಲ್ಲಿ ಏನಾದರೂ ನಿಜವಿದ್ದಲ್ಲಿ ಮಠವನ್ನು, ಅದಕ್ಕೆ ಸೇರಿದ ಆಸ್ತಿಯನ್ನೂ ಹಣದ ಆಶೆಗೆ ಶುದ್ಧ ಕ್ರಯಕ್ಕೆ ಮಠಾಧಿಕಾರದ ಮೇಲೆ ಇನ್ನೊಬ್ಬರಿಗೆ ಮನಸೋ ಇಚ್ಛೆ ಕೊಟ್ಟುಬಿಡುವ ಹಕ್ಕು ಆ ಅಧಿಕಾರಿಗೆ ಯಾರು ಕೊಟ್ಟರು, ಹ್ಯಾಗೆ ಬಂತು ಎಂಬೀ ವಗೈರೆ ಸಂಗತಿಯನ್ನು ದೇಶದವರು ಮತ್ತು ಮಠಗಳಲ್ಲಿ ವಾತ್ಸಲ್ಯವಿಟ್ಟವರು ತುಂಬಾ ಆಲೋಚನೆ ಮಾಡತಕ್ಕ ವಿಷಯವಾಗಿದೆ. ಹೀಗಾದರೆ ಕ್ರಮೇಣ ಕೊಡಗಿನ ಮಠಗಳು, ಇವುಗಳ ಆಸ್ತಿಗಳು ಪರಾಧೀನವಾಗಿ ಕೊಡಗಿನಲ್ಲಿ ಮಠಗಳೇ ಇಲ್ಲದಾಕೆ ನಿರ್ನಾಮವಾಗುತ್ತಿರುವುದರಲ್ಲಿ ಅನುಮಾನವೇನು? ಹೀಗಾದರೆ ಮಠಗಳನ್ನು ಸ್ಥಾಪಿಸಿದ ಮಹನೀಯರ ಉದ್ದೇಶ, ಕೋರಿಕೆ, ಇರಾದೆ ಎಲ್ಲಿ ನಡೆದಂತಾಯಿತು? ಅಂತು ಈ ವಿಷಯ ನಿರಾಧಾರವೋ, ನಿಜವೋ ತಿಳಿಯದು. ನಿಜವಾಗಿದ್ದ ಪಕ್ಷ ನಾಗಭೂಷಣ ಸ್ವಾಮಿಗಳ

ಈ ರೀತಿ ಮಾಡುವದು ಕೇವಲ ಸೂಕ್ತವಾಗಿಲ್ಲ. ಹಾಗೇನಾದರೂ ಮಾಡಿರುವದು, ಇಲ್ಲವೆ ಮಾಡಲಿಕ್ಕೆ ಯತ್ನಿಸಿರುವದು ನಿಜವಾದ ಪಕ್ಷದಲ್ಲಿ ದೇಶದ ಮಠಾಧಿಕಾರಿಗಳು ಮತ್ತು ಭಕ್ತಾದಿಗಳು ಸಹ ತುಂಬಾ ಎಚ್ಚರದಲ್ಲಿರಬೇಕಾಗುತ್ತೆ.

"ಕೊಡಗು ಮಠಗಳ ಹಿತೈಷಿ"

ವೈಸರಾಯರ ಸಂದರ್ಶನ.

ಅಯ್ಯಾ,

ತಾರೀಖು 28—11—29ನೇ ಗುರುವಾರ ದಿನ ಬೆಳಿಗ್ಗೆ 11–30 ಗಂಟೆಗೆ ನಮ್ಮ ಇಂಡಿಯ ದೇಶದ ಚಕ್ರವರ್ತಿಯವರ ಪ್ರತಿನಿಧಿಯಾದ ವೈಸರಾಯರವರು ಅವರ ಪತ್ನಿ ಸಮೇತ ಪುರಾತನ ಹೆಸರಾದ ಕುಶಾಲನಗರಕ್ಕೆ ಬಂದು ಬಹು ಅಲಂಕಾರವಾಗಿ ನಂಜರಾಯಪಟ್ಟಣ ತಾಲೋಕಿನವರಿಂದ ಹಾಕಲ್ಪಟ್ಟಿದ್ದ ಮಂಟಪದಲ್ಲಿ ಕಾರಿನಿಂದ ಇಳಿದರು. ಅಷ್ಟರಲ್ಲಿ ನಮ್ಮ ದೇಶದ ಘನಹೊಂದಿದ ಚೀಫ್ ಕಮಿಶನರ್ ಸಾಹೇಬರವರಿಗೂ, ಮುಂದಾಳುಗಳಾಗಿ ಮಂಟಪದ ಬಳಿ ನಿಂತಿದ್ದ ಕೊಡಗು ಕಮಿಶನರಿಗೂ, ಸಿವಿಲ್ ಸರ್ಜನರಿಗೂ, ಅಸಿಸ್ಟೆಂಟ್ ಕಮಿಶನರ್ ರಾ. ಬಾ. ಕೇಟೋಳಿರ ಚಂಗಪ್ಪನವರಿಗೂ, ಚೀಫ್ ಫಾರೆಸ್ಟ್ ಆಫೀಸರಿಗೂ ನಮ್ಮ ಕೊಡಗಿನ ನಿವಾಸಿಗಳಾದ ಕ್ಯಾಪ್ಟನ್ ಕೊಡಂದೇರ ಕಾರ್ಯಪ್ಪನವರಿಗೂ ಮತ್ತು ಮ. ರಾ ರ್ರಿ. ಅಪ್ಪಾರಂಡ ಕಾರ್ಯಪ್ಪನವರಿಗೂ ಹಸ್ತಲಾಘವನ್ನು ಕೊಟ್ಟು ನಮ್ಮನ್ನು ಆಶೀರ್ವದಿಸಿ ಮುಂದಕ್ಕೆ ದಯಮಾಡಿಸಿ ಮೆ. ಸಿ. ಉತ್ತಯ್ಯನವರೂ ಮತ್ತು ಸಿ. ಕರುಂಬಯ್ಯನವರೂ ಧರಿಸಿದ್ದ ಪದಕಗಳನ್ನು ಪರಾಂಬರಿಸಿ, ಸ್ವಲ್ಪ ಹೆಜ್ಜೆ ದಯಮಾಡಿ ಪೂರ್ವದಲ್ಲಿ ರಾಜರ ಕಾಲದಲ್ಲಿ ದಯಪಾಲಿಸಿದ್ದ ರುಮಾಲನ್ನು (ಪಾನಿಮುಂಡಿತುಣಿ) ಧರಿಸಿದ್ದ ಸೋಮವಾರಪೇಟೆ ನಾಡು ಮೆ. ಚಾರೌಡ್ಲ ಕಾಳಪ್ಪ ಯಂ. ಎಲ್. ಸಿ. ಯವರನ್ನು ಮಾತಾಡಿಸಿ ಅವರ ಒಡಿ ಕತ್ತಿಯನ್ನು ಪರಾಂಬರಿಸಿ ಅಲ್ಲಿಂದ ಪಡರಿಯವರಿಗೆ ರಾಜರು ದಯಪಾಲಿಸಿದ್ದ ಛತ್ರಿಯನ್ನು ಪರಾಂಬರಿಸಿ, ಛತ್ರಿಯನ್ನು ಇನ್ನೂ ಚೆನ್ನಾಗಿಡಬೇಕಾಗಿಯೂ, ನೀನು ಇಷ್ಟು ಪುರಾತನಕರವಾದ ರಾಜನ ಸಾಮಾನನ್ನು ಇಟ್ಟದ್ದಕ್ಕೆ ಬಹಳ ಸಂತೋಷ ಪಡುತ್ತೇವೆ ಎಂದು ಅಪ್ಪಣೆಯನ್ನು ಅವರಿಗೆ ಕೊಟ್ಟು, ಮುಂದಕ್ಕೆ ಅವರ ನಾಡಿನ ಕುಂದಳ್ಳಿ ಗ್ರಾಮದ ಮೆ. ಕಾರೇಕಾರ್ರ ಪುಟ್ಟಯ್ಯನವರಿಗೆ ರಾಜರು ಕೊಟ್ಟಂಥ ಟೊಪ್ಪಿಯನ್ನು ಮತ್ತು ಇಂಗ್ಲಿಷ್ ಗವರ್ನ್ಮೆಂಟಿನವರು ಇನಾಂ ಆಗಿ ಕೊಟ್ಟಂಥ ಇಂಗ್ಲಿಷ್ ಶಿಪಾಯಿ ಕತ್ತಿಯನ್ನು ಪರಾಂಬರಿಸಿಕೊಂಡು ರಾಜರ ಕಾಲದಲ್ಲಿ ಕೊಟ್ಟಂಥ ಹಳೆ ಒತ್ತಿ ಕೋವಿಯ ನಮೂನೆ ನಿಮ್ಮಲ್ಲಿ ಇಲ್ಲವೋ? ಎಂಬುದಾಗಿ ಕಾಳಪ್ಪನವರಿಗೆ ಪ್ರಶ್ನೆಮಾಡಿದಾಗ ತಾನು ತಂದಿಲ್ಲವಾಗಿ ಹೇಳಿ, ಕೂಡ್ಲೆ ತಾಕೇರಿ ಗ್ರಾಮದ ಮೆ. ಶೆಟ್ಟಿರ ನಾಣ್ಯಯ್ಯನವರಿಗೆ ರಾಜರು ಕೊಟ್ಟಿದ್ದಂಥ ಒಂಟಿ ಹೊಳವಿನ ಒತ್ತಿ ಕೋವಿಯನ್ನು ಪರಾಂಬರಿಸಿ, ಅದರ ವಿಚಾರಗಳನ್ನು ಮೆ. ಕಾಳಪ್ಪನವರು ವಿವರಿಸಿದ ನಂತರ ಮುಂದಕ್ಕೆ ತೋರಣಕ್ಕೆ ಬರುವಾಗ ಸದರಿ ನಾಡಿನವರ ಶುಭವಾದ್ಯಗಳು ಬೋರ್ಗರೆದವು. ಅಷ್ಟರಲ್ಲಿ ಕಾರುಗಳು ಬಂದವು. ಅಲ್ಲಿ ½ ಮಿನಿಟು ನಿಂತು ವಾದ್ಯ ವೇಷವನ್ನು ಪರಾಂಬರಿಸಿ ಸಂತೋಷಪಟ್ಟು ಕಾರನ್ನು ಹತ್ತಿ ವಾದ್ಯ ಬೋರ್ಗರೆಯುತ್ತಿರುವಾಗ ಮುಂದಕ್ಕೆ ಘನವುಳ್ಳ ವೈಸರಾಯರು ಅವರ ಪತ್ನಿಯವರು ಮಡಿಕೇರಿ ಮಾರ್ಗವಾಗಿ ಪ್ರಯಾಣ ಬೆಳಸಿದರು.

ಆ ದಿನ ಮೆ. ಚಾರೌಡ್ಲ ಕಾಳಪ್ಪನವರು ತಮ್ಮ ನಾಡಿನಿಂದ ವೈಸರಾಯರವರ ಪಾಠಕ್ಕೆ ಬಂದಿದ್ದ 8[illegible]3 ಜನ ಕೊಡಗರಿಗೂ, ಇತರರಿಗೂ ಬೆಳಿಗ್ಗೆ ಕಾಫಿಯನ್ನೂ ಮಧ್ಯಾಹ್ನ ಊಟವನ್ನು ಸಹ ತಮ್ಮ ಸ್ವಂತ ಖರ್ಚಿನಿಂದ ಕೊಟ್ಟದ್ದನ್ನು ನೋಡಿ ಸಂತೋಷ ಪಡುತ್ತೇವೆ.

"ಹಾಜರಿದ್ದವ"

ಮುಚ್ಚಿಪಟ್ಟ ಕುಳಗಳು!

ಅಯ್ಯಾ,

ಮೆ. ಉ. ಮಾಚ್ಚಯ್ಯನವರು ತಾ 8—11—'29ರ 'ಕೊಡಗು' ಪತ್ರಿಕೆಯಲ್ಲಿ ಮೆ. ಕಾಳಂಡ ಉತ್ತಯ್ಯನವರ ಬರವಾಗ ಪಕ್ಷಕ್ಕೆ ಒತ್ತಾಸೆ ಕೊಟ್ಟದ್ದು ನೋಡಲಾಯಿತು. ಅವರ ಕುಳದ ಹಾಗೆ ಇನ್ನು ಅನೇಕ ಕುಳಗಳ ಹೆಸರು ಬಿಟ್ಟಿರುತ್ತಾರೆ. ನಮ್ಮ ಕುಳದ ಆದಿ ಪುರುಷ ಬೋಜ್ಯಯ್ಯನವರು ಸುಭೇದಾರರಾಗಿಯೂ, ಅವರ ಮಕ್ಕಳು ತಿಮ್ಮಯ್ಯನವರು ದಿವಾನರಾಗಿಯೂ, ಐಯ್ಯಪ್ಪನವರು ಪಾರುಪತ್ಯಗಾರರಾಗಿಯೂ, ಇದ್ದು ಅಮರ ಸುಳ್ಯದ ಕಾಟಕಾಯಿ ದಬಾಯಿಸಿದಕ್ಕೆ ಬೋಜ್ಯಯ್ಯನವರಿಗೆ 1000 ಬಟ್ಟಿ ಜಹಗೀರ್ ಭೂಮಿಯೂ, ತಿಮ್ಮಯ್ಯನವರಿಗೆ 800 ಬಟ್ಟಿ ಜಹಗೀರ್ ಭೂಮಿಯೂ, ಐಯ್ಯಪ್ಪನವರಿಗೆ 400 ಬಟ್ಟಿ ಜಹಗೀರ್ ಭೂಮಿಯೂ, ಮೂರು ಜನರಿಗೂ ಬೇರೆ ಬೇರೆ ಮೂರು ಪಿಂಚಿನ್ ಮತ್ತು ಪದಕ ಸಹ ದೊರೆತಿರುತ್ತೆ. ಅವರ ಸಂತತಿಯಲ್ಲಿ ಐದು ತಲೆಮಾರಿನತನಕ್ಕೆ ಐದು ಸುಭೇದಾರರ ಚಾಕರಿ ಮಾಡಿರುತ್ತಾರೆ. ಈಗಲೂ ಅವರ ಸಂತತಿಯವರೊಬ್ಬರು ಸುಭೇದಾರರಾಗಿರುತ್ತಾರೆ. ಇನ್ನು ಅನೇಕ ಮೆಂಬರುಗಳು ಸಣ್ಣ ಸಣ್ಣ ಉದ್ಯೋಗಗಳನ್ನು ಮಾಡಿ ಪಿಂಚನ್ ಪಡೆದಿರುತ್ತಾರೆ. ಈಗಲೂ ಸಹ ಉದ್ಯೋಗದಲ್ಲಿದ್ದಾರೆ. ನಮ್ಮ ಕುಳದ ವಂಶಾವಳಿ ಪಟ್ಟಿಯನ್ನು ನೋಡಿದರೆ ಗೊತ್ತಾಗುವದು. ಅಲ್ಲದೆ ಕೊಡಗು ದೇಶದಲ್ಲಿ 'ಒಂದೇ ಕುಳದಲ್ಲಿ ಅಪ್ಪ ಮಕ್ಕಳಾದ ಮೂವರಿಗೆ ಜಹಗೀರ್, ಪಿಂಚಿನ್, ಪದಕ ಸಹ ಸಿಕ್ಕಿದ್ದು ನಮ್ಮ ಒಂದೇ ಕುಳಕ್ಕಲ್ಲದೆ ಬೇರೆ ಯಾವ ಕುಳಕ್ಕೂ ಸಿಕ್ಕಿಲ್ಲವೆಂಬದು ನನ್ನ ಭಾವನೆ. ಇಂಥಾ ನಮ್ಮ ಕುಳವನ್ನು ಮತ್ತು ಇನ್ನು ಅನೇಕ ಕುಳಗಳನ್ನು ಬಿಟ್ಟು ತಯಾರು ಮಾಡಿದ ಪುಸ್ತಕವು ಸರ್ಕಾರದವರ ತಪ್ಪಿಲ್ಲವೆಂತಲೇ ಭಾವಿಸಬೇಕು. ಯಾಕೆಂದರೆ—ಸರ್ಕಾರದವರಿಗೆ ಯಾವ ಯಾವ ಕುಳವೆಂಬುದು ಗೊತ್ತಿಲ್ಲ. ಸದರಿ 21 ಕುಳಗಳ ಹೆಸರು ಕೊಟ್ಟಂತವರ ತಪ್ಪೆಂದೇ ತೋರುತ್ತದೆ. ಸರ್ಕಾರದವರು ಕುಳಗಳ ಹೆಸರು ಕೇಳುವಾಗ್ಯೆ ದೇಶ, ನಾಡು, ಊರು ತಿರುಗಿ ವಿಚಾರಿಸಿ ಯಾರು ಮನಸ್ಥಾನ, ಯಾರು ಅಲ್ಲವೆಂಬದನ್ನು ತಿಳಿದು ಹೆಸರು ಕೊಡಬೇಕಾಗಿತ್ತು. "ಕಾಡ್ ಕಾಫಿ ಬೆಳಂದಿತ್ ಕಾಪಕಂಗ್ ಪೊನ್ನಾಚ' ಎಂಬ ಹಾಗೆ ಈಗಿನ ಕಾಲದಲ್ಲಿ ಹಣ ಹೆಚ್ಚಿದವರೆಲ್ಲಾ ಮನಸ್ಥಾನಗಾರರಾಗಿದ್ದಾರೆ. ಆದ್ದರಿಂದ ಸರ್ಕಾರದವರು ಮನಸ್ಥಾನವೆಂಬದಾಗಿ ಬರೆದು ಇಟ್ಟ ಮಾತ್ರಕ್ಕೆ 21 ಕುಳಕ್ಕೆ ಬಂದ ಲಾಭವೇನು? ನಮಗೆ ಬಂದ ನಷ್ಟವೇನು? ಪೂರ್ವದಿಂದ ಈಗಿನವರೆಗೆ ಹುಟ್ಟಿದವರಿಗೂ, ಇನ್ನು ಮುಂದೆ ಹುಟ್ಟತಕ್ಕವರಿಗೂ ಸಹ ಯಾವ ಕುಳ ಮನಸ್ಥಾನ, ಯಾವ ಕುಳ ಮನಸ್ಥಾನವಲ್ಲವೆಂಬುದು ಗೊತ್ತೇ ಇರುತ್ತೆ. ಆದ್ದರಿಂದ ದೇಶದ ಮಹನೀಯರು ಅಂಥಾ ಪುಸ್ತಕದ ಸಂಗತಿಯನ್ನು ಗಮನಕ್ಕೆ ತೆಗೆದುಕೊಳ್ಳಬಾರದಾಗಿ ಕೋರುತ್ತೇನೆ.

ಅಲ್ಲದೆ ಸರ್ಕಾರದವರು ಪದೇ ಪದೇ ಚಾಕರಿಗೆ ಬರುವ ಕುಳಗಳ ಪಟ್ಟಿಯೊಂದಾಗಿ ಕೇಳುವದಾದರೆ ಪೂರ್ವ ದಿಂದಲೂ ಗ್ರಾಮಗಳಲ್ಲಿ ಪಟೇಲ ಕೆಲಸ ಮಾಡಿಕೊಂಡು ಬರುವ ಕುಳಗಳ ಹೆಸರನ್ನು ಯಾತಕ್ಕೆ ಬಿಟ್ಟರು? ಇದಲ್ಲವೇ ಸರ್ಕಾರದ ಅಭಿಪ್ರಾಯ?

ಮಂಡೇಪಂಡ ಬಿ. ಮಾದಪ್ಪ.

ಮೂರ್ನಾಡು ಶಾಲಾ ವಾರ್ಷಿಕೋತ್ಸವ.

ಅಯ್ಯಾ,

ಮೂರ್ನಾಡು ಶಾಲಾ ವಾರ್ಷಿಕೋತ್ಸವವು ತಾರೀಖು 30—11—29ರಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಸುಮಾರು 500 ಜನರಿಗಿಂತ ಹೆಚ್ಚಿನ ಜನಸ್ತೋಮವು ಸದರಿ ಸ್ಥಳದಲ್ಲಿ ಸೇರಲಾಗಿತ್ತು. ಬೆಳಿಗ್ಗೆ 10 ಘಂಟೆಗೆ ಸರಿಯಾಗಿ ಶಾಲಾ ಮೈದಾನವಾದ ಪಾಲಂಡಾಣೆಯಲ್ಲಿ ವಿದ್ಯಾರ್ಥಿಗಳಿಗೂ ಮತ್ತು ಹೊರಗಿನವರಿಗೂ ಓಡುವ, ಹಾರುವ ಸ್ಪರ್ಧೆಯಾಟಗಳು (ಸ್ಪೋರ್ಟ್ಸ್) ನಡೆಸಲಾಯಿತು. ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ವಿದ್ಯಾರ್ಥಿಗಳು ತಯಾರಿಸಿದ ತಮ್ಮ ಕಲಾಕೌಶಲ್ಯತೆಯ ಕೈಗಾರಿಕೆ ಸಾಮಾನುಗಳ ಪ್ರದರ್ಶನವನ್ನು ಸರ್ವರೂ ನೋಡುವಂತೆ ಶಾಲೆಯ ಒಳಗೆ ಒಂದು ರೂಮಿನಲ್ಲಿ ಏರ್ಪಡಿಸಲಾಗಿತ್ತು. ಕೆಲವು ಎಳೇ ಪ್ರಾಯದ ಹುಡುಗಿಯರು ತಯಾರಿಸಿದ ಲೇಸುಗಳೂ ಮತ್ತು ಹುಡುಗರು ಭಿನ್ನ ತಾಳೆ ನಾರಿನಿಂದ ಹಗ್ಗ ಮಾಡಿ ತಯಾರಿಸಿದ ಬಲೆ ರೂಪದ ಚೀಲಗಳೂ ಚೆನ್ನಪಟ್ಟಣ ಮಾದರಿಯ ಮಣ್ಣಿನ ಸಾಮಾನುಗಳೂ ಮತ್ತು ಇನ್ನು ಅನೇಕ ರೀತಿಯ ಕೈಗಾರಿಕೆ ಮಾದರಿಗಳೂ ನಿಜವಾಗಿಯೂ ಆನಂದವನ್ನುಂಟುಮಾಡುತ್ತಿದ್ದವು. ಮಧ್ಯಾಹ್ನ 1½ ಗಂಟೆಗೆ ಅಧ್ಯಕ್ಷರಾದ ಮೆ. ಪಿ. ಎ ಚಂಗಪ್ಪನವರೂ, ಶಾಲಾ ಸ. ಅ. ಇ. ಮೆ. ಬಿ. ಯಸ್. ಕಾಳಪ್ಪನವರೂ ಮತ್ತು ಮಡಿಕೇರಿ ಸ್ಕೂಲ್ ಮಾಸ್ಟರ್ ಮೆ. ಬಿ ಯಂ. ಕಾರ್ಯಪ್ಪನವರೂ ಮಡಿಕೇರಿಯಿಂದ ಸದರಿ ಉತ್ಸವಕ್ಕೆ ದಯಮಾಡಿಸಿದರು. 2 ಘಂಟೆಗೆ ಸರಿಯಾಗಿ ಈ ಮೇಲ್ಕಂಡ ಅತಿಥಿಗಳನ್ನು ಒಂದು ಟೀ ಪಾರ್ಟಿ ಮೂಲಕ ನಾಡವರು ಸತ್ಕರಿಸಿದರು. ತದನಂತರ 3 ಘಂಟೆಗೆ ಸರಿಯಾಗಿ ಶಾಲೆಯಲ್ಲಿ ಹಾಕಿದ್ದ ಚಪ್ಪರದಲ್ಲಿ ಸಾಧಾರಣ 300 ಜನ ಸ್ತ್ರೀಯರೂ, ಪುರುಷರೂ ಸಭಾಸೀನರಾಗಿದ್ದರು. ಮೆ. ಪಾಲಂಡಂಡ ಚಂಗಪ್ಪ ಯಂ. ಎಲ್. ಸಿ ಯವರು ಸಭಾ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ಸದರಿ ಶಾಲೆಯ ಹೆಡ್ಮಾಸ್ಟರ್ ಮ ಜಿ ಡಬ್ಲ್ಯು ಪೂವಯ್ಯನವರು ಶಾಲಾ ವರದಿಯನ್ನು ಎಲ್ಲರೂ ಚೆನ್ನಾಗಿ ತಿಳಿದುಕೊಳ್ಳುವಂತೆ ವಿವರಿಸಿ ಹೇಳಿದರು. ಆ ವೇಳೆ ಮೆ. ಬಿ ಯಸ್. ಕಾಳಪ್ಪನವರು, ಬಿ. ಎ ಬಿ. ಟಿ. 'ಸ್ಕೌಟ್ ಡೇ' ವಿಷಯವಾಗಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ತದನಂತರ ಮೆ. ಪಿ ಯಂ. ಮುತ್ತಣ್ಣನವರು ಹಳೇ ವಿದ್ಯಾರ್ಥಿಗಳ ಪರವಾಗಿ ವಿದ್ಯಾರ್ಥಿಗಳ ಪೋಷಕರ ಕರ್ತವ್ಯವನ್ನು ಕುರಿತು ಭಾಷಣ ಮಾಡಿದರು. ಇದಾದನಂತರ ಎ. ಕೆ ಯಂ. ಪೊನ್ನಪ್ಪನವರು ಶಾಲಾಭಿವೃದ್ಧಿಯ ಪ್ರೋತ್ಸಾಹವನ್ನು ಕುರಿತು ಮಾತಾಡಿದರು. ಆ ಮೇಲೆ ಅಧ್ಯಕ್ಷರು ಸ್ವಾರಸ್ಯವಾದ ಭಾಷಣದಿಂದ ಸದರಿ ಸಭಾ ಕಾರ್ಯವನ್ನು ಅಂತ್ಯಗೊಳಿಸಿದರು. ಅಲ್ಲಿ ನೆರೆದಿದ್ದವರನ್ನೆಲ್ಲಾ ಉತ್ಸವ ಸಂಬಂಧ ಪ್ರಸಾದ, ತಾಂಬೂಲ, ಪುಷ್ಪಹಾರಗಳಿಂದ ಸಂತೋಷಗೊಳಿಸಿದರು. ಈ ಮಧ್ಯೆ ಮಡಿಕೇರಿಯಲ್ಲಿ ಈಗ ವಿದ್ಯಾರ್ಥಿಯಾಗಿರುವ ಮೆ. ವೆಂಕಟೇಶನೆಂಬ ಈ ಶಾಲೆಯ ಹಳೇ ವಿದ್ಯಾರ್ಥಿಯು "ವಿದ್ಯಾರ್ಥಿಯ ನಿಯಮವು' ಎಂಬ ಪಟ್ಟಿಯನ್ನು ಪ್ರಿಂಟು ಮಾಡಿಸಿ, ಕನ್ನಡಿ ಕಟ್ಟಿಸಿ ಈ ಶಾಲೆಗೆ ಆ ತರುಣನು ಉದಾರ ಮನಸಿನಿಂದ ಕೊಟ್ಟದ್ದನ್ನು ಸಭಿಕರು ಅನುಮೋದಿಸಿ ಶಾಲೆಯೊಳಗಿಡುವಂತೆ ಸದರಿ ಪ್ರತಿಯನ್ನು ಸ್ವೀಕರಿಸಿದರು.

ಇದೆಲ್ಲಾ ತೀರಿದನಂತರ ವಿದ್ಯಾರ್ಥಿಗಳು ತಯಾರಿಸಿದ ಭರತ ನಾಟಕ ಒಂದನ್ನು ಎಲ್ಲರ ಮನಸ್ಸು ಕರಗುವಂತೆ ನಟಿಸಿದರು. ಭರತನು ಅರಣ್ಯ ವಾಸದಲ್ಲಿದ್ದ ತನ್ನ ಅಣ್ಣ ರಾಮನ ಪಾದುಕೆಗಳನ್ನು ಪೂಜಿಸುತ್ತಾ ರಾಜ್ಯ ಪರಿಪಾಲನೆ ಮಾಡಿದ್ದೇ ಈ ನಾಟಕದ ಮುಖ್ಯ ಸಾರಾಂಶವಾಗಿತ್ತು. ಆ ಎಳೇ ಪ್ರಾಯದ ಮಕ್ಕಳು ಬರೀ ಐದನೇ ಸ್ಟಾಂಡರ್ಡಿನ ಒಳಗೆ ಓದತಕ್ಕವರು. ಅವರವರು ವಹಿಸಿದ್ದ ಪಾರ್ಟುಗಳ ಒಂದಿಷ್ಟಾದರೂ ತಪ್ಪಿಲ್ಲದೆ ನಟಿಸಿ ಅಲ್ಲಿ ಕೂತಿದ್ದ ನೋಡುಗರನ್ನು ವಿಸ್ಮಯಗೊಳಿಸಿದ್ದು ಬಹು ಆನಂದಕರವು. ನಿಜವಾಗಿಯೂ ಇದನ್ನು ನೋಡುತ್ತಾ ಕೂತಿದ್ದ ಆ ನಾಟ್ಯಗಾರರ ತಂದೆ ತಾಯಿಗಳ ಸಂತೋಷದ ಅಶ್ರುಬಿಂದುಗಳು ಅವರ ಕೆನ್ನೆಯ ಮೇಲೆ ದಾರೆ ಎರೆಯದೆ ಇದ್ದಿರಲಿಕ್ಕಿಲ್ಲ.

ನಾಟಕ ಪ್ರಾರಂಭವಾಗುವಾಗ ನಡೆಸಿದ ಶಾರದಾ[illegible]ಜೆಯು ಬಹು ಪ್ರತಾಪವುಳ್ಳದಾಗಿತ್ತೆಂದೇ ಹೇಳಬೇಕು. ಭರತ ಮತ್ತು ರಾಮನ ಪಾರ್ಟು ವಹಿಸಿದ್ದ ತರುಣರು ಆ ಪಾರ್ಟುಗಳನ್ನು ಅವರ ಪ್ರಾಯಕ್ಕಿಂತ ಮಿಗಿಲಾಗಿ ನಡೆಸಿದ್ದಾರೆಂಬುವುದರಲ್ಲಿ ಸಂಶಯವಿಲ್ಲ.

ಈ ನಾಟಕವು ಮುಗಿದನಂತರ ಅಧ್ಯಕ್ಷರಾದ ಮೆ. [illegible]ಗಪ್ಪನವರು ನಾಟ್ಯಗಾರರ ಪೈಕಿ ಮೂವರ ಚತುರತ್ವ[illegible] ಹೆಸರಿಗೆ ಅವರಿಗೆ ಬಹುಮಾನಗಳನ್ನು ಕೊಡಲು [illegible]ವುಳ್ಳವನಾಗಿರುತ್ತೇನೆಂಬದಾಗಿ ಸೂಚಿಸಿದರು. ಆ ವೇ[illegible] ಶಾಲಾ ಹೆ ಮಾ. ಪೂವಯ್ಯನವರು ಅಲ್ಲಿಗೆ ತಿಳಿಸಿದ್ದ [illegible]ಜನರನ್ನು, ಅಧ್ಯಕ್ಷರನ್ನು ನಾಲ್ಕು ಮಾತುಗಳಿಂದ ಸ್ತು[illegible]ರು. ಕಡೆಗೆ ಮೆ. ಪಿ. ಯಂ. ಮುತ್ತಣ್ಣನವರು ಅಲ್ಲಿ [illegible]ದ್ದ ಮಹಿಳೆಯರಿಗೆ ನಾಲ್ಕು ಸವಿ ಮಾತುಗಳನ್ನಾಡಿ [illegible] ಮಾಸ್ಟರುಗಳನ್ನೂ, ಇನ್ಸ್ಪೆಕ್ಟರನ್ನೂ, ಅಧ್ಯಕ್ಷರನ್ನೂ ಮ[illegible] ಶಾಲೆಗೆ ಪ್ರೋತ್ಸಾಹಕರಾಗಿ ಬಂದಿದ್ದ ಮೆ. [illegible] ಯಂ ಕಾರ್ಯಪ್ಪನವರನ್ನೂ ವಂದಿಸಿ ಸಭಾ ಬರಖಾಸ್ತು [illegible]ಡಿದರು.

ಈ ಶಾಲಾ ವಾರ್ಷಿಕೋತ್ಸವವು ಇದರಲ್ಲೇ ಮೊದಲ[illegible]ಗ ತಾನೆ ನನಗೆ ತಿಳಿದದ್ದಾಗಿದೆ. ನಿಜವಾಗಿಯೂ ಈ ಉತ್ಸವದ ಪ್ರೋತ್ಸಾಹವು ಫಲಭರಿತವುಳ್ಳದಾಗುತ್ತದೆಂಬುವುದರಲ್ಲಿ ಸಂಶಯವೇನು? ಮನೆ ಮಾಲೆಯೊಳು ಏನೂ ತಿಳಿಯದೆ ತಿರುಕಕ್ಕೆ ಹೋಗುವರು ಸಹ ಇದರಲ್ಲಿ ಭಾಗಿಗಳಾಗಿರತಕ್ಕ [illegible]ಕಾಲ ದೊರೆತಿರುವುದರಿಂದ ನಮ್ಮ ವಿದ್ಯಾರ್ಥಿಗಳು [illegible] ಮುಂದಕ್ಕಾದರೂ ಬಹು ಮುಂದುವರಿಯುವರೆಂಬುದರಲ್ಲಿ [illegible] ಸಂಶಯವಿರುವುದಿಲ್ಲ. ಈ ಶುಭ ಸೂಚನೆಗೆ ಕಾರಣ ಭೂ[illegible]ವ ಶಾಲಾ ಮಾಸ್ಟರುಗಳನ್ನು ನಾವು ಎಷ್ಟು ಸ್ತುತಿಸಿದರೂ ಸ್ವಲ್ಪವೇ ಸರಿ. ಅಲ್ಲದೆ ಈ ಸೌಕರ್ಯವನ್ನು ಕೊಡಗಿನ ಭಾಗಗಳಲ್ಲಿ ಬಾರಿಗೆ ತರಲು ಪ್ರಯತ್ನಿಸುತ್ತಿರುವ ಶಾಲಾ ಸ. ಅ. ಇ. ಮೆ. ಕಾಳಪ್ಪನವರಿಗೆ ನಾವು ಕೃತಜ್ಞರಾಗಿರುವೆವು. ದೇವರು ನಮ್ಮ ಅಭಿವೃದ್ಧಿಗೆ ಶ್ರೇಯಸ್ಸನ್ನು ಕೊಡಲೆಂದು ಪ್ರಾರ್ಥಿಸುವ,

ಹಾಜರಿದ್ದವ

ತಾವುನಾಡು ಮೀಟಿಂಗು.

ತಾವುನಾಡಿನ ಜನ್ಮ ಹಿಡುವಳಿದಾರರ ಒಂದು ಮೀಟಿಂಗು ತಾ. 4—12—'29ರಲ್ಲಿ ಭಾಗಮಂಡಲ ಕೋ[illegible]ಣೆಯಲ್ಲಿ ನಡೆಯಿತು.

ಈ ದಿವಸ ತಾವುನಾಡಿನ ನಾಲ್ಕು ಗ್ರಾಮಗಳ ಹಿಡುವಳಿದಾರರು 35 ಜನರು ಹಾಜರಿದ್ದರು. ಮೆ. [illegible] ಮುತ್ತಣ್ಣನವರ ಸೂಚನೆ ಮತ್ತು ಮೆ. ಬೇಂಗೋಟಿ[illegible]ವರ ಅನುಮೋದನೆ ಮೇರೆ ಸರ್ವ ಸಮ್ಮತದಿಂದ ಮೆ. [illegible]ಣ್ಯಯ್ಯನವರನ್ನು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. [illegible]ರ ಆಮಂತ್ರಣದ ಮೇರೆ ಮೆ. ಬಿ ತ್ರೀಪತಿರಾಯರು [illegible] ಮೆ. ಕೆ. ಸಿ ಸುಬ್ಬಯ್ಯನವರು ಸಹ ಹಾಜರಿದ್ದರು.

ಮೆ. ತಿಕ್ಕಜ ಪೊನ್ನಪ್ಪನವರು ತಾ. 22—1[illegible] ಮೆ. ಬಿ ತ್ರೀಪತಿರಾಯರವರ ಅಧ್ಯಕ್ಷತೆಯಲ್ಲಿ [illegible]ಲ್ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಹೇಳಿ [illegible] ವಿಷಯವಾಗಿ ಪೂರ್ವ ಪ್ರಮುಖರ ಉದಾಹರಣೆ[illegible]ಗತ್ಯವಾದ ಸಲಹೆಗಳನ್ನು ಕೊಟ್ಟು ಮಾತನಾಡಿ[illegible]

ಅಧ್ಯಕ್ಷರು ಮತ್ತು ಕೂಡಿದ ಸಭಿಕರಿಂದ [illegible]ಗಳನ್ನು ಕುರಿತು ಚರ್ಚಿಸಲ್ಪಟ್ಟಿತು. ಮೆ. [illegible]ರಾಯರು ಈ ನಾಡಿನ ಅಭ್ಯುದಯವನ್ನು ಕುರಿತು [illegible]ಮಾನವಾದ ವಾಕ್ಯಗಳಿಂದ ಭಾಷಣವನ್ನು ಮಾಡಿ [illegible] ನಾಡಿನ ಒಕ್ಕ ಗೌಡುಗಳೆಲ್ಲರೂ ಒಗ್ಗಟ್ಟು [illegible] ಸಹಾಯವನ್ನು ಕೊಟ್ಟು ಹೇಳಿದರು. ಈ ಕೆಳಗಿನ ಠರಾವುಗಳು ಸರ್ವ ಸಮ್ಮತಿಯಿಂದ ಮಂಜೂರಿಸಲ್ಪಟ್ಟವು.

(1) ತಾವುನಾಡಿನ ಜನ್ಮ ಗೌಡುಗಳೆಲ್ಲರೂ [illegible]ಟ್ಟಾಗಿರಬೇಕು.

(2) ಕೌನ್ಸಿಲ್ ಚುನಾವಣೆಗೆ ಈ ನಾಡಿನ ಗೌಡುಗಳಲ್ಲಿಬ್ಬರು ಉಮೇದುವಾರರಾಗಿ ನಿ[illegible] ಹಾಗಾದರೆ ಎಲ್ಲರೂ ಒಗ್ಗಟ್ಟಾಗಿ ಓಟು ಕೊಡಬೇಕು.

(3) ಈ 2ನೇ ಸೂಚನೆಯನ್ನು ಪುಷ್ಟೀಕರಿಸ[illegible] ವಾದ ಸಹಾಯಗಳನ್ನು ಇತರ ಪಕ್ಷದ[illegible] ದ ಪಡೆದುಕೊಳ್ಳುವ ಪ್ರಯತ್ನ ಮಾಡತಕ್ಕದ್ದು.

(4) ನಿಷಿದ್ಧ ಪದಾರ್ಥ ಸೇವಿಸುವುದನ್ನು ಕಡ್ಡಾ[illegible]ದು. ಆ ಸೇವನೆಯ ಸ್ಥಳಗಳಿಗೆ ಹೋಗದಿರುವುದು. [illegible]ಧ್ಯದಲ್ಲಿರುವ ಸೇಂದಿ ಸಾರಾಯಿ ಅಂಗಡಿಗಳನ್ನು [illegible] ತೆಗೆಸುವಂತೆ ಕೂಡಲೆ ಕೊಡಗು ಕಮಿಶನರ್ ಸಾಹೇ[illegible]ರ್ಜಿ ಕೊಡುವುದು.

...) ಹುತ್ರಿ ಹಬ್ಬದಲ್ಲಿ 3 ದಿವಸಗಳು ಸಂಪೂರ್ಣ ನಿಶ...ವನ್ನು ಸೇವಿಸದಿರುವದು.

...) ಈ ಕೆಳಗೆ ಪಟ್ಟಿಯಲ್ಲಿ ಸೂಚಿಸಿದ ಮಹನೀಯರು ...ಟಿಯೊಂದನ್ನು ಮುಂದಿನ ಕಾರ್ಯಕ್ರಮಗಳನ್ನು ನಡೆ...ರ್ಪಡಿಸಿದೆ.

7) ಈ ಕಮಿಟಿಯು ಈ ಭಾಗಾಯಿತು ಒಂದು ವರ್ಷ ...ಕೆಲಸದಲ್ಲಿ ರತಕ್ಕದ್ದು.

ತಾವೂರು ಗ್ರಾಮ:—ಮ. ಗಳಾದ 1. ಅಮೆ ಸಣ್ಣಯ್ಯನವರು, 2. ಬಾರಿಕೆ ಚಿಣ್ಣಪ್ಪನವರು, 3. ಕೋಳಿಬೈಲು ಚಿಣ್ಣಪ್ಪನವರು, 4. ಅಮೆ ಮುದ್ದಯ್ಯನವರು.

ಕಣ್ಣಮೂನಿ ಗ್ರಾಮ:—ಮ. ಗಳಾದ 5. ಕೂರ್ತಲೆ ಸುಬ್ಬಯ್ಯನವರು, 6 ಕುದುಪಜೆ ನಂಜಪ್ಪನವರು, 7. ದೇಂಗೋಡಿ ಬೆಳ್ಳಿಯಪ್ಪನವರು, 8. ಕುದುಕುಳಿ ಬೆಳ್ಯಪ್ಪನವರು.

ಚೇರಂಗಾಲ ಗ್ರಾಮ:—ಮ. ಗಳಾದ 9. ಕಿರಿಜಜಿ ಐಯ್ಯಪ್ಪನವರು, 10. ಕೋಡಿ ರಾಮಪ್ಪನವರು 11. ಪಾವಾರ ಪೊನ್ನಣ್ಣನವರು, 12. ಪಿಜಜಾಯಿ ಉಕ್ಕಯ್ಯನವರು,

ಕೋರಂಗಾಲ ಗ್ರಾಮ:—ಮ. ಗಳಾದ 13. ಬಳ್ಳಡ್ಕ ದೋಲ್ಯಯ್ಯನವರು, 14. ಅಂಬಾಟ್ರಿ ಮುತ್ತಣ್ಣನವರು, 15. ಸಂಗಾರು ಮುತ್ತಣ್ಣನವರು, 16. ಪಳಂಗೋಟು ಬೋಳ್ಯೆಯ್ಯನವರು.

ಅಧ್ಯಕ್ಷರ ಭಾಷಣವಾದ ನಂತರ ಸಭೆಯು ಬರಖಾಸ್ತಾಯಿತು.

'ಹಾಜರಿದ್ದವ'

ಬಂದೂಕುಗಳು.

ಇವು ವಿಲಾಯಿತಿಯಲ್ಲಿ ತಯಾರಾದವು. ಇವುಗಳನ್ನು ಮನೆಯಲ್ಲಿಡಲು ಲೈಸೆನ್ಸು ಪಡೆಯಬೇಕಾಗಿಲ್ಲ. ಯಾರು ಬೇಕಾದರೂ ಯಾವ ಭಯವೂ ಇಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗಬಹುದು. ಇವುಗಳಲ್ಲಿ ಕಷ್ಟವಿಲ್ಲದೆ ಶಿಕಾರಿ ಮಾಡಬಹುದು. 100 ರವೆಗಳ ಸಹಿತ ಬಂದೂಕು 1ಕ್ಕೆ 5—4—0. ಹೆಚ್ಚಿಗೆ ರವೆ ಬೇಕಾದರೆ 150 ರವೆಗಳಿರುವ ಪಟ್ಟಿ 1ಕ್ಕೆ 1—10—0.

ವಿಳಾಸ:—ಕೆ. ನಾಥಮುನಿ ಅಂಡ್ ಸನ್ಸ್,

52—24 ಪೋ ನಂ. 243 ಮದರಾಸು.

ಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ

... ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ...ಯೂ, ತೂಕವೂ ಹೆಚ್ಚುವುದು ಮತ್ತು ಇದು ...ರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ಕೆ...ಳ್ಳುತ್ತವೆ.

... ಬಾಟ್ಲಿ ಗಕ್ಕೆ 0—14—0. ಟ. ಖ. 0—9—0.

ಕೆ. ಟಿ. ಡೋಂಗರೆ ಕಂಪೆನಿ,

...6 ಗಿರಿಗಾಂವ, ಮುಂಬಯಿ.

ಆಯುಧಗಳು, ಮದ್ದು, ಗುಂಡು, ಮತ್ತು ಬೇಟೆಯ ಸಾಮಾನುಗಳು!!!



ಕಾರ್ಡು ಬರೆದರೆ ಈಗಿನ ಕ್ಯಾಟಲಾಗು ಮಫತಿಯಾಗಿ ಕಳುಹಿಸಲ್ಪಡುವವು.

ಜೋಡು	ಹೋಳಿನ	ತೋಟದ	ರೈಫಲುಗಳು	ರೂ.	120	ಇಂದ	ರೂ	2750 ರ	ವರೆಗೆ.
ಒಂಟಿ	"	"	"	"	35	"	"	950	"
ಜೋಡು	"	"	ಕೋವಿಗಳು	,	50	"	"	1350	"
ಒಂಟಿ	"	"	"	"	35	"	"	275	"
ಜೋಡು	ಹೋಳಿನ	ಕೇಪು	"	"	45	"	"	135	,
ಒಂಟಿ	"	,	"	"	30	"	"	80	"
ಬ್ರೀಚ್	ಲೋಡಿಂಗ್	ರಿವಾಲ್ವರುಗಳು		"	35	"	"	350	"
ಪಿಸ್ತೋಲುಗಳು				"	30	"	"	150	"

ಕಾಡು ಮೃಗಗಳ ಬೇಟೆ ಮಾಡಲು ಬೇಟೆ ಮುಂತಾದ ಎಲ್ಲಾ ತರಹದ ರಾತ್ರಿಯ ವಿನೋದ ಮತ್ತು ಕೆಲಸಗಳಿಗೆ ಬಹು ಉಪಯೋಗಕರವಾದ ಉತ್ತಮ 'ಸರ್ಚ್ ಲೈಟ' ಎಂಬ ದೀಪಕ್ಕೆ ಬೆಲೆ ರೂ. 30. ರವಾನೆಯ ಚಾರ್ಜಿಲ್ಲ.

ಕತ್ತಿಗಳು, ಬಚೀಗಳು, ಶೋಟಿಗಳು, ಶಸ್ತ್ರಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24—10

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

[illegible] ಮೈಸೂರು.

೧೯೩೦ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಮೈಸೂರು ಕ್ಯಾಲೆಂಡರುಗಳು.

1. ಅನೇಕ ವಿಷಯಗಳನ್ನೊಳಗೊಂಡು ಪರಮೇಶ್ವರ ಮತ್ತು ಮಹಾವಿಷ್ಣು ಲೀಲಾಪರವಾದ ದೇವರ ಪಿಕ್ಚರ್‌ಗಳು 17ನ್ನು ಇಟ್ಟು ಅಂದವಾಗಿ ತಯಾರಿಸಿದ ದೊಡ್ಡ ಶೀಟು ಕ್ಯಾಲೆಂಡರು

2. 3¼"×4¼" ಸೈಜಿನ ಪಾಕೆಟ್ ಕ್ಯಾಲೆಂಡರು	50ಕ್ಕೆ	ರೂ.	1	2	0	100ಕ್ಕೆ	ರೂ.	2	0	0
3. 5¼"×3¼" ಸೈಜಿನ ಇಂಗ್ಲಿಷ್ ಪಾಕೆಟ್ ಕ್ಯಾಲೆಂಡರು	25ಕ್ಕೆ	ರೂ.	1	3	0	100ಕ್ಕೆ	ರೂ.	4	12	0
4. ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ಅಂದವಾಗಿ ಪ್ರಿಂಟಾದ 10"×14" ಸೈಜಿನಲ್ಲಿ ಈಶ್ವರ, ಪಾರ್ವತಿ, ಗಣಪತಿ, ನಂದೀ ಮೇಲಿರುವ ಪಿಕ್ಚರು ಕ್ಯಾಲೆಂಡರು	12ಕ್ಕೆ	ರೂ.	0	14	0	25ಕ್ಕೆ	ರೂ.	1	11	0
5. 18"×22" ಸೈಜಿನಲ್ಲಿ ದಪ್ಪ ಅಕ್ಷರದಿಂದ ಪ್ರಿಂಟಾಗಿರುವ ತಿಂಗಳಿಗೆ 1 ಶೀಟಿನಂತೆ ಹರಿದು ಬಿಡುವ ಆಫೀಸ್ ಕ್ಯಾಲೆಂಡರು	1ಕ್ಕೆ	ರೂ.	0	3	0	12ಕ್ಕೆ	ರೂ.	1	2	0
	1ಕ್ಕೆ	ರೂ.	0	4	0	12ಕ್ಕೆ	ರೂ.	2	4	0

0—8—0 ಆಣೆ ರವಾನಿಸಿದವರಿಗೆ ಮೇಲ್ಕಂಡ 5 ಸಮೂನೆ ಕ್ಯಾಲೆಂಡರನ್ನು ಮಾದರಿಗಾಗಿ ಫ್ರೀ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ದರದಂತೆ ನಿಮಗೆ ...ವ ಕ್ಯಾಲೆಂಡರುಗಳಿಗೆ ಆಗುವ ಪೂರಾ ಬೆಲೆಯನ್ನು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ದ್ವಾರ ನಿಮ್ಮ ವಿಳಾಸಕ್ಕೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ್ಕ ಕ್ಯಾಲೆಂ... ರವಾನಿಸುವುದರಿಂದ ಪೋಸ್ಟೇಜು ದುಬಾರಿಯಾಗುತ್ತೆಯಾದ್ದರಿಂದ ವಿ. ಪಿ. ಮೂಲಕ ರವಾನಿಸಿರೆಂದು ಬರತಕ್ಕ ಆರ್ಡರುಗಳಿಗೆ ಕಂಡಿತವಾಗಿಯೂ ಸಿಗಾ ಕೊಡುವುದಿಲ್ಲ. ಕ್ಯಾಲೆಂಡರುಗಳು ಮುಗಿದ ನಂತರ ಬರತಕ್ಕ ಮನಿಯಾರ್ಡರುಗಳನ್ನು ಹೋದವರ್ಷದಂತೆ ವಾಪಸ್ ಮಾಡಲಾಗುತ್ತೆ.

ಮನಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಸಾಹಿತ್ಯಪ್ರಚಾರ ಮನಿ ... ಮೈಸೂರು.

12—31

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ --	50,000
ವಸೂಲಾದ ಶೇರ್ ಹಣಗಳು --	20,660
ಜಮೆಯಾದ ಠೇವಣಾತಿ --	1,87,795

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್,
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.	ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1929.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಇಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ, ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಚಂಗಂಡ ಕುಟ್ಟಪ್ಪನವರು.

ಮರೆನಾಡು—ಮೆ. ಕೇಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೀಪಂಡ ಸೋಮಯ್ಯನವರು, (ಖಾದಿಭಂಡಾರ.)

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.

ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,

ಗೋಣಿಕೊಪ್ಪಲು—ಮೆ. ಚಮ್ಮಟ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಣ್ಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,

"ಕೊಡಗು" ಮಡಿಕೇರಿ.



12 bore Victor Cartridges Rs 10/- Per 100

Mahomedally-Noorbhoy.

ARMS & AMMUNITION MART.

321 Abdul Rehman Street.

52-1 BOMBAY, 3.

ಮಾತನಾಡುವ ಪಕ್ಷಿಗಳು.



ಈ ಪಕ್ಷಿಗಳಲ್ಲಿ ಹುಲಿ, ಆನೆ, ಕರಡಿ, ಕುದುರೆ, ನಾಯಿ, ನರಿ ಮುಂತಾದ ಮೃಗಗಳೂ, ಕೋಳಿ, ಗಿಳಿ, ಕಾಗೆ, ಪಾರಿವಾಳ ಮುಂತಾದ ಎಲ್ಲಾ ಜಾತಿಯ ಪಕ್ಷಿಗಳೂ ಇರುವವು. ಇವನ್ನು ಸ್ವಲ್ಪ ಮುಟ್ಟಿದರೆ ತನ್ನಷ್ಟಕ್ಕೆ ತಾನೇ ಮಾತನಾಡುವವು. ನೋಡಲು ಬಹು ಆಶ್ಚರ್ಯವನ್ನುಂಟುಮಾಡುವವು. ಇವು ಪೋಸ್ಟ್ ಕಾರ್ಡಿನ ಸೈಜಿನಲ್ಲಿರುವವು ಕ್ರಯ 1 ಕ್ಕೆ 0—8—0. 3 ಪಕ್ಷಿಗಳಿಗೆ ಒಂದು ಇಂಗ್ಲಿಷ್ ಸೆಂಟ್ ಬಾಟಲನ್ನೂ, 6 ಕ್ಕೆ ಒಂದು ಇಂಗ್ಲಿಷ್ ಮೇಡ್ ಫೌಂಟನ್ ಪೆನ್ನನ್ನೂ, 12 ಕ್ಕೆ 5 ವರ್ಷ ಗ್ಯಾರಂಟಿ ಇರುವ ಒಂದು ಟೈಂಪೀಸನ್ನೂ ಇನಾಮಾಗಿ ಕೊಡುವೆವು. 3 ಪಕ್ಷಿಗಳಿಗೆ ಕಡಿಮೆ ಕಳುಹಿಸಲಾರೆವು.

ವಿಳಾಸ.—

ಸಿಟಿ ಮಾರ್ಟ್,

168 ಜೈನಾ ಬಜಾರ್,

52—24 ಮದರಾಸು.

New arrivals of Cigars

PRICES MODERATE

Popular lines

Morning whiffs 100 s.	Rs.	1— 8-
Lady love 100 s.	"	2—10-
Special Planters 100 s	"	3— 8-
Special Planters 50 s.	"	2— 0-
Catamaran shape 50 s.	"	2—12-

CROCKERY —

Tea sets for 6 persons in attracti designs @ Rs 12/8/- & 10/8/- a s

Spare cups & saucers @ Annas 8/- 10/- p

The Coorg Emporium,

Mercara. General Merchant. **Sidapur.**

48—24



ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದ ವನಸ್ಪತಿಗಳ ಅದ್ಭುತ ಮಹಿಮೆ.

ಬಾಲಾರ್ಕಮಧು.

ಇದನ್ನು ಮಕ್ಕಳು ಆನಂದದಿಂದ ಸೇವಿಸುತ್ತಾರೆ. ಇದು ಮಧುರವಾಗಿದೆ. ಚಿಕ್ಕ ಮಕ್ಕಳಿಗೆ ಇದನ್ನು ಕೊಡುವುದರಿಂದ ಬಾಧಿಸುವ ಕಾಯಿಲೆ ಅನ್ನವೂ ವ್ಯಾಗ [illegible] ಕಾಲದಲ್ಲಿ [illegible] ದಿನಗಳಿಂದಾಗಿ ಗಂಟು ಕಟ್ಟಿಕೊಂಡಿರುವ ಎಲುಬು [illegible] ಮದ್ಯ ಮಾಂಸ ಬೆಳೆದು ಮಕ್ಕಳಿಗೆ [illegible] ಶಕ್ತಿಯೂ [illegible] ವೂ ಹೆಚ್ಚುವುದು. [illegible] ವೈದ್ಯರುಗಳಿಂದಲೂ [illegible] ಮಾಡದ ಒಂದೇ ಒಂದು ಸೀಸೆ ತರಿಸಿಕೊಂಡಲ್ಲಿ ಇದರ ಅಪಾರ ಗುಣವು ತಾನಾಗಿ ತಿಳಿಯುವದು.

ಬೆಲೆ ಸೀಸೆ ೧ಕ್ಕೆ ೦—೧೨—೦ ಟ ಖ ೦—೯—೦.

M. V. Prasadika Oushadhalaya.

52—4 SHIMOGA. Mysore State.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ

ಇಂಡಿಯದಲ್ಲಿ ಯೋಜಿಸಲ್ಪಟ್ಟಿದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ
1926.	391	" "	1926.	106	" "
1927.	468	" "	1927.	122	"
1928.	585	" "	1928.	140	"

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1918ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ.	1924ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 22½ ರೂ
1921ರಲ್ಲಿ " " " " "	1927ರಲ್ಲಿ " " " 25

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಪಿನ್ನು ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಯೊಂದರಲ್ಲಿ ನಿಮಗೆ ಅದರಿಂದ ಲಾಭ ಉಂಟಾಗುವುದು. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು—

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಎಂ. ವಿ. ಮುತ್ತುಕೃಷ್ಣ ನಾಯುಡು, ಆಫೀಸಿಂಗ್ ಬ್ರಾಂಚ್ ಸೆಕ್ರೆಟರಿ.

52—50

ಇನಾಂ! ಇನಾಂ!

4 ಆಣೆ ಟಪ್ಪಾಲು ಸ್ಟಾಂಪು.

ಕಳುಹಿಸಿದರೆ 372 ಪುಟಗಳುಳ್ಳ ಬಹಳ ಉಪಯೋಗವಾದ ಮತ್ತು ಸುಂದರವಾದ

1930ನೇ ಇಸವಿಯ

ಡಯರಿ

ಮುಫತ್ತಾಗಿ ಕಳುಹಿಸಲ್ಪಡುವದು. ತ್ವರೆ ಮಾಡಿರಿ.

52—17 ಮದನ ಮಂಜರಿ ಫಾರ್ಮಸಿ,

1/94 ಚೈನಾ ಬಜಾರ್, ಮದ್ರಾಸ್.

Ford

SALES AND SERVICE

THE NEW CAR!!

The new model A Ford

The most economical car in the mark
Accellerates 5 to 25 M. P. H. in 8½ secon
Petrol consumption 20–30 mi es p
Gallon , Performance 5 to 60 miles p
hour in top 40 M. P. H. in second gear

A Wonderful Hill climber!!!

Easy instalment terms if you prefer
For Demonstration & other particular
Please apply to:—

S. Sunder Rau,

Sole Ford Dealer for Coorg.

24—24 **MERCARA.**

Printed & published by P. A. Belliappa, at "Kodagu Press, Mercara for "Kodagu" Ltd.

If not delivered please return to "KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩–೮–೦

ಪ್ರತಿ ಬುಧವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ–ಹಂಚೆಟ್ಟಿರ ಐ. ಬೆಳ್ಯಪ್ಪ.

ಸಂಪುಟ ೮] ಮಡಿಕೇರಿ, ಸನ್ ೧೯೨೯ ನೇ ಇಸವಿ ಜನವರಿ ತಾರೀಖು ೮ ನೇ ಬುಧವಾರ [ಸಂಚಿಕೆ ೩೦

JUST ARRIVED.

Guns

12 Bore D B B L Guns @ Rs 145 140 130 & 100 each
12 S B B L Guns @ 70 & 52–0–0 each
12 D B M L G 70 each

Cartridges.

Eley's Shot Cartridges 12–0–0 per 100
Lg & Sg 14–0–0 "

Ball Cartriges Rs 16–0–0 per 100
Lethal Bullet 32–0–0
12bore Ballistite 16–0–0
1 lb tin F F Gun Powder Rs 1–14–0 "
1– 0–0
0–10–0
Boxes of 250 M L Caps 1– 0–0 each

Selling fast. Buy requirements early.

52–48

SPENCER & CO. LTD. Arms & Ammunition Dealers MERCARA.

Post Box 423,
TRIPLICANE, MADRAS

Catalogue Free
to Bonafide Enquirers

MANUFACTURES AND DEALS IN ALL —

(1) Gemset Jewels, gold and silver articles of all patterns
(2) Race Cups Caskets, Medals, etc for presentation purposes
(3) Trovels Keys, Lockets etc for ceremonial purposes

JEWELLER
BY
APPOINTMENT
TO
His Excellency
THE GOVERNOR
OF MADRAS

UNDERTAKES —

(1) Remaking or Remodelling of all sorts of old gemset jewels to latest patterns.
(2) Electro plating, gilding and nickel ling
(3) Buying old jewellery or undertaking to effect sale

V. SUBRAMANIA IYER
JEWELLER

Telephone — 3145

Telegrams — "PRECIOUS"

52–16

Gold smith Silver smith, & Dealer in all Gemset Jewels.

ನೀವು ನಿರ್ಬಲಸ್ಥರಾಗಿ ಯಾಕೆ ನರಳುವಿರಿ?

ಅಪ್ಪತ್ತು ವರ್ಷಗಳಿಂದಲೂ ಪ್ರಖ್ಯಾತಿಗೊಂಡಿರುವ

ಸಾಲಮಿಸ್ರಿ ಮುಚ್ಚು



ಸೇವನೆಯ ಯಾವುದೇ ಧಾತು ಪುಷ್ಟಿ ವಿಕಾರಗಳನ್ನು ನರಗಳ ಶಕ್ತಿ ಕುಂದಿಹೋಗಿರುವದನ್ನು ಮೇಹ ಬಲಹೀನತೆಯನ್ನು ಇದಾ ರೋಗಗಳನ್ನೆಲ್ಲಾ ಯುಕ್ತಿ ನಾಶವಂತೆ ವಾಸಿಯಾಗಿಸುವ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯದಲ್ಲಿ, ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ರೋಗಿಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ದಯಮಾಡಿ ತರಿಸಿ ನೋಡಬಹುದು. ಒಂದು ಡಬ್ಬಿಯ ಸೇವನೆಯ ಒಳಗೇ ಇದರ ಗುಣವು ತೋರಬಹುದು. ೨ ೩ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ರದವರೆಗೂ ಸಂಪೂರ್ಣ ಗುಣಮಾಡುವದು. ರಿಜಿಸ್ಟರ್ಡ್ ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಅವಶ್ಯಕವಿರುತ್ತಾರೆ.

ಕ್ರಯ ಒಂದಕ್ಕೆ ೨–೦–೦ ಟಪಾಲು ಖರ್ಚು ಒಂದರಿಂದ ೩ ಡಬ್ಬಿಗಳವರೆಗೆ ೦–೮–೦

ಶೀವನಸ್ವಾಲಾಲ್, ಹೆಡ್ಡ್ ನೇಟಿವ್ ಡಾಕ್ಟರು

ಸಾಲಮಿಸ್ರಿ ಮುಚ್ಚು ಶಾಪ್, ಎಟ್ ಪೋಸ್ಟ್ ಮಾರ್ಕೆಟ್ ರೋಡ್, ಬೆಂಗಳೂರು ಸಿಟಿ.

12–10

ಅಪೂರ್ವ ಸಂದರ್ಭ.

ಯಾವುದೇ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ

ಆತಂಕನಿಗ್ರಹ ಮಾತ್ರೆಗಳು

ಮೊದಲನೆ ಆ ಗೂಸ, ಮಲಬದ್ಧತೆ ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಪಡಿಸುವವು. 32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ!

ಧರ್ಮಾರ್ಥ!!

ಕಾಮ ಶಾಸ್ತ್ರ

ಆರೋಗ್ಯಕ್ಕೆ ಭಾಗ್ಯಕ್ಕೆ ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ —

ಆತಂಕನಿಗ್ರಹ ಔಷಧಾಲಯ,
ಚಿಕ್ಕಪೇಟೆ ಬೆಂಗಳೂರು ಸಿಟಿ.

52–22

ಕೊಡಗು.

ಸನ್ ೧೯೨೯ನೇ ಇಸವಿ

ಜನವರಿ ತಾ ೪ನೇ ಶುಕ್ರವಾರ.

ಪಂಡಿತ ಮೋತಿಲಾಲರ ಭಾಷಣ.

ಕಲ್ಕತ್ತೆಯಲ್ಲಿ ನಡೆಯುತ್ತಿರುವ 43ನೆಯ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಪಂಡಿತ ನೆಹರುರವರು ಕೊಟ್ಟ ಭಾಷಣದ ಸಾರಾಂಶವನ್ನು ಈ ಪತ್ರಿಕೆಯ ಇನ್ನೊಂದು ಕಡೆ ಎತ್ತಿ ಪ್ರಕಟಿಸಿರುವೆವು. ಹಿಂದೂ ದೇಶದ ಸಂದಿಗ್ಧ ರಾಜಕೀಯ ಸ್ಥಿತಿಯಲ್ಲಿ ಅವರ ಭಾಷಣವು ಅನೇಕ ವಿಷಯಗಳಲ್ಲಿ ಮಾರ್ಗದರ್ಶಕತ್ವವನ್ನೂ, ರಾಜಕೀಯ ಕುಶಲತೆಯನ್ನೂ, ಒಗ್ಗಟ್ಟಿನ ಪ್ರೇಮವನ್ನೂ ತೋರ್ಪಡಿಸುತ್ತದೆ. ಸಾಧಾರಣವಾಗಿ ರಾಷ್ಟ್ರೀಯ ಸಭೆಯ ಅಧ್ಯಕ್ಷರು ಉದ್ದುದ್ದ ಭಾಷಣಗಳನ್ನು ಕೊಡುವುದು ರೂಢಿಯಾಗಿತ್ತು. ಆದರೆ ಪಂಡಿತರು ಆ ರೂಢಿಯನ್ನು ಮುರಿದು ಕಾಲೋಚಿತವಾದ ಸಂಕ್ಷಿಪ್ತ ಭಾಷಣವನ್ನು ಮಾಡಿದುದು ಅವರ ಕೌಶಲ್ಯವನ್ನು ಇನ್ನೂ ಹೆಚ್ಚಾಗಿ ತೋರ್ಪಡಿಸುತ್ತದೆ. ಅಸಂಬದ್ಧವಾದ ವಿಷಯಗಳಲ್ಲಿ ಕಾಲಹರಣ ಮಾಡದೆ ಥಟ್ಟನೆ ಮುಖ್ಯವಾದ ವಿಷಯವನ್ನು ಪ್ರವೇಶಿಸಿರುವರು. ಅವರ ಭಾಷಣವು, 'ಭಾರತ ಭೂಮಿಯ ಪ್ರಕೃತ ಸ್ಥಿತಿಯೇನು? ಅದರ ಮುಂದಿನ ಗತಿಯೇನು? ಆ ಗತಿಯ ಸಾಧನ ಕ್ರಮವೇನು?' ಈ ಮೂರು ಪ್ರಶ್ನೆಗಳ ಉತ್ತರಗಳಲ್ಲಿ ಅಡಕವಾಗಿದೆ. ಮೊದಲನೆಯ ಪ್ರಶ್ನೆಯನ್ನು ಚರ್ಚಿಸುವಾಗ ಸರಕಾರಕ್ಕೂ, ನಮಗೂ ಇರುವ ಸಂಬಂಧವನ್ನು, ಆಂಗ್ಲೇಯರೇ ನಮ್ಮ ದೀನತ್ವಕ್ಕೆ ಕಾರಣಭೂತರೆಂಬ ವಿಷಯವನ್ನೂ ಚೆನ್ನಾಗಿ ವಿವರಿಸಿದ್ದಾರೆ. ಸರಕಾರವು ನಮ್ಮ ಸ್ವದೇಶ ಪ್ರೇಮವನ್ನು ಅಡಗಿಸಲು ಮಾಡುತ್ತಿರುವ ಪ್ರಯತ್ನವು, ನಮ್ಮ ಉದ್ದೇಶಗಳಿಗೆ ಎದುರಾಗಿ ಒಡ್ಡುತ್ತಿರುವ ವಿಘ್ನಗಳು, ಬ್ರಿಟಿಷರ ಸಂಪೂರ್ಣ ಸ್ವಾರ್ಥತೆಯ ಉದ್ದೇಶಗಳು, ಇವುಗಳನ್ನು ಸರಳವಾಗಿಯೂ, ನಿರ್ಭೀತವಾಗಿಯೂ ಬಿಂಬಿಸಿರುವರು. ಆದರೆ ನಮ್ಮ ಸಾಮಾಜಿಕ ದೋಷಗಳಿಗೆ ಮಾತ್ರ ಪಂಡಿತರು ಸರಕಾರವನ್ನು ದೂರುವುದಿಲ್ಲ, ನಮ್ಮಷ್ಟೆ ಶುಚಿಗಳಾದ, ನಮ್ಮಷ್ಟೆ ಪರಿಶುದ್ಧರಾದ 60 ಮಿಲಿಯ ಜನರನ್ನು ಅಸ್ಪೃಶ್ಯರೆಂದು ದೂರ ತಳ್ಳುವುದಕ್ಕೆ ನಮ್ಮ ಮೂಢತೆಯೇ ಕಾರಣವಲ್ಲದೆ ವಿದೇಶಿ ಸರಕಾರವೇನೂ ಕಾರಣವಲ್ಲ. ಹೀಗೆ ಒಂದು ಕಡೆ ಸರಕಾರದ ಉರುಲು, ಇನ್ನೊಂದು ಕಡೆ ನಮ್ಮ ಸಾಮಾಜಿಕ ಕಟ್ಟು, ಇವೆರಡರಿಂದ ನಾವು ಬಂಧಿಸಲ್ಪಟ್ಟಿದ್ದೇವೆ. ಮೊದಲನೆಯ ಉರುಲನ್ನು ತಪ್ಪಿಸುವಾಗ ಎರಡನೆಯದು ಅಡ್ಡಬರುತ್ತದೆ. ಇಂತಹ ಬಂಧನಗಳ ಮಧ್ಯೆ ನಾವು ಸ್ವರಾಜ್ಯ ಸಾಧನೆಗೆ ಹೋರಾಡಬೇಕಾಗಿದೆ. ಹೀಗೆ ನೆಹರೂರವರು ಅಭಿಪ್ರಾಯಪಟ್ಟಿರುವುದು ನಮ್ಮ ನಿಜವಾದ ಪರಿಸ್ಥಿತಿಯೆಂಬುದನ್ನು ನಾವು ವಿವರಿಸಿ ಹೇಳಬೇಕಾಗಿಲ್ಲ.

ಹಾಗಾದರೆ ನಮ್ಮ ಮುಂದಿನ ಗತಿಯೇನೆಂಬುದೇ ಪಂಡಿತರ ಎರಡನೇ ಪ್ರಶ್ನೆ. ಇದಕ್ಕೆ ಸ್ವರಾಜ್ಯವೆಂಬುದೊಂದೇ ಅವರ ಉತ್ತರ. ಇದು ಸಂಪೂರ್ಣ ಸ್ವಾತಂತ್ರ್ಯವಾಗಬಹುದು. ಇಲ್ಲವೆ ಸಾಮ್ರಾಜ್ಯದೊಳಗಿನ ಸ್ವರಾಜ್ಯವಾಗಬಹುದು. ಅಂತೂ ಸ್ವರಾಜ್ಯವೇ ಸರ್ವ ಕಷ್ಟಗಳಿಗೂ ಪರಿಹಾರಣೆಯೆಂಬುದೇ ಅದರ ಸಿದ್ಧಾಂತ. ಈಗಿರುವ ಸ್ಥಿತಿಗಿಂತ ಸಾಮಂತ ಸ್ವರಾಜ್ಯವು ಎಷ್ಟೋ ಲೇಸು. ಸಾಮಂತ ಸ್ವರಾಜ್ಯವೇ ನಮ್ಮ ಗುರಿಯಲ್ಲ. ಆದರೆ ಅದು ಸಂಪೂರ್ಣ ಸ್ವಾತಂತ್ರ್ಯಕ್ಕೇನೂ ವಿರೋಧವಲ್ಲ. ಆದುದರಿಂದ ಸಂಪೂರ್ಣ ಸ್ವರಾಜ್ಯವೇ ಗುರಿಯಾಗಿರತಕ್ಕ ತಾನೂ ಸಾಮ್ರಾಜ್ಯದೊಳಗಣ ಸ್ವರಾಜ್ಯವೇ ಆಗಬಹುದೆಂದು ನುಡಿಯಲು ಕಾರಣವಾಯಿತು. ನೆಹರೂರವರ ಈ ರೀತಿಯ ವಾದವು ಸಂಪೂರ್ಣ ಸ್ವಾತಂತ್ರ್ಯವಾದಿಗಳಿಗೆ ಸಮಾಧಾನವನ್ನುಂಟುಮಾಡಲಾರದು. ಆದರೂ ಈ ಅಭಿಪ್ರಾಯವು ದೇಶದ ಬಹುಮತದ ಅಭಿಪ್ರಾಯವಾದುದರಿಂದ ರಾಷ್ಟ್ರೀಯ ಸಭೆಯ ಅಧ್ಯಕ್ಷರು ಅದನ್ನು ಹಿಂಬಾಲಿಸಿದುದು ನ್ಯಾಯವೆಂದು ನಾವು ಭಾವಿಸುತ್ತೇವೆ. ಒಗ್ಗಟ್ಟಿನ ಬಲದಲ್ಲಿ ನಂಬಿಗೆಯನ್ನಿಟ್ಟು ಪಂಡಿತರು ದೇಶಕ್ಕೆ ನ್ಯಾಯವಾದ ಮಾರ್ಗವನ್ನು ತೋರಿಸಿರುವರೆಂದೂ ನಾವು ನಂಬುತ್ತೇವೆ.

ತನ್ನ ಭಾಷಣದ ಕೊನೆಯ ಭಾಗದಲ್ಲಿ ನಮ್ಮ ಉದ್ದೇಶದ ಸಾಧನೆಗೆ ನಾವು ಕೈಕೊಳ್ಳಬೇಕಾದ ಕೆಲವು ಉಪಾಯಗಳನ್ನು ಸೂಚಿಸಿದ್ದಾರೆ. ನಮ್ಮ ಧ್ಯೇಯವನ್ನು ಜನರ ಮುಂದಿಡುವುದು, ನೆಹರು ವರದಿಯನ್ನು ಪ್ರಚುರಗೊಳಿಸುವುದು; ಸಾಮಾಜಿಕ ದೋಷಗಳನ್ನು ನಿರ್ಮೂಲನಮಾಡುವುದು; ಪರದೇಶೀ ವಸ್ತ್ರಗಳ ಬಹಿಷ್ಕಾರ, ಸ್ವದೇಶಿ ಕೈಗಾರಿಕೆಗೆ ಉತ್ತೇಜನ, ಗ್ರಾಮೋದ್ಧಾರ, ಮದ್ಯಪಾನ ನಿಷೇಧಕ್ಕಾಗಿ ಚಳವಳ; ಇವೇ ಮೊದಲಾದ ಮುಖ್ಯ ಕೆಲಸಗಳನ್ನು ದೇಶದ ಮುಂದಾಳುಗಳ ಮುಂದಿಟ್ಟಿರುವರು. ಈ ಮೇಲೆ ಹೇಳಿದ ಉಪಾಯಗಳಲ್ಲಿ ಉದ್ಯುಕ್ತರಾದರೆ ಸ್ವರಾಜ್ಯವು ತಾನಾಗಿಯೇ ನಮ್ಮ ವಶವಾಗುವುದೆಂಬುದೇ ಅವರ ನಂಬಿಗೆ.

ದೇಶಭಕ್ತರೂ, ಕರ್ತವ್ಯಾಪೇಕ್ಷಿಗಳೂ ಆದ ನಮ್ಮ ಮುಂದಾಳುಗಳು ನೆಹರೂರವರ ಈ ಉಪದೇಶದಂತೆ ನಡೆದುಕೊಂಡಾರೆಂದು ನಾವು ಆಶಿಸುತ್ತೇವೆ. ಹಿಂಸೆಯನ್ನೊಳಗೊಂಡ ಕೆಲಸಗಳನ್ನು ಕೈಕೊಳ್ಳಲು ನಮ್ಮ ದೇಶವು ತಯಾರಾಗಿಲ್ಲ. ಆದ್ದರಿಂದ ಹಿಂಸಾರಹಿತವಾದ ಮೇಲೆ ಹೇಳಿದ ಉಪಾಯಗಳೇ ಸ್ವರಾಜ್ಯ ಸಾಧನೆಗೆ ತಕ್ಕದಾದ ಮಾರ್ಗ. ನೆಹರೂರವರ ನಾಯಕತ್ವದಲ್ಲಿ ಸ್ವಾತಂತ್ರ್ಯವು ಒಡನೆ ನಮ್ಮ ಕೈಸೇರಲೆಂದು ನಾವು ಇದಿರು ನೋಡುತ್ತಿರುವೆವು.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ತಾ. 26 ನೇ ದಿವಸ ಕಲ್ಕತ್ತದಲ್ಲಿ, ರಾಷ್ಟ್ರೀಯ ಸಭೆಯ ಮುಂದೆ ಬರುವ ವಿಷಯಗಳನ್ನಿಡಬೇಕೆಂಬ ಬಗ್ಗೆ ಚರ್ಚೆಮಾಡಿತು. ನೆಹರು ವರದಿಯನ್ನು ಸ್ವೀಕಾರ ಮಾಡಿ ಸರ್ವ ಪಕ್ಷೀಯ ಪರಿಷತ್ತಿನವರು ಒಪ್ಪಿಕೊಂಡ ಸಾಮ್ರಾಜ್ಯದೊಳಗಣ ಸ್ವರಾಜ್ಯಕ್ಕೆ ಕಾಂಗ್ರೆಸ್ಸಿನವರೂ ಒಪ್ಪಿಕೊಳ್ಳಬೇಕೇ ಅಥವಾ ಮದ್ರಾಸ್ ಕಾಂಗ್ರೆಸ್ಸಿನಲ್ಲಿ ಪಾಸಾದ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯನ್ನೇ ಪುಷ್ಟೀಕರಿಸಬೇಕೇ ಎಂಬ ವಿಷಯದಲ್ಲಿ ಬಹಳ ವಿಳಂಬವಾದ ಚರ್ಚೆಯು ನಡೆಯಿತು. ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಧ್ಯೇಯವಾಗಿರತಕ್ಕದೆಂದೂ, ಇದನ್ನು ಸಾಧಿಸಲಿಕ್ಕಾಗಿ ಒಡನೆ ತಕ್ಕ ಉಪಾಯಗಳನ್ನು ಕೈಕೊಳ್ಳಬೇಕೆಂದೂ ಶ್ರೀಯುತ ಶ್ರೀನಿವಾಸಯ್ಯಂಗಾರರೂ ಅವರ ಬೆಂಬಲದಲ್ಲಿ ಪಂಡಿತ ಜವಾಹಿರ್‌ಲಾಲರೂ, ಸುಭಾಷ ಚಂದ್ರಬೋಸರೂ ಹಟವಾಗಿ ವಾದಿಸಿದರು. ಸಂದಿಗ್ಧ ಸಮಯದಲ್ಲಿ ಒಗ್ಗಟ್ಟನ್ನು ತಂದ ಸರ್ವಪಕ್ಷಗಳ ಸಭೆಯ ಒಪ್ಪಿಗೆಗೆ ವಿರೋಧವಾಗಿ ಕಾಂಗ್ರೆಸ್ ಸಭೆಯು ಠರಾವುಗಳನ್ನು ಪಾಸುಮಾಡಬಾರದಾಗಿಯೂ, ದೇಶದ ಬಹುಜನ ಅನುಮತಿಯನ್ನು ಪಡೆದ ಮತ್ತು ಹಿಂದೂ ಮುಸಲ್ಮಾನರ ಕಲಹಗಳನ್ನು ಹೋಗಲಾಡಿಸಲು ತಕ್ಕ ಉಪಾಯಗಳನ್ನು ಕಂಡು ಹಿಡಿದಿರುವ ನೆಹರು ವರದಿಯನ್ನು ತಿರಸ್ಕರಿಸಬಾರದಾಗಿಯೂ, ಪಂಡಿತ ಮೋತಿಲಾಲರೂ, ಮಹಾತ್ಮ ಗಾಂಧಿಯವರೂ ತಮ್ಮ ವಿರೋಧ ಪಕ್ಷದವರನ್ನು ಕೇಳಿಕೊಂಡರು. ಆದರೆ ಶ್ರೀನಿವಾಸ ಅಯ್ಯಂಗಾರರ ಪಕ್ಷದವರು ಸಮ್ಮತಿಸಲಿಲ್ಲ. ಕಡೆಗೆ ಮಹಾತ್ಮ ಗಾಂಧಿಯವರೆ ಒಂದು ರಾಜಿಯ ಠರಾವನ್ನು ಸಭೆಯ ಮುಂದಿಟ್ಟರು. ಬ್ರಿಟಿಷ್ ಪಾರ್ಲಿಮೆಂಟಿನವರು 1929 ನೇ ಇಸವಿ ಡಿಸೆಂಬರು 31ರ ಒಳಗೆ ನೆಹರು ಕಮಿಟಿಯವರು ಮಾಡಿದ ರಾಜ್ಯ ಘಟನೆಯ ಒಪ್ಪದಿದ್ದರೆ ಒಡನೆ ಅಸಹಕಾರದ ಚಳವಳವನ್ನು ಕೈಕೊಳ್ಳತಕ್ಕದ್ದೆಂಬುದೇ ಅವರ ಠರಾವಿನ ಸಾರಾಂಶವಾಗಿತ್ತು. ಈ ಒಪ್ಪಂದಕ್ಕೆ ಶ್ರೀನಿವಾಸಯ್ಯಂಗಾರರು ತಮ್ಮ ಅನುಮತಿಯನ್ನು ಕೊಟ್ಟರು. ಜವಾಹಿರ್‌ಲಾಲರು ತನ್ನ ಒಪ್ಪಿಗೆಯನ್ನು ಕೊಡದಿದ್ದರೂ ಅದಕ್ಕೆ ವಿರೋಧ ಮಾಡಲಿಲ್ಲ. ಸುಭಾಷ್ ಚಂದ್ರಬೋಸರೂ ಇನ್ನೂ ಕೆಲವು ಬಂಗಾಳದ ಮೆಂಬರರೂ ಇದಕ್ಕೆ ಸಂಪೂರ್ಣ ವಿರೋಧವಾಗಿ ನಿಂತರು. ಈ ಸಂದರ್ಭದಲ್ಲಿ ಮಹಾತ್ಮರು ತಮ್ಮ ಠರಾವನ್ನು ಸಭೆಯ ಮುಂದಿಡುವಾಗ ಈ ಕೆಳಗಿನ ಭಾಷಣವನ್ನು ಮಾಡಿದರು.

"ನೆಹರು ವರದಿಯು ಬಹಳ ಮಹತ್ವವುಳ್ಳದ್ದೆಂದು ನಾನು ಯೋಚಿಸುತ್ತೇನೆ. ಈ ವರದಿಯು ಪ್ರಕಟವಾದೊಡನೆ ಸಮಗ್ರ ಹಿಂದೂಸ್ಥಾನವೂ ಅದನ್ನು ಪ್ರಶಂಸೆಮಾಡಿ ಸ್ವೀಕರಿಸಿತು. ನಮ್ಮ ಇದಿರಾಳುಗಳು ಕೂಡ ಅದರ ಯೋಗ್ಯತೆಗೆ ಮೆಚ್ಚಿದರು. ಆದುದರಿಂದ ಅದನ್ನು ಎತ್ತಿ ಹಿಡಿಯುವುದು ನಮ್ಮೆಲ್ಲರ ಕರ್ತವ್ಯವೆಂದು ನಾನು ತಿಳಿಯುತ್ತೇನೆ. ಅಂತಃಕರಣ ಪೂರ್ವಕವಾಗಿ ಆ ವರದಿಯನ್ನು ಸಮರ್ಥಿಸಬೇಕು. ವಿರೋಧ ಪಕ್ಷದವರು ಹೇಳುವ ಪೂರ್ಣ ಸ್ವಾತಂತ್ರ್ಯ ಧ್ಯೇಯವನ್ನು ಸಾಧಿಸುವ ಮಾರ್ಗವು ನನ್ನ ಠರಾವಿನಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ಸರ್ವರೂ ಈ ಠರಾವಿಗೆ ಸಮ್ಮತವನ್ನು ಕೊಡುವರೆಂದು ನಾನು ನಂಬಿದ್ದೇನೆ."

ಮಹಾತ್ಮರ ಠರಾವು ಬಹುಮತದಿಂದ ಪಾಸಾಯಿತು. ಆದರೆ ಬೋಸರ ಪಂಗಡದವರು ಈ ಠರಾವನ್ನು ರಾಷ್ಟ್ರೀಯ ಸಭೆ (Open Congress) ಯಲ್ಲಿ ವಿರೋಧಿಸಬೇಕೆಂಬ ಹಟದಲ್ಲಿರುವರು. ಮುಂದೆ ಏನಾಗುವುದೋ ತಿಳಿಯದು.

ಅಖಿಲಭಾರತ ಮೊಸ್ಲೆಮ್ ಲೀಗ್

ಅಖಿಲಭಾರತ ಮೊಸ್ಲೆಮ್ ಲೀಗಿನ ಅಧಿವೇಶನವು ಅದೇ ದಿವಸ ಕೂಡಿತ್ತು. ಮೌಲವಿ ಅಬ್ದುಲ್‌ಕಲಮರು ಸ್ವಾಗತ ಮಂಡಲದ ಅಧ್ಯಕ್ಷರಾಗಿದ್ದರು. "ಇಲ್ಲದ ಮತಭೇದಗಳನ್ನು ಕಲ್ಪಿಸಿ ಇಂಥ ಪ್ರಸಂಗದಲ್ಲಿ ರಾಷ್ಟ್ರದ ಹಾನಿಯನ್ನು ಮಾಡದೆ ಎಲ್ಲರೂ ಒಗ್ಗಟ್ಟಾಗಿ ಬ್ರಿಟಿಷ್ ಸರಕಾರಕ್ಕೆ ನಮ್ಮ ಬೇಡಿಕೆಯನ್ನು ಸ್ಪಷ್ಟವಾಗಿ ತಿಳಿಸೋಣ. ಅವರು ಅದನ್ನು ಮನ್ನಿಸದಿದ್ದರೆ ಅನರ್ಥಗಳುಂಟಾಗುವುದರಲ್ಲಿ ಸಂದೇಹವಿಲ್ಲ. ಹಿಂದೀಯರು ನಿರಾಶರಾಗಿ ಬೇಕಾದ ಸಾಧನಗಳನ್ನು ಅವಲಂಬಿಸಿ ಸ್ವಾತಂತ್ರ್ಯವನ್ನು ಗಳಿಸಲಿಕ್ಕೆ ಸಿದ್ಧರಾಗುವರು. ಮುಂದಿನ ಪರಿಣಾಮವನ್ನು ಬ್ರಿಟಿಷ್ ಜನರು ಅನುಭವಿಸಬೇಕಾಗುವುದು. ನೆಹರು ಕಮಿಟಿಯ ವರದಿಯು ನಮ್ಮ ಬೇಡಿಕೆಯ ವಿವರವನ್ನು ಸ್ಪಷ್ಟವಾಗಿ ಹೇಳಿರುತ್ತದೆ." ಈ ಪ್ರಕಾರ ಸ್ವಾಗತಾಧ್ಯಕ್ಷರು ಭಾಷಣ ಮಾಡಿದ ಮೇಲೆ ಅಧ್ಯಕ್ಷರಾದ ಮಹಮ್ಮದಾಬಾದ ರಾಜಾ ಸಾಹೇಬರು ತಮ್ಮ ಭಾಷಣವನ್ನು ಪ್ರಾರಂಭ ಮಾಡಿದರು. "ಜಾತಿಯ ಹಿತ ಮತ್ತು ರಾಷ್ಟ್ರದ ಹಿತ ಇವೆರಡೂ ಬೇರೆಯೆಂದು ನಾನು ನಂಬುವುದಿಲ್ಲ. ಯಾವದೊಂದು ಜಾತಿಯ ಹಿತವು ಅಲಕ್ಷಿಸಲ್ಪಟ್ಟರೆ ಅದು ರಾಷ್ಟ್ರಕ್ಕೆ ಕೇಡು. ಹಿಂದೂ ಮುಸಲ್ಮಾನರೊಳಗಣ ಭೇದ [illegible] ಕಡಿಮೆಯಾಗುತ್ತಿದೆ. ಅದನ್ನು ನಿವಾರಿಸಿಕೊಳ್ಳಬಹುದು. ಸರ್ವಪಕ್ಷೀಯ ಪರಿಷತ್ತಿಗೆ ನಮ್ಮ ಪ್ರತಿನಿಧಿಗಳನ್ನು ಕಳುಹಿಸಿ." ಈ ಪ್ರಕಾರ ಅಧ್ಯಕ್ಷರ ಭಾಷಣ ಮುಗಿದ ಮೇಲೆ ಸರ್ವಪಕ್ಷಗಳ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸಲಾಯಿತು.

ಆದರೆ ಸರ್ವಪಕ್ಷಗಳ ಸಭೆಯಲ್ಲಿ ಮುಸಲ್ಮಾನರ ಕೋರಿಕೆಯಂತೆ ಮಧ್ಯವರ್ತಿ ಶಾಸನ ಸಭೆಯಲ್ಲಿ ಮೂರರಲ್ಲಿ ಒಂದಂಶ ಸ್ಥಾನವು ಅವರಿಗಾಗಿ ಕೊಡಬೇಕೆಂಬ ಠರಾವೂ, ಪ್ರಾಂತಗಳ ಪುನರ್ಘಟನೆಯಾದರೆ ಪಂಜಾಬ, ಬಂಗಾಲ, ಸಿಂಧ ಪ್ರಾಂತಗಳಲ್ಲಿ ಮುಸಲ್ಮಾನರು ಬಹು ಸಂಖ್ಯಾತರಾಗಿ ಉಳಿಯುವಂತೆ ಮಾಡಬೇಕೆಂಬ ಠರಾವೂ ತಿರಸ್ಕರಿಸಲ್ಪಟ್ಟವು.

ಸಮಾಜ ಸುಧಾರಕ ಪರಿಷತ್ತು.

ಕಳೆದ ತಿಂಗಳು 25ನೇ ದಿನ ಅಖಿಲಭಾರತ ಸಮಾಜ ಸುಧಾರಣೆಯ ಸಭೆಯು ಶ್ರೀ. ಎಂ. ಆರ್. ಜಯಕರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಭರತಖಂಡದಲ್ಲಾಗಬೇಕಾಗಿರುವ ಸಮಾಜ ಸುಧಾರಣೆಗಳನ್ನೆಲ್ಲಾ ವಿವರಿಸಿ, ಅವುಗಳು ಎಷ್ಟು ಅಗತ್ಯವಾಗಿಯೂ, ಅವಸರದಿಂದಲೂ ನಡೆಯಬೇಕೆಂಬುದನ್ನು ವಿವರಿಸಿದರು. ಅವರ ಭಾಷಣದ ಮುಖ್ಯ ಸಾರಾಂಶವೇನೆಂದರೆ—"ಕೆಲವು ವರ್ಷಗಳ ಹಿಂದೆ ಸಮಾಜ ಸುಧಾರಣೆಯನ್ನು ನಡೆಸುವುದು ಬಹು ಕಷ್ಟವಾಗಿತ್ತು. ಆದರೆ 15 ವರ್ಷಗಳಿಂದೀಚೆಗೆ ಸಮಾಜ ಸುಧಾರಣೆಯ ಅವಶ್ಯಕತೆಯನ್ನು ಎಲ್ಲರೂ ಒಪ್ಪುತ್ತಾರೆ. ಸುಧಾರಣೆ ಕಾರ್ಯಗಳು ಕೂಡ ಹೆಚ್ಚು ಹೆಚ್ಚಾಗಿ ನಡೆಯುತ್ತಿವೆ. ಹಿಂದಿನ ಕಾಲದಲ್ಲಿ ಜಾತಿ ಪದ್ಧತಿಗೆ ಆವಶ್ಯಕವಿದ್ದಿರಬಹುದು. ಆದರೆ ಈಗ ಜಾತಿ ಪದ್ಧತಿಯು ಸಮಾಜದ ಏಳಿಗೆಗೂ, ಸ್ವಾತಂತ್ರ್ಯಕ್ಕೂ ಒಂದು ದೊಡ್ಡ ಅಡಚಣೆಯಾಗಿದೆ. ಜಾತಿ ಪದ್ಧತಿಯನ್ನು ನಿರ್ಮೂಲ ಮಾಡಬೇಕು. ಜಾತ್ಯಂತರ ವಿವಾಹಕ್ಕಿರುವ ತೊಂದರೆಗಳನ್ನು ಹೋಗಲಾಡಿಸಬೇಕು. ಶುದ್ಧಿ ಮತ್ತು ಸಂಘಟನ ಕಾರ್ಯಗಳನ್ನು ಕೈಕೊಳ್ಳಬೇಕು. ಬೇರೆ ಮತದವರನ್ನು ಮಾತ್ರವಲ್ಲ, ನಮ್ಮ ಹಿಂದುಗಳಲ್ಲೇ ವಶಿಷ್ಟ, ವಿಶ್ವಾಮಿತ್ರರನ್ನು ಉದಾಹರಣೆಯಾಗಿಟ್ಟು ಕೀಳು ಜಾತಿಯವರನ್ನು ಶುದ್ಧಿಯ ಮೂಲಕ ಉತ್ತಮ ವರ್ಗಕ್ಕೆ ಎತ್ತಬೇಕು. ಸ್ತ್ರೀಯರಿಗೆ ಆಸ್ತಿಯಲ್ಲಿ ಹಕ್ಕಿರಬೇಕು. ತಂದೆಯ ಆಸ್ತಿಯಲ್ಲಿ ಮಗನಿಗೆ ಎಷ್ಟು ಹಕ್ಕಿದೆಯೋ ಮಗಳಿಗೂ ಅಷ್ಟೇ ಹಕ್ಕು ದೊರಕಬಾರದೆ? ಆರ್ಯರು ಭರತಖಂಡಕ್ಕೆ ಬಂದಾಗ ಸ್ತ್ರೀಯರಿಗಿದ್ದ ಆಸ್ತಿಯ ಹಕ್ಕು ಈಗ ಇಲ್ಲವಾಗಿದೆ. ಸ್ತ್ರೀಯರಿಗೆ ಆಸ್ತಿಯಲ್ಲಿ ಹಕ್ಕಿತ್ತೆಂಬುದಕ್ಕೆ ಋಗ್ವೇದದಲ್ಲಿ ಅನೇಕ ಆಧಾರಗಳಿವೆ. ಈ ಕಾಲದಲ್ಲಿ ಸ್ತ್ರೀಗೆ ಸಮಾನಾಧಿಕಾರವು ಇಲ್ಲ. ಕಾರಣಾಂತರದಿಂದ ಪತಿತರಾದ ಸ್ತ್ರೀಯರನ್ನೂ ಕಷ್ಟಕ್ಕಾಗಿ ನರಳುತ್ತಿರುವ ಹೆಣ್ಣು ಮಕ್ಕಳನ್ನೂ ಉದ್ಧರಿಸುವುದಕ್ಕಾಗಿ ಎಲ್ಲಾ ಕಡೆಗಳಲ್ಲೂ ಸಂಸ್ಥೆಗಳನ್ನು ಸ್ಥಾಪಿಸಬೇಕು. ನಮ್ಮ ಸಮಾಜ ಸುಧಾರಣೆಯ ಕಾರ್ಯವು ಮೇಲೆ ಹೇಳಿದ ಅನೇಕ ಭಾಗಗಳಲ್ಲಿ ನಡೆಯಬೇಕಾಗಿದೆ. ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳು ಒಂದಕ್ಕೊಂದು ಜೊತೆಯಲ್ಲಿ ನಡೆಯುತ್ತಿರಬೇಕು. ಪ್ರಪಂಚದಲ್ಲಿ ಒಂದು ಹೊಸ ಯುಗವು ಪ್ರಾರಂಭವಾಗಿದೆ. ನಾವು ಮಾತ್ರ ಹಿಂದಿರುವುದು ಅಸಾಧ್ಯ. ಈ ವಿಚಾರದಲ್ಲಿ ವಾದ ವಿವಾದಕ್ಕೆ ಅವಕಾಶವಿಲ್ಲ. ಕಾರ್ಯವನ್ನು ಕೈಗೊಳ್ಳಬೇಕು."

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೨೧ನೇ ಪ್ರಕರಣ.

ಆಶ್ರಮ.

[illegible]ಕೂಲಿಗಾರರಿಗೂ, ಗಿರಣಿಗಳ ಮಾಲೀಕರಿಗೂ ನಡೆದ [illegible]ವಾದದ ಕಥೆಯನ್ನು ವಿವರಿಸುವುದಕ್ಕಿಂತ ಮುಂಚೆ ಆ[illegible] ಕಡೆ ದೃಷ್ಟಿಯನ್ನೊಮ್ಮೆ ಬೀರುವುದು ಅವಶ್ಯ. ನಾ[illegible] ಚಂಪಾರಣ್ಯದಲ್ಲಿದ್ದ ಕಾಲವೆಲ್ಲಾ ಆಶ್ರಮವು ನನ್ನ ಮನ[illegible]ದ ದೂರವಾಗಲೇ ಇಲ್ಲ. ಒಂದೊಂದು ವೇಳೆ ಅಲ್ಲಿ[illegible] ಹೋಗಿ ಬರುತ್ತಿದ್ದೆನು.

ಆ ಕಾಲದಲ್ಲಿ ಆಶ್ರಮವು ಅಹಮದಾಬಾದಿನ ಒಳ[illegible] ಕೋಚರಬ್ ಎಂಬ ಸಣ್ಣ ಹಳ್ಳಿಯಲ್ಲಿದ್ದಿತು. [illegible] ಗಂಟುಬೇನೆಯು ಪ್ರಾರಂಭವಾಯಿತು. [illegible]ಶ್ರಮದಲ್ಲಿನ ಮಕ್ಕಳಿಗೆ ಅಪಾಯವುಂಟೆಂದು ನನ[illegible] [illegible]ವಾಗಿ ಗೋಚರವಾಯಿತು. ನಾನು ಆಶ್ರಮದ [illegible] [illegible]ಲ್ಯದ ನಿಯಮಗಳನ್ನು ಎಷ್ಟು ಕಟ್ಟುನಿಟ್ಟಾಗಿ [illegible] ಸುತ್ತಮುತ್ತಲಿನ ಅಶುಚಿಯ ಪರಿಣಾಮದಿಂದ [illegible] [illegible]ವಾಗಿ ತಪ್ಪಿಸಿಕೊಳ್ಳುವುದು ನಮಗೆ ಅಸಾಧ್ಯವಾಗಿತ್ತು. [illegible]ಚರಜನ ಜನರು ಈ ನಿಯಮಗಳನ್ನು ಪಾಲಿಸು[illegible] [illegible]ಡುವುದಕ್ಕಾಗಲಿ, ಆ ಗ್ರಾಮಕ್ಕೆ ಬೇರೆ ರೀತಿಯಲ್ಲಿ [illegible] [illegible]ಲಾಗಲಿ ನಮಗೆ ಆಗ ಸಾಮರ್ಥ್ಯವಿರಲಿಲ್ಲ.

ನಮ್ಮ ಆಶ್ರಮವು ಪಟ್ಟಣದಿಂದಲೂ, ಹಳ್ಳಿಯಿಂದ[illegible] [illegible]ದಷ್ಟು ದೂರವಿದ್ದು ಆದರೂ ಅವುಗಳಿಂದ ಅತಿ ದ[illegible] [illegible]ದೆ ಇರಬೇಕೆಂಬುದೇ ನಮ್ಮ ಧ್ಯೇಯವಾಗಿದ್ದಿತು [illegible] ಏನಾದರೊಂದು ದಿನ ನಮ್ಮ ಸ್ವಂತ ಭೂಮಿಯನ್ನೇ [illegible]ನಾವು ನೆಲಸಲೇಬೇಕೆಂದು ಸಂಕಲ್ಪಿಸಿದ್ದೆವು.

ಕೋಚರಬನ್ನು ಬಿಟ್ಟು ಹೊರಡುವುದಕ್ಕೆ ಗಂ[illegible] ಸಾಕಾದಷ್ಟು ಎಚ್ಚರಿಕೆಯೆಂದು ನನಗೆ ತೋರಿ[illegible] [illegible]ದಾಬಾದಿನಲ್ಲಿ ಶ್ರೀ. ಪುಂಜಾಭಾಯಿ ಹೀರಾಚಂದ [illegible] ವರ್ತಕರಿದ್ದರು. ಅವರಿಗೂ, ಆಶ್ರಮಕ್ಕೂ ಗಾ[illegible] [illegible]ವುಂಟಾಗಿ ಅವರು ಅನೇಕ ವಿಷಯಗಳಲ್ಲಿ ಆಶ್ರಮ[illegible] [illegible]ಲಾಪೇಕ್ಷೆರಹಿತವಾದ ಮನೋಭಾವದಿಂದ ನೆರವೀಯುತ್ತಿದ್ದರು. ಅಹ[ಮ]ದಾಬಾದಿಗೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ಅವರು ವಿಶೇ[ಷ] ಅನುಭವವುಳ್ಳವರಾಗಿದ್ದರು. ಅವರು ನಮಗೆ ಅನು[ಕೂ]ಲವಾದ ಜಾಗವನ್ನು ಒದಗಿಸಿಕೊಡುವೆನೆಂದು ತಾವೇ [ಮು]ಂದೆ ಬಂದರು. ನಾನು ಸ್ಥಳವನ್ನರಸುತ್ತಾ ಅವರೊಡನೆ [illegible] ಉತ್ತರಕ್ಕೂ, ದಕ್ಷಿಣಕ್ಕೂ ಅಲೆದಾಡಿ ಆ ಮೇಲೆ [illegible] [illegible]ಲ್ಕು ಮೈಲಿ ಒಡಗಲಿನಲ್ಲಿರುವ ಜಾಗವೊಂದನ್ನು [illegible] ಅವರಿಗೆ ಹೇಳಿದೆನು. ಅವರು ಈಗ ಆಶ್ರಮವಿರು[ವ] ತಾ[illegible] [illegible]ನ್ನು ನಿಶ್ಚಯಿಸಿದರು. ಅದು ಸಬರ್ಮತಿ ಕಾರಾಗೃಹದ [illegible] [illegible]ರವಿದ್ದುದು ನನಗೊಂದು ವಿಶೇಷವಾಗಿ ಕಂಡಿತು. ಕಾ[ರಾ]ಗೃಹಕ್ಕೆ ಹೋಗುವುದು ಸತ್ಯಾಗ್ರಹಿಗಳ ಸಾಧಾರಣ ಜಾ[illegible] [illegible]ಟ ಎಣಿಕೆಯಿದ್ದುದರಿಂದ ನನಗೆ ಈ ಸ್ಥಾನವು [ಹಿ]ಡಿಸಿತು. [illegible] ಸಾಮಾನ್ಯವಾಗಿ ಬಂದೀಖಾನೆಗಳಿಗಾಗಿ ಆರಿಸುವ ಜಾ[ಗ] [illegible] ಸುತ್ತುಮುತ್ತಲೂ ಸ್ವಚ್ಛತೆಯಿರುವುದೆಂಬುದು [illegible]ಗೆ ಗೊ[ತ್ತಿ]ದ್ದಿತು. ಸುಮಾರು ಎಂಟು ದಿವಸದಲ್ಲಿ ಕ್ರಯಪತ್ರವ[ನ್ನು] ಬರೆಸಿದುದಾಯಿತು. ಆ ಭೂಮಿಯ ಮೇಲೆ [illegible]ಡವಾ[illegible], ಗಿಡವಾಗಲಿ ಇರಲಿಲ್ಲ. ಆದರೆ ಅದು ನದಿಯ ತೀರದಲ್ಲಿ [illegible]ಕಾಂತಸ್ಥಾನದಲ್ಲಿದ್ದುದು ದೊಡ್ಡ ಅನುಕೂಲವಾಗಿದ್ದಿತು.

ಸರಿಯಾಗಿ ಮನೆಗಳನ್ನು ಕಟ್ಟುವುದಕ್ಕಿಂತ ಮುಂಚೆ ನಾ[illegible] [illegible] ಡೇರೆಗಳಲ್ಲಿ ವಾಸಿಸಬೇಕೆಂದೂ ತಗಡಿನ ಗುಡಿಸ್ಲು ಕ[illegible] [illegible] ಅದರಲ್ಲಿ ಅಡಿಗೆ ಮಾಡಬೇಕೆಂದೂ ನಿಶ್ಚಯಿಸಿದೆ[ವು].

ಆಶ್ರಮವು ನಿಧಾನವಾಗಿ ಬೆಳೆಯುತ್ತಿದ್ದಿತು. ಗಂಡಸ[ರೂ], ಹೆಂಗಸರೂ ಮಕ್ಕಳೂ ಎಲ್ಲಾ ಸೇರಿ ನಾವು [illegible] [illegible]ನರೂ ಒಂದೇ ಅಡಿಗೆ ಮನೆಯಲ್ಲಿ ಊಟಮಾಡುತ್ತಿದ್ದೆವು. [illegible] ಸ್ಥಳಕ್ಕೆ ಹೋಗಿ, ನೆಲೆಸುವ ಕಲ್ಪನೆಯೆಲ್ಲಾ ನನ್ನದಾಗಿದ್ದಿ[ತು]. ಅದನ್ನು ಕಾರ್ಯರೂಪಕ್ಕೆ ತರುವುದು ಎಂದಿನ ಹಾಗೆ [illegible]ಲಾಲರ ಮೇಲೆ ಬಿದ್ದಿತು.

ವಾಸಿಸುವುದಕ್ಕೆ ಸ್ಥಿರವಾದ ಮನೆಗಳು ಸಿದ್ಧವಾಗುವುದ[ಕ್ಕೆ] ಮುಂಚೆ ನಾವು ಬಹು ಕಷ್ಟಪಟ್ಟೆವು. ಮಳೆಗಾಲವು ಸ[ಮೀ]ಪಿಸಿದ್ದಿತು ಸಾಮಾನುಗಳನ್ನು ನಾಲ್ಕು ಮೈಲಿ ದೂರ[ದಲ್ಲಿ]ರುವ ನಗರದಿಂದ ತರಬೇಕಾಗಿದ್ದಿತು. ಅದುವರೆಗೂ ಬಂ[ಜರ]ವಾಗಿದ್ದ ಆ ನೆಲದಲ್ಲಿ ಹಾವುಗಳಿದ್ದುವು. ಈ ಸ್ಥಿತಿ[ಯ]ಲ್ಲಿ ಸಣ್ಣ ಹುಡುಗರೊಡನೆ ವಾಸಿಸುವುದರ ಭಯವು ಅ[illegible] [illegible]ಷ್ಟೇನೂ ಹಾಗಿರಲಿಲ್ಲ. ಹಾವುಗಳನ್ನು [ಕೊ]ಲ್ಲದಿರುವ[ದು] ಸಾಮಾನ್ಯ ನಿಯಮವಾಗಿದ್ದಿತು ಆದರೆ ವಿಷಜಂ[ತು]ಗಳ ದಿಗಿಲನ್ನು ನಾವ್ಯಾರೂ ಕಳೆದುಕೊಂಡಿರಲಿಲ್ಲ ಎಂದು ಒ[ಪ್ಪಿ]ಕೊಳ್ಳಬೇಕು—ಇಂದು ಕೂಡ ಅದು ಹೋಗಿಲ್ಲ.

ಅಸ್ಥಳಕ್ಕೆ ಪೋಸ್ಟೇಜು	0	3	0
ನಂ. ಚಿಕ್ಕ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 5"×2½" 1ಕ್ಕೆ	0	7	0
ಅಸ್ಥಳಕ್ಕೆ ಪೋಸ್ಟೇಜು	0	2	0
ನಂ. ಚಿಕ್ಕ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ 5"×2½" 1ಕ್ಕೆ	0	5	0
ಅಸ್ಥಳಕ್ಕೆ ಪೋಸ್ಟೇಜು	0	2	0

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಾ ಬೆಲೆಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್ ಗಟ್ಟಲೆ ತರಿಸಿಕೊಳ್ಳುವವರು ಡಜನ್ 1ಕ್ಕೆ 2—0—0 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929ನೇ ಇಸವಿಯ ಸಚಿತ್ರ ಕ್ಯಾಲೆಂಡರುಗಳು.

ಶೀಟ್ ಕ್ಯಾಲೆಂಡರ್ 50ಕ್ಕೆ	1	2	0
„ „ 100ಕ್ಕೆ	2	0	0
3"×4½" ಪಾಕೆಟ್ ಕ್ಯಾಲೆಂಡರ್ 12ಕ್ಕೆ	0	9	0
„ „ 50ಕ್ಕೆ	2	4	0
„ „ 100ಕ್ಕೆ	4	6	0

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10"×14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3ಕ್ಕೆ

ಕ್ಯಾಲೆಂಡರ್ 3ಕ್ಕೆ	0	8	0
„ „ 6ಕ್ಕೆ	0	14	0
„ „ 12ಕ್ಕೆ	1	6	0

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಾ ಮೊಬಲಗು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವುದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರ್ಷದಂತೆ ವಾಪಸು ಮಾಡುತ್ತೆ.

ಮಾದರಿ ಕ್ಯಾಲೆಂಡರು ಅಪೇಕ್ಷಿಸುವವರು 0—5—0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆಯ ಕ್ಯಾಲೆಂಡರುಗಳನ್ನು ಪೋಸ್ಟು ಮೂಲಕ ಫ್ರೀಯಾಗಿ ಕಳುಹಿಸಲಾಗುತ್ತೆ.

ಮಣಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

12—35

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	17 190
ಬಮೂಬಂದ ಠೇವಣಾತಿ	—	1,62 320

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಕೋಬಂಡ ಅಪ್ಪಯ್ಯನವರು,
ರಾವ್ ಬಹದ್ದೂರ್

ಟ್ರೆಜರರ್
ಕೊಂಗಟ್ಟಿರ ಅಪ್ಪಯ್ಯನವರು

ಸೆಕ್ರೆಟರಿ
ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1928

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ ಪೇರಿಯಂಡ ಪೂವಯ್ಯನವರ ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು
ಮತ್ತು—ಮೆ ಚಂಗಂಡ ಕುಟ್ಟಪ್ಪನವರು
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು
ಮರೆನಾಡು—ಮೆ ಕೇಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಕಾಸಜೇರಿರ ಸಂಜಪ್ಪನವರು,
ಮೂರ್ನಾಡು—ಪಡೆಯಂಡ ದೇವಯ್ಯನವರು,
ನಾಪೋಕ್ಲು—ಮೆ ಟಿ. ಆರ್ ರಾಮಯ್ಯನವರು,
ಗೋಣಿಕೊಪ್ಪಲು—ಮೆ ಒಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ ಜಿ ಮುದ್ದಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ ಜಿ ಮಾದಯ್ಯನವರು,

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾವ ಸಂದಾ ಹಣವನ್ನು ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ ದಾವ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದಾರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
"ಕೊಡಗು" ಮಡಿಕೇರಿ.

12 bore Victor Cartridges Rs. 10/ Per 100

Mahomedally-Noorbhoy.
ARMS & AMMUNITION MART.
321 Abdul Rehman Street.
BOMBAY. 3.

52-17

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಬಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲಿ ಹುಣ್ಣು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದ ಮೂತ್ರ ಹೊಯ್ಯುವಾಗ ಉರಿಯುವುದು, ಅಗಾಗ್ಗೆ ಮೂತ್ರ ಬರುವುದು ಮೂತ್ರ ಕಡೆಯಲಿಕ್ಕೆ ಧಾತು ಹುಡಿ ಹೋಗುವುದು, ಸ್ವಪ್ನಾವಸ್ಥೆ, ಮೂತ್ರನಾಳದಲಿ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಚುಚ್ಚುವ ನೋವು ಇವುಗಳಿಗೆ ಪರಮ ಔಷಧ ಬೆಲೆ ಬಾಟ್ಲಿ 1 3, 6ಕ್ಕೆ ರೂ 1—1—0 3—8—0 6—12—0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—6—0

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವುದು, ತಲೆಭಾರ, ಕಣ್ಣುರಿ ಅಪಸ್ಮಾರ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗೆ 5—4—0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ
9. ಮಂಗಳೂರು.

52—13

EMPIRE OF INDIA LIFE ASSURANCE COMPANY, LIMITED.

(Established 1897)

A Monthly payment of Rs 12/8/- will secure a With Profit Assurance as shown below which will further increase by Bonus Additions

Age next Birthday	Assurance payable at Death: Whole Life	Premiums Limited to: 15 Years	20 Years	25 Years	Endowment Assurances payable at Death or at end of: 20 Years	25 Years	30 Years
	Rs	Rs	Rs	Rs	Rs	Rs	Rs
25	5 820	3 550	4 250	4 800	3 010	3 800	4 520
30	5 140	3 290	3 930	4 390	2 950	3 620	4 220
35	4 480	3 030	3 600	3 970	2 810	3 400	3 870

Wannted —Agents at Mercara, Somwarpet and Siddapur

HEAD OFFICE
Empire of India Life Building,
BOMBAY

24—4

BRANCH OFFICE
152 Commercial Street,
BANGALORE

Xmas & New Year Presents!

Toys for Children!

A set comprising of tiny bright and beautiful tumblers, pots, spoons etc made of brass and bell metal, are quite suitable for the amusement and play of children

Small set 32 articles Rs 2—8—0 Medium set 32 articles Rs 3—8—0
Big set of 32 articles Rs 4—8—0

Securely packed in neat card board boxes Postage extra

Silk Sarees, Jackets Headkerchieves, Embroidary Hand Bags & Money Purses a Speciality

Send your orders to:-
BHARADWAJ & CO.,
BROCADE, EMBROIDARY & SILK MANUFACTURERS,
Benares City.

52—20

ಹೆಡ್ ಆಫೀಸು—ಬೊಂಬಾಯಿ

ಸ್ಥಾಪನೆ—1874.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ಪೈವಾಟದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು { 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ
1000 „ ಎಂಡೋಮೆಂಟ್ „ „ —ರೂ

ಹೆಚ್ಚಾಗಿ ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಬಾಕಿಯಿಲ್ಲ.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಓರಿಯಂಟಲ್ ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವು ಪುನಃ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ತೆಗೆದುಕೊಂಡು ಸಂತೃಪ್ತರಾಗಿರುವರು ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1. ಸೌತ್ ಪರೇಡ್, ಬೆಂಗಳೂರು.

52—38

ಯಲ್. ಆರ್. ಕೃಷ್ಣಸ್ವಾಮಯ್ಯರ್
ಬ್ರಾಂಚ್ ಸೆಕ್ರೆಟರಿ.

Printed & published by P. I Belliappa, at "Kodagu Press, Mercara for "Kodagu" Ltd.

Reg. No. M. 1350.

If not delivered please return to "KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩–೮–೦.

[illegible] || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಃ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ–ಪಂದ್ಯಂಡ ಐ. ಬೆಳ್ಯಪ್ಪ.

[ಸಂಪುಟ ೮] ಮಡಿಕೇರಿ, ಸನ ೧೯೨೮ ನೇ ಇಸವಿ ಜನವರಿ ತಾರೀಖು ೧೮ ನೇ ಶುಕ್ರವಾರ [ಸಂಚಿಕೆ ೩೩

JUST ARRIVED.

Guns.

12 Bore D. B. B. L. Guns @ Rs 145, 140, 130 & 100 each
12 „ S. B. B. L. Guns @ 70, & 52–8–0 each
12 „ D. M. L. „ @ 70 each

Cartridges.

Eley's Shot Cartridges Rs 12–8–0 per 100.
Lg & Sg „ „ 14–0–0 „ „

Ball Cartriges Rs. 16–0–0 per 100.
Lethal Bullet „ „ 32–0–0 „ „
12bore Ballistite „ „ 16–0–0 „ „
1 lb tin F. F. Gun Powder Rs 1–14–0
½ „ „ „ „ „ 1–0–0.
¼ „ „ „ „ „ 0–10–0
Boxes of 250 M. L. Caps „ 1–0–0 each.

Selling fast. Buy requirements early.

52–50

SPENCER & CO. LTD. Arms & Ammunition Dealers. MERCARA.

Post Box 423,
TRIPLICANE, MADRAS

Catalogue Free to Bon fide Enquirers

MANUFACTURES AND DEALS IN ALL:—

(1) Gemset Jewels, gold and silver articles of all patterns
(2) Race Cups, Caskets, Medals, etc., for presentation purposes
(3) Trovels, Keys, Locks, etc. for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

UNDERTAKES:—

(1) Remaking or Remodelling of all sorts of old genset jewels to latest patterns.
(2) Electro-plating, gilding and nickelling
(3) Buying old jewellery, or undertaking to effect sale.

V. SUBRAMANIA IYER
JEWELLER

Telephone:— 3145

Telegrams:— "PRECIOUS"

Gold-smith, Silver smith, & Dealer in all Gemset Jewels.

52–18

ನೀವು ನಿರ್ಬಲಸ್ತರಾಗಿ ಯಾಕೆ ನರಳುವಿರಿ?

ಅಷ್ಟತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

ಸಾಲಂಮಿಸ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಜನ್ಯವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ, ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯುಕ್ತಿಯಿಂತೆ ಮಾಯಮಾಡಿಸತಕ್ಕ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ. ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬಿ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ೩-೪ ಡಬ್ಬಿಗಳ ಸೇವನೆಯಿಂದ ಜನ್ಮಾಂತ್ರದವರಿಗೂ ಸಂಪೂರ್ಣ ಗುಣವನ್ನುಂಟುಮಾಡುವದು. ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಿ ತೆಗೆದುಕೊಳ್ಳಿರಿ. ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬಿಗೆ ೨–೦–೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಿಗಳವರೆಗೆ ೦–೮–೦.

ಡಿ. ಮನ್ನಾಲಾಲ್, ಡೆಪ್ಟಿ ನೇಟೀವ್ ಡಾಕ್ಟರು,

12—12 ಸಾಲಂಮಿಸ್ರಿ ಮುರಬ್ಬ ಫಾರ್ಮಸಿ, ಸಿಟಿ ಹೊಸ ಮಾರ್ಕೆಟ್ ಸಮೀಪ, ಬೆಂಗಳೂರು ಸಿಟಿ.

ಅ ಪೂ ರ್ವ ಸಂ ದ ರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ,

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

52—21

ಆತಂಕನಿಗ್ರಹ ಔಷಧಾಲಯ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	17,190
ಜಮೂಬಂದ ಠೇವಣಾತಿ	—	1,62,320

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 ೧-೦ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗೆಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1928.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರು ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಜಿಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.

ಮತ್ತು—ಮೆ. ಚಂಗಂಡ ಕುಟ್ಟಪ್ಪನವರು,

ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.

ಮರೆನಾಡು—ಮೆ. ಕೇಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಕಾಸಚೇರಿರ ನಂಜಪ್ಪನವರು,

ಮೂರ್ನಾಡು—ಮೆ. ಪೆಮ್ಮಂಡ ದೇವಯ್ಯನವರು,

ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,

ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಸಿ. ಜಿ. ಮುದ್ದಯ್ಯನವರು,

ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು.

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್, "ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮೇನೇಜರ್, "ಕೊಡಗು" ಮಡಿಕೇರಿ.

---

12 bore Victor Cartridges Rs. 10/- Per 100

Mahomedally-Noorbhoy.

ARMS & AMMUNITION MART.

321 Abdul Rehman Street.

53-17 **BOMBAY. 3.**

ಕಟುಕಷಾಯ ಮಂಜಿಜ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಜಾಕ್ತಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ. 14.

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲುಟ್ಟುವ ನೋವು ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1—1—0 3—8—0, 6—12—0.

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0]

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಶೂಲೆ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗೆ 5—4—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ.—ಮನೋಲ್ಲಾಸಿನಿ ಕಂಪೆನಿ. ೨. ಮಂಗಳೂರು.

52—13

EMPIRE OF INDIA LIFE ASSURANCE COMPANY, LIMITED.

(Established 1897.)

A Monthly payment of Rs. 12/8/- will secure a With Profit Assurance as shown below which will further increase by Bonus Additions

Age next Birthday	Assurance payable at Death				Endowment Assurances payable at Death or at end of		
	Whole Life.	Premiums Limited to					
		15 Years	20 Years.	25 Years.	20 Years	25 Years	30 Years
	Rs	Rs	Rs.	Rs	Rs	Rs.	Rs
25	5,820	3,550	4,250	4,800	3,010	3,800	4,520
30	5,140	3,290	3,930	4,390	2,950	3,620	4,220
35	4,480	3,030	3,600	3,970	2,810	3,400	3,870

Wannted:—Agents at Mercara, Somwarpet and Siddapur.

HEAD OFFICE. Empire of India Life Building, BOMBAY.

24—4.

BRANCH OFFICE. 152, Commercial Street, BANGALORE.

Xmas & New Year Presents!

Toys for Children!

A set comprising of tiny, bright and beautiful tumblers, pots, spoons, etc. made of brass and bell metal, are quite suitable for the amusement and play of children.

Small set 32 articles Rs. 2—8—0. Medium set 32 articles Rs. 3—8—0.

Big set of 32 articles Rs. 4—8—0.

Securely packed in neat card board boxes. Postage extra.

Silk Sarees, Jackets, Headkerchieves, Embroidary Hand Bags & Money Purses-a Speciality.

Send your orders to:-

BHARADWAJ & CO.,

BROCADE, EMBROIDARY & SILK MANUFACTURERS,

52—20 **Benares City.**

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವ್ಯಾಪಾರದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು { 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25. 1000 ,, ಎಂಡಾವ್ಮೆಂಟ್ ,, ,, —ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ. ಪುನಹ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು. ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.—

ಓರಿಯಂಟಲ್ ಬಿಲ್ಡಿಂಗ್ಸ್, ನಂ. 1. ಹಾಸ್ ರೋಡ್, ಬೆಂಗಳೂರು. { 52—38

ಯಲ್. ಆರ್. ಕೃಷ್ಣಸ್ವಾಮಯ್ಯರ್. ಬ್ರಾಂಚ್ ಸೆಕ್ರೆಟರಿ.

Printed & published by P. I. Belliappa, at "Kodagu" Press, Mercara for "Kodagu" Ltd.

If not delivered please return to
"KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೮—೦.

ಸತ್ಯೇನ ನಾಕಮಯುಯಂ ದಯಾ, ... ಪ್ರತ್ಯಕ್ಷತಾ ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಸಾಪ್ತಹಿಕವಾಗಿ ಪ್ರಕಟಿಸಲ್ಪಡುವದು.

[ಸಂಪುಟ ೮] ಮಡಿಕೇರಿ, ಸನ್ ೧೯೨೯ ನೇ ಇಸವಿ ಜನವರಿ ತಾರೀಖು ೧೮ ನೇ ಶುಕ್ರವಾರ [ಸಂಚಿಕೆ ೩೩

JUST ARRIVED.

Guns.

12 Bore D B B L Guns @ Rs 145, 140, 130 & 100 each
12 „ S. B B L Guns @ 70, & 52–8–0 each
12 „ D M L „ @ 70 each

Cartridges.

Eley's Shot Cartridges Rs 12–8–0 per 100.
Lg & Sg „ 14–0–0 „ „

Ball Cartriges Rs 16–0–0 per 100.
Lethal Bullet „ „ 32–0–0 „ „
12bore Ballistite „ „ 16–0–0 „ „
1 lb tin F. F Gun Powder Rs 1–14–0
½ „ „ „ „ „ 1– 0–0
¼ „ „ „ „ „ 0–10–0
Boxes of 250 M L Caps „ 1– 0–0 each.

Selling fast. Buy requirements early.

52–50

SPENCER & CO. LTD. Arms & Ammunition Dealers MERCARA.

Post Box 423,
TRIPLICANE, MADRAS

Catalogue Free to Bon fide Enquirers

MANUFACTURES AND DEALS IN ALL:—

(1) Gemset Jewels, gold and silver articles of all patterns
(2) Race Cups, Caskets, Medals, etc., for presentation purposes
(3) Trovels, Keys, Locks etc, for ceremonial purposes.

JEWELLER BY APPOINTMENT TO His Excellency THE GOVERNOR OF MADRAS.

UNDERTAKES—

(1) Remaking or Remodelling of all sorts of old gemset jewels to latest patterns.
(2) Electro plating, gilding and nickel-ling
(3) Buying old jewellery, or undertaking to effect sale.

V. SUBRAMANIA IYER
JEWELLER

Telephone:— 3145

Telegrams:— "PRECIOUS"

Gold-smith, Silver smith, & Dealer in all Gemset Jewels.

52–18

ನೀವು ನಿರ್ಬಲಸ್ಥರಾಗಿ ಯಾಕೆ ನರಳುವಿರಿ?

ಇಪ್ಪತ್ತು ವರುಷಗಳಿಂದಲೂ ಪ್ರಖ್ಯಾತಿ ಪಡೆದಿರುವ

ಸಾಲಂಮಿಸ್ರಿ ಮುರಬ್ಬ

ಸೇವನೆಯಿಂದ ಎಂಥಾ ಧಾತು ಜನ್ಯವಿಕಾರಗಳನ್ನೂ, ನರಗಳ ಶಕ್ತಿ ಕುಂದಿಹೋಗಿರುವದನ್ನೂ ಮೆದುಳಿನ ಬಲಹೀನತೆಯನ್ನೂ ಇಂಥಾ ರೋಗಗಳನ್ನೆಲ್ಲಾ ಯುಕ್ತ್ಯಾನುಸಾರ ಮಾಯಮಾಡಿಸುವದಕ್ಕೆ ತನ್ನ ವಿಚಿತ್ರವಾದ ಅದ್ಭುತಶಕ್ತಿಯನ್ನು ತೋರಿಸುತ್ತದೆ ಇಂಡಿಯಾ ಮತ್ತು ಇತರ ದೇಶಗಳಲ್ಲಿ ಇದರ ಸೇವನೆಯಿಂದ ಗುಣಹೊಂದಿರುವ ಅನೇಕ ಮಹನೀಯರ ಅಸಂಖ್ಯಾತವಾದ ಸರ್ಟಿಫಿಕೇಟುಗಳನ್ನು ಯಾರೂ ತರಿಸಿ ನೋಡಬಹುದು. ಒಂದು ಡಬ್ಬ ೧೫ ದಿನಗಳ ಸೇವನೆಯಿಂದಲೇ ಇದರ ಗುಣವು ತೋರಿಬರುವುದು. ೨೩ ಡಬ್ಬಗಳ ಸೇವನೆಯಿಂದ ಜನ್ಮಾಂತ್ಯದವರೆಗೂ ಸಂಪೂರ್ಣ ಗುಣವನ್ನುಂಟುಮಾಡುವದು ನಮ್ಮ ಟ್ರೇಡ್ ಮಾರ್ಕು ನೋಡಿ ಡಬ್ಬಾ ತೆಗೆದುಕೊಳ್ಳಿರಿ ಎಲ್ಲಾ ಸ್ಥಳಗಳಲ್ಲಿಯೂ ಏಜಂಟರ ಅವಶ್ಯಕವಿರುತ್ತೆ.

ಕ್ರಯ ಡಬ್ಬ ೧ಕ್ಕೆ ೨—೦—೦. ಟಪ್ಪಾಲು ಖರ್ಚು ೧ರಿಂದ ೩ ಡಬ್ಬಾಗಳವರೆಗೆ ೦—೮—೦.

ಡಿ. ಮನ್ನಾಲಾಲ್, ಡೆಲ್ಲಿ ನೇಟೀವ್ ಡಾಕ್ಟರು.

12—12 ಸಾಲಂಮಿಸ್ರಿ ಮುರಬ್ಬ ಫಾರ್ಮಸಿ, ಸಿಟಿ ಹೊಸ ಮಾರ್ಕೆಟ್ ಸಮೀಪ, ಬೆಂಗಳೂರು ಸಿಟಿ.

ಅ ಪೂ ರ್ವ ಸಂ ದ ರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸಬೇಕಾದರೆ ಇದೀಗ ಅಪೂರ್ವ ಸಂದರ್ಭ.

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ —

52—24 ಆತಂಕನಿಗ್ರಹ ಔಷಧಾಲಯ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕೊಡಗು.

೧೯೨೯ನೇ ಇಸವಿ
ಜನವರಿ ತಾ. ೧೮ನೇ ಶುಕ್ರವಾರ.

ಶ್ರೀ. ಕುಶಾಲಪ್ಪನವರು.

ಒಟ್ಟು ಹಿಂದೂಸ್ಥಾನದ ಸಂಗಡಲೇ ನಮ್ಮ ದೇಶವೂ ಕಳಕೊಂಡ ಸ್ವಾತಂತ್ರ್ಯವನ್ನು ಪಡೆಯಲು ನಡಿಸುವ ಹೋರಾಟವು ಜೋರಾಗಿರುವ ಈ ಕಾಲದಲ್ಲಿ ನಮ್ಮ ದೇಶದ ರಾಷ್ಟ್ರೀಯ ಚಳವಳದ ಮುಖಂಡರಾದ ಶ್ರೀ. ಕುಶಾಲಪ್ಪನವರು ಶಿವಾಧೀನರಾದದ್ದರಿಂದ ಉಂಟಾದ ನಷ್ಟವು ಎಷ್ಟೆಂದು ವಿವರಿಸಲಿಕ್ಕೆ ಸಾಧ್ಯವೇ ಇಲ್ಲ. ಶ್ರೀ. ಕುಶಾಲಪ್ಪನವರಲ್ಲಿ ಇದ್ದ ದೇಶಭಕ್ತಿಯೂ, ಬುದ್ಧಿಶಕ್ತಿಯೂ, ಕೆಲಸದ ಆಸಕ್ತಿಯೂ, ವಾಕ್ಚಾತುರ್ಯವೂ ಅಸಾಧಾರಣವಾದದ್ದು. ನಮ್ಮ ದೇಶವು ಪ್ರತ್ಯೇಕ ಪ್ರಾಂತ್ಯವಾಗಿರುವದರಿಂದ ಅವರ ಕೀರ್ತಿಯು ಇನ್ನೂ ಹೆಚ್ಚಿನ ಪ್ರಾಶಸ್ತ್ಯಕ್ಕೆ ಬರಲಿಲ್ಲ. ದೇಶಭಕ್ತಿ ಇರುವವರು ಮೊದಲಾಗಿ ತಮ್ಮ ತಮ್ಮ ಪ್ರಾಂತ್ಯದ ಕೆಲಸಕ್ಕೆ ಕೈಹಚ್ಚುವದು ಸ್ವಾಭಾವಿಕವಾದುದರಿಂದ ಶ್ರೀ. ಕುಶಾಲಪ್ಪನವರು ಪ್ರಾಂತೀಕ ಚಳವಳದಲ್ಲೇ ಮಾತ್ರ ಹೆಸರು ಪಡೆಯಲು ಅವಕಾಶ ದೊರೆಯಿತಷ್ಟೆ. ನಮ್ಮ ಪ್ರಾಂತ್ಯದ ಆವರಣವು ದೊಡ್ಡದಾಗಿದ್ದಿದ್ದರೆ ಅಲ್ಲೆಲ್ಲಾ ಅವರ ಕೀರ್ತಿಯು ಹರಡುತ್ತಿತ್ತು.

ಇವರ ವಿದ್ಯಾಭ್ಯಾಸಂಗ ತೀರಿದ ಒಡನೆಯೇ ರಾಜಕೀಯ ಚಳವಳದಲ್ಲಿ ಇವರು ಭಾಗತೆಗೆದುಕೊಂಡರು. ಈ ರೀತಿ ಮಾಡುವ ಯುವಕರು ನಮ್ಮ ದೇಶದಲ್ಲಿ ಮಾತ್ರವಲ್ಲ, ಒಟ್ಟು ಹಿಂದೂಸ್ಥಾನದಲ್ಲೇ ಬಹಳ ಅಪರೂಪ. ಬಡ ಜನರಿಂದ ವಸೂಲಾಗುವ ಕಂದಾಯ ಕಾಣಿಕೆಯ ಖರ್ಚಿನಿಂದ ದೊರಕುವ ವಿದ್ಯೆಯ ಫಲವನ್ನು ಬಡವರ ಸಹಾಯಕ್ಕೆ ಉಪಯೋಗಿಸಬೇಕೆಂಬ ತತ್ವವನ್ನು ಇವರು ಕಾರ್ಯತಃ ನಡಿಸಿರುತ್ತಾರೆ. ಇವರ ದೇಶಭಕ್ತಿಯೂ, ಕಾರ್ಯ ತತ್ಪರತೆಯೂ ಇವರ ತಾಲೋಕಿನಲ್ಲಿ ಜನರನ್ನು ಇವರ ಹಿಂಬಾಲಕರನ್ನಾಗಿ ಬಹಳ ಶೀಘ್ರದಲ್ಲೇ ಮಾಡಿಬಿಟ್ಟವು. 1918 ರಲ್ಲೇ ಇವರ ತಾಲೋಕಿನವರು ಇವರನ್ನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರನ್ನಾಗಿ ಆರಿಸಿಕೊಂಡು ಇವರಲ್ಲಿ ತಮಗೆ ಇದ್ದ ನಂಬಿಕೆಯನ್ನು ತೋರಿಸಿದರು. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ 1927 ರ ವರೆಗೂ ಮೆಂಬರಾಗಿಯೇ ಇದ್ದು ಆಗಿನ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಅವಕಾಶವಿದ್ದಷ್ಟರ ಮಟ್ಟಿಗೆ ಪ್ರಜಾಜನರ ಹಿತಕ್ಕಾಗಿ ಕೆಲಸ ಮಾಡಿದರು. ಅವರ ಕೆಲಸದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿಗೆ ತೃಪ್ತಿಯಿದ್ದದರಿಂದಲೇ ಅವರನ್ನು ಮೊದಲನೇ ಚುನಾಯಿತ ವೈಸ್ ಪ್ರೆಸಿಡೆಂಟರಾಗಿ ಆರಿಸಿಕೊಂಡರು.

1924 ಮತ್ತು 1927 ರಲ್ಲಿ ನಡೆದ ಕೌನ್ಸಿಲ್ ಚುನಾವಣೆಯಲ್ಲಿ ಇವರ ತಾಲೋಕಿನವರು ಇವರಲ್ಲಿದ್ದ ಸಂಪೂರ್ಣ ವಿಶ್ವಾಸವನ್ನು ಬಹು ಸ್ಪಷ್ಟರೂಪದಲ್ಲಿ ತೋರಿಸಿದರು. ಇವರಲ್ಲಿ ಇದ್ದ ನಂಬಿಕೆಯನ್ನು ಇವರಿಗೆ ಅರಿಸುವದರಲ್ಲಿ ಮಾತ್ರವಲ್ಲ ಇವರ ಪರವಾಗಿ ಕೆಲಸಮಾಡುವವರನ್ನೂ ಇವರ ಅಪೇಕ್ಷೆ ಮೇರೆ ಆರಿಸಿ ಸಹ ನಿದರ್ಶಿಸಿದರು. ಇಂಥಾ ದೇಶಭಕ್ತರನ್ನು ಆರಿಸಿಕೊಂಡು ತಾಲೋಕಿನವರು ತಮ್ಮ ಗೌರವವನ್ನು ಹೆಚ್ಚಿಸಿಕೊಂಡರು. ಶ್ರೀ. ಕುಶಾಲಪ್ಪನವರು ಕೀರ್ತಿ ಸಂಪಾದನೆಗೆ ದೃಷ್ಟಿ ಇಟ್ಟರಲಿಲ್ಲ. ದೇಶ ಸೇವೆಗೆ ಅವಕಾಶವಿರುವ ಜವಾಬ್ದಾರಿಗಳನ್ನೆಲ್ಲಾ ಕೈಕೊಳ್ಳುತ್ತಿದ್ದರೇ ಹೊರತು ತನಗೆ ಪದವಿ ಬೇಕೆಂಬ ಆಶೆ ಇರಲೇ ಇಲ್ಲ. ಎರಡನೇ ಕೌನ್ಸಿಲ್ ಚುನಾವಣೆಗೆ ನಿಲ್ಲಲು ಇವರಿಗೆ ಇಷ್ಟವಿರಲೇ ಇಲ್ಲ. ದೇಶಸೇವೆಗೆ ಉತ್ಸುಕರಾಗಿರುವ ಇತರರಿಗೆ ಅವಕಾಶ ಕೊಟ್ಟು ತಾನು ಕೌನ್ಸಿಲ್ ಹೊರಗೆ ಇದ್ದೇ ಕೆಲಸಮಾಡುತ್ತೇನೆಂತ ಹೇಳಿದ್ದರು. ಪುನಃ ಚುನಾವಣೆಗೆ ನಿಲ್ಲಲು ಅವರನ್ನು ಒಪ್ಪಿಸಬೇಕಾದರೆ ಅವರ ಸಹೋದ್ಯೋಗಿಗಳಿಗೆ ತುಂಬಾ ಪ್ರಯಾಸವಾಯಿತು.

ಒಟ್ಟು ದೇಶವೆಲ್ಲಾ ಇವರ ಶಕ್ತಿಸಾಮರ್ಥ್ಯಗಳನ್ನು ಅರಿತುಕೊಂಡರೇ ಇವರನ್ನು 1927ರಲ್ಲೇ ಜಮಾನ್ದಾರರ ಸಂಘದ ವೈಸ್ ಪ್ರೆಸಿಡೆಂಟರಾಗಿಯೂ ಅನಂತರ 1928ರಲ್ಲಿ ಪ್ರೆಸಿಡೆಂಟರಾಗಿಯೂ ಆರಿಸಿಕೊಂಡರು. 1924 ರಲ್ಲಿ ಕಿಗ್ಗಟ್ಟನಾಡು ತಾಲೋಕಿನವರ ಆತಿಥ್ಯದಲ್ಲಿ ಮಡಿಕೇರಿಯಲ್ಲಿ ಜಮಾನ್ದಾರರ ಸಂಘದ ಮಹಾಸಭೆ ನಡಸಲಿಕ್ಕೆ ಒಪ್ಪಿದ್ದರಾದ ನಾಲ್ಕಾರು ಜನರು ಆಡಚಣೆಗಳನ್ನು ಒಡ್ಡಿದರೂ ಆ ತಾಲೋಕಿನವರು ಸಂಘದ ಮಹಾಸಭೆಯನ್ನು ಬಹು ವೈಭವದಿಂದಾಗಿ ನಡಿಸಿದರು. ಈ ಕಾರ್ಯನಾಥನಿಗೆ ಶ್ರೀ. ಕುಶಾಲಪ್ಪನವರು ಬಹಳ ಮಟ್ಟಿಗೆ ಸಾಹಸಪಟ್ಟರು. ಸಂಘದ ಅಧ್ಯಕ್ಷರಾದ ನಂತರ ಸಂಘದ ಆಫೀಸ್ ಇರುವ ಮಡಿಕೇರಿಯಿಂದ ದೂರದಲ್ಲಿ ಇದ್ದರೂ ಸಂಘದ ಕಾರ್ಯಗಳಲ್ಲಿ ಜಾಗರೂಕರಾಗಿದ್ದು ಆಗಿಂದಾಗ್ಗೆ ಸಲಹೆಗಳನ್ನು ಕೊಡುತ್ತಿದ್ದರು. ಕಳೆದ ವರ್ಷದ ಮಹಾಸಭೆಯು ಸೋಮವಾರಪೇಟೆ ತಾಲೋಕಿನಲ್ಲಿ ನಡೆದಾಗ ಅವರು ಆ ತಾಲೋಕಿನಲ್ಲೆಲ್ಲಾ ಸುತ್ತಿ ಜನರಿಗೆ ತಿಳುವಳಿಕೆ ಕೊಟ್ಟದ್ದರಿಂದಲೇ ಸಾಧ್ಯವಾಯಿತಷ್ಟೆ. ಕೊಡಗಿನ ಮುಂದಿನ ರಾಜಕೀಯ ರಚನೆಯನ್ನು ಜನರಿಗೆ ವಿವರಿಸಿಕೊಡುವ ಬಗ್ಗೆ ಕಳೆದ ವರ್ಷದ ಆಖೈರ್ ಭಾಗದಲ್ಲಿ ಅವರು ದೇಶವನ್ನೆಲ್ಲಾ ಸುತ್ತಿದರು. ಒಂದು ಮೀಟಿಂಗಿಗಾದರೂ ಇವರು ತಪ್ಪಲಿಲ್ಲ. ಈ ರೀತಿ ಅವರು ಎರಡು ಸಾರಿ ಸುತ್ತಿದಾಗಲೂ ಅವರ ಆರೋಗ್ಯವು ತೃಪ್ತಿಕರವಾಗಿರಲಿಲ್ಲ. ಅವರು ಆಖೈರ್ ಕಾಂಗ್ರೆಸ್ ಯಾತ್ರೆಗೆ ಹೊರಡುವಾಗಲೂ ಅವರ ಆರೋಗ್ಯವು ಸಂಪೂರ್ಣ ತೃಪ್ತಿಕರವಾಗಿರಲಿಲ್ಲ. ತನ್ನ ಕರ್ತವ್ಯವನ್ನು ಮಾಡುವದರಲ್ಲಿ ಸ್ವಂತ ಅನುಕೂಲ ಆರೋಗ್ಯವನ್ನು ಸಹ ಗಣನೆಗೆ ತರುತ್ತಿರಲಿಲ್ಲ. ಸಾರ್ವಜನಿಕ ಕಾರ್ಯಕ್ಕೆ ಧನಸಹಾಯಮಾಡಲು ಮುಂದಾಗಿದ್ದರು ಎಂಬದಕ್ಕೆ ಅವರು ಸಂಘದ ಕಟ್ಟಡಕ್ಕಾಗಿ ಕೊಟ್ಟ ದೊಡ್ಡ ವಂತಿಕೆಯೇ ಸಾಕ್ಷಿ. ರಾಜಕೀಯ ಕಾರ್ಯದಲ್ಲಿ ಮಾತ್ರ ಅವರು ಕೆಲಸ ಮಾಡುತ್ತಿದ್ದದ್ದಲ್ಲ. ಮತ ಮತ್ತು ಗ್ರಾಮಾಭಿವೃದ್ಧಿಯ ಭಾಗದಲ್ಲಿ ಕೆಲಸಮಾಡುವ ರಾಮಕೃಷ್ಣ ಮಿಶನಿನ ಮಠವು ಪೊನ್ನಂಪೇಟೆಯಲ್ಲಿ ಸ್ಥಾಪನೆಯಾಗಬೇಕಾದರೆ ಶ್ರೀ. ಕುಶಾಲಪ್ಪನವರು ತುಂಬಾ ಸಹಕರಿಸಿದ್ದಾರೆ. ತಮ್ಮ ಗ್ರಾಮದ ಸಹಕಾರಿ ಚಳವಳದಲ್ಲಿ ಭಾಗತೆಗೆದುಕೊಂಡು ಅನಂತರ ಸೆಂಟ್ರಲ್ ಬ್ಯಾಂಕ್ ಸ್ಥಾಪನೆಯಾದಾಗ ಅದರ ಡೈರೆಕ್ಟರಾಗಿ ಕೆಲಸಮಾಡಿದರು. ತನ ಕೃಷಿ ಕಸುಬನ್ನು ಮಾದರಿಯಾಗಿ ಮಾಡುತ್ತಿದ್ದರು. ದನಗಳನ್ನು ಸಾಕುವದರಲ್ಲಿ ತುಂಬಾ ಅನುಭವಪಡೆದಿದ್ದರು. ಇವರ ಈ ಅನುಭವವನ್ನು ದೇಶದ ಪ್ರಯೋಜನಕ್ಕೆ ಕೊಡಲು ಕ್ಯಾಟಲ್ ಕಮಿಟಿ ಮೆಂಬರಾಗಿ ಅವಕಾಶ ದೊರಕಿತು.

ಕೊಡಗು ದೇಶದಲ್ಲಿ ವರ್ತಮಾನ ಪತ್ರಿಕೆಗಳು ಇಲ್ಲದೆ ಇದ್ದ ಲೋಪವನ್ನು ಇವರೂ, ಇನ್ನೂ ಕೆಲವು ಮುಂದಾಳುಗಳೂ ಯೋಚಿಸಿ "ಕೊಡಗು" ಕಂಪೆನಿಯನ್ನು ಸ್ಥಾಪಿಸಿ ಈ ಪತ್ರಿಕೆಯನ್ನು ಹೊರಡಿಸಲು ಸಹಾಯಕರಾದರು. ಈ ಪತ್ರಿಕೆಯು ಸ್ಥಾಪನೆಯಾದಾಗ ಇದನ್ನು ನಡಿಸಲು ಸಂಪಾದಕರು ಯಾರೂ ಮುಂದೆ ಬಾರದೆ ಇದ್ದರೆ ತಾನೇ ಸಂಪಾದಕತ್ವವನ್ನು ವಹಿಸಲು ತಯಾರಾಗಿದ್ದರು. ಕಂಪೆನಿಯು ಸ್ಥಾಪನೆಯಾದಂದಿನಿಂದ ಈ ವರೆಗೂ ಡೈರೆಕ್ಟರಾಗಿಯೇ ಇದ್ದರು.

ಅವರು ಇಷ್ಟು ಚಿಕ್ಕ ಪ್ರಾಯದಲ್ಲೇ ಇಷ್ಟು ಕೀರ್ತಿ ಪಡೆಯಲು ಅವರಿಗಿದ್ದ ವಾಕ್ಚಾತುರ್ಯ, ದೇಶಭಕ್ತಿ ಮುಂತಾದ ಗುಣಗಳು ಮಾತ್ರವಲ್ಲದೆ ಅವರ ಸರಳಭಾವವೂ ಬಹಳ ಮಟ್ಟಿಗೆ ಕಾರಣವಾಗಿದೆ. ತಾನು ಕೃಷಿ ಕಸಬಿನ ಹಳ್ಳಿಯವನೆಂಬದರಲ್ಲಿ ಅವರಿಗೆ ಹೆಮ್ಮೆ ಇತ್ತು. ತಾವೇ ಕೃಷಿಕನಾಗಿದ್ದದ್ದರಿಂದಲೂ, ಬಡ ಕೃಷಿಕರ ಕಷ್ಟಗಳನ್ನು ಅವರ ಸಂಗಡ ಬೆರೆತು ಅರಿತುಕೊಳ್ಳುತ್ತಿದ್ದದ್ದರಿಂದಲೂ ಇವರ ಮಾತಿಗೆ ತುಂಬಾ ಶಕ್ತಿಯಿತ್ತು. ಪಟ್ಟಣವಾಸಿಗಳಾಗಿರುವ ಲಾಯರು ಮುಂತಾದ ಕಸಬಿನವರು ರಾಜಕೀಯ ಚಳವಳ ನಡಿಸಿದರೆ ಅದಕ್ಕೆ ಸರ್ಕಾರದವರು ಹೆಚ್ಚಿಗೆ ಬೆಲೆ ಕೊಡುವದಿಲ್ಲ. ಶ್ರೀ. ಕುಶಾಲಪ್ಪನಂಥ ಗ್ರಾಮವಾಸಿಗಳು ಚಳವಳ ನಡಿಸಿದರೆ ಪರದಾಸ್ಯದಲ್ಲಿ ಇರುವದರ ಕಷ್ಟವು ಗ್ರಾಮದವರಿಗೂ ತಿಳುವಳಿಕೆಯಾಗಿದೆಯೆಂತ ಸರ್ಕಾರಕ್ಕೂ, ಇತರ ಜನರಿಗೂ ಗೊತ್ತಾಗುತ್ತದೆ. ಇಂಗ್ಲಿಷ್ ವಿದ್ಯೆ ಕಲಿತವರಿಗೆ ತಮ್ಮ ದಿನ್ನ ನಡವಳಿಕೆಗಳಲ್ಲಿ ಯೂರೋಪಿಯವರನ್ನು ಅನುಕರಿಸುತ್ತಿರುವ ಪದ್ಧತಿಯು ನಮ್ಮ ದೇಶದಲ್ಲಿ ಸ್ವಲ್ಪ ಹೆಚ್ಚಾಗಿಯೇ ಇದೆ. ಆದರಿಂದ ವಿದ್ಯಾವಂತರಿಗೂ, ಗ್ರಾಮವಾಸಿಗಳಿಗೂ ಮಿಳಿತವು ಕಡಿಮೆಯಾಗುತ್ತದೆ. ಶ್ರೀ ಕುಶಾಲಪ್ಪನವರು ಈ ದಾರಿಗೆ ಹೋಗಲೇ ಇಲ್ಲ. ತಮ್ಮ ಮನೆಯನ್ನು ಇಡುವದರಲ್ಲಿಯೂ ಸಹ ತನ್ನ ಸರಳ ಸ್ವಭಾವವನ್ನೇ ಅನುಸರಿಸುತ್ತಿದ್ದರು.

ಇವರು ಬೆಳಗಾಂ ಕಾಂಗ್ರೆಸಿಗೂ, ಕಲ್ಕತ್ತಾ ಕಾಂಗ್ರೆಸಿಗೂ ಹೋದದ್ದಲ್ಲದೆ ಬಳ್ಳಾರಿಯಲ್ಲಿ 1926 ರಲ್ಲಿ ನಡೆದ ಕರ್ನಾಟಕ ಪ್ರಾಂತೀಕ ಸಮ್ಮೇಳನಕ್ಕೆ ಸಹ ಹೋಗಿದ್ದಾರೆ. ಇವರಂಥ ದೇಶಭಕ್ತರ ಕೀರ್ತಿಯು ನಮ್ಮ ದೇಶದ ಹೊರಕ್ಕೂ ಹರಡುವ ಸ್ವಾಭಾವಿಕವಾಗಿದೆ. ಕರ್ನಾಟಕ ಏಕೀಕರಣಕ್ಕಾಗಲೀ ಇತರ ಯಾವ ಅಖಿಲ ಕರ್ನಾಟಕದ ಚಳವಳಕ್ಕಾಗಲೀ ಕೊಡಗಿನ ಪರವಾಗಿ ಇವರ ಅನುಮತಿಯನ್ನು ಬೊಂಬಾಯಿ ಕರ್ನಾಟಕದವರು ಪಡೆಯುತ್ತಿದ್ದರು.

ದೇಶ ಭಕ್ತರು ಖಾದಿಯನ್ನು ಧರಿಸಬೇಕೆಂತ ಕಟ್ಟಾದ ನಂತರ ನಿರಂತರವೂ ಇವರು ಖಾದಿ ಧರಿಸಿದ್ದು ಮಾತ್ರವಲ್ಲದೆ ಪೊನ್ನಂಪೇಟೆಯಲ್ಲಿ ಇದ್ದ ಖಾದಿ ಭಂಡಾರವನ್ನು ನಡಿಸುತ್ತಿದ್ದವರು ಕೈಬಿಡುವದನ್ನು ಅರಿತು ತಾನು ಮುಂದೆ ಬಂದು ಅದನ್ನು ವಹಿಸಿಕೊಂಡು ತಮ್ಮ ಅಣ್ಣನವರ ಸಹಾಯದಿಂದ ಕೆಲವು ಕಾಲ ನಡಿಸಿದರು. ಕೊಡಗಿನಲ್ಲಿ ಖಾದಿಯನ್ನು ಉತ್ಪತ್ತಿ ಮಾಡುವ ಕೇಂದ್ರಸ್ಥಾನವನ್ನು ಸ್ಥಾಪಿಸಲು ಕೆಲಸ ಮಾಡಲು ನೇಮಕವಾದ ಕಮಿಟಿಯಲ್ಲಿ ಇವರಿದ್ದರು. ಕಮಿಟಿಯ ಕೆಲಸವು ಆಗಬೇಕಾದಷ್ಟು ಆಗದಿರಲು ಇವರು ಕಾರಣರಲ್ಲ.

ಶ್ರೀ. ಕುಶಾಲಪ್ಪನವರ ಗುಣ ಕಥನಗಳನ್ನು ಮಾಡಿ ಅವರನ್ನು ಕಳಕೊಂಡ ದುಃಖವನ್ನು ಶಾಂತಿ ಮಾಡಿಕೊಳ್ಳಲು ಪ್ರಯತ್ನಿಸುವದಾಗಿದೆ. ಅವರ ವಿಯೋಗದಿಂದ ಒಟ್ಟು ದೇಶವೇ ದುಃಖಿಸುತ್ತಲಿದೆಯೆಂತ ತಿಳಿದು ಅವರ ಕುಟುಂಬದವರು ಸಮಾಧಾನ ಮಾಡಿಕೊಳ್ಳಬೇಕೆಂತ ಕುಟುಂಬದವರನ್ನು ಕೇಳಿಕೊಳ್ಳುತ್ತೇವೆ. ದೇಶದವರು ಇವರನ್ನು ಕಳಕೊಂಡ ದುಃಖದಲ್ಲಿ ಮಗ್ನರಾಗಿ ತಟಸ್ಥರಾಗಿರದೆ ಅವರು ಕೈಕೊಂಡ ಸ್ವಾತಂತ್ರ್ಯ ಸ್ಥಾಪನೆಯ ಕಾರ್ಯವನ್ನು ಇನ್ನಷ್ಟು ಉತ್ಸಾಹದಿಂದ ನಡಿಸಿ ಅವರ ಸಂಕಲ್ಪವನ್ನು ಸಫಲಗೊಳಿಸಬೇಕೆಂತ ಸೂಚಿಸುತ್ತೇವೆ. ಇವರ ಆತ್ಮಕ್ಕೆ ಶ್ರೀ ದೇವರು ಶಾಂತಿಯನ್ನೀಯಲಿ ಎಂತ ಪ್ರಾರ್ಥಿಸುತ್ತೇವೆ.

ಶ್ರೀ. ಪಿ. ಕುಶಾಲಪ್ಪನವರ ಜೀವಚರಿತ್ರೆ.

ಮೆ. ಪಾರುವಂಗಡ ತಿಮ್ಮಯ್ಯನವರ ತೃತೀಯ ಪುತ್ರರಾದ ದಿವಂಗತ ಮೆ. ಕುಶಾಲಪ್ಪನವರು 1891ನೇ ಇಸವಿಯಲ್ಲಿ ಕಿಗ್ಗಟ್ಟುನಾಡು ತಾಲೋಕು ಪತ್ತುಗಟ್ಟುನಾಡು ಬೆಸಗೂರು ಗ್ರಾಮದಲ್ಲಿ ಜನ್ಮವೆತ್ತಿದರು. ಗ್ರಾಮ ಶಾಲೆಯಲ್ಲಿ ತಮ್ಮ ಪ್ರೈಮರಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು, ವೀರರಾಜಪೇಟೆ ಶಾಲೆಯಲ್ಲಿ ಲೋವರ್ ಸೆಕೆಂಡರಿವರೆಗೆ ಓದಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿಗೆ ಸೇರಿದರು. ಇಲ್ಲಿ ಇವರು ಮೂರು ವರ್ಷ ಕಾಲ ಓದಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಇವರು ಸ್ಕೂಲಿನಲ್ಲಿದ್ದಾಗ್ಯೆ ಪಾಠ ಪರೀಕ್ಷೆಗಳಲ್ಲಿ ಮಾತ್ರವಲ್ಲ, ಆಟ ಓಟಗಳಲ್ಲಿಯೂ ಬಹು ಪ್ರವೀಣರಾಗಿದ್ದರು. ಅಲ್ಲದೆ ಅವರಿಗೆ ಓದುಗಾರಿಕೆಯಲ್ಲಿದ್ದ ಅದ್ವಿತೀಯ ಪ್ರೀತಿಯನ್ನು ಬೋರ್ಡಿಂಗಿನ ಹೋಮ್ ರೀಡಿಂಗ್ ಯೂನಿಯನ್ನನ್ನು ಸ್ಥಾಪಿಸುವದರಲ್ಲಿ ತೋರಿಸಿದರು. ಕ್ಲಾಸಿನಲ್ಲಿಯೂ, ಪರೀಕ್ಷೆಗಳಲ್ಲಿಯೂ ಒಂದನೆಯದಾಗಿ ನಿಂತು ಹಲವು ಇನಾಮುಗಳನ್ನು ಕೊಂಡೊಯ್ಯುತ್ತಿದ್ದರು-ಉಪಾಧ್ಯಾಯರುಗಳು ಇವರನ್ನು ಬೇರೆ ವಿದ್ಯಾರ್ಥಿಗಳಿಗೆ ಆದರ್ಶಪ್ರಾಯ ವಿದ್ಯಾರ್ಥಿಯಾಗಿ ತೋರಿಸುತ್ತಿದ್ದರು. ಆಗಲೇ ಮುಂದಾಳುತನದ ಕುರುಹುಗಳು (ಪಬ್ಲಿಕ್ ಸೇವೆ) ಅವರಲ್ಲಿ ತೋರುತ್ತಿದ್ದವು.

ನಂತರ ಇವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್ ಪರೀಕ್ಷೆಯ ವರೆಗೆ ವಿದ್ಯಾಭ್ಯಾಸ ಮಾಡಿದರು. ಆದರೆ ಇವರಿಗೆ ಪರೀಕ್ಷೆಗೆ ಮುಂಚೆ ಕಾಯಿಲೆಯಾಗಿ (ಮೆದುಳಿನ ಜ್ವರ) ಪರೀಕ್ಷೆಯಲ್ಲಿ ತೇರ್ಗಡೆಯಾಗಲೂ, ವಿದ್ಯಾಭ್ಯಾಸವನ್ನು ಮುಂದರಿಸಲೂ ಇವರಿಗೆ ಅನುಕೂಲವಾಗಲಿಲ್ಲ. ಆದುದರಿಂದ 1914ರಲ್ಲಿ ಇವರು ಕಾಲೇಜನ್ನು ಬಿಟ್ಟು ಬಂದರು. ಆದರೆ ಆಗಿನ ವಿದ್ಯಾವಂತ ಯುವಕರ ಆಕಾಂಕ್ಷೆಯಂತೆ ಇವರು ಸರ್ಕಾರಿ ನೌಕರಿಯನ್ನು ಅಪೇಕ್ಷಿಸಲಿಲ್ಲ. ಇವರು ಯಾವ ನೌಕರಿಗೆ ಸೇರದಿದ್ದರೂ ಮನೆಯಲ್ಲಿ ಸುಮ್ಮನಿರಲಾರದೆ ಸಹಕಾರಿ ಚಳವಳದಲ್ಲಿ ಕೆಲಸ ಮಾಡಲು ತೊಡಗಿದರು. ಮೂರು ನಾಲ್ಕು ವರ್ಷಗಳಲ್ಲೇ ಅವರು ಸಾರ್ವಜನಿಕ ಕೆಲಸಗಳಲ್ಲಿಯೂ, ರಾಜಕೀಯ ವಿಷಯಗಳಲ್ಲಿಯೂ ಆಸಕ್ತಿಯಿಂದ ಕೈ ಹಾಕಿದರು. 1918ರಲ್ಲಿ ಮೆ. ಗ್ರೀನ್‌ವೈಸ್ ಮತ್ತು ಮೆ. ಸಿ. ಯಸ್. ಉತ್ತಯ್ಯನವರು ನಡಿಸಿದ ಕೊಡಗು—ಮದ್ರಾಸು ಅಮಲ್ಗಮೇಶನ್ ಚಳವಳದಲ್ಲಿ ಇವರು ಪ್ರಾಮುಖ್ಯ ಭಾಗ ತೆಗೆದುಕೊಂಡಾಗ್ಯೆ ದೇಶಸ್ಥರಿಗೆ ಇವರ ಪರಿಚಯವು ಉಂಟಾಯಿತು. ಆ ವರ್ಷ ಇವರು ಡಿಸ್ಟ್ರಿಕ್ಟ್‌ಬೋರ್ಡಿಗೆ ಕಿಗ್ಗಟ್ಟುನಾಡು ಪರ ಮೆಂಬರಾಗಿ ಆರಿಸಲ್ಪಟ್ಟರು. ಇಷ್ಟರ ವರೆಗೆ ಅನುಭವಸ್ಥರೂ, ಹಳಬರೂ ಮತ್ತು ವಾಡಿಕೆಯಾಗಿ ಐಶ್ವರ್ಯವಂತರಿಗೆ ಮಾತ್ರ ದೊರೆಯುತ್ತಿದ್ದ ಈ ಮೆಂಬರುತನವು ಕೇವಲ ಯುವಕರಿಗೆ ದೊರೆತದ್ದು ಇದೇ ಪ್ರಥಮವಾಗಿದೆ. ಬೋರ್ಡಿನಲ್ಲಿ ಇವರ ತೃಪ್ತಿಕರವಾದ ಕೆಲಸವನ್ನು ನೋಡಿ 3 ವರ್ಷಗಳನಂತರ ಪುನಃ ಇವರನ್ನು ಬೋರ್ಡಿನ ಮೆಂಬರಾಗಿ ಚುನಾಯಿಸಿದರು.

ಅವರು 1927ನೇ ಇಸವಿವರೆಗೂ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರಾಗಿದ್ದರು. ಅಲ್ಲದೆ ಡಿಸ್ಟ್ರಿಕ್ಟ್‌ಬೋರ್ಡಿನ ಪ್ರಥಮ ಚುನಾಯಿತ ವೈಸ್ ಪ್ರೆಸಿಡೆಂಟರಾಗಿಯೂ ಆರಿಸಲ್ಪಟ್ಟಿದ್ದರು. ಈಗಿನ ಚುನಾಯಿತ ಬಹುಮತವಿರುವ ಬೋರ್ಡನ್ನು ಪಡೆಯಲು ಅವರು ಮಾಡಿದ ಪ್ರಯತ್ನವು ಎಲ್ಲರಿಗೂ ಗೊತ್ತಿದೆ.

ಕೊಡಗಿಗೆ ರಾಜಕೀಯ ಮಾರ್ಪಾಡುಗಳನ್ನು ಪಡೆಯಲು ಇವರು ಮುಂದೆ ನಿಂತು ಬಹಳ ಹೋರಾಟ ನಡಿಸಿದರು. 1924ರಲ್ಲಿ ನ್ಯಾಯವಿಧಾಯಕ ಸಭೆಯು ದೊರೆತಲ್ಲಿಂದ ಆದ ಎರಡು ಚುನಾವಣೆಗಳಲ್ಲಿಯೂ ಇವರು ಕಿಗ್ಗಟ್ಟುನಾಡಿನ ಜಮ್ಮಾದಾರರ ಪರವಾಗಿ ಎಲ್ಲರಿಗಿಂತಲೂ ಹೆಚ್ಚು ಓಟು ಪಡೆದು ನ್ಯಾಯವಿಧಾಯಕ ಕೌನ್ಸಿಲು ಮೆಂಬರಾಗಿದ್ದರು. ಅದರಲ್ಲಿ ನಾಲ್ಕು ಸಾರಿ ಕೌನ್ಸಿಲಿನ ಫೈನಾನ್ಸ್ ಕಮಿಟಿ ಮೆಂಬರಾಗಿ ಆರಿಸಲ್ಪಟ್ಟಿದ್ದರು. ಕ್ಯಾಟಲ್ (ದನಗಳ) ಕಮಿಟಿ ಮೆಂಬರಾಗಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿರುವರು. ಸೈಮನ್ ಕಮಿಷನಿನ ಬಹಿಷ್ಕಾರ ಚಳವಳದಲ್ಲಿ ಅಗ್ರಗಣ್ಯರಾಗಿದ್ದರು.

ಜಮೀನ್ದಾರರ ಸಂಘದ ಅಭಿವೃದ್ಧಿಗಾಗಿ ಬಹಳ ಕೆಲಸ ಮಾಡಿದರು. ಹಲವು ವರ್ಷಗಳಿಂದ ಸಂಘದ ಕಾರ್ಯಕಾರೀಮಂಡಳಿಯ ಮೆಂಬರಾಗಿದ್ದು 1927 ರಲ್ಲಿ ಸಂಘದ ಉಪಾಧ್ಯಕ್ಷರಾಗಿಯೂ 1928ರಲ್ಲಿ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟರು. 192..ಲ್ಲಿ ವೈಸರಾಯರಾದ ಲಾರ್ಡ್ ರೀಡಿಂಗ್‌ರವರು ಬೆಂಗಳೂರಿಗೆ ಬಂದಿದಾಗ್ಯೆ ಅವರಲ್ಲಿ ಸಂಘದ ಪರವಾಗಿ ಹೋಗಿದ್ದ ಡೆಪ್ಯುಟೇಶನಿನಲ್ಲಿ ಇವರು ಒಬ್ಬರಾಗಿದ್ದರು. ಕೊಡಗಿನ ಭಾವಿ ರಾಜಕೀಯ ರಚನೆಯನ್ನು ತಯಾರಿಸಿದ ಕಮಿಟಿಯ ಅಧ್ಯಕ್ಷರಾಗಿದ್ದರು. ಇವರು ಇವರ ಸಹೋದರರು ಸೇರಿ ಸಂಘದ ಕಟ್ಟಡಕ್ಕೆ 500 ರೂ ಕೊಟ್ಟರು.

ಈ ಮುಖಂಡರು ಚಿಕ್ಕ ವಯಸ್ಸಾಗಿ ತನ್ನ 38ನೇ ವರ್ಷ ಪ್ರಾಯದಲ್ಲಿಯೇ ಅಕಾಲಮರಣವನ್ನು ಹೊಂದಿ ತನ್ನ ಪತ್ನಿ ಮತ್ತು 4 ಪುತ್ರಿಯರನ್ನು, ಒಬ್ಬ ಅಣ್ಣ ಮತ್ತು ಒಬ್ಬ ತಮ್ಮನನ್ನು, ಬಂಧುಬಳಗ ಮತ್ತು ನೆಂಟರಿಷ್ಟರನ್ನೂ, ಯಾಕೆ ಇಡೀ ಕೊಡಗು ದೇಶವನ್ನೇ ದುಃಖಸಾಗರದಲ್ಲಿ ಮುಳುಗಿಸಿರುವರು.

ಕಾಂಗ್ರೆಸು ಪ್ರಯಾಣ.

ಮೆ. ಕುಶಾಲಪ್ಪನವರು ಕಲ್ಕತ್ತಾ ಕಾಂಗ್ರೆಸು ಮತ್ತು ಸರ್ವಪಕ್ಷೀಯ ಪರಿಷತ್ತಿಗೆ ಹೋಗುವ ಉದ್ದಿಶ್ಯ ಡಿಸೆಂಬರು ತಾ. 18 ರಲ್ಲಿ ಮಧ್ಯಾಹ್ನ ತಿತಿಮತಿ ಬಳಿ ಬಸುವನ ಪುರದಲ್ಲಿರುವ ತಮ್ಮ ಭವನದಿಂದ ಹೊರಟು ಹುಣಸೂರಿಗೆ ಹೋಗಿ ಉಳಕೊಂಡಿದ್ದವರು ಮರುದಿನ ಬೆಳಿಗ್ಗೆ ಸ್ನಾನವೂ, ಮೆ. ಮಂಕ

ಪೈಯ್ಯನವರೂ ಮಡಿಕೇರಿಯಿಂದ ಮೆಯಿಲ್ ಬಸ್ಸಿನಲ್ಲಿ ಹೋಗುವ ವರೆಗೆ ಮೈಸೂರಿಗೆ ಹೋಗಿ ರೈಲ್ವೆ ಸ್ಟೇಶನಿನಲ್ಲಿ ಕಾದುಕೊಂಡಿದ್ದರು. ಅಲ್ಲಿಂದ ನಾವು ಜೊತೆಯಾಗಿ ಮಧ್ಯಾಹ್ನದ ಮೇಲೆ ಮೆಯಿಲ್ ಟ್ರೈನಿನಲ್ಲಿ ಹೊರಟು ತಾ 20 ರ ಬೆಳಿಗ್ಗೆ ಮದ್ರಾಸಿಗೆ ತಲಪಿದೆವು. ಮದ್ರಾಸಿನಿಂದ ನೆಟ್ಟಗೆ ಕಲ್ಕತ್ತಾಕ್ಕೆ ಹೋಗುವ ಟ್ರೈನ್‌ಗಳೆಲ್ಲವೂ ಹಗಲು ಅಲ್ಲಿಂದ ಹೊರಡದ್ದರಿಂದ ಆ ದಿನ ಹಗಲು ನಾವು ಮದ್ರಾಸಿನಲ್ಲಿ ಉಳಿಯಬೇಕಾಯಿತು. ಚಿಕ್ಕಂದಿನಲ್ಲಿ ಮಾತ್ರ ಅವರು ನೋಡಿದ್ದ ಮದ್ರಾಸು ಪಟ್ಟಣವು ಅವರಿಗೆ ಹೊಸದಾಗಿ ತೋರಿದ್ದರಿಂದ ಅಲ್ಲಿಯ ಕೆಲವು ಮುಖ್ಯ ಸ್ಥಳಗಳನ್ನು ನೋಡುವದರಲ್ಲಿ ಆ ದಿನವನ್ನು ಕಳೆದೆವು. ರಾತ್ರಿ ಸುಮಾರು ಎಂಟು ಗಂಟೆ ಸಮಯಕ್ಕೆ ಮದ್ರಾಸಿನಿಂದ ಕಲ್ಕತ್ತಾ ಮೆಯಿಲ್ ಟ್ರೈನಿನಲ್ಲಿ ಹೊರಟೆವು. ನಾವು 3 ನೇ ಕ್ಲಾಸಿನಲ್ಲಿ ಪ್ರಯಾಣಮಾಡಿದೆವಾದರೂ ಪ್ರಯಾಣಿಕರ ತುಂಬು ಹೆಚ್ಚಾಗಿರದ ರಾತ್ರಿ ಚೆನ್ನಾಗಿ ನಿದ್ರೆಮಾಡಲು ನಮಗೆ ಅನುಕೂಲವಾಗಿತ್ತು. ತಾ 22 ರಲ್ಲಿ ಬೆಳಿಗ್ಗೆ 11 ಗಂಟೆ ಸಮಯಕ್ಕೆ ಕಲ್ಕತ್ತಾಕ್ಕೆ ತಲಪಿದೆವು. ಕಾಂಗ್ರೆಸು ಸ್ವಯಂಸೇವಕರ ಸಹಾಯದಿಂದ ಹೌರ ಸ್ಟೇಶನ್ನಿನಿಂದ ಕಾಂಗ್ರೆಸು ಕ್ಯಾಂಪಿಗೆ ಸುಲಭವಾಗಿ ತಲುಪಿದೆವು.

ಆ ದಿನ ಮಧ್ಯಾಹ್ನದ ಮೇಲೆ 2 ಗಂಟೆಗೆ ಪ್ರಾರಂಭವಾದ ಸರ್ವಪಕ್ಷೀಯ ಪರಿಷತ್ತಿನಲ್ಲಿ ಹಾಜರಿದ್ದೆವು. ಆ ದಿನದ ಮೀಟಿಂಗು ಮುಗಿದ ಮೇಲೆ ಸಾಯಂಕಾಲ ಹಿಂದೂದೇಶದ ಎಲ್ಲಾ ಭಾಗಗಳಿಂದಲೂ ತಂದು ವಿವಿಧ ಸ್ವದೇಶಿ ಸಾಮಾನುಗಳನ್ನಿಟ್ಟಿದ್ದ ಪ್ರದರ್ಶನಾಲಯವನ್ನು ನೋಡಿಕೊಂಡು ಬಂದೆವು. ಕಲ್ಕತ್ತಾ ಪಟ್ಟಣವು ದಕ್ಷಿಣ ಹಿಂದೂದೇಶದ ಹೆಚ್ಚಿನ ಪಟ್ಟಣಗಳಿಗಿಂತ ಶೀತವಾಗಿದ್ದರೂ ಮಡಿಕೇರಿಯಷ್ಟು ಚಳಿಯಿಲ್ಲವಾದುದರಿಂದ, ಜಿಂಕ್ ತಗಡುಗಳ ಗೋಡೆಗಳಿಂದಲೂ, ದರ್ಭೆ ಹುಲ್ಲಿನ ಮಾಡಿನಿಂದಲೂ ತಯಾರಿಸಿದ್ದ ಕ್ಯಾಂಪು ಕೊಠಡಿಗಳಲ್ಲಿ ಮಲಗಿ ನಿದ್ರೆಹೋಗಲು ನಮಗೆ ಕಷ್ಟವಾಗಲಿಲ್ಲ. ಆದರೆ ಸೊಳ್ಳೆಗಳ ಕಾಟವು ಜೋರಾಗಿತ್ತು. ಪರದೆಯಿಂದ ಇವುಗಳ ಕಾಟವನ್ನು ತಪ್ಪಿಸಲು ಕಲ್ಕತ್ತಾದಲ್ಲಿಯೇ ತಯಾರಿಸಿದ ಕ್ವಿಲ್ಟೊ ಎಂಬ ಮುಲಾಮನ್ನು ಕೊಠಡಿಗಳಲ್ಲೆಲ್ಲಾ ಹಂಚುಮಾಡುತ್ತಾ ಬಂದರು. ಇದರಿಂದ ಸ್ವಲ್ಪ ಕ್ಷೇಮವುಂಟಾಯಿತು. ಮರುದಿನವೂ ಸರ್ವಪಕ್ಷೀಯ ಪರಿಷತ್ತಿಗೆ ಹೋಗಿದ್ದೆವು.

ಕಾಶೀ ಪ್ರಯಾಗ.

ಸದರಿ ಪರಿಷತ್ತು ಇನ್ನು ತಾ. 27 ರಲ್ಲಿ ಸೇರುವದೆಂದೂ, ಅಷ್ಟರ ವರೆಗೆ ಅಲ್ಲಿ ಆರಿಸಲ್ಪಟ್ಟ ಒಂದು ಕಮಿಟಿಯು ಪರಿಷತ್ತಿನ ಕೆಲವು ಪ್ರಶ್ನೆಗಳನ್ನು ಚರ್ಚಿಸಿ ತೀರ್ಮಾನಿಸುವದೆಂದೂ ಆ ದಿನದ ಮೀಟಿಂಗಿನ ಅಂತ್ಯದಲ್ಲಿ ನಿಶ್ಚೈಸಿದ್ದರಿಂದ ಅಲ್ಲಿ ನಾವು ಮೂರು ದಿವಸ ವ್ಯರ್ಥಕಾಲ ಕಳೆಯುವದರ ಬದಲು ಅದೇ ರಾತ್ರಿ ಸುಮಾರು 9 ಗಂಟೆಗೆ ಮೆ. ಕುಶಾಲಪ್ಪನವರೂ, ನಾನೂ ಕಾಶೀಪಟ್ಟಣಕ್ಕೆ ಟ್ರೈನ್ ಹತ್ತಿದೆವು. ಹೊರಡುವಾಗ ಜನರ ತುಂಬು ಸ್ವಲ್ಪ ಮಟ್ಟಿಗೆ ಇದ್ದರೂ, ನಂತರ ನಮಗೆ ಮಲಗಲು ಅನುಕೂಲವಾಗಿತ್ತು. 'ಜೇಬು ಕತ್ತರಿ ಮಾಡುವವರಿರುವರು, ವಿಷ ಹಾಕುವವರು ಇರುವರು ಎಚ್ಚರಿಕೆ' ಎಂದು ಟ್ರೈನಿನಲ್ಲಿ ಅಂಟಿಸಿದ ನೋಟೀಸುಗಳು ಮಾತ್ರ ನಮ್ಮ ನಿದ್ರೆಯನ್ನು ಒಂದೊಂದು ವೇಳೆ ಸಂಪೂರ್ಣ ಮಾಡಗೊಡುತ್ತಿರಲಿಲ್ಲ. ಆದರೆ ನಾವು ಇಬ್ಬರು ಇದ್ದುದರಿಂದ ಹೆಚ್ಚಿನ ಹೆದರಿಕೆಗೆ ಕಾರಣವೇನೂ ಇರಲಿಲ್ಲ. ತಾ 24ನೇ ಸೋಮವಾರ ಬೆಳಿಗ್ಗೆ ಸುಮಾರು 11 ಗಂಟೆಗೆ ನಮ್ಮ ಟ್ರೈನು ಕಾಶೀ ಪಟ್ಟಣಕ್ಕೆ ತಲಪಿತು. ಅಲ್ಲಿ ವಿಶೇಷವಾಗಿರುವ ಬಹು ಹಗುರವಾದ ಚಿಕ್ಕ ಒಂದು ತರಹದ ಜಟ್ಕಾ ಗಾಡಿಯಲ್ಲಿ ಕುಳಿತುಕೊಂಡು ರೈಲ್ವೆ ಸ್ಟೇಶನಿನಿಂದ ಸುಮಾರು 1 ಮೈಲಿ ದೂರದಲ್ಲಿ ಗಂಗಾತೀರದಲ್ಲಿರುವ ದೇವಸ್ಥಾನಕ್ಕೆ ಹೋಗಿ, ಗಂಗಾಸ್ನಾನವನ್ನು ಮುಗಿಸಿ ಪೂಜೆ ಪುರಸ್ಕಾರಗಳನ್ನು ತೀರಿಸಿಕೊಂಡು ಸಾಯಂಕಾಲ 5 ಗಂಟೆಯ ಟ್ರೈನಿನಲ್ಲಿ ಪ್ರಯಾಗಕ್ಕೆ (ಅಲ್ಲಹಾಬಾದಿಗೆ) ಹೊರಟೆವು. ಕಾಶಿಯ ಪುರಾತನ ದೇವಾಲಯಗಳನ್ನೂ, ಗಂಗಾನದಿಯನ್ನೂ ನೋಡಿದಾಗ ಯಾವ ಹಿಂದೂವಿಗೇ ಆಗಲೀ ದೇವಭಕ್ತಿಯುಂಟಾಗದೆ ಇರದು ಎಂಬ ವಾಡಿಕೆ ಮಾತಿನಲ್ಲಿ ತುಂಬಾ ನಿಜಾಂಶವಿದೆ. ಅಲ್ಲಹಾಬಾದಿಗೆ ರಾತ್ರಿ ಹತ್ತು ಗಂಟೆ ಸಮಯಕ್ಕೆ ತಲಪಿ ಅಲ್ಲಿ ಉಳಕೊಂಡೆವು. ಮರುದಿನ ಬೆಳಿಗ್ಗೆ ಗಂಗಾ, ಯಮುನಾ ಮತ್ತು ಸರಸ್ವತಿ (ಗುಪ್ತಗಾಮಿನಿಯಾಗಿ) ಸಂಗಮವಾಗುವ ಸ್ಥಳಕ್ಕೆ ಹೋಗಿ ತ್ರಿವೇಣೀ ಸ್ನಾನವನ್ನು ಮುಗಿಸಿಕೊಂಡು, ಪಿಂಡ ಪ್ರದಾನಮಾಡಿ, ತೀರ್ಥ ತೆಗೆದುಕೊಂಡು ಅಲ್ಲಹಾಬಾದು ಸ್ಟೇಶನಿನಿಂದ ಗಯಾಕ್ಕೆ ಸಾಯಂಕಾಲ 6 ಗಂಟೆಗೆ ಟ್ರೈನಿನಲ್ಲಿ ಪ್ರಯಾಣ ಬೆಳೆಸಿದೆವು. ತಾ 26 ಪ್ರಾತಃಕಾಲ ಗಯಾದಲ್ಲಿ ಇಳಿದು, ಸ್ನಾನಮಾಡಿ ಪಿತೃಗಳಿಗೆ ಪಿಂಡವನ್ನಿತ್ತು, ಪೂಜೆ ವಗೈರೆಗಳನ್ನು ತೀರಿಸಿಕೊಂಡು ಸಾಯಂಕಾಲ 4 ಗಂಟೆಗೆ ಟ್ರೈನು ಹತ್ತಿದೆವು. ಪ್ರಯಾಗದ ಕಡೆ ಹೋದಹಾಗೆ ಹೆಚ್ಚೆಚ್ಚು ಚಳಿಯಾಗಿದ್ದುದರಿಂದಲೂ, ಮೂರು ದಿವಸ ಎಡೆಬಿಡದೆ ತಣ್ಣೀರಿನಲ್ಲಿ ಸ್ನಾನಮಾಡಿದ್ದರಿಂದಲೂ ನಮ್ಮಿಬ್ಬರಿಗೂ ನಗಡಿ ಕೆಮ್ಮಲು ಸುರುವಾಯಿತು. ಮೆ. ಕುಶಾಲಪ್ಪನವರಿಗೆ ಸ್ವಲ್ಪ ಹೆಚ್ಚಾಗಿತ್ತು. ತಾನು ಒಂದು ತಿಂಗಳ ಮುಂಚೆ ಕೊಡಗಿನಲ್ಲಿ ಒಮೊನ್ನತರ ಸಂಘದ ಪರವಾಗಿ ಕೊಡಗಿನ ರಚನೆಯ ಪ್ರಚಾರ ಕೆಲಸಕ್ಕೆ ಹೊರಟಿದ್ದಾಗಲೇ ತನಗೆ ಕೆಮ್ಮಲು ನೆಗಡಿಯು ಸುರುವಾದದ್ದು ಇನ್ನೂ ಗುಣವಾಗಲಿಲ್ಲವೆಂತಲೂ, ಅದು ಈಗ ಸ್ವಲ್ಪ ಹೆಚ್ಚಾಯಿತೆಂತಲೂ ಅವರು ನನ್ನ ಸಂಗಡ ಹೇಳಿದರು. ತಾ 26 ರಲ್ಲಿ ಸಾಯಂಕಾಲ ಪ್ರಯಾಗದಿಂದ ಹೊರಟ ನಾವು ಮರುದಿನ ಬೆಳಿಗ್ಗೆ ಕಲ್ಕತ್ತಾಕ್ಕೆ ವಾಪಸು ಬಂದು ತಲಪಿದೆವು.

ಕಲ್ಕತ್ತಾದಲ್ಲಿ ಮೀಟಿಂಗುಗಳು.

ಇಷ್ಟರಲ್ಲಿ ಮೆ. ಕೆ. ಪಿ. ಚಿಣ್ಣಪ್ಪನವರು ತನ್ನ ಮಗನೊಂದಿಗೆ ತಾ 26 ರಲ್ಲಿ ಕಲ್ಕತ್ತಕ್ಕೆ ಬಂದಿದ್ದರು. ಅವರೂ ನಮ್ಮ ಜೊತೆಸೇರಿದರು. ನಾವು ಮೂವರು ತಾ 27 ರಲ್ಲಿ ಮಧ್ಯಾಹ್ನದ ವರೆಗೆ ಪಟ್ಟಣಕ್ಕೆ ಸಮೀಪವಿರುವ ಬೇಲೂರು ರಾಮಕೃಷ್ಣ ಮಠವನ್ನು ಸಂದರ್ಶಿಸಿ ಅಲ್ಲಿಂದ ಸ್ಟೀಮ್‌ಲಾಂಚಿನಲ್ಲಿ ಗಂಗಾನದಿಯಲ್ಲಿ ಸ್ವಲ್ಪದೂರ ಹೋಗಿ ಶ್ರೀ ರಾಮಕೃಷ್ಣ ಪರಮಹಂಸರವರಿಗೆ ಕಾಳಿಕಾ ದೇವಿಯು ಪ್ರತ್ಯಕ್ಷವಾದ ದಕ್ಷಿಣೇಶ್ವರ ದೇವಸ್ಥಾನವನ್ನು ನೋಡಿಕೊಂಡು ಕಾಂಗ್ರೆಸ್ ಕ್ಯಾಂಪಿಗೆ ವಾಪಸು ಬಂದೆವು. ಮಧ್ಯಾಹ್ನದ ಮೇಲೆ ಸೇಕ್ಷ್ ಕನ್‌ವೆನ್ಸಿಗೆ ಹೋಗಿದ್ದೆವು. ತಾ 28 ರಲ್ಲಿ ಬೆಳಿಗ್ಗೆ ಕುಶಾಲಪ್ಪನವರ ನೆಗಡಿಯು ಸ್ವಲ್ಪ ವಾಸಿಯಾಗಿತ್ತು. ನಾವು ಮೂವರು ಆ ಪಟ್ಟಣದ ಮುಖ್ಯ ಸ್ಥಳಗಳಾದ ಬೋಸ್ ಇನ್ಸ್ಟಿಟ್ಯೂಟ್, ಮಲ್ಲಿಕ್ಸ್ ಪಾಲೇಸ್, ಜೈನರ ದೇವಸ್ಥಾನ, ಮ್ಯೂಸಿಯಂ ಮತ್ತು ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಮುಂತಾದವುಗಳನ್ನು ನೋಡಿಕೊಂಡು ಬಂದೆವು. ಮಧ್ಯಾಹ್ನದ ಮೇಲೆ ಸರ್ವ ಪಕ್ಷೀಯ ಪರಿಷತ್ತಿನಲ್ಲಿ ಹಾಜರಿದ್ದೆವು. ಕುಶಾಲಪ್ಪನವರು ಇಷ್ಟರ ವರೆಗೆ ತಮ್ಮ ಆರೋಗ್ಯದ ವಿಷಯ ಏನೊಂದು ತಕರಾರು ಹೇಳಲಿಲ್ಲ. ತಾ 29 ರ ಪ್ರಾತಃಕಾಲ ಎದ್ದು ಕಾಲಕೃತ್ಯಗಳನ್ನು ಮುಗಿಸಿಕೊಂಡು, ಕಾಂಗ್ರೆಸ್ ಸ್ವಯಂ ಸೇವಕರ ಪೆರೇಡನ್ನೂ, ರಾಷ್ಟ್ರೀಯ ಧ್ವಜ ಹಾರಿಸುವಿಕೆಯನ್ನೂ ನೋಡಿದೆವು. ಸುಮಾರು 2000 ಸ್ವಯಂ ಸೇವಕರೂ, 200 ಸ್ವಯಂ ಸೇವಕಿಯರೂ ನಡೆಸಿದ ಗಂಭೀರವಾದ ಪೆರೇಡನ್ನು ನೋಡಿ ಮೆ. ಕುಶಾಲಪ್ಪನವರು— "ನಮ್ಮ ಪುಟ್ಟ ದೇಶದಲ್ಲಿ ಇದಕ್ಕಿಂತಲೂ ಉತ್ತಮವಾದ ಸ್ವಯಂ ಸೇವಕ ಸೇವೆಯು ನಡೆಯುವದಾದರೆ, ನಾವು ಮುಂದಾಳುಗಳು ಅವರನ್ನು ತರಬೇತು ಮಾಡಿ, ಉಪಯೋಗಿಸಿಕೊಳ್ಳದೆ ಇರುವದು ನಮ್ಮ ತಪ್ಪು. ನಾವು ಮಾತಾಡುವದಕ್ಕಿಂತ ಹೆಚ್ಚು ಕೆಲಸ ಮಾಡಬೇಕಾಗಿದೆ, ಈ ತರಹದಲ್ಲಿ ನಾವು ಏನಾದರೂ ಮಾಡಿಯೇ ತೀರಬೇಕು" ಎಂದು ಮುಂತಾಗಿ ನನ್ನ ಸಂಗಡ ಹೇಳಿದರು. ಮಧ್ಯಾಹ್ನದ ಮೇಲೆ ಕಾಂಗ್ರೆಸ್ ಮಹಾಸಭೆಯು ನೆರೆಯಿತು. ಸುಮಾರು 23 ಸಾವಿರ ಜನರು ನೆರೆದಿದ್ದ ಆ ಸಭೆಯಲ್ಲಿ ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನೆಹರೂರವರು ಭಾಷಣ ಮಾಡುವದು ಚೆನ್ನಾಗಿ ಕೇಳಿಸುತ್ತಿಲ್ಲವಾದುದರಿಂದ ('ಲೌಡ್ ಸ್ಪೀಕರ್' ಎಂಬ ಗಟ್ಟಿಯಾಗಿ ಕೇಳಿಸುವ ಯಂತ್ರಗಳು ಬಂದಿದ್ದರೂ ಅವು ಚೆನ್ನಾಗಿ ಕೆಲಸ ಮಾಡದ್ದರಿಂದ) ಕುಶಾಲಪ್ಪನವರು ಮೀಟಿಂಗು ಮುಗಿಯುವ ಸ್ವಲ್ಪ ಮುಂಚಿತವಾಗಿಯೇ ಹೊರಗೆ ಹೊರಟು ಹೋದರು. ಹಾಗೆ ಹೋದ ಅವರು ಪ್ರದರ್ಶನಾಲಯಕ್ಕೆ ಹೋಗಿ ಅಲ್ಲಿ ಎಲ್ಲವನ್ನೂ ಚೆನ್ನಾಗಿ ನೋಡಿಕೊಂಡು, ಸ್ವಲ್ಪ ಖಾದಿ ಬಟ್ಟೆಯನ್ನು ತೆಗೆದುಕೊಂಡು ರಾತ್ರಿ 9 ಗಂಟೆಗೆ ವಾಪಸು ಬಂದು ಮಲಗಿಕೊಂಡರು. ಆ ರಾತ್ರಿ ಮೆ. ಚಿಣ್ಣಪ್ಪನವರು ತನ್ನ ಮಗನೊಂದಿಗೆ ಕೊಡಗಿಗೆ ಹೊರಟು ಹೋದರು.

ಜ್ವರ ಪ್ರಾರಂಭ

ಪ್ರದರ್ಶನಾಲಯದಿಂದ ವಾಪಸು ಬರುವಾಗ ಅವರಿಗೆ ಸ್ವಲ್ಪ ಚಳಿಯಾಯಿತಂತೆ. ರಾತ್ರಿ ಅವರಿಗೆ ಜ್ವರ ಬಂತು. ಆದರೆ ಬೆಳಿಗ್ಗೆ ಸ್ವಲ್ಪ ಜ್ವರ ಬಿಟ್ಟಿದ್ದುದರಿಂದ ನಾವಿಬ್ಬರೂ ಕಾಂಗ್ರೆಸ್ ಕ್ಯಾಂಪ್ ಡಾಕ್ಟರವರ ಬಳಿಗೆ ಹೋಗಿ ಔಷಧಿ ತೆಗೆದುಕೊಂಡೆವು. ತಾ 31ರಲ್ಲಿ ಕಾಂಗ್ರೆಸು ಸಭೆ ಅಂತ್ಯವಾಗುವದರಿಂದ ಟ್ರೈನಿನಲ್ಲಿ ಜನರ ತುಂಬು ಹೆಚ್ಚಾಗುವುದೆಂದು ನಾವು ತಾ 30ರ ಸಾಯಂಕಾಲವೇ ಹೊರಡಬೇಕೆಂದು ನಿಶ್ಚೈಸಿದ್ದೆವು. ಡಾಕ್ಟರವರು ಅವರಿಗೆ ನೆಗಡಿಯ ಜ್ವರವೆಂದು ಹೇಳಿದರು. ಅವರಿಗೆ ಮಧ್ಯಾಹ್ನ 2 ಗಂಟೆಗೆ ಪುನಃ ಜ್ವರ ಬಂದದ್ದರಿಂದ ಆ ದಿನ ಹೊರಡಲಿಕ್ಕೆ ಆಗಲಿಲ್ಲ. ಆ ದಿನ ರಾತ್ರಿ ಬೆವರಿ ಅವರಿಗೆ ಜ್ವರ ಬಿಟ್ಟಂತಾಯಿತು. ಆದರೆ ಮರುದಿನ ಬೆಳಿಗ್ಗೆ ಪುನಃ ಜ್ವರ ಬಂತು. ಡಾಕ್ಟರವರಿಗೆ ಹೇಳಿಕಳಿಸಿ ಬದಲು ಮಿಶ್ರಣ ತಂದುಕೊಟ್ಟೆವು. ಕುಶಾಲಪ್ಪನವರು ಮಲೇರಿಯಾ ಜ್ವರಕ್ಕೆ ಕ್ವಯಿನ ಇಂಜೆಕ್ಷನ್ ಮಾಡಿಸಬೇಕೆಂದು ಇಚ್ಛಿಸಿದರು. ಆದರೆ ಡಾಕ್ಟರವರು ಇಂಜೆಕ್ಷನಿನಿಂದ ಹೆಚ್ಚಿನ ಪ್ರಯೋಜನವಿಲ್ಲವೆಂದು ಹೇಳಿದರು. ಆ ದಿನ ರಾತ್ರಿಯೂ ಬೆವರಿತು. ತಾ 1ರ ಬೆಳಿಗ್ಗೆ ಡಾಕ್ಟರವರನ್ನು ಅವರು ಮಲಗಿದ್ದಲ್ಲಿಗೇನೇ ಕರತಂದು ಪರೀಕ್ಷೆ ಮಾಡಿಸಿದೆವು. ಡಾಕ್ಟರವರು ಅವರಿಗೆ ಒರೇ ಮಲೇರಿಯಾ ಜ್ವರವಾದುದರಿಂದ ಅದು ಬೇಗನೆ ವಾಸಿಯಾಗುವುದೆಂದು ಹೇಳಿ ಕ್ವಯಿನ ಮಿಶ್ರವಾದ ಔಷಧಿ ಕೊಟ್ಟರು. ಅವರು ಈ ಸ್ಥಿತಿಯಲ್ಲಿ ಮದ್ರಾಸಿನವರೆಗೆ ಪ್ರಯಾಣ ಮಾಡಬಹುದೋ ಎಂದು ನಾನು ಡಾಕ್ಟರವರನ್ನು ಕೇಳಿದಾಗ್ಗೆ ಪ್ರಯಾಣ ಮಾಡುವದರಿಂದ ದೋಷವೇನೂ ಇಲ್ಲವೆಂದು ಅವರು ಉತ್ತರ ಕೊಟ್ಟರು. ಜ್ವರವೂ ಸ್ವಲ್ಪ ಕಡಿಮೆಯಾಯಿತು. ಮೆ. ಎನ್. ವೆಂಕಪ್ಪಯ್ಯನವರು ಟ್ರೈನಿನಲ್ಲಿ ತನ್ನ 2ನೇ ಕ್ಲಾಸಿನ ಟಿಕೇಟನ್ನು ಕುಶಾಲಪ್ಪನವರಿಗೆ ಕೊಟ್ಟು, ತಾನು 3ನೇ ಕ್ಲಾಸಿನಲ್ಲಿ ಕುಶಾಲಪ್ಪನವರ ಸ್ಥಳದಲ್ಲಿ ಪ್ರಯಾಣ ಮಾಡಲು ಒಪ್ಪಿದರು. ನಾವೆಲ್ಲರೂ ಮದ್ರಾಸಿನಿಂದ ಬರುವಾಗಲೇ (ರಿಟರ್ನ್) ವಾಪಸು ಟಿಕೇಟು ತೆಗೆದುಕೊಂಡಿದ್ದೆವು. ತಾ. 1 ರಲ್ಲಿ ಸಾಯಂಕಾಲ 5 ಗಂಟೆಗೆ ಕಾಂಗ್ರೆಸ್ ಸ್ಪೆಶಲ್ ಟ್ರೈನ್ ಕಲ್ಕತ್ತಾದಿಂದ ಹೊರಟಿತು. ಕುಶಾಲಪ್ಪನವರ ಜ್ವರದ ಸಮಯದಲ್ಲಿ ಕಲ್ಕತ್ತಾದಲ್ಲಿರುವ ಮೂರು ಕೊಡವ ಯುವರು ನಮಗೆ ತುಂಬಾ ಸಹಾಯ ನೀಡಿದಕ್ಕೆ ಅವರಿಗೆ ನಮ್ಮ ವಂದನೆಗಳಿವೆ.

ದಾರಿಯಲ್ಲಿ.

ಕುಶಾಲಪ್ಪನವರಿದ್ದ ರೈಲ್ವೆ ಕಂಪಾರ್ಟಿಯಲ್ಲಿ ಮೆ. ಜಿ. ವೆಂಕಟಸುಬ್ಬಯ್ಯನವರಿದ್ದರು. ಅವರು ಕುಶಾಲಪ್ಪನವರಿಗೆ ಬೇಕಾದ ಹಾಗೆ ಸಹಾಯ ಮಾಡುತ್ತಿದ್ದರಲ್ಲದೆ ಸಮೀಪದ ಕಾರ್ರಿಯಲ್ಲಿದ್ದ ವೆಂಕಪ್ಪಯ್ಯನವರೂ, ನಾನೂ ಆಗಾಗ್ಗೆ ಅವರ ದೇಹಸ್ಥಿತಿಯ ವಿಷಯ ವಿಚಾರಿಸಿಕೊಳ್ಳುತ್ತಿದ್ದೆವು. ತಾ 2ರಲ್ಲಿ ಅವರಿಗೆ ಆಗಾಗ್ಗೆ ಬೆವರುತ್ತಿತ್ತು. ತನಗೆ ಬಹಳ ಬಾಯಾರಿಕೆ ಆಗುತ್ತದೆಂದು ಅವರು ಹೇಳುತ್ತಿದ್ದರು. ಬರೇ ಹಾಲನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಅತ್ಯುತ್ತ ದಾರಿಯ ಮಲಗಿದಲ್ಲಿಯೇ ವಿಶ್ರಾಂತಿ ತೆಗೆದುಕೊಂಡರು. ಮದ್ರಾಸು ಸ್ಟೇಶನಿನಿಂದಲೇ ತಾನು ಆಸ್ಪತ್ರೆಗೆ ಹೋಗುವದು ಉತ್ತಮವೆಂದೂ, ಸ್ಟೇಶನಿನಲ್ಲಿ ಕಾಯುವಂತೆ ಮದ್ರಾಸಿನಲ್ಲಿರುವ ಡಾಕ್ಟರ್ ಬಿ. ಬೋಪಯ್ಯನವರಿಗೆ ತಂತೀವಾರ್ತೆ ಕಳುಹಿಸುವದು ಒಳ್ಳೆಯದೆಂದೂ ಕುಶಾಲಪ್ಪನವರು ಹೇಳಿದ ಮೇರೆ ನಾನು ಡಾ. ಬೋಪಯ್ಯನವರಿಗೆ ವಾಲ್ಟೇರಿನಿಂದ ತಂತೀವಾರ್ತೆ ಕಳುಹಿಸಿದೆನು. ಹಾಗೆಯೇ ಮರುದಿನ ನಮ್ಮ ಟ್ರೈನು ಮದ್ರಾಸಿಗೆ ಮಧ್ಯಾಹ್ನ 1 ಗಂಟೆಗೆ ತಲಪಿದಾಗ ಡಾ. ಬೋಪಯ್ಯನವರು ಸ್ಟೇಶನಿನಲ್ಲಿ ನಮ್ಮನ್ನು ಎದುರುಗೊಂಡು ಕುಶಾಲಪ್ಪನವರ ಇಚ್ಛೆಯಂತೆ ಅವರನ್ನು ಜನರಲ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಸೇರಿಸಿದರು.

ಮದ್ರಾಸು ಆಸ್ಪತ್ರೆಯಲ್ಲಿ.

ಆಸ್ಪತ್ರೆಯಲ್ಲಿ ಸೇರುವಾಗ್ಗೆ ಅವರಿಗೆ 100 ಡಿಗ್ರಿ ಜ್ವರವಿತ್ತು. ತಾ 4ರಲ್ಲಿ ಜ್ವರವು 101 ಗೆ ಇಳಿಯಿತು. ನಾಡಿಯು ಉತ್ತಮವಾಗುತ್ತಾ ಬಂತು. ಅವರಿಗೆ ಕೋಲೆರಾಯು ಬಲವಾಗಿದೆಯೆಂದು ಡಾಕ್ಟರವರು ಹೇಳಿದರು. ತಾ 7ರ ವರೆಗೆ ಅವರ ಸ್ಥಿತಿ ದಿನೇ ದಿನೇ ಕಡಿಮೆಯಾಗುತ್ತಾ ಬಂದು, 102 ಡಿಗ್ರಿಗೆ ಇಳಿಯಿತು. ಕೋಲೆರಾ [illegible] ಗುಣವಾಗುತ್ತಿದೆಯೆಂದು ಡಾಕ್ಟರವರು ಹೇಳುತ್ತಿದ್ದರು.

ಆದರೆ ತಾ 8ರಲ್ಲಿ ಅವರ ಜ್ವರವು 103 ಡಿಗ್ರಿಗೆ ಏರಿ ಶ್ವಾಸೋಚ್ಛ್ವಾಸದ ವೇಗವು ಜಾಸ್ತಿಯಾಯಿತು. [illegible] (ಫೊ.ಸಿ.ಡಿ) ಎಂಬ ಹೆಸರಿನ [illegible] ಎಂದು ಡಾಕ್ಟರುಗಳು ಅವರ ರಕ್ತವನ್ನು ಪರೀಕ್ಷೆ ಮಾಡಿ ಕಂಡುಹಿಡಿದರು. ನಾಡಿ ಅಶಕ್ತವಾದ ಕಾರಣ ಅವರಿಗೆ ಸ್ವಲ್ಪ ಮಂಕು ಉಂಟಾಗಲಾರಂಭಿಸಿತು. ಮರುದಿನ ಬೆಳಿಗ್ಗೆ ಜ್ವರ ಸ್ವಲ್ಪ ಕಡಿಮೆಯಾದರೂ ಸಾಯಂಕಾಲ 104 ಡಿಗ್ರಿಗೇರಿತು. ನಾಡಿಯು ಬಲಹೀನವಾಗುತ್ತಾ ಬಂತು. ಕಾಯಿಲೆ ಜೋರಾದುದರಿಂದ ಅವರ ಸಹೋದರರಿಗೆ ತಂತಿ ಕಳುಹಿಸಿದೆವು. ಈ ಮೊದಲೇ ಕಾಯಿಲೆಯ ವರ್ತಮಾನ ಕೇಳಿದ್ದ ಅವರ ಅಣ್ಣ ಮೆ. ಅಚ್ಚಯ್ಯನವರು ತಾ 9ರ ಮಧ್ಯಾಹ್ನ ಅಲ್ಲಿಗೆ ಬಂದು ತಲಪಿದರು. ಕುಶಾಲಪ್ಪನವರಿಗೆ ಜ್ಞಾನವು ಸರಿಯಾಗಿ ಇಲ್ಲದ್ದರಿಂದ ಅವರ ಅಣ್ಣನನ್ನು ಗುರುತಿಸಲು ಅವರಿಗೆ ಸಾಧ್ಯವಾಗಲಿಲ್ಲವೆಂದು ತೋರಿತು. ಆ ದಿನ ಬೆಳಿಗ್ಗೆ ಅವರನ್ನು ಡಾಕ್ಟರವರನ್ನು ಕೇಳಿ ಜನರಲ್ ವಾರ್ಡಿನಿಂದ (ದಿನಕ್ಕೆ 10 ರೂ. ಬಾಡಿಗೆಯ) ಸ್ಪೆಶಲ್ ವಾರ್ಡಿಗೆ ಸಾಗಿಸಲಾಯಿತು. ತಾ 10ರ ಬೆಳಿಗ್ಗೆ ಅವರ ಜ್ವರವು ಸನ್ನಿಪಾತಜ್ವರವಲ್ಲವೆಂದು ಗಿಂಡಿಯಿಂದ ಜವಾಬು ಬಂತು. ಡಾಕ್ಟರುಗಳು ಮತ್ತು ನರ್ಸುಗಳು ಎಷ್ಟು ತೊಂದರೆಯಿಂದ ಚಿಕಿತ್ಸೆ ಮಾಡಿದರೂ ಅವರ ಸ್ಥಿತಿಯು ಕೆಡುತ್ತಾ ಬಂತು. ಪೂರ್ತಿ ಪ್ರಜ್ಞೆ ಇಲ್ಲದಾಯಿತು.

ಅಂತ್ಯಕಾಲ.

ಆ ರಾತ್ರಿ ಉಸಿರಾಟವೂ ಎಷ್ಟೂ ಜೋರಾಯಿತು. ಜ್ವರವು 104.5 ಡಿಗ್ರಿಗೆ ಏರಿತು. ರಾತ್ರಿ ಸಂಕಟದ ಕೂಗು ಅವರ ಗಂಟಲಿನಿಂದ ಕೇಳಲಾರಂಭಿಸಿತು. ಆ ಎರಡು ರಾತ್ರಿಗಳಲ್ಲಿ ಮೆ. ಅಚ್ಚಯ್ಯನವರು ಅವರಿದ್ದ ಕೊಠಡಿಯಲ್ಲಿಯೇ ಮಲಗಿದ್ದರು. ತಾ 11ನೇ ಶುಕ್ರವಾರ ಪ್ರಾತಃಕಾಲ ಅವರಿಗೆ ಉಸಿರಾಡುವದು ಕಷ್ಟವಾಯಿತು. ನಾಡಿಯು ಬಹು ಬಲಹೀನವಾಯಿತು. ಅವರ ಅಂತ್ಯಕಾಲವು ಸಮೀಪಿಸುತ್ತಾ ಬಂತು. ಅವರ ವಾರೀಸುದಾರರಿಗೆ ಸ್ನೇಹಿತರಿಗೂ ಕಾಯಿಲೆ ಬಹಳ ಜೋರೆಂದು ತಂತೀ ಕಳುಹಿಸಲಾಯಿತು. ನರ್ಸರವರು ತಂದು ಬಾಯಿಗೆ ಹುಯ್ದುಕೊಟ್ಟ ಒಂದು ಬಟ್ಟಲು ಹಾಲನ್ನು ನಿಧಾನವಾಗಿ ಕುಡಿದು ಬೆಳಿಗ್ಗೆ 9 ಗಂಟೆ 5 ನಿಮಿಷಕ್ಕೆ ದೈವಾಧೀನರಾದರು.

ಶವ ದಹನ.

ಅಲ್ಲಿಯೇ ಇದ್ದ ಮೆ. ಬಿದ್ದಂಡ ಕುಟ್ಟಪ್ಪನವರು ಮತ್ತು ಡಾ. ಬೋಪಯ್ಯನವರು ಈ ವರ್ತಮಾನ ಕೊಟ್ಟ ಕೂಡಲೇ ಮದ್ರಾಸಿನಲ್ಲಿರುವ ಕೊಡವರೆಲ್ಲರೂ (ಸುಮಾರು 45 ಜನರು) ಅಲ್ಲಿಗೆ ಬಂದು ಶವವನ್ನು ಮಧ್ಯಾಹ್ನದ ಮೇಲೆ ಹಿಂದೂ ಸ್ಮಶಾನದಲ್ಲಿ ಸುಡುವಂತೆ ಏರ್ಪಾಡು ಮಾಡಿದರು. ಹಾಗೆಯೇ ಎಲ್ಲರೂ ಸೇರಿ ಶವವನ್ನು ಸ್ನಾನಮಾಡಿಸಿ ಹೊಸಬಟ್ಟೆ ಧರಿಸಿ, ಸಾಯಂಕಾಲ 3 ಗಂಟೆಗೆ ಕುದುರೆ ಗಾಡಿಯಲ್ಲಿ ಹಾ

ಕಿ ಮೆರವಣಿಗೆ ಹೋಗಿ 3½ ಗಂಟೆಗೆ ಸ್ಮಶಾನಕ್ಕೆ ತಲಪಿದೆವು. ಅಲ್ಲಿ ಕೊಡವರ ಪದ್ಧತಿಪ್ರಕಾರ ಬಾಯಿಗೆ ನೀರುಕೊಡುವ ಮುಂತಾದ ಪದ್ಧತಿಗಳನ್ನು ಆಚರಿಸಿ ನಾಲ್ಕು ಗಂಟೆಗೆ ಶವವನ್ನು ಚಿತೆಯ ಮೇಲಿರಿಸಿದರು. ಅಲ್ಲಿಗೆ ಚಿಕ್ಕ ಪತ್ರಿಯದಲ್ಲೇ ಕೊಡಗಿನ ಮುಂದಾಳಾಗಿದ್ದ ಕುಶಾಲಪ್ಪನವರ ಈ ಒ ಸ್ತದ ಗುರುತು ಮಾಯವಾಯಿತು. ರಾತ್ರಿ ಏಳು ಗಂಟೆಗೆ ಹೋಗಿ ಅವರ ದೇಹದ ಬೂದಿ ಸ್ವಲ್ಪವನ್ನು ತೆಗೆದುಕೊಂಡು ಮ. ಪಿ. ಅಚ್ಚಯ್ಯನವರೂ, ನಾನೂ ಆ ದಿನ ರಾತ್ರಿ ಟ್ರೈನಿನಲ್ಲಿ ಅಲ್ಲಿಂದ ಹೊರಟು ತಾ. 12 ರ ರಾತ್ರಿ ಕೊಡಗಿಗೆ ಬಂದು ತಲಪಿ, ಆ ರಾತ್ರಿ ಬಸವನಹಳ್ಳಿಯ ಅವರ ಮನೆ ಬಳಿ "ಚಾವುಂಬೊಳೆ" ಯ ಕ್ರಿಯೆಯು ನಡಿಸಲಾಯಿತು.

ಮದ್ರಾಸಿನಲ್ಲಿ ನಮ್ಮ ಕಷ್ಟಕಾಲದಲ್ಲಿ ಅಲ್ಲಿದ್ದ ಕೊಡವ ಸ್ನೇಹಿತರೆಲ್ಲರೂ (ಮುಖ್ಯವಾಗಿ ಡಾ. ಭೀಮಯ್ಯನವರು ಮತ್ತು ಮೆ|| ಬಿ. ಪಿ. ಕುಟ್ಟಪ್ಪನವರು) ನಮಗೆ ತುಂಬಾ ಸಹಾಯ ಮಾಡಿದ್ದರಿಂದ ದಿವಂಗತ ಕುಶಾಲಪ್ಪನವರ ಅಂತ್ಯಕಾಲದ ಚಿಕಿತ್ಸೆಯೂ, ಶವ ದಹನದ ಕ್ರಿಯೆಯೂ ಏನೊಂದೂ ತೊಂದರೆಯಿಲ್ಲದೆ ಬಹು ಸರಾಗವಾಗಿ ನಡೆಯಿತು. ಅವರೆಲ್ಲರಿಗೂ ನಮ್ಮ ವಂದನೆಗಳನ್ನು ಈ ಮೂಲಕ ಸೂಚಿಸುವವನಾಗಿದ್ದೇನೆ. ಕೊಡಗಿನಿಂದ ಜೊತೆಯಲ್ಲಿ ಹೊರಟು ಕಲ್ಕತ್ತಾ ಕಾಂಗ್ರೆಸ್ ಎಲ್ಲವನ್ನು ಮುಗಿಸಿಕೊಂಡು ಜೊತೆಯಲ್ಲಿ ವಾಪಸು ಬರಲು ಉದ್ದೇಶಿಸಿದ ನನಗೆ ನನ್ನ ಆಪ್ತ ಸ್ನೇಹಿತನನ್ನು ದಾರಿಯಲ್ಲಿ ಸುಟ್ಟು ಬರಿದಾಗಿ ಒಬ್ಬನೇ ಹಿಂತಿರುಗುವ ದುರಾದೃಷ್ಟ ಲಭಿಸಿದಕ್ಕೆ ನಾನು ಎಷ್ಟು ವಿಷಾದಿಸಿದರೂ ಸ್ವಲ್ಪವೇ.

ಸಿ. ಐ. ಬೆಳ್ಯಪ್ಪ.

ಸೂಚನೆ.—ದಿವಂಗತ ಕುಶಾಲಪ್ಪನವರ ಕಾಯಿಲೆಯ ಸಮಯದಲ್ಲೂ ಅಂತ್ಯಕಾಲದಲ್ಲೂ ಅವರೊಂದಿಗೆ ಇದ್ದ ನನ್ನನ್ನು ಕಂಡವರೆಲ್ಲರೂ ಅವರ ಅಸ್ವಸ್ಥ ಮತ್ತು ಮರಣದ ವಿಷಯ ವಿವರವಾಗಿ ಹೇಳಬೇಕೆಂದು ಕೇಳುತ್ತಿರುವುದರಿಂದ ಅಂಥವರೆಲ್ಲರ ತಿಳುವಳಿಕೆ ಬಗ್ಗೆ ಅದನ್ನೇ ಇಲ್ಲಿ ಸಂಕ್ಷೇಪವಾಗಿ ವಿವರಿಸಿರುವುದಾಗಿದೆ. ಸಿ. ಐ. ಬಿ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಎಂಬುದೇ

ಎಲ್ಲಾ ಬೆಳೆಗಳಿಗೂ ಯೋಗ್ಯವಾದ ಕಾರಬನಕ ಗೊಬ್ಬರವು, ಪ್ರಪಂಚದಲ್ಲೆಲ್ಲಾ ಇದೇ ಸಸ್ಯಾದಿಗಳನ್ನು ಒಳ್ಳೇಯದಾಗಿ ಬೆಳೆಸುವ ಮತ್ತು ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಫಸಲನ್ನು ಕೊಡುವ ಸಾಧನವೆಂದು ಖ್ಯಾತಿಯನ್ನು ಪಡೆದಿರುತ್ತದೆ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಗಿಡಗಳ ಬೇರುಗಳನ್ನು ಹೆಚ್ಚು ಆಳದ ವರೆಗೂ ಪಸರಿಸುವಂತೆ ಮಾಡುವುದರಿಂದ ಮಳೆ ಕಡಿಮೆಯಾದಾಗ್ಯೂ ಗಿಡಗಳಿಗೆ ಹೆಚ್ಚಿನ ತೊಂದರೆಯಾಗಲಾರದು.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲತು, ಹುಳ ಮತ್ತಿತರ ರೋಗಗಳಿಗೆ ಥಕ್ಕನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಆಫ್ ಸೋಡಾದಲ್ಲಿ ಬೆಳೆಗಳನ್ನು ಮಣ್ಣನ್ನು ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಬೇರೆ ಸಾಧನದ ಗೊಬ್ಬರಗಳಂತೆ ಮಣ್ಣಿನಲ್ಲಿ ಏಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪೆರಿ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಲ ಚೀಲ 1ರ ರೂಪಾಯಿ 6—4—0ರಂತೆ ಒದಗಿಸಿ ಕೊಡುವುದಲ್ಲದೆ, ಮಡಿಕೇರಿ ಮತ್ತು ವೀರಾಜಪೇಟೆಯಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ 6—15—0ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದರ್ಶನಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ. 469, ಕಲ್ಕತ್ತಾ.

(2) ಮಿಸ್ಟರ್ ಎಂ. ಯು. ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

7

ಕೋವಿಗಳು, ಮತ್ತು ಅವುಗಳ ಸಾಹಿತ್ಯಗಳು.



ಮಿಡ್ಲೇಂಡ್ ಕಂಪೆನಿಯ "ನಾಕ್ ಎಬೌಟ್" ಎಂಬ 12 ನೇ ನಂಬರ ಒಂಟಿ ಕೊಳದ ಕೋವಿಗೆ ರೂ. 50.

ಅಮೇರಿಕದ "...ಎನ್ಸ್" ಕಂಪೆನಿಯ 12 ನೇ ನಂಬರಿನ ಒಂಟಿ ಕೊಳದ ತೋಟದ ಕೋವಿಗೆ ರೂ 15.

12 ನೇ ನಂಬರಿನ ಒಂಟಿ ಕೊಳದ ಅತಿ ಸುಲಭ ಕ್ರಯದ ತೋಟದ ಕೋವಿಗೆ ರೂ. 38.

12ನೇ ನಂಬರಿನ ಜೋಡು ಕೊಳದ 'ಇಂಗ್ಲಿಷ್' ತೋಟದ ಕೋವಿಗೆ ರೂ. 75.

" " " ಬೆಲ್ಜಿಯನ್ ' ತೋಟದ ಕೋವಿಗೆ ರೂ. 60.

ಹೊಗೆ ರಹಿತವಾದ 12 ನಂಬರಿನ 'ಇಂಗ್ಲಿಷ್ "ಎಲೇ" ಚಿಲ್ಲು ತುಂಬಿದ ತೋಟಗಳು 100 ಕ್ಕೆ ರೂ 1—0—0
ಅಮೇರಿಕನ್ ವೇಸ್ಟರನ್ " " " 100 ಕ್ಕೆ ರೂ. 9—8—0
ಬೆಲ್ಜಿಯನ್ 100 ಕ್ಕೆ ರೂ. 9—0—0

ಎಲ್ಲಾ ತರದ ಕೋವಿಗಳು ರೈಫಲ್‌ಗಳು, ರಿವಾಲ್ವರ್‌ಗಳು, ಪಿಸ್ಟಲ್‌ಗಳು ಮತ್ತು ಚಿಲ್ಲು ಮದ್ದು ವಗೈರೆ ಅಲ್ಲದೆ ಬೇಟೆಗಾರರಿಗೆ ಬೇಕಾಗಿರುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತವೆ.

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಾಪಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವುದು.

Abdoolally Noorbhoy,
Arms & Ammunition Dealers.
248–250 Abdul Rehman Street
Bombay 3. Telegrams "Guidance"

10

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ 'ರೋಲ್ಡ್‌ಗೋಲ್ಡ್ ರಿಸ್ಟ್‌ವಾಚು' ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು



24—7

ವಿಮರ್ಶೆ.

ಸ್ವರಾಜ್ಯ ಡೈರಿ—ಪ್ರಕಾಶಕರು ಪಿ. ಎ. ಪೈ ಬ್ರದರ್ಸ್, ಉಡುಪಿ. ಬೆಲೆ ೦—೮—೦.

ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ ಸಾಲಿಯ ಈ ಡೈರಿಯಲ್ಲಿ ಪ್ರತಿಯೊಂದು ಪುಟದಲ್ಲಿಯೂ ಉತ್ತಮವಾದ ನೀತಿವಾಕ್ಯಗಳು ಸಂಗ್ರಹಿಸಿದೆ. ಮತ್ತು ಡೈರಿಯ ಮುಂಭಾಗದಲ್ಲಿ ನೈಮನ್ ಸಮಿತಿ, ಕಾಂಗ್ರೆಸ್, ನೆಹರು ವರದಿ, ಬಾರ್ಡೋಲಿಯ ಸತ್ಯಾಗ್ರಹ ಮೊದಲಾದ ರಾಜಕೀಯ ಪ್ರಸಂಗವೂ, ಕರ್ನಾಟಕ ಏಕೀಕರಣದ ಮಾಹಿತಿಯೂ ಪ್ರಪಂಚ ಮತ್ತು ಹಿಂದುಸ್ಥಾನದ ತುಲನಾತ್ಮಕವಾದ ಜನಸಂಖ್ಯೆ, ಮರಣ ಸಂಖ್ಯೆ, ಉದ್ಯೋಗ, ಕೈಗಾರಿಕೆ, ವಿದ್ಯೆ, ವ್ಯಾಪಾರ ಮೊದಲಾದವುಗಳ ಮಾಹಿತಿಯೂ ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆ. ಆಯ ಮತ್ತು ವ್ಯಯ, ಭಾಷಾವಾರು ಮತ್ತು ಮತವಾರು ಜನಸಂಖ್ಯೆ. ಮುಖ್ಯ ಬಂದರುಗಳು. ಆಮದು ರಫ್ತು ವ್ಯಾಪಾರ, ಮುಖ್ಯ ಪಟ್ಟಣಗಳು ಮೊದಲಾದ ಉಪಯುಕ್ತ ಮಾಹಿತಿಯ ವಿಶೇಷ ಸಂಗ್ರಹವೂ ಇದೆ. ದಪ್ಪ ಕಾಗದ, ಮುದ್ದಾದ ಮುದ್ರಣ. ಪ್ರತಿಯೊಬ್ಬರೂ ಸಂಗ್ರಹಿಸಬೇಕು. 4—4

ಗಮನಿಸಿರಿ! ಪರೀಕ್ಷಿಸಿ ನೋಡಿ!!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದ

ಪುತ್ರ ಸಂತಾನದ ಎಣ್ಣೆ.

ಅನೇಕ ಕಾರಣಗಳಿಂದ ಸ್ತ್ರೀಯರ ಹೊಟ್ಟೆಯಲ್ಲಿ ಕ್ರಿಮಿಗಳು ಸೇರಿ ಗರ್ಭವನ್ನು ನಾಶಪಡಿಸುವವು. ಮತ್ತು ಗರ್ಭಕೋಶದಲ್ಲಿ ದರ್ಮಾಂಸವು ಬೆಳೆದು ರಕ್ತವನ್ನು ಕಟ್ಟುವುದು. ವಾಯುವು ಇದ್ದರೂ ಗರ್ಭವು ನಿಲ್ಲುವುದಿಲ್ಲ. ಇಂಥವರು ಈ ಎಣ್ಣೆಯನ್ನು 15 ದಿನಗಳು ಸೇವಿಸುವದರಿಂದ ಗರ್ಭಕೋಶದ ಎಲ್ಲಾ ವಿಧವಾದ ವ್ಯಾಧಿಗಳನ್ನು ಹೋಗಲಾಡಿಸಿ ಆ ತಿಂಗಳಲ್ಲಿಯೇ ಗರ್ಭವನ್ನು ನಿಲ್ಲಿಸುವದು. ಕೆಲವರಿಗೆ ಗರ್ಭವು 2—3 ತಿಂಗಳಕಾಲ ನಿಂತು ನಂತರ ಹೋಗಿಬಿಡುವವು. ಅಂಥವರಿಗೂ ಸಹ ಈ ಎಣ್ಣೆಯು ಸಿದ್ಧೌಷಧವು. ಮಕ್ಕಳಿಲ್ಲದವರಿಗೆ ಈ ಎಣ್ಣೆಯು ಒಂದು ವರಪ್ರಸಾದದ ಔಷಧ. ಬೊಂಬಾಯಿ ಮದರಾಸು ಪ್ರಾಂತ್ಯಗಳಲ್ಲಿ ಈ ಎಣ್ಣೆಯನ್ನು ಉಪಯೋಗಿಸಿ ಅನೇಕರು ಪುತ್ರ ಸಂತಾನವನ್ನು ಪಡೆದಿರುವರು. ಉಪಯೋಗಿಸುವ ವಿಧಾನವನ್ನು ಔಷಧದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಬಾಟ್ಲಿ 1ಕ್ಕೆ 2—0—0

ಎಸ್. ವಿ. ಗೋಪಾಲ್ ಮೆಡಿಕಲ್ ಹಾಲ್,
37 ತಿರುಪಳ್ಳಿಬೀದಿ, ಮದರಾಸ್.

52—4

52 ವರುಷಗಳ ಅನುಭವಸಿದ್ಧ ಔಷಧಗಳು.

೧. ಮಹಾಮದನ ಕಾಮೇಶ್ವರೀ ಲೇಹ.

ಅಜೀರ್ಣ, ಎದೆನೋವು, ಸೊಂಟನೋವು, ಮಲಬದ್ಧತೆ, ನಿದ್ರೆಯಿಲ್ಲದೆ ಇರುವಿಕೆ ಮುಂತಾದವುಗಳನ್ನು ಗುಣಪಡಿಸಿ ರತಿ ಸುಖಕ್ಕೆ ಶಕ್ತಿಯನ್ನುಂಟುಮಾಡುವುದು.

ಡಬ್ಬಿ 1 ಕ್ಕೆ ರೂ. 2—0—0. 3 ಡಬ್ಬಿಗಳಿಗೆ ರೂ. 5—12—0.

೨. ಪ್ರದರೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರು ಪ್ರಸೂತರಾದ ಮೇಲಾಗುವುದು, ರಜೋದೋಷ ಯದಲ್ಲಿ ಅತ್ಯಲ್ಪ ಸ್ರವಣ, ಅತಿರೇಕವಾಗಲಿ ರಕ್ತ ಸೋರುವಿಕೆ, ಹೊಟ್ಟೆನೋವು, ಸೊಂಟನೋವು, ಬಿಳಿಬಟ್ಟೆ ನಾನಾ ವರ್ಣಗಳ ಪ್ರದರಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಗರ್ಭಾಶಯ ಸಂಬಂಧ ರೋಗಗಳನ್ನು ಗುಣಪಡಿಸಿ, ಸಂತತಿಗೆ ಅಡ್ಡಿಮಾಡುವ ಎಲ್ಲಾ ದೋಷಗಳನ್ನು ಹೋಗಲಾಡಿಸುವುದು. 1 ಬಾಟ್ಲಿ ಮತ್ತು 1 ಡಬ್ಬಿ ಮಾತ್ರೆಗೆ 2—1—0.

೩. ಮೇಹಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳುಪು, ಹಳದಿ ಮೂತ್ರ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ, ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ 2—8—0. 3 ಕ್ಕೆ 7—0—0.

೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1. 2. 3 ಅಥವಾ 4 ದಿವಸಕ್ಕೊಮ್ಮೆ ಬರುವ ಜ್ವರ, ಮಲೇಜ್ವರ ಇವುಗಳ ಮೇಲೆ ಖಾತ್ರಿ. ಬಾಟ್ಲಿ 1 ರ 0—12—0.

೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0—10—0. 3 ಕ್ಕೆ 1—12—0.

೬. ಇಚ್ಛಾಭೇದಿ.

ಆಯಾಸವನ್ನುಂಟುಮಾಡದ ಸುಖವಿರೇಚಕ.

ಬಾಟ್ಲಿ 1 ಕ್ಕೆ 0—12—0. 3 ಕ್ಕೆ 2—0—0.

೭. ದಂತಕಾಂತಿ ಚೂರ್ಣ. ಡಬ್ಬಿ 1 ಕ್ಕೆ 3 ಆಣೆ

೮. ಗಜಕರ್ಣ ಮುಲಾಮ್. ಡಬ್ಬಿ 1ಕ್ಕೆ 6 ಆಣೆ.

N. B. ಇವುಗಳಲ್ಲದೆ ಬೇರೆ ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ.

ಎನ್. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

52—11 **ಮಂಗಳೂರು, ದ. ಕನ್ನಡ.**

ವರ್ತಮಾನ ಸಂಗ್ರಹ.

ಒಳದೇಶ.

ಹುದಗೂರು ಫಾರೆಸ್ಟಿನಲ್ಲಿ ಒಂದು ಕಾಡಾನೆಯು ಕಪ್ಪಕ್ಕೆ ಬಿದ್ದದ್ದನ್ನು ಹಿಡಿದಿದ್ದಾರೆ.

ವೀರಾಜಪೇಟೆ ಸಾಹುಕಾರ್ ಯಂ. ಮಹಮ್ಮದ್ ಗಾನ್ಸಾರವರು ತಾ. 14 ರಲ್ಲಿ ಮೃತರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 21 ನೇ ದಿನ ಬೆಳಿಗ್ಗೆ 9 ಗಂಟೆಗೆ ಜವಾ...

ಒಮೈ ಸರ್ಕಾರದವರು ಭಾರತೀಯರ ಕವಿತೆಗಳನ್ನು ಪ್ರಕಟಿಸಬೇಕೆಂದು ಅಪ್ಪಣೆ ಕೊಡಿಸಿದ ತಮ್ಮ ಜಾಹೀರಾತನ್ನು ಮದರಾಸು ಸರಕಾರದವರ ಕೋರಿಕೆಯ ಮೇರೆ ಹಿಂದಕ್ಕೆ ತೆಗೆದುಕೊಂಡಿರುತ್ತಾರೆ. ಇದರ ಕುರಿತು ಬರ್ಮಾ ಗೆಜೆಟ್ಟಿನ ನೋಟೀಸು ಸಿಕ್ಕಿದ ಕೂಡಲೇ ಮದರಾಸು ಸರಕಾರದವರು ಹಿಂದಿ ಪ್ರಚಾರ ಸಭೆಯ ಮತ್ತು ಇನ್ನಿಬ್ಬ ಪುಸ್ತಕ ಪ್ರಕಾಶಕರ ಕೈಯಿಂದ ಪ್ರಕಟಿಸಿದ್ದ ಹಿಂದಿ ಪುಸ್ತಕಗಳ ಪ್ರತಿಗಳೆಲ್ಲವನ್ನೂ ಮರಳಿ ಕೊಡಬೇಕೆಂತ ಅಪ್ಪಣೆ ಮಾಡಿದ ವರ್ತಮಾನ ತಿಳಿದು ಬಂದಿದೆ.

ಗುಂಟೂರು ಕಾಲೇಜಿನ ಪ್ರಿನ್ಸಿಪಾಲರು ಸೈಮನ್ ಸಮಿತಿಯು ಬೊಂಬಾಯಿಗೆ ಬಂದ ದಿವಸ ಕಾಲೇಜಿಗೆ ಹಾಜರಿರದೆ ...

"WANTED"

Gentlemen of influence and position a dairy Managers to open two Dairies for Mercara and Virajpet on a Salary of Rs 50—5—100 per mensem.

Applicants are required to deposit Rs 500/- towards 50 qualification shares and give property security of Rs 2000/- and those who can sell 500 fully paid up shares of the Company only need apply for particulars to:—

The Organising Inspector

WANTED.

A Cook Salery Rs 25/-Apply Captain Wright Hunusur

FOR SALE.

One pure bred Scindi breeding bull age four years nine months.
Price Rs 150/—
Apply Captain Wright, Hunusur.

ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.



ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಮೇಲು ಭಂಗಾರಕ್ಕೆ ಸಮಾನವಾಗಿರುವದು. ಇದಕ್ಕೆ ಫ್ಯಾಕ್ಟರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಮಾತ್ರ ರೂ. 4—14—0.

ವಿಳಾಸ —ಲೀಗಲ್ ವಾಚ್ ಕಂಪೆನಿ,
52—31 ಪೋ. ಬಾ. 243 ಮದರಾಸು.

ಏಕೆ ನರಳುತ್ತೀರಿ?

ಕ್ರಯವು ಅಂಚೆಹಾಸಲು ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—22 ಮದನಮಂಜರಿ ಫಾರ್ಮಸಿ,
1/94 ಜೈನ ಬಜಾರು ರೋಡು, ಮದ್ರಾಸು.

"ಔಷಧ ಸೀಸೆಗಳಿಗಿಂತಲೂ ಬರೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು."

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಅವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವುವು. ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯನಂತೆ ಭಾವಿಸಿರಿ.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಒಂದು ಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ.

52—17 ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಚೆಟ್ಟಿ ಬೀದಿ, ಮದರಾಸು.

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ

ರತನ್ ಮಿಶ್ರಿ ಹಲ್ವಾ

ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಗೆ ಸ್ವಪ್ನದಲ್ಲಿ ಸ್ಖಲನೆಯಾಗುವಿಕೆ, ಅತಿ ಸ್ವೇಚ್ಛಾಪ್ರವರ್ತನೆಯಿಂದಲೂ, ಬಾಲ್ಯದ ದುರಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ಶೀಘ್ರ ಸ್ಖಲನೆಯಾಗುವಿಕೆ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಯುವಿಕೆ, ಚಿರಕಾಲದ ಮೇಹ ವ್ಯಾಧಿಯಿಂದ ಶರೀರವು ಸಣ್ಣ ಹೋಗುವಿಕೆ, ನೇತ್ರರೋಗ, ಚರ್ಮವ್ಯಾಧಿ, ಉಷ್ಣವಾಯು ಸಂಬಂಧರೋಗ, ಎದೆ ಕೂಲೆ, ಮೇಹವಡೆ, ಅಜೀರ್ಣ, ಕೆಮ್ಮು ಈ ವಿಧವಾದ ನಾನಾ ರೋಗಗಳನ್ನು ಗುಣಪಡಿಸಿ ಧಾತುಪುಷ್ಟಿ, ಶರೀರ ಪುಷ್ಟಿಯನ್ನುಂಟುಮಾಡುವುದು. ಹೆಂಗಸರು ಸೇವಿಸಿದಲ್ಲಿ ಉಷ್ಣಗರ್ಭಕಾರಕ ವ್ಯಾಧಿಗಳೆಲ್ಲಾ ನೀಗುವವು. ಸಂಪೂರ್ಣ ಗುಣ ಉಂಟಾಗಲು ೩—೪ ಡಬ್ಬಿಗಳನ್ನು ಪಯೋಗಿಸಬೇಕು.

ಕ್ರಯ:—೧ ಪೌಂಡು ಟಿನ್ ಗಕ್ಕೆ ರೂ. ೫—೦—೦; ಅರ್ಧ ಪೌಂಡು ಟಿನ್ ಗಕ್ಕೆ ರೂ. ೨—೮—೦.

ಚಿಕ್ಕಪೇಟೆ, ವಿದ್ಯಾವಿಲಾಸ ಒಕ್ಕು ಡಿಪೋವಿನಲ್ಲೂ ದೊರಲ್ಪಡುತ್ತೆ.

52—4. ವ್ಯವಸ್ಥಾಪಕರು—ರತನ್ ಮಿಶ್ರಿ ಡಿಪೋ. (ಆಂಜನೇಯ ಜ್ಯೋತಿಷಾಲಯ,) ಚಾಮುಂಡೇಶ್ವರಿಗುಡಿ ಬೀದಿ, ಬೆಂಗಳೂರು ಸಿಟಿ.

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

ಗಡಿಗಳನ್ನು ಫೆಬ್ರವರಿ ತಾ. 18ನೇ ದಿನ ಸೋಮವಾರ ಪೊನ್ನಂಪೇಟೆ ತಾಲೂಕು ಕಚೇರಿಯಲ್ಲಿಯೂ, ಮಡಿಕೇರಿನಾಡು, ಸುಂಟಿಕೊಪ್ಪನಾಡು ಮತ್ತು ಭಾಗಮಂಡಲನಾಡುಗಳ ಸೇರಿದ ಅಂಗಡಿಗಳನ್ನು ಮಡಿಕೇರಿ ಖಜಾನೆ ಬಳಿ ಫೆಬ್ರವರಿ ತಾ. 22 ರಲ್ಲಿ, ನಾಪೋಕ್ಲುನಾಡು, ವೀರಾಜಪೇಟೆನಾಡು, ಅಮ್ಮತ್ತಿನಾಡು, ಪೊನ್ನಂಪೇಟೆನಾಡು ಮತ್ತು ಶ್ರೀಮಂಗಲನಾಡುಗಳ ಸೇರಿದ ಅಂಗಡಿಗಳನ್ನು ದಕ್ಷಿಣಕೊಡಗು ತಾಲೂಕು ಕಚೇರಿಯಲ್ಲಿ ಫೆಬ್ರವರಿ ತಾ. 20 ನೇ ದಿನ ಸಹ ಹರಾಜು ಮಾಡಲ್ಪಡುವದು. 1—4—29 ರಿಂದ 31—3—30ರ ವರೆಗಿನ ಮಡಿಕೇರಿ, ವೀರಾಜಪೇಟೆ ಮತ್ತು ಗೋಣಿಕೊಪ್ಪಲಲ್ಲಿರುವ ಬೀರು ಅಂಗಡಿಗಳನ್ನು ಮಡಿಕೇರಿಯಲ್ಲಿ ಅಸಿಸ್ಟೆಂಟ್ ಕಮೀಷನರವರಿಂದ ಫೆಬ್ರವರಿ ತಾ. 22 ರಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು. ಗಾಂಜ ಅಂಗಡಿಗಳನ್ನೂ ಸಹ ಸನದಿಯವರು ವೀರಾಜಪೇಟೆಯಲ್ಲಿ ತಾ.20 ರಲ್ಲೂ ಮತ್ತು ಮಡಿಕೇರಿಯಲ್ಲಿ ಫೆಬ್ರವರಿ ತಾ. 22 ರಲ್ಲೂ ಹರಾಜು ಮಾಡಲ್ಪಡುವದು.

ಹಿಂದೂದೇಶ.

ಸೈಮನ್ ಸಮಿತಿಯವರು ಬರೋಡಕ್ಕೆ ಹೋದಾಗ ಅವರಿಗೆ ಸಹಕರಿಸುವುದಕ್ಕೆ ಬರೋಡ ದಿವಾನ್‌ದಾರರ ಸುಬಂದನ್ನು ಸ್ಥಾಪಿಸಲು ಅಲ್ಲಿಯ ದಿವಾನದಾರರು ಏನನ್ನಲ್ಲ ನಿಶ್ಚೈಸಿರುತ್ತಾರೆ. ಮೀಟಿಂಗಿನಲ್ಲಿ ನಿರ್ಧರಿಸಿದ ಕಾರ್ಯವನ್ನು ನಿರ್ವಹಿಸುವುದಕ್ಕೆ ಒಂದು ಕಮಿಟಿಯು ಏರ್ಪಾಡಾಗಿದೆ. ಆದರೆ ಜನ ಸಮುದಾಯವು ಕಮಿಷನನ್ನು ಬಹಿಷ್ಕರಿಸಲಿಕ್ಕೆ ಏರ್ಪಾಡು ಮಾಡಿಕೊಂಡಿದ್ದಾರೆ.

ವಿಮಾನದಲ್ಲಿ ಕರಾಚಿಗೆ ಹೋಗಿರುತ್ತಾರೆ. ಮಾರಿಗಳ ಸ್ವಸ್ವಕ್ಕಾ, ದಂಗೆಗಾರರಿಗೂ ಅಲ್ಲಲ್ಲಿ ಸಣ್ಣ ಸಣ್ಣ ಯುದ್ಧವಾಗುತ್ತಿದೆ. ಅಮಾನುಲ್ಲಾರ ಸುಧಾರಣೆಗಳು ಜನರಿಗೆ ತೃಪ್ತಿಯಿಲ್ಲದೆ ಮಾಡಿದ್ದರಿಂದ ಪದವಿಯನ್ನು ಬಿಟ್ಟದ್ದಾಗಿದೆ.

ಲಂಡನ್ ಪಟ್ಟದ ಬೀದಿಗಳಲ್ಲಿ ನೆಲವು ಅಲ್ಲಲ್ಲಿ ಕುಸಿದು ಹೋಗಿ ಅನೇಕ ಅಪಘಾತಗಳುಂಟಾಗಿವೆ. ನೆಲದಡಿಯಿಂದ ನೀರು ಹರಿಯುವ ಟ್ಯೂಬುಗಳನ್ನು, ಮಾರ್ಗಗಳನ್ನೂ ನಾಶ ಮಾಡುತ್ತದೆ. ಒಹಳ ಹಿಂದಿನಿಂದ ನೆಲದಡಿಯಲ್ಲಿ ಬಿದ್ದುಕೊಂಡಿದ್ದ ಹಳೆಯ ಪದಾರ್ಥಗಳ ಗುಂಪು ಈಗಿನ ಆಧಾರವಾಗಿ ಭಾರವಾದ ವ್ಯಾಪಾರದ ಚಲನೆಯಿಂದ ಕುಸಿತವಾಗಿ ನೆಲವು ಕುಸಿದು ಬೀಳಲು ಕಾರಣವಾಗಿದೆಂದೂ, ನೆಲದೊಳಗಿನ ಹೊಳೆಗಳು ದೊಡ್ಡ ಕಟ್ಟಗಳನ್ನು ಮುಗುಚಿ ಹಾಕುತ್ತವೆಂದೂ ತಿಳಿದವರು ಅಭಿಪ್ರಾಯಪಡುತ್ತಾರೆ. ಕಳೆದ ಮೂರು ತಿಂಗಳಿನಲ್ಲಿ ಲಂಡನಿನಲ್ಲಿ ಇಂತಹ 17 ಅಪಘಾತಗಳೂ, ಬೇರೆ ಕಡೆ 6 ಗುಂಡಾಂತರಗಳೂ ಸಂಭವಿಸಿವೆ.

ವಿಲ್ಕಿಂಸನ್ಸ್ ಮತ್ತು ಬ್ರದರ್ಸ್,

ಬುಕ್ ಬೈಂಡರ್ಸ್, ಮಡಿಕೇರಿ.

ದರ ಸುಲಭ! ಕೆಲಸ ನಾಜೂಕು!! ಸಮಯ ಶೀಘ್ರ!!!

ಇಂಡಿಯನ್ ಲಾ ರಿಪೋರ್ಟು, ಆಲ್ ಇಂಡಿಯಾ ರಿಪೋರ್ಟರ್, ಮತ್ತು ಇನ್ನೂ ಎಲ್ಲಾ ತರದ ಪುಸ್ತಕಗಳನ್ನು ನಿಮ್ಮ ಮನ ಮೆಚ್ಚುವಂತೆ ಕ್ಯಾಲಿಕೋ ಮತ್ತು ಲೆದರ್ ಬೈಂಡ್ ಮಾಡಿ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ಮತ್ತೆ ಬಿಡಲಾರಿರಿ!

...ಳೇ ಪ್ರಾಯದಲ್ಲಿ ಇಹವನ್ನು ಬಿಟ್ಟು ಸ್ವರ್ಗ ಸೇರಿದ್ದಕ್ಕೆ ಇಲ್ಲಿ ಸೇರಿದಂಥ ಮಾನ್ಯರಾದ ಮಹಾಸಭೆಯು ವ್ಯಸನವನ್ನು ಸೂಚಿಸುತ್ತದೆ.

2. ದೇಶಾಭಿಮಾನಿಗಳಾಗಿದ್ದಂಥ ಈ ಕುಶಾಲಪ್ಪನವರ ಅಕಾಲ ಮರಣದಿಂದ ನಮ್ಮ ದೇಶವು ತುಂಬಾ ನಷ್ಟವನ್ನು ಹೊಂದುತ್ತಿದೆ.

3. ದೇಶಕಾರ್ಯಕ್ಕಾಗಿ ತಮ್ಮ ಲೌಕಿಕ ಸುಖವನ್ನು ತೊರೆದು ಈ ರೀತಿ ಸ್ವರ್ಗ ಸೇರಿದ ಶ್ರೀ. ಕುಶಾಲಪ್ಪನವರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲು ದೇವರನ್ನು ಪ್ರಾರ್ಥಿಸುತ್ತೇವೆ.

ಪಿ ಯಂ. ಮುತ್ತಣ್ಣ.
(ಅಧ್ಯಕ್ಷರು)

ಮಡಿಕೇರಿ.

ಮೋಟಿನ ವ್ಯಸನ ಸೂಚಕ ಸಭೆಯು ಇದೇ ತಾ. 13ನೇ ಆದಿತ್ಯವಾರ ಕೊಡಗು ಜಮಾನ್‌ದಾರರ ಸಂಘದ ಹಾಲ್‌ನಲ್ಲಿ ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ದೊಡ್ಡವರು, ಚಿಕ್ಕವರು ನೆರೆದಿದ್ದರು.

ಅಧ್ಯಕ್ಷರು ಕುಶಾಲಪ್ಪನವರ ಮರಣದಿಂದ ಕೊಡಗಿಗೆ ಬಹು ದೊಡ್ಡ ನಷ್ಟವು ಸಂಭವಿಸಿರುವುದೆಂದೂ, ಅವರ ಜಾಗೆಕ್ಕೆ ಅವರಷ್ಟೇ ಯೋಗ್ಯತೆಯುಳ್ಳ ಪುರುಷನು ದೊರಕುವುದು ಕಷ್ಟವೆಂದೂ, ಅವರು ತಮ್ಮ ಚಿಕ್ಕ ಪ್ರಾಯದಲ್ಲಿಯೇ ತಮ್ಮ ದೇಶಕಾರ್ಯದಿಂದಲೂ, ಸತ್ಯಾಚರಣೆಯಿಂದಲೂ ಜನ ಪ್ರೀತಿಯನ್ನು ಬಹುತರ ಸಂಪಾದಿಸಿದ್ದರೆಂದೂ, ಅವರು ಕಲ್ಪತ್ರದ

ಕಿ ಮೆರವಣಿಗೆಯಾಗಿ ಹೋಗಿ 3½ ಗಂಟೆಗೆ ಸ್ಮಶಾನಕ್ಕೆ ತಲುಪಿದೆವು. ಅಲ್ಲಿ ಕೊಡವರ ಪದ್ಧತಿಪ್ರಕಾರ ಬಾಯಿಗೆ ನೀರು ಕೊಡುವ ಮುಂತಾದ ಪದ್ಧತಿಗಳನ್ನು ಆಚರಿಸಿ ನಾಲ್ಕು ಗಂಟೆಗೆ ಶವವನ್ನು ಚಿತೆಯ ಮೇಲಿರಿಸಿದರು. ಅಲ್ಲಿಗೆ ಚಿಕ್ಕ ಪ್ರಾಯದಲ್ಲೇ ಕೊಡಗಿನ ಮುಂದಾಳಾಗಿದ್ದ ಕುಶಾಲಪ್ಪನವರ ಈ ಲೋಕದ ಗುರುತು ಮಾಯವಾಯಿತು. ರಾತ್ರಿ ಏಳು ಗಂಟೆಗೆ ಹೋಗಿ ಅವರ ದೇಹದ ಬೂದಿ ಸ್ವಲ್ಪವನ್ನು ತೆಗೆದುಕೊಂಡು ಮೆ ಪಿ ಅಚ್ಚಯ್ಯನವರೂ, ನಾನೂ ಆ ದಿನ ರಾತ್ರಿ ಟ್ರೈನಿನಲ್ಲಿ ಅಲ್ಲಿಂದ ಹೊರಟು ತಾ. 12 ರ ರಾತ್ರಿ ಕೊಡಗಿಗೆ ಬಂದು ತಲುಪಿ, ಆ ರಾತ್ರಿ ಬಸವನಪುರದ ಅವರ ಮನೆ ಬಳಿ 'ಚಾವುಂಬೊಲಿ' ಯ ಕ್ರಿಯೆಯು ನಡೆಸಲಾಯಿತು.

ಮದ್ರಾಸಿನಲ್ಲಿ ನಮ್ಮ ಕಷ್ಟಕಾಲದಲ್ಲಿ ಅಲ್ಲಿದ್ದ ಕೊಡವ ಸ್ನೇಹಿತರೆಲ್ಲರೂ (ಮುಖ್ಯವಾಗಿ ಡಾ ಭೀಮಯ್ಯನವರು ಮತ್ತು ಮ॥ ಪಿ. ಸಿ. ...

...ರಾಂದ ಚಿಕಿತ್ಸೆಯೂ, ಶವ ದಹನದ ಕ್ರಿಯೆಯೂ ಏನೊಂದೂ ತೊಂದರೆಯಿಲ್ಲದೆ ಬಹು ಸರಾಗವಾಗಿ ನಡೆಯಿತು. ಇವರೆಲ್ಲರಿಗೂ ನಮ್ಮ ವಂದನೆಗಳನ್ನು ಈ ಮೂಲಕ ಸೂಚಿಸುವವನಾಗಿದ್ದೇನೆ. ಕೊಡಗಿನಿಂದ ಜೊತೆಯಲ್ಲಿ ಹೊರಟು ಕಲ್ಕತ್ತಾ ಕಾಂಗ್ರೆಸ್ ಏಟಿಂಗನ್ನು ಮುಗಿಸಿಕೊಂಡು ಜೊತೆಯಲ್ಲಿ ವಾಪಸು ಬರಲು ಉದ್ದೇಶಿಸಿದ ನನಗೆ ನನ್ನ ಆಪ್ತ ಸ್ನೇಹಿತನನ್ನು ದಾರಿಯಲ್ಲಿ ಸುಟ್ಟು ಬೂದಿ ಮಾಡಿ ಒಬ್ಬನೇ ಹಿಂತಿರುಗುವ ದುರಾದೃಷ್ಟ ಲಭಿಸಿದಕ್ಕೆ ನಾನು ಎಷ್ಟು ವಿಷಾದಿಸಿದರೂ ಸ್ವಲ್ಪವೇ.

ಸಿ ಏ ಬೆಳ್ಯಪ್ಪ

ಸೂಚನೆ —ದಿವಂಗತ ಕುಶಾಲಪ್ಪನವರ ಛಾಯೆಯ ಸಮಯದಲ್ಲೂ ಅಂತ್ಯಕಾಲದಲ್ಲೂ ಅವರೊಂದಿಗೆ ಇದ್ದ ನನ್ನನ್ನು ಕಂಡವರೆಲ್ಲರೂ ಅವರ ಆಸನ ...

ವಿಮರ್ಶೆ.

ಸ್ವರಾಜ್ಯ ಡೈರಿ—ಪ್ರಕಾಶಕರು ಸಿ. ಎ. ಪೈ ಬ್ರದರ್ಸ್, ಉಡುಪಿ. ಬೆಲೆ ೦—೮—೦.

ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ ಸಾಲಿಯ ಈ ಡೈರಿಯಲ್ಲಿ ಪ್ರತಿಯೊಂದು ಪುಟದಲ್ಲಿಯೂ ಉತ್ತಮವಾದ ನೀತಿವಾಕ್ಯಗಳು ಸಂಗ್ರಹಿಸಿದೆ. ಮತ್ತು ಡೈರಿಯ ಮೊದಲಭಾಗದಲ್ಲಿ ಸೈಮನ್ ಸಮಿತಿ, ಕಾಂಗ್ರೆಸ್ ನೆಹರು ವರದಿ, ಬಾರ್ಡೋಲಿಯ ಸತ್ಯಾಗ್ರಹ ಮೊದಲಾದ ರಾಜಕೀಯ ಪ್ರಸಂಗವೂ, ಕರ್ನಾಟಕ ಏಕೀಕರಣದ ಮಾಹಿತಿಯೂ ಪ್ರಪಂಚ ಮತ್ತು ಹಿಂದುಸ್ಥಾನದ ತುಲನಾತ್ಮಕವಾದ ಜನಸಂಖ್ಯೆ, ಮರಣ ಸಂಖ್ಯೆ, ಉದ್ಯೋಗ ವ್ಯಾಪಾರಿಕೆ, ವಿದ್ಯೆ, ವ್ಯಾಪಾರ ಮೊದಲಾದವುಗಳ ಮಾಹಿತಿಯೂ ದಕ್ಷಿಣ ಕನ್ನಡ ಜಿ...

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಯವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ ತೂಕವೂ ಹೆಚ್ಚುವದು ಮತ್ತು ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ... 1—14—0 ಟ ಪ 0—9—0

ಕೆ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ

-2—19

ರೋಗರಿ

ಎಗ್ಯು ಮಿಕ್ಶ್ಚರ್

ಮಲೇರಿಯಾ, ಇನ್‌ಫ್ಲುಯೆಂಜಾ ನಡುಕಜ್ವರ, ಆಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ

ರೋಗರಿ ಸ್ಪ್ರಿಂಗ್ ...

ಕೆಟ್ಟುಹೋದ ರಕ್ತವನ್ನು ಶುದ್ಧಪಡಿಸುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦ ಟಪ್ಪಾಲು ವೆಚ್ಚ ಬೇರೆ

ಕರ್ನಾಟಕ ಟ್ರೇಡರ್ಸ್ ... ಲೇನ್. ... ಮುಂಬಾಯಿ.

14—3

1929 ನೇ ಇಸವಿಯ ಪಾಕೆಟ್ ಡೈರಿ ಇನಾಮ್.



ಈ ನಕ್ಷೆಯಲ್ಲಿ ಕಂಡ ಇಂಗ್ಲಿಷ್ ಮೇಡ್ ಫೌಂಟನ್ ಪೆನ್ನನ್ನು ಕೊಳ್ಳುವವರಿಗೆ ಹೊಸ ವರ್ಷದ ಪಾಕೆಟ್ ಡೈರಿ ಒಂದನ್ನು ಇನಾಮು ಕೊಡುವೆವು. ಈ ಡೈರಿಯಲ್ಲಿ ಇಂಡಿಯಾ ದೇಶದ ಎಲ್ಲಾ ಗವರ್ನರುಗಳ ಹೆಸರುಗಳೂ, ರಾಜರುಗಳ ಹೆಸರುಗಳೂ, ಇಂತಹವರಿಗೆ ಎಷ್ಟೇ ಗುಂಡುಗಳು ಹಾರಿಸಬೇಕೆಂಬುವುದು, ಟಪಾಲು ಮತ್ತು ರೈಲು ವಿಷಯಗಳೂ, ಪಂಚಾಂಗ ಸಹಿತ ಇದೆ. ಇದು ಇಂಗ್ಲಿಷ, ಕನ್ನಡ ತೆಲುಗು ಭಾಷೆಯಲ್ಲಿ ಪ್ರಿಂಟ ಆಗಿದೆ. ಪೆನ್ನಾವು ಲಂಡನ್ ಸಿಟಿಯಲ್ಲಿ ತಯಾರಾದದ್ದು.

ಕ್ರಯ ಪೆನ್ನು 1ಕ್ಕೆ ಡೈರಿ ಸಹಿತ 1—12—0

ವಿಳಾಸ—ಕೆ. ಯನ್. ರಾಧಾಕೃಷ್ಣ ಅಂಡ್ ಬ್ರದರ್ಸ್, 109. ಚೈನಾಬಜಾರ್ ರೋಡ್, ಮದರಾಸು

52—31

Telegrams "Guidance"

ಇನಾಮ್! ಇನಾಮ್!!

4 ಆಣೆ ಟಪ್ಪಾಲು ಸ್ಟಾಂಪು ಕಳುಹಿಸಿದರೆ 372 ಪುಟಗಳುಳ್ಳ ಬಹಳ ಉಪಯೋಗವಾದ ಮತ್ತು ಸುಂದರವಾದ

1929 ನೇ ಇಸವಿಯ ಡಯರಿ

ಮುಫತ್ತಾಗಿ ಕಳುಹಿಸಲ್ಪಡುವದು. ತ್ವರೆ ಮಾಡಿರಿ

52—22 ಮದನಮಂಜರಿ ಫಾರ್ಮಸಿ, 1, 94 ಚೀನಾ ಬಜಾರ್, ಮದ್ರಾಸ್.

ರೆನಾಲ್ಡ್ಸ್ ಆಫೀಸ್ ಕ್ಲಾಕ್.

ಈ ಗಡಿಯಾರಗಳು ಈ ಚಿತ್ರದಲ್ಲಿ ಕಾಣುವಂತೆಯೇ ಇರುವವು. ... ಸ್ಟಾಂಡು ಹಿತ್ತಾಳೆ, ಬೆಳ್ಳಿ ಬಂಗಾರದ ರೇಖೆಯಿಂದ ತಯಾರಾದದ್ದು. ಗಡಿಯಾರವು ಬಹು ಒಳ್ಳೆಯ ಲೀವರ್ ಮೂಮೆಂಟಿನಿಂದ ತಯಾರಾದದ್ದು. ... ಗಂಟೆಯನ್ನು ತೋರಿಸುವವು. ಇವುಗಳನ್ನು ಗೃಹ, ಅಂಗಡಿ, ರೀಡಿಂಗ್ ರೂಂ, ಸ್ಕೂಲ್ ಮತ್ತು ಮನೆಗಳಲ್ಲಿ ಇಡಲು ಬಹು ಚೆನ್ನಾಗಿದೆ. ಇಂಥಾ ಸ್ಟಾಂಡಿನ ಗಡಿಯಾರಗಳು ಇದಕ್ಕ ಮೊದಲು ಇರಲಿಲ್ಲ. ಹೊಸದಾಗಿ ಬಂದಿದೆ. ಈ ಗಡಿಯಾರಗಳಿಗೆ ಖಾತ್ರಿಯಾದ 4 ವರ್ಷ ಗ್ಯಾರಂಟಿ ಕೊಡುವೆವು. ಒಂದನ್ನು ತರಿಸಿ ನೋಡಿರಿ ಬೇಡವಾದರೆ ವಾಪಸು ತೆಗೆದುಕೊಳ್ಳುವೆವು.

ಹಿತ್ತಾಳೆಯ ಸ್ಟಾಂಡಿನದು	4—8—0
ಬೆಳ್ಳಿಯ ರೇಖೆಯದು	5—12—0
ಬಂಗಾರದ ರೇಖೆಯದು	6—1—0

ವಿಳಾಸ —ಲೀಗಲ್ ವಾಚ್ ಕಂಪೆನಿ, ಪೋ॥ ಬಾ॥ ನಂ. 243, ಮದರಾಸು

53—3

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಫೋನ್‌ಗಳೂ, ಇವುಗಳಿಗೆ ಬೇಕಾಗುವ ಸಾಮಾನುಗಳೂ, ... ಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಸ್ಟ್ಯಾಂಡ ಗಡಿಯಾರಗಳು ರೋಲ್ಡ್‌ಗೋಲ್ಡಿನ ಬೆಳ್ಳಿಯ, ನಿಕ್ಕಲ್ಲಿನ ಮತ್ತು ಚರ್ಮದ ಪಟ್ಟಿಗಳೂ ಸಹಾ ಚೀಪಾಗಿಯೂ, ಚಿಲ್ಲರೆಯಾಗಿಯೂ ಸಗಟಾಗಿಯೂ ದೊರೆಯುತ್ತವೆ. ... ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ 'ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್' ಎಂಬ ಕೈಗೆ ಕಟ್ಟುವ ಗಡಿಯಾರ



ವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕಳುಹಿಸುತ್ತೇವೆ. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.

24—7

... 1 ಬಾಟ್ಲು ಮತ್ತು 1 ಡಪ್ಪಿ ಮಾತ್ರೆಗೆ 2—1—0

೩. ಮೋಹಕರಾತ.

ಇದು ಮೂತ್ರಸ್ಥಾನದಿಂದ ಕೀವು ಬೀಳುವ ಹುಣ್ಣನ್ನು ... ಹೋಗತಕ್ಕ ಕೀವನ್ನೂ, ವ್ರಣವನ್ನೂ ಒಣಗಿಸುವದಲ್ಲದೆ, ಗುಣಪಡಿಸುತ್ತದೆ. ಡಪ್ಪಿ 1 ಕ್ಕೆ 2—8—0 3 ಕ್ಕೆ 7—0—0.

೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1 2. 3 ಅಥವಾ 4 ದಿವಸಕ್ಕೊಮ್ಮೆ ಬರುವ ಜ್ವರ, ಮಲೇರಿಯ ಇವುಗಳ ಮೇಲೆ ಖಾತ್ರಿ. ಬಾಟ್ಲಿ 1 ರ 0—12—0.

೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೬. ಇಛ್ಛಾಭೇದಿ.

ಆಯಾಸವನ್ನುಂಟುಮಾಡದ ಸುಖವಿರೇಚಕ. ಬಾಟ್ಲಿ 1 ಕ್ಕೆ 0—12—0 3 ಕ್ಕೆ 2—0—0

೭. ದಂತಕಾಂತಿ ಚೂರ್ಣ. ಡಪ್ಪಿ 1 ಕ್ಕೆ 3 ಆಣೆ.

೮. ಗಜಕರ್ಣ ಮುಲಾಮ್. ಡಪ್ಪಿ 1ಕ್ಕೆ 6 ಆಣೆ.

N B ಇವುಗಳಲ್ಲದೆ ಬೇರೆ ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಎನ್. ಗಣಪಯ್ಯ ಅಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್, ಮಂಗಳೂರು, ದ. ಕನ್ನಡ.

52—11

ವರ್ತಮಾನ ಸಂಗ್ರಹ.

ಒಳದೇಶ.

ಹುದಗೂರು ಫಾರೆಸ್ಟಿನಲ್ಲಿ ಒಂದು ಕಾಡಾನೆಯು ಕಪ್ಪಕ್ಕೆ ಬಿದ್ದದ್ದನ್ನು ಹಿಡಿದಿದ್ದಾರೆ.

ವೀರಾಜಪೇಟೆ ಸಾಹುಕಾರ್ ಯಂ. ಮಹಮ್ಮದ್ ಗೌಸ್‌ರವರು ತಾ. 14 ರಲ್ಲಿ ಮೃತರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 21 ನೇ ದಿನ ಬೆಳಿಗ್ಗೆ 9 ಗಂಟೆಗೆ ಜಮೀನ್ದಾರರ ಸಂಘದ ಹಾಲಿನಲ್ಲಿ ನಡೆಯಲಿಕ್ಕಿದೆ.

ಕೊಡಗು ಕಮೀಷನರವರು ಈ ತಾ 23 ರಲ್ಲಿ ನಾಪೋಕ್ಲಿನಲ್ಲೂ ಮತ್ತು ತಾ 28 ರಲ್ಲಿ ಭಾಗಮಂಡಲದಲ್ಲಿಯೂ ಬಿಡಾರ ಮಾಡುತ್ತಾರಾಗಿ ತಿಳಿಸಿರುತ್ತಾರೆ.

ಉಪಾಧ್ಯಾಯರ ಸಮ್ಮೇಳನದ ಪ್ರೊಸೀಡಿಂಗ್ಸ್ ನಮ್ಮ ಕೈಸೇರಿದೆ. ಆದರೆ ಈ ವಾರ ಅದನ್ನು ಪ್ರಕಟಿಸಲು ಸ್ಥಳ ಸಂಕೋಚವಾದ್ದರಿಂದ ಬರುವ ವಾರ ಪ್ರಕಟಿಸಲಾಗುತ್ತೆ.

ಫೈನಾನ್ಸ್ ಕಮಿಟಿಯವರು ಶ್ರೀಮಾನ್ ಪಾರ್ವಂಗಡ ಕುಶಾಲಪ್ಪನವರ ಮರಣಕ್ಕಾಗಿ ವ್ಯಸನವನ್ನು ಸೂಚಿಸಿ ಅವರ ಕುಟುಂಬಕ್ಕೆ ಸಹಾನುಭೂತಿಯ ಪತ್ರ ಬರೆಯಲು ತೀರ್ಮಾನಿಸಿದರು.

ತಾ 1—4—29 ರಿಂದ 31—3—30ರ ವರೆಗಿನ ಸಾರಾಯಿ ಅಂಗಡಿಗಳು ಮಡಿಕೇರಿಯಲ್ಲಿ ಅಸಿಸ್ಟಾಂಟ್ ಕಮಿಷನರವರಿಂದ ಫೆಬ್ರವರಿ ತಾ. 22 ರಲ್ಲಿ ಬಹಿರಂಗ ಹರಾಜು ಮಾಡಲ್ಪಡುತ್ತವೆ.

ಮೆ ಪಟ್ಟಮಾಡ ಪೊನ್ನಪ್ಪನವರ ಪತ್ನಿಯವರು ತನ್ನ ಕಾಯಿಲೆಕ್ಕೆ ಚಿಕಿತ್ಸೆ ಹೊಂದಲು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಂತದ ಎಂಬಲ್ಲಿಗೆ ಹೋದವರು ಈ ತಾ. 16 ನೇ ಬುಧವಾರ ರಾತ್ರಿ 12 ಗಂಟೆಗೆ ಅಲ್ಲಿಯೇ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಡಾಕ್ಟರು ಪಿ ಜಿ ಜಿ ಉನ್ನಿದನ್ ಎಂ ಬಿ ಬಿ ಎಸ್. ಬಿ ಎಸ್ ಸಿ ಇವರು ಕೊಡಗಿನಲ್ಲಿ ಸಂಚಾರ ಮಾಡುತ್ತಾ ತಾ 27 ನೇ ಆದಿತ್ಯವಾರ ಸಾಯಂಕಾಲ 6½ ಗಂಟೆಗೆ ಮಡಿಕೇರಿ ಕೌನ್ಸಿಲ್ ಚೇಂಬರಿನಲ್ಲಿ ಉಪನ್ಯಾಸ ಕೊಡುವರಾಗಿ ಕೊಡಗು ಪ್ಲಾಂಟರ್ಸ್ ಎಸೋಸಿಯೇಷನ್ನಿನ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ಬೆಂಗಳೂರು ಬಳಿ ಕೆಂಗೇರಿಯಲ್ಲಿ ಗುರುಕುಲ ಆಶ್ರಮವನ್ನು ನಡಿಸುತ್ತಾ "ಬ್ರಹ್ಮಚರ್ಯ" ಎಂಬ ಮಾಸಪತ್ರಿಕೆಯನ್ನು ನಡಿಸುವ ಶ್ರೀಯುತ ರಾಮಚಂದ್ರನ್ ಎಂಬವರು ಮಡಿಕೇರಿಗೆ ಬಂದಿರುತ್ತಾರೆ. ಇವರು ಹೈಸ್ಕೂಲ್ ಹಾಲಿನಲ್ಲಿ 'ಗುರುಕುಲ ವಿದ್ಯಾಭ್ಯಾಸ'ದ ಮೇಲೆ ತಾ. 18 ರಲ್ಲಿ ಉಪನ್ಯಾಸ ಮಾಡುತ್ತಾರಾಗಿ ತಿಳಿಯುತ್ತೇವೆ.

ಕೊಡಗಿನ ಶಾಲಾ ಇನ್ಸ್‌ಪೆಕ್ಟರಾದ ಮೆ. ಜಿ ಎ ಮಿಟ್ಸ್‌ರವರು ತಾ. 16 ಮತ್ತು 17 ರಲ್ಲಿ ಮಡಿಕೇರಿ ಇಂಗ್ಲಿಷ್ ಹೈಸ್ಕೂಲ್ ಮತ್ತು ಮೋಡೆಲ್ ಸ್ಕೂಲನ್ನು ಇನ್ಸ್‌ಪೆಕ್ಷನ್ ಮಾಡಿದನಂತರ ಶಾಲಾ ಉಪಾಧ್ಯಾಯರುಗಳೆಲ್ಲರೂ ಸೇರಿ ಅವರಿಗೆ ಒಂದು ಟೀ ಪಾರ್ಟಿಯನ್ನು ತಾ 17 ನೇ ದಿನ ಕೊಟ್ಟರು. ಇನ್ಸ್‌ಪೆಕ್ಟರ ಆಗಮನಕ್ಕಾಗಿ ಶಾಲೆಯನ್ನು ತಾ. 18ರಲ್ಲಿ ಮುಚ್ಚಿದ್ದಾರೆ.

ತಾ 1—4—29 ರಿಂದ 31—3—30ರ ವರೆಗಿನ ಸೇಂದಿ ಅಂಗಡಿಗಳನ್ನು ಅಸಿಸ್ಟಾಂಟ್ ಕಮಿಷನರವರು ಈ ಕೆಳಗೆ ನಮೂದಿಸಿರುವ ತಾರೀಖು ಮತ್ತು ಸ್ಥಳಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ. ಶನಿವಾರಸಂತೆ ಹೋಬಳಿ, ಸೋಮವಾರಪೇಟೆನಾಡು ಮತ್ತು ಫ್ರೇಜರಪೇಟೆ ಹೋಬಳಿಗಳ ಅಂಗಡಿಗಳನ್ನು ಫೆಬ್ರವರಿ ತಾ. 18ನೇ ದಿನ ಸೋಮವಾರಪೇಟೆ ತಾಲೂಕು ಕಚೇರಿಯಲ್ಲಿಯೂ, ಮಡಿಕೇರಿನಾಡು, ಸುಂಟಿಕೊಪ್ಪನಾಡು ಮತ್ತು ಭಾಗಮಂಡಲನಾಡುಗಳ ಸೇಂದಿ ಅಂಗಡಿಗಳನ್ನು ಮಡಿಕೇರಿ ಬಿಡಾರ ಬಳಿ ಫೆಬ್ರವರಿ ತಾ. 22 ರಲ್ಲಿ, ನಾಪೋಕ್ಲುನಾಡು, ವೀರಾಜಪೇಟೆನಾಡು, ಅಮ್ಮತ್ತಿನಾಡು, ಪೊನ್ನಂಪೇಟೆನಾಡು ಮತ್ತು ಶ್ರೀಮಂಗಲನಾಡುಗಳ ಸೇಂದಿ ಅಂಗಡಿಗಳನ್ನು ದಕ್ಷಿಣಕೊಡಗು ತಾಲೂಕು ಕಚೇರಿಯಲ್ಲಿ ಫೆಬ್ರವರಿ ತಾ. 20 ನೇ ದಿನ ಸಹ ಹರಾಜು ಮಾಡಲ್ಪಡುವದು.

1—4—29 ರಿಂದ 31—3—30ರ ವರೆಗಿನ ಮಡಿಕೇರಿ, ವೀರಾಜಪೇಟೆ ಮತ್ತು ಗೋಣಿಕೊಪ್ಪಲಲ್ಲಿರುವ ಬೀಡು ಅಂಗಡಿಗಳನ್ನು ಮಡಿಕೇರಿಯಲ್ಲಿ ಅಸಿಸ್ಟಾಂಟ್ ಕಮಿಷನರವರಿಂದ ಫೆಬ್ರವರಿ ತಾ 22 ರಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು. ಗಾಂಜ ಅಂಗಡಿಗಳನ್ನು ಸಹ ಹರಿಯವರು ವೀರಾಜಪೇಟೆಯಲ್ಲಿ ತಾ 20 ರಲ್ಲಿ ಮತ್ತು ಮಡಿಕೇರಿಯಲ್ಲಿ ಫೆಬ್ರವರಿ ತಾ. 22 ರಲ್ಲಿ ಹರಾಜು ಮಾಡಲ್ಪಡುವದು.

ಹಿಂದೂದೇಶ.

ಸೈಮನ್ ಸಮಿತಿಯವರು ಬರೋಡಕ್ಕೆ ಹೋದಾಗ ಅವರಿಗೆ ಸಹಕರಿಸುವುದಕ್ಕೆ ಬರೋಡ ಜಮೀನ್ದಾರರ ಸಂಘದನ್ನು ಸ್ಥಾಪಿಸಲು ಅಲ್ಲಿಯ ಜಮೀನುದಾರರು ಮೀಟಿಂಗನ್ನು ಕೂಡಿಸುತ್ತಾರೆ. ಮೀಟಿಂಗಿನಲ್ಲಿ ನಿರ್ಧರಿಸಿದ ಮಾರ್ಗವನ್ನು ನಿರ್ವಹಿಸುವುದಕ್ಕೆ ಒಂದು ಕಮಿಟಿಯು ನಿಯಮಿಸಿದೆ. ಆದರೆ ಜನ ಸಮುದಾಯವು ಕಮಿಶನನ್ನು ಬಹಿಷ್ಕರಿಸುವ ನಿರ್ಧಾರ ಮಾಡಿಕೊಂಡಿದ್ದಾರೆ.

ಒವರ್‌ಸಿ ಸರ್ಕಾರದವರು ಭಾರತೀಯರ ಹಕ್ಕುಗಳನ್ನು ಮಾರಕೊಡದೆಂದು ಅಪ್ಪಣೆ ಮಾಡಿ ಹೊರಡಿಸಿದ ತಮ್ಮ ಜಾಹೀರಾತನ್ನು ಮುದ್ರಿಸಿ ಸರಕಾರದವರ ಕೋರಿಕೆಯ ಮೇರೆ ಹಿಂದಕ್ಕೆ ತೆಗೆದುಕೊಂಡಿರುತ್ತಾರೆ. ಇದರ ಕುರಿತು ಬರ್ಮ ಗಜೆಟ್ಟಿನ ನೋಟೀಸು 'ಕ್ಷಿದ ಕೂಡಲೇ ನಗರವಾಸಿ ಸರಕಾರದವರು ಹಿಂದಿ ಪ್ರಚಾರ ಸಂಘ ಮತ್ತು ಇನ್ನಿತರ ಪುಸ್ತಕ ಪ್ರಚಾರವು ಕೃಪೆಯಿಂದ ಪ್ರೋತ್ಸಾಹಿಸಿದರು. ಜಪ್ತು ಮಾಡಿದ ಪುಸ್ತಕಗಳ ಪ್ರತಿಗಳನ್ನು ಮರಳಿ ಕೊಡುವಂತೆ ಅಪ್ಪಣೆ ಮಾಡಿದ ವರ್ತಮಾನವಾಗಿ ತಿಳಿದು ಬಂದಿದೆ.

ಗುಜರಾತ ಕಾಲೇಜಿನ ಪ್ರಿನ್ಸಿಪಾಲರು ಸೈಮನ್ ಸಮಿತಿಯು ಬೊಂಬಾಯಿಗೆ ಬಂದ ದಿವಸ ಕಾಲೇಜಿಗೆ ಬಾರದೆ ಇದ್ದ ವಿದ್ಯಾರ್ಥಿಗಳು "ಫೀಸು" ಕೊಟ್ಟು ಪರೀಕ್ಷೆಗೆ ಕುಳಿತು ಕೊಳ್ಳಬೇಕೆಂದು ವಿಧಿಸಿದುದಕ್ಕೆ ಗುಜರಾತ್ ಪಟ್ಟದ ಒಬ್ಬರು ದಾ ಕಸ್ತೂರಿಂಗರವರ ಅಧ್ಯಕ್ಷತೆಯಲ್ಲಿ ಮೀಟಿಂಗಿನಲ್ಲಿ ಸೇರಿದ ಪ್ರಿನ್ಸಿಪಾಲರ ವರ್ತನೆಯು ಅಕ್ಷಮ್ಯವಾದುದೆಂದು ಠರಾವು ಪಾಸು ಮಾಡಿದರು. ಪ್ರಿನ್ಸಿಪಾಲರು "ಫೀಸು" ಎಂಬದಾಗಿ ತಪ್ಪು ಹಣದಿಂದ ಒಬ್ಬನಿಗೆ ಕೇಳುವುದಾಗಿದೆ ಎಂದು ಇವರ ಅಭಿಪ್ರಾಯ. ವಿದ್ಯಾರ್ಥಿಗಳು ಕಾಲೇಜಿಗೆ ಹೋಗದ ಮುಷ್ಕರ ಹಿಡಿದಿದ್ದಾರೆ. ಮಹಾತ್ಮ ಗಾಂಧಿಯವರು ಇವರಿಗೆ ಉತ್ತೇಜನ ಕೊಡುತ್ತಿದ್ದಾರೆ.

ಹೊಸ ಡೆಲ್ಲಿಯಿಂದ 'ಟ್ರಿಬ್ಯೂನ' ಪತ್ರಿಕೆಯ ಬಾತ್ಮಿದಾರರೊಬ್ಬರು ಆ ಪತ್ರಿಕೆಗೆ 'ವೃಸರಾಯರುಗಳು ರಜೆಯಲ್ಲಿ ಇಂಗ್ಲಂಡಿಗೆ ಹೋಗುವ ಮುಂಚೆ ಮಹಾತ್ಮ ಗಾಂಧಿ, ಪಂಡಿತ ಮೋತೀಲಾಲ್ ನೆಹರು, ಸರ್. ತೇಜಬಹದ್ದೂರು ಸಪ್ರು, ಮಿಸೆಸ್ ಬೆಸೆಂಟ್ ಮತ್ತು ಇತರ ಕೆಲವು ಸ್ವರಾಜ್ಯದ ಮುಂದಾಳುಗಳನ್ನು ಕರೆಸಿ ಮುಂದೆ ಹಿಂದೂದೇಶಕ್ಕೆ ಕೊಡತಕ್ಕ ರಾಜಕೀಯ ಸುಧಾರಣೆಗಳ ವಿಷಯದಲ್ಲಿ ಅವರ ಅಭಿಪ್ರಾಯವನ್ನು ಚರ್ಚಿಸಬಹುದು. ಈ ಸಂಗತಿ ನಿಜವಾಗಿಯೂ ಈ ಮೊದಲೇ ಆಲೋಚನೆಯಲ್ಲಿದೆ. ಆದ್ದರಿಂದ ಈ ವಿಷಯ ಇಂಡಿಯಾ ಆಫೀಸಿನ ಸಂಗಡ ಈ ದೇಶದ ಗವರ್ನಮೆಂಟ ಪತ್ರವ್ಯವಹಾರ ನಡೆಯುತ್ತಿದ್ದು ಅದೇನೂ ರಹಸ್ಯವಾಗಿರುವದಿಲ್ಲ' ಎಂಬದಾಗಿ ಬರೆದಿದ್ದಾರೆ.

ಸ್ವಾಮಿ ಸಮಿತಿಯವರು ಕಲ್ಕತ್ತಾದಲ್ಲಿ ರಾಜಕೀಯ ಸುಧಾರಣೆಯ ಬಗ್ಗೆ ವಿಷಯ ಸಂಗ್ರಹದಲ್ಲಿ ತೊಡಗಿದ್ದಾರೆ. ಹಲವು ಉದ್ಯೋಗಸ್ಥರನ್ನು ವಿಚಾರ ಮಾಡಿದರು. ಸಮಿತಿಯವರ ವಿಷಯ ಸೂಚನೆಯನ್ನು ಕೊಡತಕ್ಕವರನ್ನು ಬಹಿಷ್ಕಾರ ಹಾಕಬೇಕೆಂಬ ನಿಶ್ಚಯವನ್ನು ಪೂನದ ಕಕ್ಷಿತ್ವದ ಜನರು ಮೀಟಿಂಗುಗಳನ್ನು ಮಾಡಿ ತೀರ್ಮಾನಿಸಿದರು. ಇವುಗಳ ಸ್ಥಾನದಲ್ಲಿ ಶ್ರೀ ಸನಾಗುಪ್ತರು ಸರಕಾರದವರು ಶಾಸ್ತ್ರೀಯ ಸಹಿಸಿ ಕೇಳುವ ಮಾರ್ಗವನ್ನು ಕೊಡದಿದ್ದರೆ ಹಿಂದೂಸ್ಥಾನವು ತೊಂದರೆ ಕೊಡುವುದನ್ನು ನಿಲ್ಲಿಸಿದಿಲ್ಲವೆಂದು ಹೇಳಿ ಆದರು ಸಂವಾದದಲ್ಲಿ ಈ ತರದ ಹೋರಾಟಕ್ಕೆ ಶಾಸ್ತ್ರೀಯ ಸಹಿಸಿ ಸ್ವರದ ಸಲುವಾಗಿ ಎಲ್ಲರೂ ಸಿದ್ಧರಾಗಬೇಕೆಂದು ಜನರನ್ನು ಹುರಿದುಂಬಿಸಿದರು.

ವಿದೇಶ.

ಅಮೆರಿಕಾದೇಶದ ನ್ಯೂಯಾರ್ಕ್ ಪಟ್ಟದ ಒಂದು ಆಸ್ಪತ್ರೆಯಲ್ಲಿ ನೇತ್ರವೈದ್ಯರು ಕುರುಡನಾದ ಒಬ್ಬ ಮನುಷ್ಯನಿಗೆ ಮತ್ತೊಬ್ಬನ ಕಣ್ಣನ್ನು ಇಟ್ಟು ಅವನಿಗೆ ದೃಷ್ಟಿದಾನವನ್ನು ಮಾಡಿರುವರಂತೆ! ಹುಟ್ಟು ಕುರುಡನಾದ ಆ ಮನುಷ್ಯನು ಈಗ ಹತ್ತು ಅಡಿಗಳ ದೂರದಲ್ಲಿರುವ ವಸ್ತುಗಳನ್ನು ಸ್ಪಷ್ಟವಾಗಿ ನೋಡುವನಂತೆ!! ಆಶ್ಚರ್ಯ!!!

ಅಫಘಾನಿಸ್ಥಾನದ ದೊರೆಯಾದ ಅಮಾನುಲ್ಲಾರವರು ಸಿಂಹಾಸನವನ್ನು ತಮ್ಮ ಅಣ್ಣನಾದ ಇನಾಯತ್ ಉಲ್ಲಾರವರಿಗೆ ಬಿಟ್ಟು ಕೊಟ್ಟಿರುತ್ತಾರೆ. ಪ್ರಿನ್ಸ್ ಇನಾಯತುಲ್ಲಾರವರು ಆ ಪದವಿಗೆ ಯೋಗ್ಯರಾಗಿದ್ದಾರೆ. ಅಮಾನುಲ್ಲಾರವರು ಅಕಾಲ ಪದಪದದಲ್ಲಿ ಕಂದಹಾರಕ್ಕೆ ಹೋಗಿರುತ್ತಾರೆ. ದಂಗೆಗಳ ಸೈನ್ಯಕ್ಕೂ, ದಂಗೆಗಾರರಿಗೂ ಅಲ್ಲಲ್ಲಿ ಸಣ್ಣ ಸಣ್ಣ ಯುದ್ಧ ನಡೆಯುತ್ತಿದೆ. ಅಮಾನುಲ್ಲಾ ರವರ ಹೊರಡಿಸಿದ ಸುದ್ದಿ ತೃಪ್ತಿಯಿಲ್ಲದ ಮಾಡಿದ್ದರಿಂದ ಸಿಂಹಾಸನ ಬಿಟ್ಟಿದ್ದಾಗಿದೆ.

ಲಂಡನ ಪಟ್ಟದ ಬೀದಿಗಳಲ್ಲಿ ನೆಲದ ಅಡಿಯಲ್ಲಿ ಕೊಳವೆ ಹೋಗಿ ಅನೇಕ ಅನುಕೂಲತೆಗಳು ಏರ್ಪಡಿಸಿವೆ. ನೆಲದಡಿಯಿಂದ ನೀರು, ಟೆಲಿಫೋನು, ಆಫೀಸುಗಳನ್ನು ಮನೆಗಳನ್ನೂ ಪ್ರವಹಿಸುತ್ತದೆ. ಒಳಗೆ ಹಿಂದಿನಿಂದ ನೆಲದಡಿಯಲ್ಲಿ ಒಟ್ಟುಗೂಡಿದ್ದ ಹಾಳು ಪದಾರ್ಥಗಳ ಗುಂಪು ಈಗ ಅನವಶ್ಯವಾಗಿ ಇರುವ ವ್ಯಾಪಾರದ ಜಲನಿಧಿಯಿಂದ ಕಂಪಿತವಾಗಿ ನೆಲವು ಕುಸಿದ ಸ್ಥಳಗಳು ಕಾಣಲಾಗಿವೆಯೆಂದು, ನೆಲದೊಳಗಿನ ಹೊಳೆಗಳು ದೊಡ್ಡ ಕಟ್ಟಡಗಳನ್ನು ಮುಗುಚಿ ಹಾಕುತ್ತವೆಯೆಂದೂ ತಿಳಿದವರ ಅಭಿಪ್ರಾಯವಾಗಿರುತ್ತದೆ. ಕಳೆದ ಮೂರು ತಿಂಗಳಲ್ಲಿ ಲಂಡನಿನಲ್ಲಿ ಇಂತಹ 17 ಅಪಘಾತಗಳೂ, ಬೇರೆ ಕಡೆ 6 ಗಂಡಾಂತರಗಳೂ ಸಂಭವಿಸಿವೆ.

ವಿಲ್ಲಿಯಂ ಮತ್ತು ಬ್ರದರ್ಸ್,

ಬುಕ್ ಬೈಂಡರ್ಸ್, ಮಡಿಕೇರಿ.

ನಂತ ಸುಳ್ಳ! ಕೇಳಿ ಬಿಡಿರಿ!! ನಮ್ಮ ತಿಳ್ಳಿ!!!

ಇಂಗ್ಲೆಂಡ್ ಲಾ ರಿಪೋರ್ಟು, ಆಲ್ ಇಂಡಿಯ ರಿಪೋರ್ಟರ್, ಮತ್ತು ಇನ್ನು ಎಲ್ಲಾ ತರದ ಪುಸ್ತಕಗಳನ್ನು ನಿಮ್ಮ ಮನ ಮೆಚ್ಚುವಂತೆ ಕ್ಯಾಲಿಕೋ ಮತ್ತು ಲೆದರ್ ಬೈಂಡ್ ಮಾಡಿ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ಮತ್ತೆ ಬಿಡಲಾರಿರಿ!

"WANTED"

Gentlemen of influence and position as dairy Managers to open two Dairies for Mercara and Virajpet on a Salary of Rs 50—5—100 per mensem.

Applicants are required to deposit Rs 500/- towards 50 qualification shares and give property security of Rs 2000/- and those who can sell 500 fully paid up shares of the Company only need apply for particulars to:—

The Organising Inspector,
The Mysore Agricultural Dairy Farm Company Limited,
2—2 P. O. Eranhipalam, Calicut.

ವಿನಂತಿ.

ನಮ್ಮ ನ್ಯಾಯವಿಧಾಯಕ ಸಭೆಯ ಮೆಂಬರುಗಳಲ್ಲೊಬ್ಬರಾಗಿದ್ದು ದೇಶಸೇವೆಯೇ ಈಶಸೇವೆಯೆಂಬ ಉನ್ನತ ತತ್ವವನ್ನರಿತು ತನ್ನ ತನುವನ್ನೇ ದೇಶಕ್ಕಾಗಿ ಅರ್ಪಿಸಿದ ಶ್ರೀಮಾನ್ ಪಾರ್ವಂಗಡ ಕುಶಾಲಪ್ಪನವರ ಹೆಸರನ್ನು ಚಿರಸ್ಮರಣೀಯವಾಗಿ ಮಾಡುವದು ಕೃತಜ್ಞರಾದ ನಮ್ಮೆಲ್ಲರ ಕರ್ತವ್ಯಗಳಲ್ಲೊಂದಾದ್ದರಿಂದ ಇದೇ ತಾ 21ನೇ ಸೋಮವಾರ ದಿನ ಅಪರಾಹ್ನ 2 ಗಂಟೆಗೆ ಪೊನ್ನಂಪೇಟೆ ಪೀಸ್ ಕ್ಲಬ್ಬಿನಲ್ಲಿ ಮ. ರಾ. ಶ್ರೀ ಅಜ್ಜಿಕುಟ್ಟೀರ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸ್ಮಾರಕ ನಿಧಿಯನ್ನೇರ್ಪಡಿಸುವ ಉದ್ದಿಶ್ಯ ಸಭೆ ಸೇರಲು ನಿಶ್ಚಯಿಸಲಾದ್ದರಿಂದ ದೇಶೀಯರಾದ ತಮ್ಮೆಲ್ಲರ ಆಗಮನವನ್ನೂ, ಸಹಾನುಭೂತಿಯನ್ನೂ ಈ ಮೂಲಕ ವಿನಯ ಪೂರ್ವಕ ಕೋರಲಾಗಿದೆ.

1. ಕೊಳ್ಳಿಮಾಡ ಕರುಂಬಯ್ಯ.
ತಾ 17—1—1929 2. ಹೆಚ್. ಆರ್. ಕೃಷ್ಣಯ್ಯ.
3. ಐಮ್ಮುಡ ಮಾದಪ್ಪ.
4. ಅಜ್ಜಮಾಡ ಮಾದಪ್ಪ.
5. ಪುತ್ತರಿರ ಮುದ್ದಯ್ಯ.

ಸಂತಾಪ ಮೀಟಿಂಗುಗಳು.

ವೀರಾಜಪೇಟೆ.

ಮುಚಿನಾಡ್ಲುನಾಡು ಬೆಳ್ಳುನಾಡಿನ ಜನರು ಈ ದಿನ ವೀರಾಜಪೇಟೆಯಲ್ಲಿ ಮೆ. ಮಾಚಿಮಾಡ ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಈ ದೇಶಕ್ಕೆ ಪುತ್ರರತ್ನದಂತಿದ್ದ ಮೆ ಪಾರ್ವಂಗಡ ಕುಶಾಲಪ್ಪನವರ ಅಕಾಲ ಮರಣಕ್ಕೆ ತಮ್ಮ ಸಂತಾಪವನ್ನು ಸೂಚಿಸುತ್ತದೆ.

ದಿವಂಗತರ ಆತ್ಮಕ್ಕೆ ಶಾಂತಿಯನ್ನು ಭಗವಂತನು ದಯಪಾಲಿಸಲಿ ಎಂದು ಈ ಮೀಟಿಂಗ್ ಪ್ರಾರ್ಥಿಸುತ್ತದೆ.

ಇದರ ನಕಲನ್ನು ದಿವಂಗತರ ಕುಟುಂಬಕ್ಕೂ, ಪತ್ರಿಕೆಗೂ ಕಳುಹಿಸಲು ಮೆ. ಕೆ ಪಿ. ಚೆಣ್ಣಪ್ಪನವರಿಗೆ ಅಧಿಕಾರ ಕೊಟ್ಟಿದೆ.

ಯಂ ಉತ್ತಯ್ಯ,
(ಅಧ್ಯಕ್ಷರು)

ಮೂನಾಡು.

1 ಸ್ವದೇಶಾಭಿಮಾನದಿಂದಲೇ ಪರಿಪೂರ್ಣಕ್ಕಾ ಇದ್ದು ರಾಜಕೀಯ ವಿಚಾರದ ಬಗ್ಗೆ ಕಲ್ಕತ್ತಾ ಕಾಂಗ್ರೆಸ್ಸಿಗೆ ಹೋದಂಥ ಶ್ರೀ. ಪಾರ್ವಂಗಡ ಕುಶಾಲಪ್ಪನವರು ವಾಪಸು ಬರುವಾಗ್ಗೆ ಮದ್ರಾಸಿನಲ್ಲಿ ನಿರೀಕ್ಷಣೆಯಿಲ್ಲದ ಕಾಯಿಲೆಕ್ಕೆ ತುತ್ತಾಗಿ ಅದರ ಏಳೆ ವ್ಯಾಧಿಯಲ್ಲಿ ಇಹವನ್ನು ಬಿಟ್ಟು ಸ್ವರ್ಗ ಸೇರಿದ್ದಕ್ಕೆ ಇಲ್ಲಿ ಸೇರಿದಂಥ ಮೂನಾಡು ಮಹಾಸಭೆಯು ವ್ಯಸನವನ್ನು ಸೂಚಿಸುತ್ತದೆ.

2. ದೇಶಾಭಿಮಾನಿಗಳಾಗಿದ್ದಂಥ ಈ ಕುಶಾಲಪ್ಪನವರ ಅಕಾಲ ಮರಣದಿಂದ ನಮ್ಮ ದೇಶವು ಬಹಳ ನಷ್ಟವನ್ನು ಹೊಂದುತ್ತಿದೆ.

3 ದೇಶಕಾರ್ಯಕ್ಕಾಗಿ ತಮ್ಮ ಲೌಕಿಕ ಸುಖವನ್ನು ತೊರೆದು ಈ ರೀತಿ ಸ್ವರ್ಗ ಸೇರಿದ ಶ್ರೀ. ಕುಶಾಲಪ್ಪನವರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲು ದೇವರನ್ನು ನಾವು ಪ್ರಾರ್ಥಿಸುತ್ತೇವೆ.

ಪಿ ಯಂ. ಮುತ್ತಣ್ಣ,
(ಅಧ್ಯಕ್ಷರು)

ಮಡಿಕೇರಿ.

ಮೇಲಿನ ವ್ಯಸನ ಸೂಚಕ ಸಭೆಯು ಇದೇ ತಾ. 13ನೇ ಆದಿತ್ಯವಾರ ಕೊಡಗು ಜಮೀನ್ದಾರರ ಸಂಘದ ಹಾಲಿನಲ್ಲಿ ರಾವ್ ಬಹದ್ದೂರ್ ಕೂಳಿರಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ದೊಡ್ಡವರು, ಚಿಕ್ಕವರು ನೆರೆದಿದ್ದರು.

ಅಧ್ಯಕ್ಷರು ಕುಶಾಲಪ್ಪನವರ ಮರಣದಿಂದ ಕೊಡಗಿಗೆ ಒದಗಿದ ನಷ್ಟವನ್ನು ಸೂಚಿಸುತ್ತಾ ಇಂದೂ, ಅವರ ಜಾಗಕ್ಕೆ ಇನ್ನೊಬ್ಬ ಯೋಗ್ಯತೆಯುಳ್ಳ ಪುರುಷನು ದೊರಕುವುದು ಕಷ್ಟವೆಂದೂ, ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ದೇಶಸೇವೆಯಿಂದಲೂ, ಸತ್ಯಾಚರಣೆಯಿಂದಲೂ ಜನಪ್ರೀತಿಯನ್ನು ಬಹಳ ಸಂಪಾದಿಸಿದ್ದರೆಂದೂ, ಅವರು ಕಲ್ಕತ್ತದ

ದಾಸ್ಪ್ರ ಸಭೆಗೆ ಹೋಗಿ ಕಾಶಿ, ಪ್ರಯಾಗ, ಗಯ ಇತ್ಯಾದಿ ಕ್ಷೇತ್ರಗಳ ಯಾತ್ರೆಗಳನ್ನು ತೀರಿಸಿಕೊಂಡು ತಮ್ಮೂರಿಗೆ ಹಿಂತಿರುಗುವಾಗ ರೋಗಪೀಡಿತರಾಗಿ ಮದ್ರಾಸಿಗೆ ಬಂದು ಅಲ್ಲಿಯ ಜನರಲ್ ಆಸ್ಪತ್ರೆಯಲ್ಲಿ ಒಂದುವಾರ ತನಕ ಒಳ್ಳೇ ವೈದ್ಯರ ಚಿಕಿತ್ಸೆಗೊಳಪಟ್ಟರೂ ನಮ್ಮೆಲ್ಲರ ದುರಾದೃಷ್ಟದಿಂದ ಪರಲೋಕವನ್ನೈದಿದರೆಂದೂ ಹೇಳಲು ವಿಷಾದವಾಗುತ್ತದೆಂದರು.

ಆ ಮೇಲೆ ಶ್ರೀ. ಪಂದ್ಯಂಡ ಬೆಳ್ಯಪ್ಪನವರು ದಿವಂಗತ ಕುಶಾಲಪ್ಪನವರು ದೇಶಕ್ಕೆ ಮಾಡಿದ ಸೇವೆಯನ್ನೂ, ಅವರು ಕಾಶಿಯಾತ್ರೆ ಮಾಡಿದ ಕಾಲದಲ್ಲೂ, ಕಾಂಗ್ರೆಸ್ ಸಮಯದಲ್ಲೂ, ತದನಂತರ ಮದರಾಸಿನಲ್ಲಿ ಸಂಭವಿಸಿದ ಅವರ ಮರಣಪರ್ಯಂತರ ಅವರ ದೇಹಾನಾರೋಗ್ಯ ಮತ್ತು ಆ ಅವಸ್ಥೆಯಲ್ಲಿಯೂ ಅವರು ದೇಶೋದ್ಧಾರಕ್ಕಾಗಿ ಬೋಧಿಸುತ್ತಿದ್ದ ಮಾತುಗಳು, ಅವರ ಅಂತ್ಯಕಾಲದ ಸ್ಥಿತಿ ಇವುಗಳನ್ನೂ ಎಲ್ಲರ ಅಂತಃಕರಣವು ಕರಗುವಂತೆ ವಿವರಿಸಿ ಹೇಳಿದರು.

ಇವರನಂತರ ಶ್ರೀ. ಸಿ. ಯಂ. ಕುಶಾಲಪ್ಪನವರು ಪರಂಧಾಮವನ್ನೈದಿದ ಕುಶಾಲಪ್ಪನವರಿಗೂ, ತಮಗೂ ಇದ್ದ ಪರಿಚಯ, ಸ್ನೇಹ, ಅವರ ಸ್ವಭಾವ, ಓದುಗಾರಿಕೆಯಲ್ಲಿ ಹಿರಿಯತನ, ಆಟಗಳಲ್ಲಿನ ಆಸಕ್ತಿ, ಬೆಂಗಳೂರಿನಲ್ಲಿ ಅವರು ಸಂಪಾದಿಸಿದ ಕೀರ್ತಿ ಇವನ್ನು ಕುರಿತು ಮಾತಾಡಿ, ಅವರ ಒಂದು ಭಾವಚಿತ್ರವನ್ನು ಹೈಸ್ಕೂಲಿನಲ್ಲಿ ಇಡುವಂತೆ ಸೂಚಿಸಿದರು.

ಪೊನ್ನಂಪೇಟೆ ಶಾರದಾಶ್ರಮದ ಸ್ವಾಮಿ ಶಾಂಭವಾನಂದರು ಕುಶಾಲಪ್ಪನವರ ಮರಣದಿಂದ ತಾನೊಬ್ಬ ಅತ್ಯಂತ ಶ್ರೇಷ್ಠ ಮಿತ್ರನನ್ನು ಕಳಕೊಂಡೆನೆಂದೂ, ಅವರು ಆಶ್ರಮದ ಏಳಿಗೆಯಲ್ಲಿ ವಿಶೇಷ ಆಸಕ್ತಿಯನ್ನು ತೋರಿಸುತ್ತಿದ್ದುದಲ್ಲದೆ, ದ್ರವ್ಯ ಸಹಾಯವನ್ನೂ ಮಾಡುತ್ತಿದ್ದರೆಂದೂ ಅತಿ ದುಃಖದಿಂದ ಹೇಳಿದರು.

ಶ್ರೀ ಯನ್. ಮುದ್ದಪ್ಪನವರು ದಿವಂಗತರ ಸಂಬಂಧವಾಗಿ ಅವರ ಆತ್ಮಕ್ಕೆ ಶಾಂತಿಯು ದೊರೆಯಲೆಂದೂ, ಅವರ ಸಂಸಾರಕ್ಕೂ, ಬಂಧುಬಾಂಧವರಿಗೂ ಈ ಸಮಯದಲ್ಲಿ ಸಂಭವಿಸಿರುವ ಅಪಾರವಾದ ದುಃಖದಲ್ಲಿ ತಾವೆಲ್ಲರೂ ಭಾಗಿಗಳಾಗಿದ್ದೇವೆಂಬ ಕೆಳಗೆ ಸೂಚಿಸಿರುವ ಠರಾವನ್ನು ಸಭೆಯ ಮುಂದಿಟ್ಟು, ಕುಶಾಲಪ್ಪನವರಂತ ಉಜ್ವಲ ದೇಶಭಕ್ತರನ್ನು ನಾವು ಕಳಕೊಂಡದ್ದರಿಂದ ನಮ್ಮ ದೇಶವು ತಲೆಯಿಲ್ಲದ ಮುಂಡದಂತಾಯಿತೆಂದೂ, ಅವರಿಗೆ ಜಾತಿವ್ಯತ್ಯಾಸದ ಭಾವನೆಯೇ ಇರಲಿಲ್ಲವೆಂಬುದನ್ನು ಅವರು ಮಾಡಿದ ಕೆಲಸದ ಒಂದು ಉದಾಹರಣೆಯಿಂದ ಬಲಪಡಿಸಿ, ಅವರ ಸೌಜನ್ಯ, ಸಚ್ಛೀಲ, ಸುಜ್ಞಾನ ಇವುಗಳನ್ನು ಹೊಗಳಿ, ಅವರ ಸ್ಥಾನಕ್ಕೆ ಅವರಷ್ಟೇ ಯೋಗ್ಯನಾದ ಮುಂದಾಳು ದೊರಕುವುದು ಅಸಂಭವವೆಂದೂ ನುಡಿದರು.

ಆ ಮೇಲೆ ಶ್ರೀ. ಡಿ. ಯಂ. ಸಿದ್ದಲಿಂಗಯ್ಯನವರು ದಿವಂಗತರಾದ ಕುಶಾಲಪ್ಪನವರಿಗೂ, ತಮಗೂ ಇದ್ದ ಪರಿಚಯ, ಅವರ ಉದಾರ ಸ್ವಭಾವ, ಉಪಾಧ್ಯಾಯರಿಗೆ ಅವರ ಮೇಲಿದ್ದ ಪ್ರೀತಿ, ಅವರಿಗೆ 20—30 ರ ಗಟ್ಲೆ ಸಿಗುತಿದ್ದ ಪುಸ್ತಕಗಳ ಬಹುಮಾನ, ಅವರ ವಾಗ್ಝರಿ, ತರಗತಿಯಲ್ಲಿ ಉಪಾಧ್ಯಾಯರು ಅವರನ್ನು ಮಾದರಿ ಹುಡುಗನನ್ನಾಗಿ ಎತ್ತಿಹಿಡಿಯುತ್ತಿದ್ದ ರೀತಿ, ಈಚೆಗೆ ತಮ್ಮಿಬ್ಬರಿಗಿದ್ದ ಪ್ರೇಮ ಇವುಗಳನ್ನು ಕುರಿತು ಪ್ರಸ್ತಾಪಿಸಿ ಠರಾವನ್ನು ಪುಷ್ಟೀಕರಿಸಿದರು.

ಅನಂತರ ಶ್ರೀ. ಸಿ. ಯನ್. ವೆಂಕಪ್ಪಯ್ಯನವರು ದಿವಂಗತರ ಗುಣ, ಅವರು ಮಾಡಿರುವ ದೇಶಸೇವೆ, ಅವರಿಂದ ತಮಗೆ ಲಭಿಸಿದ ಲಾಭ, ಅವರ ಮರಣದಿಂದ ಕೊಡಗಿಗೆ ಮಾತ್ರವಲ್ಲ ಕರ್ನಾಟಕ ಪ್ರಾಂತ್ಯಕ್ಕೂ, ಸಮಗ್ರ ಭರತಖಂಡಕ್ಕೂ ಉಂಟಾದ ನಷ್ಟ, ಯುವಕಾಂದೋಲನದಲ್ಲಿ ಅವರ ಸೇವೆ, ಸ್ಥಳೀಯ ನ್ಯಾಯನಿರ್ಣಯ ಸಭೆಯಲ್ಲಿ ಅವರು ಮಾಡಿರುವ ಕೆಲಸ, ಅವರ ವಿಶ್ವಬಂಧುತ್ವ ಇವುಗಳನ್ನು ಕುರಿತು ವಿಸ್ತಾರವಾಗಿ ಮಾತಾಡಿ, ಅವರು ಹಿರಿಯರಿಗೂ, ಕಿರಿಯರಿಗೂ ಮಾದರಿಯಾಗಿದ್ದರೆಂದೂ, ಅವರು ಮಾಡದೆ ಬಿಟ್ಟಿರುವ ದೇಶಕಾರ್ಯವನ್ನು ಕೈಕೊಳ್ಳುವ ಭಾರವು ಯುವಕರ ಮೇಲೆ ಬಿದ್ದಿದೆಯೆಂದೂ ನುಡಿದು, ಠರಾವನ್ನು ಅನುಮೋದಿಸಿದರು.

ಇಷ್ಟರಲ್ಲಿ ಮಿಸೆಸ್ ಕೊಡಂದೆರ ತಿಮ್ಮಯ್ಯನವರು—" ಮೆ. ಪಿ. ಕುಶಾಲಪ್ಪನವರ ಅಕಾಲ ಮರಣವನ್ನು ಕೇಳಿ ನಮಗೆ ಬಹಳ ದುಃಖ ಉಂಟಾಗಿದೆ. ಅವರು ಬಹು ಉಪಯುಕ್ತ ಕೊಡವರಾಗಿದ್ದರು. ದೇಶದ ಉನ್ನತಿಗಾಗಿ ಬಹಳ ಕಷ್ಟಪಟ್ಟು ಕೆಲಸಮಾಡಿದರು. ತುಂಬಾ ಮೂಲ ಅಭಿಪ್ರಾಯಗಳುಳ್ಳ ಒಳ್ಳೇ ಭಾಷಣಕಾರರಾಗಿದ್ದರು. ಅವರ ಚಿಕ್ಕ ವಯಸ್ಸಿನ ಮರಣದ ದುಃಖದಲ್ಲಿ ನಾವೆಲ್ಲರೂ ಭಾಗಿಗಳಾಗಿದ್ದೇವೆಂಬುದನ್ನು ಅವರ ಕುಟುಂಬಕ್ಕೆ ದಯವಿಟ್ಟು ತಿಳಿಸಿರಿ. ಅನಾನುಕೂಲದಿಂದ ಮೀಟಿಂಗಿಗೆ ಬರಲಿಕ್ಕಾಗಲಿಲ್ಲ ' ಎಂದು ಬರೆದು ಕಳುಹಿಸಿದ ಪತ್ರವು ಓದಲಾಯಿತು.

ನಂತರ ಮೆ. ಮುದ್ದಪ್ಪನವರು ಸೂಚಿಸಿದ ಈ ಕೆಳಗಿನ ಠರಾವನ್ನು ಎಲ್ಲರೂ ಎದ್ದುನಿಂತು ಮಂಜೂರುಮಾಡಿದರು. 'ಮಡಿಕೇರಿ ನಿವಾಸಿಗಳ ಪಬ್ಲಿಕ್ ಮೀಟಿಂಗಿನಲ್ಲಿ ನೆರೆದು ದೇಶಸೇವಾ ನಿರತರಾಗಿದ್ದ ಮ. ರಾ. ಶ್ರೀ. ಪಾರ್ವಂಗಡ ಕುಶಾಲಪ್ಪನವರು ಚಿಕ್ಕಪ್ರಾಯದಲ್ಲಿ ಮೃತರಾದದ್ದಕ್ಕೆ ತಮ್ಮ ವ್ಯಸನವನ್ನು ಸೂಚಿಸುತ್ತಾರೆ. ಮತ್ತು ಅವರ ಕುಟುಂಬಕ್ಕೆ ಸಹಾನುಭೂತಿಯನ್ನು ಸೂಚಿಸಿ, ಅವರ ಜೀವಾತ್ಮಕ್ಕೆ ದೇವರು ಶಾಂತಿಯನ್ನೀಯಲಿ ಎಂತ ಈ ಸಭೆಯು ಪ್ರಾರ್ಥಿಸುತ್ತದೆ."

ಮದ್ರಾಸು.

ತಾ. 12—1—29ರಲ್ಲಿ ಮದ್ರಾಸಿನ ಕೊಡಗರೆಲ್ಲರೂ ಮ. ರಾ. ಶ್ರೀ. ಕೊಂಗಂಡ ಅಚ್ಚಯ್ಯನವರ ಸದನದಲ್ಲಿ ಪಾರ್ವಂಗಡ ಕುಶಾಲಪ್ಪನವರ ಅಕಾಲ ಮರಣವನ್ನು ಕುರಿತು ಒಂದು ಸಭೆ ಸೇರಿದರು. ಕುಶಾಲಪ್ಪನವರು ಕಾಲಾಧೀನವಾದುದು ದೇಶಕ್ಕೆ ಕುಂದು ಎಂದೂ, ಅವರ ಸಂಸಾರದ ದುಃಖದಲ್ಲಿ ತಾವು ಭಾಗಿಗಳೆಂದೂ ಮ. ರಾ. ಶ್ರೀ. ಕಂಬೀರಂಡ ಗಣಪತಿಯವರು ಹೇಳಿದರು. ಮೆ. ಜೇನಂಡ ಕಾರ್ಯಪ್ಪನವರು, ಮೆ. ಪಾರ್ವಂಗಡ ಕುಶಾಲಪ್ಪನವರ ಜೀವಚರಿತ್ರೆಯನ್ನು ಸೂಕ್ಷ್ಮರೂಪದಲ್ಲಿ ಕಣ್ಣೀರಿನೊಡನೆ ಚಿತ್ರಿಸಿದರು. ಈ ವಿಷಯವನ್ನು ಅವರ ಕುಟುಂಬಕ್ಕೆ ತಿಳಿಸುವಂತೆ ನಿಶ್ಚಯವಾಯಿತು.

ಸ. ಚಿ. ಸುಬ್ಬಯ್ಯ.
ಸಹ ಕಾರ್ಯದರ್ಶಿ.

ಪೊನ್ನಂಪೇಟೆನಾಡು.

'ಪೊನ್ನಂಪೇಟೆನಾಡಿನವರು ತಾ. 13—1—29 ರಲ್ಲು ಮೆ. ಎ. ಸುಬ್ಬಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಗೋಣಿಕೊಪ್ಪಲಲ್ಲು ಸಭೆ ನೆರೆದು ಈ ತಾಲೋಕಿನ ರತ್ನ ಪ್ರಾಯರಾದ ಶ್ರೀಮಾನ್ ಪಿ ಟಿ. ಕುಶಾಲಪ್ಪ ಯಂ. ಯಲ್. ಸಿ.ಯವರ ಅಕಾಲ ಮರಣಕ್ಕೆ ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದೂ, ದುಃಖದಲ್ಲಿ ಮುಳುಗಿದ ಅವರ ಸಂಸಾರಕ್ಕೆ ಭಗವಂತನು ಧೈರ್ಯವನ್ನು ಕೊಡಲೆಂದೂ, ದಿವಂಗತರ ಹೆಸರಿನಲ್ಲಿ ದೇಶದವರು ತಕ್ಕ ಸ್ಮಾರಕವನ್ನೇರ್ಪಡಿಸಬೇಕೆಂಬದಾಗಿಯೂ ಠರಾವುಗಳನ್ನು ಮಂಜೂರು ಮಾಡಿ ಅದರ ನಕಲನ್ನು ಅವರ ಸಂಸಾರಕ್ಕೆ ಕಳುಹಿಸಲಾಯಿತು.

ಶ್ರೀಮಂಗಲನಾಡು.

ತಾ. 14—1—29 ರಲ್ಲು ಶ್ರೀಮಂಗಲನಾಡಿನವರು ಮೆ. ಇಟ್ಟಿರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೇಲೆ ಕಾಣಿಸಿದ ಠರಾವುಗಳನ್ನೇ ಮಂಜೂರ್ಮಾಡಿ ಅವರ ಸಂಸಾರಕ್ಕೆ ಅವುಗಳ ನಕಲನ್ನು ಕಳುಹಿಸಿದರು.

ಅ. ಮೊಡಪ್ಪ.

ಬಲಮುರಿ ಯೂನಿಯನ್.

ತಾ. 14—1—29 ರಲ್ಲು ಬಲಮುರಿ ಯೂನಿಯನ್ ಸಂಘದವರು ಮೆ. ಬೆಳ್ಳಚೆಟ್ಟಿರ ಅಚ್ಚಯ್ಯನವರ ಅಧ್ಯಕ್ಷತೆಯಲ್ಲು ನಡಿಸಿದ ಮೆ. ಕುಶಾಲಪ್ಪನವರ ಅಕಾಲಮರಣದ ವ್ಯಸನ ಸೂಚಕದ ಮೀಟಿಂಗಿನ ವಿವರ.

ಕಲಿಮಹಾತ್ಮೆಯು ವಿಚಿತ್ರವಾದದ್ದು. ಒಂದಲ್ಲದಿದ್ದರೂ ಮತ್ತೊಂದು ದಿವಸ ಕಾಲನ ಬಾಯೊಳಗೆ ತುತ್ತು ಬೀಳಬೇಕಾಗುವುದು. ಮೆ. ಕುಶಾಲಪ್ಪನವರು ಸ್ವರ್ಗಸ್ಥರಾದ ವಿಷಯಕ್ಕೆ ತುಂಬಾ ವ್ಯಸನಪಡುತ್ತೇವೆ. ಇವರ ಮರಣದಿಂದ ನಮ್ಮ ದೇಶದ ಶಿರೋಮಣಿಗಳಲ್ಲೊಬ್ಬರು ಮಡಿದಂತಾಯಿತು. ನಕ್ಷತ್ರರೂಪದ ಚಿರಪರಿಚಿತರು ದೇಶಸೇವೆಯಲ್ಲಿ ಪೂರಾ ಮಗ್ನರಾಗಿದ್ದರು. ಇವರು ಜಮೀನ್ದಾರರ ಸಂಘದ ಪ್ರೆಸಿಡೆಂಟರಾಗಿಯೂ, ಡಿ.ಬೋರ್ಡು ಮೆಂಬರಾಗಿಯೂ(ಮೊದಲು), ಕೌನ್ಸಿಲ್ ಚುನಾವಣೆಯಲ್ಲಿ ಎರಡು ಸಲವೂ ಹೆಚ್ಚಿನ ಓಟುಗಳಿಂದ ಜಯಶೀಲರಾಗಿ ಕೌನ್ಸಿಲ್ ಮೆಂಬರಾಗಿಯೂ, ಡಿ ಬೋರ್ಡಿನಲ್ಲಿ ವೈಸ್ ಪ್ರೆಸಿಡೆಂಟರಾಗಿಯೂ(ಮೊದಲು), 'ಕೊಡಗು' ಕಂಪೆನಿಯ ಮತ್ತು ಸಂಟ್ರಲ್ ಬ್ಯಾಂಕಿನ (ಮೊದಲು) ಡೈರೆಕ್ಟರರಾಗಿಯೂ, 1922 ನೇ ಇಸವಿಯಲ್ಲು ಸೋಮವಾರಪೇಟೆಯಲ್ಲು ನಡೆದ ಜಮೀನ್‌ದಾರ ಸಂಘದ ವಾರ್ಷಿಕ ಮೀಟಿಂಗಿನ ತಾತ್ಕಾಲಿಕ ಅಧ್ಯಕ್ಷರಾಗಿಯೂ, ಅಲ್ಲದೆ ವೈಸ್‌ರಾಯಿಯವರು ಮೊದಲು ಬೆಂಗಳೂರಿಗೆ ಬಂದಿದ್ದಾಗ ಕೊಡಗಿನಿಂದ ಹೋದ ಡೆಪ್ಯುಟೇಶನಿನಲ್ಲಿ ಇವರು ಒಬ್ಬರಾಗಿಯೂ ಸಹ ಇದ್ದರು. ಬೆಳಗಾಂ ಮತ್ತು ಕಲ್ಕತ್ತೆಯಲ್ಲಿ ನಡೆದ ನೇಶನಲ್ ಕಾಂಗ್ರೆಸ್ಸಿಗೆ ಇವರು ದಯಮಾಡಿದ್ದರು. ಇದು ಅಲ್ಲದೆ ಅನೇಕ ಸಂಸ್ಥೆಯಲ್ಲು ತಲಾ ಒಬ್ಬ ಮೆಂಬರಾಗಿದ್ದು ಜನರ ಕೋರಿಕೆಗನುಸಾರವಾಗಿ ನಡಕೊಳ್ಳುತಿದ್ದದ್ದೇ ದೃಢಕರಿಸುತ್ತಿದ್ದಂತಾಗಿರುತ್ತದೆ.

ಮೆ. ಕುಶಾಲಪ್ಪನವರ ಮರಣದಿಂದ ದೇಶೋನ್ನತಿಯ ಮೆಟ್ಲುಗಳಲ್ಲಿ ಒಂದು ಕಲ್ಲು ಬಿದ್ದಂತಾಯಿತೆಂಬದಕ್ಕೆ ಸಂಶಯವೇ ಇಲ್ಲ. ಆದರೆ ದೈವಾನುಗ್ರಹಕ್ಕೆ ಯಾರು ಏನು ತಾನೇ ಮಾಡಬಲ್ಲರು. ಕೊಡಗಿನಲ್ಲಿ ಆಗುವ ರಾಜಕೀಯ ಸುಧಾರಣೆಯ ವಿಷಯ ಕೊಡಗಿನಲ್ಲಿ ನಡೆಯತಕ್ಕ ಮೀಟಿಂಗುಗಳಲ್ಲಿ ತನ್ನ ನ್ಯಾಯವಾದ ಅಭಿಪ್ರಾಯವನ್ನು ಹಿತರೀತಿಯಲ್ಲಿ ಸೂಚಿಸುತ್ತಿದ್ದದರಿಂದಲೇ ಇವರ ವಿದ್ಯೆ, ಬುದ್ಧಿ, ಧೈರ್ಯ ಮತ್ತು ಚಟುವಟಿಕೆಯ ವಿದ್ಯಮಾನಗಳನ್ನು ಸರ್ವರೂ ಬಲ್ಲವರಾಗಿದ್ದರು. ಇಂಥಾ ಮಹಾತ್ಮರ ಅಕಾಲಮರಣಕ್ಕೆ ನಾವುಗಳೆಲ್ಲರೂ ಪುನಃ ನಮ್ಮ ವ್ಯಸನವನ್ನು ಸೂಚಿಸುತ್ತೇವೆ. ಈ ದುಃಖಬಂಧಿತದಲ್ಲಿ ಮಗ್ನರಾಗಿರುವ ಇವರ ಅಗ್ರಜರಾನುಜರಿಗೂ, ಪತಿವಿಯೋಗದಲ್ಲಿ ಶೋಕಿಸುತ್ತಿರುವ ಮೃತರ ಸಹಧರ್ಮಿಣಿಯವರಿಗೂ, ಪಿತೃಶೋಕದಲ್ಲಿ ನರಳುತ್ತಿರುವ ಇವರ ಮಕ್ಕಳಿಗೂ ಮತ್ತು ಮೃತರ ಬಂಧುವರ್ಗದವರಿಗೂ ಆಯುರಾರೋಗ್ಯವನ್ನಿತ್ತು, ದುಃಖವನ್ನು ಶಮನಿಸಿ, ಮೃತರಿಗೆ ಪರದಲ್ಲಿ ಮುಕ್ತಿ ಮತ್ತು ಶಾಂತಿ ದೊರೆಯಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆಂಬದಾಗಿ ಮೆ. ಚಂಗಂಡ ಕುಟ್ಟಪ್ಪನವರು ಭಾಷಣಮಾಡಿದನಂತರ, ಇದನ್ನು ಸಮರ್ಥಿಸಿ ಮೆ. ಬೆಳ್ಳಚೆಟ್ಟಿರ ಅಚ್ಚಯ್ಯನವರು ಈ ಕೆಳಗಿನ ಠರಾವುಗಳನ್ನು ತಂದರು.

ಈ ಪ್ರೋಸೀಡಿಂಗ್ಸಿನ ಯಥಾ ನಕಲೊಂದನ್ನು 'ಕೊಡಗು' ಪತ್ರಿಕೆಗೂ, ಮತ್ತೊಂದನ್ನು ಮೃತರ ಸಂಸಾರಕ್ಕೂ ಕಳುಹಿಸುವಂತೆ ಕೊಟ್ಟ ಸೂಚನೆಯು ಸರ್ವಸಮ್ಮತದಿಂದ ಮಂಜೂರಾಯಿತು.

ಬಿ. ಅಚ್ಚಯ್ಯ,
(ಅಧ್ಯಕ್ಷರು.)

ವ್ಯಸನ.

ಮಹನೀಯರೆ,

ಜನ್ಮವೆತ್ತಿದವರಿಗೆ ಮರಣ ಇದ್ದೇ ಇದೆ. ಆದರೆ ಕಾಲ, ಅಕಾಲವೆಂತ ಭೇದವಿರುವದರಿಂದ ದೇಶ ಪ್ರೀಯರಾದ ಪಿ. ಟಿ. ಕುಶಾಲಪ್ಪನವರ ಚಿಕ್ಕ ಪ್ರಾಯದ ಅಕಾಲ ಮರಣಕ್ಕೆ ದೇಶದ ಆಬಾಲವೃದ್ಧರು ಸರ್ವರೂ ವ್ಯಸನ ಪಡದೆ ಇರಲಾರರು. ಅಂಥಾ ವ್ಯಸನಕ್ಕೆ ನಾನು ಕೇವಲ ಭಾಗಿಯಾಗಿದ್ದೇನೆ. ಅಂಥಾ ಮಿತ್ರರನ್ನು ಕಳಕೊಂಡ ನಷ್ಟವು ಒಂದು ಶತಮಾನದ ವರೆಗೆ ದೇಶವು ಭರ್ತಿ ಮಾಡಿಕೊಳ್ಳುವದು ಕೇವಲ ಸಂಶಯವೆ. ಇವರ ಜೀವಿತ ಕಾಲವೆಲ್ಲಾ ಇಹ ಪರಕ್ಕೆ ಶ್ರೇಯಸ್ಕರವಾದ ಸತ್ಕಾರ್ಯದಲ್ಲು ವಿನಿಯೋಗಿಸಿರುವದರಿಂದ ಇವರ ಆತ್ಮಕ್ಕೆ ಶಾಂತಿಯೂ, ಸಮಾಧಾನವೂ ಭಗವಂತನು ಸದಾ ಉಂಟುಮಾಡಲೆಂದು ಕೆಳಗಿನ ಪದ್ಯರೂಪದಲ್ಲು ಪ್ರಾರ್ಥಿಸುವೆ.

ಹರದಾಸ ಅಪ್ಪಚ್ಚಕವಿ.

(ಮುತ್ತ್‌ನೋಳೆ ನಿನ್ನ ನಾನ್ ಎತ್ತ್ ಪೋವಂದೆ ಣ್ಣಡೊ—ಎಂಬಂತೆ)

ಭಾಗಿಯತ್ ಪಾರ್ವಂಗಡ| ಆಗಪೋಗತೆಂದೂವಿಂಜ ||ಪ|| ಯೋಗನಲ್ಲ ಕುಶಾಲಪ್ಪ| ಯೋಗಿ ಲೋಕ ಸೇರ್‌ಚಿ ಹಾ ||ಅ|ಪ|| ದೇಶಿಕ್ ಸ್ವರಾಜ್ಯ ಪಡೆಕ್| ನಾಸಿಕ್ ಕಲ್ಕತ್ತ್ ಪೊರಟ್|| ಆಶೆ ತೀತವಾಂಗ್ ವಿಜ್ಞಾ| ಈಶ ದೋಷ ಮಾಡ್‌ಚಿ ಹಾ ||೧|| ರಾಜವಿದ್ಯೆಯೆಲ್ಲಾ ಪಡಿಚ| ರಾಜಸೇವೆಕ್ ಮಡ್‌ಚಿ|| ಬೋಜ ದೇಶಸೇವೆಮಾಡಿ| ಮಾಜಿನಾಯ ಡಾಚಿ ಹಾ ||೨|| ಮೊಂಬಪ್ಪಯ್ಯ ಪೂಗುಣಾತ್| ಅಂಜಿಕಾಲ ಕೌಂಸಿಲ್‌ಕ್|| ಅಂಜತಿಂಜ ಶರವೀರ| ಇಂಬಂದ ಮರಿಯಾಚಿ ಹಾ ||೩|| ಪುಟ್ಟ್‌ನ ಈ ದೇಶತ್‌ನ| ಪಟ್ಟ್‌ಕೊತ್ತೆಲಂಗುವತ್|| ಬಟ್ಟಿಗೇನ ಬೆಚ್ಚ ಧೀರ| ಬುಟ್ಟ್ಯಾಯಿಚಿಪೋಚಿ ಹಾ ||೪|| ಪೊರಟ ಜೀವಕೆಂದೂ ತಂಪ್| ಸುರಲೋಗತ್ ಕ್ಟ್ವಿಪಕ್ || ಪರಮೇಶ ದಯಕಾಟ್‌ಂಡ್| ಹರದಾಸಬೋಡು ವಿನೊ ||೫||—

ವಿಷಾದ.

ಕೊಡಗಿನ ರಾಜಕೀಯ ಚಳವಳದಲ್ಲು ಒಬ್ಬ ಮುಂದಾಳಾಗಿದ್ದ ಮೆ. ಪಾರುವಂಗಳ ಕುಶಾಲಪ್ಪನವರು ಈ ವರ್ಷದ ಕಲ್ಕತ್ತಾ ಕಾಂಗ್ರೆಸ್ಸಿಗೆ ಹೋದವರು ಬರುವಾಗ 'ನಿಮೋನಿಯ' ಕಾಯಿಲೆಯಾಗಿ ಮದ್ರಾಸಿನಲ್ಲು ತಾ. 11—1—29 ರಲ್ಲು ಮೃತರಾದರೆಂಬ ವರ್ತಮಾನವು ಬಹು ದುಃಖಕರವಾಗಿರುತ್ತದೆ. ಇವರು ದೇಶಾಭಿಮಾನಿಗಳಾದ ಅಗ್ರಗಣ್ಯರಾಗಿದ್ದರು. ಈ ಕುಶಾಲಪ್ಪನವರು ಇವರ ಬಾಲಾವಸ್ಥೆಯಲ್ಲಿ ಅಕಾಲಮರಣಕ್ಕೆ ತುತ್ತಾಗಿರುವದು ಅವರ ಕುಟುಂಬಕ್ಕೂ ಮತ್ತು ನಾಡಿಗೂ ಪೂರ್ಣಚಂದ್ರನನ್ನು ಕಳಕೊಂಡಂತೆಯಾಗಿರುವದು ಮಾತ್ರವಲ್ಲದೆ ಆಕಾಶದಲ್ಲು ಕಾಣುತ್ತಿರುವ ನಕ್ಷತ್ರಗಳ ಪೈಕಿ 'ಧ್ರುವನಕ್ಷತ್ರವನ್ನೇ' (Pole star) ಕಳಕೊಂಡಂತೆ ಕೊಡಗು ದೇಶವು ದುಃಖಸಾಗರದಲ್ಲು ಮುಳುಗಬೇಕಾಗಿದೆ. ರಾಜಕೀಯ ವಿಚಾರದಲ್ಲಿ ನಾನಾ ಭಿನ್ನಬೇಧಗಳು ಒಂದು ಸಮಾಜದಲ್ಲು ಇರಬಹುದು. ಅಷ್ಟು ಮಾತ್ರಕ್ಕೆ ಒಬ್ಬರ ಪ್ರವೀಣತೆಯೂ, ಘನತೆಯೂ, ಸ್ವದೇಶಪ್ರೀತಿಯೂ ಮತ್ತು ಚಳವಳ, ತ್ಯಾಗ ಮೊದಲಾದವುಗಳು ಕಳೆಗುಂದಲಿಕ್ಕಿಲ್ಲ. ಭಿನ್ನಾಭಿಪ್ರಾಯವು ಸತ್ಯವಿರುವಲ್ಲೇ ಮೊಳಕೆಯುಟ್ಟತಕ್ಕದ್ದು. ಇವರ ನಷ್ಟವು ಲೆ. ಕೌನ್ಸಿಲಿಗೂ, ಜಮೀನ್‌ದಾರರ ಸಂಘಕ್ಕೂ ಅಷ್ಟಿಷ್ಟೇನೂ ಆಗುವದಿಲ್ಲ.

ಈ ಕೊಡಗು ದೇಶವು ದೇಶಾಭಿಮಾನಿಗಳನ್ನು ಕೃತಿಮಾಡುವದರಲ್ಲಿ ಬಹು ಕ್ಷೀಣತೆಯಿಂದಿರುವಾಗ ಅಭಿಮಾನದಿಂದಲೇ ಸ್ವಭಾವಿಕವಾಗಿ ಹುಟ್ಟಿದಂಥ ದೇಶಮಾನ್ಯರು ಈ ರೀತಿ ಅದೃಶ್ಯವಾಗುತ್ತಿರುವದು ನಮ್ಮ ದೇಶದ ದುರ್ದೆಶೆಯಾಗಿರುತ್ತದೆ. ರಾಜಕೀಯ ಚಳವಳವನ್ನು ಪ್ರಥಮ ಆರಂಭಿಸಿದ ನೆ. ಬಿದ್ದಂಡ ಗಣಪತಿಯವರು ಗತವಾದಂದಿನಿಂದ ನಮ್ಮ ರಾಜಕೀಯ ಪ್ರವೀಣರಾದ ರಾವುಬಹದ್ದೂರು ಸಿ. ಮಾಚಯ್ಯ, ಯಂ. ಸುಬ್ಬಣ್ಣ, ಸ್ಸೆ. ಕುಟ್ಟಯ್ಯ ಮೊದಲಾದವರೆಲ್ಲಾ ಒಬ್ಬರ ಹಿಂದೊಬ್ಬರು ಇಷ್ಟು ಕಿಂಚಿತ ಸಮಯದಲ್ಲು ಈ ರೀ ನಮ್ಮಿಂದ ಮಾಯವಾದದ್ದು ಬಹು ದುಃಖಕರವಾಗಿರು ದೆ. ಸದ್ಯಕ್ಕೆ ಅವರ ಸ್ಥಳದಲ್ಲಿದ್ದ ಈ ಕುಶಾಲಪ್ಪನ ರೂ ಅವರನ್ನು ಹಿಂಬಾಲಿಸಿದರು. ಈಗ ಈ ಕುಶಾಲಪ್ಪನ ರ ಸ್ಥಳವನ್ನು ಪ್ರವೇಶಿಸಲು ಅಂಥಾ ಅಗ್ರಗಣ್ಯರು ಸಧ್ಯ ದುಸ್ತರವಾಗಿದೆ. ದೇಶವೇ ಈ ರೀತಿ ಅನಾಥವಾಗಿರುವಾ ಅವರ ನಾಡು ಮತ್ತು ಕುಟುಂಬದ ವಿಷಯ ನಾವು ಹೇ ಕೇ? ಇದನ್ನು ಬಿಟ್ಟು ಪರವನ್ನೈದಿದ ಕುಶಾಲಪ್ಪನವರ ಟುಂಬಕ್ಕೆ ದೇವರು ನೆಮ್ಮದಿಯನ್ನೂ, ಶಾಂತತೆಯನ್ನೂ ಕೊ ಲೆಂದು ಪ್ರಾರ್ಥಿಸುವೆನು. ಅಲ್ಲದೆ ನಮ್ಮಿಂದ ಸಾಗಿದ ಶಾಲಪ್ಪನವರು ಶರೀರದಿಂದ ನಮ್ಮ ಮಧ್ಯದಲ್ಲು ಇಲ್ಲ ರೂ ಆತ್ಮವು ನಮ್ಮೊಂದಿಗೆ ಸದಾ ನಮ್ಮ ದೇಶಕಾರ್ಯ ರಲು ಸಾಧ್ಯವಿದೆ. ಅವರ ಆತ್ಮಕ್ಕೆ ದೇವರು ಶಾಂತಿಯ ಕೊಡಲೆಂದು ಪ್ರಾರ್ಥಿಸುತ್ತೇನೆ.

ಪಿ. ಯಂ. ಮುತ್ತಣ್ಣ

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಹೊಸ ಪುಸ್ತಕ)

(ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಬಹಳ ಶುದ್ಧ ರೀತಿಯಲ್ಲಿ ಪರಿಶೋಧಿಸಲ್ಪಟ್ಟು ಮಾಸ ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗತ್ಪ್ರಸಿದ್ಧರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ಸಂಚಿಸಿದ ದಿವ್ಯ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೇ ಹಾಸಲು ಉಚಿತ) ಸಾಮಾನ್ಯ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೪—೦

ಪ್ರಥಮ ಸಂಪುಟದ ಬೆಂಡಾದ ಪ್ರತಿಗಳು.

	ಸಾದಾ ಬೈಂಡು	ದಪ್ಪ ರಟ್ಟಿನ ಬೈಂಡು	ಕಿತ್ತಾನಾರು ಬೈಂಡು
ಸಾಮಾನ್ಯ ಪ್ರತಿ	೧—೪—೦	೧—೧೨—೦	೨—೪—೦
ಉತ್ತಮ ಪ್ರತಿ	೨—೪—೦	೨—೮—೦	೩—೦—೦

ಅಂಚೇಹಾಸಲು ಪ್ರತ್ಯೇಕ.

ವಿಳಾಸ.— ಸಂಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

12-12

ಪಿಗ್ಮಿ ಗ್ರಾಮೋಫೋನ್

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ 35 ರೂ. ಈಗಿನ ಕ್ರಯ 8—8—0.

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದೂಸ್ಥಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವುದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹುಚೆನ್ನಾಗಿದೆ ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಠವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಮೆಟಲ್ ಹಾರನ್ ಎಂಬ ಪದ ಹೇಳುವ ಕೊಳವೆ ಇದೆ. ನಿಧಾನವಾಗಿಯೂ, ಜಾಗ್ರತೆಯಾಗಿಯೂ ಪದ ಹೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದು ಕೊಂಡು ಹೋಗಲು ಅನುಕೂಲವಾದಂಥಾ ಸುಂದರವಾದ ಕೈ ಪೆಟ್ಟಿಯಲ್ಲಿಟ್ಟಿದೆ.

ಡಬ್ಬಲ್ ಸೈಡ್ ಎರಡು ಕಡೆಯೂ ಪದ ಇರುವ
1 ರೆಕಾರ್ಡ್ ಸಹಿತ ಕ್ರಯ ರೂ. 8—8—0.
ಹೆಚ್ಚಿಗೆ ರೆಕಾರ್ಡ್ ಬೇಕಾದರೆ, ರೆಕಾರ್ಡ್ ,,
ಪ್ರತ್ಯೇಕ 1ಕ್ಕೆ 2—0—0

ವಿಳಾಸ —ಲೀಗಲ್ ಟ್ರೇಡಿಂಗ್ ಕಂಪೆನಿ,
ಪೊ. ಬಾ. 243, ಮದರಾಸು.

52—31

Arms, Ammunition and Shooting Requisites !!!



1928 Illustrated Catalogue Just Issued Free on Application !

D. B. B. L. Rifles	Rs. 120	to	Rs.	2750
S. B. B. L.	,, 35	to	,,	950.
D. B. B. L. Guns	,, 50	to	,,	1350
S. B. B. L. ,,	,, 35	to	,,	275
D. B. M. L. ,,	,, 45	to	,,	135
S. B. M. L. ,,	,, 30	to	,,	80
B. L. Revolvers	,, 35	to	,,	350
Antomatic Pistols	,, 30	to	,,	150

Brilliant Search Light Lamp For Shooting Camping, Fishing and All such other Night Sports and work Rs 35 Free delivery

Also swords, Daggers, Cartridges, Caps, Gunpowder and Shooting Requisites at the most competitive rates

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—17 210 Abdul Rehman Street, BOMBAY.

Try !! Try

KING & CO.,

SUNTICOPPA.

for

Foreign Liquor, Arms & Ammunitions, High-Grade Cigarettes, Sports Materials, Court-Stamp papers, Printed Labour Bonds, Sewing Machines, etc, etc

ಕಿಂಗ್ ಅಂಡ್ ಕೊ.,

ಸುಂಟಿಕೊಪ್ಪ.

ನಮ್ಮ ಕಂಪೆನಿಯಲ್ಲಿ ಎಲ್ಲಾ ಪರದೇಶೀಯ ಸಾರಾಯಿ ಎಂದರೆ ಬ್ರಾಂಡಿ, ವಿಸ್ಕಿ, ವೈನ್, ಬೀರು ಮೊದಲಾದುವು ಬಿಕ್ರಿ ಮಾಡಲ್ಪಡುತ್ತದೆ ಅಲ್ಲದೆ ಅತ್ಯುತ್ತಮವಾದ ಕೋವಿ, ಕೋವಿ ಮದ್ದು, ತೋಟಗಳು, ಚಿಲ್ಲ ವಗೈರೆ ಬಹು ಸುಲಭ ದರದಲ್ಲಿ ಸಿಕ್ಕುತ್ತದೆ. ಎಲ್ಲರೂ ಒಂದು ಸಲ ನಮ್ಮಲ್ಲಿ ಒಂದು ವ್ಯಾಪಾರ ಮಾಡಿದಲ್ಲಿ ಪೂರ್ತಿ ಮಾಹಿತಿಯು ಗೊತ್ತಾಗುವುದು.

12—9

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೧೯೨೯ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 6½"×4" 1ಕ್ಕೆ	0	12	0
ಪರಸ್ಥಳಕ್ಕೆ ಪೋಸ್ಟೇಜು	0	3	0
2ನೇ ನಂ. ದೊಡ್ಡ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 6½"×4" 1ಕ್ಕೆ	0	10	0
ಪರಸ್ಥಳಕ್ಕೆ ಪೋಸ್ಟೇಜು	0	3	0
3ನೇ ನಂ. ಚಿಕ್ಕ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 5"×2½" 1ಕ್ಕೆ	0	7	0
ಪರಸ್ಥಳಕ್ಕೆ ಪೋಸ್ಟೇಜು	0	2	0
4ನೇ ನಂ. ಚಿಕ್ಕ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 5"×2½" 1ಕ್ಕೆ	0	5	0
ಪರಸ್ಥಳಕ್ಕೆ ಪೋಸ್ಟೇಜು	0	2	0

52—3

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಾ ಬೆಲೆಯನ್ನು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ ಪಿ ಮೂಲಕ ಡಜನ್ ಗಟ್ಲೆ ತರಿಸಿಕೊಳ್ಳುವವರು ಡಜನ್ 1ಕ್ಕೆ 2—0—0 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929ನೇ ಇಸವಿಯ ಸಚಿತ್ರ ಕ್ಯಾಲೆಂಡರುಗಳು.

ಷೀಟ್ ಕ್ಯಾಲೆಂಡರ್ 50ಕ್ಕೆ	1	2	0
,, ,, 100ಕ್ಕೆ	2	0	0
3"×4½" ಪಾಕೆಟ್ ಕ್ಯಾಲೆಂಡರ್ 12ಕ್ಕೆ	0	9	0
,, ,, 50ಕ್ಕೆ	2	4	0
,, ,, 100ಕ್ಕೆ	4	6	0

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10"×14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್

3ಕ್ಕೆ	0	8	0
,, ,, 6ಕ್ಕೆ	0	14	0
,, ,, 12ಕ್ಕೆ	1	6	0

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಾ ಬೆಲೆಯನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವುದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರ್ಷದಂತೆ ವಾಪಸು ಮಾಡುತ್ತೆ.

ಮಾದರಿ ಕ್ಯಾಲೆಂಡರು ಅಪೇಕ್ಷಿಸುವವರು 0—5—0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆಯ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ಕಳುಹಿಸಲಾಗುತ್ತೆ.

ಮಣಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್ ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	17,190
ಬಮೂಬಾದ ಠೇವಣಾತಿ	—	1,62,320

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಮೊಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್. ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಖು 1—7—1928.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ. ಪೇರಿಯಂಡ ಪೂವಯ್ಯನವರ ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಕೊಡಗಿನ ಜಿಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.
ಮತ್ತು—ಮೆ. ಚಂಗಂಡ ಕುಟ್ಟಪ್ಪನವರು,
ಪೊನ್ನಂಪೇಟೆನಾಡು—ಮೆ. ಕಾಳೇಂಗಡ ಚಿಣ್ಣಪ್ಪನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಮರೆನಾಡು—ಮೆ. ಕೀಕಿರ ಅಪ್ಪಯ್ಯನವರು.

ಸಬ್ ಏಜಂಟರುಗಳು.

ವೀರರಾಜಪೇಟೆ—ಮೆ. ಆಸಚೇರಿರ ಸಂಜಪ್ಪನವರು,
ಮೂರ್ನಾಡು—ಮಡೆಯಂಡ ದೇವಯ್ಯನವರು,
ನಾಪೋಕ್ಲು—ಮೆ. ಟಿ. ಆರ್. ರಾಮಯ್ಯನವರು,
ಗೋಣಿಕೊಪ್ಪಲು—ಮೆ. ಬಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ಹುದಿಕೇರಿ & ತಿತಿಮತಿ—ಮೆ. ಜಿ. ಪೂವಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನಗಳೂ, ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಸಿದ್ದಲ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

12 bore Victor Cartridges Rs. 10/- Per 100

Mahomedally-Noorbhoy.
ARMS & AMMUNITION MART.
321 Abdul Rehman Street.
52-18 BOMBAY. 3.

ಕೆಟೊಕಷಾಯ ಮಾತ್ರೆ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0; 3ಕ್ಕೆ ರೂ. 4—0—0; 6ಕ್ಕೆ ರೂ 7—8—0; 12ಕ್ಕೆ ರೂ. 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲು 1, 3, 6ಕ್ಕೆ ರೂ. 1—1—0 3—8—0; 6—12—0-

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವ ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—4—0

ನಮ್ಮ ಕೆಟಲಾಗು ತರಿಸಿ ನೋಡಿರಿ. ವಿಳಾಸ—ಮನೋಲ್ಲಾಸಿನಿ ಕಂಪೆನಿ.
52—14 9. ಮಂಗಳೂರು.

EMPIRE OF INDIA
LIFE ASSURANCE COMPANY, LIMITED.

(Established 1897.)

A Monthly payment of Rs. 12/8/- will secure a With Profit Assurance as shown below which will further increase by Bonus Additions

Age next Birthday	Assurance payable at Death: Whole Life.	Premiums Limited to 15 Years	20 Years	25 Years	Endowment Assurances payable at Death or at end of 20 Years.	25 Years	30 Years
	Rs	Rs.	Rs	Rs	Rs.	Rs.	Rs.
25	5.820	3.550	4.250	4.800	3.010	3.800	4.52)
30	5.140	3.290	3.930	4.390	2.930	3.620	4.22)
35	4.480	3.030	3.600	3.970	2.810	3.400	3.87)

Wannted:—Agents at Mercara, Somwarpet and Siddapur.

HEAD OFFICE: Empire of India Life Building, BOMBAY.

21—5.

BRANCH OFFICE. 152, Commercial Street, BANGALORE.

Xmas & New Year Presents!

Toys for Children!

A set comprising of tiny, bright and beautiful tumblers, pots, spoons, etc. made of brass and bell metal, are quite suitable for the amusement and play of children.

Small set 32 articles Rs. 2—8—0. Medium set 32 articles Rs 3—8—0.
Big set of 32 articles Rs. 4—8—0.

Securely packed in neat card board boxes. Postage extra.

Silk Sarees, Jackets, Headkerchieves, Embroidary Hand Bags & Money Purses-a Speciality.

Send your orders to:-

BHARADWAJ & CO.,
BROCADE, EMBROIDARY & SILK MANUFACTURERS,
52—21 **Benares City.**

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವ್ಯಾಪಾರದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸ್ —
1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25.
1000 ,, ಎಂಡೌಮೆಂಟ್ ,, ,, —ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ.
ಪುನಹ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು.
ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.—

ಓರಿಯಂಟಲ್ ಬಿಲ್ಡಿಂಗ್ಸ್, ನಂ. 1. ಪರೇಡ್ ರೋಡ್, ಬೆಂಗಳೂರು. 52—3 ಯಲ್. ಆರ್. ಕೃಷ್ಣಸ್ವಾಮಯ್ಯರ್. ಬ್ರಾಂಚ್ ಸೆಕ್ರೆಟರಿ.

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 1550.

If not delivered please return to
"KODAGU" OFFICE. MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩-೮-೦.

[illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಸಂಪುಟ ೮]

ಮಡಿಕೇರಿ, ೫೯ ೧೯೩೯ ನೇ ಇಸವಿ ಜನವರಿ ತಾರೀಖು ೨೫ ನೇ ಶುಕ್ರವಾರ

[ಸಂಚಿಕೆ ೩೪

JUST ARRIVED.

Guns.

12 Bore D. B. B. L. Guns @ Rs. 145 140, 130 & 100 each.
12 " S. B. B. L. Guns @ " 70, & 52-8-0 each
12 " D. B. M. L. " @ " 70 each

Cartridges.

Eley's Shot Cartridges Rs. 12-8-0 per 100.
Lg. & Sg. " " 14-0-0 " "

Ball Cartriges Rs 16-0-0 per 100.
Lethal Bullet " " 32-0-0 " "
12bore Ballistite " " 16-0-0 " "
1 lb tin F. F. Gun Powder Rs. 1-14-0."
½ " " " " " 1- 0-0."
¼ " " " " " 0-10-0."
Boxes of 250 M. L. Caps " 1- 0-0 each.

Selling fast. Buy requirements early.

52-51

SPENCER & CO. LTD. Arms & Ammunition Dealers. **MERCARA.**

Post Box 423,
TRIPLICANE, MADRAS.

MANUFACTURES AND DEALS IN ALL:—

(1) Gemset Jewels, gold and silver articles of all patterns
(2) Race Cups, Caskets, Medals, etc., for presentation purposes.
(3) Trovels, Keys, Locks, etc., for ceremonial purposes.

JEWELLER
BY
APPOINTMENT
TO
His Excellency
THE GOVERNOR
OF MADRAS.

Catalogue Free to Bon fide Enquirers

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro-plating, gilding and nickel-ling.
(3) Buying old jewellery, or under-taking to effect sale.

V. SUBRAMANIA IYER
JEWELLER

Telephone:— 3145.

Telegrams:— "PRECIOUS"

Gold-smith, Silver-smith, & Dealer in all Gemset Jewels.

52-19

Do you wish to increase the yield of your Coffee? If so, please apply

BETTIAH'S SPECIAL COFFEE MIXTURE,

The **BEST** on the market, because.

1. It is prepared according to the princeples approved by eminent Agricultural Chemists.
2. It is prepared from high-grade fertilisers of the purest kind.
3. And last, but not least, it is the cheapest mixture, for the plant-foods it contains.

Apply, for further particulars to:-

Mr. B. Bettiah,
Sole Agent for Mysore and Coorg,
IMPERIAL CHEMICAL INDUSTRIES (INDIA) LTD.,
Santhepet, MYSORE.

12-1

ಅ ಪೂ ರ್ವ ಸಂ ದ ರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸ ಬೇಕಾದರೆ ಇದೀಗ ಅಪೂರ್ವ ಸಂದರ್ಭ.

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

ಆತಂಕನಿಗ್ರಹ ಔಷಧಾಲಯ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

52-25

ಕೊಡಗು.

ಸಂ ೧೯೨೯ನೇ ಇಸವಿ

ಜನವರಿ ತಾ ೨೫ನೇ ಶುಕ್ರವಾರ.

೧೯೨೭-೨೮ನೇ ವರ್ಷದ ಸರಕಾರಿ ಆಡಳಿತ ವರದಿ.

ಈ ವರದಿ ಈಗ ತಾನೇ ಪ್ರಕಟವಾಗಿದೆ. ಒಂದು ಪ್ರತಿಯನ್ನು ನೋಡಲು ನಮಗೆ ಅವಕಾಶ ದೊರೆಯಿತು. ವರ್ತಮಾನ ಪತ್ರಿಕೆಗಳ ತಿಳಿವಳಿಕೆ ಬಗ್ಗೆ ವರದಿಯನ್ನು ಕಳುಹಿಸುವ ಪದ್ಧತಿಯನ್ನು ನಮ್ಮ ದೇಶದ ಸರಕಾರವು ಇನ್ನೂ ಪ್ರಾರಂಭಿಸಿರುವದಿಲ್ಲ. ಇದರಿಂದಲೇ ಪ್ರಜೆಗಳ ಅಭಿಪ್ರಾಯಕ್ಕೆ ನಮ್ಮ ಸರಕಾರವು ಬೆಲೆಕೊಡುವದಿಲ್ಲವೆಂಬದು ಗೊತ್ತಾಗುತ್ತದೆ. ಆಳಿಸಿಕೊಳ್ಳುವವರ ಅನುಮತಿಯಿಂದಲೇ ಸರಕಾರವು ನಡೆಯಬೇಕಾದದ್ದು ಎಲ್ಲಾ ಪ್ರಜಾಸತ್ತಾತ್ಮಕ ಆಡಳಿತ ಪದ್ಧತಿಯ ಸ್ವಭಾವವಾಗಿದೆ. ಆದರೆ ಪಾರತಂತ್ರ್ಯಕ್ಕೆ ಒಳಗಾದ ಹಿಂದುಸ್ಥಾನದಲ್ಲಿ, ಆ ಹಿಂದುಸ್ಥಾನದ ಒಳಗಿರುವ ಈ ಕೊಡಗು ದೇಶದಲ್ಲೂ ಸರಕಾರಿ ಉದ್ಯೋಗಸ್ಥರೇ ಅರಸರಾಗಿ ಯಾರಿಗೂ ಜವಾಬ್ದಾರರಾಗಿರುವದಿಲ್ಲ. ಈ ಆಡಳಿತ ಪದ್ಧತಿಯು ಹೋಗಿ ಪ್ರಜಾ ಜನರೇ ತಮ್ಮನ್ನು ತಾವೇ ಆಳಿಕೊಳ್ಳುವ ಹಕ್ಕು ಬೇಕೆಂತ ಒಟ್ಟು ಹಿಂದುಸ್ಥಾನವು ಕೇಳುತ್ತಿರುವದು. 'ಇದೇ ಸ್ವರಾಜ್ಯ'. ಅಂಥಾ ಸ್ವರಾಜ್ಯದಲ್ಲಿ ವೃತ್ತಾಂತ ಪತ್ರಿಕೆಗಳ ಅಭಿಪ್ರಾಯಕ್ಕೆ ತುಂಬಾ ಬೆಲೆ ಇರುತ್ತದೆ. ವೃತ್ತಾಂತ ಪತ್ರಿಕೆಗಳ ಮತ್ತು ಜನಸಮುದಾಯದ ಅಭಿಪ್ರಾಯಗಳಿಗೆ ಬೆಲೆ ದೊರಕುವಂತೆ ಮಾಡಲು ಶಕ್ತಿಯು ಈಗಲೂ ಜನರ ಕೈಯಲ್ಲಿದೆ. ಜನರು ಒರೇ ಸ್ವಾರ್ಥಪರರಾಗಿರದೆ ಪಾರತಂತ್ರ್ಯದ ನೋವನ್ನು ಮನಸಿಗೆ ತೆಗದುಕೊಂಡು, ಅಂಥಾ ಪಾರತಂತ್ರ್ಯವನ್ನು ಹೋಗಲಾಡಿಸಲು ಪ್ರಜಾ ಜನರಲ್ಲಿ ಪ್ರತಿಯೊಬ್ಬನೂ ತನ್ನ ಸಮಯದ ಸ್ವಲ್ಪ ಭಾಗವನ್ನು ಸಾರ್ವಜನಿಕ ಕಾರ್ಯಕ್ಕೆ ಕೊಟ್ಟರೆ ಸರಕಾರವು ಜನಸಮುದಾಯದ ಅಭಿಪ್ರಾಯಕ್ಕೆ ತಲೆ ಬಾಗಿಸಲೇ ಬೇಕಾಗುತ್ತದೆ. ಜನಸಮುದಾಯದ ಸಾರ್ವಜನಿಕ ಜಾಗ್ರತಿಯು ಹೆಚ್ಚಿದಂತೆ ಸರಕಾರದ ಕೆಲಸ ಕಾರ್ಯವನ್ನು ವಿವರಿಸುವ ಆಡಳಿತ ವರದಿಯು ದೇಶದ ವೃತ್ತಪತ್ರಿಕೆಗಳಿಗೆ ದೊರಕಿಯೇ ದೊರಕುತ್ತವೆ.

ಈ ವರ್ಷದ ವರದಿಯಲ್ಲಿ ಕೊಟ್ಟಿರುವ ಸಂಗತಿಗಳೂ ಬಹಳ ಕಡಿಮೆಯಾಗಿವೆ. ಹಿಂದಿನ ವರ್ಷಗಳಲ್ಲೂ ವಿಶೇಷ ಸಂಗತಿಗಳಿರುತ್ತಿರಲಿಲ್ಲ. ಈ ವರ್ಷವಂತೂ ವರದಿಯಲ್ಲಿ ಫಾರೆಸ್ಟ್ ಇಲಾಖೆ ವಿಷಯ ವಿನಹ ಇತರ ವಿಷಯಗಳು ತೀರಾ ಕಡಿಮೆಯಿದೆ. 'ಜನರಲ್ ಸಮರಿ' ಎಂಬ ಒಟ್ಟು ಆಡಳಿತದ ವಿಮರ್ಶೆ ಇರುವ ಮೊದಲನೇ ಭಾಗವು ಬರೇ 44 ಪಂಕ್ತಿಗಳಲ್ಲಿ ತೀರಿಹೋಗಿದೆ. ಹಿಂದಿನ ವರ್ಷದ ವರದಿಯಲ್ಲಿ ಎರಡು ಪುಟಗಳಾದರೂ ಇದ್ದವು. ಶಾಸನ ಮಂಡಲಿಯ ಮೂಲಕ ಜನರು ಸರಕಾರದ ಕಾರ್ಯಗಳನ್ನು ವಿಮರ್ಶಿಸಲು ಅನುಕೂಲವಿರುವ ಈಗಿನ ಕಾಲದಲ್ಲಿ ವರದಿಯು ಇನ್ನೂ ತಪಶೀಲುಗಳನ್ನು ಕೊಡುವದು ಅವಶ್ಯವಿದೆ.

ವರದಿಯ ವರ್ಷದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಎರಡಾವರ್ತಿ ಸೇರಿತೆಂದೂ, ಅದರಲ್ಲಿ 115 ಸವಾಲುಗಳಿಗೆ ಜವಾಬು ಕೊಡಲಾಯಿತೆಂದೂ, 29 ಠರಾವುಗಳು ಚರ್ಚಿಸಲ್ಪಟ್ಟವೆಂದೂ, ಇನ್ನೊಂದರಲ್ಲಿ 45 ಸವಾಲುಗಳಿಗೆ ಜವಾಬು ಕೊಡಲಾಯಿತೆಂದೂ, ಬಜೆಟ್ಟಿನ ಮೇಲೆ ಒರೇ 4 ಠರಾವುಗಳಿದ್ದವೆಂದೂ, ಠರಾವುಗಳ ಮೇಲೆ ಚೀಫ್ ಕಮಿಶನರ ತೀರ್ಮಾನಗಳು ಇಡಲಾಯಿತೆಂದೂ ಬರೆದಿದೆ. ಠರಾವುಗಳು ಯಾವ ಯಾವ ಸಂಬಂಧದವು ಮತ್ತು ಚೀಫ್ ಕಮಿಶನರ ತೀರ್ಮಾನವು ಏನು ಎಂತಲೂ ಕೊಟ್ಟಿದ್ದರೆ ಪ್ರಯೋಜನವಿರುತ್ತಿತ್ತು. 1928ನೇ ಇಸ್ವಿಯ ಫೆಬ್ರವರಿ ತಿಂಗಳಲ್ಲಿ ನಡೆದ ಬಜೆಟ್ ಮೀಟಿಂಗಿಗೆ 10 ಮೆಂಬರುಗಳು ಮಾತ್ರ ಹಾಜರಿದ್ದರೆಂದೂ, ಸೈಮನ್ ಕಮಿಶನಿನ ನೇಮಕಕ್ಕೆ ತಮ್ಮ ಅತೃಪ್ತಿಯನ್ನು ಸೂಚಿಸಲಿಕ್ಕಾಗಿ ಚುನಾಯಿತ ಮೆಂಬರುಗಳು ಗೈರ್ಹಾಜರಾಗಿದ್ದರೆಂತಲೂ ಒಪ್ಪಿಕೊಳ್ಳಲಾಗಿದೆ.

ವರದಿಯ ವರ್ಷದಲ್ಲಿ 3141 ಜನನವೂ 5138 ಮರಣವೂ ಲೆಕ್ಕಕ್ಕೆ ಸಿಕ್ಕಿದೆಯಂತೆ. ಮರಣದ ಸಂಖ್ಯೆಯಲ್ಲಿ 4092 ಕ್ಕೆ ಜ್ವರವೇ ಕಾರಣ. ಒಂದು ವರ್ಷಕ್ಕಿಂತ ಕಡಿಮೆ ಪ್ರಾಯದ ಶಿಶುಗಳು 817 ಮೃತವಾದವು. ಈ ಎಲ್ಲಾ ಲೆಖ್ಖಗಳಿಂದ ಜನರಲ್ಲಿ ಶಕ್ತಿಯು ಎಷ್ಟರ ಮಟ್ಟಿಗೆ ಕಡಿಮೆಯಾಗಿದೆಯೆಂತ ಗೊತ್ತಾಗುತ್ತದೆ. ಆರೋಗ್ಯದ ಸ್ಥಿತಿ ಹೀಗಾದರೂ ಜನರಿಗೆ ಹೊಟ್ಟೆ ತುಂಬಾ ಅನ್ನ ದೊರಕುವಂತೆ ಮಾಡುವ ಪ್ರಯತ್ನವು ಏನೂ ಕಾಣುವದಿಲ್ಲ. ಕೃಷಿಕಸುಬಿನಿಂದ ಉತ್ಪತ್ತಿ ಹೆಚ್ಚಿಸಿಕೊಳ್ಳಲು ಕೃಷಿ ಇಲಾಖೆಯು ಕೆಲಸವೇನೂ ಇಲ್ಲ. ಒಟ್ಟು ಹಿಂದುಸ್ಥಾನದಲ್ಲಿ ಕೃಷಿಯನ್ನು ಅಭಿವೃದ್ಧಿಗೊಳಿಸಲು ಸಲಹೆ ಕೊಡಲು ಕೃಷಿಕಮಿಶನಿನ ವರದಿಯು ಪ್ರಕಟವಾಗಿದೆ. ಜಾನುವಾರುಗಳನ್ನು ಅಭಿವೃದ್ಧಿಗೊಳಿಸಲು ನಮ್ಮ ದೇಶದ ಕೌನ್ಸಿಲ್ ಮೂಲಕ ನೇಮಿಕವಾದ ಕ್ಯಾಟಲ್ ಕಮಿಟಿಯ ವರದಿಯು ಪ್ರಕಟವಾಗಿದೆ. ವರದಿಯ ವರ್ಷದಲ್ಲಿ ಮಾತ್ರವಲ್ಲ, ಈ ವರೆಗೂ ರೈತರಿಗೆ ಸಹಾಯವಾಗುವಂತೆ ಏನೇನೂ ಕೆಲಸ ಮಾಡಿರುವದಿಲ್ಲ. ಮಲೇರಿಯಾ ಕಮಿಟಿ ರಿಪೋರ್ಟು ಮೇರೆ ಸ್ವಲ್ಪ ಹೆಚ್ಚಿಗೆ ಕೊಯಿನಾ ಹಂಚಿರುತ್ತಾರೆ. ಇದು ಸಾಲದು. ಮಲೇರಿಯಾ ಜ್ವರಕ್ಕೆ ಕಾರಣವಾದ ಸೊಳ್ಳೆಗಳನ್ನು ಬೆಳೆಯಲು ಬಿಡದಂತೆ ಮಡಿಕೇರಿ, ವೀರರಾಜಪೇಟೆ, ಸೋಮವಾರಪೇಟೆಗಳಲ್ಲಿ ಕೆಲಸಮಾಡಲು ಒಬ್ಬ ಆಫೀಸರನ್ನು ಈಚೆಗೆ ನೇಮಿಸಿರುತ್ತಾರೆ. ಇದು ಒಳ್ಳೇ ಕೆಲಸವೇ. ಇವರ ಕೆಲಸದಿಂದ ಪ್ರಯೋಜನವುಂಟೆಂತ ಕಂಡುಬಂದರೆ ಒಟ್ಟು ದೇಶದಲ್ಲೆಲ್ಲಾ ಈ ಕೆಲಸವನ್ನು ಮಾಡಿಸಲೇ ಬೇಕು. ಸಂಪಾಜೆ ಆಸ್ಪತ್ರೆಯನ್ನು ತೆರೆಯಲು ಧನಸಹಾಯ ಮಾಡಿದದ್ದು ತೃಪ್ತಿಕರವಾಗಿದೆ. ಶನಿವಾರ ಸಂತೆಯಲ್ಲೂ ತಡವಿಲ್ಲದೆ ಆಸ್ಪತ್ರೆಯನ್ನು ಮಾಡಿಯಾರೆಂತ ನಂಬುತ್ತೇವೆ.

ದನಗಳ ಮರಣ ಸಂಖ್ಯೆ 10274. ಇವುಗಳಿಗೆ ಸರಾಸರಿ 30 ರೂ. ಬೆಲೆ ಕಟ್ಟಿದರೂ ಸಹ 3,08,220 ರೂಪಾಯಿ ನಷ್ಟವಾಯಿತು. ಬಡತನದಿಂದ ಕಷ್ಟಪಡುತ್ತಿರುವ ಈ ದೇಶದಲ್ಲಿ ದನಕರುಗಳಿಂದ ಮಾತ್ರ ಇಷ್ಟೊಂದು ದೊಡ್ಡ ನಷ್ಟ ಒಂದು ವರ್ಷದಲ್ಲಿ ಆದರೆ ದೇಶವು ಅಭಿವೃದ್ಧಿಯಾಗುವದು ಹೇಗೆ?

ಆರೋಗ್ಯ ಮತ್ತು ಆರ್ಥಿಕ ಸ್ಥಿತಿಯು ಹೀಗಿದ್ದರೂ ಬರೇ ಭೂಕಂದಾಯವೇ ಜನಸಂಖ್ಯೆಯ ಮೇಲೆ ಸರಾಸರಿ ಹಂಚಿದರೆ ತಲೆ ಒಂದಕ್ಕೆ ರೂ. 2—8—1 ಬೀಳುತ್ತದೆ. ಜಮಾಯಿಯಾಗಿ ಒರುವ ಭೂಮಿ ಇಲ್ಲದ ಜನರನ್ನು ಬಿಟ್ಟರೆ ಭೂಮಾಲಿಕರಿಗೆ ಹೊರೆಯ ಅಳತೆಯು ಮತ್ತಷ್ಟು ಹೆಚ್ಚುತ್ತದೆ. ಈ ಹೊರೆಯ ಲೆಕ್ಕವು ಹೆಂಗಸರು ಮಕ್ಕಳ ಮೇಲೆ ಸಹ ಬೀಳುತ್ತದೆ. ಕೊಡಗಿನಲ್ಲಿಯೇ ವಸೂಲಾಗುವ ಬೇರೆ ತೆರಿಗೆಗಳು ಇಷ್ಟೇ ಆಗುತ್ತದೆ. ಇದನ್ನೆಲ್ಲಾ ನೋಡಿದರೆ ಜನರ ಹೊರೆ ಕಡಿಮೆಯಾಗಲೇ ಬೇಕೆಂಬದು ಸ್ಪಷ್ಟವಾಗುತ್ತದೆ. ಹಾಗಾದರೆ ಜನರ ಸ್ಥಿತಿಯನ್ನು ಅಭಿವೃದ್ಧಿಮಾಡಿಕೊಳ್ಳಲು ಬೇಕಾಗುವ ಹಣ ಎಲ್ಲಿಂದ ದೊರಕಿಸಿಕೊಳ್ಳುವದು ಎಂಬ ಪ್ರಶ್ನೆಯು ಹುಟ್ಟುತ್ತದೆ. ಇಂಡಿಯಾ ಸರಕಾರವು ವಸೂಲು ಮಾಡುವ ತೆರಿಗೆಯಲ್ಲಿ 55 ಕೋಟಿ ರೂಪಾಯಿಯನ್ನು ಮಿಲಿಟರಿಗಾಗಿ ಖರ್ಚು ಮಾಡುತ್ತಿರುವದನ್ನು ನಿಲ್ಲಿಸಿ ಪ್ರಜಾ ಜನರಿಗಾಗಿ ಖರ್ಚು ಮಾಡಬೇಕು.

ನಿಶಾ ಪದಾರ್ಥಗಳಿಂದಲೇ 3,66,491 ರೂಪಾಯಿ ಉತ್ಪತ್ತಿಯಾಗಿದೆ. ಹಿಂದಿನ ವರ್ಷಕ್ಕಿಂತ ಮೂವತ್ತೇಳು ಸಾವಿರ ರೂಪಾಯಿ ಹೆಚ್ಚು. ಕಾನೂನಿಗೆ ವಿರೋಧವಾಗಿ ಮನೆಗಳಲ್ಲಿ ಸಾರಾಯಿ ಮಾಡುವದು ಕಮ್ಮಿಯಾದ್ದರಿಂದ ಸರಕಾರಿ ಸಾರಾಯಿಯ ಖರ್ಚು ಹೆಚ್ಚಾಯಿತೆಂದೂ, ನಿಜವಾಗಿಯೂ ಕುಡುಕತನವು ಹೆಚ್ಚಿಲ್ಲವೆಂದೂ ವರದಿಯಲ್ಲಿ ಬರೆದಿದೆ. ಇದು ನಿಜವಾದ ಕಾರಣವಾದರೆ ಹೆಚ್ಚಿನ ಸಂತೋಷವೇನಿಲ್ಲ. ಕುಡುಕತನವು ಕೆಲವು ಮಟ್ಟಿಗಾದರೂ ಹೆಚ್ಚಾಗಿದೆಯೆಂತ ನಮ್ಮ ಅಭಿಪ್ರಾಯವಾಗಿದೆ. ಕುಡುಕತನವನ್ನು ನಿಲ್ಲಿಸಲಿಕ್ಕೆ ಸರಕಾರದ ಪ್ರಯತ್ನವೇನೂ ಇಲ್ಲ. ನಿಶಾ ನಿಷೇಧದ ಜೀವಧನೆಯ ಕಾರ್ಯವೂ ನಡೆಯುತ್ತಿರುವದಿಲ್ಲ. ಮಹಾತ್ಮ ಗಾಂಧಿಯವರ ಅಸಹಕಾರ ಚಳವಳಿಯ ಕಾಲದಲ್ಲಿ ನಮ್ಮ ದೇಶದಲ್ಲಿ ಕುಡುಕತನವು ಬಹಳ ಮಟ್ಟಿಗೆ ಕಡಿಮೆಯಾಯಿತು. ಈಗ ತಡೆಯಿಲ್ಲದೆ ನಿಶಾ ಸೇವನೆಯು ನಡೆಯುತ್ತಲಿದೆ. ಈ ವರ್ಷ ಕಾಂಗ್ರೆಸಿನ ಕಾರ್ಯಕ್ರಮದಲ್ಲಿ ನಿಶಾಸೇವನೆಯನ್ನು ತಡೆಯುವದೂ ಒಂದಾಗಿದೆ. ನಿಶಾ ಅಂಗಡಿಗಳ ಮುಂದೆ ನಿಂತಿದ್ದು ಕುಡಿಯಲಿಕ್ಕೆ ಹೋಗಬೇಡಿ ಎಂತ ಬೋಧಿಸಿಯೂ, ಬೇಡಿಕೊಂಡೂ ತಡೆಯಬಹುದೆಂತ ಕಾಂಗ್ರೆಸಿನ ಆಜ್ಞೆ ಇದೆ. ಈ ದೇಶದಲ್ಲಿ ಈ ಕಾರ್ಯವನ್ನು ಕೈಕೊಳ್ಳುವದು ತುಂಬಾ ಅವಶ್ಯವಾಗಿದೆ. ಅಹಿಂಸಾತತ್ವವನ್ನು ಪೂರ್ಣವಾಗಿ ನಂಬುವವರು ಈ ಕೆಲಸಕ್ಕೆ ಮುಂದೆ ಬರಬೇಕು. ಇದಕ್ಕೆ ಸರಕಾರವೂ ಉತ್ತೇಜನ ಕೊಡಬೇಕು.

ಸುಮಾರು ನಾಲ್ಕು ಲಕ್ಷ ರೂಪಾಯಿ ಸರಕಾರಕ್ಕೆ ಹೋಗುವದಲ್ಲದೆ ಮಾರಾಟ ಮಾಡುವವರ ಲಾಭವನ್ನೂ, ಪರದೇಶಿ ಮಾದಕ ವಸ್ತುಗಳ ಲೆಕ್ಕವನ್ನೂ ತೆಗೆದುಕೊಂಡರೆ ಈ ಅಭ್ಯಾಸದಿಂದ ದೇಶಕ್ಕೆ ಎಷ್ಟೊಂದು ಆರ್ಥಿಕ ನಷ್ಟವಿದೆಯೆಂಬದನ್ನು ಊಹಿಸಬಹುದು. ಇದಲ್ಲದೆ ನೈತಿಕ ಹಾನಿಯು ಅಪಾರವಾಗಿದೆ.

ವರದಿಯ ವರ್ಷದಲ್ಲಿ ವಿದ್ಯಾ ಇಲಾಖೆಯಲ್ಲಿ ವಿಶೇಷ ಸಂಗತಿಯು ಯಾವದಂದರೆ—ಸ್ತ್ರೀಯರ ವಿದ್ಯೆಯನ್ನು ಏನೂ ಮಾಡಿರುವದು. ಇದಕ್ಕೆ ಹೊಸ ಧನ್ಯವಾದವಿದೆ. ಆದರೆ ಪ್ರೈಮರಿ ವಿದ್ಯೆಯನ್ನು ಕಡ್ಡಾಯವಾಗಿ ಕಲಿಸುವ ಕಾನೂನನ್ನು ಮಾಡಿಕೊಂಡು ಜಾರಿ ಮಾಡಲೇ ಬೇಕು. ಅಸ್ಪೃಶ್ಯರಿಗೂ, ಜಮೀನು ತೋಟಗಳಲ್ಲಿ ಕೂಲಿ ಮಾಡುವವರಿಗೂ ಕಾಡು ಜನರಿಗೂ ವಿದ್ಯೆ ಕೊಡಲು ಸ್ಪೆಶಿಯಲ್ ಆಫೀಸರುಗಳನ್ನು ನೇಮಿಸಿ ಈ ಹಿಂದಿರುವವರನ್ನು ಮುಂದೆ ತರಬೇಕು. ಈ ಬಾಬಿನಲ್ಲಿ ಸರಕಾರವು ಏನೂ ಕೆಲಸ ಮಾಡಿರುವದಿಲ್ಲ.

ಆದಾಯ ವೆಚ್ಚದ ವಿಷಯ ವರದಿಯಲ್ಲಿ ಇರುವ ಸಂಗತಿಗಳು ತಿಳಿಯುವಂತಿಲ್ಲ. ಖಜಾನೆಯಲ್ಲಿ ಸಿಕ್ಕುವ ಲೆಖ್ಖದಿಂದ ಉತ್ಪತ್ತಿ ರೂ. 11,35,726 ಎಂತಲೂ ಖರ್ಚು ರೂಪಾಯಿ 11,49,031 ಎಂತಲೂ ಇದೆ. ಇದರಲ್ಲಿ ಕೊಡಗಿನ ಹೊರಗೆ ಆದ ಜಮಾ ಖರ್ಚು ಸೇರಿರುವಂತೆ ಕಾಣುವದಿಲ್ಲ. ಬಜೆಟ್ ತಯಾರಿಸುವಾಗ ಕೊಡುವ ಸಂಖ್ಯೆಗಳನ್ನೇ ಕೊಟ್ಟರೆ ಸರಕಾರದ ನಿಜವಾದ ಆದಾಯ ವೆಚ್ಚದ ಸ್ಥಿತಿಯು ತಿಳಿದೀತು. ಉತ್ಪತ್ತಿಯ ಪೈಕಿ ರೂ. 4,96,509 ಫಾರೆಸ್ಟು ಇಲಾಖೆಯಿಂದಲೇ ಬಂದಿದೆ. ಈ ಇಲಾಖೆಯ ಖರ್ಚು ರೂಪಾಯಿ 2,43,983. ಉತ್ಪತ್ತಿಯ ಪೈಕಿ ರೂ. 2,95,332 ಗಂಧದಿಂದಲೇ ಆದದ್ದಾಗಿದೆ. ಆಫೀಸರುಗಳ ಮೇಹನತ್ತಿಲ್ಲದೆ ಬರುವ ಇಲಾಖೆ ಕಂದಾಯ, ವೈಸರ್ ಫಾರೆಸ್ಟ್ ಹುಟ್ಟುವಳಿ ಮುಂತಾದದ್ದೂ ಸೇರಿದೆ. ಮರ ಮಾರಾಟದಿಂದ ಮಾತ್ರ ಎಷ್ಟು ಉತ್ಪತ್ತಿಯಾಗಿದೆಯೆಂತ ವರದಿಯಿಂದ ತಿಳಿಯುವದಿಲ್ಲ. ಈ ಇಲಾಖೆಯಿಂದ ನಿವ್ವಳ ಲಾಭ ದೊರೆತರೂ ಇಲಾಖೆಯ ಮೇಹನತ್ತಿನಿಂದ ಅಂಥಾ ಲಾಭ ದೊರೆಯಿತೆಂತ ಹೇಳಲಿಕ್ಕಾಗುವದಿಲ್ಲ. ಕಾಡಿನಲ್ಲಿ ಬೆಳೆಯುವ ಮರಗಳಲ್ಲಿ ಸ್ವಲ್ಪ ಹೆಚ್ಚನ್ನು ಕಡಿದು ಮಾರಿದರೆ ಉತ್ಪತ್ತಿ ಹೆಚ್ಚಾಯಿತು. ಆದರೆ ಈಗ ಸಾಲಿಯಾನ ಕಡಿಯುತ್ತಿರುವಷ್ಟು ಮರಗಳನ್ನು ಕಡಿಯುತ್ತಿದ್ದರೆ ಭಂಡವಾಳವನ್ನೇ ತಿಂದಂತೆ ಆದೀತೋ ಎಂತ ನೋಡುವವರು ಯಾರು? ಮಾವುಕೂಟದ ಟ್ರಾಮ್‌ವೇ ಮಾಡಬೇಕಾದರೆ ಇಲಾಖೆಯಿಂದಲೇ ಉತ್ಪತ್ತಿ ತೋರಿಸಿದರು. ಗಂಧವನ್ನು ದುಂದು ಖರ್ಚುಮಾಡಿ ಉತ್ಪತ್ತಿ ತೋರಿಸಿದ್ದೆಂತಲೂ, ವರ್ಷಕ್ಕೆ 200 ಟನ್ನಿಗಿಂತ ಹೆಚ್ಚಿಗೆ ಕಡಿದರೆ ಭಂಡವಾಳವನ್ನು ಕತ್ತರಿಸಿದಂತೆ ಆದೀತೆಂತಲೂ ಈಚೆಗೆ ಸರ್ಕಾರಕ್ಕೆ ತಿಳಿಯಿತು. ಮರ ಕಡಿಯುವ ವಿಷಯದಲ್ಲೂ ಮಿತಿಮೀರದಂತೆ ಕೂಡಲೇ ನೋಡಿಕೊಳ್ಳಬೇಕು.

ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ರಸ್ತೆ ವಗೈರೆ ಕೆಲಸಗಳಿಗೆ ರೂ. 42000 ಕೊಟ್ಟದ್ದರಲ್ಲಿ ಬರೇ 29000 ರೂ. ಮಾತ್ರ ಖರ್ಚಾಯಿತಂತೆ. 'ಕೆಲಸಕ್ಕೆ ಜನರು ಸಿಕ್ಕದೆ ಹೀಗಾಯಿತೆಂತ ಬರೆದಿದೆ.' ಪಿ. ಡಬ್ಲ್ಯು. ಡಿ. ಕೆಲಸಕ್ಕೇನೇ ಮುಂದಾಗಿ ಗಮನ ಕೊಡುವ ಇಲಾಖೆಯ ಮೂಲಕ ಡಿಸ್ಟ್ರಿಕ್ಟ್ ಬೋರ್ಡು ರಸ್ತೆ ವಗೈರೆಗಳ ಕೆಲಸ ನಡಿಯಬೇಕಾಗಿರುವದರಿಂದ ಹೀಗಾಗಿದೆಯೆಂತ ನಮ್ಮ ಅಭಿಪ್ರಾಯ. ಡಿಸ್ಟ್ರಿಕ್ಟ್ ಬೋರ್ಡಿನ ಇಂಜಿನೀಯರಿಂಗ್ ಕೆಲಸ ನಡಿಸಲು ಡಿಸ್ಟ್ರಿಕ್ಟ್ ಬೋರ್ಡಿನ ತಾಬೆಯಲ್ಲೇ ಇಂಜಿನೀಯರಿಂಗ್ ಸಿಬ್ಬಂದಿ ಇದ್ದರೆ ಇದಾವದರಲ್ಲಿ ಖರ್ಚು ಆಗಬೇಕಾದಷ್ಟು ಖರ್ಚು ಆದೀತೆಂತ ನಮಗೆ ತೋರುತ್ತದೆ. ಪಿ. ಡಬ್ಲ್ಯು. ಡಿ.ಗೆ ಕೊಡುವ ಪಂತಿಗೆಯಿಂದಲೇ ಇಂಜಿನೀಯರಿಂಗ್ ಸಿಬ್ಬಂದಿ ಇಡಬಹುದು. ಒಂದು ವೇಳೆ ಸ್ವಲ್ಪ ಹೆಚ್ಚಿಗೆ ಖರ್ಚಾದರೂ ನಷ್ಟವಿಲ್ಲ. ಪ್ರಜಾ ಪ್ರತಿನಿಧಿಗಳಿಂದ ಕೂಡಿದ ಡಿಸ್ಟ್ರಿಕ್ಟ್ ಬೋರ್ಡು ದೇಶಕ್ಕೆ ಅವಶ್ಯವಿರುವಂತೆ ಬಜೆಟ್ಟನ್ನು ತಯಾರಿಸಿರುವಾಗ ಅದರಂತೆ ಬೇಕಾದ ಅವಶ್ಯಕತೆಗಳನ್ನು ಮಾಡಿಕೊಳ್ಳಬೇಕಾದದ್ದು ಬೋರ್ಡಿನ ಕೆಲಸವಾಗಿದೆ. ಹೀಗೆ ಮಾಡಲು ಬೋರ್ಡಿನ ತಾಬೆಯಲ್ಲಿ ಇಂಜಿನೀಯರಿಂಗ್ ಸಿಬ್ಬಂದಿ ಇರಬೇಕು. ಈ ಕ್ರಮವು ಮದ್ರಾಸು ಅಧಿಸತ್ತೆಯಲ್ಲಿ ಬಹಳ ಪೂರ್ವದಿಂದಲೇ ಜಾರಿಯಲ್ಲಿದೆ.

ದೇಶದ ಜನರು ಸರಕಾರಿ ಆಡಳಿತದಲ್ಲಿ ಹೆಚ್ಚು ಸಿಗುವ ಬೇಕಾದದ್ದು ಬಹಳ ಅವಶ್ಯವಿದೆ. ವರದಿಯ ಘೋಷ್ವಾರೆ ವನ್ನು ಕನ್ನಡದಲ್ಲಿ ತರ್ಜುಮೆ ಮಾಡಿಸಿ ಎಲ್ಲಾ ದೊರಕುವಂತೆ ಮಾಡಬೇಕಾದದ್ದು ಅವಶ್ಯ. ದೇಶದ ಆಡಳಿತ ವಿಚಾರವು ದೇಶದವರಿಗೆ ವಿಸ್ತಾರವಾಗಿ ತಿಳಿಯಬೇಕಾದ್ದರಿಂದ ಈ ನಮ್ಮ ಸೂಚನೆಗೆ ಸರ್ಕಾರವು ಗಮನ ಕೊಟ್ಟೀತೆಂತ ನಂಬುತ್ತೇವೆ.

ಜಮೀನ್ದಾರರ ಸಂಘ.

ಈ ಸಂಘದ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗು ಈ ತಾ. 19 ನೇ ದಿನ ವೀರರಾಜಪೇಟೆಯಲ್ಲಿ ನಡೆಯಿತು. ಈ ಕೆಳಗಿನ ಮೆಂಬರುಗಳು ಹಾಜರಿದ್ದರು.—ಮೇ॥ ಗಳಾದ 1 ಸಿ. ಎಚ್. ಮೊಣ್ಣಯ್ಯನವರ, ವೈಸ್ ಪ್ರೆಸಿಡೆಂಟರ (ಅಧ್ಯಕ್ಷರು) 2. ಸಿ. ಎಸ್. ಉತ್ತಯ್ಯನವರ, 3. ಕೊಳ್ಳಿಮಾಡ ಕರುಂಬಯ್ಯನವರು, 4. ಪಿ. ಜಿ. ಮುದ್ದಯ್ಯನವರು, 5. ಅಜ್ಜಿಗುಟ್ಟಿರ ಪೊನ್ನಪ್ಪನವರು, 6. ಗುಡ್ಡಂಡ ಭೀಮಯ್ಯನವರು, 7. ಕೀಕಿರ ಅಣ್ಣಯ್ಯನವರು, 8. ಕೋಟಿರ ತಮ್ಮಯ್ಯನವರು, 9. ಚಂಗಂಡ ಕುಟ್ಟಪ್ಪನವರು, 10. ಚೆಪ್ಪುಡಿರ ಅಪ್ಪಯ್ಯನವರು, 11 ಚಮ್ಮಟ್ಟಿರ ಮಾದಪ್ಪನವರು, 12. ನಾಯಡ ಚಂಗಪ್ಪನವರು, 13. ಕೊಳುವಂಡ ಬಿ. ನಂಜಪ್ಪನವರು ಮತ್ತು 14 ಪಟ್ಟಡ ಚಂಗಪ್ಪನವರು

1 ಸಂಘದ ಪ್ರೆಸಿಡೆಂಟರಾದ ಶ್ರೀಯುತ ಪಾರುವಂಗಡ ಕಾಳಪ್ಪನವರು ದೇಶಸೇವೆಯಲ್ಲಿ ನಿರತರಾಗಿ ಇರುವಾಗಲೇ ಅಕಾಲ ಮರಣ ಹೊಂದಿದ್ದಕ್ಕೆ ಸಂಘದ ಕಮಿಟಿಯವರು ತಮ್ಮ ವ್ಯಸನವನ್ನು ಈ ಮೂಲಕ ಸೂಚಿಸುತ್ತಾರೆ ಮತ್ತು ಅವರ ಕುಟುಂಬಕ್ಕೆ ತಮ್ಮ ಸಹಾನುಭೂತಿಯನ್ನು ತಿಳಿಸುವದಲ್ಲದೆ ಅವರ ಆತ್ಮಕ್ಕೆ ಶಾಂತಿಯನ್ನೀಯಲಿ ಎಂತ ಕಮಿಟಿಯವರು ಪ್ರಾರ್ಥಿಸುತ್ತಾರೆ.

2. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

3. ಡಿಸೆಂಬರು ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

4. ರಶೀತಿ ಪುಸ್ತಕಗಳ ಸಂಬಂಧವಾಗಿ ಮೆ॥ ಉದಯಂಡ ಪೂಣ್ಣಯ್ಯನವರ ಪಟ್ಟಿ ಮೇರೆ ಆಸಾಮಿಗಳಿಗೆಲ್ಲ ಕಾರ್ಡು ಬರೆಯಲಾಗಿದೆ. ಹಳಗೋಟೆ ಲಕ್ಷ್ಮಪ್ಪನವರು ತನಗೆ ರಶೀತಿ ಪುಸ್ತಕ ಕೊಟ್ಟಿರುವದಿಲ್ಲವಾಗಿ ಜವಾಬು ಬರೆದಿರು

(5ನೇ ಪುಟದಲ್ಲಿ ಮುಂದುವರಿದಿದೆ.)

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೨೨ನೇ ಪ್ರಕರಣ

ಖೇಡಾ ಸತ್ಯಾಗ್ರಹ.

ಆದರೆ ನನಗೆ ಸ್ವಲ್ಪವೂ ವಿರಾಮ ದೊರೆಯಲಿಲ್ಲ ಅಹಮದಾಬಾದಿನ ಗಿರಣಿಯ ಕೂಲಿಗಾರರ ಮುಷ್ಕರವು ಮುಗಿಯುವುದಕ್ಕಿಲ್ಲ. ಅಷ್ಟರಲ್ಲಿಯೇ ನಾನು ಖೇಡಾ ಸತ್ಯಾಗ್ರಹ ಕದನಕ್ಕೆ ನುಗ್ಗಬೇಕಾಯಿತು

ಖೇಡಾಜಿಲ್ಲೆಯ ಬಹುಭಾಗದಲ್ಲಿ ಪೈರು ಬೆಳೆಯದಿದ್ದುದರಿಂದ ಅಲ್ಲಿನ ಪರಿಸ್ಥಿತಿಯು ಬರಗಾಲದಂತೆ ಪರಿಣಮಿಸಿದ್ದಿತು ಖೇಡದ ರೈತರು ಆ ವರ್ಷದ ಭೂಗಂದಾಯವನ್ನು ನಿಲ್ಲಿಸುವಂತೆ ಪ್ರಯತ್ನಪಡುವ ವಿಚಾರದಲ್ಲಿದ್ದರು

ಈ ವಿಷಯವಾಗಿ ನಾನು ರೈತರಿಗೆ ನಿರ್ದಿಷ್ಟವಾದ ಸಲಹೆಯನ್ನು ಕೊಡುವುದಕ್ಕೆ ಮುಂಚೆ ಶ್ರೀ ಅಮೃತಲಾಲ್ ಠಕ್ಕರರು ಅಲ್ಲಿನ ಪರಿಸ್ಥಿತಿಯನ್ನು ವಿಮರ್ಶಿಸಿ ಅದರ ಮೇಲಿನ ವರದಿಯನ್ನು ಬರೆದಿದ್ದರಲ್ಲದೆ ಆ ಪ್ರಾಂತ್ಯದ ಮುಖ್ಯಾಧಿಕಾರಿಗಳಾದ ಕಮಿಷನರೊಡನೆ ಈ ಪ್ರಶ್ನೆಯನ್ನು ಮುಖತಃ ಚರ್ಚಿಸಿದ್ದರು ಶ್ರೀ ಗಳಾದ ಮೋಹನಲಾಲ್ ಪಂಡ್ಯಾ ಮತ್ತು ಶಂಕರಲಾಲ ಪರೀಖರವರು ಈ ಕದನಕ್ಕೆ ಸೇರಿ ಶ್ರೀ ವಿಠಲಭಾಯೀ ಪಟೇಲ್ ಮತ್ತು ದಿವಂ ಸರ್. ಗೋಕುಲದಾಸ್, ಕಹನ್‌ದಾಸ್ ಪಾರೇಖರ ಮೂಲಕ ಮುಂಬಯಿಯ ಶಾಸನ ಸಭೆಯಲ್ಲಿ ಚಳವಳವನ್ನು ಹೂಡಿದ್ದರು. ಈ ಸಂಬಂಧವಾಗಿ ಗವರ್ನರರನ್ನು ಭೇಟಿಮಾಡಲು ಅರ್ಜಿದಾರರ ನಿಯೋಗಗಳೊಂದೆರಡು ಅವರ ಬಳಿಗೆ ಹೋಗಿದ್ದವು

ಈ ಸಮಯದಲ್ಲಿ ನಾನು ಗುಜರಾತ್ ಸಭೆಯ ಅಧ್ಯಕ್ಷನಾಗಿದ್ದೆನು. ಈ ಸಭೆಯು ಸರಕಾರಕ್ಕೆ ಅರ್ಜಿಗಳನ್ನೂ, ತಾರುಗಳನ್ನೂ ಕಳುಹಿಸಿತು, ಕಮಿಷನರ ಬೈಗಳನ್ನೂ ಬೆದರಿಕೆಗಳನ್ನೂ ಕೂಡ ತಾಳ್ಮೆಯಿಂದ ಸಹಿಸಿತು ಆ ಸಂದರ್ಭದಲ್ಲಿ ಅಧಿಕಾರವರ್ಗದವರ ನಡತೆಯು ಎಷ್ಟು ಹಾಸ್ಯಾಸ್ಪದವಾಗಿಯೂ, ಮರ್ಯಾದೆಗೇಡಾಗಿಯೂ ಇದ್ದಿತೆಂಬುದನ್ನು ನೆನಸಿಕೊಂಡರೆ ಈಗ ಅದನ್ನು ನಂಬುವ ಹಾಗಿಲ್ಲ

ರೈತರು ಕೇಳುವುದು ಹಗಲಿನ ಬೆಳಕಿನಷ್ಟು ಸ್ಪಷ್ಟವಾಗಿದ್ದಿತು ಅದು ಎಷ್ಟು ಕಡಿಮೆಯಾಗಿದ್ದಿತೆಂದರೆ ಸರಕಾರದವರು ಅದಕ್ಕೆ ಒಪ್ಪಿಕೊಳ್ಳಲು ಯಾವ ಅಡಚಣೆಯೂ ಇರುತ್ತಿರಲಿಲ್ಲ ಭೂಗಂದಾಯದ ನಿಯಮದ ಪ್ರಕಾರ ನಾಲ್ಕಾಣೆಗಿಂತ ಕಡಿಮೆಯಾಗಿ ಪೈರಾದರೆ ಆ ವರ್ಷದ ಭೂಗಂದಾಯವನ್ನು ಪೂರ್ತಿಯಾಗಿ ನಿಲ್ಲಿಸಬೇಕೆಂದು ರೈತರು ಹೇಳುವುದಾಗಿದ್ದಿತು ಸರಕಾರದವರು ತಮ್ಮ ಲೆಕ್ಕಚಾರದ ಪ್ರಕಾರ ಬೆಳೆಯು ನಾಲ್ಕಾಣೆಗಿಂತ ಹೆಚ್ಚೆಂದು ಹೇಳುತ್ತಿದ್ದರು. ರೈತರಾದರೋ ನಾಲ್ಕಾಣೆಗಿಂತ ಕಡಿಮೆಯೆಂದು ವಾದಿಸುತ್ತಿದ್ದರು. ಆದರೆ ಸರ್ಕಾರದವರು ಒಬ್ಬರ ಮಾತಿಗೆ ಕಿವಿಗೊಡುವಂತಿರಲಿಲ್ಲ. ಪಂಚಾಯಿತರನ್ನು ನೇಮಿಸಬೇಕೆಂದು ಒಬ್ಬರು ಕೇಳಲು ಅದು ತಮಗೆ ದ್ರೋಹವೆಂದು ಸರ್ಕಾರದವರು ಎಣಿಸಿದರು ಅರ್ಜಿಗಳಿಂದಲೂ, ಬಿನ್ನಹಗಳಿಂದಲೂ ಯಾವ ಪ್ರಯೋಜನವೂ ಆಗದಿರಲು ಕಟ್ಟಕಡೆಗೆ ನಾನು ನನ್ನ ಸಂಗಡಿಗರ ಸಲಹೆಯನ್ನು ತೆಗೆದುಕೊಂಡು ರೈತರಿಗೆ ಸತ್ಯಾಗ್ರಹ ನಡೆಸುವಂತೆ ಸಲಹೆ ಕೊಟ್ಟೆನು

ಖೇಡಾದ ಸ್ವಯಂಸೇವಕರಲ್ಲದೆ ಈ ಹೋರಾಟದಲ್ಲಿ ಶ್ರೀ ಗಳಾದ ವಲ್ಲಭಭಾಯೀ ಪಟೇಲ್, ಶಂಕರಲಾಲ ಬ್ಯಾಂಕರ್, ಶ್ರೀಮತೀ ಅನಸೂಯಾಬಾಯೀ ಮತ್ತು ಶ್ರೀ ಗಳಾದ ಇಂದುಲಾಲ್, ಕನ್ನೈಯಾಲಾಲ್ ಯಾಜ್ಞಿಕ್, ಮಹದೇವ ದೇಸಾಯಿ ಮುಂತಾದವರು ನನ್ನ ಸಂಗಡಿಗರಾಗಿದ್ದರು ಈ ಕದನದಲ್ಲಿ ಕೊಡಗುವುದಕ್ಕಾಗಿ ಶ್ರೀ. ವಲ್ಲಭಭಾಯಿಯು ಸಾಗಗಳಾಗಿ ನಡೆಯುತ್ತಲೂ ಇದ್ದ ತಮ್ಮ ವಕೀಲ ಕೆಲಸವನ್ನು ನಿಲ್ಲಿಸಬೇಕಾಯಿತು ಇದನ್ನು ಅವರು ಪುನಃ ಪ್ರಾರಂಭಿಸಲಾಗಲೇ ಇಲ್ಲವೆಂದು ಹೇಳಬಹುದು.

ನಾವೆಲ್ಲರೂ ತಂಗುವುದಕ್ಕೆ ಸಾಕಾದಷ್ಟು ವಿಶಾಲವಾದ ಇನ್ಯಾವ ಸ್ಥಳವೂ ದೊರಕದುದರಿಂದ ನಾವು ನಡಿಯಾದದ ಅನಾಥಾಶ್ರಮದಲ್ಲಿ ನಮ್ಮ ಕಾರ್ಯಕೇಂದ್ರವನ್ನು ಹೂಡಿದೆವು

ಸತ್ಯಾಗ್ರಹಿಗಳು ಈ ಕೆಳಗಿನ ಪ್ರಮಾಣಕ್ಕೆ ಸೈನ್ ಹಾಕಿದರು

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಒಪ್ಪಂದ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರ್ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್, "ಕೊಡಗು" ಮಡಿಕೇರಿ.

12 bore Victor Cartridges Rs 10/- Per 100

Mahomedally-Noorbhoy.

ARMS & AMMUNITION MART.

321 Abdul Rehman Street.

52-19 BOMBAY.

ಕಟುಕಷಾಯ ಮಲೇರಿಯ ರಕ್ಷೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಕ್ಕೊಮ್ಮೆ ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ವ್ಯಾಧಿಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0; 3ಕ್ಕೆ ರೂ. 4—0—0; 6ಕ್ಕೆ ರೂ 7—8—0, 12ಕ್ಕೆ ರೂ. 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಹೋಗುವುದು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದ ಮೂತ್ರ ಹೊಯ್ಯುವಾಗ ಉರಿಯುವುದು, ಅಗಾಗ್ಯೆ ಮೂತ್ರ ಬರುವುದು, ಮೂತ್ರ ಕಡೆಯಲಿಕ್ಕೆ ಧಾತು, ಹುಡಿ ಹೋಗುವುದು, ಅಗಾಗ್ಯೆ ಮೂತ್ರ ಬರುವುದು, ಮೂತ್ರ ಕಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಚಿಕ್ಕ ಬಾಟ್ಲು 1, 3, 6ಕ್ಕೆ ರೂ. 1—4—0 3—8—0, 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1. 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುರಿ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಪಸ್ಮಾರ ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—4—0

ನಮ್ಮ ಕೆಟಲಾಗು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ.

9. ಮಂಗಳೂರು.

52—15

ಎಂಪಯರ್ ಆಫ್ ಇಂಡಿಯಾ
ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು (1897ರಲ್ಲಿ)

ತಿಂಗಳಿಗೆ ರೂ. 12—8—0 ಕೊಡುತ್ತಾ ಬಂದರೆ ಲಾಭ ಸಹಿತ ಮತ್ತು ಅದರೊಡನೆ ಬೋನಸ್ಸುಗಳಿಂದ ಹೆಚ್ಚಾಗುವ ಒಂದು ಪಾಲಿಸಿಯು ಈ ಕೆಳಗೆ ನಮೂದಿಸಿದ ರೀತಿ ನಿಮಗೆ ದೊರೆಯುವುದು.

ಪ್ರಾಯ	ಜೀವಾಂತ್ಯದಲ್ಲಿ ಕೊಡಲಾಗುವ ಹಣ				ಜೀವಾಂತ್ಯ ಯಾ ವರ್ಷಗಳ ಅಂತ್ಯಕ್ಕೆ ಕೊಡುವ ಎಂಡೊವ್ಮೆಂಟ್ ಅಶ್ಯೂರೆನ್ಸ್.		
		ಪ್ರೀಮಿಯಂಗಳ ನಿರಖು					
	ಜೀವಾಂತ್ಯ	15 ವರ್ಷಗಳು	20 ವರ್ಷಗಳು.	25 ವರ್ಷಗಳು.	20 ವರ್ಷಗಳು.	25 ವರ್ಷಗಳು.	30 ವರ್ಷಗಳು
	ರೂ	ರೂ	ರೂ	ರೂ.	ರೂ.	ರೂ	ರೂ
25	5,820	3,550	4,250	4,800	3,010	3,800	4,520
30	5,140	3,290	3,930	4,390	2,930	3,620	4,220
35	4,480	3,030	3,600	3,970	2,810	3,400	3,870

ಮಡಿಕೇರಿ, ಸೋಮವಾರಪೇಟೆ ಮತ್ತು ಸಿದ್ದಾಪುರ ಮೊದಲಾದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಹೆಡ್ ಆಫೀಸು. ಎಂಪಯರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು. 152 ಕಮರ್ಶಿಯಲ್ ಬೀದಿ ಬೆಂಗಳೂರು.

24—6

Xmas & New Year Presents!
Toys for Children!

A set comprising of tiny, bright and beautiful tumblers, pots, spoons, etc. made of brass and bell metal, are quite suitable for the amusement and play of children.

Small set 32 articles Rs. 2—8—0. Medium set 32 articles Rs 3—8—0.

Big set of 32 articles Rs. 4—8—0.

Securely packed in neat card board boxes. Postage extra.

Silk Sarees, Jackets, Headkerchieves, Embroidary Hand Bags & Money Purses-a Speciality.

Send your orders to:-

BHARADWAJ & CO.,

BROCADE, EMBROIDARY & SILK MANUFACTURERS,

Benares City.

52—22

ಹೆಡ್ ಆಫೀಸು—ಬೊಂಬಾಯಿ.

ಸ್ಥಾಪನೆ—1874.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವೈವಾಟದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು { 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25.
1000 ,, ಎಂಡೊವ್ಮೆಂಟ್ ,, ,, —ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ. ಪುನಹ ಒಂದು ಹೊಸ ಪಾಲಿಸಿಯನ್ನು "ಓರಿಯಂಟಲ್" ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು. ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಓರಿಯಂಟಲ್ ಬಿಲ್ಡಿಂಗ್ಸ್, ನಂ. 1. ಸೌತ್ ಪರೇಡ್, ಬೆಂಗಳೂರು. { 52—4

ಯಲ್. ಆರ್. ಕೃಷ್ಣಸ್ವಾಮೈಯ್ಯರ್. ಬ್ರಾಂಚ್ ಸೆಕ್ರೆಟರಿ.

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 1530.
If not delivered please return to
"KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩-೮-೦.

ಸರ್ವೇನ ಶೋಕದಯುಯ ಐವಾ ... ಗ್ರಯಶ್ಚ ... || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ಭಾಗ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಸಂಪುಟ ೮] ಮಡಿಕೇರಿ, ಸನ್ ೧೯೩೯ ನೇ ಇಸವಿ ಫೆಬ್ರವರಿ ತಾರೀಕು ೧ ನೇ ಶುಕ್ರವಾರ [ಸಂಚಿಕೆ ೩೫

JUST ARRIVED.

Guns.

12 Bore D. B. B. L. Guns @ Rs 145, 140, 130 & 100 each
12 „ S. B. B. L. Guns @ „ 70 & 52-8-0 each
12 „ D. B. M. L. „ @ „ 70 each

Cartridges.

Eley's Shot Cartridges Rs 12-8-0 per 100
Lg & Sg. „ „ 14-0-0 „ „

Ball Cartriges Rs 16-0-0 per 100.
Lethal Bullet „ „ 32-0-0 „ „
12bore Ballistite „ „ 16-0-0 „ „
1 lb tin F. F Gun Powder Rs 1-14-0 „
½ „ „ „ „ „ 1-0-0
¼ „ „ „ „ „ 0-10-0.
Boxes of 250 M. L. Caps „ 1-0-0 each.

Selling fast. Buy requirements early.

52-52

SPENCER & CO. LTD. Arms & Ammunition Dealers. **MERCARA.**

Post Box 423.
TRIPLICANE, MADRAS

Catalogue Free
to Bon fide Enquirers

MANUFACTURES AND DEALS IN ALL:—

(1) Gemset Jewels, gold and silver articles of all patterns
(2) Race Cups, Caskets, Medals, etc., for presentation purposes
(3) Trowels, Keys, Locks etc., for ceremonial purposes.

JEWELLER
BY
APPOINTMENT
TO
His Excellency
THE GOVERNOR
OF MADRAS.

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro-plating, gilding and nickelling
(3) Buying old jewellery, or undertaking to effect sale.

V. SUBRAMANIA IYER
JEWELLER

Telephone:—
3145.

Telegrams:—
"PRECIOUS"

52-20

Gold-smith, Silver smith, & Dealer in all Gemset Jewels.

Do you wish to increase the yield of your Coffee?
If so, please apply

BETTIAH'S SPECIAL COFFEE MIXTURE,

The **BEST** on the market because

1. It is prepared according to the principles approved by eminent Agricultura Chemists.
2. It is prepared from high-grade fertilisers of the purest kind
3. And last, but not least, it is the cheapest mixture, for the plant-foods it contains.

Apply, for further particulars to:—

Mr. B. Bettiah,
Sole Agent for Mysore and Coorg,
IMPERIAL CHEMICAL INDUSTRIES (INDIA) LTD.,
Santhepet, MYSORE.

12-2

ಅ ಪೂ ರ್ವ ಸಂ ದ ರ್ಭ.

ಹಾಳಾದ ದೇಹದಾರ್ಢ್ಯವನ್ನು ಪುನಃ ಸಂಪಾದಿಸ
ಬೇಕಾದರೆ ಇದೀಗ ಅಪೂರ್ವ ಸಂದರ್ಭ.

ಅತಂಕನಿಗ್ರಹ ಮಾತ್ರೆಗಳು

ಮೆದುಳಿನ ಆಯಾಸ, ಮಲಬದ್ಧತೆ, ನರಗಳ ದೌ
ರ್ಬಲ್ಯಾದಿಗಳನ್ನು ಬೇಗನೆ ಗುಣಮಾಡುವುವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!!

ಧರ್ಮಾರ್ಥ! ಧರ್ಮಾರ್ಥ!!

ಕಾ ಮ ಶಾ ಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋ
ರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ
ಬರೆದುಕೊಳ್ಳಿರಿ:—

ಅತಂಕನಿಗ್ರಹ ಔಷಧಾಲಯ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

52-26

ಕೊಡಗು.

ಸನ ೧೯೨೯ನೇ ಇಸವಿ

ಫೆಬ್ರವರಿ ತಾ. ೧ನೇ ಶುಕ್ರವಾರ.

ವೈಸ್‌ರಾಯರ ಭಾಷಣ.

ಈ ವಾರದಲ್ಲಿ ಪ್ರಾರಂಭವಾದ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೀಟಿಂಗಿನ ಕಾರ್ಯಗಳು ಶುರುವಾಗುವ ಮುಂಚೆ ವೈಸ್‌ರಾಯರು ಒಂದು ಭಾಷಣ ಮಾಡಿದರು. ಚಕ್ರವರ್ತಿಗಳ ಪ್ರತಿನಿಧಿಯಾದ ವೈಸ್‌ರಾಯರು ದೇಶದ ಆಗಿಂದಾಗ್ಗೆ ಇರುವ ಪರಿಸ್ಥಿತಿಯ ಮೇಲೆ ತಮ್ಮ ಅಭಿಪ್ರಾಯಗಳನ್ನು ಎಸೆಂಬ್ಲಿಯ ಭಾಷಣದಲ್ಲಿ ತಿಳಿಸುತ್ತಾರೆ. ಈ ಸಾರಿ ಭಾಷಣದಲ್ಲಿ ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಕೊಟ್ಟ ಅಭಿಪ್ರಾಯಗಳು ಹಿಂದುಸ್ಥಾನದ ಜನರನ್ನು ಸಿಟ್ಟಿಗೆಬ್ಬಿಸುವಂತೆ ಇಲ್ಲ. "ಹಿಂದುಸ್ಥಾನದಲ್ಲಿ ರಾಜಕೀಯ ವಿಷಯದಲ್ಲಿ ಈಗ ಇರುವ ಬಿಕ್ಕಟ್ಟಿನ ಸ್ಥಿತಿಯನ್ನು ಇಂಗ್ಲೆಂಡೂ, ಇಂಡಿಯಾವೂ ಕಲೆತು ಯೋಚಿಸಿ ನಿವಾರಿಸಿಕೊಳ್ಳಬೇಕಷ್ಟೆ" ಎಂತಲೂ "ಹಿಂದುಸ್ಥಾನದಲ್ಲಿ ರಾಜಕೀಯ ವಿಷಯ ಯೋಚಿಸುವ ಹಿಂದೀಯರ ಮನಃಪೂರ್ತಿ ಒಪ್ಪಿಗೆ ಇರುವ ಮಾರ್ಪಾಡುಗಳನ್ನು ಪಾರ್ಲಿಮೆಂಟು ಮಂಜೂರು ಮಾಡದ ವಿನಹ ಪ್ರಯೋಜನವಾಗಲಾರದು" ಎಂತಲೂ ಹೇಳಿದ್ದಾರೆ. ಹಿಂದುಸ್ಥಾನಕ್ಕೆ ಎಷ್ಟರ ಮಟ್ಟಿಗೆ, ಯಾವ ತರದ ರಾಜಕೀಯ ಮಾರ್ಪಾಡುಗಳು ಆಗಬೇಕೆಂಬದನ್ನು ನಿರ್ಧರಿಸಲು ಪಾರ್ಲಿಮೆಂಟಿಗೇ ಹಕ್ಕಿರುವದು ಎಂತ ಬ್ರಿಟಿಷ್ ಅಧಿಕಾರಿಗಳು ಆಗಿಂದಾಗ್ಗೆ ಅಂದುಕೊಳ್ಳುತ್ತಾರೆ. ಈಗ ವೈಸ್‌ರಾಯರು ಕೊಟ್ಟ ಅಭಿಪ್ರಾಯದಲ್ಲಿ ಹಿಂದುಸ್ಥಾನದ ಭವಿಷ್ಯತ್ತನ್ನು ನಿರ್ಧರಿಸುವ ಕಾರ್ಯದಲ್ಲಿ ಭಾಗ ತೆಗೆದುಕೊಳ್ಳಲು ಹಿಂದೀಯರಿಗೂ ಹಕ್ಕಿದೆಯೆಂತ ಒಪ್ಪಿದಂತಾಯಿತು. ಹಿಂದುಸ್ಥಾನದ ಭವಿಷ್ಯತ್ತನ್ನು ನಿಶ್ಚೈಸಿಕೊಳ್ಳುವ ಹಕ್ಕು ಹಿಂದೀಯರಿಗೇನೇ ಇರುವದು, ಬ್ರಿಟಿಷ್ ಜನರಿಗಲ್ಲವೆಂಬ ತತ್ವವನ್ನು ಅನುಸರಿಸಿಯೇ ಸೈಮನ್ ಕಮಿಷನಿಗೆ ವಿರೋಧಿಸಿದ್ದಾಗಿದೆ. ವೈಸ್‌ರಾಯರು ಇಷ್ಟರ ಮಟ್ಟಿಗೆ ಹೋಗದಿದ್ದರೂ ಕೆಲವು ಮಟ್ಟಿಗಾದರೂ ಹಿಂದೀಯರ ಹಕ್ಕನ್ನು ಒಪ್ಪಿಕೊಂಡದ್ದು ಸಮರ್ಪಕವಾಗಿದೆ.

ನೆಹರು ಕಮಿಟಿ ರಿಪೋರ್ಟಿಗೂ ತಕ್ಕಷ್ಟು ಬೆಲೆಕೊಟ್ಟಿದ್ದಾರೆ. ಅದು ತುಂಬಾ ಶ್ರಮದಿಂದ ತೆಗೆದುಕೊಂಡು ತೀರ್ಮಾನಕ್ಕೆ ಬಂದಿರುವ ಅಭಿಪ್ರಾಯಗಳು ಎಂತ ಒಪ್ಪಿದ್ದಾರೆ. ಆದರೆ ಇದಕ್ಕೆ ಇನ್ನೂ ಅನೇಕ ಪಂಗಡಗಳು ಒಪ್ಪಿರುವದಿಲ್ಲ ಎಂತ ಹೇಳಿ ಈ ವರದಿಯ ಮಹತ್ವವನ್ನು ಕಡಿಮೆ ಮಾಡಿದ್ದಾರೆ. ಮುಸಲ್ಮಾನರ ಕೆಲವು ಪಂಗಡಗಳು ಈ ವರದಿಯ ಕೆಲವು ಭಾಗಗಳನ್ನು ಒಪ್ಪಿಕೊಂಡಿರುವದಿಲ್ಲ. ಅಂಥಾ ಒಪ್ಪಿಗೆಯು ದೊರಕುವಂತೆ ಮುಂದಾಳುಗಳು ಇನ್ನೂ ಪ್ರಯತ್ನಿಸುತ್ತಲೇ ಇದ್ದಾರೆ. ವೈಸ್‌ರಾಯರ ಮಾತುಗಳನ್ನು ಮನಸ್ಸಿಗೆ ತೆಗೆದುಕೊಂಡು ಮುಸಲ್ಮಾನ ಸಹೋದರರು ದೇಶದ ಹಿತವನ್ನೇ ಮುಂದಿಟ್ಟು ತಮಗೆ ಇರುವ ಸಂಶಯಗಳನ್ನು ಸ್ವರಾಜ್ಯ ಸಿಕ್ಕಿದ ನಂತರ ನಿವಾರಿಸಿಕೊಳ್ಳಬಹುದೆಂತ ನಂಬಿ ನೆಹರೂ ಕಮಿಟಿ ವರದಿಗೆ ಒಪ್ಪುವರೆಂತ ನಂಬುತ್ತೇವೆ. ಹಾಗೂ ವೈಸ್‌ರಾಯರಾಗಲಿ ಬ್ರಿಟಿಷ್ ಸರಕಾರವಾಗಲಿ ಮನಸ್ಸಿದ್ದರೆ ನೆಹರು ಕಮಿಟಿ ವರದಿಯಲ್ಲಿ ಎಲ್ಲರ ಒಪ್ಪಿಗೆ ಪಡೆದ ಭಾಗಗಳನ್ನು ಅಂಗೀಕರಿಸಿಕೊಳ್ಳಬಹುದು.

ಬ್ರಿಟಿಷ್ ಪಾರ್ಲಿಮೆಂಟು ಹಿಂದೀಯರು ತಯಾರಿಸಿದ ರಚನೆಯನ್ನೇ ಅಂಗೀಕರಿಸಿಕೊಳ್ಳಬೇಕೆಂತ ಯೋಚಿಸುವದು ಹುಚ್ಚುತನವೆಂತ ವೈಸರಾಯರು ಹೇಳುತ್ತಾರೆ. ಹಿಂದೀಯರ ಒಪ್ಪಿಗೆಯಿಲ್ಲದ ಸುಧಾರಣೆಯನ್ನು ಕೊಟ್ಟರೂ ಪ್ರಯೋಜನವಿಲ್ಲವೆಂತ ಹೇಳಿದ್ದಾರೆ. ಈ ಎರಡು ಅಭಿಪ್ರಾಯಗಳು ಒಂದಕ್ಕೊಂದು ವಿರೋಧವಾಗಿವೆ. ಕೆನಡಾ, ದಕ್ಷಿಣಆಫ್ರಿಕಾ ಮುಂತಾದ ಉಪನಿವೇಶಗಳು ತಯಾರಿಸಿದ ರಾಜಕೀಯ ರಚನೆಯನ್ನು ವಿನಾ-ವ್ಯತ್ಯಾಸವಾಗಿ ಪಾರ್ಲಿಮೆಂಟು ಮಂಜೂರು ಮಾಡಿದೆ. ಆದ್ದರಿಂದ ಹಿಂದೀಯರು ಹಿಂದುಸ್ಥಾನದ ಆಡಳಿತಕ್ಕಾಗಿ ತಯಾರಿಸಿದ ರಚನೆಯನ್ನು ಪಾರ್ಲಿಮೆಂಟು ಮಂಜೂರು ಮಾಡೀತೆಂತ ಯೋಚಿಸುವದರಲ್ಲಿ ಹುಚ್ಚುತನವೇನೂ ಇಲ್ಲ. ಹಿಂದೀಯರು ಒಗ್ಗಟ್ಟಿನಿಂದ ಸುಧಾರಣೆಯ ರಚನೆಯನ್ನು ತಯಾರಿಸಿ ಅದನ್ನು ಮಂಜೂರು ಮಾಡದಿದ್ದರೆ ಸರಕಾರದೊಂದಿಗೆ ಸಹಕರಿಸುವದಿಲ್ಲವೆಂತ ಒಗ್ಗಟ್ಟಿನಿಂದ ಹಟ ಹಿಡಿದರೆ ಬ್ರಿಟಿಷ್ ಪಾರ್ಲಿಮೆಂಟು ಅಂಥಾ ರಚನೆಯನ್ನು ಎಳ್ಳಷ್ಟಾದರೂ ಬದಲಾಯಿಸದೆ ಮಂಜೂರುಮಾಡಲೇ ಬೇಕು. ಹಿಂದುಸ್ಥಾನದವರು ಒಗ್ಗಟ್ಟಿನಿಂದ ಕೆಲಸ ಮಾಡದಿರುವದು ದುರ್ಭಾಗ್ಯವಷ್ಟೆ. ಕಳೆದ ವರ್ಷದ ಕಾರ್ಯದಲ್ಲಿ ಹಿಂದುಸ್ಥಾನದವರು ಬಹಳ ಮಟ್ಟಿಗೆ ಒಗ್ಗಟ್ಟಾದದ್ದು ಕಾಣುತ್ತದೆ. ಈ ಒಗ್ಗಟ್ಟು ಈ ವರ್ಷದಲ್ಲಿ ಇನ್ನೂ ಬಲವಾದೀತೆಂತ ಹಾರೈಸುತ್ತೇವೆ. ಅಫ್ಘಾನಿಸ್ಥಾನದ ಸಂಬಂಧವಾಗಿ ಹಿಂದೂಮುಸಲ್ಮಾನರ ಜೊತೆಯಲ್ಲಿ ಸಭೆಸೇರಿ ಬ್ರಿಟಿಷ್ ಸರ್ಕಾರಕ್ಕೆ ಎಚ್ಚರಕೊಡುತ್ತಿರುವದು ಕಳೆದವಾರದ ಪತ್ರಿಕೆಗಳಿಂದ ತಿಳಿಯಿತು. ಇದರಿಂದ ಹಿಂದೂ ಮುಸಲ್ಮಾನರು ಅವಶ್ಯಬಿದ್ದಾಗ ಒಗ್ಗಟ್ಟಾಗುತ್ತಾರೆಂತ ನಿದರ್ಶನವಾದದ್ದಲ್ಲದೆ ಬ್ರಿಟಿಷರಿಂದ ಹಿಂದೀ ಸ್ವರಾಜ್ಯವನ್ನು ಪಡೆಯಲು ಸಹ ಸಂಪೂರ್ಣ ಒಗ್ಗಟ್ಟಾದಾರೆಂಬ ಆಸೆ ಸಹ ಹುಟ್ಟಿದೆ.

ಒಂದು ವರ್ಷ ವಾಯಿದೆಯೊಳಗೆ ಉಪನಿವೇಶಗಳ ಸ್ವರಾಜ್ಯ ಕೊಡದಿದ್ದರೆ ಖಾಯಿದೇ ಭಂಗವನ್ನು ಕೈಕೊಳ್ಳಲಾಗುತ್ತದೆ ಎಂತ ಕಾಂಗ್ರೆಸಿನವರು ಮಾಡಿದ ತೀರ್ಮಾನವನ್ನು ಕುರಿತು, ಈ ತರದ ಹೆದರಿಸುವ ಮಾತುಗಳನ್ನಾಡಿದರೆ ಪ್ರಯೋಜನವಿಲ್ಲವೆಂತ ವೈಸ್‌ರಾಯರು ಹೇಳಿರುತ್ತಾರೆ. ಅನೇಕ ಬ್ರಿಟಿಷ್ ಅಧಿಕಾರಿಗಳ ಮಾತುಗಳಿಂದ ಹಿಂದೀಯರಿಗೆ ಬ್ರಿಟಿಷ್ ಜನಾಂಗದ ಉದ್ದೇಶದಲ್ಲಿ ಭರವಸೆ ಕೆಟ್ಟುಹೋಗಿದೆ. ಇದನ್ನು ವೈಸ್‌ರಾಯರೂ ತಿಳಿದುಕೊಂಡಿರುತ್ತಾರೆ. ಬ್ರಿಟಿಷ್ ಅಧಿಕಾರಿಗಳು 1917ನೇ ಇಸ್ವಿಯಲ್ಲಿ ಪಾರ್ಲಿಮೆಂಟು ಕೊಟ್ಟ ಮಾತನ್ನು ತಪ್ಪುವದಿಲ್ಲವೆಂತ ವೈಸ್‌ರಾಯರು ಭರವಸೆಕೊಟ್ಟರು. 1917ನೇ ಇಸ್ವಿಯ ವಾಗ್ದಾನವನ್ನು ಪೂರ್ತಿಯಾಗಿ ಒಂದು ವರ್ಷದೊಳಗೆ ನಡಿಸಿಕೊಡಬೇಕೆಂತ ಕಾಂಗ್ರೆಸ್ ಕೇಳಿರುವದಾಗಿದೆ. ಪಾರ್ಲಿಮೆಂಟ್ ಕೊಟ್ಟಮಾತಿಗೆ ವಿರೋಧ ನಡೆಯುವದಿಲ್ಲವಾದರೆ ಕಾಂಗ್ರೆಸ್‌ನವರು ಕೇಳಿರುವಂತೆ ಉಪನಿವೇಶಗಳ ಸ್ವರಾಜ್ಯವನ್ನು ಕೊಡುತ್ತೇವೆಂತ ಈ ವರ್ಷದ ಆಖೈರಿನ ಒಳಗೆ ತಿಳಿಸಬಹುದು. ಹಿಂದುಸ್ಥಾನದಂಥ ದೊಡ್ಡ ಪ್ರದೇಶದಲ್ಲಿ ಇರುವ ಚಿಕ್ಕ ಚಿಕ್ಕ ಒಳ ಕಲಹಗಳನ್ನು ದೊಡ್ಡದುಮಾಡಿ ತೋರಿಸಿ, ಆ ಕಾರಣದಿಂದಲೇ ಸ್ವರಾಜ್ಯ ಕೊಡಲಾಗುವದಿಲ್ಲವೆಂತ ಹೇಳುತ್ತಾ ಬಂದರೆ ಬ್ರಿಟಿಷರ 1917 ನೇ ಇಸವಿ ಮಾತಿನಲ್ಲಿ ಭರವಸೆ ಇಡುವದು ಕಷ್ಟವಾಗುತ್ತದೆ. ಅಲ್ಲದೆ ಬ್ರಿಟಿಷ್ ಜನಾಂಗವು ಹಿಂದೂಸ್ಥಾನವನ್ನು ಬಿಟ್ಟುಕೊಟ್ಟರೆ ಬ್ರಿಟಿಷ್ ಜನಾಂಗದ ಐಶ್ವರ್ಯಕ್ಕೆ ಕುಂದುಕವಿದೆ. ಆದ್ದರಿಂದ ಹಿಂದೀಯರು ತಮ್ಮ ಸ್ವರಾಜ್ಯವನ್ನು ಸಾಧಿಸಲು ಬ್ರಿಟಿಷರನ್ನು ಒತ್ತಾಯ ಪಡಿಸಿದ ವಿನಹ ಬ್ರಿಟಿಷ್ ಜನರು ಹಿಂದೂಸ್ಥಾನವನ್ನು ಬಿಟ್ಟುಕೊಡಲಾರರು. ಠರಾವುಗಳನ್ನು ಮಾಡಿ, ಅರ್ಜಿಗಳನ್ನು ಬರಕೊಂಡು ಪ್ರಯೋಜನವಿಲ್ಲವೆಂತ ಕಂಡೇ ಮಹಾತ್ಮ ಗಾಂಧಿಯವರು ಖಾಯಿದೆ ಭಂಗದ ಮಾತನ್ನು ಎತ್ತಿದ್ದಾಗಿದೆ. ಬ್ರಿಟಿಷ್ ಜನರೊಂದಿಗೆ ಯುದ್ಧಮಾಡಿ ಸ್ವರಾಜ್ಯವನ್ನು ಸಂಪಾದಿಸುವದು ಸಾಧ್ಯವೂ ಇಲ್ಲ. ಮಹಾತ್ಮ ಗಾಂಧಿಯವರು ನಂಬಿರುವಂತೆ ಹಿಂಸಾಯುಕ್ತವಾದ ಹೋರಾಟವು ಪ್ರಪಂಚಕ್ಕೆ ಹಾನಿಕರವೂ ಆಗಿದೆ. ಆದ್ದರಿಂದ ಅಹಿಂಸಾಯುಕ್ತವಾದ ಖಾಯಿದೆ ಭಂಗದ ಹೋರಾಟದ ದಾರಿಯನ್ನು ಹಿಡಿಯಲು ನಿಶ್ಚೈಸಿರುವದಾಗಿದೆ. ಖಾಯಿದೆ ಭಂಗದಿಂದ ದೇಶದಲ್ಲಿ ತುಂಬಾ ಗಲಭೆಗಳಾಗಬಹುದೆಂತಲೂ, ಚಕ್ರವರ್ತಿಯವರ ಸರ್ಕಾರವು ನಿರಾಟಂಕವಾಗಿ ನಡೆಯಲು ಬೇಕಾದ ಬಂದೋಬಸ್ತುಗಳನ್ನು ತಾನು ಮಾಡಬೇಕಾಗುತ್ತೆಯೆಂತಲೂ ವೈಸರಾಯರು ಎಚ್ಚರಿಸುತ್ತಾರೆ. ಖಾಯಿದೆ ಭಂಗವನ್ನು ಕೈಕೊಳ್ಳುವದರಲ್ಲಿ ಇರುವ ಜವಾಬ್ದಾರಿಯನ್ನು ಅರಿತೇ ಮುಂದಾಳುಗಳು ಅದನ್ನು ಕೈಕೊಂಡಾರು. ಅಂಥ ಖಾಯಿದೆ ಭಂಗದಿಂದ ದೇಶಕ್ಕೆ ನಷ್ಟಕಷ್ಟಗಳಾಗುತ್ತವೆಯೆಂತ ಹಿಂದೀಯರಿಗೆ ತಿಳಿಯದೆ ಇಲ್ಲ. ಆದರೆ ಸ್ವಾತಂತ್ರ್ಯವನ್ನು ಪಡೆಯಲಿಕ್ಕೆ ಎಷ್ಟು ನಷ್ಟಕಷ್ಟಪಟ್ಟರೂ ಅಲ್ಪವೇ ಆದೀತು. ಇಂಗ್ಲಿಷ್ ಮತ್ತು ಯೂರೋಪಿನ ಇತರ ಅನೇಕ ಜನಾಂಗಗಳು ತಮ್ಮ ತಮ್ಮ ಸ್ವಾತಂತ್ರ್ಯಕ್ಕಾಗಿಯೂ, ಹಕ್ಕುಗಳನ್ನು ಕಾಪಾಡಲಿಕ್ಕಾಗಿಯೂ ಲಕ್ಷಗಟ್ಲೆ ಜನರು ಮನಃಪೂರ್ತಿಯಾಗಿ ತಮ್ಮ ಪ್ರಾಣಕೊಡಲಿಲ್ಲವೇ. ಆದ್ದರಿಂದ ಹಿಂದುಸ್ಥಾನದವರು ಸಹ ಸ್ವರಾಜ್ಯ ಪಡೆಯಲು ಖಾಯಿದೆ ಭಂಗದಂಥ ಕಠಿಣ ಕಾರ್ಯವನ್ನು ಕೈಕೊಳ್ಳಲು ನಿಶ್ಚೈಸಬೇಕಾಗುತ್ತದೆಯೆಂತ ಭಾರತಭೂಮಿಯ ಮುಂದಾಳುಗಳು ತಿಳಿದಿರುತ್ತಾರೆ.

ವೈಸ್‌ರಾಯರು ಹಿಂದೀಯರನ್ನು ಕೇಳಿಕೊಂಡಿರುವದೇನಂದರೆ—ಅನ್ಯೋನ್ಯ ನಂಬಿಕೆಯನ್ನು ಕೆಡಿಸಿಕೊಳ್ಳಬೇಡಿ. ಅನ್ಯೋನ್ಯ ನಂಬಿಕೆ ಇಲ್ಲದೆ ಯಾವ ತರದ ಪ್ರಯೋಜನಕರವಾದ ಸುಧಾರಣೆ ಮಾಡಿಕೊಳ್ಳಲು ಸಾಧ್ಯವಿಲ್ಲವೆಂತ ಹೇಳಿದ್ದಾರೆ. ಬ್ರಿಟಿಷ್ ಜನಾಂಗದಲ್ಲಿ ನಂಬಿಕೆ ಹುಟ್ಟಬೇಕಾದರೆ ಹಿಂದುಸ್ಥಾನಕ್ಕೆ ಉಪನಿವೇಶಗಳ ಸ್ವರಾಜ್ಯವನ್ನು ಕೊಡುವದು ಖಂಡಿತವೆಂತ ತಡವಿಲ್ಲದೆ ಹೇಳಬೇಕು.

ವೈಸ್‌ರಾಯರು ಕಲ್ಕತ್ತಾ ಕಾಂಗ್ರೆಸ್ ಮತ್ತು ಸರ್ವಪಕ್ಷೀಯ ಸಮ್ಮೇಳನದ ಚರ್ಚೆಗಳಿಗೆ ತಕ್ಕ ಮಟ್ಟಿಗೆ ಬೆಲೆ ಕೊಟ್ಟಿರುತ್ತಾರೆ. ಆ ಚರ್ಚೆಗಳನ್ನೂ, ತೀರ್ಮಾನಗಳನ್ನೂ ತುಚ್ಛೀಕರಿಸಿರುವದಿಲ್ಲ. ಈ ತರದ ವರ್ತನೆಯಿಂದ ಎಷ್ಟೋ ಸಮಾಧಾನವಾಗುತ್ತದೆ. ಆದರೆ ಇಂಥಾ ಒಳ್ಳೇ ಮಾತುಗಳನ್ನು ಕೇಳಿ ಹಿಂದೀಯರು ತೃಪ್ತರಾಗಕೂಡದು. ಕಾಂಗ್ರೆಸ್ಸಿನಲ್ಲಿ ನಿಶ್ಚೈಸಿರುವ ಕಾರ್ಯ ಕ್ರಮವನ್ನು ಮನಃಪೂರ್ತಿಯಾಗಿ ನಡಿಸಿದರೆ ವರ್ಷದ ಆಖೈರೊಳಗೆ ಕಾಂಗ್ರೆಸಿನವರು ಪಡೆಯಲು ನಿಶ್ಚೈಸಿರುವ ಉಪನಿವೇಶಗಳ ಸ್ವರಾಜ್ಯ ದೊರೆಯಬಹುದು.

ವೈಸ್‌ರಾಯರು ಭಾಷಣದಲ್ಲಿ ಹೇಳಿರುವ ಇನ್ನೊಂದು ವಿಷಯವನ್ನು ಪ್ರಸ್ತಾಪಿಸಬೇಕಾಗಿದೆ. ಹಿಂದುಸ್ಥಾನದಲ್ಲಿ ಕೂಲಿಕಾರರಿಗೂ, ಮಾಲೀಕರಿಗೂ ಆಗಿಂದಾಗ್ಗೆ ತಕರಾರುಗಳು ನಡೆಯುತ್ತಿರುವವು; ಇದರಿಂದ ಅನೇಕ ವೇಳೆ ತುಂಬಾ ಧನನಷ್ಟವೂ, ಅನೇಕ ವೇಳೆ ಪ್ರಾಣಹಾನಿಯೂ ಆಗುತ್ತಲಿವೆ. ಕೂಲಿಕಾರರಿಗೆ ಇರುವ ಕಷ್ಟಗಳನ್ನು ವಿಚಾರಿಸಿ ಅವುಗಳ ಪರಿಹಾರಗಳಿಗೆ ಸಲಹೆ ಕೊಡುವ ಬಗ್ಗೆ ರಾಯಲ್ ಕಮಿಶನ್ ಒಂದನ್ನು ನೇಮಿಸುತ್ತಾರಂತೆ. ಪಾರ್ಲಿಮೆಂಟಿನ ಅಧ್ಯಕ್ಷರಾಗಿದ್ದ ಮಿ. ವ್ಹಿಟ್ಲಿಯವರು ಈ ಕಮಿಶನಿನ ಅಧ್ಯಕ್ಷರಾಗಲು ಒಪ್ಪಿರುತ್ತಾರಂತೆ. ಇವರು ಇಂಗ್ಲೆಂಡಿನಲ್ಲಿ ಕೂಲಿಕಾರರ ಕಷ್ಟ ನಿವಾರಣೆಗೆ ಸಹಾಯಕರಾಗಿದ್ದರಂತೆ. ಇಂಥವರ ಅಧ್ಯಕ್ಷತೆಯಲ್ಲಿ ಆಗುವ ವಿಚಾರವು ಕೂಲಿಕಾರರಿಗೆ ಸಹಾಯವಾದೀತೆಂತ ನಂಬುತ್ತೇವೆ.

ಕೃಷಿ ಕಮಿಶನಿನ ಸಿಫಾರಸ್ಸು ಮೇರೆ ಕೃಷಿ ಸಂಬಂಧ ಸರಕಾರಕ್ಕೆ ಸಲಹೆ ಕೊಡಲು ಒಂದು ಮಧ್ಯವರ್ತಿ ಮಂಡಲಿಯನ್ನು ನೇಮಿಸಲು ನಿಶ್ಚೈಸಲಾಗಿದೆಯಂತೆ. ಈ ಏರ್ಪಾಟಿನಿಂದ ಪ್ರಯೋಜನವಾಗಬಹುದು. ಹಿಂದುಸ್ಥಾನದ ಮುಖ್ಯ ಕಸಬಾದ ಕೃಷಿ ವಿಷಯ ಆಲೋಚಿಸಲು ಒಂದು ಸಂಸ್ಥೆ ಇರುವದು ಅವಶ್ಯವಾಗಿದೆ. ಈ ಕಮಿಶನಿನ ಸಿಫಾರಸ್ಸುಗಳ ಹೆಚ್ಚಿನ ಭಾಗವನ್ನು ವಿಚಾರಿಸಿ ಜಾರಿಗೆ ತರುವದು ಆಯಾ ಪ್ರಾಂತೀಕ ಸರಕಾರಗಳಿಗೆ ಕೂಡಿದೆಯೆಂತ ಹೇಳಿರುತ್ತಾರೆ. ನಮ್ಮ ಪ್ರಾಂತೀಕ ಸರಕಾರವು ಶೀಘ್ರದಲ್ಲೇ ಕಮಿಷನಿನ ಸಿಫಾರಸ್ಸುಗಳನ್ನು ಜಾರಿ ಮಾಡೀತೆಂತ ಹಾರೈಸುತ್ತೇವೆ.

ಹಿಂದೂದೇಶದ ನೆರೆ ರಾಜ್ಯವಾದ ಅಫಘಾನಿಸ್ಥಾನದ ರಾಜಕೀಯ ಪರಿಸ್ಥಿತಿಯ ಗಲಿಬಿಲಿಯು ದಿನೇದಿನೇ ಹೆಚ್ಚುತ್ತಾ ಇರುವದಾದರೂ, ಇಂಡಿಯಾ ಸರ್ಕಾರದವರು ಅದರಲ್ಲಿ ಕೈಹಾಕುವದಿಲ್ಲವೆಂದು ವೈಸರಾಯರು ತಮ್ಮ ಭಾಷಣದಲ್ಲಿ ಸೂಚಿಸಿದ್ದು ತೃಪ್ತಿಕರವೆ. ಅಫ್ಘಾನಿಸ್ಥಾನವು ಸ್ವಾತಂತ್ರ್ಯ ರಾಜ್ಯವಾದುದರಿಂದ ಅದರ ಒಳ ಕಲಹಗಳಲ್ಲಿ ಬ್ರಿಟಿಷ್ ಸರ್ಕಾರದವರು ಕೈಹಾಕಬಾರದೆಂದು ಹಿಂದೂದೇಶದ ಹಿಂದೂ ಮುಸಲ್ಮಾನ್ ಮುಖಂಡರು ಪಬ್ಲಿಕ್ ಮೀಟಿಂಗುಗಳನ್ನು ಮಾಡಿ ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಿರುವರು. ಕುತೂಹಲದ ಈ ಸಮಯದಲ್ಲಿ ವೈಸರಾಯರ ಮಾತು ಜನರಲ್ಲಿ ಸಮಾಧಾನವನ್ನು ಉಂಟುಮಾಡುವದು.

ಕೈ. ಪಾರುಮಂಗಡ ಕುಶಾಲಪ್ಪನವರು.

(ಇವರನ್ನು ಕುರಿತು ಧಾರವಾಡದ 'ಕರ್ಮವೀರ' ಪತ್ರಿಕೆ ಹೇಳುವದೇನೆಂದರೆ—)

ಕೊಡಗು ನಾಡಿನ ಅತ್ಯಂತ ನಿಸ್ಸೀಮ ದೇಶಭಕ್ತರೂ, ಕರ್ನಾಟಕ ಮಾತೆಯ ಸೇವೆಯಲ್ಲಿ ಯಾವಾಗಲೂ ನಿರತರೂ, ಕೊಡಗಿನಲ್ಲಿ ನಡೆಯುತ್ತಿದ್ದ ಎಲ್ಲ ರಾಷ್ಟ್ರೀಯ ಚಳವಳಿಗಳಿಗೆ ಪ್ರಾಣಭೂತರೂ, ಅಲ್ಲಿಯ ಜಮೀನ್ದಾರರ ಸಂಘದ ಅಧ್ಯಕ್ಷರೂ, 'ಕೊಡಗು' ಪತ್ರಿಕೆಯ ಪುರಸ್ಕರ್ತರಲ್ಲಿ ಪ್ರಮುಖರೂ ಆದ ಪಾರುಮಂಗಡ ಕುಶಾಲಪ್ಪನವರು ಹೋದ ಜನವರಿ ೧೧ ತಾರೀಕಿಗೆ ಮದ್ರಾಸಿನಲ್ಲಿ ನಿಮೋನಿಯಾದಿಂದ ಶಿವಾಧೀನರಾದರೆಂದು ತಿಳಿಸಲು ಅತ್ಯಂತ ಖೇದವಾಗುತ್ತದೆ. ಅವರ ವಯಸ್ಸು ಇನ್ನೂ ೩೫ ಮೀರಿರಲಿಲ್ಲ. ಅವರೇನೂ ಅಂಥ ಸಿರಿವಂತರಲ್ಲ. ಅಂಥ ವಿದ್ಯಾವಂತರೂ ಅಲ್ಲ. ಆದರೆ ತಮ್ಮ ನಾಡು ಮತ್ತು ಕರ್ನಾಟಕ ಇವುಗಳ ಅಭಿವೃದ್ಧಿಗಾಗಿ ಚಿಕ್ಕ ವಯಸ್ಸಿನಿಂದಲೇ ಶ್ರಮಪಡುತ್ತ ಬಂದು ಅವರು ಕೊಡಗಿನ ಸಾರ್ವಜನಿಕ ಚಳವಳಿಗಳಲ್ಲಿ ಅಗ್ರೇಸರತ್ವವನ್ನೂ, ಕ. ಏಕೀಕರಣದಲ್ಲಿ ಮುಂದಾಳುತನವನ್ನೂ ಪಡೆದರು. ಕೊಡಗಿನ ಕೌನ್ಸಿಲಿನಲ್ಲಿ ಅವರು ಎರಡು ಸಾರೆ ಚುನಾಯಿತ ಮೆಂಬರಿದ್ದು ಅಲ್ಲಿ ಸಹ ಕ. ಏಕೀಕರಣದ ಧ್ಯೇಯವನ್ನು ಊರಿಬಿಟ್ಟರು. ಅವರು ಎಷ್ಟು ಲೋಕಪ್ರಿಯರಾಗಿದ್ದರೆಂಬುದನ್ನು ನೋಡಬೇಕಾದರೆ 'ಕೊಡಗು' ಪತ್ರಿಕೆಯ ೧೮—೧—೨೯ನೆಯ ಸಂಚಿಕೆಯನ್ನು ಓದಬೇಕು. ಇಡೀ ಕೊಡಗು ನಾಡಿನಲ್ಲಿ ಅವರ ಮರಣದ ಬಗ್ಗೆ ಮರುಗದೇ ಇದ್ದ ವ್ಯಕ್ತಿಯೇ ಇಲ್ಲ, ಸಾರ್ವಜನಿಕ ರೀತಿಯಿಂದ ದುಃಖ ಪ್ರದರ್ಶನ ಮಾಡದ ಊರೇ ಇಲ್ಲ. ಈಗ ಕಲ್ಕತ್ತಾ ಕಾಂಗ್ರೆಸ್ಸಿಗೆ ಹೋಗಿ ಬರುವಾಗ ಜ್ವರ ಉಂಟಾಗಿ ಮದ್ರಾಸಿನಲ್ಲೇ ಅವರು ಕಾಲಾಧೀನರಾದದ್ದು ಕರ್ನಾಟಕಕ್ಕೆ ಬಹಳ ದೊಡ್ಡ ಹಾನಿಯು. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಸಾರ್ವಜನಿಕ ಚಳವಳಿಗಳಲ್ಲಿ ಎಲ್ಲಕ್ಕೂ ಹೆಚ್ಚಿನ ಪದವಿಯನ್ನು ಪಡೆಯುವಷ್ಟು ಅತ್ಯುಚ್ಚ ಸದ್ಗುಣಗಳು ಅವರಲ್ಲಿ ವಾಸವಾಗಿದ್ದವೆಂಬುದನ್ನು ನಾವು ಮರೆಯಲಾಗದು. ಇನ್ನು ಅವರ ನಿಧನದ ಬಗ್ಗೆ ಬರಿಯ ದುಃಖಪಡುತ್ತ ಕೂಡುವ ಕರ್ನಾಟಕದ ತರುಣರು ವಿಶೇಷತಃ ಕೊಡಗಿನ ತರುಣರು ಅವರ ಆದರ್ಶವನ್ನು ಮುಂದಿಟ್ಟುಕೊಂಡು ಅವರ ನಿಧನದಿಂದ ರಾಷ್ಟ್ರಕ್ಕೆ ಆದ ಹಾನಿಯನ್ನು ತುಂಬುವ ದೃಢನಿಶ್ಚಯ ಮಾಡಿ ಅವರ ಯೋಗ್ಯಸ್ಮಾರಕವನ್ನು ಮಾಡಬೇಕೆಂದು ನಮ್ಮ ನಮ್ರವಾದ ಹೇಳಿಕೆ. ಅವರ ನಿಧನದ ಮೂಲಕ ವಿಶೇಷತಃ ಕೊಡಗಿಗೆ ಆದ ದುಃಖದಲ್ಲಿ ನಾವೂ ಸಹಭಾಗಿಗಳಿರುವೆವೆಂದು ಬೇರೆ ಹೇಳಬೇಕಾಗಿಲ್ಲ. ಈ ದುಃಖವನ್ನು ಸಹಿಸುವ ಮತ್ತು ಅವರು ಮಾಡುತ್ತಿದ್ದ ಕಾರ್ಯವನ್ನೇ ಹೆಚ್ಚು ಬಲದಿಂದ ಮಾಡಿ ಅವರ ಹೆಸರನ್ನು ಸಾರ್ಥಕ ಮಾಡುವ ಶಕ್ತೀ ಸಾಮರ್ಥ್ಯಗಳನ್ನು ಎಲ್ಲರಿಗೂ ಕೊಡಲೆಂದು ನಾವು ದೇವರನ್ನು ಪ್ರಾರ್ಥಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿ, ಶಾಂತಿ, ಶಾಂತಿ.

ಮಹಾತ್ಮ ಗಾಂಧಿಯ ಆತ್ಮ ಚರಿತ್ರೆ.

೫ನೇ ಭಾಗದಲ್ಲಿ ೨೪ ನೇ ಪ್ರಕರಣ.

ನೀರುಳ್ಳಿಯ ಕಳ್ಳ.

ಚಂಪಾರಣ್ಯವು ಭರತಖಂಡದ ಬಹುದೂರದ ಮೂಲೆಯೊಂದರಲ್ಲಿ ರುವುದರಿಂದಲೂ, ವೃತ್ತಪತ್ರಿಕೆಗಳ ಪ್ರತಿನಿಧಿಗಳನ್ನು ಆ ಕಡೆಸದ ಹೊರಗಿಟ್ಟುದರಿಂದಲೂ ಆಗ ಬಹುಮಂದಿ ಹೊರಗಿನ ಪ್ರೇಕ್ಷಕರು ಆಕರ್ಷಿತರಾಗಲಿಲ್ಲ. ಆದರೆ ಖೇಡಾ ಸಂಗ್ರಾಮದ ವಿಷಯವು ಬೇರೆಯಾಗಿದ್ದಿತು. ಇದರ ಘಟನೆಗಳು ದಿನಂಪ್ರತಿ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು.

ಗುಜರಾತಿಗಳು ಈ ಹೋರಾಟದಲ್ಲಿ ಬಹು ಕುತೂಹಲವುಳ್ಳವರಾಗಿದ್ದರು. ಇದು ಅವರಿಗೊಂದು ಹೊಸ ಪ್ರಯೋಗವಾಗಿದ್ದಿತು. ಇದರಲ್ಲಿ ಜಯವನ್ನು ಪಡೆಯಲೋಸುಗ ಅವರು ತಮ್ಮ ಐಶ್ವರ್ಯವನ್ನು ಸುರಿಯಲು ಸಿದ್ಧರಾಗಿದ್ದರು. ಕೇವಲ ಧನ ಸಹಾಯದಿಂದ ಸತ್ಯಾಗ್ರಹವನ್ನು ನಡೆಸಲಾಗುವುದಿಲ್ಲವೆಂಬುದನ್ನು ತಿಳಿದುಕೊಳ್ಳುವುದು ಅವರಿಗೆ ಸುಲಭವಾಗಿರಲಿಲ್ಲ. ಸತ್ಯಾಗ್ರಹದ ಸಾಧನಗಳಲ್ಲಿ ಹಣಕ್ಕಿಂತ ಕಡಮೆ ಬೆಲೆಯುಳ್ಳದು ಯಾವುದೂ ಇಲ್ಲ. ಎಷ್ಟು ಹೇಳಿದರೂ ಮುಂಬಯಿ ಸಾಹುಕಾರರು ನಮಗೆ ಅಗತ್ಯವಿದ್ದುದಕ್ಕಿಂತ ಹೆಚ್ಚಾಗಿ ಹಣವನ್ನು ಕಳುಹಿಸಿದರು. ಇದರ ಫಲವೇನಾಯಿತೆಂದರೆ ಕದನವು ಕೊನೆಗಂಡಾಗ ನಮ್ಮ ಕೈಯಲ್ಲಿ ಇನ್ನೂ ಹಣವು ಉಳಿದಿದ್ದಿತು.

ಇದರೊಂದಿಗೆ ಸತ್ಯಾಗ್ರಹಿಗಳಾದ ಸ್ವಯಂಸೇವಕರು ಸರಳಜೀವನದ ಹೊಸ ಪಾಠವನ್ನು ಕಲಿಯಬೇಕಾಗಿದ್ದಿತು. ಅವರು ಅದನ್ನು ಸಂಪೂರ್ಣವಾಗಿ ಗ್ರಹಿಸಿದರೆಂದು ನಾನು ಹೇಳಲಾರೆನು. ಆದರೆ ಅವರು ತಮ್ಮ ಜೀವನಕ್ರಮವನ್ನು ಬಹುಮಟ್ಟಿಗೆ ಮಾರ್ಪಡಿಸಿಕೊಂಡರು.

ರೈತರಿಗೆ ಕೂಡ ಈ ಹೋರಾಟವು ಬೇರೆ ಹೊಸ ವಿಷಯವಾಗಿದ್ದಿತು. ಆದುದರಿಂದ ನಾವು ಹಳ್ಳಿಯಿಂದ ಹಳ್ಳಿಗೆ ಹೋಗಿ ಸತ್ಯಾಗ್ರಹದ ತತ್ವಗಳನ್ನು ವಿವರಿಸಬೇಕಾಗಿತ್ತು. ಅಧಿಕಾರ ವರ್ಗದವರು ಜನರು ತಿರುವ ... ಗಳಿಂದ ಸಾ... ವನ್ನು ಪಡೆಯುವುದರಿಂದ ಅವರು ಪ್ರಜೆಗಳ ಆಳಗಳಲ್ಲದೆ ... ಹರಲ್ಲವೆಂಬುವನ್ನು ರೈತರು ಮನಗಂಡು, ಕರ್ತವ್ಯ ... ಯನ್ನು ನೀಗುವಂತೆ ಮಾಡುವುದೇ ಮುಖ್ಯವಾದ ವಿಷಯವಾಗಿದ್ದಿತು. ಮತ್ತು ನಿರ್ಭಯದ ಜೊತೆ ವಿನಯವನ್ನು ಕೂಡ ಇಟ್ಟುಕೊಂಡಿರುವುದು ತಮ್ಮ ಕರ್ತವ್ಯವೆಂದು ಅವರಿಗೆ ಮನವರಿಕೆಯಾಗುವಂತೆ ಮಾಡುವುದು ಅಸಾಧ್ಯವೆಂಬಂತೆ ತೋರಿತು. ಅವರು ಅಧಿಕಾರಿಗಳ ಭೀತಿಯನ್ನು ಒಂದು ಸಲ ಕಳೆದುಕೊಂಡ ಮೇಲೆ ತಮಗೆ ಅವಮಾನವಾದರೆ ಅದಕ್ಕೆ ಪ್ರತೀಕಾರ ಮಾಡದಿರುವಂತೆ ಅವರನ್ನು ತಡೆಯುವದೆಂತು? ಆದರೆ ಅವರು ಅವಿನಯದಿಂದ ವರ್ತಿಸಿದರೆ ಅದು ಹಾಲಿನ ಕೊಡದೊಳಗಿರುವ ವಿಷಬಿಂದುವಿನಂತೆ ಸತ್ಯಾಗ್ರಹವನ್ನು ಕಡಿಸಿಬಿಡುವುದು. ಅವರು ವಿನಯವರ್ತನೆಯ ಪಾಠವನ್ನು ನಾನು ನಿರೀಕ್ಷಿಸಿದಷ್ಟು ಚೆನ್ನಾಗಿ ಕಲಿತುಕೊಂಡಿರಲಿಲ್ಲವೆಂದು ನನಗೆ ಆ ಮೇಲೆ ಗೋಚರಕ್ಕೆ ಬಂದಿತು. ವಿನಯವೇ ಸತ್ಯಾಗ್ರಹದ ಅತ್ಯಂತ ಕಠಿಣ ಅಂಶವೆಂದು ನನಗೆ ಅನುಭವದಿಂದ ಮಂದಟ್ಟಾಗಿದೆ. ಇಲ್ಲಿ ವಿನಯವೆಂದರೆ ಇದಿರು ಪಕ್ಷದವರಿಗೆ ಒಳಿತನ್ನೆಸಗಬೇಕೆಂಬ ಆಸೆಯೂ ಸ್ವಭಾವ ಮಾಧುರ್ಯವೂ ಅಲ್ಲದೆ ಸಮಯಾನುಕೂಲಕ್ಕಾಗಿ ಅಭ್ಯಾಸಮಾಡಿದ ಕೇವಲ ಹೊರಗಣ ಮೆದುಸುಡಿಯಲ್ಲ. ಇವು ಸತ್ಯಾಗ್ರಹಿಯ ಪ್ರತಿಯೊಂದು ಕಾರ್ಯದಲ್ಲಿಯೂ ರೂಪುಗೊಳ್ಳಬೇಕು.

ಮೊದಲು ಜನರು ಬಹು ಧೈರ್ಯದಿಂದ ನಡೆದರೂ ಸರಕಾರದವರು ಪ್ರಬಲವಾಗಿ ದಂಡಿಸಲು ಇಷ್ಟವುಳ್ಳವರಂತೆ ಕಾಣಲಿಲ್ಲ. ಆದರೆ ಜನರ ಮನಸ್ಥೈರ್ಯವು ಕದಲದಂತಿರುವಂತಿದ್ದುದನ್ನು ಕಂಡು ಸರಕಾರವು ಉಗ್ರತರವಾದ ದಂಡನೆಯನ್ನು ಪ್ರಾರಂಭಮಾಡಿತು. ಜಪ್ತಿ ಅಧಿಕಾರಿಗಳು ಜನರ ದನಕರುಗಳನ್ನು ಮಾರಿದುದಲ್ಲದೆ ತಮ್ಮ ಕೈಗೆ ಸಿಕ್ಕಿದ ಜಂಗಮ ವಸ್ತುಗಳನ್ನೆಲ್ಲಾ ಬಾಚಿಕೊಂಡರು. ಜುಲ್ಮಾನೆಯ ನೋಟಿಸುಗಳನ್ನು ಜಾರಿಮಾಡಿದರು. ಕೆಲವು ಕಡೆ ಬೆಳೆದಿದ್ದ ಪೈರನ್ನು ಜಪ್ತಿಯೇ ಮಾಡಿದರು. ಇದರಿಂದ ರೈತರು ಧೈರ್ಯಗೆಟ್ಟು ಅವರಲ್ಲಿ ಕೆಲವರು ತಮ್ಮ ಬಾಕಿಯನ್ನು ಸಲ್ಲಿಸಿದರು, ಇತರರು, ಅಧಿಕಾರಿಗಳು ತಮ್ಮ ವಸ್ತುಗಳನ್ನು ಜಪ್ತಿಮಾಡಿ ಬಾಕಿಯನ್ನು ವಸೂಲುಮಾಡಿಕೊಳ್ಳುವಂತೆ ತಮ್ಮ ಸಾಮಾನುಗಳನ್ನು ಅಧಿಕಾರಿಗಳ ಕೈಗೆ ಸಿಕ್ಕುವಂತೆ ಇಡಲು ಇಚ್ಛೈಸಿದರು. ಇನ್ನೊಂದು ಕಡೆಯಾದರೋ ಕೆಲವರು ಕಟ್ಟಕಡೆಯವರೆಗೂ ಹೋರಾಡಲು ಸಿದ್ಧರಾಗಿದ್ದರು.

ಈ ಘಟನೆಗಳು ನಡೆಯುತ್ತಿರಲು ಶ್ರೀ. ಶಂಕರಲಾಲ ಪರೀಖರ ರೈತರಲ್ಲೊಬ್ಬನು ತಾನು ಉಳುತ್ತಿದ್ದ ಭೂಮಿಯ ಕಂದಾಯವನ್ನು ಕೊಟ್ಟುಬಿಟ್ಟನು. ಇದರಿಂದ ಕಲಕಲವೆದ್ದಿತು. ಶಂಕರಲಾಲ ಪರೀಖರು ಆ ಭೂಮಿಯನ್ನು ಧರ್ಮಕಾರ್ಯಕ್ಕಾಗಿ ದಾನವಿತ್ತು ತಮ್ಮ ರೈತನು ಮಾಡಿದ ತಪ್ಪನ್ನು ಒಡನೆಯೇ ತಿದ್ದಿದರು. ಹೀಗೆ ಅವರು ತಮ್ಮ ಮಾನವನ್ನು ರಕ್ಷಿಸಿಕೊಂಡುದಲ್ಲದೆ ಇತರರಿಗೂ ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕಿದರು.

ದಿಗಿಲುಗೊಂಡಿದ್ದವರ ಎದೆಯನ್ನು ಕೆಲ್ಲುಮಾಡುವುದಕ್ಕಾಗಿ ನಾನು ಜನರಿಗೆ ಅವರು ಮೋಹನಲಾಲ ಪಂಡ್ಯಾರವರ ಮುಂದಾಳುತನದಲ್ಲಿ ಒಂದು ಹೊಲದಲ್ಲಿ ನೀರುಳ್ಳಿ ಪೈರನ್ನು ಕೀಳಬೇಕೆಂದು ಸಲಹೆಕೊಟ್ಟೆನು. ನನ್ನ ಅಭಿಪ್ರಾಯದಲ್ಲಿ ಆ ಭೂಮಿಯನ್ನು ಜಪ್ತಿಮಾಡಿದ್ದುದು ಅನ್ಯಾಯವಾಗಿದ್ದಿತು. ಇದನ್ನು ನಾನು ಕಾನೂನಿನ ನಿಯಮ ಭಂಗವೆಂದು ಭಾವಿಸಲಿಲ್ಲ. ಒಂದು ವೇಳೆ ಹಾಗಾಗಿದ್ದರೂ ಬೆಳೆದ ಪೈರುಗಳನ್ನು ಹೀಗೆ ಜಪ್ತಿಮಾಡುವುದು ಅಕ್ಷರಶಃ ಕಾನೂನನ್ನನುಸರಿಸಿದ್ದರೂ ನೈತಿಕ ದೃಷ್ಟಿಯಿಂದ ಅದು ತಪ್ಪೆಂದೂ ಅದು ಲೂಟಿಯೇ ಹೊರತು ಬೇರೆಯಲ್ಲವೆಂದೂ ಇದರಿಂದ ಜಪ್ತಿಯ ಅಪ್ಪಣೆಯನ್ನು ಲೆಕ್ಕಿಸದೆ ನೀರುಳ್ಳಿಯನ್ನು ಕೀಳುವುದು ಜನರ ಧರ್ಮವೆಂದೂ ನಾನು ಸೂಚಿಸಿದೆನು. ಈ ರೀತಿಯ ಕಾಯಿದೆಯ ಭಂಗದಿಂದ ತಪ್ಪದೆ ಫಲಿಸುವ ಕಾರಾಗೃಹ ವಾಸವನ್ನಾಗಲೀ ಜುಲ್ಮಾನೆಯನ್ನಾಗಲೀ ಜನರು ತಾವಾಗಿಯೇ ಪಡೆಯುವ ಪಾಠವನ್ನು ಕಲಿಯಲು ಇದು ಸುಸಂಧಿಯಾಗಿದ್ದಿತು. ಶ್ರೀ. ಮೋಹನಲಾಲ ಪಂಡ್ಯಾರವರಿಗಂತು ಇಂತಹ ಅನುಭವವು ಆಸ್ವಾದಕರ ವಿಷಯವಾಗಿದ್ದಿತು. ಸತ್ಯಾಗ್ರಹದ ತತ್ವಕ್ಕನುಸಾರವಾಗಿ ನಡೆಸಿದ ಯಾವುದಾದರೊಂದು ಕಾರ್ಯಕ್ಕಾಗಿ ಯಾರಾದರೂ ಸೆರೆಮನೆ ಶಿಕ್ಷೆಯನ್ನನುಭವಿಸದೆ ಈ ಹೋರಾಟವು ಕಡೆಗಾಣುವುದು ಅವರಿಗೆ ರುಚಿಕರವಾಗಿರಲಿಲ್ಲ. ಆದುದರಿಂದ ಅವರು ತಾವೇ ಹೊಲದಿಂದ ನೀರುಳ್ಳಿಯನ್ನು ಸಾಗಿಸುವೆನೆಂದು ಮುಂದೆ ಬಂದರು. ಈ ಕೆಲಸದಲ್ಲಿ ಏಳೆಂಟು ಜನ ಮಿತ್ರರು ಅವರೊಡನೆ ಸೇರಿದರು.

ಸರಕಾರದವರು ಇವರನ್ನು ಸುಮ್ಮನೆ ಬಿಟ್ಟುಬಿಡುವದೆಂತು? ಶ್ರೀ ಮೋಹನಲಾಲ ಮತ್ತು ಇವರ ಮಿತ್ರರನ್ನು ಸರಕಾರದವರು ಹಿಡಿದುದರಿಂದ ಜನರ ಉತ್ಸಾಹವೇರಿತು. ಸೆರೆಮನೆಯ ದಿಗಿಲು ಹಾರಿಹೋದ ಮೇಲೆ ದಂಡನೆಯು ಉಗ್ರ ... ದಷ್ಟೂ ಜನರ ಧೈರ್ಯವೂ ಉತ್ಸಾಹವೂ ವರ್ಧಿಸುತ್ತವೆ. ವಿಚಾರಣೆಯ ದಿನ ಜನರು ತಂಡತಂಡವಾಗಿ ನ್ಯಾಯಸ್ಥಾನವನ್ನು ಮುತ್ತಿದರು. ಪಂಡ್ಯಾರವರೂ ಅವರ ಜೊತೆಗಾರರೂ ತಪ್ಪಿತಸ್ಥರೆಂದು ನಿರ್ಣಯವಾಗಿ ಅವರಿಗೆ ಅಲ್ಪಕಾಲ ಕಾರಾಗೃಹ ವಾಸದ ಶಿಕ್ಷೆಯನ್ನು ಕೊಟ್ಟರು. ನೀರುಳ್ಳಿಯನ್ನು ಸಾಗಿಸಿದುದು ಪೀನಲ್ ಕೋಡಿನ "ಕಳವು" ಎಂಬ ಅಪರಾಧದ ಲಕ್ಷಣಗಳನ್ನು ಹೊಂದಿಲ್ಲದುದರಿಂದ ನ್ಯಾಯಾಧೀಶರ ನಿರ್ಣಯವು ತಪ್ಪೆಂದು ನಾನು ಅಭಿಪ್ರಾಯಪಟ್ಟೆನು. ಆದರೆ ನ್ಯಾಯಸ್ಥಾನಗಳನ್ನು ಸಾಧ್ಯವಾದ ಮಟ್ಟಿಗೆ ವರ್ಜಿಸುವುದೇ ನಮ್ಮ ನೀತಿಯಾಗಿದ್ದುದರಿಂದ ನಾವು ಈ ತೀರ್ಮಾನದ ಮೇಲೆ 'ಅಪೀಲ್' ಮಾಡಲಿಲ್ಲ.

ಈ ಅಪರಾಧಿಗಳನ್ನು ಜನರು ಮೆರವಣಿಗೆ ಮಾಡಿಕೊಂಡು ಸೆರೆಮನೆಗೆ ಕರೆದುಕೊಂಡು ಹೋದರು. ಆ ದಿನ ಶ್ರೀ. ಮೋಹನಲಾಲ ಪಂಡ್ಯಾರವರು ಜನರಿಂದ 'ನೀರುಳ್ಳಿಯ ಕಳ್ಳ'ನೆಂಬ ಹೆಸರಿಯ ಬಿರುದನ್ನು ಗಳಿಸಿದರು. ಆ ಸನ್ಮಾನವು ಅವರಿಗೆ ಇಂದೂ ನಡೆಯುತ್ತಿದೆ.

ಖೇಡಾ ಸತ್ಯಾಗ್ರಹದ ಪರಿಸಮಾಪ್ತಿಯನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸುತ್ತೇನೆ.

ಪರದೇಶೀ ಬಟ್ಟೆಯೂ ಖಾದಿಯೂ.

(ಮಹಾತ್ಮ ಗಾಂಧಿ)

ಖಾದಿ ಮೂಲಕ ಪರದೇಶೀ ಬಟ್ಟೆಯನ್ನು ಬಹಿಷ್ಕರಿಸಬೇಕೆಂಬ ಕಾಂಗ್ರೆಸ್ ಕಾರ್ಯಕ್ರಮವನ್ನು ಸಾಧಿಸಲಿಕ್ಕೆ ರೀತಿಯನ್ನು ನಿರ್ಣಯಿಸಲಿಕ್ಕೆ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯು ನನ್ನನ್ನು ನೇಮಿಸಿದೆ. ನಾನು ತಯಾರಿಸಿದ ಕಾರ್ಯಕ್ರಮವನ್ನು ಈ ಕೆಳಗೆ ಕೊಟ್ಟಿದೆ. ವಾಚಕರು ಜನವರಿ ೩೧ನೇ ತಾರೀಖಿನ ಸಲಹೆಗಳನ್ನು ತಿಳಿಸಬೇಕು. ಕಾಂಗ್ರೆಸ್ ಸದಸ್ಯರು ಮನಃ ಪೂರ್ತಿಯಾಗಿ ಪ್ರಯತ್ನಿಸಲು ನಿಶ್ಚೈಸಿದರೆ ಪರದೇಶೀ ಬಟ್ಟೆಯ ಬಹಿಷ್ಕಾರವು ಹೆಚ್ಚಿನ ಕಷ್ಟದ ಕೆಲಸವಲ್ಲ. ಹಾಗೆ ಮಾಡಲು ಸಾಧ್ಯವಾಗಬೇಕಾದರೆ ಅವರಿಗೆ ಖಾದಿಯಲ್ಲಿ ಸಂಪೂರ್ಣ ವಿಶ್ವಾಸವಿರಬೇಕು. ಖಾದಿಯಲ್ಲಿ ನಂಬಿಕೆ ಹುಟ್ಟಲಿಕ್ಕೆ ಇನ್ನೂ ಬೋಧನೆ ಅವಶ್ಯವಿದೆಯಾದರೆ ನನ್ನ ಸಲಹೆಗಳನ್ನು ಜಾರಿ ಮಾಡಲಿಕ್ಕಾಗಲಾರದು. ಖಾದಿ ಕಾರ್ಯಕ್ರಮದಲ್ಲಿ ನಂಬಿಕೆ ಇಲ್ಲದಿದ್ದರೆ ಠರಾವನ್ನು ಪಾಸ್ ಮಾಡಬೇಡಿ ಎಂತ ಕಾಂಗ್ರೆಸ್ ಸದಸ್ಯರನ್ನು ನಾನು ಎಚ್ಚರಿಸಿರುತ್ತೇನೆ. ಅವರೂ ಯಾವದೂ ವಿರೋಧವಿಲ್ಲದೆ ಠರಾವನ್ನು ಮಂಜೂರು ಮಾಡಿಕೊಂಡಿರುತ್ತಾರೆ. ಅದರಿಂದ ಖಾದಿಯಲ್ಲಿ ನಂಬಿಕೆ ಇದೆಯೆಂತಲೇ ಆಯಿತು. ನಂಬಿಕೆ ಇದ್ದರೆ ನನ್ನ ಸಲಹೆಗಳನ್ನು ನಡೆಸಬಹುದು. ಬೇರೆ ಯಾವ ವಿಧದಿಂದಲೂ ಪರದೇಶೀ ಬಟ್ಟೆ ಬಹಿಷ್ಕಾರ ಸಾಧ್ಯವಿಲ್ಲವೆಂಬದು ಖಂಡಿತ.

ಈ ಬಹಿಷ್ಕಾರದಲ್ಲಿ ದೇಶೀಯ ಗಿರಣಿ ಬಟ್ಟೆಗಳ ಗತಿ ಏನೆಂತ ಯಾರೂ ಚಿಂತಿಸಬೇಕಾದ ಅವಶ್ಯವಿಲ್ಲ. ಈ ಬಟ್ಟೆಯು ತನ್ನ ಎಚ್ಚರ ತಾನೇ ನೋಡಿಕೊಂಡೀತು, ಇನ್ನೂ ನೋಡಿಕೊಳ್ಳುತ್ತದೆ. ನಮ್ಮಿಂದ ಸಾಧ್ಯವಿರುವಷ್ಟು ಜನರನ್ನು ಖಾದಿ ಧರಿಸುವಂತೆ ನಾವು ಮಾಡುವ. ಸ್ವದೇಶೀ ಗಿರಣಿ ಬಟ್ಟೆಗೂ ಸಹಾಯ ಕೊಡಿ ಎಂತ ಹೇಳುತ್ತಾ ಬಹಿಷ್ಕಾರವನ್ನು ಸಾಧಿಸಲಾರೆವು. ಸ್ವದೇಶೀ ಗಿರಣಿ ಬಟ್ಟೆಗಳ ಕ್ರಯ ಹೆಚ್ಚಿಸಲಿಕ್ಕೂ, ತಿಳುವಳಿಕೆ ಇಲ್ಲದ ಸಮುದಾಯದವರನ್ನು ಅಪ್ರಮಾಣಿಕ ಗಿರಣಿ ಮಾಲೀಕರು ಮೋಸಗೊಳಿಸಲಿಕ್ಕೂ ನಾವು ಸಹಾಯ ಕೊಟ್ಟಂತೆ ಆಗುತ್ತದಷ್ಟೆ.

ನನ್ನ ಕಾರ್ಯಕ್ರಮದ ರೀತಿಯ ಸಲಹೆಗಳ ಅಡಿಯಲ್ಲಿ ನಾನು ಕೊಟ್ಟಿರುವ ಟಿಪ್ಪಣಿಯನ್ನು ಗಮನಿಸಿ ನೋಡಬೇಕೆಂತ ಅಪೇಕ್ಷಿಸುತ್ತೇನೆ. ಕಾಂಗ್ರೆಸ್ ಕಾರ್ಯಕ್ರಮಗಳು ಜಯಪ್ರದವಾಗಬೇಕಾದರೆ ಕಾಂಗ್ರೆಸಿನ ರಚನೆಯು ಸುಧಾರಿಸಲ್ಪಡಬೇಕು. 1921ನೇ ಇಸವಿಯಲ್ಲಿ ಇದ್ದಂತೆ ಜೀವವಿರುವ ಸಂಸ್ಥೆಯಾಗಬೇಕು.

ಖಾದಿ ಮೂಲಕ ಪರದೇಶೀ ಬಟ್ಟೆಯ ಬಹಿಷ್ಕಾರದ ಕಾರ್ಯಕ್ರಮ.

1. ಕಾಂಗ್ರೆಸ್ ಸಂಸ್ಥೆ ಇರುವ ಪ್ರತಿಯೊಂದು ಪಟ್ಟಣದಲ್ಲಿಯೂ, ಗ್ರಾಮದಲ್ಲಿಯೂ ಮನೆ ಮನೆಗೆ ಹೋಗಿ ಜನರಲ್ಲಿರುವ ಪರದೇಶೀ ಬಟ್ಟೆಯನ್ನೆಲ್ಲಾ ಕೇಳಿಕೊಂಡು, ಅವರಿಗೆ ಬೇಕಾದ ಖಾದಿ ಬಟ್ಟೆಯನ್ನು ಕೊಡುವ ಅಥವ ಒದಗಿಸಿಕೊಡಲು ಒಪ್ಪಿಕೊಳ್ಳುವ ಸ್ವಯಂಸೇವಕರನ್ನು ಕಾಂಗ್ರೆಸ್ ಸಂಸ್ಥೆಗಳು ಕೂಡಿಸಬೇಕು.

2. ಎಲ್ಲಾ ಖಾದಿಯ ಮೇಲೂ ಅಖಿಲ ಭಾರತ ಖಾದಿ ಸಂಘದ ಮೊಹರು ಇರಬೇಕು. ಮತ್ತು ಕ್ರಯವೂ ಬಟ್ಟೆಯ ಮೇಲೆ ಸ್ಪಷ್ಟವಾಗಿ ಬರೆದಿರಬೇಕು.

3 ಖಾದಿ ಉಪಯೋಗವನ್ನೂ ಮತ್ತು ಪರದೇಶೀ ಬಟ್ಟೆಯ ಬಹಿಷ್ಕಾರವನ್ನೂ ಕುರಿತು ಬೋಧಿಸಲು ತಾವಾಗಿ ಮುಂದು ಬರುವ ಬೋಧಕರನ್ನು ಕೂಡಿಸಬೇಕು.

ಸೂಚನೆ:—ಸ್ವಯಂಸೇವಕರಿಗೂ ಬೋಧಕರಿಗೂ ನಿಜವಾದ ಖಾದಿಗೂ ಇತರ ಖಾದಿಗೂ ಇರುವ ತಾರತಮ್ಯ ತಿಳಿದಿರಬೇಕು.

4. ಜಮಾಯಿಸಿದ ಪರದೇಶೀ ಬಟ್ಟೆಯನ್ನು ಸಾಧ್ಯವಿದ್ದಲ್ಲೆಲ್ಲಾ ಪಬ್ಲಿಕ್ ಸ್ಥಳಗಳಲ್ಲಿ ಸುಡಬೇಕು.

5. ಪರದೇಶೀ ಬಟ್ಟೆ ವ್ಯಾಪಾರ ಮಾಡುವ ಪ್ರತಿಯೊಬ್ಬನಲ್ಲಿಗೂ ಹೋಗಿ ಅವರ ಸಹಕಾರವನ್ನು ಕೇಳಿಕೊಳ್ಳಬೇಕು. ಇನ್ನು ಮೇಲೆ ಪರದೇಶೀ ಬಟ್ಟೆ ಕೊಳ್ಳದಂತೆಯೂ, ರದ್ದು ಪಡಿಸಲು ಸಾಧ್ಯವಿರುವ ಪರದೇಶೀ ಬಟ್ಟೆಯ ಆರ್ಡರುಗಳನ್ನು (ತರಿಸಲು ಮಾಡಿದ ಒಪ್ಪಂದಗಳನ್ನು), ರದ್ದು ಪಡಿಸುವಂತೆಯೂ ಮಾಡಬೇಕು.

6. ಸಾಧ್ಯವಿರುವಲ್ಲೆಲ್ಲಾ ಮತ್ತು ಕಾಂಗ್ರೆಸ್ ಕೆಲಸಗಾರರು ಹಿಂಸೆಗೆ ಇಳಿಯಲಾರರೆಂಬ ಭರವಸೆ ಇರುವಲ್ಲಿಯೂ ಪರದೇಶೀ ಬಟ್ಟೆ ಅಂಗಡಿಗಳಿಗೆ ವ್ಯಾಪಾರಕ್ಕೆ ಹೋಗದಂತೆ ಜನರನ್ನು ತಡೆಯಬಹುದು.

7. ಈ ಮೇಲಿನ ಕಾರ್ಯಕ್ರಮದಲ್ಲಿ ನಡೆಯುವ ಕೆಲಸವನ್ನು ಮಧ್ಯವರ್ತಿ ಸಂಸ್ಥೆಗೆ ಪ್ರತಿದಿನವೂ ತಿಳಿಸಬೇಕು. ಮಧ್ಯವರ್ತಿ ಸಂಸ್ಥೆಯು ಪತ್ರಿಕೆಗಳ ಮೂಲಕ ನಡೆದ ಕೆಲಸವನ್ನು ಪ್ರಕಟಿಸಬೇಕು.

8 ಎಲ್ಲಾ ರಾಜಕೀಯ ಮತ್ತು ಇತರ ಸಂಸ್ಥೆಗಳ ... ಯ ಮತ್ತು ಸಹಕಾರವನ್ನು ಕೇಳಿಕೊಳ್ಳಬೇಕು.

9. ಪರದೇಶೀ ಬಟ್ಟೆ ಬಹಿಷ್ಕಾರದ ಕೆಲಸಕ್ಕೆ ದೇಶಭಕ್ತ ಮಹಿಳೆಯರ ಸಹಾಯ ತೆಗೆದುಕೊಳ್ಳಬೇಕು.

10. ಅಖಿಲ ಭಾರತ ನೂಲುವ ಸಂಘದವರು ನಿಜವಾದ ಖಾದಿ ದೊರೆಯುವ ಸ್ಥಳಗಳ ಪಟ್ಟಿಯನ್ನು ಮಧ್ಯವರ್ತಿ ಸಂಸ್ಥೆಗೆ ಕೊಡುವಂತೆಯೂ, ಅವಶ್ಯವಿರುವಲ್ಲೆಲ್ಲಾ ಖಾದಿ ಭಂಡಾರಗಳನ್ನು ಇಡುವಂತೆಯೂ ಕೇಳಿಕೊಳ್ಳಬೇಕು.

11. ಪರದೇಶೀ ಬಟ್ಟೆ ಬಹಿಷ್ಕಾರ ಕಮಿಟಿ ಎಂಬ ಚಿಕ್ಕ ಕಮಿಟಿಯೊಂದನ್ನು ಮಾಡಿ ಅದಕ್ಕೆ ಕೊಂಚ ಮೂಲ ಧನ ಕೊಟ್ಟು, ಹೆಚ್ಚಿನ ಧನ ಶೇಕರಿಸಿಕೊಳ್ಳುವ ಅಧಿಕಾರ ಕೊಡಬೇಕು. ಹಾಗೆ ಬಂದಯಾದ ಹಣದ ಆಡಿಟಾದ ಲೆಕ್ಕವನ್ನು ಪ್ರತಿ ಮೂರು ತಿಂಗಳಿಗೊಂದಾವರ್ತಿ ಪ್ರಕಟಿಸಬೇಕು.

12. 11 ರಲ್ಲಿ ಸೂಚಿಸಿರುವ ಕಮಿಟಿಯು ಬಹಿಷ್ಕಾರದ ಆವಶ್ಯಕತೆಯನ್ನೂ, ಪ್ರತಿಯೊಬ್ಬನಿಗೂ ಬಹಿಷ್ಕಾರವನ್ನು ಸಾಧಿಸಲು ಸಾಧ್ಯವಿದೆಯೆಂಬದನ್ನೂ ವಿವರಿಸುವ ಹಸ್ತ ಪತ್ರಿಕೆಗಳನ್ನು ಹಂಚಬೇಕು.

13. ಪ್ರಾಂತೀಕ ಮತ್ತು ಮಧ್ಯವರ್ತಿ ಶಾಸನ ಮಂಡಲಿಗಳಲ್ಲೂ ಕ್ರಯವನ್ನು ಎಣಿಸದೆ ಖಾದಿ ಬಟ್ಟೆಯನ್ನೇ ಸರಕಾರವು ಕೊಂಡುಕೊಳ್ಳಬೇಕೆಂತ ಠರಾವು ತಂದು ಮಂಜೂರು ಮಾಡಿಸಬೇಕು. ಪರದೇಶೀ ಬಟ್ಟೆಯ ಮೇಲೆ ತುಂಬಾ ತೆರಿಗೆ ಹಾಕುವಂತೆಯೂ ಠರಾವು ಮಂಜೂರುಮಾಡಿಕೊಳ್ಳಬೇಕು.

ಟಿಪ್ಪಣಿ—ಹಿಂದುಸ್ಥಾನದಲ್ಲೆಲ್ಲಾ ಕಾಂಗ್ರೆಸ್ ಕಮಿಟಿಗಳ ಸಂಘಟನೆಯು ಕೂಡಲೇ ಸುಧಾರಿಸಲ್ಪಟ್ಟೀತು, ಕಾಂಗ್ರೆಸ್ಸಿನ ತುಂಬಾ ಮೆಂಬರುಗಳು ಸೇರಿಯಾರು, ಖಾದಿ ಮೂಲಕ ಪರದೇಶೀ ಬಟ್ಟೆ ಬಹಿಷ್ಕಾರಕ್ಕೆ ಕಾಂಗ್ರೆಸ್ ಕಮಿಟಿಗಳ ಸಹಕಾರ ಸಂಪೂರ್ಣವಾಗಿ ಸಿಕ್ಕೀತು ಎಂಬ ನಂಬಿಕೆಯಿಂದ ಈ ಕಾರ್ಯಕ್ರಮವು ತಯಾರಿಸಲ್ಪಟ್ಟಿದೆ. ಈ ಶರತ್ತುಗಳು ನೆರವೇರಿದರೆ ಈ ವರ್ಷದಲ್ಲಿ ಪರದೇಶೀ ಬಟ್ಟೆ ಬಹಿಷ್ಕಾರವನ್ನು ಪರದೇಶೀ ಬಟ್ಟೆಯ ಆಮದಿಗೆ ಕಾಣುವಂತೆ ಧಕ್ಕೆ ತಟ್ಟುವಂತಾದರೂ ಮಾಡಬಹುದೆಂತ ಹೇಳಬಹುದು.

ವಿಲ್ಯಂಮನ್ಸ್ ಮತ್ತು ಬ್ರದರ್ಸ್,

ಬುಕ್ ಬೈಂಡರ್ಸ್, ಮಡಿಕೇರಿ.

ದರ ಸುಲಭ! ಕೆಲಸ ನಾಜೂಕು!! ಸಮಯ ಶೀಘ್ರ!!!

ಇಂಡಿಯನ್ ಲಾ ರಿಪೋರ್ಟ್ಸ್, ಆಲ್ ಇಂಡಿಯಾ ರಿಪೋರ್ಟ್ಸ್, ಮತ್ತು, ಇನ್ನೂ ಎಲ್ಲಾ ತರದ ಪುಸ್ತಕಗಳನ್ನು ನಿಮ್ಮ ಮನ ಮೆಚ್ಚುವಂತೆ ಕ್ಯಾಲಿಕೋ ಮತ್ತು ಲೆದರ್ ಬೈಂಡ್ ಮಾಡಿ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ಮತ್ತೆ ಬಿಡಲಾರಿರಿ!

ಸ್ತ್ರೀ ಶಿಕ್ಷಣದ ಆದರ್ಶ.

ಈ ವಿಷಯವನ್ನು ಕುರಿತು ಶ್ರೀಮತಿ ವಿದ್ಯಾವತೀಜೀ ಯವರು "ವೇದಸಂದೇಶ" ದಲ್ಲಿ ಬರೆದುದರಲ್ಲಿ ಒಂದು ಕಡೆ ಹೀಗೆಂದು ಹೇಳಿರುವರು—

ಸ್ತ್ರೀ ಶಿಕ್ಷಣೆಯ ವಿಷಯವಾಗಿ ಮೊನನ ಧರ್ಮಶಾಸ್ತ್ರಕಾರರು ಒಂದು ಶ್ಲೋಕವನ್ನು ಬರೆದಿದ್ದಾರೆ. ಅದು ಸಹ ವಿಶೇಷ ಮಹತ್ವಪೂರ್ಣವು. "ಸದಾ ಪ್ರಹೃಷ್ಟಯಾ ಭಾವ್ಯಂ ಗೃಹಕಾರ್ಯೇಷು ದಕ್ಷಯಾ। ಸುಸಂಸ್ಕೃತೋಪಸ್ಕರಯಾ ವ್ಯಯೇ ಚಾಮುಕ್ತಹಸ್ತಯಾ" ಇದರ ಅಭಿಪ್ರಾಯವೇನಂದರೆ "ಸದಾ ಪ್ರಹೃಷ್ಟಯಾ ಭಾವ್ಯಂ" ಸ್ತ್ರೀಯರು ಯಾವಾಗಲೂ ಸಂತೋಷದಿಂದ ಇರಬೇಕು. ಅದಕ್ಕಾಗಿ ಸಂಗೀತ, ವಾದ್ಯ ಇತ್ಯಾದಿ ಸಾಧನೆಗಳನ್ನು ಸಂಪಾದಿಸಬೇಕು. ಈ ಪ್ರಕಾರದ ಒಳ್ಳೆ ಸ್ವಭಾವ ಮತ್ತು ಸಂಗೀತ ಇತ್ಯಾದಿಗಳಿಂದ ಅವರು ತಮ್ಮನ್ನು ಮತ್ತು ಪರಿವಾರವನ್ನು ಸಂತೋಷಿಸಬಲ್ಲರು. ಎರಡನೇ ಏನಂದರೆ—"ಗೃಹಕಾರ್ಯೇಷು ದಕ್ಷಯಾ" ಸ್ತ್ರೀಯರು ಎಲ್ಲಾ ತರದ ಗೃಹಕಾರ್ಯಗಳಲ್ಲಿ ಚತುರರಾಗಿರಬೇಕು. ಮನೆಯ ವಸ್ತುಗಳನ್ನು ಕ್ರಮಪೂರ್ವಕವಾಗಿಟ್ಟು ಸೌಂದರ್ಯವನ್ನು ವರ್ಧಿಸುವುದು ಮತ್ತು ಶಿಲ್ಪ ವಿದ್ಯೆ ಇತ್ಯಾದಿಗಳಿಂದ ಗೃಹ ಶೋಭೆಯನ್ನು ಹೆಚ್ಚಿಸುವುದು ಇದೆಲ್ಲಾ ಗೃಹಕಾರ್ಯದಲ್ಲಿಯೇ ಬರುತ್ತದೆ. ಮೂರನೇ ಏನಂದರೆ—"ಸುಸಂಸ್ಕೃತೋಪಸ್ಕರಯಾ" ಸ್ತ್ರೀಯರು ಅಡಿಗೆ ಮಾಡುವುದರಲ್ಲಿಯೂ ಸಹ ಚತುರರಾಗಿರಬೇಕು. ಮನೆಯಲ್ಲಿ ಎಷ್ಟು ಧನ ಇದ್ದರೂ ಕೂಡ ತಮ್ಮ ಕೈಗಳಿಂದಲೇ ಅಡಿಗೆ ಮಾಡಬೇಕು. ಇದೇ ಶಾಸ್ತ್ರದ ವಿಧಿಯು. ಈಗಿನ ಇಂಗ್ಲಿಷ್ ಶಿಕ್ಷಣೆಯ ಕ್ರಮದಲ್ಲಿ ಈ ಅಗತ್ಯವಾದ ವಿಷಯಕ್ಕೆ ಬಹಳ ಕಡಿಮೆ ಲಕ್ಷ್ಯಕೊಡುತ್ತಾರೆ. ಕೆಲವು ಶಿಕ್ಷಿತ ಸ್ತ್ರೀಯರು ಇದನ್ನು ಹೀನಕೆಲಸವೆಂದು ಭಾವಿಸುತ್ತಾರೆ. ಆಂಥಾ ಭಾವನೆಯನ್ನು ಶಾಸ್ತ್ರೀಯ ದೃಷ್ಟಿಯಿಂದ ಮತ್ತು ವಿಶೇಷವಾಗಿ ಆರೋಗ್ಯದೃಷ್ಟಿಯಿಂದ ಅವಶ್ಯವಾಗಿ ಬಿಡಬೇಕು. ನಾಲ್ಕನೇ ಏನಂದರೆ "ವ್ಯಯೇಚಾಮುಕ್ತಹಸ್ತಯಾ" ಅಂದರೆ ಸ್ತ್ರೀಯರು ಅನಾವಶ್ಯಕ ಖರ್ಚು ಮಾಡುವುದರಲ್ಲಿ ಕೃಪಣರಾಗಿರಬೇಕು, ಮತ್ತು ಶುಭಕಾರ್ಯಗಳ ಸಹಾಯಕ್ಕಾಗಿ ಅವರು ಬಹಳ ಉದಾರತೆಯನ್ನು ತೋರಿಸಬೇಕು. ಏಕೆಂದರೆ—ಸ್ತ್ರೀಯರಲ್ಲಿ ಉದಾರತೆಯು ಹೆಚ್ಚಾಗಿ ಇರುತ್ತದೆ. ಆ ಉದಾರತೆಯನ್ನು ಯೋಗ್ಯರೀತಿಯಿಂದ ಉಪಯೋಗಿಸಬೇಕು. ಈ ನಾಲ್ಕು ನಿಯಮಗಳು ಸ್ತ್ರೀಶಿಕ್ಷಣದಲ್ಲಿ ಬಹಳ ಅಗತ್ಯ. ಇವುಗಳನ್ನು ಪಾಲಿಸುವುದರಿಂದಲೇ ನಿಜವಾದ ಸಭ್ಯತೆಯು ಉಂಟಾಗುತ್ತದೆ.

ಸ್ವದೇಶಾನುರಾಗವನ್ನು ವರ್ಧಿಸುವುದು ಕೂಡ ಸ್ತ್ರೀಶಿಕ್ಷಣದ ಮುಖ್ಯ ಉದ್ದೇಶವು. ಅದಕ್ಕಾಗಿ ನಾವು ಯಾವಾಗಲೂ ಸ್ವದೇಶೀ ವಸ್ತ್ರವನ್ನೇ ಧರಿಸಬೇಕು. ವಿದೇಶೀ ವಸ್ತ್ರಗಳನ್ನು ಎಂದಿಗೂ ಉಪಯೋಗಿಸಬಾರದು. ಹೀಗೆ ಮಾಡುವುದರಿಂದಲೇ ನಾವು ನಮ್ಮ ದೇಶಭಕ್ತಿಯನ್ನು ಮತ್ತು ನಮ್ಮ ಧಾರ್ಮಿಕ ಕರ್ತವ್ಯಗಳನ್ನು ಕ್ರಿಯಾತ್ಮಕ ರೂಪದಿಂದ ತೋರಿಸಬಲ್ಲೆವು."

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಎಂಬುದೇ

ಎಲ್ಲಾ ಬೆಳೆಗಳಿಗೂ ಯೋಗ್ಯವಾದ ಸಾರಜನಕ ಗೊಬ್ಬರವು, ಪ್ರಪಂಚದಲ್ಲೆಲ್ಲಾ ಇದೇ ಸಸ್ಯಾದಿಗಳನ್ನು ಒಳ್ಳೇಯದಾಗಿ ಬೆಳೆಸುವ ಮತ್ತು ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಫಸಲನ್ನು ಕೊಡುವ ಸಾಧನವೆಂದು ಖ್ಯಾತಿಯನ್ನು ಪಡೆದಿರುತ್ತದೆ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಗಿಡಗಳ ಬೇರುಗಳನ್ನು ಹೆಚ್ಚು ಆಳದ ವರೆಗೂ ಪಸರಿಸುವಂತೆ ಮಾಡುವದರಿಂದ ಮಳೆ ಕಡಿಮೆಯಾದಾಗ್ಯೂ ಗಿಡಗಳಿಗೆ ಹೆಚ್ಚಿನ ತೊಂದರೆಯಾಗಲಾರದು.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗಗಳಿಗೆ ಥಕ್ಕನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಆಫ್ ಸೋಡಾದಲ್ಲಿ ಬೆಳೆಗಳನ್ನೂ ಮಣ್ಣನ್ನೂ ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಏಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆಸರ್ಸ್ 'ಪೆರಿ' ಕಂಪೆನಿಯವರು ಸಂಸ್ಥಾನದಲ್ಲಿರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಲಿನ ಚೀಲ 1ರ ರೂಪಾಯಿ 6—1—ರಂತೆ ವರೆಗಿನ ಕೊಡುವದಲ್ಲದೆ, ಮಡಿಕೇರಿ ಮತ್ತು ವೀರರಾಜಪೇಟೆಯಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ 6—15—ರಂತೆ ದೊರೆಯುತ್ತದೆ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದರ್ಮಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ. 469, ಕಲ್ಕತ್ತಾ.

(2) ಮಿಸ್ಟರ್ ಎಂ ಯಂ ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24—9

ಕೋವಿಗಳು, ಮತ್ತು ಅವುಗಳ ಸಾಹಿತ್ಯಗಳು.



ಮಿಡ್ಲೆಂಡ್ ಕಂಪೆನಿಯ "ನಾಕ್ ಎಬೌಟ್" ಎಂಬ 12 ನೇ ನಂಬರಿನ ಒಂಟಿ ಕೊಳದ ಕೋವಿಗೆ ರೂ. 50.

ಅಮೇರಿಕದ ಸ್ಟೀವನ್ಸ್ ಕಂಪೆನಿಯ 12 ನೇ ನಂಬರಿನ ಒಂಟಿ ಕೊಳದ ತೋಟದ ಕೋವಿಗೆ ರೂ 45.

12 ನೇ ನಂಬರಿನ ಒಂಟಿ ಕೊಳದ ಅತಿ ಸುಲಭ ಕ್ರಯದ ತೋಟದ ಕೋವಿಗೆ ರೂ 38.

12ನೇ ನಂಬರಿನ ಜೋಡು ಕೊಳದ 'ಇಂಗ್ಲಿಷ್' ತೋಟದ ಕೋವಿಗೆ ರೂ. 75.

ಬೆಲ್ಜಿಯನ್ ' " " ತೋಟದ ಕೋವಿಗೆ ರೂ. 60.

ಹೊಗೆ ರಹಿತವಾದ 12 ನಂಬರಿನ ಇಂಗ್ಲಿಷ್ "ಎಲೀ" ಚೆಲ್ಲು ತುಂಬಿದ ತೋಟಗಳು	100 ಕ್ಕೆ	ರೂ	1—0—0
ಅಮೇರಿಕನ್ ವೆಸ್ಟರನ್ " " "	100 ಕ್ಕೆ	ರೂ	9—8—0
ಬೆಲ್ಜಿಯನ್	100 ಕ್ಕೆ	ರೂ.	9—0—0

ಎಲ್ಲಾ ತರದ ಕೋವಿಗಳು, ರೈಫಲ್‌ಗಳು, ರಿವಾಲ್ವರ್‌ಗಳು, ಪಿಸ್ತೂಲ್‌ಗಳು ಮತ್ತು ಚೆಲ್ಲು ಮದ್ದು ವಗೈರೆ ಅಲ್ಲದೆ ಬೇಟೆಗಾರರಿಗೆ ಬೇಕಾಗಿರುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತೆ.

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಂಪೆನಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವುದು.

Abdoolally Noorbhoy.
Arms & Ammunition Dealers.
248–250 Abdul Rehman Street
Bombay 3. Telegrams "Guidance"

24—12

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.





ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಫೋನ್‌ಗಳೂ, ಅವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳೂ, ಕೈಗೆ ಕಟ್ಟಿಕೊಳ್ಳುವ, ಜೇಬಿನ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡಿನ ಬೆಳ್ಳಿಯ, ರಿಬ್ಬನಿನ ಮತ್ತು ಚರ್ಮದ ಪಟ್ಟಿಗಳೂ ಸಹಾ ಬಿಡಿಯಾಗಿಯೂ, ಚಿಲ್ಲರೆಯಾಗಿಯೂ ಯಾವಾಗಲೂ ದೊರೆಯುತ್ತವೆ. ನಮ್ಮಲ್ಲಿ 8 ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ 'ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್' ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಖಮಾನವಾಗಿಯೂ, ಒಡೆಯ ಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿಚಾರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರ ಮುಖೇನ ಬರೆದು ಈಗಲೇ ತಿಳಿಯಬಹುದು.

24—9

ಗಮನಿಸಿರಿ! ಪರೀಕ್ಷಿಸಿ ನೋಡಿ!!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದ

ಪುತ್ರ ಸಂತಾನದ ಎಣ್ಣೆ.

ಅನೇಕ ಕಾರಣಗಳಿಂದ ಸ್ತ್ರೀಯರ ಹೊಟ್ಟೆಯಲ್ಲಿ ಕ್ರಿಮಿಗಳು ಸೇರಿ ಗರ್ಭವನ್ನು ನಾಶಪಡಿಸುವವು ಮತ್ತು ಗರ್ಭಕೋಶದಲ್ಲಿ ದುರ್ಮಾಂಸವು ಬೆಳೆದು ರಕ್ತವನ್ನು ಕಟ್ಟುವುದು. ವಾಯುವು ಇದ್ದರೂ ಗರ್ಭವು ನಿಲ್ಲುವುದಿಲ್ಲ. ಇಂಥವರು ಈ ಎಣ್ಣೆಯನ್ನು 15 ದಿನಗಳು ಸೇವಿಸುವದರಿಂದ ಗರ್ಭಕೋಶದ ಎಲ್ಲಾ ವಿಧವಾದ ವ್ಯಾಧಿಗಳನ್ನು ಹೋಗಲಾಡಿಸಿ ಆ ತಿಂಗಳಲ್ಲಿಯೇ ಗರ್ಭವನ್ನು ನಿಲ್ಲಿಸುವದು. ಕೆಲವರಿಗೆ ಗರ್ಭವು 2—3 ತಿಂಗಳಕಾಲ ನಿಂತು ನಂತರ ಹೋಗಿಬಿಡುವವು. ಅಂಥವರಿಗೂ ಸಹ ಈ ಎಣ್ಣೆಯು ಸಿದ್ಧೌಷಧವು ಮಕ್ಕಳಿಲ್ಲದವರಿಗೆ ಈ ಎಣ್ಣೆಯು ಒಂದು ವರಪ್ರಸಾದದ ಔಷಧ ಬೊಂಬಾಯಿ, ಮದರಾಸ್ ಪ್ರಾಂತ್ಯಗಳಲ್ಲಿ ಈ ಎಣ್ಣೆಯನ್ನು ಉಪಯೋಗಿಸಿ ಅನೇಕರು ಪುತ್ರ ಸಂತಾನವನ್ನು ಪಡೆದಿರುವರು. ಉಪಯೋಗಿಸುವ ವಿಧಾನವನ್ನು ಔಷಧದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಬಾಟ್ಲಿ 1ಕ್ಕೆ 2—0—0

ಎನ್. ವಿ. ಗೋಪಾಲ್ ಮೆಡಿಕಲ್ ಹಾಲ್,
37. ತಿರುಪಳ್ಳಿಬೀದಿ, ಮದರಾಸ್.

52—6

52 ವರುಷಗಳ ಅನುಭವಸಿದ್ಧ ಔಷಧಗಳು.

೧. ಮಹಾನುಭವನ ಕಾಮೇಶ್ವರೀ ಲೇಹ.

ಅಜೀರ್ಣ, ಎದೆನೋವು, ಸೊಂಟನೋವು, ಮಲಬದ್ಧತೆ, ನಿದ್ರೆಯಿಲ್ಲದೆ ಇರುವಿಕೆ ಮುಂತಾದವುಗಳನ್ನು ಗುಣಪಡಿಸಿ ರತಿ ಸುಖಕ್ಕೆ ಶಕ್ತಿಯನ್ನುಂಟುಮಾಡುವುದು.

ಡಬ್ಬಿ 1 ಕ್ಕೆ ರೂ. 2—0—0. 3 ಡಬ್ಬಿಗಳಿಗೆ ರೂ. 5—12—0.

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋಸಮಯದಲ್ಲಿ ಅತ್ಯಲ್ಪವಾಗಲೀ, ಅತೀಕವಾಗಲಿ ರಕ್ತ ಸುರಿಯೋಣ, ಹೊಟ್ಟೆನೋವು, ಸೊಂಟನೋವು, ಬಿಳಿಜ್ವರ ನಾನಾವರ್ಣಗಳ ಪ್ರದರಗಳನ್ನು ಅತಿ ಶೀಘ್ರದಲ್ಲಿ ಗುಣಮಾಡಿ ಗರ್ಭಾಶಯ ಸಂಬಂಧ ರೋಗಗಳನ್ನು ಗುಣಪಡಿಸಿ, ಸಂತತಿಗೆ ಅಪಾಯಕರವಾದ ದೋಷಗಳನ್ನು ಹೋಗಲಾಡಿಸುವುದು. 1 ಬಾಟ್ಲಿ ಮತ್ತು 1 ಡಬ್ಬಿ ಮಾತ್ರೆಗೆ 2—4—0.

೩. ಮೋಹಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳುಪು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ, ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ 2—8—0. 3 ಕ್ಕೆ 7—0—0.

೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1. 2. 3. ಅಥವಾ 4 ದಿವಸಕ್ಕೊಮ್ಮೆ ಬರುವ ಜ್ವರ, ಮಲೇಜ್ವರ ಇವುಗಳ ಮೇಲೆ ಖಾತ್ರಿ. ಬಾಟ್ಲಿ 1 ರ 0—12—0.

೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೬. ಇಛ್ಛಾಭೇದಿ.

ಆಯಾಸವನ್ನುಂಟುಮಾಡದ ಸುಖವಿರೇಚಕ.

ಬಾಟ್ಲಿ 1 ಕ್ಕೆ 0—12—0. 3 ಕ್ಕೆ 2—0—0.

೭. ದಂತಕಾಂತಿ ಚೂರ್ಣ. ಡಬ್ಬಿ 1 ಕ್ಕೆ 3 ಆಣೆ

೮. ಗಜಕರ್ಣ ಮುಲಾಮ್. ಡಬ್ಬಿ 1ಕ್ಕೆ 6 ಆಣೆ.

N. B. ಇವುಗಳಲ್ಲದೆ ಬೇರೆ ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತೆ.

ಎನ್. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದೀಕ್ ಪಿಜಿಷಿಯನ್ಸ್,
ಮಂಗಳೂರು, ದ. ಕನ್ನಡ.

52—13

ಮೈಸೂರು ಮಹಾರಾಜರವರೂ ಹಾಸನ ಡಿಸ್ಟ್ರಿಕ್ಟ್ ಬೋರ್ಡೂ.

ತಾ 28—1—'29ರಲ್ಲಿ ಮೈಸೂರು ಮಹಾರಾಜರವರು ಹಾಸನದಲ್ಲಿ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಪಾಯವನ್ನು ಹಾಕಲಿಕ್ಕೆ ಬಂದಾಗ್ಯೆ ಅಲ್ಲಿಯ ಡಿಸ್ಟ್ರಿಕ್ಟ್ ಬೋರ್ಡು ಸದಸ್ಯರು ಮಹಾರಾಜರವರ ಸನ್ನಿಧಿಯಲ್ಲಿ ಒಂದು ಬಿನ್ನಹ ಪತ್ರಿಕೆಯನ್ನು ಒಪ್ಪಿಸಿದರು.

ಅದರಲ್ಲಿ, ಅಲ್ಲಿಯ ಜನರಲ್ಲಿ ಇರುವ ರಾಜಭಕ್ತಿ, ಶಾಂತಿ ಸುಖ ಮುಂತಾದವುಗಳನ್ನು ವಿವರಿಸಿದನಂತರ ರಾಮನಾಥಪುರದ ಬಳಿ ಕಾವೇರಿ ನದಿಗೆ ಸೇತುವೆಯನ್ನು ಮಾಡಿಸಿಕೊಡಬೇಕೆಂಬ ವಿಷಯಕ್ಕೆ ಒತ್ತು ಪ್ರಾಮುಖ್ಯತೆ ಕೊಟ್ಟಿರುವರು. ಬಿನ್ನಹ ಪತ್ರಿಕೆಯಲ್ಲಿ ಈ ಸೇತುವೆಯಿಂದ ನದಿಯ ಎರಡು ಬದಿಗಳಲ್ಲಿರುವ ಪ್ರದೇಶದವರಿಗೂ, ಸುತ್ತಮುತ್ತಲಿನ ಗ್ರಾಮವಾಸಿಗಳಿಗೂ ಉಂಟಾಗಬಹುದಾದ ಹಲವು ಪ್ರಯೋಜನಗಳನ್ನು ವಿವರವಾಗಿ ತೋರಿಸಿ, ತಮ್ಮ ಬೋರ್ಡಿನಿಂದ ಒಂದು ಲಕ್ಷ ರೂಪಾಯಿ ಕೊಡುತ್ತೇವೆಂದೂ, ಬಾಕಿ ಖರ್ಚನ್ನು ಮಹಾರಾಜರವರು ತಮ್ಮ ಸರ್ಕಾರದಿಂದ ಕೊಡಿಸಬೇಕೆಂದೂ ಬೇಡಿಕೊಂಡಿರುವರು. ಸದರಿ ಸೇತುವೆಯ ಪ್ರಯೋಜನಗಳ ಪೈಕಿ ಕೊಡಗಿಗೆ ಸಂಬಂಧಪಡುವ ಈ ಕೆಳಗಿನ ಭಾಗವೂ ನಮೂದು ಮಾಡಲಾಗಿದೆ.

"ಇದೂ ಅಲ್ಲದೆ ಈ ಸೇತುವೆಯನ್ನು ಕಟ್ಟಿಸುವುದರಿಂದ ಈಚೆಗೆ ಸಬ್-ತಾಲೋಕು ಆಗಿರುವ ಪಿರಿಯಾಪಟ್ಟಣದ ಮೂಲಕ ಕೊಡಗು ದೇಶದ ಕೆಲವು ಭಾಗಗಳಿಗೆ ಸುಲಲಿತವಾದ ಮಾರ್ಗವಾಗಿ ನಮ್ಮ ಜನಗಳು ಧಾರಾಳವಾಗಿ ಯಾವ ಕಾಲದಲ್ಲಾದರೂ ಪ್ರಯಾಣಮಾಡಲು ಅನುಕೂಲವಾಗುವುದಲ್ಲದೆ, ಇಲ್ಲಿನ ವ್ಯಾಪಾರಕ್ಕೆ ತುಂಬಾ ಪ್ರೋತ್ಸಾಹಜನಕವಾಗಿಯೂ, ಘನವೆತ್ತಿದ ಆ ದೇಶದ ಜನಗಳು ಸಹ ಮೈಸೂರಿಗೂ ಇರುವ ಈ ದೇಶದ ಮುಖ್ಯ ಸ್ಥಳಗಳಿಗೂ ರಾಜಧಾನಿಯ ಸಮೀಪ ನಗರದಲ್ಲಿಯೂ ಅಲ್ಪ ವೆಚ್ಚದಲ್ಲಿಯೂ ಬಂದುಹೋಗಲು ದೊಡ್ಡ ಸೌಲಭ್ಯವಾಗುತ್ತದೆಯಲ್ಲದೆ, ಈ ಸೇತುವೆಯು ಪೂರ್ಣವಾದೊಡನೆಯೇ ಕಾವೇರಿಯ ದಕ್ಷಿಣದಿಂದ ಕೊಡಗು ದೇಶಕ್ಕೆ ಮತ್ತೊಂದು ಹೊಸ ರಸ್ತೆಯು ಏರ್ಪಡಿಸಿದಂತೆಯೂ ಆಗುತ್ತದೆ, ಮಹಾಸ್ವಾಮಿ.

ರಾಮನಾಥಪುರವು ಸ್ವಭಾವ ದೃಷ್ಟಿಯಲ್ಲಿಯೂ, ಸೇತುವೆಯನ್ನು ಕಟ್ಟಲು ಯೋಗ್ಯವಾದ ಸ್ಥಳವಾಗಿರುವುದಲ್ಲದೆ, ಆಧ್ಯಾತ್ಮಿಕ ದೃಷ್ಟಿಯಲ್ಲಿಯೂ ದಕ್ಷಿಣ ಕಾಶಿ ಎಂದು ಸ್ಥಾನದಲ್ಲಿ ಪ್ರಸಿದ್ಧವಾದ ಯಾತ್ರಾಸ್ಥಳವಾಗಿರುವ ಪ್ರಯುಕ್ತ ತಂಡ ತಂಡವಾಗಿ ಬರುವ ಯಾತ್ರಾರ್ಥಿಗಳಾದ ಪ್ರಜೆಗಳಿಗೆ ಸಿದ್ಧವಾದ ಸೌಲಭ್ಯಗಳನ್ನುಂಟುಮಾಡಿಕೊಡುವ ಪರಮೋದ್ದೇಶ ಮಾಡಬೇಕಾದ ನಮ್ಮ ಕರ್ತವ್ಯವನ್ನು ನೆರವೇರಿಸಿದಂತೆ ಆಗುತ್ತದೆ ಎಂದು ಎಣಿಸುತ್ತೇವೆ, ಮಹಾಸ್ವಾಮಿ."

ವಿಜ್ಞಾಪನಾ ಪತ್ರಿಕೆಯಲ್ಲಿ ಹೇಳಿಕೊಂಡಿರುವಂತೆ ರಾಮನಾಥಪುರದ ಬಳಿ ಕಾವೇರಿ ನದಿಯ ದಕ್ಷಿಣ ತೀರದ ಪ್ರಾಂತ್ಯದಿಂದ ಕೊಡಗಿಗೆ ಜಿನಸು ಧಾನ್ಯಗಳೂ, ದನ ಕರುಗಳೂ ವ್ಯಾಪಾರಕ್ಕೆ ಬರುವದು ಹೆಚ್ಚಾಗಿರುವದರಿಂದ ಈ ಸೇತುವೆಯಿಂದ ಕೊಡಗಿಗೂ ತಕ್ಕ ಮಟ್ಟಿಗೆ ಪ್ರಯೋಜನವಾಗಬಹುದು. ಪ್ರಜೆಗಳ ಹಿತಕ್ಕಾಗಿ ಹಣ ಖರ್ಚು ಮಾಡಲು ಹಿಂಜರಿಯದ ಮಹಾರಾಜರವರು ಜನರಿಗೆ ತುಂಬಾ ಪ್ರಯೋಜನಕಾರಿಯಾದ ಈ ಸೇತುವೆಯನ್ನು ಕಟ್ಟಲು ಸಹಾಯ ಮಾಡದೆ ಇರಲಿಕ್ಕಿಲ್ಲವಾಗಿ ನಂಬುತ್ತೇವೆ.

[ಸಂ.]

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾ 26 ನೆಯ ನಡೆಯಿತು. ಹಾಜರಿದ್ದ ಮೆಂಬರುಗಳು:—1. ರಾವ್ ಸಾಹೇಬ್ ಪಿ. ದೇವಯ್ಯನವರು, 2. ಮ. ಗಳಾಟ ಪಿ. ... ರವರು, 3. ಎ. ಕೆ. ಕೃಷ್ಣಯ್ಯನವರು, 4. ಯಂ. ... ನವರು ಮತ್ತು 5. ಪಿ. ಐ. ಬೆಳ್ಯಪ್ಪನವರು, ಮೆ. ಸಿ. ವೆಂಕಪ್ಪಯ್ಯ ಬಿ. ಎ. ಬಿ. ಎಲ್.ರವರು, (ಗೌರವ ಸೆಕ್ರೆಟರಿ) ಮೆ. ಕೆ. ಪಿ. ಅಪ್ಪಯ್ಯನವರು, (ಏಜಂಟ್) ಮತ್ತು ಎನ್. ಸುಬ್ಬಯ್ಯ (ಕೋಆಪರೇಟಿವ್ ಸೊಸೈಟಿಗಳ ಇನ್ಸ್‌ಪೆಕ್ಟರು) ಸಹ ಹಾಜರಿದ್ದರು.

ಬ್ಯಾಂಕಿನ ಖಾಯಂ ಅಧ್ಯಕ್ಷರು ಗೈರುಹಾಜರಾಗಿದ್ದುದರಿಂದ ರಾವ್‌ಸಾಹೇಬ್ ಪಟ್ಟಮಾಡ ದೇವಯ್ಯನವರನ್ನು ಈ ಮೀಟಿಂಗಿನ ಅಧ್ಯಕ್ಷರನ್ನಾಗಿ ಆರಿಸಲಾಯಿತು.

ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

ಕಳೆದ ನವಂಬರ್ ಮತ್ತು ಡಿಸಂಬರ್ ತಿಂಗಳ ಜಮಾ ಖರ್ಚಿನ ಲೆಕ್ಕ ಓದಿ ಮಂಜೂರ್ ಮಾಡಲಾಯಿತು.

ಕಳೆದ ವರ್ಷದ ಬಾಕಿ ಪಟ್ಟಿಯನ್ನು ಓದಲಾಯಿತು.

ಈ ಕೆಳಗಿನ ಸೊಸೈಟಿಗಳಿಗೆ ಸಾಲ ಮಂಜೂರು ಮಾಡಲಾಯಿತು.

ಮಡಿಕೇರಿ ಟವ್ನನ್ ಸೊಸೈಟಿಗೆ ರೂ. 500, (2) ಪೊನ್ನಂಪೇಟೆ ಟವ್ನನ್ ಸೊಸೈಟಿಗೆ ರೂ. 500, ಮತ್ತು (3) ಕೊಡ್ಲಿಪೇಟೆ ಟವ್ನನ್ ಸೊಸೈಟಿಗೆ ರೂ. 1000.

6. ಚೀಫ್ ಯುನಿವರ್ಸಲ್ ಮ್ಯೂಚುವಲ್ ಏಜೆನ್ಸಿ ಕಂಪೆನಿಯ ಏಜೆನ್ಸಿಯ ನಂಬರ 123 ತಾ. 22—23—11—28ರ ಪತ್ರವು ಓದಲಾಯಿತು.

ಈ ಪತ್ರದ ಮೇರೆಗೆ ಆಲ್ ಇಂಡಿಯಾ ಮ್ಯೂಚುವಲ್ ಏಜೆನ್ಸಿ ಕಂಪೆನಿ, ಮೈಸೂರು ಎಂಬ ಹೆಸರಿನಲ್ಲಿರುವ ಚೀಟಿಗಳನ್ನು ಯುನಿವರ್ಸಲ್ ಮ್ಯೂಚುವಲ್ ಏಜೆನ್ಸಿ ಕಂಪೆನಿ, ಮದರಾಸು ಎಂಬದಕ್ಕೆ ವರ್ಗಾಯಿಸಬಹುದಾಗಿ ತೀರ್ಮಾನವಾಯಿತು.

ಯುನಿವರ್ಸಲ್ ಕಂಪೆನಿಯವರು ಬ್ಯಾಂಕಿನಲ್ಲಿ ಕರೆಂಟ್ ಎಕೌಂಟ್ ಮಾಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಬ್ಯಾಂಕು ನೂರು ತಿಂಗಳಿಗೆ ಶೇಕಡ ಮೂರು ರೂಪಾಯಿ ದರದಲ್ಲಿ 1000 ರೂ ವರೆಗೆ ಫಿಕ್ಸೆಡ್ ಡಿಪಾಜಿಟ್ಟು ತೆಗೆದುಕೊಳ್ಳಬಹುದೆಂತಾಗಿಯೂ, ಕರೆಂಟ್ ಎಕೌಂಟ್ ಮಾಡಗಲು ಆಗುವುದಿಲ್ಲವಾಗಿಯೂ ತೀರ್ಮಾನವಾಯಿತು.

8 ಶ್ರೀಮತಿ ಒಟ್ಟಿರ ಬೆಳ್ಯಪ್ಪನವರ ಬಾಪ್ತು ಫಿಕ್ಸೆಡ್ ಡಿಪಾಜಿಟ್ಟು ರಶೀತಿ ಕಾಣದೆ ಹೋದದ್ದರಿಂದ ಹೊಸ ರಶೀತಿ ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಹೊಸ ರಶೀತಿ ಕೊಡಲು ಮಂಜೂರ್ ಮಾಡಲಾಯಿತು.

9. ಕೋಆಪರೇಟಿವ್ ರಿಜಿಸ್ಟ್ರಾರವರ ತಾ 10—12—28 ರ ಪತ್ರ ಓದಲಾಯಿತು.

ಕೋಆಪರೇಟಿವ್ ಕಾನ್‌ಫರೆನ್ಸಿನ ಖರ್ಚಿಗೆ ಬ್ಯಾಂಕಿನಿಂದ ಸಹಾಯ ಕೊಡಬಾರದಾಗಿ ತೀರ್ಮಾನವಾಯಿತು.

10. ಮೆ. ... ಚೆಟ್ಟಿಯಾರರ ಪತ್ರ ಓದಲಾಯಿತು.

ಸದರಿ ... ಸುಬ್ಬಯ್ಯನ ಬಾಪ್ತು, ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಮಾರ್ಚಿ 1933 ರ ವರೆಗೆ ಅವಧಿ ಇರುವುದರಿಂದ ಅದರೊಳಗೆ ಅದನ್ನು ವಾಪಸು ಕೊಡಲು ಆಗುವುದಿಲ್ಲವಾಗಿಯೂ, ಅದರ ಮಧ್ಯೆ ಸದರಿ ಮನಾಕ್ಕ ಇವರೇ ... ಸಕ್ಸೆಷನ್ ಸರ್ಟಿಫಿಕೇಟು ಹಾಜರು ಮಾಡಬೇಕೆಂದು ... ತೀರ್ಮಾನವಾಯಿತು.

11 ... ಕಾಳೈಯ ... ಅರ್ಜಿ ಓದಲಾಯಿತು.

... ಇವರ ಅರ್ಜಿಯನ್ನು ... ದಿ ... ತೀರ್ಮಾನವಾಯಿತು.

12. ... ಬ್ಯಾಂಕಿನಲ್ಲಿರುವ ... ಹಣವನ್ನು ಅವರ ... ಅರ್ಜಿಯ ಮೇರೆ ... ತೀರ್ಮಾನವಾಯಿತು.

13. ಅಧ್ಯಕ್ಷರಿಗೆ ವಂದನೆಯಿಂದ ಮೀಟಿಂಗು ಬರಕಾಸ್ತಾಯಿತು

ಪಿ. ದೇವಯ್ಯ,
(ಅಧ್ಯಕ್ಷರು.)

COORG DISTRICT MAGISTRATE'S OFFICE.

Notification.

Mercara, dated 23rd January 1929.

Tenders are invited for the supply of three new dugout boats of the dimension given below :—

Rampura.	32 ft. by	4 ft.
Kondangeri	do.	do.
Kottamudy.	do.	do.

The boats must be well balanced and executed properly and should be ready for delivery by 30—4—1929 They will not be accepted unless they are passed by the undersigned or any officer authorised by him in that behalf.

The boats should be delivered at the ferries for which they are intended.

The tender should specify the price at which the boat would be delivered at the ferry and be addressed to the District Magistrate of Coorg, the cover being sealed and registered, and superscribed with the words "Tender for the supply of boat for the . . . ferry." Tenders should reach this office on or before the 15th March 1929 accompanied by a remittance of Rs. 25/—.

The right of accepting or rejecting any tender without assigning any reason what-so ever is reserved.

K CHENGAPPA,
District Magistrate.

1—1

ಆದಿತ್ಯಾದಿ ನವಗ್ರಹ ದೇವತಾಭ್ಯೋನಮಃ

ಶ್ಲೋ॥ ಯಸ್ಯನಾಸ್ತಿ ಖಿಲು ಜನ್ಮಪತ್ರಿಕಾಯಾಶುಭಾಶುಭ
ಫಲ ಪ್ರಕಾಶಿನೀ॥
ಅಂಧಕಂ ಭವತಿ ತಸ್ಯಜೀವಿತಂ। ದೀಪಹೀನಮಿ
ವ ಮಂದಿರನಿಶೀ॥

ಮಹಾಶಯರೇ,

ಜ್ಯೋತಿಷ್ಯ ಶಾಸ್ತ್ರವು ಬಹಳ ಗಂಭೀರವಾದ ಮತ್ತು ಪ್ರಯೋಜನಕರವಾದ ಶಾಸ್ತ್ರವಾಗಿರುವದು ಪರಮಾತ್ಮನ ಸ್ವರೂಪವನ್ನು ತಿಳಿಸುವ ಅತಿ ರಹಸ್ಯವಾದ ಶಾಸ್ತ್ರಗಳಿಗೂ ಕೂಡ ಜ್ಯೋತಿ ಶಾಸ್ತ್ರವೇ ಚಿತ್ರಕಾಶವಾಗಿರುವುದು. ಭೂತ ಭವಿಷ್ಯದ್ವರ್ತಮಾನಗಳನ್ನೂ ತಿಳಿಸುವ ಗ್ರಹಗಳ ಸ್ಥಿತಿಗಳಿಂದ ತೋರುವ ವಿಪತ್ತುಗಳನ್ನು ಅವಶ್ಯವಾದ ಶಾಂತಿಗಳಿಂದ ಪರಿಹರಿಸಿಕೊಳ್ಳುವುದಕ್ಕೆ ಇದನ್ನು ಬಿಟ್ಟು ಬೇರೆ ಯಾವ ಶಾಸ್ತ್ರಗಳೂ ತಿಳಿಸಲಾರವು. ಈ ರಹಸ್ಯವನ್ನು ತಿಳಿಯುವುದಕ್ಕ ಮುಖ್ಯ ಬಾಗಿಗಳಾದ ನಮ್ಮ ಭಾರತೀಯರಲ್ಲನೇಕರು ಈಗಿನ ನವನಾಗರೀಕತೆಯ ಪ್ರಭಾವದಿಂದಲೋ, ಅಜ್ಞಾನದಿಂದಲೋ ಈ ಶಾಸ್ತ್ರದ ಪ್ರಯೋಜನವನ್ನು ಹೊಂದದೆ ವೃಥಾ ಅನೇಕ ವಿಧವಾದ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಿರುವರಲ್ಲಾ ಎಂಬ ಕನಿಕರದಿಂದ ನಮ್ಮ ಭಾರತೀಯರಿಗೆ ಈ ಶಾಸ್ತ್ರದ ಮರ್ಮಗಳನ್ನು ತಿಳಿಸಬೇಕೆಂಬ ಸದುದ್ದೇಶದಿಂದಲೇ ನಾವು ಬೇರೆ ಬೇರೆ ಸ್ಥಳಗಳಲ್ಲಿ ಅನೇಕ ಜನಗಳಿಗೆ ತಿಳುವಳಿಕೆ ಕೊಟ್ಟು ಯೋಗ್ಯತಾಪತ್ರಗಳನ್ನು ಪಡೆದು ಈಗ ಇಲ್ಲಿರುವ ಮಹಾ ಜನಗಳಿಗೂ ತಿಳಿಸುವುದಕ್ಕಾಗಿ ಬಂದಿರುತ್ತೇವೆ. ಇಂಥಾ ಸುಸಮಯವನ್ನು ಕಳೆದುಕೊಳ್ಳದೆ ನಮ್ಮ ರೂಬರೂ ಅಥವಾ ಪತ್ರದ್ವಾರ ತಮ್ಮ ಅದೃಷ್ಟ ಪರೀಕ್ಷೆ ಮಾಡಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇವೆ. ಜನ್ಮ ಪತ್ರಿಕಾ ಅಥವಾ ಹುಟ್ಟಿದ ಸಂವತ್ಸರ, ಮಾಸ, ದಿನ ಜನನದ ಸರಿಯಾದ ಕಾಲವನ್ನು ಮಾತ್ರ ತಿಳಿಸಬೇಕು.

ದರಗಳು.

(1) ಜಾತಕವನ್ನು ಬರೆಯುವುದಕ್ಕೆ ರೂ. 2—0—0 ಅಲಂಕಾರ ಸಹಿತ 10—0—0.

(2) ದಶಾಭುಕ್ತಿಗಳ ಮೇಲೆ

	ಪ್ರತಿ ವರ್ಷ.	ಪ್ರತಿ ಮಾಸ	ಪ್ರತಿ ವಾರ.	ಪ್ರತಿ ದಿನ
(a)	5—0—0	10—0—0	15—0—0	20—0—0
(b)	3—0—0	5—0 0	6—0—0	10—0—0

(3) ಪ್ರಶ್ನೆಯ ಬಾಬುಗಳಲ್ಲಿ ಪ್ರತಿ ಭಾವಕ್ಕೂ 3.

(4) ಹೂ ಪ್ರಶ್ನೆ ರೂ 1 ಆಗಾಗಿದ್ದರೆ 10.

(5) ಜಾತಕ ನೋಡಿ ಸ್ವಕೃತ ಫಲ ತಿಳಿಸುವುದಕ್ಕೆ ರೂ. 1.

(6) ವಧೂವರರ ಜಾತಕಾನುಕೂಲ ಕೂಟ ಸಾಲಾವಳಿ ನೋಡುವುದಕ್ಕೆ ರೂ 1.

(7) ಲಗ್ನ ಕಟ್ಟಿ ಕೊಡುವುದಕ್ಕೆ ರೂ. 1

ಸೂಚನೆ—ಅಡ್ವಾನ್ಸಿಲ್ಲದೆ ಯಾವ ಕೆಲಸವನ್ನೂ ಆರಂಭಿಸುವುದಿಲ್ಲ.

ಕೆ. ಮಾದಣ್ಣಯ್ಯ ಶಾಸ್ತ್ರಿ ಅಂಡ್ ಸನ್ಸ್,
ಜ್ಯೋತಿಷ್ಯಾಲಯ,
4—1. ಗೋಣಿಕೊಪ್ಪಲು.

ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ—

ನನ್ನ ಬಳಿಯಲ್ಲಿದ್ದ ಕಿತ್ತಳ್ಳಿ ತೋಟದ ಮೇನೇಜರು ಮಾ. ಅಪ್ಪನೆರವಂಡ ಚೆಣ್ಣಪ್ಪನವರ ಬಾಬ್ತು ಕೆಂಪು ವರ್ಣದ, ಒಂದರಿ ಉದ್ದದ ಸಟ್ಟಗೋಡಿನ ಹಸು ಮತ್ತು ಅದೇ ವರ್ಣದ ಒಂದು ವರ್ಷ ಪ್ರಾಯದ ಹೆಣ್ಣು ಕರು ಸಹ ಈ ತಾ 1ರಲ್ಲಿ ಮಡಿಕೇರಿಯಲ್ಲಿರುವ ನನ್ನ ಮನೆಯಿಂದ ಪರಾರಿಯಾಗಿ ತಾತಾಲ್ ವರೆಗೂ ಪತ್ತೆಯಾಗದೆ ಇರುವುದರಿಂದ ಮೇಲ್ಕಂಡ ದನಗಳನ್ನು ಪತ್ತೆ ಮಾಡಿ ನನ್ನ ಈ ಕೆಳಗಿನ ಅಡ್ರೆಸಿಗೆ ತಿಳಿಸಿದ ಮಹನೀಯರಿಗೆ ಐದು ರೂಪಾಯಿ ಇನಾಮು ಕೊಡುತ್ತೇನೆ. ಆದ್ದರಿಂದ ದಯವಿಟ್ಟು ಎಲ್ಲರೂ ತಕ್ಕ ಪ್ರಯತ್ನ ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ.

ಮಡಿಕೇರಿ, ಯನ್. ಕೆ. ನಂಜಪ್ಪ,
ತಾ. 24—1—29 ರೆವಿನ್ಯೂ ಇನ್ಸ್‌ಪೆ...

ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಸರಿಯಾದ ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸರಿಸಮನಾಗಿರುವದು. ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಮಾತ್ರ ರೂ. 4—14—0.

ವಿಳಾಸ :—ಲೀಗಲ್ ವಾಚ್ ಕಂಪೆನಿ,
52—33 ಪೋ. ಬಾ. 243 ಮದರಾಸು.

ಪ್ರಕಟಣೆ.

ಸೋಮವಾರಪೇಟೆ ಲೇಟ್ ಸಾಹುಕಾರ್ ಡಿ. ಚೆನ್ನಬಸಪ್ಪ ಶೆಟ್ಟರ ವ್ಯೆಸರ್ ಮಕ್ಕಳ ಬಾಪ್ತು ಹಿರೀಕಾರ ಗ್ರಾಮದಲ್ಲಿ ಇರುವ ಸ. ನಂ. $\frac{81}{6}$ $\frac{86}{2}$ 84 $\frac{೮೨}{25}$ $\frac{83}{2}$ $\frac{28}{3}$ $\frac{28}{4}$ $\frac{28}{6}$ $\frac{78}{2}$ ರ 35—13 ಎಕರೆ ಒಟ್ಟು ಏರ್ಯದ ಆಸ್ತಿ, ಇದರ ಪೈಕಿ ಒಳ್ಳೇ ಕಾಫಿ ಅಂದಾಜು 30 ಎಕ್ರೆ, ಬಂಜರು ಕಾಫಿ ಅಂದಾಜು 3.37, ಪಾಠಿ ಜಾಗ ಅಂದಾಜು 0.64, ಷೊಲ 1.12 ಯನ್ನು ತಾರೀಕು 11—2—29ರಲ್ಲಿ ಮಧ್ಯಾಹ್ನ 11 ಗಂಟೆಯಿಂದ 2 ಗಂಟೆ ಒಳಗೆ ಸೋಮವಾರಪೇಟೆಯಲ್ಲಿ ಲೇಟ್ ಸಾಹುಕಾರ್ ಡಿ. ಚೆನ್ನಬಸಪ್ಪ ಶೆಟ್ಟರ ಮನೆ ಬಳಿ ಈ ಕೆಳಗೆ ಸೈನ್ ಮಾಡಿದವರ ರೂಬ್ ರೂಬ್ ಹರಾಜು ಮಾಡಲಾಗುತ್ತದೆ. ಮಾರಾಟದ ಶರತುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಸೋಮವಾರಪೇಟೆ. ಡಿ. ಸಾಕಮ್ಮ.

ತಾ. 22—1—29. (3—2)

ಏಕೆ ನರಳುತ್ತೀರಿ?

ಕ್ರಯವು ಅಂಚೆಹಾಸಲು.

ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—24. ಮದನಮಂಜರಿ ಫಾರ್ಮಸಿ,

1/94 ಚೈನ ಬಜಾರು ರೋಡು, ಮದ್ರಾಸು

ಇನಾಂ! ಇನಾಂ!!

4 ಆಣೆ ಟಪ್ಪಾಲು ಸ್ಟಾಂಪು ಕಳುಹಿಸಿದರೆ 372 ಪುಟಗಳುಳ್ಳ ಬಹಳ ಉಪಯೋಗವಾದ ಮತ್ತು ಸುಂದರವಾದ

1929ನೇ ಇಸವಿಯ

ಡಯರಿ

ಮುಫತ್ತಾಗಿ ಕಳುಹಿಸಲ್ಪಡುವದು. ತ್ವರೆ ಮಾಡಿರಿ.

52—24 ಮದನಮಂಜರಿ ಫಾರ್ಮಸಿ,

1/94 ಚೀನಾ ಬಜಾರ್, ಮದ್ರಾಸ್.

ರೆನಾಪಿನ್ ಆಫೀಸ್ ಕ್ಲಾಕ್.

ಈ ಗಡಿಯಾರಗಳು ಈ ಚಿತ್ರದಲ್ಲಿ ಕಾಣುವಂತೆಯೇ ಇರುವವು. ಇದರ ಸ್ಟಾಂಡು ಹಿತ್ತಾಳೆ, ಬೆಳ್ಳಿ, ಭಂಗಾರದ ರೇಖಿನಿಂದ ತಯಾರಾದದ್ದು.



ಗಡಿಯಾರವು ಬಹು ಒಳ್ಳೆಯ ಲೀವರ್ ಮೂವ್ಮೆಂಟ್ನಿಂದ ತಯಾರಾದದ್ದು. ಏರಾರು ಗಂಟೆಯನ್ನು ತೋರಿಸುವವು. ಇವುಗಳನ್ನು ಗುಡಿ, ಅಂಗಡಿ, ರೀಡಿಂಗ್ ರೂಂ, ಸ್ಕೂಲ್ ಮತ್ತು ಮನೆಗಳಲ್ಲಿ ಇಡಲು ಬಹು ಚೆನ್ನಾಗಿದೆ. ಇಂಥಾ ಸ್ಟಾಂಡಿನ ಗಡಿಯಾರಗಳು ಇದಕ್ಕೆ ಮೊದಲು ಇರಲಿಲ್ಲ ಹೊಸದಾಗಿ ಬಂದಿದೆ. ಈ ಗಡಿಯಾರಗಳಿಗೆ ಖಾತ್ರಿಯಾದ 4 ವರ್ಷ ಗ್ಯಾರಂಟಿ ಕೊಡುವೆವು. ಒಂದನ್ನು ತರಿಸಿ ನೋಡಿರಿ. ಬೇಡವಾದರೆ ವಾಪಸು ತೆಗೆದುಕೊಳ್ಳುವೆವು.

ಹಿತ್ತಾಳೆಯ ಸ್ಟಾಂಡಿನದು.	4—8—0
ಬೆಳ್ಳಿಯ ರೇಖಿನದು	5—12—0
ಭಂಗಾರದ ರೇಖಿನದು.	6—4—0

ವಿಳಾಸ—ಲೀಗಲ್ ವಾಚ್ ಕಂಪೆನಿ,

52—37 ಪೋ|| ಬಾ|| ನಂ. 231, ಮದರಾಸು.

ಕರ್ಣಿಕ

ಎಗ್ಯು ಮಿಕ್ಸ್ಚರ್

ಮಲೇರಿಯಾ, ಇನ್ಫ್ಲುಯೆಂಝಾ ಸಹುಕಜ್ವರ ಅಡವಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲ ಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

ಸಾರಸಾಪರಿಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ. ಬೆಲೆ ೧ ಬಾಟ್ಲಿಗೆ ರೂ. ೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್,

12—5 ದುಬಾಷ್ ಲೇನ್.

ಗಿರಗಾಂವ, ಮುಂಬಾಯಿ.

1929 ನೇ ಇಸವಿಯ ಪಾಕೆಟ್ ಡೈರಿ ಇನಾಂ.

ಈ ನಕ್ಷೆಯಲ್ಲಿ ಕಂಡ ಇಂಗ್ಲಿಷ್ ಮೇಡ್ ಫೌಂಟನ್ ಪೇನಾವನ್ನು ಕೊಳ್ಳುವವರಿಗೆ ಹೊಸ ವರ್ಷದ ಪಾಕೆಟ್ ಡೈರಿ ಒಂದನ್ನು ಇನಾಮಾಗಿ ಕೊಡುವೆವು. ಈ ಡೈರಿಯಲ್ಲಿ ಇಂಡಿಯಾ ದೇಶದ ಎಲ್ಲಾ ಗವರ್ನರುಗಳ ಹೆಸರುಗಳೂ, ರಾಜರುಗಳ ಹೆಸರುಗಳೂ, ಇಾತಿಂಧವರಿಗೆ ಇಷ್ಟೇ ಗುಂಡು ಹಾರಿಸಬೇಕೆಂಬುವುದು, ಟಪಾಲು ಮತ್ತು ರೈಲು ವಿಷಯಗಳೂ, ಪಂಚಾಂಗ ಸಹಿತ ಇದೆ. ಇದು ಇಂಗ್ಲಿಷು, ಕನ್ನಡ, ತೆಲುಗು ಭಾಷೆಯಲ್ಲಿ ಪ್ರಿಂಟಾಗಿದೆ. ಪೇನಾವು ಲಂಡನ್ ಪಟ್ಟಣದಲ್ಲಿ ತಯಾರಾದದ್ದು.

ಕ್ರಯ ಪೇನಾ 1ಕ್ಕೆ ಡೈರಿ ಸಹಿತ 1—12—

ವಿಳಾಸ:—ಕೆ. ಯನ್ ರಾಧಾಕೃಷ್ಣ ಅಂಡ್ ಬ್ರದರ್ಸ್

52—33 109. ಚೈನಾಬಜಾರ್ ರೋಡ್, ಮದರಾಸು

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು. ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ೧ಕ್ಕೆ 0—14—0. ಟಿ. ಬಿ. 0—9—0.

ಕೆ. ಟಿ. ಡೋಂಗರೆ ಕಂಪೆನಿ,

52—21 ಗಿರಗಾಂವ, ಮುಂಬಯಿ.

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ

ರತನ್ ಮಿಶ್ರಿ ಹಲ್ವಾ

ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು ನಿರಾಗಿ ಆಗಾಗ್ಯೆ ಸ್ವಪ್ನದಲ್ಲಿ ಸ್ಖಲನವಾಗುವಿಕೆ, ಅತಿ ಸ್ವೇಚ್ಛಾಪ್ರವರ್ತನೆಯಿಂದಲೂ ಲ್ಯದ ದುರಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ಶೀಘ್ರ ಸ್ಖಲಗುವಿಕೆ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಕೆ, ಚಿರಕಾಲದ ಮೇಹ ವ್ಯಾಧಿಯಿಂದ ಶರೀರವು ನಶಿಸಿ ಹೋಗುವಿಕೆ, ನೇತ್ರ ಚರ್ಮವ್ಯಾಧಿ, ಉಷ್ಣವಾಯು ಸಂಬಂಧರೋಗ, ಎದೆ ಶೂಲೆ, ಮೇಹಪಡೆ, ಅಜೀರ್ಣ, ಕೆಮ್ಮು ಈ ವಿಧವಾದ ನಾನಾ ...ಗಳನ್ನು ಗುಣಪಡಿಸಿ ಧಾತುಪುಷ್ಟಿ, ಶರೀರ ಪುಷ್ಟಿಯನ್ನುಂಟುಮಾಡುವುದು ಹೆಂಗಸರು ಸೇವಿಸಿದಲ್ಲಿ ಉಷ್ಣಗರ್ಭಕಾರ...ಧಿಗಳೆಲ್ಲಾ ನೀಗುವವು ಸಂಪೂರ್ಣ ಗುಣ ಉಂಟಾಗಲು ೨—೩ ಡಬ್ಬಿಗಳನ್ನು ಉಪಯೋಗಿಸಬೇಕು.

ಕ್ರಯ :—೧ ಪೌಂಡು ಟಿನ್ ೧ಕ್ಕೆ ರೂ. ೫—೦—೦, ಅರ್ಧ ಪೌಂಡು ಟಿನ್ ೧ಕ್ಕೆ ರೂ. ೨—೮

ಚಿಕ್ಕಪೇಟೆ, ವಿದ್ಯಾವಿಲಾಸ ಬುಕ್ಕು ಡಿಪೋವಿನಲ್ಲೂ ಮಾರಲ್ಪಡುತ್ತೆ.

52—8. ವ್ಯವಸ್ಥಾಪಕರು—ರತನ್ ಮಿಶ್ರಿ ಡಿಪೊ. (ಆಂಜನೇಯ ಜ್ಯೋತಿಷಾ...

ಚಾಮುಂಡೇಶ್ವರಿಗುಡಿ ಬೀದಿ, ಬೆಂಗಳೂರು ಸಿ

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

"ಔಷಧ ಸೀಸೆಗಳಿಗಿಂತಲೂ ಬರೇ ಜೀವನ ಕ್ರಮದಿಂದ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು.

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿ ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವುವು. **ಆರೋಗ್ಯಚಂದ್ರಿಕೆಯನ್ನು** ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬರುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ.

52—19 **ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಶೆಟ್ಟಿ ಬೀದಿ, ಮದರಾಸು**

ವರ್ತಮಾನ ಸಂಗ್ರಹ.

ಒಳದೇಶ.

ಲೇಟ್ ಆರ್. ಸಿ. ಮಂಜೈಯ್ಯನವರ ಬದಲು ಮಿ. ಕೊಂಗೆಟ್ಟಿರ ಅಪ್ಪಯ್ಯನವರನ್ನು ಮಡಿಕೇರಿಯಲ್ಲಿ ಬೆಂಚ್ ಮೇಜಿಸ್ಟ್ರೇಟರಾಗಿ ನೇಮಿಸಿರುವರು.

"ಕೊಡಗು" ಲಿಮಿಟೆಡ್ ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ಈ ತಿಂಗಳ 9ರಲ್ಲಿ ಮಧ್ಯಾಹ್ನ 1½ಗಂಟೆಗೆ ವೀರಾಜಪೇಟೆಯಲ್ಲಿ ನಡೆಯುವದು.

ಮಡಿಕೇರಿನಾಡು ಪಾರುಪತ್ತೆಗಾರರಾದ ಮಿ. ಪಾಲೇಕಂಡ ಮುತ್ತಣ್ಣನವರು ರಿಟಯರ್ ಆಗುವ ಸಂದರ್ಭ ಈ ತಾ. 15 ರಿಂದ 6 ತಿಂಗಳು ರಜೆಯಲ್ಲಿ ಹೋಗುವರು.

ಪಾಡಿಸುಬ್ರಾಯ ದೇವರ ಭಕ್ತ ಜನ ಸಂಘದ 11ನೇ ವಾರ್ಷಿಕೋತ್ಸವವು ತಾ. 11—2—'29ರಲ್ಲಿ ಡಿವಿಜನಲ್ ಫಾರೆಸ್ಟ್ ಆಫೀಸರಾದ ಮಿ. ಸಿ. ಯಂ. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಈ ತಾ 9ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆ ಪಾಡಿ ಭಂಡಾರದಲ್ಲಿ ನಡೆಯಲಿಕ್ಕಿದೆ.

ಮಡಿಕೇರಿಯಲ್ಲಿ ಔಷಧಾಲಯವಿಟ್ಟಿರುವ ಮಿ. ಎ. ಎ. ವಾರುಣ್ಣಿ ಯಲ್. ಯಂ. ಪಿ. ಯವರು ಸುಂಟಿಕೊಪ್ಪಲು ಮತ್ತು ಸುತ್ತ ಮುತ್ತಲಿನ ಜನರ ಕೋರಿಕೆ ಮೇರೆ ಈ ತಿಂಗಳ ಮಧ್ಯದಿಂದ ಸುಂಟಿಕೊಪ್ಪಲಲ್ಲಿ ತಮ್ಮ ಔಷಧಾಲಯದ ಶಾಖೆಯೊಂದನ್ನು ಇಡುವರಾಗಿ ತಿಳಿಯಬರುತ್ತದೆ

ಇಗ್ಗುತಪ್ಪ (ಪಾಡಿ ಸುಬ್ರಮಣ್ಯ) ದೇವರ 11ನೇ ವಾರ್ಷಿಕೋತ್ಸವವು ಫೆಬ್ರವರಿ ತಾ. 11ನೇ ಸೋಮವಾರ ದಿನ ಕುಂಭ ಸಂಕ್ರಮಣದಲ್ಲು ನಡಿಯುವುದರಿಂದ ಸದರಿ ದಿನ ಮೇಲ್ಕಂಡ ದೇವರಿಗೆ ಎಲ್ಲಾ ಬಾಬಿನ ಹರಕೆಗಳನ್ನು (ಪುಭಾರ ಸಹ) ಒಪ್ಪಿಸಬಹುದಂತೆ

ಬರುವ ಸ್ಕೂಲ್ ಫೈನಲ್ ಪರೀಕ್ಷೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ 59ರ ಪೈಕಿ 37 ವಿದ್ಯಾರ್ಥಿಗಳೂ, ಕಾನ್ವೆಂಟ ಹೈಸ್ಕೂಲಿನಿಂದ 5 ವಿದ್ಯಾರ್ಥಿಗಳಲ್ಲಿ ಎಲ್ಲರೂ, ವಿರಾಜಪೇಟೆ ಹೈಸ್ಕೂಲಿನಿಂದ 31ರ ಪೈಕಿ 13 ವಿದ್ಯಾರ್ಥಿಗಳೂ ಆರಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಈ ವರ್ಷ ಕಿಗ್ಗಟ್ಟುನಾಡು ತಾಲೋಕಿನಲ್ಲಿ ನಡೆಯಲಿಕ್ಕಿರುವ ಜಮೀನ್ದಾರರ ಸಂಘದ ವಾರ್ಷಿಕ ಮಹಾಸಭೆಗೆ ತಕ್ಕ ಏರ್ಪಾಡುಗಳನ್ನು ಮಾಡಲಿಕ್ಕೆ ಸ್ವಾಗತ ಮಂಡಳಿಯನ್ನು ಆರಿಸುವ ಬಗ್ಗೆ ಫೆಬ್ರವರಿ ತಾ. 11ರಲ್ಲಿ ಪೊನ್ನಂಪೇಟೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯುವದೆಂದು ತಿಳಿಯುತ್ತೇವೆ.

ಕೊಡಗು ಪ್ಲಾಂಟರುಗಳ ಸಂಘದ ಆಶ್ರಯದಲ್ಲಿ ಡಾಕ್ಟರ್ ಉನಿತನ್ನರವರು ಕಳೆದ ತಾ. 27ನೇ ಆದಿತ್ಯವಾರ ಸಾಯಂಕಾಲ ಕೌನ್ಸಿಲ್ ಹಾಲ್‌ನಲ್ಲಿ ಹುಕ್‌ವರ್ಮ್ ಮತ್ತು ಮಲೇರಿಯದ ವಿಷಯ ಮಾಯಾ ಲಾಂದ್ರ ಚಿತ್ರಗಳ ಸಮೇತ ಉಪನ್ಯಾಸ ಕೊಟ್ಟರು. ಅವರು ಈ ದಿನ ಸಾಯಂಕಾಲ 6½ ಗಂಟೆಗೆ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಪುನಹ ಅದೇ ರೀತಿ ಭಾಷಣ ಮಾಡುವರಾಗಿ ತಿಳಿಯುತ್ತೇವೆ.

ಕಳೆದ ಶನಿವಾರ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆದ ವಾಕ್ಚಾತುರ್ಯದ ಸ್ಪರ್ಧೆಯಲ್ಲಿ ಇಂಗ್ಲಿಷಿನಲ್ಲಿ 1ನೇ ಇನಾಮು ಬಿಟ್ಟಿಯಂಡ ಯಂ. ಮಾಚೈಯ್ಯನವರಿಗೂ, 2ನೇ ಇನಾಮು ಕೊಕಂಡ ಯಂ. ಚಂಗಪ್ಪನವರಿಗೂ, ಕನ್ನಡದಲ್ಲಿ 1ನೇ ಇನಾಮು ಯಸ್. ಕೆ. ನಾರಾಯಣನವರಿಗೂ 2ನೇ ಇನಾಮು ಚಾರಿರ ಎ. ಅಪ್ಪಯ್ಯನವರಿಗೂ ದೊರೆಯಿತೆಂದು ತಿಳಿಯುತ್ತೇವೆ.

ಮೈಸೂರು ಪಿ. ಎಸ್ ಸಿದ್ದಪ್ಪ ಬ್ರದರ್ಸ್‌ರವರು ಈ ಪತ್ರಿಕೆಯ ಮತ್ತೊಂದು ಕಡೆ ಪ್ರಕಟಿಸಿರುವ ಡೈರಿಗಳ ಜಾಹೀರಿಯಲ್ಲಿ ಈ ಪತ್ರಿಕೆಯ ಚಂದಾದಾರರು ಅಪೇಕ್ಷಿಸುವ ಡೈರಿಗಳನ್ನು ಡೈರಿ 1ಕ್ಕೆ 0—1—0 ಮೇರೆ ಕಡಿಮೆ ದರದಿಂದ ಕೊಡುವರಾಗಿ ತಿಳಿಸಿರುತ್ತಾರೆ.

ಹಿಂದೂದೇಶ.

ಈ ಬೇಸಿಗೆಯಲ್ಲಿ ಮಹಾತ್ಮ ಗಾಂಧಿಯವರು ಪಾಶ್ಚಿಮಾತ್ಯ ದೇಶಗಳ ಸಂಚಾರ ಹೊರಡುವರೆಂದು ವರ್ತಮಾನವಿದೆ

ಸಿಲೋನ್ ಯುನಿವರ್ಸಿಟಿ ಕಮಿಷನಿನವರು ಸದರಿ ಯುನಿವರ್ಸಿಟಿಯನ್ನು ಕ್ಯಾಂಡಿಯಲ್ಲಿ ಸ್ಥಾಪಿಸಬೇಕೆಂದು ನಿಶ್ಚೈಸಿರುವರು. ಅದಕ್ಕೆ 1,04,36,000 ರೂಪಾಯಿ ಖರ್ಚು ಬೇಕಾಗುವದಂತೆ.

ಕರ್ನಾಟಕ ಪ್ರಾಂತೀಕ ರಾಜಕೀಯ 6ನೇ ಕಾನ್‌ಫರೆನ್ಸನ್ನು ಬರುವ ಮೇ ತಿಂಗಳಲ್ಲಿ ಬೆಳ್ಗಾಮಿನಿಂದ 45 ಮೈಲಿ ದೂರದಲ್ಲಿರುವ ಸಾಂಡಟ್ಟಿ ಎಂಬ ಸ್ಥಳದಲ್ಲಿ ನಡಿಸುವಂತೆ ತೀರ್ಮಾನಿಸಲಾಗಿದೆ.

ಮದ್ರಾಸಿನ ಕೌನ್ಸಿಲ್‌ನ ಕಾಂಗ್ರೆಸ್ ಪಕ್ಷದವರು ಮಿ. ಪಿ. ಸಿ ವೆಂಕಟಪತಿ ರಾಜುರವರನ್ನು ಮುಂದಾಳಾಗಿಯೂ, ಮಿ. ಕೋಟಿ ರೆಡ್ಡಿ ಮತ್ತು ಎ ಆರ್. ಶ್ರೀನಿವಾಸ ಅಯ್ಯಂಗಾರರನ್ನು ಡೆಪ್ಯುಟಿ ಮುಂದಾಳುಗಳಾಗಿಯೂ ಆರಿಸಿಕೊಂಡಿರುವರು.

ಈ ವರ್ಷದ ಅಪ್ರೈಲಿನಲ್ಲಿ ಲಾಹೋರಿನಲ್ಲಿ ನಡಿಯಲಿಕ್ಕಿರುವ ಇಂಡಿಯನ್ ನೇಶನಲ್ ಕಾಂಗ್ರೆಸ್ ಮಹಾಸಭೆಗೆ ತಕ್ಕ ಏರ್ಪಾಡುಗಳನ್ನು ಮಾಡಲಿಕ್ಕಾಗಿ ಪಂಜಾಬು ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ಮೀಟಿಂಗು ನಡಿಸಿ ಸ್ವಾಗತ ಕಮಿಟಿಯೊಂದನ್ನು ನೇಮಿಸಿರುವರು ಈ ಕಮಿಟಿಯವರು ಈಗಾಗಲೇ ಚುರುಕಿನಿಂದ ಕೆಲಸ ಮಾಡಲು ಪ್ರಾರಂಭಿಸಿದ್ದಾರೆ.

ಸೆಂಟ್ರಲ್ ಪ್ರಾಂತ್ಯದ ಲೆಜಿಸ್ಲೇಟಿವ್ ಕೌನ್ಸಿಲಿನವರು ಸೈಮನ್ ಕಮಿಷನನ್ನು ಬಹಿಷ್ಕರಿಸಲು ತೀರ್ಮಾನಿಸಿರುವರಷ್ಟೆ. ಆದುದರಿಂದ ಕೌನ್ಸಿಲ್ ಹಾಲನ್ನು ಕಮಿಷನಿನ ಉಪಯೋಗಕ್ಕೆ ಬಿಟ್ಟುಕೊಡಕೂಡದೆಂದು ಕೌನ್ಸಿಲಿನ ಅಧ್ಯಕ್ಷರನ್ನು ಹಲವು ಮೆಂಬರುಗಳು ಕೇಳಿಕೊಂಡಿರುವರೆಂದೂ, ಅಧ್ಯಕ್ಷರು ಏನು ಮಾಡುತ್ತಾರೆಂದು ಎಲ್ಲರೂ ಕುತೂಹಲದಿಂದ ನೋಡುತ್ತಿದ್ದಾರೆಂದು ಸುದ್ದಿ.

ಕಲ್ಕತ್ತೆಯ "ಫಾರ್‌ವರ್ಡ್" ಪತ್ರಿಕೆಯಲ್ಲಿ ರಾಜದ್ರೋಹದ ಲೇಖನವನ್ನು ಬರೆದರೆಂಬ ತಕ್ಷೀರಿಗಾಗಿ ಅದರ ಸಂಪಾದಕರಾದ ಶ್ರೀಯುತ ಯಸ್ ಬಕ್ಷಿ ಯವರಿಗೆ 6 ತಿಂಗಳು ಸಜೆ ವಿಧಿಸಲಾಯಿತು. ಅವರು ಜೈಲಿಗೆ ಹೋಗುವಾಗ್ಗೆ ಎರಡು ಮೀಟಿಂಗುಗಳನ್ನು ನಡಿಸಿ ಅವರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತೋರಿಸಿದ ಧೈರ್ಯಕಸ್ಥಿ, ಸ್ವಾರ್ಥತ್ಯಾಗಕಸ್ಥಿ ಅವರನ್ನು ಅಲ್ಲಿಯ ಮುಂದಾಳುಗಳು ಹೊಗಳಿ ಅವರಿಗೆ ತುಂಬಾ ಹೂವಿನ ಹಾರಗಳನ್ನು ಹಾಕಿ ಕಳುಹಿಸಿದರು. ಬಕ್ಷಿಯವರು ಬಹು ಸಂತೋಷದಿಂದ ಕಾರಾಗೃಹ ವಾಸಕ್ಕೆ ಹೋದರಂತೆ.

ಹಿಂದೂ ಯೂನಿವರ್ಸಿಟಿಯಲ್ಲಿ ಭಗವದ್ಗೀತೆಯನ್ನು ಕಲಿಸುವಿಕೆಯ ಉತ್ತೇಜನಕ್ಕಾಗಿ ಕಲ್ಕತ್ತೆಯ ಮ ಜಗುಲ್ ಕಿಶೋರ ಬಿರ್ಲಾರವರು 50,000 ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು. ಈ ಉದ್ದೇಶ್ಯ ಕಮ್ಮಿ ಪಕ್ಷ 5 ಲಕ್ಷ ರೂಪಾಯಿಗಳಾದರೂ ಜಮೆ ಮಾಡಲಾಗುವದೆಂದು ಪಿರ್ಲಾರವರ ಹಂಬಲ. ಬಳ್ಳಾರಿಯಲ್ಲಿ ಅಸ್ಪೃಶ ಜನಗಾಗಿ ದೇವಸ್ಥಾನಗಳನ್ನು ಕಟ್ಟಿಸುವ ಬಗ್ಗೆ ಮಿ. ರಾಮೇಶ್ವರದಾಸ್ ಬಿರ್ಲರವರು 10,000 ರೂಪಾಯಿಗಳನ್ನು ಪಂಡಿತ ಮದನಮೋಹನ ಮಾಳವೀಯರ ಸ್ವಾಧೀನ ಕೊಟ್ಟಿರುವರು.

ಕಲ್ಕತ್ತಾದಲ್ಲಿ ಕಳೆದ ತಾ 28ರಲ್ಲಿ ನಡೆದ ಮತಗಳ ಪಾರ್ಲಿಮೆಂಟಿನಲ್ಲಿ ಯುದ್ಧವನ್ನು ಸಂಪೂರ್ಣವಾಗಿ ವಿರೋಧಿಸಿ ರಠರಾವು ಪಾಸು ಮಾಡಲಾಯಿತು. 'ಒಂದು ಜನಾಂಗದ ವರ್ಣವು ಮಾ ಸಂಗೋಲಿಕತೆಯು ಮಾವದೇ ಇತರೆ ಅದು ಇನ್ನೊಂದು ಜನಾಂಗವನ್ನು ಆಳುವನ್ನು ಬಳ್ಳೀಯುದೂ ಅಥವಾ ಒದ್ದಿಯುಳ್ಳದ್ದು ಆಗಿರುವದಿಲ್ಲ, ಇದು ಫಿಲಿಪ್ಪೈನಾದಲ್ಲಿ ಅಮೇರಿಕಾದವರ ಎಷ್ಟು ಸುದಬ್ಲೂ, 'ಇಂಡಿಯಾದಲ್ಲಿ ಬ್ರಿಟಿಷರ ವಿಷಯದಲ್ಲೂ ನಿಜವಾಗಿದೆ' ಎಂದು ಚಿಕಾಗೋ ಯೂನಿವರ್ಸಿಟಿಯ ಚರ್ಚಿನ ಡಾಕ್ಟರ್ ಕರ್ಟಿಸ್ ರೀನಾರವರು ತಮ್ಮ ಭಾಷಣದಲ್ಲಿ ಹೇಳಿದರು. ಇಂಥಾ ಸತ್ಯವಾಕ್ಯಗಳಿಗೆ ಬ್ರಿಟಿಷರು ಕಿವಿ ಮುಚ್ಚಿಕೊಳ್ಳುತ್ತಾರಷ್ಟೆ !

ಸೆಂಟ್ರಲ್ ಪ್ರೋವಿನ್ಸ್ ಮತ್ತು ಬೀರಾರಿನ 1927 ನೇ ವರ್ಷದ ಅಬ್ಕಾರಿ ಇಲಾಖೆಯ ವರದಿಯು ಮೇರೆ ಕುಡುಕತನವು ಕಡಿಮೆಯಾಗಿದೆ ಅಬ್ಕಾರಿಉತ್ಪತ್ತಿಯು 123 ಲಕ್ಷದಿಂದ 104 ಲಕ್ಷಕ್ಕೆ ಇಳಿದಿದೆ. 1926 ರ ಕ್ಕಿಂತ 18,000 ಗ್ಯಾಲನ್ ಸಾರಾಯಿ ಮಾರಾಟ ಕಡಿಮೆಯಾಗಿದೆ. ಕಳೆದ 3 ವರ್ಷಗಳಿಂದ ಅಂಗಡಿಗಳ ಸಂಖ್ಯೆಯು 3 ರಲ್ಲಿ ಒಂದು ಭಾಗಕ್ಕಿಂತ ಹೆಚ್ಚು ಕಡಿಮೆಯಾಗಿದೆ. ಅಮಲು ಪದಾರ್ಥಗಳ ಕ್ರಯವನ್ನು ಹೆಚ್ಚಾಗಿ ಇಟ್ಟದ್ದು, ಕುಡುಕತನಕ್ಕೆ ಅನುಕೂಲಗಳನ್ನು ಕಡಿಮೆ ಮಾಡುತ್ತಾ ಬಂದದ್ದು ಮತ್ತು ಮಾರಾಟದ ಗಂಟೆಗಳನ್ನು ಬದಲಾಯಿಸುತ್ತಾ ಬಂದದ್ದು ಇದೇ ಕುಡುಕತನ ಕಡಿಮೆಯಾಗಲು ಕಾರಣಗಳಂತೆ. ಅಲ್ಲಿಯ ನ್ಯಾಯ ವಿಧಾಯಕ ಸಭೆಯ ಅಭಿಪ್ರಾಯವನ್ನು ಸರ್ಕಾರದವರು ಜಾರಿಗೆ ತರಲು ಪ್ರಯತ್ನಿಸಿದರ ಸುಫಲವೇ ಇದು ನಮ್ಮ ಸರ್ಕಾರದವರಾದರೋ ಈ ವಿಷಯದಲ್ಲಿ ಏನು ಮಾಡುತ್ತಿದ್ದಾರೆ?

ವಿದೇಶ.

ಯೂರೋಪಿನ ಎಂಬಲ್ಲಿ ತಾ. 28ರಲ್ಲಿ ದಕ್ಷಿಣ ಮಂಚೂರಿಯ ರೈಲ್ವೆ ಕಂಪೆನಿಯ ಕಲ್ಲಿದ್ದಲು ಗನಿಯಲ್ಲಿ ಬೆಂಕಿಯತ್ತಿ ಸುಮಾರು 100 ಚೈನೀ ಮತ್ತು 7 ಜಪಾನಿ ಕೆಲಸಗಾರರು ಕಾಣದೆ ಆಗಿರುವರು.

ಆಫ್ರಿಕದಲ್ಲಿ ಹಿಂದೂದೇಶದ ಏಜೆಂಟ್ ಜನರಲ್ ತನದಿಂದ ರಿಟಯರ್ ಆದ ನಾಮಧಾರಿ ವಿ. ಶ್ರೀನಿವಾಸ ಶಾಸ್ತ್ರಿಯವರು ತಾ 28ರಲ್ಲಿ ಸಬ್ ಹಾನಿನಿಂದ "ಕೊರ್ಪಿಯು" ಹಡಗಿನಲ್ಲಿ ಹಿಂದೂದೇಶಕ್ಕೆ ವಾಪಸು ಹೊರಟಿರುವರು.

ಅಫ್ಘಾನಿಸ್ಥಾನದಲ್ಲಿ ಈಗ ಹಲವು ದಿವಸಗಳಿಂದ ಅಲ್ಲಿಯ ಕೆಲವು ಪಂಗಡಗಳು ಅಮೀರರ ಪಾಶ್ಚಾತ್ಯ ರೀತಿ ಸಾಮಾಜಿಕ ಸುಧಾರಣೆಯನ್ನು ಸಹಿಸಲಾರದೆ ದಂಗೆ ಎದ್ದು ಅಮೀರರಿಗೆ ವಿರೋಧ ಯುದ್ಧ ಮಾಡುತ್ತಿದ್ದರು. ಇದರ ಫಲಿತಾಂಶವಾಗಿ ಅಮೀರರಾದ ಅಮಾನುಲ್ಲಾ ಖಾನರವರು ಸಿಂಹಾಸನವನ್ನು ತ್ಯಜಿಸಿ ಕಾಬೂಲನ್ನು ಬಿಟ್ಟು ಕಂದಾಹಾರಿಗೆ ಹೋದರು. ಅವರ ಅಣ್ಣ ಇನಿಯತುಲ್ಲಾರವರು ಪಟ್ಟಕ್ಕೇರಿದರು ಒಂದೆರಡು ದಿವಸಗಳಲ್ಲಿಯೇ ದಂಗೆ ಖೋರರ ಮುಖಂಡರಾದ ಬಾಚಾಯಿಸಾಕೋ ಎಂಬವರು ಕಾಬೂಲನ್ನು ಹಿಡಿದ ಕೂಡಲೇ ಇನಿಯತುಲ್ಲರು ಪಟ್ಟವನ್ನು ಬಿಟ್ಟು ಪೇಷಾವರಿಗಾಗಿ ಕಂದಹಾರಿಗೆ ಹೋದರು. ಸಾಕೋರವರು ಹಬಿಬುಲ್ಲಾಗಾಜಿ ಎಂಬ ಹೆಸರಿನಿಂದ ತಾನು ಅಮೀರರೆಂದೂ ಅಫ್ಘಾನಿಸ್ಥಾನದ ಕಾಲಿಫ್ರನೆಂದೂ ಪ್ರಕಟಿಸಿರುವರು. ಅಮಾನುಲ್ಲಾರವರು ಕಂದಹಾರಿನಲ್ಲಿ ಪುನಹ ರಾಜರ ಪದವಿಗೆ ಏರಿರುವರು. ಅಲ್ಲಿಯವರೆಲ್ಲರೂ ಅವರಿಗೆ ತುಂಬಾ ಸಹಾಯಕರಾಗಿದ್ದಾರೆ. ಅಮಾನುಲ್ಲಾರವರ ಬಾವನವರಾದ ಮತ್ತು ಹಿಂದೆ ಕಾಬೂಲಿನ ಗವರ್ನರಾಗಿದ್ದ ಆಲಿ ಅಹ್ಮದ್ ಖಾನ್‌ರು ಜಲಲಾಬಾದಿನಲ್ಲಿ ಅರಸರೆಂದು ಕರೆಯಿಸಿಕೊಳ್ಳುತ್ತಿರುವ ಇವರು ಸಾಕೋರವರ ಮೇಲೆ ಕಾಬೂಲಿಗೆ ದಂಡೆತ್ತಿ ಹೋಗುತ್ತಿದ್ದಾರಂತೆ ಇವರಿಗೆ ಅಮಾನುಲ್ಲಾರವರು ಸಹಾಯ ಮಾಡಬಹುದೆಂದೂ ವದಂತಿ ಯಾವದಕ್ಕೂ ಅಲ್ಲಿಯ ನಿಜವಾದ ವರ್ತಮಾನ ಸಿಕ್ಕುವದು ಕಷ್ಟವಾಗಿದೆ. ಎಲ್ಲವೂ ರಹಸ್ಯವಾಗಿ ತೋರುತ್ತದೆ

ವಂದನೆಗಳು.

ನನ್ನ ಸಹೋದರ ಪಿ. ಟಿ. ಕುಶಾಲಪ್ಪನ ಅಕಾಲ ಮರಣದಿಂದ ನಮ್ಮ ದೇಶಕ್ಕೆ ಉಂಟಾಗಿರುವ ನಷ್ಟವನ್ನು ನೋಡಿ, ಆತನ ಕುಟುಂಬಕ್ಕೆ ಉಂಟಾಗಿರುವ ದುಃಖದಲ್ಲಿ ಭಾಗಿಗಳಾಗಿದ್ದೇವೆಂದು ದೇಶದ ಒಳಗೆ ಮತ್ತು ಹೊರಗೆ ಹಲವು ಕಡೆಗಳಲ್ಲಿ ನಡಿಸಿದ ಪಬ್ಲಿಕ್ ಸಂತಾಪ ಮೀಟಿಂಗುಗಳ ಠರಾವುಗಳೂ, ಕೊಡಗಿನ ಹಲವು ಮುಂದಾಳುಗಳ, ಆತನ ಅನೇಕ ಇಷ್ಟಮಿತ್ರರ ಮತ್ತು ಬಂಧುಗಳ ಸಂತಾಪ ಪತ್ರಗಳೂ ನನ್ನ ಕೈ ಸೇರಿವೆ. ಕುಶಾಲಪ್ಪನ ಪತ್ನಿಗೂ ಹಲವು ಅಂಥಾ ಪತ್ರಗಳು ತಲಪಿವೆ. ನಮ್ಮ ಈ ದುಃಖಕಾಲದಲ್ಲಿ ಎಲ್ಲರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಜವಾಬು ಬರೆಯುವದು ಸಾಧ್ಯವಲ್ಲದ್ದರಿಂದ ನಮ್ಮ ದುಃಖದಲ್ಲಿ ಭಾಗಿಗಳಾದವರಿಗೆಲ್ಲಾ ದಿವಂಗತನ ಪತ್ನಿಯ ಮತ್ತು ನನ್ನ ಪರವಾಗಿ ನಾನು ಮನಃಪೂರ್ವಕವಾಗಿ ಈ ಮೂಲಕ ವಂದಿಸುತ್ತೇನೆ.

ಬಸವನ ಹಳ್ಳಿ,   ಪಾರ್ವಂಗಡ ಅಚ್ಚಯ್ಯ.
ತಿತಿಮತಿ.   ತಾ. 31—1—29

ಕೊಡಗು ಸಂಘ, ಬೊಂಬಾಯಿ.

ತಮ್ಮ ಸ್ವಾರ್ಥತ್ಯಾಗದ ಸಾರ್ವಜನಿಕ ಕೆಲಸಗಳಿಂದ ಕೊಡಗಿನ ಜನರಿಗೆ ಬಹು ಪ್ರಾಮುಖ್ಯ ಮುಂದಾಳಾಗಿದ್ದ ಮಿ. ಪಾರ್ವಂಗಡ ಕುಶಾಲಪ್ಪನವರ ಅಕಾಲ ಮರಣಕ್ಕೆ ಬೊಂಬಾಯಿಯ ಕೊಡಗು ಸಂಘದ ಮೆಂಬರುಗಳು ತಮ್ಮ ಅಪಾರವಾದ ದುಃಖವನ್ನು ಸೂಚಿಸುತ್ತಾರೆ. ಅಲ್ಲದೆ ದಿವಂಗತರ ಕುಟುಂಬಕ್ಕೆ ಉಂಟಾಗಿರುವ ದುಃಖಕ್ಕೆ ಹೃದಯ ಪೂರ್ವಕವಾದ ಸಹಾನುಭೂತಿಯನ್ನು ಕಳುಹಿಸುತ್ತಾರೆ.

ಸೆಕ್ರೆಟರಿ.

COORG FOREST DEPARTMENT,
SOUTH DIVISION.

MERCARA, THE 30th JANUARY 1929.

Candidates are required for 6 posts, 3 on Rs. 60/—per month and 2 on Rs. 30/—in connection with Topographical Survey and enumeration of Ghat Forests at Wotekolly. Those desirous of obtaining appointment should appear before the under-signed on Friday the 15th February. Particulars regarding the work may be obtained on application from the South Divisional Forest Office.

Sd/ A. R. B. [illegible]RAND,
Divisional Forest Officer.

1

[illegible]ಗ್ಗಟ್ಟುನಾಡು ತಾಲೋಕಿನ ಮಹನೀಯರಲ್ಲಿ ವಿನಂತಿ.

ಇದೇ ಜನವರಿ ತಾರೀಖು 19ರಲ್ಲು ನಡೆದ ಜಮೀನ್ದಾರರ ಸಂಘದ ಕಾರ್ಯನಿರ್ವಾಹಕ ಮಂಡಳಿಯ ಸಭೆಯಲ್ಲಿ ಸಂಘದ ಈ ವರ್ಷದ ವಾರ್ಷಿಕ ಸಮ್ಮೇಳನವನ್ನು ಕಿಗ್ಗಟ್ಟುನಾಡು ತಾಲೋಕಿನಲ್ಲಿ ನಡೆಸಲು ನಿಶ್ಚೈಸಿದೆ. ಆ ಕಾರ್ಯವನ್ನು ನಡೆಸಲು ಸ್ವಾಗತ ಮಂಡಳಿಯನ್ನು ಏರ್ಪಡಿಸಲಿಕ್ಕಾಗಿ ತಾರೀಖು 11—2—29ನೇ ಸೋಮವಾರ ಅಪರಾಹ್ನ 2 ಗಂಟೆಗೆ ಪೊನ್ನಂಪೇಟೆಯ ಪೀಸ್ ಕ್ಲಬ್ಬಿನ ಬಳಿ ಒಂದು ಮೀಟಿಂಗ್ ಮಾಡಲು ಏರ್ಪಡಿಸಿದೆ. ತಾಲೋಕಿನ ಮಹನೀಯರೆಲ್ಲರ ಆಗಮನವನ್ನು ಆ ವಿನಯದಿಂದ ಕೋರೋಣವಾಗಿದೆ.

1—1   ಕೆ. ಕರುಂಬೈಯ್ಯ,
ತಾ. 26—1—29.   ಜಾಯಿಂಟ್ ಸೆಕ್ರೆಟರಿ

TENDERS.

Sealed tenders will be received at the Mercara Jail Office, up to the 26th February 1929, for the supply or contract of all articles of diet etc. for the use of the inmates of the Mercara Jail for 1929–30. For further particulars apply to the Superintendent, Mercara Jail, Mercara.

Mercara Jail Office, } Sd/ K. CHENNAPPA,
Dated 23rd January 29. } Superintendent,
1—1. Mercara Jail.

ರೋದನ.

(ಸ್ವಾಮಿ ದೇವನೆ ಲೋಕಪಾಲನೆ—ಎಂಬಂತೆ.)

ಓದನೆ ಹಾ ಕೊಡಗು ಮಾತೆಯು ಬಡವ ಪೋಷಕ ಹೋದನೇ !

ಡವಿಸಿಯಲಿದಿನವು ತೀರಿತೆ ಕುಶಾಲಪ್ಪನದಾ ಹಾ ಹಾ !
ಬು ಬರಹ ಕಲಿಯುವಾಗಲೇ ಕಾದಿದನು ಅವ ನ್ಯಾಯಕೆ
ದು ಇರದೆ ತನ್ನ ಸುಖಕೆ ಸಾಧಿಸಿದವ ದೇಶಕೆ ||೧||
ನ್ನ ರಾಜ್ಯವು ತನಗೆ ಬೇಕೆಂದು ಮುನ್ನ ಹೂಡಿದ ಕಾಳಗ
ನ್ನು ತಾನು ಬಾಲನೆಂಬ ಮನದಲೆಂದೂ ತಿಳಿಯದೆ
ನ್ನ ಸಡಲು ಬೇಸರಿಸದೆ ತನ್ನವರನ್ನು ಪೊರೆದನು
ನ್ನು ತಾಂಗನ ಸೇವೆ ಇದು ಎಂದು ಮನದಲವನು ತಿಳಿದನು ||೨||
ಎಂದು ವರುಷಕೆ ಜಮೀನ್ದಾರರ ಸಭೆಯ ನಿಂವಣಾಯೂ ದನು
ಸಂದನಾದರು ಮುದುಕರೀಗೆ ನಿಂದು ದಾರಿಯ ತೋರಿದ
ಎಂದು ಗ್ವೆಯುಲು ಸೆರಕಾರವು ಅವನ ಗುಣಗಣನೆಯನು
ಮುಂದು ತಂದರು ಅವನ ಹೆಸರನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿಯೂ ||೩||
ನ್ಯಾಯ ಸಭೆಯಲಿ ಎಂದು ಅವನು ನುಡಿಯುತಿದ್ದುದ ಕೇಳಿರೆ ?
ಕಾಯ ಪೋದರು ಮಾಯದಲ್ಲಿಯೂ ಅವನು ಅಲ್ಲಿಯೇ ಇರುವನು
ಬಾಯ ಬಿಡಿಯದೆ ನ್ಯಾಯಕಾಗಿಯೇ ಎಂದು ಅವನು ನಿಂದನು
ರಾಯರಿಗೆ ಪ್ರೀತಿಯನು ದೇಶವಾಳಲು ತೋರುತ ||೪||
ದೇಶ ಪೋಷಣೆ ಕಲಿಯಲಾಗಿ ರಾಜ್ಯಗಳಲೇ ತಿರುಗಿದ
ವೇಶವನ್ನು ಬದಲಿಸದೇ ಖಾದಿಯನ್ನು ತೊಟ್ಟನು
ಕಾಶಿಯಲ್ಲೂ ಸ್ನಾನ ಗೈದನು ಅಂತ್ಯ ಕಾಲದಿ ವೀರನು
ಆಶೆಯಿಲ್ಲದು ಕದ್ದು ಪೋದನು ಯಮಧರ್ಮ ರಾಯನು ||೫||
ಸ್ಥಿರವು ಕೀರ್ತಿಯು ಚರವು ದೇಹವು ಇದನರಿಯಂದರಿಯದೇ ?
ಮರೆಯದಿರಿ ಈ ವೀರನನ್ನು ಒರಿಯೆಂದೂ ಈ ನಾವು ವಾ
ಕಲಿಯಲಾರೆವು ಮರಳಿ ಅನನನುಸರಿಸಿ ಅವನ ದಾರಿಯೂ
ಜರೆಯದಂತೆ ಸೂಕ್ಷ್ಮ ದೇಹದಿ ನಮ್ಮನೂ ಆ ವೀರನು ||೬||

ನ. ಬಿ. ಸುಬ್ಬಯ್ಯ.

ಪ್ರ ಕ ಟ ಣೆ .

ಕೊಡಗು ದೇಶದ ಮಹನೀಯರುಗಳಲ್ಲಿ, ತೈಲ ಗ್ರಾಮದ ಹುಂಡಿಮೂಲೆ ನಾರಾಯಣ ಮೂರ್ತಿಯು ಬರೆದು ಶ್ರುತಪಡಿಸಿಕೊಳ್ಳುವದೇನೆಂದರೆ—ನನ್ನ ಹೆಸರಿನಲ್ಲಿ ತೈಲ ಗ್ರಾಮದಲ್ಲಿ ಇರುವ ಚಿರ ಸೊತ್ತುಗಳನ್ನು ಪೂರ್ತಿಯು ಮತ್ತು ಕುಟ್ಟ ಗ್ರಾಮದಲ್ಲಿ ನನ್ನ ಅಣ್ಣ ನಾರಾಯಣಮೂರ್ತಿ ಮತ್ತಿದ್ದರ ಮೂರ್ತಿ ವೈಸರಿನ ಹೆಸರಿನಲ್ಲಿ ಇರುವ ಚಿರ ಸೊತ್ತುಗಳು ಪೂರ್ತಿ ವಿಕ್ರಯ ಮಾಡಲಿಕ್ಕಾಗಿ ಕೊಡಗು ಡಿಸ್ಟ್ರಿಕ್ಟ್ ಜಡ್ಜಿಯವರಿಂದ ನಾನು ಹುಕುಂ ಪಡೆಕೊಂಡಿರುವದರಿಂದ ಸೊತ್ತು ಕೊಂಡುಕೊಳ್ಳಲಿಕ್ಕೆ ಕಾಯಿಸ್ ಇರುವವರು ರೂಬು ಬಂದು ಸೊತ್ತುಗಳನ್ನು ನೋಡಿ [illegible] ಹೆಚ್ಚಿನ ವಿವರಗಳ ತೀರ್ಮಾನ ಮಾಡಿಕೊಳ್ಳಬಹುದು [illegible] ಕುಟ್ಟ ಗ್ರಾಮದ ಸೊತ್ತುಗಳಲ್ಲಿ ಮೂರು ವರ್ಗವಿದ್ದು [illegible] ಇದನ್ನು ಬೇರೆಯಾಗಿಯೂ ಮಾರಲ್ಪಡುವದು. ಮತ್ತು [illegible], ತೈಲ ಗ್ರಾಮದಲ್ಲಿ ಇರುವ ವಿವರ್ಗಗಳನ್ನು ಬೇರೆ [illegible]ಯಾಗಿ ಕಾಯಿಸ್‍ದಾರರಿಗೆ ಕೊಡಲ್ಪಡುವವು. [illegible] ಸೊತ್ತುಗಳಲ್ಲಿ 2700 ಬಟ್ಟೆ ಭೂಮಿ ಇದೆ. ಎರಡು [illegible]ಗಗಳಲ್ಲಿ ಹೊಂಚು ಹಾಕಿದ ಮನೆ, ಕಾಫಿತೋಟ, ಸೇದುವ [illegible] ಭಾವಿ ಸಹ ಇವೆ. ಕಾಯಿಸ್‍ದಾರರು ಕೂಡ್ಲೆ ಬಂದು [illegible] ನೋಡಿ ತೀರ್ಮಾನಿಸಿ ತೆಗೆದುಕೊಳ್ಳಬಹುದು.

ತೈಲ ಗ್ರಾಮ, ಹುಂಡಿಮೂಲೆ ನಾರಾಯಣ ಮೂರ್ತಿ.
ಕುಟ್ಟ.

ಪತ್ರವ್ಯವಹಾರ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪ್ರಕಾಶಕರು ಜವಾಬ್ದಾರರಲ್ಲ. ಸಂ.

ವೈನಾಡು ಕೊಡಗು ಯೂನಿಯನ್ ಸಂಘದವರ ಸಂತಾಪ ಮೀಟಿಂಗು.

ಶ್ರೀಮಾನ್ ಪಾಲೆಂಗಡ ಕುಶಾಲಪ್ಪನವರ ಅಕಾಲ ಮರಣವನ್ನು ಕುರಿತು ಮೇಲ್ಕಂಡ ಸಂಘದವರು ತಾ. 22ರಲ್ಲಿ ಮಿ. ಬಿ. ಸಿ. ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಅವರ ಮನೆಯಲ್ಲಿ ಸಭೆ ನಡೆದ್ದರು. ದೇಶಸೇವೆ ನಿರತರಾದ ಕುಶಾಲಪ್ಪನವರು ಕಾಂಗ್ರೆಸ್ ಮೀಟಿಂಗಿಗೆ ಕಲ್ಕತ್ತಕ್ಕೆ ಹೋಗಿ ಬರುವಾಗ ದಾರಿಯಲ್ಲಿ ಮದ್ರಾಸಿನಲ್ಲಿ ಸ್ವರ್ಗಸ್ಥರಾದರೆಂಬ ಸಂಗತಿ ತಾ 11 ನೇ '[illegible]' ಪತ್ರಿಕೆ ಮೂಲಕ ತಿಳಿದ ವಿಷಯ ನೆರೆದಿದ್ದವರೆಲ್ಲರೂ ಅತ್ಯಂತ ವ್ಯಸನಭರಿತರಾದರು. ಇವರ ಅಕಾಲ ಮರಣದಿಂದ ನಮ್ಮ ದೇಶಕ್ಕೆ ಉಂಟಾದ ನಷ್ಟಕ್ಕೂ, ಅವರ ಕುಟುಂಬಕ್ಕೆ ಉಂಟಾದ ದುಃಖಕ್ಕೂ ಸಹ ನಾವು ಭಾಗಿಗಳಾಗಿದ್ದೇವೆಂದು ಸೂಚಿಸಿದರು. ಪರಲೋಕಗತರಾದ ಕುಶಾಲಪ್ಪನವರ ಆತ್ಮಕ್ಕೆ ಶಾಂತಿಯನ್ನೂ ಮತ್ತು ಮೋಕ್ಷವನ್ನೂ ಕೊಡಲೆಂದು ಎಲ್ಲರೂ ದೇವರನ್ನು ಪ್ರಾರ್ಥಿಸಿದರು. ಆ ವೇಳೆ ಕುಟ್ಟಯ್ಯನವರು ಇವರ ಬಗ್ಗೆ ಪ್ರತಿಕ್ರಿಯೆ ವಿಷಯ ಚಿಕ್ಕದೊಂದು ಭಾಷಣವನ್ನು ದುಃಖದಿಂದೊಡಗೂಡಿ ಮಾಡಿದರು. ಇದಾದ ಮೇಲೆ ಸಭೆಯವರೆಲ್ಲರೂ ಸದರಿಯವರ ಕುಟುಂಬಕ್ಕೆ ಸಂತಾಪ ಸೂಚನಾರ್ಥವಾಗಿ ಇದರ ನಕಲನ್ನು ಕಳುಹಿಸುವಂತೆ ನಿಶ್ಚೈಸಿ ಸಭೆಯನ್ನು ಮುಕ್ತಾಯ ಮಾಡಿದರು.

ಎ. ಸಿ. ದೇವಯ್ಯ,
ಕಾರ್ಯದರ್ಶಿ.

ಶನಿವಾರಸಂತೆ ಮೀಟಿಂಗು.

ತಾ. 22—1—29 ರಲ್ಲಿ ಶನಿವಾರಸಂತೆ ಹೋಬಳಿ ಮಹಾ ಜನಗಳೆಲ್ಲಾ ಖಚೇರಿ ಬಳಿ ಮೈದಾನದಲ್ಲಿ ಸಭೆ ಸೇರಿ ಮಿ. ಸಿ. ಹೆಚ್. ಜಿ. ಕಾಳೇಗೌಡರ ಅಧ್ಯಕ್ಷತೆಯಲ್ಲಿ ಮೀಟಿಂಗನ್ನು ನಡಿಸಲಾಯಿತು.

"ಲೋಕ ಸೇವೆಯಲ್ಲಿ ಸದಾ ನಿರತರಾಗಿದ್ದ ಮಿ. ಪಾಲೆಂಗಡ ಕುಶಾಲಪ್ಪನವರು ಅಕಸ್ಮಾತ್ತಾಗಿ ಸ್ವರ್ಗಸ್ಥರಾದದ್ದಕ್ಕೆ ಈ ಸಭೆಯು ವ್ಯಸನವನ್ನು ಸೂಚಿಸುತ್ತದಲ್ಲದೆ, ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲೆಂದೂ ಮತ್ತು ಅವರ ಕುಟುಂಬಕ್ಕೆ ಆಯುರಾರೋಗ್ಯವನ್ನುಂಟುಮಾಡುವಂತೆಯೂ ಭಗವಂತನನ್ನು ಪ್ರಾರ್ಥಿಸುತ್ತದೆ" ಎಂಬ ಠರಾವು ಪಾಸುಮಾಡಲಾಯಿತು.

ಬಿ. ಪಿ. ಶಾಂತಪ್ಪ.

ದಿವಂಗತರಾದ ಪಾಲೆಂಗಡ ಕುಶಾಲಪ್ಪನವರು.

"Can the Sailor move the main,
Will the potter heed the clay,
Mortal! Where the spirit drives,
Thither must the wheels obey"

ಮ. ॥ ಶ್ರೀ. ಕುಶಾಲಪ್ಪನವರು ಮದ್ರಾಸಿನಲ್ಲಿ ಮರಣ ಹೊಂದಿದ್ದಕ್ಕೆ ಮದ್ರಾಸು ಕೊಡವರಾದ ನಾವು ಎಷ್ಟು ವಿಷಾದಿಸಿದರೂ ಸಾಲದು. ಯಾವ ಕಷ್ಟನಷ್ಟವಾದರೂ ನಾವು ಅವರನ್ನು ಕಾಪಾಡಬೇಕೆಂಬ ಆಶೆಯಿಂದ ರೈಲ್ವೆ ಸ್ಟೇಷನ್‍ನಿಂದಲೇ ಆಸ್ಪತ್ರೆಗೆ ಸಾಗಿಸಿ, ಅಲ್ಲಿಯ ಚಿಕಿತ್ಸೆ ಉಪಚಾರವಲ್ಲದೆ ಬಾಕಿ ಎಲ್ಲ ಬಾಪಿನಲ್ಲು ಶ್ರಮಪಡುತ್ತಿದ್ದೆವು. ಹೀಗೆ ಶ್ರಮವಹಿಸಿ ತೆಗೆದುಕೊಂಡು ಬಹು ಮುತುವರ್ಜಿಯಿಂದ ಕೆಲಸಮಾಡಿದವರಲ್ಲಿ ಮ. ಶ್ರೀ. ಕೊಂಗಂಡ ಅಚ್ಚಯ್ಯನವರು,ಅವರ ಪತ್ನಿಯವರು ಮತ್ತು ಕೋಡಂಡ ಮಿಸ್ ಅಕ್ಕಮ್ಮ ಪೊನ್ನಯ್ಯನವರೂ ಮುಂದಾಳಾಗಿದ್ದರು. ನಮ್ಮ ದುರಾದೃಷ್ಟಕ್ಕೆ ಕುಶಾಲಪ್ಪನವರನ್ನು ಉಳಿಸಲಿಕ್ಕಾಗದಿದ್ದರೂ ಮದ್ರಾಸು ಕೊಡವರ ಪರವಾಗಿ ಬಹಳ ಶ್ರಮ ವಹಿಸಿಕೊಂಡವರಿಗೆ ನಾನು ನಿಮ್ಮ ಪತ್ರಿಕೆಯ ಮೂಲಕ ಬಹಳ ವಂದಿಸುತ್ತೇನೆ.

23—1—'29. ಬಿದ್ದಂಡ ಭೀಮಯ್ಯ.

ನಾಪೋಕ್ಲು ಆಸ್ಪತ್ರೆ.

ಅಯ್ಯಾ,

ನಾಪೋಕ್ಲು ಆಸ್ಪತ್ರೆಕಟ್ಟಡಗಳನ್ನು ಮಿ. ಗಳಾದ ಅಪ್ಪಾರಂಡ ಮಂದಣ್ಣನವರು ಮತ್ತು ಬೋಪಣ್ಣನವರು ಸಹ ಕಟ್ಟಿಸಿದಾಗಿದೆ. ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ವಸತಿಗೆ ಒಂದು ಕಟ್ಟಡ ಅವಶ್ಯವೆಂದು ರೈತಾಪಿ ಜನರು ಮತ್ತು ಸರ್ಕಾರದವರು ಅಭಿಪ್ರಾಯಪಟ್ಟರೂ ಕೂಡ ಕಟ್ಟಡಕ್ಕೆ ಬೇಕಾಗುವ ಕಮ್ಮಿ ಪಕ್ಷ 5 ಸಾವಿರ ರೂಪಾಯಿಯನ್ನು ಸರ್ಕಾರದವರೇ ಕೊಡಲು ಹಣವಿಲ್ಲವೆಂಬದಾಗಿಯೂ, ಆದ್ದರಿಂದಲೇ ಕಟ್ಟಡ (ವಾರ್ಡ್) ಇದುವರೆಗೆ ಕಟ್ಟಿಸದೆ ಬಾಕಿಯಾಗಿದೆಂದೂ ತಿಳಿಯುತ್ತೇನೆ. ಮಿ. ಅಪ್ಪಾರಂಡ ಬೋಪಣ್ಣನವರು ವೀರಾಜಪೇಟೆಯಲ್ಲಿ ರೋಗಿಗಳಿಗೆ ವಸತಿಗೆ (ವಾರ್ಡು) ಮನೆ ಕಟ್ಟಿಸಿ ಜನೋಪಕಾರಾರ್ಥವಾಗಿ ಮಾಡಿದ ಪುಣ್ಯ ಕೆಲಸವನ್ನು ಬಹಳ ಶ್ಲಾಘಿಸಬೇಕಾಗಿದೆ. ದಿವಂಗತರ ಪುತ್ರರು ಭಗವಂತನ ಕಟಾಕ್ಷದಿಂದ ಐಶ್ವರ್ಯವಂತರಾಗಿರುವದರಿಂದ ತಮ್ಮ ಹುಟ್ಟು ನಾಡಿಗೆ ನಾಪೋಕ್ಲಿನಲ್ಲಿ ಕಟ್ಟಿಸಲ್ಪಟ್ಟ ಆಸ್ಪತ್ರೆಯ ಪುಣ್ಯ ಕೆಲಸದಂತೆ ಇವರ ಮಕ್ಕಳು ಸದರಿ ಆಸ್ಪತ್ರೆಯ ಒಳ ರೋಗಿಗಳಿಗೆ ವಸತಿಗೆ (ವಾರ್ಡ್) ಮನೆ ಕಟ್ಟಿಸಿಕೊಡಬೇಕಾಗಿ ಬೇಡುತ್ತೇನೆ. ನಮ್ಮ ನಾಪೋಕ್ಲು ನಾಡಿನವರು ಹಣ ಹಾಕಿ ಕಟ್ಟಿಸುವರೆ ಗರೀಬ ಜನರಾದ್ದರಿಂದ, ಇಂಥಾ ಪುಣ್ಯ ಕೆಲಸಗಳಿಗೆ ಮನಸ್ಸು ಕೊಟ್ಟಲ್ಲಿ ನಾವು ನಾಡಿನವರು ಅವರನ್ನು ಸರ್ವದಾ ಮರೆಯ ತಕ್ಕಂಥವರಲ್ಲ. ಸದರಿ ಕಾರ್ಯವನ್ನು ಕೈಕೊಳ್ಳುವದನ್ನು ಎದುರು ನೋಡುತ್ತಾ ಇದ್ದೇವೆ. ಪತ್ರಿಕ ಮೂಲಕ ತಿಳಿದಲ್ಲಿ ಮತ್ತು ವಿಶೇಷವಾಗುವದೆಂದು ನಂಬಿರುವ.

" ನಾಪೋಕ್ಲು ನಾಡಿನವ. "

ಮಾನಂತವಾಡಿಗಾಗಿ ಬಸ್ ಸರ್ವಿಸ್.

ಅಯ್ಯಾ,

ಕುಟ್ಟದಿಂದ ಬಸ್ ಸರ್ವಿಸ್ ಎಂಬಂತೆ ಓಡುವದಾದರೂ ಮಾನಂತವಾಡಿ ವೈನಾಡು ಪ್ರದೇಶಗಳ, ಬಾಲಕರೂ ಬಸ್ಸಿನಲ್ಲಿ ಸೀಟು ಸಿಕ್ಕದೆ ಹಲವು ಜನರಿಗೆ ನಿರಾಶೆಯಾಗಿ ಮನೆಗೆ ಹಿಂತಿರುಗುವದು ನನ್ನ ಅನುಭವದ ಸಂಗತಿಯಾಗಿದೆ. ಈ ವಿಷಯವಾಗಿ ಪ್ರಯಾಣಿಕರನ್ನು ವಿಚಾರಿಸಿದಲ್ಲಿ ಘನ ಸರಕಾರದವರಿಗೆ ವೇದ್ಯವಾಗಬಹುದು. ಡಿ. ಮಿ. ಸಾಹೇಬರು ಮತ್ತು ಇಂಸ್ಪೆಕ್ಟರ್ ಸಾಹೇಬರು ದಯವಿಟ್ಟು ಮೇಲಣ ಲೈನಿಗಾಗಿ ಕೇಳುವ ಇನ್ನೊಬ್ಬರಿಗೆ ಬಸ್ ನಡೆಸಲು ಲೈಸೆನ್ಸ್ ಕೊಡಿಸಿ ಪ್ರಯಾಣಿಕರಿಗೆ ಅನುಕೂಲಪಡಿಸಿಕೊಟ್ಟರೆ ಅವರಿಗೆ ಕಾವೇರಿ

ಯಮ್ಮನವರು ದೀರ್ಘಾಯುಷ್ಯ ಕೊಡಲೆಂದು ವೃದ್ಧನಾದ ನನ್ನ ಪ್ರಾರ್ಥನೆ.

ದೇವಣಗೇರಿ. ಮುಕ್ಕಾಟಿರ ಕುಟ್ಟಪ್ಪ.
ತಾ. 28—1—'29.

'ಅನುಭವದ ಮಾತು.'

ಹೇಳುವವರು ಹೆಚ್ಚು, ಆಚರಿಸುವವರು ಇಲ್ಲ ;
ಅರಿತವರೆನ್ನುವವರು ಹೆಚ್ಚು, ಅದರಂತೆ ಮಾತ್ರ ಇಲ್ಲ;
ಬೇಕು ಅನ್ನುವವರು ಇದ್ದಾರೆ, ಯಾಕೆ ಅಂದರೆ ಉತ್ತರವಿಲ್ಲ;
ಸ್ವಾತಂತ್ರ್ಯಕ್ಕೆ ಹೋರಾಟ, ಸ್ವಾರ್ಥತೆಯಲ್ಲಿ ಲೋಲಾಟ.
ಹೀಗಾದರೆ(....................)ಯಾವಾಗ ? ಮುಂದೆಗತಿ !!!

'ಸೇವಾ ಸಮಾಜ' ಇದು ಏನು ಮಾಡೀತು !

(1) ದೇಶಸೇವೆಗೆ ಉಮೇದ್ವಾರರನ್ನು ತಯಾರಿಸೀತು.
(2) ಜನೋಪಕಾರಕ್ಕೆ ಬೇಕಾದ ಕೆಲಸಗಳಿಗೆ ದ್ರವ್ಯ ಶೇಖರಿಸೀತು.
(3) ದೇಶದ ಆಪತ್ತುಗಳಿಗೆ ನೆರವಾದೀತು.
(4) ಮಂದಿಗಳ ಏಳಿಗೆಗೆ ಅವಶ್ಯವಾದ ಕಾರ್ಯಗಳನ್ನು ಕೈಕೊಂಡೀತು.
(5) ದೇಶದಲ್ಲಿ ಶಾಂತತೆಯನ್ನು ಕಾಪಾಡೀತು.
(6) ಸತ್ಯವನ್ನು ಸ್ಥಾಪಿಸೀತು.
(7) ದೇಶೀಯ ಕೈಗಾರಿಕೆಗೆ ಉತ್ತೇಜನ ಕೊಟ್ಟೀತು.
(8) ಕಲಹಗಳಲ್ಲಿ ಮಧ್ಯಸ್ಥಿಕೆಯನ್ನು ವಹಿಸಿಕೊಂಡೀತು.
(9) ಅನಾಥರ ಜವಾಬ್ದಾರಿಕೆಯನ್ನು ವಹಿಸಿಕೊಂಡೀತು.
(10) ಜನತೆಯಲ್ಲಿ ಜಾಗ್ರತೆಯನ್ನು ಉಂಟುಮಾಡೀತು.
(11) ಮತಬೇಧಗಳನ್ನು ಸುಧಾರಿಸೀತು.
(12) ಜನಸಮುದಾಯವು ಕೋರುವ ಇತರ ಯಾವ ಕಾರ್ಯಕ್ಕಾದರೂ ಸಹಾಯಕವಾದೀತು.

ನಂಬಿದರೆ ಉಂಟು, ಇಲ್ಲದಿದ್ದರೆ ಎಂದಿಗೂ ಇಲ್ಲ.

ಸದ್ಯಕ್ಕೆ ಹತ್ತು ಜನ ಯುವಕರು ಬೇಕು. ಕುಲಗೋತ್ರದ ವಿಚಾರವಿಲ್ಲ. ಆದರೆ ತಂದೆಗೆ ಒಬ್ಬನೇ ಮಗನಾಗಿರಬಾರದು, ಲಗ್ನವಾಗಿರಬಾರದು, 18 ವಯಸ್ಸಿಗೆ ಕಡಿಮೆಯಾಗಿರಬಾರದು, 25 ವರ್ಷ ವಯಸ್ಸಿಗೆ ಮೀರಿರಬಾರದು, ಅಂಗಹೀನನಾಗಿರಬಾರದು. ಸ್ಕೂಲು ಪರೀಕ್ಷೆಯ ಮಟ್ಟಿಗಾದರೂ ಓದುಬರಹ ತಿಳಿಯದೆ ಇರಬಾರದು.

ಇದೇ ಸಂವತ್ಸರದ ಮಾರ್ಚ ಒಂದರಿಂದ ಕೆಲಸ ಪ್ರಾರಂಭಿಸಲು ಸಂಕಲ್ಪ. ಉಮೇದ್ವಾರರಾಗಲು ಇಚ್ಛಿಸುವ ಯುವಕರು ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿ. ಇಲ್ಲವೇ ಮೊಖತಾ ಮಾತಾಡಿ ಮೊಖತಾ ಮಾತಾಡಿದರೆ ಮೇಲು. ಸಂಕಲ್ಪ ನೆರವೇರಿಸುವುದರಿಂದ ದೇಶದ ಸ್ಥಿತಿಗತಿಗಳನ್ನು ಅರಿತುಕೊಳ್ಳುವಿರಿ. ಲೋಕಾನುಭವವನ್ನು ಪಡೆಕೊಳ್ಳುವಿರಿ. ಭಗವಂತನ ಅನುಗ್ರಹಕ್ಕೆ ಪಾತ್ರರೂ ಆಗುವಿರಿ. ಇದು ಖಂಡಿತ.

ಪೊನ್ನಂಪೇಟೆ. ಇತಿ ಸಜ್ಜನ ಕೃಪಾಭಿಲಾಷಿ,
ತಾ. 23—1—29 ಎ. ಕಾಳಮ್ಮ.

ನಾಪೋಕ್ಲುನಾಡಿನ ಜಮಾಬಂದಿ.

ಅಯ್ಯಾ,

ನಾಪೋಕ್ಲುನಾಡಿನ ಹುಜೂರ್ ಜಮಾಬಂದಿ ಈ ತಾರೀಕು 23ನೇ ದಿನ ಕೊಡಗು ಕಮಿಶನರ್ ಸಾಹೇಬರವರಿಂದ ನಡಿಸಲಾಯಿತು. ರೆವಿನ್ಯೂ ಅಸಿಸ್ಟೆಂಟ್ ಕಮಿಶನರ್ ಸಾಹೇಬರವರು ದಯಮಾಡಿ ಟೆಂಪೊರರಿಯಾಗಿ ಪಟ್ಟಾಮೆಗೆ ಸೇರಲು ಅನೇಕ ವಿಧದಲ್ಲಿ ಬೋಧಿಸಿದ್ದಲ್ಲದೆ, ಬರುವ ಫೆಬ್ರವರಿ ತಾ. 16ನೇ ಶನಿವಾರ ಪುನಃ ನಾಪೋಕ್ಲಿಗೆ ದಯಮಾಡಿಸುವದಾಗಿ ಹೇಳಿದರು. ಸದರಿ ದಿನ ಸೇರಲು ಇಚ್ಛೈಸುವವರೆಲ್ಲರೂ ಬರಬಹುದಾಗಿ ತಿಳಿಸಿದರು.

ಜಮಾಬಂದಿ ಆಫೀಸರಿಗೆ ಟಕ್ಕಾವಿ, ದಾರಿ ಸಾಗುವಳಿ, ಮೈನರ್ ಮಕ್ಕಳ ವಗೈರೆ ಅರ್ಜಿಗಳು ಅನೇಕ ಕೊಡಲ್ಪಟ್ಟವು.

ಇಲಾಖೆ ಮಲೆಗಳ ಬಾಬಿನ ಕಷ್ಟನಷ್ಟಗಳ ಅರ್ಜಿಯು ಫಾರೆಸ್ಟ್ ಇಲಾಖೆಯವರಿಗೆಂದು ರೈತರು ನಂಬಿ ಬರೆಯಲಿಲ್ಲ.

ಇತ್ತಲಾಗಿ ತಿಳಿದಲ್ಲಿ ಕೊಡಗು ಕಮಿಶನರ್ ಸಾಹೇಬರವರು ಮತ್ತು ಫಾರೆಸ್ಟ್ ಇಲಾಖೆ ಚೀಫ್ ಫಾರೆಸ್ಟ್ ಆಫೀಸರು ಸಹ ತಾ. 31 ರಿಂದ ಫೆಬ್ರವರಿ 2ನೇ ತಾರೀಕಿನವರೆಗೆ ಮುಂಡೆಕ್ರೋಟ್ಟಿನಿಂದ ನಾಲ್ಕುನಾಡು ಅರಮನೆಗೆ ಮಲೆಗಳ ಪರೀಕ್ಷೆಗಾಗಿ ದಯಮಾಡಿಸುವದಾಗಿ ತಿಳಿಯುತ್ತೆ.

ಬಹಳಬಾರಿ ಆಫೀಸರು ಕೋಲೆ ಸುಡುವ ಬಾಬಿನಲ್ಲಿ 1930-31ರ ವಳಗೆ ಮುಂದೆಗೆ ಕಟ್ಟಿ ಹಿಡಿದು ಆ ಮೂಲಕ ಬೆಂಕಿ ಬಿದ್ದು ಕೋಲೆ ಹಾಳಾಗಬಹುದೆಂಬ ಊಹನೆಯನ್ನು ಸೂಚಿಸಿದರು. ಆದರೆ ಈಗ ಇಲಾಖೆ ಗಿಡಗಳಿಗೆ ತಗಲಿರುವ ಮತ್ತು ತಗಲುತ್ತಿರುವ ನೆರಪಚ್ಚೆಯೂನೆ ಕಂಬಳಿ ಹುಳ (Caterpiller) ಇಲಾಖೆ ಗಿಡಗಳ ಎಲೆಗಳನ್ನು ತಿನ್ನುತ್ತಿವೆ. ಇದೇ ಪ್ರಕಾರ ಈ ಮೊದಲು ಇದೇ ಕಂಬಳಿ ಹುಳ ತಿಂದು ಗಿಡಗಳೆಲ್ಲ ಸತ್ತುದರಿಂದ ಕಂದಾಯ ರಿಮಿಶನ್ ½ ಕೊಟ್ಟದಾಗಿದೆ.

ಆದ್ದರಿಂದ ದೇಶವನ್ನಾಳುವ ಕಮಿಷನರವರೂ, ಫಾರೆಸ್ಟನ್ನಾಳುವ ಚೀಫ್ ಫಾರೆಸ್ಟಾಫೀಸರೂ ಒಂದಾಗಿ ಹೋಗುವದರಿಂದ ಈ ಸಂಗತಿಯನ್ನು ಚೆನ್ನಾಗಿ ಪರ್ಯಾಲೋಚಿಸಿ ಇದಕ್ಕೆ ತಕ್ಕ ಪರಿಹಾರಕ್ಕೆ ಯೋಚಿಸುವರಾಗಿ ಸೂಚಿಸಿದ್ದೇನೆ.

ಇಲಾಖೆ ಮಲೆಯವ

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ.

ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ಮಾಸ ಪುಸ್ತಕ)

(ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' [illegible] ಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿ! ಇದರಲ್ಲಿ ಜಗನ್ನಾಥದಾಸರೇ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳ ಲೋಕೋಪಕಾರಾರ್ಥವಾಗಿ ಮಾಡಿದ ಭಗವನ್ನಾಮ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ಕ್ರೌನ್ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೆ ಹಾಸಲು ಉಚಿತ) ಸಾಧಾರಣ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೪—೦

ಪ್ರಥಮ ಸಂಪುಟದ ಬೆಂಡಾದ ಪ್ರತಿಗಳು.

	ಸಾದಾ ಬೈಂಡು	ದಪ್ಪ ರಟ್ಟಿನ ಬೈಂಡು	ಕ್ಯಾಲಿಕೋ ಬೈಂಡು
ಸಾಧಾರಣ ಪ್ರತಿ	೧—೪—೦	೧—೧೨—೦	೨—೪—೦
ಉತ್ತಮ ಪ್ರತಿ	೨—೪—೦	೨—೮—೦	೩—೦—೦

ಅಂಚೆಹಾಸಲು ಪ್ರತ್ಯೇಕ.

ವಿಳಾಸ — ಸುಬೋಧ ಪ್ರಕಟನಾಲಯ,

12–2 ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

ಪಿಗ್ಮಿ ಗ್ರಾಮೋಫೋನ್

ಎಲ್ಲಾ ಹಾಡುಗಾರಿಕೆಯ ಯಂತ್ರ.

ಮೊದಲಿನ ಕ್ರಯ 35 ರೂ. ಈಗಿನ ಕ್ರಯ 8—8—0.

ಈ ಯಂತ್ರವು ವಿಲಾಯಿತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದುಸ್ಥಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವುದು. ಅಲ್ಲದೆ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹು ಚೆನ್ನಾಗಿದೆ. ನೋಡಲಿಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಒಳ್ಳೆಯದಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ ಸುಂದರವಾದ ಮೆಟಲ್ ಹಾರನ್ ಎಂಬ ಪದ ಕೇಳುವ ಕೊಳವೆ ಇದೆ. ನಿಧಾನವಾಗಿಯೂ, ಜಾಗ್ರತೆಯಾಗಿಯೂ ಪದ ಹೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದು ಕೊಂಡು ಹೋಗಲು ಅನುಕೂಲವಾದಂಥಾ ಸುಂದರವಾದ ಕೈ ಪೆಟ್ಟಿಯಲ್ಲಿಟ್ಟಿದೆ.

ಡಬ್ಬಲ್ ಸೈಡ್ ಎರಡು ಕಡೆಯೂ ಪದ ಇರುವ

1 ರೆಕಾರ್ಡ್ ಸಹಿತ ಕ್ರಯ ರೂ. 8—8—0.

ಹೆಚ್ಚಿಗೆ ರೆಕಾರ್ಡ್ ಬೇಕಾದರೆ ರೆಕಾರ್ಡ್ ,,

ಪ್ರತ್ಯೇಕ 1ಕ್ಕೆ 2—0—0

ವಿಳಾಸ — ಲಿಂಗಂ ಟ್ರೇಡಿಂಗ್ ಕಂಪೆನಿ,

52—33 ಪೊ. ಬಾ. 243. ಮದರಾಸು.

Arms, Ammunition and Shooting Requisites !!!



Current Illustrated Catalogue Just Issued Free on Application !

D. B. B. L. Rifles	Rs.	120	to	Rs.	2750
S. B. B. L.	,,	35	to	,,	950
D. B. B. L. Guns	,,	50	to	,,	1350
S. B. B. L. ,,	,,	35	to	,,	275
D. B. M. L. ,,	,,	45	to	,,	135
S. B. M. L. ,,	,,	30	to	,,	80
B. L. Revolvers	,,	35	to	,,	350
Automatic Pistols	,,	30	to	,,	150

Brilliant Search Light Lamp For Shooting Camping Fishing and All such other Night Sports and work Rs 30 Free delivery

Also swords, Daggers, Cartridges, Caps, Gunpowder and Shooting Requisites at the most competitive rates.

GOOLAMHUSAIN ALLIBHOY & SONS.

Largest Importers of Firearms and Ammunition

Cheapest priced firm in India.

24—19 210 Abdul Rehman Street, BOMBAY.

Try ! Try

KING & CO.,

SUNTICOPPA.

for

Foreign Liquor, Arms & Ammunitions, High-Grade Cigarettes, Sports Materials, Court-Stamp-papers, Printed Labour Bonds, Sewing Machines, etc., etc.

ಕಿಂಗ್ ಅಂಡ್ ಕೊ.,

ಸುಂಟಿಕೊಪ್ಪ.

ನಮ್ಮ ಕಂಪೆನಿಯಲ್ಲಿ ಎಲ್ಲಾ ಪರದೇಶೀಯ ಸಾರಾಯಿ ಎಂದರೆ ಬ್ರಾಂಡಿ, ವಿಸ್ಕಿ, ವೈನ್, ಬೀರು ಮೊದಲಾದವು ವಿಕ್ರಯಿಸಲ್ಪಡುತ್ತವೆ. ಅಲ್ಲದೆ ಅತ್ಯುತ್ಕೃಷ್ಟವಾದ ಕೋವಿ, ಕೋವಿ ಮದ್ದು, ತೋಟಗಳ, ಬೆಲ್ಲು ವಗೈರೆ ಬಹು ಸುಲಭ ದರದಲ್ಲಿ ಸಿಕ್ಕುತ್ತದೆ. ಎಲ್ಲರೂ ಒಂದು ಸಲ ನಮ್ಮಲ್ಲಿ ಬಂದು ವ್ಯಾಪಾರ ನಡೆಸಿದಲ್ಲಿ ಪೂರ್ತಿ ಮಾಹಿತಿಯು ಗೊತ್ತಾಗುವುದು.

12—11

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೧೯೨೯ನೇ ಇಸವಿಯ ಶಿದ್ದಪ್ಪಾಸ್ ಮೊಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929ನೇ ಇಸವಿಯ ಶಿದ್ದಪ್ಪಾಸ್ ಮೊಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 6½"×4" 1ಕ್ಕೆ	0 12 0
ಪರಸ್ಥಳಕ್ಕೆ ಪೋಸ್ಟೇಜು	0 3 0
2ನೇ ನಂ. ದೊಡ್ಡ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 6½"×4" 1ಕ್ಕೆ	0 10 0
ಪರಸ್ಥಳಕ್ಕೆ ಪೋಸ್ಟೇಜು	0 3 0
3ನೇ ನಂ. ಚಿಕ್ಕ ಸೈಜು ಪಾಕೆಟ್ ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 5"×2¼" 1ಕ್ಕೆ	0 7 0
ಪರಸ್ಥಳಕ್ಕೆ ಪೋಸ್ಟೇಜು	0 2 0
4ನೇ ನಂ. ಚಿಕ್ಕ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 5"×2¼" 1ಕ್ಕೆ	0 5 0
ಪರಸ್ಥಳಕ್ಕೆ ಪೋಸ್ಟೇಜು	0 2 0

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಾ ಬೆಲೆಯನ್ನು ಕಳುಹಿಸಿದಲ್ಲಿ [illegible] ಮೂಲಕ ಕಳುಹಿಸಲಾಗುವುದು. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವರಿಗೆ 1ನ್ನು ಹೆಚ್ಚಿಗೆ ಕೊಡಲಾಗುವುದು. ವಿ. ಪಿ. ಮೂಲಕ ತರಿಸಿಕೊಳ್ಳುವವರು ಡಜನ್ 1ಕ್ಕೆ 2—0—0 ಮುಂಗಡವಾಗಿ ಕಳುಹಿಸಬೇಕು.

1929ನೇ ಇಸವಿಯ ಸಚಿತ್ರ ಕ್ಯಾಲೆಂಡರುಗಳು.

ಶೀಟ್ ಕ್ಯಾಲೆಂಡರ್ 50ಕ್ಕೆ	1 2 0
,, ,, 100ಕ್ಕೆ	2 0 0
5"×4½" ಪಾಕೆಟ್ ಕ್ಯಾಲೆಂಡರ್ 12ಕ್ಕೆ	0 9 0
,, ,, 50ಕ್ಕೆ	2 4 0
,, ,, 100ಕ್ಕೆ	4 6 0

ಅನೇಕ ಬಣ್ಣಗಳಿಂದ ಬರೆದಿರುವ ಪ್ರತಿಯೊಂದು 11"×14" ಸೈಜಿನ [illegible] ಸ್ವಾಮಿ ಮೊದಲಾದ ದೇವತೆಗಳ ಚಿತ್ರವುಳ್ಳ ಕ್ಯಾಲೆಂಡರ್ 3ಕ್ಕೆ

ಕ್ಯಾಲೆಂಡರ್ 3ಕ್ಕೆ	0 8 0
,, ,, 6ಕ್ಕೆ	0 14 0
,, ,, 12ಕ್ಕೆ	1 6 0

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಾ ಬೆಲೆಯನ್ನು ಮನಿಯಾರ್ಡರ್ ಮೂಲಕ ಕಳುಹಿಸಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ಕಳುಹಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ಕಳುಹಿಸುವುದಿಲ್ಲ.

ಕ್ಯಾಲೆಂಡರುಗಳ ನಮೂನೆಗೋಸ್ಕರ ಬರೆದರೆ ಮಾದರಿ ನೋಡುವುದಕ್ಕಾಗಿ ಕಳುಹಿಸಲಾಗುತ್ತೆ.

ಮಾದರಿ ಕ್ಯಾಲೆಂಡರು ಅಪೇಕ್ಷಿಸುವವರು 0—5—0 ರ ಸ್ಟಾಂಪಿನಲ್ಲಿ ಮೇಲ್ಕಂಡ 3 ನಮೂನೆಯ ಕ್ಯಾಲೆಂಡರುಗಳನ್ನು ಪೋಸ್ಟು ಮೂಲಕ ಫ್ರೀಯಾಗಿ ಕಳುಹಿಸಲಾಗುತ್ತೆ.

ಮನಿಯಾರ್ಡರ್ ಕಳುಹಿಸುವ ವಿಳಾಸ.— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

52—38 ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	17 190
ಒಪ್ಪೊಬಂದ ಠೇವಣಾತಿ	—	1,12,320

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5 0 0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಅನ್ವಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟರು,
ಕೋದಂಡ ಅಪ್ಪಯ್ಯನವರು,
ರಾವ್ ಬಹದ್ದೂರ್

ಟ್ರೆಜರರ್
ಕೊಂಗಟ್ಟಿರ ತಿಮ್ಮಯ್ಯನವರು

ಸೆಕ್ರೆಟರಿ
ಸಿ. ಯಸ್ ವೆಂಕಪ್ಪಯ್ಯನವರು, ಬಿ ಎ ಬಿ ಎಲ್.

ತಾರೀಕು 1—7—1928

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ ಪೇರಿಯಂಡ ಪೂವ್ವಯ್ಯನವರ ಮತ್ತು ಚಂಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವ್ವಯ್ಯನವರು
ಮತ್ತು—ಮೆ ಚಂಗಂಡ ಕುಟ್ಟಪ್ಪನವರು,
ಪೊನ್ನಂಪೇಟೆನಾಡು—ಮೆ ಕಾಳೇಂಗಡ ಚಿಣ್ಣಪ್ಪನವರು
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು
ಮರೆನಾಡು—ಮೆ ಕೀಕಿರ ಅಣ್ಣಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಕಾಸಚೇರಿರ ನಂಜಪ್ಪನವರು,
ಮೂರ್ನಾಡು—ನುಡೆಯಂಡ ದೇವಯ್ಯನವರು,
ನಾಪೋಕ್ಲು—ಮೆ ಟಿ ಆರ್. ರಾಮಯ್ಯನವರು
ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ ಜಿ ಮುದ್ದಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ ಜಿ ಮಾದಯ್ಯನವರು,

ಮಾಹನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ,
"ಕೊಡಗು ಲಿಮಿಟೆಡ್, ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ... ಸಹಾಯಕ ಸಂಘದ ... ರಿಜಿಸ್ಟ್ರಾರವರ ಆಫೀಸಿಗೆ ... ಒಳಗಾಗಿ ... ವೆಂದು ... ಯುವ ಕೊಂಡರೆ ... ವಾಗಿ ... ಗಳೂ ನಮ್ಮಲ್ಲಿಯೂ ... ನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್,
ಕೊಡಗು" ಮಡಿಕೇರಿ.



12 bore Victor Cartridges Rs 10/- Per 100

Mahomedally-Noorbhoy.
ARMS & AMMUNITION MART
321 Abdul Rehman Street
52-20 BOMBAY. 3.

ಕಟುಕಷಾಯ ಮಹಿಷ ರಕ್ತ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ದಿನಬಿಟ್ಟು ಬರುವ ಜ್ವರ 3—1 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0, 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಹನಿಹನಿಯಾಗಿ ಹೋಗುವುದು ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದ ಮೂತ್ರ ... ಲ್ಲಿ ಧಾತು ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ದೇಹದಲ್ಲಿ ಉರಿ ಬಾಯೊಣಿಕೆ ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಬುಚ್ಚವ ನೋವು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1 3 6ಕ್ಕೆ ರೂ 1—14—0 3—8—0 6—12—0

ರೋಮನಾಶಿನಿ.— ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುರಿ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಕಿವುಡುತನ ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ಡಜನ್ ಸೀಸೆಗೆ ರೂ 2, 3 ... ಸೀಸೆಗೆ ... —0

ನಮ್ಮ ಕೆಟಲಾಗು ತರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ
9. ಮಂಗಳೂರು.

52—16

ಎಂಪಯರ್ ಆಫ್ ಇಂಡಿಯಾ
ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪಿಸಲ್ಪಟ್ಟದ್ದು (1897ರಲ್ಲಿ)

ತಿಂಗಳಿಗೆ ರೂ 12—8—0 ಕೊಡುತ್ತಾ ಒಂದರೆ ಲಾಭ ಸಹಿತ ಮತ್ತು ಅದರೊಡನೆ ಬೋನಸ್ಸುಗಳಿಂದ ಹೆಚ್ಚಾಗುವ ಒಂದು ಪಾಲಿಸಿಯು ಈ ಕೆಳಗೆ ನಮೂದಿಸಿದ ರೀತಿ ನಿಮಗೆ ದೊರೆಯುವುದು

ಪ್ರಾಯ	ಜೀವಾಂತ್ಯದಲ್ಲಿ ಕೊಡಲಾಗುವ ಹಣ				ಜೀವಾಂತ್ಯ ಯಾ ವರ್ಷಗಳ ಅಂತ್ಯಕ್ಕೆ ಕೊಡುವ ಎಂಡೊಮೆಂಟ್ ಅಶ್ಯೂರೆನ್ಸ್		
		ಪ್ರಿಮಿಯಂಗಳ ನಿರುಪ					
	ಜೀವಾಂತ್ಯ	15 ವರ್ಷಗಳು	20 ವರ್ಷಗಳು	25 ವರ್ಷಗಳು	20 ವರ್ಷಗಳು	25 ವರ್ಷಗಳು	30 ವರ್ಷಗಳು
	ರೂ	ರೂ	ರೂ	ರೂ	ರೂ	ರೂ	ರೂ
25	5 820	3 550	4 270	4,800	3 010	3 800	4 540
30	5 140	3 290	3 930	4 390	2,930	3 620	4 220
35	4,480	3 030	3 600	3 970	2,810	3 400	3 870

ಮಡಿಕೇರಿ, ಸೋಮವಾರಪೇಟೆ ಮತ್ತು ಸಿದ್ದಾಪುರ ಮೊದಲಾದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ

ಹೆಡ್ ಆಫೀಸು
ಎಂಪಯರ್ ಆಫ್ ಇಂಡಿಯಾ
ಲೈಫ ಬಿಲ್ಡಿಂಗ್, ಬೊಂಬಾಯಿ

ಬ್ರಾಂಚ್ ಆಫೀಸು.
152 ಕಮರ್ಶಿಯಲ್ ಬೀದಿ
ಬೆಂಗಳೂರು.

21—7

Xmas & New Year Presents!
Toys for Children!

A set comprising of tiny bright and beautiful tumblers pots spoons etc made of brass and bell metal are quite suitable for the amusement and play of children

Small set 3 articles Rs 2—8—0 Medium set 32 articles Rs 3—8—0.
Big set of 32 articles Rs 4—8—0

Securely packed in neat card board boxes Postage extra

Embroidary Hand Bags & Money Purses a Speciality Silk Sarees Jackets, Handkerchieves

Send your orders to:-

BHARADWAJ & CO.,
BROCADE, EMBROIDARY & SILK MANUFACTURERS,
Benares City.

52—23

ಸ್ಥಾಪನೆ—1874.

ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ
ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ವೈವಾಟದ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ದೊರೆತ ಬೋನಸು:
1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 25.
1000 ,, ಎಂಡೋಮೆಂಟ್ ,, ,, —ರೂ. 20.

ಹೆಚ್ಚಾಗಿ ಸಿಕ್ಕಿರುವ ಬೋನಸು ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ ಪುನಹ ಒಂದು ಹೊಸ ಪಾಲಿಸಿಯನ್ನು ಓರಿಯಂಟಲ್ ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು. ಸಾವಿರಾರು ಜನ ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು.

ಹೆಚ್ಚಿನ ಸೂಚನೆಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು—

ಓರಿಯಂಟಲ್ ಬಿಲ್ಡಿಂಗ್ಸ್,
ನಂ. 1 ಸೌತ್ ಪರೇಡ್, ಬೆಂಗಳೂರು.

52—5

ಯಲ್. ಆರ್. ಕೃಷ್ಣಸ್ವಾಮಯ್ಯರ್.
ಬ್ರಾಂಚ್ ಸೆಕ್ರೆಟರಿ.

Printed & published by P. I. Belliappa, at "Kodagu" Press, Mercara for "Kodagu" Ltd.

Reg. No. M. 1556
If not delivered please return to
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೮—೦.

ಸತ್ಯೇನ ಧಾರ್ಯತೇ ಪೃಥ್ವೀ ... ||

ಪ್ರತಿ ಬುಧವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪಾದಕ—ಪಂಡ್ಯಂಡ ಐ. ಬೆಳ್ಳಪ್ಪ.

ಸಂಪುಟ ೮] ಮಡಿಕೇರಿ, ... ಫೆಬ್ರವರಿ ... ನೇ ಬುಧವಾರ [ಸಂಚಿಕೆ ೩೭

JUST ARRIVED.

Guns,

12 Bore D. B. B. L. Guns @ Rs 145 140 130 & 100 each
12 „ S. B. B. L. Guns @ „ 7 . & . . . 0 each
12 „ D. B. M. L „ @ „ 7 . ea . l

Cartridges,

Eley's Shot Cartridges Rs 12 . 0 per 100
Lg. & Sg „ 14 . . „

Ball Cartriges Rs 16—0—0 per 100
Lethal Bullet „ „ 32—0—0 „ „
2bore Ballistite „ 16—0—0 „ „
1 lb tin F F Gun Powder Rs. 1—14—0"
½ „ „ „ „ „ 1— 0—0.
¼ „ „ „ „ „ 0—10—0.
Boxes of 250 M L Caps „ 1— 0—0 each.

Selling fast. Buy requirements early.

52—1

SPENCER & CO. LTD. Arms & Ammunition Dealers. MERCARA.

Post Box 423,
TRIPLICANE, MADRAS.

Catalogue Free
to Bona fide Enquirers

JEWELLER
BY
APPOINTMENT
TO
His Excellency
THE GOVERNOR
OF MADRAS.

MANUFACTURES AND DEALS IN ALL:—

(1) Gemset Jewels, gold and silver articles of all patterns
(2) Race Cups. Caskets, Medals etc., for presentation purposes
(3) Trovels. Keys, Locks, etc., for ceremonial purposes.

UNDERTAKES:—

(1) Remaking or Remodelling of all sorts of old gemset jewels to latest patterns.
(2) Electro-plating, gilding and nickelling
(3) Buying old jewellery, or undertaking to effect sale.

V. SUBRAMANIA IYER
JEWELLER

Telephone:—
3145.

Telegrams:—
"PRECIOUS"

52—21

Gold-smith, Silver smith, & Dealer in all Gemset Jewels.

Do you wish to increase the yield of your Coffee?
If so, please apply

BETTIAH'S SPECIAL COFFEE MIXTURE,

The **BEST** on the market because.

1. It is prepared according to the principles approved by eminent Agricultural Chemists.
2. It is prepared from highgrade fertilisers of the purest kind
3. And last, but not least, it is the cheapest mixture for the plant-foods it contains.

Apply, for further particulars to:—

Mr. B. Bettiah,
Sole Agent for Mysore and Coorg,
IMPERIAL CHEMICAL INDUSTRIES (INDIA) LTD.,
Sunthepet, MYSORE.

12—3

ಅಪೂರ್ವ ಸಂದರ್ಭ.

ಹೋಗಿದ ದೇಹದಾರ್ಢ್ಯವನ್ನು ಪುನಃ ಸಂಪಾದಿಸ ಬೇಕಾದರೆ ಇದೀಗ ಅಪೂರ್ವ ಸಂದರ್ಭ.

ಆತಂಕನಿಗ್ರಹ ಮಾತ್ರೆಗಳು

ಮೆದುಳಿನ ಅಶಕ್ತಿ, ಮಲಬದ್ಧತೆ, ನರಗಳ ದೌರ್ಬಲ್ಯ ವಿಗಳನ್ನು ಬೇಗನೆ ಗುಣಮಾಡುವವು.
32 ಮಾತ್ರೆಗಳುಳ್ಳ ಒಂದು ಡಬ್ಬಿ ಒಂದೇ ರೂಪಾಯಿ!

ಧರ್ಮಾರ್ಥ! ಧರ್ಮಾರ್ಥ!!

ಕಾಮ ಶಾಸ್ತ್ರ

ಆರೋಗ್ಯಕ್ಕೆ, ಭಾಗ್ಯಕ್ಕೆ, ಅಭಿವೃದ್ಧಿಗೆ ದಾರಿತೋರಿಸುವ ಗ್ರಂಥ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

ಆತಂಕನಿಗ್ರಹ ಔಷಧಾಲಯ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

52—27

ಕೊಡಗು.

ಸನ್ ೧೯೨೯ನೇ ಇಸವಿ
ಫೆಬ್ರವರಿ ತಾ. ೮ನೇ ಶುಕ್ರವಾರ.

ಕಾಂಗ್ರೆಸ್ ಚಳವಳ.

ಹಿಂದುಸ್ಥಾನಕ್ಕೆ ಆದಷ್ಟು ಬೇಗನೆ ಸ್ವರಾಜ್ಯವನ್ನು ಪಡೆಯಲು ಎಡೆಬಿಡದೆ ಕೆಲಸ ಮಾಡುತ್ತಿರುವದು ಕಾಂಗ್ರೆಸ್ ಸಂಸ್ಥೆಯಾಗಿದೆ. ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸಿನಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಉಪನಿವೇಶಗಳ ಸ್ವಾತಂತ್ರ್ಯವನ್ನು ಒಂದು ವರ್ಷದೊಳಗೆ ಕೊಟ್ಟರೆ ಅಂಗೀಕರಿಸಬಹುದೆಂದೂ, ಹಾಗೆ ಕೊಡದೆ ಇದ್ದರೆ ಬರುವ ವರ್ಷ ಖಾಯಿದೆಭಂಗವನ್ನು ಕೈಕೊಂಡು ಸ್ವಾತಂತ್ರ್ಯವನ್ನು ಸ್ಥಾಪಿಸಬೇಕೆಂದೂ ತೀರ್ಮಾನಿಸಿರುವ ಸಂಗತಿ ಮೊದಲೇ ತಿಳಿಸಿರುತ್ತೇವೆ. 1929ನೇ ಇಸವಿ ಡಿಸೆಂಬರ್ ತಿಂಗಳು 31ರ ಒಳಗೆ ಸ್ವರಾಜ್ಯ ಸಿಕ್ಕಬೇಕಾದರೆ ದೇಶದೊಳಗೆ ಕೆಲವು ಕಾರ್ಯಗಳನ್ನು ನಡಿಸುತ್ತಿರಬೇಕೆಂತ ನಿಶ್ಚೈಸಿದ್ದಾರೆ. ಸ್ವರಾಜ್ಯ ಬೇಕೆಂತ ಠರಾವು ಮಂಜೂರು ಮಾಡಿಕೊಂಡ ಮಾತ್ರಕ್ಕೆ ಸ್ವರಾಜ್ಯ ಸಿಕ್ಕಲಾರದು. ದೇಶದೊಳಗೆ ಒಗ್ಗಟ್ಟು ಹೆಚ್ಚಿಸಲಿಕ್ಕೂ, ದೇಶದ ಬಡತನಕ್ಕೆ ಕಾರಣಗಳಾದ ಪರದೇಶೀ ಬಟ್ಟೆ ಮತ್ತು ಕುಡುಕತನ ಇವುಗಳನ್ನು ಬಿಡಲೂ ಪ್ರಯತ್ನಿಸಬೇಕೆಂತಲೂ ತೀರ್ಮಾನಿಸಿರುತ್ತಾರೆ. ಕಾಂಗ್ರೆಸಿನ ಕಾರ್ಯಕ್ರಮವನ್ನು ಜಾರಿ ಮಾಡಲು ತಕ್ಕ ರೀತಿಯನ್ನು ನಿಶ್ಚೈಸಲು ಕಾಂಗ್ರೆಸಿನ ಕಾರ್ಯಕಾರೀಮಂಡಲಿಯು ಕೆಲವರನ್ನು ನೇಮಿಸಲಾಯಿತು. ಈ ಮಂಡಲಿಯ ಕೋರಿಕೆ ಮೇರೆ ಮಹಾತ್ಮ ಗಾಂಧಿಯವರು ಪರದೇಶೀ ಬಟ್ಟೆಯ ಬಹಿಷ್ಕಾರವನ್ನು ಸಾಧಿಸುವ ರೀತಿಯನ್ನು ತಯಾರಿಸಿರುವರು. ಅದನ್ನು ಕಳೆದ ವಾರ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವು. ಅದರ ಮುಖ್ಯ ಅಂಶಗಳನ್ನು ಕಾರ್ಯಕಾರೀ ಮಂಡಲಿಯು ಅಂಗೀಕರಿಸಿದೆಯೆಂತ ಈ ವಾರ ತಿಳಿದು ಬಂದಿದೆ.

ಆದರೆ ಪರದೇಶೀ ಬಟ್ಟೆ ಬಹಿಷ್ಕಾರವನ್ನೂ ಇತರ ಕಾರ್ಯಗಳನ್ನಾಗಲೀ ಜಾರಿ ಮಾಡಲಿಕ್ಕೆ ಮಹಾತ್ಮ ಗಾಂಧಿಯವರು ಒತ್ತಿ ಹೇಳಿರುವಂತೆ ಕಾಂಗ್ರೆಸ್ ಸಂಸ್ಥೆಗಳು ಸುಧಾರಿಸಲ್ಪಡಬೇಕು. ಜೀವವಿರುವ ಕಾಂಗ್ರೆಸ್ ಸಂಸ್ಥೆಗಳಾಗಬೇಕು. ನಮ್ಮ ದೇಶದಲ್ಲಿ ಸಾರ್ವಜನಿಕ ವಿಷಯಗಳನ್ನು ಯೋಚನೆಗೆ ತೆಗೆದುಕೊಂಡು ದೇಶದ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಜಮೀನ್ದಾರರ ಸಂಘವು ಕೆಲಸ ಮಾಡುತ್ತಿದ್ದರೂ ಅಖಿಲ ಹಿಂದುಸ್ಥಾನದ ರಾಜಕೀಯ ಜೀವನದ ಪ್ರವಾಹದಲ್ಲಿ ಸೇರಬೇಕಾದರೆ ಕಾಂಗ್ರೆಸ್ ಸಂಸ್ಥೆಯನ್ನು ನಮ್ಮ ದೇಶದಲ್ಲೂ ಬಲಪಡಿಸಲೇ ಬೇಕು. ನಮ್ಮ ದೇಶಕ್ಕೆ ಇರುವ ರಾಜಕೀಯ ಮೊರೆಹಾಡುಗಳನ್ನು ಮಾತ್ರ ಜಮೀನ್ದಾರರ ಸಂಘವು ಕೇಳುತ್ತಿರುವದಾಗಿದೆ. ಆದರೆ ಈ ದೇಶವು ಸ್ವರಾಜ್ಯಕ್ಕೆ ಹೋರಾಡಿದರೂ ಒಟ್ಟು ಹಿಂದುಸ್ಥಾನಕ್ಕಿಂತ ಮುಂಚೆ ಸಿಕ್ಕಲಾರದು. ಒಟ್ಟು ಹಿಂದುಸ್ಥಾನವು ಒಗ್ಗಟ್ಟಾಗಿದೆಯೆಂದೂ, ಸ್ವರಾಜ್ಯ ಸಂಪಾದನೆಗೆ ಪ್ರತಿಯೊಂದು ಪ್ರಾಂತ್ಯವೂ ತನ್ನ ಪೂರ್ತಿ ಭಾಗವನ್ನು ವಹಿಸಿಕೊಳ್ಳುತ್ತದೆಯೆಂದೂ ತೋರಿಸದಿದ್ದರೆ ಸ್ವರಾಜ್ಯವನ್ನು ಕೊಡದೆ ಇರಲು ನೆವನಗಳನ್ನು ಹೇಳಲಿಕ್ಕೆ ಬ್ರಿಟಿಷ್ ಜನಾಂಗಕ್ಕೆ ಅವಕಾಶ ಸಿಕ್ಕುತ್ತದೆ. ಅಲ್ಲದೆ ಆಯಾ ಪ್ರಾಂತ್ಯವು ತನ್ನ ತನ್ನ ಪ್ರದೇಶದೊಳಗಿನ ಕಾರ್ಯವನ್ನು ಮಾತ್ರ ಮಾಡುತ್ತಾ ಕೂತರೆ ಒಟ್ಟು ಹಿಂದುಸ್ಥಾನದ ಕೆಲಸ ಮಾಡುವವರು ಯಾರೂ ಇಲ್ಲವಾಗುತ್ತಾರೆ. ತಮ್ಮ ತಮ್ಮ ಪ್ರಾಂತೀಯ ಕಷ್ಟ ನಿವಾರಣೆಗೆ ಕೆಲಸ ಮಾಡುತ್ತಿರುವಾಗಲೇ ಒಟ್ಟು ಹಿಂದುಸ್ಥಾನಕ್ಕೆ ಸಂಬಂಧಪಡುವ ವಿಷಯಗಳನ್ನು ಸಾಧಿಸಲು ಸಹ ಗಮನ ಕೊಡಲೇ ಬೇಕು. ಆದ್ದರಿಂದ ನಮ್ಮ ದೇಶದಲ್ಲೂ ಸಹ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವ ಅವಶ್ಯಕತೆ ಇದೆ.

ಬೆಳಗ್ಗಾಂ ಕಾಂಗ್ರೆಸ್ ನಡೆದಂದಿನಿಂದ ನಮ್ಮ ದೇಶದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸುವ ಪ್ರಯತ್ನವು ಕೆಲವು ಮಟ್ಟಿಗೆ ನಡೆಯಿತು. 1927ರಲ್ಲಿ ಕಾಂಗ್ರೆಸಿಗೆ ಸೇರಿದ ಸದಸ್ಯರ ಸಂಖ್ಯೆ ಸುಮಾರು 400ಕ್ಕೆ ತಲಪಿತು. 1928ರಲ್ಲಿ ಈ ಸಂಖ್ಯೆಗೆ ತಲಪಲಿಲ್ಲ. ಮಾತ್ರವಲ್ಲ ಕಾಂಗ್ರೆಸ್ ಸದಸ್ಯರು ಆಗಾಗ್ಯೆ ಮೀಟಿಂಗ್ ಮಾಡಲಿಲ್ಲ. ಇನ್ನು ಮೇಲೆ ಈ ರೀತಿ ಮಾಡಬಾರದು. ದೇಶದ ಜನರ ಮನಸ್ಸಿಗೆ ಸ್ವರಾಜ್ಯ ಸಾಧನೆಯ ಧ್ಯೇಯವು ಚೆನ್ನಾಗಿ ನಾಟಬೇಕಾದರೆ, ಕಾಂಗ್ರೆಸ್ಸಿನ ವಿಷಯ ತಿಳಿದುಕೊಂಡು ಅದರ ತೀರ್ಮಾನಗಳನ್ನು ಜಾರಿ ಮಾಡಲು ಮನಸ್ಸು ಹುಟ್ಟುವಂತೆ ಮಾಡಬೇಕಾದರೆ ಕಾಂಗ್ರೆಸ್ಸಿನ ಸದಸ್ಯರಾಗಬೇಕೆಂತ ಜನರನ್ನು ಕೇಳಿಕೊಳ್ಳುವದು ಉತ್ತಮ ಮತ್ತು ಸುಲಭ ಉಪಾಯವಾಗಿದೆ. ಕಾಂಗ್ರೆಸ್ಸಿನ ಸದಸ್ಯರಾಗಬೇಕಾದರೆ ಬರೀ ನಾಲ್ಕಾಣೆ ಚಂದಾ ಕೊಟ್ಟರಾಯಿತು. ಆದರೆ ನಾಲ್ಕಾಣೆ ಕೊಡುವದಕ್ಕಿಂತ ಮುಖ್ಯ ವಿಷಯ ಇನ್ನೊಂದು ಇದೆ. ಹಿಂದುಸ್ಥಾನಕ್ಕೆ ಎಲ್ಲಾ ಶಾಂತ ಮತ್ತು ಯುಕ್ತ ರೀತಿಯಿಂದ ಸ್ವರಾಜ್ಯ ಸಂಪಾದಿಸಬೇಕೆಂಬ ಕಾಂಗ್ರೆಸ್ಸಿನ ಧ್ಯೇಯವನ್ನು ಒಪ್ಪುತ್ತೇನೆಂತ ಸಹಿ ಮಾಡಿ ಕೊಡಬೇಕು. ಆದ್ದರಿಂದ ಎಷ್ಟು ಜನರು ಕಾಂಗ್ರೆಸ್ಸಿನ ಸದಸ್ಯರಾಗುತ್ತಾರೋ ಅಷ್ಟು ಜನರು ಸ್ವರಾಜ್ಯ ಸಂಪಾದನೆಗೆ ದೃಢ ಸಂಕಲ್ಪ ಮಾಡಿರುತ್ತಾರೆಂತ ಪ್ರಕಟವಾಗುತ್ತದೆ. ಆದ್ದರಿಂದ ನಮ್ಮ ದೇಶದಲ್ಲಿ ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವ ಕೆಲಸವನ್ನು ದೇಶ ಹಿತೈಷಿಗಳು ಕೂಡಲೆ ಕೈಕೊಳ್ಳಬೇಕು.

ಕಾಂಗ್ರೆಸ್ಸಿನ ಧ್ಯೇಯವನ್ನೂ, ಸಂಪೂರ್ಣವಾಗಿ ಕಾಂಗ್ರೆಸ್ಸಿನ ಕಾರ್ಯಗಳನ್ನೂ ಸಾಧಿಸುವ ಜನರು ದೇಶದಲ್ಲಿ ಹೆಚ್ಚಿದ ವಿನಹ ಹಿಂದೂಸ್ಥಾನಕ್ಕೂ ಅದರ ಸಂಗಡವೇ ನಮ್ಮ ದೇಶಕ್ಕೂ ಸ್ವರಾಜ್ಯ ಸಿಕ್ಕುವದು ಸಾಧ್ಯವಿಲ್ಲ. ಪರದೇಶೀ ಬಟ್ಟೆ ಬಹಿಷ್ಕಾರವು ಈ ವರ್ಷದ ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಮುಖ್ಯ ಅಂಶವಾಗಿದೆ. ಈ ಸಾಧನೆಯು ಸಫಲವಾಗಬೇಕಾದರೆ ಖಾದಿಬಟ್ಟೆಯ ಉಪಯೋಗವು ಹೆಚ್ಚಬೇಕು. ಈ ಕಾರ್ಯಕ್ರಮದ ಎರಡು ರೂಪದಿಂದ ಸ್ವರಾಜ್ಯ ಸಾಧನೆಯು ಸುಲಭವಾಗುತ್ತದೆ, ಮತ್ತು ಸಾಂಪತ್ತಿಕ ದೃಷ್ಟಿಯಿಂದ ಪ್ರಯೋಜನಕಾರಿಯೂಗುತ್ತದೆ. ಹಿಂದುಸ್ಥಾನವನ್ನು ಬ್ರಿಟಿಷರು ಹಿಂದೀಯರಿಗೆ ಬಿಟ್ಟು ಕೊಡದೆ ಇರಲು ಮುಖ್ಯಕಾರಣವು ಯಾವದೆಂದರೆ—ಅವರು ತಯಾರಿಸುವ ಮಾಲುಗಳ ಮಾರಾಟಕ್ಕೆ ಹಿಂದೂಸ್ಥಾನವು ಉತ್ತಮ ಸ್ಥಳವಾಗಿದೆ. ಅಂಥಾ ವ್ಯಾಪಾರದ ಪೈಕಿ ಬಟ್ಟೆಯೇ ಮುಖ್ಯವಾದದ್ದಾಗಿದೆ. ಅಂಥಾ ಬಟ್ಟೆಯನ್ನು ಹಿಂದೀಯರೇ ತಯಾರಿಸಿಕೊಂಡರೆ ಹಿಂದುಸ್ಥಾನವನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳಲು ಇರುವ ಮುಖ್ಯ ಉದ್ದೇಶವು ತಪ್ಪಿಹೋಗುತ್ತದೆ. ಆಗ ಬ್ರಿಟಿಷರು ಹಿಂದೀಯರೊಂದಿಗೆ ರಾಜಿಗೆ ಬಂದು ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡುವರು. ಖಾದಿಯ ಉಪಯೋಗದಿಂದ ದೇಶದ ಬಡ ಜನರಿಗೆ ಪ್ರಯೋಜನವಾಗುತ್ತದೆ. ಹಿಂದುಸ್ಥಾನದ ಜನರಿಗೆ ಕೆಲಸವಿಲ್ಲದೆ ಇರುವಾಗ ತಮ್ಮ ಮನೆಗಳಲ್ಲೇ ಇದ್ದು ಒಂದು ಹೊತ್ತಿಗಾದರೂ ಬೇಕಾದ ಅನ್ನ ಸಂಪಾದಿಸಿಕೊಳ್ಳಲು ಅನುಕೂಲಕೊಡುವುದಕ್ಕೆ ಕೈನೂಲು ಕಸಬಿನಷ್ಟು ಸಹಾಯಕರವಾದದ್ದು ಬೇರೊಂದೂ ಇಲ್ಲವೆನ್ನಬಹುದು. ಈ ರೀತಿ ಎರಡು ಬಗೆಯಿಂದ ಪ್ರಯೋಜನವಾಗುವ ಖಾದಿ ಪ್ರಚಾರದ ಕೆಲಸದಲ್ಲಿ ಜನರಿಗೆ ಉತ್ಸಾಹ ಹುಟ್ಟಬೇಕಾದರೆ ಕಾಂಗ್ರೆಸ್ ಕೆಲಸಗಾರರಿಂದ ಆಗಬೇಕು.

ನಿಶಾ ನಿಷೇಧ ಅಸ್ಪೃಶ್ಯತಾ ನಿವಾರಣೆಯ ಕೆಲಸಗಳು ಜಮೀನ್ದಾರರ ಸಂಘದ ಕಾರ್ಯಕ್ರಮಕ್ಕೆ ಸೇರಿದರೂ ಕಾಂಗ್ರೆಸ್ಸಿನಲ್ಲಿ ಅಭಿರುಚಿ ಹುಟ್ಟಿ ಕಾಂಗ್ರೆಸ್ ಸದಸ್ಯರೆಂಬ ಭಾವನೆಯಿಂದ ಕೆಲಸ ಪ್ರಾರಂಭವಾದರೇನೇ ಈ ಕೆಲಸಗಳು ಹೆಚ್ಚು ಉತ್ಸಾಹದಿಂದ ಮುಂದೆ ಸಾಗೀತೆಂಬದರಲ್ಲಿ ಸಂಶಯವಿಲ್ಲ.

ಬ್ರಿಟಿಷರು ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡಲು ಕೊಟ್ಟಿರುವ ಒಂದು ವರ್ಷ ವಾಯಿದೆಯಲ್ಲಿ ಈಗಾಗಲೇ ಒಂದು ತಿಂಗಳು 7 ದಿನಗಳು ಕಳೆದು ಹೋದವು. ಇನ್ನೂ ಕೆಲಸವೇನೂ ನಮ್ಮ ದೇಶದಲ್ಲಿ ಪ್ರಾರಂಭವಾಗಿರುವದಿಲ್ಲ. ಕಾಂಗ್ರೆಸ್ಸಿನ ಮುಂದಾಳುಗಳು ಒಂದೇ ವರ್ಷ ಸ್ವರಾಜ್ಯ ಸಂಪಾದನೆಗೆ ನಿಶ್ಚೈಸಿರುತ್ತಾರೆ. ಅವರು ಅದನ್ನು ಹೇಗೆ ಪಡೆಯುತ್ತಾರೆಂತ ಆಶೆಯಿಂದ ನೋಡುತ್ತಿದ್ದರೂ ಆಗಲಿಲ್ಲ. ಸಾಧಿಸಲು ಕೈಲಾಗದ ತೀರ್ಮಾನವನ್ನು ಮಾಡಿಕೊಂಡಿರುತ್ತಾರೆ ಎಂತ ಟೀಕಿಸುತ್ತಿದ್ದರೂ ಆಗಲ್ಲ. ಕಾಂಗ್ರೆಸ್ಸಿನವರು ತೀರ್ಮಾನಿಸಿಕೊಂಡಿರುವ ಕಾರ್ಯಗಳಲ್ಲಿ ಭಾಗಿಗಳಾಗಬೇಕಾದದ್ದು ಪ್ರತಿಯೊಬ್ಬ ಹಿಂದೀ ನಿವಾಸಿಯ ಕರ್ತವ್ಯವಾಗಿದೆ. ದೇವರ ಮೇಲೆ ಭರವಸೆ ಇಟ್ಟು ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಮಾಡಲೇಬೇಕು. ಬ್ರಿಟಿಷರು ಅವರ ಸಾಮ್ರಾಜ್ಯವನ್ನು ಸಂಪಾದಿಸಲು, ಅವರ ಜನಾಂಗದವರು ಎಷ್ಟೊಂದು ತ್ಯಾಗವೂ ಮಾಡಿದ್ದಾರೆ, ಕಷ್ಟಪಟ್ಟಿದ್ದಾರೆ, ಎಷ್ಟೊಂದು ಜನರು ತಮ್ಮ ಜೀವವನ್ನೇ ಕೊಟ್ಟಿರುವರು. ಆದ್ದರಿಂದ ಕಳಕೊಂಡ ನಮ್ಮ ಸ್ವಾತಂತ್ರ್ಯವನ್ನು ಪಡಕೊಳ್ಳಬೇಕಾದರೆ ಹಿಂದುಸ್ಥಾನದ ಜನರು ತುಂಬಾ ತ್ಯಾಗಮಾಡಬೇಕು. ಜೀವವನ್ನಾದರೂ ಕೊಡಲು ತಯಾರಿರಬೇಕು. ಆದರೆ ಈಗ ತತ್ಕಾಲ ಅಷ್ಟೊಂದು ತ್ಯಾಗವನ್ನೇನೂ ನಿರೀಕ್ಷಿಸುವದಿಲ್ಲ. ನೋಟದ ಯಾ ನಯದ ಅಥವಾ ಸ್ವಲ್ಪಬೆಲೆ ಕಡಿಮೆ ಎಂಬ ಕಾರಣದಿಂದ ಪರದೇಶೀ ಬಟ್ಟೆಯನ್ನು ತೆಗೆದುಕೊಳ್ಳುವದನ್ನು ಬಿಟ್ಟು ಕೈನೂಲು ಬಟ್ಟೆಯನ್ನೇ ಉಪಯೋಗಿಸಿದರೆ ಸಾಕಾಗಿದೆ. ಕುಡುಕತನವನ್ನು ಬಿಟ್ಟರೆ ಸಾಕಾಗಿದೆ. ಜಾತಿ ಮಾತ್ಸರ್ಯಗಳನ್ನು ಬಿಟ್ಟು ಅಸ್ಪೃಶ್ಯತೆಯೆಂಬ ಹಿಂದೂ ಧರ್ಮಕ್ಕೆ ಇರುವ ಕಳಂಕವನ್ನು ತೆಗೆದು ಹಾಕಿದರೆ ಸಾಕಾಗಿದೆ. ಈ ಕಾರ್ಯಗಳು ಅತಿ ಸುಲಭವಾಗಿವೆ. ಇದನ್ನು ಕೈಲಾದಮಟ್ಟಿಗೆ ಎಲ್ಲರೂ ಸಾಧಿಸಬೇಕೆಂತ ಅತಿ ವಿನಯದಿಂದ ಕೇಳಿಕೊಳ್ಳುತ್ತೇವೆ. ಈ ಕೆಲಸಗಳು ಸುಲಭವಾಗಿದ್ದರೂ ಫಲವು ಬಹಳ ಮಹತ್ವವಿರುವದಾಗಿದೆ. ಮುಂದಾಳುಗಳು ಸ್ವರಾಜ್ಯ ಸಂಪಾದನೆಗಾಗಿ ನಿರ್ಧರಿಸಿರುವ ಕೆಲಸವನ್ನು ಮಾಡಿದರೆ ಸ್ವರಾಜ್ಯದ ಅಭಿಲಾಷೆಯನ್ನು ದೇಶದ ಮೂಲೆ ಮೂಲೆಯಲ್ಲಿ ತುಂಬಿದಂತಾಗುತ್ತದೆ

ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಅನೇಕ ಪ್ರಾಂತ್ಯಗಳು ಪ್ರಾರಂಭಿಸಿವೆ. ಕರ್ನಾಟಕ ಪ್ರಾಂತೀಕ ಕಮಿಟಿಯು ಇನ್ನೂ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಿರುವಂತೆ ಕಾಣುವದಿಲ್ಲ. ಶೀಘ್ರದಲ್ಲೇ ತೀರ್ಮಾನಿಸಿಯಾರು. ಹೇಗೂ ಮೇಲೆ ನಾವು ವಿವರಿಸಿರುವ ಕೆಲಸವನ್ನು ಕೈಕೊಳ್ಳಲು ಯಾರ ತೀರ್ಮಾನವನ್ನೂ ನಿರೀಕ್ಷಿಸಬೇಕಾಗಿಲ್ಲ

ಕಾಂಗ್ರೆಸಿನ ಕೆಲಸಮಾಡಲು ಸ್ವಯಂಸೇವಕರು ಬೇಕು. ದೇಶವು ಪರಾಧೀನದಲ್ಲಿದ್ದು ಕಷ್ಟಪಡುತ್ತಿರುವದು ಜನರ ಮನಸ್ಸಿಗೆ ಸರಿಯಾಗಿ ಹೊಕ್ಕಿದರೆ ಸ್ವಯಂಸೇವಕರು ದೊರೆಯಲು ಕಷ್ಟವಾಗಲಾರದು. ಪ್ರಜಾಜನರು ತಮ್ಮ ಕಷ್ಟನಿವಾರಣೆಯನ್ನು ಮಾಡಿಕೊಳ್ಳಲು ಇಷ್ಟಷ್ಟು ಸ್ವಾರ್ಥತ್ಯಾಗಿಗಳಾಗುತ್ತಾರೆ. ಒಟ್ಟು ದೇಶದ ಪಾರತಂತ್ರ್ಯದ ದುಃಖನಿವಾರಣೆಯಾಗಿ ಹೆಚ್ಚಿನ ಜನರಿಗೆ ಸುಖದೊರೆಯಬೇಕಾದರೆ ಪ್ರತಿಯೊಬ್ಬ ಮನುಷ್ಯನೂ ಸಾರ್ವಜನಿಕ ವಿಷಯದಲ್ಲಿ ಸ್ವಲ್ಪವಾದರೂ ಯೋಚಿಸಿ ತನ್ನಿಂದ ಸಾಧ್ಯವಿರುವಷ್ಟು ಕೆಲಸಮಾಡಲೇ ಬೇಕು. ಪರಕೀಯ ಜನಾಂಗದ ಅಧೀನದಿಂದ ತಪ್ಪಿಸಿಕೊಂಡರೆ ಪ್ರಜಾಜನರ ಗೋಳು ಬಹುಮಟ್ಟಿಗೆ ಕಡಿಮೆಯಾದೀತೆಂತ ಜನರಿಗೆ ಗೊತ್ತಾದರೆ ಕೆಲಸಗಾರರು ಕಡಿಮೆಯಾಗಲಾರರು. ದೇಶದ ಗೌರವವನ್ನು ಉಳಿಸಿಕೊಳ್ಳಬೇಕಾದರೆ ಪರದಾಸ್ಯವನ್ನು ಒಂದು ನಿಮಿಷವಾದರೂ ತಡಮಾಡದೆ ತಪ್ಪಿಸಿಕೊಳ್ಳಬೇಕು.

ವಿಷಾದ.

ಕಳೆದ ಜನವರಿ ತಿಂಗಳ 25ರ ಸಂಚಿಕೆಯಲ್ಲಿ ಕೊಡಗಿನ 1927—28 ನೇ ವರ್ಷದ ಆಡಳಿತ ವರದಿಯನ್ನು ಕುರಿತು ಅಗ್ರಲೇಖನ ಬರೆದಾಗ, ಸರಕಾರದವರು ಸದರಿ ವರದಿಯ ಪ್ರತಿಯೊಂದನ್ನು ಪತ್ರಿಕೆಗೆ ಕಳುಹಿಸಲಿಲ್ಲವೆಂದೂ, ಹಾಗೆ ಮಾಡುವದು ಸರಿಯಲ್ಲವೆಂದೂ ಖಂಡಿತವಾಗಿ ಅವರ ವರ್ತನೆಯ ಮೇಲೆ ಟೀಕಿಸಿದ್ದೆವು. ಇದನ್ನು ನೋಡಿದ ಕಮಿಷನರವರು ವರದಿಯ ಒಂದು ಪ್ರತಿಯು ನಮಗೆ ಕಳುಹಿಸಲಾಗಿದೆ ಎಂದು ಬರೆದು ತಿಳಿಸಿದರು. ವಿಚಾರಿಸಿ ನೋಡುವಾಗ್ಯೆ ನಮ್ಮ ಗೈರು ಹಾಜರಿನಲ್ಲಿ ನಮ್ಮ ಆಫೀಸಿನ ಸಿಬ್ಬಂದಿಯವರಲ್ಲಿ ಒಬ್ಬರು ಸಮಗಾಗಿ ಅದನ್ನು ಹೊಂದಿಕೊಂಡಿದ್ದರೆಂದು ತಿಳಿಯಬಂತು. ಇದುವರೆಗಿಂದ ಪತ್ರಿಕೆಗೆ ಇಷ್ಟು ವರ್ಷಗಳಂತೆ ಸರಕಾರದವರು ವರದಿಯನ್ನು ಕಳುಹಿಸಲಿಲ್ಲವೆಂದು ತಪ್ಪು ತಿಳುವಳಿಕೆಯ ಮೇಲೆ ಟೀಕಿಸಿದಕ್ಕೆ ವಿಷಾದಿಸುತ್ತೇವೆ. ಆದರೆ ಸರಕಾರದವರು ಈ ವರ್ಷವಾದರೂ ಸಾರ್ವಜನಿಕ ಅಭಿಪ್ರಾಯಗಳನ್ನು ಸೂಚಿಸುವ ಪತ್ರಿಕೆಗಳಿಗೆ ಬೆಲೆ ಕೊಟ್ಟು ಸರ್ಕಾರಿ ವರದಿಯನ್ನು ಕಳುಹಿಸುವ ಪದ್ಧತಿಯನ್ನು ಕೈಕೊಂಡದ್ದಕ್ಕೆ ಸಂತೋಷಪಡುತ್ತೇವೆ. ಇನ್ನು ಮುಂದಕ್ಕೆ ಎಲ್ಲಾ ತರಹದ ಸರ್ಕಾರಿ ವರದಿಗಳ ವಿಷಯದಲ್ಲಿಯೂ ಈ ಪದ್ಧತಿಯನ್ನು ನಡಿಸಿಯಾರಾಗಿ ಆಶಿಸುತ್ತೇವೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

೫ನೇ ಭಾಗದಲ್ಲಿ ೨೫ನೇ ಪ್ರಕರಣ.

ಖೇಡಾ ಸತ್ಯಾಗ್ರಹವು ಮುಗಿದುದು.

ಸತ್ಯಾಗ್ರಹ ಕದನದ ಅಂತ್ಯವು ಅನಿರೀಕ್ಷಿತವಾಗಿ ಒದಗಿತು. ಜನರು ಬಸವಳಿದು ಬಿಟ್ಟಿದ್ದರೆಂಬುದು ಸ್ಪಷ್ಟವಾಗಿದ್ದಿತು. ಅತಿ ದೃಢರಾಗಿದ್ದವರನ್ನು ನುಗ್ಗಿ ತೀರ ಹಾಳಾಗಿ ಹೋಗುವುದಕ್ಕೆ ಅವರನ್ನು ಬಿಡಲು ನಾನು ಹಿಂಜರಿದೆನು. ಸತ್ಯಾಗ್ರಹಿಯು ಒಪ್ಪಿಗೆಗೆ ಅರ್ಹವಾದ ಗೌರವದಾಯಕವಾದ ಒಂದು ಒಳ್ಳೆ ಮಾರ್ಗವನ್ನು ನಾನು ಹುಡುಕುತ್ತಿದ್ದೆನು. ಇಂತಹುದೊಂದು ಕೇವಲ ಅನಿರೀಕ್ಷಿತವಾಗಿ ಲಭಿಸಿತು. ನಡಿಯಾದ ತಾಲ್ಲೂಕಿನ ಮಾಮಲೇದಾರರು ಸ್ವತಂತ್ರರಾದ ರೈತರು ಹಣವನ್ನು ಕೊಟ್ಟರೆ ಬಡ ರೈತರಿಂದ ವಸೂಲಿ ಮಾಡುವುದಿಲ್ಲವಾಗಿ ನನಗೆ ಹೇಳಿ ಕಳುಹಿಸಿದರು. ಇದನ್ನು ಬರಹದಲ್ಲಿ ಕೊಡಬೇಕೆಂದು ಕೇಳಲು ಅವರು ಹಾಗೆಯೇ ಮಾಡಿದರು. ಆದರೆ ಮಾಮಲೇದಾರರ ಜವಾಬ್ದಾರಿಯು ತಮ್ಮ ತಾಲ್ಲೂಕಿಗೆ ಮಾತ್ರ ಅನ್ವಯಿಸುತ್ತಿದ್ದುದರಿಂದಲೂ, ಜಿಲ್ಲಾಧಿಕಾರಿಗಳು ಇಡೀ ಜಿಲ್ಲೆಯ ಎಲ್ಲಾ ಭಾಗಗಳ ಸಂಬಂಧವಾಗಿ ಮಾತುಕೊಡುವ ಅಧಿಕಾರವುಳ್ಳವರಾಗಿದ್ದುದರಿಂದಲೂ ನಾನು ಮೇಲೆ ತಿಳಿಸಿದ ಏರ್ಪಾಟು ಜಿಲ್ಲೆಗೆಲ್ಲಾ ಅನ್ವಯಿಸುವುದೆ, ಇಲ್ಲವೆ ಎಂದು ಜಿಲ್ಲಾಧಿಕಾರಿಗಳಿಗೆ ಬರೆದೆನು. ಅದಕ್ಕೆ ಅವರು ಆ ರೀತಿಯ ಆಜ್ಞೆಯು ಎಲ್ಲಾ ಕಡೆಗೂ ಆಗಲೇ ಹೋಗಿದ್ದಿತೆಂದು ಉತ್ತರವಿತ್ತರು. ನನಗೆ ಇದು ಗೊತ್ತಿರಲಿಲ್ಲ. ಆದರೆ ಅದು ನಿಜವಾಗಿದ್ದರೆ ಜನರ ಪ್ರತಿಜ್ಞೆಯು ಪೂರ್ಣವಾಗಿ ನೆರವೇರಿದಂತಾಯಿತು. ನಮ್ಮ ಪ್ರತಿಜ್ಞೆಯ ಉದ್ದೇಶವೂ ಇದೇ ಆಗಿದ್ದಿತೆಂದು ನಾವು ನೆನಪಿಸುವುದು. ಆದುದರಿಂದ ನಾವು ಈ ಆಜ್ಞೆಯಿಂದ ನಮಗೆ ತೃಪ್ತಿಯಾಯಿತೆಂದು ವ್ಯಕ್ತಪಡಿಸಿದೆವು.

ಆದರೆ ಈ ಮುಕ್ತಾಯದಿಂದ ನನಗೆ ಸಂತೋಷವೇನೂ ಉಂಟಾಗಲಿಲ್ಲ. ಏಕೆಂದರೆ—ಪ್ರತಿಯೊಂದು ಸತ್ಯಾಗ್ರಹ ಯುದ್ಧದ ಕೊನೆಯಲ್ಲಿಯೂ ಇರಬೇಕಾದ ಮಾಧುರ್ಯವು ಇದರಲ್ಲಿರಲಿಲ್ಲ. ಜಿಲ್ಲಾಧಿಕಾರಿಗಳು ತಾವು ಯಾವ ಒಪ್ಪಂದವನ್ನೂ ಮಾಡಿಕೊಳ್ಳದವರಂತೆ ವರ್ತಿಸಿದರು. ಬಡವರ ಕಂದಾಯವನ್ನು ಕೊಡಿಸುವುದಿಲ್ಲವೆಂದು ಆಜ್ಞೆಯಾಗಿದ್ದರೂ ಆದರೆ ಇದರಿಂದ ಅತ್ಯಲ್ಪ ಮಂದಿಗೆ ಮಾತ್ರ ಅನುಕೂಲವಾಯಿತು. ಯಾರು ಬಡವರೆಂಬುದನ್ನು ನಿರ್ಧರಿಸುವುದು ಜನರ ಅಧಿಕಾರವಾಗಿದ್ದಿತು. ಆದರೆ ಅವರು ಅದನ್ನು ನಡೆಸಲಾಗಲಿಲ್ಲ. ಅದನ್ನು ನಡೆಸುವ ಧೈರ್ಯವು ಅವರಲ್ಲಿಲ್ಲವೆಂದು ನಾನು ದುಃಖಿತನಾದೆನು. ಆದುದರಿಂದ ಈ ಯುದ್ಧದ ಸಮಾಪ್ತಿಯನ್ನು ಸತ್ಯಾಗ್ರಹದ ವಿಜಯವೆಂದು ಜನರು ವಿಜೃಂಭಿಸಿ ಪಟ್ಟರಾದರೂ ನಾನು ಅದರಲ್ಲಿ ಉತ್ಸಾಹಗೊಳ್ಳುವಂತಿರಲಿಲ್ಲ. ಏಕೆಂದರೆ—ಪೂರ್ಣ ವಿಜಯದ ಮುಖ್ಯಾಂಗಗಳು ಇದರಲ್ಲಿರಲಿಲ್ಲ.

ಸತ್ಯಾಗ್ರಹಿಗಳು ಆರಂಭದಲ್ಲಿದ್ದುದಕ್ಕಿಂತ ಅಂತ್ಯದಲ್ಲಿ ಹೆಚ್ಚು ಶಕ್ತಿಸಂಪನ್ನರೂ, ತೇಜಸ್ವಿಗಳೂ ಆಗಿ ಕಂಡುಬಂದರೆ ಆಗಲೇ ಸತ್ಯಾಗ್ರಹ ಯುದ್ಧವು ಯೋಗ್ಯವಾದುದೆಂದು ಹೇಳಬಹುದು.

ಹೀಗೆಂದವರೂ ಅದರಿಂದ ಅಪ್ರತ್ಯಕ್ಷವಾದ ಪರಿಣಾಮಗಳಾಗದೆ ಇರಲಿಲ್ಲ. ಇವು ಈಗ ನಮ್ಮ ಗೋಚರಕ್ಕೆ ಬರುತ್ತಿವೆ. ಇವುಗಳ ಫಲವನ್ನು ನಾವು ಇಂದು ಸವಿಯುತ್ತಿದ್ದೇವೆ. ಖೇಡಾ ಸತ್ಯಾಗ್ರಹವೇ ಗುಜರಾತಿನ ರೈತರ ಜಾಗೃತಿಯ ಉದಯದ ಚಿಹ್ನೆ, ಅದೇ ಜನರ ನಿಜವಾದ ರಾಜಕೀಯ ಶಿಕ್ಷಣದ ಅಕ್ಷರಾಭ್ಯಾಸ.

ಡಾ. ಬೆಸಂಟರ 'ಹೋಮ್‌ರೂಲ್' ಚಳವಳಿಯು ರೈತರನ್ನು ಮುಟ್ಟಿದ್ದಿತೆಂಬುದೇನೋ ನಿಜ. ಆದರೆ ಖೇಡಾ ಸತ್ಯಾಗ್ರಹವೇ ಸುಶಿಕ್ಷಿತರಾದ ಸಾರ್ವಜನಿಕ ಸೇವಕರು ರೈತರ ಜೀವನದೊಂದಿಗೆ ಸಂಪರ್ಕವನ್ನು ಬೆಳೆಸುವಂತೆ ಮಾಡಿದುದು. ಇದರಿಂದ ಈ ರಾಷ್ಟ್ರಸೇವಕರು ತಾವೂ, ರೈತರೂ ಒಂದೇ ಎಂಬುದನ್ನು ಕಲಿತುಕೊಂಡರು. ತಮ್ಮ ಕರ್ತವ್ಯಕ್ಕೆ ಯೋಗ್ಯವಾದ ಕ್ಷೇತ್ರವು ಅವರಿಗೆ ದೊರಕಿತು. ಅವರ ತ್ಯಾಗಶಕ್ತಿಯು ಹೆಚ್ಚಿತು. ಶ್ರೀ ವಲ್ಲಭಭಾಯಿಯವರು ಈ ಕದನದಲ್ಲಿ ತಮ್ಮನ್ನು ತಾವು ಅರಿತುಕೊಂಡರೆಂಬುದೇನೂ ಅಲ್ಪ ಲಾಭವಲ್ಲ. ಕಳೆದ ವರ್ಷ ಗುಜರಾತಿನಲ್ಲಿ ಅತಿವೃಷ್ಟಿಯಿಂದ ಅನಾಹುತವಾದಾಗ ಜನರಿಗೆ ಸಹಾಯವೊದಗಿಸಿದಾಗಲೂ ಈ ವರ್ಷ ಬಾರ್ಡೋಲಿ ಸತ್ಯಾಗ್ರಹವು ನಡೆದಾಗಲೂ ಇದರ ಅಳತೆಯು ನನಗೆ ಗೊತ್ತಾಯಿತು. ಗುಜರಾತಿನ ಜನಜೀವನದಲ್ಲಿ ಹೊಸ ಕಳೆಯೂ, ಹುರುಪೂ ತುಂಬಿದುವು. ಅಲ್ಲಿನ ರೈತನಿಗೆ ತಾನು ಎಂದೂ ಮರೆಯದಂತೆ ತನ್ನ ಶಕ್ತಿಯ ಅರಿವುಂಟಾಯಿತು. ತನ್ನ ಮುಕ್ತಿಯು ತನ್ನ ಕೈಯಲ್ಲಿಯೇ ಇದೆ, ಮತ್ತು ತಮಗಿರುವ ಸಹನ ಶಕ್ತಿಯನ್ನೂ, ತ್ಯಾಗಶಕ್ತಿಯನ್ನೂ ಹೊಂದಿಕೊಂಡಿರುವುದೆಂಬ ಪಾಠವು ಎಂದೂ ಅಳಿಸಿ ಹೋಗದಂತೆ ಜನರ ಮನಸ್ಸಿನಲ್ಲಿ ನಿಂತಿತು. ಖೇಡಾ ಕದನದ ಮೂಲಕ ಸತ್ಯಾಗ್ರಹವು ಗುಜರಾತಿನ ನೆಲದಲ್ಲಿ ದೃಢವಾಗಿ ಬೇರೂರಿತು.

ಹೀಗೆ ನನಗೆ ಸತ್ಯಾಗ್ರಹದ ಪರಿಸಮಾಪ್ತಿಯಲ್ಲಿ ಸಂತಸಗೊಳ್ಳಲು ಏನೂ ಕಾಣಬರಲಿಲ್ಲವಾದರೂ ಖೇಡಾ ರೈತರು ಅತ್ಯುತ್ಸಾಹಗೊಂಡರು. ಏಕೆಂದರೆ—ತಮ್ಮ ಪ್ರಯತ್ನಕ್ಕೆ ತಕ್ಕ ಫಲವು ದೊರಕಿತೆಂದು ಅವರಿಗೆ ಗೊತ್ತಾಗಿದ್ದಿತು, ಮತ್ತು ದುಃಖನಿವಾರಣೆಗೆ ನಿಜವಾದ ಹಾಗೂ ಅಮೋಘವಾದ ಮಾರ್ಗವನ್ನು ಕಂಡುಹಿಡಿದಿದ್ದರು. ಅವರ ಉತ್ಸಾಹಕ್ಕೆ ಈ ಅರಿವು ಸಾಕಾದಷ್ಟು ಕಾರಣವಾಗಿದ್ದಿತು.

ಆದರೂ ಖೇಡಾ ರೈತರು ಸತ್ಯಾಗ್ರಹದ ಅಂತರ್ಯವನ್ನು ಪೂರ್ತಿ ತಿಳಿದುಕೊಂಡಿರಲಿಲ್ಲ. ಇದರ ಕಟು ಅನುಭವವು ಮುಂದೆ ಆಗಾಗ ಲಭಿಸುತ್ತಿತ್ತು. ಇದು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲ್ಪಡುವುದು.

ಹೆಚ್ಚು ಅಪಕಾರಿಯಾವುದು? ಮದ್ಯಾರ್ಕ (ಸಾರಾಯಿ.)

(ಡಾಕ್ಟರ್ ಜಾನ್ ಹಾರ್ವಿ ಕೆಲ್ಲಾಗ್ ಅವರಿಂದ)

ಸಾರಾಯಿ ಅಥವಾ ಮದ್ಯಾರ್ಕವೆಂಬುದು ಒಂದು ವಿಷವು. ವಿಷವೆಂದರೆ ಸಾಮಾನ್ಯ ವಿಷವಲ್ಲ. ಪ್ರಪಂಚದಲ್ಲಿರುವ ಎಲ್ಲಾ ವಿಷಗಳಿಂದಲೂ ಸೇರಿ ಆಗುವ ಒಟ್ಟು ಮರಣ ಸಂಖ್ಯೆಗಿಂತ, ಮದ್ಯಪಾನದಿಂದ ಆಗುವ ಮರಣ ಸಂಖ್ಯೆಯು ಅಧಿಕವು.

ಮದ್ಯವೆಂಬುದು ಅಂತಹ ಕ್ರೂರ ವಿಷದ ಗೋಷ್ಠಿಯಲ್ಲಿ ಸೇರಿದೆ. ಇದರಲ್ಲಿ ವಿವಿಧ ಮಧುಸಾರ ಮಿಥೈಲ್, ಎಮಿಲಿಕ್, ಪ್ರಾಪಿಲಿಕ್, ಎಥಿಲಿಕ್ ಮುಂತಾಗಿ ಬೇರೆ ಬೇರೆ ತರದ ಸಾರಾಯಿಗಳುಂಟು. ಯಾವ ಜಾತಿಯದೇ ಆಗಿದ್ದರೂ ಅದೊಂದು ಕ್ರೂರ ವಿಷವೆಂಬುದರಲ್ಲಿ ಸಂದೇಹವಿಲ್ಲ. ವಿಷದ ಜಾತಿಗೆ ಸೇರಿದ ಮೇಲೆ ಅದರಿಂದ ಪ್ರಾಣವನ್ನು ನಿರೀಕ್ಷಿಸುವುದು ಅಸಂಬದ್ಧವಲ್ಲವೆ?

ಸಾರಾಯಿಯೆಂಬುದು ಪ್ರಾಣಿಜನ್ಯವಾದ ಒಂದು ಮಲಪದಾರ್ಥವು

ಮದ್ಯವೆಂಬುದು ವಿಷವಸ್ತುವೇ ಅಲ್ಲ. ಅದೊಂದು ಮಲಪದಾರ್ಥವು. ಅಂತಹ ಕಲ್ಮಷದಿಂದ ವೈದ್ಯಕೀಯ ಉಪಯೋಗವಾಗುವುದೆಂದು ನಾವು ಯಾರೂ ನಿರೀಕ್ಷಿಸುವುದಕ್ಕಿಲ್ಲ. ದೇಹಕ್ಕೆ ಮಲವು ಕೇವಲ ವಿಷಮಯವಾದುದರಿಂದಲೇ ಅದನ್ನು ನಾವು ನಿತ್ಯವೂ ಕ್ರಮವಾಗಿ ದೂರೀಕರಿಸುತ್ತೇವೆ. ಪ್ರಾಣಿ ಸಂಬಂಧವಾದ ಮಲ, ಮೂತ್ರ, ಬೆವರು, ಕಫ ಮುಂತಾದ ಕಲ್ಮಷಗಳ ವಿಷಯದಲ್ಲಿಯೂ ನಾವು ಎಚ್ಚರಿಕೆ ವಹಿಸುವೆವು. ಅದರ ಸಂಪರ್ಕವಾಗದಂತೆ ಎಷ್ಟೋ ಜಾಗ್ರತೆ ವಹಿಸುವೆವು. ಆಹಾರಪದಾರ್ಥಗಳಿಗಂತೂ ಇವು ಸೋಂಕದಂತೆ ಮಾಡುವೆವು. ಅದರ ಗಂಧಮಾತ್ರವಾದರೂ ಸೋಕಿದರೆ ಬಹಳ ಅಸಹ್ಯಪಡುವೆವು. ಮದ್ಯಸಾರವೂ ಅಂತಹ ಕಲ್ಮಷ ಪದಾರ್ಥವೇ! "ಈಸ್ಟ್" ಎಂಬ ಗಿಡದ ಮಲಪದಾರ್ಥವು ಅದು. ಆ ಗಿಡವು ತನ್ನ ವಿಷವನ್ನೇ ತಾನು ಸಹಿಸಲಾರದು. ಸಕ್ಕರೆ ಕರಗಿದ ನೀರಿನಲ್ಲಿ (ಷುಗರ್ ಸೊಲ್ಯೂಷನ್) ಈ ಸಸಿಯು ಹುಟ್ಟಿದ ೨೪ ಗಂಟೆಗಳೊಳಗಾಗಿ ಈ ಗಿಡದ ಬೆಳವಣಿಗೆಯು ಸಹಸ್ರಾರುಗಳು ಹೊರಹೊಮ್ಮುತ್ತಿರುವುದು. ಅದು ಹಾಗೆ ಹರಡುವುದಕ್ಕೆ ಮೊದಲು ಆ ಗಿಡವು ಒಂದು ನಿಮಿಷದಲ್ಲಿ ಎಷ್ಟು ಪಾಲು ಬೆಳವಣಿಗೆಯನ್ನು ಹೊಂದುತ್ತದೋ, ಅಷ್ಟು ಮಾತ್ರ ಬೆಳೆಯಲು ಒಂದು ಸಾವಿರ ನಿಮಿಷಗಳು ಬೇಕಾಗುವುವು. ಹೀಗೆ ಆ ಗಿಡದ ಬೆಳವಣಿಗೆಯಲ್ಲಿ ಸಾವಿರಪಾಲು ಶಕ್ತಿಯು ಕಡಿಮೆಯಾಗುವುದಕ್ಕೆ ಆ ಸಕ್ಕರೆಯ ದ್ರಾವಣದಲ್ಲಿ ಸೇರಿರುವ ಮದ್ಯಸಾರವೇ ಕಾರಣವು. ಅದರಿಂದ ಸಾರಾಯಿ ಕಲ್ಮಷವೆಂಬುದನ್ನು ತಿಳಿಯುವುದರಿಂದ ಕೆಲವು ದಿನಗಳಲ್ಲೇ ಆ ಗಿಡವು ಸತ್ತುಹೋಗುವುದು.

ಗಿಡವು ಸತ್ತುದನ್ನು ನೋಡಿ ಸಂತೋಷಪಡುವ—ಕೆಲವು ದಿನಗಳ ಮೇಲೆ ಸಕ್ಕರೆಯು ಪೂರ್ಣವಾಗಿ ಸಾರೆ ಹೊರಡುವುದು ಸಿಂಹಾವಲೋಕನ. ಇದೇ ಬೆಳವಣಿಗೆಯ ನಿಂತುದೇ ಇದಕ್ಕೆ ಸಾಕ್ಷಿಯೆಂದು ಗ್ರಹಿಸಬೇಕು.

ಮತ್ತೊಂದು ವಿಶೇಷವೇನೆಂದರೆ—ಕೀಳುದರ್ಜೆಯ ಪ್ರಾಣಿಯ ಮಲವು ಮೇಲುದರ್ಜೆಯ ಪ್ರಾಣಿಗಳ ಆಹಾರವಾಗಿರುವುದು ಸ್ವಭಾವದ ನಿಯಮವಾಗಿರುವುದಾದರೂ ಇದು ಈ ಮದ್ಯಸಾರದ ವಿಷಯದಲ್ಲಿ ಹಾಗೆ ನಡೆಯುವುದನ್ನು ನಾವು ಕಾಣುವುದಕ್ಕಿಲ್ಲ. ಹೀಗಿರುವಾಗಲೂ ಮಲರೂಪವಾದ ಈ ಮದ್ಯಸಾರವನ್ನು ಮನುಷ್ಯರು ಸೇವಿಸುವುದು ಆಶ್ಚರ್ಯವೇ ಸರಿ. ಅದು ಅನ್ನಪಾನವೆಂದೂ, ವೈದ್ಯಶಾಸ್ತ್ರದಲ್ಲಿ ಔಷಧಪದಾರ್ಥವಾಗಿ ಉಪಯೋಗಿಸಬಹುದೆಂದು ಕೆಲವರು ವಾದಿಸುವರು. ಆದರೆ ಶೀತ ನಿವಾರಕವಲ್ಲದ ಮೂಢನಂಬಿಕೆಯೇ ಅಲ್ಲದೆ, ಕೆಲವು ವೈದ್ಯರೊಂದಿಗೂ ಈ ಅಭಿಪ್ರಾಯವುಂಟು. ಡಾಕ್ಟರರಲ್ಲಿ ಕೆಲವರು ಸಾರಾಯಿಯು ಗೆಲ್ಲಲಾಗದ ರೋಗಗಳನ್ನು ಗೆಲ್ಲುವುದೆಂದು ಸಾಧಿಸುವುದುಂಟು. ಮದ್ಯವು ರೋಗಗಳನ್ನು ನಿವಾರಿಸುವುದೇ, ಅದರಲ್ಲಿ ಕೆಲವು ಔಷಧಗುಣವುಂಟೋ ಎಂಬುದು. ಈ ಪ್ರಶ್ನೆಗೆ ನಿಷ್ಪಕ್ಷಪಾತವಾದ ವೈಜ್ಞಾನಿಕ ದೃಷ್ಟಿಯಿಂದ ಉತ್ತರವನ್ನು ಹುಡುಕಿದರೆ ತಿಳಿಯಬರುವುದು ಹೇಗೆಂದರೆ—

"ಈಸ್ಟ್" ಗಿಡವು ಹೇಗೆಯೋ ಹಾಗೆಯೇ ಮನುಷ್ಯ ದೇಹವೂ ಜೀವವುಳ್ಳ "ಸೆಲ್" ಎಂಬ ಅಣು ಕೋಶಗಳಿಂದ ನಿರ್ಮಿಸಲ್ಪಟ್ಟಿದೆ. ಈ "ಸೆಲ್" ಗಳೇ ನಿತ್ಯವೂ ನಮ್ಮನ್ನು ಕಾಪಾಡುವ ಶಕ್ತಿಯನ್ನು ಕೊಡುವುದಕ್ಕೂ, ವಿಷ ನಿವಾರಣೆಗೂ, ಅಜೀರ್ಣ ಶಮನಕ್ಕೂ, ಶರೀರದಲ್ಲಿ ತ್ರಾಣವನ್ನುಂಟುಮಾಡುವುದಕ್ಕೂ, ಎಚ್ಚರವಿಟ್ಟು ಸಾಧನೆಗಳನ್ನು ಮಾಡುವ ನಮ್ಮ ಬುದ್ಧಿಶಕ್ತಿಗೂ ಮನೋವಿಕಾರಗಳಿಗೂ ಕಾರಣವಾದುವು.

ರಕ್ತದ ಸೆಲ್‌ಗಳು (ಅಣು ಕೋಶಗಳು) ಎರಡು ಬಗೆಯಾಗಿವೆ. ಗುಂಡಗೆ (ವರ್ತುಲವಾಗಿ) ಸಣ್ಣಗಿರುವ ಕೆಂಪು ಬಣ್ಣದ ಸೆಲ್‌ಗಳು ಒಂದು ಬಗೆ. ಇವೇ ಆಕ್ಸಿಜನ್ ಎಂಬ ಪ್ರಾಣವಾಯುವನ್ನು ಮೈಗೆ ಸೇರಿಸುವುವು. ರಕ್ತ ಸಂಚಾರದ ವೇಗದಿಂದ ಎಳೆಯಲ್ಪಟ್ಟಾಗ ಮಾತ್ರ ಇವು ಅತ್ತಿತ್ತ ಕದಲುವವು. ಅವರ ಮತ್ತೊಂದು ಬಗೆಯ ಅಣುಕೋಶಗಳು ದೇಹದಲ್ಲಿರುವುವು. ಅವು ಬಿಳೀ ಬಣ್ಣದವುಗಳಾದುದರಿಂದ, ಶ್ವೇತಕಣಗಳೆಂದು ಅವಕ್ಕೆ ಹೆಸರು. ಈ ಕಣಗಳು ಬಹಳ ಆಶ್ಚರ್ಯಕರವಾದ ಕೆಲಸ ಮಾಡುತ್ತಿರುವುವು. ರಕ್ತವಾಹಿನಿಗಳಲ್ಲಿ (ರಕ್ತಕಾಲುವೆಗಳಲ್ಲಿ) ಬೇರೆ ಜಾತಿಯದಾದರೂ ಅನ್ಯ ವಸ್ತುವಿನ ಸಂಪರ್ಕ ಉಂಟಾದುದಾದರೆ ಆ ಕ್ಷಣವೇ ಮೇಲ್ಕಂಡ ಶ್ವೇತಕಣಗಳು ಅದನ್ನು ನಿವಾರಿಸುವುದಕ್ಕಾಗಿ ನಾನಾ ಕಡೆಗಳಿಂದ ಬಂದು ಸೇರುವುವು. ಒಂದೊಂದು 'ಸೆಲ್ಲು' ವೇಗದಿಂದ ಆ ಅನ್ಯ ವಸ್ತುವನ್ನು ರಕ್ತದಿಂದ ಹೊರಡಿಸುವುದಕ್ಕಾಗಿ ಅದರ ಸಮೀಪಕ್ಕೆ ಬಂದು ಕೂಡುವುವು. ಈ ಕಣಗಳೇ ನಮ್ಮ ಶರೀರವನ್ನು ಕಾಪಾಡತಕ್ಕವು. ರಕ್ತವಾಹಿನಿಗಳಲ್ಲಿ ಬಂದು ಸೇರಬಹುದಾದ ವಿಷಕ್ರಿಮಿಗಳನ್ನೂ, ಕಶ್ಮಲಗಳನ್ನೂ, ಇತರ ವಸ್ತುಗಳನ್ನೂ ಅವು ಇದಿರಿಸಿ ನಾಶ ಮಾಡಲು ಪ್ರಯತ್ನಿಸುವುವು. ಒಂದು ಜೇಡನಾಯಿಯು ಒಂದು ಸಣ್ಣ ಕೀಟದ ಮೃಗದ ಮೇಲೆ ಹಾರಿ, ಒಂದು ಬೆಕ್ಕು ಇಲಿಯ ಮೇಲೆ ಬೀಳುವಂತೆ ಈ ಕಣಗಳೂ ಶರೀರಕ್ಕೆ ವಿರೋಧಿಗಳಾದ ಅನ್ಯವಸ್ತುಗಳ ಮೇಲೆ ಬೀಳುವುವು. ಮತ್ತು ಒಂದು ಪಟಾಲಮಿಗೆ ಒಳಪಟ್ಟ ಸೈನಿಕರಂತೆ ಅವು ಒಂದೇ ಏಕಮತ್ಯದಿಂದ ಆ ಶತ್ರುವನ್ನಿದಿರಿಸಲು ಮುಂದೆ ಬೀಳುವವು.

"ಬಾಟಲ್ ಕ್ರೀಕ್ ಸಾನಿಟೋರಿಯಂ" ಎಂಬೀ ನಮ್ಮ ಆರೋಗ್ಯರಕ್ಷಣಶಾಲೆಯಲ್ಲಿರುವ ರೋಗಿಗಳಿಗೆ, ಮೇಲ್ಕಂಡ ರಕ್ತಕಣಗಳ ಸಂಚಾರಕ್ರಮವನ್ನು ನಾವು ಜಂಗಮ ಚಿತ್ರಪ್ರದರ್ಶನಗಳ (ಸಿನಿಮಾ) ಮೂಲಕವಾಗಿ ತೋರಿಸುತ್ತಿರುವೆವು. ಅದರಲ್ಲಿ ಆ ಬಿಳೀ ಸೆಲ್‌ಗಳು ರಕ್ತವಾಹಿನಿಯಲ್ಲಿ ಯಾವುದಾದರೂ ಅನ್ಯವಸ್ತುವಿನ ಅಣುಮಾತ್ರವಾದ ಸಣ್ಣಕಣವು ಸೇರಿಸಲ್ಪಟ್ಟಿದ್ದರೆ, ಅದರ ಮೇಲೆ ಬಿದ್ದು, ಅದನ್ನು ಸಣ್ಣ ಸಣ್ಣ ಶಕಲಗಳನ್ನಾಗಿ ಒಡೆದು, ಆ ತುಂಡುಗಳನ್ನೆಲ್ಲ ಹೊತ್ತುಕೊಂಡು ಹೋಗುವ ರೀತಿಯನ್ನು ಪ್ರತ್ಯಕ್ಷವಾಗಿ, ಸ್ಪಷ್ಟವಾಗಿ ನೋಡಬಹುದು. ಹೀಗೆ ಈ ಬಿಳೀ ಸೆಲ್‌ಗಳು ನಮ್ಮ ಶರೀರಕ್ಕೆ ವಿರೋಧಿಗಳಾದ ಕ್ರಿಮಿಗಳನ್ನೂ, ಕಶ್ಮಲಗಳನ್ನೂ ನಾಶಗೊಳಿಸಿಕೊಂಡು ಹೋಗಿ ರಕ್ತವನ್ನು ಶುದ್ಧವಾಗಿರಿಸಿ, ನಮ್ಮನ್ನು ಕಾಪಾಡುವುವು. ಒಂದೊಂದು ತೊಟ್ಟು ರಕ್ತದಲ್ಲಿ ಈ ಶ್ವೇತಕಣಗಳ ಸಂಖ್ಯೆಯು ಲಕ್ಷಾಂತರವಾಗಿದ್ದು, ನಮ್ಮನ್ನು ಅಪಾಯದಿಂದ ತಪ್ಪಿಸಿ ಶರೀರವನ್ನು ಕಾಪಾಡುವುವು.

ಆದರೆ ನಮ್ಮ ರಕ್ತದಲ್ಲಿ ಮದ್ಯದ ವಿಷವು ಸೇರಿದಾಗ ಮಾತ್ರವೇ ಮೇಲ್ಕಂಡ ಬಿಳೀ "ಸೆಲ್" ಗಳ ಪ್ರತಿಸ್ಪರ್ಧನ ಶಕ್ತಿಯು ಕುಂದುವುದು. ಸಾರಾಯಿಯೆಂಬುದು ಮೇಲ್ಕಂಡ ಕಣಗಳಿಗೆ ಆ ಶಕ್ತಿಯನ್ನು ತಪ್ಪಿಸಿ ಅವನ್ನು ಜಡವಾಗ ಮಾಡುವುದು. ಮುಖ್ಯವಾಗಿ ನಿದಾನದಾರಿಗಳ ಸಂಬಂಧದಲ್ಲಿ ಆ "ಸೆಲ್" ಗಳ ಶಕ್ತಿಯು ಸತೆಯುದು. ಅವೂ ರ ವಿಷಸಂಬಂಧದಿಂದಲೇ ಪ್ರಜ್ಞೆ ತಪ್ಪಿ ಜಡವಾಗುವುದರಿಂದ ಮೊದಲಿನಂತೆ ಚಟುವಟಿಕೆಯಿಂದ ಕೆಲಸ ಮಾಡಲಾರವು. ಅಷ್ಟೇಕೆ? ಮೊದಲು ರಕ್ತವಾಹಿನಿಯಲ್ಲಿ ಅನ್ಯವಸ್ತುವನ್ನು ಕಂಡೊಡನೆ ಅವು ಎಷ್ಟು ಆತುರದಿಂದ ಎಲ್ಲಾ ಸೇರಿ ಮೇಲೆ ಬಿದ್ದು ಅದನ್ನು ತುಂಡು ತುಂಡಾಗಿ ಮುರಿದು ಹಾಕುತ್ತಿದ್ದುವೋ ಅಷ್ಟೇ ಬಿರುಸಿನಿಂದ ಆ ವಸ್ತುವಿನ ಸಂಪರ್ಕವನ್ನು ತಪ್ಪಿಸಿಕೊಂಡು ಹಿಂದೆಗೆದು ಓಡುವುವು. ಈ ಕಾರಣದಿಂದಲೇ ಸ್ವಾಭಾವಿಕವಾಗಿ ಕಫ ಜ್ವರ, ಸನ್ನಿಪಾತ, ಮುಂತಾದ ಸೋಂಕುರೋಗಗಳು ಮದ್ಯಪಾಯಿಗಳಿಗೆ ತಗುಲಿದರೆ ಮರಣದಲ್ಲಿ ಪರ್ಯವಸಿತವಾಗುವುದೇ ಹೆಚ್ಚು. ಅವರು ಬದುಕುವುದು ಬಹಳ ಕಡಿಮೆ. ಅವರ ಬಿಳೀ ಸೆಲ್‌ಗಳಲ್ಲಿ ವ್ಯಾಧಿವಿರೋಧ ಶಕ್ತಿಯಿಲ್ಲದೆ ಅವು ಜಡವಾಗುವುದೇ ಇದಕ್ಕೆ ಕಾರಣವೆಂಬುದು ಸ್ಪಷ್ಟವು.

ಶರೀರದ ಬೇರೆ ಎಲ್ಲಾ ರಚನಾವಯವಗಳೂ ಇದೇ ರೀತಿಯಲ್ಲಿ ಮದ್ಯವಿಷದಿಂದ ಜಡವಾಗಿ ಕಾರ್ಯಸಾಮರ್ಥ್ಯ ಇಲ್ಲದಾಗುವುವು. ಎಂದರೆ ಮಿದುಳಿನಲ್ಲಿ ಆಲೋಚನಾಶಕ್ತಿಯೂ, ಜ್ಞಾಪಕ ಶಕ್ತಿಯೂ ತಗ್ಗುವುದು. ಸಾಧಾರಣ ಮನುಷ್ಯನಿಗೆ ಯಾವುದಾದರೂ ಒಂದು ವಿಚಾರದಲ್ಲಿ ಊಹಾಪೋಹಗಳೂ ವಿಮರ್ಶಾಲೋಚನೆಗಳೂ ಹುಟ್ಟುವಂತೆ ಮದ್ಯಪಾಯಿಗಳಿಗೆ ಬುದ್ಧಿಯು ಸ್ಫುರಿಸಲಾರದು. ಮದ್ಯಪಾನಿಗಳಿಗೆ ನರಗಳಲ್ಲಿಯೂ ಬಲವು ಕಡಿಮೆ. ಮುಖ್ಯವಾಗಿ ಒಂದೇ ಮಾತಿನಲ್ಲಿ ಸಂಕ್ಷೇಪಿಸಿ ಹೇಳಬೇಕೆಂದರೆ ವಿಷಪದಾರ್ಥಗಳು ದೇಹದ ಎಲ್ಲಾ ಅವಯವಗಳಲ್ಲಿಯೂ ದುಃಸ್ವಭಾವವಾದ ಒಂದು ವಿಷ ಸಂಬಂಧವನ್ನು ಕಲ್ಪಿಸಿ ಮತ್ತೇರಿದ ಮನುಷ್ಯನು ಹೇಗೋ ಹಾಗೆ ಅವುಗಳನ್ನೂ ಜಡವಾಗಿ ಮಾಡಿಬಿಡುವುದು.

(ಮುಂದುವರಿಯುವುದು.)

ಪ್ರಕಟಣೆ.

ಮಡಿಕೇರಿ ಮಹಾದೇವಪೇಟೆಯಲ್ಲಿ ತಮ್ಮ ಮನೆ ಹಿತ್ತಲು ಪಗ್ಗೈರೆಯನ್ನು ಹೆಚ್ಚಿನ ಸುಚಿತ್ವದಲ್ಲಿ ಇಡುವಂಥವರಿಗೆ ಬಾಲಿ ಸುನಕ್ಷರದ ಶಿಶುಪ್ರದರ್ಶನ ಕಾಲದಲ್ಲಿ ಒಂದು ಬಹುಮಾನವು ಕೊಡಲ್ಪಡುತ್ತೆ. ಆದ್ದರಿಂದ ಸದರಿ ಪೇಟೆ ನಿವಾಸಿಗಳು ತಮ್ಮ ತಮ್ಮ ಮನೆ ಹಿತ್ತಲು ಪಗ್ಗೈರೆಗಳನ್ನು ಶುಚಿಯಾಗಿಡಲು ಪ್ರಯತ್ನಿಸಿ ಬಹುಮಾನಪಡೆಯಬೇಕಾಗಿ ಈ ಮೂಲಕ ಪ್ರಕಟಿಸುತ್ತೆ. ಕಾರ್ಯದರ್ಶಿ.

ವಿಮರ್ಶೆ.

ನವಜೀವನ:—ಕನ್ನಡ ಮಾಸಿಕ ಪತ್ರಿ. ಪ್ರಕಾಶಕರು ಶ್ರೀ. ಬಿ. ಸಿ ಪುರಾಣಿಕ, ಬಬಲೇಶ್ವರ. ವಾರ್ಷಿಕ ಚಂದ ರೂ. ೨—೧೨—೦

ನಮ್ಮಲ್ಲಿಗೆ ೧ ಮತ್ತು ೨ ನೇ ಸಂಚಿಕೆಗಳು ಬಂದಿವೆ ಇದೇ ಪ್ರಥಮ ವರ್ಷ. ಜನೋದ್ಧಾರಕ್ಕಾಗಿಯೂ ದೇಶದ ಸಂಘಟನೆಗಾಗಿಯೂ, ಹಲವು ಹೊಸ ಹೊಸ ಪತ್ರಿಕೆಗಳು ಈಗೀಗ ಜನ್ಮವೆತ್ತಿವೆ ಈ ಪತ್ರವು ಅಂಥ ಪತ್ರಗಳಲ್ಲೊಂದು ಇದರ ಉದ್ದೇಶವನ್ನು ಕುರಿತು ಅದರಲ್ಲಿ ಹೀಗೆ ಬರೆದಿರುವರು

"ನಮ್ಮ ಯಾವತ್ತು ಮಾಸ ಮತ್ತು ವಾರ ಪತ್ರಿಕೆಗಳು ಒಂದು ತರದ ಹಳೇ ಪದ್ಧತಿಯನ್ನೇ ಅವಲಂಬಿಸಿ ಒಂದೇ ಮಾರ್ಗದಿಂದ ನಡೆಯುತ್ತಿರುವವು. ಅವುಗಳಲ್ಲಿ ಹೊಸ ತರದ ಕಲ್ಪನೆಗಳೇನೂ ಇರುವುದಿಲ್ಲ. ಅವುಗಳಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ಆರ್ಥಿಕ ರಾಜಕೀಯ ವಿಷಯಗಳ ವಿವೇಚನೆಯಾಗಿರುವುದಿಲ್ಲ. ಆದಕಾರಣ ಈ ಕೊರತೆಯನ್ನು ಹೋಗಲಾಡಿಸುವ ಮೂಲಕ ಈ ನಮ್ಮ ಮಾಸಪತ್ರಿಕೆಯು ಉದ್ಭವಿಸಿರುವುದು.' ಈ ಉದ್ದೇಶವನ್ನನುಸರಿಸಿ ದೇಶೋದ್ಧಾರ ಕಾರ್ಯವನ್ನು ನಡೆಸಿ, ಸಂಪಾದಕರು ಕೀರ್ತಿಯನ್ನು ಗಳಿಸಲೆಂದು ನಮ್ಮ ಹಾರೈಕೆ ನಮಗೆ ದೊರೆತಿರುವ ಸಂಚಿಕೆಗಳಲ್ಲಿ ಸಾಹಿತ್ಯ, ವಿದ್ಯೆ, ಹಳ್ಳಿ ಸುಧಾರಣೆ, ಹಿಂದು ಮುಸಲ್ಮಾನರ ಐಕ್ಯ ಈ ವಿಷಯಗಳ ಕುರಿತ ಲೇಖನಗಳು ಬಂದಿವೆ. ಭಾಷೆಯು ಸರಳವಾಗಿಯೂ ಅಭಿರುಚಿಯುಳ್ಳದ್ದಾಗಿಯೂ ಇದೆ.

'The Shibboleth of Unfitness' ಎಂಬ ಇಂಗ್ಲಿಷ್ ಕೃತಿಯೊಂದು ನಮ್ಮ ಕೈಸೇರಿದೆ. ಇದರೊಳಗಡಗಿರುವ ವ್ಯಾಖ್ಯಾನವು ಶ್ರೀ. ಯನ್. ಸಿ. ಕೇಳಕರರು 12 ವರುಷಗಳಿಗೆ ಹಿಂದೆ ಬರೆದಿದ್ದ "The case for Indian Home Rule" ಎಂಬ ಪುಸ್ತಕದಿಂದ ತೆಗೆದುದು. ಹೀದಿಯರು ಹೆಚ್ಚಿನ ರಾಜಕೀಯ ಸುಧಾರಣೆಗೆ ಯೋಗ್ಯರೆಂಬುದನ್ನು ಈ ಪುಸ್ತಕವು ವ್ಯಕ್ತಪಡಿಸುತ್ತದೆ. ರಾಜಕಾರಣ ಪಟುಗಳಿಗೆ ಇದರಿಂದ ಬಹಳ ಪ್ರಯೋಜನವಿದೆ. ಬೆಲೆ ನಾಲ್ಕಾಣೆ—ಪ್ರಕಾಶಕರು—ಶ್ರೀ. ಯನ್. ವಿ. ಖಾಪರ್ಟ್, ಅಸಿಸ್ಟೆಂಟ್ ಸೆಕ್ರೆಟರಿ, ತಿಲಕ ಹೋಂ ರೂಲ್ ಲೀಗ್, ಮೆಮೋರಿಯಲ್ ಇನ್ಸ್ಟಿಟ್ಯೂಟ್, ಪೂನ

ನನ್ನದು ಈ ಕನ್ನಡ ನಾಡು—ಇದೊಂದು ಸಣ್ಣ ಕನ್ನಡ ಕಾವ್ಯ ಸಂಗ್ರಹ. ಶ್ರೀ. ಬೇಂದ್ರೆ ದತ್ತರಾಮರು ಇದರೊಳಗಡಗಿರುವ ಕವನಗಳನ್ನು ಆಯ್ದು ಕೊಟ್ಟರು. ಮಹಾನವಮಿಯ ಬೆಳಕು ಕಾಣಬೇಕಾಗಿದ್ದ ಸಂಪೂರ್ಣ ಕನ್ನಡ ಕಾಲಕ್ಕೆ ಪ್ರಕಟಿತವಾಗಬೇಕೆಂದು ಸಂಕಲ್ಪಿತವಾದ ಈ ಪುಸ್ತಕವು ಕರ್ನಾಟಕ ಏಕೀಕರಣದ ನಿಮಿತ್ತವಾಗಿ ದೇಹವನ್ನು ನೀಗಿದ ದಿವಂಗತ ಕಡಪಾ ರಾಘವೇಂದ್ರ ರಾಯರ ವಾರ್ಷಿಕ ಸಂಸ್ಮರಣದ ಕಾಲದಲ್ಲಿ ಪ್ರಕಟವಾಯಿತು. ಕರ್ನಾಟಕದ ಹಲವು ದೇಶಗಳ ಕುರಿತು ವರ್ಣಿಸಲ್ಪಟ್ಟ ರಮ್ಯವಾದ ಪದ್ಯಗಳು ಇದರಲ್ಲಿವೆ. ಕೊಡಗಿನ ಸಂಬಂಧವಾದ "ನಮ್ಮ ಕೊಡಗಿದು ಜನ್ಮದು" ಎಂಬ ಪದ್ಯವು ಒಳ್ಳೆ ಭಾವದಿಂದ ಕೂಡಿದ್ದಾಗಿದೆ. "ನನ್ನದು ಈ ಕನ್ನಡ ನಾಡು"—ಎಂಬ ಪದ್ಯವನ್ನು ಓದಿದಷ್ಟೂ ಸಾಲದು. ಅದರ ನವೀನ್ಮಂದಷ್ಟೂ ಶೀರದು "ಮೈಸೂರು ಮಕ್ಕಳು" ಎಂಬ ಕವನವೂ ಅತಿ ಮಧುರವಾದದ್ದು. ಇವಲ್ಲದೆ ಪ್ರಾಚೀನ ಕವಿಗಳ ಪದ್ಯಗಳೂ ಬಂದಿವೆ. ಶ್ರೀನಿವಾಸರ ಭರತವಾಕ್ಯವು ಪುಸ್ತಕಕ್ಕೆ ಇನ್ನಷ್ಟು ಕಳೆಯನ್ನು ತಂದಿದೆ. ಒಟ್ಟಿನಲ್ಲಿ ಕರ್ನಾಟಕದ ವಿಜಯಶ್ರೀಯನ್ನು ಕಾಣಬೇಕೆಂದಿರುವ ಪ್ರತಿಯೊಬ್ಬ ಕನ್ನಡಿಗನು ಸಂಗ್ರಹಿಸತಕ್ಕ ಪುಸ್ತಕವು ಇದು. ಬೆಲೆ ನಾಲ್ಕಾಣೆ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಎಂಬುದೇ

ಎಲ್ಲಾ ಬೆಳೆಗಳಿಗೂ ಯೋಗ್ಯವಾದ ಸಾರಜನಕ ಗೊಬ್ಬರವು. ಪ್ರಪಂಚದಲ್ಲೆಲ್ಲಾ ಇದೇ ನಿಸ್ಸಂದೇಹವನ್ನು ಒಳ್ಳೆಯದಾಗಿ ಬೆಳೆಸುವ ಮತ್ತು ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಫಸಲನ್ನು ಕೊಡುವ ಸಾಧನವೆಂದು ಖ್ಯಾತಿಯನ್ನು ಪಡೆದಿರುತ್ತದೆ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಗಿಡಗಳ ಬೇರುಗಳನ್ನು ಹೆಚ್ಚು ಆಳದ ವರೆಗೂ ಪಸರಿಸುವಂತೆ ಮಾಡುವದರಿಂದ ಮಳೆ ಕಡಿಮೆಯಾದಾಗ್ಯೂ ಗಿಡಗಳಿಗೆ ಹೆಚ್ಚಿನ ತೊಂದರೆಯಾಗಲಾರದು.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ ಉಪಯೋಗದಿಂದ ಗಿಡಗಳು ಚೆನ್ನಾಗಿ ಬಲಿತು, ಹುಳ ವಗೈರೆ ರೋಗಗಳಿಗೆ ಥಟ್ಟನೆ ಎಡೆಕೊಡಲಾರವು. ಇದು ಹೊರತು ಚಿಲಿಯನ್ ನೈಟ್ರೇಟ್ ಆಫ್ ಸೋಡಾದಲ್ಲಿ ಬೆಳೆಗಳನ್ನು ಮಣ್ಣನ್ನು ವೃದ್ಧಿಗೊಳಿಸುವ ಇನ್ನೂ ಅನೇಕ ಗುಣಗಳಿರುತ್ತವೆ. ಚಿಲಿಯನ್ ನೈಟ್ರೇಟ್ ಆಫ್ ಸೋಡಾವು ಬೇರೆ ಸಾರಜನಕ ಗೊಬ್ಬರಗಳಂತೆ ಮಣ್ಣಿನಲ್ಲಿ ಏಸಿಡ್ (acid) ಉಂಟಾಗುವಂತೆ ಮಾಡುವದಾಗಲೀ ಮಣ್ಣಿನ ಶಕ್ತಿಯನ್ನು ಯಾವ ವಿಧದಿಂದಲೂ ಕುಂದಿಸುವದಾಗಲೀ ಇಲ್ಲ.

ಚಿಲಿಯನ್ ನೈಟ್ರೇಟ್ ಆಫ್ ಸೋಡಾವನ್ನು ರಾಣಿಪೇಟೆಯಲ್ಲಿರುವ ಮೆ॥ 'ಪೆರಿ' ಕಂಪೆನಿಯವರು ಸಂಗ್ರಹಿಸಿದಲ್ಲಿರುವ ಯಾವ ರೈಲ್ವೇ ಸ್ಟೇಶನಿಗಾದರೂ 80 ರಾತ್ತಲಿನ ಚೀಲ 1ರ ರೂಪಾಯಿ 6—1—0ರಂತೆ ಸರಬರಾಯಿ ಮಾಡುವರಲ್ಲದೆ, ಮಡಿಕೇರಿ ಮತ್ತು ವೀರಾಜಪೇಟೆಯಲ್ಲಿರತಕ್ಕ ಅವರ ಡಿಪೋಗಳಲ್ಲಿ ದರ ರೂ. 6—15—0ರಂತೆ ದೊರೆಯುತ್ತದೆ

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ದರ್ಶನಾರ್ಥವಾಗಿ ಹಂಚುವ ಪತ್ರಿಕೆಗಳು ವಗೈರೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
ಪೋ. ಬಾ. ನಂ 469, ಕಲ್ಕತ್ತಾ.

(2) ಮಿಸ್ಟರ್ ಎಂ. ಯು. ಬೆಳ್ಳಿಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24—10

ಕೋವಿಗಳು, ಮತ್ತು ಅವುಗಳ ಸಾಹಿತ್ಯಗಳು.

ಮಿಡ್ಲೆಂಡ್ ಕಂಪೆನಿಯ "ನಾಕ್ ಎಬೌಟ್" ಎಂಬ 12 ನೇ ನಂಬರಿನ ಒಂಟಿ ಕೊಳದ ಕೋವಿಗೆ ರೂ. 50.

ಅಮೇರಿಕದ ಸ್ಟೀವನ್ಸ್ ಕಂಪೆನಿಯ 12 ನೇ ನಂಬರಿನ ಒಂಟಿ ಕೊಳದ ತೋಟದ ಕೋವಿಗೆ ರೂ 45

12 ನೇ ನಂಬರಿನ ಒಂಟಿ ಕೊಳದ ಅತಿ ಸುಲಭ ಕ್ರಯದ ತೋಟದ ಕೋವಿಗೆ ರೂ 38.

12ನೇ ನಂಬರಿನ ಜೋಡು ಕೊಳದ 'ಇಂಗ್ಲಿಷ್' ತೋಟದ ಕೋವಿಗೆ ರೂ. 75

" "

ಬೆಲ್ಜಿಯನ್ ' ತೋಟದ ಕೋವಿಗೆ ರೂ. 60.

ಹೊಗೆ ರಹಿತವಾದ 12 ನಂಬರಿನ ಇಂಗ್ಲಿಷ್ "ಎಲೀ" ಚಿಲ್ಲು ತುಂಬಿದ ತೋಟಗಳು 100 ಕ್ಕೆ ರೂ 1—0—0

ಅಮೇರಿಕನ್ ವೆಸ್ಟರನ್ " " " 100 ಕ್ಕೆ ರೂ 9—8—0

ಬೆಲ್ಜಿಯನ್ 100 ಕ್ಕೆ ರೂ. 9—0—0

ಎಲ್ಲಾ ತರದ ಕೋವಿಗಳು ರೈಫಲ್‌ಗಳು, ರಿವಾಲ್ವರ್‌ಗಳು, ಪಿಸ್ತೂಲ್‌ಗಳು ಮತ್ತು ಚಿಲ್ಲು ಮದ್ದು ವಗೈರೆ ಅಲ್ಲದೆ ಬೇಟೆಗಾರರಿಗೆ ಬೇಕಾಗಿರುವ ಎಲ್ಲಾ ಸಾಹಿತ್ಯಗಳು ಸುಲಭ ದರದಲ್ಲಿ ದೊರಕುತ್ತೆ.

ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಂಪೆನಿಯ ಕೆಟಲಾಗೊಂದು ಮುಫತ್ತಾಗಿ ರವಾನಿಸಲ್ಪಡುವುದು.

Abdoolally Noorbhoy.
Arms & Ammunition Dealers.
248–250 Abdul Rehman Street
Bombay 3. Telegrams "Guidance"

24—13

ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ ೨ ರಾರು ಗಂಟೆಯನ್ನು ತೋರಿಸುವವು. ಇದರ ಕೇಸು ಬಂಗಾರಕ್ಕೆ ಸರಿಸಮಾನಾಗಿರುವದು. ಇದಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಮಾತ್ರ ರೂ 4—14—0

ವಿಳಾಸ —ಲೀಗಲ್ ವಾಚ್ ಕಂಪೆನಿ,

52—34 ಪೋ. ಬಾ 243 ಮದರಾಸು.

52 ವರುಷಗಳ ಅನುಭವಸಿದ್ಧ ಔಷಧಗಳು.

೧. ಮಹಾಮದನ ಕಾಮೇಶ್ವರೀ ಲೇಹ.

ಅಜೀರ್ಣ, ಎದೆನೋವು ಸೊಂಟನೋವು, ಮಲಬದ್ಧತೆ, ನಿದ್ರೆಯಿಲ್ಲದೆ ಇರುವಿಕೆ ಮುಂತಾದವುಗಳನ್ನು ಗುಣಪಡಿಸಿ ರತಿ ಸುಖಕ್ಕೆ ಶಕ್ತಿಯನ್ನುಂಟುಮಾಡುವುದು.

ಡಬ್ಬಿ 1 ಕ್ಕೆ ರೂ. 2—0—0. 3 ಡಬ್ಬಿಗಳಿಗೆ ರೂ. 5—12—0.

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋನಿಮಯದಲ್ಲಿ ಅತ್ಯಲ್ಪವಾಗಲೀ, ಅತಿರೇಕವಾಗಲಿ ರಕ್ತ ಸುರಿಯೋಣ, ಹೊಟ್ಟೆನೋವು, ಸೊಂಟನೋವು, ಬಿಳುಪು ನಾನಾವರ್ಣಗಳ ಪ್ರದರಗಳನ್ನು ಅತಿ ಶೀಘ್ರದಲ್ಲಿ ಗುಣಮಾಡಿ ಗರ್ಭಾಶಯ ಸಂಬಂಧ ರೋಗಗಳನ್ನು ಗುಣಪಡಿಸಿ, ಸಂತತಿಗೆ ಅನುಕೂಲವಾದ ದೋಷಗಳನ್ನು ಹೋಗಲಾಡಿಸುವುದು. 1 ಬಾಟ್ಲಿ ಮತ್ತು 1 ಡಬ್ಬಿ ಮಾತ್ರೆಗೆ ೭—4— 0.

೩. ಮೇಹಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳುಪು, ಹಳದಿಯು ತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ, ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ 2—8—0. 3 ಕ್ಕೆ 7—0—0.

೪. ಮಲೇರಿಯಾ (ಛಳಿಜ್ವರ) ಪಿಲ್ಸ್.

1. 2. 3 ಅಥವಾ 4 ದಿವಸಕ್ಕೊಮ್ಮೆ ಬರುವ ಜ್ವರ, ಮಲೆಜ್ವರ ಇವುಗಳ ಮೇಲೆ ಖಾತ್ರಿ. ಬಾಟ್ಲಿ 1 ರ 0—12—0.

೫. ಬಾಲಗ್ರಹ ಗುಟಿಕೆ.

ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ.

ಬಾಟ್ಲಿ 1 ಕ್ಕೆ 0—10—0 3 ಕ್ಕೆ 1—12—0.

೬. ಇಚ್ಛಾಭೇದಿ.

ಆಯಾಸವನ್ನುಂಟುಮಾಡದ ಸುಖವಿರೇಚಕ.

ಬಾಟ್ಲಿ 1 ಕ್ಕೆ 0—12—0. 3 ಕ್ಕೆ 2—0—0.

೭. ದಂತಕಾಂತಿ ಚೂರ್ಣ. ಡಬ್ಬಿ 1 ಕ್ಕೆ 3 ಆಣೆ

೮. ಗಜಕರ್ಣ ಮುಲಾಮ್. ಡಬ್ಬಿ 1ಕ್ಕೆ 6 ಆಣೆ

N B. ಇವುಗಳಲ್ಲದ ಬೇರೆ ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತೆ

ಎನ್. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದೀಯ ಫಿಜಿಸಿಯನ್ಸ್,

52—14 **ಮಂಗಳೂರು, ದ. ಕನ್ನಡ.**

ದಯವಿಟ್ಟು ಗಮನಿಸಿರಿ! ದಯವಿಟ್ಟು ಒಂದು ಸಲ ಪರೀಕ್ಷಿಸಿರಿ!!

ಟಿ. ರಾಮರಾವ್,

ವಾಚ್ ರಿಪೇರರ್ ಮತ್ತು ಡೀಲರ್ 225, ಚಿಕ್ಕಪೇಟೆ, ಬೆಂಗಳೂರು ಸಿಟಿ.





ನಮ್ಮಲ್ಲಿ ಎಲ್ಲಾ ವಿಧವಾದ ಗಡಿಯಾರಗಳೂ, ಗ್ರಾಮಾಫೋನ್‌ಗಳು, ಅವುಗಳಿಗೆ ಬೇಕಾಗುವ ಸಾಮಾನುಗಳೂ, ಗಡಿಯಾರದ ಗ್ಲಾಸುಗಳು, ಕೈಗೆ ಕಟ್ಟತಕ್ಕಂಥ, ಬೆಳ್ಳಿ ಮತ್ತು ಕೈಗಡಿಯಾರಗಳ ರೋಲ್ಡ್‌ಗೋಲ್ಡ್ ಬೆಲ್ಟು, ಲೆಸ್ಸಿಯ ಮತ್ತು ಚರ್ಮದ ಪಟ್ಟಿಗಳೂ ಸಹಾ ಬಹಳ ಕಡಿಮೆ ಬೆಲೆಗೆ ದೊರೆಯುತ್ತವೆ ನಮ್ಮಲ್ಲಿ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಅತಿ ಸುಂದರವಾಗಿಯೂ, ರಮ್ಯವಾಗಿಯೂ ಇರುವ ಹೊಸ ನಮೂನೆಯ 'ರೋಲ್ಡ್‌ಗೋಲ್ಡ್ ರಿಸ್ಟ್‌ವಾಚು' ಎಂಬ ಕೈಗೆ ಕಟ್ಟುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ, ಪಡೆಯಬಹುದು. ಕ್ಯಾಟಲಾಗ್ ಬೇಕಾದಲ್ಲಿ ಉಚಿತವಾಗಿ ಕಳುಹಿಸುತ್ತೇವೆ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳ ವಿವರವಾಗಿಯೂ ಹೆಚ್ಚು ಸಂಗತಿಗಳ ಬಗ್ಗೆ ಪತ್ರಮುಖೇನ ಬರೆದು ಈಗಲೇ ತಿಳಿಯಬಹುದು.

24—10

'ಅಂಜುಮನೆ ಇತ್ತೆಹಾದ್ ಇಸ್ಲಾಂ, ಕೊಡಗು.'

ಈ ದಿವಸ ಪೋಲ್ಯಂಡ-ಅಂಜುಮನೆ ಇತ್ತೆಹಾದ ಇಸ್ಲಾಮಿನ ಒಂದು ಜನರಲ್ ಮೀಟಿಂಗು ಅಮ್ಮತ್ತಿಯಲ್ಲಿ ನಡೆದು ಇದರಡಿಯಲ್ಲಿ ನಮೂದಿಸಿದ ಕಾರ್ಯನಿರ್ವಾಹಕ ಸಭೆಯು ನೇಮಕವಾಯಿತು.

ಅಧ್ಯಕ್ಷರು—ಮ. ರಾ. ಶ್ರೀ. ಅಬ್ದುಲ್ ಮಜೀದ್‌ಖಾನ್ ಸಾಹೇಬರವರು, ಉಪಾಧ್ಯಕ್ಷರು—ಮ. ರಾ. ಶ್ರೀ. ಹಾಜೀರು ಅಬ್ದುಲ್ ರಹೀಮಾನ್ ಸಾಹೇಬರವರು, ಕಾರ್ಯದರ್ಶಿ—ಕಾಮಾಗು ಅಬ್ದುಲ್ ರಹೀಮಾನ್‌ಖಾನ್ ಸಾಹೇಬರವರು, ಖಜಾಂಚಿ—ಮ. ರಾ. ಶ್ರೀ. ದಾವೂದ್‌ಖಾನ್ ಸಾಹೇಬರು. ಎಗ್ಸಿಕ್ಯೂಟಿವ್ ಮೆಂಬರುಗಳು—ಮ. ರಾ. ಶ್ರೀ ಗಳಾದ ಸೈಯ್ಯದ್ ಅಬ್ದುಲ್ಲಾ ಸಾಹೇಬರವರು, ಯಂ. ಯಂ. ಅಹ್ಮದ್ ಖಾನ್ ಸಾಹೇಬರವರು, ಸೈಯ್ಯದ್ ಗೌಸ್ ಸಾಹೇಬರವರು, ಮಹಮ್ಮದ್‌ಗೌಸ್ ಸಾಹೇಬರವರು, ಇಸ್ಮಾಯಿಲ್‌ಖಾನ್ ಸಾಹೇಬರವರು ಮತ್ತು ಅಬ್ದುಲ್ ಖಾದರ್‌ಖಾನ್ ಸಾಹೇಬರವರು.

ಮುಖ್ಯವಾಗಿ-ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಮಂಜೂರಾದವು.

1. ಸದರಿ ಅಂಜುಮನಿನ ಮುಖ್ಯ ಸ್ಥಳ ಅಮ್ಮತ್ತಿಯಾಗಿರುವುದು.

2. ಕೊಡಗಿನ ಪ್ರತಿಯೊಂದು ಭಾಗದಲ್ಲಿಯೂ ಸದರಿ ಅಂಜುಮನಿನ ಶಾಖೆಗಳನ್ನು ಸ್ಥಾಪಿಸುವದು.

3. ಅಂಜುಮನಿನ ಮುಖ್ಯ ಕಾರ್ಯಗಳು. (1) ಮುಸಲ್ಮಾನರ ವಿದ್ಯಾಭಿವೃದ್ಧಿ, (2) ಇಸ್ಲಾಂ ಮತದ ಸುಧಾರಣೆ, (3) ಒಂದು ಮುಸ್ಲಿಂ ಫಂಡಿನ ಸ್ಥಾಪನೆ, (4) ದೇಶ ಅಭಿವೃದ್ಧಿ ಸಾಧನೆಗಳು, (5) ಜಿರಾಯ್ತಿ, ವ್ಯಾಪಾರ ಮತ್ತು ಉದ್ಯೋಗಗಳ ಹರಡುವಿಕೆಯಾಗಿರುವುದು.

4 ಇತರ ಮತದೊಡನೆ ಒಗ್ಗಟ್ಟಿನಲ್ಲಿರುವ.

5. ಪರ್ಸಕ್ಯೂಟೆ ಏಪ್ರಿಲ್ ಅಲ್ಲದೇ ಮೇ ತಿಂಗಳಲ್ಲಿ ಮುಸ್ಲಿಂ ಕಾನ್‌ಫರೆನ್ಸ್ ಕೂಡುವಿಕೆ.

6. ಅಂಜುಮನಿನ ಎಲ್ಲಾ ಕಾರ್ಯಗಳು ಮತ ಭೇದ, ಪಕ್ಷ ಎಲ್ಲರ ಜಾತಿರಾತಿಗೆ ತಟವಂತ ದೇಶೀಯ ಪತ್ರಿಕೆಗಳನ್ನು ಕೇಳಿಕೊಳ್ಳುವದು.

7 ಮೇಲ್ಕಂಡ ಉದ್ದಿಶ್ಯಗಳು ಮುಸಲ್ಮಾನರಲ್ಲಿ ಅರಿಕೆ ಮಾಡಿಕೊಳ್ಳಲಿಕ್ಕೆ ಅಧ್ಯಕ್ಷರ ಕಡೆಯಿಂದ ಒಂದು ಅಪೀಲ್ ಪತ್ರಿಕೆಯಲ್ಲು ಪ್ರಿಂಟು ಮಾಡಿಸುವಂತೆ ತೀರ್ಮಾನವಾಯಿತು. ಅನಂತರ ಮೀಟಿಂಗು ಬರಕಾಸ್ತಾಯಿತು

ಅಬ್ದುಲ್ ರಹೀಮಾನ್‌ಖಾನ್,
ಕಾರ್ಯದರ್ಶಿ.

ಅಧ್ಯಕ್ಷರ ಅಪೀಲ್.

ಕೊಡಗು ದೇಶದ ಪ್ರಿಯ ಮುಸ್ಲಿಂ ಸಹೋದರರೇ,

ಈ ಕಾಲದ ನಾಗರೀಕತೆ ಹೊಂದಿದ ಜನಾಂಗದವರ ಮುಂದೆ ನಾವು ಮುಸಲ್ಮಾನರು ಸಂಪೂರ್ಣ ಹಿಂದೆ ಬಿದ್ದಿರುವ ವಿಷಯ ನಾನು ವಿವರವಾಗಿ ಅರಿಕೆ ಮಾಡಿಕೊಳ್ಳತಕ್ಕ ಅವಶ್ಯವಿಲ್ಲ. ಇದು "ಅಂಗೈ ಹುಣ್ಣಿಗೆ ಕನ್ನಡಿ ಬೇಕೇ" ಎಂಬ ಗಾದೆಗೆ ಅನುಸಾರವಾಗಿದೆ. ದೇಶದಲ್ಲಿ ಎಲ್ಲಾ ಕಡೆಗಳಲ್ಲು ಎಲ್ಲಾ ಜನಾಂಗದವರು ತಮ್ಮ ತಮ್ಮ ಜನಾಂಗದವರ ಅಭಿವೃದ್ಧಿಗಾಗಿ ಸಭೆಗಳನ್ನೂ, ಸಂಘಗಳನ್ನೂ ಮತ್ತು ನಾನಾ ತರದ ಫಂಡುಗಳನ್ನೂ ಏರ್ಪಡಿಸಿಕೊಂಡು ಬಹು ಮುಂದೆ ಹೊರಟು ಹೋಗಿರುವ ವಿಷಯವೂ ಮತ್ತು ನಾವು ಮುಸಲ್ಮಾನರು ಸೋಮಾರಿಗಳಾಗಿ ಗಾಢವಾದ ನಿದ್ರೆಯಲ್ಲಿ ಮಲಗಿರುವ ವಿಷಯವೂ ತಮ್ಮ ಕಣ್ಣಿನ ಮುಂದೆ ಇದೆ. ಇದು ಎಂಥಾ ವ್ಯಸನಕರ ಮತ್ತು ಅಪಾಯಕರವಾದ ಸಂಭವ ಎಂದು ತಾವೆಲ್ಲರೂ ದೀರ್ಘಾಲೋಚನೆಯಿಂದ ಸಂಪೂರ್ಣವಾಗಿ ಯೋಚನೆ ಮಾಡಬೇಕಾದ ತಮ್ಮ ಅತ್ಯಂತ ಅವಶ್ಯಕರವಾದ ಕರ್ತವ್ಯವಾಗಿದೆ.

ಆದಕಾರಣ ನಾವು ತಮ್ಮ ಚಿಕ್ಕ ಸಹೋದರರು ತಮಗಳ ಪ್ರೀತಿ ಮತ್ತು ಸಹಾಯದಿಂದ ನಮ್ಮ ಮಹಾ ಧರ್ಮವು ಇಂಥಾ ಉತ್ತಮವಾದ ಉದ್ದಿಶ್ಯದಲ್ಲಿ ನಮಗೆ ಜಯ ಪಾಲಿಸಬಹುದೆಂದು ಆತನ ಮೇಲೆ ಭರವಸೆ ಇಟ್ಟು ಈ ಕಾರ್ಯಕ್ಕೆ ಇಳಿದು "ಅಂಜುಮನೆ ಇತ್ತೆಹಾದೆ ಇಸ್ಲಾಂ"ಯೆಂಬ ಒಂದು ಅಂಜುಮನನ್ನು ಸ್ಥಾಪಿಸಿರುತ್ತೇವೆ. ಇದರ ಶಾಖೆಗಳು ಪ್ರತಿ ಒಂದು ಭಾಗದಲ್ಲಿಯೂ ನಮ್ಮ ಸಹೋದರರಿಗೆ ಲಾಭಕರ ಮತ್ತು ಬಹು ಪ್ರಯೋಜನಕರಗಳಾಗಿವೆ. ಇದನ್ನು ಹಿಂದುಸ್ಥಾನಿಯಲ್ಲಿಯೂ ಮತ್ತು ಕನ್ನಡದಲ್ಲಿಯೂ ಛಾಪಿಸಿ ದೇಶದಲ್ಲೆಲ್ಲಾ ಹರಡುವಂತೆ ಏರ್ಪಡಿಸಿರುತ್ತೇವೆ. ಇದು ರಾಜಕೀಯ (ಪೊಲಿಟಿಕಲ್) ಅಂಜುಮನ್ ಅಲ್ಲದ್ದರಿಂದ ಪ್ರತಿ ಒಬ್ಬರೂ ಸ್ಕೂಲ್ ಮಾಸ್ಟರುಗಳು ಮತ್ತು ಸರಕಾರಿ ನೌಕರರು ಸಹ ಸೇರಬಹುದು.

ಆದ್ದರಿಂದ ನನ್ನ ಪ್ರಿಯ ಸಹೋದರರಾದ ದಖ್ನಿ, ಮಾಪಿಳೆ, ಒಕ್ಕಲಿಗ, ಲಬ್ಬಾಯಿ ಮತ್ತು ಸೇಟ್ ಸಹೋದರರಲ್ಲಿ, ತಾವು ಈ ಅಂಜುಮನಿನ ಮೆಂಬರುಗಳಾಗಿಯೂ, ಧರ್ಮಾರ್ಥವಾಗಿಯೂ, ಖೈರಾತ್ ಮೂಲಕವೂ ಮತ್ತು ತಮ್ಮಿಂದ ಸಹಾಯ ಆಗತಕ್ಕಂಥ ಇತರ ಬಾಬುಗಳಿಂದಲೂ ಇಸ್ಲಾಂ ಅಂಜುಮನಿಗೆ ಮನಃಪೂರ್ವಕವಾಗಿ ಸಹಾಯ ಮಾಡಿ ಮತ್ತು ಇತರರಿಂದ ಮಾಡಿಸಿ ಕೊಡಗು ದೇಶದಲ್ಲಿ ಈ ಅಂಜುಮನ್ ಭದ್ರವಾಗಿ ಸ್ಥಾಪನೆಯಾಗುವಂತೆ ಮಾಡಬೇಕಾದ್ದು ತಮ್ಮ ಮತಕರ್ತವ್ಯವಾಗಿದೆಯೆಂಬದಾಗಿ ಅತ್ಯಂತ ವಿನಯದಿಂದ ಅರಿಕೆಮಾಡಿಕೊಳ್ಳುವ.

ತಮ್ಮ ವಿಧೇಯ.
ಅಬ್ದುಲ್ ಮಜೀದ್‌ಖಾನ್,
ಬಿಸಿಗುಂದ, ಅಮ್ಮತ್ತಿ.

ಶ್ರೀ

ಆದಿತ್ಯಾದಿ ನವಗ್ರಹ ದೇವತಾಭ್ಯೋನಮಃ

ಶ್ಲೋ|| ಯಸ್ಯನಾಸ್ತಿ ಬಲು ಜನ್ಮಪತ್ರಿಕಾಯಾಶುಭಾಶುಭ
ಫಲ ಪ್ರಕಾಶಿನೀ||
ಅಂಧಕಂ ಭವತಿ ತಸ್ಯಜೀವಿತಂ| ದೀಪಹೀನಮಿವ ಮಂದಿರನಿಶಿ||

ಮಹಾಶಯರೇ,

ಜ್ಯೋತಿಷ್ಯ ಶಾಸ್ತ್ರವು ಬಹು ಗಂಭೀರವಾದ ಮತ್ತು ಪ್ರಯೋಜನಕರವಾದ ಶಾಸ್ತ್ರವಾಗಿರುವದು ಪರಮಾತ್ಮನ ಸ್ವರೂಪವನ್ನು ತಿಳಿಸುವ ಅತಿ ರಹಸ್ಯವಾದ ಶಾಸ್ತ್ರಗಳಿಗೂ ಕೂಡ ಜ್ಯೋತಿಶಾಸ್ತ್ರವೇ ಚಿತ್ರಕಾರವಾಗಿರುವುದು. ಭೂತ ಭವಿಷ್ಯದ್ವರ್ತಮಾನಗಳನ್ನೂ ತಿಳಿಸುವ ಗ್ರಹಗಳ ಸ್ಥಿತಿಗಳಿಂದ ತೋರುವ ವಿಪತ್ತುಗಳನ್ನು ಅವಶ್ಯವಾದ ಶಾಂತಿಗಳಿಂದ ಪರಿಹರಿಸಿಕೊಳ್ಳುವದಕ್ಕೆ ಇದನ್ನು ಬಿಟ್ಟು ಬೇರೆ ಯಾವ ಶಾಸ್ತ್ರಗಳೂ ತಿಳಿಸಲಾರವು. ಈ ರಹಸ್ಯವನ್ನು ತಿಳಿಯುವುದಕ್ಕೆ ಮುಖ್ಯಭಾಗಿಗಳಾದ ನಮ್ಮ ಭಾರತೀಯರಲ್ಲನೇಕರು ಈಗಿನ ನವನಾಗರೀಕತೆಯ ಪ್ರಭಾವದಿಂದಲೋ, ಅಜ್ಞಾನದಿಂದಲೋ ಈ ಶಾಸ್ತ್ರದ ಪ್ರಯೋಜನವನ್ನು ಹೊಂದದೆ ವೃಥಾ ಅನೇಕ ವಿಧವಾದ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಿರುವರಲ್ಲಾ ಎಂಬ ಕನಿಕರದಿಂದ ನಮ್ಮ ಭಾರತೀಯರಿಗೆ ಈ ಶಾಸ್ತ್ರದ ಮರ್ಮಗಳನ್ನು ತಿಳಿಸಬೇಕೆಂಬ ಸದುದ್ದೇಶದಿಂದಲೇ ನಾವು ಬೇರೆ ಬೇರೆ ಸ್ಥಳಗಳಲ್ಲಿ ಅನೇಕ ಜನಗಳಿಗೆ ತಿಳುವಳಿಕೆ ಕೊಟ್ಟು ಯೋಗ್ಯತಾಪತ್ರಗಳನ್ನು ಪಡೆದು ಈಗ ಇಲ್ಲಿರುವ ಮಹಾ ಜನಗಳಿಗಾಗಿ ತಿಳಿಸುವುದಕ್ಕಾಗಿ ಬಂದಿರುತ್ತೇವೆ. ಇಂಥಾ ಸುಸಮಯವನ್ನು ಕಳೆದುಕೊಳ್ಳದೆ ತಮ್ಮ ರೂಬರೂ ಅಥವಾ ಪತ್ರದ್ವಾರ ತಮಗಿಷ್ಟವಾದ ಪ್ರಶ್ನೆ ಮಾಡಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇವೆ. ಜನ್ಮ ಪತ್ರಿಕಾ ಅಥವಾ ಹುಟ್ಟಿದ ಸಂವತ್ಸರ, ಮಾಸ, ದಿನ, ಜನನ ಸಮಯದ ಕಾಲವನ್ನು ಮಾತ್ರ ತಿಳಿಸಬೇಕು

ದರಗಳು.

(1) ಜಾತಕವನ್ನು ಬರೆಯುವುದಕ್ಕೆ ರೂ. 2—0—0 ಗಣಿತ 1—1—0.

(2) ದಶಾಭುಕ್ತಿಗಳ ಮೇಲೆ

	ಪ್ರತಿ ವರ್ಷ.	ಪ್ರತಿ ಮಾಸ	ಪ್ರತಿ ವಾರ.	ಪ್ರತಿ ದಿನ.
(a)	5—0—0	10—0—0	15—0—0	20—0—0
(b)	3—0—0	5—0 0	6—0—0	10—0—0

(3) ಪ್ರಶ್ನೆ ಬಗ್ಗೆ ಬಾಬಗಳಲ್ಲಿ ಪ್ರತಿ ಭಾವಕಕ್ಕೆ ರೂ. 1

(4) ಹಸ್ತ ಪ್ರಶ್ನೆ ರೂ. 5 ಆಗಾಯಿತು 10.

(5) ಜಾತಕ ನೋಡಿ ಪ್ರಸ್ತುತ ಫಲ ತಿಳಿಸುವುದಕ್ಕೆ ರೂ. 1.

(6) ವಧೂ ವರರ ಜಾತಕಾನುಕೂಲ ಕೂಟ ನಾಡಾವಳಿ ನೋಡುವುದಕ್ಕೆ ರೂ. 1.

(7) ಲಗ್ನ ಕಟ್ಟಿ ಕೊಡುವುದಕ್ಕೆ ರೂ. 1.

ಸೂಚನೆ.—ದಕ್ಷಿಣೆ ಇಲ್ಲದೆ ಯಾವ ಕೆಲಸವನ್ನೂ ಅಂಗೀಕರಿಸುವುದಿಲ್ಲ.

ಪಿ. ವೆಂಕಟಸುಬ್ಬಯ್ಯ ಶಾಸ್ತ್ರಿ ಅಂಡ್ ಸನ್ಸ್,
ಜ್ಯೋತಿಷ್ಯಾಲಯ,
4—2. ಗೋಣಿಕೊಪ್ಪಲು.

ಗಮನಿಸಿರಿ! ಪರೀಕ್ಷಿಸಿ ನೋಡಿ!!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದ

ಪುತ್ರ ಸಂತಾನದ ಎಣ್ಣೆ.

ಅನೇಕ ಕಾರಣಗಳಿಂದ ಸ್ತ್ರೀಯರ ಹೊಟ್ಟೆಯಲ್ಲಿ ಕ್ರಿಮಿಗಳು ಸೇರಿ ಗರ್ಭವನ್ನು ನಾಶಮಾಡುವದು ಮತ್ತು ಗರ್ಭಕೋಶದಲ್ಲಿ ದುರ್ಮಾಂಸವು ಬೆಳೆದು ರಕ್ತವನ್ನು ಕೆಡಿಸುವುದು. ಹೀಗಿರುವ ಇವರಿಗೆ ಗರ್ಭವು ನಿಲ್ಲುವುದಿಲ್ಲ. ಇಂಥವರು ಈ ಎಣ್ಣೆಯನ್ನು 15 ದಿನಗಳು ಸೇವಿಸುವದರಿಂದ ಗರ್ಭಕೋಶದ ಎಲ್ಲಾ ವಿಧವಾದ ವ್ಯಾಧಿಗಳನ್ನು ಹೋಗಲಾಡಿಸಿ ಆ ತಿಂಗಳಲ್ಲಿಯೇ ಗರ್ಭವನ್ನು ನಿಲ್ಲಿಸುವದು. ಕೆಲವರಿಗೆ ಗರ್ಭವು 2—3 ತಿಂಗಳಾದ ನಂತರ ನಷ್ಟ ಹೋಗುತ್ತಿರುವುದು. ಅಂಥವರಿಗೂ ಸಹ ಈ ಎಣ್ಣೆಯು ಸಿದ್ಧೌಷಧವು. ಮಕ್ಕಳಿಲ್ಲದವರಿಗೆ ಈ ಎಣ್ಣೆಯು ಒಂದು ವರಪ್ರದವಾದ ಔಷಧ ವೆಂಬಾಯಿತು. ಮದರಾಸು ಪ್ರಾಂತ್ಯಗಳಲ್ಲಿ ಈ ಎಣ್ಣೆಯನ್ನು ಉಪಯೋಗಿಸಿ ಅನೇಕರು ಪುತ್ರ ಸಂತಾನವನ್ನು ಪಡೆದಿರುವರು. ಉಪಯೋಗಿಸುವ ವಿಧಾನವನ್ನು ಔಷಧದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಬಾಟ್ಲಿ 1ಕ್ಕೆ 2—0—0

ಎನ್. ವಿ. ಗೋಪಾಲ್ ಮೆಡಿಕಲ್ ಹಾಲ್,
52—7 37. ತಿರುಪಳ್ಳಿಬೀದಿ, ಮದರಾಸ್.

COORG CIVIL SURGEON'S OFFICE,
MERCARA, DATED THE 4TH FEBRUARY 1929.

NOTICE.

Sealed tenders will be received at the Civil Surgeon's Office, Mercara, up to 11 A. M., on Friday the 8th March 1929, for the supply by contract of all articles of diet, etc., required seperately for the use of the in-patients of (1) Mercara, (2) Virajpet and (3) Somwarpet Hospitals from 1st April 1929 to 31st March 1930 (both days inclusive).

For further particulars apply to the Medical Officer in charge of the Hospitals concerned

F. R. Thornton,
Major, I. M. S.,
Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, ತಾ. 4—2—'29.

ನೋಟೀಸು.

(1) ಮಡಿಕೇರಿ, (2) ವೀರರಾಜಪೇಟೆ ಮತ್ತು (3) ಸೋಮವಾರಪೇಟೆ ಆಸ್ಪತ್ರೆಗಳಲ್ಲಿರುವ ರೋಗಿಗಳ ಉಪಯೋಗಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಕಂಟ್ರಾಕ್ಟು ಮೂಲಕ 1929 ನೇ ಏಪ್ರಿಲ್ 1 ರಿಂದ 1930 ನೇ ಮಾರ್ಚ 31 ರ ವರೆಗೆ (ಆ ಎರಡು ದಿವಸಗಳೂ ಸೇರಿ) 3 ಆಸ್ಪತ್ರೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒದಗಿಸಿ ಕೊಡಲು ಮುದ್ರೆಹಾಕಿದ ದರಪಟ್ಟಿಗಳು (ಟೆಂಡರ್) 1929ನೇ ಮಾರ್ಚ 8ನೇ ಶುಕ್ರವಾರ ಬೆಳಗ್ಗೆ 11 ಗಂಟೆ ವರೆಗೆ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುವವು.

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಆಸ್ಪತ್ರೆಗಳ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರಿಗೆ ಬರೆಕೊಳ್ಳುವದು.

ಯಫ್. ಆರ್. ಥಾರ್ಂಟನ್,
ಮೇಜರ್, ಐ. ಯಂ. ಯಸ್.,
ಸಿವಿಲ್ ಸರ್ಜನ್, ಕೊಡಗು.

COORG FOREST DEPARTMENT, SOUTH DIVISION.

Timber Sale Notice.

Mercara, the 4th February 1929.

It is hereby notified that about 8000 c. ft. Teak, 2000 c. ft. Biti, 800 c. ft. Honne, 800 c. ft. Matti, 1200 c. ft. Nandi and 104 c. ft. Buruga, lying in the Coorg Timber Depot and about 3947 c. ft. Teak containing logs, branch pieces, poles, fence-posts and poratess 880 c. ft. Biti, 617 c. ft. Honne, 5626 c. ft. Nandi, 21145 c. ft. Matti and 714 c. ft. Junglewood lying in Depot at Tittimatti, Kalnalli and Nagerhole will be sold by public auction in convenient lots at Hunsur on 21—2—1929, commencing at 10 A. M. All the timber is open to inspection. For further particulars apply to the DIVISIONAL FOREST OFFICER, SOUTH COORG, MERCARA.

WANTED.

A taluk branch secretary for North Coorg Taluk on Rs. 50—5—75 plus consolidated (office) allowance of Rs. 40/— per mensem. The selected candidate has to deposit Rs. 235/—. Very decent prospects for honest and influential men. Particulars can be had on application.

Apply to:—

The Divisional Secretary,
N. L. S. R. Bank Ltd.,
(Madras)
(P. O.) Puttur,
South Kanara.

ಮಲೇರಿಯಾ ಕುರಿತ ಸ್ಪರ್ಧೆ.

ಮಲೇರಿಯಾ ಜ್ವರದ ಉತ್ಪನ್ನ, ಹಾವಳಿ ಮತ್ತು ಚಿಕಿತ್ಸೆ ಇವುಗಳ ವಿಷಯವಾಗಿ ಇಷ್ಟವುಳ್ಳ ಹೈಸ್ಕೂಲ್ ವಿದ್ಯಾರ್ಥಿಗಳು ಫೂಲ್ಸ್ ಕೇಪ್ ಕಾಗದದ ಮೂರು ಪುಟಗಳಿಗೆ ಮೀರದ ಒಂದು ಪ್ರಬಂಧವನ್ನು ಕನ್ನಡದಲ್ಲಿ ಬರೆದು ತಾರೀಕು 20—2—29 ರ ಒಳಗೆ ರಿಡ್‌ಕ್ರಾಸ್ ಸಂಘದ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡಬೇಕಾಗಿ ಕೋರಿದೆ. ಉತ್ತಮೋತ್ತಮ ಪ್ರಬಂಧಕ್ಕೆ ಇನಾಮು ಕೊಡಲಾಗುವುದು. ಉಳಿದ ಪ್ರಬಂಧಗಳನ್ನು ವಾಪಸು ಮಾಡುವ ಹಕ್ಕು ಕಾರ್ಯದರ್ಶಿಗಳಿಗೆ ಬಿಟ್ಟಿದೆ.

ಕಾರ್ಯದರ್ಶಿ.

ಪ್ರಕಟಣೆ.

ಸೋಮವಾರಪೇಟೆ ಲೇಟ್ ಸಾಹುಕಾರ್ ಡಿ. ಚೆನ್ನಬಸಪ್ಪ ಶೆಟ್ಟರ ವೈಸರ್ ಮಕ್ಕಳ ಬಾಪ್ತು, ಹಿರೀಕಾರ ಗ್ರಾಮದಲ್ಲಿರುವ ಸ. ನಂ. 81/6 86/2 84 89/25 83/2 28/3 28/4 28/6 78/2 ರ 35—13 ಎಕರೆ ಒಟ್ಟು ವಿಸ್ತೀರ್ಣದ ಆಸ್ತಿ, ಇದರ ಪೈಕಿ ಒಳ್ಳೇ ಕಾಫಿ ಅಂದಾಜು 30 ಎಕ್ರೆ, ಬಂಜರು ಕಾಫಿ ಅಂದಾಜು 3 37, ಖಾಲಿ ಜಾಗ ಅಂದಾಜು 0 64, ಹೊಲ 1 12 ಯನ್ನು ತಾರೀಕು 11—2—29ರಲ್ಲಿ ಪೂರ್ವಾಹ್ನ 11 ಗಂಟೆಯಿಂದ 2 ಗಂಟೆ ಒಳಗೆ ಸೋಮವಾರಪೇಟೆಯಲ್ಲಿ ಲೇಟ್ ಸಾಹುಕಾರ್ ಡಿ. ಚೆನ್ನಬಸಪ್ಪ ಶೆಟ್ಟರ ಮನೆ ಬಳಿ ಈ ಕೆಳಗೆ ಸೈನ್ ಮಾಡಿದವರ ರೂಬ್ ರೂಬ್ ಹರಾಜು ಮಾಡಲಾಗುತ್ತದೆ ಮಾರಾಟದ ಶರತುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಸೋಮವಾರಪೇಟೆ, ಡಿ. ಸಾಕಮ್ಮ.
ತಾ 22—1—29 (3—3)

ಇನಾಂ! ಇನಾಂ!!

4½ ಆಣೆ ಟಪ್ಪಾಲು ಸ್ಟಾಂಪು ಕಳುಹಿಸಿದರೆ 372 ಪುಟಗಳುಳ್ಳ ಬಹಳ ಉಪಯೋಗವಾದ ಮತ್ತು ಸುಂದರವಾದ

1929ನೇ ಇಸವಿಯ ಡಯರಿ

ಮುಫತ್ತಾಗಿ ಕಳುಹಿಸಲ್ಪಡುವದು. ತ್ವರೆ ಮಾಡಿರಿ

52—25 ಮದನಮಂಜರಿ ಫಾರ್ಮಸಿ,
1/94 ಚೀನಾ ಬಜಾರ್, ಮದ್ರಾಸ್.

ಕರ್ಣಿಕ

ಎ ಗ್ಯು ಮಿ ಕ್ ಶ್ಚ ರ್

ಮಲೇರಿಯಾ, ಇನ್‍ಫ್ಲುಯೆಂಝಾ, ಸಣ್ಣಜ್ವರ, ಚಳಿಜ್ವರ ಇವುಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲಶುದ್ಧಿಯಾಗಿ ಬೆವರು ಬಂದು ಜ್ವರವು ಬಿಡುತ್ತದೆ. ಬೆಲೆ ೧ ಬಾಟ್ಲಿಗೆ ಆಣೆ ೧೪. ಟಪ್ಪಾಲು ವೆಚ್ಚ ಬೇರೆ.

ಸಾ ರ ಸಾ ಪ ರಿ ಲಾ.

ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವುದಕ್ಕೆ ಇದು ಖಾತ್ರಿಯಾದ ಔಷಧ ಬೆಲೆ ೧ ಬಾಟ್ಲಿಗೆ ರೂ .೧—೦—೦. ಟಪ್ಪಾಲು ವೆಚ್ಚ ಬೇರೆ.

ಕರ್ಣಿಕ ಬ್ರದರ್ಸ್
12—6 ದುಬಾಷ್ ಲೇನ್.
ಗಿರಗಾಂವ, ಮುಂಬಾಯಿ.

ಏಕೆ ನರಳುತ್ತೀರಿ?

ಕ್ರಯವು ಅಂಚೆಹಾಸಲು.
ಇಲ್ಲದೆ ಉಚಿತವಾಗಿ ಕೊಡಲ್ಪಡುವ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

52—25 ಮದನಮಂಜರಿ ಫಾರ್ಮಸಿ,
1/94 ಚೈನ ಬಜಾರು ರೋಡು, ಮದ್ರಾಸು

ರೆನ್‍ಸನ್ ಆಫೀಸ್ ಕ್ಲಾಕ್.

ಈ ಗಡಿಯಾರಗಳು ಈ ಚಿತ್ರದಲ್ಲಿ ಕಾಣುವಂತೆಯೇ ಇರುವವು. ಇದರ ಸ್ಟಾಂಡು ಹಿತ್ತಾಳೆ, ಬೆಳ್ಳಿ, ಭಂಗಾರದ ರೇಖಿನಿಂದ ತಯಾರಾದದ್ದು. ಗಡಿಯಾರವು ಬಹು ಒಳ್ಳೆಯ ಲೀವರ್ ಮೂವ್‍ಮೆಂಟ್ಸಿನಿಂದ ತಯಾರಾದದ್ದು. ಪಿರಾರು ಗಂಟೆಯನ್ನು ತೋರಿಸುವವು. ಇವುಗಳನ್ನು ಗುಡಿ, ಅಂಗಡಿ, ರೀಡಿಂಗ್ ರೂಂ, ಸ್ಕೂಲ್ ಮತ್ತು ಮನೆಗಳಲ್ಲಿ ಇಡಲು ಬಹು ಚೆನ್ನಾಗಿದೆ ಇಂಥಾ ಸ್ಟಾಂಡಿನ ಗಡಿಯಾರಗಳು ಇದಕ್ಕೆ ಮೊದಲು ಇರಲಿಲ್ಲ ಹೊಸದಾಗಿ ಬಂದಿದೆ ಈ ಗಡಿಯಾರಗಳಿಗೆ ಖಾತ್ರಿಯಾದ 4 ವರ್ಷ ಗ್ಯಾರಂಟಿ ಕೊಡುವೆವು. ಒಂದನ್ನು ತರಿಸಿ ನೋಡಿರಿ ಬೇಡವಾದರೆ ವಾಪಸು ತೆಗೆದುಕೊಳ್ಳುವೆವು.

ಹಿತ್ತಾಳೆಯ ಸ್ಟಾಂಡಿನದು	4—8—0
ಬೆಳ್ಳಿಯ ರೇಖಿನದು	5—12—0
ಭಂಗಾರದ ರೇಖಿನದು.	6—4—0

ವಿಳಾಸ —ಲೀಗಲ್ ವಾಚ್ ಕಂಪೆನಿ,
52—34 ಪೋ|| ಬಾ|| ನಂ. 234, ಮದರಾಸು.

1929 ನೇ ಇಸವಿಯ ಪಾಕೆಟ್ ಡೈರಿ ಇನಾಂ.

ಈ ನಕ್ಷೆಯಲ್ಲಿ ಕಂಡ ಇಂಗ್ಲಿಷ್ ಮೇಡ್ ಫೌಂಟನ್ ಪೇನಾವನ್ನು ಕೊಳ್ಳುವವರಿಗೆ ಹೊಸ ವರ್ಷದ ಪಾಕೆಟ್ ಡೈರಿ ಒಂದನ್ನು ಇನಾಮಾಗಿ ಕೊಡುವೆವು. ಈ ಡೈರಿಯಲ್ಲಿ ಇಂಡಿಯಾ ದೇಶದ ಎಲ್ಲಾ ಗವರ್ನರುಗಳ ಹೆಸರುಗಳೂ, ರಾಜರುಗಳ ಹೆಸರುಗಳೂ, ಇಂತಿಂಥವರಿಗೆ ಇಷ್ಟೇ ಗುಂಡುಗಳು ಹಾರಿಸಬೇಕೆಂಬುವುದು, ಟಪಾಲು ಮತ್ತು ರೈಲು ವಿಷಯಗಳೂ, ಪಂಚಾಂಗ ಸಹಿತ ಇದೆ ಇದು ಇಂಗ್ಲಿಷು, ಕನ್ನಡ ತೆಲುಗು ಭಾಷೆಯಲ್ಲಿ ಪ್ರಿಂಟಾಗಿದೆ. ಪೇನಾವು ಲಂಡನ್ ಪಟ್ಟಣದಲ್ಲಿ ತಯಾರಾದದ್ದು.

ಕ್ರಯ ಪೇನಾ 1ಕ್ಕೆ ಡೈರಿ ಸಹಿತ 1—12—0

ವಿಳಾಸ:—ಕೆ. ಯೇಸ್ ರಾಧಾಕೃಷ್ಣ ಅಂಡ್ ಬ್ರದರ್ಸ್,
52—34 109. ಚೈನಾಬಜಾರ್ ರೋಡ್, ಮದರಾಸು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ೧ಕ್ಕೆ 0—14—0. ಟಿ. ಖ. 0—9—0.

ಕೆ. ಟಿ. ಡೋಂಗರೆ ಕಂಪೆನಿ,
52—2? ಗಿರಗಾಂವ, ಮುಂಬಯಿ.

ಅನೇಕ ಉಷ್ಣವ್ಯಾಧಿಗಳನ್ನು ಹೋಗಲಾಡಿಸಿ ಅಧಿಕ ಶರೀರ ಪುಷ್ಟಿ, ಧಾತುಪುಷ್ಟಿಯನ್ನು ಕಲ್ಪಿಸುವ

ರತನ್ ಮಿಶ್ರಿ ಹಲ್ವಾ

ವನ್ನು ಸೇವಿಸಿ.

ಗುಣ—ವೀರ್ಯವು ಮೂತ್ರದಲ್ಲಿ ಸೇರಿ ಹೋಗುವಿಕೆ ಮತ್ತು ನಿದ್ರಾಗಿರುವಿಕೆ, ಆಗಾಗ್ಗೆ ಸ್ವಪ್ನದಲ್ಲಿ ಸ್ಖಲನೆಯಾಗುವಿಕೆ, ಅತಿ ಸ್ವೇಚ್ಛಾಪ್ರವರ್ತನೆಯಿಂದಲೂ, ಬಾಲ್ಯದ ದುಂಭ್ಯಾಸದಿಂದಲೂ ನರಗಳು ದೌರ್ಬಲ್ಯವನ್ನು ಹೊಂದಿ, ಶೀಘ್ರ ಸ್ಖಲನೆಯಾಗುವಿಕೆ ಮತ್ತು ಶಕ್ತಿಯು ಕಮ್ಮಿಯಾಗಿರುವಿಕೆ, ಮೂತ್ರದ್ವಾರದ ವ್ರಣ, ಉರಿಯುವಿಕೆ, ಚಿರಕಾಲದ ಮೇಹ ವ್ಯಾಧಿಯಿಂದ ಶರೀರವು ನಾಶ ಹೋಗುವಿಕೆ, ನೇತ್ರರೋಗ, ಚರ್ಮವ್ಯಾಧಿ, ಉಷ್ಣವಾಯು ಸಂಬಂಧರೋಗ, ಎದೆ ಶೂಲೆ, ಮೈಹಸಡೆ, ಅಜೀರ್ಣ, ಕೆಮ್ಮು ಈ ವಿಧವಾದ ನಾನಾ ರೋಗಗಳನ್ನು ಗುಣಪಡಿಸಿ ಧಾತುಪುಷ್ಟಿ, ಶರೀರ ಪುಷ್ಟಿಯನ್ನುಂಟುಮಾಡುವುದು ಹೆಂಗಸರು ಸೇವಿಸಿದಲ್ಲಿ ಉಷ್ಣಗರ್ಭಕಾರಕ ವ್ಯಾಧಿಗಳೆಲ್ಲಾ ನೀಗುವವು **ಸಂಪೂರ್ಣ ಗುಣ ಉಂಟಾಗಲು ೩—೪ ಡಬ್ಬಿಗಳನ್ನು ಉಪಯೋಗಿಸಬೇಕು.**

ಕ್ರಯ—೧ ಪೌಂಡು ಟಿನ್ ೧ಕ್ಕೆ ರೂ ೫—೦—೦, ಅರ್ಧ ಪೌಂಡು ಟಿನ್ ೧ಕ್ಕೆ ರೂ ೨—೮—೦.

ಚಿಕ್ಕಪೇಟೆ, ವಿದ್ಯಾವಿಲಾಸ ಬುಕ್ಕು ಡಿಪೋವಿನಲ್ಲೂ ಮಾರಲ್ಪಡುತ್ತೆ

52—7. ವ್ಯವಸ್ಥಾಪಕರು.—ರತನ್ ಮಿಶ್ರಿ ಡಿಪೋ. (ಆಂಜನೇಯ ಜ್ಯೋತಿಷಾಲಯ,)
ಚಾಮುಂಡೇಶ್ವರಿಗುಡಿ ಬೀದಿ, ಬೆಂಗಳೂರು ಸಿಟಿ.

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿರಿ)

"ಔಷಧ ಸೀಸೆಗಳಿಗಿಂತಲೂ ಬರೇ ಜೀವನ ಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು."

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಅಸಿಸ್ಟಂಟ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯಬೋಧಕವಾದ ಮಾಸ ಪತ್ರಿಕೆಯು, ನಿಮಗೆ ಆರೋಗ್ಯ ದೃಢತೆಯಿಂದಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟ ರೋಗ ವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯ ಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹು ಕಾಲದಿಂದ ಶಸ್ತ್ರ ಚಿಕಿತ್ಸೆಯಲ್ಲಿಯೂ ಔಷಧ ಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಒಳಿಯಲ್ಲಿರುವಂತೆ ಭಾವಿಸಬಹುದು

ಆರೋಗ್ಯಚಂದ್ರಿಕೆ ಎಂಬೀ ಮಾಸ ಪತ್ರಿಕೆಯಲ್ಲಿ ಆಹಾರ ಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರ ಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವುವು. **ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.**

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವುದು ಟಪಾಲು ಹಾಸಲು ಕೂಡ ನೀವು ಕೊಡಬೇಕಾದುದಿಲ್ಲ.

52—20 **ಮ್ಯಾನೇಜರ್, ಆರೋಗ್ಯಚಂದ್ರಿಕೆ, 323 ತಂಬುಚೆಟ್ಟಿ ಬೀದಿ, ಮದರಾಸು.**

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗಿನ ಟ್ರಾಫಿಕ್ ಇನ್‌ಸ್ಪೆಕ್ಟರ ಹುದ್ದೆಯ ಅವಧಿಯನ್ನು 1—4—'29 ರಿಂದ ಒಂದು ವರ್ಷ ಮುಂದರಿಸಿರುವರು.

ಮಡಿಕೇರಿಯಲ್ಲಿ ಕುದುರೆ ಜೂಜು ಮಾರ್ಚಿ ತಿಂಗಳು 8, 11 ಮತ್ತು 13 ರಲ್ಲಿ ನಡೆಯುವದೆಂದು ತಿಳಿಯಬಂತ್ತದೆ.

ವಾರಂಟ್ಲಿ ಡಿಸ್ಪೆನ್ಸರಿಯ ಶಾಬೆಯೊಂದು ಸಂಟಿಕೊಪ್ಪ ಬಳ್ಳಿ ಈ ತಾ. 17 ರಲ್ಲಿ ತೆರೆಯಲ್ಪಡುವದೆಂದು ತಿಳಿಯುತ್ತೇವೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಬಜೆಟ್ಟು ಮೀಟಿಂಗು ಮಾರ್ಚಿ ತಾ. 8 ಮತ್ತು 11 ರಲ್ಲಿ ನಡೆಯುವದೆಂದು ವರ್ತಮಾನ.

ಸೆಷನ್ಸ್ ಕೋರ್ಟಿಗೆ ಹೋಗತಕ್ಕ ಮೊಬದಮ್ಮೆಗಳನ್ನು ಪಥಮತಃ ವಿಚಾರ ನಡಿಸುವ ಅಧಿಕಾರವು ಸಬ್‌ಜಡ್ಜರವರುಗಳಿಗೆ ಕೊಡಲಾಗಿದೆ.

ಕಳೆದ ಆದಿತ್ಯವಾರ ಪ್ರಾತಃಕಾಲ 4 ಗಂಟೆ ಸಮಯದಲ್ಲಿ ಮಡಿಕೇರಿಯಲ್ಲಿಯೂ, ದೇಶದ ಇತರ ಹಲವು ಕಡೆಗಳಲ್ಲಿಯೂ ಸ್ವಲ್ಪ ಭೂಕಂಪವಾಯಿತು.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಗೆ ವೀರಾಜಪೇಟೆ ಹೈಸ್ಕೂಲಿನಿಂದ 31 ರ ಪೈಕಿ 18 ವಿದ್ಯಾರ್ಥಿಗಳು ಅರಿಸಲ್ಪಟ್ಟಿರುವರೆಂದು ಇತ್ತಲಾಗಿ ತಿಳಿಯುತ್ತೇವೆ.

ಈ ತಾ 15 ರಲ್ಲಿ 6 ತಿಂಗಳು ರಜೆಯಲ್ಲಿ ಹೋಗುವ ಮೆ. ಪಾಲೇಕಂಡ ಮುತ್ತಣ್ಣನವರ ಬದಲು ಇಂಗ್ಲಿಷ್ ಆಫೀಸಿನ ಮೆ. ಶ್ರೀನಿವಾಸರಾವ್‌ರವರನ್ನು ಮಡಿಕೇರಿನಾಡು ಪಾರುಪತ್ಯಗಾರರಾಗಿ ಹಂಗಾಮಿಯಾಗಿ ನೇಮಿಸಿದ ವರ್ತಮಾನ ತಿಳಿಯಬರುತ್ತದೆ.

ದಿವಂಗತ ಮೆ ಆರ್. ಸಿ. ಮಂಜ್ಜಯ್ಯನವರ ಜಾಗೆಗೆ ಮೆ. ಯಸ್. ಬಸಪ್ಪನವರು ಮಡಿಕೇರಿ ಬೆಂಚ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು. ಕಳೆದ ವಾರ ಪ್ರಕಟಿಸಿದಂತೆ ಮೆ ಕೊಂಗಟ್ಟಿರ ಅಪ್ಪಯ್ಯನವರನ್ನು ಬೆಂಚ್‌ಕೋರ್ಟಿಗೆ ನೇಮಿಸಿದ್ದು ದಿವಂಗತ ಮೆ. ಕೊಳುವಂಡ ದೇವಯ್ಯನವರ ಜಾಗೆಗೆ ಆಗಿದೆ.

ಡೇರಾಡೂನಿನ ಇಂಪೀರಿಯಲ್ ಫಾರೆಸ್ಟ್ ಕಾಲೇಜಿನಲ್ಲಿ ಓದುತಿದ್ದ ಈಗ ತಾನೇ ಇಂಪೀರಿಯಲ್ ಫಾರೆಸ್ಟ್ ಸರ್ವಿಸ್ ಪರೀಕ್ಷೆಯಲ್ಲಿ 3 ನೇಯದಾಗಿ ತೇರ್ಗಡೆಹೊಂದಿದ ಬಸನಯನಂಡ ಲೇಟ್ ರಾ ಬಾ. ಮುತ್ತಣ್ಣನವರ ಪುತ್ರ ಮೆ. ಅಪ್ಪಚ್ಚುರವರು ಮೈಸೂರು ಪ್ರಾಂತ್ಯದಲ್ಲಿ ಅಸಿಸ್ಟೆಂಟ್ ಕನ್ಸರ್ವೇಟರಾಗಿ ನೇಮಿಸಲ್ಪಟ್ಟಿರುವರೆಂದು ಕೇಳಿ ಸಂತೋಷಪಡುತ್ತೇವೆ. ಇವರಿಗೆ ನಮ್ಮ ಅಭಿನಂದನೆಗಳಿವೆ.

ಮೆ. ಕೊಳ್ಳಿಮಾಡ ಕರುಂಬಯ್ಯ ಯಂ. ಎಲ್. ಸಿ. ಯವರ ಪತ್ನಿ ದೇಚಮ್ಮನವರು ಕಳೆದ ತಿಂಗಳು 18 ರಲ್ಲಿ ಗಂಡು ಮಗುವನ್ನು ಪ್ರಸವಿಸಿ, ಈ ತಾ. 2 ರಲ್ಲಿ ಸೂತಿಕಾಜ್ವರದಿಂದ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ. ಖಾದಿ ಒಟ್ಟೆಯನ್ನು ಪ್ರೀತಿಸಿ, ಕೆಲವು ವರ್ಷಗಳಿಂದ ಅದನ್ನೇ ಉಪಯೋಗಿಸುತ್ತಿದ್ದ ನಮ್ಮ ದೇಶದ ಬಹು ಕಡಿಮೆ ಸಂಖ್ಯೆಯ ದೇಶಭಕ್ತ ಸ್ತ್ರೀಯರಲ್ಲಿ ಇವರು ಒಬ್ಬರಾಗಿದ್ದರು.

ಮಡಿಕೇರಿ—ಭಾಗಮಂಡ್ಲ ರಸ್ತೆಯ 4/2 ಮೈಲು ಬಳಿ ಇರುವ ಅಪ್ಪಂಗಳ ಸೇತುವೆಯು ಅಭದ್ರವಾಗಿರುವದರಿಂದ ಅದು ಈ ತಾ. 9 ರಿಂದ ವೈವಾಟಕ್ಕೆ ಮುಚ್ಚಲ್ಪಡುವದೆಂದೂ, ಕೋಡಿಗಾಗಿ ಗಾಡಿ, ಮೋಟಾರು ವಗೈರೆ ದಾಟುವಂತೆ ತತ್ಕಾಲ ಒಂದು ರಸ್ತೆಯನ್ನು ಮಾಡುವರೆಂದೂ, ಎರಡು ತಿಂಗಳ ಅಂತ್ಯದಲ್ಲಿ ಸದರಿ ಸೇತುವೆಯನ್ನು ವೈವಾಟಕ್ಕೆ ಸರಿಪಡಿಸುವರೆಂದೂ ಎಗ್ಸಿಕ್ಯುಟಿವ್ ಇಂಜಿನೀಯರವರು ತಿಳಿಸಿರುತ್ತಾರೆ.

1929 ನೇ ಏಪ್ರಿಲ್ 1 ರಿಂದ 1930 ನೇ ಮಾರ್ಚಿ 31 ರ ವರೆಗೆ ಒಂದು ವರ್ಷ ಡಿಸ್ಟ್ರಿಕ್ಟ್‌ಬೋರ್ಡು ಟೋಲ್‌ಗೇಟುಗಳಲ್ಲಿ ಸುಂಕವಸೂಲ ಹಕ್ಕು ಅಸಿಸ್ಟೆಂಟ್ ಕಮಿಷನರಿಂದ ಈ ಕೆಳಗಿನ ಮೇರೆ ಹರಾಜು ಮಾಡಲ್ಪಡುವದೆಂದು ಗಜೆಟಿನಲ್ಲಿ ಪ್ರಕಟವಾಗಿದೆ. ಮೂರ್ನಾಡು, ಸಿದ್ದೇಶ್ವರ ಗದ್ದಿಗೆ, ಅಬಿಕೊಲ್ಲಿ ಮತ್ತು ಕುಟ್ಟ—ಮಾರ್ಚಿ ತಾ. 20 ರಲ್ಲಿ ವೀರಾಜಪೇಟೆ ತಾಲೋಕು ಕಚೇರಿ ಬಳಿ. ಫ್ರೇಜರ್‌ಪೇಟೆ, ಸಿರಂಗಾಲ, ಸಿಲುವಾಗಲು, ಎಡೆಹಳ್ಳಿ, ಮತ್ತು ಸಂಪಾಜೆ—ಮಾರ್ಚಿ ತಾ 22 ರಲ್ಲಿ ಮಡಿಕೇರಿತಾಲೋಕು ಆಫೀಸು ಬಳಿ.

ವೀರಾಜಪೇಟೆ ಹೈಸ್ಕೂಲಿನ ವಾರ್ಷಿಕೋತ್ಸವವು ಈ ತಾ. 16ನೇ ಶನಿವಾರ ಮೈಸೂರು ಯುನಿವರ್ಸಿಟಿಯ ಪ್ರೊಫೆಸರ್ ವಾಡಿಯ ಬಿ. ಎ. (ಕ್ಯಾಂಟಬ್) ಬಾರ್ ಎಟ್ ಲಾರವರ ಅಧ್ಯಕ್ಷತೆಯಲ್ಲಿ ನಡೆಯುವದು ಬೆಳಿಗ್ಗೆ 8½ ಗಂಟೆಯಿಂದ 12 ಗಂಟೆ ವರೆಗ ಆಟೋಟಗಳೂ, ಸಾಯಂಕಾಲ 4 ಗಂಟೆಯಿಂದ 6 ಗಂಟೆ ವರೆಗೆ ವರದಿಗಳ ಓದುವಿಕೆ, ಇನಾಮು ಹಂಚುವಿಕೆ ಮೊದಲಾದವುಗಳೂ, 6 ಗಂಟೆಯಿಂದ 8 ಗಂಟೆ ವರೆಗೆ ಇಂಗ್ಲಿಷ್ ಮತ್ತು ಕನ್ನಡ ನಾಟಕಗಳೂ ಜರಗುವವು. ಮರುದಿನ ಬೆಳಿಗ್ಗೆ 9 ಗಂಟೆಗೆ ಪ್ರೊ. ವಾಡಿಯರವರು "ಆದರ್ಶ ಶಿಕ್ಷಣ" ವನ್ನು ಕುರಿತು ಭಾಷಣ ಮಾಡುವರು. ನಂತರ ಸ್ವಾಮಿ ಸಿದ್ದೇಶ್ವರನಂದರವರು ಭಾಷಣಮಾಡುವ ಸಂಭವವೂ ಇದೆಯಂತೆ.

ಮೆ. ಪಾರ್ವಂಗಡ ಕುಶಾಲಪ್ಪನವರ ಮರಣದಿಂದ ಕಾಲಿಯಾಗಿರುವ ಕಿಗ್ಗಟ್ಟುನಾಡು ತಾಲೋಕು ಜಮ್ಮಾಸರ ಕಾರ್ನಿಲು ಮೆಂಬರುತನಕ್ಕೆ ಬರುವ ಮಾರ್ಚಿ ತಾ. 2 ರೊಳಗೆ ಇಲೆಕ್ಷನ್ನು ಜರಗಾಯಿಸಬೇಕೆಂದೂ, ಅದಕ್ಕೆ ಉಮೇದುವಾರರು ಈ ತಾ 9 ರೊಳಗೆ ತಮ್ಮ ಅಪ್ಲಿಕೇಶನುಗಳನ್ನು ವೀರಾಜಪೇಟೆಯಲ್ಲಿ ರಿಟರ್ನಿಂಗ್ ಆಫೀಸರ (ಸಬ್‌ಜಡ್ಜರವರಿಗೆ) ಕೊಡತಕ್ಕದ್ದೆಂದೂ, ತಾ. 11 ರಲ್ಲಿ ಅಪ್ಲಿಕೇಶನುಗಳು ಪರಿಶೋಧಿಸಲ್ಪಡುವವೆಂದೂ, ತಾ. 13 ರಲ್ಲಿ ಉಮೇದುವಾರರುಗಳ ಹೆಸರುಗಳು ಪ್ರಕಟಿಸಲ್ಪಡುವವೆಂದೂ, ಒಂದಕ್ಕಿಂತ ಹೆಚ್ಚು ಉಮೇದುವಾರರುಗಳಿದ್ದರೆ ಈ ತಾ. 27 ನೇ ಬುಧವಾರ ಕಿಗ್ಗಟ್ಟುನಾಡು ತಾಲೋಕು ಜಮ್ಮಾ ಓಟರುಗಳಿಂದ ಓಟು ತೆಗೆಯಲಾಗುವದೆಂದೂ ಪ್ರಕಟಿಸಲಾಗಿದೆ.

ಹಿಂದೂದೇಶ.

ಹಿಂದೂದೇಶದ ರಾಜರುಗಳ ಕಾನ್‌ಫರೆನ್ಸಿನ ವಾರ್ಷಿಕ ಸಮ್ಮೇಳನವು ಈ ತಾ 11ರಲ್ಲಿ ಡೆಲ್ಲಿಯಲ್ಲಿ ವೈಸರಾಯರಿಂದ ತೆರೆಯಲ್ಪಡುವದು.

ಡೆಲ್ಲಿ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಪುನಃ ಡಾಕ್ಟರ್ ಅನ್ಸಾರಿಯವರೂ, ಜನರಲ್ ಸೆಕ್ರಟರಿಯಾಗಿ ಪಂಡಿತ ಇಂದ್ರರವರೂ ಆರಿಸಲ್ಪಟ್ಟಿರುವರು.

1928ನೇ ಇಸವಿಯಲ್ಲಿ ಕಲ್ಕತ್ತಾ ಪಟ್ಟಣದ ಬೀದಿಗಳಲ್ಲಿ ನಡೆದ ಅಪಘಾತಗಳಿಂದ 107 ಜನರು ಮೃತರಾದರೆಂದೂ, 2357 ಜನರಿಗೆ ಗಾಯಗಳಾದವೆಂದೂ ಪ್ರಕಟವಾಗಿದೆ.

ಬಾವಿಯ ಉತ್ಪತ್ತಿ ಮತ್ತು ಮಾರಾಟಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಸರಕಾರದವರು ಮಂಜೂರುಮಾಡಬೇಕೆಂಬ ಠರಾವು ಬಿಹಾರ್ ಕೌನ್ಸಿಲಿನಲ್ಲಿ ದೀರ್ಘ ಚರ್ಚೆ ನಡೆದು ಪಾಸಾಗಲಿಲ್ಲ.

ಬೊಂಬಾಯಿಯಲ್ಲಿ ಒಂದು ಕಟ್ಟಡವು ಬಿದ್ದು ಹೋದ್ದರಿಂದ ಆಗಿನ ಇದ್ದವರು ಬಳಿಯ ಕಳೆದ ವಾರ ಆಗಿದೆ. ಇದರಿಂದ ಹಲವು ಕಡೆಗಳಲ್ಲಿ ಬೆಳೆಗಳು ಕೆಟ್ಟಿರುವದಲ್ಲದೆ ಪ್ರಾಣ ನಷ್ಟವೂ ಉಂಟಾಗಿದೆ ಎಂಬುದು.

ಬೊಂಬಾಯಿಯಲ್ಲಿ ಪಠಾಣರು ಚಿಕ್ಕ ಮಕ್ಕಳನ್ನು ಕದ್ದುಕೊಂಡು ಹೋಗುತ್ತಾರೆ ಎಂಬ ಸುಳ್ಳು ಸುದ್ದಿಯು ಹಬ್ಬಿದ್ದರಿಂದ ತಾ 4ರಲ್ಲಿ ಗಿರಣಿ ಮತ್ತು ರೈಲ್ವೆ ಕೆಲಸಗಾರರು ಕಂಡಕಂಡಲ್ಲಿ ಪಠಾಣರ ಮೇಲೆ ಬಿದ್ದು ಜಗಳವಾಡಿದ್ದರಿಂದ ಸುಮಾರು 100 ಪಠಾಣರಿಗೆ ಜಖಂ ಆಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರಂತೆ. ಕೆಲವು ಮರಣಗಳೂ ಆಗಿವೆ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಳಿಯವರು ಬರೆಯ ಮೂಲಕ ಪರದೇಶಿ ಒಟ್ಟೆಯ ಬಹಿಷ್ಕಾರವನ್ನು ನಡೆಸಲು ಮಹಾತ್ಮಗಾಂಧಿಯವರು ತಯಾರಿಸಿರುವ ವಿಧಾನವನ್ನು ಒಟ್ಟಾಗಿ ಒಪ್ಪಿಕೊಂಡಿರುವರು. ಈಗ ಕೂಡಲೆ ಕಾಂಗ್ರೆಸ್ ಸಂಸ್ಥೆಗಳನ್ನು ಜಾಗರೂಕರಿಸಿ ಪರಿಪೂರ್ಣ ಬಹಿಷ್ಕಾರ ಕಾರ್ಯವನ್ನು ಕೈಕೊಳ್ಳುವುದಕ್ಕೆ ನಿಶ್ಚೈಸಿರುವರು.

ಕಲ್ಕತ್ತಾ ಕಾಂಗ್ರೆಸ್ಸಿನಲ್ಲಿ ತೀರ್ಮಾನಿಸಿದಂತೆ ನೆಹರು ವರದಿಯ ಪ್ರಚಾರ, ಕಾಂಗ್ರೆಸ್ ಸಂಸ್ಥೆಗಳನ್ನು ಬಲಪಡಿಸುವಿಕೆ, ಪರದೇಶಿ ಬಟ್ಟೆ ಬಹಿಷ್ಕಾರ, ಬ್ರಿಟಿಷ್ ಸಾಮಾನುಗಳ ಬಹಿಷ್ಕಾರ ಮುಂತಾದ ಕೆಲಸಗಳನ್ನು ನಡಿಸಲು ಮಹಾರಾಷ್ಟ್ರ ಕಾಂಗ್ರೆಸ್ ಕಮಿಟಿಯವರು ಒಂಭತ್ತು ಉಪಕಮಿಟಿಗಳನ್ನು ನೇಮಿಸಿರುವರು. ಈ ಉಪ ಕಮಿಟಿಗಳು ಒಡನೆ ಕೆಲಸವನ್ನು ಪ್ರಾರಂಭಿಸಿ ತಿಂಗಳುವಾರ ವರದಿ ಪ್ರಕಟಿಸಿರುವಂತೆ.

ಮಹಾತ್ಮ ಗಾಂಧಿಯವರು ತಾ. 4ರಲ್ಲಿ ಕರಾಚಿಗೆ ಹೋದಾಗ ಅಲ್ಲಿಯ ನಿವಾಸಿಗಳು 35,000 ರೂಪಾಯಿಗಳನ್ನು ಅವರ ಉಪಯುಕ್ತರಾದ ಫಂಡಿಗೆ ಜನರಿಂದ ಮಹಾತ್ಮರಿಗೆ ಒಪ್ಪಿಸಿದರು. ಮಹಾತ್ಮರಿಗೆ ಸ್ವಾಗತವಿತ್ತಿಯಲು ಸೇರಿದ್ದ ಸಭೆಯಲ್ಲಿ ಸುಮಾರು 30 ಸಾವಿರ ಜನರು ನೆರೆದಿದ್ದರು. ಖಾದಿ ಪ್ರಚಾರಕ್ಕಾಗಿ ಅವರು ಸಾವಿರ ರೂಪಾಯಿಗಳನ್ನು ಮಹಾತ್ಮರಿಗೆ ಕೊಟ್ಟರು. ಜನರು ಬಹು ಉತ್ಸಾಹಪೂರಿತರಾಗಿದ್ದರು. ಎರಡು ದಿನಗಳನಂತರ ಗಾಂಧಿಯವರು ಜಾಕೋಬಾಬಾದಿಗೆ ಹೋದರು.

ವಿದೇಶ.

ಐರ್ಲೇಂಡಿನ ನೇಶನಲಿಸ್ಟ್ ಮುಂದಾಳಾದ ಮೆ. ಡಿವೇಲರವರು ಡಬ್ಲಿನಿನಿಂದ ಬೆಲ್‌ಫಾಸ್ಟಿಗೆ ಹೋಗುವಾಗ್ಯೆ ಅರೆಸ್ಟಿನಲ್ಲಿ ಸೆರೆಹಿಡಿಯಲ್ಪಟ್ಟಿರುವರು.

ಸ್ಪೈನಿನಲ್ಲಿ ಆಗಾಗ್ಯೆ ನಡೆಯುತ್ತಿರುವ ದಂಗೆಯನ್ನು ನಿಲ್ಲಿಸುವದಕ್ಕಾಗಿ ಅಲ್ಲಿಯ ಅರಸರಾದ ಅಲ್ಫಾನ್ಸೋರವರು ಜನರಲ್ ಪ್ರಿ ಮಿರೇರವರ ಸರಕಾರಕ್ಕೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟಿರುವರು.

ಯೂಗೊಸ್ಲಾವಿಯ ಸರಕಾರದವರು ತಮ್ಮ ಸಿವಿಲ್ ಸರ್ವಿಸ್ ಡಿಪಾರ್ಟ್‌ಮೆಂಟಿನಲ್ಲಿ ಸರಕಾರಿ ಆಫೀಸುಗಳಲ್ಲಿ ಟೀ ಮತ್ತು ಕಾಫಿ ಕುಡಿಯಕೂಡದೆಂತಲೂ, ಆದಿತ್ಯವಾರ ವಿನಹ ವಾರಕ್ಕೆ 6 ದಿವಸ ಮಾತ್ರ ರಜೆ ಇರುವದೆಂತಲೂ ನಿಬಂಧನೆ ಮಾಡಿರುವರು.

ರಷ್ಯಾದ ಈಗಿನ ಸೋವಿಯೆಟ್ ಸರಕಾರಕ್ಕೆ ವಿರೋಧವಾಗಿರುವ ಒಬ್ಬ ಪ್ರಮುಖ್ಯ ಮುಂದಾಳಾದ ಮೆ. ಯಂ. ಟ್ರಾಟ್ಸ್ಕಿಯವರು ತುರ್ಕಿಸ್ಥಾನಕ್ಕೆ ಹೋಗುತ್ತಿರುವಾಗ್ಯೆ ಕಪ್ಪು ಸಮುದ್ರ ಬಾರುಕ್ಕಾಗಿ ಸಮುದ್ರದಲ್ಲಿ ಮುಳುಗಿಸಲ್ಪಟ್ಟರೆಂಬ ವರ್ತಮಾನವು ನಿಜವಲ್ಲವೆಂದು ಪ್ರಕಟವಾಗಿದೆ.

ವ್ಯಾಂಟಿಸ್ಲಿನರಿ ಫ್ಯಾಕ್ಟರಿ ಕೆಲಸಗಾರರ ಸಂಘದ ಒಂದು ಮೀಟಿಂಗಿನಲ್ಲಿ ಇಂಗ್ಲೆಂಡಿನಲ್ಲಿ ಅತ್ಯಂತ ಹೆಚ್ಚಿನ ಸಾವನ್ನು ಸೂಚಕರಾಗಿದೆ. ಇದರಿಂದಾಗಿ ಕೆಲಸಗಾರರು ಕೈಗಾರಿಕೆಗಳನ್ನು ಬಿಟ್ಟು ಬೇರೆಡೆಗೆ ಹೋಗಬೇಕಾಗಿ ಬರುತ್ತಿದೆಯೆಂದು ಸರಕಾರದವರು ಈ ವಿಷಯದಲ್ಲಿ ಸರಿಯಾದ ಉಪಾಯಗಳನ್ನು ಸೂಚಿಸಲು ಸಮಿತಿಯನ್ನು ನೇಮಿಸಬೇಕೆಂದು ಕೇಳಿಕೊಳ್ಳಲಾಗಿದೆ. ಇದೇ ಇಂಗ್ಲೆಂಡಿನ ಪರಿಸ್ಥಿತಿ; ನಮ್ಮ ದೇಶದ ಸ್ಥಿತಿ ಇದಕ್ಕೂ ಕಡೆ ಎಂಬುದನ್ನು ಮರೆಯಬಾರದು. ಹಾಗಿದ್ದರೂ ಎಚ್ಚರಗೊಳ್ಳುವೆವೇ?

ಯೂರೋಪಿನ ಖಂಡದಲ್ಲಿ ಬಹು ಶೀತವಾದ ಗಾಳಿ ಬೀಸುತ್ತಿರುವದರಿಂದ ಹಲವು ಕಡೆಗಳಲ್ಲಿ ಹಿಮ ಕಟ್ಟಿಕೊಂಡು ರೈಲ್ವೆ, ಟೆಲಿಗ್ರಾಫ್ ಮೊದಲಾದ ವ್ಯವಹಾರಗಳು ನಿಂತು ಹೋಗಿವೆ. ಕಪ್ಪು ಸಮುದ್ರ ತೀರದಲ್ಲಿರುವ ಬಂದರುಗಳೆಲ್ಲವೂ ಹಿಮದಿಂದ ಮುಚ್ಚಲ್ಪಟ್ಟಿವೆ. ಉತ್ತರ ಚೈನಾ ಮತ್ತು ಶಾಂಗಹಾಯಿಯಲ್ಲಿಯೂ ಚಳಿಯಿಂದ ಹಲವು ಮರಣಗಳುಂಟಾಗಿವೆಯಂತೆ.

ಜಲಾಲಾಬಾದಿನಲ್ಲಿ ಅಮೀರ ಪದವಿಗೆ ಏರಿರುವ ಅಲಿ ಅಹ್ಮದ್ ಜಾನ್‌ರವರು ಬೇಗನೆ ಕಾಬೂಲನ್ನು ಮುತ್ತಿಗೆ ಹಾಕುವರೆಂದೂ, ಜಯವಾದರೆ ಅಮಾನುಲ್ಲಾರವರೇ ಪುನಃ ಅಫ್ಘಾನಿಸ್ಥಾನದ ಪಟ್ಟಕ್ಕೇರಲು ಸಹಾಯಮಾಡುವರೆಂದೂ ವರ್ತಮಾನ. ಪರ್ಶಿಯಾ ಸರಕಾರದವರು ಅಮಾನುಲ್ಲಾರವರಿಗೆ ಸಹಾಯಾರ್ಥವಾಗಿ ಅಫ್ಘಾನಿಸ್ಥಾನಕ್ಕೆ ದಂಡು ಕಳುಹಿಸುವರೆಂದೂ ಸುದ್ದಿ ಇದೆ. ಪ್ಯಾರಿಸ್ ಪಟ್ಟಣದಲ್ಲಿ ಓದುತ್ತಿದ್ದ ಅಮಾನುಲ್ಲಾರವರ ಮಗ ಹಿಡಿಯತುಲ್ಲಾರವರು ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿ ಅಫ್ಘಾನಿಸ್ಥಾನದ ಸರಕಾರದಲ್ಲಿ ಭಾಗ್ಯ ತೆಗೆದುಕೊಳ್ಳಲು ಬರ್ಲಿನ್, ಮಾಸ್ಕೋಕ್ಕಾಗಿ ಕಂದಹಾರಿಗೆ ಹೊರಟಿರುವರು. ತನ್ನ ತಂದೆಯವರು ಕಡೆಗೆ ಖಾಡಿತವಾಗಿಯೂ ಶತ್ರುಗಳನ್ನು ಜಯಿಸುವರೆಂದು ಅವರು ಬರ್ಲಿನಿನಲ್ಲಿ ಧೈರ್ಯದಿಂದ ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು.

COORG CIVIL SURGEON'S OFFICE,
MERCARA, DATED THE 4TH FEBRUARY 1929.

NOTICE.

Sealed tenders for the hiring out of calves to the Vaccine Depot at Mercara for one year commencing from 1st April 1929 to 31st March 1930, will be received at the Civil Surgeon's Office, Mercara up to 11.30 A. M., on Friday the 8th March 1929.

For terms and other particulars apply to the Vaccine Inspector or the Civil Surgeon's Office at Mercara.

F R. Thornton,
Major, I. M. S.,
Civil Surgeon, Coorg and
Superintendent of Vaccination.

ನೋಟೀಸು.

1929 ನೇ ಏಪ್ರಿಲ್ 1 ರಿಂದ 1930 ನೇ ಮಾರ್ಚಿ 31 ರ ವರೆಗೆ ಒಂದು ವರ್ಷ ಮಡಿಕೇರಿ ವೇಕ್ಸಿನ್ ಡಿಪೋವಿಗೆ ಕರುಗಳನ್ನು ಬಾಡಿಗೆಗೆ ಕೊಡಲು ಮುದ್ರೆಹಾಕಿದ ದರಖಾಸ್ತುಗಳು (ಟೆಂಡರ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1929 ನೇ ಮಾರ್ಚಿ 8 ನೇ ಶುಕ್ರವಾರ ಬೆಳಿಗ್ಗೆ 11. 30 ಗಂಟೆ ವರೆಗೆ ತೆಗೆದುಕೊಳ್ಳಲಾಗುವವು.

ಶರತುಗಳು ಮತ್ತು ವಿವರಗಳಿಗೆ ವೇಕ್ಸಿನ್ ಇನ್‌ಸ್ಪೆಕ್ಟರಿಗೆ ಅಥವಾ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿಗೆ ಬರೆದುಕೊಳ್ಳುವದು.

ಯಫ್. ಆರ್. ಥಾರ್ನ್‌ಟನ್,
ಮೇಜರ್, ಐ ಯಂ. ಯಸ್,
ಸಿವಿಲ್ ಸರ್ಜನ್, ಕೊಡಗು,
2—1 ಮತ್ತು ವೇಕ್ಸಿನೇಶನ ಸುಪರಿಂಟೆಂಡೆಂಟ್.

ಕೊಡಗು ಡಿಪ್ಯುಟಿಡೈರೆಕ್ಟರವರ ಆಫೀಸ್.
ಮಡಿಕೇರಿ, ತಾರೀಖು 4—2—1929.

ಇಸ್ತಿಹಾರ್ ನಾಮ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—ಅಮ್ಮತ್ತಿ ಹೋಬಳಿ ಆಸಿಸ್ಟೆಂಟ್‌ಸರ್ಜನ್‌ರವರ ಅಮೃತ ಮಹಾಲ್ ಬೀಜದ ಹೋರಿಯನ್ನು ಇದೇ ಫೆಬ್ರವರಿ ತಾ. 17ನೇ ಆದಿತ್ಯವಾರದಿನ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಗೋಣಿಕೊಪ್ಪಲಿನಲ್ಲಿ ಪೊನ್ನಂಪೇಟೆ ಪಾರುಪತ್ಯಗಾರರ ಮುಂದೆ ಹರಾಜು ಹಾಕಲ್ಪಟ್ಟು ಚಡಿಯರಕಾಸ್ತುದಾರರಿಗೆ ವಿಕ್ರಯಿಸಲ್ಪಡುವುದು. ಹರಾಜಿನಲ್ಲಿ ಪಡೆಕೊಂಡವರು ಪೂರ ಬೆಲೆಗಳನ್ನು ಕೂಡಲೇ ಪಾರುಪತ್ಯಗಾರರಿಗೆ ಪಾವತಿಮಾಡತಕ್ಕದ್ದು. ತಪ್ಪಿದರೆ ಬೀಜದ ಹೋರಿಯನ್ನು ಪುನಃ ಹರಾಜು ಮಾಡಿ ಕಮ್ಮಿ ಬಂದ ಹಣವನ್ನು ಮೊದಲು ಪಡೆಕೊಂಡವರಿಂದ ವಸೂಲು ಮಾಡಲಾಗುವುದು.

ಕೆ. ಎನ್. ಸುಬ್ರಾಯ,
ಡಿಪ್ಯುಟಿ ಡೈರೆಕ್ಟರ್,
ಲ್ಯಾಂಡ್ ರಿಕಾರ್ಡ್ಸ್ & ಅಗ್ರಿಕಲ್ಚರ್, ಕೊಡಗು.
ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, ತಾ. 4—2—'29.

ಮಾರುತ್ತಾರೆ.

ಮಡಿಕೇರಿಯಿಂದ 7ನೇ ಮೈಲಲ್ಲಿ ಇರುವ ಅಬ್ಬಿಯಾಲ್ ತೋಟದ ಮೇಲ್ಗಡೆಯಲ್ಲಿ ಲೇಟ್ ಮಿಸ್ಟರ್ ಜಿ. ಕೆ. ಮಾರ್ಟಿನ್‌ರವರ ಬಾಬ್ತು ಮರಗೋಡು ಗ್ರಾಮಕ್ಕೆ ಸೇರಿದ ಕಾಫಿ ನಾಟುವಳಿಗೆ ಮತ್ತು ಒಂಗ್ಲೆ ಸೈಟಿಗೆ ಉಪಯೋಗವಾಗುವ 9½ ಎಕರೆ ಜಾಗವನ್ನು ಮಾರುತ್ತಾರೆ.

ತಪಶೀಲು ಈ ಕೆಳಗಿನ ವಿಳಾಸದವರಿಗೆ ಬರೆದು ತಿಳಕೊಳ್ಳಬಹುದು.

ಡಬ್ಲ್ಯು. ಜಿ. ಎಲ್. ಹಾರ್ಸನ್ಸ್,
ಮೇನೇಜರ್,
ದಲಕಾವೇರ್ನ್ ಎಸ್ಟೇಟ್,
1—1 ಚಟ್ಟಳ್ಳಿ ಪೋಸ್ಟು.

ವಿನಂತಿ.

ಇಂಡಿಯನ್ ರೆಡ್ ಕ್ರಾಸ್ ಸಂಘದ ಕೊಡಗಿನ ಶಾಖೆಯವರು ಪ್ರತಿ ವರ್ಷ ನಡಿಸುತ್ತಿರುವ ಆರೋಗ್ಯ ಮತ್ತು ಶಿಶು ಪ್ರದರ್ಶನವನ್ನು ಹಾಲಿ ವರುಷ ಮಾರ್ಚಿ ತಿಂಗಳ ತಾರೀಖು 11, 12 ಮತ್ತು 13ರಲ್ಲು ಮಡಿಕೇರಿ ಮಾರ್ಕೆಟ್ ಬಳಿಯಲ್ಲಿಯೂ, ಮಾರ್ಚಿ ತಿಂಗಳ 15 ಮತ್ತು 16ನೇ ತಾರೀಖುಗಳಲ್ಲು ವೀರರಾಜಪೇಟೆಯಲ್ಲಿಯೂ ಮತ್ತು ಮಾರ್ಚಿ ತಿಂಗಳ 19ನೇ ತಾರೀಖಿನಲ್ಲಿ ಪೊನ್ನಂಪೇಟೆಯಲ್ಲಿಯೂ ನಡಿಸಲು ಏರ್ಪಾಡು ಮಾಡಿರುವದರಿಂದ ಸದರಿ ಪ್ರದರ್ಶನದಲ್ಲಿ ಸರ್ವರೂ ಭಾಗಿಗಳಾಗಿ ಪ್ರದರ್ಶನವನ್ನು ಜಯಪ್ರದವಾಗಿ ಮಾಡಬೇಕಾಗಿ ಕೇಳಿಕೊಳ್ಳಲಾಗಿದೆ. ಅಲ್ಲದೆ ಶಿಶುಗಳಿರುವ ಎಲ್ಲಾ ತಂದೆ ತಾಯಿಗಳು ತಮ್ಮ ತಮ್ಮ ಶಿಶುಗಳನ್ನು ಪ್ರದರ್ಶನಕ್ಕೆ ತಂದು ಬಹುಮಾನಪಡೆಯಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗುತ್ತೆ.

ಕಾರ್ಯದರ್ಶಿ.

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಭತ್ತದ ಬೆಳೆಯಲ್ಲಿ 'ಮೋಟೆ'

ಕೊಡಗು ಜಮೀನ್ದಾರರ ಸಂಘದ ರೂಲ್ಸ್‌ಗಳಲ್ಲಿ ಹೇಳಲ್ಪಟ್ಟಿರುವ ಸಂಘದ ಉದ್ದೇಶಗಳೇನೋ ಬಹಳ ಒಳ್ಳೇಯವು ಮತ್ತು ಶ್ಲಾಘ್ಯವಾದವುಗಳೇ ಸರಿ. ಆದರೆ ಅವುಗಳಲ್ಲಿ ಜಮೀನ್ದಾರ (ರೈತ) ರಿಗೆ ಪ್ರಯೋಜನವಾಗುವಂಥ ಒಂದು ಉದ್ದೇಶವನ್ನಾದರೂ ತಾಪುಲ್ ವರೆಗೆ ಜಾರಿಗೆ ತರುವ ಯಾವ ಪ್ರಯತ್ನವೂ ಇಲ್ಲದೆ ಬರೀ ರಾಜಕೀಯ ಸಂಬಂಧದ ಗುಲ್ಲೇ ಸಂಘದಿಂದ ಕೇಳಿಸುವಂಥಾದ್ದಾಗಿದೆ. ಇದು ಬಹಳ ವ್ಯಸನಕರವಾದ ಸಂಗತಿಯೇ ಸರಿ. ಹೆಚ್ಚಿನ ಸಂಖ್ಯೆ ಈ ದೇಶದಲ್ಲಿ ಬಡ ರೈತರದೆ. ಅಂಥವರಿಗೆ ರಾಜಕೀಯ ಚಳವಳವೆಂದರೇನು? ಕೌನ್ಸಿಲಿನಲ್ಲಿ ಏನೇನು ಆಗುತ್ತಿದೆ? ಎಂಬೀ ಸಂಗತಿಗಳು ವಿಶೇಷವಾಗಿ ಅವರ ತಿಳುವಳಿಕೆಗೆ ಬರುವಂತಿಲ್ಲ. ತಿಳಿದುಕೊಳ್ಳುವ ವಿಮತೆಯು ಅವರಿಗಿರುವದಿಲ್ಲ. ಸ್ವಭಾವಿಕವಾಗಿ ಅವರು ತಮ್ಮ ಈಗಿನ ಬಡಸ್ಥಿತಿಯ ಬದಲಿಗೆ ಉತ್ತಮವಾದ ಸ್ಥಿತಿ ಯಾವ ವಿಧದಿಂದ ಬಂದೀತು, ತಮ್ಮ ಆದಾಯ ಹೆಚ್ಚಾಗುವ ರೀತಿ ಯಾವದು, ತಮ್ಮ ದನಕರಗಳ ಅಭಿವೃದ್ಧಿ ಪಡಿಸುವ ದಾರಿ ಯಾವದು, ಹೆಚ್ಚಿನ ಬೆಳೆ ತೆಗಿಯುವ ಉಪಾಯ ಇಲ್ಲವೇ ಗೊಬ್ಬರದ ವಿಷಯ ತಿಳಿದುಕೊಳ್ಳಬೇಕಾದ್ದೇ ಇವೆ ಮೊದಲಾದ ತಮ್ಮ ಕೃಷಿಗೆ ಸಂಬಂಧಪಟ್ಟ ವಿಷಯಗಳನ್ನು ಅರಿತುಕೊಳ್ಳಲು ತುಂಬ ಆಸಕ್ತಿಯುಳ್ಳವರಾಗಿರುವರು. ಆದ್ದರಿಂದ ಇನ್ನು ಮುಂದಾದರೂ ಮೇಲೆ ವಿವರಿಸಿದ ಬಾಬುಗಳಲ್ಲಿ ಸಂಘದ ಮೆಂಬರುಗಳಾಗಿರುವ ರೈತರಿಗೆ ಪ್ರಯೋಜನ, ತಿಳುವಳಿಕೆ ಉಂಟಾಗುವ ತೆರದಲ್ಲು ಸಂಘದ ಕಮಿಟಿ ಮೆಂಬರುಗಳು ತುಂಬ ಶ್ರಮ ತೆಗೆದುಕೊಂಡಾರೆಂದು ನಂಬುವೆ.

ಕೆಲವು ಪ್ರಾಂತ್ಯಗಳಲ್ಲಿ ಮೋಟೆನೆಂಬುದು ಗದ್ದೆ ಬೆಳೆಯ ಸಸಿಗಳಲ್ಲಿ ಪ್ರಬಲಿಸಿ ಭತ್ತ, ಹುಲ್ಲು ಬಹಳ ಕಡಿಮೆಯಾಗಲು ಕಾರಣವಾಗಿದೆ. ಫಕ್ಕದ ಕದಿರುಗಳು ಇದರ ದೆಸೆಯಿಂದ ಬಹಳ ಕಮ್ಮಿ. ಸಸಿ ದಪ್ಪವಾಗಿದ್ದರೂ ಮೋಟೆ ಸಿಕ್ಕಿದರೆ ಕದಿರುಗಳು [illegible] 3-4 5 6 ಕಡಿಮೆ '[illegible]' 'ಮೋಟೆ'ಎನ್ನುವುದು [illegible] 1/4-1/2 ಭಾಗದಷ್ಟು ಮಾತ್ರ [illegible] ಗದ್ದೆಗಳಲ್ಲಿ ವಿಶೇಷವಾಗಿ [illegible] ಇದಕ್ಕೆ [illegible] 'ಮೋಟೆ' [illegible] 'ಕೊಡಗು' ಪತ್ರಿಕೆಯ ಮೂಲಕ ತಿಳಿಸಿಕೊಟ್ಟರೆ ಅಂಥವರಿಗೆ ಈ 'ಮೋಟೆ'ಯಿಂದ ನಷ್ಟಹೊಂದಿರುವ ಅನೇಕ ರೈತರು ತುಂಬ ಕೃತಜ್ಞರಾಗಿರುವರೆಂಬಲ್ಲಿ ಏನೂ ಅನುಮಾನವಿಲ್ಲ.

"ಕೊ. ಅ. ಸ."

ಪಟೇಲರುಗಳ ಹವಾಲು.

ಅಯ್ಯಾ,

ನಮ್ಮ ಕೊಡಗಿನಲ್ಲಿ ಗ್ರಾಮ ಉದ್ಯೋಗಸ್ಥರ ಸ್ಥಿತಿಯು ಬಹಳ ಕಷ್ಟತರದಲ್ಲಿದೆ. ಸಂಬಳ ಕಡಿಮೆ, ಕೆಲಸ ಹೆಚ್ಚು, ಗೌರವ ಇಲ್ಲ. ಮದ್ರಾಸು ಆಧಿಪತ್ಯದ ಇತರ ಜಿಲ್ಲೆಗಳಲ್ಲಿ ಪಟೇಲರುಗಳಿಗೆ ತಿಂಗಳಿಗೆ ರೂ. 15 ರಂತೆ ಸಂಬಳ ಕೊಡುವುದಲ್ಲದೆ ಅವರಿಗೆ ಸಣ್ಣ ಸಣ್ಣ ಕ್ರಿಮಿನಲ್ ಕೇಸುಗಳನ್ನು ವಿಚಾರಮಾಡಿ ಶಿಕ್ಷೆ ವಿಧಿಸುವ ಅಧಿಕಾರವನ್ನು ಸಹ ಕೊಟ್ಟಿದ್ದಾರೆ. ಕೊಡಗಿನ ಗ್ರಾಮ ಉದ್ಯೋಗಸ್ಥರಿಗ ವರ್ಷಕ್ಕೆ ರೂ. 45 ಅಥವಾ 50 ಮಾತ್ರ ಸಂಬಳ ಇದೆಯಲ್ಲದೆ ಅವರಿಗೆ ಯಾವ ಅಧಿಕಾರವೂ ಇಲ್ಲ. ಬೇರೆ ಜಿಲ್ಲೆಗಳಲ್ಲಿ ಪಟೇಲನ ಕೈಕೆಳಗೆ ಒಬ್ಬ ಉಗ್ರಾಣಿಯನ್ನು ಕೊಟ್ಟಿದ್ದಾರೆ. ಈ ಉಗ್ರಾಣಿಯು ಕೆಲಸ ಜನನ ಮರಣ ಸಂಖ್ಯೆಯನ್ನು ವಿಚಾರಿಸುವುದು ವಾರಕ್ಕೊಮ್ಮೆ ವರದಿಯನ್ನು ಒಪ್ಪಿಸುವುದು ಮತ್ತು ಗ್ರಾಮದ ಒಳಗೆ ಪಟೇಲನ ಹುಕುಮುಗಳನ್ನು ಜಾರಿಮಾಡುವುದು. ಹೀಗೆ ಉಗ್ರಾಣಿಯನ್ನು ಕೊಟ್ಟಿರುವುದರಿಂದ ಪಟೇಲನ ಕೆಲಸ ಕಡಿಮೆಯಾಗಿರುವುದಲ್ಲದೆ ಅವನ ಗೌರವ ಹೆಚ್ಚಿದಂತೆಯೂ ಆಯಿತು. ನಮ್ಮ ಕೊಡಗಿನಲ್ಲಿ ಮಾತ್ರ ಗ್ರಾಮ ಉದ್ಯೋಗಸ್ಥರನ್ನು ಏನು ಕಾರಣದಿಂದ ಇಷ್ಟು ಹೀನ ಸ್ಥಿತಿಯಲ್ಲಿಟ್ಟಿರುವರೆಂಬುದು ತಿಳಿಯುವುದಿಲ್ಲ.

ತಮ್ಮ ಹವಾಲುಗಳನ್ನು ವಿವರಿಸಿ ಜನವರಿ 28 ನೇ ತಾರೀಖಿನಲ್ಲಿ ಭಾಗಮಂಡಲದಲ್ಲಿ ನಡೆದ ಜಮಾಬಂದಿಯಲ್ಲಿ ಅನೇಕ ಮಂದಿ ಪಟೇಲರ ಗಳು ಕೂಡಿ ಒಂದು ಅರ್ಜಿ ಬರಕೊಂಡಿರುವರಂತೆ. ನಮ್ಮ ದಯೆಯುಳ್ಳ ಸರಕಾರವು ಈ ವಿಷಯವನ್ನು ಆದಷ್ಟು ಬೇಗನೆ ಗಮನಕ್ಕೆ ತರುವುದು ಅತ್ಯಂತ ಅವಶ್ಯವಾಗಿದೆ. ಅವರಿಗೆ ಕ್ರಿಮಿನಲ್ ಅಧಿಕಾರ ಕೊಡದೆ ಇದ್ದರೂ ಅವರ ಸಂಬಳವನ್ನು ಹೆಚ್ಚಿಸಿ, ಅವರಿಗೆ ಒಬೊಬ್ಬ ಉಗ್ರಾಣಿಯನ್ನು ಕೊಡಬೇಕಾಗಿ ಕೋರುತ್ತೇನೆ. ಅಲ್ಲದೆ ಈ ವಿಷಯದಲ್ಲಿ ಗ್ರಾಮಸ್ಥರ ಪ್ರತಿನಿಧಿಗಳಾದ ಕೌನ್ಸಿಲ್ ಮೆಂಬರುಗಳು ಆದಷ್ಟು ಪ್ರಯತ್ನಪಟ್ಟು ಪಟೇಲರುಗಳ ಈ ಕಷ್ಟವನ್ನು ನಿವಾರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಗ್ರಾಮಸ್ಥ.

ಕೊಡಗಿನ ರಸ್ತೆಗಳು.

ಅಯ್ಯಾ,

ಕೊಡಗಿನ ರಸ್ತೆಗಳ ದುಸ್ಥಿತಿಯನ್ನು ನೋಡಿದರೆ ವ್ಯಸನವಾಗುತ್ತದೆ. ಇದೇನು, ಕಳೆದ ವರ್ಷದ ಬಜೆಟ್ಟಿನಲ್ಲಿ ರಸ್ತೆಗಳಿಗೆ ಹಣ ಇಡಲಿಲ್ಲ? ಬಸ್ಸುಗಳಲ್ಲಿ ಪ್ರಯಾಣಮಾಡುವವರಿಗೆ ರಸ್ತೆಗಳ ದುಸ್ಥಿತಿಯಿಂದ ಬಹಳ ಆಯಾಸವಾಗವುದು. ಹೀಗಿರುವಾಗ ಬೈಸಿಕಲ್ ಮತ್ತು ಕಾಲ್ನಡಿಗೆಯವರ ಗತಿಯನ್ನು ದೇವರೇ ಬಲ್ಲ. ಕೆಲವು ರಸ್ತೆಗಳಲ್ಲಿ ಕಲ್ಲುಗಳೆದ್ದು ವಾಹನಗಳಿಗೂ, ಕಾಲ್ನಡಿಯವರಿಗೂ ಕೂಡ ಕಷ್ಟಕರವಾಗಿರುವುದು. ಒಸರ ಕ್ಷೇಮ ಪಟ್ಟೇ ಬಯಸುತ್ತೇವೆ ಎಂಬ ಸರಕಾರದ ದೃಷ್ಟಿಗೆ ಈ ರಸ್ತೆಗಳ ಸ್ಥಿತಿಯು ಇನ್ನೂ ಬೀಳದಿರುವುದು ಆಶ್ಚರ್ಯವೇ ಸರಿ. ಹೀಗೆ ರಸ್ತೆಗಳ ದುಸ್ಥಿತಿಯು ಈಗಾಗಲೇ ನಾಲ್ಕೈದು ತಿಂಗಳಿಂದಲೇ ಇದ್ದರೂ ಇದು ಇನ್ನೂ ಸಬ್ ಡಿವಿಜನ್ ಆಫೀಸರುಗಳ ದೃಷ್ಟಿಗಾಗಲೀ, ಡಿ. ಪಿ. ಡಬ್ಲ್ಯು ಇಲಾಖೆಯ ಮೇಲಧಿಕಾರಿಯಾದ ಎಕ್ಸಿಕ್ಯೂಟಿವ್ ಇಂಜಿನೀಯರ ದೃಷ್ಟಿಗಾಗಲೀ ಬೀಳದಿರುವುದು ಶೋಚನೀಯವೇ ಸರಿ. ಈ ಸಂಗತಿಯು ಕಾರ್ ಮತ್ತು ಬಸ್ಸುಗಳ ಮಾಲೀಕರ ದೃಷ್ಟಿಗೆ ಬಿದ್ದರೂ ಅವರು ಸುಮ್ಮನಿರುವುದು ವ್ಯಸನಕರವೇ ಸರಿ. ಆದುದರಿಂದ ಅಯ್ಯಾ ಈ ಇಲಾಖೆಗ ಸಮ್ಬಂಧಪಟ್ಟ ಅಧಿಕಾರಿಗಳೇ, ಇನ್ನಾದರೂ ರಸ್ತೆಗಳ ವಿಷಯ ಮುಖ್ಯವಾಗಿ ವೀರರಾಜಪೇಟೆ-ಕುಟ್ಟ ರಸ್ತೆ ಕಡೆಗೆ ಸ್ವಲ್ಪ ಗಮನ ಕೊಡುವಿರಾಗಿ ಅಪೇಕ್ಷಿಸುತ್ತೇನೆ.

"ಅನುಭವಿ"

ಡಿಸ್ಟ್ರಿಕ್ಟ್‌ಬೋರ್ಡು ಮೆಂಬರುಗಳಲ್ಲಿ ವಿನಂತಿ

ಮಹನೀಯರೇ,

ಮಡಿಕೇರಿ—ಮುಸನಾಡು ರಸ್ತೆಯ 6ನೇ ಮೈಲು 1ನೇ ಫರ್ಲಾಂಗಿನಿಂದ ಒಳರಸ್ತೆ ಹಾಕತ್ತೂರು ಮಾರ್ಗವಾಗಿ ಸಿದ್ದಾಪುರಕ್ಕೆ ಹೋಗುತ್ತದೆ. ಸದರಿ ರಸ್ತೆಯನ್ನು ಸುಮಾರು 3 ಮೈಲುಗಳ ವರೆಗೂ ಬಿದ್ದಂಡ ಮನೆಯವರೇ ಅವರ ಗಾಡಿ ಪ್ರೈವೇಟಕ್ಕಾಗಿ ವರ್ಷವರ್ಷವೂ ದುರಸ್ತು ಮಾಡುತ್ತಾರೆ. ಮೇಲ್ಕಂಡ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ವಹಿಸಿಕೊಂಡು ಗಾಳಿಬೀಡು [illegible] ಸಿದ್ದಾಪುರದ ವರೆಗೆ ಅನುಕೂಲ ಪಡಿಸಿಕೊಡಬೇಕಾಗಿ ಅನೇಕ ವರ್ಷಗಳಿಂದಲೂ ಈ ನಾಡಿನ ರೈತರು ಎಷ್ಟು ಗೋಳಿಟ್ಟರೂ "ನರಿಯ ಕೂಗು ಗಗನಕ್ಕೆ ಮುಟ್ಟೀತೆ" ಎಂಬ ಗಾದೆಯಂತೆ ಬರಿದಾಗಿದೆ. ಓಟು ತೆಗೆದುಕೊಳ್ಳುವಾಗ ಮೆಂಬರುಗಳು ರೈತರಿಗೆ ಹೇಳುವ ಭರವಸೆಗಳು ಬರೀ ಸ್ವಪ್ನಾವಸ್ಥೆಯಿಂದೇ ಹೇಳಬೇಕು. ಅವರು ಅದನ್ನು ತಮ್ಮ ತಮ್ಮ ಕಾರ್ಯ ಕೈಗೂಡಿದ ಮೇಲೆ ತಿಲಾ ಮಾತ್ರವೂ ಮನಸ್ಸಿಗೆ ತೆಗೆದುಕೊಳ್ಳದ ಸಂಗತಿ ತುಂಬಾ ಶೋಚನೀಯವಾಗಿದೆ. ನಮ್ಮ ನಾಡಿನ ಮೆಂಬರರ ಗಣನೆಗೆ ಈ ರಸ್ತೆ ಬಾರದ ಸಂಗತಿ ನೋಡಿದರೆ ಈ ನಾಡಿನವರ ದೌರ್ಭಾಗ್ಯವೆಂದೇ ಭಾವಿಸಬೇಕು. ಅಲ್ಲದೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಈ ರಸ್ತೆಗೆ ಖರ್ಚು ಮಾಡುವರೆ ತಕ್ಕಷ್ಟು ಹಣವಿಲ್ಲದಿರಬಹುದು. ಇದಕ್ಕೆ ಸಾಧಾರಣ ಮೂರು ಸಾವಿರ ರೂಪಾಯಿಗಳ ಖರ್ಚು ಬೇಕಾಗುವದು. ಈ ರಸ್ತೆ ಮೂರು ಮೈಲುಗಳ ವರೆಗೆ ಬಿದ್ದಂಡ ಮನೆಯವರೇ ಕೆಲಸ ಮಾಡುತ್ತಾರೆಯಾಗಿ ಮೊದಲೇ ಹೇಳಿದೆ. ಇನ್ನು ಮೂರು ಮೈಲಿ ರಸ್ತೆ ಮಾತ್ರ ಮಾಡಬೇಕಾಗಿದೆ. ಈ ರಸ್ತೆಯನ್ನು ಕೆಲವು ವರ್ಷಗಳಿಗೆ ಮುಂಚೆ ಊರಿನವರು ಆದಷ್ಟು ತೊಂದರೆ ತೆಗೆದುಕೊಂಡು ಮಾಡಿದರು. ಸರಕಾರದ ಸಹಾಯ ಸಿಕ್ಕದ್ದರಿಂದ ಮುರಿಲೆಗೆ ಬೀಳಲು ಕಾರಣವಾಯಿತೆ. ಇದು ಸಿದ್ದಾಪುರದಿಂದ 10 ಮೈಲಿ ಪಾಲಾಲೆಯೊಳಗೆ ಬಂದು ಮಡಿಕೇರಿ ರಸ್ತೆಯನ್ನು ಕೂಡುತ್ತದೆ. ಈ ರಸ್ತೆಯಿಂದ ರೈತರಿಗಿರುವ ಪ್ರಯೋಜನವನ್ನು ಇಷ್ಟೆಂದು ವರ್ಣಿಸಲಾಗುವುದಿಲ್ಲ. ಅಲ್ಲದೆ ಈ ಊರಿನ ಎರಡು ಗ್ರಾಮಗಳಿಂದ ಡಿಸ್ಟ್ರಿಕ್ಟ್‌ಬೋರ್ಡ್ ಸೆಸ್ ಸಾಧಾರಣ 500 ರೂಪಾಯಿಗಳಿಗೆ ಕಡಿಮೆ ಇಲ್ಲದೆ ವರ್ಷಂಪ್ರತಿಯೂ ಗ್ರಾಮಸ್ಥರಿಗೆ ಒಂದು ತೆರದ ಮಾಮೂಲಿನಂತೆ ಅಂದರೆ ಬೆಟ್ಟ ಸುಡುವ ನೆಪದಿಂದ ಕೊಡುತ್ತಾರೆ. ಈ ಬೆಟ್ಟ ಸುಡುವ ಪದ್ಧತಿಯು ಬರೀ ವಿನೋದದ ಸಂಗತಿಯಾಗಿದೆ. ಬೇಟೆಯ ಖುಷ್‌ವಾಸಿಯಲ್ಲಿ ತಲೆದೋರಿ ಬೆಂಕಿ ಹಚ್ಚುವ ನೆವದಿಂದ ಕೊನೆಗೊಳ್ಳುತ್ತದೆ. ಇದು ಸರ್ಕಾರದ ನಿಗ ಕಡಿಮೆಯಾದ ಕಾರಣ ಈ ರೀತಿ ನಡೆಯುತ್ತದೆ. ಇದನ್ನು ಸರ್ಕಾರದವರು ಹೆಚ್ಚಿನ ನಿಗ ತೆಗೆದುಕೊಂಡು ರೆವಿನ್ಯು ಕಾನೂನನ್ನು ಸರಿಯಾದ ರೀತಿಯಲ್ಲಿ ಜಾರಿ ಮಾಡುವರಾಗಿ ನಂಬುತ್ತೇನೆ.

ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಈ ರಸ್ತೆಗೆ ಖರ್ಚುಮಾಡಲು ಶಕ್ತನಷ್ಟು ಹಣವಿಲ್ಲದ ಪಕ್ಷಕ್ಕೆ ಈ ಸೆಸ್ ಮೂಲಕ ಕೊಡುವ ಬೆಟ್ಟದ ಹಣವನ್ನೇ ಒದಗಿಸಿ ವರ್ಷಕ್ಕೆ ತಕ್ಕಂತೆ ಕೆಲಸ ಮಾಡಿದಲ್ಲಿ ಎರಡು ಮೂರು ವರ್ಷಗಳಲ್ಲಿ ಮೇಲ್ಕಂಡ ರಸ್ತೆಯ ಕೆಲಸವನ್ನು ಪೂರೈಸಬಹುದು. ಅಲ್ಲದೆ ರೈತರ ಉಪಯೋಗಕ್ಕಿರುವ ಈ ರಸ್ತೆಯಿಂದ ಗ್ರಾಮಸ್ಥರಿಗೆ ಸೆಸ್ ಹಣವು ಅಷ್ಟೊಂದು ಅಗಾಧವಾಗಿ ಕಾಣಲಾರದು. ಸದರಿ ರಸ್ತೆಯನ್ನು ನೋಡಲು ವೈಸ್ ಪ್ರೆಸಿಡೆಂಟರು ತಾ. 6—1—29ರಲ್ಲಿ ಬರುತ್ತೇನೆಯಾಗಿ ಹೇಳಿ ಎಷ್ಟು ಹೊತ್ತು ಕಾದರೂ ಬಾರದೆ ರೈತರು ಹಸಿವು ಸಹಿಸಲಾರದೆ ನಿರಾಶೆಯಿಂದ ಮನೆಗೆ ಹಿಂತಿರುಗಿದರು. ಪಾಪ, ಬಡ ರೈತರು "ವೈಸ್ ಪ್ರೆಸಿಡೆಂಟರು ಬರುತ್ತಾರೆ, ನಮಗೆ ರಸ್ತೆ ಖಂಡಿತ ಮಾಡಿಸಿಕೊಡುತ್ತಾರೆ" ಎಂದು ಆಶಾಭರಿತರಾಗಿ ಕಾದು "ಮಳೆಯನ್ನು ಆಶಿಸಿದ ಬೆಳೆಯೋಪಾದಿ" ಮಳೆಯೂ ಬೆಳೆಯೂ ಇಲ್ಲದ ಅವಸ್ಥೆಯಾಯಿತು. ಇನ್ನು ಮೇಲಾದರೂ ವೈಸ್ ಪ್ರೆಸಿಡೆಂಟರು ಗರೀಬ ನಾಡು ರೈತರ ಮೇಲೆ ಕನಿಕರವಿಟ್ಟು, ಮೇಲ್ಕಂಡ ರಸ್ತೆಗೆ ಹಣ ಮಂಜೂರು ಮಾಡಿಸಿ ಬಡಜನರ ಆಶೆಯನ್ನು ಪ್ರೋತ್ಸಾಹಿಸಿಯಶೋವಂತರಾಗಬೇಕಾಗಿಯೂ, ಅಲ್ಲದೆ ಗರೀಬ ರೈತರನ್ನು ಈ ತೆರನಾದ ಆಶೆಯಿಂದ ನಿರಾಶೆಗೆ ದಬ್ಬದ ಕೊಳಲಿಕ್ಕಿಲ್ಲವಾಗಿಯೂ, ಇದರ ಕೆಲವು [illegible] ತಪಶೀಲ್ ಸಂಗತಿಗಳನ್ನು ಜನರ ತಿಳುವಳಿಕೆ ಬಗ್ಗೆ ಸ್ಥಳೀಯ ವರ್ತಮಾನ ಪತ್ರಿಕೆಗಳಲ್ಲಿ ಪ್ರಚಾರಪಡಿಸಿ ಬಡ ರೈತರ ಪ್ರೀತಿಗೆ ಪಾತ್ರರಾಗುವರಾಗಿ ಈ ಮೂಲಕ ಆಶಿಸುತ್ತೇನೆ.

"ಗ್ರಾಮದ ಬಡ ರೈತ"

ಕ್ವಯಿನ ವಿಚಾರಣೆ.

ಅಯ್ಯಾ,

ನನಗೆ ಕೆಲವು ದಿವಸಗಳಿಂದ ಜ್ವರ ಬಂದುದರಿಂದ ತಾಯಿಲಸ್ಸನಾಗಿ ನರಳುತ್ತಾ ಇದ್ದೆನು. ಸನಿವಾರಸಂತೆ ಹೋಬಳಿಯಲ್ಲಿ ಆಸ್ಪತ್ರೆ ಇಲ್ಲದೆ ಕ್ವಯಿನಿಕ್ಕೆ ಸರಿಯಾಗಿ ಔಷಧಿಯು ದೊರೆಯುವುದು ಅಸಾಧ್ಯವಾಯಿತು. ಕೆಲವು ಮಹನೀಯರನ್ನು ವಿಚಾರಿಸಲು ಎಲ್ಲಾ ನಾಡುಗಳಲ್ಲಿ ರೈತರುಗಳಿಗೆ ಕ್ರಯವಿಲ್ಲದೆ ಪಟೇಲರುಗಳ ಮೂಲಕ ಕ್ವಯಿನ ಹಂಚುತ್ತಾರೆ, ನಿಮಗೆ ಮಾತ್ರ ಯಾವ ಕಾರಣದಿಂದ ಕ್ವಯಿನ ಹಂಚುವುದಿಲ್ಲವೆಂಬುದಾಗಿ ಹೇಳಿದರು. ಅದೇ ಮೇರೆ ನಮ್ಮ ಗ್ರಾಮದ ಪಟೇಲರನ್ನು ವಿಚಾರಿಸಲಾಗ್ಯೆ ಸದರಿ ಸಂಗತಿ ನನಗೇನೂ ಗೊತ್ತಿರುವುದಿಲ್ಲ, ಕೆಲವು ಗ್ರಾಮದ ಪಟೇಲರುಗಳಿಗೆ ಮಾತ್ರ ಕ್ವಯಿನ ಕೊಡುತ್ತಾರೆ, ಎಂಬದಾಗಿ ಹೇಳಿದರು.

ಈ ಸಂಗತಿಯನ್ನು ಕೊಡಗು ಕಮಿಶನರ್ ಸಾಹೇಬರವರು ನಮ್ಮ ಹೋಬಳಿ ಜಮಾಬಂದಿಗೆ ದಯಮಾಡಿಸಿದ್ದಾಗ್ಯೆ ಅರಿಕೆಮಾಡಿದೆನು. ಕ್ವಯಿನ ಸಪ್ಲೈ ಮಾಡುತ್ತೇನೆಂಬದಾಗಿ ವಾಗ್ದಾನಮಾಡಿದರು. ಈ ವರೆಗೂ ನಮ್ಮ ಗ್ರಾಮಕ್ಕೆ ಕ್ವಯಿನ ಸಪ್ಲೈ ಇರುವುದಿಲ್ಲ. ಇದು ಯಾವ ಕಾರಣದಿಂದ ಹೀಗೆ ನಡೆಯುತ್ತದೆಂಬುದಾ. ಗೊತ್ತಾಗುವುದಿಲ್ಲ.

ಇದುವರೆಗೆ ಕೊಡಗು ದೇಶದ ಕಮೀಶನರ್ ಸಾಹೇಬರವರು ಈ ಸಂಗತಿಯನ್ನು ಚೆನ್ನಾಗಿ ವಿಚಾರಮಾಡಿ ಹೋಬಳಿ ಕಚೇರಿಯಿಂದಾಗಲಿ ಪೊಲೀಸ್‌ನವರ ಮೂಲಕವಾಗಲಿ ನಮ್ಮ ಗ್ರಾಮಕ್ಕೆ ಪಟೇಲರ ಮೂಲಕ ಸಪ್ಲೈ ನಡೆಯುವಂತೆ ಒಡನೆ ಹುಕುಂ ಹೊರಡಿಸಿಕೊಡಬೇಕಾಗಿ ಕೋರುತ್ತೇನೆ. ಈ ಸಂಗತಿ ನಮ್ಮ ಕೌನ್ಸಿಲ್ ಮೆಂಬರುಗಳಾಗಲಿ ಡಿ. ಬೋರ್ಡು ಮೆಂಬರುಗಳಾಗಲಿ ಯಾವ ತೊಂದರೆ ತೆಗೆದುಕೊಳ್ಳದ್ದಕ್ಕೆ ನಾನು ತುಂಬಾ ವ್ಯಸನಪಡಬೇಕಾಗುತ್ತೆ. ನಮ್ಮ ಹಿತವನ್ನು ಕಾಯುತ್ತಾರೆಂದು ನಾವುಗಳೆಲ್ಲರೂ ಓಟು ಕೊಟ್ಟದಾಯಿತು. ಈಗ ಅವರು ಸುಮ್ಮನಿರಲು ಕಾರಣವೇನೆಂದು ಗೊತ್ತಿಲ್ಲ.

"ನೊಂದವ"

ದಾಸಸೇವಾ ಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಲು ಸುಸಮಯ..

ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ (ನೂತನ ಪುಸ್ತಕ)

(ಎರಡನೆಯ ವರ್ಷಾರಂಭವಾಗಿದೆ.)

'ಹರಿದಾಸ ಸೇವಾ ಸಮಿತಿ' ಯವರಿಂದ ಒಹಳ ಶುದ್ಧ ರೀತಿಯಲ್ಲಿ ಸಂಶೋಧಿಸಲ್ಪಟ್ಟು ಮೂರು ಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಯನ್ನು ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ರಚಿಸಿದ, ಭಗವನ್ಮಹಿಮಾ ಕೀರ್ತನೆಗಳು ಪ್ರತಿ ತಿಂಗಳಲ್ಲಿಯೂ ೫ ಫಾರಂ ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಲಿವೆ. ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಬೇಕಾದುದು.

ವಾರ್ಷಿಕ ಚಂದಾ (ಅಂಚೆ ಹಾಸಲು ಉಚಿತ) ಸಾಧಾರಣ ಪ್ರತಿ ರೂ ೧–೪–೦ ಉತ್ತಮ ಪ್ರತಿ ರೂ. ೨–೪–೦

ಪ್ರಥಮ ಸಂಪುಟದ ಬೆಂಡಾದ ಪ್ರತಿಗಳು.

	ಸಾದಾ ಬೈಂಡು	ದಪ್ಪ ಪಟ್ಟಿನ ಬೈಂಡು	ಕಿತ್ತಾನಾಪು ಬೈಂಡು
ಸಾಮಾನ್ಯ ಪ್ರತಿ	೧–೪–೦	೧–೧೨–೦	೨–೪–೦
ಉತ್ತಮ ಪ್ರತಿ	೨–೪–೦	೨–೮–೦	೩–೦–೦

ಅಂಚೇಹಾಸಲು ಪ್ರತ್ಯೇಕ.

ವಿಳಾಸ — ಸುಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

12–3

ಪಿಗ್ಮಿ ಗ್ರಾಮೋಫೋನ್

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ 35 ರೂ ಈಗಿನ ಕ್ರಯ 8–8–0.

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದೂಸ್ತಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವುದು. ಅನ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹುಚೆನ್ನಾಗಿದೆ. ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಠವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಮೆಟಲ್ ಹಾರನ್ ಎಂಬ ಪದ ಹೇಳುವ ಕೊಳವೆ ಇದೆ. ನಿಧಾನವಾಗಿಯೂ, ಜಾಗ್ರತೆಯಾಗಿಯೂ ಪದ ಹೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥಾ ಸುಂದರವಾದ ಕೈ ಪೆಟ್ಟಿಯಲ್ಲಿಟ್ಟಿದೆ.

ಡಬ್ಬಲ್ ಸೈಡ್ ಎರಡು ಕಡೆಯೂ ಪದ ಇರುವ
1 ರಿಕಾರ್ಡ್ ಸಹಿತ ಕ್ರಯ ರೂ. 8–8–0.
ಹೆಚ್ಚಿಗೆ ರಿಕಾರ್ಡ್ ಬೇಕಾದರೆ, ರಿಕಾರ್ಡ್ „
ಪ್ರತ್ಯೇಕ 1ಕ್ಕೆ 2–0–0

ವಿಳಾಸ — ಸಿಂಗಲ್ ಟ್ರೇಡಿಂಗ್ ಕಂಪೆನಿ,
ಪೋ. ಬಾ 243. ಮದರಾಸು.

52–34

Arms, Ammunition and Shooting Requisites!!!



Current Illustrated Catalogue Just Issued Free on Application!

D. B. B. L. Rifles	Rs	120	to Rs	270
S. B. B. L.	„	35	to	75
D. B. B. L. Guns	„	50	to	1350
S. B. B. L.	„	35	to	275
D. B. M. L.	„	45	to	135
S. B. M. L.	„	30	to	80
B. L. Revolvers	„	35	to	351
Automatic Pistols	„	30	to	150

Brilliant Search Light Lamp For Shooting, Camping, Fishing and All such other Night Sports and work Rs. 30 Free delivery.

Also swords, Daggers, Cartridges, Caps, Gunpowder and Shooting Requisites, at the most competitive rates

GOOLAMHUSAIN ALLIBHOY & SONS.

Largest Importers of Fire arms and Ammunition

Cheapest priced firm in India,

210 Abdul Rehman Street BOMBAY.

24–20

Try!! Try

KING & CO.,
SUNTICOPPA.

for

Foreign Liquor, Arms & Ammunitions, High Grade Cigarettes, Sports Materials, Court-Stamp papers, Printed Labour Bonds, Sewing Machines, etc., etc.

ಕಿಂಗ್ ಅಂಡ್ ಕೊ.,
ಸುಂಟಿಕೊಪ್ಪ.

ನಮ್ಮ ಅಂಗಡಿಯಲ್ಲಿ ಎಲ್ಲಾ ಪರದೇಶೀಯ ಸಾರಾಯಿ ಎಂದರೆ ಬ್ರಾಂದಿ, ವಿಸ್ಕಿ, ವೈನ್, ಬೀರು ಮೊದಲಾದುವು ಬಿಕ್ರಿ ಮಾಡಲ್ಪಡುತ್ತದೆ. ಅಲ್ಲದೆ ಅತ್ಯುತ್ಕೃಷ್ಟವಾದ ಬಾಂಬಿ, ಕೋವಿ ಮದ್ದು, ತೋಟಗಳ ಚಿಲ್ಲರೆ ವಗೈರೆ ಬಹಳ ಸುಲಭ ದರದಲ್ಲಿ ಸಿಕ್ಕುತ್ತದೆ. ಒಂದು ಸಲ ನಮ್ಮಲ್ಲಿ ಒಂದು ವ್ಯಾಪಾರ ನಡಿಸಿದಲ್ಲಿ ಪೂರ್ತಿ ಮಾಹಿತಿಯು ಗೊತ್ತಾಗುವುದು.

12—12

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೧೯೨೯ನೇ ಇಸವಿಯ ಶಿದ್ದಪ್ಪಾಸ್ ಮೋಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929ನೇ ಇಸವಿಯ ಶಿದ್ದಪ್ಪಾಸ್ ಮೋಡಲ್ ಪಾಕೆಟ್ ಡೈರಿಗಳು.

1ನೇ ನಂ ದೊಡ್ಡ ಸೈಜು ಪಾಕೆಟ್ ಡೈರಿ ಪೆನ್‌ಸಿಲ್ ಇಟ್ಟು ಮುಚ್ಚಳ ಹಾಕಿದ್ದು 6½"×4" 1ಕ್ಕೆ	0 12 0
ಪರಸ್ಥಳಕ್ಕೆ ಪೋಸ್ಟೇಜು	0 3 0
2ನೇ ನಂ. ದೊಡ್ಡ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 6½"×4" 1ಕ್ಕೆ	0 10 0
ಪರಸ್ಥಳಕ್ಕೆ ಪೋಸ್ಟೇಜು	0 3 0
3ನೇ ನಂ. ಚಿಕ್ಕ ಸೈಜು ಪಾಕೆಟ್ ಡೈರಿ ಪೆನ್‌ಸಿಲ್ ಇಟ್ಟು ಮುಚ್ಚಳ ಹಾಕಿದ್ದು 5"×2½" 1ಕ್ಕೆ	0 7 0
ಪರಸ್ಥಳಕ್ಕೆ ಪೋಸ್ಟೇಜು	0 2 0
4ನೇ ನಂ. ಚಿಕ್ಕ ಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್ ಡೈರಿ 5"×2½" 1ಕ್ಕೆ	0 5 0
ಪರಸ್ಥಳಕ್ಕೆ ಪೋಸ್ಟೇಜು	0 2 0

ಮೇಲ್ಕಂಡ ಪ್ರಕಾರ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಾ ಹಣಬಂದು ರವಾನಿಸಿದಲ್ಲಿ ಪೋಸ್ಟಿನ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್ ಗಟ್ಲೆ ತರಿಸಿಕೊಳ್ಳುವವರು ಡಜನ್ 1ಕ್ಕೆ 2–0–0 ರೂಪಾಯಿ ಮುಂಗಡ ಅಡ್ವಾನ್ಸ್ ರವಾನಿಸಬೇಕು.

1929ನೇ ಇಸವಿಯ ಸಚಿತ್ರ ಕ್ಯಾಲೆಂಡರುಗಳು.

ಶೀಟ್ ಕ್ಯಾಲೆಂಡರ್ 50ಕ್ಕೆ	1 2 0
„ „ 100ಕ್ಕೆ	2 0 0
3"×4½" ಪಾಕೆಟ್ ಕ್ಯಾಲೆಂಡರ್ 12ಕ್ಕೆ	0 9 0
„ „ 50ಕ್ಕೆ	2 4 0
„ „ 100ಕ್ಕೆ	4 6 0

ಅನೇಕ ಬಣ್ಣಗಳಿಂದ ಜರ್ಮನಿ ಪ್ರೆಸ್ಸಿನಲ್ಲಿ ತಯಾರಾದ 19"×14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್

ಕ್ಯಾಲೆಂಡರ್ 3ಕ್ಕೆ	0 8 0
„ „ 6ಕ್ಕೆ	0 14 0
„ „ 12ಕ್ಕೆ	1 6 0

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಾ ಹಣವನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವುದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಒರಕ್ಕೆ ಮುಂಗಡ ಹಣವನ್ನು ಹಿಂದಿರುಗಿಸಲಾಗುತ್ತೆ.

ಮಾದರಿ ಕ್ಯಾಲೆಂಡರು ಅಪೇಕ್ಷಿಸುವವರು 0–5–0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆಯ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ಕಳುಹಿಸಲಾಗುತ್ತೆ.

ಮಣಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್ ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52–39

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	17 190
ಒಮೊಬಂದ ಠೇವಣಾತಿ	—	1,62 320

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಡಿಸುತ್ತಾರೆ.

ಪ್ರೆಸಿಡೆಂಟರು, ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಕೊಂಗಟ್ಟಿರ ಅಪ್ಪಯ್ಯನವರು.

ಸೆಕ್ರೆಟರಿ

ಸಿ. ಯಸ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್.

ತಾರೀಕು 1—7—1928

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ ಮೆ ಪೇರಿಯಂಡ ಪೂವಯ್ಯನವರ ಮತ್ತು ಚಾಗಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಏಜೆಂಟರುಗಳು

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಪೇರಿಯಂಡ ಪೂವಯ್ಯನವರು.

ಮತ್ತು—ಮೆ ಚಾಗಂಡ ಕುಟ್ಟಪ್ಪನವರು,

ಪೊನ್ನಂಪೇಟೆನಾಡು—ಮೆ ಕಾಳೇಂಗಡ ಚಿಣ್ಣಪ್ಪನವರು

ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು.

ಮರೆನಾಡು—ಮೆ ಕೀಕಿರ ಅಪ್ಪಯ್ಯನವರು

ಸಬ್ ಏಜೆಂಟರುಗಳು

ವೀರರಾಜಪೇಟೆ—ಮೆ ಕಾನಚೇರಿರ ಸಂಬಪ್ಪನವರು,

ಮೂರ್ನಾಡು—ಮಡೆಯಂಡ ದೇವಯ್ಯನವರು,

ನಾಪೋಕ್ಲು—ಮ. ಟಿ. ಆರ್ ರಾಮಯ್ಯನವರು,

ಗೋಣಿಕೊಪ್ಪಲು—ಮೆ. ಒಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ ಬಿ ೦ಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಯ್ಯಯ್ಯನವರು,

ಹುದಿಕೇರಿ & ತಿತಿಮತ್ತಿ—ಮೆ ಜಿ ಮಾದಯ್ಯಯ್ಯನವರು,

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿರತಕ್ಕದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್

"ಕೊಡಗು" ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಉಚಿತ ವ್ಯವಹಾರ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ಬಾವ ಒದೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿ ಅದನ್ನು ಪುನಹ ಸರಿಯಾಗಿ ಒರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿದಾಸಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬದ್ರರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ

ಮೇನೇಜರ್, "ಕೊಡಗು" ಮಡಿಕೇರಿ

---

12 bore Victor Cartridges Rs 10/– Per 100

Mahomedally-Noorbhoy.

ARMS & AMMUNITION MART.

321 Abdul Rehman Street.

52-21 — BOMBAY. 3.

ಚಟುಕಷಾಯ ಮಂಜೀಜ ರಕ್ಷೆ—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದಾಗ್ಯೂ ಗುಣವಾಗದಿರುವ ಮಲೆ ಜ್ವರ ದಿನಬಿಟ್ಟು ಬರುವ ಜ್ವರ 3–4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಪ್ಲೀಹದ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14

ಚಂದನಾಸವ —ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಹೋಗುವುದು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದ ಮೂತ್ರ ಹೊಯ್ಯುವಾಗ ಉರಿಯುವುದು, ಆಗಾಗ್ಯೆ ಮೂತ್ರ ಬರುವುದು, ಮೂತ್ರ ತಡೆಯೋಕ್ಕಿಲ್ಲ ಧಾತು ಹುಡಿ ಹೋಗುವುದು, ಆಗಾಗ್ಯೆ ಮೂತ್ರ ಬರುವುದು, ಮೂತ್ರ ತಡೆಯೋಕ್ಕಿಲ್ಲ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳದ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಚಿಕ್ಕ ಬಾಟ್ಲಿ 1, 3, 6ಕ್ಕೆ ರೂ 1—–0 3—8—0 6—12—0

ರೋಮನಾಶಿನಿ — ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಡಬ್ಬಿ 1ಕ್ಕೆ 6 ಆಣೆ 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವುದು, ತಲೆಭಾರ, ಕಣ್ಣುರಿ ಕಿವಿಯಿಂದ ಕೀವು ಸೋರುವುದು ಕಡಿಮೆಯಾದ ಕಣ್ಣು ನೋವು ಅಪಸ್ಮಾರ ನಿದ್ದೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ದಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನು ಹೊಳಪನ್ನು ಕೊಟ್ಟು ಅಕಾಲಿಕ ತಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—›—0

ನಮ್ಮ ಕೆಟಲಾಗು ತರಿಸಿ ನೋಡಿರಿ

52—17

ವಿಳಾಸ —ಮನೋಲ್ಲಾಸಿನಿ ಕಂಪೆನಿ 9. ಮಂಗಳೂರು.

ಸ್ಥಾಪನೆ—1874. ಹೆಡ್ ಆಫೀಸು—ಬೊಂಬಾಯಿ.

ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1927ನೇ ಇಸವಿ 31ನೇ ಡಿಸೆಂಬರ್ ತಿಂಗಳಿಗೆ ಅಂತ್ಯವಾಗುವ ತ್ರೈವಾರ್ಷಿಕ ಪೈಸಾಟವ ಫಲ.

ಹಂಚಲು ನಿಶ್ಚಯಿಸಿದ ಲಾಭ. ರೂ. 77,94,716

ವಿಮೆದಾರರಿಗೆ ಹೆಚ್ಚಾಗಿ ಸಿಕ್ಕಿರುವ ಬೋನಸು { 1000 ರೂಪಾಯಿಗಳ ಜೀವಾಂತ್ಯ ಪಾಲಿಸಿದಾರರಿಗೆ ವರ್ಷಕ್ಕೆ—ರೂ. 20.
1000 ,, ಎಂಡೌಮೆಂಟ್ ,, ,, —ರೂ. 20.

ಸದ್ಯಕ್ಕೆ ನೀವು ಎಷ್ಟು ರೂಪಾಯಿಗಳಿಗೆ ಜೀವವಿಮೆ ಮಾಡಿದ್ದರೂ ಚಿಂತೆಯಿಲ್ಲ ಪುನಹ ಒಂದು ಹೊಸ ಪಾಲಿಸಿಯನ್ನು 'ಓರಿಯಂಟಲ್' ಕಂಪೆನಿಯಿಂದ ಈಗ ತೆಗೆದುಕೊಳ್ಳುವುದರಿಂದ ನಿಮಗೆ ಲಾಭವುಂಟು. ಸಾವಿರಾರು ಜನರು ಪಾಲಿಸಿಯನ್ನು ತೆಗೆದುಕೊಂಡು ಸಂತೃಪ್ತರಾಗಿರುವರು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು—

ಓರಿಯಂಟಲ್ ಬಿಲ್ಡಿಂಗ್ಸ್, ನಂ. 1. ಸೌತ್ ಪೆರೇಡ್, ಬೆಂಗಳೂರು. { 52—6

ಯಲ್. ಆರ್. ಕೃಷ್ಣಸ್ವಾಮಯ್ಯರ್. ಬ್ರಾಂಚ್ ಸೆಕ್ರೆಟರಿ.

Xmas & New Year Presents!

Toys for Children!

A set comprising of tiny, bright and beautiful tumblers, pots, spoons, etc made of brass and bell metal, are quite suitable for the amusement and play of children

Small set 3? articles Rs 2—8—0 Medium set 32 articles Rs 3—8—0.

Big set of 32 articles Rs 4—8—0

Securely packed in neat card board boxes Postage extra

Silk Sarees, Jackets, Headkerchieves, Embroidery Hand Bags & Money Purses a Speciality.

Send your orders to:-

BHARADWAJ & CO.,

BROCADE, EMBROIDARY & SILK MANUFACTURERS,

Benares City.

52—24

EMPIRE OF INDIA LIFE ASSURANCE COMPANY, LIMITED.

(Established 1897.)

A Monthly payment of Rs 12/8/– will secure a With Profit Assurance as shown below which will further increase by Bonus Additions

Age next Birthday	Assurance payable at Death: Whole Life	Premiums Limited to 15 Years	20 Years	25 Years	Endowment Assurances payable at Death or at end of 20 Years	25 Years	30 Years
	Rs	Rs	Rs	Rs	Rs	Rs	Rs
20	5 820	3 550	4,250	4 800	3,010	3 800	4 520
35	5 140	3 290	3 930	4 390	2 930	3 620	4 230
35	4 480	3 030	3 600	3 970	2,810	3 400	3 870

Wanted —Agents at Mercara, Somwarpet and Siddapur

HEAD OFFICE
Empire of India Life Building,
BOMBAY.

24—8

BRANCH OFFICE.
152, Commercial Street,
BANGALORE.

Printed & published by P. I. Belliappa, at "Kodagu Press, Mercara for "Kodagu" Ltd.